ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 4—7—1947 [ಸಂಚಿಕೆ 27]

ಪಠಾಣಿಸ್ತಾನ — ನರೇಂದ್ರರ ಕಳವಳ — ಮುಂದಿನ ವಿಚಾರ

ಪಾಕಿಸ್ಥಾನ ಸ್ಥಾಪನೆಯು ನಿಶ್ಚಯವಾಗಿ ಜಿನ್ನಾ ಸಾಹೇಬರ ಜಯ ಭೇರಿಯು ಮೊಳಗುತ್ತಿರುವಾಗ ಗಡಿನಾಡು ಪ್ರಾಂತ್ಯದಲ್ಲಿ ಸ್ವತಂತ್ರ ಪಠಾಣಿ ಸ್ತಾನ ಸ್ಥಾಪನೆಯಾಗಬೇಕೆಂದು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಖಾನ ಸಹೋದರರು ಚಳವಳವನ್ನೆಬ್ಬಿಸಿದ್ದಾರೆ. ಪಂಜಾಬು, ಸಿಂಧು, ಗಡಿನಾಡು ಪ್ರಾಂತ್ಯಗಳು ಒಂದೇಯಾಗಿ ಪಶ್ಚಿಮ ಪಾಕಿಸ್ತಾನ ರಾಷ್ಟ್ರ ಸ್ಥಾಪನೆಯಾದರೆ ಪಠಾಣರ ಪಾಡು ಇನ್ನೂ ನಿಕೃಷ್ಟವಾಗುವುದೆಂದು ಅವರ ಭೀತಿಯಾಗಿದೆ. ಜಿನ್ನಾ ಸಾಹೇಬರು ಆಂಗ್ಲ ಮೈತ್ರತ್ವವನ್ನು ನಂಬಿಕೊಂಡಿದ್ದಾರೆ. ಪಾಕಿಸ್ತಾನದ ಮೇಲೆ ಆಂಗ್ಲ ಅಧಿಕಾರಿ ವರ್ಗಕ್ಕೆ ತುಂಬಾ ಪ್ರೇಮವಿದೆ. ಪಠಾಣ ಭೂಮಿಯಲ್ಲಿ ಆಂಗ್ಲ ಸೈನಿಕ ವೈಮಾನಿಕ ನಿಲ್ದಾಣಗಳು ಜಿನ್ನಾ ಸಾಹೇಬರ ಸಮ್ಮತಿಯಿಂದ ಸ್ಥಾಪನೆಯಾಗಿ ಪಾಕಿಸ್ತಾನದ ಪ್ರಯೋಜನವು ಪಂಜಾಬು ಸಿಂಧುಗಳ ಮುಸ್ಲಿಮರಿಗೂ ಅದನ್ನು ರಕ್ಷಿಸುವ ಪಠಾಣರಿಗೂ ಹಂಚಿ ಬೀಳುವುದೆಂದು ಖಾನ ಸಹೋದರರು ಸಾರುತ್ತಿದ್ದಾರೆ. ಖಾನ ಸಹೋದರರ ಚಳವಳದಿಂದ ಜಿನ್ನಾ ಸಾಹೇಬರಿಗೆ ತುಂಬಾ ವೇದನೆಯಾಗುತ್ತಿದೆ. ಅವರು ಖಾನ ಸಹೋದರರ ವರ್ತನೆಯನ್ನು ಖಂಡಿಸಿ ತಮ್ಮ ಅಭಿಪ್ರಾಯವನ್ನು ದೀರ್ಘ ಘೋಷಣೆಯೊಂದರಲ್ಲಿ ಜೂನ್ 28ನೇ ದಿನ ಪ್ರಕಟಿಸಿರುವರು. ಖಾನ ಸಹೋದರರ ಚಳವಳಕ್ಕೆ ಬೆಂಬಲವನ್ನಿತ್ತ ಗಾಂಧೀಜಿಯವರ ಕಡೆಯೂ ಜಿನ್ನಾ ಸಾಹೇಬರು ತಮ್ಮ ಅಸಂತೋಷವನ್ನು ಆ ಘೋಷಣೆಯಲ್ಲಿ ವ್ಯಕ್ತಪಡಿಸಿರುವರು.

ಪಾಕಿಸ್ತಾನ ಸ್ಥಾಪನೆಯಾದೊಡನೆ ಜಿನ್ನಾ ಸಾಹೇಬರ ಕಷ್ಟಗಳು ಪ್ರಾರಂಭವಾಗುವವು. ಈ ತನಕ ಜಿನ್ನಾ ಸಾಹೇಬರು ಕಾಂಗ್ರೆಸ್ಸನ್ನು ಹೀಯಾಳಿಸಿ ಗಾಂಧೀಜಿಯವರನ್ನು ಹಿಂದೂಗಳನ್ನು ದೂಷಿಸಿದರೆ ಮಾತ್ರ ಸಾಕಿತ್ತು. ಹಿಂದೀ ಸ್ವಾತಂತ್ರ್ಯಕ್ಕಾಗಿ ಜಿನ್ನಾ ಸಾಹೇಬರಾಗಲಿ ಅವರ ಲೀಗಾಗಲಿ ಮತ್ತೇನೂ ಮಾಡಿದಿಲ್ಲ. ಈಗ ಪಾಕಿಸ್ತಾನದ ಮುಸ್ಲಿಮರಲ್ಲಿ ಒಕ್ಕಟ್ಟನ್ನು ಬೆಳೆಸಿ ಪಾಕಿಸ್ತಾನ ಆರ್ಥಿಕ ಬಲವನ್ನು ವೃದ್ಧಿಗೊಳಿಸಿ ದರಿದ್ರ ಮುಸ್ಲಿಮರ ಹೊಟ್ಟೆಯಲ್ಲಿ ಕಾಳನ್ನು ತುಂಬಿಸುವ ಕೆಲಸಕ್ಕೆ ಅವರು ಕೈಹಾಕಬೇಕಾಗಿದೆ. ಮೂಲೆಯ ಕರಾಚಿಯಲ್ಲಿ ಪಾಕಿಸ್ಥಾನದ ರಾಜಧಾನಿಯು ನಿರ್ಮಿತವಾಗುತ್ತಿದೆ. ಅಧಿಕಾರ ಲಾಲಸೆಯುಳ್ಳ ಮುಸ್ಲಿಮರ ತಂಡಗಳು ಅಲ್ಲಿಗೆ ಬಂದು ಸೇರಿಕೊಳ್ಳ ಪ್ರಾರಂಭಿಸಿವೆ. ರಕ್ಷಿತ ಪಠಾಣರಿಗೆ ಕರಾಚಿಯ ಪಾಕಿಸ್ತಾನ ಕಚೇರಿಗಳಲ್ಲಿ ಕಾವಲುಗಾರರ ಕೆಲಸವು ದಕ್ಕಿದರೆ ಹೆಚ್ಚು. ನೂರಾರು ರಕ್ಷಣ ತಿಷ್ಟು ಪಡೆದರೆ ಆರ್ಥಿಕ ಸ್ಥಿತಿಯು ಹೀನವಾಗಿರುವ ಗಡಿನಾಡು ಪ್ರಾಂತ್ಯವು ಇನ್ನು ನೂತನ ಪಾಕಿಸ್ತಾನ ರಾಷ್ಟ್ರ ಸ್ಥಾಪನೆಯ ಖರ್ಚಿನ ಪಾಲನ್ನೂ ತಾಳಿಕೊಂಡು ಅಧೋಗತಿಯನ್ನು ಮುಟ್ಟುವಂತಿದೆ. ಪಾಕಿಸ್ತಾನದೊಳಗೆ ಸೇರುವ ಇತರ ಮುಸ್ಲಿಮರಿಗೂ ಪಠಾಣರಿಗೂ ಯಾವ ದೇಶದ ನುಡಿ ಉಡಿಗೆ ತೊಡಿಗೆ,- ಧ್ಯೇಯ ನೀತಿ ಆಚಾರ ಸಾಂಪ್ರದಾಯಗಳ ಬಾಂಧವ್ಯವು ಇಲ್ಲ. ಬ್ರಿಟಿಷರ ಚಕ್ರಾಧಿಪತ್ಯದ ಭದ್ರತೆಗೆ ಆಗತ್ಯವಿರುವ ನಿಲ್ದಾಣಗಳು ಪಠಾಣಿಸ್ತಾನದಲ್ಲಿ ಸ್ಥಾಪಿಸಲ್ಪಡುತ್ತದೆಂದೂ ಪಾಕಿಸ್ತಾನದಲ್ಲಿ ಪಠಾಣರು ಬರೇ ಆಳುಗಳಾಗುವರೆಂದೂ ಖಾನ ಸಹೋದರರು ಸಾರುವ ಭೀತಿಯು ನಿರಾಧಾರವೆಂದು ಹೇಳಸಾಧ್ಯವಿಲ್ಲ. ಪಾಕಿಸ್ತಾನ ರಾಜ್ಯಾಂಗರಚನಾ ಸಭೆಗೆ ಗಡಿನಾಡು ಪ್ರಾಂತ್ಯವು ಸೇರಿದ ಬಳಿಕ ಆ ಸಭೆಯಲ್ಲಿ ನಿಶ್ಚಿತವಾಗುವ ರಾಜ್ಯಾಂಗದ ರಚನೆ ತಮಗೆ ಒಪ್ಪದಿದ್ದರೆ ತಾವು ಪಾಕಿಸ್ತಾನವನ್ನು ಬಿಟ್ಟು ಹೋಗಿರುವುದೋ ಎಂಬ ಪಠಾಣ ಖಾನರ ಪ್ರಶ್ನೆಗೆ ಜಿನ್ನಾ ಸಾಹೇಬರು ಜವಾಬನ್ನು ಕೊಡ ನಿರಾಕರಿಸಿದ್ದರಿಂದ ಪಠಾಣರು ಪಾಕಿಸ್ತಾನಕ್ಕೆ ಸೇರಿ ಭದ್ರವಾದೊಂದು ಪಂಜರದೊಳಗೆ ಬೀಳುವರೆಂದು ಅವರು ಭೀತಿಪಡುವುದರಲ್ಲಿ ಆಶ್ಚರ್ಯವಿಲ್ಲ.

ಪಠಾಣರು ಈಗಲೇ ಇಲ್ಲಿಯ ಕನ್ನಡಿಗರಂತೆ ಒಕ್ಕಪಾಲಾಗಿ ಬಿದ್ದಿರುತ್ತಾರೆ. ಹಿಂದುಕುಶ್ ಪರ್ವತದಿಂದ ಸಿಂಧೂ ನದಿಯ ತನಕವಿರುವ ಭೂಪ್ರದೇಶವು ಪಠಾಣರ ನ್ಯಾಯವಾದ ಮಾತೃಭೂಮಿಯಾಗಿದೆ. ಅಲ್ಲಿಯ ಜನರಲ್ಲಿ ಪಾಕ್ತೂನು ಭಾಷೆಯೇ ಉಪಯೋಗದಲ್ಲಿದೆ. ಯಾರಿಗೂ ಬಗ್ಗದ ವೈಯಕ್ತಿಕ ಸ್ವಾತಂತ್ರ್ಯದಭಿಮಾನ,- ತಮ್ಮ ತಮ್ಮ ಸಂಘಗಳಿಂದಲೇ ರಾಜ್ಯಭಾರ ಚಲಾವಣೆಯ ವಿಚಾರ,- ಸರಳ ಜೀವನ- ಪಾಶ್ಚಾತ್ಯ ನಾಗರೀಕತೆಯ ಕಡೆಯೂ ಇತರ ನಾಗರೀಕತೆಗಳ ಕಡೆಯೂ ತುಚ್ಛೀಕಾರ ಇವುಗಳೇ ಪಠಾಣರ ವಿಶಿಷ್ಟ ಗುಣಗಳು. ಪ್ರಾಚೀನ ಕಾಲದಲ್ಲಿ ಹಿಂದೀದೇಶಕ್ಕೆ ಸೇರಿದ ಆ ಭೂಪ್ರದೇಶವು ಇಸ್ಲಾಮ್ ಮತ ಸ್ಥಾಪನೆಯ ಬಳಿಕ ಹಿಂದೀ ರಕ್ತಮಿಶ್ರಿತರುವ ಅಫಘಾನ ಅಥವಾ ಪಠಾಣರ ನಾಡಾಯಿತು. ಬ್ರಿಟಿಷರ ಕಾಲದಲ್ಲಿ ಅಫಘಾನಿಸ್ತಾನವು ಅಮೀರ್ ಇಲಿಯವ ಮತ್ತು ಗಳನ್ನೊಡನೆ ಪ್ರಾಂತ್ಯಗಳೆಂಬ ಮೂರು ಭಾಗಗಳಾಗಿ ಕೆಲಭಾಗವು ಬಲೂಚಿಸ್ತಾನದಲ್ಲಿಯೂ ಸೇರಿತು. ಪಠಾಣರು ಬೇರೆ ಬೇರೆ ಕಾಲದಲ್ಲಿ ಕಾಬೂಲ ಮುಸ್ಲಿಮ್ ಅರಸರ ಸಾರ್ವಭೌಮತ್ವವನ್ನು ಒಪ್ಪದೆ ಸ್ವತಂತ್ರವಾಗಿಯೇ ವರ್ತಿಸುತ್ತಿದ್ದ ವೇಗ ಬ್ರಿಟಿಷ್ ಚಕ್ರಾಧಿಪತಿಗಳಿಗೆ ಬೇಸರವನ್ನುಂಟು ಮಾಡುತ್ತಿದ್ದರು. ಪಾಶ್ಚಾತ್ಯ ನಾಗರೀಕತೆಯಲ್ಲಿ ಲೀನರಾದ ಪಾಕಿಸ್ತಾನ ನಾಯಕರಾದ ಜಿನ್ನಾ ಸಾಹೇಬರನ್ನು ಅವರು ನಂಬುತ್ತಿಲ್ಲ. ಬರುವ ರಿಫರೆಂಡಮಿನ ಮೂಲಕ ಅವರು ಪಾಕಿಸ್ತಾನದೊಳಗೆ ಬಲಾತ್ಕಾರದಿಂದ ಸೇರಿಸಲ್ಪಟ್ಟರೆ ಜಿನ್ನಾ ಸಾಹೇಬರು ಈ ತನಕ ನಡಸಿದ ದೇಶಚ್ಛಿದ್ರ ಚಟುವಟಿಕೆಗಳ ಕಹಿ ಫಲವನ್ನು ಅವರು ಉಣ್ಣುವಂತಾಗುವದು. ಬಲೂಚಿಸ್ತಾನವು ಪಾಕಿಸ್ತಾನಕ್ಕೆ ಸೇರುವುದೆಂದು ನಿಶ್ಚಯಿಸಿದೆ. ಪಾಕಿಸ್ತಾನದ ಗಡಿಗಳನ್ನು ನಿಶ್ಚಯ ಮಾಡಲಿಕ್ಕಾಗಿ ಜೂನ್ 30ನೇ ದಿನ ಬಂಗಾಳದ ಮತ್ತು ಪಂಜಾಬ ಬೌಂಡರಿ ಕಮಿಶನುಗಳು ನೇಮಕವಾಗಿವೆ. ಆದರೆ ಇದಿ ಒಳಗಿಟ್ಟು ಬಿಲವನ್ನು ಮುಟ್ಟಿದಂತೆ ಪಠಾಣರ ಸಮಸ್ಯೆಯನ್ನು ಹಾಗೆಯೇ ಇಟ್ಟು ಜಿನ್ನಾ ಸಾಹೇಬರು ತಮ್ಮ ಪಾಕಿಸ್ತಾನ ಸಿಂಹಾಸನವನ್ನೇರುವರು. ಅವರ ಜಯಭೇರಿಯು ಬೇಗನೇ ಬೇರೆ ಸ್ವರವನ್ನು ನುಡಿಯ ತೊಡಗುವಂತಿದೆ.

ನರೇಂದ್ರರಲ್ಲಿನ್ನೂ ಐಕ್ಯಮತ್ಯವಿಲ್ಲ. ಇವರಲ್ಲಿ ಅಧಿಕಾಂಶವಿರುವ ಹಿಂದೀ ಯೂನಿಯನ್ನಿನೊಂದಿಗೆ ಸಹಕರಿಸ ನಿಶ್ಚಯಿಸಿದರೂ ಹೈದರಾಬಾದು ತಿರುವಾಂಕೂರುಗಳಲ್ಲಿ ಸ್ವಾತಂತ್ರ್ಯ ಸ್ಥಾಪನೆಯ ಆಶೆಯೂ ಮಧ್ಯಹಿಂದೀ ಪ್ರಾಂತ್ಯದ ಸಂಸ್ಥಾನಗಳಲ್ಲಿ ಹೇಗೆ ವ್ಯವಹರಿಸಿಕೊಳ್ಳಬೇಕೆಂಬ ಕುರಿತು ತಳಮಳವೂ ಕಾಣುತ್ತಿವೆ. ಭೂಪಾಲ ನವಾಬರ ಕಡೆಯಿಂದ ಸರ್ ಜಫ್ರುಲ್ಲಾ ಖಾನರು ಇಂಗ್ಲಾಂಡಿನಲ್ಲಿ ಅಂತರಂಗದ ಚಳವಳವನ್ನೇನೋ ನಡೆಸುತ್ತಿದ್ದಾರೆ. ಇಂಡೋರು ಮಹಾರಾಜರು ತಮ್ಮ ಮುಂದಿನ ಕರ್ತವ್ಯದ ಕುರಿತು ಜಯಕಾರರೊಡನೆ ಮಂತ್ರಾಲೋಚನೆಯನ್ನು ಪಡೆಯಲಿಕ್ಕಾಗಿ ಇಂಗ್ಲಾಂಡಿಗೆ ಸ್ವತಹಾ ಹೋಗಿರುವರು. ನರೇಂದ್ರರು ಪಾಕಿಸ್ತಾನ ಇಲ್ಲವೆ ಉಳಿದ ಹಿಂದೀದೇಶದ ರಾಜ್ಯಾಂಗ ರಚನಾ ಸಭೆಯ ಕಾರ್ಯಗಳಲ್ಲಿ ಭಾಗವಹಿಸಬೇಕಲ್ಲದೆ ಪ್ರತ್ಯೇಕ ರೀತಿಯಿಂದ ವರ್ತಿಸಬಾರದೆಂದು ತಮ್ಮ ಅಭಿಪ್ರಾಯವನ್ನು ಬ್ರಿಟಿಷ ಮಂತ್ರಿಮಂಡಲದವರು ಈ ಮೊದಲೇ ಸೂಚಿಸಿರುವರು. ಆದರೂ ನರೇಂದ್ರರಲ್ಲಿನ್ನೂ ಸ್ವಾತಂತ್ರ್ಯದ ವಿಚಾರಗಳು ಸಂಪೂರ್ಣವಾಗಿ ಹೋಗಿಲ್ಲ. ಸಂಯುಕ್ತ ರಾಷ್ಟ್ರಗಳೊಡನೆ ಸ್ವತಂತ್ರ ವ್ಯವಹಾರಗಳನ್ನು ಬೆಳೆಸುವ ಶಕ್ತಿಯನ್ನು ಕೂಡ ಬಾ... ಸರ್ ಸಿ ಪಿ ರಾಮಸ್ವಾಮಿ ಅಯ್ಯರರು ವ್ಯಕ್ತಪಡಿಸಿದ್ದಾರೆ. ಆದರೆ ನರೇಂದ್ರರ ಆಶೆಗಳಿಗೆಲ್ಲಾ ಅವರ ಪ್ರಜೆಗಳ ಬೆಂಬಲ ಸಿಗುವುದಿಲ್ಲ. ನರೇಂದ್ರರು ಪ್ರಜಾಪ್ರತಿನಿಧಿಗಳೊಡನೆ ವಿಚಾರವಿನಿಮಯ ಮಾಡಿ ತಮ್ಮ ಸ್ವಾತಂತ್ರ್ಯ ಪ್ರಜೆಗಳಿಗೆ ಒಪ್ಪಿಸಿದರೆ ತಮ್ಮ ತಮ್ಮ ಪ್ರಜೆಗಳ ಪ್ರೀತಿ ಪಡೆದು ಅವರು ವಿವೇಕವನ್ನು ಬೇಗನೆ ಕಲಿಸುವರು.

ಹಿಂದೀ ದೇಶವೀಗ ಎರಡು ಬಲವಾದ ಶಕ್ತಿಗಳ ಹೋರಾಟದ ರಂಗಭೂಮಿಯಾಗಿದೆ. ಹಿಂದೀ ಐಕ್ಯತೆ ಸಾಮಾನ್ಯ ಜನರ ಅಧಿಕಾರ ಪ್ರಾಪ್ತಿ, ... ವರ್ಗಗಳಿಗಾಗಿ ತಮ್ಮ ಸರ್ವಸ್ವವನ್ನು ಒಪ್ಪಿಸುವ ಹಿಂದೀ ... ಹಿಂದೀ ಉಸ್ತುವಾರಿಗಳಿಗಾಗಿ ... ಶಕ್ತಿಯೊಂದು — ಸ್ವಾರ್ಥಮೂಲವಾಗಿ ಮತಭೇದ, ಜಾತಿಭೇದ, ಸಾಂಘಿಕ ಭೇದ ಶ್ರೀಮಂತ ದರಿದ್ರ ಭೇದಗಳ ವಿಷವನ್ನುಣ್ಣುತ್ತಾ ಕಾದಿರುವ ಶಕ್ತಿಯಿನ್ನೊಂದು. ಈಗ ಕಾದಾಡುತ್ತಲಿವೆ. ಮುಂದಣ ದಿನಗಳು ಯಾರಿಗೆನ್ನುವ ಕುರಿತು ಸಂಶಯಕ್ಕೇನೂ ಎಡೆತೋರದಿದ್ದರೂ ಆಶೋತ್ತರ ... ಸಾನವಾದ ದಿನಗಳು ಮುಂದೆ ಬರುವವು. ... ಕಷ್ಟಗಳೇನೂ ದಾಟಿಕೊಳ್ಳುವೆವೆಂದು ಹೇಳಸಾಧ್ಯವಿಲ್ಲ. ಹಿಂದೀ ದೇಶದ ಸ್ಥಿತಿಯು ಈ ವಿಷಯದಲ್ಲೀಗ ಇತರ ಜಗತ್ತಿನ ಸ್ಥಿತಿಯನ್ನೇ ಹೋಲುತ್ತಿದೆ. ಅಲ್ಲಿಯೂ ಸೈನ್ಯದ ಬಲ, ಆರ್ಥಿಕ ಬಲಗಳಿಂದ ಕೊಬ್ಬಿರುವ ರಾಷ್ಟ್ರಗಳ ಸ್ಪರ್ಧೆಗಳೊಂದೆಡೆ ಕಾಣುತ್ತಿವೆ. ಇನ್ನೊಂದೆಡೆ ಭೂಲೋಕದ ವಿಚಾರಿಗಳಲ್ಲೆಲ್ಲಾ ಮಾನವ ಸಹೋದರತೆ, ವರ್ಣ ಭೇದಗಳ ನಿರ್ಮೂಲ, ಮಾನವೋನ್ನತಿಯ ಚಿಂತೆಗಳು ಕಾಣುತ್ತಿವೆ. ಈ ಶಕ್ತಿಗಳ ಕಾದಾಟವು ಇನ್ನೊಂದು ಮಹಾಯುದ್ಧದ ನಡುವೆಯಾಗಬೇಕಲ್ಲದೆ ಇತರ ರೀತಿಯಿಂದಾಗುವಂತಿಲ್ಲ.

"C"

ವಿಭಾಗೀಕರಣದಿಂದ ಭಾರತವು ಬಲಿಷ್ಠವಾಗುವುದು

ದೇಶದ ರಕ್ಷಣಾ ಸಾಮರ್ಥ್ಯದ ವಿಮರ್ಶೆ

ಹೊಸ ರಾಷ್ಟ್ರೀಯ ಸೈನೀಕರಣ ಧೋರಣೆ

ಪಾಕಿಸ್ತಾನದ ಭಾರತದ ರಕ್ಷಣೆಯ ಸಮಸ್ಯೆಯು ಹೇಗೆ ಬದಲಾಯಿಸಿದೆ? ಸರಿಯಾಗಿ ಪರಿಶೀಲಿಸಿ ನೋಡಿದರೆ ಭಾರತದ ರಕ್ಷಣೆಯ ಸಮಸ್ಯೆಗಳಲ್ಲಿ ಯಾವ ಸ್ಥಿತ್ಯಂತರವಾಗಲಿಲ್ಲವೆಂದು ತೋರುತ್ತದೆ. ಪಶ್ಚಿಮ ಪಂಜಾಬ, ಸಿಂಧ, ಬಲೂಚಿಸ್ಥಾನ ಮತ್ತು ಗಡಿನಾಡುಗಳು ಬೇರ್ಪಡಿಸಲ್ಪಟ್ಟದ್ದರಿಂದ ಭಾರತದ ಮತ್ತು ಅದರ ಗಡಿಗಳ ನಡುವೆ ಒಂದು ಭದ್ರ ಮಧ್ಯ ಪ್ರಾಂತ್ಯವಾಯಿತು.

ಇದರ ಸಂತ್ಯಾಂಶವನ್ನರಿಯಲು ನಾವು 1840ರ ಭಾರತದ ಪರಿಸ್ಥಿತಿಯನ್ನು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಆಗ ಪಂಜಾಬು ಸಿಕ್ಕರ ಸ್ವತಂತ್ರ ಪ್ರಾಂತ್ಯವಾಗಿತ್ತು. ಸಿಂಧವು ಅಲ್ಲಿನ ಅಮೀರರ ಆಳ್ವಿಕೆಗೊಳಗಾಗಿತ್ತು. ಬಲೂಚಿಸ್ಥಾನವು ಸಂಪೂರ್ಣ ಪರಕೀಯವಾಗಿಯೇ ಇತ್ತು. ಪಂಜಾಬದ ಗಡಿಗಳು ಕಾಶ್ಮೀರದಿಂದ ಮುಲ್ತಾನದ ತನಕ ಆವರಿಸಿದ್ದುವು. ಈಗ ವಿಭಾಗೀಕರಣದಿಂದ ಹಿಂದಿನ ಆ ಪರಿಸ್ಥಿತಿಯೇ ಪುನಃ ಉದ್ಭವಿಸಿದಂತಾಯಿತು. ಹಿಂದೂಸ್ಥಾನದ ಮಟ್ಟಿಗೆ ರಕ್ಷಣೆಯ ಗಡಿಗಳು ಸಟ್ಲೆಜ್ ನದಿಯ ವರೆಗಿದ್ದುವುಗಳು ಈ ಸ್ವಲ್ಪ ಕೆಳಗೆ ರವಿ ನದಿಯ ಹತ್ತಿರಕ್ಕಿಳಿದಂತಾಯಿತು.

★

ಅಫ್ಘಾನ್ ಗಡಿಯ ಬಳಿ ರಶ್ಯವಿರುವುದು ಒಂದು ಗಣನೀಯ ಸಮಸ್ಯೆ. 1844ರಲ್ಲಿ ರಶ್ಯವು ಈ ಕಡೆಗಳಲ್ಲೆಲ್ಲ ಹರಡಿರಲಿಲ್ಲ. 1853ರಲ್ಲಿ ರಶ್ಯವು ಮಧ್ಯ ಆಸ್ಯದ ಕೆಲವು ಪ್ರದೇಶಗಳನ್ನು ಆಕ್ರಮಿಸಿದಾಗಲೇ ಅದರ ವಿಸ್ತರಿಸುವ ಉದ್ದೇಶ ಬಯಲಾಯಿತು. 1865ರಲ್ಲಿ ಅದು ಇನ್ನಷ್ಟು ಮುಂದುವರಿಯಿತು. ಈಗ ಅಫಗಾನಿಸ್ಥಾನದ ಗಡಿತನಕ ಅದರ ರಾಜ್ಯ ವಿಸ್ತಾರವಿದೆ.

ರಶ್ಯವು ತನ್ನ ಉತ್ತರ ಪ್ರದೇಶದ ಕ್ಯಾಲ್ ಪ್ರದೇಶದಲ್ಲಿ ಕೋಟೆ ಕೊತ್ತಲಗಳನ್ನು ಕಟ್ಟಲು ನಿರ್ಧರಿಸಿದಾಗ ಅಮೇರಿಕವು ಅದರ ಎದುರಿನಲ್ಲಿರುವ ಗ್ರೀನ್‌ಲೆಂಡ್ ಪ್ರದೇಶದಲ್ಲಿ ಭದ್ರತೋಪಾಯಗಳನ್ನು ರಚಿಸಲು ನಿರ್ಧರಿಸಿತು. ಇದರಿಂದ ಒಂದು ದೇಶದ ರಕ್ಷಣೆಗೆ ಅದರ ಹತ್ತಿರವಿರುವ ದೇಶದ ಭದ್ರತೆಯೇ ಮುಖ್ಯವಾದುದೆಂಬ ಸಂಗತಿ ಸ್ಪಷ್ಟವಾಗುತ್ತದೆ

ಗಡಿನಾಡು ಬೇರ್ಪಡುವುದರಿಂದ ನಮ್ಮ ರಕ್ಷಣೆಯ ಪರಿಸ್ಥಿತಿಯು ಬದಲಾಗುವುದೇ? ಸ್ಪಷ್ಟವಾಗಿ ಇಲ್ಲವೆಂದೇ ಹೇಳಬೇಕಾಗುತ್ತದೆ. ಪಾರ್ಶಿಕೊಲ್ಲಿ, ಅರಬೀ ಸಮುದ್ರ ತೀರ ಮತ್ತು ಅಫಘಾನಿಸ್ಥಾನಗಳ ಭದ್ರತೆಯು ವಿಭಾಗೀಕರಣದ ಮೊದಲು ಎಷ್ಟು ಆವಶ್ಯವೆನಿಸುತಿತ್ತೊ ಇಂದೂ ಅದು ಅಷ್ಟೇ ಅವಶ್ಯಕವೆನಿಸುತ್ತವೆ.

ಪಾರ್ಶಿಕೊಲ್ಲಿಯನ್ನು ಪರಕೀಯರ ಸಾಮೀಪ್ಯದಿಂದ ತಪ್ಪಿಸುವುದು, ಪರ್ಶಿಯವನ್ನು ಐಕ್ಯಮತ್ಯದಲ್ಲಿರಿಸುವುದು, ಮತ್ತು ಅಫಗಾನಿಸ್ತಾನವನ್ನು ಸ್ವತಂತ್ರವಾಗಿರುವಂತೆ ನೋಡುವುದು ಇವು ಮೂರು ಇಂದು ಭಾರತದ ವಿದೇಶಾಂಗ ಧೋರಣೆಯ ಉದ್ದೇಶಗಳಾಗಿರಬೇಕಾಗುತ್ತದೆ. ಪಾಕಿಸ್ಥಾನ ನಿರ್ಮಾಣದಿಂದ ಈ ಅವಶ್ಯಕತೆಯು ಕಡಿಮೆ ಗಹನವೆನಿಸುವುದಿಲ್ಲ.

★

ಮೇಲೆ ಸೂಚಿಸಿದ ಪ್ರದೇಶಗಳ ಹತ್ತಿರಕ್ಕೆ ರಶ್ಯವು ಸಮೀಪ ಬಂದುದರಿಂದ ಭಾರತವು ಮಧ್ಯಗೂಟ ರಾಜ್ಯಗಳ ಸೂಚನೆಯ ಕಡೆಗೆ ಗಮನ ಕೊಡಬೇಕಾಗಿದೆ. ಇವುಗಳ ತಾಟಸ್ಥ್ಯ ಮತ್ತು ಸ್ವಾತಂತ್ರ್ಯಗಳು ಭಾರತದ ಭದ್ರತೆಗೆ ಅತೀ ಪ್ರಾಮುಖ್ಯದ ವಿಷಯಗಳಾಗಿವೆ. ಎರಡು ದೊಡ್ಡ ರಾಷ್ಟ್ರಗಳ ನಡುವೆ ಗೂಟ ಪ್ರದೇಶವಾಗಿರುವ ಒಂದು ಚಿಕ್ಕ ರಾಜ್ಯದ ಅಸ್ತಿತ್ವಕ್ಕೆ ತುಂಬಾ ಧಕ್ಕೆ ಇದೆ ಎಂಬುದು ಹಿಂದಿನ ಜರ್ಮನಿ ಮತ್ತು ಫ್ರಾನ್ಸ್‌ಗಳ ನಡುವಿದ್ದ ಬೆಲ್ಜಿಯಮ್ಮಿನ ಸಂಕಷ್ಟದಿಂದ ಅನುಭವಕ್ಕೆ ಬಂದಿದೆ. 1921ರಲ್ಲಿ ಅಫಗಾನಿಸ್ಥಾನವನ್ನು ಅಂತಹವೊಂದು ಗೂಟವನ್ನಾಗಿ ಮಾಡಲು ಪ್ರಯತ್ನಗಳಾದಾಗ ಆ ರಾಷ್ಟ್ರವು ಈ ಧೋರಣೆಯನ್ನು ಯಶಸ್ವಿಯಾಗಿ ವಿರೋಧಿಸಿ ತಪ್ಪಿಸಿಕೊಂಡಿತು.

ಪರ್ಶಿಯಾ ಮತ್ತು ಅಫಗಾನಿಸ್ಥಾನಗಳನ್ನು ಗೂಟ ರಾಜ್ಯಗಳಾಗಿ ಪರಿಗಣಿಸಲಿಕ್ಕಾಗುವುದಿಲ್ಲ. ಅವುಗಳ ಭದ್ರತೆಯು ಭಾರತಕ್ಕೆ ಮಹತ್ವದ್ದಾಗಿರುವುದರಿಂದ ಅವು ಸ್ವತಂತ್ರವಾಗಿ ಬಲಿಷ್ಠವಾಗಿರುವಂತೆ ಸಹಾಯವನ್ನು ನೀಡುವುದೂ ಭಾರತದ ಹೊಣೆಗಾರಿಕೆಗಳಲ್ಲೊಂದಾಗಿರುತ್ತದೆ. ಈಗ ಈ ರಾಜ್ಯಗಳಿಗೆ ಪಾಕಿಸ್ತಾನವೆಂಬ ಮತ್ತೊಂದು ಸ್ವತಂತ್ರ ರಾಜ್ಯವೂ ಸೇರುವುದರಿಂದ ಈ ಹೊಸ ರಾಜ್ಯದ ಮಹತ್ವವು ಇನ್ನಷ್ಟು ಹೆಚ್ಚುವಂತಾಗಿದೆ. ಒಂದು ವೇಳೆ ಪಾಕಿಸ್ತಾನವು ಬ್ರಿಟಿಷ್ ಸಾಮ್ರಾಜ್ಯ ಸಂಘದಲ್ಲಿ ಉಳಿಯುವುದಾದರೆ ಅದರ ರಕ್ಷಣೆಯ ಹೊಣೆಗಾರಿಕೆಯೂ ಬ್ರಿಟಿಷರದೇ ಆಗಿರುತ್ತದೆ.

★

ಕೆನಡಾ ಮತ್ತು ಸಂಯುಕ್ತ ಅಮೇರಿಕಗಳಂತೆ ಪಾಕಿಸ್ತಾನ ಹಿಂದೂಸ್ತಾನದ ಸಂಬಂಧವಿರುವುದು. ಇರ್ವ ರಾಜ್ಯಗಳೂ ಸೌಹಾರ್ದತೆಯಿಂದಲೇ ಇರಬೇಕಾಗುವುದು. ಫ್ರಾನ್ಸಿನ ಭದ್ರತೆಯು ಇಂಗ್ಲೆಂಡಿನ ಭದ್ರತೆಗೆ ಎಷ್ಟು ಪ್ರಾಮುಖ್ಯದ್ದೊ ಅಷ್ಟೇ ಹಿಂದೂಸ್ಥಾನದ ಭದ್ರತೆಯು ಹಿಂದೂಸ್ಥಾನಕ್ಕೆ ಮಹತ್ವದ್ದು.

ಈಗ ಒಂದು ದೃಷ್ಟಿಯಿಂದ ಹಿಂದೂಸ್ಥಾನ ಮತ್ತು ರಶ್ಯಕ್ಕೆ ಅಂತರವು ಹೆಚ್ಚಿದಂತಾಯಿತು. ಇಷ್ಟಾದರೂ ರಕ್ಷಣಾ ವ್ಯವಸ್ಥೆಯ ಮಟ್ಟಿಗೆ ಸಮಸ್ಯೆ ಬಗೆಹರಿದಂತಾಗಲಿಲ್ಲ.

★

ವಿಭಾಗೀಕರಣದಿಂದ ಭಾರತದ ಸೈನ್ಯ ಶಕ್ತಿಯ ಮೇಲೆ ಅದೆಂತಹ ಪರಿಣಾಮವಾಗಿದೆ? ಹಿಂದೂಸ್ಥಾನಕ್ಕೆ ಪಂಜಾಬದಿಂದ ದೊರಕುವ ಸೈನಿಕರು ಮುಂದೆ ದೊರೆಯಲಾರರು. ಆದರೆ ಉತ್ತರದ ಗಡಿನಾಡಿನ ಮೇರೆಗಳನ್ನು ಭದ್ರಪಡಿಸುವ ಹೊರೆ ಪಾಕಿಸ್ಥಾನದ ಮೇಲೇ ಬೀಳುವಂತಾಗಿದೆ. ಸಿಂಧೂ ನದೀ ಪ್ರದೇಶವನ್ನು ಭದ್ರಗೊಳಿಸುವುದೂ ಅವಶ್ಯಕ.

ಪಶ್ಚಿಮ ಪಂಜಾಬದ ಸೈನಿಕರಲ್ಲದಿದ್ದರೂ ಹಿಂದೂಸ್ಥಾನಕ್ಕೆ ಜಟ್, ಸಿಕ್, ರಾಜಪೂತ್ ಮತ್ತು ಮರಾಟಾ ಸೈನಿಕರು ಸಿಗುವ ಪ್ರದೇಶಗಳು ಈಗ ಸೇರಿಕೊಂಡಿವೆ. ಇಂದಿನ ಆಧುನಿಕ ಯುದ್ಧ ರೀತಿಯಲ್ಲಿ ಸೈನಿಕ ವಂಶದ ಮಹತ್ವ ಕಡಿಮೆಯೆ ಆಗದೆ. ನಮ್ಮ ಮದ್ರಾಸಿಯೊಬ್ಬನು ದಾರ್ಢ್ಯ ಪಂಜಾಬಿಯಷ್ಟೇ ಸಾಹಸವನ್ನು ತೋರಿಸಬಲ್ಲನು—ಇಂದಿನ ಶಸ್ತ್ರಾಸ್ತ್ರಗಳ ಸಹಾಯದಿಂದ. ಆದುದರಿಂದ ಇಂದು ಶಸ್ತ್ರಾಸ್ತ್ರ ಪ್ರಯೋಗ ಜಾಣ್ಮೆಗೇ ಹೆಚ್ಚು ಮಹತ್ವ.

★

ಇಂದಿನ ಆಧುನಿಕ ವಿಮಾನ ದಾಳಿಯ ದೃಷ್ಟಿಯಿಂದ ಒಂದು ದೇಶದಿಂದ ಇನ್ನೊಂದಕ್ಕೆ ಇರುವ ದೂರವು ಮಹತ್ವದ ಸಂಗತಿ. ರಶ್ಯಕ್ಕೆ ಪಾಕಿಸ್ಥಾನವು ಬೊಂಬ್ ದಾಳಿಗೆ ಹಿಂದೂಸ್ತಾನಕ್ಕಿಂತ ಹತ್ತಿರ. ಹಿಂದೂಸ್ತಾನದ ಆಂತರಿಕ ಪ್ರದೇಶಗಳಿಗೆ ಈಗ ಗಂಡಾಂತರವು ಕಡಿಮೆ. ಆದರೆ ನೌಕಾಯುದ ಮಟ್ಟಿಗೆ ಹಿಂದಿನಷ್ಟೇ ಗಂಡಾಂತರವಿದೆ.

(ಮುಂದುವರಿಯುವುದು)

ಭರತಖಂಡದ ಅತ್ಯಂತ ಪ್ರಸಿದ್ಧ ಮುಲಾಮು



ನೋವನ್ನು ಒಡನೆಯೇ ನಿರ್ಮೂಲಿಸುವುದು.

ನೆಗಡಿ, ಕೆಮ್ಮು, ಹರಿವಾತ, ನರಗಳ ಬಾವು, ಹಲ್ಲುನೋವು, ವಾತರೋಗ ಉಳುಕು, ದೆಬ್ಬೆ, ತಲೆನೋವುಗಳಿಗೆ—ಆ ಭಾಗವನ್ನು ಬೆಚ್ಚಗೆ ಮಾಡಿ 10–15 ನಿಮಿಷಗಳು ಲಿಟಿಲ್ಸ್ ಒರಿಯಂಟಲ್ ಬಾಮನ್ನು ತಿಕ್ಕುವುದು.

ತರ್ಕ ವಿತರ್ಕ

ತಿರುವಾಂಕೂರು ಹಿಂದೆ ಯಾವ ರಾಜ್ಯದೊಡನೆಯೂ ಸೋತಿಲ್ಲವಂತೆ. ಆದರೆ ಶತ್ರುಗಳೊಡನೆ ಯುದ್ಧ ಮಾಡಿ ಅದಕ್ಕೆ ಇನ್ನೂ ಅನುಭವವಿಲ್ಲ.

◆

ಈಗಿನ ಪಾಕಿಸ್ತಾನದಿಂದ ಅನೇಕ ಲೀಗ್ ಧುರೀಣರಿಗೆ ತೃಪ್ತಿಯಾಗಿಲ್ಲವಂತೆ. ಅವರು 'ಯಾರಿಗೆ ಬೇಕೀ ಸ್ತಾನ' ಎಂದರೆ ಕೌತುಕವಲ್ಲ.

◆

ನಮ್ಮ ಶಾಲೆಗಳಲ್ಲಿನ ದಿನನಿತ್ಯದ ವ್ಯವಹಾರದಲ್ಲಿ ಶಿಕ್ಷಣ ಕೊಡುವಂತಾಗಬೇಕೆಂದು ಮದ್ರಾಸ್ ಮಂತ್ರಿಗಳೊಬ್ಬರ ಸೂಚನೆ. ಇನ್‌ಕಮ್ ಟೆಕ್ಸ್ ಲೆಕ್ಕದಲ್ಲಿ ತಪ್ಪುಗಳಾಗುವುದಕ್ಕೆ ಇದರ ಕೊರತೆಯೇ ಕಾರಣವಿರಬಹುದು.

◆

ಪೂರ್ವ ಬಂಗಾಲದ ದಳಿತ ವರ್ಗದವರಿಗೆ ಪಾಕಿಸ್ತಾನದಲ್ಲಿ ಹಿಂದಿನಂತೆ ಸೌಕರ್ಯಗಳನ್ನೊದಗಿಸಲಾಗುವುದೆಂದು ಸುಹರ್ವರ್ದಿಯವರು ಭರವಸೆಯಿತ್ತಿದ್ದಾರೆ. ನೌಖಾಲಿಯ ಪುನರಾವರ್ತನೆ ಖಂಡಿತವೆಂದು ಸಮಾಧಾನ ತಾಳಬಹುದು.

◆

ಪಾಕಿಸ್ತಾನದ ಚಕ್ರವರ್ತಿ ಎಂಬ ಬಿರುದಿಗೆ ಜಿನ್ನರು ಆಕ್ಷೇಪಿಸಿದರಂತೆ. ಹಿಂದೂಸ್ತಾನವು ಚಕ್ರಾಧಿಪತ್ಯದಲ್ಲಿ ಸೇರುವ ತನಕ ಹಾಗೆನ್ನುವುದು ಅಸಮಂಜಸವೆಂದು ಉತ್ಸಾಹಿ ಲೀಗ್ ಘೋಷಣೆಗಾರರು ಸಮಾಧಾನಪಟ್ಟುಕೊಳ್ಳಬಹುದು.

◆

ಗಡಿನಾಡಿನ ಗವರ್ನರ್ ಕೆರೊ ಅವರು ರಜೆಯ ಮೇಲೆ ಹೋದರು. ಕುತಂತ್ರ ಮಾಡುವಾಗಲಾದರೂ ದಣಿವಾಗುವುದಿಲ್ಲವೆ? ಇಲ್ಲವೆ ಅಲ್ಲಿನ ರಾಜಕೀಯ ಉಷ್ಣತೆ ತಡೆಯಲಿಕ್ಕಾಗಲಿಲ್ಲವೆ?

◆

ತಿರುಚಿನಾಪಳ್ಳಿಯ ದ್ರಾವಿಡ ಸಂಘದವರು ಸ್ವತಂತ್ರ ದ್ರಾವಿಡ ಸ್ಥಾನಕ್ಕಾಗಿ ಚಳವಳ ಮಾಡಲಿರುವರಂತೆ. ಅವರು ಆರ್ಯರಿಗೆ 'ಬಿಟ್ಟು ತೊಲಗಿರಿ' ಎಂದರೆ ನಮ್ಮಲ್ಲಿ ಹಲವರಿಗೆ ಹೊಸ ಮನೆ ನಾಡುಗಳೆಲ್ಲಿ ದೊರಕುವವು?

◆

ಇದುತನಕದ ಒಂದು ಜನಾಂಗದ ಸೊತ್ತನ್ನು ಇಬ್ಭಾಗವಾಗಿ ಹಂಚಲಾಗುವುದಂತೆ. ಶಹಾಜಾನನು ಎರಡು ತಾಜಮಹಾಲುಗಳನ್ನು ಕಟ್ಟಿದರೆ ಈಗನದರನ್ನು ಒಡೆಯುವುದರ ಆವಶ್ಯಕತೆ ಬೀಳುತ್ತಿರಲಿಲ್ಲ!

◆

ಸಂಸ್ಥಾನಗಳು ಸ್ವತಂತ್ರವಾಗುವುದಕ್ಕೆ ಜಿನ್ನರು ಸಂಪೂರ್ಣ ಬೆಂಬಲದ ಆಶ್ವಾಸನೆ ಕೊಟ್ಟಿದ್ದಾರೆ. ಪಟಾಣಿಸ್ಥಾನಕ್ಕೂ ಅದೇ ಅನುಗ್ರಹವನ್ನವರೇಕೆ ದಯಪಾಲಿಸಬಾರದು?

◆

ಅಧ್ಯಕ್ಷರಾದ ಮೇಲೆ ಟ್ರುಮನ್ನರಿಗೆ ಹತ್ತು ವಿಶ್ವವಿದ್ಯಾಲಯ ಪದವಿಗಳು ದೊರಕಿವೆಯಂತೆ. ಅವರ ಧೋರಣೆ ವಿರೋಧಿಗಳು ಇನ್ನಾದರೂ ತಮ್ಮ ಅಧ್ಯಕ್ಷರಲ್ಲಿ ವಿವೇಕ ಮೂಡೀತೆಂದು ಹಾರೈಸುತ್ತಲಿದ್ದಾರೆ.

ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಭಂಡಾರದ ಬಾಬ್ತು ತಾರೀಕು 26-7-46ರಿಂದ ತಾರೀಕು 30-6-47ರ ವರೆಗಿನ ಪಸ್ಲಿ ಆಖೇರಿಗೆ ಸರಿಯಾಗುವಂತೆ ತಿಂಗಳು 11ರ ಜಮಾ ಖರ್ಚು ವಿವರ

ಜಮಾ ವಿವರಗಳು	ನಗದು ರೂ	ಆ	ಪೈ	ಅಕ್ಕಿ ಮು	ಕ	ಸೆ	ತೆಂಗಿನ ಕ್ಕಾ	ಸಿಯಾಳ
ಗುದಸ್ತಾ ಶಿಲ್ಕು	123	12	8	9	1	9¾		
ಗದ್ದಿಗೆ ಪೂಜೆ ಕಾಣಿಕೆ	2938	3	3					
ಗದ್ದಿಗೆ ಪೂಜೆ ಸಮಯ ಎದ್ದು ಗೇಣಿ ವ ಖರ್ಚಿಗೆ ಬಂದದ್ದು	351	9	0					
ಕುಂಕುಮಾರ್ಚನೆ	14	4	0					
ಹಿಂದಿನ ಶಿಲ್ಕು ಹವನು ಬೆಳ್ಳಿ ವಗೈರೆ ವಿಕ್ರಿಕದಿಂದ ಜಮಾ	3666	0	0					
ನವರಾತ್ರಿ	7	8	0					
ಮಾರಿಪೂಜೆ	913	7	6					
ಉಡ್ಪಿ ಡಿ. ಮು. ಕೋರ್ಟು 51/41ನೇ ಖರ್ಚಿನ ವೈಕಿ ಜಮಾ	73	0	0					
ಗೇಣಿ ಉತ್ಪತ್ತಿ	1586	5	3	8	0	0	377	397
ಬೇಂಕು ಡಿಪೋಜಿಟ್ ವ್ಯಾದೆ ಅದ್ಸ್ಲ ಜಮಾ	708	6	0					
ಜುಮ್ಲಾ	10372	7	8	17	1	9¾	377	397

20-5-47ರಿಂದ ಹರಿಕೆ ಬಂದ ಮುಗುತಿ 2 ಬೊಟ್ಟು, 4, ಜರ್ಮನ್ ಕರಿಮಣಿ 1 ಎಳೆ, ಸಣ್ಣ ತಗಡು, ದೃಷ್ಟಿ 1, ತೊಟ್ಲುಚೂರು 1, ಬೆಳ್ಳಿ ತಗಡುಚೂರು 1 ಕೂಡಾ ಶಿಲ್ಕು

ಖರ್ಚು ವಿವರಗಳು	ನಗದು ರೂ	ಆ	ಪೈ	ಅಕ್ಕಿ ಮು	ಕ	ಸೆ	ತೆಂಗಿನ ಕ್ಕಾ	ಸಿಯಾಳ
ಆಸ್ತಿಗಳ ತೀರ್ವೆ	921	8	0					
ಗದ್ದಿಗೆ ಪೂಜೆ	240	5	9	0	9	9	259	370
ನವರಾತ್ರಿ	371	7	9	1	1	0		27
ಮಾರಿಪೂಜೆ	360	1	5	4	1	6		
ಆಸ್ತಿಗಳ ಕೃತದ ಖರ್ಚು	98	12	0	0	1	18½		
ಉಡ್ಪಿ ಡಿ. ಮು. ಕೋರ್ಟು 51/41ರ ಕೋರ್ಟು ಖರ್ಚು	107	7	9					
ಎಂಡೋಮೆಂಟು ಬೋರ್ಡಿಗೆ	4[illegible]3	6	0					
ಬರವಣಿಗೆ ಪ್ರಯಾಣ ಹಸೂರಿ	1[illegible]3	7	5					
ಬೇಂಕ ಡಿಪೋಜಿಟು	140[illegible]	[illegible]	[illegible]					
ಮಾರಿಗುಡಿ ಸುತ್ತುವಳಿಗಳ ಕೆಲ್ಸದ ಬಗೆ	1[illegible]69	6	[illegible]					
ವೆಂಕಟ್ರಮಣ ದೇವರ ಭಂಡಾರಕ್ಕೆ	175	0	0	3	0	0	118	
ಸಪ್ತಾಹದ ಬಗೆ	9	15	[illegible]					
ಮುಹಲಿಗೆ ಣ	4	[illegible]	9					
ಮಾರಿಪೂಜೆ ಅವ ನಾತ್ರು [illegible] ಖರ್ಚು	50	[illegible]	0					
ನೌಕರರ ತಲಬು	13[illegible]8	1	9					
ಆಖೇರ ಶಿಲ್ಕು	2	1	8	1	0	9¼		
ಜುಮ್ಲಾ	10372	[illegible]	8	17	1	9¾	37	397

K Narasimha Shenoy
Manager

ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಭಂಡಾರದ ಬಾಬ್ತು 1947-48ಕ್ಕೆ ಅಂದಾಜು ಜಮಾ ಖರ್ಚು

1947-48ಕ್ಕೆ ಅಂದಾಜು ಜಮಾ ರೂ	ಆ	ಪೈ	ಖಾತೆಯ ಹೆಸರು	1947-48ಕ್ಕೆ ಅಂದಾಜು ಖರ್ಚು ರೂ	ಆ	ಪೈ
2	15	8	ಗುದಸ್ತಾ ಶಿಲ್ಕು			
13	9	0	ಶಿಲ್ಕು ಅಕ್ಕಿ ಮು 1 0 8¼ರ ಪ್ರಕಾರ			
1500	0	0	ಗೇಣಿ ಉತ್ಪತ್ತಿ			
3500	0	0	ಗದ್ದಿಗೆ ಪೂಜೆ, ಮಾರಿಪೂಜೆಗಳಿಂದ			
12000	0	0	ಬೇಂಕು ಡಿಪೋಜಿಟಿನಿಂದ			
			ಆಸ್ತಿಗಳ ತೀರ್ವೆ	221	8	0
			ನೌಕರರ ತಲಬು	1561	15	0
			ಮಾರಿಪೂಜೆ, ನವರಾತ್ರಿ ಗದ್ದಿಗೆ ಪೂಜೆ	1200	0	0
			ಎಂಡೋಮೆಂಟು ಬೋರ್ಡಿಗೆ	273	6	0
			ಬರವಣಿಗೆ ಪ್ರಯಾಣ ಹಸೂರಿ	175	0	0
			ವ್ಯವಹರಣೆ	100	0	0
			ಸಪ್ತಾಹ ಸಮಾರಾಧನೆಗೆ	100	0	0
			ಆಸ್ತಿಗಳ ಕೃತದ	100	0	0
			ಸುತ್ತುವಳಿಗಳ ಬಗ್ಗೆ	12000	0	0
			ವೆಂಕಟ್ರಮಣ ದೇವರ ಭಂಡಾರಕ್ಕೆ	500	0	0
			ಮಾರಿಗುಡಿ ತೆಂಕುದಿಕ್ಕಿನ ಹಳೆಕೆರೆ ದುರುಸ್ತಿಗೆ	500	0	0
			ಶಿಲ್ಕು	284	11	8
17016	8	8	ಅಕ್ಕಿಮುಡಿ 9 0 0 ನಗ್ದಿಯಿಂದ ಖರ್ಚು	17016	8	8

ಕಾಪು ಶ್ರೀ ವೆಂಕಟ್ರಮಣ ದೇವರಭಂಡಾರದ ಬಾಬ್ತು ತಾರೀಕು 26-7-46ರಿಂದ ತಾರೀಕು 30-6-47ರ ವರೆಗಿನ ಪಸ್ಲಿ ಆಖೇರಿಗೆ ಸರಿಯಾಗುವಂತೆ ತಿಂಗಳು 11ರ ಜಮಾ ಖರ್ಚು ವಿವರ

ಜಮಾ ವಿವರಗಳು	ನಗದು ರೂ	ಆ	ಪೈ	ಅಕ್ಕಿ ಮು	ಕ	ಸೆ	ತೆಂಗಿನ ಕ್ಕಾ
ಗುದಸ್ತಾ ಶಿಲ್ಕು	55	18	0	11	0	5¾	
ಗೇಣಿ ಉತ್ಪತ್ತಿ	970	0	1	37		7	60
ಮಾರಿಯಮ್ಮ ದೇವರ ಭಂಡಾರದಿಂದ	475	0	0	9	0	0	118
ಅಂಮೃತ ಕೆರಿಗೆ ಬಂದಬಾಬ್ತು				0		7	
ಪ್ರಾಣದೇವರ ಕಾಣಿಕೆ	12	1	6				
ವೆಂಕಟ್ರಮಣದೇವರ ಕಾಣಿಕೆ	40	13	0				
ಶ್ರೀ ಕಾಶೀಮಠದ ಕಾಣಿಕೆ	3	8	0				
ವಸೂಲಿ ವರ್ಗದಲ್ಲಿ ಜಮಾ	14	0	0				
ಜುಮಲಾ	1521	14	7	58	2	5¾	178

ಖರ್ಚು ವಿವರಗಳು	ನಗದು ರೂ	ಆ	ಪೈ	ಅಕ್ಕಿ ಮು	ಕ	ಸೆ	ತೆಂಗಿನ ಕ್ಕಾ
ಆಸ್ತಿಗಳ ತೀರ್ವೆ	148	-	0				
ನಿತ್ಯ ವಿನಿಯೋಗ ಎಲೆ ಅಕ್ಕಿ ವಗೈರೆ ನಂದಾದೀವ್ಗಿ ಎಣ್ಣೆ ಕ್ರಯ	580	1	7	41		5	178
ಸಮಾರಾಧನೆ ಶಾಶ್ವತ ಸಂತರ್ಪಣೆ	94	4	6	1	1	5	
ಅನಂತ ವ್ರತದ ಬಾಬ್ತು	11	8	11			8	
ವ್ಯವಹರಣೆ	74	1	0				
ಬರವಣಿಗೆ ಪ್ರಯಾಣ ಹಸೂರಿ	59	4	1				
ಉತ್ಸವ ವಸಂತಗಳ	186	5	[illegible]				
ನೌಕರರ ತಲಬು	140	0	0				
ಎಂಡೋಮೆಂಟು ಬೋರ್ಡಿಗೆ	123	9	0				
ಆಖೇರು ಶಿಲ್ಕು	1	15	4	16		1¾	
ಜುಮಲಾ	1521	14	7	58	2	5¾	178

K Narasimha Shenoy
Manager

ಕಾಪು ಶ್ರೀ ವೆಂಕಟ್ರಮಣ ದೇವರ ಭಂಡಾರದ ಬಾಬ್ತು 1947-48ಕ್ಕೆ ಅಂದಾಜು ಜಮಾ ಖರ್ಚು

1947-48ಕ್ಕೆ ಅಂದಾಜು ಜಮಾ ರೂ	ಆ	ಪೈ	ಖಾತೆಯ ಹೆಸರು	1947-48ಕ್ಕೆ ಅಂದಾಜು ಖರ್ಚು ರೂ	ಆ	ಪೈ
1	15	4	ಗುದಸ್ತಾ ಶಿಲ್ಕು			
176	6	8	ಶಿಲ್ಕು ಅಕ್ಕಿ ಮುಡಿ 16-0-1¾ರ ಕ್ರಯ			
1000	0	0	ಗೇಣಿ ಉತ್ಪತ್ತಿ, ಅಕ್ಕಿ ಕ್ರಯ ಕೂಡಾ			
15	0	0	ಕಾಣಿಕೆ			
500	0	0	ಮಾರಮ್ಮ ದೇವರ ಭಂಡಾರದಿಂದ			
			ಆಸ್ತಿಗಳ ತೀರ್ವೆಗೆ	148	2	0
			ನಿತ್ಯ ವಿನಿಯೋಗ ಎಲೆ ಅಕ್ಕಿ ವಗೈರೆ ನಂದಾದೀವ್ಗಿ ಎಣ್ಣೆ ಕ್ರಯ	700	0	0
			ಸಮಾರಾಧನೆ ಶಾಶ್ವತ ಸಂತರ್ಪಣೆ	100	0	0
			ಉತ್ಸವ ವಸಂತ	300	0	0
			ಬರವಣಿಗೆ ಪ್ರಯಾಣ ಹಸೂರಿ	75	0	0
			ವ್ಯವಹರಣೆ	100	0	0
			ನೌಕರರ ತಲಬು	162	0	0
			ಎಂಡೋಮೆಂಟ್ ಬೋರ್ಡಿಗೆ	90	0	0
			ಆಖೇರು ಶಿಲ್ಕು	28	8	7
1693	5	7	ಅಕ್ಕಿ ಮುಡಿ 45 ನಗ್ದಿಯಿಂದ ಖರ್ಚು	1693	5	7

ಮನುಷ್ಯ ಅಧಃಪಾತಕ್ಕೆ

ಕೂಲಿಯುವರು ಸಿಕ್ಕದ ಊರುಗಳಲ್ಲಿ "ಕೆಲಸ ಕಡಿಮೆ ಮಾಡುವ ಯಂತ್ರ"ಗಳನ್ನು ಬಳಸುತ್ತಾರೆ; ಅವು ಕೂಲಿಯುವರು ಬಹಳವಾಗಿರುವ ದೇಶಗಳಲ್ಲಿ "ನಿರುದ್ಯೋಗಿ ಪ್ರಾಣಿಗಳ"ನ್ನುಸುತ್ತವೆ. ಮೊದಲು ಶ್ರಮ ಕಡಿಮೆ ಮಾಡುವ ಸಾಧನಗಳು ಬಂದೊಡನೆ ಕಸಬುದಾರರಿಗೆ ಕೆಲಸವಿಲ್ಲದಂತಾಯಿತು. ಅನಂತರ "ಹಳ್ಳಿಯ ಹುಂಬರು, ತಿನ್ನುವ ರೊಟ್ಟಿ"ಗಾಗಿ ಮನುಷ್ಯನು ಪಶುಗಳೊಡನೆ ಸ್ಪರ್ಧೆಗೆ ನಿಲ್ಲಬೇಕಾಗುತ್ತದೆ.

ಇದು ರಿಕ್ಷಾ ಕೂಲಿಗಳ ಪದ್ಧತಿಯಾಗಿದೆ; ಅವರು ಟಾಂಗಾ ಕುದುರೆಗಳೊಡನೆ ಸ್ಪರ್ಧಿಸಬೇಕಾಗಿದೆ. ಟಾಂಗಾಕ್ಕೆ ಒಂದು ಕುದುರೆ ಒಬ್ಬ ಸಾರಥಿ ಬೇಕಾಗುತ್ತದೆ. ರಿಕ್ಷಾದಲ್ಲಿ ಕುದುರೆಯಿಲ್ಲ; ಕುದುರೆ ಮತ್ತು ಸಾರಥಿ– ಈ ಇಬ್ಬರ ಕೆಲಸವನ್ನೂ ಕಡಿಮೆ ಕೂಲಿಗೆ ರಿಕ್ಷಾವಾಲನೇ ನಿರ್ವಹಿಸುತ್ತಾನೆ. ಹೀಗೆ ಮನುಷ್ಯತ್ವದಿಂದ ಮನುಷ್ಯನು ಪಶುತ್ವಕ್ಕೆ ಬೀಳುತ್ತಾನೆ. ಮನುಷ್ಯನ ದೇಹರಚನೆ ಕುದುರೆಯಂತಿಲ್ಲ. ಆದುದರಿಂದ ಈ ಕೆಲಸದಿಂದ ಅವನೆದೆಗೆ ಬಹಳ ಪೆಟ್ಟಾಗುತ್ತದೆ. ಮತ್ತು ತನ್ನ ಅನ್ನದ ತುತ್ತಿನೊಡನೆ ಜಾಗ್ರತೆಯಾಗಿ ಮರಣವನ್ನು ಕಾಣುತ್ತಾನೆ.

ಅಂತಹ ಹೀನ ಕಾರ್ಯವನ್ನು ನಡೆಯಲು ಬಿಡುವ ಯಾವ ಸಮಾಜವೇ ಆಗಲಿ ರಾಕ್ಷಸೀ ಕೃತ್ಯಮಾಡಿದ ಅಪರಾಧಕ್ಕೆ ಗುರಿಯಾಗುತ್ತದೆ. ಪ್ರಾಣಿದಯಾಸಂಘಗಳನ್ನು ಜನರು ಸಂಘಟಿಸಿದ್ದಾರೆ; ಆದರೆ ದಾರಿದ್ರ್ಯದ ಒತ್ತಾಯಕ್ಕೊಳಗಾಗಿ ದನಗಳ ಆಹಾರಕ್ಕೆ ಬಾಯಿ ನೀರುಬಿಡುವ ಜನರ ಆರ್ತಸ್ವರವನ್ನು ಕೇಳುವವರಾರೂ ಇಲ್ಲವೆ?

ಕಡೆಯಪಕ್ಷ, ಒಂದಾವರೂ ಸ್ಥಳದಲ್ಲಿ ಸ್ವಾತಂತ್ರ್ಯ ಮೂಡಿಬರುವ ಈ ಕಾಲದಲ್ಲಿ ಸಮಾಜ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ತೊಡಗಿರುವುದು ಸಂತೋಷದ ಸಂಗತಿ.

ಸುಮಾತ್ರದ ಮೇಡಾನ ನಗರದಲ್ಲಿ ಚೀನೀಯರು ಅಲ್ಲಿ ತಿರುಗುತ್ತಿದ್ದ ಈ ರಿಕ್ಷಾಗಳನ್ನು ಕೊಂಡು ನಾಶಗೊಳಿಸಿದರು; ಕೂಲಿಗಳಿಗೆ ನೂರು ನಾಣ್ಯಗಳನ್ನಿತ್ತು ಚೀನಾಕ್ಕೆ ಕರೆದೊಯ್ದರು; ಕೆಲವರಿಗೆ ಅಲ್ಲೇ ಬೇರೆಯ ಕೆಲಸ ಕೊಡಿಸಿದರು.

ಮದ್ರಾಸು ನಾಗಪುರಗಳಂತಹ ನಮ್ಮ ರಿಕ್ಷಾಮಯ ಪಟ್ಟಣಗಳು ಅವರಿಂದ ಒಂದು ನೀತಿ ಪಾಠ ಕಲಿತುಕೊಂಡು ತಮ್ಮಲ್ಲಿ ಸಾಮಾಜಿಕ ಕರ್ತವ್ಯೋದ್ಬೋಧವಾಗಿದೆಯೆಂದು ತೋರಿಸುವರೆ? ಈ ಕುತ್ಸಿತ ಯಾನವನ್ನು ಬಹಿಷ್ಕರಿಸುವುದನ್ನು ಬಿಟ್ಟು ಮದ್ರಾಸು ಅದಕ್ಕೆ ಅಪ್ಪಣೆ ಕೊಡುವ ಸಿದ್ಧತೆ ನಡೆಸಿದೆ. ಇಂತಹ ದುಸ್ಥಿತಿಗೊಳಗಾದ ಮಾನವಕುಲವಿಭಾಗಕ್ಕೆ ಸ್ವರಾಜ್ಯದಿಂದ ಯಾವ ಪ್ರಯೋಜನ ಉಂಟಾದಂತಾಯಿತು?

ಮರುಭೂಮಿ

ವರ್ಷಕ್ಕೆ 300 ಚದರ ಮೈಲುಗಳಂತೆ ರಾಜಪುತಾನಾದ ಮರುಭೂಮಿ ಅಗಲವಾಗುತ್ತಿದೆಯೆಂದು ಅರಣ್ಯ ಸಂಶೋಧ ಸಂಸ್ಥೆಯವರು ನಮ್ಮ ಗಮನಕ್ಕೆ ತಂದಿದ್ದಾರೆ. ಇದು ಬಹಳ ತೀವ್ರ ವ್ಯಥೆಯನ್ನುಂಟುಮಾಡುವ ಸಂಗತಿ. ಇದನ್ನು ಚೆನ್ನಾಗಿ ಪರಿಶೀಲಿಸಿ ನೋಡಬೇಕಾಗಿದೆ. ಆಗಲೆ ಸ್ವಲ್ಪವಾಗಿರುವ ಬೆಳೆವ ಭೂಮಿಯನ್ನು ಮರುಭೂಮಿಯಾಗಬಿಡಲು ಭಾರತಕ್ಕೆ ಸಾಧ್ಯವಿಲ್ಲ.

ಇದರ ಜೊತೆಗೆ ಕೃತಕಗೊಬ್ಬರವನ್ನು ಯುಕ್ತಾಯುಕ್ತ ವಿವೇಕವಿಲ್ಲದೆ ಉಪಯೋಗಿಸುವ ಅಪಾಯವೂ ಸೇರಿದೆ. ಹಾಗೆ ಬೆಳೆದರೆ ಕೆಲವು ವರ್ಷಗಳಲ್ಲಿ ಒಳ್ಳೆಯ ಗದ್ದೆಗಳು ಬಂಜರು ಬೀಳುವಂತಾಗಬಹುದು.

ನಮ್ಮನ್ನೆದುರಿಸುವ ಈ ದುರ್ಭೇದ್ಯ ಪ್ರಶ್ನೆಗಳನ್ನು ಉತ್ತರಿಸಲು ಸರಕಾರವು ಸಂಬಂಧಿಸಿದ ಖಾತೆಯನ್ನು ಒತ್ತಾಯ ಪಡಿಸುವುದೆಂದು ಆಶಿಸುತ್ತೇನೆ.

ದನಕರುಗಳು

ಕಳೆದ ಕೆಲವು ವರ್ಷಗಳಲ್ಲಿ ಪರದೇಶದ ಸೈನಿಕರ ಮತ್ತು ಬಂದಿಗಳ ಆಹಾರಕ್ಕಾಗಿ ಲಕ್ಷಗಟ್ಟಲೆ ದನಕರುಗಳನ್ನು ಕಡಿಯಲಾಯಿತು. ಇದರಿಂದ ಹಾಲಿನ ಕೊರತೆ ಬಹಳ ಹೆಚ್ಚಾಯಿತು. ಉತ್ತಮ ವರ್ಗದ ದನಗಳನ್ನು ಸಾಕುವ ಪದ್ಧತಿಯನ್ನನುಸರಿಸುವ ತೀವ್ರ ಧೋರಣವನ್ನನುಸರಿಸುವದಲ್ಲದೆ ಹಾಲಿನ ಪುಡಿಯನ್ನು ಆಯಾತ ಮಾಡುವುದು ಇದರ ನಿವಾರಣೆಯ ಮದ್ದಲ್ಲ. ಉಳುವ ಹೋರಿಗಳ ಕೊರತೆಯನ್ನು ನೀಗಿಸಲು ನಮ್ಮ ಸರಕಾರಗಳು "ಟ್ರಾಕ್ಟರ್ಸ್"ಗಳನ್ನು ತರ ಹೋಗುತ್ತವೆ: ಇದರಿಂದ ತಾತ್ಕಾಲಿಕವಾಗಿ ಸ್ವಲ್ಪ ಉಪಯೋಗ ಕಂಡರೂ ಶಾಶ್ವತವಾಗಿ ಈ ಪ್ರಶ್ನೆಯನ್ನು ಎದುರಿಸಲು ಬೇರೆಯ ಮಾರ್ಗವನ್ನೇ ಅನುಸರಿಸಬೇಕಾದೀತು.

—ಜಿ. ಸಿ. ಶಿವಪ್ಪ

ಚರ್ಚಿಲ್ಲರು ಅಧಿಕಾರಕ್ಕೆ ಬರುವರು !

ಸ್ಟೆಲಿನನ ಮರಣಕಾಲ ಸಮೀಪಿಸಿದೆ.

ಪ್ರಖ್ಯಾತ ಜೋತಿಷ್ಯಜ್ಞನ ಭವಿಷ್ಯ

ಹಿಟ್ಲರನ ಅಧಃಪತನದ ಕುರಿತು ಭವಿಷ್ಯ ಹೇಳಿದ ಪ್ರಖ್ಯಾತ ಜೋತಿಷ್ಯಶಾಸ್ತ್ರಜ್ಞನಾದ ಲಿಯೋನಾರ್ಡ್ ಬ್ಲೇಡ್ ಎಂಬವನು ಇದೇ ಬರುವ ಆಗೋಸ್ಟು ತಿಂಗಳು ಅತ್ಯಂತ ಮಹತ್ವದ ತಿಂಗಳೆಂದೂ ಅನೇಕ ಗಹನ ಸಂಗತಿಗಳು ಸಂಭವಿಸಲಿರುವವೆಂದೂ, ಸದ್ಯದಲ್ಲಿ ವಿಶ್ವ ಪರಿಸ್ಥಿತಿಯು ಭೀಕರಗೊಳ್ಳುತ್ತದೆಂದೂ ತಿಳಿಸುತ್ತಾನೆ. ಅವನ ಕೆಲವು ಭವಿಷ್ಯ ಸೂಚನೆಗಳು ಹೀಗಿವೆ:

ಈಗಿನ ಬ್ರಿಟಿಷ್ ರಾಜ ಮನೆತನಕ್ಕೆ ಆಕಸ್ಮಾತ್ ದುರಂತವೊಂದು ಸಂಭವಿಸುವುದು. ಈಗಿನ ಅರಸರ ಗೃಹಗಳು ತುಂಬಾ ಕಳವಳಾಸ್ಪದ ಸ್ಥಾನದಲ್ಲಿವೆಯಂತೆ.

ಮುಂದೆ ರಾಣಿಯಾಗಲಿರುವ ರಾಜಕುಮಾರಿ ಎಲಿಜಬೇತಳ ಜಾತಕದಲ್ಲಿ ಅವಳ ಆಳ್ವಿಕೆಯು ಸುಗಮವಾಗುವುದೆಂದು ಸೂಚಿಸುವ ಲಕ್ಷಣ ಕಾಣುವುದಿಲ್ಲ.

ರಶ್ಯದ ಸ್ಟೇಲಿನನ ಬಾಳು ಈ ಜಗತ್ತಿನಲ್ಲಿ ಶೀಘ್ರ ಮುಕ್ತಾಯವಾಗುವುದು. ಬರುವ ಬೇಸಿಗೆಯೊಳಗೆ ಅವನ ಮರಣವು ಖಂಡಿತ. ಅನಂತರ ರಶ್ಯವು ಹೊಸ ದಾರಿಹಿಡಿದು ಇತರ ಜನಾಂಗಗಳೊಡನೆ ಸಹಕರಿಸುವುದು.

ಅದಕ್ಕಿಂತ ಮೊದಲು ಈಗ ರಶ್ಯವು ಜರ್ಮನಿಯ ವಿಷಯವಾಗಿ ತಳೆದ ಧೋರಣೆಯಿಂದ ಯುದ್ಧದ ಗಂಡಾಂತರವುಂಟಾಗುವುದು. ಆದರೆ ಯುದ್ಧವನ್ನು ತಪ್ಪಿಸಲಿಕ್ಕಾಗುತ್ತದೊ ಎಂಬ ಸಂಗತಿ ಬರುವ ಬೇಸಿಗೆಯಲ್ಲಿ ಸ್ಪಷ್ಟವಾಗಿ ತಿಳಿಯುವುದು.

ಭವಿಷ್ಯನಲ್ಲಿ ರಶ್ಯಕ್ಕೆ ಸಂಕಷ್ಟಮಯ ದಿನಗಳು ಕಾದಿವೆ. ಸ್ಟೇಲಿನನು ಕಳೆದುಹೋದ ಮೇಲೆ ರಶ್ಯವು ಎಲ್ಲರೊಡನೆಯೂ ಸ್ವಲ್ಪ ಕಾಲ ಕೆಣಕಾಟದಿಂದಿರುವುದು.

ತಮ್ಮ ಭವಿಷ್ಯವೇನೆಂದು ಯೋಚಿಸುತ್ತಿರುವ ಚರ್ಚಿಲ್ಲರ ಟೋರಿ ಪಕ್ಷದವರಿಗೆ ಶುಭ ಕಾಲೋದಯವಾಗಬಹುದು. ಕೆಲವೊಂದು ವಾರಗಳಲ್ಲಿಯೇ ಬಂತೆ ಅವರು ಅಧಿಕಾರಕ್ಕೆ ಬರುವ ಸಂಭವವಿದೆ.

ಚರ್ಚಿಲ್ಲರ ಪಕ್ಷವು ಜಯಶೀಲವಾಗಿ ಮೆರೆಯುವಂತಾಗುವ ಒಂದು ಪರಿಸ್ಥಿತಿಯುತ್ಪನ್ನವಾಗುವುದು. ಸದ್ಯದಲ್ಲೇ ಇಂಗ್ಲೆಂಡಿನಲ್ಲಿ ರಾಷ್ಟ್ರೀಯ ಸರಕಾರ ಬೇಕೆಂಬ ಚಳವಳವೊಂದು ಪ್ರಾರಂಭವಾಗುವುದು.

ವನಸ್ಪತಿ ಔಷಧಿಗಳಿಂದ ತಯಾರಿಸಿದ

BILE BEANS

ಬೈಲ್ ಬೀನ್ಸ್ ಆರೋಗ್ಯ ಮತ್ತು ಶಕ್ತಿ ಪ್ರದರ್ಶಕ.

ESTD. 1906.

CANARA BANK, LIMITED.

(Incorporated in British India with Limited Liability.)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29,00,000	29,00,000	Cash	1,34,91,000	1,16,16,000
Capital paid up	28,43,000	28,80,000	Govt. Securities	1,60,45,000	2,75,61,000
Reserve	11,00,000	11,00,000	Advances to customers	1,56,87,000	2,01,38,000
Deposits	3,50,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	5,000
Call Deposits from Bankers	8,60,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,09,000	Other Assets	10,26,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ಹವಾಮಾನ: ಕೃಷಿಕಾರರು ನಿರೀಕ್ಷಿಸಿದಷ್ಟು ಮಳೆ ಬಿರುಸಾಗಿಯೇ ಬಿದ್ದಿರುವುದು ಗಾಳಿಯ ರಭಸವೂ ಸಾಕಷ್ಟಿತ್ತು. ಮುಂದಿನ ಒಂದು ಮಾಸದ ವರೆಗೆ ಮಳೆ ಚೆನ್ನಾಗಿ ಬೀಳುವ 'ಭವಿಷ್ಯವನ್ನೂ ಹವಾಮಾನ ಖಾತೆಯವರು ಪ್ರಕಟಿಸಿದ್ದಾರೆ.

ಎಣ್ಣೆ ಬೆಲ್ಲ ಕಂಟ್ರೋಲ್ ನಿರ್ಬಂಧಗಳನ್ನು ಸಡಿಲು ಮಾಡಿದುದೇ ಈ ಅನಶ್ಯಕ ವಸ್ತುಗಳ ಬೆಲೆಯು ಏರಿರುವುದಾಗಿಯೂ ಎಣ್ಣೆ ಮಣಕ್ಕೆ 1ಕ್ಕೆ 30-31 ರೂಪಾಯಿಗಳಿಗೂ, ಬೆಲ್ಲ 9-10 ರೂಪಾಯಿಗಳಿಗೂ ಪಡಕೊಳ್ಳಬೇಕಾಗುವುದೆಂದೂ ತಿಳಿದುಬರುತ್ತದೆ. ಆದರೆ ಇವುಗಳ ಸರಬರಾಯಿಯು ಹೆಚ್ಚಾಗಿ ಆಗಬಹುದೆಂಬ ನಿರೀಕ್ಷೆಯೂ ಇರುವುದರಿಂದ ಈ ಬೆಲೆಗಳು ಬೇಗನೆ ಇಳಿಯುವ ಸಂಭವನಿದೆಯಾಗಿಯೂ ವ್ಯಾಪಾರಿ ಕೇಂದ್ರಗಳಲ್ಲಿ ಹಾರೈಕೆಯಿದೆ.

ಆಹಾರ ಪರಿಸ್ಥಿತಿ: ಇನ್ನು ಮುಂದಿನ ಬೆಳೆಯಾಗುವ ಎರಡು ಮೂರು ತಿಂಗಳ ತನಕ ಅಕ್ಕಿ ಸರಬರಾಯಿಯ ಸಂಕಷ್ಟವು ಬಿಗುವಿನದಾಗಬಹುದೆಂದೂ, ಈಗಾಗಲೇ ಆ ಕಠಿಣ ಸಮಯದ ಪ್ರಾರಂಭವಾಗಿದೆಯೆಂದು ಅಕ್ಕಿಯ ಪ್ರಮಾಣವನ್ನು ಒಂದು ಪಾವಿಗೆ ಇಳಿಸಿದುದರಿಂದ ತಿಳಿಯಬಹುದಾಗಿದೆ. ಗೋಧಿಯ ಸರಬರಾಯಿಯನ್ನಾದರೂ ಸರಿಯಾಗಿ ಮಾಡಲು ಪ್ರಯತ್ನಗಳಾಗಬೇಕಾದುದು ಅತ್ಯಾವಶ್ಯಕ. ಧಾನ್ಯಗಳೂ ಅವರೂನವೆಂದೇ ಹೇಳಬಹುದಾದರೂ ಸದ್ಯಕ್ಕೆ ಹೆಚ್ಚು ವೆಗಾದರೂ ಇವು ದೊರಕುತ್ತಿವೆ. ತರಕಾರಿಗಳು ಧಾರಾಳವಾಗಿ ಒದಗಲು ಇನ್ನು ಸ್ವಲ್ಪ ಅವಧಿಯಿರುವುದರಿಂದ ಬಟಾಟೆಯ ಬೆಲೆಯು ರೂ. 9ಕ್ಕೂ ಮುಟ್ಟಿದೆ. ಆಹಾರ ವಸ್ತುಗಳಲ್ಲಿ ಆದಷ್ಟು ಮಿತವ್ಯಯವಾಡುವುದು ನಗರಗಳಲ್ಲಿ ಅವಶ್ಯಕವೆನಿಸುತ್ತದೆ.

ಜಾಗೃತಿ: ಕನ್ನಡ [illegible] ದಕರಾದ ಶ್ರೀ [illegible] ಧಾರವಾಡದ [illegible] ಲಯದಲ್ಲಿ ಮುದ್ರಿಸಿ 14 [illegible] ಸ್ಟೇಟ್ ಕೋಟೆ [illegible] 1 ಇದಲ್ಲಿ ಪ್ರಕಾಶಿಸಿದರು. [illegible] ಕೆ ಎಸ್ [illegible] ಎಸ್ ನಾಗಭೂಷಣ ಇವರು ಸಂಪಾದಕ ಮಂಡಳಿಯವರು. ದೇಶೀಯ ಸಂಸ್ಥಾನಗಳ ಪ್ರಜೆಗಳಲ್ಲಿ ಜಾಗೃತಿಯನ್ನುಂಟುಮಾಡುವುದೆ ಈ ಪತ್ರಿಕೆಯ ಧ್ಯೇಯ. ಈ ಬಿರುಷ್ಟ ಗುರಿಯು ಇಂದಿನ ಪರಿಸ್ಥಿತಿಯಲ್ಲಿ ಸ್ತುತ್ಯಾರ್ಹವಾದುದು. ಮುಂದಿನ ಹೋರಾಟ ಸಂಸ್ಥಾನಗಳಲ್ಲಿ ಜರಗಲಿದೆ. [illegible] ಜಾಗೃತಿಯು ಪ್ರಕಾಶವಾದುದು ಅಭಿನಂದನೀಯವೂ ಆಗಿದೆ. ಕರ್ನಾಟಕದ ಮುಖಂಡರ ಸಾಹಿತಿಗಳ ವಿಚಾರಪರ ಲೇಖನಗಳಿವೆ. ಡೆಮಿ ಕ್ವಿ ಆಕೃತಿಯ 12 ಪುಟಗಳು ಬೆಲೆ ಎರಡಾಣೆ. ಜಾಗೃತಿಯು ಶೀಘ್ರವಾಗಿ ಕನ್ನಡಿಗರೆಲ್ಲರ ಆದರಕ್ಕೆ ಪಾತ್ರವಾಗಿ ಶ್ರೀಯ ಸ್ಕರವಾಗಿ ಸಾಗಲೆಂದು ಹಾರೈಸುವೆವು.

ಹೊಸ ಪತ್ರಿಕೆಗಳು

ಗರ್ಜನೆ: ಜೂನ್ ತಿಂಗಳ ಪ್ರಥಮ ಸಂಚಿಕೆ ಗದಗಿನಲ್ಲಿ ಶ್ರೀ ಎಚ್ ಎಲ್ ದಂಡಿ ಇವರಿಂದ ಪ್ರಕಾಶಿಸಲ್ಪಟ್ಟಿದ್ದು ಶ್ರೀ ಎ. ಎಲ್ ಬಂಕಾಪುರ ಇವರು ಸಂಪಾದಕರು. ಡೆಮಿ ಕ್ವಿ ಆಕೃತಿಯ 50 ಪುಟದ ಮಾಸಿಕ ಪತ್ರಿಕೆ. ಬೆಲೆ 4 ಆಣೆ. ಸತ್ಯ, ನ್ಯಾಯ ಇವುಗಳ ಪ್ರಸ್ಥಾಪನೆಗಾಗಿ ಜನತೆಯ ಸಾಕ್ಷ್ಯಕ್ಕಾಗಿ, ನಾಡಿನ ಐಕ್ಯಕ್ಕಾಗಿ ಹೆಣಗುವ ದೊಂದೇ ಗರ್ಜನೆಯ ಗುರಿ. ಕನ್ನಡ ಯುವಕ ಜಾಗೃತಿಯು ಗರ್ಜನೆಯ ಧ್ಯೇಯಗಳ

ಜಿಲ್ಲಾ ಪರಿಚಯ

ಲ್ಲೊಂದು ವಿಚಾರಪರ ಪ್ರಬಂಧಗಳೂ, ಲಘು ಹಾಸ್ಯ ಲೇಖನಗಳೂ, ಏಕಾಂಕ ನಾಟಕಗಳೂ, ಕವಿತೆ, ವಿಮರ್ಶೆ ಇವೇ ಮೊದಲಾದ ಲಾಕ್ಷಣೀಕ ವಿಷಯಗಳಲ್ಲದೆ ಅತ್ಯಾಧುನಿಕ ರಾಜಕೀಯ ಸಾಮಾಜಿಕ ವರ್ತಮಾನ ವಿಸಮಯಗಳೂ ಪ್ರಕಟವಾಗುತ್ತವೆ. ಪ್ರಥಮ ಸಂಚಿಕೆಯು ಯಶಸ್ವಿ ಹಾರೈಕೆಯನ್ನುಂಟುಮಾಡುವಂತಹದಾಗಿದೆ. ಕನ್ನಡಿಗರು ಇದನ್ನು ಪುರಸ್ಕರಿಸವೆಂದು ಹಾರೈಸಿ ಪತ್ರಿಕೆಗೆ ಉತ್ತರೋತ್ತರ ಅಭಿವೃದ್ಧಿ ಕೋರುವೆವು.

ಜಿಲ್ಲಾ ವಾಣಿಜ್ಯ ಸಂಘ
ಮಂಗಳೂರು

"ಪ್ರಬುದ್ಧ ಬಂದರ ಮಂಗಳೂರು" ಹಾಗಾಗಬೇಕೆಂದೇ ಏಕಕಂಠದ ತೀರ್ಮಾನ

ಬಂದರಗಳ ಅನುಕೂಲತೆಗಳ ವಿವರಣೆ— ಬಂದರ ವೃದ್ಧಿಗಾಗಿ ಸಮಿತಿ

ಕಳೆದ ತಾ 29ನೇ ಆದಿತ್ಯವಾರ ಸಂಜೆ ಜಿ. ವಾಣಿಜ್ಯ ಸಂಘದ ಕಾರ್ಯಾಲಯದಲ್ಲಿ, ಸಂಘದ ಅಧ್ಯಕ್ಷ ಶ್ರೀ [illegible] ಎಸ್ ಕುಡ್ವರ ಸತ್ಕಾರ ಕೂಟದ ಬಳಿಕ, ಪಶ್ಚಿಮ ಕರಾವಳಿ ಮಲ್ಲೊಂದು ಪ್ರಬುದ್ಧ ಬಂದರವನ್ನು ರಚಿಸುವ ಕುರಿತು ಚರ್ಚೆ ನಡೆಯಿತು.

ಈ ಸಭೆಗೆ ಹಲವಾರು ಪಕ್ರಿಕಾ ಪ್ರತಿನಿಧಿಗಳೂ, ಎಂ ಎಲ್ ಎಗಳಾದ ಡಾ ಯು [illegible] ಕೆ ಬಿ ಜಿನರಾಜ ಹೆಗ್ಗಡೆ [illegible] ಎಲ್ ಎ (ಕೇಂದ್ರ) ಶ್ರೀ ಯು [illegible] ಮಲ್ಯ, ಕೆ [illegible] ಇಂಪೀರಿಯಲ್ ಬೇಂಕ್ ಏಜೆಂಟ್ ಮಿ ಕಾಲ್ಸನ್ ಮತ್ತು ಪೋರ್ಟ್ ಆಫೀಸರ

ಮಿ. ಯಟ್ಸ್ ಇವರೂ ಸಂಘದ ಹಲವಾರು ಸದಸ್ಯರೂ ಬನ್ನಿದ್ದರು. ಶ್ರೀ ವಿ. ಎಸ್ ಕುಡ್ವರು ಅಧ್ಯಕ್ಷರಾಗಿದ್ದರು.

ಅಧ್ಯಕ್ಷರು, ಇಂದಿನ ಈ ಕೂಟದ ಉದ್ದೇಶವನ್ನು ತಿಳಿಸಿದ ಮೇಲೆ, ಬಂದರದ ಪ್ರಶ್ನೆಯ ವಿಚಾರದಲ್ಲಿ ಮಾತಾಡುವಂತೆ ಮಿ ಕಾಲ್ಸನ್ ಅವರನ್ನು ವಿನಂತಿಸಿದರು. ಮಿ. ಕಾಲ್ಸನ್ ಅವರು ಈ ವಿಷಯದಲ್ಲಿ ವಿಸ್ತಾರ ವಿವರಣೆಯ ಭಾಷಣ ಮಾಡಿ— ಮಂಗಳೂರು ಬಂದರವು ಎಲ್ಲ ವಿಷಯಗಳಲ್ಲಿಯೂ ಹೇಗೆ ವೃದ್ಧಿಗೆ ಬಂತೆಂದು ತಿಳಿಸಿದರು. ಜಿಲ್ಲೆಯ 7 ಬಂದರುಗಳಲ್ಲಿ ಮಂಗಳೂರೇ ಮುಖ್ಯವಾದದ್ದು ಎಂದು, ಮಂಗಳೂರಿನ ಹಿಂದಿನ ಇತಿಹಾಸವನ್ನು ವಿಶದೀಕರಿಸುವಾಗ, ಇಲ್ಲಿನ ವ್ಯಾಪಾರದ ಸ್ಥಿತಿ, ಸಾಂಸ್ಕೃತಿಕ ಗುಣ ಲಕ್ಷಣ, ವಿದ್ಯಾ ನಾಗರಿಕತೆಗಳ ವಿಚಾರಗಳನ್ನೂ ಮುಂದಿಟ್ಟು, ಮಂಗಳೂರಿನ ಹಂಚು, ಅಡಿಕೆ, ಗೇರುಬೀಜ, ಮೀನು, ಅದರ ಗೊಬ್ಬರ ಇತ್ಯಾದಿಗಳ ಧಾರಾಳ ವ್ಯಾಪಾರ ನಡೆಯುತ್ತಿರುವುದನ್ನೂ ಲಕ್ಷ್ಯಕ್ಕೆ ತಂದುಕೊಟ್ಟು, ಒಟ್ಟು ಇಲ್ಲಿನ ವ್ಯಾಪಾರದ ವಿನಿಯೋಗ ಸುಮಾರು 13 ಕೋಟಿ ರೂಪಾಯಿಗಳಷ್ಟಿದೆ [illegible] ಇದು ಪಶ್ಚಿಮ ಕರಾವಳಿಯಲ್ಲಿ [illegible] ವಾಗಲು ಯೋಗ್ಯವೆಂದ [illegible]

ಅನಂತರ ಮಿ. ಯಟ್ಸ್‌ಯವರು [illegible] ಮಂಗಳೂರು ಬಂದರ [illegible] ಬಂದರಗಳ ಕುರಿತು ಪ್ರಸ್ತಾಪಿಸಿ [illegible] ರವನ್ನು ಅರಿಯದರ, [illegible] ಮುಂದುಗಡೆ [illegible] ಕ ನೈಸರ್ಗಿಕ ಅನುಕೂಲತೆಗಳ [illegible] ಬೆಟ್ಟ ಇವೇ ಈ ಸಮಸ್ಯೆಯ [illegible] ತೀರ್ಮಾನವನ್ನು ಮಾಡುವುದು [illegible]

KANARA COMMERCIAL BANK LTD.

PUTTUR

H O Puttur | Estd 1920 | Branch Vittal

All kinds of Banking Business transacted.

Deposits — Current, Savings, Cumulative Deposits are accepted

Fixed Deposits for periods of 3 months and above up to 24 months are accepted.

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.

ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ ಅಷ್ಟು ಸುಖಕರ— ಅಷ್ಟು ಚರ್ಮ ಮೃದುಕರ—

ಕುಟಿಕೂರ ಟಾಲ್ಕಮ್ ಪೌಡರ್

CUTICURA TALCUM POWDER

ಈ ಚರ್ಚೆಯಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆಯವರೇ ಮೊದಲಾದವರು ಭಾಗವಹಿಸಿದ್ದರು, ಕೇಳಲಾದ ಹಲವು ಸಂದೇಹದ ಪ್ರಶ್ನೆಗಳಿಗೆ ಮಿ ಕಾಲ್ಸನ್‌ರವರು ಸಮರ್ಪಕವಾದ ಉತ್ತರ ಕೊಟ್ಟರು. ಈ ಕರಾವಳಿಯಲ್ಲಿ ಮಂಗಳೂರೇ ಪ್ರಬುದ್ಧ ಬಂದರವಾಗಲು ಯೋಗ್ಯವೆಂದು ನೆರೆದವರೆಲ್ಲರ ಏಕಾಭಿಪ್ರಾಯವಾಯಿತು.

ಬಂದರದ ಅಭಿವೃದ್ಧಿ ಕಾರ್ಯದ ಸಂಬಂಧ ಒಂದು ಸಮಿತಿಯ ರಚನೆಯಾಯಿತು. ಶ್ರೀಗಳಾದ ವಿ ಎಸ್. ಕುಡ್ವ, ಕಾರ್ಯದರ್ಶಿ, ಇತರ ಸದಸ್ಯರು ಶ್ರೀ ಕೆ ಬಿ ಜಿನರಾಜ ಹೆಗ್ಗಡೆ, ಎಂ ಎಲ್ ಎ ಗಳಾದ ಶ್ರೀ ಎಲ್ ಸಿ ಪಾಯಿಸ್, ಡಾ ಯು ಪಿ ಮಲ್ಯ, ಶ್ರೀ ಉಮಾನಾಥ ಭಂಡಾರಿ, ಎಚ್ ನಾರಾಯಣರಾವ್, ಎಚ್ ಶೀನ ರಾವ್

ಶ್ರೀ ವಿ ಎಸ್ ಕುಡ್ವರು ವಂದಿಸಿದರು, ಮಧ್ಯೆ ಅಲ್ಪಾಹಾರವೂ ಇತ್ತು.

ದ. ಕ. ಜಿಲ್ಲಾ ಪ್ರೆಸ್ ಕೆಲಸಗಾರರ ಸಂಘ: ಇದರ 10ನೇ ವಾರ್ಷಿಕ ಮಹಾಸಭೆಯು 29—6—47ರಂದು [illegible] [illegible] ಅಧ್ಯಕ್ಷತೆಯಲ್ಲಿ ಜರಗಿತು. [illegible]

ದೇವಸ್ಥಾನ ಪ್ರವೇಶ
ಪಾಂಡೇಶ್ವರ ಮಂಗಳೂರು

[illegible] ಅಧಿಕಾರಿಗಳು [illegible] ದೇವಸ್ಥಾನದ ಹೊರ ಸುತ್ತಿನ ಜೀರ್ಣೋದ್ಧಾರ ಕಾರ್ಯಕ್ಕಾಗಿ ಎಲ್ಲರೂ ಸಹಾಯವೀಯ ಬೇಕೆಂದು ಕೇಳಿಕೊಂಡರು. ಇದನ್ನು ಶ್ರೀ [illegible] ಯಲ್ಲಿ ವಿವರಿಸಿದರು. ಈ ದೇವಸ್ಥಾನಕ್ಕೆ ಸಂಬಂಧಪಟ್ಟವರು ಈ ಮೊದಲು ಪ್ರವೇಶ ಕೊಟ್ಟಿರಲಿಲ್ಲ.

ರಾಮಕೃಷ್ಣ ಮಿಶನ್ ಸಭೆ: ಇಂದು ಸಾಯಂಕಾಲ 5—15ಕ್ಕೆ ಕೆನರಾ ಹೈಸ್ಕೂಲಿನಲ್ಲಿ ಇಲ್ಲಿಯ ರಾಮಕೃಷ್ಣಾಶ್ರಮದ ಅಧ್ಯಕ್ಷ ಸ್ವಾಮಿ ವಿಮಲಾನಂದರು "ಯುವಕರಿಗೆ ಕರೆ" ಎಂಬ ವಿಷಯ ಭಾಷಣ ಮಾಡಲಿರುವರು. ಎಲ್ಲರಿಗೂ ಸುಸ್ವಾಗತ.

ಭಕ್ತಿ ವಿಶ್ವಾಸದ ಅವರ್ಣನೀಯ ಮಹಿಮೆ

ಯಾತ್ರಾಕ್ಷೇತ್ರಗಳ ಪವಿತ್ರತೆಯ ಪ್ರತಾಪ

ಅಸ್ಪೃಶ್ಯರೂ ಪಾವನರಾಗಬಹುದು

ದಕ್ಷಿಣದ ಅತ್ಯಂತ ಪವಿತ್ರ ಯಾತ್ರಾ ಸ್ಥಳವೆನಿಸುವ ತಿರುಪತಿಯ ವೈಷ್ಣವ ದೇವಾಲಯವು ಹರಿಜನರಿಗೆ ತೆರವಾಯಿತು. ಶತಮಾನಗಳಿಂದ ಸಮಾಜದ ಅತೀ ಕೆಳ ಮೆಟ್ಟಲಲ್ಲಿ ಬಹಿಷ್ಕೃತರಾಗಿ ಕೊಳೆಯುತ್ತಿದ್ದ ಅಸ್ಪೃಶ್ಯರು ಈ ಪವಿತ್ರ ದೇವಮಂದಿರದೊಳಗೆ ಪ್ರವೇಶಿಸಿ ಖಂಡಿತ ಪಾವನರಾಗುವರು—ಹೀಗೆಂದೊರ್ವ ಪ್ರಖ್ಯಾತ ಸಂಚಾರಕರು ಒಂದು ಲೇಖನದಲ್ಲಿ ತಮ್ಮ ಅನುಭವವನ್ನು ತಿಳಿಸುತಿದ್ದಾರೆ.

ತಿರುಪತಿಯಂತೆ ರಾಮೇಶ್ವರವೂ ಪುರಾಣ ಕಾಲದಿಂದ ಪ್ರಖ್ಯಾತಿಪಟ್ಟ ಕ್ಷೇತ್ರಸ್ಥಳ. ಉತ್ತರದ ಕಾಶಿಗೂ ಇದಕ್ಕೂ ಯಾತ್ರಾ ಬಾಂಧವ್ಯವಿದೆ. ಅಲ್ಲಿಯ ಗಂಗಾಜಲವನ್ನು ರಾಮೇಶ್ವರಕ್ಕೂ ಇಲ್ಲಿಯ ಮರಳನ್ನು ಕಾಶಿಗೂ ಅಭಿಷೇಕಕ್ಕಾಗಿ ಒಯ್ಯುವ ಸಂಪ್ರದಾಯವಿದೆ. ಕಲ್ಪನಾತೀತ ಕಾಲಗಳಿಂದ ಜನರು ಈ ಸ್ಥಳಗಳ ಮೇಲೆ ವಿಶ್ವಾಸವಿಟ್ಟಿರುವುದರಿಂದ ಅನೇಕ ಸಂಕಷ್ಟಗಳು ಪರಿಹಾರಹೊಂದಿದ ಘಟನೆಗಳನ್ನು ಇಲ್ಲಿಯ ಪುರೋಹಿತರುಗಳಿಂದ ಕೇಳಬಹುದು. ಅನೇಕ ಸಂತತಿಹೀನರು ರಾಮೇಶ್ವರಕ್ಕೆ ಬಂದು ಕೆಲವೊಂದು ವಿಧಿಗಳನ್ನು ಪೂರೈಸುವುದರ ಮೂಲಕ ಸಂತಾನ ಪ್ರಾಪ್ತಿ ಪಡೆದಿರುವರು. ಇವರಲ್ಲಿ ಕೆಲವರ ವಿಳಾಸಗಳನ್ನು ಪಡೆದು ನಾನು ವಿಚಾರಿಸಲು ಆ ಸಂಗತಿಯು ನಿಜವೆಂದು ರುಜುವಾತಾಯಿತು.

ರಾಮೇಶ್ವರದಲ್ಲಿ ಕಾಶೀಮಠವೆಂಬ ಯಾತ್ರಿಕ ಛತ್ರವಿದೆ. ಅಲ್ಲಿನ ಪುರೋಹಿತರು ತುಂಬಾ ಶ್ರದ್ಧಾವಂತರು. ಕೆಲವೊಂದು ವಿಶೇಷ ಜಪತಪ, ಅರ್ಚನ ಆಚಾರಗಳಿಂದ ಅವರು ಯಾತ್ರಿಕರ ಸಂಕಷ್ಟ ವಿಮೋಚನೆಗಾಗಿ ದೇವಾರಾಧನೆ ಮಾಡುತ್ತಾರೆ. ಭಕ್ತಿ ವಿಶ್ವಾಸದಿಂದಲೇ ಹೆಚ್ಚಿನ ಸಂದರ್ಭಗಳಲ್ಲಿ ಇಷ್ಟಸಿದ್ಧಿಯಾಗುವುದು.

ಭಾರತವು ಶ್ರದ್ಧೆ ವಿಶ್ವಾಸಗಳ ಆಧ್ಯಾತ್ಮ ಸಂಸ್ಕೃತಿಯ ನಾಡು. ತಲಾಂತರಗಳಿಂದ ಅನೇಕ ಪಾಶ್ಚಾತ್ಯ ಆಕ್ರಮ, ಆಕ್ರಮಣಗಳಿಂದ ಇಲ್ಲಿನ ಮಹೀಯ ಪವಿತ್ರತೆಯು ಇನ್ನೂ ಪ್ರಭಾವಪೂರ್ಣವಾಗಿ ಉಳಿಯಬೇಕಾದರೆ ಅದ್ಯಾವುದೋ ಅವರ್ಣನೀಯ ಶಕ್ತಿಯು ಇದರ ಹಿಂದೆ ತನ್ನ ಚಮತ್ಕಾರವನ್ನು ಗೈಯ್ಯುತ್ತಿರುವುದೆಂದು ನಂಬಲೇ ಬೇಕಾಗುತ್ತದೆ.

ಈ ಪ್ರಾಚೀನ ಹಿಂದೂ ದೇವಾಲಯಗಳೂ ನೋಡುವವರನ್ನು ಒಂದು ಸಲಕ್ಕೆ ದಂಗುಬಡಿಸುತ್ತವೆ. ಮೈಲು ಗಟ್ಟಲೆ ವಿಸ್ತೀರ್ಣದ ಆವರಣಗಳಲ್ಲಿ ಅಗಾಧ ಶಿಲಾಶಿಲ್ಪದ ಅಮೋಘ ಸಾಹಸ ಕೃತಿಗಳನ್ನೂ, ಕಟ್ಟಡ ಮಾದರಿಗಳನ್ನೂ ನೋಡುವಾಗಲೇ ಎಂತಹ ನಾಸ್ತಿಕನಲ್ಲೂ ಒಂದು ಸಲಕ್ಕೆ ವಿಶ್ವಾಸ ಉತ್ಪನ್ನವಾಗದಿರದು.

ಈ ಯಾತ್ರಾ ಸ್ಥಳಗಳ ಸಂಬಂಧವಾದ ದೈವೀಕ ಮಹಿಮೆಯ ವಿಚಾರವನ್ನೆ ಬಿಟ್ಟು ಪರಿಶೀಲಿಸುವುದಾದರೆ ಇವುಗಳು ಸ್ಥಾಪಿಸಲ್ಪಟ್ಟ ಸ್ಥಳಗಳು ವಿಚಿತ್ರ ಸೃಷ್ಟಿ ಲಕ್ಷಣಗಳಿಂದೊಡಗೂಡಿವೆ. ಅನೇಕ ತೀರ್ಥಗಳು ಖಂಡಿತ ವೈದಕೀಯ ಸತ್ವ ಪರಿಪೂರ್ಣವಾದವುಗಳಾಗಿವೆ.

ಉದಾಹರಣೆಗಾಗಿ ರಾಮೇಶ್ವರವನ್ನೇ ತೆಗೆದುಕೊಳ್ಳೋಣ. ಈ ಕ್ಷೇತ್ರವು 53 ಮೈಲು ವಿಸ್ತೀರ್ಣದ ಒಂದು ದ್ವೀಪದಲ್ಲಿದೆ. ದೇವಸ್ಥಾನವು ಸಮುದ್ರಕ್ಕೆ ಅತೀ ಸಮೀಪವಾಗಿದೆ. ಇಡೀ ದ್ವೀಪದಲ್ಲಿ ದೇವಸ್ಥಾನದ ತೀರ್ಥಗಳು ಮಾತ್ರ ಸಿಹಿ ನೀರಿನವುಗಳಾಗಿದ್ದು ಇತರ ಜನ ವಸತಿಯ ಯಾವ ಭಾಗದಲ್ಲೂ ಅಡಿಗೆ ಯೋಗ್ಯವಾದ ನೀರಿಲ್ಲ. ಈ ತೀರ್ಥಗಳ ನೀರು ಉತ್ತಮ ಔಷಧಿಕ ಗುಣವುಳ್ಳ ಖನಿಜ ಮತ್ತಿತರ ಉಪಯುಕ್ತ ಸತ್ವಗಳಿಂದ ಕೂಡಿರುವುವೆಂದು ತಜ್ಞರು ಪರೀಕ್ಷಿಸಿದ್ದಾರೆ. ಇಲ್ಲಿಯ ಆಸುಪಾಸಿನ ಸಮುದ್ರವು 15 ಅಡಿಗಳಿಗಿಂತ ಆಳವಿಲ್ಲ. ಒಂದು ಕಡೆ ಸಮುದ್ರ ಮಧ್ಯ ಪ್ರದೇಶದಲ್ಲೇ ಒಂದು ಚಿಕ್ಕ ತೀರ್ಥವಿದೆ. ಇಳಿತದ ಸಮಯದಲ್ಲಿ ಇದರ ನೀರು ಕುಡಿಯಲು ಯೋಗ್ಯವಾಗಿದೆ. ಭರತಿಯ ಸಮಯದಲ್ಲಿ ಇದು ಸಂಪೂರ್ಣ ಉಪ್ಪು ನೀರಿನಿಂದ ಮುಚ್ಚಿರುತ್ತದೆ.

ಹಿಂದಿನ ಕಾಲದಲ್ಲಿ ಯಾತ್ರೆ ಮಾಡಿ ಬರುವುದೆಂದರೆ ಒಂದು ಉತ್ತಮ ಶರೀರ ವ್ಯಾಯಾಮವೇ ಆಗುತಿತ್ತು. ಇದರಿಂದ ದೇಹದಾರ್ಢ್ಯವು ವೃದ್ಧಿಯಾಗಿ ಆರೋಗ್ಯವು ಉತ್ತಮಗೊಳ್ಳುತಿತ್ತು. ದೇಶ ವಾತಾವರಣ ಬದಲಾವಣೆಯಿಂದ ಮಾನಸಿಕ ಮತ್ತು ಗೃಹ ಸಂಕಷ್ಟಗಳೂ ಶಮನಗೊಳ್ಳುತಿದ್ದವು. ಒಂದು ಕುಟುಂಬವೇ ಯಾತ್ರೆ ಹೋಗುತಿದ್ದುದರಿಂದ ಸಂಸಾರಿಕರಲ್ಲಿ ಸೌಹಾರ್ದ ಭಾವನೆ ಹೆಚ್ಚುವಂತಾಗಿ ಸಮಾಜದಲ್ಲಿ ಐಕ್ಯಮತ್ಯವುಂಟಾಗುತಿತ್ತು. ಅದೇ ರೀತಿ ದೇಶದಲ್ಲಿ ಧಾರ್ಮಿಕ ಮನೋಭಾವದ ಜನರೇ ಹೆಚ್ಚಾಗಿ ಶಾಂತಿ ನೆಮ್ಮದಿಗಳಿಗೆ ಸಹಾಯಕವಾಗುತಿತ್ತು.

ಭಾರತವು ಅಖಂಡವಾಗಿಯೇ ಬಾಳುವುದು

ಬ್ರಿಟಿಷ್ ಇತಿಹಾಸಜ್ಞನ ಭವಿಷ್ಯ

ಕಳೆದ ಯುದ್ಧದಲ್ಲಿ ಭಾರತವು ವಹಿಸಿದ ಪಾತ್ರವೇನೆಂಬುದರ ಒಂದು ಇತಿಹಾಸವನ್ನು ಬರೆಯುತ್ತಿರುವ ಮಿ। ಕೊಂಪ್ಟನ್ ಮೆಕೆಂಜಿಯವರು 'ಭಾರತವು ಅಖಂಡವಾಗಿಯೇ ಬಾಳುವುದು, ಶ್ರೇಷ್ಠ ದೇಶಭಕ್ತರಾದ ಪಂಡಿತ್ ಜವಾಹರಲಾಲ್ ನೆಹುರು ಅವರ ಕನಸು ಪ್ರತ್ಯಕ್ಷ ಪರಿಪೂರ್ಣತೆಗೊಳ್ಳುವುದು ಎಂದು ಅಭಿಪ್ರಾಯ ಸೂಚಿಸಿರುವರು. ಆ ಕುರಿತು ಅವರ ವಿವರಣೆ ಹೀಗಿದೆ:

"ಕಳೆದೆಂಟು ತಿಂಗಳಿಂದ ಭಾರತೀಯ ಸೈನ್ಯ ವರ್ಗದೊಡನೆ ನನಗಾದ ಆಪ್ತ ಸಂಪರ್ಕದಿಂದ ಭಾರತವು ಒಕ್ಕೂಟವಾಗಿ ಬಾಳುವುದೆಂಬ ವಿಷಯವು ನನಗೆ ಖಚಿತವಾಗಿದೆ. ಸೈನ್ಯದಲ್ಲಿ ಐಕ್ಯಮತ್ಯವು ಒಡಗೂಡಿ ಬರಲು ಸಾಧ್ಯವಿದೆಯೆಂದಾದರೆ ಕೊನೆಯಲ್ಲಿ ಅದು ಇತರ ವಿಷಯಗಳಲ್ಲೂ ಅಸಾಧ್ಯವೆಂದು ಹೇಳಲಿಕ್ಕಾಗುವುದಿಲ್ಲ. ಕಳೆದ ಯುದ್ಧ ವಿಜಯದಲ್ಲಿ ಭಾರತ ಸಹಾಯದ ಅಗಾಧತೆಯೆಷ್ಟೆಂದು ಹೆಚ್ಚಿನ ಭಾರತೀಯರಿಗಾಗಲಿ ಬ್ರಿಟಿಷರಿಗಾಗಲಿ ಇನ್ನು ತಿಳಿದಿಲ್ಲ. ಈ ವಿಷಯದ ಸಂಪೂರ್ಣ ಇತಿಹಾಸವು ಹೇಳಲ್ಪಟ್ಟಾಗ ಇತ್ತ ಕದದರು ಕೌತುಕಗೊಳ್ಳದಿರಲಾರರು.

ದಂಗೆಯ ದೊಡ್ಡ ವರದಿ

"ಭಾರತದಲ್ಲಿ ಒಮ್ಮೆ [illegible] ನಾನು ಅಲ್ಲಿಯ ದಂಗೆಯ ದಳ್ಳುರಿಯಲ್ಲಿ ಸುಟ್ಟು ಭಸ್ಮವಾಗದೆ ಹೇಗೆ ಉಳಿದನೆಂದು ಲಂಡನಿಗೆ ನಾನು ಮುಟ್ಟಿದ ಕೆಲವೇ ಗಂಟೆಗಳಲ್ಲಿ ಅನೇಕರು ಕೌತುಕದ ಪ್ರಶ್ನೆ ಹಾಕಿದರು [illegible] ಇಲ್ಲವೆ ಸಂಪರ್ಕವಿಲ್ಲದೆ [illegible] ವ [illegible] ರೈಲು ಪ್ರ[illegible] [illegible]ದ ಮ [illegible] ಅವರ ವರಗಿಗೆ [illegible] ತು"

"ಇತಿಹಾಸದ [illegible] ಹಿ [illegible] ದಂ[illegible] ವರದಿಗ [illegible] ಬೃಹತ್ತರಿಸಲ್ಲಿ

ದುವುದು ಸಾಮಾನ್ಯವಾಗಿದೆ. ಚಿಕ್ಕ ಗಲಭೆಯನ್ನು ದೊಡ್ಡ ದೊಂಬಿಯಾಗಿ ಬಣ್ಣಿಸುವುದೊಂದು ಸಹಜ ಮಾನವ ನಿರ್ಬಲತೆ.

"ಇಷ್ಟಾದರೂ ಪಂಜಾಬ ಬಂಗಾಲಗಳಲ್ಲಾಗುತ್ತಿರುವ ಜಾತೀಯ ಕಚ್ಚಾಟದ ಗಂಭೀರತೆಯನ್ನು ಸೂಕ್ಷ್ಮೀಕರಿಸುವುದು ನನ್ನ ಉದ್ದೇಶವಲ್ಲ. ಆದರೆ ಇಂದಿನ ವರ್ತಮಾನ ಪತ್ರಿಕೆಗಳಲ್ಲಿನ ವಿವರಣಗಳು ಇಡೀ ಭಾರತ ಪರಿಸ್ಥಿತಿಯ ನಿಜಸ್ಥಿತಿಯ ಕುರಿತು ತಪ್ಪು ಅಭಿಪ್ರಾಯವುಂಟು ಮಾಡುವಂತಹುಗಳಾಗಿವೆ. ಇಂದಿನ ಪರಿಸ್ಥಿತಿಯು ಅದೆಷ್ಟು ನಿರಾಶಾ ಜನಕವಾಗಿದ್ದರೂ ಭಾರತವು ಭೌಗೋಳಿಕವಾಗಿಯೂ, ಆರ್ಥಿಕವಾಗಿಯೂ, ಮತ್ತು ಮನೀಯ ಭಾವನೆಗಳಲ್ಲೂ ಅಖಂಡ ಒಂದೇ ಎಂದೆನಿಸಲ್ಪಡುವುದೆಂಬುದು ನಿರ್ವಿವಾದ.

★

ಸಿಹಿಸುದ್ದಿ ಸಂಗ್ರಹ

ಇದುವರೆಗೆ ಬಣ್ಣಬಣ್ಣದ ಹೇಟುಗಳನ್ನು ಧರಿಸುವ ಪದ್ಧತಿ ಇಂಗ್ಲಿಷ್ ಮಹಿಳೆಯರಲ್ಲಿ ಮಾತ್ರವಿತ್ತು. ಈಗ ಆಂಗ್ಲ ಗೃಹಸ್ಥರೂ ನಾನಾ ತರದ ವಿಚಿತ್ರ ಬಣ್ಣಗಳ ತಲೆಕವಚವನ್ನು ಧರಿಸಿ ಮೆರಯುವ ಸಾಂಪ್ರದಾಯ ಇಂಗ್ಲೆಂಡಿನಲ್ಲಿ ಪ್ರಾರಂಭಿಸಲ್ಪಟ್ಟಿದೆ.

★

ಜೂನ್ 9ರಂದು ಸೇರಿದ ಮುಸ್ಲಿಂ ಲೀಗ್ ಕೌನ್ಸಿಲ್ ಸಭೆಯಲ್ಲಿ ಮೌಲಾನಾ ಹಸ್ರತ್ ಮೋಹಾನಿಯವರ ಮೌಂಟ್‌ಬೇಟನ್ ಯೋಜನೆಯನ್ನು ಬಹಳ ಆವೇಶದಿಂದ ವಿರೋಧಿಸಿದಾಗ ಅವರನ್ನು ಇತರರು ಸಶರೀರವಾಗಿ ಎತ್ತಿ ಹೊರಗೆ ಹಾಕಿದರಂತೆ.

★

[illegible] ವಿಶ್ವ ವಿದ್ಯಾಲಯವನ್ನು ಸ್ಥಾಪಿಸಿ 600 ವರ್ಷಗಳಾದುವು. ನೆಹರುಗಳು ಅದರ [illegible] ವಿದ್ಯಾರ್ಥಿಗಳ

★

[illegible] ಬಾಂಬಿನಿಂದ ಹಿರೋಶಿಮಾದಲ್ಲಿ 78 ಸಾವಿರ ಜನರು ನಾಶವಾಗಿ 13 ಸಾವಿರ ಜನರ ಪತ್ತೆಯಿಲ್ಲದಾಗಿದೆ.

★

ಕಳೆದ 45 ವರ್ಷಗಳಲ್ಲಿ ಇಂಗ್ಲೆಂಡಿನ ಟಪಾಲು ವ್ಯವಹಾರವು ವಿಪರೀತ ಹೆಚ್ಚಿದೆ. 1900ರಲ್ಲಿ 3724 ಲಕ್ಷ ಕಾಗದ ಮತ್ತು ಪಾರ್ಸೆಲುಗಳು ಹಂಚಲ್ಪಟ್ಟಿವೆ. ಮಾದರೆ ಅವುಗಳ ಸಂಖ್ಯೆ 1946ರಲ್ಲಿ 65 ಲಕ್ಷದಷ್ಟಾಗಿದೆ.

★

ಯುದ್ಧಕಾಲದಲ್ಲಿ ತಯಾರಾದ ನ್ಯಾಲನ್ ಒಟ್ಟಿ ನೂಲಿನಿಂದ ಮೀನು ಬಲೆಗಳನ್ನು ಮಾಡುವ ಯೋಜನೆಯಾಗಿದೆ.

★

ಜಪಾನಿನಲ್ಲಿ ಮರಗಳ ಬೆಳೆಯನ್ನು ಹೆಚ್ಚಿಸಲು ಆಕ್ರಮಣ ಸೈನ್ಯ ಇಲಾಖೆಯವರು ವಿಮಾನಗಳಿಂದ ಗಾಳಿ ಮರಗಳನ್ನು ದೇಶದಲ್ಲೆಲ್ಲಾ ಹಂಚುವ ಏರ್ಪಾಡು ಮಾಡಿರುವರು.

★

ಮದ್ಯಪಾನವನ್ನು ಕಡಿಮೆಮಾಡಲು ನಿರ್ಧರಿಸಿದ ಅಮೇರಿಕದ ಸ್ತ್ರೀಯರು ಮಾದಕ ದ್ರವ್ಯದಂಗಡಿಗಳಿಗೆ ಹೋಗಿ ದೇವರ ಕೀರ್ತನೆ ಹಾಡುವ ಕಾರ್ಯಕ್ರಮವನ್ನು ಯೋಜಿಸಿದ್ದಾರೆ.



ಉಬ್ಬಸದ್ದು ಕೆಮ್ಮಿನಿಂದ ಅಶಕ್ತಿಯಾಗಿ ನಿಮೋನಿಯಾ ಕ್ಷಯಗಳ ಭಯವಿರುತ್ತದೆ. ಪೆಪ್ಸ್ ಶ್ವಾಸನೀಯ ಮಾತ್ರೆಗಳು ತೊಂದರೆಯ ಮೂಲಕ್ಕೆ ಕೊಡಲಿ ಹಾಕುತ್ತವೆ.

ಬಾಯಲ್ಲಿ ಪೆಪ್ಸಿನ ಔಷಧಿಯ ಸತ್ವಗಳು ಕರಗಿ ಶ್ವಾಸಕೋಶದಾಳಕ್ಕಿಳಿಯುವವು. ಪೆಪ್ಸ್ ಕೆಮ್ಮು ಕಡಿಮೆಮಾಡಿ ಕಫ ಸಡಿಲಿಸಿ ಮುಂದಿನ ಬಾಧೆಗಳಿಂದ ರಕ್ಷಿಸುತ್ತದೆ.

ವಿಶಹಾರಿ ಮಾತ್ರೆ ಸೇವಿಸಿರಿ.

PEPS

ನಿತ್ಯವೂ ಬಳಿಯಲ್ಲಿರಿಸಿರಿ

ಎಲ್ಲಾ ಔಷಧಿಯಂಗಡಿಗಳಲ್ಲಿ ದೊರಕುವುದು.

ಭಾರತದ ಸ್ವಾತಂತ್ರ್ಯ ದಿನಾಚರಣೆ

ಭಾಷೆ, ಉಡುಪು, ಹಕ್ಕು ಬಾಧ್ಯತೆಗಳು

ಭಾರತವು ಹೇಗೆ ಸ್ವಾತಂತ್ರ್ಯ ದಿನವನ್ನಾಚರಿಸುವುದು?

ದಿಲ್ಲಿಯ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆ ಈ ಕುರಿತು ಹೀಗೆ ಬರೆದಿದೆ

ಅಧಿಕಾರವು ಬಿಟ್ಟುಕೊಡಲ್ಪಟ್ಟ ದಿನ ರಾಷ್ಟ್ರೀಯ ಧ್ವಜವು ಎಲ್ಲಾ ಸರಕಾರಿ ಕಛೇರಿಗಳ ಮೇಲೆ ಹಾರಾಡುವುದು ದೇಶದ ಎಲ್ಲಾ ಭಾಗಗಳಲ್ಲಿ ಧ್ವಜವಂದನಾ ಸಮಾರಂಭಗಳು ಜರಗಿಸಲ್ಪಡಬೇಕು

ಈಗಿನ ತ್ರಿವರ್ಣ ಧ್ವಜದಲ್ಲಿ ಯಾವ ಬದಲಾವಣೆಗಳಾಗಬೇಕೆಂಬುದರ ಕುರಿತು ಕೊಂಗ್ರೆಸ್ ಕಾರ್ಯಕಾರಿ ಸಮಿತಿಯು ಪರ್ಯಾಲೋಚಿಸುತ್ತಲಿದೆ ಈ ಧ್ವಜವು ಈಗ 30 ವರ್ಷಗಳಿಂದ ಸ್ವಾತಂತ್ರ್ಯ ಹೋರಾಟದ ಸಂಕೇತವಾಗಿತ್ತು

ರಾಷ್ಟ್ರ ಧ್ವಜ

ದೇಶಕ್ಕೊದಗಿದ ಸ್ವಾತಂತ್ರ ಸಂದರ್ಭವನ್ನು ಮನರಂಜಕಗೊಳಿಸುವ ಸಂಕೇತಗಳನ್ನು ಹುಡುಕಲು ಕೊಂಗ್ರೆಸ್ ಮುಖಂಡರು ಪರ್ಯಾಲೋಚಿಸುತ್ತಿರುವರು ಇಂತಹ ಸಮಾರಂಭಗಳಲ್ಲಿ ಧರಿಸಬೇಕಾದ ವಿಶೇಷ ತರದ ಉಡುಪು ಶೈಲಿಯ ಕುರಿತೂ ಅವರು ಯೋಚಿಸುತ್ತಿರುವರು ಇತ್ತೀಚೆಗೆ ನೆಹರುಗಳ ನಿವಾಸಸ್ಥಾನದಲ್ಲಿ ರಾಷ್ಟ್ರಧ್ವಜ ವಂದನೆಯ ಸಮಾರಂಭಗಳಾದಾಗ ಕೆಲವು ಕೊಂಗ್ರೆಸ್ ಮುಖಂಡರಲ್ಲದೆ ಉಳಿದವರೆಲ್ಲರೂ ಪಾಶ್ಚಾತ್ಯ ಶೈಲಿಯಲ್ಲಿ ವೇಷಭೂಷ ಮಾಡಿದ್ದರು ಅದರಲ್ಲಿ ಬೇರೆ ದೇಶಗಳ ರಾಯಭಾರಿಗಳೂ ಕೇಂದ್ರ ಸರಕಾರದ ಉನ್ನತ ಅಧಿಕಾರಿಗಳೂ ಇದ್ದರು ಒಂದು ಯುಕ್ತನಾದ ರಾಷ್ಟ್ರೀಯ ಶಿ[illegible]ಕಾರವನ್ನು ನಿಯೋಜಿಸಿಕೊಳ್ಳುವ ಅವಶ್ಯಕತೆದೆ.

ಭಾಷೆ ಭೂಷಣ

ಸಾರ್ವಜನಿಕ ಸಮಾರಂಭಗಳಲ್ಲಿ ಭಾಷಣ ಮಾಡುವಾಗ ಇಂಗ್ಲಿಷಿನ ಬದಲಿಗೆ ರಾಷ್ಟ್ರಭಾಷೆಯನ್ನು ಉಪಯೋಗಿಸುವುದನ್ನೂ ಪ್ರೋತ್ಸಾಹಿಸುವುದರ ಕುರಿತೂ ಯೋಚನೆಗಳಾಗುತ್ತಿವೆ ರಾಷ್ಟ್ರಭಾಷೆಯನ್ನು ಜನಪ್ರಿಯಗೊಳಿಸುವುದು ಅತ್ಯಾವಶ್ಯಕ ಕಳೆದ ಅಖಿಲಭಾರತ ಕೊಂಗ್ರೆಸ್ ಸಮಿತಿ ಸಭೆಯಲ್ಲಿ ಹೆಚ್ಚಿನ ವ್ಯವಹಾರಗಳೂ ಭಾಷಣಗಳೂ ಹಿಂದೂಸ್ಥಾನಿಯಲ್ಲೇ ಜರಗಿದ್ದು ಗಣನೀಯ ಸಂಗತಿ ರಾಷ್ಟ್ರಭಾಷೆಯ ಮಹತ್ವವನ್ನು ಅದು ಸೂಚಿಸುತ್ತದೆ

ಹಕ್ಕು ಬಾಧ್ಯತೆಗಳು

ದೇಶದ ರಾಜಕೀಯ ವ್ಯವಹಾರದಲ್ಲುಂಟಾಗುವ ಗಹನವಾದ ಬದಲಾವಣೆಗಳಿಗೆ ಹೊಂದಿಕೊಂಡು ಜನತೆಯ ಮಾನಸಿಕ ಪರಿವರ್ತನವೂ ಆಗಬೇಕಾದುದು ಅತ್ಯಾವಶ್ಯಕ

ಈ ಕುರಿತು ದೇಶದ ಆಡಳಿತಾಧಿಕಾರವನ್ನು ಸ್ವೀಕರಿಸುವ ದೇಶದ ಅಗ್ರಗಣ್ಯ ಮುಖಂಡರು ಅಂದು ತಮ್ಮ ನೂತನ ಧೋರಣೆಯನ್ನೂ ಸಾರಲಿರುವರು ಯಾವ ಜಾತಿ ಮತ ವ್ಯತ್ಯಾಸವಿಲ್ಲದೆ ಎಲ್ಲಾ ಪ್ರಜೆಗಳಿಗೂ ಸಮಾನ ಹಕ್ಕು ಬಾಧ್ಯತೆಗಳೂ, ಸಂಯುಕ್ತ ಮತದಾನ ಪದ್ಧತಿಯೂ ಘೋಷಿಸಲ್ಪಡುವವು.

ವಾರದ ವಿಜ್ಞಾನ ವಾರ್ತೆಗಳು

ಗದ್ದೆಗೆ ಸಮುದ್ರದ ನೀರು

ಸೂರ್ಯನ ಬಿಸಿಲನ್ನುಪಯೋಗಿಸಿ ಸಮುದ್ರದ ಉಪ್ಪು ನೀರನ್ನು ಸಪ್ಪಗಾಗಿ ಮಾಡುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ರಾಜಪುತಾನದ ಥಾರ್ ಮರುಭೂಮಿಯನ್ನು ಕೃಷಿ ಯೋಗ್ಯವಾಗಿ ಮಾಡುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಲು ಒರ್ವ ಪ್ರಖ್ಯಾತ ಫ್ರೆಂಚ್ ವಿಜ್ಞಾನಿಗಳು ಭಾರತಕ್ಕೆ ಬಂದಿದ್ದಾರೆ ನವನಗರದ ಮಹಾರಾಜರು ಅವರನ್ನು ಈ ಕೆಲಸಕ್ಕಾಗಿ ವಿಶೇಷ ಆಮಂತ್ರಣದಿಂದ ತರಿಸಿದ್ದಾರೆ

ತುಂಬಾ ಬಿಸಿಲಿನ ನಾಡಾದ ಭಾರತದಲ್ಲಿ ಸೂರ್ಯ ಪ್ರಕಾಶದ ಶಕ್ತಿಯನ್ನು ದೊಡ್ಡ ಪ್ರಮಾಣದಲ್ಲಿ ಸದುಪಯೋಗಗೊಳಿಸಲು ಸಾಧ್ಯವಿದೆ "ಒಂದು ದೊಡ್ಡ ಸೂರ್ಯಯಂತ್ರವು ಬಿಸಿಲಿನ ಉಷ್ಣತೆಯನ್ನು ಹೆಚ್ಚುವಂತೆ ಮಾಡಿ ಸಮುದ್ರದ ವಿಶಾಲ ಪ್ರದೇಶವನ್ನು ಕುದಿಸುವುದು ಅಲ್ಲಿ ಉತ್ಪನ್ನವಾಗುವ ಆವಿಯನ್ನು ಶುದ್ಧ ನೀರಾಗಿ ಪರಿವರ್ತಿಸಿ ಒಹುದ ದೊಡ್ಡ ಕೊಳವೆಗಳಿಂದ ಈ ನೀರನ್ನು ಬೇಕಾದಲ್ಲಿ ಸಾಗಿಸಬಹುದು" ಇದು ಡಾ. ಸ್ಟೆಡ್‌ಮಾನರ ಯೋಜನೆಯ ಸಾರಾಂಶ

ಹಡಗು ಸರಕು ಭದ್ರತೆ

ಹಡಗುಗಳಲ್ಲಿ ಸಾಗಿಸುವ ಸರಕುಗಳು ಯಾವ ರೀತಿಯಲ್ಲೂ ಹಾಳಾಗದಂತೆ ಇರಿಸುವ ಒಂದು ವಿಧಾನವನ್ನು ಪ್ರಯೋಗದಿಂದ ಯಶಸ್ವಿಯೆಂದು ಸಿದ್ಧ ಮಾಡಿ ತೋರಿಸಲಾಗಿದೆ ಸರಕು ತುಂಬಿದ ಕೊಟಡಿಗಳಿಂದ ಬಿಸಿ ಗಾಳಿಯು ಸದಾ ಹಾದು ಹೋಗುವಂತೆ ಮಾಡಿದರೆ ಧಾನ್ಯಗಳು ತೇವ ಹಿಡಿದು ಹಾಳಾಗದಂತಾಗುವುದು ಅಲ್ಲಿ ಘರ್ಷಣೆ ಹೊಂದಿದ ಹಣ್ಣುಗಳು ಬೇಗನೆ ಕೊಳೆಯುವುದಂತಾಗುವುದು ಹಡಗದ ಯಂತ್ರಗಳೂ ಲೋಹ ಉಪಕರಣಗಳೂ ತುಕ್ಕು ಹಿಡಿಯದಂತಾಗುವುದು ಮಾತ್ರವಲ್ಲ ಮರದ ಸಾಮಾನುಗಳು ತೇವಕ್ಕೆ ಸುಕ್ಕಿ ಸೊರಗದಂತೆಯೂ ಆಗುವುದು.

ಆಹಾರ ಮಾತ್ರೆ

ಶರೀರ ಪೋಷಣೆಗೆ ಬೇಕಾದ ಆಹಾರ ಸತ್ವಗಳನ್ನೊಳಗೊಂಡ ಚಿಕ್ಕ ಮಾತ್ರೆಗಳನ್ನು ತಿಂದ ಮಾತ್ರಕ್ಕೆ ಆಹಾರ ತಿಂದಷ್ಟೇ ತೃಪ್ತಿಯಾಗಬಹುದೆಂಬ ಕಲ್ಪನೆಯ ವಿಚಾರಗಳು ಸರ್ವಥಾ ಅಸಾಧ್ಯವೆಂದು ಅಮೇರಿಕದ ಪ್ರಯೋಗ ತಜ್ಞರು ತಿಳಿಸುತ್ತಾರೆ ಹೊಟ್ಟೆಯೊಳಗಿನ ಅವಯವಗಳು ನಾವು ತಿಂದ ಆಹಾರ ಸತ್ವಗಳನ್ನೊಳಗೊಂಡ ವಸ್ತುಗಳನ್ನು ಜೀರ್ಣಿಸಿ ಅವುಗಳಲ್ಲಿನ ವಿವಿಧ ಪೋಷಕ ಸಾರಗಳನ್ನು ಹೀರುವ ಕ್ರಿಯೆಗೆ ಅಭ್ಯಾಸ ಹೊಂದಿದವಿರುತ್ತವೆ ಮಾತ್ರವಲ್ಲ ನಮ್ಮ ಶರೀರಕ್ಕೆ ಕೊಬ್ಬು, ಸಾರ ಪಿಷ್ಟ ಪದಾರ್ಥಗಳು ಹೆಚ್ಚು ಪ್ರಮಾಣದಲ್ಲಿ ಅವಶ್ಯವಿರುವುದರಿಂದ ಅವನ್ನು ಈ ಮಾತ್ರೆಗಳಲ್ಲಿ ತುಂಬಿಸಲಾಗುವುದಿಲ್ಲ ಆದುದರಿಂದ ಈ ಕಲ್ಪನೆಯು ಕೇವಲ ಭ್ರಮೆ ಎನ್ನಲಾಗಿದೆ

ಕೋಪದಿಂದ ಶೀತ

"ನಿಮಗೆ ಶೀತವಾಗಿದೆಯೆ? ಬಹುಶಃ ನೀವು ಶೀಘ್ರ ಕೋಪಿಗಳಿರುವುದರಿಂದ ನಿಮಗದು ತಗಲಿರಬಹುದು" ಹೀಗೆಂದು ಡಾ ಹೆರೋಲ್ಡ್ ವೊಲ್ಫ್ ಎಂಬ ಚಿಕಾಗೊ ವೈದ್ಯತಜ್ಞರು ತಿಳಿಸುತ್ತಾರೆ "ಕೋಪ ಬಂದಾಗ ಮೂಗಿನ ಶ್ವಾಸ ದ್ವಾರ ಸಂಕೋಚಗೊಳ್ಳುವುದು ಮೂಗಿನೊಳಗಿನ ಗ್ರಂಥಿ ಪರೆಗಳು ಸ್ವಲ್ಪ ಊದಿಕೊಳ್ಳುತ್ತವೆ ಆಗ ನಮ್ಮ ಮೂಗಿನಲ್ಲಿ ಸಿಲುಕಿಕೊಂಡಿರುವ ಶೀತದ ಅಣುಗಳಿಗೆ ಒಂದು ಒಳ್ಳೇ ಸಂಧಿ ಸಿಗುತ್ತದೆ ಅವು ಬಿಗಿಯಾಗಿ ಅಂಟಿಕೊಂಡು ಅಭಿವೃದ್ಧಿಯಾಗುತ್ತವೆ. ಆಗಲೇ ನಮಗೆ ಶೀತವಾಗುವುದು.

ಕೈಬರಹ ಜಾತಕ

ಬರೆಯುವಾಗ ಕೈಯನ್ನು ಚಲಿಸುವಂತಹದು ಮಿದುಳು ಆದುದರಿಂದ ನಿಮ್ಮ ಕೈ ಬರಹವು ನಿಮ್ಮ ಗುಣ ಲಕ್ಷಣಗಳನ್ನು ಕಂಡು ಹಿಡಿಯಲು ಒಂದು ಒಳ್ಳೇ ಸಾಧನ. ಹೀಗೆಂದು ಏಕಾಭಿಪ್ರಾಯಗೊಂಡ ಪೆರಿಸಿನ ಕೆಲವು ಕೈಬರಹ ತಜ್ಞರು ಸ್ತ್ರೀಪುರುಷರನ್ನು ವಿವಾಹ ಬಂಧನದಲ್ಲಿ ಜೋಡಿಸಲೂ ಇದು ಸಹಾಯವಾಗಬಹುದೆಂದು ಆ ಕುರಿತು ಪ್ರಚಾರಿಸಲು ಒಂದು ಸಂಸ್ಥೆಯನ್ನೇ ಸ್ಥಾಪಿಸಿರುವರು ಕೆಲವು ಲಕ್ಷಣ ಚಿಹ್ನೆಗಳು ಹೀಗಿವೆ ಸ್ವಲ್ಪ ಬಲಕ್ಕೆ ವಾಲಿದರೆ ಚುರುಕು ಬುದ್ಧಿ ಹೆಚ್ಚು ವಾಲಿದರೆ ಆಕಾಂಕ್ಷೆ, ಮತ್ಸರ ನೇರವಾಗಿದ್ದರೆ ಗಂಭೀರತೆ, ವಿಚಾರಪರ ಹಿಂದಕ್ಕೆ ವಾಲಿದರೆ ತತ್ವಜ್ಞಾನ, ಜಗಳಗಂಟತನ

ಚಿಕಾಗೋದ 6 ಸಾವಿರ ಅಜ್ಜಿಯರು ಸಂಸಾರ ಜೀವನದಿಂದ ಸ್ವಲ್ಪ ಬಿಡುಗಡೆ ದೊರೆಯಲನುಕೂಲಿಸುವಂತೆ ತಮ್ಮದೇ ಒಂದು ಕ್ಲಬ್ಬನ್ನು ಸ್ಥಾಪಿಸಿರುವರು

★

ದಿನಾಲೂ ಸಿಂಬೆಹಣ್ಣಿನ ರಸವನ್ನು ಕುಡಿಯುವುದರಿಂದ ಹಲ್ಲುಗಳಿಗೆ ಬಾಧಕವಿದೆಯೆಂದು ನ್ಯೂಯೋರ್ಕಿನ ಮೆಡಿಕ್ಲಿನಿಕ್ ಆಸ್ಪತ್ರೆಯ ಪ್ರಖ್ಯಾತ ದಂತ ವೈದ್ಯರೊಬ್ಬರು ತಿಳಿಸುತ್ತಾರೆ

★

ಮಕ್ಕಳಿಗೆ ಮುದ್ದು ಮಾಡುವುದು ಆಹಾರ ಕೊಡುವಷ್ಟೇ ಅವಶ್ಯಕವೆಂದು ಮಿಸ್ ಮ್ಯಾರಿ ಕರ್ಟಿಸ್ ಎಂಬ ಶಿಶು ಆರೈಕೆ ತಜ್ಞೆಯು ತಿಳಿಸುತ್ತಾಳೆ ಮಕ್ಕಳು ಮುದ್ದಾಟವನ್ನು ಸಹಜವಾಗಿ ಹಾರೈಸುತ್ತವೆಯಂತೆ.

★

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಯಾನಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೇಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಯೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು ಸ್ಪೆಶ್ಯಲುಗಳ ಬಗ್ಯೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಯೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ

ಮಂಗ್ಳೂರು,
29-3-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India with Limited Liability)

Estd: 1906

Head Office: UDIPI, S. Kanara.

	Rs.
CAPITAL	
Authorised	25,00,000
Issued, subscribed & called up	16,00,000
Paid up	15,97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕೀಲು, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷದಿಂದಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business proves the popularity

THE BOMBAY LIFE ASSURANCE COMPANY LIMITED

Company's New Business in 1946 - 3·28 Crores

Our Cheif Agency New Business in 1946 about 54 Lakhs.

Our experience of 37 years available to you for arranging Insurance investment. It therefore, pays you to consult us to Insure or to represent

Messrs. Kochikar Brothers, Limited.

Chief Agents for South India,

Bombay Life Building,

Central Office, Udipi:

Branches at: MANGALORE, CALICUT, MADRAS, TRIVANDRUM, MADURA, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 11—7—1947 [ಸಂಚಿಕೆ 28]

ಕಲ್ಕತ್ತ — ಹೈದರಾಬಾದುಗಳ ಘಟನೆಗಳು - ಪಾಕಿಸ್ತಾನ — ಜಾಗತಿಕ ವಿಚಾರಗಳು.

ಕಾಂಗ್ರೆಸ್ಸ್ ಲೀಗುಗಳಲ್ಲಿ ಹಿಂದೀ ದೇಶದ ವಿಭಜನೆಯ ಕುರಿತು ಒಪ್ಪಂದವಾದೊಡನೆ ಜಾತೀಯ ಹೋರಾಟದ ಗಲಭೆಯು ಸ್ತಬ್ಧವಾಗಬಹುದೆಂದು ಎಣಿಸಿದ್ದು ಸರಿಯಲ್ಲವೆಂದು ಕಲ್ಕತ್ತ, ಹೈದರಾಬಾದುಗಳಲ್ಲಿ ಜರಗುತ್ತಿರುವ ಭೀಕರ ಘಟನೆಗಳಿಂದ ಈಗ ವ್ಯಕ್ತವಾಗುತ್ತದೆ ಬಂಗಾಳ ವಿಭಜನೆಯಲ್ಲಿ ಕಲ್ಕತ್ತೆಯು ಪಶ್ಚಿಮ ಬಾಗಕ್ಕೆ ಸೇರುವುದರಿಂದ ಲೀಗಿನ ಬೇಗನೇ ಕಲ್ಕತ್ತೆಯ ಮೇಲಿನ ಪಾರುಪತ್ಯವು ಅಂತ್ಯವಾಗಬಹುದು. ಪೂರ್ವ ಪಾಕಿಸ್ತಾನಕ್ಕೆ ದೊಡ್ಡ ಬಂದರುಗಳಿಲ್ಲದ್ದರಿಂದ ಅಲ್ಲಿಯ ಮುಸ್ಲಿಮರ ಸ್ಥಿತಿಯು ಇನ್ನೂ ನಿಕೃಷ್ಟವಾಗಬಹುದು. ಕಲ್ಕತ್ತೆಯನ್ನು ಇತರರ ಪಾರುಪತ್ಯಕ್ಕೆ ಬಿಡುವ ಮೊದಲು ಅಲ್ಲಿ ತಮ್ಮ ಕೈಯನ್ನು ಸ್ವಲ್ಪವಾದರೂ ತೋರಿಸಿಬಿಡಬೇಕೆಂದು ಲೀಗಿನ ಪಕ್ಷದ ಮುಸ್ಲಿಮ್ ಗೂಂಡಾ ಸಮೂಹವು ಈಗ ಹೊರಟಿದೆ ಕಳೆದ ೧೯೪೬ನೇ ಇಸವಿ ಆಗೋಸ್ತು ೧೬ನೇ ದಿನ ಆ ಪುಂಡರು ಕಲ್ಕತ್ತದಲ್ಲಿ ಪ್ರಾರಂಭಿಸಿದ ಪಾಶವೀ ಕೃತ್ಯವು ನೊವಾಖಾಲಿ, ಬಿಹಾರ ಪಂಜಾಬುಗಳನ್ನೆಲ್ಲಾ ದಾಟಿ ಹಿಂದೀ ದೇಶವನ್ನೆಲ್ಲಾ ಸುಟ್ಟರೂ ಅವರಿಗಿನ್ನೂ ತೃಪ್ತಿಯಾಗಿರುವುದಿಲ್ಲ ಬಂಗಾಳದಲ್ಲಿನ್ನೂ ಲೀಗ್ ಪಕ್ಷದ ಮಂತ್ರಿಮಂಡಳಿಯೇ ರಾಜ್ಯಾಧಿಕಾರವನ್ನು ನಡೆಸುತ್ತಿದ್ದುದರಿಂದ ಆ ಪುಂಡರಿಗೆ ಸಂಪೂರ್ಣ ಇಚ್ಛಾರೀತಿ ನಡೆಯಲಿಕ್ಕೆ ಸಂದರ್ಭಗಳೀಗ ಈತನಕ ತಪ್ಪಿಯಿಲ್ಲ. ದಿನಂಪ್ರತಿ ಕಲ್ಕತ್ತದಲ್ಲೀಗ ಜಾತೀಯ ದೊಂಬಿಗಳೂ, ಕೊಲೆಗಳೂ ತಪ್ಪುವುದಿಲ್ಲ ಜುಲಾಯಿ ೭ರ ಒಂದು ದಿನದಲ್ಲಿಯೇ ಅವರ ಕೋಪಾಗ್ನಿಗೆ ಕಲ್ಕತ್ತದ ೨೫ ಮಂದಿ ತುತ್ತಾದರು,-೧೪೦ ಜನರು ಗಾಯಪಟ್ಟು ಚಿಕಿತ್ಸಾಲಯಗಳಲ್ಲಿ ಬಿದ್ದುಕೊಂಡಿದ್ದಾರೆ ಪೂರ್ವ ಪಾಕಿಸ್ತಾನಕ್ಕೆ ಸೇರುವ ಕುರಿತು ಸಿಲ್‌ಹೆಟ್ಟಿನಲ್ಲಿ ಈಗ ನಡೆಯುತ್ತಿರುವ ರೆಫರೆಂಡಮಿನಲ್ಲಿಯೂ ಪುಂಡಾಟಿಕೆಗಳು ನಡೆಯುತ್ತಿವೆ ಪಶ್ಚಿಮ ಪಾಕಿಸ್ತಾನದಲ್ಲಿ ಪಠಾಣರ ಭೂಮಿಯಾದ ವಾಯುವ್ಯ ಗಡಿನಾಡಿನಲ್ಲಿ ಜಿನ್ನಾಸಾಹೇಬರ ಮಾತಿಗೆ ಬ್ರಿಟಿಷರು ಎಣಿಸಿದಷ್ಟು ಮೌಲ್ಯ ಬರುವಂತಿಲ್ಲ ಪಠಾಣರಿಗೆ ಪಂಜಾಬು, ಸಿಂಧೂ ಪ್ರಾಂತ್ಯದ ಮುಸ್ಲಿಮರ ಕೆಳಗೆ ಜೀವಿಸಿಕೊಂಡಿರುವದೆಂದರೆ ಬಹಳ ಸಂಕಷ್ಟವಾಗಿ ತೋರುತ್ತಿದೆ. ಪಠಾಣರು ಪಾಶ್ಚಾತ್ಯ ನಾಗರೀಕತೆಯ ಮೋಹಕ ವಿಲಾಸಗಳಲ್ಲಿ ಭ್ರಾಂತಿ ಹೊಂದಿದವರಲ್ಲ. ಸರಳ ಜೀವನ, ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನೂ ಅರ್ಪಿಸುವ ಕಡುಬಕ್ತಿ, ಇವುಗಳೇ ಪಠಾಣರ ಸ್ವಾಭಾವಿಕ್ಕ ಗುಣಗಳಾಗಿವೆ ಮೊಗಲ್ ಬಾದಶಹರ ರೀತಿ ಒಡ್ಡೋಲಗವನ್ನು ನಡೆಸಬೇಕೆಂದು ಹೊರಟಿರುವ ಲೀಗಿನ ಮುಸ್ಲಿಮ್ ಧುರೀಣರ ಕಡೆ ಅವರ ಭಕ್ತಿಯಿಲ್ಲ ರೆಫರೆಂಡಮಿನಲ್ಲೀಗ ಒಂದುವೇಳೆ ಲೀಗಿಗೆ ಜಯವಾದರೂ ಪಾಕಿಸ್ತಾನದಲ್ಲಿ ಪಠಾಣರೆಂದೂ ಸಂತುಷ್ಟರಾಗಿ ಜೀವಿಸಿಕೊಂಡಿರರು ಹಿಂದೀ ಯೂನಿಯನಿಂದ ತ್ಯಜಿಸಲ್ಪಟ್ಟು ಅವರ ದೃಷ್ಟಿಯು ಇನ್ನು ಕಾಬೂಳಿನ ಕಡೆ ತಿರುಗಬಹುದು. ಜಿನ್ನಾಸಾಹೇಬರ ಗತಿಯು ಅಮಾನುಲ್ಲರ ಗತಿಯಾಗಬಹುದು ಅಫಘಾನಿಸ್ಥಾನದ ಕಡೆಯಿಂದ ಪಠಾಣರಿಗೆ ಉತ್ತೇಜನ ದೊರಕುತ್ತಿದೆ

ಬ್ರಿಟಿಷ್ ಇಂಡಿಯಕ್ಕೆ ಸೇರಿದ ಪ್ರಾಂತ್ಯಗಳಲ್ಲಿ ಪಾಕಿಸ್ತಾನ ಸ್ಥಾಪನೆಯ ಗಲಭೆಯು ಹೀಗೆ ನಡೆಯುತ್ತಿರುವಾಗ ಅತ್ತ ನರೇಂದ್ರಪಾಲಿತ ಸಂಸ್ಥಾನಗಳಲ್ಲಿ ಒಂದು ಕಡೆ ತಿರುವಾಂಕೂರಿನ ಸರ್ ಸಿ ಪಿ ರಾಮಸ್ವಾಮಿಯರ ಗರ್ಜನೆ,-ಇನ್ನೊಂದು ಕಡೆ ಕಾಶ್ಮೀರಿನ ಕಾಕಾ ಪಿಪಾಸುಗಳ ದಿನಕ್ಕೊಂದು ರೀತಿಯ ಚಿಂತೆ-ಮತ್ತೊಂದು ಕಡೆ ಹೈದರಾಬಾದಿನಲ್ಲಿ ಹಿಂದೂ ಪ್ರಜೆಗಳ ರಕ್ತಪ್ರವಾಹ-ಹೀಗೆ ವಿವಿದ ಕಡೆ ವಿಧವಿದ ರೀತಿಯ ಘಟನೆಗಳು ತೋರಿಬರುತ್ತಿವೆ ಕಾಶ್ಮೀರು, ಹೈದರಾಬಾದುಗಳ ಸಂಗತಿಗಳು ಒಂದೇ ರೀತಿಯಾಗಿವೆ ಕಾಶ್ಮೀರಿನ ಜನರಲ್ಲಿ, ಬಹುಸಂಖ್ಯಾಕರು ಮುಸ್ಲಿಮರಾಗಿದ್ದಾರೆ, ಸಂಸ್ಥಾನಾಧಿಪತಿಗಳು ಹಿಂದೂ ಮಹಾರಾಜರು-ಸಂಸ್ಥಾನದ ಅಧಿಕಾರ ಸ್ಥಾನಗಳಲ್ಲಿ ಹಿಂದುಗಳೇ ಅಧಿಕ ಹೈದರಾಬಾದಿನಲ್ಲಿ ಹಿಂದುಗಳು ಬಹುಸಂಖ್ಯಾಕರು ಸಂಸ್ಥಾನಾಧಿಪತಿಗಳೂ ಹೆಚ್ಚಿನ ಅಧಿಕಾರೀ ವರ್ಗವೂ ಮುಸ್ಲಿಮರಾಗಿದ್ದಾರೆ. ಕಾಶ್ಮೀರಿಗೆ ಪಾಕಿಸ್ತಾನವು ಹತ್ತಿರ, ಹೈದರಾಬಾದಿನ ಸುತ್ತಲೂ ಹಿಂದೀ ಯುನಿಯನಿನ ಪ್ರಾಂತ್ಯಗಳು, ಸಂಸ್ಥಾನಾಧಿಪತಿಗಳ ಮನಸ್ಸೊಂದು ಕಡೆ-ಬಹುಸಂಖ್ಯಾಕ ಜನರ ಆಶೆಯೊಂದು ಕಡೆ ಇದ್ದು ಪ್ರಜಾ ನರೇಂದ್ರರೊಳಗೆ ವೈಮನಸ್ಸು ಬೆಳೆಯುತ್ತಿದೆ ಹೈದರಾಬಾದಿನಲ್ಲಿ ಈ ವಿವಾದಗಳೀಗ ಹಿಂಸಾರೂಪವನ್ನು ತಾಳಿವೆ ಮುಸ್ಲಿಮರೇ ಪ್ರಬಲರಾಗಿರುವ ಆ ಸಂಸ್ಥಾನದ ಅಧಿಕಾರಿ ವರ್ಗಗಳೆಲ್ಲ ಹೈದರಾಬಾದಿನ ಸ್ವಾತಂತ್ರ್ಯವನ್ನು ಪ್ರತಿಭಟಿಸುವ ಹಿಂದುಗಳ ಮತ್ತು ಸ್ಟೇಟ್ ಕಾಂಗ್ರೆಸ್ಸಿನ ಬಲವನ್ನು ತಗ್ಗಿಸ ಹೊರಟಿವೆ. ವಾರಂಗಾಲಿನಲ್ಲಿ ಜೂನ್ ಅಂತ್ಯದಲ್ಲಿ ಹಿಂದೂ ಮುಸ್ಲಿಮ್ ಜಾತೀಯ ಗಲಭೆಗಳು ಭೈಶಾಚಿಕ, ಹಿಂಸಾತ್ಮಕ ರೂಪವನ್ನು ತಾಳಿದವು. ಹಿಂದುಗಳು ಹೈದರಾಬಾದನ್ನು ಈಗ ಬಿಟ್ಟು ಓಡಹತ್ತಿದ್ದಾರೆ ಇನ್ನು ಜಾತೀಯ ವಿಭಜನೆಯ ಸೈನ್ಯವನ್ನು ಅವಲಂಬಿಸುವುದರಿಂದ ಹಿಂದೂ ಮುಸ್ಲಿಮರು ರಾಜ್ಯ ತಂತ್ರಗಳಿಗಾಗಿ ಒಬ್ಬರನ್ನೊಬ್ಬರು ರಕ್ತೋತ್ಸವದಿಂದ ದೃಷ್ಟಿಸತೊಡಗಬಹುದೆಂದು ಮಹಾತ್ಮಾಜೀಯವರು ಜುಲಾಯಿ ೭ನೇ ದಿನದ ಸಾಯಂಕಾಲದ ಪ್ರಾರ್ಥನಾಕೂಟದಲ್ಲಿ ತಮ್ಮ ಭೀತಿಯನ್ನು ಪ್ರಕಟಿಸಿರುವರು, ಆಂಗ್ಲ ಚಕ್ರಾಧಿಪತ್ಯದ ಅಂತಿಮಕಾಲದ ಬ್ರಿಟಿಷ್ ಕಾಳಸರ್ಪನ ಶ್ವಾಸದಂತೆ ಹಿಂದೀ ದೇಶದಲ್ಲೆಲ್ಲ ಕೋಮುವಾರು ಕಲಹಗಳನ್ನುಂಟುಮಾಡುತ್ತಿದೆ ಇನ್ನು ಹಿಂದೀ ಐಕ್ಯತೆಯು ಮಾಯವಾಗಿ, ಸ್ವಾತಂತ್ರ್ಯವು ಬರೇ ಬಿಸಿಲ್ಗುದುರೆಯಂತಾಗಬಹುದು. ಛಾಯಾ ಸ್ವಾತಂತ್ರ್ಯದ ಮುಸುಕಿನಲ್ಲಿ ಹಿಂದೂ ಮುಸ್ಲಿಮರು ತಮ್ಮ ಸಹೋದರತ್ವವನ್ನೆಲ್ಲಾ ಮರೆತು, ಪರಸ್ಪರ ಹೋರಾಟಗಳಲ್ಲಿ ಕಾಲಕಳೆಯುತ್ತಾ ಹಿಂದೀ ದೇಶವನ್ನು ಪ್ರಗತಿಯ ಪ್ರವಾಹದಿಂದೆತ್ತಿ ಎರಡು ಶತಮಾನಗಳ ಹಿಂದಿನ ಜವುಗಿಗೆ ತಳ್ಳಬಹುದು. ವಿಧಾತನು ಹಿಂದೀಯರಿಗೆ ಧೈರ್ಯ, ವಿಚಾರಗಳನ್ನು ಬೇಗನೇ ದಯಪಾಲಿಸದಿದ್ದರೆ ಅವರು ಲೋಕದ ನಗೆಗೀಡಾಗಿ ಇನ್ನೂ ಹೀನಾವಸ್ಥೆಯನ್ನು ಹೊಂದುವದು ನಿಶ್ಚಯವೇ.

ಹಿಂದೀ ಯೂನಿಯನಿಗೆ ಅಮೇರಿಕದಿಂದ ರಾಯಭಾರಿಯರಾಗಿ ಬಂದಿರುವ ಡಾಕ್ಟರ್ ಹೆನ್ರಿ ಎಫ್ ಗ್ರೇಡಿಯವರು ಹಿಂದೀದೇಶದ ಎರಡು "ಸಂಸ್ಥಾನ"ಗಳು ಸ್ಥಾಪಿತವಾದೊಡನೆ ಅಮೇರಿಕದ ಸಹಾಯವು ಎರಡು ಸಂಸ್ಥಾನಗಳಿಗೂ ಧಾರಾಳ ಪ್ರವಾಹದಿಂದ ದೊರ

(೨ನೇ ಪುಟಕ್ಕೆ ಮುಂದುವರಿದಿದೆ)

THE

UNITED INDIA LIFE ASSURANCE CO., LTD.

ESTD 1906 H. O. MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore.

(೧ನೇ ಪುಟದಿಂದ)

ಕಾಣವೆಂದು ತಿಳಿಸಿದ್ದಾರೆ. ಈ ಆರ್ಥಿಕ ಸಹಾಯವನ್ನು ಹಿಂದೀ ಮತ್ತು ಪಾಕಿಸ್ತಾನದ ಅಧಿಕಾರಿಗಳು ಪಡೆದು ದೇಶೋನ್ನತಿಯ ಉದ್ಯಮಗಳಲ್ಲಿ ಉತ್ಸಾಹದಿಂದ ಪ್ರವೇಶಿಸಿದರೆ ಭ್ರಾತೃಕಲಹಗಳಲ್ಲಿ ಈಗ ಸಮಯ ಕಳೆಯುತ್ತಿರುವ ಹಿಂದೂಮುಸ್ಲಿಮರು ದೇಶೋದ್ಧಾರದ ಕಾರ್ಯಗಳ ಕಡೆ ತಮ್ಮ ದೃಷ್ಟಿಯನ್ನು ತಿರುಗಿಸಿ—ದೇಶಹಿತದ ಸಾಹಸಗಳಲ್ಲಿ ಭಾಗಿಗಳಾಗುತ್ತಾ—ಈಗ ತಮ್ಮ ಕೈತಪ್ಪಿ ಜಾರಿದ ಒಕ್ಕಟ್ಟಿನ ಬಾಂಧವ್ಯವನ್ನು ಪುನಃ ದೊರಕಿಸಿಕೊಳ್ಳಬಹುದು.

ಕಳೆದ ಮಹಾಯುದ್ಧದ ಬಳಿಕ ಆರ್ಥಿಕ ಬಲವು ಅಮೇರಿಕವೊಂದಕ್ಕೇ ಉಳಿದಿದೆ. ಸಮರ ಬಲದಲ್ಲಿ ರಶ್ಯವು ಹಿಂದಿರದಿದ್ದರೂ ಇತರರಿಗೆ ಆರ್ಥಿಕ ಸಹಾಯವನ್ನೀಯುವ ಶಕ್ತಿಯು ಇಂದು ರಶ್ಯಕ್ಕಿಲ್ಲ. ಜರ್ಮನರು ನಾಶಮಾಡಿದ ತಮ್ಮ ಹೇರಳ ಸಂಪತ್ತನ್ನು ಪುನಃ ಸೃಷ್ಟಿಸಿಕೊಳ್ಳಲಿಕ್ಕೆ ರಶ್ಯಕ್ಕಿನ್ನೂ ಅನೇಕ ವರ್ಷಗಳು ಬೇಕಾಗಬಹುದು. ಈಗ ನಿರ್ಜನವಾಗಿ ಬಿದ್ದಿರುವ — ಸಂಪತ್ತನ್ನಿನ್ನೂ ಬೆಳೆಸ ಸಾಧ್ಯವಿರುವ, — ಪ್ರದೇಶಗಳಿನ್ನೂ ಆಸ್ಯಖಂಡಕ್ಕೆ ಸೇರಿದ ರಶ್ಯದಲ್ಲಿ ತುಂಬಿಕೊಂಡಿದೆ. ಅಮೇರಿಕದ ಧೋರಣೆಗಳಿಂದ ತನಗೆ ಧಕ್ಕೆ ಬಾರದಂತೆ ಜಗತ್ತಿನಲ್ಲೆಲ್ಲಾ ಕಮ್ಯೂನಿಜಮನ್ನು ಹಬ್ಬಿ, ತನ್ನ ಬಲವನ್ನು ಹೆಚ್ಚಿಸಿಕೊಳ್ಳಬೇಕಾಗಿ ರಶ್ಯವು ಆಶಿಸುತ್ತಿದೆ. ಈ ಅಮೇರಿಕ—ರಶ್ಯಗಳ ವಿವಾದಗಳಲ್ಲಿ ತಲೆಗೆಡದೆ; ಅಮೇರಿಕವು ಉದಾರ ರೀತಿಯಿಂದ ಕೊಡಲಿಚ್ಛಿಸುವ ಸಹಾಯವನ್ನು ಪಡೆದು, ಹಿಂದೀಯರು ತಮ್ಮ ಆಹಾರ, ವಸ್ತ್ರ, ನಿವಾಸಗಳ ಸಂಕಷ್ಟಗಳನ್ನು ದೂರಗೊಳಿಸುವ ಕಾರ್ಯಗಳಲ್ಲಿ ಇನ್ನು ರಭಸದಿಂದ ಮುಂದರಿಯಬೇಕಾಗಿವೆ. ಖಾದಿ ಪ್ರತಿಷ್ಠೆ, ಮಧ್ಯಪಾನ ನಿಷೇಧ, ವ ಇತರ ಧಾರ್ಮಿಕ ವಿಚಾರಗಳೆಲ್ಲವೂ ಹಿಂದೀ ಕೋಟಿಗಳ ಹೊಟ್ಟೆ ತುಂಬಾ ಕೂಳೂ ಮೈ ತುಂಬಾ ವಸ್ತ್ರವೂ ತೋರ ಪ್ರಾರಂಭವಾದ ಬಳಿಕ—ಅವರವರಿರುವ ಸ್ವಂತ ನಿವಾಸಗಳಿಂದ ಅವರನ್ನು ಒಟ್ಟುಕೂಡಿಸಿ—ಬೋಧಿಸಬಹುದಾಗಿದೆ. ದಿನಗಳಿಗೆ ಈಗ ೧೨, ಇನ್ನೊಂದು ತಿಂಗಳಲ್ಲಿ ೧೦, ಮತ್ತೊಂದು ತಿಂಗಳಲ್ಲಿ ೮ ಔನ್ಸು ಅಕ್ಕಿಯೆಂದು ನಿಶ್ಚಯಮಾಡುವ ಸಮಯವನ್ನು ನಮ್ಮ ಮಂತ್ರಿಮಂಡಲಗಳು ಆಹಾರ ಸಾಮಗ್ರಿಗಳನ್ನೂ ವಸ್ತ್ರದ ಸಂಗ್ರಹಗಳನ್ನೂ ಇನ್ನೂ ಹೆಚ್ಚಿಸುವ ದಾರಿಯಾವದೆಂದು ಕಂಡುಹಿಡಿಯಲಿಕ್ಕೆ ವಿನಿಯೋಗಿಸತೊಡಗಬೇಕು. ದಾರಿದ್ರ್ಯವು ದೂರವಾಗಿ, ಈ ದೇಶದ ಜನರು ತಲೆಯೆತ್ತಿ ತಿರುಗುವರೆ ಸಾಧ್ಯವಾದ ಬಳಿಕ ಉಳಿದ ಸಂಗತಿಗಳ ಕಡೆ ಅವರು ಉತ್ಸಾಹಿತರಾಗದಿರರು. ಹಿಂದೀದೇಶದ ಹೊರಗೆ ಆಸ್ಯದ ಸಂಗತಿಗಳಿನ್ನೂ ತೀರಾ ಶೋಚನೀಯ ಸ್ಥಿತಿಯಲ್ಲಿವೆ. ಪಾಶ್ಚಾತ್ಯ ರಣಹದ್ದುಗಳನ್ನೂ ಇಂಡೋನೇಸ್ಯ, ಇಂಡೋ ಚೀನಗಳ ರಕ್ತದ ರುಚಿಯನ್ನು ಮರೆತಿಲ್ಲ. ಅಲ್ಲಿ ಶಾಂತಿಸ್ಥಾಪನೆಯಿನ್ನೂ ಆಗರುವುದಿಲ್ಲ. ಅಲ್ಲಿಯ ಜನರು ಆರ್ಥಿಕ ಬಲವನ್ನು ಸಂಪಾದಿಸಿಕೊಳ್ಳುವ ದಾರಿಯಲ್ಲಿ ಆ ರಣಹದ್ದುಗಳು ಕೂತು ಕೋಲಾಹಲ ಮಾಡುತ್ತಿವೆ. ಕೆಲವು ದಿನಗಳ ಹಿಂದೆ ಇಂಡೋನೇಸ್ಯದಲ್ಲಿ ಸಮರ ಜ್ವಾಲೆಯು ಪುನಃ ಬೆಳಗುವದು ನಿಶ್ಚಯವೆಂದು ತೋರುತ್ತಿರುವಾಗ ಇತ್ತಟ್ಟಿನವರಿಗೂ ಅಮೇರಿಕವು ಶಾಂತಿಯ ಕಡೆ ದೃಷ್ಟಿಯನ್ನಿಡುವಂತೆ ಬೋಧಿಸಿದರಿಂದ ಡಚ್ಚ—ದೇಶೀಯರ ಸಂಧಾನವು ಬೇಗನೆ ಅಲ್ಲಿ ಕಾರ್ಯರೂಪಕ್ಕೆ ಬರಬಹುದೆಂದು ಪುನಃ ಆಶೆ ತೋರುತ್ತಿದೆ. ಇಂಡೋಚೀನದಲ್ಲಿ ಫ್ರಾನ್ಸಿಗೆ ಯಾರ ಆತಂಕವೂ ಇಲ್ಲದ್ದರಿಂದ ಅಲ್ಲಿ ಹೋರಾಟವು ಹೀಗೆ ಬೇಗ ಮುಗಿಯುವಂತಿಲ್ಲ. ಇಂಡೋನೇಸ್ಯದಂತೆ ಇಂಡೋಚೀನವು ಜಗತ್ತಿನ ಕೇಂದ್ರಸ್ಥಾನಗಳಲ್ಲಿಲ್ಲ; ಅದರ ಸಂಪತ್ತಾಗಲಿ ಜನಸಂಖ್ಯೆ, ಜನಸ್ಥಿತಿಯಾಗಲಿ ಪ್ರಮುಖ ರಾಷ್ಟ್ರಗಳ ದೃಷ್ಟಿಯನ್ನು ತನ್ನ ಕಡೆ ಸೆಳಕೊಳ್ಳುವಷ್ಟು ಬಲವುಳ್ಳದಲ್ಲ.

ಅತ್ತ ಚೀನದಲ್ಲಿಯೂ ಪೆಲೆಸ್ಟೈನಿನಲ್ಲಿಯೂ ನಿರಂತರ ಕಾದಾಟವು ತಪ್ಪುವುದಿಲ್ಲ. ಚೀನವು ಲೋಕದ ಮಹಾರಾಷ್ಟ್ರಗಳ ಸಾಲಿಗೆ ಕಾಲನ್ನಿಡುವಾಗ ಆ ಮುಂದರಿಸಿಟ್ಟ ಕಾಲನ್ನು ಅಲ್ಲಿಯ ಕಮ್ಯೂನಿಸ್ಟ ಪಕ್ಷವು ಕಡಿದಂತಾಗಿಯದೆ. ಅಮೇರಿಕದ ಪ್ರಬಲ ವರ್ಚಸ್ಸು ತನ್ನ ಗಡಿಗಳಿಗೆ ಮುಟ್ಟದಂತೆ ರಶ್ಯವು ಜಾಗ್ರತೆಯಲ್ಲಿದೆ. ಕಮ್ಯೂನಿಸ್ಟ ಪಕ್ಷಕ್ಕೆ ರಶ್ಯದ ಸಹಾಯವು ತಪ್ಪುವುದಿಲ್ಲ. ಅಮೇರಿಕದ ಆಶ್ರಯವನ್ನು ಪಡೆದಿರುವ ಚೀನದ ಕೇಂದ್ರ ಸರಕಾರದ ಕೆಳಗೆ ಇಡೀ ಚೀನವು ಸೇರಿದರೆ ರಶ್ಯಕ್ಕೆ ಗಂಡಾಂತರವಿದೆ. ಆದ್ದರಿಂದ ನಡುವೆ ಕಮ್ಯೂನಿಸ್ಟ ಪ್ರದೇಶವೊಂದು ಸ್ವತಂತ್ರವಾಗಿರಬೇಕೆಂದು ರಶ್ಯವು ಕಮ್ಯೂನಿಸ್ಟರನ್ನು ಉತ್ತೇಜಿಸುತ್ತಿದೆ. ಅತ್ತ ಶಾಂತಸಾಗರದ ಕಡೆಯಿಂದಲೂ ಅಮೇರಿಕವು ತನ್ನ ಗಡಿಗೆ ಕಾಲಿಡದಂತೆ ಚೀನದ ಉತ್ತರದ ಬಂದರುಗಳೆರಡರಲ್ಲೀಗ ರಶ್ಯವು ಸೇರಿಕೊಂಡು, ಉತ್ತರ ಕೊರಿಯದಲ್ಲಿ ತನ್ನ ಕಾಲನ್ನು ಸ್ಥಿರಗೊಳಿಸಿದೆ.

ಅಮೇರಿಕವು ಶಾಂತಸಾಗರದಲ್ಲಿ ತನ್ನ ಒಡೆತನವನ್ನು ಸಂಪೂರ್ಣ ಸ್ಥಾಪಿಸಿದೆ; ರಶ್ಯದೊಡನೆ ಮುಂದೆ ಬರಬಹುದಾದ ಯುದ್ಧದಲ್ಲಿ ತನ್ನ ಪಕ್ಷದ ಸಹಾಯಕ್ಕಾಗಿ ಜಪಾನನ್ನು ಸಜ್ಜುಗೊಳಿಸುತ್ತಿದೆ. ಒಸ್ಟ್ರೇಲಿಯವು ಅಮೇರಿಕದ ಆಶ್ರಯವನ್ನು ಬಿಟ್ಟು ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳುವ ಶಕ್ತಿಯನ್ನು ಗಳಿಸಬೇಕೆಂದು ಹೊರಟಿದೆ. ಕಳೆದ ಮಹಾಯುದ್ಧದ ನಡುವೆ ಒಸ್ಟ್ರೇಲಿಯದ ಸಮರ ಬಲವೂ ಕೈಗಾರಿಕೆಗಳೂ ಎಷ್ಟೋ ಬಲಹೊಂದಿವೆ. ಆದರೆ ಒಸ್ಟ್ರೇಲಿಯದ ಜನಸಂಖ್ಯೆಯಿನ್ನೂ ಬಹಳ ಅಲ್ಪವಾಗಿದೆ; ಒಸ್ಟ್ರೇಲಿಯದ ಬಿಳೀ ಜನರು ಕಪ್ಪು ಜನರನ್ನು ಒಳ ಪ್ರವೇಶಿಸ ಬಿಡುವುದಿಲ್ಲ. ಜಗತ್ತಿನ ಸರ್ವಮೂಲೆಗಳಿಂದಲೂ ಬಿಳೀ ಜನರನ್ನು ಸಂಗ್ರಹಿಸಿ, ತಮ್ಮ ಜನಸಂಖ್ಯೆಯನ್ನು ಹೆಚ್ಚಿಸಿಕೊಂಡು ಒಸ್ಟ್ರೇಲಿಯವನ್ನು ಶಾಶ್ವತವಾಗಿ ಬಿಳೀ ಜನರ ಭೋಗಭೂಮಿಯಾಗಿರಿಸಿಕೊಳ್ಳಬೇಕೆಂದು ಒಸ್ಟ್ರೇಲಿಯದ ಪ್ರಜಾನಾಯಕರು ಈಗ ಪ್ರಯತ್ನಿಸುತ್ತಿದ್ದಾರೆ. ಆಂಗ್ಲ ಸೇನಾಪತಿಗಳು ಒಸ್ಟ್ರೇಲಿಯವನ್ನು ಈ ನೂತನ ಪಾತ್ರಕ್ಕೆ ಸಿದ್ಧಗೊಳಿಸುತ್ತಿದ್ದಾರೆ. ಆಫ್ರಿಕದಲ್ಲಿಯೂ ಅದೇ ರೀತಿ ಬಿಳೀ ಜನರ ಬಲಿಷ್ಠ ಸಾಮ್ರಾಜ್ಯವೊಂದು ಸದ್ದಿಲ್ಲದೆ ಆಂಗ್ಲ ಆಶ್ರಯದಲ್ಲಿ ಬೆಳೆಯುತ್ತಿದೆ. ಆಂಗ್ಲರು ರಶ್ಯದೊಡನೆ ಕಾದಾಡಲಿಕ್ಕೆ, ಅಮೇರಿಕವನ್ನು ಬಿಟ್ಟು ತಮ್ಮ ಚಕ್ರಾಧಿಪತ್ಯವನ್ನು ಆಸ್ಯದಿಂದ ಮರೆಮಾಡಿ—ಆಫ್ರಿಕ, ಒಸ್ಟ್ರೇಲಿಯಗಳಲ್ಲಿ ತಮ್ಮ ಸಾಮ್ರಾಜ್ಯವನ್ನು ಬಲಗೊಳಿಸುತ್ತಿದ್ದಾರೆ. ರಶ್ಯ ಅಮೇರಿಕಗಳು ಪರಸ್ಪರ ಹೋರಾಟದಲ್ಲಿ ಶಕ್ತಿಗುಂದಿ, ನಿಸ್ತೇಜವಾದರೆ ಆಂಗ್ಲರು ಲೋಕದ ಅಗ್ರಾಸನವನ್ನು ಪುನಃ ತಾವೇ ಅಲಂಕರಿಸಬಹುದು. ಹಿಂದುಸ್ಥಾನದಲ್ಲಿ ವಿಭಜನೆಯಾಗಿ ಹಿಂದೀ ಯುನಿಯನ್ ಪಾಕಿಸ್ತಾನಗಳ ಹೋರಾಟವು ಶಾಶ್ವತವಾಗದೆ—ಆಂಗ್ಲರು ಜಗತ್ತಿನ ಅಗ್ರಾಸನದಲ್ಲಿ ಕೂತ ಬಳಿಕ ಹಿಂದುಸ್ಥಾನವನ್ನೂ ಪುನಃ ತಮ್ಮ ರಾಗಕ್ಕೆ ತಕ್ಕಂತೆ ಕುಣಿದಾಡಿಸತೊಡಗಬಹುದು. ಆಂಗ್ಲರ ಈ ವಿಚಾರದ ಬೆಂಬಲಕ್ಕೂ ಆಶೆಗಳ ಸಾರ್ಥಕಕ್ಕೂ ಈಗ ಬೇಕಾದುದೊಂದೇ—ದೈವಕೃಪೆ.

"C"

*

ವಾರದ ವಿಜ್ಞಾನ ವಾರ್ತೆಗಳು.

ರಾಸಾಯನಿಕ ಉಣ್ಣೆ

ಅಮೇರಿಕದ ಹರ್ವಾರ್ಡ್ ವಿಶ್ವವಿದ್ಯಾಲಯದ ರಾಸಾಯನಿಕ ಸಂಶೋಧನಾಲಯಕ್ಕೆ ಸೇರಿದ ಡಾ॥ ರೋಬರ್ಟ್ ವುಡ್ ವರ್ಡ್ ಅವರು ಸಸ್ಯ ಜೀವಾಣುಗಳ ಕುರಿತು ಕೆಲವೊಂದು ನವನವೀನ ವಿಷಯಗಳನ್ನು ಶೋಧಿಸಿರುವರು. ಇದರಿಂದ ಹೊಸ ವಿಧಾನದ ಪ್ಲೆಸ್ಟಿಕ್ ವಸ್ತುಗಳನ್ನು ತಯಾರಿಸುವ ಉಪಾಯಗಳೂ, ಮತ್ತಿತರ ಉಪಯುಕ್ತ ವಸ್ತುಗಳನ್ನು ತಯಾರಿಸುವ ರಹಸ್ಯವೂ ಪ್ರಕಾಶಕ್ಕೆ ಬಂದಿದೆ. ಅವರ ಪರಿಶೋಧನೆಯು ಫಲವಾಗಿ ರೇಶ್ಮೆಯನ್ನು ರೇಶ್ಮೆ ಹುಳದಿಂದ ಮಾತ್ರವಲ್ಲ, ಉಣ್ಣೆಯನ್ನು ಕುರಿಯಿಂದ ಮಾತ್ರವಲ್ಲ, ಇತರ ವಸ್ತುಗಳಿಂದಲೂ ಅವನ್ನು ತಯಾರಿಸಬಹುದೆಂದು ತಿಳಿದುಬರುತ್ತದೆ.

ಎಲ್ಲರಿಗೂ ಟೆಲಿವಿಜನ್ ಸೌಕರ್ಯ

ರೇಡಿಯೋದಲ್ಲಿ ನಾವು ದೂರ ಕೇಂದ್ರಗಳಿಂದ ನುಡಿದ ಶಬ್ದವನ್ನು ಕೇಳುತ್ತೇವೆ. ಟೆಲಿವಿಜನಿನಲ್ಲಿ ದೂರ ಕೇಂದ್ರಗಳಲ್ಲಿ ನಟಿಸುವ ವ್ಯಕ್ತಿ, ದೃಶ್ಯಗಳನ್ನು ನೋಡಬಹುದು. ಈಗ ಇಂಗ್ಲೆಂಡಿನ ಟೆಲಿವಿಜನ್ ತಜ್ಞರು ಒಂದು ವಿಶೇಷ ತರದ ದೃಶ್ಯ ಪ್ರಚಾರಕ ಯಂತ್ರವನ್ನು ತಯಾರಿಸಿ ಅಲ್ಲಿನ ಪ್ರತಿಯೊಬ್ಬರಿಗೂ ಅದರ ಸೌಕರ್ಯ ದೊರಕುವಂತೆ ಸೌಲಭ್ಯಮಾಡಿಕೊಂಡಿರುವರು. ಇದುತನಕ ಟೆಲಿವಿಜನ್ ಪ್ರಸಾರವು 35 ಮೈಲುಗಳೊಳಗೆ ಮಾತ್ರ ಸ್ವಚ್ಛವಾಗಿ ನೋಡುವಂತಾಗುತ್ತಿತ್ತು. ಆದರೆ ಈಗಿನ ಶೋಧೆಯಿಂದ ಹೆಚ್ಚೆಚ್ಚು ದೂರದ ತನಕ ಅದನ್ನು ಪಸರಿಸಲು ಸಾಧ್ಯವಾಗುತ್ತದೆ.

ಬಿರುಗಾಳಿಯಿಂದ ತಪ್ಪಿಸಿಕೊಳ್ಳುವುದು

ಜನರು ಕೆಲವು ಸಲ ಆಕಸ್ಮಾತಾಗಿ ಸುಂಟರ ಗಾಳಿ, ಬಿರುಗಾಳಿ ಮಳೆಗಳಿಗೆ ಸಿಲುಕಿ ಗಂಡಾಂತಕ್ಕೀಡಾಗುವುದುಂಟು. ಅಮೇರಿಕದ ವೈದ್ಯ ಪತ್ರಿಕೆಯೊಂದು ಇಂತಹ ಸಂದರ್ಭದಲ್ಲಿ ಈ ಕೆಳಗಿನ ಸೂಚನೆಗಳನ್ನು ಕೊಡುತ್ತದೆ:

ಇಂತಹ ಸಂದರ್ಭದಲ್ಲಿ ಉತ್ತಮವಾದ ಆಶ್ರಯವು ಒಂದು ಮನೆ, ಕೋಣೆ, ಇಲ್ಲವೆ ಮೋಟಾರುಕಾರು. ಕೆಲವು ಸಲ ಮಿಂಚು ಬಡಿಯುವುದೂ ಉಂಟು. ಗಾಳಿ ಮಳೆ ಬೀಸುವಾಗ ತೆರೆದಿರುವ ಕಿಟಕಿಯಿಂದ ಇದು ಒಳಬರಲು ಸಾಧ್ಯವಿದೆ. ಆಗ ನೆಲಮಾಳಿಗೆಯಲ್ಲಿ, ಕವಾಟುಗಳಲ್ಲಿ ಅಡಗುವುದು ಅಗತ್ಯವಿಲ್ಲ. ಆದರೆ ವಿದ್ಯುತ್ ಸರಿಗೆಗಳ ಹಲಗೆ ಇದ್ದಲ್ಲಿ ಇಲ್ಲವೆ ಒಲೆಯ ಬಳಿ ಮಾತ್ರ ಇರಬಾರದು. ಗೋಡೆ, ಪೊದರು, ಒಂಟೀಮರ, ಸರಿಗೆಬೇಲಿ, ಇವುಗಳ ಬಳಿ ಅಥವಾ ಅಡಿಯಲ್ಲಿರುವುದೂ ಅಪಾಯಕರ. ಮೈದಾನು ಪ್ರದೇಶದಲ್ಲಿದ್ದರೆ ಹೊಂಡ ಕಣಿವೆಗಳಲ್ಲಿ ಹುದುಗಿಕೊಳ್ಳುವುದು ಭದ್ರ. ಒದ್ದೆಯಾಗಿರುವುದು ಒಣಗಾಗಿರುವುದಕ್ಕಿಂತ ಒಳ್ಳೇದು.

ESTD. 1906.

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29,00,000	29,00,000	Cash	1,01,91,000	1,16,16,000
Capital paid up	28,43,000	28,80,000	Govt. Securities	1,80,45,000	2,75,61,000
Reserve	11,00,000	11,00,000	Advances to customers	1,56,87,000	2,01,38,000
Deposits	3,60,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	5,000
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ವಾರಾಂತ್ಯ ವರದಿ ವಿಮರ್ಶೆ

‘ವಾಸ್‌ರಾಯು’ ಜಿನ್ನಾ

ಜಿನ್ನಾ ಸಾಹೇಬರನ್ನು ಪಾಕಿಸ್ಥಾನ ಸಾಮಂತ ರಾಜ್ಯದ ಪ್ರಥಮ ಗವರ್ನರ್ ಜನರಲ್ಲರಾಗಿ ಬ್ರಿಟಿಷ್ ಸರಕಾರ ನೇಮಿಸಿದೆ. ಈ ನೇಮಕವು ವಿಚ್ಛೇಧೀಕರಣ ನಾಟಕದ ಪರಮಾವಧಿ. ಆದರೆ ಇದೊಂದು ಮುತ್ಸದ್ದೀತನದ ಮಾದರಿಯೂ ಆಗಿದೆನ್ನಬಹುದು. ಅಮೇರಿಕದ ಸ್ವಾತಂತ್ರ್ಯಗೆದ್ದ ಜನರಲ್ ವಾಶಿಂಗ್ಟನ್ನನು ಸಂಯುಕ್ತ ಅಮೇರಿಕದ ಪ್ರಥಮ ಅಧ್ಯಕ್ಷನಾಗಿ ಮಾಡಲ್ಪಟ್ಟನು. ಜಿನ್ನಾ ಸಾಹೇಬರಾದರೊ ತಮ್ಮ ಹೊಸ ಸ್ಥಾನಕ್ಕಾಗಿ ಅವಿಶ್ರಾಂತ ದುಡಿದವರು. ಅವರ ದಿವ್ಯ ನಾಯಕತ್ವದಲ್ಲಿ ಅವರದೆಷ್ಟೊ ಡೈರೆಕ್ಟ್ ಏಕ್ಷನುಗಳೂ, ಕಾಯಿದೆಭಂಗದ ಚಳವಳಿಗಳೂ ನಡೆದಿವೆ. ಅವರ ಪರಿಣಾಮವು ಎಂತಹದೆಂಬುದೂ ಮರೆತು ಹೋಗುವ ವಿಷಯವಲ್ಲ.

ಈಗ ಪಾಕಿಸ್ಥಾನದ ‘ವ್ಯಾಸ್‌ರಾಯರ’ ಮೇಲೆ ಹೊಸ ಹೊಣೆಗಾರಿಕೆಯು ಬಿದ್ದಿರುತ್ತದೆ. ಹಿಂದಿನಂತೆ ಅವರು ಅಲ್ಪಸಂಖ್ಯಾಕರಾದ ಹಿಂದುಗಳನ್ನೂ ತಮ್ಮ ವೈರಿಗಳೆಂದು ತಿಳಕೊಳ್ಳುವಂತಿಲ್ಲ. ಅಲ್ಪಸಂಖ್ಯಾಕರಿಗೆ ಸಂಪೂರ್ಣ ಜೀವಿತದ ಭದ್ರತೆಗಳು ದೊರಕುವಂತೆ ಮಾಡಿ ಅವರು ತಮ್ಮ ಹೊಸ ಹುದ್ದೆಯ ಘನಸ್ಥಿಕೆಯನ್ನು ಕಾಯ್ದುಕೊಳ್ಳಬೇಕಾಗಿದೆ. ಮಾತ್ರವಲ್ಲ ಹಿಂದಿನಂತೆ ತರ್ಕರಹಿತವಾದ ಕೇಳಿಕೆಗಳನ್ನು ಪ್ರಕಟಿಸುವುದರಲ್ಲೂ ಅವರು ತುಂಬಾ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ತಮ್ಮ ವಿರೋಧಿಗಳನ್ನು ಅವಮಾನಾಸ್ಪದ ರೀತಿಯಲ್ಲಿ ಕಾಣುವುದನ್ನು ತಿದ್ದಿಕೊಳ್ಳುವುದು ಅವಶ್ಯವೆನಿಸದಿರದು. ಅಂತೂ ಆಫ್ರಿಕದ ಜನರಲ್ ಸ್ಮಟ್ಸರಂತೆ ಅವಿಕಾರ ಮದದಿಂದ ಮತ್ತರಾಗುವುದಿಲ್ಲವೆಂದು ಪಾಕಿಸ್ತಾನದ ಅಲ್ಪಸಂಖ್ಯಾಕರು ಹಾರೈಸುವರು.

ನರೇಂದ್ರರ ನೀತಿ

ಬ್ರಿಟಿಷ್ ಸರಕಾರದವರು ಇದುವರೆಗೆ ಯಶಸ್ವಿಯಾಗಿ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸುವುದಾದರೂ ಅವರ ನಿಷ್ಪಕ್ಷಪಾತ ಮನೋಭಾವದ ಅಂತಿಮ ಪರೀಕ್ಷೆ ಭಾರತೀಯ ದೇಶೀ ಸಂಸ್ಥಾನಗಳಲ್ಲಿ ಜರಗುವುದು. ಅವರು ಇರುವಾಗ ದೇಶಿ ಸಂಸ್ಥಾನಗಳ ಮೇಲೆ ಅವರಿಗೆ ಸಂಪೂರ್ಣ ಹತೋಟಿ ಇತ್ತಾದರೂ ಅವರ ಅಧಿಕಾರವನ್ನು ಕೈವಶಮಾಡಿಕೊಂಡವರಿಗೆ ಆ ಹತೋಟಿ ಹೇಗೆ ತಪ್ಪುವುದೆಂದು ವಿವರಿಸಲ್ಪಡಲಿಲ್ಲ. ಒಂದುವೇಳೆ ದೇಶಿರಾಜರು ನಿಜವಾಗಿ ದೈವದತ್ತವಾದ ಅಧಿಕಾರ ಪ್ರಾಪ್ತಿಯುಳ್ಳವರಾಗಿದ್ದರೆ ಬ್ರಿಟಿಷರಿಗೆ ಅವರು ಏಕೆ ತಲೆ ಬಗ್ಗಿಸಿಕೊಂಡಿದ್ದರೊ ತಿಳಿಯದು. ಈಗ ಭಾರತೀಯರ ಕೈಗೆ ಅದೇ ಅಧಿಕಾರ ಬರುವಾಗ ಈ ದೈವಸ್ಫೂರ್ತಿಯು ಮತ್ತೆಲ್ಲಿಂದ ಆವಿರ್ಭವಿಸಿತೊ ಹೇಳಬರುವುದಿಲ್ಲ. ಅಂತೂ ಬ್ರಿಟಿಷರು ಇಲ್ಲಿಂದ ಸಂಪೂರ್ಣವಾಗಿ ಹಿಂತೆಗೆಯುವಾಗ ಈ ಸಮಸ್ಯೆಯನ್ನು ತೃಪ್ತಿಕರವಾಗಿ ನೀಗಿಸಿದರೆ ಅವರ ಪ್ರಾಮಾಣಿಕತೆಯು ಇತಿಹಾಸ ಪ್ರಸಿದ್ಧವಾಗುವುದರಲ್ಲಿ ಸಂದೇಹವಿಲ್ಲ. ಇಲ್ಲವೆ ಸ್ವತಂತ್ರ ಭಾರತದೊಳಗೆ ವಿಷ ಬೀಜಗಳನ್ನು ಬಿತ್ತಿ ಹೋದ ದುಷ್ಕೀರ್ತಿಗೆ ಅವರು ಪಾತ್ರರಾಗುವುದು ಖಂಡಿತ.

ಆಹಾರ ಹಾಹಾಕಾರ

ರಾಜಕೀಯದ ವಿಷಯವು ಒಂದು ರೀತಿಯಲ್ಲಿ ಸುಧಾರಿಸಿದಂತಾಗುವಾಗ ಬಹು ಮುಖ್ಯವಾದ ಆಹಾರದ ಅವಸ್ಥೆಯು ತೀರ ಹದಗೆಡುತ್ತಿದೆಯೆಂದು ಹೇಳಲಾಗದೆ. ಶಾಂತಿಕಾಲದಲ್ಲಿ ಹಿಂದಿನ ಬರ್ಮಾ, ಮಲಯಾ, ಇಂಡೋನೇಸ್ಯಾ, ಸಯಾಮುಗಳಿಂದ ಬರುತ್ತಿದ್ದ ಅಕ್ಕಿಯನ್ನು ಈಗೇಕೆ ತರಿಸಲ್ಪಡಲಾಗುವುದಿಲ್ಲವೆಂಬುದು ರಹಸ್ಯದ ವಿಷಯವಾಗಿದೆ. ಈ ದೇಶಗಳ ರಾಜಕೀಯ ಪರಿಸ್ಥಿತಿಯು ಇನ್ನೂ ಸುಧಾರಿಸಿಲ್ಲವೆಂಬುದೇನೊ ನಿಜ. ಆದರೆ ಇತ್ತೀಚೆಗೆ ಬರ್ಮಾದಿಂದ ಅಕ್ಕಿಯು ಈ ದೇಶಕ್ಕೆ ಬಂದಿರುವುದಾದರೂ ಅದು ಎಲ್ಲಿ ತಪ್ಪಿದೆಯೆಂಬ ಸಂಗತಿಯು ತಿಳಿದುಬಂದಿಲ್ಲ. ಕೇಂದ್ರ ಸರಕಾರವು ಆಹಾರದ ವಿಷಯದಲ್ಲಿ ಅತ್ಯಂತ ಬಿಗುವಾದ ಧೋರಣೆಯನ್ನು ವಹಿಸುವುದು ಅತ್ಯಾವಶ್ಯಕ.

ಲೀಗ್ ಪಿಕಲಾಟ ಮುಗಿದಿಲ್ಲ

ಮುಸ್ಲಿಂ ಲೀಗು ಇನ್ನು ದುಸ್ವಾರ್ಥದಲ್ಲೇ ತೊಡಗಿರುವುದು ಭಾರತದ ಭವಿಷ್ಯಕ್ಕೆ ಶುಭ ಚಿಹ್ನೆಯಲ್ಲ. ಈಗಾಗಲೇ ಅದರ ಕೇಂದ್ರ ಸರಕಾರ ಪ್ರತಿನಿಧಿಗಳು ರಾಜಿನಾಮೆ ಕೊಡಬೇಕಿತ್ತು. ವ್ಯಾಸ್‌ರಾಯರು ಆ ಕುರಿತು ಒತ್ತಾಯವನ್ನು ಹಾಕಿರುವರೆಂದು ಬಲವಾದ ವದಂತಿಯಿತ್ತು. ಆದರೆ ಲೀಗ್ ಮಂತ್ರಿಗಳು ಇನ್ನು ಅರೆಮನಸ್ಸಿನಿಂದಲೇ ಇರುವರು. ಇದುತನಕ ಅವರು ತಮ್ಮ ರಾಜಿನಾಮೆಯನ್ನು ಕೊಡಲಿಲ್ಲವೆಂದು ತಿಳಿದುಬಂದಿದೆ. ಜಿನ್ನಾ ಸಾಹೇಬರು ಅದೇನೊ ಹೊಸ ಸಮಸ್ಯೆಯೊಂದನ್ನು ಕಲ್ಪಿಸಿ ವ್ಯಾಸ್‌ರಾಯರೊಡನೆ ಚರ್ಚೆ ನಡಸುತ್ತಿರುವರಂತೆ. ಇದು ಅವರು ಹಿಂದೆ ಕೇಳಿದ ಪಾಕಿಸ್ಥಾನ ಮಾರ್ಗದ ಕುರಿತಾಗಿರಬಹುದೆ ಎಂದು ರಾಜಕೀಯ ಕೇಂದ್ರಗಳಲ್ಲಿ ಶಂಕೆಹುಟ್ಟಿದೆ. ಇಲ್ಲವೆ ಗಡಿನಾಡಿನಲ್ಲಿ ಕಾಂಗ್ರೆಸು ಮತಗಣನೆಯಲ್ಲಿ ಭಾಗವಹಿಸದಿರುವುದರಿಂದ ಲೀಗಿಗೆ ಉಂಟಾದ ಕಳವಳದ ಪರಿಣಾಮವಿರಬಹುದೆ? ಮತಗಣನೆ ಹೇಗಿದ್ದರೂ ಇನ್ನೆರಡು ಮೂರು ವರ್ಷಗಳ ತನಕ ಖಾನ್ ಸಾಹೇಬರ ಮಂತ್ರಿಮಂಡಳವು ಅಧಿಕಾರದಲ್ಲಿರಲು ಹಕ್ಕುಳ್ಳದಾಗಿದೆ. ಇದು ಲೀಗಿಗೆ ತುಂಬಾ ‘ನಾಕುಶಿ’ಯ ಪರಿಸ್ಥಿತಿಯಾಗಿರಬಹುದು. ಆದರೆ ಡಾ। ಖಾನ್ ಸಾಹೇಬರು ಘನ ಗಂಭೀರತೆಯಿಂದ ‘ಈ ಮತಗಣನೆಯಲ್ಲಿ ಲೀಗಿಗೆ ಮಿತಿ ಮೀರಿದ ಸಂಖ್ಯೆಯಲ್ಲಿ ಬೆಂಬಲ ಸಿಕ್ಕಿದೆಯೆಂದು ಖಚಿತವಾದರೆ’ ತಾನು ರಾಜಿನಾಮೆ ಈಯುವದಾಗಿಯೂ ತಿಳಿಸಿರುವನು. ಒಂದು ವೇಳೆ ಇಷ್ಟು ವಿಶ್ವಾಸ ಲೀಗಿಗೆ ಇಲ್ಲದಿರಬಹುದು. ಅದು ಪಡೆಯಬಹುದಾದ ವೋಟುಗಳು ಕೇವಲ ಸ್ವಯಂ ಪ್ರೇರಣೆಯಿಂದೆಂದೂ ಹೇಳಬರುವುದಿಲ್ಲ. ಅನಕ್ಷರ ಜನತೆಯನ್ನು ಬೆದರಿಕೆ ಬಲಾತ್ಕಾರದ ಹಿಂಸೆಗೊಳಮಾಡುವ ನೀತಿಯು ಸಾಮಾನ್ಯವಾಗಿದೆ. ಅಲ್ಪಸಂಖ್ಯಾಕರ ಭದ್ರತೆಯ ಪ್ರಶ್ನೆಯು ಇನ್ನು ಲೀಗ್ ದುರೀಣರ ಗಮನಕ್ಕೆ ಬಂದಿಲ್ಲವೆಂದೇ ಹೇಳಬೇಕು. ರಾವಳ್ ಪಿಂಡಿ, ಅಮೃತಸರ, ಲಾಹೋರ್‌ಗಳಲ್ಲಿಯೂ ಗಡಿನಾಡಿನ ಕೆಲವು ಜಿಲ್ಲೆಗಳಲ್ಲೂ ಈಗಲೂ ಅಲ್ಪಸಂಖ್ಯಾಕರ ಮೇಲೆ ಅನಾಚಾರಗಳು ನಿರ್ವಹಿಸಲ್ಪಡುತ್ತವೆಯೆಂದು ದಿನಪತ್ರದ ವರದಿಗಳಿಂದ ತಿಳಿಯಬಹುದು. ಸಿಂಧದಲ್ಲಿ ಲೀಗು ಪಾಕಿಸ್ಥಾನದ ಘೋಷಣೆಯ ಪೀಠಿಕೆಯನ್ನು ಹಾಕಿದೆ. ಅಲ್ಲಿನ ಬ್ಯಾಂಕುಗಳ ಮೂಲ ಧನವನ್ನು ಪಾಕಿಸ್ತಾನ ರಾಜ್ಯದ ಸೊತ್ತಾಗಿ ಪರಿವರ್ತಿಸುವ ಹಂಚಿಕೆಯೊಂದು ನಡೆದಿದೆಯಾಗಿ ಊಹೆ ಪ್ರಚಾರವಾಗಿ ಆಗಲೇ ಕೋಟಿಗಟ್ಟಲೆ ಬಂಡವಾಳವು ಪರಪ್ರಾಂತ್ಯಗಳಿಗೆ ಸ್ಥಳಾಂತರಿಸಲ್ಪಡಹತ್ತಿರುವುದಂತೆ. ಇತ್ತ ನೌಖಾಲಿಯಲ್ಲಿ ಬಹುಸಂಖ್ಯಾಕರು ಅಲ್ಪಸಂಖ್ಯಾಕರಾದ ಹಿಂದೂಗಳಿಗೆ ತಮ್ಮ ವಸತಿಗಳನ್ನು ಬಿಟ್ಟುಕೊಡುವಂತೆ ಬೆದರಿಕೆಯ ಪತ್ರಗಳನ್ನು ಕೊಟ್ಟಿರುವರಂತೆ.

ಇವೆಲ್ಲವುಗಳಿಂದ ಲೀಗಿಗೆ ಈಗಾಗಲೇ ತನ್ನ ಪರಿಸ್ಥಿತಿಯು ಸಹನೀಯವಾಗಲಿಲ್ಲವೆಂದು ಅರ್ಥವಾಗುತ್ತದೆ. ಇನ್ನಿರುವ ಅಲ್ಪಾವಧಿಯಲ್ಲಿ ಅದು ನಿರಂತರವಾದ ವೈಷಮ್ಯ ಬೀಜವನ್ನು ಬಿತ್ತಿ ಅದರ ದುಷ್ಪರಿಣಾಮದಿಂದಾಗುವ ಲಾಭವನ್ನು ಪಡೆಯಲು ಹವಣಿಸುತ್ತದೆಂದು ತಿಳಕೊಂಡರೆ ತಪ್ಪಲ್ಲ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಅಂದರೆ ಬ್ರಿಟಿಷರು ಇಲ್ಲಿಂದ ತಳ ಕಿತ್ತ ಮೇಲೆ ಲೀಗಿಗೆ ಹಿಂದಿನ ಲಾಭಗಳು ಖಂಡಿತ ದೊರೆಯಲಾರವೆಂದು ತಿಳಿದಿರಬೇಕಾದುದು ಅವಶ್ಯ.

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted

Fixed Deposits for periods of 3 months and above up to 24 months are accepted.

ಸ್ವದೇಶ ವಾರ್ತಾ ವೈಖರಿ

ಭಾರತದ ಸಾಮರ್ಥ್ಯವನ್ನು ಹೆಚ್ಚಿಸಲು ನರೇಂದ್ರರು ಸರ್ದಾರ್ ಪಟೇಲರ ಸೂಚನೆಯಂತೆ ಯಾವುದಾದರೂ ಘಟನಾಸಮಿತಿಗಾಗಲಿ, ಒಕ್ಕೂಟಕ್ಕಾಗಲಿ ಸೇರುವುದು ಹಿತಕರವೆಂದು ಪ್ರಖ್ಯಾತ ಲಿಬರಲ್ ಮುಖಂಡರಾದ ಸರ್ ಹೋಮಿ ಮೋಡಿಯವರು ತಿಳಿಸುತ್ತಾರೆ.

★

ಬಿರಾರವನ್ನು ನಿಜಾಮರ ಸಂಸ್ಥಾನಕ್ಕೆ ಸೇರುವಂತಾಗುವ ಯಾವುದೇ ತರದ ದಾವಿಲೆಯಿದ್ದರೂ ಅದನ್ನು ತಿದ್ದುಪಡಿ ಮಾಡಬೇಕೆಂದು ಸ್ವತಂತ್ರ ಬಿರಾರದ ಸಮಿತಿಯವರು ಎಟ್ಲಿಯವರಿಗೆ ತಂತಿ ಮೂಲಕ ತಿಳಿಸಿದ್ದಾರೆ.

★

ಪಂಜಾಬ ಮತ್ತು ಬಂಗಾಲ ಗಡಿ ನಿರ್ಣಯ ಸಮಿತಿಯ ಅಧ್ಯಕ್ಷರಾಗಿ ನೇಮಿಸಲ್ಪಟ್ಟ ಸರ್ ಸಿರಿಲ್ ರ್ಯಾಡ್‌ಕ್ಲಿಫರು ಭಾರತಕ್ಕೆ ಆಗಮಿಸಿದ್ದು ಇನ್ನೆರಡು ತಿಂಗಳಲ್ಲಿ ತಮ್ಮ ಕೆಲಸವನ್ನು ಮುಗಿಸುವುದಾಗಿ ವಿಶ್ವಾಸ ಪ್ರಕಟಿಸಿದ್ದಾರೆ.

★

ಭಾರತವನ್ನು ವಿಚ್ಛೇಧೀಕರಿಸಿದುದರ ವಿರೋಧ ಮತ ಪ್ರದರ್ಶನ ಮಾತ್ರವಲ್ಲ ಸ್ವಾಧೀನ ದಳ ಚಟುವಟಿಕೆ ಕಡಿಮೆಯಾಗಲಿಲ್ಲ. [illegible] ಕೌನ್ಸಿಲ್ ಭವನದೆದುರು ಸತ್ಯಾಗ್ರಹ ಮಾಡಿದ ಸ್ವಾಮಿ ಕರಪಾತ್ರಿಜಿ ಮತ್ತಿತರ ಸಾಧುಗಳನ್ನು ಬಂಧಿಸಲಾಗಿದೆ.

★

ಹಿಂದೂಸ್ಥಾನ ಸರಕಾರದ ಹೊಸ ಆಯಾತ ನಿಯಂತ್ರಣದ ಧೋರಣದ ಮೇರೆಗೆ ಪರದೇಶಗಳಿಂದ ಹಿಂದೂಸ್ಥಾನಕ್ಕೆ ಮೋಟಾರ, ಮೋಟಾರ ಸೈಕಲ್, ಸೈಕಲ್, ಚಹಾ, ಮದ್ಯ ಮೊದಲಾದವುಗಳು ಬರುವುದು ಬಂದಾಗುವುದು.

★

“ಇತ್ತೀಚಿಗೆ ನಿಜಾಮರು ಹೊರಡಿಸಿದ ಫರ್ಮಾನಕ್ಕೆ ಜನತೆಯ ಬೆಂಬಲವಿಲ್ಲ. ಆದರೆ ಕೆಲವು ಮುಸಲ್ಮಾನರು ಮತ್ತು ಸಂಸ್ಥಾನದಲ್ಲಿ ಪ್ರತಿಗಾಮಿಗಳಾದ ಜಹಾಗೀರದಾರರು ತಮ್ಮ ಹಿತ ಸಂಬಂಧಗಳನ್ನು ರಕ್ಷಿಸಿಕೊಳ್ಳಲು ಸರಕಾರದ ಬಾಲ ಹಿಡಿಯುವ ಜನರು ಈ ಫರ್ಮಾನವನ್ನು ಸ್ವಾಗತಿಸಿರುವರು” ಹೀಗೆಂದು ಹೈದರಾಬಾದು ಸಂಸ್ಥಾನದ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರು ತಿಳಿಸುತ್ತಾರೆ. ತಮ್ಮ ಜನ್ಮಸಿದ್ಧ ಹಕ್ಕನ್ನು ಸಂಪಾದಿಸಲು ಪ್ರಜೆಗಳು ಬದ್ಧಕಂಕಣರಾಗಿರುವರೆಂದೂ ಅವರ ವಿಶ್ವಾಸ.

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP.

ಬ್ರಿಟನಿನ ಸಂಯುಕ್ತ ರಾಜ್ಯ ಮತ್ತು ಸ್ವತಂತ್ರ ಸಾಮ್ರಾಜ್ಯಗಳು

ಡೊಮಿನಿಯನ್ ಸ್ಟೇಟಸ್ ಎಂಬುದರ ಭಾವನೆ?

ಬ್ರಿಟಿಷ್ ಕಾಮನ್‌ವೆಲ್ತಿನ ಸಾಮ್ರಾಜ್ಯವು ಸಮಾನತೆಯ ಸ್ವತಂತ್ರ ರಾಷ್ಟ್ರಗಳ ಕೂಟ. ಸಂಯುಕ್ತ ಅಮೇರಿಕದಂತೆ ಅಥವಾ ಸಾಮಂತ ಪ್ರಾಂತ್ಯಗಳು ಒಂದು ಕೇಂದ್ರಕ್ಕೆ ಸೇರಿದವುಗಳಲ್ಲ. ಇದರಲ್ಲಿ ಕೇಂದ್ರ ಶಾಸನ್ಯಾಡಳಿತವಿಲ್ಲ. ಇದಕ್ಕೊಂದು ಲಿಖಿತ ಘಟನಾವಳಿಯೂ ಇಲ್ಲ.

ಇದಕ್ಕೆ ಸೇರಿದ ರಾಜ್ಯಗಳು: ಗ್ರೇಟ್ ಬ್ರಿಟನ್ ಮತ್ತು ಉತ್ತರ ಆಯರ್ಲೆಂಡಿನ ಸಂಯುಕ್ತ ರಾಜ್ಯ, ಕೆನಡಾ, ಆಸ್ಟ್ರೇಲಿಯಾ, ನ್ಯೂಜೀಲೆಂಡ್, ದಕ್ಷಿಣ ಆಫ್ರಿಕ, ಮತ್ತು ದಕ್ಷಿಣ ಆಯರ್ಲೆಂಡುಗಳು.

ಬ್ರಿಟನಿನ ಮತ್ತು ಮೇಲಿನ ಇತರ ಡೊಮಿನಿಯನುಗಳ ಎಲ್ಲಾ ಜನರೂ ಸರ್ವಸಮಾನ ಹಕ್ಕು ಬಾಧ್ಯತೆಗಳುಳ್ಳ ಬ್ರಿಟಿಷ್ ಪ್ರಜೆಗಳು. ಆದರೆ ಅವರಿಗೆ ಪ್ರತ್ಯೇಕ ಪ್ರಜಾಧಿಕಾರವು ಇದೆ. ಉದಾ: ಕೆನಡದವರು ಇತರರಂತೆ ಬ್ರಿಟಿಷ್ ಪ್ರಜೆಗಳೆನಿಕೊಳ್ಳುವುದಾದರೂ ಅವರಿಗೆ ಕೆನಡದ ಪ್ರಜೆಗಳೆಂದೆನಿಸಿಕೊಳ್ಳುವ ಹಕ್ಕೂ ಇದೆ.

ದಕ್ಷಿಣ ಆಯರ್ಲೆಂಡನ್ನು ಬಿಟ್ಟರೆ ಬ್ರಿಟನಿನ ರಾಜಶಾಹಿಯು ಇತರ ಎಲ್ಲಾ ಸಾಮಂತ ರಾಜ್ಯಗಳಿಗೂ ಸಾಮಾನ್ಯವಾದ ಸಂಬಂಧವುಳ್ಳದಿದ್ದು ಅವುಗಳ ರಾಜ್ಯಘಟನೆಯಲ್ಲಿ ಅದಕ್ಕೊಂದು ವಿಶೇಷ ಸ್ಥಾನವಿದೆ. ಆರನೇ ಜೋರ್ಜರು ಬ್ರಿಟನಿನ ಸಂಯುಕ್ತ ರಾಜ್ಯದ ಮಾತ್ರವಲ್ಲ ಇತರ ಸಾಮಂತ ರಾಜ್ಯಗಳ ರಾಜರೂ ಆಗಿರುವರು. ಬ್ರಿಟನಿನಲ್ಲಿನ ಪ್ರಭು ಸರಕಾರ ಮಾತ್ರವಲ್ಲ ಕೆನಡ, ಭಾರತದಲ್ಲಿನ ಪ್ರಭುವಿನ ಸರಕಾರವೆಂದೂ ನಾವು ಸಂಬೋಧಿಸುತ್ತೇವೆ.

ಬ್ರಿಟನಿನಲ್ಲಿ ಹೇಗೋ ಹಾಗೇ ಕೆನಡದಲ್ಲಿನ ರಾಜಕಾರಣದಲ್ಲಿ ಕೂಡಾ ರಾಜರು ಪ್ರತ್ಯಕ್ಷ ಭಾಗವಹಿಸುವುದಿಲ್ಲ. ಕೆನಡದ ಸರ್ವ ನಿರ್ವಹಣಾಧಿಕಾರವೆಲ್ಲ ಅಲ್ಲಿನ ಮುಖ್ಯ ಪ್ರಧಾನರ ಮತ್ತವರ ಮಂತ್ರಿಮಂಡಳದ ಕೈಯಲ್ಲಿರುತ್ತದೆ. ಅದರ ಸಲಹೆಯಂತೆ ರಾಜರು ವರ್ತಿಸುವರು.

ತಮ್ಮ ಸರಕಾರ ರಚನೆ, ಧೋರಣೆ ನಿರ್ವಹಣೆಯಲ್ಲಿ ಎಲ್ಲಾ ರಾಜ್ಯಗಳೂ ಸರ್ವ ಸಾಮಾನ್ಯವಾದ ರೀತಿಯಲ್ಲಿ ವರ್ತಿಸುತ್ತವೆ. ಶಾಸನ ಮಾನ್ಯಮಾಡುವಿಕೆ, ವ್ಯಕ್ತಿಪರ ಹಕ್ಕು ಬಾಧ್ಯತೆಗಳು ಮತ್ತಿವುಗಳಲ್ಲಿರುವ ಭಾವನೆಗಳ ಮೌಲ್ಯವನ್ನು ಎಲ್ಲರೂ ಸಮಾನ ಹಿತವೆಂದು ಭಾವಿಸುವರು.

ಈ ಪ್ರತಿಯೊಂದು ದೇಶದಲ್ಲೂ ಒಂದೊಂದು ಪ್ರಜಾಪ್ರತಿನಿಧಿ ಸಭೆ ಇದೆ. ಇದರಿಂದಲೇ ಮುಖ್ಯ ಪ್ರಧಾನರೂ ಇತರ ಮಂತ್ರಿಗಳೂ ಚುನಾಯಿಸಲ್ಪಡುವರು. ಇವರು ಒಂದು ಮಂತ್ರಿಮಂಡಳ ರಚಿಸಿ ರಾಜ್ಯಾಡಳಿತಕ್ಕೆ ಹೊಣೆಗಾರರಾಗುವರು. ಪ್ರಜಾಪ್ರತಿನಿಧಿ ಸಭೆಯವರು ಒಂದು ಅವಿಶ್ವಾಸದ ಠರಾವಿನ ಮೂಲಕ ಒಂದು ಮಂತ್ರಿಮಂಡಳಕ್ಕೆ ರಾಜಿನಾಮೆ ಕೊಡಿಸಿ ಮತ್ತೊಂದನ್ನು ರಚಿಸಬಹುದು. ಪ್ರತಿ ದೇಶದಲ್ಲಿ ಪ್ರಜಾಪ್ರತಿನಿಧಿ ಸಭಾ ಕಾರ್ಯವು ಒಂದೇ ತರವಾಗಿದೆ.

ಜನರ ಸರಕಾರ, ಶಾಸನ ಮಾನ್ಯತೆ, ವ್ಯಕ್ತಿ ಸ್ವಾತಂತ್ರ್ಯದ ಸಾಂಪ್ರದಾಯಗಳಿಂದಲೇ ಎಲ್ಲಾ ರಾಜ್ಯಗಳ ಅಭಿವೃದ್ಧಿಯು ಸಾಗುತ್ತದೆ. ಇದರಿಂದಾಗಿ ಈ ದೇಶಗಳು ಶೀಘ್ರದಲ್ಲಿ ಸಂಪೂರ್ಣ ಸ್ವಾತಂತ್ರ್ಯಕ್ಕೆ ಹೊಣೆಗಾರರಾಗಿ ಪರಿಪೂರ್ಣ ಜನಾಂಗತ್ವದ ಘನಸ್ಥಿಕೆಯನ್ನು ಹೊಂದುವಂತಾಯಿತು.

ಈ ರಾಜ್ಯಗಳ ಪ್ರಜೆಗಳೆಲ್ಲರೂ ಬ್ರಿಟಿಷ್ ಮೂಲದವರೇ ಅಲ್ಲ—ಅಂದರೆ ಆದಿ ಬ್ರಿಟಿಷ್ ವಲಸೆಗಾರರ ವಂಶಸ್ಥರೇ ಆಗಿರುವುದಿಲ್ಲ. ಯಾವ ಜಾತಿಮತ, ಜನಾಂಗಕ್ಕೂ ಸೇರಿದವರಿದ್ದರೂ ಇವರಿಗೆ ತಮ್ಮ ಮತ, ಸಾಂಪ್ರದಾಯ, ಭಾಷೆ, ಕಟ್ಟುಕಟ್ಟಳೆಗಳನ್ನು ಆಚರಿಸುವ ಸಂಪೂರ್ಣ ಸ್ವಾತಂತ್ರ್ಯವಿದೆ.

ಎಲ್ಲರೂ ಸರ್ವಸಾಮಾನ್ಯವಾದ ಶಾಸನೆ ಮತ್ತು ಸ್ವತಂತ್ರತೆಗೆ ಬಾಧ್ಯಸ್ಥರಾಗಿದ್ದು ಈ ಮಿತಿಯೊಳಗೆ ತಮ್ಮ ಜನಾಂಗಿಕ ರೀತಿ ನೀತಿಗಳಿಗನುಸಾರ ಜೀವನ ನಿರ್ವಹಿಸಬಹುದು. ಆದರೆ ಎಲ್ಲರೂ ಇಡೀ ದೇಶದ ಹಿತದೃಷ್ಟಿಯುಳ್ಳವರಾಗಿರಬೇಕು. ಕೆಲವು ಮೂಲಭೂತ ತತ್ವಗಳಿಗೆಲ್ಲರೂ ಬದ್ಧರಾಗಿದ್ದು ಎಲ್ಲರಿಗೂ ಸಮಾನವಾದ ಕೆಲವು ಹಿತಗಳನ್ನು ಕಾಯಲು ಐಕ್ಯಮತದಿಂದಿರುವುದು.

ಬ್ರಿಟಿಷ್ ಸಾಮ್ರಾಜ್ಯ ಸಂಘವು ಬಿಗಿಯಾದೊಂದು ಶಾಸನ ಬಂಧನವಲ್ಲ. ಅದನ್ನು ಬೇಕಾದಂತೆ ಪರಿವರ್ತಿಸಲು ಸಾಧ್ಯವಿದೆ.

ರಾಷ್ಟ್ರೀಯ ಸ್ವಾತಂತ್ರ್ಯ

ಬ್ರಿಟನ್ನು, ಕೆನಡಾ, ಆಸ್ಟ್ರೇಲಿಯಾ ನ್ಯೂಜೀಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಆಯರ್ಲೆಂಡುಗಳು ಸಮಾನ ಸ್ಥಾನಮಾನದವುಗಳು. (ಆಗಸ್ಟ್ 15ರಿಂದ ಸಂಯುಕ್ತ ಭಾರತ ಮತ್ತು ಪಾಕಿಸ್ತಾನಗಳು ಇದೇ ಸಮಾನತೆ ಪಡೆಯುವುವು.) ಒಂದಕ್ಕೆ ಇನ್ನೊಂದು ಅಧೀನವಾದವುಗಳಲ್ಲ.

ಬ್ರಿಟನಿನ ಸಂಯುಕ್ತ ರಾಜ್ಯಕ್ಕೆ ಇತರ ಸಾಮಂತ ರಾಜ್ಯಕಾರಣದೊಳಗೆ ಒಂದಿಷ್ಟು ಕೈಹಾಕವಿಲ್ಲ. ಅವು ರಾಜಕೀಯವಾಗಿ ಸರ್ವಸ್ವತಂತ್ರವಾಗಿದ್ದು ತಮ್ಮ ಇಚ್ಛಾನುಸಾರವಾಗಿ ತಮ್ಮ ಆಂತರೀಕ ಮತ್ತು ವಿದೇಶಿಕ ಧೋರಣೆಯನ್ನು ನಿರ್ವಹಿಸುತ್ತವೆ.

ರಾಜಕೀಯವಾಗಿ ಮಾತ್ರವಲ್ಲ ಸಾಂಸ್ಕೃತಿಕವಾಗಿಯೂ ಇವು ಬೇರೆಯಾಗಿವೆ. ಸಾಮಂತ ರಾಜ್ಯದ ಪ್ರಜೆಗಳು ತಮ್ಮ ದೇಶಕ್ಕೂ ಮತ್ತು ಸಾಮ್ರಾಜ್ಯ ಸಂಘಕ್ಕೂ ವಿಧೇಯರಾಗಿರಬೇಕು. ಉದಾ: ನ್ಯೂಜಿಲೆಂಡದ ಜನರು ಬ್ರಿಟನಿನ ಜನರಿಂದ ಪ್ರತ್ಯೇಕವೆನಿಸುವ ಜನಾಂಗತ್ವವನ್ನು ತಳೆದಿದ್ದರೂ ಸಾಮ್ರಾಜ್ಯ ಸಂಘದೊಡನೆ ಸಂಬಂಧವಿಟ್ಟುಕೊಳ್ಳಲು ಇಚ್ಛಿಸುತ್ತಾರೆ.

1907ರಲ್ಲಿ ಜರಗಿತ ವಸಾಹತು ರಾಜ್ಯಗಳ ಪರಿಷತ್ತಿನಲ್ಲಿ ಡೊಮಿನಿಯನ್ ಇಲ್ಲವೆ ಸಾಮಂತರಾಜ್ಯವೆಂಬ ಈ ಶಬ್ದವನ್ನು ಕಂಡು ಹಿಡಿಯಲಾಯಿತು. ಬ್ರಿಟಿಷ್ ಸಾಮ್ರಾಜ್ಯದ ಮೇಲೆ ಹೊಂದಿಕೊಂಡಿರದೆ ಸ್ವತಂತ್ರವಾಗಿ ಆಳಿಕೊಂಡಿರುವ ರಾಜ್ಯಗಳಿಗೆ ಇದು ಅನ್ವಯಿಸುವಂತೆ ಮಾಡಲಾಯಿತು.

ಈ ಸಾಮಂತ ರಾಜ್ಯಗಳ ಶಾಸನ ಸಭೆಗಳಿಗೆ ತಮ್ಮ ಸ್ವಂತ ಕಾನೂನುಗಳನ್ನು ಮಾಡುವ ಸ್ವತಂತ್ರತೆ ಇದೆ.

ಒಂದು ಸಾಮಂತ ರಾಜ್ಯದ ಘಟನೆಯನ್ನು ಬದಲಾಯಿಸಲು ಬ್ರಿಟನಿಗೆ ಅಧಿಕಾರವಿಲ್ಲ. ಆದರೆ ಆ ರಾಜ್ಯವು ಸ್ವಪ್ರೇರಣೆಯಿಂದ ವಿನಂತಿಸಿಕೊಂಡರೆ ಹಾಗೆ ಮಾಡಲು ಬ್ರಿಟನಿಗೆ ಹಕ್ಕುಂಟಾಗುತ್ತದೆ. ಈ ವಿಧಾನವನ್ನು 1867ರಲ್ಲಿ ಕೆನಡದ ಪ್ರಜಾಪ್ರತಿನಿಧಿ ಸಭೆಯು ಈ ರೀತಿಯ ಒಂದು ಮಸೂದೆಯಲ್ಲಿ ಪಾಸುಮಾಡಿದೆ.

ಬ್ರಿಟನು ಸಾಮಂತ ರಾಜ್ಯಗಳ, ಇಲ್ಲವೆ ಒಂದು ಸಾಮಂತ ರಾಜ್ಯ ಇನ್ನೊಂದರ ಶಾಸನವನ್ನು ಬದಲಾಯಿಸಲು ಹಕ್ಕುಳ್ಳದಾಗಿಲ್ಲ. 1931ರಲ್ಲಿ ಬ್ರಿಟನ್ನು ಈ ಅಧಿಕಾರವನ್ನು ಬಿಟ್ಟುಬಿಟ್ಟಿದೆ.

ಸಾಮಂತ ರಾಜ್ಯಗಳಿಗೆ ಬ್ರಿಟನಿನ ಸಮೇತವಾದ ಎಲ್ಲಾ ವಿದೇಶಿ ತಯಾರಿಕೆಯ ವಸ್ತುಗಳ ಮೇಲೆ ಸುಂಕ ಹಾಕುವ ಅಧಿಕಾರವಿದೆ. ಇದರಿಂದ ಆಯಾ ದೇಶದ ಕೈಗಾರಿಕೆಯು ಅಭಿವೃದ್ಧಿಯಾಗಲು ಸಹಾಯವಾಯಿತು.

ಬ್ರಿಟನ್ನು ತನ್ನ ವಸಾಹತುಗಳಿರುವಂತೆ ಆಸ್ಟ್ರೇಲಿಯಕ್ಕೆ ಪಪೂವಾ ದ್ವೀಪವೂ, ನ್ಯೂಜೀಲೆಂಡಿಗೆ ಕೂಕ್ ದ್ವೀಪಗಳೂ ಒಳಪಟ್ಟಿವೆ. ಇವುಗಳ ಹೊಣೆ ಬ್ರಿಟನಿಗೆ ಇಲ್ಲ.

ಸಾಮಂತ ರಾಜ್ಯಗಳ ಸೈನ್ಯಗಳು ಆಯಾ ರಾಜ್ಯದ ಸರಕಾರದ ಕೈಕೆಳಗೇ ಇರುತ್ತವೆ. ಆದರೆ ಪರಸ್ಪರ ಸಮ್ಮತದಿಂದ ಅವುಗಳಲ್ಲಿ ಬೇಕಾದ ತರಬೇತಿ ಶಸ್ತ್ರೀಕರಣಗಳ ಸೌಕರ್ಯಗಳನ್ನು ಮಾಡಿಕೊಳ್ಳಬಹುದು.

ಇವುಗಳು ತಮ್ಮ ಸ್ವಂತ ವಾಣಿಜ್ಯ ಕರಾರುಗಳನ್ನು ಮಾಡಿಕೊಳ್ಳಬಹುದು. ತಮಗೆ ಸರಿದೋರಿದಲ್ಲಿ ರಾಯಭಾರಿಗಳನ್ನು ಕಳುಹಿಸಬಹುದು.

ಸಾಮಂತ ರಾಜ್ಯಗಳಿಗೆ ವ್ಯಾಸ್‌ರಾಯರನ್ನು ಇಲ್ಲವೆ ಗವರ್ನರ್ ಜನರಲ್‌ಗಳನ್ನು ಆಯಾ ಸರಕಾರದ ಸಲಹೆ ಮೇರೆಗೆ ರಾಜರು ನೇಮಿಸುವರು. ಆದರೆ ಇವರು ಬ್ರಿಟನಿನ ಸರಕಾರಕ್ಕೆ ಯಾವ ರೀತಿಯಲ್ಲೂ ಹೊಣೆಗಾರರಲ್ಲ.

ಸಹಕಾರ

ಯುದ್ಧ, ಶಾಂತಿಕಾಲಗಳಲ್ಲಿ ಎಲ್ಲಾ ಸಾಮಾನ್ಯ ಹಿತಗಳಿಗೆ ಎಲ್ಲಾ ರಾಜ್ಯಗಳೂ ಸಹಕರಿಸುವವು. ಇದಕ್ಕಾಗಿ ಶಾಂತಿಕಾಲದಲ್ಲಿ ಈ ರಾಜ್ಯಗಳ ಒಂದು ಪರಿಷತ್ತು ಕೆಲವು ವರ್ಷಕ್ಕೊಮ್ಮೆ ಜರಗಿ ಪರಸ್ಪರ ಹಿತಾಹಿತಗಳ ಚರ್ಚೆ ನಡೆಸುವರು. ರಾಯಭಾರಿಗಳ ಮತ್ತು ವಿಶೇಷ ಸಂದರ್ಭಗಳಲ್ಲಿ ಮುಖ್ಯ ಪ್ರಧಾನರುಗಳೊಳಗೆ ಮಹತ್ವದ ಮಾತುಕತೆಗಳ ವ್ಯವಹಾರ ಜರಗಬಹುದು. ಯುದ್ಧಕಾಲದಲ್ಲಿ ಸೈನ್ಯ, ನೌಕೆ ಮತ್ತು ವಿಮಾನ ದಳಗಳ ತರಬೇತಿಯು ಪರಸ್ಪರ ಸಹಾಯದಿಂದ ಒಂದೇ ಸೈನ್ಯ ಶಿಕ್ಷಣಕ್ರಮಗಳವಾಗಿ ಜರುಗುವುದು.

ಯುದ್ಧಕ್ಕಿಂತ ಮುಂಚೆ ಇಂಗ್ಲೆಂಡಿನಲ್ಲಿ 50 ಲಕ್ಷಕ್ಕೂ ಮಿಕ್ಕಿದ ಧೂಮ್ರಪಾನ ಸೇವನೆ ಮಾಡುವ ಮಹಿಳೆಯರಿದ್ದರೆಂದು ಲೆಕ್ಕ ಹಾಕಲಾಗಿದೆ.

ಕಳೆದ ವರ್ಷ ಸಂಯುಕ್ತ ಅಮೇರಿಕದ ಸರಕಾರದವರು ವಿದ್ಯಾಭ್ಯಾಸದ ಮೇಲೆ ಖರ್ಚು ಮಾಡಿದುದರ ಆರು ಪಾಲಿಷ್ಟು ಹೆಚ್ಚಾಗಿ ಮದ್ಯಸಾರಗಳ ತಯಾರಿಕೆಗೆ ವ್ಯಯಿಸಿರುವರು.

ಬ್ರಿಟನಿನಲ್ಲಿ 16 ಸಾವಿರ ಕುಟುಂಬಸ್ಥರು ಕಾರ್ಖಾನೆಯಲ್ಲಿ ತಯಾರಿಸಿದ ಎಲುಮಿನಿಯಂ ಮನೆಗಳಲ್ಲಿ ವಾಸಿಸುತ್ತಾರೆ.

ಪ್ಯೂರ್ಟೋರಿಕೋದ ಮಾರ್ಗದಲ್ಲಿ ಒಂದು ದಿನ ಗಲಾಟೆಯೇ ಗಲಾಟೆ. ಹೆಚ್ಚು ಪೋಲೀಸರನ್ನು ತರಬೇಕಾಯಿತು. ಕಾರಣ: ಒಬ್ಬ ನಾಗರಿಕ ಮೊಣಕಾಲು, ಕೈಗಳನ್ನುಪಯೋಗಿಸಿ ಮಗುವಿನಂತೆ ಅಲ್ಲಿನ ಮುಖ್ಯ ಮಾರ್ಗದಲ್ಲಿ ಅಂಬೆಗಾಲು ಹಾಕುತ್ತ ಮೂಗಿನಿಂದ ಒಂದು ಬಾದಾಮಿ ಕಾಯಿಯನ್ನು 100 ಅಡಿಗಳ ತನಕ ದೂಡುತಿದ್ದ. ತನಗೆ ಆಗುವ ಮಗು ಗಂಡು ಎಂದೂ, ತಾನು ಹೇಳಿದ್ದು ಸುಳ್ಳಾದರೆ ಹಾಗೆ ಮಾಡುವೆನೆಂದೂ ಅವನು ಪಂಥಹಾಕಿಕೊಂಡಿದ್ದನಂತೆ. ಮಗು ಹೆಣ್ಣಾಯಿತು.

ಗುರಿ ತಪ್ಪದ

ಸರಳ ರೇಖೆ

ಗುಣಪಡಿಸುತ್ತದೆ
ಕೊಳೆಯುಗೊಡಿಸುವುದಿಲ್ಲ

ಅಟಿಲ್ಸ್ ಒರಿಯಂಟಲ್ ಬಾಮ್ ಮತ್ತು ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್,
ಪೋಸ್ಟು ಬಾಕ್ಸ್ ನಂ. 67 ಮದರಾಸು.

ಜಿಲ್ಲಾ (ಆಹಾರ) ಸಮಿತಿಯ ಮೀಟಿಂಗ್

ದ. ಕ. ಜಿಲ್ಲಾ ಸಮಿತಿಯ ೧೨ನೆಯ ಮೀಟಿಂಗ್ ಕಳೆದ ಜೂನ್ ೩೦ನೇ ತಾರೀಕಿನಲ್ಲಿ ಕಲೆಕ್ಟರರ ಕಚೇರಿಯಲ್ಲಿ ಸೇರಿತ್ತು. ಸಮಿತಿಯ ಅಧ್ಯಕ್ಷರಾದ ಜಿಲ್ಲಾ ಕಲೆಕ್ಟರರವರು ಅಧ್ಯಕ್ಷತೆ ವಹಿಸಿದ್ದರು ಅಕ್ಕಿ ಗೋಧಿ ಮೊದಲಾದವುಗಳ ದಾಸ್ತಾನಿನ ಕುರಿತು ವಿವರಿಸಲಾಯಿತು, ಜಿಲ್ಲೆಯಲ್ಲಿ ಇದೇ ತಾ. ೨೦ರ ವರೆಗೆ ಸ್ಟಾಕ್ ಇದೆ, ಬೆಜವಾಡದಿಂದ ೧೫೦೦ ಟನ್ ಅಕ್ಕಿ ಇತ್ತ ಬರಲಿದೆ. ಮುಂದಿನ ತಿಂಗಳುಗಳಲ್ಲಿ ಈ ಆಹಾರದ ಅಪಾಂತರದಿಂದ ಪಾರಾಗಬೇಕಾದರೆ ಶ್ರಮವೂ ಅಗತ್ಯ, ಪ್ರೊಕ್ಯೂರ್‌ಮೆಂಟಿನ ಕಾರ್ಯದಲ್ಲಿ ಸಾರ್ವಜನಿಕ ಸಹಕಾರವೂ ಅಗತ್ಯ ಎಂಬ ಅಂಶವನ್ನು ಸೂಚಿಸಲಾಯಿತು

"ಆಗಲೇ ಹೊಸದುರ್ಗದ ಕೆಲ ಭಾಗಗಳಲ್ಲಿ ಸಂಭವಿಸಿರುವಂತೆ, ಇಡಿಯ ಜಿಲ್ಲೆಯಲ್ಲಿಯೇ ಸುಮಾರು ಮೂರು ವಾರಗಳಲ್ಲಿ ಆಹಾರದ ಪರಿಸ್ಥಿತಿ ಕಂಗಟ್ಟು ಕುಸಿದು ಬೀಳಬಹುದು ಆದ್ದರಿಂದ ಈ ಅವಾಂತರಕ್ಕೆ ಅವಕಾಶವಿಲ್ಲದ ಹಾಗೆ ಈ ಜಿಲ್ಲೆಗೆ ಕೂಡಲೇ ಅನ್ನ ಸಾಮಗ್ರಿಗಳನ್ನು ಕಳುಹಿಸುವಂತೆ ಸಮಿತಿ ಸರಕಾರವನ್ನು ಒತ್ತಾಯಪಡಿಸುತ್ತದೆ" ಎಂಬ ಠರಾವು ಮಂಜೂರಾಯಿತು

ಜಾನುವಾರುಗಳಿಗೆ ನೆಲಗಡಲೆ ಹಿಂಡಿಯನ್ನು ಸರಕಾರ ಒದಗಿಸುವುದಿಲ್ಲವೆಂದಾಯಿತು, ಮೂಡಬಿದರೆ ಗ್ರಾಮ ಸಮಿತಿಯ ಕಾರ್ಯದರ್ಶಿ ಶ್ರೀ ಬಿ ಚಂದಪ್ಪ ಇಂದ್ರರ ಅಪೀಲಿನ ವಿಚಾರದಲ್ಲಿ ತನಿಖೆ ನಡೆಸಿದ ಕುಂದಾಪುರ ರೆ ಡಿ। ಆಫೀಸರರ ಅಭಿಪ್ರಾಯದ ಮೇರೆಗೆ ಅವರನ್ನು ಆ ಕಾರ್ಯದರ್ಶಿಯ ಸ್ಥಾನದಿಂದ ತೆಗೆದುಬಿಡಬೇಕು, ಆದರೆ ಅವರು ಆ ಸಮಿತಿಯ ಮೆಂಬರರಾಗಲು ಅಡ್ಡಿಯಿಲ್ಲವೆಂಬ ತೀರ್ಮಾನವಾಯಿತು ರೈತರು ವಿಳಂಬದಿಂದ ಒಪ್ಪಿಸಿದ ಅಕ್ಕಿ ಬತ್ತಗಳ ದಂಡನೆಯ ಮೊಬಲಗು ಈೂ 75 ಸಾವಿರವನ್ನು ಈ ಜಿಲ್ಲೆಯಲ್ಲಿ ಸರಕಾರದ 'ಯುದ್ಧಾನಂತರದ ಅಭಿವೃದ್ಧಿ ಕಾರ್ಯಗಳ ಯೋಜನೆ'ಗಾಗಿ ವಿನಿಯೋಗಿಸಬೇಕೆಂದಾಯಿತು ಈ ಜಿಲ್ಲೆಗೆ ತಿಂಗಳಿಗೆ 35 ಟನ್ ಸಕ್ಕರೆ ಕೋಟಾ ಹೆಚ್ಚಿದೆಯಾಗಿ ಅದರಲ್ಲಿ ಮಂಗಳೂರು ರೇಶನ್ ಕ್ಷೇತ್ರದಲ್ಲಿ ಸೇಕಡಾ 10ರಷ್ಟು, ಇತರ ತಾಲೂಕು ಸಬ್ ತಾಲೂಕುಗಳಲ್ಲಿ ಸೇ 25ರಷ್ಟು ಹೆಚ್ಚಿಸಬೇಕೆಂದಾಯಿತು, ಅವಲಕ್ಕಿಯ ತಯಾರಿ ವಿತರಣೆಯನ್ನು ಹಿಂದಿನ ತಿಂಗಳ ಸಭೆಯ ತೀರ್ಮಾನದಂತೆ, ವ್ಯವಸ್ಥೆಗೊಳಿಸಬೇಕೆಂದಾಯಿತು, ಜಿಲ್ಲಾ ವಾಣಿಜ್ಯ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಎ. ದಾಮೋದರ ಪೈ ಅವರ ಬದಲಿಗೆ ಅದರ ಹೊಸ ಅಧ್ಯಕ್ಷ ಶ್ರೀ ವಿ ಎಸ್ ಕುಡ್ವರನ್ನು ಈ ಸಮಿತಿಯ ಮೆಂಬರರನ್ನಾಗಿ ಸ್ವೀಕರಿಸಲಾಯಿತು; ತಾಲೂಕು ಜಿಲ್ಲಾ ಕಮಿಟಿಗಳಲ್ಲಿ ಪ್ರತಿಯೊಂದಕ್ಕೂ ಒಬ್ಬ ಸದಸ್ಯನನ್ನು ವ್ಯಾಪಾರಿ ಸೊಸೈಟಿಗಳಿಂದ ಸೇರಿಸಿಕೊಳ್ಳುವ ಹಾಗೆ, ಅಪ್ಪಣೆಯಾಗಬೇಕೆಂದು ಸರಕಾರಕ್ಕೆ ಶಿಫಾರಸು ಮಾಡಲಾಯಿತು, ಗೇಣಸನ್ನು ಈ ಜಿಲ್ಲೆಯಿಂದ ಹೊರಗೆ ಸಾಗಿಸದಂತೆ ಮರಳಿ ನಿರ್ಬಂಧ ಹಾಕುವಂತೆ ಸರಕಾರವನ್ನು ಒತ್ತಾಯಪಡಿಸುವ ತೀರ್ಮಾನವಾಯಿತು. ಕೈಮಗ್ಗದ ಬಟ್ಟೆ ಬೆಲೆ ಏರುವ ಕುರಿತು ಅದನ್ನು ಹತೋಟಿಗೆ ತರುವ ವಿಚಾರದಲ್ಲಿ ಸರಕಾರಕ್ಕೆ ಬರೆದುಕೊಳ್ಳಬೇಕೆಂದಾಯಿತು; ಕೆಲವು ಹಳ್ಳಿಗಳಿಗೆ ಮಿಲ್ ಬಟ್ಟೆಗಳ ಕೋಟಾವನ್ನು ಕೊಡದ ವಿಚಾರದ ಕುರಿತು ಸರಕಾರದ ಅಪ್ಪಣೆ ಬೇಗ ದೊರಕುವ ಹಾಗೆ ಸರಕಾರವನ್ನು ಒತ್ತಾಯಪಡಿಸಬೇಕೆಂದಾಯಿತು

ಜಿಲ್ಲಾ ಪರಿಭ್ರಮಣ

೧

ವೆಲಕಂ ಹೋಟೇಲು ಕೊಲೆ

ದಿವಂಗತ ಶ್ರೀ ಮಾಗಂದಾಡಿ ಕೃಷ್ಣಪ್ಪ ಮೇಲಾಂಟರನ್ನು ಕೊಲೆಮಾಡಿದ ಆರೋಪದ ಮೇಲೆ ಸೆರೆಹಿಡಿದ ತರುಣ ವಿಠಲ್ ಕುಂಜಪ್ಪ ಶೆಟ್ಟಿಯ ವಿಚಾರಣೆಯು ತಾರೀಕು 30 6–47ರಿಂದ ತಾರೀಕು 3 7 47ರ ವರೆಗೆ ಬೊಂಬಾಯಿ ಹೈಕೋರ್ಟಿನ ಸೆಸ್ಸನ್ಸು ಜಡ್ಜರ ಬಳಿ ನಡೆದು, ಸದ್ರಿ ಆರೋಪಿ ವಿಠಲ್ ಕುಂಜಪ್ಪ ಶೆಟ್ಟಿಯು ನಿರಪರಾಧಿಯೆಂದು ಸರ್ವ ಮುಖೇನ ಜೂರಿ ಮಂಗಡದ ಅಭಿಪ್ರಾಯವಾದುದರಿಂದ, ಸದ್ರಿಯುವನ ಬಿಡುಗಡೆ ಇದೇ ತಾರೀಕು 3–7–47ರಲ್ಲಿ ಆಯಿತ್ತು

ರಂಜೇಶ್ರಿ ಪಂಡ್ಯೆ ಎಡ್ವೋಕೇಟರು ಸರಕಾರದ ಪರವಾಗಿ ಮೃತರ ಕಡೆಯಿಂದಲೂ ಮಂಗಳೂರಿನ ದಿವಾನ ಬಹದೂರ್ ಎಂ ಎ ಎಫ್ ಕೊಯಿಲೊ ಎಡ್ವೊಕೇಟ ಮತ್ತು ಬಂಟವಾಳ ಕೃಷ್ಣ ಶೆಣೈ ಎಂ ಎ ಎಲ್ ಎಲ್ ಬಿ ಇವರಿಬ್ಬರ ಆರೋಪಿಯ ಪರವಾಗಿಯೂ ವಾದಿಸಿದರು

ಹೊಸ ಕೋಲೇಜು

ಸಂಧ್ಯಪಿದ್ದರೆ ಒಂದು ಕೋಲೇಜನ್ನು ತೆರೆಯುವ ಸಂಭವಸಾಧ್ಯತೆಯನ್ನು ತಿಳಿದುಕೊಳ್ಳಲು ಕೆಲ ಉನ್ನತ ಶಿಕ್ಷಣ ಹಿತೈಷಿಗಳು ಎಸ್ ಎಲ್ ಮತ್ತು ಬಿ ಎ ಗಳ ಮೊದಲನೇ ವರ್ಷದ ತರಗತಿಗೆ ಸೇರಲಿಚ್ಛಿಸುವವರೆಷ್ಟು ಮಂದಿಗಳಿರುವರೆಂದು ತಿಳಿಯಬಯಸುವರು ಅಂಥ ತರಗತಿಗಳಿಗೆ ಅರ್ಹರಾದ ವಿದ್ಯಾರ್ಥಿಗಳು ಒರೆಸು ಮೂಲಕ ಹೆಸರು, ಕಲಿಯಲಿಚ್ಛಿಸುವ ವಿಷಯ ಗ್ರೂಪ್ ಇವುಗಳನ್ನು ನಮೂದಿಸಿ ಕೆನೆರಾ ಹೈಸ್ಕೂಲಿನ ಹೆಡ್ ಮಾಸ್ತರರಿಗೆ ಕಳಿಸಿ ಕೊಡಲು ಪ್ರಕಟಿಸಲಾಗಿದೆ

೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕಾಸರಗೋಡಿನಲ್ಲಿ

ದಕ್ಷಿಣ ಕನ್ನಡದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧಿವೇಶನವು ಈ ಮೊದಲೊಮ್ಮೆ ಜರಗಿದುದು ೨೫ ವರ್ಷಗಳಿಗೂ ಹಿಂದೆ ಈಗಿನ ಸನ್ನಿವೇಶದಲ್ಲಿ ಕನ್ನಡ ನಾಡಿನ ತೆಂಕು ಎಲ್ಲೆಯಲ್ಲಿರುವ ಕಾಸರಗೋಡಲ್ಲಿ ಮುಂದಿನ ಸಾಹಿತ್ಯ ಸಮ್ಮೇಳನವನ್ನು ಜರುಗಿಸುವುದು ಸಮಯೋಚಿತವೂ ಅತ್ಯಾವಶ್ಯಕವೂ ಆಗಿದೆ

ಕನ್ನಡ ಸಾಹಿತ್ಯ ಪರಿಷತ್ತಿನ ಸಂಚಾಲಕರು ಮುಂದಿನ ಸಮ್ಮೇಳನವನ್ನು ಬರುವ ದಶಂಬರ ತಿಂಗಳಲ್ಲಿ ಕಾಸರಗೋಡಲ್ಲಿ ಜರುಗಿಸಲು ಒಪ್ಪಿರುವುದು ಸಂತೋಷದ ಸಂಗತಿ

ಸಮ್ಮೇಳನದ ವಿವಿಧ ಕಾರ್ಯಕಲಾಪಗಳನ್ನೂ, ಅತಿಥಿಗಳ ಸತ್ಕಾರ ಸೌಕರ್ಯಗಳನ್ನೂ ಯಶಸ್ವಿಯಾಗಿ ಕೈಗೂಡಿಸುವ ಸಲುವಾಗಿ ಸುಪ್ರಾತಿನಿಧ್ಯವುಳ್ಳ ಸ್ವಾಗತ ಸಮಿತಿಯನ್ನು ಕೂಡಲೇ ರಚಿಸಬೇಕಾಗಿದೆ. ಸದಸ್ಯತೆಯ ವರ್ಗಣಿಯನ್ನು ರೂ. 100, 50, 25, 10, 5 ಯೂ ಹೆಚ್ಚು ಹೀಗೆ ೫ ಶ್ರೇಣಿಗಳಾಗಿ ಮಾಡಲಾಗಿದೆ. ಸ್ವಾಗತ ಸಮಿತಿಯ ಸದಸ್ಯರಾಗಿ ಸೇರುವುದರೊಂದಿಗೆ ತಮ್ಮ ಮಿತ್ರರನ್ನು ಕೂಡ ಸದಸ್ಯರನ್ನಾಗಿ ಸೇರಿಸಿ, ಕನ್ನಡ ನಾಡಿನವರೆಲ್ಲರೂ ಪೂರ್ಣ ಸಹಾಯ ಸಹಕಾರಗಳನ್ನು ನೀಡಬೇಕಾಗಿ ವಿನಂತಿ.

ನೇಮಕ: ಶ್ರೀ ನಂದಳಿಕೆ ಪುರುಷೋತ್ತಮ ಕುಡ್ವ ಬಿ. ಎ ರವರು ದಕ್ಷಿಣ ಕನ್ನಡ ಮತ್ತು ಮಲಬಾರ್ ಜಿಲ್ಲೆಗಳ ನೀರಾವರಿ (ಇರಿಗೇಶನ್) ಯೋಜನಾ ವಿಚಾರದ ಬಗ್ಗೆ ಅಸಿಸ್ಟೆಂಟ್ ಇಂಜಿನಿಯರರಾಗಿ ನೇಮಿಸಲ್ಪಟ್ಟಿರುವರು ಇವರ ಹೆಡ್‌ಕ್ವಾರ್ಟರ್ಸ್ ಮಂಗಳೂರು

ಶ್ರೀ ಅಮ್ಮೆಂಬಳ ವಿಠಲ ಪೈ, ಸಿ. ಐ. ಇ, ಒ ಬಿ ಇ ಐ ಸಿ. ಎಸ್ ಇವರನ್ನು ರಶ್ಯದ ಭಾರತ ರಾಯಭಾರ ಕಛೇರಿಯ ಮುಖ್ಯಸಲಹೆಗಾರರಾಗಿ ಭಾರತ ಸರಕಾರದವರು ನೇಮಿಸಿರುವರೆಂದು ವದಂತಿ ಬಂದಿದೆ ಕೆಲವು ದಿನಗಳ ಹಿಂದೆ ಶ್ರೀಯುತ ಪೈಗಳು ಮಂಗಳೂರಿಗೆ ಚಿತ್ತೈಸಿದ್ದು ಬಂಧು ಆಪ್ತರನ್ನು ಕಂಡುಹೋಗಿರುವರು

ಮದ್ರಾಸ ಸರಕಾರದ ಡೆವಲಪ್‌ಮೆಂಟ್ ಖಾತೆಯ ಕಾರ್ಯದರ್ಶಿಗಳಾದ ಈ ಜಿಲ್ಲೆಯ ಶ್ರೀ ವಿ ಎನ್ ಕುಡ್ವಾ ಐ ಸಿ ಎಸ್ ಅವರು ಮಲಬಾರಿನ ಕಲೆಕ್ಟರ್ ಮತ್ತು ಜಿಲ್ಲಾ ಮೆಜಿಸ್ಟ್ರೇಟರಾಗಿ ನೇಮಕ ಹೊಂದಿರುತ್ತಾರೆ

ರಜೆ: ನಮ್ಮ ಜಿಲ್ಲೆಯ ರಾವ್ ಬಹದೂರ್ ಡಾಕ್ಟರ್ ಎಸ್ ಆರ್ ಸವೂರ್ (ವಿದ್ಯಾಇಲಾಖೆಯ ಡೈರೆಕ್ಟರ್ ಮತ್ತು ಸರಕಾರಿ ಪರೀಕ್ಷೆಗಳ ಕಮಿಶನರ್) ಇವರು ಎರಡು ತಿಂಗಳ ರಜೆ ಪಡೆದಿರುವರು

ಹರಿಜನ ದೇವಾಲಯ ಪ್ರವೇಶ ಪ್ರಶ್ನೆ

ಈ ವಿಷಯದಲ್ಲಿ ಉಡುಪಿಯ ಹರಿಜನರು ಸಿದ್ಧರಿರುವರಾಗಿ ಸೂಚಿಸಿ ಬರೆದ ಜಿಲ್ಲಾ ಶಿವಸಮಾಜದ ಪತ್ರವು ಇದೇ ತಾ ೨ರಲ್ಲಿ ಕೂಡಿದ ಉಡುಪಿ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಆಲೋಚಿಸಲಾಯಿತು ಶ್ರೀ ಬೆಳ್ಳಿಬೀಡು ಕೃಷ್ಣಯ್ಯ ಹೆಗ್ಡೆಯವರು ಅಧ್ಯಕ್ಷತೆ ವಹಿಸಿದ್ದರು ಹರಿಜನರ ಒಮ್ಮೆಯ ಬೇಗನೆ ಸಿದ್ಧಿಯಾಗುವ ಕಾರ್ಯಕ್ರಮವನ್ನು ಮುಂದೆ ತ್ವರಿತ ನಿರ್ಧರಿಸಲಾಯಿತು ಮುಟ್ಟಿ ... ದೇವಸ್ಥಾನ ಒಂದರವನ್ನಾಗಿ ಮಾಡುವ ಯೋಜನೆ ಸಂಬಂಧಪಟ್ಟ ಕಮಿಟಿಗೆ ... ವಹಿಸಿಕೊಡಲಾಯಿತು ಮಿಗತೆ ಅಕ್ಕಿ ಉಳ್ಳವರು ಸರ್ಕಾರಗಳಿಗೊಪ್ಪಿಸಿ ದಸ್ತ್ಯಾಲಿಕ ಬಡವರಿಗೆ ಜೀವದಾನ ಮಾಡಬೇಕೆಂದು ಪ್ರಾರ್ಥಿಸಲಾಯಿತು

ಪೆಟ್ರೋಲ್ ದರ ಹೆಚ್ಚಿತು: ಇದೇ ತಾ 1ರಿಂದ ಇಂಡಿಯಾ ಸರಕಾರದವರು ಪೆಟ್ರೋಲಿನ ದರವನ್ನು ಗೆಲನಿಗೆ ಒಂದಾಣೆಯಂತೆ ಹೆಚ್ಚಿಸಿರುವರು ಹಾಗೆಯೇ ಚಿಮಿಣಿ ಎಣ್ಣೆಯ ದರವೂ ಕೊಂಚ ಏರಿಸಲ್ಪಟ್ಟಿದೆ

ಅಪಘಾತ: ತಾ 3ನೇ ಗುರುವಾರ ಹೂ ಮಾರ್ಕೆಟಿನ ಬಳಿ ಶ್ರೀ। ವಾಫ್ ಕೃಷ್ಣಶ್ಯಾನಭಾಗರಿಗೆ ಒಂದು ಕಾರಿಗೆ ಡಿಕ್ಕಿ ಬಡೆದು, ಅವರು ಮೋದಂಡಾವಸ್ಥೆಯಲ್ಲಿ ಆಸ್ಪತ್ರೆಗೊಯ್ಯಲ್ಪಟ್ಟಿರುವರಾಗಿ ತಿಳಿದು ಬರುತ್ತದೆ.

ಆನೆಕಾಲು: (ಮೈಲೇರಿಯಾ) ಮುಂತಾದ ರೋಗಗಳು ಹರಡುವ ನುಸಿಗಳನ್ನು ಹಿಡಿದು, ಸಂಶೋಧನೆ ನಡೆಸಲು, ನಮ್ಮ ಪ್ರಾಂತೀಯ ಸರಕಾರದ ಆರೋಗ್ಯ ಖಾತೆಯವರು ಕೆಲ ಮಂದಿ ತಜ್ಞರನ್ನು ಇಲ್ಲಿಗೆ ಕಳುಹಿಸಿದ್ದು, ಅವರು ಇಷ್ಟರಲ್ಲಿ ಇಲ್ಲಿಯ ಬೇರೆ ಬೇರೆ ಕಡೆಗಳ ನುಸಿಗಳನ್ನು ಹಿಡಿದು ಶೋಧನೆ ನಡೆಸಿರುವರಾಗಿ ತಿಳಿದುಬರುತ್ತದೆ.

ಟಪ್ಪಾಲು ಸೌಕರ್ಯ

ಮಂಗಳೂರಿಗೆ ಸಮೀಪದಲ್ಲಿರುವ ಅಂಬ್ಲಮೊಗ್ರು, ಮುನ್ನೂರು, ಹರೇಕಳ ಈ ಮೂರು ಗ್ರಾಮಗಳಿಗೆ ಅಂಬ್ಲಮೊಗ್ರುದಲ್ಲಿ ಒಂದು ಪೋಸ್ಟ್ ಆಫೀಸನ್ನು ಎಕ್ಸ್‌ಪೆರಿಮೆಂಟಲ್ ಆಗಿ ಇತ್ತೀಚೆಗೆ ತೆರೆಯಲಾಗಿದೆ.

ಹಿಂದುಸ್ಥಾನ್ ಸ್ಕೌಟ್ ಕಮಿಶನರರ ಪರಿಷತ್ತು

ಬರುವ ಅಕ್ಟೋಬರ್ ತಿಂಗಳ ಕೊನೆಯ ವಾರದಲ್ಲಿ ಮಣಿಪಾಲದಲ್ಲಿ ಮೂರು ದಿವಸಗಳ ತನಕ ಜರಗಲಿರುವುದಾಗಿ ಗೊತ್ತಾಗಿದೆ. ಸ್ವಾಗತ ಸಮಿತಿಯ ರಚನೆ ಈಗಾಗಲೇ ನಡೆದಿದೆ ಒಬ್ಬರಿಬ್ಬರು ಮದ್ರಾಸ್ ಮಂತ್ರಿಗಳೂ ಬರಲಿರುವರಂತೆ

ಪುತ್ತೂರು

ಅಕ್ಕಿ-ಭತ್ತ ಸಂಗ್ರಹಕ್ಕಾಗಿ ಮನವಿ

ಪುತ್ತೂರು ವ ಆಸುಪಾಸುಗಳಲ್ಲಿ ಮುಂದಿನ ೩ ತಿಂಗಳಲ್ಲಿ ಪಡಿ ಅಕ್ಕಿ ಕೊಡಲು ಬೇಕಾದ ಅಕ್ಕಿ-ಭತ್ತ ಸಂಗ್ರಹ ಇಲ್ಲವೆಂದೂ, ಸಕಾಲದಲ್ಲಿ ಒದಗಿಸಿಕೊಡುವ ಏರ್ಪಾಡು ಮಾಡಬೇಕೆಂದೂ ಇಲ್ಲಿಂದ ಸಂಬಂಧಪಟ್ಟವರು ಜಿಲ್ಲಾ ಕಲೆಕ್ಟರರಿಗೆ ಮನವಿ ಕಳುಹಿಸಿರುವರಾಗಿ ತಿಳಿದು ಬಂದಿದೆ ಧಾನ್ಯವಾಗಲೀ ಗೋದಿಯಾಗಲೀ ಸಂಗ್ರಹ ಇಲ್ಲದ್ದರಿಂದಲೂ, ಅಕ್ಕಿಯ ಕೋಟಾ ಕಡಿಮೆಯಾಗಲಿರುವುದರಿಂದಲೂ ಜನರು ಉಪವಾಸ ಬೀಳಬೇಕಾಗಿರುವರು

ಕಳ್ಳ ವ್ಯಾಪಾರ

ಈಗೀಗಲ ಬೆಂಕಿಪೆಟ್ಟಿಗೆ, ಬೆಲ್ಲ ವ ಇನ್ನಿತರ ಸಾಮಾಗ್ರಿಗಳು ಸರಿಯಾಗಿ ದೊರಕದೆ ಕಳ್ಳ ವ್ಯಾಪಾರಕ್ಕೆ ಒಳಗಾಗಿವೆ ಎಂದು ತಿಳಿಯಬರುತ್ತದೆ ಬೆಂಕಿಪೆಟ್ಟಿಗೆ ಮಂಗಳೂರಿನಿಂದ ಬಂದ ಒಂದೆರಡು ದಿವಸಗಳಲ್ಲೇ ಇಲ್ಲದಂತಾಗುತ್ತದೆ ಸ್ಟೋರುಗಳಿಗೆ ಬೆಲ್ಲ ಬಂದರೆ ಒಂದಾದರ ಕೆಲವು ಅಂಗಡಿಗಳಲ್ಲಿ ಮಾತ್ರ ಬೆಲ್ಲ ಉಂಟೆಂತಾಗುತ್ತದೆ ಸ್ಟೋರುಗಳಲ್ಲಿ ಇಲ್ಲವಾದರೆ ಅಂಗಡಿಗಳಲ್ಲೂ ಇಲ್ಲ ಮಣಕ್ಕೆ ರೂ ೯ ಯಾ ರೂ ೧೦ ಕೊಡುವುದಾದರೆ ಎಲ್ಲಿಂದಾದರೂ ಬರುತ್ತಿದೆ ಜೀವನ-ಮರಣದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಕೂಡಾ ಕಳ್ಳ ವ್ಯಾಪಾರವೇ ಇದು ಭಾರತದ ಮರ್ದನಗಳ ದೇ ಪೇಳಲಿಕೆ

NOTICE

In the Court of the Small Causes Judge of Mangalore

S C 109, 1947

Between

Sringeri Narayana Dasa Pai & Co — *Plaintiffs*

and

1 U Narasimha Nayak
2 U Vamana Nayak
3 U Krishna Nayak } Defendants

To The above-named defendants residing in Kokkada village of Puttur Taluk

Take notice that the above Suit filed by the plaintiff for recovery of Rs 299-8-4 from defendants 1 and 2 personally and the 1st defendant also as manager of their family stands posted to 16-7-47 at 11 A M for hearing and in default of your appearance on that date either in person or by pleader, the Suit will be proceeded with Exparte.

(By order of the Board)

Mangalore, 8-7-47 — S. Srinivasa Pai, Vakil for Plaintiffs.

ಗಾಂಧಿ ವಿಚಾರ ತರಂಗ

ಬಂಡವಾಳಿಗರ ಕರ್ತವ್ಯ

"ಬಂಡವಲ್ಲುದಾರರು ಮತ್ತು ಜಮೀನುದಾರರು ತಮ್ಮ ಹಕ್ಕು ಬಾಧ್ಯತೆಗಳನ್ನು ಪ್ರತಿಪಾದಿಸುತ್ತಿರುವರು. ನರೇಂದ್ರರು ತಮ್ಮ ಆಳುವ ಹಕ್ಕು ದೈವದತ್ತವೆಂದು ಹೇಳುತ್ತಿರುವರು. ಅದನ್ನು ವಿರೋಧಿಸುವುದೇ ತನ್ನ ಕರ್ತವ್ಯವೆಂದು ರೈತನೆನ್ನುವನು. ಎಲ್ಲರೂ ಕೇವಲ ತಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ ಒತ್ತಾಯಪಡಿಸಿ ಕರ್ತವ್ಯಗಳನ್ನು ತಿಳಿದುಕೊಳ್ಳದಿದ್ದರೆ ಎಲ್ಲೆಲ್ಲಿಯೂ ತೀರ ಗೊಂದಲ ಮತ್ತು ಗಡಿಬಿಡಿ ಏಳುವುದರಲ್ಲಿ ಸಂದೇಹವಿಲ್ಲ.

ತದ್ವಿರುದ್ಧವಾಗಿ ಪ್ರತಿಯೊಬ್ಬ ತನ್ನ ಹಕ್ಕುಗಳ ಬಗ್ಗೆ ಆಗ್ರಹಪಡಿಯದೆ ಕರ್ತವ್ಯವನ್ನು ಮಾಡಿದರೆ ಕೂಡಲೆ ಮಾನವ ಸಮಾಜದಲ್ಲಿ ಸುವ್ಯವಸ್ಥಿತ ಆಡಳಿತ ನಡೆಯುವುದು. ದೈವದತ್ತವಾದ ಆಳುವ ಹಕ್ಕೆಂಬುದೊಂದು ಇಲ್ಲ. ಒಡೆಯರ ಅಪ್ಪಣೆಯನ್ನು ಚಾಚೂ ಎನ್ನದೆ ಪಾಲಿಸುವುದು ರೈತರ ಕರ್ತವ್ಯವೆಂದು ಹೇಳುವುದು ಸರಿಯಲ್ಲ. ಈ ವೈಷಮ್ಯ ಪರಂಪರಗತವಾಗಿ ಬಂದಿದೆ. ಇದು ಸಮಾಜಕ್ಕೆ ಅಪಾಯಕರ. ಇದುತನಕ ಕೋಟ್ಯಾವಧಿ ಇಂತಹ ಜನರು ಕಾಲಡಿಯಲ್ಲಿ ತುಳಿಯಲ್ಪಟ್ಟಿದ್ದಾರೆ. ದೈವದತ್ತ ಅಧಿಕಾರ ಪಡೆದವರಿಗೆ ಆಗುವ ಹಾನಿಗಿಂತ ಕೋಟ್ಯಾವಧಿ ಅವರ ಪ್ರಜೆಗಳಿಗೆ ಹೆಚ್ಚು ಹಾನಿ ಆಗುತ್ತದೆ. ಯೋಗ್ಯ ರೀತಿಯಿಂದ ಕರ್ತವ್ಯ ಮಾಡದೆ ಪ್ರಾಪ್ತವಾಗುವ ಹಕ್ಕು ಬಾಧ್ಯತೆಗಳು ನಿರರ್ಥಕ. ಅದು ಬಲಾತ್ಕಾರವೂ ಆಗುತ್ತದೆ. ಇಂತಹ ಅಧಿಕಾರವನ್ನು ಬೇಗನೇ ಬಿಟ್ಟುಕೊಡುವುದು ಹಿತಕರ.''

★

ಪತಿಪತ್ನಿ ಸ್ವಾಮ್ಯ

"ಇಚ್ಛಾನುಸಾರ ವರ್ತಿಸುವ ಗಂಡನು ತನ್ನ ನಿಷ್ಠಾವಂತ ಹೆಂಡತಿಯಿಂದ ಪ್ರತಿಯೊಂದು ಸಂದರ್ಭದಲ್ಲಿ ಆದರ ಸತ್ಕಾರಗಳನ್ನಪೇಕ್ಷಿಸುವುದು ಧಾರ್ಮಿಕಾಚಾರದ ಭಂಗವೆಸ್ಸೆ. ಆದರೆ ಮಕ್ಕಳಿಗಾಗಿ ತನ್ನ ಕರ್ತವ್ಯ ಮಾಡಲು ಯಾವಾಗಲೂ ತತ್ಪರನಾದ ಪಾಲಕನ ಅಪ್ಪಣೆಗಳನ್ನು ಕೇಳದಿದ್ದ ಮಕ್ಕಳು ಕೃತಘ್ನರಾಗಿರುವರಲ್ಲದೆ ಪಾಲಕನಿಗಿಂತ ತಾವೇ ಹೆಚ್ಚು ಹಾನಿಗೊಳಗಾಗುವರು. ಗಂಡ ಹೆಂಡತಿಯ ಸಂಬಂಧದಲ್ಲೂ ಹೀಗೆಯೇ ಹೇಳಬಹುದು. ಈ ಸರಳ ಮತ್ತು ಸಾರ್ವತ್ರಿಕ ನಿಯಮವನ್ನು ಕೂಲಿಕಾರರ ಒಡೆಯರ, ರೈತರ ಮತ್ತು ಜಮೀನ್ದಾರರ, ನರೇಂದ್ರರ ಮತ್ತವರ ಪ್ರಜೆಗಳ ಇಲ್ಲವೆ ಹಿಂದೂ ಮತ್ತು ಮುಸಲ್ಮಾನರ ಸಂಬಂಧದಲ್ಲಿಯೂ ಅನ್ವಯಿಸಿದ್ದಾದರೆ ಜಗತ್ತಿನ ಉಳಿದ ಭಾಗಗಳಲ್ಲಿಯಂತೆ ಹಿಂದೂಸ್ಥಾನದಲ್ಲಿಯೂ ಇಂದು ನೀವು ಕಾಣುತ್ತಿರುವ ಜೀವನದಲ್ಲಿಯ ಮತ್ತು ವ್ಯವಹಾರದಲ್ಲಿಯ ವಿಷಾದಕರ ಅವ್ಯವಸ್ಥೆ ನಾಯವಾಗಿ ಗೊಂದಲವಿಲ್ಲದೆ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಅತ್ಯಂತ ಸಮಾಧಾನದ ಸಂಬಂಧವನ್ನು ನೀವು ಕಾಣಬಹುದು."

★

ನೆರೆಯವನೊಡನೆ ಬೆರೆಯುವುದು

"ತನ್ನ ನೆರೆಯ ಮುಸಲ್ಮಾನನ ಸಂಬಂಧದಲ್ಲಿ ಹಿಂದೂವಿನ ಕರ್ತವ್ಯವಾವುದು? ಮಾನವನೆಂದು ಅವನೊಡನೆ ಮಿತ್ರತ್ವ ಬೆಳೆಸುವುದೇ ಕರ್ತವ್ಯ. ಅವನ ಸುಖ ದುಃಖಗಳಲ್ಲಿ ಭಾಗಿಯಾಗುವುದು ಅವನು ಕಷ್ಟದಲ್ಲಿದ್ದಾಗ ಅವನಿಗೆ ಸಹಾಯ ಮಾಡುವುದು ಕರ್ತವ್ಯವಾಗಿದೆ. ಅನಂತರವೆ ಅವನು ತನ್ನ ಮುಸ್ಲಿಂ ನೆರೆಯವನಿಂದ ಅದೇ ಬಗೆಯ ಸಹಾಯವನ್ನು ಅಪೇಕ್ಷಿಸಬಲ್ಲನು. ಯಾವುದಾದರೊಂದು ಹಳ್ಳಿಯಲ್ಲಿ ಹಿಂದೂಗಳು ಬಹುಸಂಖ್ಯಾಕರಾಗಿದ್ದು ಅವರ ಮಧ್ಯದಲ್ಲಿ ಕೆಲವೇ ಮುಸಲ್ಮಾನರಿರುವರೆಂದು ತಿಳಿಯೋಣ. ಆ ಕೆಲ ಮುಸಲ್ಮಾನರ ಬಗ್ಗೆ ಬಹುಸಂಖ್ಯ ಹಿಂದುಗಳ ಕರ್ತವ್ಯ ಬಹಳ ಇರುವುದು. ತಾವು ಬೇರೆ ಧರ್ಮದವರಿರುವುದರಿಂದ ಹಿಂದೂಗಳು ತಮ್ಮನ್ನು ಹೀಗೆ ಕಾಣುತ್ತಿರುವರೆಂದು ಆ ಮುಸಲ್ಮಾನರಿಗನಿಸಬಾರದು. ಆವಾಗಲೇ ಮುಸಲ್ಮಾನರು ಅವರ ನಿಜ ಮಿತ್ರರಾಗುವರು. ಮತ್ತು ಗಂಡಾಂತರದ ಪ್ರಸಂಗಗಳಲ್ಲಿ ಎರಡೂ ಜಾತಿಯವರು ಒಬ್ಬ ಮನುಷ್ಯರಂತೆಯೇ ಕೆಲಸಮಾಡಬಲ್ಲರು. ಅನೇಕ ಹಿಂದೂಗಳಂತೆ ಕೆಲ ಮುಸಲ್ಮಾನರು ಸರಿಯಾದ ರೀತಿಯಲ್ಲಿ ಪ್ರತಿಯೊಂದು ಕೃತ್ಯದಲ್ಲಿ ವಿರೋಧವನ್ನೇ ಪ್ರದರ್ಶಿಸುತ್ತ ನಡೆದರೆ ಅದು ಪಾಶವೀ ವೃತ್ತಿಯ ಲಕ್ಷಣವೆಂದು ಗೊತ್ತಾಗುವುದು.

ಈ ಪರಿಸ್ಥಿತಿಯಲ್ಲಿ ಅನೇಕ ಹಿಂದೂಗಳ ಕರ್ತವ್ಯವಾವುದು? ಬಹುಸಂಖ್ಯಾಕರ ಪಾಶವೀ ವೃತ್ತಿಯನ್ನು ಒಟ್ಟುಗೂಡಿಸಿ ಅಲ್ಪಸಂಖ್ಯಾಕರ ಪಾಶವೀ ವೃತ್ತಿಯನ್ನು ಹತ್ತಿಕ್ಕುವುದಲ್ಲ. ಅದು ಅನ್ಯಾಯದ ಬಲಾತ್ಕಾರ."

★

ಸ್ತ್ರೀ ಪುರುಷ ಸಂಬಂಧ

"ಪುರುಷ ಸ್ತ್ರೀಯರ ಸಂಬಂಧದಲ್ಲಿ ವಿಚಿತ್ರ ಮನೋವೃತ್ತಿಯನ್ನು ನಾನು ತಳೆದಿದ್ದೇನೆ. ಅದರೊಳಗೆ ಕೆಲವೊಂದು ನಿರ್ಬಂಧಗಳಿರಬೇಕೆಂದು ನನ್ನ ನಂಬುಗೆ. ಆದರೆ ನನ್ನ ಪರಿಸ್ಥಿತಿ ತ್ರಿಶಂಕುವಿನಂತಾಗಿದೆ. ಸದ್ಯಕ್ಕಿಂತ ಹೆಚ್ಚು ಸ್ವಾಭಾವಿಕವಾದ ಸಂಬಂಧ ಸ್ತ್ರೀಪುರುಷರಲ್ಲಿದ್ದುದಾದರೆ ಪಾಪಾಚರಣೆ ಈಗಿನದಕ್ಕಿಂತ ಕದಾಚಿತ್ ಕಡಿಮೆಯಾಗಬಹುದಿತ್ತು. ಆದರೆ ಸ್ಪರ್ಶವು ಎಷ್ಟೇ ಬಾಹ್ಯ ಸ್ವರೂಪದ್ದಾಗಿದ್ದರೂ ಮಾನವನಲ್ಲಿ ಕಾಮ ವಾಸನೆಯನ್ನು ಹುಟ್ಟಿಸುವುದೆಂದು ನನ್ನ ಹೃದಯದ ಯಾವುದೋ ಒಂದು ನುಡಿ ಮಿಡಿಯುತ್ತದೆ. ಬಂಧು ಭಗಿನಿಯರ ಮತ್ತು ತಂದೆ ಮಗಳ ವಿಷಯದಲ್ಲಿ ಕೋರ್ಟುಗಳಲ್ಲಿ ನಡೆದ ಕಟ್ಲೆಗಳನ್ನು ವಿಮರ್ಶಿಸಿದ್ದಾದರೆ ಪ್ರಾರಂಭವು ಬಹಳ ಅಪಾಯಕಾರಿಯಾಗಿದ್ದೆಂದು ಕಂಡುಬರದಿರಲಾರದು. ಪುರುಷನಲ್ಲಿ ಅಷ್ಟೊಂದು ವಿಶುದ್ಧ ವಿರಕ್ತಿಯಿಲ್ಲದಿದ್ದರೆ ಕೇವಲ ಸ್ಪರ್ಶ ಮಾತ್ರದಿಂದ ಒಂದೇ ವಾರದಲ್ಲಿ ಅವನು ಅಧೋಗತಿಗಿಳಿಯುವನೆಂದು ನನ್ನ ಅಭಿಪ್ರಾಯ."

★

ಅಹಿಂಸಾ ಸೌರಭ

"ಲಾಹೋರ ಅಮೃತಸರ ಮೊದಲಾದ ಹಿಂದೂಸ್ಥಾನದ ನಗರಗಳಲ್ಲಿಯೂ ಬೇರೆ ಕಡೆಗಳಲ್ಲಿಯೂ ಇಂದು ಹಬ್ಬಿರುವ ಅತ್ಯಂತ ಹೇಡಿತನದ ಹಿಂಸೆಯ ದುರ್ಗಂಧದ ನಡುವೆ ಇಂದು ಅಹಿಂಸೆಯ ಸುಗಂಧ ಎಂದಿಗಿಂತಲೂ ಮಧುರವಾಗಿದೆ. ನನ್ನ ದೇಶಬಾಂಧವರ ವರ್ತನೆಯಿಂದ — ಅವರು ಹಿಂದೂ ಇಲ್ಲವೆ ಮುಸ್ಲಿಮರಿರಲಿ — ನನಗೆ ಮುಖವೆತ್ತದಂತಾಗಿದೆ. ಅವರಲ್ಲಿ ಯಾರು ನನ್ನನ್ನು ವೈರಿಯೆಂದು ಕರೆದರೂ ನಾನೇನು ಅವರ ವೈರಿಯಾಗುವಂತಿಲ್ಲ. ಹಿಂದೂಗಳನ್ನು, ಅದರಲ್ಲಿಯೂ ಸವರ್ಣ ಹಿಂದೂಗಳನ್ನು ತಮ್ಮ ವೈರಿಗಳೆಂದು ಕರೆದು ಜಿನ್ನರು ಇಸ್ಲಾಮಿಗೆ ಅಪರಾಧ ಮಾಡಿದ್ದಾರೆಂದು ನನಗೆ ಗೊತ್ತಿದೆ. ಆದರೆ ಸವರ್ಣ ಹಿಂದೂಗಳು ಮಾತ್ರ ಜಿನ್ನರಂತೆ ಭಾವಿಸದೆ ಭಾರತ ಪ್ರೇಮಿಗಳಾದ ತಾವು ಎಲ್ಲಾ ಭಾರತೀಯರ ಗೆಳೆಯರೆಂದು ಸಿದ್ಧಮಾಡಿಕೊಡಬೇಕೆಂದು ನನ್ನ ಬಿನ್ನಹ."

★

ಇಂಗ್ಲೆಂಡಿನೊಡನೆ ಗೆಳೆತನ

"ಹಿಂದೂಸ್ಥಾನದ ರಾಜ್ಯಘಟನೆ ಸಿದ್ಧವಾಗಿ ಅದು ಸಾಮಂತ ರಾಜ್ಯಪದದಿಂದ ಸ್ವತಂತ್ರವಾದ ಬಳಿಕ ಇಂಗ್ಲೆಂಡಿನೊಡನೆ ಸ್ನೇಹದಿಂದಿರಬೇಕೆಂದಾಗಲಿ ಮತ್ತಾವುದೇ ಸಂಬಂಧವಿಟ್ಟುಕೊಳ್ಳಬೇಕೆಂದಾಗಲಿ ಗಾಂಧೀಜಿ ಭಾವಿಸುತ್ತಾರೆಯೇ ಎಂಬ ಪ್ರಶ್ನೆಗೆ ಉತ್ತರ ನೀಡುತ್ತ ಗಾಂಧೀಜಿ ಹೀಗೆಂದರು: "ಇಂಗ್ಲೆಂಡಿನೊಡನೆ ನಿಕಟ ಸಂಬಂಧವಿರಬೇಕೆಂದು ನಾನು ಬಗೆದಿರುವೆನು. ಆದ್ದರಿಂದಲೇ ಈ ಸಂಧಿಕಾಲದಲ್ಲಿ ವ್ಯಾಸ್‌ರಾಯರಾಗಲಿ ಅವರ ಬ್ರಿಟಿಷ್ ಸಲಹೆಗಾರರಾಗಲಿ ಹಿಂದೂಸ್ಥಾನದಲ್ಲಿರುವ ಇತರ ಆಂಗ್ಲರಾಗಲಿ ಪೂರ್ಣ ಉಚಿತವಾದುದಲ್ಲದುದೇನನ್ನು ಮಾಡಬಾರದೆಂದು ನಾನು ಹಾರೈಸುತ್ತೇನೆ. ಹಿಂದೂಸ್ಥಾನದೊಟ್ಟಿಗೆ ಉಚಿತವಾಗಿ ನಡೆಕೊಂಡರೆ ಕಹಿಯಾದ ನೆನಹುಗಳು ಉಳಿಯಲಾರವು."

ಬ್ರಿಟಿಷರು ಹೋದರೂ ಮೌಂಟ್‌ಬೇಟನರು ಇರುವರು

ಡಿಲ್ಲಿಯಲ್ಲೇ ಮನೆ ಮಾಡುವರು

1948ರ ಜೂನಿನಲ್ಲಿ ಬ್ರಿಟಿಷ್ ಅಧಿಕಾರವು ಸಂಪೂರ್ಣವಾಗಿ ಹಿಂತೆಗೆಯಲ್ಪಡುವಾಗ ಈಗಿನ ವ್ಯಾಸ್‌ರಾಯರಾದ ಲೋರ್ಡ್ ಮೌಂಟ್‌ಬೇಟನ್ನರು ಡಿಲ್ಲಿಯ ತಮ್ಮ ವ್ಯಾಸ್‌ರಾಯ ಭವನದಲ್ಲೇ ಉಳಕೊಂಡು ಇರುವರೆಂದು ಒಂದು ಬ್ರಿಟಿಷ್ ಪತ್ರಿಕೆ ತಿಳಿಸುತ್ತವೆ.

ಆದರೆ ಅವರು ವ್ಯಾಸ್‌ರಾಯರಾಗಿ ಉಳಿಯುವುದಿಲ್ಲ. ಅವರಿಗೆ ಬೇರೆ ಹುದ್ದೆ ಇಲ್ಲವೆ ಪದವಿ ಕೊಡಲ್ಪಡುವುದು. ವ್ಯಾಸ್‌ರಾಯ ಭವನವೆಂಬ ಹೆಸರೂ ಬದಲಾಯಿಸಲ್ಪಡುವುದು.

ಜವಾಹರಲಾಲ್ ನೆಹರುಗಳು ಮೌಂಟ್‌ಬೇಟನ್ನರನ್ನು ಇಲ್ಲಿಯೇ ಇರುವಂತೆ ಮಾಡಲು ತುಂಬಾ ಆತುರವುಳ್ಳವರಾಗಿರುವರಂತೆ. ಯಾವುದಾದರೂ ಅಧಿಕಾರ ವಹಿಸಿಕೊಂಡಿರಲು ಮೌಂಟ್‌ಬೇಟನ್ನರಿಗೂ ತುಂಬಾ ಕ[illegible]ಯಿದೆಯಂತೆ.

ಮೌಂಟ್‌ಬೇಟನ್ನರನ್ನು ವ್ಯಾಸರಾಯರನ್ನಾಗಿ ಶಿಫಾರಸ ಮಾಡಿದ್ದು ನೆಹರುಗಳೇ ಇದ[illegible]ಜವಿದ್ದರೂ ಇರಬಹುದು.

ನೆಹರು ಸೂಚನೆ

ನೆಹರು ಮತ್ತು ಮೌಂಟ್‌ಬೇಟನ್ನರ ಪರಿಚಯ ಹಿಂದೆ ಪಾರ್ಲಿಮೆಂಟರಿ ಶಿಷ್ಟಮಂಡಳದವರು ಇಲ್ಲಿಗೆ ಬಂದಾಗಲೇ ಆಗಿತ್ತು. ಮತ್ತೆ ಬ್ರಿಟಿಷ್ ಸರಕಾರದ ಶಿಷ್ಟಮಂಡಳದ ತ್ರಿಮೂರ್ತಿಗಳು ಇಲ್ಲಿಗ ಚರ್ಚೆಗಾಗಿ ಬಂದಾಗಲೇ — ಅಂದರೆ 1946ರ ಪ್ರಾರಂಭದಲ್ಲಿ ನೆಹರ ಮಲಯಾ ಪರ್ಯಾಯ ದ್ವೀಪದ ಸಂಚಾರಕ್ಕಾಗಿ ಅಲ್ಲಿಯ ಭಾರತೀಯರ ಪರಿಸ್ಥಿತಿಯನ್ನು ಪ್ರತ್ಯಕ್ಷ ಅಭ್ಯಾಸಿಸಲಿಕ್ಕಾಗಿ ಆ ಕಡೆ ತೆರಳಿದ್ದರು.

ಸಿಂಗಾಪುರದಲ್ಲಿ ಮುಖ್ಯಾಧಿಕಾರಿಯಾಗಿದ್ದ ಮೌಂಟ್‌ಬೇಟನ್ ದಂಪತಿಗಳು ನೆಹರುಗಳನ್ನು ಅತಿಥಿಗಳಾಗಿ ಆಹ್ವಾನಿಸಿ ಸತ್ಕರಿಸಿದರು.

ಆಗ ನೆಹರು ಮತ್ತು ನೌಕಾಧಿಪತಿ ಮೌಂಟ್‌ಬೇಟನ್ನರೊಳಗಿನ ಪರಿಚಯವು ಅನ್ಯೋನ್ಯ ಸ್ನೇಹವಾಗಿ ಮಾರ್ಪಟ್ಟಿತು. ನಂತರ ನೆಹರುಗಳು ಬ್ರಿಟಿಷ್ ಮಂತ್ರಿತ್ರಯರವರ ಭೇಟಿಯಲ್ಲಿ ವೇವೆಲ್ಲರಿಗಿಂತ ಮೌಂಟ್‌ಬೇಟನ್ನರು ವ್ಯಾಸರಾಯರಾಗುವುದು ಒಳ್ಳೇಯದೆಂದು ತಿಳಿಸಿದರಂತೆ. ಇದಾದ 7 ತಿಂಗಳಲ್ಲಿ ವೇವೆಲ್ಲರು ತೆಗೆಯಲ್ಪಟ್ಟು ಮೌಂಟ್‌ಬೇಟನ್ನರು ಆವರ ಹುದ್ದೆ ಕೊಡಲ್ಪಟ್ಟರು.



ಶೀಘ್ರ ಗುಣ, ಶಮನ

ಮುದ್ದಣ, ಕಜ್ಜಿ ಕುರುಗಳು ವಿಷಮಯವಾದ ಚರ್ಮ ಲಕ್ಷಣಗಳು. ಇವುಗಳ ಕುರಿತು ಜಾಗರೂಕರಾಗಿರಿ. ಪ್ರತಿ ರಾತ್ರಿ ಇವುಗಳ ಚರ್ಮ ಭಾಗವನ್ನು ಜಾಂಬಕ್ಕಿನಿಂದ ತಿಕ್ಕಿ.

ಜಾಂಬಕಿನೊಳಗಿನ ಪರಿಶುದ್ಧ ವನಸ್ಪತಿ ತೈಲಗಳು ವಿಷಹಾರಕ, ನಿವಾರಕ ಗುಣಗಳುಳ್ಳವು. ಅವು ತುರಿಸುವಿಕೆ ಮತ್ತು ಊದುವಿಕೆಯನ್ನು ನಿಲ್ಲಿಸಿ ವಿಷ ಮತ್ತು ರೋಗಾಣುಗಳನ್ನು ತೆಗೆದು ಚರ್ಮವನ್ನು ಆರೋಗ್ಯವಂತ ಮಾಡುತ್ತವೆ.

ಮಡವೆ, ಮುದ್ದಣ, ಕಿಮಿಕಡಿತ ಇತ್ಯಾದಿಗಳಿಂದ ಉಷ್ಣಗುಳ್ಳೆ, ಕಾಲು ಕುರುಗಳನ್ನು ಗುಣಪಡಿಸಲು ಜಾಂಬಕು ವಿಶ್ವವಿಖ್ಯಾತ ನಿವಾರಕ

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು.

ತರ್ಕ ವಿತರ್ಕ

ಬ್ರಿಟಿಷ್ ವಿಜ್ಞಾನಿಗಳು ಸ್ಯಾನೆಕ್ಸಿಲ್ ಎಂಬ ಕ್ಷಯ ಕಳವಳ ನಿವಾರಣಾ ಔಷಧಿಯನ್ನು ಕಂಡುಹಿಡಿದಿರುವರಂತೆ. ಸಾರ್ವಭೌಮ ಪ್ರತಿನಿಧಿಗಳು ಇದರ ಮಾದರಿ ಸೀಸೆಯೊಂದನ್ನು ನಮ್ಮ ದೇಶಿ ಅರಸರಿಗೆ ಜನ್ಮದಿನೋತ್ಸವದ ಬಿರುದುದಾನದೊಂದಿಗೆ ಅರ್ಪಿಸಬಾರದಿತ್ತೆ?

★

ಸಂಯುಕ್ತ ಪ್ರಾಂತ್ಯದಲ್ಲಿ ಯಾವನೊಬ್ಬ ಬಿಳಿ ಜನಾಂಗಿಕನು ಸತ್ತರೆ ಅವನ ಶವ ಪರೀಕ್ಷೆಯನ್ನು ಭಾರತೀಯರಾರೂ ಮಾಡಬಾರದೆಂಬ ಶಾಸನವಿನ್ನೂ ಇದೆಯಂತೆ 1856ರ ದಂಗೆಯ ನಂತರ ಬಿಳಿಯರಿಗೆ ಭಾರತೀಯರ ಕುರಿತು ಹಿಡಿದ ಹೆದರಿಕೆಯ ಪರಿಣಾಮವಿದಾಗಿರಬಹುದು.

★

ಪೂರ್ವ ಬಂಗಾಲದಲ್ಲಿನ ಹಿಂದೂಗಳು ತಮ್ಮ ಮನೆಮಾರುಗಳನ್ನು ಮುಸ್ಲಿಮರಿಗೆ ಬಿಟ್ಟುಕೊಡಬೇಕೆಂದು ಸಾರಲಾಗುತ್ತಿದೆಯೆಂದು ಯುನೈಟೆಡ್ ಪ್ರೆಸ್ಸಿನ ಬಾತ್ಮಿದಾರರೊಬ್ಬರು ತಿಳಿಸುತ್ತಾರೆ ಇನ್ನು ಪಾಕಿಸ್ಥಾನ ರಾಜ್ಯಭಾರದ ಶುಭೋದಯವಾಯಿತೆಂದು ಈ ಕುರುಹಿನಿಂದ ತಿಳಿಯಬಹುದು.

★

ಅಫಘಾನಿಸ್ಥಾನವು ಗಡಿನಾಡಿನ ಪಠಾಣರಿಗೆ ಹಕ್ಕು ಇದೆಯಾಗಿ ಪ್ರತಿಪಾದಿಸಿದೆ. ಹಿಂದೆ ಅಫಘಾನಿಸ್ಥಾನದವರು ದಾರಿ ಬಿಟ್ಟುಕೊಡದಿದ್ದರೆ ಮುಸ್ಲಿಂ ಸೇನೆಗಳು ಭಾರತಕ್ಕೆ ಬರುವಂತಿರಲಿಲ್ಲ ಆದುದರಿಂದ ಅದರ ಲಾಭ ಈಗಲಾದರೂ 'ಡಿವಿಡೆಂಡ್' ಆಗಿ ಸಲ್ಲಲೇ ಬೇಕು.

★

ಆಗಸ್ಟ್ 15ರ ತನಕ ಕಾಂಗ್ರೆಸ್ ಮಂತ್ರಿಗಳೇ ಕೇಂದ್ರ ಸರಕಾರವನ್ನು ಚಲಾಯಿಸುವರು ಇದೆಂಬರ ಅಧಿಕಾರಬೇಟೆ ಮಾಡುವ ಕಾಂಗ್ರೆಸ್‌ವಾದಿಗೆ ಸಂಪೂರ್ಣ ಸ್ವಾತಂತ್ರವೆಂದು ಇದರ ಅರ್ಥವಲ್ಲವೆಂಬುದನ್ನು ಮರೆಯಬಾರದು.

★

ತಿರುವಾಂಕೂರು ಹಿಂದೀ ಒಕ್ಕೂಟಕ್ಕೆ ಸೇರಲೇಬೇಕೆಂದು ಪಟ್ಟಾಭಿ ಸೀತಾರಾಮಯ್ಯನವರ ಸೂಚನೆ ಹಿಂದೀ ಒಕ್ಕೂಟವೂ ತಿರುವಾಂಕೂರಿಗೇ ಸೇರಲಿ ಎಂದು ಸರ್ ಸಿ ಪಿ ಯವರ ಸರ್ವಾಧಿಕಾರದ ವಾಣಿ ಹೊರಟಿದರೆ ಆಶ್ಚರ್ಯವಲ್ಲ

★

ವಿಜಾಪೂರದ ಕೆಲವು ಅಧಿಕಾರಿಗಳು ತೂಕದ ಕಲ್ಲಿನಲ್ಲಿ ಮೋಸಮಾಡಿ ಲಂಚ ತಿಂದುದಕ್ಕೆ ಶಿಕ್ಷೆಗೊಳಗಾಗುವರು ಅಂತು ತೂಕ ಪ್ರಕಾರ ಭಕ್ಷೀಸು ಪಡೆದುದು ತೃಪ್ತಿಯ ಸಂಗತಿ

★

ಐಯರ್ಲೆಂಡಿನ ಜನರ ಮುಖ್ಯ ಆಹಾರ ಬಟಾಟೆಯಂತೆ ಬ್ರಿಟಿಷರ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಪಡೆದವರಲ್ಲಿ ಅಲ್ಲಿನ ಜನರು ಅಗ್ರಗಣ್ಯರು ನಮಗೆ ಸ್ವಾತಂತ್ರ್ಯ ಸಮೀಪವಾದಾಗ ಈ ಗೆಡ್ಡೆಯ ರುಚಿಯನ್ನು ಮದ್ರಾಸ್ ಸರಕಾರ ಮಾಡಿಕೊಡಲು ಪ್ರಯತ್ನಿಸುವುದು ಸ್ತುತ್ಯ

★

ಸಂಸ್ಥಾನಗಳ ಕುರಿತು ಬ್ರಿಟಿಷರು ಭೇದ ನೀತಿ ತೋರಿದ್ದು ಅಯೋಗ್ಯವೆಂದು ಡಾ। ಅಂಬೇಡ್ಕರರ ಹೇಳಿಕೆ - ಕಡೆಗಾದರೂ ಈ ಮಹನೀಯರಿಗೆ ತಮ್ಮ ಸಾಕುವೊಡೆಯರ ಉತ್ತಮ ಗುಣಲಕ್ಷಣದ ಅರಿವಾದುದು ಗಣನೀಯ.

ಭೂಮಾತೆಯಿಂದ ಹೆಚ್ಚು ಫಲ ಪಡೆಯುವ ವಿಧಾನ

ಆಹಾರ ಕೊರತೆಯನ್ನು ನೀಗಿಸುವ ದಾರಿ

ಯೋಗ್ಯ ಗೊಬ್ಬರಗಳ ಸಂಗ್ರಹಿಸುವಿಕೆ

ಕಳೆದ ಯುದ್ಧವಾರಂಭವಾಗುವ ಮುಂಚಿನಿಂದಲೂ ಭಾರತವು ಆಹಾರದ ಮಟ್ಟಿಗೆ ಸ್ವಾವಲಂಬಿಯಾಗಿರಲಿಲ್ಲವೆಂಬ ಸಂಗತಿಯು ಅನೇಕರನ್ನು ಕೌತುಕಗೊಳಿಸಬಹುದು ಹೆಚ್ಚಿನ ನಮ್ಮ ಆಹಾರಾಂಶಗಳು ಹೊರಗಿನಿಂದಲೇ ಬರಬೇಕಿತ್ತು ಇಲ್ಲಿ ಬೆಳೆಯುವ ಆಹಾರವಸ್ತುಗಳು ಕೂಡ ಪೌಷ್ಟಿಕ ದೃಷ್ಟಿಯಿಂದ ಅತ್ಯುತ್ತಮವೆಂದು ಹೇಳಬರುತ್ತಿದ್ದಿಲ್ಲ ಆದುದರಿಂದ ಪ್ರಮಾಣದಲ್ಲಿಯೂ ಗುಣದಲ್ಲಿಯೂ ಕೊರತೆಬಾರದಂತೆ ಯಾವ ಉಪಾಯಗಳನ್ನು ಕೈಕೊಳ್ಳಬಹುದು?

ಆಕೃಕೆ ವಿಧಾನ

ಕಮ್ಮಿ ಕರ್ಚು ತಗಲುವ ಆಧುನಿಕ ಕೃಷಿ ವಿಧಾನಗಳನ್ನು ಅನುಸರಿಸಿ ಗಣನೀಯ ಪ್ರಗತಿಯನ್ನು ಪಡೆಯಬಹುದು ನಮ್ಮ ದೇಶದ ಎಲ್ಲಾ ಕಡೆಗಳಲ್ಲಿ ಯಂತ್ರ ಉಳುವಿಕೆಯನ್ನು ಅನುಸರಿಸಲಾಗುವುದೆಂದು ಹೇಳಬರುವುದಿಲ್ಲ. ಇದರ ಬದಲಿಗೆ ಸರಳ ಕೃಷಿಗಾರಿಕೆಯ ಮತ್ತು ಕಮ್ಮಿ ಕರ್ಚಿನ ಗೊಬ್ಬರ ಸೇರಿಸುವ ವಿಧಾನಗಳನ್ನು ಉಪಯೋಗಿಸುವುದು ಲಾಭಕರವಾಗುವುದು. ಇದರಿಂದ ನೆಲ ಉತ್ತಮಗೊಳ್ಳುವುದು. ಅತೀ ಹಗುರವಾದ ಕಬ್ಬಿಣದ ಹಲಗೆ ನೇಗಿಲುಗಳು ಜನಪ್ರಿಯವಾಗುತ್ತಿವೆ ಇದರಿಂದ ಎತ್ತುಗಳ ಮೇಲೆ ಕಮ್ಮಿ ಭಾರ ಬೀಳುವುದು ಮಾತ್ರವಲ್ಲ ಕಮ್ಮಿ ಉಳುವಿಕೆಯಲ್ಲಿ ಹೆಚ್ಚಿನ ಮಣ್ಣನ್ನು ಮಗುಚಲೂ ಇದರಿಂದ ಸಾಧ್ಯವಾಗುವುದು

ಅನೇಕ ರೀತಿಯ ಜಾನುವಾರು ಗೊಬ್ಬರ ಸಂಗ್ರಹಿಸುವ ಸಂದರ್ಭವನ್ನು ಕೇವಲ ಅಲಕ್ಷ್ಯದಿಂದ ಭಾರತೀಯ ರೈತನು ಹಾಳು ಮಾಡುತ್ತಿರುವುದು ಅವನು ಮಾಡುತ್ತಿರುವ ದೊಡ್ಡ ತಪ್ಪುಗಳಲ್ಲೊಂದು ಕ್ರಮ ಪ್ರಕಾರವಾದ ಸಾರಗಳನ್ನೀಯುವುದರಿಂದ ರೈತನು ಈಗಿನ ತನ್ನ ಉತ್ಪತ್ತಿಗಿಂತ ಶೇಕಡಾ 30 ರಷ್ಟು ಹೆಚ್ಚು ಬೆಳೆಯನ್ನು ಪಡೆಯಬಹುದು ಹೀಗೆ ಒಂದು ಎಕ್ರೆ ಸ್ಥಳದಲ್ಲಿ ½ ಟನ್ ಗೋದಿ ಇತರ ಸಾರ ರಹಿತ ಹೊಲಗಳಿಗಿಂತ ಹೆಚ್ಚು ಬೆಳೆಸಬಹುದು

ಈಗಿನ ಪರಿಸ್ಥಿತಿಯನ್ನು ನಮ್ಮ ದೇಶದಲ್ಲಿ ಕೊರತೆಯಾಗಿರುವ 7 ಮಿಲಿಯ ಟನ್ ಆಹಾರಧಾನ್ಯಗಳನ್ನು ಹೆಚ್ಚಾಗಿ ಬೆಳೆಸಬೇಕಾಗಿದೆ ಇದರಲ್ಲಿ 1 ಮಿಲಿಯ ಟನ್ನಿನಷ್ಟನ್ನು ಪ್ರತಿ ವರ್ಷ ಹೆಚ್ಚಾಗುತ್ತಿರುವ 5 ಮಿಲಿಯ ಜನಸಂಖ್ಯೆಗೆ ಪ್ರತ್ಯೇಕ ಗಣಿಸಿ ಉಳಿದ 6 ಮಿಲಿಯ ಟನ್ನುಗಳನ್ನು ಈಗಿನ ಕೊರತೆಗೆ ಉಪಯೋಗಿಸಿಕೊಳ್ಳಬೇಕು

ಜಾನುವಾರು ಗೊಬ್ಬರವನ್ನು ಗಾಳಿ, ಮಳೆ, ಬಿಸಿಲಿಗೆ ತೆರೆದಿಡುವುದು ನಮ್ಮ ದೇಶದಲ್ಲಿ ಸಾಮಾನ್ಯ ರಿವಾಜಾಗಿದೆ ಇದಕ್ಕೆ ಗೊಬ್ಬರವನ್ನು ಸಾರವತ್ತಾಗಿರುವ ವಿಧಾನದ ಶಾಸ್ತ್ರೀಯ ವಿಧಾನದ ಅಜ್ಞಾನವೇ ಕಾರಣ ಹೀಗೆ ತೆರೆದಿಟ್ಟ ಗೊಬ್ಬರವು ನಿಷ್ಪ್ರಯೋಜಕ ಇದನ್ನು ಹೊಂಡಗಳಿಗೆ ಹಾಕುವುದೂ ನಿಷ್ಪ್ರಯೋಜಕವೆಂದು ನಗರಗಳಲ್ಲಿನ ಕಸಕಡ್ಡಿಯನ್ನು ಉತ್ತಮ ಗೊಬ್ಬರವಾಗಿ ಪರಿವರ್ತಿಸುವ ವಿಧಾನದ ಕುರಿತು 312 ಕಡೆಗಳಲ್ಲಿ ಇಂಡಿಯಾ ಸರಕಾರದವರು ಪ್ರಯೋಗ ಪ್ರಚಾರಗಳನ್ನು ಸ್ಥಾಪಿಸಿರುವರು ಇದರಿಂದ ಈಗಾಗಲೇ ಸುಮಾರು 270 ಸಾವಿರ ಟನ್‌ಗಳಷ್ಟು ಇಂತಹ ಗೊಬ್ಬರವಾಗಿದೆ ಈ ಕಾರ್ಯಕ್ರಮವನ್ನು 5 ಸಾವಿರ ಕೇಂದ್ರಗಳಿಗೆ ವಿಸ್ತರಿಸಲು ಪ್ರಯತ್ನಿಸಲಾಗುತ್ತಿದೆ 5 ಸಾವಿರ ಜನಸಂಖ್ಯೆಯಿರುವ ಪ್ರತಿ ಪಟ್ಟಣದಲ್ಲಿ ಇದನ್ನು ಕೈಕೊಳ್ಳಲಾಗುವುದು ಮತ್ತು ಅದರಿಂದ 2 ಮಿಲಿಯ ಟನ್ ಗೊಬ್ಬರವು ತಯಾರಾಗಬಹುದೆಂದೂ ಲೆಕ್ಕ ಹಾಕಲಾಗಿದೆ. ಇದರೊಂದಿಗೆ ರಾಸಾಯನಿಕ ಮತ್ತಿತರ ವಿಧಾನದ ಗೊಬ್ಬರವು ಸೇರಿದರೆ ಮತ್ತೆ 2 ಮಿಲಿಯ ಟನ್ನುಗಳಷ್ಟು ಹೆಚ್ಚು ಗೊಬ್ಬರವು ಸಿಗಬಹುದು.

ಇದರ ನಂತರದ ಕಷ್ಟಕರವಾದ ಸಮಸ್ಯೆಯೆಂದರೆ ನೀರಾವರಿ ಸೌಕರ್ಯಗಳನ್ನೊದಗಿಸುವುದು. ಈಗ ಕೃಷಿಮಾಡಲ್ಪಡುವಲ್ಲೇ ಹೆಚ್ಚಿನ ನೀರು ಸರಬರಾಯಿಯಾದರೆ ಇಮ್ಮಡಿ ಬೆಳೆಯನ್ನು ಹೆಚ್ಚಿಸಬಹುದು ಇದರಿಂದ ಒಟ್ಟು ಉತ್ಪತ್ತಿಯು ಶೇಕಡಾ 50ರಷ್ಟು ಹೆಚ್ಚುತ್ತದೆ

ಉತ್ತಮ ಉಳುವಿಕೆ ಮತ್ತು ಸಾರ ಸೇರಿಸೋಣದಿಂದ 4 ಮಿಲಿಯ ಟನ್ ಧಾನ್ಯಗಳನ್ನು ಹೆಚ್ಚಿಸಬಹುದೆಂದು ಈ ಮೊದಲೇ ಹೇಳಲ್ಪಟ್ಟಿವೆ ಆದುದರಿಂದ ನೀರಾವರಿ ಕೆಲಸಗಳಿಂದ ನಮಗೆ 5 ಮಿಲಿಯ ಟನ್ ಹೆಚ್ಚು ಆಹಾರ ವಸ್ತುಗಳು ದೊರಕುವಂತಾದರೆ ಸಾಕು ಇದಕ್ಕಾಗಿ 20 ಮಿಲಿಯ ಎಕ್ರೆಗಳಷ್ಟು ಸ್ಥಳಕ್ಕೆ ನೀರು ಸರಬರಾಯಿಯಾಗಬೇಕು ಯುದ್ಧ ಮುಗಿದರಿಂದ ಈ ಕೆಲಸವನ್ನು ಹೆಚ್ಚಿನ ಹುರುಪಿನಿಂದ ನಿರ್ವಹಿಸಲು ಸಾಧ್ಯವಾಗಿದೆ ಈಗಾಗಲೇ 40 ಅಣೆಕಟ್ಟಿನ ಯೋಜನೆಗಳು ಸಿದ್ಧವಾಗಿವೆ ಇವಕ್ಕೆ 13 ಕೋಟಿ ರೂಪಾಯಿ ವೆಚ್ಚದ ಅಂದಾಜು ಹಿಡಿಯಲಾಗಿದೆ 1947ರ ಅಂತ್ಯದೊಳಗೆ 2 ಮಿಲಿಯ ಎಕ್ರೆ ಸ್ಥಳವು ಹೊಸ ಕೃಷಿಗಾಗಿ ಸಿದ್ಧವಾಗಬಹುದೆಂಬ ನಿರೀಕ್ಷೆಯಿದೆ

ಪ್ರತಿಯೊಂದು ಗಾಡಿಯಲ್ಲಿಯೂ ಒಂದೊಂದು ರೇಡಿಯೋ ಉಪಕರಣವನ್ನು ಜೋಡಿಸಿರುವ ಹೊಸ ರೈಲು ಬಂಡಿಯೊಂದು ಅಮೇರಿಕದಲ್ಲಿ ಪ್ರಾರಂಭಿಸಿದ್ದಾರೆ

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೋಟಾರು ಬಸ್ಸುಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟ ನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ ಲೈನಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೇಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು–ಮುಲ್ಕಿ ಲೈನಿನಲ್ಲಿ ಪಡುಬಿದ್ರೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾದೂರು ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶಲುಗಳನ್ನು ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿನ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಪಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಿಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗ್ಳೂರು,
29-3-1947.

ಜೊಯಿಂಟ್ ಮೆನೇಜರ್ಸ್,
ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India with Limited Liability)

Estd: 1906.

Head Office: UDIPI, S. Kanara.

	Rs.
CAPITAL:—	
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business proves the popularity

THE BOMBAY LIFE ASSURANCE COMPANY LIMITED

Company's New Business in 1946 - 3·28 Crores

Our Cheif Agency New Business in 1946 about 54 Lakhs.

Our experience of 37 years available to you for arranging Insurance investment. It therefore, pays you to consult us to Insure or to represent

Messrs. Kochikar Brothers, Limited.

Chief Agents for South India,

Bombay Life Building,

Central Office, Udipi:

Branches at: MANGALORE, CALICUT, MADRAS, TRIVANDRUM, MADURA, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleted ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 18—7—1947 [ಸಂಚಿಕೆ 29]

ವಾರಾಂತ್ಯ ವರದಿ ವಿಮರ್ಶೆ

ಅವ್ಯವಸ್ಥೆ

ಕೆಲವು ಕೊಂಗ್ರೆಸ್ ಸರಕಾರಗಳ ಗಾಳಿ ಬಂದಂತೆ ತೂರಿ ಬಿಡುವ ಧೋರಣೆಯನ್ನು ಅನುಸರಿಸುವುದು ಸುಲಭವೆಂದು ಮನಗಂಡಂತೆ ಕಾಣುತ್ತದೆ. ನಮ್ಮ ಮದ್ರಾಸ್ ಸರಕಾರದ ಕೆಲವು ರೀತಿ ನೀತಿಗಳನ್ನು ವಿಮರ್ಶಿಸಿದರೆ ಕೇವಲ ಮೂರು ತಿಂಗಳಲ್ಲಿ ಉಪಾಧ್ಯಾಯರ ಸಂಬಳದ ಕುರಿತು ನಾಲ್ಕು ಬದಲಾವಣೆಗಳಾದುವು. ಆಹಾರದ ಸರಬರಾಯಿ ಕುರಿತಾದ ಬದಲಾವಣೆಗಳು ಅನೇಕವಾಗಿವೆ.

ಇತ್ತೀಚೆಗೆ ಆರ್ಥಿಕ ಪರಿಸ್ಥಿತಿಯಿಂದ ಗಾಬರಿಗೊಂಡ ಸರಕಾರ ರೈತರಿಗೆ ಬೋನಸ್ ಕೊಡುವುದನ್ನು ಸಾರಿದೆ. ಹಿಂದೆ ಈ ಧೋರಣೆ ಯಶಸ್ವಿಯಾಗಲಿಲ್ಲ. ಪರಿಣಾಮಕಾರಿಯಲ್ಲವೆಂದು ಸಿದ್ಧಾಂತವಾದ ವಿಧಾನವನ್ನು ಪುನಃ ಪ್ರಯೋಗಿಸುವುದರಲ್ಲಿ ಅರ್ಥವಿಲ್ಲ. ಇದು ಸರಕಾರದ ಅಸಮರ್ಥತೆಯು ಚಿಲ್ಲರೆ ದಾಸ್ತಾನುಗಾರರು ಇದರಿಂದ ಅಪೂರ್ವ ಜಯ ಸಂಪಾದಿಸಿದಂತಾಯಿತು. ಅಕ್ಕಿಯನ್ನು ಪಡೆಕೊಳ್ಳುವ ಬೆಲೆಯನ್ನು ಖಂಡಿತ ಹೆಚ್ಚಿಸುವುದಿಲ್ಲವೆಂಬ ನಿರ್ಧಾರವನ್ನು ಸರಕಾರಿ ಪ್ರಕಟನ ಒತ್ತಿ ಹೇಳುತ್ತದೆ. ಆದರೆ ಬೋನಸ್ ಕೊಡುವುದೆಂದರೆ ಸುತ್ತಿ ಬಳಸಿ ಅಷ್ಟೇ ಹಣವನ್ನು ಹೆಚ್ಚಿಸಿದ ಹಾಗಾಯಿತೆಂಬುದೂ ಸ್ಪಷ್ಟವೇ. ಇನ್ನೇನು ಸವಯಕ್ಕೆ ಆಹಾರವಸ್ತುಗಳ ಚಿಲ್ಲರೆ ಮಾರಾಟದ ಬೆಲೆಯನ್ನು ಏರಿಸಲಾಗುವುದೆಂದು ತಿಳಿಸಿರುವುದರಿಂದ ಪಡೆಕೊಳ್ಳುವ ಬೆಲೆಯನ್ನು ಏರಿಸಿದರೇನಾಗುವುದು ಎಂಬ ಪ್ರಶ್ನೆ ಹುಟ್ಟುತ್ತದೆ.

"ಆಹಾರ ದಾಸ್ತಾನಿರುವ ಲೆಕ್ಕಗಳನ್ನು ಪುನಃ ಶೋಧಿಸಲಾಗುವುದೆಂದೂ, ಆಗಸ್ಟ್ ಅಂತ್ಯದೊಳಗೆ ಕೃಷಿಕರ ಬಳಿ ಬೇಕಾದಕ್ಕಿಂತ ಹೆಚ್ಚಿದ್ದರೆ ಅದನ್ನು ವಶಪಡಿಸಿಕೊಳ್ಳಲಾಗುವುದೆಂದೂ ತಿಳಿಸಲ್ಪಟ್ಟಿದೆ. ವಶಪಡಿಸಿಕೊಳ್ಳುವುದನ್ನು ಮೊದಲೇ ತಿಳಿಸದೆ ಬರೀ ದಾಸ್ತಾನಿನ ಲೆಕ್ಕ ಮಾತ್ರ ತೆಗೆದುಕೊಳ್ಳುವ ದಾರಿ ತಿಳಿಸಿದ್ದರೆ ಮತ್ತೆ ಪಕ್ಕನೆ ಸ್ಟೋರುಗಳಿಗೆ ಕೊಡದೆ ಉಳಿದಿರುವುದನ್ನು ಹಿಡಿಯಲಿಕ್ಕಾಗುತ್ತಿರಲಿಲ್ಲವೆ? ಈಗ ಅದೆಲ್ಲ 'ಕಪ್ಪು ಸಂತೆಯನ್ನು' ಸೇರುವಂತೆ ಮುಂಜಾಗ್ರತೆ ಕೊಟ್ಟಹಾಗಾಯಿತಲ್ಲವೆ? ಸಾರ್ವಜನಿಕದ ಹಣದಿಂದ ಧಾಸ್ತಾನುಗಾರರಿಗೆ ಈ ಪಾರಿತೋಷಕ ಕೊಡುವ ಅವಶ್ಯಕತೆಯಾದರೂ ಇರಲಿಲ್ಲ." ಹೀಗೆನ್ನುತ್ತಿದೆ ಒಂದು ಪತ್ರಿಕೆ.

★

ಸ್ವಾತಂತ್ರ್ಯ ಮಸೂದೆ

ಬಹುಕಾಲ ನಿರೀಕ್ಷೆಯ ಭಾರತ ಸ್ವಾತಂತ್ರ್ಯ ಮಸೂದೆಯು ಈಗಾಗಲೇ ಪ್ರಕಟವಾಗಿದೆ. ಆಗಸ್ಟ್ 15ರ ನಂತರ ಭಾರತವು ಸ್ವತಂತ್ರತೆಯನ್ನು ಹೊಂದುವುದು [illegible] ತ [illegible] ಅದರಲ್ಲಿ [illegible] ಬರ [illegible].

[illegible] ಭಾರತವನ್ನು ಹಿಂದೆ [illegible] ಅಸ್ಥಿರತೆಯ ಅರಣ್ಯದಲ್ಲಿ ಬಿಟ್ಟುಬಿಡುವುದೇ [illegible] ಸ್ಪಷ್ಟವಾಗುತ್ತದೆ. 200 [illegible]ಗಳ ಹಿಂದೆ ಇದೇ ಅಸ್ಥಿರತೆ ಅರಾಜಕತೆಗಳು ಇದ್ದುವಾದರೂ ಆಗ ನಮ್ಮ ದೇಶವು ಸಿರಿವಂತವಾಗಿತ್ತು. ಶಕ್ತಿಯುತವೂ ಆಗಿತ್ತು. ಆದರೆ ಈಗ ಬ್ರಿಟಿಷ್ ಆಡಳಿತದಿಂದ ದರಿದ್ರವೂ [illegible] ಆಗಿದೆ.

ಬ್ರಿಟಿಷರ [illegible] ಸ್ವ[illegible]ಸುವುದರ ಕುರಿತು ಹೆಮ್ಮೆ [illegible]. ಆದರೆ ಈಗ [illegible] ಈಗ ದೇಶವು ಇಬ್ಭಾಗವಾಗಿ ವಿಚ್ಛೇದಿಸಲ್ಪಟ್ಟಿದೆ ಮಾತ್ರವಲ್ಲ ದೇಶಿ ರಾಜರಿಗೆ ಸ್ವತಂತ್ರತೆ ಸಾರುವ ಹಕ್ಕೂ ಕೊಟ್ಟಂತಾಗಿದೆ. ಹೀಗೆ ಉದ್ದೇಶಪೂರ್ವಕವಾಗೆಂಬಂತೆ ಯಾವುದೇ ಕಲಹಕ್ಕೆ ಈ ದೇಶವನ್ನು ತುತ್ತು ಮಾಡಿ ಭೀಕರ ಗಂಡಾಂತರಕ್ಕೊಳ್ಳಿಸಿದಂತಾಯಿತು.

ಬ್ರಿಟಿಷರು ಮಾಡಿದ ಈ ಕುಹಕವನ್ನು ತಡೆಯುವುದು ಮುಂದಿನ ಶ್ರೇಯಸ್ಸಿನ ದೃಷ್ಟಿಯಿಂದ ಅತ್ಯಾವಶ್ಯಕ. ಸರ್ದಾರ್ ಪಟೇಲರು ಸಂಸ್ಥಾನಗಳಿಗೆ ಒಂದು ವಿಶಾಲ ಹೃದಯದ ಸೂಚನೆ ಕೊಟ್ಟಿದ್ದಾರೆ. ಸಂಸ್ಥಾನಗಳ ಆಂತರಿಕ ಸ್ವಾತಂತ್ರ್ಯವು ಸಂಪೂರ್ಣ [illegible]ಸಲಾಗುವುದು. ಕೇಂದ್ರ ಸರಕಾರವು ಕೇವಲ ಸೈನ್ಯ, ವಿದೇಶಾಂಗ ಮತ್ತು [illegible] ವಿಷಯಗಳನ್ನು ಮಾತ್ರ ಇಟ್ಟುಕೊಳ್ಳುವುದೆಂದವರು ಸ್ಪಷ್ಟಪಡಿಸಿದ್ದಾರೆ. ದೇಶಿ ರಾಜರು ಈ ಸೂಚನೆ [illegible] ತಮ್ಮ ವಿನಾಶವನ್ನು ತಪ್ಪಿಸಿಕೊಳ್ಳುವರೆಂದು ಹಾರೈಸೋಣ.

ಬಿರಾರ್ ಪ್ರಶ್ನೆ

ಬಿರಾರನ್ನು ಹೈದರಾಬಾದಿಗ ಸೇರಿಸುವ ಕುರಿತು ಸಾರ್ವಜನಿಕ ಅಭಿಪ್ರಾಯವು ಉದ್ರೇಕಗೊಂಡಿದೆ. ಹೈದರಾಬಾದು ಈ ಕುರಿತು ಲಂಡನಿನಲ್ಲಿ ತನ್ನ ಬೇಹುಗಾರರ ಮುಖಾಂತರ ಗುಪ್ತಸಂಚು ನಡೆಸುವುದೆಂದು ಸುದ್ದಿ ಹರಡಿದೆ. ಇತ್ತ ನಿಜಾಮರು ಬಲಿಷ್ಠವಾದೊಂದು ಸೈನ್ಯ ಸಂಗ್ರಹವನ್ನು ಮಾಡುತ್ತಿರುವರಂತೆ. ಬಲಾತ್ಕಾರದಿಂದಾದರೂ ಬಿರಾರನ್ನು ವಶಪಡಿಸುವ ಯೋಜನೆಯಿರುವುದಂತೆ. ಇದು ಎಷ್ಟರ ಮಟ್ಟಿಗೆ ನಿಜವೋ ಹೇಳಬರುವುದಿಲ್ಲ. ಏನಿದ್ದರೂ ಬಿರಾರಿನ ಕುರಿತು ಕೊಂಗ್ರೆಸ್ ಕೇಂದ್ರ ಮಂತ್ರಿಗಳು ಬ್ರಿಟಿಷ್ ಸರಕಾರದೊಡನೆ ಈ ಕುರಿತು ಒಂದು ಇತ್ಯರ್ಥಕ್ಕಾಗಿ ಪ್ರಯತ್ನಿಸುವುದು ಯೋಗ್ಯವೆನಿಸುತ್ತದೆ. ಮತ್ತೆ ಬಲಾತ್ಕಾರವು ತೋರಿಸಲ್ಪಡುವ ಸಂದರ್ಭದಲ್ಲಿ ಹೆಚ್ಚಿನ ಬಲಾತ್ಕಾರದಿಂದದನ್ನು ನಿವಾರಿಸಲು ಸನ್ನಾಹಗಳಾಗಬೇಕಾದುದೂ ಅತ್ಯಾವಶ್ಯಕ.

ಬಟಾಟೆ ಏಕೆ?

ಈ ವಾರದಿಂದ ಮದ್ರಾಸ್ ಪ್ರಾಂತ್ಯದಲ್ಲಿ ಅಕ್ಕಿಯ ಬದಲಿಗೆ ಬಟಾಟೆ ಸರಬರಾಯಿ ಮಾಡುವ ಯೋಜನೆ ಜಾರಿಗೆ ಬಂದಿದೆ. ಇದು ಕೇವಲ ಹಾಸ್ಯಾಸ್ಪದ ವಿಚಾರವೆಂದು ಕೆಲವು ಪತ್ರಿಕೆಗಳು ಸೂಚಿಸಿವೆ. ಇಲ್ಲಿಯ ಜನರ ಮುಖ್ಯ ಆಹಾರ ಅಕ್ಕಿ. ಅದು ಈಗ ಮುಂಚಿನಕ್ಕಿಂತ ಸಮ ಅರ್ಧಕ್ಕೆ ಕಡಿಯಲಾಗಿದೆ.

(3ನೇ ಪುಟಕ್ಕೆ ಮುಂದುವರಿದಿದೆ)

ಮುಂದಿನ ಬ್ರಿಟಿಷ್ ಅರಸಿ

ವ್ಯಾಸ್‌ರಾಯ್ ಮೌಂಟ್ ಬೇಟನ್ನರ ಸೋದರ ಮಗನಾದ ಕರ್ನಲ್ ಮೌಂಟ್‌ಬೇಟನ್ನರಿಗೆ ಮುಂದಿನ ಬ್ರಿಟಿಷ್ ಜನಾಂಗದ ಮಹಾರಾಜ್ಞಿಯಾಗಲಿರುವ ರಾಜಕುಮಾರಿ ಎಲಿಜಬೇತಳ ವಿವಾಹ ನಿಶ್ಚಯವಾಗಿದೆ. ಈ ಚಿತ್ರದಲ್ಲಿ ಆಕೆ ಮೊದಲಿನ ಸಲಕ್ಕೆ ಅಶ್ವಾರೂಢಳಾಗಿ ಸೈನ್ಯವೊಂದನ್ನು ನಿರೀಕ್ಷಿಸುತ್ತಿರುವಳು.

ಭಾರತದ ಪ್ರಥಮ ರಾಯಭಾರಿಣಿ

ನೆಹರು ಕುಟುಂಬದ ಉಜ್ವಲ ಆದರ್ಶ

ಸ್ಮಟ್ಸರನ್ನೂ ಸೋಲಿಸಿದ ವಿಜಯಲಕ್ಷ್ಮಿ

ರಶ್ಯಕ್ಕೆ ಭಾರತದ ರಾಯಭಾರಿಣಿಯಾಗಿ ನೇಮಿಸಲ್ಪಟ್ಟ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಆಧುನಿಕ ಭಾರತ ನಾರಿಯರಲ್ಲಿ ರತ್ನಪ್ರಾಯರಾಗಿರುವರು. ಅವರಲ್ಲಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳೆರಡು ಆವಿರ್ಭವಿಸಿವೆ. ಅವರ ಜೀವನ ಮತ್ತು ಸೇವಾಕಾರ್ಯಗಳು ಆಧುನಿಕ ಭಾರತದ ಸಂಕೇತಗಳಾಗಿವೆ.

ನೆಹರು ಕುಟುಂಬದ ಘನ ಗಂಭೀರ ಶ್ರೀಮಂತಿಕೆಯ ವಾತಾವರಣವನ್ನು ಪ್ರಸ್ತಾಪಿಸುವುದು ಅಪ್ರಸ್ತುತ. ಕಾರಣ ಅದನ್ನರಿಯದವರೆ ವಿರಳ. ಇಂತಹ ಸಿರಿಸಂಪತ್ತಿನ ಭಾಗ್ಯಭೋಗದಲ್ಲಿ 1900ರಲ್ಲಿ ವಿಜಯಲಕ್ಷ್ಮಿಯವರು ಇಂದಿಗೆ 47 ವರ್ಷಗಳ ಹಿಂದೆ ಜನಿಸಿದರು. ಈ ಸುಂದರ ಹೆಣ್ಣು ಶಿಶುವನ್ನು ನೆಹರುಗಳು ಸ್ವರೂಪಳೆಂದು ಕರೆಯುತ್ತಿದ್ದರು ಕೇವಲ 5 ವರ್ಷ ಪ್ರಾಯದಲ್ಲಿ ಸ್ವರೂಪಳು ತನ್ನ ಹತ್ತಿರವರೊಡನೆ ಯುರೋಪ್ ಸಂಚಾರಕ್ಕೆ ಹೋದಳು.

ಅರಮನೆಯಂತಿರುವ ಮೋತಿಲಾಲರ ಆನಂದ ಭವನದ ಜೀವನವು ಹೆಚ್ಚಾಗಿ ಐರೋಪ್ಯ ಶೈಲಿಯಲ್ಲೇ ನಡೆಯುತಿತ್ತು. ಒರ್ವ ಐರೋಪ್ಯ ಮಹಿಳೆಯು ಸ್ವರೂಪಳ ದಾಸಿಯಾಗಿದ್ದು ಅತ್ಯಂತ ಆಡಂಬರದ ವೈಭವದಲ್ಲಿ ಅವರು ಬೆಳೆದಳು. ಹೀಗಿದ್ದುದರಿಂದ ಮೊದಲವಳು ಆಂಗ್ಲಭಾಷೆಯನ್ನೇ ಕಲಿತಳು ನಾಲ್ಕನೆ ವಯಸ್ಸಿನಲ್ಲೇ ಸ್ವರೂಪಳಿಗೆ ಇಂಗ್ಲಿಷ್ ಭಾಷೆ ಮಾತನಾಡಲು ಬರುತಿತ್ತು. ತನ್ನ ಮಾತೃಭಾಷೆ ಅವಳು ಕಲಿಯಲಾರಂಭಿಸಿದುದು 9ನೇ ವಯಸ್ಸಿನಲ್ಲಿ.

*

ನೆಹರು ಭವನದಲ್ಲಿ ಜೀವನವು ಹಾಗಿತ್ತು. ಎಲ್ಲವೂ ಇಂಗ್ಲಿಷ್ ಮಾದರಿಯಲ್ಲಿ ಆ ಕಾಲದ ಶಿಕ್ಷಿತ ಶ್ರೀಮಂತರ ಮನೋಭಾವವು ಹಾಗೆ ರೂಪುಗೊಂಡಿತ್ತು. ಆದುದರಿಂದ ನೆಹರು ಕುಟುಂಬಸ್ಥರ ಭಾವನೆಯು ಹೆಚ್ಚಾಗಿ ಆಂಗ್ಲಮಯವಾಗಿತ್ತಾದರೂ ಅವರು ಹೆಸರು ಅಚ್ಚ ಭಾರತೀಯವಾಗಿಯೇ ಉಳಿಯಿತು. ಮೋತಿಲಾಲ ನೆಹರುಗಳು ಶುದ್ಧ ಭಾರತೀಯ ನೋಟವನ್ನು ಸಂಪೂರ್ಣ ತಪ್ಪಿಸಿರಲಿಲ್ಲ.

ಸ್ವರೂಪಳು ಯಾವ ಶಾಲೆಗೂ ಹೋಗಲಿಲ್ಲ. ಆದರೆ ಮನೆಯಲ್ಲಿ ಅವಳಿಗೆ ಯಾವ ಶಾಲೆಯೂ ಕೊಡಲು ಅಸಮರ್ಥವಿಲ್ಲದಂತಹ ಉಚ್ಚ ಶಿಕ್ಷಣವು ದೊರಕಿತು. ನಾಲ್ಕೈದು ಮಂದಿ ತಜ್ಞ ಅಧ್ಯಾಪಕರು ಅವಳಿಗೆ ಕಲಿಸಲು ನೇಮಕವಾಗಿದ್ದರು ಮತ್ತು ಮನೆಯಲ್ಲೇ ಅವಳಿಗೆ ಅವಳ ಪ್ರಖ್ಯಾತ ವಕೀಲನಾದ ತಂದೆಯ ಬಳಿ ಬರುತಿದ್ದ ಅನೇಕ ಆಢ್ಯ ವ್ಯಕ್ತಿಗಳ ಪರಿಚಯವೂ ಸಂಪರ್ಕವೂ ಆಯಿತು. 1915ರಲ್ಲಿ ಬರೀ 15 ವರ್ಷದವಳಿದ್ದಾಗ ಅವಳು ಬೊಂಬಾಯಿಯಲ್ಲಿ ಜರಗಿದ ಕೊಂಗ್ರೆಸ್ ಅಧಿವೇಶನಕ್ಕೆ ತನ್ನ ತಂದೆಯೊಡನೆ ಹೋಗಿದ್ದಳು.

ನಾಲ್ಕು ವರ್ಷಗಳ ನಂತರ ನೆಹರು ಕುಟುಂಬದಲ್ಲಿ ಮಹತ್ತರವಾದ ಬದಲಾವಣೆ ಸಂಭವಿಸಿತು. ಪಂಜಾಬದ ಜಾಲಿಯನ್‌ವಾಲಾ ಪ್ರಕರಣದಿಂದ ಉದ್ವೇಗಗೊಂಡ ಮೋತಿಲಾಲರು ಮಹಾತ್ಮಾ ಗಾಂಧಿಯವರ ಪ್ರಭಾವದಡಿಯಲ್ಲಿ ಬಂದರು. ತಮ್ಮ ಹೇರಳ ಸಂಪಾದನೆಯ ವಕಾಲತು ವೃತ್ತಿಗೆ ತಿಲಾಂಜಲಿಯಿತ್ತು ಗಾಂಧೀಜಿಯೊಡನೆ ದೇಶಸೇವೆಗೆ ತೊಡಗಿದರು. ಒಂದೇ ದಿನದಲ್ಲೆಂಬಂತೆ ಆನಂದಭವನದ ಜೀವನದಲ್ಲಿಯೂ ಪರಿವರ್ತನೆಯಾಯಿತು. ಸುಖೋಪಭೋಗದ ಜೀವನವು ಜನಾಂಗದ ಸ್ವಯಂಸೇವೆಯ ಕಾರ್ಯಕ್ಕೆ ಬದಲಿಸಿತು. ಆಗ ಸ್ವರೂಪಳಿನ್ನೂ ನವತರುಣಿಯಾಗಿದ್ದಳು. ಅವಳಿಗೆ ಅಗಿನಿಂದ ಒಂದು ಹೊಸ ದೃಷ್ಟಿಕೋನವೂ ನೂತನ ವಿಚಾರ ಸರಣಿಯೂ ದೊರಕಿದಂತಾಯಿತು.

1921ರಲ್ಲಿ ಸ್ವರೂಪಳು ರಂಜಿತ್ ಪಂಡಿತನೆಂಬ ಕಾಥಿಯಾವಾರ್ ಬ್ರಾಹ್ಮಣನನ್ನು ತನ್ನ ಪತಿಯಾಗಿ ಆರಿಸಿದಳು. ಅವನೂ ಕೂಡಾ ಸುಸಂಸ್ಕೃತ ಕಲಾಭಿರುಚಿಯುದ್ದವನೂ ವ್ಯಕ್ತಿಯಲ್ಲಿ ಬೆರಿಸ್ಟರನೂ ಆಗಿದ್ದನು. ಅವನು ಸ್ವರೂಪಳಿಗೆ ಹೊಸ ಹೆಸರನ್ನು ಕೊಟ್ಟು ವಿಜಯಲಕ್ಷ್ಮಿ ಎಂದ ಕರೆದನು. ಅವರ ದಾಂಪತ್ಯದಲ್ಲಿ ಮೂರು ಮಂದಿ ಹೆಣ್ಣು ಮಕ್ಕಳು ಹುಟ್ಟಿದರು.

1935ರಲ್ಲಿ ವಿಜಯಲಕ್ಷ್ಮಿಯವರು ಅಲಹಾಬಾದ್ ನಗರಸಭಾ ಸದಸ್ಯೆಯಾಗಿ ಚುನಾಯಿಸಲ್ಪಟ್ಟರು. 1937ರ ಸಾರ್ವತ್ರಿಕ ಚುನಾವಣೆಯಲ್ಲಿ 10 ಸಾವಿರ ವೋಟುಗಳನ್ನು ಹೆಚ್ಚಾಗಿ ಪಡೆದು ಸಂಯುಕ್ತ ಪ್ರಾಂತ್ಯದ ಶಾಸನಸಭೆಗೆ ಅವರನ್ನು ಆರಿಸಲಾಯಿತು. ಕೂಡಲೇ ಅವರಿಗೆ ಆ ಪ್ರಾಂತ್ಯದ ಮಂತ್ರಿ ಪದವಿಯೊಂದೂ ಕೊಡಲ್ಪಟ್ಟಿತು. ಅವರು ಸ್ಥಳೀಕ ಸಂಸ್ಥೆಗಳ ಮತ್ತು ಆರೋಗ್ಯಖಾತೆಯ ಮಂತ್ರಿಯಾದರು. ಭಾರತದ ಪ್ರಥಮ ಮಂತ್ರಿಣಿಯಾದ ಕೀರ್ತಿ ವಿಜಯಳಿಗೇ ಸಲ್ಲುವುದು. ತನ್ನ ಮಂತ್ರಿತ್ವದ ಅವಧಿಯಲ್ಲಿ ಅವರು ತಮ್ಮ ಆಡಳಿತ ಸಾಮರ್ಥ್ಯವನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ಕಳೆದ ಯುದ್ಧಾರಂಭಕ್ಕೆ ಮೊದಲು ಲಕ್ಷ್ಮಿಯವರು ಯುರೋಪ್ ಸಂಚಾರಕ್ಕೊಂದಮಸಲ ಹೋಗಿ ಚೆಂಬರ್ಲೀನರು ಹಿಟ್ಲರನೊಡನೆ ಮ್ಯೂನಿಕ್ ಒಪ್ಪಂದಕ್ಕೆ ಸಹಿ ಹಾಕುವಾಗ ಅವರು ಇಂಗ್ಲೆಂಡಿನಲ್ಲಿಳಿದ್ದರು.

ಕೊಂಗ್ರೆಸ್ ಮಂತ್ರಿಮಂಡಳಗಳು ರಾಜಿನಾಮೆಯಿತ್ತಾಗ ಪುನಃ ವಿಜಯಲಕ್ಷ್ಮಿಯವರು ರಾಷ್ಟ್ರ ಹೋರಾಟದಲ್ಲಿ ಧುಮುಕಿದರು. 1941ರಲ್ಲಿ ಅವರನ್ನು ಕೈದು ಮಾಡಲಾಯಿತು. 4 ತಿಂಗಳ ಸಜೆಯೂ ಆಯಿತು. ಪುನಃ 1942ರಲ್ಲಿ ಕೈದು ಮಾಡಲ್ಪಟ್ಟರು. ಆದರೆ ಅನಾರೋಗ್ಯದ ನಿಮಿತ್ತ 9 ತಿಂಗಳ ನಂತರ ಅವರನ್ನು ಬಿಡುಗಡೆ ಮಾಡಲಾಯಿತು.

*

1949ರಲ್ಲಿ ಸಂಯುಕ್ತ ಅಮೇರಿಕಕ್ಕೆ ಸಂಚಾರ ಹೋಗಿ ಆ ದೇಶದ ಪ್ರಮುಖ ಕೇಂದ್ರಗಳಲ್ಲಿ ಸ್ಫೂರ್ತಿಯುವಾದ ಭಾಷಣ ಕಾರ್ಯಕ್ರಮವನ್ನು ನಿರ್ವಹಿಸಿದರು. 1945ರಲ್ಲಿ ಅವರು ಸೇನ್‌ಫ್ರಾನ್ಸಿಸ್ಕೋಗೆ ಅಲ್ಲಿನ ಜನಾಂಗ ಮಂಡಲ ಸಭೆಯಲ್ಲಿ ಭಾರತವು ಸಂಪೂರ್ಣ ಸ್ವಾತಂತ್ರ್ಯವಾಗಬೇಕೆಂಬ ಮನವಿಯನ್ನು ಮಂಡಿಸಿದರು. ಅವರ ಭಾರತೀಯ ಧ್ವನಿಯು ವಿಶ್ವದಲ್ಲಿನ ಎಲ್ಲಾ ಪರತಂತ್ರ ರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿ ಮೊರೆಯಿಟ್ಟಿತು.

ಪುನಃ ಕೊಂಗ್ರೆಸು ಅಧಿಕಾರ ವಹಿಸಿದಾಗ ವಿಜಯಲಕ್ಷ್ಮಿಯವರು ಆರೋಗ್ಯ ಮತ್ತು ಶಿಕ್ಷಣಖಾತೆಯ ಮಂತ್ರಿಣಿಯಾದರು. ಇತ್ತೀಚೆಗೆ ಅವರು ನ್ಯೂಯೋರ್ಕಿನಲ್ಲಿ ಸೇರಿದ ಜನಾಂಗ ಸಂಘದಲ್ಲಿ ದ. ಆಫ್ರಿಕದ ವರ್ಣವೈಷಮ್ಯ ಧೋರಣೆಯನ್ನು ಪ್ರತಿಭಟಿಸಿ ಎಲ್ಲಾ ಜನಾಂಗದ ಸದಸ್ಯರ ಆದರ ಮನ್ನಣೆಗಳಿಗೆ ಪಾತ್ರರಾದರು. ದ. ಆಫ್ರಿಕದ ಜನರಲ್ ಸ್ಮಟ್ಸರು ಅದೆಷ್ಟು ಕುಯುಕ್ತಿಗಳನ್ನು ಮಾಡಿದರೂ ವಿಜಯಲಕ್ಷ್ಮಿಯ ಘೃತಪೂರ್ವಕತೆಯ ಇದಿರಿನಲ್ಲಿ ಅವು ನಿಷ್ಫಲವಾದುವು.

ಇಂದು ರಶ್ಯಕ್ಕೆ ಭಾರತೀಯ ರಾಯಭಾರಿಣಿಯಾಗಿ ಹೋಗಲಿರುವ ಅವರ ಹೊಣೆಗಾರಿಕೆಯು ಅಗಾಧವಾಗಿದೆ—ಆದರೆ ಅವರ ಶಕ್ತಿ ಸಾಮರ್ಥ್ಯಗಳೂ ಅಷ್ಟೇ ಅಗಾಧವಾಗಿವೆ.

(ಇನ್ನೂ ಇದೆ)



ಜೀವನ ಕಾರ್ಯವು ಸಾಂಗವಾಗಿ ನಡೆಯಬೇಕಾದರೆ, ನಷ್ಟವಾಗುವ ಶಕ್ತಿಯು ಭರ್ತಿಯಾಗಬೇಕು. ನಿಮ್ಮ ಹೊಳೆಯನ್ನೂ ಕಾಂತಿಯನ್ನೂ ರಕ್ಷಿಸಬೇಕಾದರೆ ನಿಮ್ಮಲ್ಲಿ ಅಂತರಾರೋಗ್ಯವಿರಬೇಕು. ಈ ಬಗ್ಗೆ ನಿಮಗೆ ಬೇಕಾದುದು ಬ್ಯಾಲ್‌ಬೀನ್ಸ್. ಅವುಗಳಿಂದ ನಿಮ್ಮ ದೇಹಾರೋಗ್ಯವು ನೆಟ್ಟಗಾಗುವುದು. ನಿಮ್ಮ ರಕ್ತವು ಪರಿಶುದ್ಧವಾಗುವುದು. ನಿಮ್ಮ ದೇಹದ ವಿಸರ್ಜನಾ ಕಾರ್ಯಗಳು ಸರಿಯಾಗಿ ನಡೆಯುವವು. ಈ ವನಸ್ಪತಿ ಮೂಲ ಮದ್ದಿನಿಂದ ನಿಮಗೆ ಹೊಸ ಹುರುಪು ದೊರಕುವುದು. ಶುಭ್ರ ಲೋಚನಗಳೂ, ನಿಶ್ಚಳ ಚರ್ಮವೂ ನಿಮಗೆ ಒದಗುವವು. ನಿಮ್ಮನ್ನು ಆಕರ್ಷಣೀಯರಾಗಿ ಮಾಡುವುದು.

BILE BEANS

ಶಯನ ಸಮಯ ನಿತ್ಯವೂ ಸೇವಿಸಿರಿ

ಬಟಾಟೆಯ ಬೆಳೆಯು ಈ ಸಲ ವಿಪರೀತವಾಗಿದ್ದು ಅದರ ಬೆಲೆಯೂ ತುಂಬಾ ಕಡಿಮೆಯಾಗುವುದೆಂದೂ ನಿರೀಕ್ಷೆ ಇತ್ತು. ಆದರೆ ಸರಕಾರವು ತನ್ನ ಧೋರಣೆಯಿಂದ ಬಟಾಟೆಗೆ ಇಲ್ಲದ ಬೆಲೆ ಉಂಟಾಗುವಂತೆ ಮಾಡಿತು. ಅಕ್ಕಿ ಕಡಿಮೆ ಮಾಡುವುದು ಕೆಟ್ಟದ್ದು. ಅದರ ಸ್ಥಾನದಲ್ಲಿ ಬಟಾಟೆ ಕೊಡಿಸುವುದೆಂದು ಹೇಳುವುದು ತಪ್ಪು ಕಾಲವನ್ನಬೇಕು.

ಗೃಹಿಣಿಯರಿಗೆ ಸೂಕ್ತ ಸಲಹೆಗಳು

1 ಮನೆ ನಡೆಸುವುದರಲ್ಲಿ ಅಂದವಂದ ವಿರಲಿ ಅನಾವಶ್ಯಕ ವಸ್ತು ಎಂದರೆ ಬೆಲೆಯ ಆಭರಣಗಳ ಮೇಲೆ ವೃಥಾ ವ್ಯಯಿಸಬೇಡಿರಿ

2 ಕೆಲಸಗಾರರನ್ನು ಯಾವಾಗಲೂ ಶಂಕಿಸಬೇಡಿರಿ. ಅವರು ಅಲ್ಪಸ್ವಲ್ಪ ತಿಂದು ಹಾಕಿದರೆ ಮನಸ್ಸು ಕೆಡಿಸಬೇಡಿ. ತೃಪ್ತಿಪಟ್ಟುಕೊಂಡಿರುವ ಕೆಲಸಗಾರರಿಂದ ಗೃಹಸೌಖ್ಯ ಹೆಚ್ಚುವುದು

3 ಸಾಮಾನು ತರಲು ಪೇಟೆಗೆ ಹೋದರೆ ಕೆಲವೇ ಕಾಸುಗಳಿಗಾಗಿ ವ್ಯಾಪಾರಿಗಳೊಡನೆ ಚೌಕಾಸಿ ಮಾಡಬಾರದು. ಕೇಳಿದ ಬೆಲೆ ಕೊಟ್ಟು ತರುವ ಸ್ವಭಾವ ದೈನ್ಯಕಷ್ಟಗಳ ... ಕೆಲವರು 2 ಕಾಸಿನ ಅರ್ಥಕ್ಕಾಗಿ ತರ್ಕ ಮಾಡುತ್ತಾರೆ. ... ಹೇಳಿದರೆ 200 ರೂಪಾಯಿ ... ಅನಾವಶ್ಯಕವಾಗಿ ಕೇಳುತ್ತಾರೆ

4 ... ಗಾಡಿಯವರಿಗೆ ಖರ್ಚು ಮಾಡುವುದನ್ನು ಕಡಿಮೆ ಮಾಡಬೇಡಿರಿ. ಅವರಿಗೂ ಜೀವನ ಸಾಗಬೇಕೆಂಬುವುದನ್ನು ಮರೆಯಬಾರದು. ಒಂದು ಕಡೆ ಒಬ್ಬ ಹುಡುಗಿ ಕೂಲಿಯ ಹುಡುಗನೊಬ್ಬನಿಗೆ 1 ಆಣೆ ಹೆಚ್ಚು ಕೊಡಲು ಒಪ್ಪಲಿಲ್ಲ. ಮನೆಗೆ ಬರುವಾಗ ದಾರಿಯಲ್ಲಿ ಏನನ್ನೋ ತೆಗೆದುಕೊಳ್ಳಲು ಅವಳೊಂದು ಅಂಗಡಿಗೆ ಹೊಕ್ಕಿದಳು. ಇತ್ತ ಅತೃಪ್ತಿಪಟ್ಟ ಹುಡುಗ ಸುಮಾರು 50 ರೂಪಾಯಿ ಸಾಮಾನು ಸಮೇತ ಪರಾರಿಯಾಗಿದ್ದ

5 ಪ್ರತಿದಿನ ನಿಮ್ಮ ಕುಟುಂಬದವರಿಗೆ ಸಾಲುವಷ್ಟೇ ಆಹಾರ ತಯಾರು ಮಾಡುವುದಲ್ಲ. ಸ್ವಲ್ಪ ಹೆಚ್ಚು (ಈ ಕಾಲದಲ್ಲಿ ಅತೀ ಸ್ವಲ್ಪ) ಉಳಿದರೆ ನಿಮ್ಮ ಕೆಲಸದವರಿಗೆ ಸಂತೋಷವಾಗುವುದು

6 ಒಳ್ಳೇ ಕೆಲಸಕ್ಕೂ ದಾನ ಧರ್ಮಕ್ಕೂ ಕೊಡಲು ಗೊಣಗುಟ್ಟಬೇಡಿರಿ. ಬಡಬಗ್ಗರಿಗೆ ಸಣ್ಣ ರೀತಿಯಲ್ಲಿ ಸಹಾಯ ಮಾಡುವುದೊಳಿತು—ಅನಾವಶ್ಯಕ ಸುಖೋಪಭೋಗದ ವಸ್ತುಗಳ ಮೇಲೆ ಖರ್ಚು ಮಾಡುವುದಕ್ಕಿಂತ ಉದ್ದೇಶ ಕಾಸಿಗಾಗಿ ರಾಶಿ ಕಳಕೊಳ್ಳಬಾರದು

ಮುಂದಿನ ಖಂಡಖಂಡಗಳೊಳಗಿನ ಯುದ್ಧ

ಅಣುಶಕ್ತಿ, ರೋಗಾಣುಶಕ್ತಿಗಳ ಉಪಯೋಗ

ಇಂಗ್ಲೆಂಡಿಗೆ ತುಂಬಾ ಗಂಡಾಂತರ

ಎಟಂ ಬೊಂಬಿನ ಕುರಿತು ಎರಡು ತರದ ಅಭಿಪ್ರಾಯಗಳು ಈಗ ವಿಜ್ಞಾನಿಗಳಲ್ಲಿ ಉಂಟಾಗಿದೆ. 'ಅದು ಕೇವಲ ಒಂದು ಯುದ್ಧ ಅಸ್ತ್ರವೆಂದು ಕೆಲವರ ಅಭಿಪ್ರಾಯ. ಎಟಂ ಬೊಂಬು ಸಿಡಿಲಿನ ಮರಿ, ಒಂದು ಉಲ್ಕಾಪಾತದಂತಹ ವಿಧ್ವಂಸಕವೆಂದೂ ಅದು ಕ್ಷಣ ಮಾತ್ರದಲ್ಲಿ ಶತ್ರು ಕೇಂದ್ರಗಳನ್ನು ಭಸ್ಮಗೊಳಿಸಬಲ್ಲದೆಂದೂ ಬೇರೆ ಕೆಲವರ ಮತ.

ಸದ್ಯಕ್ಕೆ ಎಟಂ ಬೊಂಬು ಒಂದು ಪರಿಣಾಮಕಾರಿ ಯುದ್ಧಾಸ್ತ್ರವೆಂದು ನಂಬುವವರೇ ಹೆಚ್ಚು. ಸೈನ್ಯ ನೌಕ ಮತ್ತು ವಿಮಾನ ದಳಗಳನ್ನು ವಿಕಾಸಗೊಳಿಸುವುದು ಅತ್ಯಾವಶ್ಯಕವೆಂದೂ ಇವರ ಅಭಿಪ್ರಾಯ. ಕಾರಣ ಎಟಂ ಬೊಂಬನ್ನು ಅತ್ಯಂತ ಪರಿಪೂರ್ಣತೆಯಿಂದ ಉಪಯೋಗಿಸಬೇಕಾಗುವುದು. ಎಟಂ ಬೊಂಬಿನಿಂದ ವಿಶಾಲ ಪ್ರದೇಶಗಳನ್ನು ನಾಶಗೊಳಿಸಿದರೂ ಅವುಗಳನ್ನು ಮತ್ತೆ ಹಿಡಿಯಲು ಸೈನ್ಯಗಳು ಆವಶ್ಯ. ಈ ವಿಚಾರ ಶ್ರೇಣಿಯವರೇ ಇಂದಿನ ಅಮೇರಿಕದ ವಿದೇಶಾಂಗ ನೀತಿಯನ್ನು ನಿರ್ದೇಶಿಸುತ್ತಿರುವರೆಂದರೆ ಅತಿಶಯೋಕ್ತಿಯಾಗದು. ಆದುದರಿಂದಲೇ ಅಧ್ಯಕ್ಷ ಟ್ರುಮೆನ್ನರು ಯುರೋಪಿನ ಮತ್ತು ಚೀನಾ ಜಪಾನ್, ಫಿಲಿಪ್ಪೈನ್ ದೇಶಗಳ ರಾಜಕಾರಣದಲ್ಲಿ [illegible] ತಮ್ಮ ಕೈಯಾಡಿಸುವ ಧೋರಣೆಯನ್ನು ಮೊಳೆ [illegible] ಪ್ರಕಟಿಸುತ್ತಾರೆ. ಗ್ರೀಸಿಗೆ ಸಹಾಯ, ಚೀನದಲ್ಲಿ ಮಧ್ಯಸ್ಥಿಕೆ, ಜಪಾನ್ ಸುಧಾರಣೆ, ಜರ್ಮನಿ ಮತ್ತು ಬಾಲ್ಕನ್ ದೇಶಗಳ ಕಚ್ಚಾಟದ ಇತ್ಯರ್ಥ ಇವು ಕೆಲವು ಗಣನೀಯ ಉದಾಹರಣೆಗಳು.

ಮುಂದಿನ ಯುದ್ಧಕ್ಕೆ ಬೇಕಾಗುವ ಸೈನ್ಯ ರಾಣ್ಯ, ವೈಮಾನಿಕ ಕೇಂದ್ರ, ನೌಕಾ ನಿಲ್ದಾಣಗಳನ್ನು ಸಜ್ಜಿಗೊಳಿಸಿಕೊಳ್ಳುವುದು ಈ ಧೋರಣೆಯ ಹಿನ್ನೆಲೆಯಲ್ಲಿ ಹುದುಗಿರುವ ಉದ್ದೇಶ. ಯುದ್ಧಪೂರ್ವದಲ್ಲೂ ಅಮೇರಿಕವು ತನ್ನ ಶಕ್ತಿ ಹಸ್ತವನ್ನು ಬೀಸುತ್ತಿದ್ದ ಕಾರಣ ಅಲ್ಲಿಯೂ ಎಲ್ಲಾ [illegible] ಅದಕ್ಕೆ ಮುಂದೆ ಆತಾ ವಶ್ಯಕವೆನಿಸುವುದು. ಬ್ರಿಟನ್ನೂ [illegible] ಸಾಮ್ರಾಜ್ಯವು [illegible] ಕ ಸಹಾಯ ಮಾಡುತ್ತದೆ. ಕಾರಣ ಬ್ರಿಟಿಷ್ ವಸಾಹತುಗಳಲ್ಲಿನ ಅನೇಕ ನೌಕಾ ನಾಣ್ಯಗಳು, ವಿಮಾನ [illegible] ಪ್ರದೇಶಗಳೂ ಅದಕ್ಕೆ ಮುಂದೆ [illegible].

ಬೊಂಬಿನ ಪರಿಣಾಮ

ಮೊದಲು ಎಟಂ [illegible] ಸೋಟವಾದಾಗ ವಿಜ್ಞಾನಿಗಳು ಇನ್ನೈದು ವರ್ಷಗಳಲ್ಲಿ ಎಲ್ಲಾ ದೇಶಗಳಲ್ಲೂ ಇಂತಹ [illegible] ಗಳು ಕಂಡುಹಿಡಿಯಲ್ಪಡುವವೆಂದು ಭವಿಷ್ಯ ಹೇಳಿದ್ದರು. ಎಟಂ ಬೊಂಬಿನ ಪ್ರಥಮ ಪ್ರಯೋಗ ಕೆಲಿಫೋರ್ನಿಯದ ಒಂದು ಮರುಭೂಮಿಯಲ್ಲಾಗಿ ಇಂದಿಗೆ ವರ್ಷವೆರಡಾದುವು. ಮುಂದೆ ಒಂದೆರಡು ಇಲ್ಲವೆ ಹೆಚ್ಚು ಜನಾಂಗಗಳ ಹತ್ತಿರ ಇಂತಹ ಬೊಂಬು ಇದೆಯೆಂದಾದರೆ ಆಗ ಪರಿಸ್ಥಿತಿಯು ಸಂಪೂರ್ಣ ಬದಲಾಗುವುದು.

ಆಗ ಯುದ್ಧವು ಕೇವಲ ಸೈನ್ಯಗಳ ಒಂದು ಗುದ್ದಾಟವಾಗಿರದೆ ಇನ್ನಷ್ಟು ಭೀಕರವಾಗುವುದು. ಈಗಾಗಲೇ ಕೆಲವು ಶಕ್ತಿ ರಾಷ್ಟ್ರಗಳ ಬತ್ತಳಿಕೆಯಲ್ಲಿರುವುವೆಂದು ಹೇಳಲ್ಪಟ್ಟ ರೋಗಾಣು ಪ್ರಸಾರಕ ಬೊಂಬು, ಮೃತ್ಯುಕಿರಣ ಪ್ರಸಾರಕ ಬೊಂಬು, ರೇಡಿಯೋ ಕಿರಣ ವಿಧ್ವಂಸಕಗಳು ಇವೇ ಮೊದಲಾದುವೂ ಉಪಯೋಗಿಸಲ್ಪಟ್ಟು ಹಿಡಿದ ದೇಶವನ್ನು ಆಕ್ರಮಿಸಲು ಒಂದು ಸೈನ್ಯವಾದರೂ ಉಳಿಯಲಾರದು.

ಅಂಕೆ ಸಂಖ್ಯೆಗಳು

ಈ ಕೆಳಗಿನ ಸಂಗತಿಗಳನ್ನು ಪರಿಶಿಲೀಸಿರಿ. ಈಗಿರುವ ಸಿಡಿಮದ್ದಿನ ಬೊಂಬಿಗಿಂತ ಮೂರು ಮಿಲಿಯ ಪಾಲಷ್ಟು ಹೆಚ್ಚು ಶಕ್ತಿ ಚೈತನ್ಯವನ್ನು ಎಟಂ ಬೊಂಬು ಉತ್ಪಾದಿಸುವುದು. ಇನ್ನು ಹೊಸದಾಗಿ ರಚಿಸಲ್ಪಡುವವುಗಳಲ್ಲಿ ಇನ್ನು ನೂರು ಏಕೆ ಸಾವಿರ ಪಾಲಷ್ಟು ಹೆಚ್ಚು ವಿಧ್ವಂಸಕ ಶಕ್ತಿಯಿರಬಹುದು. ಸಿಡಿಮದ್ದುಗಳ ಬೊಂಬಿಗಿಂತ ಕಮ್ಮಿ ಖರ್ಚು ಮತ್ತು ಸುಲಭ ವಿಧಾನಗಳಲ್ಲಿ ಮತ್ತು ತುಂಬಾ ಸಂಖ್ಯೆಯಲ್ಲಿ ಕೂಡಾ ಅವು ಮಾಡಲ್ಪಡಬಹುದು.

ಎಟಂ ಬೊಂಬನ್ನು ಆದಾಗಲೇ ಪ್ರಾರಂಭಿಸಿದ ಕೀರ್ತಿ ಅಮೇರಿಕಕ್ಕೆ ಸಲ್ಲುತ್ತದೆ. ಅದರ ಸಂಬಂಧವಾದ ರಹಸ್ಯಗಳೆಲ್ಲವೂ ಮತ ದಸ್ಸು ಕಾರ್ಯರೂಪಕ್ಕೆ ತರುವದ ಬೇಕಾದ ಐಶ್ವರ್ಯವೂ ಆ ದೇಶದ ಕೈಯಲ್ಲಿದೆ ಮಾತವಲ್ಲ ಇನ್ನು ಹೆಚ್ಚಿದೆ. ಆದರೆ ಬೇರೆ ಜನಾಂಗಗಳು ಈ ಗುಟ್ಟನ್ನು ವಶಪಡಿಸಿಕೊಳ್ಳಲು ಅಸಾಧ್ಯವೆಂಬಿಲ್ಲ. ಈ ಸಂದರ್ಭದಲ್ಲಿ [illegible] ಆದರ ರಚನೆಗೆ ತೊಡಗಲು [illegible]. ಈಗಾಗಲೇ ಓರ್ವ [illegible] ಸಂಶೋಧನಾಧಿಕಾರಿಗಳು ಅಮೇರಿಕದಂತಹ [illegible] ಬೊಂಬಿನ [illegible] ಶಕ್ತಿಯುಳ್ಳ [illegible] ಬಿನ [illegible] ಜಗತ್ತಿಗೆ [illegible].

[illegible] ಪತ್ರಿಕೆ [illegible] ವರ್ಷವುಳ್ಳ [illegible] 30 ಕೋಟಿ [illegible] ಒಂದು [illegible] ವರ್ಷ [illegible] ಅದಕ್ಕೆ 30 ಕೋಟಿ [illegible] 4 [illegible] 100 ಎಟಂ ಬೊಂಬುಗಳನ್ನು ಪ್ರತಿ ವರ್ಷ ತಯಾರಿಸ [illegible] ಈಗಾಗಲೇ [illegible].

[illegible] ಹಾರುವ [illegible] ಬೊಂಬು ವಿಮಾನಗಳಲ್ಲೊ, ಇಲ್ಲವೆ [illegible] ನಿಯಂತ್ರಿಕ ಆಕಾಶ ವಾಹನಗಳಲ್ಲೂ ಬೇಕಾದಲ್ಲಿಗೆ ಬೀಳಿಸಲೂ ಸಾಧ್ಯವಿದೆ. ಇಲ್ಲವೆ ಶತ್ರು ಪ್ರದೇಶದಲ್ಲಿ ಮೊದಲೇ ಗುಪ್ತವಾಗಿರಿಸಿರುವ ಈ ಎಟಂ ಬೊಂಬುಗಳನ್ನು ಮತ್ತೆ ರೇಡಿಯೋ ವಿದ್ಯುತ್ ಕಿರಣಗಳಿಂದ ಸ್ಫೋಟಗೊಳಿಸಬಹುದೆಂದು ಕೆಲವು ಅಮೇರಿಕನ್ ತಜ್ಞರು ಈಗಲೇ ತಮ್ಮ ಕೆಲವು ಭಾಷಣಗಳಲ್ಲಿ ತಿಳಿಸಿರುವರು. ಆದರೆ ಹೆಚ್ಚು ವಿಶಾಲ ಭೂಪ್ರದೇಶವಿರುವ ಶತ್ರು ದೇಶದಲ್ಲಿ ಇಂತಹ ವಾಹನಗಳನ್ನು ತಡೆಯುವ ಪ್ರತಿವಿರೋಧಕ ವಾಹನಗಳನ್ನು ಎದುರಿಸಬೇಕಾದಲ್ಲಿ ಹಿರೋಶಿಯಾದಂತಹ ದುರಂತವನ್ನುಂಟು ಮಾಡಲು ಸಾಧ್ಯವಾಗಲಿಕ್ಕಿಲ್ಲ. ಮಾತ್ರವಲ್ಲ ಈಗಿನ ರಾಡಾರ್ ಉಪಕರಣದಿಂದ ಅತಿ ದೂರದಲ್ಲಿನ ಶತ್ರು ವಿಮಾನಗಳನ್ನು ಪತ್ತೆಹಚ್ಚಬಹುದು. ಆದರೆ ಇತ್ತೀಚೆಗೆ ದೊಡ್ಡ ನಗರಗಳಲ್ಲಿನ ಕಟ್ಟಡಗಳು ಎಟಂ ಬೊಂಬಿನಿಂದ ಹಾಳಾಗದಂತೆ ರಕ್ಷಿಸುವ ಒಂದು ಏರ್ಪಾಡೂ ಕಂಡುಹಿಡಿಯಲ್ಪಟ್ಟಿದೆ. ಆದರ ಇದರಿಂದ ಕಟ್ಟಡಗಳು ಉಳಿದರೂ ಅದರೊಳಗಿನ ಜನರು ಮಾತ್ರ ಜೀವಂತ ಉಳಿಯಲಾರರು.

ವಿನಾಶದ ದಾರಿಗಳು

ಈಗ ನಿಷ್ಪ್ರಯೋಜಕರಣದ ಉದ್ದೇಶವಾದರೂ [illegible] ಕೇವಲ ಶತ್ರು ಪ್ರದೇಶಗಳನ್ನು [illegible] ಅವರ [illegible] ಯುದ್ಧ [illegible] ಎಟಂ ಬೊಂಬಿನಿಂದ ಸಸ್ಯವರ್ಗಕ್ಕೆ [illegible] ಹಾನಿಯು ವಿಶೇಷವಾಗಿದೆ. [illegible] ಪ್ರದೇಶದಲ್ಲಿ ಸಸ್ಯಗಳು ಬೆಳೆಯಲಾರವು. [illegible] ಮಣ್ಣಾದರೂ ವಿಷಭರಿತವಾದ [illegible] ಕಿರಣಗಳ ರಾಸಾಯನಿಕ ಕ್ರಿಯೆಯಿಂದ ವಿಷಪೂರಿತವಾಗುವುದು. ಇಂತಹ ಪ್ರದೇಶವು [illegible].

[illegible] ರೋಗಾಣು ಪ್ರಸಾರಕ [illegible] ಮತ್ತು [illegible] ಕದ್ದಂತಹುಗಳಾಗಿವೆಯು. [illegible] ಮಾತ್ರವಲ್ಲ ಸಸ್ಯಗಳಿಗೂ ಪ್ರಾಣಿಗಳಿಗೂ ಈ ರೋಗಗಳು ಹಾನಿಕಾರಕವಾಗಿದೆಯಂತೆ.

ಈ ರೋಗಾಣು ಪ್ರಸಾರಕಗಳ ಇನ್ನೊಂದು ಭೀತಿ ಇದೆ. ಇದ ಪ್ರಸಾರದ [illegible] ರಿಗೂ ತಗಲಬಹುದು. 1918ರಲ್ಲಿ ಹಬ್ಬಿದ ರಾತೆ ಜ್ವರದ ಒಂದು ಜಾಡ್ಯ ಶತ್ರು ಮಿತ್ರರಿಬ್ಬರನ್ನು ಪೀಡಿಸಿತ್ತು. ಯುರೋಪಿನಿಂದ ಅದು ಅಮೇರಿಕಕ್ಕೆ ಹೋಯಿತು. ಭಾರತದಲ್ಲಿ ಆ ಜ್ವರದಿಂದ 4 ವರ್ಷದ ಯುದ್ಧದಲ್ಲಿ ಸತ್ತವರಿಗಿಂತ ಹೆಚ್ಚು ಮಂದಿ ಮಡಿದರು.

ಇನ್ನು ಅತೀ ಭೀಕರವಾದ ರಾಸಾಯನಿಕ ವಸ್ತುಗಳ ಯುದ್ಧವಿದೆ. ಇದರಲ್ಲಿ ಹೆಚ್ಚಾಗಿ ವಿಷ ವಾಯುಗಳ ಪ್ರಯೋಗವು ಮುಖ್ಯವಾದುದು. ಇದುತನಕ ಉಪಯೋಗಿಸಲ್ಪಟ್ಟವು ಈಗ ಕಂಡುಹಿಡಿಯಲ್ಪಟ್ಟವುಗಳಿಗಿಂತ ತೀರ ನಮ್ರವಾದುದು. ಈಗಾಗಲೇ ಗದ್ದೆಗಳೊಳಗಿನ ಕಳೆಗಳನ್ನು (ಬೆಳೆಯ ಗಿಡಗಳಿಗೆ ಹಾನಿಯಾಗದಂತೆ) ಕೊಲ್ಲುವ ಒಂದು ತರದ ದ್ರಾವಕ ಕಂಡುಹಿಡಿಯಲ್ಪಟ್ಟಿದೆ. ಇದನ್ನು ಪ್ರಾಣಿಗಳ ಮೇಲೆ ಉಪಯೋಗಿಸಿದರೆ ಕೈಕಾಲು ಬಾತುವುದು, ದವಡೆ ಊದುವುದು ಮುಂತಾದ ವಿಕಾರಗಳಾಗುತ್ತಿವೆಯಂತೆ. ಇದನ್ನೇ ಪರಿಪೂರ್ಣಗೊಳಿಸಿದರೆ ಎಲ್ಲಾ ಸಸ್ಯ ಮತ್ತು ಪ್ರಾಣಿ ವರ್ಗಕ್ಕೆ ಮೃತ್ಯುಪ್ರಾಯವಾಗುವ ಒಂದು ವಿಷ ಧಾತು ಇಲ್ಲವೆ ಆಸಿಲವು ಸಂಶೋಧಿಸುವ ಸಂದರ್ಭವು ಅಸಂಭವವಲ್ಲ.

ಹೀಗೆ ಶತ್ರು ಕೇಂದ್ರಗಳನ್ನು ಎಟಂ ಬೊಂಬಿನಂತಹ ಕ್ರೂರ ಶಕ್ತಿಯಿಂದಲೂ, ರೋಗಾಣು ಪ್ರಸಾರಗಳ ನಿರ್ದಾಕ್ಷಿಣ್ಯ ಜಾಡ್ಯ ಸಾಂಕ್ರಾಮಿಕದಿಂದಲೂ ಮಾನವನು ತನ್ನ ವರ್ಗವನ್ನು ತಾನೇ ಧ್ವಂಸಮಾಡಲು ಮುಂದುವರಿದಿದ್ದಾನೆ. ಈ ಪರಿಸ್ಥಿತಿಯಲ್ಲಿ ಸೈನ್ಯ ನೌಕ ವಿಮಾನದಳಗಳ ಪಾತ್ರವು ಕಿರಿತಾಗ [illegible] ದಾಗುವುದು.

ಇಷ್ಟೆಲ್ಲಾ [illegible] ಉದ್ದೇಶವೇನು? [illegible] ತನಕದ ನಮ್ಮ ಅನುಭವದಿಂದ [illegible] ಜರ್ಝರಿತವಾದ [illegible] ಜನಾಂಗಗಳನ್ನು ಆಳುವುದು ಅದೆಷ್ಟು ಖರ್ಚಿನ ಕೆಲಸವೆಂದು ನಮಗೆ ತಿಳಿದಿದೆ. ಶತ್ರುವಿನ ಒಂದು [illegible] ಕೇಂದ್ರವನ್ನು ಕಡಿದು [illegible] ಸ್ಥಾಪಿಸಿ [illegible] ಬೇಕಾಗುವುದು. [illegible] ನಿಂದ [illegible] ರಣರಂಗದ [illegible] ದೃಶ್ಯಗಳು [illegible].

[illegible] ಅಮೇರಿಕಗಳು ಏನು ಮಾಡಬಲ್ಲವೆಂಬುದನ್ನು ವಿವರಿಸದೆ ಸದ್ಯಕ್ಕೆ ಚಿಕ್ಕ ದ್ವೀಪವಾದ ಇಂಗ್ಲೆಂಡಿನ ಅವಸ್ಥೆಯೇನೆಂದು ಯೋಚಿಸೋಣ. ಇಂಗ್ಲೆಂಡಿನ ಮೇಲೆ ದಾಳಿ ಮಾಡುವವರಿಗೆ ಒಳ್ಳೇ ಸುಸಂಧರ್ಭ ಬ್ರಿಟನ್ನು ಎಂದೆಂದಿಗೂ ಯಾರ ಮೇಲೂ ದಾಳಿ ಮಾಡಲು ಸಮರ್ಥವಾಗಿಲ್ಲ. [illegible] ಐಸ್‌ಲೆಂಡ್‌ಗಳಂತೆ ಇಂಗ್ಲೆಂಡು ಅಮೇರಿಕದ ಮುಂಗಡ ಸೈನ್ಯ ರಾಣ್ಯವಾಗುವುದು. ಎಟಂ ವಿಜ್ಞಾನಿಗಳ ಒಂದು ಪತ್ರಿಕೆಯಲ್ಲಿ ಈ ಕುರಿತು ಹೀಗೆ ಬರೆದಿದೆ "ನಮ್ಮ ಮುಂಗಡ ರಾಣ್ಯ ದೇಶಗಳು ಮೊದಲು ವಿನಾಶಕ್ಕೆ ಗುರಿಯಾಗುವವು. ಆದುದರಿಂದ ಎಲ್ಲಿ ಅಮೇರಿಕವು ತನ್ನ ಮುಂಗಡ ಸೈನ್ಯ ರಾಣ್ಯಗಳನ್ನಿಡುವುದೊ ಆ ದೇಶಗಳ ಸಂಪೂರ್ಣ ವಿನಾಶದ ಹೊಣೆಗಾರಿಕೆಯೂ ಅವರ ಮೇಲಿದೆ."

ಸಯಾಮದ ನರ್ತಕಿಯರ ಉಡುಪಿನಲ್ಲಿ ಒಂದೇ ಒಂದು ಗುಬ್ಬಿಯಾಗಲಿ ಕೊಕ್ಕೆಯಾಗಲಿ ಇಲ್ಲ. ನಾಟ್ಯ ಕಾರ್ಯಕ್ರಮ ಪ್ರಾರಂಭವಾಗುವ ಮೊದಲು ನರ್ತಕಿಯರ ದೇಹಕ್ಕೆ ಈ ಉಡುಪುಗಳನ್ನು ನಿಂತಲ್ಲೇ ಹೊಲಿಯುತ್ತಾರೆ.



ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನ ಉಪಯೋಗಿಸಿರಿ ಅಷ್ಟು ಸುಖಕರ- ಅಷ್ಟು ಚರ್ಮ ಮೃದುಕರ-
ಕುಟಿಕೂರ ಟಾಲ್ಕಮ್ ಪೌಡರ್
CUTICURA TALCUM POWDER

ಸ್ವದೇಶ ವಾರ್ತೆಗಳು

ಸರ್ ಮಿರ್ಜಾ ಇಸ್ಮಾಯೀಲರು ಹೈದರಾಬಾದಿನ ದಿವಾನಗಿರಿ ಬಿಟ್ಟನಂತರ ಅಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದುಷ್ಕೃತ್ಯಗಳು ಹೆಚ್ಚಾಗಿವೆಯೆಂದೂ, ಹಿಂದೂ ಸಂಸ್ಥಾನಗಳ ರಾಜರು ಹೈದರಾಬಾದಿನ ಹಿಂದೂಗಳನ್ನು ರಕ್ಷಣೆಮಾಡುವ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವಂತೆ ಮಾಡಬೇಕೆಂದೂ ಸಂಸ್ಥಾನ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಭೂಪಾಳಂ ಚಂದ್ರಶೇಖರಯ್ಯನವರು ಒಂದು ಪ್ರಕಟಣೆಯಲ್ಲಿ ತಿಳಿಸುತ್ತಾರೆ

◆

ಸಿಲಿಟ್‌ನಲ್ಲಿ ಮತಗಣನೆಯಾದಾಗ ನಡೆದ ಅರಾಜಕತೆಗೆ ಅಲ್ಲಿನ ಗವರ್ನರರೇ ಹೊಣೆ ಎಂದೂ, ಅವರು ಸಾಕಷ್ಟು ಭದ್ರತೆಯ ವ್ಯವಸ್ಥೆ ಮಾಡಿಲ್ಲವೆಂದೂ ಅಲ್ಲಿನ ಒಬ್ಬ ಪ್ರಮುಖ ಕೊಂಗ್ರೆಸ್ ಮುಖಂಡರು ಪ್ರಕಟಿಸಿದ್ದಾರೆ.

◆

ಪಾಕಿಸ್ಥಾನ ಪ್ರದೇಶಗಳಲ್ಲಿನ ಕೊಂಗ್ರೆಸ್ ಸಂಸ್ಥೆಗಳನ್ನು ವಿಸರ್ಜಿಸಬೇಕೆಂದೂ ಅವುಗಳ ಸ್ಥಾನದಲ್ಲಿ ಎಲ್ಲಾ ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ ಧ್ಯೇಯದ ಒಂದು ಹೊಸ ಸಂಸ್ಥೆಯನ್ನು ಸ್ಥಾಪಿಸಬೇಕೆಂದೂ ಸರ್ದಾರ್ ಶಾಂತಸಿಂಗರು ಒಂದು ಸೂಚನೆ ಕೊಟ್ಟಿದ್ದಾರೆ

◆

ಮತಗಣನೆ ನಡೆಯುವುದಾದರೆ ಪಾಕಿಸ್ಥಾನೋ, ಪಟಾಣಿಸ್ಥಾನೋ ಎಂಬ ವಿಷಯದಲ್ಲಿ ನಡೆಯಬೇಕು ಆಗ ಪಾಕಿಸ್ಥಾನವಾದಿಗಳು ಗೆದ್ದರೆ ತಾನೂ ಲೀಗಿಗೆ ಸೇರುವೆನೆಂದು ಖಾನ್ ಅಬ್ದುಲ್ ಗಫಾರ್‌ಖಾನರು ಒಂದು ಪ್ರಕಟಣೆಯಲ್ಲಿ ತಿಳಿಸುತ್ತಾರೆ.

◆

ಫಿಲಿಪ್ಪೈನ್ ದ್ವೀಪದಿಂದ ನಮ್ಮ ದೇಶಕ್ಕೆ 8 ಸಾವಿರ ಟನ್ ತೆಂಗಿನೆಣ್ಣೆ ಸದ್ಯದಲ್ಲೇ ಬರಲಿದೆ.

◆

"ಡೊಮಿನಿಯನುಗಳಿಗೂ ಸಂಸ್ಥಾನಗಳಿಗೂ ಭೇದವನ್ನು ತಂದು ಭಿನ್ನಾಭಿಪ್ರಾಯವನ್ನು ಹೆಚ್ಚು ಮಾಡುವುದು ತರವಲ್ಲ ಬ್ರಿಟಿಷರು ಐಕ್ಯತೆಯನ್ನು ಒಯಸುವರು ಹೀಗೇಕೆ ಮಾಡಿದರು? ಬಿರುದಿನ ವಿಷಯವನ್ನು ಎಟ್ಲಿಯವರೊಂದಿಗೆ ಪ್ರತ್ಯೇಕವಾಗಿ ಪ್ರಸ್ತಾಪಿಸಬೇಕೆಂದು ಡಾ| ಅಂಬೇಡ್ಕರರು ಹೇಳಿದ್ದಾರೆ

◆

ಭಾರತದಿಂದ ಬ್ರಿಟಿಷ್ ಅಧಿಕಾರವು ನಿವೃತ್ತಿಯಾದೊಡನೆ ಪಂಡಿತ್ ನೆಹರುರವರ ಸರಕಾರಕ್ಕೆ ತಾವು ಸಂಪೂರ್ಣ ಬೆಂಬಲ ಕೊಡುವೆವಾಗಿಯೂ, ಅದರ ಅಭಿವೃದ್ಧಿ ಬಗ್ಗೆ ಟೀಕಿಸಿ ಸೂತ್ರ ಸಲಹೆಗಳನ್ನು ಕೊಡುವುದಾಗಿಯೂ ಸೋಷಲಿಸ್ಟ್ ಮುಖಂಡ ಜೈಪ್ರಕಾಶ್ ನಾರಾಯಣರು ತಿಳಿಸಿದ್ದಾರೆ

ಈಗಿರುವ ಕೊಂಗ್ರೆಸ್ ತ್ರಿವರ್ಣ ಧ್ವಜದಲ್ಲಿಯೇ ಚರಕದ ಗುರುತಿಗೆ ಬದಲಾಗಿ ಚಕ್ರದ ಗುರುತನ್ನು ಹಾಕಿ ಸ್ವತಂತ್ರ ಭಾರತದ ರಾಷ್ಟ್ರಧ್ವಜವಾಗಿ ಅಂಗೀಕರಿಸಬೇಕೆಂದು ರಾಜ್ಯಾಂಗ ರಚನೆ ಸಭೆಯ ರಾಷ್ಟ್ರಧ್ವಜ ನಿಷ್ಕರ್ಷೆ ಸಮಿತಿಯವರು ತೀರ್ಮಾನಿಸಿದ್ದಾರಂತೆ.

ವಾರದ ವಿಜ್ಞಾನ ವಾರ್ತೆಗಳು

ಆನೆಕಾಲಿಗೆ ಔಷಧಿ

ಆನೆಕಾಲಿನ ರೋಗವು ಒಂದು ಭೀಕರವಾದ ಉಷ್ಣವಲಯ ವ್ಯಾಧಿ. ನಮ್ಮ ದೇಶದ ಕೊಚ್ಚಿನ್, ಮಲಬಾರ್ ಮತ್ತು ದಕ್ಷಿಣ ಕನ್ನಡಗಳಲ್ಲಿ ಇದು ತುಂಬಾ ಹಾವಳಿಗೈಯುತ್ತಿದೆ. ಈಗ ಇದರಿಂದ ನರಳುವವರಿಗೆ ಹೊಸ ಆಶಾಕಿರಣವೊಂದು ಮೂಡಿದೆ.

ಸಂಯುಕ್ತ ಅಮೇರಿಕದ ವೆಸ್ಟರ್ನ್ ರಿಸರ್ವ್ ಎಂಬ ವಿಶ್ವವಿದ್ಯಾಲಯದ ವಿಜ್ಞಾನಿಗಳು ಒಂದು ತರದ ಸಸ್ಯ ಮತ್ತು ರಾಸಾಯನಿಕ ಧಾತುವಿನಿಂದ (ಇದನ್ನು ಬಣ್ಣದ ಫೊಟೊ ಚಿತ್ರಗಳನ್ನು ಮಾಡಲು ಉಪಯೋಗಿಸುತ್ತಾರೆ) ತಯಾರಿಸಿದ ಔಷಧಿಯು ಆನೆಕಾಲು ರೋಗದ ಮೇಲೆ ಉತ್ತಮ ಪರಿಣಾಮಕಾರಿಯಾಗಿದೆಯೆಂದು ತಿಳಿಸುತ್ತಾರೆ. ಆನೆಕಾಲನ್ನುಂಟುಮಾಡುವ ಫೈಲೇರಿಯಾ ರೋಗಾಣುಗಳನ್ನು ಇಲಿಗಳ ದೇಹದಲ್ಲಿ ತುಂಬಿಸಿ ಮೇಲ್ಕಂಡ ಔಷಧಿಯಿಂದ ಚಿಕಿತ್ಸೆ ಮಾಡಿದಾಗ ಇಲಿಗಳ ದೇಹದೊಳಗಿನ ಆ ರೋಗಾಣುಗಳೆಲ್ಲ ಸಂಪೂರ್ಣ ನಾಶವಾಗಿವೆಯಂತೆ ಸದ್ಯದಲ್ಲೇ ಈ ಔಷಧವು ಪರಿಪೂರ್ಣಗೊಳಿಸಲ್ಪಟ್ಟು ನರಳುವವರ ಸಹಾಯಕ್ಕೆ ಬರಬಹುದೆಂದು ಹಾರೈಕೆಯಿದೆ

ಹೃತ್ಕೋಶ ಸೀಳುವುದು

ಸಂಯುಕ್ತ ಅಮೇರಿಕದ ಟೆನೆಸಿ ಪ್ರಾಂತ್ಯದ ಒಂದು ಆಸ್ಪತ್ರೆಯ ಶಸ್ತ್ರ ಚಿಕಿತ್ಸಕ ವೈದ್ಯರು ಒರ್ವ ರೋಗಿಯ ಹೃತ್ಕೋಶವನ್ನು ಕಿತ್ತು ಕೈಯಲ್ಲಿ ಹಿಡಕೊಂಡರು ಮತ್ತೆ ಅದನ್ನು ಹಣ್ಣಿನ ಸಿಪ್ಪೆ ತೆಗೆದಂತೆ ಸೀಳಿ ಅದರ ಸುತ್ತಲೂ ಬೆಳೆದಿರುವ ವಿಪರೀತ ಮಾಂಸ ಪದರನ್ನು ಹರಿದು ತೆಗೆದರು ಈ ವಿಧಾನವು ಅತ್ಯಂತ ಅಪಾಯಕರವಾದರೂ ಅದರಿಂದ ಜೋನ್ ಬಿಜಸ್ ಎಂಬ ನೌಕಾಧಿಕಾರಿಯೊಬ್ಬನ ಜೀವ ಬದುಕಿತು

ಬ್ರಿಜಿಸನ ಹೃದಯ ಮಿಡಿತವು ಸುಕ್ರಮದಿಂದಿರಲಿಲ್ಲ ಹೃತ್ಕೋಷದ ಸುತ್ತಲೂ ಗಟ್ಟಿಯಾದ ಮಾಂಸದ ಆವರಣವೊಂದು ಅದನ್ನು ಗಟ್ಟಿಯಾಗಿ ಮಾಡಿದ್ದವು ಮೇಲ್ಕಂಡ ವೈದರು ಬ್ರಿಜಸನ ಎದೆಯನ್ನು ತೆರೆದು ಹೃತ್ಕೋಶವನ್ನು ಕೈಯಲ್ಲಿ ಹಿಡಿದು ಗಟ್ಟಿಯಾದ ಗ್ರಂಥಿಗಳನ್ನು ಹರಿದುಹಾಕಿ ಪುನಃ ಜೋಡಿಸಿದರು ಇದಕ್ಕೆ 4 ಗಂಟೆಗಳ ಅವಧಿ ಹಿಡಿಯಿತು

ಬೇಕಾದಾಗ ಬೆಳೆಗೆ ನೀರು

ಮಣ್ಣಿನ ತೇವವು ಎಷ್ಟಿದೆ, ಗಿಡಗಳಿಗೆ ನೀರಿನ ಆವಶ್ಯಕತೆ ಯಾವಾಗ ಉಂಟಾಗುತ್ತದೆ ಎಂಬುದನ್ನು ಕಂಡುಹಿಡಿಯುವ ಒಂದು ಉಪಕರಣವನ್ನು ಒರ್ವ ಆಸ್ಟ್ರೇಲಿಯದ ಇಂಜಿನಿಯರರು ಕಂಡುಹಿಡಿದಿದ್ದಾರೆ. ಹೊಲಕ್ಕೆ ನೀರು ಬೇಕೆಂದಿರುವಾಗ ಈ ಉಪಕರಣದೊಳಗಿನ ಮುಳ್ಳು ತನ್ನಷ್ಟಕ್ಕೆ ಚಲಿಸಿ ಹೊಲದ ಮೇಲಿನಿಂದ ನೀರು ಬೀಳುವಂತೆ ಏರ್ಪಡಿಸಿರುವ ನಳಿಗೆಗಳಿಂದ ನೀರು ಸುರಿಯುವಂತೆ ತನ್ನಷ್ಟಕ್ಕೆ ಆಗುವ ಏರ್ಪಾಡೂ ಇದೆ.

ಭಾರತೀಯ ಗಿಡಗಳ ಪರೀಕ್ಷೆ

ಆಯುರ್ವೇದ ಶಾಸ್ತ್ರದಲ್ಲಿ ಉತ್ತಮ ವ್ಯಾಧಿ ನಿವಾರಕ ಔಷಧಿಗಳನ್ನೀಯುವಂತಹುಗಳೆಂದು ಹೇಳಲ್ಪಟ್ಟ ಸುಮಾರು 100 ಭಾರತೀಯ ಗಿಡ ಮೂಲಿಕೆಗಳ ಸಂಶೋಧನೆಯು ಬೆಂಗಳೂರಿನ ಇಂಡಿಯನ್ ಇನಸ್ಟಿಟ್ಯೂಟ್ ಆಫ್ ಸಾಯಿನ್ಸ್ ಇದರ ಪ್ರಯೋಗಶಾಲೆಯಲ್ಲಿ ಪರಿಶೀಲಿಸಲ್ಪಡುತ್ತವೆ ಇವುಗಳಲ್ಲಿ ಸುಮಾರು 29 ಗಿಡಗಳ ಸಾರಗಳು ಅತ್ಯುಪಯುಕ್ತವೆಂದು ಈಗಾಗಲೇ ಅನುಭವಕ್ಕೆ ಬಂದಿದೆ

ನೂತನ ರಜತ ಪರದೆ

ಚಲಚಿತ್ರ ಮಂದಿರದಲ್ಲಿ ಕೂತ ಪ್ರೇಕ್ಷಕರೆಲ್ಲರಿಗೂ—ಅವರು ಎಲ್ಲಿ ಕುಳಿತಿದ್ದರೂ ಚಿತ್ರವು ಒಂದೇ ಸಮನಾಗಿ ಮಧ್ಯಭಾಗದಲ್ಲಿ ಕುಳಿತರೆ ಹೇಗೆ ಕಾಣುವುದೊ ಹಾಗೆಯೇ, ಕಾಣುವಂತಾಗುವ ಹೊಸ ಚಿತ್ರ ಪರದೆಯೊಂದನ್ನು ಕಂಡುಹಿಡಿದಿರುವರು. ಈಗ ಸದ್ಯಕ್ಕೆ ಬದಿಗಳಲ್ಲಿ ಕುಳಿತವರಿಗೆ ಚಿತ್ರಗಳು ಓರೆಕೋರೆಯಾಗಿ, ಚಪ್ಪಟೆಯಾಗಿ ಕಾಣುವ ಕೊರತೆಯು ಇದರಿಂದ ನೀಗುವುದು

ರೋಗಾಣು ಬೊಂಬು

ಮುಂದಿನ ಯುದ್ಧದಲ್ಲಿ ರೋಗಾಣುಗಳನ್ನು ಪಸಾರಮಾಡುವ ಬೊಂಬುಗಳುಪಯೋಗಿಸಲಾಗುವುದೆಂದು ಇತ್ತೀಚೆಗೆ ಬಹಳವಾಗಿ ಹೇಳಲ್ಪಡುತ್ತಿವೆಯಷ್ಟೆ ಆದರೆ ಕುಷ್ಟ, ಕ್ಷಯ, ಪೈಲಗಜಿ ಇವೇ ಮೊದಲಾದ ಕೆಲವು ನಿಧಾನ ಪ್ರಸಾರದ ರೋಗಾಣುಗಳನ್ನು ಈ ಬೊಂಬುಗಳಿಂದ ಹರಡಲಿಕ್ಕಾಗುವುದಿಲ್ಲವಂತೆ ಆದರೆ ಪ್ಲೇಗು, ವಿಷಮಜ್ವರ ಇಂತಹ ರೋಗಗಳ ಅಣುಗಳನ್ನು ಹರಡಲು ಮಾತ್ರ ಸಾಧ್ಯವಿದೆ ಇವುಗಳನ್ನು ಜಲಾಶ್ರಯಗಳಲ್ಲಿ ಇಲ್ಲವೆ ಗಾಳಿಯಿಂದ ಪಸರಿಸಬಹುದು ಈ ಗಂಡಾಂತರಕ್ಕೆ ಪ್ರತಿಬಂಧಕವೂ ಕಂಡುಹಿಡಿಯಲು ಪ್ರಯತ್ನಗಳಾಗುತ್ತಿವೆ

KANARA COMMERCIAL BANK LTD.

PUTTUR

[H. O. Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ವಿದೇಶ ರಾಜಕೀಯ

ಗ್ರೀಸಿನಲ್ಲಿ ಸಾಮೂಹಿಕವಾಗಿ ದಸ್ತಗಿರಿ ಮಾಡಿರುವುದನ್ನು ಖಂಡಿಸಿ ಪ್ರಪಂಚ ಟ್ರೇಡ್ ಯೂನಿಯನ್ ಫೆಡರೇಶನಿನ ಸೆಕ್ರೆಟರಿಯವರು ಜನಾಂಗ ಸಂಘಕ್ಕೆ ಖಂಡನಾಪತ್ರ ಕಳುಹಿಸಿರುವರು. ಗ್ರೀಸ್ಸಿನಲ್ಲಿ ಸ್ವತಂತ್ರ ವಾತಾವರಣ ಕಲ್ಪಿಸುವಂತೆ ಸಾಮಾನ್ಯ ಆಡಳಿತವನ್ನೇರ್ಪಡಿಸಬೇಕೆಂದು ಅವರು ಕೋರಿದ್ದಾರೆ

★

ಪೆರೀಸ ಸಮ್ಮೇಳನಕ್ಕೆ ಹೋಗುವುದರಿಂದ ರಷ್ಯದ ಸ್ನೇಹಕ್ಕೆಡೆಯಾಗುವುದರಿಂದ ಜೆಕೊಸ್ಲೊವೇಕಿಯವು ತಾನು ಮೊದಲು ಮಾಡಿದ ತೀರ್ಮಾನವನ್ನು ಬದಲಾಯಿಸಿದೆ ಹಂಗೇರಿ ಅಲ್ಬೇನಿಯಗಳೂ ನಿರಾಕರಿಸಿವೆ ಫಿನ್‌ಲೆಂಡು ಇನ್ನೂ ಪರಿಶೀಲಿಸುತ್ತಿದೆ

★

ಇಟಲಿಯಲ್ಲಿ ಪ್ರಜಾಪ್ರತಿನಿಧಿ ಸರಕಾರವನ್ನು ಸ್ಥಾಪಿಸಲು ತೀವ ಪಕ್ಷಗಳೆಲ್ಲವು ಐಕ್ಯಮತ್ಯದಿಂದ ಸಂಘಟನೆ ಹೊಂದಿ ಚಳವಳ ನಡೆಸಬೇಕೆಂದು ಇಟಲಿಯ ಮಜೂರ ಪಕ್ಷದ ಕೇಂದ್ರ ಸಮಿತಿಯು ಕೇಳಿಕೊಂಡಿದೆ

★

ಚೀನದಲ್ಲಿ ಸೈನ್ಯಬಲವನ್ನು ಪರಿಪೂರ್ಣವಾಗಿ ಸಿದ್ಧಗೊಳಿಸುವುದಕ್ಕೆ ಸರಕಾರವು ಹೊಸ ಕಾನೂನು ಮಾಡಿದೆ ಈ ಕಾನೂನು ಸ್ಟೇಟ್ ಕೌನ್ಸಿಲಿನಲ್ಲಿ ಅಂಗೀಕಾರವಾಯಿತು ಚೀಣ ಕಮ್ಯೂನಿಸ್ಟರ ಮೇಲೆ ಸರಕಾರವು ಉಗ್ರ ಕಾರ್ಯಕ್ರಮ ನಡೆಸಲು ನಿರ್ಧರಿಸಿದೆ

★

ಬ್ರಿಟನ್ ಮತ್ತು ಜನಾಂಗ ಸಂಘವು ಪಲಸ್ತೈನಿನಲ್ಲಿ ಅರಬರ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ಒಪ್ಪದಿದ್ದಲ್ಲಿ ಬಲವಂದ ಮಾರ್ಗ ಆಗುವುದು ಅನಿವಾರ್ಯವೆಂದು ಅರಬ್ ಸಂಘದ ಉಪಾಧ್ಯಕ್ಷ ಜಮಾಲ್ ಬೇ ಅವರು ತಿಳಿಸುತ್ತ ಯೆಹೂದ್ಯರಿಗೆ ಸಂಬಂಧಪಟ್ಟದ್ದನ್ನೆಲ್ಲ ಬಹಿಷ್ಕರಿಸಬೇಕೆಂದೂ ಒಂದು ಅರಬರ ಸಭೆಗೆ ಸೂಚಿಸಿದರು

★

ಅಮೇರಿಕವು ಯುರೋಪಿನ ಆರ್ಥಿಕ ಅಭಿವೃದ್ಧಿಯ ಬಗ್ಗೆ ಮಾಡಿರುವ ಸಹಾಯ ಸಲಹೆಗಳಿಗೆ ಯುರೋಪು ದೇಶಗಳು ಬೆಂಬಲ ಕೊಡಬೇಕು ಯುರೋಪಿನ ಆರ್ಥಿಕ ಅಭಿವೃದ್ಧಿಯ ಪುನಃರ್ರಚನೆಯಲ್ಲಿ ಬ್ರಿಟನ್ ಫ್ರಾನ್ಸುಗಳು ಮುಖ್ಯ ಪಾತ್ರ ವಹಿಸಬೇಕಾಗಿದೆ ಹೀಗೆಂದು ಫ್ರಾನ್ಸಿನ ಮುಖ್ಯ ಪ್ರಧಾನಿ ರೆಮೆಡಿಯರರು ವಿನಂತಿಸಿಕೊಂಡಿದ್ದಾರೆ

★

ಪ್ರಪಂಚದ ಶಾಂತಿ ಸಾಧನೆಯಲ್ಲಿ ಅರ್ಜಂಟಿನವು ಎಲ್ಲಾ ಬೆಂಬಲವನ್ನೂ ಸಹಾಯವನ್ನೂ ನೀಡುವುದು ಪ್ರಪಂಚದ ಜನಾಂಗಗಳ ಸಹಾಯಕ್ಕಾಗಿ ಅರ್ಜಂಟಿನವು ತನ್ನ ಆಹಾರ ಸಾಮಾಗ್ರಿಗಳನ್ನು ಕೊಡುತ್ತಿದೆ ಎಂಬುದಾಗಿ ಅಲ್ಲಿನ ಅಧ್ಯಕ್ಷ ಪೆರಾನರು ಹೇಳಿಕೆಯಿತ್ತಿದ್ದಾರೆ

★

ಪೋಲೆಂಡಿಗೂ ರಷ್ಯಕ್ಕೂ ವಾಣಿಜ್ಯ ಒಪ್ಪಂದದ ಸಂಧಾನವು ಏರ್ಪಟ್ಟಿದೆ. ಪೋಲೆಂಡಿನ ವಾಣಿಜ್ಯ ಮಂಡಳದ ಡೈರೆಕ್ಟರರು ಒಪ್ಪಂದಕ್ಕೆ ಸಹಿಹಾಕಲು ರಷ್ಯಕ್ಕೆ ಹೋಗುವರು

★

ಜಿಲ್ಲಾ ಪರಿಚಯ

ನಿಧನ— ಮಂಗಳೂರು

ಸ್ಥಳೀಯ ಮೆ| ಕೊಂಚಾಡಿ ಅಪ್ಪಯ್ಯ ಶ್ಯಾನುಭಾಗ ಎಂಡ್ ಕೊ. ಅವರ ಪಾರ್ಟನರರಾದ ಶ್ರೀ ಉಳ್ಳಾಲ ಆನಂದ ಕಿಣಿಯವರು ಕಳೆದ ತಾ 13ರಂದು ಹೃದ್ರೋಗದಿಂದ ಕೊಡಿಯಾಲಬೈಲಿನ ತಮ್ಮ ಮನೆಯಲ್ಲಿ ಅಕಸ್ಮಾತ್ ದೈವಾಧೀನರಾದರೆಂದು ತಿಳಿಸಲು ವಿಷಾದವೆನಿಸುತ್ತಿದೆ ಅವರಿಗೆ ಸುಮಾರು 45 ವರ್ಷ ವಯಸ್ಸು ಮೃತರ ಆತ್ಮಕ್ಕೆ ಚಿರಶಾಂತಿ ಇರಲಿ!

ರಿಜಿಸ್ಟರ್ಡ್ ವಿವಾಹ

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರೂ, ಸ್ಥಳೀಯ ಡಿ ಸಿ ಯವರ್ ಸಂಸ್ಥೆಯ ಕಾರ್ಯದರ್ಶಿಗಳೂ ಆದ ಶ್ರೀ, ಕೆ ಎಲ್ ಎನ್ ರಾಯರ ವಿವಾಹವು, ಬಿಸೆಂಟ್ ಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ರಾಧಾ ಶೆಟ್ಟಿ ಅವರೊಡನೆ ಬಿಸೆಂಟ್ ಶಾಲೆಯಲ್ಲಿ ತಾ 6ರಂದು ವಿವಾಹಗಳ ರಜಿಸ್ಟ್ರಾರ್ ರಾ| ಬ| ಮಂಜಪ್ಪನವರ ನೇತೃತ್ವದಲ್ಲಿ ಜರಗಿತು

ವಾರ್ಧಾ ಶಿಕ್ಷಣ ಪದ್ಧತಿ ಮೇರೆಗೆ

ಉಪಾಧ್ಯಾಯರುಗಳಿಗೆ ತರಬೇತಿ ಕೊಡಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ಬರುವ ಆಗೋಸ್ತು ತಿಂಗಳ ಪ್ರಾರಂಭದಲ್ಲಿ, ಒಂದು ಮೂಲ ತರಬೇತಿ ಶಾಲೆ ತೆರೆಯಲ್ಪಡುವುದು ತರಬೇತಿಯ ಅವಧಿಯು ಎರಡು ವರ್ಷ ಮತ್ತು ತರಬೇತಿ ಹೊಂದುವವರಿಗೆ ಈ ಸಮಯದಲ್ಲಿ ತಿಂಗಳೊಂದರ ರೂ 18 ಸ್ಟೈಪೆಂಡು ಕೊಡಲಾಗುವುದು ಎಂಟನೇ ದರ್ಜೆ ಅಥವಾ ಅದಕ್ಕೆ ಮೇಲ್ಪಟ್ಟ ಪರೀಕ್ಷೆ ಪಾಸಾಗಿರುವವರು ಇದಕ್ಕೆ ಅರ್ಜಿ ಹಾಕಬಹುದು ತರಬೇತಿ ಆದ ಮೇಲೆ ಇವರು ಈ ತರಬೇತಿ ಶಾಲೆಯ ಸರಕಾರದ ಶಾಲೆಗಳಲ್ಲಿ ಕೆಲಸ ಮಾಡಬೇಕಾಗುವುದು ಅರ್ಜಿ ಫೋರ್ಮುಗಳನ್ನು ಡೈರಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ನುಂಗಾಂಬಕಂ, ಮದ್ರಾಸ್ ಇವರಿಂದ ಪಡೆದು ಅದು 15-7-47ರ ಒಳಗೆ ಅವರಿಗೆ ತಲಪುವ ಹಾಗೆ ಕಳುಹಿಸತಕ್ಕದ್ದಿತ್ತು ಈ ಟ್ರೈನಿಂಗ್ ಶಾಲೆಯು ಮೂಡಬಿದ್ರೆಯಲ್ಲಿ ತೆರೆಯಲ್ಪಡಲಿರುವುದೆಂದೂ ಅದಕ್ಕೆ ಎಸ್ ಎಸ್ ಎಲ್ ಸಿ ಪಾಸಾದವರು ಬಂದರೆ ಅವರಿಗೆ ಸೀನಿಯರು ಗ್ರೇಡು ಸರ್ಟಿಫಿಕೇಟು ಕೊಡಲಾಗುವುದೆಂದೂ ಮತ್ತು ಅರ್ಜಿ ಮದ್ರಾಸಿಗೆ ಮುಟ್ಟಬೇಕಾದ ತಾರೀಕನ್ನು ಕೆಲವೇ ದಿನಗಳ ವರೆಗೆ ಮುಂದುವರಿಸಬಹುದೆಂದೂ ತಿಳಿದುಬರುತ್ತದೆ

ಹೊಸ ಬೋನಸ್ ವ್ಯವಸ್ಥೆ

ರೈತರು, ತಾವು ಬೆಳೆಸುವ ಅಕ್ಕಿಯನ್ನು ಸರಕಾರಕ್ಕೊಪ್ಪಿಸುವ ಧಾರಣೆ ಹಾಗೂ ರೈತರಿಗೆ ಬೇಕಾಗುವ ಇತರ ಉಪಯುಕ್ತ ಪದಾರ್ಥಗಳ ಏರಿದ ಬೆಲೆ—ಇವುಗಳ ತಾರತಮ್ಯವನ್ನು ಸರಕಾರವು ಮನಗಂಡು ಹೊಸ ಬೋನಸ್ ವ್ಯವಸ್ಥೆಯೊಂದನ್ನು ಜಾರಿಗೆ ತರಲು ನಿರ್ಧರಿಸಿದೆ ಈ ವ್ಯವಸ್ಥೆಯಿಂದ, ರೈತರು ಇನ್ನಷ್ಟು ಆಹಾರ ಧಾನ್ಯಗಳನ್ನು ಬೆಳೆಸಲು ಉತ್ಸಾಹಗೊಂಡು, ತಮ್ಮ ಉಳಿಕೆಯನ್ನೆಲ್ಲ ಸ್ವಸಂತೋಷದಿಂದ ಸರಕಾರಕ್ಕೊಪ್ಪಿಸುವರೆಂದು ನಿರೀಕ್ಷಿಸಲಾಗಿದೆ ಆದರೆ, ಅಕ್ಕಿಯ ಪ್ರೊಕ್ಯೂರ್‌ಮೆಂಟ್ ಧಾರಣೆಯನ್ನೇ ಏರಿಸಲು ಸರಕಾರವು ಸಿದ್ಧವಿಲ್ಲ

ಹೊಸ ಬೋನಸ್ಸನ್ನು 6 ತಿಂಗಳಿಗೊಮ್ಮೆ ರೈತರಿಗೆ ಕೊಡುವ ವ್ಯವಸ್ಥೆ ಮಾಡಲಾಗುವುದು. ಬೋನಸ್ಸಿನ ಅರ್ಧಾಂಶ ವೆಚ್ಚವನ್ನು ಸರಕಾರವೂ ಉಳಿದರ್ಧವನ್ನು ಸಾರ್ವಜನಿಕರೂ ವಹಿಸುವರು ರೈತರಿಗೂ ಬೋನಸ್ಸಿನ ಹಣದ ಅರ್ಧಾಂಶ ಮೌಲ್ಯವನ್ನು ನೆಲಗಡಲೆ ಹಿಂಡಿ ಮೊದಲಾದ, ಗೊಬ್ಬರದ ರೂಪದಲ್ಲೂ ಉಳಿದರ್ಧವನ್ನು ರೊಕ್ಕ ರೂಪದಲ್ಲಿಯೂ ಕೊಡಲಾಗುವುದು. ಒಂದು ಮುಡಿ ಭತ್ತಕ್ಕೆ ರೂ. 1ರಂತೆ ಬೋನಸ್ ಕೊಡಲಾಗುವುದು

ಶ್ರೀಮತಿ ಕಮಲಾದೇವಿ

ಅವರು ಈ ಹೇಳಿಕೆಯನ್ನು ಪ್ರಕಟಿಸಿದ್ದಾರೆ 'ಸದ್ಯದ ಆರ್ಥಿಕ ಮುಗ್ಗಟ್ಟಿನಿಂದ ಉದ್ಭೂತವಾಗುವ ಮಜೂರ—ಮಾಲಕರೊಳಗಿನ ಹಲವಾರು ಬಿಕ್ಕಟ್ಟುಗಳಲ್ಲಿ ಸರಕಾರವು ಯೋಗ್ಯ ರೀತಿಯಿಂದ ವರ್ತಿಸಬೇಕಾಗಿದೆ ಇತ್ತಂಡಗಳಿಗೂ ಯೋಗ್ಯ ನ್ಯಾಯವನ್ನೊದಗಿಸುವುದು ಸರಕಾರದ ಮಾಧ್ಯಸ್ಥ ಮಂಡಲದ ಹೊಣೆ ದ ಕನ್ನಡ ಮತ್ತು ಮಲಬಾರುಗಳ ಬೀಡಿ ಮಜೂರರು ಕಳೆದ 1946ನೆಯ ಅಕ್ಟೋಬರದಲ್ಲಿ ತಮ್ಮ ಕಲವು ಕೇಳಿಕೆಗಳನ್ನು ಮುಂದಿಟ್ಟು ಮುಷ್ಕರ ಹೂಡಿದರು. ಕೊನೆಗೆ 47ನೆಯ ಫೆಬ್ರುವರಿ ತಿಂಗಳಲ್ಲಿ ಸರಕಾರವು ಈ ವಿವಾದದ ಮಾಧ್ಯಸ್ಥ ವಹಿಸಿ ಒಂದು ವಿಚಾರಣ ಸಮಿತಿ ನೇಮಿಸಿತು ಈ ಸಮಿತಿಯ ವಿಚಾರಣೆಯು ಎಪ್ರಿಲ್ ತಿಂಗಳಲ್ಲಿ ಕೊನೆಗೊಂಡು ತಮ್ಮ ವರದಿಯನ್ನು ಸರಕಾರಕ್ಕೆ ಒಪ್ಪಿಸಿದ್ದರೂ ಸರಕಾರ ಈ ತನಕವೂ ಮೌನವನ್ನೇ ತಾಳಿರುವುದು ವ್ಯಸನಕರ ಸರಕಾರವು ತಮ್ಮ ನ್ಯಾಯವಾದ ಕೇಳಿಕೆಗಳನ್ನು ಪೂರೈಸಿಕೊಡುವುದೆಂದು ಮಜೂರರಿಗಿದ್ದ ವಿಶ್ವಾಸವು ಇದರಿಂದ ನಶಿಸುವಂತಾಗಿದೆ ಇದರಿಂದ ಸರಕಾರವು ಇನ್ನಾದರೂ ಈ ವಿಚಾರಗಳಲ್ಲಿ ಅಸಡ್ಡೆ ಮಾಡಬಾರದು

ಜಿಲ್ಲೆಯಲ್ಲಿ ಸಸಿ ದಿನಾಚರಣೆ

ಇದೇ ಆಗೋಸ್ತು ತಾ 3ರಿಂದ 9ರ ತನಕ ಇಡೀ ಜಿಲ್ಲೆಯಲ್ಲಿ ಸಸಿ ದಿನಾಚರಣೆಯನ್ನು ಆಚರಿಸಬೇಕಾಗಿ ಜಿಲ್ಲಾ ಕಲೆಕ್ಟರರು ಮತ್ತು ಎಲ್ಲಾ ಡಿಪಾರ್ಟುಮೆಂಟುಗಳ ಮುಖ್ಯ ಆಫೀಸರರು ತಾ 31-6-46ರಲ್ಲಿ ಸಭೆ ಕೂಡಿ ನಿಶ್ಚಯಿಸಿರುವರು

ಎರಡು ವರ್ಷಗಳಲ್ಲಿ ಮುಲ್ಕಿಯ 38 ಗ್ರಾಮಗಳಲ್ಲಿ 6 ಸಾವಿರಕ್ಕೆ ಮಿಕ್ಕಿದ ಸಸಿಗಳೂ ಕಳೆದ ವರ್ಷ ಉಪ್ಪಿನಂಗಡಿ ಕಣಿಯೂರು ಸೆಂಟರಿನ 8 ಗ್ರಾಮಗಳಲ್ಲಿ ಒಂದು ಸಾವಿರಕ್ಕೆ ಮಿಕ್ಕಿದ ಸಸಿಗಳೂ ನಡಲ್ಪಟ್ಟಿರುವವು. ನಟ್ಟ ಸಸಿಗಳು ಬೆಳೆದು ಬರಬೇಕೆಂದು ಸಾಧಿಸಿದ್ದಾದರೆ ಮಾತ್ರ ಫಲ ಸಿಕ್ಕುವುದೆಂದು ಎಚ್ಚರಿಸುವೆವು

ನಿರ್ಮಲವಾದ ಮನೆ, ತೋಟ, ಬಾವಿ ಅಥವಾ ಕುಡಿಯುವ ನೀರು ಪ್ರತಿಯೊಂದು ಕುಟುಂಬ ಒದಗಿಸಿಕೊಳ್ಳಲು ಪ್ರಯತ್ನಿಸಬೇಕೆಂಬುದಕ್ಕೆ ಮೂಲ್ಕಿ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಪ್ರಥಮ ಸ್ಥಾನ ಕೊಡಲಾಗಿದೆ ಮನೆ ವಠಾರಗಳನ್ನು ಗುಡಿಸಿ, ಕಸಕಡ್ಡಿ ಕಶ್ಮಲಗಳನ್ನು ಕೂಡಿಹಾಕಿ ಸುಟ್ಟು ಹಾಕುವುದು, ನೀರು ನಿಂತು ಕೊಳೆಯಿರುವ ಸ್ಥಳಗಳನ್ನು ಮಣ್ಣು ತುಂಬಿಸಿ ಸರಿಮಾಡುವುದು ಎಲ್ಲವರಲ್ಲಿ "ಆಟಿ" ತಿಂಗಳಲ್ಲಿ ಇದ್ದ ಪದ್ಧತಿ ಸಸಿ ದಿನಾಚರಣೆಯ ನಿವ ಯಮವೇ ಎಲ್ಲವರು ಹೀಗೆ ಆಚರಿಸಿದರೆಂದರೆ ಜಿಲ್ಲೆಯು ನಿರ್ಮಲವಾಗುವುದು, ಶಾಲೆಯಲ್ಲಿ ಮಕ್ಕಳಿಗೆ ಬೋಧನೆ ಇತ್ತರೆ ಅವರು ಹೆತ್ತವರಿಂದ ಮಾಡಿಸುವರು

ಈ ಸಂಬಂಧ ತಾ 19-7-47ನೇ ಶನಿವಾರ ಮಧ್ಯಾಹ್ನ 3 ಗಂಟೆಗೆ ಕಾರ್ನಾಡು ಶಾಲೆಯಲ್ಲಿ ಸಭಸೇರಿ ಅಗತ್ಯವುಳ್ಳ ಕಾರ್ಯ ಕೈಕೊಳ್ಳಲಿಕ್ಕಿದೆ ಎಲ್ಲವರೂ ತಪ್ಪದೆ ಬರಬೇಕಾಗಿ ವಿನಂತಿ ಎಂದು ಶ್ರೀ ಎನ್ ಆರ್ ಪೂಜ ಕಾರ್ಯದರ್ಶಿ, ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿ ಇವರು ತಿಳಿಸುತ್ತಾರೆ

ವರ್ಗದಾರರ ಮಿತಿ

ತಾ 8 7 47ರಲ್ಲಿ ಮದ್ರಾಸ್ ಸರಕಾರವು ಸ್ವತ ಸಾಗುವಳಿ ಇರುವ ವರ್ಗದಾರರು ದಿನ 1ರ ಅರ್ಧ ಸೇರು ಅಕ್ಕಿ ಮತ್ತು ಸ್ವಂತ ಸಾಗುವಳಿ ಇಲ್ಲದ ವರ್ಗದಾರರು ದಿನ 1ರ ಒಂದು ಕಾಲು ಪಾವಿನ ತೆ ಅಕ್ಕಿ ಇಟ್ಟುಕೊಳ್ಳಬಹುದೆಂದು ಹುಕುಂ ಮಾಡಿದೆ ಉಳಿದವರಿಗೆ ದಿನಕ್ಕೆ ಒಂದು ಪಾವು ಮಾತ್ರ

ಬಟ್ಟೆಯ ನಿಯಂತ್ರಣಾಜ್ಞೆಯನ್ನು

ರದ್ದುಗೊಳಿಸಬೇಕೆಂಬ ವಾದವನ್ನು ಸಮರ್ಥಿಸಿ ಸ್ಥಳೀಯ ಬಟ್ಟೆ ವ್ಯಾಪಾರಿ ಸಂಘದವರು ಸಂಬಂಧಪಟ್ಟ ಅಧಿಕಾರಿಗಳಿಗೆ ತಂತಿ ಕಳುಹಿಸಿದ್ದಾರೆ.

ಪ್ರಗತಿಶೀಲ ಲೇಖಕರ ಸಂಘವನ್ನು ಪುನರ್ವ್ಯವಸ್ಥೆಗೊಳಿಸುವ ಉದ್ದೇಶದಿಂದ ಶ್ರೀ| ಕೆ. ಕೆ ಶೆಟ್ಟರ ನೇತೃತ್ವದಲ್ಲಿ ಸಮಿತಿಯೊಂದು ಸ್ಥಾಪಿಸಲ್ಪಟ್ಟಿದೆ. ಈ ಸಮಿತಿಯ ಆಶ್ರಯದಲ್ಲಿ ಬರುವ ಆಗೋಸ್ತು ತಾ 7ರಂದು ಠಾಗೋರರ ದಿನವು ಆಚರಿಸಲ್ಪಡುವುದು

ಪ್ರಕಟಣೆ

ದ ಕ ಜಿಲ್ಲೆಯ ಮಂಗಳೂರು ತಾಲೂಕಿನ 88ನೇ ಬಜಲು ಗ್ರಾಮದಲ್ಲಿದ್ದ ಸರ್ವೆ ನಂಬ್ರ 74/11ನೇ 68ನೇ ಪಟ್ಟಾ ನಂಬ್ರದ ಖಾತೆಯ 8 ಸೆಂಟ್ಸು ಸ್ಥಳವು, ಮತ್ತು ಅದರಲ್ಲಿದ್ದ ಮನೆ ಬಾವಿ ಮರಮುಟ್ಟು ವಗೈರೆಗಳೂ, 84/B ಕಂಕನಾಡಿ ಗ್ರಾಮದಲ್ಲಿದ್ದ ಸರ್ವೆ ನಂಬ್ರ 98/6D ನೇ Spl 6ನೇ ಪಟ್ಟಾ ನಂಬ್ರದ ಖಾತೆಯ 60 ಸೆಂಟ್ಸು ಮತ್ತು ಅದರಲ್ಲಿದ್ದ ಕೆಲವು ಕಾಟು ಮರಗಳೂ, ಪಾಸ್ಕಲ್ ಸೋಜರ ಮಗ ಜೊನ್ ಲೋರಿಸ್ ಸೋಜರದ್ದು 1942ನೇ ಇಸವಿಯಿಂದ ನನ್ನ ವಂಶದಲ್ಲಿದ್ದು ತಿರುವೆ ತೆರುತ್ತಾ ಬರುತ್ತೇನೆ ಇತ್ತೀಚೆಗೆ ಅದಕ್ಕೆ ಅಗತ್ಯವಾಗಿದ್ದ ಬಾವಿ ದುರಸ್ತಿ, ಸುತ್ತಲಿನ ದರೆ ಮುಂತಾದುವುಗಳನ್ನು ಸ್ವಂತ ವ್ಯಯದಿಂದ ಮಾಡಿರುತ್ತೇನೆ ಈಗ ಮನೆ ಬಿದ್ದುಹೋಗುವ ಸ್ಥಿತಿಗೆ ಬಂದಿದೆ ಆದುದರಿಂದ ಸದ್ರಿ ಪಟ್ಟಾದಾರರಿಗೆ ತಾ 13 12 1946ರಲ್ಲು ರಿಜಿಸ್ಟ್ರಿ ನೋಟಿಸಿನ ಮುಖಾಂತರ ತಿಳಿಸಿದೆ ಆದರೆ ಆ ನೋಟೀಸು ವಿಳಾಸದಾರರು ಕಾಣೆಯಾಗಿ ಹಿಂದೆ ಬಂದಿದೆ ಆದಾಗಿ ಈ ಮುಖಾಂತರ ಪ್ರಕಟಿಸುವುದೇನೆಂದರೆ—ಆ ಸ್ಥಳವು ಸದ್ರಿಯವರಿಗೆ ಹಿಂದೆ ಬೇಕಾದಲ್ಲಿ ನನ್ನ ವ್ಯಯಗಳನ್ನು ಕೊಟ್ಟು ಪಡೆಯುವರೆ ಆಕ್ಷೇಪವಿಲ್ಲ ಮನೆ ಕೂಡಾ ದುರಸ್ತಿ ಮಾಡುವೆನು ಪಟ್ಟದಾರರು ಯಾವತ್ತೊಂದು ಸ್ಥಳದ ಗೋಜಿಗೆ ಬಾರದಲ್ಲಿ ಕ್ಲಿಪ್ತ ಸಮಯಕ್ಕೆ ಪಟ್ಟಿ ಶಿಷ್ತೀಲಿ ಮಾಡಿಸಿ ಸ್ವಂತ ಅನುಭೋಗ ಮಾಡಿಕೊಳ್ಳುವೆನು

Holy Ghost Church Bajal
12-7-1947

Rev Fr L A Cutinha,
Parish Priest

ESTD 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29 00 000	29 00 000
Capital paid up	28,43,000	28 86 000
Reserve	11 00 000	11 00 000
Deposits	3 50 43 000	4 60 40,000
Due to Bankers	26,91,000	69 57 000
Call Deposits from Bankers	8 00 000	15,00 000
Branch Adjustments	22,07 000	21,09 000
Bills for collection and foreign bills negotiated	20,56 000	34,23,000
Other Liabilities	77,000	85,000
Profit for the year	3,61,000	4 19,000
Rs	4,71,78,000	6,45 13 000

ASSETS

	1940	1946
Cash	1 81 91 000	1,18,16,000
Govt Securities	1 80,45 000	2 75,61 000
Advances to customers	1 56 87 000	2,01,38,000
Bills for collection and Foreign Bills negotiated	20,56 000	34 23,000
Landed Properties	28 000	6,000
Bank Premises and Furniture and Fixtures	1,46,000	1 47,000
Other Assets	10,25,000	16,23,000
Rs	4,71,78,000	6,45,13,000

ತರ್ಕ ವಿತರ್ಕ

ರೈಲ್ವು ಬೋರ್ಡಿಗಳಲ್ಲೀ ಆಗಬೇಕಾದ ಸುಧಾರಣೆಗಳ ಕುರಿತು ಯೋಗ್ಯ ಸಲಹೆಗಳನ್ನು ಕೊಡಬೇಕೆಂದು ಸಾರ್ವಜನಿಕರಲ್ಲಿ ವಿನಂತಿಸಲಾಗಿದೆ. ರೈಲುಗಳೇ ಇಲ್ಲವೆಂದೂ ಹೇಳಲಾಗುತ್ತಿರುವಲ್ಲಿ ಈ ಸುಧಾರಣೆಗಳಿಂದೇನು?

★

ಆಗಸ್ಟು 15ಕ್ಕೆ ತಿರುವಾಂಕೂರು ಸ್ವತಂತ್ರವಾಗುವುದು ಖಂಡಿತವೆಂದು ದಿವಾನ್ ಸಿ. ಪಿ.ಯವರು ಒತ್ತಿ ಹೇಳಿದ್ದಾರೆ. ಬಲೂಚಿಸ್ಥಾನವು ಪಾಕಿಸ್ಥಾನಕ್ಕೆ ಸೇರಿದಂತೆ ತಿರುವಾಂಕೂರು ಸಂಸ್ಥಾನವು ಸ್ವತಂತ್ರಸ್ಥಾನ್ ವಾಗಲಿದ್ದಿಯೇನು!

★

ಮಿ। ಜಿನ್ನರೂ, ವೀರ ಸಾವರಕರರೂ ಸರ್ ಸಿ. ಪಿ. ಯವರಿಗೆ ಶ್ಲಾಘನೆಯ ತಂತಿಗಳನ್ನು ಕಳುಹಿಸಿರುವರು- ಹಿಂದೂ ಮುಸ್ಲಿಂ ಐಕ್ಯದ ಪ್ರಥಮ ನಿದರ್ಶನವೆನ್ನಬಹುದು.

★

ಅರೈಹೆ. ಸರಕಾರವಾಗಿ ಮುಂದುವರಿಯುವ ಸುಹ್ರವರ್ಧಿ ಸರಕಾರವು ತನ್ನ ಆಶ್ರಯದಲ್ಲಿ ಪಶ್ಚಿಮ ಬಂಗಾಲದ ಒಂದು ಛಾಯಾ ಸರಕಾರ ಸ್ಥಾಪಿಸಿದೆ: ಇದುತನಕದ ಲೀಗ್ ಮಂತ್ರಿಮಂಡಳದ ಅಕೃತ್ಯಗಳ ಮೇಲೆ ಈ ಛಾಯೆ ಬೀಳದಿರಲೆಂದು ಹಾರೈಕೆ.

★

ಬಂಗಾಲ ಪ್ರಾಂತೀಯ ಲೀಗಿನ ಕಾರ್ಯದರ್ಶಿ ಹಶೀಮರು 'ಎಲ್ಲರೂ ಸಮಾಜವಾದ ಕಾರ್ಯಕ್ರಮವನ್ನನುಸರಿಸಬೇಕೆಂದು ಬಿನ್ನವಿಸಿಕೊಂಡಿದ್ದಾರೆ. ಹಾಗಾದರೆ ಇಮ್ಮಡಿ ಲಾಭ. ಈಗ ತಮ್ಮ ಪಾಲು ಸಿಕ್ಕಿತು. ಸಮಾಜವಾದ ಪ್ರಕಾರ ಇತರರದ್ದೂ ಸ್ವಲ್ಪ ಸಿಕ್ಕುವುದು.

★

ಜಿನ್ನರು ಗವರ್ನರ್ ಜನರಲ್ ಪದವಿ ಅಂಗೀಕರಿಸಿ ಒಬ್ಬರೇ ಗವರ್ನರ್ ಜನರಲರು ಸಾಕೆಂಬ ತಮ್ಮ ಮೊದಲಿನ ಮಾತನ್ನು ತಪ್ಪಿದ್ದಾರೆಂದು ಗಾಂಧೀಜಿ ತಿಳಿಸಿದರು. ಜಿನ್ನರು ಹಿಂದೆ ಎಂದಾದರೂ ಒಪ್ಪಿದ್ದುಂಟೆ?

★

ಪ್ರತಿಯೊಬ್ಬ ಪಠಾಣನೂ ತಾನು ಮುಸ್ಲಿಮನೆಂಬುದನ್ನು ಭಾವಿಸಬೇಕಂತೆ. ಪಠಾಣ ಹಿಂದೂಗಳು ಕೂಡಾ? ಪಾಕಿಸ್ತಾನದ ಅಲ್ಪ ಸಂಖ್ಯಾಕರು ಹೀಗೆ ಭಾವಿಸದಿದ್ದರೆ ಗತಿ ಏನೆಂದು ಹಲವರು ತಿಳಿಯಬಯಸುತ್ತಾರೆ.

★

ಅರಬರಿಗೆ ನ್ಯಾಯ ದೊರಕದಿದ್ದರೆ ಪಲೇಸ್ತೀನದಲ್ಲಿ ದಂಗೆಯಾಗಬಹುದೆಂದು ಅರಬ ಸಂಘದ ಜಮಾಲಬೇ ಅವರು ತಿಳಿಸುತ್ತಾರೆ. ಈಗಲ್ಲಿ ನಡೆಯುವುದು ಕೇವಲ ಗಡಿಬಿಡಿಯಿರಬಹುದು.

★

ರಶ್ಯವು ಬ್ರಿಟನಿಗೆ ಗೋಧಿಯನ್ನು ಕಳುಹಿಸುವುದಂತೆ. ಗೋಧಿ ಚೀಲಗಳ ಮೇಲೆ ಕೆಂಪು ಕತ್ತಿ ಗುದ್ದಲಿಗಳಿದ್ದರೆ ಬ್ರಿಟನರು ಅದನ್ನು ಹಿಂತಿರುಗಿಸುವರೋ ಎಂದು ನೋಡಲಿಕ್ಕಿದೆ.

ಭಾರತದಲ್ಲಿ ಜಗತ್ತಿನ ದೊಡ್ಡ ವಿಮಾನ ಠಾಣ್ಯ

ನಮ್ಮ ವಿಮಾನಗಳಿಗೆ ಅವಘಡವಾಗಲಿಲ್ಲ

ಕೆಲವು ಅಂಕೆ ಸಂಖ್ಯೆಗಳು

ಅಂತರಾಷ್ಟ್ರೀಯ ವಿಮಾನ ಸೌಕರ್ಯ ಪರಿಷತ್ತಿನಲ್ಲಿ ಭಾಗವಹಿಸಲು ಹೋದ ಭಾರತದ ಪ್ರತಿನಿಧಿ ಮಿ। ಆರ್. ಕೆ. ರಾಹಾ ಅವರು ಕೆನಡದಲ್ಲಿ ಒಂದು ರೇಡಿಯೊ ಭಾಷಣ ಕೊಡುತ್ತ ಸ್ವಲ್ಪ ಅವಧಿಯೊಳಗೆ ಭಾರತವು ಹೇಗೆ ಜಗತ್ತಿನ ದೊಡ್ಡ ವಿಮಾನ ಸೌಕರ್ಯದ ಠಾಣ್ಯವಾಗುವುದೆಂದು ವಿವರಿಸಿದರು:

"ಭಾರತದಿಂದ ಬಹುದೂರವಿದ್ದ ನಿಮ್ಮವರಲ್ಲಿ ಹೆಚ್ಚಿನವರು ಭಾರತದಲ್ಲಿ ಇನ್ನು ಎತ್ತಿನ ಗಾಡಿ, ಆನೆ ಸವಾರಿಗಳ ಕಾಲಮಾಗಿದಿಲ್ಲವೆಂಬ ಭಾವನೆಯುಳ್ಳವರಿರುವುದು ಸಹಜವಾದುದೆ. ಹಿಂದಿನ ಕಾಲದಲ್ಲಿ ಈ ವಾಹನಗಳು ನಮಗೆ ಅತ್ಯಂತ ಉಪಕಾರಿಯಾಗಿದ್ದುವು. ಆದರೆ ನೂತನ ಭಾರತವು ಆಧುನಿಕ ಜಗತ್ತಿನೊಂದಿಗೆ ಪ್ರಗತಿಹೊಂದುತ್ತಿದೆ. ಘಟನಾಪೂರ್ಣವೂ ಚಟುವಟಿಕೆಯುಕ್ತವೂ ಆದ ಅನೇಕ ವರ್ಷಗಳ ಪ್ರಗತಿಯು ಈ ಬದಲಾವಣೆಯನ್ನು ತಂದೊಡ್ಡಿದೆ. ರೈಲು ಮಾರ್ಗಗಳು ಈಗ ಎಲ್ಲಾ ಕಡೆಗಳಲ್ಲೂ ಬಲೆಯೊಡ್ಡಿವೆ. ರಾಜಮಾರ್ಗಗಳು ದೇಶದ ಒಂದು ತುದಿಯಿಂದ ಇನ್ನೊಂದಕ್ಕೆ ಸಂಬಂಧ ಕಲ್ಪಿಸಿವೆ. ಹೊಸ ಬದಲಾವಣೆಯ ಲಕ್ಷಣಗಳಿವು.

"ಭೂಮಧ್ಯರೇಖೆಯ ಸುತ್ತು ಇರುವಷ್ಟು ದೂರವನ್ನು ಭಾರತೀಯ ವಿಮಾನಗಳು ಇಂದು ಪ್ರತಿನಿತ್ಯವೆಂಬಂತೆ ಹಾರುತ್ತಿವೆ. ಕಳೆದ 60 ಮಿಲಿಯ ಮೈಲುಗಳಷ್ಟು ಅವು ಪ್ರಯಾಣಿಕರನ್ನೊಯ್ಯುವ ಕೆಲಸ ಮಾಡಿವೆ. ಈ ವರ್ಷ ಈ ಅಂಕೆಸಂಖ್ಯೆಗಳು ಇಮ್ಮಡಿಯಾಗಬಹುದು. ಇದುತನಕ ನಮ್ಮ ವಿಮಾನಗಳಲ್ಲೊಂದಕ್ಕೂ ಅವಘಡ ತಟ್ಟಲಿಲ್ಲವೆಂಬುದು ಅತ್ಯಂತ ತೃಪ್ತಿಯ ಸಂಗತಿ.

"ನಾಗರೀಕರ ಸೌಕರ್ಯಕ್ಕಾಗಿ 400 ವಿಮಾನಗಳಿಂದು ಕಾರ್ಯಮಗ್ನವಾಗಿವೆ. ದೇಶದಲ್ಲೆಲ್ಲ ಅತ್ಯುತ್ತಮವಾದ ವಿಮಾನ ಠಾಣ್ಯಗಳು ಸ್ಥಾಪಿಸಲ್ಪಟ್ಟದ್ದು ಆಗಿಂದಾಗ್ಗೆ ರೇಡಿಯೊ ಜೋಡನೆ, ಹಾರುವಿಕೆಗೆ ಸಹಾಯಮಾಡುವ ಉಪಕರಣ ಇತ್ಯಾದಿಗಳು ಅವುಗಳಲ್ಲಿ ಹೆಚ್ಚಿಸಲಾಗುತ್ತಿವೆ. ಇವುಗಳನ್ನು ಇನ್ನಷ್ಟು ಆಧುನಿಕವಾಗಿ ಮಾಡುವ ಪುನರ್ರಚನಾ ಕಾರ್ಯವು ಭರದಿಂದ ಕೈಕೊಳ್ಳಲ್ಪಟ್ಟಿದೆ. ಕರಾಚಿ, ಡಿಲ್ಲಿ, ಕಲ್ಕತ್ತಾ ಮತ್ತು ಬೊಂಬಾಯಿಗಳಲ್ಲಿರುವ 4 ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳು ಜಗತ್ತಿನ ಅತೀ ಮನೋಹರವಾದ ನಿಲ್ದಾಣಗಳಲ್ಲಿ ಗಣಿಸಲ್ಪಟ್ಟಿವೆ.

ಅಂತರ್ರಾಷ್ಟ್ರೀಯ ಸೌಕರ್ಯ

"ಸದ್ಯದಲ್ಲೇ ಭಾರತವು ಅಂತರಾಷ್ಟ್ರೀಯ ವಿಮಾನ ಸೌಕರ್ಯವನ್ನು ತೆರಲಿಚ್ಛಿಸುತ್ತದೆ. ಪ್ರಥಮತಃ ತನ್ನ ಹತ್ತಿರದ ಪೂರ್ವ ಮತ್ತು ಪಶ್ಚಿಮದ ದೇಶಗಳಿಗೆ ಸಂಬಂಧ ಕಲ್ಪಿಸಲಾಗುವುದು. ನಂತರ ಇಂಗ್ಲೆಂಡಿಗೂ ಅದು ವಿಸ್ತರಿಸಲಾಗುವುದು. ನಮ್ಮ ದೇಶದ ಅಭಿವೃದ್ಧಿಹೊಂದುವ ವ್ಯಾಪಾರಕ್ಕೆ ವಿಮಾನ ಪ್ರಯಾಣದ ಅವಶ್ಯಕತೆ ತುಂಬಾ ಇದ್ದರೂ ಸದ್ಯಕ್ಕೆ ತರಬೇತು ಹೊಂದಿದ ಕೆಲಸಗಾರರಿಲ್ಲದೆ ಎಲ್ಲವೂ ನಿಧಾನವಾಗಿ ಸಾಗಬೇಕಾಗಿದೆ. ಈ ಕೊರತೆಯನ್ನು ನೀಗಿಸಲು ಅಲ್ಲಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ಈಗ ನಮ್ಮ ವಿಮಾನಗಳಲ್ಲಿ ಕೆಲಸಕ್ಕಿರುವವರಲ್ಲಿ ನೂರಕ್ಕೆ 95 ಮಂದಿಗಳಷ್ಟು ಭಾರತೀಯರೇ ಇರುವರು.

"ಆದುದರಿಂದ ಈ ವರ್ಷವು ಅಂತ್ಯವಾಗುವುದರೊಳಗೆ ಭಾರತವು ಜಗತ್ತಿನ ದೊಡ್ಡ ವಿಮಾನ ಸಾರಿಗೆಯ ಕೇಂದ್ರವಾಗುವುದೆಂದು ನಮಗೆ ಭರವಸೆಯಿದೆ."

ನೈಜಾಮರು ಸೈನ್ಯ ಕಟ್ಟುವ ರೀತಿ

ಹೊರದೇಶದ ಅರಬಿಗಳನ್ನು ತರಿಸುತ್ತಿದ್ದಾರೆ

ದೊಡ್ಡ ಸಂಸ್ಥಾನದ ದೊಡ್ಡ ಕಾಂಕ್ಷೆ

ಜಗತ್ತಿನ ಪರಮ ಪ್ರಬುದ್ಧ ಶ್ರೀಮಂತ ನಿಜಾಮರು ಸ್ವಾತಂತ್ರ್ಯ ಘೋಷಣೆ ಮಾಡಿರುವರು. ಇದು ಅಕ್ಷರ ಪ್ರಜೆಗಳಿಗಲ್ಲ, ತಮ್ಮ ಸ್ವಂತ ಉದ್ದೇಶ ಸಾಧನೆಗೆ. ಹೈದರಾಬಾದು ಇಟಲಿಯಷ್ಟೆ ದೊಡ್ಡ ದೇಶ. 1 ಕೋಟಿ 60 ಲಕ್ಷ ಜನಸಂಖ್ಯೆ ಅವರ ಆಳ್ವಿಕೆಗೊಳಪಟ್ಟಿದೆ,

ಸ್ವತಂತ್ರವಾದ ತಮ್ಮ ಸಂಸ್ಥಾನಕ್ಕೆ ಯಾರಾದರೂ ಹೊರಗಿನಿಂದ ಇಲ್ಲವೆ ಒಳಗಿನಿಂದ ತೊಂದರೆ ಕೊಟ್ಟರೆ ಅವರೇನು ಮಾಡುವರು ಬಲ್ಲಿರೊ? ಅವರು ಈ ವಿಷಯವೇನೂ ಮೊಕ್ತಾ ಹೇಳಲಿಲ್ಲ. ಪ್ರತ್ಯಕ್ಷ ಕಾರ್ಯದಿಂದ ಎಲ್ಲಾ ತಯಾರಿ ಮಾಡುತ್ತಿರುವರು. ಸದ್ಯಕ್ಕೆ ಒಂದು ಅತ್ಯಾಧುನಿಕ ಸೈನ್ಯ ಕಟ್ಟುವುದು ಅವರ ಉದ್ದೇಶವಿರುತ್ತದೆ.

ಹೈದರಾಬಾದಿನ ವೈಭವದ ಕುರಿತು ಅಲ್ಲಿನ ಆಸ್ಪತ್ರೆಗಳ, ವಿದ್ಯಾಸಂಸ್ಥೆಗಳ, ನೀರಾವರಿ ಯೋಜನೆಗಳ ಕುರಿತು ಎಷ್ಟೋ ಪ್ರಚಾರಮಾಡಲ್ಪಟ್ಟಿದೆ. ಆದರೆ ಭಾರತದ ಹೃದಯಭಾಗದಲ್ಲೆಂಬಂತಿರುವ ಈ 80 ಸಾವಿರ ಚದರ ಮೈಲು ಸಂಸ್ಥಾನದಲ್ಲಿ ಅತ್ಯಾಧುನಿಕ ಶಸ್ತ್ರಸಜ್ಜಿತ ಸೈನ್ಯವೊಂದಿರುವ ಸಂಗತಿ ಯಾರಿಗೂ ತಿಳಿದಿಲ್ಲ.

ಪ್ರತಿದಿನವೆಂಬಂತೆ ಸಮುದ್ರಾಚೆಯಿಂದ ಒಬ್ಬಿಬ್ಬ ಅರಬರು ನಿಜಾಮರ ಸೈನ್ಯ ಸೇರಲು ಬರುತ್ತಿರುವರು. ಈಗ ಈ ಅರಬರ ಸೈನ್ಯ 12 ಸಾವಿರದಷ್ಟಾಗಿದೆ. ಸೆಯಿದ್ ಹಮಿದ್ ಎಲ್. ಎಡ್ರೂಸನೆಂಬ ಶುದ್ಧ ಅರಬಿ ರಕ್ತದವನೊಬ್ಬ ಈ ಸೈನ್ಯದ ಅಧಿಪತಿಯಾಗಿ ಮಾಡಲ್ಪಟ್ಟಿದ್ದಾನೆ. ಇವನು ಹೊಸ ಒಂದು ಸೈನ್ಯ ತರಬೇತಿ ಕೇಂದ್ರವನ್ನು ತೆರೆದಿದ್ದಾನೆ. ಈ ಸೈನ್ಯದಲ್ಲಿ ಕೆಲವು ಅಬಿಸೀನಿಯರು ಕೂಡಾ ಇದ್ದಾರೆ.

ಇದರೊಂದಿಗೆ ಒಂದು ಶಸ್ತ್ರಾಸ್ತ್ರ ದಳದ ತರಬೇತಿಯೂ ನಡೆಯುತ್ತಲಿದೆ. ವಾಯುಶ್ಲೈನ್ ಕೆಲಸಗಾರರು, ಗುಂಡು, ಬಂದೂಕು, ಅಸ್ತ್ರಧಾರಿಗಳು ಮತ್ತು ವಾಹನ ಕೆಲಸಗಾರರು ಇಲ್ಲಿ ತರಬೇತಿ ಪಡೆಯುತ್ತಿದ್ದಾರೆ.



ಸರಳ ಕೆಮ್ಮು ಬೇಗ ಬಲವತ್ತರವಾಗಬಹುದು. ಶ್ವಾಸನಾಳಕೋಶಗಳನ್ನು ಹೀಗೆ ದುರ್ಬಲಗೊಳಿಸದಂತೆ ಕೂಡಲೇ ಪೆಪ್ಸ್ ವಿಷಹಾರಿ ಮಾತ್ರೆ ತೆಗೆದುಕೊಳ್ಳಿರಿ.

ಬಾಯಲ್ಲಿ ಕರಗಿದ ಪೆಪ್ಸ್‌ನ ಅಮೂಲ್ಯ ವನಸ್ಪತಿ ಸಾರಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೊಯ್ಯಲ್ಪಟ್ಟು ವಿಷಾಣುಗಳನ್ನು ನಾಶಮಾಡುತ್ತವೆ—ಕೆಮ್ಮು ನಿಲ್ಲಿಸಿ, ಬೇನೆ ಶಮನಿಸಿ, ಊದಿಕೊಂಡ ಗ್ರಂಥಿಗಳನ್ನು ಸರಿಗೊಳಿಸುವುದು. ರಕ್ಷಣೆಯನ್ನೂ ಕೊಡುವುದು.

ಶೀತ, ಗಂಟಲುನೋವು, ಕೆಮ್ಮು, ನೆಗಡಿ, ಶೀತಜ್ವರ, ಗೂರಲು ಮತ್ತಿತರ ಎಥೆ ಶ್ವಾಸಕೋಶ ವ್ಯಾಧಿಗಳು ಪೆಪ್ಸ್‌ನಿಂದ ಶಮನಗೊಳಿಸಲ್ಪಡುತ್ತವೆ.

ಪೆಪ್ಸ್ ಸೇವಿಸಿರಿ.

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು.

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವವು.

MANGALORE AUTOMOBILES LTD.

CITY BUS SERVICE,

MANGALORE.

Notice is hereby given that share certificate in respect of the 3 shares Nos. 2076 to 2078 in the name of Mrs. Angelina Mascarenha, wife of Joseph Veigas, Near Rozario Church, Bolar, Mangalore, South Kanara, has been lost, mislaid or destroyed. Any claim in respect of the above shares should be notified to the company at their Registered Office, Balmatta Road, Mangalore within one month from the date hereof otherwise a duplicate share certificate will be issued irrespective of any claim in respect thereof.

Mangalore, 18-7-47. } KERWAR & Co., Managing Agents.

ಜೀವ ಸೃಷ್ಟಿಸುವ ಶಕ್ತಿಯುಳ್ಳ ಶರೀರ ಧಾತು?

ಬ್ರಹ್ಮಚರ್ಯ ಪರಿಪಾಲನೆಯ ಮಹತ್ವ

ಗಾಂಧೀ ಶಿಷ್ಯ ವಿನೋಭಾ ಭಾವೆಯವರ ಸೂತ್ರ

ಇತ್ತೀಚೆಗಿನ ಹರಿಜನದ ಒಂದು ಲೇಖನದಲ್ಲಿ ಮಹಾತ್ಮರು ಮತ್ತೊಂದು ಸಲವೆಂಬಂತೆ ಬ್ರಹ್ಮಚರ್ಯ ಪರಿಪಾಲನೆಯ ಮಹತ್ವದ ಕುರಿತು ಗಂಭೀರ ಸಲಹೆಗಳನ್ನಿತ್ತಿರುವರು.

ಬ್ರಹ್ಮಸ್ವರೂಪಿಯಾದ ಪರಮಾತ್ಮನಲ್ಲಿಗೆ ನಮ್ಮನ್ನೊಯ್ಯುವ ಮಾರ್ಗವೆ ಬ್ರಹ್ಮಚರ್ಯ ಪರಿಪಾಲನೆಯು. ವಿಧಾನ ಸಂತಾನವನ್ನುಂಟುಮಾಡುವುದರ ಮೇಲೆ ಸಂಪೂರ್ಣ ಹತೋಟಿಯನ್ನಿಡುವುದೇ ಇದರಲ್ಲೊಂದು ಮುಖ್ಯ ಶರ್ತವಾಗಿದೆ. ಈ ಸ್ವಂಯಮನವು ಮನೋವಾಕ್ಕಾಯಗಳೆಂಬ ತ್ರಿಕರಣಬದ್ಧವಾಗಿರಬೇಕು. ಮನಸ್ಸು ಹತೋಟಿಯಲ್ಲಿಲ್ಲದಿದ್ದರೆ ಮತ್ತೆರಡು ಕಾರಣಗಳಾದ ನಡೆನುಡಿಗಳಿಗ ಮೌಲ್ಯವಿಲ್ಲ. ಹಿಂದೂ ಸ್ಥಾನಿಯಲ್ಲಿ "ಮಾನವನ ಹೃದಯವು ಪರಿಶುದ್ಧವಾಗಿದೆಯೋ ಅವನ ಮನೆಯಲ್ಲಿ ಎಲ್ಲಾ ಗಂಗಾಜಲದ ಶಕಿ ಯೂ ಇದೆ" ಎಂಬೊಂದು ನಾಣ್ಣುಡಿಯಿದೆ. ಮಾನವ ವಿಚಾರಗಳು ಹತೋಟಿಯ ಲ್ಲಿವೆಯೋ ಅವನ ನಡೆನುಡಿಗಳೂ ಸುಲಭವಾಗಿ ಹತೋಟಿಯಲ್ಲಿರುತ್ತವೆ.

ನನ್ನ ಕಲ್ಪನೆಯ ಬ್ರಹ್ಮಚಾರಿಯು ಸುಧೃಢಕಾಯನೂ ದೀರ್ಘಾಯುಷ್ಯಿಯೂ ಆಗಿರುತ್ತಾನೆ. ಅಂಥವನಿಗೆ ಒಂದು ತಲೆನೋವು ಕೂಡ ಉಂಟಾಗುವುದಿಲ್ಲ. ಅವನಿಗ ಮಾನಸಿಕ ಮತ್ತು ಶಾರೀರಿಕ ಕೆಲಸದಿಂದ ಆಯಾಸವಾಗುವುದಿಲ್ಲ. ಅವನು ಸತ್ಯ ಪ್ರಕಾಶಯುಕ್ತನಾಗಿದ್ದು ಎಂದೂ ಆಲಸ್ಯವಂತನಾಗಿರುವುದಿಲ್ಲ. ಒಳಗ ಶುದ್ಧವಿರುವಂತೆ ಹೊರಗಾದರೂ ಅವನು ಹಾಗೇ ಕಾಣಿಸುವನ. ಗೀತೆಯಲ್ಲಿ ಹೇಳಿದ ಸ್ಥಿತಪ್ರಜ್ಞನ ಲಕ್ಷಣಗಳೆಲ್ಲವೂ ಅವನಲ್ಲಿ ಕಾಣುತ್ತವೆ. ಇಂತಹ ಒಬ್ಬನೇ ಒಬ್ಬ ಸಿಗಲಾರನಾದರೂ ವ್ಯಧೆಯಿಲ್ಲ.

ಮಾನವ ಜೀವಿಗಳನ್ನು ಸೃಷ್ಟಿಸುವ ಶಕ್ತಿಯುಳ್ಳ ಈ ಶ್ರೇಷ್ಠ ಧಾತುವನ್ನು ಸಂಗಹಿಸಿಡುವವನು ಮೇಲೆ ಹೇಳಿದೆಲ್ಲಾ ಲಕ್ಷಣಗಳಿಂದ ಕೂಡಿರುವುದೊಂದು ಕೌತುಕದ ವಿಷಯವೆ? ಈ ಉದಾತ್ತತೆಯ ಶಕ್ತಿಯೇನೆಂದು ಯಾರು ಅಳೆದಿರುವರು? ಈ ಕುರಿತು ಪತಾಂಜಲಿಯು ಐದು ನಿಯಮಗಳನ್ನು ಬೋಧಿಸಿರುವನು. ಇವುಗಳಲ್ಲಿ ಯಾವುದೊಂದನ್ನಾದರೂ ಪ್ರತ್ಯೇಕಿಸಿ ಅದನ್ನು ಒಂದೊಂದಾಗಿಯೇ ಅಭ್ಯಾಸ ಮಾಡಲಿಕ್ಕಾಗುವುದಿಲ್ಲ. ಸತ್ಯವೊಂದರಲ್ಲಿ ಇವೆಲ್ಲವೂ ಅಡಕವಾಗಿವೆ. ಈಗಿನ ಕಾಲಕ್ಕೆ ಈ ಐದು ಸೂತ್ರಗಳನ್ನು ವಿಶಾಲಿಸಿ ಹನ್ನೊಂದನ್ನಾಗಿ ಮಾಡಿರುತ್ತಾರೆ. ಆಚಾರ್ಯ ವಿನೋಭಾ ಭಾವೆಯವರು ಇದನ್ನು ಮರಾಠಿಯಲ್ಲಿ ಕವಿತಾರೂಪದಲ್ಲಿ ನಿರೂಪಿಸಿರುವರು. ಸತ್ಯ, ಅಹಿಂಸಾ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ, ಜೀವನಕ್ರಮ, ಅರುಚಿ, ಧೈರ್ಯ, ಸಮಾನತೆ, ಸ್ವದೇಶಿ, ಅಸ್ಪೃಶ್ಯತೆ.

ಜರ್ಮನಿಗೆ ಓರ್ವ ನೆಹರು ಬೇಕಂತೆ!

ನಾಜೀಗಳಿಗೆ ಗಾಂಧಿ ತತ್ವದ ಕೋರಿಕೆ

ಸಂಪೂರ್ಣವಾಗಿ ಭೌತಿಕ ವಿಷಯಗಳಲ್ಲಿ ಮಗ್ನವಾಗಿದ್ದ ಸೈನಿಕ ಮನೋವೃತ್ತಿಯ ಜರ್ಮನಿಯು ಆಧ್ಯಾತ್ಮಿಕ ಉನ್ನತಿಯ ಭಾರತದ ಕಡೆ ತಿರುಗುತ್ತಿರುವುದೆಂದರೆ ನಿಮಗೆ ಕೌತುಕವಾಗಬಹುದು. ಹಿಟ್ಲರನ ಜರ್ಮನಿಯು ಗಾಂಧಿ ನಹುರುಗಳ ಸ್ಫೂರ್ತಿ ಆದರ್ಶಗಳಿಗಾಗಿ ಹಾತೊರೆಯುತ್ತಿರುವರು.

ಡಾ। ಸತ್ಯನಾರಾಯಣ ಸಿನ್ಹಾ ಎಂಬವರು "ಪುನಃ ಜರ್ಮನಿಯಲ್ಲಿ" ಎಂಬೊಂದು ಲೇಖದಲ್ಲಿ ಭಾರತದ ಅಗ್ರಗಣ್ಯ ಮುಖಂಡರನ್ನು ಇಂದು ಸೋತ ಜರ್ಮನಿಯು ಹೇಗೆ ಅತ್ಯಾದರ ಪೂರ್ವಕವಾಗಿ ಕಾಣುತ್ತಿರುವುದೆಂಬುದನ್ನು ವಿವರಿಸಿದ್ದಾರೆ.

ಡಾ। ಸಿನ್ನರು ಜರ್ಮನಿಯಲ್ಲಿ ವಿದ್ಯಾಭ್ಯಾಸ ಮಾಡುತಿದ್ದರು. ಈಚೆಗ ಬಹು ವರ್ಷಗಳ ನಂತರ ಅವರು ಪುನಃ ಒಮ್ಮೆ ಜರ್ಮನಿಗೆ ಹೋದಾಗ ತಮ್ಮ ಹಳೇ ಜರ್ಮನ್ ಸ್ನೇಹಿತರನ್ನು ಹುಡುಕಹೊರಟರು. ಅವರು ಅಲ್ಲಿದ್ದಾಗ ವಾಸಿಸುತಿದ ಒಂದು ಚಿಕ ಕಾಡು ಪ್ರದೇಶದ ಬಳಿ ಹೋದಾಗ ಅಲ್ಲಿ ಮರಗಳ ಕಾಣ ಸಿಗಲಿಲ್ಲ. ಅದರಲ್ಲಿ ಕೆಲವು ಮಾತ್ರ ಹೆಣದಂತೆ ನಿಂತಿದ್ದವು. ಯಾವನೋ ಒಬ್ಬ ರಕ್ಕಸನು ಅಲ್ಲಿನ ಮರಗಳನ್ನು ಎಲ್ಲಾ ಸಮೇತ ಕಿತ್ತೊಗೆದಂತೆ ಅವರಿಗೆ ಭಾಸವಾಯಿತು.

ಆಗ ಹಿಂದಿನಿಂದ ಯಾರೋ ಒಬ್ಬರು "ತರುಣನೇ ನೀನೇನನ್ನು ನೋಡುತ್ತಿರುವೆ ಇಲ್ಲಿ?" ಎಂದು ಕೇಳಿದ ಹಾಗಾಯಿತು.

ಬ್ರಿಟಿಷರೊಡನೆ ಜಗಳ

ಸಿನ್ಹಾ ತಿರುಗಿದಾಗ ಸ್ವಲ್ಪ ದೂರದಲ್ಲಿ ಓರ್ವ ಮುದುಕಿ ಬರುತಿದ್ದಳು. ಹತ್ತಿರ ಬಂದು ಅವರ ಗುರುತು ಹಿಡಿಯಲು ಯತ್ನಿಸಿದಳು. "ಪ್ರೊಫೆಸರ್ ಹೆಜ್ಜರ ಕುಟುಂಬದೊಡನೆ ವಾಸಿಸುತಿದ್ದ ಭಾರತೀಯರು ನೀವೇ ಅಲ್ಲವೆ?" ಎಂದು ಪ್ರಶ್ನಿಸುತ್ತ ಅವಳು ಸಿನ್ಹರ ಹೆಸರನ್ನು ಹೇಳಿದಳು "ನನಗೆ ಅವಳ ಗುರುತು ತಿಳಿಯಿತು. ನಾವವಳನ್ನು ಅಜ್ಜಿ ಎಂದು ಕರೆಯುತಿದ್ದೆವು" ಮುಂದಿನ ಸಂಭಾಷಣೆಯನ್ನು ಡಾ। ಸಿನ್ನರು ಹೀಗೆ ವರ್ಣಿಸುತ್ತಾರೆ.

"ಅವಳ ಕಣ್ಣಿನಲ್ಲಿ ಆನಂದೋದಕ ಹರಿಯಿತು. ಹತ್ತಿರದ ಕೋಣೆಗೆ ಹೋಗಿ ಸ್ವಲ್ಪ ಹಣ್ಣಿನ ರಸ ತಂದುಕೊಂಡು "ನಿಲ್ಲಿರಿ, ನಿಮ್ಮ ನೆನಪು ಈಚೆಗೆ ನನಗಾಯಿತು – – – ಯಾಕೆಂದು ಹೇಳುತ್ತೇನೆ – ಮರೆತುಬಿಟ್ಟಿದ್ದೇನೆ. ಸರಿ, ನಿಮ್ಮ ದೇಶದ ಮುಖಂಡನ ಕುರಿತು ಯೋಚಿಸುವಾಗ ನಿಮ್ಮ ನೆನಪಾಯಿತು. ಆ ಮುಖಂಡನ ಹೆಸರೇನು?"

"ಗಾಂಧಿ"

"ಅವರಲ್ಲ, ಸ್ವಲ್ಪ ತರುಣರು ಇನ್ನೊಬ್ಬರಿರುವರು."

'ನೆಹ – – –

"ಸರಿ, ಸರಿ, ನೆಹರು. ಬ್ರಿಟಿಷ್‌ರಿಂದ ನಿಮ್ಮ ದೇಶವನ್ನು ವಿಮೋಚಿಸಿದವರವರು. ಇಂಗ್ಲಿಷರು ನಮ್ಮನ್ನ ಏನೆಂಬುದಾಗಿ ಗುರಿಮಾಡಿದರು. ನಾವೂ ಅವರಿಗೆ ದ್ವೇಷಿಸುತ್ತೇವೆ. ಆದರೆ ನಾವೆಷ್ಟು ದುರ್ಭಾಗ್ಯರು! ನಮ್ಮ ದೇಶದಲ್ಲಿ ವೈರಿಗಳನ್ನು ಓಡಿಸುವ ಓರ್ವ ನಹುರುಗಳು ಇಲ್ಲವ ಹಾಂದರಲ್ಲ.

ಇದು ತುಂಬ ಕಷ್ಟಕರವಾದ ಸಂಗತಿ ಎನ್ನೆಂದೆ. ಇದೇ ಅಭಿಪ್ರಾಯವನ್ನು ಅನೇಕ ಜರ್ಮನರು ವ್ಯಕ್ತಪಡಿಸಿದರು.

ಸಂದೇಹಾಸ್ಪದ ನಾಗರೀಕತೆ

ಓರ್ವ ಜರ್ಮನ್ ಪ್ರೊಫೆಸರರು ಹೇಳಿದರು. "ಇತ್ತೀಚೆಗೆ ನಾನು ಭಾರತದ ಕುರಿತು ತುಂಬಾ ಯೋಚಿಸುತಿದ್ದೇನೆ. ಆ ಕಡೆಯಿಂದ ಒಂದು ಬೆಳಕು ದೊರೆಯಬಹುದೆಂದು ನಮ್ಮ ಹಾರೈಕೆ. ಇದೆ ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ನಾವೆಲ್ಲಾ ಆಶೆಯನ್ನು ಬಿಟ್ಟಿದ್ದೇನೆ. ಮಾನವ ಕೋಟಿಯ ಇಂದಿನ ಗೋಳನ್ನು ನಿವಾರಿಸಲು ಪಾಶ್ಚಿಮಾತ್ಯ ಸಂಸ್ಕೃತಿ ನಾಗರಿಕತೆಗಳು ಸಂಪೂರ್ಣ ಅಯಶಸ್ವಿಯಾಗಿವೆ. ಪಾಶ್ಚಿಮಾತ್ಯ ದೇಶಗಳಲ್ಲಿ ಇಂದು ಸಂಪೂರ್ಣ ಕತ್ತಲು ಹರಡಿದೆ. ಇಲ್ಲಿ ನಡೆದ ದುರಂತವನ್ನು ಪ್ರತ್ಯಕ್ಷ ನೋಡಿದರೆ ಮಾತ್ರ ತಿಳಿಯುವುದು. ನಮ್ಮ ಸಂಸ್ಕೃತಿ ನಾಗರಿಕತೆಗಳ ಅಸ್ತಿತ್ವವೇ ಸಂದೇಹಾಸ್ಪದವಾಗಿವೆ.

"ಇಂತಹ ಸಂಕಷ್ಟ ಕಾಲದಲ್ಲಿ ನಾನು ನಿಮ್ಮ ಗಾಂಧಿ ನೆಹುರುಗಳನ್ನು ಜ್ಞಾಪಿಸುತ್ತೇನೆ. ಅವರು ಅತ್ಯದ್ಭುತ ಸಾಮರ್ಥ್ಯದ "ವೈದ್ಯರು" ಎಂಬುದು ಖಂಡಿತ. ಮೊದಲು ನನಗೂ ಭಾರತೀಯ ಸಂಸ್ಕೃತಿಯ ಅಸ್ತಿತ್ವದ ಕುರಿತೂ ಸ್ವಲ್ಪ ಸಂದೇಹವಿತ್ತು. ಭಾರತೀಯರಿಗೂ ಬ್ರಿಟಿಷರು ಅದೆಷ್ಟು ಸಂಕಷ್ಟ ಕೊಟ್ಟಿದ್ದಾರೆ!

ರಕ್ಷಕರು

"ಆದರೆ ಭಾರತೀಯರು ಪದೆಪದೇ ಹೊಸ ಹೊಸ ಚಳವಳಿಗಳೆಂಬ ನಿರ್ಮಲಗಾಳಿ ಬೆಳಕಿನ ಕಿಟಿಕಿಗಳನ್ನು ತೆರೆದು ಜೀವವುಳಿಸಿಕೊಂಡರು. ಗಾಂಧಿ ನೆಹುರುಗಳಂತಹರು ಇದಕ್ಕೆ ಅವಕಾಶ ಕಲ್ಪಿಸಿಕೊಟ್ಟವರು. ಕ್ಷಮಿಸಿ, ನನಗ ಗಾಂಧಿಗಿಂತ ನೆಹುರುಗಳೇ ಹೆಚ್ಚು ಮೆಚ್ಚಿಗೆಯಾಗುತ್ತಾರೆ. ನೆಹುರುಗಳು ಹೆಚ್ಚು ಚೈತನ್ಯ ಸ್ವರೂಪಿಗಳೂ ನಿಜಸ್ಥಿತಿಯ ಅರಿವುಳ್ಳವರೂ ಆಗಿರುವರು. ಅವರಲ್ಲಿ ಅದೆಷ್ಟು ಶಕ್ತಿ ಅಡಕವಾಗಿದೆ! ದೇಶವಲ್ಲಿ ಅದೆಂತಹ ಪ್ರಕಂಪ ದಂಗೆ ಇಲ್ಲದ ಗಲಾಟೆಯಾದರೆ ಕಂಡಲ್ಲಿ ನಹುರುಗಳು ಅಲ್ಲಿ ಕಡೆ ವ್ಯಾಪಿಸುತ್ತಾರೆ. ಅವರೊಬ್ಬ ಯೋಧರು, ಮುಖಂಡರು ಮತ್ತೊಬ್ಬ ನಿಜವಾದ "ವೈದ್ಯ"ರೂ ಆಗಿರುವರು. ಜರ್ಮನಿಯಲ್ಲಿ ನಮಗೊಬ್ಬ ನೆಹುರುಗಳ ಅವಶ್ಯಕತ ಇದೆ. ಇಂದಿನ ನಮ್ಮ ಸಂಕಷ್ಟದಿಂದ ಅಂಥವರೇ ನಮ್ಮನ್ನು ರಕ್ಷಿಸಬಲ್ಲರು.

ಪ್ರಯಾಣಿಕರಿಗೆ ಸೂಚನೆ.

ಪ್ರಸ್ತುತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ, ಮತ್ತು ಗೆಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ ಕೋಸ್ಟಲ್ಯಾನಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶ್ಯಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು–ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T. O. ಕೊಯಂಬತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತರ ಪ್ರಯಾಣಿಸದ ಸದಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳುವುದು ತಿಳಿದುಬರುತ್ತದೆ. ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗ್ಳೂರು,
29-3-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India with Limited Liability)
Estd: 1906.
Head Office: UDIPI, S. Kanara.

CAPITAL:	Rs
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೊಡಿಮು ಮೊದಲಾಧ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೈ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟದ್ದು)
ಪ್ರಧಾನ ವಿಮಾ ಸಂಸ್ಥೆ

1945ರ ವ್ಯವಹಾರ – 2,77,23,000
1946ರ „ – 3,28,21,200

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)
ತಿರುವಾಂಕೂರು, ಕೊಚ್ಚಿ ಮತ್ತು ಮೈಸೂರನ್ನೊಳಗೊಂಡ ದಕ್ಷಿಣ ಭಾರತದ ಪ್ರಾವಿನ್ಶಿಯಲ್ ಏಜಂಟರು

1945ರ ನಮ್ಮ ವ್ಯವಹಾರ - 49,85,500
1946ರ „ „ - 53,82,250

ಈಗಿನ ಪರಿಸ್ಥಿತಿ ಮತ್ತು ಬಡ್ಡಿದರ ಪ್ರಮಾಣಕ್ಕನುಗುಣವಾಗಿ ನಮ್ಮ ಪ್ರಿಮಿಯಮ್ ದರಗಳನ್ನು ಇದೇ ತಾ 1-8-47ರಿಂದ ಪುನರಾವರ್ತಿಸಲು ಬೊಂಬೈ ಲ್ಯಾಫ್ ಸಂಸ್ಥೆಯು ನಿರ್ಧರಿಸಿರುವುದನ್ನು ನಮ್ಮ ಎಲ್ಲಾ ವೈದ್ಯ ಪರೀಕ್ಷಕರಿಗೂ, ಪೋಲಿಸಿ ಹೋಲ್ಡರರಿಗೂ ಸ್ನೇಹಿತ ಹಿತೈಷಿಗಳಿಗೂ ತಿಳಿಸುವುದು ನಮ್ಮ ಕರ್ತವ್ಯವೆಂದೆಣಿಸುತ್ತೇವೆ. ಈಗವರು ಹಿಂದಿನ ಕಮ್ಮಿ ದರದಲ್ಲಿ ದೊಡ್ಡ ಪೋಲಿಸಿಗಳನ್ನು ಪಡೆಯಬಹುದು – ಇದರಿಂದ ವರ್ಷಂಪ್ರತಿ ಕಮ್ಮಿಯಾಗ ವ ದರ ಪ ಯೋಜನವೂ ದೊರಕಿದಂತಾಗುವುದು ನಮ್ಮ 2ನೇ ಜುಲ್ಯಾ 1947ರ ಸರ್ಕಿಲಾರು ತಲುಪಿರದ ಏಜೆಂಟರು ತಮ್ಮ ಗಿರಾಕಿಗಳಿಗೆ 31-7-'47ರ ನ ತರ ವಿ ತೆಗೆ ವವರಿಗೆ ಆದೆಷ್ಟು ಪ್ರಿಮಿಯಂ ತಗಲುವುದೆಂಬ ವಿವರವನ್ನು ತಿಳಿಸಲು ಕರ್ತವ್ಯಬದ್ಧರಾಗಿರುವುದರಿಂದ, ಅಂಥಾ ಏಜೆಂಟರು ಕೂಡಲೇ ನಮಗೆ ತಿಳಿಸ ಪತ್ರ ಮೂಲಕ ಕೇಳ ವುದ

ಪೋಲಿಸಿ ತೆಗೆದುಕೊಳ್ಳಲಿಚ್ಛಿಸುವವರು ಇವತ್ತೇ ನಮ್ಮ ಈ ಕೆಳಗಿನ ಯಾವದಾದರೂ ಆಫೀಸುಗಳಿಗೆ ಬರೆಯುವುದು:
ಉಡುಪಿ, ಮಂಗಳೂರು, ಕಲ್ಲಿಕೋಟೆ, ಟ್ರಿವೆಂಡ್ರಮ್, ಮಧುರಾ ಬೆಂಗಳೂರು ಬೊಂಬಾಯಿ ಮತ್ತು ಮದ್ರಾಸ್

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪ್ಪೊ ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಖು 25—7—1947 [ಸಂಚಿಕೆ 30]

ಮಹಾತ್ಮರ ತ್ರಿವರ್ಣ

ಘಟನಾ ಸಮಿತಿಯು ಚರಕದ ಸಂಕೇತವಿರುವ ತ್ರಿವರ್ಣ ಧ್ವಜವನ್ನೇ ಸಂಯುಕ್ತ ಭಾರತ ಸರಕಾರದ ಅಧಿಕೃತ ಪತಾಕೆಯಾಗಿ ಅಂಗೀಕರಿಸಿ ನಮ್ಮ ಸ್ವಾತಂತ್ರ್ಯ ಪಿತನೆನಿಸುವ ಮಹಾತ್ಮಾ ಗಾಂಧಿಯವರ ಜೀವಮಾನ ಸೇವೆಗೆ ಅಮೋಘ ಮನ್ನಣೆಯನ್ನಿತ್ತಂತಾಗಿದೆ. ಉಜ್ವಲ ನೈತಿಕ ವಿಧಾನದ ಸ್ವಾತಂತ್ರ್ಯ ಹೋರಾಟಗಳು ಈ ಸತ್ಯ ಶುದ್ಧತೆ ಮತ್ತು ಮಂಗಳಕರವಾದ ಸಂಕೇತದಡಿಯಲ್ಲಿ ಜರಗಿಸಲ್ಪಟ್ಟಿದ್ದು ಜಗತ್ತಿನ ಪ್ರಾಚೀನ ಜನಾಂಗವೊಂದರ ಸರ್ವತೋಮುಖ ಪುನರ್ಜೀವನವು ಇದರ ಸ್ಫೂರ್ತಿಯಿಂದುಂಟುಮಾಡಲ್ಪಟ್ಟಿದೆ

ಪ್ರಥಮ ಪ್ರಧಾನರು

ಸ್ವತಂತ್ರ ಸಂಯುಕ್ತ ಭಾರತದ ಪ್ರಥಮ ಪ್ರಧಾನರಾಗಿ ಪಂಡಿತ್ ನೆಹರುರವರು ನೇಮಿಸಲ್ಪಡುವರೆಂಬ ವದಂತಿಯು ಜನಾಂಗಕ್ಕೊಂದು ಹೊಸ ಭರವಸೆಯನ್ನು ಕೊಟ್ಟಂತಾಗಿದೆ. ಜಗತ್ತಿನ ಅಗ್ರಗಣ್ಯ ಅಂತರ್ರಾಷ್ಟ್ರೀಯ ಮುತ್ಸದ್ದಿಗಳೂ, ನಿರ್ವಂಚನೆಯ ಧ್ಯೇಯ ಧೋರಣೆಗಳ ಅಸಾಮಾನ್ಯ ಪುರುಷರೂ, ಸೇವೆ ತ್ಯಾಗಗಳ ಸ್ಫೂರ್ತಿ ಮೂರ್ತಿಗಳೂ ಆಗಿರುವ ಈ ಮಹಾ ವ್ಯಕ್ತಿಗೆ ಜನಾಂಗದ ಅಧ್ಯಸ್ಥಾನವು ದೊರಕಬೇಕಾದುದು ಸಮಂಜಸವಾದುದೆ. ಸಾಮಾನ್ಯ ಮನುಷ್ಯನ ಶ್ರೇಯಸ್ಸಿಗಾಗಿ ದುಡಿಯಲು ಅವರ ನಾಯಕತ್ವವು ಮಾದರಿಯಾಗಿದೆ. ಅವರು ನಮ್ಮೊಳಗಿನ ಎಡಬಲ ಪಕ್ಷಗಳನ್ನು ಐಕ್ಯಮತ್ಯಗೊಳಿಸಿ ಜನತೆಯ ಆರ್ಥಿಕ ದುರ್ದೆಶೆಯನ್ನು ನೀಗಿಸಲು ತಮ್ಮ ಪ್ರಥಮ ಪ್ರಯತ್ನಗಳನ್ನು ಗೈಯುವರೆಂಬುದರಲ್ಲಿ ಸಂದೇಹವಿಲ್ಲ

ಹೈದರಾಬಾದಿನ ನಪ

ಇಲ್ಲಿಯ ದಿವಾನರಾದ ಚಟ್ಟಾರಿ ನವಾಬರು 'ಹೈದರಾಬಾದು ಸಂಯುಕ್ತ ಭಾರತದೊಡನೆ ಸೇರಿದರೆ ಇಲ್ಲಿನ ಮುಸಲ್ಮಾನರು ಸಂಪೂರ್ಣ ವಿರೋಧಿಸುವರು' ಎಂದು ಸ್ವತಂತ್ರರಾಗಿರುವುದಕ್ಕೆ ಕಾರಣವನ್ನು ಕೊಟ್ಟಿರುವರು. ಈ ಸಂಸ್ಥಾನದಲ್ಲಿ ಕೇವಲ ಶೇಕಡಾ 13ರಷ್ಟು ಮುಸಲ್ಮಾನರಿದ್ದು 87ರಷ್ಟು ಬಹುಸಂಖ್ಯಾಕರು ಮುಸಲ್ಮಾನೇತರರು. ಅತೀ ಅಲ್ಪ ಸಂಖ್ಯಾಕರಿಗಾಗಿ ಬಹುಸಂಖ್ಯಾಕರ ಆಶೆ ಹಾರೈಕೆಗಳನ್ನು ಬದಿಗೊತ್ತುವ ಈ ವಿಚಿತ್ರ ಧೋರಣೆಯು ಪ್ರಜಾಪ್ರಭುತ್ವಪ್ರಿಯರನ್ನು ದಂಗುಬಡಿಸಿದೆ.

ವಾರಾಂತ್ಯ ವರದಿ ವಿಮರ್ಶೆ

ಗಡಿನಾಡಿನ 'ತೀರ್ಪು'

ಗಡಿನಾಡು ಪ್ರಾಂತ್ಯವು ಪಾಕಿಸ್ತಾನಕ್ಕೆ ಸೇರಬೇಕೆಂದು ಶೇಕಡಾ 50ಕ್ಕಿಂತ ಸ್ವಲ್ಪ ಹೆಚ್ಚು ಮತದಾರರು ಅಭಿಪ್ರಾಯ ತಿಳಿಸಿರುವರು. ಅಂದರೆ ಪಾಕಿಸ್ತಾನಕ್ಕೆ ಸೇರಬಾರದೆಂಬವರ ಸಂಖ್ಯೆ ಸೇಕಡಾ 49ಗಿಂತ ಹೆಚ್ಚಾಗಿದೆ. ಈ ಅಂಕೆಸಂಖ್ಯೆಗಳಿಂದಲೇ ಪಠಾಣಿಸ್ತಾನಕ್ಕೆ ಎಷ್ಟೊಂದು ಬೆಂಬಲವಿದೆಯೆಂಬ ಸಂಗತಿ ಸ್ಪಷ್ಟವಾಗುತ್ತದೆ. ಕಾರಣ ಲೀಗಿನ ಪರವಾಗಿ ವೋಟು ಮಾಡಿದ ಸಂದರ್ಭಗಳು ಹೆಚ್ಚಿನ ಕಡೆಗಳಲ್ಲಿ ಒತ್ತಾಯ ಬೆದರಿಕೆಯವುಗಳಾಗಿವೆಯೆಂದು ಪ್ರತ್ಯೇಕ ತಿಳಿಸಬೇಕಾಗಿಲ್ಲ

ಪ್ರಾನರು ಜೀವನ ಹಂಗು ತೊರೆದು ಮಾಡಿದ ಪ್ರಯತ್ನವು ಸ್ತುತ್ಯವಾದುದು. ಆದರೆ ಮುಳುಗಿದ ಹಡಗಿನ ಕಪ್ತಾನರಾದ ಸುಲೇಮಾನರು ಸ್ವಜೀವ ರಕ್ಷಣೆಯಲ್ಲಿ ಮಗ್ನರಾದುದು ಹೇಯ ಸಾಹಸವೆಂದೆನ್ನಲಾಗಿದೆ. ಅಂತೂ ಕರಾವಳಿ ಪ್ರಯಾಣ ಮಾರ್ಗಗಳು ಸುರಕ್ಷಿತ ಯಾತಾಯಾತವನ್ನು ನಿರ್ವಹಿಸುವಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯವಾಗಿದೆ

ಬರ್ಮದ ಹತ್ಯಾಕಾಂಡ

ರಾಜಕೀಯ ಉದ್ದೇಶ ಸಾಧನೆಗಾಗಿ ಜೀವ ಹತ್ಯದ ಧೋರಣೆಯನ್ನು ಕೈಕೊಳ್ಳುವುದು ಅನಾಗರೀಕತೆಯ ಲಕ್ಷಣವೆಂದು ತಿಳಿಯಲ್ಪಡುತ್ತದೆ. ಸ್ವಾತಂತ್ರ್ಯೋದಯವನ್ನು ಕಾಣಲಿರುವ ಬರ್ಮದ ರಾಜಕೀಯ ಆಲ್ಲೋಲಕಲ್ಲೋಲತೆಯ ನಡುವೆ ದೇಶ ನೌಕೆಯನ್ನು ಕಷ್ಟಕರವಾಗಿಯಾದರೂ ಪ್ರಶಾಂತತೆಯಿಂದ ಚಲಾಯಿಸುತ್ತಿದ್ದ ಬರ್ಮದ ಜನಪ್ರಿಯ ನಾಯಕರಾದ ಆಂಗ್‌ಸೇನರನ್ನು ಮತ್ತವರ ಸಂಗಾತಿಗಳನ್ನು ಬಹಿರಂಗವಾಗಿ ಕೊಲೆ ಮಾಡಿದ ಪ್ರಕರಣವು ಜಗತ್ತಿನ ನೈತಿಕ ಭಾವನೆಯನ್ನು ಕೆಣಕಿದಂತಾಗಿದೆ. ಈ ವನ್ಯ ಚಟುವಟಿಕೆಗಳ ನಡುವಿನಲ್ಲಿ ನಾಗರೀಕ ಜೀವನವು ಸುಗಮವಾಗದು. ಕೊಲ್ಲುವಿಕೆಯಿಂದ ಕಾರ್ಯ ಸಾಗಿಸುವ ಪ್ರವೃತ್ತಿ ಮಾನವ ಜನಾಂಗಕ್ಕೆ ಗಂಡಾಂತರದ್ದು ಎಂದು ಮತ್ತೊಮ್ಮೆ ಕಲಿಯಬೇಕೆ?

THE

UNITED INDIA LIFE ASSURANCE CO., LTD.

ESTD 1906 — H. O. MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore.

ಹಡಗು ಪ್ರಯಾಣ

ಬೊಂಬಾಯಿಯ ಕಡಲ ದಂಡೆಯ ಬಳಿಯೆ ಥಟ್ಟಂತೆ ಮುಳುಗಿದ್ದ 'ರಾಮದಾಸ್' ಎಂಬ ಹಡಗಿನ ದುರಂತವು ಜಲಪ್ರಯಾಣದ ಭರವಸೆಗೆ ಧಕ್ಕೆಯನ್ನುಂಟುಮಾಡಿದೆಯೆಂದರೆ ಅತಿಶಯವಾಗದು. ನೀರುಪಾಲಾದ ಪ್ರಯಾಣಿಕರಲ್ಲನೇಕರ ಪ್ರಾಣ ಉಳಿಸಲು ಬೇರೆ ಹಡಗದ ರಾಮಚಿ ಎಂಬ ಕ

ಡಚ್ಚರ ಡಕಾಯಿತಿ

ತನ್ನ ಸಂಪೂರ್ಣ ಶಸ್ತ್ರಾಸ್ತ್ರ ಮತ್ತು ಸೈನ್ಯ ಸಿದ್ಧತೆಯಾದ ಕೂಡಲೇ ಎಲ್ಲಾ ಮಾತುಕತೆಗಳನ್ನು ಬದಿಗಿರಿಸಿ ಡಚ್ಚರು ತಮ್ಮ ವಸಾಹತಿನ ಇಂಡೋನೇಶಿಯನರ ಮೇಲೆ ಒಂದೇ ಸವನೆ ಪಾಶವೀ ಶಕ್ತಿ ಪ್ರಯೋಗ ಮಾಡಹತ್ತಿದ್ದಾರೆ. ಬ್ರಿಟಿಷರಂಥಾ ಜಾಣಾಕ್ಷ ಶಕ್ತಿ ರಾಷ್ಟ್ರಗಳು ವಸಾಹತುಗಳಿಗೆ ತಿಲಾಂಜಲಿ ಕೊಟ್ಟು ತಳಕೀಳುವಾಗ ಡಚ್ಚರಂಥಾ ನಿರ್ಬಲರು ವಸಾಹತು ಜನರನ್ನು ಶೋಷಿಸುವ ಕ್ಷುಲ್ಲಕ ಕಾಂಕ್ಷೆಗಳನ್ನು ಬಿಟ್ಟಿರದಿರುವುದು ಕೌತುಕದ ಸಂಗತಿ. ಭಾರತೀಯರಿಗಿಂತ ಎಷ್ಟೋ ಹೆಚ್ಚು ಶಸ್ತ್ರಾಸ್ತ್ರ ಸಜ್ಜಿತರಾಗಿರುವ ಇಂಡೋನೇಶ್ಯನ್ನರು ತಮ್ಮ ಆಳೊಡೆಯರಿಗೆ ಈ ಕೊನೆಯ ಹೋರಾಟದಲ್ಲಿ ತಕ್ಕ ಪಾಠವನ್ನು ಕಲಿಸದಿರಲಾರರು

ಜಿನ್ನರ ಆಶ್ವಾಸನೆ

ಪಾಕಿಸ್ತಾನದಲ್ಲಿನ ಅಲ್ಪ ಸಂಖ್ಯಾಕರಿಗೆ ಜೀವವಿತ್ತ ಭದ್ರತೆ ಮತ್ತು ಮತಾರಾಧನೆಯ ಸಂಪೂರ್ಣ ಸ್ವಾತಂತ್ರ್ಯ ಕೊಡುವುದಾಗಿ ಮಿ। ಜಿನ್ನರು ತಿಳಿಸಿದ್ದಾರೆ. ಆದರೆ ಪೂರ್ವ ಬಂಗಾಲದಿಂದ ಬಂದ ವರದಿಗಳನ್ನು ನಂಬುವುದಾದರೆ ಪಾಕಿಸ್ತಾನವು ಆಗಸ್ಟ್ 15ರ ನಂತರ ತಮ್ಮ ಸ್ವಂತ ರಾಜ್ಯವಾಗುವುದೆಂದು ಅಲ್ಲಿನ ಮುಸಲ್ಮಾನರು ನಂಬಿದಂತೆಯೂ ಅದೇ ಮೇರೆ ಆ ಅವಧಿಯೊಳಗೆ ಹಿಂದೂಗಳೆಲ್ಲರೂ ಅಲ್ಲಿಂದ ಬಿಟ್ಟುಹೋಗಬೇಕೆಂದು ಮುಂಜಾಗ್ರತೆ ಕೊಟ್ಟಿರುವಂತೆಯೂ ತಿಳಿದು ಬರುತ್ತದೆ. ಇದರಲ್ಲಿ ಸ್ವಲ್ಪವಾದರೂ ಸತ್ಯಾಂಶವಿಲ್ಲದಿರಲಿಕ್ಕಿಲ್ಲ. ಒಂದು ವೇಳೆ ವಿಪರೀತಗಳು ನಡೆದರೆ ಅದರ ಪ್ರತಿಕ್ರಿಯೆಗಳು ಹಿಂದುಸ್ಥಾನದಲ್ಲಿರುವ ಅಲ್ಪ ಸಂಖ್ಯಾಕರ ಮೇಲೂ ಆಗಬಹುದೆಂಬ ಸಂಗತಿಯನ್ನು ಪಾಕಿಸ್ತಾನಿಗಳು ಬಿಹಾರವನ್ನು ಜ್ಞಾಪಿಸಿಕೊಳ್ಳುವುದೊಳಿತೆಂದು ಬಂಗಾಲದ ಒಂದು ಪತ್ರಿಕೆ ಈಗಾಗಲೇ ಸಾರಿದೆ.

ಆದರ್ಶ ಪ್ರಾರಂಭ

ಘಟನಾ ಸಮಿತಿಯಲ್ಲಿ ಅಶೋಕ ಚಕ್ರಾಂಕಿತ ತ್ರಿವರ್ಣ ಧ್ವಜಕ್ಕೆ ತಾವು ವಿಧೇಯರಾಗಿದ್ದು ಅದನ್ನು ಸನ್ಮಾನತೆಯಿಂದ

(3ನೇ ಪುಟಕ್ಕೆ ಮುಂದುವರಿದಿದೆ)

ಚಿಲ್ಲರೆ ಸುದ್ದಿ ಸಂಗ್ರಹ

ಸಂಯುಕ್ತ ಅಮೇರಿಕದ ಡೀಟ್ರೋಯಿಟ್ ಪ್ರಾಂತ್ಯದ ಜೆ. ಸಿ. ಬಿಯರ್ಡ್ ಎಂಬ ಕ್ಷೌರಿಕರು ಒಂದು ನ್ಯಾಕಲು ಇರ್ವರ ಒಡೆತನಕ್ಕೆ ಸೇರಿದ್ದುದು ಮನಗಂಡು ಅದನ್ನು ಇಬ್ಭಾಗ ಮಾಡಿ ಒಂದೊಂದು ಚಕ್ರ ಒಬ್ಬೊಬ್ಬರಿಗೆ ಕೊಡುವಂತೆ ತೀರ್ಪು ಇತ್ತರು.

ಗಡಿನಾಡಿನ ಜಾತಿ ಗಲಭೆಯ ಹೆದರಿಕೆಯಿಂದ ಓಡಿಹೋದ ಹಿಂದುಗಳು ಹಿಂತಿರುಗಬೇಕೆಂದೂ ಅವರ ಜೀವವಿತ್ತಗಳಿಗೆ ಅಪಾಯ ಬಾರದಂತೆ ತಮ್ಮ ಮಕ್ಕಳನ್ನು ಭದ್ರತೆಗಾಗಿ ಎರವಿಡುವುದಾಗಿಯೂ ಬಟ್ಟಾಲ್ ಮತ್ತು ಹೆವೆಲಿಯನ್ ಎಂಬೂರುಗಳ ಪಠಾಣರು ವ್ಯಾಖ್ಯಾನ ಮಾಡಿರುವರೆಂದೂ ತಿಳಿದುಬರುತ್ತದೆ.

ಕಾಲಿನ ಹತ್ತಿರ ಬಂದು ಮಾಡುವ ಒಂದು ತರದ ಚಲ್ಲಣಗಳನ್ನು ಹಾಕುವುದರಿಂದ ಹೊರಗಿನ ವಾತಾವರಣಗಿಂತ ದೇಹವು ಐದಾರು ಡಿಗ್ರಿಗಳಷ್ಟು ತಂಪಾಗಿರುವ ಒಂದು ಉಡುಪು ಶೈಲಿಯು ಕಂಡುಹಿಡಿಯಲ್ಪಟ್ಟಿದೆ.

ಬ್ರಿಟನಿನ ಪ್ರತಿಯೊಂದು ಕುಟುಂಬವು ಸರಾಸರಿ ವಾರಕ್ಕೆ 3 ಪವನುಗಳನ್ನು ಧೂಮ್ರಪಾನ, ಸುರಾಪಾನ ಮತ್ತು ಜುಗಾರಿ ಆಟಗಳಿಗಾಗಿ ವ್ಯಯಿಸುತ್ತದೆ.

ಕೆನಡದ ನಗ್ನ ಸಂಘದವರು ಎಲ್ಲರ ಸೊತ್ತು ಎಂಬ ತತ್ವದಂತೆ ಪತ್ನಿಯರನ್ನೂ ಮಾಡಿಕೊಳ್ಳುವರು.

ಇಟಲಿಯಲ್ಲಿರುವ ಜಗತ್ತಿನ ಅತೀ ಚಿಕ್ಕ (ಕೇವಲ 38 ಮೈಲು ವಿಸ್ತೀರ್ಣ) ಪ್ರಜಾಪ್ರಭುತ್ವವಾದ ಸೈಂಟ್ ಮೆರಿನೊವು ಜನಾಂಗ ಸಂಘದ ಸದಸ್ಯತನಕ್ಕಾಗಿ ಅರ್ಜಿ ಹಾಕಿದೆ.

ಮಿನಿಟಿಗೆ ಒಂದು ಮಿಲಿಯುಕ್ಕೂ ಮಿಕ್ಕಿದ ಶಬ್ದಗಳನ್ನು ರವಾನಿಸುವ ವಾರ್ತಾವಾಹಕ ಉಪಕರಣವನ್ನು ಅಮೇರಿಕದಲ್ಲಿ ಕಂಡುಹಿಡಿಯಲಾಗಿದೆ.

ಯುದ್ಧಕ್ಕೆ ಮುಂಚೆ ಜಗತ್ತಿನಲ್ಲಿ ವರ್ಷಕ್ಕೆ 3400 ಕೋಟಿ ರಾತ್ಲ ಉಣ್ಣೆಯು ಖರ್ಚಾಗುತಿತ್ತು.

ವಿಶ್ವ ಭಾರತಿಯ ಪ್ರೊಫೆಸರ್ ಪಾಚೌ ಅವರು ರವೀಂದ್ರರ ಸಣ್ಣ ಕತೆಗಳನ್ನು ಚೀನೀ ಭಾಷೆಗೆ ಪರಿವರ್ತಿಸಿದ್ದಾರೆ.

ಒಂದು ವಿಚಿತ್ರ ಕಾಲೊರಸುವ ಚಾಪೆ ಕಂಡುಹಿಡಿಯಲಾಗಿದೆ. ಅತಿಥಿಗಳು ಇದರ ಮೇಲೆ ನಿಂತ ಕೂಡಲೇ ಅವರ ಬೂಟ್ಸುಗಳು ತನ್ನಷ್ಟಕ್ಕೆ ತಿಕ್ಕಲ್ಪಡುವುದು, ಒಳಗಿನ ಗಂಟೆ ಬಾರಿಸಲ್ಪಡುವುದು.

ಸ್ವದೇಶ ವಾರ್ತೆ

ಹಿಂದೂಸ್ಥಾನ ಸಾಮ್ಯವಾದೀ ಪಕ್ಷದ ಮುಖಂಡರಾದ ಶ್ರೀ ಜಯಪ್ರಕಾಶ ನಾರಾಯಣರು ಮುಂಬಯಿಯ ರಾಷ್ಟ್ರೀಯ ಪಕ್ಷದ ಮುಸ್ಲಿಮರ ಸಭೆಯಲ್ಲಿ ಮಾತನಾಡುತ್ತ ಜಾತೀಯ ತಳಹದಿಯ ರಾಜಕೀಯ ಪಕ್ಷಗಳು ಹೋಗಬೇಕೆಂದರು.

★

ಹಿಂದೂಸ್ಥಾನವು ಸ್ವತಂತ್ರವಾದ ಒಂದು ವರ್ಷದಲ್ಲಿ ಗೋವಧೆ ಪ್ರತಿಬಂಧೋಪಾಯವನ್ನು ಕೈಕೊಳ್ಳಬೇಕೆಂದೂ ಇಲ್ಲದಿದ್ದರೆ ತಾವು ಆಮರಣ ಉಪವಾಸ ಕೈಕೊಳ್ಳುವುದಾಗಿ ಸೇಟ್ ದಾಲ್ಮಿಯಾ ಅವರು ಸಾರಿದ್ದಾರೆ.

★

ಪಾಕಿಸ್ಥಾನದ ರಾಜಧಾನಿಯಾದ ಕರಾಚಿಗೆ ಸುಮಾರು 20 ಸಾವಿರ ಜನರು ಬರಲಿರುವರೆಂದು ಸಿಂಧ ಸರಕಾರವು ಅಲ್ಲಿಯ ಶಾಲೆ ಕಾಲೇಜುಗಳನ್ನು ಒಂದು ತಿಂಗಳ ಮಟ್ಟಿಗೆ ಮುಚ್ಚಬೇಕೆಂದು ನಿಶ್ಚೈಸಿದೆ. ಈ ವಿದ್ಯಾ ಸಂಸ್ಥೆಗಳಲ್ಲಿ ಹೊರಗಿನವರ ತಾತ್ಕಾಲಿಕ ವಸತಿ ಕಲ್ಪಿಸಲಾಗುವುದು.

★

ನೇತಾಜಿ ಸುಭಾಸಚಂದ್ರ ಬೋಸರ ಧ್ಯೇಯ ಧೋರಣೆ ಮತ್ತು ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕಿಳಿಸಲು ಒಂದು ಕ್ರಾಂತಿಕಾರಕ ರಾಜಕೀಯ ಪಕ್ಷವನ್ನು ಸಂಘಟಿಸಲು ಕಲ್ಕತ್ತೆಯಲ್ಲಿ ಕೂಡಿದ ರಾಜಕೀಯ ಪಕ್ಷಗಳ ಪರಿಷತ್ತಿನಲ್ಲಿ ಶ್ರೀ ಶರಚ್ಚಂದ್ರ ಬೋಸರಿಗೆ ಅಧಿಕಾರ ಕೊಡಲಾಗಿದೆ

★

೧೮ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಅಯೋಧ್ಯಾ ರಾಜ್ಯವನ್ನು ಪುನಃ ಅದಕ್ಕೆ ಬಾಧ್ಯಸ್ಥರಾದ ಅಯೋಧ್ಯೆಯ ನವಾಬರ ವಂಶಜರಿಗೆ ಮರಳಿ ದೊರಕಿಸುವ ಬಗ್ಗೆ ಈಗ ಸಂಯುಕ್ತ ಪ್ರಾಂತ್ಯದಲ್ಲಿ ಆ ವಂಶದವರ ಚಳವಳಿಯೊಂದು ಪ್ರಾರಂಭವಾಗಿದೆ.

★

ಭಾರತ ಮತ್ತು ಪಾಕಿಸ್ಥಾನಗಳೊಳಗೆ ರಕ್ಷಣೆಯ ಯೋಗ್ಯ ಒಪ್ಪಂದವಾಗುವಂತೆ ಬ್ರಿಟಿಷ್ ಸರಕಾರವು ತನ್ನ ವರ್ಚಸ್ಸನ್ನು ಉಪಯೋಗಿಸುವುದು. ಈ ಬಗ್ಗೆ ಲಾರ್ಡ್ ಇಸ್ಮೆಯವರು ಹೊಸದಿಲ್ಲಿಯಲ್ಲಿ ಬೇಗನೆ ಮಾತುಕತೆ ಪ್ರಾರಂಭಿಸಲಿರುವರೆಂದು ತಿಳಿದು ಬರುತ್ತದೆ.

★

ತಿರುವಾಂಕೂರಿನ ದಿವಾನರು ಲಕ್ಷಾಂತರ ರೂಪಾಯಿ ಖರ್ಚುಮಾಡಿ ಪುಂಡ ಜನರ ಒಂದು ಸೈನ್ಯವನ್ನು ತಯಾರಿಸುವರೆಂದು ತಿಳಿದ ಅಲ್ಲಿನ ಮಹಾರಾಜರಿಗೆ ಕೌತುಕವಾಗಿದೆಯೆಂದು ಬ್ಲಿಟ್ಜ್ ಪತ್ರಿಕೆಯ ಬಾತ್ಮಿದಾರರು ತಿಳಿಸುತ್ತಾರೆ. ಈ ಪತ್ರಿಕೆಯನ್ನು ಆ ಸಂಸ್ಥಾನದಲ್ಲಿ ನಿಷೇಧಿಸಿದ್ದಾರೆ.

★

ಇತ್ತೀಚೆಗೆ ಹೈದರಾಬಾದಿನ ಶಿಷ್ಟಮಂಡಳವೊಂದು ಮೌಂಟ್ ಬೇಟನರನ್ನು ಕಂಡಾಗ ಅವರು ಬಿರಾರನ್ನು ನಿಜಾಮರಿಗೆ ಬಿಟ್ಟುಕೊಡುವ ಯೋಚನೆ ಬಿಟ್ಟುಬಿಡಬೇಕೆಂದೂ, ನಿಜಾಮರು ಭಾರತ ಸಂಯುಕ್ತ ಕೇಂದ್ರಕ್ಕೇ ಸೇರುವಂತೆ ಪ್ರಯತ್ನಿಸಬೇಕೆಂದೂ ಸೂಚಿಸಿರುವರಂತೆ

★

ಪ್ರಾಂತ್ಯಗಳ ಗವರ್ನರ ಪದವಿಗೆ ಸರ್ ಗೋಪಾಲ ಸ್ವಾಮಿ ಐಯ್ಯಂಗಾರ್, ಸರ್ ಬೆನೆಗಲ್ ರಾಮರಾವ್, ಗೋವಿಂದ ವಲ್ಲಭಪಂತ್, ಮೌಲಾನಾ ಅಜಾದ್, ಜೋನ್ ಮಾಥಯ್ ಎ.ಡಿ ಶ್ರೋಫ್, ಮುನ್ಶಿ ಈ ಮೊದಲಾದವರ ಹೆಸರುಗಳು ಸೂಚಿತವಾಗಿವೆಯಂತೆ.

★

ಪಾಕಿಸ್ಥಾನ ಸರಕಾರವು ತನ್ನ ಪ್ರದೇಶದ ಬೇಂಕುಗಳಲ್ಲಿದ್ದ ಹಣವನ್ನು ಜಪ್ತಿ ಮಾಡಬಹುದೆಂದು ಹರಡಿದ ವಾರ್ತೆಯೊಂದರ ಪರಿಣಾಮವಾಗಿ ಸಿಂಧ ಪ್ರಾಂತದ ಬೇಂಕುಗಳಿಂದ ಕಳೆದ ಕೆಲವೇ ದಿನಗಳಲ್ಲಿ 6 ಕೋಟಿ ರೂಪಾಯಿಗಳಷ್ಟು ಬಂಡವಾಳವು ಪರ ಪ್ರಾಂತ್ಯಗಳಿಗೆ ಸ್ಥಳಾಂತರಿಸಲ್ಪಟ್ಟಿದೆಯಂತೆ

ಭಾರತದಲ್ಲಿ ಸಿರಿಸಂಪತ್ತಿನ ವೈವಿಧ್ಯ

ಫ್ರೆಂಚ್ ಪ್ರತಿನಿಧಿಗಳ ಅಭಿಪ್ರಾಯ

ವಿಶ್ವತರುಣ ಸಂಘದ ಫ್ರೆಂಚ್ ಸದಸ್ಯರೊಬ್ಬರು ಭಾರತದಲ್ಲಿನ ಶ್ರೀಮಂತ ಬಡವರೊಳಗಿರುವ ಸಂಪತ್ತಿನ ವೈವಿಧ್ಯದ ಕುರಿತು ಟೀಕಿಸಿರುವರು. ಇವರು ಇತ್ತೀಚೆಗೆ ನಮ್ಮ ದೇಶದ ಸಂಚಾರ ಮಾಡಿದ್ದರು:

"ಭಾರತದಲ್ಲಿ ಒಂದು ಅತ್ಯಲ್ಪ ಸಂಖ್ಯಾಕರಲ್ಲಿ ವಿಪರೀತವಾಗಿ ಒಟ್ಟುಗೂಡಿರುವ ಸಂಪತ್ತಿನ ವೈವಿಧ್ಯತೆಯು ಕೌತುಕಗೊಳಿಸುವಂತಹವಿದೆ; ಬಹುಸಂಖ್ಯಾಕ ಅಲ್ಲಿನ ಜನತೆಯ ದರಿದ್ರತೆಯ ಗೋಳು ಹೇಳಿ ತೀರದು. ಹೆಚ್ಚಿನವರು ಉಪವಾಸ ತಪ್ಪಿಸಲು ಅದೆಷ್ಟೋ ಶ್ರಮಗೈಯ ಬೇಕಾಗುವುದು.

ರೈತನ ಸಂಕಷ್ಟ

"ಭಾರತ ಮಕ್ಕಳ ಮತ್ತು ತರುಣರ ಅವಸ್ಥೆಯು ಕಷ್ಟತರದ್ದು. ಅಲ್ಲಿನ ಮಣ್ಣು ಫಲವತ್ತಾದುದು. ಆದರೆ ರೈತ ಒಕ್ಕಲು ತಮ್ಮ ಉತ್ಪತ್ತಿಯ ಶೇಕಡಾ 50ರಷ್ಟು ಜಮೀನ್ದಾರರಿಗೆ ಕೊಡಬೇಕು, ಉಳಿದುದು ತೆರಿಗೆ ತೆರಲು ಸಾಕಾಗುವುದಿಲ್ಲ. ಹೊಸ ಬೆಳೆಯ ತನಕ ರೈತರು ತಮ್ಮ ಊಟಕ್ಕೆ ಅಕ್ಕಿಯನ್ನು ಸಾಲಪಡೆಯಬೇಕಾಗುವುದು.

"ಭಾರತದಂತೆ ಬರ್ಮಾ, ಮಲಯಾ ಮತ್ತು ಇಂಡೋನೇಷ್ಯಾದ ತರುಣರ ಪರಿಸ್ಥಿತಿಯೂ ಕಠಿಣತರದ್ದಾಗಿದೆ. ಅವರಿಗೆ ಯೋಗ್ಯ ರಾಜಕೀಯ ಹಕ್ಕು ಬಾಧ್ಯತೆಗಳೂ ಇಲ್ಲ. ಇಲ್ಲಿಯ ತರುಣರು ವಿಶ್ವತರುಣರೊಂದಿಗೆ ಪ್ರಜಾಪ್ರಭುತ್ವ ತತ್ವಕ್ಕಾಗಿ ಹೋರಾಡಲು ಸಿದ್ಧರಾಗಿರುವರು"

ವಾರಾಂತ್ಯ ವರದಿ ವಿಮರ್ಶೆ

(೧ನೇ ಪುಟದಿಂದ)

ಕಾಣುವೆವೆಂಬ ಭರವಸೆಯನ್ನು ಲೀಗ್ ಪಕ್ಷದ ಮುಖಂಡರಾದ ಖಾಲಿ ಕುಜಮಾನರು ಕೊಟ್ಟಿರುವುದು. ಪ್ರಜಾಪ್ರಭುತ್ವವಾದುದು ಅಲ್ಪ ಸಂಖ್ಯಾಕರು ಬಹುಸಂಖ್ಯಾಕರ ತೀರ್ಮಾನಗಳನ್ನು ಮನ್ನಿಸಿದರೇನೇ ಪ್ರಜಾಪ್ರಭುತ್ವ ಸಾಂಗವಾಗಿ ಸಾಗೀತು. ಅಂತೇ ಅಲ್ಪ ಸಂಖ್ಯಾಕರನ್ನು ಸಂತೃಪ್ತಿಯಿಂದ ನಡೆಸಿಕೊಂಡು ಬರುವುದು ಬಹುಸಂಖ್ಯಾಕರ ಕರ್ತವ್ಯವೇ ಆಗಿದೆ

ವಿಶೇಷ ಸೌಕರ್ಯ

ಮುಸ್ಲಿಮರಿಗೆ ಈಗಿರುವ ವಿಶೇಷ ಸವಲತ್ತುಗಳನ್ನು ಸಂಯುಕ್ತ ಪ್ರಾಂತ್ಯದ ಸರಕಾರವು ತೆಗೆದುಹಾಕಿದೆ. ಮುಂಬಯಿ ಸರಕಾರವು ಅದೇ ಧೋರಣೆ ಅನುಸರಿಸುವುದು. ಆದರೆ ಮದ್ರಾಸ್ ಸರಕಾರವು ಅದನ್ನು ಹಾಗೆ ಮಾಡಲು ಸಿದ್ಧವಿಲ್ಲ. ಪಾಕಿಸ್ಥಾನದಲ್ಲಿ ಹಿಂದೂಗಳಿಗೆ ಅಂತಹ ಸವಲತ್ತುಗಳು ಸಿಗಲಾರವೆಂದು ಸಿಂಧ ಪ್ರಧಾನಿಗಳು ಕಾರ್ಯತಃ ಮಾಡಿ ತೋರಿಸಿದ್ದಾರೆ. ಹೈದರಾಬಾದಿನ ನಿಜಾಮರು ಅಲ್ಲಿನ ಶೇಕಡಾ 87 ಹಿಂದೂಗಳಿಗಿಲ್ಲದ ಅತೀ ವಿಶೇಷದ ಸವಲತ್ತುಗಳನ್ನು ಶೇಕಡಾ 13 ಮುಸ್ಲಿಮರಿಗೆ ಕೊಟ್ಟಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಬಹುಸಂಖ್ಯಾಕ ಅಲ್ಪಸಂಖ್ಯಾಕರೆಲ್ಲರಿಗೆ ಸಮಾನ ಸಂದರ್ಭಗಳು ಸಿಗಬೇಕು ಅದರಲ್ಲಿಯೂ ಪಾಕಿಸ್ಥಾನದಲ್ಲಿ ಹಿಂದೂಗಳಿಗೆ ಸಿಗದನ್ನು ಹಿಂದೂಸ್ಥಾನದಲ್ಲಿ ಮುಸಲ್ಮಾನರಿಗೆ ದೊರಕಿಸುವುದು ಸಮಂಜಸವಲ್ಲವೆಂದು ಒಂದು ಪ್ರಮುಖ ಪತ್ರಿಕೆ ಟೀಕಿಸಿರುವುದು.

ವಾತ ರೋಗಕ್ಕೆ

ಪುಟ್ಟ ಸೀಸೆ ಅಪಾರ ಪ್ರಖ್ಯಾತಿ

ನೋವುಳ್ಳ ಜಾಗವನ್ನು ಬೆಚ್ಚಗೆ ಮಾಡಿ ದಿನಕ್ಕೆ ೩ ಸಲ 10-15 ನಿಮಿಷಗಳು ಲಿಟಲ್ಸ್ ಓರಿಯಂಟಲ್ ಬಾಮನ್ನು ತಿಕ್ಕಿರಿ. ನೋವು ಮತ್ತು ಉರಿ ಕ್ಷಣ ಮಾತ್ರದಲ್ಲಿ ಮಾಯವಾಗುವುದು.

ಶೀಘ್ರ ಖಾತರಿ ಗುಣ!

ಸ್ವತಂತ್ರ ಭಾರತದ ಧ್ಯೇಯಾದರ್ಶಗಳೇನು?

ವಿಮೋಚನೆಗೊಂಡ ದೇಶದ ಉಜ್ವಲ ಭವಿಷ್ಯ

ಮಾನವ ಜನಾಂಗಕ್ಕೆ ಗಾಂಧೀಜಿಯ ಸೇವೆ

ಪಾರ್ಲಿಮೆಂಟಿನ ಸದಸ್ಯರ ಶ್ಲಾಘನೆ

"ಬಡತನದ ಭಾರತ, ಧೀರ ಸಾಹಸಿಗಳ ಭಾರತ, ಮತ್ತು ತತ್ವಜ್ಞಾನಿಗಳ ಭಾರತವು ಸಮಗ್ರವಾದೊಂದು ಅಖಂಡ ಪುಣ್ಯಭೂಮಿ" ಹೀಗೆಂದು ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರಾದ ಮಿ| ರೆಜಿನಾಲ್ಡ್ ಸೊರೆನ್ಸನ್ ಅವರು ಒಂದು ಲೇಖದಲ್ಲಿ ವಿಚಾರಪರ ವಿಷಯಗಳನ್ನು ಬರೆಯುತ್ತಾ, ಭಾರತವು ಲೋಕ ಸಂಸ್ಕೃತಿಗೆ ಮಾಡಿದ ಸೇವೆಯನ್ನು ವಿವರಿಸುತ್ತಾರೆ:

ನಾವು ಭಾರತದ ರಾಜಕೀಯ ವಿಮೋಚನೆಯ ಕುರಿತು ಹೆಮ್ಮೆಪಟ್ಟುಕೊಳ್ಳಬಹುದು. ಆದರೆ ಇಂದು ಭಾರತದ ಆರ್ಥಿಕ ದುರವಸ್ಥೆಯನ್ನು ಸುಧಾರಿಸುವುದರ ಕಡೆಗೆ ನಮ್ಮ ಹೆಚ್ಚಿನ ಗಮನವು ಸಲ್ಲತಕ್ಕದ್ದು. ಇಷ್ಟಾದರೂ ಭಾರತದ ಇತರ ಗುಣಲಕ್ಷಣಗಳು ಅಮರವಾದವು. ಭಾರತದ ಸ್ಫೂರ್ತಿಭಾವವು ಸಿರಿವಂತವಾದ ಫಲವನ್ನು ಕೊಟ್ಟ ಕೊಡುವುದು ಇದಕ್ಕೆ ಪ್ರಥಮತಾ ಆ ದೇಶದ ಆರ್ಥಿಕ ನೆಲವನ್ನು ಸಾರವತ್ತುಗೊಳಿಸುವುದು ಅತ್ಯಾವಶ್ಯಕ.

ರಶ್ಯವು ಹಲವು ವಿಧಾನಗಳಲ್ಲಿ ಉತ್ತಮ ಆದರ್ಶಗಳನ್ನು ಕಲ್ಪಿಸಿಕೊಡುತ್ತದೆ ಹೀಗೆಂದ ಮಾತ್ರಕ್ಕೆ ಕೊಮ್ಯುನಿಸ್ಟ ತತ್ವಜ್ಞಾನವನ್ನು ನಾನು ಮೆಚ್ಚುವೆನೆಂದರ್ಥವಲ್ಲ ರಶ್ಯದ ಕೆಲವು ರಾಜಕೀಯ ಧೋರಣ ಮತ್ತು ಆಡಳಿತದ ರೀತಿ ನೀತಿಗಳನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ ರಶ್ಯದ ಕೆಲವು ಗುಣಗಳಿಗೆ ಮತ್ಸರವಿಲ್ಲ ಉದಾ ಕೆಲವೇ ವರ್ಷಗಳಲ್ಲಿ ಅಲ್ಲಿ ನಿರಕ್ಷರತೆಯನ್ನು ಸಂಪೂರ್ಣ ನೀಗಿಸಲಾಗಿದೆ ಜನಾಂಗೀಕ, ಮತೀಯ ವೈಷಮ್ಯಗಳನ್ನು ಕಿತ್ತೊಗೆಯಲಾಗಿದೆ ವಿವಿಧ ಮತ ಜನಾಂಗಗಳ ಜನರು ಅಲ್ಲಿ ಸಾಮಾಜಿಕ ಐಕ್ಯಮತ್ಯದಿಂದಿರಲು ಕಲಿತಿದ್ದಾರೆ ಅಲ್ಲಿನ ಮಹಿಳೆಯರ ಸ್ಥಾನಮಾನಗಳು ಉನ್ನತಿಗೊಂಡಿವೆ ಹುಟ್ಟಿದ ಮಗುವಿಗೆ ಸರಕಾರದ ರಕ್ಷಣೆ ಮತ್ತು ಭವಿಷ್ಯದ ಭದ್ರತೆ ಕೊಡಲ್ಪಟ್ಟಿದೆ ಕೈಗಾರಿಕೆಗಳೆಲ್ಲ ಸರಕಾರ ವಶವಿದ್ದು ನಿಯಂತ್ರಣಗೊಳಗಾಗಿವೆ ರೈತ ಮಜೂರರಿಗೆ ಆರ್ಥಿಕ ಭರವಸೆ ಮತ್ತು ಹೊಣೆಗಾರಿಕೆಯ ಸ್ಥಾನಮಾನಗಳು ದೊರಕುವಂತಾಗಿದ

★

ಭಾರತದ ಚಾರಿತ್ರಿಕ ಹಿನ್ನೆಲೆ ಮತ್ತು ಪರಿಸ್ಥಿತಿಗಳು ರಶ್ಯಕ್ಕಿಂತ ತೀರ ಭಿನ್ನವಾದುವು. ಭಾರತವು ತನ್ನ ಸ್ವಂತ ಸಂಸ್ಥೆಗಳ ಮತ್ತು ವಿಚಾರಗಳ ಮೂಲಕ ತನ್ನ ಸ್ವಂತ ಪರಿವರ್ತನೆಯನ್ನು ಮಾಡಿಕೊಳ್ಳಬಹುದು ಅನೇಕ ಭಾರತೀಯ ಮುಂದಾಳುಗಳೂ ಇದೇ ವಿಶ್ವಾಸವನ್ನು ತಳೆದಿರುತ್ತಾರೆ ಭಾರತವು ತನ್ನ ಅಭಿವೃದ್ಧಿಯನ್ನು ಮಾತ್ರವಲ್ಲ ಇಡೀ ವಿಶ್ವದ ಶ್ರೇಯಸ್ಸನ್ನು ಕೂಡಾ ಸಾಧಿಸಲು ಅನುವಾಗಬಹುದು.

ಈಗ ಭಾರತವು ರಾಜಕೀಯವಾಗಿ ಸಂಪೂರ್ಣ ಸ್ವತಂತ್ರವಾಗಿರುವುದರಿಂದ ಮುಂದೆ ಬ್ರಿಟನನೊಡನೆ ಅದು ಚಿರ ಸೌಹಾರ್ದ ಸಹಕಾರ, ಸ್ನೇಹಗಳಿಂದ ಬಾಳುವುದೆಂಬ ಹಾರೈಕೆಯಿದೆ. ಬ್ರಿಟಿಷರಾದ ನಾವು 300 ವರ್ಷಕ್ಕೂ ಮಿಕ್ಕಿದ ಕಾಲದಿಂದ ಭಾರತದೊಡನೆ ಸಂಪರ್ಕವುಳ್ಳವರಾಗಿದ್ದೇವೆ. ಕಳೆದ ಶತಮಾನದ ಕೆಲವು ಘಟನೆಗಳೂ (1857ರ ದಂಗೆ?) ಮತ್ತು ಇತ್ತೀಚೆಗಿನ ಕೆಲವು ಘಟನೆಗಳೂ ನಮ್ಮ ಮತ್ತು ಭಾರತೀಯರ ಸಂಬಂಧದಲ್ಲಿ ಖೇದಕರವಾದ ಪ್ರಕಾಶವನ್ನು ಬೀರುತ್ತವೆ. ಮುಂದಿನ ನಮ್ಮ ಸಂಬಂಧವು ಸಂಪೂರ್ಣ ಬೇರೆಯ ತರದ್ದಾಗಿ ಪರಸ್ಪರ ಸೌಹಾರ್ದ, ವಿಶ್ವಾಸಗಳದ್ದಾಗಬೇಕು ಇಂತಹ ಸಂಬಂಧದಿಂದ ಈ ಎರಡು ದೇಶಗಳು ಪರಸ್ಪರವಾಗಿ ಕಲಿಯುವ ವಿಷಯಗಳು ತುಂಬಾ ಇವೆ ಈ ಅನುಭವದಿಂದ ಉಭಯದೇಶ ಪ್ರಜೆಗಳ ಶಾರೀರಿಕ ಮತ್ತು ಮಾನಸಿಕ ಸ್ಥಿತಿಗಳು ಅತ್ಯುಚ್ಚಮಟ್ಟಕ್ಕೆ ತಲುಪಲು ಸಹಾಯವಾಗುವುದರಲ್ಲಿ ಸಂದೇಹವಿಲ್ಲ

ಶಾಂತಿ ಮತ್ತು ವಿಶ್ವಬಾಂಧವ್ಯ

ಬ್ರಿಟನ್ ಭಾರತದ ಮಾನಕೋಟಿಯ ಅಂಶಗಳಲ್ಲಿ ಪರಸ್ಪರ ವಿಶ್ವಾಸ ಸ್ನೇಹಭಾವಗಳನ್ನು ಹೆಚ್ಚಿಸಲು ಕಿಂಚಿತ್ ಸಹಾಯ ಮಾಡಿದ ಹತ್ತು ಮಂದಿ ಪಾರ್ಲಿಮೆಂಟ್ ಸದಸ್ಯರಲ್ಲಿ ನಾನೂ ಒಬ್ಬನಾಗಿರುವೆನೆಂಬ ಭಾವನೆ ನನ್ನಲ್ಲಿ ಅತಿಶಯವಾದ ತೃಪ್ತಿಯನ್ನುಂಟುಮಾಡಿದೆ (ಹಿಂದೆ ಪಾರ್ಲಿಮೆಂಟರಿ ಪ್ರತಿನಿಧಿಗಳು ಭಾರತ ಪರಿಸ್ಥಿತಿ ಪರಿಶೀಲನೆಗಾಗಿ ಬಂದಿದ್ದಾಗ ಮಿ| ಸೊರೆನ್ಸನ್ನರು ಅವರಲ್ಲೊಬ್ಬರಾಗಿದ್ದರು.)

ಭವಿಷ್ಯವನ್ನು ಸ್ಪಷ್ಟವಾಗಿ ಸೂಚಿಸಲು ಯಾರಿಂದಲೂ ಸಾಧ್ಯವಿಲ್ಲ ಎಲ್ಲವೂ ಕಾರ್ಯ ಕಾರಣದ ಫಲಿತಾಂಶವಾಗಿಯೇ ಸಂಭವಿಸುವುದು ಈಗಿನ ಫಲವು ಗತ ಕಾರ್ಯಗಳ ಪರಿಣಾಮವಾಗಿದೆ ವರ್ತಮಾನ, ಭೂತಕಾಲಗಳ ಪರಿಣಾಮವು ಭವಿಷ್ಯದ ಮೇಲೆ ಖಂಡಿತ ಪ್ರಭಾವಿತವಾಗುವುದು ಆದರೆ ಅದನ್ನು ವಿವೇಕಪೂರ್ಣವಾಗಿ ನಿರ್ದೇಶಿಸುವುದು ಮಾನವನ ಶಕ್ತಿಯೊಳಗಿದೆ ಅದನ್ನು ಹಾಳುಗೈವುದೂ ಅವನ ಶಕ್ತಿಯೆ ಭವಿಷ್ಯವನ್ನು ಶಾಂತಿ ಮತ್ತು ವಿಶ್ವಬಾಂಧವ್ಯ ಇಲ್ಲವೆ ವಿನಾಶಕಾರಕ ಯುದ್ಧದ ಕಡೆಗೆ ನಿರ್ದೇಶಿಸಲೂ ಸಾಧ್ಯವಿದೆ

★

ಗಾಂಧೀಜಿಯ ಸೇವೆ

ಈ ಸಂದರ್ಭದಲ್ಲಿ ಮಹಾತ್ಮಾಗಾಂಧಿಯವರಿಗೆ ನಾವು ನಮ್ಮ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ ಅವರ ಶಕ್ತಿ ಪ್ರಭಾವಗಳಿಗೂ ಒಂದು ಮಿತಿಯಿದೆಯೆಂಬ ಸಂಗತಿಯನ್ನು ನಾನು ಮರೆಯುವುದಿಲ್ಲ. ಅವರ ಕೆಲವು ತತ್ವಗಳೂ ನಮಗೆ ಒಪ್ಪಿಗೆಯಾಗಲಿಕ್ಕಿಲ್ಲ. ಆದರೆ ಹಿಂಸೆ ವೈಷಮ್ಯಗಳನ್ನು ಬದಿಗಿರಿಸಿ ನೈತಿಕ ಶಕ್ತಿ ಬಲದಿಂದ ಹೋರಾಟ ನಡೆಸುವ ಮಾರ್ಗವನ್ನು ಜಗತ್ತಿಗೆ ತೋರಿಸಿಕೊಟ್ಟು ಅದರಿಂದ ಉದಾತ್ತವಾದ ಮಾನವ ಸೇವೆ ಮಾಡಿದ್ದಾರೆ ಅವರ ತತ್ವಗಳನ್ನು ಅವರಂತೇ ಅನುಸರಿಸಲು ಇತರರಿಗೆ ಸಾಧ್ಯವಿದೆಯೊ ಇಲ್ಲವೋ ಎಂಬುದೂ, ಇಲ್ಲವೆ ಅವರೇ ತಮ್ಮ ತತ್ವಗಳನ್ನು ಪರಿಪೂರ್ಣ ಆಚರಿಸುತ್ತಾರೊ ಇಲ್ಲವೊ ಎಂಬುದರ ಕುರಿತು ಕೆಲವರು ಸಂದೇಹಪಟ್ಟುಕೊಂಡರೂ ಅವರು ತಮ್ಮ ತತ್ವಗಳನ್ನು ಸಾರುವ ರೀತಿಯಲ್ಲಿ ಸಂಪೂರ್ಣ ಪ್ರಾಮಾಣಿಕತೆಯಿದೆಯೆಂಬುದರಲ್ಲಿ ಎರಡಭಿಪ್ರಾಯಗಳಿಲ್ಲ

ಹಿರೋಶೀಮಾ ನಗ ಸಾಕಿಯ ವಾರದಿಂದ ಜಗತ್ತು ಒಂದು ದಿನವಾದರೂ ಈ 'ಅರ್ಧನಗ್ನ ಭಾರತ ಫಕೀರ'ನೆಂದು ಒರ್ವ ಮುದಿ ಅಂಧ ಸಾಮ್ರಾಜ್ಯವಾದಿ ಮುತ್ಸದಿಯಿಂದ ವರ್ಣಿಸಲ್ಪಟ್ಟ ಮುದುಕನ ತತ್ವಗಳ ಕಡೆಗೆ ತಿರುಗುವುದಿಲ್ಲವೆಂದು ಹೇಗೆ ಹೇಳಬರುತ್ತದೆ?

ಕಾಲಾನುಗತದಲ್ಲಿ ಗಾಂಧೀಜಿಯು ಈ ಮೃತ್ಯು ಲೋಕದಿಂದ ಅದೃಶ್ಯರಾಗುವರಾದರೂ ಅವರ ಹೆಸರು ಶಾಶ್ವತವಾಗಿ ಬಾಳಿ ಭಾರತೀಯರ ತಲಾಂತರಗಳ ಭಾವಿ ಪೀಳಿಗೆಯಿಂದಲೇ ಮಾತ್ರವಲ್ಲ ಜಗತ್ತಿನ ಜನಾಂಗಗಳೆಲ್ಲರಿಂದ ಮನ್ನಿಸಲ್ಪಡುವುದು ಖಂಡಿತ.

ಕ್ರೈಸ್ತೇತರರಾದರೂ ಕ್ರಿಸ್ತ ಮತ ಪ್ರವರ್ತಕನ ಉಚ್ಚ ತತ್ವಗಳಿಗೆ ಆಳವಾದ ಸಾಮಾಜಿಕ ಭಾವನೆಗಳನ್ನು ಕೊಟ್ಟು ಪ್ರಚಾರಿಸಿದ ಕೀರ್ತಿ ಅವರಿಗೆ ಸಲ್ಲುವುದು

ಘನಗಂಭೀರ ಭವಿಷ್ಯ

ಹಳೇ ನಾಗರೀಕತೆಗಳು ತಮ್ಮ ಕತೆಯನ್ನು ಹೇಳುವಂತೆ ತಮ್ಮ ಭಗ್ನಾವಶೇಷಗಳನ್ನು ಬಿಟ್ಟುಹೋಗುವವು. ಭಾರತದ ಭಾಗ್ಯದೇವತೆಯು ಅನೇಕ ಎಡರುತೊಡರುಗಳನ್ನೆದುರಿಸಿದೆ. ಆದರೂ ಅವಳು ತನ್ನ ಗತವೈಭವದ ಸಂಪರ್ಕವನ್ನಿರಿಸಿಕೊಂಡೇ ಸಚೇತನವಾಗಿ ಮುಂದರಿಯುವಳು. ಮುಂದಿನನೇಕ ಶತಮಾನಗಳ ತನಕ ಅವಳು ಬದುಕಿ ಬಾಳುವಳು. ಆಗವಳು ಹಿಂದಿನಕ್ಕಿಂತ ಹೆಚ್ಚು ಘನಗಂಭೀರತೆಯಿಂದ ತನ್ನ ಪ್ರಭಾವವನ್ನು ತೋರುವಳು.

ಭಾರತದ ಭಗ್ನಾವಶೇಷಗಳೊಳಗೆ ಗತ ಕಾಲದ ವೈಭವವೇ ಮಾತ್ರವಲ್ಲ ಭವಿಷ್ಯದ ಶಕ್ತಿ ಸಾಮರ್ಥ್ಯಗಳೂ ಹುದುಗಿಕೊಂಡಿವೆ. ಭಾರತ ಮುಖಂಡರ ಮೇಲೆ ಈಗ ಅಗಾಧ ಹೊಣೆಗಾರಿಕೆಯು ಬಿದ್ದಿದೆ. ಅವರೆದುರಿಗಿರುವ ಸಮಸ್ಯೆಗಳೂ ಕಲ್ಪನಾತೀತ ಗಾತ್ರದವಿವೆ ಪ್ರಾಚೀನ ಜ್ಯೋತಿಷ್ಯ ಶಾಸ್ತ್ರದೊಂದಿಗೆ ಆಧುನಿಕ ವಿಜ್ಞಾನವೂ, ಪ್ರಾಚೀನ ದೇವಾಲಯಗಳೊಂದಿಗೆ ಅರ್ವಾಚೀನ ಯಂತ್ರಾಗಾರಗಳೂ, ದುರ್ದೆಶೆಯು ಘನಸ್ಥಿತಿಯೊಂದಿಗೆ ಅಲ್ಲಿ ಅನ್ಯೋನ್ಯವಾಗಿ ಸಂಪರ್ಕವಾಗುತ್ತಿವೆ. ಪೂರ್ವ ಪಶ್ಚಿಮ ಸಂಸ್ಕೃತಿಗಳು ಅಲ್ಲಿ ಖಂಡಿತವಾಗಿಯೂ ಸಮ್ಮಿಳಿತವಾಗಿ ಕಿಪ್ಲಿಂಗನ ಪೂರ್ವ ಪಶ್ಚಿಮಗಳೆಂದಿಗೂ ಒಂದಾಗವೆಂಬ ನಿರೂಪವು ಸುಳ್ಳಾಗಿದೆ ಪಾಶ್ಚಿಮಾತ್ಯರ ದೋಷಗಳೊಂದಿಗೆ ಗುಣಗಳೂ ಅಲ್ಲಿ ಹೊಂದಿಕೆಯಾಗಿವೆ. ಎಲ್ಲಾ ದರ್ಮಗಳ ಭಾರತೀಯರು ಸಾಮಾಜಿಕ ಸುಧಾರಣೆ ಐಕ್ಯ ಸ್ವಾತಂತ್ರ್ಯಕ್ಕಾಗಿ ದುಡಿದರೆ ಅನೋಪಮವಾದ ನೂತನ ಭಾರತವೊಂದು ಸೃಷ್ಟಿಯಾಗಲಿರುವುದು. "ಸೌಂದರ್ಯದ ಹಾರವನ್ನು ಭೂಮಾತೆಗೆ ಅಲಂಕರಿಸಲು ಪ್ರಭಾತದೇವಿಯು ಬರುತ್ತಿರುವಳು" ಎಂಬ ರವೀಂದ್ರರ ಹಾರೈಕೆಯು ಅಲ್ಲಿಗೆ ಪರಿಪೂರ್ಣವಾಗುವುದು

ಉತ್ತರ ಬರ್ಮದಲ್ಲಿ ದಂಗೆಗಳೆದ್ದು ಅಲ್ಲಿನ ಪೋಲಿಸ್ ಮತ್ತಿತರ ಸಂರಕ್ಷಣಾಧಿಕಾರಿಗಳು ಕೂಡ ಬಂಡುಗಾರರನ್ನು ಸೇರಿರುವರೆಂದು ಸುದ್ದಿ ಬಂದಿದೆ

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29,00,000	29 00,000	Cash	1,01,91,000	1,16,16,000
Capital paid up	28,43,000	28,80,000	Govt Securities	1,80,45,000	2,75,61,000
Reserves	11,00,000	11,00,000	Advances to customers	1,56,67,000	2,01,38,000
Deposits	3,50,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	5,000
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs	4,71,78,000	6,45,13,000	Rs.	4,71,78,000	6,45,13,000

ಗಾಂಧೀ ವಿಚಾರ ವಾಹಿನಿ

ಬಿಟ್ಟುಹೋಗುವ ಉದ್ದೇಶ

ಬ್ರಿಟಿಷರು ಭಾರತವನ್ನು ಒಂದು ತತ್ವಾನುಸಾರವಾಗಿ ಬಿಟ್ಟುಹೋಗುತಿದ್ದಾರೆಂಬಲ್ಲಿ ನನಗೆ ಸಂದೇಹವಿಲ್ಲ. ಮನುಷ್ಯನಿಗೆ ತನ್ನನ್ನು ಮೋಸಗೊಳಿಸಿಕೊಳ್ಳುವ ಒಂದು ಅದ್ವಿತೀಯವಾದ ಕೌಶಲ್ಯವಿದೆ. ಅಂಥವರಲ್ಲಿ ಬ್ರಿಟಿಷರು ಅಗ್ರಗಣ್ಯರು. ರಾಜಕೀಯ ಮತ್ತು ಆರ್ಥಿಕ ಕಾರಣಗಳಿಂದ ಭಾರತವನ್ನು ದಾಸ್ಯದಲ್ಲಿಡುವುದು ತಪ್ಪೆಂದು ತಿಳಿದಿದುದರಿಂದ ಅವರು ಅದನ್ನು ಬಿಟ್ಟುಹೋಗುತಿದ್ದಾನೆ. ಇಲ್ಲಿ ಅವರು ಸಂಪೂರ್ಣ ಪ್ರಮಾಣಿಕನು. ಆದರೆ ಹೇಗೆ ಆಗಲಿ ಅಪ್ರಾಮಾಣಿಕತೆಯು ಅವರ ಆತ್ಮವಂಚನೆಗೆ ಸರಿಹೊಂದುವಂಥದೇ ಆಗಿದೆಯೆಂಬುದನ್ನು ಸುಳ್ಳೆನ್ನಲಾಗುವುದಿಲ್ಲ. ಹಿಂದೂಸ್ಥಾನದಲ್ಲಿ ಅರಾಜಕತೆಯುಂಟಾದೀತಾದುದರಿಂದ ಅದನ್ನು ಬಿಟ್ಟುಹೋಗಲಾರೆನೆಂದು ಆಂಗ್ಲನು ತಿಳಿದಿರುವುದು ಅವನ ಆತ್ಮವಂಚನೆ.

ಕನಸ್ಸಿನ ಸ್ವರಾಜ್ಯ

ನಿಸ್ಕ್ರಿಯ ಪ್ರತಿಕಾರದಲ್ಲಿ ಅಹಿಂಸೆಯಂತೆ ಮಾನವನ ಮನಸ್ಸನ್ನು ಪರಿವರ್ತಿಸುವ ಶಕ್ತಿಯಿಲ್ಲ. ಪರಿಣಾಮಗಳೂ ಚೆನ್ನಾಗಿ ಗೊತ್ತಿದ್ದುವು. ಈ ಬಗ್ಗೆ ಇನ್ನು ಹೆಚ್ಚಿನ ಗಮನ ಕೊಡಬೇಕಿಲ್ಲ. ನಮ್ಮ ಕನಸಿನ ಸ್ವರಾಜ್ಯ ಬಹಳ ದೂರಹೋಯಿತು. ವಿಷವನ್ನು ಅಮೃತವನ್ನಾಗಿ ಮಾರ್ಪಡಿಸಲು ಮಾಡತಕ್ಕದ್ದೇನು? ಅದು ಶಕ್ಯವಿದೆಯೆ? ಶಕ್ಯವಿದೆಯೆಂದು ನನಗೆ ಗೊತ್ತಿದ್ದು ಆದರ ಹಾದಿಯೂ ಗೊತ್ತಿದೆ. ಆದರೆ ನಿಸ್ಕ್ರಿಯ ಪ್ರತಿಕಾರ ಪ್ರಯತ್ನಕ್ಕೆ ಭಾರತೀಯರು ಸಿದ್ಧರಿದ್ದಂತೆ ವಿಷವನ್ನು ಅಮೃತವನ್ನಾಗಿ ಮಾರ್ಪಡಿಸಲು ಒಂದೇ ಸಾಧನವಾದ ಅಹಿಂಸೆಯ ಪಾಠವನ್ನು ಕಲಿಯಲು ಭಾರತೀಯರು ಸಿದ್ಧರಿಲ್ಲ. ಅಹಿಂಸೆಯೆಂದೂ ಅಯಶಸ್ವಿಯಾಗಿಲ್ಲ. ಎಂದೆಂದಿಗೂ ಆಗಿಲ್ಲ.

★

ಅಖಂಡ ಹಿಂದೂಸ್ಥಾನ

ಹಿಂದೂಸ್ಥಾನ ಎರಡು ತುಂಡಾಗಿ ಮಾಡಲ್ಪಟ್ಟಿರುವುದರಿಂದ ನಾವು ನಮ್ಮ ನಡತೆಯನ್ನು ಅದೇ ಮೇರೆಗೆ ವಿವೇಚಿಸಬೇಕಾಗುತ್ತದೆ. ದುರ್ದೈವದಿಂದ ಈಗ ನಾವು ಪರಸ್ಪರ ಶತ್ರುಗಳೆಂಬಂತೆ ನಡೆದುಕೊಳ್ಳುವದೊಂದು ಚಾಳಿಯಾಗಿ ಬಿಟ್ಟಿದೆ. ಈ ನಂಬಿಕೆಗೆ ನನ್ನ ಸಮ್ಮತಿಯಿಲ್ಲ. ಅದರೆ ಆರಾಧಿಸುವ ಇಲ್ಲವೆ ಸಂತೋಷಗೊಳಿಸುವ ಪದ್ಧತಿಗೂ ನನ್ನ ಬೆಂಬಲವಿಲ್ಲ. ಈ ಶಬ್ದಕ್ಕೆ ಇಂದು ದುಷ್ಟ ಅರ್ಥ ಬಂದಿದೆ. ನನಗೆ ಆರಾಧನೆಯಲ್ಲಿ ವಿಶ್ವಾಸವಿಲ್ಲದಿದ್ದರೆ 1944ರಲ್ಲಿ 18 ದಿನಗಳ ವರೇಗೆ ಜಿನ್ನಾಸಾಹೇಬರ ಮನೆಗೆ ಎಡತಾಕಿದ್ದೇಕೆಂದು ನನ್ನನ್ನು ಕೇಳುವುದುಂಟು. ಸ್ನೇಹಪೂರ್ವಕವಾಗಿ ನಡೆದುಕೊಳ್ಳುವುದು ಆರಾಧನೆಯಲ್ಲ. ಶತ್ರುಗಳ ನಡುವೆ ಆದರೆ ಅದಕ್ಕೆ ಆರಾಧನೆಯೆಂದು ಹೆಸರು. ಹಿಟ್ಲರನ ವಿಷಯವಾಗಿ ಹೀಗಾಯಿತೆಂದು ಹೇಳುತ್ತಾರೆ. ಇಂಗ್ಲೆಂಡೂ ಜರ್ಮನಿಯೂ ಶತ್ರುಗಳು. ಚೆಂಬರ್ಲೇನರು ಹಿಟ್ಲರನನ್ನು ಮೆಚ್ಚಿಸಿದರೆಂದು ಅವರ ಮೇಲೆ ಆರೋಪವಿದೆ. ನನಗೆ ಶತ್ರುಗಳೇ ಇಲ್ಲ. ನಾನು ಜಿನ್ನರಿಗೆ ಒಂದು ಕೊಡುಗೆಯನ್ನು ಕೊಡಮಾಡಿದನೆಂಬಲ್ಲಿ ಸಂಶಯವಿಲ್ಲ. ಅದಕ್ಕಾಗಿ ನನಗೆ ಹೆಮ್ಮೆಯಿದೆ. ಆದರೆ ಆಗ ಜಿನ್ನಾಸಾಹೇಬರು ಅದನ್ನು ಸ್ವೀಕರಿಸಿದ್ದರೆ ಅವರು ಪಾಕಿಸ್ಥಾನ ಪ್ರದೇಶವೆನಿಸಿದರಲ್ಲಿ ಪ್ರಭುವಾಗಿರುತಿದ್ದರು. ಅದೇ ವೇಳೆಗೆ ಉಭಯ ಪ್ರದೇಶಗಳಲ್ಲಿ ಗೆಳೆಯರೊಳಗಿರುವಂತೆ ಸಮಾನ ವಿಷಯಗಳು ಇರಬಹುದಾಗಿತ್ತು. ಆಗ ನಮಗೂ ಅಖಂಡವಾದ ಒಂದೇ ಹಿಂದೂಸ್ಥಾನ ದೊರಕುತಿತ್ತು.

ಭಾರತೀಯರ ಮಾತೃಭೂಮಿ

ಪಾಕಿಸ್ಥಾನದಲ್ಲಿರುವ ಹಿಂದು, ಸೀಖ, ಮತ್ತು ಇತರ ಮುಸ್ಲಿಮೇತರರು ಏನು ಮಾಡಬೇಕು? ಕೇಡು ತಮ್ಮನ್ನು ಆಕ್ರಮಿಸುವುದೆಂಬ ಭಯದಿಂದ ಅವರು ತಮ್ಮ ಮನೆಮಾರುಗಳನ್ನು ಬಿಡುವುದಿಲ್ಲ. ಸಾಮಾನ್ಯ ಪ್ರಾಮಾಣಿಕತೆ ಮತ್ತು ಮನುಷ್ಯ ಸಹಜವಾದ ವರ್ತನೆ ಇವಿಷ್ಟಿದ್ದರೆ ಅಲ್ಲಿಯ ಮುಸಲ್ಮಾನ ಸಹಜೀವಿಯನ್ನು ನಾನು ಮೆಚ್ಚುತ್ತೇನೆ. ಪಾಕಿಸ್ತಾನ ಭಾಗಗಳಲ್ಲಿ ಗುರುದ್ವಾರಗಳೂ ದೇವಾಲಯಗಳೂ ಇವೆ. ಅವುಗಳನ್ನು ನಾಶಮಾಡಬಹುದೆ? ಇಡಿಯ ಹಿಂದೂಸ್ಥಾನವು ಪ್ರತಿಯೊಬ್ಬ ಭಾರತೀಯನ ಮಾತೃಭೂಮಿ. ಆದುದರಿಂದ ಇಲ್ಲಿ ಮುಂಚಿನಿಂದ ವಾಸಿಸಿಕೊಂಡುಬಂದ ಎಲ್ಲಾ ಮತಸ್ಥರಿಗೆ ಅವರವರ ವಿಶ್ವಾಸಗಳ ಕುರಿತು ಸಂಪೂರ್ಣ ಸ್ವಾತಂತ್ರ್ಯವಿರಬೇಕು.

ದ್ರಾವಿಡ ಸ್ಥಾನ

ವಿಂಧ್ಯಾಚಲದ ದಕ್ಷಿಣಕ್ಕಿರುವ ಜನರು ಅನಾರ್ಯರೆಂದೂ ಅದರ ಉತ್ತರಕ್ಕಿರುವ ಜನರು ಆರ್ಯರೆಂದೂ ಹೇಳುವುದು ಕಟ್ಟುಕತೆ. ಪ್ರಾಚೀನ ಕಾಲದಲ್ಲಿ ಏನೇ ಇದ್ದರೂ ಈಗ ಜನರಲ್ಲಿ ನಿಕಟಸಂಬಂಧವಿದ್ದು ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ಒಂದೇ ಜನಾಂಗದ ಜನರೇ ಇದ್ದಾರೆ. ಭಾರತವು ವಿಭಜನೆ ಹೊಂದಿದ್ದರೂ ಈ ಮಾತು ಸತ್ಯ. ಮುಂದೆ ಹೆಚ್ಚಿನ ವಿಭಜನೆಯಾಗಕೂಡದು. ಅದು ಮೂರ್ಖತನವೂ ಆಗಿದೆ. ದೇಶ ವಿಚ್ಛೇಧಿಕರಣದ ಈ ಪ್ರವೃತಿಯನ್ನು ನಾವೀಗಲೇ ತಡೆಯಬೇಕು.

ತರ್ಕ ವಿತರ್ಕ

ಧಾನ್ಯಗಳು ಕ್ರಿಮಿ ಕೀಟಗಳಿಂದ ಹಾಳಾಗದಂತೆ ಇಡುವ ವಿಧಾನವನ್ನು ಭಾರತ ಸರಕಾರದ ಕ್ರಿಮಿಕೀಟ ಶಾಸ್ತ್ರದ ನಿಪುಣರು ಕಂಡುಹಿಡಿದಿರುವರೆಂದು ಪ್ರಕಟವಾಗಿದೆ. ಈ ವಿಧಾನ ಕಪ್ಪು ಸಂತೆಯ ಕೀಟಗಳಿಗೂ ಅನ್ವಯಿಸುವುದೇ?

卐

ಆಗಸ್ಟ್ 15ರಂದು ಬ್ರಿಟಿಷ್ ಸರಕಾರ ಪ್ರತಿನಿಧಿಗಳು ಘಟನಾ ಸಭೆಗೆ ತಮ್ಮೆಲ್ಲ ಅಧಿಕಾರವನ್ನು ಬಿಟ್ಟುಕೊಡುವರೆಂದು ತಿಳಿದುಬಂದಿದೆ. ಆದರೆ ಇಲ್ಲಿಂದ ಹೊರಟುಹೋಗುವ ಒಂದು ಅಧಿಕಾರವನ್ನು ಮಾತ್ರ ಅವರೇ ಇಟ್ಟುಕೊಳ್ಳುವಂತೆ ಭಾರತೀಯ ಮುಖಂಡರು ಅವರಿಗೆ ಜ್ಞಾಪಿಸಲು ಮರೆಯಲಾರರು.

卐

ಪ್ರಾಂತ್ಯಾಧಿಕಾರಿಗಳೆಲ್ಲ ಇನ್ನು ಮುಂದೆ ಭಾರತೀಯರೇ ಆಗುವರೆಂದು ವಿಶ್ವಾಸಾರ್ಹವಾಗಿ ತಿಳಿದುಬಂದಿದೆ. ಆದರೆ ಅವರಿಗೆ ಬ್ರಿಟಿಷರದೇ ಬುದ್ಧಿ ಬರಲಿಕ್ಕಿಲ್ಲವೆಂದೂ ಭರವಸೆ ತಾಳಬಹುದು.

卐

ಆಗಸ್ಟ್ 15ರಿಂದ ಸಂಸ್ಥಾನಾಧೀಶ್ವರರು ಬ್ರಿಟಿಷರಿಗೆ ಕೊಡುತಿದ್ದ ಪೊಗದಿಯು ನಿಲ್ಲಿಸಲ್ಪಡುವುದಂತೆ. ಈ ಮಿಗತಾಯವನ್ನು ಪ್ರಜೆಗಳ ಮೇಲಿನ ಯುದ್ಧಕ್ಕೆ ಉಪಯುಕ್ತವಾಗಿ ವ್ಯಯಿಸಲಾಗುವುದೆಂದು ನಂಬಬಹುದು.

卐

ಸ್ಟರ್ಲಿಂಗ್ ನಿಧಿ ಲೆಕ್ಕಾಚಾರದ ಬಗ್ಗೆ ಬ್ರಿಟಿಷ್ ಸರ್ಕಾರದ ಮತ್ತು ಇಂಡಿಯಾ ಸರಕಾರದ ಪ್ರತಿನಿಧಿಗಳು ಫಲಕಾರಿಯಾಗುವ ಮಾತುಕತೆಗಳಲ್ಲಿ ನಿರತರಾಗಿದ್ದಾರೆಂದು ತಿಳಿಸಲಾಗಿದೆ. ಯಾರಿಗೆ ಫಲಕಾರಿ ಎಂಬುದೇ ಪ್ರಶ್ನೆ.

卐

"ನಮಗೆ ದಿವಾನರುಗಳೇ ಬೇಡ"ವೆಂದು ತಿರುವಾಂಕೂರು ಸಂಸ್ಥಾನ ಕೊಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎಂ. ವರ್ಗೀಸರು ತಿಳಿಸುತ್ತಾರೆ. 'ನನಗೆ ರಾಜರ ಪದವಿಯನ್ನೆ ಕೊಡಿರಿ' ಎಂದು ಸರ್. ಸಿ. ಪಿ. ಯವರು ಕೇಳಿದರೆ ಆಶ್ಚರ್ಯವಲ್ಲ.

卐

ಗಡಿನಾಡಿನ ಮತಗಣನೆಯಲ್ಲಿ ಅಧಿಕಾರಿಗಳು ಮುಸ್ಲಿಂ ಲೀಗ್ ಪಕ್ಷ ವಹಿಸಿದ್ದಾಗಿಯೂ ಈ ಕುರಿತು ನಿಷ್ಪಕ್ಷಪಾತ ವಿಚಾರಣೆಯಾಗಬೇಕೆಂದೂ ಅಲ್ಲಿನ ಪ್ರಾಂತೀಕ ಕೊಂಗ್ರೆಸ್ ಕಮಿಟಿಯವರು ಒತ್ತಾಯಪಡಿಸಿದ್ದಾರೆ. ಲೀಗ್ ಗೆದ್ದ ಶೇಕಡಾ ನೋಡಿದರೆ (·49 ಹೆಚ್ಚು) ಎಲ್ಲವೂ ವಿಷದವಾಗುವುದು. ಪ್ರತ್ಯೇಕ ವಿಚಾರಣೆಯೇಕೆ?

卐

"ಯುರೋಪಿನ ಆರ್ಥಿಕ ದುರ್ದಶೆಯನ್ನು ನಿವಾರಿಸದಿದ್ದರೆ ಪ್ರಜಾಸತ್ತೆಯ ನಾಶವಾಗುವುದು" ಎಂಬುದಾಗಿ ಜಾರ್ಜ್ ಮಾರ್ಶಲ್ಲರು ತಿಳಿಸುತ್ತಾರೆ. ಇನ್ನಾದರೂ ಮಿತ್ರ ಸೈನ್ಯಗಳು ಅಲ್ಲಿಂದ ಹಿಂದಿರುಗುವುದು ಒಳಿತೆಂದು ಕಾಣುತ್ತದೆ.

卐

ಇನ್ನು ಮುಂದೆ ಬ್ರಿಟನಿನೊಡನೆ ಭಾರತದ ವ್ಯಾಪಾರ ಸಂಬಂಧವು ವೃದ್ಧಿಯಾಗುವುದೆಂದು ಒರ್ವ ಪ್ರಖ್ಯಾತ ಲೇಖಕರು ಬರೆದಿದ್ದಾರೆ. ಭಾರತದ ಕುರಿತು ಅಪಪ್ರಚಾರ ಮಾಡುವ ಗ್ರಂಥಗಳ ಪ್ರಕಟಣೆ ಮಾತ್ರ ಕಡಿಮೆಯಾಗಲೆಂದು ಹಾರೈಕೆ.

卐

2500 ಅಲ್ಬೆನೀಯಾ ಸೈನಿಕರು ಗ್ರೀಸಿನ ಗಡಿ ದಾಟಿ ಬಂದಿರುವರೆಂಬ ಆಪಾದನೆಯನ್ನು ಅಲ್ಬೇನಿಯಾ ಸರಕಾರ ಅಲ್ಲಗಳೆದಿದೆ. ಬಹುಶ್ಯ ಆ ಸೈನಿಕರು ತಾವು ದಾಟಿ ಬಂದ ಪ್ರದೇಶ ತಮ್ಮದೆಂಬ ಕಲ್ಪನೆಯಲ್ಲೇ ಇರಬಹುದು.

卐

ಬ್ರಿಟಿಷ್ ವಿಜ್ಞಾನಿಗಳು 'ಆನಂದ ಸಂಜೀವಿನಿ'ಯೊಂದನ್ನು ತಯಾರಿಸಿರುವರು. ಇದು ಸ್ಯಾನೆಕ್ಸಿಲ್ ಎಂಬ ಹೆಸರಿನ ಒಂದು ಔಷಧ. ಭಯ ಕಳವಳದಿಂದ ನರಳುವವರಿಗೆ ಇದನ್ನು ಕೊಟ್ಟರೆ ಸುಖನಿದ್ರೆಯುಂಟಾಗಿ ಮನಸ್ಸಿನ ಭಾರ ಕಡಿಮೆಯಾದಂತಾಗುವುದು. ಸ್ವಲ್ಪ ಆತ್ಮ ವಿಶ್ವಾಸವೂ ಉಂಟಾಗುವುದು.

ಆಸ್ಟ್ರೇಲಿಯದ ವಿಕ್ಟೋರಿಯಾ ಪ್ರಾಂತ್ಯದ ಒಂದು ಕಡೆ ಆರು ಅಡಿ ಉದ್ದ ಮಿಗುವ ಎರೆಹುಳಗಳು ಇವೆ. ಕೆಲವು 11 ಅಡಿ ತನಕ ಮುಟ್ಟುತ್ತವಂತೆ. ಇವುಗಳಲ್ಲಿ ಕೆಲವನ್ನೀಗ ಇಂಗ್ಲೆಂಡಿನ ಕೃಷಿ ಸಂಶೋಧನಾಲಯಕ್ಕೆ ಪರಿಶೀಲನೆಗಾಗಿ ಸ್ಪೆಶಲ್ ವಿಮಾನವೊಂದರಲ್ಲಿ ತಂದಿರುವರು.

ಇಂಗ್ಲೆಂಡಿನಲ್ಲಿ ಒಂದು ರೈಲ್ವೇ ಪಟ್ಟೆಯ ಬಳಿ ತಲುಪಬೇಕಾದರೆ 18 ಮೈಲಿಗಿಂತ ಹೆಚ್ಚು ನಡೆಯಬೇಕಾಗಿಲ್ಲ.

KANARA COMMERCIAL BANK LTD.
PUTTUR.
H. O. Puttur.] Estd. 1920 [Branch: Vittal.
All kinds of Banking Business transacted.
Deposits: Current, Savings, Cumulative Deposits are accepted.
Fixed Deposits for periods of 3 months and above up to 24 months are accepted.

ಬಾವುಗಳನ್ನು ಕೂಡಲೇ ಗುಣಪಡಿಸಿ
ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ: ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು
CUTICURA OINTMENT

ನಾಗರೀಕ ವ್ಯವಹಾರ

ವಿದ್ಯುಚ್ಛಕ್ತಿ ಕೊರತೆ: ನಮ್ಮ ನಗರವು ದಿನೇ ದಿನೇ ಎಂಬಂತೆ ಸರ್ವತೋಮುಖ ಅಭಿವೃದ್ಧಿಹೊಂದುವ ಕೈಗಾರಿಕೆ ಕೇಂದ್ರ. ಹೊಸದಾಗಿ ಸ್ಥಾಪಿಸಲ್ಪಡುವ ಯಂತ್ರೋಪಕರಣಗಳಿಗೂ, ನಿವಾಸ ಸ್ಥಳಗಳಿಗೂ ಬೇಕಾದಷ್ಟು ಸರಬರಾಯಿಮಾಡುವ ವ್ಯವಸ್ಥೆ ಇಲ್ಲಿ ಇರಬೇಕಾದುದು ಅತ್ಯಾವಶ್ಯಕ. ಈಗ ಸದ್ಯಕ್ಕೆ ಸ್ಥಳೀಯ ವಿದ್ಯುಚ್ಛಕ್ತಿ ಉತ್ಪಾದಕ ಸಂಸ್ಥೆಯು ಅಂತಹ ಸೌಕರ್ಯಗಳನ್ನು ಪೂರೈಸಿಕೊಡಲು ತನ್ನ ಅಸಮರ್ಥತೆಯನ್ನು ತೋರಿಸುವಂತಾಗಿದೆ. ಅದಕ್ಕೂ ವಿದ್ಯುತ್ಪಾದಕ ಯಂತ್ರ ಸಲಕರಣೆಗಳು ದೊರಕುವುದು ಕಷ್ಟದ ಕೆಲಸವೇ ಆಗಿದೆ. ಆದರೆ ಸ್ಥಳೀಯ ದಿನಪತ್ರಿಕೆಯೊಂದು ಸೂಚಿಸಿದಂತೆ ಈ ಕುರಿತು ಅದು ಮುಂದಾಗಿಯೇ ಏರ್ಪಾಡುಗಳನ್ನು ಮಾಡಬೇಕಿತ್ತು ಇಂತಹ ಸಂದರ್ಭದಲ್ಲಿ ನಗರದ ಬೇರೊಂದು ಕಡೆಯಲ್ಲಿ ಸ್ವಲ್ಪ ಚಿಕ್ಕ ಪರಿಮಾಣದ್ದಾದರೂ ಒಂದು ಪ್ರತ್ಯೇಕ ವಿದ್ಯುತ್ ಉತ್ಪಾದಕ ಕೇಂದ್ರ ಪ್ರಾರಂಭಿಸುವುದರ ಕಡೆಗೆ ನಗರದ ಪ್ರಮುಖ ಕೈಗಾರಿಕೆ ಸಂಸ್ಥೆಗಳಾದರೂ ಗಮನ ಕೊಡುವುದು ಯುಕ್ತವಾದುದು ಸರಕಾರವೂ ನಗರಾಡಳಿತವೂ ಇಂತಹದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಟ್ಟರೆ ನಾಗರೀಕ ಜೀವನಕ್ಕೆ ತುಂಬಾ ಅನುಕೂಲವಾಗುವುದು ಈಗಿನ ಇಲೆಕ್ಟ್ರಿಕ್ ಸಪ್ಲೈ ಕೆಂಪೆನಿಯವರಾದರೂ ಆ ದಿಸೆಯಲ್ಲಿ ಆದಷ್ಟು ಹೆಚ್ಚಿನ ಯತ್ನಗಳನ್ನು ಜರಗಿಸತಕ್ಕದ್ದು

ಕಾಂಗ್ರೆಸ್ ಸದಸ್ಯತನ

ಅವಧಿಯು ಮುಂದುವರಿಸಲ್ಪಡದಿದ್ದಲ್ಲಿ ಇದೇ ಬರುವ ಆಗೋಸ್ತು ತಿಂಗಳೊಳಗೆ ಕಾಂಗ್ರೆಸ್ ಸದಸ್ಯರಾಗಿ ಸೇರುವವರೆಲ್ಲರೂ ಸೇರಬೇಕಾಗಿದೆ. ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಬಂದಿರುವ ಪುಸ್ತಕಗಳನ್ನೆಲ್ಲ ಮಂಗಳೂರು, ಬಂಟ್ವಾಳ, ಪಾಣೆಮಂಗಳೂರು, ಮಂಜೇಶ್ವರ, ಕಾಸರಗೋಡು ಉಡುಪಿ, ಕುಂದಾಪುರ, ಕಟಪಾಡಿ, ಕಾರ್ಕಳ ಮತ್ತು ಬಾರಕೂರು (ಬ್ರಹ್ಮಾವರ) ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಗೆ ಇಷ್ಟರಲ್ಲೇ ಕಳುಹಿಸಲಾಗಿದೆ ಉಳಿದ ಸರ್ಕಲ್ ಕಾಂಗ್ರೆಸ್ ಕಮಿಟಿಗಳವರೂ ಕೂಡಲೆ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ತಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ತಿಳಿಸಿ ಪಡಕೊಳ್ಳಬೇಕಾಗಿ ವಿನಂತಿ ಆಯಾ ಸರ್ಕಲಿಗೆ ಸೇರಿರುವ ಮಹಾಜನರು ತಮ್ಮ ತಮ್ಮ ಸರ್ಕಲ್ ಕಾಂಗ್ರೆಸ್ ಕಮಿಟಿ ಅಧಿಕಾರಿಗಳೊಡನೆ ವಿಚಾರಿಸಿ ಸದಸ್ಯರಾಗಬಹುದು ಒಂದು ಸರ್ಕಲಿನವರು ಇನ್ನೊಂದರಲ್ಲಿ ಸದಸ್ಯರಾದ್ದಲ್ಲಿ ಓಟು ಕೊಡುವುದಕ್ಕೂ ಪ್ರತಿನಿಧಿ ಸ್ಥಾನದ ಉಮೇದ್ವಾರಿಕೆಗೂ ತೊಂದರೆಯಾಗುವುದು

ಪ್ರತಿ ಸರ್ಕಲ್ ಕಾಂಗ್ರೆಸ್ ಕಮಿಟಿಗಳವರೂ, ಆದಷ್ಟು ಹೆಚ್ಚು ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಕುರಿತು ಉತ್ಸಾಹದಿಂದ ಕೆಲಸಮಾಡಬೇಕಾಗಿ ವಿನಂತಿ. ಹೆಚ್ಚು ಪುಸ್ತಕಗಳು ಬೇಕಾದ್ದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ತಿಳಿಸತಕ್ಕದ್ದು. ಹೀಗೆಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಜಿಲ್ಲಾ ಪರಿಚಯ
೧

ಜಿಲ್ಲೆಯಲ್ಲಿ ಕಡ್ಡಾಯ ಶಿಕ್ಷಣ ಪ್ರಚಾರ

ಜಿಲ್ಲಾ ಬೋರ್ಡ್ ಅಧಿಕಾರಿಗಳಿಂದ ಯೋಜನೆಯ ವಿಸ್ತರಣ

ನಮ್ಮ ಜಿಲ್ಲೆಯ ಎಲ್ಲ ಅಂದರೆ ಸುಮಾರು 700 ಗ್ರಾಮಗಳಲ್ಲಿಯೂ ಕ್ರಮಕ್ರಮವಾಗಿ "ಕಡ್ಡಾಯ ಶಿಕ್ಷಣ" ಪ್ರಸಾರವಾಗುವಂತೆ, ಈ ಜಿಲ್ಲಾ ಬೋರ್ಡಿನವರು 45-46ರಲ್ಲಿ ಜಿಲ್ಲೆಯ ಇಪ್ಪತ್ತಮೂರು ಗ್ರಾಮಗಳಲ್ಲಿಯೂ, 46-47ರಲ್ಲಿ ಇಪ್ಪತ್ತೇಳು ಗ್ರಾಮಗಳಲ್ಲಿಯೂ ಅನುಕ್ರಮವಾಗಿ ಶಾಲಾ ವಯಸ್ಸಿನ ಸುಮಾರು 5 ಸಾವಿರ ಮತ್ತು 6500 ಮಕ್ಕಳು ಕಡ್ಡಾಯ ಶಿಕ್ಷಣ ಪಡೆಯುವಂತೆ ಏರ್ಪಾಡುಗಳನ್ನು ಸಂಪೂರ್ಣಗೊಳಿಸಿದ್ದು ಈಗ 47-48ರಲ್ಲಿ ಇನ್ನೂ 31 ಹೆಚ್ಚಿನ ಗ್ರಾಮಗಳ ಸುಮಾರು 4500 ಮಂದಿ ಮಕ್ಕಳಿಗೆ ವಿದ್ಯಾದಾನ ಮಾಡುವ ಏರ್ಪಾಡುಗಳನ್ನು ಪೂರೈಸುವವರಾಗಿದ್ದಾರೆ

ತಾಲೂಕು ಕಮಿಟಿ ಮೀಟಿಂಗ್

ಈ ತಾಲೂಕಿನ ಕಮಿಟಿ ಮೀಟಿಂಗ್ ಈಚೆಗೆ ಅಧ್ಯಕ್ಷರಾದ ಶ್ರೀ ಎಸ್ ಬಾಲಾಜಿರಾಯರ ಅಧ್ಯಕ್ಷತೆಯಲ್ಲಿ ಜರುಗಿತು; ಕಾರ್ಯದರ್ಶಿ ಶ್ರೀ ಬಿ ಗಣೇಶ, ಶ್ರೀ ಎಸ್ ಯು. ಪಿ ನಾಯಕ್, ತಾ ಸ ಆಫೀಸರ್ ಮೊದಲಾದ ಸಂಬಂಧಪಟ್ಟ ಆಫೀಸರರೂ ಮೆಂಬರರೂ ಹಾಜರಿದ್ದರು. ಶ್ರೀ ಪಿ ಎನ್ ಭಂಡಾರ್ಕರರವರ ನಿಧನಕ್ಕಾಗಿ ಒಂದು ಸಂತಾಪ ಸೂಚನೆಯು ಠರಾವು ಮಾಡಿದ್ದಾಯಿತು. ಗ್ರಾಮಸ್ಥರಿಗೆ ಹಾರೆ ಪಿಕಾಸುಗಳನ್ನು ಹಂಚುವ ಒಂದು ಪಟ್ಟಿ ತಯಾರಿಸಬೇಕೆಂದೂ ಸದ್ಯಕ್ಕೆ ಕೆಲ ಮಟ್ಟಿಗೆ ಗ್ರಾಮ ಸಮಿತಿ ಅಧ್ಯಕ್ಷರ ಪರ್ಮಿಟಿನಂತೆ ಹಂಚಬಹುದೆಂದೂ ನಿರ್ಣಯಿಸಲಾಯಿತು ಎರಡು ತಿಂಗಳಿಂದ ಸಕ್ಕರೆ ಸರಬರಾಯಿ ಈ ತಾಲೂಕಿಗೆ ಸರಿಯಾಗಿ ಸಿಕ್ಕಿಲ್ಲ, ಮುಂದೆ ಸಿಕ್ಕುವಷ್ಟನ್ನು ಇಡಿಯ ತಾಲೂಕಿನಲ್ಲೇ ಸರಿಸಮಾನವಾಗಿ ಹಂಚುವಂತೆಯೂ ಮುಸ್ಲಿಮ್ ಕಾರ್ಡು ಹೋಲ್ಡರರಿಗೆ ರಮ್ಜಾನಿನಲ್ಲಿ ದುಬಾರಿ ಸಕ್ಕರೆ ಹಂಚಲು ಕಲೆಕ್ಟರರನ್ನು ಕೇಳಿಕೊಳ್ಳುವಂತೆಯೂ, ಸಕ್ಕರೆ ಸ್ಪೆಶಲ್ ಪರ್ಮಿಟುಗಳ ಅಧಿಕಾರ ಹಿಂದಿನಂತೆ ಗ್ರಾಮ ಸಮಿತಿಗಳಿಗೇ ಕೊಡುವಂತೆಯೂ ನಿರ್ಧರಿಸಲಾಯಿತು

ಹೊಸ ಪೋಸ್ಟಾಫೀಸು

ಮಂಗಳೂರು ಅಜ್ಜಿರುದ್ದೀನ್ ರಸ್ತೆಯಲ್ಲಿ ಹಲವು ವರ್ಷಗಳಿಂದಿದ್ದ ಸಬ್ ಪೋಸ್ಟಾಫೀಸನ್ನು ತೆಗೆದು ಬಂದರಿಗೊಯ್ದ ನಂತರ ಜನರಿಗೆ ತೊಂದರೆಯಾಗಿತ್ತು, ಈ ವಿಷಯ ಟಪ್ಪಾಲು ಇಲಾಖೆಗೆ ಅನೇಕ ಮನವಿಗಳೂ ತಲಪಿದ್ದುವು ಏಳೆಂಟು ವರ್ಷಗಳ ನಂತರ ಈಗ, ಹೊಸ ಸಬ್ ಪೋಸ್ಟಾಫೀಸನ್ನು ಬಸವನಗುಡಿಯ ಬಳಿ (ನ್ಯೂ ಚಿತ್ರಾ ಟಾಕೀಸಿನ ಎದುರು) ಇದೇ ತಾ. 15ರಿಂದ ತೆರೆದಿರುವರು ಇಲ್ಲಿ, ಟೆಲಿಗ್ರಾಮ್‌ಗಳನ್ನು ಪಡೆಯುವುದಿಲ್ಲ, ಉಳಿದೆಲ್ಲ ಟಪ್ಪಾಲು ಸೌಕರ್ಯಗಳಿವೆ.

ಹತ್ತು ಔನ್ಸು ರೇಶನ್?

ಢಿಲ್ಲಿಯಿಂದ ಈಗತಾನೆ ಮರಳಿಬಂದ ಮದ್ರಾಸು ಆಹಾರ ಇಲಾಖಾ ಮಂತ್ರಿ ಡಾ. ಟಿ. ಎಸ್ ಎಸ್. ರಾಜನ್‌ರವರು, "ಇಂಡಿಯನ್ ಎಕ್ಸ್‌ಪ್ರೆಸ್" ಪತ್ರಿಕಾ ಬಾತ್ಮೀದಾರರಿಗೆ ಇದೇ ತಾ. 17ರಲ್ಲಿತ್ತ ಭೇಟಿಯಲ್ಲಿ, "ಎಂಟು ಔನ್ಸು ರೇಶನನ್ನು ನಾವು ಬರುವ ವಾರದೊಳಗೇ ಹತ್ತು ಔನ್ಸಿಗೆ ಹೆಚ್ಚಿಸಬಹುದು. ಎಂಟು ಔನ್ಸು ಅಕ್ಕಿ ಮತ್ತು ಉಳಿದೆರಡು ಔನ್ಸು ಜೋಳ, ರಾಗಿ ಇತ್ಯಾದಿ ಕೊಡಬಹುದು" ಎಂಬುದಾಗಿ ಹೇಳಿರುವರು. ತಾ. 20ರಿಂದ 10 ಔನ್ಸುಗಳಾಗಿವೆ.

ರಮ್‌ಜಾನ್ ತಿಂಗಳಲ್ಲಿ

ತಾ. 15-7-47ರಿಂದ 15-8-47ರ ವರೆಗೆ ಮುಸ್ಲಿಮರಿಗೆ ಕಾರ್ಡಿನಲ್ಲಿ ನಮೂದಿಸಿರುವುದರ ಇಮ್ಮಡಿ ಚಿಮಿಣಿ ಎಣ್ಣೆ ಕೊಡತಕ್ಕದ್ದೆಂದು ಜಿಲ್ಲಾ ಕಲೆಕ್ಟರರ ಅಪ್ಪಣೆಯಾಗಿದೆ.

ಮಿಲ್ ಬಟ್ಟೆಯನ್ನು ಮೂರು ತಿಂಗಳಿಗೊಮ್ಮೆ ಪಡೆಯತಕ್ಕದ್ದು ಪ್ರಥಮದ ಮೂರು ತಿಂಗಳಲ್ಲಿ ಏನೂ ಪಡೆಯದಿದ್ದರೆ, ಮುಂದೆ, ಹಿಂದಿನ ಕಂತಿನ ಬಟ್ಟೆ ಸಿಗಲಾರದೆಂದು ಪ್ರಕಟಿಸಲಾಗಿದೆ.

ಸಣ್ಣ ಪುಟ್ಟ ಕಳವು

ಈ ನಗರದಲ್ಲಿ ಈಗ ಅಲ್ಲಲ್ಲಿ ಸಣ್ಣ ಪುಟ್ಟ ಕಳವುಗಳು ನಡೆಯುತ್ತಿವೆಯೆಂದೂ ಹಸಿವೆಯ ನೆವದಿಂದ ಈ ಕಳವುಗಳು ಆಗುತ್ತಿರುವವೆಂದೂ ಸುದ್ದಿಯುಂಟು ನಗರದ ಹೊರಭಾಗದಲ್ಲಿ ಪಲ್ಯ ಕಾಯಿ ಮಾರಿ ಹೋಗುತ್ತಿರುವವರ ಹಣ ಯಾರೋ ದುರಾತ್ಮರು ಕಸಿದುಕೊಳ್ಳುತ್ತಿರುವರೆಂದು ಸುದ್ದಿಯುಂಟು.

ಬಂಟವಾಳ

ತಾ. 15-ಎಲಿಮೆಂಟರಿ ಶಾಲೆಗಳ ಇಲಾಖೆಯವರು ಹೊರಡಿಸಿದ ನೂಲುವ ತರಬೇತಿನ ಸರ್ಕ್ಯುಲಾರಿನ ಸಿಲೆಬಸ್ಸಿಗನುಸಾರವಾಗಿ ಬಂಟವಾಳ ಕೊಟ್ಟೇಜ್ ಇಂಡಸ್ಟ್ರೀಸ್ ಎಸೋಸಿಯೇಶನಿನ ಮೇಲ್ವಿಚಾರಣೆಯಲ್ಲಿ, ಅ. ಭಾ. ಚರಖಾ ಸಂಘದ ಶಿಕ್ಷಾಯಿ ಕಾರ್ಯಕರ್ತ ಪದವೀಧರರಿಂದ ಒಂದೊಂದು ತಿಂಗಳ ಅವಧಿಯ ಕ್ಲಾಸನ್ನು ಬರುವ ಆಗೋಸ್ತು ತಾರೀಕು 1ರಿಂದ ಪ್ರಾರಂಭಿಸಲಾಗುವದು. ಉಮೇದ್ವಾರ ಉಪಾಧ್ಯಾಯರು ಮೇಲಿನ ಎಸೋಸಿಯೇಶನಿನ ಸಂಚಾಲಕರಿಗೆ ಬರೆದು ವಿಶೇಷ ಮಾಹಿತಿಯನ್ನು ತಿಳಿದುಕೊಳ್ಳಬಹುದು.

ಹವಾಮಾನ: ಈ ವಾರದಲ್ಲಿ ಬಲವಾದ ಮಳೆ ಬಿದ್ದಿರುವುದಾದರೂ ಅಲ್ಪಸ್ವಲ್ಪ ಬಿಸಿಲೂ ಪ್ರಕಾಶಿಸಿರುವುದು ಹಿಂದಿನ ವರ್ಷದ ಈ ಅವಧಿಯ ಸರಾಸರಿಗಿಂತ ಕೆಲವು ಇಂಚುಗಳಷ್ಟು ಮಳೆ ಇನ್ನು ಕಡಿಮೆಯಿದೆ ಕೆಲವು ದಿನಗಳ ಹಿಂದೆ ಒಂದು ಸುಂಟರ ಗಾಳಿಯು ಹಲವು ಕಡೆಗಳಲ್ಲಿ ಚಿಕ್ಕ ಪುಟ್ಟ ಅನಾಹುತಗಳನ್ನು ಮಾಡಿದೆ. ಮಾಡಿನ ಹಂಚು ಹಾರುವಿಕೆ, ಮರಬೀಳುವಿಕೆಯ ವರದಿಗಳು ಡೊಂಗರಕೇರಿ, ಜೇಡಿಗುಡ್ಡೆ ಕಡೆಗಳಿಂದ ಬಂದಿರುತ್ತದೆ.

ಕಸಿ ಹಣ್ಣಿನ ಗಿಡಗಳು ಮತ್ತು ತರಕಾರಿ ಬೀಜಗಳು

ಜುಲೈ ಅಗಸ್ಟ್ ತಿಂಗಳಲ್ಲಿ ಹಾಕುವ ಇಂಗ್ಲೀಷ್ ಟೈಪ ಮತ್ತು ಇಂಡಿಯನ್ ತರಕಾರಿ ಬೀಜಗಳು 20 ತರಹ ಕಲರ್‌ಪ್ಯಾಕಿಟ್‌ಗಳ ಸಮೇತ- ರೂ. 4-0-0

ಬೆಂಗಳೂರು ಕಸಿ ಮಾವಿನ ಗಿಡಗಳು 6 ಜಾತಿ 6 ಗಿಡಕ್ಕೆ 9-0-0
ಕಲಕತ್ತೆ ಮಾವಿನ ಗಿಡಗಳು 12 ಜಾತಿ 12 ಗಿಡಕ್ಕೆ 16-0-0
ಸಪೋಟ, (ಚಿಕ್ಕು) ಗಿಡ 1ಕ್ಕೆ 1-8-0
ನಾಗಪುರ—ಕೊಡಗು— ಮುಸಂಬಿ-ನಿಂಬೆ-ಚಕ್ಕೋತ್ರ.
ದಾಳಿಂಬ. ಪನ್ನೇರಳೆ-ಗಿಡಗಳು ಡಜನ್ 1ಕ್ಕೆ 15-0-0

ಅರ್ಧ ಕ್ರಯ ಮುಂಗಡ ರವಾನಿಸಬೇಕು ಪ್ಯಾಕಿಂಗ್ ಮತ್ತು ಇತರ ಖರ್ಚು ಬೇರೆ

ಪತ್ತೆ ದಿ ಅಲ್‌ಸೂರ್ ಸೀಡ್ ಕಂಪೆನಿ,
ಅಲಸೂರು — ಬೆಂಗಳೂರು.

NOTICE

In the Court of the District Judge of South Kanara

ORIGINAL PETITION NO 61 OF 1947

In the matter of the debt of B Narasimha Das Baliga—*Deceased*.

1. B Vasudeva Baliga
2. B Gopalakrishna Baliga
3. B Upendra Baliga
4. B Damodara Baliga
5. B Surendranath Baliga

(2–5: minors by next friend elder brother and manager of the family 1st petitioner; 1–5: sons of the deceased)

6. B Sanjivi Bai, widow of deceased
7. B Purushottama Baliga, brother of the deceased

(*Petitioners*)

All are residing in the Mahamayi Temple Street, Mangalore

To All Whom it May Concern

Notice is hereby given that on 2-7-1947 application has been made to the said Court by the above-named petitioners for the grant of a Certificate under Part X of the Indian Succession Act, 1925, in the name of the 1st petitioner in respect of the Insurance amount of Rs. 1,000 due by the East and West Insurance Co, Ltd, Bombay, under Policy No. 37089 on the life of the said deceased who died on 1-2-1947 at Mahamayi Temple Street, Mangalore, and that the 12th day of August 1947 has been appointed for the hearing of the said application when you are at liberty to appear and oppose the same.

Mangalore. 14-7-1947.

B. Vasudeva Kamath,
Vakil for Petitioners.

ಸ್ವಾತಂತ್ರ್ಯ ಸ್ವೀಕರಿಸಲು ಸಿದ್ಧರಾಗಿರಿ.

ಬ್ರಿಟಿಷ್ ಧೋರಣೆಯ ಪುನರಾವರ್ತನೆ ಬೇಡ

ಜನರು ಮುಖಂಡರೊಡನೆ ಸಹಕರಿಸಬೇಕು.

ಹಲವು ದಶಮಾನಗಳಿಂದ, ನಾವು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದುದರ ಪರಿಣಾಮವಾಗಿ ಇಂದು ಆ ಅಮೋಘಬಂಧ ವಿಮೋಚನೆಯ ಸುಪ್ರಭಾತವಾಗುತ್ತಲಿದೆ. ಈ ಅವಧಿಯಲ್ಲಿ ಅಸಂಖ್ಯಾತ ದೇಶಭಕ್ತರು ಸ್ವಾತಂತ್ರ ಧ್ವಜದಡಿಯಲ್ಲಿ ತಮ್ಮ ಪವಿತ್ರ ಪ್ರಾಣಗಳನ್ನು ಪೂರ್ಣತೆಗಾಗಿ ಅರ್ಪಿಸಿರುವರು. ಅದೆಷ್ಟೊ ದುರಂತಮಯವಾದ ಕಷ್ಟಸಂಕಷ್ಟಗಳನ್ನೂ, ಮಾನಾಪಮಾನಗಳನ್ನೂ, ಹಿಂಸೆ ಅತ್ಯಾಚಾರಗಳನ್ನೂ ನಮ್ಮ ಬಂಧುಭಗಿನಿಯರು ಅನುಭವಿಸಿದ್ದಾರೆ.

ಈಗ ನಾವು ನಮ್ಮ ಗುರಿಯ ಸಾಮೀಪ್ಯವನ್ನು ಸೇರಿದ್ದೇವೆ. ನಮ್ಮ ಗೋಳಿನ ಯಾತ್ರೆಯ ಕೊನೆಯ ಹಂತವನ್ನೇರಿ ಸ್ವಾತಂತ್ರ ಭೂಮಿಯ ಉಜ್ವಲ ಪ್ರದೇಶಗಳು ನಮ್ಮ ದೃಷ್ಟಿಪಥದಲ್ಲಿ ಕಂಗೊಳಿಸುತ್ತವೆ ಆಗಸ್ಟ 15ರ ಸುಪ್ರಭಾತದಂದು ದಿನ ದೇವತೆಯು ಅಮೋಘವಾದ ಪುಷ್ಪಹಾರಗಳನ್ನು ಹಿಡಿದುಕೊಂಡು ಭಾರತಮಾತೆಯನ್ನು ಅಲಂಕರಿಸಲು ಬರುವಳು. ಅವಳನ್ನು ಘನಗಂಭೀರ ರೀತಿಯಲ್ಲಿ ಸ್ವಾಗತಿಸುವುದು ನಮ್ಮ ಆದ್ಯಕರ್ತವ್ಯವಾಗಿದೆ

ಸದ್ಯಕ್ಕೆ ನಮ್ಮದು ಸಾಮಂತರಾಜ್ಯವೆಂದು ಕರೆಯಲ್ಪಡಬಹುದು ಆದರೆ ಸಂಪೂರ್ಣ ಸ್ವಾತಂತ್ರ್ಯದ ಪುಣ್ಯಕಾಲವು ದೂರವಿಲ್ಲ 1948ರ ಜೂನ್ ಅಂತ್ಯದೊಳಗೆ ನಾವು ಶತಮಾನಗಳ ದಾಸ್ಯದ ಶೃಂಖಲೆಯಿಂದ ವಿಮುಕ್ತರಾಗಲಿದ್ದೇವೆ ಈಗಾಗಲೇ ಅನಿರ್ಬಂಧವಾದ ವಾತಾವರಣದಲ್ಲಿ ನಾವು ಉಸಿರಾಡುತ್ತಿದ್ದೇವೆಂದು ಭಾಸವಾಗದಿರದು ಸ್ವಾತಂತ್ರ್ಯವು ಸ್ಥೂಲವಾಗಿ ನಮ್ಮ ಕೈಮುಷ್ಟಿಯ ಸಂಪರ್ಕದೊಳಗೆ ಬಂದಿದೆ. ಸದ್ಯದಲ್ಲೇ ನಾವು ಸ್ವತಂತ್ರ ಜನಾಂಗವೆನಿಸಿ ವಿಶ್ವರಾಷ್ಟ್ರಕೂಟದಲ್ಲಿ ಗಣನೀಯ ಸ್ಥಾನ ಹೊಂದುವವರಿದ್ದೇವೆ

ಇಷ್ಟಾದರೂ ನಾವೀಗ ಹೊಂದಲಿರುವ ಸ್ವಾತಂತ್ರ್ಯವು ನಾವು ಬಹುಕಾಲದಿಂದ ಹಾರೈಸಿದಂತಹ ಸ್ವಾತಂತ್ರ್ಯವಾಗಿರಲಾರದು ನಾವೀಗ ಕಲ್ಪಿಸಿದ ಸ್ವಾತಂತ್ರ್ಯ ದೃಶ್ಯವು ಈಗ ನಾವು ಹೊಂದಿರುವುದಕ್ಕಿಂತ ಅದೆಷ್ಟೊ ವರ್ಣರಂಜಿತವಾಗಿತ್ತು ಅದರ ಆಕರ್ಷಣೆಯು ಇಂದಿನದರಲ್ಲಿ ಕಂಡುಬರುವುದಿಲ್ಲ ಸ್ವತಂತ್ರರಾಗುತ್ತಿರುವ ಈ ಕಾಲದಲ್ಲೇ ನಮ್ಮಲ್ಲಿದ್ದ ಅಮೂಲ್ಯವಾದೊಂದು ಸ್ಫೂರ್ತಿಭಾವವು ಮಾಯವಾದಂತಿದೆ

ಮೊದಲಾಗಿ ನಮ್ಮ ಸ್ವಾತಂತ್ರ್ಯವು ಬ್ರಿಟಿಷ್ ಪಾರ್ಲಿಮೆಂಟಿನ ಪೂರ್ಣವಿರಾಮ ಅರ್ಧ ವಿರಾಮಗಳಿಂದ ಕೂಡಿದ ಶಾಸನ ಮಸೂದೆಯೊಂದರ ಮುಖಾಂತರ ಸಂಭವಿಸಬೇಕೆಂದು ನಾನು ಆಶಿಸಿರಲಿಲ್ಲ ನಮ್ಮ ದೇಶವನ್ನು ತುಂಡರಿಸಿದ ಮೇಲೇ ನಮಗೆ ಸ್ವಾತಂತ್ರ ಸಿಗಬೇಕೆಂಬ ಕಲ್ಪನೆಯೂ ನಮ್ಮದಾಗಿರಲಿಲ್ಲ ‘ಐಕ್ಯದಲ್ಲಿ ಬಲವಿದೆ’ ಹೊಸ ಸರಕಾರ ಎಂಬ ಹಳೆ ನಾಣ್ಣುಡಿಯನ್ನು ನಾವೀಗ ಬದಲಿಸಬೇಕಾದ ಕಾಲ ಬಂದಿದೆ ‘ದಾಸ್ಯದಲ್ಲಿರುವಾಗ ಒಗ್ಗಟ್ಟಾಗಿದ್ದವರು ಇಬ್ಬಾಗವಾಗಿ ಸ್ವತಂತ್ರರಾದರೆಂದರೆ ವಿಧಿವೈಚಿತ್ರವಲ್ಲವೆ!

ಆದರೂ ಇದರ ಒಳಿತುಕೆಡುಕುಗಳ ಪರಿಣಾಮಗಳನ್ನು ತಿಳಿಯಬೇಕಾದರೆ ಸ್ವಲ್ಪ ವಿಳಂಬವಿದೆ ಸ್ವಾತಂತ್ರವೇನೊ ನಮ್ಮದಾಗಿದೆ. ಆದರೆ ನಾವೀ ಸ್ವಾತಂತ್ರ್ಯವನ್ನು ಹೇಗೆ ಸದುಪಯೋಗಿಸುತ್ತೇವೆಂಬುದರ ಮೇಲೆ ನಮ್ಮ ಭವಿಷ್ಯದ ಶುಭವು ಹೊಂದಿಕೊಂಡಿದೆ ಸ್ವಾತಂತ್ರ್ಯವು ಹಸಿದ ಜನತೆಯನ್ನು ಉಣ್ಣಿಸಬಲ್ಲುದೆ? ನಗ್ನ ಜನತೆಯನ್ನು ತೊಡಿಸಬಲ್ಲುದೆ? ಅನಜ್ಞ ಜನತೆಯನ್ನು ಶಿಕ್ಷಿತರನ್ನಾಗಿ ಮಾಡಬಲ್ಲುದೆ? ಸದ್ಯದ ಸ್ವಾತಂತ್ರ್ಯವಾದರೂ ನಮ್ಮಲ್ಲಿ ಸಮಾನತೆಯನ್ನುಂಟುಮಾಡಬಲ್ಲುದೆ?

ಹೊಸ ಸ್ವಾತಂತ್ರ್ಯವು ದಾಸ್ಯದಲ್ಲಿ ಕೊಳೆತ ಜನತೆಗೆ ಪ್ರಜಾಪ್ರಭುತ್ವತದ ಮತ್ತು ಸಾಮಾಜಿಕ ಅಭಿವೃದ್ಧಿಯ ಸಂದರ್ಭಗಳನ್ನು ಕಲ್ಪಿಸಿಕೊಡಬಲ್ಲುದೊ? ಇಲ್ಲವೆ ಈ ಸ್ವಾತಂತ್ರ್ಯವು ಒಂದು ರಾಜಕೀಯ ಘೋಷವಾಗಿ ಉಳಿದು ಒಂದು ಗಗನ ಪುಷ್ಪವಾಗಿ ಉಳಿಯುವುದೊ? ಈ ಸ್ವಾತಂತ್ರ್ಯವು ಬಂಡವಾಳದ್ವಾರರ ಸುಲಿಗೆಯ ಧೋರಣೆಗೆ ಒಂದು ಉತ್ತಮ ಸಹಾಯಕವಾಗುವುದೊ ಇಲ್ಲವೆ ನಮ್ಮ ಮುಂದಾಳುಗಳು ತಮ್ಮ ಮುಂದಿರುವ ಅಗಾಧವೂ ಕಠಿಣವೂ ಆದ ಸಮಸ್ಯೆಗಳನ್ನು ಧೈರ್ಯದಿಂದೆದುರಿಸಲು ಸಮರ್ಥರಾಗುವರೊ? ನಮ್ಮ ಜನರು ಇನ್ನಾದರೂ ದೇಶಾಡಳಿತ ಯಜಮಾನರು ತಾವೇ ಎಂದು ಭಾವಿಸಲಾರಂಭಿಸುವರೊ?

ನಮ್ಮ ಮುಂದಿರುವ ಅಗಾಧ ಸಮಸ್ಯೆಗಳನ್ನು ತಿಳಿಕೊಳ್ಳಬೇಕಾದರೆ ಮೇಲಿನ ಪ್ರಶ್ನೆಗಳನ್ನು ನಾವು ಒಂದೊಂದಾಗಿ ಪರ್ಯಾಲೋಚಿಸಬೇಕಾಗುವುದು ಈ ದೃಷ್ಟಿಯಿಂದ ಸ್ವಾತಂತ್ರ್ಯವು ನಮ್ಮ ಪ್ರಯಾಣದ ಅಂತ್ಯವಲ್ಲ, ಅದು ಹೊಸತೊಂದು ಪ್ರಯಾಣದ ಪ್ರಾರಂಭವೆನ್ನಬಹುದು ಸ್ವಾತಂತ್ರ್ಯವೆಂದರೆ ನಮ್ಮ ಕೊರಳಿಗೆ ಹಾಕಿ ಮೆರೆಯುವ ಒಂದು ಮಾಲೆಯಲ್ಲ, ಅದು ನಮ್ಮನ್ನು ಚೇತರಿಸುವ ಸ್ಥೂಲ ಎಚ್ಚರಿಕೆಯಾಗಿರುತ್ತದೆ ಹಿಂದಿನ ಕಾಲದ ತಪ್ಪೊಪ್ಪುಗಳ ಕುರಿತು ಚಿಂತಿಸುವ ಕಾಲವಿದಲ್ಲ ಅದರಿಂದ ನಮಗಾಗುವ ಸಹಾಯ ಅತ್ಯಲ್ಪವಾದುದು ಆದುದರಿಂದ ನಾವು ಸ್ಥೈರ್ಯದಿಂದ ಭವಿಷ್ಯದ ಕಡೆಗೆ ದೃಷ್ಟಿಸೋಣ ಇಬ್ಬಗಿಸಲ್ಪಟ್ಟ ನಮ್ಮ ಸ್ವಾತಂತ್ರ್ಯದ ಸಂಕಷ್ಟಗಳನ್ನು ಧೈರ್ಯದಿಂದೆದುರಿಸೋಣ

★

ಮಹತ್ಕಾರ್ಯ

ಸ್ವಾತಂತ್ರ್ಯೋದಯವು ಭಾರತೀಯರೆಲ್ಲರಿಗೆ ಶ್ರೇಯಸ್ಕರವಾದ ಚಿಹ್ನೆಯಾಗಿದೆ ಅನತಿ ಭವಿಷ್ಯದಲ್ಲೆಂಬಂತೆ ಇದು ತನಕ ನಮ್ಮ ಮೇಲೆ ಹೊರೆಯಾಗಿ ಕೂತಿದ್ದ ಬ್ರಿಟಿಷರ ಕೊನೆಯ ಗಂಟುಮೂಟೆಗಳೂ ದಾಟಿಹೋಗುವುದನ್ನು ನಾವು ಕಾಣದಿರಲಾರೆವು ಪಾಕಿಸ್ತಾನ ಮತ್ತು ಸಂಯುಕ್ತ ಭಾರತಗಳನ್ನಾಗಿ ಮಾಡಿದುದು ಇದೊಂದು ದೊಡ್ಡ ರಾಜಕೀಯ ಮುತ್ಸದ್ದೀತನದ ದುಷ್ಟ ಧೋರಣೆ ಆದರೆ ಭಾರತೀಯರು ಇದನ್ನು ಸ್ವೀಕರಿಸದೆ ಬಿಡಲು ದಾರಿಯಿಲ್ಲದಾಗಿದೆ ಭಾರತವು ಈಗೊಂದು ದೊಡ್ಡ ಗಂಡಾಂತರದ ಬೋನಿನಲ್ಲಿ ಸಿಲುಕಿದಂತಾಗಿದೆ ಈ ಸಂದಿಗ್ಧದಿಂದ ತಪ್ಪಿಸಿಕೊಳ್ಳಬೇಕಾದರೆ ಇನ್ನೂ ಮಹತ್ತರವಾದ ತ್ಯಾಗ ಬಲಿದಾನಗಳನ್ನು ಮಾಡಿ ತನ್ನ ಐಕ್ಯತೆ ಮತ್ತು ಅಖಂಡತ್ವಗಳನ್ನು ಕಾಪಾಡಿಕೊಳ್ಳಬೇಕಾಗಿದೆ

ಪಾಕಿಸ್ತಾನವು ಭಾರತ ಘಟನೆಗೆ ಸೇರುವ ಕಾಲವು ದೂರವಿರದೆಂಬೊಂದು ಉದಾತ್ತ ಪರೀಕ್ಷೆಯಿಂದ ವಿಭಾಗೀಕರಣವನ್ನು ನಾವು ಒಪ್ಪಿದ್ದೇವೆ ಕುತಂತ್ರ ಮಾಡುವ ಆ ಮೂರನೇ ಪಕ್ಷದವರ ಸಾನಿಧ್ಯವಿಲ್ಲದಿದ್ದರೆ ನಮ್ಮೊಳಗಿನ ಕಲಹ ಜ್ವಾಲೆಯು ಕೂಡಲೇ ತಣಿಯುವುದು ಹಿತವೆಂಬೊಂದು ಪರೀಕ್ಷೆ ನಮ್ಮವರ ಹೃದಯಗಳಲ್ಲಿ ಕುಣಿದಾಡುತ್ತಿದೆ

ಭಾರತ ಮಂಡಳದಲ್ಲಿರುವ ನಾವು ಅತ್ಯಂತ ತಾಳ್ಮೆ ಸಹಿಷ್ಣುತೆಗಳಿಂದ ವರ್ತಿಸಬೇಕಾದುದು ಅತ್ಯಾವಶ್ಯಕ. ನಾವಿನ್ನೂ ಅಪಾರವಾದ ತ್ಯಾಗಗಳನ್ನು ಮಾಡಬೇಕಾಗಿದೆ. ಈಗ ಅಸ್ತಿತ್ವಕ್ಕೆ ಬರಲಿರುವ ಎರಡು ಸ್ಥಾನಗಳೊಳಗೆ ಪರಸ್ಪರ ಹಿತಘರ್ಷಣೆಗಳೆಷ್ಟೊ ಉಂಟಾಗಲಿವೆ, ಈ ವಿಷಯದಲ್ಲಿ ಭಾರತ ಮಂಡಳದವರಿಗೆ ಕಷ್ಟಗಳ ಕಾಡುಗಳೇ ಎದುರಾಗಿ ತಂದೊಡ್ಡಿದಂತಾಗಿದೆ

‘ಹಿಂದುಸ್ಥಾನ’ದಲ್ಲಿ ಪಾನನಿರೋಧ, ಕುದುರೆಜೂಜು ನಿಲ್ಲಿಸುವಿಕೆಯಿಂದ ಎಷ್ಟೋ ಜನರಿಗೆ ಅನಾನುಕೂಲತೆಗಳುಂಟಾಗಬಹುದು ಕಳೆದ 175 ವರ್ಷಗಳಿಂದ ನಮ್ಮ ದೇಶದಲ್ಲುಂಟಾದ ಕೆಡುಕುಗಳನ್ನು ನಿವಾರಿಸಲು ನಾವಿಂದು ಗಾಂಧೀಜಿ, ನೆಹರುಗಳ ಕಡೆ ನೋಡುತ್ತೇವೆ ಆದರೆ ಇವುಗಳೆಲ್ಲವನ್ನೂ ಒಂದು ಕ್ಷಣದಲ್ಲಿ ನಾಶಮಾಡಲು ಸಾಧ್ಯವಿಲ್ಲ ಜನತೆಯು ಮುಖಂಡರನ್ನರಿತುಕೊಂಡು ಜನಾಂಗದ ಸರ್ವತೋಮುಖ ಶ್ರೇಯಸ್ಸಿನ ಕಡೆಗೆ ಗಮನತೆತ್ತು ಮುಖಂಡರೊಡನೆ ಸಹಕರಿಸಿ ನಮ್ಮ ಸ್ವಾತಂತ್ರ್ಯದ ಸಂಪೂರ್ಣ ಸದುಪಯೋಗ ಮಾಡಬೇಕಾದುದು ಅತ್ಯಂತ ಮಹತ್ವದ ಕರ್ತವ್ಯವಾಗಿದೆ

ನರೆ ಕೂದಲು ನಿಲ್ಲಿಸಿರಿ

ಬ್ಲೈಕಿನಾ. ಖಂಡಿತವಾಗಿ ನರೆಕೂದಲನ್ನು ಕಪ್ಪಾಗಿ ಪರಿವರ್ತಿಸಿ ನರೆತವನ್ನು ನಿಲ್ಲಿಸುವುದು ಇದಕ್ಕೆ ಮೆದುಳು, ಕಣ್ಣುಗಳನ್ನು ತಂಪು ಮಾಡುವ ಆರೋಗ್ಯದಾಯಕ ಶಕ್ತಿ ಇದೆ ನಮ್ಮ ಫಾರ್ಮಸಿಯ ಹೆಸರು ಬಾಟ್ಲಿಯ ಮೇಲಿಲ್ಲದಿದ್ದರೆ ಅದನ್ನು ತಿರಸ್ಕರಿಸಿರಿ ಕೆಲವೇ ನರೆತ ಕೂದಲುಗಳ ಬಾಟ್ಲಿಗೆ ರೂ 2 8—0 ಅದಕ್ಕಿಂತ ಹೆಚ್ಚಿದ್ದರೆ ರೂ 3 8—0 ಸಂಪೂರ್ಣ ನೆರೆತದಕ್ಕೆ ರೂ 5—0—0

ಕಾಮಕಲಾ: ಸಾಯಂಕಾಲ ಒಂದು ಮಾತ್ರೆ ಸೇವಿಸಿರಿ ಅದು ನಿಮಗೆ ಚಿರ ಆನಂದ ಕೊಟ್ಟು ನಿಮ್ಮ ಶಕ್ತಿ ಸಾಹಸ ಹೆಚ್ಚಿಸುತ್ತದೆ ಒಂದ ಸಲ ಉಪಯೋಗಿಸಿದರೆ ನಿಮಗದರ ಅದ್ಭುತ ಸಾಮರ್ಥ್ಯ ಮರೆಯಲಾರಿರಿ ಇದು ನಿರ್ಬಲತೆ ಹೋಗಲಾಡಿಸುವುದು

16 ಮಾತ್ರೆಗಳಿಗೆ ರೂ 1

ಸತ್ಯದೇವ ಆಯುರ್ವೇದ ಭವನ.
No 15 P O
Katri sarai Gaya)

ರೂ. ೧೦೦ ಬಹುಮಾನ

ಅದ್ಭುತ ಶಕ್ತಿ ಸಿದ್ಧಕವಚ

ಇದನ್ನು ಇಟ್ಟುಕೊಂಡ ಮಾತ್ರಕ್ಕೆ ಅತೀ ದುಸ್ಸಾಧ್ಯವಾದ ಉದ್ದೇಶವೂ ಸಾಧಿಸುವುದು. ಇದನ್ನು ಪರಿಣಾಮಕಾರಿ ಮಾಡಲೂ ಯಾವ ಕಷ್ಟದ ಶ್ರಮವನ್ನು ವಹಿಸಬೇಕಾಗಿಲ್ಲ ಯಾವ ತಕರಾರಿಯಿಲ್ಲದೆಯೂ ಇದು ಫಲಕೊಡುವುದು ನೀಚಗ್ರಹಗಳನ್ನಿದು ಗೆಲ್ಲುವುದು, ಶತ್ರುಗಳನ್ನು ಗೆದ್ದು ಪರೀಕ್ಷೆ, ವ್ಯಾಪಾರ, ವ್ಯಾಜ್ಯ, ಸೋಡ್ತಿ, ಜೂಜು, ಉದ್ಯೋಗಗಳಲ್ಲಿ ಯಶಸ್ಸುಕೊಡುತ್ತದೆ ಸಂಪತ್ತಭಿವೃದ್ಧಿ ಮಾಡಿ, ಸಾಲ ವಿಮೋಚಿಸಿ, ಅಪಾಯಕರ ಕಾಯಿಲೆಗಳನ್ನು ಗುಣಪಡಿಸುತ್ತದೆ ನಿಮ್ಮನ್ನು ಅದೃಷ್ಟಶಾಲಿ ಮಾಡುತ್ತದೆ ಇದನ್ನು ಸುಳ್ಳೆಂದು ರುಜುವಾತು ಮಾಡಿದವರಿಗೆ 100 ರೂಪಾಯಿ ಬಹುಮಾನ ಬೆಲೆ ತಾಮ್ರದಕ್ಕೆ ರೂ 2 ಬೆಳ್ಳಿದ್ದಕ್ಕೆ ರೂ 8, ಬಂಗಾರದಕ್ಕೆ ರೂ 15 ಶೀಘ್ರ ಫಲದ ವಿಶೇಷ ತರದ ಕವಚಕ್ಕೆ (ಶುದ್ಧ ಬಂಗಾರದ ಮುಚ್ಚಿಗೆಯದು) ರೂ 25—7

Dukh Haran Ashram, No 1
P O Katri Sarai (Gaya)



ಜಾಂಬಕಿನಿಂದ ಪರಿಹಾರ

ಈ ವನಸ್ಪತಿ ಜಾಂಬಕ್ ಮುಲಾಮು ವಿಷಹಾರಿ ಶಮನದ ಪರಿಹಾರ ಸಡಿಲಾದ ನರಗಳನ್ನು ಸಂಕೋಚಿಸಿ ರಕ್ತಸ್ರಾವ ತಡೆದು, ಊರುವಿಕೆ ನಿಲ್ಲಿಸಿ ವಿಷಮತೆಯನ್ನು ಪರಿಹರಿಸುತ್ತದೆ ಶಸ್ತ್ರಕ್ರಿಯೆ ಅನಿವಾರ್ಯವೆಂದಾಗಲೂ ಜಾಂಬಕ್ಕು ಯಶಸ್ವಿಯಾಗಿದೆ

ಮಡವೆ, ತುರಿಕಜ್ಜಿ, ಕಡುಕಡಿತದಿಂದ ಕುರು, ಉಷ್ಣ ಗುಳ್ಳೆ ಕಾಲು ಬಾತುವಿಕೆ ಮೊದಲಾದ ಎಲ್ಲಾ ಚರ್ಮ ವ್ಯಾಧಿಗೆ ಜಾಂಬಕು ವಿಶ್ವಖ್ಯಾತಿ ಔಷಧಿ

ಜಾಂಬಕನ್ನೇ ಉಪಯೋಗಿಸಿರಿ



Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು.

ವಾರದ ವಿಜ್ಞಾನ ವಾರ್ತೆಗಳು

ನೂರು ವರ್ಷ ಆಯುಷ್ಯ

ಒಕ್ಸಫರ್ಡ್‍ನಲ್ಲಿನ ಒಂದು ವೈಜ್ಞಾನಿಕ ಸಂಶೋಧನಾಲಯದಲ್ಲಿ ಪರಿಶೋಧನೆ ನಡೆಸುತ್ತಿರುವ ಡಾ॥ ಕೊರಿಂಚವಸ್ಕಿ ಎಂಬ ವೈದ್ಯತಜ್ಞರು ಮನುಷ್ಯನ ಬದುಕುವಿಕೆಯನ್ನು 109ರಿಂದ 114 ವರ್ಷಗಳ ತನಕ ಮುಂದುವರಿಸಲು ಸಾಧ್ಯವಿದೆಯೆಂದು ಭರವಸೆ ಸಾರಿದ್ದಾರೆ. ಇಂದು ಅಸಹಾಯಕರಾಗಿರುವ ಮುದುಕರು ಕೆಲಸ ಮಾಡುವ ತರುಣ ಜನಾಂಗದ ಮೇಲೊಂದು ಹೊರೆಯಾಗಿರುವರು ಆದರೆ ಮುಂದೆ ಮುದುಕರನ್ನು ಶಕ್ತಿವಂತರಾಗಿ ಮಾಡಲು ಸಾಧ್ಯವಿದೆಯೆಂದು ಮೇಲ್ಕಂಡ ವೈದ್ಯರು ತಿಳಿಸುತ್ತಾರೆ ವೈದ್ಯಶಾಸ್ತ್ರ ಮತ್ತು ವಿಜ್ಞಾನಶಾಸ್ತ್ರಗಳು ವೃದ್ಧರಿಗೆ ಆಯುಷ್ಯಾಭಿವೃದ್ಧಿಯನ್ನು ಮಾತ್ರವಲ್ಲ ಶಾರೀರಿಕ, ಮಾನಸಿಕ ಚೈತನ್ಯವನ್ನು ಅಭಿವೃದ್ಧಿಗೊಳಿಸುವುದು ಎಂದವರ ಅಭಿಪ್ರಾಯ

ಆಕಾಶದಲ್ಲಿ ಪೆಟ್ರೋಲು ಟಾಂಕಿ

ವಿಮಾನಗಳು ದೀರ್ಘ ದೂರದ ಪ್ರಯಾಣಿಕರನ್ನೊಯ್ಯುವಾಗ ಎಲ್ಲಿಯೂ ಕೆಳಗಿಳಿಯದೆ ತಮ್ಮ ಪ್ರಯಾಣವನ್ನು ಮುಂದುವರಿಸಲು ಸಾಧ್ಯವಾಗುವಂತೆ ಆಕಾಶದಲ್ಲೇ ಬೇಕಾದ ಎಣ್ಣೆಯನ್ನು ತುಂಬಿಸುವ ಯಶಸ್ವಿ ವಿಧಾನವೊಂದನ್ನು ಬ್ರಿಟಿಷ್ ವಿಮಾನ ಹಾರಾಟ ಪರಿಶೋಧನಕಾರರು ಪರಿಪೂರ್ಣಗೊಳಿಸಿರುವರು ಇಂತಹ ವಿಧಾನವನ್ನನುಸರಿಸಿ ಪ್ರಯೋಗಾರ್ಥವಾಗಿ ಒಂದು ವಿಮಾನವು ಕಳೆದ ಮೇ ತಿಂಗಳಲ್ಲಿ ಇಂಗ್ಲೆಂಡಿನಿಂದ ಸುಮಾರು 2000 ಮೈಲು ದೂರದ ಬರ್ಮುಡಾ ದ್ವೀಪಕ್ಕೆ ಹಾರಿ ಕೆಳಗಿಳಿಯದೆ ಹಿಂದಕ್ಕೆ ವಾಪಸ್ಸು ಬಂದಿತು ಸುಮಾರು ಒಂದು ಸಾವಿರ ಮೈಲು ಅಂತರದಷ್ಟರಲ್ಲಿ ಅದು ಆಕಾಶದಲ್ಲೇ ಬೇರೆ ವಿಮಾನಗಳ ಸಹಾಯದಿಂದ ಎಣ್ಣೆ ತುಂಬಿಸಿಕೊಂಡಿತು ಬರುವಾಗಲೂ ಅದೇ ರೀತಿ

ಎಟಂ ಶಕ್ತಿ ಹಡಗಕ್ಕೆ

ಕಳೆದ ಯುದ್ಧದಲ್ಲಿ ವಿನಾಶಕಾರಕ ಚಟುವಟಿಕೆಗಳಿಗೆ ಉಪಯೋಗಿಸಿದ ಎಟಂ ಶಕ್ತಿಯನ್ನು ಯಂತ್ರ ಚಲನೆಗೆ ಉಪಯೋಗವಾಗುವಂತೆ ಪ್ರಯೋಗಗಳನ್ನು ಜರಗಿಸಬೇಕೆಂದು ಬ್ರಿಟಿಷ್ ನೌಕಾ ಇಲಾಖೆಯವರು ಒಂದು ವಿನಂತಿ ಮಾಡಿರುವರು ಮುಖ್ಯವಾಗಿ ಯುದ್ಧ ಹಡಗಗಳನ್ನು ಚಲಾಯಿಸಲು ಇದನ್ನುಪಯೋಗಿಸುವಂತಾಗಬೇಕೆಂದು ಅವರ ಮನಸ್ಸು

ಎಟಂ ಶಕ್ತಿಯನ್ನು ಹೀಗೆ ಉಪಯೋಗಿಸಿಕೊಂಡರೆ ಬ್ರಿಟನಿನ ನೌಕಾ ರಕ್ಷಣಾ ಬಲದ ಸಾಮರ್ಥ್ಯವು ಹೆಚ್ಚುವುದೆಂದೂ ಹಡಗಗಳಿಗೆ ಎಟಂಶಕ್ತಿ ಚಲನೆಯ ಏರ್ಪಾಡುಗಳನ್ನಿರಿಸಿದರೆ ಆಗಿಂದಾಗ್ಗೆ ಅವುಗಳಲ್ಲಿ ಎಣ್ಣೆ ಕಲ್ಲಿದ್ದಲ್ಲುಗಳ ಕೊರತೆ ಹುಟ್ಟಲಾರದೆಂದೂ ನೌಕಾ ಇಲಾಖೆಯ ನಿರೀಕ್ಷೆ. ಇದರಿಂದ ಹಡಗವೊಂದು ಹೆಚ್ಚುಕಾಲ ಸಾಗರ ಮಧ್ಯದಲ್ಲಿ ಇರಲು ಸಾಧ್ಯವಾಗುವುದು.

ವಿದ್ಯುತ್ತಿನಿಂದ ರೋಗಾಣು ನಾಶ

ಅಮೇರಿಕನ್ ವಿಜ್ಞಾನಿಗಳು ವಿದ್ಯುತ್ ಪ್ರವಾಹದಿಂದ ರೋಗಾಣುಗಳನ್ನು ಕೊಲ್ಲುವ ವಿಧಾನದೊಂದಿಗೆ ಪ್ರಯೋಗಗಳನ್ನು ನಡೆಸುತ್ತಿರುವರು ಇದುತನಕ ಕುದಿಸಿ, ಶೀತಗೊಳಿಸಿ ವಿಷಪ್ರಯೋಗದಿಂದ ಇಲ್ಲವೆ ಅಲ್ಟ್ರಾ ವೊಲೈಟ್ ಕಿರಣಗಳಿಂದ ರೋಗಾಣುಗಳನ್ನು ಕೊಲ್ಲುವುದು ರೂಢಿಯಾಗಿದೆ ಈಗ ಕಪಾಸಿಟ್ರೋನ್ ಎಂಬೊಂದು 'ವಿದ್ಯುತ ಮನೆ' ತಯಾರುಮಾಡಲ್ಪಟ್ಟಿದೆ ಇದು ರೋಗಾಣುಗಳನ್ನು ಕೊಂದು ಆಹಾರವನ್ನು ಹಾಳಾಗದಂತಿರಿಸುತ್ತದೆ ಬಹಳ ಶಕ್ತಿವಂತವಾದ ಸೂಕ್ಷ್ಮ ವಿದ್ಯುತ್ ಕಿರಣಗಳನ್ನು ವೈದಕೀಯ ಔಷಧಿಗಳೊಳಗೂ, ಶೇಕರಿಸಿಡಲ್ಪಟ್ಟ ರಕ್ತದಲ್ಲೂ ಹರಿಯುವಂತೆ ಮಾಡುವುದರಿಂದ ಅವುಗಳೊಳಗಿನ ಎಲ್ಲಾ ರೋಗಾಣುಗಳನ್ನು ನಾಶಪಡಿಸಲಾಗುವುದು ಇದೇ ರೀತಿ ಹಾಲು ಮಾಂಸಗಳನ್ನು ಹಾಳಾಗದಂತೆ ಇಡಬಹುದು.

ಬೀಳುವ ರೋಗಕ್ಕೆ ಮದ್ದು

ರಶ್ಯನ್ ವಿಜ್ಞಾನಿಗಳು ಬಹಳ ಭೀಕರವಾದ ಫಿಟ್ಸ್ ಎಂಬ ಬೀಳುವರೋಗಕ್ಕೊಂದು ಪರಿಹಾರವನ್ನು ಕಂಡುಹಿಡಿದಿದ್ದಾರೆ ಶಸ್ತ್ರಕ್ರಿಯೆ ಮಾಡುವಾಗ ಉಪಯೋಗಿಸುವ ಕ್ಲೋರೋಫೋರ್ಮನ್ನು ಔಷಧಿ ರೂಪದಲ್ಲಿ ಸೇವಿಸುವುದರಿಂದ ಈ ರೋಗವು ವಾಸಿಯಾಗುತ್ತದೆಂದು ಕೆಲವು ಇಲಿಗಳ ಮೇಲೆ ಮಾಡಿದ ಪ್ರಯೋಗದಿಂದ ತಿಳಿದಿದೆ

ವಿದೇಶ ವಾರ್ತೆ

ಹಿಟ್ಲರನ ಕಾಲದಲ್ಲಿ ಜರ್ಮನೇತರರನ್ನು ಯಾವರೀತಿಯಲ್ಲಿ ಕಾಣಲಾಗಿತ್ತೋ ಅದೇ ರೀತಿ ಈಗ ಜರ್ಮನರನ್ನು ನಡೆಸಿ ಅವರು ಮುಂದೆಂದಿಗೂ ಶಕ್ತಿವಂತರಾಗಿ ತಲೆಯೆತ್ತದಂತೆ ಮಾಡಬೇಕೆಂದು ಕಮ್ಯುನಿಸ್ಟ್ ಪಾರ್ಟಿಯ ಜೆಕೋಸ್ಲೋವೇಕಿಯದ ಮಂತ್ರಿಗಳೊಬ್ಬರು ಸಾರಿದ್ದಾರೆ. ಅಲ್ಲಿ ಈಗಾಗಲೇ ಈ ಕೆಲಸ ಆರಂಭವಾಗಿದೆ.

★

ಮಾರ್ಶಲ್ ಯೋಜನೆಯ ಕುರಿತು ಪೆರಿಸಿನಲ್ಲಾದ ತ್ರಿಶಕ್ತಿ ರಾಷ್ಟ್ರ ಪ್ರತಿನಿಧಿಗಳ ಪರಿಷತ್ತು ಅಯಶಸ್ವಿಯಾದಂದಿನಿಂದ ಪಶ್ಚಿಮ ಯುರೋಪದ ರಾಷ್ಟ್ರಗಳು ಒತ್ತೊಟ್ಟಾಗಿಯೂ, ಪಶ್ಚಿಮದ ರಾಷ್ಟ್ರಗಳು ಒಂದು ಕಡೆಯಾಗಿಯೂ ಭದ್ರತೆಯ ಯೋಜನೆಗಳನ್ನು ಪರ್ಯಾಲೋಚಿಸುತ್ತಿವೆಯಂತೆ ಯುರೋಪಿನಲ್ಲಿ ಮೂರನೇ ಯುದ್ಧದ ಸಿದ್ಧತೆ ಈಗಾಗಲೇ ಪ್ರಾರಂಭವಾಗಿದೆಯೆಂದು ರಾಜಕೀಯ ನಿರೀಕ್ಷಕರು ಭಾವಿಸುತ್ತಾರೆ.

★

ಅಮೇರಿಕವು ಯುರೋಪಿನ ಚಿಕ್ಕ ರಾಷ್ಟ್ರಗಳಿಗೆ ಸಹಾಯ ಕೊಡುವ ಯೋಜನೆ ಮಾಡಿದ್ದುದನ್ನು ಟೀಕಿಸುವುದು ರಷ್ಯ ಮಾತ್ರವಲ್ಲ ಇಂಗ್ಲೆಂಡಿನ ಕನ್ಸರ್ವೆಟಿವ ಪಕ್ಷದ ಮುಖಂಡರು ಕೂಡಾ ಈಗಾಗಲೇ ಈ ಕುರಿತು ಎಚ್ಚರಿಕೆ ಕೊಡುತ್ತಿದ್ದಾರೆ

★

ಜುಲೈ 1ರಿಂದ ಗ್ರೀಸಿನಲ್ಲಿ ಪ್ರಚಂಡ ಬಂಧನ ಸತ್ರವೊಂದು ಪ್ರಾರಂಭವಾಯಿತು. ೪ ಸಾವಿರಕ್ಕಿಂತ ಸ್ತ್ರೀ ಪುರುಷರನ್ನು ಹಿಡಿಯಲಾಯಿತು ಅವರಲ್ಲಿ ಬಹುಸಂಖ್ಯಾಕರನ್ನು ಏಜಿಯನ್ ದ್ವೀಪಾಂತರಕ್ಕೆ ಕಳುಹಿಸಲಾಗಿದೆ

★

ಗೃಹಿಣಿಯರ ಗಮನಕ್ಕೆ ಕೆಲವು ಸರಳ ಸೂಚನೆಗಳು

1 ಭವಿಷ್ಯದ ಕುರಿತು ಅತಿಯಾಗಿ ಚಿಂತಿಸಬೇಡಿರಿ. ನಿಮ್ಮ ಕೈಗೆ ಬರುವ ಆದಷ್ಟು ಹಣವನ್ನು ಒಟ್ಟುಗೂಡಿಸಿರಿ. ಈಗಿನ ಮಧ್ಯವರ್ಗದ ಜನರು ಭವಿಷ್ಯದ ಕುರಿತು ಹೆಚ್ಚು ಯೋಚಿಸುವುದಿಲ್ಲವೆಂದು ಕಾಣುತ್ತದೆ. ಮಕ್ಕಳ ಶಿಕ್ಷಣಕ್ಕೆ ಸಾಕಷ್ಟು ಹಣ ಮತ್ತು ನಿಮ್ಮ ಜೀವನಗಳ ಮೇಲೆ ವಿಮೆ ತೆಗೆದಿದ್ದರೆ ಯಥೇಷ್ಟ ಭದ್ರತೆಯಾಯಿತು

2 ಬಡಬಗ್ಗರಿಗೆ ದಾನಕೊಡಲು ಹಣ ಗುಟ್ಟಬೇಡಿರಿ. ದರಿದ್ರ ನಿವಾಸಗಳಿಗೆ ಹೋಗಿ ನಿಮ್ಮ ಅನುಕೂಲತೆಯ ಹಣ ಇಲ್ಲವೆ ಕಾಲವನ್ನು ಅಲ್ಲಿನ ಮಹಿಳೆಯರ ಉದ್ಧಾರಕ್ಕಾಗಿ ವ್ಯಯಿಸಿರಿ ಇದರಿಂದ ಭಾರತದ್ದೇ ಉದ್ಧಾರವಾಗುವುದು

3 ನಿಮ್ಮ ಹಳೆ ಬಟ್ಟೆಗಳನ್ನು ಬಿಸಾಡಬೇಡಿರಿ ಬಡವರಿಗದನ್ನು ಕೊಡಿರಿ

4 ನಿಷ್ಪ್ರಯೋಜಕ ಆಭರಣಗಳಲ್ಲಿ ಹಣ ವ್ಯಯಿಸಬೇಡಿರಿ ಇದರಿಂದ ಕಷ್ಟಗಳೂ ಮತ್ತು ಕಳ್ಳರೂ ಉಂಟಾಗುವರು ಅದಕ್ಕಿಂತ ದರಿದ್ರ ಸಹಾಯ ಸಂಸ್ಥೆಗಳಿಗಾಗಿ ವ್ಯಯಿಸಿರಿ ನಮ್ಮ ದೇಶದ ಸಂಪತ್ತು ಸಮಾನವಾಗಿ ಹಂಚಲ್ಪಡಬೇಕು ಈಗ ಹೆಚ್ಚಿನದು ಶ್ರೀಮಂತರಿಗೂ, ಅತಿ ಕಮ್ಮಿ ಬಡವರಿಗೂ ದೊರೆಯುವಂತಾಗುವುದು

5 ಆರೋಗ್ಯ ಜ್ಞಾನ ಮತ್ತು ಶಿಕ್ಷಣದ ಕುರಿತು ಸ್ವಾರ್ಥ ತಾಳಬೇಡಿರಿ ಪ್ರತಿದಿನ ಇಲ್ಲವೆ ವಾರಕ್ಕೊಮ್ಮೆಯಾದರೂ ನಿಮ್ಮ ನಿರಕ್ಷರಸ್ಥ ಭಗಿನಿಯರಿಗೂ ಸ್ವಲ್ಪ ಕಲಿಸಿರಿ

6 ಬಡವರ ಬಳಿಗೆ ಹೋಗಲು ಅಸಹ್ಯಪಡಬೇಡಿರಿ ಅವರ ಮನೆಗೆ ಹೋಗಿ ಕುಳಿತುಕೊಂಡು ಸಂಭಾಷಿಸಿರಿ ಬಡವರು ನಿಮ್ಮ ಸಂದರ್ಶನಗಳಿಂದ ಸಂತೋಷಪಡುವರು

ಧ್ಯೇಯ: ದೇವರು ನಮಗೆ ಕೊಟ್ಟಿರುವುದನ್ನು ನಾವು ಬೇರೆಯವರಿಗೆ ಕೊಡೋಣ.

ಆಶ್ಚರ್ಯವಾದ ಸಿದ್ಧಿ ಯಂತ್ರ

ಅದ್ಭುತ ಶಕ್ತಿಯುಳ್ಳ ಈ ಗುಪ್ತ ವಶೀಕರಣ ಯಂತ್ರಧಾರಣದಿಂದ ನಿಮ್ಮ ಇಚ್ಛಿತ ಕಾರ್ಯಗಳೆಲ್ಲ ನೆರವೇರುವುವು ಇದನ್ನು ಧರಿಸಲು ಯಾವ ತಪಸ್ಸಿದ್ಧಿಯೂ ಬೇಕಾಗಿಲ್ಲ. ಇದು ನಿಮಗೆ ಐಶ್ವರ್ಯವನ್ನು ಕೊಟ್ಟು ನಿಮಗೆ ಬೇಕಾದವರನ್ನು ನಿಮ್ಮ ವಶಪಡಿಸಿ, ಇಚ್ಛಿತ ಕಾರ್ಯಗಳೆಲ್ಲ ವಿಜಯವನ್ನು ಕೊಡುವುದು. ಇದು ತಪ್ಪೆಂದು ಸ್ಥಾಪಿಸುವವರಿಗೆ ರೂ. ೧೦೦ ಬಹುಮಾನ.

ತಾಮ್ರದ ತಾಯಿತಕ್ಕೆ ರೂ. ೨-೪-೦ ಬೆಳ್ಳಿಯ ತಾಯಿತಕ್ಕೆ ರೂ ೩ ಚಿನ್ನದಕ್ಕೆ ರೂ. ೧೫.

PRET SHILA ASHRAM
No. 181
POKATRI SARAI (GAYA)

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ ಡಿಸ್ಟ್ರಿಕ್ಟಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ ನಿರ್ಧರಿಸಿದ ಸ್ಥಳದವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗಳೂರು-ಮುಲ್ಕಿ ಲೈನಿನಲ್ಲಿ ಮಂಗಳೂರಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್‍ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡು ಅಂಥಾ ಸ್ಪೆಶ್ಯಲುಗಳನ್ನು ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ನಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕೆನಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ. ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗ್ಳೂರು,
29-3-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India with Limited Lisbility)

Estd: 1906.

Head Office: UDIPI, S. Kanara.

CAPITAL:	Rs.
Authorised	25,00,000
Issued, subscribed & called up	16,00,000
Paid up	15,97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಬೊಂಬೈ ಲ್ಯಾಪ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟದ್ದು)

ಪ್ರಧಾನ ವಿಮಾ ಸಂಸ್ಥೆ

1945ರ ವ್ಯವಹಾರ – 2,77,23,000

1946ರ – 3,28,21,200

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್.

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)

ತಿರುವಾಂಕೂರು, ಕೊಚ್ಚಿ ಮತ್ತು ಮೈಸೂರನ್ನೊಳಗೊಂಡ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು

1945ರ ನಮ್ಮ ವ್ಯವಹಾರ - 49,85,500

1946ರ ,, ,, - 53,82,250

ಈಗಿನ ಪರಿಸ್ಥಿತಿ ಮತ್ತು ಬಡ್ಡಿದರ ಪ್ರಮಾಣಕ್ಕನುಗುಣವಾಗಿ ನಮ್ಮ ಪ್ರಿಮಿಯಮ್ ದರಗಳನ್ನು ಇದೇ ತಾ. 1-8-47ರಿಂದ ಪುನರಾವರ್ತಿಸಲು ಬೊಂಬೇ ಲ್ಯಾಪ್ ಸಂಸ್ಥೆಯು ನಿರ್ಧರಿಸಿರುವುದನ್ನು ನಮ್ಮ ಎಲ್ಲಾ ವೈದ್ಯ ಪರೀಕ್ಷಕರಿಗೂ, ಪೋಲಿಸಿ ಹೋಲ್ಡರರಿಗೂ ಸ್ನೇಹಿತ ಹಿತೈಷಿಗಳಿಗೂ ತಿಳಿಸುವುದು ನಮ್ಮ ಕರ್ತವ್ಯವೆಂದೆಣಿಸುತ್ತೇವೆ. ಈಗವರು ಹಿಂದಿನ ಕಮ್ಮಿ ದರದಲ್ಲಿ ದೊಡ್ಡ ಪೋಲಿಸಿಗಳನ್ನು ಪಡೆಯಬಹುದು – ಇದರಿಂದ ವರ್ಷಂಪ್ರತಿ ಕಮ್ಮಿಯಾಗುವ ದರ ಪ್ರಮಾಣವೂ ದೊರಕಿದಂತಾಗುವುದು. ನಮ್ಮ 2ನೇ ಜುಲಾಯಿ 1947ರ ಸರ್ಕ್ಯುಲಾರು ತಲಪಿರದ ಏಜೆಂಟರು ತಮ್ಮ ಗಿರಾಕಿಗಳಿಗೆ 31-7-'47ರ ನಂತರ [illegible] ತೆಗೆ[illegible] ವವರಿಗೆ ಅದೆಷ್ಟು ಖರ್ಚು ತಗಲುವುದೆಂಬ ವಿವರವನ್ನು ತಿಳಿಸಲು ಕರ್ತವ್ಯಬದ್ಧರಾಗಿರುವುದರಿಂದ, ಅಂಥಾ ಏಜೆಂಟರು ಕೂಡಲೇ ನಮಗೆ [illegible] ಬರೆಯುವುದು.

ಪೋಲಿಸಿ ತೆಗೆದುಕೊಳ್ಳಲಿಚ್ಛಿಸುವವರು ಇವತ್ತೇ ನಮ್ಮ ಈ ಕೆಳಗಿನ ಯಾವದಾದರೂ ಆಫೀಸುಗಳಿಗೆ ಬರೆಯುವುದು.

ಉಡುಪಿ, ಮಂಗಳೂರು, ಕಲ್ಲಿಕೋಟೆ, ಟ್ರಿವೆಂಡ್ರಮ್, ಮಧುರಾ ಬೆಂಗಳೂರು ಬೊಂಬಾಯಿ ಮತ್ತು ಮದ್ರಾಸ್

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಬಹಳ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕೊಡುವುದು ಸೂತಿಕಾ ರೋಗಗಳನ್ನು ಕಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 1—8—1947 [ಸಂಚಿಕೆ 31]

ಮತಾರಾಧನೆಯ ಅಭ್ಯಾಸಕ್ಕೂ ಜ್ಞಾನಾಭಿವೃದ್ಧಿಗಾಗಿಯೂ ರಾಮಕೃಷ್ಣಪೀಠ ಮತ್ತು ಪ್ರಚಾರ ಸಂಸ್ಥೆಯ ಕೇಂದ್ರವೊಂದು ಮಂಗಳೂರಿನ ಪಣ್ಣೀರಿನ ಬಳಿ ಸ್ಥಾಪಿಸಲ್ಪಟ್ಟಿರುವ ಸಂಗತಿಯು ಈಗಾಗಲೇ ಅನೇಕ ಇಲ್ಲಿಯ ನಾಗರೀಕರಿಗೆ ತಿಳಿದಿರಬಹುದು. ಅದುದರಿಂದ ಸರ್ವಸಾಮಾನ್ಯವಾಗಿ ರಾಮಕೃಷ್ಣಾ ಚಳವಳದ ಮತ್ತು ಮುಖ್ಯವಾಗಿ ಈ ಸ್ಥಳೀಯ ಕೇಂದ್ರದ ಚಟುವಟಿಕೆಗಳ ಉದ್ದೇಶದ ಕುರಿತು ತಿಳಿದುಕೊಳ್ಳುವುದು ಅಭಿಲಾಷಣೀಯವು ಆವಶ್ಯಕವು ಆಗುತ್ತದೆ.

ಪರಮ ಶ್ರೇಷ್ಠನೂ ಹಿಂದೂ ಧರ್ಮಾಭ್ಯಾಸಿಯೂ ಮತ್ತು ಸಂತಪುರುಷನೂ ಆಗಿರುವ ರಾಮಕೃಷ್ಣ ಪರಮಹಂಸರ ಹೆಸರನ್ನೇ ಈ ಸಂಸ್ಥೆ ತಳೆದಿರುತ್ತದೆ. ಇದರ ಮೂಲ ಸ್ಫೂರ್ತಿಯು ಆಮೂಲಾಗ್ರ [illegible] ರುತ್ತದ ಆಳವಾದ ಭಕ್ತಿ ವಿಶ್ವಾಸಗಳಿದ್ದ ಬ್ರಾಹ್ಮಣ ವಂಶವೊಂದರಲ್ಲಿ ಶ್ರೀ ರಾಮಕೃಷ್ಣರು 1836ರಲ್ಲಿ [illegible] ಪ್ರಶಾಂತ ಹಳ್ಳಿಯಲ್ಲಿ ಜನಿಸಿದರು. [illegible] ದಿಂದ ಅವರಲ್ಲಿ [illegible] ದರ್ಶನಾಭಿಲಾಷೆಯು ಬಲವತ್ತರವಾಗಿತ್ತು. [illegible] 17ನೇ ವಯಸ್ಸಿನಲ್ಲಿ [illegible] ಒಂದು ಸಂಸ್ಕೃತ ವಿದ್ಯಾ[illegible] ನಡೆಸುತ್ತಿದ್ದ ತಮ್ಮ ಅಣ್ಣನ [illegible] ದರು. ಅಲ್ಲವರು ತಮ್ಮ [illegible] ಸಮಯವನ್ನು ಮತೀಯ ಸಾಧನೆಯಲ್ಲೇ ಕಳೆಯುತ್ತಿದ್ದರು.

ರಾಮಕೃಷ್ಣರಿಗೆ ಅಸಾಮಾನ್ಯವಾದ ಸ್ಮರಣಶಕ್ತಿಯೂ, ತೀಕ್ಷ್ಣ ಮೇಧಾಶಕ್ತಿ ಮುಂತಾದ ಕಲಾಭಿರುಚಿಗಳಿದ್ದರೂ ಅವರು ಮತೀಯ ಜ್ಞಾನಾರ್ಜನೆಮಾಡುವುದನ್ನು ತಿರಸ್ಕರಿಸಿದರು. ಅಜ್ಞಾನಾಂಧಕಾರವನ್ನು ಶಾಶ್ವತವಾಗಿ ತೊಲಗಿಸುವ ಆಧ್ಯಾತ್ಮಿಕ ಜ್ಞಾನಾನಂದವನ್ನು ಹೊಂದಬೇಕೆಂದವರ ಹೃದಯವು ಹಾತೊರೆಯುತ್ತಿತ್ತು. ದೇವರನ್ನು ವಿಶ್ವಮಾತೆಯೆಂಬುದಾಗಿ ಪೂಜಿಸಲ್ಪಡುತ್ತಿರುವ ದಕ್ಷಿಣೇಶ್ವರ ದೇವಾಲಯದಲ್ಲಿ ಅವರು ತಮ್ಮ 20ನೇ ವಯಸ್ಸಿನಲ್ಲಿ ಓರ್ವ ಅರ್ಚಕರಾಗಿ ಸೇರಿದರು. ದೇವಮಾತೆಯ ದರ್ಶನಮಾಡಬೇಕೆಂಬೊಂದು ಮಹತ್ತರವಾದ ಕೋರಿಕೆಯು ಅವರ ಆತ್ಮವನ್ನು ಆವರಿಸಿತ್ತು. ಇಷ್ಟೊಂದು ಆತ್ಮಜಿಜ್ಞಾಸೆಯಿಂದವರು ಕಠಿಣತರ ದೇಹಿಕ ಶಿಸ್ತುಗಳನ್ನಭ್ಯಾಸಿಸುವವರಾದರು. ರಾತ್ರಿ ಹಗಲು ಪ್ರಾರ್ಥನಾಮಗ್ನರಾಗಿದ್ದು ಮಾತೆಯ ಧ್ಯಾನಮಾಡುತ್ತ ಅವಳ ಚರಣಾರವಿಂದಗಳಲ್ಲಿ ತಮ್ಮ ಹೃದಯ ಭಕ್ತಿಯಝುರಿಯನ್ನು ಹರಿಸಿದರು. ಅವಳ ದೈವಿಕ ವದನದ ಪ್ರತ್ಯಕ್ಷತೆಗಾಗಿ ಭಕ್ತಿ-ಪುರಸ್ಸ-

ಎಚ್ಚರವಾಗಿರಿ, ಎದ್ದೇಳಿರಿ

ರವಾಗಿ [illegible] ಬಳಲಿದರು.

ಹೀಗೆ ಹನ್ನೆರಡು [illegible] ಶ್ರಮಿಸಿದ ಮೇಲೆ ಅವರಿಗೆ [illegible] ದೈವಿಕ ದರ್ಶನವಾಗತೊಡಗಿತು. ಇದು ಅವರ [illegible] ಸಾಧನೆ [illegible] ಜಾಗೃತಾವಸ್ಥೆ [illegible] ಅವರಿಗೆ ಕಾಣುವಂತಾಯಿತು. ಅನಂತರ ಅವರು ದೇವರ ವಿವಿಧ ರೂಪಾವಲೋಕನಗಳನ್ನು ಕಾಣಲು ಹಂಬಲಿಸತೊಡಗಿದರು. [illegible] ಮಾನವರ ಚೈತನ್ಯ ಶಕ್ತಿಶ್ರದ್ಧೆಗಳಿಂದ [illegible] ಅನೇಕ ಸಾಧನೆಗಳನ್ನಭ್ಯಾಸಿಸಿ ತಂತ್ರ ಯೋಗ, ವೈಷ್ಣವ ವಿಧಿ [illegible] ಇಸ್ಲಾಮ [illegible] ಕ್ರೈಸ್ತ ವಿಧಿಗಳನ್ನನುಸರಿಸುವುದರಿಂದ [illegible] ಸಾಕ್ಷಾತ್ಕಾರವನ್ನು ಹೊಂದಿದರು.

ಈ ಸಾಧನೆಗಳ 12 ವರ್ಷ [illegible] ಮತ್ತು [illegible] 18 [illegible] ಜೀವನ [illegible] ಅವರು ವಿವಿಧ [illegible] ಸಾಧನೆಗಳನ್ನು [illegible] ಆಧ್ಯಾತ್ಮಿಕ [illegible] ಭಾವಗಳಲ್ಲಿ [illegible] ಸತ್ಯದ ಅದ್ವೈತ ಸಾಕ್ಷಾತ್ಕಾರವು ಅವರಿಗಾಗಿತ್ತು [illegible] ಪರಮಾತ್ಮ [illegible] ವಿಧ [illegible] ದ ಒಂದೇ ಒಂದು ಆಧ್ಯಾತ್ಮಿಕ [illegible]

ನ್ನು ಅಭ್ಯಾಸಿಸಿ ತಮ್ಮ ಜೀವನಮಾನದಲ್ಲೇ ಉದ್ದೇಶ ಸಾಧನಹೊಂದುವ ಸಾಧಕರೇ ವಿರಳ. ಅಂತಹದರಲ್ಲಿ ಕೆಲವೇ ವರ್ಷಗಳಲ್ಲಿ ಜಗತ್ತಿನ ಎಲ್ಲಾ ಆಧ್ಯಾತ್ಮಿಕ ವಿಧಾನಗಳನ್ನು ಸಂಪೂರ್ಣಗೊಳಿಸಿ ಗುರಿಮುಟ್ಟಿದ ಶ್ರೀ ರಾಮಕೃಷ್ಣರ ಮಹಿಮೆ [illegible] ಇದರಿಂದವರು ಗುರಿಯೊಂದು [illegible] ಎಂಬುದನ್ನು ಪ್ರದರ್ಶಿಸಿ ತೋರಿಸಿದಂತಾಯಿತು. ದೇವರು **ಅಂತರ್ಯಾಮಿಯೂ, ಪ್ರಪಂಚಾತೀತನೂ** ಎಂಬುದನ್ನು ಅವರು ತಿಳಿಸಿಕೊಟ್ಟರು. ಅವನು ಸಗುಣನೂ ನಿರ್ಗುಣನೂ ಆಗಿರುವನು.

ಹೀಗೆ ಅವರು ದೀನಮಹಾದರ್ಶನ [illegible] ಆವರ [illegible] ಪ್ರಮುಖ [illegible] ವರ್ಣ [illegible] ಆಶೀರ್ವಾದ [illegible] ತಮ್ಮ [illegible] ಬಂಧನವಾಗಿ [illegible] ಅವರ [illegible] ದರು. ಅವರ [illegible] ಆಕರ್ಷಿತರಾಗಿ ಅವರ [illegible] ಹೇರಳ [illegible] ಪುರುಷರು [illegible] ದ [illegible]

ತಾನೊಂದು ದೈವೀಕ ಉದ್ದೇಶ ಸಾಧನೆಯನ್ನು ಪರಿಪೂರ್ಣಗೊಳಿಸಲಿಕ್ಕಿದೆಯೆಂದು ಶ್ರೀ ರಾಮಕೃಷ್ಣರಿಗೆ ತಮ್ಮ ಕೆಲವೊಂದು ಆಧ್ಯಾತ್ಮಿಕ ಅನುಭವಗಳಿಂದ ತಿಳಿಯಿತು. ಅವರ ಸಾಧನ ಮತ್ತು ಸಾಕ್ಷಾತ್ಕಾರ ದರ್ಶನಾನುಭವವು ಸ್ವಂತ ಉದ್ದೇಶದವುಗಳಾಗಿರದೆ ಸಕಲ ಮಾನವ ಕೋಟಿಯ ಉದ್ಧಾರಕ್ಕೆ ಅವು ನಿರ್ಮಿಸಲ್ಪಡುತ್ತಿದ್ದವು. ಅವರನ್ನಾವರಿಸಿದ ದೈವಿಕ ಪ್ರಭಾವವು ಅವರನ್ನು ಭಾರತದ ಪುನರುದ್ಧಾರಗೊಳಿಸುವ [illegible] ನವಜಾಗೃತಿಯನ್ನುಂಟುಮಾಡುವ ಮತ್ತು ವಿವಿಧ ಮತಧರ್ಮಗಳಲ್ಲಿ ಸಾಮರಸ್ಯವನ್ನುಂಟುಮಾಡುವ ಹೊಸ ಮತ ಸಂಸ್ಥೆಯನ್ನು ಸ್ಥಾಪಿಸಲು ಕಾರಣಭೂತರಾಗುವಂತೆ ಮಾಡಿತು. ಅವರ ಕೊನೆಯ ಹದಿನೆರಡು ವರ್ಷಗಳಲ್ಲಿ ಅವರ ಬಳಿ ಎಲ್ಲಾ ಜಾತಿ, ಮತ, ಸಮಾಜಗಳ ಶ್ರದ್ಧಾವಂತ ಸತ್ಯಶೋಧಕರು [illegible] ಉಪದೇಶ [illegible] ತಿದ್ದರು.

ಶ್ರೀ ರಾಮಕೃಷ್ಣ ಪರಮಹಂಸರು [illegible] ಸ್ವೀಕರಿಸಿದ ತರುಣ ಶಿಷ್ಯ [illegible] ಉಪದೇಶ [illegible] ಈ ಶಿಷ್ಯರು ನರೇಂದ್ರನಾಥನೆಂಬುವನ (ಮುಂದೆ ಸ್ವಾಮಿ ವಿವೇಕಾನಂದರೆಂದು ಕರೆಯಲ್ಪಟ್ಟರು) ನಾಯಕತ್ವದಲ್ಲಿ ವ್ಯವಸ್ಥಿತರಾಗಿ ಸದಾ ತಮ್ಮ ಪೂಜ್ಯ ಗುರುವಿನ ಪ್ರಸಾದರ [illegible] ಸೇವೆಯಲ್ಲಿ ನಿರತರಾಗಿದ್ದರು. ಇವರ [illegible] ವರ್ಗ [illegible] ಮತ್ತು ಗುರು [illegible] ದರ್ಶನದಿಂದ ರಾಮಕೃಷ್ಣ ಮಠ [illegible] ವಿಶ್ವಬಾಂಧವ್ಯ ಸಂಸ್ಥೆಯು ರೂಪುಗೊಳ್ಳುವಂತಾಯಿತು. ದೇವ ಸಾಮೀಪ್ಯ ಸಾಧನೆಗಾಗಿ ತ್ಯಾಗ ಜೀವನ ಪಥವನ್ನನುಸರಿಸಬೇಕೆಂದು ಶ್ರೀ ಪರಮಹಂಸರು ಅವರಿಗೆ ಬೋಧಿಸಿದ್ದರು. ಜನಾರ್ಧನನ ಸೇವೆಗಾಗಿ ಜನತಾಸೇವೆ ಮಾಡಿರೆಂದೂ ಅವರ ನಿತ್ಯ ಉಪದೇಶವಿತ್ತು. ಅವರ ಪರಿಶುದ್ಧತೆ, ಆತ್ಮಾನಂದ, ವಿವೇಕ, ಕರುಣೆ, ಮತ್ತು ಕೇವಲ ಸಂಪರ್ಕ, ನುಡಿ, ನೋಟ ಇವುಗಳಿಂದಲೇ ಇಚ್ಛಾಮಾತ್ರದಿಂದ ಇತರರ ಜೀವನವನ್ನು ಪರಿವರ್ತಿಸುವ ಅವರ ದೈವೀಕ ಸಾಕ್ಷಾತ್ಕಾರಾನುಭವದ ಪ್ರಭಾವುವ ಜನರಲ್ಲಿ ವಿಶ್ವಾಸವನ್ನುಂಟುಮಾಡುತ್ತಿದ್ದುವು.

ಪರಮಹಂಸರ ತತ್ವಗಳು

ಪರಮಹಂಸರ ಜೀವನದ ಪ್ರಾಮುಖ್ಯವಾದ ನಾಲ್ಕು ತತ್ವಗಳು ಹೀಗಿದ್ದವು: 1) ದೇವರೆಂಬುದು ನಿಜ. 2) ದೇವರನ್ನು ದರ್ಶಿ-

(4ನೇ ಪುಟಕ್ಕೆ ಮುಂದುವರಿದಿದೆ)



ಸ್ವತಂತ್ರ ಭಾರತಕ್ಕೆ ಇವು ಬೇಕು.

ಕಮ್ಮಿ ಖರ್ಚಿನಿಂದ ಹೆಚ್ಚು ಕೆಲಸವಮಾಡುವ ಯಂತ್ರವೊಂದನ್ನು ಇಂಗ್ಲಂಡಿನ ಕೃಷಿ ಇಲಾಖೆಯವರು ಪ್ರಯೋಗ ನೋಡುತ್ತಿರುವರು.

(೧ನೇ ಪುಟದಿಂದ)

ಸಬಹುದು. 3) ಮತಗಳೆಲ್ಲ ಒಂದೇ ಉದ್ದೇಶದವುಗಳು. 4) ದೇವರ ಸೇವೆ ಗೈಯುವಂತೆ ಮಾನವನ ಸೇವೆಯೂ ಮಾಡಲ್ಪಡಬೇಕು.

ದೈವೀಕ ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದುದು ಅನಿವಾರ್ಯ. ಇದರಿಂದ ಜನ್ಮ ವಿಮೋಚನೆ ಮತ್ತು ಆತ್ಮಾನಂದಗಳು ಮಾತ್ರವಲ್ಲ ಐಹಿಕ ಶಾಂತಿ, ಭದ್ರತೆ, ಸಂತೋಷ ಸುಖಾಭಿವೃದ್ಧಿಗಳೂ ಲಭಿಸುವವು. ಮನುಷ್ಯನು ಆಧ್ಯಾತ್ಮಿಕ ಧ್ಯೇಯದತ್ತ ತಿರುಗಿದವನಾಗಿ ತನ್ನ ಬೌದ್ಧಿಕ, ಕಲಾತ್ಮಕ ಮತ್ತು ನೈತಿಕ ಸ್ವಭಾವವನ್ನು ಯಾವಾಗ ಸುವ್ಯವಸ್ಥಿತಗೊಳಿಸುವನೋ ಆಗ ಅವನು ಶಾರೀರಿಕವಾಗಿಯೂ, ಮಾನಸೀಕವಾಗಿಯೂ, ಮತ್ತು ನೈತಿಕವಾಗಿಯೂ ಉನ್ನತಿಯನ್ನೈಯ್ದುವನು. ಉತ್ತಮ ಸ್ತ್ರೀ ಮತ್ತು ಉತ್ತಮ ಪುರುಷರಿಂದಲೇ ಉತ್ತಮ ಜಗತ್ತುಂಟಾಗುವುದು. ಆದುದರಿಂದಲೇ ರಾಮಕೃಷ್ಣಾ ಚಳವಳವು ಮಾನವ ಗುಣ ಲಕ್ಷಣಕ್ಕೇ ಪ್ರಥಮ ಗಣನೆಯನು ಕೊಟ್ಟು ಮಾನವನ ಅಂತರೀಕ ಜೀವನೋನ್ನತಿಗೇ ಹೆಚ್ಚಿನ ಗಮನ ಕೊಡುವುದು. ಮಾನವನಲ್ಲಿರುವ ದೇವರ ಸೇವೆಯನ್ನು ಮಾಡಬೇಕೆಂಬ ಶ್ರೀರಾಮಕೃಷ್ಣರ ಧ್ಯೇಯವೇ ರಾಮಕೃಷ್ಣಾ ಚಳವಳದ ಮೂಲಾಧಾರವಾಗಿದೆ.

2. ರಾಮಕೃಷ್ಣಾ ಮಿಶನಿನ ಧ್ಯೇಯ

ಸ್ವಾಮಿ ವಿವೇಕಾನಂದರಿಂದ ಸ್ಥಾಪಿಸಲ್ಪಟ್ಟ ರಾಮಕೃಷ್ಣಾ ಪ್ರಚಾರ ಸಂಸ್ಥೆಗೆ ರಾಷ್ಟ್ರೀಯ ಮತ್ತು ಅಂತರ‍್ರಾಷ್ಟ್ರೀಯ ಪ್ರಾಮುಖ್ಯತೆಯಿದೆ-ಒಂದು ಕಡೆಯಿಂದ ಭಾರತದ ಅಧ್ಯಾತ್ಮಿಕ ಜಾಗೃತಿಯನ್ನು ಸಂಘಟಿಸಿ ಮತೀಯ ತಳಹದಿಯ ಮೇಲೆ ರಾಷ್ಟ್ರೀಯ ಪುನಃರ‍್ರಚನೆ ಮಾಡಬೇಕೆಂದು ಸಾರುತ್ತದೆ. ಇನ್ನೊಂದು ಕಡೆಯಿಂದ ತಜ್ಞ ಕೆಲಸಗಾರರನ್ನು ಜಗತ್ತಿನ ಮೂಲೆ ಮೂಲೆಗೂ ಕಳುಹಿಸಿ ವಿಶ್ವ ಜಾಗೃತಿಯನ್ನುಂಟುಮಾಡಿ ವಿವಿಧ ವಿಶ್ವ ಧರ್ಮ ತತ್ವಗಳನ್ನು ಪರಸ್ಪರ ಮೆಚ್ಚಿ, ಸ್ವೀಕಾರ ಮಾಡುವ ಒಂದು ವಿಶ್ವಭ್ರಾತೃತ್ವವನ್ನು ಸ್ಥಾಪಿಸಬೇಕೆಂದೂ ಯತ್ನಿಸುತ್ತದೆ. ಭಾರತದ ಆಧ್ಯಾತ್ಮಿಕ ಜಾಗೃತಿಯನ್ನುಂಟುಮಾಡುವಾಗಲೇ ಮತೀಯ ಶ್ರದ್ಧೆಯಿಂದ ಇತರರ ಸೇವೆ ಮಾಡಬೇಕೆಂಬ ಕೋರಿಕೆಯೊಂದನ್ನು ಈ ಸಂಸ್ಥೆಯು ಜನರಲ್ಲುಂಟುಮಾಡುತ್ತದೆ. ಇದರ ಪರಿಣಾಮವಾಗಿ ಇಂದು ದೇಶದಲ್ಲಿ ರಾಮಕೃಷ್ಣಾ ಮಿಶನಿನ ಧ್ಯೇಯಕ್ಕನುಸಾರವಾಗಿ ಸೇವೆಮಾಡುವ ನೂರಾರು ಉದಾರ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿವೆ. ರಾಮಕೃಷ್ಣಾ ಮಿಶನ್ ಸಂಸ್ಥೆಯು ಇಂದೊಂದು ಜನಾಂಗೋದ್ಧಾರಕ ಸಂಸ್ಥೆಯೆಂದು ದೇಶಪರದೇಶಗಳಲ್ಲಿಯೂ ಗಣಿಸಲ್ಪಟ್ಟಿದೆ.

ರಾಮಕೃಷ್ಣ ಪಂಥದವರಿಂದ ನಡೆಸಲ್ಪಡುವ ವೇದಾಂತ ಚಳವಳವು ಶುದ್ಧ ಆಧ್ಯಾತ್ಮಿಕ ಮತ್ತು ಮಾನವ ಸೇವಾದರ್ಶದಾಗಿದ್ದು ರಾಮಕೃಷ್ಣ ಮಠ ಮತ್ತು ರಾಮಕೃಷ್ಣಾ ಪ್ರಚಾರ ಕೇಂದ್ರಗಳ ಚಟುವಟಿಕೆಗಳಲ್ಲಿ ಅದು ಪೂರ್ಣ ರೂಪವನ್ನು ತಾಳಿರುವುದನ್ನು ಕಾಣಬಹುದು. ಈಗ ನಮ್ಮ ದೇಶದಲ್ಲಿ 45 ಪ್ರಚಾರ ಕೇಂದ್ರಗಳೂ, 20 ಮಠ ಮತ್ತು ಪ್ರಚಾರ ಸಂಸ್ಥೆಗಳು ಒಟ್ಟಾಗಿ ಕೆಲಸಮಾಡುವ ಕೇಂದ್ರಗಳಲ್ಲದೆ ಬೇಲೂರಿನ ಮುಖ್ಯ ಕೇಂದ್ರದಿಂದ ಸಮಾನ ಧ್ಯೇಯಕ್ಕಾಗಿ ಆದರೆ ಸ್ವತಂತ್ರವಾಗಿ ಕಾರ್ಯ ಸಾಗಿಸುವ ಕೇಂದ್ರಗಳೂ ಇವೆ.

ಬಂಗಾಲ, ಬಿಹಾರ, ಅಸ್ಸಾಮು, ಮದ್ರಾಸ್, ಮೈಸೂರು, ತಿರುವಾಂಕೂರು, ಕೊಡಗು, ಕೊಚ್ಚಿ, ಮಧ್ಯಪ್ರಾಂತ್ಯ, ಡಿಲ್ಲಿ, ಪಂಜಾಬ, ಸಿಂಧ, ಕಾಥಿಯಾವಾರ್, ಸಿಲೋನ್, ಫಿಜೀದ್ವೀಪ, ಮೌರಿಸಿಯಸ್, ಇಂಗ್ಲೆಂಡ್, ಫ್ರಾನ್ಸ್, ಅರ್ಜೆಂಟಿನಾ, ಸಂಯುಕ್ತ ಅಮೇರಿಕಾ, ಸಿಂಗಾಪುರ, ಮತ್ತು ಬರ್ಮಾ ಈ ಕಡೆಗಳಲ್ಲೆಲ್ಲ ಈ ಕೇಂದ್ರಗಳು ಹಬ್ಬಿವೆ.

ಮಠ ಕೇಂದ್ರದ ಮುಖ್ಯ ಉದ್ದೇಶ: ಅದರ ಸದಸ್ಯರನ್ನೂ ಇತರ ಸಾಮಾನ್ಯ ಭಕ್ತವೃಂದವನ್ನೂ ಆರಾಧನೆ, ಅಭ್ಯಾಸ, ಧ್ಯಾನ, ಮತ್ತು ಉಪದೇಶಗಳ ಮುಖಾಂತರ ಅಭಿವೃದ್ಧಿಗೊಳಿಸುವುದು; ಸ್ವಂತ ತತ್ವಾದರ್ಶಗಳುಳ್ಳ ಸನ್ಯಾಸಿಗಳನ್ನು ಯೋಗ್ಯ ಮತೀಯ ಶಿಕ್ಷಕರನ್ನಾಗಿ ತಯಾರು ತರಬೇತಿ ಮಾಡುವುದು.

ಪ್ರಚಾರ ಕೇಂದ್ರಗಳ ಸದಸ್ಯರಲ್ಲಿ ಸನ್ಯಾಸಿಗಳೂ ಸಂಸಾರಿಗಳೂ ಇರುತ್ತಾರೆ. ಇವರು ಮತೀಯ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಂಬಂಧವಾದ ಎಲ್ಲಾ ಸಾರ್ವಜನಿಕ ಸೇವೆಯಲ್ಲಿ ಈ ಸದಸ್ಯರೆಲ್ಲರೂ ನಿರತರಾಗಿರುವರು. ಮಠ ಮತ್ತು ಪ್ರಚಾರ 'ಮಿಶನ್' ಸಂಸ್ಥೆಗಳು ಪ್ರತ್ಯೇಕವಾದರೂ ಅವುಗಳಲ್ಲೊಂದು ಅನ್ಯೋನ್ಯ ಸಂಬಂಧವಿದೆ: ಮಠಗಳ ಟ್ರಸ್ಟಿಗಳು ಮಿಶನಿನ ಆಡಳಿತ ಮಂಡಳಿಯವರಿಂದ ಕೂಡಿದೆ. ಮಿಶನಿನ ಪೂರ್ಣ ಕಾಲ ಕೆಲಸಗಾರರು ಮಠದ ಸದಸ್ಯರೂ ಆಗಿರುವರು.

ರಾಮಕೃಷ್ಣಾ ಮಿಶನಿನ ಬೇರೆ ಬೇರೆ ಕೇಂದ್ರಗಳಲ್ಲಿ ಜನತೆಯ ಶಾರೀರಕ ಸೌಕರ್ಯ ಶುಶ್ರೂಷೆ ಮಾಡುವ 10 ಸಂಪೂರ್ಣ ಆಸ್ಪತ್ರೆಗಳೂ, 62 ಔಷಧಾಲಯಗಳೂ ಆಶ್ರಯಗಳೂ ಇವೆ. ಇವು ಧರ್ಮಾರ್ಥವಾಗಿ ಸೇವೆ ಸಲ್ಲಿಸುತ್ತವೆ: ಶಾಲೆ, ಕಾಲೇಜು, ಕೈಗಾರಿಕೆ ಶಿಕ್ಷಣಾಲಯ ಮುಂತಾದುವುಗಳ ಮುಖಾಂತರ ಮಿಶನಿನ ಶೈಕ್ಷಣಿಕ ಕಾರ್ಯವು ನಿರ್ವಹಿಸಲ್ಪಡುವುದು. ಬಂಗಾಲ, ಒರಿಸ್ಸಾ ಮೊದಲಾದ ಕಡೆಗಳಲ್ಲಿರುವಂತೆ ಸಂಕಷ್ಟ ನಿವಾರಣೆಯ ಕಾರ್ಯವು ವಿಶಾಲ ಪರಿಣಾಮದಲ್ಲಿ ಕೈಕೊಳ್ಳಲ್ಪಡುತ್ತದೆ.

ಮೇಲಿನ ರೂಪರೇಖೆಗಳಿಂದ ಭಾರತದಲ್ಲಿ ರಾಮಕೃಷ್ಣ-ವಿವೇಕಾನಂದ ಜೀವನ ಧ್ಯೇಯಗಳು ಹೇಗೆ ಅತ್ಯಂತ ಶ್ರೇಷ್ಠತರ ಪ್ರಭಾವ ಬೀರಿವೆ ಎಂಬದರ ಅರಿವಾಗುವುದು—ಜನಾಂಗದ ಸಾಂಸ್ಕೃತಿಕ ಪ್ರಾಚೀನತೆಯ ವೈಭವದ ಮೇಲೆ ಹೇಗೆ ವಿಶ್ವಾಸವಿಡುವುದು, ಹಳೆಯುದರ ತಳಹದಿಯ ಮೇಲೆ ಹೊಸತಾದುದನ್ನು ಹೇಗೆ ಸ್ವೀಕರಿಸುವುದು; ಅಮೋಘವಾದ ಮತೀಯ ತತ್ವಗಳನ್ನು ಆಧುನಿಕ ಪರಿಸ್ಥಿತಿಗಳಿಗೆ ಹೇಗೆ ಅನ್ವಯಿಸಿಕೊಳ್ಳುವುದು ಇವುಗಳೆಲ್ಲವನ್ನು ಪ್ರಚಾರ ಮಾಡಲಾಗುತ್ತದೆ.

ಈ ಉದಾತ್ತ ಧ್ಯೇಯವು ಮತವನ್ನು ತತ್ವ ಜ್ಞಾನದೊಂದಿಗೂ, ವಿಶ್ವಾಸವನ್ನು ತರ್ಕ ವಿಚಾರದೊಂದಿಗೂ ಸೇರಿಸುತ್ತಿದಲ್ಲದೆ ಜೀವನದಲ್ಲಿ ಮತ್ತು ವಿಚಾರದಲ್ಲಿ ಕಾರ್ಯ ತತ್ಪರತೆ ಮತ್ತು ಕಾರ್ಯಕ್ಷೇತ್ರ ವಿಶಾಲಿಸುವುದು ಹೇಗೆಂದು ತಿಳಿಸುತ್ತದೆ. ಈ ಶ್ರೇಷ್ಠ ಚಳವಳದ ಒಂದು ಕೇಂದ್ರವು ನಮ್ಮ ನಗರದಲ್ಲಿ ತೆರೆಯಲ್ಪಟ್ಟಿರುವುದು ಭಾಗ್ಯವೆನ್ನಬೇಕು. ಇಲ್ಲಿ ಉತ್ಸವ, ಸಭೆ, ಶೈಕ್ಷಣಿಕ ತರಗತಿ, ವಾಚನಾಲಯ, ಮತ್ತು ಸಂದರ್ಶನಗಳ ಮುಖಾಂತರ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ವಿಚಾರಗಳು ಪ್ರಚಾರಿಸಲ್ಪಡುವವು ಮಾತ್ರವಲ್ಲದೆ ಮೇಲ್ಕಂಡ ಕಾರ್ಯಗಳಿಂದ **ಹಿಂದೂ** ಧ್ಯೇಯಗಳೂ ಪ್ರಚಾರಿಸಲ್ಪಡುತ್ತವೆ.

ಸ್ವಾಮಿ ವಿವೇಕಾನಂದರ ಈ ಧ್ಯೇಯವು ಆಕಾಶದಷ್ಟು ವಿಶಾಲವೂ, ಸಾಗರದಷ್ಟು ಆಳವೂ ಉಳ್ಳದ್ದಾಗಿದೆ. ಇದರಲ್ಲಿ ತರುಣರೂ, ವೃದ್ಧರೂ, ಬಡವರೂ ಶ್ರೀಮಂತರೂ, ಉಚ್ಚರೂ, ನೀಚರೂ, ಸ್ತ್ರೀಯರೂ ಪುರುಷರೂ,-ಎಲ್ಲರೂ ಸ್ಫೂರ್ತಿ ಶಕ್ತಿ ಮತ್ತು ಅಭಿವೃದ್ಧಿಗಳನ್ನೂ ಪಡೆಯುವರು. ಪ್ರತಿಭಾವಂತನಾದ ಆ ದೇಶ ಭಕ್ತ ಸನ್ಯಾಸಿಯಾದ ಸ್ವಾಮಿ ವಿವೇಕಾನಂದರ ಉಪದೇಶಗಳನ್ನು ಆಳವಾಗಿ ವಿವೇಚಿಸಿ ಕಾಲ ವಿಳಂಬಮಾಡದೆ ನಾವು ಕಾರ್ಯ ಪ್ರವೃತ್ತರಾಗೋಣ. ತ್ಯಾಗ ಸೇವೆಗಳು ಭಾರತದ ರಾಷ್ಟ್ರೀಯ ಧ್ಯೇಯಗಳು. ಇವನ್ನು ಹೆಚ್ಚಿಸೋಣ. ಉಳಿದುದೆಲ್ಲವೂ ತನ್ನಷ್ಟಕ್ಕೆ ಸಾಧ್ಯವಾಗುವುದು. ನಮ್ಮ ಪ್ರೀತಿಯ ಮಾತೃಭೂಮಿಯ ಮಕ್ಕಳೇ, ನಿಮ್ಮ ಪೂರ್ವಜರ ಮೇಲೆ ನಿಮಗೆ ಭಕ್ತಿ ವಿಶ್ವಾಸ, ಹೆಮ್ಮೆಗಳು ಹೆಚ್ಚಲಿ! ಅದು ಜಗತ್ತಿನ ವಿಮೋಚನೆಗಾಗಿ ಕಾರ್ಯವೆಸಗಲಿ! ಲಕ್ಷಾಂತರ ಸ್ತ್ರೀಪುರುಷರು ಪವಿತ್ರತೆಯಿಂದ ಸ್ಫೂರ್ತಿಸಲ್ಪಟ್ಟವರಾಗಿ ಪರಮಾತ್ಮನಲ್ಲಿ ಅನಂತ ವಿಶ್ವಾಸವುಳ್ಳವರಾಗಿ, ದೀನ ದರಿದ್ರರ, ತುಳಿಯಲ್ಪಡುವವರ ಮೇಲಿನ ಸಹಾನುಭೂತಿಯಿಂದ ಸಿಂಹ ಸ್ಥೈರ್ಯವನ್ನು ಹೊಂದಿದವರಾಗಿ ದೇಶದ ಉದ್ದಗಲಕ್ಕೂ ಹೋಗುವರು! ವಿಮೋಚನೆಯ ಸಂದೇಶವನ್ನು, ಸಾಮಾಜಿಕ ಉನ್ನತಿಯ ಸಂದೇಶವನ್ನು ಸಾರುತ್ತ ಗುರಿಮುಟ್ಟುವ ತನಕ ನಿಲ್ಲದೆ ಮುಂದರಿಯುವರು!

ಕಸಿ ಹಣ್ಣಿನ ಗಿಡಗಳು ಮತ್ತು ತರಕಾರಿ ಬೀಜಗಳು

ಜುಲೈ ಆಗಸ್ಟ್ ತಿಂಗಳಲ್ಲಿ ಹಾಕುವ ಇಂಗ್ಲೀಷ್ ಟೈಪ ಮತ್ತು ಇಂಡಿಯನ್ ತರಕಾರಿ ಬೀಜಗಳು 20 ತರಹ ಕಲರ್‌ಪ್ಯಾಕೆಟ್‌ಗಳ ಸಮೇತ- ರೂ. 4-0-0

ಬೆಂಗಳೂರು ಕಸಿ ಮಾವಿನ ಗಿಡಗಳು 6 ಜಾತಿ 6 ಗಿಡಕ್ಕೆ	9-0-0
ಕಲಕತ್ತೆ ಮಾವಿನ ಗಿಡಗಳು 12 ಜಾತಿ 12 ಗಿಡಕ್ಕೆ	16-0-0
ಸಪೋಟ, (ಚಿಕ್ಕು) ಗಿಡ 1ಕ್ಕೆ	1-8-0
ನಾಗಪುರ—ಕೊಡಗು—ಮುಸಂಬಿ-ನಿಂಬೆ-ಚಕ್ಕೋತ್ರ.	
ದಾಳಿಂಬ. ಪನ್ನೇರಳೆ-ಗಿಡಗಳು ಡಜನ್ 1ಕ್ಕೆ	15-0-0

ಅರ್ಧ ಹಣ ಮುಂಗಡ ರವಾನಿಸಬೇಕು. ಪ್ಯಾಕಿಂಗ್ ಮತ್ತು ಇತರ ಖರ್ಚು ಬೇರೆ.

ಪತ್ತೆ: ದಿ ಅಲ್‌ಸೂರ್ ಸೀಡ್ ಕಂಪೆನಿ,
ಅಲಸೂರು — ಬೆಂಗಳೂರು.

ESTD. 1906.

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29,00,000	29,00,000
Capital paid up	28,43,000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,91,000	1,16,16,000
Govt. Securities	1,80,46,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13,000

ವಾರಾಂತ್ಯ ವರದಿ ವಿಮರ್ಶೆ

ಅಲೆಕ್ಸಾಂಡರನ ಹಕ್ಕು ಭಾದ್ಯಸ್ಥರು

ಪಂಜಾಬದ ಗಡಿಯು ಸಟ್ಲೆಜ್ ನದಿಯು ತನಕ ಇರಬೇಕೆಂದು ಸರ್ ಫಿರೋಜ್ ಖಾನ್‌ನೂನರು ಸೂಚಿಸಿದ್ದಾರೆ ಇದಕ್ಕೆ ಅವರು ಕೊಟ್ಟ ಕಾರಣ ಅಲೆಕ್ಸಾಂಡರನು ಆ ನದಿಯ ತನಕದ ಪ್ರದೇಶವನ್ನು ಜಯಿಸಿದ್ದನಂತೆ ಅಲೆಕ್ಸಾಂಡರನನ್ನು ಇಸ್ಲಾಮಿ ಇತಿಹಾಸದಲ್ಲಿ ಸಿಕಂದರ್ ಈ ಆಜಂ ಎಂದು ಹೆಸರಿಸಿದ್ದರೂ ಆ ಯವನ ಯೋಧನು ಇಸ್ಲಾಂ ಧರ್ಮ ಪ್ರವರ್ತಕನಿಗಿಂತ ಎಷ್ಟೋ ಶತಮಾನಗಳ ಹಿಂದೆ ಇದ್ದವನು ಸರ್ ನೂನರು ಅವನನ್ನು ಮುಸಲ್ಮಾನನೆಂದು ತಪ್ಪಿ ಭಾವಿಸಿದುದಕ್ಕೆ ಯಾರೂ ಹೊಣೆಗಾರರಲ್ಲ ಒಂದು ಕಾಲದಲ್ಲಿ ಅಫಘಾನಿಸ್ಥಾನ ತನಕದ ಪ್ರದೇಶವು ಹಿಂದೂ ಅರಸರ ಆಳ್ವಿಕೆಯೊಳಗಿತ್ತೆಂದೂ ಹಿಂದೂ ಸ್ಥಾನಕ್ಕೆ ಅದನ್ನು ಸೇರಿಸಬೇಕೆಂದೂ, ಹಿಂದೂ ಮಹಾ ಸಭೆಯವರು ಸೂಚಿಸಿದರೆ ಕೇಳುವರಾರು?

ಸ್ವಾತಂತ್ರ್ಯ ದಿನ

ಇದನ್ನು ಹೇಗೆ ಆಚರಿಸಬೇಕೆಂಬುದರ ಕುರಿತು ಹಲವು ಸೂಚನೆಗಳು ಕೊಡಲ್ಪಟ್ಟಿವೆ ಅಂದು ಆಡಂಬರದ ಪ್ರದರ್ಶನ ಉತ್ಸವಗಳೇ ಇರಲಿ ಪ್ರತಿಯೊಬ್ಬ ಭಾರತೀಯನೂ ಅಂದು ತನ್ನ ದಿನ ನಿತ್ಯದ ತಾಪತ್ರಯಗಳನ್ನು ಬದಿಗಿರಿಸಿ ರಾಷ್ಟ್ರ ಸ್ವಾತಂತ್ರ್ಯದ ಪ್ರಥಮ ರುಚಿಯನ್ನುಣ್ಣುವನು ಎಲ್ಲರೂ ಹರುಷಾನಂದದಿಂದಿರಬೇಕಾದುದು ಅತ್ಯಾವಶ್ಯಕ ಮಾತ್ರವಲ್ಲ ಅಂದಿನ ಉತ್ಸವಗಳಲ್ಲಿ ದಿವಾಲಿ, ಇದ್, ಹೋಳಿ, ಕ್ರಿಸ್ಮಸ್ ಮತ್ತು ನವರೋಜ್ ಹಬ್ಬಗಳ ಸಮ್ಮಿಶ್ರ ಸಂಭ್ರಮವು ಇರಬೇಕೆಂದು ಹೆಚ್ಚಿನವರ ಕೋರಿಕೆ

ಸಂಯುಕ್ತ ಭಾರತಕ್ಕೆ ಸಂಸ್ಥಾನಗಳು

ವ್ಯಾಸ್‌ರಾಯರು ಸಕಾಲದಲ್ಲಿ ಸೂಚನೆ ಎಚ್ಚರಿಕೆಗಳನ್ನು ಕೊಟ್ಟುದರ ಪರಿಣಾಮವಾಗೆಂಬಂತೆ, ಹೈದರಾಬಾದು ತಿರುವಾಂಕೂರುಗಳು ಭಾರತ ಘಟನಾಸಮಿತಿಗೆ ಸೇರಲು ನಿರ್ಧರಿಸಿವೆಯೆಂದು ತಿಳಿದು ಬರುತ್ತದೆ ಪ್ರಜಾಪ್ರಭುತ್ವವು ಅತ್ಯಂತ ಪರಿಪೂರ್ಣತೆ ಹೊಂದಿದ ಈ ಕಾಲದಲ್ಲಿ ನಮ್ಮ ಸಂಸ್ಥಾನಿಕರು ಪ್ರಜೆಗಳ ಪರಮಾಧಿಕಾರವನ್ನು ಅಲಕ್ಷಿಸುವುದು ಸಮಂಜಸವೆನಿಸುವುದಿಲ್ಲ ಪ್ರಜೆಗಳೊಡನೆ ವಿರೋಧ ಕಟ್ಟಿ ರಾಜ್ಯ ಭಾರ ನಿರ್ವಹಿಸುವುದು ಸಮುದ್ರಕ್ಕೆ ದಂಡೆಕಟ್ಟುವಷ್ಟೇ ಅಸಾಧ್ಯವಾದುದು

ಅಪಮಾನಾಸ್ಪದ

ವಿದೇಶಗಳ ಸಾಗರೋತ್ತರ ಸರಕು ಸಾಗಿಸುವಿಕೆಯ ಒಂದಂಶವು ತಮಗೂ ಸಿಗುವಂತಾಗಬೇಕೆಂದು ಮಾತುಕತೆ ನಡಸಲು ಲಂಡನಿಗೆ ಹೋದ ಭಾರತೀಯ ಹಡಗು ಸಂಸ್ಥೆಗಳ ಪ್ರತಿನಿಧಿಗಳಿಗೆ "ನಿಮ್ಮ ಹಡಗುಗಳಿಗೆ ಆ ಯೋಗ್ಯತೆಯಿಲ್ಲ"ವೆಂಬಂರ್ಥದ ಉತ್ತರವನ್ನು ಬ್ರಿಟಿಷ್ ಹಡಗು ಹಿತ ಸಂಸ್ಥೆಗಳವರು ಕೊಟ್ಟದ್ದು ಅಪಮಾನಾಸ್ಪದವಾದ ಸಂಗತಿ ಭಾರತದಿಂದ ಪರದೇಶಗಳಿಗೆ ಒಯ್ಯಲ್ಪಡುವ ಸರಕುಗಳ ಸಾಗಿಸುವಿಕೆಯನ್ನು ಬ್ರಿಟಿಷ್ ಹಡಗು ಸಂಸ್ಥೆಗಳೇ ಇದುತನಕ ಪಡೆದಿವೆ ಈಗ ಅದರಲ್ಲೊಂದು ಅಂಶವನ್ನಾದರೂ ಭಾರತೀಯ ಹಡಗುಗಳ ಪಾಲಿಗೆ ಕೊಡಲು ಅವರು ಸಿದ್ಧರಿಲ್ಲದಿರುವುದು ಇನ್ನೂ ಅವರೊಳಗಿರುವ ಸಾಮ್ರಾಜ್ಯ ಶಾಹಿ ಸ್ವಾರ್ಥವನ್ನು ವ್ಯಕ್ತಪಡಿಸುತ್ತದೆ ಸ್ವತಂತ್ರವಾಗುವ ಭಾರತವು ಇಂತಹ ಸುಲಿಗೆಯನ್ನು ತಕ್ಷಣ ನಿಲ್ಲಿಸಲು ಶಾಸನ ಜಾರಿ ಮಾಡಬೇಕು. ಹಿಂದೀ ವ್ಯಾಪಾರಿ ಸಂಸ್ಥೆಗಳು ಹಡಗುಗಳನ್ನು ಶೀಘ್ರತರಗತಿಯಿಂದಾಗಿ ಮಾಡಲೂ ಸಹಕರಿಸುವುದಶ್ಯಕ

ಜನಾಂಗ ಸಂಘದ ಸತ್ವ ಪರೀಕ್ಷೆ

ಡಚ್ಚರು ಇಂಡೋನೇಶಿಯನ್ನರ ಮೇಲೆ ಕೈಕೊಂಡ ಧೋರಣೆ ವಿಶ್ವ ಜನಾಂಗದ ಸಂಘದ ಸತ್ವ ಪರೀಕ್ಷೆ ಮಾಡುವಂತಹದಾಗಿದೆ ನ್ಯಾಯ ನೀತಿಯ ಸ್ವಲ್ಪವಾದರೂ ತಾರತಮ್ಯವಿರುವ ಯಾವ ಜನಾಂಗವಾದರೂ ಡಚ್ಚರ ಉದ್ಧಟತನವನ್ನು ಹಿಂಬಿಸದಿರರು ಇಂತಹ ಬಲಾತ್ಕಾರವನ್ನು ಈಗಲೇ ನಿಲ್ಲಿಸದಿದ್ದರೆ ಜಗತ್ತಿನ ಶಾಂತಿಗೆ ಮತ್ತೊಮ್ಮೆ ಧಕ್ಕೆ ತಗಲಬಹುದು.

ಗಡಿ ನಿರ್ಣಯ ಗಲಾಟೆ

ಪಾಕಿಸ್ಥಾನ ಹಿಂದೂಸ್ಥಾನಗಳು ಒಡೆಯುವ ಸಂಭವವು ಅನತಿ ದೂರದಲ್ಲಿಲ್ಲವೆಂದು ಹೆಚ್ಚಿನ ದೇಶಾಭಿಮಾನಿಗಳು ನಂಬಿ ಕೊಂಡಿರುವಾಗ ಗಡಿ ನಿರ್ಣಯದ ಕುರಿತು ಕಿರುಕುಳಗಳನ್ನು ಹುಡುಕುತ್ತ ಗಲಾಟೆ ಎಬ್ಬಿಸುವವರೂ ಅಲ್ಲಲ್ಲಿ ತಲೆಯೆತ್ತುತ್ತಿರುವರು. ಯುರೋಪಿನಲ್ಲಿ ಈ ಗಡಿ ಗೊಂದಲವು ಭಯಂಕರ ಹತ್ಯಾಕಾಂಡದಲ್ಲಿ ಪರಿಣಮಿಸಿದೆ ದೇಶ ಮುಂದಾಳುಗಳು ಅತ್ಯಾವಶ್ಯಕ ಸಮಸ್ಯೆಗಳನ್ನು ಇತ್ಯರ್ಥಿಸಲು ಗಮನ ಕೊಟ್ಟರೆ ಮತ್ತೆಲ್ಲವೂ ಸುಗಮವಾಗಿ ಸಾಗುವುವು

ಫಿಲಿಪ್ ಮೌಂಟಬೇಟನ್:

ನಮ್ಮ ವ್ಯಾಸ್‌ರಾಯರ ಸೋದರ ಮಗ ಬ್ರಿಟಿಷರ ಭಾವೀ ರಾಣಿ ಎಲಿಜಬೇತಳ ನಿಶ್ಚಿತ ವರ, ಯುದ್ಧಕ್ಕೆ ಮುಂಚೆ ಗ್ರೀಸಿನ ಪಟ್ಟಕ್ಕೆ ಹಕ್ಕುದಾರ ನೆನಿಸಿದ್ದ ರಾಣಿಯ ಪತಿಯಾದರೂ ರಾಜನಲ್ಲ

ರಾಜಕುಮಾರಿ ಎಲಿಜಬೆತ್:

ಬ್ರಿಟಿಷ್ ಪಟ್ಟದ ಹಕ್ಕು ಭಾದ್ಯಸ್ಥಳು ತನ್ನ ಭಾವೀ ಕರ್ತವ್ಯಗಳಲ್ಲಿ ಯೋಗ್ಯ ತರಬೇತಿಯನ್ನು ಹೊಂದಿರುವಳು ಇವಳಿಗೆ ಸಾಮಾನ್ಯ ಜನರ ಹುಡುಗಿಗೆ ಸಿಕ್ಕುವ ಶಿಕ್ಷಣವನ್ನೇ ಕೊಡಲಾಗಿದೆ

ತರ್ಕ ವಿತರ್ಕ

ಫೀಲ್ಡ್ ಮಾರ್ಶಲ್ ಮೋಂಟಗೊಮರಿಯವರು ತಮ್ಮ ಜಪಾನ್ ಪ್ರವಾಸದ ಕಾರ್ಯಕ್ರಮ ಸದ್ಯಕ್ಕೆ ರದ್ದುಮಾಡಿರುವರೆಂದು ತಿಳಿಸಲಾಗಿದೆ ಆಂಗ್ಲೋ ಅಮೇರಿಕನ್ ಘರ್ಷಣೆ ಸದ್ಯಕ್ಕೆ ಮುಂದೆ ಬಿದ್ದಂತಾಯಿತೆಂದೂ ತಿಳಿಯಬೇಕೆ?

❖

ಮೈಸೂರು ಮಹಾರಾಜರ ಅರಮನೆಯ ಮುಂದೆ ಅಲ್ಲಿನ ವಿದ್ಯಾರ್ಥಿಗಳು ಅನ್ನ ಸತ್ಯಾಗ್ರಹ ಮಾಡುವರಂತೆ ಮುಂದಿನ ದಸರಾ ಸಮಯದಲ್ಲಿ, ಇವರಲ್ಲಿ ಕೆಲವರಿಗೆ 'ನಿರಶನ ವ್ರತಾಸಕ್ತ' ರೆಂಬ ಬಿರುದು ಕೈತಪ್ಪಿ ಸಲ್ಲದಂತೆ ದರ್ಬಾರ ಭಕ್ತಿಯವರು ಎಚ್ಚರ ತೆಗೆದುಕೊಳ್ಳಬಹುದು.

❖

ದಂಗೆ ಎದ್ದ ಇಂಡೋನೇಶಿಯನ್ನರಿಂದ ಹಾನಿಮಾಡಲ್ಪಟ್ಟ ಸೊತ್ತನ್ನು ಪುನಃರ್ರಚಿಸಲು ಡಚ್ ಸರಕಾರವು ತಮ್ಮ ಖಜಾನೆಯಿಂದ ಕೆಲವು ಲಕ್ಷ ಹಣವನ್ನು ಮಂಜೂರು ಮಾಡಿರುವರಂತೆ. ಮತ್ತೆ ಡಚ್ಚ ಸೈನಿಕರಿಂದ ಹಾಳುಮಾಡಲ್ಪಟ್ಟದ್ದನ್ನು ಇಂಡೋನೇಶಿಯನ್ನರಿಂದಲೇ ವಸೂಲುಮಾಡಲಾಗುವುದೆಂದು ಖಂಡಿತ ಊಹಿಸಬಹುದು

❖

ಸರ್. ಸಿ. ಪಿ. ಯವರ ಹತ್ಯಾಕಾರಿಯನ್ನು ಹಿಡಿದು ಕೊಟ್ಟವರಿಗೆ ಹತ್ತು ಸಾವಿರ ರೂಪಾಯಿ ಇನಾಮು ಸಾರಲಾಗಿದೆ ಕೊಲೆಗೆಡುಕನೇ ಮುಂದೆ ಒಂದು ಇದನ್ನು ಪಡೆಯಲು ಸಾಧ್ಯವಿದೆಯೊ ಎಂಬುದರ ಕುರಿತು ಸ್ಪಷ್ಟ ತಿಳಿದಿಲ್ಲ

❖

ಪಶ್ಚಿಮ ಪಂಜಾಬ ಹಾಗೂ ಪೂರ್ವ ಬಂಗಾಲದ ಶಾಸನ ಸಭೆಗಳಿಗೆ ದುರೀಣರನ್ನು ಆರಿಸುವುದರಲ್ಲಿ ತಮ್ಮ ಹಸ್ತಕ್ಷೇಪವಾವುದೂ ಇಲ್ಲವೆಂದು ಮಿ। ಜಿನ್ನರು ತಿಳಿಸಿದ್ದಾರೆ. ಆರಿಸಿ ಬಂದವರು ಮಾತ್ರ ಅವರ ಸರ್ವಾಧಿಕಾರಕ್ಕೆ ಒಳಗಾಗಬೇಕೆಂಬುದು ಮಾತ್ರ ನಿರ್ವಿವಾದ.

ಪಟಾಣೆ ಸ್ಥಾನವನ್ನು ರಚಿಸುವುದರ ಕುರಿತು ಮಾತುಕತೆಗಳನ್ನು ವಿರ್ಪಡಿಸಬೇಕೆಂದು ಘಾನಬಾಜ ಖಾನರು ಸೂಚಿಸಿದ್ದಾರೆ ಅದು ಪಾಕಿಸ್ಥಾನದೊಳಗೆ ಇರುವುದಾದರೆ ಜಿನ್ನರ ಆಕ್ಷೇಪವಿರಲಿಕ್ಕಿಲ್ಲವೆಂದು ಹಾರೈಸಬಹುದು

❖

ಜಾವಾದಲ್ಲಿ ಬ್ರಿಟಿಷರು ಮಧ್ಯಸ್ಥಿಕೆ ನಡೆಸಲಿರುವರೆಂದು ಒಂದು ಊಹಾಪೋಹೆ ಇದೆ ಶಾಂತಿ ಸ್ಥಾಪನೆಯಾಗುವ ತನಕ ಆ ಪ್ರದೇಶಗಳು ಅವರ ಕೈಕೆಳಗಿರಿಸಲ್ಪಡುವವೊ ಎಂಬ ಶಂಕೆಯೂ ಎದ್ದಿದೆ

ಭಾರತದ ಕೊನೆಯ ವ್ಯಾಸ್‌ರಾಯರ ಸರಳತೆ

ಲೋರ್ಡ್ ಲೂಯಿ ಮೌಂಟ್ ಬೇಟನರ ಪರಿಚಯ

ದಿಲ್ಲಿಯಲ್ಲಿ ಪತ್ರಿಕಾ ಸಂಪಾದಕರ ಪರಿಷತ್ತು ಸೇರಿದಾಗ ವ್ಯಾಸ್‌ರಾಯ್ ಮೌಂಟ್ ಬೇಟನರು ಅವರನ್ನು ತಮ್ಮ ನಿವಾಸಕ್ಕೆ ಲಘು ಉಪಹಾರ ಕೂಟವೊಂದಕ್ಕೆ ಆಹ್ವಾನಿಸಿದರು. ಇದಕ್ಕೆ ಹಾಜರಾದ ಹಿತವಾದ ಪತ್ರಿಕೆಯ ಸಂಪಾದಕರು ಭಾರತದ ಕೊನೆಯ ವ್ಯಾಸ್‌ರಾಯರ ಗುಣಲಕ್ಷಣಗಳ ಕುರಿತು ಹೀಗೆ ಬರೆದಿದ್ದಾರೆ.

ವ್ಯಾಸ್‌ರಾಯರ ಭವನದೊಳಗೆ ಪ್ರವೇಶ ಮಾಡುವಲ್ಲಿ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸಂಸ್ಥಾಪಕನೆನಿಸುವ ಕ್ಲೈವನ ತೈಲಚಿತ್ರವೊಂದು ತೂಗುತ್ತಿದೆ. ಇದನ್ನು ನೋಡುವಾಗ ಆಗಿನ ಕಾಲದ ಬ್ರಿಟಿಷ್ ಅಧಿಕಾರ ದುಷ್ಕೃತ್ಯಗಳ ಜಗುಪ್ಸೆಯ ಸ್ಮರಣೆಯಾಗುವುದು. ಆದರೆ ಅದೇ ಭವನದೊಳಗೆ ಸಾಮ್ರಾಜ್ಯವನ್ನು ದ್ರವೀಕರಿಸಿದ ಕೊನೆಯ ವ್ಯಾಸ್‌ರಾಯರೂ ಇವರೆಂಬ ಭಾವನೆಯು ಸ್ವಲ್ಪ ಸಮಾಧಾನವನ್ನುಂಟುಮಾಡುವುದು.

ಸುಂದರ ವ್ಯಕ್ತಿ

ವಿಭಜನೆಯ ಕಾರ್ಯದಲ್ಲಿ ಮಗ್ನರಾಗಿದ್ದರಿಂದ ಅಂದು ವ್ಯಾಸ್‌ರಾಯ್ ಸಾಹೇಬರು ನಮ್ಮನ್ನು ಕಾಣಬರಲು ಸ್ವಲ್ಪ ವಿಳಂಬವಾಯಿತು. ಬಂದ ಮೇಲೆ ಅವರನ್ನು ಅತೀ ಹತ್ತಿರದಿಂದ ನೋಡಿದಾಗಲೂ ಅವರ ಸುಂದರ ವ್ಯಕ್ತಿತ್ವವು ಮನವೊತ್ತುವಂತಿದ್ದುದು ಕಂಡುಬಂತು. ಹೊಲಿವುಡ್ ಚಲಚ್ಚಿತ್ರ ಕೇಂದ್ರಕ್ಕೆ ಹೋದರೆ ಅವರಿಗೆ ಯಾವಾಗಲೂ ಒಂದು ಉದ್ಯೋಗ ಸಿಗಬಹುದೆಂಬ ಭಾವನೆಯಾಗುತ್ತಿದೆ. ಅನೇಕ ಮೇಲಧಿಕಾರಿಗಳು ತೋರಿಸುವ ಡೌಲಿನ ಯಾವ ಕೃತಕ ಹಾರಭಾವಗಳೂ ಅವರಲ್ಲಿರಲಿಲ್ಲ. ವರ್ಷ ಐವತ್ತಕ್ಕೆ ಹತ್ತಿರವಾಗಿದ್ದರೂ ಅವರು ತಾರುಣ್ಯವನ್ನು ಚೆನ್ನಾಗಿ ಪರಿಪಾಲಿಸಿದ್ದಾರೆಂದು ಅವರ ಚಟುವಟಿಕೆಯುಕ್ತವಾದ ಶರೀರ ಲಕ್ಷಣಗಳಿಂದ ಸ್ಪಷ್ಟ ತೋರುತಿತ್ತು. ತಮ್ಮ ಉನ್ನತ ಹುದ್ದೆಯ ಹೊಣೆಗಾರಿಕೆಯ ಅರಿವು ವಿಶ್ವಾಸ ಅವರಲ್ಲಿ ಆಳವಾಗಿತ್ತು. ರಾಜಮನೆತನದವರಾದರೂ ಸಿರಿವಂತಿಕೆಯ ಆಡಂಬರ ಅವರಲ್ಲಿ ಅತ್ಯಲ್ಪವಾಗಿತ್ತೆನ್ನಬಹುದು,

ಹಿದಡೆ ಭಾರತಕ್ಕೆ ಬಂದಿದ್ದ ಅನೇಕ ಉನ್ನತ ಬ್ರಿಟಿಷ್ ಅಧಿಕಾರಿಗಳೊಡನೆ ಸಂದರ್ಶನ ಮಾಡಿದಾಗ ಅವರೊಡನೆ ಸಲಿಗೆಯಿಂದಿರಲು ಸ್ವಲ್ಪ ಸಂಕೋಚವಾಗುತಿತ್ತು. ಉದಾಹರಣೆಗಾಗಿ ಲೊರ್ಡ್ ಪೆಥಿಕ್ ಲೊರೆನ್ಸರು ಯಾವಾಗಲೂ ಗಂಭೀರ ಸನ್ಯಾಸಿಯೊಬ್ಬನ ಮುಖಭಾವದಿಂದಿರುತಿದ್ದರು. ಆದರೆ ಈ ವ್ಯಾಸರಾಯರೊಡನೆ ಇನ್ನಷ್ಟು ಆಳವಾಗಿ ವ್ಯವಹರಿಸಬಹುದೆಂಬ ಭಾವನೆಯುಂಟಾಗುತ್ತದೆ. ಆದರೆ ಅತೀ ಆಳಕ್ಕಿಲ್ಲವೆಂಬುವರ ಅರಿವೂ ಆಗುತ್ತದೆ. ನಮ್ಮಲ್ಲನೇಕರು ಸಮಸ್ಯಾತ್ಮಕವಾದ ಪ್ರಶ್ನೆಗಳನ್ನು ಅವರಿಗೆ ಹಾಕಿದರು. ಯಾವುದನ್ನೂ ಅವರು ಕೋಪವನ್ನಾಗಲಿ, ತಿರಸ್ಕಾರವನ್ನಾಗಲಿ ತೋರಿಸದೆ, ಎಲ್ಲವನ್ನು ಸುರಸ ವಿನೋದ ಭಾವದಿಂದ ಎದುರಿಸಿದರು. ಅವರ ಉತ್ತರಗಳು ತೀಕ್ಷ್ಣತೆಯುವಾಗಿದ್ದರೂ, ಒಂದಿಷ್ಟಾದರೂ ವೈಷಮ್ಯದಿಂದೊಡಗೂಡಿರಲಿಲ್ಲ. ಹಲವು ಪ್ರಶ್ನೆಗಳನ್ನು ಕೇಳಿ ಒಂದೊಂದಾಗಿ ಉತ್ತರವಿತ್ತ ಅವರ ರೀತಿಯು ಉತ್ತಮ ಮಾನಸೀಕ ಶಿಸ್ತು ಚೈತನ್ಯದ ಶ್ರೇಷ್ಠತೆಯನ್ನು ತೋರಿಸುತ್ತವೆ. ಮಾತ್ರವಲ್ಲ ಅವರ ಹೇಳಿಕೆಗಳ ವಿವೇಕಪರ ಚಾತುರ್ಯವು ಅವರನ್ನು ಯಾವ ಜನಾಂಗವಾದರೂ ಮುಖ್ಯ ಪ್ರಧಾನರನ್ನಾಗಿ ಮಾಡಲು ಅರ್ಹನೆನಿಸುತ್ತವೆ.

ಬುದ್ಧನ ಪ್ರಶಾಂತತೆ

ಪ್ರಶ್ನೆಗಳನ್ನು ಕೇಳುತ್ತಿರುವಾಗ ಅವರು ತಲೆಯನ್ನು ಸ್ವಲ್ಪ ಎಡಕ್ಕೆ ಬಗ್ಗಿಸಿ ಮೌನವಾಗಿ ತಮ್ಮ ಕಣ್ಣಿನ ಮೂಲೆಯಿಂದೆಂಬಂತೆ ಪ್ರಶ್ನೆಗಾರರನ್ನು ತೀಕ್ಷ್ಣವಾಗಿ ನೋಡುತಿದ್ದರು. ಅವರ ಮುಖವು ಬುದ್ಧನಂತೆ ಪ್ರಶಾಂತತೆಯಿಂದ ಕೂಡಿತ್ತು. ಎಲ್ಲ ಪ್ರಶ್ನೆಗಳನ್ನು ಕೇಳಿದ ಮೇಲೆ ಅವುಗಳಲ್ಲಿ ಒಂದೊಂದನ್ನೆ ಕ್ರಮ ಪ್ರಕಾರ ಉತ್ತರಿಸುತಿದ್ದರು. ಅವುಗಳಲ್ಲಿ ಒಂದನ್ನಾದರೂ ಬಿಡದೆ ಉತ್ತರಿಸಿರುವುದು ಬೆರಗಿನ ಸಂಗತಿ.

ಕೆಲವು ಪ್ರಶ್ನೆಗಳಿಗೆ ಅವರು ಕೊಟ್ಟ ಉತ್ತರಗಳು ಕೆಲವರಿಗೆ ಸಂಪೂರ್ಣ ತೃಪ್ತಿ ಕೊಟ್ಟಿರಲಿಕ್ಕಿಲ್ಲ. ಆದರೆ ಅವರ ಉತ್ತರಗಳಲ್ಲಿ ಮಾತಿನ ಮೋಟಗಾರಿಕೆಯಾಗಲಿ, ಅರ್ಥದ ವಿಪರ್ಯಾಸವಾಗಲಿ ಇಲ್ಲವೆ ರಾಜತಾಂತ್ರಿಕ ಅತಿಸತ್ಯಗಳಾಗಲಿ ಇರಲಿಲ್ಲವೆಂಬುದು ಖಂಡಿತ. ರಹಸ್ಯವಾಗಿಡಬೇಕಾದ ರಾಜಕೀಯ ವಿಚಾರಣೆಗಳ ಕುರಿತಾದ ಪ್ರಶ್ನೆಗಳನ್ನುತ್ತರಿಸುವಾಗ ಅವರಿಗೆ ತುಂಬಾ ಸಂಕೋಚವುಂಟಾಯಿತಾದರೂ ತಮ್ಮ ಕೈಗಳನ್ನು ಮುಂದಕ್ಕೆಳೆದು “ಸಭ್ಯರೇ, ಸತ್ಯವನ್ನೇ ಹೇಳುತ್ತೇನೆ, ಆದರೆ ಇದನ್ನು ಹೊರಗೆಡಹಬೇಡಿರಿ. ಪ್ರಯಾಣಿಕತೆಯ ಗೌರವದಿಂದ ನೀವು ಇಲ್ಲಿ ಬಂದಿದ್ದೀರಿ. ಈ ವಿಷಯವನ್ನು ಹೊರಗೆಡವಿದಿರೆಂದರೆ ಇತ್ಯರ್ಥವು ಕಠಿಣವಾಗುವುದು” ಎನ್ನುತಿದ್ದರು.

ಇಂತಹ ಮುಕ್ತ ಹೃದಯದ ವ್ಯಕ್ತಿಗಳು ಕೊಂಗ್ರೆಸ್ ಮತ್ತು ಲೀಗುಗಳ ವಿಶ್ವಾಸಕ್ಕೆ ಪಾತ್ರರಾದುದು ವಿಶೇಷವಲ್ಲ. ಅವರು ತುಂಬಾ ಹೃತ್ಪೂರ್ವಕತೆಯಿಂದ ಮಾತನಾಡುತ್ತಾರೆ. ಪ್ರತಿಯೊಂದು ಸಲ “ಸಭ್ಯರೇ, ಇದು ನಿಮ್ಮ ದೇಶ, ನಾನಿಲ್ಲಿ ಹೊರಗಿನವ” ಎನ್ನುವರು.

ಆದರ್ಶ ಚೈತನ್ಯ

ಬ್ರಿಟಿಷ್ ರಾಜಕೀಯ ಮುತ್ಸದ್ಧಿತನದ ವ್ಯವಹಾರ ಇತ್ಯರ್ಥಿಸುವ ಪ್ರತಿನಿಧಿಗಳೂ, ಬ್ರಿಟನಿನ ರಾಯಭಾರಿಗಳೂ ಆಗಿರುವ ಮೌಂಟ್‌ಬೈಟನರು ಅವಿಶ್ರಾಂತ ಕೆಲಸಗಾರರು. ಅವರಿಗೆಲ್ಲವೂ ಶೀಘ್ರದಲ್ಲಾಗಬೇಕು. ಎಲ್ಲವೂ ಕೂಡಲೇ ತಕ್ಷಣ ತೀರಬೇಕು. ನಾಳೆ ಎಂಬುದು ಅವರ ಮಟ್ಟಿಗೆ ಡೈರಿಯಲ್ಲಿ ಮಾತ್ರ ಬರೆಯಲ್ಪಟ್ಟಿರುವುದು. ಎಲ್ಲವನ್ನು ಆರಾಮವಾಗಿ ವಾರಾಂತ್ಯದಲ್ಲಿ ನೋಡುವ ಎನ್ನುವ ಪಲ್ಲಂಗಶಾಯರೆಂದರೆ ಅವರಿಗೆ ಆಗುವುದಿಲ್ಲ. ಅವರ ಡೈರಿಯ ಪ್ರತಿ ಪುಟದಲ್ಲೆಂಬಂತೆ “ಅಧಿಕಾರ ಬಿಟ್ಟುಕೊಡಲು ಕೇವಲ, ಮೂವತ್ತೈದು ದಿವಸಗಳಿವೆ, ಮೂವತ್ತ ನಾಲ್ಕು, ಮೂವತ್ತಮೂರಾ... ಎರಡು... ಮೂವತ್ತು... ದಿವಸಗಳಿವೆ” ಎಂಬುದೇ ಹೆಚ್ಚಾಗಿ ಕಂಡುಬರುತ್ತಿದೆ. ದಿಲ್ಲಿಯ ಕಛೇರಿ ಅಧಿಕಾರಿಗಳೆಲ್ಲರೂ ತಮ್ಮ ಡೈರಿಗಳಲ್ಲಿ ಹೀಗೆಯೇ ಬರೆದುಕೊಂಡಿದ್ದಾರೆ.

ಇಷ್ಟು ಚಟುವಟಿಕೆ ಚೈತನ್ಯದ ವಕ್ತಿಗಳು ಆಗ್ನೇಯ ಏಷ್ಯಾದ ಯುದ್ಧ ಕೇಂದ್ರದ ಮುಖ್ಯಾಧಿಕಾರಿಯಾಗಿ ಮಾಡಲ್ಪಟ್ಟಿದ್ದು ಅತ್ಯಂತ ಯುಕ್ತವಾದುದು. ಇದೇ ರೀತಿ ಕೆಲಸ ಮಾಡುವ ಚರ್ಚಿಲ್ಲರು ಯೋಗ್ಯರನ್ನೇ ತಮ್ಮ ವಿಜಯ ಸಂಪಾದನೆಗಾಗಿ ಆರಿಸಿದರೆನ್ನಬಹುದು. ಮೌಂಟ್ ಬೇಟನ್ನರ ಚಟುವಟಿಕೆಯನ್ನು ನೋಡುವಾಗ ನಮಗೂ ಅವರಷ್ಟೇ ವೇಗದಲ್ಲಿ ಕೆಲಸ ನಿರ್ವಹಿಸೋಣವೆನ್ನಿಸುತ್ತದೆ.

ಶ್ರೇಷ್ಠ ಚಾತುರ್ಯ

ಶುದ್ಧ ಹೃದಯದ ವ್ಯಕ್ತಿಗಳು ಎಂದಾದರೂ ಚತುರ ವ್ಯಕ್ತಿಗಳಾಗ ಬಲ್ಲರೊ ಎಂಬ ಸಂಶಯ ಹುಟ್ಟುತ್ತಿದೆ. ಮೌಂಟ್‌ಬೇಟನರು ಈ ಮುಂಚೆ ಸ್ಟೆಲಿನ್, ಚರ್ಚಿಲ್ ಮೊದಲಾದ ಮಹಾಮಹಿಮ ವ್ಯಕ್ತಿಗಳನ್ನು ಕಂಡಿದ್ದಾರೆ. ಆದುದರಿಂದ ಮುಖಂಡರೊಡನೆ ವ್ಯವಹರಿಸುವ ಕೆಲಸವು ಅವರಿಗೆ ಹೊಸ ಅನುಭವದಲ್ಲ. ನಿಮ್ಮೊಡನೆ ಮಾತನಾಡುವಾಗ ಅವರು ನಿಮ್ಮ ಮನಸ್ಸನ್ನು ರೂಪುಗೊಳಿಸುತ್ತಾರೆ. ಮಾತನಾಡುತ್ತಿರುವಾಗಲೇ ನಿಮ್ಮ ಯೋಗ್ಯತೆಯು ಅವರಿಗೆ ತಿಳಿದು ನಿಮ್ಮನ್ನು ತಮ್ಮ ಮನಸ್ಸಿನ ಕೊಟಡಿಯಲ್ಲಿನ ಮೇಧಾವಿ, ಬುದ್ಧಿಶಾಲಿ, ಸಾಧಾರಣ ಬುದ್ಧಿಶಾಲಿಗಳ ಉಪಖಾತೆಯೊಳಗೆ ಸೇರಿರುತ್ತಾರೆ.

ನಿಮ್ಮೊಡನೆ ಮಾತನಾಡುವಾಗ ಅವರು ಮಧುರವಾದ ಶಬ್ದ ಶ್ರೇಣಿಯನ್ನುಪಯೋಗಿಸುವುದಿಲ್ಲ. ನಿಮ್ಮ ಸ್ವಾಭಿಮಾನ ಗೌರವಗಳನ್ನು ಮನ್ನಿಸಿ ಮೃದುವಾಗಿ ಮಾತನಾಡುತ್ತಾರೆ. ಒಂದು ವಿಷಯದ ಕುರಿತು ಚರ್ಚೆಯೆದ್ದರೆ ಕೂಡಲೇ ಅದನ್ನೊಂದು ವಿನೋದದಿಂದ ಇಲ್ಲವೆ ನಗೆಯಿಂದ ಇತ್ಯರ್ಥಮಾಡುವುದೊಂದು ಅವರ ಸಾಮಾನ್ಯ ರೀತಿ. ಇಂತಹ ವ್ಯಕ್ತಿಗಳು ರಾಜಕೀಯದಲ್ಲಿರಲು ತುಂಬಾ ಅರ್ಹರು. ಇವರು ಇಷ್ಟು ಕಾಲ ನೌಕೆಯಲ್ಲಿ ಹೇಗಿರುವಂತಾಯಿತೊ ಹೇಳಬರುವುದಿಲ್ಲ. ಈ ವಿಷಯವನ್ನು ಅವರಿಗೆ ಜ್ಞಾಪಿಸಿದಾಗ ಅವರು “ರಾಜಕೀಯವೆ, ಅದು ನನಗೆ ಹೇಳಿದ್ದಲ್ಲ” ಎಂದರು.



ಸಿಂಗಾರದ ಪೆರಿಸಿದಲ್ಲಿ ವ್ಯಭಿಚಾರದ ಕೊಳೆ

ಗಂಡಂದಿರ ಸಮ್ಮತಿಯಿಂದ ಅಕೃತ್ಯ

ಪೋಲೀಸರು ಆಪ್ತ ಸಹಾಯಕರು!

ಪೆರಿಸ್ ನಗರದ ಸೌಂದರ್ಯವು ಕೇವಲ ಬಾಹ್ಯ ತೋರಿಕೆಗೆ—ವ್ಯಭಿಚಾರಿಣಿಯರ ವರ್ಣಳ ಶೃಂಗಾರದಂತೆ. ಡೈಲಿ ಮಿರರ್ ಪತ್ರಿಕೆಯಲ್ಲಿ ಒರ್ವ ಪ್ರತ್ಯಕ್ಷದರ್ಶಿಗಳು ಹೀಗೆ ಬರೆಯುತ್ತಾರೆ:

ಒಂದು ವರ್ಷದ ಕೆಳಗೆ ಫ್ರಾನ್ಸಿನಲ್ಲಿ ಬಹಿರಂಗ ವ್ಯಭಿಚಾರದ ಮನೆಗಳನ್ನು ನಿಷೇಧಿಸುವ ಕಾನೂನು ಜಾರಿ ಮಾಡಲಾಯಿತು—ಪರಿಣಾಮವಾಗಿ ಈಗ ಗುಪ್ತವಾಗಿ ಈ ದುಷ್ಕೃತ್ಯವು ಎಲ್ಲಾ ಕಡೆಗಳಲ್ಲೂ ನಡೆಯುತ್ತಿದೆ. ಅದೂ ಅಲ್ಲಿನ ಪೋಲಿಸರ ಭದ್ರವಸ್ತುವಾರಿಯಲ್ಲಿ ಫ್ರೆಂಚ್ ಪೋಲೀಸರು ಅತ್ಯಲ್ಪವಾದ ತಮ್ಮ ಸಂಬಳವನ್ನು ಭರ್ತಿ ಮಾಡಲು ಇದೊಂದು ಸುಲಭ ಮಾರ್ಗವನ್ನು ಕಂಡುಹಿಡಿದಿರುವರು.

ಉದಾಹರಣೆ

ಒರ್ವ ತರುಣ ಪೋಲಿಸನ ನಿದರ್ಶನವನ್ನು ಪರಿಶೀಲಿಸಿರಿ. ವ್ಯಭಿಚಾರ ಪತ್ತೆಹಚ್ಚುವ ಪೋಲಿಸ್ ಖಾತೆಯಲ್ಲಿ ಅವನಿಗೆ ಕೆಲಸ. ವಾರಕ್ಕೆ 4 ಪವನು ಸಂಬಳ. ಗಿರಾಕಿಗಳನ್ನು ಅವನೇ ಸ್ವತಃ ಈ ಪಾಪದ ಕೂಪಗಳಿಗೆ ಕೊಂಡೊಯ್ದು ಬಿಡುತ್ತಾನೆ. ಅಲ್ಲಿ ಅವನಿಗೆ ಬೇಕಾದ ಕಮಿಶನ್ ಸಿಗುತ್ತದೆ. ಇಂತಹ ಮನೆಗಳ ಹೊರಗೆ ‘ವ್ಯಾಪಾರದ ಹೊಟೇಲು’ ಎಂಬ ಸಂಕೇತ ಪಟ್ಟಿ ತೂಗಹಾಕಲಾಗುತ್ತದೆ. ಅದರ ಕೆಳಗೆ “ಎಲಾ ಸುಖೋಪಭೋಗಗಳೂ ಪೂರೈಸಲಾಗುವುವು” ಎಂದೂ ಬರೆದಿರುತ್ತದೆ.

ವ್ಯಭಿಚಾರ ನಿರ್ಮೂಲನಕ್ಕಾಗಿ ಸಾರ್ವಜನಿಕ ಸೇವೆ ಮಾಡುತ್ತಿರುವ ಮೆಡೇಮ್ ಮಾರ್ತ ರಿಚಾರ್ಡ್ ಎಂಬ ಮಹಿಳೆ ಈ ಕೆಳಗಿನ ಕೆಲವು ಸ್ವಾರಸ್ಯ ಅಂಕೆಸಂಖ್ಯೆಗಳನ್ನು ಕೊಟ್ಟಿದ್ದಾಳೆ: ವ್ಯಭಿಚಾರ ಮನೆಗಳನ್ನು ನಿಷೇಧಿಸುವ ಆಜ್ಞೆ ಜಾರಿಗೆ ಬಂದಾಗ ಸರಕಾರ ಸಮ್ಮತಿಯಿಂದ ಸ್ಥಾಪಿಸಲ್ಪಟ್ಟ 1500 ಇಂತಹ ಮನೆಗಳಿದ್ದವು. ಇವುಗಳಲ್ಲಿನ ಜಾರೆಯರಲ್ಲಿ 1100ರಷ್ಟು ಮಂದಿ ವಿವಾಹಿತೆಯರು. ಅವರಿಗೆ ಅವರ ಗಂಡಂದಿರು ಬರೆಹ ಮೂಲಕ ಈ ವೃತ್ತಿ ಕೈಕೊಳ್ಳಲು ಅನುಮತಿ ಕೊಟ್ಟಿದ್ದರು. ಇವರಲ್ಲಿ 200 ಮಂದಿಗಳು ಪೋಲಿಸ್ ಜವಾನರ ಹೆಂಡತಿಯರೇ ಆಗಿದ್ದರು!

ಆಶ್ಚರ್ಯವಾದ ಸಿದ್ಧಿ ಯಂತ್ರ

ಅದ್ಭುತ ಶಕ್ತಿಯುಳ್ಳ ಈ ಗುಪ್ತ ವಶೀಕರಣ ಯಂತ್ರಧಾರಣದಿಂದ ನಿಮ್ಮ ಇಚ್ಛಿತ ಕಾರ್ಯಗಳೆಲ್ಲ ನೆರವೇರುವುವು. ಇದನ್ನು ಧರಿಸಲು ಯಾವ ತಪಸ್ಸಿದ್ಧಿಯೂ ಬೇಕಾಗಿಲ್ಲ. ಇದು ನಿಮಗೆ ಐಶ್ವರ್ಯವನ್ನು ಕೊಟ್ಟು ನಿಮಗೆ ಬೇಕಾದವರನ್ನು ನಿಮ್ಮ ವಶಪಡಿಸಿ, ಇಚ್ಛಿತ ಕಾರ್ಯಗಳೆಲ್ಲ ವಿಜಯವನ್ನು ಕೊಡುವುದು. ಇದು ಠಕ್ಕೆಂದು ಸ್ಥಾಪಿಸುವವರಿಗೆ ರೂ. ೧೦೦ ಬಹುಮಾನ.

ತಾಮ್ರದ ತಾಯಿತಕ್ಕೆ ರೂ. ೨-೮-೦ ಬೆಳ್ಳಿಯ ತಾಯಿತಕ್ಕೆ ರೂ. ೩. ಚಿನ್ನದಕ್ಕೆ ರೂ. ೧೫.

PRET SHILA ASHRAM
No. 181.
POKATRI SARAI (GAYA)

ಜಿಲ್ಲಾ ಪರಿಚಯ

ಶ್ರೀ. ಕೆ. ಕೆ. ಪಿ. ರಾಮು ಪೊಳುವಾಳರು

ಜಿಲ್ಲೆ ಸಂಚಾರ ಕಾರ್ಯಕ್ರಮ

ಮಂಗಳೂರು ತಾ. 30-ಜಿಲ್ಲೆಯಲ್ಲಿ ಕಾಂಗ್ರೆಸ್ ಸದಸ್ಯರನ್ನು ಸೇರಿಸುವುದೇ ಮೊದಲಾದ ಕಾಂಗ್ರೆಸ್ ಕೆಲಸವನ್ನು ಬೇರೆ ಬೇರೆ ಸರ್ಕಲ್ ಕಾಂಗ್ರೆಸ್ ಕಮಿಟಿಗಳು ವ್ಯವಸ್ಥಿತ ರೀತಿಯಲ್ಲಿ ನಡಿಸುವಂತೆ ಮೇಲ್ವಿಚಾರ ನಡಿಸುವರೆ ಜಿಲ್ಲಾ ಕಾಂಗ್ರೆಸ್ ಕಮಿಟಿಯಿಂದ ನಿಯುಕ್ತರಾಗಿರುವ ಶ್ರೀ ಕೆ ಕೆ ಪಿ ರಾಮು ಪೊತುವಾಳರು, ಜಿಲ್ಲೆಯ ಕೆಲವು ಭಾಗಗಲ್ಲಿ ಈ ಕೆಳಗಣ ತಾರೀಕುಗಳಲ್ಲಿ ಸಂಚರಿಸಲಿರುವರು ಸರ್ಕಲ್ ಕಾಂಗ್ರೆಸ್ ಕಮಿಟಿಗಳೂ, ಇತರ ಕಾಂಗ್ರೆಸ್ ಕೆಲಸಗಾರರೂ, ಅವರೊಡನೆ ಉತ್ಸಾಹದಿಂದ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ

ತಾ 1 ಮತ್ತು 2-8-47 ಕಾರ್ಕಳ, ತಾ 3 ಹೆಬ್ರಿ, ತಾ 4 ಬ್ರಹ್ಮಾವರ, ತಾ. 5 ಮತ್ತು 6 ಕುಂದಾಪುರ, ತಾ 7 ಉಡ್ಪಿ, ತಾ. 8 ಕಟಪಾಡಿ, ತಾ 9 ಹಿರಿಯಡ್ಕ, ಪೆರ್ಡೂರು ಮತ್ತು ಬೈಲೂರು, ತಾ 10 ಮೂಡಬಿದ್ರೆ, ತಾ 11 ಮೂಲ್ಕಿ, ತಾ 12 ಪುತ್ತೂರು ಮತ್ತು ವಿಟ್ಲ, ತಾ 13 ಉಪ್ಪಿನಂಗಡಿ ಮತ್ತು ಬೆಳ್ತಂಗಡಿ

ಕಾಂಗ್ರೆಸ್ ಸದಸ್ಯತನದ ಪುಸ್ತಕಗಳು ಈ ವರೆಗೆ ಸಿಕ್ಕದಿದ್ದವರೂ, ಬೇಕಾದವರೂ ಶ್ರೀ ಪೊತುವಾಳರೊಡನ ತಿಳಿಸಬಹುದು

ಆಗೋಸ್ತು ತಾ 15ನೇ ದಿನಾಚರಣೆಯ ಸಂಬಂಧವಾಗಿಯೂ ಶ್ರೀ ಪೊತುವಾಳರು ಬೇಕಾದ ಸಲಹೆಯನ್ನೀಯುವರು ಎಂದು ಶ್ರೀ ಕೆ ಕೆ ಶೆಟ್ಟಿ, ಪ್ರಧಾನ ಕಾರ್ಯದರ್ಶಿ, ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿ, ಇವರು ತಿಳಿಸುತ್ತಾರೆ

ಕಾರ್ಯಕಾರಿ ಮಂಡಲದ ಸಭೆ

ಇದೇ ಕಳೆದ ತಾ 27ನೇ ಆದಿತ್ಯವಾರ ಅಪರಾಹ್ನ ಘಂಟೆ 4ಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲದ ಸಭೆ ಶ್ರೀ ಎಚ್ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರುಗಿ ಈ ಕೆಳಗಣ ನಿರ್ಣಯಗಳು ಮಂಜೂರಾದುವು

1 ಜಿಲ್ಲೆಯಲ್ಲಿ ಕಾಂಗ್ರೆಸ್ ಸದಸ್ಯರನ್ನು ಸೇರಿಸುವರೆ ಕಾರ್ಯದಲ್ಲಿ ನರವಾಗಿ ಮತ್ತು ಸರ್ಕಲ್ ಕಾಂಗ್ರೆಸ್ ಕಮಿಟಿಗಳು ವ್ಯವಸ್ಥಿತ ರೀತಿಯಿಂದ ಸಕಾಲದಲ್ಲಿ ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಕೆಲಸವನ್ನು ನಿರ್ವಹಿಸುವಂತೆ ಮೇಲ್ವಿಚಾರ ನೋಡುವರೆ ಶ್ರೀ ಕೆ ಕೆ ಪಿ ರಾಮು ಪೊತುವಾಳರನ್ನು ನೇಮಿಸಲಾಯಿತು

2. ಆಗೋಸ್ತು 15ನೇ ದಿನೋತ್ಸವವನ್ನು ಸಮಸ್ತ ಜನರ ಸಹಕಾರದಿಂದ ವಿಜೃಂಭಣೆಯಿಂದ ಜರುಗಿಸುವ ವ್ಯವಸ್ಥೆಮಾಡಲು ಯೋಗ್ಯ ಸಮಿತಿಯನ್ನು ಪ್ರಧಾನ ಕಾರ್ಯದರ್ಶಿಯವರು ಏರ್ಪಡಿಸಬೇಕಾಗಿ ನಿಶ್ಚಯಿಸಲಾಯಿತು

3. ಸಾರ್ವಜನಿಕ ಹಿತ ಸಂಬಂಧ ಸಮಿತಿ ಮತ್ತು ಹರಿಜನ ಸಮಿತಿಯು ಯಾವ ಯಾವ ಕಾರ್ಯ ಕೈಕೊಳ್ಳಬೇಕೆಂಬುದನ್ನು ನಿಶ್ಚೈಸಲಾಯಿತು

ನೇಮಕ: ಸ್ಥಳೀಯ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾದ ಶ್ರೀ ಬಿ ಗಣಪತಿಯವರು ಕೆಲಸದಿಂದ ನಿವೃತ್ತರಾಗುವುದರಿಂದ ಸೇಲಮಿನ ಶ್ರೀ ಎಸ್ ಶಂಕರಂರವರು ಟ್ಯಾಕ್ಸ್ ಆಫೀಸರರಾಗಿ ನೇಮಿಸಲ್ಪಟ್ಟಿರುತ್ತಾರೆ

ಭಗಿನೀ ಸಮಾಜದ ವರ್ಷಂತಿಯು ಇದೇ ತಾ 27ರಂದು, ಸ್ಥಳೀಯ ಬಿಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಕಲೆಕ್ಟರರ ಪತ್ನಿ ಮಿಸೆಸ್ ಸೋಂಡರ್ಸರ ಅಧ್ಯಕ್ಷತೆಯಲ್ಲಿ ಜರುಗುವುದು

ಭರತನಾಟ್ಯ: ತಾ 25ರಂದು ಸಂಜೆ ಬಿಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ತಿರುವಾಂಕೂರಿನ ಕೆ. ವಿ ಭಾಸ್ಕರನ್ ಅವರಿಂದ ನೃತ್ಯ ಪ್ರದರ್ಶನವು ನಡೆಯಿತು

ಬಸವನ ಗುಡಿಯ ಬಳಿ ಹೊಸ ಸಬ್ ಪೋಸ್ಟಾಫೀಸನ್ನು ತೆರೆಯಲಾಗಿದೆ

ಉಪಾಧ್ಯಾಯರ ಮುಷ್ಕರ: ಕಾಸರಗೋಡು ತಾಲೂಕು ಪ್ರಾಥಮಿಕ ಶಾಲೋಪಧ್ಯಾಯರ ಯೂನಿಯನ್ ಸವರ ಸಮಿತಿಯ ಸಭೆಯೊಂದು ತಾ 20ರಂದು ಕಾಸರಗೋಡಿನಲ್ಲಿ ಜರಗಿ ಸೌತ್ ಇಂಡಿಯನ್ ಟೀಚರ್ಸ್ ಯೂನಿಯನಿಂದ ಈ ವರೆಗೆ ಯಾವ ವಿವರವೂ ಸಿಕ್ಕದ ನಿಮಿತ್ತ ಉಪಾಧ್ಯಾಯರ ಮುಷ್ಕರ ನಿಶ್ಚಿತ ಸಮಯಕ್ಕೆ ಮುಂದರಿಸಿಡುವ ತೀರ್ಮಾನ ಮಾಡಲಾಯಿತು ಮತ್ತು ಮುಷ್ಕರದ ಕುರಿತು ದ ಕ ಜಿ ಬೋರ್ಡು ಸ್ಪೆಶಲ್ ಆಫೀಸರರು ಕಳಿಸಿದ ಸರ್ಕಿಲಾರಿಗೆ ಪ್ರತಿಷೇಧ ಸೂಚಿಸಲಾಯಿತು ಮಧುರೆ ಉಪಾಧ್ಯಾಯರ ಮುಷ್ಕರಕ್ಕೆ ಸಹಾನುಭೂತಿ ತೋರ್ಪಡಿಸಿತು

ಕನ್ನಡ ಕಲಿಸುವ ಪಂಡಿತರ ತರಬೇತಿ ವರ್ಗ ಒಂದು ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ತೆರೆಯಲ್ಪಡುವುದೆಂದು ಪ್ರಕಟವಾಗಿದೆ

ದಕ್ಷಿಣ ಕನ್ನಡ ವಾಣಿಜ್ಯ ನೌಕರರ ಸಂಘ, ಮಂಗಳೂರು

ಸಂಘದ ಕಚೇರಿಯನ್ನು ಬೆಳಿಗ್ಯೆ 9ರಿಂದ 2 ಗಂಟೆ ವರೆಗೆ ತೆರೆದಿಡಬೇಕಾಗಿಯೂ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕುವ ದಿನ ಎಲ್ಲಾ ನೌಕರರೂ ಅದರಲ್ಲಿ ಭಾಗವಹಿಸುವಂತೆ ತಾ 15 8-47ಕ್ಕೆ ರಜೆ ಕೊಡಬೇಕೆಂದೂ, ಅಲ್ಲದ ಆ ದಿನಸ ಎಲ್ಲಾ ಒಡನೌಕರರು ತಮ್ಮ ಸಾಲಿದಿಂದಲೂ ಸ್ವತಂತ್ರ ಹೊಂದುವಂತೆ 3 ತಿಂಗಳ ಸ್ವತಂತ್ರ ಬೋನಸ್ ಕೊಡಬೇಕಾಗಿಯೂ ದ ಕ ವಾಣಿಜ್ಯ ಸಂಘದವರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನಿಸಿತು.

ಈ ಕೆಳಗಣ ಠರಾವುಗಳು ಸರ್ವಾನುಮತದಿಂದ ಪಾಸಾದವು-1 ಮದ್ರಾಸ್ ಪ್ರಾಂತ್ಯದ ಎಲ್ಲಾ ರಾಜಕೀಯ ಕೈದಿಗಳನ್ನೂ ಸ್ವಾತಂತ್ರ್ಯ ಸಮಾರಂಭದಲ್ಲಿ ಭಾಗವಹಿಸುವಂತೆ ಬಿಡಬೇಕಾಗಿಯೂ 2 ಟ್ರೈಬ್ಯೂನಲ ಲೇಬರ ವಿಚಾರಣಾ ಸಮಿತಿಯವರು ಕಾರಕೂನರಿಗೆ ರೂ 30 ಸಂಬಳವೆಂದು ತೀರ್ಮಾನಿಸಿದ್ದನ್ನು ಖಂಡಿಸ್ತಿಯೂ, 3 ಅವರಿಗೆ ಕೇಂದ್ರ ಸರ್ಕಾರದವರು ತಮ್ಮ ಕಾರಕೂನರಿಗೆ ಕೊಡುವ ಸಂಬಳವೇ ಸಿಗಬೇಕೆಂದೂ ಕೇಳುವ 4. ಪ್ರಾಂತ್ಯದ ಎಲ್ಲಾ ವಾಣಿಜ್ಯ ನೌಕರರ ಸ್ಥಿತಿಗತಿಗಳನ್ನು ಪರಿಶೀಲಿಸುವರೆ ಸರಕಾರದವರು ಕೂಡಲೇ ಬಂದು ವಿಚಾರಣಾ ಸಮಿತಿಯನ್ನು ನಿರ್ಣಯಿಸಬೇಕೆಂದು ಕೇಳಿಕೊಳ್ಳುವ 5 ಜಿಲ್ಲೆಯ 3 ಜನ ಪ್ರಮುಖ ರಖಂ ವ್ಯಾಪಾರಸ್ಥ ಮತ್ತು ಕೆಲವು ಚಿಲ್ಲರೆ ವ್ಯಾಪಾರಸ್ಥರ ಮಿಲ್ಲು ಬಟ್ಟೆ ವ್ಯಾಪಾರ ಲೈಸನ್ಸು ರದ್ದಾಗಿದ್ದರಿಂದ ಅವರಲ್ಲಿರುವ ನೌಕರರಿಗೆ ಇನ್ನೂ ಆ ವ್ಯಾಪಾರವನ್ನು ಕೈಕೊಳ್ಳುವವರು ಕೆಲಸ ಕೊಡಬೇಕೆಂದು ಜಿಲ್ಲಾಧಿಕಾರಿಗಳನ್ನು ಕೇಳಿಕೊಳ್ಳುವ ಠರಾವುಗಳು ಪಾಸಾದವು

ಶಿಕ್ಷೆ ಮತ್ತು ಜುಲ್ಮಾನೆ: ಶ್ರೀ ವೇಣೂರ ಮಠದ ಮಾಜಿ ಜನರಲ್ ಏಜಂಟರಾಗಿದ್ದ ಶ್ರೀ ಮಿಯ್ಯಾರು ನರಸಿಂಹಾಚಾರ್ಯರಿಗೆ 409 ಸೆಕ್ಷನ್, ಇಂಡಿಯನ್ ಪೆನಲ್ ಕೋಡ್ ಇದರನ್ವಯ 5 ವರ್ಷ ಕಠಿಣ ಶಿಕ್ಷೆ ಮತ್ತು 500 ರೂಪಾಯಿ ಜುಲ್ಮಾನೆ, ಶ್ರೀಗಳಾದ ಗುರುರಾಜ ಉಡುಪ, ಬೈಕಾಡಿ ಶ್ರೀನಿವಾಸ ರಾವ್ ಮತ್ತು ಎಸ್ ವಿ ತೊಳ್ಪಡಿತ್ತಾಯ ಇವರೆಲ್ಲರಿಗೆ ಒಂದೊಂದು ವರ್ಷ ಸಶ್ರಮ ಶಿಕ್ಷೆ ಮತ್ತು 100 ರೂಪಾಯಿ ದಂಡನೆಯನ್ನು ಕುಂದಾಪುರ ಸಬ್ ಡಿವಿಜನಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಿಂದ ವಿಧಿಸಲಾಯಿತು

ಕಾರ್ಕಳ ದುಃಖವಾರ್ತೆ: ಹಲವು ವರ್ಷಗಳಿಂದ ಸ್ಥಳೀಯ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಜಿಲ್ಲೆಯ ಪ್ರಸಿದ್ಧ ಶಿಕ್ಷಣ ತಜ್ಞ ಶ್ರೀ ಕೆ ಶ್ರೀನಿವಾಸ ಕಿಣಿ ಬಿ ಎ., ಎಲ್ ಟಿ, ಅವರು 2 ವರ್ಷಗಳಿಂದ ಬೇನೆಯಿಂದ ನರಳುತ್ತಿದ್ದು ಕಳೆದ ತಾ 15ಕ್ಕೆ ಬೆಂಗಳೂರಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ

ಪ್ರೌಢ ವಿದ್ಯಾಲಯ: ಕುಂಬಳೆಯ ನಾರಾಯಣ ಮಂಗಲದ ಕಣ್ವಾಶ್ರಮದ ಆಶ್ರಯದಲ್ಲಿ ವಿಜಯ ಭಾರತೀಯ ರಚನಾತ್ಮಕ ಪ್ರೌಢ ವಿದ್ಯಾಲಯವು ಸ್ಥಾಪಿಸಲ್ಪಟ್ಟಿದೆ ಎಸ್ ಎಸ್ ಎಲ್ ಸಿ ಹಾಗು ಕೆಳ ತರಗತಿಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರ ಬಗ್ಗೆ ಒಂದೆರಡು ವರ್ಷಗಳ ತರಬೇತಿಯಿಂದ ಎಸ್ ಎಸ್ ಎಲ್ ಸಿ ಅಥವಾ ಇಂಟರ್ ಮಿಡಿಯೇಟ್ ಕಲಾ ಪ್ರವೇಶಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬಹುದು ಶಾಂತಿನಿಕೇತನ ಮೊದಲಾದ ಸಂಸ್ಥೆಗಳಂತೆ ಈ ಸಂಸ್ಥೆಯು ಕಾರ್ಯರಂಗಕ್ಕಿಳಿದಿರುವುದು ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಪ್ರತ್ಯೇಕ ವಸತಿ ಭೋಜನ ವ್ಯವಸ್ಥೆ ಮಾಡಿಸುವ ಯೋಜನೆಯಾಗಿದೆ ಹಿಂದಿ ಮಾಧ್ಯಮಿಕ ತೇರ್ಗಡೆ ಹೊಂದಿದವರೂ, S, S L C ಫೈಲ್ ಆದವರೂ ಮುಂದೆ ಹಿಂದೀ ಉಪಾಧ್ಯಾಯರಾಗುವರೆ ಈ ಸಂಸ್ಥೆಗೆ ಸೇರಬಹುದು.

ಪುತ್ತೂರು: ಕಳೆದ ವಾರ ಜಿಲ್ಲಾ ಕಲೆಕ್ಟರರು ಇಲ್ಲಿ ಜರಗಿದ ಅಡಿಕೆ ತೋಟಗಾರರ ವ, ಜಮೀನ್ದಾರರುಗಳ ಸಮ್ಮೇಲನದ ಸಭೆಯಲ್ಲಿ ಭಾಗವಹಿಸಿ ಜಿಲ್ಲೆಯ ಆಹಾರ ತುಟ್ಟಿ ವಿಚಾರದಲ್ಲಿ ಎಲ್ಲರೂ ಸಹಕರಿಸಿ ಹಂಚಿ ಉಂಡು ಕ್ಷಾಮ ಬಾರದಂತೆ ಸಹಾಯಮಾಡಬೇಕಾಗಿ ಕೇಳಿಕೊಂಡರೆಂದೂ, ವರ್ಗದಾರರ ಕೆಲವೊಂದು ನಿವೇದನೆಗಳಿಗೆ ಸಮಾಧಾನಕರವಾದ ಹಿತವಚನ ಹೇಳಿದರೆಂದೂ ಗೊತ್ತಾಗಿದೆ

ವಿಚಿತ್ರ ಮರಣ: ಪುತ್ತೂರು ಸಮೀಪ ಬಾಲವನ ಹತ್ತಿರ ಕೆಲವು ದಿವಸದ ಮೊದಲು ಒಬ್ಬ ಹುಡುಗನು ಒಣಹಾಕಿರುವ ವಸ್ತ್ರದ ತುದಿಯನ್ನು ಕುತ್ತಿಗೆಗೆ ಬಿಗಿದು ಆಟವಾಡುತ್ತಿರುವಾಗ್ಗೆ ತಿರುಗಿಕೊಂಡು ಕಾಲು ಕೆಳಗೆ ನೀಡುವಾಗ್ಗೆ ಇಟ್ಟ ಸ್ಟೂಲು ತಪ್ಪಿ ನೇತಾಡಿದಂತಾಗಿ ಕುತ್ತಿಗೆ ಬಿಗಿ ಹಿಡಿಯಲ್ಪಟ್ಟು ಕೂಡಲೇ ಮೃತ ಪಟ್ಟನೆಂದೂ, ಈ ವಿಚಾರದಲ್ಲಿ ಪೋಲೀಸರಿಗೆ ವರದಿಯಾಗಿ ತನಿಖೆ ನಡೆಸಲಾಗಿತ್ತೆಂದೂ ಗೊತ್ತಾಗಿದೆ.

ನಾಗರೀಕ ವ್ಯವಹಾರ

ಆಹಾರ ಪರಿಸ್ಥಿತಿ

ಈಗ ಹಂಚಲ್ಪಡುವ ಅಕ್ಕಿಯು ಹೆಚ್ಚಾಗಿ ಬೆಳ್ತಿಗೆಯಾಗಿರುವುದರಿಂದ ನಮ್ಮ ಜಿಲ್ಲೆಯ ಉತ್ಪತ್ತಿಯಲ್ಲಿ ಮುಗಿದಿದೆಯೆಂದು ಭಾವಿಸಬಹುದು. ಇಲ್ಲಿನ ಹೆಚ್ಚಿಗ ಜನತೆ ಕುಚಲಕ್ಕಿಯ ಅಭ್ಯಾಸಿಗಳು ಹೊರಗಿನ ಬೆಳ್ತಿಗೆ ಅಕ್ಕಿಯು ರುಚಿಯು ವ್ಯತ್ಯಾಸವುಳ್ಳದ್ದು ಮಾತ್ರವಲ್ಲ ನಿಕೃಷ್ಟ ತರದ್ದೂ ಆಗಿರುತ್ತವೆ ಅದರಲ್ಲಿನ ಹೆಚ್ಚಿನಂಶ ಪುಡಿಯಾದದ್ದೇ ಆಗಿರುತ್ತವೆ. ಇದರಿಂದ ನಮ್ಮವರಿಗೆ ಇವು ಸ್ವಾದಿ ಸಂಕಷ್ಟ. ಬೆಳ್ತಿಗೆಯು ಕುಚಲಕ್ಕಿಯಷ್ಟು ಪೌಷ್ಟಿಕವೂ ಅಲ್ಲ ಇಂತಹ ಪರಿಸ್ಥಿತಿಯಲ್ಲಿ ಸರಕಾರವು ಗೋದಿಯನ್ನಾದರೂ ಸರಬರಾಯಿಮಾಡಲು ಯತ್ನಿಸುವುದೋ ಏನೋ ಜಿಲ್ಲೆಯ ಕೆಲವು ಕಡೆಗಳಲ್ಲಿ ಕೊಡಲ್ಪಡುವ ಗೋದಿಯು ಆಹಾರಕ್ಕೆ ಬಳಸಲು ನಿಷ್ಪ್ರಯೋಜಕವಾದುದೆಂದು ವರದಿಗಳು ಪ್ರಕಟವಾಗಿವೆ ಆಹಾರದ ವಸ್ತುಗಳ ಪ್ರಮಾಣವು ಕನಿಷ್ಟ ಮಟ್ಟಕ್ಕೆ ತರಲ್ಪಟ್ಟಾಗ ಅದರ ಬದಲಿಗೆ ಸರಬರಾಯಿ ಮಾಡಲ್ಪಡುವ ದವಸಧಾನ್ಯಗಳು ಉತ್ತಮ ತರದಾಗಿರುವಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯವಾಗಿರುತ್ತದೆ ಆರೋಗ್ಯ ನಿಯಮಗಳ ಕುರಿತು ಅನಜ್ಞವಾಗಿರುವ ಜನತೆ ಹೆಚ್ಚಾಗಿರುವ ನಮ್ಮ ದೇಶದಲ್ಲಿ ಅನಾರೋಗ್ಯಕರ ವಸ್ತುಗಳನ್ನು ಬಳಸಲು ಸಂದರ್ಭಗಳನ್ನು ಕೊಡುವುದು ಅತ್ಯಂತ ಹಾನಿಕಾರಕವಾದುದು ಈಗಾಗಲೇ ಬರ್ಮಾ ಬೀನ್ಸುಗಳನ್ನುಪಯೋಗಿಸಿ ಸಂಭವಿಸಿದ ದುರಂತಮಯ ಘಟನಗಳು ಸರಕಾರದ ಗಮನಕ್ಕೆ ಬಂದಿಲ್ಲವೆಂತಿಲ್ಲ ಇದೇ ಪ್ರಕಾರ ಇನ್ನು ಮುಂದೆ ಸರಬರಾಯಿ ಮಾಡಲ್ಪಡುವ ಬಟಾಟೆಯಾದರೂ ಉತ್ತಮ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕಾದುದೂ ಅತ್ಯಾವಶ್ಯಕ ಈಗ ಕೊಡಲ್ಪಡುವ ಬೇರು ಗೆಣಸಿನ ಹುಡಿಯಾದರೂ (ಟಿಪಿಯೊಕಾ) ಹೆಚ್ಚು ಉಪಯೋಗಿಸಿದಲ್ಲಿ ಪಚನಕಾರ್ಯಕ್ಕೆ ತುಂಬಾ ತೊಡಕನ್ನುಂಟುಮಾಡುತ್ತದೆಂಬ ಅಂಜಿಕೆ ಜನತೆಯಲ್ಲಿದೆ ಈ ಸಂದರ್ಭದಲ್ಲಿ ಜನರು ರಾಗಿಯನ್ನು ಹೆಚ್ಚು ಬಳಸಲು ಪ್ರಯತ್ನ ಮಾಡಬೇಕು ಈಗ ಆಹಾರ ಕೊರತೆಯ ದುರ್ದೆಶೆಯು ನಮ್ಮೆದುರು ನೇರವಾಗಿ ನಿಂತಿರುವುದರಿಂದ ತಾಳ್ಮೆ ಕೆಡದೆ ನಾವು ವರ್ತಿಸಬೇಕಾದ ದೂ ಕರ್ತವ್ಯವೇ ಈಗ ಸರಕಾರವನ್ನು ದೂರುವುದರಲ್ಲಿ ಮಗ್ನರಾಗುವುದಕ್ಕಿಂತ ಒಂದು ಸಲಕ್ಕೆ ಈ ಕಷ್ಟಕಾಲವನ್ನು ದೂಡುವರೆ ಅದಷ್ಟು ವಿಧಾನಗಳಲ್ಲಿ ಸರಕಾರದೊಡನೆ ಸಹಕರಿಸುವುದು ಯುಕ್ತವಾದುದು ಮತ್ತೆ ಮುಂದೆ ಇಂತಹ ಸಂಕಷ್ಟ ಪ್ರಾಪ್ತಿಯಾಗದಂತೆ ಸರಕಾರವಾದರೂ ಈಗಿನಿಂದಲೇ ಯೋಗ್ಯ ಜಾಗರೂಕತೆ ಮುಂದಾಲೋಚನೆಯಿಂದ ಏರ್ಪಾಡುಗಳನ್ನು ಮಾಡಿಕೊಳ್ಳಬೇಕೆಂದು ನಾವು ಪುನಃ ವೊಮ್ಮೆ ಕೇಳಿಕೊಳ್ಳಬಯಸುತ್ತೇವೆ ಜನತೆಗೆ ಸಾಕಷ್ಟು ಆಹಾರ ಧಾನ್ಯಗಳನ್ನೊದಗಿಸುವುದಕ್ಕಾಗಿ ಸರಕಾರವು ಹಿಂದಿನಂತೆ ಬಿಗುವಾದ ಧೋರಣೆಯನ್ನನುಸರಿಸಿದರೂ ಹೆಚ್ಚಿನ ಜನತೆ ಗೊಣಗುಟ್ಟಲಾರದೆಂದೂ ಭರವಸೆಯಿದೆ

ಸ್ವೀಕಾರ

ಭಾರತದಿಂದ ತೊಲಗಿರಿ: ಗಾಂಧೀಜಿ. ಸಂಪಾದಕರು ಶ್ರೀ ಆರ್ ಕೆ ಪ್ರಭು ಮತ್ತು ಯು ಆರ್ ರಾವ್ ಸಾಹಿತ್ಯ ಭಂಡಾರ, ಹುಬ್ಬಳ್ಳಿ ಬೆಲೆ ೧-೪-೦

ಸಂಸಾರ ಚಿತ್ರ: ಆನಂದಕಂದರು ಸಾಹಿತ್ಯ ಭಂಡಾರ ಹುಬ್ಬಳ್ಳಿ, ಬೆಲೆ ೨-೦-೦

ಭಾರತೀಯ ಘಟನಾ ಸಮಿತಿ: ಶ್ರೀ ನಾರಾಯಣ ಶರ್ಮ. ಸಾಹಿತ್ಯ ಭಂಡಾರ ಹುಬ್ಬಳ್ಳಿ ಬೆಲೆ ೧-೦-೦

ಸಾಮ್ಯದಿಂದಲೇ ಏಕೆ? ಜಯಪ್ರಕಾಶ ನಾರಾಯಣ ಕನ್ನಡಿಸಿದವರು ಶ್ರೀ ಮುಳಿಯ ಗೋವರ್ಧನರಾಯರು ಸಾಹಿತ್ಯ ಭಂಡಾರ, ಹುಬ್ಬಳ್ಳಿ ಬೆಲೆ ೦-೧೦-೦.

ಜಗತ್ತನ್ನೇ ಬೆರಗುಗೊಳಿಸುವ ವ್ಯಕ್ತಿಗಳು

ಗಾಂಧಿ ಮತ್ತು ಲೆನಿನರ ಅಗಾಧ ವ್ಯಕ್ತಿತ್ವ

ಬ್ರಿಟಿಷ್ ದುರೀಣರು ಮಹಾತ್ಮರನ್ನು ಕಂಡಾಗ

"ಗಾಂಧಿ ಮತ್ತು ಲೆನಿನರೊಳಗೆ ತುಂಬಾ ವ್ಯತ್ಯಾಸವಿರುವುದಾದರೂ ಅವರಿಬ್ಬರು ಇಪ್ಪನೇ ಶತಮಾನದ ಜಗತ್ತಿನಲ್ಲಿ ಅಸಾಧಾರಣ ಪ್ರತಿಭೆಯ ವ್ಯಕ್ತಿಗಳಾಗಿರುವರೆನ್ನಬಹುದು" ಹೀಗೆಂದು ಪಾರ್ಲಿಮೆಂಟ್ ಸದಸ್ಯರಾದ ಮಿ। ರೆಜಿನಾಲ್ಡ್ ಸೊರೆನ್ಸನ್ನರು ಒಂದು ಲೇಖನದಲ್ಲಿ ತಮ್ಮ ಮತ್ತು ಗಾಂಧೀಜಿಯ ಸಂದರ್ಶನ ವಿವರವನ್ನು ವರ್ಣಿಸಿದ್ದಾರೆ. ಅವರು ಹೀಗೆ ಬರೆದಿರುವರು

"ಮೋಹನ ದಾಸ್ ಕರಮ ಚಂದ್ ಗಾಂಧಿಯವರು ಲೆನಿನರಿಗಿಂತ ಹೆಚ್ಚು ವಿಶೇಷತೆಯವರು" ಪಾರ್ಲಿಮೆಂಟಿನ ಶಿಷ್ಟಮಂಡಳವು ಭಾರತಕ್ಕೆ ಹೋದಾಗ ಅದರಲ್ಲಿ ಮಿ। ಸೊರೆನ್ಸನ್ನರೂ ಒಬ್ಬರಾಗಿದ್ದರು ನಾವೆರಡು ಸಲ ಗಾಂಧಿಯನ್ನು ಕಂಡೆವು ಆಗ ಅವರು ಮದ್ರಾಸಿನಲ್ಲಿದ್ದರು ಅವರಿರುವ ಭವನದೆದುರು ಸಂದರ್ಶನಾರ್ಥಿಗಳು ಯಾವಾಗಲೂ ಕಿಕ್ಕಿರಿದು ನೆರೆಯುತಿದ್ದರು ಅವರ ಪ್ರಾರ್ಥನೆಗಂತೂ ಸಾವಿರಗಟ್ಟೆಯಲ್ಲಿ ಜನರು ಸೇರುತ್ತಾರೆ

"ಮಹಾತ್ಮಾರೊಡನೆ ನಾವು ಅರ್ಧ ಚಂದ್ರಾಕಾರವಾಗಿ ಕುಳಿತೆವು-ಅವರು ಒಂದು ಬಿಳಿ ಹಾಸಿಗೆಯ ಮೇಲೆ ಕುಳಿತಿದ್ದರು ಅವರು ತೀಕ್ಷ್ಣಮತಿಗಳೂ ವಿನೋದ ಪರರೂ ಆಗಿರುವರು ಕ್ಷಣದಲ್ಲಿ. ಗಂಭೀರತೆಯನ್ನು ತಾಳುತಿದ್ದರು ಅವರ ಮನಸ್ಸು ಅವರು ಚರ್ಚಿಸುವ ವಿಷಯದ ಸುತ್ತಲೂ ಭದ್ರವಾಗಿಯೂ ನಿರ್ಧಾರ ಯುಕ್ತವಾಗಿಯೂ ಕೆಲಸ ಗೈಯುವಂತೆ ನಮಗೆ ಸ್ಪಷ್ಟ ಭಾಸವಾಗುತ್ತದೆ"

"ಕೆಲವು ಸಲ ಅದರ ಹೇಳಿಕೆಗಳು ಪರಸ್ಪರ ವಿರೋಧ ಅಭಿಪ್ರಾಯದವುಗಳಾಗಿಯೂ ತರ್ಕ ರಹಿತವೆಂದಾಗಿಯೂ ಅಭಿಪ್ರಾಯವಾಗುತ್ತದೆ ತಮ್ಮ ತಪ್ಪನ್ನು ತಿದ್ದಬೇಕೆಂದೂ ಅವರು ಕೇಳಿಕೊಳ್ಳುತ್ತಾರೆ ಅವರ ನುಡಿ ಮತ್ತು ನಡೆಗಳಲ್ಲಿಯೂ ಹಲವು ಸಲ ವಿರೋಧಾಭಾಸಗಳು ತೋರುತ್ತವೆ ಆದರೆ ನಡೆ ನುಡಿಗಳೆಲ್ಲವನ್ನು ತಮ್ಮ ಆತ್ಮಶಕ್ತಿಯಲ್ಲಿ ಸಂಯೋಜಿಸಿಕೊಳ್ಳುವ ಆಳ ವಿಶ್ವಾಸವೂ ಅವರಲ್ಲಿದೆ ಸಮಸ್ಯೆಗಳನ್ನು ನೈತಿಕ ಮತ್ತು ಮತೀಯ ಶಾಸ್ತ್ರ ಸೂತ್ರಗಳಿಗನುಸಾರವಾಗಿ ವಿವರಿಸುವ ಅವರ ವಿಧಾನ ರಾಜಕೀಯ ಮುತ್ಸದ್ದಿಗಳಿಗೆ ಹಲವು ಸಲ ಅರ್ಥವಾಗುವುದಿಲ್ಲ"

"ದ್ವೇಷಾ ಸೂಯೆಗಳಿಂದಲೇ ಕಾರ್ಯ ಸಾಧಿಸುವವರಿಗೆ ಅವರ ತತ್ವಗಳು ರುಚಿಸಲಾರವು ಅವರ ನಿಷ್ಕಪಟ ಮನೋದ್ವಾರದಿಂದ ಹೊರಟ "ಭಾರತ ಬಿಟ್ಟು ತೊಲಗಿರಿ" ಘೋಷದ (ಕ್ವಿಟ್ ಇಂಡಿಯಾ) ಅರ್ಥ ವಿವರಣೆಯ ನಿದರ್ಶನ ನೋಡಿರಿ"

'ಈ ಯೋಜನೆಯಲ್ಲಿ ಪರಕೀಯರ ವೈಷಮ್ಯವಿಲ್ಲ. ಅವನನ್ನು ಹೆದರಿದರೆ ಮಾತ್ರ ವೈಷಮ್ಯವುಂಟಾಗುವುದು ಹೆದರಿಕೆ ಇಲ್ಲದಿದ್ದರೆ ವೈಷಮ್ಯವಿಲ್ಲ"

"ಇದರಲ್ಲಿ ಎರಡಾರ್ಥವಿಲ್ಲ ತಮ್ಮದೇಶಬಾಂಧವರಿಗೆ ವೈಷಮ್ಯ ರಹಿತವಾದ ಸತ್ಯ ಅಹಿಂಸೆಯನ್ನಾಚರಿಸಿರಿ ಎನ್ನುವಾಗ ಅವರು ಶುದ್ಧ ತಾತ್ವಿಕ ರೀತಿಯಲ್ಲೇ ನುಡಿಯುತ್ತಾರೆ."

"ಬ್ರಿಟಿಷರು ಕಣ್ಣಿಗೆ ಗಾಂಧಿಯವರು ಒಂದು ಚಿತ್ರ ರಹಸ್ಯದ ವ್ಯಕ್ತಿಯಾಗಿ ತೋರಬಹುದು. ಅವರ ತತ್ವಗಳು ಹುಚ್ಚಿನವೆಂದು ತೋರಬಹುದು. ಆದರೆ ಮಿಲಿಯಾವಧಿ ಭಾರತೀಯರ ಹೃದಯದಲ್ಲಿ ಅವರು ತಮ್ಮ ದುರ್ದೆಶೆಯ ವಿಮೋಚನೆ ಮಾಡುವ ಸಂಕೇತಿಕ ವ್ಯಕ್ತಿಗಳಾಗಿರುವರೆಂಬುದು ನಿಸ್ಸಂದೇಹದ ಮಾತು. ಜನತೆಗೆ ಅವರು ಕೇವಲ ಒಬ್ಬ ರಾಜಕೀಯ ನಾಯಕರು ಮಾತ್ರವಲ್ಲ ಪೂಜನೀಯರಾದ ಮಹಾತ್ಮರೂ ಆಗಿರುವರು ಅವರ ತತ್ವಗಳ ಕಠಿಣತೆ ಆದೆಷ್ಟಿದ್ದರೂ ಜನತೋದ್ಧಾರದ ಅವರ ಶ್ರದ್ಧೆ ನಿರ್ಧಾರಗಳು ಅಖಂಡವಾದವುಗಳು ಅದೆಂತಹ ಸಂಕಷ್ಟಮಯ ಕಾಲದಲ್ಲೂ ಅವರು ತಮ್ಮ ಮಾನಸೀಕ ಧೃಡತೆಯಿಂದ ಕದಲುವವರಲ್ಲ.

"ಅವರು ಆಡಂಬರಕ್ಕಾಗಿ ತಮ್ಮ ನಿವಾಸದ ಸುತ್ತಲೂ ಸ್ವಯಂ ಸೇವಕರನ್ನಿಟ್ಟುಕೊಳ್ಳುವರೆಂದು ಕೆಲವರು ಅವರ ಮೇಲೆ ಆರೋಪ ಹೊರಿಸುತ್ತಾರೆ ಅವರಂಥ ವಿಶಾಲ ಚಟುವಟಿಕೆಯ ವ್ಯಕ್ತಿಗಳ ವ್ಯವಹಾರವು ಸುಗಮವಾಗಿ ಸಾಗಬೇಕಾದರೆ ಸ್ವಲ್ಪವಾದರೂ ಇಂತಹ ಏರ್ಪಾಡು ಅತ್ಯಾವಶ್ಯಕವೆಂಬುದನ್ನು ಮರೆಯಬಾರದು

ವಿದೇಶ ರಾಜಕೀಯ

ಪೋರ್ತುಗಲದ ಸರ್ವಾಧಿಕಾರಿ ಸಲಜಾರರು ಭಾರತದಲ್ಲಿರುವ ತಮ್ಮ ವಸಾಹತುಗಳನ್ನು ಬಿಟ್ಟುಕೊಡಲಾಗುವುದಿಲ್ಲವೆಂಬರ್ಥದಲ್ಲಿ ನಮ್ಮ ಧೋರಣೆಯನ್ನು ಸ್ಪಷ್ಟಪಡಿಸಿರುವರು.

ಇಂಡೋನೇಸ್ಯದ ಬಿಕ್ಕಟ್ಟನ್ನು ಬಿಡಿಸುವ ಉಪಾಯಗಳನ್ನು ಆಸ್ಟ್ರೇಲಿಯರ ಸರಕಾರವು ಹುಡುಕುತಿದ್ದು ಈ ಬಗ್ಗೆ ಅದು ಡಚ್ ಸರಕಾರದೊಂದಿಗೆ ಪತ್ರವ್ಯವಹಾರ ನಡೆಸಿದೆಂದು ತಿಳಿದುಬರುತ್ತದೆ

ಡಚ್ಚರ ಧೋರಣೆಯು ಸಂಯುಕ್ತ ರಾಷ್ಟ್ರ ಮಂಡಳದ ವಿಶ್ವ ಪ್ರಗತಿಯ ಧೋರಣೆಗೆ ವಿಘಾತುಕವಾದುದೆಂದು. ಪಂಡಿತ್ ನೆಹರುಗಳು ತಿಳಿಸಿದ್ದಾರೆ

ಚೇಂಗ್ ಕೆ ಶೇಕರ ಸರಕಾರವು ಇನ್ನು ಮುಂದೆ ಅಲ್ಲಿನ ಕಮ್ಯುನಿಸ್ಟರೊಡನೆ ಯಾವ ಮಾತುಕತೆಗಳನ್ನು ನಡೆಸುವುದಿಲ್ಲವೆಂದೂ, ಕಮ್ಯುನಿಸ್ಟರನ್ನು ಹತ್ತಿಕ್ಕಲು ಸರ್ವಪ್ರಯತ್ನ ನಡೆಸುವುದಾಗಿ ಪುನಃ ಒಮ್ಮೆ ನಿರ್ಧರಿಸಿರುವುದಾಗಿ ವರದಿ ಬಂದಿದೆ.

ವಾರದ ವಿಜ್ಞಾನ ವಾರ್ತೆಗಳು

ಹೊಸ ಬಾಚಣಿಕೆ

ಕೂದಲು ಬಾಚಲೂ, ಅವನ್ನು ಗುಂಗುರವಾಗಿ ಮಾಡಲೂ ಮತ್ತು ತಲೆ ಚರ್ಮವನ್ನು ಆರೋಗ್ಯವಾಗಿ ತಿಕ್ಕಲೂ ಸಾಧ್ಯವಾಗುವ ಹೊಸ ಬಾಚಣಿಕೆಯೊಂದನ್ನು ತಯಾರಿಸಲಾಗಿದೆ

ಇದರ ಆಕೃತಿಯು ಸಾಮಾನ್ಯ ಬಾಚಣಿಕೆಯಂತಿಲ್ಲ ಇದರ ಹಲ್ಲುಗಳು ಚೂಪಾಗಿರುವ ಬದಲು ಉರುಟಾಗಿದ್ದು ತಿರುಗುವ ಲೋಹ ಗುಳಿಗೆಗಳಿಂದ ಜೋಡಿಸಲ್ಪಟ್ಟಿವೆ ಇದನ್ನು ತಲೆಗೆ ಒತ್ತಿ ಅಲ್ಲಿನ ಚರ್ಮವನ್ನು ಚೆನ್ನಾಗಿ ತಿಕ್ಕಬಹುದು ಹಲ್ಲುಗಳು ಸುತ್ತಲೂ ತಿರುಗುತ್ತವೆ ಹೀಗಿರುವುದರಿಂದ ಕೂದಲು ಮಧ್ಯದಿಂದೆಳೆಯುವಾಗ ಅವು ಕೂದಲ ರಾಶಿಗೆ ಹೊಳಪನ್ನು ಕೊಡುತ್ತವೆ ಪ್ರತಿ ಹಲ್ಲನ್ನು ಪ್ರತಪ್ರತ್ಯೇಕ ತೆಗೆಯಬಹುದು ಒಂದು ಹಾಳಾದರೆ ಬೇರೆಯೊಂದನ್ನು ಜೋಡಿಸುವ ಏರ್ಪಾಡೂ ಇದೆ

ಮುಳುಗದ ದೋಣಿ

ಯಾವ ಪರಿಸ್ಥಿತಿಯಲ್ಲೂ ಮುಳುಗದ ಜೀವ ರಕ್ಷಣೆಯ ನಂವೆಗಳನ್ನು ಒಂದು ಬ್ರಿಟಿಷ್ ನೌಕಾಯಂತ್ರ ತಯಾರಿ ಸಂಸ್ಥೆಯವರು ಕಂಡುಹಿಡಿದಿದ್ದಾರೆ ನೋಡಲು ಇದು ಈಗ ಹಡಗಗಳಲ್ಲಿ ಉಪಯೋಗಿಸುವ 'ಲ್ಯಾಪ್ ಬೋಟು'ಗಳಂತೇ ಇದೆ, ಆದರೆ ಇದರಲ್ಲಿ ಕೆಲವೊಂದು ವಿಶೇಷ ರೀತಿಯ ಸಲಕರಣೆಗಳೂ ಉಪಕರಣಗಳೂ ಇರುವುದರಿಂದ ಕೂತವರಿಗೆ ಭದ್ರವಾದ ರಕ್ಷಣೆ ಸಿಗುವುದು ಒಳಕೂತವರಿಗೆ ಬೆಚ್ಚಗಿಂದ ಉಷ್ಣವೂ, ಸಾಕಷ್ಟು ಸಿಹಿ ನೀರೂ ಸಂಗ್ರಹಿಸಿಡಲಾಗುವುದು ಹಡಗದಿಂದ ಕೆಳಗಿಳಿಸುವಾಗ ಇದು ಕವಚಿ ಬಿದ್ದರೂ ಪುನಃ ತನ್ನಷ್ಟಕ್ಕೆ ಸರಿಯಾಗಿ ತೇಲುವುದು

ಕಿವುಡರಿಗೆ ರೇಡಿಯೊ

ಒಂದು ಕುಟುಂಬದಲ್ಲಿ ಎಲ್ಲರೂ ಸಾಮಾನ್ಯ ಶ್ರವಣ ಶಕ್ತಿಯದರಾಗಿದ್ದು ಯಾರಾದರೊಬ್ಬರು ಅರೆ ಕಿವುಡರಾದರೆ ಒಬ್ಬರಿಗೋಸ್ಕರ ರೇಡಿಯೊದ ಧ್ವನಿಯನ್ನು ದೊಡ್ಡ ಮಾಡಬೇಕಾಗುವುದು ಇದರಿಂದ ಇತರರಿಗೆ ಕರ್ಕಶವಾಗುವಷ್ಟು ಸದ್ದಾಗುವುದು ಒಬ್ಬ ಗೋಸ್ಕರ ಹೆಚ್ಚು ಮಂದಿ ಕಷ್ಟಪಡಬೇಕಾಗುವುದು ಈಗ ಕಿವುಡರಿಗಾಗಿ ಪ್ರತ್ಯೇಕ ಕೇಳುವ ಶ್ರವಣೋಪಕರಣಗಳಿರುವ ರೇಡಿಯೊಗಳನ್ನು ಒಂದು ಬ್ರಿಟಿಷ್ ಸಂಸ್ಥೆಯವರು ತಯಾರಿಸಿದ್ದಾರೆ ಕಿವುಡರಾದವರು ಇವುಗಳನ್ನು ಕಿವಿಗ ಇಟ್ಟುಕೊಳ್ಳುವುದರಿಂದ ಇತರರಿಗೆ ತೊಂದರೆಯಾಗದಂತೆ ಅವರು ಪ್ರತ್ಯೇಕವಾಗಿ ಕೇಳಬಹುದು. ರೇಡಿಯೊವು ಕೆಲಸ ಮಾಡದಿರುವಾಗ ಈ ಉಪಕರಣಗಳನ್ನು ಕಿವುಡರು ಸ್ವಂತ ಉಪಯೋಗಕ್ಕಿಟ್ಟುಕೊಳ್ಳಬಹುದು

ಸ್ವದೇಶ ವಾರ್ತೆ

ಪಂಜಾಬ ಸರಕಾರದವರು ಹಾಕಿದ ನಿರ್ಬಂಧಗಳನ್ನು ಮುರಿದು ಸುಮಾರು ೧೦ ಸಾವಿರ ಸಿಕ್ಕರು ನಾನಕಾನ ಸಾಹೀಬದಲ್ಲಿ ಸರ್ವಪಕ್ಷೀಯ ಸಿಕ್ ಪರಿಷತ್ತನ್ನು ಸರದಾರ್ ದಲೀಪ್‌ಸಿಂಗ್‌ರ ಅಧ್ಯಕ್ಷತೆಯಲ್ಲಿ ನೆರವೇರಿಸಿ ಸಿಕ್ಕರಿಗೆ ನ್ಯಾಯಸಮ್ಮತವಾದ ರೀತಿಯಲ್ಲಿ ಗಡಿ ನಿರ್ಣಯ ಸಮಿತಿಯವರು ನಿರ್ಣಯ ಕೊಡಬೇಕು, ಸಿಕ್ಕ ಪವಿತ್ರವಾದ ನಾನಕಾನ ಸಾಹೀಬವನ್ನು ಪೂರ್ವ ಪಂಜಾಬದಲ್ಲಿ ಸೇರಿಸಬೇಕೆಂಬ ಗೊತ್ತುವಳಿ ಸ್ವೀಕರಿಸಿದರು ಸೈನಿಕರು ನಾನಕಾನ ಸಾಹೀಬಕ್ಕೆ ಜನರು ಹೋಗದಂತೆ ಎಲ್ಲಾ ಮಾರ್ಗಗಳನ್ನು ಬಂದುಮಾಡಿ ಸಾವಿರಾರು ಸೈನಿಕರು ನಾನಕಾನ ಸಾಹೀಬದ ಸುತ್ತಲೂ ಕೋಟೆ ಗೋಡೆ ಕಟ್ಟಿದಂತೆ ನಿಂತಿದ್ದರು

★

ಆಗಸ್ಟ್ ೧೫ಕ್ಕೆ ಅಧಿಕಾರ ವರ್ಗಾಯಿಸಲ್ಪಟ್ಟರೂ ಸದ್ಯದ ಘಟನಾ ಸಮಿತಿ ಅಕ್ಟೋಬರ ಕೊನೆಯ ವರೆಗೆ ಕಾರ್ಯವಹಿಸುವ ಸಂಭವವಿಲ್ಲವೆಂದು ತಿಳಿದುಬರುತ್ತದೆ

★

ಸಿ ಧದ ಅಲ್ಪ ಸಂಖ್ಯಾಕರ ಸಂಘವು ಪಾಕಿಸ್ತಾನ ನಿಯೋಜಿತ ಗವರ್ನರಜನರಲರಾದ ಮಿ। ಜಿನ್ನರಿಗೆ ತಮ್ಮ ಬೇಡಿಕೆಗಳನ್ನೊಳಗೊಂಡ ಒಂದು ಮನವಿಯನ್ನು ಅವರು ಆಗಸ್ಟ್ ೩ಕ್ಕೆ ಕರಾಚಿಗೆ ಬಂದಾಗ ಸಲ್ಲಿಸಬೇಕೆಂದು ನಿರ್ಧರಿಸಿದೆ

★

ಬನಾರಸ ಪಟ್ಟಣದ ಸುತ್ತಲಿನ ಗಂಗಾ ನದಿಯ ಕೊಳ್ಳದಲ್ಲಿ ನೆರೆಯು ಇನ್ನೂ ಏರುವ ಸಂಭವವಿದೆಯೆಂದು ಆ ಪ್ರದೇಶದ ಜನರು ಭೀತಿಗೊಳಗಾಗಿರುವರು

★

ಬೆರಿಸ್ಟರ್ ಸಾನೆಯವರ ರಾಜಿನಾಮೆಯಿಂದ ತೆರವಾದ ಘಟನಾ ಸಮಿತಿಯ ಸ್ಥಳಕ್ಕೆ ಮುಂಬಯಿ ಶಾಸನ ಸಭೆಯು ಹರಿಜನ ಪ್ರತಿನಿಧಿಯನ್ನು ಆರಿಸಬೇಕೆಂದು ಹಿಂದುಳಿದ ವರ್ಗದ ಅಧಿಕಾರೇತರ ಸಮಿತಿಯ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿದೆ

★

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ನರೆ ಕೂದಲು ನಿಲ್ಲಿಸಿರಿ

ಬ್ಲೆಕಿನಾ: ಖಂಡಿತವಾಗಿ ನರೆಕೂದಲನ್ನು ಕಪ್ಪಾಗಿ ಪರಿವರ್ತಿಸಿ ನರೆತವನ್ನು ನಿಲ್ಲಿಸುವುದು ಇದಕ್ಕೆ ಮೆದುಳು, ಕಣ್ಣುಗಳನ್ನು ತಂಪು ಮಾಡುವ ಆರೋಗ್ಯದಾಯಕ ಶಕ್ತಿ ಇದೆ ನಮ್ಮ ಫಾರ್ಮಸಿಯ ಹೆಸರು ಬಾಟ್ಲಿಯ ಮೇಲಿಲ್ಲದಿದ್ದರೆ ಅದನ್ನು ತಿರಸ್ಕರಿಸಿರಿ ಕೆಲವೇ ನರೆತ ಕೂದಲುಗಳ ಬಾಟ್ಲಿಗೆ ರೂ 2 8—0 ಅದಕ್ಕಿಂತ ಹೆಚ್ಚಿದ್ದರೆ ರೂ. 3 8—0, ಸಂಪೂರ್ಣ ನರೆತದಕ್ಕೆ ರೂ. 5—0—0

ಕಾಮಕಲಾ: ಸಾಯಂಕಾಲ ಒಂದು ಮಾತ್ರೆ ಸೇವಿಸಿರಿ ಅದು ನಿಮಗೆ ಚಿರ ಆನಂದ ಕೊಟ್ಟು ನಿಮ್ಮ ಶಕ್ತಿ ಸಾಹಸ ಹೆಚ್ಚಿಸುತ್ತದೆ. ಒಂದು ಸಲ ಉಪಯೋಗಿಸಿದರೆ ನಿಮಗದರ ಅದ್ಭುತ ಸಾಮರ್ಥ್ಯ ಮರೆಯಲಾರಿರಿ ಇದು ನಿರ್ಬಲತೆ ಹೋಗಲಾಡಿಸುವುದು

16 ಮಾತ್ರೆಗಳಿಗೆ ರೂ 1

ಸತ್ಯದೇವ ಆಯುರ್ವೇದ ಭವನ.

No. 15 P O,

Katri sarai (Gaya).

ಕನ್ನಡ ಸಾಹಿತ್ಯ ಪರಿಷತ್ತು

ಗ್ರಂಥಕರ್ತರಿಗೆ ಸಂಭಾವನೆ

೧೯೪೫ರಲ್ಲಿ ಪ್ರಕಟವಾದ ಗ್ರಂಥಗಳನ್ನು ಪರಿಷತ್ತಿಗೆ ಗ್ರಂಥಕರ್ತರು ಸಂಭಾವನೆಗಾಗಿ ಕಳುಹಿಸಬೇಕಾಗಿದ್ದ ಅವಧಿಯ ಕಾಲಕ್ಕೆ ಅಂಚೆ ಮುಷ್ಕರ ನಡೆದುದರಿಂದ ಕೆಲವರಿಗೆ ಗ್ರಂಥಗಳನ್ನು ಕಳುಹಿಸಲು ಅನನುಕೂಲವಾಯಿತೆಂದು ಕಂಡುಬಂದಿದೆ. ಅಂಥ ಗ್ರಂಥಕರ್ತರ ಕೃತಿಗಳನ್ನು ೧೯೪೬ರ ಕೃತಿಗಳ ಜೊತೆಗೆ ಪರಿಶೀಲಿಸಿ ಬಹುಮಾನಿಸಬೇಕೆಂದು ಕಾರ್ಯಸಮಿತಿ ತೀರ್ಮಾನಿಸಿದೆ ಈ ಕಾರಣದಿಂದ ಸಂಭಾವನೆಗೆ ಗ್ರಂಥಗಳನ್ನು ಕಳುಹಿಸಬೇಕೆಂದು ಗೊತ್ತುಪಡಿಸಿದ್ದ ಅವಧಿಯನ್ನು ಜುಲೈ ೩೧ರಿಂದ ಆಗಸ್ಟ್ ೨೦ರ ವರೆಗೆ ಹೆಚ್ಚಿಸಿದೆ

ಗಮಕ ತರಗತಿ—೧೯೪೭

ಈ ವರ್ಷದ ಗಮಕ ತರಗತಿಗಳ ಅಭ್ಯಾಸ ಭಾಗವನ್ನು ಕೆಳಗೆ ಕೊಟ್ಟಿದೆ

ಪದ್ಯ ಭಾಗ

೧ ಕುಮಾರವ್ಯಾಸ ಭಾರತದಿಂದ

ಅರಣ್ಯಪರ್ವ ೨೦ನೆಯ ಸಂಧಿ—ಚಿತ್ರಾಂಗದಾ (೧, ೩ರಿಂದ ೧೩, ೧೫, ೧೮, ೧೯ ೨೦, ೨೬ ಮತ್ತು ೨೯ರಿಂದ ೪೧ ಈ ಪದ್ಯಗಳು) ಅಥವಾ

ಸಭಾಪರ್ವ ೪ನೆಯ ಸಂಧಿ—ದ್ರೌಪದೀ ಮಾನಸಂರಕ್ಷಣ (೬೬, ೬೭ ೭೧ರಿಂದ ೮೩ ೮೫, ೮೭ರಿಂದ ೯೧ ೧೦೧, ೧೦೪ರಿಂದ ೧೧೦ ೧೧೨, ೧೩೧, ೧೩೨, ೧೩೯ ೧೩೧ ಮತ್ತು ೧೩೨ ಈ ಪದ್ಯಗಳು)

ಅಥವಾ

ವಿರಾಟಪರ್ವ ೬ನೆಯ ಸಂಧಿ—ಉತ್ತರನ ಪೌರುಷ (೧ರಿಂದ ೭, ೯ ೧೨ರಿಂದ ೩೧ ಮತ್ತು ೩೬ರಿಂದ ೪೭)

೨ ಹರಿಶ್ಚಂದ್ರ ಕಾವ್ಯ ಸಂಗ್ರಹದಿಂದ (ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆ)

೭ನೆಯ ಸಂಧಿ—ಅಶ್ವವಿಕ್ರಯ (೨೯ರಿಂದ ೪೧ ಈ ಪದ್ಯಗಳು)

೨ನೆಯ ಸಂಧಿ—ವಸಿಷ್ಠ ವಿಶ್ವಾಮಿತ್ರರ ವಾದ (೩ರಿಂದ ೨೧ರ ವರೆಗಿನ ಪದ್ಯಗಳು)

೩ ಜೈಮಿನಿಭಾರತದಿಂದ

ಚಂದ್ರಹಾಸನ ಬಾಲ್ಯ—೨೮ನೆಯ ಸಂಧಿ—(೧, ೧೩ರಿಂದ ೧೯ ಈ ಪದ್ಯಗಳು)

ಅಥವಾ

ಸುಧನ್ವ—ಅರ್ಜುನ—೪೩ನೆಯ ಸಂಧಿ—(೧, ೩, ೪, ೫, ೮, ೯, ೧೦, ೧೩, ೧೫, ೧೬ ಈ ಪದ್ಯಗಳು)

ಸೂಚನೆ—ಆಯಾ ಪ್ರದೇಶದಲ್ಲಿ ತರಗತಿಯನ್ನು ನಡೆಸುವವರು ೧, ೨, ೩ ಇವುಗಳಲ್ಲಿ ಕಾಣಿಸಿರುವಂತೆ ತಮಗೆ ಅನುಕೂಲವಾದ ಭಾಗಗಳನ್ನು ಆಯ್ದುಕೊಂಡು ಪಾಠ ನಡಸಬಹುದು ಹಾಗೆ ಆಯ್ದುಕೊಂಡ ಭಾಗಗಳನ್ನು ಪರಿಷತ್ತಿನ ಕಚೇರಿಗೆ ಮುಂಚಿತವಾಗಿ ತಿಳಿಸಬೇಕಾಗಿ ವಿನಂತಿ

ತರಗತಿಗೆ ಸೇರಬಿಚ್ಛಿಸುವವರು ಪರಿಷತ್ತಿನ ಸದಸ್ಯರಾಗಿರಬೇಕು, ಇಲ್ಲವೆ ಅಭಿಮಾನಿಗಳಾಗಿರಬೇಕು (ಅಭಿಮಾನಿ ಚಂದಾ ೧ ರೂ.) ಮತ್ತು ಕನ್ನಡ ಭಾಷೆಯಲ್ಲಿ ಪರಿಶ್ರಮ ಹೊಂದಿದವರಾಗಿರಬೇಕು ಮತ್ತು ಸ್ವಲ್ಪ ಮಟ್ಟಿಗಾದರೂ ಸಂಗೀತ ರಾಗಜ್ಞಾನಗಳನ್ನು ಪಡೆದವರಾಗಿರಬೇಕು ತರಗತಿಗೆ ಸೇರಿದವರು ತಿಂಗಳಿಗೆ ೧ ರೂ ಯಂತೆ ತರಗತಿ ನಡೆಯುವಷ್ಟು ಕಾಲ ತೆರವನ್ನು ಕೊಡಬೇಕು

ಅಪೇಕ್ಷಾಪತ್ರದ ವಿವರ

(೧) ಹೆಸರು (೨) ವಯಸ್ಸು (೩) ಉದ್ಯೋಗ (೪) ಇರುವ ಭಾಷಾ ಸಾಮರ್ಥ್ಯ, (೫) ಸಂಗೀತ ಜ್ಞಾನ. (೬) ವಿಶೇಷಾಂಶಗಳು (೭) ವಿಳಾಸ

ಹೊರಗಡೆ ಗಮಕ ತರಗತಿಗಳನ್ನು ತೆರೆಯಲು ಬಯಸುವವರು ದಯಮಾಡಿ ಈ ಬಗ್ಗೆ ಪರಿಷತ್ತಿಗೆ ಈ ತಿಂಗಳ ಕೊನೆಯೊಳಗಾಗಿ ತಿಳಿಸಬೇಕಾಗಿ ಕೋರಿದೆ.

ಬೆಂಗಳೂರಿನಲ್ಲಿ ಸದ್ಯದಲ್ಲೇ ತೆರೆಯಲಾಗುವ ತರಗತಿಗೆ ಸೇರಬಿಚ್ಛಿಸುವವರು ಅಪೇಕ್ಷಾಪತ್ರಗಳನ್ನು ಅಭಿಮಾನಿ ಚಂದಾ ೧ ರೂ ತರಗತಿಯ ತೆರ ೧ ರೂ ಹೀಗೆ ೨ ರೂ ಗಳೊಂದಿಗೆ ಆಗಸ್ಟ್ ತಿಂಗಳು ೧೦ನೆಯ ತಾ ನೊಳಗಾಗಿ ಪರಿಷತ್ತಿನ ಕಚೇರಿಗೆ ತಲುಪಿಸಬೇಕಾಗಿ ಗೌ ಕಾರ್ಯದರ್ಶಿ ಸಿ ಕೆ ನಾಗರಾಜರಾವ್ ತಿಳಿಸುತ್ತಾರೆ

ಇಂಜಿನಿಯರುಗಳನ್ನು ಸಾಧು ಸೋಲಿಸಿದ

ಒಂದು ಪಟ್ಟಣಕ್ಕೆ ಜಲಾಶ್ರಯ ತೋರಿಸಿದ

ಪಂಜಾಬದ ಕಾಲ್ಕಾ ಪಟ್ಟಣಕೆ ನೀರು ಸರಬರಾಯಿ ಮಾಡುವ ಯೋಗ್ಯ ಜಲಾಶ್ರಯ ಕಂಡುಹಿಡಿಯುವ ಕಾರ್ಯದಲ್ಲಿ ಅಲ್ಲಿನ ಮ್ಯುನ್ಸಿಪಲ್ ಆಡಳಿತವೂ ಅದರ ಇಂಜಿನಿಯರರೂ ಹತಾಶರಾದಾಗ ಒರ್ವ ಸಾಧುವು ಅಂತಹದೊಂದು ಜಲಾಶಯವನ್ನು ತೋರಿಸಿ ಎಲ್ಲರನ್ನೂ ಬೆರಗುಗೊಳಿಸಿದ ಸಂಗತಿಯೆಂದು ಟ್ರಿಬ್ಯೂನ ಪತ್ರಿಕೆ ತಿಳಿಸುತ್ತದೆ

ಕಾಲ್ಕಾ ನಗರನಿವಾಸಿಗಳು ಮತ್ತ ಅಲ್ಲಿಗೆ ಹೋಗುವ ಹೊರಗಿನವರಿಗೂ ಕುಡಿಯುವ ನೀರು ಸಿಕ್ಕುವುದು ಕಷ್ಟವಾಗುತ್ತದೆ ಇದಕ್ಕಾಗಿ ಸ್ಥಳೀಯ ನಗರಸಭೆಯವರು ೧ ಲಕ್ಷ ರೂಪಾಯಿ ಖರ್ಚುಮಾಡಲು ಸಿದ್ಧರಿದ್ದಾರೆ ಆದರೆ ಯೋಗ್ಯ ನೀರಿನ ಸ್ಥಳ ಸಿಕ್ಕದೆ ಅನೇಕ ಇಂಜಿನಿಯರುಗಳು ತಮ್ಮ ಶೋಧನಗಳಲ್ಲಿ ಅಪಜಯಹೊಂದಿದರು

ಸಾಧುವಿನ ಭವಿಷ್ಯವಾಣಿ

ಆ ಸಮಯಕ್ಕೆ ಕಾಲ್ಕಾ ಪಟ್ಟಣಕ್ಕೆ ಒರ್ವ ಸಾಧು ಸಂಚಾರಿಯಾಗಿ ಬರುವವನಾದ ಅಲ್ಲಿನ ನೀರಿನ ಸಂಕಷ್ಟ ತಿಳಿದು ಆತ ಕೆಲ ನಾಗರಿಕರೊಂದಿಗೆ ಎರಡು ಫರ್ಲಾಂಗು ದೂರದ ಒಂದು ಸ್ಥಳಕ್ಕೆ ಹೋಗಿ ಕೆಲ ಹೊತ್ತು ಧ್ಯಾನಸ್ಥನಾಗಿ ಕಡೆಗೆ "ದೇವರಿಗೆ ಜಯವಾಗಲಿ, ಇಲ್ಲಿ ಅಗೆಯಿರಿ ದೇವರ ವರಪ್ರಧಾನವಾದ ಸಿಹಿಯಾದ ನೀರು ಸಿಗುವುದು" ಎಂದನು ಎಷ್ಟು ಆಳ ಅಗೆಯಬೇಕೆಂದೂ ಆತ ತಿಳಿಸಿದ "ಹತ್ತು ಅಡಿಯಲ್ಲಿ ನೀರು ಸಿಗುವುದು ಮತ್ತು 30 ಅಡಿ ಅಗೆದರೆ ಇನ್ನಷ್ಟು ಹೆಚ್ಚು ಸಿಗುವುದು" ಎಂದನು ಅವನು ಹೇಳಿದಂತೆ ಮಾಡಲು ಉತ್ತಮ ನೀರಿನ ಝರಿಗಳು ದೊರಕಿ ಎಲ್ಲರನ್ನೂ ಕೌತುಕಗೊಳಿಸಿತು

ರೂ. ೧೦೦ ಬಹುಮಾನ

ಅದ್ಭುತ ಶಕ್ತಿ ಸಿದ್ಧ ಕವಚ

ಇದನ್ನು ಇಟ್ಟುಕೊಂಡ ಮಾತ್ರಕ್ಕೇ ಅತೀ ದುಸ್ಸಾಧ್ಯವಾದ ಉದ್ದೇಶವೂ ಸಾಧಿಸುವುದು ಇದನ್ನು ಪರಿಣಾಮಕಾರಿಮಾಡಲೂ ಯಾವ ಕಷ್ಟದ ಶ್ರಮವನ್ನು ವಹಿಸಬೇಕಾಗಿಲ್ಲ. ಯಾವ ತಯಾರಿಯುಲ್ಲದೆಯೂ ಇದು ಫಲಕೊಡುವುದು ನೀಚಗ್ರಹಗಳನ್ನಿದು ಗೆಲ್ಲುವುದು, ಶತ್ರುಗಳನ್ನು ಗೆದ್ದು ಪರೀಕ್ಷೆ, ವ್ಯಾಪಾರ, ವ್ಯಾಜ್ಯ, ಸೋದ್ರಿ ಜೂಜು, ಉದ್ಯೋಗಗಳಲ್ಲಿ ಯಶಸ್ಸುಕೊಡುತ್ತದೆ ಸಂಪತ್ತಭಿವೃದ್ಧಿ ಮಾಡಿ ಸಕಲ ವಿಮೋಚಿಸಿ ಅಪಾಯಕರ ಕಾಯಿಲೆಗಳನ್ನು ಗುಣಪಡಿಸುತದೆ ನಿಮ್ಮನ್ನು ಅದೃಷ್ಟಶಾಲಿ ಮಾಡುತ್ತದೆ ಇದನ್ನು ಸುಳ್ಳೆಂದು ರುಜುವಾತು ಮಾಡಿದವರಿಗೆ 100 ರೂಪಾಯಿ ಬಹುಮಾನ ಬೆಲೆ ತಾಮ್ರಕ್ಕೆ ರೂ 2 ಬೆಳ್ಳಿದ್ದಕ್ಕೆ ರೂ 3, ಬಂಗಾರದಕ್ಕೆ ರೂ 15 ತಕ್ಷಣ ಫಲದ ವಿಶೇಷ ತರದ ಕವಚಕ್ಕೆ (ಶುದ್ಧ ಬಂಗಾರದ ಮುಚ್ಚಿಗೆಯುದು) ರೂ 25 7

Dukh Haran Ashram No 1
P O Katri Sarai (Gaya)

ನೋಟೀಸು

ಎಗ್ರಿಕಲ್ಚರಲ್ ಮತ್ತು ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್, ಕುಂದಾಪುರ

ಈ ಕೆಳಗೆ ಕೊಟ್ಟ ಹೆಸರಿನವರು ನಮ್ಮಲ್ಲಿ ಚಿನ್ನಾಭರಣವನ್ನು ಈಡಿಟ್ಟು ಹಣ ಪಡಕೊಂಡು ಬೇಂಕಿನವರು ಸಾಪಾ ನೋಟೀಸು ವ ರಿಜಿಸ್ತ್ರ ನೋಟೀಸು ಕೊಟ್ಟಾಗ್ಯೂ ಬೇಂಕಿಗೆ ಸಲ್ಲಬೇಕಾದ ಬಡ್ಡಿ ವ ಅಸಲು ರೂಪಾಯಿಯನ್ನು ತೆರದೆ ಇರುವುದರಿಂದ ತಾ 12 8—1947ಕ್ಕೆ ಈಡಿಟ್ಟ ಡಾಗಿನೆಗಳನ್ನು ಬೇಂಕಿನ ಆಫೀಸಿನಲ್ಲಿ ಅಪರಾಹ್ನ ಘಂಟೆ ಮೂರಕ್ಕೆ ಸರಿಯಾಗಿ ಬಹಿರಂಗವಾಗಿ ಏಲಂ ಮಾಡಲಿದ್ದೇವೆ ಬೇಂಕಿಗೆ ಸಲ್ಲಬೇಕಾದ ಐವೇಜು, ನಗಗಳನ್ನು ಏಲಂ ಮಾಡಿ, ಬಾರದೇ ಇದ್ದಲ್ಲಿ ಸದ್ರಿಯವರ ಮೇಲೆ ಕಡಿಮೆ ಬೀಳುವ ಐವೇಜಿಗೆ ದಾವಾ ಧಾಖಲು ಮಾಡುತ್ತೇವೆ ತಪಶೀಲು —

ಲೋನು ನಂಬ್ರ	ಹೆಸರು	ಐವೇಜು ರೂಪಾಯಿ
87	ಶ್ರೀ ವಿ. ರಘುನಾಥ ನಾಯಕ್, ಅನಂತ ನಾಯಕ್‌ರ ಮಗ, ಕುಂದಾಪುರ	5
41	ಶ್ರೀ ಶೀನಾಚಾರಿ, ಶೇಷಾಚಾರಿಯ ಮಗ, ಹುಂಚ್ಚಕೇರಿ (ಕುಂದಾಪುರ)	60
53K	ಶ್ರೀ ಮನ್ವೆಲ್ ಸೋಜಾ, ಜೂಜ ಸೋಜನ ಮಗ, ಒಡೇರೊ (ಕುಂದಾಪುರ)	23
177K	ಶ್ರೀ ತಮ್ಮಯ್ಯ ಅಕ್ಕಸಾಲಿ, ನಾಗಪ್ಪ ಅಕ್ಕಸಾಲಿಯ ಮಗ ತಕ್ಕಟ್ಟೆ	25
2516B	ಶ್ರೀ ರ ಸಂಜೀವ ನಾಯ್ಕ, ವೆಂಕಟನಾಯ್ಕರ ಮಗ ಬೈಂದೂರು	6
2864B	ಶ್ರೀ ಕಲ್ಲಾರ್‌ಬಿತ್ತ್ಲ ನೆರಿ, ನಜರತ್ ಪೆಡ್ರು ರುಜಾರಿಯೋ ನಜರತ್‌ರ ಮಗ, ಕಲ್ಲಾರ್‌ಬಿತ್ತ್ಲ ಬೈದೂರು	5

ಕುಂದಾಪುರ 29 7—47

V N Shenoy (Agent)

ಪ್ರಯಾಣಿಕರಿಗೆ ಸೂಚನೆ.

ಪಕ್ಕತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾ ಬಹಳ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬಹುದಾಗುತದೆ ಅಲ್ಲದೆ ಕೋಸ್ಟಲ್ಯಾಸಿನಲ್ಲಿ ಕಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸ ಬಸ್ಸುಗಳಿರುವುದರಿಂದ ಸಾಧ್ಯವಿದ ಸ್ಥಳದ ವರೇಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಲೂರು-ಮುಲ್ಕಿ ಲ್ಯಾಸಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರೆಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಿಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗ್ಳೂರು, 29-3-1947.

ಜ್ಯೋಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೈ ಲೈಫ್ ಎನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟದ್ದು)

ಪ್ರಧಾನ ವಿಮಾ ಸಂಸ್ಥೆ

1945ರ ವ್ಯವಹಾರ – 2,77,23,000

1946ರ ,, – 3,28,21,200

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್.

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)

ತಿರುವಾಂಕೂರು, ಕೊಚ್ಚಿ ಮತ್ತು ಮೈಸೂರನ್ನೊಳಗೊಂಡ ದಕ್ಷಿಣ ಭಾರತದ ಪ್ರಾಧಮಿಕ್ಯ ಏಜಂಟರು.

1945ರ ನಮ್ಮ ವ್ಯವಹಾರ – 49,85,500

1946ರ ,, ,, – 53,82,250

ಈಗಿನ ಪರಿಸ್ಥಿತಿ ಮತ್ತು ಬಡ್ಡಿದರ ಪ್ರಮಾಣಕ್ಕನುಗುಣವಾಗಿ ನಮ್ಮ ಪ್ರಿಮಿಯಮ್ ದರಗಳನ್ನು ಇದೇ ತಾ 1-8-47ರಿಂದ ಪುನರಾವರ್ತಿಸಲು ಬೊಂಬೇ ಲೈಫ್ ಸಂಸ್ಥೆಯು ನಿರ್ಧರಿಸಿರುವುದನ್ನು ನಮ್ಮ ಎಲ್ಲಾ ವೈದ್ಯ ಪರೀಕ್ಷಕರಿಗೂ, ಪೋಲಿಸಿ ಹೋಲ್ಡರರಿಗೂ ಸ್ನೇಹಿತ ಹಿತೈಷಿಗಳಿಗೂ ತಿಳಿಸುವುದು ನಮ್ಮ ಕರ್ತವ್ಯವೆಂದೆಣಿಸುತ್ತೇವೆ. ಈಗವರು ಹಿಂದಿನ ಕಮ್ಮಿ ದರದಲ್ಲಿ ದೊಡ್ಡ ಪೋಲಿಸಿಗಳನ್ನು ಪಡೆಯಬಹುದು – ಇನ್ನರಿಂದ ವರ್ಷಂಪ್ರತಿ ಕಮ್ಮಿಯಾಗುವ ದರ ಪ್ರಮಾಣವೂ ದೊರಕದಂತಾಗುವುದು. ನಮ್ಮ 2ನೇ ಜುಲೈ 1947ರ ಸರ್ಕಿಲಾರು ತಲುಪಿರದ ಏಜೆಂಟರು ತಮ್ಮ ಗಿರಾಕಿಗಳಿಗೆ 31-7-47ರ ನಂತರ ವಿಮಾ ತೆಗೆಯುವವರಿಗೆ ಅದೆಷ್ಟು ಹೆಚ್ಚು ತಗಲುವುದೆಂಬ ವಿವರವನ್ನು ತಿಳಿಸಲು ಕರ್ತವ್ಯಬದ್ಧರಾಗಿರುವುದರಿಂದ, ಅಂಥಾ ಏಜೆಂಟರು ಕೂಡಲೇ ನಮಗೆ ತಂತಿ ಇಲ್ಲವೆ ಪತ್ರ ಮೂಲಕ ತಿಳಿಸುವುದು.

ಪೋಲಿಸಿ ತೆಗೆದುಕೊಳ್ಳಲಿಚ್ಛಿಸುವವರು ಇವತ್ತೇ ನಮ್ಮ ಈ ಕೆಳಗಿನ ಯಾವದಾದರೂ ಆಫೀಸುಗಳಿಗೆ ಬರೆಯುವುದು.

ಉಡುಪಿ, ಮಂಗಳೂರು, ಕಲ್ಲಿಕೋಟೆ, ಟ್ರಿವೆಂಡ್ರಮ್, ಮಧುರಾ ಬೆಂಗಳೂರು, ಬೊಂಬಾಯಿ ಮತ್ತು ಮದ್ರಾಸ್

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 8—8—1947 [ಸಂಚಿಕೆ 32]

ಭಾರತೀಯ ಗವರ್ನರರು

ಸ್ವತಂತ್ರ ಭಾರತ ಪ್ರಾಂತ್ಯಗಳ ಗವರ್ನರುಗಳ ಹೆಸರು ಪ್ರಕಟವಾಗಿರುವಲ್ಲಿ ರಾಜಾಜಿ ಮತ್ತು ಪ್ರೆಸ್ಸಿನ್ ಮುದಿಯವರ ಕುರಿತು ಕೆಲವು ತರ್ಕವಿತರ್ಕಗಳೆದ್ದಿವೆ ರಾಜಾಜಿಯವರು ಕೇಂದ್ರ ಸರಕಾರದ ಮಂತ್ರಿಗಳಾಗಿ ಅಖಿಲ ಭಾರತದ ಅಭಿವೃದ್ಧಿಗಾಗಿ ಅವರ ಪರಿಪಕ್ವ ವಿವೇಕವನ್ನುಪಯೋಗಿಸಿಕೊಳ್ಳುವುದು ಹಿತಕರವಾಗಿತ್ತೆಂದು ಕೆಲವರ ತರ್ಕ ಆದರೆ ಕ್ರೋಮುವಾರು ವಾಗ್ವಿವಾದದಲ್ಲಿ ಅವರಿಗೆ ಅಲ್ಪಸಂಖ್ಯಾಕರಲ್ಲಿರುವ ಹೆಚ್ಚಿನ ಸಹಾನುಭೂತಿಯು ಅವರ ನ್ನು ಸ್ಥಾನಕ್ಕೆ ಅರ್ಹರೆಂದು ತೀರ್ಮಾನಿಸಲು ಕಾರಣವಾಯಿತೆಂದೂ, ಪಶ್ಚಿಮ ಬಂಗಾಲದ ಸದ್ಯದ ಪರಿಸ್ಥಿತಿಯಲ್ಲಿ ಅವರಂತಹ ಮೇಲಧಿಕಾರಿಯ ಅವಶ್ಯಕತೆಯಿದೆಯೆಂದು ಹೆಚ್ಚಿನ ಮುಖಂಡರ ಅಭಿಪ್ರಾಯವಿದ್ದರೂ ಇರಬಹುದು

ಪಾಕಿಸ್ಥಾನ ಪಕ್ಷಪಾತಿ ಮುದಿ

ಆದರೆ ಸರ್ ಪ್ರೆಸ್ಸಿಸ್ ಮುದಿಯವರು ಸಿಂಧದ ಗವರ್ನರರಾಗಿದ್ದಾಗ ಬಹಿರಂಗವಾಗಿ ಮುಸ್ಲಿಂ ಲೀಗನ್ನು ಬೆಂಬಲಿಸಿದಲ್ಲದೆ ಪಾಕಿಸ್ಥಾನ ರಚನೆಗೆ ಅವರು ಪ್ರತ್ಯಕ್ಷ ಕಾರ್ಯ ಭಾಗಿಗಳಾಗಿದ್ದರೆಂದೂ ಆಪಾದಿಸಲ್ಪಟ್ಟಿದೆ ಈ ಸಂದರ್ಭದಲ್ಲಿ ನಾವು ಕೆಲವು ಸರ್ವ ಸಾಮಾನ್ಯ ಸಂಗತಿಗಳನ್ನು ಗಮನಕ್ಕೆ ತಂದುಕೊಳ್ಳಬೇಕಾದುದು ಅತ್ಯಾವಶ್ಯಕ ಮೊದಲಾಗಿ ಮುಸ್ಲಿಂ ಬಹುಸಂಖ್ಯಾಕ ಪ್ರಾಂತ್ಯಗಳಲ್ಲಿ ಗವರ್ನರರಾಗಿದ್ದ ಆಂಗ್ಲೇಯರಿಗೆಲ್ಲ ಪಕ್ಷಪಾತದ ಅಪವಾದ ಬಂದಿದೆ ಗಡಿನಾಡಿನ ಕೆರಟರೂ ಪಂಜಾಬದ ಜೆಂಕಿನ್ಸರೂ, ಬಂಗಾಲದ ಬರೂಸರೂ ಈ ಅಪಕೀರ್ತಿಗೆ ಪಾತ್ರರಾಗಿರುವರು ಈ ಪ್ರಾಂತ್ಯಗಳಲ್ಲಿ ಆದಷ್ಟು ಮಟ್ಟಿಗೆ ಬಹುಸಂಖ್ಯಾಕರಾಗಿರುವ ಮುಸ್ಲಿಮರ ಜನಪ್ರಿಯ ಪಕ್ಷವನ್ನೇ ಅಧಿಕಾರದಲ್ಲಿರಿಸಿದರೆ ಜಾತೀಯ ಕಲಹ ಕಡಿಮೆಯಾಗಬಹುದೆಂದು ಅಲ್ಲಿಗೆ ಮೇಲಧಿಕಾರಿಯಾಗಿ ಹೋದ ಈ ಗವರ್ನರುಗಳೆಲ್ಲರೂ ಧೃಢಾಭಿಪ್ರಾಯವುಳ್ಳವರಾಗಿರಬಹುದು. ಮುಸ್ಲಿಂ ಬಹುಸಂಖ್ಯಾಕರಾಗಿದ್ದು ಲೀಗಿನ ಅನುಯಾಯಿಗಳು ಹೆಚ್ಚಾಗಿದ್ದ ಗಡಿನಾಡಿನಲ್ಲಿ ಕೊಂಗ್ರೆಸ್ ಮಂತ್ರಿಮಂಡಳವಿದ್ದುದರಿಂದ ಸಂಭವಿಸಿದ ಘಟನೆಗಳು ಈ ಗವರ್ನರರು ಲೀಗನ್ನು ಅಧಿಕಾರದಲ್ಲಿಡಲು ಮಾಡಿದ ಪ್ರಯತ್ನಗಳ ಆವಶ್ಯಕತೆಯನ್ನು ತೋರಿಸುತ್ತವೆ ಕೊಂಗ್ರೆಸ್ ವರಿಷ್ಠರಿಗೂ ಇದು ಮನಗಂಡಿರಬಹುದು

ವಾರಾಂತ್ಯ ವರದಿ ವಿಮರ್ಶೆ

ಯುದ್ಧಾನಂತರ ಯೋಜನೆ

ದೇಶದ ಪೂರ್ಣ ಜನತೆಯ ಕಾರ್ಯವು ಇದುವರೆಗೆ ರಾಜಕೀಯ ಕಾರ್ಯಕಲಾಪಗಳಿಗಾಗಿ ಹಿಂದಕ್ಕೆ ಬಿದ್ದಿತ್ತು ನಮ್ಮ ಸ್ವಾತಂತ್ರ್ಯವು ದೊರಕಿದ ಮೇಲೆ ಈ ಕುರಿತು ಗಂಭೀರವೂ ಮತ್ತು ಚಟುವಟಿಕೆಯುಕ್ತವೂ ಆದ ಬಿರುಸಾದ ಕಾರ್ಯಧೋರಣೆಯನ್ನನುಸರಿಸುವುದಕ್ಕೆ ವಿಳಂಬ ಮಾಡಬಾರದು ಜರ್ಝರಿತವಾದ ದೇಶದ ಆರ್ಥಿಕ ಸ್ಥಿತಿಯನ್ನು ಸ್ಥಿಮಿತಗೊಳಿಸಿ ದರಿದ್ರತೆಯನ್ನು ನೀಗುವುದರ ಕಡೆಗೆ ಸ್ವತಂತ್ರ ಭಾರತ ಸರಕಾರವು ಪ್ರಥಮ ಗಮನ ಕೊಡತಕ್ಕದ್ದು ಅತ್ಯಾವಶ್ಯಕವಿದೆ ಇದರಲ್ಲಿ ಜನತೆಯು ಮೂಲ ಅವಶ್ಯಕತೆಗಳಿಗೆ ಸಾಕಷ್ಟು ಆರ್ಥಿಕ ಪ್ರತಿಫಲ ಸಿಗುವಂತಾಗಬೇಕಾದುದು ಅತ್ಯುಕ್ತವಾದುದು

ಕೊಂಗ್ರೆಸಿನ ಭವಿಷ್ಯ

ಸ್ವಾತಂತ್ರ್ಯ ದೊರಕಿದ ಮೇಲೆ ಈ ರಾಷ್ಟ್ರ ಸಂಸ್ಥೆಯು ವಿಸರ್ಜನೆ ಹೊಂದುವುದೆಂದು ಮೊದಲೇ ಹೇಳಲ್ಪಟ್ಟಿತ್ತು ಅದರ ಆಷ್ಟು ಉದ್ದೇಶವು ಕೊನೆಗೊಂಡಿದೆ ನಿಜ ಆದರೆ ಕೊಂಗ್ರೆಸು ಒಂದು ಸಾಮಾನ್ಯ ರಾಜಕೀಯ ಪಕ್ಷವಲ್ಲ ಅದು ಜಗತ್ತಿನ ಇತಿಹಾಸದಲ್ಲೇ ಇಲ್ಲಿ ಕಂಡುಬರದ ಅದ್ವಿತೀಯವಾದೊಂದು ನೈತಿಕ ಶಕ್ತಿಸಂಸ್ಥೆ ಅದೆಂದಿಗೂ ನಾಶವಾಗದು ಅದರ ಕಾರ್ಯಕಲಾಪಗಳು ಒಂದಲ್ಲ ಒಂದು ಕ್ಷೇತ್ರದಲ್ಲಿ ನಿರೂಪಗೊಳ್ಳಬೇಕಾದುದು ಅತ್ಯಾವಶ್ಯಕ ರಾಜಕೀಯ ಸಾಧನೆ ಮುಗಿದರೆ ನಮ್ಮ ದೇಶದಲ್ಲಿ ಸಾಮಾಜಿಕ ಶೈಕ್ಷಣಿಕ, ಆರೋಗ್ಯ, ಕೈಗಾರಿಕೆ ಕ್ಷೇತ್ರಗಳಲ್ಲಿ ಆದಷ್ಟು ಸುಧಾರಣೆಗಳು ಮಾಡಲಿಕ್ಕಿವೆ. ಜನತೆಯ ಸಂಸ್ಥೆಯಾಗಿ ಕೊಂಗ್ರೆಸು ಈ ದಿಸೆಯಲ್ಲಿ ತನ್ನ ಚೈತನ್ಯವನ್ನುಪಯೋಗಿಸುವುದು ಸಮಂಜಸವಾದುದೆಂಬುದಕ್ಕೆ ಯಾರ ಆಕ್ಷೇಪವೂ ಇರಲಾರದು.

ಡಚ್ಚರ ಒಪ್ಪಿಗೆ

ಕೊನೆಗಂತೂ ಡಚ್ಚರು ಜನಾಂಗ ಸಂಘದ ಅಭಿಮತವನ್ನು ಮನ್ನಿಸಿದರು ಇನ್ನು ಜನಾಂಗ ಸಂಘವು ಯಾವ ರೀತಿಯಲ್ಲಿ ಮಧ್ಯಸ್ಥಿಕೆ ನಡೆಸುತ್ತವೆಂಬುವರ ಕುರಿತು ನೋಡಲಿಕ್ಕಿದೆ ಒಂದು ವಿಷಯ ಮಾತ್ರ ಸುಸ್ಪಷ್ಟ ಸಾಮ್ರಾಜ್ಯಶಾಹಿಯು ಇಂಡೋನೇಶ್ಯದಲ್ಲಿ ಮಾತ್ರವಲ್ಲ ಜಗತ್ತಿನಲ್ಲೇ ಅದು ಅಸ್ತಿತ್ವದಲ್ಲಿಲ್ಲದಂತಾಗಬೇಕು ಬ್ರಿಟಿಷರು ಆ ಕುರಿತು ಹಾಕಿಕೊಟ್ಟ ಮೇಲ್ಪಂಕ್ತಿಯು ಇದುವರೆಗಿನ ಆದರ್ಶನೀಯವೆನ್ನಬಹುದು ಇದುವರೆಗೆ ಅದುದನ್ನು ಮರೆತು ಮನ್ನಿಸಿ ವರ್ತಿಸುವ ಹೊಣೆಗಾರಿಕೆಯಾದರೂ ಪಶ್ಚಾತ್ತಾಪ ಪಡಬೇಕಾದ ವರಿಗಳ ಪಾಲಿನದು ಈ ಸಂದರ್ಭದಲ್ಲಿ ಇಂಡೋನೇಶ್ಯರಿಗೆ ನೀತಿಯ ನ್ಯಾಯ ದೊರಕುವುದೆಂದು ಹಾರೈಸೋಣ

ಮೈಸೂರಿನ ಸಮಸ್ಯೆ

ಇದೇ 9ನೇ ತಾರೀಕಿನೊಳಗೆ ಜವಾಬ್ದಾರಿ ಸರಕಾರ ಸ್ಥಾಪಿಸದಿದ್ದರೆ ಸತ್ಯಾಗ್ರಹ ಹೂಡುವುದಾಗಿ ಮೈಸೂರು ಕೊಂಗ್ರೆಸು ನಿರ್ಧರಿಸಿದೆ ಭಾರತ ಪ್ರಜಾಪಟಲಿಗೆ ಸೇರುವೆವೆಂದು ನಿರ್ಧರಿಸಿದ ಮೈಸೂರು ಸರಕಾರ ಈಗನ್ನೆಂದು ನ್ಯಾಯವಾದ ಬೇಡಿಕೆಯನ್ನು ತಳ್ಳಿಗಳೆಯುವುದರಲ್ಲಿ ಅರ್ಥವಿಲ್ಲ

ಹೈದರಾಬಾದಿನಲ್ಲಿ ಗೊಂದಲ

ದಕ್ಷಿಣದ ಈ ಸಂಸ್ಥಾನ ಬಹುಸಂಖ್ಯಾಕ ಹಿಂದೂಗಳಿಂದೊಡಗೂಡಿದೆ ಆದರೂ ಬಹುಸಂಖ್ಯಾಕ ತನ್ನ ಪ್ರಜೆಗಳ ಅಭಿಪ್ರಾಯವನ್ನು ಪೂರೈಸಲು ಇದರ ಮುಸಲ್ಮಾನ ರಾಜರು ಪ್ರಯತ್ನಮಾಡುತ್ತಿಲ್ಲವೆಂದು ಈಗೀಗ ಸ್ಪಷ್ಟವಾಗುತ್ತಿದೆ ಬಹಳ ಆಗ್ರಹ ಹಿಡಿದಿದ್ದ ತಿರುವಾಂಕೂರು ಕೂಡ ಭಾರತ ಒಕ್ಕೂಟಕ್ಕೆ ಸೇರಲೊಪ್ಪಿದರೂ ಹೈದರಾಬಾದು ಇನ್ನೂ ತೀರ್ಮಾನಕ್ಕೆ ಬಂದಿಲ್ಲ. ಪರಿಣಾಮವಾಗಿ ಈಗಲ್ಲಿ ಗಲಭೆಗಾರಂಭವಾಗಿದೆ. ಇದು ಅಲ್ಲಿನ ಸರಕಾರದ ಉದ್ಧಟತನದ ಪರಿಣಾಮವೇ ಎಂದರೂ ಅತಿಶಯವಾಗಲಾರದು ವ್ಯಕ್ತಿ ಸ್ವಾತಂತ್ರ್ಯ ಮತ ಸ್ವಾತಂತ್ರ್ಯದ ಈ ಯುಗದಲ್ಲಿ ಬಹುಸಂಖ್ಯಾಕರ ಬೆಂಬಲವಿಲ್ಲದ ಪುಟ್ಟ ರಾಜ್ಯವೊಂದು ತನ್ನ ರಾಜನ ಆಪ್ತ ಧರ್ಮ ತತ್ವವನ್ನು ಪ್ರಚಾರ ಮಾಡಲೋಸುಗ ಬಹುಸಂಖ್ಯಾಕರನ್ನು ದಬ್ಬಿ ಆಳಲು ಪ್ರಯತ್ನ ಮಾಡುವುದೆಂದರೆ ತೀರ ಹಾಸ್ಯಾಸ್ಪದ ವಿಚಾರ ರಾಜನ ಧರ್ಮ ಪ್ರಜೆಗಳ ಹಿತವನ್ನೇ ಅನುಸರಿಸಬೇಕಾದುದು ನ್ಯಾಯವಾಗಿರುತ್ತದೆ.

THE

UNITED INDIA LIFE ASSURANCE

ESTD 1906 | CO., LTD. | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE

K S. Rao Road, Mangalore.

ಸ್ವದೇಶ ವಾರ್ತೆ

ಪಾಕಿಸ್ತಾನಿ ಮುಸ್ಲಿಮ್ ಅಧಿಕಾರಿಗಳನ್ನು ಕರಾಚಿಗೆ ಒಯ್ಯುವ ಮೊದಲ ರೈಲುಬಂಡಿಯಲ್ಲಿ ಓರ್ವ ಹಿಂದೂ ಗಾರ್ಡನಿದ್ದ. ಅವನನ್ನು ತೆಗೆದು ಮುಸ್ಲಿಮನನ್ನೇ ಇಡಬೇಕೆಂದು ಕೊಟ್ರಿ ಎಂಬಲ್ಲಿನ ಸ್ಟೇಶನಿನ ಮುಸಲ್ಮಾನ ಪ್ರಜೆಗಳು ಆಗ್ರಹ ಹಿಡಿದು ರೈಲು ಮುಂದೆ ಹೋಗಲು ಬಿಡಲಿಲ್ಲ. ಕಡೆಗೆ ಅವರ ಇಚ್ಛೆ ಸಲ್ಲಿಸಲಾಯಿತು.

卐

ಪಶ್ಚಿಮ ಬಂಗಾಲವು ಹಿಂದೀ ಒಕ್ಕೂಟದ ಪೂರ್ವ ಗಡಿಯಾಗಿರುವುದರಿಂದ ರಕ್ಷಣೆಗಾಗಿ ಕಲ್ಕತ್ತದ ಬಳಿ ವಿಶಾಲವಾದ ಸೈನ್ಯ ಠಾಣ್ಯವನ್ನು ಸ್ಥಾಪಿಸಲು ಹಿಂದೂಸ್ಥಾನ ಸರಕಾರವು ಯೋಜಿಸಿದೆ.

卐

ಹಿಂದೀ ಒಕ್ಕೂಟಕ್ಕೆ ಸೇರಲು ಇಚ್ಛೆಪಡದ ಕೆಲವು ದೇಶಿ ಸಂಸ್ಥಾನಿಕರು ತಮ್ಮ ಸ್ವಂತ ಆಸ್ತಿಪಾಸ್ತಿಗಳನ್ನು ಮಾರಿ ಹೇರಳ ಧನವನ್ನು ಪರದೇಶಗಳಲ್ಲಿ ದಾಸ್ತಾನು ಮಾಡುತ್ತಿರುವರೆಂದೂ, ಪರಿಸ್ಥಿತಿ ತಾವೆಳೆಸಿದಂತೆ ಮೈಗೂಡದಿದ್ದರೆ ಸುಖವಾಗಿ ಇಂಗ್ಲೆಂಡಿನಲ್ಲೊ ಅಮೇರಿಕ ಯುರೋಪುಗಳಲ್ಲೊ ವಾಸಿಸಲು ಈಗಾಗಲೇ ಪ್ರಯತ್ನಕ್ಕಾರಂಭಿಸಿರುವರೆಂದೂ ತಿಳಿದುಬರುತ್ತದೆ

卐

ಭಾರತದಲ್ಲಿ ಅಧಿಕಾರ ವರ್ಗೀಕರಣದ ಮತ್ತು ಸ್ವಾತಂತ್ರ್ಯ ದಿನದ ಸಮಾರಂಭಗಳನ್ನು ಪ್ರತ್ಯಕ್ಷ ನೋಡಿಢ ವರದಿ ಮಾಡಲೂ, ಚಿತ್ರ ತೆಗೆಯಲೂ, ಶಬ್ದಗ್ರಾಹಿ ಇಂಜಿನಿಯರುಗಳನ್ನೂ ಪತ್ರಿಕಾ ಪ್ರತಿನಿಧಿಗಳನ್ನೂ ಬಿ ಬಿ ಸಿ ರೇಡಿಯೋ ಪ್ರಸಾರ ಸಂಸ್ಥೆಯವರು ಕಳುಹಿಸಿದ್ದಾರೆ

卐

ಇಂಡೋನೇಸ್ಯದಲ್ಲಿ ಭಾರತೀಯ ವಿಮಾನವೊಂದನ್ನು ಹೊಡೆದು ಕೆಡವಿದುದರ ಕುರಿತು ಪಾರ್ಲಿಮೆಂಟಿನಲ್ಲಿ ತೀಕ್ಷ್ಣವಾದ ಪ್ರಶ್ನೋತ್ತರಗಳಾಗಿವೆ

卐

ಸ್ವಾತಂತ್ರ್ಯ ದಿನದಂದು ಮಹಾತ್ಮರು ನೌಕಾಲಿಯಲ್ಲಿರುವರೆಂದು ವದಂತಿಯಿದೆ ಘಟನಾ ಸಮಿತಿ ಪ್ರಾರಂಭವಾದಂದೂ ಅವರು ಅಲ್ಲೇ ಇದ್ದರು

ನರೆ ಕೂದಲು ನಿಲ್ಲಿಸಿರಿ

ಬ್ಲೆಕಿನಾ: ಖಂಡಿತವಾಗಿ ನರೆಕೂದಲನ್ನು ಕಪ್ಪಾಗಿ ಪರಿವರ್ತಿಸಿ ನರೆತವನ್ನು ನಿಲ್ಲಿಸುವುದು. ಇದಕ್ಕೆ ಮೆದುಳು, ಕಣ್ಣುಗಳನ್ನು ತಂಪು ಮಾಡುವ ಆರೋಗ್ಯದಾಯಕ ಶಕ್ತಿ ಇದೆ ನಮ್ಮ ಫಾರ್ಮಸಿಯ ಹೆಸರು ಬಾಟ್ಲಿಯ ಮೇಲಿಲ್ಲದಿದ್ದರೆ ಅದನ್ನು ತಿರಸ್ಕರಿಸಿರಿ. ಕೆಲವೇ ನರೆತ ಕೂದಲುಗಳ ಬಾಟ್ಲಿಗೆ ರೂ. 2-8—0 ಅದಕ್ಕಿಂತ ಹೆಚ್ಚಿದ್ದರೆ ರೂ 3-8-0 ಸಂಪೂರ್ಣ ನೆರೆತದಕ್ಕೆ ರೂ. 5—0—0

ಕಾಮಕಲಾ: ಸಾಯಂಕಾಲ ಒಂದು ಮಾತ್ರೆ ಸೇವಿಸಿರಿ. ಅದು ನಿಮಗೆ ಚಿರ ಆನಂದ ಕೊಟ್ಟು ನಿಮ್ಮ ಶಕ್ತಿ ಸಾಹಸ ಹೆಚ್ಚಿಸುತ್ತದೆ. ಒಂದು ಸಲ ಉಪಯೋಗಿಸಿದರೆ ನಿಮಗದರ ಅದ್ಭುತ ಸಾಮರ್ಥ್ಯ ಮರೆಯಲಾರಿರಿ ಇದು ನಿರ್ಬಲತೆ ಹೋಗಲಾಡಿಸುವುದು.

16 ಮಾತ್ರೆಗಳಿಗೆ ರೂ. 1.

ಸತ್ಯದೇವ ಆಯುರ್ವೇದ ಭವನ.

No. 15. P. O,
Katri sarai (Gaya).

ಭಾರತರದ ರತ್ನ ಪಂಡಿತ್ ನೆಹರು

ರಾಷ್ಟ್ರೀಯವಾದಿ ಅಜಾದ್ ಮತ್ತು ಗಫೂರ್ ಖಾನ್

ಬ್ರಿಟಿಷ್ ಮುತ್ಸದ್ಧಿಗಳ ಪ್ರಶಂಸೆ

ಈ ಲೇಖನದಲ್ಲಿ ಪಾರ್ಲಿಮೆಂಟಿನ ಭಾರತ ಸಹಾನುಭೂತಿ ಸದಸ್ಯರಾದ ಮಿ। ಸೊರೆನ್ಸನ್ನರು ನೆಹುರೂ ಅಜಾದ ಮತ್ತು ಗಡಿನಾಡಿನ ಗಾಂಧಿಗಳ ತಾವು ಕಂಡ ವ್ಯಕ್ತಿ ಚಿತ್ರವನ್ನು ಕೊಡುತ್ತಾರೆ

ಪಂಡಿತ್ ನೆಹುರುಗಳನ್ನು ನಾನು ಅಲಹಾಬಾದಿನಲ್ಲಿ ಕಂಡೆ. ಅವರು ನನ್ನನ್ನು ಕರಕೊಂಡು ಗಂಗಾ ಯಮುನಾ ಸಂಗಮ ಸ್ಥಾನವಾದ, ಹಿಂದೂಗಳ ಅತಿ ಪವಿತ್ರ ಯಾತ್ರಾಸ್ಥಳ ಪ್ರಯಾಗಕ್ಕೆ ನನ್ನನ್ನು ಕರಕೊಂಡು ಹೋದರು. ನಾವು ಆ ಸ್ಥಳಕ್ಕೆ ಮುಟ್ಟಿದಾಕ್ಷಣ ಕೆಲವು ಜನರಿಗೆ ನಹುರುಗಳ ಗುರುತು ತಿಳಿಯಿತು ಕೂಡಲೇ ತಮ್ಮ ಮಮತೆಯ ಮುಖಂಡರಿಗೆ ಜನರು ಜಯಕಾರ ಹಾಕಿದರು ಸುದ್ದಿ ಮಿಂಚಿನಂತೆ ಹರಡಲು ಸಾವಿರಾರು ಜನರು ನಮ್ಮ ಕಾರನ್ನು ಮುತ್ತತೊಡಗಿದರು ನಾವಲ್ಲಿಂದ ಬೇಗನೆ ಹಿಂದಿರುಗದಿದ್ದರೆ ಆ ಘರ್ಷಣೆಯಲ್ಲಿ ನಾವೇನಾಗುತಿದ್ದೆವೊ ಹೇಳಲಾಗುತ್ತಿರಲಿಲ್ಲ

ನಹುರುಗಳ ಜನಪ್ರಿಯತೆ ಅಷ್ಟಿದೆ ಅವರ ಪ್ರಶಾಂತವಾದ ಚಿಕ್ಕ, ಕೂದಲು ಬಿದ್ದ ತಲೆ, ಕರುಣಾಪೂರಿತ ದೃಷ್ಟಿ ನಿರ್ಧಾರಯುಕ್ತ ತುಟಿಗಳ ಆಳದಲ್ಲಿ ಅಮರವಾದೊಂದು ಧ್ಯೇಯ ಜ್ವಾಲೆಯುರಿಯುತ್ತಿದೆ ಗಾಂಧಿ ಮತ್ತು ಇವರೊಳಗೆ ತುಂಬಾ ಅಭಿಪ್ರಾಯ ಭೇದವಿದೆಯಾದರೂ ಮಹಾತ್ಮರನ್ನು ನೆಹುರುಗಳು ತುಂಬಾ ಗೌರವಿಸುತ್ತಾರೆ, ಗಾಂಧೀಜಿಯದು ಪ್ರಾಚೀನಕಾಲ ತತ್ವಜ್ಞಾನ—ನೆಹುರುಗಳದ್ದು ಆಧುನಿಕ ವಿಚಾರ—ಅಂತರಾಷ್ಟ್ರೀಯ ದೃಷ್ಟಿಕೋನ ಆದರೆ ಇರ್ವರೂ ಮಾನವಕೋಟಿಯ ಹಿತಸಾಧಕರೆಂಬುದು ನಿಸ್ಸಂದೇಹ ಹಿರಿಯ ಗಾಂಧಿ ಆಧ್ಯಾತ್ಮಿಕ ರಹಸ್ಯ ವಿಚಾರಗಳಲ್ಲಿ ಶ್ರದ್ಧೆ ತಾಳುವುದಾದರೆ ಕಿರಿಯ ನೆಹುರು ಕಾರ್ಯರೂಪಕ್ಕೆ ತರಬಹುದಾದ ತತ್ವಗಳಿಗೇ ಮನ್ನಣೆ ಕೊಡುವವರು ಗಾಂಧೀಜಿಯದು ಸನ್ಯಾಸಮಾರ್ಗವಾದರೆ ನೆಹುರುಗಳದ್ದು ಕಾರ್ಯಾತ್ಮಕ ಕಲೆಯ ಪಥ

ಇಷ್ಟಾದರೂ ಇರ್ವರೂ ಉದಾತ್ತ ಧ್ಯೇಯವಾದಿಗಳು ಇರ್ವರೂ ಭಾರತೀಯ ರೈತರ ಭಾವೀ ಉದ್ಧಾರಕ್ಕಾಗಿಯೇ ಶ್ರಮಿಸುವವರು ನೆಹುರುಗಳ ವಿಚಾರಗಳು ಸಮತಾವಾದ ತತ್ವದಿಂದ ಪ್ರೇರೇಪಿತವಾಗಿವೆ ಆದರೆ ಅವರು ಅದರ ಉಗ್ರ ರೂಪಿಗಳಲ್ಲ

ಅವರ ಸಮತಾವಾದ

ನೆಹುರುಗಳ ಸಮತಾವಾದ ಸ್ಥೂಲವೂ ಮೇಲಿಂದ ಮೇಲೆ ನಿರೂಪಿಸಲ್ಪಡುವಂತಹದೂ ಆಗಿದೆ ಒಂದು ದಿನ ಅವರು ಖಂಡಿತವಾಗಿ ಭಾರತ ನೌಕೆಯನ್ನು ಸಮತಾವಾದಿ ತೀರಕ್ಕೆ ಯಶಸ್ವಿಯಾಗಿ ಮುಟ್ಟಿಸುವ ಕಪ್ತಾನರಾಗುವರು ಅವರು ಜನತೆಯಿಂದಲೇ ಸ್ಫೂರ್ತಿ ಹೊಂದುತ್ತಿರುವರು. ಜನತೆಯ ಪ್ರೇಮದ ಉದ್ಧಾರದ ಕಡೆಗೆ ಅವರ ಸೇವಾ ತತ್ಪರತೆಯ ಹೃದಯ ಕೂಡಲೇ ಪ್ರತಿಧ್ವನಿ ಕೊಡುತ್ತದೆ. ಆದುದರಿಂದ ಹಲವು ಸಂದರ್ಭಗಳಲ್ಲಿ ಅವರ ಭಾಷಣಗಳಲ್ಲಿ ವಿವೇಕಪೂರ್ಣತೆ ಮಾತ್ರವಲ್ಲ ಭಾವನಾತ್ಮಕ ತೀಕ್ಷ್ಣತೆಯೂ ಕಂಡುಬರುತ್ತದೆ.

ಗಫರ್ ಖಾನ್

ಚರಿತ್ರಾರ್ಹ—ಖೈಬರ್—ಕಣಿವೆಯ ಬಳಿಯ ಒಂದು ಹಳ್ಳಿಯಲ್ಲಿ ನಾನು ಗಡಿನಾಡಿನ ಗಾಂಧಿ ಎನಿಸುವ ಅಬ್ದುಲ್ ಗಫೂರ್ ಖಾನರನ್ನು ಕಂಡೆ. ಭಾರತ ಸ್ವಾತಂತ್ರ ಸಂಗ್ರಾಮದಲ್ಲಿ ಇವರೂ ಅಗಾಧ ಪಾತ್ರವಹಿಸಿದ ವ್ಯಕ್ತಿ. ಉಗ್ರ ಪಟಾಣಿ ಜನರನ್ನು ಗಾಂಧೀ ಮಾದರಿಯ ಚಳವಳವೆಸಗುವ ಧೋರಣೆಯಲ್ಲಿ ತರಬೇತುಗೊಳಿಸಿದ ಅಮರ ಕೀರ್ತಿಗೆ ಇವರು ಬಾಧ್ಯರಾಗಿರುವರು ಇವರ ಕಂಪಂಗಿದಳದ ಸ್ವಯಂಸೇವಕರು ನಮ್ಮನ್ನು ಸನ್ಮಾನಪೂರ್ವಕ ವಿಜೃಂಭಣೆಯಿಂದ ಸ್ವಾಗತಿಸಿದರು. ಅವರ ಉದ್ವೇಗಪೂರ್ಣವಾದರೂ ಕರುಣಾಜನಕವಾದ ದೃಷ್ಟಿ, ಗಿಡ್ಡವಾಗಿ ಕತ್ತರಿಸಿದ ಗಡ್ಡ ಮತ್ತು ಅಗಾಧ ಆಕೃತಿ ಶರೀರಾಂಗಗಳನ್ನು ವಿವಿಧ ಭಾವಗಳಲ್ಲಿ ಜೋತಾಡಿಸಿ ಅವರು ತಮ್ಮ ಪುಸ್ತು ಭಾಷೆಯಲ್ಲಿ ಒಂದು ಚುನಾವಣಾ ಭಾಷಣ ಕೊಟ್ಟಿರುವುದನ್ನು ನೋಡಿದಾಗ ನನಗೆ ಬೈಬಲಿನಲ್ಲಿ ಚಿತ್ರಿಸಿದ ಹಳೇ ಪ್ರವಾದಿಗಳ ನೆನಪು ಬಂತು

ಬಾಲ್ಯದಲ್ಲಿ ಓರ್ವ ಕ್ರೈಸ್ತ ಮಿಶನರಿಗಳು ಖಾನರ ಮೇಲೆ ತುಂಬಾ ಪ್ರಭಾವವನ್ನುಂಟುಮಾಡಿದ್ದಾರೆ ಜನರ ಸೇವೆ ಮಾಡಲು ಈ ಪ್ರಭಾವವೇ ಅವರಿಗೆ ಸ್ಫೂರ್ತಿ ಕೊಟ್ಟಿತು ಗಡಿನಾಡಿನಲ್ಲಿ ಶಾಲೆಗಳನ್ನು ತೆರೆದದ್ದಕ್ಕೆ ಅವರು ಜೈಲುವಾಸ ಅನುಭವಿಸಿದ್ದಾರೆ ಅನಂತರವಂತೂ ಅನೇಕ ಸಲ ಅವರು ಸೆರೆಮನೆ ಕಂಡಿದ್ದಾರೆ ಅವರ ಹಿರಿಯ ಬಾಲಕರೆಲ್ಲರೂ ದೇವರ ಸೇವಕರು (ಖುದಾಯಿ ಖಿದ್ಮತ ಗಾರರು) ಕೆಂಪು ಅಂಗಿ ದಳದ ಮಾತಕ್ಕೆ ಇವರಲ್ಲಿ ಯಾವ ಕೋಮುವಾರು ಸ್ಪರ್ಧೆಯೂ ಇಲ್ಲ ಗಾಂಧಿಯೊಡನೆ ಇವರ ಅನ್ಯೋನ್ಯ ಸ್ನೇಹ ಸಂಬಂಧವು

ರಾಷ್ಟ್ರೀಯ ಮುಸ್ಲಿಮರು

ಮುಸ್ಲಿಮರೊಳಗಿರುವ ವಿವಿಧ ಪಕ್ಷಪಂಗಡಗಳನ್ನರಿವು ಮಾಡಿಕೊಳ್ಳಬೇಕಾದರೆ ಮೌಲಾನಾ ಅಬುಲ್ ಕಲಾಮ್ ಅಜಾದ್ ಮತ್ತು ಆಸಫ್ ಅಲಿಯ ಕಡೆ ತಿರುಗಬೇಕು ಅಜಾದರು ಓರ್ವ ಅಗ್ರಗಣ್ಯ ಇಸ್ಲಾಮಿ ತತ್ವಜ್ಞಾನ ವಿದ್ವಾಂಸರು ವಿರೋಧಿಗಳು ಇವರನ್ನು ಕೊಂಗ್ರೆಸಿನ ಕೈಗೊಂಬೆಗಳೆಂದು ಕರೆದರೂ ಇವರು ಸ್ವಂತ ವಿಚಾರ ಧ್ಯೇಯಾದರ್ಶಗಳುಳ್ಳ ವ್ಯಕ್ತಿಗಳೆಂಬುದು ನಿರ್ವಿವಾದ ಎಲ್ಲಾ ಮುಸಲ್ಮಾನರ ಪ್ರಾತಿನಿಧಿಕ ಸಂಸ್ಥೆ ಎನ್ನುವ ಲೀಗಿನ ಧೋರಣೆಗೆ ಇವರು ಸದಾ ವಿರೋಧಿಗಳು.

ಅಜಾದರೂ ಗಿಡ್ಡವಾದ ಗಡ್ಡವನ್ನಿಟ್ಟುಕೊಳ್ಳುತ್ತಾರೆ ಅವರ ವಯಸ್ಸು ಇಂತಿಷ್ಟೇ ಎಂದು ಹೇಳಬರುವುದಿಲ್ಲ ಅಂತೂ ನೆಹುರುಗಳಿಗಿಂತ ಪ್ರಾಯದಲ್ಲಿ ಚಿಕ್ಕವರು ಇವರ ಮನೋಚೈತನ್ಯವು ಶಕ್ತಿಯುಕ್ತವೂ ತೀಕ್ಷ್ಣವೂ ಆಗಿರುವುದಾದರೂ ಇವರ ಹಾವಭಾವಗಳು ಓರ್ವ ಸಿದ್ಧ ಪುರುಷನಂತಿರುತ್ತವೆ ಭಾರತವು ಸಮತಾವಾದಿ ತತ್ವಾನುಯಾಯಿಯಾದುದನ್ನು ನೋಡಬೇಕೆಂಬಿಚ್ಛೆ ಇವರಲ್ಲಿ ಆಳವಾಗಿದೆ ಇವರೊಬ್ಬ ಪೌರ್ವಾತ್ಯ ಭಾಷಾ ವಿಶಾರದರಾಗಿರುವುದರಿಂದ ಇಂಗ್ಲಿಷಿನಲ್ಲಿ ಮಾತನಾಡಲಿಚ್ಛಿಸುವುದಿಲ್ಲ ಆದರೂ ನಮ್ಮೊಡನೆ ಅನೇಕ ಸಲ ಮಧ್ಯಮಧ್ಯದಲ್ಲಿ ಇಂಗ್ಲಿಷಿನಿಂದಲೇ ವ್ಯವಹರಿಸಿದ್ದಾರೆ

ವಿದೇಶ ವಾರ್ತೆ

ಇಂಡೋನೇಸ್ಯಕ್ಕೆ ಹೋಗುವ ಒಂದು ಡಚ್ ಹಡಗು ಸುವೇಜ್ ಕಾಲುವೆಯ ಮೂಲಕ ರವಾನಿಸಲ್ಪಡುವಾಗ ಅದನ್ನು ಸಾಗಿಸುವ ಕೆಲಸವನ್ನು ತಾವು ಮಾಡುವುದಿಲ್ಲವೆಂದು ಅಲ್ಲಿನ ಈಜಿಪ್ಟ್ ಕೆಲಸಗಾರರು ನಿರಾಕರಿಸಿದರು.

卐

ಬರ್ಮಾ ಸರಕಾರವನ್ನು ಥಾಕಿನ್ ನೂ ಅವರ ಮುಖ್ಯ ಮಂತ್ರಿತ್ವದಲ್ಲಿ ಪುನರ್ರಚಿಸಲಾಗಿದೆ. ಹೊಸ ಮಂಡಳದಲ್ಲಿ ೧೪ ಮಂತ್ರಿಗಳಿರುವರು

卐

ಇಂಗ್ಲೆಂಡಿನ ಕಲ್ಲಿದ್ದಲು ಮತ್ತು ಆಹಾರ ಕೊರತೆಗೆ ಅಲ್ಲಿನ ಮಜೂರ ಸರಕಾರದ ನಮ್ರ ಆಡಳಿತ ಧೋರಣವೇ ಕಾರಣವೆಂದು ಚರ್ಚಿಲ್ಲಿರು ಅಟ್ಲಿ ಮಂತ್ರಿಮಂಡಳವನ್ನು ಉರುಳಿಸಲು ಕಂಕಣಬದ್ಧರಾಗಿರುವರೆಂದು ಇತ್ತೀಚೆಗಿನ ಪಾರ್ಲಿಮೆಂಟ್ ಸಭೆಯಲ್ಲಿ ನಡೆದ ಉದ್ವೇಗ ಪರಚರ್ಚೆಯಿಂದ ತಿಳಿದು ಬರುತದೆ

卐

ಈ ವರ್ಷ ಅಮೇರಿಕದಲ್ಲಿ ಗೋಧಿ ಬೆಳೆ ವಿಪರೀತವಾಗಿ ಬೆಳೆದಿರುವುದರಿಂದ ಮುಂದಿನ ವರ್ಷ ಆಹಾರ ಪರಿಸ್ಥಿತಿ ಸುಧಾರಿಸಬಹುದೆಂದು ಊಹಿಸಲಾಗಿದೆ

卐

ಪ್ಯಾಲೆಸ್ಟೈನದಲ್ಲಿ ಯೆಹೂದಿ ದಂಗೆಗಾರರ ಪುಂಡತನ ವಿಪರೀತವಾಗಿದೆ ಸದ್ಯದಲ್ಲೇ ಅರಬರ ದಂಗೆ ಏಳುವುದಾಗಿ ಸಾರಿದ್ದಾರೆ ಇಂಗ್ಲೆಂಡಿನಲ್ಲಿನ ಕೆಲವು ಯೆಹೂದಿ ವರ್ತಕರ ಅಂಗಡಿಗಳನ್ನು ಕಲ್ಲು ಹೊಡೆದು ಪುಡಿ ಮಾಡಲಾಗಿದೆ ಯೆಹೂದಿಗಳ ಆಂಗ್ಲ ಸಿಪಾಯಿಗಳನ್ನು ಕೊಂದದ್ದೇ ಈ ಪ್ರತೀಕಾರಕ್ಕೆ ಕಾರಣ

卐

ಅಮೇರಿಕ ಫ್ರಾನ್ಸ ಗಳ ಮತ್ತು ಬ್ರಿಟನ್ ಗಳ ಜೆ[illegible]ಗಳು ಇನ್ನೂ ಜನಾಂಗ ಮಂಡಳದ ಸದಸ್ಯತನ ಪಡೆದಿಲ್ಲ ಅವರನ್ನು ಸೇರಿಸಿಕೊಳ್ಳಬಾರದೆಂದು ರಶ್ಯವು ಎಚ್ಚರಿಕೆ ಕೊಟ್ಟಿದೆ ಕಳೆದ ಯುದ್ಧದಲ್ಲಿ ಇವರು ಜರ್ಮನಿಗೆ ತೋರಿಸಿದ ಸಹಾನುಭೂತಿಯೇ ರಶ್ಯದ ಈ ಧೋರಣೆಗೆ ಕಾರಣವೆಂದೆನ್ನಲಾಗಿದೆ

ರೂ. ೧೦೦ ಬಹುಮಾನ

ಅದ್ಭುತ ಶಕ್ತಿ ಸಿದ್ಧ ಕವಚ

ಇದನ್ನು ಇಟ್ಟುಕೊಂಡ ಮಾತ್ರಕ್ಕೇ ಅತೀ ದುಸ್ಸಾಧ್ಯವಾದ ಉದ್ದೇಶವೂ ಸಾಧಿಸುವುದು ಇದನ್ನು ಪರಿಣಾಮಕಾರಿಮಾಡಲೂ ಯಾವ ಕಷ್ಟದ ಶ್ರಮವನ್ನು ವಹಿಸಬೇಕಾಗಿಲ್ಲ, ಯಾವ ತಯಾರಿಯಿಲ್ಲದೆಯೂ ಇದು ಫಲಕೊಡುವುದು ನೀಚಗ್ರಹಗಳನ್ನಿದು ಗೆಲ್ಲುವುದು, ಶತ್ರುಗಳನ್ನು ಗೆದ್ದು ಪರೀಕ್ಷೆ, ವ್ಯಾಪಾರ, ವ್ಯಾಜ್ಯ, ಸೋಡಿ, ಜೂಜು, ಉದ್ಯೋಗಗಳಲ್ಲಿ ಯಶಸ್ಸುಕೊಡುತ್ತದೆ ಸಂಪತ್ತಭಿವೃದ್ಧಿ ಮಾಡಿ, ಸಾಲ ವಿಮೋಚಿಸಿ, ಅಪಾಯಕರ ಕಾಯಿಲೆಗಳನ್ನು ಗುಣಪಡಿಸುತ್ತದೆ ನಿಮ್ಮನ್ನು ಅದೃಷ್ಟಶಾಲಿ ಮಾಡುತ್ತದೆ ಇದನ್ನು ಸುಳ್ಳೆಂದು ರುಜುವಾತು ಮಾಡಿದವರಿಗೆ 100 ರೂಪಾಯಿ ಬಹುಮಾನ ಬೆಲೆ ತಾಮ್ರದಕ್ಕೆ ರೂ 2 ಬೆಳ್ಳಿದ್ದಕ್ಕೆ ರೂ 8, ಬಂಗಾರದಕ್ಕೆ ರೂ 15 ಶೀಘ್ರ ಫಲದ ವಿಶೇಷ ತರದ ಕವಚಕ್ಕೆ (ಶುದ್ಧ ಬಂಗಾರದ ಮುಚ್ಚಿಗೆಯದು) ರೂ 25—7

Dukh Haran Ashram, No 1
P O Katri Sarai (Gaya).

ನಮ್ಮ ಮಾತು

ಗಾಂಧೀಜಿಯವರು ಕಾಶ್ಮೀರದ ಪ್ರವಾಸ ಮುಗಿಸಿ ಡಿಲ್ಲಿಗೆ ಹಿಂತೆರಳಿರುವರು. ಕಾಶ್ಮೀರದಲ್ಲಿ ಅವರಿಗೆ ಅತೀ ಉತ್ಸಾಹದ ಸ್ವಾಗತವು ದೊರಕಿತು ಅವರು ಕಾಶ್ಮೀರ ರಾಷ್ಟ್ರೀಯ ಪರಿಷತ್ತಿನ ಅಧ್ಯಕ್ಷ ಶೇಕ್ ಅಬ್ದುಲ್ಲಾರವರ ಧರ್ಮಪತ್ನಿಯರ ಅಥಿತಿಯಾಗಿದ್ದರು.

ಗಾಂಧೀಜಿಯರ ಕಾಶ್ಮೀರ ಪ್ರಯಾಣದ ಉದ್ದೇಶದ ಕುರಿತು ಸಂದೇಹಗೊಳಗಾದ ಮುಸ್ಲಿಮ ಲೀಗಿನವರು ಗಾಂಧೀಜಿಯರು ಕಾಶ್ಮೀರದ ರಾಜಕೀಯದಲ್ಲಿ ಕೈಹಾಕಬಾರದೆಂದು ಸೂಚಿಸಿ, ಪ್ರದರ್ಶನವನ್ನು ನಡೆಯಿಸಿದರು

ಗಾಂಧೀಜಿಯರು, ಶೇಕ್ ಅಬ್ದುಲ್ಲಾರವರ ಧರ್ಮಪತ್ನಿಯೊಡನೆ ದೀರ್ಘ ಸಂಭಾಷಣೆಯನ್ನು ನಡೆಯಿಸಿದರು ದಿವಾನ್ ಪಂಡಿತ ಖಾನರನ್ನು ಕಂಡು ಮಾತನಾಡಿರುವರು ಕಾಶ್ಮೀರ ಮಹಾರಾಜರೂ ಅವರ ಭೇಟಿ ಮಾಡಿರುವರು

ಕಾಶ್ಮೀರದ ಭವಿಷ್ಯವು ಎರಡೂ ಡೊಮಿನಿಯನಗಳೂ, ಕಾಶ್ಮೀರದ ಜನರೂ ಆಡಳಿತವೂ ಸೇರಿ ತೀರ್ಮಾನಿಸಬೇಕಾದ ವಿಚಾರವೆಂದು ಗಾಂಧೀಜಿಯವರು ಅಲ್ಲಿಂದ ಹಿಂತೆರಳುವ ಮುನ್ನ ಸಾರಿರುವರು

ಕಾಶ್ಮೀರದ ಸಮಸ್ಯೆಯು ಅತಿ ಗೂಢವಿದೆ ಅಲ್ಲಿ ಸದ್ಯದಲ್ಲೆ, ಗಡಿನಾಡಿನಲ್ಲಿ ನಡೆದಂತೆ ಜನಮತಗಣನೆಯು ನಡೆಯುವುದೆ, ಅಥವಾ ಕಾಶ್ಮೀರವು ಪಾಕಿಸ್ಥಾನದೊಡನೆ ನೇರಾಗಿ ಸೇರುವುದೆ ನೋಡಬೇಕು

ಹಿಂದೂದೇಶದ ವಿಭಜನೆಯು ಪೂರ್ಣಗೊಳ್ಳುತ್ತಾ ಬರುತ್ತಿದೆ ಎರಡೂ ಡೊಮಿನಿಯನುಗಳಲ್ಲಿನ ಅಲ್ಪಸಂಖ್ಯಾಕರ ರಕ್ಷಣೆಯ ಸಮಸ್ಯೆ ಈಗ ಮೇಲಕ್ಕೆ ಬಂದಿದೆ ಈ ಬಗೆ ಇಕ್ಕಡೆಗಳಿಂದಲೂ ಉತ್ತಮ ಆಶ್ವಾಸನಗಳು ಹೊರಟಿವೆ ಆದರೆ ಇಷ್ಟರ ತನಕ ಪಂಜಾಬದಲ್ಲಿ ಮತ್ತು ಬಂಗಾಳದಲ್ಲಿ ಈ ಆಶ್ವಾಸನಗಳಿಂದ ಉತ್ತಮ ಪರಿಣಾಮಗಳ ಉಂಟಾದುದು ಕಾಣಿಸುವುದಿಲ್ಲ ಆಗೋಸ 15ರ ಮತ್ತು ಎಲ್ಲಾ ಶಾಂತಿ ನೆಲೆಗೊಳ್ಳುವುದೆಂದೂ ಬಾವನಗಳಿವೆ ಆದರೂ ಗಡಿ ನಿರ್ಧಾರ ಸಮಿತಿಯ ಇತ್ಯರ್ಥಗಳನ್ನು ಕುರಿತೆ ತರಬೂ ಮಿಲಿಟರಿ ಏರ್ಪಾಡುಗಳಾದುವನ್ನು ನೋಡಿದರೆ, ಎರಡೂ ಡೊಮಿನಿಯನುಗಳು ಸ್ಥಾಪನೆಯಾದ ಮೇಲೂ ಕೆಲಸಮಯದವರೆಗೆ ಜಾತಿವಾರು ಗಲಭೆಯ ತಾಪವು ಮುಂದುವರಿಯಬಹುದೊ, ಎಂಬ ಸಂದೇಹವು ಉಂಟಾಗುತ್ತಿದೆ ಹಿಂದಿನದನ್ನು ಮರೆತು ಮುಂದಕ್ಕೆ ಪರಸ್ಪರ ಹಿತಚಿಂತನ ದೃಷ್ಟಿಯಿಂದ ವರ್ತಿಸುವಂತೆ, ಗಾಂಧೀ ಜಿನ್ನಾ ಮೊದಲಾಗಿ ಮುಂದಾಳುಗಳು ಹಿಂದಿ ಜನತೆಯೊಡನೆ ಭಿನ್ನವಿಸಿಕೆಂಡಿರುವರು ಅವರ ಈ ಕರೆಗೆ ಯೋಗ್ಯ ಲಕ್ಷ್ಯವು ದೊರಕಲೆಂದು ನಮ್ಮ ಹಾರೈಕೆ

ಭಾಷಾನುವಾರು ಪ್ರಾಂತ್ಯಗಳ ರಚನೆಯಾಗಬೇಕೆಂಬ ವಿಚಾರವು ಈಗ ಬೆಳಕಿಗೆ ಬಂದಿದೆ ಕನ್ನಡ ಪ್ರಾಂತವೊಂದು ಬೇರೆಯಾಗಬೇಕೆಂಬ ಚಳವಳವು ಈಗ ಪ್ರಾರಂಭವಾಗಿದೆ ಕನ್ನಡ ವಿಶ್ವ ವಿದ್ಯಾಲಯವೊಂದನ್ನು ಏರ್ಪಡಿಸಬೇಕೆಂದೂ ಕಾರ್ಯಕಲಾಪಗಳು ಪ್ರಾರಂಭವಾಗಿವೆ ಕನ್ನಡ ಪ್ರಾಂತ್ಯವೂ ಬ್ರಿಟಿಷ್ ಕರ್ನಾಟಕದ ಜಿಲ್ಲೆಗಳನ್ನು ಮಾತ್ರ ಕೂಡಿಸಿ, ರಚನೆಯಾಗಬೇಕೊ, ಯಾ ಮೈಸೂರಿನ ಸುತ್ತಲೂ, ಇತರ ಕನ್ನಡ ಜಿಲ್ಲೆಗಳನ್ನು ಕೂಡಿಸಿ ಪ್ರಾಂತ ರಚನೆಯಾಗಬೇಕೊ ಎಂದು ಕೆಲವರು ಕೇಳುತ್ತಿರುವರು ನಿಜವಾಗಿಯೂ ಕರ್ನಾಟಕವು ಒಂದು ಶ್ರೇಷ್ಠ ಪ್ರಾಂತ್ಯವಾಗಿ ಬಾಳಬೇಕಾದರೆ, ಮೈಸೂರನ್ನು ಕೂಡಿಸಿಕೊಂಡೇ ಪ್ರಾಂತದ ರಚನೆಯಾಗಬೇಕೆಂದೂ ನಮ್ಮ ಅಭಿಪ್ರಾಯವಿದೆ

ಅಂದರೆ, ಮೈಸೂರಿನಲ್ಲಿ ಈಗಿರುವ ರಾಜಾಡಳಿತ ಪದ್ಧತಿಯು ಸುಧಾರಿಸಬೇಡವೇ ಎಂಬ ಪ್ರಶ್ನೆಯು ಹೊರಡುತ್ತದೆ ಮೈಸೂರಿನಲ್ಲಿ ಜವಾಬ್ದಾರಿ ಸರಕಾರದ ಸ್ಥಾಪನೆಯಾಗಬೇಕು, ನಂತರ ಅದನ್ನು ಕರ್ನಾಟಕದಲ್ಲಿ ಏಕೀಕರಿಸಬೇಕು ಕರ್ನಾಟಕ ಏಕೀಕರಣ ಚಳವಳದೊಡನೆ, ಮೈಸೂರಿನಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ಚಳವಳವು ಅತಿ ಭರದಿಂದ ಸಾಗಬೇಕು

ದಕ್ಷಿಣ ಕನ್ನಡವು ಕೇರಳದ ಅಂಶವಾಗಿತ್ತು ಎಂಬ ಅತೀ ಪ್ರಾಚೀನ ಚರಿತ್ರೆಯ ದಾಖಲೆಗಳನ್ನು ಮುಂದಕ್ಕೆ ತರುವ ಲೇಖನಮಾಲಗಳು ಈಗ ತುಂಬಾ ಹೊರಡುತ್ತಿವೆ ಚರಿತ್ರೆಯ ದಾಖಲಗಳನ್ನೇ ಹೊಂದಿಕೊಂಡು ಪ್ರಾಂತ್ಯಗಳನ್ನು ರಚಿಸುವುದಾದರೆ, ದಕ್ಷಿಣಕನ್ನಡದ ಮೇಲ ಇನ್ನೂ ಹಲವು ಕೋರಿಕೆಗಳು ಬರಲು ಕಾರಣವಿದೆ ಇದರಿಂದ ಗೊಂದಲವು ಇನ್ನಷ್ಟು ಹೆಚ್ಚುವುದಲ್ಲದೆ ಬೇರೆ ಉಪಕಾರವಿಲ್ಲ ಸದ್ಯದ ಸ್ಥಿತಿಯನ್ನು ಪರಿಶೀಲಿಸಿಯೇ ಈ ಸಮಸ್ಯೆಗಳ ಪರಿಹಾರ ಮಾಡುವುದು ಹಿತವಿದೆ

ಇಂಡೋನೇಸ್ಯದಲ್ಲಿ ಡಚ್ಚರು, ರಿಪಬ್ಲಿಕ್ ಸರಕಾರದ ಮೇಲೆ ಕೈಮಾಡಿದರು ಅದು ಹಿಂದೂದೇಶದೊಡನೆ ಮೊರೆಯಿಟ್ಟಿತು. ಪಂಡಿತ ನೆಹರುರುಗಳವರು ನ್ಯೂಯೋರ್ಕಿನ ಯುನೋವಿನ (ಸಂಯುಕ್ತ ರಾಷ್ಟ್ರ ಸಂಸ್ಥೆಯ) ಸೆಕ್ಯೂರಿಟಿ ಕೌನ್ಸಿಲಿಗೆ ದೂರನ್ನು ಕಳುಹಿಸಿ ಕೊಟ್ಟರು ಫಲಿತಾಂಶ ಇಂಡೋನೇಶ್ಯದಲ್ಲಿ ಯುದ್ಧವು ಕೂಡಲೆ ನಿಲ್ಲಿಸಬೇಕೆಂಬ ಆಜ್ಞೆಯು ಹೊರಟಿತು ಅದಕ್ಕೆ ತಕ್ಕ ಮನ್ನಣೆಯೂ ದೊರಕಿತು

ಡಚ್-ಇಂಡೋನೇಸ್ಯ ವಿವಾದವನ್ನು ಬಗೆಹರಿಸಲು ಸಂಯುಕ್ತ ಅಮೇರಿಕವು ಮಧ್ಯಸ್ತಿಕೆಯನ್ನು ವಹಿಸಲು ಒಪ್ಪಿದೆ ಇಂಡೋನೇಸ್ಯದ ಮಾಜಿ ಪ್ರಧಾನ ಮಂತ್ರಿ ಸುಲ್ತಾನ ಶರೀರರು ಈಗಾಗಲೇ ನ್ಯೂಯಾರ್ಕಿಗೆ ತೆರಳಿರುವರು

ಇಂಡೋನೇಸ್ಯಾದ ಸಮಸ್ಯೆಯು ನ್ಯಾಯ ತರದಲ್ಲಿ ಬಗೆಹರಿಸುವುದರ ಮೇಲೆ ಯುನೋವಿನ ಮುಂದಿನ ಯಶಸ್ಸು ಹೊಂದಿಕೊಂಡಿದೆ ಹಿಂದೆ ಜಪಾನು ಮಂಚೂರಿಯಾದ ಅಭಿಕ್ರಮ ಮಾಡಿದಾಗ ಹಳೆಯ ಲೀಗ್ ಸಂಸ್ಥೆಯು ಕಣ್ಣು ಮುಚ್ಚಿಕೊಂಡು ಕುಳಿತದರಿಂದ ಉಂಟಾದ ದುಷ್ಪರಿಣಾಮಗಳ ಜ್ಞಾನವು ಈಗ ಸಂಬಂಧಪಟ್ಟ ಎಲ್ಲಾ ಮಹಾಪ್ರಭುತ್ವಗಳಿಗಿದೆ ಈಗ ಮಗದೊಮ್ಮೆ ಅದೇ ತರದ ದುಡುಕು ನಡೆಯದಂತೆ ಅವರು ಸಾಧಿಸಿದರೆ, ಆಗ ಈಗಿನ ಯುನೋವು ನಿಜವಾಗಿ ಒಂದು ಸಾರ್ಥಕ ಸಂಸ್ಥೆಯಾಗಿ ಬಾಳುವುದೆಂದು ಆಶೆಯಹೊಂದಬಹುದು

ಆಗೋಸ್ತು 15ರಂದು ಸ್ವಾತಂತ್ರ್ಯ ಲಭಿಸಿದುದಕ್ಕಾಗಿ ವಿಜೃಂಭಣೆಯ ಆಚರಣೆಗಳು ನಡೆಯಲು ಈಗಾಗಲೆ ಸಿದ್ಧತೆಗಳಾಗುತ್ತಿವೆ. ಅದೊಂದು ಮಹಾ ಸಂತೋಷದ ದಿನ ಆದರೆ ಈ ದಿನದಲ್ಲೆ, ದೇಶವನ್ನು ಸದ್ಯದ ಸಂಕಟದಿಂದ ಪಾರುಗೊಳಿಸುವ ಕುರಿತು ಮಹಾ ಪ್ರತಿಜ್ಞೆಯು ಕೂಡ ಆಗಬೇಕಾಗಿಯದೆ. "ಹಿಂದೂದೇಶದಲ್ಲಿ ಸೌಮ್ಯವಾದೀ ಪ್ರಜಾಪ್ರಭುತ್ವವೊಂದನ್ನು ಸ್ಥಾಪಿಸುವರೆ, ಕಾಂಗ್ರೆಸು ಹಾಕಿಕೊಂಡ ರಚನಾತ್ಮಕ ಕಾರ್ಯಕ್ರಮಗಳು ಮುಂದಕ್ಕೆ ರೂಢಿಗೆ ಬರಬೇಕಾಗಿವೆ" ಎಂಬುದಾಗಿ, ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಜನರಲ್ ಸೆಕ್ರೆಟರಿರಾದ ಶ್ರೀ ಶಂಕರರಾವ್ ದೇವರ ಹಾರೈಕೆಗೆ ನಮ್ಮ ಸಮರ್ಥನೆಯಿದೆ.

ದೇಶವು ಇಬ್ಭಾಗಿಸಲ್ಪಟ್ಟಿದ್ದರೂ ಸಾಂಪತ್ತಿಕದಮಟ್ಟಿಗೆ ಅದು ಏಕೀಕೃತವಾಗಿಯೆ ಬಾಳಬೇಕೆಂದು, ರಿಜರ್ವ ಬೇಂಕಿನ ಗವರ್ನರ್ ದೇಶಮುಖರವರು ಅಭಿಪ್ರಾಯಪಟ್ಟಿರುವರು ಅಷ್ಟೆ ಅಲ್ಲ ದೇಶದ ಸಾಂಪತ್ತಿಕವು ಸುರಕ್ಷಿತವಾಗಿಯೂ ಸುಭಿಕ್ಷವಾಗಿಯು ಸಾಗಬೇಕಾದರೆ ನಮ್ಮ ತಯಾರಿಕೆಯಲ್ಲಿ ತುಂಬಾ ಅಭಿವೃದ್ಧಿಯಾಗಬೇಕೆಂದೂ, ಧಾರಣೆಗಳಲ್ಲಿ ಕಡಿತದ ಯತ್ನಗಳು ನಡೆಯಬೇಕೆಂದೂ ಅವರು ಕೋರಿರುವರು

ದ್ವಿತೀಯ ಮಹಾಯುದ್ಧದ ಪರಿಣಾಮವಾಗಿ ಬ್ರಿಟನು ಈಗ ಕಠಿಣತರದ ಸಾಂಪತ್ತಿಕ ವಿಷಮತೆಗೆ ಒಳಗಾಗಿದೆ ಅದನ್ನು ಎದರಾಯಿಸಲು, ತಯಾರಿಕೆಯ ವೃದ್ಧಿಸಲು, ರಫ್ತನ್ನು ಹೆಚ್ಚಿಸಲು, ಅಲ್ಲಿನ ಜನತೆಯು ಬಹಳ ತ್ಯಾಗ ಮತ್ತು ಸಾಹಸದಿಂದ ಯತ್ನಪಡುತ್ತಿದೆ ಇದರಲ್ಲಿ ನಮಗೊಂದು ಪಾಠವಿದೆ

ಕಸಿ ಹಣ್ಣಿನ ಗಿಡಗಳು ಮತ್ತು ತರಕಾರಿ ಬೀಜಗಳು

ಜುಲೈ ಅಗಸ್ಟ ತಿಂಗಳಲ್ಲಿ ಹಾಕುವ ಇಂಗ್ಲೀಷ್ ಟೈಪ ಮತ್ತು ಇಂಡಿಯನ್ ತರಕಾರಿ ಬೀಜಗಳು 20 ತರಹ ಕಲರ್‌ಪ್ಯಾಕೆಟ್‌ಗಳ ಸಮೇತ- ರೂ. 4—0—0

ಬೆಂಗಳೂರು ಕಸಿ ಮಾವಿನ ಗಿಡಗಳು 6 ಜಾತಿ 6 ಗಿಡಕ್ಕೆ 9—0—0
ಕಲಕತ್ತೆ ಮಾವಿನ ಗಿಡಗಳು 12 ಜಾತಿ 12 ಗಿಡಕ್ಕೆ 16—0—0
ಸಪೋಟ, (ಚಿಕ್ಕು) ಗಿಡ 1ಕ್ಕೆ 1—8—0
ನಾಗಪುರ—ಕೊಡಗು—ಮುಸಂಬಿ—ನಿಂಬೆ—ಚಕ್ಕೋತ್ರ.
ದಾಳಿಂಬ. ಪನ್ನೀರಳೆ—ಗಿಡಗಳು ಡಜನ್ 1ಕ್ಕೆ 15—0—0

ಅರ್ಧ ಹಣ ಮುಂಗಡ ರವಾನಿಸಬೇಕು ಪ್ಯಾಕಿಂಗ್ ಮತ್ತು ಇತರ ಖರ್ಚು ಬೇರೆ

ಪತ್ತೆ ದಿ ಅಲ್‌ಸೂರ್ ಸೀಡ್ ಕಂಪೆನಿ,
ಅಲಸೂರು — ಬೆಂಗಳೂರು.

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP

ಗೃಹಿಣಿಯರಿಗೆ ಕೆಲ ಸೂಚನೆಗಳು

ಭಾರತೀಯ ನಡೆ ನೋಟಗಳನ್ನಿಡಿರಿ

ಭಾರತ ಸ್ತ್ರೀಯರು ಅತ್ಯಾಧುನಿಕ ಶೈಲಿಗಳನ್ನನುಸರಿಸುವಾಗಲೂ ತಮ್ಮ ಪೌರ್ವಾತ್ಯ ರೀತಿನೀತಿಗಳನ್ನಾಗಲಿ, ಭಾವ ಶೈಲಿಗಳನ್ನಾಗಲಿ ಮರೆಯಬಾರದು ನಮ್ಮ ಮನೆಗಳಲ್ಲಿ ನಾವೆಲ್ಲ ಪಾಶ್ಚಾತ್ಯ ಸುಖೋಪಭೋಗ ಸಲಕರಣೆಸನ್ನಿಟ್ಟುಕೊಂಡಿದ್ದರೂ ಅವುಗಳಲ್ಲಿ ಪೌರ್ವಾತ್ಯತನವಿರುವಂತೆ ನೋಡಿಕೊಳ್ಳಬೇಕು. ಉದಾ ವಿಶ್ರಾಂತಿ ಕೋಣೆಯಲ್ಲಿ ತುಂಬಾ ಭಾರತೀಯ ಚಿತ್ರಗಳನ್ನಿಟ್ಟಿರಬೇಕು. ಅಲ್ಲಿ ತೂಗಿಸಲ್ಪಡುವ ಪರದೆಗಳಲ್ಲೂ ಭಾರತೀಯ ಚಿತ್ರಗಳಿರುವಂತೆ ಪ್ರಯತ್ನಿಸಬೇಕು ಅದೇ ರೀತಿ ಪಾತ್ರೆಗಳು, ಚಾಪೆಗಳೂ ಭಾರತೀಯ ಇಲ್ಲವೆ ಪೌರ್ವಾತ್ಯ ಶೈಲಿಯವಾಗಿರಬೇಕು

ಊಟದ ಮನೆಯಲ್ಲಿ ಪ್ಲೇಟುಗಳನ್ನುಪಯೋಗಿಸುವ ಬದಲು ಹರಿವಾಣಗಳನ್ನು ಬಳಸಬೇಕು. ಊಟದ ನಂತರ ವೀಳ್ಯವನ್ನುಪಯೋಗಿಸುವ ವಾಡಿಕೆಯಿಟ್ಟುಕೊಳ್ಳಬೇಕು ಇದರಲ್ಲಿ ಅಪೂರ್ವವಾದೊಂದು ಭಾರತೀಯ ಸಾಂಸ್ಕೃತಿಕ ಭಾವವಿದೆ

ದಕ್ಷಿಣ ಭಾರತದಲ್ಲಿ ಒಂದು ಸಂತೋಷಕೂಟವೇರ್ಪಡಿಸಿದರೆ ಮಹಿಳೆಯರಿಗೆ ಹೂಗಳನ್ನು ಅರ್ಪಿಸುವ ಒಂದು ಪದ್ಧತಿಯಿದೆ. ಹಾಗೇ ಗಂಧದಲೇಪವೂ ಹಂಚಲ್ಪಡುವುದು ಮತ್ತೆ ಪನ್ನೀರನ್ನು ಎಲ್ಲರ ಮೇಲೂ ಚಿಮುಕಿಸಲಾಗುವುದು. ಇದರಿಂದ ಅಚ್ಚ ಭಾರತೀಯ ವಾತಾವರಣವುಂಟಾಗುವುದು. ಕಾರಣ ನಾವು ಮೊತ್ತಮೊದಲು ಭಾರತೀಯರೆಂಬುದನ್ನು ಮರೆಯಬಾರದು

★

ಹಿಸುದ್ದಿ ಸಂಗ್ರಹ

ಜಗತ್ತಿನ ಜನತೆ ಆಹಾರದಲ್ಲಿ 13½ ಮಿಲಿಯ ಟನ್ನುಗಳಷ್ಟು ಸಮುದ್ರದಿಂದ ಸಿಗುತ್ತದೆ.

ಪಾರ್ಲಿಮೆಂಟಿನ ಲೋರ್ಡ್ ಸಭೆಯ ಪ್ರತಿನಿಧಿಗಳಿಗೆ ಸಂಬಳ ರೂಪದ ಸಂಭಾವನೆ ಸಿಗುವುದಿಲ್ಲ. ಆದರೆ ಅವರ ವಾಸಸ್ಥಳದಿಂದ ಶಾಸನ ಸಭೆಗೆ ಬರಲು ತಗಲುವ ಪ್ರಯಾಣ ಖರ್ಚು ಸಿಗುವುದು.

★

ಬ್ರಿಟಿಷ್ ವಿಶ್ವ ವಿದ್ಯಾಲಯಗಳಲ್ಲಿ ಸುಮಾರು 66 ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

★

ನಮ್ಮ ದೇಶದಲ್ಲಿ ಲೈಸೆನ್ಸ್ ಪಡೆದ 2,47,092 ರೇಡಿಯೋಗಳಿವೆ.

★

1723ರಲ್ಲಿ ಎಡಿಬರ್ಗಿನ ಡ್ಯೂಕನು ಮಾಡಿಸಿದ 50 ಸಾವಿರ ಡಾಲರ್ ಬೆಲೆ ಬಾಳುವ ಅಮೂಲ್ಯ ಪೀಟಿಲು ಒಂದನ್ನು ಓರ್ವ ಕಳ್ಳನು ಕದ್ದು ನ್ಯೂಯೋರ್ಕಿನ ಒಂದು ಅಂಗಡಿಯಲ್ಲಿ 30 ಡಾಲರಿಗೆ ಅಡವು ಇಟ್ಟನು

★

ಮಿಸ್ಸೋರಿಯ 86 ವರ್ಷದ ರೈತನೊಬ್ಬನು 41 ವರ್ಷದ ವಿಧವೆಯೊಬ್ಬಳಿಗೆ ಮದುವೆ ಮಾಡಿಕೊಳ್ಳುವ ಮಾತು ಕೊಟ್ಟು ಕೊನೆಗೆ ತಿರಸ್ಕರಿಸಿದಕ್ಕೆ ಸಾವಿರ ಪವನು ಮಾನನಷ್ಟ ಕೊಡುವಂತೆ ವಿಧಿಸಲ್ಪಟ್ಟಿದ್ದಾನೆ

★

ಹರಿಜನರಿಗೆ ಕ್ಷೌರ ಮಾಡಬೇಕಾಗುವುದೆಂದು ಪಂಡರಾಪುರದ ಕೆಲಸಿಗಳು ತಮ್ಮ ಸೆಲೂನುಗಳನ್ನು ಮುಚ್ಚಿ, ಮನೆಯಿಂದ ಮನೆಗೆ ಸ್ಪೃಶ್ಯ ಹಿಂದೂಗಳಲ್ಲಿಗೆ ಮಾತ್ರ ಹೋಗುತ್ತಿರುವರಂತೆ

★

ಮಧ್ಯಪ್ರಾಂತ್ಯದ ಚಿಂದವಾರ ಜಿಲ್ಲೆಯಲ್ಲಿ ಓರ್ವ ಬಡ ಹೆಂಗಸು ಸತ್ತಳು ಹೂಳುವಾಗ 'ನೀರು' ಎಂದು ಕೂಗಿದಳು ಮೇಲೆ ತೆಗೆದಾಗ ಅವಳು ಎದ್ದು "ಸ್ವರ್ಗದಲ್ಲಿ ಸ್ಥಳವಿಲ್ಲವಂತೆ, ಮೂರು ತಿಂಗಳ ನಂತರ ಬರಲು ಅಲ್ಲಿಯ ಅರಸನೊಬ್ಬನು ಹೇಳಿದ್ದಾನೆ" ಎಂದವಳು ತಿಳಿಸಿದಳಂತೆ ಈ ವಿಚಿತ್ರ ವರ್ತಮಾನ ನಾಗ್ಪುರ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು

★

ಕೆಲವು ವಾರಗಳ ಹಿಂದೆ ನಮಗೆ 12 ಔನ್ಸು ಅಕ್ಕಿ ಸಿಕ್ಕುತಿತ್ತು ಆದರೆ ಮಲಯದ ಜಪರೇಶನ್ ಪ್ರಮಾಣ ಕೇವಲ 7 ಔನ್ಸು ಜಪಾನಿನಲ್ಲಿ ಕೂಡ 11 ಔನ್ಸು

★

ಬ್ರಿಟನಿನಲ್ಲಿ ಪ್ರತಿವಾರ 500 ಜನರು ಕ್ಷಯರೋಗದಿಂದ ಸಾಯುತ್ತಾರೆಂದೂ, ಭಾರತದಲ್ಲಿ ವರ್ಷಕ್ಕೆ 5 ಲಕ್ಷ ಮಂದಿ ಅದಕ್ಕೆ ತುತ್ತಾಗುವರೆಂದೂ ಡಾ! ಹಾರ್ಲೆ ಎಂಬವರು ವಿಶ್ವಕ್ಷಯರೋಗ ನಿವಾರಣೆ ಪರಿಷತ್ತಿನ ಲಂಡನ್ ಸಭೆಯಲ್ಲಿ ತಿಳಿಸಿದರು.

★

ಎತ್ತರ ಕಟ್ಟಡಗಳಲ್ಲಿ, ಅಪಾಯಕರ ಗನಿಗಳಲ್ಲಿ, ಸಿಡಿಮದ್ದಿನ ಕಾರ್ಖಾನೆಗಳಲ್ಲಿ—ಅಂಜಿಕೆ ಹುಟ್ಟಿಸುವ ಎಲ್ಲಾ ಕೆಲಸಗಳಲ್ಲಿ ಉದ್ಯುಕ್ತರಾದವರಲ್ಲಿ ವಾತರೋಗವು ಹೆಚ್ಚಾಗಿ ಕಂಡುಬಂದಿದೆ.

ಆಗಸ್ಟ್ 15ರ ನಂತರ ಕಲ್ಕತ್ತದ ಆಂಗ್ಲ ಮಹನೀಯರ ಕೀರ್ತಿಗಾಗಿ ಹೆಸರಿತ್ತ ಮಾರ್ಗಗಳಿಗಾಗಿ ಹೊಸದಾಗಿ ಭಾರತೀ ನಾಮಕರಣಗಳನ್ನು ಮಾಡಲಾಗುವುದು.

★

ಅದೆಂತಹ ಉಗ್ರ ವಿಷದ ಪರಿಣಾಮವನ್ನು ನಿಷ್ಫಲಗೊಳಿಸುವ ಒಂದು ವಿಷಹಾರಿ ರಸಾಯನವನ್ನು ರಶ್ಯನ್ ವಿಜ್ಞಾನಿಗಳು ಪರಿಪೂರ್ಣಗೊಳಿಸಿರುವರು.

★

ಐಯರ್ಲೆಂಡಿನ ಪಶ್ಚಿಮ ಕರಾವಳಿಯ ಸಮುದ್ರ ನೀರು ದಿನಹೋದಂತೆ ಹೆಚ್ಚೆಚ್ಚು ಶುದ್ಧವಾಗುತ್ತಿದೆಯಂತೆ ಪರಿಣಾಮವಾಗಿ ಬೆಸ್ತರು ಬೆಳಗ್ಗಿನ ಹೊತ್ತು ಹಾಕಿದ ಬಲೆಗಳನ್ನು ಅಲ್ಲಿನ ಮೀನುಗಳಿಗೆ ಕಾಣುವಂತಾಗಿ ತಮ್ಮ ದಂಧೆಗೆ ಧಕ್ಕೆ ಬಂದಿರುವದೆಂದವರು ಸರಕಾರಕ್ಕೆ ಮನವಿ ಮಾಡಿಕೊಂಡಿದ್ದರ ಪರಿಣಾಮವಾಗಿ ಈಗ ಆ ಕಡೆಗಳಲ್ಲಿ ರಾತ್ರಿ ಕಾಲದಲ್ಲಿ ಮೀನು ಹಿಡಿಯುವ ಸರತಿ ಪ್ರಾರಂಭಿಸಲಾಗಿದೆ

★

ಇಂಗ್ಲೆಂಡಿನ ದುರುಸು ಬಾಣ ತಯಾರಿಸುವವನೊಬ್ಬನು ಹೆಂಡತಿ ಕಡೆಯವರು ಕೊಡುತ್ತಿರುವ ತಾಪತ್ರಯವನ್ನು ಸಹಿಸಲಾರದೆ ತನ್ನ ಮನೆಯಲ್ಲಿರುವ ಸಿಡಿಮದ್ದುಗಳಿಗೆ ಬೆಂಕಿ ಕೊಟ್ಟು ಹೆಂಡತಿ ಮಕ್ಕಳನ್ನು ಜಖಂಗೊಳಿಸಿದ್ದಾನೆ ಹೆಂಡತಿಯ ಇರ್ವ ತಮ್ಮ, ತಂಗಿಯರು ಮೃತಪಟ್ಟರು

★

ಭಾರತದ ಸಾಂಸ್ಕೃತಿಕ ಮತ್ತು ತತ್ವಜ್ಞಾನ ಸಂಬಂಧ ಪರಿಚಯವನ್ನು ಮಾಡಿಕೊಳ್ಳುವ ಉದ್ದೇಶದಿಂದೋರ್ವ ಜರ್ಮನ್ ವಿಶ್ವವಿದ್ಯಾಲಯ ವಿದ್ಯಾರ್ಥಿಯು ಮದ್ರಾಸ್ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಬರಕೊಂಡಿದ್ದಾನೆ ಅವನೊಡನ ಪತ್ರವ್ಯವಹಾರ ನಡೆಸಲಿಚ್ಛಿಸುವವರು ಮದ್ರಾಸ್ ವಿಶ್ವವಿದ್ಯಾಲಯದ ಸುದ್ದಿ ಖಾತೆಯ ಅಧಿಕಾರಿಗೆ ಬರಿಯುವುದು.

★

ತನ್ನ ಧೂಮ್ರಪಾನ ಸೇದುವಿಕೆಯನ್ನು ಅರ್ಧಾಂಶದಷ್ಟು ಕಡಿಮೆಮಾಡಲು ವೇಲ್ಸಿನ ಓರ್ವ ಗೃಹಸ್ಥನು ತನ್ನ ತಂಬಾಕು ನಳಿಗೆಯನ್ನು ಅರ್ಧಕ್ಕೆ ಕೊಯಿರುವನು

★

ಲಂಡನಿನ ಡೆಪ್ಟ್‌ಫರ್ಡ್ ತಾಲೂಕಿನಲ್ಲಿ ಪಾರಿವಾಳಗಳ ತೊಂದರೆ ಕಡಿಮೆ ಮಾಡುವುದನ್ನು ನೋಡಿಕೊಳ್ಳಲು ಓರ್ವ ಸರಕಾರಿ ಅಧಿಕಾರಿ ಇದ್ದಾನೆ

★

ಕಳೆದ ಸೋಮಾವತಿ ಅಮಾವಾಸ್ಯೆ ಜಾತ್ರೆಗಾಗಿ ಚಿತ್ರಕೂಟಕ್ಕೆ ಹೋಗುತ್ತಿದ್ದ ರೈಲಿನಲ್ಲಿ ಯಾತ್ರಿಕರ ಗರದಿಯಿಂದ ಐದು ಜನರು ಶ್ವಾಸೋಶ್ವಾಸನೆಕ್ಕೆಡೆಯಿಲ್ಲದೆ ಮಡಿದಿರುವರು

ವಾರದ ವಿಜ್ಞಾನ ವಾರ್ತೆಗಳು

ಹಲ್ಲುಗಳಿಗೆ ಲಿಂಬೆ ಬೇಡ

ಲಿಂಬೆ ಹಣ್ಣಿನ ರಸದಲ್ಲಿ ವಿಟಮಿನ್ ಸಿ ಜೀವಾತುಗಳು ಯಥೇಷ್ಟವಾಗಿವೆಯೆಂದು ಇದುತನಕ ವೈದ್ಯರುಗಳು ವಾತ ಅಗ್ನಿಮಾಂದ್ಯ ವ್ಯಾಧಿಗಳಿಗೆ ಸೇವನ ಮಾಡಲು ಶಿಫಾರಸು ಮಾಡುತ್ತಿದ್ದರು ಆದರೆ [illegible] ದಂತ ವೈದ್ಯರು ಈಗ [illegible] ದ್ದಾರೆ ಲಿಂಬೆಗೆ ಹದಪಿರಲಿ, ಅದರ [illegible] ಹಲ್ಲಿಗೆ ಕೆಡುಕ ಂಟ ಮಾಡಬಹುದು ಅಮೇರಿಕದ ಒಂದು ಪ್ರಸಿದ್ಧ ದಂತ ಶುಶ್ರೂಷಾಲಯಕ್ಕೆ ಒಂದ 50 ಹಲ್ಲು [illegible] ಗಳ ಪಥ್ಯ ವಿವರ ಕೇಳಿದಾಗ ಅವರೆಲ್ಲರೂ ಧೀರ್ಘ ಕಾಲ ಎಂಪ ಲಿಂಬೆ ಹಣ್ಣಿನ ರಸ ಸೇವನೆ ಮಾಡುತ್ತಿದ್ದರೆಂದು [illegible] ಲಿಂಬೆ ಹಣ್ಣಿನೊಳಗಿರುವ ಸಿಟ್ರಿಕ್ ಸಿಡ ಅಗ್ನಿಸಾರವು ಹಲ್ಲಿನ ಹೊರ ಕವಚವನ್ನು ಕೊರೆದು ಹಾಕಿರುವುದು. ಕೊಲಂಬಿಯಾ ವಿಶ್ವವಿದ್ಯಾಲಯದ ಓರ್ವ ದಂತ ಚಿಕಿತ್ಸಾ ಸಂಶೋಧಕರು ಲಿಂಬೆ ಮತ್ತು ದ್ರಾಕ್ಷೆ ಹಣ್ಣುಗಳೆರಡರ ರಸವೂ ದಂತ ಕವಚ ಕೊರೆಯುವ ಶಕ್ತಿಯುಳ್ಳದ್ದೆಂದು ತಿಳಿಸುತ್ತಾ, "ಅದಕಿಂತಲೂ ಹೀಗೆ ಸಿಟ್ರಿಕ್ ಎಸಿಡಿನಿಂದ ಮೆದುಮಾಡಲ್ಪಟ್ಟ ದಂತಕವಚವನ್ನು ಬಿರುಸಾದ ಬ್ರಶ್ಶುಗಳಿಂದ ತಿಕ್ಕುವುದರಿಂದ ಕೊರೆಯುವಿಕೆ ಮತ್ತಷ್ಟು ಶೀಘ್ರವಾಗಿದೆ" ಎಂದೂ ಹೇಳುತ್ತಾರೆ

卐

ಷಷ್ಟೇಂದ್ರಿಯ

ಯಾವುದಾದರೂ ಒಂದು ಅಪೂರ್ವ ಘಟನೆ ನಡೆದರೆ ಕೆಲವರು "ಹೌದು ಸ್ವಲ್ಪ ಸಮಯ ಮುಂಚೆ ಆ ಕುರಿತು ನನಗೇನೊ ತೋಚಿದ ಹಾಗಾಯಿತು" ಎನ್ನುವುದನ್ನು ನಾವು ಕೇಳಿರಬಹುದು ಯಾರಾದರೊಬ್ಬರು ಏನಾದರನ್ನು ಹೇಳುವ ಮುಂಚೆಯೇ ಅವರು ಏನು ಹೇಳಬಹುದೆಂದು ಮಗೆಂದಾದರೂ ತಿಳಿದಿದಿಯೆ? ಅಂದ ಅನುಭವ ನಿಮಗಾಗಿದ್ದರೆ ಮಾನಸಿಕ ವಿಜ್ಞಾನಿಗಳು ತಿಳಿಸುವ ಷಷ್ಟೇಂದ್ರಿಯ ಜ್ಞಾನವು ನಿಮಗಾಗಿದೆಯೆಂದಾಯಿತು. ನಿಮ್ಮ ಉಳಿದ ಪಂಚೇಂದ್ರಿಯಗಳ ಸಹಾಯವಿಲ್ಲದೆ ವಿಷಯ ಜ್ಞಾನವನ್ನು ಪಡೆಕೊಳ್ಳುವ ಶಕ್ತಿಯದು ಈ ಕುರಿತ [illegible] ಡ್ಯೂಕ್ ವಿಶ್ವವಿದ್ಯಾಲಯ [illegible] 1[illegible] ವರ್ಷ ಪರಿಶೋಧನ ನಡೆಸಿ [illegible] ಇದನ್ನು ವಿಮ್ಯ ದೃಷ್ಟಿಯಿಂದೂ ನ[illegible] ಪ್ರಾಚೀನರ ಮಾತುಗಳಲ್ಲಿ ವಿವರಿಸಬಹುದು

ತರ್ಕ ವಿತರ್ಕ

[illegible] ಕಿಸ್ತಾನದ ಅಲ್ಪಸಂಖ್ಯಾತರಿಗೆ [illegible] ಹಕ್ಕಿನ ಹೊಸ ಭರವಸೆ ಸಿಕ್ಕಿದೆ—"ನಾವು [illegible] ಭಗಿನಿಯರಂತೆ ತಿಳಿಕೆ [illegible] ಜೀವವನ್ನು [illegible] ಕೊಟ್ಟು ರಕ್ಷಿಸ[illegible] [illegible] ಸ್ಪಷ್ಟವಾಗಿ [illegible]

卐

[illegible] ತಮ್ಮ ಹಿಂದಿನ ಸ್ಥಳಕ್ಕೆ ಹಿಂತಿರುಗಬೇಕೆಂದು ಜನಾಂಗ [illegible] ವಿನಂತಿಸಿಕೊಂಡಿದೆ ಆದರ ಪಚ್ಚರು ಈಗಾಗಲೇ [illegible] ಹೋಗಲು ಸಿದ್ಧರಿರುವ [illegible] ಸಂದೇಹಾಸ್ಪದ

卐

ಕೆಲವು ಶರತುಗಳ ಮೇಲೆ ದೇಶಿ ಸಂಸ್ಥಾನಗಳು ಹಿಂದೀ ಪಟನಾ ಸಮಿತಿಗೆ ಸೇರುವುವಂತೆ ನರೇಂದ್ರರಿಗೆ ಜೂಜಿನ ಅಶ್ವಗಳನ್ನು ಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂಬುದು ಈ ಶರ್ತಗಳಲ್ಲೊಂದು ಖಂಡಿತವಾದುದೆಂದು ಸಮತಾವಾದಿಗಳ ಊಹೆಯಿರಬಹುದು

卐

ಬಿರಾರನ್ನು ಆಕ್ರಮಿಸುವ ಧೈರ್ಯ ನಿಜಾಮರಿಗಿಲ್ಲವೆಂದು ಶಂಕರರಾವ ದೇವರ ಧೃಡ ನಂಬಿಕೆ ಈ ನಂಬಿಕೆಯ ಧೈರ್ಯವೇನು?

卐

ರಶ್ಯಕ್ಕೆ ಸದ್ವರ್ತನೆಯನ್ನು ಕಲಿಸಬೇಕೆಂದೋರ್ವ ಅಮೇರಿಕನ್ ವಿದೇಶಾಂಗ ಕಚೇರಿಯ ಅಧಿಕಾರಿಗಳು ಎಚ್ಚರಿಸಿದ್ದಾರೆ. ಎಟಂ ಬೊಂಬ್ ಹಾಕುವ ನಿಗ್ರೋಗಳನ್ನು ಸುಲಿಯುವ ಅಮೇರಿಕನರಿಗೆ ಕಲಿಸಿದ ಉಪಾಧ್ಯಾಯರಾರು?

ರಾತ್ರಿ ಹವೆಯು ಅಪಾಯಕರವಿರಬಹುದು ರಕ್ಷಣೋಪಾಯವಿಲ್ಲದಿದ್ದರೆ ಶೀತದಿಂದ ಗೂರಲು ಕೆಮ್ಮು, ವಿಷಮ ಜ್ವರಗಳುಂಟಾಗಬಹುದು ಪೆಪ್ಸ್ ಶ್ವಾಸನೀಯ ವಿಷಹಾರಿ ಮಾತ್ರೆ ಸೇವಿಸಿರಿ

ಪೆಪ್ಸಿನ ಅಮೂಲ್ಯ ಔಷಧ ಸಾರಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೊಯಲ್ಪಡುವುವು ಅಲ್ಪ ಊದುಕೊಂಡಿರುವ ಶ್ವಾಸನಾಳ ಮತ್ತು ಪರೆಗಳನ್ನದು ಶಮನಿಸಿ ಕೆಮ್ಮು ನಿಲ್ಲಿಸುವುದು ಶ್ವಾಸೇಂದ್ರಿಯಗಳು ಬಲಗೊಂಡು ಚೇತನಗೊಳ್ಳುವವು ರೋಗಾಣು ನಾಶವಾಗಿ ಭಾವಿ ಸಂಕಷ್ಟವನ್ನು ತಡೆಯುವುದು

ಕೆಮ್ಮು, ಶೀತ, ಗಂಟಲು ನೋವು, ವಿಷಮ ಜ್ವರ, ಗೂರಲು ಮತ್ತಿತರ ಎದೆ ತೊಂದರೆಗಳಿಗೆ ಪೆಪ್ಸ್ ಪ್ರಖ್ಯಾತ ನಿವಾರಣೆ ಔಷಧಿ.

ಪೆಪ್ಸ್ ಸೇವಿಸಿರಿ.

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇರಿಸಿರಿ.

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವವು.

ಆಗಸ್ಟ ತಾ. ೯ ಮತ್ತು ೧೫ ಆಚರಿಸುವ ಬಗೆ

ಕಾಂಗ್ರೆಸ್ ಕಾರ್ಯದರ್ಶಿಗಳ ಪ್ರಕಟಣೆ

ಇಂದೀಗ ಆಗೋಸ್ತು 15ರ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮಕ್ಕೆ ಮುಖ್ಯ ಕಾರಣವಾದ ಆಗೋಸ್ತು 9ನ್ನು ಜಿಲ್ಲೆಯ ಎಲ್ಲಾ ಸರ್ಕಲ್ ಕಾಂಗ್ರೆಸ್ ಕಮಿಟಿಗಳವರೂ, ಬೆಳಿಗ್ಗೆ ಧ್ವಜವಂದನ, ಸಂಜೆ ಮೆರವಣಿಗೆ ಮತ್ತು ಸಾರ್ವಜನಿಕ ಸಭೆನಡಿಸಿ ಆಚರಿಸಬೇಕಾಗಿ ವಿನಂತಿ ಈ ಸಂದರ್ಭದಲ್ಲಿ ಹಳೆಯ ರಾಷ್ಟ್ರೀಯ ಧ್ವಜಗಳನ್ನೇ ಉಪಯೋಗಿಸಬಹುದು.

ಆಗೋಸ್ತು 15ರ ಸಮಾರಂಭವನ್ನು ಅಧಿಕಾರಿ ಮತ್ತು ಇತರ ಎಲ್ಲಾ ವರ್ಗದ ಜನರ ಸಹಕಾರ ಮತ್ತು ಕೂಡುವಿಕೆಯಿಂದ ನಡಿಸುವ ವ್ಯವಸ್ಥೆ ಮಾಡಬೇಕು.

ಎಲ್ಲಾ ವರ್ಗದ ಜನರ ಪ್ರತಿನಿಧಿಗಳ ಮತ್ತು ಸ್ಥಳೀಯ ಅಧಿಕಾರಿಗಳಿಂದ ಕೂಡಿದ ಸಮಾರಂಭ ಕಮಿಟಿಯನ್ನು ಸ್ಥಾಪಿಸಿ ಆ ಮೂಲಕ ಸರ್ವ ಕಾರ್ಯಕಲಾಪಗಳನ್ನೂ ನಡಿಸುವಂತೆ ನೋಡಬೇಕು ಕಾಂಗ್ರೆಸಿಗರು ಈ ಸಂದರ್ಭದಲ್ಲಿ ಯಾವ ಪ್ರತ್ಯೇಕ ಭಾವವನ್ನೂ ತೋರಿಸಬಾರದು

ಬೆಳಿಗ್ಗೆ ಕೇಂದ್ರ ಸ್ಥಳವೊಂದರಲ್ಲಿ ಧ್ವಜವಂದನೆ ನಡಿಸಿದ ಮೇಲೆ ಬೇರೆಬೇರೆ ಕಟ್ಟಡಗಳಲ್ಲಿ ಧ್ವಜಾರೋಹಣ ನಡಿಸಬಹುದು ಚಿಕ್ಕ ಧ್ವಜಗಳನ್ನು ಜನರಿಗೆ ವಿಕ್ರಯಿಸಿ ಪ್ರಚಾರವಾಡಬಹುದು

ದೇವಾಲಯ, ಮಸೀದಿ, ಇಗರ್ಜಿಗಳಲ್ಲಿ ಪ್ರಾರ್ಥನೆ ನಡಿಸುವ ಏರ್ಪಾಡು ಮಾಡಬಹುದು

ಶಾಲಾ ಮಕ್ಕಳಿಗೆಲ್ಲಾ ಏನಾದರೂ ಸಿಹಿ ತಿನಸು ಹಂಚಿ ಸಂಜೆ ಅವರೆಲ್ಲ ಮೆರವಣಿಗೆಯಿಂದ ಪೂರ್ವನಿಶ್ಚಿತ ಕೇಂದ್ರ ಸ್ಥಳಕ್ಕೆ ಹೋಗಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುವ ವ್ಯವಸ್ಥೆ ಮಾಡಬೇಕು

ಸಭೆಯಲ್ಲಿ ಭಾಷಣಗಳು ಚರ್ಚಾಸ್ಪದ ವಿಷಯಗಳನ್ನೊಳಗೊಂಡಿರಬಾರದು. ಪಾರ ಟೀಕೆಟಿಪ್ಪಣಿ ಮೆಗ್ಗಳಿಕೆಗಳೂ ಇಲ್ಲದೆ ಸಂದರ್ಭೋಚಿತ ಗಾಂಭೀರ್ಯ ಮತ್ತು ಗೌರವದಿಂದ ಅವು ಮಾಡಲ್ಪಡಬೇಕು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮವಾಗಿ ಉಜ್ವಲ ರಾಷ್ಟ್ರೀಯತೆಯ ಬೀಜ ಬಿತ್ತಿ ಚಿರಸ್ಮರಣೀಯರಾಗಿರುವ ದೇಶಭಕ್ತ ಕಾರ್ನಾಡು ಸದಾಶಿವರಾಯರನ್ನು ಈ ಸಂದರ್ಭದಲ್ಲಿ ಸ್ಮರಣೆ ಮಾಡುವುದು, ಮತ್ತು ಜಿಲ್ಲೆಯ ಸ್ವಾತಂತ್ರ್ಯ ಇತಿಹಾಸದ ಸಂಕ್ಷಿಪ್ತ ಇತಿಹಾಸವನ್ನೀಯುವುದು ಸಂದರ್ಭೋಚಿತವಾಗುವುದು

ಈ ದಿನದ ಸ್ಮರಣಾರ್ಥವಾಗಿ ಏನಾದರೂ ಶಾಶ್ವತ ಸ್ಮಾರಕದ ಏರ್ಪಾಡು ಮಾಡಲು ಸಾಧ್ಯವಾದರೆ ಮಾಡಬಹುದು.

ರಾಷ್ಟ್ರೀಯ ಧ್ವಜಗಳು

ರಾಷ್ಟ್ರೀಯ ಧ್ವಜಗಳಿಗಾಗಿ ನಮಗೆ ಹಲವು ಪತ್ರಗಳು ಬಂದಿರುತ್ತವೆ ಮಂಗಳೂರಿನ ರಥಬೀದಿಯ ಖಾದಿ ಭಂಡಾರದವರು (ಸ್ವದೇಶಿ ಸ್ಟೋರ್ಸ್) ದೊಡ್ಡ ಮಧ್ಯ ತರಗತಿಯ ಮತ್ತು ಚಿಕ್ಕ ಪ್ರಮಾಣದ ಹೊಸ ರಾಷ್ಟ್ರೀಯ ಧ್ವಜವನ್ನು ಬೇಕಷ್ಟು ತಯಾರಿಸಿರುತ್ತಾರೆ. ಬೇಕಾದವರು, ದ.ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ. ಕೆ. ಶೆಟ್ಟಿಯವರಿಂದ ಪಡಕೊಳ್ಳಬಹುದು ಎಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಜಿಲ್ಲಾ ಪರಿಚಯ

ಜಿಲ್ಲಾ ಪೋಸ್ಟ್‌ಮೇನ್ ಸಭೆ: ಈ ಸಭೆಯು ತಾ. 27-7-47ರಂದು ಶ್ರೀ ಬಿ. ಎಸ್ ಭಾಸ್ಕರ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು. ದ ಕ ಜಿಲ್ಲೆಯಲ್ಲಿ ಮಂಜೂರಾದ ಠರಾವುಗಳನ್ನು ಅಖಿಲಭಾರತ ಸಮ್ಮೇಳನಕ್ಕೆ ಕಳುಹಿಸುವ ಬಗ್ಗೆ ನಮ್ಮ ಸಂಘದ ಅಧ್ಯಕ್ಷ ಬಿ ಎಸ್ ಭಾಸ್ಕರ ರೈ ಮತ್ತು ಕಾರ್ಯದರ್ಶಿ ರೋಬರ್ಟ್ ಸಿಕ್ವೇರ ಇವರನ್ನು ಪ್ರತಿನಿಧಿಗಳನ್ನಾಗಿ ತಾ 11-8-47ಕ್ಕೆ ದೆಹಲಿಯಲ್ಲಿ ಜರಗುವ ಅಖಿಲ ಭಾರತ ಸಂಘದ ಸಮ್ಮೇಳನಕ್ಕೆ ಕಳುಹಿಸುವುದೆಂದು ನಿರ್ಣಯವಾಯಿತು

ಭಗಿನಿ ಸಮಾಜ: ಕಳೆದ ತಾ. 26ರಂದು ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ವಾರ್ಷಿಕ ಮಹಾಸಭೆ ಜರುಗಿ ಈ ಕೆಳಗಿನ ಸದಸ್ಯರು ಕಾರ್ಯಕಾರಿ ಸಮಿತಿಗೆ ಆರಿಸಲ್ಪಟ್ಟಿದ್ದಾರೆ– ಶ್ರೀಮತಿ ಲೀಲಾಬಾಯಿ ಇ ರಾವ್–ಅಧ್ಯಕ್ಷೆ, ಶ್ರೀಮತಿ ಮ ಕಲ್ಪಾ ಪಂಡಿತ್ ಮತ್ತು ಲೀಲಾ ಸಖಾರಾಮ ರಾವ್–ಉಪಾಧ್ಯಕ್ಷೆಯರು, ಶ್ರೀಮತಿ ರಮಾಬಾಯಿ ಪೈ–ಕೋಶಾಧ್ಯಕ್ಷೆ, ಶ್ರೀಮತಿ ಕಲ್ಯಾಣಿ ಶೆಟ್ಟಿ ಮತ್ತು ಶ್ರೀಮತಿ ವಸಂತಿ–ಸಹಕಾರ್ಯದರ್ಶಿಯರು. (ಕೊಡಿಯಾಲಬೈಲು) ವಿ ಸೆಸ್ ಬಿ ಗಣೇಶ–ಕಾರ್ಯದರ್ಶಿ, ಜಪ್ಪು, ಶ್ರೀಮತಿ ಮೋಹಿನಿ–ಕಾರ್ಯದರ್ಶಿ, ಪಂಟ್ಲಂಡ್‌ಪೇಟೆ ಅದೇ ದಿನ ಅದೇ ಸ್ಥಳದಲ್ಲಿ ಶ್ರೀಮತಿ ಜೆ ಎಸ್ ಸೋಂದರ್ಸರವರ ಅಧ್ಯಕ್ಷತೆಯಲ್ಲಿ ಸಮಾಜದ ವಾರ್ಷಿಕೋತ್ಸವವು ಸಾಂಗವಾಗಿ ನೆರವೇರಿತು

ಭಾಷಣ: ಇಲ್ಲಿಯ ವೆನ್‌ಲಾಕ್ ಆಸ್ಪತ್ರೆಯಲ್ಲಿ ಈಚೆಗೆ ಇಲ್ಲಿಗೆ ಬಂದಿದ್ದ ತಮ್ಮ ಆಧಿಪತ್ಯದ ಆರೋಗ್ಯ ಶಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಡಾ ಅನಂತ ಪಿಳ್ಳೆ ಇವರು ಒಂದು ಭಾಷಣ ಮಾಡಿದರು. ಈ ಮುನಿಸಿಪಾಲಿಟಿಯಲ್ಲಿ ಸನ್ನಿಪಾತ, ಅತಿಸಾರ, ಅತಿಸಾರ, ಭೇದಿ ಮೊದಲಾದ ರೋಗಗಳು ಬೇರೆ ಬೇರೆ ಕಡೆ ಹೆಚ್ಚುತ್ತಿವೆ ಎಂಬುದರ ಅಂಕ ಸಂಖ್ಯೆಗಳನ್ನು ಕೊಟ್ಟು, "ಇಂಥ ರೋಗಗಳು ಹಬ್ಬಲಿಕ್ಕೆ ನೊಣಗಳು, ಹುಳುಗಳೇ ಕಾರಣ, ಅವುಗಳ ಬಾಧೆ ಕಡಿಮೆ ಮಾಡಬೇಕಾದರೆ ಕಕ್ಕಸು ಮುಂತಾದುವು ನಿರ್ಮಲವಾಗಿರಬೇಕು" ಎಂದರು. ತಾವು ಮಂಗಳೂರಿನಲ್ಲಿ ಸಂದರ್ಶಿಸಿದ "ಹೋಟೆಲ್ ಸಿನಮಾ ಮರಾರಗಳ ಸ್ಥಿತಿ ಸಮರ್ಪಕವಲ್ಲ, ಅದಕ್ಕಾಗಿ ಹೊಸ ರೀತಿಯ ಕಕ್ಕಸುಗಳನ್ನು ಕಟ್ಟಿಸುವ ಒಂದು ಮಾದರಿಯನ್ನು ತಯಾರಿಸಲಾಗಿದೆ; ಅದಕ್ಕಾಗಿ ಖರ್ಚು ಸಾಮಾನ್ಯ; ಪ್ರಯೋಜನ ಹೆಚ್ಚು" ಎಂದರು. ಈ ವಿಚಾರದಲ್ಲಿ ಇಲ್ಲಿನ ಡಾಕ್ಟರುಗಳೆಲ್ಲ ಸಹಕರಿಸಿ, ಆ "ಮಾದರಿಯನ್ನು ಇಲ್ಲಿನವರೂ ಅನುಸರಿಸುವಂತೆ ಜನರನ್ನು ಪ್ರೋತ್ಸಾಹಿಸಬೇಕಾಗಿ" ಕೇಳಿಕೊಂಡರು. ಡಾ. ಅಡಪ್ಪರೇ ಮೊದಲಾದವರು ಸಹಕರಿಸುವ ಆಶ್ವಾಸನವಿತ್ತರು.

150 ಗ್ರಾಮಗಳಿಗೆ ಬಟ್ಟೆ ಹಂಚೋಣವಿಲ್ಲ

ನಮ್ಮ ಜಿಲ್ಲೆಯ ಸುಮಾರು 800 ಹಳ್ಳಿಗಳಲ್ಲಿ ಇನ್ನೂ ಸುಮಾರು 150 ಗ್ರಾಮಗಳಿಗೆ ಬಟ್ಟೆ ಹಂಚೋಣವಿಲ್ಲವೆಂದು ಕೇಳಿ ವಿಸ್ಮಯವಾಗಿದೆ. ಇದು ಕಳೆದ ಎಪ್ರಿಲ್, ಮೇ ಜೂನಿನಿಂದ ಎಂದೆನ್ನಲಾಗಿದೆ ಮೊದಲು ಈ 150 ಗ್ರಾಮಗಳವರೂ ಸಮೀಪದ ಬಟ್ಟೆ ವ್ಯಾಪಾರಿಯಿಂದ ಬಟ್ಟೆ ಕೊಳ್ಳುತ್ತಿದ್ದರು, ಈಗ ಈ "ವಿಶ್ವಾಮಿತ್ರ ಸೃಷ್ಟಿ"ಯಲ್ಲಿ ಆ ಗ್ರಾಮದವರ ಅವಸ್ಥೆ ತ್ರಿಶಂಕುವಿನದು

ಸ್ವತಂತ್ರ ದಿನಾಚರಣೆ

ಇದೇ ಆಗೋಸ್ತು ತಾ 15ರಂದು, ಸ್ವತಂತ್ರ ದಿನಾಚರಣೆ ಅತಿ ವಿಜೃಂಭಣೆಯಿಂದ ಜರಗಬೇಕಾಗಿ ಒಂದು ಸಮಿತಿಯು ರಚನೆಯಾಗಿರುತ್ತದೆ ಈ ಉತ್ಸವಕ್ಕೆ ತುಂಬಾ ವ್ಯಯದ ಅವಶ್ಯವಿರುವುದರಿಂದ, ಈ ಬಗ್ಗೆ ಒಂದು ನಿಧಿಯನ್ನು ಕೂಡಿಸಲು ಒಂದು ಕಮಿಟಿಯು ಚುನಾಯಿಸಲ್ಪಟ್ಟಿದ್ದು, ನಿಧಿ ಕೂಡಿಸುವ ಕೆಲಸವು ಈಗಲೇ ಪ್ರಾರಂಭವಾಗಿರುತ್ತದೆ ಈ ನಿಧಿಗೆ ವಂತಿಗೆ ತೆರಲು ಇಚ್ಛಿಸುವವರು ತಮ್ಮ ವಂತಿಗೆಯನ್ನು ಈ ಸಮಿತಿಯ ಕೋಶಾಧಿಕಾರಿಯವರಿಗೆ ಕಳುಹಿಸಿಕೊಡಬಹುದು ಯಾ ಇನ್ನಿತರ ದಾರಿಯ ಮೂಲಕ ಕಳುಹಿಸಿಕೊಡಬಹುದು. ಇಷ್ಟು ಕಿರಿತತ್ವಾದರೂ ವಂತಿಗೆಯು ಸ್ವೀಕರಿಸಲಾಗುವುದು ದಿನಾಚರಣೆಯ ನಂತರ ಉಳಿಯಬಹುದಾದ ನಿಧಿಯ ಅಂಶವನ್ನು ಪ್ರಾಂತೀಯ ರಿಲೀಫ್ ನಿಧಿಗೆ ಕಳುಹಿಸಿಕೊಡುವ ನಿರ್ಧಾರವಾಗಿರುತ್ತದೆ [ಈ ಸಮಿತಿಯ ಕಾರ್ಯಾಲಯವು ಸ್ಥಳೀಯ ಇಂಪೀರಿಯಲ್ ಬೇಂಕಿನಲ್ಲಿ ಏರ್ಪಡಿಸಲ್ಪಟ್ಟಿದೆ]

ಸರ್ವಜನರೂ ಮುಂದೆ ಬಂದು, ತಮ್ಮ ಕೈಲಾದ ಮಟ್ಟಿಗೆ ಈ ನಿಧಿಗೆ ಸಹಾಯ ನೀಡಬೇಕಾಗಿ ನಮ್ಮ ಹಾರೈಕೆ

KANARA COMMERCIAL BANK LTD.

PUTTUR

H. O. Puttur.] Estd. 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ನಾಗರೀಕ ವ್ಯವಹಾರ

ಸ್ವಾತಂತ್ರ್ಯ ಉತ್ಸವ

ಜಿಲ್ಲಾ ಕಾಂಗ್ರೆಸು ಸೂಚಿಸಿದಂತೆ ದಿವಂಗತ ದೇಶಭಕ್ತ ಕಾರ್ನಾಡ್ ಸದಾಶಿವರಾಯರ ಸ್ಮಾರಕ ಸಮಾರಂಭವನ್ನು ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಸೇರಿಸಿರುವದರಲ್ಲಿ ಒಂದು ಅತ್ಯಪೂರ್ವವಾದ ವಿಶೇಷತೆಯಿದೆ. ದಿ। ಸದಾಶಿವರಾಯರು ಹಿಂದಿನ ಸ್ವಾತಂತ್ರ್ಯ ಸಾಧಕರ ಆದರ್ಶ ವ್ಯಕ್ತಿಗಳು ಮಾತ್ರವಲ್ಲ, ಇಂದಿನ ಸ್ವಾತಂತ್ರ್ಯ ದಿನಾಚರಣೆ ಮಾಡುವ ಆಸಕ್ತಿಗಾರರಿಗೂ, ಮುಂದಿನ ಸ್ವಾತಂತ್ರ್ಯ ಅನುಭವಿಸುವವರಿಗೂ ಅವರೊಂದು ಅದ್ವಿತೀಯ ಆದರ್ಶ ಮೂರ್ತಿಗಳೆನ್ನಬಹುದು. ರಾಷ್ಟ್ರ ಹೋರಾಟದ ಅದೆಂತಹ ದುರಂತ ಪ್ರಸಂಗದಲ್ಲೂ ಅವರ ಅಚಲ ತಾಳ್ಮೆ, ನಿರ್ಧಾರ, ಸೇವಾಪ್ರವೃತ್ತಿಗಳು ಕುಗ್ಗಲಿಲ್ಲ. ಸ್ವಾತಂತ್ರ್ಯ ಪಥದಲ್ಲಿ ದೇಶವು ಅನೇಕ ಸಲ ಮುಂದರಿದಾಗಲೂ, ಅವರು ಹಿಗ್ಗಲಿಲ್ಲ. ಅವರದು ಚಿರಸ್ಮರಣೀಯ ಆದರ್ಶ. ಉಚ್ಚ ರಾಷ್ಟ್ರ ಸೇವಕನಲ್ಲಿರಬೇಕಾದೆಲ್ಲ ಉದಾತ್ತ ಗುಣಲಕ್ಷಣಗಳೂ, ರಚನಾ ಸಾಮರ್ಥ್ಯಗಳೂ ಅವರಲ್ಲಿ ಸಂಪೂರ್ಣವಿದ್ದವು. ನಾವಿಂದು ಅವರ ದಿವ್ಯ ಆದರ್ಶವನ್ನು ಸ್ಮೃತಿಯಲ್ಲಿಟ್ಟು ಸ್ವಾತಂತ್ರ್ಯ ದಿನಾಚರಣೆಯನ್ನು ಜರಗಿಸಲಿಕ್ಕಿರುವೆವಾದರಿಂದ ಅಂದು ನಮ್ಮ ಸಂತೋಷವು ಗತತ್ಯಾಗಿಗಳಿಗಾಗಿ ಹೊಂದುವ ದುಃಖದಿಂದ ಗಂಭೀರವಾಗಲಿ. ನಮ್ಮ ಉತ್ಸಾಹವು ಭಾವಿದೇಶ ಕಲ್ಯಾಣದ ಧ್ಯೇಯಕ್ಕೆ ಸಮನ್ವಯಿಸುವ ಚೈತನ್ಯದಿಂದ ಕೂಡಿರಲಿ ಕೇವಲ ತಾತ್ಕಾಲಿಕ ಸ್ಫೂರ್ತಿಯು ಆಲಸ್ಯದ ಮರಳಲ್ಲಿ ಇಂಗಿ ಕೆಡದಂತಾಗಲಿ. ನಮ್ಮ ವಿಶಾಲ ರಾಷ್ಟ್ರ ದೃಷ್ಟಿಕೋನವು ಪಕ್ಷ ರಾಜಕೀಯತೆಯ ಅನ್ಯಾಸಕ್ತಿಯಿಂದ ಸುಬ್ಬಾಗದಿರಲಿ ಅದೇ ಸಮಯಕ್ಕೆ ಅತ್ಯ ದೇಶ ಸೇವಕರು ಘನವೂ ಸ್ಥೂಲವೂ ಆದ ರಚನಾತ್ಮಕ, ಸಾಮಾಜಿಕ ಪುನಃರುದ್ಧರಣದ ಕಾರ್ಯಕ್ಕೆಂದೇ ದೀಕ್ಷೆವಹಿಸುವಂತಾಗಲಿ ಸ್ವಾತಂತ್ರ್ಯ ಸಿಕ್ಕಿದ ಮಾತ್ರದಿಂದ ನಮ್ಮ ಸಮಸ್ಯೆಗಳನ್ನು ಬಿಡಿಸಲು ಪ್ರಾರಂಭಕಾಲವೆಂಬುದನ್ನು ಮರೆಯಬಾರದು.

ಉದಾರ ದಾನ–ಚಿತ್ರಾಪುರ: ಶ್ರೀ. ಸಿ ನಾರಾಯಣಾಚಾರ್ಯರು ಚಿತ್ರಾಪುರ ಮಠದಲ್ಲಿ ತನ್ನ ತಂದೆ ಗೋವಿಂದಾಚಾರ್ಯರ ಬಗ್ಗೆ ಈ ವರ್ಷ ಪ್ರತಿಷ್ಠಿಸಿದ ಶ್ರೀ ಮುಖ್ಯಪ್ರಾಣ ದೇವರ ನಿತ್ಯ ನೈವೇದ್ಯ ನಂದಾದೀಪದ ಬಗ್ಗೆ ರೂಪಾಯಿ 2000 ಕ್ರಯ ಬಾಳುವ ಆಸ್ತಿಯನ್ನು ಉಂಬಳಿಯಾಗಿ ಶ್ರೀ. ವಿದ್ಯಾಪೂರ್ಣ ತೀರ್ಥರ ವಶ ಬಿಟ್ಟಿದ್ದಾರೆ

ವರ್ಗ: ನಮ್ಮ ರಿಸೆಪಶನ್ ತಹಶಿಲ್ದಾರರಾಗಿದ್ದ ಶ್ರೀ ಎಚ್. ನರಸಿಂಹ ಅವರಿಗೆ ಹಂಗಾಮಿ ಡೆಪ್ಯುಟಿ ಕಲೆಕ್ಟರರಾಗಿ ತಿರುಚಿನಾಪಳ್ಳಿಗೆ ವರ್ಗವಾಗಿದೆ, ರಜೆಯ ಮೇಲಿದ್ದ ಶ್ರೀ. ಕೇಶವ ಕುಡುವ ಅವರು ರಿಸೆ। ತಹಶಿಲ್ದಾರರಾಗಿ ಕೆಲಸದ ಮೇಲೆ ಹಾಜರಾಗಿದ್ದಾರೆ.

ಸ್ವೀಕಾರ

ವಿಶ್ವಮೇಧ (ರೂಪಕ) ಡಿ. ರೇಣುಕಾಚಾರ್ಯ, ಬಿ. ಎ. (ಆನರ್ಸ್). ಪ್ರಕಾಶಕರು: ಭಾರತೀ ಪ್ರಕಟನಾಲಯ, ಅವೆನ್ಯೂ ರೋಡ್, ಬೆಂಗಳೂರು ಸಿಟಿ. ಬೆಲೆ. ರೂ. ೧-೮-೦.

ಸುಖವಿಲ್ಲದ ಶ್ರೀಮಂತ ಪುರುಷ

“ಸೇಟ್ ದಾಲ್ಮಿಯರ ಉದಾರತೆ”

ಬೆರಟಲ್ ನಾಮಾಂಕಿತ ಪತ್ರಲೇಖಕರೊಬ್ಬರು ಬೊಂಬೇ ಕ್ರೊನಿಕಲ್ ಪತ್ರಿಕೆಯಲ್ಲಿ ಭಾರತದ ಪ್ರಖ್ಯಾತ ಕೈಗಾರಿಕೆಯ ಧುರೀಣರಾದ ಸೇಟ್ ರಾಮಕೃಷ್ಣ ದಾಲ್ಮಿಯರ ಕುರಿತು ಹೀಗೆ ಬರೆಯುತ್ತಾರೆ:

“ಶ್ರೀ ದಾಲ್ಮಿಯರು ವಿಚಿತ್ರ ವ್ಯಕ್ತಿಗಳು. ಖಂಡಿತವಾಗಿ ಕೌತುಕ ಪುರುಷರು. ಆದ್ದರಿಂದಲೇ ಅವರು ಕೇವಲ ದೀನ ಸ್ಥಿತಿಯಿಂದ ಇಂದಿನ ಭಾರಿ ಶ್ರೀಮಂತಗಿರಿಯ ಸ್ಥಾನಕ್ಕೇರಿರುವರು. ಇಂದವರನ್ನು ಕೈಗಾರಿಕೆ ಧುರೀಣರಲ್ಲಿ ರಾಜನೆಂದು ಕರೆಯುವರು. ಅವರ ಪ್ರಭಾವಿತ ಯೋಜನೆಯೊಳಗಿಲ್ಲದ ವಿಷಯವಿಲ್ಲ. ಸಿಮೆಂಟ್ ಕಾರ್ಖಾನೆಯಿಂದ ವಿಮಾನ ಕಂಪೆನಿಗಳ ತನಕ, ಬ್ಯಾಂಕುಗಳಿಂದ ವೃತ್ತಪತ್ರಿಕೆಗಳ ತನಕ ಅನೇಕ ವ್ಯವಸಾಯ ವೃತ್ತಿಗಳು ಅವರಿಗೆ ಹೇರಳ ಲಾಭವನ್ನು ತರುತ್ತಿವೆ. ಅವರಿಗೆ ಬೇಕಾದಷ್ಟು ಸಂಪತ್ತಿದೆ, ಸತಿಗಳಿದ್ದಾರೆ, ವರ್ಚಸ್ಸಿದೆ, ಸ್ನೇಹಿತರಿದ್ದಾರೆ—ಜಿನ್ನರು ಕೂಡ ಅವರ ಆಪ್ತ ಸ್ನೇಹಿತರಲ್ಲೊಬ್ಬರು.

ಈಚೆಗೆ ಕ್ಷಣಕ್ಷಣಕೆಂಬಂತೆ ಅವರು ಗಮನವನ್ನಾಕರ್ಷಿಸುವ ಪತ್ರಿಕಾ ಪ್ರಕಟಣೆಗಳನ್ನು ಕೊಡುತಿದ್ದಾರೆ. ಅದರಲ್ಲವರು ತಮ್ಮ ಭವಿಷ್ಯದ ಯೋಜನೆಗಳನ್ನು ನಿರೂಪಿಸುತ್ತಾರೆ. ಒಂದರಲ್ಲವರು ತಮ್ಮ ಸಂಪತ್ತಿಗೆ ತಿಲಾಂಜಲಿಕೊಡುವ ನಿರ್ಧಾರವನ್ನು ವ್ಯಕ್ತಪಡಿಸಿದ್ದರು. ಇನ್ನೊಂದು ಸಲ ವೃತ್ತಪತ್ರಿಕೆಗಳ ಮೂಲಕ ವಿಶ್ವಬಾಂಧವ್ಯವನ್ನುಂಟುಮಾಡುವ ತಮ್ಮ ಕೋರಿಕೆಯನ್ನು ನಿರೂಪಿಸಿದರು. ಆ ಉದ್ದೇಶಕ್ಕಾಗಿ ಬೊಂಬಾಯಿಯ ಪ್ರಖ್ಯಾತ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಸರ್ವತ್ರ ಹಕ್ಕನ್ನು ನಗದಿಯಾಗಿ ಕೊಂಡುಕೊಂಡರು. ಈಚೆಗೆ ಡೈಲಿ ಗಜೆಟ್ ಎಂಬ ಪತ್ರಿಕೆಯನ್ನು ಕೊಂಡುಕೊಂಡಿರುವರು.

ನಂತರ ಪಕ್ಕನೆ ಅವರಿಗೆ ಗೋವುಗಳ ಕುರಿತು ಜ್ಞಾಪಕ ಬರುತ್ತದೆ. ಕಸಾಯಿಯ ಧೂರ್ತ ಚಾಕುವಿನಿಂದ ಈ ನಮ್ಮ ಪ್ರಾಣಿಗಳನ್ನು ರಕ್ಷಿಸುವುದಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಲು ಅವರು ಸಿದ್ಧರಿರುವುದಾಗಿ ಸಾರಿದ್ದಾರೆ. ಅವರ ಮನಸ್ಸಿನಲ್ಲಿರುವ ಧೋರಣೆಯನ್ನನುಸರಿಸಿದರೆ ಭಾರತದಲ್ಲಿರುವರಾರಿಗೂ ಗೋಮಾಂಸವೇ ತಿನ್ನಲು ಸಿಕ್ಕಲಿಕ್ಕಿಲ್ಲ. ಇದೇ ಸಮಯಕ್ಕೆ ಒಂದು ವೇಳೆ ಗೋಕಟಾವನ್ನು ನಿಲ್ಲಿಸಿದರೆ ಉತ್ತಮ ಹಾಲು ಮೊಸರುಗಳನ್ನು ಕೊಡುವ ದನಗಳನ್ನು ಪುಷ್ಟಿಕರವಾಗಿ ಸಾಕುವ ಯೋಜನೆಗೆ ತಮ್ಮ ಸಂಪತ್ತಿನ ಬೆಂಬಲಕೊಡುವರೊ ಇಲ್ಲವೊ ಎಂಬ ವಿಷಯವನ್ನು ಮಾತ್ರ ಅವರು ಸ್ಪಷ್ಟವಾಗಿ ತಿಳಿಸಿಲ್ಲ.

ಒಂದು ಸಲ ಗಾಂಧೀಜಿಯವರು ಒಂದು ಗೋಸಂರಕ್ಷಣಾಲಯಕ್ಕೆ ಸಂದರ್ಶನ ವಿತ್ತಿದ್ದರು. ಶ್ರೀಮಂತ ಮಾರವಾಡಿಗಳು ಅಲ್ಲಿ ಕಟುಕರ ಕತ್ತಿಯಿಂದ ತಪ್ಪಿಸಿದ ನೂರಾರು ದನಗಳನ್ನು ಸಾಕುವ ಏರ್ಪಾಡು ಮಾಡಿದ್ದರು. ಆದರೆ ಅಲ್ಲಿನ ಗೋವುಗಳಿಗೆ ಹಾಕುವ ಹುಲ್ಲು ಹಿಂಡಿಯ ಪ್ರಮಾಣವನ್ನು ಕಂಡು ಮಹಾತ್ಮರು ದಂಗು ಬಡೆದವರಂತಾದರು. ಕಾರಣ ಕತ್ತಿಗೆ ತುತ್ತಾಗುವ ಆ ಪ್ರಾಣಿಗಳು ಈ ಗೋಸಂರಕ್ಷಣಾಲಯಕ್ಕೆ ಸೇರಿ ಹೊಟ್ಟೆಗೆ ಸರಿಯಾದ ತುತ್ತಿಲ್ಲದೆ ಶೀಘ್ರ ಸತ್ತುಹೋಗುವಂತಾಗುತಿದ್ದವು. ಕೂಡಲೇ ಮಹಾತ್ಮರು “ಇಂತಹ ಪ್ರಾಣಿ ಪ್ರೇಮ ಬೇಡ”ವೆಂದರು. ದಾಲ್ಮಿಯರ ಗೋರಕ್ಷಣಾ ಯೋಜನೆಯ್ಯಾದರೂ ಇಂತಹದೇ ಆಗುವುದಾದರೆ ಆ ಕುರಿತು ನಾವು ಹೆಚ್ಚು ಗಮನ ತೆರಬೇಕಾಗಿಲ್ಲ.

ಇನ್ನೊಂದು ಮಾತ್ರ ಉಳಿದಿದೆ: ದಾಲ್ಮಿಯರು ಹಳ್ಳಿಯಿಂದ ಹಳ್ಳಿಗೆ ಕಾಲ್ನಡೆಯಲ್ಲಿ ಹೋಗಿ ತಮ್ಮ ಆಪ್ತ ತತ್ವ ಪ್ರಚಾರಮಾಡುವುದನ್ನು ನೋಡುವ ಸುದಿನವೆಂದು ಒದಗುವುದೊ! ಅಷ್ಟು ಹೊತ್ತಿಗೆ ಅವರು ತಮ್ಮ ಸೊತ್ತನ್ನೆಲ್ಲ ಆಪ್ತ ಬಂಧುಗಳ ವಶಮಾಡಿ ಉದ್ಯೋಗದಿಂದ ‘ನಿವೃತ್ತ’ರಾಗುವರು. ಅಂದರೆ ಅವರು ಸಿರಿವಂತರಾಗುವುದನ್ನು ನಿಲ್ಲಿಸುವರೆಂದು ಹಾರೈಸೋಣ.

ದಾಲ್ಮಿಯರು ತಮ್ಮ ಕಂಪೆನಿಗಳ ಪ್ರಧಾನ ಡೈರೆಕ್ಟರರಾಗಿದ್ದಾಗ ಅವರ ಕೆಲಸಗಾರರು ಬೋನಸ್ಸಿಗಾಗಿ ಮನವಿಮಾಡಿಕೊಂಡಿದ್ದರು. ಆ ವರ್ಷ ದಾಲ್ಮಿಯ ಸಂಸ್ಥೆಗಳಿಗೆ ಶೇಕಡಾ 40% ಲಾಭ ಸಿಕ್ಕಿತ್ತು. ಆದರೆ ಉದಾರವಾದಿ ಸೇಟರು ತಮ್ಮ ಕಾರಕೂನರಿಗೆ ತತ್ವೋಪದೇಶವನ್ನೇ ಮಾಡಿದರು: “ನೀವು ಹೆಚ್ಚು ಹಣ ಬೇಕೆಂದು ಕೇಳುತ್ತೀರೊ? ನೋಡಿ ನನ್ನ ಹತ್ತಿರ ಹಣವಿದೆ ಆದರೂ ನನಗೆ ಸುಖವಿಲ್ಲ. ಹಣದಿಂದ ಹರುಷ ಉಂಟಾಗದು” ಇದನ್ನು ಕೇಳಿದ ನೌಕರರು ಸಿಡಿಲು ಬಡೆದಂತಾದರು. ಅವರಿಗೆ ಬೋನಸ್ಸೂ ನಾಮವೆ.”

ಇಂಡೋನೇಸ್ಯಾದ ಸ್ವಾತಂತ್ರ್ಯಾಪಹರಣ

ಡಚ್ಚರ ಡಕಾಯಿತಿ ಧೋರಣೆ

ಜಗತ್ತಿನ ಬಲಿಷ್ಠರೂ “ಅನುಭವಸ್ಥ”ರೂ ಆದ ಸಾಮ್ರಾಜ್ಯಶಾಹಿಗಳಾದ ಬ್ರಿಟಿಷರು ಫ್ರೆಂಚರು ತಮ್ಮ ವಸಾಹತುಗಳನ್ನು ಬಿಟ್ಟುಕೊಡುತ್ತಿರುವಾಗ ಯುರೋಪಿನ ಎಲ್ಲೋ ಮೂಲೆಯಲ್ಲಿರುವ ಡಚ್ಚರು ದೂರ ಪೂರ್ವದ ಸಾಗರಗಳಲ್ಲಿರುವ ತಮ್ಮ ಚಿಕ್ಕ ರಬ್ಬರ್, ಬಾಳೆಹಣ್ಣು ಮತ್ತು ಸಕ್ಕರೆಯ ಕೆಲವು ‘ಸುಲಿಗೆ’ ಕೇಂದ್ರಗಳನ್ನು ವಶದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುವುದು ಕೇವಲ ಹಾಸ್ಯಾಸ್ಪದವಾದ ವಿಷಯ.

ಇಂಡೋನೇಸ್ಯನ್ನರಾದರೊ ಈ ಯುದ್ಧಾನಂತರ ಸ್ವಾತಂತ್ರ್ಯ ಸ್ಫೂರ್ತಿಗೊಂಡವರಾಗಿ ಅದು ದೊರೆಯುವ ತನಕ ಸಾಹಸವನ್ನು ನಿಲ್ಲಿಸುವಂತಿಲ್ಲವೆಂಬ ನಿರ್ಧಾರದಿಂದ ಹೆಣಗುತ್ತಿರುವರು. ಡಚ್ಚರು ತಮ್ಮ ಈ ಸಿಹಿ ವಸಾಹತಿನ ದ್ವೀಪಗಳನಿಟ್ಟುಕೊಳ್ಳಲು ಮತ್ತದರ ಸಾರವತ್ತಾದ ಫಲವನ್ನನುಭವಿಸಲು ಹಲವು ಕುತಂತ್ರದ ಮಾತುಕತೆ, ರಾಜಿಪ್ರಸ್ತಾಪ, ಇತ್ಯರ್ಥ ಪರಿಷತ್ತುಗಳನ್ನು ಜರಗಿಸಿ ಇದುತನಕ ಕಾಲಹರಣ ಮಾಡಿದರು. ಅವರಿಗೆ ಬೇಕಿತ್ತು ಕಾಲಹರಣ. ಕಾರಣ ಕೆಲವು ಸಮಯದ ಹಿಂದೆ ಪರಿಸ್ಥಿತಿಯು ಇಂಡೋನೇಸ್ಯನ್ನರಿಗೆ ಅನುಕೂಲವಾಗಿತ್ತು. ಡಚ್ಚರು ದಂಗೆಯನ್ನಡಗಿಸಲು ಸಿದ್ಧರಿರಲಿಲ್ಲ. ಕೊನೆಗಂತೂ ಅವರ ಇಚ್ಛೆಯಂತೆ ಸೈನ್ಯ ತಯಾರಿಕೆಗೆ ಸಾಕಷ್ಟು ಸಮಯ ಸಿಕ್ಕಿತು.

ಇಂಡೋನೇಸ್ಯದ ಜನತಾ ಮುಖಂಡರು ತಮ್ಮ ಸ್ವಂತ ಪ್ರಜಾಪ್ರಭುತ್ವ ಸರಕಾರವನ್ನು ಸ್ಥಾಪಿಸಿದ್ದಾರೆ. ಕೆಲವು ಸಮಯ ಡಚ್ಚರು ಇದನ್ನು ಮಾನಿಸಿದರು. ಮತ್ತೆ ಆ ದ್ವೀಪಗಳು ಸಂಪೂರ್ಣ ಕೈತಪ್ಪುವುದೆಂಬ ಅಂಜಿಕೆ ಹಿಡಿಯಿತವರಿಗೆ. ಉಭಯ ಸನ್ಮಾನ ಸಂತೃಪ್ತಿಯ ಒಪ್ಪಂದಕ್ಕೆ ಸಿದ್ಧವಿದ್ದವರನ್ನು ಸಿಂಗಶೆಗೊಳಿಸುವ ಪರಿಸ್ಥಿತಿಗಳಿಸಿ ದಂಗೆ ಏಳುವಂತೆ ಮಾಡಿ ಡಚ್ಚರು ತಮ್ಮ ಹಿರಿದಾದ ಶಸ್ತ್ರಶಕ್ತಿಯಿಂದ ಆ ಅಸಹಾಯಕ ಜನತೆಯನ್ನು ಸದೆಬಡಿಯಲು ನೋಡುತ್ತಿರುವರು.

ಇಂಡೋನೇಸ್ಯದವರ ಮೇಲೆ ಮಾಡಿದ ಈ ಅತ್ಯಾಚಾರವನ್ನು ಮೊದಲು ಖಂಡಿಸಿದ್ದು ಭಾರತೀಯರು. ಭಾರತೀಯರ ಸಹಾನುಭೂತಿಯು ಅವರಿಗೆ ಯಾವಾಗಲೂ ಇದ್ದೇ ಇದೆ. ಒಂದು ದಿನ ಭಾರತಕ್ಕೂ ಅಂತಹ ಸಮಾನ ಗಂಡಾಂತರ ಬರದಿರಲಾರದು. ಕಾರಣ ಇಲ್ಲಿಯೂ ಕೆಲವು ತೊಡಕಿನ ಮುಳ್ಳುಗಳಿವೆ. ಉದಾ.—ಗೋವೆ ಮತ್ತು ಪಾಂಡುಚೇರಿಗಳು. ಈಗಾಗಲೇ ಪೋರ್ತುಗಲದ ಧೂರ್ತ ಸರ್ವಾಧಿಕಾರಿಯು ಗೋವೆಯು ತಮ್ಮ ದೇಶದ ಒಂದು ಅಂಗವೇ ಆಗಿ ಹೋಗಿ ಬಿಟ್ಟಿದೆ, ಅದನ್ನು ಬಿಟ್ಟುಕೊಡಲು ಸಾಧ್ಯವಿಲ್ಲವೆಂಬ ಅಭಿಪ್ರಾಯವನ್ನು ಸಾರಿರುವನು. ನಾಳೆ ಸ್ವತಂತ್ರ ಭಾರತವು ಗೋವೆಯನ್ನು ಕೇಳಿದರೆ ಪುಟ್ಟ ಪೋರ್ತುಗಲ್ಲಿನ ಯುದ್ಧನಾವೆಗಳು ಅರಬಿಸಮುದ್ರದಲ್ಲಿ ತುಪಾಕಿ ಹಾರಿಸುತ್ತ ಬರದಿರಲಾರವು.

ಜಗತ್ತಿನ ಪರಿಸ್ಥಿತಿಯು ಹೀಗೆ ಮುಂದರಿಸಿದರೆ ಚಿರಶಾಂತಿಯ ಆಶೆಹಾರೈಕೆಗಳೆಲ್ಲ ಕನಸಾಗಿ ಉಳಿಯುವವು. ಜನಾಂಗ ಸಂಘವು ಈ ಸಂಧಿಕಾಲದಲ್ಲಿ ತನ್ನ ಅಸಹಾಯಕತೆಯನ್ನು ತೋರಿಸುತ್ತ ಕೂತರೆ ಅದರ ಇರುವಿಕೆಯು ನಿಷ್ಪ್ರಯೋಜಕವಾಗುವುದು.

ಭಾರತ ಮತ್ತು ಆಸ್ಟ್ರೇಲಿಯಗಳು ಸಕಾಲದಲ್ಲಿ ಡಚ್ಚರ ಅಕೃತ್ಯಗಳನ್ನು ಜನಾಂಗ ಸಂಘ ಮಂದಿರದಲ್ಲಿ ಪ್ರತಿಧ್ವನಿಗೊಳ್ಳುವಂತೆ ಮಾಡಿ ಅಸ್ಯದ ಕೃತಜ್ಞತೆಗೆ ಪಾತ್ರವಾಗಿವೆ. ಡಚ್ಚರ ಪಾಶವೀ ಅತ್ಯಾಚಾರಕ್ಕೆ ಬಲಿಬಿದ್ದ ದುರ್ದೈವಿ ಇಂಡೋನೇಸ್ಯನ್ನರಿಗಾದರೂ ಇದರಿಂದ ಶೀಘ್ರ ಪರಿಹಾರ ದೊರಕುವುದು ಖಂಡಿತ. ಪಾಶ್ಚಿಮಾತ್ಯ ನಾಗರಿಕತೆಯೊಂದು ತನ್ನ ಮೃತ್ಯು ಸಂಸ್ಕೃತಿಯನ್ನು ಪೌರ್ವಾತ್ಯ ಭೂಮಿಯೊಂದರ ಮೇಲೆ ಸುರಿಯ ನೋಡಿ ಯಶಸ್ವಿಯಾದೀತೆ? ಒಂದು ಸೋತಲ್ಲಿ ಮತ್ತೊಂದೆಂದಿಗೂ ಗೆಲ್ಲದು.

—ನ್ಯೂ ಟೈಮ್ಸ್.

ಕಳೆದೆರಡು ವರ್ಷಗಳಿಂದ ಅಸ್ಸಾಂ ಖಂಡದಲ್ಲಿ ಅಕ್ಕಿಯ ಉತ್ಪತ್ತಿಯು ಕಡಿಮೆಯಾಗಿರುವುದೇ ಇಂದಿನ ಅಕ್ಕಿ ಕ್ಷಾಮಕ್ಕೆ ಕಾರಣವಾಯಿತೆಂದು ಜನಾಂಗ ಮಂಡಲದ ಆಹಾರ ಸಮಿತಿಯು ವರದಿಯೊಂದು ತಿಳಿಸುತ್ತದೆ.

卐

ಆಶ್ಚರ್ಯವಾದ ಸಿದ್ಧಿ ಯಂತ್ರ

ಅದ್ಭುತ ಶಕ್ತಿಯುಳ್ಳ ಈ ಗುಪ್ತ ವಶೀಕರಣ ಯಂತ್ರಧಾರಣದಿಂದ ನಿಮ್ಮ ಇಚ್ಛಿತ ಕಾರ್ಯಗಳೆಲ್ಲ ನೆರವೇರುವುವು. ಇದನ್ನು ಧರಿಸಲು ಯಾವ ತಪಸ್ಸಿದ್ಧಿಯೂ ಬೇಕಾಗಿಲ್ಲ. ಇದು ನಿಮಗೆ ಐಶ್ವರ್ಯವನ್ನು ಕೊಟ್ಟು ನಿಮಗೆ ಬೇಕಾದವರನ್ನು ನಿಮ್ಮ ವಶಪಡಿಸಿ, ಇಚ್ಛಿತ ಕಾರ್ಯಗಳಲ್ಲಿ ವಿಜಯವನ್ನು ಕೊಡುವುದು. ಇದು ತಪ್ಪೆಂದು ಸ್ಥಾಪಿಸುವವರಿಗೆ ರೂ. ೧೦೦ ಬಹುಮಾನ.

ತಾಮ್ರದ ತಾಯಿತಕ್ಕೆ ರೂ. ೨-೮-೦ ಬೆಳ್ಳಿಯ ತಾಯಿತಕ್ಕೆ ರೂ. ೩. ಚಿನ್ನದಕ್ಕೆ ರೂ. ೧೫.

PRET SHILA ASHRAM
No. 181.
POKATRI SARAI (GAYA)

ESTD. 1906.

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946
Capital Subscribed	29,00,000	29 00,000
Capital paid up	28,43,000	28,80,000
Reserves	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS	1945	1946
Cash	1,01,91,000	1,16,16,000
Govt. Securities	1,80,45,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13,000

ಗಾಂಧೀ ವಿಚಾರ ದರ್ಶನ

ಧ್ವಜ ಮತ್ತು ಚರಖಾ

"ಹೊಸ ರಾಷ್ಟ್ರ ಬಾವುಟದಲ್ಲಿ ಚರಕ ವಿಲ್ಲದುದಕ್ಕೂ, ಖಾದಿಯು ಸ್ಥಾನ ಭ್ರಷ್ಟವಾದುದಕ್ಕೂ ಕೆಲವರು ದುಃಖಪ್ರದರ್ಶನ ಮಾಡಿದ್ದಾರೆ. ಅಶೋಕ ಚಕ್ರವು ಚರಕವನ್ನೂ ಪ್ರತಿನಿಧಿಸುತ್ತದೆಂದು ಕೆಲವರು ಪ್ರತಿಪಾದಿಸಿದ್ದಾರೆ. ಅವರ ಭಾವನೆಯನ್ನು ಈ ಧ್ವಜವು ನಿಜವಾಗಿ ಪ್ರತಿಬಿಂಬಿಸುವುದಾದರೆ—ಚರಕ ಮತ್ತು ಖಾದಿಗಳು ಅವರ ಹೃದಯಗಳಲ್ಲಿದ್ದುದಾದರೆ ಸರಿಹೋಯಿತು. ಅಲ್ಲದಿದ್ದರೆ ಧ್ವಜ ನನ್ನ ಪಾಲಿಗೆ ಅಪ್ರಯೋಜಕವೇ ಸರಿಯೆಂದು ನನ್ನ ಅಭಿಪ್ರಾಯ."

卐

ದೇವಸಾಕ್ಷಾತ್ಕಾರ

"ನಾನು ಪರಮಾತ್ಮ ಸಾಕ್ಷಾತ್ಕಾರ ಮಾಡಿಕೊಂಡಿಲ್ಲವೆಂದು ನನಗೆ ತೋರುತ್ತದೆ. ಹಾಗೆ ಸಾಕ್ಷಾತ್ಕರಿಸಿಕೊಂಡಿದ್ದರೆ ನನಗೆ ಭಾಷಣಮಾಡುವ ಅಗತ್ಯವೇನು? ಆದರೆ ಪರಮಾತ್ಮನ ಅಸ್ತಿತ್ವದಲ್ಲಿ ನನಗ ನಿಸ್ಸಂದೇಹದ ಶ್ರದ್ಧೆಯಿದೆ. ನನ್ನಂತೆ ಕೋಟ್ಯಾವಧಿ ನಿರಕ್ಷರಸ್ಥರಲ್ಲೂ ಈ ಶ್ರದ್ಧೆಯಿದೆ. ಅದೆಂತಹ ವಿದ್ವಾಂಸನಿಂದಲೂ ಇದನ್ನು ಹೋಗಲಾಡಿಸಲಾಗುವುದಿಲ್ಲ

ಉಪ್ಪು ಸಪ್ಪಗಾದರೆ

"ಪೇಟೆಯಲ್ಲಿ ಶುದ್ಧವಾದ ಉಪ್ಪು ಸಿಗುವುದಿಲ್ಲ. ಉಪ್ಪನ್ನು ಶುದ್ಧಗೊಳಿಸುವುದು ಅತಿ ಸುಲಭ. ಜೈಲಿನಲ್ಲಿ ನಾವದನ್ನು ಮಾಡುತ್ತಿದ್ದೆವು. ಸ್ವಲ್ಪ ನೀರಲ್ಲಿ ಮಣ್ಣು ಮಿಶ್ರವಾದ ಉಪ್ಪನ್ನು ಕರಗಿಸಿ ನೀರನ್ನು ಕುದಿಸಬೇಕು. ಬಿಸಿಲಿನಲ್ಲಿಯೂ ಇದನ್ನು ಒಣಗಿಸಿದರಾಯಿತು. ಆದರೆ ಇದಕ್ಕೆ ಬಹಳ ಸಮಯ ಹಿಡಿಯುವುದು. ಶುದ್ಧ ಉಪ್ಪನ್ನು ಮಾಡಿ ಹಂಚುವ ಕೆಲಸವನ್ನು ಜನರೇ ಮಾಡಬಲ್ಲರು. ಕೇವಲ ಸ್ವಲ್ಪ ಹಣಕ್ಕೆ ಅವರದನ್ನು ಹಂಚಬಹುದು. ಇಲ್ಲಿ ಲಾಭದ ಆಸೆಯನ್ನು ಹಿಡಿಯಬೇಕಾಗುವುದು. ಈಗ ದೇಶದಲ್ಲಿ ಸ್ವಾರ್ಥ ಮತ್ತು ಲಂಚಗುಳಿತನ ನರ್ತನ ಮಾಡುತ್ತಿವೆ. ಈ ಪರಿಸ್ಥಿತಿಯಲ್ಲಿ ರಾಮರಾಜ್ಯವನ್ನಾಶಿಸುವುದೆಂತು?"

卐

ತಂಬಾಕು ಸೇದುವುದು

"ಪ್ರಾರ್ಥನಾ ಮಂದಿರವನ್ನು ಪ್ರವೇಶಿಸಿದ ಮೇಲೆ ಕ್ರೈಸ್ತನಾಗಲಿ, ಮುಸಲ್ಮಾನನಾಗಲಿ ತಂಬಾಕು ಸೇದುವುದಿಲ್ಲ. ಅವರಲ್ಲಿ ಕಠಿಣ ತಂಬಾಕು ಚಟದವರಿದ್ದಾರೆಂದು ಬಲ್ಲೆ. ನನ್ನ ಪ್ರಾರ್ಥನಾ ಸಭೆಯನ್ನು ಇಗರ್ಜಿ, ಮಸೀದಿ, ಮಂದಿರ ಇಲ್ಲವೆ ಯಾವ ಮತ ನೀತಿಗನುಸಾರವಾದದ್ದೇ ಆಗಲಿ ಅದನ್ನೊಂದು ದೈವೀಕ ಸಾನಿಧ್ಯಸಂಪರ್ಕ ಸಾಧನೆಯ ಸ್ಥಾನವೆಂದು ತಿಳಿದು ಇಲ್ಲಿಯೂ ಪ್ರಾರ್ಥನೆಯ ಅವಧಿಯಲ್ಲಿ ಆ ಚಟವನ್ನು ನಿರ್ವಹಿಸಬಾರದೆಂಬುದೊಂದು ಸದಾಚಾರವೆ ಆಗಿದೆ."

卐

ದಿಹಾರ ನಂತರದ ಕೊಂಗ್ರೆಸ್ಸು

"ನ್ಯಾಯ ಮತ್ತು ಶಾಂತಮಾರ್ಗಗಳಿಂದ—ನನ್ನ ಭಾಷೆಯಲ್ಲಿ ಸತ್ಯ ಮತ್ತು ಅಹಿಂಸೆಯಿಂದ—ಹಿಂದೂಸ್ಥಾನದ ಸ್ವಾತಂತ್ರ್ಯವನ್ನು ಸಂಪಾದಿಸುವುದೇ ಈ ವರೇಗೆ ಕೊಂಗ್ರೆಸಿನ ಧ್ಯೇಯವಾಗಿತ್ತು. ಇಂದು ನಮ್ಮೆಲ್ಲರ ಹೃದಯದಲ್ಲಿ ಸತ್ಯವೂ ಅಹಿಂಸೆಯೂ ಇಲ್ಲವಾಗಿವೆ. ಧ್ಯೇಯದಲ್ಲಿ ಬದಲಾವಣೆ ಮಾಡಲಿಕ್ಕೆ ಬೇಕಾದರೂ ಆಗಸ್ಟ್ 15ರ ಸ್ವಲ್ಪ ನಂತರವೂ ಕೊಂಗ್ರೆಸ್ಸು ಅಸ್ತಿತ್ವದಲ್ಲಿ ಉಳಿಯಲೇ ಬೇಕೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ."

ದಂಗೆಯ ತಯಾರಿ

"ಇಂದು ನಾವೆಲ್ಲ ಒಬ್ಬರೊಬ್ಬರ ಕತ್ತನ್ನು ಕೊಯ್ಯುತ್ತಿರುವೆವು. ಇನ್ನೂ ಹೆಚ್ಚು ಹತ್ಯಾಕಾಂಡಕ್ಕೆ ಸಿದ್ಧರಾಗುತ್ತಿರುವೆವು. ನಮ್ಮ ನಮ್ಮಲ್ಲಿಯೇ ರಕ್ತಪಾತದ ಸಂಗ್ರಾಮದ ಸಿದ್ಧತೆ ನಡೆಯುತ್ತಿದೆ. ಆದುದರಿಂದಲೇ ಆಗಸ್ಟ್ 15ರ ಉತ್ಸವದಲ್ಲಿ ನಾನು ಭಾಗವಹಿಸಲಾರೆ. ಪರಮಾತ್ಮನ ಅನುಗ್ರಹದಿಂದ ಇಂಥ ದುರಂತ ಬರುವುದು ಬೇಡ. ಅದು ಸಂಭವಿಸಿದೇ ಆದರೆ ನಮ್ಮ ಸ್ವಾತಂತ್ರ್ಯ ಅಲ್ಪಾಯುಷ್ಯದಾಗುವುದು."

ಸ್ಥಿತಪ್ರಜ್ಞತೆ

"ಸ್ಥಿತಪ್ರಜ್ಞತೆಗಾಗಿ ಎಷ್ಟೋ ಪ್ರಯತ್ನ ಮಾಡಿದರೂ ಅದರಿಂದ ನಾನು ಬಹಳ ದೂರದಲ್ಲಿರುವೆನೆಂಬುದನ್ನು ಒಪ್ಪಿಕೊಳ್ಳುತ್ತೇನೆ. ನನ್ನ ಸುತ್ತಮುತ್ತಲಿನ ಬಿರುಗಾಳಿಯ ಎದುರು ಸ್ಥಿತಪ್ರಜ್ಞನಾಗುವುದು ಎಷ್ಟು ದುಃಸಾಧ್ಯವೆಂಬುದನ್ನು ಅರಿತಿದ್ದೇನೆ" ಹೀಗೆಂದೊರ್ವ ಮಹಿಳೆ ಬರೆಯುತ್ತಾಳೆ. ಎಷ್ಟು ಸತ್ಯವಾದ ಮಾತು, ಆದರೆ ಎಷ್ಟು ಕಠಿಣವಾದ ಕಾರ್ಯ!"

卐

ರಾಷ್ಟ್ರ ಭಾಷೆ

"ದೇವನಾಗರಿ ಲಿಪಿಯು ರಾಷ್ಟ್ರ ಭಾಷೆಗೆ ನಾನೆಂದೂ ಒಪ್ಪಲಾರೆ. ನಾನು ಹಿಂದೀ ಇಲ್ಲವೆ ಉರ್ದು ಭಾಷೆಯ ಕತ್ತು ಹಿಸುಕುವುದಿಲ್ಲ. ಹಿಂದೀ ಉರ್ದುಗಳ ಮಿಶ್ರಣವೇ ಹಿಂದೂಸ್ಥಾನಿ. ಅದು ಜನಸಾಮಾನ್ಯರ ಭಾಷೆ. ಮುಸಲ್ಮಾನರಿಗೆ ಅನೇಕ ಹಿಂದೂಗಳಿಗೆ ಸಂಸ್ಕೃತ ಮಿಶ್ರಿತ ಹಿಂದೀ ಭಾಷೆ ತಿಳಿಯುವುದಿಲ್ಲ. ಮುಸಲ್ಮಾನರು ತಾವು ಹಿಂದೂಗಳ ವೈರಿಗಳೆಂದು ತಿಳಿದಿರಬಹುದು. ಹಿಂದೂಸ್ಥಾನಿ ಮುಸಲ್ಮಾನರ ಮನವೊಲಿಸಬೇಕಾಗಿದೆ. ದಾಸ್ಯವೃತ್ತಿಯಿಲ್ಲವೆ ಸಂತೋಷ ಪಡಿಸುವ ಧೋರಣದಿಂದಲ್ಲದಿದ್ದರೂ ಶತ್ರುಭಾವನೆಯಿಂದಲೂ ಅಲ್ಲವೆಂದು ಸಿದ್ಧ ಶೂರರ ಅಹಿಂಸೆಯಾದ ಮಿತ್ರತೆಯಿಂದಲೇ ಅವರು ಹಾಗೆಮಾಡ ಬಲ್ಲರು."

ವಿದ್ಯುತ್ ಕಂಬಳಿ

ಮಲಗುವಾಗ ಅನೇಕರಿಗೆ ಬೆಚ್ಚಗಿನ ಹೊದಿಕೆ ಬೇಕಾಗುತ್ತದೆ. ಬೇಸಿಗೆ ಕಾಲದಲ್ಲಿ ಸ್ವಲ್ಪ ತಂಪಾಗಿದ್ದರೆ ಒಳ್ಳೆದೆನಿಸುತ್ತದೆ. ಒಂದು ಬ್ರಿಟಿಷ್ ಸಂಸ್ಥೆ ಈ ಎರಡು ಕೋರಿಕೆಗಳನ್ನು ತೃಪ್ತಿಪಡಿಸುವ ಒಂದು ಕಂಬಳಿಯನ್ನು ಕಂಡುಹಿಡಿದಿದೆ. ಇವುಗಳನ್ನು ವಿದ್ಯುತ್ ಉಷ್ಣದಿಂದ ಬೆಚ್ಚಗಾಗಿ ಮಾಡಬಹುದು. ಉಷ್ಣತೆ ಬೇಡವಾದರೆ ವಿದ್ಯುತ್ ಪ್ರವಾಹ ನಿಲ್ಲಿಸಿದರಾಯಿತು

ಬೇಕಾದಾಗ ರೇಡಿಯೊ ಸಂಗೀತ

ಎಲ್ಲಾ ಸಮಯದಲ್ಲಿ ರೇಡಿಯೊದ ಉತ್ತಮ ಮತ್ತು ಸಾರಸ್ಯವಾದ ಕಾರ್ಯಕ್ರಮಗಳನ್ನು ಆಲಿಸಲು ನಮಗೆ ಬಿಡುವಿರಾವುದಿಲ್ಲ. ಆದರೆ ಅಂತಹ ಸುಸಂದರ್ಭವು ಕಳೆದು ಹೋಗುವುದೆಂದು ಇನ್ನು ಮುಂದೆ ಚಿಂತಿಸಬೇಕಾಗಿಲ್ಲ. ಕಾರಣ ರೇಡಿಯೊದಲ್ಲಿ ಕೇಳಿ ಬರುವ ಎಲ್ಲಾ ವಿಷಯಗಳನ್ನು ಗ್ರಮೊಫೋನ್ ರಿಕಾರ್ಡಿನಂತೆ 'ಬರೆದಿಟ್ಟು' ಬೇಕಾದಾಗ ಮತ್ತೆ ಅವನ್ನು ಹೊರಡಿಸುವ ಏರ್ಪಾಡಿರುವ ರೇಡಿಯೊಗಳನ್ನು ಬ್ರಿಟನಿನ ಒಂದು ಸಂಸ್ಥೆಯವರು ಕಂಡುಹಿಡಿದಿರುವರು

ವಿಚಿತ್ರ ಆಲದ ಮರ

ಕಟಕ್ ಜಿಲ್ಲೆಯಲ್ಲಿನ ಒಂದು ಆಲದ ಮರ ಅಲ್ಲಿನ ಹಳ್ಳಿಗರಲ್ಲಿ ಬಹಳ ಕೌತುಕವನ್ನುಂಟುಮಾಡಿದೆ. ಮೂರು ವರ್ಷಗಳ ಹಿಂದೆ ಈ ಮರವು ಗಾಳಿಗೆ ಬೇರು ಸಮೇತ ಕಿತ್ತುಹೋಗಿ ಬಿದ್ದಿತ್ತು. ಹಳ್ಳಿಯವರು ಅದರ ಗೆಲ್ಲುಗಳನ್ನೆಲ್ಲ ಕಡಿದಿದ್ದರು. ಆದರೆ ಕೆಲವು ದಿನಗಳ ಹಿಂದೆ ಆ ಮರ ಪುನಃ ಮೊದಲಿನ ಸ್ಥಾನದಲ್ಲಿ ನೆಟ್ಟಗೆ ನಿಂತಿದ್ದು ಎಲೆಗಳಿಂದ ತುಂಬಿದ್ದುದು ಕಂಡುಬಂತು. ಇದನ್ನು ನೋಡಲು ಆಸುಪಾಸಿನಿಂದ ತಂಡಾ ಜನರು ಬರುತ್ತಿದ್ದು ಈಗದನ್ನು ಪೂಜಿಸಲಾರಂಭಿಸಿರುವರು. ಯಾವುದೋ ಒಂದು ದೇವತೆ ಅದರಲ್ಲಿ ಪ್ರವೇಶ ಮಾಡಿದ್ದು ಅವು ಹಳ್ಳಿಗರಿಗೆ ಶ್ರೇಯಸ್ಸನ್ನು ತರುವುದೆಂದು ಅವರ ನಂಬಿಕೆಯಾಗಿದೆ. ಅಂಗಹೀನರು ಅದರ ಬಳಿಗೆ ಹೋಗಿ ತಮ್ಮ ದೋಷ ನಿವಾರಣೆಗಾಗಿ ಅದನ್ನು ಪೂಜಿಸುತ್ತಿರುವರು

ಕತ್ತಿಯಿಲ್ಲದ ಕ್ಷೌರ

ಕ್ಷೌರ ಕತ್ತಿಗಳನ್ನು ನಿರುಪಯೋಗವಾಗಿ ಮಾಡುವ ಒಂದು ರಾಸಾಯನಿಕ ಕ್ಷಾರ ಲೇಪವೊಂದನ್ನು ಅಮೇರಿಕದಲ್ಲಿ ವಾಸವಾಗಿದ್ದ ಒರ್ವ ಜೆಕ್ ಯುದ್ಧಾಶ್ರಿತನು ಕಂಡುಹಿಡಿದಿರುವನು. ಮುಖಕ್ಕೆ ಇದನ್ನು ಹಚ್ಚಿದ ಕೆಲವೇ ನಿಮಿಷಗಳಲ್ಲಿ ಕೂದಲೆಲ್ಲ ಉದುರಿ ಹೋಗುವುದು

ಈ ಅತ್ಯದ್ಭುತವಾದ ಶ್ರಮ ಕಡಿಮೆ ಮಾಡುವ ವಿಧಾನವು ಸಾವಿರ ವರ್ಷಗಳ ಹಿಂದೆ ನಮ್ಮ ಪೂರ್ವಜರಿಗೆ ಗೊತ್ತಿತ್ತೆಂಬ ಸಂಗತಿಯು ಕೌತುಕದ್ದಾಗಿದೆ. ಡಾ। ಬ್ರೋನ್ ಎಂಬ ಮೇಲ್ಕಂಡ ಸಂಶೋಧಕರು ಪ್ರಾಚೀನ ಈಜಿಪ್ಟ್, ಮತ್ತು ಪರ್ಶಿಯನ್ ಗ್ರಂಥಗಳನ್ನು ಅಭ್ಯಸಿಸುವಾಗ ಈ ವಿಧಾನವು ಅವರ ಗಮನಕ್ಕೆ ಹೋಯಿತು.

ಆದರೆ ಇಂತಹ ವಿಚಿತ್ರ ರಸಾಯನವು ಮಾರಾಟಕ್ಕೆಂದಿಗೂ ಬರಲಾರದೆಂದು ಸಂದೇಹಗಾರರು ಶಂಕಿಸ ಹತ್ತಿರುವರು. ಕಾರಣ ಹೀಗಾದರೆ ಕ್ಷೌರ ಕತ್ತಿ ತಯಾರಕ ಸಂಸ್ಥೆಗಳೆಲ್ಲವೂ ದಿವಾಳಿಯಾಗುವುದು. ಖಂಡಿತ ಇದಲ್ಲದೆ ಕ್ಷೌರದ ಸಾಬೂನು, ಮುಲಾಮ, ಬ್ರಶ್ ಮತ್ತು ಕತ್ತಿ ಸಾಣೆ ಮಾಡುವ ಸಂಸ್ಥೆಗಳೂ ಮೂಲೆ ಪಾಲಾಗುವವು. ಐದು ವರ್ಷಗಳ ಹಿಂದೆ ಒಬ್ಬರು ನಿರತ ಹರಿತವಾಗಿರುವಂತಹ ಕ್ಷೌರ ಕತ್ತಿಯೊಂದನ್ನು ಕಂಡುಹಿಡಿದಿದ್ದರು. ಅದರ ತಯಾರಿ ಹಕ್ಕನ್ನು ಕೆಲವು ಕ್ಷೌರ ಕತ್ತಿ ಸಂಸ್ಥೆಗಳು ಹೇರಳ ಹಣಕೆ ಪಡೆದು ಭದ್ರವಾಗಿ ತಮ್ಮ ಖಜಾನೆಗಳಲ್ಲಿಟ್ಟಿದ್ದಾರೆ. ಈ ಹೊಸ ರಾಸಾಯನಿಕದ ಗತಿಯೂ ಅದೇ ಆಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೊಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸ ಗಳನ್ನು ರನ್ ಮಾಡಿಸಲ್ಪಟ್ಟ ನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ ಕೋಸ್ಟಲ್ ಏರಿಯಾದಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೇಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು—ಮುಲ್ಕಿ ಲೈನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ಕಂಡುಬರುತ್ತದೆ. ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29—3—1947.

ಜ್ವೊಯಿಂಟ್ ಮೆನೇಜರ್ಸ್,
ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೈ ಲ್ಯಾಫ್ ಎನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟದ್ದು)

ಪ್ರಧಾನ ವಿಮಾ ಸಂಸ್ಥೆ

1945ರ ವ್ಯವಹಾರ — 2,77,23,000

1946ರ „ — 3,28,21,200

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್.

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)

ತಿರುವಾಂಕೂರು, ಕೊಚ್ಚಿ ಮತ್ತು ಮೈಸೂರನ್ನೊಳಗೊಂಡ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.

1945ರ ನಮ್ಮ ವ್ಯವಹಾರ - 49,85,500

1946ರ „ „ - 53,82,250

ಈಗಿನ ಪರಿಸ್ಥಿತಿ ಮತ್ತು ಬಡ್ಡಿದರ ಪ್ರಮಾಣಕ್ಕನುಗುಣವಾಗಿ ನಮ್ಮ ಪ್ರಿಮಿಯಮ್ ದರಗಳನ್ನು ಇದೇ ತಾ. 1-8-'47ರಿಂದ ಪುನರಾವರ್ತಿಸಲು ಬೊಂಬೇ ಲ್ಯಾಫ್ ಸಂಸ್ಥೆಯು ನಿರ್ಧರಿಸಿರುವುದನ್ನು ನಮ್ಮ ಎಲ್ಲಾ ವೈದ್ಯ ಪರೀಕ್ಷಕರಿಗೂ, ಪೋಲಿಸಿ ಹೊಲ್ಡರರಿಗೂ, ಸ್ನೇಹಿತ ಹಿತೈಷಿಗಳಿಗೂ ತಿಳಿಸುವುದು ನಮ್ಮ ಕರ್ತವ್ಯವೆಂದೆಣಿಸುತ್ತೇವೆ. ಈಗವರು ಹಿಂದಿನ ಕಮ್ಮಿ ದರದಲ್ಲಿ ದೊಡ್ಡ ಪೋಲಿಸಿಗಳನ್ನು ಪಡೆಯಬಹುದು — ಇದರಿಂದ ವರ್ಷಂಪ್ರತಿ ಕಮ್ಮಿಯಾಗುವ ದರ ಪ್ರಮಾಣವೂ ದೊರಕಿದಂತಾಗುವುದು. ನಮ್ಮ 2ನೇ ಜುಲಾಯಿ 1947ರ ಸರ್ಕಿಲಾರು ತಲಪಿರದ ಏಜೆಂಟರು ತಮ್ಮ ಗಿರಾಕಿಗಳಿಗೆ 31-7-'47ರ ನಂತರ ವಿಮೆ ತೆಗೆಯುವವರಿಗೆ ಅದೆಷ್ಟು ಖರ್ಚು ತಗಲುವುದೆಂಬ ವಿಷಯವನ್ನು ತಿಳಿಸಲು ಕರ್ತವ್ಯಬದ್ಧರಾಗಿರುವುದರಿಂದ, ಅಂಥಾ ಏಜೆಂಟರು ಕೂಡಲೇ ನಮಗೆ ತಂತಿ ಇಲ್ಲವೆ ಪತ್ರ ಮೂಲಕ ತಿಳಿಸುವುದು.

ಪೋಲಿಸಿ ತೆಗೆದುಕೊಳ್ಳಲಿಚ್ಛಿಸುವವರು ಇವತ್ತೇ ನಮ್ಮ ಈ ಕೆಳಗಿನ ಯಾವದಾದರೂ ಆಫೀಸುಗಳಿಗೆ ಬರೆಯುವುದು;

ಉಡುಪಿ, ಮಂಗಳೂರು, ಕಲ್ಲಿಕೋಟೆ, ಟ್ರಿವೆಂಡ್ರಮ್, ಮಧುರಾ, ಬೆಂಗಳೂರು, ಬೊಂಬಾಯಿ ಮತ್ತು ಮದ್ರಾಸ್.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 15—8—1947 [ಸಂಚಿಕೆ 33]

ರಾಷ್ಟ್ರಧ್ವಜ



ಕೆಂಪು, ಬಿಳಿ ಮತ್ತು ಹಸುರು—ಈ ಮೂರು ಬಣ್ಣಗಳಿಂದ ಕೂಡಿದ್ದು ನಡುವೆ ಚಕ್ರದಿಂದ ಚಿತ್ರಿತವಾಗಿರುವ ಈ ನವ ರಾಷ್ಟ್ರಧ್ವಜವು ಇಂದು ಹಿಂದುಸ್ಥಾನದಲ್ಲಿ ಸರ್ವತ್ರ ಹಾರಾಡುತ್ತಿದೆ. ಎಲ್ಲೆಡೆಗಳಲ್ಲಿಯೂ ಇದಕ್ಕೆ ಇಂದು ಅಭಿವಂದನೆಯು ಸಲ್ಲುತ್ತಿದೆ.

ರಾಷ್ಟ್ರೀಯ ಸಂಸ್ಥೆಯಿಂದ ಕಾಂಗ್ರೆಸು ಮಹಾತ್ಮಾ ಗಾಂಧೀಯವರ ನೇತೃತ್ವದಲ್ಲಿ ಚಳವಳವನ್ನು ಆರಂಭಿಸಿದಾಗ ಗಾಂಧೀಯವರಿಂದ ಈ ಧ್ವಜವು ಕಲ್ಪಿತವಾಯಿತು. ಅದರಲ್ಲಿ ಅಂಕಿತವಾಗಿದ್ದ ನೂಲುವ ಚರ್ಕದ ಬದಲು ಈಗ ಒಂದು ಚಕ್ರವು ಮಾತ್ರ ಅಂಕಿತವಾಗಿದೆ. ಇದು ಅದೇ ನಮ್ಮ ಪರಿಚಿತ ರಾಷ್ಟ್ರಧ್ವಜವಿರುತ್ತದೆ.

ಆರಂಭದಲ್ಲಿ ಈ ಬಣ್ಣಗಳಿಗೆ ಜಾತಿ ಸೂಚಕ ಅರ್ಥ ಕೊಡಲಾಗಿತ್ತು. ಕೆಂಪು ಹಿಂದುಗಳ ಬಣ್ಣವೆಂದೂ, ಹಸುರು ಮುಸ್ಲೀಮರ ಬಣ್ಣವೆಂದೂ, ಬಿಳಿ ಬಣ್ಣವು ಇತರರ ಎಲ್ಲಾ ವರ್ಣದವರ ದ್ಯೋತಕವೆಂದು ಹೇಳಲಾಗುತ್ತಿತ್ತು. ಕೊನೆಗೆ ಧ್ವಜದ ಅರ್ಥದಲ್ಲಿ ಈ ಬಗೆ ಭಿನ್ನತೆಗೆ ಆಸ್ಪದ ಕೊಡತಕ್ಕುದಲ್ಲವೆಂದು ತಿಳಿದು ಈ ಬಣ್ಣಗಳಿಗೆ ನೀತಿಪರ ಅರ್ಥವನ್ನು ಅಧಿಕೃತ ರೀತಿಯಿಂದ ಹೇಳಲಾಯಿತು. ಕೆಂಪು ಬಣ್ಣವು ತ್ಯಾಗವನ್ನು ಸೂಚಿಸುವುದೆಂದೂ, ಬಿಳಿ ಬಣ್ಣವು ಪಾವಿತ್ರ್ಯವನ್ನು ಸೂಚಿಸುವುದೆಂದೂ, ಹಸುರು ವರ್ಣವು ಸ್ಥೈರ್ಯ ಧೈರ್ಯ ಸಾಹಸಗಳ ದ್ಯೋತಕವೆಂದೂ ವಿವರಿಸಲಾಯಿತು.

ನಮ್ಮ ಧ್ವಜದಲ್ಲಿಯ ತ್ರಿವರ್ಣಗಳು ಸ್ವಾತಂತ್ರ್ಯದ ಆವಶ್ಯಕ ಗುಣಗಳನ್ನೇ ವರ್ಣಿಸುತ್ತದೆಂಬುದು ಸರಿಯಾದ ಸಮಂಜಸವಾದ ಅರ್ಥವೆಂದು ತಿಳಿಯಬೇಕು.

ಪರಿಶುದ್ಧವಾದ ಜೀವನ, ಪವಿತ್ರವಾದ ಸಚ್ಚಾರಿತ್ರ್ಯ, ತ್ಯಾಗಮಯ-ಯಜ್ಞಮಯ ಜೀವನ, ಧೈರ್ಯ ಸ್ಥೈರ್ಯ ಸಾಹಸಗಳಿಂದ ಕೂಡಿದ ಉದ್ಯಮಪೂರ್ಣ ಜೀವನ—ಇದು ನಮ್ಮ ರಾಷ್ಟ್ರದ ಧ್ಯೇಯವೆಂದು ಈ ಧ್ವಜವು ನಮಗೆ ಎಂದೆಂದೂ ಕರೆದು ಹೇಳುತ್ತದೆ.

ಇದರಲ್ಲಿ ಅಂಕಿತವಾಗಿದ್ದ ಆ ಚರ್ಕ ಅಥವಾ ಈಗಿನ ಈ ಚಕ್ರದ ಅಭಿಪ್ರಾಯವೇನೆಂಬುದನ್ನೂ ನಾವು ತಿಳಿದುಕೊಳ್ಳಬೇಕು.

ಯಾವ ಆಧುನಿಕ ನಾಗರಿಕತೆಯು ಎರಡು ಮಹಾಯುದ್ಧಗಳಿಗೆ ಕಾರಣವಾಯಿತೊ, ಮೂರನೆಯ ಎಟಮ್ ಬಾಂಬಿನ ಯುದ್ಧಕ್ಕೆ ತಯಾರು ಮಾಡುತ್ತಿದೆಯೊ ಆ ಆಧುನಿಕ ನಾಗರಿಕತೆಯನ್ನು ಧಿಕ್ಕರಿಸುವ ಚಿಹ್ನೆಯೇ ಚರ್ಕವೆನ್ನಬಹುದು. ಬಂಡವಲಶಾಹೀ ಪದ್ಧತಿಯಿಂದ ಕೇಂದ್ರೀಕೃತ ವಿಧಾನದಿಂದ ಸಂಪಾದಿತವಾದ ಮಾಲಿನ ವಿಕ್ರಯಕ್ಕಾಗಿ ಸಾಮ್ರಾಜ್ಯಗಳನ್ನು ಕಟ್ಟಿಕೊಂಡು ವ್ಯಾಪಾರೀ ಕ್ಷೇತ್ರಗಳನ್ನು ಕಲ್ಪಿಸಿಕೊಂಡು, ಇತರ ರಾಷ್ಟ್ರಗಳ ಕೊಳ್ಳೆಹೊಡೆದು ಮತ್ತೆ ಈ ಕಾರ್ಯದಲ್ಲಿ ಪರಸ್ಪರ ಸ್ಪರ್ಧೆ ಅನಿವಾರ್ಯವಾಗಿ ಬಂದು ನಾನಾ ಬಗೆಯ ಪೈಶಾಚಿಕ ರೀತಿಯ ಯುದ್ಧ ಸನ್ನಾಹಗಳಿಂದ ಹೊಡೆದಾಡಿ ಯಾದವೀ ಕಲಹದಿಂದ ಪರಸ್ಪರ ವಿನಾಶವನ್ನು ತಂದುಕೊಳ್ಳುವ ನಾಗರಿಕತೆಯು—ನಾಗರಿಕತೆಯೆಂಬ ಹೆಸರಿಗೆ ಯೋಗ್ಯವಲ್ಲವೆಂದು ಆ ಚರ್ಕವು ಸೂಚಿಸುತ್ತದೆ.

ಸ್ವಾವಲಂಬೀ ಸ್ವತಂತ್ರ ಜೀವನ, ಯಾರೊಡನೆಯೂ ಸ್ಪರ್ಧೆ ವೈರತ್ವಗಳಿಲ್ಲದ ಅಹಿಂಸಾತ್ಮಕ-ಪ್ರೇಮಮಯ ಜೀವನ, ಸತ್ಯ ಜೀವನ—ಇವೇ ಆ ಚರ್ಕದ ಅರ್ಥ. ವಿಕೇಂದ್ರೀಕೃತ ಪದ್ಧತಿಯ ಸಂಪಾದಿತವಾದ ಸಮುದಾಯದ ಸ್ವಾಯತ್ತದ ಜಗತ್ತಿನ ಜನಾಂಗಗಳು ಪರಸ್ಪರ ಹೊಡೆದಾಡುವುದಕ್ಕಿಂತ ಪರಸ್ಪರ ಸಹಕಾರದಿಂದ ವರ್ತಿಸುವುದೇ ನಿಜವಾದ ನಾಗರಿಕತೆಯೆಂದು ಇದು ಹೇಳುತ್ತದೆ. ಜಗತ್ತಿನಲ್ಲಿ ಶಾಂತಿ ನೆಲೆಸಬೇಕಾದರೆ ಈ ಚರ್ಕದ ದಾರಿಯಲ್ಲಿ ನಡೆಯಬೇಕೆಂದು ಅದು ಕರೆದು ಹೇಳುತ್ತಿದೆ.

ಆದರೆ ಆ ಚರ್ಕ ಮತ್ತು ಈಗಿನ ಚಕ್ರ—ಇವುಗಳಲ್ಲಿ ಏನೂ ಭೇದವೂ ಇಲ್ಲ. ಇಂದು ನಮ್ಮ ಧ್ವಜದಲ್ಲಿ ಅಂಕಿತವಾಗಿರುವ ಅಶೋಕ ಚಕ್ರವರ್ತಿಯ ಧರ್ಮಚಕ್ರವು ಹೇಳುವುದೆಂದರೆ ಏನು? ಮಾನವ ಇತಿಹಾಸದಲ್ಲಿ ಅಹಿಂಸಾತ್ಮಕ ಸಂಸ್ಕೃತಿಯ ಸಂದೇಶವನ್ನು ಸಾರಿದ ಮಹಾನುಭಾವ ಚಕ್ರವರ್ತಿಯೆಂದರೆ ಅಶೋಕ ಚಕ್ರವರ್ತಿಯೊಬ್ಬನು ಸುಪರಿಚಿತವಿರುತ್ತದೆ. ಆತನ ಕಾಲದಲ್ಲಿ ಹಿಂದುಸ್ಥಾನವು ತನ್ನ ಅಹಿಂಸಾ ಸಂದೇಶವನ್ನು ಜಗತ್ತಿಗೆ ಸಾರಿತು. ಇಂದಿನ ನಮ್ಮ ಧ್ವಜವೂ ಅದೇ ಸಂದೇಶವನ್ನು ಜಗತ್ತಿಗೆ ಸಾರುತ್ತದೆ.

ಧ್ವಜದ ಎರಡು ಬದಿಗಳಲ್ಲಿಯೂ ಒಂದೇ ರೀತಿ ಕಾಣಬೇಕೆಂದು ಚರ್ಕವನ್ನು ತೆಗೆದು ಚಕ್ರವನ್ನಿರಿಸಲಾಗಿದೆ. ಅದರಲ್ಲಿ ಭೇದವಿಲ್ಲವೆಂದು ಈ ಧ್ವಜವನ್ನು ನಾವು ಸ್ವೀಕರಿಸಿದ್ದೇವೆ. ಸ್ವತಂತ್ರ ಜವಾಹರಲಾಲರೇ ಸ್ವತಃ ಹೇಳಿರುವದರಿಂದ ಇದರಲ್ಲಿ ಸಂಶಯ ಪಡುವ ಆವಶ್ಯಕತೆ ಇಲ್ಲ. ಆದರೆ ಒಂದು ಭೇದವಿದೆ. ಇದುವರೆಗೆ ನಮ್ಮ ಧ್ವಜವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಧ್ವಜವಾಗಿತ್ತು. ಇಂದು ಅದು ಸ್ವತಂತ್ರ ಹಿಂದುಸ್ಥಾನದ ರಾಜಮುದ್ರೆ ಪಡೆದ ರಾಷ್ಟ್ರಧ್ವಜವಾಗಿ ಹಾರಾಡುತ್ತಿದೆ. ಅದು ಆಗ ಹೇಳುತ್ತಿದ್ದ ಸಂದೇಶವೂ ಈಗ ಹೇಳುವ ಸಂದೇಶವೂ ಒಂದೇ ಇರುತ್ತದೆ.

ಈ ನಮ್ಮ ರಾಷ್ಟ್ರಧ್ವಜವನ್ನು ಎತ್ತರಕ್ಕೆ ಹಾರಿಸಲು ಬೇಕಾದ ಸಾಮರ್ಥ್ಯವು ನಮ್ಮ ಕೈಗಳಿಗೆ ಬರಬೇಕು. ಅದರ ಆ ಸುಂದರ ಶಕ್ತಿ ನಾವು ಕೊಡಬೇಕು. ಅದು ಸೂಚಿಸುವ ಬಗೆಯ ಜೀವನವನ್ನು ನಡೆಸಲು ಸತತ ಯತ್ನಿಸಬೇಕು. ಆಗ ನಮ್ಮ ಧ್ವಜವು ಮೇಲೆ ಹಾರುತ್ತಲಿರುವುದು. ಅದರ ಸಂದೇಶಕ್ಕೆ ಇಡೀ ಜಗತ್ತೇ ಲಕ್ಷ್ಯ ಕೊಡುವಂತಾಗುವುದು ಮತ್ತು ನಮ್ಮ ಧ್ವಜವನ್ನು ಇಡೀ ಜಗತ್ತೇ ಗೌರವಿಸುವುದು.

ಅಂಥ ಸಾಮರ್ಥ್ಯವು ನಮಗೆ ಬರಲೆಂದು ಪ್ರಾರ್ಥಿಸಿ ಇಂದು ಎಲ್ಲರೂ ಸೇರಿ ಈ ನಮ್ಮ ತ್ರಿವರ್ಣಾತ್ಮಕ ಚಕ್ರಾಂಕಿತ ರಾಷ್ಟ್ರಧ್ವಜವನ್ನು ವಂದಿಸೋಣ.

ಧರ್ಮ ಚಕ್ರದ ರಹಸ್ಯ

ಬರೆಯುತ್ತ ಬರೆಯುತ್ತ ನಿದ್ರೆ ಹತ್ತಿತು. ಅಲ್ಲೇ ಒರಗಿ ನಿದ್ರಿಸಿದೆ. ಸ್ವಪ್ನವೆಂದು ಕಾಣುತ್ತದೆ. ನಾನು ಸಾವಿರಾರು ವರ್ಷಗಳ ಹಿಂದಿನ ಅಶೋಕ ಚಕ್ರವರ್ತಿಯ ರಾಜ್ಯದಲ್ಲಿ ಪ್ರವೇಶಿಸಿದ್ದೇನೆ. ಬೌದ್ಧಜನರ ಒಂದಾನೊಂದು ದೊಡ್ಡ ಸ್ತೂಪದೆದುರು ನಿಂತು ಅದನ್ನು ಪರಿಶೀಲಿಸುತ್ತಿದ್ದೇನೆ. ಅದರ ಮೇಲೊಂದು ಗಾಡಿಚಕ್ರದ ಹಾಗೆ ಚಕ್ರವು ಚಿತ್ರಿಸಲ್ಪಟ್ಟಿರುತ್ತದೆ. ಇದೇಕೆಂದು ಯೋಚಿಸುತ್ತ ನಿಂತಿದ್ದೆ.

ಬೌದ್ಧ ಭಿಕ್ಷುವೊಬ್ಬನು ಬಂದು ಬಳಿಯಲ್ಲಿ ನಿಂತು "ಆ ಚಕ್ರದ ಅರ್ಥವಾಗಲಿಲ್ಲವೆ?" ಎಂದು ಮೃದುಸ್ವರದಲ್ಲಿ ವಿಚಾರಿಸಿದನು.

"[illegible] ಚಕ್ರ [illegible] ನನಗೆ ಗೊತ್ತಿದ್ದ [illegible] ಇಲ್ಲಿ [illegible] ಸಲ್ಪಟ್ಟಿದೆಯೆಂದು [illegible] ಯುತ್ತದೆ" ಎಂದೆ.

ಭಿಕ್ಷುವು ಗಹಗಹಿಸಿ ನಕ್ಕು "ಇದು ಗಾಡಿ ಚಕ್ರವಲ್ಲ—ಧರ್ಮಚಕ್ರ" ಎಂದನು. "ಧರ್ಮಚಕ್ರವೆಂದರೇನು?" ವಿನೀತನಾಗಿ ಕೇಳಿದೆ. ಭಿಕ್ಷುವು ಆಗ ವಿವರಿಸಿದನು. "ಭೂಮಿಯು ಉರುಟಾಗಿದೆ. ಸೂರ್ಯಚಂದ್ರರು ಉರುಟಾಗಿದ್ದಾರೆ. ನಕ್ಷತ್ರಗಳೂ ಉರುಟಾಗಿವೆ—ಇವುಗಳಲ್ಲಿ ಒಂದು ಇನ್ನೊಂದನ್ನು ಉರುಟಾಗಿ ಸುತ್ತುತ್ತಲೇ ಇವೆ. ವಿಶ್ವವೂ ಉರುಟಾಗಿಯೇ ಇದೆ ಜಗತ್ತಿನಲ್ಲಿರುವ ಸಕಲವೂ ಉರುಟಾಗಿಯೇ ಇದೆ. ಅದೇ ರೀತಿ ಧರ್ಮವೂ ಉರುಟಾಗಿ ಚಕ್ರಾಕಾರವಾಗಿರುತ್ತದೆ" ಎಂದನು.

ಭಿಕ್ಷುವಿನ ಬೋಳುತಲೆಯೂ ಉರುಟಾಗಿದೆಯೆಂದು ಮನಸ್ಸಿನಲ್ಲಿ ಅಂದುಕೊಂಡೆ. ಆದರೆ ಬಾಯಿಯಿಂದ ಹೇಳಲಿಲ್ಲ. ಭಿಕ್ಷುವು ಮುಂದರಿಸಿದನು "ರಾತ್ರಿ ಕಳೆದು ಹಗಲಾಗುತ್ತದೆ. ಪುನಃ ಹಗಲು ಕಳೆದು ರಾತ್ರೆಯಾಗುತ್ತದೆ. ರಾತ್ರೆ ಹಗಲುಗಳು ಚಕ್ರಾಕಾರವಾಗಿ ಸುತ್ತುತ್ತಲೇ ಇವೆ. ಪಕ್ಷ ಮಾಸಗಳು, ಋತು ವತ್ಸರಗಳು ಪುನಃ ಪುನಃ ಚಕ್ರಾಕಾರವಾಗಿ ಸುತ್ತುತ್ತ ಬರುತ್ತವೆ. ಕಾಲವು ಚಕ್ರಾಕಾರವಾಗಿಯೇ ಉರುಳುತ್ತಿದೆ. ಪ್ರತಿಯೊಂದು ಕರ್ಮಕ್ಕೂ ಒಂದು ಫಲರೂಪ ಕರ್ಮವಿದೆ. ಅದರಿಂದ ಪುನಃ ಕರ್ಮ ಉತ್ಪನ್ನವಾಗುತ್ತದೆ ಹೀಗೆ ಕರ್ಮವೂ ಚಕ್ರಾಕಾರವಾಗಿಯೇ ಮುಂದರಿಯುತ್ತದೆ. ಜನ್ಮವಾದ ಬಳಿಕ ಮರಣವು ಬರುತ್ತದೆ ಮರಣದ ಬಳಿಕ ಪುನಃ ಜನ್ಮವಾಗುತ್ತದೆ. ಹೀಗೆ ಜನ್ಮಮರಣಗಳು ಚಕ್ರಾಕಾರವಾಗಿ ಸುತ್ತುತ್ತಲೇ ಇವೆ."

ಈ ಭಿಕ್ಷುವು ಉಪದೇಶದ ಕೊನೆಗೆ ನನ್ನಿಂದ ಒಂದು ಚಕ್ರ ಬೇಡಿ ನನಗೆ ಚಕ್ರ ಹಾಕುವನೋ ಎಂದು ಒಂದು ಭಾವನೆಯು ಮನಸ್ಸಿನಲ್ಲಿ ಉದಿಸಿತು ಆದರೂ ಇನ್ನೇನೆಲ್ಲ ಹೇಳುವನೊ ಎಂಬ ಕುತೂಹಲದಿಂದ ಕೇಳುತ್ತ ನಿಂತೆ

ಪುನಃ ಭಿಕ್ಷುವು ಹೇಳತೊಡಗಿದನು, 'ಸೂರ್ಯನ ತಾಪದಿಂದ ಸಮುದ್ರದ ನೀರು ಆವಿಯಾಗಿ ಮೋಡವಾಗುವುದು ಅದು ಪುನಃ ನೀರಾಗಿ ಮಳೆಯ ರೂಪದಲ್ಲಿ ಬೀಳುವುದು. ಪುನಃ ಸಮುದ್ರವನ್ನು ಸೇರಿ ಒಂದು ಸುತ್ತನ್ನು ಪೂರ್ಣ ಮಾಡುವುದು ಈ ರೀತಿ ಜಗತ್ತಿನ ಆರಂಭದಿಂದಲೂ ಈ ಸುತ್ತು ನಡೆಯುತ್ತಲೇ ಇದೆ. ಇದರಿಂದಲೇ ಅನ್ನ ಬೆಳೆಯುತ್ತದೆ ಬಲ್ಲೆಯಾ? ಎಂದನು ಈ ಭಿಕ್ಷುವಿಗೆ ಇಷ್ಟು ವಿಜ್ಞಾನದ ಮಾಹಿತಿ ಇದೆ ಎಂದೆಂದುಕೊಂಡೆ

ನನ್ನ ಮನಸ್ಸಿನಲ್ಲಿ ಹೊಳೆದುದು ಈ ಸನ್ಯಾಸಿಗೆ ಹೇಗೆ ಗೊತ್ತಾಯಿತೋ ಏನೊ ಮುಂದೆ ಬರುವ ವಿಜ್ಞಾನದ ಯುಗದಲ್ಲಿ ನಡೆಯುವ ಎಲ್ಲ ಮಹಾಯಂತ್ರಗಳೂ ಚಕ್ರಾಕಾರವನ್ನೇ ತಾಳುವವು. ಚಕ್ರಗಳ ಒಗ್ಗಟ್ಟಿನಿಂದಲೇ ನಡೆಯುವ ಹಲವು ಚಕ್ರಗಳಿರುವ ಒಂದು ಮಹಾಯಂತ್ರದಲ್ಲಿ ಒಂದು ಚಕ್ರವು ಶಿಥಿಲವಾದರೆ ಏನಾಗುವುದು? ಉಳಿದ ಚಕ್ರಗಳ ಚಲನೆಯಿಂದ ಅದು ಇನ್ನೂ ಶಿಥಿಲವಾಗಿ ಕೊನೆಗೆ ತಾನು ನಾಶವಾಗುವುದು ಯಂತ್ರವೂ ನಿಲ್ಲುವುದು ಮತ್ತೆ ಆ ಹಾಳಾದ ಚಕ್ರವನ್ನು ತೆಗೆದುಹಾಕಿ ಒಳ್ಳೆಯ ಚಕ್ರವನ್ನಿಟ್ಟು ಯಂತ್ರವನ್ನು ನಡೆಸಬೇಕಾಗುವುದು ಅದೇ ರೀತಿ ವಿಶ್ವದ ಮಹಾಯಂತ್ರದಲ್ಲಿ ಪ್ರತಿಯೊಂದು ವಸ್ತುವೂ ಒಂದು ಚಕ್ರವಾಗಿದೆ ಆಯಾ ವಸ್ತುವು ತನ್ನ ಸುತ್ತನ್ನು ಸರಿಯಾಗಿ ತಿರುಗಿಸುತ್ತಿರಬೇಕು ಇಲ್ಲದಿದ್ದರೆ ತನಗೂ ಮಹಾಯಂತ್ರಕ್ಕೂ ತೊಂದರೆಯಾಗುವುದು ತಿಳಿಯಿತೆ? ಎಂದನು

ಮತ್ತೆ ಸ್ವಲ್ಪ ಹೊತ್ತು ಸುಮ್ಮನಿದ್ದು ಆ ಬಳಿಕ ಹೀಗೆ ಹೇಳಿದನು "ಈ ರೀತಿ ಪ್ರವರ್ತಿಸುತ್ತಿರುವ ಚಕ್ರವನ್ನು ಅನುವರ್ತಿಸಬೇಕೆಂದು ಶ್ರೀ ಕೃಷ್ಣನು ಹೇಳಿರುವುದು ಈ ಧರ್ಮಚಕ್ರವನ್ನು ಕುರಿತೇ ಹೇಳಿದ ಮಾತು' ಎಂದನು

ಇಷ್ಟು ಹೇಳಿ ಮುಂದೆ ಭಿಕ್ಷುವು ನಗುತ್ತ ನನ್ನ ಕಣ್ಣ ಮುಂದೆ ಒಂದು ಪತಾಕೆಯನ್ನೆತ್ತಿ ತೋರಿಸಿದನು ಕೆಂಪು ಬಿಳಿ ಮತ್ತು ಹಸುರು ಬಣ್ಣಗಳದ್ದು ನಡುವೆ ಅದೇ ಧರ್ಮ ಚಕ್ರವಿತ್ತು ನನಗೆ ಆಶ್ಚರ್ಯವಾಗಿ ನಾನು ಏನೋ ಕೇಳಬೇಕೆಂದಿರುವಷ್ಟರಲ್ಲಿ ಆತನು ಹೇಳತೊಡಗಿದನು "ಹಲವು ವರ್ಷಗಳ ಬಳಿಕ ಕಾಲಚಕ್ರವು ಉರುಳಿ ಈ ಪುಣ್ಯಭೂಮಿಯು ಪುನಃ ಸ್ವಾತಂತ್ರ್ಯದಿಂದ ಮೆರೆಯುವಾಗ ಇದೇ ಆ [illegible] ದ ಧ್ವಜವನ್ನೆತ್ತುವುದು. ಸತ್ವರಜಸ್ತಮಗಳೆಂಬ ತ್ರಿಗುಣಗಳಿಂದಾಗಿ ಸಂಸಾರ ಚಕ್ರದಲ್ಲಿ ಬಿದ್ದು ನರಳುವವರಿಗೆ ಧರ್ಮಚಕ್ರವೇ ಮೋಕ್ಷಸಾಧನವೆಂದು ಇದು ಬೋಧಿಸುವುದು" ಎಂದು ಹೇಳಿ ಅಲ್ಲಿ ನಿಲ್ಲದೆ ಭಿಕ್ಷುವು ಹೋಗಿಬಿಟ್ಟನು.

ವೆಚ್ಚರವಾಗುವಾಗ ಸ್ವಾತಂತ್ರ್ಯ ದಿನದ ಸಮಾರಂಭಕ್ಕಾಗಿ ರಾಷ್ಟ್ರಧ್ವಜದೊಡನೆ ಸ್ವಯಂಸೇವಕರ ಮೆರವಣಿಗೆಯೊಂದು ಜಯಘೋಷದೊಡನೆ ಹಾದುಹೋಗುತ್ತಿತ್ತು.

—ಕೈ. ರಾ. ಮಲ್ಯ.

ಸ್ವರಾಜ್ಯ

ಸ್ವರಾಜ್ಯವೆಂದರೆ ನನ್ನ ಸ್ವಂತ ರಾಜ್ಯವೆಂಬ ಅರ್ಥ. ಸ್ವತಂತ್ರವೆಂಬ ಶಬ್ದಕ್ಕೂ ಇದೇ ಬಗೆಯ ಅರ್ಥವಿರುತ್ತದೆಂದು ಪುನಃ ಹೇಳಬೇಕಾಗಿಲ್ಲ.

ಸ್ವರಾಜ್ಯವೆಂದರೆ ಹಿಂದುಸ್ಥಾನದ ಮುಖ್ಯ ಮಂತ್ರಿಯಾಗಿರುವ ಪಂಡಿತ ಜವಾಹರಲಾಲರ ಅಥವಾ ಅವರ ಮಂತ್ರಿಮಂಡಲಕ್ಕೆ ಸೇರಿದ ಇತರ ಮಹನೀಯರ ರಾಜ್ಯವೆಂಬ ಅರ್ಥವಲ್ಲ. ಬಂಗಾಳದಲ್ಲಿ ಗವರ್ನರ ಪದವಿಗೇರಿದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರ ರಾಜ್ಯವಲ್ಲ ಅಥವಾ ಸಂಯುಕ್ತ ಪ್ರಾಂತ್ಯದಲ್ಲಿ ಗವರ್ನರ ಪದವಿಯನ್ನಲಂಕರಿಸಿರುವ ಶ್ರೀಮತಿ ಸರೋಜಿನಿ ನಾಯಡು ಇವರ ರಾಜ್ಯವೂ ಅಲ್ಲ. ಇದೇ ರೀತಿ ನಮ್ಮ ಮದ್ರಾಸ್ ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಓ ಮಂದೂರು ರಾಮಸ್ವಾಮಿ ರೆಡ್ಡಿಯವರ ರಾಜ್ಯವೂ ಅಲ್ಲ ಮಂತ್ರಿ ಪದವಿಗೇರಿದ ನಮ್ಮ ಶ್ರೀಮಾನ್ ಎ ಬಿ ಶೆಟ್ಟರ ರಾಜ್ಯವೂ ಅಲ್ಲ

ಸ್ವರಾಜ್ಯವೆಂದರೆ ನನ್ನ ಅಥವಾ ನಮ್ಮ ಅಥವಾ ಒಂದೇ ಶಬ್ದದಲ್ಲಿ ಹೇಳುವುದಾದರೆ ನಮ್ಮ ರಾಜ್ಯವಿರುತ್ತದೆ ಈ ರಾಜ್ಯದ ಹಕ್ಕು ನಮ್ಮದು ಅದು ನಮ್ಮ ಜನ್ಮಸಿದ್ಧ ಹಕ್ಕು ಪಂಡಿತ ಜವಾಹರಲಾಲ [illegible] ಎಲ್ಲ ಪ್ರಭೃತಿಗಳು ನನ್ನ ಮತ್ತು ನಮ್ಮ ಹೆಸರಿನಲ್ಲಿ ನನ್ನ ಪ್ರತಿನಿಧಿಗಳಾಗಿ ಆಡಳಿತೆ ವಹಿಸಿಕೊಂಡಿದ್ದಾರೆ ಇವರು ಸರಿಯಾಗಿ ತಮ್ಮ ಕೆಲಸ ಮಾಡುವುದಿಲ್ಲವೆಂದರೆ ಇವರನ್ನು ತೆಗೆದುಹಾಕಿ ಇತರರನ್ನು ನೇಮಿಸುವ ಹಕ್ಕು [illegible] ನನ್ನ [illegible] ತ್ತದೆ

ಇದು ತನಕ ನಮ್ಮ ದೇಶದ [illegible] ರನ್ನು [illegible] ಅಥವಾ ತೆಗೆದು ಹಾಕುವ ಕೊನೆಯ ಅಧಿಕಾರವು ಬ್ರಿಟಿಷ ಜನಾಂಗಕ್ಕೆ [illegible] ಇಂದಿನಿಂದ ಅದು ನನಗೂ ನಿಮಗೂ ನಮ್ಮ ಪ್ರತಿನಿಧಿಗಳ ಮೂಲಕ [illegible] ಕೊಡಲಾಗಿದೆ

ನಮಗೆ ಈ ರೀತಿ ನಮ್ಮ ರಾಜ್ಯದ ಹಕ್ಕು ಪ್ರಾಪ್ತವಾಗಿರುತ್ತದೆಂದು ಹೇಳುವಾಗ ಈ ಹಕ್ಕಿನೊಡನೆ ಒಂದು [illegible] ಜವಾಬ್ದಾರಿಯು ಎಷ್ಟಿರುತ್ತದೆಂದು ವಿಚಾರಿಸುವುದೂ ಅಗತ್ಯವಷ್ಟೆ? ಜವಾಬ್ದಾರಿ [illegible] ಯಾವ ಹಕ್ಕೂ ಜಗತ್ತಿನಲ್ಲಿ ಇರುವುದಿಲ್ಲ ಇದು ಜಗತ್ತಿನ ಕ್ರಮ ಹಕ್ಕು ಬೇಕಾದರೆ ಅದರ ಜೊತೆಯಲ್ಲಿ [illegible] ಬರುವ ಜವಾಬ್ದಾರಿಯನ್ನು ಹೊರಲಿಕ್ಕೂ ಸಿದ್ಧರಿರಬೇಕಾಗುತ್ತದೆ

ನಮ್ಮ ಪಕ್ಷದ ಈ [illegible] ಪಂಡಿತ ಜವಾಹರಲಾಲರು ಸರಿಯಾಗಿ ನಡೆಸುವರೆ [illegible] ಕರ್ತವ್ಯಗಳನ್ನು ಚೆನ್ನಾಗಿ ಪೂರೈಸುತ್ತಿರುವರೆ [illegible] ಇವರೆಲ್ಲ ಅಧಿಕಾರಿಗಳ [illegible] ರೀತಿ [illegible] ಅಂದರೆ ನಮ್ಮ ಈ ಸ್ವರಾಜ್ಯದ [illegible] ಜವಾಬ್ದಾರಿ [illegible]

[illegible] ಕ್ರಮಗಳು [illegible] ನಮ್ಮ [illegible] ಜನರೆಲ್ಲರೂ [illegible] ಸ್ವಾತಂತ್ರ್ಯದಿಂದ ಬಾಳಬೇಕೆಂದು [illegible] ಕ್ರಮಗಳನ್ನು ಅನುಸರಿಸಬೇಕಾಗುತ್ತದೆ [illegible] ನಮ್ಮ ದೇಶದವರ ಇತರ ಜನರ [illegible] ಯಾವ ರೀತಿ ವರ್ತಿಸಬೇಕು? ಇತ್ಯಾದಿ [illegible] ಪ್ರಶ್ನೆಗಳ [illegible] ಮಾಹಿತಿ ಬೇಕೆಂಬುದೇ ಇದರ [illegible] ಅರ್ಥ [illegible] ಪ್ರಶ್ನೆ [illegible] ಪರಿಚಯವೂ ಇಲ್ಲದೆ ನಾವು ಕೇವಲ ಅಪೇಕ್ಷಿಸಿದ್ದ [illegible] ಜವಾಬ್ದಾರಿಯನ್ನು ಲೆಕ್ಕಿಸದೆ ವರ್ತಿಸುವಂತಾದರೆ ನಮ್ಮ ರಾಜ್ಯವೆಂಬುದು [illegible] ಹೆಸರಿಗೆ ಮಾತ್ರವಾಗುತ್ತದಲ್ಲವೆ?

KANARA COMMERCIAL BANK LTD.

PUTTUR

H. O. Puttur] Estd. 1920 [Branch Vittal

All kinds of Banking Business transacted.

Deposits: Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ಕಸಿ ಹಣ್ಣಿನ ಗಿಡಗಳು ಮತ್ತು ತರಕಾರಿ ಬೀಜಗಳು

ಜುಲೈ ಅಗಸ್ಟ ತಿಂಗಳಲ್ಲಿ ಹಾಕುವ ಇಂಗ್ಲೀಷ್ ಟೈಪ ಮತ್ತು ಇಂಡಿಯನ್ ತರಕಾರಿ ಬೀಜಗಳು 20 ತರಹ ಕಲರ್‌ಪ್ಯಾಕಿಟ್‌ಗಳ ಸಮೇತ- ರೂ. 4-0-0

ಬೆಂಗಳೂರು ಕಸಿ ಮಾವಿನ ಗಿಡಗಳು 6 ಜಾತಿ 6 ಗಿಡಕ್ಕೆ 9-0-0

ಕಲಕತ್ತ ಮಾವಿನ ಗಿಡಗಳು 12 ಜಾತಿ 12 ಗಿಡಕ್ಕೆ 16-0-0

ಸಪ್ರೋಟ, (ಚಿಕ್ಕು) ಗಿಡ 1ಕ್ಕೆ 1-8-0

ನಾಗಪುರ—ಕೊಡಗು—ಮುಸಂಬಿ-ನಿಂಬೆ-ಚಕ್ರೋತ್ರ.

ದಾಳಿಂಬ. ಪನ್ನೀರಳೆ-ಗಿಡಗಳು ಡಜನ್ 1ಕ್ಕೆ 15-0-0

ಅರ್ಧ ಹಣ ಮುಂಗಡ ರವಾನಿಸಬೇಕು ಪ್ಯಾಕಿಂಗ್ ಮತ್ತು ಇತರ ಖರ್ಚು ಬೇರೆ.

ಪತ್ತೆ ದಿ ಅಲ್‌ಸೂರ್ ಸೀಡ್ ಕಂಪೆನಿ,

ಅಲಸೂರು — ಬೆಂಗಳೂರು.

" ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು " ಎಂದು ಸಾರಿದ ದಿವಂಗತ ಲೋಕಮಾನ್ಯ ತಿಲಕರು

ಮತದಾನದಿಂದ ಪ್ರತಿನಿಧಿಗಳನ್ನು ಆರಿಸುವ ಒಂದು ಕ್ರಮವು ಜಾರಿಗೆ ಬಂದ ಕ್ಷಣ ರಾಜ್ಯ ನಡೆಸುವ ಹಕ್ಕು ಮತದಾರರದೆಂದು ಹೇಳುವುದರಲ್ಲಿ ಹೆಚ್ಚು ತಿರುಳಿಲ್ಲ. ಮತದಾರರು ತಿಳುವಳಿಕೆಯುಳ್ಳವರಾಗಿರಬೇಕು. ತಮ್ಮ ಮತಗಳನ್ನು ಜವಾಬ್ದಾರಿ ತಿಳಿದು ನ್ಯಾಯವಾದ ರೀತಿಯಲ್ಲಿ ಉಪಯೋಗಿಸುವಷ್ಟು ಆರ್ಥಿಕ ಸ್ವಾವಲಂಬನ ಮತ್ತು ಸ್ವಾತಂತ್ರ್ಯವುಳ್ಳವರಾಗಬೇಕು. ಆಗ ಮಾತ್ರ ನಿಜವಾದ ಸ್ವರಾಜ್ಯ ನಮ್ಮ ಪಾಲಿಗೆ ಬಂದಿದೆಯೆಂದು ಹೇಳಬಹುದು.

ಪ್ರಜಾಸತ್ತಾತ್ಮಕ ರಾಜ್ಯಭಾರವೆಂದರೆ ನಿಜವಾಗಿಯೂ ಪ್ರಜೆಗಳ ಅಭಿಪ್ರಾಯದಂತೆ ಪ್ರಜೆಗಳ ಹಿತಕ್ಕಾಗಿ ಪ್ರಜೆಗಳಿಂದ ನಡೆಸಲ್ಪಡುವ ರಾಜ್ಯಭಾರವಾಗಿ ಪರಿಣಮಿಸಬೇಕು.

ಮತದಾನದ ಪದ್ಧತಿ ಇದ್ದೊಡನೆ ಸ್ವರಾಜ್ಯವೆನ್ನಲು ಬರುವುದಿಲ್ಲ. ಈಗ ಎಷ್ಟೋ ರಾಜ್ಯಗಳಲ್ಲಿ ಮತದಾನದ ಪದ್ಧತಿ ಇದೆ. ಹಿಟ್ಲರನ ಜರ್ಮನಿಯಲ್ಲಿ, ಸ್ಟಾಲಿನನ ರಶ್ಯಾದಲ್ಲಿ, ಭಂಡವಾಳಶಾಹೀ ರಾಷ್ಟ್ರಗಳಾದ ಅಮೇರಿಕ ಬ್ರಿಟನುಗಳಲ್ಲಿ ಮತದಾನ ಪದ್ಧತಿ ಜಾರಿಯಲ್ಲಿದ್ದಾಗ್ಯೂ ಎಲ್ಲ ಕಡೆ ಒಂದೇ ಬಗೆಯ ಪ್ರಜಾಸತ್ತೆ ನಡೆಯುತ್ತದೆನ್ನಬಹುದೆ? ಹಿಟ್ಲರನ ಜರ್ಮನಿಯಲ್ಲಿ ಎಲ್ಲರೂ ಹಿಟ್ಲರನಿಗೇನೆ ಮತ ಕೊಡುತ್ತಿದ್ದರು. ರಶ್ಯಾದಲ್ಲಿ ವಿರುದ್ಧ ಪಕ್ಷಕ್ಕೆ ಆಸ್ಪದವೇ ಇರುವುದಿಲ್ಲ. ಅಮೇರಿಕದಲ್ಲಿ ಮತಸಂಗ್ರಹವು ಯಾವ ಯಾವ ಬಗೆಯಲ್ಲಿ ನಡೆಯುತ್ತದೆಂಬುದನ್ನು ವಿಚಾರಿಸಿದರೆ ಬಹಳ ಚೋದ್ಯವಾದೀತು.

ಈ ಬಗೆಯ ಮತದಾನದಿಂದ ನಮ್ಮ ಸ್ವರಾಜ್ಯವು ಸರಿಯಾಗಿ ನಡೆಯಲಾರದು. ನಮಗೆಲ್ಲರಿಗೆ ಆರ್ಥಿಕ ಸ್ವಾವಲಂಬನ ಮತ್ತು ಅದರ ಜೊತೆಯಲ್ಲಿ ಬರುವ ಸ್ವಾತಂತ್ರ್ಯ ದೊರೆತಾಗ ಮಾತ್ರ ನಮ್ಮ ಮುಂದಿನ ಪ್ರಶ್ನೆಗಳನ್ನು ನ್ಯಾಯವಾದ ರೀತಿ ವಿಮರ್ಶಿಸಿ ನ್ಯಾಯವಾದ ರೀತಿಯಲ್ಲಿ ನಮ್ಮ ಮತದಾನದ ಹಕ್ಕು ವಿನಿಯೋಗವಾಗುವಂತಾಗಬೇಕು.

ಅಂದರೆ ನಮ್ಮ ಸ್ವರಾಜ್ಯದಲ್ಲಿ ಪ್ರತಿಯೊಬ್ಬ ಪ್ರಜೆಯೂ ಸ್ವತಂತ್ರ್ಯನಾಗಿ ಸ್ವರಾಜ್ಯ ಅನುಭವಿಸಬೇಕು. ಆಗ ಮಾತ್ರ ದೇಶದಲ್ಲಿ ಸ್ವರಾಜ್ಯವು ಸರಿಯಾಗಿ ನಡೆಯುವುದು ಸಾಧ್ಯ.

ಪ್ರತಿಯೊಬ್ಬ ಪ್ರಜೆಗೂ ಸ್ವರಾಜ್ಯ ಬರುವುದು ಹೇಗೆ? ಅದನ್ನು ಪ್ರತಿಯೊಬ್ಬ ಪ್ರಜೆಯೂ ಸಂಪಾದಿಸಿಕೊಳ್ಳಬೇಕು. ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಸಾಹಸಪಟ್ಟಂತೆ ಇದಕ್ಕಾಗಿಯೂ ಪ್ರತಿಯೊಬ್ಬನೂ ಸಾಹಸಪಡಬೇಕಾಗುತ್ತದೆ.

ಪವಿತ್ರತೆಯಿಂದ ಕೂಡಿದ ಸಚ್ಚಾರಿತ್ರ್ಯ, ತ್ಯಾಗ ಮತ್ತು ಯಜ್ಞಮಯ ಜೀವನ, ಧೈರ್ಯ ಸ್ಥೈರ್ಯ ಸಾಹಸಗಳಿಂದ ಕೂಡಿದ ಉದ್ಯಮಪೂರ್ಣ ಜೀವನ, ಸತ್ಯ ಮತ್ತು ಅಹಿಂಸಾ ಧರ್ಮನಿಷ್ಠೆ ಇವೇ ಸ್ವರಾಜ್ಯ ಸ್ಥಾಪನೆಯ ಸಾಧನಗಳೆಂದು ನಮ್ಮ ರಾಷ್ಟ್ರಧ್ವಜವು ಸಾರುತ್ತಲಿದೆಯಷ್ಟೆ! ಅಂಥ ಜೀವನವೇ ಪ್ರತಿಯೊಬ್ಬನಿಗೂ ಸ್ವರಾಜ್ಯವನ್ನು ಒದಗಿಸಿ ಕೊಡುತ್ತದೆ.

ದೇಶದ ಪ್ರಜೆಗಳೆಲ್ಲ ತಮ್ಮ ತಮ್ಮ ಸ್ವರಾಜ್ಯ ಸಾಧಿಸಿದರೇನೇ ಇಡೀ ದೇಶದ ಸ್ವರಾಜ್ಯ ಸ್ಥಿರವಾಗಿ ನಿಲ್ಲುವುದು. ದೇಶದಲ್ಲಿ ಇಂಥ ಸ್ಥಿರವಾದ ಸ್ವರಾಜ್ಯವನ್ನು ಕಟ್ಟಲು ಎಲ್ಲರೂ ಇಂದಿನಿಂದ ಯತ್ನಿಸೋಣ.

— ಕನ್ನಡ ಸಹಕಾರಿಯಿಂದ

"ಇದು ಗಾಡಿ ಚಕ್ರ [illegible] ನನಗೆ ಗೊತ್ತಿದೆ. ಇಲ್ಲೇಕೆ ಚಕ್ರ ಸಿಲ್ಲಿಸಲ್ಪಟ್ಟಿದೆಯೆಂದು ತಿಳಿಯುವ[illegible] ಬಂದೆ."

ಭಿಕ್ಷುವು ಗಹಗಹಿಸಿ ನಕ್ಕು "ಇದು ಗಾಡಿ ಚಕ್ರವಲ್ಲ-ಧರ್ಮಚಕ್ರ" ಎಂದನು.

"ಧರ್ಮಚಕ್ರವೆಂದರೇನು?" ವಿನೀತನಾಗಿ ಕೇಳಿದೆ. ಭಿಕ್ಷುವು ಆಗ ವಿವರಿಸಿದನು. "ಭೂಮಿಯು ಉರುಟಾಗಿದೆ. ಸೂರ್ಯಚಂದ್ರರು ಉರುಟಾಗಿದ್ದಾರೆ. ನಕ್ಷತ್ರಗಳೂ ಉರುಟಾಗಿವೆ—ಇವುಗಳಲ್ಲಿ ಒಂದು ಇನ್ನೊಂದನ್ನು ಉರುಟಾಗಿ ಸುತ್ತುತ್ತಲೇ ಇವೆ. ವಿಶ್ವವೂ ಉರುಟಾಗಿಯೇ ಇದೆ. ಜಗತ್ತಿನಲ್ಲಿರುವ ಸಕಲವೂ ಉರುಟಾಗಿಯೇ ಇದೆ. ಅದೇ ರೀತಿ ಧರ್ಮವೂ ಉರುಟಾಗಿ ಚಕ್ರಾಕಾರವಾಗಿರುತ್ತದೆ" ಎಂದನು.

ಭಿಕ್ಷುವಿನ ಬೋಳುತಲೆಯೂ ಉರುಟಾಗಿದೆಯೆಂದು ಮನಸ್ಸಿನಲ್ಲಿ ಅಂದುಕೊಂಡೆ. ಆದರೆ ಬಾಯಿಯಿಂದ ಹೇಳಲಿಲ್ಲ. ಭಿಕ್ಷುವು ಮುಂದರಿಸಿದನು. "ರಾತ್ರಿ ಕಳೆದು ಹಗಲಾಗುತ್ತದೆ. ಪುನಃ ಹಗಲು ಕಳೆದು ರಾತ್ರಿಯಾಗುತ್ತದೆ. ರಾತ್ರೆ ಹಗಲುಗಳು ಚಕ್ರಾಕಾರವಾಗಿ ಸುತ್ತುತ್ತಲೇ ಇವೆ. ಪಕ್ಷ ಮಾಸಗಳು, ಋತು ವತ್ಸರಗಳು ಪುನಃ ಪುನಃ ಚಕ್ರಾಕಾರವಾಗಿ ಸುತ್ತುತ್ತ ಬರುತ್ತವೆ. ಕಾಲವು ಚಕ್ರಾಕಾರವಾಗಿಯೇ ಉರುಳುತ್ತದೆ. ಪ್ರತಿಯೊಂದು ಕರ್ಮಕ್ಕೂ ಒಂದು ಫಲರೂಪ ಕರ್ಮವಿದೆ. ಅದರಿಂದ ಪುನಃ ಕರ್ಮ ಉತ್ಪನ್ನವಾಗುತ್ತದೆ. ಹೀಗೆ ಕರ್ಮವೂ ಚಕ್ರಾಕಾರವಾಗಿಯೇ ಮುಂದರಿಯುತ್ತದೆ. ಜನ್ಮವಾದ ಬಳಿಕ ಮರಣವು ಬರುತ್ತದೆ. ಮರಣದ ಬಳಿಕ ಪುನಃ ಜನ್ಮವಾಗುತ್ತದೆ. ಹೀಗೆ ಜನ್ಮಮರಣಗಳು ಚಕ್ರಾಕಾರವಾಗಿ ಸುತ್ತುತ್ತಲೇ ಇವೆ."

ಈ ಭಿಕ್ಷುವು ಉಪದೇಶದ ಕೊನೆಗೆ ನನ್ನಿಂದ ಒಂದು ಚಕ್ರ ಬೇಡಿ ನನಗೆ ಚಕ್ರ ಹಾಕುವನೋ ಎಂದು ಒಂದು ಭಾವನೆಯು ಮನಸ್ಸಿನಲ್ಲಿ ಉದಿಸಿತು. ಆದರೂ ಇನ್ನೇನೆಲ್ಲ ಹೇಳುವನೊ ಎಂಬ ಕುತೂಹಲದಿಂದ ಕೇಳುತ್ತ ನಿಂತೆ.

ಪುನಃ ಭಿಕ್ಷುವು ಹೇಳತೊಡಗಿದನು. "ಸೂರ್ಯನ ತಾಪದಿಂದ ಸಮುದ್ರದ ನೀರು ಆವಿಯಾಗಿ ಮೋಡವಾಗುವುದು. ಅದು ಪುನಃ ನೀರಾಗಿ ಮಳೆಯ ರೂಪದಲ್ಲಿ ಬೀಳುವುದು. ಪುನಃ ಸಮುದ್ರವನ್ನು ಸೇರಿ ಒಂದು ಸುತ್ತನ್ನು ಪೂರ್ಣ ಮಾಡುವುದು. ಈ ರೀತಿ ಜಗತ್ತಿನ ಆರಂಭದಿಂದಲೂ ಈ ಸುತ್ತು ನಡೆಯುತ್ತಲೇ ಇದೆ. ಇದರಿಂದಲೇ ಅನ್ನ ಬೆಳೆಯುತ್ತದೆ. ಬಲ್ಲೆಯಾ?" ಎಂದನು. ಈ ಭಿಕ್ಷುವಿಗೆ ಇಷ್ಟು ವಿಜ್ಞಾನದ ಮಾಹಿತಿ ಇದೆ ಎಂದಂದುಕೊಂಡೆ.

ನನ್ನ ಮನಸ್ಸಿನಲ್ಲಿ ಹೊಳೆದುದು ಈ ಸನ್ಯಾಸಿಗೆ ಹೇಗೆ ಗೊತ್ತಾಯಿತೋ ಏನೋ. "ಮುಂದೆ ಬರುವ ವಿಜ್ಞಾನದ ಯುಗದಲ್ಲಿ ನಡೆಯುವ ಎಲ್ಲ ಮಹಾಯಂತ್ರಗಳೂ ಚಕ್ರಾಕಾರವನ್ನೇ ತಾಳುವವು. ಚಕ್ರಗಳ ಬಲುಮೆಯಿಂದಲೇ ನಡೆಯುವುವು. ಹಲವು ಚಕ್ರಗಳಿರುವ ಒಂದು ಮಹಾಯಂತ್ರದಲ್ಲಿ ಒಂದು ಚಕ್ರವು ಶಿಥಿಲವಾದರೆ ಏನಾಗುವುದು? ಉಳಿದ ಚಕ್ರಗಳ ಚಲನೆಯಿಂದ ಅದು ಇನ್ನೂ ಶಿಥಿಲವಾಗಿ ಕೊನೆಗೆ ತಾನು ನಾಶವಾಗುವುದು. ಯಂತ್ರವೂ ನಿಲ್ಲುವುದು. ಮತ್ತೆ ಆ ಹಾಳಾದ ಚಕ್ರವನ್ನು ತೆಗೆದುಹಾಕಿ ಒಳ್ಳೆಯ ಚಕ್ರವನ್ನಿಟ್ಟು ಯಂತ್ರವನ್ನು ನಡೆಸಬೇಕಾಗುವುದು. ಅದೇ ರೀತಿ ವಿಶ್ವದ ಮಹಾಯಂತ್ರದಲ್ಲಿ ಪ್ರತಿಯೊಂದು ವಸ್ತುವೂ ಒಂದು ಚಕ್ರವಾಗಿದೆ. ಆಯಾ ವಸ್ತುವು ತನ್ನ ಸುತ್ತನ್ನು ಸರಿಯಾಗಿ ತಿರುಗಿಸುತ್ತಿರಬೇಕು. ಇಲ್ಲದಿದ್ದರೆ ತನಗೂ ಮಹಾಯಂತ್ರಕ್ಕೂ ತೊಂದರೆಯಾಗುವುದು. ತಿಳಿಯಿತೆ?" ಎಂದನು.

ಮತ್ತೆ ಸ್ವಲ್ಪ ಹೊತ್ತು ಸುಮ್ಮನಿದ್ದು ಆ ಬಳಿಕ ಹೀಗೆ ಹೇಳಿದನು. "ಈ ರೀತಿ ಪ್ರವರ್ತಿಸುತ್ತಿರುವ ಚಕ್ರವನ್ನು ಅನುವರ್ತಿಸಬೇಕೆಂದು ಶ್ರೀ ಕೃಷ್ಣನು ಹೇಳಿದುವುದು ಈ ಧರ್ಮಚಕ್ರವನ್ನು ಕುರಿತೇ ಹೇಳಿದ ಮಾತು" ಎಂದನು.

ಇಷ್ಟು ಹೇಳಿ ಮುಂದೆ ಭಿಕ್ಷುವು ನಗುತ್ತ ನನ್ನ ಕಣ್ಣ ಮುಂದೆ ಒಂದು ಪತಾಕೆಯನ್ನೆತ್ತಿ ತೋರಿಸಿದನು. ಕೆಂಪು ಬಿಳಿ ಮತ್ತು ಹಸುರು ಬಣ್ಣಗಳಿದ್ದು ನಡುವೆ ಅದೇ ಧರ್ಮ ಚಕ್ರವಿತ್ತು. ನನಗೆ ಆಶ್ಚರ್ಯವಾಗಿ ನಾನು ಏನೋ ಕೇಳಬೇಕೆಂದಿರುವಷ್ಟರಲ್ಲಿ ಆತನು ಹೇಳತೊಡಗಿದನು. "ಹಲವು ವರ್ಷಗಳ ಬಳಿಕ ಕಾಲಚಕ್ರವು ಉರುಳಿ ಈ ಪುಣ್ಯಭೂಮಿಯು ಪುನಃ ಸ್ವಾತಂತ್ರ್ಯದಿಂದ ಮೆರೆಯುವಾಗ ಇದೇ ಆ ರಾಷ್ಟ್ರದ ಧ್ವಜವೆನ್ನಿಸುವುದು. ಸತ್ವರಜತಮಗಳೆಂಬ ತ್ರಿಗುಣಗಳಿಂದಾಗಿ ಸಂಸಾರ ಚಕ್ರದಲ್ಲಿ ಬಿದ್ದು ನರಳುವವರಿಗೆ ಧರ್ಮಚಕ್ರವೇ ಮೋಕ್ಷಸಾಧನವೆಂದು ಇದು ಬೋಧಿಸುವುದು" ಎಂದು ಹೇಳಿ ಅಲ್ಲಿ ನಿಲ್ಲದೆ ಭಿಕ್ಷುವು ಹೋಗಿಬಿಟ್ಟನು.

ಎಚ್ಚರವಾಗುವಾಗ ಸ್ವಾತಂತ್ರ್ಯ ದಿನದ ಸಮಾರಂಭಕ್ಕಾಗಿ ರಾಷ್ಟ್ರಧ್ವಜದೊಡನೆ ಸ್ವಯಂಸೇವಕರ ಮೆರವಣಿಗೆಯೊಂದು ಜಯಘೋಷದೊಡನೆ ಹಾದುಹೋಗುತ್ತಿತ್ತು.

—ಹಿ. ರಾ. ಮಲ್ಯ

ಸ್ವರಾಜ್ಯ

ಸ್ವರಾಜ್ಯವೆಂದರೆ ನನ್ನ ಸ್ವಂತ ರಾಜ್ಯವೆಂಬ ಅರ್ಥ. ಸ್ವತಂತ್ರವೆಂಬ ಶಬ್ದಕ್ಕೂ ಇದೇ ಬಗೆಯ ಅರ್ಥವಿರುತ್ತದೆಂದು ಪುನಃ ಹೇಳಬೇಕಾಗಿಲ್ಲ.

ಸ್ವರಾಜ್ಯವೆಂದರೆ ಹಿಂದುಸ್ಥಾನದ ಮುಖ್ಯ ಮಂತ್ರಿಯಾಗಿರುವ ಪಂಡಿತ ಜವಾಹರಲಾಲರ ಅಥವಾ ಅವರ ಮಂತ್ರಿಮಂಡಲಕ್ಕೆ ಸೇರಿದ ಇತರ ಮಹನೀಯರ ರಾಜ್ಯವೆಂಬ ಅರ್ಥವಲ್ಲ. ಬಂಗಾಳದಲ್ಲಿ ಗವರ್ನರ ಪದವಿಗೇರಿದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರ ರಾಜ್ಯವಲ್ಲ ಅಥವಾ ಸಂಯುಕ್ತ ಪ್ರಾಂತ್ಯದಲ್ಲಿ ಗವರ್ನರ ಪದವಿಯನ್ನಲಂಕರಿಸಿರುವ ಶ್ರೀಮತಿ. ಸರೋಜಿನಿ ನಾಯಡು ಇವರ ರಾಜ್ಯವೂ ಅಲ್ಲ. ಇದೇ ರೀತಿ ನಮ್ಮ ಮದ್ರಾಸ್ ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯವರ ರಾಜ್ಯವೂ ಅಲ್ಲ. ಮಂತ್ರಿ ಪದವಿಗೇರಿದ ನಮ್ಮ ಶ್ರೀಮಾನ್ ಎ. ಬಿ. ಶೆಟ್ಟರ ರಾಜ್ಯವೂ ಅಲ್ಲ.

ಸ್ವರಾಜ್ಯವೆಂದರೆ ನನ್ನ ಅಥವಾ ನಿಮ್ಮ, ಅಥವಾ ಒಂದೇ ಶಬ್ದದಲ್ಲಿ ಹೇಳುವುದಾದರೆ ನಮ್ಮ ರಾಜ್ಯವಿರುತ್ತದೆ. ಈ ರಾಜ್ಯದ ಹಕ್ಕು ನಮ್ಮದು. ಅದು ನಮ್ಮ ಜನ್ಮಸಿದ್ಧ ಹಕ್ಕು. ಪಂಡಿತ ಜವಾಹರಲಾಲ ಮೊದಲಾದ ಎಲ್ಲಾ ಪ್ರಭೃತಿಗಳು ನನ್ನ ಮತ್ತು ನಿಮ್ಮ ಹೆಸರಲ್ಲಿ ನಮ್ಮ ಪ್ರತಿನಿಧಿಗಳಾಗಿ ಆಡಳಿತೆ ವಹಿಸಿಕೊಂಡಿದ್ದಾರೆ. ಇವರು ಸರಿಯಾಗಿ ತಮ್ಮ ಕೆಲಸ ಮಾಡುವುದಿಲ್ಲವಾದರೆ ಇವರನ್ನು ತೆಗೆದುಹಾಕಿ ಇತರರನ್ನು ನೇಮಿಸುವ ಹಕ್ಕು ನನಗೂ ನಿಮಗೂ ನಮ್ಮೆಲ್ಲರಿಗೂ ಸೇರುತ್ತದೆ.

ಇದು ತನಕ ನಮ್ಮ ದೇಶದ ಆಡಳಿತೆದಾರರನ್ನು ನೇಮಿಸುವ ಅಥವಾ ತೆಗೆದು ಹಾಕುವ ಕೊನೆಯ ಅಧಿಕಾರವು ಬ್ರಿಟಿಷ ಜನಾಂಗಕ್ಕೆ ಸೇರಿ ಇತ್ತು. ಇಂದಿನಿಂದ ಅದು ನನಗೂ ನಿಮಗೂ ನಮ್ಮ ಪ್ರತಿನಿಧಿಗಳ ಮೂಲಕ ವರ್ಗಾಯಿಸಿ ಕೊಡಲಾಗಿದೆ.

ನಮಗೆ ಈ ರೀತಿ ನಮ್ಮ ರಾಜ್ಯದ ಹಕ್ಕು ಪ್ರಾಪ್ತವಾಗಿರುತ್ತದೆಂದು ಹೇಳುವಾಗ ಈ ಹಕ್ಕಿನೊಡನೆ ಬಂದಿರುವ ಜವಾಬ್ದಾರಿಯು ಎಷ್ಟಿರುತ್ತದೆಂದು ವಿಚಾರಿಸುವುದೂ ಅಗತ್ಯವಷ್ಟೆ? ಜವಾಬ್ದಾರಿ ಹೊರಲಿಕ್ಕೆ ಮನಸ್ಸಿಲ್ಲದವರಿಗೆ ಯಾವ ಹಕ್ಕೂ ಜಗತ್ತಿನಲ್ಲಿ ಇರುವುದಿಲ್ಲ. ಇದು ಜಗತ್ತಿನ ಕ್ರಮ. ಹಕ್ಕು ಬೇಕಾದರೆ ಅದರ ಜೊತೆಯಲ್ಲಿಯೇ ಬರುವ ಜವಾಬ್ದಾರಿಯನ್ನು ಹೊರಲಿಕ್ಕೂ ಸಿದ್ಧರಿರಲೇಬೇಕಾಗುತ್ತದೆ.

ನಮ್ಮ ಹಕ್ಕಿನ ಈ ರಾಜ್ಯದ ಆಡಳಿತವನ್ನು ಪಂಡಿತ ಜವಾಹರಲಾಲರು ಸರಿಯಾಗಿ ನಡಿಸುವರೆ? ಮದ್ರಾಸಿನ ನಮ್ಮ ಮಂತ್ರಿಗಳು ತಮ್ಮ ಕರ್ತವ್ಯಗಳನ್ನು ಚೆನ್ನಾಗಿ ಪೂರೈಸುತ್ತಿರುವರೆ? ಇದನ್ನು ನಾವು ವಿಚಾರಿಸಬೇಕು. ಇವರೆಲ್ಲ ಅಧಿಕಾರಿಗಳು ಯಾವ ರೀತಿ ಸೇವೆ ಸಲ್ಲಿಸಬೇಕೆಂದು ನಿರ್ಧರಿಸಿ ಹೇಳಬೇಕು ನಾವು. ಅಂದರೆ ನಮ್ಮ ಈ ಸ್ವರಾಜ್ಯದ ಆಡಳಿತೆ ಸರಿಯಾಗಿ ನಡೆಯುವಂತೆ ಮಾಡುವ ಜವಾಬ್ದಾರಿ ನನ್ನದು ಮತ್ತು ನಿಮ್ಮದು.

ರಾಜ್ಯದ ಆಡಳಿತವು ನಡೆಯುವುದು ಯಾವ ಕ್ರಮಗಳಲ್ಲಿ? ಆ ಕ್ರಮಗಳು ಸರಿಯಾಗಿವೆಯೆ? ನಮ್ಮ ದೇಶದ ಜನರೆಲ್ಲರೂ ಸುಖಿಗಳಾಗಿ ಸ್ವಾತಂತ್ರ್ಯದಿಂದ ಬಾಳಿ ಬದುಕಬೇಕಾದರೆ ನಾವು ಯಾವ ಯಾವ ಕಾರ್ಯಕ್ರಮಗಳನ್ನು ಅನುಸರಿಸಬೇಕಾಗುತ್ತದೆ? ನಮ್ಮ ದೇಶದವರು ಇತರ ಜನಾಂಗದವರೊಡನೆ ಯಾವ ರೀತಿ ವರ್ತಿಸಬೇಕು? ಇತ್ಯಾದಿ ನೂರಾರು ಪ್ರಶ್ನೆಗಳ ಕುರಿತು ನನಗೂ ನಿಮಗೂ ಮಾಹಿತಿ ಬೇಕೆಂಬುದೇ ಇದರ ನೇರವಾದ ಅರ್ಥ. ನಮಗೆ ಯಾವ ಪ್ರಶ್ನೆಯ ಪರಿಚಯವೂ ಇಲ್ಲದೆ ನಾವು ಕೇವಲ ಅಶಿಕ್ಷಿತರಿದ್ದು ನಮ್ಮ ಯಾವ ಜವಾಬ್ದಾರಿಯನ್ನೂ ಲೆಕ್ಕಿಸದೆ ವರ್ತಿಸುವಂತಾದರೆ ನಮ್ಮ ರಾಜ್ಯವೆಂಬುದು ಬರೇ ಹೆಸರಿಗೆ ಮಾತ್ರವಾಗುತ್ತದಲ್ಲವೆ?

KANARA COMMERCIAL BANK LTD.

PUTTUR.

H. O. Puttur.] Estd. 1920 [Branch: Vittal.

All kinds of Banking Business transacted.

Deposits: Current, Savings, Cumulative. Deposits are accepted.

Fixed Deposits for periods of 3 months and above up to 24 months are accepted.

ಕಶಿ ಹಣ್ಣಿನ ಗಿಡಗಳು ಮತ್ತು ತರಕಾರಿ ಬೀಜಗಳು

ಜುಲೈ-ಅಗಸ್ಟ್ ತಿಂಗಳಲ್ಲಿ ಹಾಕುವ ಇಂಗ್ಲೀಷ್ ಟೈಪ ಮತ್ತು ಇಂಡಿಯನ್ ತರಕಾರಿ ಬೀಜಗಳು 20 ತರಹ ಕಲರ್‌ಪ್ಯಾಕೆಟ್‌ಗಳ ಸಮೇತ- ರೂ. 4–0–0

ಬೆಂಗಳೂರು ಕಶಿ ಮಾವಿನ ಗಿಡಗಳು 6 ಜಾತಿ 6 ಗಿಡಕ್ಕೆ	9–0–0
ಕಲಕತ್ತೆ ಮಾವಿನ ಗಿಡಗಳು 12 ಜಾತಿ 12 ಗಿಡಕ್ಕೆ	16–0–0
ಸಪೋಟ, (ಚಿಕ್ಕು) ಗಿಡ 1ಕ್ಕೆ	1–8–0
ನಾಗಪುರ—ಕೊಡಗು—ಮುಸಂಬಿ-ನಿಂಬೆ-ಚಕ್ಕೋತ್ರ.	
ದಾಳಿಂಬ. ಪನ್ನೇರಳೆ-ಗಿಡಗಳು ಡಜನ್ 1ಕ್ಕೆ	15–0–0

ಅರ್ಧ ಹಣ ಮುಂಗಡ ರವಾನಿಸಬೇಕು. ಪ್ಯಾಕಿಂಗ್ ಮತ್ತು ಇತರ ಖರ್ಚು ಬೇರೆ.

ಪತ್ತೆ: ದಿ ಅಲ್‌ಸೂರ್ ಸೀಡ್ ಕಂಪೆನಿ,
ಅಲಸೂರು — ಬೆಂಗಳೂರು.

" ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು " ಎಂದು ಸಾರಿದ ದಿವಂಗತ ಲೋಕಮಾನ್ಯ ತಿಲಕರು

ಮತದಾನದಿಂದ ಪ್ರತಿನಿಧಿಗಳನ್ನು ಆರಿಸುವ ಒಂದು ಕ್ರಮವು ಜಾರಿಗೆ ಬಂದಾಕ್ಷಣ ರಾಜ್ಯ ನಡೆಸುವ ಹಕ್ಕು ಮತದಾರರದೆಂದು ಹೇಳುವುದರಲ್ಲಿ ಹೆಚ್ಚು ತಿರುಳಿಲ್ಲ. ಮತದಾರರು ತಿಳುವಳಿಕೆಯುಳ್ಳವರಾಗಿರಬೇಕು. ತಮ್ಮ ಮತಗಳನ್ನು ಜವಾಬ್ದಾರಿ ತಿಳಿದು ನ್ಯಾಯವಾದ ರೀತಿಯಲ್ಲಿ ಉಪಯೋಗಿಸುವಷ್ಟು ಆರ್ಥಿಕ ಸ್ವಾವಲಂಬನ ಮತ್ತು ಸ್ವಾತಂತ್ರ್ಯವುಳ್ಳವರಾಗಬೇಕು. ಆಗ ಮಾತ್ರ ನಿಜವಾದ ಸ್ವರಾಜ್ಯ ನಮ್ಮ ಪಾಲಿಗೆ ಬಂದಿದೆಯೆಂದು ಹೇಳಬಹುದು.

ಪ್ರಜಾಸತ್ತಾತ್ಮಕ ರಾಜ್ಯಭಾರವೆಂದರೆ ನಿಜವಾಗಿಯೂ ಪ್ರಜೆಗಳ ಅಭಿಪ್ರಾಯದಂತೆ ಪ್ರಜೆಗಳ ಹಿತಕ್ಕಾಗಿ ಪ್ರಜೆಗಳಿಂದ ನಡೆಸಲ್ಪಡುವ ರಾಜ್ಯಭಾರವಾಗಿ ಪರಿಣಮಿಸಬೇಕು.

ಮತದಾನದ ಪದ್ಧತಿ ಇದ್ದೊಡನೆ ಸ್ವರಾಜ್ಯವೆನ್ನಿಸಿ ಬರುವುದಿಲ್ಲ. ಈಗ ಎಷ್ಟೋ ರಾಜ್ಯಗಳಲ್ಲಿ ಮತದಾನದ ಪದ್ಧತಿ ಇದೆ. ಹಿಟ್ಲರನ ಜರ್ಮನಿಯಲ್ಲಿ, ಸ್ಟೆಲಿನ್ನನ ರಶ್ಯಾದಲ್ಲಿ, ಭಂಡವಲಶಾಹೀ ರಾಷ್ಟ್ರಗಳಾದ ಅಮೇರಿಕ ಬ್ರಿಟನುಗಳಲ್ಲಿ ಮತದಾನ ಪದ್ಧತಿ ಜಾರಿಯಲ್ಲಿದ್ದಾಗ್ಯೂ ಎಲ್ಲ ಕಡೆ ಒಂದೇ ಬಗೆಯ ಪ್ರಜಾಸತ್ತೆ ನಡೆಯುತ್ತದೆನ್ನಬಹುದೆ? ಹಿಟ್ಲರನ ಜರ್ಮನಿಯಲ್ಲಿ ಎಲ್ಲರೂ ಹಿಟ್ಲರನಿಗೇನೆ ಮತ ಕೊಡುತ್ತಿದ್ದರು. ರಶ್ಯಾದಲ್ಲಿ ವಿರುದ್ಧ ಪಕ್ಷಕ್ಕೆ ಆಸ್ಪದವೇ ಇರುವುದಿಲ್ಲ. ಅಮೇರಿಕದಲ್ಲಿ ಮತಸಂಗ್ರಹವು ಯಾವ ಯಾವ ಬಗೆಯಲ್ಲಿ ನಡೆಯುತ್ತದೆಂಬುದನ್ನು ವಿಚಾರಿಸಿದರೆ ಬಹಳ ಚೋದ್ಯವಾದೀತು.

ಈ ಬಗೆಯ ಮತದಾನದಿಂದ ನಮ್ಮ ಸ್ವರಾಜ್ಯವು ಸರಿಯಾಗಿ ನಡೆಯಲಾರದು. ನಮ್ಮಗೆಲ್ಲರಿಗೆ ಆರ್ಥಿಕ ಸ್ವಾವಲಂಬನ ಮತ್ತು ಅದರ ಜೊತೆಯಲ್ಲಿ ಬರುವ ಸ್ವಾತಂತ್ರ್ಯ ಇವು ಸರಿಯಾಗಿ ಇದ್ದು ನಮ್ಮ ಮುಂದಿರುವ ವ್ಯಕ್ತಿಗಳನ್ನು ನ್ಯಾಯವಾದ ರೀತಿ ವಿಮರ್ಶಿಸಿ ಸ್ವಾಭಿಮಾನದ ರೀತಿಯಲ್ಲಿ ನಮ್ಮ ಮತದಾನದ ಹಕ್ಕು ವಿನಿಯೋಗವಾಗುವಂತಾಗಬೇಕು.

ಅಂದರೆ ನಮ್ಮ ಸ್ವರಾಜ್ಯದಲ್ಲಿ ಪ್ರತಿಯೊಬ್ಬ ಪ್ರಜೆಯೂ ಸ್ವತಂತ್ರನಾಗಿ ಸ್ವರಾಜ್ಯ ಅನುಭವಿಸಬೇಕು. ಆಗ ಮಾತ್ರ ದೇಶದಲ್ಲಿ ಸ್ವರಾಜ್ಯವು ಸರಿಯಾಗಿ ನಡೆಯುವುದು ಸಾಧ್ಯ.

ಪ್ರತಿಯೊಬ್ಬ ಪ್ರಜೆಗೂ ಸ್ವರಾಜ್ಯ ಬರುವುದು ಹೇಗೆ? ಅದನ್ನು ಪ್ರತಿಯೊಬ್ಬ ಪ್ರಜೆಯೂ ಸಂಪಾದಿಸಿಕೊಳ್ಳಬೇಕು. ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಸಾಹಸಪಟ್ಟಂತೆ ಇದಕ್ಕಾಗಿಯೂ ಪ್ರತಿಯೊಬ್ಬನೂ ಸಾಹಸಪಡಬೇಕಾಗುತ್ತದೆ.

ಪವಿತ್ರತೆಯಿಂದ ಕೂಡಿದ ಸಚ್ಚಾರಿತ್ರ್ಯ, ತ್ಯಾಗ ಮತ್ತು ಯಜ್ಞಮಯ ಜೀವನ, ಧೈರ್ಯ ಸ್ಥೈರ್ಯ ಸಾಹಸಗಳಿಂದ ಕೂಡಿದ ಉದ್ಯಮಪೂರ್ಣ ಜೀವನ, ಸತ್ಯ ಮತ್ತು ಅಹಿಂಸಾ ಧರ್ಮನಿಷ್ಠೆ ಇವೇ ಸ್ವರಾಜ್ಯ ಸ್ಥಾಪನೆಯ ಸಾಧನಗಳೆಂದು ನಮ್ಮ ರಾಷ್ಟ್ರಧ್ವಜವು ಸಾರುತ್ತಲಿದೆಯಷ್ಟೆ? ಅಂಥ ಜೀವನವೇ ಪ್ರತಿಯೊಬ್ಬನಿಗೂ ಸ್ವರಾಜ್ಯವನ್ನು ಒದಗಿಸಿ ಕೊಡುತ್ತದೆ.

ದೇಶದ ಪ್ರಜೆಗಳೆಲ್ಲ ತಮ್ಮ ತಮ್ಮ ಸ್ವರಾಜ್ಯ ಸಾಧಿಸಿದರೇನೇ ಇಡೀ ದೇಶದ ಸ್ವರಾಜ್ಯ ಸ್ಥಿರವಾಗಿ ನಿಲ್ಲುವುದು. ದೇಶದಲ್ಲಿ ಇಂಥ ಸ್ಥಿರವಾದ ಸ್ವರಾಜ್ಯವನ್ನು ಕಟ್ಟಲು ಎಲ್ಲರೂ ಇಂದಿನಿಂದ ಯತ್ನಿಸೋಣ.

— ಕನ್ನಡ ಸಹಕಾರಿಯಿಂದ

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed .. .	Rs. 16,00,000
Capital Paid up	Rs. 15,98,220
Reserves .. .	Rs 5,26,000

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಬೊಂಬೈ ಲ್ಯಾಫ್ ಎನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟದ್ದು)

ಪ್ರಧಾನ ವಿಮಾ ಸಂಸ್ಥೆ

1945ರ ವ್ಯವಹಾರ – 2,77,23,000

1946ರ „ – 3,28,21,200

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್.

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)

ತಿರುವಾಂಕೂರು, ಕೊಚ್ಚಿ ಮತ್ತು ಮೈಸೂರನ್ನೊಳಗೊಂಡ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.

1945ರ ನಮ್ಮ ವ್ಯವಹಾರ 49,85,500

1946ರ „ – 53,82,250

ಈಗಿನ ಪರಿಸ್ಥಿತಿ ಮತ್ತು ಬಡ್ಡಿದರ ಪ್ರಮಾಣಕ್ಕನುಗುಣವಾಗಿ ನಮ್ಮ ಪಿ ಮಿ ಯಮ್ ದರಗಳನ್ನು ಇದೇ ತಾ 1-8 47ರ ದ ಪುನರಾವರ್ತಿಸಲು ... ಲ್ಯಾಫ್ ಸಂಸ್ಥೆಯು ನಿರ್ಧರಿಸಿರುವುದನ್ನು ನಮ್ಮ ಎಲ್ಲಾ ವೈದ್ಯ ಪರೀಕ್ಷಕರಿಗೂ, ಪೋಲಿಸಿ ಹೋಲ್ಡರ್ ಸ್ವ...ತ ಹಿತೈಷಿಗಳಿಗೂ ತಿಳಿಸ ವುದು ನಮ್ಮ ಕರ್ತವ್ಯವೆಂದೆಣಿಸುತ್ತೇವೆ ಈಗವರು ಹಿಂದಿನ ಕಮ್ಮಿ ದರದಲ್ಲಿ ದೊಡ್ಡ ಪೋಲಿಸಿಗಳನ್ನು ಪಡೆಯಬಹುದು — ...ರಿಂದ ವರ್ಷ...ಕ ... ಗ ದರ ಪ್ರ... ರಕಿದಂತ ಗವುದು ನಮ್ಮ 2ನೇ ಜುಲ್ಯಾ 1947ರ ಸರ್ಕಿಲಾರು ತಲಪಿರದ ಏಜೆಂಟರು ತಮ್ಮ ಗಿರಾಕಿಗಳಿಗೆ 31-7-47ರ ನಂತ ... ತೆಗೆ ... ವರಿಗೆ ಆದೆಷ್ಟು ... ತಗಲುವುದೆಂಬ ವಿವರವನ್ನು ತಿಳಿಸಲು ಕರ್ತವ್ಯಬದ್ಧರಾಗಿರುವುದರಿಂದ, ಅಂತಾ ಏಜೆಂಟರು ಕೂಡಲೇ ನಮ... ಪತ್ರವ ... ತಿಳಿಸ ವುದು

ಪೋಲಿಸಿ ತೆಗೆದುಕೊಳ್ಳಲಿಚ್ಛಿಸುವವರು ಇವತ್ತೇ ನಮ್ಮ ಈ ಕೆಳಗಿನ ಯಾವದಾದರೂ ಆಪೀಸುಗಳಿಗೆ ಬರೆಯುವುದು.

ಉಡುಪಿ, ಮಂಗಳೂರು, ಕಲ್ಲಿಕೋಟೆ ಟ್ರಿವೆಂಡ್ರಮ್, ಮದುರಾ ಬೆಂಗಳೂರು ಬೊಂಬಾಯಿ ಮತ್ತು ಮದ್ರಾಸ್

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office KATAPADI S. Kanara.

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ರಾಜಕೀಯ ರಂಗದಲ್ಲಿ ಅಹಿಂಸಾಧರ್ಮ

ಆಧುನಿಕ ರಾಜಕೀಯರಂಗದಲ್ಲಿ ಅಹಿಂಸಾಧರ್ಮದ ಆಚರಣೆಯನ್ನು ತಂದು ಸೇರಿಸಿದವರು ಮಹಾತ್ಮಾ ಗಾಂಧಿಯವರು. ಮಹಾತ್ಮಾ ಗಾಂಧಿಯವರಿಗೆ ಅಹಿಂಸೆಯೆಂಬುದು ಜೀವನದ ಒಂದು ತತ್ವ. ನಮ್ಮ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರಸಭೆಯು ಈ ಧರ್ಮ ತತ್ವವನ್ನು ಒಂದು ರಾಜಕೀಯ ಧೋರಣೆಯನ್ನಾಗಿ ಸ್ವೀಕರಿಸಿ ಆಚರಿಸಿತು. ಪರಿಣಾಮವಾಗಿ ಹಿಂದುಸ್ಥಾನವು ಶಾಂತ ರೀತಿಯಿಂದ ತನ್ನ ರಾಜಕೀಯ ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಇದು ಜಗತ್ತಿನ ಇಂದಿನ ಇತಿಹಾಸದಲ್ಲಿ ನಡೆದ ಒಂದು ಅಪೂರ್ವ ಘಟನೆ.

ಅಂದರೆ ಅನ್ಯಾಯ ಮಾಡಿದವರಿಗೆ ಪ್ರತೀಕಾರ ಮಾಡಲು ಅಸಾಧ್ಯವಾಗಿ ಸುಮ್ಮನಿರುವುದು ಅಶಕ್ತರ ಅಹಿಂಸೆ. ಪ್ರತೀಕಾರ ಸಾಧ್ಯವಿದ್ದು ಅದನ್ನು ಕೈಕೊಳ್ಳದೆ ಧರ್ಮಬುದ್ಧಿಯಿಂದ ಇರುವುದು ಸಶಕ್ತರ ಅಹಿಂಸೆ. ಸಶಕ್ತರ ಅಹಿಂಸೆ ವ್ಯಕ್ತಿಶಃ ನಾವು ಎಷ್ಟೋ ಕಂಡಿರಬಹುದು. ಆದರೆ ಒಂದು ಜನಾಂಗವೇ ಅದನ್ನು ಆಚರಿಸುವ ದೃಷ್ಟಾಂತವು ಈಗಿನ ಜಗತ್ತಿನಲ್ಲಿ ನಾವು ಕಂಡಿಲ್ಲ. ಇದು ಸಾಧ್ಯವೆಂದು ಸಾರುವುದು ಮಹಾತ್ಮಾ ಗಾಂಧೀಯವರು ಕೈಕೊಂಡಿರುವ ಕೆಲಸ.

ಇದು ನ್ಯಾಯ ಮತ್ತು ಇದು ಅನ್ಯಾಯವೆಂಬ ಸಾಮಾನ್ಯ ತಿಳುವಳಿಕೆ ಒಂದು ಮಟ್ಟಿಗೆ ಎಲ್ಲರಿಗೂ ಇದೆ. ಅನ್ಯಾಯ ಮಾಡುವವನು ಒಮ್ಮೆ ಭಿನ್ನ ಕಾರಣಗಳಿಂದ ಅದನ್ನು ನ್ಯಾಯವೆಂದೇ ಸಾಧಿಸಿದರೂ ಆತನಲ್ಲಿ ಅದು ಅನ್ಯಾಯವೆಂಬ ಭಾವನೆ

ಆಧುನಿಕ ರಾಜಕೀಯ ರಂಗದಲ್ಲಿ ಅಹಿಂಸಾ ಧರ್ಮದ ಆಚರಣೆಯನ್ನು ತಂದು ಭಾರತಕ್ಕೆ ಸ್ವಾತಂತ್ರ್ಯ ಗಳಿಸಿದ ಮಹಾತ್ಮಾ ಗಾಂಧಿಜಿಯವರು

ಅಹಿಂಸೆಯಲ್ಲಿ ಅಶಕ್ತರ ಅಹಿಂಸೆ [illegible] ಸಶಕ್ತರ ಅಹಿಂಸೆ [illegible] ಮಹಾತ್ಮಾ ಗಾಂಧಿಯವರು ಎರಡು ರೀತಿಯ ಅಹಿಂಸೆ ಹೇಳುತ್ತಾರೆ. ಹಿಂದುಸ್ಥಾನಕ್ಕೆ ಶಸ್ತ್ರಗಳಿರಲಿಲ್ಲ. ಯುದ್ಧ ಸನ್ನಾಹಗಳಿರಲಿಲ್ಲ. [illegible] ಅದರಿಂದ ಅಹಿಂಸೆಯ ದಾರಿಯನ್ನು ಅದು ರಾಜಕೀಯ ಧೋರಣೆಯಾಗಿ ಅಂಗೀಕರಿಸಿತು. ಇದು ಅಶಕ್ತರ ಅಹಿಂಸೆ. ಹಿಂದುಸ್ಥಾನವು 40 ಕೋಟಿ ಜನರ ಬಲಿಷ್ಠ ರಾಷ್ಟ್ರ. ಬ್ರಿಟನು ಇದರ ಮೇಲೆ ಎಂದಿಗೂ ಬಲಾತ್ಕಾರ ನಡೆಸಲು ಸಮರ್ಥನಲ್ಲ. ಹೊಡೆದೋಡಿಸುವುದಿದ್ದರೆ ಕೇವಲ ಸ್ವಲ್ಪ ಸಂಖ್ಯಾಕರಾದ ಬ್ರಿಟಿಷರನ್ನು ಓಡಿಸುವುದು ನಮಗೆ ಸಾಧ್ಯ. ಆದರೆ ಹಿಂಸಾತ್ಮಕ ರೀತಿಯು ಅನಾಗರಿಕ ಜನರ ರೀತಿ. ನಮ್ಮಂಥ ಸುಸಂಸ್ಕೃತಿಯುಳ್ಳ ಜನಾಂಗಕ್ಕೆ ಅದು ಹೇಳಿಸಿದ್ದಲ್ಲ. ಅಹಿಂಸೆಯಿಂದ ನಮ್ಮ ಇಚ್ಛೆ ನಾವು ಪಡೆಯುವುದು ಸಾಧ್ಯ. ಇಂಥ ವಿಶ್ವಾಸದಿಂದ ಅಹಿಂಸೆಯ ರೀತಿಯನ್ನು ಕೈಕೊಂಡಿದ್ದರೆ ಅದು ಸಶಕ್ತರ ಅಹಿಂಸೆಯಾಗುತ್ತಿತ್ತು.

ಮೂಲದಲ್ಲಿ ಇದ್ದೇ ಇದೆ. ಸಾಕಷ್ಟು ಸಹನೆಯಿಂದ ಆತನ ಅನ್ಯಾಯವನ್ನು ಎದುರಿಸಿದರೆ ಆತನಲ್ಲಿ ಆ ಧರ್ಮಬುದ್ಧಿ ಖಚಿತ ಜಾಗೃತಿ ಹೊಂದುತ್ತದೆ ಎಂಬುದೇ ಈ ಅಹಿಂಸಾ ತತ್ವದ ಮೂಲವಿರುತ್ತದೆ.

ವಸ್ತುತಃ ಅಹಿಂಸೆಯ ಸರಿಯಾದ ಆಚರಣೆಯಿಂದ ಪ್ರಬಲವಾದ ಜನಮತವು ಜಾಗೃತಿಯಾಗುತ್ತದೆಂಬುದು ನಿರ್ವಿವಾದ. ಪ್ರಬಲವಾದ ಜನಮತವನ್ನು ಅಲ್ಲಗಳೆಯುವುದು ಬಹಳ ಕಷ್ಟಸಾಧ್ಯ. ಹಿಂಸಾತ್ಮಕ ಗಲಭೆಯಲ್ಲಿ ಮನುಷ್ಯನ ವಿಚಾರಶಕ್ತಿಯು ಲುಪ್ತವಾಗುವ ಸಂಭವವೇ ಹೆಚ್ಚು. ಅಹಿಂಸೆಯ ವಾತಾವರಣದಲ್ಲಿ ವಿಚಾರಶಕ್ತಿಯು ಸುಪ್ತವಾಗಿದ್ದರೂ ಜಾಗೃತಿ ಹೊಂದುತ್ತದೆ.

ನಮ್ಮ ಹೃದಯದಲ್ಲಿ ನಿಜವಾದ ಅಹಿಂಸಾಧರ್ಮವಿಲ್ಲದ್ದರಿಂದ ನಮಗೆ ಸ್ವಾತಂತ್ರ್ಯ ಸಿಕ್ಕುವ ಈ ದಿನ ನಮ್ಮೊಳಗೆ ಜಗಳ, ಹೊಡೆದಾಟ, ಕೊಲೆ ಇವೆಲ್ಲ ನಡೆಯಲು ಕಾರಣವಾಯಿತು. ಅಖಂಡ ಹಿಂದುಸ್ಥಾನವು ಒಡೆದು ಪಾಲಾಯಿತು. ನಿಜವಾದ ಅಹಿಂಸೆ

1942 ಆಗೋಸ್ತು ಚಳವಳಿಯಲ್ಲಿ
ಭೂಗತ ಚಳವಳಿಯನ್ನು ಹೂಡಿದ ಸಮರಧೀರ
ಜಯಪ್ರಕಾಶ ನಾರಾಯಣ

ಸೋಶಿಯಲಿಸ್ಟ್ ಪಾರ್ಟಿಯ ನಾಯಕರೂ ;
ಪ್ರಾರಂಭದಿಂದ ಅದರ ಸದಸ್ಯರೂ ಆದ
ಡಾ ರಾಮಮನೋಹರ ಲೋಹಿಯಾ

1942 ಆಗೋಸ್ತು ಚಳವಳಿಯಲ್ಲಿ
ಭೂಗತ ಚಳವಳಿಯನ್ನು ಹೂಡಿದ ವೀರಮಹಿಳೆ
ಶ್ರೀಮತಿ ಅರುಣಾ ಅಸಫ್ ಆಲಿ

ಸ್ವರಾಜ್ಯ ಮತ್ತು ಸಮತಾವಾದ

ಸ್ವರಾಜ್ಯವು ನಿಜವಾದ ಸ್ವರಾಜ್ಯವಾಗಬೇಕಾದರೆ ಅದು ಸಮತಾವಾದೀ ರಾಷ್ಟ್ರವಾಗಬೇಕೆಂಬುದು ನಿರ್ವಿವಾದದ ಸಂಗತಿ. ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತ ಹೋಗುವುದು ಬಡವರು ಬಡತನದಲ್ಲಿ ನರಳುವುದು ಎಂದಾದರೆ ಇದಕ್ಕೆ ನಿಜವಾದ ಸ್ವರಾಜ್ಯವೆಂದು ಯಾರೂ ಹೇಳಲಾರರು. ದೊಡ್ಡವರು ಮತ್ತು ಬಡವರೊಳಗೆ ಇರುವ ಅಂತರವನ್ನು ಜಗತ್ತಿನಲ್ಲಿ ಎಷ್ಟು ಕಡಿಮೆಮಾಡುವುದು ಸಾಧ್ಯವೋ ಅಷ್ಟು ಕಡಮೆಯಾಗಿ ಎಲ್ಲರೂ ಏಕಪ್ರಕಾರ ಸುಖಸಂಪತ್ತಿನಲ್ಲಿ ಜೀವಿಸುವಂತಾಗಬೇಕೆಂಬುದೇ ಸಮತಾವಾದದ ಧ್ಯೇಯ.

ದೊಡ್ಡ ಸರಕಾರೀ ನೌಕರರಿಗೆ 5000 ರೂಪಾಯಿ ಮೇಲೆ ಸಂಬಳ-ಬಡ ಕಾರಕೂನನಿಗೆ ರೂಪಾಯಿ 30ಕ್ಕೂ ಗತಿಯಿಲ್ಲವೆಂಬಷ್ಟು ಅಂತರವು ಏತಕ್ಕಿರಬೇಕು. ಮೇಲಿನವರ ಸಂಬಳ ಕಡಮೆ ಮಾಡಿ ಬಡವರ ಸಂಬಳ ಏರಿಸಿದರೆ ಅಷ್ಟರ ಮಟ್ಟಿಗೆ ಸಮತಾವಾದ ಬಂದಂತಾಗುವುದು.

ಮಾಲಕರಿಗೆ ವಿಪರೀತ ಲಾಭ-ಕೆಲಸಗಾರರಿಗೆ ದಿನವಿಡೀ ದುಡಿದರೂ ಊಟಕ್ಕೆ ಗತಿಯಿಲ್ಲವೆಂಬ ಪರಿಸ್ಥಿತಿಯು ಹೋಗಬೇಕು. ಮಾಲಕರ ಲಾಭ ಒಟ್ಟಿ ಅಂಶದಷ್ಟಕ್ಕೆ ಮಾತ್ರ ಇಳಿಸಲ್ಪಡಲಿ. ಕೂಲಿಕಾರರ ಸಂಬಳ ಅವರ ಕುಟುಂಬವು ಸುಖವಾಗಿ ಜೀವಿಸಲು ಸಾಕಷ್ಟು ಸಿಕ್ಕುವಂತಾಗಲಿ. ಆಗ ಇಷ್ಟರ ಮಟ್ಟಿಗೆ ಸಮತಾವಾದ ಜಾರಿಗೆ ಬಂದಂತಾಗುವುದು.

ದೊಡ್ಡ ದೊಡ್ಡ ಕಾರಖಾನೆಗಳನ್ನು ದೊಡ್ಡ ಭಂಡವಲಗಾರರು ತಮ್ಮ ಸ್ವಂತ ಲಾಭಕ್ಕೆ ನಡೆಸುವುದನ್ನು ನಿಲ್ಲಿಸಿ ಸರಕಾರದವರೇ ಇದನ್ನು ನಡಸಲಿ. ಉತ್ಪತ್ತಿಯು ಪ್ರಜೆಗಳೆಲ್ಲರ ಹಿತಕ್ಕಾಗಿ ಹಂಚಲ್ಪಡಲಿ. ಆಗ ಸಮತಾವಾದವು ಇನ್ನೂ ಹೆಚ್ಚಾಗಿ ಜಾರಿಗೆ ಬರುವುದು.

ಚಿಕ್ಕ ಚಿಕ್ಕ ಕೈಗಾರಿಕೆಗಳನ್ನು, ವ್ಯಾಪಾರಗಳನ್ನು ಸಹಕಾರ ತತ್ವದಿಂದ ನಡಸಿ ಅದರಲ್ಲಿ ಲಾಭ ಪಡೆಯುವ ಹವ್ಯಾಸವೇಕೆ? ಸರಕಾರೀ ಸಂಘಗಳ ಮೂಲಕ ಇವೆಲ್ಲ ವಹಿವಾಟುಗಳು ನಡೆದು ಎಲ್ಲರಿಗೂ ಇದರ ಪ್ರಯೋಜನ ಸಿಕ್ಕುವಂತಾಗಲಿ.

ಕೃಷಿಯೂ ಸಹಕಾರದ ಮೂಲಕ ನಡೆದರೆ ಉತ್ತಮವಲ್ಲವೆ! ಇಂದಿನ ಸಾಂಪತ್ತಿಕ ವ್ಯವಹಾರ ಸರಕಾರದಿಂದ ಸಹಕಾರೀ ಸಂಸ್ಥೆಗಳ ಮೂಲಕ ನಡೆಸಿದಲ್ಲಿ ಬಹು ಮಟ್ಟಿಗೆ ಸಮತಾವಾದವನ್ನು ಪೂರ್ಣತೆಯಲ್ಲಿ ಜಾರಿಗೆ ತರಬಹುದು.

ಇಡೀ ರಾಷ್ಟ್ರಕ್ಕೆ ಬೇಕಾಗುವ ದೊಡ್ಡ ಮೂಲ ಕೈಗಾರಿಕೆಗಳನ್ನು ಮಾತ್ರ ಸರಕಾರವು ನಡೆಸಬೇಕು. ಜನರ ನಿತ್ಯದ ಆವಶ್ಯಕತೆಯ ವಸ್ತುಗಳನ್ನು ಜನರೇ ಸಹಕಾರದಿಂದ ಉತ್ಪತ್ತಿ ಮಾಡಿಕೊಳ್ಳಬೇಕು. ಹೀಗಾದರೆ ಮಾತ್ರ ಜನರು ಸ್ವಾವಲಂಬಿಗಳಾಗಿ ಸ್ವಾತಂತ್ರ್ಯದಿಂದ ಬಾಳಲು ಸಾಧ್ಯವಾಗುವುದು. ಎಲ್ಲವನ್ನು ಕೇಂದ್ರೀಕರಿಸಿ ಸರಕಾರದವರೇ ನಡೆಸುವ ವ್ಯವಸ್ಥೆ ಸರಕಾರೀ ಅಧಿಕಾರಿಗಳು ನಿರಂಕುಶ ಪ್ರಭುಗಳಾಗುವಂತೆ ಮಾಡೀತೆಂಬ ಹೆದರಿಕೆ ಆಧಾರರಹಿತವಲ್ಲ.

ಈ ಬಗೆಯ ಸಮತಾವಾದವನ್ನು ಸಾಧಿಸಲು ಬಲಾತ್ಕಾರ ಪ್ರಯೋಗದ ಅಗತ್ಯವಿಲ್ಲ. ಇಂದ ಸಮತಾವಾದ ಜಾರಿಯಲ್ಲಿಡಲಿಕ್ಕೂ ಬಲಾತ್ಕಾರದ ಅಗತ್ಯ ಬೀಳುವಂತಿಲ್ಲ. ಪ್ರಜೆಗಳಿಗೆ ಸರಿಯಾದ ಶಿಕ್ಷಣ ಕೊಟ್ಟೇ ಸಾಧಿಸಬಹುದು. ಶಾಂತ ರೀತಿಯಿಂದ ಹಿಂದುಸ್ಥಾನದಲ್ಲಿ ಸಮತಾವಾದವನ್ನು ಸ್ಥಾಪಿಸಿದರೆ ನಾವು ಜಗತ್ತಿನಲ್ಲಿ ಒಂದು ಉತ್ತಮ ಮಾದರಿ ಹಾಕಿಕೊಟ್ಟಂತಾಗುವುದು. ಸಮತಾವಾದ ಹಾಗೂ ವ್ಯಕ್ತಿ ಸ್ವಾತಂತ್ರ್ಯ ಇವೆರಡನ್ನು ಸಾಧಿಸಬೇಕಾದರೆ ಶಾಂತ ರೀತಿಯ ಯತ್ನದಿಂದ ಮಾತ್ರ ಸಾಧ್ಯವಿರುತ್ತದೆ.

ಶ್ರೀಮಂತರನ್ನು ಭಂಡವಲಗಾರರನ್ನು ಇದಕ್ಕೊಪ್ಪುವಂತೆ ಶಾಂತರೀತಿಯಿಂದ ಸಾಧಿಸಲು ಸಾಧ್ಯವಿದೆಯೆ ಎಂದು ಕೇಳಬಹುದು. ಇಂಥವರು ಸಮಾಜದಲ್ಲಿ ಕೇವಲ ಸ್ವಲ್ಪ ಮಂದಿ ಮಾತ್ರವೆಂಬುದರಿಂದ ಇತರರೆಲ್ಲರೂ ಜಾಗ್ರತರಾಗಿ ಸರಿಯಾದ ರೀತಿಯಲ್ಲಿ ವರ್ತಿಸಿದರೆ ಇವರೂ ಈ ಹೊಸ ವ್ಯವಸ್ಥೆಗೆ ಒಪ್ಪಲೇಬೇಕಾಗುತ್ತದೆಂದು ತಿಳಿಯಲು ಕಷ್ಟವಿಲ್ಲ.

ಶಾಂತರೀತಿಯಿಂದ ಸ್ವರಾಜ್ಯವನ್ನು ಸ್ಥಾಪಿಸಿಕೊಂಡ ಹಿಂದುಸ್ಥಾನವು ಮುಂದೆ ಶಾಂತದಿಂದ ಆ ಸ್ವರಾಜ್ಯವನ್ನು ಸಮತಾವಾದೀ ರಾಷ್ಟ್ರವಾಗಿ ಮಾರ್ಪಡಿಸಿಕೊಳ್ಳಬೇಕಾಗಿದೆ.

ಸೋಶಿಯಲಿಸ್ಟ್ ಪಾರ್ಟಿಯ ಕಾರ್ಯಕಾರಿ ಸಮಿತಿಯ ಸದಸ್ಯೆ
ಶ್ರೀಮತಿ ಕಮಲಾದೇವಿ

(ನೇ ಪುಟದಿಂದ)

ಯಿಂದ ನಾವು ವರ್ತಿಸಿದ್ದರೆ ಈ ದುಃಖದಾಯಕ ಘಟನೆಗಳು ಯಾವವೂ ಸಂಭವಿಸುತ್ತಿರಲಿಲ್ಲವೆಂದು ಗಾಂಧೀಜಿಯವರು ಹೇಳುತ್ತಾರೆ.

ಸ್ವರಾಜ್ಯ ಚಳವಳಿಯ ಆಚಾರ್ಯರಾಗಿದ್ದ ಗಾಂಧೀಜಿಯವರ ಮಾತುಗಳನ್ನು ಸರಿಯಾಗಿ ಪಾಲಿಸದಿದ್ದುದರಿಂದ ಇಂದು ಸ್ವಾತಂತ್ರ್ಯ ದೊರಕಿದರೂ ಸಂತೋಷಪಡುವಂತಿಲ್ಲವೆಂಬ ಪರಿಸ್ಥಿತಿ ದೇಶಕ್ಕೆ ಬಂದು ಒದಗಿರುತ್ತದೆ. ಇವರ ಉಪದೇಶವನ್ನು ಅಲ್ಲಗಳೆದು ನಮ್ಮ ಸಂಸ್ಕೃತಿಯನ್ನು ಬದಿಗೊತ್ತಿ ಆಧುನಿಕ ರಾಷ್ಟ್ರಗಳ ಹಾದಿಯನ್ನೇ ನಾವೂ ತುಳಿದರೆ ಅಂದರೆ ಸೈನ್ಯ ಸಂಗ್ರಹ ಮತ್ತು ಯುದ್ಧ ಸನ್ನಾಹಗಳೇ ಸರ್ವಸ್ವವೆಂದು ಭಾವಿಸಿ ಅದಕ್ಕಾಗಿ ಯತ್ನಿಸುತ್ತ ಹೋದರೆ ದೇಶವು ಇನ್ನಷ್ಟು ಕಷ್ಟಕ್ಕೀಡಾಗುವುದು ಖಂಡಿತ. ಹಿಂದುಸ್ಥಾನ ಪಾಕಿಸ್ಥಾನಗಳು ಹೊಡೆದಾಟ ಕಟ್ಟಿಕೊಳ್ಳಬೇಕೆ? ಪರಿಣಾಮವೇನಾದೀತು?

ಆದಾರಿಯನ್ನು ಬಿಟ್ಟುಕೊಟ್ಟು ಪರಸ್ಪರ ಸಹಕಾರದಿಂದ ವರ್ತಿಸುತ್ತಾ ಹೋದರೆ ಇಂದು ವಿಭಾಗವಾಗಿದ್ದ ರಾಷ್ಟ್ರವು ಪುನಃ ಒಂದುಗೂಡುವ ಸಂಭವವುಂಟು.

ಅಹಿಂಸೆಯ ಮಹತ್ವವನ್ನು ಜಗತ್ತಿನಲ್ಲಿ ತೋರಿಸಿಕೊಟ್ಟು ಜಗತ್ತಿಗೆ ಶಾಂತಿಯನ್ನು ತಂದುಕೊಡುವ ಜವಾಬ್ದಾರಿಯು ನಮ್ಮ ದೇಶಕ್ಕೆ ಸೇರಿದುದು. ಈ ದೇಶವು ಇದನ್ನು ಸಾಧಿಸುವುದೆಂದು ನಾವು ಆಶಿಸಬಹುದು. ಅಶೋಕ ಚಕ್ರವರ್ತಿಯ ಕಾಲದಲ್ಲಿ ಜಗತ್ತಿಗೆ ನಮ್ಮ ದೇಶವು ಸಾರಿದ ಶಾಂತಿ ಸಂದೇಶವು ಇಂದು ಪುನಃ ನಮ್ಮ ದೇಶದಿಂದ ಜಗತ್ತಿಗೆ ಸಾರಲ್ಪಡಬೇಕಾಗಿದೆ.

ಬಲಾತ್ಕಾರವಿದ್ದಲ್ಲಿ ಸ್ವಾತಂತ್ರ್ಯವಿರಲಾರದು. ಹಿಟ್ಲರನ ರಾಜ್ಯದಲ್ಲಿ ಪ್ರಜೆಗಳಿಗೆ ಸ್ವಾತಂತ್ರ್ಯವೆಲ್ಲಿಯದು ? ಅಹಿಂಸೆಯ ತಳಹದಿಯ ಮೇಲೆ ಕಟ್ಟಲ್ಪಡುವ ಸಮಾಜದಲ್ಲಿ ಮಾತ್ರ ಪ್ರಜೆಗಳು ಸ್ವತಂತ್ರರಾಗಿ ಬಾಳುವುದು ಸಾಧ್ಯ. ಸರಿಯಾದ ಪ್ರಜಾಸತ್ತಾತ್ಮಕ ಪದ್ಧತಿಯು ನಮ್ಮಲ್ಲಿ ಜಾರಿಗೆ ಬಂದು ಎಲ್ಲ ಪ್ರಜೆಗಳೂ ಸುಖಿಗಳಾಗಿ ಬಾಳಬೇಕಾದರೆ ನಾವು ಅಹಿಂಸೆಯ ದಾರಿಯನ್ನು ಪೂರ್ಣವಾಗಿ ಕೈಕೊಳ್ಳಬೇಕು. ಸ್ವರಾಜ್ಯ ಸಾಧನೆಗಾಗಿ ಈ ವರೆಗೆ ನಡೆದಿರುವ ಎಲ್ಲ ಸಂಗತಿಗಳಲ್ಲಿ ನಾವು ಕಲಿಯತಕ್ಕ ಮುಖ್ಯ ಪಾಠವೆಂದರೆ ಅಹಿಂಸೆಯ ಮಹತ್ವ. ಆ ಪಾಠವನ್ನು ಇನ್ನಷ್ಟು ಚೆನ್ನಾಗಿ ಅಭ್ಯಾಸಿಸಿದರೆ ಮಾತ್ರ ನಮ್ಮ ಸ್ವರಾಜ್ಯವು ಸಾರ್ಥಕವಾಗುವುದು.

ಭಾರತವು ಸ್ವಾತಂತ್ರ್ಯ ಹೇಗೆ ಗಳಿಸಿತು?

ಭಾರತದ ಜನನಾಯಕ
ಪಂಡಿತ ಜವಾಹರಲಾಲ

ಪ್ರಖ್ಯಾತ ಭಾರತ [illegible] ಗಾದ ಆಂಗ್ಲ ರಾಜಕೀಯ ತಜ್ಞ ಪಿ. ಎಚ್. ಎನ್. [illegible] ಎಂಬು ವಿಚಾರಪರ ಲೇಖನದಲ್ಲಿ ಭಾರತವು ಸ್ವಾತಂತ್ರ್ಯ ಗಳಿಸಿದ ಐತಿಹಾಸಿಕ ವಿಧಾನವನ್ನು ಹೀಗೆ ವಿವರಿಸಿದ್ದಾರೆ

ಇತ್ತೀಚೆಗೆ ಷ [illegible] ಸಂಸ್ಥೆಯು [illegible] ಮಕ್ಕಳ [illegible] ರಣ [illegible] ಜೀವನ [illegible] ಒರೆಗೆ [illegible] ಗವು [illegible] ಧನ್ಯ [illegible] ಲನ [illegible] ಪುಟ್ಟ ಮಕ್ಕಳು [illegible] ಪರಸ್ಪರರ ಕುರಿತು [illegible] ಯನ್ನು ತಳೆಯ [illegible] ನಾವು ಸಾಮ್ರಾಜ್ಯ [illegible] ಗಳನ್ನು ಅಂತ್ಯಗೊಳಿಸಲು [illegible] ತ್ತವೆ

ಆದರೆ ಗಾಂಧಿಯಂತಹ ಅಗಾಧ ಸಂತಪುರುಷನೊಬ್ಬನ ತತ್ವಗಳ ಕುರಿತು ಚಿಕ್ಕ ಬಾಲಕರಿಗೆ ಮನವೊತ್ತಾಗೆ ವಿವರಿಸುವುದು ಕಷ್ಟದ ಕೆಲಸ. ಬೇರೊಬ್ಬನೊಡನೆ ಹೋಲಿಕೆ ಮಾಡಿ ಹೇಳುವುದಕ್ಕೆ ಮಹಾತ್ಮಾ ಗಾಂಧಿಯವರಂತಹ ಅಸಾಮಾನ್ಯ ವ್ಯಕ್ತಿ ಆಂಗ್ಲ ಇತಿಹಾಸದಲ್ಲೆಂದೂ ಹುಟ್ಟಿಲಿಲ್ಲ. ಈ ಸಂದರ್ಭದಲ್ಲಿ ವಿಷಯವನ್ನು ಬಾರತದ ಅತಿ ದರಿದ್ರತೆಯ ಪರಿಸ್ಥಿತಿಯನ್ನು ಎಣಿಸುವುದರ ಮೂಲಕ ಪ್ರಾರಂಭಿಸಬೇಕಾಗುತ್ತದೆ ಅಮೃತಸರದ ಮುತ್ತು ಮೈದಾನದಲ್ಲಿ ಸಂಭವಿಸಿದ ದುರಂತ, ಸವಿನಯ ಕಾಯದೆಬಂಗ ಸತ್ಯಾಗ್ರಹಗಳ ಸ್ವೀಕೃತಿ ಮತ್ತು ರಾಜಕೀಯ ಪರಿಣಾಮಗಳು ಇವುಗಳನ್ನೆಲ್ಲ ವಿವರಿಸಬೇಕಾಯಿತು 1942ರ ಸ್ವಜ ಜಗತು ಹಬ್ಬಾಗಿ ಸಂಪತ್ತು, ಸಿಡಿಮದ್ದುಗಳ ಮೇಲೆ ಹೊಂದಿಕೊಂಡಿರುವಾಗ ನೈತಿಕ ಶಕ್ತಿಯ ಮೇಲ್ಮೆಯು ಯಾರ ಚಿತ್ತಕ್ಕೆ ಹೋಗುತ್ತದೆ?

ತರದ ಒತ್ತಾಟವನ್ನು ಹಾಕಲಿಲ್ಲ ಅವರೆಲ್ಲರೂ ಸ್ವಾತಂತ್ರ್ಯದ ಕುರಿತು ಏಕಕಂಠದ ಅಭಿಪ್ರಾಯವನ್ನು ಸೂಚಿಸಿದರು. ಅದೇ ಸಾಕಷ್ಟಾಯಿತು ಕೂಡಲೇ ಬ್ರಿಟಿಷ್ ಸರಕಾರವು ಜನತೆಯ ಇಚ್ಛೆಯನ್ನು ಈಡೇರಿಸುವ ಕಾರ್ಯದಲ್ಲಿ ಮಗ್ನವಾಯಿತು. ಆ ನಿರ್ಧಾರಕ್ಕೆ ಅವು ಕವಲದೆ ಅಂಟಿಕೊಂಡಿತು ಅಧಿಕಾರ ವರ್ಗಾಯಿಸಲು ಯೋಗ್ಯ ವಿಧಾನವಾವುದೆಂಬುದೇ ನಂತರದ ಕಷ್ಟ ಸಮಸ್ಯೆಯಾಯಿತು ಅಂತ್ಯದಲ್ಲಿ ಪ್ರಜಾಪ್ರಭುತ್ವಕ್ಕೆ, ಸಂಪೂರ್ಣ ಮನ್ನಣೆ ದೊರಕಿತು

ಇಷ್ಟು ಕಾಲ ವಿಳಂಬವೇಕೆ?

ಈ ಸುಸಂತೋಷ ಸಂದರ್ಭಕ್ಕಾಗಿ ಭಾರತವು 1946ರ ತನಕವೇಕೆ ಕಾದಿರಬೇಕಾಯಿತು? ಹಿಂದಿನ ದಾಖಲೆಗಳನ್ನು ನೋಡಿದವರಾರೂ ಬ್ರಿಟಿಷ್ ಸರಕಾರವು ಇದು ತನಕ ಜನತೆಯ ಒಪ್ಪಿಗೆಯಿಂದಲೇ ಆಳಿಕೊಂಡಿತೆಂದು ಪ್ರಾಮಾಣಿಕತೆಯಿಂದ ಚ

"ದಿಲ್ಲಿ ಚಲೋ" ಎಂದು ಸಾರಿದ
ಈಗ ಭಾರತದಲ್ಲಿಲ್ಲದ
ನೇತಾಜಿ ಸುಭಾಸ್‌ಚಂದ್ರ ಬೋಸರು



ಹಿಂದೆ ಸೈನ್ಯಶಕ್ತಿಯ ಕೊನೆಯ ವಾಶವೀಯತೆಯು ಸದಾ ಮೆರೆದುಕೊಂಡೇ ಇತ್ತು

ಸ್ವಲ್ಪ ಕಾಲದ ಮುಂಚೆ ಭಾರತೀಯರು ಸ್ವತಂತ್ರತೆಗೆ [illegible] ಅರ್ಹರಾಗಿಲ್ಲ [illegible] ಅನಂತರ ಆ [illegible] ವಧಿಯಲ್ಲಿ ಅವರು ಹೇಗೆ ಆ ಅರ್ಹತೆ [illegible] ರಹಸ್ಯದ ವಿಷಯ [illegible] ಬ್ರಿಟಿಷ್ ಸರಕಾರವು ತನ್ನೊಂದು [illegible] ಶಿಕ್ಷಣ ಕ್ರಮ ಮತ್ತು [illegible] ಘೋರಣೆಯಿಂದ ಭಾರತವನ್ನು [illegible] ತರಬೇತಿ [illegible]

ಕಳೆದ ಶತಮಾನದಲ್ಲಿ [illegible] ಸಮ ಜನವೆಂದು [illegible] ಆದರೆ [illegible] ಶಿಕ್ಷಣ [illegible] ಸ್ವಾತಂತ್ರ್ಯ [illegible] ಮಾಡಲಿಲ್ಲವೆಂಬುದನ್ನು [illegible] ಉದ್ದೇಶ ದೇಶೀ ಜನರನ್ನು ನಿಕೃಷ್ಟ ಮತ್ತು ಕಮ್ಮಿ ಸಂಬಳದ ಹುದ್ದೆಗಳಿಗಾಗಿ ತರಬೇತಿಗೊಳಿಸುವುದು [illegible] ಆದರೆ 185[illegible] ದಂಗೆಯು ಸರಕಾರಕ್ಕೆ [illegible] ಯ ಅಂಜಿಕೆ ಹಿಡಿಯಿತು. ಇದರ ಪ್ರತಿಕ್ರಿಯೆಯಾಗಿ ಅಷ್ಟು ಸ್ವಲ್ಪವಾಗಿ [illegible]

ಬಾರತದ ಘಟನಾ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದ್



ಬಂಗಾಳದ ಗವರ್ನರರಾಗಿ ನೇಮಿಸಲ್ಪಟ್ಟ
ಶ್ರೀ. ಸಿ. ರಾಜಗೋಪಾಲಾಚಾರ್ಯ

ಸಾವೆಲ್ಲರೂ ಈ ಸಮಸ್ಯೆಯ ಕುರಿತು ನಮ್ಮ ಮನಸ್ಸಿನ ಆಳಗವಾಕ್ಷಗಳಲ್ಲಿ ಯೋಚಿಸುತ್ತಿರುವಾಗಲೇ ಭಾರತದಲ್ಲಿ ವೈಸರಾಯರೊಬ್ಬರು ಬಾರತದ ಮುಖಂಡರೊಡನೆ ಅಧಿಕಾರ ವರ್ಗಾಂತರದ ಕುರಿತು ಪರ್ಯಾಲೋಚಿಸುತ್ತಿದ್ದರು. ಮೇಲ್ನೋಟಕ್ಕೆ 18ನೇ ಶತಮಾನದಲ್ಲಿ ಪ್ರಾರಂಭಿಸಿದ ಸಾಮ್ರಾಜ್ಯ ದಿಗ್ವಿಜಯ ನಯವಾಗಿಯೂ ಶಾಂತ ರೀತಿಯಲ್ಲಿಯೂ ಅಂತ್ಯವಾದಂತೆ ತೋರುತ್ತದೆ ಭಾರತೀಯರಾದರೊ ಈ ನಾಟಕದ ಕೊನೆಯ ಅಂಕದಲ್ಲಿ ಯಾವ

ಚಿಸಲಾರರು ಬಾರತೀಯ ರಾಷ್ಟ್ರ ಹೋರಾಟವು ಅತೀವ ಆಯಾಸದಿಂದೆಂಬಂತೆ ದುರ್ಬಳವಾದಾಗ ಮಾತ್ರ ಅವರಿಗೆ ಆಳಲು ಸಮ್ಮತಿ ದೊರಕಿರಬಹುದೆಂದು ಭಾವಿಸಬಹುದು ಮೇಲಿಂದ ಮೇಲೆ ಭಾರತವನ್ನು ಹೊಸ ಹೊಸದಾಗಿ ಜಯಿಸಿಕೊಳ್ಳುವ ಕೆಲಸ ಬಿಟ್ಟು **ನಮ್ಮ ಕಾಲದಲ್ಲೇನೊ ಅಲ್ಲಿನ ಚಳವಳಗಳು ಸಂಪೂರ್ಣ ಅಹಿಂಸಾತ್ಮಕವಾಗಿದ್ದವೆಂಬದೊಂದು ದೊಡ್ಡ ಸಮಾಧಾನ. ಸ್ವಲ್ಪ ಕಾಲದಲ್ಲೂ ಪ್ರಾಂತಿಕ ಗವರ್ನರುಗಳ ವಿಶೇಷಾಧಿಕಾರದ**



ಸಂಯುಕ್ತ ಪ್ರಾಂತ್ಯದ ಪ್ರಧಾನ ಮಂತ್ರಿ
ಪಂಡಿತ ಗೋವಿಂದ ವಲ್ಲಭ ಪಂತರು

ಬ್ರಿಟಿಷ್ ಪ್ರಧಾನ ಕ್ಲೆಮೆಂಟ್ಸ್ ಅಟ್ಲಿ
ಭಾರತಕ್ಕೆ ಸ್ವಾತಂತ್ರ್ಯ ಕೊಡುವಲ್ಲಿ ಇವರು ವಹಿಸಿದ ಧೋರಣೆಯು ಶ್ಲಾಘನೀಯ.

ಪ್ರಭುತ್ವಕ್ಕೆ ಮನ್ನಣೆ ಕೊಡುವ ಬದಲು ಬ್ರಿಟಿಷ್ ಸರಕಾರವು ದೇಶೀ ರಾಜರಿಗೆ ಪುಸಲಾಯಿಸತೊಡಗಿ ಅವರಿಂದ ದಬ್ಬಾಳಿಕೆ ನಡೆಸಲಾರಂಭಿಸಿತು. ಅದೇ ರೀತಿ ಶ್ರೀಮಂತ ವರ್ಗಕ್ಕೆ ಸಹಾನುಭೂತಿಯನ್ನು ತೋರಿಸುತ್ತ ಹಿಂದೂ ಮುಸಲ್ಮಾನರೊಳಗಿನ ಬಿರುಕಿನೊಳಗೆ ಬಲವಾದ ಬೆಣೆಯನ್ನು ಬಿಗಿಯತೊಡಗಿತು.

ಮಿಂಟೊ ಮೋರ್ಲೆ ಇಲ್ಲವೆ ಮೊಂಟೆಗೊ ಚೆಮ್ಸ್‌ಫರ್ಡ್ ಸುಧಾರಣೆಗಳ ನಂತರ ಬ್ರಿಟಿಷ್ ಸರಕಾರ ಪ್ರಜಾಪ್ರಭುತ್ವ ಪದ್ಧತಿಯನ್ನಾರಂಭಿಸಿತೆನ್ನಬಹುದು. ಇವು ಕೂಡಾ ದೇಶ ವಿಶಾಲ ಚಳವಳಿವಾದ ನಂತರವೇ ಜನ್ಮ ತಾಳಿದುವು. ದೇಶದಲ್ಲಿ ಭೀಕರ ಹಿಂಸಾತ್ಮಕ ಕ್ರಾಂತಿಕಾರಕ ಚಟುವಟಿಕೆಗಳೂ ನಡೆಯಹತ್ತಿದುದೂ ಈ ಧೋರಣೆಗೆ ಅನುಸರಿಸಲು ಇನ್ನೊಂದು ಶೀಘ್ರ ಕಾರಣವೆನ್ನಬಹುದು. ಇದರಿಂದ ಭಾರತವು ಹೆಚ್ಚು ಕಾಲ ತಾಳ್ಮೆಯಿಂದಿರಲಾರದೆಂಬ ಸಂಗತಿಯು ಸುಸ್ಪಷ್ಟವೂ ಆಯಿತು. ಇದೇ ಸಮಯಕ್ಕೆ ಕೊಂಗ್ರೆಸಿನ ಒತ್ತಾಯ ಮತ್ತು ದರ ಹಿಂಬಾಲಕರ ಸಂಖ್ಯೆಯೂ ವರ್ಧಿಸುತ್ತ ಬಂದಷ್ಟಕ್ಕೆ ಈ ಸುಧಾರಣೆಗಳು ಹೆಚ್ಚೆಚ್ಚು ಉದಾರವಾಗಹತ್ತಿದವು. ಜನತಾ ಸಂಸ್ಥೆಯು ನಿರ್ಧಾರಯುಕ್ತವಾದ ಮತ್ತು ಸುವ್ಯವಸ್ಥಿತ ರೀತಿಯ ಮೂರು ಪ್ರಭಾವಶಾಲಿ ಕಾಯಿದೆ ಭಂಗದ ಚಳವಳಿಗಳನ್ನು ನಿರ್ವಹಿಸಿದ ಮೇಲೇ ತಕ್ಕಮಟ್ಟಿನ ಅಧಿಕಾರ ವರ್ಗಾಂತರಕ್ಕೆ ಆಸ್ಪದವಿರುವ 1935ನೇ ಸ್ವಾಯತ್ತೆಯ ಶಾಸನವು ಜಾರಿಗೆ ಬಂತು.

ಆಧ್ಯಾತ್ಮಿಕ ಸೊತ್ತು

ಈ ಸತ್ಯಾಗ್ರಹ ಇಲ್ಲವೆ ಸವಿನಯ ಕಾಯದೆ ಭಂಗ ಚಳವಳಗಳ ಪರಿಣಾಮವನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬಹುದು? ಅವುಗಳ ಪ್ರಥಮ ಮತ್ತು ಪ್ರಬಲವಾದ ಪರಿಣಾಮವು ಭಾರತೀಯರ ಮನೋದಿಗಂತಗಳ ಮೇಲೆ ಅಸಾಧಾರಣ ಪ್ರಭಾವವನ್ನುಂಟುಮಾಡಿತು. 1930ರಲ್ಲಿ ಗಾಂಧೀಜಿಯು ಕರೆ ಮನ್ನಿಸಿ ಜನತೆಯು ಅವರ ನಿರ್ದೇಶಕ್ಕನುಸಾರವಾಗಿ ವರ್ತಿಸಿದುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಅವರು ತಮ್ಮ 1 ಲಕ್ಷ ಹಿಂಬಾಲಕರೊಡನೆ ಸೆರೆಮನೆಯೊಳಗೆ ಕೂತಾಗಲೇ ಅವರು ಸಂಪೂರ್ಣ ಸ್ವಾತಂತ್ರ್ಯದ ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಹೊಂದಿದರೆಂದು ನಾನು ನಿಶ್ಚಯಿಸಿದೆ.

ಪೋಲೀಸರ ಬಂದೂಕುಗಳನ್ನೂ, ಲಾಠಿ ಪೆಟ್ಟುಗಳನ್ನೂ, ಮತ್ತು ಸೆರೆಮನೆಯ ಸಂಕಷ್ಟವನ್ನು ಸ್ವಪ್ರೇರಣೆಯಿಂದೆದುರಿಸಿದ ಈ ಸಾವಿರಾರು ಸ್ತ್ರೀಪುರುಷರು ಆಗಲೇ ತಮ್ಮ ಹೃದಯದಲ್ಲಿ ಸಂಪೂರ್ಣ ಸ್ವತಂತ್ರರಾಗಿದ್ದರು. ಪರಕೀಯ ಆಳೊಡೆಯರಾಗಲಿ, ಅವರ ಸಿಬಂಧಿಯಾಗಲಿ ಈ ಜನರನ್ನೆಂದಿಗೂ ತಮ್ಮ ಅಧಿಕಾರದ ದರ್ಪದಿಂದ ಅಂಜಿಸಲು ಅಸಮರ್ಥರಾದರು. ಅವರನ್ನು ಮೇಲಿಂದಮೇಲೆ ಸೋಲಿಸಿದರೂ ಅವರ ಮನೋನಿರ್ಧಾರವನ್ನೆಂದಿಗೂ ಕುಂಟಿಸುವುದು ಅಸಾಧ್ಯದ ಸಂಗತಿಯೇ ಸರಿ. ಆಗುಂತುಕರಿಂದ ಆಳಿಸಿಕೊಳ್ಳುವ ದುರ್ವಿಧಿಯನ್ನೆಂದಿಗೂ ಅವರು ಒಪ್ಪದಾದರು. ಎಂದು ಈ ಸ್ವಯಂಸೇವಕರು ತಮ್ಮ ಮಾನಸಿಕ ದಾಸ್ಯದ ಶೃಂಖಲೆಗಳನ್ನು ಕಿತ್ತು ಹರಿದೊಗೆದರೊ ಅಂದೇ ಭಾರತೀಯರ ಸ್ಥಾನಮಾನಗಳ ವರ್ಚಸ್ಸು ಬೆಳೆಯಲಾರಂಭಿಸಿತು. ಇಂದಿನ ಸ್ವಾತಂತ್ರ್ಯಕ್ಕೆ ಅಂದ್ಲು ಬುನಾದಿ ಬಿದ್ದಿತ್ತು.

ಸತ್ಯಾಗ್ರಹ ಚಳವಳಗಳ ನೈತಿಕ ಪರಿಣಾಮವು ಅದರ ಲೌಕಿಕ ಸಫಲತೆಗಿಂತ ಹೆಚ್ಚು ಶ್ರೇಯಸ್ಕರವಾಗಿ ಪರಿಣಮಿಸಿತು. ತೆರಿಗೆ ನಿರಾಕರಣದಿಂದ ಸರಕಾರಕ್ಕೆ ತುಂಬಾ ನಷ್ಟವಾಗತೊಡಗಿತು. ಅದರ ಜೊತೆಗೆ ವಿಶಾಲಿಸಿದ ಪೋಲೀಸ ಫೌಜುಗಳನ್ನಿಟ್ಟುಕೊಳ್ಳುವ ಖರ್ಚು. ಆದರೆ ಚಾಣಾಕ್ಷ ಬ್ರಿಟಿಷ್ ಸರಕಾರ ಈ ಖರ್ಚನ್ನು ಭಾರತೀಯ ತೆರಿಗೆದಾರನ ಮೇಲೆ ಹೊರಿಸಿತು.

ನ (ಇಂಗ್ಲೆಂಡಿನ) ತಮ್ಮ ಜನತೆಯ ಕಣ್ಣಿಗೆ ಇಲ್ಲವೆ ಮನಸ್ಸಿಗೆ ನಾಟುವಂತಾಗಬಾರದೆಂದೂ ಬ್ರಿಟಿಷ್ ಸರಕಾರದವರು ವರ್ತಮಾನ ವರದಿಗಳ ಮತ್ತು ಚಲಚಿತ್ರ ಪ್ರದರ್ಶನಗಳ ಮೇಲೆ ಬಿಗಿಯಾದ ನಿಯಂತ್ರಣ ವಿಡುವುದರ ಮೂಲಕ ಎಚ್ಚರಿಕೆ ವಹಿಸಿತು. ಇಷ್ಟಾದರೂ ಭಾರತೀಯ ಸೆರೆಮನೆಗಳೆಲ್ಲ ಅಲ್ಲಿನ ಜನಪ್ರಿಯ ಮುಖಂಡರಿಂದ ತುಂಬಿ ಹೋಗಿವೆಯೆಂಬ ಸಂಗತಿಯು ಎಲ್ಲರಿಗೂ ತಿಳಿದಿತ್ತು. ಈ ಸಂಗತಿಯೊಂದೇ ಬ್ರಿಟಿಷ್ ಜನತೆಯ ವಿವಿಧ ಪಕ್ಷ ಸಂಘಗಳ ಜನತೆಯಲ್ಲಿ ಖೇದಾಶ್ಚರ್ಯಗಳನ್ನೂ, ಭೀತಿ ಲಜ್ಜೆಗಳನ್ನೂ, ಉಂಟುಮಾಡಲು ಸಾಕಾಗುವಂತಾಯಿತು. ಭಾರತದಲ್ಲಿ ಚಳವಳಗಳು ನಡೆಯುತ್ತಿದ್ದಾಗ ಅಲ್ಲಿ ಶಾಂತಿಶಿಸ್ತುಗಳನ್ನು ಕಾಪಾಡುವ ಅವಶ್ಯಕತೆಯಿದೆಯೆಂಬ ಸಂಗತಿಯನ್ನು ಎಲ್ಲರೂ ಒಪ್ಪುತ್ತಿದ್ದರು. ಅದೇ ಸಮಯಕ್ಕೆ ಅಂತಹ ಚಳವಳಗಳು ಪುನರಾವರ್ತನೆಯಾಗದಂತೆ ಅದೆಂತಹ ಸುಧಾರಣೆಗಳನ್ನಾದರೂ ಕೊಡಲು ಸಿದ್ಧರಿದ್ದ ಮುಖಂಡರೂ ಬ್ರಿಟನಿನಲ್ಲಿದ್ದರು. ಭಾರತ ಬ್ರಿಟನುಗಳು ಒಂದಾಗಿ ಉಳಿಯುವಂತಾಗಬೇಕೆಂಬುದೆ ಅವರ ಆಳ ಆಶಯವಾಗತೊಡಗಿತು.

ಇಂತಹ ವ್ಯಕ್ತಿಗಳು ಗಾಂಧೀಜಿಯವರ ತತ್ವ ಧೋರಣೆಗಳನ್ನೂ ಹೆಚ್ಚೆಚ್ಚಾಗಿ ತಿಳಿಕೊಂಡ

ಲೋರ್ಡ್ ಲುಯಿ ಮೌಂಟ್ ಬೇಟನ್
ವೈಸರಾಯರಾಗಿದ್ದು ಭಾರತಕ್ಕೆ ಸ್ವಾತಂತ್ರ್ಯ ಕೊಡುವಲ್ಲಿ ಇವರು ಪಟ್ಟ ಶ್ರಮವು ಸ್ತುತ್ಯ

ತಮ್ಮ ಅರ್ಹತೆಯನ್ನು ರುಜುವಾತು ಮಾಡಿ ತೋರಿಸಿದರು.

ಹಾಗಾದರೆ ಕೇವಲ ಈ ನೈತಿಕ ಶಕ್ತಿ ಪ್ರಭಾವದಿಂದಲೇ ಭಾರತವು ಸ್ವಾತಂತ್ರ್ಯ ಗಳಿಸಿತೆನ್ನೋಣವೆ? ಖಂಡಿತವಾಗಿಯೂ ಹಾಗಲ್ಲದಿರುತ್ತಿದ್ದರೆ ಭಾರತವು ಇಂದು ಸ್ವಾತಂತ್ರ್ಯ ಪಥವನ್ನೇ ಮೆಟ್ಟುವಂತಾಗುತ್ತಿರಲಿಲ್ಲ. ಅದಕ್ಕೆ ಕೂಡಿಸಬಹುದಾದ ಬೇರೊಂದು ಕಾರಣವೂ ಇಲ್ಲದೆ ಇಲ್ಲ. ಭಾರತ ರಾಷ್ಟ್ರೀಯ ಚಳವಳದ ನೈತಿಕ ಪ್ರಭಾವವು ಇತಿಹಾಸದೊಂದು ಅಪೂರ್ವ ಸಂದಿಗ್ಧ ಕಾಲದಲ್ಲೆಂಬಂತೆ ಉಪಯೋಗಿಸಲ್ಪಟ್ಟಿತು. ಅದು ಸಕಾಲದಲ್ಲಿಯೇ ಪ್ರಾರಂಭಿಸಲ್ಪಟ್ಟಂತಾಯಿತು. ಒಂದು ವೇಳೆ ಗಾಂಧಿಜಿಯವರು 18ನೇ ಶತಮಾನದಲ್ಲಿ ಹುಟ್ಟಿದ್ದು ಆ ಕಾಲದಲ್ಲಿ ಏನಾದರೂ ತಮ್ಮ ಸವಿನಯ ಕಾಯದೆಭಂಗದ ಚಳವಳವನ್ನು ಕ್ಲೈವನೆದುರಿನಲ್ಲಿ ಪ್ರಾರಂಭಿಸುತ್ತಿದ್ದರೆ ಅವರಿಗೆ ಸಾಕಷ್ಟು ಪ್ರೋತ್ಸಾಹ ಸಿಕ್ಕುವುದು ಸಂದೇಹಾಸ್ಪದವೇ ಆಗಿತ್ತು.

ಗಾಂಧಿ ಚಳವಳವನ್ನು ಆಗಿನ ಬ್ರಿಟಿಷ್ ಆಡಳಿತ ವರ್ಗವು ಸೌವರ್ಣತ್ವ ಜನತೆಯ "ವಿಚಿತ್ರ ತತ್ವಜ್ಞಾನ ಪ್ರಧಾನ ವ ಸ್ಸಿನ ದೆಂದು ಕನಸು ಎಂದು ಅಪೇಕ್ಷಿಸುತ್ತಿದ್ದ ರು. ಆಗಿನ ಬ್ರಿಟಿಷ್ ಜನತೆಗೆ ಸಶಸ್ತ್ರ ದಂಗೆಯೆಂದರೆ ಶೀಘ್ರ ಅರ್ಥವಾಗುತ್ತದೆ ಅಹಿಂಸಾತ್ಮಕ ಚಳವಳವೆಂದರೆ ಏನೆಂದು ತಿಳಿಕೊಳ್ಳಲು ಅವರಿಗೆ ತುಂಬಾ ಕಷ್ಟವಾಗುತ್ತದೆ.

ಕಟ್ಟಕಡೆಗೆ ಬ್ರಿಟಿಷ್ ಸರಕಾರದ ಕೊನೆಯ ಪರೀಕ್ಷೆಯಾಗುವ ಕಾಲಕ್ಕೆ ಅದರ ಆಡಳಿತ ಸೂತ್ರವು ಒರ್ವ ಮಾಜಿ ಅಧ್ಯಾಪಕನ ಕೈಯಲ್ಲಿ(ಎಟ್ಲಿ) ರುವಂತಾದುದು ಗಣನೀಯ ಸಂಗತಿ. ಭಾರತದ ಕೇಳಿಕೆಯನ್ನು ಮನ್ನಿಸದಿದ್ದರೆ ಅದರ ಪರಿಣಾಮವಾಗಿ ಸಿಡಿಯಬಹುದಾದ ದಂಗೆಯನ್ನಡಗಿಸಲು ತಮ್ಮ ಬಳಿ ಸಾಕಷ್ಟು ಸೈನ್ಯ ಶಕ್ತಿಯಿಲ್ಲವೆಂದವರಿಗೆ ಖಚಿತವಾಯಿತು. ಮತ್ತೆ ದೊಡ್ಡ ಸೈನ್ಯವನ್ನು ಸಜ್ಜುಗೊಳಿಸಲು ಬೇಕಾದ ಧನಸಂಗ್ರಹಕ್ಕೂ ಈ ಎರಡನೇ ಯುದ್ಧಾನಂತರ ಅತೀವ ಕೊರತೆಯಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಇದಲ್ಲದೆ ಆಸ್ಯದಲ್ಲಿ ಭಾರತದ ಕೇಂದ್ರ ಸ್ಥಾನ ಮಹತ್ವವನ್ನು ಬ್ರಿಟಿಷರು ಅರಿತುಕೊಂಡರು. ಭಾರತವನ್ನು ಸ್ನೇಹ ಸೌಹಾರ್ದದಲ್ಲಿಟ್ಟುಕೊಳ್ಳುವುದರ ಅವಶ್ಯಕತೆಯು ಈ ಸ್ಥಾನ ಮಹತ್ವದ ದೃಷ್ಟಿಯಿಂದ ಇನ್ನ



ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಡಿನಾಡು ಅಸಾಧಾರಣ ತ್ಯಾಗವನ್ನು ಮಾಡಿದೆ.

ಗಡಿನಾಡಿನ ಧುರೀಣರಾದ ಖಾನ್ ಸಹೋದರರು

ಪರದೇಶಿ ಬಟ್ಟೆ ಬಹಿಷ್ಕಾರದಿಂದ ಲೆಂಕೇಶಯರಿನ ಗಿರಣಿಗಳಿಗೆ ತುಂಬಾ ಧಕ್ಕೆ ತಗಲಿದೆ. ಎಲ್ಲದಕ್ಕಿಂತಲೂ ಭಾರತದಲ್ಲಿ ವಾಸಿಸುತ್ತಿದ್ದ ಬ್ರಿಟಿಷ್ ಅಧಿಕಾರಿಗಳ ಮನೋಶರೀರಗಳ ಮೇಲೆ ಉಂಟಾದ ಭಯ, ಬೆದರಿಕೆ ಕಳವಳಗಳ ಪರಿಣಾಮವು ಇನ್ನಷ್ಟು ಮಹತ್ವದ್ದು. ಭಾರತದಲ್ಲಿನ ಬ್ರಿಟಿಷ್ ಸೈನ್ಯವು ಅಲ್ಲಿನ ಅಗಾಧ ಸಂಖ್ಯೆಗೆ ಹೋಲಿಸುವಾಗ ಕೇವಲ ಅತ್ಯಲ್ಪ ಸಂಖ್ಯಾಕವೂ ನಿರ್ಬಲವೂ ಎಂದು ತೋರತೊಡಗಿತು. ಸ್ವತಂತ್ರವಾಗಲು ಹೆಣಗುವ ಜನತೆಯ ಮಧ್ಯದಲ್ಲಿ ಇವರ ಶಸ್ತ್ರಾಸ್ತ್ರಶಕ್ತಿಯು ಬೆಂಕಿಯ ಮಧ್ಯದಲ್ಲಿರುವ ಹುಲ್ಲಿನಂತೆ ತೋರತೊಡಗಿದುದು ಆಶ್ಚರ್ಯವಲ್ಲ. ಬಟ್ಟೆ ಬಹಿಷ್ಕಾರ ಅಸಹಕಾರ ಚಳವಳದಿಂದ ಬ್ರಿಟಿಷ್ ಆಳ್ವಿಕೆಗಾದ ನಷ್ಟ ಅತ್ಯಲ್ಪವೇ ಆದರೂ ಅದರಿಂದ ಆಳಧಿಕಾರಿಗಳ ಮನಸ್ಸಿನಲ್ಲಿ ಶಾಶ್ವತವಾದೊಂದು ಅಂಜಿಕೆ ಹುಟ್ಟುವಂತಾಯಿತು.

ಸಾರ್ವಜನಿಕ ರಕ್ಷಣೆ

ಇದೇ ಸಮಯಕ್ಕೆ ತಾವು ಭಾರತದಲ್ಲಿ ನಡೆಸುವ ದಬ್ಬಾಳಿಕೆ ಅಕೃತ್ಯಗಳು ಸ್ವನಾಡಿನ ಹಾಗೆ ಬ್ರಿಟಿಷ್ ಸರಕಾರವು ದಬ್ಬಾಳಿಕೆ ನಡೆಸುವ ತನ್ನ ರೀತಿ ನೀತಿಗಳನ್ನು ಬದಲಿಸತೊಡಗಿತು. ಭಾರತೀಯರು ನೈತಿಕ ಶಕ್ತಿ ಪ್ರಯೋಗವನ್ನು ಹೆಚ್ಚು ಮಾಡಿದಂತೆ ಬ್ರಿಟಿಷ್ ಜನತೆಯಲ್ಲಿಯೂ ಆಧ್ಯಾತ್ಮಿಕ ಚೇತನವುಂಟಾಗತೊಡಗಿ ಬ್ರಿಟಿಷರು ಉದಾತ್ತೀಕರಣದ ಉನ್ನತ ಮಟ್ಟಕ್ಕೇರುವಂತಾಯಿತು. ಭಾರತ ಬ್ರಿಟನಿನ ಈ ದೀರ್ಘಕಾಲ ಸಂಪರ್ಕದ ಪ್ರತಿಯೊಂದೂ ಕಾಲಮಾನದಲ್ಲೂ ಭಾರತದಲ್ಲಿ ಪ್ರಜಾರಾಜ್ಯ ಸ್ಥಾಪಿಸಬೇಕೆಂದು ಹೃತ್ಪೂರ್ವಕವಾಗಿ ಸಹಾನುಭೂತಿಯಿದ್ದ ಅನೇಕ ಬ್ರಿಟಿಷ್ ಮಹಸೀಯರಿದ್ದರೆಂಬುದನ್ನೂ ನಾವು ಮರೆಯಬಾರದು. ಆದರೆ ಇವರ ಸದ್ವಿಚಾರಗಳು ಕೇವಲ ಕನಸಾಗಿಯೇ ಉಳಿದುವು. ಭಾರತೀಯರು ಸ್ವತಃ ಸ್ವರಾಜ್ಯಕ್ಕಾಗಿ ಚಳವಳವಾರಂಭಿಸಿದ ನಂತರವೇ ಬ್ರಿಟಿಷ್ ಸರಕಾರ ಮೆಲ್ಲನೆ ಕ್ರಿಯಾಮಗ್ನವಾಗತೊಡಗಿತು. ಭಾರತೀಯರು ತಮ್ಮ ತಾಳ್ಮೆ ಸಹಿಷ್ಣುತೆಗಳಿಂದ ತಮ್ಮ ಉಜ್ವಲವಾದ ಸ್ವಾತಂತ್ರ್ಯ ಕೋರಿಕೆಯಿಂದ

(೮ನೇ ಪುಟದಿಂದ)

ಷ್ಟು ತುರ್ತಿನ ವಿಷಯವೆಂದೆನಿಸಲ್ಪಟ್ಟಿತು. ಈ ಎರಡು ನೈಜ ಸಂಗತಿಗಳನ್ನು ಬ್ರಿಟನಿನ ಧ್ಯೇಯವಾದಿಗಳು ಮುಂದೆ ತಂದಾಗ ಒರಟು ಸಾಮ್ರಾಜ್ಯವಾದಿಗಳು ಕೂಡಾ ತಲೆದೂಗಬೇಕಾಯಿತು.

ಇನ್ನೊಂದು ಮುಖ್ಯ ಕಾರಣ

ಹತ್ತು ವರ್ಷಗಳ ಹಿಂದೆ ಭಾರತದ ಆರ್ಥಿಕ ಸ್ಥಿತಿಯು ನಿಕೃಷ್ಟಾವಸ್ಥೆಯಲ್ಲಿದ್ದು ಸಾಮ್ರಾಜ್ಯಶಾಹಿಯ ಮೇಲೆ ಅದು ಸಂಪೂರ್ಣ ಹೊಂದಿಕೊಂಡಿರಬೇಕಾಗಿತ್ತು. ಬ್ರಿಟನಿಗೆ ಭಾರತವು ಕಚ್ಚಾ ಪದಾರ್ಥಗಳನ್ನು ಕೊಡುವ ಫಲವತ್ತಾದ ಆಸ್ತಿಯಾಗಿತ್ತು. ಅದೇ ಸಮಯಕ್ಕೆ ಬ್ರಿಟನಿನ ಕೈಗಾರಿಕೆ ವಸ್ತುಗಳ ಮಾರಾಟಕ್ಕೆ ಭಾರತವು ಲಾಭಕರವಾದ ಸಂತೆ ಸ್ಥಳವಾಗಿತ್ತು. ಕ್ರಮೇಣ ಭಾರತವು ತನ್ನ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿ ಅನೇಕ ಅಭ್ಯಂತರಗಳನ್ನು ದಾಟುತ್ತ ಎರಡನೇ ಯುದ್ಧಾಂತ್ಯದ ಸಮಯಕ್ಕೆ ಸಂಪೂರ್ಣ ಸ್ವಾವಲಂಬನದ ಮಟ್ಟಕ್ಕೆ ಬಂದು ನಿಂತಿತು. **ಹಿಂದೆ ಮುಂಗಡ ಸಾಲಕೊಡುವ ಬ್ರಿಟನು ಭಾರತಕ್ಕೆ ಸಾಲದ ಋಣಿಯಾಯಿತು.**

ಹೀಗ ತನ್ನ ಕಾರ್ಖಾನೆಗಳ ಗಿರಣಿಗಳಿಂದ ಒಟ್ಟೆ, ಕಬ್ಬಿಣ, ಉಕ್ಕುಗಳನ್ನು ತಯಾರಿಸ... ಮೆಲ್ಲನೆ ಭಾರತವು ಸ್ವತಂತ್ರವ ಪಡೆ[illegible] ಯಲು ಅರ್ಹವಾಯಿತು. [illegible] ಗವು ಎಂದು ಸ್ವಶಕ್ತಿಯನ್ನು [illegible] ವನ್ನು ಗಳಿಸಿಕೊಳ್ಳುತ್ತದೆ [illegible] ಸ್ವಾತಂತ್ರ್ಯಕ್ಕರ್ಹವಾ ಗುತ್ತದೆಂಬ [illegible] ಐತಿಹಾಸಿಕ ಸಿದ್ಧಾಂತ [illegible] ಪ್ರಾನ್ಸುಗಳಲ್ಲಿ ಪ್ರತ್ಯಕ್ಷತೆ [illegible] ಎಂದ ಈ ಸಿದ್ಧಾಂತವು ಭಾರತದಲ್ಲಿ ಪುನರಾವರ್ತನೆ ಹೊಂದಿತೆನ್ನಬಹುದು. **ಹೀಗೆ ಇತಿಹಾಸದ ರಹಸ್ಯವೂ ಅಪ್ರತ್ಯಕ್ಷವೂ ಆದ ತತ್ವ ಸೂತ್ರವು ನಿಗೂಢವಾಗಿ ಕಾರ್ಯವೆಸಗಿ ಸ್ವಾತಂತ್ರ್ಯ ಗಳಿಸಿತು. ಗಾಂಧೀಜಿಯವರು ತಮ್ಮ ನೈತಿಕ ಶಕ್ತಿಯಿಂದ ಸಮರದ ಅವಧಿಯನ್ನು ಶೀಘ್ರಗೊಳಿಸಿದರು.**

ನೋಟೀಸು

ಮಂಗಳೂರು ತಾಲೂಕ ಪಣಂಬೂರು ಗ್ರಾಮದಲ್ಲಿರುವ ಅಂಮಣ್ಣ ಪೂಜಾರಿ ಕೂಸೆ ತೋಚು ಹೆಂಗಸು ಈ ಮೂಲಕ ಸರ್ವಜನರಿಗೆ ತಿಳಿಸುವುದೇನಂದರೆ

ಬೈಕಂಪಾಡಿ ಗ್ರಾಮದ ಪಟ್ಟಾನಂಬ್ರ 119ಕ್ಕೆ ಒಳ್ಪಡ ಸರ್ವಾಧಿ ಆಸ್ತಿ, ಕಟ್ಟೋಣ ವಗೈರೆ ನನ್ನ ಅಳಿಯಸಂತಾನ ಕುಟುಂಬಕ್ಕೆ ಸೇರಿದ್ದಾಗಿದ್ದು ಈಗ ಕುಟುಂಬದಲ್ಲಿ ಹಿರಿಯನಾಗಿರುವ ದೂಮ ಪೂಜಾರಿ ಹೆಸರಲ್ಲಿ ಪಟ್ಟೆ ಕೂಡಾ ಆಗಿರುತ್ತದೆ ಆದರೂ, ಸರ್ವಾದಿ ಆಸ್ತಿಯು ನನ್ನ ಸ್ವಾಧೀನದಲ್ಲಿ ಇದ್ದರೂ, ತನಗೆ ಲಾಭ ಮಾಡಿಕೊಂಡು ಕುಟುಂಬಕ್ಕೆ ನಷ್ಟ ಮಾಡುವ ಇರಾಧೆಯಿಂದ ಸದ್ರಿ ದೂಮ ಪೂಜಾರಿಯು ಆ ಆಸ್ತಿ ಪೈಕಿ ಹೆಚ್ಚಿನ ಅಂಶವನ್ನು ಮೊಲಾಗೇಣಿ ಯಾ ವ್ಯಾದೆಗೇಣಿಗೆ ಕೊಡುವ ಇರಾಧೆಯಲ್ಲಿರುವದರಿಂದ ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದರೆ—ಯಾವುದೊಂದು ತರದ ವ್ಯಾದೆಗೇಣಿ ಯಾ ಮೂಲಗೇಣಿ ವ ಯಾವ ಪರಾಧೀನ ಮಾಡುವರೆ ನಂಮ ಕುಟುಂಬಕ್ಕೆ ಅಗತ್ಯವಿಲ್ಲದಿರುವುದರಿಂದ ಆ ರೀತಿ ಏನಾದರೂ ಪರಾಧೀನ ಮಾಡಿದರೆ ಅಂಥಾ ಪರಾಧೀನಗಳು ಸಿಂಧುವಾಗಲಿಕ್ಕಿಲ್ಲ ಮತ್ತು, ಅಂಥವರಿಗೆ ಯಾವ ತರದ ಸ್ವಾಧೀನ ವ ಪ್ರಯೋಜನ ಸಿಕ್ಕಲಿಕ್ಕಿಲ್ಲವೆಂದು ಈ ಮೂಲಕ ಜ್ಯಾಹೀರು ಮಾಡಿಕೊಂಡಿರುತ್ತೇನೆ

||| ಈ ಮೂರು ಗೆರೆ ಸದ್ರಿ

ತೋಚು ಹೆಂಗಸಿನ ರುಜು.

ಸ್ವತಂತ್ರ ಭಾರತಕ್ಕೆ ಏಸ್ಯದ ನಾಯಕತ್ವ

ಗತವೈಭವ—ಉಜ್ವಲ ಭವಿಷ್ಯ

ಬುದ್ಧನ ಕಾಲದಿಂದ ಭಾರತವು ಇತರ ಏಸ್ಯಾ ಜನಾಂಗಗಳೊಡನೆ ಸೋದರ ಸಾಂಸ್ಕೃತಿಕ ಸಂಪರ್ಕವನ್ನಿಟ್ಟುಕೊಂಡಿತ್ತು. 'ಬಿಳಿ'ಯರ ಒಡೆತನದಲ್ಲಿ ಈ ಬಾಂಧವ್ಯ ಸೂತ್ರವು ಕಡಿದುಹೋಯಿತು. ಈ ಸ್ವತಂತ್ರವಾದ ಭಾರತವು ತನ್ನ ಪ್ರಾಚೀನ ಅನ್ಯೋನ್ಯತೆಯನ್ನು ಪುನಃ ಪ್ರಾರಂಭಿಸಬೇಕಾದುದು ಅತ್ಯಾವಶ್ಯಕ.

ಕೆಲವು ತಿಂಗಳ ಹಿಂದೆ ಭಾರತವು ಅಂತರ್ ಏಸ್ಯಾ ಪರಿಷತ್ತೊಂದನ್ನು ಡಿಲ್ಲಿಯಲ್ಲಿ ಆಹ್ವಾನಿಸಿ ಅತ್ಯಪೂರ್ವ ಆದರ ಮನ್ನಣೆಗಳಿಗೆ ಪಾತ್ರವಾಯಿತು. ಏಸ್ಯಾ ಮಹಾ ಖಂಡದ ಎಲ್ಲಾ ಜನಾಂಗಿಕರೂ ತಮ್ಮ ಜನಪ್ರಿಯ ಪ್ರತಿನಿಧಿಗಳನ್ನು ಕಳುಹಿಸಿ ಆ ಪರಿಷತ್ತನ್ನು ಯಶಸ್ವಿಗೊಳಿಸಿದವು. ನಮ್ಮ ಜನಪ್ರಿಯ ಮುಖಂಡರು ಕೇಂದ್ರಾಧಿಕಾರ ವಹಿಸಿದಾಕ್ಷಣ ಏರ್ಪಡಿಸಿದ ಆ ಸೌಹಾರ್ದ ಪರಿಷತ್ತಿನ ಯೋಜನೆ ಅತ್ಯಂತ ಸಮಯೋಚಿತವೂ ಆವಶ್ಯಕವೂ ಆಗಿತ್ತು.

ಶತಮಾನಗಳಿಂದ ಏಸ್ಯಾ ಜನಾಂಗ ಮತ್ತು ಭಾರತದ ನಡುವೆ ಬೆಳೆದ ಧಾರ್ಮಿಕ ಮತ್ತು ಆರ್ಥಿಕ ಸಂಪರ್ಕಗಳು [illegible] ನಲ್ಲಿ ಹೊಸದಾಗಿ ಪ್ರಾರಂಭಿಸಲಾದುದು [illegible] ಕಾಲದಿಂದ ಈ ಸಂಪರ್ಕ ಬಾಂಧವ್ಯವು ಇತ್ತೆಂದು ಇತಿಹಾಸವು ತಿಳಿಸುತ್ತದೆ. ಇಂದು ನಮ್ಮ ರಾಷ್ಟ್ರ ಧ್ವಜದಲ್ಲಿ [illegible] ಧರ್ಮ [illegible] ಚಕ್ರವನ್ನು ನಾವು ಅನುಕರಿಸಿ [illegible] ಧರ್ಮ ಸೂತ್ರ [illegible] ಚೀನಾ ಮತ್ತು ಜಪಾನುಗಳಿಗೆ ಕಳುಹಿಸಿದನು. ಆ ಭಿಕ್ಷುಗಳು [illegible] ದೇಶಗಳಲ್ಲಿ ಬೌದ್ಧ ಧರ್ಮ [illegible] ಸಂಸ್ಕೃತ [illegible] ಮತ್ತು [illegible] ಪ್ರವಾಸ [illegible]

★

ಬೌದ್ಧ ಪ್ರಚಾರಕರು ಚೀನಕ್ಕೆ ಹೋಗಿದ್ದರು. ಅವರ ಕೂಡೆ ಬೌದ್ಧ ಪ್ರತಿಮೆಗಳೂ, ಚಿತ್ರಗಳೂ ಮತ್ತು ಸಾಹಿತ್ಯ ಗ್ರಂಥಗಳೂ ಹೋದುವು. ಚೀನದ ಜನರು ಭಾರತವನ್ನು ಬುದ್ಧದೇವನ ಅವತಾರ ಭೂಮಿ ಮಾತ್ರವಲ್ಲ ತಪಸ್ಯ ತತ್ವಜ್ಞಾನದ ಅತ್ಯುತ್ಕೃಷ್ಟ ಕರ ದೇಶವೆಂದು ಭಾವಿಸುವಂತಾಯಿತು. ಈ ಭಾರತೀಯ ಪ್ರತಿಮೆಗಳಲ್ಲೂ ಗ್ರಂಥಗಳಲ್ಲೂ ಅಡಕವಾಗಿದ್ದ ಮಹೋನ್ನತ ಆಧ್ಯಾತ್ಮಿಕ ಸ್ಫೂರ್ತಿ ರಹಸ್ಯಗಳನ್ನು ತಿಳಕೊಳ್ಳಲು ಅವರು ಕಾತರಿಸಿದರು.

ಇದರ ಪರಿಣಾಮವಾಗಿ ಚೀನಿ ಚಕ್ರವರ್ತಿಯು 62ನೇ ಇಸವಿಯಲ್ಲಿ ಭಾರತೀಯ ವಸ್ತುವಿಷಯಗಳ ಮತ್ತು ವೇದ ವಿದ್ವಾಂಸರೊಡಗೂಡಿ ಹೆಚ್ಚಿನ ಪರಿಜ್ಞಾನ ಪಡೆಯಲು ಒಂದು ಸಂದೇಶ ಮಂಡಳವನ್ನು ಕಳುಹಿಸಿದನು. ಇವರು ಹಿಮಾಲಯ ದಾಟಿ ಭಾರತಕ್ಕೆ ಬಂದು ಐದು ವರ್ಷಗಳ ಕಾಲ ಇಲ್ಲಿನ ವಸ್ತುಸ್ಥಿತಿಯ ಪ್ರತ್ಯಕ್ಷ ಅನುಭವ ಹೊಂದಿ ಅನೇಕ ಹಸ್ತಲಿಖಿತ ಗ್ರಂಥ, ಶಾಸ್ತ್ರ ಪುರಾಣಗಳೊಡನೆ ಹಿಂತಿರುಗಿದರು.

ಯುವನ್ ಚಾಂಗ್ ಮತ್ತು ಫ್ಹಾಹಿಯನ್ ಎಂಬ ಚೀನಿ ವಿದ್ವಾಂಸರು ನಂತರ ಬಂದವರು. ಇವರು ಹಿಂತಿರುಗುವಾಗ ಗಾಡಿ ತುಂಬ ಗ್ರಂಥಗಳನ್ನೊಯ್ದರಂತೆ. ಅನೇಕ ಭಾರತೀಯ ವಿದ್ವಾಂಸರೂ ಅವರೊಡನೆ ಚೀನಕ್ಕೆ ಹೋಗಿ ಸಂಸ್ಕೃತ ಗ್ರಂಥಗಳನ್ನು ಚೀನಿ ಭಾಷೆಗೆ ಪರಿವರ್ತಿಸಲು ಸಹಾಯ ಮಾಡಿದರು. ಇಂತಹರಲ್ಲಿ ಬೋಧಿ ಧರ್ಮನೆಂಬವನು 6ನೇ ಶತಮಾನದಲ್ಲಿ ಚೀನಕ್ಕೆ ಹೋದವರಲ್ಲೊಬ್ಬನು. ಕ್ರಮೇಣ ಬೌದ್ಧ ಧರ್ಮವು ಚೀನದಿಂದ ಜಪಾನಿನತ್ತ ಸಾಗಿತು.

★

ನಾಲ್ಕನೇ ಶತಮಾನದಲ್ಲಿ ಕಳಿಂಗ ದೇಶದ ವಿಜಯನೆಂಬರಸು ಕುಮಾರನು ದಕ್ಷಿಣ ಭಾರತವನ್ನಾಕ್ರಮಿಸಿ ತನ್ನ ದಿಗ್ವಿಜಯದಿಂದ ಮಲಾಯಾ, ಜಾವಾ, ಸುಮಾತ್ರಾ ಮತ್ತು ಸಯಾಮ್ ಇಂಡೋಚೀನಗಳ ತನಕ ತನ್ನ ಸಾಮ್ರಾಜ್ಯ ವಿಸ್ತಾರ ಮಾಡಿದನು. ಅವನ ಧ್ವಜ ಪ್ರಭಾವದೊಳಗೆ ಜಪಾನಿನ ಬಳಿಯ ಫೋರ್ಮೋಸಾ ದ್ವೀಪವೂ, ಫಿಲಿಪ್ಪೈನಿನ ಕೆಲವು ದ್ವೀಪಗಳೂ ಸಂಯೋಜಿತವಾದುವು. ಈ ವಿಜಯ ಕುಮಾರನ ವಂಶದವರು ಏಸ್ಯಾ [illegible] ರಾಜಕೀಯಾಧಿಕಾರವನ್ನು ಮಾತ್ರವೇ ಸ್ಥಾಪಿಸಿದಲ್ಲ. ಅದರೊಡನೆ ಆ ದೇಶಗಳ ಕಲೆ ಸಾಹಿತ್ಯ ಭಾಷೆಗಳನ್ನು ಶ್ರೇಯಸ್ಕರವಾಗಿ ಪ್ರೋತ್ಸಾಹಿಸಿದರು. ಸಯಾಮಿನ ಎಂಕರ್, ಕಾಂಬೋಡಿಯ ಸುಮಾತ್ರಾ ಜಾವಾ ಮತ್ತು ಬಲಿ ದ್ವೀಪಗಳಲ್ಲಿನ ಪ್ರಾಚೀನ ದೇವಾಲಯಗಳ ಭಗ್ನಾವಶೇಷಗಳು ಇದಕ್ಕೆ ಸಾಕ್ಷಿಯಾಗಿವೆ.

[illegible] ಸ್ಮೃತಿ [illegible] ಪ್ರಚಾರ [illegible]

★

[illegible] ಸಾಮ್ರಾಜ್ಯ [illegible] ತತ್ವದ [illegible] ಸ್ವಾತಂತ್ರ್ಯವನ್ನು [illegible] ರೆಯ ಹತ್ತಿದ ಹಾಗೆ ಪೌರ್ವಾತ್ಯ ಜನಾಂಗಗಳ ಪಕ್ಕ ಸ್ವಾತಂತ್ರ್ಯಗಳು ಮಾಯವಾಗ ಹತ್ತಿದವು. ಪರಿಣಾಮವಾಗಿ ಏಸ್ಯಾ ಜನಾಂಗಗಳಲ್ಲಿ ತಾತ್ಕಾಲಿಕವಾದ [illegible] ಪ್ರತ್ಯೇಕತೆಯುಂಟಾಯಿತು.

ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಜಪಾನು ರಷ್ಯವನ್ನು ಸೋಲಿಸಿದಾಗ (1904-5) ಇಡೀ ಏಸ್ಯವೇ ಪುನರುತ್ತರಗೊಂಡಿತು. ಅದೇ ಸಮಯಕ್ಕೆ ಏಸ್ಯದ ಬೇರೆ ಬೇರೆ ದೇಶಗಳಲ್ಲಿ ರಾಷ್ಟ್ರೀಯ ಆಂದೋಲನಗಳುಂಟಾಗತೊಡಗಿ ಅವು ಪರಸ್ಪರ ಒಂದರೊಡನೊಂದಾಗಿ ತಮ್ಮ ಪ್ರಾಚೀನ ಸಂಬಂಧವನ್ನು ಪುನರ್ಜೀವನಗೊಳಿಸುವಂತಾಯಿತು. ಮತ್ತು ನಂತರ ಪ್ರಬಲವಾಗಿ ಬೆಳೆದ ಭಾರತೀಯ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳವು ಏಸ್ಯದ ಮತ್ತು ಭಾರತೀಯ ಜನತೆಯನ್ನು ಇನ್ನಷ್ಟು ಹತ್ತಿರದ ಬಾಂಧವ್ಯದೊಳಗೆ ಬರುವಂತೆ ಮಾಡಿತು.

ದಿವಂಗತ ದೇಶಭಕ್ತರಾದ ಲಾಲಾಲಜಪತ್‌ರಾಯ್, ಲಾಲಾಹರ್ ದಯಾಲ್, ರಾಶ ಬಿಹಾರಿಘೋಶ್, ಮೊದಲಾದವರು ಜಪಾನ್ ಮೊದಲಾದ ದೇಶಗಳಿಗೆ ಹೋಗಿ ನೆಲೆನಿಂತು ಅಲ್ಲಿ ಭಾರತದ ಜನತೆಯ ಆಶೆ ಹಾರೈಕೆಗಳ ಕುರಿತು ಆಳವಾದ ಸಹಾನುಭೂತಿಯನ್ನು ಸೃಜಿಸಿದರು.

★

1930ರ ನಂತರ ದಕ್ಷಿಣ ಏಸ್ಯದ ದಾಸ್ಯ ಜನಾಂಗಗಳು ಭಾರತದ ಸ್ವಾತಂತ್ರ್ಯ ಹೋರಾಟದಿಂದ ಸ್ಫೂರ್ತಿ ತಳೆದುವು. ಬಿಳಿ ಸಾಮ್ರಾಜ್ಯಶಾಹಿಯನ್ನು ಕಿತ್ತೊಗೆಯಲು ಭಾರತವು ವಹಿಸಿದ ಅಗ್ರಗಣ್ಯ ಪ್ರಯತ್ನವು ಎಲ್ಲರಿಗೂ ಆದರ್ಶವಾಯಿತು. ಬಿಳಿಯರು ಆ ದೇಶಗಳನ್ನು ಹೆಸರಿಗೆ ಸ್ವತಂತ್ರವಾಗಿಯೂ ಪ್ರತ್ಯಕ್ಷ ದಾಸ್ಯದಲ್ಲಿಯೂ ಇಟ್ಟಿದ್ದರು. ಪರಿಣಾಮವಾಗಿ ಸಯಾಮಿನ ಸರಕಾರದವರು ತಮ್ಮ ದೇಶಕ್ಕೆ ಬಂದು ಬೌದ್ಧ ಧರ್ಮ ಮತ್ತು ಭಾರತೀಯ ಸಂಸ್ಕೃತಿಯ ಕುರಿತು ಭಾಷಣ ಕೊಡಲು ಕೆಲವು ವಿದ್ವಾಂಸರನ್ನು ಕಳುಹಿಸಬೇಕೆಂದು ರವೀಂದ್ರರ ವಿಶ್ವ ಭಾರತಿಗೆ ಬರಕೊಂಡರು. ಹಾಗೆ ಕಳುಹಿಸಲ್ಪಟ್ಟ ಸ್ವಾಮಿ ಸತ್ಯಾನಂದ ಪುರಿ ಎಂಬ ಸಂಸ್ಕೃತ ಮತ್ತು ಪಾಲಿಭಾಷಾ ಪಂಡಿತರು ಸಯಾಮಿನ ಜನತೆಯ ಮೇಲೆ ಶಾಶ್ವತವಾದ ಸದಭಿಪ್ರಾಯವನ್ನುಂಟು ಮಾಡಿದರು.

★

ಸುಭಾಸ್ ಚಂದ್ರಭೋಸರ ಕಾಲದಲ್ಲಿ ಏಸ್ಯಾ ಭಾರತ ಸಂಪರ್ಕ ಚಳವಳವು ಪರಮಾವಧಿಗೆ ಮುಟ್ಟಿತೆನ್ನಬಹುದು. ಕಳೆದ ಯುದ್ಧಕಾಲದಲ್ಲಿ ಅವರು ಸ್ವತಂತ್ರ ಭಾರತ ಫೌಜು ಒಂದನ್ನು ಸ್ಥಾಪಿಸಿದ್ದು ಅತ್ಯಂತ ಗಣನೀಯ ಸಂಗತಿಗಳು.

ಸ್ವಾಭಾವಿಕವಾಗಿ ಮುಂದೆ ಚೀನ, ಜಪಾನ್, ಫಿಲಿಪ್ಪೈನ್ ಇಂಡೋನೇಸ್ಯಾ, ಇಂಡೋಚೀನಾ, ಸಯಾಮ್, ಮಲಯಾ, ಮತ್ತು ಬರ್ಮಗಳಲ್ಲಿ ವಿರೋಧಿಯಾಗಿ ಸಂಚಾರವಾಡಿ ಭಾರತದ ಸಂದೇಶವನ್ನು ಏಸ್ಯದ [illegible] ಒಪ್ಪಿದರು.

(ಪ್ರಬುದ್ಧ ಭಾರತ)

"ಸ್ವಾತಂತ್ರ್ಯ ದಿನಾಚರಣಾ ಉತ್ಸವ"

ತಾ 17-8-1947ನೆ ಆದಿತ್ಯವಾರ ಸಂಜೆ ಘಂಟೆ 5-30ಕ್ಕೆ ಹಂಪನಕಟ್ಟೆಯಲ್ಲಿನ ಕೆಥೋಲಿಕ್ ಕ್ಲಬ್ಬಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೆಥೋಲಿಕ್ ಕಾಂಗ್ರೆಸ್ ಸೇವಕ ಸಂಘದ ಸದಸ್ಯರು ಸ್ವಾತಂತ್ರ್ಯ ದಿನಾಚರಣೆಯ ಉತ್ಸವವನ್ನು ಆಚರಿಸಲಿರುವರು.

ಈ ವಿಷಯದ ಕಾರ್ಯಕ್ರಮಗಳು —

ರಾಷ್ಟ್ರೀಯ ಧ್ವಜಾರೋಹಣ, ಭಾಷಣಗಳು, ಚರಕದಿಂದ ನೂಲು ತೆಗೆಯುವ ಪ್ರದರ್ಶನ, ರಾಷ್ಟ್ರಗೀತೆ ಮತ್ತು ಸಂಗೀತ ಹಾಡುವಿಕೆ, ಜೆಪ್ಪು ಸೆಮಿನೆರಿಯ ಬ್ಯಾಂಡ್ ಸೆಟ್ಟಿನ ಬ್ಯಾಂಡ್ ಬಾರಿಸುವಿಕೆ ಇತ್ಯಾದಿ ಹಾಗೂ ಈ ದಿನ ಮಧ್ಯಾಹ್ನ 1 ಘಂಟೆಯಿಂದ ಹಿಂದೀ ಸಿನೇಮಾ ತಾರೆಯವರ ನವ ನವೀನ ಹಾಡುಗಳನ್ನು ಮೈಕ್ರೋಫೋನ್ ಮತ್ತು ಲೌಡ್ ಸ್ಪೀಕರ್‌ಗಳ ಮೂಲಕ ಹಾಡಿಸುವಂತೆ ಏರ್ಪಾಡು ಮಾಡಲಾಗಿದೆ

ಮಹಾ ಜನರು ಮೇಲಿನ ಸಂಘದ ಆಶ್ರಯದಲ್ಲಿ ನಡೆಯಲಿರುವ ಈ ಸಮಾರಂಭಕ್ಕೆ ಬಂದು ಸಂಘದ ಸದಸ್ಯರನ್ನು ಉತ್ಸಾಹಗೊಳಿಸಬೇಕಾಗಿ ಜಿ ಎಲ್ ಸಲ್ಡಾನ್ಹಾರವರು ತಿಳಿಸುತ್ತಾರೆ

NEW INDIA ASSURANCE COMPANY LIMITED, BOMBAY.

NOTICE having been given of the loss of the Policy numbered 133386 on the life of Gurpur Dayananda Kamath of Konchadi, Bondel P. O., a duplicate policy will be issued unless objection is lodged with us within one month from this date.

B. K. Shah.
General Manager.

ಸ್ವಾತಂತ್ರ್ಯದ ಮೊದಲು ಮತ್ತಾನಂತರ

ಮೂಲ ಲೇಖಕರು: ಕೆ. ರಾಮರಾವ್

"ನಮ್ಮ ಕನಸುಗಳು ನನಸಾಗುವುದು ಬಹಳ ಅಪರೂಪ. ನಾವು ಪ್ರಾರಂಭಿಸುವ ಧ್ಯೇಯ ಮತ್ತು ಗುರಿಗಳು ಒರ್ವ ವ್ಯಕ್ತಿಯ ಇಲ್ಲವೆ ಜನಾಂಗದ ಜೀವಾವಧಿಯಲ್ಲಿ ಪರಿಪೂರ್ಣತೆ ಪಡೆಯುವುದು ಅಷ್ಟೇ ದುರ್ಲಭ".

—ಜವಾಹರಲಾಲ ನೆಹುರು

ಎರಡು ವರ್ಷಗಳ ಹಿಂದೆ ಇತಿಹಾಸದೊಳಗಿನ ಅತೀ ಭೀಕರ ಯುದ್ಧ ಕೊನೆಗೊಂಡಿತು. ವಿಜಯಿಯಾದರೂ ಪ್ರಬಲ ಸಾಮ್ರಾಜ್ಯ ಶಾಹಿಯೊಂದು ಮೆಲ್ಲನೆ ಕ್ಷಯಿಸುತ್ತ ಬಂದಿತು. ಜಗತ್ತಿನ ಖಂಡಗಳ ಯುರೋಪಿನ ರಾಷ್ಟ್ರಗಳಿಗಿದ್ದ ಒಡೆತನವು ಮಾಯವಾಗುವಂತೆ ತೋರುತ್ತದೆ. ಸಾಮ್ರಾಜ್ಯಶಾಹಿಯಲ್ಲವೆಂದು ಪರಿಗಣಿಸಲ್ಪಟ್ಟ ಒಂದು ದೊಡ್ಡ ಶಕ್ತಿ ರಾಷ್ಟ್ರ ಅಗಾಧ ಪ್ರಾಮುಖ್ಯತೆಗೆ ಬಂದಿದೆ. ಜಪಾನಿಯರ ತುಂಟತನವು ಕೊನೆಗೊಂಡಿತು. ನಿಷ್ಕಂಟಕವಾಗಿದ್ದ ಚೀನವು ಶಕ್ತಿಯನ್ನು ವರ್ಧಿಸುತ್ತಲಿದೆ. ಅನೇಕ ಶತಮಾನಗಳ ದಾಸ್ಯದ ಸಂತ ಭಾರತವು ಸ್ವಾತಂತ್ರ್ಯ ಗಳಿಸಿದೆ. ಇದನ್ನು ವಿವೇಕಪರವಾಗಿ ಉಪಯೋಗಿಸಿಕೊಂಡರೆ ನಮ್ಮ ದೇಶವು ಉದಾತ್ತ ವೈಭವವನ್ನು ಪಡೆಯಬಹುದು.

ಇಷ್ಟಾದರೂ ಹೊಸ ಯುಗದಲ್ಲಿ ಅತ್ಯಾನಂದ ಪಡುವ ಯಾವ ಪರಿಸ್ಥಿತಿಯೂ ಕಂಡು ಬರುವುದಿಲ್ಲ. ನಮ್ಮ ಇಂದ್ರಿಯಗಳು ಮರಗಟ್ಟಿ ಹೋಗಿವೆ. ನಮ್ಮ ಕೈಗಳು ಚಪ್ಪಾಳೆ ಹೊಡೆಯಲು ತಿರಸ್ಕರಿಸುತ್ತವೆ. ನಮ್ಮ ಕಂಠಗಳು ವಿಜಯ ಘೋಷ ಹಾಕಲಾರವು. ಇಷ್ಟಾದರೂ ನೆಹರುರವರು **"ಪ್ರಸ್ತುತಕ್ಕೆ ನಮ್ಮ ಆಶಯದ ಧ್ಯೇಯವನ್ನು ನಾವು ಹೊಂದಿರದಿದ್ದರೂ ಹೊಂದಿದ ಸ್ವಲ್ಪ ದರ ಕುರಿತು ಕೌತುಕವಾಗಲಿ, ಲಜ್ಜೆಯಾಗಲಿ ಪಡುವ ಕಾರಣವಿಲ್ಲ. ನಮ್ಮ ಯಶಸ್ಸು ಅತ್ಯಲ್ಪವೆಂದೂ ಅಲ್ಲ. ಇದೂ ಅಗಾಧವಾದೊಂದು ಯಶಸ್ಸು ಶ್ರೇಷ್ಠ ಸಿದ್ಧಿಯೂ ಇದಾಗಿದೆ. ನಮ್ಮ ಇಚ್ಛೆಗೆ ರುಚಿಸದ ಕೆಲವು ಬೇರೆ ಸಂಗತಿಗಳು ಸಂಭವಿಸಿದುದಕ್ಕೆ ನಾವಿದನ್ನು ಕೀಳುಗಾಣಿಸದಿರೋಣ"** ಎಂದು ತಿಳಿಸಿರುವುದನ್ನು ಒಪ್ಪಲೇಬೇಕಾಗುತ್ತದೆ.

ಅರುಚಿಯ ಸಂಗತಿಗಳು

ನಮ್ಮ ಇಚ್ಛೆಗೆ ರುಚಿಸದ ಆ ಸಂಗತಿಗಳಾದರೂ ಯಾವುವು? ಅವುಗಳ ಹಾನಿಯನ್ನು ತಪ್ಪಿಸಲು ನಾವು ಗಳಿಸಿದ ಇತರ ವಿಷಯಗಳಾದರೂ ಯಾವುವು? ಮನೋಕಾಂಕ್ಷೆಯ ದೃಷ್ಟಿಯಿಂದ ಡೊಮಿನಿಯನ್ ಸ್ಟೆಟಸ್ ನಮಗೆ ತೃಪ್ತಿಯನ್ನುಂಟುಮಾಡದು. ನಮ್ಮ ಕನಸಿನ ಪೂರ್ಣ ಸ್ವರಾಜ್ಯವು ನಮಗೆ ದೊರಕಿರುವುದೆ? ಬ್ರಿಟಿಷರ ಪಾರಿತೋಷಕಗಳ ಮೇಲೆ ನಮಗೆ ಸದಾ ಸಂದೇಹವೇ ಇಡೆ. ಅದೇಕೆಂದು ಕೇಳುವ ಬದಲಿಗೆ ಬ್ರಿಟಿಷರ ಹಿಂದಿನ ದಾಖಲೆಗಳ ಇತಿಹಾಸವನ್ನು ನೋಡುವುದೊಳಿತು. ಎರಡನೆಯದಾಗಿ ನಮ್ಮ ಸ್ವಾತಂತ್ರ್ಯವು ಜಿನ್ನರಿಗೆ ಕೊಟ್ಟ ಪಾಕಿಸ್ಥಾನದ ಪಾರಿತೋಷಕ ಹೊಂದಿನೇ ಬಂದಿರುತ್ತದೆ. ಭಾರತದಂತೇ ಅದೂ ಸ್ವತಂತ್ರ ರಾಜ್ಯ. ಬ್ರಿಟಿಷರಿಗೆ ಅದನ್ನು ತಪ್ಪಿಸಲು ಸಾಧ್ಯವಿರಲಿಲ್ಲವೆ? ಅವರು ವಿಭಾಗಿಸಿಯೇ ತೊಲಗಬೇಕೆ?

ಗಾಂಧೀಜಿಯನ್ನು ಬಿಟ್ಟು ಇತರ ಎಲ್ಲಾ ಕೊಂಗ್ರೆಸ್ ಮುಖಂಡರ ಮೇಲೆ ನಾವಿಂದು ಕುಪಿತರಾಗಿದ್ದೇವೆ. ತಮ್ಮ ಸಡಗರದ ಶರಣಾಗತಿಯಿಂದ ಪಾಕಿಸ್ಥಾನವು ನೈತಿಕವಾಗಿ ಅನಿವಾರ್ಯವೆಂದವರು ಮಾಡಿ ಕೊಟ್ಟಂತಾಗಿದೆ. ಅದೇ ಸಮಯಕ್ಕೆ ಅದೇ ದೃಷ್ಟಿಯಿಂದ ಸುತ್ತಲೂ ನೋಡಿದರೆ ಪಾಕಿಸ್ಥಾನ ಹಿಂದೂಸ್ಥಾನಗಳೊಳಗೆ ನಿರಂತರ ಕಚ್ಚಾಟ ತಪ್ಪಲಿಕ್ಕಿಲ್ಲವೆಂದೂ, ಪ್ರಾಂತ್ಯ ಪ್ರಾಂತ್ಯಗಳೊಗೂ ಅದೇ ಪರಿಸ್ಥಿತಿ ಘಟಿಸಬಹುದೆಂದು ನಮಗೆ ತೋರುತ್ತದೆ. ವಿಂದ್ಯಾಂತರ ರಾಜಕೀಯ ಮುತ್ಸದ್ದಿಗಳ ಅಭಿಪ್ರಾಯದಲ್ಲಿ ಈಗ ಈ ಭಾಷಾವಾರು ಪ್ರಾಂತ್ಯ ರಚನೆಯು ಒಂದು ಅನಾವಶ್ಯಕ ದುರ್ವಿಧಿ ಎಂಬಭಿಪ್ರಾಯವೂ ಕಂಡು ಬರುತ್ತದೆ. ಇದು ದಕ್ಷಿಣಿಗಳ ಮಕ್ಕಳಾಟವೆಂದೂ ಪ್ರಖ್ಯಾತಿ ಪಡೆದಿದೆ.

ಕೊಂಗ್ರೆಸ್ಸು ಅಧಿಕಾರಕ್ಕೆ ಬಂದು ಸ್ವಲ್ಪ ಅವಧಿಯಾಯಿತು. ಇಷ್ಟಾದರೂ ಅನಿಯಂತ್ರಣ ಕಪ್ಪು ಸಂತೆ ಮೊದಲಾದ ದುರ್ವ್ಯಾಪಾರಗಳ ವ್ಯವಹಾರಗಳನ್ನು ತಡೆಗಟ್ಟಲು ಸಾಕಷ್ಟು ಅವಧಿ ಅದಕ್ಕೆ ದೊರಕಿದೆ. ಆದರೆ ಕೊಂಗ್ರೆಸಿನ ಆಳ್ವಿಕೆ ದಾಖಲೆಯು ಅತೃಪ್ತಿಕರವಾಗಿಯೇ ಉಳಿದಿದೆ. ಈ ಟೀಕೆ ನ್ಯಾಯವಾದುದಲ್ಲವಾದರೂ ಗಮನೀಯವಾದುದು. ಆಹಾರವೂ ಸ್ವಾತಂತ್ರ್ಯವೂ ಎಂಬೆರಡು ಸಂಗತಿಗಳನ್ನು ನಮ್ಮೆದುರಿನಲ್ಲಿರಿಸಿದರೆ ಆಹಾರವೇ ಬೇಕೆಂದು ನಾವು ಸೂಚಿಸುತ್ತೇವೆ. ಹಸಿದ ಮಾನವನಿಗೆ ಸ್ವಾತಂತ್ರ್ಯದ ಭಾವಾತ್ಮಕ ವಿಷಯದಲ್ಲಿ ಅಭಿರುಚಿ ಕಡಿಮೆ. ನಾವೀಗ ಅದೆಂತಹ ಪಾಳು ಬಿದ್ದ ಆಸ್ತಿಗೆ ಭಾದ್ಯಸ್ಥರಾಗಲಿರುವೆವೆಂದು ನಾವು ಆ ಚಿಕೆಪಡುತ್ತೇವೆ. ಇದುವರೆಗೆ ಪರಿಹರಿಸಲ್ಪಡದ ಅನೇಕ ಸಮಸ್ಯೆಗಳು ನಮ್ಮ ಪಾಲಿಗೇ ಬರುತ್ತವೆ.

1939ರ ನಂತರ ಬ್ರಿಟಿಷರು ಮಾಡಿದ ಗುರುತಿಸದ ಮಾತುಗಳಿಂದ [illegible] ನಮಗೆ 1947ರ ಅಗಸ್ಟ 15 ಪಕ್ವ[illegible] ಬಂದಂತಾಗಿ ಕೌತುಕವಾಗಿದೆ. ಮೊದಲು ಸಿಮ್ಲಾ ಪರಿಷತ್ತಿನ ನಾಟಕದ ನೋಟಿಸಿತು. ಆ ಕಂಕರದ ಸಿರಾಶೆಯು. ನಂತರ ಇಂದು ಲಭಿಸಿದ ಸ್ವಾತಂತ್ರ್ಯ ಪತ್ರಲೆಯಲ್ಲಿದ್ದವನೊಬ್ಬನನ್ನು ಪ್ರಚಂಡ ಪ್ರಕಾಶ ರಾಶಿಯಲ್ಲಿ ತಳಿದ ತಾಗಿದೆ. ಶತಮಾನಗಳ ನಂತರ ಒಂದಿರುವ ಈ ಸ್ವತಂತ್ರತೆಯಲ್ಲಿ ಒಂದು ತರದ ನಡುಕವಿದೆ. ಇಂದಿನ ಯುದ್ಧ ಜರ್ಝರಿತ ಜಗತ್ತಿನಲ್ಲಿ ಮಾನವ ಮೌಲ್ಯಗಳನ್ನು ಸುಲಭವಾಗಿ ಅಳೆಯಲಾಗುವುದಿಲ್ಲ. ಅಮೂಲ್ಯವಾದ ಹೊಸ ವಿಚಾರಗಳೂ ರೂಪುಗೊಳ್ಳುತ್ತಿವೆ. ಈ ಸಡಗರದಲ್ಲಿ ವ್ಯಕ್ತಿಯು ಯಾವ ಗಂಡಾಂತರದ ಯಾವ ಅಧಃಪತನ ಪಥದ ಕಡೆಗೆ ಸಾಗುವನೆಂದು ಹೇಳ ಬರುವುದಿಲ್ಲ. ಬ್ರಿಟಿಷರು ಇಷ್ಟೊಂದು ಶೀಘ್ರದಲ್ಲಿ ಉದಾರಿಗಳೇಕಾದರು?

ಮುಖಂಡರ ಮೇಲಿನ ಸಂದೇಹ

ಇಂದು ನಾವು ದುಃಖಪೂರಿತ ಸಂದೇಹದಿಂದ ನಮ್ಮ ಮುಖಂಡರ ಕಡೆಗೆ ನೋಡುತ್ತಿದ್ದೇವೆ. ಹಲವು ಬಿರುಗಾಳಿಗಳಲ್ಲಿ ದಾಸ್ಯ ನೌಕೆಯನ್ನು ಚಲಾಯಿಸಿ ಸುಸ್ತಾಗಿರುವವೆಂಬ ಭಾವನೆಯಿಂದವರು ಇಂದು ಸಮೀಪದಲ್ಲಿ ಸಿಕ್ಕಿದ ಬಂದರದಲ್ಲಿ ಉರುಳಿಸಿದಂತಾಗಿದೆ. ನೌಕೆಯ ಅಲ್ಲೋಲ ಕಲ್ಲೋಲತೆಯನ್ನು ಹೆಚ್ಚು ಸಹಿಸುವ ತಾಳ್ಮೆ ಅವರಲ್ಲಿಲ್ಲವಾಗಿದೆ. ಅವರು ಶಾಂತಿಯನ್ನು ಅತೀ ಹೆಚ್ಚಿನ ಬೆಲೆಗೆ ಕೊಂಡಂತಾಗಿದೆ. ನಾವು ಯಾವುದನ್ನು ತಡೆಯಲು ಅದೆಷ್ಟು ಶ್ರಮ ವಹಿಸಲೂ ಸಿದ್ಧರಿದ್ದೆವೊ, ಆ ಪಾಕಿಸ್ಥಾನವನ್ನು ಬಗಲಲ್ಲ ಹಾಕಿ ಜಿನ್ನರು ವಿಜಯೋನ್ಮಾಖರಾಗಿ ನಡೆದೇ ಬಿಟ್ಟರು. ಅವರು ಮಾಡಿದ ಮತ್ತು ಮಾಡದಿರುವ ಅನೇಕ ತಪ್ಪೊಪ್ಪುಗಳಿಗಾಗಿ ನಾವು ಮಹಾತ್ಮರನ್ನು ದೂರುತ್ತಿದ್ದೇವೆ. ಕೊಂಗ್ರೆಸ್ ಪರಿಷ್ಠಾಧಿಕಾರಿಗಳು ದೇಶದ ಜಿಗುಪ್ಸೆಗೆ ಪಾತ್ರರಾಗಿರುವರು. ಶಾಂತಿ ಸಾಧಕರ, ಒಪ್ಪಂದ ಇತ್ಯರ್ಥಿಸುವವರ ಪಾಡು ಎಲ್ಲಾ ಕಡೆಗಳಲ್ಲೂ ಹಾಗೆಯೆ. ಅವರು ನಮ್ಮಿಂದ ಯಾವ ತರದ ಅಭಾರಕ್ಕೆ ಅರ್ಹರಾಗಿಲ್ಲವೆಂಬ ಭಾವನೆ ನಮ್ಮಲ್ಲುಂಟಾಗಿದೆ.

ಇತ್ತೀಚಿಗೆ ಕೊಂಗ್ರೆಸ್ ಮೇಲಧಿಕಾರಿಗಳು ಪ್ರತಿಯೊಂದು ಪ್ರಾಂತ್ಯವನು ಒಂದಲ್ಲ ಒಂದು ರೀತಿಯಲ್ಲಿ ಕೆಣಕುವಂತಹ ಕಾರ್ಯ ಮಾಡಿದ್ದಾರೆ. ಮದ್ರಾಸ ಮತ್ತು ಪಂಜಾಬದ ಸಂಬಂಧದಲ್ಲಂತೂ ಅವರು ಸರ್ವಾಧಿಕಾರದ ಅಸಹ್ಯದ[illegible] ತೋರಿಸಿರುವರು. ಸ್ವಾತಂತ್ರ್ಯದ [illegible] ಫಲವುಣ್ಣಬೇಕಾದರೆ ಈಗಿನ ಉನ್ನತ ಮುಖಂಡತನವು ಸಂಪೂರ್ಣ [illegible]. ಅವರ ಸ್ಥಾನದಲ್ಲಿ ಹೊಸ ಹುರುಪಿನವರನ್ನು ಸೇರಿಸಬೇಕು.

ಪರಿಸ್ಥಿತಿಯು ಅಷ್ಟು ಹಾಳೇ

ನಾವು ಅಳಕ್ಕೂ ವಿಶಾಲಕ್ಕೂ ನೋಡಲು ಸಮರ್ಥರಾಗಿದ್ದೇವ. ಭವಿಷ್ಯದ ಕಡೆಗೆ ನಾವಿಂದು ಅಧೈರ್ಯದಿಂದ ನೋಡುತ್ತಿದ್ದೇವೆ. ನಮ್ಮೆದುರಿನ ಸಮಸ್ಯೆಗಳಾದರೂ ಅತಿ ದುರ್ಗಮವಾದವುಗಳೇ ಆಗಿವೆ. ಪಾಕಿಸ್ಥಾನವು ನಮ್ಮ ಶತ್ರುವಾಗುವುದೊ ಮಿತ್ರನಾಗುವುದೋ? ಪಾಕಿಸ್ಥಾನದೊಳಗಿನ [illegible] ಹಿಂದೂಗಳ ವಿಧಿಯೇನು? [illegible] [illegible] ಮತ್ತು [illegible] ವ್ಯವಸ್ಥೆಯು ಬ್ರಿಟಿಷಿನ ಪಿಡೆ [illegible] ಘೋರ[illegible] ಗುಣವೆ? [illegible] ನಮ್ಮ ಸ್ವಾತಂತ್ರ್ಯದ ದಿನವಾನಕೆ [illegible] ಗಪೆ? ವಿಶ್ವಾಸಘಾತ [illegible] ಎಳೆದೆ [illegible]?

ನಮ್ಮ ಆಡಳಿತ ಅನುಭವದ ಹಿನ್ನಲೆ ಸಾಕಷ್ಟು ತೃಪ್ತಿಕರವಾಗಿಲ್ಲ. [illegible] ಕಾಗದದಲ್ಲಿ ನಾವು [illegible] ನಾ ಸೂತ್ರವೊ [illegible] ತಿದೆ. ಆದರ ಈ ಅಗಾಧ ಘಟನಾ [illegible] ತವನ್ನು ಕಾರ್ಯ ರೂಪಕ್ಕೆ ತರುವ [illegible] ಹೇಗೆಂಬುದನ್ನು ನಾವು ಇನ್ನೂ ಯೋಚಿಸಿಲ್ಲ. ಭಾವಿ ಭಾರತದ ಆರ್ಥಿಕ ವ್ಯವಸ್ಥೆಯು ಹೇಗ ರೂಪುಗೊಳ್ಳುತ್ತದೆಂಬ ಪ್ರಶ್ನೆಯನ್ನು ಪ್ರಗಲ್ಭ ವಿಚಾರಿಗಳೇ ಮಾತ್ರವಲ್ಲ ಸಾಮಾನ್ಯ ಸ್ತ್ರೀಪುರುಷರೂ ಕೇಳುತ್ತಿದ್ದಾರೆ. ಬಂಡವಾಳಶಾಹಿಯೆ? ಸಮತಾವಾದವೆ? ಸ್ವರಾಜವೆಂದರೆ ರಾಮರಾಜ್ಯವೆ ದರ್[illegible]?

ಹೀಗೆಲ್ಲ ನಮ್ಮ ಸಂದೇಹ ಕಲ್ಪನೆಗಳು ಓಡಾಡುತ್ತಿವೆ. ಇದೇ ರೀತಿ ಸ್ವಾತಂತ್ರ್ಯ ಯುಗದ ಪ್ರಗತಿಯೂ ಅಗೋಚರವಾಗಿಯೇ ಸಾಗುವುದು. ಸಮಸ್ಯೆಗಳ ಪರಿಹಾರವು ಅಷ್ಟೊಂದು ಕೆಟ್ಟದ್ದಾಗಿರುವುದೆ? ಫಲಿತಾಂಶವಾದರೂ ಕಳವಳಾಸ್ಪದವಾಗಿರುವುದೆ? ಸಹಜವಾಗಿ ದಾಸ್ಯ ಜನಾಂಗವೊಂದು ಅಸಂಖ್ಯಾತ ನಿಕೃಷ್ಟತಾಭಾವಗಳಿಂದ ಕೂಡಿರುತ್ತದೆ.

ನಮ್ಮ ದಾರಿಯಲ್ಲಿರುವ ತೊಡಕುಗಳೇನೂ ಅತ್ಯಂತ ಗಹನವಾದುವುಗಳೆ. ಆದರೆ ಸ್ಥೈರ್ಯದ ಪುರುಷರು ಅವನ್ನು ಕ್ರಮೇಣ ಸುಧಾರಿಸಬೇಕು. ಅವರಲ್ಲಿ ಆಶೆ ಭರವಸೆಗಳೂ ಇರಬೇಕು. ಹೊಸತಾಗಿ ವಿಮೋಚನೆ ಹೊಂದಿದ ಯಾವ ದೇಶದಲ್ಲಿಂತಹ ಸಮಸ್ಯೆಗಳಿರಲಿಲ್ಲ. ಅನೇಕ ದೇಶಗಳ ಸಮಸ್ಯೆಗಳು ನಮಗಿಂತ ಕಠಿಣ ತರದವಾಗಿದ್ದವು. ನಮ್ಮ ಸಮಸ್ಯೆಗಳು ಅದೆಷ್ಟೋ ಲಘು ಪರಿಮಾಣದವೆಂದು ಹೇಳಬಹುದು.

ಬ್ರಿಟಿಷರು ಮುಂದಾಗಿ ಸಕಾಲ ಎಚ್ಚರಿಕೆ ಕೊಟ್ಟು ಜಾರುತ್ತಿರುವರು. ನಿಜವಾಗಿಯೂ ಈ ಸ್ವಾತಂತ್ರ್ಯದೊಂದಿಗೆ ಆ ಪಾಕಿಸ್ಥಾನವು ಬಾರದಿರುತ್ತಿದ್ದರೆ ನಾವು ಗಗನ ಬಿರಿಯುವ ತೆರದಲ್ಲಿ ಜಯ ಘೋಷಗಳನ್ನು ಹಾಕಿ ಅದನ್ನು ಸ್ವಾಗತಿಸುತಿದ್ದೆವು. ಬೇರೊಂದು ರೀತಿಯಲ್ಲಿ ನಾವು ನಮ್ಮನ್ನೆ ಪ್ರಶ್ನಿಸೋಣ. ಒಂದು ವೇಳೆ ನಾವೀ ಬ್ರಿಟಿಷ್ ನೊಗವನ್ನು ಕಿತ್ತುಹಾಕಲು ಅಸಮರ್ಥರಾದವೆನ್ನೋಣ. ಆಗಲೂ ಈಗಿನ ಭೀಕರ ಸಮಸ್ಯೆಗಳೆಲ್ಲವೂ ಇದೇ ಕರಾಳತೆಯಿಂದಿರುತ್ತಿರಲಿಲ್ಲವೆ? ಆಗ ನಾವು ಈಗಿನದಕ್ಕಿಂತ ಕಮ್ಮಿ ದುಃಖಿತರಾಗಿರುತಿದ್ದೆವೆ?

ನಮ್ಮ ಸ್ವಾತಂತ್ರ್ಯವು ಯುದ್ಧಾನಂತರದ ಸಮ [illegible] ಸಂದರ್ಭದಲ್ಲಿ [illegible] ದಿರುತ್ತದೆ. [illegible] ಸ್ವತಂತ್ರ ದೇಶಗಳು ಈ ಸಂಕಷ್ಟವನ್ನು [illegible] ಸಮ [illegible] ರುತ್ತವೆಯೆ? [illegible] ಹೆಚ್ಚು [illegible] ತರಾಗಿರಲು [illegible] ಪ್ರಮೇತಕ್ಕೆ? **ನಾವೀಗ ಸ್ಥೈರ್ಯವಂತರಾಗಿ ನಮ್ಮ ಕೈಗೆ ಬಂದ ಅಧಿಕಾರದ ಸಂಪೂರ್ಣ ಅನುಕೂಲತೆಯನ್ನು ತೆಗೆದುಕೊಳ್ಳಬೇಕು. ನಮಗೀಗ ಸಿಕ್ಕಿದ ಸ್ವಾತಂತ್ರ್ಯವು ನಿಜವಾದುದಲ್ಲವಾದರೆ ಅದು ನಿಜವಾಗುವಂತೆ ನಾವು ಪ್ರಯತ್ನಿಸಬೇಕು.**

[illegible] ಕಿಸ್ಥಾನ [illegible] ಬೇರ್ಪಡುಕೊಳ್ಳಲಿ [illegible] ಭಾರತವು [illegible] [illegible] ವಿಗ್ನಿಜ [illegible] ನಕ್ಷೆ [illegible] ಸಿಕ್ಕಿದಷ್ಟು [illegible] ಈ ದೇಶದ [illegible] ಅನೇಕ [illegible] ನಗಳ [illegible] ಗಿವೆ.

[illegible] ಸ್ವತಂತ್ರ [illegible] ಅದರ ಗುರಿ [illegible] ಮುಂದಿನ 20 ವರ್ಷಗಳ ತನಕವಾದರೂ [illegible] ಶಾಂತಿಯು [illegible] ನಾವು ರಕ್ತದ [illegible] ವನ್ನಾಗಲಿ ಬ್ರಿಟಿಷರ ಮಾತನ್ನಾಗಲಿ [illegible] ಭಾರತವು ಇರ್ವ [illegible] ಪ್ರಬುದ್ಧ ಸಂದರ್ಭ [illegible] ಮಾರ್ಗವನ್ನನುಸರಿಸ[illegible] ಸೈನ್ಯ ಶಸ್ತ್ರೀಕರಣವು ವಿಪರೀತ [illegible] ನಾವು ಈಗಿನ ಪದ್ಧತಿಗನುಗುಣವಾಗಿ ನಮ್ಮ ರಕ್ಷಣೆ [illegible] ವ್ಯವಸ್ಥೆ [illegible] ನಮ್ಮ [illegible] ಯುದ್ಧ [illegible] ಸಮರ ಸಿದ್ಧತೆಯನ್ನು ಮಾಡಿಕೊಳ್ಳಬೇಕು.

ಕೇಂದ್ರ ಸರಕಾರಕ್ಕೇ ಅಧಿಕಾರ

ದೇಶಿ ಸಂಸ್ಥಾನಗಳು ಸಪ್ಪ ಕಳವಳವನ್ನು ಮಾಡುತ್ತಿವೆ. ನರೇಂದ್ರರು ಸದ್ವರ್ತನೆ ಕಲಿಯುವರೆಂದು ಆಶಿಸೋಣ. ಬ್ರಿಟಿಷರಿಗಿದ್ದ ಚಕ್ರವರ್ತಿತ್ವದಧಿಕಾರವು ಈಗಿನ ಕೇಂದ್ರ ಸರಕಾರಕ್ಕೆ ಒಂದಲ್ಲ ಒಂದು ವಿಧದಲ್ಲಿ ಬರುತ್ತದೆ. ದೇಶದ ಶಾಂತಿಗಾಗಿ ನಾವು ಸಂಸ್ಥಾನಗಳ ವ್ಯವಹಾರದಲ್ಲಿ ಕೈಹಾಕಲೇ

ಸ್ವಾತಂತ್ರ್ಯ ಮೊದಲು ಮತ್ತಾನಂತರ

ಬೇಕಾಗುವುದು. ಪ್ರಜೆಗಳನ್ನು ದಬ್ಬಾಳಲು ನರೇಂದ್ರರು ಪ್ರಾರಂಭಿಸಿದರೆ ಅದೊಂದೆ ನೆಪವೇ ಸಾಕು ಬರುವ 20 ವರ್ಷಗಳೊಳಗೆ ಚಿಕ್ಕ ದೊಡ್ಡ ಯಾವೊಂದು ಸಂಸ್ಥಾನವೂ ಉಳಿಯುವುದಿಲ್ಲ. ಏಕೀಕೃತ ಮಹಾರಾಷ್ಟ್ರ, ಏಕೀಕೃತ ಕರ್ನಾಟಕ, ಏಕೀಕೃತ ಆಂಧ್ರ, ಐಕ್ಯ ಕೇರಳ, ಹೈದರಾಬಾದು, ತಿರುವಾಂಕೂರು, ಮೈಸೂರು, ಕೊಚ್ಚಿ ಮೊದಲಾದ ಸಂಸ್ಥಾನಗಳಿರುವ ತನಕ ಈ ಏಕೀಕರಣದ ಕುರಿತು ಯೋಚಿಸುವುದು ತರ್ಕಹೀನವಾದ ವಿಚಾರ

ಹೊಸ ರಾಜ್ಯ ಘಟನೆ ರೂಪುಗೊಳ್ಳುತ್ತಿದೆ. ಅದನ್ನು ಕಾರ್ಯರೂಪಕ್ಕೆ ತರುವುದು ಅದೆಷ್ಟು ಸಾಧ್ಯವೆಂದು ನೋಡಲಿಕ್ಕಿದೆ ಆದರೆ ಬಲವಾದ ಕೇಂದ್ರವಿರಬೇಕೆಂಬ ಅದರ ಧ್ಯೇಯವು ಒಂದು ಉಜ್ವಲ ಗುಣಲಕ್ಷಣ ಪರಿಮಾಣದಲ್ಲಿ ಸಂಕುಚಿತಗೊಳಿಸಲ್ಪಟ್ಟರೂ ಬಲವಾದ ಸರಕಾರವೊಂದು ಭಾರತವನ್ನು ಜಗತ್ತಿನ ಅತಿ ಶಕ್ತಿರಾಷ್ಟ್ರವನ್ನಾಗಿ ಮಾಡಬಲ್ಲುದು ಶಕ್ತಿಯುಕ್ತವಾದ ಆತ ... ನಿರ್ವಹಣ ಮುಂದಳಿಸುವುದಕ್ಕೆ ಹೊಸ ರಾಜ್ಯ ಘಟನೆಯಲ್ಲಿ ಆಸ್ಪದವಿರುವುದು ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ತುಂಬಾ ಸಹಕಾರಿಯಾಗಿ ... ಕ್ರ ಸರಕಾರವು ... ಕ್ರಾಂತಿಯುಕ್ತ ಅಭಿವೃದ್ಧಿ ... ಮಾಡಿ ...

ಕೊಂಗ್ರೆಸಿನ ಭವಿಷ್ಯ

ಕೊಂಗ್ರೆಸ್ ಅಸ್ತಿತ್ವದ ... ಆ ... ಕೆಗಳೆದ್ದಿವೆ ... ಕೆಲವು ... ದರೂ ಆ ಸಂಸ್ಥೆಯಿರಬೇಕು. ಅದರ ಸ್ಥಾನ ವಹಿಸಲು ಶಕ್ತಿಯುಳ್ಳ ಬೇರೆ ಪಕ್ಷವೂ ಸದ್ಯಕ್ಕಿಲ್ಲ. ಇಲ್ಲವೆ ಶೀಘ್ರ ನಾಶವಾಗುವಂತಹ ಪಕ್ಷಭೇದಗಳೂ ಕೊಂಗ್ರೆಸಿನೊಳಗಿಲ್ಲ. ಬ್ರಿಟಿಷ್ ಅಧಿಕಾರದ ಉತ್ತರಾಧಿಕಾರಿಯಾಗಿ ಅದು ತನ್ನ ಸ್ಥಾನವನ್ನು ಬಲವತ್ತರಗೊಳಿಸಬೇಕು ಅದು ಹೊಸ ವೇಷ ಭೂಷಣವನ್ನು ಹಾಕಿಕೊಳ್ಳುವ ಕಾಲ ಬರಲಿಕ್ಕಿಲ್ಲವೆಂದರ್ಥವಲ್ಲ ಈ 60 ವರ್ಷಗಳಲ್ಲಿ ಅದು ಹಲವು ಸಲ ರೂಪ ಬದಲಿಸಿದೆ ಪರಿಸ್ಥಿತಿಗನುಸಾರ ನಡೆಯುವುದು ಮಾನವ ಕೋಟಿಯದೆ ಒಂದು ಲಾಕ್ಷಣಿಕ ಗುಣ

ಈಗಿನ ಮುಂದಾಳುಗಳು ಕೊಂಗ್ರೆಸ್ಸನ್ನು ಆದಷ್ಟು ಸಮತಾವಾದಿಯಾಗಿ ಮಾಡಬೇಕಾದುದು ಕರ್ತವ್ಯವೆಂದೆಣಿಸಬೇಕು. ಸಮೂಹಿಕ ಸಹಕಾರ ಸಮಾನತೆಗಳು ಸ್ಥಾಪಿಸಲ್ಪಡಬೇಕಾದುದು ಅತ್ಯಾವಶ್ಯಕ ಮಜೂರ ವರ್ಗದೊಡನೆ ಈಗಿನ ಕೊಂಗ್ರೆಸು ಅಷ್ಟೊಂದು ಹಿತವಿಂದಿಲ್ಲ ತಯಾರಿಕೆಗಳನ್ನು ಹೆಚ್ಚಿಸಬೇಕಾದುದು ನಮ್ಮ ಸಮಸ್ಯೆಗಳೆಲ್ಲೊಂದಾಗಿರುವಾಗ ರೈತ, ಮಜೂರರೊಡನೆ ವೈರತ್ವ ಕಟ್ಟಿಕೊಳ್ಳುವುದರಲ್ಲಿ ಅರ್ಥವಿಲ್ಲ. ಸಮತಾವಾದಿ ಪಕ್ಷದೊಡನೆ 20 ವರ್ಷದ ಒಡಂಬಡಿಕೆ ಮಾಡಿದರೆ ದೇಶದ ಆರೋಗ್ಯ, ಸಂಪತ್ತುಗಳನ್ನು ಹೆಚ್ಚಿಸಬಹುದು

ಈಗಿನ ಹೆಚ್ಚಿನ ಕೊಂಗ್ರೆಸ್ ಮುಖಂಡರು ವೃದ್ಧರಾಗಿರುವರು. ಅವರಿಗೆ ನಾವು ನಮ್ಮ ಆಭಾರ ಶ್ಲಾಘನೆಗಳನ್ನು ಸಮರ್ಪಿಸೋಣ. ಅವರು ತನುಮನಧನಗಳಿಂದ ಸಾಧ್ಯವಿದ್ದಷ್ಟು ಶ್ರಮಿಸಿದ್ದಾರೆ ದೇಶವೇ ಅವರಿಗೆ ಕೃತಜ್ಞವಾಗಿರಬೇಕು ಹೊಸ ನಾಯಕತ್ವವು ಸಹಜವಾದ ಸ್ಥಿತಿಗತಿಗಳಿಂದುಂಟಾಗುತ್ತದೆ

ಒಂದೆರಡು ವಿಷಯಗಳನ್ನು ನಾವು ಜ್ಞಾಪಕದಲ್ಲಿಡೋಣ ಸ್ವಾತಂತ್ರ್ಯವು ಸ್ವತಂತ್ರತೆಯ ವಾತಾವರಣದಲ್ಲಿ ಮಾತ್ರ ಬೆಳೆಯಬಲ್ಲದು ಈ ಸಂಧಿಗ್ಧಕಾಲದಲ್ಲಿ ನಾವು ಸ್ವೈರ್ಯಗೆಡಬಾರದು. ಸ್ವಾತಂತ್ರ್ಯವು ವಿಶ್ವವ್ಯಾಪಿಯಾಗಬೇಕು. ಅದಿಲ್ಲದ ಕಡೆಗಳಲ್ಲಿ ಅದುಂಟಾಗುವಂತೆ ನಾವು ಪ್ರಯತ್ನಿಸಬೇಕು ನಮ್ಮ ನೆರೆಕೆರೆಯ ಅನೇಕ ದೇಶಗಳಲ್ಲಿಂದು ಸ್ವಾತಂತ್ರ್ಯವು ಗಂಡಾಂತರದಲ್ಲಿದೆ. ಸ್ವತಂತ್ರವೂ, ಪುನರ್ ಸಂಯುಕ್ತಗೊಂಡದ್ದೂ ಆದ ಭಾರತವು ಅತೀ ಶ್ರೇಷ್ಠ ದೇಶವಾಗುವುದು ಸಮರ್ಥ ಮನಸ್ಸುಗಳನ್ನು ಶಕ್ತಿವಂತ ಹೃದಯಗಳನ್ನು ನಾವು ಕೆಲಸಕ್ಕೆ ಹಚ್ಚಬೇಕಾದುದು ಅತ್ಯಾವಶ್ಯಕ. ನಾವು ಅಂಜದೆ ಅಳುಕದೆ ತತ್ತರಿಸದೆ ಮುಂದೊತ್ತೋಣ. 'ಕ್ರಾನಿಕಲ್ ವೀಕ್ಲಿ'

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ...

ಕುಟಿಕೂರಾ ಸೋಪು

CUTICURA SOAP.

ನರೆ ಕೂದಲು ನಿಲ್ಲಿಸಿರಿ

ಬ್ಲೆಕಿನಾ: ಖಂಡಿತವಾಗಿ ನರೆಕೂದಲನ್ನು ಕಪ್ಪಾಗಿ ಪರಿವರ್ತಿಸಿ ನರೆತವನ್ನು ನಿಲ್ಲಿಸುವುದು ಇದಕ್ಕೆ ಮೆದುಳು, ಕಣ್ಣುಗಳನ್ನು ತಂಪು ಮಾಡುವ ಆರೋಗ್ಯದಾಯಕ ಶಕ್ತಿ ಇದೆ ನಮ್ಮ ಫಾರ್ಮಸಿಯ ಹೆಸರು ಬಾಟ್ಲಿಯ ಮೇಲಿಲ್ಲದಿದ್ದರೆ ಅದನ್ನು ತಿರಸ್ಕರಿಸಿರಿ ಕೆಲವೇ ನರೆತ ಕೂದಲುಗಳ ಬಾಟ್ಲಿಗೆ ರೂ 2 8—0 ಅದಕ್ಕಿಂತ ಹೆಚ್ಚಿದ್ದರೆ ರೂ 3 8—0 ಸಂಪೂರ್ಣ ನೆರೆತದಕ್ಕೆ ರೂ 5—0—0

ಕಾಮುಕಲಾ: ಸಾಯಂಕಾಲ ಒಂದು ಮಾತ್ರೆ ಸೇವಿಸಿರಿ ಅದು ನಿಮಗೆ ಚಿರ ಆನಂದ ಕೊಟ್ಟು ನಿಮ್ಮ ಶಕ್ತಿ ಸಾಹಸ ಹೆಚ್ಚಿಸುತ್ತದೆ ಒಂದು ಸಲ ಉಪಯೋಗಿಸಿದರೆ ನಿಮಗದರ ಅದ್ಭುತ ಸಾಮರ್ಥ್ಯ ಮರೆಯಲಾರಿರಿ ಇದು ನಿರ್ಬಲತೆ ಹೋಗಲಾಡಿಸುವದು.

ಮಾತ್ರೆಗಳಿಗೆ ರೂ 1

ಸತ್ಯದೇವ ಆಯುರ್ವೇದ ಭವನ.

N 15 P O

Katri Sarai (Gaya)

ALL INDIA GENERAL INSURANCE CO. LTD.,

Head office: BOMBAY.

Ramdeo Anandilal Podar, Esq, . . *Chairman*

S. B Cardmaster, Esq., . . *General Manager*

SUBSCRIBED CAPITAL: Rs. 1,25,00,000

PAID-UP CAPITAL: Rs. 31,25,000

New Life Business completed in 1946 exceeds

Rs. 1½ CRORES.

Transacts: LIFE, FIRE, MARINE, MOTOR VEHICLES, TRANSIT, WORKMEN'S COMPENSATION, FIDELITY Etc., Etc.

TO INSURE WITH OR REPRESENT CONSULT

P R. HEGDE,
Supdt of Agencies,
Maidan Road,
MANGALORE

OR

P. V. K. SHANMUGAM,
Manager,
Madras Branch,
118, Trichy Road,
COIMBATORE

ಹರಿಜನ ವಾಣಿ

ಆಗಸ್ಟ್ 15ರ ನಂತರ ಕಾಂಗ್ರೆಸ್ಸು

ಆಗಸ್ಟ್ 15ರ ನಂತರ ಕಾಂಗ್ರೆಸ್ಸಿನ ಅಸ್ತಿತ್ವ ಅನವಶ್ಯವೆನಿಸಿದರೆ ಎರಡು ಕಾಂಗ್ರೆಸುಗಳ ಸ್ಥಾಪನೆಯಾಗುವದೇ ಇಲ್ಲವೆ ಹಿಂದುಸ್ಥಾನದಲ್ಲಿಯ ಎರಡು ಭಾಗಗಳಿಗೂ ಒಂದೇ ಕಾಂಗ್ರೆಸ್ಸು ಉಳಿಯುವದೇ ಎಂಬ ಪ್ರಶ್ನೆಗೆ ಉತ್ತರವಾಗಿ ಗಾಂಧೀಜಿಯವರು, ಹೀಗೆಂದಿರುವರು-

ನನ್ನ ಅಭಿಪ್ರಾಯದಂತೆ, ಇಂಥ ಸಂಸ್ಥೆಯು ಅವಶ್ಯಕತೆ ಈ ವರೆಗಿನಕ್ಕಿಂತ ಇನ್ನು ಮುಂಥೆಯೆ ಹೆಚ್ಚಾಗಿದೆ. ಆದರೆ ಅದರ ಕಾರ್ಯ ಮಾತ್ರ ಭಿನ್ನವಾಗಿದೆಂಬುದು ನಿಃಸಂದಿಗ್ಧ. ಎರಡು ಧರ್ಮಗಳ ತಳಹದಿಯ ಮೇಲೆ ಎರಡು ರಾಷ್ಟ್ರಗಳೆಂಬ ತತ್ವಕ್ಕೆ ಕಾಂಗ್ರೆಸ್ಸಿಗರು ಒಪ್ಪಿಗೆ ಕೊಡುವ ಮೂರ್ಖತನವನ್ನು ತೋರಿಸದಿದ್ದರೆ ಒಂದು ಹಿಂದುಸ್ಥಾನಕ್ಕೆ ಒಂದೇ ಕಾಂಗ್ರೆಸ್ಸು ಇರಬಲ್ಲುದು ಹಿಂದುಸ್ಥಾನದ ವಿಭಜನೆಯು ಅಖಿಲ ಭಾರತ ಸಂಸ್ಥೆಯನ್ನು ವಿಭಾಗಿಸಲಾರದು. ಹಿಂದುಸ್ಥಾನ ಎರಡು ಸ್ವತಂತ್ರ ಸಾರ್ವಭೌಮಸರಕಾರಗಳಾಗಿ ವಿಭಾಗಿಸಲ್ಪಟ್ಟಿದ್ದರಿಂದ ಎರಡು ರಾಷ್ಟ್ರಗಳಾಗಿ ಪರಿಣಮಿಸಲಾರದು. ಒಂದೆರಡು ಸಂಸ್ಥಾನಗಳು ಎರಡೂ ಸಾಮಂತ ಸರಕಾರಗಳಲ್ಲಿ ಸೇರುವದಿಲ್ಲೆಂದು ತಿಳಿಯಿರಿ, ಕಾಂಗ್ರೆಸ್ಸು ಆ ಪ್ರದೇಶಗಳನ್ನು ಬಿಟ್ಟುಬಿಡುವದೊ? ಅಲ್ಲಿನ ಜನರನ್ನು ಕಾಂಗ್ರೆಸ್ಸು ಹೊರಗೆ ಹಾಕುವದೊ? ಅವರು ಕಾಂಗ್ರೆಸ್ಸಿನಿಂದ ಹೆಚ್ಚಿನ ಲಕ್ಷ್ಯವನ್ನು ಕೋರಲಾರರೆ? ಮೊದಲಿಗಿಂತ ಹೆಚ್ಚು ತೊಡಕಿನ ಸಮಸ್ಯೆಗಳೇನೊ ನಿಶ್ಚಿತವಾಗಿ ಉದ್ಭವಿಸುವವು ಕೆಲವುಗಳಿಗೆ ಪರಿಹಾರವೂ ದೊರೆಯಲಿಕ್ಕಿಲ್ಲ ಆ ಕಾರಣದಿಂದ ಕಾಂಗ್ರೆಸ್ಸನ್ನು ಇಬ್ಭಾಗಿಸಲಾಗದು. ಅಂಥ ಸಮಸ್ಯೆಗಳುಂಟಾಗುವದರಿಂದ ಈ ಮೊದಲಿಗಿಂತ ಹೆಚ್ಚು ಮುತ್ಸದ್ದಿತನ ಆಳವಾದ ವಿಚಾರ ಮತ್ತು ಯೋಗ್ಯ ನಿರ್ಣಯಗಳ ಅವಶ್ಯಕತೆ ಇದೆ ಶಕ್ತಿಹ್ರಾಸ ಮಾಡುವಂಥ ತೊಂದರೆಗಳನ್ನು ನಾವು ಮೊದಲೆ ಗ್ರಹಿಸುವದು ಬೇಡ ಸದ್ಯಕ್ಕೆ ಸಾಕಷ್ಟು ಕಷ್ಟಗಳಿವೆ

ನಿಜವಾದ ಇಸ್ಲಾಂ

ವೈಯಕ್ತಿಕ ನಿರ್ದೇಶಗಳನ್ನುಳಿದು ಒಬ್ಬ ಮುಸ್ಲಿಂ ಪತ್ರಕಾರನು ಬರೆದದ್ದನ್ನು ಈ ಕೆಳಗೆ ಕೊಡಲಾಗಿದೆ

"ಇಸ್ಲಾಂ ಎಂಬುದು ಒಂದ ವಿಶ್ವಧರ್ಮ. ಸತ್ಯವನ್ನು ಹೋರಾಡಿ ತಿಳಿಯೆಂಬುದೇ ಅದರ ಮಹಾಸಂದೇಶ ಖಲೀಫ ಆಲಿಯಂತಹ ಮಹಾತ್ಮರು ಕೂಡ ಸತ್ಯವನ್ನು ತಿಳಿಯಲು ಎಂತಹ ಮಹತ್ಪ್ರಯತ್ನವೆಸಗಬೇಕಾಯಿತೆಂಬುದನ್ನು ಕೆಳಗಿನ ಮೌಲಾನಾ ಜಲಾಲುದ್ದೀನರ ಗೀತದಿಂದ ತಿಳಿದುಕೊಳ್ಳಬಹುದು-

1. ಪ್ರವಾದಿಯು ಆಲಿಗೆ ಹೇಳಿದರು "ಓ ಆಲಿ, ನೀನು ದೇವರ ಸಿಂಹ, ಮಹಾಬಲಶಾಲಿಯಾದ ವೀರ-ಆದರೆ ನಿನ್ನ ಸಿಂಹ ಪರಾಕ್ರಮವನ್ನು ನೀನು ನೆಚ್ಚಬೇಡ ಸತ್ಯದ ತಾಳೆಯ ಮರದ ಕೆಳಗೆ ವಿಶ್ರಮಿಸು ವಿವೇಕಿಯಾದ ಮಾನವನನೆಳಲೊಳಗೆ ಬಾ ಪರಂಪರಾ ಶರಣನ ಮಾರ್ಗದಲ್ಲಿ ನೀನು ಅದನ್ನು ಪಡೆಯಲಾರೆ. ಆತನ ಛಾಯೆಯು ಕಾಫಪರ್ವತವಂಥದು, ಆತನ ಅಂತರಾತ್ಮವು ಗಂಡಭೇರುಂಡದಷ್ಟು ಎತ್ತರ ಹಾರುವಂಥದು ನಾನು ಆ ದೇವರ ಸ್ತುತಿ ಪ್ರಾರಂಭಿಸಿದರೆ ನನ್ನ ವಾಕ್ಯಗಳು ಎಂದೂ ಹೆಚ್ಚಿಸಿಸವು, ಎಂದೂ ಕಡಿಮೆ ಮಾಡಲು ಯುಕ್ತವೆನಿಸವು. ಆ ಸೂರ್ಯನು ಮಾನವರೂಪದಲ್ಲಿದ್ದಾನೆ. ನಾನು ಹೇಳುವುದನ್ನು ತಿಳಿ. ಅಲ್ಲಾ ಸತ್ಯವನ್ನು ಬಲ್ಲ!"

2. ಹೆಸರುಗಳನ್ನು ಗಣಿಸಬೇಡ, ಗುಣಗಳತ್ತ ಲಕ್ಷ್ಯವಿಡು. ಹಾಗೆ ಮಾಡಿದರೆ ಗುಣಗಳು ನಿನ್ನನ್ನು ಸಾರವಿದ್ದೆಡೆಗೊಯ್ಯುವುವು. ಆ ದೇವರ ಹೆಸರಿಂದ ಜಾತಿಭೇದ ಹುಟ್ಟುತ್ತದೆ ಆತನ ಮೂಲಮೂರ್ತಿಯ ಸಾಕ್ಷಾತ್ಕಾರವಾದ ಕೂಡಲೆ ಆತನ ಶಾಂತಿಯ ಭಾಗಿಗಳಾಗುತ್ತಾರೆ

ಇಂದು ಮುಸ್ಲಿಂ-ಇಂಡಿಯದ ಬಹು ದೊಡ್ಡ ದುರಂತವೆಂದರೆ ಅದು ಹೆಸರಿನ ತೊಡಕಿನಲ್ಲಿ ಸಿಕ್ಕಿಕೊಂಡಿದೆ ಮತ್ತು ಇಸ್ಲಾಮಿನ ಉಪದೇಶವನ್ನೆ ಲಕ್ಷ್ಯಕ್ಕೆ ತಂದುಕೊಂಡಿಲ್ಲ ಲಕ್ಷ್ಯಕ್ಕೆ ತಂದುಕೊಂಡಿದ್ದರೆ ಅದು ಸತ್ಯವನ್ನು ತಿಳಿಯಬಲ್ಲುದಾಗಿತ್ತು. ಅವರು ತಮ್ಮ ತಮ್ಮ ಸ್ವಭಾವಾನುಸಾರವಾಗಿ ಕಾರ್ಯಪ್ರವೃತ್ತರಾಗುತ್ತಾರೆ ಆದರೂ ತಮ್ಮ ಕಾರ್ಯಗಳನ್ನು ಇಸ್ಲಾಮಿಗೆ ಅಂಟಿಸುತ್ತಾರೆ, ಅವರು ಹಾಗೆ ಮಾಡುವಲ್ಲಿ ಮರೆತು ಬಿಟ್ಟುದೆಂದರೆ-

ಚಂದ್ರನು ಪ್ರಕಾಶಿಸುತ್ತಾನೆ ಮತ್ತು ನಾಯಿ ಬೊಗಳುತ್ತದೆ ಪ್ರತಿಯೊಬ್ಬನೂ ತನ್ನ ಸ್ವಭಾವಾನುಗುಣವಾಗಿ ಆಚರಿಸುತ್ತಾನೆ ಪ್ರತಿಯೊಬ್ಬನಿಗೂ ದೈವಾಜ್ಞೆಯು ಅವನವನ ಕರ್ತವ್ಯವನ್ನು ನಿರ್ದೇಶಿಸಿದೆ

ಯುಗಯುಗಗಳ ಹೆಸರಿನಲ್ಲಿ ನಾನು ಪ್ರಮಾಣಮಾಡಿ ಹೇಳುತ್ತೇನೆ ಮನುಷ್ಯನು ಇನ್ನೂ ಸಂಪೂರ್ಣ ಅಜ್ಞಾನದಲ್ಲಿದ್ದಾನೆ ಇದಕ್ಕೆ ಅಪವಾದವೆಂದರೆ ಒಳ್ಳೆಯದನ್ನು ಶ್ರದ್ಧೆಯಿಂದ ಮಾಡುವವರು ಮತ್ತು ಸತ್ಯಾಹಿಂಸೆಗಳನ್ನು ಉಪದೇಶಿಸತಕ್ಕವರು ಮಾತ್ರ. ಇಂದು ಮುಸ್ಲಿಮರ ಕೃತ್ಯಗಳೂ ಇಸ್ಲಾಮಿನ ಧರ್ಮವೂ ಭಿನ್ನವಿರುವುದರಿಂದ ಮುಸ್ಲಿಮರ ಕೃತ್ಯಗಳನ್ನು ಹೆಸರಿಸುವಾಗ ನೀವು ಇಸ್ಲಾಮಿನ ಹೆಸರೆತ್ತ ಕೂಡದೆಂದು ದೈನ್ಯದಿಂದ ಬಾಧಿಸುತೇನೆ"

ಭಾರತದತ್ತ ನೈಗೇರಿಯದ ನೋಟ

ಬ್ರಿಟಿಷರ ಆಳಿಕೆಗೊಳಗಾದ ಆಫ್ರಿಕದ ನೈಗೇರಿಯದ ಮುಖಂಡರಾದ ಡಾ ನಾಮದಿ ಅಜಿಕಿವೆಯವರು ಲಂಡನ್ನಿನ ಒಂದು ಸಂದರ್ಶನದಲ್ಲಿ ನೈಗೇರಿಯವು ಇನ್ನು ಹದಿನೈದು ವರ್ಷಗಳಲ್ಲಿ ಸ್ವರಾಜ್ಯ ಪಡೆಯಲು ಅರ್ಹವಾಗುವುದು ಎಂದು ತಿಳಿಸಿದರು

"ಇಂದು ಕಳೆದ 20 ವರ್ಷಗಳಲ್ಲಿ ಭಾರತದಲ್ಲಿ ಏನು ನಡೆಯಿತೆಂಬುದರ ಚಿತ್ರ ನಮ್ಮ ಮುಂದಿದೆ" ಎಂದು ಜೀಕರು (ಹಾಗೆ ಅವರ ಅನುಯಾಯಿಗಳು ಅಜಿಕಿವೆಯವರನ್ನು ಕರೆಯುತ್ತಾರೆ) ಹೇಳಿದರು "ಗಾಂಧೀಜಿಯು ನಮ್ಮ ಪಾಲಿಗೆ ಒಬ್ಬ ಮಹಾ ವ್ಯಕ್ತಿ ಹಾಗೂ ಸ್ಫೂರ್ತಿದಾರರೆನಿಸಿದ್ದಾರೆ ಹೋರಾಟ ಪ್ರಾರಂಭಿಸಿದ ನಾವು ಅವರ ಉಪದೇಶದತ್ತ ಬಹಳ ಲಕ್ಷ್ಯ ಕೊಟ್ಟಿದ್ದೇವೆ ಮತ್ತು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನಂತೆ ಅಹಿಂಸಾ ಮಾರ್ಗವನ್ನೇ ಅನುಸರಿಸಬೇಕೆಂದು ನಾವು ನಿರ್ಧರಿಸಿದ್ದೇವೆ ಬ್ರಿಟಿಷ ಜನರನ್ನು ಕಂಡು ನಮ್ಮ ಉದ್ದೇಶದ ಬಗ್ಗೆ ಅವರ ಸಹಾನುಭೂತಿಯನ್ನು ಪಡೆಯಬೇಕೆಂದು ಹಾಗೂ ವಸಾಹತ ಸರಕಾರದ ಕಾರ್ಯಾಲಯ ಮತ್ತು ಬ್ರಿಟಿಷ ಸರಕಾರಗಳನ್ನು ಈ ವಿಷಯದಲ್ಲಿ ಮಾನನಾಡಿ ನ ನೈಗೇರಿಯವನ್ನು ಸ್ವರಾಜ್ಯದ ಮಾರ್ಗದಲ್ಲಿ ಹೆಜ್ಜೆಯಿಡುವಂತೆ ಮಾಡಲು ಪ್ರಯತ್ನಿಸಬೇಕೆಂದು ಕೇಳಿಕೊಳ್ಳುವುದರ ಸಲುವಾಗಿ ಲಂಡನ್ನಿಗೆ ನಾನು ಬಂದಿದ್ದೇನೆ"

ನೈಗೇರಿಯವು ಪಶ್ಚಿಮ ಆಫ್ರಿಕದಲ್ಲಿದೆ ಅದರ ಉತ್ತರದ ಪರದೆಸೆ ಸಹರಾ ಮರುಭೂಮಿ ಅಲ್ಲಿಯ ನೀಗ್ರೋ ಜನರು ಬ್ರಿಟಿಷರ ಆಳಿಕೆಗೊಳಪಟ್ಟವರ ಎಷ್ಟೋ ಕಾಲದಿಂದ ನಾಗರಿಕತೆಯಲ್ಲಿ ಹಿಂದುಳಿ-

ಇಂತಹ ಇಸ್ಲಾಮ್ ಧರ್ಮವೇ ಪಾಕಿಸ್ತಾನದಲ್ಲಿ ಆಚರಣೆಗೆ ಬರಲಿ ಎಂದು ಮತ್ತು ಮೇಲಿನ ಪತ್ರಕಾರನ ಕಹಿಮಾತು ಇಲ್ಲದಂತಾಗದೆ!

ಕರಮಚಂದ ಮೋಹನದಾಸ ಗಾಂಧಿ

ದ್ದಾರೆ. ಇತ್ತೀಚಿಗೆ ಜಗತ್ತಿನಲ್ಲಿ ದಾಸರಾಷ್ಟ್ರಗಳು ಸ್ವಾತಂತ್ರ್ಯಕ್ಕಾಗಿ ಈಶ ರಾಷ್ಟ್ರಗಳೊಡನೆ ಹೋರಾಟ ನಡೆಸಿ ಅಲ್ಪ ಜಯ-ಪೂರ್ಣ ಜಯಗಳನ್ನು ಪಡೆದುದರ ಗಾಳಿ ಆ ನಾಡಿಗೆ ಬೀಸಿದೆ ಮೇಲೆ ಹೇಳಿದ ನೈಗೇರಿಯದ ನೀಗ್ರೋ ಮುಖಂಡರು, ಭಾರತದ ಆದರ್ಶನವನ್ನು ಹಿಡಿದು ತಮ್ಮ ಜನತೆ ಹೇಗೆ ಬೆಳಕುಕಂಡಿತೆಂಬುದನ್ನು ಹೇಳಿದ್ದು ಈ ಮಾತಿಗೆ ನಿದರ್ಶನವಾಗಿದೆ

ಜೀಕರ ಜೊತೆಗೆ ಮತ್ತೆ ಮೂವರು ನೀಗ್ರೋ ಮುಖಂಡರೂ ಲಂಡನಿನಲ್ಲಿದ್ದಾರೆ ಜೀಕರು ನೈಗೇರಿಯದಲ್ಲಿ ಐದು ಪ್ರಮುಖ ವೃತ್ತಪತ್ರಗಳನ್ನು ಹೊರಡಿಸಿದ್ದಾರೆ 3 ವರ್ಷಗಳ ಹಿಂದೆ ನೈಗೇರಿಯದ ರಾಷ್ಟ್ರೀಯ ಕೌನ್ಸಿಲನ್ನು ಸ್ಥಾಪಿಸಿದರು ಅದು ಭಾರತದ ಕಾಂಗ್ರೆಸ್ಸಿನ ತತ್ವದ ಮೇಲೆಯೇ ಸ್ಥಾಪಿತವಾದದ್ದು ಅದರಲ್ಲಿ 170 ರಾಜಕೀಯ ಪಕ್ಷಗಳು ಕೆಲಸಗಾರರ ಸಂಸ್ಥೆಗಳು, ಔದ್ಯೋಗಿಕ ಸಂಘಗಳ ಕಾಡು ಜನರ ಒಕ್ಕೂಟಗಳ ಇವೆಲ್ಲ ಸೇರಿವೆ ಆ ಪಕ್ಷಗಳೆಲ್ಲ ಸಂಯುಕ್ತ ಬೇಡಿಕೆಯನ್ನು ಆಳರಸರ ಮುಂದಿಡಲು ಬದ್ಧಪ್ರತಿಜ್ಞೆವಾಗಿವೆ

ಸುಮಾರ 1923ರಲ್ಲಿ ಚಳವಳ ಹುಟ್ಟಿದ್ದರೂ ಅದ ಸಜೀವವೆನಿಸಿ ಕಾರ್ಯಸಾಧನೆಗಿಳಿದುದು 1944ರಲ್ಲಿ 1945ರಲ್ಲಿ ಇಡೀ ನಾಡಿನಲ್ಲಿಯ ಕೂಲಿಕಾರರು ಸಂಬಳ ಹೆಚ್ಚಿಸಬೇಕೆಂದು 44 ದಿನಗಳ ವರೆಗೆ ಮುಷ್ಕರ ಹೂಡಿದರು ಅದರ ಪರಿಣಾಮವಾಗಿ ಪರಿಸ್ಥಿತಿಯನ್ನು ವಿಚಾರ ಮಾಡಲು ಬ್ರಿಟಿಷ ಸರಕಾರವು ಸಮಿತಿಯೊಂದನ್ನು ಕಳಿಸಿತು ಮತ್ತು ಆ ಸಮಿತಿಯು ಕೂಲಿಕಾರರಿಗೆ ಅನುಕೂಲವಾಗಿ ತೀರ್ಪು ಕೊಟ್ಟಿತು

ಈಗ ರಾಷ್ಟ್ರೀಯ ಕೌನ್ಸಿಲ ಸಂಸ್ಥೆಯು ಹೊಸ ಪ್ರಜಾಸತ್ತಾತ್ಮಕ ಘಟನೆಯನ್ನು ಬೇಡುತ್ತಲಿದೆ ಕಾನೂನುಗಳನ್ನು ಒದಲಿಸಲು ಒತ್ತಾಯಿಸುತ್ತಿದೆ ಒಪ್ಪದ ವಿಷಯಗಳಲ್ಲಿ ಸಮಾನ್ಯ ಪ್ರಜೆಗಿರುವ ಹಕ್ಕು ಕೂಡ ಜನರಿಗಿಲ್ಲವಾಗಿದ್ದು ಆ ಪರಿಸ್ಥಿತಿಯನ್ನು ಹೋಗಲಾಡಿಸಬೇಕೆನ್ನುತ್ತದೆ ನವೀನ 10 ವರ್ಷಗಳ ವರೆಗೆ ಅರ್ಧ ಬ್ರಿಟಿಷ ಅಧಿಕಾರಿಗಳು ಅರ್ಧ ದೇಶೀಯ ಪ್ರಜೆಗಳ ಸರಕಾರನಡೆಸಬೇಕೆಂದೂ ಕಡೆಗೆ ಐದು ವರ್ಷಗಳಲ್ಲಿ ಸಂಪೂರ್ಣವಾಗಿ ಆಡಳಿತವು ದೇಶೀಯರ ಕೈಗೆ ಬರಬೇಕೆಂದೂ ಬ್ರಿಟಿಷರು ಕೇವಲ ಸಲಹೆಗಾರರಾಗಿ ಉಳಿಯಬೇಕೆಂದೂ ಆ ಬಳಿಕ ಬ್ರಿಟಿಷರು ಸಂಪೂರ್ಣ ಅಲ್ಲಿಂದ ಕಾಲು ತೆಗೆಯಬೇಕೆಂದೂ ಆ ಸಂಸ್ಥೆಯ ಯೋಜನೆಯಿದೆ

ದೇಶವನ್ನು ಬಡಗಣ, ಪಡುವಣ ಮತ್ತು ಮೂಡಣ ಜಿಲ್ಲೆಗಳೆಂದು ಮೂರು ಪಾಲು ಮಾಡಿ ಅಲ್ಲಲ್ಲಿಯ ಪಾಳೆಯಗಾರರಿಗೆ ಪ್ರಾಮುಖ್ಯ ಕೊಡುತ್ತಿರುವುದು ದೇಶದ ಐಕ್ಯಕ್ಕೆ ಕುಠಾರಪ್ರಾಯವಾಗಿದೆ ಆದರೂ ಹಿಂದುಸ್ಥಾನದ ಇಂದಿನ ಗತಿಯನ್ನು ಕಂಡ ನಂತರ ತಾವು ಎಂತಹ ಸ್ಥಿತಿಯಲ್ಲಿಯೂ ದೇಶದ ವಿಭಜನೆಗೆ ಒಪ್ಪಿಗೆ ಕೊಡುವುದಿಲ್ಲವೆಂದು ಡಾ ಜೀಕರು ಕಂಠೋಕ್ತವಾಗಿ ಹೇಳಿದರು.

[ಹಿಂದುಸ್ಥಾನ ಟೈಮ್ಸದಿಂದ]



ಜಾಂಬಕಿನಿಂದ ಪರಿಹಾರ

ಈ ವನಸ್ಪತಿ ಜಾಂಬಕ್ ಮುಲಾಮು ವಿಷಹಾರಿ, ಶಮನದ ಪರಿಹಾರ, ಸಡಿಲಾದ ನರಗಳನ್ನು ಸಂಕೋಚಿಸಿ ರಕ್ತಸ್ರಾವ ತಡೆದು, ಉರಿಯುವಿಕೆ ನಿಲ್ಲಿಸಿ, ವಿಷಮತೆಯನ್ನು ಪರಿಹರಿಸುತ್ತದೆ ಶಸ್ತ್ರಕ್ರಿಯೆ ಅನಿವಾರ್ಯವೆಂದಾಗಲೂ ಜಾಂಬಕ್ಕು ಯಶಸ್ವಿಯಾಗಿದೆ

ಮಡವೆ, ತುರಿಕಜ್ಜಿ, ಕ್ರಿಮಿಕಡಿತದಿಂದ ಕುರು, ಉಷ್ಣ ಗುಳ್ಳೆ ಕಾಲು ಬಾತುವಿಕೆ ಮೊದಲಾದ ಎಲ್ಲಾ ಚರ್ಮವ್ಯಾಧಿಗೆ ಜಾಂಬಕು ವಿಶ್ವಖ್ಯಾತಿ ಔಷಧಿ

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು.

ನಮ್ಮ ಮಾತು

ನೂರೈವತ್ತು ವರ್ಷಗಳ ಬ್ರಿಟಿಷ್ ಸಾಮ್ರಾಜ್ಯಶಾಹೀ ಶೋಷಣೆಯ ನಂತರ, ಅರವತ್ತು ವರ್ಷಗಳ ಅವಿಶ್ರಾಂತ ಹೋರಾಟದ ನಂತರ ನಾವು ಇಂದು ಸ್ವಾತಂತ್ರ್ಯ ಹೊಂದಿರುತ್ತೇವೆ. ನಮ್ಮ ಕನಸಿನ ಸ್ವಾತಂತ್ರ್ಯವು ನಮಗೆ ಲಭಿಸಿದಿದ್ದರೂ, ಈಗ ಕೈಗೆ ಬಂದುದರಿಂದಲೆ ನಮ್ಮ ಹಿರಿಯ ಬಯಕೆಗಳನ್ನು ಸಾಧಿಸಕೊಳ್ಳಬಹುದೆಂಬ ಆಶಯಗಳು ನಮ್ಮಲ್ಲಿ ಉಂಟಾಗಿವೆ ಈ ಮಹಾ ವಿಜಯದ ಶ್ರೇಯಸ್ಸು, ಮಹಾತ್ಮಾಗಾಂಧಿಯವರ ಮುಂದಾಳುತನಕ್ಕೆ ಸಲ್ಲತಕ್ಕದು ಅವರೊಡನೆ ದುಡಿದ ಇತರ ಭಾರತ ವೀರರಿಗೂ ಸಲ್ಲತಕ್ಕದು. ಸತ್ಯ ಮತ್ತು ಅಹಿಂಸೆಯ ಬಲದಿಂದಲೆ ಒಂದು ರಾಷ್ಟ್ರವು ದಾಸ್ಯದಿಂದ ವಿಮುಕ್ತಹೊಂದಿದುದು, ಇದೇ ಜಗತ್ತಿನ ಚರಿತ್ರೆಯಲ್ಲಿ, ಇದೆ ಮೊದಲಿನದಾಗಿರುತ್ತದೆ.

ಇಂದಿನ ದಿನ ಭಾರತದಲ್ಲಿ ನವಯುಗದ ಪ್ರಾರಂಭವಾಗಿದ ಸ್ವಾತಂತ್ರ್ಯದೊಡನೆ ದೊಡ್ಡ ಹೊಣೆಗಾರಿಕೆಗಳು ನಮ್ಮ ಮೇಲೆ ಬಂದುಬಿಟ್ಟಿವೆ ದೀರ್ಘಕಾಲದ ರೋಗಕ್ಕೆ ತುತ್ತಾದ ನಮ್ಮ ದೇಶವು ಇಂದು ಗುಣಹೊಂದುವ ಸ್ಥಿತಿಗೆ ಬಂದದೆ ರೋಗಿಯನ್ನು ಸುಧಾರಿಸುವರೆ, ಮಹಾಕಾರ್ಯಗಳು, ಮಹಾಸಂಕಲ್ಪಗಳು ಜಾಗ್ರತೆಯಾಗಿ ನಡಯಬೇಕಾಗಿದೆ

ಅನ್ನ ವಸ್ತ್ರಗಳ ಕೊರತೆ ಕಳ್ಳಸಂತೆ ಲಾಭಖೋರತನ, ಅನ್ಯಾಯಂತರದ ಮುಷ್ಕರಗಳು, ಇವೆ ಮೊದಲಾದುವುಗಳು ನಮ್ಮನ್ನು ಸದ್ಯ ಪೀಡಿಸುತ್ತಿರುವ ಸಂಕಟಗಳು ಅವಿದ್ಯೆ ಮತ್ತು ಅನಾರೋಗ್ಯದಿಂದ ದೇಶವು ಬಳಲುತ್ತಿದೆ ದೇಶದ ವ್ಯಾಪಾರ, ಕೈಗಾರಿಕೆ, ವಹಿವಾಟುಗಳೆಲ್ಲಾ ತಟಸ್ಥಹೊಂದಿದ ಬಡತನದ ಗೋಳು ಎಲ್ಲೆಲ್ಲೂ ನಮ್ಮನ್ನು ಎದುರು ನೋಡುತ್ತಿದ

ಇಷ್ಟೆ ಅಲ್ಲ ಪ್ರಪಂಚದ ಪರಿಸ್ಥಿತಿಯು ದಿನದಿನ ಕೆಡುತ್ತಿದೆ ಶಾಂತಿಗಾಗಿ ಒಂದೆ ಜಗದ ಸ್ಥಾಪನೆಗಾಗಿ ಯತ್ನಗಳು ನಡೆಯುತ್ತಿದ್ದರೂ, ಉನ್ನತಿಯಲ್ಲಿರುವ ಪ್ರಭುತ್ವ ರಾಷ್ಟ್ರಗಳು, ಇನ್ನೂ ತಮ್ಮ ಸ್ವಾರ್ಥ ವಿಪರ್ಯಾಸಗಳನ್ನು ತೊರೆದಂತ ಕಾಣಿಸುವುದಿಲ್ಲ ಸದ್ಯಕ್ಕೆ ಯುದ್ಧ ತಂದೊದ್ಯವ ಇಚ್ಛೆಯು ಯಾರಲ್ಲೂ ಇಲ್ಲದಿದ್ದರೂ ಇನ್ನೊಂದು ಮಹಾಯುದ್ಧಕ್ಕಾಗಿ ಸಿದ್ಧತೆಗಳಿಗೆ ಈಗಾಗಲೆ ಪ್ರಾರಂಭವಾಗಿದೆ ಈ ಜಗತ್ತು, ಸೋವಿಯಟ್ ರಷ್ಯ-ಮತ್ತು ಆಂಗ್ಲೊ ಅಮೇರಿಕನ್ ಪಕ್ಷಗಳಾಗಿ ಇಬ್ಭಾಗವಾಗುವ ಕ್ರಿಯೆಯು ಈಗ ಪ್ರಾರಂಭವಾಗಿರುತ್ತದೆ ಈ ವಿಷಮತೆಯಲ್ಲಿ ಶಾಂತಿ ರಕ್ಷಣಗಾಗಿ ಹೊಯ್ದಾಟದ ಕೆಲಸವು ನಮ್ಮ ಹೆಗಲ ಮೇಲ ಬಂದಿದೆ ಸಮಸ್ತ ಏಸ್ಯಾಖಂಡವನ್ನು ಈ ಪರಿಸ್ಥಿತಿಯಲ್ಲಿ ನಡೆಯಿಸುವ ಮುಂದಾಳುತನವು ನಮಗೆ ದೊರಕಿದೆ

ಇಷ್ಟೆಲ್ಲಾ ಸಂಕಷ್ಟ, ತಟಸಿದಿತೆಗಳನ್ನು ಇನ್ನೂ ಹೆಚ್ಚಿಸುವ ದೇಶದ ವಿಚ್ಛೇದಿಕರಣಕ್ಕೆ ನಾವು ಸಮ್ಮತಿಯಿತ್ತಿದೇವ ಈ ಒಂದು ಕಾರಣದಿಂದ ವಿಜಯದ ಸಂತೋಷದೊಡನೆ ದುಃಖವು ಕಲೆಯುವ ತಾಗಿದೆ ಇದು ಹೊಸ ರಗಳೆಗಳಿಗ ಕಾರಣವಾಗಿದೆ ನೂರೈವತ್ತು ವರ್ಷಗಳ ಸಂಕಟದ ನಂತರವೂ, ಹೊಸ ರೋಗಗಳು ನಮಗ ಬಂದು ಅಂಟಿದ [illegible] ದೇಶದ [illegible] ಗಳಲ್ಲಿ ನಮ್ಮದಕೆ ನಡೆಯ [illegible]

ಸ್ವಾತಂತ್ರ್ಯ ಪಡದಾಕ್ಷಣ ಪದಾಯಿತ ಬ್ರಿಟಿಷ ಸಾಮ್ರಾಜ್ಯಶಾಹಿಯು ಇನ್ನು ತಮ್ಮ ದೇಶದಿಂದ ಹೊರ ನಡಯುವುದು ಅದರ ಸ್ಥಳದಲ್ಲಿ ಭಾರತೀಯ ಬಂದ ಪಾಳೆಶಾಹಿಯು ಬಂದು [illegible] ಪ್ರಯತ್ನಗಳು ನಡಯುತ್ತಿವೆಯಾದರೂ ಮಹಾ ಜನತೆಯ [illegible] ಬಳೆದ ಕಾಂಗ್ರೆಸ್ಸು ಈ ವಿಚಾರ ಲಕ್ಷ್ಯ ತಲೆಯದೆ ಇರದು ಎಂದು ನಮಗ ಭರವಸೆಯಿದೆ ಅದಲ್ಲದೆ ಸಾಮಾನ್ಯ ಜನತೆಯ ಹಿತ [illegible] ತಕ್ಕಂದ ಪಂಡಿತ್ ಜವಾಹರಲಾಲರಂತ ಪ್ರಭುಗಳು ಇಂದು ನಮ್ಮ ಮುಂದಾಳುತನವನ್ನು ವಹಿಸುದು [illegible] ಹೇಳಬೇಕಿವೆ [illegible] ದೊಡ್ಡ [illegible] ಯತ್ನ ಮತ್ತು ತ್ಯಾಗದಿಂದ ಎಲ್ಲವನ್ನು ಗಳಿಸಿಕೊಂಡು ಜಗತ್ತಿನಲ್ಲಿ ಭಾರತಕ್ಕೊಂದು ಮಹಾ ಸ್ಥಾನವು ದೊರಕಿಸಿಕೊಳ್ಳುವ ಕಾರ್ಯದಲ್ಲಿ ನಮಗೆ ಯಶಸ್ಸು ದೊರಕುವುದು ಖಂಡಿತವೆಂದೆ ನಾವು ಹೇಳಬಯಸುತ್ತೇವೆ

★

ದೇಶದ ಆಹಾರ ಪರಿಸ್ಥಿತಿಯ ಕುರಿತು ಕೇಂದ್ರ ಸರಕಾರದ ಪ್ರಕಟಣೆಯೊಂದು ಹೊರಟಿರುತ್ತದೆ ಅದರಿಂದ ತಿಳಿದು ಬರುವಂತೆ ಹಲವು ಕಡೆಗಳಲ್ಲಿ ಹವೆ ಇತ್ಯಾದಿ ಕಾರಣದಿಂದ ಪಸಲು ಕೆಟ್ಟು ಹೋದುದರಿಂದ ಬರಬೇಕಾದಷ್ಟು ಬೆಳೆಯು ಬಾರದಿದ್ದುದರಿಂದ ಆಹಾರದ ಕೊರತವು ತುಂಬಾ ಕಡಿಮೆಯಾಗಿರುತ್ತದೆ ಉಂಟಾದ ನಷ್ಟವನ್ನು ಭರ್ತಿ ಮಾಡಿಕೊಳ್ಳುವರೆ ಪರದೇಶಗಳಿಂದ ಆಹಾರವನ್ನು ತರಿಸಿಕೊಳ್ಳಲು ಸರಕಾರವು ತುಂಬಾ ಯತ್ನಗಳನ್ನು ಮಾಡುತ್ತಿದೆ ರೈತರಿಂದ ಬರಬೇಕಾದಷ್ಟು ಆಹಾರವು ಮುಂದೆ ಬಾರದಿರುವುದೂ ಕೊರತೆಯ ಒಂದು ಕಾರಣವಾಗಿರುತ್ತದೆ ಆಹಾರವನ್ನು ಸರಿಯಾಗಿ ಹಂಚಲು ಬೇಕಾದ ಸಾಗಣೆಯ ಅನಾನುಕೂಲತೆಯು ತೊಂದರೆಯ ಕಾರಣವಾಗಿರುತ್ತದೆ ಇನ್ನು ಎರಡು ತಿಂಗಳ ಅವಧಿಯು ಅತಿ ವಿಷಮತೆಯದಾಗುವುದೆಂದೂ ಪ್ರಕಟನೆಯಲ್ಲಿ ಹೇಳಲಾಗಿದೆ

ಪರಿಸ್ಥಿತಿಯ ಕಠಿಣತೆಯನ್ನು ನಿವಾರಿಸುವರ ಸರ್ವ ಯತ್ನಗಳು ಸರಕಾರದಿಂದ ಮಾಡಲಾಗುವವು ಆದರೆ ಈ ಸಂದಿಗ್ಧದಲ್ಲಿ ಸರಕಾರ ಮಾತ್ರವಲ್ಲ ಪ್ರಜೆಗಳು ಕೂಡ ಹೊಣೆಗಾರಿಕೆಯನ್ನು ವಹಿಸಿ ವರ್ತಿಸಬೇಕಾಗಿದೆ ಕತ್ತಲೆಗೆ ಸೇರಿದ ಆಹಾರವು ಬೆಳಕಿಗೆ ಬರುವಂತೆ ಆಹಾರವು ಮಿತಿಯಾದ ರೀತಿಯಲ್ಲಿ ಉಪಯೋಗಿಸಲ್ಪಡುವಂತೆ ಸಾರ್ವಜನಿಕರು ಸರಕಾರದೊಡನೆ ಸಹಕರಿಸುವುದು ಈಗ ಅತೀ ಅವಶ್ಯವಿದೆ

★

ಫ್ರಾನ್ಸಿನಲ್ಲಿ ಪ್ರಜಾಪ್ರಭುತ್ವ ಸರಕಾರವು ಅಧಿಕಾರದಲ್ಲಿರುವುದಾದರೂ ಫ್ರೆಂಚ್ ವಲಸೆಗಳಲ್ಲಿ ಮಾತ್ರ ಸಾಮ್ರಾಜ್ಯಶಾಹಿ ಕ್ರಮಗಳೆ ಇನ್ನೂ ರೂಢಿಯಲ್ಲಿವೆ. ಅವುಗಳನ್ನು ಇನ್ನೂ ಬಲವಂತಗೊಳಿಸುವ ಯತ್ನಗಳು ನಡೆಯುತ್ತಿವೆ. ಇಂಡೋಚೀನಾ, ಭಾರತ ಫ್ರೆಂಚ್ ಪ್ರದೇಶಗಳು, ಉತ್ತರ ಆಫ್ರಿಕಾದ ಅಲ್ಜೀರಿಯಾ ಮಡಗಾಸ್ಕರ, ಮೊದಲಾದ ಫ್ರೆಂಚ್ ವಲಸೆಗಳಲ್ಲಿ, ಸ್ವಾತಂತ್ರ್ಯಕ್ಕಾಗಿ ಆಂದೋಲನಗಳು ನಡೆಯುತ್ತಿವೆ. ಅವುಗಳನ್ನು ದಬ್ಬಲು ಫ್ರಾನ್ಸಿನ ಸೌಮ್ಯವಾದೀ ಸರಕಾರದ ಯತ್ನಗಳೂ ನಡೆಯುತ್ತಿವೆ. ಮನೆಯಲ್ಲಿ ಹಲವು ಕಷ್ಟಗಳಿರುವ ಫ್ರಾನ್ಸು, ವಲಸೆಗಳಲ್ಲಿ ತಮ್ಮ ಅಧಿಕಾರವನ್ನು ತ್ಯಜಿಸಲು, ಇನ್ನೂ ಮನಸ್ಸು ಮಾಡಿದಂತೆ ಕಾಣುವುದಿಲ್ಲ

ಸಂಯುಕ್ತ ರಾಷ್ಟ್ರಸಂಸ್ಥೆಯೊಂದು ಜಾಗತಿಕ ಶಾಂತಿಗಾಗಿ ಸ್ಥಾಪನೆಯಾಗಿದ್ದರೂ, ಜಗತ್ತಿನ ಪ್ರತಿಯೊಂದು ರಾಷ್ಟ್ರವು ಸ್ವತಂತ್ರವಾಗಿ ಬಾಳುವಂತೆ ಮಾಡುವುದು ಈ ಸಂಸ್ಥೆಯ ಧ್ಯೇಯಗಳಲ್ಲಿ ಒಂದಾಗಿದ್ದರೂ, ಈ ಸಂಸ್ಥೆಯು ಮೇಲಿನ ದೇಶಗಳ ನೆರವಿಗೆ ಹೋಗುವ ಮನಸ್ಸು ಮಾಡಿದಂತೆ ಕಾಣುವುದಿಲ್ಲ ಪಂಡಿತ ನೆಹುರುಗಳು ಅಂದಂತೆ ಮುಂದಕ್ಕೆ ಏಸ್ಯಾಖಂಡದ ರಾಷ್ಟ್ರಗಳು ಒಟ್ಟಾಗಿ ತಮ್ಮ ರಕ್ಷಣೆಯನ್ನು ಮಾಡಬೇಕಾಗುವುದು

ಹಿಂದೂದೇಶದಲ್ಲೂ ಫ್ರೆಂಚರಿಗೆ ಕೆಲವು ಸಣ್ಣ ಪ್ರದೇಶಗಳಿವೆ ಅವುಗಳನ್ನು ಫ್ರೆಂಚ್ ಸಾಮ್ರಾಜ್ಯ ಅಂಗಗಳಾಗಿ ಕಾಯ್ದಿರಿಸುವರೆ ಅವರ ಹಂಚಿಕೆಗಳು ನಡೆಯುತ್ತಿವೆ

★

ಇಂಡಿಯನ್ ಸಿವಿಲ್ ಸರ್ವಿಸ್ ಮೊದಲಿಂದ ಮೊದಲಿನ ಸೆಕ್ರೆಟರಿ ಓಫ್ ಸ್ಟೇಟರ ಹುದ್ದೆಗಳು ರದ್ದಾಗಿರುವುದರಿಂದ ಅನೇಕ ಮಂದಿಗಳು ನಿವೃತ್ತರಾಗಿ ಮನೆ ಕಡೆ ಪ್ರಯಾಣ ಬೆಳೆಸಿರುವರು. ಖಾಲಿ ಬಿದ್ದ ಈ ಹುದ್ದೆಗಳನೇಕ ಈಗ ತುಂಬ ಬೇಕಾಗಿವ ಆಡಳಿತದ ಸೂತ್ರವೆ ಈ ಹುದ್ದೆಗಳ ಮೇಲೆ ಹೊಂದಿಕೊಂಡಿದೆ ಹೀಗಿರುತ್ತಾ, ಈ ಹುದ್ದೆಗಳನ್ನು ತುಂಬುವಾಗ ಹುದ್ದೆಗಳಿಗೆ ಬೇಕಾದ ಯೋಗ್ಯತೆಯಿರುವವರನ್ನೇ ಒಳ್ಳೆ ಬುದ್ಧಿವಂತರ ಮತ್ತು ಸಾತ್ವಿಕ ವ್ಯಕ್ತಿಗಳನ್ನು ನೇಮಿಸಿಕೊಳ್ಳುವುದರ ಮೇಲೆ ಹೊಂದಿಕೊಂಡಿದ ದೇಶದ ಮುಂದಿನ ಅಭ್ಯುದಯ

ESTD 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29 00 000	29 00 000
Capital paid up	28,43,000	28,50 000
Reserves	11,00 000	11 00,000
Deposits	3,50,43,000	4 60,40,000
Due to Bankers	26 91 000	69,57 000
Call Deposits from Bankers	8,00,000	15,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs	4,71,78,000	6,45,13,000

ASSETS

	1945	1946
Cash	1 01 91 000	1 16,16 000
Govt Securities	1 80,45,000	2 75,61,000
Advances to customers	1 56,87,000	2 01 38 000
Bills for collection and Foreign Bills negotiated	20,56,000	34 23,000
Landed Properties	28,000	5 000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13,000

ರೂ. ೧೦೦ ಬಹುಮಾನ

ಅದ್ಭುತ ಶಕ್ತಿ ಸಿದ್ಧ ಕವಚ

ಇದನ್ನು ಇಟ್ಟುಕೊಂಡ ಮಾತ್ರಕ್ಕೇ ಅತೀ ದುಸ್ಸಾಧ್ಯವಾದ ಉದ್ದೇಶವೂ ಸಾಧಿಸುವುದು. ಇದನ್ನು ಪರಿಣಾಮಕಾರಿಮಾಡಲೂ ಯಾವ ಕಷ್ಟದ ಶ್ರಮವನ್ನು ವಹಿಸಬೇಕಾಗಿಲ್ಲ. ಯಾವ ತಯಾರಿಯಿಲ್ಲದೆಯೂ ಇದು ಫಲಕೊಡುವುದು ನೀಚಗ್ರಹಗಳನ್ನಿದು ಗೆಲ್ಲುವುದು, ಶತ್ರುಗಳನ್ನು ಗೆದ್ದು ಪರೀಕ್ಷೆ, ವ್ಯಾಪಾರ, ವ್ಯಾಜ್ಯ, ನೌಕರಿ, ಜೂಜು, ಉದ್ಯೋಗಗಳಲ್ಲಿ ಯಶಸ್ಸುಕೊಡುತ್ತದೆ ಸಂಪತ್ತಭಿವೃದ್ಧಿಮಾಡಿ, ಸಾಲ ವಿಮೋಚಿಸಿ, ಅಪಾಯಕರ ಕಾಯಿಲೆಗಳನ್ನು ಗುಣಪಡಿಸುತ್ತದೆ ನಿಮ್ಮನ್ನು ಅದೃಷ್ಟಶಾಲಿ ಮಾಡುತ್ತದೆ ಇದನ್ನು ಸುಳ್ಳೆಂದು ರುಜುವಾತು ಮಾಡಿದವರಿಗೆ 100 ರೂಪಾಯಿ ಬಹುಮಾನ ಬೆಲೆ ತಾಮ್ರದಕ್ಕೆ ರೂ 2 ಬೆಳ್ಳಿದ್ದಕ್ಕೆ ರೂ 8, ಬಂಗಾರದಕ್ಕೆ ರೂ 15. ತಕ್ಷಣ ಫಲದ ವಿಶೇಷ ತರದ ಕವಚಕ್ಕೆ (ಶುದ್ಧ ಬಂಗಾರದ ಮುಚ್ಚಿಗೆಯದು) ರೂ. 25—7

Dukh Haran Ashram, No. 1
P. O. Katri Sarai (Gaya).

ಸ್ವತಂತ್ರ ಜನತೆಯ ಹಕ್ಕುಬಾಧ್ಯತೆಗಳು!

ಅಮೇರಿಕನ್ ಪ್ರಜಾಸ್ವಾತಂತ್ರ್ಯದ ಮಾದರಿ

ಆಡಳಿತದ "ಜುಲುಂ" ಅಂತವಾಗಬೇಕು!

"ಸರಕಾರದ ಅಧಿಕಾರವು ಆಳಲ್ಪಡುವ ಜನತೆಯಿಂದಲೇ ಬರುವುದು" ಎಂಬ ವಿಶ್ವಾಸವು ಪ್ರಜಾಪ್ರಭುತ್ವದ ಮೂಲಾಧಾರವಾಗಿದೆ. ಸ್ವತಂತ್ರ ದೇಶವೊಂದರಲ್ಲಿ ಪ್ರಜಾಧಿಕಾರವು ಸಂಪೂರ್ಣತೆಯನ್ನು ತಳೆಯಬೇಕಾದುದು ನ್ಯಾಯವಾದುದೇ. ಜರ್ಮನಿಯು ಸ್ವತಂತ್ರವಾಗಿದ್ದರೂ ಆ ಜನಾಂಗವು ಕೆಲವೇ ಮಂದಿ ನಾಜಿ ಪಕ್ಷ ಪಾತಿಗಳಿಂದ ಆಳಲ್ಪಡುತ್ತಿದ್ದುದು ಅದರ ಅವನತಿಗೆ ಕಾರಣವಾಯಿತು

ರಷ್ಯವೂ ಸ್ವತಂತ್ರ ದೇಶ. ಆದರೆ ನದಿ ಬಿಟ್ಟು ಬಾವಿಗೆ ಬಿದ್ದ ಪರಿಸ್ಥಿತಿ ರಷ್ಯದ್ದಾಗಿದೆ. ಝಾರನ ಏಕ ಪ್ರಭುತ್ವದ ದಬ್ಬಾಳಿಕೆಯ ಬದಲಿಗೆ ಈಗ ಮಜೂರ ಆಡಳಿತ ವರ್ಗದ ಸರ್ವಾಧಿಕಾರತ್ವವು ಅಲ್ಲಿ ಸ್ಥಾಪನೆ ಹೊಂದಿರುತ್ತದೆ ರಶ್ಯನ್ನರಿಗೆ ವಾಕ್ ಸ್ವಾತಂತ್ರವಾಗಲಿ, ರಾಜಕೀಯ ಸ್ವಾತಂತ್ರವಾಗಲಿ ಇಲ್ಲ ಕೈ ಕಟ್ಟಿ ಬಾಯಿಗೆ ತುತ್ತು ಹಾಕುವ ದುರಂತ ಸುಖ ಆ ಜನರ ಪಾಲಿಗೆ ಬಂದಿದೆ. ಮಾನವನು ಎಳಸುವುದು ಕೇವಲ ಶಾರೀರಿಕ ರಕ್ಷಣೆಯಲ್ಲ ಅವನಿಗೆ ಮನೋ ಸ್ವಾತಂತ್ರ್ಯವು ಅತ್ಯಮೂಲ್ಯವಾದುದು ಅದು ಅವನ ಸರ್ವತೋಮುಖ ಬೆಳವಣಿಗೆ ವಿಕಾಸ, ಉದಾತ್ತೀಕರಣಗಳಿಗೆ ಅತ್ಯಾವಶ್ಯಕವಾದ ಪೋಷಕ ವಸ್ತು

ಅಮೇರಿಕನ್ ಆದರ್ಶ

ಭಾರತ ಘಟನಾ ಸಮಿತಿಯು ರಾಜ್ಯಾಡಳಿತದ ಆದರ್ಶವಾಗಿ ಬ್ರಿಟಿಷ್ ವಿಧಾಯಕ ಪದ್ಧತಿಯನ್ನು ಅಂಗೀಕರಿಸಿದೆ ಬ್ರಿಟಿಷರ ಮಟ್ಟಿಗೆ ಅಲ್ಲಿನ ಪ್ರಜೆಗಳ ಹಕ್ಕು ಬಾಧ್ಯತೆಗಳು ತಕ್ಕಷ್ಟು ಸ್ವತಂತ್ರ ಶ್ರೀಯವಾಗಿವೆಯಾದರೂ ಅವು ಅಮೇರಿಕನರಷ್ಟು ಪರಿಪೂರ್ಣತೆಯುಳ್ಳವೆಂದು ನಾಗರೀಕ ಸ್ವಾತಂತ್ರ್ಯ ದುರೀಣರು ಅಭಿಪ್ರಾಯಪಡುತ್ತಾರೆ ವಿವಿಧ ಜಾತಿಮತ ಪಂಥಗಳಿಂದೊಡಗೂಡಿದ ನಮ್ಮ ದೇಶದಲ್ಲಿ ಅಮೇರಿಕನ್ ಪ್ರಜಾ ಸ್ವಾತಂತ್ರ್ಯದ ಶಾಸನಗಳು ಅತ್ಯಾವಶ್ಯಕವಿವೆ ಉದಾ ಅಮೇರಿಕನ್ ರಾಜ್ಯ ಘಟನೆಯೊಳಗಿನ ಒಂದು ಸೂತ್ರವು ಹೀಗಿದೆ

"ಮತ ವಿಚಾರದ ಸಂಬಂಧ ಯಾವ ತರದ ಕಾನೂನನ್ನು ಮಾಡಲು ಪ್ರಜಾಪ್ರತಿನಿಧಿ ಸಭೆಗೆ ಹಕ್ಕಿರಬಾರದು. ಮತ ವಿಚಾರವು ಸಂಪೂರ್ಣ ಸ್ವಾತಂತ್ರ್ಯದ್ದಿರಬೇಕು ವ್ಯಕ್ತಿಯ ವಾಕ್ ಸ್ವಾತಂತ್ರ್ಯದ, ಇಲ್ಲವೆ ಪತ್ರಿಕೆಗಳ ಅಭಿಪ್ರಾಯ ನಿರೂಪಣಾ ಸ್ವಾತಂತ್ರ್ಯದ ಕುರಿತೂ ಪ್ರಜಾಪ್ರತಿನಿಧಿ ಸಭೆಯು ಯಾವೊಂದು ಆತಂಕವನ್ನುಂಟು ಮಾಡಬಾರದು ಜನರು ಶಾಂತ ರೀತಿಯಲ್ಲಿ ಮಾಡುವ ಯಾವ ಸಭೆಗೂ ಆತಂಕವಿರಬಾರದು. ಸಂಕಷ್ಟ ನಿವಾರಣೆಗಾಗಿ ಸರಕಾರಕ್ಕೆ ಮನವಿ ಮಾಡಿಕೊಳ್ಳುವ ಅಧಿಕಾರ ಜನರಿಗೆ ಯಾವಾಗಲೂ ಇರಬೇಕು."

ಹೀಗಾದರೆ ನಿಜವಾಗಿಯೂ ಸರ್ವಾಧಿಕಾರಕ್ಕೆಡೆ ಸಿಗುವುದಿಲ್ಲ. ಅಮೇರಿಕನ್ನರು ತಮ್ಮ ಸರಕಾರವನ್ನು ಅಧ್ಯಕ್ಷರನ್ನು ಇಲ್ಲವೆ ಯಾವದೇ ಅಧಿಕಾರಿಯನ್ನಾಗಲಿ ಬಹಿರಂಗವಾಗಿ ಟೀಕಿಸಬಹುದು. ಆದರೆ ಟೀಕೆಯು ಗೌರವಪೂರ್ಣವಾಗಿರಬೇಕು. ಅಪಮಾನಾಸ್ಪದವಿರಬಾರದು. ಹೀಗಿದ್ದರೆ ಸರಕಾರಕ್ಕೂ ಆಗಿಂದಾಗ್ಗೆ ತನ್ನನ್ನು ತಿದ್ದಿಕೊಳ್ಳಲೆಡೆಸಿಗುತ್ತದೆ. ಜನರಿಗೂ ನ್ಯಾಯ ರೀತಿಯಲ್ಲಿ ವ್ಯವಹಾರ ಸಾಗಿಸಲು ಸಂದರ್ಭ ದೊರಕುತ್ತದೆ.

ಹಿನ್ನೋಟ

ನಮ್ಮ ದೇಶದ ಕೆಲವೇ ತಿಂಗಳುಗಳ ಹಿಂದಿನ ಪರಿಸ್ಥಿತಿಯನ್ನು ಅವಲೋಕಿಸಿದರೆ ನಾವು ಅದೆಂತಹ ಮಧ್ಯ ಕಾಲದಲ್ಲಿ ಜೀವಿಸುತಿದ್ದೇವೆಂದು ಭಾಸವಾಗುತ್ತದೆ ಅದಕ್ಕಿಂತಲೂ ಮುಂಚೆ ಅಂದರೆ ಯುದ್ಧ ಕಾಲದಲ್ಲಂತೂ ನಾಗರೀಕ ಸ್ವಾತಂತ್ರ್ಯವು ಕಾಡುಪಾಲಾಗಿಯೇ ಇತ್ತೆಂದರೆ ಅತಿಶಯವಲ್ಲ. ಸಾಮಾನ್ಯ ಒರ್ವ ಪೋಲಿಸ್ ಕಾನ್ಸೇಬಲನಿಗೆ ಹಲವಾರು ವ್ಯಕ್ತಿಗಳ ಜೀವಗಳ ಮೇಲೆ ಅಧಿಕಾರದ ಹಕ್ಕಿದ್ದಂತೆ ತೋರುತಿತ್ತು. ಅವರ ಕಡೆಯಿಂದ ಅದೆಂತಹ ಬರ್ಬರೀ ಕೃತ್ಯಗಳೂ ಜರಗಿಸಲ್ಪಟ್ಟರೂ ಶಾಂತಿ ಶಿಸ್ತಿನ ಹೆಸರಲ್ಲಿ ಮನ್ನಿಸಲ್ಪಡುತಿದ್ದವು ಜಾತೀಯ ಪಕ್ಷಪಾತಗಳೂ, ಲಂಚಗುಳಿತನವೂ ಇದರಿಂದ ತಾಂಡವವಾಡುವಂತಾಯಿತು

ಹೆಚ್ಚೇಕೆ ಒರ್ವ ಗ್ರಾಮಾಧಿಕಾರಿಗೆ ಗವರ್ನರನಿಗಿಂತಲೂ ಮಿಗಿಲಾದ ಅಧಿಕಾರ- ತನ್ನ ಗ್ರಾಮಸ್ಥರ ಮೇಲ ಹೊಸ ರಾಜ್ಯಾಂಗ ರಚನೆಯಲ್ಲಿ ಇವಕ್ಕೆಡೆಯಿರಬಾರದು ಈ ಸಂದರ್ಭದಲ್ಲಿ ಪ್ರಜೆಗಳ ಹೊಣೆಯಾದರೂ ಮಹತ್ವದಿದೆ ಸ್ವಾತಂತ್ರ್ಯದ ಸದುಪಯೋಗ ಮಾಡಿ ಶಾಂತಿ ನೆಮ್ಮದಿಯ ಜಗತ್ತಿನ ನಿರ್ಮಾಣಕ್ಕಾಗಿ ಹೆಣಗಬೇಕಾದುದು ನಮ್ಮ ಧ್ಯೇಯವಾಗಿರಬೇಕು ಸಂಕುಚಿತ ಆಚಾರ ವಿಚಾರಗಳಿಂದ ನಮ್ಮ ಭಾವನೆಗಳು ಸಮಸ್ತ ದೇಶದ ಮಾತ್ರವಲ್ಲ ಅಖಿಲ ಮಾನವ ಕೋಟಿಯ ಶ್ರೇಯಸ್ಸಿನ ವಿಶಾಲ ದೃಷ್ಟಿಕೋನವನ್ನು ಮುಚ್ಚಾಗಿರಿಸುವಂತಾಗಬಾರದು

ಅಮೇರಿಕನ್ ರಾಜ್ಯ ಘಟನೆಯು ನಾಗರೀಕರಿಗೆ ಸರ್ವ ವಿಧದ ಹಕ್ಕು ಬಾಧ್ಯತೆಗಳನ್ನು ಕೊಡಲು ವಚನವಿಯುತ್ತದೆನ್ನುವ ನಿಜ ಆದರೆ ಆ ವಚನವನ್ನು ಕಾರ್ಯರೂಪಕ್ಕೆ ತಂದು ಪೂರೈಸುವ ಕರ್ತವ್ಯವಾದರೂ ಅಮೇರಿಕನ್ ಪ್ರಜೆಗಳ ಪಾಲಿಗೆ ಸೇರಿದ್ದು ಈ ನಮ್ಮ ದೇಶದಲ್ಲಿ ಹಲವು ರಾಜಕೀಯ ಪಕ್ಷ ಪಂಗಡಗಳು ಒಂದೇಸಾರಿ ತಲೆ ಎತ್ತುವ ಸಂಭವವಿದೆ ಆದರೆ ಯಾವ ಪಕ್ಷವೂ ತನ್ನ ಉದ್ದೇಶ ಸಾಧನೆಗಾಗಿ ಜನತೆಯನ್ನು ಅರಾಜಕತೆಯ ಭೀಕರ ಅಶಾಂತಿಗೆ ತುತ್ತುಮಾಡುವುದಕ್ಕೆ ತನ್ನ ಸ್ವಾತಂತ್ರ್ಯವನ್ನು ಪ್ರಯೋಗಿಸಬಾರದು ನಮ್ಮೆಲ್ಲ ಚಟುವಟಿಕೆಗಳು ವಿಧಾಯಕ ರೀತಿಯಲ್ಲೇ ಜರಗಬೇಕು ಕೊಂಗ್ರಸಿನ ಸ್ವಾತಂತ್ರ್ಯ ಹೋರಾಟವು ಇದಕ್ಕೊಂದು ಅಮೋಘ ನಿದರ್ಶನವೇ ಆಗಿದೆ

ನಮ್ಮೊಳಗಿನ ವೈರತ್ವ

ಈಗ ದೇಶದ ಹಲವು ಕಡೆಗಳಲ್ಲಿ ಜಾತೀಯ ಮತಾಂಧತೆಯ ವೇಗವು ಹೆಚ್ಚುತ್ತಿದೆ ದೇಶದ ವಿಭಾಗೀಕರಣದಿಂದ ಅನೇಕರ ರಾಗ ದ್ವೇಷಗಳು ಉರಿಯಲಾರಂಭಿಸಿವೆ ಆದರೆ ನಾವು ಇತಿಹಾಸದ ಪ್ರಚಂಡ ಸತ್ಯವನ್ನು ಅಲಕ್ಷಿಸಬಾರದು. ನಮ್ಮ ಹತೋಟಿಯಲ್ಲಿಲ್ಲದ ವಿಶಾದಮಯ ಕಾರಣಗಳಿಂದ, ಸಂದರ್ಭ ವಿಶೇಷ, ಕಾಲಗತಿಯಿಂದ ನಮ್ಮ ದೇಶದಲ್ಲಿಂದು ಅನೇಕ ಮತ ಪಂಥಗಳು ಸ್ಥಾಪ

ಸಮುದ್ರ ಮಂಥನ

ಲೇಖಿಕೆಯರು: ಸುಶೀಲಾ ನಯ್ಯರ

ಹಿಂದುಸ್ಥಾನವನ್ನೆ ತವರೂರಾಗಿ ಮಾಡಿಕೊಂಡ ಇಂಗ್ಲೀಷ ಮನುಷ್ಯರೊಬ್ಬರು ಗಾಂಧೀಜಿಗೆ ಹೀಗೆ ಬರೆದಿದ್ದಾರೆ —

"ರಾಷ್ಟ್ರೀಯ ಕಾರ್ಯದಲ್ಲಿ ಇನ್ನೆಲ್ಲಿಯ ಸುಖ? ನಿಮ್ಮ ಧ್ಯೇಯಗಳಿಗಾಗಿ ನಾನು ಎಲ್ಲಿ ಹೇಗೆ ಕೆಲಸಮಾಡಲಿ? ತನ್ನ ಸೈನ್ಯವನ್ನೆಲ್ಲ ನಿರ್ಭಯವಾಗಿ ಗಾಳಿಗೆ ತೂರಿಬಿಡಲು ಇತಿಹಾಸದಲ್ಲೆಲ್ಲ ಇಂದು ಹಿಂದುಸ್ಥಾನಕ್ಕೆ ಅತ್ಯುಚಿತ ಮುಹೂರ್ತವೊದಗಿತ್ತು ಅದರ ಬದಲಿಗೆ ಇಂದು ಹಿಂದುಸ್ಥಾನದಲ್ಲಿ ಎರಡು ಪ್ರತಿಸ್ಪರ್ಧಿ ಸೈನ್ಯಗಳನ್ನು ಕಟ್ಟುವವರಿದ್ದೇವೆ ಹಿಂದುಸ್ಥಾನ ಅನಿವಾರ್ಯವಾಗಿ ವಿನಾಶದ ಕಡೆಗೆ ಎಳೆಯಲ್ಪಡುತ್ತಿದೆ ಎಷ್ಟು ಸುಲಭ ಸಂಗತಿಯಿದು ಆದರೆ ಸೈನ್ಯಗಳು ಮನುಜ ಕುಲದ ಮೃತ್ಯುಪಂಜರವೆಂದು ಜನರಿಗೇಕೆ ತಿಳಿಯದಾಗಿದೆ? ಈ ಮೃತ್ಯು ಪಂಜರದ ರಚನೆಗಾಗಿ ಹಿಂದುಸ್ಥಾನದಲ್ಲಿ ಬಹಳ ದ್ರವ್ಯವನ್ನು ವೆಚ್ಚಮಾಡಲಾಗುವದು, ಉಳಿದ ಅಲ್ಪಸ್ವಲ್ಪ ಹಣವನ್ನು ಅನೇಕ ದೋಷಸಂಕೀರ್ಣವಾದ ಔದ್ಯೋಗಿಕ ವಿಕಾಸಕ್ಕಾಗಿ ಸುರಿಯಲಾಗುವದು

"ನಿಮ್ಮ ಧ್ಯೇಯಗಳಲ್ಲಿ ವಿಶ್ವಾಸವುಳ್ಳವರು ತಾವು ಯಾವುದಕ್ಕಾಗಿ ಬಾಳಿದರೋ ಅದರಿಂದ ಬದ್ಧವಿರುದ್ಧವಾದ ಈ ಮಾರ್ಗದಿಂದ ತಪ್ಪಿಸಿಕೊಂಡು ತಮ್ಮದೇ ಆದ ಉಪಾಯವನ್ನು ಹುಡುಕಿಕೊಳ್ಳಲಾರರೆ?

"ಈ ಕಗ್ಗತ್ತಲೆ ಸುಂಟರಗಾಳಿಯಿಂದ ಹೊರ ಬಂದು ನಮ್ಮ ಬಾಪುವಾದರೂ ಎಲ್ಲಾದರೊಂದು ಶಾಂತ ಸ್ಥಳದಲ್ಲಿ ನಮ್ಮನ್ನು ಸೇರಿಸಿ ನಮ್ಮ ಹೃದಯಗಳನ್ನು ಅವನ ಮುಂದೆ ತೆರೆದಿಟ್ಟು ಸತ್ಯ ಅಹಿಂಸೆಗಳ ಪ್ರತ್ಯಕ್ಷ ಸೇವೆಗಾಗಿ ಹೊಸ ಕರ್ತವ್ಯ ಮಾರ್ಗವನ್ನು ಕೇಳಲು ಅವಕಾಶ ಮಾಡಿ ಕೊಡಲಾರನೆ? ಈ ರುದ್ರವಿಪ್ಲವದಲ್ಲಿ, ಸತ್ಯದಲ್ಲಿ ವಿಶ್ವಾಸವುಳ್ಳ ಹಲಕೆಲವೇ ಜನರು ನಾವು ನಮ್ಮ ಹರಿಹಂಚಾದ ಸತ್ವವನ್ನು ಶೇಖರಿಸದೆ ಹೋದರೆ ಎಲ್ಲರೂ ಬಿರುಗಾಳಿಯಲ್ಲಿ ನಷ್ಟರಾಗಿ ಹೋದೆವು

ಹೀಗೆ ಮಾಡಲು ಗಾಂಧೀಜಿಗೆ ಬಹಳ ಆನಂದವಾದೀತು ಆದರೆ ಇಂದು ತಾವು ಹೀಗೆ ಮಾಡುವಂತಿಲ್ಲೆಂದು ಅವರಿಗೆನಿಸುತ್ತದೆ ಅವರ ಒಂದೇ ಒಂದು ಆತುರವೆಂದರೆ ಬಿಹಾರಕ್ಕೂ ನೌಖಾಲಿಗೂ ಸಾಧ್ಯವಿದ್ದಷ್ಟು ಬೇಗನೆ ಹೋಗುವದು ಇವೆರನೆಹೊಂದುವಂತಾಗಿದೆ ಇಂದು ನಾವು ಆ ಹಿಂದಿನವರ ತಪ್ಪುಗಳನ್ನು ತಿದ್ದಲು ಪ್ರಯತ್ನ ಮಾಡುವುದರಲ್ಲಿ ಯಾವ ಪುರುಷಾರ್ಥವಿಲ್ಲ

ಈಗಿನ ಪರಿಸ್ಥಿತಿಯಲ್ಲಿ ಎಲ್ಲವನ್ನೂ ಮರೆತು ಮನ್ನಿಸಿ ಮುಂದಿನ ಅಗಾಧ ರಾಷ್ಟ್ರ ಪುನಃ ನಿರ್ಮಾಣದ ಕಾರ್ಯಕ್ಕೆ ನಾವು ಟೊಂಕಕಟ್ಟಬೇಕು. ನಾವೆಲ್ಲರಿಗೂ ಸಮಾನ ಹಕ್ಕು ಸ್ವಾತಂತ್ರ್ಯಗಳನ್ನೀಯಲು ಸಿದ್ಧರಿರಬೇಕು ಮತೀಯ ದ್ವೇಷದಿಂದೊಡಗೂಡಿದವರಾಗಿ ನಾವು ವರ್ತಿಸಿದರೆ ಅದರಿಂದ ಸರ್ವಾಧಿಕಾರಕ್ಕೆಡೆಯಿತ್ತಂತಾಗಿ ಅದರ ದುಷ್ಟ ಪರಿಣಾಮಗಳಿಗೂ ನಾವು ತುತ್ತಾಗಬೇಕಾಗುವುದು ನಮ್ಮ ಅಳಿದುಳಿದ ಸಂಸ್ಕೃತಿಯನ್ನು ಪರಿಪೋಷಿಸಲು ಸಿಕ್ಕಿದ ಸಂಪೂರ್ಣ ಸಂದರ್ಭಗಳಿಗಾಗಿ ಹರ್ಷಿಸಿ ಜಗತ್ತಿನಲ್ಲಿ ನೆಮ್ಮದಿಯೂ, ಮಾನವರೊಳಗೆ ಪರಸ್ಪರ ಸೌಹಾರ್ದವೂ ಉಂಟಾಗುವಂತೆ ಪ್ರಯತ್ನಿಸಬೇಕು.

ಡೂ ಪ್ರದೇಶಗಳಲ್ಲಿರುವ ಅಲ್ಪ ಸಂಖ್ಯಾಕರು, ಕಾಂಗ್ರೆಸ್ ಮತ್ತು ಲೀಗ್ ಮುಂದಾಳುಗಳ ಈಚೆಗಿನ ಹೇಳಿಕೆಯಲ್ಲಿ ಹೇಳಿರುವಷ್ಟು ಸುರಕ್ಷಿತರಾಗಿರುವಂತಾದರೆ ಅವರು ಆನಂದಿತರಾಗಿ ತಿರುಗಿ ಬರುವರು ಈಗಂತೂ ಹಿಮಾಲಯಕ್ಕೆ ತೀರ್ಥಯಾತ್ರೆ ಮಾಡುವಂತೆ ಬಿಹಾರ ನೌಖಾಲಿಗಳಿಗೆ ತೆರಳಲು ಅವರು ಬಯಸುತ್ತಾರೆ ಅದಾದ ಬಳಿಕ ಅವರು ರಚನಾತ್ಮಕ ಕಾರ್ಯಕ್ಕಾಗಿ ಒಂದೆಡೆ ತಳವೂರಿ ತಮ್ಮ ಧ್ಯೇಯಗಳಿಗಾಗಿ ಯಾರು ಆಯುಸ್ಸನ್ನು ಧಾರೆಯೆರೆಯಲು ಸಿದ್ಧರಾಗಿರುವರೊ ಅಂಥ ಸಹಕಾರ್ಯಕರ್ತರೊಂದಿಗೆ ರಾಮರಾಜ್ಯದ ತಮ್ಮ ಕನಸನ್ನು ನನಸಾಗಿ ಮಾಡುವ ಕಾರ್ಯದಲ್ಲಿ ತೊಡಗುವರು ಗಾಂಧೀಜಿ ಯಾವಾಗಲೂ ಮುಖ್ಯವಾಗಿ ಸಮಾಜಸುಧಾಕರು ರಾಜಕೀಯ ಸ್ವಾತಂತ್ರ್ಯವಿಲ್ಲದೆ ಸಮಾಜ ಸುಧಾರಣೆ ಅಸಾಧ್ಯವೆಂದು ಮನವರಿಕೆಯಾದುದರಿಂದಲೇ ರಾಜಕಾರಣದ ಜಂಜಾಟದಲ್ಲಿ ಅವರು ಎಳೆಯಲ್ಪಟ್ಟರು ಈಗ ರಾಜಕೀಯದಾಸ್ಯ ವಿಮೋಚನೆಯಾದಂತೆ ತೋರುವದರಿಂದ ಅವರ ಜೀವನದ ನಿಜವಾದ ಕಾರ್ಯಕ್ಕೆ ಅವರು ಮ... ಸ್... ಆಗಸ್ಟ 9, 1942 ಆ ದುರ್ದಿನದ ... ಗಾಂಧೀಜಿಯನ್ನೂ ಬೇರೆ ಮುಂದಾಳುಗಳನ್ನೂ ಸೆರೆಮನೆಗೊಯ್ಯುತಿದ್ದ ರೈಲುಗಾಡಿಯಲ್ಲಿ ದಿವಂಗತ ಸತ್ಯಮೂರ್ತಿಯವರು ಗಾಂಧೀಜಿಗೆ ಹೇಳಿದ್ದು ಬಾಪು ನಿಮ್ಮ ನಿಜವಾದ ಕಾರ್ಯ ಹಿಂದುಸ್ಥಾನ ಸ್ವಾತಂತ್ರ್ಯವಾದಾಗಲೆ ಮೊದಲಾಗುವದು " ಹಿಂದುಸ್ಥಾನವಿಂದು ಸ್ವಾತಂತ್ರ್ಯದ ಹೊಸ್ತಿಲಲ್ಲಿದೆ ವಿಭಜನೆಯಿಂದೊದಗಿದ ಆಘಾತ ಗಾಂಧೀಜಿ ಯಾವುದಕ್ಕಾಗಿ ಬಾಳಿದರೆೊ ದುಡಿದರೊ ಅದನ್ನೆಲ್ಲ ನಾಶವಾಡಿಬಿಡಬಹುದೆ? ಇಡಿ ಜಗತ್ತಿನ ಕಣ್ಣುಗಳು ಹಿಂದುಸ್ಥಾನದತ್ತ ತಿರುಗಿವೆ ಪುರಾಣದ ಸಮುದ್ರ ಮಂಥನದಲ್ಲಿ ಅನೇಕ ಅನರ್ಘ್ಯ ವಸ್ತುಗಳೊಡನೆ ವಿಷವೂ ಅಮೃತವೂ ಉದಿಸಿದವು ದೇವಾಸುರರು ಎಲ್ಲ ಅನರ್ಘ್ಯ ವಸ್ತುಗಳನ್ನು ಹಂಚಿಕೊಂಡರು ಆದರೆ ಜಗತ್ತನ್ನು ಉಳಿಸುವ ಸಲುವಾಗಿ ವಿಷವನ್ನು ನುಂಗುವದು ಶಿವ ಭಗವಂತನ ಪಾಲಿಗೆ ಬಂತು ಹಿಂದುಸ್ಥಾನದ ಸ್ವಾತಂತ್ರ್ಯದ ಮಹಾ ಸಮರವನ್ನೂ ಸಮುದ್ರಮಂಥನಕ್ಕೆ ಹೋಲಿಸಬಹುದು ಅದು ಸ್ವಾತಂತ್ರ್ಯಾಮೃತವನ್ನೂ ವಿಭಜನೆಯ ವಿಷವನ್ನೂ ಹಡೆಯಿತು ಆ ವಿಷವನ್ನು ನುಂಗಬೇಕಾಗಿ ಬಂದವರು ಹಲವರಿದ್ದಾರೆ ಪುರಾಣದ ಶಿವನಂತೆ ಈ ಅಪಾಯಕರ ಪೇಯವನ್ನು ಕುಡಿದವರು ಇನ್ನಷ್ಟು ಬಲಿಷ್ಠರಾಗಲೆಂದು ಹಾರೈಸೋಣ

— ಕರ್ಮವೀರ ಹರಿಜನ ಪುರವಣಿ

ಆಶ್ಚರ್ಯವಾದ ಸಿದ್ಧಿ ಯಂತ್ರ

ಅದ್ಭುತ ಶಕ್ತಿಯುಳ್ಳ ಈ ಗುಪ್ತ ವಶೀಕರಣ ಯಂತ್ರಧಾರಣದಿಂದ ನಿಮ್ಮ ಇಚ್ಛಿತ ಕಾರ್ಯಗಳೆಲ್ಲ ನೆರವೇರುವುವು ಇದನ್ನು ಧರಿಸಲು ಯಾವ ತಪಸ್ಸಿದ್ಧಿಯೂ ಬೇಕಾಗಿಲ್ಲ ಇದು ನಿಮಗೆ ಐಶ್ವರ್ಯವನ್ನು ಕೊಟ್ಟು ನಿಮಗೆ ಬೇಕಾದವರನ್ನು ನಿಮ್ಮ ವಶಪಡಿಸಿ, ಇಚ್ಛಿತ ಕಾರ್ಯಗಳೆಲ್ಲ ವಿಜಯವನ್ನು ಕೊಡುವುದು. ಇದು ರಕ್ಕೆಂದು ಸ್ಥಾಪಿಸುವವರಿಗೆ ರೂ ೧೦೦ ಬಹುಮಾನ

ತಾಮ್ರದ ತಾಯಿತಕ್ಕೆ ರೂ ೨-೮-೦ ಬೆಳ್ಳಿಯ ತಾಯಿತಕ್ಕೆ ರೂ ೪ ಚಿನ್ನದಕ್ಕೆ ರೂ ೧೫

PRET SHILA ASHRAM
No 181
POKATRI SARAI (GAYA)

ಅರುವತ್ತೆರಡು ವರ್ಷಗಳ ಸ್ವಾತಂತ್ರ್ಯ ಹೋರಾಟ!

ಕೊಂಗ್ರೆಸೆಂಬೀ ರಾಷ್ಟ್ರ ಸಂಸ್ಥೆ ಜನತೆಯ ಪರವಾಗಿ ಕಾದಾಟ ಪ್ರಾರಂಭಿಸಿ ಇಂದಿಗೆ 62 ವರ್ಷಗಳಾದುವು ಅಂದು ಬೆರಳೆಣಿಕೆಯಷ್ಟು ಮಂದಿ ದೇಶ ಪ್ರೇಮಿಗಳು ಬಿತ್ತಿದ ಚಿಕ್ಕ ಬೀಜವು ಮೊಳಕೆ ಒಡೆದು ಸಸಿಯಿಂದ ಕ್ರಮೇಣ ವೃಕ್ಷವಾಗಿ ಬೆಳೆದಿಂದು ತನ್ನ ಅಮೋಘ ಫಲವನ್ನು ಬಿಟ್ಟಿದೆ ಈ ಅವಧಿಯಲ್ಲಿ ಎದುರಿಸಿದ ಭರದ ಬಿರುಗಾಳಿಗಳೆಷ್ಟೊ ಸಾರದ ಕೊರತೆಯಿಂದ ತನ್ನ ಭಾರ ಜೀವನದ ಅನುಭವಿಸಿದ ಸಂಕಷ್ಟಗಳೆಷ್ಟೊ ಕರುಣಾರಹಿತವಾದ ದುಷ್ಟವೂ ದುರಿತವೂ ಆದ ಕ್ರಿಮಿ ಕೀಟ ಕೋಟಲೆಗಳನ್ನು ಸಹಿಸಿರುವುದೆಷ್ಟೊ ಅಷ್ಟು ಅವರ್ಣನೀಯವೇ ಆಗಿದೆ

ಆದರೊಂದು ಸಲಕ್ಕೆ ನಟ್ಟ ಬೀಜ ಬೇರು ಬಿಟ್ಟು ಪಟ್ಟ ಶ್ರಮಗಳನ್ನು ಜ್ಞಾಪಿಸಿದರೆ ಇಂದಿನ ಸ್ವಾತಂತ್ರ್ಯೋತ್ಸವದ ಗಂಭೀರತೆಯ ಅರಿವಾಗುವುದು ಕಿರಿದಾಗಿರುವಾಗಲೇ ಸ್ವಾತಂತ್ರ್ಯ ಕಡು ಹಿರಿದಾಧ ಜಂಝಾವಾತಗಳ ಭಾರಿ ದಾಳಿಗಳನ್ನು ಎದುರಿ ಮೆರೆದಿದೆ ಕರುಣಾಶೂನ್ಯವಾದ ಪಾಶವೀ ಶಕ್ತಿಯು ಅದರ ಆಧಾರಭೂತವಾದ ಕದಿರು [illegible] ಗಳನ್ನೆಷ್ಟು ಮುರಿದಿದೆ, ಎಲೆಗಳುದುರಿ ಕೆಲವೊಂದು ಸಲ ಈ ಮರವು ಬರಿಯ ಅಸ್ಥಿಪಂಜರವಾಗಿ ತನ್ನ ಜೀವನ ಸಂಗಿಂದರೂ ಉಂಟು ಅದಕ್ಕೆ ಅಂಟಿ ಅದರ ಸಾರವನ್ನು ಹೀರುತ್ತಿದ್ದ ಅನೇಕ ಗಿಡಬಳ್ಳಿಗಳು ತಾಯಿ ಮರವನ್ನು ನಾಶಮಾಡಲೂ ಹವಣಿಸಿವೆ ಸುದೈವ [illegible] ಬೀಜ ಬಿತ್ತಿದ ಮಣ್ಣು ಸಾರವತ್ತಾದುದರಿಂದ ಆಳಕ್ಕೆ ಹೋದ ಬೇರುಗಳು ಅದೇ ತಹ ದುರಂತ ಕಾಲದಲ್ಲೂ ಮರವನ್ನು ಸ[illegible]ರವಾಗಿರಿಸಿದ ವು [illegible] ಗಕ್ಕೆ ಹೊಸ ಹೊಸ ಸ್ಫೂರ್ತಿಯ ನೀರು [illegible] ರಕಿದಾಕ್ಷಣ ಅದ ಮೇಲಿಂದ ಮೇಲೆ [illegible] ಸಿರಾಶೆಗೊಂಡ ಜನತೆಗೆ ಶಾಂತಿಯ ಆಶ್ರಯವನ್ನು ಕಲ್ಪಿಸಿತು.

ಅದರ ಉದಾತ್ತವೂ ಉದಾರವೂ [illegible] ನೆರಳಿನನಡಿಯಲ್ಲಿ ಉಪಯುಕ್ತವಾದ ಚಟುವಟಿಕೆಗಳು ತಲೆದೋರಿ ಸುತ್ತಲಿನ ಮಾನವ ಕೋಟಿಯಲ್ಲಿ ಪುನಚೇತನವನ್ನುಂಟು ಮಾಡಿದೆ.

★

ಈ ಅವಧಿಯಲ್ಲಿ ಹೊರಗಿನವರೇಕೆ ಕೊಂಗ್ರೆಸಿನೊಳಗಿದ್ದವರೇ ಅದರ [illegible] ಶಕ್ತಿಯನ್ನು ಕುರಿತು ಸಂದೇಹಪಟ್ಟು ಕೊಂಡವರಿದ್ದರು ಇಂದು ಕೊಂಗ್ರೆಸ್ಸಿನ ಅಂತ್ಯ ಉದ್ದೇಶವು ಬಹುಮಟ್ಟಿಗೆ ಸಂಪೂರ್ಣವಾಗಿದ ಸಂಪೂರ್ಣ ಸ್ವರಾಜ್ಯವಲ್ಲದಿದ್ದರೂ ಸ್ವಾತಂತ್ರ್ಯದ ಸಾರವು ಅವರ ವಶಕ್ಕೆ ದೊರಕಿದೆ ಸ್ವಾತಂತ್ರ್ಯವನ್ನು ಹೊಂದಲು ಜಗತ್ತಿನ ಇತರ ದೇಶಗಳಿಗೆ ಹಿಡಿದ ಅವಧಿಯನ್ನು ಪರಿಗಣಿಸುವಾಗ ಭಾರತದ ಸ್ವಾತಂತ್ರ್ಯವು ಅನೆಷ್ಟು ಶೀಘ್ರದಲ್ಲಿ ದೊರಕಿರುವುದೆಂಬ ಸಂಗತಿಯು ನಮ್ಮನ್ನು ಕೌತುಕಗೊಳಿಸದಿರಲಾರದು.

ಏಳೆಂಟು ಶತಮಾನಗಳ ದಾಸ್ಯ ದೆಸೆಯ ನಂತರ ಆಯರ್ಲೆಂಡು ಸ್ವರಾಜ್ಯಗಳಿಸಿತು ಇಟೆಲಿಯು ಕಳೆದೊಂದು ಶತಮಾನದಿಂದ ಸ್ವತಂತ್ರವಾಗಿದೆ. ಅದಕ್ಕಿಂತ ಮುಂಚಿನ ಹದಿನಾಲ್ಕು ಶತಮಾನಗಳ ತನಕ ಒಂದು ಸಲವಾದರೂ ಅದು ಅಖಂಡವಾಗಿ ಸ್ವಾತಂತ್ರ್ಯದ ಸವಿ ಕಂಡಿರಲಿಲ್ಲ ಆಯರ್ಲೆಂಡು ಇಟಲಿಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಭಾರತಕ್ಕಿಂತ ಹೆಚ್ಚಿನ ಸಂದರ್ಭಾನುಕೂಲತೆಗಳಿದ್ದವು. ಅಲ್ಲಿಯ ಜನರಿಗೆ ಒಂದೇ ಭಾಷೆ, ಒಂದೇ ಮತಗಳಿವೆ. ಭಾರತದಲ್ಲಿನ ನುಡಿ, ನೀತಿಗಳಿಗೆ ಲೆಕ್ಕವಿಲ್ಲ ಭಾರತದಲ್ಲಿನ ಜನತೆ ಹಲವು ಜನಾಂಗಿಕ ಮೂಲದವಾಗಿವೆ ಇಟಲಿ ಮತ್ತು ಆಯರ್ಲೆಂಡಿನ ಜನರು ಒಂದೇ ಜನಾಂಗ ಮೂಲವಿದ್ದವರು

ಇಷ್ಟೇ ಇಲ್ಲ. ಭಾರತವು ಬ್ರಿಟಿಷ್ ಮತ್ತು ದೇಶಿ/ಸಂಸ್ಥಾನಗಳಾಗಿ ಮತ್ತೆ ಬೇರೆ ವಿಂಗಡಿಸಲ್ಪಟ್ಟಿದೆ ಈ ಸಂದರ್ಭದಲ್ಲಿ ಸಂಯುಕ್ತವಾದೊಂದೇ ಹೋರಾಟದ ಕಾರ್ಯವು ಅಸಂಭವವೆ ಈ ಹಲವಾರು ತೊಡಕುಗಳನ್ನೂ ಕೊಂಗ್ರೆಸು ತನ್ನ ಉದಾತ್ತ ಧ್ಯೇಯವಾದದಿಂದಲೂ, ತನ್ನ ಮುಂಡಾಳುಗಳ ಅದ್ವಿತೀಯ ಆದರ್ಶದಿಂದಲೂ ಒಗೆದರಿಸಿ ದೇಶದ ತುದಿಯಿಂದ ತುದಿಯ ವರೆಗೆ ಐಕ್ಯತೆ ಸಾಮರಸ್ಯವನ್ನು ಟುವಾಡಿದ ಅಸಾಮಾನ್ಯ ಕೀರ್ತಿಗೆ ಪಾತ್ರವಾಗಿದೆ [illegible] ಬಲ್ಲಿದರೂ ಉಚ್ಚರೂ ನೀಚರೂ ಒಡೆಯರೂ ಆಳುಗಳೂ ಸ್ತ್ರೀಯರೂ ಪುರುಷರೂ [illegible] ವೃದ್ಧರೂ ಒಂದೇ ಧ್ವಜದಡಿಯಲ್ಲಿ [illegible]

[illegible]

★

[illegible]

ವಳಗಳಿಗೂ ಪ್ರೇರಣೆ ಸಿಕ್ಕಿರುತ್ತದೆ. ಕೆಲವೊಂದು ಸಲ ಆ ಚಳವಳದಲ್ಲಿ ಆಯಾಸಪೂರ್ಣವಾದ ಸ್ತಬ್ಧತೆಯುಂಟಾದುದೂ ಹೌದು ಆದರೆ ಅದು ಕೇವಲ ತಾತ್ಕಾಲಿಕವಾಗಿದ್ದು, ಮುಂದಿನ ಹೆಚ್ಚಿನ ಭರದ ಚಳವಳಕ್ಕೆ ಬೇಕಾದ ಚೈತನ್ಯ ಕೊಡುವಂತಹುದೂ ಆಯಿತು

ಸವಿನಯ ಕಾಯದೆ ಭಂಗ ಇಲ್ಲವೆ ಸತ್ಯಾಗ್ರಹ, ಅಸಹಕಾರ, ವಿದೇಶಿ ವಸ್ತು ಬಹಿಷ್ಕಾರ, ತೆರಿಗೆ ನಿರಾಕರಣ ಇವೇ ಸ್ವಾತಂತ್ರ್ಯ ಚಳವಳದ ವಿವಿಧ ರೂಪರೇಖೆಗಳು. ಎಲ್ಲವೂ ಅಹಿಂಸಾತ್ಮಕವಾಗಿ ನಿರ್ವಹಿಸಲ್ಪಟ್ಟದ್ದು ಜಗತ್ತಿನ ಇತಿಹಾಸದಲ್ಲೇ ಅತ್ಯಪೂರ್ವವಾದ ಸಂಗತಿ ಸ್ವಾವಲಂಬನವು ರಾಷ್ಟ್ರ ಚಳವಳದ ಅನಿವಾರ್ಯ ಚಟುವಟಿಕೆ ಗ್ರಾಮೋದ್ಧಾರ, ಅಸ್ಪೃಶ್ಯತಾ ನಿವಾರಣ, ಮದ್ಯಪಾನ ನಿರೋಧಗಳು ಇದರ ಉಪ ಚಟುವಟಿಕೆಗಳಾದರೂ ಜನಾಂಗ ಪುನರ್ನಿರ್ಮಾಣದ ಅಖಂಡ ಆಧಾರಸ್ತಂಭಗಳಿವು

ಅನಕ್ಷರತೆ ಜನತೆಯೇ ಹೆಚ್ಚಾಗಿರುವ ಜ[illegible] ಗದಲ್ಲಿ ಸಾಮೂಹಿಕ [illegible] ಜಾಗೃತಿಯುಂಟುಮಾಡಿದ್ದು ಕೊಂಗ್ರೆಸಿನ ಹೆಚ್ಚಿನ [illegible] ಅಗಾಧ ಸಾಹಸ ಇಂತಹ ಸಾಹಿ[illegible] ಜೀವದ ಹಂಗು ತೊರೆದು [illegible] ಸಿದ್ಧರಾದುದು [illegible] ಅತ್ಯುನ್ನತ ಧ್ಯೇಯ ಪರಿಶುದ್ಧತೆಯ [illegible] ಕೆಲವು ಸ ದರ್ಗಗಳಲ್ಲಿ ಸತ್ಯಾಗ್ರಹಿಗಳು ಭೀಕರ ದಬ್ಬಾಳಿಕೆಯನ್ನೂ ಎದುರಿಸಬೇಕಾಯಿತು [illegible] ಇಂತಹ ಹುತಾತ್ಮರುಗಳ ಅಸಾಮಾನ್ಯ ಧೈರ್ಯ ಸ್ಥೈರ್ಯಗಳ ಮೇಲೆ ಇಂದಿನ ಸ್ವಾತಂತ್ರ್ಯ ಕಟ್ಟಡವು ಕಟ್ಟಲ್ಪಟ್ಟಿತು

[illegible] ತಮ್ಮ [illegible] ಗಳನ್ನು ಬಿಟ್ಟು [illegible] ಪಟ್ಟಾಗ [illegible] ಗಕ್ಕೆ [illegible] ಣೀಯವಾದ ಸಂಗತಿ. ಕೊಂಗ್ರೆಸಿನ ಸೂತ್ರಧಾರಿಗಳಾಗಿ ತ್ಯಾಗ ಮೂರ್ತಿಗಳೂ, ಸ್ವಾರ್ಥರಹಿತರೂ, ಆದರ್ಶ ಕರ್ಮವೀರರು ಇದ್ದುದರಿಂದ ಅನಂತವಾದೀ ಸ್ಫೂರ್ತಿಗೆ ಹುರುಪು ಕೊಟ್ಟಿತು.

ಸ್ವಾತಂತ್ರ್ಯ ಚಳವಳವನ್ನು ನಿರ್ಮೂಲಿಸಲು ಬ್ರಿಟಿಷ್ ಸರಕಾರವು ಕೈಕೊಂಡ ಧೋರಣೆಗಳಿಗೆ ಲೆಕ್ಕವಿಲ್ಲ. ವ್ಯಾಸರಾಯ ಗವರ್ನರುಗಳಿಗೆ ವಿಶೇಷಾಧಿಕಾರಗಳು, ಪೋಲಿಸರ ಅತ್ಯಾಚಾರಗಳಿಗೆ ವಿಶೇಷ ಸ್ಥಾನಗಳು, ಕುಕೀರ್ತಿವಂತ ಕಲ್ಲು ಹೃದಯದ ಅಧಿಕಾರಿಗಳಿಗೆ ಘನತೆಯ ಪದವಿದಾನಗಳು, ಜನತೆಯ ಅನ್ನವನ್ನುಂಡು ಜನತೆಯ ಮೇಲೇ ಕೈಯೆತ್ತುವ ಖೂಳ ಪ್ರವೃತ್ತಿಯನ್ನು ತಮ್ಮ ಸಿಬಂಧಿಯಲ್ಲಿ ಪ್ರೇರೆಪಿಸಿ ಬ್ರಿಟಿಷರು ಸ್ವಾತಂತ್ರ್ಯ ಚಳವಳಕ್ಕೆ ಕಲ್ಲು ಹಾಕ ಪ್ರಯತ್ನಿಸಿದರು ಆದರೆ ಎಲ್ಲವೂ ಉರಿವ ಬೆಂಕಿಗೆ ತುಪ್ಪಹೊಯ್ದಂತಾಯಿತು.

★

ಇಂದು ಮಜೂರ ವರ್ಗವೂ ದಳಿತ ವರ್ಗವೂ ಜಾಗೃತವಾಗಿ ನಿಂತಿರುವುದಕ್ಕೆ ಕೊಂಗ್ರೆಸ್ಸೇ ಕಾರಣ ಈಗ ರಾಷ್ಟ್ರ ಮುಖಂಡರ ಅಗ್ನಿ ಪರೀಕ್ಷೆಯ ಕಾಲ ಆರಂಭವಾಗುತ್ತದೆ ಮಜೂರ ಬಂಡವಳುದಾರರನ್ನು, ಜಮೀನ್ದಾರ ರೈತನನ್ನೂ, ಅಸ್ಪೃಶ್ಯರನ್ನು ಹಿಂದುಳಿದವರನ್ನು ಅವರು ಹೇಗ ಸಂತೃಪ್ತಿಗೊಳಿಸುವರೆಂಬುದರ ಮೇಲ ರಾಷ್ಟ್ರದ ಭಾವಿ ಕಲ್ಯಾಣವು ಹೊಂದಿಕೊಂಡಿದೆ. ಅವರ ದೇಶಭಕ್ತಿ ವಿವೇಕ, ನ್ಯಾಯಪ್ರಿಯತೆ, ಸಮಾನ ದೃಷ್ಟಿಗಳ ಸತ್ವಪರೀಕ್ಷೆಯ ಸಮಸ್ಯೆಗಳ ಶೀಘ್ರದಲ್ಲೇ ಅವರನ್ನೆದುರಿಸುವವು ಅದೇ ಸಮಯಕ್ಕೆ ಒಂದು ಸಮಾಧಾನದ ಸಂಗತಿ ಪರಕೀಯವೂ ಪಾಶವೀ ಶಕ್ತಿಪ್ರೇರಿತವೂ ಆದೊಂದು ದುರ್ಗಮ ಸಾಮ್ರಾಜ್ಯಶಾಹಿಯನ್ನು ಮುರಿದಿಕ್ಕಿದ ಶಕ್ತಿ ಸ್ವಕೀಯವೂ ಸ್ವದೇಶದ್ದೂ ಆದ ಸಮಸ್ಯೆಗಳನ್ನೂ ಎಷ್ಟು ಸೌಲಭ್ಯದಿಂದ ಬಗೆಹರಿಸುವುದೆಂದ [illegible] ವಾಗಿ ಹಾರೈಸಬಹುದು

ಪ್ರಯಾಣಿಕರಿಗೆ ಸೂಚನೆ.

[illegible] ಕೆಲವು ಬಸ್ಸುಗಳಿಗೆ [illegible] ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ [illegible], ಮತ್ತು ಗೇಸು ಬಸ್ಸುಗಳು ಸ್ವಲ್ಪ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಯಾಂಡಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸ ಧ್ಯಸಿದ್ದ ಸ್ಥಳದ ವರೆಗೆ ಮಾತ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗೆ ಮಂಗ್ಳೂರು-ಮುಲ್ಕಿ ಲೈನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ ಮಾಡುವ ಸ ಭ ಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು.

ಅಲ್ಲದೆ ಮದ ನೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಡುತ್ತಾರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

ಆಮಂತ್ರಣ

ನೀವು ಈ ವರೆಗೆ ನಮ್ಮ ಬೇಂಕಿನ ಪೋಷಕರಾಗಿ ನಮ್ಮ ಅನೇಕ ಉಪಯೋಗಿ ಚಟುವಟಿಕೆ ಮತ್ತು ಕಾರ್ಯಕಲಾಪಗಳ ಪ್ರಯೋಜನವನ್ನು ಪಡೆಯುತ್ತಿಲ್ಲವಾದರೆ, ಒಮ್ಮೆ ನಮ್ಮ ಬೇಂಕಿಗೆ ಬಂದು ಒಂದು ಖಾತೆಯನ್ನು ತೆರೆಯಲು ನಿಮ್ಮನ್ನು ಸವಿನಯವಾಗಿ ಆಮಂತ್ರಿಸುತ್ತೇವೆ.

ಬೇಂಕಿನಲ್ಲಿ ಕೆಲಸ ಮಾಡುತ್ತಿರುವ ನಮ್ಮಲ್ಲನೇಕರ ಪೂರ್ಣ ಪರಿಚಯವು ನಿಮಗೆ ಈ ಮೊದಲೇ ಇರಬಹುದು, ಅಥವಾ ನಮ್ಮ ಬೇಂಕಿಗೆ ನಿಮ್ಮ ಪರಿಚಯವನ್ನು ಅಭಿಮಾನ ಮತ್ತು ಸಂತೋಷದಿಂದ ಮಾಡಿ ಕೊಡಲಿಚ್ಛಿಸುವ ಮಿತ್ರರು ನಿಮಗೆ ಇದ್ದೇ ಇರುವರೆಂದು ನಾವು ದೃಢವಾಗಿ ನಂಬುತ್ತೇವೆ.

ಖಾತೆ ತೆರೆಯುವುದು ಎಷ್ಟು ಸರಳವೋ ಅಷ್ಟೇ ಸುಲಭ. ಬೇಂಕಿನ ವ್ಯವಹಾರ ನಿಬಂಧನೆಗಳು ಸ್ವಲ್ಪವಿವೆ. ಅವುಗಳ ಒಂದು ಪಟ್ಟಿಯನ್ನು ಓದಿನೋಡಿದರೆ ಅವೆಷ್ಟು ಸದುಪಯೋಗಕಾರಿ ಮತ್ತು ಸುಲಭವೆಂದು ನೀವೇ ತಿಳಿಯುವಿರಿ. ಇದಾದ ನಂತರ ಛಾಪಿಸಲ್ಪಟ್ಟ ಒಂದು ಕಾರ್ಡು ಮತ್ತೊಂದು ಖಾತೆ ತೆರೆಯುವ ಫೋರ್ಮನ್ನು ಪಡಕೊಂಡು ಕಾರ್ಡಿನ ಮೇಲೆ ನಿಮ್ಮ ಮಾದರಿ ಸಹಿಯನ್ನು ಹಾಕಿ, ಫೋರ್ಮನ್ನು ಸರಿ ಮಾಡಿ ಇವನ್ನು ನೀವು ಮೊದಲಾಗಿ ಇಡಲಿಚ್ಛಿಸುವ ಹಣದೊಂದಿಗೆ [illegible] ಬಹುವಾಗಿರಬೇಕೆಂದಿಲ್ಲ. ನಿಮ್ಮ ಹೆಸರ ಬರೆದುಕೊಟ್ಟು ನಿಮ್ಮ ಹಣದ ವಿವರಗಳನ್ನು ಬರೆದುಕೊಡುವ ಪಾಸ್ ಪುಸ್ತಕವೊಂದನ್ನು ಪಡಕೊಂಡರಾಯಿತು. ಈ ಪುಸ್ತಕದಲ್ಲಿ ಜಮಾ ಬರೆದುಕೊಟ್ಟ ಪ್ರತಿಯೊಂದು ಮೊಬಲಗಿಗೂ ಅದೇ ರಶೀದು.

ಬೇಂಕಿನ ಗ್ರಾಹಕರಾದನಂತರ ಅನೇಕ ರೀತಿಗಳಿಂದ ನಿಮಗೆ ನಾವು ಸಹಾಯಕರಾಗಬಹುದೆಂಬುದನ್ನು ನೀವೇ ಮನಗಾಣುವಿರಿ!

ಸ್ಥಾಪನೆ: ೧೯೦೬

CANARA BANK

INCORPORATED IN BRITISH INDIA LIMITED LIABILITY OF MEMBERS LIMITED

ಕೆನರಾ ಬೇಂಕ್ ಲಿಮಿಟೆಡ್.

Edited, Printed & Published by A. S. Kamath at the Sharada Press, Car Street, Mangalore.

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 22—8—1947 [ಸಂಚಿಕೆ 34]

ಪಾರಾರತ್ರ್ಯ ವರದಿ ವಿಮರ್ಶೆ

ಎಂಥ ಸ್ವಾತಂತ್ರ್ಯ?

ನಾವು ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಮುಗಿಸಿದೆವು ಆದರೆ ನಮಗೆ ಸಿಕ್ಕಿದುದು ನಿಜವಾದ ಸ್ವಾತಂತ್ರ್ಯವಲ್ಲವೆಂದು ಸಂದೇಹಪಟ್ಟುಕೊಳ್ಳುವವರಿದ್ದಾರೆ ಹೌದು, ನಮಗೆ ಸಿಕ್ಕಿದುದು ಡೊಮಿನಿಯನ್ ಸ್ಟೇಟಸ್ ಎಂಬ ಸಾಮಂತ ಸ್ವರಾಜ್ಯ, ಸಂಪೂರ್ಣ ಸ್ವರಾಜ್ಯವಲ್ಲ ಆದರೆ ಈ ಡೊಮಿನಿಯನ್ ಸ್ಥಾನ ಮಾನವು ಸಂಪೂರ್ಣ ಸ್ವರಾಜ್ಯಕ್ಕಿಂತ ಏನೂ ಕಡಿಮೆಯಿರುವುದಿಲ್ಲ ನಾವು ಸ್ವೇಚ್ಛೆಯಿಂದ ಬ್ರಿಟಿಷ್ ಸಾಮಂತ ರಾಜ್ಯ ಸಂಘದ ಸದಸ್ಯರಾಗಿರುತ್ತೇವೆಯೇ ಹೊರತು, ಅದರಲ್ಲಿ ಯಾವ ತರದ ಬಲಾತ್ಕಾರದ ಪ್ರಸಂಗವೂ ಇರುವುದಿಲ್ಲ ಬ್ರಿಟಿಷ್ ಪಾರ್ಲಿಮೆಂಟಿಗೆ ನಮ್ಮ ವ್ಯವಹಾರದಲ್ಲಿ ಎಳ್ಳಷ್ಟೂ ಕೈವಾಡವಿರುವುದಿಲ್ಲ ನಾವು ಇಚ್ಛೆಪಟ್ಟಾಗ ಬ್ರಿಟಿಷ್ ಕೂಟದಿಂದ ಸಂಪೂರ್ಣ ಪ್ರತ್ಯೇಕವಾಗಬಹುದು ಆದುದರಿಂದ ನಾವು ಸಂಪೂರ್ಣ ಸ್ವತಂತ್ರರೆಂದೇ ಪರಿಗಣಿಸಬೇಕು.

ಸದುಪಯೋಗ

"ಬ್ರಿಟಿಷ್ ಅಧಿಕಾರವು ಅಂತ್ಯವಾಗುವ್ವಕೇ ಸಂಪೂರ್ಣ ಸ್ವರಾಜ್ಯದ ಅರ್ಥವೇನು?" ಎಂದೊಂದು ಸಲ ನಮ್ಮ ಸ್ವಾತಂತ್ರ್ಯ ಹೋರಾಟದ ಪಿತಾಮಹರೆನಿಸಲ್ಪಡುವ ಮಹಾತ್ಮಾ ಗಾಂಧಿಯವರು ಪ್ರಶ್ನಿಸಿದ್ದರು ಅದಕ್ಕಾಗಿಯೇ ಅವರು "ನನಗೆ ಸಬರಮತಿಗಿಂತಲೂ ನೌಕಾಲಿ ಹತ್ತಿರವಾಗಿದೆ" ಎಂದು ಸಂಕೇತಾರ್ಥದಲ್ಲಿ ಅಂದಿದ್ದರು ನಾವು ಸ್ವತಂತ್ರರಾಗಿದ್ದೇವೇನೊ ನಿಜ ಆದರೆ ಹೊಂದಿದ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಆವಶ್ಯಕವಿರುವ ಐಕ್ಯತೆಗೆ ನಮ್ಮಲ್ಲಿಂದು ಲೋಕವುಂಟಾಗುವ ಲಕ್ಷಣಗಳು ಮಹಾತ್ಮರ ಸೂಕ್ಷ್ಮ ವಿಚಾರಕ್ಕೆ ತಿಳಿದಿವೆ. ಅವರು ಇಂದಿನ ವಾತಾವರಣದಲ್ಲಿ ಹಿಂಸೆಯ ವಾಸನೆಯನ್ನು ಘ್ರಾಣಿಸಿದ್ದಾರೆ ಆದುದರಿಂದಲೇ ಅವರಿಗೆ ಸಬರಮತಿಗೆ ಹೋಗುವ ಸುಕಾಲವೆಂದಿಲ್ಲ ಅವರ ಕರ್ಮಪಥವು ಅವರನ್ನು ನೌಖಾಲಿಯಂತಹ ಘೋರ ಜಾತ್ಯಂಧತೆಯ ನಂಜು ಪ್ರದೇಶಕ್ಕೆ ಒಯ್ಯುತ್ತಿದೆ.

ಉದ್ವೇಗ ಶಮನ

ಆದುದರಿಂದಲೇ ಅವರು ತಮ್ಮ ಜೀವಮಾನವನ್ನು ಪಾಕಿಸ್ತಾನದಲ್ಲಿ ಕಳೆಯಲು ನಿರ್ಧರಿಸಿರುವರು ಬ್ರಿಟಿಷರು ಬಿಟ್ಟುಹೋಗುವಾಗಲೇ ಮತೀಯ ವೈಷಮ್ಯಗಳು ಸಿಡಿದೇಳಲಾರಂಭಿಸಿವೆ ಲಾಹೋರು ಉಗ್ರ ಜಾತಿ ಕಲಹದಿಂದ ಉರಿಯುತ್ತಿದೆ. ಕಲ್ಕತ್ತೆಯಲ್ಲಿ ಕೊಲೆಗಳು ಕಡಿಮೆಯಾಗುತ್ತಿಲ್ಲ ನೌಖಾಲಿಯ ಅಲ್ಪಸಂಖ್ಯಾಕರಿಗೆ ಬದರಿಕೆಯ ಪತ್ರಗಳು ಹೋಗಿವೆ ಬಂಗಾಲ ಒಕ್ಕೂಟದಲ್ಲಿನ ಅಲ್ಪಸಂಖ್ಯಾಕರಿಗೂ ಅದೇ ವಿಧರಿಕೆಗಳ ಬೇತಾಳ ದರ್ಶನವಾಗುವಂತೆ ಮಾಡಲಾಗಿದೆಯೆಂದೂ ವರದಿಗಳಿವೆ ಯಾವು ನಿಜ ಇಲ್ಲವೆ ಸುಳ್ಳಿದ್ದರೂ ಒಂದು ಸಂಗತಿ ಮಾತ್ರ ನಿರ್ವಿವಾದ, ನಮ್ಮ ಮತೀಯ ತಾಳ್ಮೆ ಆದರ್ಶಗಳ ಭಾವನೆಗಳು ಸಂಕುಚಿತವಾಗಿವೆ ನಾವಿಂದು ನಿಕೃಷ್ಟವಾದ ನಮ್ಮ ಆರ್ಥಿಕ ದುಸ್ಥಿತಿಯನ್ನು ಅಲಕ್ಷಿಸಿ ಕ್ಷುಲ್ಲಕವೂ ಅಗಣನೀಯವೂ ಆದ ಮತೀಯ ಕಚ್ಚಾಟದಲ್ಲಿ ಮಗ್ನರಾಗಿದ್ದೇವೆ. ಇದೂ ದಾಸ್ಯದೊಂದು ದೂರ್ತ ಪರಿಣಾಮವೆನ್ನಬೇಕು. ಆದರೂ ನಮ್ಮ ಜನತೆ ಇನ್ನಾದರೂ ತಮ್ಮ ದೃಷ್ಟಿಕೋನವನ್ನು ವಿಶಾಲಿಸಿ ನಮ್ಮ ತುರ್ತಿನ ಸಮಸ್ಯೆಗಳನ್ನು ಬಗೆಹರಿಸಲು ಒಟ್ಟುಗೂಡಬೇಕು

ಸಮತಾವಾದವೆ?

ನಮ್ಮ ಸ್ವಾತಂತ್ರ್ಯವನ್ನು ಸುವ್ಯವಸ್ಥಿತಗೊಳಿಸುವ ಮಹತ್ತರವಾದ ಕಾರ್ಯವು ನಮ್ಮ ಸಂಯುಕ್ತ ಚೈತನ್ಯವನ್ನು ನಿರೀಕ್ಷಿಸುತ್ತದೆ ಅದೇ ಸಮಯಕ್ಕೆ ಹಲವು ರಾಜಕೀಯ ವಿಚಾರಗಳು ಹಲವು ವಾದ ರೂಪಗಳಲ್ಲಿ ನಮ್ಮ ಗಮನವನ್ನು ಸೆಳೆಯುತ್ತಿವೆ ಜೈಪ್ರಕಾಶರ ಸಮತಾವಾದವೊಂದು ಕಡೆ, ಪಿ ಸಿ ಜೋಶಿಯವರ ಕೊಮ್ಯುನಿಸ್ಟ್ ವಾದವು ಇನ್ನೊಂದು ಕಡೆ ಆದರೆ ಈ ವಾದ ನಿಷ್ಕರ್ಷೆಗಳಲ್ಲಿ ನಾವಿಂದು ಕಾಲಹರಣ ಮಾಡಬೇಕಾಗಿಲ್ಲ ನಮ್ಮ ಸ್ವಾತಂತ್ರ್ಯ ಸಂರಕ್ಷಣೆಯ ಉದ್ಧರಣಕ್ಕಾಗಿ ಟೊಂಕಕಟ್ಟಿ, ಜನಾಂಗದ ಅಭಿವೃದ್ಧಿಯ ಹೊಣೆ ಹೊತ್ತ ಮುಖಂಡರಿಗೆ ನಾವು ನಮ್ಮ ಸಹಕಾರವನ್ನು ಕೊಟ್ಟರೆ ಅವರು ನಮ್ಮನ್ನು ಸತ್ಪಥದಲ್ಲೊಯ್ಯುವರೆಂಬುದು ನಿಸ್ಸಂದೇಹ. ಈ ಸಂದಿಗ್ಧ ಕಾಲದಲ್ಲಿ ನಾವು ಪಕ್ಷ ಪಂಗಡಗಳಾಗಿ ವಿಭಾಗಿತರಾದರೆ ನಮ್ಮ ಸ್ವಾತಂತ್ರ್ಯವು ಕ್ಷಣಿಕವಾಗಿ ನಾವು ಪುನಃವೊಮ್ಮೆ ಪರಕೀಯರ ಪಾದಾಕ್ರಾಂತರಾಗಿ ನಮ್ಮ ಅಚ್ಚುಮೆಚ್ಚಿನೆಲ್ಲವನ್ನೂ ಮತ್ತೊಂದು ದೀರ್ಘ ಕಾಲದ ತನಕ ಕಳಕೊಳ್ಳುವುದರಲ್ಲಿ ಸಂದೇಹವಿಲ್ಲ ಈಗಾಗಲೇ ನಮ್ಮ ಜನಪ್ರಿಯ ಮುಖಂಡರು ಒಂದೊಂದಾಗಿ ತಮ್ಮ ಜನೋದ್ಧಾರದ ಧೋರಣೆಗಳನ್ನು ಸಾರುತ್ತಲಿರುವರು ಅವುಗಳಲ್ಲಿ ಭರವಸೆ ತಾಳಿ ಶ್ರೇಯಸ್ಸಿನ ಪಥದಲ್ಲಿ ಮುಂದರಿಯಲು ನಾವೆಲ್ಲರೂ ಸಿದ್ಧರಾಗೋಣ. ವೈದ್ಯರು ಜಗಳಾಡಿಕೊಂಡರೆ ರೋಗಿಯು ವಿಧಿವಶನಾಗುವನು ವಾದ ನಾಯಕರು ಸೆಣಸಾಡಿ ಬಳಲಿದ ದೇಶವನ್ನು ಭೀಕರ ಸಂಕಷ್ಟಕ್ಕೆ ತುತ್ತುಮಾಡದಂತೆ ಎಚ್ಚರಿಕೆ ವಹಿಸುವುದು ಪ್ರಜೆಗಳಾದ ನಮ್ಮ ಆದ್ಯ ಕರ್ತವ್ಯವಾಗಿದೆ

THE
UNITED INDIA LIFE ASSURANCE
ESTD 1906 CO., LTD. H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE
K. S. Rao Road, Mangalore.

ಕಿರುಸುದ್ದಿ ಸಂಗ್ರಹ

ಅಮೇರಿಕದ ಕೊಲೊರಾಡೋ ಪ್ರಾಂತ್ಯದಲ್ಲಿನ ಒಂದು ರೈತ ಕುಟುಂಬ 120 ದೂರದಲ್ಲಿ ಸಂಭವಿಸಿದ ಭಾರಿ ಬಿರುಗಾಳಿಯ ನ್ನು ನೋಡಲು ಹೋಗಿದ್ದರು. ಹಿಂತಿರುಗಿ ಬರುವಾಗ ಮತ್ತೊಂದು ಬಿರುಗಾಳಿಗೆ ಅವರ ಮನೆ ಹಾರಿಹೋಗಿತ್ತು

★

ಜಪಾನಿನ ಸುರುಮಿ ನಗರದ ಒಂದು ಕೈಗಾರಿಕೆ ಸಂಸ್ಥೆಯವರು ಪಾಶ್ಚಾತ್ಯ ನೃತ್ಯ ಶೈಲಿಗಳನ್ನು ಪ್ರಚಾರ ಮಾಡಲು ನಿರ್ಧರಿಸಿದರು ಈ ನೃತ್ಯಕೂಟಕ್ಕೆ ಬರುವ ಅವಿವಾಹಿತೆಯರು ತಮ್ಮ ತಾಯಂದಿರ ಸಮ್ಮತಿ ಪಡೆಯಬೇಕು. ವಿವಾಹಿತ ಪುರುಷರು ತಮ್ಮ ಪತ್ನಿಯರ ಪರವಾನಗಿ ತರಬೇಕು

★

ಅಮೇರಿಕದ ಸ್ಪ್ರಿಂಗ್‌ಫೀಲ್ಡ್ ಎಂಬಲ್ಲೊಂದು ನಗ್ನ ನಿವಾಸವಿದೆ ಅಲ್ಲಿನ ತರುಣ ತರುಣಿಯರಿಬ್ಬರು ಪ್ರಥಮ ನೋಟಕ್ಕೇ ಪ್ರೇಮಪಾಶದಲ್ಲಿ ಬಿದ್ದು, ಕೂಡಲೇ ಉಡುಪು ಧರಿಸಿ ವಿಹಾರಕ್ಕೆ ಹೊರಟರು

★

ಅಮೇರಿಕದ ಮಿಲಾವುಕಿ ನಗರದ ಇಗರ್ಜಿಯ ಪಾದ್ರಿ ರೆವರೆಂಡ್ ಲೂಯಿಸರಿಗೆ ತಮ್ಮ ಹಳೇ ಪ್ರಾರ್ಥನಾ ಮಂದಿರದ ಮೇಲೆ ಜಿಗುಪ್ಸೆ ಹುಟ್ಟಿ ಹೊಸತೊಂದನ್ನು ಕಟ್ಟಿಸಬೇಕೆಂದು ಹಳೇದಕ್ಕೆ ಬೆಂಕಿಕೊಟ್ಟರು. ಹೊಸ ಇಗರ್ಜಿಯ ಬದಲಿಗೆ ಅವರಿಗೆ 5 ವರ್ಷ ಜೈಲು ಸಿಕ್ಕಿತು.

ಶಾಶ್ವತ ಸಾಮ್ರಾಜ್ಯಶಾಹಿ ಕೆಡಹಿದ ಗಾಂಧಿ

ಹಾವಿನೊಡನೆ ಹೋರಾಡ ಸಿದ್ಧರಾಗಿದ್ದ ಮಹಾತ್ಮ

ಅಮೇರಿಕನ್ ಪತ್ರಿಕೆಯ ಸ್ವಾತಂತ್ರ್ಯ ಸಂದೇಶ

1857ರಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವಾರಂಭವಾಯಿತು. ಸಿಪಾಯಿ ದಂಗೆಯು ಉದ್ರೇಕಗೊಂಡ ಹಿಂದೀ ಸೈನಿಕರ ಬಂಧ ವಿಮೋಚನಾ ಚಳವಳಿ. ಅದರ ಪರಿಣಾಮವಾಗಿ ಈಸ್ಟ್ ಇಂಡಿಯಾ ಕಂಪೆನಿಯು ಸಾಮ್ರಾಜ್ಯವನ್ನಾಳಲು ಅಯೋಗ್ಯವೆಂದು ರುಜುವಾತಾಯಿತು. ಮತ್ತೆ 20 ವರ್ಷಗಳಲ್ಲಿ ಭಾರತ ಸಾಮ್ರಾಜ್ಯವು ಬ್ರಿಟಿಷ ಚಕ್ರಾಧಿಪತ್ಯದೊಳಗೆ ಬಂತು.

"1877ರಲ್ಲಿ ಡಿಲ್ಲಿಯ ಶೃಂಗರಿತ ಪೀಠವೊಂದರಿಂದ ವ್ಯಾಸ್‌ರಾಯ್ ಲಿಟನ್ನರು ವಿಕ್ಟೋರಿಯಾ ಮಹಾರಾಣಿಯನ್ನು ಭಾರತ ಚಕ್ರವರ್ತಿನಿಯಾಗಿ ಸಾರಿದರು. ದೇಶಿ ಅರಸರಲ್ಲಿ ಅಗ್ರಗಣ್ಯರಾದ ಗ್ವಾಲಿಯರಿನ ಸಿಂಧ್ಯರು "ತಮ್ಮ ಆಳ್ವಿಕೆ ಶಾಶ್ವತ ಶಕ್ತಿಯುಕ್ತವಾಗಲಿ" ಎಂದು ಪ್ರಾರ್ಥಿಸಿದರು. 60 ವರ್ಷಗಳ ನಂತರ 1947ರಲ್ಲಿ ಅದೇ ವಿಕ್ಟೋರಿಯಾ ರಾಣಿಯ 'ಮೊಮ್ಮಗನ ಮೊಮ್ಮಗನಾದ ನೌಕಾಧಿಪತಿ ಲೋರ್ಡ್ ಮೌಂಟ್ ಬೇಟನ್ನರು ಆ ಶಾಶ್ವತ ಸಾಮ್ರಾಜ್ಯವನ್ನು ವಿಸರ್ಜಿಸಿ ಆಗಸ್ಟ್ 15ರಂದು ಸ್ವತಂತ್ರ ಭಾರತದ ಅಶೋಕ ಚಕ್ರಾಂಕಿತ ತ್ರಿವರ್ಣ ಧ್ವಜಕ್ಕೆ ವಂದನೆ ಮಾಡಿದರು" ಹೀಗೆಂದು ಅಮೇರಿಕದ ಟ್ರ್ಯಾವಿಸ್ ಪತ್ರಿಕೆಯು ಮಹಾತ್ಮಾ ಗಾಂಧಿಯವರ ಜೀವನ ಚರಿತ್ರೆಯನ್ನು ಸ್ವಾತಂತ್ರ ಸಂಗ್ರಾಮದೊಡನೆ ಪೋಣಿಸಿ ಸಾರಸ್ಯಪರವಾದ ಲೇಖನವೊಂದನ್ನು ಹೀಗೆ ಬರೆದಿರುತ್ತದೆ

1872ರ ಡಿಲ್ಲಿಯಲ್ಲಿ ವಿಕ್ಟೋರಿಯಾ ಮಹಾರಾಣಿಯ ಚಕ್ರವರ್ತಿತ್ವವು ಘೋಷಿಸಲ್ಪಡುವಾಗ ಶಾಶ್ವತವಾಗಿರಲೆಂದು ಪ್ರಾರ್ಥಿಸಲ್ಪಟ್ಟ ಬ್ರಿಟಿಷ್ ಚಕ್ರಾಧಿಪತ್ಯವನ್ನು ನಿರ್ನಾಮ ಮಾಡುವ ಸೊರಗಿದ ಚಿಕ್ಕ 8 ವರ್ಷದ ಬಾಲಕನೊಬ್ಬನು 700 ಮೈಲು ದೂರದ ಪೋರ್‌ಬಂದರ್ ನಗರದಲ್ಲಿ ಒಂದು ಇಂಗ್ಲಿಷ್ ಕವಿತೆಯನ್ನು ಬಾಯಿಪಾಠ ಮಾಡುತ್ತಿದ್ದ ಅದರ ಭಾವಾರ್ಥ ಹೀಗಿತ್ತು

ನೋಡೆಲೊ ಈ ಬೃಹತ್ ಆಂಗ್ಲನನ್ನು
ಆಳುವನವನು ಚಿಕ್ಕ ಭಾರತೀಯರನ್ನು
ಮಾಂಸ ತಿಂದುದೇ ಅವ ಅಷ್ಟು ಜೋರು
ಬೆಳೆದಿಹನು ನೋಡು ಐದು ಮಾರು.

ಬಾಲಕನ ಹೆಸರು ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ ಬಹಳ ಅಂಜಿಕೆಯ ನಮ್ರ ಹುಡುಗ. ಆದರೆ ಅಂದಿನಿಂದಲೇ ಬ್ರಿಟಿಷರ ಮೇಲೆ ಅವನಿಗೆ ತಿರಸ್ಕಾರ ಹುಟ್ಟಿದೆ ಅವನದು ಸಸ್ಯಾಹಾರದ ವೈಷ್ಣವ ಕುಟುಂಬ ಆದರೆ ಆಂಗ್ಲರಂತೆ ಬಲಿಷ್ಠನಾಗಬೇಕೆಂಬ ಬಾಲ್ಯ ಚಾಂಚಲ್ಯದಿಂದ ಆಡಿನ ಮಾಂಸ ಗಾಂಧಿ ಭಕ್ಷಿಸಿ ರುಚಿ ನೋಡಿದ. ರಾತ್ರೆ "ನಿದ್ದೆಯಲ್ಲಿ ನನ್ನ ಹೊಟ್ಟೆಯಲ್ಲಿ ಆಡೊಂದು ಕೂಗಿದಂತೆ ಭಾಸವಾಯಿತು"

ಗಾಂಧಿಯ ಶರೀರ 110 ಪೌಂಡಿಗೂ ಮಿಕ್ಕಿ ಎಂದೂ ಬೆಳೆಯಲಿಲ್ಲವಾದರೂ ಅವರ ದೇಶಭಕ್ತಿಯು ಶ್ರದ್ಧೆ ಅಗಾಧವಾಗಿ ಬೆಳೆಯಿತು " ಚರ್ಚಿಲ್ಲರು 1930ರಲ್ಲಿ ಅವರನ್ನು "ಈ ಅರೆನಗ್ನ ಗಲಾಟೆ ಫಕೀರ'ನೆಂದು ಸಂಭೋಧಿಸಿ ಮತ್ತೆ ಪುನಃ ಅದೇ ಚರ್ಚಿಲ್ಲರು "ಈ ಭಾರತೀಯ ರಾಜಕೀಯ ಮುತ್ಸದ್ಧಿಗಳ ಜೀವಮಾನದಲ್ಲೇ ಸ್ವರಾಜ್ಯ ಸಿಕ್ಕಲಾರದು" ಎಂದಿದ್ದರು

ಇಂದು ಚರ್ಚಿಲ್ ಗಾಂಧಿಗಳಿಬ್ಬರೂ ಜೀವಂತರಿರುವಾಗಲೇ ಭಾರತವು ಸ್ವಾತಂತ್ರ್ಯದ ಹೊಸ್ತಿಲನ್ನು ದಾಟಿತು ಆದರೆ ವಿಕ್ಟೋರಿಯಾ ರಾಣಿಯು ಮಾಡಿದ ಒಂದು ಭಾರತಕ್ಕೆ ಅವಳ ಮರಿಮೊಮ್ಮಗ ಮೌಂಟ್ ಬೆಟನ್ನರು ಎರಡನ್ನು ಮಾಡಿ ತಮ್ಮ ನವ ದಿಲ್ಲಿಯ ರಾಜ ಭವನದೊಳಗೆ ಕೂತು ಹಿಂದೂ ಮುಸ್ಲಿಮರೊಳಗೆ ಹಂಚಿದರು ಭಾರತದಲ್ಲಿ ದೊಂಬಿಯಾಗುವ ಮೊದಲು ಹೆಸರ ಹೋಗಬೇಕೆಂದು ಬ್ರಿಟಿಷರದೊಂದು ಆಸೆ

ಎಲ್ಲರೂ ಸಂತೋಷದಿಂದಿರುವಾಗ ಅದೇ ಡಿಲ್ಲಿಯ ಸೆಗಣಿ ಸಾರಿದ ಭಂಗಿ ನಿವಾಸದಲ್ಲಿ ಗಾಂಧಿ ಮಾತ್ರ ಸಂತಸದಿಂದಿರಲಿಲ್ಲ ಬ್ರಿಟಿಷರು ಬಿಟ್ಟುಹೋದರೂ ದೇಶದಲ್ಲಿ ಹಿಂಸೆಯ ವಾತಾವರಣ ತುಂಬಿದೆ ಎಂದೇ ಅವರ ಖೇದ ಗಾಂಧಿಗೆ ಅಹಿಂಸೆಯು ಜೀವನದ ಪ್ರಥಮ ಸೂತ್ರ ಸತ್ಯಾಗ್ರಹವು ಅತ್ಯುತ್ತಮ ಜೀವನ ಮಾರ್ಗ "ಪರಕೀಯ ಸ್ವಾತಂತ್ರ್ಯ ಹೊರೆಯನ್ನು ತಳ್ಳಿ ಹಾಕುವಾಗಲೇ ಕೆಳಗಿನ ಕೆಸರು ಮೇಲಕ್ಕೆ ಬರಹತ್ತಿದೆ" ಎನ್ನುತ್ತ ಅವರು ಹಿಂದೂ ಮುಸ್ಲಿಮ್ ಶಾಂತತೆಗಾಗಿ ನೌಖಾಲಿಗೆ ಹೋಗಲು ಕಾರ್ಯಕ್ರಮ ಮಾಡುತಿದ್ದರು

ಹಕ್ಕಿಯ ಆದರ್ಶ

23 ವರ್ಷದಲ್ಲಿ ಲಂಡನಿನ ಬೆರಿಸ್ಟರರಾಗಿ ಗಾಂಧಿ ವರ್ಷಕ್ಕೆ 5 ಸಾವಿರ ಪವನು ಆದಾಯಕ್ಕಾಗಿ ದಕ್ಷಿಣ ಆಫ್ರಿಕಕ್ಕೆ ಹೋದರು ಅಲ್ಲಿ ರಷ್ಯದ ಟೊಲ್‌ಸ್ಟೊಯ್ ಗ್ರಂಥವನ್ನು ಓದಿದರು ಅದರಲ್ಲಿ **"ಮೊಟ್ಟೆಯಲ್ಲಿ ಬೆಳೆದ ಮರಿಹಕ್ಕಿಗೆ-ಚೆನ್ನಾಗಿ ಗೊತ್ತಿದೆ— ಮೊಟ್ಟೆಯಲ್ಲಿ ತನಗೆ ಸ್ಥಳವಿಲ್ಲವೆಂದರಿವಾದಾಗ ಅದು ಒಡೆದು ಹೊರ ಬರುವುದು ಸ್ವತಂತ್ರನಾಗಲು ಬಯಕೆಯಿಂದ ಪ್ರೇರಿತನಾದ ವ್ಯಕ್ತಿಯನ್ನು ಯಾವ ಶಕ್ತಿಯೂ ಬಗ್ಗಿಸಲಾರದು."**

ಗಾಂಧಿ ತನ್ನ ಮೊಟ್ಟೆ ಒಡೆದ. ಉತ್ತಮ ಜೀವನಕ್ಕೆ ಶರೀರ ದುಡಿಮೆ ಅತ್ಯಾವಶ್ಯಕವೆಂದವರು ಮನಗಂಡರು. ತಮ್ಮ ವಕೀಲ್ ವೃತ್ತಿಗೆ ತಿಲಾಂಜಲಿ ಕೊಟ್ಟು ಆಫ್ರಿಕದ ಒರಟು ಸರಕಾರದೊಂದಿಗೆ ಸತ್ಯಾಗ್ರಹ ಮಾಡಿದರು, ಅಲ್ಲಿ ಭಾರತೀಯರಿಗೆ ವಿರೋಧವಾಗಿದ್ದ ಕೆಲವು ಶಾಸನಗಳನ್ನು ರದ್ದುಮಾಡುವಂತೆ ಅವರು ಮಾಡಿದರು.

ನಾಲ್ವತ್ತೈದನೇ ವರ್ಷದಲ್ಲಿ ಗಾಂಧಿ ಸ್ವಾತಂತ್ರ್ಯದ ವೀರ ವ್ಯಕ್ತಿಯಾಗಿ ಸ್ವದೇಶಕ್ಕೆ ಮರಳಿ ಒಂದು ಸಲ ತಮ್ಮ ಮೊಣಕಾಲಿನ ದೋತರದಲ್ಲಿ ದೇಶ ಸಂಚಾರ ಮಾಡಿದರು. ಜನರು ಅವರನ್ನು ಮಹಾ ಆತ್ಮನೆಂದು ಕರೆದರು ಹೆಚ್ಚಿನವರು ಅವರನ್ನು ಅವತಾರಿ ಪುರುಷನೆಂದೇ ಪೂಜಿಸಲೂ ಪ್ರಾರಂಭಿಸಿದರು ಅವರು ಅಂದಿನಿಂದ ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನಾರಂಭಿಸಿದರು

ಆಗ ಭಾರತ ರಾಷ್ಟ್ರೀಯ ಕೊಂಗ್ರೆಸು ಕೇವಲ ಒಂದು ಚರ್ಚಾಕೂಟವಾಗಿತ್ತು ಗಾಂಧಿ ಅದನ್ನು ಜನತಾ ಚಳವಳ ಸಂಸ್ಥೆವಾಗಿ ಪರಿವರ್ತಿಸಿದರು ಗಾಂಧಿ ಹೇಳಿದ ತನಕ ಭಾರತೀಯ ರೈತನಿಗೆ ಸ್ವಾತಂತ್ರ್ಯವೇನೆಂದು ತಿಳಿದಿರಲಿಲ್ಲ

ಮೊದಲನೇ ಯುದ್ಧಾನಂತರ ಬ್ರಿಟಿಷ್ ಸರಕಾರ ಕೈಕೊಂಡ ದಬ್ಬಾಳಿಕೆ ನೋಡಿ ಬ್ರಿಟಿಷರು ಸ್ವಂತ ಮನಸ್ಸಿನಿಂದೆಂದಿಗೂ ಸ್ವರಾಜ್ಯ ಕೊಡರೆಂದು ಗಾಂಧಿಗೆ ಖಚಿತವಾಯಿತು ಕೂಡಲೇ ಅವರು ಸತ್ಯಾಗ್ರಹವನ್ನಾರಂಭಿಸಿದರು ಈ ಮೊದಲ ಚಳವಳದಿಂದಲೇ ಬ್ರಿಟಿಷ್ ಸರಕಾರ ತಬ್ಬಿಬ್ಬಾಯಿತು ಆದರೆ ಅವರು ಪ್ರತಿಸಲ ಚಳವಳ ಆರಂಭಿಸಿದಾಗ ಅದು ಹಿಂದೂ ಮುಸ್ಲಿಂ ದೊಂಬಿಯಲ್ಲೇ ಕೊನೆಗೊಳ್ಳುತಿತ್ತು ಕೊನೆಗೆ ಎಲ್ಲರ ಪಾಪಕ್ಕಾಗಿ ಗಾಂಧಿ ಉಪವಾಸ ಕೈಕೊಳ್ಳುತಿದ್ದರು.

ಹೀಗೆ ಪ್ರತಿ ಉಪವಾಸ, ಬಹಿಷ್ಕಾರ ಮತ್ತು ಸೆರೆಮನೆ ವಾಸದಿಂದ (ಗಾಂಧಿಯನ್ನು ಹೊರಬಿಡುವುದೆಂದರೆ ಬ್ರಿಟಿಷರಿಗೆ ಎಲ್ಲಿಲ್ಲದ ಅಂಜಿಕೆ) ಅವರು ಸ್ವತಂತ್ರ ಭಾರತದ ತಮ್ಮ ಗುರಿಗೆ ಹತ್ತಿರ ಹತ್ತಿರ ಬರುತ್ತಿದ್ದರು ಹೀಗೆ ಅವರಿಗೆ ಸ್ವರಾಜ್ಯ ಸಿಗುವುದು ಖಂಡಿತವೆಂದಾಗುವಾಗ ಭಾರತದಲ್ಲಿ ಜಾತೀ ಕಲಹದ ನೆತಗಳೂ ಹೆಚ್ಚತೊಡಗಿದುವು. ~~ಮಹಮ್ಮದಾಲಿ ಜಿನ್ನಾ ಎಂಬವರು ತಾವು~~ ಮುಸಲ್ಮಾನರ ಮುಖಂಡನೆಂದೆನಿಸಿಕೊಂಡರು ಹಲವು ಸಲ ಗಾಂಧಿ ಅದನ್ನು ಒಪ್ಪಬೇಕಾಯಿತು ಇತ್ತ ಕೊಂಗ್ರೆಸ್ಸಿನ ಬಲಿಷ್ಟ ಸಾಂಪ್ರದಾಯವಾದಿಗಳ ಕೈಸೆರೆ ಸರದಾರ್ ಪಟೇಲರೆಂಬ ಉಗ್ರ ವ್ಯವಸ್ಥಾಪಕರ ಒಡೆತನದೊಳಗಾಯಿತು ಗಾಂಧಿ ಹಿಂದೆ ನಿಂತೇ ಕೆಲಸಗೈಯಬೇಕಾಯಿತು

ಹೆಚ್ಚಿನ ಕೊಂಗೆಸ್ ಮುಂದಾಳುಗಳು ಬಂಡವಾಳಶಾಹಿ ಹಿತಚಿಂತಕರೆನಿಸಲ್ಪಡುವಾಗ ಸಕಲ ವರ್ಗ ಮಾನ್ಯರೆನಿಸಲ್ಪಡುವವರು ಒರ್ವ ಸಮತಾವಾದಿ ಮನೋಭಾವನೆಯ ಜವಾಹರಲಾಲ್ ನೆಹರುಗಳು ಮಾತ್ರ ಪ್ರತ್ಯೇಕ ನಮೂನೆಯ ವ್ಯಕ್ತಿಗಳಾಗಿದ್ದರು ಗಾಂಧಿ ಹೇಳುತಿದ್ದರು **"ಸಾಮ್ರಾಜ್ಯಶಾಹಿಯೊಡನೆ ಹೋರಾಡುವುದೆಂದರೆ ಹಾವಿನೊಡನೆ ಹೋರಾಡಿದಂತೆ. ನನಗೆ ಹಾವಿನೊಡನೆ ಹೋರಾಡಬೇಕೆಂದಿದೆ"**

ಕೊನೆಗಂತೂ ಹಾವು ಮೊಟ್ಟೆಯ ಕುಕ್ಕೆಯಿಂದ ಹೊರಬಿದ್ದು ತನ್ನ ಬಿಲ ಸೇರುವಂತಾಯಿತು. ಇನ್ನೂ ವಿಭಾಗಿತ ಭಾರತದ ಸಮಸ್ಯೆಗಳು ಹೇಗೆ ರೂಪುಗೊಳ್ಳುತ್ತವೆಂದು ನೋಡಲಿದೆ. ಜಾತೀಯ ವೈಷಮ್ಯವಂತೂ ಭಾರತದಲ್ಲಿ ಕುದಿಯುತ್ತಿದೆ ಗಾಂಧಿ ತಮ್ಮ ಜೀವಮಾನ ಅದನ್ನು ನೊಂದಿಸಲಿಕ್ಕಾಗಿಯೇ ಮೀಸಲಿರಿಸಿದ್ದೇನೆಂದು ಸಾರಿದ್ದಾರೆ ಬ್ರಿಟಿಷರನ್ನು ಗೆದ್ದ ಭಾರತೀಯನಿಗೆ ಭಾರತೀಯರನ್ನು ಸಮಾಜಾಯಿಸುವುದು ಕಷ್ಟವೇ?

ದ. ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪರವಾಗಿ ವಂದನಾರ್ಪಣೆ

ಜಿಲ್ಲೆಯ ಸರ್ಕಲ್ ಕಾಂಗ್ರೆಸ್ ಕಮಿಟಿಗಳವರೂ, ಪಟ್ಟಣ ಪೇಟೆಗಳವರು ಮಾತ್ರವಲ್ಲದೆ ಹಳ್ಳಿ ಮೂಲೆಗಳಲ್ಲಿನ ಜನರೂ, ರಾಷ್ಟ್ರೀಯ ಸ್ವಾತಂತ್ರ್ಯ ದಿನೋತ್ಸವವನ್ನು, ಅಭೂತಪೂರ್ವ ಸ್ವಯಸ್ಫೂರ್ತಿ ಮತ್ತು ಉತ್ಸಾಹದಿಂದ, ಹಿಂದು ಮುಸಲ್ಮಾನ ಕ್ರೈಸ್ತ ಅಧಿಕಾರಿಗಳು ಅನಧಿಕಾರಿಗಳೆನ್ನದೆ ಸರ್ವರೂ ಸೌಹಾರ್ದದಿಂದ ಸಹಕರಿಸಿ, ಹಿಂದೂ ಮುಂದೂ ಸಂಭವಿಸಲಾರದಷ್ಟು ವಿಜೃಂಭಣೆಯಿಂದ ನಿಜವಾದ ಏಕಮಾತ್ರ ರಾಷ್ಟ್ರೀಯ ಹಬ್ಬವಾಗಿ ಆಚರಿಸಿದುದಕ್ಕಾಗಿ ನಾನು ದ ಕ ಜಿಲ್ಲಾ ಕಾಂಗೆಸ್ ಕಮಿಟಿಯ ಪರವಾಗಿ ಸರ್ವರಿಗೂ ಹೃತ್ಪೂರ್ವಕ ವಂದನೆಗಳನ್ನರ್ಪಿಸುತ್ತೇನೆ

ಇಂದೀಗ ನಾವು ಪಡೆದಿರುವ ಸ್ವಾತಂತ್ರ್ಯವನ್ನು ಜನಸಾಮಾನ್ಯರ ನಿಜವಾದ ಹಿತ ಸಾಧನಗಾಗಿ, ಸಂಕಷ್ಟ ನಿವಾರಣಗಾಗಿ ಉಪಯೋಗಿಸಿ, ಅದು ಪ್ರಜಾರಾಜ್ಯವಾಗಿ ಪರಿಣಮಿಸುವಂತೆ ಮಾಡಲು ಎಂದಿಗಿಂತಲೂ ಹೆಚ್ಚಿನ, ಉತ್ಸಾಹಪರ ಹಾಗೂ ನಿಷ್ಠಾವಂತ ಶ್ರಮ, ಸಂಘಟನೆ ಮತ್ತು ಸೇವೆಯು ಅತ್ಯಗತ್ಯವಾಗಿದೆ ಆದುದರಿಂದ ಜಿಲ್ಲೆಯ ಮಹಾಜನರು, ಈ ಸ್ವಾತಂತ್ರ್ಯೋತ್ಸವದಲ್ಲಿ ಎಷ್ಟೊಂದು ಸ್ವಯಂ ಸ್ಫೂರ್ತಿ ಉತ್ಸಾಹ ಮತ್ತು ಒಕ್ಕಟ್ಟು ತೋರಿಸಿರುವರೋ ಅಷ್ಟೇ ಉತ್ಸಾಹವನ್ನು ಸಂಘಟನಾರೂಪದಲ್ಲಿ ತೋರಿಸಿ, ಮುಂದಿನ ನವನಿರ್ಮಾಣದಲ್ಲಿ ಪಾಲು ಪಡೆದು ನವ, ಬವ್ಯ ಹಾಗೂ ಉಜ್ವಲ ಭಾರತವನ್ನು ನಿರ್ಮಿಸುವ ಹೊಣೆಯನ್ನು ಹೊರುವಂತಾಗಲೆಂದು ಹಾರೈಸುತ್ತೇನೆಂಬದಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳು ತಿಳಿಸುತ್ತಾರೆ

ರೂ. ೧೦೦ ಬಹುಮಾನ

ಅದ್ಭುತ ಶಕ್ತಿ ಸಿದ್ಧ ಕವಚ

ಇದನ್ನು ಇಟ್ಟುಕೊಂಡ ಮಾತ್ರಕ್ಕೇ ಅತೀ ದುಸ್ಸಾಧ್ಯವಾದ ಉದ್ದೇಶವೂ ಸಾಧಿಸುವುದು ಇದನ್ನು ಪರಿಣಾಮಕಾರಿಮಾಡಲೂ ಯಾವ ಕಷ್ಟದ ಶ್ರಮವನ್ನು ವಹಿಸಬೇಕಾಗಿಲ್ಲ. ಯಾವ ತಯಾರಿಯಿಲ್ಲದೆಯೂ ಇದು ಫಲಕೊಡುವುದು ನೀಚಗ್ರಹಗಳನ್ನಿದು ಗೆಲ್ಲುವುದು, ಶತ್ರುಗಳನ್ನು ಗೆದ್ದು ಪರೀಕ್ಷೆ, ವ್ಯಾಪಾರ, ವ್ಯಾಜ್ಯ, ಲಾಟರಿ, ಜೂಜು, ಉದ್ಯೋಗಗಳಲ್ಲಿ ಯಶಸ್ಸುಕೊಡುತ್ತದೆ. ಸಂಪತ್ತಭಿವೃದ್ಧಿಮಾಡಿ, ಸಾಲ ವಿಮೋಚಿಸಿ, ಅಪಾಯಕರ ಕಾಯಿಲೆಗಳನ್ನು ಗುಣಪಡಿಸುತ್ತದೆ. ನಿಮ್ಮನ್ನು ಅದೃಷ್ಟಶಾಲಿ ಮಾಡುತ್ತದೆ ಇದನ್ನು ಸುಳ್ಳೆಂದು ರುಜುವಾತು ಮಾಡಿದವರಿಗೆ 100 ರೂಪ್ಯಾ ಬಹುಮಾನ. ಬೆಲೆ ತಾಮ್ರದಕ್ಕೆ ರೂ. 2 ಬೆಳ್ಳಿದ್ದಕ್ಕೆ ರೂ. 8, ಬಂಗಾರದಕ್ಕೆ ರೂ. 15. ತಕ್ಷಣ ಫಲದ ವಿಶೇಷ ತರದ ಕವಚಕ್ಕೆ (ಶುದ್ಧ ಬಂಗಾರದ ಮುಚ್ಚಿಗೆಯದು) ರೂ. 25—7.

Dukh Haran Ashram, No. 1
P. O. Katri Sarai (Gaya)

ನರೆ ಕೂದಲು ನಿಲ್ಲಿಸಿರಿ

ಬ್ಲೆಕಿನಾ: ಖಂಡಿತವಾಗಿ ನರೆಕೂದಲನ್ನು ಕಪ್ಪಾಗಿ ಪರಿವರ್ತಿಸಿ ನರೆತವನ್ನು ನಿಲ್ಲಿಸುವುದು ಇದಕ್ಕೆ ಮೆದುಳು, ಕಣ್ಣುಗಳನ್ನು ತಂಪು ಮಾಡುವ ಆರೋಗ್ಯದಾಯಕ ಶಕ್ತಿ ಇದೆ ನಮ್ಮ ಫಾರ್ಮಸಿಯ ಹೆಸರು ಬಾಟ್ಲಿಯ ಮೇಲಿಲ್ಲದಿದ್ದರೆ ಅದನ್ನು ತಿರಸ್ಕರಿಸಿರಿ ಕೆಲವೇ ನರೆತ ಕೂದಲುಗಳ ಬಾಟ್ಲಿಗೆ ರೂ 2 8—0 ಅದಕ್ಕಿಂತ ಹೆಚ್ಚಿದ್ದರೆ ರೂ 3 8—0 ಸಂಪೂರ್ಣ ನೆರೆತದಕ್ಕೆ ರೂ 5—0—0

ಕಾಮಕಲಾ: ಸಾಯಂಕಾಲ ಒಂದು ಮಾತ್ರೆ ಸೇವಿಸಿರಿ ಅದು ನಿಮಗೆ ಚಿರ ಆನಂದ ಕೊಟ್ಟು ನಿಮ್ಮ ಶಕ್ತಿ ಸಾಹಸ ಹೆಚ್ಚಿಸುತ್ತದೆ ಒಂದು ಸಲ ಉಪಯೋಗಿಸಿದರೆ ನಿಮಗದರ ಅದ್ಭುತ ಸಾಮರ್ಥ್ಯ ಮರೆಯಲಾರಿರಿ ಇದು ನಿರ್ಬಲತೆ ಹೋಗಲಾಡಿಸುವುದು

16 ಮಾತ್ರೆಗಳಿಗೆ ರೂ 1

ಸತ್ಯದೇವ ಆಯುರ್ವೇದ ಭವನ.

No 15 P. O,
Katri sarai (Gaya)

ನಮ್ಮ ಮಾತು

ಕಳೆದ ವಾರ ನಮ್ಮ ದೇಶದ ಚರಿತ್ರೆಯಲ್ಲಿ ಅತಿ ಮಹತ್ವವಾದುದು. ಜಯಘೋಷ, ಉಜ್ವಲ ಭಾಷಣ, ಮಹಾಪ್ರತಿಜ್ಞೆ, ಇತ್ಯಾದಿಗಳೊಡನೆ ಅದು ಮುಕ್ತಾಯವಾಯಿತು. ಯುದ್ಧವಿಲ್ಲದನೆ, ಒಂದು ಸಂಧಾನವು ನಡೆದುಬಿಟ್ಟಿತು. ಹಿಂದೂದೇಶದ ಬ್ರಿಟಿಷ ಒಡೆಯತನವು ಸ್ನೇಹಮಯ ರೀತಿಯಲ್ಲಿ ಕೊನೆಗೊಂಡಿತು. ಬ್ರಿಟನ್ ಭಾರತ ಸಂಬಂಧವು ಹೊಸ ರೂಪವನ್ನು ಹೊಂದಿತು.

ನಮ್ಮ ದೇಶವು ವಿಭಾಗಿಸಲ್ಪಟ್ಟಿದೆ. ಇದೊಂದು ಬರೆ ರಾಜಕೀಯ ವಿಭಜನೆಯಾಗಿಯೆ ಉಳಿಯಲೆಂದೂ, ಹೃದಯೈಕ್ಯತೆಯು ಮೊದಲಿನಂತೆ ಇರಲೆಂದೂ, ಇಂಡಿಯಾ ಸರಕಾರ ಪ್ರಧಾನಿ ಜವಾಹರಲಾಲ ನೆಹರೂರುಗಳವರಿಂದ ಆಶಿಸಲಾಗಿದೆ. ಮುಂದಿನ ಇಂಡಿಯಾ ಸರಕಾರ ದಡಿಯಲ್ಲಿ ಕೋಮುವಾರು ಬೇದಗಳಿಗೆ ಆಸ್ಪದದೊರಕದೆಂದೂ, ಹಿಂದೂ, ಮುಸ್ಲಿಮ, ಸಿಖ, ಪಾರ್ಸಿ, ಹರಿಜನ—ಎಲ್ಲರೂ ಒಂದೆಯಾಗಿ ಪರಿಗಣಿಸಲ್ಪಡುವರೆಂದೂ, ಎಲ್ಲರಿಗೂ ಸಮಾನ ಹಕ್ಕುಗಳು ದೊರಕಿಸಲಾಗವುವೆಂದೂ ಅವರಿಂದ ಸಾರಲಾಗಿದೆ.

ದೇಶದ ಆಡಳಿತದ ಜವಾಬ್ದಾರಿಯು ನಮ್ಮ ಕೈಗಳಿಗೆ ಬಂದಿದೆ. ದೇಶವನ್ನು ಪ್ರಗತಿಯ ಕಡೆಗೆ, ಸುಭಿಕ್ಷತೆಯ ಕಡೆಗೆ ನಡೆಯಿಸಿಕೊಂಡು ಹೋಗುವ ಜವಾಬ್ದಾರಿಯು ಇದು. ಯುದ್ಧದ ಪರಿಣಾಮವಾಗಿ ಅನೇಕ ಸಮಸ್ಯೆಗಳು ಉಂಟಾಗಿವೆ. ಹಲವು ಬಗೆಯ ಕೊರತೆಗಳು ನಮ್ಮನ್ನು ಪೀಡಿಸುತ್ತಿವೆ. ತಯಾರಿಕೆಯ ಕೊರತೆಯು ಮಾತ್ರವಲ್ಲ ತಯಾರಿಕೆಗೆ ಬೇಕಾದ [illegible] ಕೊರತೆಯೂ ನಮ್ಮನ್ನು ಬಹಳವಾಗಿ ಪೀಡಿಸುತ್ತಿದೆ. ಈ ಕೊರತೆಗಳನ್ನು ನೀಗಿಸುವ, ನಿತ್ಯ ಜೀವನದ ಆವಶ್ಯಕತೆಗಳನ್ನು ಒದಗಿಸಿಕೊಡುವ ಮತ್ತು ಧಾರಣೆಗಳ ಹೆಚ್ಚಳವನ್ನು ನಿಲ್ಲಿಸುವ ಮಹಾ ಕರ್ತವ್ಯವು ನಮ್ಮ ಮೇಲೆ ಬಂದಿದೆ.

ತಯಾರಿಕೆಯ ವೃದ್ಧಿಗಾಗಿ ನಮ್ಮ ಸರಕಾರವು ಬೇಕಾದ ಯೋಜನೆಗಳನ್ನು ಸಿದ್ಧಮಾಡಿರುತ್ತದೆ. ಇದೊಂದು ಅಗಾಧ ಸಮಸ್ಯೆಯು. ಇದನ್ನು ಯಶಸ್ವಿಯಾಗಿ ನಡೆಯಿಸಬೇಕಾದರೆ, ಸರ್ವರ ಸಹಕಾರ ಸಹಾನುಭೂತಿಗಳು ಅತಿ ಅವಶ್ಯವಿವೆ.

ವಿದ್ಯೆಯ ವಿಚಾರದಲ್ಲಿ ನಾವು ಬಹಳ ಹಿಂದುಳಿದಿದ್ದೇವೆ. ನಮ್ಮ ಆರೋಗ್ಯವು ಕೀಳುತರದಲ್ಲಿದೆ. ನಮ್ಮೊಡನೆ ಸಂಪತ್ತಿನ ಕೊರತೆಯು ಇದೆ. ನಮಗೆ ಬೇಕಾದ ಅತಿ ಅಲ್ಪ ಅವಶ್ಯಕತೆಗಳು ಇಲ್ಲಿ ತಯಾರಾಗುತ್ತಿಲ್ಲ. ಸ್ವಾತಂತ್ರ್ಯಕ್ಕಾಗಿ ಬ್ರಿಟನಿನೊಡನೆ ನಡೆಯಿಸಿದ ಹೋರಾಟದಲ್ಲಿ ನಾವು ಯಾವ ತರದ ಯತ್ನಗಳನ್ನೂ, ತ್ಯಾಗಗಳನ್ನೂ ನಡೆಯಿಸಿದ್ದೆವೊ, ಅವುಗಳಿಗಿಂತ ಇಮ್ಮಡಿ ತರದ ತ್ಯಾಗಪೂರ್ವಕ ಯತ್ನಗಳು ಈಗಲೂ ನಡೆಯಬೇಕಾಗಿದೆ.

ಆಹಾರಕ್ಕಾಗಿ ನಾವು ಪರದೇಶಗಳ ಮೇಲೆ ಹೊಂದಿಕೊಂಡಿರುವ ಪರಿಸ್ಥಿತಿಯು ಇಂದಿನದು. ನಮ್ಮ ಆಹಾರವನ್ನು ನಾವು ಹೊರಗಿನಿಂದ ಪಡಕೊಳ್ಳುವುದರಿಂದ ನಮ್ಮಿಂದ ಅತಿ ದೊಡ್ಡ ನಿಧಿಯು ನಮ್ಮ ಕೈಬಿಡುತ್ತಿದೆ. ಇದರಿಂದ ರಾಷ್ಟ್ರೋದ್ಧಾರಕ್ಕೆ ಬೇಕಾದ ನಿಧಿಗಳನ್ನು ಒದಗಿಸುವರೆ ನಮಗೆ ಕಷ್ಟಸಾಧ್ಯವಾಗುತ್ತದೆ. ಈ ಕಾರಣದಿಂದ ನಮ್ಮ ಭೂವ್ಯವಸಾಯ ಸುಧಾರಣೆ ಹೊಂದಿಕೊಂಡು ಇನ್ನಷ್ಟು ಹುರುಪಿನಿಂದ ನಡೆಯಬೇಕಾಗಿದೆ. ಆಹಾರದ [illegible] ನಾವು ಸ್ವಾವಲಂಬಿಗಳಾಗಬೇಕು.

ನಮ್ಮ ಹಳ್ಳಿಗಳು, ಅನೇಕ ವರ್ಷಗಳ ಉಪೇಕ್ಷೆಯಿಂದ, ಇಂದು ಬಹಳ ಕಂಗಾಲು ಸ್ಥಿತಿಗೆ ಬಂದುಬಿಟ್ಟಿವೆ. ಹಳ್ಳಿಗಳ ವ್ಯವಸಾಯವು ಮಾತ್ರವಲ್ಲ, ಅಲ್ಲಿನ ಇತರ ಕೈಗಾರಿಕೆಗಳನ್ನು [illegible] ತಕ್ಕೆ ತರಬೇಕಾಗಿದೆ.

ಇಷ್ಟೆಲ್ಲ ಕಾರ್ಯಗಳ ನಡೆಯಲು [illegible]ಗಳು ಬೇಕು. ಜನಗಳು ನಮ್ಮಲ್ಲಿ ಧಾರಾಳ ಇದ್ದಾರೆ. ಈ ಜನಬಲವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು [illegible] ನಡೆಯಬೇಕು. ದೇಶದಲ್ಲಿ ಪ್ರತಿಯೊಬ್ಬ [illegible] ಹೊಟ್ಟೆಗೆ ಬೇಕಾದ ಉತ್ತಮ ಆಹಾರವನ್ನು, ಮೈಗೆ ಬೇಕಾದಷ್ಟು ವಸ್ತ್ರವನ್ನು ಒದಗಿಸುವ ಕಾರ್ಯ [illegible] ಶೀಘ್ರವಾಗಿ ನಡೆಯಬೇಕಾಗಿದೆ.

ಸ್ವದೇಶದಲ್ಲಿ [illegible] ಪರದೇಶಗಳೊಡನೆ [illegible] ಬೇಕು. ಇಷ್ಟೆಲ್ಲ ಕೆಲಸಗಳಿಗೆ ಯೋಗ್ಯ ವಿದ್ಯಾವಂತ ಶಿಕ್ಷಿತ ಕುಶಲ, ಚತುರ ತರುಣರ ಸೈನ್ಯಗಳೆ ದೇಶಕ್ಕೆ ಅವಶ್ಯವಿವೆ. ಜನತೆಯ ಸಹಕಾರವು ಅತಿ ಅವಶ್ಯವಿವೆ. ಹಾಗಾದರೆ ಮಾತ್ರ ನಾವು ಪ್ರಗತಿಯನ್ನು ಪಡೆಯಬಹುದು.

卐

ಸ್ವಾತಂತ್ರ್ಯ ದಿನದ ಸಂದೇಶ

ಪಂಡಿತ ಜವಾಹರಲಾಲ್ ನೆಹರು

ಪೂರ್ವನಿಶ್ಚಿತ ದಿನ—ಅದೃಷ್ಟವೇ ನಿಶ್ಚಯಿಸಿದ ದಿನ—ಇಂದು ಉದಯಿಸಿದೆ. ತನ್ನ ದೀರ್ಘ ನಿದ್ರೆಯನ್ನು ತೊರೆದು ಸಶಕ್ತ ಸ್ವತಂತ್ರ ಭಾರತವು ತಲೆಯೆತ್ತಿದೆ. ಆಗಬೇಕಾದ ಕೆಲಸ ನಮ್ಮ ಮುಂದೆ ಇನ್ನೂ ಇದೆಯಾದರೂ, ನಾವೀಗ ಒಂದು ದಡ ಸೇರಿದ್ದೇವೆ. ಹೊಸ ಚರಿತ್ರೆಯೊಂದು ಆರಂಭವಾಗಲಿದೆ.

ಭಾರತಕ್ಕೆ ಮಾತ್ರವಲ್ಲ ಏಷ್ಯಕ್ಕೆ, ಅಖಂಡ ಜಗತ್ತಿಗೆ—ಇಂದೊಂದು ಮಹಾನಕ್ಷತ್ರ—ಒಂದು ಸ್ವಾತಂತ್ರ್ಯ ನಕ್ಷತ್ರ—ಉದಯಿಸಿದೆ. ಬಹುಕಾಲದಿಂದ ಬಯಸಿದ ಆಕಾಂಕ್ಷೆಯೊಂದು ಮೂರ್ತಿಭವಿಸಿದೆ. ಈ ನಕ್ಷತ್ರವು ಇನ್ನು ಅಸ್ತಮಿಸದಿರಲಿ! ನಮ್ಮ ಆಕಾಂಕ್ಷೆಯು ಹುಸಿಯಾಗದಿರಲಿ!

ಖೇದವೆಂದು ನಮ್ಮನ್ನಗಲಿದ ನಮ್ಮ ಬಂಧುಗಳನೇಕರು ದುಃಖಿಗಳಾಗಿದ್ದಾರೆ. ಕೆಲವು ಎಡರುಗಳು ನಮ್ಮನ್ನು ಬಾಧಿಸುತ್ತಿವೆ. ಆದರೂ ಇಂದು ನಾವು ಆನಂದಭರಿತರಾಗಿದ್ದೇವೆ. ಸ್ವಾತಂತ್ರ್ಯದ ಜತೆಗೆ ಜವಾಬ್ದಾರಿಗಳು ನಮ್ಮ ಮೇಲೆ ಬೀಳಲಿವೆ ಎಂಬುದನ್ನು ಮರೆಯಬಾರದು. ಆದುದರಿಂದ ಎಡರುಗಳನ್ನು ಎದುರಿಸಲು ನಾವು ಶಿಸ್ತಿನ ಸಿದ್ಧರಾಗಬೇಕು.

ಈ ಸುದಿನದಲ್ಲಿ ನಮ್ಮ ಸ್ವಾತಂತ್ರ್ಯಶಿಲ್ಪಿ ಭಾರತದ ಗತ ಚೈತನ್ಯದ ಪ್ರತಿಮೂರ್ತಿಯಾಗಿ ನಮ್ಮನ್ನುದ್ಧರಿಸಿದ್ದ, ಕತ್ತಲನ್ನು ಹೋಗಲಾಡಿಸಿ ಸ್ವಾತಂತ್ರ್ಯದ ಬೆಳಕ ತೋರಿಸಿದ ನಮ್ಮ ರಾಷ್ಟ್ರಪಿತನ ಕಡೆಗೆ ಹರಿಯುತ್ತಿದೆ ನಮ್ಮ ಚಿತ್ತ. ಹಲವು ಬಾರಿ ನಾವು ಅತನ ಅಯೋಗ್ಯ ಶಿಷ್ಯರಂತೆ ವರ್ತಿಸಿ ಅವನ ಸಂದೇಶದಿಂದ ದೂರ ಸರಿದುದಿದೆ. ಆದರೆ ನಮ್ಮ ಮಾತ್ರವಲ್ಲ ನಮ್ಮ ಮುಂದಿನ [illegible] ಆ ಮಹಾತ್ಮನ [illegible] [illegible] [illegible]ರಲಾರದು.

[illegible]ಯಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದ ನಮ್ಮ ಬಂಧುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕು.

ಮೂರನೆಯದಾಗಿ ರಾಜಕೀಯ ಗಡಿಗಳ ಮೂಲಕ ನಮ್ಮಿಂದ ಬೇರಾಗಿ ನಮ್ಮ ಈ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸದಾದ ನಮ್ಮ ಬಂಧು ಭಗಿನಿಯರನ್ನು ಸ್ಮರಿಸಬೇಕಾಗಿದೆ. ಅವರು ಹಿಂದೆಯೂ ಮುಂದೆಯೂ ನಮ್ಮವರೇ ಆಗುವರು. ಅವರ ಅಳಲು ಸಂತೋಷಗಳಲ್ಲಿ ನಾವೂ ಸಹಭಾಗಿಗಳು.

ಮುಂದಿನ ನಮ್ಮ ಗುರಿಯ ಕಡೆಗೆ ತಿರುಗೋಣ. ಸ್ವಾತಂತ್ರ್ಯ ಸುಖವನ್ನು ಸರ್ವರೂ—ಕೃಷಿಕನೂ, ಕೂಲಿಯೂ—ಅನುಭವಿಸುವಂತಾಗಬೇಕು. ಬಡತನ, ಅವಿದ್ಯೆ, ಅನಾರೋಗ್ಯಗಳನ್ನು ಕೊಡೆದು ತೆಗೆಯಬೇಕು. ಪ್ರತಿಯೊಬ್ಬ ಸ್ತ್ರೀ ಪುರುಷನಿಗೂ ಜೀವನದ ಪೂರ್ಣತೆಯನ್ನೂ, ಸಮಾನ ಸಮತೆಯನ್ನೂ ಒದಗಿಸುವ ಪ್ರಜಾಸತ್ತಾತ್ಮಕ ರಾಷ್ಟ್ರವನ್ನು ಕಟ್ಟಬೇಕು.

ಘನ ಕಾರ್ಯಗಳು ನಮ್ಮ ಮುಂದಿವೆ. ನಮ್ಮ ಪ್ರತಿಜ್ಞೆಯು ಪೂರ್ಣ ನೆರವೇರುವ ತನಕ ಭಾರತದ ವಿಧಿಲಿಖಿತವನ್ನು ನೆರವೇರಿಸುವ ತನಕ ನಾವು ಶ್ರಮಿಸುವಂತಿಲ್ಲ. ಧೈರ್ಯದಿಂದ ಪ್ರಗತಿಯ ಮೆಟ್ಟಲೇರತೊಡಗಿರುವ ಮಹೋನ್ನತ ರಾಷ್ಟ್ರವೊಂದರ ಪ್ರಜೆಗಳು ನಾವು. ಆ ಘನಸ್ಥಿಕೆಯನ್ನು ನಾವು ಉಳಿಸಿಕೊಳ್ಳಬೇಕು. ನಾವು ಯಾವ ಮತಾನುಯಾಯಿಗಳೇ ಆಗಲಿ, ಸಮಾನ ಸಂದರ್ಭ ಅನುಕೂಲತೆಗಳನ್ನು ಅನುಭವಿಸುವ ಭಾರತಾಂಬೆಯ ಮಕ್ಕಳು ನಾವು. ಆದುದರಿಂದ ದೇಶದ ಘನಸ್ಥಿಕೆಗೆ ಬಾಧಕವಾದ ಜಾತೀಯತೆ, ಕ್ಷುದ್ರ ಮನೋವೃತ್ತಿಗಳಿಗೆ ಎಡೆಗೊಡಲಾರೆವು.

ಈ ಸಂದರ್ಭದಲ್ಲಿ ಪ್ರಪಂಚದ ವಿವಿಧ ರಾಷ್ಟ್ರಗಳಿಗೂ, ಜನತೆಗೂ ನಾವು ಸಂದೇಶ ಕಳುಹುವೆವಲ್ಲದೆ ಜಾಗತಿಕ ಶಾಂತಿಪಾಲನೆ, ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯ ಪ್ರಸ್ಥಾಪನಾ ಕಾರ್ಯದಲ್ಲಿ ನಾವು ಸಹಕರಿಸುವೆವೆಂಬ ಪ್ರತಿಜ್ಞೆ ತೊಡುವೆವು.

ಕೊನೆಯದಾಗಿ ನಮ್ಮ ಪ್ರೇಮದ ಭಾರತಮಾತೆಗೆ ಪ್ರಾಚೀನಳೂ, ಶಾಶ್ವತಳೂ, ಸದಾ ಹೊಸಬಳೂ ಆದ ದೇಶಮಾತೆಗೆ ನಮ್ಮ ಭಕ್ತಿಪೂರ್ವಕ ಪ್ರಣಾಮ ಸಲಿಸಿ ಅವಳ ಸೇವೆಗಾಗಿ ಪುನಃ ಬದ್ಧಕಂಕಣರಾಗುವೆವು.

ಜೈ ಹಿಂದ್

[illegible] ರೇಷನ್ ಎಂಬ [illegible] ನೋಟಿಸು [illegible] 1 ಸೇರ್ (9 ಪೈಂಟ್ಸ್) ಬಾಕಿ ಇತ್ತು.

★

ಅಮೇರಿಕದ ಇಲಿನೊಯ್ಸ್ ಪ್ರಾಂತದಲ್ಲಿ ಆರ್ಥರ್ ಎಲಿಸ್ ಎಂಬಾತನು [illegible] ಮನೆಯೊಂದನ್ನು ಜೋಡಿಸಿದ್ದ. ರಾತ್ರಿ ಯಾರೋ ಒಬ್ಬರು ಮೆಲ್ಲನಾಗಿ ಅದನ್ನು ಕಳಚಿ ಕೊಂಡೊಯ್ದರು.

★

ಕಸಿ ಹಣ್ಣಿನ ಗಿಡಗಳು ಮತ್ತು ತರಕಾರಿ ಬೀಜಗಳು

ಜುಲೈ ಆಗಸ್ಟ್ ತಿಂಗಳಲ್ಲಿ ಹಾಕುವ ಇಂಗ್ಲೀಷ್ ಟೈಪ ಮತ್ತು ಇಂಡಿಯನ್ ತರಕಾರಿ ಬೀಜಗಳು 20 ತರಹ ಕಲರ್‌ಪ್ಯಾಕೆಟ್‌ಗಳ ಸಮೇತ– ರೂ. 4–0–0

ಬೆಂಗಳೂರು ಕಸಿ ಮಾವಿನ ಗಿಡಗಳು 6 ಜಾತಿ 6 ಗಿಡಕ್ಕೆ	9–0–0
ಕಲಕತ್ತೆ ಮಾವಿನ ಗಿಡಗಳು 12 ಜಾತಿ 12 ಗಿಡಕ್ಕೆ	16–0–0
ಸಪೋಟ, (ಚಿಕ್ಕು) ಗಿಡ 1ಕ್ಕೆ	1–8–0
ನಾಗಪುರ—ಕೊಡಗು—ಮುಸಂಬಿ–ನಿಂಬೆ–ಚಕ್ಕೋತ್ರ.	
ದಾಳಿಂಬ. ಪನ್ನೀರಳೆ–ಗಿಡಗಳು ಡಜನ್ 1ಕ್ಕೆ	15–0–0

ಅರ್ಧ ಹಣ ಮುಂಗಡ ರವಾನಿಸಬೇಕು ಪ್ಯಾಕಿಂಗ್ ಮತ್ತು ಇತರ ಖರ್ಚು ಬೇರೆ

ಪತ್ತೆ ದಿ ಅಲ್‌ಸೂರ್ ಸೀಡ್ ಕಂಪೆನಿ, ಅಲಸೂರು — ಬೆಂಗಳೂರು.

KANARA COMMERCIAL BANK LTD.

PUTTUR

H O Puttur | Estd 1920 | Branch Vittal

All kinds of Banking Business transacted.

Deposits Current, Savings, Cumulative. Deposits are accepted.

Fixed Deposits for periods of 3 months and above up to 24 months are accepted.

ಪುಸ್ತಕ ವಿಮರ್ಶೆ

ಸಾಮ್ಯವಾದವೇ ಏಕೆ?

ಮೂಲ ಲೇಖಕರು ಕಾಮ್ರೇಡ್ ಜಯಪ್ರಕಾಶನಾರಾಯಣ್. ಅನುವಾದಕರು ಶ್ರೀ. ಮಳಿಯೆ ಗೋವರ್ಧನರಾಯರು.

ಭರತಖಂಡದ ಆಧುನಿಕ ಜೀವಜ್ಯೋತಿಗಳ ಲ್ಲೊಬ್ಬರಾದ ಕಾಮ್ರೇಡ್ ಜಯಪ್ರಕಾಶ ನಾರಾಯಣರ "why Socialism?" ಎಂಬ ಆಂಗ್ಲ ಗ್ರಂಥದ ಭಾಷಾಂತರವಿದು. ಇದರಲ್ಲಿ ಸಾಮ್ಯವಾದದ ಬುನಾದಿಯಿಂದ ಮೊದಲ್ಗೊಂಡು ರೀತಿ-ವಿಧಾನಗಳ ವರೆಗೆ ವಿಷಯವು ವಿಸ್ತರಿಸಿಕೊಂಡಿದೆ.

ಗ್ರಂಥವು ಕನ್ನಡಿಗರಿಗಾಗಿ ಭಾಷಾಂತರಿಸಲ್ಪಟ್ಟಿದೆ. ಜಯಪ್ರಕಾಶರ ವಿಷಯ ನಿವೇದನದ ಪ್ರಶಂಸನೀಯವಾದ ಪ್ರಭುತ್ವದಿಂದಲೂ, ಅನುವಾದಕರ ಶೈಲಿ, ಬಿಗುವುಗಳಿಂದಲೂ ಅಲಂಕೃತವಾಗಿ ಓದುಗರನ್ನಾಕರ್ಷಿಸುತ್ತದೆ. ಇದರಲ್ಲಿ ಅವರ ಅನುಭವಸಿದ್ಧವಾದ ವಿಷಯಗಳೇ ನಿರೂಪಿಸಲ್ಪಟ್ಟಿವೆಯಲ್ಲದೆ, ಅವರ ಬರಿ ಓದಿನ ಪ್ರದರ್ಶನವಿಲ್ಲ

ಈ ಗ್ರಂಥದಲ್ಲಿ ವಿವೇಚಿತವಾದ ವಿಷಯಗಳು ಹಲವಾರು; ಇದರ ಸಾರಾಂಶವನ್ನು ಸಂಗ್ರಹಿಸುವುದು ಕಠಿನವಾದರೂ, ಹೀಗೆ ಹೇಳುವುದು ಸಮಂಜಸವೆಂದು ತೋರುತ್ತದೆ ಮೊದಲನೆಯ ಅಧ್ಯಾಯವು "ಆಸ್ತಿಯೆಂಬುದು ಅಳಿಯದ ಹೊರತು ಸರಕುಗಳ ಹಂಚುವಿಕೆ ನ್ಯಾಯವಾದುದೂ ಸಮವಾದುದೂ ಆಗಲಾರದು ಜಗದ ಆಡಳಿತವೂ ಸುಖಕರವಾಗಿ ಜರುಗಲಾರದು ಎಂಬಲ್ಲಿಂದ ಪ್ರಾರಂಭವಾಗಿ ಸಾಮ್ಯವಾದವು ಸಮಾಜ ಸಂಘಟನೆಯ ಒಂದು ಪದ್ಧತಿಯೆಂಬುದನ್ನು ಸಮರ್ಥಿಸಿ, ಸಾಮ್ಯವಾದದ ಸಿದ್ಧಿಗೆ ಸರಕಾರ ಮತ್ತು ಜನತೆಯ ಶಕ್ತಿ ಪ್ರೋತ್ಸಾಹಗಳು ಅತ್ಯಗತ್ಯವೆಂಬುದರ ಸಮರ್ಥನೆಯನ್ನೊಳಗೊಂಡಿದೆ. ಎರಡನೇ ಅಧ್ಯಾಯದಲ್ಲಿ ಹಿಂದೂದೇಶದಲ್ಲಿ ಸಾಮ್ಯವಾದಕ್ಕೆ ಯೋಗ್ಯವಾದ ವಾತಾವರಣವಿದೆಯೆಂದು ಸಾಧಿಸಿ, ಕಾಂಗ್ರೆಸ್ ಸಂಸ್ಥೆಯು ಸಾಮ್ಯವಾದವನ್ನು ಎಷ್ಟರಮಟ್ಟಿಗೆ ಪುಷ್ಟೀಕರಿಸುತ್ತದೆಂಬುದಾಗಿ ವಿವೇಚಿಸಿದ್ದಾರೆ ಗ್ರಂಥಕರ್ತರು ಗಾಂಧೀವಾದ, ಪ್ರಾಚೀನ ವರ್ಣಾಶ್ರಮಧರ್ಮ ಮೊದಲಾದುವುಗಳ ತುಲನಾತ್ಮಕವಾದ ವಿಮರ್ಶೆಯೂ ಅವುಗಳ ಸಾಧ್ಯಾಸಾಧ್ಯತೆಗಳ ಪ್ರತಿಪಾದನೆಯೂ ಮೂರನೆಯ ಅಧ್ಯಾಯದಲ್ಲಡಕವಾಗಿದೆ ಕಟ್ಟಕಡೆಯ ಅಧ್ಯಾಯದಲ್ಲಿ ಕಾಂಗ್ರೆಸ್ಸಿನ ಜನತಾಪ್ರಾತಿನಿಧ್ಯದ ಅವಶ್ಯಕತೆಯ ಕುರಿತು ಸಮರ್ಥಿಸಿ, ಹಿಂದೂದೇಶವು ಸ್ವತಂತ್ರವಾದ ಮೊದಲ್ಗೊಂಡು ಅದು ಸಾಮ್ಯವಾದದ ಆದರ್ಶಕ್ಕೋಸ್ಕರ ಹೋರಾಡ ಬೇಕೆಂಬುದಾದ ತಮ್ಮ ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ

ಒಟ್ಟಾರೆ ಹೇಳುವುದಾದರೆ, ಭಿನ್ನಭೇದಗಳನ್ನು ಕಡೆಗಣಿಸಿ, ಮಾನವರೆಲ್ಲರಲ್ಲಿಯೂ ಸಮಾನವಾಗಿಯೇ ಹುದುಗಿರುವ ಪರಿಪೂರ್ಣತೆಯನ್ನು ವಿಕಾಸಗೊಳಿಸುವುದು ಅವಶ್ಯಕ, ಅದು ಸಾಧ್ಯವೆಂಬುದೇ ಈ ಗ್ರಂಥದ ಸಾರವೆನ್ನಬಹುದು

ಸಾಮ್ಯವಾದದ ತತ್ವವನ್ನು ಕನ್ನಡಿಗರಿಗೆ ತರುವ ಉದ್ದೇಶದಿಂದ ಜಯಪ್ರಕಾಶರ ಗ್ರಂಥದ ಭಾಷಾಂತರವನ್ನು ಅತ್ಯುತ್ತಮ ರೀತಿಯಿಂದ ಕೈಕೊಂಡ ಮಳಿಯೆ ಗೋವರ್ಧನರಾಯರು ಕನ್ನಡಿಗರಿಗೆ ಶ್ಲಾಘ್ಯವಾದ ಉಪಕಾರವನ್ನೆಸಗಿದ್ದಾರೆ. ಅವರ ಉದ್ಯಮವನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆಯೆಂದರೆ ಅತ್ಯುಕ್ತಿಯಾಗಲಾರದು.

— ದೇವದಾಸ್

ಭಾರತೀಯ ಘಟನಾಸಮಿತಿ

ಲೇಖಕರು ಶ್ರೀ. ನಾರಾಯಣ ಶರ್ಮ

ಸ್ವತಂತ್ರ ಭಾರತಕ್ಕೆ ಮೂಲಾಧಾರವಾದ ಘಟನಾಸಮಿತಿಯ ಇತಿಹಾಸವನ್ನು ಸಂಕ್ಷಿಪ್ತವಾಗಿಯೂ ಸ್ಪಷ್ಟವಾಗಿಯೂ ತಿಳಿಸುವ ಚಿಕ್ಕ ಹೊತ್ತಗೆ ಇದು ಇದರಲ್ಲಿ ಮೆಕಾಲೆಯವರ ಕನಸಿನಿಂದ ವಿಷಯ ಪ್ರಾರಂಭವಾಗಿ ಮೊನ್ನೆ ಮೊನ್ನೆಯ ಜೂನ್ ೩ರ ಘೋಷಣೆಯಲ್ಲಿ ಅಂತ್ಯವಾಗುತ್ತದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹಿರಿಕೆಯನ್ನು ಶ್ರೀಯುತ ಶರ್ಮರು ಯೋಗ್ಯ ರೀತಿಯಲ್ಲೇ ಹಾಕಿದ್ದಾರೆನ್ನಬಹುದು ಅದಲ್ಲದೆ ಕ್ರಿಪ್ಸರ ರಾಯಭಾರವು ಜನಸಾಮಾನ್ಯರಿಗೆ ಮುಂದ ಟ್ಟಾಗುವಂತೆ ವರ್ಣಿಸಲ್ಪಟ್ಟಿದೆ ಗ್ರಂಥಕರ್ತರು, "ಕಾಂಗ್ರೆಸಿನ ಬೇಡಿಕೆ" ಮತ್ತು "ತ್ರಿಮಂತ್ರಿಗಳ ರಾಯಭಾರ' ಗಳೆಂಬ ಅಧ್ಯಾಯಗಳಲ್ಲಿ ಕಾಂಗ್ರೆಸ್ ಸಂಸ್ಥೆಯು ಹಿಂದುಸ್ಥಾನದ ಪ್ರಮುಖ ಪ್ರತಿನಿಧಿಯೆಂಬುದನ್ನೂ, ಪಾಕಿಸ್ತಾನವನ್ನು ಮುಸ್ಲಿಮರು ಕೇಳುವ ಕಾರಣ ಮತ್ತು ಅದರಿಂದುಂಟಾಗುವ ಹಾನಿಯನ್ನೂ, ತಮ್ಮದೇ ಆದ ಒಂದು ವೈಶಿಷ್ಟ್ಯದಿಂದ ಸಕಾರಣವಾಗಿ ಚರ್ಚಿಸಿದ್ದಾರೆ ಇದರಿಂದ ವಿಶದವಾಗುವಂತೆ, ಪರರಾಷ್ಟ್ರದ ಆಳಿಕೆಗೆ ತುತ್ತಾದ ಯಾವುದೊಂದು ದೇಶವು ಸ್ವತಂತ್ರವಾಗುವ ಸಂಧಿ ಕಾಲದಲ್ಲೆಲ್ಲ, ರಾಜ್ಯಸೂತ್ರಗಳಿಗೆ ಮೂಲಭೂತವಾದ ರಾಜ್ಯಘಟನೆಯ ಕಟ್ಟುಕಟ್ಟಳೆಗಳನ್ನು ನಿರ್ವಹಿಸುವ ಆ ರಾಜ್ಯದ ಪ್ರಬುದ್ಧ ನಾಗರಿಕರನ್ನೊಳಗೊಂಡ ಮಹಾ ಸಾರ್ವಭೌಮ ಸಂಸ್ಥೆಯೇ ಘಟನಾ ಸಮಿತಿ" (constituent Assembly) ಎನ್ನಲ್ಪಡುವುದು ಪ್ರಪಂಚದ ಘಟನಾ ಸಮಿತಿಗಳ ಇತಿಹಾಸ ಮತ್ತು ಬೆಳವಣಿಗೆಯನ್ನು ಮುಂದಿನ ಅಧ್ಯಾಯವು ಒಳಗೊಂಡಿದೆ ಕೊನೆಯ ಮೂರು ಅಧ್ಯಾಯಗಳಲ್ಲಿ ಈಗ ನಡೆಯುವ ರಾಜಕೀಯ ವಿಷಯಗಳ ಕೂಲಂಕುಷವಾದ ವಿವರವೂ ವಿಮರ್ಶೆಯೂ ಇದೆ

ಭಾರತೀಯ ಘಟನಾ ಸಮಿತಿಯ ವಿಷಯವನ್ನು ಕನ್ನಡಿಗರಿಗೆ ಅರುಹುವ ಉದ್ಯಮವನ್ನು ಕೈಕೊಂಡ ಶ್ರೀ ನಾರಾಯಣ ಶರ್ಮರು ತಮ್ಮ ಕಾರ್ಯದಲ್ಲಿ ಸಂಪೂರ್ಣ ಯಶಸ್ಸನ್ನು ಸಂಪಾದಿಸಿದ್ದಾರೆಂದು ನಿಸ್ಸಂದೇಹವಾಗಿ ಹೇಳಬಹುದು,

"ದೇವದಾಸ"

ಮುಂದಿನ ಮಾರ್ಗವೆಂತಹುದು?

ಆಗಸ್ಟ್ 15 – ಈ ದಿನವನ್ನು 40 ಕೋಟಿ ಭಾರತೀಯರು ಸಂಭ್ರಮದಿಂದ ಆಚರಿಸಿದ್ದಾರೆ. ಈ ಚರಿತ್ರಾರ್ಹ ದಿನದಿಂದ ಪರಕೀಯ ಒಡೆತನವು ಅಂತ್ಯವಾಗಿ ಸ್ವಕೀಯ ಆಡಳಿತವು ಜಾರಿಗೆ ಬರುತ್ತದೆ ನಮ್ಮ ದೇಶದ ಆಂತರೀಕ ವ್ಯವಹಾರದಲ್ಲಿ ಅಂದಿನಿಂದ ಯಾವ ಪರಕೀಯ ಸರಕಾರ ಪ್ರತಿನಿಧಿಗೂ ಕೈವಾಡವಿರುವುದಿಲ್ಲ ಇನ್ನು ಮುಂದೆಂದೂ ಅವರು ನಮ್ಮ ತಲೆಯ ಮೇಲೆ ಕೂತುಕೊಳ್ಳಲಾರರು ಇಂದಿನಿಂದ ನಾವು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪ್ರಜೆಗಳಲ್ಲ ನಾವು ಭಾರತದ ಸ್ವತಂತ್ರ ನಾಗರೀಕರಾಗಿದ್ದೇವೆ ಇದು ತನಕ ನಾವು ದಾಸ್ಯದ ಅಗಾಧ ಹೊರೆಯ ಭಾರವನ್ನನುಭವಿಸಿದ್ದೇವೆ ಇಂದಿನಿಂದಲೇ ನಾವು ಭಾರತೀಯ ಜೀವನ ವಿಧಾನವನ್ನನುಸರಿಸಲು ಪ್ರತಿಜ್ಞೆಗೊಡೋಣ ಪರಕೀಯರಿಂದ ಕಲಿತ ಅನುಕರಣ ಶೈಲಿಗಳಿಗಿಂದೇ ತಿಲಾಂಜಲಿಯನ್ನೀಯೋಣ ನಮ್ಮ ದೃಷ್ಟಿಕೋನವನ್ನು ಬದಲಾಯಿಸಿ ಭಾರತದ ನಿಜವಾದ ಪರಿಸ್ಥಿತಿಯೇನೆಂದು ಪರಿಶೀಲಿಸೋಣ

卐

ಈ ಸ್ವಾತಂತ್ರ್ಯ ದಿನದೊಂದು ನಾವು ನಮ್ಮ ಸ್ವತಂತ್ರವಾದ ಹೃದಯದಾನಂದವನ್ನು ಹೊರ ಸೂಸುವುದರೊಂದಿಗೆ ನಮ್ಮ ದೇಶದ ಭಾವಿ ಕಲ್ಯಾಣಕ್ಕಾಗಿ ನಾವು ಘನ ಗಂಭೀರವಾದ ಕೆಲವು ನಿರ್ಧಾರಗಳನ್ನು ಮಾಡಬೇಕಾಗಿದೆ ಈ ಕೆಳಗೆ ಕೆಲವು ಸೂಚನೆಗಳಿವೆ

★ 5–8–47ರಂದು ಹುಟ್ಟಿದ ಮಕ್ಕಳ ಹೆತ್ತವರಿಗೆ ಪಾರಿತೋಷಕಗಳನ್ನು ಹಂಚಬಹುದು ಈ ಉಡುಗರೆಯನ್ನು ಮಗುವಿನ ಮೊದಲ ವರ್ಷದ ಜನ್ಮ ದಿನದಂದು (15 8–48) ಅರ್ಪಿಸಬಹುದು

★ ಹೊರಟು ಹೋದ ಸರಕಾರದವರ ನಮ್ಮ ದೇಶದ ಆಢ್ಯವ್ಯಕ್ತಿಗಳಿಗೆ ಕೊಟ್ಟ ಬಿರುದಾವಳಿಗಳನ್ನು ಇನ್ನು ಮುಂದೆ ಪತ್ರಿಕೆಗಳಲ್ಲಾಗಲಿ, ಭಾಷಣಗಳಲ್ಲಾಗಲಿ ಬರದಂತೆ ನೋಡಿಕೊಳ್ಳಬೇಕು

★ ಶಿಷ್ಟನಾಮಗಳಾದ ಸರ್, ಮೇಡಮ್ ಮಿಸ್ಟರ್ ಮಿಸ್, ಮೊದಲಾದುವುಗಳನ್ನು ಬದಲಾಯಿಸಿ ಶ್ರೀಯುತ, ಶ್ರೀಮಾನ್ ಶ್ರೀ ಜಿ ಶ್ರೀಮತಿ ಚಿರಂಜೀವಿ, ಸೌಭಾಗ್ಯವತಿ ಇವನ್ನುಪಯೋಗಿಸಬೇಕು

★ ಭಾರತೀಯ ಉಡುಪು ತೊಡುಪುಗಳನ್ನೇ ಎಲ್ಲರೂ ಧರಿಸಬೇಕು.

★ ಸರಕಾರ ಮತ್ತು ಸಾರ್ವಜನಿಕ ದಾಖಲೆಗಳಿಂದ ಮತ, ಜಾತಿ, ಉಪಜಾತಿ ಮೊದಲಾದುವುಗಳ ವಿವರಗಳನ್ನು ತೆಗೆದುಹಾಕಬೇಕು ಕೇವಲ ಭಾರತೀಯ (ಹಿಂದೂ ಎಂದು ಕೂಡ ಅವಶ್ಯವಿಲ್ಲ) ಎಂದಿದ್ದರೆ ಮಾತ್ರ ಸಾಕು

★ ನಮ್ಮ ಜೀವನ, ಸಂಸ್ಕೃತಿಗಳಿಗೊಪ್ಪದ ಅನಾವಶ್ಯಕ ರೂಢಿ ಪದ್ಧತಿಗಳನ್ನು ತೊಡೆದುಹಾಕಬೇಕು

★ ಗುರುವಾರ ಅರ್ಧ ದಿನ ಮತ್ತು ಶುಕ್ರವಾರ ಇಡಿ ದಿನಗಳನ್ನು ವಾರದ ರಜಾದಿನಗಳಾಗಿ ಅನುಸರಿಸಬೇಕು

★ ಈ ಯುಗಕ್ಕೆ ಗಾಂಧೀಯುಗವೆಂದು ಹೆಸರಿಡಬೇಕು ಪ್ರತಿವರ್ಷ ಆಗಸ್ಟ್ 15ರಿಂದ ಒಕ್ಟೋಬರ್ 2ರ (ಗಾಂಧೀ ಜಯಂತಿ) ತನಕ ಹಬ್ಬದ ತಿಂಗಳುಗಳಾಗಿ ಆಚರಿಸಬೇಕು

★ ಮಾತನಾಡಲೂ ಬರೆಯಲೂ ಮಾತೃಭಾಷೆ ಇಲ್ಲವೆ ಹಿಂದೂಸ್ಥಾನಿಯನ್ನೇ ಉಪಯೋಗಿಸಿ ಇಂಗ್ಲಿಷ್ ಶಬ್ದಗಳನ್ನು ನಮ್ಮ ಮಾತುಕತೆಗಳಲ್ಲಿ ಆದಷ್ಟು ಕಡಿಮೆ ಮಾಡಬೇಕು

★ ಎಲ್ಲಾ ಶಾಲಾ ಕಚೇರಿಗಳ ಸಮಯವನ್ನು ೮ ರಿಂದ ೪ರ ತನಕವೆಂದು ಬದಲಾಯಿಸಬೇಕು ಮಧ್ಯದಲ್ಲಿ 2 ಗಂಟೆ ವಿರಾಮ ಕಾಲ ಚಟುವಟಿಕೆಭರಿತ ಬೆಳಗ್ಗೆ ಮತ್ತು ಹಿಂಬಂದ ಸಾಯಂಕಾಲಗಳ ನಮ್ಮ ಸರ್ವತೋಮುಖ ಅಭಿವೃದ್ಧಿಗೆ ಸಾಧಕಗಳ

★ ಸ್ತ್ರೀಯರನ್ನು ಅವರ ಪುರುಷರ ಉಪನಾಮಗಳಿಂದ ಕರೆಯಲ್ಪಡುವುದನ್ನು ನಿಲ್ಲಿಸಿ ಅವರಿಗೆ ಸಂಪೂರ್ಣ ಸ್ವತಂತ್ರ ನಾಮಧೇಯಗಳಿರುವಂತಾಗಬೇಕು ಗಂಡಂದಿರ ಉಪನಾಮಗಳ ಬದಲಿಗೆ ತಾಯಂದಿರ ಉಪನಾಮಗಳನ್ನಿಟ್ಟುಕೊಳ್ಳಬಹುದು

★ ಭೌತಿಕ ಜೀವನಕ್ಕೆ ಆಹಾರವು ಪ್ರಾಮುಖ್ಯವಾಗಿರುವಂತೆ ಸಾಂಸ್ಕೃತಿಕ ಜೀವನಕ್ಕೆ ನೈತಿಕ ಪರಿಶುದ್ಧತೆಯು ಅತ್ಯಾವಶ್ಯಕ ಆದುದರಿಂದ ದೇಶದಲ್ಲೆಲ್ಲಾ ಸಮಾಜಗೌರವವನ್ನು ಅಧಃಪತನಕ್ಕೊಯ್ಯುವ ಲೈಂಗಿಕ ಅನೀತಿಯನ್ನು ಕಡಿಮೆ ಮಾಡಲು ಪ್ರಯತ್ನಿಸರಾಗಬೇಕಾದುದು ಅತ್ಯಾವಶ್ಯಕ

卐

ಆಶ್ಚರ್ಯವಾದ ಸಿದ್ಧಿ ಯಂತ್ರ

ಅದ್ಭುತ ಶಕ್ತಿಯುಳ್ಳ ಈ ಗುಪ್ತ ವಶೀಕರಣ ಯಂತ್ರಧಾರಣದಿಂದ ನಿಮ್ಮ ಇಚ್ಛಿತ ಕಾರ್ಯಗಳೆಲ್ಲ ನೆರವೇರುವುವು ಇದನ್ನು ಧರಿಸಲು ಯಾವ ತಪಸ್ಸಿದ್ಧಿಯೂ ಬೇಕಾಗಿಲ್ಲ ಇದು ನಿಮಗೆ ಐಶ್ವರ್ಯವನ್ನು ಕೊಟ್ಟು ನಿಮಗೆ ಬೇಕಾದವರನ್ನು ನಿಮ್ಮ ವಶಪಡಿಸಿ, ಇಚ್ಛಿತ ಕಾರ್ಯಗಳೆಲ್ಲ ವಿಜಯವನ್ನು ಕೊಡುವುದು ಇದು ತಕ್ಕೆಂದು ಸ್ಥಾಪಿಸುವವರಿಗೆ ರೂ. ೧೦೦ ಬಹುಮಾನ.

ತಾಮ್ರದ ತಾಯಿತಕ್ಕೆ ರೂ ೨-೮-೦ ಬೆಳ್ಳಿಯ ತಾಯಿತಕ್ಕೆ ರೂ ೪ ಚಿನ್ನದಕ್ಕೆ ರೂ, ೧೫.

PRET SHILA ASHRAM
No. 181.
POKATRI SARAI (GAYA)

ESTD 1906

CANARA BANK, LIMITED.

Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29 00 000	29 00 000
Capital paid up	28,43,000	28,80,000
Reserves	11 00 000	11 00,000
Deposits	3 50,43,000	4 60 40 000
Due to Bankers	26,91 000	69 57,000
Call Deposits from Bankers	8 00,000	15 00 000
Branch Adjustments	22,07,000	21 09 000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3 61,000	4,19,000
Rs.	4,71,78,000	6,45 13,000

ASSETS

	1945	1946
Cash	1 01 91 000	1 16,16 000
Govt. Securities	1,80,45,000	2 75 61,000
Advances to customers	1 56 87 000	2 01 38 000
Bills for collection and Foreign Bills negotiated	20 56 000	34 23 000
Landed Properties	28 000	5 000
Bank Premises and Furniture and Fixtures	1 46 000	1,47 000
Other Assets	10,25,000	16,23 000
Rs	4,71,78,000	6,45,13,000

ಜಿಲ್ಲಾ ಪರಿಚಯ

ನಗರಗಳಲ್ಲಿ ಸ್ವಾತಂತ್ರ್ಯೋತ್ಸವ

200 ವರ್ಷಗಳ ದಾಸ್ಯಜೀವನದ ಜಾಡ್ಯವನ್ನು ಕಡಿದೊಗೆದು ಸ್ವಾತಂತ್ರ್ಯದ ನವಸ್ಫೂರ್ತಿಯಿಂದ ಇಡೀ ನಗರವೇ ತಾ. 15ರಂದು ಎಚ್ಚೆತ್ತಂತಿತ್ತು ನಗರದ ಕೇರಿ ಕೇರಿಗಳೂ ಮನೆ, ಮಳಿಗೆ ಶಾಲೆ ಮತ್ತಿತರ ಕಟ್ಟಡಗಳೂ ತಳಿರುತೋರಣಗಳಿಂದಲೂ, ಧ್ವಜಪತಾಕೆಗಳಿಂದಲೂ ರಾಷ್ಟ್ರನಾಯಕರ ಭಾವಚಿತ್ರಗಳಿಂದಲೂ ಅಂಕರಿಸಲ್ಪಟ್ಟಿದ್ದುವು

ತಾ. 14ರಂದು ಮಧ್ಯರಾತ್ರಿಯಲ್ಲಿ, ದೆಹಲಿಯಲ್ಲಿ ಘಟನಾಸಮಿತಿಯ ಅಭೂತಪೂರ್ವ ಸಭೆ ಜರಗುತ್ತಿದ್ದಾಗಲೆ ಮೈದಾನಿನಲ್ಲಿ ಜನ ನೆರೆದಿತ್ತು ಹನ್ನೆರಡು ಬಡಿದೊಡನೆಯೆ ತೋಪು ಹಾರಿಸಲಾಯಿತು, ಸೈರನ್‌ಗಳು ಹೊಸ ಸ್ವತಂತ್ರ ರಾಷ್ಟ್ರ ಒಂದರ ಜನನವನ್ನು ಎಲ್ಲೆಡೆಗೆ ಸಾರಿದುವು ಇಗರ್ಜಿ ದೇವಾಲಯಗಳಲೆಲ್ಲ ಗಂಟೆ ನಗಾರಿಗಳನ್ನು ಬಾರಿಸಲಾಯಿತು ಮೈದಾನಿನಲ್ಲಿ ಆಗಲೆ ತ್ರಿವರ್ಣ ರಾಷ್ಟ್ರಧ್ವಜವನ್ನು ಹಾರಿಸಲಾಯಿತು ವಿದ್ಯುದ್ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ಮೈದಾನಿನ ರೇಡಿಯೊ ಆಗಲೆ ದೆಹಲಿಯಲ್ಲಿ ನಡೆಯುತ್ತಿದ್ದ ಘಟನಾ ಸಮಿತಿಯ ಕಾರ್ಯಕಲಾಪ, ಭಾಷಣಗಳನ್ನು ಘೋಷಿಸುತ್ತಿದ್ದಿತು

ತಾ 15ರಂದು ಮುಂಜಾನೆ, ಕೇರಿ ಕೇರಿಗಳಲೂ ಜಯಘೋಷಮಾಡುತ್ತ ಪ್ರಭಾತ ಪೇರಿಗಳ ತಂಡಗಳು ಹೊರಟುವು 9 ಗಂಟೆಗೆ ಎಲ್ಲಾ ಶಾಲಾಕಾಲೇಜುಗಳಲ್ಲೂ, ವಿಶಿಷ್ಟತರ ವೈಭವಪೂರ್ಣ ಕಾರ್ಯಕ್ರಮಗಳಿದ್ದುವು ಧ್ವಜ ಏರಿಸಲಾಗಿತ್ತು ಆ ಬಳಿಕ ಸಿಂಗರಿಸಿದ ಬಸ್, ಲಾರಿ, ಮೋಟರ್, ಮೊದಲಾದ ವಾಹನಗಳಲ್ಲಿ ಸ್ವಾತಂತ್ರ್ಯದ ಪೂರ್ಣ ಲಾಭ ಪಡೆಯಲಿರುವ ಮುಂದಿನ ಪೀಳಿಗೆಯಾದ ಬಾಲಕ ಬಾಲಿಕಿಯರು ಕುಣಿತು ಜಯಘೋಷವನ್ನು ಮಾಡುತ್ತ ಕೇರಿ ಕೇರಿಗಳಲ್ಲಿಯೂ ಸುತ್ತಾಡಿ ಹೊಸ ರಾಷ್ಟ್ರದ ಜನನವೊಂದರ ಸುಭಸಂದೇಶವನ್ನು ಸಾರಿದರು ಇಡೀ ನಗರವೇ ಸಂತೋಷದ ಆವೇಶದಿಂದ ಪ್ರತಿಧ್ವನಿಸುತ್ತಿತ್ತು, ಜಾತಿ ಮತ ಭೇದವಿಲ್ಲದೆ ಸಕಲರೂ ಈ ಆನಂದದಲ್ಲಿ ಭಾಗಿಗಳಾಗಿದ್ದರು ಸಂಜೆಯ ತನಕವೂ ಇದೇ ರೀತಿಯ ಕೋಲಾಹಲ ನಡದು 3 ಗಂಟೆಯ ಬಳಿಕ ನಗರದ ಎಲ್ಲಾ ಬೀದಿಗಳಿಂದಲೂ ಜನರು ಮೈದಾನಿನತ್ತ ಮೆರವಣಿಗೆಯಾಗಿಯೂ ಬೇರೆ ಬೇರೆಯಾಗಿಯೂ ಸಾಗುತ್ತಿದ್ದರು ನದಿಗಳೆಲ್ಲ ಬಂದು ಮೈದಾನಿನಲ್ಲಿ ಕೂಡಿ ಸಾಗರವಾದಂತಿತ್ತು ಸಿಂಗರಿಸಿದ ನೂರಾರು ಲೋರಿ–ಬಸ್ಸುಗಳ ಮೆರವಣಿಗೆ, ಸೈಕಲ್ ಮೆರವಣಿಗೆ ಇತ್ಯಾದಿಗಳೆಲ್ಲ ಮೈದಾನಿಗೆ ಬಂದು ಸೇರಿದುವು 50 ಸಾವಿರಕ್ಕೆ ಕಡಿಮೆ ಇಲ್ಲದಷ್ಟು ಮುಂದಿ ದೂರದ ಹಳ್ಳಿಗಳಿಂದಲೂ ಬಂದು ನೆರೆದಿದ್ದರು. ಮೈದಾನಿನಲ್ಲಿ ತೋರಣಗಳಿಂದ ಸಿಂಗರಿಸಲಾಗಿದ್ದ 'ಕಾರ್ನಾಡ್ ಸದಾಶಿವರಾವ್' ನಗರದಲ್ಲಿ 5 ಗಂಟೆಗೆ ಪೋಲಿಸ್ ಕವಾತ್, ಸ್ಕೌಟ್ – ಗೈಡ್‌ರ್‍ಯಾಲಿ ನಡೆದು ಸಂಜೆ 6 ಗಂಟೆಗೆ ಕಲೆಕ್ಟರರ ನೇತೃತ್ವದಲ್ಲಿ 'ದರ್ಬಾರ್' ಆರಂಭವಾಯಿತು. ಕೆಲವರಿಗೆ ಕುರ್ಚಿ ಬೆಂಚುಗಳನ್ನಿಟ್ಟುದರಿಂದ ಹಿಂದೆ ನಿಂತಿ ಸಾವಿರಾರು ಜನರಿಗೆ ಏನೂ ಕಾಣಿಸುತ್ತಿರಲಿಲ್ಲ. 'ಸಾರೆ ಜಹಾನ್ಸೆ ಅಚ್ಚಾ ಹಿಂದುಸ್ತಾನ್' ಎಂಬ ಗೀತೆಯಿಂದ ಕಾರ್ಯಕ್ರಮ ಆರಂಭವಾಯಿತು. ಆ ಬಳಿಕ ಕಲೆಕ್ಟರರು ಇಂದಿನ ದಿನದ ಮಹತ್ವವನ್ನೂ ಮುಂದಿನ ಹೊಣೆಯನ್ನೂ ವಿವರಿಸಿ 'ಜೈಹಿಂದ್' ಘೋಷದಿಂದ ಭಾಷಣ ಮುಗಿಸಿದರು. ಆ ಬಳಿಕ, ಡಾ। ಒಡೆಯರು ಕನ್ನಡದಲ್ಲಿ, ಜ। ಚವನ್ನಾಡ್ ಮಲೆಯಾಳದಲ್ಲಿ, ಶ್ರೀ। ನಾವಡರು ಹಿಂದಿಯಲ್ಲಿ ಶ್ರೀ। ಕಿಲ್ಲೆ ತುಳುವಿನಲ್ಲಿ ಶ್ರೀ। ಎಲ್ ಸಿ ವಾಯಸ್ ಕೊಂಕಣಿಯಲ್ಲಿ ಭಾಷಣವಿತ್ತರು ರಾಷ್ಟ್ರಗೀತೆಯೊಡನೆ ಸಭೆ ಮುಗಿದ ಬಳಿಕ, ಸಿಡಿಮದ್ದು, ಕೇಂಪ್ ಫಯರ್ ಮೊದಲಾದ ಕಾರ್ಯಕ್ರಮಗಳಾದುವು

ಸಂಜೆ ನಾಲ್ಕು ಗಂಟೆಗೆ ಮೈದಾನಿನ ಬೇರೊಂದೆಡೆಯಲ್ಲಿ, ಟೌನ್ ಕಾಂಗ್ರೆಸಿನ ನೇತೃತ್ವದಲ್ಲಿ ಬೇರೊಂದು ಸಾರ್ವಜನಿಕ ಸಭೆ ನೆರೆದಿತ್ತು

ಕೊನೆಗೆ, ಬಂಧವಿಮುಕ್ತರಾಗಿ ಅಂದೇ ಬಂದಿದ್ದ ಕಮ್ಯೂನಿಸ್ಟ್ ಮುಂದಾಳುಗಳಾದ ಹೊಳ್ಳ, ಕಕ್ಕಿಲ್ಲಾಯ, ಶಾಂತಾರಾಮ ಪೈ, ಕೇಶವ ಕಾಮತ್ ಮೊದಲಾದವರನ್ನು ಮಜೂರರು ಸ್ವಾಗತಿಸಿ ಮೆರವಣಿಗೆಯಿಂದ ಕರೆದೊಯ್ದು ಬೇರೊಂದು ಸಭೆ ಜರಗಿಸಿದರು

ರಾತ್ರಿ ಅಲ್ಲಲ್ಲಿ ವಿದ್ಯುದ್ದೀಪಾಲಂಕಾರಗಳಿದ್ದುವು

ಪುಂಜಾಲಕಟ್ಟೆ: ತಾರೀಕು 15 8 47 ರಲ್ಲಿ ಮಧ್ಯಾಹ್ನ ಗಂಟೆ 2ಕ್ಕೆ ಸುಮಾರು 3000 ಜನಕ್ಕೆ ಮಿಕ್ಕಿದ ಜನ ಸಮೂಹದ ಸಭೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಆಚರಿಸಲ್ಪಟ್ಟಿತು. ಕಾರ್ಯಕ್ರಮದಲ್ಲಿ ಮೊದಲಾಗಿ ಧ್ವಜಾರೋಹಣ ಮತ್ತು ಧ್ವಜವಂದನೆಯು ಶ್ರೀಯುತ ಹಿರಿಯಡ್ಕ ರಾಮರಾಯ ಮಲ್ಯರಿಂದ ನೆರವೇರಿತು ನಂತ ಶ್ರೀ। ಜಿ ಡಿ ಮೋದರ ಬಾಳಿಗಾ ಬಿ ಎ ಇವರ ಅಧ್ಯಕ್ಷತೆಯಲ್ಲಿ ಶ್ರೀಯುತ ನಾರಾಯಣ ಕಿಲ್ಲೆ ಯವರು ಸ್ವಾತಂತ್ರ್ಯ ಮತ್ತು ರಾಷ್ಟ್ರಧ್ವಜದ ಕುರಿತು ಸರಳವಾದ ಭಾಷೆಯಲ್ಲಿ ಭಾಷಣ ಮಾಡಿ ಸಭೆಯನ್ನು ಆನಂದಗೊಳಿಸಿದರು ನಂತ್ರ ಅಧ್ಯಕ್ಷರ ಭಾಷಣ ಮತ್ತು ಶ್ರೀ ರಾಮರಾಜ ಕಿಣಿಯವರ ರಾಷ್ಟ್ರಗೀತೆದೊಂದಿಗೆ ಸಭೆಯು ಮುಕ್ತಾಯವಾಯಿತು. ಇಂಥಹ ವಿಜೃಂಭಣೆಯು ಪುಂಜಾಲಕಟ್ಟೆಯಲ್ಲಿ ಈ ವರೆದ್ದು ಎಂದೂ ಜರಗಿದ್ದಿಲ್ಲ

ಪೆರಡಾಲ: ಇಲ್ಲಿನ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ತಾ 14ರಂದು ರಾತ್ರಿ ವಿಶೇಷ ಭಜನೆ ಮತ್ತು 15ರಂದು ಬೆಳಿಗ್ಗೆ ಮೆರವಣಿಗೆ, ಧ್ವಜಾರೋಹಣ ಹಾಗೂ 4-30ಕ್ಕೆ ಖಂಡಿಗ ಮಹಾಲಿಂಗ ಭಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೂ ನಡೆಯಿತು. ರಾತ್ರಿ 7ರಿಂದ 9ರ ವರೆಗೆ ವಿವಿಧ ವಿನೋದಾವಳಿಗಳೂ ಜರಗಿದ್ದುವು

ಬೇಳ: ಊರ ಮಹಾಜನರ ಸೇರುವಿಕೆಯಿಂದ ತಾ 14ರಂದು ರಾತ್ರಿ ಘಂಟೆ 12 2ಕ್ಕೆ ಸ್ವತಂತ್ರ ಹಿಂದುಸ್ಥಾನಕ್ಕೆ ಯಶಸ್ಸನ್ನು ಬಯಸಿ ದೀಪೋತ್ಸವ ಕಾರ್ತಿಕ ಪೂಜೆಯನ್ನು ಕುಮಾರ ಮಂಗಲಂ ದೇವಸ್ಥಾನದಲ್ಲಿ ನಡೆಸಲಾಯಿತು ಮರುದಿನ ಬೆಳಿಗ್ಗೆ ಪ್ರಭಾತಫೇರಿ ಧ್ವಜವಂದನೆಗಳನ್ನು ಮುಗಿಸಿ ವಾದ್ಯಘೋಷದಿಂದ ಅಭೂತಪೂರ್ವ ಜನಸಂದಣಿಯೊಡನೆ ಮೆರವಣಿಗೆ ನಡೆಯಿತು. ಅಪರಾಹ್ನ ಘಂಟೆ 4–30ಕ್ಕೆ ಬೇಳ ಶಾಲಾ ವಠಾರದಲ್ಲಿ ಸಾರ್ವಜನಿಕ ಸಭೆ ಭಾಷಣ ಸಿಹಿ ತಿಂಡಿ ತೀರ್ಥ ಹಂಚೋಣ ವಗೈರೆ ನಡೆಸಲಾಯಿತು.

ಚೇವಾರ್: ಅಗೋಸ್ತು ತಾ. 14ನೇ ರಾತ್ರಿ ಗಂಟೆ 11ಕ್ಕೆ ಚೇವಾರ್ ಶಾಲೆಯಲ್ಲಿ ಕುಡಾಲ್-ಮೇರ್ಕಳ ಮತ್ತು ಕೈಯ್ಯಾರ್ ಗ್ರಾಮಸ್ಥರ ಒಂದು ಮಹಾ ಸಮ್ಮೇಳನವು ಮರ್ವಳ ತಿರುಮಲೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಅಧ್ಯಕ್ಷರ ಭಾಷಣಾನಂತರ ಶಿರುಲಾಬಾದ್ ಮುಸ್ಲಿಂ ಲೀಗ್ ಸೆಕ್ರೆಟರಿಗಳಾದ ಶ್ರೀ ಯೂಸೂಫ್ ಕಂಬಾರರು ಗಂಟೆ 12-2ಕ್ಕೆ ರಾಷ್ಟ್ರಧ್ವಜಾರೋಹಣ ಮಾಡಿದರು ಶ್ರೀ ಕಂಬಾರರ ಭಾಷಣದಲ್ಲಿ ಭೂಲೋಕದ ಹಲವು ಭಾಗಗಳಲ್ಲಿ ಶ್ರೀಕೃಷ್ಣ, ಶ್ರೀರಾಮ, ಗೌತಮಬುದ್ಧ, ಯೇಸು ಕ್ರಿಸ್ತ, ಮಹ್ಮದ್ ಪೈಗಂಬರ್, ಅಶೋಕ, ಅಕ್ಬರ್—ಮುಂತಾದ ಮಹನೀಯರ ಶಾಂತಿ ಧ್ವಜವೇ ಈ ಧ್ವಜವೆಂದರು ಇದರ ಶಾಂತಿ ಮತ್ತು ಸಹಿಷ್ಣುತೆಯು ಲೋಕವನ್ನೇ ಜಯಿಸಲಿ ಎಂದು ಪ್ರಾರ್ಥಿಸಿದರು ಅನಂತರ ಸಭೆಯು ಹಗಲು ಗಂಟೆ 4ಕ್ಕೆ ಮುಂದರಿಸಲಾಗಿ ಮುಕ್ತಾಯವಾಯಿತು

ತಾ 15ನೇ ಸಂಜೆ ಗಂ 4ಕ್ಕೆ ಕೈಯ್ಯಾರ್‌ರೆ ಫಾದರ್ ಜೆ ಎ. ಪಿ ಮಿರಾಂದಾರವರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ಪುನಃ ಸೇರಿತು ಅಧ್ಯಕ್ಷರ ಭಾಷಣದನಂತರ ಬಾಲಕಿಯರು ರಾಷ್ಟ್ರೀಯ ಗೀತೆಯನ್ನು ಹಾಡಿದರು ಅನಂತರ ಶ್ರೀಯುತರಾದ ಮರ್ವಳ ತಿರುಮಲೇಶ್ವರ ಭಟ್ಟ, ಯೂಸೂಪ್ ಕಂಬಾರ್, ಎ ಕೇಶವ ಭಟ್ಟ, ಬಿ ಶಂಬಟ್ಟ ಮುಂತಾದ ಮಹನೀಯರು ಭಾಷಣಗಳನ್ನಿತ್ತರು ಅಧ್ಯಕ್ಷರ ಉಪಸಂಹಾರ, ಗ್ರಾಮ ಪಟೇಲರ ವಂದನೆಯನಂತರ ಸಭೆಯು ಮುಕ್ತಾಯವಾಯಿತು. ಮಿಠಾಯಿ ವಿತರಣೆಯನಂತರ ಗ್ರೂಪ್ ಫೋಟೋ ತೆಗೆಯಲಾಯಿತು

ಮಡಂತ್ಯಾರು: ಇದೇ ತಾ ೧೯ ಕು 15–8–'47ನೇ ಶುಕ್ರವಾರ ದಿವಸ ಇಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಬೆಳಿಗ್ಗೆ 5 30ಕ್ಕೆ ಪ್ರಭಾತಫೇರಿ 7 ಗಂಟೆಗೆ ಮಾಲಾಡಿ ಶಾಲಾ ವಠಾರದಲ್ಲಿ ಧ್ವಜವಂದನೆಯಿಂದ ಪ್ರಾರಂಭಿಸಿ 11 ಗಂಟೆಗೆ ಮಡಂತ್ಯಾರು ಶಾಲಾ ವಠಾರಕ್ಕೆ ಮೆರವಣಿಗೆ ಇಲ್ಲಿ ಧ್ವಜಾರೋಹಣದ ನಂತರ ಸ್ಥಳೀಯ ಇಗರ್ಜಿ ಗುರುಗಳಾದ ವೆ ವಾ ಜೆ ಬಿ ಪಿಂಟೋ ರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಕೆಲವು ಮಹನೀಯರುಗಳ ಭಾಷಣಗಳು ಜರಗಿ, ಸಿಹಿ ತಿಂಡಿ ಹಂಚೋಣದೊಂದಿಗೆ ಮುಕ್ತಾಯವಾಯ್ತು ನೆರೆಕರೆಯ ಗ್ರಾಮಗಳಿಂದ ಸುಮಾರು ಮೂರು ಸಾವಿರ ಜನರು ನೆರೆದಿದ್ದು ಎಲ್ಲರಲ್ಲಿಯೂ ಉತ್ಸಾಹವು ಕಂಡು ಬರುತ್ತಿತ್ತು.

ಕೋಳಿ ರಕ್ಷಕರಿಗಾಗಿ: ನಮ್ಮ ಜಿಲ್ಲೆಯ ಕೋಳಿಗಳಿಗೆ ಈಚೆಗೆ ಬಹಳವಾಗಿ ತೊಂದರೆ ಕೊಡುತ್ತಿರುವ ರಾಣಿಕೆಟ್ ರೋಗವನ್ನು ಪರಿಹರಿಸಲು ಯೋಗ್ಯವಾದ ರಾಣಿಕೆಟ್ ಇಂಜಕ್ಷನ್ ಮದ್ದನ್ನು ಸರಬರಾಯಿ ಮಾಡಲು ಪಳ್ನೀರಿನ ಶ್ರೀ ರೆಬೆಲ್ಲೊ ಮೊದಲಾದ ಮಹನೀಯರು ಸರಕಾರಕ್ಕೆ ಮಾಡಿಕೊಂಡ ಮನವಿಯ ಪ್ರಕಾರ ಈಗ ಸದ್ರಿ ಔಷಧಿ ಕಳುಹಿಸಲ್ಪಟ್ಟಿದೆ. ಕೋಳಿಗಳಿಗೆ ಇದನ್ನು ಕೊಡುವ ಏರ್ಪಾಡು ನಗರದ ಪಶುವೈದ್ಯಶಾಲೆ (ಜೈಲು ಬಳಿ)ಯಲ್ಲಿ ಮಾಡಲಾಗಿದೆ. ಒಂದು ಸಾರಿ ಇಂಜಕ್ಷನ್ ಕೊಟ್ಟರೆ 2 ವರ್ಷಕ್ಕೆ ರೋಗದ ಬಾಧೆಯಿಲ್ಲವೆಂಬುದು ಮೇಲ್ಕಂಡ ಮಹನೀಯರ ಸ್ವಾನುಭವ ವಿಶೇಷ ಮಾಹಿತಿ ಬಗ್ಗೆಯೂ ಶ್ರೀ ಡಿ. ಜೆ. ಬ್ರಿಟ್ಟೊ, ಪಳ್ನೀರ್ ಮಂಗಳೂರು ಇವರಿಗೂ ಬರೆಯಬಹುದು.

ಮೈಸೂರು ವಿದ್ಯಾರ್ಥಿಗಳ ಹೋರಾಟಕ್ಕೆ ದಕ್ಷಿಣ ಕನ್ನಡ ವಿದ್ಯಾರ್ಥಿಗಳ ಸಂಪೂರ್ಣ ಬೆಂಬಲ

ಬೆಂಗಳೂರಲ್ಲಿ ವಿದ್ಯಾರ್ಥಿಗಳ ಮೇಲೆ ನಡೆದ ಅನ್ಯಾಯವು ಸರ್ವರಿಗೂ ವಿದಿತವು ವಿದ್ಯಾರ್ಥಿಗಳ ಸನ್ಮತಿಯನ್ನು ನಿರ್ಲಕ್ಷಿಸಿ ಸರ್ವಾಧಿಕಾರವನ್ನು ತೋರಿಸುತ್ತ, ಕೆಲವೇ ಕುತಂತ್ರಿಗಳ ಸ್ವಾರ್ಥಸಾಧನೆಗಾಗಿ, ವಿದ್ಯಾರ್ಥಿಗಳನ್ನು ಶಿಕ್ಷಿಸುವುದು, ರಾಷ್ಟ್ರದ ಏಳಿಗೆಯ ದೃಷ್ಟಿಯಲ್ಲಿ ಸರ್ವಥಾ ಸಲ್ಲದುದಾಗಿದೆ. ರಾಷ್ಟ್ರದ ಸೇನಾಮುಖವೇ ವಿದ್ಯಾರ್ಥಿಗಳಾಗಿರುತ್ತ, ವಿದ್ಯಾರ್ಥಿಗಳ ಶಕ್ತಿಯನ್ನು ದರ್ಪ, ದಬ್ಬಾಳಿಕೆಯ ಮೂಲಕ ಮುರಿಯಲೆತ್ನಿಸುವುದು ವ್ಯರ್ಥವಾಗುವುದರಲ್ಲಿ ಸಂದೇಹವಿಲ್ಲ.

ಸಂಸ್ಥಾನದ ವಿದ್ಯಾರ್ಥಿಗಳ ಈ ಹೋರಾಟಕ್ಕೆ ದಕ್ಷಿಣ ಕನ್ನಡದ ವಿದ್ಯಾರ್ಥಿಗಳು ಸಂಪೂರ್ಣ ಬೆಂಬಲವನ್ನೀಯಬೇಕೆಂದು ದ ಕ ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ನಿರ್ಧರಿಸಿದೆ ಏಕೆಂದರೆ ಕರ್ಣಾಟಕವು ಪ್ರಾಂತೀಕರಣವಾಗುವ ಈ ಸಂದರ್ಭವಲ್ಲಿ ಸಂಸ್ಥಾನಕ್ಕೂ ಇತರ ಪ್ರಾಂತಗಳಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ—ವಿದ್ಯಾರ್ಥಿಗಳಲ್ಲಿ ಈ ಮೊದಲೂ ಇದ್ದಿಲ್ಲ

ಮೈಸೂರಿನ ವಿದ್ಯಾರ್ಥಿಗಳು ಸೆಪ್ಟೆಂಬರದಲ್ಲಿ ಹೂಡಲಿರುವ ಈ ಹೋರಾಟಕ್ಕೆ ನೇರಾದ ಬೆಂಬಲವನ್ನೀಯುವುದಕ್ಕಾಗಿ, ಚಳುವಳಿಯ ಸಮಯಕ್ಕೆ ವಿದ್ಯಾರ್ಥಿಗಳ ಎರಡು "ಜಾತಾ" ಕಳುಹಿಸಿಕೊಡಬೇಕೆಂದು ದ ಕ ವಿದ್ಯಾರ್ಥಿ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು ಶ್ರೀ ಬಿ ಯೋಗೀಶ್ವರ ಹೊಳ್ಳ, ಜತೆಕಾರ್ಯದರ್ಶಿ, ಅ ಪ್ರಾ ವಿ ಕಾಂಗ್ರೆಸ್ ಇವರಿಗೆ ಸಂಪೂರ್ಣ ಕಾರ್ಯಭಾರವನ್ನು ವಹಿಸಿ ಕೊಟ್ಟಿರುತ್ತದೆ

ಈ ವರೆಗೆ ದ ಕ ವಿದ್ಯಾರ್ಥಿ ಕಾಂಗ್ರೆಸಿನ ಹಲವಾರು ಸಂಸ್ಥೆಗಳಲ್ಲಿ ಈ ಕುರಿತು ನಿರ್ಣಯಗಳು ಮಂಜೂರಾಗಿದ್ದರೂ, ಪ್ರತ್ಯಕ್ಷ ಕಾರ್ಯತಃ ನಮ್ಮ ಬೆಂಬಲ ತೋರಿಸುವುದವಶ್ಯ ಆದುದರಿಂದ ವಿದ್ಯಾರ್ಥಿಗಳು ಈ "ಜಾತಾ"ದಲ್ಲಿ ಹೋಗಲು ಸಿದ್ಧರಿರುವವರು ಈ ತಿಂಗಳ ಕೊನೆಯ ಒಳಗೆ ನಮ್ಮ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ ಎಂಬುದಾಗಿ ದ ಕ ವಿ ಸಂಘದ ಪ್ರಧಾನ ಕಾರ್ಯದರ್ಶಿಗಳು ತಿಳಿಸುತ್ತಾರೆ

ಮಳೆ: ಅನಿರೀಕ್ಷಿತವಾಗಿ ಜಿಲ್ಲೆಯಲ್ಲಿ ವಿಪರೀತ ಮಳೆ ಬಿದ್ದಿರುವುದು ಹಲವು ಕಡೆಗಳಲ್ಲಿ ಚಿಕ್ಕ ದೊಡ್ಡ ನೆರೆಗಳು ಬಂದಿದ್ದು ಬೆಳೆಗೆ ತುಂಬಾ ಹಾನಿ ಮಾಡುವ ತೆರದಲ್ಲಿ ನೀರಿನ ಪ್ರಭಾವವುಂಟಾಗಿದೆಯೆಂದು ಸುದ್ದಿಗಳಿವೆ ಮಂಗಳೂರಿನ ಅಳ್ಕೆಯ ತೋಡಿನಲ್ಲಿ ಒರ್ವ ಬಾಲಕಿ ಬಿದ್ದು ಮಡಿದಿರುವಳೆಂದು ತಿಳಿದುಬರುತ್ತದೆ

ನಗರ ಸಭೆ ಚುನಾವಣೆ: ಚುನಾವಣೆ ಪ್ರಕಟಣೆ 14 8 47ರಲ್ಲಾಗಿದೆ ನಾಮಪತ್ರ ಸ್ವೀಕಾರ 25, 26, 27 8 47ರೊಳಗೆ ನಾಮಪತ್ರ ಪರಿಶೀಲನೆ 28.8.47 ರಂದು. ಉಮೇದುವಾರರ ಹೆಸರು ಪ್ರಕಟಣೆ-ಆಕ್ಷೇಪಗಳಿಲ್ಲದಿದ್ದರೆ 3.9 47ರಲ್ಲಿ, ಆಕ್ಷೇಪವಿದ್ದರೆ 9–9–47ರಂದು ಮತ ಕೊಡುವಿಕೆ: 29–9–47ರಂದು ಮತಗಣನೆ 30-9-47ರಂದು. ಹೀಗೆಂದು ಹಂಗಾಮಿ ಮುನ್ಸಿಪಲ್ ಕಮಿಶನರರಾದ ಡಾ। ಕೆ. ಶಂಬು ಶೆಟ್ಟಿ ಅವರು ತಿಳಿಸುತ್ತಾರೆ.

ದಕ್ಷಿಣ ಕನ್ನಡ ಗ್ರಾಮ ಕೈಗಾರಿಕಾ ಸಂಘ ಮಂಗಳೂರು

ಲೇಖಕ:— ಶ್ರೀ। ದ್ವಾರಕನಾಥ ಲೇ ಛೇ— ಸೇವಾಗ್ರಾಮ, ವಾರ್ಧಾ

(ಖಾದಿ ಜಗತ್ತಿನಿಂದ ಉತ್ತರಿಸಿದ್ದು)

ರಾಜಕೀಯ ದೃಷ್ಟಿಯಿಂದ, ದಕ್ಷಿಣ ಕನ್ನಡವು ಮದ್ರಾಸ್ ಪ್ರಾಂತ್ಯಕ್ಕೂ ಉತ್ತರ ಕನ್ನಡವು ಮುಂಬಯಿ ಪ್ರಾಂತ್ಯಕ್ಕೂ ಸೇರುತ್ತವೆ. ಎರಡೂ ಜಿಲ್ಲೆಗಳು ಒಂದೇ ಆಗಿದ್ದಾಗ್ಯೂ ಭಿನ್ನ ಪ್ರಾಂತ್ಯಗಳಲ್ಲಿ ವಿಭಕ್ತವಾಗಿರುವ ಕಾರಣ, ಇವುಗಳ ನಡುವೆ ಸಹಕಾರ್ಯವಾಗಲು ಅಡಚಣೆಯಾಗಿದೆ ಕಂಟ್ರೋಲ್ ಕಾರಣದಿಂದ ಉತ್ತರ ಕನ್ನಡ ಜಿಲ್ಲೆಯ ನೂಲು ನೆಯಿಸುವದಕ್ಕೆ ದಕ್ಷಿಣ ಕನ್ನಡಕ್ಕೆ ಕಳುಹಿಸಲಿಕ್ಕೆ ಸಾಧ್ಯವಿಲ್ಲ. ದಕ್ಷಿಣ ಕನ್ನಡದಲ್ಲಿ ಶ್ರೀ ನಾರಾಯಣರಾವ್ ಮತ್ತು ಶ್ರೀ. ಪ್ರಭು ಇವರ ಪ್ರಯತ್ನದಿಂದ ದ ಕ ಗ್ರಾಮ ಕೈಗಾರಿಕೆ ಸಂಘವು ಸ್ಥಾಪಿಸಲ್ಪಟ್ಟಿದೆ ಈ ಜಿಲ್ಲೆಯಲ್ಲಿ 4 5 ಉತ್ಪತ್ತಿ ಕೇಂದ್ರ ಮತ್ತು ಅಪ್ಪೇಬಿಕರಿ ಭಂಡಾರಗಳನ್ನು ನಡೆಸುತ್ತಾರೆ ನೆಯಿಗೆ ಸಮಸ್ಯೆಯು ಅವರ ಮುಂದೆಯೂ ಇತ್ತು ಅವರು ದುಬಟಾ ಪದ್ಧತಿಯನ್ನು ಅನುಸರಿಸಿ ಈ ಸಮಸ್ಯೆಯನ್ನು ಬಿಡಿಸಿರುತ್ತಾರೆ ಇವರು ಹುರಿ ನೂಲಿನ ಹಾಸು ಮಾಡಿ ಒಂಟಿ ಎಳೆಯನ್ನು ಅಡ್ಡಕ್ಕೆ ಹಾಕಿ ಖಾದಿ ತಯಾರಿಸುತ್ತಾರೆ ಮಧ್ಯಮ ವರ್ಗದ ಬಾಲಕಿಯರನ್ನು ತರಬೇತು ಮಾಡಿ ತಮ್ಮ ನೆಯಿಗೆ ಕೆಲಸವನ್ನು ಸಾಗಿಸಿದ್ದಾರೆ ಇಂದಿನ ತುಟ್ಟಿಯ ದಿವಸಗಳಲ್ಲಿ ಮಧ್ಯಮ ತರಗತಿಯ ಜನರಿಗೆ ತಮ್ಮ ಉಪಜೀವನ ನಡೆಸುವುದು ಕಷ್ಟವಾಗಿದೆ. ಆದುದರಿಂದ ಮನೆಯ ಹೆಂಗಸರು ಉಪಜೀವನಕ್ಕಾಗಿ ದುಡಿಯುವುದು ಅಗತ್ಯವಾಗಿದೆ ಆದರೆ ಹುಡುಗಿಯರನ್ನು ಕೆಲಸಕ್ಕೆ ಎಲ್ಲಿಗೆ ಕಳುಹಿಸಬೇಕು ಖಾದಿ ಕಾರ್ಯವು ಸ್ತ್ರೀಯರಿಗೆ ಸುರಕ್ಷಿತವಾದ ಒಂದು ಉದ್ಯೋಗವಾಗಿದೆ ಅಲ್ಲಿಯ ಜನರು ಇದನ್ನು ತಿಳಿಯಹತ್ತಿದ್ದಾರೆ ಸಮಿತಿಯವರಲ್ಲಿ ಹುಡುಗಿಯರ ಕೆಲವು ಅರ್ಜಿಗಳು ಬಂದಿವೆ ಸುಮಾರು ಹದಿನಾರು ಹುಡುಗಿಯರು ಬಂಟ್ವಾಳದಲ್ಲಿ ಪರಿಶ್ರಮಾಲಯ ಪದ್ಧತಿಯ ಮೇಲೆ ಒಂದೇ ಜಾಗದಲ್ಲಿ ನೆಯ್ಯುತ್ತಿದ್ದಾರೆ ಇನ್ನು ಮುಂದೆ ಹುಡುಗಿಯರಿಗೆ ತಂತಮ್ಮ ಮನೆಗಳಲ್ಲಿ ಕೆಲಸ ಕೊಟ್ಟು ಪುನಃ ಹದಿನಾರು ಹುಡುಗಿಯರನ್ನು ತರಬೇತಿಗೆ ತೆಗೆದುಕೊಳ್ಳುವದನ್ನು ಸಮಿತಿಯವರು ಆಲೋಚಿಸುತ್ತಿದ್ದಾರೆ ಛಾಪಾ ಹಾಕುವ ಕೆಲಸವನ್ನು ಕೂಡಾ ಈ ರೀತಿಯಲ್ಲಿ ಹುಡುಗಿಯರಿಂದ ಒಳ್ಳೇ ರೀತಿಯಲ್ಲಿ ಮಾಡಿಸುತ್ತಿದ್ದಾರೆ ನೆಯಿಗೆಯವರ ಅಭಾವದ ಈ ದಿನಗಳಲ್ಲಿ ಈ ಪ್ರಯೋಗವು ಇನ್ನಿತರ ಕಡೆಗಳಲ್ಲಿಯೂ ಮಾಡಿ ನೋಡಲು ಯೋಗ್ಯವಾಗಿದೆ. ಸಮಿತಿಯ ಲೆಖ್ಖಪತ್ರ, ಮಾಲು ಇತ್ಯಾದಿ ಎಲ್ಲಾ ವ್ಯವಸ್ಥಿತ ರೀತಿಯಿಂದ ಇಟ್ಟಿರುತ್ತಾರೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಮಳೆಯಾಗುವದರಿಂದ ಹತ್ತಿಯ ಬೆಳೆ ಅಲ್ಲಿ ಆಗುವದಿಲ್ಲ. ಪರಂತು ಉದ್ದ ಎಳೆಯ ಕಡಲುಗಡ್ಡೆ ಹತ್ತಿಯು, ಹೆಚ್ಚು ಮಳೆಯಿರುವ ಪ್ರದೇಶಗಳಲ್ಲಿ ಸಹಾ ಬೆಳೆಯುತ್ತದೆ ಇದನ್ನು ಬೆಳೆಸುವ ಏರ್ಪಾಡು ಸಹಾ ಈ ಜಿಲ್ಲೆಯಲ್ಲಿ ನಡೆದವೆ.

ವಾರದ ವಿಜ್ಞಾನ ವಾರ್ತೆಗಳು

1939ರಲ್ಲಿ ಬಿಲ್ಲಿಗ್ಲಾಸ್ ಎಂಬ ಸಂಗೀತ ವಾದ್ಯ ನಿಪುಣನು ನ್ಯೂಯೋರ್ಕಿನ ವಿಶ್ವ ವಸ್ತು ಪ್ರದರ್ಶನಕ್ಕೆ ಹೋಗಿದ್ದ. ಅಲ್ಲಿ ಅವನು ಹೊಸ ಹೊಸ ಗಾಜಿನ ಉಪಕರಣಗಳನ್ನು ಕಂಡು ಬೆರಗಾಗಿ ಕೊನೆಗೆ ಪ್ಲೆಸ್ಟಿಕಿನ ಮುರಿಯದ ಗಾಜಿನಿಂದ ಸಂಗೀತ ಉಪಕರಣಗಳನ್ನು ಮಾಡಲು ಸಾಧ್ಯವಿದೆಯೇ ಎಂದು ಅಲ್ಲಿನ ತಜ್ಞರನ್ನು ವಿಚಾರಿಸಿದ ಅವರು ನಕ್ಕರು. ನಿರಾಶನಾಗದೆ ಕೆಲವು ಪ್ಲೆಸ್ಟಿಕಿನ ತುಂಡುಗಳನ್ನು ತೆಗೆದುಕೊಂಡು ಗ್ಲಾಸನು ತನ್ನ ಅಡಿಗೆ ಕೋಣೆಯಲ್ಲಿ ಬಿಸಿ ಮಾಡಿ ಬೇಕಾದ ಹಾಗೆ ಬಗ್ಗಿಸಿ ಒಂದು ಪಿಟೀಲು ತಯಾರು ಮಾಡಿದ ಅದರ ಸ್ವರವು ಅತ್ಯುತ್ತಮವಾಗಿತ್ತು ನಂತರ ಒಂದೊಂದಾಗಿ ಬೇರೆ ವಾದ್ಯಗಳನ್ನು ತಯಾರಿಸಿದ ಈಗ ಇಂತಹ ಗಾಜಿನ ವಾದ್ಯಗಳನ್ನು ಮಾಡುವ ಒಂದು ಕಾರ್ಖಾನೆಯೇ ಅಲ್ಲಿ ಸ್ಥಾಪಿಸಲ್ಪಟ್ಟಿದೆ

卐

ಕುಂಟರಿಗೆ ನಡೆ

ನ್ಯೂಯೋರ್ಕಿನ ಊನ ಸಹಾಯಕ ಸಂಘದವರು ಅಂಗಹೀನರಿಗೆ ಸಾಧ್ಯವಿದ್ದಷ್ಟು ತಮ್ಮ ಅವಯವಗಳನ್ನುಪಯೋಗಿಸಲು ಕಲಿಸುವರು ನಮ್ಮ ಶರೀರದ ಯಾವುದಾದರೂ ಒಂದು ಉಪಯುಕ್ತ ಅಂಗವು ಕಳಚಿ ಹೋದರೆ ಇಲ್ಲವೆ ಆಕಸ್ಮಾತ್ ಘಟನೆಯಿಂದ ನಿರುಪಯುಕ್ತವಾದರೆ ಬೇರೊಂದು ಅಂಗವು ಅದರ ಕೆಲಸವನ್ನು ಮಾಡುವಂತೆ ದೇವರು ಈ ಮಾನವ ಶರೀರಕ್ಕೊಂದು ವಿಶೇಷ ಶಕ್ತಿ ಕೊಟ್ಟಿದ್ದಾನೆಂದು ಅಲ್ಲಿನ ಡಾ। ಜೊರ್ಜ್ ಡಿವರರು ತಿಳಿಸುತ್ತಾರೆ ಅಂಗಹೀನರಿಗೆ ಬೇರೆ ಬೇರೆ ತರದ ವ್ಯಾಯಾಮಾಭ್ಯಾಸಗಳಿಂದ ಚಲನವಲನ ಕ್ರಿಯಾಶಕ್ತಿಗಳನ್ನುಂಟುಮಾಡಲು ಇಲ್ಲಿ ಪ್ರಯತ್ನಗಳಾಗುತ್ತವೆ

卐

ಮಾಯವಾಗುವ ಶೀತ

ಹಿಮವಲಯದಲ್ಲಿರುವ ಗ್ರೀನ್‌ಲೆಂಡ್ ಪ್ರದೇಶದಲ್ಲಿನ ಹಿಮವು ಕಡಿಮೆಯಾಗುತ್ತಾ ಬರುತ್ತಿದ್ದು ಅಲ್ಲಿ ಹೆಚ್ಚೆಚ್ಚು ಹಸಿರು ಹುಲ್ಲು ಬೆಳೆಯಲಾರಂಭವಾಗುತ್ತದೆಂದು ಸ್ಟೊಕ್ ಹೋಮ್ ವಿಶ್ವವಿದ್ಯಾಲಯದ ಭೂಗೋಳ ಶಾಸ್ತ್ರಜ್ಞರಾದ ಡಾ। ಅಲ್ಮೆನ್ನರು ತಿಳಿಸುತ್ತಾರೆ ಹಲವು ವರ್ಷಗಳಿಂದ ಡಾ। ಅಲ್ಮೆನರು ಈ ಪ್ರದೇಶಗಳ ದಾಖಲೆಗಳನ್ನು ತೆಗೆಯುತ್ತಿದ್ದಾರೆ 19ನೇ ಶತಮಾನದಿಂದ ಈ ಪ್ರದೇಶಗಳು ಉಷ್ಣವಾಗಹತ್ತಿವೆಯೆಂದವರ ಸಂಶೋಧನೆ ತಿಳಿಸುತ್ತದೆಯಂತೆ. 1300ರಲ್ಲಿ ಗ್ರೀನ್‌ಲೆಂಡಿನಲ್ಲಿ ತುಂಬಾ ಹುಲ್ಲಿದ್ದು ಕುರಿಮಂದೆಗಳಿದ್ದ ದಾಖಲೆಯಿದೆ ಆಗೊಂದು ಶೀತ ಪ್ರಭಾವವಾರಂಭವಾಗಿ ಹುಲ್ಲು ಇಲ್ಲದಾಯಿತು, ಕುರಿಗಳೂ ಮನುಷ್ಯರೂ ಮಡಿಯಲಾರಂಭಿಸಿದರು. ನಂತರ ಈಗ ಉಷ್ಣ ಪ್ರಭಾವ ಪ್ರಾರಂಭವಾಗಿರುವುದು ಶುಭಲಕ್ಷಣವೆಂದವರ ಅಭಿಪ್ರಾಯ.

卐

ಹೊಸ ಮುದ್ರಾ ಯಂತ್ರ

ಬ್ರಿಟನಿನಲ್ಲೊಂದು ಹೊಸ ಅಚ್ಚು ಯಂತ್ರ ರಚಿಸಲಾಗಿದೆ ಈಗಿರುವ ಯಂತ್ರಗಳಿಗಿಂತ ಸುಮಾರು 80 ಸಣ್ಣಪುಟ್ಟ ಭಾಗಗಳು ಇದರಲ್ಲಿ ಇಲ್ಲದುದರಿಂದ ಹಾಳಾಗುವ ಸಂಭವ ಕಡಿಮೆ, ದುರುಸ್ತಿ ಮಾಡುವುದೂ ಸುಲಭ ಇದರಲ್ಲಿ ಅತೀ ತೆಳ್ಳಗಿನ ಕಾಗದವನ್ನೂ ಉಪಯೋಗಿಸಬಹುದು ಬಹಳ ಕಮ್ಮಿ ಉಪಭಾಗಗಳಿರುವುದರಿಂದ ಮುದ್ರಿಸಲ್ಪಟ್ಟ ಹಾಳೆಯು ಮುದ್ರಕನ ದೃಷ್ಟಿಯಲ್ಲಿ ಸ್ಪಷ್ಟವಾಗಿಯೇ ಇರುತ್ತದೆ ಅದು ಕವಚಿಸುತ್ತುವುದಾಗಲಿ, ಇತರ ಉಪಕರಣಗಳ ಹಿಂದೆ ಬಿದ್ದು ಕಾಣದೆ ಇರುವುದೆಂದಾಗಲಿ ಇಲ್ಲ

卐

ಬ್ರಿಟಿಷ್ ರಾಷ್ಟ್ರಕ್ಕೆ ಎಟ್ಲಿ ಸರಕಾರವು ಗಂಡಾಂತರವನ್ನು ತಂದೊಡ್ಡಿದೆ ಎಂದು ಚರ್ಚಿಲ್ಲರ ಗರ್ಜನ ತಾವೇ ಮುಗಿಸಿದ ಯುದ್ಧದ ಪರಿಣಾಮ ಅದೆಂಬುದು ಈ ಮಾಜಿ ಮುಖಿ ಪ್ರಧಾನರಿಗೆ ಹೇಗೆ ಹೊಳೆದೀತು

★

For Sale

22⅞ mooras rice property threefourth Chalageni, 8 crops seaside, 4 miles from Mangalore, absentee owner, respectable tenents, rent collections very regular, no arrears, at 8 mooras or near offer, no brokers, Address offers to

Box No 128

c/o Swadeshabimani,
Mangalore.







ಸದಸ್ಯ ಸಂಪತ್ತು

ಕನ್ನಡ ಸಾಹಿತ್ಯ ಸಂಸ್ಕೃತಿಗಳ ನಂದಾದೀಪ ಕಂಪದೆ ಉಜ್ವಲವಾಗಿ ಬೆಳಗಿ, ಕಾವೇರಿಯಿಂದ ಗೋದಾವರಿ ವರೆಗಣ ನಲೆಯೆಲ್ಲವನ್ನೂ ಬೆಳಗಿಸುವ ಮಹತ್ಕಾರ್ಯಕ್ಕಾಗಿಯೆ ಹಗಲಿರುಳೂ ಶ್ರಮಿಸುತ್ತಿರುವ, ಮುಂದೆ ತನ್ನ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿ ಈ ಸ್ವಾತಂತ್ರ್ಯ ಸಮಯದಲ್ಲಿ ಎಲ್ಲ ಕನ್ನಡಿಗರಿಗೂ ತಮ್ಮ ನುಡಿಯ ಬಗ್ಗೆಯೂ ಹಿಂದಿನ, ಈಗಿನ ಸಾಹಿತಿಗಳ ಮತ್ತು ಅವರ ಕೃತಿಗಳ ಪ್ರಯೋಜನದ ಬಗ್ಗೆಯೂ ಅರಿವನ್ನು ಬೀರಿ ಮಮತೆಯನ್ನು ದೃಢಪಡಿಸಲೋಸುಗ ಶ್ರಮಿಸಲಿರುವ, ಏಕೈಕ ಸಂಸ್ಥೆಯೆಂದು ಜನಪ್ರಿಯವಾದ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ಸಂಪತ್ತಿನ ವಿಷಯವಾಗಿ ಒಂದೆರಡು ಮಾತುಗಳನ್ನು ಆಡಲು ಇಲ್ಲಿ ಧೈರ್ಯ ವಹಿಸುವುದು ಯಾವ ದೃಷ್ಟಿಯಿಂದಲೂ ಅನುಚಿತವೆನಿಸಲಾರದು.

ಈಗ್ಗೆ ನಾಲ್ಕು ವರುಷಗಳಿಂದಲೂ ಪಾಲ್ಕಿಯಂತೆ ಹೆಚ್ಚಿದ ಸದಸ್ಯ ಸಂಪತ್ತು ಇದೀಗ ಇಳಿಯುವ ಸೂಚನೆ ಕಾಣುತ್ತಿರುವುದು ಇಂದಿನ ಮಹತ್ವದ ಕಾಲಕ್ಕೆ ಶುಭ ಸೂಚನೆಯೆಂದು ತೋರುವುದಿಲ್ಲ. ಸದಸ್ಯರಾದವರು ಮೊತ್ತ ಮೊದಲು ತಾವು ಪರಿಷತ್ತಿಗೆ ಸಲ್ಲಿಸಿದ ಸದಸ್ಯತ್ವದ ಕಾಣಿಕೆಯ ನೆರವಿನಿಂದ ಈ ನಾಲ್ಕು ವರ್ಷಗಳೂ ಅದರ ಸೇವೆಯ ಫಲವನ್ನು ಪಡೆಯುತ್ತಿದ್ದಾರೆ. ಈ ಪಂಗಡಕ್ಕೆ ಸೇರಿದ ಸದಸ್ಯ ಮಹಾಶಯರ ಮರವಿನಿಂದಲೊ ಅನಾದರದಿಂದಲೊ ಪರಿಷತ್ಸಂಸ್ಥೆಗೆ ಈಗ ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮೀರಿದಷ್ಟು ಮೊತ್ತದಲ್ಲಿ ಸದಸ್ಯತ್ವದ ಕಾಣಿಕೆ ಬರಬೇಕಾಗಿದೆ. ಈ ವಿಷಯವನ್ನು ನಾವು ಬಹು ಸಂಕೋಚಪಟ್ಟುಕೊಂಡ ಗತ್ಯಂತರವಿಲ್ಲದೆ ಇಲ್ಲಿ ಬರೆಯಬೇಕಾಗಿದೆ. ಪರಿಷತ್ತಾದರೂ ಹಾಗೆ ಸದಸ್ಯತ್ವದ ಕಾಣಿಕೆಯನ್ನು ನಿಲ್ಲಿಸಿಕೊಂಡಿರುವ ಮಹನೀಯರಿಗೆ ಆಗಿಂದಾಗ ತಿಳಿವಳಿಕೆಗಳನ್ನು ಕೊಡುತ್ತಲೆ ಬಂದಿದೆ. ಆದರೂ ಇದರ ಫಲವು ನಾವು ನಿರೀಕ್ಷಿಸಿದಷ್ಟು ದೊರಕುತ್ತಿಲ್ಲ. ಇದು ಪರಿಷತ್ತು ಈಗ ಕೈಕೊಳ್ಳಬೇಕೆಂದಿರುವ ಅನೇಕ ಆತುರದ ಕಾರ್ಯಗಳಿಗೆ ಅಡ್ಡಿಯಾಗಿ ಪರಿಣಮಿಸಿದೆ. ಅಲ್ಲದೆ ಸದಸ್ಯತ್ವದ ಕಾಣಿಕೆಯನ್ನು ನಿಲ್ಲಿಸಿಕೊಂಡಿರುವ ಮಹನೀಯರಿಗೆ ಪರಿಷತ್ ಪತ್ರಿಕೆಗಳನ್ನು ಕಳಿಸಿ ಸಂಸ್ಥೆಗೆ ನಷ್ಟಮಾಡಿಕೊಳ್ಳಲಾಗುವುದಿಲ್ಲವೆಂಬುದನ್ನು ಇಲ್ಲಿ ತಿಳಿಸಬೇಕಾಗಿದೆ.

ನಾಡು ನುಡಿಗಳ ಬಗೆ ಅಭಿಮಾನವಿರುವವನ್ನು ಸದಸ್ಯ ಮಹಾಶಯರು ಪರಿಷತ್ತಿನ ಅಭ್ಯುತ್ತರಗಳಿಗೆ ಮತ್ತಷ್ಟು ಪ್ರೋತ್ಸಾಹವನ್ನು ಕೊಟ್ಟೇ ಕೊಡುತ್ತಾರೆಂಬ ನಂಬುಗೆಯಿಂದ ಅವರಲ್ಲಿ ನಾವು ಈ ಎರಡು ಮಾತುಗಳನ್ನು ವಿನಯದಿಂದ ವಿಜ್ಞಾಪಿಸಿಕೊಂಡಿದ್ದೇವೆ. ಈ ನಮ್ಮ ವಿಜ್ಞಾಪನೆಯನ್ನು ಸಫಲಗೊಳಿಸುವುದು ಸದಸ್ಯರ ಕರ್ತವ್ಯ. ಪರಿಷತ್ತಿಗೆ ಸದಸ್ಯ ಸಂಖ್ಯೆ ಹೆಚ್ಚಬೇಕಾಗಿದೆ. ನೂರರ ಸಂಖ್ಯೆ ಸಾಲದು, ಸಾವಿರದ ಸಂಖ್ಯೆಯಲ್ಲಿ ಹೆಚ್ಚಬೇಕಾಗಿದೆ. ನಾಡಿನ ಎರಡು ಕೋಟಿ ಕನ್ನಡಿಗರು ಈ ಕಡೆಗೆ ತಮ್ಮ ದೃಷ್ಟಿಯನ್ನು ಬೀರುವರೆಂಬ ಭರವಸೆ ನಮಗಿದೆ.

—'ಕನ್ನಡ ನುಡಿ'

ಶ್ರೀ ರಜಕ ಸಂಘ ಮುಂಬಯಿ

ನಮ್ಮೀ ಸಂಘವು ರಜಕ (ಅಗಸ) ಜಾತಿಯ ಬಡವಿದ್ಯಾರ್ಥಿ ವಿದ್ಯಾರ್ಥಿನಿಯರು ವಿದ್ಯಾರ್ಥಿವೇತನವನ್ನು ಬಯಸಿ ಅರ್ಜಿಗಳನ್ನು ಕಳುಹಿಸಿದಲ್ಲಿ, ಅಂತಹ ಅರ್ಜಿಗಳನ್ನು ಪರಿಶೀಲಿಸಿ, ಒಂದನೇ ಕ್ಲಾಸಿನಿಂದ ಮೆಟ್ರಿಕ್ಯುಲೇಶನಿನ ವರೆಗೆ ವಿದ್ಯಾರ್ಥಿವೇತನವನ್ನು ಕೊಡುವುದು.

ಆದ ಪ್ರಯುಕ್ತ ವಿದ್ಯಾರ್ಥಿವೇತನವನ್ನು ಬಯಸಿ ಅರ್ಜಿಗಳನ್ನು ಕಳುಹಿಸುವವರು ದಯಮಾಡಿ ಈ ಕೆಳಗಿನ ವಿಳಾಸಕ್ಕೆ ತಾ. 31-8-47ರ ಒಳಗೆ ರವಾನಿಸಬೇಕಾಗಿ ವಿನಂತಿ ಎಂಬುದಾಗಿ,

ಪೂವಪ್ಪ ಕೆ. ಕುಂದರ್,
ಗೌ. ಕಾರ್ಯದರ್ಶಿ.
ರಜಕ ಸಂಘದ ಪರವಾಗಿ ತಿಳಿಸುತ್ತಾರೆ.

ವಿಳಾಸ
KULSUMTERACE,
Back Side, 2nd Floor, Room No. 4
Walton Road, BOMBAY 1.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುಭಾಸರ ಪಾತ್ರ

ಗಾಂಧೀ ಪಕ್ಷ ಸೋಲಿಸಿದ ಅಗಾಧ ವ್ಯಕ್ತಿ

ಕೋಲೇಜಿನಲ್ಲಿ ಕಲಿಯುವಾಗ ಆಂಗ್ಲ ಪ್ರೊಫೆಸರನೊಬ್ಬನು ಭಾರತೀಯ ಜನಾಂಗಕ್ಕೆ ಹೀನೈಸಿ ಮಾತನಾಡಿದನೆಂದು ಪರಿತಪಿತರಾದ ಸುಭಾಸರು ಅವನ ಕೆನ್ನೆಗೊಂದು ಕೊಟ್ಟು ಮೊದಲಿನ ಸಲಿಕ್ಕೆ ಜನಪ್ರಿಯರಾದರು. ಒಮ್ಮೊಮ್ಮೆ ಸನ್ಯಾಸಿಯ ಮನೋಭಾವದಿಂದಲೂ ಅವರು ಪ್ರೇರೇಪಿತರಾಗಿ ಹಿಮಾಲಯದ ಸಾಧುಗಳನ್ನರಸಿ ಓಡಿಹೋದುದೂ ಉಂಟು. ಮತ್ತು ಮನೆತಿರುಗಿ ದೊಡ್ಡ ಐ ಸಿ ಎಸ್ ಅಧಿಕಾರಿಯಾಗಲೂ ಇಂಗ್ಲೆಂಡಿಗೆ ಹೋಗಿದ್ದಾರೆ. ಆ ಹುದ್ದೆ ಸಿಕ್ಕಿದಾಕ್ಷಣ ಅವರಿಗದು ಬೇಡವಾಯಿತು. ಕಲೆಕ್ಟರರ ಕೆಲಸಕ್ಕೆ ರಾಜಿಕೊಟ್ಟು ಸ್ವಯಂಸೇವಕ ವ್ಯಕ್ತಿ ಕೈಕೊಂಡದ್ದೂ ಉದಾತ್ತ ತ್ಯಾಗಾದರ್ಶದ ನಿದರ್ಶನ.

ಇಂತಹ ಹಲವು ಚಮತ್ಕಾರಿಕವಾಗಿ ತೋರುವ ನಾಟಕೀಯ ಘಟನೆಗಳಿಂದ ಮೇಳೈಸಿದ ಮೇಲೆ ಸುಭಾಸ್ ಬೋಸರು ಭಾರತೀಯ ಜನಾಂಗದ ಅತ್ಯಂತ ಮೆಚ್ಚಿಗೆಯ ಸಾಹಸ ಪುರುಷರಾದರು. ಶಿವಾಜಿಯ ಸಾಹಸ, ಪ್ರತಾಪನ ವೈರಾಗ್ಯ, ವಿದ್ಯಾರಣ್ಯ ದೃಷ್ಟಿ, ವಿವೇಕಾನಂದರ ಸ್ಫೂರ್ತಿ, ಗಾಂಧಿಯ ಸೇವಾಸಕ್ತಿ, ಜವಾಹರರ ಆವೇಶಪೂರ್ಣ ದೇಶಾಭಿಮಾನ ಇವೆಲ್ಲವೂ ಒರ್ವ ಸುಭಾಸರಲ್ಲಿ ರೂಪುಗೊಂಡಿದ್ದುವು. ಹೀಗಾಗಿ ಅವರು ಒಮ್ಮೊಮ್ಮೆ ಸಲಿಕ್ಕೆ ಅಪೂರ್ವ ಮಹಾಪುರುಷನಂತೆ ದೇಶ ಕಾಲ ಪರಿಸ್ಥಿತಿಗನುಕೂಲವಾಗಿ ತಮ್ಮ ಅದ್ವಿತೀಯ ವ್ಯಕ್ತಿತ್ವದ ಅಪೂರ್ವ ಉನ್ನತಿಗೇರಿದ್ದಾರೆ.

ಪ್ರಾರಂಭದಲ್ಲಿ ಸುಭಾಸರು ನಾಗರೀಕ ವ್ಯವಹಾರದಲ್ಲಿ ಮಗ್ನರಾಗಿ ಕಲ್ಕತ್ತಾ ನಗರಸಭೆಯಲ್ಲಿ ಸಿ ಆರ್ ದಾಸರ ನೇತೃತ್ವದಲ್ಲಿ ದುಡಿದರು. ನಂತರ ಹಿಡಿದ ಕ್ರಾಂತಿಕಾರಕ ಚಟುವಟಿಕೆಗಳು ಅವರನ್ನಾಕರ್ಷಿಸಿದುವು. ನೇರ ವಿನಾಶಕತನಕ್ಕೆ ಸಂಬಂಧವಾದ ಇದ್ದು ವ ಚಟುವಟಿಕೆಯೇ ಇರಲಿ ಸುಭಾಸರಿಗೆ ಅದರಲ್ಲಿ ಸಹಾನುಭೂತಿಯಿದೆ. ಅವರಿಗೆ ಹಿಂಸಾಹಿಂಸೆಯ ತತ್ವ ಘರ್ಷಣೆಯ ತಾಪತ್ರಯವಿಲ್ಲ. ಯಾವ ತತ್ವವನ್ನೂ ಅವರು ತಮ್ಮದನ್ನಾಗಿ ಮಾಡಿಕೊಂಡವರಲ್ಲ. ಸಮಯಕ್ಕೆ ಗಾಂಧೀ ತತ್ವವನ್ನೂ ಒಪ್ಪುವರು. ಸಮತಾವಾದಕ್ಕೂ ಮನ್ನಣೆಯೀಯುವರು.

ಭಾರತೀಯ ಸಾಹಿತ್ಯ ಸಂಸ್ಕೃತಿಗಳ ಪ್ರಚಾರ ನಡೆಸಿ ಸುಭಾಸರು ಕೆಲವು ವರ್ಷ ಯುರೋಪಿನಲ್ಲಿ ಸಂಚರಿಸಿದ್ದಾರೆ. ನಮ್ರ ಶಾಂತಿ ಪ್ರಚಾರಕರಿಂದ ಹಿಡಿದು ಉಗ್ರ ನಾಜಿ, ಫೆಸಿಸ್ಟ್, ಮತ್ತು ಕೊಮ್ಯುನಿಸ್ಟ್ ಮುಖಂಡರೊಡನೆಯೂ ಅವರು ಸ್ನೇಹ ಸಂಪರ್ಕ ಬಳೆಸಿದ್ದರು. ಹಿಟ್ಲರನು ಭಾರತೀಯರನ್ನು ತುಚ್ಛೀಕರಿಸಿ ಮಾತನಾಡಿದಾಗ ಜರ್ಮನಿಯಲ್ಲಿದ್ದ ಸುಭಾಸರು ನಾಜೀ ಮುಖಂಡನ ಭಾಷಣವನ್ನು ಖಂಡಿಸಿ ಪತ್ರ ಬರೆದರು.

ಎಲ್ಲಿ ಹೋದರೂ ಅವರು ತಮ್ಮ ದೇಶಾಭಿಮಾನ ವ್ಯಕ್ತಿ ಸ್ವಾತಂತ್ರ್ಯಗಳಿಗೆ ಲೋಪ ಬರದಂತೆ ನೋಡಿಕೊಳ್ಳುತಿದ್ದುದು ಅವರ ಸ್ವಾಭಿಮಾನ ಪ್ರವೃತ್ತಿಯ ಲಕ್ಷಣವಾಗಿತ್ತು. ಟೋಕಿಯೋದ ಒಂದು ಸಭೆಯಲ್ಲಿ ಯುದ್ಧ ಕಾಲ ಪ್ರಧಾನಿ ಟೋಜೋನು "ನಾವು ಭಾರತವನ್ನು ಗೆದ್ದಾಗ ಸುಭಾಸರನ್ನು ಅದರ ಅಧ್ಯಕ್ಷರನ್ನಾಗಿ ಮಾಡುವೆವು" ಎಂದನಂತೆ. "ನನ್ನನ್ನು ಅಧ್ಯಕ್ಷರನ್ನಾಗಿ ಮಾಡಲು ನೀವು ಯಾರು? ಆ ಹಕ್ಕು ಭಾರತೀಯರದೇ ಇರುತ್ತದೆ" ಎಂದುದು ಅವರ ಪ್ರಜಾಪ್ರಭುತ್ವ ಪ್ರಿಯತೆಯ ಒಂದು ಗಣನೀಯ ನಿದರ್ಶನ. ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಅವರು ಸರ್ವಾಧಿಕಾರತ್ವದ ಲಕ್ಷಣಗಳನ್ನು ತೋರಿಸುತಿದ್ದರು. ಸರ್ವಾಧಿಕಾರತ್ವದೊಡನೆ ಹೋರಾಡುವಾಗ ಸರ್ವಾಧಿಕಾರತ್ವವನ್ನೇ ತೋರಿಸಬೇಕೆಂಬುವವರ ಆಪ್ತ ತತ್ವವೇ ಆಗಿತ್ತು. ಈ ಕಾರಣಕ್ಕಾಗಿ ಅವರ ದೇಶಭಕ್ತಿಯಲ್ಲಿ ಸಂದೇಹ ತಾಳುವ ಯಾವ ಕಾರಣವೂ ಇಲ್ಲ.

ಮಹಾತ್ಮ ಗಾಂಧಿಯವರು ಬ್ರಿಟಿಷ್ ಸಾಮ್ರಾಜ್ಯಶಾಹಿತ್ವವನ್ನು ನಾಶಮಾಡುವ ಕಾರ್ಯವನ್ನು ಪರದೇಶದಲ್ಲಿ ಪ್ರಾರಂಭಿಸಿದರು—ದ. ಆಫ್ರಿಕದಲ್ಲಿ. ಸುಭಾಸರು ಪರದೇಶದಲ್ಲಿದ್ದುಕೊಂಡು ಪ್ರತ್ಯಕ್ಷ ಸೈನ್ಯವೊಂದನ್ನೇ ತಯಾರಿಸಿ ಅದೇ ಸಾಮ್ರಾಜ್ಯಶಾಹಿಯ ಅಂತ್ಯವನ್ನಾರಂಭಿಸಿ, ಶೀಘ್ರಗೊಳಿಸಿದರು. ಭಾರತೀಯರ ಸ್ವಾತಂತ್ರ್ಯ ಅರ್ಹತೆಗೆ ಸುಭಾಸರ ಸಾಹಸವು ಒಂದು ಪ್ರಬಲ ಕಾರಣವೆಂಬುದು ಚಿರಸ್ಮರಣೀಯವಾದ ಸಂಗತಿ. ಗಾಂಧಿಜಿಯವರು ಹಳೇ ದೇಶಾಭಿಮಾನಿಗಳ ಬೆಂಬಲವಿದ್ದವರಾಗಿ ತರುಣರಿಂದ ಆದರಿಸಲ್ಪಡುತಿದ್ದರೆ ಸುಭಾಸರು ಎಲ್ಲಾ ವರ್ಗದವರಿಂದ ಸನ್ಮಾನಿಸಲ್ಪಡುತಿದ್ದರು.

ಇಂದು ಅವರ ಅಸ್ತಿತ್ವದ ಕುರಿತು ನಿಜಸ್ಥಿತಿ ತಿಳಿದುಬಂದಿಲ್ಲ. ಆದರೂ ಜನತೆಯು ಅವರ ಬರುವಿಕೆಯನ್ನು ಸದಾ ಉತ್ಸಾಹದಿಂದ ಎದುರುನೋಡುತ್ತಿದೆ. ಇದಕ್ಕೆ ಆ ವಂಗವೀರನ ಅಸಾಮಾನ್ಯ ಶೌರ್ಯ ಸಾಹಸ ಕಾರ್ಯಗಳೇ ಕಾರಣ. ಔರಂಗಜೇಬನ ಸೆರೆಯಿಂದ ಶಿವಾಜಿಯು ತಪ್ಪಿಸಿಕೊಂಡದ್ದಕ್ಕಿಂತ ಸುಭಾಸರು ಜಾಣಾಕ್ಷ ಬ್ರಿಟಿಷ್ ಬೇಹುಗಾರರ ಕಣ್ಣಿಗೆ ಮಣ್ಣೆರಚಿ ಪಾರಾದುದು ಇತ್ತೀಚೆಗಿನ ಇತಿಹಾಸದಲ್ಲಿ ಅತ್ಯಂತ ನಾಟಕೀಯವಾದ ಘಟನೆ. ಆದುದರಿಂದಲೇ ಜನತೆಗೆ ಅವರ ಮೇಲೊಂದು ಅಪೂರ್ವವಾದ ವಿಶ್ವಾಸ. ಅವರು ಇಂದು ಇರಲಿ ಇಲ್ಲದಿರಲಿ ಅವರ ಕೀರ್ತಿಯು ಅಜರಾಮರವಾದುದೆಂಬುದರಲ್ಲಿ ಸಂದೇಹವಿಲ್ಲ. ಅವರಿಂದು 'ಜೈ ಹಿಂದ್' ಎಂಬೀ ಘೋಷವನ್ನು ಭಾರತಕ್ಕೆ ಕೊಟ್ಟು ಜನಜನಿತರಾಗಿದ್ದಾರೆ. ಅದು ನವಭಾರತದ ಸ್ಫೂರ್ತಿ ಘೋಷವಾಗಿದೆ. ಸುಭಾಸರಷ್ಟೇ ಅದು ಅಮರವಾದುದು. ಭಾರತಮಾತೆಯು ತನ್ನ ವೀರ ಪುತ್ರನನ್ನೆಂದಿಗೂ ಮರೆಯಲಾರಳು.

ಪ್ರಯಾಣಿಕರಿಗೆ ಸೂಚನೆ.

ಪಕ್ರತ ಮಾರುಕಟ್ಟೆಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ ಕೆಲವು ಲೈನುಗಳಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲೈನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶಲುಗಳನ್ನು ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ. ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs 16,00,000
Capital Paid up	Rs. 15,98,220
Reserves ..	Rs. 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ,
ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೈ ಲ್ಯಾಫ್ ಎಸ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟದ್ದು)

ಪ್ರಧಾನ ವಿಮಾ ಸಂಸ್ಥೆ

1945ರ ವ್ಯವಹಾರ – 2,77,23,000

1946ರ „ – 3,28,21,200

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್.

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)

ತಿರುವಾಂಕೂರು, ಕೊಚ್ಚಿ ಮತ್ತು ಮೈಸೂರನ್ನೊಳಗೊಂಡ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.

1945ರ ನಮ್ಮ ವ್ಯವಹಾರ – 49,85,500

1946ರ „ „ – 53,82,250

ಈಗಿನ ಪರಿಸ್ಥಿತಿ ಮತ್ತು ಬಡ್ಡಿದರ ಪ್ರಮಾಣಕ್ಕನುಗುಣವಾಗಿ ನಮ್ಮ ಪ್ರಿಮಿಯಮ್ ದರಗಳನ್ನು ಇದೇ ತಾ 1-8-47ರಿಂದ ಪುನರಾವರ್ತಿಸಲು ಬೊಂಬೇ ಲ್ಯಾಫ್ ಸಂಸ್ಥೆಯು ನಿರ್ಧರಿಸಿರುವುದನ್ನು ನಮ್ಮ ಎಲ್ಲಾ ವೈದ್ಯ ಪರೀಕ್ಷಕರಿಗೂ, ಪೋಲಿಸಿ ಹೊಲ್ಡರರಿಗೂ, ಸ್ನೇಹಿತ ಹಿತೈಷಿಗಳಿಗೂ ತಿಳಿಸುವುದು ನಮ್ಮ ಕರ್ತವ್ಯವೆಂದೆಣಿಸುತ್ತೇವೆ. ಈಗವರು ಹಿಂದಿನ ಕಮ್ಮಿ ದರದಲ್ಲಿ ದೊಡ್ಡ ಪೋಲಿಸಿಗಳನ್ನು ಪಡೆಯಬಹುದು – ಇದರಿಂದ ವರ್ಷಂಪ್ರತಿ ಕಮ್ಮಿಯಾಗಿ [illegible] ದೊರಕಿದಂತಾಗುವುದು. ನಮ್ಮ 2ನೇ ಜುಲಾಯಿ 1947ರ ಸರ್ಕಿಲಾರು ತಲಪಿರದ ಏಜೆಂಟರು ತಮ್ಮ ಗಿರಾಕಿಗಳಿಗೆ 31-7-'47ರ [illegible] ಅದೆಷ್ಟು ಖರ್ಚು ತಗಲುವುದೆಂಬ ವಿವರವನ್ನು ತಿಳಿಸಲು ಕರ್ತವ್ಯಬದ್ಧರಾಗಿರುವುದರಿಂದ, ಅಂಥಾ ಏಜೆಂಟರು ಕೂಡಲೇ ನಮಗೆ ತಂತಿ [illegible]

ಪೋಲಿಸಿ ತೆಗೆದುಕೊಳ್ಳಲಿಚ್ಛಿಸುವವರು ಇವತ್ತೇ ನಮ್ಮ ಈ ಕೆಳಗಿನ ಯಾವದಾದರೂ ಆಫೀಸುಗಳಿಗೆ ಬರೆಯುವುದು.

ಉಡುಪಿ, ಮಂಗಳೂರು, ಕಲ್ಲಿಕೋಟೆ, ಟ್ರಿವೇಂಡ್ರಮ್, ಮಧುರಾ, ಬಂಗಳೂರು, ಬೊಂಬಾಯಿ ಮತ್ತು ಮದ್ರಾಸ್

Bhuvanendra Products Limited,

KATAPADI S. Kanara.

'Bhuvanendra'.

Dashamoolarishta

Prepared with seleted ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಬಹಳ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಹೊಡೆದಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 29—8—1947 [ಸಂಚಿಕೆ 35]

ಪ್ರಥಮಾವಶ್ಯಕತೆ

ಆಹಾರದ ಹಾಹಾಕಾರ ಎಲ್ಲೆಡೆಗಳಲ್ಲೂ ಏಳುತ್ತಿದೆ. ಮುಂದಿನ ತಿಂಗಳು ಈ ದೃಷ್ಟಿಯಿಂದ ಸಂಕಷ್ಟದಾಯಕವೆಂದು ಸರಕಾರಗಳೇ ಸಾರುತ್ತಿವೆ. ಈ ಸಂದರ್ಭದಲ್ಲಿ ಆಹಾರ ವಸ್ತು ಸಂಗ್ರಹ ಕಾರ್ಯವನ್ನು ಅತ್ಯಂತ ಬಿಗುವಾದ ಧೋರಣೆಯಿಂದ ನಿರ್ವಹಿಸುವುದು ಅತ್ಯಾವಶ್ಯಕವೆಂಬುದನ್ನು ಒತ್ತಿ ಹೇಳಬೇಕಾಗುತ್ತದೆ. ಹಳ್ಳಿ ಪ್ರದೇಶಗಳಲ್ಲಿ ಗುಪ್ತ ದಾಸ್ತಾನಿರುವ ದವಸಧಾನ್ಯಗಳನ್ನು ವಶಪಡಿಸಿಕೊಳ್ಳಲು ಅದೆಂತಹ ಕಠಿಣ ವಿಧಾನಗಳನ್ನನುಸರಿಸಿದರೂ ಅಯುಕ್ತವೆನಿಸಲಾರದ ಪರಿಸ್ಥಿತಿಯಿದು. ಇಂತಹ ದುರಂತ ಕಾಲದಲ್ಲಿ ಅನೀತಿ ವ್ಯಾಪಾರಗಳಿಂದಲೂ ಕಳ್ಳಪೇಟೆಯ ರೀತಿಗಳಿಂದಲೂ ಲಾಭಹೊಂದಲು ಪ್ರಯತ್ನಿಸುವವರು ಅತೀ ನೀಚ ದೇಶದ್ರೋಹದ ಅಪರಾಧಕ್ಕೆ ಅರ್ಹರಾಗುವರು. ಅಂಥವರನ್ನು ಮಾರ್ಗಕ್ಕೆ ತರಲು ಮಾಡುವ ಯತ್ನಗಳಲ್ಲಿ ಸರಕಾರಕ್ಕೆ ಬಹುಸಂಖ್ಯಾಕ ಜನತೆಯ ನೈತಿಕ ಬೆಂಬಲವಿರುವುದು.

ಹಿಂದೂಸ್ಥಾನವಲ್ಲ ಒಕ್ಕೂಟದ ಭಾರತ

ಮಿ। ಜಿನ್ನರ ಹಮ್ಮೆಯ ಕಾಂಕ್ಷೆಯನ್ನು ತಣಿಸಲು ಪಾಕಿಸ್ತಾನ ರಚನೆಯಾಗಿದೆಯೇ ಹೊರತು ಭಾರತ ಖಂಡವು ಇನ್ನೂ ಅಖಂಡವಾಗಿ ಉಳಿದಿದೆ ಎಂಬುದು ಅತ್ಯಂತ ಸಮಾಧಾನದ ಸಂಗತಿ. ಇನ್ನೂ ಜಿನ್ನರು ಭಾರತ ಒಕ್ಕೂಟವನ್ನು ಹಿಂದೂಸ್ಥಾನವೆಂದು ಕರೆಯುವ ಕ್ಷುಲ್ಲಕ ಹವ್ಯಾಸವನ್ನು ಬಿಟ್ಟಿಲ್ಲ. ಅವರಿಗೆ ಬೇಕಾಗಿದ್ದದ್ದು ಪಾಕಿಸ್ತಾನವಲ್ಲ. ಭಾರತ ಒಕ್ಕೂಟವನ್ನು ಹಿಂದೂಗಳ ಸ್ಥಾನವೆಂದು ಹೆಸರಿಸಿ, ಕಾಂಗ್ರೆಸು ಹಿಂದೂಗಳ ಪ್ರತಿನಿಧಿ ಸಂಸ್ಥೆ ಎಂಬ ತಮ್ಮ ಹಿಂದಿನ ವೈಮನಸ್ಸಿನ ಅಭಿಪ್ರಾಯವನ್ನು ಋಜುವಾತು ಮಾಡಿ ತೋರಿಸುವ ಪ್ರಯತ್ನದಲ್ಲಿ ಅವರು ಮಗ್ನರಾದಂತೆ ತೋರುತ್ತದೆ. ಈವೊಂದು ಕಾರಣದಿಂದಲೇ ಅವರಿಗೆ ತಮ್ಮ ಹೊಸ ರಾಜ್ಯದಿಂದ ಒಂದಿಷ್ಟೂ ತೃಪ್ತಿಯಾಗಲಿಲ್ಲವೆಂಬ ಸಂಗತಿಯು ಸ್ಪಷ್ಟವಾಗುತ್ತದೆ.

ಬೆರಗಿನ ಐಕ್ಯ

ಮಹಾತ್ಮರು ಹಿಂದು ಮುಸ್ಲಿಂ ಐಕ್ಯತೆಯ ತಮ್ಮ ದೀರ್ಘಕಾಲದ ಪರಿಶ್ರಮದಲ್ಲಿ ಈಗಲಾದರೂ ಪರಿಣಾಮಕಾರಿಯ ಶಿಸ್ತನ್ನು ಸಂಪಾದಿಸಿದರೆಂಬುದಕ್ಕೆ ಇಂದು ಕಲ್ಕತ್ತದಲ್ಲಿ ಕಾಣಬರುವ ಉಭಯಮತೀಯರ ಸೌಹಾರ್ದ ಪ್ರದರ್ಶನವೇ ಸಾಕ್ಷಿ. ಯಾವ ಹಿಂದೂಗಳ ಮೇಲಿನ ದ್ವೇಷದಿಂದ ಲೀಗು ಪಾಕಿಸ್ತಾನ ಪಡೆಯಿತೋ, ಪ್ರಯತ್ನಿಸಿತೋ ಅದೇ ಹಿಂದೂಗಳೊಡನೆ ಸಹಕರಿಸುವುದರ ಮೂಲಕ ಈ ಹೊಸ ರಾಜ್ಯವು ಭಾರತ ಒಕ್ಕೂಟಕ್ಕೆ ಸೇರುವಂತಾಗುವುದೆಂಬ ಹಲವು ದೇಶಹಿತೈಷಿಗಳ ಹಾರೈಕೆಯು ಶೀಘ್ರದ ಭವಿಷ್ಯದಲ್ಲಿ ನೆರವೇರಲೆಂದು ಎಲ್ಲರ ಕೋರಿಕೆ.

ವಾರಾಂತ್ಯ ವರದಿ ವಿಮರ್ಶೆ

ಪಠಾಣಿ ಸ್ಥಾನ

ಡಾ। ಖಾನ್ ಸಾಹೇಬರ ಮಂತ್ರಿಮಂಡಳವನ್ನು ರದ್ದು ಮಾಡಿದಂದಿನಿಂದ ಗಡಿನಾಡಿನ ರಾಜಕೀಯ ವಾತಾವರಣವು ಪ್ರಕ್ಷೋಭೆಗೊಂಡಿದೆ. ಅಲ್ಲಿ ಕಾಂಗ್ರೆಸ್ ಲೀಗ್ ಸಹಾನುಭೂತಿಗಳು ಸಮಪ್ರಮಾಣದಲ್ಲಿರುವರೆಂಬ ಸಂಗತಿ ಕಳೆದ ಮತಗಣನೆಯಲ್ಲೇ ಸ್ಪಷ್ಟವಾಗಿದೆ. ಇಡೀ ಭಾರತದಲ್ಲಿ ಐದನೇ ಒಂದಂಶವಷ್ಟಿದ್ದ ಮುಸಲ್ಮಾನರಿಗೆ ಪ್ರತ್ಯೇಕ ಸ್ಥಾನವೊಂದು ಸಿಗಬೇಕೆಂಬ ತರ್ಕಕ್ಕೆ ಮನ್ನಣೆ ದೊರಕಿರುವಾಗ ಸಮ ಅರ್ಧ ಜನರು ನಿರ್ದಿಷ್ಟ ಜನಾಂಗಿಕ ಹಕ್ಕು ಲಕ್ಷಣಗಳ ಮೇಲೆ ತಮ್ಮ ಬಾಧ್ಯತೆಯನ್ನು ಪ್ರತಿಪಾದಿಸುವಾಗ ಅದಕ್ಕೆ ಸಮರ್ಥನೆ ಏಕೆ ಸಿಗಲಾರದು? ಅದರಲ್ಲಿಯೂ ಗಡಿನಾಡಿನ ಲೀಗ್ ಪಠಾಣರು ಕೂಡ ಪಂಜಾಬಿ ಇಲ್ಲವೆ ಸಿಂಧೀಯರ ಒಡೆತನವನ್ನು ಎಂದೂ ಒಪ್ಪಲಾರರಲ್ಲವೆಂಬ ಸಂಗತಿಯು ಇನ್ನು ಕೆಲವೇ ದಿವಸಗಳಲ್ಲಿ ಸ್ಪಷ್ಟ ತಿಳಿಯಬರುವುದು. ಅತ್ತ ಬಂಗಾಲಿಗಳು ಒಟ್ಟಾಗುತ್ತಿರುವರು. ಇತ್ತ ಸಿಂಧವು ಸಿಂಧೀಯರಿಗೆ ಎಂಬ ಘೋಷವು ಮಿ। ಜಿನ್ನರಿಗೆ ತಲೆಶೂಲೆಯನ್ನುಂಟುಮಾಡಿದೆ. ಪಂಜಾಬದಲ್ಲಿ ಸಿಕ್ಖರನ್ನು ಸಮಾಧಾನಿಸುವುದು ಕಷ್ಟದ ಕೆಲಸವಾಗಿದೆ. ಕೊನೆಗೆ ಈ ಪಠಾಣಿ ಸ್ಥಾನವನ್ನು ಒಪ್ಪಿಸುವುದು ಹೇಗೆಂದು ನೋಡಲಿದೆ.

ಆದರ್ಶ ಗವರ್ನರರು

ಪ್ರಾಂತ್ಯದ ಗವರ್ನರರು ಸರಳಜೀವಿಕೆ ಉಚ್ಚ ವಿಚಾರಗಳ ಆದರ್ಶವನ್ನಿಡಬೇಕು. ಅವರು ಬ್ರಿಟಿಷರ ಆಡಳಿತ ನಿಪುಣತೆಯನ್ನು, ಭಾರತೀಯರ ಸದಾಕಾಂಕ್ಷೆಯ ತತ್ವವನ್ನು ಪ್ರತಿಬಿಂಬಿಸಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಮಹಾತ್ಮರು ತಿಳಿಸಿರುವರು. ಸ್ವರಾಜ್ಯದ ಸಾರ್ಥಕತೆಯನ್ನು ಮಾಡಿಕೊಳ್ಳಲು ಇಂತಹ ಉತ್ಕೃಷ್ಟ ಗುಣಾದರ್ಶಗಳು ಅತ್ಯಾವಶ್ಯಕವೆಂದೂ, ಪ್ರಜೆಗಳು ರಾಜ್ಯಾಡಳಿತ ನಿರ್ವಹಣೆಯ ಕಾರ್ಯವನ್ನು ಸುಗಮವಾಗುವಂತೆ ಮಾಡಲು ಹೃತ್ಪೂರ್ವಕವಾಗಿ ಸಹಕರಿಸುವುದು ಕರ್ತವ್ಯವೆಂಬುದನ್ನೂ ಮರೆಯಬಾರದು.

ಸಂಸ್ಥಾನಗಳ ಸೊಕ್ಕು

ಸಾಧ್ಯವಿದ್ದಷ್ಟು ಕಿರಿಕುಳಗಳನ್ನು ಮಾಡಿ ಕೊನೆಗಂತೂ ಹೆಚ್ಚಿನ ಸಂಸ್ಥಾನಗಳು ಭಾರತ ಒಕ್ಕೂಟಕ್ಕೆ ಸೇರಲು ಮನಸ್ಸು ಮಾಡಿದ್ದು ಒಂದು ಬೆರಗಿನ ಸಂಗತಿ. ಬಹುಸಂಖ್ಯಾಕ ಪ್ರಜೆಗಳ ಹಾರೈಕೆಗೆ ವಿರೋಧವರ್ತಿಸುವುದರ ಗಂಡಾಂತರವನ್ನು ಹೈದರಾಬಾದ್ ಸಂಸ್ಥಾನವೂ ಶೀಘ್ರದಲ್ಲಿ ಮನಗಾಣುವುದೆಂಬ ನಿರೀಕ್ಷೆಯಿದೆ. ರಾಜ್ಯದಲ್ಲಿ ನಿರಂತರ ಅಶಾಂತಿಯನ್ನೂ, ಅರಾಜಕತೆಯನ್ನೂ ಕೊನೆಗೊಳಿಸುವುದಕ್ಕೆ ಇದೊಂದೇ ಮಾರ್ಗ. ತಿರುವಾಂಕೂರು ರಾಜರು ಸಕಾಲದಲ್ಲಿ ತಮ್ಮ ಅಮಾತ್ಯರನ್ನು ಸನ್ಮಾನಪೂರ್ವಕವಾಗಿ ನಿವೃತ್ತಗೊಳಿಸಿದುದು ಧೈರ್ಯದ ಘೋಷಣೆಯೆನ್ನಬೇಕು. ನಿಜಾಮರು ಬಹುಸಂಖ್ಯಾಕ ಇಸ್ಲಾಮೇತರ ತಮ್ಮ ಪ್ರಜೆಗಳಿಗೆ ಇಸ್ಲಾಮಿ ಸಂಸ್ಕೃತಿಯ ದೀಕ್ಷೆಯನ್ನೀಯುವ ಧರ್ಮ ಕಾರ್ಯವು ಕೇವಲ ಹಾಸ್ಯಾಸ್ಪದವೆಂಬುದನ್ನು ವಿವೇಚಿಸಿಕೊಳ್ಳಲೆಂದು ಹೈದರಾಬಾದು ಹಿತೈಷಿಗಳ ಪ್ರಾರ್ಥನೆ.

ಡಾಲರ್ ಸಾಮ್ರಾಜ್ಯಶಾಹಿ

ಅಮೇರಿಕವು ತನ್ನ ಸಂಪತ್ತು ಮತ್ತು ಶಸ್ತ್ರಾಸ್ತ್ರ ಶಕ್ತಿಯನ್ನು ಸಂಪೂರ್ಣ ಮನಗಂಡತೆ ತೋರುವುದು. ಈಗ ತನ್ನ ಬಳಿ ಸಂಗ್ರಹಿತವಾಗಿರುವ ಅಪಾರ ಆರ್ಥಿಕ ಅನುಕೂಲತೆಯಿಂದ ದೇಶವು ಜಗತ್ತನ್ನೇ ತನ್ನ ನಾಣ್ಯ ಪ್ರಭಾವದೊಳಗಿರಿಸಲು ಯತ್ನಿಸುವುದೆಂಬುದಕ್ಕೆ ಇಂದಿನ ಜಾಗತಿಕ ಹಣಕಾಸಿನ ಅವ್ಯವಸ್ಥೆಯೇ ಒಂದು ಪ್ರಬಲ ನಿದರ್ಶನ. ನಮ್ಮ ದೇಶವು ಈಗ ನೇರವಾಗಿ ಅಮೇರಿಕನ್ ಡಾಲರಿನೊಂದಿಗೆ ವ್ಯವಹಾರ ನಡೆಸಬೇಕಾಗಿದೆ. ನಮ್ಮ ದೇಶದ ಸಂಪತ್ತು ಇನ್ನೂ ಪೂರ್ಣ ವಿಕಾಸಗೊಳ್ಳಲಿಲ್ಲ. ಆದರೆ ಅದು ಶೀಘ್ರ ಅಭಿವೃದ್ಧಿ ಹೊಂದುವುದು ಖಂಡಿತ. ನಮ್ಮ ಆರ್ಥಿಕ ಮತ್ತು ಔದ್ಯೋಗಿಕ ಪರಿಪೂರ್ಣತೆಯಾದರೆ ನಾವೆಂದಿಗೂ ಬೇರೊಂದು ದೇಶದ ಸಾಂಪತ್ತಿಕ ಪ್ರಭಾವದಿಂದ ಕುಗ್ಗಬೇಕಾದವಶ್ಯಕತೆಯಿಲ್ಲ. ಅಮೇರಿಕವಾದರೂ ಈ ನಮ್ಮ ಆರ್ಥಿಕ ಭವಿಷ್ಯವನ್ನರಿತು ಈ ಸಂಕ್ರಾಂತಿ ಕಾಲದಲ್ಲಿ ನಮ್ಮನ್ನು ಸಂಕಷ್ಟದೊಳಗೆ ಸಿಲುಕಿಸದಿರಲೆಂದು ಹಾರೈಕೆ.

ತರ್ಕ ವಿತರ್ಕ

ನಿರಕ್ಷರತೆ ಮತ್ತು ಅನಾರೋಗ್ಯ ನಿವಾರಣೆಗಳಿಗೆ ಸ್ವತಂತ್ರ ಭಾರತ ಸರಕಾರವು ಪ್ರಥಮ ಗಮನ ಕೊಡುವುದೆಂದು ಪ್ರಕಟವಾಗಿದೆ. ಜನರು ಆಹಾರ ಎಲ್ಲಿ ದೊರಕುತ್ತದೆಂಬುದನ್ನು ಕಲಿತು ಬರ್ಮಾ ಬೀನ್ಸುಗಳು ಅನಾರೋಗ್ಯಕರವೆಂದು ತಿಳಿಯಬೇಕಾದುದು ಅತಿ ತುರ್ತಿನ ಆವಶ್ಯಕತೆ.

★

ಜಿನ್ನರನ್ನು ಕೈದೆ ಆಜಾಮರೆಂದು ಸಂಬೋಧಿಸಬೇಕೆಂದು ಪಾಕಿಸ್ತಾನ ಘಟನಾ ಸಮಿತಿಯಲ್ಲಿ ಮಂಜೂರಾಗಬೇಕಾಯಿತು. ಭಾರತ ಒಕ್ಕೂಟದ ಘಟನಾ ಸಮಿತಿಯಲ್ಲಿ ಗಾಂಧೀಜಿಯ ಮಹಾತ್ಮ ಬಿರುದು ಶಾಶ್ವತ ಮಾಡುವ ಮಸೂದೆ ಮುಂದೆ ತರಲ್ಪಡದಿರಲೆಂದು ಹಾರೈಕೆಯಿದೆ.

★

ಪಾಕಿಸ್ತಾನ ಮತ್ತು ಭಾರತದ ಮುಖ್ಯ ಪ್ರಧಾನರು—ಲಿಯಾಖತ್, ನೆಹರುಗಳು—ಲಾಹೋರ್ ದಂಗೆ ನಿಲ್ಲಿಸಲು ಒಟ್ಟುಗೂಡುವರೆಂದು ಪ್ರಕಟಿಸಲಾಗಿದೆ. ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾಕರಿಗೆ ಅದೆಷ್ಟು ಭರವಸೆ, ನೆಮ್ಮದಿಗಳಿವೆಯೆಂಬುದನ್ನು ಪ್ರತ್ಯಕ್ಷ ಕಂಡ ಹಾಗೂ ಆಗುವುದು.

★

ಜಿನ್ನರ ಬಂಗಲೆಯಲ್ಲಿ ದಾಲ್ಮಿಯರ ಗೋಸಂರಕ್ಷಣಾ ಸಂಘದ ಕಛೇರಿ ಸ್ಥಾಪಿಸಲ್ಪಡುವುದು. ದಾಲ್ಮಿಯರ ನಿವಾಸದಲ್ಲಿ ಕಾರಕೂನ ಸಂರಕ್ಷಕ ಮಂಡಳದ ಕಛೇರಿಯೂ ಸ್ಥಾಪಿಸಲ್ಪಡುವುದು ಖಂಡಿತವೆಂದು ಹಾರೈಸುವವರೂ ಇದ್ದಾರೆ.

★

ಪಾಕಿಸ್ತಾನದ ಗವರ್ನರ್ ಜನರಲರೂ, ಪಾಕಿಸ್ತಾನ ಘಟನಾ ಸಮಿತಿಯ ಅಧ್ಯಕ್ಷರೂ, ಮುಸ್ಲಿಂ ಲೀಗಿನ ಅಧ್ಯಕ್ಷರೂ ಆದ ಮಿ। ಜಿನ್ನರು, ಹಿಂದೂಸ್ತಾನದ ಪ್ರಜೆಗಳೂ, ಹೈದರಾಬಾದಿನ ಹಿತಚಿಂತಕರೂ, ಪಠಾಣಿಸ್ತಾನದ ವಿರೋಧಿಗಳೂ ಆಗಿರುವರೆಂದು ಗಣಿಸಲಾಗಿದೆ.

ವಿವೇಕಾನಂದರು ಸಾರಿದ ಸಮತಾವಾದ

ಭಾರತದ ಮತ, ಜಾತಿ ಸಂಸ್ಕೃತಿ ವೈವಿಧ್ಯ

ಹಿಂದೂಧರ್ಮದ ಅಧೋಗತಿ

'ನಾನೊಬ್ಬ ಸಮತಾವಾದಿ' ಎಂದೊಂದು ಸಲ ಸ್ವಾಮಿ ವಿವೇಕಾನಂದರೆಂದಿದ್ದರು. ನಿಜ. ವಿಶಾಲ ಪರದೇಶ ಸಂಚಾರ ಮಾಡಿಯೂ ಮತ್ತು ಅನೇಕ ರಾಜಕೀಯ ತತ್ವಜ್ಞಾನಗಳ ಗ್ರಂಥಗಳನ್ನು ಓದಿಯೂ ಸ್ವಾಮಿಜಿಯವರು ಆಧುನಿಕ ರಾಜಕೀಯ ಚಳವಳಿಗಳಾದ ಸಮತಾವಾದ, ಕೊಮ್ಯುನಿಸ್ಟ್ ವಾದ, ಅರಾಜಕತೆಯ ವಾದ, ಕ್ರಾಂತಿ ವಾದ ಮೊದಲಾದವುಗಳ ವಿಷಯ ಸವಿಸ್ತಾರ ಪರಿಚಯ ಮಾಡಿಕೊಂಡಿದ್ದರು. ಮಾತ್ರವಲ್ಲ ವಿವಿಧ ರಾಜಕೀಯ ಚಳವಳಿ ಮುಖಂಡರನ್ನು ಅವರು ಸ್ವತಃ ಕಂಡು ಮಾತನಾಡಿದ್ದರು. 1900ರ ಪೆರಿಸಿನ ಅಂತರಾಷ್ಟ್ರೀಯ ವಸ್ತು ಪ್ರದರ್ಶನದಲ್ಲಿ ಅವರು ರಷ್ಯದ ಪಿಟರ್ ಕ್ರೊಪೊಟ್ಕಿನ್ ಎಂಬ ಪ್ರಖ್ಯಾತ ಕಮ್ಯೂನಿಸ್ಟರನ್ನು ಭೇಟಿಯಾಗಿದ್ದರು. ಕತ್ತಿ ಕೊಡಲಿ ಸಂಕೇತದ ಈ ಮಜೂರ ಚಳವಳಿವು ಆಗ ಬಾಲ್ಯಾವಸ್ಥೆಯಲ್ಲಿತ್ತು. ಆಗಿನ ಅದರ ಮುಖಂಡರಿಗೆ ತಮ್ಮ ಚಳವಳದಲ್ಲಿ ಧೃಢವಾದ ಭರವಸೆಯೂ ಇರಲಿಲ್ಲ

ನಾಲ್ವತ್ತೇಳು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರು 'ಒಂದು ದಿನ ಸಮತಾವಾದವು ಜಗತ್ತಿನಲ್ಲೆಲ್ಲ ಸ್ಥಾಪನೆಯಾಗುವುದು' ಎಂದಿದ್ದು, ಇಂದವರ ಭವಿಷ್ಯವು ಕೈಗೂಡುವಂತೇ ತೋರುತ್ತಿದೆ. ಇಷ್ಟು ಮಾತ್ರವಲ್ಲ 'ಈಗ ಶೂದ್ರರೆನಿಸಲ್ಪಡುವವರು ಮುಂದಿನ ಆಳೊಡೆಯರಾಗುವರು' ಎಂದೂ ಅವರು ಸ್ಪಷ್ಟ ತಿಳಿಸಿದ್ದರು. ಜನತಾ ಶಕ್ತಿಯ ಅಗಾಧ ಪ್ರಭಾವದ ಕಡೆಗೆ ಅವರು ಆಗಿಂದಾಗ್ಗೆ ನಮ್ಮ ಗಮನವನ್ನು ನಿರ್ದೇಶಿಸುತ್ತಿದ್ದರು **"ಅಧಿಕಾರವನ್ನು ವಿದ್ಯಾರ್ಜನೆಮಾಡುವ ಬ್ರಾಹ್ಮಣರು ನಿರ್ವಹಿಸಲಿ, ಇಲ್ಲವೆ ಶಸ್ತ್ರಸಂಪತ್ತನ್ನು ಹೊಂದಿದ ಕ್ಷತ್ರಿಯರು ಚಲಾಯಿಸಲಿ, ಅಧಿಕಾರ ಶಕ್ತಿಯ ಮೂಲ ಉಗಮಸ್ಥಾನವು ಪ್ರಜೆಗಳಾದ ಜನತೆಯಲ್ಲೇ ಇರುವುದು ಆಳುವ ವರ್ಗವು ಜನತೆಯ ಸಂಪರ್ಕವನ್ನು ಕಳಕೊಂಡರೆ ಖಂಡಿತ ನಿರ್ಬಲವಾಗುವುದು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಆಳುವ ವರ್ಗದವರು ತಾವು ಯಾರಿಂದ ತಮ್ಮ ಅಧಿಕಾರ ವರ್ಚಸ್ಸನ್ನು ಸಂಪಾದಿಸುವರೊ ಆ ಜನತೆಯನ್ನು ಅಲಕ್ಷಿಸುವಂತಾದುದು ಒಂದು ವಿಧಿ ವೈಚಿತ್ರ್ಯ."**

ವಿವೇಕಾನಂದರ ಗ್ರಂಥ, ಭಾಷಣಗಳನ್ನು ಓದಿದವರು ಸ್ವಾಮಿಜಿಯವರ ದೀನ ಜನತಾಪ್ರೇಮವನ್ನು ಮನಗಾಣದಿರರು ದರಿದ್ರತೆಯಲ್ಲಿ ಕೊಳೆಯುವ ಜನತೆಯ ಉದ್ಧಾರಕ್ಕಾಗಿ ಅವರು ಮಾಡಿಕೊಂಡ ಕಳಕಳಿಯ ವಿನಂತಿಯು ಹೃದಯಂಗಮವಾಗಿದೆ

"ನರಳುವವರಿಗಾಗಿ ಪರಿತಾಪಪಟ್ಟು ಸಹಾಯಕ್ಕಾಗಿ ದೇವರ ಕಡೆ ಈಕ್ಷಿಸಿರಿ ಅದು ಖಂಡಿತ ಸಿಗುವುದು . . ಹೊಲೆಯನಾದ ಗುಹಕನನ್ನಾಲಂಗಿಸಲು ಸಂಕೋಚಪಡದ, ಗೋಕುಲದ ದೀನರೂ ನಿಕೃಷ್ಟರೂ ಆದ ಗೋವಳರ ಆಪ್ತನಾಗಿದ್ದ ಪರಮಾತ್ಮನಾದ ಆ ಪಾರ್ಥಸಾರಥಿಯ ಮಂದಿರಕ್ಕೆ ಈಗಲೇ ಹೋಗಿ ನಿಮ್ಮ ಇಡೀ ಜೀವಮಾನವನ್ನು ಅಂಥ ದೀನ ದರಿದ್ರರಿಗಾಗಿ ಬಲಿದಾನ ಕೊಡುವುದಾಗಿ ಪ್ರತಿಜ್ಞೆ ಮಾಡಿರಿ. ಈ ದೀನರಿಗಾಗಿ, ಈ ನರಳುವ ನಿಕೃಷ್ಟರಿಗಾಗಿ ಈ ತುಳಿಯಲ್ಪಟ್ಟವರಿಗಾಗಿ ಅವನು ಕಾಲಕಾಲಕ್ಕೆ ಅವತಾರವೆತ್ತಿ ಬಂದವನಲ್ಲವೆ!"

ಭಾರತದ ಪ್ರಜಾಶಕ್ತಿ

ವಿವೇಕಾನಂದರ ದೃಷ್ಟಿಯಲ್ಲಿ ಶೂದ್ರರೂ ದಳಿತ ವರ್ಗದವರೂ ಭಾರತದ ಶಕ್ತಿವಂತ ಪ್ರಜೆಗಳೆಂದಿತ್ತು. ಅವರ ಉದ್ಧಾರಕ್ಕಾಗಿಯೇ ಭಾರತದಲ್ಲಿ ಸಮತಾವಾದವು ಸ್ಥಾಪಿಸಲ್ಪಡಬೇಕೆಂದವರು ಹಾರೈಸಿದ್ದರು ಜಾತಿ ಪದ್ಧತಿಯನ್ನು ಅವರು ಒಂದೇ ಸವನೆ ಖಂಡಿಸಲಿಲ್ಲವೆಂಬುದೂ ನಿಜ. ಯಾಕೆಂದರೆ ನಮ್ಮ ಪೂರ್ವಿಕರ ಈ ವರ್ಗೀಕರಣ ಪದ್ಧತಿಯು ಒಂದು ಅಮೋಘ ತತ್ವ ಪ್ರಧಾನವಾದ ಸಂಸ್ಥೆಯಾಗಿತ್ತು ಮುಂದಿನ ನವಸಮಾಜ ರಚನೆಯಲ್ಲೂ ಇದರ ವೈಶಿಷ್ಟ್ಯವು ಚೆನ್ನಾಗಿ ಅರಿವಾಗದಿರದು

ಇಷ್ಟಾದರೂ ವಿವೇಕಾನಂದರಿಗೆ ಈಗಿನ ಜನ್ಮತಃ ಜಾತಿಪದ್ಧತಿಯ ಮೇಲೆ ಆದರವಿರಲಿಲ್ಲ. ಅದರಿಂದ ಸಮಾಜದ ಪ್ರಗತಿಯು ಕುಂಟಿತವಾಗುವುದೆಂದವರ ಅಭಿಪ್ರಾಯವಿತ್ತು ಅವರ ಜಾತಿ ಪದ್ಧತಿಯ ವಿವರಣೆಗೆ ವಿಶಾಲ ಅರ್ಥವಿತ್ತು!

"ನೀವೇನೆಂದು ಭಾವಿಸಿದ್ದೀರಿ? ನಾನೇನು ಈ ಇಂದಿನ ಸುಶಿಕ್ಷಿತ ಹಿಂದೂಗಳೊಳಗಿರುವ ಜಾತ್ಯಾಂಧತೆಯ, ಮೂಢ ನಂಬಿಕೆಯ, ನಿಷ್ಕಾರುಣ್ಯದ, ಕಪಟಿಗಳಾದ ನಾಸ್ತಿಕ ಕೇವಲ ಹೇಡಿಗಳಂತೆ ಜೀವಿಸಿ ಸಾಯಲು ಹುಟ್ಟಿರುವೆನೆಂದು ನೀವು ತಿಳಿದಿದ್ದಿರೊ?" ಎಂಬವರ ಮಾತುಗಳಲ್ಲಿ ಅದೆಂತಹ ಪ್ರಬುದ್ಧ ವಿಚಾರ ವಿಶಾಲತೆಯಿದೆ!

ಸಂಪತ್ತನ್ನು ಸಮಾನವಾಗಿ ಹಂಚಬೇಕೆಂಬ ವಿಷಯದ ಕುರಿತು ಅವರು ಹೆಚ್ಚು ಆಸಕ್ತರಾಗಿರಲಿಲ್ಲ. ಆರ್ಥಿಕ ಸಮತೆಯೂ, ರಾಜಕೀಯ ಸ್ವತಂತ್ರತೆಯೂ ಇರುವ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ, ನೈತಿಕ ಮತ್ತು ವೈಜ್ಞಾನಿಕ ಬಾಂಧವ್ಯವುಳ್ಳ ಸಮಾಜದ ಮನೋಚಿತ್ರವನ್ನವರು ನಿರೂಪಿಸಿದ್ದರು ಸಂಕ್ಷೇಪವಾಗಿ ಅವರು ಎಲ್ಲವನ್ನೂ ಕನಿಷ್ಟ ಮಟ್ಟದ ಸಮಾನತೆಗೆ ತರುವುದಕ್ಕಿಂತ ಎಲ್ಲವನ್ನೂ ಉತ್ಕೃಷ್ಟ ಶ್ರೇಣಿಗೆ ಒಯ್ದು ಏಕಭಾವವನ್ನುಂಟುಮಾಡಬೇಕೆಂದವರ ಆಶಯವಿತ್ತು

ಸತ್ಯಯುಗ

ಅವರೆಳೆಸಿದ ಸುವರ್ಣ ಕಾಲದ ಚಿತ್ರಣದಲ್ಲಿ ವ್ಯಕ್ತಿ ಸಾಮರ್ಥ್ಯ ಉದ್ಯೋಗ್ಯ ವಿಭಾಗಗಳು ಹಾಗೆ ಉಳಿವಂತಿದೆ ಆದರೆ ಆ ಕಾಲದಲ್ಲಿ ಯಾರಿಗೂ ವಿಶೇಷ ಸವಲತ್ತು ಸಂದರ್ಭಗಳನ್ನು ಕೊಡಬಾರದೆಂದಿತ್ತು ಇಂತಹ ವ್ಯವಸ್ಥೆಯನ್ನು ಸ್ಥಾಪಿಸಲು ದೊಡ್ಡ ಉತ್ಕ್ರಾಂತಿಯ ಆವಶ್ಯಕತೆಯಿದೆ ಆದರೆ ಅದು ಹಿಂಸಾತ್ಮಕವಾಗಿರಬಾರದು. ಸಾಂಸ್ಕೃತಿಕ ಕ್ರಾಂತಿಯಿಂದಲೇ ಅದು ಸಂಭವಿಸಬೇಕು. ಸ್ವಾಮಿ ವಿವೇಕಾನಂದರ ಇಚ್ಛೆಯ ಸುವರ್ಣಯುಗದಲ್ಲಿ ಪ್ರತಿಯೊಬ್ಬರೂ ಬ್ರಾಹ್ಮಣರಾಗಿರುವರು. ಬ್ರಾಹ್ಮಣನೆನಿಸಿಕೊಳ್ಳಲು ಎಲ್ಲರಿಗೂ ಸಮಾನ ಸಂದರ್ಭ ಸೌಕರ್ಯಗಳನ್ನು ಕೊಡಲಾಗುವುದು. ಅವರು ಹೀಗೆಂದಿದ್ದರು:

"ಸತ್ಯಯುಗದಾರಂಭದಲ್ಲಿ ಒಂದೇ ಜಾತಿ ಮಾತ್ರ ಇತ್ತು. ಅದೆಂದರೆ ಬ್ರಾಹ್ಮಣರು. ಇವರೆಲ್ಲರೂ ತಮ್ಮ ತಮ್ಮ ವೃತ್ತಿಗನುಸಾರವಾಗಿ ಉಪ ಜಾತಿಗಳಾಗಿ ವಿಭಾಗಿತರಾದರು ಮುಂದೆ ಬರಲಿರುವ ಸತ್ಯಯುಗದಲ್ಲೂ ಈಗಿನೆಲ್ಲಾ ಜಾತಿಗಳು ಹಿಂದಿನಂತೆ ಪುನಃ ಒಂದೇ ಬ್ರಾಹ್ಮಣ ಜಾತಿಯಾಗುವುದು.) ಭಾರತದಲ್ಲಿನ ಜಾತಿ ಬೇಧ ನಿವಾರಣೆಗೆ ಇದೊಂದೆ ವಿಧಾನ. ಇದರಿಂದ ಉಚ್ಚರು ನೀಚರಾಗಲಾರರು. ಬ್ರಾಹ್ಮಣರು ನಾಶವಾಗಲಾರರು"

ವಿವೇಕಾನಂದರು ಎಲ್ಲಾ ತರದ ಸಾಮಾಜಿಕ ಅಸಮಾನತೆಗೆ ವಿರೋಧವಾಗಿ ದಂಗೆ ಎಬ್ಬಿಸಿದರು ಅವರ ಚೈತನ್ಯಮಯ ಜೀವನದಲ್ಲಿ ಕೆಲವು ವಿಷಯಗಳಿಗೆ ಸ್ಥಾನವೇ ಇರಲಿಲ್ಲ ಇದುತನಕ ಭಾಗ್ಯಶಾಲಿಗಳೆನಿಸಿದ ವರ್ಗದವರು ತಮ್ಮ ಸಂಸ್ಕೃತಿಯ ಹೆಬ್ಬಾಗಿಲುಗಳನ್ನು ತೆರೆದು ನಿಮ್ನವರ್ಗದವರ ಉದ್ಧಾರಕ್ಕಾಗಿ ಅದನ್ನು ತೆರೆದಿಡಬೇಕು. ಇನ್ನು ವಿಳಂಬ ಮಾಡಿದರೆ ಜಾತಿಕಲಹದ ಗಂಡಾಂತರ ಹೆಚ್ಚಿ ಜನತೆಯ ಶಕ್ತಿ ಸಾಮರ್ಥ್ಯವೂ ಅಭಿವೃದ್ಧಿಯಾಗುವುದು ಸ್ವಾಮಿಜಿಯವರ ಮಾತುಗಳು ಹೀಗಿವೆ

"ಈಗಾಗಲೇ ಸಂಸ್ಕೃತಿಯು ಎಲ್ಲಾ ಕಡೆಗಳಲ್ಲಿ ಹಂಚಿ ಬೀಳುವುದು ಅಸಾಧಾರಣ ಬುದ್ಧಿ ಸಾಮರ್ಥ್ಯಗಳು ಮುಂದೆ ಕಮ್ಮಿ ಕಮ್ಮಿಯಾಗಿ ಬರುವವು" ಕಾರಣ ಸಾಮಾನ್ಯ ಜನತೆಯ ವಿಕಾಸಕ್ಕೆ ಸಂದರ್ಭಗಳು ಹೆಚ್ಚೆಚ್ಚು ಸಿಗುವಂತಾಗುವುದು

ಈಗಿನ ಬ್ರಾಹ್ಮಣ ವರ್ಗವನ್ನು ಸ್ವಾಮಿಜಿಯವರು ಕಡುವಾಗಿ ಟೀಕಿಸುತ್ತಿದ್ದರು ಈಗಿನ ಹಿಂದೂ ಸಮಾಜದಲ್ಲಿ ಅನಾವಶ್ಯಕವಾಗಿ ತಲೆಯೆತ್ತಿ ಪ್ರಗತಿಯನ್ನು ನಾಶಮಾಡಿದ ಎಲ್ಲಾ ಅವಿಚಾರವಂತ ಭೇದಾಭೇದ ಕಲ್ಪನೆಗಳಿಗೆ ಬ್ರಾಹ್ಮಣ ವರ್ಗವೇ ಕಾರಣವೆಂದವರಿಗೆ ಖಚಿತವಾಗಿತ್ತು ಜಾತಿಭೇದ ಕಲ್ಪನೆಯು ಒಂದು ಹುಚ್ಚೆಂದು ಅವರ ಅಭಿಪ್ರಾಯವಿತ್ತು

"ಮಲಬಾರಿನಲ್ಲಿ ನಾನು ಜಗತ್ತಿನ ಅತೀ ಮೂರ್ಖ ಪದ್ಧತಿಯೊಂದನ್ನು ಕಂಡೆ ಅಲ್ಲಿ ಮೇಲ್ಜಾತಿಯವರಿರುವ ಮಾರ್ಗದಿಂದ ಹೊಲೆಯರು ಹಾದುಹೋಗಬಾರದು ಆದರೆ ಅದೇ ಹೊಲೆಯ ಕ್ರೈಸ್ತ, ಇಲ್ಲವೆ ಮುಸ್ಲಿಮನಾಗಿ ಪಾಶ್ಚಾತ್ಯ ಹೆಸರು ಧರಿಸಿ ಜೀವಿತೋಮನಾಗಿ ಬಂದರೆ ಅವರ ಅಡ್ಡಿಯಿಲ್ಲ. ಮಲಬಾರಿಗಳೆಲ್ಲರೂ ಹುಚ್ಚರೆನ್ನುವುದಕ್ಕಿಂತಲೂ ಬೇರೆ ಯಾವ ಅಭಿಪ್ರಾಯ ನೀವು ಮಾಡಿಕೊಳ್ಳುತ್ತೀರಿ?

"ಇಂತಹ ನೀಚ ಮತ್ತು ಹೇಯ ಪದ್ಧತಿಗಳನ್ನಿಟ್ಟುಕೊಳ್ಳುವವರಿಗೆ ಧಿಕ್ಕಾರವಿರಲಿ. ಹಿಂದೂಗಳಾಗಿದ್ದ ನಮ್ಮ ಮಕ್ಕಳು ಉಪವಾಸ ಬಿದ್ದು ಸತ್ತರೂ ನಾವು ಲಕ್ಷಿಸುವುದಿಲ್ಲ. ಅವರು ಬೇರೆ ಮತಗಳಿಗೆ ಸೇರಿದರೆ ಅವರಿಗೆ ತುಂಬಾ ತಿನ್ನಲು ಕೊಡಲು ಸಮ್ಮತಿಸುತ್ತೇವೆ. ಆದುದರಿಂದಲೇ ಇಂದು ನಮ್ಮ ಸಂಖ್ಯೆಯ ನಾಲ್ಕನೇ ಒಂದಂಶ ಮುಸಲ್ಮಾನರಾಗಲು ಕಾರಣ. ನೀವು ಹೀಗೆ ಅಲಕ್ಷಿಸಿದರೆ ಮದ್ರಾಸಿನ ನಿಮ್ಮ ಅರ್ಧಾಂಶ ಜನರು ಕ್ರೈಸ್ತರಾಗುವರು."

೬ನೇ ಪುಟಕ್ಕೆ ಮುಂದುವರಿದಿದೆ



ವ್ರಣಗಳನ್ನು ಮಾಯಿಸುವುದು ಅವು ಕೊಳೆಯದಂತೆ ಮಾಡುವುದು

ಜೆರ್ಮೆಕ್ಸ್ ಗಾಯ—ಅಂಟುರೋಗ ಆ ಮಧ್ಯ ತ್ರಿಕೋಣವನ್ನು ಮುರಿಯುವುದು

ಅಟಿಲ್ಸ್ ಓರಿಯಂಟಲ್ ಬಾಮ್ ಮತ್ತು ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್, ಪೋಸ್ಟು ಬಾಕ್ಸ್ ನಂ. 67 ಮದರಾಸು.

DIK—22

ಪ್ರಪಂಚ ಪರಿಚಯ

ಇನ್ನೊಂದು ಮಹಾಯುದ್ಧ! ಈ ಕುರಿತು ಊಹಾಪೂಹೆಗಳು ತುಂಬಾ ಹೊರಡುತ್ತಿವೆ. ಸೋವಿಯಟ್ ರಷ್ಯಾದ ಬಲವು ಅತ್ಯಧಿಕವಿದೆ, ಅದರ ಸರಿ ಬರಲು ಯುಕ್ತ ಅಮೇರಿಕಾವು ಸಿದ್ಧತೆಗಳಲ್ಲಿ ತೊಡಗಿರುತ್ತದೆ [illegible] ಊರನೆ ಮಹಾಯುದ್ಧವು ಸದ್ಯದಲ್ಲಿ ತಲೆದೋರದು 1957ರಲ್ಲಿ ಅದು ಖಂಡಿತವೆಂದು ಪ್ರವೀಣರೊಬ್ಬರ ಅಭಿಪ್ರಾಯ. ಹತ್ತು ವರ್ಷಗಳಾದರೂ ಆ ಕಂಟಕವು ದೂರವಿದೆ, ಎಂಬುದರಿಂದಲೆ ಸದ್ಯಕ್ಕೆ ಸಮಾಧಾನ! ಎಟಾಮಿಕ್ ಯುದ್ಧದಲ್ಲಿ ಜಗತ್ತಿನ ಜನತೆಯು ಮೂರನೆ ಎರಡಂಶವು ನಾಶವಾಗಬಹುದೆಂದು ಪ್ರೊಫೆಸರ್ ಎಯಿಸ್ಟನರ ಅಭಿಪ್ರಾಯ

ರಷ್ಯ ಅಮೇರಿಕಾಗಳ ಭಿನ್ನಾಭಿಪ್ರಾಯದಿಂದ ಜಗತ್ತಿನಲ್ಲಿ ಹಲವರಿಗೆ, ಮುಖ್ಯವಾಗಿ ಪ್ರತಿಗಾಮಿಗಳಿಗೆ ಪೋಷಣೆಯು ದೊರಕುವಂತಾಗಿದೆ ಅವರಲ್ಲೊಬ್ಬ ಸ್ಪೈಯಿನ ಜನರಲ್ ಫ್ರೆಂಕೊನಿಗೆ, ಅರ್ಜೆಂಟೀನಾದ ಪೆರೋನನಿಗೆ ಈ ಭಿನ್ನತೆಯಿಂದ ತನ್ನ ಸ್ಥಾನವನ್ನು ಭದ್ರಗೊಳಿಸಲು ಫ್ರೆಂಕೊನು ಯತ್ನಿಸುತ್ತಿರುವುದಾದರೂ, ಪ್ರಜಾಪ್ರಭುತ್ವ ಪ್ರಭಾವಗಳಿಗೆ ಅಲ್ಲಿ ತಲೆ ಎತ್ತಲು ಅವಕಾಶವೆ ದುರ್ಲಭವಾದರೂ, ಈ ಘಟಗಳು ಅಜ್ಞಾತವಾಗಿ ಕಾರ್ಮಿಕ [illegible] ಅವುಗಳ ಕೈಗಳಿಗೆ [illegible] ಉಪಕರಣಗಳು [illegible] ಜನರಲ್ ಫ್ರೆಂಕೊನ [illegible] ಬಹಿಷ್ಕಾರಕ್ಕೆ [illegible] ಒಳಗಾಗಿದ್ದರೂ ಅತ[illegible] ದಕ್ಷಿಣ ಅಮೇರಿಕಾದ ಅರ್ಜೆಂಟೀನಾದ ಸರ್ವಾಧಿಕಾರಿ ಪೆರೋನನಿಂದ ತುಂಬಾ ಸಹಾಯ ಸಹಾನುಭೂತಿಯು [illegible]ತ್ತಿರುವುದು

ರಷ್ಯದ ಮೇಲಿನ ಅಸಮಾಧಾನದಿಂದ, ಅಮೇರಿಕಾವು ಅರ್ಜೆಂಟೀನಾದ ಪ್ರತಿಗಾಮಿ ಪೆರೋನನ [illegible] ತೊಡಗಿ[illegible] ಇದರ ಪರಿಣಾಮ [illegible] ದೆಂದ [illegible] ರಷ್ಯಕ್ಕೆ ವಿರೋಧವಾಗಿ ಹಿಟ್ಲರನನ್ನು [illegible] [illegible]

[illegible] ಪರಿಸ್ಥಿತಿಯಲ್ಲಿದ್ದ ಅಲ್ಲಿ ಜನ [illegible] ಹೊಟ್ಟೆಗೆ ಮಾತ್ರ ಆಹಾರ [illegible] ಈ ಪರಿಸ್ಥಿತಿಯನ್ನು [illegible] ಅಮೇರಿಕಾದ [illegible] ಮಾರ್ಷಲ್ಲರ [illegible] ಸುವ ಸಿದ್ಧತೆ [illegible] ಅಂದರೆ ಈ ಪ್ಲೇ[illegible] ಲಾಭ ದೊರಕಬ[illegible] ಅದ [illegible] ಅಮೇರಿಕಾ [illegible] ಪಶ್ಚಿಮ ಯುರೋಪಿಗೆ ಮಾತ್ರ ಮಾರ್ಷಲ್ ಪ್ಲಾನಿನಲ್ಲಿ ರಷ್ಯವು ಸಹಕರಿಸುತ್ತಿದ್ದರೆ, ಪಶ್ಚಿಮ ಯುರೋಪದಲ್ಲಿ ನರಳುತ್ತಿರುವ ಜನತೆಗೆ ಅದರ ~~ಕುರಿತು ಒಳ್ಳೆ ಅಭಿಪ್ರಾಯಗಳು ಹುಟ್ಟಾ~~ಗುವ ಸಂಬಂಧವಿದ್ದಿತು ರಷ್ಯವು ಒಂದು ಒಳ್ಳೆ ಸುಸಂಧಿಯನ್ನು ಕಳಗೊಂಡಿತೆ?

ರಷ್ಯಾ-ಅಮೇರಿಕಾ ಭಿನ್ನಾಭಿಪ್ರಾಯದ ಸಂಕಟಕ್ಕೆ ಒಳಗಾದ ದೇಶಗಳಲ್ಲಿ ಗ್ರೀಸ್ ಒಂದು ಎಡಪಕ್ಷದ ಪ್ರಭಾವಗಳಿಗೆ ಅಲ್ಲೀಗ ಬೆಳಕಿಗೆ ಬರುವಷ್ಟು ಸಾಮರ್ಥ್ಯವಿಲ್ಲದಿದ್ದರೂ, ಅವರು ಗೊರಿಲ್ಲಾ ತರದಲ್ಲಿ ತುಂಬಾ ಚಟುವಟಿಕೆಯನ್ನು ನಡಯಿಸುತ್ತಿರುವರು. ಅವರಿಗೆ ಸರಹದ್ದಿನ ಕೊಮ್ಯುನಿಷ್ಟ ದೇಶಗಳ ನೆರವು ಇದೆ ಎಂದು ಹೇಳಲಾಗಿದೆ ಪ್ರತಿಗಾಮಿಗಳೂ, ಮಧ್ಯಮ ತರದ ಉಧಾರವಾದಿಗಳಿರುವ ಸರಕಾರವೊಂದು ಅಲ್ಲಿ ಮೊನ್ನಿನ ವರೆಗೆ ಅಧಿಕಾರದಲ್ಲಿತ್ತು ಆದರೆ ಯುಕ್ತ ಅಮೇರಿಕಾದಿಂದ ಸಹಾಯವನ್ನು ಪಡೆದು ಕೊಮ್ಯುನಿಷ್ಟರನ್ನು ದಬ್ಬುವ ನಿರ್ಧಾರಕ್ಕೆ ಆ ಸರಕಾರವು ಬಂದುದರಿಂದಲೊ ಏನೊ ಅದೀಗ ಅಧಿಕಾರದಿಂದ ಉರುಳಿದೆ ಹೊಸತೊಂದು ಸಂಮಿಶ್ರ ಸರಕಾರವನ್ನು ರಚಿಸಲು ಯತ್ನಗಳು ನಡೆದೂ ಅವು ಅಪಯಶಸ್ವಿಯಾಗಿವೆ ಮುಂಥಕ್ಕೆ ಅಲ್ಲಿ ಪ್ರತಿಗಾಮಿ ತರದ ಸರಕಾರವೆ ಅಧಿಕಾರಕ್ಕೆ ಬರುವಂತೆ ಕಾಣುತ್ತದೆ ಒಂದು ಉತ್ತಮ, ಸಮೃದ್ಧ ದೇಶವಾಗಿ ಬಾಳಲು ಗ್ರೀಸಿನೊಳಗೆ ಬೇಕಾದ ಎಲ್ಲಾ ಯೋಗ್ಯತೆಗಳು ಇವೆ ತ[illegible] ಯೋಗ್ಯತೆಗಳನ್ನು ಉಪಯೋಗಿಸಿಕೊಳ್ಳುವ ಸಂದರ್ಭ ಮಾತ್ರ ಅದಕ್ಕೆ ಲಭಿಸಲಿಲ್ಲ

ಬ್ರಿಟನಿನಲ್ಲಿ ಸಾಂಪತ್ತಿಕ ವಿಷಮತೆ ಇದರಿಂದ [illegible] ಯತ್ನಗಳು ನಡೆಯುತ್ತಿವೆ ಅಲ್ಲಿನ ಜನತೆಯು ಅದನ್ನು [illegible] ಮಾಡಿರುತ್ತದೆ [illegible] ವರ್ಗವು ಲೇಬರ ಸರಕಾರದ [illegible] ಸಹಕರಿಸಲು [illegible] ಮಾಡಿರುತ್ತದ [illegible] ವೃದ್ಧಿಸಲು ಅವರ [illegible]ಗಳಲ್ಲಿ [illegible] ಅವಧಿಗಿಂತ ಹೆಚ್ಚು [illegible] ಪರಿಶ್ರಮಿಸಲು ಅವರು ಮುಂದೆ ಬಂದಿರುವರು [illegible] ಡೆಮಿನ್ಯನುಗಳಿಲ್ಲಾ ಮಾತ್ರ ದೇಶದ ನೆರವಿಗೆ ಹೋಗಲು [illegible] ದಕ್ಷಿಣ ಆಫ್ರಿಕಾದಿಂದ [illegible] ಬ್ರಿಟನಿಗೆ ಒದಗಿರುತ್ತದೆ ಬ್ರಿಟನಿಗೆ [illegible] ಒದಗಿಸಿಕೊಡಲು ಆಸ್ಟ್ರೇಲಿಯಾವು ಸಿದ್ಧವಿದೆ ಹೆಚ್ಚಿಗೆ [illegible] ಆಹಾರವನ್ನು ತರಿಸುವ [illegible] ಬ್ರಿಟನು [illegible]ತ್ತವೆ ಐಯರ್ಲೆಂಡು ಬೇಸರ್ವಯದ ನಾಡು ರಾಜಕೀಯ ಭಿನ್ನಾಭಿಪ್ರಾಯದಿಂದ ಬ್ರಿಟನು ಅದರ ಕಡೆ ಅಲಕ್ಷ್ಯವನ್ನು ತಳೆದಿತ್ತು. ಈ ಮೊದಲೆ ಆಹಾರದ ಕುರಿತು ಅದರೊಡನೆ ಸಹಕರಿಸುತ್ತಿದ್ದರೆ, ಬ್ರಿಟನಿಗೆ ಅದರಿಂದ ಈ ಸಂದಿಗ್ಧತೆಯ ಸಮಯದಲ್ಲಿ ತುಂಬಾ ನೆರವು ದೊರಕುತ್ತಿದ್ದಿತು

ಬ್ರಿಟನಿನ ಈ ಸದ್ಯದ ಪರಿಸ್ಥಿತಿಯಿಂದ ಎಟ್ಲಿಯವರು ಪ್ರಧಾನ ಪದವಿಯಿಂದ [illegible] ತ್ತರಾಗಬಹುದ [illegible] ಗಳ ಒರುತ್ತಿವೆ ಈ ಸಂದಿಗ್ಧದಲ್ಲಿ ಲೇಬರ್ ಸರಕಾರದ ಕಾಲನ್ನು ಹಿಡಿದಳೆಯುವ [illegible] ಚರ್ಚಿಲ್ಲರು ಮಾಡುತ್ತಿದ್ದಾರೆ ಈ ಸಂದಿಗ್ಧವನ್ನು ಯಶಸ್ವಿಯಾಗಿ ದಾಟುವ ದೃಢ ನಿರ್ಧಾರ ಲೇಬರ್ ಸರಕಾರವು [illegible] ಬ್ರಿಟನಿನಲ್ಲಿ ಈಗ ಮತ್ತೊಮ್ಮೆ "1931" ಬಂದಿರುತ್ತದೆ

ರಷ್ಯದ ಆ [illegible] ಪೂರ್ವ ಯುರೋಪದ ಪ್ರದೇಶದಲ್ಲಿ ಆಹಾರದ [illegible] ಬ್ರಿಟನಿನ [illegible] ತನಗೆ ಹೆಚ್ಚಾಗುವ [illegible] ತನ್ನ ಸಾಂಪತ್ತಿಕ ಉದ್ಧರ[illegible] ಸಾಧಿಸುವುದರಲ್ಲಿ ತೊಡಗಿರುತ್ತದೆ ಬ್ರಿಟನ [illegible] ಸಂತ[illegible] ಪಡೆದ ಕೈಗಾರಿಕಗಳನ್ನು ವೃದ್ಧಿಸಿಕೊಳ್ಳುವುದು ಅದಕ್ಕೆ ಅವಶ್ಯವಿದೆ [illegible] ಗಳನ್ನು ದೊರಕಿಸಿಕೊಳ್ಳಲು [illegible] ಸರಕಾರವು ಬ್ರಿಟಿಷ ಸರಕಾರದೊಡನೆ [illegible] ಪ್ರಾರಂಭಿಸಿದೆ [illegible] ಹೇಗೆ [illegible] ಸಹಕಾರದ [illegible] ಸಮ್ಮತಿ [illegible] ರವು ಈ ವ್ಯವಹಾರವನ್ನು ಪ್ರಾರಂಭಿಸುತ್ತಿರಲಿಲ್ಲ ರಷ್ಯದ ಈ ನವೀನ ಧೋರಣವು ಯಾವ ರೂಪ ಹೊಂದುತ್ತದೆಂದು ನೋಡಬೇಕು

ಯುಕ್ತ ಅಮೇರಿಕಾದ ಎಣ್ಣೆಯ ಶೇಖರಗಳು ಬರಿದಾಗುತ್ತ ಬರುತ್ತಿವೆ ಆದರ ಕೈಗಾರಿಕೆಗಳು ರಾಕ್ಷಸ ರೂಪವನ್ನು ಹೊಂದಿವೆ ಈ ರಾಕ್ಷಸಗಳಿಗೆ ಎಣ್ಣೆಯು ಮುಖ್ಯ ಆಹಾರ ಈ ಆಹಾರಕ್ಕಾಗಿಯೆ ಈ ರಾಕ್ಷಸಗಳು, ಜಗತ್ತಿನ ಇತರ ಪ್ರದೇಶಗಳಲ್ಲಿ ಕಣ್ಣು ಹೊರಳಿಸಲು ಕಾರಣವಾಗಿರುತ್ತದೆ

ಮಧ್ಯಪೂರ್ವದ ಪ್ರದೇಶದಲ್ಲಿ ಅಪಾರ ಎಣ್ಣೆಯ ಸಿಧಿ ಇರುವುದಾಗಿ ಕಂಡುಹಿಡಿಯಲಾಗಿದೆ ಇಡೀ ಜಗತ್ತಿನ ಕೈಗಾರಿಕೆಗೆ ಅವಶ್ಯವಿರುವ ಎಣ್ಣೆಯನ್ನು ಒದಗಿಸುವ ಯೋಗ್ಯತೆಯು ಅದೆಂದು ಹೇಳಲಾಗಿದೆ ಈ ಕಾರಣದಿಂದಲೆ, ಯುಕ್ತ ಅಮೇರಿಕಾವು ಮಧ್ಯಪೂರ್ವದ ರಾಜಕೀಯದಲ್ಲಿ ಕೈಯಿಕ್ಕಿದೆ ಮಧ್ಯಪೂರ್ವದ ತಮ್ಮ ಹಿಡಿತವನ್ನು ರಕ್ಷಿಸಿಕೊಳ್ಳಲು, ಫ್ರಾನ್ಸು, ಬ್ರಿಟನೂ ಯತ್ನಪಡುತ್ತಿರುವುದು ಇದೆ ಕಾರಣದಿಂದ ರಷ್ಯಕ್ಕೂ ಈ ಎಣ್ಣೆಯ ಮೇಲೆ ದೃಷ್ಟಿ ಇದೆ ಈ ಎಣ್ಣೆ ಸಿಧಿಗಳು ಮಹಾ ಪ್ರಭುತ್ವಗಳಲ್ಲಿ ಬಿನ್ನಾಭಿಪ್ರಾಯಗಳಿಗೆ ಬಹುಮಟ್ಟಿಗೆ ಕಾರಣವಾಗಿರುತ್ತವೆ ಆದುದರಿಂದ ಮಧ್ಯಪೂರ್ವದ ಈ ಎಣ್ಣೆ ಸಿಧಿಗಳನ್ನು ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಹಂಚಲ್ಪಟರೆ ಇನ್ನೊಂದು ಮಹಾ ಯುದ್ಧದ ಕಾರಣಗಳಲ್ಲಿ ಹೆಚ್ಚಿನವು ನಿವಾರಣೆಯಾಗಬಹುದು

ಸರ್ ಷಣ್ಮುಗ ಚೆಟ್ಟಿ ಮೊದಲಾದವರು ಬ್ರಿಟಿಷ್ ಸರಕಾರ ಕೆತ್ತ ಪದವಿಗಳನ್ನು ತ್ಯಜಿಸಿರುವರು ಆದರೂ ಇನ್ನೆಷ್ಟೊ ಮಂದಿ ಅವುಗಳನ್ನು ಹಿಡಿದಿರುಗಿಸಲು ಹಿಂದುಮುಂದ ನೋಡುತ್ತಿರುವರೆಂದು ಒರ್ವ ಪತ್ರಿಕೋದ್ಯೋಗಿಯ [illegible] ಸುಲಭವಾಗಿ ಸಿಕ್ಕಿದ[illegible] ಬಿಡವುದು ಅತೀ ಕಷ್ಟದ [illegible]

CANARA BANK, LIMITED.

(ಹೊಣೆಗಾರಿಕೆ ಪರಿಮಿತಗೊಳಿಸಲ್ಪಟ್ಟು [illegible] ಸ್ಥಾಪಿಸಲ್ಪಟ್ಟಿದ್ದು)

(ಸ್ಥಾಪಿತ. ೧೯೦೬)

ಹೆಡ್ ಆಫೀಸು
ಬಾವಟೆಗುಡ್ಡೆ, ಮಂಗಳೂರು

ಜನರಲ್ ಮೆನೇಜರರ ಆಫೀಸು —
75 ಎಪ್ರೊಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು:—

ಮದರಾಸು ಪ್ರಾಂತ್ಯ:
- ಮಂಗಳೂರು ಸಿಟಿ
- ಮಂಗಳೂರು-ಬಂದರ್
- ಮುಲ್ಕಿ
- ಗಂಗೊಳ್ಳಿ
- ಕುಂದಾಪುರ
- ಉಡುಪಿ
- ಕಾರ್ಕಳ
- ಬಂಟ್ವಾಳ
- ಪುತ್ತೂರು
- ಕಾಸರಗೋಡು.
- ಮದರಾಸು.
- ಪಯ್ಯನ್ನೂರು
- ಕಲ್ಲಿಕೋಟೆ.
- ಕೆನ್ನಾನ್ನೂರು
- ಕೊಯಮುತ್ತೂರು.
- ತಿರುಚಿನಾಪಳ್ಳಿ
- ತುತುಕುಡಿ
- [illegible]
- [illegible]

ಹೈದರಾಬಾದ್ ಸಂಸ್ಥಾನ:
- ಸಿಕಂದರಾಬಾದು

ತಿರುವಾಂಕುರು ಸಂಸ್ಥಾನ:
- ಅಲ್ಲೆಪ್ಪಿ
- ಕ್ವಿಲೋನ್

ಮಧ್ಯ ಪ್ರಾಂತ್ಯ:
- ನಾಗಪುರ
- ಅಕೋಲಾ
- ಅಮರಾವತಿ.

ಮುಂಬೈ ಪ್ರಾಂತ್ಯ:
- ಬೆಳಗಾಂವ್
- ಧಾರವಾಡ
- ಹುಬ್ಬಳ್ಳಿ.
- ಕೊಲ್ಹಾಪುರ.
- ಪೂಣೆ.
- [illegible] ಫೋರ್ಟ್
- [illegible] ಮಾಂಡ್ವಿ
- [illegible]
- [illegible]-ಗಿರ್‌ಗಾಂವ್
- [illegible]-ಕಲ್ಯಾಣ

ಮೈಸೂರು ಸಂಸ್ಥಾನ:
- ಮೈಸೂರು
- ಶಿವಮೊಗ್ಗ
- ಚಿಕ್ಕಮಗಳೂರು.
- ಬೆಂಗಳೂರು ಸಿಟಿ
- ಅರಸಿಕೆರೆ
- ದಾವಣಗೆರೆ

ಸಿಂದ್ ಪ್ರಾಂತ್ಯ:
- ಕರಾಚಿ.

ಕೊಚ್ಚಿ ಸಂಸ್ಥಾನ:
- ಕೊಚ್ಚಿ.
- ಎರ್ನಾಕುಲಾಮ್.

ಆಹಾರದ ಕಸ್ವ ಮತ್ತು ಮಣ್ಣಿನ ಫಲವತ್ತೆ

ಸೆಗಣಿಯನ್ನು ಸುಡುವದು ಮಹಾಪರಾಧ

ಸೆಗಣಿ ಅಥವಾ ಕೊಟ್ಟಿಗೆಯ ಗೊಬ್ಬರವು ಮಣ್ಣಿನ ಗುಣಾಭಿವೃದ್ಧಿಗೂ ಫಸಲಿನ ಪ್ರಮಾಣವನ್ನು ಒಂದೇ ಸಮನಾಗಿ ಇಟ್ಟಿರುವದಕ್ಕೂ ಅತ್ಯುತ್ತಮವಾದುದು. ಸರಿಯಾಗಿ ಬಳಸಿದರೆ ವಿಶೇಷ ಖರ್ಚಿಲ್ಲದೆ ಬಡ ಹಿಂದೀ ಒಕ್ಕಲಿಗರಿಗೆ ಸಮಪ್ರಮಾಣದ ಬೆಳೆಯನ್ನು ಅದು ಒದಗಿಸಿಕೊಡಬಲ್ಲುದು ಸಗಣಿಯ ಗೊಬ್ಬರವು ಅತ್ಯಂತ ಬೆಲೆ ಬಾಳುವ ಗೊಬ್ಬರವಾಗಿದ್ದು ತನ್ನ ಹಣವನ್ನೇ ತಾನು ಸುಡುತ್ತಿರುವೆನೆಂಬ ಅರಿವಿಲ್ಲದೆ ಹಿಂದೀ ರೈತನು ಅದನ್ನು ಸುಡಲು ಉಪಯೋಗಿಸುವುದನ್ನು ಕಂಡರೆ ಕನಿಕರವೆನಿಸುತ್ತದೆ. ಆದರೆ ಅವನು ಉರುವಲಿಗೆ ಏನನ್ನು ಉಪಯೋಗಿಸಬೇಕೆಂಬ ಪ್ರಶ್ನೆಯೇಳುತ್ತದೆ. ದುರದೃಷ್ಟದಿಂದ ಸೆಗಣಿಯೊಂದೇ ಅವನಿಗೆ ಅಗ್ಗವಾಗಿ ಸಿಗುವ ಉರುವಲು. ಹಿಂದೆ ಸರಕಾರವು ಈ ಮುಖ್ಯ ಸಮಸ್ಯೆಯನ್ನೇ ಸಂಪೂರ್ಣವಾಗಿ ಅಲಕ್ಷ್ಯ ಮಾಡಿತ್ತು. ಮತ್ತು ಈಗಲೂ ಆ ಬಗ್ಗೆ ಅದರ ಹತ್ತಿರ ಯಾವ ಯೋಜನೆಯೂ ಇದ್ದಂತಿಲ್ಲ ಒಕ್ಕಲುತನದ ಸುಧಾರಣೆಗಾಗಿ ಸಾವಿರಾರು ಯೋಜನೆಗಳನ್ನು ಕೈಕೊಳ್ಳುವೆನೆಂಬ ರಾಷ್ಟ್ರೀಯ ಸರಕಾರದ ಆಳಿಕೆಯಲ್ಲಿ ಸೆಗಣಿಯನ್ನು ಗೊಬ್ಬರಕ್ಕಾಗಿ ಉಳಿಯುವಂತೆ ಮಾಡಿ ರೈತನ ಬಳಕೆಗೆ ಬೇರೆ ಯಾವುದಾದರೂ ಉರುವಲು ಸಿಗುವಂತೆ ಸಗಿ ಹಿಂದೀ ರೈತನ ಸ್ಥಿತಿಗತಿಯನ್ನು ಉತ್ತಮಗೊಳಿಸಲು ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಮರಗಳನ್ನು ನೆಡುವುದನ್ನು ಪ್ರೋತ್ಸಾಹಿಸಬೇಕು, ಇಲ್ಲವೆ 'ಸಾಧ್ಯವಾದಲ್ಲಿ ಕಲ್ಲಿದ್ದಲು ಸಿಗುವಂತೆ ಮಾಡಬೇಕು.

'ಹೇಸಿಗೆ'ಯನ್ನು ಗದ್ದೆಗಳಲ್ಲಿ ಬಳಸಬಹುದೆಂದು ಸಲಹೆ ಮಾಡಲಾಗಿದೆ, ಆದ್ದರಿಂದ ಕೆಲ ಮಟ್ಟಿಗೆ ಪ್ರಯೋಜನ ಸಿಗಬಹುದು ಆದರೆ ಜಗತ್ತಿನ ಎಲ್ಲ ವಿಭಾಗದ ರೈತನಿಗೂ ಅದನ್ನು ತಯಾರಿಸುವುದು ಸುಲಭದ ಕೆಲಸವಾಗದು, ಆದುದರಿಂದ ಅದರ ತಯಾರಿಕೆಯಲ್ಲಿ ರೈತರು ಅಷ್ಟು ಉತ್ಸುಕರಾಗಿಲ್ಲ ಹಸಿ ಒಣ ಎಲೆಗಳು, ಕಾಗದ ಹುಲ್ಲು ಮುಂತಾದುವನ್ನು ಗದ್ದೆಗಳಲ್ಲಿ ಹರಡಿ ಸಾರಜನಕವನ್ನು ನೆಲೆನಿಲ್ಲಿಸುವ ನಮ್ಮ ಪ್ರಯೋಗಗಳಿಂದ ನಮಗೆ ಇಂತಹ ಸಸ್ಯಾವಶೇಷಗಳನ್ನು 'ಹೇಸಿಗೆ' ಹಾಕುವುದರ ಮೊದಲು ಬಳಸುವುದು ಯೋಗ್ಯವೆಂದು ಕಂಡುಬಂದಿದೆ ಮಳೆಗಾಲದ ಮುನ್ನ ಈ ಸಸ್ಯಾವಶೇಷಗಳನ್ನು ಸೇರಿಸಿ ಉತ್ತರ ಮೂರು ತಿಂಗಳಲ್ಲಿ ತಕ್ಕಮಟ್ಟಿಗೆ ಅವು ಕೊಳೆತು ಅವುಗಳ ಕಾರ್ಬನ್ನು ಮಣ್ಣಿನ ಮೇಲೆ ಅಮ್ಲೀಕೃತವಾಗಿ ಸಾರಜನಕವನ್ನು ತಡೆಹಿಡಿಯಲಗತ್ಯವಾದ ಸತ್ವವನ್ನು ಹೊರಗೆಡಹುತ್ತದೆ ಮಣ್ಣಿಗೆ ಸೇರಿಸಿದಾಗ ಈ ಸಸ್ಯ ಪದಾರ್ಥಗಳು ನೇರವಾಗಿ ತಮ್ಮಲ್ಲಿದ್ದ ಪೊಟಾಶ್ ಹಾಗೂ ಸಾರಜನಕವನ್ನು ಪುರವಣಿ ಮಾಡುವುದಲ್ಲದೆ ಮಣ್ಣಿನ ಮೇಲೆ ಕೆಲ ಪ್ರಮಾಣದಲ್ಲಿ ಸಾರಜನಕವನ್ನು ನಿಲ್ಲಿಸಿ ಅದನ್ನು ಹೆಚ್ಚು ಫಲವತ್ತಾಗಿ ಮಾಡಬಲ್ಲವು ಆ ಪದಾರ್ಥಗಳು ಬಹಳ ಹೆಚ್ಚಾಗಿಲ್ಲದಿದ್ದರೆ ಹಾಕಿದ ಮೂರು ತಿಂಗಳುಗಳಲ್ಲಿ ಅವು ತಕ್ಕಮಟ್ಟಿಗೆ ಕೊಳೆತು ಮಣ್ಣಿನ ಕಾರ್ಬನ್ ಸಾರಜನಕ ಪ್ರಮಾಣವು ಯೋಗ್ಯ ಮಟ್ಟಕ್ಕೆ ಬರುತ್ತದೆ. ಸಸ್ಯಜ ಪಿಷ್ಟ, ಹೊಲಸು ಮತ್ತು ಸಾರಜನಕಗಳ ಅಂಶ ಹೆಚ್ಚಾಗುತ್ತದೆ. ಉತ್ತ ಮೇಲೆ ಬಂದ ಮಣ್ಣು, ತೇವವನ್ನು ಉಳಿಸಿಕೊಳ್ಳುವ ಶಕ್ತಿ, ಮತ್ತು ಸಾರಜನಕ ಸಂಗ್ರಹಣ ಬಲ—ಇವು ಸುಧಾರಿಸುತ್ತವೆ. ಕೊಳೆಸುವುದರಲ್ಲಿ ಪದಾರ್ಥಗಳಲ್ಲಿಯ ಸಾರಜನಕವನ್ನು ಉಳಿಸುವುದು ಮತ್ತು ಆ ಕೊಳೆತ 'ಹೇಸಿಗೆ'ಯ ಕಾರ್ಬನಿನ ಜೊತೆಗೆ ಅದನ್ನು ಮಣ್ಣಿಗೆ ಸೇರಿಸುವದು—ಇದೇ ಮುಖ್ಯ ಗುರಿ ನಮ್ಮ ಗೊಬ್ಬರ ಹಾಕುವ ಪದ್ಧತಿಯಲ್ಲಿ ಸಸ್ಯ ಪದಾರ್ಥಗಳು ಮಣ್ಣಿಗೆ ನೇರವಾಗಿ ಬಿದ್ದು ಮೂಲ ಪದಾರ್ಥಗಳಲ್ಲಿಯ ಸಾರಜನಕವು ಮಣ್ಣಿಗೆ ಸೇರುವಂತೆ ಮಾಡುವುದಲ್ಲದೆ ವಾತಾವರಣದ ಸಾರಜನಕದ ನಿಲುಗಡೆಯಿಂದ ಕೆಲ ಪ್ರಮಾಣದಲ್ಲಿ ಮಣ್ಣಿನಲ್ಲಿ ಸಾರಜನಕ ವೃದ್ಧಿಯುಂಟಾಗುತ್ತದೆ ಆದುದರಿಂದ ಕೊಳೆಸದೆ ಹಾಗೆ ಸಸ್ಯಾವಶೇಷಗಳನ್ನು ಗದ್ದೆಗೆ ಹಾಕುವುದು ಉತ್ತಮವೆಂದಾಯಿತು, ಏಕೆಂದರೆ ಉಷ್ಣವಲಯದಲ್ಲಿ ಹೆಚ್ಚಿನ ಉಷ್ಣ ಮತ್ತು ಬಿಸಿಲು ಬೇಕಾದಷ್ಟು ದೊರೆತು ಮತ್ತಷ್ಟು ಸಹಕಾರಿಯಾಗುವದು

ಮಣ್ಣಿನ ಗುಣಗಳನ್ನು ಸುಧಾರಿಸಲು ಸಸ್ಯಜ ಹಾಗೂ ಪ್ರಾಣಿಜ ಪದಾರ್ಥಗಳನ್ನು ಬಿಟ್ಟರೆ ಬೇರೆಯ ನಿರವಯವಿಜನ್ಯ ಪದಾರ್ಥಗಳು ಅಷ್ಟೇನೂ ಪ್ರಯೋಜನಕಾರಿಗಳೆನಿಸವು, ಅವಶ್ಯ ಬಿದ್ದಾಗ ಕೇವಲ ಹೆಚ್ಚು ಬೆಳೆಯನ್ನು ತೆಗೆಯಲು ಅವು ಸಹಕಾರಿಗಳಾಗಬಹುದೆಂದು ಹೇಳಬಹುದು ಗಾಳಿಯಲ್ಲಿಯ ಸಾರಜನಕದಿಂದ ಸಾರಜನಕದ್ರಾವಕ ಮತ್ತು ಮಿಶ್ರ ಅಮೋನಿಯಗಳನ್ನು ಉತ್ಪಾದಿಸಲೆಂದು ನಿಲ್ಲಿಸಲಾದ ವಾತಾವರಣದ ಸಾರಜನಕದ ಪ್ರಮಾಣದ ಮೇಲೆ ಒಂದು ದೇಶದ ನಾಗರಿಕತೆಯ ಮಟ್ಟವನ್ನು ನಿರ್ಣಯಿಸಬಹುದೆಂದರೆ ಅತಿಶಯೋಕ್ತಿಯಾಗಲಾರದು ಗೊಬ್ಬರದ ತಯಾರಿಕೆಗೆ ಭಾರತವು ಕೆಲವು ಯಂತ್ರಗಳನ್ನು ತರಿಸಲಿದೆಯೆಂಬುದೊಂದು ಸಂತೋಷದ ಸಂಗತಿ ಆದರೆ ನಮ್ಮ ನೆರೆಹೊರೆಯ ಚೀನ ಜಪಾನುಗಳಂತಹ ದೇಶಗಳೊಡನೆ ಈ ಉದ್ಯಮದಲ್ಲಿ ಸ್ಪರ್ಧೆ ನಡೆಸಲು ಶಕ್ತರಾದಲ್ಲದೆ ಹಾಗೆ ಗೊಬ್ಬರದ ತಯಾರಿಕೆಗೆ ಹೊರಟರೆ ಕೆಲಕಾಲದ ಹಿಂದೆ ಬೆಲ್ಲದ ಸಕ್ಕರೆಯನ್ನು ತಯಾರಿಸಹೋಗಿ ನಷ್ಟ ಹೊಂದಿದಂತೆ ನಷ್ಟಹೊಂದಬೇಕಾದೀತೆಂಬುದನ್ನು ಸರಕಾರವು ಮರೆಯಲಾಗದು ಬಿಹಾರದಲ್ಲಿ ಕಾರಖಾನೆಯನ್ನು ಸ್ಥಾಪಿಸಿ 800 ಮೈಲು ದೂರದ ರಜಪುಟಾಣದಿಂದ ಕಚ್ಚಾ ಮಾಲುಗಳನ್ನು ತರಿಸುವುದು ಆರ್ಥಿಕ ದೃಷ್ಟಿಯಿಂದ ಲಾಭಕರವೆನಿಸದು

ಹಿಂದೂಸ್ಥಾನದಲ್ಲಿ ತಯಾರಿಸಬಹುದಾದ ಗೊಬ್ಬರಗಳೆಂದರೆ ಮೂತ್ರಜ ಗೊಬ್ಬರ, ಅಮೋನಿಯಂ ನೈಟ್ರೇಟ್, ಅಮೋನಿಯಂ ಸಲ್ಫೇಟ್ ಮೊದಲಾದುವು

(ತಾ 11 ಮತ್ತು 18ರ ಹರಿಜನದಲ್ಲಿ ಪ್ರಕಟಿತವಾದ ಡಾ ಎನ್ ಆರ್ ಧಾರ್ ಇವರ "ಆಹಾರದ ಕಸ್ವ ಮತ್ತು ಮಣ್ಣಿನ ಫಲವತ್ತತೆ" ಎಂಬ ಲೇಖದಿಂದ)

ಕಸಿ ಹಣ್ಣಿನ ಗಿಡಗಳು ಮತ್ತು ತರಕಾರಿ ಬೀಜಗಳು

ಜುಲೈ ಅಗಸ್ಟ್ ತಿಂಗಳಲ್ಲಿ ಹಾಕುವ ಇಂಗ್ಲೀಷ್ ಟೈಪ ಮತ್ತು ಇಂಡಿಯನ್ ತರಕಾರಿ ಬೀಜಗಳು 20 ತರಹ ಕಲರ್‌ಪ್ಯಾಕೆಟ್‌ಗಳ ಸಮೇತ— ರೂ. 4—0—0

ಬೆಂಗಳೂರು ಕಸಿ ಮಾವಿನ ಗಿಡಗಳು 6 ಜಾತಿ 6 ಗಿಡಕ್ಕೆ 9—0—0
ಕಲಕತ್ತೆ ಮಾವಿನ ಗಿಡಗಳು 12 ಜಾತಿ 12 ಗಿಡಕ್ಕೆ 16—0—0
ಸಪೋಟ, (ಚಿಕ್ಕು) ಗಿಡ 1ಕ್ಕೆ 1—8—0
ನಾಗಪುರ—ಕೊಡಗು—ಮುಸಂಬಿ-ನಿಂಬೆ-ಚಕ್ಕೋತ್ರ.
ದಾಳಿಂಬ. ಪನ್ನೇರಳೆ—ಗಿಡಗಳು ಡಜನ್ 1ಕ್ಕೆ 15—0—0

ಅರ್ಧ ಹಣ ಮುಂಗಡ ರವಾನಿಸಬೇಕು ಪ್ಯಾಕಿಂಗ್ ಮತ್ತು ಇತರ ಖರ್ಚು ಬೇರೆ

ಪತ್ತೆ ದಿ ಅಲ್‌ಸೂರ್ ಸೀಡ್ ಕಂಪೆನಿ,
ಅಲಸೂರು — ಬೆಂಗಳೂರು.

ಭಾರತೀಯ ಸಾಹಿತ್ಯ ಪರಿಷತ್ತು ದಿಲ್ಲಿ

ಪ್ರಾರಂಭಿಕ ಅಧಿವೇಶನ

ಬಿನ್ನಹ

ಪುಣ್ಯ ಸ್ಮರಣೀಯ ಪ್ರೇಮಚಂದರ ಹೆಸರು ಈಗ ಮನೆ ಮಾತಾಗಿದೆ. ಪ್ರೇಮಚಂದರು ಹಿಂದಿಯಲ್ಲೂ ಉರ್ದುವಿನಲ್ಲೂ ಅಪ್ರತಿಮ ಸಾಹಿತ್ಯ ನಿರ್ಮಾಣವನ್ನು ಮಾಡಿದರು, ಪ್ರತಿಯೊಬ್ಬ ಭಾರತೀಯನ ದೃಷ್ಟಿಗೆ ಭಾರತೀಯ ಭಾಷೆಗಳ ಸಾಹಿತ್ಯವನ್ನು ತರಲು ಅವರು ಹೆಣಗಾಡಿದರು ಅವರ ಹಂಸವು ಈ ಉಚ್ಚ ಧ್ಯೇಯಕ್ಕಾಗಿ ಮೀಸಲಾಗಿತ್ತು ಸಮಾಜದ ಹಿತಕ್ಕಾಗಿ ಅವರು ತಮ್ಮ ಕೃತಿಗಳಲ್ಲಿ ಸದ್ಯಃಕಾಲಿನ ಸಾಮಾಜಿಕ, ನೈತಿಕ ಮತ್ತು ರಾಜಕೀಯ ಪ್ರವೃತ್ತಿಗಳನ್ನು ಚಿತ್ರಿಸಿ ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಅತ್ಯುತ್ತಮವಾದುದನ್ನು ಸಲ್ಲಿಸಿದರು

ಈ ಸಾಹಿತ್ಯ ಸೇವೆಯ ಸವಿನೆನಪಿಗಾಗಿ ಮತ್ತು ಅವರ ಸಾಹಿತ್ಯ ಪ್ರಚಾರಕ್ಕಾಗಿ ದಕ್ಷಿಣ ಹೈದ್ರಾಬಾದದಲ್ಲಿ 'ಪ್ರೇಮಚಂದ ಸಮಾಜ'ವು ಹೋದ ವರುಷ ಸ್ಥಾಪಿಸಲ್ಪಟ್ಟಿತು ಈ ಸಂಸ್ಥೆಯ ಪರವಾಗಿ ಭಾರತೀಯ ಎಲ್ಲ ಭಾಷೆಗಳ ಪ್ರಾತಿನಿಧಿಕ ಬರಹಗಾರರ ಸಮ್ಮೇಲನವನ್ನು ಸ್ನೇಹಮಯ ಸಂಬಂಧವನ್ನುಂಟು ಮಾಡುವುದಕ್ಕಾಗಿ ಕರೆಯಲ್ಪಟ್ಟಿದೆ ಮತ್ತು ಈ ಸಮ್ಮೇಲನವು ಭಾರತೀಯ ವಿಚಾರ ಮತ್ತು ಸಂಸ್ಕೃತಿಯ ಕ್ಷೇತ್ರದಲ್ಲಿ ಕೆಲಸ ಮಾಡಲು ಅನುಕೂಲತೆಯನ್ನು ಒದಗಿಸಿಕೊಡುವ ಕೇಂದ್ರವಾಗುವುದೆಂದು ಆಶಿಸಲಾಗಿದೆ

ಭಾರತವು ಜಗತ್ತಿನಲ್ಲಿ ತನ್ನ ಪರಂಪರೆಗೆ ತಕ್ಕ ಸ್ಥಾನಮಾನವನ್ನು ಪಡೆಯುವುದು ಅದರ ಲೇಖಕರ ಅರ್ಥಾತ ವಿಚಾರ ಕ್ರಾಂತಿಯ ಮೂಲ ಪುರುಷರ ಮೇಲೆ ಇದೆಯೆಂಬುದನ್ನು ಹೇಳುವುದು ಅನವಶ್ಯಕ

ಈ ಸಮ್ಮೇಳನವನ್ನು ನೀವು ನಿಮ್ಮ ಸಹಕಾರದಿಂದ ಯಶಸ್ವಿಯನ್ನಾಗಿ ಮಾಡುವಿರೆಂದು ಇಚ್ಛಿಸುತ್ತೇವೆ ಮತ್ತು ನಿಮ್ಮ ನೆರವನ್ನು ಕೋರುತ್ತೇವೆ

ನಿಮ್ಮ ವಿಶ್ವಾಸಿಗಳ ,

ರಾಜೇಂದ್ರ ಪ್ರಸಾದ, ಸರೋಜಿನಿ ನಾಯಡು ಜಾಕಿರ ಹುಸ್ಸೇನ್, ಎಸ್ ಎಸ್ ಭಟನಾಗರ, ವಿಯೋಗಿಹರಿ ಖಾಜೆ ಅಬ್ದುಲ್ ಗಫರ, ಜೈನೇಂದ್ರ ಕುಮಾರ

ಪರಿಷತ್ತಿನ ಉದ್ದೇಶ

ಈ ಸಮ್ಮೇಲನವು ಕೇಂದ್ರೀಯ ಸಾಹಿತ್ಯ ಪರಿಷತ್ತಿಗೆ ತಳಹದಿ ಹಾಕಬಯಸುತ್ತದೆ ಸದ್ಯಕ್ಕೆ ಭಾರತದ ಎಲ್ಲ ಭಾಷೆಗಳಲ್ಲಿ ಹುಟ್ಟಿದ ಬೆಲೆಯುಳ್ಳ ಸಾಹಿತ್ಯವು ಅಸ್ತವ್ಯಸ್ತವಾಗಿ ಹರಡಿದೆ ಸಂಘಟನೆಯು ಇಲ್ಲ ಒಂದು ಭಾಷೆಯ ಸಮೃದ್ಧ ಸಾಹಿತ್ಯದ ಪರಿಚಯ ಮತ್ತೊಂದು ಭಾಷೆಯವರಿಗಿಲ್ಲ ಆದುದರಿಂದ ಪ್ರತಿಯೊಂದು ಭಾಷೆಯಲ್ಲಿ ನಡೆದ ಉತ್ತಮ ಸಾಹಿತ್ಯ ಸೇವೆಯ ಪರಿಚಯವನ್ನು ಮಾಡಿಕೊಡಲು ಒಂದು ಸಂಸ್ಥೆಯು ಅವಶ್ಯವೆಂದು ಬಗೆದು ಈ ಸಮ್ಮೇಲನವನ್ನು ಕರೆಯಲಾಗಿದೆ

ಈ ಸಮ್ಮೇಲನದ ಕಾಲಕ್ಕೆ ಆಧುನಿಕ ಹಾಗೂ ಪ್ರಾಚೀನ ಸಾಹಿತ್ಯದ ಅಂಗಾಂಗಗಳನ್ನು ಕುರಿತು ಚರ್ಚೆಗಳು ಆಗಲಿವೆ ಲೇಖನಗಳು ಓದಲ್ಪಡಲಿವೆ ಸಾಹಿತ್ಯದ ನಾನಾ ಪ್ರವೃತ್ತಿಗಳನ್ನು ಕುರಿತು ವಿಚಾರ ವಿನಿಮಯವಾದ ವಿವಾದಗಳಾಗಲಿವೆ ಚರ್ಚೆ ಮಾಡತಕ್ಕ ಮುಖ್ಯ ವಿಷಯಗಳು ಸುಮಾರು 16ಕ್ಕೆ ಮಿಕ್ಕಿವೆ

ಕಾದಂಬರಿ, ನಾಟಕ, ಪದ್ಯ ಮತ್ತು ಜೀವನ ಚರಿತ್ರೆ ಮತ್ತು ಪ್ರಬಂಧ ಮುಂತಾದ ಸಾಹಿತ್ಯದ ಅಂಗಾಂಗಗಳ ಬಗೆಗೆ, ಆಧುನಿಕ ಸಾಹಿತ್ಯದ ಮೇಲೆ ಪೂರ್ವದ ಅಭಿಜಾತ ಸಾಹಿತ್ಯದಿಂದಾದ ಪರಿಣಾಮ, ಮನೋವಿಜ್ಞಾನದಿಂದಾದ ಪರಿಣಾಮ, ಆಧುನಿಕ ಸಾಹಿತ್ಯದ ಮುನ್ನೋಟ, ಜನತಾ ಸಾಹಿತ್ಯ, ಪಾಶ್ಚಾತ್ಯ ಸಾಹಿತ್ಯದ ತಂತ್ರದಿಂದಾದ ಪರಿಣಾಮ ಲೇಖಕರ ಕರ್ತವ್ಯ ಹಾಗೂ ಹಕ್ಕುಗಳು, ಬರೆಹಗಾರರ ಸಮಸ್ಯೆಗಳು ಮುಂತಾದವು ಚರ್ಚಿಸಲ್ಪಡತಕ್ಕ ವಿಷಯಗಳಲ್ಲಿ ಮುಖ್ಯವಾದವು

ಪರಿಷತ್ತಿನ ಸ್ವಾಗತ ಸಮಿತಿ

ಚೇರಮನ್—ಸರ್ ಶಂಕರಲಾಲ, ವೈಸ ಚೇರಮನ್—ಶ್ರೀ ಜೈನೇಂದ್ರ ಕುಮಾರ, ಸರ್ ಗುರುನಾಥ ಬೆವೂರ ಮೊದಲಾದವರು

ಜನರಲ್ ಸೆಕ್ರೆಟರಿಗಳು— ಶ್ರೀ. ಸತ್ಯವತಿ ಮಲ್ಲಿಕ ಮತ್ತು ಡಾ। ಅಖ್ತರ ಹುಸೇನ ರಾಯಪುರಿ

ಇವರಲ್ಲದೆ ಕೋಶ, ಸಂಘಟನೆ, ವಾಸಸ್ಥಳ, ಪ್ರಕಾಶನ, ವಿಷಯ ಚುನಾವಣೆ ಮುಂತಾದ ಅನೇಕ ಭಾಗಗಳಿಗೆ ಸಮರ್ಥರಾದ ಸೆಕ್ರೆಟರಿಗಳು ಇರುವರಲ್ಲದೆ ಭಾಷೆಗಳ ಪ್ರತಿನಿಧಿಗಳು ಸ್ವಾಗತ ಸಮಿತಿಯಲ್ಲಿದ್ದಾರೆ ಕನ್ನಡದ ಪರವಾಗಿ ಶ್ರೀ ಎಸ್ ಆರ್ ಎಸ್ ರಾಘವನ್ ಅವರು ಇದ್ದಾರೆ

ಈ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನಲಂಕರಿಸಲು ಡಾ ರಾಜೇಂದ್ರ ಪ್ರಸಾದರು ಒಪ್ಪಿದ್ದಾರೆ. ಅಬ್ದುಲ್ ಕಲಾಂ ಆಜಾದರು ಉದ್ಘಾಟನೆ ಮಾಡುವರು

ಪ್ರತಿನಿಧಿಗಳ ಗೋಷ್ಠಿಯ ಅಧ್ಯಕ್ಷರು ಸರ್ ರಾಧಾಕೃಷ್ಣನ್ ಅವರು

ಸಾಹಿತ್ಯ ಪ್ರದರ್ಶನ ಉದ್ಘಾಟನೆ ಶ್ರೀ. ಸಿ ರಾಜಗೋಪಾಲಾಚಾರ್ಯರಿಂದಾಗುವುದು

ಸಾಹಿತ್ಯ ಗೋಷ್ಠಿಯ ಅಧ್ಯಕ್ಷ ಸ್ಥಾನಕ್ಕೆ ಡಾ। ಜಾಕೀರ ಹುಸೇನರು ಆರಿಸಲ್ಪಟ್ಟಿದ್ದಾರೆ ಶ್ರೀಮತಿ ಸರೋಜಿನಿ ನಾಯಡು ಅವರು ಮುಕ್ತಾಯ ಭಾಷಣ ಮಾಡುವರು

ಪಂಡಿತ ಜವಾಹರಲಾಲ ಮತ್ತು ಮಹಾತ್ಮಾ ಗಾಂಧಿಯವರನ್ನೂ ಮಾತಾಡಲು ಬಿನ್ನವಿಸಿಕೊಳ್ಳಲಾಗಿದೆ

ಪ್ರತಿಯೊಂದು ಭಾಷಾ ಸಾಹಿತ್ಯದ ಸಿಂಹಾವಲೋಕನ

ಪುಸ್ತಕಾಕಾರದಲ್ಲಿ ಪ್ರಕಟಿಸಲ್ಪಡುವುದು

ಪ್ರದರ್ಶನದಲ್ಲಿ ಪ್ರಸಿದ್ಧ ಬರೆಹಗಾರರ ಪುಸ್ತಕಗಳು ಮತ್ತು ಭಾವಚಿತ್ರಗಳು ಪ್ರದರ್ಶಿಸಲ್ಪಡುವವು

ಪರಿಷತ್ತಿನ ಅಧಿವೇಶನ

ಅಗಸ್ಟ 30, 31, ಸಪ್ಟಂಬರ 1 2ನೆಯ ತಾರೀಖಿನ ದಿನ ನಡೆಯಬೇಕಾದ ಈ ಸಮ್ಮೇಳನವು ಘಟನಾ ಸಮಿತಿಯ ಅಧಿವೇಶನದ ನಿಮಿತ್ತವಾಗಿ ಈ ದಿನಗಳಲ್ಲಿ ನಡೆಯದೆ ಸಪ್ಟಂಬರ 13, 14, 15, 16 ನೆಯ ತಾರೀಖಿನ ದಿನಗಳಲ್ಲಿ ನಡೆಯುವುದು

ಬಿನ್ನಹ

ಕರ್ನಾಟಕದಿಂದ ಈ ಸಮ್ಮೇಳನಕ್ಕೆ ಹೋಗುವ ಪ್ರತಿನಿಧಿಗಳ ಭೋಜನ ಮತ್ತು ನಿವಾಸದ ವ್ಯವಸ್ಥೆಯನ್ನು ದಿಲ್ಲಿ ಕರ್ನಾಟಕ ಸಂಘದವರು ವಹಿಸಿಕೊಂಡಿದ್ದಾರೆ ಆದುದರಿಂದ ಕನ್ನಡ ಲೇಖಕರು ಇದರ ಲಾಭವನ್ನು ಪಡೆದುಕೊಳ್ಳಬೇಕು ಮತ್ತು ಇಂಥ ಅತ್ಯುತ್ತಮ ಸಂಧಿಯನ್ನು ಕನ್ನಡ ಸಾಹಿತ್ಯ ಪ್ರಚಾರಕ್ಕಾಗಿ ಉಪಯೋಗಿಸಿಕೊಳ್ಳಲು ಬಹುಸಂಖ್ಯೆಯಲ್ಲಿ ಹೋಗಬೇಕು ಕರ್ನಾಟಕ ಸಂಘದ ವಿಳಾಸವು ಈ ಕೆಳಗಿನಂತಿದೆ—

ಶ್ರೀ ಎಸ್ ಆರ್ ಎಸ್ ರಾಘವನ್
ಜನರಲ್ ಸೆಕ್ರೆಟರಿ

ದಿಲ್ಲಿ ಕರ್ನಾಟಕ ಸಂಘ
ನಂ 10, ಅಶೋಕ ರೋಡ
ನ್ಯೂ ದಿಲ್ಲಿ

For Sale

22½ mooras rice property threefourth Chalageni, 8 crops seaside, 4 miles from Mangalore, absentee owner, respectable tenents, rent collections very regular, no arrears, at 8 mooras or near offer, no brokers, Address offers to

Box No 128
c/o Swadeshabimani
Mangalore.

ಜಿಲ್ಲಾ ಪರಿಚಯ
೩

ನಾಗರೀಕ ವ್ಯವಹಾರ

ಮುಂದಿನ ನಗರ ಪಿತಾಮಹರು

ಸದ್ಯದಲ್ಲಿ ನಮ್ಮ ನಗರಸಭೆಗಳಿಗೆ ಚುನಾವಣೆಗಳಾಗಲಿವೆ. ಇಲ್ಲಿಯ ಜನತಾ ಪ್ರತಿನಿಧಿ ಸಂಸ್ಥೆ–ಕಾಂಗ್ರೆಸು ಹುರಿಯಾಳುಗಳನ್ನು ನಿಲ್ಲಿಸುವುದಿಲ್ಲವೆಂದು ನಿರ್ಧರಿಸಿದೆ. ಈಗ ನಿಲ್ಲುವವರು ವ್ಯಕ್ತಿಗತ ಹೊಣೆಗಾರಿಕೆಯವರು ಈ ಸಂದರ್ಭದಲ್ಲಿ ನಾಗರೀಕರು ಯುದ್ಧ ಕಾಲದ ಸರಕಾರಿ ನೇಮಿತ ನಗರ ಸಭಾ ಮಂಡಳಿಯ ಕಾರ್ಯ ದಾಖಲೆಯನ್ನು ಸ್ಮರಿಸಿಕೊಂಡು ಆ ಇತಿಹಾಸವು ಪುನರಾವರ್ತಿಯಾಗದಂತೆ ತಮ್ಮ ಮತದಾನವನ್ನು ಮಾಡಬೇಕು ಆರಿಸಿಬರುವ ತನಕದ ಮಾತು ಸೇವೆ ನಂತರದ ಮಾತು ತಾವೇ. ಮತ್ತೆ ಕೆಲವು ವರ್ಷಗಳ ತನಕ ಚುನಾವಣೆಯಿಲ್ಲ ಆ ಅವಧಿಯಲ್ಲಿ ಸ್ವಾರ್ಥಸಾಧಕರ ಗುಂಪೊಂದು ನಾಗರೀಕ ಆವಶ್ಯಕತೆಗಳ ಸಂಪೂರ್ಣ ಅಲಕ್ಷ್ಯದಿಂದ ಕಾರ್ಯ ಸಾಧನೆ ಮಾಡಿಕೊಳ್ಳದಂತೆ ಎಚ್ಚರ ವಹಿಸುವುದು ಮತದಾರರ ಕರ್ತವ್ಯ ಆಗಿಂದಾಗ್ಗೆ ಸಾರ್ವಜನಿಕರೊಡನೆ ಸಂಪರ್ಕ ಏರಿಸಿಕೊಳ್ಳಬಲ್ಲವರಿಗೆ ಮತ ಕೊಟ್ಟು ಈ ನಾಗರೀಕ ಹಕ್ಕಿನ ಸಾರ್ಥಕ ಮಾಡಿಕೊಳ್ಳಬೇಕೆಂದು ವಿನಂತಿ

ಮಂಗಳಾದೇವಿ ದೇವಸ್ಥಾನಕ್ಕೆ ಕಳೆದ ತಾ ೧೫ರಂದು ಡಾ| ಯು ಪಿ ಮಲ್ಯ, ಶ್ರೀಗಳಾದ ಕೆ ಈಶ್ವರ ಮತ್ತು ಗೋಪಾಲ ಸಾಲೆನ್ಸರ ನೇತೃತ್ವದಲ್ಲಿ ಹರಿಜನ ಪ್ರವೇಶವಾಯಿತೆಂದು ಕೇಳುತ್ತೇವೆ

ಹರಿಜನ ಪ್ರವೇಶ: ತಾ ೧೫ರಂದು ಮಧ್ಯಾಹ್ನ ೧೧ಕ್ಕೆ ಪೂಜೆಯ ವೇಳೆ ಪುತ್ತೂರಿನ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ವಿದ್ಯಾರ್ಥಿಗಳು ಮತ್ತಿತರ ಜನತೆಯೊಂದಿಗೆ ಹರಿಜನ ಪ್ರವೇಶವೂ ಆಗಿದೆಯಾಗಿ ತಿಳಿದಿದೆ

ನೆರೆಹಾವಳಿ: ಕಳೆದ ತಾ ೧೫, ೧೬, ೧೭ರಲ್ಲಿ ಸುರಿದ ಮಳೆಯು ಅಸಾಮಾನ್ಯವಾಗಿ ಜಿಲ್ಲೆಯ ಎಲ್ಲಾ ಕಡೆಗಳಲ್ಲೂ ಧಾರಾಳವಾಗಿ ಸುರಿದಿದ್ದು ಹಲವು ಕಡೆಗಳಲ್ಲಿ ನೆರೆಯ ಹಾವಳಿ ನಡೆದ ವರ್ತಮಾನ ಬಂದಿದೆ. ಆ ಕಾಲದಲ್ಲಿ ಬಂದ ಈ ನೆರೆಯಿಂದ ಭತ್ತದ ಬೆಳೆಗೂ ಅಡಿಕೆ ತೋಟಗಳಿಗೂ ತುಂಬಾ ಹಾನಿಯಿದೆಯಂತೆ ಪುತ್ತೂರಿನ ಮುಂಡಾಜೆ, ಮಲವಂತಿಗೆ, ಮಿತ್ತಬಾಗಿಲು, ಕಡಿರುದ್ಯಾವರಗಳಲ್ಲೂ ಕಾಸರಗೋಡಿನ ಸೀರೆ, ಉಪ್ಪಳ, ಕುಂಬಳೆ ಮೊದಲಾದ ಹೊಳೆಗಳಲ್ಲಿಯೂ ನೆರೆ ಏರಿ ಅಲ್ಲಲ್ಲಿ ಮನೆಗಳು ಬಿದ್ದ ಹಾಗೂ ಪೈರು ನಾಶವಾದ ವಾರ್ತೆ ಬಂದಿದೆ ಭತ್ತದ ತೆನೆ ಬರುವ ಈ ಸಮಯದಲ್ಲಿ ನೆರೆ ಬಂದುದರಿಂದ, ಭತ್ತವೆಲ್ಲ ಜಳ್ಳಾಗಿ ಬೆಳೆಗೆ ತುಂಬಾ ಹಾನಿ ಇದೆಯಂತೆ ಕುಂದಿದ್ದ ಮಳೆಯು ಭರ್ತಿಯಾಗಿ ಇಷ್ಟರಲ್ಲೇ ೧೦೦ ಇಂಚಿನ ವರೆಗೆ ಸುರಿದಿದೆ

ಈ ಮಳೆ ಸಿಂಹಳ, ತಿರುವಾಂಕೂರು ಮೊದಲಾದೆಡೆಗಳಲ್ಲೆಲ್ಲ ಸುರಿದು ಅಪಾರ ನೆರೆಬಂದಿದೆ

ಸ್ವಾತಂತ್ರ್ಯ ದಿನಾಚರಣೆ: ಸುರತ್ಕಲ್, ಹಂಗಾರಕಟ್ಟೆ, ಉಚ್ಚಿಲ, ಮಂಗಳಪೇಟೆ, ಕುತ್ತೇತ್ತೂರು, ಉಡುಪಿ, ಕಾರ್ಕಳ, ಗಂಗೊಳ್ಳಿ, ನಕ್ರೆ, ವಿಟ್ಲ, ಮೂಲ್ಕಿ, ಸಿದ್ಧಾಪುರ, ಮೂಡಬಿದ್ರಿ, ಬಂಟ್ವಾಳ, ಈ ಮೊದಲಾದ ಕಡೆಗಳಲ್ಲಿ ಸ್ವಾತಂತ್ರ ದಿನವನ್ನು ಯಶಸ್ವಿಯಾಗಿಯೂ, ವಿಜೃಂಭಣೆಯಿಂದಲೂ ಆಚರಿಸಿದ ವರದಿಗಳು ನಮಗೆ ಬಂದಿರುತ್ತವೆ ಸ್ಥಳಾಭಾವದಿಂದ ಪ್ರತಿಯೊಂದನ್ನೂ ಪ್ರಕಟಿಸಲಾಗದಕ್ಕೆ ವಿಷಾದಿಸುತ್ತೇವೆ

ಅಕ್ಕಿಯ ಬೆಲೆ ಏರಿಸುವುದೇಕೆ?

ಅಕ್ಕಿ ಹಾಗೂ ಭತ್ತದ ಬೆಲೆಯನ್ನು ಏರಿಸಿದರೆ, ನಮ್ಮ ಆಹಾರದ ಬಿಕ್ಕಟ್ಟು ಪರಿಹಾರವಾಗುವುದೆಂದು, ಮದ್ರಾಸಿನ ಮಂತ್ರಿಗಳೂ ಅವರ ಬೋಧಕರೂ ಭಾವಿಸಿದ ಹಾಗಿದೆ. ಈ ಬಗ್ಗೆ ಅವರು ಒಂದು ಸಮಿತಿಯನ್ನು ರಚಿಸಿ ಮುಂದಿನ ವರ್ಷದ ಆಹಾರ ಧಾನ್ಯದ ಬೆಲೆ ನಿರ್ಧರಿಸುವ ಅಧಿಕಾರವನ್ನು ಕೊಟ್ಟಿದ್ದಾರೆ ಅಧಿಕಾರಿಗಳ ಈ ತೆರನಾದ ಅಭಿಪ್ರಾಯಕ್ಕೆ ಕಾರಣವಿಲ್ಲದಿಲ್ಲ ನಮ್ಮ ಈಗಿನ ಮಂತ್ರಿಮಂಡಲದಲ್ಲಿ ಹೆಚ್ಚಿನವರು ಸ್ವಂತ ಬೇಸಾಯಗಾರರಲ್ಲದ ದೊಡ್ಡ ಜಮೀನುದಾರರೇ ಆಗಿದ್ದಾರೆ

ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ಅವಲೋಕಿಸಿದರೆ, ಆಹಾರ ಧಾನ್ಯದ ಬೆಲೆಯನ್ನು ಇನ್ನೂ ಏರಿಸಿದರೆ ದೊಡ್ಡ ಜಮೀನುದಾರರ ಹೊರತು ಇತರರೆಲ್ಲರಿಗೂ—ಆಹಾರ ಬೆಳೆಸುವ ಒಕ್ಕಲಿಗೂ ಇದರಿಂದ ಬಾಧಕವಲ್ಲದೆ ಪ್ರಯೋಜನವಿಲ್ಲ. ಬೇಸಾಯದ ಖರ್ಚು ಏರಿರುವುದರಿಂದ, ಬೆಲೆಯನ್ನು ಹೆಚ್ಚಿಸಬೇಕಾಗುತ್ತದೆ—ಎಂದು ಕಾರಣ ಕೊಡಬಹುದು, ಆದರೆ ನಮ್ಮ ಜಿಲ್ಲೆಯಲ್ಲಿ ಖರ್ಚುಮಾಡಿ ಬೆಳೆಸುವ ಹಕ್ಕು ಮಾತ್ರ ಬೇಸಾಯಗಾರನಿಗೆ, ಅದರ ಬೆಳೆಯ ಫಲ ಉಣ್ಣುವವನು ಏನೂ ಮಾಡದ ಜಮೀನುದಾರ! ಆದುದರಿಂದ ಅಕ್ಕಿಯ ಬೆಲೆಯನ್ನು ಏರಿಸಿದರೆ, ನಿಜವಾದ ಬೇಸಾಯಗಾರನಾದ ಒಕ್ಕಲಿಗೆ ಯಾವ ಸಹಾಯವೂ ಆಗುವಂತಿಲ್ಲ ಈ ಜಿಲ್ಲೆಯ ಒಡುವಳಿ ಪದ್ಧತಿಯೆಂದರೆ, ಬೇಸಾಯಕ್ಕಾಗಿ ಏನೂ ಖರ್ಚು ಮಾಡದಿದ್ದರೂ, ಆಸ್ತಿಯಲ್ಲಿ ಬೆಳೆದುದಕ್ಕೆಲ್ಲ ಜಮೀನುದಾರರೇ ಹಕ್ಕುದಾರರು ಆದುದರಿಂದ ಅಕ್ಕಿಯ ಬೆಲೆಯನ್ನು ಹೆಚ್ಚಿಸಿದರೆ ನಿಜವಾಗಿ ಖರ್ಚುಮಾಡಿ ಬೇಸಾಯಮಾಡುವ ಒಕ್ಕಲಿಗೆ ಯಾವ ಉಪಕಾರವೂ ಆಗುವುದಿಲ್ಲ. ಸರಕಾರವು ಬೇಸಾಯದ ಹಿತೇಚ್ಛುಗಳಾದರೆ, ಅಕ್ಕಿಯ ಬೆಲೆಯಲ್ಲೇನೂ ಹೆಚ್ಚುಮಾಡದೆ ಆ ಬದಲು, ನಿಜವಾದ ಬೇಸಾಯಗಾರನಾದ ಒಕ್ಕಲಿಗೆ ಸಹಾಯವಾಗುವಂತೆ, ಆತನಿಗೆ ಬೋನಸ್ಸನ್ನು ಕೊಡಬೇಕು.

ಮಾತ್ರವಲ್ಲದೆ, ಸೇಕಡಾ ೭೫ ಮಂದಿ ಒಕ್ಕಲುಗಳಿಂದ ಆತನು ಬೆಳೆಸಿದುದೆಲ್ಲವನ್ನೂ ಸ್ವಾಧೀನಪಡಿಸಿಕೊಂಡು, ಆತನಿಗೆ ಕಾರ್ಡು ಕೊಡಲಾಗುತ್ತಿದೆ. ಅಕ್ಕಿಯ ಬೆಲೆ ಏರಿಸಿದರೆ, ಅದನ್ನು ಬೆಳೆಸುವ ಆ ಒಕ್ಕಲಿಗ ಅಧಿಕ ಮೌಲ್ಯ ಕೊಟ್ಟು, ಆತನ ಆಹಾರವನ್ನು ಪಡಕೊಳ್ಳಬೇಕಾಗುತ್ತದೆ.

ಅಕ್ಕಿಯ ಬೆಲೆಯನ್ನು ಏರಿಸುವ ಸೂಚನೆಯನ್ನು ಕೇಂದ್ರ ಸರಕಾರವು ವಿರೋಧಿಸಿದೆ. ಹಾಗೆ ಏರಿಸಿದರೆ, ಈಗಲೇ ಏರಿರುವ ಇತರ ಪದಾರ್ಥಗಳ ಧಾರಣೆ ಮತ್ತಷ್ಟು ಏರುವುದು, ಪ್ರತಿಯೊಬ್ಬನೂ ಇನ್ನಷ್ಟು ಅಧಿಕ ವೇತನಕ್ಕಾಗಿ ಕೂಗೆಬ್ಬಿಸಬಹುದು ಎಂಬ ಭೀತಿ ಅವರಿಗಿದೆ ಆಹಾರೋತ್ಪಾದನೆಯು ಹೆಚ್ಚಳವಾಗಬೇಕಾದರೆ, ಈಗಿನ ಸಂಗ್ರಹಣ ವಿಧಿಯಲ್ಲಿ ಮಾರ್ಪಾಟಾಗಬೇಕು. ನಿಜವಾದ ಉತ್ಪಾದಕನ ಸ್ವಂತ ಉಪಯೋಗಕ್ಕೆ ಬೇಕಾದಷ್ಟನ್ನು ಆತನು ಬೆಳೆಸಿದುದರಿಂದಲೆ ಬಿಟ್ಟು, ಮಿಗುವುದನ್ನು ಮಾತ್ರ ರಿಕ್ವಿಸಿಶನ್ ಮಾಡಬೇಕು. ಹೀಗೆಂದು ಶ್ರೀ ಜಿ ಕೆ ಗೋವಿಂದ ಭಟ್, ಅವರು ಬರೆಯುತ್ತಾರೆ.

ರಾಜಕುಮಾರನೆಂಬ ಸೋಗಿನಿಂದ ಮಂಗಳೂರಿನ ಕೆಲವರನ್ನು ವಂಚಿಸಿದ ಫೀಜಿ ದ್ವೀಪದ ಅಬ್ದೀಸ್ ಎಂಬವನಿಗೆ ೧ ವರ್ಷದ ಕಠಿಣ ಸಜೆ ಹಾಗೂ ಸಾವಿರ ರೂ ಜುಲ್ಮಾನೆ ವಿಧಿಸಲಾಗಿದೆ

ಮುನ್ಸಿಪಲ್ ಚುನಾವಣೆ: ಇದೇ ಸಪ್ಟಂಬರ ತಿಂಗಳಲ್ಲಿ ಜರಗುವ ನಮ್ಮ ಮುನಿಸಿಪಲ್ ಚುನಾವಣೆಗೆ 12ನೇ ವಾರ್ಡಿಗೆ ಮರ್ಕಾಡ ಪದ್ಮನಾಭ ಕಿಣಿ (ವಕೀಲ)ಯವರ ಸದ್ರಿ ವಾರ್ಡಿನ ಅನೇಕ ವೋಟರರ ಅಪೇಕ್ಷೆ ಮೇರೆಗೆ ಉಮೇದ್ವಾರರಾಗಿರುತ್ತಾರೆಂದು ತಿಳಿಯುತ್ತೇವೆ

ಕಲೆಕ್ಟರರು: ವರ್ಗಾಯಿಸಲ್ಪಟ್ಟಿದ್ದಾರೆಂದು ಪ್ರಕಟವಾದ ನಮ್ಮ ಜಿಲ್ಲಾ ಕಲೆಕ್ಟರರು ಸದ್ಯಕ್ಕೆ ಇಲ್ಲೇ ಇರಿಸಲ್ಪಡುವರೆಂದು ಈಗ ತಿಳಿದು ಬರುತ್ತದೆ

ಕಾಂಗ್ರೆಸ್ ಸದಸ್ಯತನ: ಕಾಂಗ್ರೆಸ್ಸು ಸದಸ್ಯರನ್ನು ಸೇರಿಸುವ ಅವಧಿ ಸೆಪ್ಟಂಬರ್ ತಿಂಗಳಾಂತ್ಯದ ವರೆಗೆ ಮುಂದರಿಸಿದೆ ಪ್ರತಿ ಸರ್ಕಲಿನಲ್ಲಿ 5 ಸಾವಿರ ಸದಸ್ಯರನ್ನು ಮಾಡುವ ಗುರಿಯಿಟ್ಟುಕೊಳ್ಳಲಾಗಿದೆ, ಎಂದು ಪ್ರಕಟಿಸುತ್ತ ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಕೆ ಕೆ ಶೆಟ್ಟರು ಸಾರ್ವಜನಿಕರ ಸಹಕಾರಕ್ಕಾಗಿ ವಿನಂತಿಸಿಕೊಂಡಿದ್ದಾರೆ

ಕಲೆಕ್ಟರರ ಪ್ರಕಟಣೆ: ಹೊಸದುರ್ಗ ತಾಲೂಕಿನ ಮಿಗತಾಯದ ತಾನ್ಯರು ತನಾ ಮತ್ತು ಚನ್ನಾಲ್ ಅಕ್ಕಿ, ಬತ್ತಗಳನ್ನು ಕ್ರಮವಾಗಿ 26-10-47, 30-9-47 ಮತ್ತು 31-10-47ರೊಳಗೆ ಸ್ಟೋರಿಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ.

ಸಂಗೀತ ಕಚೇರಿ – ಮಂಗಳೂರು: ತಾ ೧೫ನೇ ಶುಕ್ರವಾರ ಶ್ರೀ. ಭೋಜರಾವ್ ಪೋಳಾರರವರ ಮನೆಯಲ್ಲಿ, ಶ್ರೀ. ಗುಣಪಾಲ ಜೈನ್ ಯವರ ಅಧ್ಯಕ್ಷತೆಯಲ್ಲಿ, "ಶ್ರೀ ವೆಂಕಟೇಶ ಪ್ರಸಾದಿಕ ನಾಟಕ ಸಭಾ ಮಂಗಳೂರು"ರವರ ಗಾಯನ ಕಚೇರಿಯು ಜರಗಿತು

ಕಂಬನಿ: ಸ್ಥಳೀಯ ಗೌ| ಸಾ| ಬ್ರಾಹ್ಮಣ ಸಮಾಜದ ಕುಲೀನ ಮನೆತನಕ್ಕೆ ಸೇರಿದವರೂ ಪ್ರಸಿದ್ಧ ಹೊಗೆಸೊಪ್ಪು ವ್ಯಾಪಾರಿಗಳೂ ಆಗಿದ್ದ ಶ್ರೀ ಮರೋಳಿ ಕೊಗ್ಗ ಕಾಮತ್ ಇವರು ಕಳೆದ ತಾ. 24ನೇ ರವಿವಾರ ಮಧ್ಯಾಹ್ನ 12-30 ಗಂಟೆಗೆ, ಕೆಲವೇ ದಿನಗಳ ಅಕಾಲ ಹೃದ್ರೋಗದಿಂದ ತಮ್ಮ 68ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಶ್ರೀಯುತರು ಸ್ಥಳೀಯ ವಿಠೋಬ ದೇವಸ್ಥಾನದ ಟ್ರಸ್ಟಿಗಳಲ್ಲಿ ಒಬ್ಬರೂ ಆಗಿದ್ದರು. ಮೃತರ ಆತ್ಮಕ್ಕೆ ಶಾಂತಿ ಕೋರುವುದರೊಡನೆ ಅವರ ಬಂಧು ಮಿತ್ರರಿಗೆ ದುಃಖ ಸಮಾಧಾನ ಬಯಸುವೆವು

ಒಂದು ಸಲಹೆ: ಪ್ರತಿಯೊಂದು ಗ್ರಾಮದಲ್ಲಿಯೂ ಎಲ್ಲಿ ನೋಡಿದರೆ ಅಲ್ಲಿ ಕಾಫಿ ಹೋಟೇಲು ಕಂಡುಬರುತ್ತದೆ ಆದರೆ ಈ ಹೋಟೇಲುಗಳ ದೆಸೆಯಿಂದ ಊರಿನಲ್ಲಿ ತೆಂಗಿನ ಕಾಯಿ, ಬಾಳೆಗೊನೆ, ಹಲಸಿನ ಕಾಯಿ ಕೂಡಾ ಹಲವು ವಸ್ತುಗಳು, ಇದ್ದ ಹಾಗೆ ಕಾಣೆಯಾಗುತ್ತವೆ ಇದರಿಂದ ಸರಕಾರಕ್ಕೆ ಅಬ್ಕಾರಿ ಇಲಾಖೆಯಿಂದ ಆಗುವ ಆದಾಯ ನಷ್ಟ ಭರ್ತಿಗೂ, ಗ್ರಾಮೋದ್ಧಾರ ಯೋಜನೆಗೂ ಅನುಕೂಲವಾಗುವಂತೆ ಪ್ರತಿಯೊಂದು ಗ್ರಾಮದ ಜನಸಂಖ್ಯೆಯ ಮೇರೆಗೆ ಸಾವಿರ ಜನರಿಗೆ ಒಂದು ಕಾಫಿ ಹೋಟೇಲು ಎಂಬಂತೆ ನಿರ್ಣಯಿಸಿ ಅದಕ್ಕೆ ಬೇಕಾದ ರೇಶನ್ ಸಾಮಾನುಗಳನ್ನು ಕೊಟ್ಟು ಏಲಂ ಮಾಡುವಂತೆ ಗ್ರಾಮ ಸಮಿತಿಗಳಿಗೂ ಮುನಿಸಿಪಾಲಿಟಿಗಳಿಗೂ ಅಧಿಕಾರವನ್ನು ಕೊಟ್ಟರೆ ಈಗಿನ ಕಾಲದಲ್ಲಿ ಅಬ್ಕಾರಿ ಗುತ್ತಿಗೆಗಳಿಂದ ಆಗುವ ಉತ್ಪತ್ತಿಯಷ್ಟೇ ಹಣಸಂಗ್ರಹವಾಗಬಹುದು

ಎಚ್ ಎಸ್ ಪೊಳಲಿ.

ಗುರುಕಂಬಳ: ಮಂಗಳೂರು ತಾಲೂಕ ಮೂಡುಪೆರಾರ ಗ್ರಾಮದ ಗುರುಕಂಬಳದಲ್ಲಿ ಇರುವ ಅಸ್ಸಾರ ದ್ದೀನ್ ವಲಿಯವರ ಉರೂಸು ಎಂಬ ಕಾರ್ಯವು ಇದೇ ತಾರೀಕು 9-9-1947 (ಶವ್ವಾಲ್ 23)ರಿಂದ 3 ದಿನಗಳ ವರೆಗೆ ನಡಿಯುವದಾಗಿ ಸದ್ರಿ ದರ್ಗಾ ಮುಕ್ತೇಸರ್ ಜನಾಬ್ ಸಯ್ಯದ್ ಆದಂ ಸಾಹೇಬರು ತಿಳಿಸುತ್ತಾರೆ

ರೂ. ೧೦೦ ಬಹುಮಾನ

ಅದ್ಭುತ ಶಕ್ತಿ ಸಿದ್ಧ ಕವಚ

ಇದನ್ನು ಇಟ್ಟುಕೊಂಡ ಮಾತ್ರಕ್ಕೇ ಅತೀ ದುಸ್ಸಾಧ್ಯವಾದ ಉದ್ದೇಶವೂ ಸಾಧಿಸುವುದು ಇದನ್ನು ಪರಿಣಾಮಕಾರಿಮಾಡಲೂ ಯಾವ ಕಷ್ಟದ ಶ್ರಮವನ್ನು ವಹಿಸಬೇಕಾಗಿಲ್ಲ. ಯಾವ ತಯಾರಿಯಿಲ್ಲದೆಯೂ ಇದು ಫಲಕೊಡುವುದು ನೀಚಗ್ರಹಗಳನ್ನಿದು ಗೆಲ್ಲುವುದು, ಶತ್ರುಗಳನ್ನು ಗೆದ್ದು ಪರೀಕ್ಷೆ, ವ್ಯಾಪಾರ, ವ್ಯಾಜ್ಯ, ಲಾಟರಿ, ಜೂಜು, ಉದ್ಯೋಗಗಳಲ್ಲಿ ಯಶಸ್ಸುಕೊಡುತ್ತದೆ ಸಂಪತ್ತಭಿವೃದ್ಧಿಮಾಡಿ, ಸಾಲ ವಿಮೋಚಿಸಿ, ಅಪಾಯಕರ ಕಾಯಿಲೆಗಳನ್ನು ಗುಣಪಡಿಸುತ್ತದೆ ನಿಮ್ಮನ್ನು ಅದೃಷ್ಟಶಾಲಿ ಮಾಡುತ್ತದೆ ಇದನ್ನು ಸುಳ್ಳೆಂದು ರುಜುವಾತು ಮಾಡಿದವರಿಗೆ 100 ರೂಪಾಯಿ ಬಹುಮಾನ. ಬೆಲೆ ತಾಮ್ರದಕ್ಕೆ ರೂ. 2 ಬೆಳ್ಳಿದ್ದಕ್ಕೆ ರೂ 8, ಬಂಗಾರದಕ್ಕೆ ರೂ. 15...ತತ್ಕ್ಷಣ ಫಲದ ವಿಶೇಷ ತರದ ಕವಚಕ್ಕೆ (ಶುದ್ಧ ಬಂಗಾರದ ಮುಚ್ಚಿಗೆಯದು) ರೂ. 25—7

Dukh Haran Ashram, No. 1
P. O Katri Sarai (Gaya).

KANARA COMMERCIAL BANK LTD.

PUTTUR

H O Puttur] Estd 1920 [Branch Vittal.

All kinds of Banking Business transacted.

Deposits Current, Savings, Cumulative. Deposits are accepted.

Fixed Deposits for periods of 3 months and above up to 24 months are accepted.

ವಿದ್ಯಾರ್ಥಿಗಳ ತೊಂದರೆಗಳು

"ಈಗಿರುವ ವಿದ್ಯಾರ್ಥಿ ಸಂಘಗಳನ್ನೆಲ್ಲ ರಾಷ್ಟ್ರೀಯ ಮಹಾಸಭೆಯೊಂದರೊಳಗೆ ತರಬೇಕೆಂಬ ಪ್ರಯತ್ನವು ಈಗ ನಡೆದಿದ್ದೆ; ವಿದ್ಯಾರ್ಥಿ ಚಳವಳದ ಮೂಲ ತತ್ವಗಳನ್ನು ಪುನರ್ವಿಮರ್ಶಿಸುವ ಹಾಗೂ ವಿದ್ಯಾರ್ಥಿಗಳ ಸಂಯುಕ್ತ ಸಂಸ್ಥೆಯೊಂದನ್ನು ಹೊರಗೆಡಹುವ ಬಯಕೆಯಿಂದ ಕೆಲಸ ಸಾಗಿದೆ. ಈ ಹೊಸ ಸಂಸ್ಥೆಯ ವ್ಯಾಪ್ತಿಯು ನಮ್ಮ ದೃಷ್ಟಿಯಲ್ಲಿ ಎಷ್ಟಿರಬೇಕು? ದೇಶದ ಹೊಸ ಪರಿಸ್ಥಿತಿಯಲ್ಲಿ ಈ ವಿದ್ಯಾರ್ಥಿ ಸಂಸ್ಥೆಯು ಯಾವ ಚಟುವಟಿಕೆಗಳನ್ನು ಕೈಕೊಳ್ಳಬೇಕು?

ಹಿಂದುಗಳು, ಮುಸ್ಲಿಮರು ಮತ್ತು ಇತರರನ್ನೆಲ್ಲ ಒಳಗೊಂಡ ಅಂತಹ ಒಂದು ರಾಷ್ಟ್ರೀಯ ಸಂಸ್ಥೆಯಿರತಕ್ಕದ್ದೆಂಬುದರಲ್ಲಿ ಸಂದೇಹವಿಲ್ಲ. ವಿದ್ಯಾರ್ಥಿಗಳೇ ಭವಿಷ್ಯ ನಿರ್ಮಾಪಕರು. ಅವರನ್ನು ವಿಭಜಿಸಲಾಗದು, ಒಳ್ಳೆಯ ನಾಗರಿಕರಾಗುವಂತೆ ವಿದ್ಯಾರ್ಥಿಗಳು ಸ್ವತಃ ತಮ್ಮಲ್ಲಿ ವಿಚಾರ ಮಾಡಲಿಲ್ಲ ಮತ್ತು ಮುಖಂಡರು ಕೂಡ ಅವರನ್ನು ಓದು ಬರಹದಲ್ಲಿ ಮಗ್ನರಾಗಿರಲು ಬಿಡಲಿಲ್ಲ ಪರಸರಕಾರದಿಂದಲೇ ಕೊಳೆ ಪ್ರಾರಂಭಿಸಿತು. ಅದರ ಫಲದ ಹಕ್ಕುದಾರರಾದ ನಾವು ಅದರ ಹಳೆಯ ದೋಷಗಳನ್ನು ತಿದ್ದಲು ತೊಂದರೆ ತೆಗೆದುಕೊಳ್ಳಲಿಲ್ಲ. ಅದರ ಮೇಲೆ ಬೇರೆ ಬೇರೆ ರಾಜಕೀಯ ಪಕ್ಷಗಳು ಮೀನಿನ ರಾಶಿಯಂತೆ ಅವರನ್ನು ಹಿಡಿಯ ಹೋಗಿವೆ. ಮತ್ತು ದಡ್ಡತನದಿಂದ ವಿದ್ಯಾರ್ಥಿಗಳು ಅವರಿಗಾಗಿ ಎಸೆದ ಬಲೆಯೊಳಗೆ ಓಡಿ ಸಿಕ್ಕಿಕೊಂಡಿದ್ದಾರೆ

ಆದುದರಿಂದ ಯಾವುದಾದರೊಂದು ವಿದ್ಯಾರ್ಥಿ ಸಂಸ್ಥೆಗೆ ಅದೊಂದು ಭಗೀರಥ ಪ್ರಯತ್ನವೆನಿಸುವುದೇ ಸರಿ ಆದರೆ ಹಿಡಿದ ಕಷ್ಟದಿಂದ ಹಿಂದಿರುಗುವದರಲ್ಲಿ ಒಂದು ವಿಧದ ಧೀರ ಭಾವವಿರಬೇಕು ಅವರೆಲ್ಲರನ್ನೂ ಒಂದುಗೂಡಿಸುವುದೇ ಸಂಸ್ಥೆಯ ಕಾರ್ಯವ್ಯಾಪ್ತಿ ಇಂದಿನ ರಾಜಕೀಯ ರಂಗದಿಂದ ನೇರವಾಗಿ ಹೊರಗೆ ನಿಲ್ಲಲು ಕಲಿತ ಹೊರತು ಅವರು ಇದನ್ನು ಮಾಡಲಾರರು. ಉತ್ತರಿಸಬೇಕಾಗಿರುವ ವಿವಿಧ ಸಮಸ್ಯೆಗಳನ್ನು ಅಭ್ಯಸಿಸುವುದೇ ವಿದ್ಯಾರ್ಥಿಯ ಕರ್ತವ್ಯ. ಓದು ಮುಗಿದ ಮೇಲೆ ಅವನು ಕಾರ್ಯ ಮಾಡುವ ಕಾಲ ಬರುತ್ತದೆ.

"ಇಂದು ವಿದ್ಯಾರ್ಥಿ ಸಂಸ್ಥೆಗಳು ರಾಜಕೀಯ ವಿಷಯಗಳ ಮೇಲೆ ಗರಾವು ಪಾಸು ಮಾಡುವುದರಲ್ಲೇ ಹೆಚ್ಚು ಮಗ್ನವಾಗಿರುವುವಲ್ಲದೆ ರಾಷ್ಟ್ರೀಯ ಪುನರ್ರಚನೆಯ ಕಾರ್ಯಕ್ಕಾಗಿ ತಮ್ಮ ಶಕ್ತಿಯನ್ನು ವ್ಯಯಿಸುವದರಲ್ಲಿಲ್ಲ ಅರಿವಾಸಿ ಇದು ರಾಜಕೀಯ ಪಕ್ಷಗಳು ತಮ್ಮ ಪಕ್ಷೀಯ ಉದ್ದೇಶ ಸಾಧನೆಗಾಗಿ ವಿದ್ಯಾರ್ಥಿ ಸಂಘಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವುದರಿಂದ ಹೀಗಾಗಿದೆ ನಮ್ಮ ಈಗಿನ ಅನೈಕ್ಯಕ್ಕೂ ಆ ಪಕ್ಷತಂತ್ರಗಳೇ ಕಾರಣ ಆದುದರಿಂದ ಸೂಚಿತವಾದ ವಿದ್ಯಾರ್ಥಿಗಳ ರಾಷ್ಟ್ರೀಯ ಒಕ್ಕೂಟದಲ್ಲಿ ಈ ಎಲ್ಲ ಪಕ್ಷತಂತ್ರ ಮತ್ತು ಅನೈಕ್ಯಗಳು ಪುನಃ ಉದಯಿಸದಂತೆ ಮಾಡಲು ನಾವು ಒಂದು ಕ್ರಮವನ್ನು ಹೊರಗೆಡಹಬೇಕೆನ್ನುತ್ತೇವೆ ರಾಜತಂತ್ರವನ್ನು ಸಂಪೂರ್ಣವಾಗಿ ಒಟ್ಟುಬಿಡಲು ವಿದ್ಯಾರ್ಥಿ ಸಂಘಗಳಿಗೆ ಸಾಧ್ಯವೆಂದು ನೀವು ತಿಳಿಯುವಿರಾ? ಸಾಧ್ಯವಿಲ್ಲವಾದರೆ ವಿದ್ಯಾರ್ಥಿ ಸಂಘಗಳು ಎಷ್ಟರ ವರೆಗೆ ರಾಜತಂತ್ರದಲ್ಲಿ ಆಸಕ್ತಿವಹಿಸಬೇಕು?

ಈ ಪ್ರಶ್ನೆಯನ್ನು ಪ್ರಾಕ್ಟಿಕವಾಗಿ ಮೇಲೆ ಉತ್ತರಿಸಲಾಗಿದೆ ವಿದ್ಯಾರ್ಥಿ ಪ್ರಪಂಚವನ್ನು ಎಲ್ಲ ಪಕ್ಷಗಳೂ ತಮ್ಮ ಉದ್ದೇಶ ಸಾಧನೆಗಾಗಿ ಬಳಸಿಕೊಂಡಿರುವುದು ಒಮ್ಮಗ್ಗುಲ ಬೆಳವಣಿಗೆಯ ಗುರುತು ದಾಸ್ಯಕ್ಕೆ ಜೋತು ಬೀಳುವ ದಾಸ್ಯ ಕುಲವೊಂದನ್ನು ಸೃಷ್ಟಿಸುವುದೇ ವಿದ್ಯಾಭ್ಯಾಸದ ಉದ್ದೇಶವಾದಾಗ ಇದು ಅಪರಿಹಾರ್ಯವಾಗಿತ್ತೆನ್ನಬಹುದು. ಆ ಕೆಲಸ ಮುಗಿದೆಯೆಂದು ಆಶಿಸುತ್ತೇನೆ ವಿದ್ಯಾರ್ಥಿಗಳ ಮೊದಲ ಕರ್ತವ್ಯವೆಂದರೆ ಸ್ವತಂತ್ರ ರಾಷ್ಟ್ರದ ಮಕ್ಕಳು ಪಡೆಯಬೇಕಾದ ವಿದ್ಯಾಭ್ಯಾಸವಾವುದೆಂಬುದನ್ನು ವಿಚಾರ ಮಾಡುವುದು. ಇಂದಿನ ವಿದ್ಯಾಭ್ಯಾಸವು ಅಂಥದಲ್ಲವೆಂಬುದು ಸ್ಪಷ್ಟ. ಅದು ಎಂಥದಿರಬೇಕೆಂಬ ಪ್ರಶ್ನೆಯಲ್ಲಿ ನಾನು ತಲೆಹಾಕಬಾರದು. ಅವರು ಅದು ವಿಶ್ವವಿದ್ಯಾಲಯದ ಸಿನೇಟಿನಲ್ಲಿರುವ ತಮ್ಮ ಹಿರಿಯರು ಮಾತ್ರ ಮಾಡಬೇಕಾದ ಕರ್ತವ್ಯವೆಂದು ತಿಳಿದು ಮೋಸಹೋಗಬಾರದು ವಿಚಾರ ಶಕ್ತಿಯನ್ನು ಅವರು ಪ್ರಚೋದಿಸಿಕೊಳ್ಳಬೇಕು. ಮುಷ್ಕರ ಮುಂತಾದುವುಗಳಿಂದ ವಿದ್ಯಾರ್ಥಿಗಳು ಅಂತಹ ಸನ್ನಿವೇಶವನ್ನು ಬಲಾತ್ಕಾರದಿಂದ ಬರಮಾಡಬೇಕೆಂದು ನಾನು ಸೂಚ್ಯವಾಗಿ ಕೂಡ ಹೇಳುವುದಿಲ್ಲ ರಚನಾತ್ಮಕ ಹಾಗೂ ಪ್ರಬುದ್ಧ ವಿಮರ್ಶೆಗಳಿಂದ ಅವರು ಸಾರ್ವಜನಿಕ ಮತವನ್ನು ಹುಟ್ಟಿಸಬೇಕು ಹಳೆಯ ಪ್ರಸ್ಥಾನದಲ್ಲಿ ಬೆಳೆದು ಬಂದ ಸನೇಟಿನ ಸದಸ್ಯರು ಬೇಗ ಹೊಸ ಬದಲಾವಣೆಯತ್ತ ಗಮನ ಕೊಡಲಾರರು ತಿಳಿಸಿ ಹೇಳುವುದರಿಂದ ಅವರನ್ನು ಅತ್ತಕಡೆ ಒಯ್ಯಬಹುದು

"ಇಂದು ರಾಷ್ಟ್ರ ಸೇವೆಯಲ್ಲಿ ಬಹುಸಂಖ್ಯಾಕ ವಿದ್ಯಾರ್ಥಿಗಳು ಆಸಕ್ತಿ ವಹಿಸುತ್ತಿಲ್ಲ ಅವರಲ್ಲಿ ಬಹಳ ಜನರು ತೀವ್ರ ವೈಲಾಸಿಕರೆಂದು ತಿಳಿದುಕೊಂಡು ಪಾಶ್ಚಾತ್ಯ ಅಭ್ಯಾಸಗಳನ್ನು ಕಲಿಯುತ್ತಿದ್ದಾರೆ ಮತ್ತು ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಮದ್ಯಪಾನ ಮುಂತಾದ ದುರಭ್ಯಾಸಗಳಿಗೆ ಶರಣು ಹೋಗುತ್ತಿದ್ದಾರೆ ಸ್ವತಂತ್ರ ವಿಚಾರಕ್ಕೆ ಅವರಲ್ಲಿ ಏನೂ ಇಚ್ಛೆ ಹಾಗು ದಕ್ಷತೆಯಿಲ್ಲ ನಾವು ಈ ಎಲ್ಲ ಸಮಸ್ಯೆಗಳನ್ನು ಎದುರಿಸಬಯಸುತ್ತೇವೆ ಮತ್ತು ಚಾರಿತ್ರ ಶುದ್ಧಿ, ಶಿಸ್ತು ಮತ್ತು ದಕ್ಷತೆಗಳನ್ನು ತರುಣರಲ್ಲಿ ಬೆಳೆಸಲ ಪೇಕ್ಷಿಸುತ್ತೇವೆ ನೀವು ಅದನ್ನು ಹೇಗೆ ಮಾಡಬಲ್ಲೆವೆಂದು ನೀವು ತಿಳಿಯುವಿರಿ!"

ಇದು ಇಂದಿನ ಪರಿಸ್ಥಿತಿಯ ವಸ್ತುಸ್ಥಿತಿಯ ನಿಜವಾದ ಚಿತ್ರಣ. ರಾಜಕೀಯ ವಾತಾವರಣ ಉತ್ಕಟವಾದಾಗ ವಿದ್ಯಾರ್ಥಿಗಳ ಮುಷ್ಕರಕಾರರಾಗುವುದನ್ನು ನಿಲ್ಲಿಸಿ [illegible] ಗಂಭೀರವಾಗಿ ಓದಿಗೆ ಗಮನ ಕೊಡತೊಡಗಿದಾಗ ಇದು ಮಾಯವಾಗುತ್ತದೆ ಒಬ್ಬ ವಿದ್ಯಾರ್ಥಿಯ ಜೀವನವು ನ್ಯಾಯವಾಗಿ [illegible] ಮತ್ತು [illegible] ಸ್ವರೂಪವಾಗಿರಬೇಕು [illegible] ಶಿಸ್ತಿನ [illegible] ತಿಳಿದು [illegible] ವಿದ್ಯಾರ್ಥಿ [illegible] ಕಾಣುತ್ತದೆ [illegible] ವಿದ್ಯಾರ್ಥಿ [illegible] ಕ್ಕಿಂತ ಹೆಚ್ಚಿನ ಸಂತೋಷವಾವುದಿದೆ"

ಹರಿಜನ (ಕರ್ಮವೀರ)

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 40/1947.

ಅರ್ಜಿದಾರರು: 1. ಲಕ್ಷ್ಮಿಅಮ್ಮ, ಗೋವಿಂದ ಪ್ರಭುರ ವಿಧವೆ. 2. ಮಾಧವ ಪ್ರಭು 3. ರಮಾನಾಥ ಪ್ರಭು. 4 ನರಸಿಂಹ ಪ್ರಭು. 1ನೇ ಅರ್ಜಿದಾರಳ ಮ ಗೋವಿಂದ ಪ್ರಭುರ ಮಕ್ಕಳು. ಕಾರ್ಕಳ ತಾಲ್ಲೂಕು ಬೆಳುವಾಯಿ ಗ್ರಾಮದ ಕೆಸ್ರಗದ್ದೆಯಲ್ಲಿರುವವರು

ಮತ್ತು

ಎದ್ರಿ: ರಾಮ ಪ್ರಭು, ಕೃಷ್ಣ ಪ್ರಭುರ ಮಗ ಕಾರ್ಕಳ ತಾಲ್ಲೂಕು ಬೆಳುವಾಯಿ ಗ್ರಾಮದ ಮಲೆಬೆಟ್ಟು ಎಂಬಲ್ಲಿರುವವನೆ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದರೆ—

1ನೇ ಅರ್ಜಿದಾರಳ ಗಂಡ ವ 2, 3, 4ನೇ ಅರ್ಜಿದಾರ್ರ ತಂದೆ ಗೋವಿಂದ ಪ್ರಭುರ ಎಂಪಾಯರ್ ಒಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿಯಲ್ಲಿ ಪೊಲಿಸಿ ನಂಬ್ರ 97851 ನೇಗೆ ರೂಪಾಯಿ 1000/–ಕ್ಕೆ ಅವರು ಲೈಫ್ ಯಿನ್ಶ್ಯೂರ್ ಮಾಡಿದ್ದಲ್ಲದೆ ಸದ್ರಿಯವರು ರೂಪಾಯಿ 400/–ಕೂಡಾ ಸದ್ರಿ ಪೊಲಿಸಿ ಜವಾಬ್ದಾರಿಯಿಂದ ಸಾಲ ಕೂಡಾ ಪಡಕೊಂಡಿದ್ದಾರೆ ಇವರು ಕಳೆದ ತಾ 31 10 1946ರಲ್ಲು ಮೃತಪಟ್ಟಿರುತ್ತಾರೆ ಈ ಕಾರಣ ಇನ್ನು ಕಂಪೆನಿಯಿಂದ ಸದಿ ಪೊಲಿಸಿ ಬಾಬ್ತು ಸಿಕ್ಕತಕ್ಕ ರೂಪಾಯಿ 510/ನ್ನು ಪಡಿಯುವರೆ ತಮಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಕ್ಲು ಮಾಡಿದ ಮೇಲ್ಕಾಣಿಸಿದ ಅರ್ಜಿಯು ತಾರೀಕು 1 9 1947ಕ್ಕೆ ತನ್ನಿಗೆ ಇಟ್ಟಿರುತ್ತದೆ ಈ ಕುರಿತು ಯಾರದಾದ್ರೂ ಆಕ್ಷೇಪ ಯಿರುವದಾದ್ರೆ ಸದಿ ದಿವ್ಸ ಹಗಲು ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗುತ್ತದೆ

K V Kamath
Advocate for Pitiitioners

ಕಾರ್ಕಳ ತಾ 20–8 47

ನರೆ ಕೂದಲು ನಿಲ್ಲಿಸಿರಿ

ಬ್ಲೇಕಿನಾ: ಖಂಡಿತವಾಗಿ ನರೆಕೂದಲನ್ನು ಕಪ್ಪಾಗಿ ಪರಿವರ್ತಿಸಿ ನರೆತವನ್ನು ನಿಲ್ಲಿಸುವುದು ಇದಕ್ಕೆ ಮೆದುಳು, ಕಣ್ಣುಗಳನ್ನು ತಂಪು ಮಾಡುವ ಆರೋಗ್ಯದಾಯಕ ಶಕ್ತಿ ಇದೆ ನಮ್ಮ ಫಾರ್ಮಸಿಯ ಹೆಸರು ಬಾಟ್ಲಿಯ ಮೇಲಿಲ್ಲದಿದ್ದರೆ ಅದನ್ನು ತಿರಸ್ಕರಿಸಿರಿ ಕೆಲವೇ ನರೆತ ಕೂದಲುಗಳ ಬಾಟ್ಲಿಗೆ ರೂ 8–0 ಅದಕ್ಕಿಂತ ಹೆಚ್ಚಿದ್ದರೆ ರೂ 8 ೪ ॥ ಸಂಪೂರ್ಣ ನರೆತದಕ್ಕೆ ರೂ 5—0

ಕಾಮಕಲಾ: ಸಾಯಂಕಾಲ ಒಂದು ಮಾತ್ರೆ ಸೇವಿಸಿರಿ ಅದು ನಿಮಗೆ ಚಿರ ಆನಂದ ಕೊಟ್ಟು ನಿಮ್ಮ ಶಕ್ತಿ ಸಾಹಸ ಹೆಚ್ಚಿಸುತ್ತದೆ ಒಂದು ಸಲ ಉಪಯೋಗಿಸಿದರೆ ನಿಮಗದರ ಅದ್ಭುತ ಸಾಮರ್ಥ್ಯ ಮರೆಯಲಾರಿರಿ ಇದು ನಿರ್ಬಲತೆ ಹೋಗಲಾಡಿಸುವುದು

16 ಮಾತ್ರೆಗಳಿಗೆ ರೂ 1

ಸತ್ಯದೇವ ಆಯುರ್ವೇದ ಭವನ.
No 15 P O,
Katri sarai (Gaya)



ತಂಪು, ಶುದ್ಧಿ, ಗುಣ ಮಾಡುವುದು—

40 ವರ್ಷ ಮಿಕ್ಕಿದ ಖ್ಯಾತಿ

ಜಾಂಬಕ್ ವನಸ್ಪತಿ ಮುಲಾಮು ಮುದ್ದಣ, ಕಜ್ಜಿ, ಕುರು, ಕಾಲು ಹುಣ್ಣು ಇತ್ಯಾದಿ ಎಲ್ಲಾ ಚರ್ಮ ಗಾಯ, ವ್ಯಾಧಿಗಳ ಅತೀ ಯಶಸ್ವಿ ಮತ್ತು ಶೀಘ್ರ ಗುಣಕಾರಿ ಎಂದು ವಿಶ್ವ ಖ್ಯಾತಿ ಪಡೆದಿದೆ.

ಜಾಂಬಕಿನೊಳಗಿನ ಪರಿಶುದ್ಧ ಎಣ್ಣೆಗಳು ಸುಲಭವಾಗಿ ಚರ್ಮ ರಂಧ್ರದೊಳಗೆ ಹೀರಲ್ಪಡುವವು ರೋಗಗ್ರಸ್ತ ಇಲ್ಲವೆ ಧಕ್ಕೆಗೊಂಡ ಚರ್ಮಾಣುಗಳನ್ನವು ಶುದ್ಧಮಾಡಿ ಅವುಗಳಲ್ಲಿನ ವಿಷ, ನೋವು, ಊದುವಿಕೆಗಳನ್ನು ಪರಿಹರಿಸುವುದು ಕೀವು ಆರಿ ಹೋಗಿ ಚರ್ಮವು ತ್ವರಿಯಾಗಿ ಗುಣಹೊಂದುವುದು.

Zam-Buk

ವಿಶ್ವ ವಿಖ್ಯಾತ ವನಸ್ಪತಿ ಮಲಾಮು
ಖಂಡಿತ ಪ್ರಾಣಿ ಕೊಬ್ಬು ರಹಿತವಾದುದು

ಇದು ಮಗುವಿನ ಚರ್ಮವನ್ನು
ತಂಪಾಗಿಯೂ, ಮೃದುವಾಗಿಯೂ,
ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ
ಉಪಯೋಗಿಸಿರಿ ಅಷ್ಟು ಸುಖಕರ– ಅಷ್ಟು
ಚರ್ಮ ಮೃದುಕರ–

ಕುಟಿಕೂರ ಟಾಲ್ಕಮ್ ಪೌಡರ್

CUTICURA TALCUM POWDER

(೩ನೇ ಪುಟದಿಂದ)

ವಿವೇಕಾನಂದರು ಸಾರಿದ ಸಮತಾವಾದ

ಮಲಬಾರವನ್ನು ವಿವೇಕಾನಂದರು ಒಂದು ನಿದರ್ಶನವಾಗಿ ಮಾತ್ರ ತೆಗೆದುಕೊಂಡಿರುವರು. ಭಾರತದ ಇತರ ಪ್ರಾಂತ್ಯಗಳೂ ಈ ಅಪರಾಧಕ್ಕೆ ಗುರಿಯಾಗಿವೆ ಅಸ್ಪೃಶ್ಯತೆ, ಜಾತಿ ಭೇದಗಳು ಹಿಂದೂ ಸಮಾಜದ ಅಂಗಾಂಗಗಳನ್ನು ಕೊರೆದು ಹಾಕುತ್ತಿವೆ

"ಹಿಂದೂಗಳಾದವರುಮತಹೀನರಾಗಿದ್ದೀರಿ. ನಿಮ್ಮ ದೇವರು ಅಡಿಗೆ ಮನೆಯಲ್ಲಿದ್ದಾನೆ. ಅಡಿಗೆ ಪಾತ್ರೆಯೇ ನಿಮ್ಮ ವೇದ . ಜನರಿಂದು ವೇದಗಳನ್ನು ತ್ಯಜಿಸಿದ್ದಾರೆ, ನಿಮ್ಮೆಲ್ಲ ತತ್ವಜ್ಞಾನ ಅಡಿಗೆ ಮನೆ ಸೇರಿದೆ. 'ನನ್ನನ್ನು ಮುಟ್ಟಬೇಡ'ವೆಂಬುದೇ ಇಂದಿನ ಭಾರತದ ಮತವಾಗಿದೆ. ಇಂದಿನ ಹಿಂದೂತ್ವವು ನಿಕೃಷ್ಟಾವಸ್ಥೆಗಿಳಿದಿದೆ."

ಇಂದು ಸ್ವಾತಂತ್ರ್ಯವನ್ನು ಗಳಿಸಿದ ನಾವು ನವಯುಗವೊಂದರ ಹೊಸ್ತಿಲನ್ನು ಪ್ರವೇಶಿಸಿದ್ದೇವೆ ಈ ಸಂದರ್ಭದಲ್ಲಿ ನಮ್ಮ ಹಿರಿಯ ಸಾಮಂತರುಗಳು, ಸಾಧು ಸಂತರುಗಳು ನಮ್ಮ ಜನಾಂಗದ ಸಮಾಜ ಜೀವನವನ್ನು ಉಚ್ಚ ನೈತಿಕ ಮಟ್ಟಕ್ಕೇರಿಸಲು ಕೊಟ್ಟ ಉಪದೇಶವನ್ನು ನಾವು ಜ್ಞಾಪಿಸಿಕೊಳ್ಳೋಣ ವಿವೇಕಾನಂದರು ನಮ್ಮ ಜಾತಿ ಪದ್ಧತಿಯ ಪರಿಷ್ಕಾರ ವರ್ಣಭೇದಕ್ಕಿಂತ ಎಷ್ಟೋ ಉತ್ತಮ ವೆಂದಿದ್ದರು "ನಾವು ನಮ್ಮ ಪ್ರಾಚೀನರ ಉದ್ದೇಶಗಳನ್ನು ಸರಿಯಾಗಿ ಪಿವ ಚಿಸಿ ನಮ್ಮ ಸಮಾಜಗಳನ್ನು ಪುನರ್ರಚಿಸೋಣ ನಮ್ಮ ದೇಶದಲ್ಲಿ ಈ ಚಾತುರ್ವರ್ಣ ಪದ್ಧತಿಯಿಲ್ಲದಿರುತ್ತಿದ್ದರೆ ನಮ್ಮ ಸಂಸ್ಕೃತಿಯು ಉಳಿಯುತ್ತಿರಲಿಲ್ಲ ನಮ್ಮ ಸಾಹಿತ್ಯ ಇಷ್ಟೊಂದು ಅಮೋಘತೆ ಪಡೆಯುತ್ತಿರಲಿಲ್ಲ ಐರೋಪ್ಯರಿಗೆ ಕಲಿಯಲು ಏನೂ ಸಿಗುತ್ತಿರಲಿಲ್ಲ

ಕೊನೆಯದಾಗಿ ಸ್ವಾಮಿಜಿಯವರು ಜನಾಂಗಕ್ಕೆ ಹೀಗೆ ವಿನಂತಿಸಿಕೊಂಡಿದ್ದರು

"ಓ ಭಾರತವೆ ನಿಮ್ಮ ವಿವಾಹ, ನಿಮ್ಮ ಸಂಪತ್ತು, ನಿಮ್ಮ ಜೀವಗಳು ಸುಖಕ್ಕಾಗಲ್ಲ, ಅವನ್ನು ಮಾತೆಯ ಪಾದದಲ್ಲಿ ಬಲಿದಾನ ಕೊಡಿರಿ ನಮ್ಮ ಜಾತಿ ಪದ್ಧತಿಯು ವಿಶ್ವಮಾತೃತ್ವದ ಒಂದು ಪ್ರತಿಬಿಂಬವೆಂದು ತಿಳಿಯಿರಿ ನಿಕೃಷ್ಟ ವರ್ಗದವರು, ಅಶಿಕ್ಷಿತರು, ದೀನರು, ಸಮಗಾರರು, ಹೊಲೆಯರು, ಕಸಗುಡಿಸುವವರು ನಿಮ್ಮ ರಕ್ತಬಾಂಧವರೆಂಬುದನ್ನು ಮರೆ**ಯದಿರಿ ಭಾರತೀಯನಾದುದಕ್ಕೆ ಹೆಮ್ಮೆ ಪಡಿರಿ. "ನಾನೊಬ್ಬ ಭಾರತೀಯ. ಭಾರತೀಯರೆಲ್ಲರೂ ನಮ್ಮ ಬಂಧುಗಳು" ಎಂದು ಗಟ್ಟಿಯಾಗಿ ಘೋಷಿಸಿರಿ ಭಾರತದ ಒಳಿತು ನನ್ನ ಒಳಿತು. ಭಾರತದ ಆತ್ಮ ನನ್ನ ಆತ್ಮವೆನ್ನಿರಿ. ಭಾರತದ ದೀನರು, ಅನಾಥರು ನಮ್ಮ ಬಂಧುಗಳೆಂದು ಉದ್ಗರಿಸಿರಿ."**

ಆಗಲೇ ಸುಸಮತಾವಾದವು ಸ್ಥಾಪನೆಯಾಗುವುದು.

卐

ಏಕಾಂಕ ನಾಟಿಕಗಳ ಸ್ಪರ್ಧೆ

ಶ್ರೇಷ್ಠ ಕೃತಿಗೆ ರೂ. 50 ಬಹುಮಾನ

ಕನ್ನಡ ಸಾಹಿತ್ಯ ಪರಿಷತ್ತಿನ ಮುಖಪತ್ರಿಕೆ ಕನ್ನಡ ನುಡಿ ನಾಡಹಬ್ಬಕ್ಕಾಗಿ ಹೊರಡುವ ವಿಶೇಷ ಸಂಚಿಕೆಯ ಸಂದರ್ಭದಲ್ಲಿ ಏಕಾಂಕ ನಾಟಿಕಗಳ ಸ್ಪರ್ಧೆಯೊಂದನ್ನು ನಡಸಲು ನಿಶ್ಚಯ ಮಾಡಿದೆ.

ನಿಯಮಗಳು

1 ಪ್ರವೇಶಧನ ರೂ 1

2 ಏಕಾಂಕ ನಾಟಕವು ಐತಿಹಾಸಿಕ ವಸ್ತುವೊಂದನ್ನು ಕುರಿತದ್ದಾಗಿರಬೇಕು ಇದುವರೆಗೆ ಎಲ್ಲೂ ಪ್ರಕಟವಾಗದೆ ಇರಬೇಕು

8 ಏಕಾಂಕ ನಾಟಕ ಅಚ್ಚಿನಲ್ಲಿ ಕನ್ನಡ ನುಡಿಯ ಆರು ಪುಟಗಳನ್ನು ಮೀರದಂತಿರಬೇಕು.

4 ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾಗಿಯೂ ವಿರಳವಾಗಿಯೂ ಬರೆದಿರಬೇಕು

5 ಏಕಾಂಕ ನಾಟಕ ಕಳಿಸಲು ಕಡೆಯ ತಾರೀಕು 10—9 1947

6 ಶ್ರೇಷ್ಠವೆಂದು ತೀರ್ಮಾನವಾದ ಕೃತಿಗೆ ರೂ 50 ಬಹುಮಾನ

7 ಅಂಥ ಬಹುಮಾನಿತ ಕೃತಿಯನ್ನು ನಾಡಹಬ್ಬದ ಸಂಚಿಕೆಯಲ್ಲಾಗಲಿ ಬೇರೆಯ ಪ್ರಕಟನೆಯಲ್ಲೇ ಆಗಲಿ ಪ್ರಕಟಿಸುವ ಮತ್ತು ಅಭಿನಯಿಸುವ ಹಕ್ಕು ಪರಿಷತ್ತಿಗೆ ಇರುತ್ತದೆ

8 ಹಸ್ತಪ್ರತಿಗಳನ್ನು ವಾಪಾಸು ಬಯಸುವವರ ನಾಲ್ಕಾಣೆ ಅಂಚೆ ಚೀಟಿಯನ್ನು ಕಳಿಸಬೇಕು

9 ಏಕಾಂಕ ನಾಟಕದ ಮೇಲೆ ಎಲ್ಲೂ ಲೇಖಕರ ಹೆಸರು ವಿಳಾಸಗಳನ್ನು ಕಾಣಿಸಿರಕೂಡದು ಈ ವಿವರಗಳನ್ನೊಳಗೊಂಡ ಪತ್ರವನ್ನು ಪ್ರತ್ಯೇಕವಾಗಿ ಜೋಡಿಸಿ ಕಳಿಸಬೇಕು

10 ಪರೀಕ್ಷಕರ ತೀರ್ಮಾನವೇ ಕಟ್ಟಕಡೆಯದು

11 ಸ್ಪರ್ಧೆಯ ಸಂಬಂಧವಾಗಿ ಯಾವ ಬಗೆಯ ಪತ್ರವ್ಯವಹಾರಕ್ಕೂ ಆಸ್ಪದವಿಲ್ಲ ಎಂದಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾದ ಸಿ ಕೆ ನಾಗರಾಜರಾವ್ ತಿಳಿಸುತ್ತಾರೆ

ಕಿರಿ ಸುದ್ದಿ ಸಂಗ್ರಹ

ವಿಲಿಯಂ ಫ್ರಿಸ್ ಗ್ರೀನ್ ಎಂಬ ಆಂಗ್ಲ ಮಹನೀಯನು 1890ರಲ್ಲಿ ಒಂದು ಉದ್ದದ ಕರ್ಪೂರದ ಪಟ್ಟಿಯ ಮೇಲೆ-ಮೊದಲ ಚಲಚಿತ್ರವನ್ನು ತಯಾರಿಸಿದನು

卐

ಯುದ್ಧಕಾಲದ ಇಂಗ್ಲೆಂಡಿನಲ್ಲಿ 70ಸಾವಿರ ರೈಲು ಇಂಜಿನುಗಳು ಕೆಲಸಗೈಯುತಿದ್ದುವು

卐

ಫ್ರಾನ್ಸಿನ ೪900 ಮೈಲು ಕರಾವಳಿಯಲ್ಲಿ 900ಕ್ಕೂ ಮಿಕ್ಕಿ ಸಮುದ್ರ ಸ್ನಾನ ವಿಹಾರದ ಸ್ಥಳಗಳಿವೆ

卐

NOTICE

1 Applications are invited from qualified Licentiates in Indian medicine to fill up the vacancies of Rural Ayurvedic Medical Practitioners in five new Rural Dispensaries to be opened in this District The present rate of annual subsidy (payable monthly) is Rs 600 and it will be enhanced to Rs 600 by Government shortly

2 Applications with details of present appointment and copies of diplomas etc in support of their qualifications should reach the Special Officer, District Board South Kanara by 15th September 1947 at the latest

K District Board Office Mangalore Dated 3 8 1947 | M Sunder Row For Special Officer Dt Board S K

ಆಶ್ಚರ್ಯವಾದ ಸಿದ್ಧಿ ಯಂತ್ರ

ಅದ್ಭುತ ಶಕ್ತಿಯುಳ್ಳ ಈ ಗುಪ್ತ ವಶೀಕರಣ ಯಂತ್ರಧಾರಣದಿಂದ ನಿಮ್ಮ ಇಚ್ಛಿತ ಕಾರ್ಯಗಳೆಲ್ಲ ನೆರವೇರುವುವು ಇದನ್ನು ಧರಿಸಲು ಯಾವ ಕಷ್ಟಸಿದ್ಧಿಯೂ ಬೇಕಾಗಿಲ್ಲ. ಇದು ನಿಮಗೆ ಐಶ್ವರ್ಯವನ್ನು ಕೊಟ್ಟು ನಿಮಗೆ ಬೇಕಾದವರನ್ನು ನಿಮ್ಮ ವಶಪಡಿಸಿ, ಇಚ್ಛಿತ ಕಾರ್ಯಗಳೆಲ್ಲ ವಿಜಯವನ್ನು ಕೊಡುವುದು. ಇದು ರಕ್ಷೆಂದು ಸ್ಥಾಪಿಸುವವರಿಗೆ ರೂ. ೧೦೦ ಬಹುಮಾನ

ತಾಮ್ರದ ತಾಯಿತಕ್ಕೆ ರೂ ೨-೮-೦ ಬೆಳ್ಳಿಯ ತಾಯಿತಕ್ಕೆ ರೂ ೩ ಚಿನ್ನದಕ್ಕೆ ರೂ ೧೫

PRET SHILA ASHRAM
No 181
POKATRI SARAI (GAYA)

NOTICE

The Canara Banking Corporation, Limited

ESTD 1906

60 5 First Preference Shares paid at Re 1/ each, and numbered P C 45038 to 45087 49006 to 49015 (both inclusive) in The Canara Industrial & Banking Syndicate Ltd will be sold by us in public auction at the Mangalore Car Street Office of the Bank on Saturday the 6th September 1947 at 2 P M in order to recover a debt due to the Bank by the person holding the abovesaid shares Intending buyers may bid for the shares

Office of the Bank Mangalore (8 1947 | K Vittal Bhandary, Agent

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿ ಪ್ರದೇಶದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಗಿ ಬಂದಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ... ತಿಸಲ್ಪಟ್ಟ ತರಪ್ ಸಂಖ್ಯೆಯಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ... ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ ಸಂಖ್ಯೆಪಿಡ್ಡ ಸ್ಪೆಶಲ್ ... ರನ್ ಮಾಡಬೇಕಾಗಿರುತ್ತದೆ ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲೈನಿನಲ್ಲಿ ... ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡ್ ಅಂಥಾ ಸ್ಪೆಶಲುಗಳನ್ನು ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜನ್ನು ಒಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರಪೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು, 29-3-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY, LIMITED
(ESTD. 1910)
Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { Company's: Over ¾ Crores / Ours: About 50 lakhs.

Kochikar Brothers, Limited.
(ESTD. 1908)
Chief Agents for S. India & Special Agents for Bomay City & Suburbs
"Bombay Life Building," Gandhi Nagar, UDIPI.
With Offices at:—
MADRAS, BANGALORE, TRIVANDRUM, MANGALORE, MADURA, CALICUT, BOMBAY AND UDIPI.
And Agencies all over South India.

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with seletced ingredients under the supervision of the experienced staff. ~~A specific for the puerperal~~ diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಹೊಡೆದಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸು ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sh...

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 6—9—1947 [ಸಂಚಿಕೆ 35]

ಮಹೋಪವಾಸ

ದೇಶ ವಿಮೋಚನೆಯು ಕೆಲವೇ ದಿವಸಗಳಲ್ಲೆಂಬಂತೆ ಸ್ವಾತಂತ್ರ್ಯ ಪಿತನೆನಿಸಿದ ಮಹಾತ್ಮಾ ಗಾಂಧಿಯವರು ಆಮರಣಾಂತಿಕ ಉಪವಾಸ ಕೈಕೊಂಡಿರುವ ವಾರ್ತೆ ದೇಶದ ಆದ್ಯಂತವನ್ನು ಕಳವಳಕ್ಕೀಡುಮಾಡಿದೆ ನಮ್ಮನ್ನು ಪಾರತಂತ್ರ್ಯದ ಶೃಂಖಲೆಗಳಿಂದ ತಪ್ಪಿಸಲು ಹೆಣಗಾಡಿದ, ನಮ್ಮ ಸಮಾಜ ಜೀವನದಲ್ಲಿ ಜಾತ್ಯಾಂಧತೆ ರಹಿತವಾದ ಸೌಹಾರ್ದವನ್ನುಂಟುಮಾಡಲು ಜೀವಮಾನವನ್ನೇ ಮೀಸಲಾಗಿಟ್ಟ ಮಹಾ ವ್ಯಕ್ತಿಯೊಂದು ನಮ್ಮ ದೇಶಬಾಂಧವರು ಪರಸ್ಪರ ದ್ವೇಷಾನುರಾಗದಿಂದ ಒಬ್ಬರ ಕೊರಳನ್ನೊಬ್ಬರು ಕೊಯ್ಯುವ ಪೈಶಾಚಿಕ ಹವ್ಯಾಸಕ್ಕೆ ಕೈಯಿಕ್ಕಿರುವುದನ್ನು ನಿಲ್ಲಿಸಲೋಸುಗ ಮತ್ತೊಮ್ಮೆ ಉಗ್ರ ನಿರ್ಧಾರ ಕೈಕೊಂಡಿರುವರು ಒಮ್ಮೆ ಶಾಂತತೆ ಸೌಹಾರ್ದಗಳನ್ನು ಪ್ರದರ್ಶಿಸಿದ ಕಲ್ಕತ್ತಾವು ಪುನಃ ತನ್ನ ಹತ್ಯಾಕಾಂಡದ ವೃತ್ತಿಗೆ ಕೈಯಿಟ್ಟಿತು ಮಹಾತ್ಮರ ಶಾಂತಿ ಯತ್ನವು ಸಫಲವಾದುದನ್ನು ಕಂಡು ಸಹಿಸಲಾರದ ಅಧಮರಾರೋ ಅಲ್ಪ ಸಂಖ್ಯಾಕರಾದವರ ಮೇಲೆ ಬಿದ್ದು ನಾರಕೀ ಅತ್ಯಾಚಾರದಿಂದ ದೇಶದ ಶಾಂತಿಗೇ ಕೆಸರೆರಚಲು ಯತ್ನಿಸಿದುದರ ಪರಿಣಾಮವಿದು

ಮಹಾತ್ಮರಾದರೋ ಎಷ್ಟೋ ಸಮಯದಿಂದ ಈ ಕೊನೆಯ ವಿಧಾನವನ್ನು ದೂರ ನಿರಿಸಿದ್ದರು ಇಂದು ಕಲ್ಕತ್ತದಲ್ಲಾದ ಕೊಲೆಗಳ ಪುನರಾವರ್ತನೆಯು ಅವರಿಗೆ ಆತ್ಮಾರ್ಪಣೆಯನ್ನು ಮಾಡುವ ವಿಧಿಯ ಕಡೆಗೇ ಸೆಳೆದುಬಿಟ್ಟಂತಾಗಿದೆ ಪಂಜಾಬದ ನರಮೇಧವು ಸಹಜವಾಗಿ ಎಲ್ಲರಲ್ಲೂ ಉದ್ವೇಗವನ್ನುಂಟುಮಾಡುವಂತಹದಾದರೂ ಒಂದು ಸಲ ಆರಿದ ಅಗ್ನಿಯನ್ನು ಪುನಃವೊಮ್ಮೆ ಹೊತ್ತಿಸಲು ಕಲ್ಕತ್ತದಲ್ಲಿ ಮಾಡಿದ ಯತ್ನಗಳು ಖಂಡನಾರ್ಹವಾಗಿವೆ ನಾವಿಂದು ಲೋಕಪ್ರಿಯನೂ, ಮಹೋನ್ನತ ಮಾರ್ಗದರ್ಶಕನೂ ಆದ ಭವ್ಯ ಪುರುಷನೊಬ್ಬನನ್ನು ಜಗತ್ತು ಕಳಕೊಳ್ಳುವ ದುರಂತವನ್ನೆದುರಿಸಬೇಕಾಗಿದೆ.

ಇಷ್ಟಾದರೂ ಇಂತಹ ಸಮಾನ ಕ್ಲೇಶ ಕಾಲಗಳಲ್ಲಿ ದೈವೀಕ ಚಮತ್ಕಾರದಿಂದ ಅನೇಕ ಕಲ್ಲು ಮಾನವ ಹೃದಯಗಳು ಪರಿವರ್ತನಗೊಂಡಿವೆ. ಹಿಂದೆ ಯರವಾಡಾ ಉಪವಾಸದಿಂದುಂಟಾದ ಪ್ರಚಂಡ ಪ್ರತಿಕ್ರಿಯೆಯಿಂದ ಭಾರತವರ್ಷವೇ ಅಮೋಘ ಕೃತ್ ಸಂಸ್ಕಾರವನ್ನು ಪಡೆದು ಸಮಾಜದೊಳಗಿನ ಸಿಕ್ಕಷ್ಟು ಬಹಿಷ್ಕಾರಕ್ಕೊಳಗಾದ ಮಾನವ ಜೀವಿಗಳು ಪಾವನಗೊಳ್ಳುವಂತಾಯಿತು. ಇಂದಿನ ದುರ್ದೆಶೆಯು ಅಂತರ್ಮತೀಯ ಸಾಂಸ್ಕೃತಿಕ ಘರ್ಷಣೆಗೆ ಸಂಬಂಧಪಟ್ಟದ್ದಿರುತ್ತದೆ ಮಹಾತ್ಮರ ವರ್ಚಸ್ಸಿನಿಂದ ಪರಿವರ್ತನ ಹೊಂದದ ಮಾನವ ಸಿರ್ಬಲತೆಗಳಿಲ್ಲ ಇಂದು ನಮ್ಮನ್ನಾವರಿಸಿರುವ ಈ ದುಃಖವಹ್ನಿಯು ಗಾಂಧೀಜಿಯ ಆತ್ಮ ತೇಜಸ್ಸಿನಿಂದ ತಣಿಯದಿರಲಾರದು ನಾವಾದರೊ ನಮ್ಮೊಳಗಿನ ಕೋಮುವಾರು ವೃತ್ಯಾಸಗಳ ದ್ವೇಷಾಸೂಯೆಗಳ ನಂಜನ್ನು ನಮ್ಮ ಸಾಮಾಜಿಕ ಶರೀರದಿಂದ ತೊಡೆದು ತೊಳೆದುಬಿಡುವ ನಿರ್ಧಾರವನ್ನು ಮಾಡಿಕೊಂಡು ಆ ದೀನ ಮಹಾತ್ಮನನ್ನು ನಮ್ಮ ಮುಂದಿನ ಮಾರ್ಗದರ್ಶನಕ್ಕೆ ಚಿರಾಯುವಾಗಿ ಉಳಿಸಿಕೊಡಬೇಕೆಂದು ವಿಶ್ವ ಸೂತ್ರಧಾರ ನಾದು ಪರಮಾತ್ಮನಲ್ಲಿ ಮೊರೆಯಿಡುವವರಾಗೋಣ.

ವಾರಾಂತ್ಯ ವರದಿ ವಿಮರ್ಶೆ

ಪಂಜಾಬಿದ ಶಾಂತಿ

ಶಾಂತಿ ಬೇಕಾದವರಿಗಲ್ಲವೆ ಅದು ಸಿಗುವುದು ಪೂರ್ವ ಬಂಗಾಲದಲ್ಲಿನ ದಂಗೆಗಳು ಹತೋಟಿಗೆ ತರಲ್ಪಟ್ಟರೂ ಪಾಕಿಸ್ಥಾನದ ಪಶ್ಚಿಮ ಪಂಜಾಬದಲ್ಲಿ ಪುಂಡರು ಸಂಪೂರ್ಣ ಒಡೆತನ ವಹಿಸಿದಂತೆ ವರದಿಗಳಿಂದ ತಿಳಿದುಬರುತ್ತದೆ ಪಾಕಿಸ್ಥಾನದ ಅಧಿಕಾರಿಗಳಾದರೊ ಪಂಜಾಬದ ಕಡೆಗೆ ಬೆಟ್ಟು ತೋರಿಸುತ್ತ ಪುಂಡರನ್ನು ಹತ್ತಿಕ್ಕಲಾಗದ ತಮ್ಮ ಅಸಮರ್ಥತೆ ಮತ್ತು ನಿರ್ಬಲತೆಗಳನ್ನು ಮುಚ್ಚಲು ಪ್ರಯತ್ನಿಸುತ್ತಿರುವರು. ಕೇವಲ ಪುಂಡರನ್ನಡಗಿಸಲಾರದ ಸರಕಾರ ಪ್ರಾಂತ್ಯಗಳನ್ನಾಳಬಲ್ಲದೆ? ಇಂದಿನ ಈ ಭೀಕರ ಪ್ರಕರಣಗಳಿಗೆ ಹಿಂದಿನ ಈ ಪಾಕಿಸ್ತಾನಿ ಪ್ರಿಯರೇ ಕಾರಣರೆಂಬುದನ್ನು ನಾವು ಮರೆಯಲಾರೆವು. ಅದೊಂದು 'ದುರ್ದಿನದಂದು ಲೀಗಿನ ಡ್ಯಾರೆಕ್ಟ್ ಏಕ್ಶನು ಈ ಕ್ರೂರ ಇತಿಹಾಸವನ್ನುದ್ಘಾಟಿಸಿತು. ಅಂದಿನಿಂದಿಂದು ಆ ದ್ವೇಷಾಗ್ನಿಯು ದೇಶದ ವಿಶಾಲ ಭಾಗಗಳನ್ನು ಸುಟ್ಟು ಸೂರೆಗೈಯ್ಯುತ್ತಿದೆ. ಲಕ್ಷಾಂತರ ನಿರಾಶ್ರಿತರು ಆಹಾರದ ಸಮಸ್ಯೆಯನ್ನು ಇನ್ನಷ್ಟು ತೊಡಕಿನದಾಗಿ ಮಾಡಿರುವರು ಇನ್ನಾದರೂ ಎರಡೂ ಸಾಮಂತಗಳ ಧುರೀಣರು ತಮ್ಮ ತಮ್ಮ ಪ್ರದೇಶಗಳಲ್ಲಿ ಚಿರಶಾಂತಿ, ಅಲ್ಪ ಸಂಖ್ಯಾಕರಿಗೆ ಭದ್ರತೆಗಳನ್ನು ಕೊಡಲು ಹೃತ್ಪೂರ್ವಕ ಹಾರೈಸುವುದಕ್ಕಿಂತ ಹೆಚ್ಚಿನದೇನನ್ನೂ ಮಾಡಲಾಗುವುದಿಲ್ಲ

ಪ್ರಾಂತ್ಯದಲ್ಲಿ ಆಹಾರ ಸ್ಥಿತಿ

ಮದ್ರಾಸ್ ಸರಕಾರವು ಪ್ರಾಂತ್ಯಕ್ಕೆ ಆಹಾರ ಸರಬರಾಯಿ ಮಾಡುವರೆ ಅವಿಶ್ರಾಂತ ಶ್ರಮ ವಹಿಸುತ್ತಿರುವರು ಆದರೆ ಜನತೆಯ ಸೌಹಾರ್ದದ ಸರಕಾರವಿಲ್ಲದೆ ಅವರ ಉದ್ದೇಶವು ಸರವೇರಲಾರದು ಆದುದರಿಂದ ಈ ಸಂದರ್ಭದಲ್ಲಿ ಜನತೆಯ ಹೊಣೆಗಾರಿಕೆಯೂ ಅತ್ಯಂತ ಮಹತ್ವದ್ದಿರುತ್ತದೆ

ಈಗ ಆಹಾರ ವಸ್ತುಗಳನ್ನು ಗುಪ್ತ ದಾಸ್ತಾನಿಸಿದ ಮಹಸೀಯರಿಗೊಂದು ಮಾತು ಇವರ ಸ್ವಾರ್ಥ ಸಾಧನೆಯಿಂದ ಅಸಂಖ್ಯಾತ ಜನತೆಯು ಉಪವಾಸದ ಅಸಹನೀಯ ಸಂಕಷ್ಟಕ್ಕೊಳಗಾಗ ಮತ್ತ ಇಲ್ಲಸಲ್ಲದ ಆಹಾರ ಭಕ್ಷಣೆಯಿಂದ ಭೀಕರ ಸಾಂಕ್ರಾಮಿಕ ರೋಗಗಳಿಗೆ ಆಶ್ರಯ ಕೊಡುವಂತಾಗುವುದು ಈ ಪರಿಸ್ಥಿತಿಯಲ್ಲಿ ಹತೋಟಿ ಮೀರುವ ರೋಗರುಜಾದಿಗಳು ಬಡವ ಬಲ್ಲಿದರೆಂದಿಲ್ಲದೆಲ್ಲರನ್ನೂ ಬಲಿಯಾಗಿ ಸ್ವೀಕರಿಸುವುದು ಇದರಿಂದ ಸ್ವಾರ್ಥ ಸಾಧಕರಿಗೂ ಆಪ್ತರಾದವರೂ ಈ ಸಾಂಕ್ರಾಮಿಕ ಯಜ್ಞಕುಂಡದಲ್ಲಾಹುತಿಯಾಗದಿರರೆಂದು ಹೇಳಬರುವುದಿಲ್ಲ ಆದುದರಿಂದ ಅವರು ವಿವೇಚನೆಯಿಂದ ಸರಕಾರ್ರದೊಡನೆ ಸಹಕರಿಸಿ ಆಹಾರ ಶಾಂತಿಯನ್ನು ಸ್ಥಾಪಿಸಲು ನೆರವಾಗಲೆಂದು ಪ್ರಾರ್ಥಿಸುತ್ತೇವೆ

'ಅಮೇರಿಕದ ಸ್ಪ್ರಿಂಗ್ ಫೀಲ್ಡಿನ ನ್ಯಾಯಾಧೀಶರೊಬ್ಬರು ಮೋಟರ್ ವೇಗ ಮೀರಿದ ತರುಣನೊಬ್ಬನಿಗೆ 10 ದಿವಸ ಸಜೆ ಕೊಟ್ಟರು. ಆದರೆ ತಪ್ಪಿತಸ್ಥನ ತಾರುಣ್ಯಕ್ಕಾಗಿ ಕನಿಕರಪಟ್ಟು ನ್ಯಾಯಾಧೀಶರು ಆ 10 ದಿವಸದ 240 ತಾಸುಗಳನ್ನು ಅವನು ಪ್ರತಿ ಆದಿತ್ಯವಾರ ಎರಡೆರಡು ಗಂಟೆಗಳಂತೆ ಸಲ್ಲಿಸುವ ರಿಯಾಯಿತಿ ಕೊಟ್ಟಿರುವರು.

THE
UNITED INDIA LIFE ASSURANCE CO., LTD.

ESTD 1906 — H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE
K S. Rao Road, Mangalore.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed . .	Rs 16,00,000
Capital Paid up	Rs. 15,98,220
Reserves . .	Rs 5,26,000

BANKING BUSINESS OF EVERY DESCRIPTION TRANSACTED



ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY, LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { Company's: Over ¾ Crores
Ours: About 50 lakhs.

Kochikar Brothers, Limited.

(ESTD. 1908)

Chief Agents for S. India & Special Agents for Bomay City & Suburbs

"Bombay Life Building," Gandhi Nagar, UDIPI.

With Offices at:—

MADRAS, BANGALORE, TRIVANDRUM, MANGALORE, MADURA, CALICUT, BOMBAY AND UDIPI

And Agencies all over South India

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 5—9—1947 [ಸಂಚಿಕೆ 35]

ವಾರಾಂತ್ಯ ವರದಿ ವಿಮರ್ಶೆ

ಮಹೋಪವಾಸ

ದೇಶ ವಿಮೋಚನೆಯ ಕೆಲವೇ ದಿವಸಗಳಲ್ಲಿಂಬಂತೆ ಸ್ವಾತಂತ್ರ್ಯ ಪಿತನೆನಿಸಿದ ಮಹಾತ್ಮಾ ಗಾಂಧಿಯವರು ಆಮರಣಾಂತಿಕ ಉಪವಾಸ ಕೈಕೊಂಡಿರುವ ವಾರ್ತೆ ದೇಶದ ಅದ್ಯಂತವನ್ನು ಕಳವಳಕ್ಕೀಡುಮಾಡಿದೆ ನಮ್ಮನ್ನು ಪಾರತಂತ್ರ್ಯದ ಶೃಂಖಲೆಗಳಿಂದ ತಪ್ಪಿಸಲು ಹೆಣಗಾಡಿದ, ನಮ್ಮ ಸಮಾಜ ಜೀವನದಲ್ಲಿ ಜಾತ್ಯಾಂಧತೆ ರಹಿತವಾದ ಸೌಹಾರ್ದವನ್ನುಂಟುಮಾಡಲು ಜೀವಮಾನವನ್ನೇ ಮೀಸಲಾಗಿಟ್ಟ ಮಹಾ ವ್ಯಕ್ತಿಯೊಂದು ನಮ್ಮ ದೇಶಬಾಂಧವರು ಪರಸ್ಪರ ದ್ವೇಷಾನುರಾಗದಿಂದ ಒಬ್ಬರ ಕೊರಳನ್ನಿನ್ನೊಬ್ಬರು ಕೊಯ್ಯುವ ಪೈಶಾಚಿಕ ಹವ್ಯಾಸಕ್ಕೆ ಕೈಯಿಕ್ಕಿರುವುದನ್ನು ನಿಲ್ಲಿಸಲೋಸುಗ ಮತ್ತೊಮ್ಮೆ ಉಗ್ರ ನಿರ್ಧಾರ ಕೈಕೊಂಡಿರುವರು ಒಮ್ಮೆ ಶಾಂತತೆ ಸೌಹಾರ್ದಗಳನ್ನು ಪ್ರದರ್ಶಿಸಿದ ಕಲ್ಕತ್ತಾವು ಪುನಃ ತನ್ನ ಹತ್ಯಾಕಾಂಡದ ವೃತ್ತಿಗೆ ಕೈಯಿಕ್ಕಿತು ಮಹಾತ್ಮರ ಶಾಂತಿ ಯತ್ನವು ಸಫಲವಾದುದನ್ನು ಕಂಡು ಸಹಿಸಲಾರದ ಅಧಮಾಧಮರೋ ಅಲ್ಪ ಸಂಖ್ಯಾಕರಾದವರ ಮೇಲೆ ಬಿದ್ದು ನಾರಕೀ ಅತ್ಯಾಚಾರದಿಂದ ದೇಶದ ಶಾಂತಿಗೇ ಕೆಸರೆರಚಲು ಪ್ರಯತ್ನಿಸಿದುದರ ಪರಿಣಾಮವಿದು.

ಮಹಾತ್ಮರಾದರೋ ಎಷ್ಟೋ ಸಮಯದಿಂದ ಈ ಕೊನೆಯ ವಿಧಾನವನ್ನು ದೂರವಿರಿಸಿದ್ದರು ಇಂದು ಕಲ್ಕತ್ತದಲ್ಲಾದ ಕೊಲೆಗಳ ಪುನರಾವರ್ತನೆಯು ಅವರಿಗೆ ಆತ್ಮಾರ್ಪಣೆಯನ್ನು ಮಾಡುವ ವಿಧಿಯು ಕಡೆಗೆ ಸೆಳೆದುಬಿಟ್ಟಂತಾಗಿದೆ ಪಂಜಾಬದ ನರಮೇಧವು ಸಹಜವಾಗಿ ಎಲ್ಲರಲ್ಲೂ ಉದ್ವೇಗವನ್ನುಂಟುಮಾಡುವಂತಹದಾದರೂ ಒಂದು ಸಲ ಆರಿದ ಅಗ್ನಿಯನ್ನು ಪುನಃವೊಮ್ಮೆ ಹೊತ್ತಿಸಲು ಕಲ್ಕತ್ತದಲ್ಲಿ ಮಾಡಿದ ಯತ್ನಗಳು ಖಂಡನಾರ್ಹವಾಗಿವೆ ನಾವಿಂದು ಲೋಕಪ್ರಿಯನೂ, ಮಹೋನ್ನತ ಮಾರ್ಗದರ್ಶಕನೂ ಆದ ಭವ್ಯ ಪುರುಷನೊಬ್ಬನನ್ನು ಜಗತ್ತು ಕಳಕೊಳ್ಳುವ ದುರಂತವನ್ನೆದುರಿಸಬೇಕಾಗಿದೆ.

ಇಷ್ಟಾದರೂ ಇಂತಹ ಸಮಾನ ಕ್ಲೇಶಕಾಲಗಳಲ್ಲಿ ದೈವೀಕ ಚಮತ್ಕಾರದಿಂದ ಅನೇಕ ಕಲ್ಲು ಮಾನವ ಹೃದಯಗಳು ಪರಿವರ್ತನಗೊಂಡಿವೆ. ಹಿಂದೆ ಯರವಾಡಾ ಉಪವಾಸದಿಂದುಂಟಾದ ಪ್ರಚಂಡ ಪ್ರತಿಕ್ರಿಯೆಯಿಂದ ಭಾರತವರ್ಷವೇ ಅಮೋಘ ಹೃತ್ ಸಂಸ್ಕಾರವನ್ನು ಪಡೆದು ಸಮಾಜದೊಳಗಿನ ಸಿಕ್ಖರು ಬಹಿಷ್ಕಾರಕ್ಕೊಳಗಾದ ಮಾನವ ಜೀವಿಗಳು ಪಾವನಗೊಳ್ಳುವಂತಾಯಿತು. ಇಂದಿನ ದುರ್ದೆಸೆಯು ಅಂತರ್ಮತೀಯ ಸಾಂಸ್ಕೃತಿಕ ಘರ್ಷಣೆಗೆ ಸಂಬಂಧಪಟ್ಟದ್ದಾಗುತ್ತದೆ ಮಹಾತ್ಮರ ವರ್ಚಸ್ಸಿನಿಂದ ಪರಿವರ್ತನ ಹೊಂದದ ಮಾನವ ಜೀವಿತೆಗಳಿಲ್ಲ ಇಂದು ನಮ್ಮನ್ನಾವರಿಸಿರುವ ಈ ದುಃಪರಿಸ್ಥಿತಿಯು ಗಾಂಧೀಜಿಯ ಆತ್ಮ ತೇಜಸ್ಸಿನಿಂದ ತಣಿಯದಿರಲಾರದು ನಾವಾದರೋ ನಮ್ಮೊಳಗಿನ ಕೋಮುವಾರು ವ್ಯತ್ಯಾಸಗಳ ದ್ವೇಷಾಸೂಯೆಗಳ ಸಂಜನ್ನು ನಮ್ಮ ಸಾಮಾಜಿಕ ಶರೀರದಿಂದ ಕಿಡೆದು ತೊಳೆದುಬಿಡುವ ನಿರ್ಧಾರವನ್ನು ಮಾಡಿಕೊಂಡು ಆ ದೀನ ಮಹಾತ್ಮನನ್ನು ನಮ್ಮ ಮುಂದಿನ ಮಾರ್ಗದರ್ಶನಕ್ಕೆ ಚಿರಾಯುವಾಗಿ ಉಳಿಸಿಕೊಡಬೇಕೆಂದು ವಿಶ್ವಸೂತ್ರಧಾರನಾದ ಪರಮಾತ್ಮನಲ್ಲಿ ಮೊರೆಯಿಡುವವರಾಗೋಣ.

ಪಂಜಾಬದ ಶಾಂತಿ

ಶಾಂತಿ ಬೇಕಾದವರಿಗಲ್ಲವೆ ಅದು ಸಿಗುವುದು ಪೂರ್ವ ಬಂಗಾಲದಲ್ಲಿನ ದಂಗೆಗಳು ಹತೋಟಿಗೆ ತರಲ್ಪಟ್ಟರೂ ಪಾಕಿಸ್ಥಾನದ ಪಶ್ಚಿಮ ಪಂಜಾಬದಲ್ಲಿ ಪುಂಡರು ಸಂಪೂರ್ಣ ಒಡೆತನ ವಹಿಸಿದಂತೆ ವರದಿಗಳಿಂದ ತಿಳಿದುಬರುತ್ತದೆ ಪಾಕಿಸ್ಥಾನದ ಅಧಿಕಾರಿಗಳಾದರೋ ಪಂಜಾಬದ ಕಡೆಗೆ ಬೆಟ್ಟು ತೋರಿಸುತ್ತ ಪುಂಡರನ್ನು ಹತ್ತಿಕ್ಕಲು ಆಗದ ತಮ್ಮ ಅಸಮರ್ಥತೆ ಮತ್ತು ನಿಷ್ಕ್ರಿಯತೆಗಳನ್ನು ಮುಚ್ಚಲು ಪ್ರಯತ್ನಿಸುತ್ತಿರುವರು. ಕೇವಲ ಪುಂಡರನ್ನಡಗಿಸಲಾರದ ಸರಕಾರ ಪ್ರಾಂತ್ಯಗಳನ್ನಾಳಬಲ್ಲದೆ? ಇಂದಿನ ಈ ಭೀಕರ ಪ್ರಕರಣಗಳಿಗೆ ಹಿಂದಿನ ಈ ಪಾಕಿಸ್ತಾನಿ ಪ್ರಿಯರೇ ಕಾರಣರೆಂಬುದನ್ನೂ ನಾವು ಮರೆಯಲಾರೆವು. ಅದೊಂದು ದುರ್ದಿನದಂದು ಲೀಗಿನ ಡ್ಯಾರೆಕ್ಟ್ ಏಕ್ಶನು ಈ ಕ್ರೂರ ಇತಿಹಾಸವನ್ನುದ್ಘಾಟಿಸಿತು. ಅಂದಿನಿಂದಿಂದು ಆ ದ್ವೇಷಾಗ್ನಿಯು ದೇಶದ ವಿಶಾಲ ಭಾಗಗಳನ್ನು ಸುಟ್ಟು ಸೂರೆಗೈಯ್ಯುತ್ತಿದೆ. ಲಕ್ಷಾಂತರ ನಿರಾಶ್ರಿತರು ಆಹಾರದ ಸಮಸ್ಯೆಯನ್ನು ಇನ್ನಷ್ಟು ತೊಡಕಿನದಾಗಿ ಮಾಡಿರುವರು ಇನ್ನಾದರೂ ಎರಡೂ ಸಾಮಂತಗಳ ಧುರೀಣರು ತಮ್ಮ ತಮ್ಮ ಪ್ರದೇಶಗಳಲ್ಲಿ ಚಿರಶಾಂತಿ, ಅಲ್ಪಸಂಖ್ಯಾಕರಿಗೆ ಭದ್ರತೆಗಳನ್ನು ಕೊಡಲು ಹೃತ್ಪೂರ್ವಕ ಹಾರೈಸುವುದಕ್ಕಿಂತ ಹೆಚ್ಚಿನದೇನನ್ನೂ ಮಾಡಲಾಗುವುದಿಲ್ಲ

ಪ್ರಾಂತ್ಯದಲ್ಲಿ ಆಹಾರ ಸ್ಥಿತಿ

ಮದ್ರಾಸ್ ಸರಕಾರವು ಪ್ರಾಂತ್ಯಕ್ಕೆ ಆಹಾರ ಸರಬರಾಯಿ ಮಾಡುವರೆ ಅವಿಶ್ರಾಂತ ಶ್ರಮ ವಹಿಸುತ್ತಿರುವರು ಆದರೆ ಜನತೆಯ ಸೌಹಾರ್ದದ ಸಹಕಾರವಿಲ್ಲದೆ ಅವರ ಉದ್ದೇಶವು ನೆರವೇರಲಾರದು ಆದುದರಿಂದ ಈ ಸಂದರ್ಭದಲ್ಲಿ ಜನತೆಯ ಹೊಣೆಗಾರಿಕೆಯು ಅತ್ಯಂತ ಮಹತ್ವದ್ದಿರುತ್ತದೆ

ಈಗ ಆಹಾರ ವಸ್ತುಗಳನ್ನು ಗುಪ್ತ ದಾಸ್ತಾನಿಸಿದ ಮಹಾಶಯರಿಗೊಂದು ಮಾತು. ಅವರ ಸ್ವಾರ್ಥ ಸಾಧನೆಯಿಂದ ಅಸಂಖ್ಯಾತ ಜನತೆಯು ಉಪವಾಸದ ಅಸಹನೀಯ ಸಂಕಷ್ಟಕ್ಕೊಳಗಾಗಿ ಮತ್ತೆ ಇಲ್ಲಸಲ್ಲದ ಆಹಾರ ಭಕ್ಷಣೆಯಿಂದ ಭೀಕರ ಸಾಂಕ್ರಾಮಿಕ ರೋಗಗಳಿಗೆ ಆಶ್ರಯ ಕೊಡುವಂತಾಗುವುದು ಈ ಪರಿಸ್ಥಿತಿಯಲ್ಲಿ ಹತ್ತೆಂಟು ಹಬ್ಬುವ ರೋಗರುಜಾದಿಗಳು ಬಡವ ಬಲ್ಲಿದರೆಂದಿಲ್ಲದೆಲ್ಲರನ್ನೂ ಬಲಿಯಾಗಿ ಸ್ವೀಕರಿಸುವುದು ಇದರಿಂದ ಸ್ವಾರ್ಥಸಾಧಕರಿಗೂ ಅಪ್ತರಾದವರೂ ಈ ಸಾಂಕ್ರಾಮಿಕ ಯಜ್ಞಕುಂಡದಲ್ಲಾಹುತಿಯಾಗರೆಂದು ಹೇಳಬರುವುದಿಲ್ಲ ಆದುದರಿಂದ ಅವರು ವಿವೇಚನೆಯಿಂದ ಸರಕಾರದೊಡನೆ ಸಹಕರಿಸಿ ಆಹಾರ ಶಾಂತಿಯನ್ನು ಸ್ಥಾಪಿಸಲು ನೆರವಾಗಲೆಂದು ಪ್ರಾರ್ಥಿಸುತ್ತೇವೆ.

ಅಮೇರಿಕದ ಸ್ಪ್ರಿಂಗ್ ಫೀಲ್ಡಿನ ನ್ಯಾಯಾಧೀಶರೊಬ್ಬರು ಮೋಟರ್ ವೇಗ ಮೀರಿದ ತರುಣನೊಬ್ಬನಿಗೆ 10 ದಿವಸ ಸಜೆ ಕೊಟ್ಟರು. ಆದರೆ ತಪ್ಪಿತಸ್ಥನ ಕಾರುಣ್ಯಕ್ಕಾಗಿ ಕನಿಕರಪಟ್ಟು ನ್ಯಾಯಾಧೀಶರು ಆ 10 ದಿವಸದ 240 ತಾಸುಗಳನ್ನು ಅವನು ಪ್ರತಿ ಆದಿತ್ಯವಾರ ಎರಡೆರಡು ಗಂಟೆಗಳಂತೆ ಸಲ್ಲಿಸುವ ರಿಯಾಯತಿ ಕೊಟ್ಟಿರುವರು.

THE
UNITED INDIA LIFE ASSURANCE CO., LTD.
ESTD 1906 | H O MADRAS

SLCURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore.

ಬೆಟ್ಟದ ಮೇಲಿನ ಬೌದ್ಧ ಚಕ್ರಾಧಿಪತ್ಯ

ಟಿಬೆಟಿನ ರಹಸ್ಯಮಯ ಬಿಕ್ಷು ಜೀವನ

ಶವಗಳನ್ನು ಹದ್ದುಗಳಿಗೆ ತಿನ್ನಿಸುವ ಪದ್ಧತಿ

ಹಿಮಾಲಯದ ಎತ್ತರ ಶ್ರೇಣಿ ಪ್ರದೇಶವೆಲ್ಲವೂ ಪ್ರಕೃತಿ ಸೌಂದರ್ಯದ ತವರು ಮನೆಯಂತೆ ತೋರುತ್ತದೆ. ಅಲ್ಲಿಯ ಒಂದು ಪ್ರಶಾಂತ ಮೂಲೆಯಲ್ಲಿ ಟಿಬೆಟ್ ಪ್ರದೇಶವು ತನ್ನ ಮೌನ ಪ್ರಶಾಂತತೆಯಿಂದ ಮಾನವ ಕೋಟಿಯ ಕಡೆಗೆ ಇಣಿಕಿ ನೋಡಿದಂತೆ ಕಾಣುತ್ತದೆ. ಅದರ ರಾಜಧಾನಿಯಾದ ಲ್ಹಾಸಾ ನಗರಕ್ಕೆ ಯಾವ ಪರಕೀಯನಿಗೂ ಪ್ರವೇಶವಿಲ್ಲ. ಅಲ್ಲಿಗೆ ಪ್ರಯಾಣಗೆಯ್ಯುವುದೆಂದರೆ ಪರಮ ಸಂಕಷ್ಟದ ಕೆಲಸವೇ ಸರಿ. ಪ್ರಯಾಣಿಕರಿಗೆ ಅಸಾಧಾರಣ ದೇಹದಾರ್ಢ್ಯವೂ ಕಷ್ಟ ಸಹಿಷ್ಣುತಾಶಕ್ತಿಯೂ ಇರಬೇಕು. ಮೊದಲು ಸ್ವಲ್ಪ ದೂರದ ತನಕ ಮೋಟಾರು ಕಾರಿನಲ್ಲೂ, ನಂತರ ಹೇಸರ ಕತ್ತೆಗಳ ಮೇಲೂ ಕೊನೆಗೆ ಬರಿಕಾಲಿನಲ್ಲೂ ಆ ಬೌಧ ಧರ್ಮದ ರಾಜಧಾನಿಗೆ ಮುಟ್ಟಬೇಕಾಗುವುದು ಯಾತ್ರಿಕನು ಅಲ್ಲಿನ ಧರ್ಮಗುರುವಾದ ಲಾಮನಿಗೆ ಯೋಗ್ಯವೂ ಅಮೂಲ್ಯವೂ ಆದ ಪಾರಿತೋಷಕಗಳನ್ನು ಒಯ್ಯಲೂ ಮರೆಯಬಾರದು ಕೆಲವೊಂದು ಪಾರಿತೋಷಕಗಳನ್ನು ದಾರಿಯಲ್ಲಿ ನಾವು ಉಳಕೊಳ್ಳಬೇಕಾದ ಕೆಲ ಅಭ್ಯಾಗತ ಬೆಟ್ಟದ ಮಾಂಡಲೀಕರಿಗೂ ಅರ್ಪಿಸಬೇಕಾಗುವುದು

ಟಿಬೆಟು ಪರ್ವತ ಪ್ರದೇಶದ ಪೀಠಭೂಮಿ. ಅಲ್ಲಿನ ಸರೋವರಗಳು ಅತ್ಯಂತ ರಮಣೀಯವಾಗಿ ಕಂಗೊಳಿಸುತ್ತವೆ ಈ ಮನಾಕರ್ಷಕ ಸನ್ನಿವೇಶದಲ್ಲಿ ಸುತ್ತಲಿನ ಬೆಟ್ಟ ಶಿಖರಗಳು ವಿವಿಧ ವರ್ಣದವುಗಳಾಗಿ ರಂಜಿಸುತ್ತವೆ ಸೂರ್ಯೋದಯ ಸೂರ್ಯಾಸ್ತ ಕಾಲದಲ್ಲಂತೂ ಇಲ್ಲಿನ ಪ್ರಕೃತಿ ಶೋಭೆಯು ಅವರ್ಣನೀಯವಾಗಿದೆ ಈ ಸುಂದರ ದೃಶ್ಯಾನುಭವವು ಪ್ರಯಾಣಿಕನ ಆಯಾಸವನ್ನು ತಣಿಸಿ, ಅವನ ತನುಮನಗಳನ್ನು ಸ್ಫೂರ್ತಿಗೊಳಿಸುತ್ತದೆ ಅವನ ಜ್ಞಾಪಕಶಕ್ತಿಯು ಚೇತನಮಯವಾಗುತ್ತದೆ. ಅಲ್ಲಲ್ಲಿನ ಸಮತಟ್ಟು ಪ್ರದೇಶಗಳಲ್ಲಿ ಟಿಬೆಟಿ ರೈತರು ತಮ್ಮ ಬಟಾಣಿ ಬಾರ್ಲಿ ಬೆಳೆಗಳನ್ನು ಬೆಳೆಸುತ್ತಾರೆ ಕೃಷಿ ಕೆಲಸವು ಹೆಚ್ಚಾಗಿ ಹೆಂಗಸು ಮಕ್ಕಳಿಂದಲೇ ನಿರ್ವಹಿಸಲ್ಪಡುತ್ತದೆ

ಮನೆಗಳಿಗಿಂತ ಮಠಗಳೇ ಹೆಚ್ಚಾಗಿರುವುದು ಜಗತ್ತಿನ ಈ ಭಾಗದ ನಾಗರೀಕತೆಯ ಒಂದು ಲಾಕ್ಷಣಿಕ ವಿಶೇಷತೆ ಇವುಗಳ ಪ್ರಾಮುಖ್ಯತೆಯೂ ಗಣನೀಯವೇ ಆಗಿದೆ. ಟಿಬೆಟಿನಲ್ಲೆಲ್ಲಾ ಮತ್ತು ಮುಖ್ಯವಾಗಿ ಲ್ಹಾಸಾದಲ್ಲಿನ ಪ್ರತಿ ಹತ್ತು ಜನರಲ್ಲಿ ಒಬ್ಬನಂತೆ ಸನ್ಯಾಸಿಯಾಗಿರುತ್ತಾನೆ ಪ್ರತಿಯೊಬ್ಬ ವ್ಯಕ್ತಿಯೂ ಓದುಬರಹ ಬಲ್ಲವನಿದ್ದು ಅಚಲವಾದ ಮಾನಸಿಕ ಶಿಸ್ತು ಅಲ್ಲಿ ಒಂದು ಉದಾತ್ತ ಗುಣವೆಂದು ಭಾವಿಸಲ್ಪಡುತ್ತದೆ. ಅಲ್ಲಿಯ ಜನರೆಲ್ಲರೂ ಬೌಧಮತದವರಾಗಿದ್ದು ಪ್ರತಿಯೊಂದು ಕುಟುಂಬದಿಂದಲೂ ಒಬ್ಬೊಬ್ಬ ಸದಸ್ಯರು ಮಠಸೇವೆಗೆ ಕಳುಹಿಸಲ್ಪಡುವನು.

ರಾಜಧಾನಿ ಲ್ಹಾಸಾವು ಒಂದು ವಿಚಿತ್ರ ಶಿಷ್ಟ ಸಾಂಪ್ರದಾಯದ ನಗರ. ಅಲ್ಲಿನ ರಾಜಭವನವನ್ನು ಪ್ರವೇಶಿಸಲು ಅನುಮತಿ ಸಿಕ್ಕಬೇಕಾದರೆ ವಿವಿಧ ವಿಧಿ ಸಂಸ್ಕಾರಗಳನ್ನು ಪೂರ್ತಿಗೊಳಿಸುವುದವಶ್ಯವಿದೆ. ಮೊತ್ತಮೊದಲು ನಾವು ತಂದ ಪಾರಿತೋಷಕಗಳ ಮೌಲ್ಯವನ್ನೂ ವೈಶಿಷ್ಟವನ್ನು ಪರಿಶೀಲಿಸಲಾಗುವುದು. ಅಲ್ಲಿಗೆ ಹೋಗುವ ಪ್ರೇಕ್ಷಕರು ತಮ್ಮ ದೇಶದ ಅಮೂಲ್ಯ ವಸ್ತುಗಳನ್ನೇ ಒಯ್ಯುತ್ತಾರೆ ಆದರೆ ಅಲ್ಲಿಯವರು ಕೊಡುವುದು ಮೋಡಿ ಮಂತ್ರದ ಗುಳಿಗೆಗಳನ್ನು ಮತ್ತು ಪ್ರಾರ್ಥನೆ ಬರೆದ ಪತ್ರಗಳನ್ನು ಅಲ್ಲಿಯ ನಂಬಿಗಸ್ಥ ಜನರು ಇವುಗಳನ್ನು ಅತ್ಯಂತ ಶ್ರದ್ಧೆಯಿಂದ ತಮ್ಮೊಡನೆ ಇಟ್ಟುಕೊಳ್ಳುವರು. ಅವುಗಳು ಜೊತೆಯಲ್ಲಿದ್ದರೆ ಒಂದೂಕು ಗುಂಡಾಗಳ ಭಯವಿಲ್ಲವಂತೆ.

ಟಿಬೆಟ್ ಅರಮನೆಯ ಆಡಳಿತಾಧಿಕಾರಿಗಳು ಪ್ರೇಕ್ಷಕರನ್ನು ಆಧುನಿಕ ಪದ್ಧತಿಗನುಸಾರವಾಗಿಯೇ ಸ್ವಾಗತಿಸಲ್ಪಡುತ್ತಾರೆ ಅವರದೊಂದು ಸ್ವಾಗತ ಸಮಿತಿಯಿದೆ ಅದರಲ್ಲಿ ನಗರದ ಮೆಜಿಸ್ಟ್ರೇಟರೂ, ಬ್ರಿಟಿಷ್ ರೆಸಿಡೆಂಟರೂ, ಚೀನಿ, ನೇಪಾಲ ರಾಯಭಾರಿಗಳೂ ಇರುವರು ಒಬ್ಬರ ನಂತರ ಒಬ್ಬರು ಸ್ವಾಗತ ವಿಧಿಯನ್ನು ನೆರವೇರಿಸುವರು ಎಲ್ಲವೂ ಪಾಶ್ಚಾತ್ಯ ಮಾದರಿಯ ಮೇಲೇ ಜರುಗುವುದು ಆದರೆ ಡಾಲೈಲಾಮನು ಸಂದರ್ಶನ ಕೊಡಬೇಕಾದರೆ ಅರಮನೆಯ ದರ್ಶನ ಪತ್ರಿಯನ್ನು ವಿಚಾರಿಸಬೇಕು ಅದರ ಮಂಗಲ ಸೂಚನೆಯ ಆಧಾರದ ಮೇಲೆ ಸಂದರ್ಶನದ ಸಮಯವನ್ನು ಪ್ರಕಟಿಸಲಾಗುವುದು ಡಾಲೈಲಾಮನ ಮಠವು ಅರಮನೆಯು ಮಧ್ಯದಲ್ಲಿನ ಎತ್ತರ ಪ್ರದೇಶದಲ್ಲಿರುವುದು ಅಲ್ಲಿಗೆ ಹೋಗುವುದು ಅತ್ಯಂತ ಪ್ರಯಾಸದ ಕೆಲಸ

ಟಿಬೆಟಿನ ಪ್ರತಿಯೊಂದು ವ್ಯವಹಾರದಲ್ಲೂ ಮತೀಯ ಆಚಾರ ವಿಚಾರಗಳಿಗೇ ಪ್ರಾಧಾನ್ಯ ಸಿಗುವುದು - ಬೌಧ ಸನ್ಯಾಸಿಗಳ ತರಪೇತಿಯು ಮತ ವಿಚಾರಪ್ರಧಾನವಾಗಿಯೇ ಇರುವುದಾದರೂ ಅವರಲ್ಲಿ ಕೆಲವರು ಉತ್ತಮ ಚಿತ್ರಗಾರರೂ ಶಿಲ್ಪಿಗಳೂ ಸಂಗೀತಗಾರರೂ ಇರುವರು

ಟಿಬೆಟ್ಟಿನವರು ಆಗಂತುಕರನ್ನು ಮೊದಲು ದೂರನಿಂತು ಬಗ್ಗಿ ವಂದಿಸುವರು ನಿಲ್ಲುವ ದೂರವು ಅತಿಥಿಯ ಸ್ಥಾನಮಾನದಾಮಾಶಯದ ಮೇಲೆ ಹೊಂದಿಕೊಂಡಿದೆ ನಂತರ ನಾಲಗೆ ಹೊರಗೆ ಹಾಕಿ ಬುಸುಗುಟ್ಟುವ ವಿಧಾನವೊಂದಿದೆ ಇದರ ಪ್ರಮಾಣವೂ ಅತಿಥಿಯ ಸ್ಥಾನಮಾನಕ್ಕೆ ಹೊಂದಿಕೊಂಡೇ ಇದೆ. ವಿದೇಶಿಯರನ್ನು ಆತಿಥ್ಯ ಮಾಡುವುದಕ್ಕೆ ಅವರು ತುಂಬಾ ಸಂತೋಷಪಡುತ್ತಾರೆ ಆದರೆ ಎಲ್ಲವೂ ತಮ್ಮದೇ ಆದ ರೀತಿ ನೀತಿಗಳಲ್ಲಿ. ಇಲ್ಲಿಯ ಜನರು ಉಣ್ಣೆ ಮತ್ತು ಅಮೂಲ್ಯ ಹರಳುಗಳ ವ್ಯಾಪಾರ ಮಾಡುತ್ತಾರೆ ತಮ್ಮ ಸರಕನ್ನು ಚೀನದ ಮೂಲಕ ಪರದೇಶಗಳಿಗೆ ಕಳುಹಿಸುತ್ತಾರೆ ಟಿಬೆಟಿನ ಬೆಟ್ಟ ನಾಯಕರು ತಮ್ಮ ಮಕ್ಕಳನ್ನು ಉಚ್ಚ ಶಿಕ್ಷಣಕ್ಕಾಗಿ ಹಿಂದೂದೇಶಕ್ಕೆ ಕಳುಹಿಸುತ್ತಾರೆ ಅಲ್ಲಿನ ಬೌಧ ಮಠಗಳು ಮತೀಯ ಕೇಂದ್ರಗಳೂ ಮಾತ್ರವಲ್ಲ ಅವು ಆಡಳಿತ ಕಛೇರಿಗಳು ಆಗಿವೆ. ಕೆಲವು ಮಠಗಳಲ್ಲಿ ಟಪ್ಪಾಲು ಕಟ್ಟೆಗಳೂ ಇವೆ

ಟಿಬೆಟಿನ ಜನರ ಆಟ ವಿನೋದಗಳಲ್ಲಿ ಬಿಲ್ಲುಗಾರಿಕೆಯು ಅತ್ಯಂತ ಜನಪ್ರಿಯವಾದುದು ಬಾಣಗಳನ್ನು ರಭಸದಿಂದ ಬಿಡುವಾಗ ಉಂಟಾಗುವ ಗಾಳಿಯ ಸಿಳ್ಳು ಶಬ್ದದಲ್ಲಿ ಅವರು ತುಂಬಾ ಆನಂದಪಡುತ್ತಾರೆ ಹಾಗೆ ಬಿಡಲು ತುಂಬಾ ಕಷ್ಟದ ಅಭ್ಯಾಸದ ಅವಶ್ಯಕತೆಯೂ ಇದೆ ಯಾಕ್ ಎಂಬ ಕೋಣ ಜಾತಿಯ ಪ್ರಾಣಿಯು ಅಲ್ಲಿನ ಕುದುರೆ ಈ ಪ್ರಾಣಿಗೆ ಬೆಟ್ಟ ಹತ್ತುವಿಕೆಯಲ್ಲಿ ವಿಶೇಷ ಚಾತುರ್ಯವಿದೆ

ಟಿಬೆಟನರು . . ವಿಧಾನಗಳಲ್ಲಿ ಶವಸಂಸ್ಕಾರ ಮಾಡುತ್ತಾರೆ ಹೆಚ್ಚಿನವರು ಹೂಳಿಟ್ಟು ಸಮಾಧಿ ಕಟ್ಟುತ್ತಾರೆ . . ಕೆಲವರು ಶವಗಳನ್ನು ತಜ್ಞ ಶಸ್ತ್ರ ಚಿಕಿತ್ಸಕರಿಂದ ಭಾಗಭಾಗಗಳಾಗಿ ಕತ್ತರಿಸಿ ಎತ್ತರದ ಬೆಟ್ಟಕ್ಕೆ ಒಯ್ದು ಅಲ್ಲಿ ಅವನ್ನು ರಣಹದ್ದುಗಳ ಭಕ್ಷಣೆಗೆ ಇಟ್ಟುಬಿಡುತ್ತಾರೆ—ಪಾರಸಿಗಳೂ ಹೆಚ್ಚುಕಡಿಮೆ ಇದೇ ಕ್ರಮವನ್ನನುಸರಿಸುತ್ತಾರೆ ಅಲ್ಲಿನ ಕಾಡುಗಳಲ್ಲಿ ತುಂಬಾ ಮೃಗಗಳಿದ್ದರೂ ಮೃಗಬೇಟೆಗೆ ಅಲ್ಲಿ ಬಿಗುವಾದ ನಿಷೇಧವಿದೆ.

ಅಲ್ಲಿ ಕೆಲವು ಶ್ರೀಮಂತ ವ್ಯಾಪಾರಿಗಳಿದ್ದಾರೆ. ಇವರು ತುಂಬಾ ಆಭರಣಗಳನ್ನು ಧರಿಸುವರು ಇತರರು ಸಾಮಾನ್ಯವಾಗಿ ರೇಶ್ಮೆ ಅಂಗಿಗಳನ್ನು ಧರಿಸಿ ಉಣ್ಣೆಯ ಕವಚಗಳನ್ನು ತೊಟ್ಟು ಉದ್ದದ ಟೊಪ್ಪಿಗಳನ್ನಿಡುವರು ಒಟ್ಟಿನಲ್ಲಿ ಟಿಬೆಟನರು ಆತ್ಮ ಸಂತುಷ್ಟಿಯ ನೆಮ್ಮದಿಯುಕ್ತ ಜನಾಂಗ ಅವರ ಪ್ರಾಚೀನ ಆಚಾರ ವಿಚಾರಗಳೆಲ್ಲ ಸಾಂಪ್ರದಾಯ ಪ್ರಧಾನವಾದುವುಗಳು ತಮ್ಮ ಆತ್ಮಗೌರವ ಪ್ರಾಮಾಣಿಕತೆಗಳ ಮೇಲೆ ಅವರಿಗೆ ವಿಶೇಷ ಅಭಿಮಾನವಿದ್ದು ತಮ್ಮ ಮನೆಮಠಗಳನ್ನು ಶಾಶ್ವತವಿರಿಸಲು ಅತ್ಯಂತ ಶ್ರದ್ಧೆ ವಹಿಸುತ್ತಾರೆ

ನರೆ ಕೂದಲು ನಿಲ್ಲಿಸಿರಿ

ಟ್ರೈಕಿನಾ. ಖಂಡಿತವಾಗಿ ನರೆಕೂದಲನ್ನು ಕಪ್ಪಾಗಿ ಪರಿವರ್ತಿಸಿ ನರೆತವನ್ನು ನಿಲ್ಲಿಸುವುದು ಇದಕ್ಕೆ ಮೆದುಳು, ಕಣ್ಣುಗಳನ್ನು ತಂಪು ಮಾಡುವ ಆರೋಗ್ಯದಾಯಕ ಶಕ್ತಿ ಇದೆ ನಮ್ಮ ಫಾರ್ಮಸಿಯ ಹೆಸರು ಬಾಟ್ಲಿಯ ಮೇಲಿಲ್ಲದಿದ್ದರೆ ಅದನ್ನು ತಿರಸ್ಕರಿಸಿರಿ ಕೆಲವೇ ನರೆತ ಕೂದಲುಗಳ ಬಾಟ್ಲಿಗೆ ರೂ 2 8-0 ಅದಕ್ಕಿಂತ ಹೆಚ್ಚಿದ್ದರೆ ರೂ 3 8-0 ಸಂಪೂರ್ಣ ನೆರೆತದಕ್ಕೆ ರೂ 5—0—0

ಕಾಮುಕಲಾ: ಸಾಯಂಕಾಲ ಒಂದು ಮಾತ್ರೆ ಸೇವಿಸಿರಿ ಅದು ನಿಮಗೆ ಚಿರ ಆನಂದ ಕೊಟ್ಟು ನಿಮ್ಮ ಶಕ್ತಿ ಸಾಹಸ ಹೆಚ್ಚಿಸುತ್ತದೆ ಒಂದು ಸಲ ಉಪಯೋಗಿಸಿದರೆ ನಿಮಗದರ ಅದ್ಭುತ ಸಾಮರ್ಥ್ಯ ಮರೆಯಲಾರಿರಿ ಇದು ನಿರ್ಬಲತೆ ಹೋಗಲಾಡಿಸುವುದು

16 ಮಾತ್ರೆಗಳಿಗೆ ರೂ. 1

ಸತ್ಯದೇವ ಆಯುರ್ವೇದ ಬವನ.
N 15 P O
Katri arai (Gaya)

CANARA BANK, LIMITED.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

(ಸ್ಥಾಪಿತ: ೧೯೦೬)

ಹೆಡ್ ಆಫೀಸು
ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು -
75 ಎಪೊಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು:—

ಮದರಾಸು ಪ್ರಾಂತ್ಯ:
ಮಂಗಳೂರು-ಸಿಟಿ
ಮಂಗಳೂರು—ಬಂದರ್
ಮುಲ್ಕಿ
ಗಂಗೊಳ್ಳಿ
ಕುಂದಾಪುರ
ಉಡುಪಿ
ಕಾರ್ಕಳ
ಬಂಟ್ವಾಳ
ಪುತ್ತೂರು
ಕಾಸರಗೋಡು
ಮದರಾಸು.
ಪಯ್ಯನ್ನೂರು
ಕಲ್ಲಿಕೋಟೆ
ಕನ್ನಾನ್ನೂರು.
ಕೊಯಮುತ್ತೂರು.
ತಿರುಚಿನಾಪಳ್ಳಿ.
ತುತುಕುಡಿ.
ಸಲೆಂ
ಇರೋಡ್

ಹೈದರಾಬಾದ್ ಸಂಸ್ಥಾನ:
ಸಿಕಂದರಾಬಾದು

ತಿರುವಾಂಕುರು ಸಂಸ್ಥಾನ.
ಅಲ್ಲೆಪ್ಪಿ
ಕ್ವಿಲೋನ್

ಮಧ್ಯ ಪ್ರಾಂತ್ಯ:
ನಾಗಪುರ
ಅಕೋಲಾ
ಅಮರಾವತಿ

ಮುಂಬೈ ಪ್ರಾಂತ್ಯ:
ಬೆಳಗಾಂವ್.
ದಾರವಾಡ.
ಹುಬ್ಬಳ್ಳಿ.
ಕೋಲಾಪುರ.
ಪೂಣೆ.
ಮುಂಬೈ ಫೋರ್ಟ್
ಮುಂಬೈ ಮಾಂಡ್ವಿ
ಮುಂಬೈ-ಕಲ್ಬಾದೇವಿ
ಮುಂಬೈ-ಗಿರ್‌ಗಾಂವ್
ಮುಂಬೈ-ಕಲ್ಯಾಣ

ಮೈಸೂರು ಸಂಸ್ಥಾನ:
ಮೈಸೂರು
ಶಿವಮೊಗ್ಗ
ಚಿಕ್ಕಮಗಳೂರು.
ಬೆಂಗಳೂರು ಸಿಟಿ
ಅರಸೀಕೆರೆ
ದಾವಣಗೆರೆ

ಸಿಂದ್ ಪ್ರಾಂತ್ಯ:
ಕರಾಚಿ

ಕೊಚ್ಚಿ ಸಂಸ್ಥಾನ:
ಕೊಚ್ಚಿ.
ಎರ್ನಾಕುಲಾಮ್

ಮುನ್ಸಿಪಲ್ ಚುನಾವಣೆ

ಇದೇ ತಿಂಗಳ 29ನೇ ತಾರೀಕಿನಂದು ಜರಗಲಿರುವ ನಗರ ಸಭೆಯ ಚುನಾವಣೆಗಳಿಗೆ ಉಮೇದುವಾರರ ನಾಮಪತ್ರ ದಾಖಲಾತಿಗಳಾಗಿವೆ. ಚುನಾವಣೆಗೆ ಉಮೇದುವಾರರಾಗಿ ನಿಂತವರಲ್ಲಿ ಈ ಕೆಳಗಿನ ಮಹನೀಯರು ಕೆಲವರೆಂದು ತಿಳಿದುಬರುತ್ತದೆ: ಸೆಂಟ್ರಲ್ ವಾರ್ಡಿಗೆ ಶ್ರೀಯುತರುಗಳಾದ ಎಂ. ರಾಮರಾಜ ಕಿಣಿ, ಮರ್ಕಡ ಪದ್ಮನಾಭ ಕಂಮ್ತಿ ಮತ್ತು ನಗರ ಗೋಪಾಲಕೃಷ್ಣ ಶೆಣೈ, ಬಿ.ಎ.ಬಿ ಎಲ್. ಇವರುಗಳು. ಮಾರ್ಕೆಟು ವಾರ್ಡಿಗೆ ಶ್ರೀಗಳಾದ ಸುಮಿತ್ರ ಭಟ್ ಮತ್ತು ಎಂ ರಾಘವೇಂದ್ರ ಪೈಗಳವರು. ಬಂದರ ವಾರ್ಡಿಗೆ ಶ್ರೀಗಳಾದ ಮಣೇಲ್ ಶ್ರೀನಿವಾಸ ನ್ಯಾಕ್ ಮತ್ತು ಎಂ ಆರ್ ಭಟ್, ವೈದ್ಯಭೂಷಣ ಇವರು ಸಂಪೂರ್ಣ ವಿವರ ಇನ್ನು ತಿಳಿಯಲಿದೆ

ನಗರ ಸಭೆಯ 32 ಸ್ಥಾನಗಳಿಗೆ 83 ಉಮೇದುವಾರರು ಅರ್ಜಿಹಾಕಿದ್ದಲ್ಲಿ ಇವರ್ಗರದು ತಿರಸ್ಕೃತವಾಗಿವೆ 17 ಸ್ಥಾನಗಳಿಗೆ (6 ರಿಸರ್ವ್ ಸ್ಥಾನಗಳ ಸಮೇತ) ಪ್ರತಿನಿಧಿಗಳು ಅವಿರೋಧವಾಗಿ ಚುನಾಯಿಸಲ್ಪಡುವರು ಉಳಿದ 15 ಸ್ಥಾನಗಳಿಗೆ ಸ್ಪರ್ಧೆ ನಡೆಯುವುದು ಅವಿರೋಧವಾಗಿ ಆರಿಸಲ್ಪಡುವವರು ಶ್ರೀಗಳಾದ ಫೆಲಿಕ್ಸ್ ಆಲ್ಬುಕರ್ಕ್, ಕೆ ಸೂರ್ಯನಾರಾಯಣ ಅಡಿಗಾ, ಬಿ ಎನ್ ಭಾಸ್ಕರ ರೈ ಅಂದ್ರಾದೆ ಮುಸಟಪ್ಪ ಎಲ್ ಸಿ ಪ್ರೈಸ್ ಎಂ ಎಸ್ ಶ್ರೀಪಪ್ಪ, ಎ ಚೆಂಡಪ್ಪ, ಶ್ರೀಮತಿಗಳಾದ ಮೇರಿ ಬ್ರಿಟ್ಟೋ ಮತ್ತು ಕಲ್ಯಾಣಿ ಡಿ ಶೆಟ್ಟಿ, ಹಾರೂನ್ ಶೇಟ್ ಎಂ ಸಿ ಅಹಮ್ಮದ್, ಸೋಮಸುಂದರ, ಲಕ್ಷ್ಮಣ ಸಾಲಿಯಾನ್ ಚೊಡಪ್ಪ ... ಸಾಲಿನ್ಸ್, ಡಿ ಜೆ ಬ್ರಿಟ್ಟೋ ರಾ ಒ ಸುವರ್ಣ

ಪಾನ ನಿಶೇಧ

ಬರುವ ಅಕ್ಟೋಬರ್ ತಿಂಗಳಿಂದ ಪಾನ ನಿಶೇಧ ಶಾಸನವು ನಮ್ಮ ಜಿಲ್ಲೆಯಲ್ಲಿ ಜಾರಿಯಾಗಲಿದೆ ಆ ಸಮಯಕ್ಕೆ ಜಿಲ್ಲೆಯ ಪ್ರಭಾವಿಕ ಧುರೀಣರೂ, ಸಮಾಜ ಸುಧಾರಕರೂ ಜನಹಿತೈಷಿಗಳೂ ಸರಕಾರಕ್ಕೆ ಸಹಕಾರ ನೀಡುವರೆಂದು ಹಾರೈಕೆಯಿದೆ ಈ ಸಂದರ್ಭದಲ್ಲಿ ಜಿಲ್ಲೆಯಲ್ಲಿನ ಹಳ್ಳಿ ಪ್ರದೇಶಗಳಲ್ಲಿ ಹಾಡು ಕೂಟಗಳನ್ನೇರ್ಪಡಿಸಿ ಜನತೆಯ ಮನರಂಜನೆ ಮಾಡಲು ಸರಕಾರದವರು ಲಾವಣಿ ಹಾಡುವವರನ್ನು ತಾತ್ಕಾಲಿಕವಾಗಿ ನೇಮಿಸಲಿರುವರು ಈ ಸ್ಥಳಗಳಿಗೆ ಅರ್ಜಿಹಾಕ ಬಯಸುವವರು ತಾ 15–9–47ರೊಳಗೆ ಜಿಲ್ಲಾ ಕಲೆಕ್ಟರರಿಗೆ ಅರ್ಜಿ ಹಾಕತಕ್ಕದ್ದು ಪ್ರಾಯ 35ಕ್ಕೆ ಮೀರದ, ಮಿಡ್ಲ್ ಸ್ಕೂಲ್ ಪಾಸಾದ, ಉತ್ತಮ ಹಾಡುಗಾರಿಕೆ ಬಲ್ಲ ಮತ್ತು ಹಳ್ಳಿ ಜನತೆಯನ್ನು ರಂಜನೆ ಮಾಡಬಲ್ಲವರು ಇದಕ್ಕೆ ಅರ್ಹರಾಗುವರು ಇಂಥವರಿಗೆ 38 ರೂ. ತಲಬು ಕೊಡಲಾಗುವುದು

ಗುರು ಜಯಂತಿ

ಶ್ರೀ ನಾರಾಯಣ ಸೇವಾಸಂಘದ ಆಶ್ರಯದಲ್ಲಿ "ಶ್ರೀ ನಾರಾಯಣ ಗುರುದೇವರ" 97ನೇ ಜನ್ಮದಿನವು ಕಳೆದ ತಾ. 31ರಂದು ಪಾಂಡೇಶ್ವರ ಮುನ್ಸಿಪಲ್ ಶಾಲಾ ಭವನದಲ್ಲಿ ಶ್ರೀ. ಎಂ ಕೆ ನಂಬಿಯಾರ್ ಬಾರ್ ಎಟ್ ಲೊ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಶ್ರೀ ಗುರುದೇವರ ಜೀವನ ಕಾರ್ಯದ ಕುರಿತು ಸ್ವಾಮಿ ವಿಮಲಾನಂದಜಿ, ಶ್ರೀಗಳಾದ ಎಂ. ಶ್ರೀನಿವಾಸನ್, ಶ್ರೀಮಾನ್ ಕಿಲ್ಲೆ ಮೊದಲಾದವರು ಭಾಷಣ ಮಾಡಿದರು. ಈ ದನಾಚರಣೆಯಿಂದು ಸರಕಾರವು ಸಾರ್ವಜನಿಕ ರಜೆ ಕೊಡಿಸಬೇಕೆಂದು ಕೇಳಿಕೊಳ್ಳುವ, ಕೊಚ್ಚಿ ದೇವಸ್ಥಾನಗಳಿಗೆ ಹರಿಜನ ಪ್ರವೇಶವಾಗಬೇಕೆಂಬ ಠರಾವುಗಳಾದುವು ಅಂದು ಭಜನೆ, ಮೆರವಣಿಗೆ, ಬಡಬಗ್ಗರಿಗೆ ಆಹಾರಧಾನದ ಕಾರ್ಯಕ್ರಮಗಳಿದ್ದುವು

ಜಿಲ್ಲಾ ಪರಿಚಯ

ಅಕ್ಕಿ ಉತ್ಪತ್ತಿ ಹೆಚ್ಚಿಸುವ ಸೂಚನೆ

ಅಡಿಕೆ ಬೆಳೆಸುವುದರಿಂದ ಹೆಚ್ಚು ಲಾಭವಿದೆಯೆಂದು ಈಚೆಗೆ ಒತ್ತದ ಹೊಲಗಳನ್ನು ಅಡಿಕೆ ತೋಟಗಳಾಗಿ ಮಾಡುವ ಆಸಕ್ತಿ ಬಹಳವಾಗಿದೆ, ಈಗಿನ ಕಾಲಕ್ಕೆ 'ಹೊನ್ನು ಬೆಳೆ'ಗಿಂತ 'ಅನ್ನ ಬೆಳೆ'ಯೇ ಮುಖ್ಯ ನಮ್ಮ ಜಿಲ್ಲೆಯ ಭೂಮಾಲಿಕರ ಕೆಲವರ ಧೋರಣ ಒತ್ತದ ಗದ್ದೆಗಳು ಅಡಿಕೆ ತೋಟಗಳಾಗಿ ಬರಗೂಲ ಬಿಗಿಯಾಗಬಹುದು 'ಈ ಕುರಿತು ಸರಕಾರವೇ ಯೋಗ್ಯ ಎಚ್ಚರಿಕೆ ಕೊಟ್ಟು ಈಗಿನ ಸಂಕಷ್ಟ ಹೆಚ್ಚಾಗದ ತೆರೆ ನೋಡಿಕೊಳ್ಳುವುದವಶ್ಯ' ವೆಂದು ಕೆಲ ಜನಹಿತೈಷಿಗಳು ಪ್ರಕಟಿಸುತ್ತಾರೆ

ಹವೆ: ಈ ವಾರದಲ್ಲಿವ ಬಿಸಿಲು ಕಮ್ಮಿಯಾಗಿದ್ದು ಬಿಸಿಲುಗಳ ... ರಾತ್ರೆ ಕಾಲದಲ್ಲಿ ಮತ್ತು ಪ್ರಾತಃಕಾಲದಲ್ಲಿ ಸ್ವಲ್ಪ ಚಳಿಯೂ ಮಧ್ಯಾಹ್ನ ಕಾಲದಲ್ಲಿ ಸ್ವಲ್ಪ ಸೆಕೆಯೂ ಅನುಭವವಾಗುತ್ತಿದೆ

ಕ್ರಿಕೆಟ್ ಪಂದ್ಯಾಟ

ಕೇಂದ್ರ ಮೈದಾನದಲ್ಲಿ ಪಂದ್ಯಾಟ ... ದ ದಾಸ್ಕ... ... ಇಲ್ಲಿನ ಜನರು ಕ್ರಿಕೆಟ್ ಪಂದ್ಯಾಟಗಳಿಗೆ ತುಂಬಾ ಆತುರಪಡುತ್ತಿರು ಈಗ ಮೈದಾನ ... ಖಾಲಿಯಾಗಿದ್ದು ಪುನಃ ಆ ಸ್ಥಳವು ಪಂದ್ಯಾಟಗಳಿಗೆ ಸಿದ್ಧವಾಗಿದೆ ... ಸಿ ಸಿ ಮೈಟ್ರಿಂಡ್, ಮತ್ತು ಜೈ ಹಿಂದ್ ಟೀಮುಗಳು ... ಅಭ್ಯಾಸಕ್ಕಾರಂಭಿಸಿವೆ

ಮದ್ರಾಸು ಸರಕಾರದ ಡಿರೆಕ್ಟರ್ ಒಫ್ ಇನ್ಫರ್ಮೇಶನ್ ರಾದ ಶ್ರೀ ಹನುಮಂತರಾಯುಡು ತಾ 26ಕ್ಕೆ ಮಂಗಳೂರಿಗೆ ಬಂದಿದ್ದರು ತಾ 27ಕ್ಕೆ ಪ್ರಾತಃ 11 ಘಂಟೆಯ ಸಮಯಕ್ಕೆ ಪತ್ರಿಕಾ ಸಂಪಾದಕರನ್ನು ಆಮಂತ್ರಿಸಿ ಅವರೊಡನೆ ಸಂಭಾಷಿಸಿದರು ಇದೀಗ ನಾವು ಸ್ವತಂತ್ರರಾಗಿರುತ್ತ ನಮ್ಮ ಸರಕಾರವು ಮಾಡುತ್ತಿರುವ ಕೆಲಸಗಳಲ್ಲಿ ಸಹಕರಿಸಿ ಉಪಯುಕ್ತ ಸೂಚನೆಗಳನ್ನು ಕೊಟ್ಟು ಆಡಳಿತವು ಸಮರ್ಥವಾಗುವಂತೆ ಪತ್ರಿಕೆಗಳು ಪ್ರಯತ್ನಿಸಬೇಕು ಮುಖ್ಯವಾಗಿ ಅನ್ನದ ಪ್ರಶ್ನೆ ಈಗ ಮಹತ್ವದುದು. ಗ್ರಾಮ ಸುಧಾರಣೆ, ಮದ್ಯನಿಷೇಧ ಮೊದಲಾದ ದೊಡ್ಡ ಕಾರ್ಯಗಳಲ್ಲಿ ಸರಕಾರವು ತೊಡಗಿರುವುದು ಅದಕ್ಕೆ ದೇಶಭಾಷಾ ಪತ್ರಿಕೆಗಳ ನೆರವು ಬೇಕು ಎಂದು ಮೊದಲಾಗಿ ಅವರು ಕೇಳಿಕೊಂಡರು. ಅನಂತರ ಹಲವು ವಿಷಯಗಳಲ್ಲಿ ಚರ್ಚೆಗಳೂ ವಿಚಾರವಿನಿಮಯಗಳೂ ಆದುವು. ಈ ವೇಳೆಯಲ್ಲಿ ಜಿಲ್ಲಾ ಕಲೆಕ್ಟರರೂ ಹಾಜರಿದ್ದರು. ಆಮಂತ್ರಿತರಾದ ಹದಿನಾಲ್ಕು ಮಂದಿಯಲ್ಲಿ ಎಂಟು ಮಂದಿ ಹಾಜರಿದ್ದರು.

ಬಟಾಟೆ ಬಂದಿದೆ: ಈಗ ಮೆಟ್ಟುಪಾಳ್ಯಂದಿಂದ ಮಂಗಳೂರಿಗೆ ಬಟಾಟೆ ಬಂದಿದೆ. ಮೈಸೂರು ಬಟಾಟೆಯ ಮೇಲಿನ ನಿರ್ಬಂಧ ತೆಗೆದುಹಾಕಿದ್ದರಿಂದ ಅಲ್ಲಿಂದ ಬಟಾಟೆ ಬರಬಹುದು ಈಗ ಬಟಾಟೆ ಗೋಣಿಗೆ ರೂ 37 ಇದೆ ಇದಕ್ಕಿಂತ ಹೆಚ್ಚು ಬಿದ್ದರೆ ಸರಕಾರ ಭರ್ತಿ ಕೊಡುವದು ಈಗ ಬಟಾಟೆಯನ್ನು ರಾತ್ಲಿಗೆ 0–3-3ಯಂತೆ ಮಾರಲು ಬರುವದು

ಶ್ರೀ ಕೃಷ್ಣ ಜನ್ಮೋತ್ಸವ: ಜಪ್ಪುವಿನ 'ವಿದ್ಯೋದಯ ಭಜನಾ ಮಂದಿರ'ದ 14ನೇ ವಾರ್ಷಿಕೋತ್ಸವದ ಶ್ರೀ ಕೃಷ್ಣ ಜಯಂತಿ ಭಜನಾ ವ್ರತ ಇದೇ ತಾ. 7ನೇ ಆದಿತ್ಯವಾರ ಆ ಮಂದಿರದಲ್ಲಿ ಜರುಗಲಿದೆ ಎಂದು ಮಂದಿರದ ಅಧಿಕಾರಿಗಳು ತಿಳಿಸುತ್ತಾರೆ ಅಂದ ಅಹೋರಾತ್ರಿ ಭಜನೆ ಇದೆ ಈ ಸಂದರ್ಭದಲ್ಲಿ ಶ್ರೀ ಬಿ ಸಂಜೀವ ಬಂಗೇರರು ಸುಮಾರು 400 ರೂ ಬಾಳುವ ಕಾಲ್ದೀಪಗಳನ್ನು ಒಪ್ಪಿಸಲಿರುವ ಈ ಸೇವಾಧರ್ಮವು ಸ್ತುತ್ಯವಾಗಿದೆ

ಮಂತ್ರಿಗಳ ಸಂಚಾರ: ಮದ್ರಾಸ್ ಸರಕಾರದ ಆರೋಗ್ಯ ಮಂತ್ರಿ ಮಾನ್ಯ ಎ ಬಿ ಶೆಟ್ಟಿ ಅವರು ಕೃಷಿ ಸಚಿವ ಮಾನ್ಯ ಮಾಧವ ಮೆನನ್ನರೊಂದಿಗೆ ಇದೇ ತಾರೀಕು 6–9–47 ಮತ್ತು 7–9 47 ಈ ಎರಡು ದಿನಗಳಲ್ಲಿ ನಮ್ಮ ಜಿಲ್ಲೆಯ ಸಂಚಾರ ಮಾಡಲಿರುವರು ಅಕ್ಕಿ ಸಂಗ್ರಹದ ಸಂಬಂಧ ಅವರ ಈ ಸಂಚಾರ ಕಾರ್ಯಕ್ರಮವಿದೆಯೆಂದು ತಿಳಿದುಬರುತ್ತದೆ

ಬರ್ಮದ ಅವರೆ ಅಥವಾ ಅದರಿಂದ ಸಿದ್ಧವಾದ ಪದಾರ್ಥಗಳು ಆರೋಗ್ಯಕ್ಕೆ ಅಪಾಯಕಾರಿಯಾಗಿರುವುದರಿಂದ ಅವುಗಳ ವಿಕ್ರಯಕ್ಕೆ ನಿಬಂಧ ಹಾಕಲಾಗಿದೆ ... ದ ಈ ಜಿಲ್ಲಾ ಆರೋಗ್ಯಾಧಿಕಾರಿಗಳು ಪ್ರಕಟಿಸುತ್ತಾರೆ

ಆಕಸ್ಮಿಕ

ತಿರೂರು: ಕೆಲವು ದಿನಗಳ ಹಿಂದೆ ಇಲ್ಲಿ ... ವರೆಯುವ ಸಮಯದಲ್ಲಿ ಒಂದು ಮರದ ಸಂಕವನ್ನು ದಾಟುತ್ತಿದ್ದ ಸಮಗಾರ ಜಾತಿಯ ಬಾಲಿಕೆಯು ... ನೀರುಪಾಲಾಗಿ ಮೃತಳಾದಳೆಂದು ವಿಷಮದ ವರದಿ ಬಂದಿರುತ್ತದೆ ಈ ಸೇತುವೆಯನ್ನು ಪುನಃ ರಚಿಸಲು ಬಂಬತ್ತು ವರ್ಷಗಳ ... ಅಧಿಕಾರಿಗಳಿಗೆ ಗಮನ ಸಳೆಯಲಾಗಿದ್ದು ಇನ್ನಾದರೂ ತಕ್ಕ ವ್ಯವಸ್ಥೆ ಕೈಕೊಳ್ಳುವರೆಂದು ಹಾರೈಸಲಾಗಿದೆ

ಪಾಣಾಜೆ ಬಟ್ಟೆ ಲೈಸನ್ಸ್‌ದಾರರು ಬಟ್ಟೆಯನ್ನು ಜನಸಂಖ್ಯೆಯ ಮೇರೆಗೆ ಸರಿಯಾಗಿ ಹಂಚದೆ ಇದ್ದ ಬಟ್ಟೆಯನ್ನು ಗ್ರಾಮದ ಮುಖ್ಯಸ್ಥರಿಗೆ ಹಂಚಿಕೊಟ್ಟು, ಕೂಲಿಗಾರರಿಗೆ, ಬಡವರಿಗೆ ಬೇಕಾದ ಅತ್ಯಲ್ಪ ಅಂಗಿ ಚೀಟು ಅಥವಾ ರವಕೆಕಣ ಬೇಕಾದಲ್ಲಿ ಅವರು ಮೇಷ್ಟಿಯನ್ನೊ ಶೀರೆಯನ್ನೊ ತೆಗೆದುಕೊಳ್ಳಲೇ ಬೇಕೆಂದು ಪತ್ತಾಯಿಸುತ್ತಿರುವುದರಿಂದ ಇಲ್ಲಿನವರಿಗೆ ಅಗತ್ಯದ ಬಟ್ಟೆ ಸಿಗುವುದು ಕಷ್ಟವಾಗಿದೆ. ಈ ವಿಷಯದಲ್ಲಿ ಮೇಲಧಿಕಾರಿಗಳು ಗಮನವೀಯಬೇಕಾಗಿ 'ಗ್ರಾಮಸ್ಥ'ರೊಬ್ಬರ ವಿನಂತಿ.

ವಿಚಿತ್ರ ಘಟನೆ: ಕಳೆದ ತಾ. 24ರಲ್ಲಿ ಗದಗಿನ ಮಿಶ್ಯನ್ ಆಸ್ಪತ್ರೆಯಲ್ಲಿ ಒಬ್ಬಳು ಎರಡು ಮುಖಗಳುಳ್ಳ ಹೆಣ್ಣು ಮಗುವನ್ನು ಹೆತ್ತಳು. ಮಗು ಸತ್ತಿದ್ದರೂ ಅದನ್ನು ನೋಡಲು ಸಾವಿರಾರು ಜನರು ಬಂದಿದ್ದರಂತೆ.

ಕುಂದಾಪುರ

ಈ ತಾಲೂಕಿನ ಅಜ್ರಿ ಗ್ರಾಮನಿವಾಸಿಗಳ ಜೀವನವು ಕೆಲವು ದಿವಸಗಳಿಂದ ದುಸ್ಸಹನೀಯವಾಗಿದೆಯೆಂದೂ, ಕೆಲವು ಗ್ರಾಮಗಳಲ್ಲಿ ಅಕ್ಕಿ ರೇಶನ್ ಕಾರ್ಡುಗಳ ದುರುಪಯೋಗವಾಗಿದೆಯೆಂದೂ ಹಲವು ಭಾಗದ ಜನರು ಅರಣ್ಯ ಜೀವನವನ್ನು ಈಗಾಗಲೇ ನಡೆಸತೊಡಗಿದ್ದಾರೆಂದೂ, 'ಕೇನೆ' 'ಹುಳಗೆಂಡೆ'ಯೇ ಮೊದಲಾದ ಗಡ್ಡೆಗಳನ್ನು ತಿಂದು ಅಸ್ವಾರೋಗ್ಯ ಕಾಯಿಲೆಗಳಿಗೆ ತುತ್ತಾಗಿರುವರೆಂದೂ ಆ ಕಡೆಯ ಒರ್ವ ನಿವಾಸಿಗಳು ಪ್ರಕಟಿಸಿದ್ದಾರೆ. ಆಹಾರ ಕೊರತೆಯಾದರೂ, ಸಿಕ್ಕುತ್ತಿರುವುದನ್ನು ಸರಿಯಾಗಿ ದೊರಕುವಂತೆ ಮೇಲಾಧಿಕಾರಿಗಳು ಗಮನವನ್ನೀಕಡೆ ಕೆರಬೇಕೆಂದು ಹಾರೈಸಲಾಗಿದೆ.

ಸ್ವೀಕಾರ

ಪಂಚವರ್ಣ: ಸಣ್ಣ ಕತೆಗಳ ಸಂಗ್ರಹ ಕೆ ಕೇಶವ ಕುಡುವ ಉಡುಪಿ, ಪ್ರಕಾಶಕರು ಸರ್ವಭಾರತ ಪುಸ್ತಕ ಭಂಡಾರ ಉಡುಪಿ ಬೆಲೆ ಆರಾಣೆ

ಚಿತ್ರದ ಬೆಳೆ: (ಸಾಮಾಜಿಕ ಆವಿಧ್ಧ ಪ್ರಯೋಗ) ಬರೆದವರು ಕೋ ಶಿ ಕಾರಂತ ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ ಧಾರವಾಡ ಬೆಲೆ ಒಂದು ರೂಪಾಯಿ

ರಾಷ್ಟ್ರ ಪುರುಷ: ಕಾದಂಬರಿ ಬರೆದವರು ಮಿರ್ಜಿ ಅಣ್ಣಾರಾಯರು ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ಭಾರತ ಸ್ವಾತಂತ್ರ್ಯದ ಹೋರಾಟವನ್ನು ಚಿತ್ರಿಸುವ ರಮ್ಯ ಕಾದಂಬರಿ 720 ಪುಟಗಳು– ಬೆಲೆ ರೂ 7

ಪುಟ್ಟ ತಮ್ಮ ಯಾರು? ಮಕ್ಕಳ ಕಥೆ ಪುಸ್ತಕ ಬರೆದವರು ಹೊಯಿಸಳ ಪ್ರಕಾಶಕರು ಶಿವಮೊಗ್ಗ ಪ್ರಿಂಟಿಂಗ್ ಅಂಡ್ ಪಬ್ಲಿಶಿಂಗ್ ಕೊ ಶಿವಮೊಗ್ಗ ಬೆಲೆ ನಾಲ್ಕಾಣೆ

ರೂ. ೧೦೦ ಬಹುಮಾನ

ಅದ್ಭುತ ಶಕ್ತಿ ಸಿದ್ಧ ಕವಚ

ಇದನ್ನು ಇಟ್ಟುಕೊಂಡ ಮಾತ್ರಕ್ಕೇ ಅತೀ ದುಸ್ಸಾಧ್ಯವಾದ ಉದ್ದೇಶವೂ ಸಾಧಿಸುವುದು. ಇದನ್ನು ಪರಿಣಾಮಕಾರಿಮಾಡಲೂ ಯಾವ ಕಷ್ಟದ ಶ್ರಮವನ್ನು ವಹಿಸಬೇಕಾಗಿಲ್ಲ. ಯಾವ ತಯಾರಿಯಿಲ್ಲದೆಯೂ ಇದು ಫಲಕೊಡುವುದು. ನೀಚಗ್ರಹಗಳನ್ನಿದು ಗೆಲ್ಲುವುದು ಶತ್ರುಗಳನ್ನು ಗೆದ್ದು ಪರೀಕ್ಷೆ, ವ್ಯಾಪಾರ, ವ್ಯಾಜ್ಯ, ಸೋಡ್ತಿ, ಜೂಜು, ಉದ್ಯೋಗಗಳಲ್ಲಿ ಯಶಸ್ಸುಕೊಡುತ್ತದೆ ಸಂಪತ್ತಭಿವೃದ್ಧಿ ಮಾಡಿ, ಸಾಲ ವಿಮೋಚಿಸಿ, ಅಪಾಯಕರ ಕಾಯಿಲೆಗಳನ್ನು ಗುಣಪಡಿಸುತ್ತದೆ ನಿಮ್ಮನ್ನು ಅದೃಷ್ಟಶಾಲಿ ಮಾಡುತ್ತದೆ. ಇದನ್ನು ಸುಳ್ಳೆಂದು ರುಜುವಾತು ಮಾಡಿದವರಿಗೆ 100 ರೂಪಾಯಿ ಬಹುಮಾನ. ಬೆಲೆ ತಾಮ್ರದಕ್ಕೆ ರೂ. 2 ಬೆಳ್ಳಿದ್ದಕ್ಕೆ ರೂ 3, ಬಂಗಾರದಕ್ಕೆ ರೂ. 15. ಶೀಘ್ರ ಫಲದ ವಿಶೇಷ ತರದ ಕವಚಕ್ಕೆ (ಶುದ್ಧ ಬಂಗಾರದ ಮುಚ್ಚಿಗೆಯದು) ರೂ. 25—7.

Dukh Haran Ashram, No. 1
P. O. Katri Sarai (Gaya).

ಯುದ್ಧ ಮುಗಿದು ವರ್ಷವೆರಡಾಯಿತು. ಆದರೂ ಮಿಲಿಯಾವಧಿ ಕೋಟ್ಯಾವಧಿ ಜನರು ಉಪವಾಸ ಬೀಳಬೇಕಾಗುವ ಪ್ರಸಂಗ ಬಂದಿದೆ. ಸೋತ ಜನಾಂಗಗಳ ಪಾಡಂತಿರಲಿ, ವಿಜಯಿಗಳಾದ ಬ್ರಿಟನ್, ರಶ್ಯಗಳಲ್ಲೂ ಗಂಡಾಂತರದ ಪರಿಸ್ಥಿತಿವೊದಗಿದೆ. ಶಿಷ್ಟ ರಾಷ್ಟ್ರಗಳಂತೂ ರೇಶನ್ ಮಿತಿಗೆ ತುಂಬಾ ಕೆಳಗಿಳಿದಿವೆ. ಯುದ್ಧದ ದುರ್ನಾಶಕ್ಕೊಳಗಾಗದ ಜಗತ್ತಿನ ಧಾರಾಳ ಆಹಾರ ವಸ್ತು ಉತ್ಪಾದಕ ದೇಶಗಳಾದ ಅಮೇರಿಕಾಗಳಲ್ಲಿ ಹೇರಳ ಧಾನ್ಯ ಉತ್ಪತ್ತಿಯಾಗುತ್ತಿದೆಯಾದರೂ ಅಲ್ಲಿನ ಜನರೂ ಹೊಟ್ಟೆಬಾಕರಂತೆ ತಿನ್ನಲೂ ಕಲಿತಿರುವರು.

ಕೆನಡಾ, ಸಂಯುಕ್ತ ಅಮೇರಿಕಾ ಮತ್ತು ಬ್ರೆಜಿಲ್ ದೇಶಗಳು ಜಗತ್ತಿನ ಧಾನ್ಯ ಕಣಜಗಳೆಂಬ ಪ್ರತೀತಿ ಪಡೆದಿವೆ ನಿಜ. ಯುದ್ಧದಿಂದ ಬ್ರೆಜಿಲ್ ಮೆಕ್ಸಿಕೊ ದೇಶದ ಜನರ ಕೈಯಲ್ಲಿ ತುಂಬಾ ಹಣವೂ ಸಿಕ್ಕಿದ್ದು ಅವರೀಗ ತಮ್ಮದನ್ನು ಮಾತ್ರವಲ್ಲ ಜಗತ್ತಿನ ಇತರ ಕಡೆಯ ಆಹಾರ ವಸ್ತುಗಳನ್ನೂ ತಿನ್ನಲು ಪ್ರಾರಂಭಿಸಿರುವರು ಆಸ್ಟ್ರೇಲಿಯಾ ನ್ಯೂಜಿಲೆಂಡ್‌ಗಳ ಪರಿಸ್ಥಿತಿಯೂ ಹೀಗೇ ಸಂಭವಿಸಿದೆ.

ಯುದ್ಧಾನಂತರದ ಇಷ್ಟೊಂದು ದೀರ್ಘ ಕಾಲದ ತನಕ ಈ ಜಾಗತ್ತಿಕ ಆಹಾರ ಕೊರತೆಯೇಕೆ ಬಾಧಿಸುತ್ತಿರುವುದು? ಈ ಕೊರತೆ ಇನ್ನೆಷ್ಟು ಭಯಾನಕ ಅವಧಿಯ ತನಕ ಮುಂದರಿಯಬಹುದು? ಪ್ರತಿಯೊಬ್ಬರೂ ಇದನ್ನೇ ಪ್ರಶ್ನಿಸುತ್ತಾರೆ ಆಹಾರ ಉತ್ಪತ್ತಿಯಲ್ಲಿ ಹವಾಮಾನದ ಪರಿಸ್ಥಿತಿಯು ಪರಿಣಾಮಕಾರಿ ಪಾತ್ರವಹಿಸುತ್ತದೆಂಬುದನ್ನೂ, ಹೆಚ್ಚು ಆಹಾರ ಬೆಳೆಸುವುದರಿಂದಲೇ ಕಮ್ಮಿ ಆಹಾರದ ಕೊರತೆಯನ್ನು ನೀಗಬಹುದೆಂಬುದನ್ನೂ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು ಇದೇ ಸಮಯಕ್ಕೆ ಕಂಗೆಟ್ಟ ಜಗತ್ತಿನ ಆರ್ಥಿಕ ಪರಿಸ್ಥಿತಿಯಾದರೂ ಸುಧಾರಿಸಿಕೊಳ್ಳುವುದೆಂದು ಎಂಬುದನ್ನು ಪರ್ಯಾಲೋಚಿಸಬೇಕಾಗಿದೆ.

ಆಹಾರ ಮತ್ತೆರಡು ಯುದ್ಧಗಳು

ಈಗ ಮೊದಲನೇ ಪ್ರಶ್ನೆ ಈ ಜಾಗತ್ತಿಕ ಆಹಾರ ಕೊರತೆಯೇಕೆ ಇನ್ನೂ ಬಾಧಿಸುತ್ತಿದೆ?–ಮೊದಲಿನ ಜಾಗತ್ತಿಕ ಯುದ್ಧಾನಂತರದಂತೆ(1918ರಂತೆ) ಈಗಲೂ ಏಕಾಗಲಿಲ್ಲವೆಂಬುದನ್ನು ತಿಳಕೊಳ್ಳತಕ್ಕದ್ದು. ಮೊದಲನೇ ಯುದ್ಧಾನಂತರ ಜಗತ್ತಿನಲ್ಲಿ ಆಹಾರ ಸಂಗ್ರಹವು ಆವಶ್ಯಕತೆಗಿಂತ ಹೆಚ್ಚಾಗಿದ್ದು ಬೆಲೆಗಳು ಒಂದೇ ಸವನೆ ಇಳಿಮುಖವಾದುದರ ದುಷ್ಪರಿಣಾಮವೆಂಬಂತೆ 1930ರಲ್ಲಿ ಜಾಗತ್ತಿಕ ಆರ್ಥಿಕ ಮುಗ್ಗಟ್ಟುಂಟಾಯಿತು

ಜಗತ್ತಿನ ಆಹಾರ ಕೊರತೆಯ ಕಾರಣ

ಈ ಸಂಕಷ್ಟವೆಷ್ಟು ಕಾಲ?

ಆದರೆ ಈಗ ಆಹಾರದ ಬೆಲೆಯು ಏರುತ್ತಲೇ ಇದೆ. ಇದಕ್ಕೆ ಕಾರಣವೇನು?

ಇದರ ಉತ್ತರವು ದೂರಪೂರ್ವದ ದೇಶಗಳಲ್ಲಡಗಿದೆ. ಮೊದಲನೆ ಜಾಗತ್ತಿಕ ಯುದ್ಧವು ಈ ಪ್ರದೇಶಗಳಿಗೆ ಸ್ವಲ್ಪವಾದರೂ ಸಂಪರ್ಕಗೊಂಡಿರಲಿಲ್ಲ. ಆದುದರಿಂದ ಈ ದೇಶಗಳಲ್ಲಿ ಆ ಯುದ್ಧಾನಂತರವೂ ಆಹಾರ ಉತ್ಪತ್ತಿಯು ಅವ್ಯಾಹತವಾಗಿ ಸಾಗಿತು. ಸಕ್ಕರೆ, ಅಕ್ಕಿ, ಸಸ್ಯ ಎಣ್ಣೆಗಳು, ಮಿತಿಮೀರಿ ಸಂಗ್ರಹವಾಗಿ ಶೀಘ್ರದಲ್ಲಿ ಆವಶ್ಯಕತೆಗಿಂತ ಹೆಚ್ಚು ವಸ್ತುಗಳು ಸರಬರಾಯಿಯಾದುವು

ಈ ಸಲದ ಪರಿಸ್ಥಿತಿಯು ಬಹಳಮಟ್ಟಿಗೆ ವಿರೋಧವಾಗಿದೆ. ಜಪಾನಿಗಳು ವಿಶಾಲ ದೇಶಭಾಗಗಳನ್ನು ಹಿಡಿದದ್ದರಿಂದ ಅನೇಕ ಸಕ್ಕರೆ ಕಾರ್ಖಾನೆಗಳು ನಾಶವಾದುವು, ಕೊಬ್ಬರಿಯನ್ನೊಯ್ಯುವ ನೌಕಾ ಸೌಕರ್ಯವು ಕಡಿಯಲ್ಪಟ್ಟಿತು ಯುದ್ಧದಿಂದ ರೈತನಿಗೆ ಸಾಕಷ್ಟು ರಾಸಾಯನಿಕ ಗೊಬ್ಬರವೂ ಸಿಗಲಿಲ್ಲ ಮಾತ್ರವಲ್ಲ ದಿನವಹಿ ಉಪಯೋಗದ ವಸ್ತುಗಳೂ ದೊರಕದೆ ಮಜೂರರಲ್ಲ ಒಂದು ಸಂಪೂರ್ಣ ದಿನದ ಕೆಲಸ ಮಾಡಲು ಸಾಕಷ್ಟು ಪ್ರೇರಣೆ ಉತ್ಸಾಹಗಳು ಹುಟ್ಟದಾದವು

ಪರಿಣಾಮವಾಗಿ ದೂರಪೂರ್ವದ ದೇಶಗಳು ತಮ್ಮ ಮಿಗಿತಾಯದ ಧಾನ್ಯಗಳನ್ನು ಹೊರದೇಶಗಳಿಗೆ ಕಳುಹಿಸುವುಧರ ಬದಲಿಗೆ ಅಮೇರಿಕಾ, ಕೆನಡಾ ಬ್ರೆಜಿಲ್‌ಗಳಿಂದ ತಾವೇ ಆಹಾರವನ್ನು ತರಿಸಿಕೊಳ್ಳಲಾರಂಭಿಸಿದುವು.

ಸಯಾಮ್, ಇಂಡೋಚೀನಾ, ಕೊರಿಯಾ, ಫ್ರೊರ್ಮೋಸಾ ಮೊದಲಾದ ಅತಿ ಮಿಗಿತಾಯ ಪ್ರದೇಶಗಳು ಹೊರಕ್ಕೆ ಕಳುಹಿಸಲು ಸಮರ್ಥವಿರುವ ಪರಿಮಾಣಕ್ಕಿಂತ ಅಕ್ಕಿಯನ್ನು ತರಿಸಿಕೊಳ್ಳುವ ದೇಶಗಳಲ್ಲಿ ಅಕ್ಕಿಯ ಕೊರತೆ ಹೆಚ್ಚಾಗಿದ್ದುದರಿಂದ, ಹೀಗೆ ಕೊರತೆ ಬಿದ್ದ 6-ಮಿಲಿಯ ಟನ್ ಆಹಾರ ವಸ್ತುಗಳಿಗಾಗಿ ಈ ದೇಶಗಳು ಗೋದಿ ಜೋಳಗಳಿಗಾಗಿ ಅಮೇರಿಕಾಗಳ ಕಡೆ ನೋಡಬೇಕಾಯಿತ. ದುರ್ದೈವ ವಶಾತ್ ಈ ದೇಶಗಳಲ್ಲಿ ಸಕಾಲದಲ್ಲಿ ಮಳೆ ಬಾರದ್ದರಿಂದ ಬೆಳೆಗಳು ಅಪಾರ ಹಾನಿಗೂ ಸಪ್ಪಕಕ್ಕ ಒಳಗಾಗಿ ಉತ್ಪತ್ತಿ ಪ್ರಮಾಣವೂ ಬಹಳ ಕಡಿಮೆಯಾಗಿತ್ತು, ಆಸ್ಟ್ರೇಲಿಯಾಕ್ಕೂ ಅದೇ ದುಷ್ಕಾಳವು ವೊದಗಿತ್ತು ಇದರಿಂದ ಈ ದೇಶಗಳು ಒಂದು ನಿರ್ದಿಷ್ಟ ಪ್ರಮಾಣದ ದವಸಧಾನ್ಯಗಳನ್ನು ಮಾತ್ರ ರಪ್ತುಮಾಡಲು ಸಮರ್ಥವಾದವು

ಅರ್ಜೆಂಟಿನಾದ ಸಹಾಯ

ಇದೇ ಸಮಯಕ್ಕೆ ಸ್ಪುದೈವವಶಾತ್ ಕೆಲವು ಪೌರ್ವಾತ್ಯ ದೇಶಗಳಲ್ಲಿ ಬೆಳೆಯು ನಿರೀಕ್ಷಣೆ ಮಿಕ್ಕಿವುಂಟಾದುದರಿಂದ ಆಹಾರದ ಬಿಕ್ಕಟ್ಟು ಒಂದು ತಿಂಗಳಿಗಾದರೂ ಮುಂದರಿಯುವಂತಾಯಿತು. ಈಗ ಸಂಕಷ್ಟಕ್ಕೊಳಗಾದ ಉತ್ತರಾರ್ಧಗೋಲದ ಸುಮಾರು ಆರೆಂಟು ದೇಶಗಳಿಗೆ ಸಂಕಷ್ಟದಿಂದ ಪಾರುಮಾಡುವಷ್ಟು ಧಾನ್ಯ ಸಂಗ್ರಹವುಳ್ಳ ದೇಶವೆಂದರೆ ಆರ್ಜೆಂಟಿನಾ ದಕ್ಷಿಣ ಅಮೇರಿಕದ ಈ ದೇಶವು ತನ್ನ ಉದಾರತೆಯಿಂದ ಈ ದೇಶಗಳ ಅಪಾರ ಜನತೆಯ ಪ್ರಾಣಗಳನ್ನುಳಿಸಿ ಪುಣ್ಯಗಳಿಸಿ ಜಗತ್ತಿನ ಸೌಹಾರ್ದವನ್ನೂ ಶಾಂತಿಯನ್ನೂ ಕಾಪಾಡಬಹುದು

ಇದೇ ರೀತಿ ಜಗತ್ತಿನ ಎಣ್ಣೆ ಕೊಬ್ಬುಗಳನ್ನುಪಯೋಗಿಸುವ ದೇಶಗಳಲ್ಲಿ ಬೇಕಾಗುವ ಈ ಪುಷ್ಟಿ ವಸ್ತುಗಳ ಕೇವಲ ಅರ್ಧಾಂಶದಷ್ಟು ಮಾತ್ರ ಸರಬರಾಯಿ ಮಾಡಬಹುದಾಗಿದೆ ಇದರ ಪರಿಣಾಮವಾಗಿ ಯೂ ಜನತೆ ಹೆಚ್ಚಿನ ದವಸ ಧಾನ್ಯಗಳನ್ನು ತಿನ್ನುವ ಆವಶ್ಯಕತೆ ಬಿದ್ದಿದೆ, ಇಲ್ಲದಿದ್ದರೆ ಕನಿಷ್ಟ ಪ್ರಮಾಣದ ಆರೋಗ್ಯ ಸುಸ್ಥಿತಿಯನ್ನು ಕಾಪಾಡಲು ಕಷ್ಟತರದ್ದಾಗುವುದು

ಯುರೋಪಿನಲ್ಲಿ ಯುದ್ಧ ದೆಸೆಯಿಂದ ಮಾಂಸಕ್ಕಾಗಿ ಅಪಾರ ಕೊಬ್ಬು ಪ್ರಾಣಿಗಳು ನಾಶವಾದುದರಿಂದ ಅಲ್ಲಿಯವರು ಸಸ್ಯ ಎಣ್ಣೆಗಳಿಗಾಗಿ ಪೌರ್ವಾತ್ಯ ದೇಶಗಳನ್ನು ಮರೆಹೋಗಬೇಕಾಗಿದೆ ಅಮೇರಿಕ ಮತ್ತು ಫಿಲಿಪ್ಪೈನ್ ದೇಶದಲ್ಲಿನ ಎಣ್ಣೆ ಕೊಬ್ಬು ಉತ್ಪತ್ತಿಯು ಕಡಿಮೆಯಾಗಲಿಲ್ಲವಾದರೂ ಜಾಗತ್ತಿಕ [illegible] ವಷ್ಟು ಪ್ರಮಾಣವು ಅಲ್ಲಿಲ್ಲ ಪೌರ್ವಾತ್ಯ ದೇಶಗಳಲ್ಲಿ ಕೊಬ್ಬರಿ ಸಂಗ್ರಹ [illegible] ಸಣ್ಣ ನೌಕೆಗಳೆಲ್ಲ ನಾಶವಾಗಿದ್ದುದರಿಂದಲೂ, ಮತ್ತೆ ಇಂಡೋನೇಸ್ಯದ ಜನರು ತಮ್ಮ ಸ್ವಾತಂತ್ರ್ಯ ಕದನದಲ್ಲಿ ಮಗ್ನರಾಗಿರುವುದರಿಂದಲೂ ಒಂದು ವೇಳೆ ಸಾಕಷ್ಟು ನೌಕೆಗಳು ಸಿಕ್ಕಿದರೂ ಅಲ್ಲಿಯ ಜನರು ಕೊಬ್ಬರಿ ಸಂಗ್ರಹದಲ್ಲಿ ಹೆಚ್ಚು ಆತುರರಾಗಿಲ್ಲ

ಸಕ್ಕರೆಯ ಅಂಕೆಸಂಖೆಗಳು ಹೀಗಿವೆ 1919–20ರಲ್ಲಿ ಜಾವಾ ಮತ್ತು ಫಿಲಿಪ್ಪೈನ್ ದ್ವೀಪಗಳಿಂದಲೇ ಎಲ್ಲಾ ಸಕ್ಕರೆ ಬರುತಿತ್ತು ಈಗ ಈ ದೇಶಗಳು ಸಕ್ಕರೆ ರಪ್ತು ಮಾಡುವ ಬದಲಿಗೆ ತಾವೇ ಆಮದು ಮಾಡಲಿಕ್ಕೆ ಹತ್ತಿವೆ

ಕಂಟ್ರೋಲು ಹೋಗಬೇಕು

ಜಗತ್ತಿನ ಅನೇಕ ಜನಾಂಗಗಳು ಬೆಲೆ ನಿಯಂತ್ರಣದಿಂದ ಇನ್ನಷ್ಟು ಸಂಕಷ್ಟಕ್ಕೊಳಗಾಗಿದ್ದಾರೆ. ವ್ಯಾಪಾರವು ಕಂಟ್ರೋಲುಗಳಿಂದ ವಿಮೋಚನೆಹೊಂದಬೇಕೆಂದು ಜನತೆ ಆಶಿಸುತ್ತದೆ. 1930ರ ದುರಂತವನ್ನು ಯಾರೂ ಆಶಿಸುವುದಿಲ್ಲ ಇದಕ್ಕಾಗಿ ಜನಾಂಗ ಸಂಘದ ಅಂತರಾಷ್ಟ್ರೀಯ ಆಹಾರ ವಿತರಣ ಸಂಘವು ದೇಶ ದೇಶಗಳಲ್ಲಿ ಪ್ರಚಾರಗೈಯುತ್ತಿದೆ ಜನರಲ್ಲಿ ಸೌಹಾರ್ದ, ಸಹಾನುಭೂತಿ, ಸಹಕಾರಗಳ ಭಾವವು ಇನ್ನಷ್ಟು ಹೆಚ್ಚಾಗಿ ಮೂಡಿ ಬರಬೇಕು. ಜಗತ್ತಿನ ಜನರು ಆಹಾರ ವಿತರಣೆಯಮಟ್ಟಿಗಾದರೂ ಒಂದೆಂಬ ಭಾವನೆಯುಳ್ಳವರಾಗಬೇಕು. ಹಾಗಾದರೇನೆ ನಾವಿಂದು ನಮ್ಮೀ ಭೀಕರ ಸಂಕಷ್ಟದಿಂದ ಪಾರುಗೊಂಡೇವು.

(೩ನೇ ಪುಟದಿಂದ)

ಣರ ಅಭಿಪ್ರಾಯವಿದೆ ಇಲ್ಲೂ, ಜಪಾನಿನಲ್ಲೂ ಬ್ರಿಟನಿನ ಸತ್ವಪರೀಕ್ಷೆಯಾಗಲಿದೆ

ಇಷ್ಟೆಲ್ಲಾ ಉಭಯಸಂಕಟಕ್ಕೆ ಕಾರಣ ಸೋವಿಯಟ್ ರಷ್ಯದ ಕಡೆ ಅಮೇರಿಕನ್ ದ್ವೇಷವು ಹಿಂದೆ ಬ್ರಿಟನಿನ ಟೋರಿಗಳೂ ರಷ್ಯದ ಮೇಲಿನ ದ್ವೇಷದಿಂದ ಜರ್ಮನಿಯಲ್ಲಿ ಹಿಟ್ಲರನನ್ನೂ, ಇಟೆಲಿಯಲ್ಲಿ ಮುಸಲೀನಿಯನ್ನೂ, ಬೆಳೆಯಲು ಅನುಕೂಲ ಮಾಡಿಕೊಟ್ಟರು ಅಮೇರಿಕಾದ ಸದ್ಯದ ರಷ್ಯಾದ್ವೇಷದ ಪರಿಣಾಮವೇನಾಗುತ್ತದೆಂದು ನೋಡಬೇಕು

ಅಮೇರಿಕದ ಪ್ರತಿಗಾಮಿತೆಯಿಂದ ಜಗತ್ತಿನಲ್ಲಿ ಕಮ್ಯುನಿಸ್ಟ ಪ್ರಭಾವ ದಬ್ಬಲ್ಪಡಬಹುದೆ? ಹಾಗೇನು ಭರವಸೆ ಕೊಡುವ ಚಿಹ್ನೆಗಳು ಇಷ್ಟರ ತನಕ ಕಾಣಿಸಿಕೊಂಡಿಲ್ಲ ಬದಲು ಕೊಮ್ಯುನಿಷ್ಟ ಪ್ರಭಾವಗಳಿಗೆ ಇನ್ನಷ್ಟು ಸಾರವು ದೊರಕುತ್ತಿರುವುದು ಕಾಣಿಸುತ್ತಿದೆ

ಇ [illegible] ಚೀನ, ಇಂಡೋನೇಸ್ಯಗಳಲ್ಲಿ ತಾವು ಸಾಯಬಾರದು ಕೊಲುಮರಿ [illegible] ಘೋರಣೆಯು ಆಚರಣೆಗೆ ಬಂದದೆ [illegible] ಇಂಡೋಚೀನಾವನ್ನು ಬಿಡುವ ಮನಸಿಲ್ಲ ತಮ್ಮ ಪ್ರಭಾವ ಉಳಿಸಿಯೇ ಅದನ್ನು ತ್ಯಜಿಸುವ ಯೋಚನೆಯು ಅವರದು ಇಂಡೋನೇಸ್ಯವು ತಮ್ಮ ಕೈಗಳಿಂದ ಹೋದರೆ ಆಗ ತಮ್ಮ ಸರ್ವನಾಶವೆಂಬ ಭೀತಿಯಿಂದ ಡಚ್ಚರು ವರ್ತಿಸುತ್ತಿರುವರು ಈ ಇವರನ್ನು ಸರಿಯಾದ ಮಾರ್ಗಕ್ಕೆ ತರುವ ದುರೀಣತೆಯು ಯುಕ್ತರಾಷ್ಟ್ರಗಳ ಸಂಸ್ಥೆಯಲ್ಲಿ ಕಾಣುವುದಿಲ್ಲ ಅಲ್ಲೀಗ ಪ್ರಜಾಸತ್ತಾ ನೀತಿಗೆ ಅರೆಮನಸ್ಸಿನ ಪೂಜೆಯು ಸಲ್ಲುತ್ತಿದೆ

ಕಶಿ ಹಣ್ಣಿನ ಗಿಡಗಳು ಮತ್ತು ತರಕಾರಿ ಬೀಜಗಳು

ಜುಲೈ ಅಗಸ್ಟ್ ತಿಂಗಳಲ್ಲಿ ಹಾಕುವ ಇಂಗ್ಲೀಷ್ ಟೈಪ ಮತ್ತು ಇಂಡಿಯನ್ ತರಕಾರಿ ಬೀಜಗಳು 20 ತರಹ ಕಲರ್‌ಪ್ಯಾಕೆಟ್‌ಗಳ ಸಮೇತ– ರೂ. 4–0–0

ಬೆಂಗಳೂರು ಕಶಿ ಮಾವಿನ ಗಿಡಗಳು 6 ಜಾತಿ 6 ಗಿಡಕ್ಕೆ	9–0–0
ಕಲಕತ್ತೆ ಮಾವಿನ ಗಿಡಗಳು 12 ಜಾತಿ 12 ಗಿಡಕ್ಕೆ	16–0–0
ಸಪೋಟ, (ಚಿಕ್ಕು) ಗಿಡ 1ಕ್ಕೆ	1–8–0
ನಾಗಪುರ—ಕೊಡಗು—ಮುಸಂಬಿ–ನಿಂಬೆ–ಚಕ್ಕೋತ್ರ.	
ದಾಳಿಂಬೆ, ಪನ್ನೇರಳೆ–ಗಿಡಗಳು ಡಜನ್ 1ಕ್ಕೆ	15–0–0

ಅರ್ಧ ಹಣ ಮುಂಗಡ ರವಾನಿಸಬೇಕು. ಪ್ಯಾಕಿಂಗ್ ಮತ್ತು ಇತರ ಖರ್ಚು ಬೇರೆ

ಪತ್ತೆ ದಿ ಅಲ್‌ಸೂರ್ ಸೀಡ್ ಕಂಪೆನಿ,
ಅಲಸೂರು — ಬೆಂಗಳೂರು.

KANARA COMMERCIAL BANK LTD.

PUTTUR

H. O. Puttur.] Estd 1920 [Branch Vittal.

All kinds of Banking Business transacted.

Deposits Current, Savings, Cumulative. Deposits are accepted.

Fixed Deposits for periods of 3 months and above up to 24 months are accepted.

ಪಾಕಿಸ್ತಾನವು ಹಿಟ್ಲರ್ ರಾಜ್ಯವಾಗುವುದು

ನಿರಕ್ಷರಸ್ಥ ಜನತೆಯನ್ನಾಳಲು ಸರ್ವಾಧಿಕಾರವೇ ದಾರಿ

"ಮುಸ್ಲಿಂ ಪಕ್ಷದ ಲೀಗಿನ ಇದುತನಕದ ಧೋರಣೆಗಳನ್ನು ಪರಿಶೀಲಿಸುವಾಗ ಈ ಹೊಸತೊಂದು ರಾಜ್ಯವನ್ನೇ ಹೊಂದಿದ ಈ ಮತೀಯ ರಾಜಕೀಯ ಪಕ್ಷವು ನಿರಂಕುಶ ಸರ್ವಾಧಿಕಾರತ್ವದ ಕಡೆ ಧಾವಿಸುತ್ತದೆಂದು ಸ್ಪಷ್ಟವಾಗುತ್ತದೆ" ಹೀಗೆಂದೋರ್ವ ಪ್ರಖ್ಯಾತ ಅಮೇರಿಕನ್ ರಾಜಕೀಯ ನಿರೀಕ್ಷಕನು ಒಂದು ಲೇಖನದಲ್ಲಿ ಬರೆದು ತಮ್ಮ ಕಾರಣಗಳನ್ನು ಹೀಗೆ ಕೊಡುತ್ತಾರೆ

ಪಾಕಿಸ್ತಾನದ ಶೇಕಡಾ 95ರಷ್ಟು ಜನತೆ ನಿರಕ್ಷರ ಕುಕ್ಷಿಗಳು ರಶ್ಯವು ಕೊಮ್ಯುನಿಸ್ಟ್ ರಾಜ್ಯಭಾರ ಪ್ರಾರಂಭಿಸಿದಾಗಲೂ ಇದೇ ಪರಿಸ್ಥಿತಿಯಿತ್ತು ಕೆಲವೇ ಮಂದಿ ಸರ್ವಾಧಿಕಾರಿಗಳಿಂದು ರಶ್ಯವನ್ನು ತಮ್ಮ ಉಕ್ಕಿನ ಮುಷ್ಟಿಯಲ್ಲಿ ಹಿಡಿದುಕೊಂಡಿರುವರು ಇಟಲಿ, ಜರ್ಮನಿಗಳ ಸರ್ವಾಧಿಕಾರಿಗಳಿಗೆ ಸಂಭವಿಸಿದ ದುಃಸ್ಥಿತಿಯೇ ಅವರ ರಶ್ಯನ್ ಸಮಕಾಲೀನರಿಗೆ ಉಂಟಾಗುವುದೆಂದು ತಿಳಿಸಲು ಇತಿಹಾಸದಲ್ಲಿ ಸರ್ವಾಧಿಕಾರಿಗಳ ಜೀವನ ವಿಧಿಯನ್ನು ಅಭ್ಯಾಸಿಸುವಾಗ ತಿಳಿಯುವುದು ರೋಮನ್ ಸರ್ವಾಧಿಕಾರಿ ಜೂಲಿಯಸ್ ಸೀಸರನ ಅವಸ್ಥೆಯೇನಾಯಿತು? ಅವನ ಆಪ್ತರೇ ಅವನನ್ನು ಕೊಲೆಗೈದರು ನೆಪೋಲಿಯನನು ಅದೆಂತಹ ಪಾಡಿಗೊಳಗಾದನು?

ಜಗತ್ತಿನಲ್ಲಿ ಸರ್ವಾಧಿಕಾರವು ಒಂದು ಅತೀ ಮೋಹಕ ವಸ್ತು ಮುಸೊಲೀನಿಯು ಕೆಲವೇ ಮಂದಿ ತನ್ನ ಕಪ್ಪಂಗಿಯವರನ್ನು ರೋಮ್ ನಗರದ ಮಾರ್ಗದಲ್ಲಿ ಮೆರವಣಿಗೆ ಮಾಡುತ್ತ ಸರಕಾರವನ್ನು ವಶ ಮಾಡಿಕೊಂಡನು ಅಂತೆಯೇ ಹಿಟ್ಲರನು

ಇಂಡಿಯಾದಲ್ಲಿ ಇ ದ. ಮಿ. ಜಿನ್ನಾರು ತಮ್ಮ ಕೆಲವೇ ಮಂದಿ ಶ್ರೀಮಂತರ ಪ್ರಭಾವಿತರ ಆದ ಗೆಳೆಯರಿಂದೊಡಗೂಡಿ ಬಾರಂತದ ಮುಸ್ಲಿಮರನ್ನಾಳಲು ಪ್ರಯತ್ನಿಸುತ್ತಿರುವರು ಭಾರತದ ಕಾಂಗ್ರೆಸ್ ಪಕ್ಷದಲ್ಲಿನ ಅಪಾರ ತ್ಯಾಗ ಮಾಡಿದ ನಾಯಕರು ತಮ್ಮ ಜನತೆಯ ಆರ್ಥಿಕ ದುಸ್ಥಿತಿಯನ್ನು ನಿವಾರಿಸಲು ಸರ್ವ ಪ್ರಯತ್ನ ಮಾಡುವರು ಆ ಕಾಲಕ್ಕೆ ಪಾಕಿಸ್ತಾನದ ಮಂತ್ರಿಗಳು ಸುಖಾಸೀನರಾಗಿ ಸ್ವಹಿತ ಸಾಧನೆಯಲ್ಲಿ ತೊಡಗುವರು ಇದರಿಂದ ಅವರ ಹಿಂಬಾಲಕರು ನಾವು ಎಣಿಸುವುದಕ್ಕಿಂತ ಬೇಗನೆ ಗೊಣಗುಟ್ಟತ್ತುವರು ಜನತೆ ಅತೃಪ್ತಿಪಟ್ಟರೆ ಮತ್ತೆ ಉಂಟಾಗುವುದು ದಂಗೆಯೇ ಪಾಕಿಸ್ತಾನದ ದಂಗೆಯನ್ನಡಗಿಸಲು ಮಿ. ಜಿನ್ನರು ಬಲಿಷ್ಟವಾದ ದಬ್ಬಾಳಿಕೆ ಯಂತ್ರವನ್ನು ಚಾಲುಮಾಡಬೇಕಾಗುವುದು. ಹಿಟ್ಲರನ ಗೆಸ್ಟೆಪೊದಂತಹ, ಸ್ಟೇಲಿನನ ಒಗ್ಗುದಂತಹ ಗುಪ್ತಾಚಾರ ದಳವು ಪಾಕಿಸ್ಥಾನಕ್ಕೆ ಅವಶ್ಯವೆನಿಸುವುದು.

ಇಷ್ಟಾಗುವಾಗ ತಮ್ಮ ಬೆಂಬಲಕ್ಕಿರುವ ಹಿಂಬಾಲಕರ ಮತ್ತು ತಮ್ಮ ಮುಸ್ಲಿಂ ಸೇನೆಗಳ ಗಮನವನ್ನು ಆಂತರೀಕ ಅವ್ಯವಸ್ಥೆಯಿಂದ ಬೇರೊಂದು ಕಡೆ ನಿರ್ದೇಶಿಸಲು ~~ಜಿನ್ನಾ ಮಂಡಳಿಯವರು ಅಲ್ಪಸಂಖ್ಯಾಕ~~ರಾದವರ ಮೇಲೆ ದ್ವೇಷವುಂಟಾಗುವಂತೆ ಮಾಡುವರು ಜರ್ಮನಿಯಲ್ಲಿ ಯೆಹೂದಿಗಳು ಹಿಟ್ಲರನ ಈ ಧೋರಣೆಗೆ ಆಹುತಿಯಾಗಿದ್ದರು ಇತ್ತೀಚೆಗೆ ಪಾಕಿಸ್ಥಾನ ಸಿಕ್ಕುವ ಸ್ವಲ್ಪೇ ಮೊದಲೆಂಬಂತೆ ಮಿ. ಜಿನ್ನರು ಕೂಡಾ ತಮ್ಮ ಅನುಯಾಯಿಗಳಿಗೆ ಹಿಂದೂಗಳನ್ನು ದ್ವೇಷಿಸುವಂತೆ ಪ್ರೇರೆಪಿಸುತಿದ್ದರು.

ರಹಸ್ಯ ಪ್ರಕಟ

ಒಂದು ದೇಶದಲ್ಲಿ ಚಿರಶಾಂತಿ ನೆಲೆಸಬೇಕಾದರೆ ಆ ದೇಶದ ಜನಪ್ರಿಯ ಮುಖಂಡರು ಆದರ್ಶ ವ್ಯಕ್ತಿಗಳಾಗಿದ್ದು ಜನೋದ್ಧಾರಕ್ಕಾಗಿ ತಮ್ಮ ಜೀವನವನ್ನು ವಿಸಲಾಗಿಟ್ಟವರಿರಬೇಕು ಸರಕಾರ ಮುಖಂಡರು ನಿರಂತರವಾಗಿ ಜನತೆಯ ಸಂಕಷ್ಟ, ದರಿದ್ರತೆ ನಿವಾರಣೆಯ ಕಡೆ ಬಹುಕಾಲ ಅಲಕ್ಷವನ್ನು ತೋರಿಸಿಕೊಂಡಿರಲು ಸಾಧ್ಯವಿಲ್ಲ. ಹಿಟ್ಲರನು ಒರ್ವ ಸಂಸಾರ ರಹಿತ ಸನ್ಯಾಸಿಯ ಸೋಗು ಹಾಕಿಕೊಂಡಿದ್ದನು ಆದರೆ ಗೋರಿಂಗನಂತಹ ಅವನ ವೈಭೋಗಪ್ರಿಯ ಮಿತ್ರರಿಂದ ಜರ್ಮನರನ್ನು ಮೆಚ್ಚಿಸಲಾಗಲಿಲ್ಲ ನಾಜೀ ಸರ್ವಾಧಿಕಾರ ಯಂತ್ರದ ಕೊನೆಯ ಕುಸಿತಕ್ಕೆ ಕ್ಷೀಣಗೊಂಡ ಅವರ ಜನತಾ ಸಂಪರ್ಕವೇ ಕಾರಣವಾಯಿತು ಮೊದಮೊದಲು ಮುಸೊಲಿನಿಯು ಸರಳ ನಾಗರೀಕನಂತೆ ನಟಿಸಿದರೂ ಕ್ರಮೇಣ ಅವನು ಅಧಿಕಾರ ಮತ್ತತೆಯಿಂದ ರಾಜವೈಭೋಗವನ್ನೇ ಹಿಡಿಸಿದನು ಪರಿಣಾಮವಾಗಿ ಅವನಿಗೆ ಜನತೆಯ ಮೇಲಿನ ಹಿಡಿತ ತಪ್ಪಿತು ಈಗ ರಶ್ಯದ ಸ್ಟೇಲಿನರಾದರೆ ಓರ್ವ ಆದರ್ಶ ಮಜೂರನಂತೆ ಮೇಷ್ಟ ... ಆದರೆ ಅವರ ಅನುಯಾಯಿಗಳು ... ಜೀವನ ... ರಹಸ್ಯವೇ ಆಗಿದೆ

ಪುನಃ ಸ್ಟೇಲಿನರ ... ಕಾರ್ಮಿಕ ಸಮಾನತೆಯ ಮಜೂರ ... ರಶ್ಯದಲ್ಲೆನೇ ಸ್ಥಾಪಿತವಾಗಿ ಅನೇಕ ವರ್ಷಗಳಾದವು ಈ ಅವಧಿಯಲ್ಲಿ ಅಲ್ಲಿನ ಆಡಳಿತ ವರ್ಗದ ಸ್ಟೆಲಿನ್ ಮುಂತಾದವರು ಈಗೊಂದು ಪೀಡಾತ್ಮಕವಾದ ಸರ್ವಾಧಿಕಾರ ವ್ಯಾಪಾರ ... ಇನ್ನು ಕೆಲವೇ ವರ್ಷಗಳಲ್ಲಿ ರಶ್ಯನ್ ಜನತೆಯು ಈ ಸರ್ವಾಧಿಕಾರದ ಬೋನಿನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸದಿರಲಾರರು ಆಗ ಸ್ಟೇಲಿನ್ ಕಂಪೆನಿಯವರ ಪಾಡು ಹಿಟ್ಲರ್ ಮುಸ್ಸೋಲಿನಿಗಳಂತೇ ಪರ್ಯವಸಾನ ಹೊಂದುವದರಲ್ಲಿ ಸಂದೇಹವಿಲ್ಲ

ಜಪಾನಿಯವರದು ಇನ್ನೊಂದು ನಿದರ್ಶನ ಅಲ್ಲಿನ ಸೈನಿಕ ವರ್ಗದವರು ಇಡೀ ಜನಜೀವನವನ್ನು ಹತೋಟಿಯಲ್ಲಿ ಹಿಡಿದು ಪಾಶ್ಚಾತ್ಯ ಅನುಕರಣೆಯನ್ನು ಪರಿಪೂರ್ಣಗೊಳಿಸಿ ಕೊನೆಗೆ ಅನ್ಯಂತವಾದ ತಮ್ಮ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಲು ಸಾಮ್ರಾಜ್ಯಶಾಹಿ ದಾಹಕ್ಕೆ ಬಲಿಯಾಗಿ ತಮ್ಮ ಅಂತ್ಯವನ್ನು ಕಂಡರು ಇಂದು ಪ್ರಜಾಪ್ರಭುತ್ವವಾದರಿಯಲ್ಲಿ ಜಪಾನಿಗಳು ಸ್ವತಂತ್ರ ವಾಯು ಸೇವನೆಯಿಂದ ನೆಮ್ಮದಿಗೊಂಡಿದ್ದಾರೆ ಇಂದಿನ ಅವರ ಚಕ್ರವರ್ತಿ ಹಿಂದಿನ ದೇವಾಂಗ ಸಂಭೂತನಲ್ಲ ಅವನು ಸಾಮಾನ್ಯ ಪ್ರಜೆಯಂತೆ ಚಲಿಸುತ್ತಿರುವನು

ಪಾಕಿಸ್ಥಾನ ಪರಿಣಾಮ

ಹೊಸದಾದ ರಚನೆಯ ಭಾರತೀಯ ಮುಸ್ಲಿಂ ರಾಜ್ಯದ ಅವಸ್ಥೆಯೂ ಹೀಗಾಗ ಬಾರದೆಂದು ನಮ್ಮೆಲ್ಲರ ಆಶಯ ಆದರೆ ಇತ್ತೀಚೆಗೆ ಮಿ. ಜಿನ್ನರು ತಮ್ಮ ಗವರ್ನರ್ ಜನರಲ್ ಪದವಿಗೆ 1935ನೇ ಘಟನೆಯಲ್ಲಿನ ಎಲ್ಲಾ ಪ್ರಾಂತ್ಯಾಧಿಕಾರವನ್ನು ವಹಿಸಿಕೊಂಡಿರುವುದನ್ನು ನೋಡುವಾಗ ಪಾಕಿಸ್ತಾನದ ಆಡಳಿತವರ್ಗವೂ ಸರ್ವಾಧಿಕಾರದ ದುರಂತ ಪಥವನ್ನನುಸರಿಸಲು ಸಿದ್ಧಮಾಡಿಕೊಂಡಂತೆ ತೋರುತ್ತದೆ ಆದರೆ ಇಟಲಿ ಜರ್ಮನಿ ಜಪಾನುಗಳಲ್ಲಿ ಅಂತ್ಯವಾದ ಧೋರಣೆಯು ಪಾಕಿಸ್ತಾನದಲ್ಲಿ ... ಮಾನವ ಸ್ವಭಾವವು ಜಗತ್ತಿನ್ನೆಲ್ಲಾ ಕಡೆಗಳಲ್ಲೂ ಒಂದೇಯಾಗಿರುತ್ತದೆ ಮತ, ಆಚಾರ ವಿಚಾರ ಸಂಸ್ಕೃತಿಗಳಲ್ಲಿ ವ್ಯತ್ಯಾಸಗಳಿರಬಹುದು. ಇಸ್ಲಾಮ್ ಮತದ ಧರ್ಮ ಪೀಠವಾದ ತುರ್ಕಿಯು ತೊಡೆದು ಹಾಕಿದ್ದನ್ನು ಪಾಕಿಸ್ತಾನವು ತೊಡಗಲು ಯತ್ನಿಸಿ ಸಾಫಲ್ಯ ಹೊಂದಲಾರದೆಂದು ಒತ್ತಿ ಹೇಳಬಹುದು.

ಪಾಕಿಸ್ತಾನದ ಆಳೊಡೆಯರು ಅದೆಷ್ಟು ಶೀಘ್ರದಲ್ಲಿ ತಮ್ಮ ಜನತೆಯ ಅಭಿವೃದ್ಧಿಯನ್ನು ಗೈಯ್ಯುವರೊ ಅಷ್ಟು ಶೀಘ್ರದಲ್ಲಿ ಅದು ಪ್ರಗತಿ ಹೊಂದುವುದು ಈ ಪ್ರಗತಿಯನ್ನು ಪರಕೀಯ ಸಂಪತ್ತಿನ ಸಹಾಯದಿಂದ ಹೊಂದಲೆಳಿಸಿದರೂ ಗಂಡಾಂತರ ತಪ್ಪದು. ಒಂದು ಪ್ರತ್ಯೇಕ ಮತೀಯ ಸಂಸ್ಕೃತಿಯನ್ನು ಪ್ರಚಾರಿಸಲಿಕ್ಕೆ ಯತ್ನಿಸುವುದೂ ಬಹುಮತೀಯ ಜನಸಂಖ್ಯೆಯುಳ್ಳ ದೇಶದ ನೆಮ್ಮದಿಗೆ ಹಾನಿಕರವೆಂಬುದು ಸ್ವತಃ ಸಿದ್ಧ ಇಂತಹ ಗಹನವಾದ ಪರ್ಯಾಯ ಕಾಲದಲ್ಲಿ ಪಾಕಿಸ್ತಾನದ ನಮ್ಮ ಮುಸ್ಲಿಮ್ ಬಂಧುಗಳಿಗೆ ಅದೆಂತಹ ಭಾಗ್ಯವಿಧಿಯು ನಿರೀಕ್ಷಿಸುತ್ತಲಿದೆಯೆಂದು ನೋಡಲಿದೆ

ಆಶ್ಚರ್ಯವಾದ ಸಿದ್ಧಿ ಯಂತ್ರ

ಅದ್ಭುತ ಶಕ್ತಿಯುಳ್ಳ ಈ ಗುಪ್ತ ವಶೀಕರಣ ಯಂತ್ರ ಧಾರಣದಿಂದ ನಿಮ್ಮ ಇಚ್ಛಿತ ಕಾರ್ಯಗಳೆಲ್ಲ ನೆರವೇರುವುವು ಇದನ್ನು ಧರಿಸಲು ಯಾವ ತಪಸ್ಸಿದ್ಧಿಯೂ ಬೇಕಾಗಿಲ್ಲ ಇದು ನಿಮಗೆ ಐಶ್ವರ್ಯವನ್ನು ಕೊಟ್ಟು ನಿಮಗೆ ಬೇಕಾದವರನ್ನು ನಿಮ್ಮ ವಶಪಡಿಸಿ, ಇಚ್ಛಿತ ಕಾರ್ಯಗಳಲ್ಲಿ ವಿಜಯವನ್ನು ಕೊಡುವುದು ಇದು ರಕ್ಕೆಂದು ಸ್ಥಾಪಿಸುವವರಿಗೆ ರೂ ೧೦೦ ಬಹುಮಾನ

ತಾಮ್ರದ ತಾಯಿತಕ್ಕೆ ರೂ ೨-೮-೦ ಬೆಳ್ಳಿಯ ತಾಯಿತಕ್ಕೆ ರೂ ೪ ಚಿನ್ನದಕ್ಕೆ ರೂ ೫

PRFT SHILA ASHRAM
No 181
POKATRI SARAI (GAYA)

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಪ ಎರಡು ತಿಂಗಳಿಗೆ ಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವೀಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವೀಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲ್ ಸರ್ವೀಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೆಲವು ಲೈನ್ಸಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲ್ ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜ್ವೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ತೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY, LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { Company's: Over ¾ Crores / Ours: About 50 lakhs.

Kochikar Brothers, Limited

(ESTD. 1908)

Chief Agents for S. India & Special Agents for Bomay City & Suburbs

"Bombay Life Building," Gandhi Nagar, UDIPI.

With Offices at:—

MADRAS, BANGALORE, TRIVANDRUM, MANGALORE, MADURA, CALICUT, BOMBAY AND UDIPI.

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 12—9—1947 [ಸಂಚಿಕೆ 36]

ಸ್ವದೇಶ ವಾರ್ತೆ

★ ಸಿಂಧವು ಜಾತೀಯ ಗಲಭೆಯಿಂದ ದೂರವಿದ್ದುದೇ ಮಿ॥ ಜಿನ್ನರು ಕರಾಚಿಯನ್ನು ಪಾಕಿಸ್ಥಾನದ ರಾಜಧಾನಿಯಾಗಿ ಆರಿಸಲು ಒಂದು ಕಾರಣವೆಂದು ಹೇಳಲಾಗಿದೆ ಆದರೆ ಈಚೆಗೆ ಅಲ್ಲಿನ ಕ್ವೆಟ್ಟಾದಲ್ಲಿ ನಡೆದ ಭೀಕರ ಘಟನೆಗಳಿಂದಲೂ, ಅಲ್ಪಸಂಖ್ಯಾಕರ ಮೇಲೆ ನಡೆದ ಅತ್ಯಾಚಾರದಿಂದಲೂ, ಪಾಕಿಸ್ಥಾನದ ಗವರ್ನರ್ ಜನರಲ್ಲರು ತಬ್ಬಿಬ್ಬಾಗಿದ್ದಾರಂತೆ ಕ್ವೆಟ್ಟಾದಲ್ಲಿನ ರಾಜಪೂತ ಸೈನಿಕರಿಲ್ಲದಿದ್ದರೆ ನಗರವಿಡೀ ಗಲಭೆಗಾರರ ದುಷ್ಕೃತ್ಯಗಳಿಗಾಹುತಿಯಾಗುತ್ತಿತ್ತಂತೆ

★ ಭೋಪಾಲವು ಭಾರತ ಒಕ್ಕೂಟಕ್ಕೆ ಸೇರಿದ್ದರಿಂದ ಇದುತನಕ ನಮ್ಮ ರಾಜಕೀಯದಲ್ಲಿ ಬಹಳ ಹಾನಿ ಮಾಡಿದ ಜಿನ್ನಾ ಭೋಪಾಲ್ ನವಾಬ್ ಸಮ್ಮೇಳವು ಮುರಿದಂತಾಗಿದೆಯೆಂದು ರಾಜಕೀಯ ಪರೀಕ್ಷಕರ ಅಭಿಪ್ರಾಯ

★ ಗಡಿನಾಡಿನ ಡಾ॥ ಖಾನ್ ಸಾಹೇಬರ ಮಂತ್ರಿಮಂಡಳವನ್ನು ರದ್ದು ಮಾಡಿದ ಆ ಪ್ರಾಂತ್ಯದಲ್ಲಿ ಗಂಭೀರ ಪ್ರಕ್ಷೋಭೆ ಉತ್ಪತ್ತಿಯಾಗಿದೆ ರಾಜ್ಯ ಘಟನಾ ದೃಷ್ಟಿಯಿಂದಲೂ ಅಲ್ಲಿನ ಗವರ್ನರರ ಈ ಘೋಷಣೆಯು ಪ್ರಶ್ನಾರ್ಥವಾಗಿದೆಯೆಂದೂ ತಜ್ಞರ ಅಭಿಪ್ರಾಯವಿದೆ ಪಠಾಣರ ಸ್ವಾತಂತ್ರ್ಯಕ್ಕೆ ಅಫಘಾನಿಸ್ಥಾನದ ಬಲವಾದ ಬೆಂಬಲವಿದೆಯೆಂದು ಪಾಕಿಸ್ಥಾನದಲ್ಲಿನ ಆ ದೇಶದ ರಾಯಭಾರಿಗಳು ಬಹಿರಂಗವಾಗಿ ನಿರೂಪಿಸಿದ್ದಾರೆ ಇಪೀ ಫಕೀರನಂತೂ ಮುಂದೆ ಏನು ಮಾಡುವನೆಂಬುದರ ಕುರಿತು ರಾಜಕೀಯ ಕ್ಷೇತ್ರದಲ್ಲಿ ತುಂಬಾ ಕಳವಳವನ್ನುಂಟು ಮಾಡಿದೆ

★ ಇಂಡೂರ್ ಸಂಸ್ಥಾನದಲ್ಲಿ ಶೀಘ್ರದಲ್ಲಿ ಪ್ರಜಾಪ್ರತಿನಿಧಿ ಸರಕಾರವನ್ನು ರಚಿಸುವುದಾಗಿ ಅಲ್ಲಿನ ಮಹಾರಾಜರು ಆಶ್ವಾಸನ ಪ್ರಕಟಿಸಿದ್ದಾರೆ

★ ಮುಂದಿನ ಭಾರತ ಒಕ್ಕೂಟದಲ್ಲಿ ಸಮತಾವಾದಿಗಳು ಯಾವ ಅಭ್ಯಂತರದ ಚಳವಳವನ್ನು ಎಬ್ಬಿಸುವುದಿಲ್ಲವೆಂದೂ, ಇತರ ದೇಶಗಳಲ್ಲಿ ನಡೆಯುವಂತೆ ಪ್ರಜಾಪ್ರಭುತ್ವ ಮತ್ತು ಸಮತಾವಾದಗಳೊಳಗೆ ಘರ್ಷಣೆಯಾಗಲು ಆಸ್ಪದ ಕೊಡುವುದಿಲ್ಲವಾಗಿಯೂ ಆದರೆ ಪ್ರಜಾಪ್ರಭುತ್ವ ಮತ್ತು ಸಮತಾವಾದ ಪದ್ಧತಿಗಳಲ್ಲಿನ ಜನೋಪಕಾರಿ ತತ್ವಗಳನ್ನು ಸಮಾವೇಶಗೊಳಿಸಲು ಪ್ರಯತ್ನ ಪಡುವುದಾಗಿಯೂ ಡಾ॥ ರಾಮ ಮನೋಹರ ಲೋಹಿಯಾ ಅವರು ಕಾಂಗ್ರೆಸ್ ಸಮತಾವಾದಿಗಳ ಮುಂದಿನ ಧೋರಣೆಯನ್ನು ಸ್ಪಷ್ಟೀಕರಿಸಿದ್ದಾರೆ

★ ಪಂಜಾಬದ ಸಿಕ್ ಮತ್ತು ಮುಸ್ಲಿಮರೊಳಗಿನ ವ್ಯತ್ಯಾಸಗಳನ್ನು ಇತ್ಯರ್ಥ ಮಾಡುವರೆ ಸರ್ದಾರ್ ವಲ್ಲಭಾಯ್ ಪಟೇಲ್ ಮತ್ತು ಮಿ॥ ಜಿನ್ನಾರವರು ಒಟ್ಟುಗೂಡಿ ಮಾತುಕತೆ ನಡೆಸಬೇಕೆಂದು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಸೂಚಿಸಿದೆ.

FOR ALL CLASSES OF INSURANCE

LIFE-FIRE-MARINE-ACCIDENT.

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA

ASSURANCE CO. LTD.

(H. O. BOMBAY)

A Tata's Promotion & India's Largest Composite Insurance Office.

Total Assets - - - About 9 Crores.

For Agency and other particulars:-

Apply to

K. GANAPATHI Esq., *Branch Manager.* 4/5, First Line Beach, MADRAS.

K. N. NAYAK, Esq., *Secretary, Sub Office* Hampankatta, MANGALORE.

ವಿದೇಶ ವಾರ್ತೆ

ಕೂಲಿಕಾರ ಸರಕಾರವು ತನ್ನ ಕೈಗಾರಿಕೆ ರಾಷ್ಟ್ರೀಕರಣದ ಧೋರಣೆಯನ್ನು ಬಿಟ್ಟು ಬಿಡದಿದ್ದರೆ ಡಾಲರಿನ ಸಹಾಯ ಸಿಗಲಾರದೆಂದು ಅಮೇರಿಕವು ಹೇಳಹತ್ತಿದೆ ಆದರೆ ತನ್ನ ಸ್ವಂತ ಕಾಲಲ್ಲಿ ನಿಲ್ಲಲು ಇಂಗ್ಲೆಂಡಿನ ಆರ್ಥಿಕ ತಜ್ಞರು ಸತತಪ್ರಯತ್ನ ಮಾಡುತಿದ್ದಾರೆ

卐

ಚೀನ ಕೊಮಿಂಟಾಂಗ್ ಸರಕಾರವು ಫಾರ್ಮೋಸಾ ದ್ವೀಪವನ್ನು ಅಮೇರಿಕೆಗೆ ಕೊಡಲು ಒಪ್ಪಿದೆಂದ ತಿಳಿಯುತ್ತದೆ ಚಿಯಾಂಗರು 1946ರಲ್ಲಿ ಅಲ್ಲಿಗೆ ಹೋದಾಗ ಜನರಲ್ ಮೆಕಾರ್ಥರರೊಡನೆ ಮಾತುಕತೆ ನಡೆಸಿ ಈ ಒಪ್ಪಂದ ಮಾಡಿಕೊಂಡಿರುವರಂತೆ

卐

ಇಂಡೋಚೀನದಲ್ಲಿ ಶಾಂತಿಸ್ಥಾಪಿಸಲು ಅಲ್ಲಿನ ಜನತಾ ಮುಖಂಡ ಡಾ॥ ಹೋ ಅವರೊಡನೆ ಸಂಧಾನ ನಡೆಸಲು ಕೆಲವೊಂದು ಹೊಸ ಯೋಜನೆಗಳನ್ನು ಫ್ರೆಂಚ್ ಸರಕಾರವು ತಯಾರಿಸಿದೆ

卐

ಈಜಿಪ್ತಿನಲ್ಲಿ ಪುನಃ ಬ್ರಿಟಿಷ್ ವಿರೋಧ ಚಳವಳವೆದ್ದಿದೆ ಈ ಸಲ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಬೇಕೆಂದು ಚಳವಳಗಾರರ, ಮುಖ್ಯವಾಗಿ ತರುಣ ವರ್ಗದವರ ಆಗ್ರಹ ಈ ಬಿಕ್ಕಟ್ಟು ಪರಮಾವಧಿಗೆ ಮುಟ್ಟಿ ಪೋಲೀಸ್ ಮತ್ತು ಜನತೆಯೊಳಗೆ ಕೈಕೈ ಕದನವೂ ಸಂಭವಿಸಿದೆ

卐

ಇಂಗ್ಲೆಂಡಿನ ಆರ್ಥಿಕ ದುಃಸ್ಥಿತಿಯು ಸಿಕ್ಕಟ್ಟವಾಗುತ್ತ ಬರುವುದರ ಪರಿಣಾಮವಾಗಿ ಎಟ್ಲಿ ಸರಕಾರವು ರಾಜಿನಾಮೆ ಕೊಡಬಹುದೆಂದೂ, ಕನಿಷ್ಟಪಕ್ಷಕ್ಕೆ ಕೆಲವು ಗಣನೀಯ ಬದಲಾವಣೆಗಳಾದರೂ ಆಗಲಿರುವುವೆಂದೂ ನಿರೀಕ್ಷಿಸಲ್ಪಟ್ಟಿದೆ.

卐

ಬೊಂಬ್ಯಾಯಲ್ಲಾದಂತೆ ಸ್ಪೈನಿನ ನೌಕಾಂಗಣವಾದ ಕೆಡಿಜ್ ಬಂದರದ ಸಬ್‌ಮೆರಿನ್ ನಿಲ್ದಾಣದಲ್ಲುಂಟಾದೊಂದು ಸ್ಫೋಟದಿಂದ ತಕ್ಷಣ ಸಾವಿರ ಜನರು ಮೃತಪಟ್ಟಿದ್ದು 5 ಸಾವಿರ ಜನರು ಗಾಯಗೊಂಡಿರುವರು. ಇದರಲ್ಲಿ ಕೊಮ್ಯುನಿಸ್ಟ್ ಕೈವಾಡವಿದೆಯೆಂದೂ ಊಹೆಗಳಿವೆ.

ವಾರದ ವಿಜ್ಞಾನ ವರದಿಗಳು

ಪೋಲಿಸರಿಗೆ ವಿಮಾನ

ವಿಮಾನಗಳಲ್ಲಿ ಹೆಲಿಕೊಪ್ಟರ್ ಮಾದರಿಯವು ಅತೀ ವಿಚಿತ್ರವಾದುವು. ಅವಕ್ಕೆ ಹಾರಲೂ ಇಳಿಯಲೂ ವಿಶಾಲ ಸ್ಥಳ ಬೇಕಾಗಿಲ್ಲ. ಅವು ಮಧ್ಯ ಮಾರ್ಗದಲ್ಲಿ ಇಳಿಯಬಲ್ಲವು, ಕಟ್ಟಡಗಳ ಮೇಲೆ ಇಳಿದು ಅಲ್ಲಿಂದಲೇ ಹಾರಬಲ್ಲವು. ಅವಕ್ಕೆ ತಿರುಗು ಚಕ್ರಗಳು ಮೇಲ್ಗಡೆಯಲ್ಲಿರುವುದೇ ಈ ವಿಶೇಷ ಕಸರತ್ತುಗಳಿಗೆ ಸಹಕಾರಿಯಾಗುವುದು

ಈಗ ಇಂತಹ ವಿಮಾನಗಳು ಪೋಲಿಸ್ ಇಲಾಖೆಗೆ ತುಂಬಾ ಸಹಾಯ ಮಾಡಬಲ್ಲವೆಂದೂ ಪ್ರತಿಯೊಂದು ಪ್ರಮುಖ ನಗರದಲ್ಲಿ ಒಂದೊಂದನ್ನು ಸರಬರಾಯಿ ಮಾಡಬೇಕೆಂದೂ ಲಂಡನಿನ ಒಂದು ಪತ್ರಿಕೆ ಸೂಚಿಸಿದೆ. ಕೆಲ ವಾರಗಳ ಹಿಂದೆ ಲಂಡನಿನಲ್ಲಿ ಒಂದು ಹೆಲಿಕೊಪ್ಟರ್ ವಿಮಾನವು ಇರ್ವ ಪೋಲಿಸ್ ಅಧಿಕಾರಿಗಳನ್ನು ಹೊತ್ತು ಮರ ತುದಿಗಳ ಎತ್ತರಕ್ಕೆ ಹಾರಿ ಕಾಲು ಗಂಟೆಯಲ್ಲಿ ವಿಶಾಲ ಕ್ಷೇತ್ರವನ್ನು ಸುತ್ತಿ ಬಂತು. ಅಷ್ಟು ವಿಸ್ತಾರ ಸ್ಥಳದಲ್ಲಿ ಯಾವುದಾದರೂ ಕೊಲೆ, ಇಲ್ಲವೆ, ದರೋಡೆ ಘಟನೆ ಕಾಲದಲ್ಲಿ ಶೀಘ್ರ ಪತ್ತೆ ನಡೆಸಲು ಐವತ್ತು ಪೋಲಿಸರಿಗೆ 24 ತಾಸುಗಳಾದರೂ ತಾಗುತಿತ್ತು.

ಶಬ್ದ ರಹಿತ ವಿಮಾನ

ಬ್ರಿಟಿಷ್ ವಿಮಾನ ತಯಾರಕ ಸಂಸ್ಥೆಯೊಂದು ಇಬ್ಬರು ಕೂತುಕೊಳ್ಳುವ ಅತೀ ಕಮ್ಮಿ ಯಂತ್ರ ಶಬ್ದವಾಗುವ ವಿಮಾನವೊಂದನ್ನು ತಯಾರಿಸಿರುವರು ಸಾಮಾನ್ಯ ಒಂದು ಮೋಟಾರು ಕಾರು ಮಾಡುವಷ್ಟು ಶಬ್ಧ ಮಾತ್ರ ಇದರಿಂದಾಗುವುದಂತೆ. ಎತ್ತರದಲ್ಲಿ ಹಾರುವಾಗ ಇದು ಕೆಳಗಿನವರಿಗೆ ಕೇಳುವುದಿಲ್ಲವಂತೆ

ಜಗತ್ತಿಗೆ ನೀರಿನ ಕೊರತೆ

ಈಗಿನ ಪ್ರಮಾಣದಲ್ಲಿ ಜಗತ್ತಿನ ಜನಸಂಖ್ಯೆ ಹೆಚ್ಚಿದರೆ ಭೂಲೋಕದಲ್ಲಿ ಕುಡಿಯುವ ನೀರಿನ ಅಭಾವವುಂಟಾಗುವ ಗಂಡಾಂತರವಿದೆಯೆಂದು ಲಂಡನ್ ವಿಶ್ವವಿದ್ಯಾಲಯದ ರಾಸಾಯನಿಕ ಯಂತ್ರ ಶಾಸ್ತ್ರಜ್ಞರಾದ ಸರ್ ಆಲ್ಫ್ರೆಡ್ ಎಗರ್ಟನ್ ಅವರು ಭವಿಷ್ಯ ಸಾರಿದ್ದಾರೆ ಹೀಗೆ ಸಂಭವಿಸಿದರೆ ನಾವು ಕುಡಿಯಲು ನೀರನ್ನು ಸಮುದ್ರ ನೀರಿನ ಆವಿಯಿಂದ ತಯಾರಿಸಬೇಕಾಗುವುದೆಂದೂ ಅದನ್ನು ಸಂಗ್ರಹಿಸಿಡಲು ಎಟಂ ಬೊಂಬಿನ ಸ್ಫೋಟದಿಂದ ಮಾಡಲ್ಪಟ್ಟ ದೊಡ್ಡ ನೆಲಬಿರುಕುಗಳ ಅವಶ್ಯಕತೆಯಿದೆಯೆಂತಲೂ ಅವರು ತಿಳಿಸುತ್ತಾರೆ

ಕುಡಿತ ನಿಲ್ಲಿಸುವ ಔಷಧಿ

ಮಾದಕ ಪದಾರ್ಥ ಸೇವನೆಗಳ ಆಶೆಯನ್ನು ಸಂಪೂರ್ಣ ನಾಶಮಾಡುವ ಒಂದು ಔಷಧಿಯು ಈಗ ಕಂಡುಹಿಡಿಯಲು ಸಾಧ್ಯವಿದೆಯೆಂದು ಅಮೇರಿಕದ ಓರ್ವ ತಜ್ಞ ವೈದ್ಯಕೀಯ ಸಂಶೋಧಕರು ತಿಳಿಸುತ್ತಾರೆ. ಬೆಂಜಾಡ್ರಿನ್ ಎಂಬ ಔಷಧಿ ಸತ್ವವು ನಾಯಿಗಳ ಹಸಿವನ್ನು ನಾಶಮಾಡಿತೆಂದು ಪ್ರಯೋಗಗಳಿಂದ ತಿಳಿದುಬಂದಿದೆ. ಒಂದು ನಾಯಿಗೆ ಇದನ್ನು ಕೊಡಲು 28 ದಿನಗಳ ತನಕ ಅದು ಆಹಾರ ಸೇವನೆ ಮಾಡಲಿಲ್ಲವಂತೆ ಆ ಪ್ರಾಣಿಯ ಶರೀರ ತೂಕವೂ ಕಾಲಂಶದಷ್ಟು ಕಡಿಮೆಯಾಯಿತು. ಮನುಷ್ಯನ ತಿನ್ನುವ ಮತ್ತು ಕುಡಿಯುವ ಕೋರಿಕೆಯು ಮಿದುಳಿನ ಕ್ರಿಯೆಯಿಂದಾಗುವುದರಿಂದ ಈ ಔಷಧಿಯಿಂದ ಅದನ್ನು ಉಂಟಾಗದಂತೆ ಮಾಡಲು ಸಾಧ್ಯವಿದೆಯೆಂದು ಆ ತಜ್ಞರ ಅಭಿಪ್ರಾಯ. ಇಂತಹ ಸಂದರ್ಭದಲ್ಲಿ ಪಾನನಿಶೇಧವು ಅತಿ ಸುಲಭವಾಗುವುದು.

ಎಟಂ ಶಕ್ತಿ ಉಗ್ರಾಣ

ಅಮೇರಿಕವು 10 ಮಿಲಿಯ ಡಾಲರ್ ವ್ಯಯಿಸಿ ಒಂದು ಹೊಸ ಎಟಂ ಶಕ್ತಿ ಉತ್ಪಾದನಾಲಯವನ್ನು ಬೇಗನೆ ರಚಿಸುವುದು ನ್ಯೂಯೋರ್ಕಿನ ಲೊಂಗ್ ಐಲೆಂಡ್ ದ್ವೀಪದಲ್ಲಿ ಈಗಾಗಲೇ ಇದರ ರಚನೆಗಾರಂಭವಾಗಿದೆ. ಒಂದು ವರ್ಷದಲ್ಲಿ ಇದು ಸಂಪೂರ್ಣಗೊಳ್ಳಬಹುದೆಂಬ ನಿರೀಕ್ಷೆಯಿದೆ ಇಲ್ಲಿ ಎಟಂ ಶಕ್ತಿಯನ್ನು ವೈದ್ಯಕೀಯದಲ್ಲೂ, ರಾಸಾಯನಿಕ ಕ್ಷೇತ್ರದಲ್ಲೂ, ಯಂತ್ರೋಪಕರಣ ವಿಧಾನದಲ್ಲೂ ಉಪಯೋಗಿಸುವುದರ ಕುರಿತು 500 ತಜ್ಞ ವಿಜ್ಞಾನಿಗಳು ಪರಿಶೋಧನೆಯನ್ನು ನಡೆಸಲು ಸೌಕರ್ಯವೂ ಇದೆ ಈಗಾಗಲೇ ಎಟಂ ಶಕ್ತಿಯ ಉಪಾಂಗ ವಸ್ತುಗಳನ್ನೂ, ಧಾತುಗಳನ್ನೂ, ಅನೇಕ ರೋಗ ಚಿಕಿತ್ಸೆಗಳಿಗಾಗಿ ಉಪಯೋಗಿಸಬಹುದೆಂದು ಕಂಡುಹಿಡಿದಿದೆ

ಮುರಿಯದ ಕನ್ನಡಕ

ಪ್ಲೆಸ್ಟಿಕ್ ಕೃತಕ ಗಾಜಿನಿಂದ ಮಾಡಿದ ಮುರಿಯದ ಕನ್ನಡಕಗಳು ಇಂಗ್ಲೆಂಡಿನಲ್ಲಿ ವಿಶಾಲ ಪ್ರಮಾಣದಲ್ಲಿ ತಯಾರಿಸಲ್ಪಡುತ್ತಿವೆ ಇವು ಗಾಜಿನ ಹರಳುಗಳಿಗಿಂತ ಉತ್ತಮವಾಗಿ ಕಾಣುತ್ತವೆ ಮಾತ್ರವಲ್ಲ ಗಾಜಿನ ಹರಳುಗಳನ್ನು ನಾಜೂಕು ಮಾಡಲಿಕ್ಕೆ ಬೇಕಾದ ಶ್ರಮವು ಇದರಲ್ಲಿಲ್ಲ

ರೇಡಿಯೊ ನಿಯಂತ್ರಿತ ವಾಹನಗಳು

ಪ್ರಥಮ ಬಾರಿಗೆ ರೇಡಿಯೊ ನಿಯಂತ್ರಿತ ಮೋಟಾರು ವಾಹನಗಳು ಬ್ರಿಟನಿನ ಕೆಂಬ್ರಿಜ್ ನಗರದ ಮಾರ್ಗಗಳಲ್ಲಿ ಚಲಾವಣೆಗಾರಂಭಿಸಿವೆ ಆ ನಗರದ 12 ಮೈಲು ವ್ಯಾಸದಲ್ಲಿ ಅವು ಎಲ್ಲಿ ಹೋದರೂ ಅವುಗಳ ಚಾಲಕನು ತನ್ನ ಮುಖ್ಯ ಕಛೇರಿಯೊಡನೆ ಸಂಪರ್ಕವಿದ್ದವನಿರುತ್ತಾರೆ ಯುದ್ಧ ಕಾಲದಲ್ಲಿ ಶಸ್ತ್ರ ಸಜ್ಜಿತ ವಾಹನಗಳಿಗೆ ಈ ತರದ ಏರ್ಪಾಡು ಇದ್ದಿತು ಈ ಹೊಸ ತರದ ವಿಧಾನದಿಂದ ಮೋಟಾರು ವಾಹನಗಳು ಶೇಕಡಾ 25ರಷ್ಟು ಹೆಚ್ಚು ಕಾರ್ಯವೆಸಗಲು ಸಾಧ್ಯವಾಗಿದೆ

ತರ್ಕ ವಿತರ್ಕ

ಗಡಿ ನಿರ್ಣಯದ ವರದಿಯಿಂದ ಅಸಮಾಧಾನಪಟ್ಟ ಬಂಗಾಲದ ಓರ್ವ ಲೀಗ್ ದುರೀಣರು "ಈ ನಿರ್ಣಯಕ್ಕೆ ಹಿಂದುಗಳು ಕಾರಣವಲ್ಲವಾದುದರಿಂದ ನಾವು ಚಳವಳ ಮಾಡುವುದು ವ್ಯರ್ಥ"ವೆಂದು ತಿಳಿಸುತ್ತಾರೆ ಗಡಿ ನಿರ್ಣಯದ ಗಲಾಟೆ ಮುಸ್ಲಿಂಲೀಗಿನಿಂದಲೇ ಉಂಟಾದುದೆಂದು ಅವರು ಪ್ರತ್ಯೇಕ ಹೇಳುವ ಅವಶ್ಯಕತೆಯಿಲ್ಲ

卐

ಪಾಕಿಸ್ಥಾನಕ್ಕೆ ಜನಾಂಗ ಮಂಡಳದ ಸದಸ್ಯತನ ಕೊಡಬೇಕೆಂದು ಸಮರ್ಥಿಸಿದ ಭಾರತ ಒಕ್ಕೂಟದ ಪ್ರತಿನಿಧಿಯಾದ ಡಾ। ಪಿಳ್ಳೆಯವರನ್ನು ಪಾಕಿಸ್ಥಾನದ ಮಂತ್ರಿಗಳಾದ ಫಜಲೂರ್ ರಹಮಾನರು ಶ್ಲಾಘಿಸಿರುವರು ಮುಂದೆ ಪಟಾಣಿ ಸ್ಥಾನಕ್ಕೂ ಭಾರತ ಪ್ರತಿನಿಧಿಗಳು ಅದೇ ಸಮರ್ಥನೆಯನ್ನು ಕೊಡುವಾಗ ಪಾಕಿಸ್ಥಾನ ಅನಾತ್ಯರುಗಳು ಮುನಿಯದಿರಲಿ

卐

ಬ್ರಿಟನಿನ ಆರ್ಥಿಕ ಬಿಕ್ಕಟ್ಟಿನಲ್ಲಿ ದಕ್ಷಿಣ ಆಫ್ರಿಕವು ಆ ದೇಶಕ್ಕೆ ಸಾಲ ಕೊಟ್ಟು ಸಹಾಯ ಮಾಡುವುದೆಂದು ಪ್ರಕಟವಾಗಿದೆ ಹಿಂದೀಯರಿಗೆ ಮಾಡಿದ ಅನ್ಯಾಯಗಳ ಸಮರ್ಥನೆಗೆ ಈ ಸಹಾಯವು ಒಂದು ಲಂಚವೆ?

卐

ಭಾಲ್‌ಪುರದ ನವಾಬರ ತಮ್ಮ ಹಿರಿಯರ ಅಮೀರ್ ಬಿರುದನ್ನು ಈಗ ಪುನ ಧರಿಸಿಕೊಂಡಿರುವರು ಪಾಕಿಸ್ಥಾನಕ್ಕೆ ಸೇರಿದ ಜನಾಗಡದ ನವಾಬರ ಪೂರ್ವಜರು ಜೆಂಗೀಸ್ ಖಾನನಾಗಿರಲಿಕ್ಕಿಲ್ಲವೆಂದು ಅಲ್ಲಿನ ಬಹುಸಂಖ್ಯಾಕ ಹಿಂದೂ ಪ್ರಜೆಗಳ ಹಾರೈಕೆ

卐

ವನಸ್ಪತಿ ತುಪ್ಪಗಳು ಮಂದಗತಿಯಲ್ಲಿ ಜೀರ್ಣವಾಗುವಂತೆ ರೇಶನ್ ಕಠಿನೆಯಾಗಿ ಸಿಕ್ಕಿದ್ದು ಶೀಘ್ರದಲ್ಲಿ ಕರಗಿ ಹೋಗುವಾಗ ಇಂತಹ ಕೊಬ್ಬುಗಳು ಸಹಾಯಕವಾಗುವುದಿಲ್ಲವೆ ಎಂದು ಹಲವರು ಪ್ರಶ್ನಿಸಬಹುದು.

卐

ಸರ್ ಸಿ ಪಿ ಯವರ ಹದಿನೈದು ವರ್ಷದ ದಿವಾನ ಗಿರಿಯನ್ನು ತಿರುವಾಂಕೂರಿನ ಮಹಾರಾಜರು ಶ್ಲಾಘಿಸಿದ್ದಾರೆ. ಇಷ್ಟೊಂದು ದೀರ್ಘ ಶ್ರಮದಿಂದ ದಣಿದವರಿಗೆ ಕ್ಲುಪ್ತ ಕಾಲದಲ್ಲಿ ವಿಶ್ರಾಂತಿ ಕೊಟ್ಟದಕ್ಕೆ ಪ್ರಜೆಗಳಾದರೂ ತುಂಬಾ ಆಭಾರಿಯಾಗಿರುವರು

卐

ಸ್ವಾತಂತ್ರ್ಯ ಚಳವಳದಲ್ಲಿ ಸಂಕಷ್ಟವನ್ನನುಭವಿಸಿದವರಿಗೆ 5ರಿಂದ 10 ಎಕ್ರೆ ಸ್ಥಳ ಕೊಡುವುದಾಗಿ ಮದ್ರಾಸ್ ಸರಕಾರ ಸಾರಿದೆ ಹಿಂದೆ ಕೊಂಗ್ರೆಸಿಗರಾಗಿ ಜೈಲಿಗೆ ಹೋದವರೂ, ಮುಂದೆ ಕೊಮ್ಯುನಿಸ್ಟರಾಗಿ ಹೋಗಲಿರುವರೂ ಇದಕ್ಕೆ ಅರ್ಹರೊ ಎಂಬ ಸಂಗತಿ ತಿಳಿದು ಬಂದಿಲ್ಲ

卐

ಆಶ್ಚರ್ಯವಾದ ಸಿದ್ದಿ ಯಂತ್ರ

ಅದ್ಭುತ ಶಕ್ತಿಯುಳ್ಳ ಈ ಗುಪ್ತ ವಶೀಕರಣ ಯಂತ್ರಧಾರಣದಿಂದ ನಿಮ್ಮ ಇಚ್ಛಿತ ಕಾರ್ಯಗಳೆಲ್ಲ ನೆರವೇರುವುವು ಇದನ್ನು ಧರಿಸಲು ಯಾವ ತಪಸ್ಸಿದ್ಧಿಯೂ ಬೇಕಾಗಿಲ್ಲ ಇದು ನಿಮಗೆ ಐಶ್ವರ್ಯವನ್ನು ಕೊಟ್ಟು ನಿಮಗೆ ಬೇಕಾದವರನ್ನು ನಿಮ್ಮ ವಶಪಡಿಸಿ, ಇಚ್ಛಿತ ಕಾರ್ಯಗಳೆಲ್ಲ ವಿಜಯವನ್ನು ಕೊಡುವುದು ಇದು ದಕ್ಕೆಂದ ಸ್ಥಾಪಿಸುವವರಿಗೆ ರೂ ೧೦೦ ಬಹುಮಾನ

ತಾಮ್ರದ ತಾಯಿತಕ್ಕೆ ರೂ ೩-೮-೦ ಬೆಳ್ಳಿಯ ತಾಯಿತಕ್ಕೆ ರೂ ೪ ಚಿನ್ನದಕ್ಕೆ ರೂ ೧೫

PRETI SHILA ASHRAM
No 181
POKAIRI SARAI (GAYA)

CANARA BANK, LIMITED.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

(ಸ್ಥಾಪಿತ: ೧೯೦೬)

ಹೆಡ್ ಆಫೀಸು
ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು —
75 ಎಪೊಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು:—

ಮದರಾಸು ಪ್ರಾಂತ್ಯ:
ಮಂಗಳೂರು ಸಿಟಿ
ಮಂಗಳೂರು–ಬಂದರ್
ಮುಲ್ಕಿ
ಗಂಗೊಳ್ಳಿ
ಕುಂದಾಪುರ
ಉಡುಪಿ.
ಕಾರ್ಕಳ.
ಬಂಟ್ವಾಳ
ಪುತ್ತೂರು
ಕಾಸರಗೋಡು.
ಮದರಾಸು.
ಪಯ್ಯನ್ನೂರು.
ಕಲ್ಲಿಕೋಟೆ.
ಕನ್ನಾನ್ನೂರು.
ಕೊಯಮುತ್ತೂರು.
ತಿರುಚಿನಾಪಳ್ಳಿ.
ತುತುಕುಡಿ.
ಸೇಲಂ
ಇರೋಡ್

ಹೈದರಾಬಾದ್ ಸಂಸ್ಥಾನ:
ಸೆಕುಂದರಾಬಾದು

ತಿರುವಾಂಕುರು ಸಂಸ್ಥಾನ:
ಅಲ್ಲಪ್ಪಿ
ಕ್ವಿಲೋನ್

ಮಧ್ಯ ಪ್ರಾಂತ್ಯ:
ನಾಗಪುರ
ಅಕೋಲಾ
ಅಮರಾವತಿ

ಮುಂಬೈ ಪ್ರಾಂತ್ಯ:
ಬೆಳಗಾಂವ್
ಧಾರವಾ
ಹುಬ್ಬಳ್ಳಿ
ಶೋಲಾಪುರ.
ಪೂಣೆ.
ಮುಂಬೈ–ಫೋರ್ಟ್
ಮುಂಬೈ ಮಾಂಡ್ವಿ
ಮುಂಬೈ–ಕಾಲ್ಬಾದೇವಿ
ಮುಂಬೈ–ಗಿರ್‌ಗಾಂವ್
ಮುಂಬೈ–ಕಲ್ಯಾಣ

ಮೈಸೂರು ಸಂಸ್ಥಾನ:
ಮೈಸೂರು
ಶಿವಮೊಗ್ಗೆ
ಚಿಕ್ಕಮಗಳೂರು.
ಬೆಂಗಳೂರು ಸಿಟಿ
ಅರಸಿಕೆರೆ
ದಾವಣಗೆರೆ

ಸಿಂಧ್ ಪ್ರಾಂತ್ಯ:
ಕರಾಚಿ.

ಕೊಚ್ಚಿ ಸಂಸ್ಥಾನ:
ಕೊಚ್ಚಿ
ಎರ್ನಾಕುಲಾಮ್.

ಪಶುಶಕ್ತಿಯ ಅಪಜಯ

ಎಲ್ಲರ ಪ್ರಾರ್ಥನೆಗಳು ನೆರವೇರಿತೆಂಬಂತೆ ಮಹಾತ್ಮಾಗಾಂಧಿಯವರು ಮತ್ತೊಮ್ಮೆ ನಮಗಾಗಿ ರಕ್ಷಿಸಲ್ಪಟ್ಟದ್ದು ಭಾರತದ ಮಾತ್ರವಲ್ಲ ಇಡೀ ವಿಶ್ವದ ಸೌಭಾಗ್ಯವೆನ್ನಬೇಕು. ಆದರೆ ಅವರ ನೈತಿಕ ಹೃದಯವನ್ನು ಉಗ್ರ ನಿರ್ಧಾರಕ್ಕೊಳಮಾಡಿದ ಭೀಕರ ಕೃತ್ಯಗಳು ಶಾಶ್ವತವಾಗಿ ನಿಲ್ಲಿಸಲ್ಪಡುವ ತನಕ ಅವರ ವ್ಯಕ್ತಿತ್ವದ ಮಹೋತ್ತಮ ಪ್ರಭಾವ ಪುಣ್ಯವು ನಮಗೆ ಲಭಿಸದು ಇಂದವರು ನಮ್ಮೊಳಗಿನ ಪಾಶವೀತನವನ್ನು ನಷ್ಟಗೊಳಿಸಲು ತಮ್ಮ ಅಮೋಘ ಸೇವಾಸಾಮರ್ಥ್ಯವುಳ್ಳ ಜೀವವನ್ನು ಸಂತೋಷದಿಂದ ಬಲಿದಾನಗೊಡಲು ಸದಾ ಸಿದ್ಧನಿರುತ್ತಾರೆ ಇಂತಹ ಸತ್ವ ಪರೀಕ್ಷೆಗಳು ನಮ್ಮನ್ನು ಉಚ್ಚ ಸಾಂಸ್ಕೃತಿಕ ಪದಕ್ಕೇರಿಸಲು ಸಹಾಯವಾಗುವ ದೈವಿಕ ವರದಾನಗಳೆಂದು ನಾವು ತಿಳಿಯಬೇಕು.

ಇಲ್ಲದಿದ್ದರೆ ಈ ಅಮಾನುಷಿಕ ಹಿಂಸಾಕಾಂಡದ ಅರ್ಥವೇನು? ಕೊಳೆಯಿಂದ ಕೆಸರನ್ನು ತೊಳೆಯುವ ಪಾಶವೀ ಲಕ್ಷಣಕ್ಕೊಂದು ಮಿತಿಯಿಲ್ಲವೆ? ಸಕಾಲದಲ್ಲಿದನ್ನು ತಡೆಗಟ್ಟದಿದ್ದರೆ ಇಡೀ ಬುದ್ಧ ಭೂಮಿಯೇ ಘೋರ ಭ್ರಾತೃಕಲಹದ ನಿಕೃಷ್ಟ ಕುರುಕ್ಷೇತ್ರವಾಗದೆ? ಎಲ್ಲರೂ ನಾಶಗೊಂಡ ಮೇಲೆ ನಾವು ಉದ್ಧರಿಸಲೆಳಸುವ ಮತತತ್ವಗಳಿಂದಾದರೂ ಸಾರ್ಥಕವೇನಾದೀತು?

ಜಾತ್ಯಂಧಕಾರ ಪರಿವೇಷ್ಟಿತವಾದ ಕಲ್ಕತ್ತದ ಬುದ್ಧಿಗೆಟ್ಟ ತರುಣ ತಸ್ಕರಕ್ಕಗಳು ಮಹಾತ್ಮರ ಅಚಲ ನಿರ್ಧಾರದ ಉಗ್ರಾಸ್ತ್ರದೆದುರು ತಣಿದುಹೋದವು. ಪಶುಶಕ್ತಿಯು ಆತ್ಮಶಕ್ತಿಯೆದುರು ಎಂದಿಗೂ ನಿಲ್ಲಲಾರದು. ಸಮುದ್ರ [illegible] ಕತ್ತಲೋಡಿದಂತೆ ಮಹಾತ್ಮರ ಆತ್ಮಾರ್ಪಣೆಯ ಅಮೃತದಿಂದ [illegible] ಜಾತ್ಯಂಧತೆಯ ನಂಜು ತನ್ನ ವಿಘಾತುಕ ವಿಷಲಕ್ಷಣವನ್ನು ಕಳೆದುಕೊಂಡಿತು.

ಮುಂದಿನ ಹೊಣೆ

ಪ್ರಸ್ತುತ ಮಹಾತ್ಮರು ತಮ್ಮ ನಿರ್ಧಾರವನ್ನು ಕೊನೆಗೊಳಿಸಿ ಇನ್ನಷ್ಟು ಭೀಕರ ಪ್ರಕರಣದ ಕ್ಷೇತ್ರವಾದ ಪಂಜಾಬವನ್ನು ಪ್ರವೇಶಿಸಿರುವರು ಅಲ್ಲಿಯ ಅಗ್ನಿ ಪರೀಕ್ಷೆ ಇನ್ನಷ್ಟು ಮಹತ್ತರವಾದುದು ಆದರೆ ಅಲ್ಲಿ ಉರಿಯುತ್ತಿರುವ ಅಗ್ನಿ ಜ್ವಾಲೆಯು ಮಹಾತ್ಮರಂಥ ಅಗಾಧ ಆತ್ಮ ಬಲದೆದುರು ಶಮನಗೊಳ್ಳದಿರಲಾರದು. ಅವರ ಅಮೂಲ್ಯ ಜೀವವನ್ನುಳಿಸಲು ವೀರ ಪಂಜಾಬಿಗಳು ತಮ್ಮ ಧೀರೋದಾತ್ತತೆಯನ್ನು ಪ್ರದರ್ಶಿಸದಿರರೆಂದು ಹಾರೈಸುತ್ತೇವೆ. ಕಾರಣ ಕಲ್ಕತ್ತದಂತಹ ವಿಶ್ವಾಸಘಾತದ ಪ್ರಸಂಗವು ಅಲ್ಲಿ ಪುನರಾವರ್ತಿಸಲ್ಪಟ್ಟರೆ ಮಹಾತ್ಮರು ಆಮರಣಾಂತಿಕವಾಗಿ ಉಪವಾಸ ಕೈಯ್ಕೊಳ್ಳುವೆನೆಂದು ತಮ್ಮ ದೃಢ ಚಿತ್ತ ನಿರೂಪಣೆ ಮಾಡಿರುವರು ಈ ನಿರ್ಧಾರದ ಗಂಭೀರತೆ ತಿಳಿದು ಪ್ರತಿಯೊಬ್ಬ ಭಾರತೀಯನು ವರ್ತಿಸುವನೆಂದು ಹಾರೈಸುತ್ತೇವೆ

ಆಹಾರ ಹೆಚ್ಚಿಸುವಿಕೆ

ಮಹಾತ್ಮರ ಉಪವಾಸ ಫಲದಿಂದ ದೇಶದ ಜನತೆಯು ಇಂದು ಎದುರಿಸಿರುವ ಉಪವಾಸದ ಸಂಕಷ್ಟವೂ ಪರಿಹಾರವಾಗಲೆಂದು ಹಾರೈಸುತ್ತೇವೆ ಆದರೆ ಆಹಾರ ಕೊರತೆಯಂತಹ ಭೌತಿಕ ಸಂಕಷ್ಟವು ಮಾನವ ಪರಿಶ್ರಮದಿಂದಲೇ ನಿವಾರಣೆಯಾಗಬೇಕು. ದೇಶಾಡಳಿತಗಳು ತಮ್ಮ ಸರ್ವ ಚೈತನ್ಯವನ್ನು ಈವೊಂದು ದುರಂತ ಸಮಸ್ಯೆಯ ಶಮನದ ಕಡೆಗೆ ಪರಿವರ್ತಿಸಬೇಕು. ಆಹಾರ ಉತ್ಪತ್ತಿಯು ಕಡಿಮೆಯೆಂಬ ಮಂತ್ರೋಚ್ಚಾರಣೆ ಮಾಡುವುದಕ್ಕಿಂತ ಅದನ್ನು ಹೆಚ್ಚಾಗಿ ಬೆಳೆಸಲು ಪ್ರತ್ಯಕ್ಷ ಕಾರ್ಯಕ್ರಮಗಳನ್ನು ನಿಯೋಜಿಸುವುದತ್ಯಾವಶ್ಯಕ. ನಮ್ಮ ಸರಕಾರಗಳು ಕೃಷಿ ತಜ್ಞರನ್ನು ಕಾರ್ಯಕ್ಕೆ ಹಚ್ಚಲು ಹಿಂಜರಿಯುತ್ತಿರುವುದು ಅಲಕ್ಷ್ಯದ ಮಾದರಿಯೆನ್ನಬೇಕು ನಮ್ಮ ಕೃಷಿ ಉತ್ಪತ್ತಿಯನ್ನು ಶೇಕಡಾ 25ರಷ್ಟಾದರೂ ಹೆಚ್ಚಿಸದಿದ್ದರೆ ಉತ್ತರೋತ್ತರ ಅಭಿವೃದ್ಧಿಗೊಳ್ಳುವ ನಮ್ಮ ಜನಾಂಗವು ನಿರಂತರ ಕಷ್ಟದಿಂದ ನರಳಬೇಕಾದೀತು ಇನ್ನು ಆಹಾರ ವಸ್ತು ಸಂಗ್ರಹದ ಕಾರ್ಯಕ್ರಮವಾದರೂ ಅತ್ಯಂತ ಬಿಗುವಾಗಿಯೇ ನಡೆಯಬೇಕು ನಿರ್ದಾಕ್ಷಿಣ್ಯವಾಗಿ ನಿರ್ವಹಿಸದಿದ್ದರೆ ಪ್ರಾಂತ್ಯಗಳ ತಪ್ಪು, ಅರಾಜಕತೆ, ಅಶಾಂತಿಗಳಿಗೆ ಇಂಬುಕೊಟ್ಟಂತಾಗುವುದು.

ಸಂಸ್ಥಾನ ಹೋರಾಟ

ದಿವಾನ ರಾಮಸ್ವಾಮಿಯವರು ತಮ್ಮ ಸಂಸ್ಥಾನದ ಕಾಂಗ್ರೆಸಿಗೆ ಒಕ್ಕೂಟದ ವರೆಗೆ ತಾಳ್ಮೆ ವಹಿಸಲು ವಿನಂತಿಸಿಕೊಂಡರು ಅದೇ ಪಲ್ಲವಿಯನ್ನು ಮಹಾರಾಜರೂ ಹಾಡಿರುವರು. ಕೂಡಲೇ ತಾತ್ಕಾಲಿಕ ಜನತಾ ಪ್ರತಿನಿಧಿ ಸರಕಾರ ರಚಿಸಬೇಕೆಂಬ ಮೈಸೂರು ಕಾಂಗ್ರೆಸಿನ ಬೇಡಿಕೆಗೆ ಸಂಪೂರ್ಣ ಅಲಕ್ಷ್ಯ ತೋರಲಾಗಿದೆ ಜವಾಬ್ದಾರಿ ಸರಕಾರದ ಅವಧಿಯೂ ಅನಿಶ್ಚಿತವಾಗಿದೆ ಇದು ಹಿಂದಿನ ಬ್ರಿಟಿಷ್ ಸರಕಾರದ ಕುಟಿಲ ರಾಜನೀತಿ ಬಳಕೆಯಲ್ಲಿನ ಒಂದು ಅಸ್ತ್ರವೆಂದು ಅಲ್ಲಿನವರು ವಿಚಿತ್ರಗೊಂಡು ಆ ರಾಜನೀತ್ಯ ಮಾರ್ಗಗಳನ್ನು ತಿರಸ್ಕರಿಸಿ, ತಮ್ಮ ನಿಯೋಜಿತ ಹೋರಾಟವನ್ನು ಪ್ರಾರಂಭಿಸಿಯೇ ಬಿಟ್ಟಿರುವರು ಕೊನೆಯ ಹಂತದಲ್ಲಿ ಉದ್ವೇಗಗಳು ಮಿಟ್ಟಿದಾಗ ರಾಜರ ಸಹಿಷ್ಣುತೋಪದೇಶವು ಅರ್ಥರಹಿತವಾಗಿ ತೋರುತ್ತದೆ ಇದಕ್ಕಿಂತ ಮುಂಚೆ ಬೇಕಾದಷ್ಟು ಅವಧಿಯಿರಲಿಲ್ಲವೆ? ಪರಮಾವಧಿಗೆ ಮುಟ್ಟಿದ ಮೇಲೆ ಪರಿಸ್ಥಿತಿಯನ್ನು ತಡೆಗಟ್ಟಲಾಗುತ್ತದೆಯೇ? ಇಂತಹ ದರ್ಪದ ಅಧಿಕಾರ ದೌಲತ್ತನ್ನು ಪ್ರದರ್ಶಿಸಿದ ತಿರುವಾಂಕೂರು ದಾರಿಗೆ ಬಂದಿರುವಾಗ ಮೈಸೂರು ತದ್ವಿರುದ್ಧ ಪಥಗಮನದಿಂದ ಯಶಸ್ವಿಯಾಗಬಲ್ಲದೆ?. ಅಲ್ಲಿ ಪುಟ್ಟ ಜಾಲಿಯನ್ ವಾಲಾಭಾಗ್ ಪ್ರಕರಣಗಳೂ, ಮನೆ ಹೊಗುವ ಪೋಲೀಸರ ಜುಲುಮೂ ಜಿಜ್ಞಾಸ್ಪದ ಅಕೃತ್ಯಗಳನ್ನು ನೆರವೇರಿಸಿವೆ ಹೈದರಾಬಾದು ಇನ್ನೂ ಒಂದು ಹೆಜ್ಜೆ ಮುಂದುವರಿದಿದೆ ಜಾತೀಯ ಪಕ್ಷಪಾತದಿಂದ ಒಂದು ಕಡೆ ಬಹುಸಂಖ್ಯಾಕರ ಉದ್ದೇಶ ಸಾಧನೆಗೆ ತೊಡಕುಂಟುಮಾಡುತ್ತಿದ್ದರೆ, ನಿರಂಕುಶ ದಬ್ಬಾಳಿಕೆಯಿಂದಿನ್ನೊಂದು ಕಡೆ ಬಹುಮತವನ್ನು ತಗ್ಗಿಸುವ ಯತ್ನಗಳಾಗುತ್ತಿರುವವು ಇನ್ನಾದರೂ ಸಂಸ್ಥಾನಾಧಿಪತಿಗಳು ಸುಜ್ಞಾನವನ್ನು ಹೊಂದಿ ಪ್ರಜೆಗಳ ದರ್ಮದರ್ಶಿತ್ವದ ತಮ್ಮ ಪವಿತ್ರ ಹೊಣೆಯನ್ನು ಪರಿಪೂರ್ಣಗೊಳಿಸಲೆಂದು ಹಾರೈಸುವೆವು

★ ಮತ್ತ ದೃಷ್ಟಿಯಿಂದ ನೋಡಿದರೆ ಮಾತ್ರ ಸಂಸ್ಕೃತವು 'ಮೃತಭಾಷೆ'ಯಾಗಿ ತೋರುವುದೆಂದೂ, ಎಲ್ಲಾ ಭಾರತೀಯ ಭಾಷೆಗಳ ಮಾತೃಭಾಷೆಯಾಗಿರುವ ಆ ದೇವಭಾಷೆಯನ್ನು ತುಂಬಾ ಪ್ರಚಾರ ಮಾಡಲು ಸರ್ವ ಪ್ರಯತ್ನಗಳಾಗಬೇಕೆಂದು ದೇವಾಸ್ ಸಂಸ್ಥಾನದ ರಾಜಕುಮಾರಿ ಪಾರ್ವತೀದೇವಿಯವರು ಮದ್ರಾಸಿನ ವಿವೇಕಾನಂದ ಕಾಲೇಜಿನಲ್ಲಿ ಕೊಟ್ಟ ಒಂದು ಭಾಷಣದಲ್ಲಿ ತಿಳಿಸಿದರು.

ಕಿರುಸುದ್ದಿ ಸಂಗ್ರಹ

ಮದ್ರಾಸ್ ಪ್ರಾಂತ್ಯದ ಕಾಲೇಜುಗಳು ಕಿಕ್ಕಿರಿದು ತುಂಬಿರುವಾಗ ಲಕ್ನೋದಲ್ಲಿನ ಕಾಲೇಜುಗಳಲ್ಲಿ ವಿದ್ಯಾರ್ಥಿಗಳೇ ಇಲ್ಲದೆ ವಿದ್ಯಾಧಿಕಾರಿಗಳು ಪೇಚಾಡುತ್ತಿದ್ದಾರೆ ಅಲ್ಲಿನ ಇಂಟರಮಿಡಿಯೆಟ್ ಕಾಲೇಜೊಂದರಲ್ಲಿ 400 ಸ್ಥಾನಗಳು ಖಾಲಿ ಇವೆ

卐

ಭಾರತದಲ್ಲಿನ ಇಗರ್ಜಿಗಳಿಗೆ ಇದುತನಕ ಸರಕಾರದಿಂದ ಕೊಡಲ್ಪಡುತ್ತಿದ್ದ ಸಹಾಯಧನವು ಬರುವ 1948ರ ಮಾರ್ಚ 31ರ ನಂತರ ನಿಲ್ಲಿಸಲಾಗುವುದು

卐

ಸೈನ್ಯದಲ್ಲಿನ ಇಲ್ಲವೆ ಜೂಜಿನ ಕುದುರೆಗಳಿಗೆ ಅಲಿ, ಮಹಮ್ಮದ್ ಎಂಬ ಪವಿತ್ರ ಪ್ರವಾದಿಗಳ ಹೆಸರನ್ನು ಕೊಡಬಾರದೆಂದು ಸ್ವಾಬಿರಿಯದ ಮುಸಲ್ಮಾನ ಮುಖಂಡರೊಬ್ಬರು ಫ್ರೆಂಚ್ ಸರಕಾರಕ್ಕೆ ವಿನಂತಿಸಿಕೊಂಡಿದ್ದಾರೆ

卐

ವಿಶ್ವಾಸಘಾತುಕತನದಿಂದ ಹಣ ಅಪಹರಿಸಿ ಜೈಲಿಗೆ ಹೋದ ಓರ್ವ ಲಂಡನ್ ವಂಚಕನು ತನಗೆ ಆರು ವಾರಗಳ ಅವಧಿ ಕೊಟ್ಟು ಬಿಡುಗಡೆ ಮಾಡಿದರೆ ತಾನು ಮೋಸ ಮಾಡಿದ 30ಸಾವಿರ ಪವನುಗಳನ್ನು ಪುನಃ ಸಂಪಾದನೆ ಮಾಡಿಕೊಡುವೆನೆಂದು ಕೇಳಿಕೊಂಡಿರುವನಂತೆ

卐

ಸಂಯುಕ್ತ ಅಮೇರಿಕದಲ್ಲಿ ಸೇರಿದ ಐಂದ್ರಜಾಲಿಕರ ಪರಿಷತ್ತಿನಲ್ಲಿ 'ಮೆಜಿಕ್ ಆಟಗಳನ್ನು ಮಾಡಿ ತೋರಿಸುವಾಗ ದೊಡ್ಡವರಿಗಿಂತ ಸಣ್ಣ ಹುಡುಗರ ಕಣ್ಣುಕಟ್ಟುವುದು ಕಷ್ಟದ ಕೆಲಸ'ವೆಂಬಭಿಪ್ರಾಯಕ್ಕೆ ಬಂದಿರುವರು.

卐

ಪಶ್ಚಿಮ ಇಂಡಿಸ್ ದ್ವೀಪಗಳಲ್ಲಿನ ಕ್ಯೂಬಾವು ಜಗತ್ತಿನಲ್ಲಿ ಅತಿ ಹೆಚ್ಚು ಸಕ್ಕರೆ ತಯಾರಿಸುವ ಪ್ರದೇಶವಾಗಿದೆ

卐

ಉಷ್ಣ ಸಾರದ ವೇದನೆ

ಜಾಂಬಕಿನಿಂದ ಪರಿಹಾರ

ಈ ವನಸ್ಪತಿ ಜಾಂಬಕ್ ಮುಲಾಮು ವಿಷಹಾರಿ, ಶಮನದ ಪರಿಹಾರ ಸಡಿಲಾದ ನರಗಳನ್ನು ಸಂಕೋಚಿಸಿ ರಕ್ತಸ್ರಾವ ತಡೆದು, ಊರುವಿಕೆ ನಿಲ್ಲಿಸಿ, ವಿಷಮತೆಯನ್ನು ಪರಿಹರಿಸುತ್ತದೆ ಶಸ್ತ್ರಕ್ರಿಯೆ ಅನಿವಾರ್ಯವೆಂದಾಗಲೂ ಜಾಂಬಕ್ಕು ಯಶಸ್ವಿಯಾಗಿದೆ

ಮಡವೆ, ತುರಿಕಜ್ಜಿ, ಕ್ರಿಮಿಕಡಿತದಿಂದ ಕುರು, ಉಷ್ಣ ಗುಳ್ಳೆ, ಕಾಲು ಬಾತುವಿಕೆ ಮೊದಲಾದ ಎಲ್ಲಾ ಚರ್ಮ ವ್ಯಾಧಿಗೆ ಜಾಂಬಕು ವಿಶ್ವಖ್ಯಾತಿ ಔಷಧಿ

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು.

ರೂ. ೧೦೦ ಬಹುಮಾನ

ಅದ್ಭುತ ಶಕ್ತಿ ಸಿದ್ಧಕವಚ

ಇದನ್ನು ಇಟ್ಟುಕೊಂಡ ಮಾತ್ರಕ್ಕೇ ಅತೀ ದುಸ್ಸಾಧ್ಯವಾದ ಉದ್ದೇಶವೂ ಸಾಧಿಸುವುದು ಇದನ್ನು ಪರಿಣಾಮಕಾರಿಯಾದಲೂ ಯಾವ ಕಷ್ಟದ ಶ್ರಮವನ್ನು ವಹಿಸಬೇಕಾಗಿಲ್ಲ. ಯಾವ ತಯಾರಿಯುಲ್ಲದೆಯೂ ಇದು ಫಲಕೊಡುವುದು ನೀಚಗ್ರಹಗಳನ್ನಿದು ಗೆಲ್ಲುವುದು, ಶತ್ರುಗಳನ್ನು ಗೆದ್ದು ಪರೀಕ್ಷೆ, ವ್ಯಾಪಾರ, ವ್ಯಾಜ್ಯ, ನೌಕ್ರಿ, ಜೂಜಾ, ಉದ್ಯೋಗಗಳಲ್ಲಿ ಯಶಸ್ಸುಕೊಡುತ್ತದೆ ಸಂಪತ್ತಭಿವೃದ್ಧಿಮಾಡಿ, ಸಾಲ ವಿಮೋಚಿಸಿ, ಅಪಾಯಕರ ಕಾಯಿಲೆಗಳನ್ನು ಗುಣಪಡಿಸುತ್ತದೆ ನಿಮ್ಮನ್ನು ಅಧೃಷ್ಟಶಾಲಿ ಮಾಡುತ್ತದೆ ಇದನ್ನು ಸುಳ್ಳೆಂದು ಶುಜುವಾತು ಮಾಡಿದವರಿಗೆ 100 ರೂಪಾಯಿ ಬಹುಮಾನ ಬೆಲೆ ತಾಮ್ರದಕ್ಕೆ ರೂ 2, ಬೆಳ್ಳಿದ್ದಕ್ಕೆ ರೂ 8, ಬಂಗಾರದಕ್ಕೆ ರೂ. 15 ತಕ್ಷಣ ಫಲದ ವಿಶೇಷ ತರದ ಕಚವಕ್ಕೆ (ಶುದ್ಧ ಬಂಗಾರದ ಮುಟ್ಟಿಗೆಯುದು) ರೂ. 25—7

Dukh Haran Ashram, No. 1
P. O. Katri Sarai (Gaya).

ಪುಸ್ತಕ ವಿಮರ್ಶೆ

ಬಿತ್ತಿದ ಬೆಳೆ (ಸಾಮಾಜಿಕ ಅಭಿನಯ ಪ್ರಯೋಗ) ಶಿವರಾಮ ಕಾರಂತ. ಪ್ರಕಾಶಕರು. ಮನೋಹರ ಗ್ರಂಥ ಪ್ರಕಾಶನ ಸಮಿತಿ ಧಾರವಾಡ.

ಪ್ರಸಿದ್ಧ ಆಂಗ್ಲೇಯ ಸಾಹಿತಿಗಳಾದ ಜಾರ್ಜ ಬರ್ನಾರ್ಡ್ ಶಾರವರು, ನಾಟಕಗಳ ಮೂಲಕ, ಸಮಾಜ ಸುಧಾರಣೆಯನ್ನು ಬಹಳ ಯಶಸ್ವಿಯಾಗಿ ಸಾಧಿಸಿಬಿಟ್ಟರು. ಸಮಾಜದ ಕುಂದು ಕೊರತೆಗಳನ್ನೆಲ್ಲಾ ಈ ನಾಟಕಗಳ ಮೂಲಕ ಬೆಳಕಿಗೆ ತಂದು, ಅವುಗಳ ನಿವಾರಣೆಯ ಯತ್ನ ಮಾಡಿದರು. ಅವರ ನಾಟಕಗಳಲ್ಲಿ ಈ ಕಾಲದ ಬ್ರಿಟಿಷ ಸಮಾಜವು ಬಹುಮಟ್ಟಿಗೆ ಪ್ರತಿಫಲಿತವಾಗಿ ಕಾಣಿಸುತ್ತದೆ.

ಈ ತರದ ನಾಟಕಗಳು ಕನ್ನಡ ಸಾಹಿತ್ಯದಲ್ಲಿ ವಿರಳವೆನ್ನಬೇಕು ಈ ಕೊರತೆಯನ್ನು ನೀಗಿಸುವರೆ ಇತ್ತೀಚಿಗೆ ಯತ್ನಗಳಾಗುತ್ತಿವೆ. ಕಾರಂತರ "ಬಿತ್ತಿದ ಬೆಳೆಯು" ಈ ತರದ ಒಂದು ಯತ್ನವಾಗಿರುತ್ತದೆ ನಾಟಕ ಸಾಹಿತ್ಯವನ್ನು ರಚಿಸುವುದರಲ್ಲಿ ಶ್ರೀ ಕಾರಂತರದು ನುರಿತ ಕೈ ಅವರ ಈ ಕೃತಿಯಲ್ಲಿ ಅವರ ಈ ಯೋಗ್ಯತೆಯು ಇನ್ನೂ ಹೊಳಪನ್ನು ಹೊಂದಿದಂತೆ ಕಾಣುತ್ತದೆ ಇತರ ಕಾರಂತ ಕೃತಿಗಳಂತೆ, ಒಳ್ಳೆ ಕುತೂಹಲ ಹುಟ್ಟಿಸುವಂಥಹುದು ಇದು.

ನಾಟಕದ ವಿಷಯವಾದರೊ, ನಮ್ಮ ಸುತ್ತಮುತ್ತಲೂ ನಿತ್ಯಲೂ ಎಂಬಂತೆ ಘಟಿಸುವ ವಿದ್ಯಮಾನಗಳು ಶಂಕರರಾಯರು ಸುಮಾರು ಐವತ್ತು ವರ್ಷ ಪ್ರಾಯದ ಕುಲೀನ ಗೃಹಸ್ಥ ಉದ್ಯೋಗದಲ್ಲಿ ವಕೀಲ ದಿನೆದಿನೆ ಕುಂದುತ್ತಿರುವ ಸಂಪಾದನೆಯನ್ನು ಇದಿರಿಸುತ್ತಿರಬೇಕಾದ ತಂದೆ. ವಸಂತಿ ಆತನ ಹೆಂಡತಿ ಸುಧಾಕರ ಶಂಕರರಾಯರ ಹಿರಿಯ ಮಗ. ಕಥೆಯ ಪ್ರಾರಂಭದಲ್ಲಿ ನಾಲ್ಕು ವರ್ಷ ಮೆಡಿಕಲ್ ಕಾಲೇಜ್ ಮುಗಿಸಿ ಮನೆಗೆ ಬಂದಿದ್ದಾನೆ ಸದಾಶಿವ, ಶಂಕರರಾಯನ ಎರಡನೆ ಮಗ ಚಿದಾನಂದ ಶಂಕರರಾಯರ ಮೂರನೆ ಮಗ ಶ್ರೀಮಂತಿ, ಶಂಕರರಾಯನ ಒಬ್ಬಳೆ ಮಗಳು ಕಥೆಯ ಪ್ರಾರಂಭಕ್ಕೆ ಹದಿನಾರು ಹದಿನೇಳು ವಯಸ್ಸು ರಾಮರಾಯರು ಅದೇ ಊರಿನ ಡಾಕ್ಟರರು ನಾಳೆ ಶಂಕರರಾಯರ ಬೀಗರಾಗುವವರು ಸುಲೋಚನಾಬಾಯಿ, ರಾಮರಾಯರ ಹೆಂಡತಿ ರಾಜಾರಾಮ, ಶೇವಂತಿ, ಸೀಮಂತಿ, ರಾಮರಾಯರ ಮಕ್ಕಳು ಲಕ್ಷ್ಮಣ, ಶಂಕರರಾಯರಲ್ಲಿ ಅನ್ನಕ್ಕಿದ್ದ ಹುಡುಗ ಈಗ ಬಿ ಎ ಮಾಡಿದ್ದಾನೆ ಶೇಷಗಿರಿ ಲಕ್ಷ್ಮಣನ ತಂದೆ ತೀರ ಬಡತನದಿಂದ ಅಲ್ಲಿ ಇಲ್ಲಿ ತಿಂದು ಉಂಡು ಜೀವಿಸುತ್ತಿದ್ದ ವ್ಯಕ್ತಿ ಈ ಕಥೆಯ ಕಾಲಕ್ಕೆ ಒಂದು ಅಂಗಡಿಯನ್ನು ತೆಗೆದು ಶ್ರೀಮಂತನಾಗುತ್ತಾನೆ

ಸುಧಾಕರ ಮೆಡಿಕಲ್ ಕಾಲೇಜಿನ ನಾಲ್ಕು ವರ್ಷಗಳು ಮುಗಿಸಿ ಪರೀಕ್ಷೆ ಕೊಟ್ಟು ಬಂದವನು, ಫಲಿತಾಂಶ ನಿರೀಕ್ಷಿಸುತ್ತಾಯಿದ್ದನು ಫಲಿತಾಂಶ ತಿಳಿಯಿತು ಆತನು ಪಾಸೆಂದಾಯಿತು ಇನ್ನೂ ಒಂದು ವರ್ಷದ ತರಬೇತು ಮಾತ್ರಯಿರುವುದು ಅದಕ್ಕೆ ಬೇಕಾದ ವ್ಯಯ ತೆರಲು ಶಂಕರರಾಯರೊಡನೆ, ಸಂಪಾದನೆಯು ಕಡಿಮೆಯಾಗುತ್ತ ಬಂದುದರಿಂದ, ಹಣವಿಲ್ಲ ಊರಿನ ಡಾಕ್ಟರ್ ರಾಮರಾಯರೂ ಶಂಕರರಾಯರ ಆಪ್ತರು. ಒಳ್ಳೆ ಪ್ರೆಕ್ಟಿಸ್ ಇತ್ತು ಇವನ ಬೆಳೆದ ಹುಡುಗಿ ಶೇವಂತಿಯನ್ನು ಸುಧಾಕರರಿಗೆ ತರುವ ಯೋಚನೆ ಶಂಕರರಾಯರಾಗಿತ್ತು ಮಗನೊಡನೆ ಪ್ರಸ್ತಾಪವೆತ್ತಿದ್ದರು. ರಾಮರಾಯರ ಮಗ ರಾಜಾರಾಮನಿಗೆ, ತಮ್ಮ ಶ್ರೀಮತಿಯನ್ನು ಕೊಟ್ಟು, ಒಂದು ಸಾಟಿಯನ್ನು ಸಾಧಿಸುವುದೂ ಶಂಕರರಾಯರ ಇಚ್ಛೆಯಿತ್ತು.

ಲಕ್ಷ್ಮಣನು ಬಡವ; ಶಂಕರರಾಯರಲ್ಲಿ ಚಿಲ್ಲರೆ ಚಾಕರಿಗಳನ್ನು ಮಾಡಿ, ಅನ್ನತಿಂದು ಬೆಳೆದವನು, ಬಿ ಎ. ವರೆಗೆ ಕಲಿತಿದ್ದನು, ಶಂಕರರಾಯರು, ಅವರ ಹೆಂಡತಿ, ಮಗ ಸುಧಾಕರನೂ ಅವನನ್ನು ಅತಿ ತಾತ್ಸಾರದಿಂದ ನೋಡುತ್ತಿರುವುದರಿಂದ, ಆತನ ಕಡೆ ಶ್ರೀಮತಿಗೆ ತುಂಬಾ ಕನಿಕರ ಉಂಟಾಗಿದ್ದುದ್ದು, ಅವಳು ವ್ಯಕ್ತ ಪಡಿಸುದುದನ್ನು, ತಪ್ಪು ತಿಳುವಳಿಕೆಯಿಂದ ಪ್ರೇಮದೆಂದು ಪರಿಗಣಿಸಲ್ಪಟ್ಟು, ಅದು ಕೊನೆಗೆ ನಿಜವಾಗಿಯೂ ಪ್ರೇಮದಲ್ಲಿ ಕೊನೆಗೊಳ್ಳುವುದು.

ಶ್ರೀಮತಿಯ ವಿಚಾರ ಬಾಕಿಯುಟ್ಟು, ಸುಧಾಕರನ ಮದುವೆಯು ನಡೆದುಬಿಟ್ಟಿತು. ರಾಮರಾಯರು ಮೆಡಿಕಲ್ ಪದವೀಧರನೊಬ್ಬನನ್ನು ಕ್ರಯಕ್ಕೆ ತೆತ್ತರು. ದೊಡ್ಡವರ ಮಗಳಿಗೆ, ಶಂಕರರಾಯರಲ್ಲಿ ಯಾವುದೂ ಸರಿತೋರದೆ, ಕೊನೆಗೆ ಕೋಪವೆದ್ದು, ತವರುಮನೆಗೆ ಗಂಡನನ್ನು ಹಿಡಿದುಕೊಂಡು ನಡೆಯುವಂತಾಯಿತು. ಶಂಕರರಾಯರ ಪಾಲಿಗೆ ಸುಧಾಕರನು ನಷ್ಟವಾದನು. ಕೊನೆಕೊನೆಗೆ ಶಂಕರರಾಯರಲ್ಲಿಗೆ ಸುಧಾಕರ ಆಗಮನವೆ ದುರ್ಲಭವಾಯಿತು.

ಶಂಕರರಾಯರ ಎರಡನೆ ಮಗ ಸದಾಶಿವನು, ಸುಧಾಕರನಿಗಿಂತ ವಿವೇಕಿಯು ತಂದೆಯ ಪಾಡನ್ನು ಅರಿತು, ಅರ್ಧದಲ್ಲೆ ವಿದ್ಯಾಭ್ಯಾಸಂಗವನ್ನು ಮುಗಿಸಿ, ತಂದೆಗೆ ಸಹಾಯಾರ್ಥಿಯಾಗಲು ದುಡಿಯಲು ಪ್ರಾರಂಭಿಸಿದನು. ಲಕ್ಷ್ಮಣನಲ್ಲಿ ಆತನಿಗೆ ಅನುರಾಗ ತುಂಬಾ ಶ್ರೀಮತಿಯು ಲಕ್ಷ್ಮಣನನ್ನು ಹಿತದೃಷ್ಟಿಯಿಂದ ಕಾಣುವುದರಲ್ಲಿ ಏನು ದೋಷವನ್ನು ಆತನು ಕಾಣದಾದನು

ಶಂಕರ ಸ್ಥಿತಿಯು ತೀರ ಕೆಟ್ಟಿತು ರಾಮರಾಯರ ಮತ್ತವರ ಮಗಳ ಬಲೆಯೊಳಗೆ ಬಿದ್ದ ಸುಧಾಕರನು ಆತನಿಗೆ ಯಾವತ್ತೂ ತರದಲ್ಲಿ ಸಹಾಯಕನಾಗದಾದನು ಸದಾಶಿವ ಒಮ್ಮೆ ಅವನನ್ನು ಕಾಣಲು ಹೋದನು ಸ್ಥಿತಿಯು ತುಂಬಾ ಹಾಳಿತ್ತು ಶಕ್ತಿಗಾರರೊಬ್ಬನ ಎರಡು ಸಾವಿರ ರೂ ಗಳನ್ನು ಶಂಕರರಾಯರು, ಸುಧಾಕರನ ಮದುವೆ ಸಮಯದಲ್ಲಿ ತೆಗೆದು ಖರ್ಚು ಮಾಡಿಬಿಟ್ಟಿದ್ದರು ಅದರೊಡನೆ ಅವರಿಗೆ ಇನ್ನೊಂದು ಸಾವಿರ ರೂ ಸಾಲವೂ ಆಗಿತ್ತು ಶಕ್ತಿಗಾರರ ಹಣ ತುಂಬಿಸುವ ಸಮಯ ಬಂದಿತ್ತು ಮಗನಿಂದಾದರೂ ಸಹಾಯ ಪಡೆಯುವ ಉದ್ದೇಶದಿಂದ ಶಂಕರರಾಯರು, ಸದಾಶಿವನನ್ನು ಸುಧಾಕರನಲ್ಲಿ ಕಳುಹಿಸಿದ್ದನು ತನ್ನ ನಾದಿನಿ ಸೀಮಂತಿನಿಯನ್ನು ಸದಾಶಿವನು ಮದುವೆಯಾದರೆ ಮಾತ್ರ, ಶ್ರೀಮತಿಯು ರಾಜಾರಾಮನಿಗೆ ಕೊಡುವುದಾದರೆ ಮಾತ್ರ, ತಂದೆಗೆ ಸಹಾಯನೀಡುವನೆಂದು, ಶರ್ತಕೊಟ್ಟನು

ಶ್ರೀಮತಿಯ ಪ್ರೀತಿಯು ಲಕ್ಷ್ಮಣ ಮೇಲೆಯೆ ಕೇಂದ್ರೀಕೃತವಾಗಿತ್ತು ಸದಾಶಿವನಿಗೆ ಸೀಮಂತಿನಿ ತರಲು ಶಂಕರರಾಯರು ಸಿದ್ಧರಿರಲಿಲ್ಲ ತಮ್ಮ ಮನೆಯಲ್ಲಿ ಅನ್ನಕ್ಕಿದ್ದ, ಕುಟುಂಬ ಪಾರಂಪರೆಯಿಲ್ಲದ ಲಕ್ಷ್ಮಣನನ್ನು ಶ್ರೀಮತಿ ಮೋಹಿಸುವುದದೆಂದರೇನು ಎಂದು ಸುಧಾಕರು, ಅತಿ ತಾತ್ಸಾರದಿಂದ ಮಾತನಾಡುತಿದ್ದನು ಒಂದೂ ಆಗದೆ ಶಂಕರರಾಯರು ಹತಾಶರಾಗಬೇಕಾಯಿತು

ಸುಧಾಕರನ ಮದುವೆಯ ನಿಶ್ಚಯ ಸಮಯದಲ್ಲಿ, ಲಕ್ಷ್ಮಣನಿಗೆ ಸುಧಾಕರನ ಕೈಗಳಲ್ಲಿ ಮಾತ್ರವಲ್ಲ, ಶಂಕರರಾಯರು, ವಸಂತಿಗಳ ಕೈಗಳಲ್ಲೂ, ತುಚ್ಛೀಕಾರದ ವರ್ತನೆಯು, ಒದಗಿದುದರಿಂದ ಲಕ್ಷ್ಮಣನು ಜಿಗುಪ್ಸೆಗೆ ಒಳಗಾಗಿದ್ದನು ಶ್ರೀಮತಿಯ ಮೇಲೆ ಪ್ರೇಮಿತನಾದ ಆತನಿಗೆ ನಿರಾಶೆ ಉಂಟಾಯಿತು ಯುದ್ಧ ಸಮಯವಾದುದರಿಂದ, ತನಗೆ ಒದಗಿದ ಗತಿಯನ್ನು ಮರೆಯಲೆಂಬ ಎಂಬಂತೆ ಆತನು ವಾರ್ ಸರ್ವಿಸಿಗೆ ಸೇರುವನು ಅಲ್ಲಿ ಕೆಪ್ಟನ್ ಹುದ್ದೆಗೇರುವನು

ಇತ್ತಲಾಗೆ, ಕಾಸಿಲ್ಲದ ಶೇಷಗಿರಿಯು, ಯುದ್ಧದ ದೆಸೆಯಿಂದ ಉಂಟಾದ ಬ್ಲೆಕ್ ಮಾರ್ಕೆಟ ಮೂಲಕವೊ, ಏರಿದ ಧಾರಣೆಗಳಿಂದಲೊ, ಮದ್ದಿನ ವ್ಯಾಪಾರವೊಂದನ್ನು ಸಾಧಿಸಿ, ಧನ ಸಂಪಾದಿಸಿದನು. ಶಂಕರರಾಯರ ವಿಪತ್ತಿಯ ಕಾಲದಲ್ಲಿ, ಮಗ ಲಕ್ಷ್ಮಣನ ಇಚ್ಛೆಯ ಮೇರೆಗೆ ಶಂಕರರಾಯರಿಗೆ ಸಾಲ ತೀರಿಸಿಕೊಳ್ಳಲು, ಮೂರು ಸಾವಿರ ರೂ.ಗಳನ್ನು ಕೊಡಿಸಿ ಅವರ ಋಣವನ್ನು ತೀರಿಸುವನು.

ಕೆಪ್ಟನ್ ಲಕ್ಷ್ಮಣನು ಡಾ। ರಾಮರಾಯರ ದೃಷ್ಟಿಗೆ ಬೀಳುವನು. ಸೀಮಂತಿನಿಗೆ ತಕ್ಕ ವರನೆಂದು ಆವರಿಗೆಣಿಸಿ, ಸುಧಾಕರನೂ ಭಾಗಿಯಾಗಿ, ಶೇಷಗಿರಿಯ ಮೂಲಕ (ಶೇಷಗಿರಿಗೂ ಡಾಕ್ಟರಿಗೂ, ಮದ್ದಿನ ಅಂಗಡಿಯ ದೆಸೆಯಿಂದ ತುಂಬಾ ವ್ಯವಹಾರವಿತ್ತು) ಮದುವೆ ನಿಶ್ಚಯಿಸಿ, ಕೊನೆಗೆ ರಜಿಸ್ಟರ್ಡ್ ಕ್ರಮ ಪ್ರಕಾರ ವಿವಾಹವನ್ನು ನಡೆಯಿಸಿಯೆಬಿಟ್ಟನು.

ಶಂಕರರಾಯರು ಮೊದಲು ಶ್ರೀಮತಿಯನ್ನು ಬಡವ ಲಕ್ಷ್ಮಣನಿಗೆ ಕೊಡುವುದಕ್ಕೆ ವಿರೋಧಿಗಳಾಗಿದ್ದವರು, ಈಗ ಶೇಷಗಿರಿಯ ಮತ್ತು ಲಕ್ಷ್ಮಣನ ಸ್ಥಿತಿಯು ಉದ್ಧರಿಸಿದುದರಿಂದ, ಲಕ್ಷ್ಮಣನಿಗೆ ತನ್ನ ಹೆಣ್ಣು ಕೊಡುವುದರಲ್ಲಿ ಇಚ್ಛಿತನಾದನು ಸದಾಶಿವನು ಈ ಬಗ್ಗೆ ಪ್ರಯತ್ನಗೊಳ್ಳುವನು ಆದರೆ ಅವರ ಯತ್ನಗಳು ನಿಷ್ಫಲ ಹೊಂದಿದವು

ಶಂಕರರಾಯರ ಸುಧಾಕರ, ವಸಂತಿಯ ಕೈಗಳಲ್ಲಿ ದೊರೆತ ವರ್ತನದಿಂದ, ತನ್ನ ಪ್ರೇಮದ ಶ್ರೀಮತಿಯು ತನಗೆ ದೊರಕುವುದು ಅಸಾಧ್ಯವೆಂಬುದಾಗಿ ಮನಗಂಡ ಲಕ್ಷ್ಮಣನು ಹತಾಶನಾಗಿ, ಯುದ್ಧಕ್ಕೆ ಸೇರಿ, ಅಧ್ಯದಾರಿಯನ್ನು ಹಿಡಿದು, ತನಗೆ ಒದಗಿದ ಸ್ಥಿತಿಯನ್ನು ಮರೆಯುವುದರಲ್ಲಿದ್ದನು ತನಗಾದ ಗತಿಗೆ ತಕ್ಕ ಸೇಡನ್ನು ತೀರಿಸುವುದರಲ್ಲಿ ಉದ್ಯುಕ್ತನಾಗಿದ್ದನು ಈ ಕಾರಣದಿಂದಲೆ ಶಂಕರರಾಯರಿಗೆ ಕಷ್ಟದ ಸಮಯದಲ್ಲಿ ಹಣಕೊಟ್ಟು ನೆರವಾದನು ಸುಧಾಕರನ ಮೇಲೆ ಸೇಡು ತೀರಿಸಲು, ಆತನು ನಾದಿನಿಯನ್ನು ವಿವಾಹಿತನಾದನು

ರಾಮರಾಯರು ನೆನೆದೊಂದು, ಆದರೆ ಜಿಗುಪ್ಸೆಗೊಂಡ ಕೆಪ್ಟನ್ ಲಕ್ಷ್ಮಣನ ಜೀವನವೇ ಬದಲಾಗಿತ್ತು ಕುಡಿಯುವುದು, ಮೊದಲಾದ ಹೇಯ ಜೀವನವು ಅವನದಾಗಿತ್ತು

ಶ್ರೀಮತಿಯನ್ನು ಆತನು ಎಂದೂ ಮರೆಯಲಿಲ್ಲ ತನ್ನ ನಿಜವಾದ ಪ್ರೇಮಕ್ಕೆ ಆಕೆ ತಕ್ಕವಳು ಆಕೆಯು ಯೋಗ್ಯ ಗೃಹಿಣಿಯಾಗುವವಳು ತನ್ನ ಈಗಿನ ಹಾಳು ಜೀವನದಲ್ಲಿ ಅವಳನ್ನು ಎಂದಿಗೂ ಸೇರಿಸಿಕೊಳ್ಳಬಾರದೆಂದೆ ಆತನ ಕೊನೆಯ ಇಚ್ಛೆ ಕೊನೆಗೆ ಬರ್ಮಾರಂಗಕ್ಕೆ ತೆರಳುವ ಮುನ್ನ ಶ್ರೀಮತಿಯ ಫೊಟೊವನ್ನು ಹಿಡಿದು ನಡೆದುಬಿಟ್ಟನು.

ಇಷ್ಟು ನಾಟಕದ ಸಾರಂಶ ನಾಟಕವನ್ನು ಓದುತ್ತಿದ್ದ ಹಾಗೆ ಯುದ್ಧಕಾಲದಲ್ಲಿ ನಡೆದ ಕೆಲವು ಘಟನೆಗಳು ನಮ್ಮ ಮುಂದೆ ಒಂದು ನಿಲ್ಲುತ್ತವೆ ಬಡ ಶೇಷಗಿರಿಯು ಸಂಪತ್ತು ಸಾಧಿಸಿದುದು ಲಕ್ಷ್ಮಣನು ಡಾಕ್ಟರ ರಾಮರಾಯರ ಅಳಿಯನಾಗಲು ಯೋಗ್ಯತೆ ಹೊಂದಿದುದು, ಈ ಘಟನೆಗಳಲ್ಲಿ ಮುಖ್ಯವಾದವು ಅಲ್ಲದೆ ಈ ನಾಟಕದಲ್ಲಿ ನಿರೂಪಿಸಲಾದ ಘಟನೆಗಳು, ನಮ್ಮ ಸುತ್ತಲೂ ಈ ಮೊದಲೂ ಕಾಣಿಸಿಕೊಂಡವುಗಳು, ಈಗಲೂ ಕಾಣಿಸುವಂತವೂ, ಮುಂದಕ್ಕೂ ಕಾಣಿಸುವಂತವುಗಳು. ಈ ಘಟನೆಗಳು ಬಹಳ ರಸವತ್ತಾಗಿ ಚಿತ್ರಿತವಾಗಿವೆ. ನಮ್ಮ ಸಮಾಜದಲ್ಲಿರುವ ಅನೇಕ ಸುಧಾಕರನ್ನೂ, ಡಾ. ರಾಮರಾಯರನ್ನೂ ಶಂಕರರಾಯರನ್ನೂ ನಾಟಕದಿಂದ ಕಲೆ ಬಗ್ಗಿಸುವಂತೆ ಮಾಡುವಂತವುಗಳು ನಾಟಕವನ್ನು ಓದಿ ಮುಗಿಸಿದಾಗ, ಫ್ರೆಂಚ್ ಸಾಹಿತಿ, ಅಲೆಕ್ಸಂಡರ್ ಡೂಮಾರವರ ಕೌಂಟ್ ಒಫ್ ಮೊಂಟೆಕ್ರಿಸ್ಟೊ ಕಥೆಯ ನೆನಪಾಗುತ್ತದೆ

'ವಿಮರ್ಶಕ'

*

ಪುಸ್ತಕ ಸ್ವೀಕಾರ ವಿಮರ್ಶೆ

ಪುಟ್ಟು ತಮ್ಮ ಯಾರು?

ಮಕ್ಕಳ ಪುಸ್ತಕ ಮಾಲೆಯ ಮೊದಲ ಕೃತಿ. ಬರೆದವರು 'ಹೊಯಿಸಳ' ಶಿವಮೊಗ್ಗ ಪ್ರಿಂಟಿಂಗ್ ಎಂಡ್ ಪಬ್ಲಿಶಿಂಗ್ ಕಂಪೆನಿ ಲಿಮಿಟೆಡ್ ಇವರು ಪ್ರಕಾಶಕರು ಕ್ರೌನ್ ⅛ ಆಕೃತಿಯ ಸಚಿತ್ರ ಹೊದಿಕೆಯ ಪುಸ್ತಕ ಬೆಲೆ ೪ ಆಣೆ

ಶ್ರೀ 'ಹೊಯಿಸಳರ'ದು ಕನ್ನಡದಲ್ಲಿ ನುರಿತ ಕೈ ತಮ್ಮ ಪ್ರಾವೀಣ್ಯವನ್ನು ಆಕರ್ಷಕವಾಗಿ ಬಾಲ ಕಥಾ ನಿರೂಪಣಕ್ಕೆ ಪರಿವರ್ತಿಸಿಕೊಂಡು ಯಶಸ್ವಿಯಾಗಿದ್ದಾರೆ ಈ ಚಿಕ್ಕ ಪುಸ್ತಕದಲ್ಲಿ ಮಕ್ಕಳ ಮನೋಭಾವನೆ ಸರಳ ಶೈಲಿಗೊಪ್ಪುವ ೬ ಪುಟ್ಟ ಕತೆಗಳಿವೆ. ಕತೆಗಳೂ ಅಭಿರುಚಿದಾಯಕವೂ ಮೂಲಕಲ್ಪನೆಯವೂ ಆಗಿದ್ದು ಎಲ್ಲಾ ಶಾಲಾ ಮಕ್ಕಳ ಪುಸ್ತಕ ಭಂಡಾರಗಳಲ್ಲೂ, ವಾಚನಾಲಯಗಳಲ್ಲೂ ಅವಶ್ಯವಾಗಿ ಬೇಕಾದಂತವಾಗಿವೆ ಉಪ ಪಠ್ಯವಾಗಿಡಲೂ ತುಂಬಾ ಯೋಗ್ಯವಾಗಿದೆ

'ನಾಥ'

ಜಿಲ್ಲಾ ಆಹಾರ ಸಮಿತಿ ಮೀಟಿಂಗ್

ಈ ಸಮಿತಿಯ ಮೀಟಿಂಗ್ ಕಳೆದ ತಾ 1ನೇ ಸೋಮವಾರ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು "ಅಕ್ಕಿ ಹೊರಗಡೆಯಿಂದ ಸಂಪೂರ್ಣ ಇಲ್ಲಿಗೆ ಬಂದಿಲ್ಲ, ಕೆಲವು "ಅಲಾಟ್‌ಮೆಂಟ್" ರದ್ದಾಗಿದೆ ಬರುವ ಕೊಯ್ಲಿನ ವರೆಗೆ ಅಕ್ಕಿ ಸಾಲದು" ಎಂದು ಅಧ್ಯಕ್ಷರು ತಿಳಿಸಿದರು ಶ್ರೀ ಕೆ ಆರ್ ಕಾರಂತರು, ಶ್ರೀ ಕೆ ಬಿ ಜಿನರಾಜ ಹೆಗ್ಗಡೆ, ಶ್ರೀ ಸುಬ್ಬಣ್ಣ ಸೆಟ್ಟಿ ಮತ್ತು ಶ್ರೀ ಎಸ್ ಎಸ್ ಕೊಳ್ಕೆಬೈಲ್ ಅವರು ಅಶಾಸ್ತ್ರೀಯವಾದ ರೇಶನ್ ಭಾಗಗಳಲ್ಲಿ ಅಕ್ಕಿ ಇಲ್ಲದೆ ತೊಂದರೆ ವಿಚಾರವನ್ನು ವಿವರಿಸಲಾಗಿ ಅಧ್ಯಕ್ಷರು ಆ ಕಷ್ಟ ನಿವಾರಣೆಗಾಗಿ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ ಎಂದರು

ಬೇಸಾಯಗಾರನ ವರ್ಷದ ಆವಶ್ಯಕತೆಗಳನ್ನು ಲಕ್ಷಿಸದ ವಸೂಲಾಗುತ್ತಿರುವ ಗೇಣಿ ಸಂಬಂಧದ ಈಗಿನ ಪ್ರೊಕ್ಯೂರ್‌ಮೆಂಟ್ ಕ್ರಮಗಳಿಂದ ಉಂಟಾಗುವ ಕಷ್ಟಗಳ ವಿಚಾರದಲ್ಲಿ ಮುಂದಾಜೆಯಂಥ ಗ್ರಾಮಗಳನ್ನು ನಿದರ್ಶನವನ್ನು ಶ್ರೀ ಕೆ ಆರ್ ಕಾರಂತರು, ವಿವರಿಸಿ, ಬೇಸಾಯಗಾರನಿಗೆ ಬೇಸಾಯದಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ ಎಂದರು ಶ್ರೀ ಜಿನರಾಜ ಹೆಗ್ಗಡೆಯವರು ಈಗಿನ 'ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಕುಂದುಕೊರತೆಗಳನ್ನು ಸೂಚಿಸಿದ ಮೇಲೆ, ಆಗಿನ ಪ್ರೊಕ್ಯೂರ್‌ಮೆಂಟ್ ಪದ್ಧತಿ ಹೇಗೆ ಕೆಲಸಮಾಡುತ್ತಿದೆ?' ಅದನ್ನು ಹೇಗೆ ಸುಧಾರಿಸಬಹುದು? ಎಂಬ ವಿಚಾರದಲ್ಲಾಲೋಚಿಸಲು ಒಂದು ಉಪಸಮಿತಿಯನ್ನು ನೇಮಿಸಲಾಯಿತು ಈ ಸಮಿತಿ ಇದೇ ತಾ 10ರಲ್ಲಿ ಕೂಡಿ, ಜಿಲ್ಲೆಯಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಸುವ ವಿಧಾನಗಳ ಕುರಿತೂ, ಅಕ್ಕಿ ಭತ್ತಗಳ ಬೆಲೆ ನಿರ್ಧರಿಸುವ ಕುರಿತೂ ಕೂಡ ಆಲೋಚಿಸುವುದು.

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted

Fixed Deposits for periods of 3 months and above up to 24 months are accepted.

ಜಿಲ್ಲಾ ಪರಿಚಯ

೧

ಮೈಸೂರು ವಿದ್ಯಾರ್ಥಿ ದಿನ

ಕೆಲ ದಿನಗಳ ಹಿಂದೆ ಪೆರಡಾಲ ವಿದ್ಯಾರ್ಥಿ ಸಂಘದ ಮಹಾಸಭೆಯು ಮೈಸೂರು ವಿದ್ಯಾರ್ಥಿಗಳ ದಿನವನ್ನು ಆಚರಿಸಿತು. ಅಲ್ಲದೆ ವಿದ್ಯಾರ್ಥಿಗಳು ಹೂಡಿದ ಸತ್ಯಾಗ್ರಹಕ್ಕೆ ಪೂರ್ಣ ಬೆಂಬಲ ಕೊಟ್ಟು ಸಹಾನುಭೂತಿ ವ್ಯಕ್ತಮಾಡಿದ ಠರಾವು ಪಾಸಾಯಿತು.

ಸಾಹಿತ್ಯ ಸಮ್ಮೇಳನ

ದಿನಾಂಕ 21–8–47ರಲ್ಲಿ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ ಅಧ್ಯಕ್ಷತೆಯಲ್ಲಿ 21ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯ ಸಮಿತಿಯ ಸಭೆ ಜರಗಿ ಸಮ್ಮೇಳನಕ್ಕೆ ತಗಲಬಹುದಾದ ಅಂದಾಜು ಖರ್ಚಿನ ಪಟ್ಟಿಯನ್ನು ತಯಾರಿಸಲಾಯಿತು ಸಮ್ಮೇಳನದ ಸ್ಥಳದ ವ್ಯವಸ್ಥೆಯನ್ನು ಮಾಡಲು, ಶ್ರೀಗಳಾದ ಯಂ ಉಮೇಶ ರಾವ್ ಡಾ। ಪಿ ಎನ್ ಭಟ್ ಯು ಭವಾನಿಶಂಕರ ರಾವ್, ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಇವರಿಂದೊಡಗೂಡಿದ ಉಪಸಮಿತಿಯನ್ನು ರಚಿಸಲಾಯಿತು

ನಮ್ಮ ಜಿಲ್ಲೆಯಲ್ಲಿ ಅಕ್ಕಿ ದಾಸ್ತಾನು

ಸದ್ಯ ನಮ್ಮ ಜಿಲ್ಲೆಯಲ್ಲಿರುವ ಅಕ್ಕಿ ದಾಸ್ತಾನು 636 ಟನ್ನು ಮಾತ್ರ, ಜಿಲ್ಲೆಗೆ ಹೊರಗಿನಿಂದ ಬರಬೇಕಾದುದು 15330 ಟನ್ನು, ಇದರಲ್ಲಿ 7382 ಟನ್ನು ಈ ಮುಂಚೆ ಬಂದಿದೆ, ಉಳಿದುದು ಬರುವುದೆಂದು ನಿರೀಕ್ಷಿಸಲಾಗಿದೆ ಸದ್ಯಕ್ಕೆ ಪ್ರತಿ ವಾರಕ್ಕೆ 1500 ಟನ್ನು ಅಕ್ಕಿ ವಿನಿಯೋಗ ಹೊಂದುತ್ತದೆ. ಬರಬೇಕಾದ ಅಕ್ಕಿ ಬಂದರೆ ಈ ತಿಂಗಳ ಅಂತ್ಯದವರೆಗೆ ಕಾಲಕ್ಷೇಪಮಾಡಬಹುದು ಬರುವ ಬೆಳೆ ನವಂಬರ ಆದಿವರೆಗೆ ದೊರೆಯುವ ಹಾಗಿಲ್ಲ ಆದುದರಿಂದ 3000 ಅಧಿಕ ಟನ್ನು ಅಕ್ಕಿಯಿಲ್ಲದೆ ನಿರ್ವಹಿಸಿ ಬರಬೇಕಾದ ಅಕ್ಕಿಯಲ್ಲಿ ವಿಳಂಬವಾದರೆ ಕೂಡಲೆ ಹಸಿವಿನ ಪರಿಸ್ಥಿತಿಯು ಮಾಡಿದು ಹೋಗುವುದು ಆದುದರಿಂದ ಸದ್ಯದ ವಿಪತ್ತನ್ನು ನಿವಾರಿಸುವುದು ದೊಡ್ಡ ಸಮಸ್ಯೆಯಾಗಿದೆ ಎಂಬುದನ್ನು ಮಂತ್ರಿಗಳು ವಿಧಿತಪಡಿಸಿದರು

1946 47ನೆಯ ವರ್ಷದಲ್ಲಿ ಅಕ್ಕಿಯ ಉತ್ಪತ್ತಿ ಸುಮಾರು 255000 ಟನ್ನುಗಳು (ಒಂದು ಟನ್ನಿಗೆ ಸುಮಾರು 26 ಮುಡಿ) ಇಲ್ಲಿಯ ಖರ್ಚಿಗೆ ಬೇಕಾದುದು 182800 ಟನ್ನುಗಳು ಎಂದರೆ ನಮ್ಮ ಜಿಲ್ಲೆಯು ಉಳಿಕೆಯ ಜಿಲ್ಲೆಯೆಂದಾಯಿತು. ಈ ವರ್ಷವಾದರೂ ಸಾಮಾನ್ಯ ವಾರ್ಷಿಕೋತ್ಪತ್ತಿಯ ನೇಕಡ 95 ಭಾಗವು ದೊರೆಯಬಹುದೆಂದು ಊಹಿಸಲಾಗಿದೆ

ನಗರ ಸಭೆ ಉಮೇದುದಾರರು

ಈ ಮುನ್ಸಿಪಾಲಿಟಿಯ ವಾರ್ಡುಗಳು 25, ಕೌನ್ಸಿಲರುಗಳಲ್ಲಿ ಒಟ್ಟು ಸಂಖ್ಯೆ 32, ಈ ಸ್ಥಾನಗಳಲ್ಲಿ ಒಟ್ಟು ಪ್ರತಿಸ್ಪರ್ಧಿಗಳಿಲ್ಲದೆ ಆಗಲೇ ಆರಿಸಿ ಬಂದವರ ಸಂಖ್ಯೆ 17 ಅವರ ಹೆಸರು ವಾರ್ಡುಗಳು ಈ ಕೆಳಗಿನಂತಿವೆ —

ಬಿಜೈ ಎ ಅಲ್ಬುಕರ್ಕ್, ಕದ್ರಿ. ಎ. ಸೂರ್ಯನಾರಾಯಣ ಅಡಿಗ, ಕದ್ರಿ ಮೇರಿ ಜಿ. ಬ್ರಿಟೊ (ಹೆಂಗಸರ ರಿಜರ್ವ) ಸ್ಥಾನಕ್ಕೆ. ಕಂಬಳ ಬಿ ಎಸ್ ಭಾಸ್ಕರ ರೈ, ಬೋಳೂರು ಆರ್. ಬಿ ಸಿ ಡಿ ಅಂದ್ರಾದೆ, ಕುದ್ರೋಳಿ ಎಂ. ಸಿ ಅಹಮ್ಮದ್ (ಮುಸ್ಲಿಮರ ರಿಜರ್ವ ಸ್ಥಾನ) ನವಾಯತ ಎ. ಮಹಮ್ಮದ್ ಸಬ್ಬು, ಬಂದರ: ಹಾರೂನ್ ಸೇಟ್. ಮಾರ್ಕೆಟ್. ಕಲ್ಯಾಣಿ ಡಿ ಸೆಟ್ಟಿ. ಕೋರ್ಟ್ ಎಲ್. ಸಿ. ಪಾಯ್ಸ್, ಪಳ್ನೀರು: ಇಲ್ಲಿ ಹಿಂದೀ ಕ್ರೈಸ್ತರ ರಿಜರ್ವ ಸ್ಥಾನವೊಂದು; ಜನರಲ್ ಸೀಟ್ 1; ಹೀಗೆರಡು ಸ್ಥಾನಗಳಿಗೆ ಶ್ರೀಗಳಾದ ಎಮ್. ಎಸ್. ಶ್ರೀಸ್ಥರು ಮತ್ತು ಶ್ರೀ ಡಿ. ಜೆ. ಬ್ರಿಟೊ ಉಮೇದುದಾರರು ಕೆಂಟೋನ್ಮೆಂಟ್ ಎನ್ ಎನ್. ಸುವರ್ಣರು, ಫೋರ್ಟ್ ಎಚ್. ಸಿ. ಸೋಮಸುಂದರ, ಹೊೖಗೆ ಬಜಾರ್ ಎಚ್. ಲಕ್ಷ್ಮಣ ಸಾಲಿಯಾನ್, ಅತ್ತಾವರ ಚೂಡಪ್ಪ, ಜೆಪ್ಪು ಎಸ್ ಗೋಪಾಲ ಸಾಲಿನ್ನ (ಹರಿಜನರ ರಿಜರ್ವ ಸೀಟ್)

ಮಿಕ್ಕ 15 ಸ್ಥಾನಗಳಲ್ಲಿ ಪ್ರತಿಸ್ಪರ್ಧಿಗಳಿವರು ದೇರೆಬೈಲು ಶ್ರೀಗಳಾದ ಎ ಶಾಂತರಾಮ ಪೈ, ಪೀಟರ್ ಪಾಲ್ ಡಿಸೋಜ, ಕೊಡಿಯಾಲಬೈಲ್, ಡಾ। ಪಂ ಉಮೇಶ ರಾವ್, ನೇಮಿರಾಜ ಅಳ್ವ, ಮಣ್ಣಗುಡ್ಡೆ ಎಂ ಗೋವಿಂದ ಪೈ, ಎಂ ಚಾರಪ್ಪ, ಪಿ ರಾಮ್ದಾಸ್ ನಾಯಕ್, ಸೆಂಟ್ರಲ್ ಡಾ। ಎನ್ ಉಪೇಂದ್ರ ಪೈ, ಡಾ। ನಾಗಪ್ಪ ಆಳ್ವ ಎಂ ಮುಕುಂದ ನಾಯಕ್, ಬಂದರ್ ಡಾ। ಎಂ ಆರ್ ಭಟ್, ಎಂ ಶ್ರೀನಿವಾಸ ನಾಯಕ್, ಎಚ್ ಗಣಪತಿ ಕಾಮತ್ ಡೊಂಗರಕೇರಿ ಜಿ ಎಸ್ ನಗರ್ಕರ್, ಪದ್ಮನಾಭ ಕಾಮತ್ ಎಂ, ಎಂ ರಾಮಚಂದ್ರ ಶೆಣೈ ಮಾರ್ಕೆಟ್ ರಾಘವೇಂದ್ರ ಶೈ ಯು ಸುಜಿತ ಭಟ್, ಎಂ ಮುಕುಂದ ನಾಯಕ್, ಕುದ್ರೋಳಿ ಡಾ। ಪಿ ಆರ್ ಹೆಗ್ಗಡೆ, ಕೇಶವ ಕಾಮತ್ ಬೆಂದೂರು ಇಲ್ಲಿ ಸ್ಥಾನಗಳೆರಡು, ಒಂದು ಹಿಂದೀ ಕ್ರೈಸ್ತರ ಒಂದು ರಿಜರ್ವ ಸ್ಥಾನ, ಮತ್ತೊಂದು ಜನರಲ್ ಸೀಟ್, ಇವೆರಡಕ್ಕೆ ಶ್ರೀಗಳಾದ ಸಿರಿಲ್ ಗೊನ್ಸಾಲ್ವಿಸ್, ಜೆ ಬಿ. ಡಿ ಸೋಜ, ಎಸ್ ನರ್ಸಪ್ಪಯ್ಯ, ಒಲ್ವರ ಬೆನೆಡಿಕ್ಟ್, ಹೆರಿ, ಇ ಎ ಪಾಯ್ಸ್ ಮಿಲಾಗ್ರಿಸ್ ಬಿ ದಾಮೋದರ ಬಾಳಿಗ, ಗಜಾನನ ರಾವ್ ಪಂಡಿತ್, ಪೋಳಾರ್ ಗಜಾನನ ರಾವ್ ಪಂಡಿತ್ ಎ ಶ್ರೀನಿವಾಸ ರಾವ್ ಬಿ ಕೊರಗಪ್ಪ ಶ್ರೀ ಮಂಗಳಾದೇವಿ ಬಿ ಗಂಗಾಧರ ದಾಸ್, ಎಫ್ ಎಲ್ ಡಿ ಸಿಂಕಿನ ಬಿ ಬಾಬು ರಾವ್, ಸಿಂಪ್ಸನ್ ಸೋನ್ಸ್ ಜೆಪ್ಪು - ನಾರಾಯಣ ಎಸ್ ಕಿಲ್ಲೆ ಬಿ ಎಸ್ ಕಕ್ಕಿಲಾಯ (ಬೆಂದೂರಿನ ಹೊರತು ಇತರ ಯಾವ ಕಡೆಗಳಲ್ಲಿ ಇರುವ ಸ್ಥಾನಕ್ಕೆ ಒಂದೊಂದೇ ಮಾತ್ರ)

ಹೊಸ ಅಕ್ಕಿ ಬತ್ತ ಒಪ್ಪಿಸುವ ಅವಧಿ
ಜಿಲ್ಲಾ ಕಲೆಕ್ಟರರ ಪ್ರಕಟಣೆ

ಮುಂದಿನ 1ನೆ, 2ನೆ ಮತ್ತು ಮೂರನೆ ಬೆಳೆಗಳ ಮಿಗತಾಯದ ಅಕ್ಕಿಯನ್ನು ಎಸ್ ಕೆ ಸಿ, ಸಿ ಸ್ಟೋರುಗಳಿಗೆ ಒಪ್ಪಿಸುವ ಅವಧಿಗಳನ್ನು ಜಿಲ್ಲಾ ಕಲೆಕ್ಟರರು ಈ ಕೆಳಗಿನಂತೆ ನಿರ್ಣಯಿಸಿರುವರು

1ನೇ ಬೆಳೆ. ಭತ್ತವಾದರೆ ಅರ್ಧಾಂಶ 5–11–47ರೊಳಗೆ, ಇನ್ನೊಂದರ್ಧಾಂಶ 20–11–47ರೊಳಗೆ. ಅಕ್ಕಿಯಾದರೆ ¼ ಅಂಶ 5–11 47, ¼ ಅಂಶ 30 11 47 ¼ ಅಂಶ 15–12–47, ¼ ಅಂಶ 31–12–47ರೊಳಗೆ.

ಹೊಸದುರ್ಗ ಸಬ್ ತಾಲೂಕಿನಲ್ಲಿ, ತವಸ್ತು ಅಕ್ಕಿ, ಭತ್ತ 30–9–47ರೊಳಗೆ; ಚನ್ನಾಲ್ ಅಕ್ಕಿಯಾ ಭತ್ತ 21–10 47 ರೊಳಗೆ ಒಪ್ಪಿಸತಕ್ಕದ್ದು.

2ನೇ ಬೆಳೆ: ಇಡಿ ಜಿಲ್ಲೆಯದು ಭತ್ತವಾದರೆ 15-3–48ರೊಳಗೆ; ಅಕ್ಕಿಯಾದರೆ 31–3–48ರೊಳಗೆ ಒಪ್ಪಿಸತಕ್ಕದ್ದು. ಕಾರ್ಕಳ ತಾಲೂಕಿನ ಪಟ್ಟದಲ್ಲಿಯ ಅಕ್ಕಿಯಾ ಭತ್ತ 31–5–48ರೊಳಗೆ. ಕುಂದಾಪುರ ತಾಲೂಕಿನ ಹೆಬ್ಬಿಗೆ, ನಾಗೋಡಿ, ಕೋಟೆ ಶಿರೂರು ಹಳ್ಳಿಗಳ ಅಕ್ಕಿ ಯಾ ಭತ್ತ 31–5–48ರೊಳಗೆ ಒಪ್ಪಿಸಲ್ಪಡಬೇಕು.

3ನೇ ಬೆಳೆ: ಇಡಿ ಜಿಲ್ಲೆಯೊಳಗೆ ಅಕ್ಕಿ ಯಾ ಭತ್ತ 15–8–48ರೊಳಗೆ ಒಪ್ಪಿಸತಕ್ಕದು

ಹಿಂದೆ ಪ್ರಕಟವಾದ ಬೆಲೆಗಳೇ ಮುಂದುವರಿಯುವವು ಅವಧಿ ಮೀರಿದ ಅಕ್ಕಿ ಯಾ ಭತ್ತಕ್ಕೆ ಕ್ರಮವಾಗಿ ಮುಡಿಯಲ್ಲಿ ರೂ ಒಂದು, ಮತ್ತು ಆಣೆ 8ನ್ನು ಕಡಿಮೆ ಕೊಡಲಾಗುವುದು ಮೊದಲನೆ ಕಂತನ್ನು ಅಕ್ಕಿ ಯಾ ಭತ್ತದ ರೂಪದಲ್ಲಿ ಕೊಡಬಹುದು

ತೋಟದ ಸ್ಪರ್ಧೆ

ದ ಕ ಜಿಲ್ಲಾ ಎಡ್ವಾನ್ಸ್‌ಮೆಂಟ್ ಸಂಘದ ಸಭೆ ಜಿಲ್ಲಾ ಕಲೆಕ್ಟರರ ಬಂಗಲೆಯಲ್ಲಿ ಇತ್ತೀಚೆಗೆ ಸೇರಿ ಇದೇ ಬರುವ ಅಕ್ಟೋಬರ 25ರಂದು ಇಲ್ಲಿಯೆ ಅದರ ಸುಮಾರಿಗೆ ಒಂದು ಹೂ ಹಣ್ಣು ತರಕಾರಿ ಪ್ರದರ್ಶನವನ್ನು ಜರಗಿಸಲು ನಿರ್ಣಯಿಸಲಾಗಿದೆ ಇದರೊಂದಿಗೆ ತೋಟಗಳ ಸ್ಪರ್ಧೆಯೂ ಅದೇ ತಿಂಗಳಲ್ಲಿ ಜರಗಿಸಲ್ಪಡುವುದು ಚಾರಿತ್ರಾರ್ಹವಾದೀ ವರ್ಷದಲ್ಲಿನ ಈ ಎರಡೂ ಸ್ಪರ್ಧೆಗಳು ಅತಿ ಹೆಚ್ಚಿನ ಉತ್ಸಾಹಿಗಳಿಂದ ಭಾಗವಹಿಸಲ್ಪಡುವಂತಾಗಲೆಂದು ಹಾರೈಕೆ ಇದೆ

ಕರ್ನಾಟಕದ ಕಂಬನಿ
ಮುದವೀಡು ಕೃಷ್ಣರಾಯರು ದಿವಂಗತರಾದರು

ಕನ್ನಡನಾಡು ಮರುದಾಗಬೇಕಾದರೆ ಅದು ಒಂದಾಗಬೇಕು ಎಂದು ಗರ್ಜಿಸಿದ ಸುಪ್ರಸಿದ್ಧ ಕನ್ನಡ ಸಂತತಿಗಳೂ, ಜನತೆಯ ದುರಿಣರೂ, ವಯೋವೃದ್ಧರೂ, ಜ್ಞಾನವೃದ್ಧರೂ ಆದ ಮುದವೀಡು ಕೃಷ್ಣರಾಯರು ನಿಧನ ಹೊಂದಿದರೆಂಬ ವಾರ್ತೆಯು ಇಡೀ ಕನ್ನಡ ನಾಡನ್ನೇ ದುಃಖಿಸ್ಸಿದೆ. ಮಾಡಿದೆ ಭಾರತ ಸೇವಕರೂ, ಕನ್ನಡದ ನಾಯಕರೂ ಆಗಿದ್ದ ಈ ಹಿರಿಯ ಪ್ರತಿಭಾವಂತ ವ್ಯಕ್ತಿಯ ಮರಣದಿಂದ ತುಂಬಲಾಗದೊಂದು ನಷ್ಟವು ನಮ್ಮ ನಾಡಿಗಾಗಿರುತ್ತದೆ ಅವರ ಜೀವನದೆರಡು ಗುರಿಗಳಲ್ಲೊಂದು ಭಾರತ ಬಂಧ ವಿಮೋಚನೆಯಾದುದನ್ನವರು ಕಂಡರಾದರೂ ಇನ್ನೊಂದು ಗುರಿಯಾಗಿದ್ದ ಕರ್ನಾಟಕ ಏಕೀಕರಣವನ್ನು ಕಾಂಬುವವರಾಶೆಯು ಪರಿಪೂರ್ಣವಾಗುವ ಮೊದಲೇ ಅವರ ಭೌತಿಕ ಶರೀರವನ್ನು ಕಳೆದು ಪಾರಮಾರ್ಥಿಕದೆಡೆ ಸಾಗಿದುದು ಸ್ವಲ್ಪ ಖೇದದಾಯಕವಾದರೂ ಅವರು ಆವೊಂದು ಧ್ಯೇಯಕ್ಕಾಗಿ ನಿರ್ವಹಿಸಿದ್ದ ಅವಿಶ್ರಾಂತ ಯತ್ನಗಳು ಗುರಿಯತ್ತ ಯಶಸ್ವಿಯಾಗಿ ಸಾಗುತ್ತಲಿರುವುದೊಂದು ಸಮಾಧಾನದ ಸಂಗತಿ

'ಸ್ವದೇಶಾಭಿಮಾನಿಯ' ಪೂಜ್ಯ ಸ್ಥಾಪಕರಾದ ಕೀರ್ತಿ ಶೇಷ ಶ್ರೀನಿವಾಸ ಕಾಮತರ ಆಪ್ತ ಮಿತ್ರರೂ, ಸಲಹೆಗಾರರೂ, ಪತ್ರಿಕೋದ್ಯಮ, ಅಚ್ಚು ಕೆಲಸಗಳಲ್ಲಿ ಸಹೋದ್ಯೋಗಿಗಳೂ ಆಗಿದ್ದ ಮುದವೀಡು ಅವರು ಮರಣಾಂತ್ಯದ ತನಕ ಕನ್ನಡ ನುಡಿ ನಾಡುಗಳ ಅಭಿವೃದ್ಧಿಗಾಗಿ ಸಲ್ಲಿಸಿದ ಸೇವೆಗೆ ಕನ್ನಡಿಗರೆಲ್ಲರೂ ಚಿರಕೃತಜ್ಞರಾಗಿರುವರು. ಎಪ್ಪತ್ತಕ್ಕೂ ಮಿಕ್ಕಿದ ವೃದ್ಧಾಪ್ಯದಲ್ಲಿ ಅವರು ಪ್ರದರ್ಶಿಸುತಿದ್ದ ಅಸಾಧಾರಣ ತಾಳ್ಮೆ ಚಿತ್ತ ಸಾಮರ್ಥ್ಯಗಳು ಕಿರಿಯ ಜನಾಂಗಕ್ಕೊಂದು ಆದರ್ಶವೇ ಆಗಿದ್ದುವು. ಅವರ ಅನನುಕರಣೀಯವೂ, ಸ್ಫೂರ್ತಿದಾಯಕವೂ ಮತ್ತು ಅಮೋಘ ಶೈಲ್ಯಾಲಂಕಾರ ಪರಿಪೂರ್ಣವೂ ಆದ ಭಾಷಣ ವೈಖರಿಯು ಎಂಥವರಲ್ಲೂ ನುಡಿ ಪ್ರೇಮಾದರಗಳನ್ನು ಹುಟ್ಟಿಸುತಿದ್ದವು ಅವರ ಸರಳ ವೇಷಭೂಷ, ಅವರ ಬಿಚ್ಚು ಹೃತ್ಪೂರ್ವಕತೆ, ಸ್ನೇಹ ಶೀಲಗಳೂ ನಾಗರೀಕ ವ್ಯವಹಾರ ಜೀವನದ ಮಾದರಿಯಾಗಿದ್ದುವು. ಪಂಡಿತ್ ಜವಾಹರಲಾಲರೊಡನೆ ಭಾಷಾಂತರಕಾರರಾಗಿ ಅವರು ನಮ್ಮ ಜಿಲ್ಲೆಗೆ ಬಂದಿದ್ದು ತಮ್ಮ ಭವ್ಯ ಭಾಷಾ ಪ್ರೌಢಿಮೆಯಿಂದ ಇಂದಿನ ಭಾರತಮಾತ್ಮನ ಸ್ಫೂರ್ತಿ ಭಾವಗಳನ್ನು ಕನ್ನಡ ಜನತೆಯ ಹೃದಯದಲ್ಲಿ ಮುದ್ರಿಯೊತ್ತಿದಂತೆ ಅರಳಿಸಿದ ಕೀರ್ತಿ ಮುದವೀಡರಿಗೆ ಸಲ್ಲುತ್ತವೆ ಚಲಚಿತ್ರ ನಾಟಕಗಳಲ್ಲೂ ಪಾತ್ರ ವಹಿಸಿ ದಿವಂಗತರು ತಮ್ಮ ಕಲಾ ಪ್ರೇಮವನ್ನು ನಿರೂಪಿಸಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಅವರ ಶೋಕಿತ ಬಂಧು ಬಳಗಕ್ಕೆ ಸಮಾಧಾನವನ್ನೂ ಪರಮಾತ್ಮನೊದಗಿಸಲೆಂದು ಪ್ರಾರ್ಥಿಸುತ್ತೇವೆ

ಸುಪ್ರಸಿದ್ಧ ನರ್ತಕರಾದ ಕುಲಕರ್ಣಿ ಶ್ರೀನಿವಾಸರ
ಅಖಿಲ ಭಾರತ ಪ್ರವಾಸ

ದಕ್ಷಿಣ ಹಿಂದುಸ್ಥಾನ ಹಾಗು ಸಿಲೋನುಗಳಲ್ಲಿ ಅನೇಕ ಸಲ ತಮ್ಮ ನೃತ್ಯ ಮಂಡಲಿಯೊಡನೆ ಪ್ರವಾಸ ಮಾಡಿ ಪ್ರಮುಖ ಪಟ್ಟಣಗಳಲ್ಲಿ ತಮ್ಮ ಅಮೋಘ ನೃತ್ಯ ಪ್ರದರ್ಶನದಿಂದ ನರ್ತಕರನ್ನು ಮುಗ್ಧಗೊಳಿಸಿದ ಶ್ರೀಮಾನ್ ಕುಲಕರ್ಣಿ ಶ್ರೀನಿವಾಸ ಬಿ ಎ ಅವರು ಅನೇಕ ಸುಂದರ ನರ್ತಕಿಯರು, ಕೀರ್ತಿವಂತ ನರ್ತಕರು, ನುರಿತ ಪಾತ್ರಗಾರರೊಡನೆ ತ್ರಿಚನಾಪಳ್ಳಿಯಿಂದ ದಿಲ್ಲಿಯ ವರೆಗೆ ಪ್ರವಾಸ ಮಾಡುವವರಿದ್ದಾರೆ ಕಥಕ್ಕಳಿ, ಭರತ ನಾಟ್ಯ, ಕಥಕ್ ಮೊದಲಾದ ಭಾರತೀಯ ನೃತ್ಯಗಳನ್ನು ಪ್ರದರ್ಶಿಸುವುದಲ್ಲದೆ ಕರ್ನಾಟಕದ ವಿಶಿಷ್ಟ ನರ್ತನವಾದ ಯಕ್ಷಗಾನವನ್ನು ಕೂಡ ಪ್ರದರ್ಶಿಸುವವರಿದ್ದಾರೆ ಅಲ್ಲದೆ ಈಗ ಆದ ಪ್ರವಾಸದಲ್ಲಿ ಕರ್ನಾಟಕದ ಕೆಲವು ಕಲಾವಿದರಿಗೆ ಕೂಡ ಅವಕಾಶವನ್ನು ಕಲ್ಪಿಸಿಕೊಡಬೇಕೆಂದಿದ್ದಾರೆ ಮಂಡಲಿಯಲ್ಲಿ ಸೇರಬಯಸುವ ನರ್ತಕರು, ನಾಟ್ಯಗಾರರು, ಗಾಯಕರು "ಸಂಚಾಲಕ ನೃತ್ಯಭಾರತ ಗಿರಾಯಪೇಟೆ ಹೈರೋಡು ಮದ್ರಾಸು" ಇವರೊಡನೆ ಪತ್ರವ್ಯವಹಾರ ಮಾಡಬೇಕು ಕರ್ನಾಟಕದ ಹೆಮ್ಮೆಯ ನರ್ತಕರ ಈ ಭಾರತ ಪ್ರವಾಸದಲ್ಲಿ ಕನ್ನಡ ಕಲಾವಿದರೂ ರಸಿಕರೂ ಸಹಕರಿಸಿ ಅವರ ಈ ಪ್ರವಾಸವು ಕರ್ನಾಟಕಕ್ಕೆ ಹೆಚ್ಚಿನ ಗೌರವ ತರುವಂತೆ ಮಾಡಬೇಕು.

ಮದ್ರಾಸಿನಲ್ಲಿರುವ ದಿ ಕರ್ನಾಟಕ ಮಿತ್ರಮಂಡಲಿ: (Regd) ಇದರ ವಾರ್ಷಿಕ ಮಹಾಸಭೆಯು ತಾರೀಕು 31 8 47 ನೇ ಆದಿತ್ಯವಾರ "ವುಡ್ ಲ್ಯಾಂಡ್"ನಲ್ಲಿ ಮದ್ರಾಸು ಸರಕಾರದ ಮುಖ್ಯ ಇಲೆಕ್ಟ್ರಿಕ್ ಇನ್ಸ್ಪೆಕ್ಟರರಾದ ಕೆ. ಪಿ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ಆಫೀಸು ಬೇರರನ್ನು ನೇಮಿಸಲಾಯಿತು.

ಅಧ್ಯಕ್ಷರು. ಡಾಕ್ಟರ್ ಎಚ್. ಎಂ. ರಾವ್, ಡಿ. ಡಿ. ಎಸ್. (ಯು. ಎಸ್. ಎ.) ಕಾರ್ಯದರ್ಶಿ 1. ಶ್ರೀ ಕೆ. ಧನಪತಿ. (ರಿಸರ್ವ್ ಬೇಂಕಿನವರು) 2. ಡಾಕ್ಟರ್. ಪಿ. ಶೇಷಗಿರಿರಾವ್.

ಗಡಿನಾಡಿನ ಗಾಂಧಿ — ಪಠಾಣರ ಅರಸು

ಅಬ್ದುಲ್ ಗಫೂರ್ ಖಾನರ ಧೀರೋದಾತ್ತ ಜೀವನ

ಗುಂಡಿನ ಜನರಲ್ಲಿ ಗಾಂಧಿ ತತ್ವ ಪ್ರಚಾರ

ಖಾನ್ ಅಬ್ದುಲ್ ಗಫೂರ್ ಖಾನ್ ಮಿತ್ರರ ಸಹೋದರ ಡಾ| ಖಾನ್ ಸಾಹೇಬರನ್ನು ಪಾಕಿಸ್ತಾನ ಸರಕಾರವು ಕೈದು ಮಾಡಿದೆಯೆಂದು ಸುದ್ದಿಗಳು ಬಂದಿವೆ. ಇದು ನಿಜವಿದ್ದರೆ ಹೆಚ್ಚಿನ ಪಠಾಣರಿಗೆ ತಮ್ಮ ಬಾದಶಾ (ಅರಸು)ನು ಬಂಧಿಸಲ್ಪಟ್ಟಿರುವುದು ಅತ್ಯಂತ ಖೇದದ ಸಂಗತಿಯಾಗುವುದು ಕಾರಣ ಹೆಚ್ಚಿನ ಪಠಾಣರಿಗೆ ಗಫೂರ ಖಾನರ ಮೇಲಿದ್ದಷ್ಟು ಅಭಿಮಾನ ಇತರರಾರ ಮೇಲೂ ಇಲ್ಲ.

ಪಠಾಣರದೊಂದು ತಿರುಕ, ದರೋಡೆಗಾರರ, ಕೊಲೆ ಸುಲಿಗೆಖೋರರ ಜನಾಂಗವೆಂದು ಹಲವರ ಅಭಿಪ್ರಾಯ. 'ಪ್ರಾಚೀನ ಗ್ರೀಕರು ಇವರನ್ನು ಬೆಕ್ತಿಯಾನರೆಂದು ಕರೆಯುತಿದ್ದು 'ಚಿನ್ನ ಮತ್ತು ಸಾಂಬಾರ ಜೀನಸುಗಳ ವ್ಯಾಪಾರವೇ ಅವರ ಮುಖ್ಯ ಉದ್ಯೋಗ'ವೆಂದು ಬರೆದ ಉಲ್ಲೇಖಗಳಿವೆ ಹೆರೋಡೆಟಸ್ ಎಂಬ ಗ್ರೀಕ್ ಸಂಚಾರಿಯು ಇವರ ಈ ವ್ಯಾಪಾರ ದೃಷ್ಟಿಯ ವಿಷಯ ಕೇಳಿದವನಾಗಿ ಪಠಾಣರನ್ನು ಯೆಹೂದಿ ಜನರೆಂದು ಕರೆದಿದ್ದಾನೆ. ಆದರೆ ನಿಜವಾಗಿ ಈ ಭಾವನೆ ಕೇವಲ ತಪ್ಪು ತಿಳುವಳಿಕೆಯದು ಇಂದಿನ ಪಠಾಣರು ಇಂತಹದೇ ನಿರ್ದಿಷ್ಟವಾದೊಂದು ಜನಾಂಗ ಮೂಲದವರೆಂದು ಹೇಳಬರುವುದಿಲ್ಲ. ಮಧ್ಯಪೂರ್ವದ ಆಸ್ಯದಿಂದ ಭಾರತಕ್ಕೆ ಬರುವ ಕಣಿವೆ ಪ್ರದೇಶದಲ್ಲಿರುವ ಈ ಜನರಲ್ಲಿ ಇಲ್ಲಿಗೆ ಬಂದ ಗ್ರೀಕ್, ಪರ್ಶಿಯನ್, ಮಂಗೋಲ ಮತ್ತು ತುರ್ಕಿ ಎಲ್ಲಾ ಜನಾಂಗದ ಮಿಶ್ರ ರಕ್ತಲಕ್ಷಣಗಳಿವೆ

ಒಂದು ಕಾಲದಲ್ಲಿ ಇದೇ ಪಠಾಣರು ಬೌದ್ಧರಾಗಿದ್ದರೆಂಬುದಕ್ಕೆ ಈಗಲ್ಲಿ ದೊರಕುವ ಅಸಂಖ್ಯಾತ ಬೌದ್ಧ ಅವಶೇಷಗಳೇ ನಿದರ್ಶನ ಅಂದಮೇಲೆ ಅದಕ್ಕಿಂತ ಮುಂಚೆ ಅವರು ಹಿಂದೂಗಳಾಗಿಯೇ ಇದ್ದಿರಬೇಕೆಂಬುದು ಸ್ವತಃ ಸಿದ್ಧವಾಗುತ್ತದೆ ಮಾತ್ರವಲ್ಲ ಇಂದು ಗಫೂರ್ ಖಾನರಂತಹ ಪಠಾಣಿ ನಾಯಕರು ಅಹಿಂಸಾತತ್ವಕ್ಕನುಸಾರವಾಗಿ ವಿಶಾಲ ಹಿಂಬಾಲಕರನ್ನು ಸಂಘಟನೆಗೊಳಿಸಿ ಕುದಾಯ ಕಿದ್ಮತ್ತಗಾರರೆಂಬ 'ದೇವರ ಸೇವಕರ' ಪಡೆಯನ್ನು ವ್ಯವಸ್ಥಿಸಿದ್ದು ಪಠಾಣನ ಪ್ರಾಚೀನ ಸಾಂಸ್ಕೃತಿಕ ಪರಿಷ್ಕರಣದ ಪರಿಣಾಮವೆನ್ನಬಹುದು

ಆದರೆ ಇಂದು ಪಠಾಣರೆಲ್ಲರೂ ಇಸ್ಲಾಮ್ ಮತಾನುಯಾಯಿಗಳು ಗಫೂರ್ ಖಾನರು ಆ ಮತದ ನಿಜವಾದ ತತ್ವಗಳ ಸಾರವನ್ನು ಜಗತ್ತಿಗೇ ಪ್ರದರ್ಶಿಸಿ ತೋರಿಸಲು ತಮ್ಮ ಜೀವನವನ್ನು ಮೀಸಲಾಗಿಟ್ಟಿದ್ದಾರೆ ಪಠಾಣರು ಎಲ್ಲದಕ್ಕಿಂತ ಹೆಚ್ಚಾಗಿ ತಮ್ಮ ಮನೆ ಮಠಗಳ ಭದ್ರತೆಯನ್ನು ಪ್ರೀತಿಸುವರು ದೇಶದ ಇತರ ಭಾಗದಿಂದ ಸಂಪೂರ್ಣ ಕಡಿದಂತಿರುವ ಅವರ ನಾಡು ಅಲ್ಪಸ್ವಲ್ಪ ಕೃಷಿಗಾರಿಕೆಯಿಂದ ವ್ಯವಸಾಯಗೊಳಿಸಲ್ಪಟ್ಟಿದೆ ಜನಸಂಖ್ಯೆಯ ದಾಮಾಶಯದಲ್ಲಿ ಆದಾಯವು ಬಹಳ ಕಡಿಮೆ ಪಠಾಣ ಅಗಾಧ ಶರೀರಧಾರ್ಡ್ಯವುಳ್ಳ ವ್ಯಕ್ತಿ. ಅವನೆಲ್ಲರಂತೆಯೂ ಸಮಾಜ ಜೀವಿ ತನ್ನ ಸಂಸಾರವನ್ನು ಸಾಕಲು ಆರ್ಥಿಕ ಅಡಚಣೆಯಾದಾಗ ಅವನು ಯಾವ ಮತೀಯ ತತ್ವವನ್ನೂ ಗೌರವಿಸುವುದಿಲ್ಲ ಮತ್ತೆ ಅವನು ಅವನ ತೀಕ್ಷ್ಣ ಗುರಿಯ ಕೋವಿಯೂ ಕೆಲಸಗೈಯ್ಯುವವು. ಅವನ ಹೋರಾಟ ಪ್ರತ್ಯೇಕ ಬಡತನ, ನಿರಕ್ಷರತೆಯೊಂದಿಗೆ. ಓರ್ವ ಪಠಾಣನಿಗೆ ಸಾಕಷ್ಟು ಅನ್ನ ಬಟ್ಟೆ ಸಿಗುವಂತಾಗಲಿ, ಅವನಷ್ಟು ವಿಶ್ವಾಸದಸ್ನೇಹಿತ, ಅವನಷ್ಟು ಆತಿಥ್ಯಮಾಡುವ ನೆರೆಯವ ಇನ್ನೊಬ್ಬ ದೊರಕಲಿಕ್ಕಿಲ್ಲ.

ಇಂತಹ ಜನತೆಯನ್ನು ಸತ್ಪಥಕ್ಕೆ ತರಲು ಗಫೂರ್ ಖಾನರು ನಿರ್ಧರಿಸಿದರು. ಅವರ ತಂದೆ ಬೈರಾಮುಖಾನರು ಒಂದು ಪಠಾಣಿ ಪಂಗಡದ ಗುರಿಕಾರರು. ಸರ್ವಸಾಧಾರಣವಾಗಿ ಪಠಾಣಿ ತುಂಡು ಪಾಳೆಯಗಾರರಲ್ಲಿಲ್ಲದ ಕೆಲವು ವಿಶಿಷ್ಟ ಗುಣಗಳು ಬೈರಾಮು ಖಾನರಲ್ಲಿದ್ದುದರಿಂದ ಅದು ಪಾರಂಪರ್ಯವೆಂಬಂತೆ ಅವರ ಮಕ್ಕಳಲ್ಲಿ ಸಂಪೂರ್ಣ ಆವಿರ್ಭೂತವಾದುವು. ಮೊದಲನೆಯದಾಗಿ ಬೈರಾಮುಖಾನರಿಗೆ ಶತ್ರುಗಳೆಂದಿಲ್ಲ ಅವರ ಈ ಉದಾತ್ತ ಕ್ಷಮೆ ಮತ್ತು ತಾಳ್ಮೆ ಗುಣಗಳು ಗಫೂರಖಾನರಲ್ಲಿ ಪೂರ್ಣ ಪ್ರತಿಬಿಂಬಿಸಿದುದರಿಂದಲೇ ಅವರು ಈತ್ತೀಚೆಗೆಂಬಂತೆ ಮುಸ್ಲಿಂ ಲೀಗಿಗೆ ಒಪ್ಪಂದದ ಮಾತುಕತೆಗಾಗಿ ಆಹ್ವಾನಿಸಿದರು ಬೈರಾಮುಖಾನರು ತಮ್ಮ ಜೀವಮಾನದಲ್ಲೇ ಅಸತ್ಯವನ್ನಾಡಲಿಲ್ಲವೆಂಬ ಸಂಗತಿಯು ಕೌತುಕವನ್ನುಂಟು ಮಾಡಬಹುದಾದರೂ ಶೂರ ಪಠಾಣನೊಬ್ಬನ ಬಿಚ್ಚು ಹೃದಯದ ಲಾಕ್ಷಣಿಕ ಗುಣಧಾರ್ಡ್ಯದ ಸರ್ವಸಾಧಾರಣ ನಿದರ್ಶನವೆಂದು ತಿಳಿಯಬೇಕು ಆದುದರಿಂದ ಸತ್ಯ ಅಹಿಂಸೆಯ ಗಾಂಧೀತತ್ವದ ಕಡೆಗೆ ಗಫೂರ್ ಖಾನರು ಆಕರ್ಷಿತರಾದುದಕ್ಕೆ ಈ ಕುಲಶೀಲ ಸಂಸ್ಕಾರವೊಂದಿದೆಯೆಂಬುದನ್ನು ನಾವು ನೆನಪಿಟ್ಟುಕೊಳ್ಳತಕ್ಕದ್ದು

ಚಿಕ್ಕಂದಿನಿಂದ ಗಫೂರ್ ಖಾನರು ವಿಚಿತ್ರಾಚರಣೆ, ವರ್ತನೆಗಳ ಬಾಲಕನಾಗಿದ್ದ ಅವರು ಮಾಡುತ್ತಿದ್ದ ಎಲ್ಲಾ ಚಟುವಟಿಕೆಗಳಲ್ಲಿ ಗಣನೀಯವೂ ಪನಸ್ಥಿತಿಕೆಯದೂ ಆದೊಂದು ಉದ್ದೇಶವು ಕೂಡಿಕೊಂಡಿರುತಿತ್ತು ಮೇಲಾಗಿ ಬೈರಾಮು ಖಾನರ ಪಂಚಪಾಂಡವರ್ರಂತಹ ಐದು ಮಕ್ಕಳಲ್ಲಿ ಇವರು ಕಿರಿಯವರಾಗಿದ್ದು ತಾಯಿಯ ಮುದ್ದಾಗಿದ್ದರು ಹಿರಿಯ ಮಗ ಬ್ರಿಟಿಷ ಸೈನ್ಯವೊಂದರಲ್ಲಿ ಕೆಪ್ಟನನಾಗಿದ್ದ ಆದರೆ ಈ ಕಿರಿಯನಿಗೆ ಬ್ರಿಟಿಷರ ಕೈಕೆಳಗಿರುವುದು ಚಿಕ್ಕಂದಿನಿಂದ ಸಹಿಸಲಾಗದ ವಿಷಯ ತಂದೆಯು ಮಗನ ಸ್ವತಂತ್ರ ಪ್ರೇಮಕ್ಕೆ ಅಡ್ಡಿ ಮಾಡಲಿಲ್ಲ ಹೀಗಾಗಿ ಆರಡಿ ಮೂರಂಗುಲ ಎತ್ತರ ಬೆಳೆದ ಗಫೂರ ಖಾನರು ಮನೆ ಮಗನಾಗಿ ಒಂದು ಹಳ್ಳಿಯ ಜಾಗೀರನ್ನು ನೋಡಿಕೊಳ್ಳುತಿದ್ದರು ಸಮತಾರುಣ್ಯದಲ್ಲಿ ಅವರಿಗೆ ಮದುವೆಯೂ ಆಯಿತು ಸಂಸಾರ ಜೀವನದಿಂದಾದರೂ ಸುಧಾರಿಸುಕೊಳ್ಳುವನೋ ಎಂದು ತಂದೆಯ ಹಾರೈಕೆ

ಗಫೂರ್ ಖಾನ್ ದಂಪತಿಗಳು ಅನ್ಯೋನ್ಯ ಸಾಮರಸ್ಯದಿಂದ ಜೀವನ ಸಾಗಿಸುತಿದ್ದರು. ಅವರದೊಂದು ಆದರ್ಶ ಸಂಸಾರವೆನಿಸಿತ್ತು ಆದರೆ ಅನೇಕ ದೇಶ ಪ್ರೇಮಿಗಳಿಗೆ ಸಮಾನವಾದೊಂದು ದುರ್ವಿಧಿಯೆಂಬಂತೆ ಎರಡು ಗಂಡು ಮಕ್ಕಳನ್ನು ಅರ್ಪಿಸಿ ಖಾನರ ಪತ್ನಿ ಕೇವಲ 28 ವರ್ಷ ಪ್ರಾಯದಲ್ಲಿ ಮೃತಳಾದುದು ಶೋಚನೀಯ ಆದರೆ ಆನಂತರದಿಂದ ಗಫೂರ್ ಖಾನರು ತಮ್ಮ ಜನಾಂಗದ ಸೇವೆಯಲ್ಲಿ ಅನುರಾಗ ತಾಳಿದವರಾಗಿ ದಾಂಪತ್ಯ ದುಃಖವನ್ನು ಮರೆಯುವಂತಾಗುದುದು ದೇಶದ ಸೌಭಾಗ್ಯವಾಗಿ ಪರಿಣಮಿಸಿತೆಂದು ಸಮಧಾನ ತಾಳಿಕೊಳ್ಳಬಹುದು ಅಂದಿನಿಂದ ಮೊದಲ ಕುಡ್ಯೆ ಕಿದ್ಮತ್‌ಗಾರನ (ದೇವರ ಸೇವಕರು) ಜನನವಾಯಿತು

ತಮ್ಮ ಜನದ ಕರುಣಾಜನಕ ದಾರಿದ್ರ್ಯ, ನಿರಕ್ಷರತೆ, ಮತಾಂಧತೆ ಮತ್ತು ಅವ್ಯಸ್ಥಿತ ಜೀವನವನ್ನು ಕಂಡು ಅವರು ಮರುಗಿದರು ಕೊಲೆ ಸುಲಿಗೆ, ದರೋಡೆ ಅಂತಕಲಹದಲ್ಲಿಯೂ, ಅಜ್ಞಾನ, ಅನಾರೋಗ್ಯಗಳಲ್ಲಿಯೂ ಮುಳುಗಿದ ಜನಾಂಗವೊಂದನ್ನು ಪುನರ್ಜೀವನಗೊಳಿಸುವುದು ಹಿಮಾಲಯ ಕಾರ್ಯ ಆದರೂ ಗಫೂರ್ ಖಾನರು ಅದಕ್ಕೇ ಕಂಕಣ ತೊಟ್ಟದ್ದು ಶೂರರಿಗೆ ಸಲ್ಲುವ ಕಾರ್ಯ

ಗಫೂರ್ ಖಾನರು ಒಂದು ಶಾಲೆಯನ್ನು ಸ್ಥಾಪಿಸಿದರು. ಸಂಘಟನೆಗಾಗಿ ಅವರು ಮಾಡುತಿರುವ ಭಾಷಣಗಳು ಬ್ರಿಟಿಷರನ್ನು ಕೆರಳಿಸಿದುವು ಪರಿಣಾಮವಾಗೊಂದು ದಿನ ಮಸೀದಿಯಲ್ಲಿ ಅಸಂಖ್ಯಾತ ಪಠಾಣಿ ಸ್ತೋಮದೆದುರು ಭಾಷಣಗೈಯ್ಯುವಾಗ ತಂದೆ ಮಕ್ಕಳಿಬ್ಬರೂ ಕೈದು ಮಾಡಲ್ಪಟ್ಟಿರು ಪುಟ್ಟ ಜಾಲಿಯನ್ ವಾಲಾ ಭಾಗದ ಪ್ರಕರಣವು ಅಲ್ಲಿ ಪುನರಾವರ್ತಿಸಲ್ಪಟ್ಟಿತು ಇದುತನಕ ಬ್ರಿಟಿಷರ ಮೇಲೆ ವಿಶ್ವಾಸವಿಟ್ಟಿದ್ದ ಬೈರಾಮು ಖಾನರಿಗೆ ಈಗ ಮಗನ ಮೇಲೆ ಗೌರವ ಹುಟ್ಟುವಂತಾಯಿತು ಗಫೂರ್ ಖಾನರ ಕೀರ್ತಿಗೆ ಪುಟವಿಟ್ಟಂತೂ ಆಯಿತು ಆಸುಪಾಸಿನ ಪಠಾಣ ಗುರಿಕಾರರು ಅವರನ್ನು ತಮ್ಮ ಅರಸ'ನೆಂದಾಗಿ ಘೋಷಿಸಿದರು ಅಂದಿನಿಂದಿನ ತನಕ ಗಫೂರ್ ಖಾನರು 'ಬಾದಷಾ ಖಾನ'ರಾಗಿ ಮೆರೆಯುತಿದ್ದಾರೆ ಇತ್ತ ಬಾದಷಾಗೆ ಧೈವ ವಶಾತ್ ಗಲ್ಲಿನ ಶಿಕ್ಷೆ ತಪ್ಪಿ ಮೂರು ವರ್ಷ ಸಜೆಯಾಯಿತು 'ತಪ್ಪು ಒಪ್ಪಿ' ಮುಂದೆ ಇಂತಹ ದಂಗೆಯ ಸಂಘಟನೆ ಮಾಡದಿದ್ದರೆ 'ಮಾಫಿ' ಮಾಡುವುದಾಗಿ ದರ್ಪದ ಬ್ರಿಟಿಷ್ ಅಧಿಕಾರಿಯೊಬ್ಬ ತಿಳಿಸಿದ. ಮಾನ ಕಳೆಕೊಳ್ಳುವ ಮಾಫಿಗಿಂತ ಜೀವ ಕ್ಷೀಣಿಸುವ ಜೈಲೇ ಮೇಲೆಂದರು ಬಾದಷಹರು. ಮೂರು ವರ್ಷ ನಂತರ ಹೊರಬರುವಾಗ ಅವರ ದೇಹದ ನೂರು ರಾತ್ತಲ ಭಾರ ಕಮ್ಮಿಯಾಗಿತ್ತು. ನಿಮ್ನ ಮಾನವ ವರ್ಗವೊಂದನ್ನು ಸುಧಾರಿಸ ನೋಡಿದ್ದು ಇವರ ಅಕ್ಷಮ್ಯ ಅಪರಾಧವಾಯಿತು.

ಅವರು ಬಂಧ ವಿಮುಕ್ತರಾದ ಮೇಲೆ ಪಠಾಣರು ಸಾವಿರ ಗಟ್ಲೆಯಲ್ಲಿ ಅವರ ಹಿಂಬಾಲಕರಾದರು ಕುಡ್ಯೆಕಿಡ್ಮತ್‌ಗಾರರ ಕೆಂಪಂಗಿ ದಳವು ಬ್ರಿಟಿಷರ ದಾರಿಯಲ್ಲಿ ಬಲವಾದ ಮುಳ್ಳಾಯಿತು ಇಂದದು ಜಿನ್ನರ ಪಥದಲ್ಲಿ ನಿಂತಿರುವಂತಾಗಿದೆ ಪಠಾಣರಿಗೆ ಅಖಂಡ ಹಿಂದುಸ್ಥಾನದಲ್ಲಿ ನೆಲೆಸಲಿಚ್ಛೆಯಿದೆ ಲೀಗಿನ ಪಾಕಿಸ್ಥಾನ, ಪಂಜಾಬಿ, ಸಿಂಧೀ ಶ್ರೀಮಂತರ ಪಾಕಿಸ್ತಾನ ಅವರಿಗೆ ರುಚಿಸದು ಅದರ ಬದಲಿಗೆ ಪುಟ್ಟ ಪಠಾಣಿಸ್ಥಾನವೇ ಮೇಲೆಂದೂ, ಗಫೂರ್ ಖಾನರೇ ಅದರ ಅನುಭಿಷಕ್ತ ರಾಜನೆಂದೂ ಸದ್ಯದಲ್ಲೇ ಸಿದ್ಧಾಂತವಾಗುವುದು

ಜನಾಂಗ ಮಂಡಳದ ವಿನಂತಿಯನ್ನು ಮನ್ನಿಸಿ ಇಂಡೋನೇಸ್ಯದ ಪ್ರಜಾಪ್ರಭುತ್ವ ಸಂಘದವರು ಯುದ್ಧ ನಿಲ್ಲಿಸಿದ್ದರೂ ಡಚ್ಚರು ಒಂದಲ್ಲ ಒಂದು ನೆವನದಿಂದ ಇನ್ನು ತಮ್ಮ ಗುಂಡುಗಳಿಗೆ ವಿಶ್ರಾಂತಿಕೊಟ್ಟಿಲ್ಲವೆಂದು ತಿಳಿದು ಅಲ್ಲಿಂದ ಬಂದ ವರದಿಗಳಿಂದ ತಿಳಿಯಬಹುದಾಗಿದೆ

卐

ಇದೇ ರೀತಿ ಅಫ್ರಿಕದ ಜನರಲ್ ಸ್ಮಟ್ಸರು ಉದ್ಧಟತನವನ್ನೇ ತೋರಿಸುತಿದ್ದಾರೆ ಕೆಲವು ಸಮಯದ ಹಿಂದೆ ದಕ್ಷಿಣ ಅಫ್ರಿಕದಲ್ಲಿ ಹಿಂದೀಯರಿಗಾಗುವ ಅನ್ಯಾಯವನ್ನು ಸರಿಪಡಿಸಬೇಕೆಂದು ಜನಾಂಗ ಮಂಡಳವು ಒಂದು ನಿರ್ಣಯವನ್ನು ಮಾಡಿತ್ತು ಆದರೆ ಚರ್ಚಿಲ್ ಶಿಷ್ಯರಾದ ಸ್ಮಟ್ಸರು ಅದನ್ನು ಅಲಕ್ಷಿಸಿದಂತಿದೆ

卐

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 47/1947

ಅರ್ಜಿದಾರಳು ತುಳಸಿ ಯಾನೆ ಭಾಗೀರತಿ ಬಾ ಬಿ ಸಾಂತ್ರಪ್ಪೈಗಳ ವಿಧವೆ ಉಡುಪಿ ತಾಲೂಕು ಮೂಡು ತೋನ್ಸೆ ಗ್ರಾಮದ ಕಲ್ಯಾಣಪುರ

ಅರ್ಜಿದಾರಳ ಮಗ ತಾ 22-2-1947 ರಲ್ಲಿ ಮೃತಪಟ್ಟ ಬ್ರದೆಟೆಟ್ಟು ರಾಮದಾಸಸಾಂತ್ರಪ್ಪೈಯು ಆತನ ಜೀವದೆಸೆಯಲ್ಲಿ "The New India Assurance ಕಂಪೆನಿಯಲ್ಲಿ ಪಡದ ನಂಬ್ರ 108247ನೇ ಪೊಲಿಸಿಯ ಬಾಬ್ತು ಸದರಿ ಕಂಪೆನಿಯಿಂದ ಬರ್ತಕ್ಕ ರೂಪಾಯಿ 998-0-0ನ್ನು ವಸೂಲು ಪಡೆಯುವರೆ ತಾನು ಹಕ್ಕುದಾರಳೆಂತಲೂ, ಆ ಕುರಿತು ತನ್ನ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಸಹಾ ಅರ್ಜಿದಾರಳು ಬರಕೊಂಡ ಮೇಲ್ಕಂಡ ಅರ್ಜಿಯು ತಾರೀಕು 1-10-1947 ಕ್ಕೆ ತನಖೆಗೆ ಇಟ್ಟಿರುವದರಿಂದ ಈ ಕುರಿತು ಯಾರಾದರೂ ಆಕ್ಷೇಪ ಹೇಳುವವರು ಯಿದ್ರೆ ಸದರಿ ತಾರೀಕಿನ ದಿವ್ಸ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಅವರ ಆಕ್ಷೇಪಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದೆಂತ್ರ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸೋಣಾಗಿಯದೆ.

M Damodar Kamath.
Advocate for Petitioner.

ಉಡುಪಿ. ದ. ಕ. ತಾ. 11-9-1947

ಮಗುವಿನ ಮೃದು ಚರ್ಮಕ್ಕೆ
ಹೆಚ್ಚು ರಕ್ಷಣೆಬೇಕು.

ಕುಟಿಕುರಾ ಸಾಬೂನು ಮಗುವಿನ ಮೃದು ಚರ್ಮರಕ್ಷಣೆ ಮಾಡುತ್ತದೆ ಅದನ್ನು ನಿಜ ಆರೋಗ್ಯದಲ್ಲಿರಿಸಿ ಅದರ ಸಹಜ ತೇವವನ್ನು ಕಾಪಾಡುತ್ತದೆ ಉಷ್ಣ ಪ್ರದೇಶಗಳಲ್ಲಿ ಇದು ಅವಶ್ಯ

554

ಕುಟಿಕೂರಾ ಸಾಬೂನು
CUTICURA SOAP

ಗಾಂಧೀ ವಿಚಾರ ದರ್ಶನ

ಗೋರಕ್ಷಣೆ

"ಭಾರತ ಒಕ್ಕೂಟದಲ್ಲಿ ಗೋವಧೆ ನಿಲ್ಲಿಸುವ ಕಾಯಿದೆ ಪಾಸು ಮಾಡಬೇಕೆಂದು ಕೆಲವರೆನ್ನುತ್ತಾರೆ, ಹಾಗೆ ಮಾಡ ಹೋದರೆ ದೊಡ್ಡ ತಪ್ಪಾಗುವುದು. ಮುಸ್ಲಿಮರು ಸ್ವಯಂ ಸ್ಫೂರ್ತಿಯಿಂದ ಗೋ ಹತ್ಯವನ್ನು ಬಿಡುವಂತೆ ಅತ್ಯಂತ ಚಾಕ ಚಕ್ಯದಿಂದ ಹಿಂದೂಗಳು ಮುಸ್ಲಿಮರ ಸಹಾನುಭೂತಿಯನ್ನು ಪಡೆಯಲು ಶಕ್ಯರಾದಾಗ ಮಾತ್ರ ಗೋವನ್ನು ಉಳಿಸಬಹುದು. ಬಲಾತ್ಕಾರದ ಕಾಯಿದೆ ತಂದರೆ ಹಿಂದೂಗಳಿಗೆ ಅದರಿಂದ ಅನ್ಯಾಯವೇ ಸಂಭವಿಸುವುದು ಯಾವ ಜಾತಿಗೇ ಸೇರಿದ ಆ ಮನುಷ್ಯನಾದವನನ್ನು ನ್ಯಾಯ ದೃಷ್ಟಿಯಿಂದ ನಡೆಸಿಕೊಂಡಾಗ ಮಾತ್ರ ಹಿಂದೂ ಧರ್ಮವನ್ನುಳಿಸಿಕೊಳ್ಳಬಹುದು"

ಧರ್ಮ

ಧರ್ಮವು ವ್ಯಕ್ತಿಗತವಾದುದು ಅದನ್ನು ವ್ಯಕ್ತಿಗತವಾಗಿಯೇ ಇಟ್ಟುಕೊಳ್ಳುವಲ್ಲಿ ನಾವು ಯಶಸ್ವಿಯಾದರೆ ನಮ್ಮ ರಾಜಕೀಯ ಜೀವನವು ಸುಸೂತ್ರವಾಗುವದು. ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ನಾವು ಯೋಗ್ಯ ರೀತಿಯಿಂದ ಕಾರ್ಯ ಮಾಡಿ ಬಂಧುತ್ವವನ್ನು ತೋರಿಸದಿದ್ದರೆ ವಿಶ್ವ ಬಂಧುತ್ವದ ಬಗ್ಗೆ ಈಗ ತೋರಿಸುತ್ತಿರುವ ಔದಾರ್ಯವನ್ನೆಲ್ಲ ಕೇವಲ ತೋರಿಕೆಯದಾಗಿ ಪರಿಣಾಮಿಸುವುದು. ಸರಕಾರಿ ಅಧಿಕಾರಿಗಳು ಮತ್ತು ಸಾರ್ವಜನಿಕರು ಕೂಡಿಯೇ ಹೊಣೆಯನ್ನು ಹೊತ್ತುಕೊಂಡು ಲೌಕಿಕ ರಾಜ್ಯವನ್ನು ಕಟ್ಟಲಿಕ್ಕೆ ಹೃತ್ಪೂರ್ವಕವಾಗಿ ಕಾರ್ಯ ಮಾಡಿದ್ದಾದರೆ ಇಡೀ ಜಗತ್ತಿನಲ್ಲಿ ವೈಭವ ಶಾಲಿಯಾಗುವ ಹೊಸ ಹಿಂದೂಸ್ಥಾನವನ್ನು ನಾವು ಕಟ್ಟಬಲ್ಲೆವು"

ಅಲ್ಲಾಹೋ ಅಕ್ಬರ್

"ಈ ಘೋಷಣೆಗಿಂತ ಶ್ರೇಷ್ಠವಾದ ಘೋಷಣೆಯನ್ನು ಜಗತ್ತು ಈ ವರೆಗೆ ಕಂಡುಹಿಡಿದಿಲ್ಲವೆಂದು ಕದಾಚಿತ್ ಹೇಳಬಹುದೆಂದು ಗಾಂಧೀಜಿ ಅಭಿಪ್ರಾಯಪಟ್ಟರು. ಅಂತಃಕರಣವನ್ನು ಕಳಕುಮಲಕು ಮಾಡುವ ಧಾರ್ಮಿಕ ಘೋಷಣೆಯದು ಪರಮಾತ್ಮನೊಬ್ಬನೇ ಶ್ರೇಷ್ಠ ಎಂಬುದೆ ಅದರ ಅರ್ಥ. ಈ ಅರ್ಥದಲ್ಲಿ ಎಷ್ಟೊಂದು ಔದಾರ್ಯವಿದೆ. ಅರಬಿ ಭಾಷೆಯಲ್ಲಿ ಇದ್ದ ಮಾತ್ರಕ್ಕೆ ಅದು ಆಕ್ಷೇಪಾರ್ಹವೆ? ರಾಮಧುನದ ಅರ್ಥವೂ ಹಾಗೆಯೇ ಇದೆ

ವಂದೇ ಮಾತರಂ

"ಇದು ಧಾರ್ಮಿಕ ಘೋಷಣೆಯು ಅದು ವಿಶುದ್ಧವಾದ ರಾಜಕೀಯ ಘೋಷಣೆ ಅದರ ಪ್ರಾರಂಭದ ಪದ್ಯಗಳಿಗೆ ಯಾವದೇ ಆಕ್ಷೇಪವಿಲ್ಲವೆಂದು ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಹಿಂದೂ ಮುಸಲ್ಮಾನ ಸದಸ್ಯರೆಲ್ಲರೂ ನಿರ್ಣಯಕ್ಕೆ ಬಂದರು ಯೋಗ್ಯ ಪ್ರಸಂಗದಲ್ಲಿ ಎಲ್ಲರೂ ಕೂಡಿ 'ಅದನ್ನು ಹಾಡಬೇಕೆಂದು ನನ್ನ ಬಿನ್ನಹ. ಅದು ಮುಸಲ್ಮಾನರ ಮನ ನೋಯಿಸುವ ಪದ್ಯವೆಂದೂ ಆಗಲಾರದು. ರಾಜಕೀಯ ಬಂಗಾಲವನ್ನು ಎಚ್ಚರಗೊಳಿಸಿದ ಪದ್ಯವದು. ಇದನ್ನು ಹಾಡುತ್ತಲೆ ಅನೇಕರು ಪ್ರಾಣ ತ್ಯಾಗವನ್ನು ಮಾಡಿರುವರು. ಆದರೆ ಇದನ್ನು ಹಾಡಲೇಬೇಕೆಂದು ಯಾರನ್ನು ಒತ್ತಾಯಿಸಬೇಕಾಗಿಲ್ಲ. ಎಲ್ಲವೂ ಐಚ್ಛಿಕವಾಗಿರತಕ್ಕದ್ದು."

ಪರಸ್ಪರ ತಾಳ್ಮೆ

"ಪಂಜಾಬದಿಂದ ಭೀಕರ ವರದಿಗಳು ಬರಹತ್ತಿವೆ. ಲಾಹೋರದಿಂದ ಹಿಂದೂ, ಸಿಕ್ಕರೂ, ಅಮೃತಸರದಿಂದ ಮುಸಲ್ಮಾನರೂ ಓಡಿ ಹೋಗಿರುವರು ಪಾಕಿಸ್ಥಾನದಲ್ಲಿ ಮುಸಲ್ಮಾನೇತರರು ಇರತಕ್ಕದ್ದಲ್ಲವೆಂದು ಪಂಜಾಬ ದುರೀಣರ ಅಭಿಪ್ರಾಯವಾಗಿದೆಂದು ನನಗೆನಿಸುವುದಿಲ್ಲ. ಅದೇ ರೀತಿ ಉಳಿದ ಭಾಗಗಳಲ್ಲಿ ಹಿಂದ್ವೇತರರು ಇರಬಾರದೆಂದು ಹಿಂದೂ ಭಾಗದ ದುರೀಣರ ಅಭಿಪ್ರಾಯವಾಗಿರಲಿಕ್ಕಿಲ್ಲೆಂದು ನನಗೆನಿಸುತ್ತದೆ ಪಶ್ಚಿಮ ಪಂಜಾಬದಲ್ಲಿ ಗುರುದ್ವಾರ ಮತ್ತು ಮಂದಿರಗಳು ಉಳಿಯತಕ್ಕದ್ದಲ್ಲ ಮತ್ತು ಪೂರ್ವ ಪಂಜಾಬದಲ್ಲಿ ಮಸೀದೆ ಇರತಕ್ಕದ್ದಲ್ಲವೆಂದು ಅದರ ಪರಿಣಾಮವಾಗಬಹುದು ಇಂತಹ ಮಾತು ನಂಬುವುದಕ್ಕೆ ಕೂಡ ಯೋಗ್ಯವಾಗಿರುವುದಿಲ್ಲ"

ರಾಷ್ಟ್ರೀಯ ಮುಸಲ್ಮಾನರು

"ಇವರನ್ನು ಅಲಕ್ಷಿಸುವ ಪ್ರಶ್ನೆಯೇ ಇಲ್ಲ ಮನುಷ್ಯನ ರಾಷ್ಟ್ರೀಯತ್ವವೊಂದು ದೊಡ್ಡ ಸದ್ಗುಣ ಯಾರೂ ಅದನ್ನು ಮಸ್ಲಿಸುವ ಅವಶ್ಯಕತೆಯಿಲ್ಲ ತಂಪು ಮೊದಲಿದ್ದಂತೆ ರಾಷ್ಟ್ರೀಯರಾಗಿಯೇ ಉಳಿಯಬೇಕು ಮತ್ತು ಪ್ರತಿಯೊಂದು ಕೃತ್ಯದಲ್ಲಿ ಧೈರ್ಯ ನಿಸ್ವಾರ್ಥ ತ್ಯಾಗ ಮತ್ತು ಅಭ್ಯಾಸ ಕಂಡುಬರಬೇಕು"

ನಮ್ಮ ಸಂತೋಷವೆಂತಹುದು?

ಅಮೇರಿಕನ್ ಮಿಲಿಯಾಧೀಶನ ಸಲಹೆ

ಸುಖಾನಂದವನ್ನು ಅನುಭವಿಸಬೇಕೆ ಹೊರತು ಅದನ್ನು ವಿವರಿಸಿ ಹೇಳಲಿಕ್ಕಾಗುವುದಿಲ್ಲ ನಮ್ಮ ಪ್ರಾಚೀನ ಋಷಿವರ್ಯರು ತ್ಯಾಗ, ಶಾಂತಿ ಮತ್ತು ಗಂಭೀರತೆಯಿಂದದನ್ನು ಗಳಿಸಿದ್ದರು ಈಗ ಅಮೇರಿಕದ ಮಿಲಿಯಾಧೀಶ ದಾನಶೂರನೆನಿಸಿದ ಎಂಡ್ರೂ ಕಾರ್ನಿಜ ಎಂಬ ಸಿರಿವಂತನು ತ್ಯಾಗವೇ ಸುಖದ ಮಾರ್ಗನೆಂದು ಘೋಷಿಸಿದ್ದಾನೆ ಇದರಿಂದ ನಮ್ಮ ಪ್ರಾಚೀನರ ನೆಮ್ಮದಿ ಮಾರ್ಗವೇ ಸತ್ಪಥವೆಂಬುದು ಸಿದ್ಧಾಂತವಾಗುವುದು

ಆದರೆ ನಮ್ಮಲ್ಲಿ ಹಲವರು ನಮ್ಮ ಆಶೆಹಾರೈಕೆಗಳು ಪರಿಪೂರ್ಣಗೊಳ್ಳುವುದರಲ್ಲೆ ಆನಂದದ ಮೂಲವಿದೆಯೆನ್ನುತ್ತಾರೆ ಒರ್ವ ಪ್ರಖ್ಯಾತ ರೋಮನ್ ತತ್ವಜ್ಞನು ಈ ಕುರಿತು ಕೊಟ್ಟ ವಿವರಣೆಯು ಬಹುಶ್ಯ ಅತ್ಯಂತ ಸಮರ್ಪಕವಾದುದೆನ್ನಬಹುದು ಅವನೆಂದಿದ್ದಾನೆ "ಸುಖಿಯೆಂದು ನೆನಸದ ಮನುಷ್ಯನಿಗೆ ಸುಖಾನುಭವವಾಗದು"

ಪ್ರಸಿದ್ಧ ಆಂಗ್ಲ ಸಾಹಿತಿಯಾದ ಡಾ। ಜೊನ್ಸನ್ನನು "ತಿಳಕೊಳ್ಳಲಿಕ್ಕಾಗದಿದ್ದರೆ ಸುಖಿವರಿವಾಗದು, ಇತರರು ಅದರ ಕುರಿತು ಅಸೂಯೆ ಪಡುವಂತಾಗದಿದ್ದರೆ ಅದು ಶೂನ್ಯವೆ ಸರಿ" ಎಂದಿದ್ದಾನೆ ಹೀಗೆ ಪ್ರತಿಯೊಬ್ಬನು ಒಂದೊಂದು ರೀತಿಯಲ್ಲಿ ಸುಖಾಪೇಕ್ಷಿಯಾಗಿರುತ್ತಾನೆ ಆದರೆ ಬಿಸಿಲ್ಗುದುರೆಯಂತೆ ಅದು ಹತ್ತಿರ ಹೋದಷ್ಟಕ್ಕೆ ದೂರವಾಗುತ್ತದೆ

ಅಮೇರಿಕದ ಸಾಂಪತ್ತಿಕ ವೈಭೋಗ

ಜಗತ್ತಿನ ಕೇವಲ ಶೇಕಡಾ 6ರಷ್ಟು ಜನಸಂಖ್ಯೆಯಿರುವ ಸಂಯುಕ್ತ ಅಮೇರಿಕದ ಜನರ ಸುಖೋಪಭೋಗಕ್ಕಿರುವ ಸೌಕರ್ಯಗಳನ್ನು ತಿಳಕೊಳ್ಳುವಾಗ ಕೌತುಕವಾಗದಿರದು. ಅಮೇರಿಕನರ ಬಳಿ ಜಗತ್ತಿನ ಮೋಟಾರು ಕಾರುಗಳ ಶೇಕಡಾ 70ರಷ್ಟು ಇವೆ. ಜಗತ್ತಿನ ಶೇ. 50ರಷ್ಟು ಟೆಲಿಫೋನುಗಳು ಅಲ್ಲಿವೆ, ಜಗತ್ತಿನ ಶೇ 34ರಷ್ಟು ರೈಲುಮಾರ್ಗಗಳು ಅಲ್ಲಿ ಹಾಕಲ್ಪಟ್ಟಿವೆ.

ಅಮೇರಿಕನ್ನರು ತಮ್ಮ ಸೌಕರ್ಯಕ್ಕಾಗಿ ಜಗತ್ತಿನ ಶೇಕಡಾ 56ರಷ್ಟು ರೇಶ್ಮೆ ಬಟ್ಟೆಯನ್ನೂ, 53ರಷ್ಟು ಕಾಫೀ ಬೀಜವನ್ನೂ, 51ರಷ್ಟು ರಬ್ಬರನ್ನೂ ಉಪಯೋಗಿಸಿಕೊಳ್ಳುವರು

ತಮ್ಮ ಉಪಯೋಗಕ್ಕಾಗಿ ಅಮೇರಿಕನ್ನರು ಜಗತ್ತಿಗೆ ಬೇಕಾಗುವುದರ ಶೇಕಡಾ 62ರಷ್ಟು ಎಣ್ಣೆಯನ್ನೂ, 53ರಷ್ಟು ದವಸಧಾನ್ಯಗಳನ್ನೂ, 34ರಷ್ಟು ಕಲ್ಲಿದ್ದಲನ್ನೂ 32ರಷ್ಟು ತಾಮ್ರವನ್ನೂ, 30ರಷ್ಟು ಕಬ್ಬಿಣವನ್ನೂ ತಯಾರಿಸಿಕೊಳ್ಳುವರು.

ನರೆ ಕೂದಲು ನಿಲ್ಲಿಸಿರಿ

ಬ್ಲೆಕಿನಾ: ಖಂಡಿತವಾಗಿ ನರೆಕೂದಲನ್ನು ಕಪ್ಪಾಗಿ ಪರಿವರ್ತಿಸಿ ನರೆತವನ್ನು ನಿಲ್ಲಿಸುವುದು. ಇದಕ್ಕೆ ಮೆದುಳು, ಕಣ್ಣುಗಳನ್ನು ತಂಪು ಮಾಡುವ ಆರೋಗ್ಯದಾಯಕ ಶಕ್ತಿ ಇದೆ ನಮ್ಮ ಫಾರ್ಮಸಿಯ ಹೆಸರು ಬಾಟ್ಲಿಯ ಮೇಲಿಲ್ಲದಿದ್ದರೆ ಅದನ್ನು ತಿರಸ್ಕರಿಸಿರಿ ಕೆಲವೇ ನರೆತ ಕೂದಲುಗಳ ಬಾಟ್ಲಿಗೆ ರೂ 2 8-0 ಅದಕ್ಕಿಂತ ಹೆಚ್ಚಿದ್ದರೆ ರೂ 3 8-0 ಸಂಪೂರ್ಣ ನೆರೆತದಕ್ಕೆ ರೂ 5-0-0

ಕಾಮಕಲಾ: ಸಾಯಂಕಾಲ ಒಂದು ಮಾತ್ರೆ ಸೇವಿಸಿರಿ ಅದು ನಿಮಗೆ ಚಿರ ಆನಂದ ಕೊಟ್ಟು ನಿಮ್ಮ ಶಕ್ತಿ ಸಾಹಸ ಹೆಚ್ಚಿಸುತ್ತದೆ ಒಂದು ಸಲ ಉಪಯೋಗಿಸಿದರೆ ನಿಮಗದರ ಅದ್ಭುತ ಸಾಮರ್ಥ್ಯ ಮರೆಯಲಾರಿರಿ ಇದು ನಿರ್ಬಲತೆ ಹೋಗಲಾಡಿಸುವುದು

16 ಮಾತ್ರೆಗಳಿಗೆ ರೂ 1

ಸತ್ಯದೇವ ಆಯುರ್ವೇದ ಭವನ.
No 15 P O
Katri sarai (Gaya)

ಪ್ರಯಾಣಿಕರಿಗೆ ಸೂಚನೆ.

ಸಕೃತ ಮೂರು ತಿಂಗಳಿಗೆ ಗವೇಕಾದ ಪೆಟ್ರೋಲು ಕೋಟಾದಲ್ಲಿ ಕಡಿಮೆಯಾದುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲೈನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲ್ಯಾಸಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿನಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜ್ಯೋಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs 5,26,000

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 – 3.28 Crores.

Our Chief Agency New Business in 1946 { **About 54 lakhs**

Our experience of 37 years avialable to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 19—9—1947 [ಸಂಚಿಕೆ 37]

ಪ್ರಾಂತ್ಯವರದಿ ವಿಮರ್ಶೆ

ಜಿನ್ನರ ಹಳೆ ಸೊಲ್ಲು

ಪಾಕಿಸ್ಥಾನಕ್ಕೆ ನಿರಾಶ್ರಿತರಾಗಿ ಓಡಿದ ತನ್ನ ಜನತೆಗಾಗಿ ಧನ ಸಹಾಯವನ್ನು ಕೋರುತ್ತ ಮಿ। ಜಿನ್ನರು ಒಂದು ಘೋಷಣೆಯಲ್ಲಿ ಪೂರ್ವ ಪಂಜಾಬದಲ್ಲಿ ಮುಸಲ್ಮಾನರ ಮೇಲಾದ ಅತ್ಯಾಚಾರಗಳನ್ನು ವರ್ಣಿಸಿರುವರು. ಒಂದು ಕಡೆಯಿಂದ ಅವರ ಪ್ರಧಾನಾಮಾತ್ಯ ಲಿಯಾಕತರು ಭಾರತ ಪ್ರಧಾನರೊಡಗೂಡಿ ನೆಮ್ಮದಿ ಸ್ಥಾಪನೆಯ ಪ್ರಯತ್ನಗಳನ್ನೆಸಗುವಾಗ ಪಾಕಿಸ್ಥಾನಾಧಿಪತಿಗಳ ಈ ಹಳೆ ರಾಗವು ಅತ್ಯಂತ ಶೋಚನೀಯವಾಗಿ ಕೇಳಿಸುತ್ತದೆ. ತಮ್ಮ [illegible] ಕಾರ್ಯವನ್ನು ಅಲಕ್ಷಿಸಿ ಇತರರ ಸಾಚಿನೆಯನ್ನರಸಲು ಹೊರಟ ಮಿ। ಜಿನ್ನರಿಗೆ ಕೋಮು ಸೌಹಾರ್ದವು ಬೇಕಾಗಿಲ್ಲವೆಂದಿದರಿಂದ ಸ್ಪಷ್ಟವಾಗುತ್ತದೆ. ಅವರು ನಿರಂತರವಾಗಿ ತಮ್ಮ ಅನುಯಾಯಿಗಳನ್ನು ನೆಮ್ಮದಿಯ ನಿವಾಸದಿಂದ ಪ್ರಚೋದಿಸುತ್ತಿರುವುದರ ಉದ್ದೇಶವೇನಿರಬಹುದು? ಬಹುಶಃ ಅವರಿಗೆ ತಮ್ಮ ಹೊಸ ಸ್ಥಾನದಿಂದ ತೃಪ್ತಿದೊರೆಯದಿಲ್ಲ. ಪತ್ರದಲ್ಲಿ ಈ ಸ್ಥಾನದ [illegible] ಭಾಗಗಳನ್ನು ಏಕತ್ರಿತವಾಗಿಟ್ಟುಕೊಳ್ಳುವ ಸಾಮರ್ಥ್ಯದಲ್ಲಿ [illegible] ಅವರಿಗೆ ಖಚಿತವಾಗಿಲ್ಲ. ಆದರೂ ಪಾಕಿಸ್ಥಾನಿಗಳು ತಮ್ಮ ನಿರಪೇಕ್ಷ ಸಹಮತೀಯರ ಮೇಲಿನ [illegible] ದೃಷ್ಟಿಕೋನಗಳನ್ನು ದೂರದೃಷ್ಟಿಯಿಂದ ವಿವೇಚಿಸಿ ಇದುವರೆಗಿನ ಈ ದೀರ್ಘ ಕಲಹವನ್ನು ಮುಕ್ತಾಯಗೊಳಿಸುವರೆಂದು ಹಾರೈಸಲಾಗಿದೆ.

ಪಾನ ನಿರೋಧ

ಮದ್ರಾಸಿನ ಇನ್ನೆಂಟು ಪ್ರಾಂತ್ಯಗಳು ಬರುವ ಅಕ್ಟೋಬರ ತಿಂಗಳಿಂದ ಪಾನನಿರೋಧ ಕ್ಷೇತ್ರದೊಳಗೆ ಬರುತ್ತವೆ. ದೀರ್ಘ ಮಾದಕ ಪದಾರ್ಥ ಅಭ್ಯಾಸಿಗರಿಗಾಗಿ ಪ್ರತ್ಯೇಕ ಸೌಕರ್ಯ ಮಾಡಲಾಗುವುದು. ನಾಗರೀಕರು ಈ ಶಾಸನವು ನಮ್ಮ ಭಾವೀ ಪೀಳಿಗೆಯ ಅಭಿವೃದ್ಧಿಯ ದೃಷ್ಟಿಯಿಂದ ಜಾರಿಗೆ ತಂದಿರುವ ಸಂಗತಿಯನ್ನು ಮನಗೊಂಡು, ದೇಶಹಿತವೂ ಅದರಲ್ಲೇ ಅಡಗಿದೆಂಬುದನ್ನು ದೃಷ್ಟಿಯಲ್ಲಿರಿಸಿ ಸರಕಾರವು ತಾನು ಅಮಲು ಪದಾರ್ಥಗಳ ಮೂಲಕ ಕಳಕೊಳ್ಳುವ ತೆರಿಗೆಯನ್ನು ಭರ್ತಿಮಾಡಲು ಯೋಜಿಸುವ ನೂತನ ತೆರಿಗೆ ಧೋರಣೆಗಳಿಗೆ ಸಂಪೂರ್ಣ ಬೆಂಬಲವಿತ್ತು ಸಹಕರಿಸುವುದು ಕರ್ತವ್ಯವಿರುತ್ತದೆ. ಈ ದುಷ್ಟಚಟ ನಿವಾರಣೋಪಾಯಗಳಲ್ಲೂ ತಮ್ಮ ಯೋಗ್ಯ ಪಾತ್ರವನ್ನು ನಿರ್ವಹಿಸುವುದು ಅವಶ್ಯವಿದೆ.

ನಿರಾಶ್ರಿತರ ಸಮಸ್ಯೆ

ಸ್ವತಂತ್ರ ಭಾರತದ ನಿರ್ಮಾಣದ ಸಮಸ್ಯೆ ಒಂದು ಕಡೆ, [illegible] ನಿರಾಶ್ರಿತರದು [illegible] ಗಿರುತ್ತದೆ. ದೇಶವು ತನ್ನ ಇತಿಹಾಸದ ಅತಿ ದುರ್ಗಮ ಕಾಲವನ್ನು [illegible] ದೇಶವಿಭಜನೆಯ [illegible] ಈ ಅತ್ಯುಗ್ರತರ ಸಮಸ್ಯೆಯು ಅತ್ಯಂತ ಗಹನವಾಗಿದೆ. [illegible] ಇಂತಹ ಪರಿಸ್ಥಿತಿಯಲ್ಲಿ [illegible] ಉದಾರತೆಯಲ್ಲಿ [illegible] ಹುಟ್ಟಿದ ನಮ್ಮ ದೇಶ [illegible] ನಿರಾಶ್ರಿತರನ್ನು ತಮ್ಮಲ್ಲಿಗೆ [illegible] ಸರಕಾರ [illegible] ಈ ಸಂದರ್ಭದಲ್ಲಿ [illegible] ತಮ್ಮ [illegible] ಯೊಳಗೆ ತೆಗೆದುಕೊಂಡು ಸರಕಾರದ ಭಾರವನ್ನು ಕಡಿಮೆ ಮಾಡಲು ಪ್ರಯತ್ನಿಸುವುದು ಶ್ಲಾಘನೀಯವೆನಿಸಿದೆ.

ಸಮ್ಮಿಶ್ರ ಮಂತ್ರಿಮಂಡಳ

ಬಂಗಾಲದಲ್ಲಿ ಗಾಂಧೀಜಿಯವರು ಪಾವನಾಸ ಪೂರ್ವದಲ್ಲಿ ಮುಸಲ್ಮಾನರಿಂದಲೂ [illegible] ಪರಸ್ಪರ ಮೈತ್ರಿಯ ಸೌಹಾರ್ದದ ವಾತಾವರಣದಿಂದ ಭಾರತ ಒಕ್ಕೂಟದ ಪ್ರಾಂತ್ಯದಲ್ಲಿ ಸಮ್ಮಿಶ್ರ ಮಂತ್ರಿಮಂಡಳಗಳನ್ನು ರಚಿಸಬೇಕೆಂಬ ಸೂಚನೆಗಳು [illegible] ಈ [illegible] ಮಂತ್ರಿಮಂಡಳಗಳು [illegible] ಕಾಂಗ್ರೆಸ್ ಮುಸ್ಲಿಮ್ ಲೀಗುಗಳು [illegible] ಈ ಸಮ್ಮಿಶ್ರಣವು ಫಲಕಾರಿಯಾಗಲ್ಲ. ಅದರ ಬದಲಿಗೆ ರಾಷ್ಟ್ರೀಯ ಮುಸಲ್ಮಾನರನ್ನೂ ಇತರ ರಾಷ್ಟ್ರೀಯವಾದಿಗಳನ್ನೂ ಒಳಗೊಂಡ ಸಮ್ಮಿಶ್ರ ಮಂತ್ರಿ ಮಂಡಳಗಳು ಯಶಸ್ವಿಯಾಗಿಯೂ, ಪರಿಣಾಮಕಾರಿಯಾಗಿಯೂ ಕಾರ್ಯನಿರ್ವಹಿಸಬಲ್ಲವೆಂದು ಹೆಚ್ಚಿನ ಪತ್ರಿಕೆಗಳು ಅಭಿಪ್ರಾಯಪಡುತ್ತಿವೆ.

ಭಾಷಾಪ್ರಾಂತ

ಶ್ರೀ ಪ್ರಕಾಶಂ ಅವರು ಆಂಧ್ರ ಪ್ರಾಂತ್ಯ ನಿರ್ಮಾಣವು ಕೂಡಲೇ ಆಗಬೇಕೆಂದು ಪ್ರಚಾರ ಮಾಡುತ್ತಿದ್ದಾರೆ. ಕೇರಳವು ಇತ್ತೀಚೆಗೆ ಕರ್ನಾಟಕದ ಹಲವು ಭಾಗಗಳನ್ನೊಳಗೊಂಡ ಒಂದು ಏಕ ಪ್ರಾಂತ್ಯದ ನಕಾಶೆ ಮಾಡಿ ಜಗತ್ತಿಗೆ ಸಾರಿದೆ. ಕರ್ನಾಟಕವಾದರೋ ಎರಡು ಪ್ರಾಂತ್ಯಗಳೊಳಗೂ, ಹಲವು ಸಂಸ್ಥಾನಗಳೊಳಗೂ ಹಂಚಿಬಿದ್ದಿದೆ. ಅದರ ಗಡಿಗಳು ಮರಾಠಿ, ತೆಲುಗು, ತಮಿಳು ಮತ್ತು ಮಲಯಾಳ ಭಾಷಾ ಪ್ರದೇಶಗಳಲ್ಲಿ ಪರ್ಯವಸಾನಗೊಳ್ಳುತ್ತಿದ್ದು ಈ ಗಡಿಗಳ ಕುರಿತು ಇದುವರೆಗೂ ಒಂದು ಪರಸ್ಪರ ಇತ್ಯರ್ಥವಾಗಲಿಲ್ಲ. [illegible] ಇತರ ಭಾಷಾ ಪ್ರಾಂತ್ಯಕ್ಕೆ ತಮ್ಮ ಆಕ್ಷೇಪವಿಲ್ಲವೆಂದು [illegible] ಇದರಿಂದ [illegible] ತಮ್ಮ [illegible] ತಮ್ಮ ಉದ್ದೇಶ ಸಾಧನೆ ಮಾಡಬೇಕು.

ಹೊಸ ಪಂಥ

ಫ್ರಾನ್ಸಿನ ಸೇಮರ್ಸ್ ಎಂಬ 43 ವರ್ಷದ ಅಧ್ಯಾಪಕನೊಬ್ಬನು ಸಸ್ಯಹಾರಿಗಳ ಹೊಸ ಪಂಥವೊಂದನ್ನು ಸ್ಥಾಪಿಸಿರುವನು. ಇವನ ಹಿಂಬಾಲಕರು ನಿತ್ಯ ಜೀವನವನ್ನು ತಳೆಯಲು ಉಪ್ಪು, ಮಾಂಸ, ರೊಟ್ಟಿ, ಬೆಣ್ಣೆ-ಹಾಲು, ತುಪ್ಪ ಯಾವುದನ್ನೂ ಮುಟ್ಟುವುದಿಲ್ಲ. ಕೇವಲ ತರಕಾರಿ ತಿಂದು ನೀರು ಕುಡಿದು ಇವರು ಬದುಕಲೆಳಿಸುತ್ತಾರೆ. ಮುಂದೆ ಎಟಂ ಬೊಂಬ್ ದಾಳಿಯಾಗುವಾಗ ತಮ್ಮ ಹಿಂಬಾಲಕರನ್ನು ಬಿಟ್ಟು ಉಳಿದವರೆಲ್ಲರೂ ನಾಶವಾಗುವರೆಂದು ಪಂಥ ನಾಯಕ ಸೆಮರ್ಸ್ನೆಯ ಹಾರೈಕೆ.

THE

UNITED INDIA LIFE ASSURANCE CO., LTD.

ESTD 1906 | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to.—

INSPECTORATE OFFICE

K. S. Rao Road, Mangalore.

ಜಾತೀಯ ಸಂಸ್ಥೆಗಳ ಸ್ವಾರ್ಥ ಸಾಧನೆಯ ಘೋರ ಪರಿಣಾಮ

ಇಂದಿನ ಕೋಮು ದಂಗೆಗಳ ಒಳನೋಟ

ಅಲ್ಪ ಸಂಖ್ಯಾಕರ ನಿರ್ನಾಮದಲ್ಲಿ ಮುಖಂಡರ ಕೈವಾಡ

ಹಿಂದೂಸ್ಥಾನ್ ಟ್ಯಾಯ್ಮ್ಸ್ ಪತ್ರಿಕೆಯು ಒಂದು ಲೇಖನದಲ್ಲಿ ಪಂಜಾಬದ ಕೋಮು ಕಲಹದ ಒಳ ಸುದ್ದಿ ಗಳನ್ನು ವಿವರಿಸಿ ಬರೆದುದರ ಸಾರಾಂಶ ಇಲ್ಲಿ ಕೊಡಲಾಗಿದೆ.

ಕಲ್ಕತ್ತಾ ಕೊಲೆ ಪ್ರಕರಣದ ನಂತರ ಸಂಭವಿಸಿದ ಬಿಹಾರ ದುರಂತವನ್ನು ಮುಸ್ಲಿಂ ಲೀಗು ರಾಜಕೀಯ ಉದ್ದೇಶ ಸಾಧನೆಗಾಗಿ ಅನುಕೂಲಿಸಿ ಕೊಂಡಿತು. ಬಿಹಾರದ ಮುಸ್ಲಿಂ ನಿರಾಶ್ರಿತರನ್ನು ಪಂಜಾಬ ಗಡಿನಾಡುಗಳಿಗೆ ಕೊಂಡೊಯ್ದು ಅಲ್ಲಿಯ ಜನತೆಯನ್ನು ಹಿಂದೂ ಮತ್ತು ಸಿಖ್ಖರ ವಿರುದ್ಧವಾಗಿ ಉದ್ವೇಗಗೊಳಿಸಲಾಯಿತು ಕಳೆದ ಮಾರ್ಚಿಯಲ್ಲಿನ ಕೋಮು ನರಮೇಧದಲ್ಲಿ ಹಿಂದೂ ಸಿಖ್ಖರಿಗೆ ಅವರ್ಣನೀಯ ನಷ್ಟಗಳು ಸಂಭವಿಸಿದುವು ಇಷ್ಟಾದರೂ ಮುಸ್ಲಿಂ ಪತ್ರಿಕೆಗಳು ಸೀಖರನ್ನು ಹೀಯಾಳಿಸಿ "ಅಲ್ಪ ಸಂಖ್ಯಾಕರಿಗೊಂದು ಪಾಠ ಕಲಿಸಿದಂತಾಯಿತು" ಎಂದು ಕೊಚ್ಚಿ ಕೊಂಡವು. ಇಂತಹ ಜವಾಬ್ದಾರಿ ಇಲ್ಲದ ಪ್ರಚಾರಕ್ಕೆ ಎಣೆಯಿಲ್ಲದಂತಾಗಿ, ನಿರಕ್ಷರಸ್ಥರೂ, ಮತಾಂಧತೆಯಲ್ಲಿ ಮುಳುಗಿದ್ದವರೂ, ಅದೇ ಸಮಯಕ್ಕೆ ತಮ್ಮ ದರಿದ್ರದ ದುಃಸ್ಥಿತಿಯನ್ನು ಮನಗಾಣಲು ಸಾಮರ್ಥ್ಯವಿಲ್ಲದವರೂ ಆದ ಸಾಮಾನ್ಯ ಜನತೆಯು ತಮ್ಮ ಮುಖಂಡರ ದ್ವೇಷ ಗೀತಗಳಿಂದ ಮೃತ್ಯು ತಾಂಡವವಾಡ ತೊಡಗಿದುದು ಅತ್ಯಂತ ಖೇದಕರ ಸಂಗತಿ

ನಿರಾಶ್ರಿತರು ಬಂದಾಗ

ನಾಲ್ಕು ತಿಂಗಳ ತನಕ ಎಂತಹದೂ ಸಂಭವಿಸಲಿಲ್ಲ. ಆದರೆ ಪೂರ್ವ ಪಂಜಾಬದೊಳಗೆ ನಿರಾಶ್ರಿತರ ಪ್ರವಾಹಗಳು ಹರಿಯಹತ್ತಿದ ಹಾಗೆ ಉದ್ವೇಗಗಳು ಏರುವಂತಾಯಿತು. ಅವರ ಕರುಣಾಜನಕ ಕತೆಗಳಿಂದ ಭಾವನೆಗಳು ಉನ್ಮತ್ತಂಗೊಳಿಸಲ್ಪಟ್ಟವು ಪರಿಣಾಮವಾಗಿ ಪ್ರತಿಕಾರದ ಪ್ರತಿಕ್ರಿಯೆ ಪ್ರೇರೇಪಿತವಾದವು ಪೂರ್ವ ಪಂಜಾಬದ ಸೀಖರಿಗೆ ಆಗಲೇ ಪಾಕಿಸ್ಥಾನದಿಂದ ಅತೃಪ್ತಿಯುಂಟಾಗಿತ್ತು ಜೊತೆಗೆ ತಮ್ಮ ಬಂಧು ಬಳಗದ ಆರ್ತನಾದವು ಅವರ ಸೈನಿಕ ಪ್ರವೃತ್ತಿಯನ್ನು ರೊಚ್ಚಿಗೆಬ್ಬಿಸಿತು ಅವರೊಂದು ಸುಸಂಧಿಯನ್ನು ಕಾಯುತ್ತಿದ್ದರು ಇದೇ ಸಮಕ್ಕೆ ಪಂಜಾಬದ ವಿಭಾಗೀಕರಣ ಗಡಿ ನಿರ್ಣಯ ಸಮಿತಿಯ ಅನಿಶ್ಚಿತ ಕಾರ್ಯಕಲಾಪಗಳು ಭಾವನೆಗಳನ್ನು ಪರಮಾವಧಿಗೆ ಮುಟ್ಟಿಸುವಂತಾಯಿತು

ಖೂನಿಗ ಸಹಕಾರ

ಪಾಕಿಸ್ಥಾನದಲ್ಲಿ ಸೀಖರಿಗೆ ಭದ್ರತೆ ಇಲ್ಲವೆಂಬ ಪ್ರಚಾರವು ಇದೇ ಸಮಯಕ್ಕೆ ಮಾಡಲಾಯಿತು, ತಮ್ಮ ಭದ್ರತೆಗಾಗಿ ನಾವು ಮಧ್ಯ ಪಂಜಾಬದಲ್ಲೇ ಇರಬೇಕು, ಅಲ್ಲಿನ ಮುಸಲ್ಮಾನರನ್ನು ಪಶ್ಚಿಮಕ್ಕೆ ಕಳಹಿಸಬೇಕೆಂದು ಸೀಖ ಮುಖಂಡರು ಕೆಲವರು ಗರ್ಜಿಸಹತ್ತಿದರು ಹೀಗೆ ವಾತಾವರಣವು ಪ್ರಕ್ಷುಬ್ಧಗೊಂಡಿರುವಾಗ ಅಮೃತಸರದ ಮುಸಲ್ಮಾನರು ತಮ್ಮ ಮೊದಲದಾಳಿಯನ್ನಾರಂಭಿಸಿ ಕಲಹದ ಸಂಕೇತ ಕೊಟ್ಟರು ಆಗಸ್ಟ್ 15ರಂದು ಅಧಿಕಾರಗಳ ವರ್ಗಾಂತರವಾದುದು ಈ ಕಲಹಾಗ್ನಿಯನ್ನು ಹರಡಲು ಸಹಾಯವಾಯಿತು.

ಪೂರ್ವ ಪಂಜಾಬಕ್ಕೆ ಬಂದ ಅಧಿಕಾರಿಗಳು ಕುಟುಂಬ ಕುಟುಂಬವೇ ಕೊಲೆ ಮಾಡಲ್ಪಟ್ಟದ್ದನ್ನು ಕಣ್ಣಾರೆ ಕಂಡವರಾಗಿದ್ದರು ಅವರ ಆಸ್ತಿ ಪಾಸ್ತಿಗಳೆಲ್ಲವೂ ಸುಲಿಗೆ ಮಾಡಲ್ಪಟ್ಟಿದ್ದವು. ಪಾಕಿಸ್ಥಾನದ ಮುಸ್ಲಿಮ್ ಅಧಿಕಾರಿಗಳೂ ಪೋಲೀಸರೂ ಕೊಲೆ ಸುಲಿಗೆಗಾರರಿಗೆ ಪ್ರತ್ಯಕ್ಷವಾಗಿಯೂ ಸಹಾಯ ನೀಡುವುದನ್ನು ಕಂಡಿದ್ದರು. ಹೀಗೆ ನೊಂದು ಪೂರ್ವ ಪಂಜಾಬಕ್ಕೆ ಬಂದ ಹಿಂದೂ ಮತ್ತು ಸೀಖ್ ಅಧಿಕಾರಿಗಳು ತಮ್ಮ ಪ್ರದೇಶಗಳಲ್ಲಿ ಅಲ್ಪ ಸಂಖ್ಯಾಕರಾದ ಮುಸಲ್ಮಾನರ ಮೇಲೆ ಅತ್ಯಾಚಾರಗಳು ನಡೆಸಲ್ಪಡುತ್ತಿರುವಾಗ ತೆಪ್ಪಗೆ ನಮ್ಮ ಮನೆಗಳ ಆರಾಮ ಕುರ್ಚಿಯಲ್ಲಿ ಕುಳಿತು ಬಿಟ್ಟರು ಕೆಲವರು ದಂಗೆಗಾರರಿಗೆ ಸಹಾಯವನ್ನೂ ಕೊಟ್ಟದ್ದುಂಟು

ಪಕ್ಷಪಾತ

ಪಂಜಾಬದ ಸರಕಾರ ಆಡಳಿತದಲ್ಲಿ ಬಹುಕಾಲದಿಂದ ಜಾತೀಯ ಪಕ್ಷಪಾತಗಳು ನಡೆಯುತಿದ್ದವು ಜಾತೀಯ ದಾಮಾಶಯದ ಮೇಲೆ ಬ್ರಿಟಿಷ್ ಸರಕಾರವು ಮಾಡಿಟ್ಟ ಕೋಮುವಾರು ವರ್ಗೀಕರಣದಿಂದ ಪಂಜಾಬದಲ್ಲಿ ಸೀಖ ಮತ್ತು ಹಿಂದೂಗಳಿಗೆ ಸರಕಾರಿ ಕಛೇರಿಗಳಲ್ಲಿ ನ್ಯಾಯವಾದ ಭಾಗವು ದೊರೆಯಲಿಲ್ಲವೆಂಬ ವಿಷಯ ಒಂದು ತಮ್ಮ ಮೇಲಧಿಕಾರಿಗಳಾಗಿ ತಮ್ಮಗಿಂತ ಕಮ್ಮಿ ಶಿಕ್ಷಣ ಯೋಗ್ಯತೆಯವರ ನೇಮಿಸಲ್ಪಡುವರೆಂಬ ವಿಷಯ [illegible] ಇವುಗಳಿಂದ ಭಗ್ನಮನಸ್ಕರಾದ ಹಿಂದೂ ಸಿಖ್ಖರು ಬಹುಕಾಲದಿಂದ ನೊಂದುಕೊಂಡಿದ್ದರು

ಮುಸ್ಲಿಮರಿಗಾದರೂ ಇಸ್ಲಾಮ ಮತವು ಒಂದು ರಕ್ಷಣಾ ಕವಚವಾಗಿತು ಅದಿಲ್ಲದಿದ್ದರೆ ತಮಗೆ ಸರಕಾರಿ ಕಛೇರಿಗಳ ಲಾಭಪ್ರಸಾದವು ದುರ್ಲಭವಾಗುತ್ತಿತ್ತೆಂದೇ ಅವರಿಗೆ ಖಚಿತವಾಗಿತ್ತು ಬ್ರಿಟಿಷರು ಬಿಟ್ಟು ಹೋಗುವಾಗ ತಮಗೊಂದು ಪ್ರತ್ಯೇಕ ಸ್ಥಾನ ಸಿಗದಿದ್ದರೆ ಇಡೀ ದೇಶದಲ್ಲಿ ಬಹುಸಂಖ್ಯಾಕರಾಗಿದ್ದ ಹಿಂದೂ ಸೀಖರ ಸಂಯುಕ್ತ ಪ್ರಭಾವದೆದುರಿಗೆ ತಮ್ಮ ಇರುವಿಕೆಯೇ ಅಪಾಯಕಾರಕವೆಂದವರು ತಿಳಕೊಳ್ಳುವಂತಾಯಿತು ಈ ತಿಳುವಳಿಕೆಯನ್ನೆ ಮುಸ್ಲಿಂಲೀಗು ತನ್ನ ಪಾಕಿಸ್ಥಾನ ಧ್ಯೇಯ ಸ್ಫೂರ್ತಿ ಮಂತ್ರವಾಗಿ ಅನುಸರಿಸಿತು. ಇಷ್ಟಾದರೂ ಪಾಕಿಸ್ಥಾನದಲ್ಲಿ ಹೇರಳ ಸಂಖ್ಯೆಯ ಅಲ್ಪಸಂಖ್ಯಾಕರಿರು[illegible]ತು. ಇವರನ್ನೆಲ್ಲ ನಾಶವ[illegible] ಗೆ ಸುಖ ದೊರೆತಿತೆಂದು ಇಲ್ಲದಿದ್ದರೆ ಮುಂದೆ ಹಿಂದೂಗಳು [illegible] ದುಳ ಶಕ್ತಿಯಿಂದ [illegible] ಹಿಡಿ[illegible] ದ್ದಿಗೆ ತಮ್ಮ ಅಯೋಗ್ಯತೆ[illegible] [illegible] ಕೃಪೆ[illegible] ಗಳನ್ನು ಮುಸ್ಲಿಂ ಅಧಿಕಾರಿಗಳು [illegible] ಸ[illegible]ದರು

ಪೋಲೀಸ್ ಸೈನ್ಯದಲ್ಲಿ ಜಾತಿ ದ್ವೇಷ

[illegible] ಬ್ರಿಟಿಷರು [illegible] ಸಂಶಿ[illegible] ಆ ಕಡೆಯ ಸರಕಾರಿ ಕಛೇರಿಗಳಲ್ಲಿ ಮುಸ್ಲಿಂ [illegible] ಭೂತಿ ಪರವಾದ ಸರಕಾರಿ ಅಧಿಕಾರಿಗಳೇ ದೊರೆತರು ಆ ಕಡೆಯ ಚುನಾವಣೆಗಳಲ್ಲಿ ಲೀಗಿಗೆ ಬಹುಮತ ಸಿಕ್ಕಲು ಇದೊಂದು ಪ್ರಬಲ ಕಾರಣವೇ ಆಗಿದೆ.

ಈ ಅಧಿಕಾರಿಗಳು ಸರಕಾರಿ ಕಛೇರಿಗಳಲ್ಲಿ ಮೊದಲೇ ಪಾಕಿಸ್ಥಾನ ಸ್ಥಾಪಿಸಿದ್ದರು ಕಳೆದ ಮಾರ್ಚಿಯಲ್ಲಿ ಉಂಟಾದ ಜಾತೀಯ ಕಲಹದಿಂದ ಪರಿಸ್ಥಿತಿಯು ಗಂಭೀರವಾಗಿ ಕೊಂಗ್ರೆಸ್ಸು ಈ ಜಾತೀಯ ಕಲಹದ ಕಿಡಿಯನ್ನು ನೊಂದಿಸಲು ಶೀಘ್ರದ ಇತ್ಯರ್ಥಕ್ಕೆ ಬರಬೇಕಾಯಿತು

ದೊಡ್ಡ ಪ್ರಮಾದ

ದೇಶದೊಂದಿಗೆ ಸೈನ್ಯವನ್ನು ಕೂಡಲೇ ವಿಭಾಗಿಸಬೇಕೆಂಬ ಲೀಗಿನ ಒತ್ತಾಟವು ದೊಡ್ಡ ಪ್ರಮಾದವೇ ಆಗಿದೆ ಮೊದಲೇ ಜಾತೀಯ ದ್ವೇಷಾಗ್ನಿಯಿಂದ ಪರಿತಪ್ತವಾದ ವಾತಾವರಣದಲ್ಲಿ ಇತ್ತಂಡದ ಅಲ್ಪ ಸಂಖ್ಯಾಕರಿರುವಲ್ಲಿ ಪರಮತಸ್ಥರಾದ ಅಧಿಕಾರಿಗಳನ್ನು ನೇಮಿಸಿದ್ದು ಕ್ಷೋಭೆಯನ್ನು ಉದ್ರೇಕಿಸಲಡೆ[illegible]ಯಿತು ಅಲ್ಪ ಸಂಖ್ಯಾಕರಿಗೆ ಈ ಅಧಿಕಾರಿಗಳ ಮೇಲೆ [illegible] ಪೂರ್ವ [illegible]ದಲ್ಲಿದ್ದ 17 ಸಾವಿರ ಪೋಲೀಸರಲ್ಲಿ 14 ಸಾವಿರ [illegible] [illegible]

[illegible]

ಮುಖಂಡರ ಕೈವಾಡ

[illegible] ಇವೆಲ್ಲ ಪಕ್ಷಪಾತಗಳಿಂದ ನಿರಪರಾಧಿ ಜನತೆಯು ಅವರ್ಣನೀಯ ಅಕೃತ್ಯಗಳಿಗೊಳಗಾಗ ವಂತಾಯಿತು ಇಂತಹ ಅವಿಚಾರದ ಧೋರಣೆಯಿಂದ ಇತ್ತಂಡದವರಿಗೂ ಕಷ್ಟ ಸಂಕಷ್ಟಗಳು ಒದಗುವುವೆಂಬ ಸಂಗತಿಯನ್ನು ಎರಡೂ ಸಾಮಂತಗಳ ಆಳೊಡೆಯರು ಮನಗಾಣುವರೆಂದು ಹಾರೈಕೆ ಇದೆ

ಅದೆಲ್ಲವೂ ಅಂತರ್ಯ ಆರೋಗ್ಯವು ನೆಟ್ಟಗಿರುವುದರ ಮೇಲೆ ಹೊಂದಿಕೊಂಡಿದೆ ಈ ಉತ್ತಮ ಸ್ಥಿತಿಯು ಬ್ಯಾಲ್‌ಬೀನ್ಸ್‌ಗಳು ಒದಗಿಸಿಕೊಡುತ್ತವೆ. ಇದೊಂದು ಶುದ್ಧ ವನಸ್ಪತಿಯ ಮೂಲ ಶಕ್ತಿದಾಯಕ ಬೇದಿ ಮದ್ದು ಇದು ನಮ್ಮ ಜೀರ್ಣ ಕ್ರಿಯೆಯನ್ನು ಉತ್ತಮಗೊಳಿಸುತ್ತದೆ ರಕ್ತ ಸಂಚಲನವನ್ನು ಆರೋಗ್ಯದಲ್ಲಿಡುತ್ತದೆ ಮತ್ತು ನಿಕ್ಕಲೂ ದೇಹದೊಳಗಿನ ಕಶ್ಮಲ ವಿಸರ್ಜನೆಯನ್ನು ಮಾಡುತ್ತದೆ

ಶಕ್ತಿ, ಮನೋಹರತೆ ಉತ್ತಮ ಆರೋಗ್ಯದ ಕಳೆಹದಿಯನ್ನು ಹಾಕಿಕೊಳ್ಳಲು ಇಡೀ ಸುಸಂಧಿಯು—ಬ್ಯಾಲ್‌ಬೀನ್ಸ್‌ಗಳಿಂದ ಇದನ್ನು ನೆರವೇರಿಸಕೊಳ್ಳಬಹುದು

BILE BEANS

ಬ್ಯಾಲ್‌ಬೀನ್ಸ್ ಕ್ರಮವನ್ನು ಯಾವಾಗಲೂ ಜ್ಞಾಪಕದಲ್ಲಿಡಿರಿ.

ಶ್ರೀಮಂತ ಬ್ರಿಟನು ಬಡತನಕ್ಕಿಳಿದ ಅವಶ್ಯಕತೆ

ಬ್ರಿಟಿಷ್ ಜನತೆಯ ಆದರ್ಶ ಸ್ಥೈರ್ಯ

ಇಂಗ್ಲೆಂಡಿನಲ್ಲಿರುವ ಹಿಂದೀಯರೊಬ್ಬರ ಶ್ಲಾಘನೆ

ಬಹು ಕಾಲದಿಂದ ಇಂಗ್ಲೆಂಡಿನಲ್ಲಿ ವಾಸಿಸುತ್ತಿರುವ ಡಾ। ರಂಜಿ ಜಿ. ಸಾಹಾನಿ ಅವರು ಇಂಗ್ಲಿಷ್ ಜನತೆಯ ಕೆಲವು ವಿಶಿಷ್ಟ ಗುಣ ಲಕ್ಷಣಗಳನ್ನು ಒಂದು ಲೇಖನದಲ್ಲಿ ಹೀಗೆ ಚಿತ್ರಿಸಿದ್ದಾರೆ:

ಪವನನ್ನು ಡಾಲರಿಗೆ ಪರಿವರ್ತಿಸುವ ಇದುತನಕದ ರೂಢಿಯನ್ನು ಬ್ರಿಟಿಷ್ ಸರಕಾರವು ರದ್ದುಗೊಳಿಸಿದರ ಸಾಂಕೇತಿಕ ಮಹತ್ವವನ್ನು ಬ್ರಿಟಿಷ್ ಜನತೆ ಈಗ ತಿಳಕೊಳ್ಳಲಾರಂಭಿಸಿದೆ. ಅಲ್ಲಿನ ವಿಚಾರವಂತ ಜನರ ಎರಡು ಮುಖ್ಯ ಸಂಭವಗಳನ್ನು ಮೊದಲೇ ನಿರೀಕ್ಷಿಸಿದ್ದರು. ಇನ್ನು ಮುಂದೆ ಬ್ರಿಟಿಷರು ಇತರ ಜನಾಂಗಗಳಂತೆ ತಮ್ಮ ಸ್ವಂತ ರಾಷ್ಟ್ರೀಯ ಆದಾಯದ ಮೇಲೆ ಹೊಂದಿಕೊಳ್ಳಬೇಕಾಗುವುದು.' ಬ್ರಿಟನಿನ ವಸಾಹತುಗಳು ಇಂದು ಸ್ವತಂತ್ರವಾಗಿದ್ದು ಅವುಗಳಿಂದ ಹಿಂದಿನಂತೆ ಈಗ 'ಸುಲಿಗೆ'ಯು ಸಾಧ್ಯವಿಲ್ಲ. ಇದರೊಂದಿಗೆ ಬ್ರಿಟಿಷ್ ಜನತೆಯ ಆಹಾರ ಸರಬರಾಯಿ ಪ್ರಮಾಣವೂ ಕಡಿಮೆಯಾಗುವುದು. ಈ ಸಂದರ್ಭದಲ್ಲಿ ನನ್ನೊಬ್ಬ ಫ್ರೆಂಚ್ ಸ್ನೇಹಿತರು "ಯಾವಾಗಲೂ ಯುದ್ಧವನ್ನು ಗೆಲ್ಲುವುದು ಒಳ್ಳೇದಲ್ಲವೆಂಬ ಸಂಗತಿ ಇದರಿಂದ ತಿಳಿಯಬಹುದು" ಎಂದು ಹೇಳಿದ ಮಾತುಗಳು ನೆನಪಿಗೆ ಬಂದವು.

ಬೇರೆ ದಾರಿಯಿಲ್ಲ

ಖಚಿತವಾಗಿ ಹೇಳುವುದಾದರೆ ಆದುನಿಕ ಯುದ್ಧವು ಸೋತವರಿಗೂ ಗೆದ್ದವರಿಗೂ ಸಮಾನ ಸಂಕಷ್ಟದಾಯಕವಾದುದು. ಯುದ್ಧವು ... ಸಮಸ್ಯೆಗಳನ್ನು ಇತ್ಯರ್ಥಗೊಳಿಸುವ ವಿಧಾನವು ಅತ್ಯಂತ ಮೂರ್ಖತನದ್ದೆಂದು ಈಗಲಾದರೂ ಸ್ಪಷ್ಟವಾಗದಿರದು. ಇಷ್ಟಾದರೂ ಬ್ರಿಟನಿಗೆ ಈ ಸಂಗತಿಯಲ್ಲಿ ಬೇರೆ ಉಪಾಯವೇ ಇರಲಿಲ್ಲ. ಬ್ರಿಟನ್ನು ಯುದ್ಧಕ್ಕಿಳಿಯದಿದ್ದರಿಂದ ಇಡೀ ಜಗತ್ತೇ ನಿರಂಕುಶ ಸರ್ವಾಧಿಕಾರಕ್ಕೊಳಪಡ[illegible] ಗತಿಯು ನಿರ್ಮಾಣವಾದುದು. ಇದಕ್ಕಾಗಿ ಒಂದು ಭೀಕರ ವರ್ಷವನ್ನು ಬ್ರಿಟನು ಹಿಟ್ಲರನ ಅಸಂಖ್ಯಾತ ಶಕ್ತಿಯನ್ನು ಸಂಪೂರ್ಣ ಎದುರಿಸುವ ಸಂಕಷ್ಟವನ್ನೊದಗಿಸಿತು. ಈ ಸಾಹಸಕ್ಕಾಗಿ ಬ್ರಿಟನ್ ತನ್ನ ರಾಜ್ಯ ಖಜಾನೆಯನ್ನು ಸಂಪೂರ್ಣ ಬರಿದು ಮಾಡಬೇಕಾಯಿತು. [illegible] ಬಡತನವೇ ಮೋ[illegible] ದದರ ಸಮಾಧಾನ.

ಸಂಪತ್ತು ಕ್ಷೀಣತೆ

ಈಗ ಬ್ರಿಟನ್ನು ಸಾಂಪತ್ತಿಕ ದುರ್ದೆಶೆಯಿಂದ ನರಳುತ್ತಿದೆ. ಆ ದೇಶವು ಪುನಃ ಒಮ್ಮೆ ಹಿಂದಿನ ಶ್ರೇಯೋಭಿವೃದ್ಧಿಯನ್ನು ಹೊಂದುವುದೆಂಬ ಸಂಗತಿಯೂ ಖಂಡಿತ. ಯಾಕೆ ಖಂಡಿತ? ಅಲ್ಲಿಯ ಜನತೆಯ ಗುಣ ವೈಶಿಷ್ಟ್ಯ ಮತ್ತು ಅಸಾಧಾರಣ ಪ್ರಾವೀಣ್ಯಗಳೇ ಇದಕ್ಕೆ ಕಾರಣವಾಗಿ ತೆಗೆದುಕೊಳ್ಳಬಹುದು. ಸದ್ಯಕ್ಕೆ ಬ್ರಿಟನಿನ ಜನತೆ ಹಲವಾರು ಭೌತಿಕ ತೊಂದರೆಗಳಿಂದ ನರಳುತ್ತಿರುವುದು. ಯುದ್ಧ ವಿಜಯಾನಂತರದ ಈ ಅವಧಿಯಲ್ಲಿ ಇದು ಇನ್ನೂ ಗಂಭೀರವಾಗಿದೆ. ಆದರೂ ಎರಡು ಆಶಾದಾಯಕ ಚಿಹ್ನೆಗಳು ತೋರುತ್ತಿವೆ. ಸ್ವತಂತ್ರವಾದ ಬ್ರಿಟಿಷ್ ವಸಾಹತು ರಾಜ್ಯಗಳಿಂದು ಅದರ ಸಹಾಯಕ್ಕೆ ಒರುತ್ತಿವೆ. ಬ್ರಿಟಿಷ್ ಜನತೆ ತಮ್ಮ ಪರಿಸ್ಥಿತಿಯನ್ನು ಅತ್ಯಂತ ಪ್ರಸಂಗಾವಧಾನದ ಮನೋಭಾವದಿಂದಲೂ, ಸಾವಧಾನದಿಂದಲೂ ಎದುರಿಸಲು ನಿರ್ಧರಿಸಿದೆ. ಆ ಜನತೆ ಯಾವ ಪ್ರಸಂಗದಲ್ಲೂ ಎದೆಗುಂದುವಂತಹದಲ್ಲ, ಅಂಜುವಂತಹದೂ ಅಲ್ಲ.

ಒಂದು ನಿದರ್ಶನ. ಲಂಡನ್ ದಾಳಿಯ ಕಾಲದಲ್ಲೊಂದು ಸಲ ನಾನು ಕೆನ್ಸಿಂಗ್ಟನ್ ಬದಾವಣೆಯಿಂದ ಪಿಕಾಡಿಲಿಯ ಕಡೆಗೆ ಬರುತಿದ್ದೆ. ಹೊತ್ತು ಸಾಯಂಕಾಲ ಮೀರಿತ್ತು. ನಮ್ಮ ಸುತ್ತಲೂ ಎಂಬತ್ತು ಬೊಂಬುಗಳು ಬೀಳುತಿದ್ದುವು. ನಾವು ಪ್ರಯಾಣ ಮಾಡುವ ಬಸ್ಸಿನ ಕಂಡಕ್ಟರನು "ಈ ಪರಿಸ್ಥಿತಿಯಲ್ಲಿ ಮೋಟಾರು ಚಲಿಸುವುದು ಭಯಂಕರ ಕಷ್ಟ"ವೆನ್ನುತಿದ್ದ. ಆದರೆ ಬಸ್ಸಿನೊಳಗಿನವರಾರೂ ಮಾತನಾಡಲಿಲ್ಲ. ಡ್ರೈವರನ ಧೈರ್ಯ ಸಹಿಸುತ್ತಿದೆವು. ನಾವೆಲ್ಲರೂ ಸ್ಪಷ್ಟ ಭಾವಿಸಿದೆವು. ಆದರೆ ನಮ್ಮ ಭಾವನೆ ಅದೆಷ್ಟು ತಪ್ಪಾಗಿತು. ಕೆಲ[illegible] ಬಸ್ಸು ನಿಂತಿತು. ನಾನು ಕೆಳಗಿಳಿದು ಹೋಗುತಿದ್ದಾಗ ಕಂಡಕ್ಟರನು ನನ್ನನ್ನು ಕರೆದು "ನಾನು ಹೇಳಿದ್ದರ ಕುರಿತು ತಪ್ಪು ತಿಳಕೊಳ್ಳಬೇಡಿರಿ. ಈ ಬೋಂಬಿನ ಬೊಬ್ಬೆಯ ಸಂಗೀತ ನಮಗೆ ರುಚಿಸುವುದಿಲ್ಲ. ಆದರೂ ಹಿಟ್ಲರನನ್ನು ನಾವು ಖಂಡಿತ ನೆಲಸಮ ಮಾಡುವುವೆಂಬ ಸಂಗತಿಯನ್ನು ನೀವೊಂದು ದಿನ ಕಾಣುವಿರಿ" ಎಂದಾಗ ನನಗೆ ಬೆರಗಾಯಿತು.

ಅಧಿಕ ಉಷ್ಣ

ಈಗಲೂ ನಾವು ಅದೇ ಮನೋಭಾವವನ್ನು ನೋಡಬಹುದು. ಒಂದು ಸಾರ್ವಜನಿಕ ಆಹಾರ ಪಾನೀಯ ಮಂದಿರಕ್ಕೆ ಹೋದರಲ್ಲಿ ನೆರೆದ ಬ್ರಿಟಿಷರು 'ಈ ಆಹಾರ ಕೊರತೆ ನಮಗೆ ರುಚಿಸುವುದಿಲ್ಲ. ಆದರೆ ಇದರಿಂದ ನಮ್ಮ ದೇಶಕ್ಕೊಳಿತಾಗುವುದಾದರೆ ಸಂತೋಷದಿಂದ ನಾವಿದನ್ನು ಸಹಿಸುತ್ತೇವೆ" ಎಂದೆನ್ನುವುದನ್ನು ಕೇಳಿದೆ. ಯಾವಾಗಲೂ ಬ್ರಿಟನಿನ ಜನತೆಯು ಮೇಲೆ ವಿಶ್ವಾಸವಿಡುವುದು ವಿವೇಕದ ಧೋರಣೆ. ತಾವು ಯಾವುದನ್ನು ಏತಕ್ಕೆ ಮಾಡುತಿದ್ದೇವೆ ಎಂಬುದನ್ನು ಅವರು ತಿಳಕೊಂಡರೆ ಮತ್ತೆ ಅದೆಂತಹ ಸಂಕಷ್ಟವನ್ನು ತಾಳಲೂ ಅವರು ಹಿಂಜರಿಯುವುದಿಲ್ಲ. ಮೋಸ ಮತ್ತು ದುಷ್ಕಾರ್ಯಗಳನ್ನು ಮಾತ್ರ ಅವರೆಂದಿಗೂ ಕ್ಷಮಿಸುವುದಿಲ್ಲ.

ಇದರ ಮಧ್ಯ ಬ್ರಿಟಿಷ್ ಜನತೆ ಅತ್ಯುಷ್ಣತೆಯ ಬೇಸಿಗೆ ಕಾಲವೊಂದನ್ನು ಎದುರಿಸುವ ಭೌತಿಕ ದುಃಸ್ಥಿತಿಯೂ ಉಂಟಾಗಿದೆ. ಕೆಲವು ವಾರಗಳಿಂದಲ್ಲಿ ಬೀರಿಯುತ್ತಿರುವ ಬಿಸಿಲು ಭಾರತದಲ್ಲಿ ಬೆಳೆದ ನಮಗೂ ತಾಪದಾಯಕವಾಗಿ ತೋರುತ್ತಿದೆ. ತಂಗಾಳಿಯ ಒಂದೇ ಒಂದು ಸುಳಿವೂ ಕಂಡು ಬರುವುದಿಲ್ಲ. ಹಾಸಿಗೆಯ ಬಟ್ಟೆಗಳು ಕಾದ ಕಬ್ಬಿಣದಂತೆ ಭಾಸವಾಗುತ್ತಿವೆ.

ಈ ಉಷ್ಣ ಸಹಿಸಲಾರದೆ ನಾನೊಂದು ಹತ್ತಿರದ ಉದ್ಯಾನಕ್ಕೆ ಹೋಗಿ ಅಲ್ಲಿನ ಒಂದು ಬೆಂಚಿನ ಮೇಲೆ ಸ್ವಸ್ಥ ಮಲಗಿಬಿಟ್ಟೆ. ತಕ್ಷಣ ಓರ್ವ ಪೋಲಿಸನು ಕಾಣಿಸಿಕೊಂಡ. "ಏನು ಮಾಡುತ್ತೀರಿ" ಎಂದು ಪ್ರಶ್ನಿಸಿಯೇ ಬಿಟ್ಟ. "ಒರ್ವ ದೇವಿಯ ಆಗಮನವನ್ನು ಕಾಯುತಿದ್ದೇನೆ" ಎಂದೆ. "ಯಾವ ದೇಶದ ಹುಡುಗಿ ಅವಳು" ಎಂದು ಪೋಲಿಸ್ ಪ್ರಶ್ನಿಸಿದ. "ವಾಯು ದೇವತೆ, ಅಂದರೆ ತಂಗಾಳಿ" ಎಂದಾಗ ಅವನು ಹೊಟ್ಟೆ ತುಂಬ ನಕ್ಕುಬಿಟ್ಟ. ನನ್ನ ತಾಪ ತ[illegible] ಅವನಿಗರಿವಾಯಿತು. ಆದರೆ ಕರ್ತವ್ಯ ಪರಿಪಾಲನೆಯು ತನ್ನ ಆದ್ಯ ಕರ್ತವ್ಯವೆಂದು ಅವನು ಚೆನ್ನಾಗಿ ಬಲ್ಲ. "ಆದರೆ ಮಹಾಶಯರೆ ನೀವು ಈ ಬೆಂಚಿನ ಮೇಲೆ ಮಲಗಿಕೊಂಡಿರುವುದು ತಪ್ಪಾಗುವುದು" ಎಂದು ನಿದಾಕ್ಷಿಣ್ಯವಾಗಿ ಸ್ಪಷ್ಟವಾಗಿ ತಿಳಿಸಿಬಿಟ್ಟ. ನ[illegible] ಹೋಗುವುದೆ ಪ ತಿಳಿಯಲಿಲ್ಲ. ಆಗವನು ಸಂತೋಷದಿಂದ ಒಂದು ಕಪ್ಪು ಚಾದಿಗೆ ನನ್ನನ್ನು ಮಂದಿರಕ್ಕೆ ಕರೆದೊಯ್ದ.

ಲಂಡನಿನಲ್ಲಿ ಭಾರತ ಧ್ವಜ

ಆಗಸ್ಟ್ 15ರಂದು ನ[illegible] ಲಂಡನಿನ ಭಾರತ ಕಛೇರಿಯಲ್ಲಿದ್ದ ರಾಷ್ಟ್ರ ಧ್ವಜಾರೋಹಣ ಸಮಾರಂಭಕ್ಕೆ ಹೋಗಿದೆ. ನಮ್ಮ ದೇಶ ಬಾಂಧವರಾದ ಹಿಂದೂ ಮುಸಲ್ಮಾನರೆಲ್ಲರೂ ಅಲ್ಲಿ ಸಂತೋಷ ಚಿತ್ತರಾಗಿ ನೆರೆದಿದ್ದರು. ನಮ್ಮ ರಾಜಕೀಯ ಆಶೆ ಆಕಾಂಕ್ಷೆಗಳು ನೆರವೇರಿದುದಕ್ಕವರು ಹೆಮ್ಮೆ ಪಟ್ಟಿಕೊಂಡಿದ್ದರು. ಭಾರತ ಮತ್ತು ಪಾಕಿಸ್ಥಾನಗಳಿಂದು ಸ್ವತಂತ್ರ ನಾಡುಗಳಾಗಿದ್ದು ಬ್ರಿಟನಿನೊಂದಿಗೆ ಸಮಾನ ಸ್ಥಾನಮಾನ ತಳೆಯುವವು.

ಅಂದು ಬ್ರಿಟಿಷ್ ಸರಕಾರದ ಆದ್ಯ ವ್ಯಕ್ತಿಗಳು ಆ ಸಮಾರಂಭಕ್ಕೆ ಬಂದಿದ್ದರು. ಖಜಾನೆ ಮಂತ್ರಿ ಮಿ. ಹರ್ಬರ್ಟ್ ಮೋರಿಸನ್ನರೂ ಒಂದು ಕಡೆ ನಿಂತಿದ್ದರು. ಓರ್ವ ಗಣನೀಯ ಭಾರತೀಯರು ಅವರ ಬಳಿಗೆ ಬಂದು "ಚಕ್ರವರ್ತಿಗಳ ಕೋಶಾಧಿಪತಿಯ ಬಳಿ ನಿಲ್ಲುವ ಗೌರವ ಪಡೆಯಲೆ?" ಎಂದು ಪ್ರಶ್ನಿಸಿದರು. ಇದರ ಸಂಕೇತಾರ್ಥದ ವಿನೋದವು ಎಲ್ಲರಿಗೂ ತಿಳಿಯದಿರಲಿಲ್ಲ. ಧ್ವಜಾರೋಹಣ ನಂತರ ಓರ್ವ ಆಂಗ್ಲ ಮನೆಗೆಲಸದ ಹೆಂಗಸು "ಎಂತಹ ಸುಂದರ ಪತಾಕೆ ಇದು" ಎಂದಳು. ಆ ದಿವಸಕ್ಕೆ ಅಷ್ಟು ಉತ್ತಮ ಮಾತುಗಳನ್ನು ನಾನು ಕೇಳಲಿಲ್ಲ.

FOR ALL CLASSES OF INSURANCE

LIFE–FIRE–MARINE–ACCIDENT

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA ASSURANCE CO. LTD.

(H O BOMBAY)

*

A Tata's Promotion & India's Largest Composite Insurance Office.

Total Assets – About 9 Crores.

For Agency and other particulars:-

Apply to

K. GANAPATHI Esq., *Branch Manager.* 4/5, First Line Beach, MADRAS

K. N. NAYAK, Esq., *Secretary, Sub Office* Hampankatta, MANGALORE.

ಕೃಷಿ ಪ್ರಧಾನ ದೇಶದಲ್ಲಿ ಆಹಾರ ಅಭಾವವೇಕೆ?

ಆಹಾರ ಕೊರತೆ ನೀಗಿಸುವ ಚೀನಿ ವಿಧಾನ

ಕಳ್ಳ ಸಂತೆಯನ್ನು ತಡೆಯುವ ಉಪಾಯ

ಕೃಷಿತೋ ನಾಸ್ತಿ ದುರ್ಭಿಕ್ಷಂ ಎಂಬುದು ನಮ್ಮ ಪ್ರಾಚೀನದ ವಿವೇಕದ ಮಾತು. ಸಾವಿರಾರು ವರ್ಷಗಳಿಂದ ನಮ್ಮ ದೇಶ ಕೃಷಿ ಪ್ರಧಾನವಾಗಿದ್ದು ಇಂದೂ ಶೇಕಡಾ 80ರಷ್ಟು ಜನತೆ ಹೊಲಗಾರಿಕೆಯ ವ್ಯವಸಾಯ ಗೆಯ್ಯುತ್ತಿದೆ. ಆದರೂ ಭೀಕರವಾದ ಆಹಾರ ಭಿಕ್ಕಟ್ಟೊಂದು ದೇಶವನ್ನು ಗಂಡಾಂತರಕ್ಕೀಡುಮಾಡುವ ದುರಂತ ಪರಿಸ್ಥಿತಿ ನಮ್ಮನ್ನೆದುರಿಸಿದೆ. ಇದಕ್ಕೆ ಕಾರಣವೇನು? ಈ ಪ್ರಶ್ನೆಯನ್ನುತ್ತರಿಸುತ್ತಾ ಎಂಡ್ರೂರೊತ್ ಎಂಬ ಅಮೇರಿಕನ್ ತಜ್ಞರೊಬ್ಬರು ಒಂದು ವಿಚಾರಪರ ಲೇಖನದಲ್ಲಿ ಹಲವು ನಿವಾರಣೋಪಾಯಗಳನ್ನು ಸೂಚಿಸಿರುವುದು ಗಮನಾರ್ಹವಾಗಿದೆ. ಅದರ ಸಾರಾಂಶ ಈ ಕೆಳಗೆ ಕೊಡಲಾಗಿದೆ:

ಭಾರತಕ್ಕೆ ಸ್ವಾತಂತ್ರ್ಯ ದೊರಕಿರುವುದಾದರೂ ಭಾರತೀಯರಿಂದು ಅರೆಹೊಟ್ಟೆಯಲ್ಲಿ ಕಾಲಕಳೆಯುವ ದುರ್ಧರ ಪ್ರಸಂಗವೊದಗಿದೆ. ಬೆಳಗಿಂದ ಸಾಯಂಕಾಲ ತನಕ ಹೊಲದಲ್ಲಿ ಶ್ರಮಿಸುವ ರೈತನಿಗೇ ಸರಿಹೊಟ್ಟೆ ತುಂಬುವುದು ಕಷ್ಟಕರವಾಗಿದೆ

ಡಿಲ್ಲಿಯ ಸರಕಾರ ಕಛೇರಿಯಲ್ಲಿ ಸಿರಾ ತೆಗೊಂಡ ಅಧಿಕಾರಿಗಳು ಕೆಲವೊಂದು ಅಂಕೆಸಂಖ್ಯೆಗಳನ್ನು ಕೊಡುತಿದ್ದಾರೆ ಭಾರತಕ್ಕೆ ವರ್ಷಕ್ಕೆ 37 ಮಿಲಿಯ ಟನ್ ಆಹಾರ ಬೇಕು. ಆದರೆ ಈಗ ಸರ್ವಸಾಧಾರಣ ದೇಶದಲ್ಲಿ ದಿನಕ್ಕೆ 8 ಔನ್ಸಿಗಿಂತ ಹೆಚ್ಚು ಆಹಾರ ಧಾನ್ಯ ಕೊಡಲು ಸಾಧ್ಯವಾಗುವುದಿಲ್ಲ. ಓರ್ವ ಸಾಮಾನ್ಯ ಮನುಷ್ಯನ ಚಟುವಟಿಕೆಗಳಿಗೆ ಬೇಕಾಗುವ ಆಹಾರದ ಮೂರನೇ ಒಂದಂಶದಷ್ಟು ಆಗುವುದು ಈ ಪ್ರಮಾಣ ಪರಿಣಾಮವಾಗಿ ಜನತೆಯ ಆರೋಗ್ಯಕ್ಕೆ ತುಂಬಾ ಧಕ್ಕೆವುಂಟಾಗಿ ಮಲೇರಿಯಾ ಮತ್ತಿತರ ವ್ಯಾಧಿಗಳ ಹರಡುವಿಕೆಗೆ ತುಂಬಾ ಇಂಬು ಸಿಗುವಂತಾಗಿದೆ

ಯುದ್ಧ ಪೂರ್ವ ಪರಿಸ್ಥಿತಿ

ಇಂದಿನ ಆಹಾರ ಪರಿಸ್ಥಿತಿಯನ್ನು ಓರ್ವ ಜನತಾ ಪ್ರಮುಖರು ಬಹಳ ಸರಳವಾಗಿ ವರ್ಣಿಸಿದ್ದಾರೆ "ನಮ್ಮ ಕಷ್ಟವೆಂದರೆ ನಮ್ಮಲ್ಲಿನ ಶೇಕಡಾ 5ರಷ್ಟು ಜನರಿಗ ಬೇಕಾದಕ್ಕಿಂತ ಹೆಚ್ಚು ಸಿಕ್ಕುತ್ತದೆ ಶೇಕಡಾ 10 ಜನರಿಗೆ ಸಾಕಷ್ಟು ಸಿಕ್ಕುತ್ತದೆ ಉಳಿದವರಿಗೆ ಮುಂದಿನೆರಡು ಊಟಗಳು ಹೇಗ ಸಿಕ್ಕಬಹುದೆಂಬುದೇ ನಿತ್ಯದ ಕಳವಳವಾಗುತ್ತದೆ ಇದರಲ್ಲಿ ತುಂಬಾ ಸತ್ಯಸ್ಥಿತಿಯಿದೆ

ಭಾರತದಲ್ಲಿ ಪ್ರತಿ ವರ್ಷ 20 ಲಕ್ಷ ಜನರು ಮಲೇಜ್ವರಕ್ಕೆ ತುತ್ತಾಗುತ್ತಾರೆ ಈ ಮರಣಗಳು ಕೇವಲ ಸೊಳ್ಳೆ ಕಡಿತದಿಂದ ಮಾತ್ರವಲ್ಲ ಸರಿಯಾದ ಆಹಾರ ಪೋಷಣೆಯಿಲ್ಲದೆ ಉಂಟಾಗುವ ಶಾರೀರಿಕ ನಿರ್ಬಲತೆಯಿಂದಲೂ ಇದು ಸಂಭವಿಸುವುದು ಇನ್ನೊಂದು ಸಂಖ್ಯೆ ನಮ್ಮನ್ನು ತಬ್ಬಿಬ್ಬುಗೊಳಿಸುವಂತಹುದು ಅದೆಂದರೆ ಭಾರತದಲ್ಲಿ ಈಗ ಶೇಕಡಾ 13ರಷ್ಟು ಆಹಾರ ಕಡಿಮೆಯಾಗಿರುತ್ತದೆಂದು ಲೆಕ್ಕಹಾಕಲಾಗಿದೆ ಇಷ್ಟೇ ಪ್ರಮಾಣದ ಆಹಾರ ಬಂಗಾಳದಲ್ಲಿ ಕಡಿಮೆ ಬಿದ್ದಾಗ ಅಲ್ಲಿ ಜನರು ಕ್ರಿಮಿಗಳಂತೆ ಸತ್ತರು. ಯಾಕೆ?

ಯಾಕೆ?

ಕಳೆದ ವರ್ಷ ಯುದ್ಧ ಭಗ್ನವಾಗಿದ್ದ ಬರ್ಮದಿಂದ ಎಂದಿನಂತೆ ಅಕ್ಕಿ ಸರಬರಾಯಿ ಮಾಡಲು ಸಾಧ್ಯವಾಗಲಿಲ್ಲ. ಈ ವರ್ಷ ಅಕಡೆಯಿಂದ ಮಳೆಯ ಅಭಾವದ ವಿವರಣೆಗಳು ಬಂದಿರುತ್ತವೆ. ಭಾರತದಲ್ಲೇ ಜಾತೀಯ ದಂಗೆಗಳಿಂದ ಅದೆಷ್ಟೋ ಆಹಾರವು ಸುಟ್ಟುಹೋಗಿರುವುದೆಂದೂ, ಅಗಾಧ ಪ್ರಮಾಣದ ಗೋಧಿಯು ಹಾಳಾಗಿ ಹೋಗಿರುವುದೆಂದೂ, ಇದ್ದುದನ್ನು ಸಕಾಲದಲ್ಲಿ ಸಾಗಿಸುವ ಏರ್ಪಾಡಿಲ್ಲದೆ ಎಷ್ಟೋ ಆಹಾರ ಹಾಳಾಗಿರುವುದೆಂದೂ ಹೇಳಲಾಗಿದೆ

ಇದರ ಜೊತೆಗೆ ಕಳೆದ ಹತ್ತು ವರ್ಷಗಳಲ್ಲಿ ವೃದ್ಧಿಸಿ ಬಂದ 5 ಕೋಟಿ ಹೆಚ್ಚಿನ ಜನಸಂಖ್ಯೆ. ಭಾರತದ ಬೆಳೆ ಸಾಗುವಳಿ ಕ್ರಮಗಳೂ ಅತ್ಯಂತ ಹಳೆಯವು. ಬೆಳೆಯುವ ಜನಕೋಟಿಯ ಅವಶ್ಯಕತೆಯನ್ನು ನಿವಾರಿಸಲು ಈ ಪದ್ಧತಿಗಳು ತೀರ ಯೋಗ್ಯವಲ್ಲ

ಇಂಧು ಸರಕಾರವು ಆಹಾರ ಧಾನ್ಯ ಸಂಗ್ರಹಕ್ಕಾಗಿ ಅವಿಶ್ರಾಂತ ಶ್ರಮ ವಹಿಸುವುದಾದರೂ ಅದರ ಆಹಾರ ಉಗ್ರಾಣಗಳು ಬರಿದಾಗಿಯೇ ಉಳಿದಿದ್ದು ಹೆಚ್ಚಿನ ಆಹಾರವೆಲ್ಲ ಹಲವು ಕಪ್ಪು ಸಂತೆಯ ಕಳ್ಳ ಉದ್ಯಮದವರ ಕೈಯಲ್ಲಿರುವಂತಾಗಿದೆ ಅವರು ತಮ್ಮ ಗುಪ್ತ ಕೃತಿಗಳಿಂದ ಹೇರಳ ಲಾಭ ಸಂಗ್ರಹಿಸಲು ಪ್ರಯತ್ನಿಸುತ್ತಿರುವರು ಈಗಿನ ದುರ್ಭಿಕ್ಷವು ಅವರಿಗೊಂದು ಉತ್ತಮ ಸುಗ್ಗಿ ಸಮಯ ಅದಕ್ಕೂ ಕಾರಣವಿದೆ ಏಕೆಂದರೆ ಬಂಗಾಲ ಕ್ಷಾಮ ಕಾರಣ ಪರಿಶೋಧನಾ ಸಮಿತಿಯವರ ವರದಿಯಲ್ಲಿ ಅಲ್ಲಿ ಸತ್ತ ಪ್ರತಿ ವ್ಯಕ್ತಿಯ ಪ ಸುಮಾರು 750 ರೂಪಾಯಿ ಲಾಭವು ಅಲ್ಲಿನ ಕಪ್ಪು ಸಂತೆ ಕೋರ ಶಿಖಾಮಣಿಗಳಿಗೆ ಸಿಕ್ಕಿರುವುದ [illegible] ಲ್ಲರನ್ನೂ ಆಕರ್ಷಣೆಗೊಳಪಡಿಸಿದೆ ಅಲ್ಲಿ ಸತ್ತವರು 20 ಲಕ್ಷ!

ಕಳ್ಳರ ಪತ್ತೆ

ಆಗೂಸ್ಟು 12ರಂದು ಮದ್ರಾಸಿನ ಓರ್ವ ಮಂತ್ರಿಗಳು ತಮ್ಮ ಪ್ರಾಂತ್ಯದಲ್ಲಿ ಈ ವರ್ಷ ಉತ್ಪತ್ತಿಯು ಎಂದಿಗಿಂತ ಹೆಚ್ಚಾಗಿರುವುದಾದರೂ ಆಹಾರ ಧಾನ್ಯ ಸಂಗ್ರಹವು ಹಿಂದಿಗಿಂತ ಎಷ್ಟೋ ಕಡಿಮೆಯಾಗಿದೆಯೆಂದು ತಿಳಿಸಿದರು ಇದರಿಂದ ಕಪ್ಪುಸಂತೆಗಾರರ ಬಳಿ ಹೇರಳ ದಾಸ್ತಾನಿರುವುದೆಂಬ ಸಂಗತಿಯು ಸ್ಪಷ್ಟವಾಗುತ್ತದೆ ಈ ಪ್ರಾಂತ್ಯದಲ್ಲಿ ಸುಮಾರು 5 ಲಕ್ಷ ಟನ್ನುಗಳಷ್ಟು ಆಹಾರವು ಗುಪ್ತ ದಾಸ್ತಾನಿಗೊಳಪಟ್ಟಿದೆಯೆಂದು ಗುಣಿಸಲಾಗಿದೆ ಇದೇ ಸಮಯಕ್ಕೆ ಸರಕಾರದ ಬಳಿಯಿರುವ ಎಲ್ಲಾ ಸಂಗ್ರಹವೂ ಬರಿದಾಗ ಹತ್ತಿದೆ

ಹೀಗಾಗಿ ಬೆಳೆಯನ್ನು ಬೆಳೆಸುವ ಒಕ್ಕಲುಗಳ ಒಳಿ ಸಮಹೊಟ್ಟೆಗೆ ಬೇಕಾದಷ್ಟು ಆಹಾರ ಸಂಗ್ರಹವಿಲ್ಲದಂತಾಗಿ [illegible] ಕಳ್ಳ ಸಂತೆಯಲ್ಲಿ [illegible] ಗುತ್ತದೆ [illegible] ಭಾರತೀಯ ಜನತೆಯ [illegible] ಒಕ್ಕಲುಗಳು [illegible] ಅಯೋಗ್ಯರಾಗಿರುವರು ತಮ್ಮ ಸಂಸಾರಗಳನ್ನು [illegible] ಹೊಲಗಳನ್ನು [illegible] ಈ [illegible] ಯುವಂತಾಗಿದೆ

ಯುದ್ಧ ಪೂರ್ವದಲ್ಲಿ [illegible] ಕೃಷಿ ಕೆಲಸದ ಕುಟುಂಬಗಳಲ್ಲಿ [illegible] 200 ಲಕ್ಷದಷ್ಟು ಕುಟುಂಬಗಳು ಅಲ್ಪಸ್ವಲ್ಪ ಆಸ್ತಿಪಾಸ್ತಿ ಇದ್ದವರಾಗಿದ್ದರು. ಇವರು ತುಂಬಾ ಸಾಲದಲ್ಲೂ ಮುಳುಗಿದ್ದರು. ಇತರ 250 ಲಕ್ಷ ಕುಟುಂಬಗಳು ಕೇವಲ ಕೂಲಿಗೆ ದುಡಿಯುವ ಒಕ್ಕಲುಗಳಾಗಿದ್ದು ತಮ್ಮ ಉತ್ಪತ್ತಿಯ ಶೇಕಡಾ 80ರಷ್ಟನ್ನು ಗೇಣಿಕೊಡುತಿದ್ದರು. ಮತ್ತೂ ಉಳಿದ 340 ಲಕ್ಷ ಕುಟುಂಬಗಳು ಬರೇ ಕೂಲಿ ಕೆಲಸದವರು—ದಿವಸಕ್ಕೆ ಕೆಲವೇ ಆಣೆ ಕೃಷಿ ಕೂಲಿಯಿಂದ ಹೊಟ್ಟೆತುಂಬಿಸುವವರು.

ಅದೇ ರೀತಿ ಅರ್ಧಕರ್ಧ ಜಮೀನುಗಳು ರಕ್ತಹೀರುವ ಜಮೀನ್ದಾರರ ವಶವಾಗಿವೆ. ಅಲ್ಪಸ್ವಲ್ಪ ಹೊಲಗದ್ದೆಗಳಿದ್ದ ರೈತರ ಬಳಿ ಅವುಗಳನ್ನು ಅಭಿವೃದ್ಧಿಗೊಳಿಸಲು ಸಾಕಷ್ಟು ಹಣವಿಲ್ಲದೆ ಸಂಕಷ್ಟಪಡುತ್ತಿರುವರು. ತಮ್ಮ ಕೃಷಿ ವಿಧಾನಗಳನ್ನು ಸುಧಾರಣೆ ಮಾಡಿಕೊಳ್ಳುವ ಜ್ಞಾನ ಸಂಪಾದಿಸಲೂ ಅವರಿಗೆ ತಕ್ಕ ಶೈಕ್ಷಣಿಕ ಅನುಕೂಲತೆಗಳಿಲ್ಲ

ಚೀನೀ ಆದರ್ಶ

ಭಾರತದ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಇತರ ಕೃಷಿ ಪ್ರಧಾನ ದೇಶಗಳ ಪರಿಶೀಲನ ಅವಶ್ಯವಿದೆ ಚೀನೀ ಜಪಾನಿ ಯುದ್ಧಕಾಲದಲ್ಲಿ ಚೀನದ ಜನತೆಗೆ ಇದೇ ಸಂಕಷ್ಟವು ಪ್ರಾಪ್ತಿಸಿತ್ತು ಆಗ ಅವರಿಗೆ ಆಧುನಿಕ ಕೃಷಿ ಉಪಕರಣಗಳನ್ನು ತರಿಸಲೂ [illegible] ಆದರೂ ಸ್ವಕಷ್ಟ ಮತ್ತು ಅನುಭವಗಳಿಂದವರು ಕೆಲವು [illegible] [illegible]

ರೈತನ ತ್ರಾಣದಿಂದಲೇ ಹೆಚ್ಚು ಆಹಾರ ಬೆಳೆಸಲು ಸಾಧ್ಯವೆಂದವರಿಗೆ ಖಚಿತವಾಯಿತು ಭಾರತದಲ್ಲೂ ಹಾಗೇ ಮಾಡಿದರೆ ಆಹಾರ ಉತ್ಪತ್ತಿಯನ್ನು ಹೆಚ್ಚಿಸಲು ಸಾಧ್ಯವಿದೆ ಚೀನೀಯರು ತಮ್ಮ ರೈತರ ಗೇಣಿಯನ್ನು ಶೇಕಡಾ 60ರಿಂದ 38ಕ್ಕಿಳಿಸಿದರು [illegible] ಅಲ್ಲಿನ ರೈತನಿಗೆ ತಿನ್ನಲು ಸಾಕಷ್ಟು [illegible] ಆಧುನಿಕ ಉಪಕರಣಗಳನ್ನು ಕೊ[illegible] ಅವರ ತಮ್ಮ [illegible] ಇದ [illegible] ಉತ್ಪತ್ತಿ [illegible] ಭಾರತದಲ್ಲೂ ಇದೇ ರೀತಿ [illegible] ಕಳ್ಳ ವ್ಯಾಪಾರ [illegible] ಮಾತ್ರವಲ್ಲ ಆಹಾರ [illegible] ಸುಲಭವಾಗಿ ಸುಧಾರಿಸುವುದು [illegible] ಪ್ರಾಂತ್ಯಗಳಲ್ಲಿ ಆಗಲೇ ಕೃಷಿ ಸುಧಾರಣಾ ವಿಧಾನಗಳನ್ನು ಜಾರಿಗೆ ತರುತ್ತಿರುವುದು ಶ್ಲಾಘ್ಯ

ಹುಲ್ಲು ಊಟ

ಹುಲ್ಲನ್ನು ಮಾನವ ಶರೀರ ಪೋಷಣೆಯ ಆಹಾರವಾಗಿ ಹೇಗೆ ಉಪಯೋಗಿಸಿಕೊಳ್ಳಬಹುದೆಂಬುದರ ಕುರಿತು ಲಂಡನಿನಲ್ಲಿ ಪ್ರಯೋಗಗಳು ನಡೆಯುತ್ತವೆಂದು ತಿಳಿದುಬರುತ್ತದೆ

ಯುದ್ಧ ಕಾಲದಲ್ಲಿ ಹಿಟ್ಲರನ ಯುಬೋಟುಗಳು ಇಂಗ್ಲೆಂಡಿನ ಆಹಾರ ಹಡಗುಗಳನ್ನು ಮುಳುಗಿಸುತ್ತಿದ್ದಾಗ ಅಲ್ಲಿನ ಆಹಾರ ತಜ್ಞರಿಗೆ ಈ ಯೋಚನೆಯು ಹೊಳೆದಿದ್ದು ಆ ಕುರಿತು ಪ್ರಯೋಗಗಳು ಪ್ರಾರಂಭವಾಗಿದ್ದುವು. ಹುಲ್ಲಿನಲ್ಲಿ ತುಂಬಾ ಪ್ರೋಟಿನುಗಳಿವೆಯೆಂದು ಕಂಡುಬಂದಿದೆ ವಿಟಮಿನ್ 'ಬಿ'ಯ ಕೊರತೆಯಿಂದ ನರಳುತಿದ್ದ ಜಪಾನಿ ಕೈದಿಗಳಿಗೆ ಹುಲ್ಲಿನ ಗಂಜಿ ಕೊಟ್ಟು ಪ್ರಯೋಗ ನೋಡಿದಾಗ ತೃಪ್ತಿಕರವಾದ ಆರೋಗ್ಯ ಸುಧಾರಣೆಯು ಕಂಡುಬಂದಿತ್ತು

CANARA BANK, LIMITED.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟ ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ.)

(ಸ್ಥಾಪಿತ: ೧೯೦೬)

ಹೆಡ್ ಆಫೀಸು: ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು: 75 ಎಪ್ಲೋಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು:—

ಮದರಾಸು ಪ್ರಾಂತ್ಯ: ಮಂಗಳೂರು ಸಿಟಿ, ಮಂಗಳೂರು–ಬಂದರ್, ಮುಲ್ಕಿ, ಗಂಗೊಳ್ಳಿ, ಕುಂದಾಪುರ, ಉಡುಪಿ, ಕಾರ್ಕಳ, ಬಂಟ್ವಾಳ, ಪುತ್ತೂರು, ಕಾಸರಗೋಡು, ಮದರಾಸು., ಪಯ್ಯನ್ನೂರು., ಕಲ್ಲಿಕೋಟೆ., ಕನ್ನಾನ್ನೂರು, ಕೊಯಮುತ್ತೂರು., ತಿರುಚಿನಾಪಳ್ಳಿ., ತುತುಕುಡಿ., ಸಲಂ, ಇರೋಡ್

ಹೈದರಾಬ್ಯಾದ್ ಸಂಸ್ಥಾನ: ಸೆಕುಂದರಾಬಾದು

ತಿರುವಾಂಕುರು ಸಂಸ್ಥಾನ: ಅಲ್ಲಪ್ಪಿ, ಕ್ವಿಲೋನ್

ಮಧ್ಯ ಪ್ರಾಂತ್ಯ: ನಾಗಪುರ, ಅಕೋಲ, ಅಮರಾವತಿ

ಮುಂಬೈ ಪ್ರಾಂತ್ಯ: ಬೆಳಗಾಂವ್., ದಾರವಾಡ., ಹುಬ್ಬಳ್ಳಿ., ಶೋಲಾಪುರ., ಪೂಣೆ., ಮುಂಬೈ–ಫೋರ್ಟ್, ಮುಂಬೈ ಮಾಂಡ್ವಿ, ಮುಂಬೈ–ಕಾಲ್ಬಾದೇವಿ, ಮುಂಬೈ–ಗಿರ್ಗಾಂವ್, ಮುಂಬೈ ಕಲ್ಯಾಣ

ಮೈಸೂರು ಸಂಸ್ಥಾನ: ಮೈಸೂರು, ಶಿವಮೊಗ, ಚಿಕ್ಕಮಗಳೂರು., ಬೆಂಗಳೂರು ಸಿಟಿ, ಅರಸಿಕೆರೆ, ದಾವಣಗೆರೆ

ಸಿಂದ್ ಪ್ರಾಂತ್ಯ: ಕರಾಚಿ.

ಕೊಚ್ಚಿ ಸಂಸ್ಥಾನ: ಕೊಚ್ಚಿ., ಎರ್ನಾಕುಳಾಮ್.

ಜಿಲ್ಲಾ ಪರಿಚಯ

ಮಂಗಳೂರು: ಸ್ಥಳೀಯ ಶ್ರೀ ಮುಖ್ಯಪ್ರಾಣ ದೇವಸ್ಥಾನದಲ್ಲಿ ಪ್ರತಿ ಶುಕ್ರವಾರ ಶ್ರೀ ರಾಮಾಂಜನೇಯ ಭಜನಾಮಂಡಳಿಯವರಿಂದ ಭಜನೆಯು ನಡೆಯುತ್ತಿದ್ದು ಕಳೆದ ಶುಕ್ರವಾರ ಅದರ ಪ್ರಥಮ ವಾರ್ಷಿಕೋತ್ಸವವು ಬಹಳ ವಿಜೃಂಭಣೆಯಿಂದ ಜರಗಿತು. ಅಂದು ಪೂಜೆ ಪುರಸ್ಕಾರಗಳೂ, ಹರಿಕೀರ್ತನೆಯ ಕಾರ್ಯಕ್ರಮವೂ ಇದ್ದಿತು.

ನಿಧನ: ಇಲ್ಲಿಯ ಎಡಿ. ಪಾ: ಪ್ರೊಸಿಕ್ಯೂಟರರಾಗಿದ್ದ ಶ್ರೀ ಆನಂದ ತಳ್ವಾರರವರು ಕೆಲ ಕಾಲದಿಂದ ಅಸ್ವಸ್ಥದಲ್ಲಿದ್ದು ಈಚೆಗೆ ವಿಧಿವಶರಾದುದು ಅತ್ಯಂತ ಶೋಚನೀಯ. ಇವರು ಸಮರ್ಥ ವಾಗ್ಮಿಗಳು, ತುಳುನಾಡಿನ ಅಭಿಮಾನಿಗಳು, ಕನ್ನಡದಲ್ಲಿ ಲೇಖನಗಳನ್ನು ಬರೆದು ನಾಡಿನ ಸೇವೆ ಸಲ್ಲಿಸಿರುವರು. ಅವರ ಆತ್ಮಕ್ಕೆ ಶಾಂತಿ ಕೋರುವೆವು.

ಅಭಿವಂದನೆ ಸಭೆ: ಹರಿಜನರ ಪರವಾಗಿ ಮಂಗಳೂರು ಮುನಿಸಿಪಾಲಿಟಿಗೆ ಆರಿಸಿ ಬಂದ ಶ್ರೀ ಎಸ್. ಜಿ. ಸಾಲೆನ್ನರನ್ನು ಅಭಿನಂದಿಸಲು ಕಳೆದ ತಾ. 14ರಲ್ಲಿ ಸೂಟರ್ ಪೇಟೆ ಲೇಬರ್ ಕೊಲೊನಿಯಲ್ಲಿ ಒಂದು ಸಭೆ ಶ್ರೀ ಕೆ. ಸೆಟ್ಟರ ಅಧ್ಯಕ್ಷತೆಯಲ್ಲಿ ನೆರೆದಿತ್ತು.

ಹವಾಮಾನ: ಮಳೆ ಸ್ವಲ್ಪ ಕಡಿಮೆಯಾಗಿರುವುದಾದರೂ ಆಗಿಂದಾಗ್ಗೆ ಸುರಿಯುವಿಕೆಯು ಮುಂದುವರಿಯುತ್ತಲೆ ಇದೆ. ಬಿಸಿಲೂ ಶುಭ್ರವಾಗಿ ಪ್ರಕಾಶಿಸುತ್ತಿಲ್ಲ. ಕೆಲವೇ ಕಡೆಗಳಲ್ಲಿ ಪೈರೆಯನ್ನು ಕೊಯ್ಯಲು ಆರಂಭಿಸಿದ ವರದಿಗಳಿವೆ.

ಅಕ್ಕಿ ಸಂಗ್ರಹ: ದಶಂಬರ ತನಕ ದಾಸ್ತಾನಿರಿಸಲು ಅನುಮತಿ ಪಡೆದ ಅನೇಕ ಜಮೀನ್ದಾರರೂ, ಇತರ ಪ್ರಮುಖರೂ ಅಕ್ಟೋಬರ ಮಧ್ಯದ ತನಕದ ಪರ್ಮಾಣವನ್ನು ಮಾತ್ರ ಇಟ್ಟುಕೊಂಡು ಉಳಿದುದನ್ನು ಬಿಟ್ಟುಕೊಡುತ್ತಿದ್ದಾರೆಂದು ತಿಳಿದು ಬರುತ್ತದೆ.

ಅಕ್ಕಿ ಸಂಗ್ರಹದ ವಾಗ್ದಾನ: ಮಾನ್ಯ ಮಂತ್ರಿದ್ವಯರು ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಸಿಪ್ಪೆಗಳನ್ನು ಏರ್ಪಡಿಸಿದ ಪರಿಣಾಮವಾಗಿ ಈ ಕೆಳಗೆ ಕಾಣಿಸಿದಂತೆ ಅಕ್ಕಿಯ ವಾಗ್ದಾನವಾಗಿದೆಯೆಂದು ತಿಳಿದುಬರುತ್ತದೆ.

ಮಂಗಳೂರು ನಗರ—ಸುಮಾರು 45 ಮುಡಿ, ಕಾಸರಗೋಡು ಸುಮಾರು 40, ಪುತ್ತೂರು 35, ಬಂಟ್ವಾಳ 3, ಬೆಳ್ತಂಗಡಿ 100, (ಶ್ರೀ ಡಿ. ಮಂಜಯ್ಯ ಹೆಗ್ಗಡೆ ಎಂ. ಎಲ್. ಸಿ. ಅವರಿಂದ) ಮೂಡಬಿದ್ರೆ 108, ಮೂಲ್ಕಿ 38.

110 ವಾಗಿನು ಅಕ್ಕಿ ಬಂದದೆ: ಹೊರಗಿನ ಜಿಲ್ಲೆಗಳಿಂದ ಮಂಗಳೂರಿಗೆ ಕಳೆದ ಸಪ್ಟೆಂಬರ್ ತಾ. 5ರಿಂದ ತಾ. 9ರ ವರೆಗೆ ಒಟ್ಟು 110 ವಾಗಿನು ಅಕ್ಕಿ (ಎಂದರೆ ಸುಮಾರು 60,000 ಮುಡಿ) ಬಂದಿರುತ್ತದೆ. ಜಿಲ್ಲೆಯಲ್ಲಿ ದಿನ ಒಂದಕ್ಕೆ ಖರ್ಚಾಗುವ ಸರಾಸರಿ ಅಕ್ಕಿ 6000 ಮುಡಿ. ಆಗೋಸ್ತು 31ರ ವರೆಗೆ ವಾಗ್ದಾನದ ಅಕ್ಕಿಯಲ್ಲಿ ಉಳಿದ ಅಂಶ ಸುಮಾರು 3000 ಟನ್ ಅಕ್ಕಿ ಇನ್ನು ಬಂದರೆ ಆಹಾರದ ತುಟ್ಟಿ ಸುಧಾರಿಸಬಹುದೆಂಬ ನಿರೀಕ್ಷೆಯಿದೆ.

ಸಂಸ್ಥಾನ ಸಹಾನುಭೂತಿ ಸಭೆ: ಕೇಂದ್ರ ಮೈದಾನಿನಲ್ಲಿ ನಿನ್ನೆಯೊಂದು ಸಾರ್ವಜನಿಕ ಸಭೆ ಸೇರಿ ಮೈಸೂರು ಹೈದರಾಬಾದುಗಳಲ್ಲಿ ಜನತೆಯ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯನ್ನು ಖಂಡಿಸುವ ಮತ್ತು ಸಾಧ್ಯವಿದ್ದ ಸಹಾಯ ಸಹಾನುಭೂತಿಗಳನ್ನು ಕೊಡಬೇಕೆಂಬ ನಿರ್ಧಾರಗಳಾಗಿ ಅಲ್ಲಿಯ ಪರಿಸ್ಥಿತಿಯ ಕುರಿತು ಭಾಷಣಗಳಾದುವು.

ಶ್ರೀ ಕೃಷ್ಣಾಷ್ಟಮಿ, ಚೌತಿಗಳಿಗೆ ಸಕ್ಕರೆ: ಶ್ರೀ ಕೃಷ್ಣಾಷ್ಟಮಿ ಮತ್ತು ಚೌತಿ ಇವೆರಡು ಹಬ್ಬಗಳು ಎಲ್ಲಾ ಹಿಂದೂಗಳಿಗೆ, ದೊಡ್ಡ ಹಬ್ಬಗಳು. ಈ ಹಬ್ಬದ ದಿನಗಳಲ್ಲಿ ಸಿಹಿತಿಂಡಿ ಮತ್ತು ಪಾನೀಯಗಳನ್ನು ತಯಾರಿಸದ ಹಿಂದೂ ಮನೆಗಳೇ ಇಲ್ಲ. ಇಂತಹ ಹಬ್ಬಗಳಿಗೆ, ಸಕ್ಕರೆಯನ್ನು, ಎಂದಿಗಿಂತ ಸೇಕಡಾ 50%ರಷ್ಟು ಹೆಚ್ಚು ಅಥವಾ 100% ಹೆಚ್ಚು ಕೊಡುವ ವಾಡಿಕೆ. ಅದೇ ರೀತಿ ಮುಸ್ಲಿಮರ ರಮ್ಜಾನಿಗೂ ಕೊಡುವರು. ಹಿಂದೂಗಳಿಗೆ ಅಷ್ಟಮಿ ಮತ್ತು ಚೌತಿ ಹಬ್ಬಗಳಿರುವ ಈ ತಿಂಗಳಲ್ಲಿ ಒಲೆ 50%ರಷ್ಟು ಹೆಚ್ಚು ಮಂಜೂರಾಗಿದೆ. ಎಲ್ಲರಿಗೂ ಏಕಪ್ರಕಾರವಾದ ನ್ಯಾಯವಿರಬೇಡವೇ—ಎಂದು ಜನರಾಡಿಕೊಳ್ಳುತ್ತಿದ್ದಾರೆ. ಅಧಿಕಾರಿಗಳು ಈ ರೀತಿಯ ಭೇದಭಾವ ತೋರುವುದು ಸರಿಯಲ್ಲ. ಕಡಿತಲೇ ಈ ತಿಂಗಳಲ್ಲಿ 100% ರಷ್ಟು ಹೆಚ್ಚು ಸಕ್ಕರೆ ಕೊಡುವಂತೆ ಅಪ್ಪಣೆ [illegible] ಅವಶ್ಯವಿದೆ [illegible]

ದಿ ಕೆನರಾ ಚೇಂಬರ್ ಒಫ್ ಕೊಮರ್ಸ್: [illegible] 11ನೇ [illegible] 4 [illegible] ಆಫೀಸಿನಲ್ಲಿ ಕಂಡು, ಜಿಲ್ಲೆ [illegible] ಸಮಸ್ಯೆಗಳನ್ನು [illegible] ಕಲೆಕ್ಟರರಿಗೆ [illegible] ಸತ್ಕರಿಸಿತ್ತು.

ಬಾವಿಗೆ ಬಿದ್ದು ಮರಣ: [illegible] ಮಣ್ಣಗುಡ್ಡೆಯಲ್ಲಿ [illegible] 2[illegible] ([illegible]) [illegible] ಬಾವಿಯಲ್ಲಿ ಬಿದ್ದು [illegible]

ಪರ್ಸನಲ್ ಅಸಿಸ್ಟಾಂಟರಾದರು: ನಮ್ಮ ಜಿಲ್ಲಾ ಬೋರ್ಡ್ ಕಾರ್ಯದರ್ಶಿ ಸ್ಥಾನದಲ್ಲಿದ್ದ ಶ್ರೀ ಎಂ. ಸುಂದರರಾವ್ ಅವರು ಜಿಲ್ಲಾ ಬೋರ್ಡಿನ ಸ್ಪೆಶಲ್ ಆಫೀಸರ್ (ಜಿಲ್ಲಾ ಕಲೆಕ್ಟರರು) ರಿಗೆ ಪರ್ಸನಲ್ ಅಸಿಸ್ಟೆಂಟರಾಗಿ ನೇಮಕರಾಗಿದ್ದಾರೆ. ಕಾರ್ಯದರ್ಶಿ ಸ್ಥಾನಕ್ಕೆ ಇನ್ನೊಬ್ಬರ ನೇಮಕವಾಗಲಿದೆ.

ಗವರ್ನ್‌ಮೆಂಟ್ ಕಾಲೇಜು: ಇಲ್ಲಿಯ ಗವರ್ನ್‌ಮೆಂಟ್ ಕಾಲೇಜನ್ನು ಫಸ್ಟ್ ಗ್ರೇಡ್ ಕಾಲೇಜಾಗಿ ಮಾರ್ಪಡಿಸಬೇಕು, ಬಿ. ಎ., ಬಿ. ಕೋಮ್., ಬಿಟಿ, ಕ್ಲಾಸುಗಳನ್ನು ತೆರೆಯಬೇಕೆಂಬ ವಿಷಯದ ಕುರಿತಾಲೋಚಿಸಲು ಈಚೆಗೆ ಶ್ರೀಗಳಾದ ವರ್ಗೀಸ್, ಕಾಲೇಜ್ ಪ್ರಿನ್ಸಿಪಾಲ್, ಎಚ್. ನರಸಿಂಹ ಸೆಟ್ಟಿ, ಕೆ. ಟಿ. ಆಳ್ವ, ಎಂ. ವೆಂಕಟೇಶ ಪೈ, ಡಾ. ನಾಗಪ್ಪ ಆಳ್ವ ಮತ್ತು ಶ್ರೀ ಪಿ. ರಾಮಚಂದ್ರರಾವ್ ವಕೀಲ್ ಇವರಿಷ್ಟು ಮಂದಿ ಸೇರಿ ಚರ್ಚಿಸಿದರೆಂದು ತಿಳಿದು ಬಂದಿದೆ.

ಹೊಸ ಜಿಲ್ಲಾ ಜಡ್ಜರು: ಈ ವರೆಗೆ [illegible] ನೆಲ್ಲೂರಲ್ಲಿ ಸಬ್ ಜಡ್ಜರಾಗಿದ್ದ ಮಿ. [illegible] ಎಂ. ಆರ್. [illegible] ಎಂ. ಎ., ಬಿ. ಎಲ್. ಅವರು ನಮ್ಮ ಜಿಲ್ಲಾ ಮತ್ತು ಸಶನ್ ಜಡ್ಜರಾಗಿ ಇಷ್ಟರಲ್ಲೇ ಚಾರ್ಜ ವಹಿಸಿಕೊಂಡಿರುವರು.

ಆಹಾರ ಪರಿಸ್ಥಿತಿ: ಪ್ರಾಂತ್ಯದ ಆಹಾರ ಸಂಗ್ರಹ ಕಾರ್ಯವು ತೃಪ್ತಿಕರವಾಗಿ ಸಾಗು[illegible] ನಿರೀಕ್ಷಣೆಗಳು [illegible] ಆಹಾರ ಮಂತ್ರಿಗಳು ತಿಳಿಸುವುದು [illegible]

[illegible] ಕನ್ನಡದ ಹಳ್ಳಿಗಳಲ್ಲಿ [illegible] ಗುಪ್ತ ದಾಸ್ತಾನು [illegible] ಹೊರತೆಗೆಯಲು [illegible] ಕೈಕೊಂಡರೂ [illegible] ಸೂಚಿಸಿದರು. [illegible] ಹೊರಡಿಸಲಾಗಿದೆ.

ಮದ್ಯಪಾನ ನಿರೋಧ: ದ. ಕನ್ನಡ ಜಿಲ್ಲೆಯಲ್ಲಿ ಮದ್ಯಪಾನ ನಿರೋಧವು [illegible] ಒಕ್ಟೋಬರ 1ರಿಂದ [illegible] ಜಾರಿಗೆ ಬರುವುದೆಂದು [illegible]

ಬೆಲ್ಲ: ಮಂಗಳೂರು ನಗರದ [illegible] ಸಾಕಷ್ಟು ಬೆಲ್ಲದ [illegible] ಇದೆಯೆಂದು ತಿಳಿದು ಬರುತ್ತದೆ. ಅದರೆ ಈಗ ದರ ಬೆಲೆ ರೂ. [illegible] 8½ ತನಕ [illegible] ರುತ್ತದೆಂದೂ ಹೇಳಲಾಗುತ್ತದೆ.

ಚೌತಿ ಸೌಕರ್ಯ: ಚೌತಿ ಹಬ್ಬದ ಸಮಯಕ್ಕೆ ನಗರದ ರೇಶನ್ ಕಾರ್ಡು ಹೊಂದಿದವರಿಗೆ ನಿರ್ದಿಷ್ಟ ಪ್ರಮಾಣದ ಕಡಲೆ, ಹಿಟ್ಟು, ಉದ್ದಿನ ಬೇಳೆ ಮೊದಲಾದುವನ್ನು ಕೊಡಲು ಏರ್ಪಡಿಸಲಾಗಿತ್ತು. ಈ ವಸ್ತುಗಳು ಕ್ಲಪ್ತಕಾಲದಲ್ಲಿ ಸಿಗುವಂತಾಗಬೇಕೆಂದೊರ್ವ ನಾಗರಿಕರ ಮನವಿಯಿದೆ.

ಉಡುಪಿಯಲ್ಲಿ ಮಂತ್ರಿಗಳು: 'ಹೇಗೆ ಪಾರು ಮಾಡುವಿರಿ ಕಠಿನ ಸಮಯದಿಂದ' ಎಂಬ ಉದಾತ್ತ ಧ್ಯೇಯವನ್ನಿಟ್ಟುಕೊಂಡು ಮದ್ರಾಸಿನಿಂದ ಹೊರಟ ಕೃಷಿ ಇಲಾಖೆ ಸಚಿವರಾದ ಶ್ರೀ ಕೆ. ಮಾಧವ ಮೆನೋನರೂ ಆರೋಗ್ಯಖಾತೆಯ ಮಂತ್ರಿಗಳಾದ ಶ್ರೀ ಎ. ಬಿ. ಸೆಟ್ಟರೂ ಕಳೆದ ಆದಿತ್ಯವಾರ ಬೆಳಿಗ್ಗೆ ಉಡುಪಿಗೆ ಬಂದು ತಾಲೂಕು ಕಛೇರಿಯಲ್ಲಿ ಕೂಡಿದ ವರ್ಗದಾರ, ರೈತ, ಆಹಾರಸಮಿತಿಯ ಮೆಂಬರರೇ ಮೊದಲಾದವರ ಸಭೆಯಲ್ಲಿ ಇಂದಿನ ನಿರಾಶಾಜನಕ ಆಹಾರ ಪರಿಸ್ಥಿತಿಯನ್ನು ವಿವರಿಸಿ ಜನಜೀವನಕ್ಕೆ ಅತ್ಯಗತ್ಯವಾದ ಭತ್ತ—ಅಕ್ಕಿಯನ್ನು ದಯಪಾಲಿಸಿರಿ ಎಂದು ವಿನಂತಿಸಿದರು. ಸರಕಾರಿ ಅಂಕೆ ಸಂಖ್ಯೆಗಳ ಮಿತಿಯಂತೆ ವರ್ಗದಾರ, ರೈತ ಜನತೆಯು ಅನ್ನದೇವತೆಗೆ ಸಾಕಷ್ಟು ಆಹುತಿಯನ್ನು ಕೊಟ್ಟಿಲ್ಲ. ಅಂತರಾತ್ಮನ ಕರೆಯನ್ನು ಆಲಿಸಿ ಉಗ್ರಾಣಗಳ ಬಾಗಿಲುಗಳನ್ನು ತೆರೆದು ಆಹಾರ ಪ್ರಶ್ನೆಯನ್ನು ಬಗೆಹರಿಸುವುದರಲ್ಲಿ ನೆರವಾಗಿರಿ ಎಂದು ಸೂಚಿಸಿದರು. ಹಾಜರಿದ್ದ ಸದಸ್ಯರಲ್ಲಿ ಅನೇಕರಿಗೆ ಈ ಕುರಿತು ವಿಚಾರವಿನಿಮಯ ಮಾಡಬೇಕೆಂದಿದ್ದರೂ ಮಂತ್ರಿಗಳಿಗೆ ಸಮಯದ ಅಭಾವವಿದ್ದುದರಿಂದ ಸಾಧ್ಯವಾಗಲಿಲ್ಲ.

ವಿರಾಮ ವಿನೋದ: ಮೂಡಬಿದ್ರಿ ಸರಕಾರಿ ರೂರಲ್ ರಿಕ್ರಿಯೇಶನ್ ವಿಭಾಗ ಕಲಾವೃಂದ ಜೈನ್ ಹೈಸ್ಕೂಲಿನ ವಠಾರದಲ್ಲಿ ಜರುಗಿತು. ವಿವಿಧ ವಿನೋದಾವಳಿಗಳು ನಡೆದ ತರುವಾಯ ರೂರಲ್ ರಿಕ್ರಿಯೇಶನ್ ಆಫೀಸರಾದ ಶ್ರೀ ಕಾಂತಪ್ಪನವರು ಸರಕಾರದ ಈ ಯೋಜನೆಯ ಉದ್ದೇಶ ಮತ್ತು ಆವಶ್ಯಕತೆಯ ಕುರಿತು ಮಾತನಾಡಿದರು.

ಪುಸ್ತಕ ವಿಮರ್ಶೆ

ವಿಮರ್ಶಕ ವೈದ್ಯ: ಒರಿದವರು ವಿ. ಕೃಷ್ಣರಾಜ. ಹಾಸ್ಯ ವಿಡಂಬನೆ ಪ್ರಧಾನವಾಗಿ ಸತ್ಯ[illegible] ಚಿತ್ರದ ಪಕ್ಕವನ್ನು ಸಮರ್ಥಿಸುವ ಏಕಾಂಕನಾಟಕ ಪ್ರಕಾಶಕರು ಮನೋಹರ ಗ್ರಂಥಮಾಲೆ ಧಾರವಾಡ.

ಈ ಏಕಾಂಕ ನಾಟಕವು ಸಾಹಿತ್ಯಕ ಹಾಸ್ಯವನ್ನೊಳಗೊಂಡ ರೂಪಕ. ಹಾಸ್ಯದ ಯೋಜನೆಯಿಂದ ಸತ್ಯವನ್ನು ಎತ್ತಿ ಹಿಡಿದು ಭಾವವೈಶಿಷ್ಟ್ಯವನ್ನು ಇಲ್ಲದಾಗಿಸುವುದು ಲೇಖಕರ ಉದ್ದೇಶಗಳಲ್ಲೊಂದು. ಇದು ಪರಿಪೂರ್ಣ ಸಾಧಿತವೆಯೆಂದು ಧೈರ್ಯವಾಗಿ ಹೇಳಬಹುದು. ಡಿ. ಎಲ್. ಆ. (ರತಿಯಾ) ಪದವೀಧರರೊಬ್ಬರು ಕಥಾ ನಾಯಕರಾಗಿ ಉಪನಾಯಕನಾದ ತನ್ನ ಕಂಪೌಂಡರರಿಂದ ಹಲವು 'ಕಾವ್ಯ, ಕವಿತಾ ವಸ್ತ್ರನಿಂದುಂಟಾದ' ವ್ಯಾಧಿಗಳಿಗೆ ಚಿಕಿತ್ಸೆ ಮಾಡಿದ ಹೊಸ ಪ್ರಯೋಗದ ಪ್ರಹಸನ ಅತ್ಯಂತ ಆರೋಗ್ಯಕರವಾದ ಹಾಸ್ಯ ಘಟನೆಗಳಿಂದಲೂ, ವಿನೋದ ನುಡಿ, ವ್ಯಂಗ ಟೀಕೆ, ವಿಧಗ್ಧತೆಗಳಿಂದಲೂ ಕೂಡಿದ್ದು ಲಘು ಇಲ್ಲವೆ ಗಂಭೀರ ಓದುವಿಕೆಗೂ, ಇಲ್ಲವೆ ಪ್ರತ್ಯಕ್ಷ ಅಭಿನಯಕ್ಕೂ ಅತ್ಯಂತ ಯೋಗ್ಯವಾಗಿದೆ. ನಟನಾಚಾತುರ್ಯವಿದ್ದವರಿಗೆ ತಮ್ಮ ಸಂಪೂರ್ಣ ವ್ಯಕ್ತಿತ್ವವನ್ನು ನಿರೂಪಿಸಲಿಕ್ಕೆ ಆಸ್ಪದ ಕೊಡುವಂತಹ ಕನ್ನಡದಲ್ಲಿನ ಕೆಲವೇ ಏಕಾಂಕಗಳಲ್ಲಿ ಇದು ಮುಂದಿನ ಸಾಲಿನಲ್ಲಿ ಮೆರೆಯುವುದು. ಇದರಲ್ಲಿನ ಹೊಟ್ಟೆಹುಣ್ಣು ಮಾಡುವ ಹಾಸ್ಯರಸವನ್ನು ಸ್ವಾಧಿಸಲು ಬಯಸುವ ಪ್ರತಿಯೊಬ್ಬನೂ ಅತ್ಯಾವಶ್ಯಕವಾಗಿ ಓದಬೇಕಾದ ಕೃತಿ. ಬೆಲೆಯೂ ಕೇವಲ ಆರಾಣೆ. ಕ್ರಾನ್ ಕ್ರಿ ಆಕೃತಿಯ ಸುಮಾರು 60 ಪುಟಗಳ ಹಾಸ್ಯಸಾರ. ಈ ಯಶಸ್ವಿಯಾದ ನೂತನ ಮಾದರಿಗಾಗಿ ಗ್ರಂಥಕರ್ತರಿಗೆ ಅಭಿನಂದನೆಗಳು.

'ನಾಥ'

ಕಜ್ಜಿ, ಗಾಯ, ಚರ್ಮ ಘಾತಗಳಿಗೆ ಕುಟಿಕೂರಾ ಆವಶ್ಯ.

ಭದಕೆಗ್ಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ. ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ. ಉಜ್ಜುವಿಕೆ ನೋವನ್ನು ಕಡಿಮೆ ಮಾಡುತ್ತದೆ.



ಕುಟಿಕೂರಾ ಮುಲಾಮು
CUTICURA OINTMENT

ಸ್ವದೇಶ ವಾರ್ತೆ

ಮೈಸೂರು ಹೈದರಾಬಾದುಗಳಲ್ಲಿನ ಜನತಾ ಚಳವಳದ ಭರವು ದಿನದಿಂದ ದಿನಕ್ಕೆ ಏರ ತೊಡಗಿದೆ. ಜವಾಬ್ದಾರಿ ಸರಕಾರ ಸ್ಥಾಪಿಸಲು ಭರವಸೆ ಕೊಡುವ ಮಹಾರಾಜರ ಘೋಷಣೆಗೆ ಮೈಸೂರಲ್ಲಿ ತೃಪ್ತಿಕರ ಅಂಗೀಕಾರ ದೊರೆಯಲಿಲ್ಲ. ನಿಜಾಮರಾದರೊ ತಮ್ಮ ರಾಜ್ಯದಲ್ಲಿ ಮುಸಲ್ಮಾನರು ಆಳುವ ವರ್ಗದವರೆಂಬುದನ್ನು ಪ್ರತಿಷ್ಠಿಸಲು ನಿರ್ಧರಿಸಿದಂತೆ ರಾಜಕೀಯ ನಿರೀಕ್ಷಕರಿಗೆ ಖಚಿತವಾಗ ತೊಡಗಿದೆ. ಅವರು ತಮ್ಮ ದಬ್ಬಾಳಿಕೆಯ ಹೊಣೆಯನ್ನು ಸಂಪೂರ್ಣ ಅಲ್ಲಿನ ಮುಸ್ಲಿಮ್ ಜಾತೀಯ ಸಂಸ್ಥೆಗೆ ಒಪ್ಪಿಸಿ ಬಿಟ್ಟಿರುತ್ತಾರೆ. ಹೈದರಾಬಾದಿನಲ್ಲಿ ಪುಂಡರ ಹಾವಳಿಗೂ ಪ್ರೋತ್ಸಾಹ ಕೊಡಲಾಗಿದೆಯೆಂಬ ವರದಿಗಳು ಬಂದಿರುತ್ತವೆ. ಬೆಂಗಳೂರಿನಿಂದ ಚಳವಳವನ್ನು ಕಣ್ಣಾರೆ ಕಂಡ ವರದಿಗಳನ್ನು ಕಳುಹಿಸುತ್ತಿದ್ದ ಇಂಡಿಯನ್ ಎಕ್ಸ್ ಪ್ರೆಸ್ ಬಾತ್ಮಿದಾರರನ್ನು ಅಲ್ಲಿನ ಒರ್ವ ಸರಕಾರಿ ಸಮರ್ಥಕರು ಟೆಲಿಫೋನಿನ ಮೂಲಕ ಗದರಿಸಿದರೆಂದೂ, ಸ್ವಲ್ಪ ಸಮಯದ ನಂತರ ಮೇಲ್ಕಂಡ ಬಾತ್ಮಿದಾರರನ್ನು ಕೆಲ ಪುಂಡರು ಅದೇ ಸರಕಾರಿ ಸಮರ್ಥಕರ ಮನೆಯ ಮುಂದೆಯೇ ಘಾತಗೊಳಿಸಿದರೆಂದೂ ಪ್ರಕಟವಾಗಿದೆ.

★ ಪಾಕಿಸ್ತಾನದ ಮುಸಲ್ಮಾನರ ಮೇಲೆ ಹಿಂದೂ ಸೀಕರಿಂದ ಅತ್ಯಾಚಾರ ಮಾಡಲ್ಪಡುತ್ತಿದೆಯೆಂಬ ಒಂದು ಕಡೆಯ ಪಕ್ಷಪಾತದ ವರದಿಗಳು ಮಧ್ಯ ಪೂರ್ವದ ಅರಬ ಮತ್ತು ಮಹಮ್ಮದೀ ರಾಷ್ಟ್ರಗಳಲ್ಲಿ ಪ್ರಚಾರಿಸಲ್ಪಡುತ್ತವೆಂದೂ ಪಾಕಿಸ್ಥಾನಕ್ಕೆ ಆ ಕಡೆಯ ಬೆಂಬಲವನ್ನು ಒಟ್ಟು ಗೂಡಿಸುವ ಒಂದು ಯೋಜನೆ ಇದೆಂದೂ ಉತ್ತರ ಹಿಂದೂಸ್ಥಾನದ ಒಂದು ಪ್ರಮುಖ ಪತ್ರಿಕೆ ಪ್ರಕಟಿಸಿದೆ

★ ಮುಂಬಾಯಿ ಶಾಸನ ಸಭೆಯಲ್ಲಿ ಹರಿಜನ ದೇವಸ್ಥಾನ ಪ್ರವೇಶದ ಮಸೂದೆಗೆ ಸರ್ವಾನು ಮತದ ಒಪ್ಪಿಗೆ ಸಿಕ್ಕಿತು

★ ಪ್ರಖ್ಯಾತ ಅಮೇರಿಕನ್ ಲೇಖಿಕೆ ಮಿಸ್ ಪರ್ಲ್ ಬಕ್ಕಳು ಅಲ್ಲಿ ವ್ಯಾಸಂಗ ಮಾಡುವ ಶ್ರೀ ನಾಡಿಗ ಕೃಷ್ಣ ಮೂರ್ತಿಯವರಿಗೆ ಬರೆದ ಪತ್ರದಲ್ಲಿ "ಸ್ವತಂತ್ರ ರಾಷ್ಟ್ರಗಳ ಮಾಲಿಕೆಗೆ ಸೇರಿದ ಭಾರತವು ಪ್ರಭಾವಿ ರಾಷ್ಟ್ರವಾಗಿ ಬಾಳಲಿ, ಅಪ್ರತಿಮ ತ್ಯಾಗ ಸಾಹಸಗಳಿಂದ ಗೌರವಮರ್ಯಾದೆಗಳನ್ನು ಸಂಪಾದಿಸಿದ ದುರೀಣರನ್ನು ಪಡೆದ ಭಾರತೀಯರು ಸುದೈವಿಗಳು" ಎಂದು ನಿರೂಪಿಸಿದ್ದಾರೆ

★ ಪಶ್ಚಿಮ ಬಂಗಾಲ ಸರಕಾರದವರು ಕಲ್ಕತ್ತೆಯಲ್ಲಿನ ಪೋಲಿಸರಿಗೆ ಸಹಾಯ ಮಾಡಲು ಸಶಸ್ತ್ರ ಸ್ವಯಂ ಸೇವಕರ ದಳವೊಂದನ್ನು ರಚಿಸಲೇರ್ಪಡಿಸಿರುವರು ಅವರಿಗೆ ಶಾಂತಿ ರಕ್ಷಣೆಗೆ ಬೇಕಾದ ತರಬೇತಿ ಕೊಡಲಾಗುವುದು

★ ಡಿಲ್ಲಿಯಲ್ಲಿ ಮಹಾತ್ಮರು ಬಂದಂದಿನಿಂದ ಅಲ್ಲಿನ ಮುಸಲ್ಮಾನರಲ್ಲಿ ಭರವಸೆಯುಂಟಾಗಿದೆ. ಅನೇಕ ಮುಸಲ್ಮಾನರು 'ಇಂತಹ ಗೋಳಿನ ವಿಭಾಗೀಕರಣ ಬೇಕಾಗಿರಲಿಲ್ಲ'ವೆಂದು ಕಳಕಳಿಯಿಂದ ನುಡಿದಿರುವರು.

★ ಕೋಲಾಪುರ ಸಂಸ್ಥಾನದ ಪೂರ್ವಿಕೆ ಮಂತ್ರಿಗಳು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡುತ್ತಿರುವಾಗ ಕೆಲವರು ಸಂಸ್ಥಾನದಲ್ಲಿ ಸಾಗುವಳಿಗೆ ಯೋಗ್ಯವಿದ್ದ ಭೂಮಿಯ ಸಂಖ್ಯೆಯೆಷ್ಟು, ಅದರಲ್ಲಿ ಎಷ್ಟು ಸಾಗುವಳಿಯಾಗಿದೆ, ಎಷ್ಟು ಹಾಳು ಬಿದಿದ್ದೆ ಎಂದು ಮಂತ್ರಿಗಳನ್ನು ಕೇಳಿದಾಗ ಆ ವಿಷಯ ತಮಗೆ ಗೊತ್ತಿಲ್ಲವೆಂದು ಹೇಳಿ ಆ ಕುರಿತು ಅಂಕೆ ಸಂಖ್ಯೆಗಳನ್ನು ಒಟ್ಟು ಮಾಡುತ್ತಲಿರುವೆನೆಂದು ತಿಳಿಸಿದರು. ಕೆಲವರು ಪತ್ರಿಕೆಗಳು ಇದನ್ನು "ಮಂತ್ರಿಗಳ ಅಕ್ಷಮ್ಯ ಅಜ್ಞಾನ" ಎಂಬ ಶಿರೋನಾಮದಿಂದ ಪ್ರಕಟಿಸಿ "ಈ ಸಂಸ್ಥಾನಗಳಲ್ಲಿ ಎಂತಹರನ್ನು ಮಂತ್ರಿಗಳಾಗಿ ನೇಮಿಸುತ್ತಾರೆ!" ಎಂದು ಟೀಕಿಸಿವೆ.

卐

ಸಿಹಿಸುದ್ದಿ ಸಂಗ್ರಹ

ಹಾವಳಿ ಮಾಡುವ ಮಂಗಗಳನ್ನು ನಾಶ ಮಾಡಲು ದರ್ಬಾನಿನ ಇಂಜಿನಿಯರರು ಆಜ್ಞೆ ಇತ್ತರು. ಪ್ರತಿಕಾರವೆಂಬಂತೆ ಅಲ್ಲಿನ ಮಂಗಗಳು ಇಂಜಿನಿಯರರ ಮನೆ ಮುತ್ತಿ, ತೋಟವನ್ನು ಹಾಳುಗೆಡವಿ ಅವನ ನಾಯಿಯನ್ನು ಘಾತಗೊಳಿಸಿದುವು.

★

ಸೂರ್ಯನ ಒಂದು ಸುತ್ತು ಬರಲು ಭೂಮಿಗೆ ಸರಿಯಾಗಿ 365 ದಿವಸ 5 ಗಂಟೆ, 48 ಮಿನಿಟು, 45½ ಸೆಕುಂಡುಗಳು ಬೇಕು.

★

ಆಗ್ರಾದ ಬಳಿಯ ಹಳ್ಳಿಯಲ್ಲಿ ಒರ್ವ ಹರಿಜನ ಹೆಂಗುಸು ಆನೆಯಂತೆ ಕಾಣುವ ಮಗುವೊಂದನ್ನು ಹೆತ್ತಾಗ ಸಾವಿರಾರು ಜನರು ಸಂದರ್ಶನಕ್ಕೆ ಬಂದಿದ್ದರು ಮಗುವು ಕೆಲವೇ ಗಂಟೆ ಬದುಕಿತ್ತು. ನಂಬಿಗಸ್ಥರು ಅದನ್ನು ಗಣೇಶನ ಅವತಾರವೇ ಎಂದು ಸ್ತುತಿ ಮಾಡಿದರು

★

ಇಂಗ್ಲೆಂಡಿನ ಒಂದು ರೈಲ್ವೆ ಸ್ಟೇಶನಿನ ಹೆಸರು ಸ್ಥಳ ನಾಮಗಳಲ್ಲಿ ಅತೀ ಉದ್ದವಾದುದು ಅದು ಲಾನ್‌ಪೆರ್ ಪಿಲಿಗ್ವಿನ್ .ಲೊಗ್ರಿಬ್ವೆರಿಂಡ್ ರೊಬ್ ವಿಲ್ಲೆಂಟಿಸಿಲಿಗೊಗೊ ಗೊಚ್ ಎಂದಿದೆ

★

ಸಿಸಿಲಿಯ ಪಾಲೆರ್ಮೊ ನಗರದಲ್ಲಿನ ಕಸಗುಡಿಸುವವರು ಸಂಬಳ ಭರ್ತಿ ಕೇಳಿದಾಗ ಕೊಡಲ್ಪಡಲಿಲ್ಲವೆಂಬುದಕ್ಕೆ ಮುಂಚಿನ ದಿನ ಒಟ್ಟು ಮಾಡಿದ ಕಸವನ್ನೆಲ್ಲ ಮರುದಿನ ಮಾರ್ಗಗಳಲ್ಲೆಲ್ಲ ಚೆಲ್ಲಿದರು.

★

ಪ್ರೆಸಿಡೆಂಟ್ ಟ್ರುಮನ್ನರ ಮಗಳಾದ ಮಾರ್ಗ್ರೆಟ್ ಟ್ರುಮನ್ನಳು ಹಾಡುಗಾರಿಕೆಯ ಉದ್ಯಮವನ್ನನುಸರಿಸಿರುವಳು ಅದರಿಂದವಳಿಗೆ ವರ್ಷಕ್ಕೆ 20 ಸಾವಿರ ಪವನು ಆದಾಯವಿದೆ ಇದೆಂದರೆ ಜನಾಂಗಧ್ಯಕ್ಷ ತಂದೆಗಿಂತ 5 ಸಾವಿರ ಪವನು ಹೆಚ್ಚಿಗೆ ಆದಾಯವಾಯಿತು

★

ಮರದ ಹುಡಿಯನ್ನು ನೀರಲ್ಲಿ ಕೆಲವು ದಿನ ಹಾಕಿಟ್ಟು ಕೆಲವೊಂದು ಕ್ರಿಮಿಗಳಿಂದ ಅಂಟು ಮಾಡಲ್ಪಡುವಂತೆ ಪ್ರಯೋಗ ನಡೆಸಿ ಸಾಗುವಾಣಿಗಿಂತಲೂ ಗಟ್ಟಿಯಾದ ಕೃತಕ ಮರವನ್ನು ನಿರ್ಮಿಸಲು ಸಾಧ್ಯವಿದೆಯೆಂದು ವಿಜ್ಞಾನಿಗಳು ಕೆಲವರು ಕಂಡು ಹಿಡಿದಿರುವರು

★

ಉಷ್ಟ್ರ ಪಕ್ಷಿಯ ಮೊಟ್ಟೆ ಸರ್ವ ಸಾಧಾರಣವಾಗಿ 3 ರಾತ್ತಲುಗಳಷ್ಟು ಭಾರವಿರುತ್ತದೆ

★

ವಿದೇಶ ರಾಜಕೀಯ

ಇರಾಣವನ್ನು ಬ್ರಿಟಿಷ್-ರಶಿಯನ್ ಸಮ್ಮಿಶ್ರ ಪ್ರಭಾವವುಳ್ಳ ಎರಡು ರಂಗಗಳನ್ನಾಗಿ ವಿಭಾಗಿಸುವ 1907ರ ಆಂಗ್ಲ-ರಶಿಯನ್ ಒಡಂಬಡಿಕೆಯ ಮಾದರಿಯಲ್ಲಿ ಈಗ ಬ್ರಿಟನ್ ಮತ್ತು ರಶಿಯಾಗಳು ಒಂದು ಗುಪ್ತ ಒಡಂಬಡಿಕೆಯನ್ನು ಮಾಡಿಕೊಳ್ಳುವ ಬಗ್ಗೆ ಮಾತುಕತೆ ನಡೆಸುತ್ತಿವೆಂದು ಇರಾಣದ ಒಂದು ಪತ್ರಿಕೆ ಪ್ರಕಟಿಸಿದೆ.

ಆಲ್ಬೇನಿಯದ ಸರಕಾರ ಉರುಳಿಸುವ ಬಗ್ಗೆ ಸಹಾಯ ನೀಡಲು ತಮಗೆ ಅಮೇರಿಕೆಯ ರಾಯಭಾರಿಯು ಆಶ್ವಾಸನವಿತ್ತಿದನೆಂದು ಆಲ್ಬೇನಿಯದ ಗುಪ್ತ ಕ್ರಾಂತಿಕಾರ ದುರೀಣರು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತ ಹೇಳಿದರು ಒಳಸಂಚು ನಡೆಸಿದ್ದು ಇವರ ಮೇಲೆ ಆರೋಪ

ಜಿನಿವಾದಲ್ಲಿ ಸೇರಿದ ಜಾಗತ್ತಿಕ ಒಕ್ಕಲತನ ಪರಿಷತ್ತಿನ ಕೊನೆಯ ಅಧಿವೇಶನದಲ್ಲಿ ಸರ್ ಜಾನ್ ಬಾಯ್ಡ್ ಆರರು "ಮುಂದಿನ ಚಳಿಗಾಲದಲ್ಲಿ ಯುರೋಪ್, ಏಶಿಯಾಗಳ ಆಹಾರ ಪರಿಸ್ಥಿತಿ ಇನ್ನೂ ಕಠಿಣವಾಗುವುದರಿಂದ ಸಂಬಂಧಿಸಿದ ರಾಷ್ಟ್ರಗಳು ಕೂಡಲೇ ಮುಂಜಾಗ್ರತೆ ತಾಳಬೇಕೆ"ನ್ನು ಹೇಳುತ್ತ "ಇನ್ನೊಂದು ಯುದ್ಧದ ಸಂಭವವಿಲ್ಲದಿದ್ದರೆ ಆಹಾರ ಮಂಡಲವನ್ನು ನಾವು ಸ್ಥಾಪಿಸಬಹುದು" ಎಂದು ತಿಳಿಸಿದರು

ಬ್ರಿಟನಿನ ಕೈಗಾರಿಕೆ ಮಂತ್ರಿ ಸರ್ ಸ್ಟಾಫರ್ಡ್ ಕ್ರಿಪ್ಸರು ತಮ್ಮ ದೇಶದ ಆಮದು ರಫ್ತುಗಳೊಳಗಿನ 600 ಮಿಲಿಯ ಪವನಿನ ವ್ಯತ್ಯಾಸವನ್ನು ಭರ್ತಿ ಮಾಡಲು ಸ್ವತಂತ್ರ ಕೈಗಾರಿಕೆಯ ಮಾಲಕರೂ ಮಜೂರರೂ ಒಮ್ಮಿಳಿತದಿಂದ ಪ್ರಯತ್ನಿಸದಿದ್ದರೆ ಸರಕಾರವು ಹಾಗೆ ಮಾಡಲು ಒತ್ತಾಯಪಡಿಸುವುದೆಂದು ತಿಳಿಸಿದರು

ಪೆಲೇಸ್ತಿನವನ್ನು ಸಂಯುಕ್ತ ರಾಜ್ಯವನ್ನಾಗಿ ರಚಿಸಬೇಕೆಂದು ಕಮ್ಯುನಿಸ್ಟರ ಪೆಲೆಸ್ತೀನ ವಿಮೋಚನಾ ಸಮಿತಿಯವರು ಅಭಿಪ್ರಾಯ ಸೂಚಿಸಿದ್ದು ವಿಚ್ಛೇಧನೆಯ ಯೋಜನೆಯನ್ನು ನಿಷೇಧಿಸಿರುತ್ತಾರೆ

ಲಂಡನ್ ಮೇಲೆ ಯಹೂದಿಗಳು ಬೊಂಬು ದಾಳಿ ಮಾಡಲು ಹವಣಿಸುತ್ತಿರುವರೆಂಬ ಸುದ್ದಿಯು ನಿರಾಧಾರವಾದುದೆಂದೂ ಯೆಹೂದಿ ಕ್ರಾಂತಿಕಾರರ ಅಂಗವು ಅದರಲ್ಲಿಲ್ಲವೆಂದೂ ವಿಶ್ವಾಸಾರ್ಹ ಕಡೆಗಳಿಂದ ತಿಳಿದು ಬಂದಿದೆ

ರಶಿಯದ ಜನಾಂಗ ಸಂಘದ ಪ್ರತಿನಿಧಿ ಗ್ರೊಮಿ-ಕೊ ಅವರು "ಎಟಂ ಬೊಂಬುಗಳನ್ನು ತಯಾರಿಸುವ ಹಕ್ಕನ್ನು ತನಗೆ ಮೀಸಲಾಗಿರಿಸಿಕೊಳ್ಳಲು ಅಮೇರಿಕವು ಹವಣಿಸುತ್ತಿದೆ"ಯೆಂದು ಸಾರಿದರು "ಎಟಂ ಶಕ್ತಿಯ ವಿಷಯಲ್ಲಿ ಯಾವುದೇ ರಾಷ್ಟ್ರವು ಸರ್ವಾಧಿಕಾರಿಯಾಗಿ ವರ್ತಿಸುವುದನ್ನು ನಾವು ಸಹಿಸಲಾರೆವು ಈಗಿರುವ ಎಟಂ ಬೊಂಬಗಳನ್ನು ಕೂಡಲೇ ನಾಶ ಮಾಡಬೇಕು ಮತ್ತು ಎಟಂ ಶಕ್ತಿ ನಿರ್ಮಾಣವನ್ನು ಪ್ರತಿಬಂಧಿಸಲು ರಾಷ್ಟ್ರಗಳೆಲ್ಲಾ ಒಡಂಬಡಿಕೆ ಮಾಡಿಕೊಳ್ಳಬೇಕು" ಎಂದೂ ಅವರು ಸೂಚಿಸಿವರು

ಪೂರ್ವ ಆಫ್ರಿಕದಲ್ಲಿ ಬ್ರಿಟನರು ಭಾರತ ಮತ್ತು ಈಜಿಪ್ತುಗಳಿಂದ ಹಿಂದಕ್ಕೊಯ್ಯಲ್ಪಡುವ ಶಸ್ತ್ರಾಸ್ತ್ರ ಮತ್ತು ಇತರ ಸೈನ್ಯ ಸಾಮಾಗ್ರಿಗಳನ್ನಿಡುವ ಒಂದು ಕೇಂದ್ರವನ್ನು ಸ್ಥಾಪಿಸಲು ಯೋಜಿಸಿರುವರು

ಗ್ರೀಸಿನ ರಾಜಕೀಯ ಪ್ರಗತಿಯನ್ನು ತಡೆಯಲು ರಶಿಯಾ, ಯುಗೊಸ್ಲೇವಿಯಾ ಮತ್ತು ಆಲ್ಬೇನಿಯಗಳು ಪ್ರಯತ್ನಿಸುತ್ತಿವೆಯೆಂಬ ಆರೋಪವನ್ನು ವಿವರಿಸುವ ಒಂದು ಪ್ರಕಟಣೆಯನ್ನು ಅಮೇರಿಕವು ಹೊರಡಿಸಿದೆ.

卐



ನೋವಿನ ಎದೆ ಗಂಡಾಂತರದ ಅಣುಗಳನ್ನು ತೋರಿಸುತ್ತದೆ ಪೆಪ್ಸ್ ವಿಷಹಾರಿ ಮಾತ್ರೆ ಸೇವಿಸಿ ಈ ಗಂಡಾಂತರವನ್ನು ಪಾರುಗೊಳಿಸಿರಿ

ಬಾಯಲ್ಲಿ ಕರಗುತ್ತಲೆ ಪೆಪ್ಸಿನ ಅಮೂಲ್ಯ ಔಷಧೀಯ ಸತ್ವಗಳು ಶ್ವಾಸಕೋಶ ಕೊಳ್ಳುಯಲ್ಪಟ್ಟು ಅಣು ನಾಶ, ಶಮನ, ಪರಿಹಾರಗಳನ್ನು ಗೆಯ್ಯುತ್ತದೆ ಕಫ ಸಡಿಲಾಗಿ, ಎದೆ ಒತ್ತಾಟ ಕಮ್ಮಿಯಾಗುತ್ತದೆ ಶ್ವಾಸ ಸುಲಭವಾಗುತ್ತದೆ ಕೆಮ್ಮು, ಗೂರಲು, ಶೀಘ್ರ ಕಮ್ಮಿಯಾಗಿ ಅವನ್ನು ತಡೆಯುವ ಶರೀರ ಶಕ್ತಿ ಹೆಚ್ಚುತ್ತದೆ ಕೆಮ್ಮು, ಶೀತ, ನೆಗಡಿ, ಗಂಟಲು ಬೇನೆ, ವಿಷಮ ಜ್ವರ, ಗೂರಲು ಮತ್ತಿತರ ಎದೆ ಶ್ವಾಸಕೋಶ ಬಾಧೆಗಳಿಗೆ ಪೆಪ್ಸ್ ಖಿತ್ತ ವಿಖ್ಯಾತವಾದುದು

ಈಗಲೇ ಪೆಪ್ಸ್

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ.

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವವು

ಈಗಿನ ಆಹಾರ ವಸ್ತು ವಿತರಣೆಯ ದೋಷಗಳೇನು?

ಸಾಮಾನ್ಯ ಮನುಷ್ಯನೊಬ್ಬನ ಅನುಭವ

ವಸ್ತು ಸಾಮಾಗ್ರಿಗಳು ಸಿಗುವುದಿಲ್ಲ ವೆಂಬ ಸಂಗತಿಯನ್ನು ಪ್ರತ್ಯೇಕವಿರಿಸಿ ಅವುಗಳೊಂದಿಗೆ ಏರಿದ ಬೆಲೆಗಳ ಪರವಾವಧಿಯನ್ನು ಹೋಲಿಸುವಾಗ ಮನಸ್ಸು ಬೆರಗಾಗುತ್ತದೆ. ಮಧ್ಯಮ ವರ್ಗದ ಮನುಷ್ಯನ ಕೊಳ್ಳುವ ಸಾಮರ್ಥ್ಯಕ್ಕೆ ಕೂಡಾ ಎಷ್ಟೊ ಮಿಕ್ಕಿದ ಮಟ್ಟಕ್ಕೇರಿರುವವು. ಮತ್ತೆ ಬಡವರ ಪಾಡಂತೂ ಹೇಳುವುದೇ ಅವಶ್ಯವಿಲ್ಲ

'ರೂಪಾಯಿಗೆಷ್ಟು ಸೇರು' ಎಂಬಲ್ಲಿಂದ 'ಸೇರಿಗೆಷ್ಟು ರೂಪಾಯಿ' ಎಂಬ ತದ್ವಿರುದ್ಧ ವಿಪರೀತಕ್ಕೆ ಇಂಥಿನ ಪರಿಸ್ಥಿತಿ ವಿಕಾಸಗೊಂಡಿದೆ ಸಾಮಾನ್ಯ ಜನತೆಯ ಗೋಳಂತೂ ಹೇಳಿ ತೀರದು ಅವರ ಪಾಲಿಗೆ ಸೇರೂ ರೂಪಾಯಿಯೂ ಇಲ್ಲದಾಗಿದೆ ಅವರು ಧಾನ್ಯ ಕೊರತೆಯ ಮತ್ತು ಏರಿದ ಬೆಲೆಗಳ ಮಧ್ಯ ಸಿಲುಕಿ ನುಜ್ಜು ಗುಜ್ಜಾಗುತ್ತಿರುವರು ಅವರ ಶರೀರಾತ್ಮಗಳು ಕಂಗಾಲಾಗಿ ಕುಗ್ಗಿ ಹೋಗುತ್ತಿರುವ ದುರಂತಮಯ ದುರ್ವಿಧಿಯು ಉದ್ಭವಿಸಿದೆ.

ಈ ಕೊರತೆ ಏರಿತಗಳ ಸೆಳವಿಗೆ ಸಿಕ್ಕಿದ ಜನತೆ ಮೌನವಾಗಿ ತನ್ನ ವಿನಾಶದ ಕಡೆ ಸಾಗುತ್ತಿರುವ ಕರುಣಾಜನಕ ಅವ್ಯವಸ್ಥೆಯಲ್ಲಿ ಸರಕಾರದ ಕರ್ತವ್ಯವಾದರೋ ಗಹನವಾದದ್ದಿರುತ್ತದೆ ತಿಂಗಳಿಗೆ ಒಂದು ನಿರ್ದಿಷ್ಟ ಪ್ರಮಾಣದ ವೇತನ ಸಿಕ್ಕುವವರ ಪರಿಸ್ಥಿತಿ ಈ ಶೋಚನೀಯ ರೂಪ ತಾಳಿರುವಾಗ ಸಿರುದ್ಯೋಗಿಗಳ ಮತ್ತು ನಿರ್ಗತಿಕರ ಪಾಡಾವದೂ ಹೇಗಿರಬಹುದೆಂದು ವರ್ಣಿಸುವುದಕ್ಕಿಂತ ಊಹಿಸುವುದುತ್ತಮ.

ದೋಷವೆಲ್ಲಿ?

ದೇಶದಲ್ಲಿ ಕಳ್ಳಸಂತೆಯ ವಹಿವಾಟು ಅವ್ಯಾಹತವಾಗಿ ಸಾಗುವ ತನಕ ಮತ್ತು ಗುಪ್ತ ದಾಸ್ತಾನಿಗೆ ಸಾಕಷ್ಟು ಪ್ರತಿರೋಧ ವಿಲ್ಲದಿರುವ ತನಕ ಈಗಿನ ರೇಶನ್ ಪದ್ಧತಿಯು ಪರಿಪೂರ್ಣವೆಂದು ಹೇಳ ಬರುವುದಿಲ್ಲ ಮಾನವನು ಕೇವಲ ಅಕ್ಕಿಯೊಂದರಿಂದಲೇ ಬದುಕುವವನಲ್ಲ ಅಕ್ಕಿ ಮತ್ತು ಸಕ್ಕರೆಗಳನ್ನು ಮಾತ್ರ ಕಂಟ್ರೋಲ್ ಮಾಡುವುದಲ್ಲ ಅದರೊಂದಿಗೆ ಎಲ್ಲಾ ಆವಶ್ಯಕ ವಸ್ತುಗಳನ್ನು ನಿಯಂತ್ರಣಗೊಳಿಸಬೇಕು.

ನಮ್ಮ ದೇಶದಲ್ಲಿ ನಮಗೆ ಬೇಕಾಗುವ ಅತ್ಯಾವಶ್ಯಕ ಆಹಾರ ಧಾನ್ಯಗಳೆಲ್ಲವೂ ದೊರಕುತ್ತವೆ ಮಾತ್ರವಲ್ಲ ಕೈಗಾರಿಕೆ ವಸ್ತುಗಳೂ ತಯಾರಾಗುತ್ತವೆ ಇವುಗಳ ಉತ್ಪಾದಕರು ಪ್ರಾಮಾಣಿಕತನದಿಂದ ಇವನ್ನು ಬಹಿರಂಗವಾಗಿ ಮಾರಲು ಪ್ರಾರಂಭಿಸಿದರೆ ಇಂದಿನ ಈ ಬೆಲೆ ಏರುವಿಕಗೆ ಆಸ್ಪದ ದೊರಕುತ್ತಿರಲಿಲ್ಲ ತನ್ನ ನೌಕರರಿಗೆ ಹೆಚ್ಚಿಗೆ ವೇತನ ಕೊಡಲು ಸಾಧ್ಯವಾಗದ ಸರಕಾರಕ್ಕೂ ತನ್ನ ರೂಪಾಯಿ ನಾಣ್ಯ ಮತ್ತು ನೋಟಿನ ಬೆಲೆಯನ್ನು ಸ್ಥಿರತೆಯಲ್ಲಿರಿಸಲು ತುಂಬಾ ಸಹಾಯವೂ ಆಗುತ್ತದೆ ಆದಕ ಧನಗಳಿಸುವ ಈ ದುಷ್ಟ ನಿರ್ಬಂಧತೆಯನ್ನು ಮಾನವ ಸ್ವಭಾವದಿಂದ ಕಿತ್ತೊಗೆಯಲು ಸಾಧ್ಯವೆ?

ಸರಕಾರದ ಕರ್ತವ್ಯ

ಇಂತಹ ಪರಿಸ್ಥಿತಿಯಲ್ಲಿ ಸರಕಾರದ ಕೆಲವು ಅನಿವಾರ್ಯ ಕರ್ತವ್ಯಗಳಿರುತ್ತವೆ ಸರಕಾರವು ವ್ಯಾಪಾರಸ್ಥರ ಮತ್ತು ಉತ್ಪಾದಕರ ವಿಶಾಲ ಹೃದಯದ ಮೇಲೆ ವಿಶ್ವಾಸವಿಟ್ಟರೆ ಪರಿಸ್ಥಿತಿಯು ತನ್ನಷ್ಟಕ್ಕೆ ನೆಟ್ಟಗಾಗುವುದೆಂದು ಭಾವಿಸಿ ಕುಳಿತು ಕೊಂಡರೆ ಅವಿವೇಕದ ಅಪರಾಧಕ್ಕೆ ಗುರಿಯಾಗಬೇಕಾಗುವುದು. ಕೆಲವು ಮಾನವ ಸ್ವಭಾವಗಳು ಒತ್ತಾಯವಿಲ್ಲದೆ ಬದಲಾವಣೆಯಾಗವು' ಆದುದರಿಂದ ಅಂತಹ ವಿಷಯಗಳಲ್ಲಿ ಬಿಗಿಯಾದ ಧೋರಣೆಯನ್ನವಲಂಬಿಸುವುದು ಯಥಾರ್ಥವೆನಿಸುವುದು.

ಆಹಾರ ಸಮಸ್ಯೆ

ಬಹುಕಾಲದಿಂದ ಆಹಾರ ಸಮಸ್ಯೆ ಒಂದು ಅನಿವಾರ್ಯ ವ್ಯಾಧಿಯಂತಾಗಿದೆ ಇದಕ್ಕೆ ತಕ್ಕ ಲೇಪ ಹಚ್ಚದಿದ್ದರೆ ಶಮನವು ಅಸಾಧ್ಯವಾಗುವುದು ಒರ್ವ ಶಕ್ತಿದಾಯಕ ಶತ್ರುವನ್ನು ಬಗ್ಗಿಸಲು ಬೃಹತ್ ಶಕ್ತಿ ಸಾಮರ್ಥ್ಯವನ್ನುಪಯೋಗಿಸುವ ಅವಶ್ಯಕತೆ ಇರುವಂತೆ ನಮ್ಮ ಈಗಿನ ಅಧಿಕಾರ ಶಕ್ತಿಗಳನ್ನು ಈ ಅತೀ ತುರ್ತಿನ ಸಮಸ್ಯೆಯ ಪರಿಹಾರಕ್ಕಾಗಿ ಕೇಂದ್ರೀಕರಿಸಬೇಕಾಗಿದೆ. ಈಗಿನ ವ್ಯವಸ್ಥೆಯ ಮೇಲೇ ಹೊಂದಿಕೊಂಡು ಮುಂದುವರಿಯುವುದರಲ್ಲಿ ಯಾವ ಅರ್ಥವೂ ಇಲ್ಲ ಇದನ್ನು ಹರಡ ಬಿಟ್ಟರೆ ಇದೇ ಮಾನವಕೋಟಿಯೇ ವಿನಾಶಕ್ಕೀಳಗಾಗುವ ಸಂಭವವಿದೆ

ಸರಕಾರವು ಕೃಷಿ ಉತ್ಪಾದನೆಯ ಎಲ್ಲಾ ವ್ಯವಸ್ಥೆಯನ್ನು ವಶಪಡಿಸಿಕೊಳ್ಳಬೇಕು. ಅವಶ್ಯ ಬಿದ್ದಲ್ಲಿ ಎಲ್ಲಾ ಕೆಲಸಗಳನ್ನು ಮಾಡಿಸಿ ಒಕ್ಕಲಿಗರನ್ನು ವ್ಯವಸ್ಥಿತಗೊಳಿಸಬೇಕು. ಅವಷ್ಟು ಹೆಚ್ಚಿನ ಭೂಪ್ರದೇಶಗಳನ್ನು ಕೃಷಿಗೊಳಿಕೆಗೊಳಪಡಿಸಬೇಕು. ಇದಕ್ಕಾಗಿ ಯಾವ ಶ್ರಮ ಅಲ್ಲದೆ ಧನದ ಕೊರತೆಯನ್ನು ಗಣಿಸಿಕೊಳ್ಳಬಾರದು.

ಲಂಚವಂಚನೆ

ಜೀವನಾವಶ್ಯಕತೆಯ ವಸ್ತುಗಳ ಬೆಲೆಗಳನ್ನು 'ಇಂತಿಷ್ಟು' ಎಂದು ನಿಯಂತ್ರಿಸಬೇಕು. ಅಧಿಕಾರಿಗಳ ಕರ್ತವ್ಯ ನಿರ್ವಹಣದ ಕಡೆಗೆ ಬಿಗಿಯಾದ ನಿಗವನ್ನಿರಿಸಿ ಯಾವ ತರದ ಲಂಚವಂಚನೆಗಳಾಗಲಿ ಪಕ್ಷಪಾತದ ಸಹಾನುಭೂತಿಗಳೂ ಜರಗದಂತೆ ನೋಡಿಸಬೇಕು. ಇದಕ್ಕಾಗಿ ರಾಮಕೃಷ್ಣ ಮಠ ಮುಂತಾದ ಇತರ ನಿಸ್ವಾರ್ಥ ಸೇವಾ ಸಂಘಗಳಲ್ಲಿ ಕೆಲಸ ಮಾಡುವವರ ಸಹಾಯವನ್ನು ಪಡೆಯಲು ಪ್ರಯತ್ನಿಸುವುದೊಳಿತು. ಹೀಗೆ ಸರಕಾರವು ಭರದಿಂದ ತನ್ನ ನೂತನ 'ಚಟುವಟಿಕೆಗಳನ್ನಾರಂಭಿಸತಕ್ಕದ್ದು.

ಜರ್ಮನ್ ಚಾತುರ್ಯ

ನಾಲ್ಕು ವರ್ಷಗಳ ಶ್ರಮದಿಂದ ಬರ್ಲಿನಿನಲ್ಲಿ ಜರ್ಮನರಿಂದ ರಚಿಸಲ್ಪಟ್ಟ ವಿಮಾನ ದಾಳಿ ಆಶ್ರಯಾಲಯವೊಂದನ್ನು ಕೆಡವುವ ಕೆಲಸವು ಅಲ್ಲಿನ ಅಮೇರಿಕನ್ ಆಕ್ರಮಣೊಡೆಯರಿಗೆ ಬಹಳ ಕಷ್ಟಕರವೆನಿಸುತ್ತದೆ. ಆಶ್ರಮಾಲಯವು 30 ಸಾವಿರ ಜನರನ್ನು ರಕ್ಷಣೆ ಮಾಡುವಷ್ಟು ವಿಶಾಲವಾಗಿದೆ. ಅತೀ ಹೆಚ್ಚಿನ ಶಕ್ತಿಯ ಸ್ಫೋಟನಗಳನ್ನುಪಯೋಗಿಸಿದಾಗ ಅದರ ಗೋಡೆಗಳು ಮಾತ್ರ ಕುಸಿದುವು. ಒಳಗಿನ ಭಾಗವು ಹಾಗೆಯೇ ಉಳಿಯಿತು 82 ಸಾವಿರ ಟನ್ ಕೊಂಕ್ರಿಟ್ ಮಿಶ್ರಣವು ಇದರ ರಚನೆಗೆ ಉಪಯೋಗಿಸಲ್ಪಟಿದ್ದು 50 ಮಿಲಿಯ ಡಾಲರುಗಳು ಖರ್ಚಾಗಿರಬಹುದೆಂದು ಅಂದಾಜು ಹಿಡಿಯಲಾಗಿದೆ. ಇದನ್ನು ಒಡೆಯಲು ಅಮೇರಿಕನ್ನರು ಪಡುವ ಸಂಕಷ್ಟವನ್ನು ನೋಡಿ ಜರ್ಮನರು ಮನಸ್ಸಿನಲ್ಲೇ ತಮ್ಮವರ ಚಾತುರ್ಯದ ಕುರಿತು ಹೆಮ್ಮೆ ಪಟ್ಟುಕೊಳ್ಳುತ್ತಾರಂತೆ.

★

Tender Notice.

Sealed tenders are invited to reach the Municipal office, Mangalore, on or before 30-9-1947 for the supply of 2 water tanks of 700 gallons capacity each, made of 1/8" M S Sheets complete with mounting brackets, clamps, water sprinkler, etc, to be fitted to Ford 134' Wheel-base chasses

COMMISSIONER

KANARA COMMERCIAL BANK LTD.

PUTTUR

H O Puttur. Estd 1920 [Branch Vittal.

All kinds of Banking Business transacted.

Deposits Current, Savings, Cumulative Deposits are accepted

Fixed Deposits for periods of 3 months and above up to 24 months are accepted.

ಪ್ರಯಾಣಿಕರಿಗೆ ಸೂಚನೆ.

ನಿಶ್ಚಿತ ಮಾರ್ಗ ತಿಂಗಳಿಗೆ ಸಿಗಬೇಕಾದ ಪೆಟ್ರೋಲ್ ಕೋಟಾದಲ್ಲಿ ಕಡಿತವಾಗಿದ್ದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದು. ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನನಿತ್ಯ ಸರ್ವಿಸನ್ನು ರನ್ ಮಾಡಿಸಲ್ಪಡುತ್ತಿರುವುದರಿಂದ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲ್ ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೆಲವು ರೂಟ್ಸಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲ್ ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ನಿಶ್ಚಯಿಸಿದ ಸ್ಥಳದ ವರೆಗೆ ಮಾತ್ರ ಸ್ಪೆಶಲ್ ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲೈನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು..

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇಧನೆಗಳಿಗೂ ಎದೆನೋವು, ಗಾಯುಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಪೋಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪ್ಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs.**

Our experience of 37 years avialable to you for arranging Insurance Investment.
It therefore pays you to consult us to insure or to represent.

—chikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಬಹಳ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 26—9—1947 [ಸಂಚಿಕೆ 38]

ಭಾರತದ ಆರ್ಥಿಕ ಅಭಿವೃದ್ಧಿಯ ಯೋಜನೆ

ಸರ್ ವಿಶ್ವೇಶ್ವರಯ್ಯಾ ಅವರ ಸೂಚನೆಗಳು

ಹೊಸಪೇಟೆಯ [illegible] ಪತ್ರಿಕ್ಕೆ ಉತ್ತರಿಸುತ್ತ [illegible] ಯಂತ [illegible] ಗುಂಡಂ ವಿಶ್ವೇಶ್ವರಯ್ಯನವರು "ಭಾರತದ ಜನತೆ ಹೆಚ್ಚು [illegible] ವಿವೇಕದಿಂದ ಕೆಲಸ ಮಾಡದಿದ್ದರೆ ದೇಶದ ಪರಿಸ್ಥಿತಿಯು [illegible] ಎಂದು ಎಚ್ಚರಿಕೆ ಕೊಟ್ಟರು. ಅವರ [illegible] ವಾಗಿದೆ.

ಹಳ್ಳಿಗಳ ಮನೆಗಳ [illegible] ಗಳ ಕಾಮಗಾರಿ [illegible] ಗೊಳ್ಳಬೇಕು. ಜನರಲ್ಲಿ [illegible] ಬೇಕು. ದೇಶವ[illegible] ವಿಂಗಡಿಸಬೇಕು. [illegible] ಮತ್ತು ಹಳ್ಳಿ [illegible] ಪ್ರದೇಶದ ಹಿತ [illegible] ಕೊಳ್ಳಲು ಒಂದೊಂದು [illegible] ಕೇಂದ್ರವಿರಬೇಕು.

ಇಂದು ಬಂಡವಾಳಗಿಂತ [illegible] ಶ್ರಮಕ್ಕೆ ಹೆಚ್ಚಿನ [illegible] ಕದಲ್ಲೂ ಕೊಡಲ್ಪಡತಕ್ಕದ್ದು. ನಮ್ಮ ದೇಶದ ಮಟ್ಟಿಗೆ ಎಲ್ಲಾ ಪಕ್ಷದವರೂ ಒಮ್ಮತದಿಂದಲೂ ಪರಸ್ಪರ ಸಹಕಾರದಿಂದಲೂ ಕಾರ್ಯಗೆಯ್ಯಬೇಕು [illegible] ಯುದ್ಧ ಜರ್ಝರಿತ ಜಗತ್ತು ಪುನರ್ನಿರ್ಮಾಣಗೊಂಡು ತಯಾರಿ ಹೆಚ್ಚಬೇಕಾದರೆ 2 3 ವರ್ಷಗಳಾದರೂ ಹಿಡಿಯುವವು. ಈಗ ಜಗತ್ತಿನ ಜನತೆಯೆಲ್ಲವೂ ಹೆಚ್ಚೆಚ್ಚು ಶ್ರಮ ವಹಿಸಿ ತಯಾರಿಯನ್ನು ಹೆಚ್ಚಿಸುವುದು ಅತ್ಯಾವಶ್ಯಕವಿದೆ. ಪ್ರತಿ ಕುಟುಂಬವೂ ಶ್ರಮ ಮಗ್ನವಾಗಬೇಕು.

ಈ ಎಲ್ಲಾ ದುಡಿಯುವಿಕೆಯು ಸಹಕಾರಿಯ ಪರಸ್ಪರ ಸಹಾಯ ತತ್ವದ ಮೇಲೆ ನಿರ್ವಹಿಸಲ್ಪಡುವುದಿನ್ನೊಂದು ಆವಶ್ಯಕತೆ. ಇದಕ್ಕಾಗಿ ಮೇಲೆ ಹೇಳಿದಂತೆ ಪ್ರದೇಶಗಳಾಗಿ ವರ್ಗೀಕರಣವಾಗಬೇಕು. ಎಲ್ಲವೂ ಐಕ್ಯಮತ್ಯದ ಭಾವದಿಂದ ನಡೆಯಬೇಕು.

ವಿದ್ಯಾಭಿವೃದ್ಧಿ

ಹಳ್ಳಿಗಳೇ ಹೆಚ್ಚಿನ ಅಭಿವೃದ್ಧಿಯ ಗಮನ [illegible] ರಲ್ಲಿ [illegible] ಹೆಚ್ಚು [illegible] ತೆಗಳ [illegible] ರಲ್ಲಿ [illegible] ಚಿಕ್ಕ [illegible] ವ್ಯಾಪಾರಿ ಇವರಿಗೆ ಹೆಚ್ಚಿನ ಸೌಕರ್ಯ ಸಹಾಯಗಳನ್ನು ನೀಡಿ ಸಂರಕ್ಷಿಸಬೇಕು. ಇವರ ಮಕ್ಕಳಿಗೆ ಕೊಡಲು ಯೋಗ್ಯವಾದ ಶಿಕ್ಷಣ ವಿಧಾನವನ್ನು ಕಂಡುಹಿಡಿಯಬೇಕು. ತಮ್ಮ ಪ್ರದೇಶದ ಅಭಿವೃದ್ಧಿಯ ಅಭಿಲಾಷೆ [illegible] ಅಂಗಗಳಾಗಿ ಅವರು ಇರುವಂತಹ ಶಿಕ್ಷಣ ಪದ್ಧತಿ ಯೋಜಿಸಲ್ಪಡಬೇಕು.

[illegible] ದಲ್ಲಿ ಶೇಕಡಾ 12ರಷ್ಟು ಮಂದಿ ಮಾತ್ರ ಶಿಕ್ಷಿತರು. ಅಮೇರಿಕದ ಮಜೂರರ [illegible] ದಿನಕ್ಕೆ 15 ರೂಪಾಯಿ ದುಡಿಯುತ್ತಾನೆ. ಆದರೆ ನಮ್ಮ ಕೆಲಸಗಾರರಿಗೆ 1 ರಿಂದ 2 ರೂಪಾಯಿ ಸಿಗುವುದು ಕಷ್ಟ. ಇದಕ್ಕೆ [illegible] ಕೆಲಸವಾದರೂ ಅಲ್ಲಿಯ [illegible] ರಾಷ್ಟ್ರೀಯ [illegible] ಸಾರ್ವತ್ರಿಕ ಶಿಕ್ಷಣ [illegible] ಸ್ಥಾಪಿಸಲ್ಪಡುವ ತನಕ [illegible] ಕೆಲಸದ ಶ್ರೇಷ್ಠತೆ ಹೆಚ್ಚದು.

ಹೆಚ್ಚುವ ಜನಸಂಖ್ಯೆ

[illegible] ಯಂತ್ರಗಳೂ, [illegible] ಅದರೊಂದಿಗೆ ಹೆಚ್ಚುವ ಜನಸಂಖ್ಯೆ [illegible] ಮತ್ತೆ ಅದರೊಂದಿಗೆ [illegible] ಬಿಗುವಾಗುತ್ತದೆ [illegible] ವೇಗವಾಗಿ ನಮ್ಮ [illegible] ಹೆಚ್ಚುತ್ತಿದೆ.

ರಾಸಾಯನಿಕ ಭೂತ

[illegible] ರಾಸಾಯನಿಕ ಧಾತು ಭೂತವೊಂದು ಅಮೇರಿಕನ್ ವಿಜ್ಞಾನಿಗಳು [illegible] ಯತ್ನಿಸುತ್ತಿರುವರು. ಇದು ತನಕ ರಾಸಾಯನಿಕ ಧಾತುಗಳಲ್ಲಿ [illegible] ಫ್ಲೋರಿನ್ [illegible] ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಿದೆಯೆಂದಾಗಿ ತಿಳಿದು ಬಂದುದರಿಂದ ಈಗ ನೂರಾರು ಸಂಶೋಧಕರು ಅವನ್ನು ಸದುಪಯೋಗಕ್ಕೆ ತರಲು ಯತ್ನಿಸುತ್ತಿರುವರು.

ಫ್ಲೋರಿನ್ ಎಂಬುದೊಂದು ಭಯಂಕರ ಸ್ಫೋಟ ಶಕ್ತಿಯುಳ್ಳ ಅನಿಲ. ನೀರು ಹೆಪ್ಪುಗಟ್ಟುವ ಹವೆಯಲ್ಲೂ ಇದು ಜಲಜನಕ (ಹೈಡ್ರೋಜನ್) ದೊಡನೆ ಸಂಪರ್ಕಗೊಂಡರೆ ಸಿಡಿಯುತ್ತದೆ. ಈ ಅನಿಲವು ಉರಿಯುವಾಗ ಉಂಟಾಗುವ ಹೊಗೆಯಲ್ಲಿ ಮರ, ಉಕ್ಕು, ಗಾಜು ಮೊದಲಾದವುಗಳು ಕರಗಿ ಹೋಗುತ್ತವೆಯಂತೆ.

ಕೈಗಾರಿಕೆಯಲ್ಲಿ ಎಲ್ಯುಮಿನಿಯಂ, ಗೆಸೊಲಿನ್ ಮೊದಲಾದುವುಗಳ ತಯಾರಿಯಲ್ಲಿ ಇದುತನಕ ಫ್ಲೋರಿನ್ ಅನಿಲವು ಅಲ್ಪ ಪ್ರಮಾಣದಲ್ಲಿ ಉಪಯೋಗಿಸಲ್ಪಡುವುದು.

FOR ALL CLASSES OF INSURANCE

LIFE-FIRE-MARINE-ACCIDENT

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA ASSURANCE CO. LTD.

(H O BOMBAY)

❋

A Tata's Promotion & India's Largest Composite Insurance Office.

Total Assets - - - About 9 Crores.

For Agency and other particulars:-

Apply to

K. GANAPATHI Esq., *Branch Manager.* 4/5, First Line Beach, MADRAS.

K. N. NAYAK, Esq., *Secretary, Sub Office* Hampankatta, MANGALORE.

ಶ್ರೀ ಶಂಕರಾಚಾರ್ಯರ ಬೃಹದ್ವ್ಯಕ್ತಿತ್ವ

ವೇದಾಂತದಿಂದ ಆಸೇತು ಹಿಮಾಚಲ ತನಕ ಅಖಂಡವಾಯಿತು

ಆಧುನಿಕ ಶಂಕರ ಸ್ವರೂಪಿ ನೆಹುರು

ಕೇವಲ ಮೂವತ್ತೆರಡು ವರ್ಷಗಳ ಅತ್ಯಲ್ಪಾವಧಿಯಲ್ಲಿ ಶ್ರೀ ಶಂಕರಾಚಾರ್ಯರು ಭಾರತೀಯ ಜನತಾ ವರ್ಗದಲ್ಲಿ ಉಂಟುಮಾಡಿದ ಬೌಧಿಕ ಮತ್ತು ಸಾಂಸ್ಕೃತಿಕ ಉತ್ಕ್ರಾಂತಿಯು ಮಾನವ ಭಾವನೆಯನ್ನು ಬೆರಗುಗೊಳಿಸುವ ಸಂಗತಿಯಾಗಿದೆ." ಹೀಗೆಂದು ಸ್ವಾಮಿ ರಂಗನಾಥಾನಂದರವರು ಕರಾಚಿಯ ರಾಮಕೃಷ್ಣ ಮಠದಲ್ಲಿ ಜರಗಿಸಲ್ಪಟ್ಟ ಶಂಕರ ಜಯಂತಿ ಸಮಾರಂಭ ಭಾಷಣದಲ್ಲಿ ತಿಳಿಸುತ್ತ ಶ್ರೀ ಶಂಕರಾಚಾರ್ಯರ ಚೈತನ್ಯಮಯ ಜೀವನದ ಅಮೋಘ ಸಾಹಸಗಳನ್ನು ಈ ಕೆಳಗಿನಂತೆ ಸಂಕ್ಷೇಪಿಸಿದ್ದಾರೆ:

"ಮಹೋನ್ನತವಾದೊಂದು ಕಾರ್ಯ ಸಾಧನೆಯು ತನ್ನಿಂದ ಪರಿಪೂರ್ಣಗೊಳಿಸಲಿಕ್ಕಿದೆಂಬ ಪೂರ್ವ ಜ್ಞಾನವನ್ನು ಹೊಂದಿ ಶಂಕರಾಚಾರ್ಯರು ಬಾಲ್ಯದಲ್ಲೇ ಸ್ವಗೃಹ ತ್ಯಾಗ ಮಾಡಿದು. ತಮ್ಮ ಜೀವನೋದ್ದೇಶಕ್ಕಾಗಿ ತಮ್ಮ ಶಕ್ತಿ ಸರ್ವಸ್ವವನ್ನು ಸಂಘಟಿಸಿಕೊಂಡರು ಆಗಿನ ಕಾಲದ ಭಾರತೀಯ ಜನತೆಯ ಆತ್ಯದ್ಭುತ ಮಾದರಿ ಅವರಾಗಿದ್ದರು ಸುಮಾರು ಸಾವಿರ ವರ್ಷದ ಹಿಂದೆ ಬಾಳಿದ ಈ ಮಹಾ ಪುರುಷರ ಕಾಲದ ದೇಶ ಕಾಲ ಪರಿಸ್ಥಿತಿಗಳನ್ನು ಪರಿಶೀಲಿಸುವಾಗ ಅವರ ಅಜರಾಮರ ಸಾಹಸಗಳ ಅಗಾಧತೆಯ ಅರಿವಾಗುವುದು

ಅಸಾಧಾರಣ ಶಕ್ತಿ ಸಾಮರ್ಥ್ಯಗಳಿಂದೊಡಗೂಡಿದವರಾಗಿ ಶ್ರೀ ಶಂಕರರು ನಮ್ಮ ಸಾಂಸ್ಕೃತಿಕ ಮತ್ತು ಮತೀಯ ಜೀವನದಲ್ಲಿ ಕಲ್ಪನಾತೀತ ಅದ್ಭುತಗಳನ್ನೆಸಗಿರುವರು. ಆ ಕಾಲದ ಭಾರತದಲ್ಲಿ ಅನೇಕಾನೇಕ ವಿಚಾರ ಪಂಥಗಳು ಪರಸ್ಪರ ಸ್ಪರ್ಧಿಸಿಗೊಳ್ಳುತಿದ್ದುವು ದೇಶವು ರಾಜಕೀಯವಾಗಿಯೂ ಸಾಮಾಜಿಕವಾಗಿಯೂ ಲೆಕ್ಕವಿಲ್ಲದಷ್ಟು ವಿಭಾಗಗಳನ್ನೊಳಗೊಂಡಿದ್ದು ದೇಶದ ಸಂಸ್ಕೃತಿಯು ಒಂದು ಪಾರಮಾರ್ಥಿಕ ವಿಚಾರ ನಿರ್ದೇಶ ಕೇಂದ್ರವಿಲ್ಲದೆ ಭಿನ್ನವಾಗಿದ್ದಿತು ಜನತೆಯು ಅನೇಕ ಮತ ಪಂಥಗಳಾಗಿ ವಿಭಕ್ತವಾಗಿದ್ದು ಎಲ್ಲರೂ ಹೆಸರಿಗೆ ಮಾತ್ರ ವೇದಾಧಾರವನ್ನು ಮನ್ನಿಸುತಿದ್ದರು ವೇದೋಕ್ತ ಶಾಸ್ತ್ರ ಪುರಾಣಗಳ ಮತ್ತು ಆಚಾರ ವಿಚಾರಗಳ ಸರಿಯಾದ ಜ್ಞಾನವು ಜನತೆಯಲ್ಲಿ ನಶಿಸಿ ಹೋಗಿತ್ತೆಂದರೂ ಅತಿಶಯವಲ್ಲ

ಕೊನೆಯ ಬೌದ್ಧ ಅರಸನಾದ ಹರ್ಷವರ್ಧನನ ಮರಣಾನಂತರ ತಕ್ಕ ಮಟ್ಟಿಗೆ ಏಕೀಕೃತಗೊಳಿಸಲ್ಪಟ್ಟ ಭಾರತವು ಮತ್ತೊಮ್ಮೆ ಸಣ್ಣ ಪುಟ್ಟ ರಾಜ್ಯಗಳಾಗಿ ಹರಿದು ಹಂಚಿ ಹೋಯಿತು ಈ ವಿವಿಧ ರಾಜ್ಯ ವಿಭಾಗಗಳನ್ನು ಸಂಘಟಿಸುವ ಒಂದು ಕೇಂದ್ರ ಶಕ್ತಿಯು ಲೋಪವಾಗಿತ್ತು ಇಂತಹ ಅವ್ಯವಸ್ಥೆಯ ಪರಿಸ್ಥಿತಿಯಲ್ಲಿ ಶಂಕರಾಚಾರ್ಯರ ಮಹಾ ಮೇಧಾವಿತೆಯು ಕಾರ್ಯಮಗ್ನವಾಗಿ ಮತೀಯ ಸಾಂಸ್ಕೃತಿಕ, ಮತ್ತು ತಾತ್ವಿಕ ಐಕ್ಯ ಸಾಧನೆಗೆ ತೊಡಗಿದು ಪರಿಣಾಮವಾಗಿ ರಾಜಕೀಯ ಐಕ್ಯತೆಯು ಆನಂತರ ತನ್ನಷ್ಟಕ್ಕೆ ಉಂಟಾಗಲನುವಾಯಿತು. ಅವರು ಕೈಕೊಂಡ ಈ ಬೃಹತ್ ಕಾರ್ಯವು ಒಬ್ಬ ವ್ಯಕ್ತಿಯ ಸಾಮರ್ಥ್ಯಕ್ಕೆ ಮಿತಿಮೀರಿದಾಗಿತ್ತು.

ಆಗ ಅಸ್ತಿತ್ವದಲ್ಲಿದ್ದ ಮತ ಪಂಥಗಳನ್ನು ಐಕ್ಯ ಮಾಡುವುದೇ ಅವರ ಉದ್ದೇಶವಿತ್ತಲ್ಲದೆ ಅದನ್ನು ನಾಶಗೆಡಹುವುದಲ್ಲವೆಂಬ ಸಂಗತಿಯು ಅವರ ಜೀವನ ಚಟುವಟಿಕೆಗಳಿಂದ ನಾವು ತಿಳಿದು ಕೊಳ್ಳಬಹುದು ಇತರ ಪಂಥಗಳನ್ನು ನಿರ್ನಾಮಗೊಳಿಸುವ ಅಗಾಧ ಸಾಮರ್ಥ್ಯ ಅವರಲ್ಲಿತ್ತೆಂಬುದು ನಿರ್ವಿವಾದ ಆದರೆ ವಿಶ್ವ ವಿಶ್ವಾಸಗಳಲ್ಲಿ ಭೇದಾಂತರಗಳಿರುವುದವಶ್ಯವೆಂಬವರ ವಿಶಾಲ ಧ್ಯೇಯ ಭಾವಕ್ಕೆ ಇದು ವಿರುದ್ಧವಾಗಿತ್ತು ಐಕ್ಯವೇ ಅವರ ಗುರಿಯಾಗಿತ್ತಲ್ಲದೆ ಸಮಾನತೆಯಲ್ಲ ಭಿನ್ನ ಪಂಥಗಳು ಅವಶ್ಯವಿವೆ ಆದರೆ ಅವೆಲ್ಲಕ್ಕೊಂದು ಐಕ್ಯ ಕೇಂದ್ರವಿರಬೇಕೆಂದವರ ಆಶಯ ಭಾರತೀಯ ಎಲ್ಲಾ ಮತೀಯ, ರಾಜಕೀಯ ಮತ್ತು ಸಾಮಾಜಿಕ ಐಕ್ಯ ಸಾಧಕರ ಉದಾತ್ತ ಉದ್ದೇಶಗಳಾದರೂ ಇದೇ ಆಗಿದ್ದುವು ಇತರ ದೇಶಗಳಲ್ಲಿ ಈ ಮತೀಯ ಐಕ್ಯತೆಯು ಖಡ್ಗಮುಖೇನ ನಿರ್ವಹಿಸಲ್ಪಟ್ಟಿತ್ತು, ಆದರೆ ಶಂಕರಾಚಾರ್ಯರು ಜನತೆಯ ಬುದ್ಧಿ ಮತ್ತು ಹೃದಯಗಳಿಗೆ ಮನವಿ ಮಾಡಿ ಅವುಗಳನ್ನು ಪರಿವರ್ತಿಸುವುದರ ಮುಖಾಂತರ ಐಕ್ಯವನ್ನುಂಟುಮಾಡಲು ಪ್ರಯತ್ನಿಸಿದ್ದು ಅತ್ಯಾದರ್ಶನೀಯವಾದ ಸಂಗತಿ ವಿದ್ವತ್ತು, ತರ್ಕ ಸಾಮರ್ಥ್ಯಗಳೇ ಅವರ ಬಲವಾದ ಅಸ್ತ್ರಗಳಾಗಿದ್ದುವು

ವಿರೋಧಿಗಳನ್ನು ತಿಳಕೊಳ್ಳಲೂ ಅವರನ್ನು ತಮ್ಮಭಿಪ್ರಾಯಕ್ಕೆ ಪರಿವರ್ತಿಸಿಕೊಳ್ಳಲೂ ಬೇಕಾದ ಅದ್ವಿತೀಯ ತಾಳ್ಮೆ, ಚಾಣಕ್ಯಗಳು ಅವರಲ್ಲಿ ಮೆರೆಯುತಿದ್ದುವು ಅರೇಬಿಯದ ಬಿನ್ ಕಾಸೀಮನೆಂಬವನು ಅರೇಬಿಯದಿಂದ ಭಾರತಕ್ಕೆ ಇಳಿದು ಕೆಲವೇ ಸಂಗಾತಿಗಳ ಶೌರ್ಯದಿಂದ ತನ್ನ ಕೇವಲ ಹದಿನಾರು ವಯಸ್ಸಿನಲ್ಲಿ ಸಿಂಧ ಪ್ರಾಂತ್ಯವನ್ನು ವಶಪಡಿಸಿದ್ದು ಅಗಾಧ ಸಾಹಸವೇ ಸರಿ ಯುರೋಪವನ್ನೆಲ್ಲ ಪಾದಾಕ್ರಾಂತ ಮಾಡಿದ್ದ ನೆಪೋಲಿಯನನ ಸಾಹಸ ಅದ್ಭುತವಾದುದು ನಮ್ಮ ಚರಿತ್ರೆಯಲ್ಲೇ, ಬಾದಳ, ಪ್ರತಾಪಸಿಂಹ, ನೇತಾಜಿ ಶಿವಾಜಿ, ಝಾನ್ಸಿರಾಣಿ ಮೊದಲಾದ ಐತಿಹಾಸಿಕ ಸ್ತ್ರೀ ಪುರುಷರ ಹೇರಳ ನಿದರ್ಶನಗಳಿವೆ ಇವೆಲ್ಲವುಗಳಿಂತಲೂ ಶಂಕರಾಚಾರ್ಯರ ಸಾಹಸವು ಅತ್ಯುಜ್ವಲವಾದುದು ಆಳ ಸಹಾನುಭೂತಿ ಅಸಾಮಾನ್ಯ ಮೇಧೋಶಕ್ತಿಗಳೇ ಧೃಡ ಸಂಗಾತಿಗಳಂತಿದ್ದ ಏಕಮಾತ್ರ ವ್ಯಕ್ತಿ ದೇಶದ ಉದ್ದಗಲವನ್ನು ಸಂಚರಿಸಿ ಜನತೆಯ ಬೌಧಿಕ ಮತ್ತು ಹಾರ್ದಿಕ ಆತ್ಮಗಳನ್ನು ಜಯಿಸಿದ್ದು ಇತಿಹಾಸದಲ್ಲೇ ಅತೀ ದುರ್ಲಭವಾದ ಸಂಗತಿ

ಶಂಕರಾಚಾರ್ಯರ ಕಾಲದ ಪರಿಸ್ಥಿತಿಯನ್ನು ತಿಳಿಯುವುದೂ ನಮಗಿಂದು ಸಾರಸ್ಯದ ಸಂಗತಿಯಾಗಿದೆ ಆಗ ಪ್ರಬುದ್ಧ ಜ್ಞಾನಿಗಳಿಗೂ, ವಿದ್ಯಾವಂತರಿಗೂ ದೇಶದ ಆದ್ಯಂತದಲ್ಲೆಲ್ಲ ವಿಶೇಷ ಗೌರವವಿತ್ತು ನಮ್ಮ ದೇಶದ ಸಂಸ್ಕೃತಿಯ ಒಂದು ವಿಶಿಷ್ಟ ಲಕ್ಷಣವೇ ಇದು ಹಿಂದಿನಿಂದಲೂ ಲೋಕೋದ್ಧಾರಕರು ತಮ್ಮ ವಿದ್ವತ್ಪ್ರತಿಭೆಯ ಮೂಲಕವೇ ಜನ ಸಾಮಾನ್ಯರ ಹೃದಯಗಳನ್ನು ಸುಸ್ಕರಿಸುತಿದ್ದರು ಎಲ್ಲಾ ರೀತಿಯ ಅಭಿಪ್ರಾಯ ಭೇದಗಳು ಪರಸ್ಪರ ತರ್ಕ ವಾತುಕತೆಗಳಿಂದಲೇ ಇತ್ಯರ್ಥಿಸಲ್ಪಡುತಿದ್ದವು ಖಡ್ಗಕ್ಕೆ ಇಂತಹ ವಿಷಯಗಳಲ್ಲಿ ಯಾವ ಸ್ಥಾನವೂ ಇರಲಿಲ್ಲ ಇಂದು ನಾವು ನಮ್ಮ ಅಭಿಪ್ರಾಯಗಳನ್ನು ಇತರರ ಮೇಲೆ ಬಲಾತ್ಕಾರದಿಂದ ಹೊರಿಸಲು ಪ್ರಯತ್ನಿಸುತ್ತೇವೆ ಆಗಿನವರ ಮನವಿಯು ನೇರವಾಗಿ ಮನಸ್ಸಿನಾಳವನ್ನು ಹೊಕ್ಕುವಂತಿದ್ದು ಈಗ ಅದಕ್ಕಾಗಿ ಕತ್ತಿಗಳು ಶರೀರದೊಳಗೆ ತೂರಲ್ಪಡುತ್ತವೆ

ಹ್ಯುವೆನ್ ಸಾಂಗ್ ಎಂಬ ವಿದತ್ ಸಂಪನ್ನನಾದ ಚೀನಿ ಯಾತ್ರಿಕನು ಶಂಕರಾಚಾರ್ಯರಿಗಿಂತ 150 ವರ್ಷ ಹಿಂದೆ ಇಲ್ಲಿಗೆ 'ಕಲಿಯಲು' ಬಂದಿದ್ದನು ಈ ದೇಶದ ಜನರ ವಿಶಾಲ ವೈಶಿಷ್ಟ್ಯವನ್ನು ಕಂಡವನು ಬೆರಗಾಗಿದ್ದನು ಶಂಕರಾಚಾರ್ಯರು ಅಂತಹ ಮಹಾ ಬುದ್ಧಿವಂತಿಗಳ ಕಾಲದಲ್ಲಿ ಜೀವಿಸಿದ್ದರು ಮಹಾ ಮೇಧಾವಿಗಳನ್ನು ತನ್ನ ಮತಕ್ಕೆ ಅನುಯಾಯಿಗಳನ್ನಾಗಿ ಮಾಡಿಕೊಂಡ ವ್ಯಕ್ತಿಯ ಬಹತ್ಕೃತಿಯ ಪ್ರಮಾಣವೆಷ್ಟೆಂಬುದನ್ನು ನಾವು ಊಹಿಸಿಕೊಳ್ಳಬಹುದು

ಕೆಲವೇ ವರ್ಷಗಳಲ್ಲಿ ಈ 'ಷಣ್ಮತ ಸ್ಥಾಪನಾಚಾರ್ಯನು' ದೇಶದ ಉದ್ದಗಲದಲ್ಲಿ ಸಂಚಾರ ಮಾಡಿ ನಾಲ್ಕು ಪ್ರಾಮುಖ್ಯ ಸ್ಥಾನದಲ್ಲಿ ನಾಲ್ಕು ಮಠ ಪೀಠಗಳನ್ನು ಸ್ಥಾಪಿಸಿದನು. ಗೀತಾ ಸಂದೇಶ ಕರ್ತನಾದ ಶ್ರೀ ಕೃಷ್ಣನ ಜೀವನ ಬೋಧಾಮೃತ ಗ್ರಂಥಕ್ಕೆ ಟೀಕೆ ಬರೆದ ಶಂಕರಾಚಾರ್ಯರು ಗೀತಾ ನಿರ್ದೇಶದಂತೆ ನಿಷ್ಕಾಮ ಮಾರ್ಗದಿಂದ ಸದಾ ಮಾನವ ಉದ್ಧಾರಕ್ಕಾಗಿ ಸತ್ಕಾರ್ಯ ಪ್ರವರ್ತಕರಾದರು ಆಚಾರ್ಯರು ತಮ್ಮ ಗುರುವಾದ ಗೋವಿಂದ ಪಾದರಿಗಿಂತ ಜ್ಞಾನ ಹಿರಿಮೆಯುಳ್ಳವರಾಗಿದ್ದರಾದರೂ ತಮ್ಮ ಕೃತಿಗಳಲ್ಲಿ ಗುರುವಿಗೆ ಪೂಜ್ಯ ಸ್ಥಾನ ಮಾನಗಳನ್ನು ಕೊಟ್ಟಿರುವರು ಗುರುವಿನ ನಿರ್ದೇಶದಂತೆ ಅವರು ಕಾಶೀ ಪಟ್ಟಣಕ್ಕೆ ತೆರಳಿ ಅಲ್ಲಿನ ಪಂಡಿತರನ್ನು ತರ್ಕದಲ್ಲಿ ಸೋಲಿಸಿದರು, ಅಂದಿನಿಂದ ಅವರ ಕೀರ್ತಿಯು ಜನಜನಿತವಾಯಿತು.

ಹೀಗೆ ತಮ್ಮ ಪ್ರಚಾರ ಕಾರ್ಯಗೆಯ್ಯುತ್ತಿರುವಾಗಲೇ ಶ್ರೀ ಶಂಕರರು ದಕ್ಷಿಣದ ಶೃಂಗೇರಿಯಲ್ಲಿ, ಪಶ್ಚಿಮದ ದ್ವಾರಕೆಯಲ್ಲಿ, ಪೂರ್ವದ ಪುರಿಯಲ್ಲಿ ಮತ್ತು ಉತ್ತರದ ಬದರಿಯಲ್ಲಿ ಹೀಗೆ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪೀಠ ಕೇಂದ್ರಗಳನ್ನು ಸ್ಥಾಪಿಸಿ ವೇದಾಂತ ಪ್ರಚಾರವು ಚಿರಕಾಲ ಬಾಳುವಂತೆ ಮಾಡಿದರು ಇದರಿಂದ ಅವರ ಭೌಗೋಳಿಕ ಜ್ಞಾನವೂ ಅಖಿಳ ಭಾರತ ದೃಷ್ಟಿಯೂ ಎಷ್ಟಿತ್ತೆಂಬುದರ ಅರಿವಾಗುತ್ತದೆ ಅವರು ಒಂದೇ ಕಡೆಯಲ್ಲಿ ನಿಲ್ಲುವವರಲ್ಲ ಕ್ಷಣಕ್ಷಣಕ್ಕೂ ಸಂಚರಿಸುತಿದ್ದರು ಇದರ ಪರಿಣಾಮವಾಗಿಂದು ಹಿಂದೂಮತ ಸಂಸ್ಕೃತಿಯಲ್ಲಿ ಒಂದು ತರದ ಸಂಘಟನೆಯು ಕಾಣುವಂತಾಯಿತು ಇಂದಿನ ಭಾರತೀಯ ರಾಜಕೀಯದಲ್ಲಿ ಶಂಕರ ಸ್ವರೂಪಿಗಳೆನಿಸುವ ಜನಪ್ರಿಯ ಜವಾಹರಲಾಲ ನೆಹರೂಗಳು ಸ್ವಾರ್ಥ ಪಥ ಪ್ರವರ್ತಕರೆಗೆ ತಮ್ಮ ಗ್ರಂಥದಲ್ಲಿ ಈ ಕೆಳಗಿನ ಅಮೋಘ ಶ್ಲಾಘನೆಯನ್ನು ಕೆತ್ತಿರವುದು ಏನೆಂದರೆ ಶಂಕರಾಚಾರ್ಯರ ಭವ್ಯ ವ್ಯಕ್ತಿತ್ವದ ಒಳನೋಟ ವ್ಯಕ್ತವಾಗುವುದು

ಶಂಕರಾಚಾರ್ಯರ ಚಟುವಟಿಕೆಗಳು ಅಸಾಧಾರಣವಾದುವು ಅವರ ಗ್ರಂಥ ಟೀಕೆ ಟಿಪ್ಪಣಿಗಳಿಂದ ಇಡೀ ದೇಶದ ಬೌಧಿಕ ಶಕ್ತಿಯು ಕೆರಳಿತು ಅವರು ಕೇವಲ ಬ್ರಾಹ್ಮಣ ವರ್ಗದ ಮುಖಂಡರು ಮಾತ್ರವಲ್ಲ ಸಾಮಾನ್ಯ ಜನತೆಯನ್ನೂ ಅವರು ಆಕರ್ಷಿಸಿದ್ದರು ಕೇವಲ ತಮ್ಮ ಬುದ್ಧಿ ಸಾಮರ್ಥ್ಯದಿಂದಲೇ ಅವರು ಜನಮನ್ನಣೆ ಪಡೆದುದು ಅತ್ಯಪೂರ್ವ ಸಂಗತಿ ಅದರಿಂದ ಇತಿಹಾಸದ ರೂಪವೇ ಬದಲಾಗಿದೆ ಜನತೆಯ ಮಾನಸಿಕ ಪರಿವರ್ತನವು ಕಠಿಣ ಕೆಲಸ ಶಂಕರರ ಮನವಿಯು ಮನಸ್ಸಿಗಿತ್ತು ಅವರ ತರ್ಕಗಳು ತಪ್ಪು ಇಲ್ಲವೆ ಒಪ್ಪಾಗಿರಲಿ ಮತೀಯ ವಿಚಾರಗಳನ್ನು ವಿವೇಕ ದೃಷ್ಟಿಯಿಂದ ಕಂಡ ಅವರ ಆದರ್ಶವು ಗಣನೀಯವಾದುದು ಅತ್ಯಲ್ಪ ಅವಧಿಯಲ್ಲಿ ಅವರ ಚಳವಳವು ದೇಶದಲ್ಲಿ ಹರಡಿದ ಸಂಗತಿಯನ್ನು ವಿವೇಚಿಸುವಾಗ ಪ್ರಬುದ್ಧ ವಿಚಾರ ಲಹರಿಗಳು ಹೇಗೆ ಆಗಿನ ಕಾಲದಲ್ಲಿ ದೇಶದ ಉದ್ದಗಲಕ್ಕೆ ಹರಡುತಿದ್ದುವು ಎಂಬ ಸಂಗತಿಯು ಬೆರಗುಗೊಳಿಸುತ್ತದೆ "

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted,

Deposits Current, Savings, Cumulative Deposits are accepted

Fixed Deposits for periods of 3 months and above up to 24 months are accepted.

ವಿಮಾನ ಮೂಲಕ ಮಡಿ ಬಟ್ಟೆ

ಅರಿಜೋನಾದ ಓರ್ವ ಸಾಹಸಿ ಮಡಿವಾಳನು 175 ಮೈಲು ದೂರದ ತನಕದ ಗಿರಾಕಿಗಳ ಬಟ್ಟೆಗಳನ್ನು ಮಡಿಮಾಡಲನುಕೂಲವಾಗುವಂತೆ ಒಂದು ವಿಮಾನವನ್ನು ಇಟ್ಟುಕೊಂಡಿರುವನು. 48 ಗಂಟೆಗಳೊಳಗೆ ಬಟ್ಟೆಗಳು ಮಡಿ ಮಾಡಿ ಕೊಡಲ್ಪಡುವವು.

ಪ್ರಪಂಚ ಪರಿಚಯ

ಸಂಯುಕ್ತ ರಾಷ್ಟ್ರಗಳ ಸಂಸ್ಥೆಯ ಶಾಸಕ ಸಭೆಯ ಅಧಿವೇಶನವು ಈಗ ಅಮೇರಿಕಾದಲ್ಲಿ ನಡೆಯುತ್ತಿದೆ: ದಕ್ಷಿಣ ಆಫ್ರಿಕದ ಹಿಂದೀಯರ ಸಮಸ್ಯೆ, ಡಚ್-ಇಂಡೋನೇಸ್ಯಾ ವಿವಾದ, ಪೆಲೆಸ್ತೀನ ಪ್ರಕರಣ, ಬಾಲ್ಕನ್ಸ್ ಪ್ರಕರಣ, ವೇಟೊ ಕ್ರಮದಲ್ಲಿ ತಿದ್ದುಪಡಿ, ಇವೇ ಮೊದಲಾದ ವಿಚಾರಗಳು ಅಧಿವೇಶನದ ಮುಂದೆ ಬಂದಿವೆ. ಯುದ್ಧ ಮುಗಿದು ಎರಡು ವರ್ಷಗಳಾಗಿದ್ದರೂ, ಲೋಕಶಾಂತಿಯನ್ನು ಸ್ಥಾಪಿಸುವುದರಲ್ಲಿ ಈ ಸಂಸ್ಥೆಗೆ ಹೆಚ್ಚು ಯಶ ದೊರಕಲಿಲ್ಲ, ಎಂಬ ಉದ್ಗಾರವು, ಸಂಸ್ಥೆಯ ಕಾರ್ಯದರ್ಶಿಯ ಭಾಷಣದಲ್ಲಿ ಹೊರಡಿರುತ್ತದೆ. ಜಗತ್ತು ಅಮೇರಿಕಾ-ರಷ್ಯಗಳ ಮಧ್ಯೆ ಹರಿದು ಹಂಚಿಹೋಗುವ ಕ್ರಿಯೆಯು ಈಗ ಅತಿ ಬಿರುಸಿನಿಂದ ನಡೆಯುತ್ತಿರುವಾಗ, ಲೋಕಶಾಂತಿ ಸಾಧನೆಯ ಕುರಿತು, ಸಂಯುಕ್ತ ರಾಷ್ಟ್ರಗಳ ಸಂಸ್ಥೆಯು, ಕೆಲವು ಖಂಡಿತ ಅಭಿಪ್ರಾಯಗಳಿಗೆ ಬರುವುದು ಅತಿ ಅವಶ್ಯವಿದೆ. ಸಂಯುಕ್ತ ರಾಷ್ಟ್ರಗಳ ಸಂಸ್ಥೆಯನ್ನು ತಮ್ಮ ಕೈಗೊಂಬೆಯಾಗಿ ಉಪಯೋಗಿಸಿಕೊಳ್ಳಲು ಅಮೇರಿಕಾವು ಯತ್ನಿಸುತ್ತಿದೆ, ಎಂಬ ದೂರು ರಷ್ಯದ ಕಡೆಯಿಂದ ಹೊರಟಿದ್ದು, ಅಮೇರಿಕದ ಕಡೆಯಿಂದ ಮಂಡಿಸಲಾಗುವ ಯಾವತ್ತೂ ನಿರ್ಣಯಗಳಿಗೆ, ರಷ್ಯದ ಬಲವಾದ ವಿರೋಧವು ಮುಂದೆ ಬರುತ್ತಿರುವುದು, ಈ ಅಧಿವೇಶನದಲ್ಲಿ ಕಾಣಿಸುತ್ತದೆ. ವೇಟೊ ಹಕ್ಕಿನ ಉಪಯೋಗದಿಂದ, ಅನೇಕ ಮಹತ್ವದ ನಿರ್ಣಯಗಳಿಗೆ ಅಡ್ಡಿ ತಂದೊಡ್ಡುವುದನ್ನು ತಡೆಯುವರೆ, ವೇಟೊ ಹಕ್ಕಿನ ಕುರಿತು ತಿದ್ದುಪಡಿಗಳು ಅಮೇರಿಕಾದಿಂದ ಸೂಚಿಸಲಾಗಿದೆ. ದಕ್ಷಿಣ ಆಫ್ರಿಕದಲ್ಲಿ ಹಿಂದೀಯರಿಗೆ ಬಿಳಿಯರೊಡನೆ ಸಮಾನತೆ, ದೊರಕಿಸಿಕೊಡುವುದು, ಇಂಡೋನೇಸ್ಯಾದ ಸ್ವಾತಂತ್ರ್ಯ ರಕ್ಷಣೆ — ಈ ಎರಡು ವಿಚಾರ ಕುರಿತು ಸಂಯುಕ್ತರಾಷ್ಟ್ರಗಳ ಸಭೆಯ ಇತ್ಯರ್ಥವು ನ್ಯಾಯಬದ್ಧವಾದರೆ ಮಾತ್ರ ಮುಂದಕ್ಕೆ ಲೋಕಶಾಂತಿ ಸ್ಥಾಪನೆಯಾಗಬಹುದೆಂದು ಭರವಸೆ ಹೊಂದಬಹುದು.

ಇಂಡೋಚೀನಾ ಇಂಡೋನೇಸ್ಯಗಳಲ್ಲಿ ಫ್ರೆಂಚರು ಮತ್ತು ಡಚ್ಚರು ತಮ್ಮ ಹಿತಗಳಿಗೆ ಹೆಚ್ಚು ಹಾನಿಯಾಗದ ಕರಾರುಗಳನ್ನು ಕೊಟ್ಟು ಬಿಡುವ ನಿರ್ಧಾರ ಮಾಡಿದಂತೆ ಕಾಣುತ್ತದೆ. ಇದಕ್ಕಾಗಿ ಅವರು ಭೇದ ನೀತಿಯ ಉಪಾಯವನ್ನು ಹೂಡಿರುವರು. ಅವರಿಗೆ ಬ್ರಿಟನು, ಅಮೇರಿಕಾದ, ಮೌನ ಬೆಂಬಲವು ಇದ್ದಂತೆ ಕಾಣುತ್ತದೆ. ಕಾರಣ, ಏಸ್ಯಾಖಂಡದಲ್ಲಿ ಬಿಳಿಯರ ಹಿಡಿತವು ಸಡಿಲಾಗಿ ಬಿಟ್ಟರೆ, ಏಸ್ಯಾಖಂಡವು ಸರ್ವಸಮೃದ್ಧವಾಗಿ ಬೆಳೆದು ಪಾಶ್ಚಾತ್ಯರನ್ನು ಹಿಮ್ಮೆಟ್ಟಿಸುವುದೊ ಎಂಬ ಭೀತಿಯು ಪ್ರತಿಬಿಳಿಯರಲ್ಲಿದೆ. ಇಂಡೋಚೀನಾದಲ್ಲಿ ಫ್ರೆಂಚರ ಧೋರಣ, ಇಂಡೋನೇಸ್ಯಾದಲ್ಲಿ ಡಚ್ಚರ ಧೋರಣ, ಹಿಂದೂದೇಶದಲ್ಲಿ ಬ್ರಿಟಿಷರ ಧೋರಣ, ಗ್ರೀಸಿನಲ್ಲಿ ಅಮೇರಿಕದ ಧೋರಣ, ಪೂರ್ವ ಯುರೋಪದಲ್ಲಿ ರಷ್ಯಾದ ಧೋರಣ, ಇವುಗಳಲ್ಲಿ ಒಂದೆ ಉದ್ದೇಶವು ಕಾಣಿಸುತ್ತದೆ. ಭೇದ ನೀತಿಯಿಂದ ತಮ್ಮ ಸ್ವಾರ್ಥ ಸಾಧಿಸುವುದು.

ಜಗತ್ತು, ಅಮೇರಿಕಾ ಮತ್ತು ಸೋವಿಯಟ್ ಪ್ರಭಾವಗಳ ಅಡಿಯಲ್ಲಿ ವಿಭಾಗಿಸಲ್ಪಡುವ ಕ್ರಿಯೆಯು, ಪ್ರಭುತ್ವದ ರಾಷ್ಟ್ರಗಳಲ್ಲಿ ಒಮ್ಮನಸ್ಸು ಉಂಟಾಗುವುದಕ್ಕೆ ಒಂದು ದೊಡ್ಡ ಅಡ್ಡಿಯಾಗಿರುವುದು. ಅಮೇರಿಕಾ ಸೋವಿಯಟ್ ಮಧ್ಯೆ ಪೂರ್ವ ಪಶ್ಚಿಮದೊಳಗಿರುವ ವ್ಯತ್ಯಾಸವು ಈಗ ಕಾಣಿಸುತ್ತದೆ. ಹೀಗಿರುತ್ತಾ ರಷ್ಯ-ಅಮೇರಿಕಗಳ ಐಕ್ಯ, ಅದರಿಂದ ಜಾಗತಿಕ ಐಕ್ಯವು ಉಂಟಾಗುವುದೆಂದು ನಂಬಲು ಈಗ ಸಾಧ್ಯವಿಲ್ಲದಾಗಿದೆ. ಜಗತ್ತು ಎರಡು ಶಿಬಿರಗಳಾಗಿ ಪ್ರಕೃತ ವಿಭಾಗವಾಗಲೆ ಬೇಕಾಗಿದೆ. ಸದ್ಯಕ್ಕೆ ಈ ವಿಭಜನೆಯು ನಡೆಯುವುದು. ನಂತರ ಎರಡೂ ವಿಭಾಗಗಳ ಸರಿಸಜ್ಜುಗೊಳಿಸುವ ಕಾರ್ಯವು ನಡೆಯುವುದು. ಈ ವಿಭಜನೆಯು ನಡೆಯುತ್ತಿದ್ದ ಹಾಗೆನೆ, ಯುದ್ಧಾಗ್ನಿಯು ಹೊರಡುವುದೆ? ಇಲ್ಲ. ಯುದ್ಧಕ್ಕೆ ಬೇಕಾದ ಅನುಕೂಲ ಸ್ಥಿತಿಯು ಇಕ್ಕಡೆಗಳಲ್ಲು ಇಲ್ಲ. ಜಗತ್ತು ಇಬ್ಭಾಗವಾದ ನಂತರ ಪರಿಣಾಮವೇನಾಗುವುದೆಂದು ಈಗ ಭವಿಷ್ಯವಾಗಿ ಹೇಳಲು ಸಾಧ್ಯವಿಲ್ಲ.

ಈ ಕಾರಣದಿಂದ ಹಾಳುಬಿದ್ದ ಪಶ್ಚಿಮ ಯುರೋಪವು ಅಮೇರಿಕಾದಿಂದ ಎತ್ತಲಾಗುವುದು. ಪೂರ್ವ ಯುರೋಪದಲ್ಲಿ ಕೊಮ್ಯುನಿಸಮ್ಮಿನ ಸ್ಥಾಪನೆಯಾಗುವುದು. ಆದರೆ ಕಳೆದ ಯುದ್ಧದ ದೆಸೆಯಿಂದ ಹಾಳಾದ ಪ್ರಪಂಚದ ಸಾಂಪತ್ತಿಕ ಸ್ಥಿತಿಯು ಇನ್ನೂ ಸುಧಾರಿಸಿಕೊಂಡಿಲ್ಲ. ಬೇಗನೆ ಸುಧಾರಿಸಿಕೊಳ್ಳುವ ಚಿಹ್ನೆಗಳು ಕಾಣಿಸುವುದಿಲ್ಲ. ಹಾಳಾದ ಯುರೋಪವನ್ನು ಸುಧಾರಿಸಲೆಂದು ಅಮೇರಿಕಾದ ಮಾರ್ಶೆಲ್ಲರ ಯೋಜನೆಯೊಂದು ಸಿದ್ಧವಾಗಿ, ಅದು ಈಗ ಪಶ್ಚಿಮ ಯುರೋಪದ ಬಗ್ಗೆ ಮಾತ್ರ ಉಪಯೋಗಿಸುವಂತಾಗಿದೆ. ಈ ಯೋಜನೆಯೊಳಗೆ ಬರುವ ದೇಶಗಳಿಗೆ ಒಟ್ಟಿನಲ್ಲಿ 22 ಬಿಲಿಯ ಡಾಲರುಗಳ ಸಹಾಯವಾಗಿ ಸಲ್ಲಿಸಲು ನಿರ್ಧಾರವಾಗಿದೆ. ಕೆಟ್ಟುಹೋದ ಪ್ರಪಂಚದ ಸಾಂಪತ್ತಿಕ ಸ್ಥಿತಿಯನ್ನು ಉದ್ಧರಿಸುವ ಅಮೇರಿಕಾದ ಇನ್ನೊಂದು ಉಪಾಯವೆಂದು ಹೇಳಲಾಗಿದೆ. ಅಮೇರಿಕವು ಧರ್ಮಿಷ್ಠ ಸೇವೆಗಾಗಿ ಯುರೋಪದ ನೆರವಿಗೆ ಮುಂದೆ ಬಂದಿದ್ದರೂ, ಗತಿಗೆಟ್ಟ ಯುರೋಪವು ಸುಧಾರಿಸಿಕೊಳ್ಳದೆ, ಅಮೇರಿಕಾದ ಸಂಪತ್ತಿನಿಂದ ಯಾವತ್ತೂ ಸಾರ್ಥಕತೆಯು ಉಂಟಾಗದೆಂದು, ಮುಂದಟ್ಟಾಗಿರುವುದರಿಂದಲೆ ಅಮೇರಿಕಾವು ಹೀಗೆ ಮುಂದೆ ಬರಲು ಕಾರಣ.

ಸೋವಿಯಟ್ ರಷ್ಯವು ಪಶ್ಚಿಮ ಯುರೋಪದ ದೇಶಗಳಲ್ಲಿ ತಮ್ಮ ಪ್ರಭಾವ ಬೀರಲು ಕೊಮ್ಯುನಿಸ್ಟರ ಮೂಲಕ ಹಂಚಿಸುತ್ತಿರುವಾಗ, ಡೊಲ್ಲರುಗಳ ಮೂಲಕ, ಸೋವಿಯಟ್ ಪ್ರಭಾವಿತ ದೇಶಗಳೊಳಗೆ ಕಾಲಿಡಲು ಅಮೇರಿಕನ್ ಪ್ರಯತ್ನಗಳು ನಡೆಯುತ್ತಿವೆ. ಈಗ ಮೊದಲಾಗಿ ಅದರಿಂದ ಈ ಕಾರ್ಯದಲ್ಲಿ ಗ್ರೀಸನ್ನು ಪ್ರಥಮ ಸೋಪಾನವಾಗಿ ಮಾಡಿಕೊಳ್ಳಲಾಗಿದೆ. ಬಾಲ್ಕನ್ಸ್‌ಗಳಲ್ಲಿ ಹರಡಿದ್ದ ಕೊಮ್ಯುನಿಸಂ ಅಲ್ಲಿಂದ ಮುಂದೆ ಹರಡದಂತೆ ಪ್ರತಿದಟ್ಟಲೂ ಈ ಉಪಾಯ ಅಮೇರಿಕಾವು ಕೈಕೊಂಡಿರುವುದು.

ಪರ್ಸಿಯಾದಲ್ಲಿ, ಉತ್ತರ ಪ್ರದೇಶ ಎಣ್ಣೆಶೇಖರವು, ಈ ವರೆಗೆ ರಷ್ಯ-ಪರ್ಸಿಯಾಗಳು ಭಾಗಿಗಳಾಗಿ ಶೋಷಣೆಯಾಗುತ್ತಿರುವುದನ್ನು ನಿಲ್ಲಿಸಲು ಯತ್ನಗಳು ನಡೆದು, ವಿಷಮತೆಯೊಂದು ಸಂಭವಿಸಬಹುದೊ ಎಂಬ ಸಂದೇಹಗಳುಂಟಾಗಿದ್ದವು. ಪರ್ಸಿಯಾದ ಉತ್ತರ ಭಾಗದ ಎಣ್ಣೆಯ ಪಾಲು ತಮಗೆ ದೊರಕತಕ್ಕದೆಂದು ರಷ್ಯದ ವಾದ. ಅದನ್ನು ಪಾಲಿನಲ್ಲಿ ಉಪಯೋಗಿಸಿಕೊಳ್ಳಲು ರಷ್ಯಕ್ಕೂ-ಪರ್ಸಿಯಾ ನಡುವೆ ಒಪ್ಪಂದವಾಗುವುದಕ್ಕೆ ಪರ್ಸಿಯಾವು ಸ್ವಲ್ಪ ವಿಳಂಬ ಮಾಡಿದುದರಿಂದ ಪರ್ಸಿಯಾ ಈಗಡಿಯಲ್ಲಿ, ಕೆಂಪು ಸೈನ್ಯದ ಭಾರಿ ಕವಾಯಿತುಗಳು ನಡೆಯುವಂತಾಯಿತು. ಇದಕ್ಕೆ ಹೆದರಬೇಕಾಗಿಲ್ಲವೆಂದೂ ಅಮೇರಿಕಾದ ಮದತ್ತೂ ಪರ್ಸಿಯಾಕ್ಕೆ ದೊರಕಿತು. ಆದ್ದರಿಂದ ಈ ಘಟನೆಯು ಶಾಂತವಾದ ರೀತಿಯಲ್ಲಿ ಇತ್ಯರ್ಥಹೊಂದುವಂತೆ ಕಾಣುತ್ತದೆ. ಎಣ್ಣೆಯ ಕುರಿತು ಬೇಗನೆ ಒಪ್ಪಂದ ಮಾಡಿಕೊಳ್ಳಲು ಪರ್ಸಿಯಾಕ್ಕೂ ರಷ್ಯಕ್ಕೂ ಒಡಂಬಡಿಕೆಯಾಗುವಂತಿದೆ.

ಪ್ರಪಂಚದ ಸಾಂಪತ್ತಿಕ ಸ್ಥಿತಿಯೂ ಬಹಳ ಕೆಟ್ಟಿರುವುದು. ವ್ಯಾಪಾರ ಲೋಕದಲ್ಲಿ ತಡೆಗಳು ದಿನೆ ದಿನೆ ಹೆಚ್ಚುತ್ತಿವೆ. ಈ ಸ್ಥಿತಿಯನ್ನು ಸುಧಾರಿಸಿಕೊಳ್ಳುವರೆ ಬ್ರಿಟನು ಅಮೇರಿಕಾ ದೇಶಗಳು ಯತ್ನಪಡುತ್ತಿದ್ದಾವೆ. ಬ್ರಿಟನಿನ ಸಾಂಪತ್ತಿಕ ಸ್ಥಿತಿಯು ತೀರಾ ಕೆಟ್ಟಿರುತ್ತದೆ. ಇದೆ ತಕ್ಕ ಸಮಯವೆಂದು ಬ್ರಿಟನಿನ ಕೈಯೊಳಗಿರುವ ಸಾಮ್ರಾಜ್ಯದ ವ್ಯಾಪಾರವನ್ನು ಕಸಗೊಳ್ಳಲು ಅಮೇರಿಕಾವು ಸಾಧಿಸುತ್ತಿದೆ. ಸಾಮ್ರಾಜ್ಯದ ವ್ಯಾಪಾರದಲ್ಲಿ ಬ್ರಿಟನಿಂದ ಹಾಕಲಾದ ತಡೆಗಳನ್ನು ತೆಗೆಯುವ ಶರ್ತದಲ್ಲಿ ಮಾತ್ರ ಅಮೇರಿಕಾವು ಬ್ರಿಟನಿಗೆ ಮುಂದಕ್ಕೆ ಸಾಲ ನೀಡಲು ಸಿದ್ಧವಿದೆ. ತಮಗೆ ಯಾವದೆ ಕಷ್ಟಗಳು ಬಂದೊದಗಿದರೂ ತಮ್ಮ ಸ್ಥಾನವನ್ನು ಇತರರಿಗೆ ಬಿಟ್ಟುಕೊಡಲು ಬ್ರಿಟನು ಸಿದ್ಧವಿಲ್ಲ. ತಮ್ಮ ಜಾಗತಿಕ ವ್ಯಾಪಾರವನ್ನು ಉಳಿಸಿಕೊಳ್ಳಲು ಬ್ರಿಟನ್ ಯಾವ ತ್ಯಾಗಕ್ಕೂ ಸಿದ್ಧವಿದ್ದಂತೆ ಕಾಣುತ್ತದೆ.

ಆದರೆ ಯಾವ ಕಡೆ ನೋಡಿದರೂ ದೊಡ್ಡದೊಂದು ಸಾಂಪತ್ತಿಕ ವಿಷಮತೆಯು ಈ ಜಗತ್ತನ್ನು ಎದುರು ನೋಡುತ್ತಿದೆ. ಈಗಿನ ಘಟನೆಗಳನ್ನು ಪರಿಶೀಲಿಸಿದರೆ ಈ ವಿಷಮತೆ ಬರುವ ಕಾಲವು ದೂರವಿರುವುದರಲ್ಲಿ ಹೆಚ್ಚು ವಿಳಂಬವಿಲ್ಲವೆಂಬ ಸಂದೇಹವು ಉಂಟಾಗುತ್ತದೆ.

ಪ್ರಪಂಚವು ಹೀಗೆ ವಿಷಮತೆಯ ಕಡೆಗೆ ನಡೆಯುವುದಾದರೂ, ಜನತೆಯು, ನೈತಿಕ ಮೌಲ್ಯಗಳಿಗೆ ಹೆಚ್ಚು ಮಹತ್ವ ಕೊಟ್ಟು ವರ್ತಿಸುತ್ತಿರುವುದು ಕಾಣಿಸುವುದಿಲ್ಲ. ತಮ್ಮ ಧ್ಯೇಯ ಸಾಧನೆಯಲ್ಲಿ, ಸೋವಿಯಟ್ ರಷ್ಯದ ನಾಯಕರು ಒಳ್ಳೆ ನೀತಿಗಳಿಗೆ ಮನ್ನಣೆ ಕೊಡುವಂತೆ ಕಾಣುವುದಿಲ್ಲ. ಹಾಗನೆ ಅಮೇರಿಕಾದಿಂದಲೂ ನೈತಿಕ ಮೌಲ್ಯಗಳ ಕುರಿತು ನಿರ್ಲಕ್ಷ್ಯವಾಗಿದೆ, ಆಗ ಜಗತ್ತಿನ ಗತಿ ಏನು, ನಾಗರೀಕತೆಯು ಕಳಚಿ ಬೀಳಬಹುದೆ, ಜನತೆಯು ಇನ್ನಾದರೂ ಚೇತರಿಸಿಕೊಳ್ಳಬಾರದೆ, ಎಂಬ ಪ್ರಶ್ನೆಯು, ಪ್ರವೀಣರಿಂದ ಕೇಳಲಾಗಿದೆ.

★

ಜರ್ಮನಿಗೆ ಈಗ ಬಂದೊದಗಿದ ಸ್ಥಿತಿಯಿಂದ, ಅಲ್ಲಿನ ಯುವಕರಲ್ಲಿ ಪಶ್ಚಾತ್ತಾಪ ಉಂಟಾಗಿರುವುದು. ಉತ್ತಮ ಅಂತರ್ರಾಷ್ಟ್ರೀಯ ಸಂಬಂಧಗಳನ್ನು ಸ್ಥಾಪಿಸುವರೆ, ಇತರ ರಾಷ್ಟ್ರಗಳೊಡನೆ ಸಹಕರಿಸಲು ಅವರು ಹಾತೊರೆಯುತ್ತಿರುವರು. ತಮ್ಮ ಹಿರಿಯರ ಪಾಪಗಳಿಗೆ ತಕ್ಕ ಪ್ರಾಯಶ್ಚಿತ್ತ ಮಾಡಲು ಅವರು ಸಿದ್ಧರಿರುವರು. ಅವರ ಪಾಪದಿಂದಾಗಿ, ಉತ್ತಮ ಜೀವನ, ತಮಗೆ ಲೋಪವಾಗಬೇಕೆ? ಎಂದವರು ಕೇಳುತ್ತಿರುವರು. ಅವರು ಜಗತ್ತಿನ ಕನಿಕರವನ್ನು ಕೋರುತ್ತಿರುವರು, ಹೀಗೆಂದು, ಮ್ಯೂನಿಕ್‌ದಲ್ಲಿ ಜರಗಿದ ಯುವಕ ಪರಿಷತ್ತಿಗೆ ತೆರಳಿದ ಓರ್ವ ಆಧ್ಯ ಆಂಗ್ಲ ಪತ್ರಿಕಾಪ್ರತಿನಿಧಿಗಳು ಪ್ರಸಿದ್ಧಿಸಿರುವರು.

ಪಶ್ಚಿಮ ಜರ್ಮನಿಯ ಕೈಗಾರಿಕೆ ಮತ್ತೊಮ್ಮೆ ಪ್ರಾರಂಭವಾಗುವಂತೆ, ಆಂಗ್ಲೊ-ಅಮೇರಿಕನ್ ಇತ್ಯರ್ಥವಾಗಿರುತ್ತದೆ. ಖಾಸಗಿ ಯಜಮಾನತ್ವದಲ್ಲಿ ಅದು ನಡೆಯುವಂತೆ ಅವಕಾಶ ಮಾಡಿಕೊಡಲಾಗಿದೆ. ಈ ಇತ್ಯರ್ಥದಿಂದ, ಜರ್ಮನಿಯ ಕೈಗಳಿಂದ ನೊಂದ ದೇಶಗಳಿಗೆ ತುಂಬಾ ಅಸಮಾಧಾನವು ಉಂಟಾಗಿದೆ. "ಜರ್ಮನಿಯ ಉದ್ಧಾರವಾಗಬೇಕು, ಅದರಿಂದ ನಮಗೆ ಹಾನಿಯಾಗಬಾರದೆಂದು" ಫ್ರಾನ್ಸಿನ ಬಿಡೊಲ್ಟರು ಎಚ್ಚರಿಕೆ ಕೊಟ್ಟಿರುವರು.

★

"ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವರೆ ಬ್ರಿಟನಿಗೆ ಮಹಾ ಯತ್ನದಲ್ಲಿ ತೊಡಗಬೇಕಾಗಿದೆ. ರಫ್ತಿಗೆ ಬೇಕಾದ ಯಂತ್ರಗಳನ್ನು ತಯಾರಿಸಲು, ಅದರ ಕೈಗಾರಿಕೆಗಳು ಇಮ್ಮಡಿ ಹುರುಪಿನಿಂದ ನಡೆಯುವ ಅವಶ್ಯ ಬಿದ್ದಿದೆ. ಆದರೆ, ನುರಿತ ಕೆಲಸಗಾರರು ಸೈನ್ಯದೊಳಗೆ ಸೇರಿ, ಪರದೇಶಗಳಿಗೆ ತೆರಳಿದವರು, ಇನ್ನೂ ಹಿಂತೆರಳದಿರುವುದರಿಂದ, ಕೆಲಸಗಾರರ ದೊಡ್ಡದೊಂದು ಕೊರತೆಯು ಒಂದು ದೊಡ್ಡ ಅಡ್ಡಿಯಾಗಿ ನಿಂತಿರುತ್ತದೆ. ಗ್ರೀಸಿನಿಂದ ಇಜಿಪ್ತದಿಂದ, ಪೆಲೆಸ್ತೀನದಿಂದ, ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆದು, ಕೈಗಾರಿಕೆಗಳಿಗೆ ಬೇಕಾದ ಕೆಲಸಗಾರರನ್ನು ಒದಗಿಸಿಕೊಡುವ ನಿರ್ಧಾರಕ್ಕೆ ಬ್ರಿಟಿಷ ಮಂತ್ರಿ ಮಂಡಳವು ಬಂದಿರುತ್ತದೆ. ಈ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಅಮೇರಿಕಾದ ಅಡ್ಡಿಯುಂಟಾದಂತೆ ತೋರುತ್ತದೆ. ಗ್ರೀಸ್, ಪೆಲೆಸ್ತೀನ, ಮೊದಲಾದ ಪ್ರದೇಶಗಳಲ್ಲಿ, ಬ್ರಿಟಿಷ ಸೈನ್ಯವು ಇನ್ನು ಕಾವಲಿದ್ದು, ತಾವು ಹೊಂಚುಹಾಕುತ್ತಿರುವ ಎಣ್ಣೆಯ ಪ್ರದೇಶಗಳನ್ನು ಭದ್ರಗೊಳಿಸುವುದೆ ಅದರ ಉದ್ದೇಶವಿರಬಹುದು.

ಆದರೆ ಪೆಲೆಸ್ತೀನ ಪ್ರಕರಣವು ಸಂಯುಕ್ತ ರಾಷ್ಟ್ರಗಳ ಸಂಸ್ಥೆಯಿಂದ ಬೇಗನೆ ಇತ್ಯರ್ಥವಾಗದಿದ್ದರೆ, ಮೆಂಡೆಟನ್ನು ತ್ಯಜಿಸಿ, ಅಲ್ಲಿಂದ ತಮ್ಮ ಸೈನ್ಯಬಲವನ್ನು ಹಿಂತೆಗೆಯಬೇಕಾಗಿ, ಬ್ರಿಟಿಷ ಮಂತ್ರಿಮಂಡಳದ ಖಂಡಿತ ನಿರ್ಧಾರವಾಗಿರುವುದಂತೆ.

ರೋಗಾಣು ನಾಶಕ ಕಿರಣಗಳು

ಸೂರ್ಯ ಪ್ರಕಾಶವು ರೋಗಾಣುಗಳನ್ನು ಕೊಲ್ಲಲು ಶಕ್ತಿವುಳ್ಳದ್ದೆಂದು ವೈದ್ಯ ವಿಜ್ಞಾನವು ಬಹಳ ಹಿಂದಿನಿಂದ ಕಂಡುಹಿಡಿದಿದೆ. ಈಚೆಗೆ ಅಲ್ಟ್ರಾವೈಲೆಟ್ ಕಿರಣಗಳೆಂಬವನ್ನು ಕಂಡುಹಿಡಿಯಲಾಗಿದೆಯಷ್ಟೆ. ಇವು ಮಾನವ ದೃಷ್ಟಿಗೆ ಗೋಚರವಾಗದ ಬೆಳಕು ಕಿರಣಗಳು. ಇವಕ್ಕೆ ಮಾನವ ವ್ಯಾಧಿಗಳನೇಕವನ್ನು ಗುಣಮಾಡುವ ಅಗಾಧ ಶಕ್ತಿಯಿದೆಯೆಂದೂ ಕಂಡುಹಿಡಿಯಲಾಗಿದೆ. ಇವನ್ನೀಗ ರೋಗಾಣು ವಿನಾಶಕ್ಕಾಗಿ ಉಪಯೋಗಿಸುವ ಕುರಿತು ಹಲವು ಪ್ರಯೋಗಗಳಾಗುತ್ತಿವೆ.

★

ಕೆಥೋಲಿಕ್ ಕ್ರೈಸ್ತರೂ ಮಧ್ಯಪಾನ ನಿಷೇಧವೂ

ಶರೀರಾತ್ಮವಿಘಾತುಕ ಅಮಲುಗಳ ಪೈಶಾಚಿಕ ಪರಿಣಾಮ.

ಕೆಥೋಲಿಕ್ ಬಂಧುಗಳೊಬ್ಬರ ಕಳಕಳಿಯ ಮನವಿ

ಸನ್ನಡತೆ ಸುಧಾರಣೆಗಾಗಿ ಸಾಧಿಸುವ ನಿರಲಿಪ್ತರಾದ ಶ್ರೀ ಎಸ್. ಟಿ. ಪಿ. ಶಿಟೆಲ್ಲೊ ಅವರು ಹೃದಯಂಗಮವೂ ವಿಚಾರಣೀಯವೂ ಆದ ಈ ಕೆಳಗಿನ ಲೇಖನ ರೂಪವಾದ ಮನವಿಯನ್ನು ಮಾಡಿಕೊಳ್ಳುತ್ತಾರೆ.

ಇತರ ಎಲ್ಲಾ ಮತವರ್ಗದವರಿಗಿಂತ ಅತೀ ಹೆಚ್ಚಿನ ಅನಾಹುತವು ಈ ಮಧ್ಯಪಾನ ಪಿಶಾಚಿಯಿಂದ ನಮ್ಮ ಕೆಥೋಲಿಕ್ ಕ್ರೈಸ್ತ ಸಮಾಜಕ್ಕೆ ಉಂಟಾಗಿದೆಯೆಂದು ಲಜ್ಜೆಯಿಂದ ನಾವು ಒಪ್ಪಬೇಕಾಗಿದೆ ಕೆಥೋಲಿಕರಿಂದಲೇ ಹೆಚ್ಚಿನ ಅಕ್ರಮ ಮಧ್ಯ ತಯಾರಿಕೆಯ ಅಪರಾಧಗಳು ನಿರ್ವಹಿಸಲ್ಪಟ್ಟಿದೆಯೆಂದೂ ಹೇಳಲ್ಪಡುತ್ತದೆ. ಕೆಥೋಲಿಕ್ ಹಬ್ಬಗಳಿಗೂ ಹಿಂದೂ ಮತ್ತು ಮುಸ್ಲಿಂ ಹಬ್ಬಗಳಿಗೂ ಗಣನೀಯವಾದ ವ್ಯತ್ಯಾಸ ತೋರಿ ಬರುವುದಕ್ಕೆ ಅಂದು ಕೆಥೋಲಿಕರು ಸುರಾಪಾನ ಮತ್ತತೆಯ ಪ್ರಭಾವಕ್ಕೊಳಗಾಗಿ ಮಾರ್ಗ ಅಳೆಯುವಿಕೆ ಮಾಡುವುದರಿಂದಲೂ, ಕುಡಿತದಿಂದ ಕಚ್ಚಾಡಿಕೊಳ್ಳುವುದರಿಂದಲೂ, ಗಂಧರ್ವ ಕಿನ್ನರರ ಹರ್ಷಲೋಲುಪತ್ತೆಯಿಂದಲೂ, ಅಸಹ್ಯವೂ ಅಶ್ಲೀಲವೂ ಆದ ಕರ್ಣ ಕಠೋರ ಹಾಡುವಿಕೆಯಿಂದಲೂ ಮೆರೆಯುವುದೇ ಕಾರಣವಾಗಿದೆ. ಹಬ್ಬಗಳನ್ನಾಚರಿಸುವ ಎಂತಹ ಅ ಕ್ರೈಸ್ತ ವಿಧಾನವಿದು' ಸಂಕ್ಷೇಪವಾಗಿ ಹೇಳುವುದಾದರೆ ದುರಾಚಾರವೆಂಬಂತೆ ಕ್ರೈಸ್ತ ಮತವೂ ಕುಡಿಯುವಿಕೆಯೂ ಏಕಮೇಯವೆಂದು ಪರಿಗಣಿಸಲ್ಪಡುವಂತಾಗಿದೆ! ! ಕ್ರೈಸ್ತೇತರರಿಂದು ತಮ್ಮ ಧಿಕ್ಕಾರದ ಬೆರಳಿಂದ ನಮ್ಮನ್ನು ಬೊಟ್ಟು ಮಾಡಿ ತೋರಿಸುತ್ತಾ "ನೀವು ಕೆಥೋಲಿಕರು ಬಿಸಿ ಪಾನೀಯಗಳಿಗಾಗಿ ಖಂಡಿಗಟ್ಲೆ ಹಣವನ್ನು ದುರ್ವ್ಯಯಿಸುತ್ತೀರಿ" ಎಂದು ವ್ಯಂಗಿಸುವಂತಾಗಿದೆ

ಹಿಂದೂ ಮತ್ತು ಮುಸ್ಲಿಮರೊಳಗೆ ಅಮಲು ಸೇವನೆಯ ಕೆಲವು ದುರ್ಲಭ ನಿದರ್ಶನಗಳಿರುವುದಾದರೂ ಕೆಥೋಲಿಕರಲ್ಲಿ ಸಾಮೂಹಿಕ ಕುಡುಯುವಿಕೆ ಬೇರೂರಿದೆ ಹಿಂದೂ, ಮುಸ್ಲಿಮರಲ್ಲಿ ಶೇಂದಿ ಶರಾಬುಗಳನ್ನು ಸ್ಪರ್ಶಿಸುವುದೂ ಪಾಪಕಾರಕವಾಗಿರುತ್ತದೆ ನಮ್ಮಲ್ಲಾದರೆ ಅಮಲು ಹುಟ್ಟಿಸದಷ್ಟು ಪ್ರಮಾಣವನ್ನು ಕುಡಿದರೂ ಪಾಪವಲ್ಲವೆಂದು ಭಾವಿಸಲ್ಪಡುತ್ತದೆ! ಆದರೆ ಕುಡಿತದ ಯಾವ ಮಟ್ಟದಲ್ಲಿ ಈ ಅಮಲು ಹುಟ್ಟುತ್ತದೆಂಬುದನ್ನು ಅರಿತು ಕೊಳ್ಳುವುದು ಕಷ್ಟದ ಕೆಲಸ ಕಾರಣ ಅದು ವ್ಯಕ್ತಿ, ಸಂದರ್ಭ ಮತ್ತು ಕುಡಿಯುವ ವಸ್ತುಗಳನ್ನು ಹೊಂದಿಕೊಂಡಿದೆ ಕೆಥೋಲಿಕರಾದ ನಾವಾದರೊ ಮೊದಲು ಖಾಲಿ ಮಾಡಲ್ಪಟ್ಟ ವ್ಯಾನು ಗ್ಲಾಸುಗಳನ್ನು ನೆಕ್ಕುವಲ್ಲಿಂದ ಇಲ್ಲವೆ ತುಸು ಹೀರುವಿಕೆಯಿಂದ ಪ್ರಾರಂಭಿಸುತ್ತೇವೆ

ಆದರೆ ಈ ಮಿಂಚುವ ದ್ರಾವಕವು ನಮ್ಮನ್ನು ಕೇವಲ ತುಸು ಹೀರುವಿಕೆಯಲ್ಲೇ ನಿಲ್ಲಲು ಬಿಡುವಂತಹ ಶೀರ ನಿರ್ಬಲ ದ್ರಾವಕವಲ್ಲ. ಕೇವಲ 'ಸಂಗಾತಿ ಸುಖ'ಕ್ಕೆಂ ಪ್ರಾರಂಭಿಸಿದ ಶ್ರೀಮಂತ ಕುಡುಕರು ಮೆಲ್ಲನೆಯಾದರೂ ಖಂಡಿತವಾಗಿ ನಾನಾ ಛಟ್ಟಸಿಗಳೂ, ಧನ ದುರ್ವ್ಯಯಿಗಳೂ, ಕುಟುಂಬ ವಿನಾಶಕರೂ, ಪಿತ್ರಾರ್ಜಿತ ಆಸ್ತಿ ನಾಶಕರೂ, ಕೋಮುವಾರು ಮತ್ತು ಗೃಹ ಶಾಂತಿ ಭಂಗ ಗೈಯ್ಯುವವರೂ, ಪ್ರೇಮಿ ಹೃದಯಗಳ ಸಂತೃಪ್ತ ಸಂಸಾರದ, ಮೆಚ್ಚಿನ ಮನೆಗಳ ಧೂರ್ತ ಭಂಜಕರೂ, ಆಗಿ ಪರಿವರ್ತನೆ ಹೊಂದುತ್ತಾರೆ. ಮುಂದೆ ತಾನು ದೊಡ್ಡ ಬಾಟ್ಲಿಗಳಿಂದ ಪರಿಗ್ರಹಿಸುವಂತಹ

ನಾಗುವನೆಂದು ಮೊದಲೆ ತಿಳಿದಿದ್ದರೆ ಅಂದಿನ ಈ ಅಮಲು ಭ್ರಾಂತನೆಂದಿಗೂ ತನ್ನ ಮೊದಲು ವ್ಯಾನು ತಟಿಗೆ ತುಟ್ಟಿ ಮುಟ್ಟಿಸುತ್ತಿರಲಿಲ್ಲ. ಮೊದಲವನಿಗೆ ತನ್ನ ಮನಶಕ್ತಿಯಲ್ಲಿ ತುಂಬಾ ವಿಶ್ವಾಸವಿತ್ತು. ಆದರೆ ಕ್ರಮೇಣ ಅವನು ಅಧೋಗತಿಗಿಳಿದನು ನಮ್ಮೆಲ್ಲರಂತೆ ಮೊದಲು ಅವನು ಒಂದು ಹಬ್ಬ ವಿಹಾರ ಕೂಟವಲ್ಲಿ ಇಲ್ಲವೆ ಹಬ್ಬ ಸಮಾರಂಭ ಕೂಟದಲ್ಲಿ ಶೇಂದಿಯ ಇಲ್ಲವೆ ಶರಾಬಿನ ರುಚಿ ನೋಡುತ್ತ ಆರಂಭಿಸಿದ ಆದರೆ ಹಾ ವಿಧಿಯೆ! ಇಂದವನು ಸುರಾ ರಕ್ಕಸನ ಉಕ್ಕಿನ ಹಿಡಿತದಲ್ಲಿ ಸಿಕ್ಕಿರುವನು ಹದ ಪ್ರಮಾಣದಲ್ಲಿ ಮಧ್ಯ ಸೇವನೆ ಮಾಡಬಹುದೆಂಬ ಕ್ರೈಸ್ತ ಮತ ಸೂತ್ರದ ಸ್ವತಂತ್ರತೆಯ ಅನುಕೂಲತೆ ತೆಗೆದುಕೊಂಡು ಅವನಿಂದು ತಡೆಯಿಲ್ಲದ ಈ ಹೇಯ ಪಾನ ಸೇವನೆಯಲ್ಲಿ ಮುಳುಗಿರುತ್ತಾನೆ

'ಅಮಲು ಪದಾರ್ಥ ಸೇವನೆಯ ನಿವಾರಣೆ', 'ಉತ್ತಮ ಆದರ್ಶ', 'ಸ್ವಯಂತ್ಯಾಗ' 'ಸುಧಾರಣೆಗೆಯ್ಯುವಿಕೆ'ಗಳ ಸ್ವಯಂ ಸ್ವೀಕಾರದ ಸಂಪೂರ್ಣ ತ್ಯಾಜ್ಯದ ಒದಲಿಗೆ ಅರ್ಚಕರೂ ಸಾಮಾನ್ಯ ಜನತೆಯೂ ಮಧ್ಯ ಕುಡಿತದ ಈ 'ಸ್ವತಂತ್ರತೆಯ ವಿಭಾಗ'ಕ್ಕೆ ಹೆಚ್ಚಿನ ಮನ್ನಣೆ ಕೊಟ್ಟದ್ದು ಅತ್ಯಂತ ಕರುಣಾ ಜನಕವಾದ ಸಂಗತಿಯಾಗಿದೆ ಯಾವಾಗಲೂ ತಡೆಯುವಿಕೆಯು ನಿವಾರಣಗಿಂತಲೂ, ನಡೆಯು ನುಡಿಗಿಂತಲೂ ಶ್ರೇಷ್ಠವಾದುವು ಆದುದರಿಂದ ಇಂದು ಕೆಥೋಲಿಕ್ ಅರ್ಚಕರೂ, ಸಾಮಾನ್ಯ ಜನತೆಯೂ ಮಧ್ಯಪಾನ ನಿರೋಧವನ್ನು ಮುಕ್ತ ಹಸ್ತಗಳಿಂದ ಆಹ್ವಾನಿಸಬೇಕಾದುದು ಕರ್ತವ್ಯವಾಗಿದೆ ಕೆಥೋಲಿಕರ ಬಡವರ ಮತ್ತು ಸಿರಿ, ಶೈಲಿ ಪ್ರಧಾನವಾದ ಬಲ್ಲಿದ ವರ್ಗದ ಜನತೆಯಲ್ಲಿ ಪಾಪ ಹೇತುವಾದೊಂದು ಆಕರ್ಷಣೆಯನ್ನು ತಪ್ಪಿಸುವ ಉದ್ದೇಶದಿಂದೊಡಗೂಡಿದ ಈ ಚಳವಳಾಗ್ನಿಯ ಮೇಲೆ ತಣ್ಣೀರೆರೆಯಲು ನಾವು ಪ್ರಯತ್ನಿಸಬಾರದು

ಆಹಾರ ಸಮಸ್ಯೆಯನ್ನು ನಿವಾರಿಸುವ ನಮ್ಮ ಆಸಕ್ತಿಯಲ್ಲಿ (ಮಧ್ಯಪಾನ ನಿರೋಧವನ್ನು ಮುಂದಕ್ಕೆ ಹಾಕಲು ಸ್ವಾರ್ಥ ಹಿತ ವರ್ಗದವರ ಕುಂಟುನೆವವಿದು) ಅನ್ನ ಬಟ್ಟೆಗಾಗಿ ವ್ಯಯಿಸಬಹುದಾದ ಈ ಹಣವು ಮಧ್ಯ ಸೇವನೆಯಲ್ಲಿ ದುಂದು ಮಾಡಲ್ಪಡುತ್ತದೆಂಬ ಸಂಗತಿಯನ್ನು ನಾವು ಮರೆಯಬಾರದು ಈ ಹಣವನ್ನುಳಿಸಿ ಅಕ್ಕಿ ಇಲ್ಲದಿದ್ದರೂ ಹಾಲು, ಮೊಟ್ಟೆ, ಹಣ್ಣು ಮೀನು, ಮಾಂಸ ತರಕಾರಿಗಳನ್ನು ಕೊಳ್ಳಲಾದರೂ ಉಪಯೋಗಿಸೋಣ.

ಹಸಿವೆಯಿಂದ ಬೆಂದು ಬೇಗುದಿಗೊಂಡ ಹೊಟ್ಟೆಯೊಳಗೆ ಒಣಗಿದ ಗಂಟಲಿಂದ ಬಿಡಲ್ಪಡುವ ಈ ಅಗ್ನಿ ಸಾರವನ್ನು ತಯಾರಿಸುವ ಬ್ರಿಟಿಷರಾಳ್ವಿಕೆ ಕಾಲದ ಶರಾಬು ಕಾರ್ಖಾನೆಗಳನ್ನು ಒಂದು ಕೊಂಗ್ರೆಸ್

ಸರಕಾರವು ಇನ್ನೂ ಅಸ್ತಿತ್ವದಲ್ಲಿರಲು ಬಿಡುವುದೆಂದಾದರೆ ಇಂದಿನ ಆಹಾರ ಕೊರತೆಗಾಗಿ ಕೂಗೆಬ್ಬಿಸಿ ಫಲವೇನು? '8 ಔನ್ಸಿನ ಆಹಾರ ಕೊರ್ರತೆಯನ್ನು ಭರ್ತಿ ಮಾಡುತ್ತದೆಂದು, ಹೇಳಲ್ಪಡುವ ಈ ಬಡ ಮಜೂರನ ಪರವಾಗಿ ಎಬ್ಬಿಸಲ್ಪಟ್ಟ ಕುಹಕ ಕಾರಣಕ್ಕೆ 'ಅಮಲು ಪಾನೀಯಗಳಲ್ಲಿ ಆಹಾರ ಮೌಲ್ಯವಿಲ್ಲ'ವೆಂಬ ತಜ್ಞರ ಆಧಾರಗಳೆಷ್ಟನ್ನೊ ಕೊಡಬಹುದು. ತನ್ನ ಶರೀರಾಂಗಗಳನ್ನು ಮೃತಾವಸ್ಥೆಯ ನಿಷ್ಕ್ರಿಯೆಗೊಳಪಡಿಸಿ ಕಾಯ ಕಷ್ಟದ ತನ್ನ ಶ್ರಮವನ್ನು ಹೊಡೆದೋಡಿಸಬಹುದೆಂಬುದು ಅನಕ್ಷರ ಮಜೂರನ ಅಜ್ಞಾನದ ತಪ್ಪು ಭಾವನೆಯಾಗಿದೆ [illegible] ಸಿಲವಾದ ಕೆಲ್ಸರ [illegible] ನಂತೆ ಮಾಧಕ ಪದಾರ್ಥ ಸೇವನಾನಂತರದ ಪರಿಣಾಮಗಳೂ ಅತೀ ಕೆಟ್ಟದಾಗಿವೆ [illegible] ಶರಾಬಿಗಿಂತ ಕಾಫಿ, ಟೀಗಳು ಉತ್ತಮ, ಈ [illegible] ಒಂದು ಕುಡಿದರೆ ಸಾಲದಾಗುತ್ತದೆ ಮೇಲಿಂದ ಮೇಲೆ ಅವರ ಪುನರಾವರ್ತನೆಗೆ [illegible] ಗುತದೆ ಈ [illegible] ಉರಿಯುವ ತನಕ, [illegible] ರಕ್ತವು ಧಾವಿಸುವ ತನಕ, ಅವನ [illegible] ಉಬ್ಬಿ ಉದ್ರೇಕಗೊಳ್ಳುವ ತನಕ ತಲೆ ತಿರುಗಿ, ತೂಗಾಡಿ ತೇಲಿಡಿಗೆ ಬೀಳುವ ತನಕ [illegible] ಕಚ್ಚಿ [illegible] ತನಕ, ಕಾಲುಗಳು [illegible] ತನಕ ಜ್ವಾಲಾ [illegible] ಕರಗು ಲೋಹದಂತೆ [illegible] ಬುದ್ಧಿಯಿಂದ ಬೈಗಳೇ [illegible] ತನಕ ಸಂಕ್ಷೇಪವಾಗಿ ಹೇಳುವುದಾದರೆ ಮಾನವ ವ್ಯಕ್ತಿಯು ನಿಕೃಷ್ಟ ವನ್ಯಪಶುವಾಗಿ ಪರಿವರ್ತನ ಹೊಂದುವ ತನಕ ಮಾಧಕ ದ್ರವ್ಯವು ತನ್ನ ಕೆಲಸವನ್ನು ಸಾಗಿಸುತ್ತದೆ

ಕಾರಣ ಪಶುಗಳು ಕೂಡಾ ಈ ನಂಜು ದ್ರಾವಕವನ್ನು ಕುಡಿಯಲು ತಿರಸ್ಕರಿಸುತ್ತವೆ ಆದರೆ ಹಾಯ್! ಪರಮಾತ್ಮ ಸೃಷ್ಟಿಯ ಶ್ರೇಷ್ಠ ಜೀವಿಗಳೆನಿಸುವ ನಾವು ಅದನ್ನು ಕುಡಿಯುವುದು ಮಾತ್ರವಲ್ಲ ಮಾನವ ಶಿರಗಳನ್ನು ಭ್ರಮಣಗೊಳಿಸಿ ಇಂತಹ ಆಕರ್ಷಕ ವಸ್ತುಗಳನ್ನು ನಮ್ಮ ಅನಕ್ಷ, ನಿರ್ಬಲ ಬಂಧು ಭಗಿನಿಯರಿಗೆ ಅರ್ಪಿಸಿ ತನ್ಮೂಲಕ ಹಣ ಸಂಚಯಿಸಲೂ ಅದನ್ನು ತಯಾರಿಸುತ್ತೇವೆ ಆದುದರಿಂದ ನಾವೀ ಕ ಖ್ಯಾತ ಪಾನೀಯಗಳ ಕಮ ಇಲ್ಲವೆ ಅಕ್ರಮ ತಯಾರಿಕೆಗೊಂದು ಪೂರ್ಣ ವಿರಾಮ ಕೊಡೋಣ ಮಾತ್ರವಲ್ಲ ಈ ರಾಕ್ಷಸೀ ಪಾನೀಯವನ್ನು ಇತರರೂ ತಯಾರಿಸದಂತೆಯೂ ಕುಡಿಯದಂತೆಯೂ ನಾವು ನೋಡಿಕೊಳ್ಳೋಣ. ನಮ್ಮ ಬಡವರೂ ನಿರಕ್ಷರಸ್ಥರೂ ಆದ ಮಜೂರರ ಮತ್ತು ಕೃಷಿಕರ ಅಲ್ಪ ಸಂಪಾದನೆಯನ್ನು ಅಪಹರಿಸಿ ಇತರರು ತಮ್ಮ ಚೀಲಗಳನ್ನು ಉಬ್ಬಿಸಿ

ಕೊಳ್ಳದಂತೆಯೂ ನಾವು ನೋಡಿಕೊಳ್ಳೋಣ. ಎಲ್ಲದಕ್ಕೂ ಮೊದಲು ನಾವು ಜನತಾ ಸರಕಾರದ ಹಾದಿಯಲ್ಲಿ ತಡೆಗಳನ್ನೊಡ್ಡದಿರೋಣ. ಸಾಮಾನ್ಯ ಜನತೆಯ ಜೀವನ ಮಟ್ಟವನ್ನೇರಿಸಿ ಅವನ ಜೀವನದ ರೀತಿ ನೀತಿಗಳನ್ನು ಸುಧಾರಿಸುವ ಈ ಘನ ಗಂಭೀರ ಯತ್ನಕ್ಕೆ ಅಡ್ಡಿ ಮಾಡದಿರೋಣ.

ಸರಕಾರವು ಅಪಾರ ಆದಾಯ ತ್ಯಾಗದಿಂದ ಈ ಪಾನ ನಿರೋಧವನ್ನು ಜಾರಿಗೆ ತಂದಿರುತ್ತದೆಂಬ ಸಂಗತಿಯನ್ನು ನಮ್ಮ ಗುರುಗಳು-ಮುಖ್ಯವಾಗಿ ಹಳ್ಳಿ ಕ್ಷೇತ್ರದವರು ತಮ್ಮ ಶಿಷ್ಯ ಸ್ತೋಮಗಳಿಗೂ ಹಿಂದೂ ಸ್ನೇಹಿತರಿಗೂ ಹೇಳುತ್ತ ರಾತ್ರೆ ಹಗಲೆಂಬಂತೆ ಪ್ರಚಾರ ಪ್ರಸಂಗಗಳನ್ನು ಕೈಕೊಳ್ಳಬೇಕೆಂದೂ ನಾನೆಲ್ಲಾ ಗುರುಗಳಲ್ಲಿಯೂ ಬೇಡಿಕೊಳ್ಳುತ್ತೇನೆ ಇದು ಜನೋದ್ಧಾರದ ಕಾರ್ಯ ಔಷಧಿಗಾದರೂ ಒಂದೇ ಒಂದು ಬಿಂಧುವನ್ನು ಕೂಡಾ ತಯಾರಿಸದಂತೆ ಹಳ್ಳಿ ಜನತೆಗೆ ಬೋಧಿಸಿ ಅವರ ಆತ್ಮ ವಿವೇಕವನ್ನು ಕೆರಳಿಸಲು ಪ್ರಯತ್ನಗಳಾಗಲಿ. ಶೇಂದಿ ಶರಾಬುಗಳ ಔಷಧಿ ಗುಣ ಪ್ರಶಂಸೆಯು ಕುಡುಕರದೊಂದು ಸ್ವಂತ ಕಲ್ಪನೆ ಈ ವಿಕಲ್ಪನೆ ಪ್ರಚಾರದಲ್ಲಿ ಸ್ವಾರ್ಥಿ ಹಿತಗಳವರ ಮತ್ತು ಅವರ [illegible] ಸ್ನೇಹಿತರೂ ಆಗಿರುವ ಕೆಲವು ಡಾಕ್ಟರುಗಳ ಕೈವಾಡವೂ ಇದೆ

ಹೀಗೆ ಕೆಥೋಲಿಕರಾದ ನಾವು ಮಧ್ಯಪಾನ ನಿರೋಧವನ್ನು "ಕೇವಲ ಒಂದು ಸಂದರ್ಭೋಚಿತವೂ ಆರ್ಥಿಕ ಲಾಭದ್ದೂ ಅಲ್ಲದ [illegible] ಯೋಗ"ವೆಂದು ಕರೆಯುವ ಬದಲಿಗೆ ಅದನ್ನು ಯಶಸ್ವಿಯನ್ನಾಗಿ ಮಾಡೋಣ ಮಧ್ಯ ಪಾನದ ದುಷ್ಪರಿಣಾಮ [illegible] ಬಾಣದ ತಿರುವ ಪಾನ ನಿರೋಧಕ್ಕೆ ನಾವು ಬಹುಕಾಲದಿಂದ ನಿರೀಕ್ಷಿಸುತ್ತಿದ್ದೆವೆಂಬ ಸಂಗತಿಯನ್ನು ತೋರಿಸಿ ಕೊಡೋಣ [illegible] ಸರಕಾರದ ಈ ಘೋರಣೆಗೆ [illegible] ನಾವು ಒಂದು ಅಭ್ಯಂತರ, [illegible] ಇಲ್ಲವೆ ತೆ [illegible], ಇಲ್ಲವೆ ಮುಳ್ಳುಗಳಿಲ್ಲವೆಂದು [illegible] ತೋರಿಸಿ [illegible] ದೊಡ್ಡ ಮತ ವರ್ಗದವರೆಂದೆನಿಸಿ [illegible] ಲಸನ್ಯಾರೂ ಅವರಲ್ಲಿ ಅಮಲು ಪದಾರ್ಥ ಸೇವನೆಗೆ ನಿಷೇಧವಿದೆ ಅವರೊಡನೆ ನಾವಿಲ್ಲಿ ಆ ಚಿರಕಾಲದ ಫಲವನ್ನು ಗಳಿಸಲು ಉಳಿಯೋಣ ಅಳಿಯೋಣ ಜೈ ಹಿಂದ್

ಬಿಂಧುವೆಂದರೆಷ್ಟು

ವೈದ್ಯರು ಕೆಲವೊಂದು ಔಷಧಿಗಳನ್ನು "ಇಂತಿಷ್ಟು ಬಿಂಧು ಬಿಸಿ ನೀರಿನಲ್ಲಿ ಹಾಕಿ ಕೊಡಿ" ಎಂದು ಹೇಳುವುದಿದೆ ಈ ಬೊಟ್ಟು, ಇಲ್ಲವೆ ಬಿಂಧುವಿನ ಪ್ರಮಾಣವೆಷ್ಟು? ಇದನ್ನು ನಿರ್ಧರಿಸಲು ವಿಶ್ವ ಆರೋಗ್ಯ ಸಂಪದವರು ಮುಂಬರುವ ತಮ್ಮ ಸಭೆಯಲ್ಲಿ ಚರ್ಚಿಸಲಿರುವರು ಇಂಗ್ಲಿಷ್ ವೈದ್ಯರ ಬಿಂಧು ಪ್ರೆಂಚ್ ವೈದ್ಯರಿಗಿಂತ ವ್ಯತ್ಯಾಸವುಳ್ಳದ್ದು, ಫ್ರೆಂಚರದು ಅಮೇರಿಕನ್ ವೈದ್ಯರಿಗಿಂತ ಭಿನ್ನ ಪ್ರಮಾಣದ್ದು ಹೀಗಿರುವಾಗ ಈ ಬಿಂಧುವಿಗೆ ಒಂದು ಅಂತರ್ರಾಷ್ಟ್ರೀಯ ಪ್ರಮಾಣವನ್ನು ನಿಷ್ಕರ್ಷಿಸುವುದು ಅವಶ್ಯವಿದೆಯೆಂದೂ, ವಿವಿಧ ಸಾಂಧ್ರತೆ (Density) ಯುಳ್ಳ ದ್ರಾವಕಗಳಿಗೆ ಒಂದೇ ಪ್ರಮಾಣದ ಬಿಂಧುಗಳನ್ನುಂಟುಮಾಡುವ ಉಪಕರಣವನ್ನು ಕಂಡುಹಿಡಿಯಲೂ ಪ್ರಯತ್ನಗಳಾಗುತ್ತಿವೆ.

ಜಿಲ್ಲಾ ಪರಿಚಯ

ಹರಿಜನ ಪ್ರವೇಶ

ಕಾರ್ಕಳ: ನಿನ್ನೆ ಇಲ್ಲಿಯ ಹತ್ತುಸಮಸ್ತರ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಹರಿಜನ ಪ್ರವೇಶವಾಯಿತೆಂದು ತಿಳಿದುಬರುತ್ತದೆ. ಪಟ್ಟಣದ ಆಢ್ಯ ಸಮಾಜಸುಧಾರಕರು ಕೆಲ ಹರಿಜನ ವಿದ್ಯಾರ್ಥಿಗಳೊಡಗೂಡಿ ದೇವಳ ಪ್ರವೇಶಮಾಡಿ ಪೂಜೆ ಪುರಸ್ಕಾರ ಸಂದರ್ಶನವನ್ನು ಮಾಡಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿದರು

ಮದ್ಯಪಾನ ನಿರೋಧ

ಮಂತ್ರಿಗಳ ಸಂಚಾರ: ಒಕ್ಟೋಬರ್ 1ನೇ ತಾರೀಕಿನಿಂದ ಈ ಜಿಲ್ಲೆಯಲ್ಲಿ ಮದ್ಯಪಾನ ನಿರೋಧ ಶಾಸನವು ಜಾರಿಗೆ ಬರುವುದು ಈ ಸಂಬಂಧ ಮಾನ್ಯ ಮಂತ್ರಿಗಳಾದ ಶ್ರಿ. ಎ ಬಿ ಶೆಟ್ಟಿ ಮತ್ತು ಶ್ರೀ ಸೀತಾರಾಮ ರೆಡ್ಡಿ ಇವರು ಜಿಲ್ಲೆಯಲ್ಲಿ ಸಂಚರಿಸುವರೆಂದು ತಿಳಿದುಬರುತ್ತದೆ. ಶೇಂದಿ ಶರಾಬು ಅಂಗಡಿಗಳಿರುವಲ್ಲಿ ಇತರ ಪಾನೀಯಗಳನ್ನೂ, ತಿಂಡಿಯನ್ನೂ ಮಾರಲು ಇಡಲಾಗುವುದೆಂಧೂ, ಹಳ್ಳಿ ಮತ್ತು ಮಜೂರ ವಸತಿ ಪ್ರದೇಶಗಳಲ್ಲಿ ವಿವಿಧ ಮನರಂಜನೆಯ ಕಾರ್ಯಕ್ರಮಗಳನ್ನು ಜರಗಿಸಲಾಗುವುದೆಂದೂ ತಿಳಿದುಬರುತ್ತದೆ

ಭಾಷಣ: ನಿನ್ನೆ ತಾ 26ರಂದು ಸಾಯಂಕಾಲ ಪೆಂಟ್ಲೆಂಡ್ ಪೇಟೆಯ ಕೆನರಾ ಹ್ಯಾಸ್ಕೂಲಿನಲ್ಲಿ ಇಲ್ಲಿಯ ರಾಮಕೃಷ್ಣಾಶ್ರಮದ ಅಧ್ಯಕ್ಷ ಸ್ವಾಮಿ ವಿಮಲಾನಂದಜಿಯವರು 'ಸನಾತನ ಧರ್ಮದ ಕುರಿತು ವಿಚಾರಣೀಯವೂ, ಬೋಧಪ್ರದವೂ ಮತ್ತು ಹೃದಂಗಮವೂ ಆದ ಭಾಷಣವನ್ನು ಕೊಟ್ಟರು

ಸಂತಾಪ ಸಭೆ: ಸ್ಥಳೀಯ ಕೆನರಾ ಹ್ಯಾಸ್ಕೂಲಿನ ಮಾಜಿ ಡ್ರಿಲ್ ಮತ್ತು ಡ್ರಾಯಿಂಗ್ ಅಧ್ಯಾಪಕರಾಗಿದ್ದು ಮೂವತ್ತೈದ ವರ್ಷಕ್ಕೂ ಮಿಕ್ಕಿ ಮೇಲ್ಕಂಡ ಸಂಸ್ಥೆಯ ಸೇವೆಮಾಡಿದ ಜನಾಬ್ ಎಂ ಸಿ ರುದ್ದೀನ್ ಸಾಹೇಬರು ಪೈಗಂಬರವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ ಸಂತಾಪ ಸೂಚಕಾರ್ಥವಾಗಿ ಶಾಲೆಗೆ ಅರ್ಧ ದಿನದ ರಜೆಯು ಕೊಡಲ್ಪಟ್ಟಿದ್ದು ಶಾಲೆಯ ಉಪಾಧ್ಯಾಯ ಸಂಘದವರು ತಮ್ಮೊಂದು ವಿಶೇಷ ಸಭೆಯಲ್ಲಿ ಮೃತರ ಗುಣಕಥನ ಮಾಡಿ ಅವರ ಆತ್ಮಕ್ಕೂ ಕುಟುಂಬಕ್ಕೂ ಶಾಂತಿ ಸಮಾಧಾನಗಳನ್ನು ಕೋರುವ ಠರಾವುಗಳನ್ನು ಮಾಡಿದರು

ಕಾಮರ್ಸ್ ಚೇಂಬರಿನಲ್ಲಿ ಐ. ಎ. ಟಿ ಸಿ.ಯವರು ಇಂದು ಸಂಜೆ ಇಲ್ಲಿನ ಕಾಮರ್ಸ್ ಚೇಂಬರಿನವರು ದ ಕ ಜಿಲ್ಲೆಗೆ ನೇಮಕವಾಗಿ ಬಂದಿರುವ ಇನ್ಸ್‌ಪೆಕ್ಟಿಂಗ್ ಅಸಿಸ್ಟಾಂಟ್ ಟೆಕ್ಸ್‌ಟೈಲ್ ಕಮಿಶನರಾದ ಡಾ। ಜಿ ನಾರಾಯಣ ಮೂರ್ತಿಯವರನ್ನು ಸತ್ಕರಿಸಿದರು ಸಭಾರಂಭದಲ್ಲಿ ಚೇಂಬರಿನ ಅಧ್ಯಕ್ಷರಾದ ವಿ ಎಸ್ ಕುಡ್ವರವರು ಐ ಎ ಟಿ. ಸಿ ಯವರನ್ನು ಸ್ವಾಗತಿಸಿ ಬಟ್ಟೆ ವ್ಯಾಪಾರದಲ್ಲಿ ಅವರು ಚೇಂಬರಿನೊಡನೆ ಸಹಕರಿಸಬೇಕೆಂದೂ, ಚೇಂಬರು ತನ್ನ ಸೇವೆ ನೀಡಲು ಸಿದ್ಧವಿದೆಯೆಂದೂ ತಿಳಿಸಿದರು. ಡಾ। ಮೂರ್ತಿಯವರು ತನಗೆ ಈ ಮೊದಲೇ ಒಪ್ಪಿಸಿದ ಪ್ರಶ್ನಾವಳಿಯನ್ನು ಒಂದೊಂದಾಗಿ ಉತ್ತರಿಸುತ್ತಾ ಬಟ್ಟೆಯ ವಿತರಣೆಯಲ್ಲಿ ಚೇಂಬರಿನ ಸೂಚನೆಯನ್ನು ತಾನು ಅನುಮೋದಿಸುವುದಾಗಿ ತಿಳಿಸಿದರು ಈಗ ಎರಡು ತಿಂಗಳಿಂದ ಮಾರಾಟವಾಗದೆ ಉಳಿದಿರುವ 40 ಇಂಚು ಅಗಲದ ಬಟ್ಟೆಗಳನ್ನು ರೇಶನ್ ಪದ್ಧತಿಯ ಹೊರತಾಗಿ ಮಾರಾಟಮಾಡುವ ವ್ಯವಸ್ಥೆಯಾಗಬೇಕೆಂಬ ಚೇಂಬರಿನ ಸೂಚನೆಯನ್ನು ತಾನು ಪರಾಂಬರಿಸುವುದಾಗಿ ಹೇಳಿದರು. ಅದರಂತೆ "ಪೆರ್ಸ್" ಜಾತಿಯ ಬಟ್ಟೆಗಳ ಮಾರಾಟದ ಕುರಿತೂ ತಾನು ಆಲೋಚಿಸುವುದಾಗಿ ಹೇಳಿದರು. ಈಗ ಮಾಡುತ್ತಿರುವ ಕೆಲ ತಪ್ಪುಗಳನ್ನು ತೋರಿಸಿಕೊಟ್ಟರು, ಅವರು ಜಿಲ್ಲೆಯಲ್ಲಿ 'ಲುಂ

ಕಿಂಗ್' ಯೋಜನೆಯು ಸರಿಯಾಗಿ ಆಗಿಲ್ಲವೆಂದೂ 700 ಗ್ರಾಮಗಳಲ್ಲಿ 200 ಗ್ರಾಮಗಳ ಕೆಲಸ ತಾನೀಗ ಪೂರೈಸಿರುವುದಾಗಿಯೂ ಉಳಿದುದು ಕೂಡಲೇ ಆಗುವುದಾಗಿಯೂ ತಿಳಿಸಿದರು

ಬಟ್ಟೆ ರೇಶನ್ ಕಾರ್ಡುಗಳ ಕುರಿತು ಮಾಹಿತಿ: 1947ನೇ ಮದ್ರಾಸು ಕ್ಲೋತ್ ಡೀಲರ್ಸ್ ಕಂಟ್ರೋಲ್ ಆರ್ಡರು ಅನುಗುಣವಾಗಿ ಮಿಲ್ ಬಟ್ಟೆ ವ್ಯಾಪಾರಸ್ಥರು ಮಿಲ್ ಬಟ್ಟೆಗಳನ್ನು ಬಟ್ಟೆ ರೇಶನ್ ಕಾರ್ಡುಗಳ ಮೇಲೆ ಸದರಿ ಕಾರ್ಡು ಹೋಲ್ಡರರಿಗೆ ಕೊಡುವಾಗ ಅವರಿಗೆ ಕೊಡುವ ಕೇಶ್ ಯಾ ಕ್ರೆಡಿಟ್ ಮೆಮೋವಿನಲ್ಲಿ ಸದರಿ ಬಟ್ಟೆ ರೇಶನ್ ಕಾರ್ಡು ನಂಬ್ರ ನಮೂದಿಸುವದಲ್ಲದೆ ಕಾರ್ಡು ಹೋಲ್ಡರನ ಸರಿಯಾದ ವಿಳಾಸ, ಪ್ರಾಯಸ್ಥರ ಮತ್ತು ಮಕ್ಕಳ ಸಂಖ್ಯೆ ವಿವರಗಳನ್ನು ಅಗತ್ಯವಾಗಿ ನಮೂದಿಸಬೇಕಾಗಿ ಜಿಲ್ಲಾ ಕಲೆಕ್ಟರವರಿಗಳವರ ಪ್ರಕಟಣೆ ಹೊರಡಿರುವ ಸಂಗ್ತಿ ಎಲ್ಲಾ ಬಟ್ಟೆ ವ್ಯಾಪಾರಸ್ಥರ ಮಾಹಿತಿಗಾಗಿ ದಕ್ಷಿಣ ಕನ್ನಡಾ ಜಿಲ್ಲಾ ಜವುಳಿ ವ್ಯಾಪಾರಸ್ಥರ ಸಂಘದ ಗೌರವ ಕಾರ್ಯದರ್ಶಿ ಶ್ರೀ ದೇವಿದಾಸ ಗಿರಿದರಲಾಲ್ ಶೆಟ್ಟರು ತಿಳಿಸುತ್ತಾರೆ ಹೆಚ್ಚಿನ ಮಾಹಿತಿ ಅಗತ್ಯವುಳ್ಳವರು ಹಂಪನಕಟ್ಟೆ ಫೆಲಿಕ್ಸ್ ಪೈ ಬಿಲ್ಡಿಂಗ್ಸಿನಲ್ಲಿರುವ ಸಂಘದ ಆಫೀಸಿನಲ್ಲಿ ತಿಳಕೊಳ್ಳಬಹುದು

ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರಕಟಣೆ: "ಈ ತಿಂಗಳ ಅಂತ್ಯದೊಳಗೆ ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಕೆಲಸ ಮುಗಿಯ ಬೇಕಾಗಿದೆ ಇನ್ನು ಕೆಲವೇ ದಿನಗಳು ಉಳಿದ ದರಿಂದ ಎಲ್ಲಾ ಸರ್ಕಲ್ ಕಾಂಗೆಸ್ ಕಮಿಟಿಗಳವರೂ, ಕಾರ್ಯಕರ್ತರೂ ಇತರ ಕಾಂಗೆಸಿಗರೂ ಆದಷ್ಟು ಹೆಚ್ಚಿಗೆ ಕಾಂಗೆಸ್ ಸದಸ್ಯರನ್ನು ಅತಿ ವ್ಯಾಪಕವಾಗಿ ವಿಶೇಷವಾಗಿ ಹಳ್ಳಿ ಹಳ್ಳಿಗಳಲ್ಲಿ ಸೇರಿಸುವಂತೆ ಅತ್ಯುತ್ಸಾಹದಿಂದ ಪ್ರಯತ್ನಿಸಬೇಕು ಈ ಸಲ ಜಿಲ್ಲೆಯ ಎಲ್ಲಾ ವರ್ಗದ ಆದಷ್ಟು ಜನಸಾಮಾನ್ಯರೂ ಕೃಷಿಕರ ಮತ್ತು ಮಜೂರರೂ ಕಾಂಗ್ರೆಸ್ ಸದಸ್ಯರಾಗಲು ಮಾಡಬೇಕೆಂದು ನಮ್ಮ ಆಗ್ರಹಪೂರ್ವಕವಾದ ಅರಿಕೆಯಿದೆ ... ಜಿಲ್ಲಾ ಕಾಂಗೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯವರು ವಿನಂತಿಸಿಕೊಂಡಿದ್ದಾರೆ

ಬೇಸಾಯಗಾರರಮೇಲೆ ಖಟ್ಲೆಗಳು: 1946ನೆಯ ಇಸವಿಯಲ್ಲಿ ಅಕ್ಕಿಯ ಉತ್ಪತ್ತಿಯ ಬಗ್ಗೆ ಸರಿಯಾದ ಹೇಳಿಕೆಯ ಪತ್ರಗಳನ್ನು ಕೊಡಲಿಲ್ಲ ಎಂದೂ ಮೊದಲಾದ ಅಕ್ಕಿ ಹಿಡಿತದ ನಿಯಮಗಳನ್ನು ಮೀರಿದ ಆರೋಪಣೆಯಿಂದ ಸುಮಾರು 50 ಖಟ್ಲೆಗಳನ್ನು ಕಳೆದ ವಾರ ಹೂಡಲಾಗಿದೆ ಈ ಅಕ್ರಮಗಳು ನಡೆದುವೆಂದು ಹೇಳಲಾದ ಕಾಲದಲ್ಲಿ ಹೀಗೆ ಖಟ್ಲೆ ಹೂಡುವುದಕ್ಕೆ ಕಾನೂನುಗಳಿರಲಿಲ್ಲ ಇತ್ತೀಚೆಗೆ ಎಂದರೆ ಏಪ್ರಿಲ್ 26ಕ್ಕೆ ಆಚರಣೆಗೆ ಬಂದ ಹೊಸ ಕಾನೂನು ಹಿಂದಿನವಕ್ಕೂ ಅನ್ವಯಿಸುವುದೆಂದು ಹೇಳಿ ಅಧಿಕಾರಿಗಳು ಖಟ್ಲೆಗಳನ್ನು ಹೊರಡಿಸಿದ್ದಾರೆ

ವರ್ಗಾವರ್ಗಿ: ಶ್ರೀಯುತ ಆರ್. ಎಲ್. ಶ್ರೇಷ್ಠಾರವರು ಇಲ್ಲಿಯ ಫಿಶ್ಶರೀಸ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು.

ರಿಟಾಯರ್ಡ್ ಪೋಲೀಸು ಇನ್ಸ್‌ಪೆಕ್ಟರ ಮಿ ಎವರ್ ಲೋಬೋ ಬಿ ಎ ರವರು ಇಲ್ಲಿಯ ಹೊನರರಿ ಬೆಂಚ್ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು

ಇಂಡೋನೇಶಿಯದ ಸ್ವಾತಂತ್ರ್ಯ ಸಮರಕ್ಕೆ ಬೆಂಬಲವನ್ನೀಯುವ ಒಂದು ಸಾರ್ವಜನಿಕ ಸಭೆಯು ಮಂಗಳೂರಿನ ಸಮಾಜವಾದಿ ಪಕ್ಷದ ಆಶ್ರಯದಲ್ಲಿ ತಾ 18ರಂದು ಸಂಜೆ ಕೇಂದ ಮೈದಾನಿನಲ್ಲಿ ಜರಗಿತು ಡಾ ಕೆ ನಾಗಪ್ಪ ಆಳ್ವರು ಅಧ್ಯಕ್ಷರಾಗಿದ್ದರು ಶ್ರೀಗಳಾದ ಕೆ ಎಸ್ ಕಾರಂತ, ಎ ರಿ ಸಂಕಪ್ಪ ರೈ ಎಚ್ ಸುರೇಶ, ಎಂ ಮಧುಕರ ರಾವ್ ಮುಂತಾದವರು ಇಂಡೋನೇಶಿಯದ ಸ್ವಾತಂತ್ರ್ಯದ ಹೋರಾಟದ ಕುರಿತು ಮಾತನಾಡಿ ಭಾರತೀಯರು ತಮ್ಮ ಸಹಾಯ ನೀಡಬೇಕೆಂದು ಹೇಳಿದರು ಇಂಡೋನೇಶಿಯ ಸಹಾಯ ನಿಧಿಗೆ ಸುಮಾರು 167 ರೂಪಾಯಿಯಷ್ಟು ವಂತಿಗೆ ವಸೂಲು ಮಾಡಿ ಕಳುಹಿಸಲಾಗಿದೆ

ಮೂಡಬಿದ್ರೆ: ಸ್ಥಳೀಯ ಪೂರ್ಣಿಮಾ ಸ್ಟ್ರಾಬೋರ್ಡ್ ಎಂಡ್ ಪೇಪರ್ ಮಿಲ್ಸ್ ಬಗ್ಗೆ ಬರೋಡಾದಲ್ಲಿ ಕೊಂಡುಕೊಂಡ ರಟ್ಟೆ ಕಾಗದ ತಯಾರಿ ಯಂತ್ರವು ಈಗ ತಾನೇ ಮೂಡಬಿದ್ರೆಗೆ ಬಂದು ತಲಪಿರುವುದೆಂದು ಕೇಳಿಬರುತ್ತದೆ ರಟ್ಟೆ ತಯಾರಿ ಕಾರ್ಖಾನೆಯ ಕೆಲಸ ಭರದಿಂದ ಸಾಗುತ್ತಿದ್ದು ಮುಕ್ಕಾಲುವಾಸಿ ಪೂರ್ಣಗೊಂಡಿರುವುದು ಸದ್ಯದಲ್ಲೇ ಕೆಲಸ ಆರಂಭವಾಗಲಿದೆ

ಮಣಿಪಾಲ. ಇಲ್ಲಿಯ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್ ಎಂಬೀ ವಿದ್ಯಾಸಂಸ್ಥೆಯ ಪದವಿದಾನ ಸಮಾರಂಭವು ತಾ 11—17ರ ವರ ಅಧ್ಯಕ್ಷ ... ಜಿ ನಾಯಕ ಬಿ ಬಾಳಿಗಾ ಬಿ ಎ ಬಿ ಎಲ್ ಅವರ ಅಧ್ಯಕ್ಷತೆಯಲ್ಲಿ ಜರಗಿತು ಈ ಸಂಬಂಧದಲ್ಲಿ ಜರಗಿಸಲ್ಪಟ್ಟ ಭಾಷಣ ಕಾರ್ಯಕ್ರಮಗಳಲ್ಲಿ ಹೀಗೆ ಜರಗಿದವು ತಾ 19ರಂದು ಶ್ರೀ ಕೆ ರಾಮಕೃಷ್ಣ ಶೆಟ್ಟಿ ಬಿ ಎ ಎಲ್ ಟಿ (ಉಡುಪಿ ಗವರ್ನಮೆಂಟ್ ಮಾಲ್ ಟ್ರೈನಿಂಗ್ ತರಬೇತಿ ಶಾಲೆಯ ಅಧ್ಯಾಪಕರು) ಅವರ ವೃತ್ತಿ ಶಿಕ್ಷಣದ ಪ್ರಾಮುಖ್ಯತೆಯ ಕುರಿತು ಭಾಷಣವಿತ್ತರು ತಾ 20ರಂದು ಡಾ ಎಂ ಕೇಶವ ಪೈ ಅವರು ಶಾಲೆಗಳಲ್ಲಿ ಮತೀಯ ಶಿಕ್ಷಣದ ಆವಶ್ಯಕತೆ ಮತ್ತದರ ರೀತಿನೀತಿಗಳನ್ನೂ, ಶಿಕ್ಷಣ ಮೌಲ್ಯವನ್ನೂ ವಿವರಿಸುವ ಭಾಷಣ ಮಾಡಿದರು. ತಾ 21ರಂದ ಶ್ರೀ ವಿ ಎಸ್ ಕುಡ್ವರು ಪದವಿದಾನ ಸಮಾರಂಭ ಭಾಷಣ ಮಾಡುತ ಶಿಕ್ಷಣ ಮಾತೃಭಾಷೆ, ಕೈಗಾರಿಕೆ ಮತ್ತು ರಾಷ್ಟ್ರ ಪುನರಚನೆ ಈ ವಿಷಯಗಳನ್ನೊಳಗೊಂಡ ಮತ್ತವುಗಳ ಪರಸ್ಪರ ಹೊಂದಿಕೆಯನ್ನು ತೋರಿಸುವ ಭಾಷಣ ಮಾಡಿದರು ಮೇಲ್ಕಂಡ ಸಂಸ್ಥೆಯ ವರದಿಯೂ ಲೆಖ್ಖಾಚಾರ ತಪಶೀಲು ಪಟ್ಟಿಯೂ ನಮ್ಮಗೆ ಕಳುಹಿಸಲ್ಪಟ್ಟಿದೆ

ಪತ್ರ ವ್ಯವಹಾರ

ಅಯ್ಯಾ ಸಂಪಾದಕರೇ,

ನಮ್ಮ ಮುನಿಸಿಪಾಲಿಟಿಯವರು ನಮಗೆ ಅಂದರೆ ಹರಿಪದವಿನ ಸುತ್ತಮುತ್ತಲಿರುವ ದೇರೆಬೈಲು ನಿವಾಸಿಗಳಿಗೆ ತಯಾರುಮಾಡಿರುವ ಅನ್ಯಾಯವನ್ನು ಹೇಳಲು ಒಂದಿಷ್ಟು ಸ್ಥಳ ಕೊಡಿರಿ.

ಹರಿಪದವಿನಲ್ಲಿ ಮಲ ಹುಗಿಯುವ ಸ್ಥಳ ಮಾಡುವರಂತೆ ಎದುರಿಗೆ ಇಗರ್ಜಿ ಹಾಗೂ ಶಾಲೆಗಳಿವೆ. ಸುತ್ತಮುತ್ತಲು ಕಡಮೆಯೆಂದರೆ ಐನೂರು ಮನೆಗಳಿರುತ್ತವೆ. ನಮ್ಮ ಬಾವಿಗಳಿಗೆ ಪದವಿನ ಝರಿಯಿಂದಲೇ ನೀರು ಬರುತ್ತಿದೆ ಮುಂದೆ ಈ ನೀರಿನ ಅವಸ್ಥೆಯೇನು? ಸಾಲದ್ದಕ್ಕೆ ಒಂದೆರಡು ಕೆರೆಗಳೂ ಇವೆ. ನಮ್ಮ ಹವೆ ಹಾಗೂ ನೀರು ಕೆಡಿಸಿ ನಮ್ಮ ಆರೋಗ್ಯ ಹಾಳುಮಾಡುವುದೇ ಮುನಿಸಿಪಲ್ ಕೌನ್ಸಿಲಿನ ಕಾರ್ಯವೋ ಎಂದು ಯಾರಾದರೂ ಕೌನ್ಸಿಲಿನ ಉಮೇದ್ವಾರರಾದರೂ ಸ್ಪಷ್ಟಪಡಿಸಬೇಕು

ಹಿಂದೊಮ್ಮೆ ಇದೇ ಬಗೆಯ ಸೂಚನೆ ಬಂದಿತ್ತು ಮಿ। ವೆಲ್ಸ್ ಸಾಹೇಬರು ಜಿಲ್ಲಾ ಕಲೆಕ್ಟರರಾಗಿದ್ದರು ಅವರು ಸ್ವತಃ ಬಂದು ಸ್ಥಳ ತನಿಖೆ ನಡೆಸಿ ಈ ಸ್ಥಳವನ್ನು ಆರಿಸುವುದು ಯುಕ್ತವಲ್ಲವೆಂದು ತೀರ್ಮಾನ ಮಾಡಿ ಸೂಚನೆಯು ಬಿದ್ದು ಹೋಯಿತು. ಈಗ ಪುನಃ ನಮ್ಮ ದುರದೃಷ್ಟದಿಂದ ಈ ಸೂಚನೆ ತಲೆಯೆತ್ತಿದೆ

ಸಾರ್ವಜನಿಕ ಆರೋಗ್ಯ ರಕ್ಷಿಸುವ ಜವಾಬ್ದಾರಿಯುಳ್ಳ ಮುನಿಸಿಪಾಲಿಟಿಯವರೂ ಈ ಸ್ಥಳವನ್ನು ಉಪಯೋಗಿಸಿಕೊಳ್ಳುವ ಯೋಚನೆಯನ್ನು ಬಿಟ್ಟುಕೊಟ್ಟು ಜನವಸತಿ ಇಲ್ಲದ ದೂರದ ಸ್ಥಳವನ್ನು ಹುಡುಕಿ ತೆಗೆಯಬೇಕೆಂದು ನಮ್ಮ ಮನವಿ

ಇತಿ

ದೆ ರಬೈಲು ನಿವಾಸಿಗಳು

ಕುಂದಾಪುರ

ಇಲ್ಲಿಯ ಕಾಂಗೆಸ್ ಕಮಿಟಿಯನ್ನು ಶ್ರೀ ಪೊತುವಾಳರು ರಚಿಸಿರುವರು ಅದರ ವಿವರ ಹೀಗಿದೆ

ಸದಸ್ಯರು

1 ಶ್ರೀಗಳಾದ ಪಿ ವಿ ಎನ್ ಹೆಬ್ಬಾರ (ಅಧ್ಯಕ್ಷ) - ಎಚ್. ಭಾಸ್ಕರ ಕಂಪ್ಲಿ, ಗಂಗೊಳ್ಳಿ (ಉಪಾಧ್ಯಕ್ಷ), 3 ಕಟೀಲು ಬಾಬುರಾಯ ಪೈ (ಕೋಶಾಧಿಕಾರಿ), 4 ಮುಕ್ತಯ್ಯ ಹೆಗ್ಡೆ (ಕಾರ್ಯದರ್ಶಿ), 5 ಜನಾರ್ಧನ ಶೆಣೈ (ಕಾರ್ಯದರ್ಶಿ), 6 ಮಹಾಬಲ ಶೆಟ್ಟಿ, 7 ಸೂರಪ್ಪ ಶೆಟ್ಟಿ 8 ಗಂಗೊಳ್ಳಿ ವೇಣುಗೋಪಾಲ ನಾಯಕ, 9 ಎಸ್ ಎಸ್. ಪರಮೇಶ್ವರಯ್ಯ 10. ಕೆ ವಿ. ಐತಾಳ, 11 ಗಾಂಧಿ ರಾಮಣ್ಣ ಸೆಟ್ಟಿ, 12 ಸಂಜೀವ ಶೆಟ್ಟಿ, 18. ಬಿ ಮುಹಮ್ಮದ ಸಾಹೇಬ

ಪುತ್ತೂರು

ನೇರಳೆ ಕಟ್ಟೆಯಲ್ಲಿ ಆಹಾರ ಭಾವ: ಸಣ್ಣ ಪೇಟೆಯಾದ ನೇರಳೆಕಟ್ಟೆಯಲ್ಲಿ ಜುಲಾಯಿ, ಆಗೋಸ್ತು ತಿಂಗಳುಗಳಲ್ಲಿ ಅಕ್ಕಿಯಿಲ್ಲದ ವಾರ್ತೆ ಹೊರಬಿದ್ದಿದೆ ಈ ಎರಡು ತಿಂಗಳುಗಳಲ್ಲಿ ಸುಮಾರು 15 ದಿನಗಳ ವರೆಗೆ ಅಕ್ಕಿ ಸಿಗದೆ ಜನರು ಕಷ್ಟಪಟ್ಟರು. ಕೃಷ್ಣಾಷ್ಟಮಿಯನ್ನೂ ಜನರು ಉಪವಾಸದಿಂದಲೇ ಕಳೆದರು. ಈಗಾಗಲೇ ಈ ತಾಲೂಕಿನಲ್ಲಿ ಗೆಣಸು ಮುಂತಾದ ಆಹಾರ ಸಾಮಗ್ರಿಗಳ ಬೆಲೆ ವಿಪರೀತ ಏರಿರುವುದು. ಗೆಣಸು ಮುಡಿಕ್ಕೆ 4 ರೂ.ಯಂತೆ ಮಾರಲ್ಪಡುತ್ತದೆ.



ಸ್ವದೇಶಾಭಿಮಾನಿ

ಅಕ್ಕಿಯ ಬೆಲೆ ಏರಿಸಬಾರದು

ಈಗ ನಮ್ಮ ಮುಂದಿರುವ ಪ್ರಶ್ನೆಗಳಲ್ಲಿ ಆಹಾರದ ಪ್ರಶ್ನೆಯು ಅತ್ಯಂತ ಮಹತ್ವದ ಪ್ರಶ್ನೆ. ಇದನ್ನು ಸರಿಯಾದ ರೀತಿಯಲ್ಲಿ ಬಿಡಿಸದಿದ್ದರೆ ಬರಗಾಲದಿಂದ ಜನರು ಸಾಯುವುದು ಖಂಡಿತ. ಆಹಾರದ ಮಟ್ಟಿಗೆ ಈಗ ಇಡೀ ಜಗತ್ತಿನ ಪರಿಸ್ಥಿತಿಯೇ ಹಾಳಾಗಿರುವುದರಿಂದ ಹಾಗೂ ಪಾಕಿಸ್ಥಾನ ಪ್ರದೇಶವು ನಮ್ಮಿಂದ ಪ್ರತ್ಯೇಕವಾಗಿರುವುದರಿಂದ ಕೂಡಾ ನಮಗೆ ಬೇಕಾಗುವ ಆಹಾರಕ್ಕಾಗಿ ನಾವು ಬೇರೆ ಕಡೆಯಿಂದ ಆಮದು ಮಾಡಿ ಪೂರೈಸುವಂತಿಲ್ಲ. ಅಂದಮೇಲೆ ಆಹಾರ ಪ್ರಶ್ನೆಯನ್ನು ಬಿಡಿಸಲಿಕ್ಕೆ ಆಹಾರದ ಅಂದರೆ ನಮ್ಮಲ್ಲಿ ಅಕ್ಕಿಯ ಬೆಳೆಯನ್ನು ಹೆಚ್ಚಿಸುವುದೊಂದೇ ದಾರಿಯೆಂಬುದು ಅತ್ಯಂತ ಸ್ಪಷ್ಟವಾದ ವಿಷಯ.

ಈಗ ಹೊಸ ಬೆಳೆ ಕೈಸೇರುವ ತನಕ ಜನರಿಗೆ ಎಲ್ಲಿಂದ ಅಕ್ಕಿ ಒದಗಿಸಬೇಕೆಂಬುದು ತಾತ್ಕಾಲಿಕ ಪ್ರಶ್ನೆ. ಇದೂ ಕೂಡಾ ಪ್ರಾಮುಖ್ಯ ವಿಷಯವೆಂಬುದು ನಿಜ. ಹೊರಗಿನಿಂದ ಅಕ್ಕಿ ಬರಲು ಸ್ವಲ್ಪ ವಿಳಂಬವಾದರೆ ಜನರು ಉಪವಾಸ ಬೀಳುವ ಪರಿಸ್ಥಿತಿ ಈಗ ನಮಗೆ ಪ್ರಾಪ್ತವಾಗಿರುತ್ತದೆ. ಈ ಜಿಲ್ಲೆಯ ಅನೇಕ ಹಳ್ಳಿ ಕೇಂದ್ರಗಳಲ್ಲಿ ಈ ವರ್ಷ ವಾರಕ್ಕೆ ಮೂರೇ ದಿನ ಕೊಟ್ಟ ಅಥವಾ ಕೆಲವೆಡೆ ಇಡೀ ವಾರ ಅಕ್ಕಿಯೇ ಒದಗಿಸದ ಉದಾಹರಣೆಗಳು ಇವೆ. ಕಳೆದ ವರ್ಷ ಇಂಥ ಸ್ಥಿತಿ ಕಾಸರಗೋಡು ತಾಲೂಕಿನ ಕೆಲವು ಭಾಗಗಳಲ್ಲಿ ಮಾತ್ರವಿತ್ತು. ಈ ಪರಿಸ್ಥಿತಿಯಲ್ಲಿ ಬೆಳೆ ತಯಾರಾಗುತ್ತ ಬಂದಂತೆ ಜನರು ಅದನ್ನು ಉಪಯೋಗಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಮುಂದಿನ ವರ್ಷದ ಸ್ಥಿತಿ ಏನಾಗುವುದು? ಈ ತನಕ ಮಾಡಿದಂತೆ ತಾತ್ಕಾಲಿಕ ಪೂರೈಕೆಯ ಕಡೆಗೆ ಮಾತ್ರ ಗಮನ ಕೊಡುತ್ತ ಹೋದರೆ ಬರುವ ವರ್ಷದ ಪರಿಸ್ಥಿತಿ ಇನ್ನಷ್ಟು ಕೆಡುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ.

ಆದುದರಿಂದ ಬೆಳೆಯನ್ನು ಹೆಚ್ಚಿಸುವುದರ ಕಡೆಗೆ ಪೂರ್ಣ ಲಕ್ಷ್ಯವಿರಿಸುವುದು ಅತ್ಯಾವಶ್ಯಕವಿರುತ್ತದೆ.

ಅಕ್ಕಿಯ ಬೆಳೆಯನ್ನು ಏರಿಸಲು ಅಕ್ಕಿಯ ಬೆಲೆಯನ್ನು ಹೆಚ್ಚಿಸುವುದು ಅಗತ್ಯವೆಂದು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ನಮ್ಮ ಶಾಸನ ಸಭೆಗಳಲ್ಲಿ, ಮಂತ್ರಿಮಂಡಲದಲ್ಲಿ, ಸಾರ್ವಜನಿಕ ಸಭೆ ಹಾಗೂ ಮನವಿಗಳಲ್ಲಿ ಎಲ್ಲೆಲ್ಲಿಯೂ ಅಕ್ಕಿಯ ಬೆಲೆ ಏರಿಸಬೇಕು ಎಂಬ ಬಗ್ಗೆ ಒತ್ತಾಯ ನಡೆಯುತ್ತಿದೆ. ಬೇರೆ ಎಲ್ಲ ಮಾಲುಗಳಿಗೂ ಕ್ರಯ ಬಹಳ ಏರಿರುತ್ತದೆ. ಅಡಿಕೆಯ ಕ್ರಯ ನೋಡಿರಿ. ರೈತರಿಗೆ ಅಗತ್ಯವಿರುವ ಎಷ್ಟೋ ಮಾಲುಗಳ ಕ್ರಯ ನೋಡಿರಿ. ಅದೇ ದಾಮಾಶೆಯಿಂದ ಅಕ್ಕಿಯ ಕ್ರಯವನ್ನೂ ಏರಿಸಬೇಡವೆ?

ಕೇಂದ್ರ ಸರಕಾರದವರು ಮಾತ್ರ ಅಕ್ಕಿಯ ಬೆಲೆಯನ್ನು ಏರಿಸಲು ಕೇಳುವುದಿಲ್ಲ. ಮದ್ರಾಸಿನ ಮುಖ್ಯ ಮಂತ್ರಿಯವರೇ ವಾದಿಸಿದರೂ ಬಾಬು ರಾಜೇಂದ್ರ ಪ್ರಸಾದರು ಬೆಲೆಯೇರಿಸಲು ಒಪ್ಪುವುದಿಲ್ಲ. ಇದರಿಂದಾಗಿ ಮಾತ್ರ ಇನ್ನೂ ಬೆಲೆ ಏರಿಲ್ಲ. ಇದು ಅಕ್ಕಿ ಉಣ್ಣುವ ಬಡಜನರ ಪುಣ್ಯವೆನ್ನಬೇಕು.

ಅಕ್ಕಿಗೆ ಈಗ ನಿರ್ಣಯಿಸಲ್ಪಟ್ಟಿರುವ ಕ್ರಯ ನೋಡಿದರೆ ಕಡಮೆಯಾಗಿಲ್ಲ. ಈ ಬೆಲೆಯನ್ನೇ ವಾರದಿಂದ ವಾರಕ್ಕೆ ಕೊಟ್ಟು ಅಕ್ಕಿ ಕೊಂಡುಹೋಗಲಿಕ್ಕೆ ಸಾವಿರಾರು ಬಡ ಜನರಿಗೆ ಕಷ್ಟವಾಗುತ್ತಿದೆ. ಬೆಲೆ ಕೊಡಲು ಸಾಧ್ಯವಾಗದೆ ವಾರದಲ್ಲಿ ಸ್ವಲ್ಪ ಅಕ್ಕಿಯನ್ನು ಕೊಂಡುಕೊಳ್ಳದೆ ಬಿಡುವ ಜನರಿದ್ದಾರೆಂಬುದನ್ನು ಅಕ್ಕಿ ವಿಕ್ರಯ ಮಾಡುವ ಡಿಪೋಗಳಲ್ಲಿ ಒಂದೆರಡು ಗಂಟೆ ಸಮಯ ಕಳೆದರೆ ಪ್ರತ್ಯಕ್ಷ ಕಾಣಬಹುದು. ಅಕ್ಕಿಯ ಬೆಲೆಯನ್ನು ಏರಿಸಿ ಅಕ್ಕಿಯ ಬರಗಾಲದ ಬದಲು ಹಣದ ಬರಗಾಲದಿಂದ ಜನರನ್ನು ಕೊಲ್ಲುವಂತಾಗುವುದು. ಇದರ ವಿಚಾರ ಹೆಚ್ಚಿನವರು ಮಾಡುತ್ತ ಇಲ್ಲವೆಂಬುದು ಶೋಚನೀಯ ಪರಿಸ್ಥಿತಿಯಿರುತ್ತದೆ.

ಅಕ್ಕಿಯ ಬೆಲೆ ಏರಿಸಿದರೆ ಇತರ ಮಾಲುಗಳ ಬೆಲೆ ಇನ್ನಷ್ಟು ಏರುತ್ತದೆಂಬುದು ಹೆಚ್ಚಿನವರಿಗೆ ಅರ್ಥವಾಗದೆ ಇರಬಹುದು. ಆದರೆ ಅರ್ಥಶಾಸ್ತ್ರದ ಸ್ವಲ್ಪಮಟ್ಟಿನದಾದರೂ ಮಾಹಿತಿ ಇದ್ದರೆ ಇದನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಇದರಿಂದಾಗಿ ಅಕ್ಕಿಯ ಬೆಲೆ ಸ್ವಲ್ಪ ಮಟ್ಟಿಗೆ ಏರಿಸಿದರೆ ಇದರಿಂದ ರೈತರಿಗೆ ಹೆಚ್ಚಿನ ಪ್ರಯೋಜನವಾಗುವಂತಿಲ್ಲ ಮಾತ್ರವಲ್ಲ ಬಡಜನರಿಗೆ ಗೋಳಾಡಿಸಿದ ಪರಿಣಾಮ ಮಾತ್ರ ಸಿಕ್ಕುತ್ತದೆ.

ಇದನ್ನು ಚೆನ್ನಾಗಿ ಅರಿತವರಾದುದರಿಂದಲೇ ಕೇಂದ್ರ ಸರಕಾರದವರು ಅಕ್ಕಿಯ ಕ್ರಯವೇರಿಸಲು ಒಪ್ಪಿಗೆ ಕೊಡುತ್ತ ಇಲ್ಲ.

ಅಕ್ಕಿ ಬೆಳೆಸುವ ಬದಲು ಕಬ್ಬು ಬೆಳೆಸಿದರೆ, ಗೆಣಸು ನೆಟ್ಟರೆ ಅಥವಾ ಅದೇ ಸ್ಥಳದಲ್ಲಿ ಅಡಿಕೆ ತೋಟ ಮಾಡಿದರೆ ಎಷ್ಟೊ ಹೆಚ್ಚಿನ ಲಾಭ ಬರುವಾಗ ಅಕ್ಕಿ ಬೆಳೆ ಕಡಮೆಯಾಗುವುದು ಸಹಜವಲ್ಲವೆ? ಎಂಬುದು ಇನ್ನೊಂದು ತರ್ಕವಿರುತ್ತದೆ. ಅಕ್ಕಿ ಬೆಳೆ ನಮಗೆ ಸಾಕಷ್ಟು ಆಗದೆ ಆಹಾರದ ಅಭಾವವಿರುವಾಗ ಅಕ್ಕಿಯ ಬದಲು ಹಣ ಹೆಚ್ಚು ದೊರೆಯುವ ಬೆಳೆ ಬೆಳೆಸುವುದು ಸಹಜವಾದುದಲ್ಲ. ಅದು ರೈತರ ಕರ್ತವ್ಯ ಭ್ರಷ್ಟತೆಯನ್ನು ಮಾತ್ರ ಸೂಚಿಸುತ್ತದೆ. ಹಣದ ಬಗ್ಗೆ ಬೆಳೆಸುವ ಬೆಳೆಗಳನ್ನು ಸರಕಾರದಿಂದ ಲೈಸೆನ್ಸು ಪಡೆದೇ ಬೆಳೆಸಬೇಕೆಂಬ ನಿಯಮವಿರಿಸಿ ಇದನ್ನು ನಿಯಂತ್ರಣಗೊಳಿಸಲು ಹೆಚ್ಚು ಕಷ್ಟವಿಲ್ಲ.

ಸಾಕಷ್ಟು ಆಹಾರ ಬೆಳೆಸದಿದ್ದರೆ ರೈತರು ಕೂಡಾ ಉಪವಾಸ ಬೀಳುವ ದಿನಗಳು ಬಂದೇ ಬರುತ್ತವೆ. ಅವರು ಬೆಳೆಸಿದ್ದನ್ನು ತಾವು ಮಾತ್ರ ಉಣ್ಣುತ್ತೇವೆ. ಉಳಿದವರು ಉಪವಾಸ ಬೀಳಲಿ ಎಂದು ತಾವೇ ಊಟಮಾಡಿಕೊಂಡಿರಲು ಈಗಿನ ದಿನಗಳಲ್ಲಿ ಬಿಡುವುದಿಲ್ಲವೆಂಬುದು ಅವರಿಗೆ ಈಗ ಸ್ಪಷ್ಟವಾಗಿರಬೇಕು. ಇದ್ದುದನ್ನು ಎಲ್ಲರೂ ಹಂಚಿ ಊಟಮಾಡುವ ದಿನಗಳಿವು. ಅಂದಮೇಲೆ ಎಲ್ಲರಿಗೂ ಸಾಕಾಗುವಷ್ಟು ಅವರು ಬೆಳೆಸದೆ ಅವರಿಗೂ ಸಾಕಷ್ಟು ಆಹಾರ ಸಿಕ್ಕುವಂತಿಲ್ಲವೆಂಬುದನ್ನು ಸ್ಪಷ್ಟವಾಗಿ ಎಲ್ಲ ರೈತರೂ ತಿಳಿದುಕೊಳ್ಳಬೇಕು.

ಶೇಕಡಾ 25ರಷ್ಟಾದರೂ ನಮ್ಮ ಅಕ್ಕಿಯ ಉತ್ಪತ್ತಿ ಹೆಚ್ಚಿಸಬೇಕು. ಪ್ರತಿ ಗ್ರಾಮದವರು ಪ್ರತಿ ರೈತನ್ನು ಈ ಧ್ಯೇಯವನ್ನು ಮುಂದಿಟ್ಟುಕೊಂಡು ಈಗಿನಿಂದಲೇ ಕೆಲಸ ಮಾಡಬೇಕು.

ಪ್ರಕಾಶಂ ಮಂತ್ರಿಮಂಡಲದವರು ಆಹಾರ ಸಂಗ್ರಹವು ಸರಿಯಾಗಿ ನಡೆಯಲೆಂದು ಗ್ರಾಮ, ತಾಲೂಕು ಹಾಗೂ ಜಿಲ್ಲೆಯಲ್ಲಿ ಆಹಾರ ಸಮಿತಿಗಳನ್ನು ಏರ್ಪಡಿಸಿದರು. ಈ ಸಮಿತಿಗಳಿಂದ ಸಹಾಯವಾಗುವ ಬದಲು ಸಂಗ್ರಹ ಕಾರ್ಯವು ಸರ್ಧಾಗವಾಗಿ ನಡೆಯಲು ಇವುಗಳಿಂದ ಅಡ್ಡಿಯಾಗಿ ಅಕ್ಕಿಯ ಸಂಗ್ರಹವು ಕಡಮೆಯಾಗುವಂತಾಯಿತು. ಆದರೂ ಈ ಸಮಿತಿಗಳ ಆಯುಷ್ಯವನ್ನು ಇನ್ನೂ ಒಂದು ವರ್ಷ ಹೆಚ್ಚಿಸಿರುವರೆಂದು ಈಗ ತಾನೆ ತಿಳಿದುಬಂದಿರುತ್ತದೆ.

ಆಹಾರ ಸಮಿತಿಗಳಲ್ಲಿ ಆಯಾ ಗ್ರಾಮಗಳ ಜವಾಬ್ದಾರೀ ಜನರೇ ಇದ್ದಾರೆಂಬುದೇನೋ ನಿಜವಾದ ಸಂಗತಿ. ಆದರೆ ಇವರು ತಮ್ಮ ಕರ್ತವ್ಯವನ್ನು ಸರಿಯಾಗಿ ತಿಳಿದಂತೆ ತೋರುವುದಿಲ್ಲ. ತಮಗೆ ಇದೊಂದು ಹೊಸ ಅಧಿಕಾರವೆಂದೇ ತಿಳಿದಂತೆ ಕಾಣುತ್ತದೆ. ಇದರಲ್ಲಿ ಅಧಿಕಾರದ ಪ್ರಶ್ನೆ ಇಲ್ಲ. ಇದು ಒಂದು ದೊಡ್ಡ ಜವಾಬ್ದಾರಿಯೆಂದು ತಿಳಿದಿಲ್ಲ. ಇದನ್ನು ಅವರು ತಿಳಿಯಬೇಕಾಗಿದೆ. ಪ್ರತಿ ಗ್ರಾಮದ ಅಕ್ಕಿ ಉತ್ಪತ್ತಿ ಶೇಕಡಾ 25ರಷ್ಟಾದರೂ ಹೆಚ್ಚಿಸುವಂತೆ ಕೆಲಸ ಮಾಡುವ ಜವಾಬ್ದಾರಿ ಈ ಗ್ರಾಮಸಮಿತಿಯವರಿಗೆ ಸೇರಿದುದೆಂದು ಸೂಚಿಸಬಯಸುತ್ತೇವೆ.

ಮದ್ರಾಸು ಸರಕಾರದವರು ಕೊಡುವ ಬೋನಸ್ಸಿನ ಕುರಿತು ಒಂದು ಮಾತು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವರು ಬೋನಸ್ಸು ಕೊಟ್ಟು ಸಾರ್ವಜನಿಕ ಹಣದ ದುರ್ವ್ಯಯ ಮಾಡಿರುವರೆಂಬುದನ್ನು ನಾವು ವಿಷಾದಪೂರ್ವಕವಾಗಿ ಹೇಳಲೇಬೇಕು. ರೈತರಿಗೆ ಕ್ರಯ ಹೆಚ್ಚಿಗೆ ಕೊಡಬಾರದೆಂದು ಕೇಂದ್ರ ಸರಕಾರದವರು ನಿಷೇಧಿಸಿದಂದ ಹೆಚ್ಚಿನ ಕ್ರಯವನ್ನು ಅಕ್ರಮ ರೀತಿಯಿಂದ ರೈತರಿಗೆ ಕೊಡಲು ಈ ದಾರಿ ಕೈಗೊಂಡಂತೆ ಕಾಣುತ್ತದೆ. ಅಕ್ಕಿಯನ್ನು ಬೇಗನೆ ಕೊಡಲೆಂದು ಇದಕ್ಕೆ ಇದನ್ನು ಕೊಡುವುದಾದರೂ ಸರಿಯಲ್ಲ. ಕ್ಲಪ್ತ ಸಮಯದಲ್ಲಿ ಅಕ್ಕಿಯನ್ನು ಪ್ರತಿಯೊಬ್ಬ ರೈತನೂ ಕೊಡಲೇಬೇಕು. ಇದಕ್ಕೆ ಬೋನಸ್ಸೆಂದು ಲಂಚದ ಆವಶ್ಯಕತೆ ಇಲ್ಲ. ಬೋನಸ್ಸು ಹೆಚ್ಚು ಕೊಡಲೆಂದು ರೈತರು ಇನ್ನಷ್ಟು ವಿಳಂಬ ಮಾಡುವುದೇ ಇದರ ಪರಿಣಾಮವಾಗಿರುತ್ತದೆ.

ಬೋನಸ್ಸು ಕೊಡುವುದಿದ್ದರೆ ಯಾರು ಈಗ ಇದ್ದುದಕ್ಕಿಂತ ಹೆಚ್ಚು ಬೆಳೆ ಬೆಳೆಸುವರೋ ಅಂಥವರಿಗೆ ಕೊಡುವುದಾದರೆ ಅದು ಸಾರ್ಥಕವಾಗುವುದು. ಬೆಳೆ ಹೆಚ್ಚಿಸಲು ಯಾವ ಎಲ್ಲ ಬಗೆಯ ಸಹಾಯಗಳು ರೈತರಿಗೆ ಬೇಕಾಗುವವೊ ಅಂಥ ಎಲ್ಲ ಸಹಾಯಗಳನ್ನು ವ್ಯವಸ್ಥಿತ ರೀತಿಯಲ್ಲಿ ಒದಗಿಸುವುದು ಸರಕಾರದ ಮುಖ್ಯ ಕರ್ತವ್ಯವಿರುತ್ತದೆ.

ರೈತ ವರ್ಗದವರೂ ಗ್ರಾಮದ ಮುಂದಾಳುಗಳಿಂದ ಕೂಡಿದ ಗ್ರಾಮ ಸಮಿತಿಯವರೂ ಸರಕಾರದವರೂ ಅಕ್ಕಿಯ ಉತ್ಪತ್ತಿ ಹೆಚ್ಚಿಸಲು ನಿಜವಾದ ಪ್ರಯತ್ನಗಳನ್ನು ಕೂಡಲೇ ಕೈಕೊಳ್ಳಬೇಕಾಗಿದೆ.

++ ++ ++

ಟೀಕೆ-ಟಿಪ್ಪಣಿಗಳು

ಮುನಿಸಿಪಲ್ ಚುನಾವಣೆಗಳು ಮತ್ತು ಕಾಂಗ್ರೆಸು. ಈ ಬಾರಿಯ ಮುನಿಸಿಪಲ್ ಚುನಾವಣೆಗಳಲ್ಲಿ ನಮ್ಮಲ್ಲಿಯ ಕಾಂಗ್ರೆಸ್ ಸಂಸ್ಥೆಯವರು ಉಮೇದ್ವಾರರನ್ನು ನಿಲ್ಲಿಸಿಲ್ಲ. ಇದೇಕೆ? ಕಾಂಗ್ರೆಸು ದೇಶದ ರಾಜಕೀಯ ಸಂಸ್ಥೆ. ಸ್ಥಳೀಕ ಆಡಳಿತೆಯ ಸಂಸ್ಥೆಗಳಲ್ಲಿ ನಿಜವಾಗಿ ರಾಜಕೀಯ ಪಕ್ಷಗಳಿಗೆ ಎಡೆಯಿಲ್ಲ. ಕಾಂಗ್ರೆಸ್ ಸಂಸ್ಥೆಯವರು ಸ್ಥಳೀಕ ಸಂಸ್ಥೆಗಳ ಚುನಾವಣೆಗಳಲ್ಲಿ ಕೈಹಾಕದಿರುವುದೇ ಶ್ರೇಯಸ್ಕರವೆಂಬುದಾಗಿ ಒಮ್ಮೆ ಕೆಲವರು ವಾದಿಸುತ್ತಿದ್ದರು. ಆಗ ಈ ತರ್ಕಕ್ಕೆ ಸ್ವಲ್ಪಮಟ್ಟಿನ ಅರ್ಥವಿತ್ತು. ಈಗ ಕಾಂಗ್ರೆಸ್ ಸಂಸ್ಥೆಯ ಉದ್ದೇಶ ಕೇವಲ ರಾಜಕೀಯವೆನ್ನುವಂತಿಲ್ಲ. ಏಕೆಂದರೆ ಅದರ ರಾಜಕೀಯ ಧ್ಯೇಯವಾಗಿದ್ದ ರಾಜಕೀಯ ಸ್ವಾತಂತ್ರ್ಯ ದೇಶಕ್ಕೆ ಸಿಕ್ಕಿರುತ್ತದೆ. ಈಗ ಕಾಂಗ್ರೆಸ್ ಸಂಸ್ಥೆಯು ತನ್ನ ಮುಂದೆ ಯಾವ ಧ್ಯೇಯವನ್ನಿಟ್ಟುಕೊಂಡರೂ ಅದಕ್ಕೆ ಸ್ಥಳೀಕ ಸಂಸ್ಥೆಗಳ ಚುನಾವಣೆಗಳಲ್ಲಿ ಭಾಗವಹಿಸಿದರೆ ಅನುಕೂಲವೇ ಇರುತ್ತಿತ್ತೆಂದು ನಮಗನಿಸುತ್ತದೆ.

ನಿಜವಾದ ಪ್ರಜಾಸತ್ತೆಯನ್ನು ಜಾರಿಗೆ ತರುವುದೇ ಕಾಂಗ್ರೆಸಿನ ಧ್ಯೇಯವಿದ್ದರೆ ಈ ಚುನಾವಣೆಗಳಲ್ಲಿ ಭಾಗವಹಿಸಿ ಜನರಿಗೆ ನ್ಯಾಯವಾದ ಮತದಾನದ ಕ್ರಮ ಮನದಟ್ಟಾಗುವಂತೆ ಮಾಡುವುದು ಕಾಂಗ್ರೆಸಿನ ಕೆಲಸವಿತ್ತು. ಕಾಂಗ್ರೆಸಿನ ಮುಂದೆ ಆರ್ಥಿಕ ಧ್ಯೇಯವಿದ್ದರೆ ಮುನಿಸಿಪಲ್ ಸಂಸ್ಥೆಯವರು ಇದನ್ನು ಸಾಧಿಸಲು ಸಹಕರಿಸುವಂತೆ ಮಾಡಲು ಸಾಧ್ಯವಿತ್ತು. ಇದೇ ರೀತಿ ಕಾಂಗ್ರೆಸು ಈ ಚುನಾವಣೆಗಳಲ್ಲಿ ಭಾಗವಹಿಸಿದರೆ ಕಾಂಗ್ರೆಸ್ ಸಂಸ್ಥೆಯ ಕಾರ್ಯಕ್ರಮವನ್ನು ಮುಂದೊತ್ತಲಿಕ್ಕೆ ಹಾಗೆ ಕಾಂಗ್ರೆಸ್ ಸಂಸ್ಥೆಯ ವರ್ತನೆಯನ್ನು ಬಳಸಲಿಕ್ಕೆ ಬಹು ಪ್ರಯೋಜನವಾಗುತ್ತಿತ್ತು.

ಕಾಂಗ್ರೆಸಿನವರು ದೂರ ನಿಂತುದರ ಪರಿಣಾಮವೆಂದರೆ ಯಾವ ಸಾರ್ವಜನಿಕ ಕಾರ್ಯಕ್ರಮವೂ ಜನರ ಮುಂದಿರಿಸಲ್ಪಡದೆ ವ್ಯಕ್ತಿಗತವಾಗಿಯೋ ಮನೆತನದ ಹೆಸರಲ್ಲೋ ಜಾತಿಯ ಹೆಸರಲ್ಲೋ ಉಮೇದ್ವಾರರು ಸ್ಪರ್ಧಿಸುವ ಅತಿ ನಿಕೃಷ್ಟ ಪರಿಸ್ಥಿತಿಯನ್ನು ನಾವು ಇಂದಿನ ಚುನಾವಣೆಗಳಲ್ಲಿ ಕಾಣುವಂತಾದದು.

ಸ್ಥಳೀಕ ಕಾಂಗ್ರೆಸ್ ಸಂಸ್ಥೆಯ ಮೇಲೆ ಟೀಕೆ ಮಾಡುವುದು ನಮ್ಮ ಉದ್ದೇಶವಲ್ಲ. ಮುಂದೆಯೂ ಇಂತ ಹಲವು ಚುನಾವಣೆಗಳು ಬರಲಿವೆಯೆಂಬುದರಿಂದ ಈ ಪ್ರಶ್ನೆಯು ಬಹಿರಂಗ ಚರ್ಚೆಯಾಗುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಾವಶ್ಯವಿರುತ್ತದೆ.

ಕಾಂಗ್ರೆಸ್ ಸಂಸ್ಥೆಯವರು ಈ ಚುನಾವಣೆಯಲ್ಲಿ ಏಕೆ ಭಾಗವಹಿಸಲಿಲ್ಲವೆಂದು ಸಂಸ್ಥೆಯ ಪರವಾಗಿ ಯಾರಾದರೂ ಸ್ಪಷ್ಟಪಡಿಸುವರೆಂದು ನಾವು ನಿರೀಕ್ಷಿಸುತ್ತೇವೆ.

ಹರಿಜನ ದೇವಸ್ಥಾನ ಪ್ರವೇಶ

ಮದ್ರಾಸು ಸರಕಾರದವರು ಹರಿಜನರು ದೇವಸ್ಥಾನಗಳಿಗೆ ಪ್ರವೇಶಿಸಲು ಕಾನೂನು ಮಂಜೂರು ಮಾಡಿ ಈಗ ಸ್ವಲ್ಪ ಸಮಯ ಕಳೆಯಿತು. ದಕ್ಷಿಣ ಹಿಂದುಸ್ಥಾನದ ಹಲವು ಪ್ರಮುಖ ದೇವಸ್ಥಾನಗಳಲ್ಲಿ ಹರಿಜನ ಪ್ರವೇಶವಾಯಿತು. ದಕ್ಷಿಣ ಕನ್ನಡದಲ್ಲಿ ಹಲವು ಪ್ರಮುಖ ದೇವಸ್ಥಾನಗಳಲ್ಲಿ ಇನ್ನೂ ಹರಿಜನ ಪ್ರವೇಶವಿಲ್ಲ. ಇದೇಕೆ? ನಮ್ಮ ಜಿಲ್ಲೆಯ ಹೆಚ್ಚಿನ ದೇವಸ್ಥಾನಗಳ ಮಟ್ಟಿಗೆ ಮದ್ರಾಸ್ ಸರಕಾರದ ಕಾನೂನು ಕಾಗದದಲ್ಲಿಯೇ ಉಳಿಯುವಂತಾದುದು ನಮ್ಮ ಜಿಲ್ಲೆಗೆ ಭೂಷಣವಲ್ಲ.

ಅಸ್ಪೃಶ್ಯತಾ ನಿವಾರಣೆಯಲ್ಲಿ ದೇವಸ್ಥಾನ ಪ್ರವೇಶಕ್ಕೆ ಒಂದು ಮಹತ್ವದ ಸ್ಥಾನವಿರುತ್ತದೆ. ಎಲ್ಲಿಯ ತನಕ ನಮ್ಮ ದೇವಸ್ಥಾನಗಳಲ್ಲಿ ಹರಿಜನರಿಗೆ ಎಲ್ಲ ಭಜಕರಿಗೆ ದೊರೆಯುವಂತೆಯೇ ಸಮಾನವಾಗಿ ಪ್ರವೇಶ ದೊರೆಯುವುದಿಲ್ಲವೊ ಅಲ್ಲಿತನಕ ನಮ್ಮಲ್ಲಿಂದ

(ಎರಡನೆ ಪುಟಕ್ಕೆ ಮುಂದುವರಿದಿದೆ)

(೬ನೇ ಪುಟದಿಂದ)

ಅಸ್ಪೃಶ್ಯತೆಯು ಕಳಂಕ ಹೋದಂತಾಗುವುದಿಲ್ಲ. ಅಸ್ಪೃಶ್ಯತೆ ಹೋಗದೆ ಹರಿಜನ ಸ್ಥಿತಿ ಸುಧಾರಿಸುವಂತೆಯೂ ಇಲ್ಲ

ದೇವಸ್ಥಾನದ ಯಾವ ಆಡಳಿತೆಯವರೂ ಈಗ ಹರಿಜನ ಪ್ರವೇಶಕ್ಕೆ ಆಕ್ಷೇಪ ಮಾಡಲು ಈಗ ಕಾನೂನಿನಂತೆ ಸಾಧ್ಯವಿಲ್ಲ. ಹರಿಜನರು ದೇವಸ್ಥಾನಗಳಲ್ಲಿ ಪ್ರವೇಶ ಮಾಡಿಲ್ಲವಾದರೆ ದೇವಸ್ಥಾನದ ಆಡಳಿತೆಯವರನ್ನು ಈಗ ದೂರುವಂತಿಲ್ಲ ಅಂದಮೇಲೆ ಈ ಕಾರ್ಯಕ್ರಮವನ್ನು ಜಾರಿಗೆ ತರಬೇಕಾದುದು ಮುಖ್ಯವಾಗಿ ಸ್ಥಳೀಕ ಹರಿಜನ ಸೇವಾ ಸಂಘದ ಜವಾಬ್ದಾರಿಯೂ ಕರ್ತವ್ಯವೂ ಇರುತ್ತದೆ ಇದು ಜಾರಿಗೆ ಬರುವಲ್ಲಿ ತನಕ ಸ್ಥಳೀಕ ಹರಿಜನ ಸೇವಾ ಸಂಘದವರು ತಮ್ಮ ಕರ್ತವ್ಯ ಪಾಲಿಸಿದಂತಾಗುವುದಿಲ್ಲ

ಆದುದರಿಂದ ನಮ್ಮ ಹರಿಜನ ಸೇವಾ ಸಂಘದವರು ನಮ್ಮಲ್ಲಿಯ ಎಲ್ಲಾ ಪ್ರಮುಖ ದೇವಸ್ಥಾನಗಳಿಗೆ ಹರಿಜನರನ್ನು ಕರೆದೊಯ್ಯುವ ಕಾರ್ಯಕ್ರಮವನ್ನು ವಿಳಂಬವಿಲ್ಲದೆ ಸಾಧಿಸಿ ಮದ್ರಾಸ್ ಸರಕಾರದವರು ಈ ಬಗ್ಗೆ ಮಾಡಿರುವ ಕಾನೂನನ್ನು ಸಾರ್ಥಕಗೊಳಿಸುವರೆಂದು ನಿರೀಕ್ಷಿಸುತ್ತೇವ

ಮೈಸೂರು ಸ್ವಾತಂತ್ರ್ಯ ಸಮರ

ಮೈಸೂರು ಸಂಸ್ಥಾನದವರು ಹಿಂದಿ ರಾಜ್ಯಘಟನೆಗೆ ಸೇರುವುದಾಗಿ ಪ್ರಕಟಿಸಿದ ಗ ಎಲ್ಲ ಕನ್ನಡಿಗರಿಗೂ ಆನಂದವಾಗಿತ್ತು ಆದರೆ ತಮ್ಮಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸಬೇಕೆಂಬ ಅಲ್ಲಿಯ ಪ್ರಜೆಗಳ ನ್ಯಾಯವಾದ ಕೋರಿಕೆಯನ್ನು ಮನ್ನಿಸುವ ಬದಲು ಉಗ್ರವಾದ ದಬ್ಬಾಳಿಕೆಯನ್ನು ನಡೆಸುತ್ತಿರುವ ಈಗಿನ ಮೈಸೂರು ಸರಕಾರದ ನೀತಿಯನ್ನು ಕಂಡರೆ ಪ್ರತಿಯೊಬ್ಬ ಕನ್ನಡಿಗನಿಗೂ ಖೇದವೆನಿಸದೆ ಇರಲಾರದು.

ಪ್ರಜೆಗಳ ಸ್ವಾತಂತ್ರ್ಯ ಚಳವಳಿಯನ್ನು ದಬ್ಬಾಳಿಕೆಯಿಂದ ನಿಲ್ಲಿಸಲೆಳಸುವುದು ವ್ಯರ್ಥ ಯತ್ನವೆಂದು ಈಗಿನ ದಿನಗಳಲ್ಲಿಯೂ ಅಲ್ಲಿಯ ಸರಕಾರವು ತಿಳಿಯದಿರುವುದು ಚೋದ್ಯವಾಗಿರುತ್ತದೆ. ಬ್ರಿಟಿಷ್ ಸರಕಾರದಂಥ ಬಲಿಷ್ಠ ಸರಕಾರವು ಕೂಡಾ ಸ್ವಾತಂತ್ರ್ಯ ಕೊಡದೆ ನಿವೃತ್ತಿ ಇಲ್ಲವೆಂದು ತಿಳಿದು ರಾಜ್ಯವನ್ನು ಬಿಟ್ಟುಕೊಟ್ಟಾಗ ಮೈಸೂರಿನಂಥ ಸರಕಾರವು ಜನರ ಚಳವಳವನ್ನು ಮುರಿಯಲು ಎಂದಿಗೂ ಸಮರ್ಥವಾಗಲಾರದು. ಕೊನೆಗೆ ಸರಕಾರವು ಪ್ರಜೆಗಳ ಕೇಳಿಕೆಯನ್ನು ಮನ್ನಿಸಲೇಬೇಕಾಗುವುದು ಅಂದಮೇಲೆ ಜನರನ್ನು ನಾನಾ ವಿಧ ಹಿಂಸೆಗೆ ಈಗ ವ್ಯರ್ಥವಾಗಿ ಒಳಪಡಿಸುವುದರ ಸಾರ್ಥಕತೆಯಾದರೂ ಏನು?

ಮೈಸೂರು ಸ್ವಾತಂತ್ರ್ಯ ಸಮರಕ್ಕೆ ಅಖಿಲ ಕರ್ನಾಟಕದ ಪ್ರಜೆಗಳ ಸಹಾನುಭೂತಿ ಹಾಗೂ ಬೆಂಬಲವಿದೆಯೆಂಬ ಬಗ್ಗೆ ಸಂಶಯವಿಲ್ಲ ವ್ಯವಸ್ಥಿತ ರೀತಿಯಿಂದ ಅವಶ್ಯವುಳ್ಳ ಸಹಾಯವನ್ನು ಕರ್ನಾಟಕದ ಎಲ್ಲಾ ಜಿಲ್ಲೆಗಳೂ ಈ ಚಳವಳಕ್ಕೆ ಕಾರ್ಯರೂಪದಲ್ಲಿ ಒದಗಿಸಬೇಕಾಗಿದೆ

ರಾಣಿ ನೊಣ ಪತ್ತೆ

೬೦ ಸಾವಿರಕ್ಕೂ ಮಿಕ್ಕಿರುವ ಜೇನು ನೊಣಗಳಿರುವ ಗೂಡಿನಲ್ಲಿ ರಾಣಿ ನೊಣವನ್ನು ಕಂಡುಹಿಡಿಯುವುದು ಸ್ವಲ್ಪ ತಾಪದಾಯಕವಾಗಿದೆ ಅದ ಆಕೃತಿಯಲ್ಲಿ ಕೆಲ ಸಗಾರ ನೊಣಗಳಂತೆ ಸ್ವಲ್ಪ ದೊಡ್ಡದಾಗಿರುವುದಾದರೂ [illegible] ಹಿಡಿಯುವು [illegible] ಭವಸ್ಥ [illegible] ಸಿದ್ಧ ಜೇನು ನೊಣಗಳ [illegible] ಹಲವು ದೇಶಗಳಲ್ಲಿ ಈಗ [illegible] ಉಪ [illegible] ದ್ಯಮವಾಗಿದೆ ಇತ್ತೀಚೆಗೆ [illegible] ಲ್ಲಿ ನಡೆದ [illegible] ಪ್ರದರ್ಶನದಲ್ಲಿ ರಾಣಿ ನೊಣ ಸಂಶೋಧಕ ಉಪಕರಣವೊಂದು ಪ್ರದರ್ಶಿಸಲಾಗಿತ್ತು ಈ ಉಪಕರಣದ ಚಿತ್ರದಂತೆ [illegible] ದಲ್ಲಿ ತುಂಗಿದ ನೊಣಗಳ ಮಧ್ಯದಿಂದ [illegible] ಕೆಲವೊಂದು ವಿಶಿಷ್ಟ [illegible] ರಾಣಿ ನೊಣ ಪತ್ತೆ [illegible] ವುದು

ಆಕಳನ್ನು ಹೇಗೆ ಉಳಿಸಬೇಕು?

ಹಿಂದೂ ಧರ್ಮದಲ್ಲಿ ಆಕಳಿಗಿರುವ ಸ್ಥಾನದ ಬಗೆಗೆ ಮತ್ತು ಹಿಂದೀಯರ ಜೀವನದ ಆರ್ಥಿಕ ವ್ಯವಹಾರದಲ್ಲಿ ಅದಕ್ಕಿರುವ ಸ್ಥಾನವನ್ನು ಕುರಿತೂ ಆಳವಾದ ಅಜ್ಞಾನವಿದೆ ಅದೇ ಕಾಲಕ್ಕೆ ವಿದೇಶೀಯರ ಆಳ್ವಿಕೆಯಿಂದ ಹಿಂದುಸ್ತಾನವು ಮುಕ್ತವಾಗಿ ಎಲ್ಲರ ಸಮ್ಮತಿಯಿಂದ ಅದು ಇಭ್ಭಾಗವಾಗಿ ಒಂದು ಭಾಗವು ಹಿಂದು ಹಿಂದುಸ್ತಾನವೆಂದೂ ಇನ್ನೊಂದು ಭಾಗವು ಮುಸಲ್ಮಾನ ಹಿಂದುಸ್ತಾನವೆಂದೂ ಅವಾಸ್ತವವಾದ ನಂಬಿಕೆ ಅವಕಾಶವಿತ್ತಿದೆ ಎಲ್ಲ ಅಂಧಶ್ರದ್ಧೆಗಳಂತೆ ಹಿಂದು ಹಿಂದುಸ್ತಾನ ಮುಸ್ಲಿಂ ಹಿಂದುಸ್ತಾನವೆಂಬ ನಂಬಿಕೆಯು ಅಳಿದು ಹೋಗುವುದು ಕಠಿನ ಅವರವರ ಬಣ್ಣ ಶ್ರದ್ಧೆಗಳೇ ಸಿದ್ಧರೂ ಹಿಂದೀ ಒಕ್ಕೂಟ ಮತ್ತು ಪಾಕಿಸ್ತಾನಗಳು ಆಯಾಯ ಭೂಭಾಗದ ಮಕ್ಕಳೆನ್ನುವವರಿಗೆಲ್ಲ ಸೇರಿದ ಸ್ಥಾನಗಳೆಂಬುದು ವಸ್ತುಸ್ಥಿತಿ

ಆದರೂ ಮಾತುಎಲ್ಲ ಹಿಂದುಗಳಲ್ಲಿ ಬಹು ಜನರು ಹಿಂದೂ ಒಕ್ಕೂಟವು ಹಿಂದುಗಳದೇ ಎಂಬ ಅಂಧಶ್ರದ್ಧೆಗೆ ಅಂಟಿಕೊಂಡಿರುವರು ಮತ್ತು ಆ ಕಾರಣದಿಂದ ಶಾಸನದ ಮೂಲಕವಾಗಿ ಕೂಡ ಆ ಹಿಂದುಗಳ ಮೇಲೆಯೂ ತಮ್ಮ ಶ್ರದ್ಧೆ [illegible] ವ [illegible] ಒಕ್ಕೂಟದ ಒಂಗದಲ್ಲಿ [illegible] ಪ್ರತಿಬಂಧಿಸುವ ಶಾಸನವನ್ನು ಮಾಡುವದ [illegible] ಎಂಬ ಪ್ರಚಂಡ ತರಂಗವೇ ಎದ್ದಿದೆ

[illegible] ಕವಾಗಿದೆಂದ [illegible] ಳಿದಿರುವ ಈ ಪರಿಸ್ಥಿತಿಯಲ್ಲಿ ಮತ್ತು ಗೋ [illegible] ಲ್ಲಿ ಹೇರಳ [illegible] ಕಡಿಮೆ [illegible] ಅಭಿಮಾನದಿಂದ ಈ ಅಜ್ಞಾನವನ್ನು ವಾಸಿಸಲು ಉತ್ತಮ ರೀತಿಯಲ್ಲಿ ಸಲ್ಲುವಿದ್ದ ಪ್ರಯತ್ನವನ್ನು ನಾನು ಮಾಡಲೇ ಬೇಕು

ಧಾರ್ಮಿಕ ರೀತಿಯಲ್ಲಿ ಗೋಪೂಜೆಯು ಗುಜರಾತ, ಮಾರವಾಡ ಸಂಯುಕ್ತ ಪ್ರಾಂತ ಮತ್ತು ಬಿಹಾರದಲ್ಲಿ ಹೆಚ್ಚು ರೂಢವಾಗಿದೆಂಬುದನ್ನು ಮೊದಲೇ ನೆನಪಿನಲ್ಲಿಟ್ಟುಕೊಳ್ಳುವಾ ಗುಜರಾತಿಗಳ ಮಾರವಾಡಿಗಳು ಸಾಹಸಿಗರಾದ ವ್ಯಾಪಾರಸ್ಥರಾದುದರಿಂದ ಹಿಂದೂಸ್ತಾನದ ಗೋಸಂಪತ್ತನ್ನು ಸಂರಕ್ಷಿಸಿಕೊಳ್ಳುವ ಕಠಿನ ಸಮಸ್ಯೆಯನ್ನು ಬಿಡಿಸುವದಕ್ಕೆ ತಮ್ಮ ವ್ಯವಹಾರ ಕುಶಲತೆಯನ್ನು ಉಪಯೋಗಿಸದೆ ಈ ಬಗೆಗೆ ದೊಡ್ಡ ಗಲಭೆಯನ್ನೆಬ್ಬಿಸುವಲ್ಲಿ ಯಶಸ್ವಿಯಾಗಿರುವರು

ಯಾವ ಧಾರ್ಮಿಕ ಶ್ರದ್ಧೆಯಲ್ಲಿ ಹೆರವರಿಗೆ ನಂಬಿಗೆಯಿಲ್ಲವೋ ಆ ಧಾರ್ಮಿಕ ವಿಧಿಯನ್ನು ಶಾಸನದ ಮೂಲಕ ಎರಡನೆಯವರ ಮೇಲೆ ಹೇರುವದು ತಪ್ಪೆಂಬುದು ಸ್ಪಷ್ಟವಿದೆ

ಗೋರಕ್ಷಣೆಯು ಶುದ್ಧ ಆರ್ಥಿಕ ಅವಶ್ಯಕತೆಯು ಮಟ್ಟಿಗೆ ಹೇಳುವದಾದರೆ ಅದನ್ನು ಆ ದೃಷ್ಟಿಕೋನದಿಂದಲೇ ನೋಡಿದಲ್ಲಿ ಸಹಜವಾಗಿ ಸಾಧಿಸಿಕೊಳ್ಳಬಹುದು ಅಂತಹ ಪ್ರಸಂಗದಲ್ಲಿ ಹಳೆಯ ಬರಡು ಗೊಡ್ಡು ಮತ್ತು ಅವುಗಳ ಪೋಷಣೆಗೆ ಹತ್ತುವ ಖರ್ಚಿಗಿಂತಲೂ ಕಡಿಮೆ ಹಾಲು ಕೊಡುವ ಆಕಳುಗಳನ್ನು ಎರಡನೇ ವಿಚಾರವಿಲ್ಲದೆ ಕೊಲ್ಲಬೇಕಾಗುವದು. ಪರಸ್ಪರ ವಿರೋಧಾಭಾಸಗಳ ಈ ದೇಶದ ನಿವಾಸಿಗಳು ಅನೇಕ ಹೃದಯಹೀನಕೃತಿಗಳನ್ನು ಮಾಡುವ ದೋಷಕ್ಕೆ ಗುರಿಯಾಗಿದ್ದರೂ ಅಂತಹ ಹೃದಯಹೀನ ಆರ್ಥಿಕ ಪದ್ಧತಿಗೆ ಈ ನಾಡಿನಲ್ಲಿ ಎಡೆ ಇಲ್ಲ.

ಹಾಗಾದರೆ ಆಕಳು ಸಾಕಷ್ಟು ಹಾಲು ಕೊಡದಂತಾದರೆ ಅಥವಾ ಬೇರೆ ರೀತಿಯಿಂದ ಗೋಪಾಲನೆಯು ಭಾರವೆನಿಸಿದರೆ ಅದನ್ನು ಕೊಲ್ಲದೆ ಹೇಗೆ ಉಳಿಸಬಹುದು? ಈ ಪ್ರಶ್ನೆಯ ಉತ್ತರವನ್ನು ಹೀಗೆ ಕ್ರೋಡೀಕರಿಸಬಹುದು,

೧ ಆಕಳು ಮತ್ತು ಅದರ ತಳಿ ಇವುಗಳ ರಕ್ಷಣೆಯ ಬಗೆಗೆ ಹಿಂದುಗಳು ತಮ್ಮ ಧರ್ಮವನ್ನು ಪರಿಪಾಲಿಸುವದರಿಂದ, ಹಾಗೆ ಅವರು ಮಾಡಿದರೆ ನಮ್ಮ ಗೋಸಂಪತ್ತು ಹಿಂದುಸ್ತಾನಕ್ಕಷ್ಟೇ ಅಲ್ಲದೆ ಜಗತ್ತಿಗೆ ಹೆಮ್ಮೆಯ ಮಾತಾಗಬಲ್ಲದು ಇಂದಿನ ಪರಿಸ್ಥಿತಿ ಇದಕ್ಕೆ ವಿಪರೀತವಾಗಿದೆ

೨ ದನಗಳ ಸಂಗೋಪನೆಯ ಶಾಸ್ತ್ರವನ್ನು ಚೆನ್ನಾಗಿ ಕಲಿತು ಬದುಕಿಸಬಹುದು ಆದರೆ ಇಂದು ಮಾತ್ರ ಈ ವಿಷಯದಲ್ಲಿ ಪೂರ್ಣ ಅರಾಜಕತೆಯಿದೆ

ತರತುಬಡಿಯುವ ಈಗಿನ ಕ[illegible]ರ ಪದ್ಧತಿಯನ್ನು ಬಿಟ್ಟು ಪಶ್ಚಿಮದ ದೇಶಗಳಲ್ಲಿಯ ದನ[illegible] ಪದ್ಧತಿಯನ್ನು ಸ್ವೀಕರಿಸಬಹುದು

[illegible] ಸನದ ಪಾಂಜರಪೋಳ [illegible] ಗಳನ್ನು ಪೂರ್ಣ ಸುಧಾರಿಸಿ ಬಳಕೆಸಬಹುದು ಸದ್ಯಕ್ಕಂತೂ ಈ ಸಂಸ್ಥೆಗಳು ಅಜ್ಞಾನ[illegible]ಲ್ಲಿವೆ

೫ ಅತ್ಯಂತ ವ್ಯಾಧಿಮೂಲಕವಾದ ಈ ಕೆಲಸವನ್ನು ಮಾಡಿದರೆ ಮುಸಲ್ಮಾನರು ಹಿಂದು ಬಾಂಧವರ ಸಲುವಾಗಿಯಾದರೂ ತಮ್ಮ ಖಾದ್ಯಗಳಿಗಾಗಲಿ ಇಲ್ಲವೆ ಇತರ ಕಾರ್ಯಕ್ಕಾಗಲಿ ಆಕಳುಗಳನ್ನು ಕೊಲ್ಲುವದನ್ನು ತಾವೆ ಬಿಟ್ಟುಕೊಡುವರು

ಮೇಲೆ ಹೇಳಿದ ಆವಶ್ಯಕ ಕಾರ್ಯಗಳ ಹಿಂಬದಿಯಲ್ಲಿ ಅಹಿಂಸೆ ಅದವಾ ಶಿಕ್ಷೆ [illegible]ಂ ಧವ್ವವೆಂಬ ಒಂದು ವಸ್ತು ವಿರುವದೆಂಬುದನ್ನು [illegible] ಕಾಣಬಹುವ ಶೇಷವಾದ ಈ ಮಾತನ್ನು ಅರಿತರೆ ಉಳಿದುದೆಲ್ಲವೂ ಹಗುರವಾಗ ವದು ಅಹಿಂಸೆಯಿದ್ದಲ್ಲಿ ಅಪರಿಮಿತ ತಾಳ್ಮೆಯಿದೆ, ಆಂತರಿಕ ಶಾಂತಿಯಿದೆ ವಿವೇಕವಿದೆ, ಸ್ವಾರ್ಥತ್ಯಾಗವಿದೆ, ಮತ್ತು ಸತ್ಯಜ್ಞಾನವಿದೆ ಗೋರಕ್ಷಣೆಯು ಸುಲಭ ಕಾರ್ಯವಲ್ಲ, ಅದರ ಹೆಸರಿನಿಂದ ಅಪರಿಮಿತ ಹಣವು ಹಾಳಾಗುತ್ತಿದೆ ಆದರೂ ಅಹಿಂಸೆಯ ಅಭಾವದಿಂದ ಹಿಂದುಗಳು ಗೋಪಾಲಕರಾಗುವ ಬದಲು ಗೋಸಂಹಾರಕರಾಗಿರುವರು ಹಿಂದುಸ್ತಾನದಿಂದ ವಿದೇಶೀಯರ ಆಳ್ವಿಕೆಯನ್ನು ನಿರ್ಮೂಲಗೊಳಿಸುವದಕ್ಕಿಂತಲೂ ಅದು ಕಠಿನವಾಗಿದೆ

ಕಲಕತ್ತೆ,
೨೨-೮-೪೭

[ಅಡಿಟಿಪ್ಪಣಿ: ಹಿಂದುಸ್ತಾನದಲ್ಲಿ ಒಂದು ಆಕಳು ಕೊಡುವ ಹಾಲಿನ ಸರಾಸರಿ ಪ್ರಮಾಣವು ದಿನಕ್ಕೆ ೨ ಪೌಂಡು. ನ್ಯೂಝೀಲಂಡಿನಲ್ಲಿಯ ಆಕಳು ಕೊಡುವ ಹಾಲಿನ ಪ್ರಮಾಣ ದಿನಕ್ಕೆ ೧೪ ಪೌಂಡು. ಇಂಗ್ಲಂಡಿನಲ್ಲಿ ೧೫ ಪೌಂಡು. ಸ್ಕಾಟಲಂಡಿನಲ್ಲಿ ೨೦ ಪೌಂಡು, ಹಾಲಿನ ಪ್ರಮಾಣ ಹೆಚ್ಚಿದಂತೆ ಆ ದೇಶಗಳ ಜನರ ಆರೋಗ್ಯ ಪ್ರಮಾಣವು ಹೆಚ್ಚುತ್ತದೆ.]

—ಕರ್ಮವೀರ 'ಹರಿಜನ ಪುರವಣಿ'ಯಿಂದ.

CANARA BANK, LIMITED.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

(ಸ್ಥಾಪಿತ: ೧೯೦೬)

ಹೆಡ್ ಆಫೀಸು — ಬಾವಟಿಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು. — 75 ಎಪ್ರೊಲೊ ಸ್ಟ್ರೀಟ್, ಫೋರ್ಟ ಮುಂಬೈ.

ಶಾಖೆಗಳು:—

ಮದರಾಸು ಪ್ರಾಂತ್ಯ: ಮಂಗಳೂರು-ಸಿಟಿ, ಮಂಗಳೂರು-ಬಂದರ್, ಮುಲ್ಕಿ, ಗಂಗೊಳ್ಳಿ, ಕುಂದಾಪುರ, ಉಡುಪಿ, ಕಾರ್ಕಳ, ಬಂಟ್ವಾಳ, ಪುತ್ತೂರು, ಕಾಸರಗೋಡು, ಮದರಾಸು., ಪಯ್ಯನ್ನೂರು, ಕಲ್ಲಿಕೋಟೆ, ಕನ್ನಾನ್ನೂರು, ಕೊಯಮುತ್ತೂರು., ತಿರುಚಿನಾಪಳ್ಳಿ., ತೂತುಕುಡಿ., ಸೇಲಂ, ಇರೋಡ್

ಹೈದರಾಬಾದ್ ಸಂಸ್ಥಾನ: ಸಿಕಂದರಾಬಾದು

ತಿರುವಾಂಕುರು ಸಂಸ್ಥಾನ: ಅಲ್ಲೆಪ್ಪಿ, ಕ್ವಿಲೋನ್

ಮಧ್ಯ ಪ್ರಾಂತ್ಯ: ನಾಗಪುರ, ಅಕೋಲಾ, ಅಮರಾವತಿ

ಮುಂಬೈ ಪ್ರಾಂತ್ಯ: ಬೆಳಗಾಂವ್, ದಾರವಾಡ, ಹುಬ್ಬಳ್ಳಿ, ಶೋಲಾಪುರ, ಪೂಣೆ, ಮುಂಬೈ-ಫೋರ್ಟ, ಮುಂಬೈ-ಮಾಂಡ್ವಿ, ಮುಂಬೈ-ಕಾಲ್ಬಾದೇವಿ, ಮುಂಬೈ-ಗಿರ್‌ಗಾಂವ್, ಮುಂಬೈ-ಕಲ್ಯಾಣ

ಮೈಸೂರು ಸಂಸ್ಥಾನ: ಮೈಸೂರು, ಶಿವಮೊಗ್ಗೆ, ಚಿಕ್ಕಮಗಳೂರು., ಬೆಂಗಳೂರು ಸಿಟಿ, ಅರಸಿಕೆರೆ, ದಾವಣಗೆರೆ

ಸಿಂದ್ ಪ್ರಾಂತ್ಯ: ಕರಾಚಿ

ಕೊಚ್ಚಿ ಸಂಸ್ಥಾನ: ಕೊಚ್ಚಿ, ಎರ್ನಾಕುಲಾಮ್

ಮದ್ಯ ಮತ್ತು ಮಾದಕ ಪದಾರ್ಥಗಳ ಪೂರ್ಣ ನಿರೋಧ

ಇದೇ ಅಕ್ಟೋಬರ ತಾರೀಕು ಒಂಧನೇ ದಿನ ಮದ್ಯ ಮತ್ತು ಮಾದಕ ಪದಾರ್ಥಗಳ ಸಂಪೂರ್ಣ ನಿರೋಧದ ಕಾನೂನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಜಾರಿಗೆ ಬರುತ್ತದೆ. ಅಂದಿನಿಂದ ಇಡೀ ಜಿಲ್ಲೆಯಲ್ಲಿ ಶೇಂದಿ ಶರಾಬು ಮೊದಲಾದ ಗುತ್ತಿಗೆಗಳೆಲ್ಲವೂ ಮುಚ್ಚಲ್ಪಡುತ್ತವೆ. ಇದೊಂದು ಅತ್ಯಂತ ಮಹತ್ವದ ದಿನ. ಈ ದಿನ ಜಾರಿಗೆ ಬರಲಿರುವ ಕಾನೂನು ಅತ್ಯಂತ ಮಹತ್ವದ ಪರಿಣಾಮವನ್ನುಂಟುಮಾಡುವಂತಹುದು.

ಮದ್ಯಪಾನದಿಂದಾಗುವ ಆರ್ಥಿಕ ಹಾನಿಯನ್ನು ಜನರು ಸರಿಯಾಗಿ ತಿಳಿದಂತೆ ಕಾಣುವುದಿಲ್ಲ. ಜನರು ಮದ್ಯಪಾನಕ್ಕಾಗಿ ಕೊಡುವ ಹಣವು ಸರಕಾರಕ್ಕೆ ಗುತ್ತಿಗೆಗಳ ಪಲುಮಿನಿಂದ ಸಿಕ್ಕುವ ಉತ್ಪತ್ತಿಯಷ್ಟೇ ಎಂದು ತಿಳಿಯಲಾಗದು. ಈ ಇಲಾಖೆಯಿಂದ ಸರಕಾರಕ್ಕೆ ಸಿಕ್ಕುವ ಉತ್ಪತ್ತಿಗಿಂತ ಎಷ್ಟೋ ಪಾಲು ಕುಡುಕರು ಈ ಬಗ್ಗೆ ಖರ್ಚು ಮಾಡುವರು. ಮರಗಳನ್ನು ಮುರ್ತೆಗೆ ಕೊಟ್ಟ ವರ್ಗದಾರರಿಗೆ ಸಿಕ್ಕುವ ಗೇಣಿ, ಗುತ್ತಿಗೆಗಳನ್ನು ನಡೆಸುವವರಿಗೆ ಸಿಕ್ಕುವ ಲಾಭ, ಈ ವ್ಯಾಪಾರಕ್ಕಾಗಿ ದುಡಿಯುವ ಸಾವಿರಾರು ಜನರ ಉತ್ಪತ್ತಿ ಇದೆಲ್ಲವೂ ಕುಡುಕರು ಹೊರಬೇಕಾಗುತ್ತದೆಂಬುದು ಸ್ಪಷ್ಟವಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಿಂದ ಸರಕಾರಕ್ಕೆ ಈ ಇಲಾಖೆಯಿಂದ ಸುಮಾರು 64 ಲಕ್ಷ ರೂಪಾಯಿ ಉತ್ಪತ್ತಿ ಇದೆಯಂತೆ ಸರಕಾರಕ್ಕೆ ಈ ಜಿಲ್ಲೆಯಿಂದ ಸಿಕ್ಕುವ ಭೂಕಂದಾಯ 36 ಲಕ್ಷ ರೂಪಾಯಿ ಮಾತ್ರ ಸರಕಾರಕ್ಕೇನೆ ಈ ವ್ಯಾಪಾರದಿಂದ 64 ಲಕ್ಷ ರೂಪಾಯಿ ಸಿಕ್ಕುವುದಾದರೆ ಕುಡುಕರು ಈ ಜಿಲ್ಲೆಯಲ್ಲಿ ಕುಡುಕತನಕ್ಕಾಗಿ ಕೊಡುವ ಹಣ ಒಂದು ಕೋಟಿ ರೂಪಾಯಿಗಳಿಗೆ ಕಡಮೆಯಾಗುವಂತಿಲ್ಲ

ಜಿಲ್ಲೆಯಲ್ಲಿ ಎಲ್ಲರೂ ಕುಡುಕರಲ್ಲ ಎಷ್ಟೋ ಜಾತಿಯವರೂ ಪಂಗಡದವರೂ ಮದ್ಯವನ್ನು ಮುಟ್ಟದವರಿದ್ದಾರೆ ಜನಸಂಖ್ಯೆಯ ಒಂದಂಶ ಮಾತ್ರ ಇಷ್ಟು ಹಣವನ್ನು ಖರ್ಚು ಮಾಡುತ್ತದೆ ಜಿಲ್ಲೆಯ ಜನಸಂಖ್ಯೆಯನ್ನು ಲೆಕ್ಕಿಸಿ ಸರಾಸರಿ ತಲೆ ಒಂದರ ಖರ್ಚನ್ನು ಎಣಿಸಿದರೆ ಲೆಕ್ಕ ತಪ್ಪಾಗುವುದು ಕುಡಿಯುವವರ ಸಂಖ್ಯೆಯಿಂದಲೇ ಈ ಸರಾಸರಿ ನಿರ್ಣಯಿಸಬೇಕಾಗುವುದು ಕುಡುಕತನದಿಂದ ಎಷ್ಟೋ ಕುಟುಂಬಗಳು ದಿವಾಳಿಯಾಗುವುದು ಏಕೆಂಬುದು ಆಗ ಮನದಟ್ಟಾಗುವುದು.

ಮದ್ಯ ತಯಾರಿಗಾಗಿ ಎಷ್ಟು ಉತ್ಕೃಷ್ಟವಾದ ಆಹಾರ ಪದಾರ್ಥಗಳ ನಾಶವಾಗುತ್ತಿದೆಯೆಂಬುದನ್ನು ಯೋಚಿಸಬೇಕು ಮದ್ರಾಸ್ ಪ್ರಾಂತ್ಯದಲ್ಲಿ 10 ಲಕ್ಷ ತೆಂಗಿನ ಮರಗಳ ಮುರ್ತೆ ನಡೆಯುತ್ತದೆಯೆನ್ನುತ್ತಾರೆ. ತಾಳೆ ಮರಗಳನ್ನು ಇದರಲ್ಲಿ ಎಣಿಸಿಲ್ಲ ಇಷ್ಟೆಲ್ಲ ತೆಂಗಿನ ರಸವು ತೆಂಗಿನ ಕಾಯಿಯಾಗುವಂಥಾದ್ದು. 10 ಲಕ್ಷ ತೆಂಗಿನ ಮರಗಳ ಮುರ್ತೆಯಿಂದಾಗಿ ಕಡಮೆಯೆಂದರೆ 10 ಕೋಟಿ ಉತ್ತಮ ತೆಂಗಿನ ಕಾಯಿಗಳ ನಷ್ಟವಾಗುತ್ತದೆ ಮದ್ರಾಸು ಪ್ರಾಂತ್ಯದಲ್ಲಿ ಪ್ರತಿ ವರ್ಷ ಒಂದು ಮಿಲಿಯ ಗೆಲನು ಶರಾಬನ್ನು ಬೆಲ್ಲದಿಂದ ತಯಾರಿಸುತ್ತಾರೆ. ಎಷ್ಟು ಬೆಲ್ಲ ಇದಕ್ಕಾಗಿ ವ್ಯರ್ಥವಾಗುತ್ತಿದೆಯೆಂದು ಎಣಿಸಬಹುದು. ಇಷ್ಟೆಲ್ಲ ಉತ್ತಮ ಆಹಾರ ಪದಾರ್ಥಗಳ ಬದಲು ಸಿಕ್ಕುವುದಾದರೂ ಏನು? ಆಹಾರ ದೃಷ್ಟಿಯಿಂದ ಶುದ್ಧ ನಿಷ್ಪ್ರಯೋಜಕವಾದ ಮದ್ಯ. ಜನರ ಆರೋಗ್ಯ, ಸಾರ್ವಜನಿಕ ಶಾಂತಿ ಹಾಗೂ ಕುಟುಂಬ ಸುಖ ಇವಿಷ್ಟನ್ನೂ ನಾಶಮಾಡುವ ಮದ್ಯ.

ಈ ಮದ್ಯ ತಯಾರಿಯ ಕೈಗಾರಿಕೆ ಹಾಗೂ ವ್ಯಾಪಾರಕ್ಕಾಗಿ ದುಡಿಯುವವರ ಸಂಖ್ಯೆಯಾದರೂ ಸಾವಿರಾರು ಮಂದಿ. ಇಷ್ಟೆಲ್ಲ ಜನರ ಪರಿಶ್ರಮದಿಂದ ಯಾವ ಸಾರ್ಥಕತೆಯೂ ಇಲ್ಲ ಮಾತ್ರವಲ್ಲ ತುಂಬಾ ಹಾವಳಿ ಇರುತ್ತದೆ.

ಮದ್ಯದಿಂದ ಆರೋಗ್ಯಕ್ಕೆ ಆಗುವ ಹಾವಳಿಯನ್ನು ಹೆಚ್ಚು ವಿವರಿಸಬೇಕಾಗಿಲ್ಲ. ಮದ್ಯವು ನಿಜವಾಗಿ ಒಂದು ವಿಷ ಪದಾರ್ಥವಿದ್ದು ಇದರ ಸೇವನೆಯಿಂದ ವಿವಿಧ ರೋಗಗಳಿಗೆ ಆಸ್ಪದವುಂಟಾಗುತ್ತದೆಂದು ಎಲ್ಲ ವೈದ್ಯಕೀಯ ಜನರೂ ಒಮ್ಮತದಿಂದ ಹೇಳುತ್ತಾರೆ.

ಮದ್ಯಪಾನದಿಂದ ಆಯಾಸ ಪರಿಹಾರವಾಗುತ್ತದೆಂಬ ಒಂದು ತಪ್ಪು ಅಭಿಪ್ರಾಯವು ಪ್ರಚಾರದಲ್ಲಿದೆ. ನರಗಳು ಸ್ವಲ್ಪ ಸಮಯ ಸತ್ತಂತಾಗಿ ಆಯಾಸ ಗೊತ್ತಾಗದಂತಾಗುವುದು ಮಾತ್ರವಲ್ಲದೆ ನಿಜವಾದ ಆಯಾಸ ಪರಿಹಾರವಾಗುವುದಿಲ್ಲ.

ಮದ್ಯಕ್ಕೆ ಔಷಧದ ಗುಣವಿದೆಯೆಂದು ಭಾವಿಸುವವರೂ ಇದ್ದಾರೆ ಇದರಿಂದ ಜೀರ್ಣಶಕ್ತಿ ಹೆಚ್ಚುತ್ತದೆಂದು ಭಾವಿಸುತ್ತಾರೆ ನಿಜವಾಗಿ ಇದು ಜೀರ್ಣಶಕ್ತಿಯನ್ನು ಹಾಳುಮಾಡುತ್ತದೆ ಅನೇಕ ತರದ ಮದ್ಯಗಳನ್ನು ಶಕ್ತಿವರ್ಧಕವೆಂದು ಪತ್ರಿಕೆಗಳಲ್ಲಿ ಪ್ರಕಟನೆಗಳನ್ನು ಕೊಟ್ಟು ಜಾಹೀರುಪಡಿಸುತ್ತಾರೆ. ಇವೆಲ್ಲ ಹಣಮಾಡುವ ವಿಧಾನಗಳು ಮಾತ್ರವಿರುತ್ತವಲ್ಲದೆ ಇವುಗಳಲ್ಲಿ ಮದ್ಯವಿರುವಷ್ಟರ ಮಟ್ಟಿಗೆ ಇವು ಹಾನಿಕಾರಕವಿರುತ್ತವೆ

ಮದ್ಯಪಾನದಿಂದಾಗುವ ನೈತಿಕ ಹಾವಳಿ ಸರ್ವವಿದಿತವಿರುತ್ತದೆ ಹೆಚ್ಚಿನ ಕ್ರಿಮಿನಲ್ ತಕ್ಷೀರುಗಳಿಗೆ ಮೂಲಕಾರಣ ಮದ್ಯಪಾನವೆಂಬುದಕ್ಕೆ ಸಾಕಷ್ಟು ರುಜುವಾತುಗಳಿರುತ್ತವೆ.

ಕ್ರೈಸ್ತ, ಬೌದ್ಧ, ಜೈನ, ಹಿಂದು ಹಾಗೂ ಇಸ್ಲಾಮ್ ಎಲ್ಲಾ ಧರ್ಮಗಳೂ ಮದ್ಯಪಾನವನ್ನು ನಿಷೇಧಿಸುತ್ತವೆ.

ಮಿತವಾಗಿ ಕುಡಿಯುವುದರಿಂದ ಹಾನಿಯಿಲ್ಲವೆಂದು ಕೆಲವರ ಅಭಿಪ್ರಾಯವಿರುತ್ತದೆ. ಕುಡಿಯುವ ಅಭ್ಯಾಸವಾದಂತೆ ಹೆಚ್ಚು ಕುಡಿಯದೆ ಅದರ ಪರಿಣಾಮ ಸಿಕ್ಕುವುದಿಲ್ಲವಾಗಿ ಮಿತವಾಗಿ ಕುಡಿಯುವವನು ತಾನಾಗಿ ಹೆಚ್ಚು ಕುಡಿಯುತ್ತಾನೆ ಶರಾಬು ಕೆಟ್ಟದ್ದಿರಬಹುದು ಶೇಂದಿಯಲ್ಲಿ ಅಷ್ಟು ಮಾದಕ ಗುಣವಿಲ್ಲದಿರುವುದರಿಂದ ಅದರಿಂದ ಅಷ್ಟು ಹಾನಿಯಿಲ್ಲವೆನ್ನುವವರಿದ್ದಾರೆ ಮಾದಕ ಗುಣ ಕಡಮೆಯಾದ ಶೇಂದಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಕುಡಿಯುತ್ತಾರೆ ಹೀಗೆ ಇದರ ಪರಿಣಾಮ ಒಂದೇ ಆಗುತ್ತದೆ

ಸರಕಾರವು ಜನರಿಗೆ ಮನಸ್ಸಿಗೆ ಕುಡಿಯಲು ಬಿಡಬಾರದೆಂಬ ಉದ್ದೇಶ ಇಟ್ಟುಕೊಂಡೇ ಈ ವ್ಯಾಪಾರವನ್ನು ಹತೋಟಿಯಲ್ಲಿಡಬಯಸಿತ್ತೆನ್ನುತ್ತಾರೆ ಉದ್ದೇಶವಿರಬಹುದು. ಆದರೆ ಇದರಿಂದ ತುಂಬಾ ಉತ್ಪತ್ತಿ ಸಿಕ್ಕಿದ್ದರಿಂದ ಅದೊಂದು ಸರಕಾರೀ ವ್ಯಾಪಾರವಾಗಿಯೇ ಪರಿಣಮಿಸಿತು. ಗುತ್ತಿಗೆಗಳ ಸಂಖ್ಯೆ ಕಡಿಮೆ ಮಾಡಿದರೂ ಕುಡುಕತನ ಕಡಮೆಯಾಗುವುದಿಲ್ಲವೆಂದು ತಿಳಿದುಬಂದಿದೆ

ಜನರಿಗೆ ಬೋಧಿಸಿ ಕುಡುಕತನ ಬಿಡಿಸಲು ಸಾಧ್ಯವಿಲ್ಲವೆಂದು ಅನುಭವದ ಮಾತು ಕುಡುಕತನ ನಿರೋಧ ಮಾಡುವುದರಿಂದ ವ್ಯಕ್ತಿ ಸ್ವಾತಂತ್ರ್ಯ ಅಪಹರಿಸಿದಂತಾಗುತ್ತದೆಂಬುದು ಹಾಸ್ಯಾಸ್ಪದ ಮಾತು. ಎಲ್ಲ ಕ್ರಿಮಿನಲ್ ಕಾನೂನು ಇದೇ ರೀತಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿಯೆನ್ನಬಹುದಲ್ಲವೆ?

ಬಡಜನರಿಗೆ ಸಿಕ್ಕುವ ಈ ಅಲ್ಪ ಸಂತೋಷಕ್ಕೂ ಅಡ್ಡಿ ಬರುವುದೆ? ಎಂದು ಕೇಳುವವರಿದ್ದಾರೆ. ಈ ಸುಧಾರಣೆ ನಿಜವಾಗಿಯೂ ಬಡಜನರ ಉನ್ನತಿಗಾಗಿಯೇ ಇರುತ್ತದೆಂಬುದನ್ನು ಸ್ವಲ್ಪ ವಿಚಾರಿಸಿದರೆ ತಿಳಿದುಕೊಳ್ಳಬಹುದು.

ಸರಕಾರಕ್ಕೆ ವಿಪರೀತ ನಷ್ಟವಾಗುತ್ತದೆಯೆಂಬುದು ಮದ್ಯಪಾನ ನಿರೋಧಕ್ಕೆ ಇರುವ ಮುಖ್ಯ ಆಕ್ಷೇಪ ಈ ಹಣವೆಲ್ಲ ಸಿಕ್ಕಿದರೆ ಎಷ್ಟೋ ಜನಹಿತಸಾಧನೆಯ ಕಾರ್ಯಗಳನ್ನು ಮಾಡಬಹುದಲ್ಲ ಎಂದು ನಂಬುವವರು ಅನೇಕ ಮಂದಿ ಇದ್ದಾರೆ

ಪ್ರಜೆಗಳ ಸರ್ವನಾಶಮಾಡುವ ವ್ಯಾಪಾರದಿಂದ ಸರಕಾರ ತನ್ನ ಉತ್ಪತ್ತಿ ಹೆಚ್ಚಿಸಲು ಯಾವ ನ್ಯಾಯವೂ ಇಲ್ಲ ಸರಕಾರಕ್ಕೆ ಹಣ ಬೇಕಾದರೆ ನ್ಯಾಯವಾದ ರೀತಿಯಲ್ಲಿ ಇತರ ತೆರಿಗೆಗಳನ್ನು ಹೊರಿಸಿ ವಸೂಲು ಮಾಡುವುದೇ ಸರಿಯಾದ ಹಾದಿಯಿರುತ್ತದೆ

ಪ್ರಜೆಗಳಲ್ಲಿ ಸಾವಿರಾರು ಮಂದಿಯ ಸರ್ವನಾಶ ಮಾಡಿ ಎಂಥ ಪ್ರಜಾಹಿತ ಸಾಧಿಸಬಹುದು? ಸರಕಾರದ ಯಾವ ಕಾರ್ಯಕ್ರಮದಿಂದ ಮದ್ಯ ನಿರೋಧದಿಂದಾಗುವಷ್ಟು ಹಿತಸಾಧನೆಯಾಗುವುದು?

ನಿರೋಧದ ಕಾನೂನು ಮಾಡಬಹುದು ಅದನ್ನು ಜಾರಿಗೆ ತರುವುದು ಕಷ್ಟ ಕಳ್ಳಭಟ್ಟಿಯ ತಯಾರಿ ಹೆಚ್ಚುವುದು ಇತ್ಯಾದಿ ಆಕ್ಷೇಪ ಹೇಳುವವರಿದ್ದಾರೆ

ಸಾರ್ವಜನಿಕ ಹಿತದೃಷ್ಟಿಯಿಂದ ಮಹನೀಯರೆಲ್ಲರೂ ಸಹಕರಿಸಿ ವರ್ತಿಸಿದರೆ ಕಾನೂನನ್ನು ಉತ್ತಮ ರೀತಿಯಿಂದ ಜಾರಿಗೆ ತರಬಹುದು ಹೀಗೆ ಸಹಕರಿಸುವ ಬದಲು ಆಕ್ಷೇಪ ಹೇಳುವುದರಲ್ಲಿ ಹುರುಳಿಲ್ಲ

ಕಾಂಗ್ರೆಸು ಸುಮಾರು ಹಲವು ವರ್ಷಗಳಿಂದ ಮದ್ಯ ನಿರೋಧಕ್ಕಾಗಿ ಹೋರಾಟ ಪಟ್ಟಿರುತ್ತದೆ ಗುತ್ತಿಗೆಗಳ ಬಳಿಯಲ್ಲಿ ಪಿಕೆಟಿಂಗ್ ನಡೆಸಿ ನೂರಾರು ಸ್ವಯಂಸೇವಕರು ಪೆಟ್ಟು ತಿಂದಿದ್ದಾರೆ ನೂರಾರು ಸ್ತ್ರೀಯರು ಕಾರಾಗೃಹ ಸೇರಿದ್ದಾರೆ ಇಂದು ಕಾಂಗ್ರೆಸ್ ಸರಕಾರ ಸ್ಥಾಪನೆಯಾಗಿ ಈ ಕಾರ್ಯಕ್ರಮವು ಜಾರಿಗೆ ಬರುತ್ತಿರುವುದು ಆನಂದದ ವಿಷಯ.

ಸಾವಿರಾರು ಕುಟುಂಬಗಳಲ್ಲಿಯ ಹೆಂಗಸರು ಮಕ್ಕಳ ಗೋಳನ್ನು ನಿವಾರಿಸುವ ಈ ಕಾರ್ಯಕ್ರಮ ಜಾರಿಗೆ ಬರುವ ಈ ಶುಭ ದಿನದಲ್ಲಿ ಇದನ್ನು ಯಶಸ್ವಿಗೊಳಿಸಲು ಎಲ್ಲರೂ ಮನಃಪೂರ್ವಕ ಸಹಕರಿಸುವ ನಿರ್ಧಾರ ಮಾಡಬೇಕು.

ಶಾಂಘಾಯಿಯಲ್ಲಿ ಓರ್ವ ಚೀನೀ ಅಧ್ಯಾಪಕರು ಸಾಮೂಹಿಕ ಶಿಕ್ಷಣ ಪ್ರಚಾರ ಕೈಕೊಂಡಿರುವರು. ಅಲ್ಲಿಯ ವರ್ತಮಾನ ಪತ್ರಿಕೆ ಮಾರುವ ಹುಡುಗರಿಗೇ ಓದುಬರಹ ಗೊತ್ತಿಲ್ಲವಂತೆ ಅದಕ್ಕವರು ಮೊದಲು ಈ ಹುಡುಗರಿಗೆ ಧರ್ಮಾರ್ಥ ಶಿಕ್ಷಣ ಕೊಟ್ಟರು ಒಂದು ಶರ್ತವೆಂದರೆ ಈ ಹುಡುಗರು ತಾವು ಕಲಿತುದನ್ನು ಪ್ರತಿದಿನ ಇತರರಿಗೆ ಕಲಿಸಬೇಕು ಎಲ್ಲರಿಗೆ ಓದುಬರಹ ಬಂದರೆ ಹೆಚ್ಚು ಪತ್ರಿಕೆಗಳು ಖರ್ಚಾಗುವವೆಂದು ಹುಡುಗರು ಸಂತೋಷದಿಂದೊಪ್ಪಿಕೊಂಡರು.



ಜಾಂಬಕಿನಿಂದ ಪರಿಹಾರ

ಈ ವನಸ್ಪತಿ ಜಾಂಬಕ್ ಮುಲಾಮು ವಿಷಹಾರಿ, ಶಮನದ ಪರಿಹಾರ ಸಡಿಲಾದ ನರಗಳನ್ನು ಸಂಕೋಚಿಸಿ ರಕ್ತಸ್ರಾವ ತಡೆದು, ಊರುವಿಕೆ ನಿಲ್ಲಿಸಿ, ವಿಷಮತೆಯನ್ನು ಪರಿಹರಿಸುತ್ತದೆ ಶಸ್ತ್ರಕ್ರಿಯೆ ಅನಿವಾರ್ಯವೆಂದಾಗಲೂ ಜಾಂಬಕ್ಕು ಯಶಸ್ವಿಯಾಗಿದೆ.

ಮಡವೆ, ತುರಿಕಜ್ಜಿ, ಕ್ರಿಮಿಕಡಿತದಿಂದ ಕುರು, ಉಷ್ಣ ಗುಳ್ಳೆ, ಕಾಲು ಬಾತುವಿಕೆ ಮೊದಲಾದ ಎಲ್ಲಾ ಚರ್ಮ ವ್ಯಾಧಿಗೆ ಜಾಂಬಕು ವಿಶ್ವಖ್ಯಾತಿ ಔಷಧಿ

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು.

ಭಾರತದಲ್ಲಿ ವೈದ್ಯಕೀಯ ಸಂಶೋಧನೆ

ಹಲವಾರು ರೋಗಗಳಿಗೆ ಔಷಧಿಗಳು ಕಂಡುಹಿಡಿಯಲಾಗುತ್ತವೆ.

ಹಿಂದುಸ್ಥಾನದ ಸಂಶೋಧನಾ ನಿಧಿ ಸಂಘದ ವೈಜ್ಞಾನಿಕ ಸಲಹಾ ಬೋರ್ಡಿನ 1946ನೇ ವಾರ್ಷಿಕ ವರದಿಯಲ್ಲಿ ಭಾರತದ ವೈದ್ಯಕೀಯ ಸಂಶೋಧನೆಯ ಕ್ಷೇತ್ರದಲ್ಲಿ ಪ್ರತಿಯೊಂದು ವಿಭಾಗದಲ್ಲಿಯೂ ಪ್ರಗತಿ ನಡೆದಿತ್ತೆಂದು ಸೂಚಿಸಲ್ಪಟ್ಟಿದೆ. ಹಿಂದುಸ್ಥಾನದಲ್ಲಿರುವ ಪ್ರಖ್ಯಾತ ಸಂಶೋಧನೆಗಾರರಲ್ಲಿ ಕೆಲವರು ಮಲೇರಿಯಾ, ವಾಂತಿಭೇದಿ, ಪೋಷಣೆ, ದೇಶೀಯ ಔಷದಗಳು, ಪೆನ್ಸಿಲಿಯನ್ ತಯಾರಿ ಹರಿಗೆ ಮತ್ತು ಶಿಶು ಪೋಷಣೆ, ಇತ್ಯಾದಿ ವಿವಿಧ ವಿಷಯಗಳಲ್ಲಿ ಸಂಶೋಧನಾ ಕಾರ್ಯವು ಹೆಚ್ಚಾಗಿ ನಡೆದಿರುತ್ತದೆ

ಪ್ರಯೋಗಗಳು

ವೈದ್ಯಕೀಯ ಸಂಶೋಧನಾ ಕೌನ್ಸಿಲಿನ ಪ್ರಖ್ಯಾತ ವಾಂತಿಭೇದಿ ಸಂಶೋಧನೆಗಾರರಾದ ಮಿ॥ ಬ್ರೂಸ್ ವೈಟ್‌ರವರನ್ನು ಸಂಘವು ಹಿಂದುಸ್ಥಾನದಲ್ಲಿ ವಾಂತಿಭೇದಿಯ ಕುರಿತು ಸಂಶೋಧನ ನಡಸುವ ಬಗ್ಗೆ ಆಹ್ವಾನಿಸಿರುತ್ತದೆ. ಕಲ್ಕತ್ತದಲ್ಲಿರುವ ಉಷ್ಣವಲಯದ ಔಷಧಿ ಶಾಲೆಯ ವೈಕ್ಷರ [illegible] ಲ್ವಿಚಾರಣೆಯಲ್ಲಿ ಬಂಗಾಳದಲ್ಲಿ ನಡಸಿದ ಪ್ರಯೋಗಗಳ ಪ್ರಕಾರ ವಾಂತಿಭೇದಿ ರೋಗವನ್ನು ಗುಣಪಡಿಸುವುದರಲ್ಲಿಯೂ ಪ್ರತಿಬಂಧಿಸುವುದರಲ್ಲಿಯೂ "ಸಲ್ಫಾಗ್ವನಿಡಿನ್" ಒಳ್ಳೇ ಪ್ರಯೋಜನಕಾರಿಯಾಗಿ ಕಂಡುಬಂದಿದೆ. ಒಂದು ಪ್ರಯೋಗದಲ್ಲಿ ವಾಂತಿಭೇದಿ ತಗಲಿದ [illegible] ವ್ಯಕ್ತಿ ನಾಲ್ಕು [illegible] ಎರಡು ಅಥವಾ ಮೂರು ದಿನಗಳೊಳಗೆ ಸಂಪೂರ್ಣ ಗುಣ ಹೊಂದಿದ

ಹಿಂದುಸ್ಥಾನದ ಮಲೇರಿಯಾ ಇನ್‌ಸ್ಟಿಟ್ಯೂಟಿನವರು ದಿಲ್ಲಿಯ ಪತ್ತು [illegible] ಕೆಲವು ಹಳ್ಳಿಗಳಲ್ಲಿ ಪ್ರಯೋಗ [illegible] ಸಿರುತ್ತಾರೆ. [illegible] ಮಲೇರಿಯಾ ಜ್ವರ ತಗಲುವುದನ್ನು [illegible] ಕ್ಷೇತ್ರದಲ್ಲಿ ಒಮ್ಮೆಯೂ ದಿಲ್ಲಿ [illegible] ಮೂರು ಸಲವೂ "ಡಿ ಡಿ ಟಿ" ಔಷಧಿಯನ್ನು ಚಿಮುಕಿಸಿದರೆ ಸಾಕೆಂದು ತಿಳಿದು ಬಂದಿದೆ

ಕುಷ್ಠ ಚಿಕಿತ್ಸೆ

ಕಲ್ಕತ್ತದಲ್ಲಿರುವ ಉಷ್ಣವಲಯದ ಔಷಧಿ ಶಾಲೆಯಲ್ಲಿ ಕುಷ್ಠರೋಗ ಚಿಕಿತ್ಸೆಗೆ ಇತ್ತೀಚೆಗೆ ಕಂಡು ಹಿಡಿದ ಕೆಲವು ಔಷಧಿಗಳನ್ನು ಉಪಯೋಗಿಸಿ ಒಳ್ಳೆ ಪ್ರಯೋಜನವಾಗಿದೆ. "ಪ್ರೊಮಿನ್" ಮತ್ತು "ಡಯಸೋನ್" ಎಂಬ ಎರಡು "ಸಲ್ಫೋನ್" ಔಷಧಿಗಳು ಅತ್ಯುತ್ತಮ ಫಲಕಾರಿಯಾದರೂ ಅವು ವಿಷದ ಪರಿಣಾಮವನ್ನುಂಟುಮಾಡುವುದರಿಂದಾಗಿ ಅವನ್ನು ನಿಲ್ಲಿಸಬೇಕಾಯ್ತು. ಕುಷ್ಠರೋಗಕ್ಕೆ ಒಳ್ಳೆಯ ಔಷಧವಾದ "ಸ್ಟ್ರೆಪ್ಟೋ ಮಿಸಿನ್" ಸಾಕಷ್ಟು ದೊರೆತೊಡನೆಯೇ, ಅದನ್ನು ಉಪಯೋಗಿಸಿ ನೋಡಲಾಗುವುದು

ಪ್ಲೇಗ್ ದಾಕು

ಹೇಪ್ಕಿನ್ ಇನ್‌ಸ್ಟಿಟ್ಯೂಟ್ ಒಂದು ಹೊಸ ಪ್ಲೇಗ್ ದಾಕನ್ನು ತಯಾರಿಸಿದೆ. ಈ ದಾಕು ಇತರವುಗಳಿಗಿಂತ ಒಳ್ಳೇ ಫಲಕಾರಿಯಾಗಿದೆಯಲ್ಲದೆ, ಎಂತಹ ವಿರೋಧ ವಾತಾವರಣಗಳಲ್ಲಿ ಸಹ ಹೆಚ್ಚು ಕಾಲ ದಾಸ್ತಾನಾಗಿ ಇಟ್ಟರೂ ಕೆಟ್ಟು ಹೋಗುವುದಿಲ್ಲವೆಂದೂ ತಿಳಿದು ಬಂದಿದೆ

ಪೋಷಣೆಯ ಕುರಿತು ಸಂಶೋಧನೆ

ಸಂಶೋಧನಾ ನಿಧಿ ಸಂಘದ ನೇತೃತ್ವದಲ್ಲಿ ಪೋಷಣೆಗೆ ಸಂಬಂಧಪಟ್ಟ ವಿಷಯಗಳ ಕುರಿತು ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಸಂಶೋಧನೆಯು ನಡಯುತ್ತದೆ. ಪೋಷಣೆಯ ಕುರಿತು ವಿವಿಧವಿಷಯಗಳನ್ನು ತಿಳಿಯುವುದರಲ್ಲಿ ಕೂನೂರಿನಲ್ಲಿರುವ ನ್ಯೂಟ್ರಿಷನ್ ರಿಸರ್ಚ್ ಲೊಬೊರೇಟರಿಯು, ತುಂಬಾ ಮುಂದರಿದಿದೆಂದು ವರದಿ ಇದೆ

ಸಿಲೋನ್‌ನಲ್ಲಿಯೂ ದಕ್ಷಿಣ ಹಿಂದುಸ್ಥಾನದ ಕೆಲವು ಭಾಗಗಳಲ್ಲಿಯೂ ಹೆಚ್ಚಾಗಿ ಕಂಡು ಬರುವ "ಫ್ರಿನೊಡರ್ಮ" (ಕಪ್ಪೆ [illegible] ಚರ್ಮ) ಎಂಬ ರೋಗಕ್ಕೆ ಆಹಾರದಲ್ಲಿ ಸಂಕಷ್ಟ "[illegible] ವಿಟಮಿನ್" (ಅನ್ನಸತ್ವ) ಇಲ್ಲದಿರುವ ಕಾರಣವೆಂದು ಭಾವಿಸಲಾಗಿದೆ. [illegible] ಈಗ [illegible] ಈ ರೋಗಕ್ಕೆ "ಬಿ [illegible] ಕೊಡಿಯ [illegible] ಈ ರೋಗಕ್ಕೆ ಮದ್ರಾಸ್ ಪ್ರಾಂತದಲ್ಲಿ ಚಿಕಿತ್ಸೆಯು ಒಳ್ಳೆ [illegible] ನಡದಿದೆ

[illegible] ಆಹಾರ [illegible] ಅಧಿಕ [illegible] ಉಪಯೋಗಿಸಿ [illegible] ಹೆಚ್ಚು [illegible] ಶಕ್ತಿ [illegible] ಕೆಲಸವು [illegible] ಈಗ ನಡೆಸುತ್ತಿರುವ ಪ್ರಯೋಗ [illegible] ಹಿಂದುಸ್ಥಾನದ [illegible]

ಅನೇಕ [illegible] ವಸ್ತುಗಳನ್ನು ತರಕಾರಿಗಳನ್ನು ಪರೀಕ್ಷಿಸಲಾಗಿದೆ. ಧಾನ್ಯಗಳನ್ನೂ, ಬೇಳೆಗಳನ್ನೂ, ಪರೀಕ್ಷೆಮಾಡಿ, ನೈಟ್ರೋಜನ್‌ನಿಂದ ಕೂಡಿದ ಗೊಬ್ಬರಗಳನ್ನೂ ಉಪಯೋಗಿಸುವುದರಿಂದಲೂ ಉತ್ತಮ ಜಾತಿಯ ಬೀಜಗಳನ್ನು ಆರಿಸುವುದರಿಂದಲೂ ಅಕ್ಕಿಯ ಅನ್ನ ಸತ್ವವನ್ನೂ ಪೋಷಕ ಗುಣವನ್ನೂ ತುಂಬಾ ಹೆಚ್ಚಿಸಬಹುದೆಂದು ತಿಳಿದು ಬಂದಿದೆ

"ಲ್ಯಾಥಿರಿಸಂ" ಎಂಬ ಕಾಲಿಗೆ ಬರುವ ಪಕ್ಷವಾತ ರೋಗಕ್ಕೆ ಕೇಸರೀ ಬಣ್ಣದ ಬೇಳೆಯ ಉಪಯೋಗವೇ ಮುಖ್ಯ ಕಾರಣವೆಂದು ಕಂಡು ಹಿಡಿಯಲಾಗಿದೆ. ಈ ತನಕ ಈ ರೋಗಕ್ಕೆ "ವೆಬ್" ಅಥವಾ "ವಿಸಿಯಾ ಸಟೈವಾ" ಎಂಬುದರ, ಬೀಜಗಳು ಕೇಸರೀ ಬೇಳೆಯಲ್ಲಿ ಹೆಚ್ಚಾಗಿ ಸೇರಿಸಲ್ಪಡುವುದೇ ಕಾರಣವೆಂದು ಭಾವಿಸಲಾಗಿತ್ತು

ಪೆನ್ಸಿಲಿಯನ್ ತಯಾರಿ

ಬೊಂಬಾಯಿಯ "ಹೆಪ್ಕಿನ್ ಇನ್‌ಸ್ಟಿಟ್ಯೂಟ್" ನಲ್ಲಿ ಪೆನ್ಸಿಲಿಯನ್ ತಯಾರಿಸುವ ಕ್ರಮಗಳನ್ನು ವಿಚಾರಿಸಲಾಗುತ್ತದೆ. ಪೆನ್ಸಿಲಿಯನ್ ದೊರೆಯುವ ಅನೇಕ ವಸ್ತುಗಳನ್ನು ಪರೀಕ್ಷಿಸಲಾಗುತ್ತಿದೆ. ಇದನ್ನೂ ತಯಾರಿಸುವ [illegible] ಕ್ರಮಗಳನ್ನು ಸರಿಹೋಲಿಸಿ [illegible] ಉತ್ತಮವೆಂದೂ [illegible] ಈ ವಿಚಾರಣೆಯೂ [illegible] ಹಿಂದುಸ್ಥಾನದಲ್ಲಿ [illegible] ಔಷಧಿಯು ಹೆಚ್ಚು ಪ್ರಮಾಣದಲ್ಲಿ ತಯಾರಿಸಲ್ಪಡಲಾಗ ಬಹುದು

ಸಿಹಿಸುದ್ದಿ ಸಂಗ್ರಹ

[illegible] ಗಳನ್ನು ಚಿತ್ರ [illegible] ಶಿಕ್ಷಣ [illegible] ಅನೇಕ ದೇಶಗಳಲ್ಲಿ [illegible] ಅಕ್ರಮ [illegible] ಅಲ್ಲಿ ಕೇಂಕೆ 9 ಸಾವಿ [illegible]

卐

[illegible] ತರದ [illegible] ಗಂಧಕರ್ತ [illegible] ನ್ಯಾಯ [illegible] ಸ್ಸಿ [illegible] ಸಿದ್ದನು. ಕಾರಣ ಹತ್ತಿನವ [illegible] ವ್ಯಕ್ತಿಯು [illegible] ಅದಕ್ಕಾಗಿ ನಕ್ಕ [illegible] ಪೋಲಿಸ ಪೋಲಿಸ್ ಓಸ್ಪತ್ರಿಲ್ [illegible] ನು ಸಾಯುವಾಗ ಇಂಸಿಗ [illegible] ಗಗನ ಚುಂಬಿ ಕಟ್ಟಡವೊಂದರ ಕಿಟಿಕಿ ಬಳಿಯಲ್ಲ ಮಲಗಿದ ಅವನು ಒದೆ ಮುಲ್ಲಿ ಹೊರಳಾಡಿ ಕೆಳಗೆ ಬಿದ್ದನು.

卐

ಮಾಸಕ್ಕೊಮ್ಮೆ ಕೊಲೆ ಮಾಡುವ ಒಂದು "ಕ್ಲಬ್" ನ್ಯೂಯೋರ್ಕಿನಲ್ಲಿ ಸ್ಥಾಪಿಸಲ್ಪಟ್ಟಿದ್ದು ಕಳೆದ ಎಂಟು ತಿಂಗಳಲ್ಲಿ 8 ಕೊಲೆಗಳು ಅವರಿಂದ ನಿರ್ವಹಿಸಲ್ಪಟ್ಟವಂತೆ. ಅಲ್ಲಿನ ಪೋಲೀಸರಿಗ ಈ "ವಿಚಿತ್ರ ಕ್ಲಬ್ಬಿ"ನ ಪತ್ತೆಗಾಗಿ ರಾತ್ರಿ ಹಗಲು ಯತ್ನಿಸುತಿದ್ದಾರೆ

卐

ಉತ್ತರ ಧ್ರುವದ ಬಳಿ ವಾಸಿಸುವ ಎಸ್ಕಿಮೊ ಜನರು ತಮ್ಮ ಪ್ರದೇಶದಲ್ಲಿ ಹೇರಳ ಬಂಗಾರವಿರುವ ಸ್ಥಳವೊಂದನ್ನು ಕಂಡು ಹಿಡಿದಿರುವರು. ಅಲ್ಲಿನ ಕೆಲವರಿಗೆ ಸಿಕ್ಕಿದ ಬಂಗಾರ ಗಟ್ಟಿಗಳು 25 ಪವನುಗಳಷ್ಟು ಭಾರವಿದ್ದವು.

ಲಂಡನಿನಲ್ಲಿ ಗಾಂಧೀ ಜೀವನ ವಿಧಾನ

ಶ್ರಮ ಗೌರವ ಸರಳತೆಗಳ ಆದರ್ಶ

"ಗಾಂಧೀಜಿಯ ಸರಳ ಜೀವನ ಅವರ ಸನ್ಯಾಸಿ ಮನೋಭಾವದ ಪರಿಣಾಮವೆಂದಿನ್ನುವವರಿದ್ದಾರೆ. ಆದರೆ ಸರಿಯಾಗಿ ವಿವೇಚಿಸಿದರೆ ಸರಳತೆಯು ಶಾಶ್ವತವಾದ ಆರ್ಥಿಕ ಯೋಜನೆಯ ತಳಹದಿಯಾಗಿದೆ." ಹೀಗೆಂದು ಜೆ ಸಿ ಕುಮಾರಪ್ಪನವರು ಗಾಂಧೀ ವಿಧಾನಗಳನ್ನು ಇಂಗ್ಲೆಂಡ್ ಐರೋಪ್ಯ ದೇಶಗಳಲ್ಲಿ ಹೇಗೆ ಅನುಸರಿಸುತ್ತಿರುವರೆಂಬುದನ್ನು ವಿವರಿಸಿದುದರ ಸಾರಾಂಶ ಹೀಗಿದೆ

ನನ್ನ ಇತ್ತೀಚಿನ ಯುರೋಪ್ ಸಂಚಾರದಲ್ಲಿ ಅಲ್ಲಿನ ಶ್ರೀಮಂತ ವರ್ಗದವರು ಕೂಡಾ ಸಂದರ್ಭಗಳ ಒತ್ತಾಯದಿಂದ ಹೇಗೆ ಸರಳ ಜೀವನವನ್ನನುಸರಿಸುತ್ತಿರುವರೆಂಬ ಸಂಗತಿಯು ಕೌತುಕವನ್ನುಂಟುಮಾಡಿತು. ಬ್ರಿಟನು ತನ್ನ ಆಹಾರಕ್ಕಾಗಿ ಪರರಾಷ್ಟ್ರಗಳ ಮೇಲೆ ಹೊಂದಿರಬೇಕಾಗಿದೆ. ಆಹಾರ ತರಿಸಲು ಇಂಗ್ಲಿಷ್ ಜನರು ಅನೇಕ ವಿಲಾಸೀ ವಸ್ತುಗಳ ಆಮದುಗಳನ್ನು ನಿಲ್ಲಿಸಿರುವರು. ಮಾತ್ರವಲ್ಲ ಕರ್ಮುಗ ಕಪ್ಪು ಬೀಳುವ ಬಟ್ಟೆಗಳನ್ನು ಆಹಾರ ತರಿಸುವ ದೇಶಗಳಿಗೆ ಕಳುಹಿಸಿಬಿಡಬೇಕಾದ ಪ್ರಸಂಗ ಆ ಜನರಿಗೆ ಬಂದಿರುತ್ತದ

ಇದರ ಪರಿಣಾಮವಾಗಿ ಬ್ರಿಟಿಷ್ ಜನತೆ ತಮ್ಮ [illegible] ಪುತಂಡುಪುಗಳನ್ನು ಅತ್ಯಂತ ಸರಳಮಟ್ಟಕ್ಕೆ ನಿಲ್ಲಿಸಿದೆ. ಉದಾ: ಅಲ್ಲಿನ ಮಹಿಳೆಯರ ಹೆಚ್ಚಾಗಿ [illegible] ಗಳನ್ನೀಗ ಉಪಯೋಗಿಸುವುದಿಲ್ಲ. ಪುರುಷರು ಸ್ನಾನದ ಉಡುಪುಗಳಲ್ಲಿ ಸೈಕಲ್ಲುಗಳಲ್ಲಿ ಸಂಚರಿಸುತ್ತಾರೆ. ಅನೇಕರು ಒಂದು ಚಡ್ಡಿ ಮತ್ತು [illegible] ನ್ನು ಕಳೆಯುವ ಪ್ರಯತ್ನಿಸುತ್ತಾರೆ. ಈ ಜನರೇನು ಗಾಂಧಿ ಅನುಯಾಯಿಗಳಲ್ಲ. ಆದರೆ ಇಂದವರು ನಮ್ಮ ವ [illegible] ಗಿ [illegible] ವಸ್ತುಗಳನ್ನುಡುವಂತಾಗಿದೆ. ಹಿಂದಿನ ಕಾಲದ ಇಂಗ್ಲೆಂಡಿನಲ್ಲಿ [illegible] ಈ ಅತ್ಯಲ್ಪ ವೋಷಾಕು [illegible] ಕೃದುವಾದಲ್ಲ ದುತಿದ್ದರು

ಶ್ರಮ ಗೌರವ

[illegible] ಹೆಚ್ಚಾಗಿರುವುದರಿಂದ ಶ್ರೀಮಂತ ಬ್ರಿಟಿಷ್ ಮಹಿಳೆಯರು [illegible], ಸ್ವಂತ ಅಡಿಗೆ, ಒಗೆಯುವಿಕೆ, ಪಾತ್ರ ತಿಕ್ಕುವಿಕೆಗಳನ್ನು ಮಾಡುತ್ತಿರುವರು. ನಮ್ಮ ದೇಶದಲ್ಲಿ ಆಹಾರ ಹೆಚ್ಚು ಬೆಳೆಸಿರಿ ಚಳವಳವು ಗೋಡೆಗಳಲ್ಲಿ ವಿರತ ಸಾಗುತ್ತಿರುವಾಗ ಇಂಗ್ಲೆಂಡಿನ ಸಂಸಾರಸ್ಥರು ಒಂದು ಕಾಲದಲ್ಲಿ ಕಸ ಕೊಳೆಯಿಂದ ತುಂಬಿರುತ್ತಿದ್ದ ತಮ್ಮ ಸಣ್ಣ ಪುಟ್ಟ ಹಿತ್ತಿಲು, ತೋಟಗಳಲ್ಲಿಂದು ತರಕಾರಿಗಳನ್ನು ಬೆಳೆಸುತಿದ್ದಾರೆ. ಪ್ರತಿಯೊಬ್ಬರೂ ತಮ್ಮ ವಿರಾಮ ಕಾಲವನ್ನು ಆಹಾರದ ಬೆಳವಣಿಗೆಗಾಗಿ ಉಪಯೋಗಿಸುತ್ತಾರೆ.

ನಾವು ಉದ್ದೇಶಪೂರ್ವಕವಾಗಿ ನಮ್ಮ ಜೀವನಾವಶ್ಯಕತೆಗಳನ್ನು ಅತ್ಯಂತ ಸರಳಮಟ್ಟಕ್ಕಿಳಿಸಿದರೆ 'ಭ್ರಾಂತ'ರೆನಿಸಲ್ಪಡಬೇಕಾಗಿಲ್ಲ. ಇಂದು ಲಂಡನಿಗರು ಗಾಂಧಿ ರೀತಿ ನೀತಿಗಳನ್ನನುಸರಿಸುವ ಸಂದರ್ಭ ಒತ್ತಾಯಕ್ಕೆ ಸಿಲುಕಿದ್ದಾರೆ. ಆದುದರಿಂದ ಅಂತ ಪರಿಸ್ಥಿತಿಗಾಗಿ ಮೊದಲೇ ಸಿದ್ಧಪಡಿಸಿಕೊಳ್ಳುವುದು ಎಷ್ಟು ಉತ್ತಮ ದೂರದೃಷ್ಟಿಯ ವಿಚಾರವಾಗಿದೆ!



ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ ಲಿಟ್ಲ್ಸ್ ಓರಿಯಂಟಲ್ ಬಾಮನ್ನು ಉಪಯೋಗಿಸಿರಿ.

ಸ್ವದೇಶ ವಾರ್ತೆ

★ ಡಿಲ್ಲಿ ಪಂಜಾಬುಗಳು ಸಂಪೂರ್ಣ ಶಾಂತ ಗೊಂಡಿಲ್ಲವಾದರೂ ನಿರಾಶ್ರಿತರ ಸ್ಥಳಾಂತರವು ಹೆಚ್ಚಿನ ಭದ್ರತೆಯಿಂದಲೂ ಸುವ್ಯವಸ್ಥಿತವಾಗಿಯೂ ಸಾಗಿದೆ. ಡಿಲ್ಲಿಯಲ್ಲಿ ಮಹಾತ್ಮರ ಶಾಂತಿ ಸ್ಥಾಪನೆ ಕಾರ್ಯವು ಯಶಸ್ವಿ ಪರಿಣಾಮಗಳನ್ನು ತೋರಿದೆ. ಮುಸ್ಲಿಮ್ ಪ್ರದೇಶಗಳಲ್ಲಿ ಅವರನ್ನು ಸನ್ಮಾನ ಪೂರ್ವಕವಾಗಿ ಸ್ವಾಗತಿಸಲಾಗುತ್ತಿದೆ. ಅವರ ಪ್ರಾರ್ಥನೆಯಲ್ಲಿ ಕುರಾನ ಪಠಣಕ್ಕೆ ಮೊದಲು ಅಡ್ಡಿ ತೆಗೆದ ಸಿಕ್ಖರು, ಈಗ ಆಕ್ಷೇಪವೆತ್ತುತ್ತಿಲ್ಲ. ಮುಸ್ಲಿಮರು ತಮ್ಮ ಬಳಿಯಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಅವರ ಕಾಲಡಿಗೆ ತಂದೊಪ್ಪಿಸಿರುವರು ಜಾಫರುಲ್ಲಾ ಖಾನ್, ಗಜ್ನಾಫರ್ ಅಲಿ ಮತ್ತು ಲಿಯಾಖತ್ ಅಲಿಖಾನರ ಪಕ್ಷಪಾತದ ದೂರಿನ ಪ್ರಕಟಣೆಗಳನ್ನು ಸಂಯುಕ್ತ ಪ್ರಾಂತ್ಯದ ಲೀಗ್ ದುರೀಣ ಖಾಲಿಕ್-ಉಜಾಮರು ಖಂಡಿಸಿರುವರು. ಅಧ್ಯಕ್ಷ ಕೃಪಲಾನಿಯವರು ಜಿನ್ನರನ್ನು ಕಂಡು ಅಲ್ಪ ಸಂಖ್ಯಾಕರ ರಕ್ಷಣೆಯ ಭರವಸೆ ಪಡೆದರು

★ ಮೈಸೂರು ಇನ್ನು ಧಗಧಗಿಸುತ್ತಲಿದೆ. ದಬ್ಬಾಳಿಕೆ ನಡೆಯುತ್ತಿರುವಾಗಲೇ ದಿವಾನ ಆರ್ಕಾಟರು ಸುಧಾರಣೆ ಯೋಜನೆಗಳನ್ನು ಮಹಾರಾಜರಿಗೆ ಅರ್ಪಿಸಿರುವರು ಅನಾವಶ್ಯಕ ಈ ಕಾಲವಿಳಂಬದಿಂದ ಹಾನಿಯಾಗುತ್ತದೆಂದು ನಿರೀಕ್ಷಕರು ಎಚ್ಚರಿಸಿದ್ದಾರೆ ಅಲ್ಲಿನ ಮಾಜಿ ಅರಸರ ಮಹಾರಾಣಿಯವರು ಜನತೆಯ ಆಶಯ ಪೂರೈಸಬೇಕೆಂಬುದಾಗಿ ಉಪವಾಸ ಕೈಕೊಂಡಿರುವರೆಂದೂ ಸುದ್ದಿಯೂ ಪ್ರಕಟವಾಗಿದೆ

★ ನಿಜಾಮ ಸರಕಾರ ತಮ್ಮ ಶಾಂತಿ ಶಿಸ್ತು ಅಧಿಕಾರಿಗಳಿಗೆ ಗುಂಡಿನ ಸರ್ವಾಧಿಕಾರ ಕೊಟ್ಟದ್ದು ಜನತೆಯ ಮೇಲೆ ನಿರ್ದಾಕ್ಷಿಣ್ಯವಾಗಿ ಪ್ರಯೋಗಿಸಲಾಗಿದೆ ಸಂಸ್ಥಾನದ ಆಡಳಿತ ಹೆಚ್ಚು ಕಡಿಮೆ ಕುಸಿದು ಬಿದ್ದಂತಾಗಿದೆ ಈನ್ಮಧ್ಯೆ ಹೈದರಾಬಾದ್ ಮತ್ತು ಭಾರತ ಒಕ್ಕೂಟದ ಪರಸ್ಪರ ವ್ಯವಹಾರ ಯೋಜನೆಯ ಮಾತುಕತೆಗಳಿಗಾಗಿ ನಿಜಾಮ ಪ್ರತಿನಿಧಿ ಮಂಡಳಿಯೊಂದು ಡಿಲ್ಲಿ ತೆರಳಿದೆ.

★ ಮದ್ರಾಸ್ ನ್ಯಾಯ ವಿಧಾಯಕ ಸಭೆಯಲ್ಲಿ ಜಮೀನ್ದಾರಿ ಪದ್ಧತಿಯ ರದ್ದಾಯತಿ ಸ್ತ್ರೀಯರಿಗೆ ಸಮಾನ ಹಕ್ಕುಗಳ ನಿರ್ಮಾಣ, ಪಾನನಿರೋಧ, ಮೋಟಾರು ರಾಷ್ಟ್ರೀಕರಣ ಹಿಂದೂ ಮತ ಸಂಸ್ಥೆಗಳ ನಿಕೇಂದ್ರೀಕರಣ ಇವೇ ಮೊದಲಾದ ವಿಷಯಗಳ ಕುರಿತು ಬಿರುಸಾದ ಚರ್ಚೆ ನಡೆದಿದೆ. ಯಾವುದೊಂದು ನಿರ್ದಿಷ್ಟ ಇತ್ಯರ್ಥಕ್ಕೆ ಬರಲಿಲ್ಲ

★ ಇತ್ತೀಚೆಗಿನ ವರದಿಗಳ ಪ್ರಕಾರ ಮೈಸೂರು ಮಹಾರಾಜರು ನಮ್ಮ ಸ್ವಂತ ಅರಮನೆಯಲ್ಲಿ 'ಬಂಧಿ'ಗಳಂತೆ ಕಾಯಲ್ಪಡುವರೆಂದೂ ಮಹಾರಾಣಿಯರ ಉಪವಾಸದ ಸಂಗತಿಯೂ ನಿಜವೆಂದೂ ತಿಳಿದು ಬಂದಿದೆ. ಅಲ್ಲಿನ ಸತ್ಯಾಗ್ರಹದಲ್ಲಿ ಈಚೀಚೆಗೆ ಪೋಲಿಸ್ ಅಧಿಕಾರಿಗಳೂ ಭಾಗವಹಿಸುತ್ತಿರುವ ವರದಿಗಳು ಬಂದಿವೆ.

★ ಅಲ್ಪಸಂಖ್ಯಾಕರನ್ನು ಸಂಪೂರ್ಣ ಸ್ಥಳಾಂತರಕ್ಕೆ ಒತ್ತಾಯ ಪಡಿಸುವುದು ಶುದ್ಧ ಹುಚ್ಚು ಎಂದೂ, ಬ್ರಿಟಿಷರನ್ನು ಓಡಿಸಿದಂತೆ ಅವರ ಭಾಷೆ ಇಂಗ್ಲಿಷನ್ನು ನಮ್ಮ ಶಿಕ್ಷಣಾಲಯಗಳಿಂದ ತೊಡೆದು ಹಾಕಬೇಕೆಂದೂ, ಭಾರತದಲ್ಲಿ ಇಂದು ಕಂಡು ಬರುತ್ತಿರುವ ಪ್ರಾಂತೀಕ ಭಾವನೆಗಳು ಹಾನಿಕಾರಕವೆಂದೂ ಮಹಾತ್ಮಾ ಗಾಂಧಿಯವರು ಇತ್ತೀಚೆಗಿನ ಹರಿಜನದಲ್ಲಿ ಒತ್ತಿ ಹೇಳಿದ್ದಾರೆ.

ವಿದೇಶ ರಾಜಕೀಯ

ಪೂರ್ವ ಇಂಡೋನೇಶಿಯದ ಪ್ರಧಾನ ನಿಡ್ಜಾಮೆದ್ದಿನರನ್ನು ಲಂಚವಂಚನೆಯ ಆರೋಪದ ಮೇಲೆ ಡಿಸ್‌ಮಿಸ್ ಮಾಡಲಾಗಿದೆ. ಡಚ್ ಈಸ್ಟ್ ಇಂಡೀಸಿನ ಗವರ್ನರ್ ಜನರಲ್ಲರಾದ ಡಾ। ವೇನ್ ಮೂಖರು ಅಲ್ಲಿನ ಕಲಹವು ಅಂತರಾಷ್ಟ್ರೀಯ ಮಧ್ಯಸ್ತಿಕೆಗಾರರ ತೃಪ್ತಿಗನುಸಾರವಾಗಿ ಇತ್ಯರ್ಥಿಸಲ್ಪಡುವುದೆಂದು ಹಾರೈಸಿದ್ದಾರೆ.

卐

ದಕ್ಷಿಣ ಆಫ್ರಿಕಾ ಮತ್ತು ಭಾರತದ ಕುರಿತಾದ ಚರ್ಚೆಯನ್ನು ಜನಾಂಗ ಸಂಘದ ನಿರ್ದೇಶಕ ಸಮಿತಿಯಿಂದ ನೇರವಾಗಿ ಸಂಘದ ಸಾಮಾನ್ಯ ಸಭೆಯಲ್ಲೇ ಇತ್ಯರ್ಥಕ್ಕೆ ಇಡಬೇಕೆಂದು ಜಸ್ಟಿಸ್ ಪಜ್ಲ ಹುಸೇನರು ತಿಳಿಸಿದ್ದಾರೆ

卐

ಯಾಲ್ಟಾ ಒಪ್ಪಂದದ ಶರ್ತಗಳನ್ನು ಮುರಿಯುವ ಯಾವುದೇ ಕಾರ್ಯಗಳನ್ನು ಇನ್ನು ಮುಂದೆ ರೊಮೇನಿಯಾ ಮತ್ತು ಬಲ್ಗೇರಿಯಾ ಸರಕಾರಗಳು ಕೈಕೊಂಡರೆ ಇಡೀ ಯುರೋಪಿನ ವಿರೋಧವಾಗಿ ಕೊಲೆವ್ಯಾತದ ಅಪರಾಧಗೈದಂತಾಗುವುದೆಂದು ಓರ್ವ ಬ್ರಿಟಿಷ್ ವಿದೇಶಾಂಗ ಕಛೇರಿಯ ವಕ್ತಾರರು ಎಚ್ಚರಿಕೆ ಕೊಟ್ಟಿರುವರು

卐

ಜೆಕೋಸ್ಲೊವೇಕಿಯದ ಸರಕಾರವನ್ನು ಕಿತ್ತುಹಾಕಲು ಪ್ರಯತ್ನಿಸಿದರೆಂಬ ಅಪವಾದನೆಯ ಮೇಲೆ ನೂರು ಮಂದಿ ಕ್ರೈಸ್ತ ಪಾದ್ರಿ, ಮಾದ್ರಿ ಮತ್ತು ಉಪಾಧ್ಯಾಯರುಗಳ ವಿಚಾರಣೆಯಾಗಲಿದೆ

卐

ಬರ್ಮಾವನ್ನು ಸಂಪೂರ್ಣ ಸ್ವತಂತ್ರವಾಗಿ ಮಾಡುವ ಬ್ರಿಟಿಷ್ ಘೋಷಣೆಯು ಬರ್ಮಾದಲ್ಲಿ ಸ್ವಾನಂದದಿಂದ ಸ್ವೀಕರಿಸಲ್ಪಟ್ಟಿದೆ ದೇಶಾಡಳಿತದ ಲಂಚಗುಳಿತನವನ್ನು ನಿರ್ಮೂಲಿಸಲು ಅಲ್ಲಿ ಉಗ್ರ ಕಾರ್ಯಕ್ರಮ ಕೈಕೊಳ್ಳಲಾಗುವುದು

卐

ಯುರೋಪಿಗೆ ಮಾರ್ಶಲ್ ಯೋಜನೆಯ ಸಹಾಯದ ಕುರಿತ ಪರ್ಯಾಲೋಚಿಸಲು ಇದೀಗಲೇ 16 ಜನಾಂಗಗಳು ಒಪ್ಪಿವೆಯಾದರೂ ಸಂಯುಕ್ತ ಅಮೇರಿಕಕ್ಕೇ ಈ ಯೋಜನೆಯಲ್ಲಿ ಅತೃಪ್ತಿಯುಂಟಾಗಿದೆಯೆಂದೂ ಅದು ಹೃತ್ಪೂರ್ವಕವಾಗಿ ಈ ವಿಷಯ ಇತ್ಯರ್ಥಿಸಲು ಇಷ್ಟವುಳ್ಳದಾಗಿಲ್ಲವೆಂದೂ ಶಂಕಿಸಲಾಗಿದೆ

卐

1948ರ ಬೆಳೆ ಕೊಯ್ಯುವಿಕೆಯ ನಂತರವೂ ಜಗತ್ತು ದವಸ ಧಾನ್ಯಗಳ ಕೊರತೆಯಿಂದ ಸಂಕಷ್ಟಪಡುವುದೆಂದು ವಿಶ್ವ ಆಹಾರ ಮತ್ತು ಕೃಷಿಗಾರಿಕೆ ಸಂಘದ ಸರ್ ಜಾನ್ ಬೊಯ್ಡ್ ಓರರು ಪೆರಿಸಿನ ಒಂದು ಪತ್ರಿಕಾಪ್ರತಿನಿಧಿ ಸಭೆಯ ಪ್ರಕಟಣೆಯಲ್ಲಿ ತಿಳಿಸಿದರು

★ ನವಯುಗ ★

ಬಡತನ ಅಜ್ಞಾನ ಅನ್ಯಾಯ ಅವನತಿಗಳಿಂದ ಬಿಡುಗಡೆ

ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿ ಇವರಿಂದ

ಅನೇಕ ವರ್ಷಗಳಿಂದ ನಾವು ಆಶಿಸಿದ್ದ ಸ್ವಾತಂತ್ರ್ಯ ಉದಯಿಸಿದ ಈ ದಿನ ಮಹಾ ಸುದಿನ. ನಮ್ಮ ದೇಶದ ಇತಿಹಾಸದಲ್ಲಿ ಇಂದಿನಿಂದ ಒಂದು ನವ ಯುಗ ಆರಂಭವಾಯಿತೆನ್ನಬಹುದು ಜಗತ್ತಿನ ಸ್ವಾತಂತ್ರ್ಯ ಪ್ರೇಮಿಗಳೆಲ್ಲಾ ಈ ದಿನ ನಮ್ಮೊಡನೆ ಆನಂದ ಪಡುವರೆಂಬುದರಲ್ಲಿ ಸಂದೇಹವಿಲ್ಲ ಒಂದು ವರೆ ಶತಮಾನದಿಂದ ಬ್ರಿಟಿಷರ ವಶವಿದ್ದ ಆಡಳಿತೆಯ ಅಧಿಕಾರವನ್ನು ಅವರು ಇಂದಿಗೆ ಹಿಂದೀಯರಿಗೆ ಬಿಟ್ಟುಕೊಟ್ಟು ಶ್ರೇಯಸ್ಸು ಪಡೆದಿರುವರು ಸ್ವಾತಂತ್ರ್ಯದ ಹೋರಾಟವನ್ನು ಹಿಂಸಾತ್ಮಕ ಕ್ರಿಯೆಗಳಿಲ್ಲದೆ ಹೇಗೆ ನಡೆಸಬಹುದೆಂದು ಭಾರತವು ಇತರ ದೇಶಗಳಿಗೆ ಒಂದು ನಿದರ್ಶನವನ್ನು ತೋರಿಸಿರುವುದು ಇದಕ್ಕಾಗಿ ಮಹಾತ್ಮಾ ಗಾಂಧಿಯವರಿಗೆ ಪ್ರಪಂಚವೇ ಋಣಿಯಾಗಿರಬೇಕು ನಮ್ಮ ಜನ್ಮ ಭೂಮಿಯ ಉದ್ಧಾರಕ್ಕಾಗಿ ಹೋರಾಡಿದ ಲೋಕಮಾನ್ಯ ತಿಲಕ್, ಲಜಪತ್‌ರಾಯ್, ಸಿ ಆರ್ ದಾಸ್ ಮೋತೀಲಾಲ್ ನೆಹರುಗಳೇ ಮೊದಲಾದ ಅನೇಕ ಮಹಾನ [illegible] ಸ್ವರಾಜ್ಯದ ಸುಪ್ರಭಾತವು ಒಡಮೂಡುವ ಮೊದಲೇ ಕಣ್ಮರೆಯಾದರು ಇಂತ ಮಹಾ ವೈಭವದ ಸಂದರ್ಭದಲ್ಲಿ ಈ ದೇಶಧುರೀಣರಿಗೆಲ್ಲಾ ನಮ್ಮ ಕೃತಜ್ಞತೆಗಳು ಸಲ್ಲಬೇಕಾಗಿವೆ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನು ಸವೆದ ಅನೇಕ ಮಂದಿ ಸ್ವಾರ್ಥ ತ್ಯಾಗಿಗಳು ಈಗಲೂ ನಮ್ಮ ಕಣ್ಣ ಮುಂದೆ ಜೀವಿಸುತ್ತಿದ್ದಾರೆ ಜವಹರಲಾಲ್ ನೆಹರು, ವಲ್ಲಭಭಾಯಿ ಪಟೇಲ್, ರಾಜೇಂದ್ರ ಪ್ರಸಾದ್, ಮೊದಲಾದ ದೇಶ ಭಕ್ತರ ನಿಸ್ವಾರ್ಥ ಜೀವನವು ನಮಗೆ ಅನುಕರಣೀಯವಾಗಿದೆ ಶಾಂತಿಯ ಒಪ್ಪಂದದಿಂದ ಹಿಂದುಸ್ಥಾನದ ಸ್ವಾತಂತ್ರ್ಯವು ದೊರಕುವಂತೆ ಮಾಡಿದ ಕೀರ್ತಿ ಮುಖ್ಯವಾಗಿ ಪೂಜ್ಯ ಗಾಂಧೀಜಿಯವರಿಗೆ ಸಲ್ಲತಕ್ಕದ್ದು ಈ ಪುಣ್ಯಪುರುಷರು ನಮ್ಮೊಡನೆ ಈ ಸ್ವಾತಂತ್ರ್ಯೋತ್ಸವದ ಸಂಭ್ರಮವನ್ನು ನೋಡುವಂತಾದುದು ನಮ್ಮೆಲ್ಲರ ಮಹಾ ಭಾಗ್ಯವೆನ್ನಬೇಕು

ಇನ್ನು ಮುಂದೆ ಸರಕಾರದ ಎಲ್ಲಾ ತರಗತಿಯ ಆಫೀಸರರು ಪರದೇಶೀಯರ ನೌಕರರಲ್ಲ ಈ ದೇಶದ ಸೇವಕರು, ಎಂಬುದನ್ನು ತಿಳಿದು ಜನತೆಯ ವಿಷಯದಲ್ಲಿ ತಮ್ಮ ಮನೋವೃತ್ತಿಯನ್ನು ತಿದ್ದಿಕೊಳ್ಳಬೇಕು ಜನತೆಯೂ ಕೂಡ ಪೋಲೀಸ್ ಇತ್ಯಾದಿ ಅಧಿಕಾರಿಗಳ ಮೇಲೆ ತಮಗಿದ್ದ ವಕ್ರ ದೃಷ್ಟಿಯನ್ನು ತೊರೆಯಬೇಕು ಜನತಾಸರಕಾರವಾದ ಮೇಲೆ ಎಲ್ಲರೂ ಸಹಕರಿಸಿ ತಮ್ಮ ತಮ್ಮ ಕರ್ತವ್ಯಗಳನ್ನು ದೇಶಹಿತದ ಸಾಧನೆಗಾಗಿ ಮಾಡಬೇಕು

ಪರದೇಶೀಯರ ಆಳಿಕೆಯ ಬಂಧನದಿಂದ ಬಿಡುಗಡೆಯಾದ್ದರಿಂದ ಮಾತ್ರವೇ ದೇಶದ ಏಳಿಗೆಯಾಗುವುದಿಲ್ಲ ಅಧಿಕಾರ ಸೂತ್ರವು ನಮ್ಮ ಕೈಗೆ ಬಂದದ್ದರಿಂದ ನಮ್ಮ ಕರ್ತವ್ಯ ಜವಾಬುದಾರಿಕೆಗಳು ಬಹಳವಾಗಿವೆ ಇನ್ನು ಮುಂದೆ ಯುದ್ಧ ಸಂಭವಿಸಿದರೆ ಶತ್ರುಗಳಿಂದ ದೇಶವನ್ನು ನಾವೇ ರಕ್ಷಿಸಿಕೊಳ್ಳಬೇಕು. ಬಡತನ, ಅಜ್ಞಾನ, ಅನ್ಯಾಯ ಅವನತಿಗಳಿಂದ ಸಾಮಾನ್ಯ-ಜನತೆಯನ್ನು ಬಿಡುಗಡೆ ಮಾಡಿ ಅವರ ಭಾವೀ ಜೀವನವನ್ನು ಸುಗಮವಾಗಿ ಮಾಡುವುದು ನಮ್ಮ ಮಹತ್ವದ ಕೆಲಸವಾಗಿದೆ ದೇಶದ ಆರ್ಥಿಕ ಸ್ಥಿತಿ ಸುಧಾರಿಸಬೇಕು. ನಮ್ಮ ದೇಶವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿ ಇತರ ಸ್ವತಂತ್ರರಾಷ್ಟ್ರಗಳೊಡನೆ ಸಮಾನತೆಯ ಸ್ಥಾನಮಾನ ಪಡೆಯುವಂತಾಗಬೇಕು. ರಾಷ್ಟ್ರೀಯ ಸರಕಾರ ಬಂದೊಡನೆ ಇಷ್ಟೆಲ್ಲ ಮಹತ್ವದ ಕಾರ್ಯಗಳನ್ನು ಸ್ವಲ್ಪ ಅವಧಿಯಲ್ಲಿ ಮಾಡಿ ತೀರಿಸಬಹುದೆಂದು ನೆನಸುವುದು ತಪ್ಪು ಹೊಸ ಸರಕಾರದ ಕಷ್ಟ ಅಡಚಣೆಗಳನ್ನು ಜನರು ತಿಳಿದುಕೊಳ್ಳುವುದು ಅಗತ್ಯ ಯುದ್ಧವು ಮುಗಿದರೂ ಅದರ ದುಷ್ಪರಿಣಾಮವು ಇನ್ನೂ ಕೊನೆಗೊಂಡಿಲ್ಲ. ಆಹಾರ ಬಟ್ಟೆಗಳ ಕೊರತೆ, ಏರಿದ ಬೆಲೆ, ಜೀವನದ ವೆಚ್ಚದಲ್ಲಿ ಅಧಿಕ್ಯ, ಮಜೂರರ ಅತೃಪ್ತಿ, ಹೆಚ್ಚಿನ ವೇತನಕ್ಕಾಗಿ ಒತ್ತಾಯ ಇವೆಲ್ಲಾ ಯುದ್ಧವು ಬಿಟ್ಟೋಡಿದ ವಿಷಬೀಜಗಳು ದೇಶದ ಆರ್ಥಿಕ ದುಸ್ಥಿತಿಯನ್ನು ಹೋಗಲಾಡಿಸಲು ಸರಕಾರವು ತಕ್ಕ ಉಪಾಯಗಳನ್ನು ಕೈಕೊಳಬೇಕಾಗಿದೆ ನಮ್ಮ ಉತ್ಪನ್ನಗಳನ್ನು ಹೆಚ್ಚಿಸಬೇಕು ಸಾಂಪತ್ತಿಕ ಪರಿಸ್ಥಿತಿಯನ್ನು ಸುಧಾರಿಸಬೇಕು ಇಲ್ಲವಾದರೆ ಯುದ್ಧಾನಂತರದ ಎಲ್ಲಾ ಅಭಿವೃದ್ಧಿಯ ಯೋಜನೆಗಳೂ ತಿರುಕನ ಕನಸಿನಂತೆ ಗಾಳಿಯ ಗೋಪುರದಂತೆ ವಾಯುವಾಗಬಹುದು ಈ ಸುದಿನದಲ್ಲಿ ನಮ್ಮ ರಾಷ್ಟ್ರದ ಪತಾಕೆಯು ಎಲ್ಲೆಲ್ಲೂ ಹಾರಾಡುತ್ತಿದೆ ತ್ರಿವರ್ಣದಿಂದ ಕಂಗೊಳಿಸುವ ಈ ರಾಷ್ಟ್ರ ಪತಾಕೆಗೆ ಅಶೋಕ ಚಕ್ರವು ಇನ್ನಷ್ಟು ಕಳೆಕೊಟ್ಟಿದೆ ಇದು ಭಾರತದ ಅನೇಕಾನೇಕ ಚಾರಿತ್ರಿಕ ಘಟನೆಗಳ ಚಿಹ್ನೆಯಾಗಿದೆ ಅಶೋಕ ಚಕ್ರವರ್ತಿಯ ಕಾಲದಲ್ಲಿ ನಮ್ಮ ದೇಶದ ಸಂದೇಶವಾಹಕರ ದೂರ ದೂರದ ದೇಶಗಳಿಗೆ ಸಾಗಿದ್ದಾರೆ ಶಾಂತಿ-ಸೌಸ್ಥ್ಯ-ಶುಭಾಶಯಗಳ ಸಂದೇಶಗಳನ್ನು ಸಾರಿದ್ದರು ಇಂದಿನ ಕಾಲ ಸಂಕುಚಿತವಾದ ರಾಷ್ಟ್ರೀಯತೆಗೆ ಅವಕಾಶಕೊಡುವ ಕಾಲವಲ್ಲ ನಾವೀಗ ಇಡೀ ಪ್ರಪಂಚವೇ ಅನ್ಯೋನ್ಯ ಜೊತೆಯಾಗಿರುವ ಯುಗಕ್ಕೆ ಕಾಲಿಟ್ಟಿದ್ದೇವೆ ನಮ್ಮ ಭಾರತ ಭೂಮಿಯು ಸಂಯುಕ್ತ ರಾಷ್ಟ್ರಗಳ ಸಂಸ್ಥೆಯಲ್ಲಿ ತಕ್ಕ ಸ್ಥಾನವನ್ನು ಹೊಂದಿ ಜಗತ್ತಿನ ಶಾಂತಿಗೂ ಮಾನವಕೋಟಿಯ ಹಿತಕ್ಕಾಗಿ ತನ್ನ ಹೃತ್ಪೂರ್ವಕವಾದ ಸಹಕಾರವನ್ನು ಕೊಡಬೇಕು

ಜೈ ಹಿಂದ್

[15-8-'47ಕ್ಕೆ ಮದ್ರಾಸ್ ಆಕಾಶವಾಣಿಯಿಂದ ಸಾರಿದ ಸಂದೇಶ]

ಇಂಗ್ಲೆಂಡಿನಲ್ಲಿ ಸಿಗರೇಟುಗಳ ಬಲೆ ವಿಪರೀತ ಏರಿದುದರ ಪರಿಣಾಮವಾಗಿ ಕೆಲವು ತಂಬಾಕ ಸೇವಕರು ಚಹಸೊಪ್ಪನ್ನು ಹೊಗೆ ನಳಿಗೆಯಲ್ಲಿಟ್ಟು ಸೇದಹತ್ತಿರುವರು

★

ಚೀನಿ ಭಾಷೆಯ ಟ್ಯಾಪ್ ರ್ಯಾಟರ್ ಯಂತ್ರವನ್ನು ಕಂಡುಹಿಡಿಯಲು ಅನೇಕ ಯಾಂತ್ರಿಕ ತಜ್ಞರು ಇದುತನಕ ಮಾಡಿದ ಯತ್ನಗಳು ನಿಷ್ಫಲವಾಗಿದ್ದುವು ಈಗ ಲಿನ್ ಯು ಪಿಂಗ್ ಎಂಬ ಚೀನಿ ಗ್ರಂಥಕಾರನು 90 ಸಾವಿರ ಚೀನಿ ಶಬ್ದಗಳನ್ನು ಟ್ಯಾಪ್ ಮಾಡುವ ಯಂತ್ರವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವನು.

ಬಂಜರು ಭೂಮಿಯಿಂದ ಉಪವನಕ್ಕೆ

ಆಸ್ಟ್ರೇಲಿಯದ ನದೀ ವಸಾಹತುಗಳ ಸಫಲತೆ

ಹಿಂದೂದೇಶವು ತನ್ನ ಈಗಿನ ಕೃಷಿ ನಿರ್ವಾಹಕ್ರಮವನ್ನವಿಕಸಿಸಬೇಕಾದ ಸಂದರ್ಭವೀಗ ಬಂದಿದೆ. ಅದು ಸಾಮುದಾಯಿಕವಾಗಬೇಕೋ ಅಥವಾ ಸಹಕಾರದಿಂದಾಗಬೇಕೋ ಎಂಬುದನ್ನು ಸರಿಯಾಗಿ ನಿರ್ಧರಿಸುವುದು ನಮ್ಮನ್ನೇ ಹೊಂದಿಕೊಂಡಿದೆ. ಪ್ರಾಯಶಃ ಸಹಕಾರಿ ಕ್ರಮವು ನಮ್ಮ ವಾತಾವರಣಕ್ಕೆ ಹೆಚ್ಚು ಅನುಕೂಲವಾಗಿದೆ. ಇಲ್ಲಿ ನಾವು ಆಸ್ಟ್ರೇಲಿಯದಲ್ಲಾದ ಕೆಲವು ಪ್ರಯೋಗಗಳ ಪರಿಣಾಮಗಳನ್ನು ಕೊಡುತ್ತೇವೆ. ಕೃಷೀ ಕ್ಷೇತ್ರದಲ್ಲಿ ನಾವು ಅವರಿಂದ ಕಲಿಯಬೇಕಾದುದು ಬಹಳವಿದೆ

1,500 ಮೈಲು ಉದ್ದವಿರುವ ಆಸ್ಟ್ರೇಲಿಯದ ಮುರ್ರೇ ನದಿಯ ಅಂಚಿನ ಪ್ರದೇಶವು ನೀರಾವರಿಯಿಂದಾಗಿ ಬಹಳ ಫಲವತ್ತಾದ ಪ್ರದೇಶವಾಗಿ ಮಾರ್ಪಟ್ಟಿದೆ. ಅದರ ಫಲವತ್ತತೆಯಿಂದಾಗಿ ಆಸ್ಟ್ರೇಲಿಯದಲ್ಲಿ ಲ್ಲೊ ಸಾಟಿಯಿಲ್ಲದ ಸಹಕಾರಿ ನಿರ್ವಾಹಕ್ರಮವು ಇಲ್ಲಿ ಪ್ರಚಾರದಲ್ಲಿದೆ

ಇಲ್ಲಿಯ ಸಹಕಾರಿ [illegible] ತಮ್ಮದೇ ಆದ ಮದ್ಯಶಾಲೆ [illegible], ಉಗ್ರಾಣ, ಸಿನೇಮಾಗೃಹ ಮತ್ತು ವಿದ್ಯುಚ್ಛಕ್ತಿ [illegible] ವಸಾಹತುಗಳ ಮಧ್ಯದಲ್ಲೇ ಸ್ಥಾಪಿಸಿದ್ದಾರೆ. ಅವರು ತಮ್ಮದೇ ಆದ ಉಪಹಾರಗೃಹಗಳನ್ನು ನಡೆಯಿಸಿ, [illegible] ತಮ್ಮ ನಗರಗಳ [illegible] ತಮ್ಮ ಜೀವನ [illegible] ಕಿರುತ್ತಾರೆ

ದಕ್ಷಿಣ ಆಸ್ಟ್ರೇಲಿಯದಲ್ಲಿ ಮುರ್ರೇ ನದಿಯ ದಡಗಳಲ್ಲಿ ಸಹಕಾರಿ [illegible] ಯಿಂದ ಅಭಿವೃದ್ಧಿ ಹೊಂದಿದ [illegible] ಪ್ರದೇಶವಿದೆ. ಇಲ್ಲಿ ದ್ರಾಕ್ಷೆ, ಕಿತ್ತಳೆ ಮೊದಲಾದ ಹಣ್ಣುಗಳು ಧಾರಾಳವಾಗಿರುವ ತೋಟಗಳು ಸಮೃದ್ಧವಾಗಿವೆ. [illegible] ನೊಂದು ಕಾಲದಲ್ಲಿ ಬಂಜರು ಪ್ರದೇಶವಾಗಿದ್ದ ಈ ಪ್ರದೇಶವು ಈಗ ನೀರಾವರಿ ಕಾಲುವೆಗಳಿಂದ ಉಪವನದಂತಾಗಿದೆ

ಇಲ್ಲಿ ನಾವು ಅಭಿವೃದ್ಧಿಯ ಹಾದಿಯಲ್ಲಿರುವ ಮತ್ತು ಉಜ್ವಲ ಭವಿಷ್ಯತ್ತುವಾದ ಅನೇಕ ನಗರಗಳನ್ನು ಕಾಣಬಹುದು. ಹಲವಾರು ವರ್ಷಗಳ ಅನುಕೂಲವಾದ ಋತುಗಳೂ, ಯೋಗ್ಯವಾದ ಬೆಲೆಯೂ ಕೃಷಿಕರ ಅಭಿವೃದ್ಧಿಗೆ ಕಾರಣವಾಗಿ, ಅವರ ಆರಂಭದ ಹೋರಾಟಗಳಿಗೆ ತಕ್ಕ ಪ್ರತಿಫಲವು ಸಿಕ್ಕಿದೆ.

ಡೆನ್ಮಾರ್ಕಿನಿಂದ ವ್ಯಾಕರಿಯ ವರೆಗೆ ವಿಸ್ತರಿಸಿರುವ 25,000 ಎಕ್ರೆ ವಿಸ್ತೀರ್ಣವಿರುವ ಫಲವತ್ತಾದ ಪ್ರದೇಶದಲ್ಲಿ, ಕೃಷಿಕರು ಸಹಕಾರಿ ಪದ್ಧತಿಯನ್ನು ತಮ್ಮ ಆರ್ಥಿಕ ಸ್ಥಿತಿಯಲ್ಲಿ ಪ್ರಚಾರಕ್ಕೆ ತಂದಿರುವರು. ಈ ಪದ್ಧತಿಯು ಎಲ್ಲೆಡೆಗೂ ಹಬ್ಬಿದೆ. ರೈತರಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯೂ ಅವರದೇ ಕೈವಾಡವಿದೆ. ಅವರು ಸಹಕಾರಿ ಪದ್ಧತಿಯ ಪ್ರೇಮಿಗಳಾಗಿರುವರಲ್ಲದೆ, ತಮ್ಮ ಸ್ಥಿತಿಗತಿಗಳಿಗನುಗುಣವಾದ ವ್ಯವಸ್ಥೆಯು ಅದೇ ಎಂಬುದಾಗಿ ನಂಬಿಕೊಂಡಿದ್ದಾರೆ. ಆದರೂ ಖಾಸಗಿ ವ್ಯಾಪಾರದ ಪ್ರೋತ್ಸಾಹವನ್ನು ಅವರಿನ್ನೂ ತ್ಯಜಿಸಿಲ್ಲ.

ಡೆನ್ಮಾರ್ಕಿನ ಆಧುನಿಕ ಪ್ರಜಾ ಉಪಹಾರಗೃಹವೊಂದು 1,50,000 ರೂ.ಗಳ ಲಾಭವನ್ನು ಈ ವರ್ಷ ಸಂಪಾದಿಸಿದೆ. ಅದರಲ್ಲಿ ಒಂದು ನಿರ್ದಿಷ್ಟ ಅಂಶವು ಉಪಹಾರ ಗೃಹದ ಅಭಿವೃದ್ಧಿಗೆ ಉಪಯೋಗಿಸಲ್ಪಟ್ಟು, 89,000 ರೂ.ಗಳು ನಗರದ ಜನರಿಗೆ ಹಂಚಲು ವ್ಯಯಿಸಲ್ಪಟ್ಟಿವೆ. ಇದರಲ್ಲಿ 32,000 ರೂ. ಸ್ಥಳೀಯ ವೈದ್ಯಾಲಯಕ್ಕೂ, 16,000 ರೂ. ಯುದ್ಧ ವಿಮುಖರಾದವರ ಸಂಘಕ್ಕೂ, 7,500 ರೂ ಪ್ರೌಢ ಶಾಲೆಗೂ ಮತ್ತು 4,300 ರೂ ಉಪವನಗಳ ದುರುಸ್ತಿಯೇ ಮೊದಲಾದ ಸಾರ್ವಜನಿಕ ಕಾರ್ಯಗಳಿಗೆ ವಿನಿಯೋಗಿಸಲ್ಪಟ್ಟಿವೆ

ಡೆನ್ಮಾರ್ಕಿನ ಈ ಉಪಹಾರ ಗೃಹವು [illegible] ಸಾರ್ವಜನಿಕ ಉಪಹಾರ ಗೃಹಗಳಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದೆ. [illegible] ನಗರಗಳಲ್ಲಿ [illegible] ಉಪಹಾರಗೃಹ [illegible] ಇದು [illegible] ಮೊದಲಾದ ಸೌಕರ್ಯಗಳನ್ನು ಒದಗಿಸುತ್ತಿದೆ

ಡೆನ್ಮಾರ್ಕ್ [illegible] ದೂರದಲ್ಲಿರುವ [illegible] ನಗರವು ಡೆನ್ಮಾರ್ಕನ್ನು [illegible] ಇದರಿಂದ [illegible] ನಗರವು [illegible] ಸಹಕಾರಿ ಪದ್ಧತಿಯ [illegible] ಇಲ್ಲಿಯ [illegible] ಸಾರ್ವಜನಿಕ ಉಪಹಾರ ಗೃಹದಿಂದ ಕಳೆದ ವರ್ಷ 86,000 ರೂ.ಗಳ ಲಾಭವಾಗಿದೆ.

ಆಸ್ಟ್ರೇಲಿಯದ ಈ ಭಾಗದ ಕೃಷಿಕರು, ತಮ್ಮ ವಸಾಹತುಗಳ ಅಭಿವೃದ್ಧಿಗೆ ಮುಖ್ಯ ಕಾರಣವು ಸಹಕಾರಿ ಪದ್ಧತಿಯೆಂಬುದಾಗಿ ಪರಿಗಣಿಸಿದ್ದಾರೆ. ಇಲ್ಲಿಯ ವ್ಯಾಪಾರವು ಬಹುಮಟ್ಟಿಗೆ ಸಹಕಾರ ಸಂಘಗಳ ಕೈಯಲ್ಲಿದೆ. ಕೃಷಿಕನು ತಾನು ಬೆಳೆಯಿಸಿದ ಹಣ್ಣುಹಂಪಲನ್ನು ಸಂಘಕ್ಕೆ ಸಲ್ಲಿಸಿದ ಕೂಡಲೇ ಅದರ ಕ್ರಯದ ಮುಕ್ಕಾಲಂಶ ಹಣವು ಅವನಿಗೆ ಪಾವತಿಯಾಗುವುದು. ವರ್ಷಾಂತ್ಯದಲ್ಲಿ ಅವನು ಒಪ್ಪಿಸಿದ ಹಣ್ಣಿನ ಕ್ರಯದಲ್ಲಿ ಉಳಿದ ಅಂಶವೂ, ಆ ವರ್ಷದ ಲಾಭಾಂಶವೂ ಅವನಿಗೆ ಸಲ್ಲುವುದು. ಈ ಕೃಷಿಕರಿಗೆ ಬೇಕಾದ ಸಕಲ ವಿಧದ ಸಲಕರಣೆಗಳು ಈ ಸಂಘಗಳಿಂದಲೇ ಒದಗಿಸಲ್ಪಡುತ್ತವೆ

ಈ ಸಂಸ್ಥೆಗಳಿಂದಾಗುವ ಸಾರ್ವಜನಿಕ ಪ್ರಯೋಜನದಿಂದಲೇ ಪ್ರಜಾಸಕ್ತಿಯು ಉದ್ಭವಿಸುವುದು. ಯಾವನಾದರೊಬ್ಬ ಕೃಷಿಕನು ತೊಂದರೆಗೊಳಗಾದರೆ, ಉಳಿದವರು ಒಡನೆಯೇ ಅವನ ಸಹಾಯಕ್ಕೆ ಧಾವಿಸುವರು.

ಆಸ್ಟ್ರೇಲಿಯದ ಈ ಮುರ್ರೇ ನದೀ ಪ್ರದೇಶದಲ್ಲಿ ಜನಸಂಖ್ಯೆಯು [illegible] ಸಮೃದ್ಧಿ [illegible] ಇಲ್ಲಿಯ ನಿವಾಸಿಗಳಲ್ಲಿ ನೆಲೆಗೊಂಡಿರುವ [illegible] ಯುದ್ಧದಿಂದ ವಿಮುಖರಾದ [illegible] ಸರಕಾರವು ಇನ್ನೂ ಅನೇಕ [illegible] ಯೋಜನೆಗಳನ್ನು [illegible] ಈ ಪ್ರದೇಶದ ಜನಸಂಖ್ಯೆಯು [illegible] ಹೆಚ್ಚುತ್ತಿರುವುದು ಸಂತೋಷಕರವಾದ ವಿಷಯ.

ಶಾಂತಿ ಸ್ಥಾಪಿಸಲು ಸಂಸ್ಥಾನಾಧೀಶರ ಸಹಾಯ
ನವನಗರದ ಜಾಮ್ ಸಾಹೇಬರ ಬೆಂಬಲ

ದೇಶದಲ್ಲಿನ ಅರಾಜಕತೆಯನ್ನು ಹತ್ತಿಕ್ಕಲು ಭಾರತ ದುರೀಣರಿಗೆ/ದೇಶಿ ಸಂಸ್ಥಾನಾಧೀಶರು ಸಂಪೂರ್ಣ ಬೆಂಬಲ ಕೊಡುವರೆಂಬ ಆಶ್ವಾಸನೆಯನ್ನು ನವ ನಗರದ ಜಾಮ್ ಸಾಹೇಬರು ಡಿಲ್ಲಿ ರೇಡಿಯೊದಿಂದ ಸಾರಿದರು. ಅವರ ಭಾಷಣದ ಸಾರಾಂಶ ಹೀಗಿತ್ತು

"ಕಳೆದ ತಿಂಗಳ ಘಟನೆಗಳನ್ನು ನಾವೆಲ್ಲರೂ ಆಸಕ್ತಿಯಿಂದ ನಿರೀಕ್ಷಿಸಿದ್ದೇವೆ. ಭಾರತದ ಇಂದಿನ ಆಡಳಿತಗಾರರಿಗೆದುರಿಸಿರುವ ಸಮಸ್ಯೆಯು ಜಗತ್ತಿನ ಯಾವ ದೇಶಕ್ಕೂ ಎದುರಿಸಿಲ್ಲ. ಸ್ವಾತಂತ್ರ್ಯದ ಮೊದಲ ತಿಂಗಳಲ್ಲೇ ಒಂತೆ ಭೀಕರ ಘಾತ್ಯ ಕಲಹವು ಕಿಡಿಯೆಬ್ಬಿಸಿತು. ಈ ಪರಿಸ್ಥಿತಿಯನ್ನು ಕೇಂದ್ರ ಸರಕಾರವು ಎದುರಿಸಿದ ಅದ್ಭುತ ಸ್ಥೈರ್ಯದಿಂದ ಸಂಸ್ಥಾನಾಧೀಶರೆಲ್ಲ ಭರವಸೆಯುಂಟಾಗಿದೆ. ಹಿಂದೀ ಸಂಸ್ಥಾನಗಳ [illegible] ಸುರಕ್ಷಿತವಾಗಿರುವುದೆಂಬ ವಿಶ್ವಾಸ ನಮ್ಮಲ್ಲುಂಟಾಗಿದೆ. [illegible] ಅಗಾಧ ಸಮಸ್ಯೆಯ [illegible] ಇತ್ತ ಆಹಾರದ ಪರಿಸ್ಥಿತಿಯು ಅತ್ಯಂತ ಕಳವಳಕಾರಿದ ಸಂಗತಿಗಳಾಗಿವೆ. ಈ ಸಂದರ್ಭದಲ್ಲಿ ಭಾರತ ಸರಕಾರಕ್ಕೆ ನಮ್ಮ ಸಹಕಾರವನ್ನು ಕೊಟ್ಟಿದ್ದರೂ ನಾವು ಸಹಾಯ ಮಾಡಲು ಸಿದ್ಧರಿದ್ದೇವೆಂದು ನನ್ನ [illegible] ಮಂಡಲೀಶರ ಪರವಾಗಿ ದೇಶದ [illegible] ಭರವಸೆ ಕೊಡಬಯಸುತ್ತೇನೆ"

ಪ್ರಯಾಣಿಕರಿಗೆ ಸೂಚನೆ.

[illegible] ಕಳೆದ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟಿನ ಕೇವಲ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ ಕೋಸ್ಟಲ್ಲಾನಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗಳೂರು-ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T. O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಒದಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ. ಇದರಿಂದ ಮಂಗಳೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜೊಯಿಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.



ಹುಳುಕಡ್ಡಿ ಮುಲಾಮು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಬ್ಬ, ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 – 3.28 Crores.

Our Chief Agency New Business in 1946 { **About 54 lakhs**

experience of 37 years avialable to you for arranging Insurance Investment.
It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal ~~diseases and also valuable to~~ puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೊಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 3—10—1947 [ಸಂಚಿಕೆ 39]

ದೇಶದ ಮತ್ತು ಪ್ರಾಂತದ ಆಹಾರ ಪರಿಸ್ಥಿತಿ

ಆಹಾರ ಮಂತ್ರಿಗಳವರ ಹೇಳಿಕೆಗಳು

ಕೆಲವೇ ಕಷ್ಟದ ವಾರಗಳು

“ದೇಶದ ಆಹಾರ ಪರಿಸ್ಥಿತಿಯು ದಿನೇ ದಿನೇ ಹದಗೆಡುತ್ತಿರುವುದರಿಂದ ಸದ್ಯದಲ್ಲೇ ದೇಶದ ರೇಶನ್ ವ್ಯವಸ್ಥೆಯು ಮುರಿದು ಬೀಳುವುದು ಮಾತ್ರವಲ್ಲ ಜನತೆಯು ನಮ್ಮ ಈಗಿನ ಪೂರೈಕೆಯಲ್ಲಿ ಇನ್ನಷ್ಟು ಹೆಚ್ಚಿನ ಆಹಾರ ಧಾನ್ಯ ಕಡಿತವನ್ನೆದುರಿಸಲು ಸಿದ್ಧರಿರಬೇಕು. “ಹೀಗೆಂದು ಕೇಂದ್ರ ಸರಕಾರದ ಆಹಾರ ಸಚಿವ ಡಾ। ರಾಜೇಂದ್ರ ಪ್ರಸಾದರು ತಿಳಿಸಿದರು ಮತ್ತೆ ಅವರು ತಿಳಿಸಿದ ಸಂಗತಿಗಳ ಸಾರಾಂಶ ಹೀಗಿದೆ

ವಿದೇಶಗಳಿಂದ ಆಹಾರ ವಸ್ತುಗಳನ್ನು ತರಿಸುವ ಕಷ್ಟಗಳು ಎಂದಿನಂತೆ ಇವೆ ಅವು ಬರುವುದು ಮೆಲ್ಲನ ಮಾತ್ರವಲ್ಲ ಅವು ಎಂದಿಗಿಂತ ಕಡಿಮೆ ಪ್ರಮಾಣದವೂ ಆಗಿರುತ್ತವೆ ನಿಂದಿತವಾಗಿ ಬರುತ್ತವೆಂದು ಹೇಳಲೂ ಸಾಧ್ಯವಿಲ್ಲ ನಮ್ಮ ದೇಶದಲ್ಲಾದರೂ ಆಹಾರ ಧಾನ್ಯ ಸಂಗ್ರಹಣ ಕಾರ್ಯವೂ ಸಾಕಷ್ಟು ತೃಪ್ತಿಕರವಾಗಿ ನಡೆದಿಲ್ಲ ಕೃಷಿಕ ಮತ್ತು ವ್ಯಾಪಾರಿಗಳೊಳಗೆ ಪರಸ್ಪರ ಸಹಕಾರದ ಕೊರತೆಯಿರುವುದೇ ಇದಕ್ಕೆ ಕಾರಣ ಈ ದುರು [illegible] ರೇಶನ್ ಪ್ರಾರಂಭಿಸಿದಂದಿನಿಂದಲೇ ಇದೆ

ಪಾಕಿಸ್ಥಾನದ ರಚನಾನಂತರವಂತೂ ಆಹಾರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ ಆ ಸರಕಾರವು ತಾನು ವಚನವಿತ್ತ 55 ಸಾವಿರ ಟನ್ ಅಕ್ಕಿ ಗೋಧಿಯನ್ನು ಇದ ತನಕ ಕಳುಹಿಸಿಕೊಟ್ಟಿಲ್ಲ ಆದರೆ ಪಾಕಿಸ್ಥಾನದಲ್ಲಿನ ಮಿಗಿತಾಯದ ಆಹಾರ ಧಾನ್ಯಗಳನ್ನು ತರಿಸುವ ವಿಷಯ ಆ ಪ್ರದೇಶಕ್ಕೆ ಇಲ್ಲಿಂದ ಉಕ್ಕು, ಕಲ್ಲಿದ್ದಲುಗಳನ್ನು ಕಳುಹಿಸಿ ಕೊಡುವ ಸಂಬಂಧದಲ್ಲಿ ನಡೆಯುವ ಮಾತುಕತೆಯ ಸಂದರ್ಭದಲ್ಲಿ ಯತ್ನಿಸಲಾಗುವುದು

ದೇಶದ ಆಹಾರ ಬೆಳೆಗಳ ಪ್ರಮಾಣವನ್ನು ಹೆಚ್ಚಿಸಲು ಅನೇಕ ಯೋಜನೆಗಳನ್ನು ಈಗಾಗಲೇ ಕೈಕೊಳ್ಳಲಾಗಿದೆ ಸಣ್ಣಪುಟ್ಟ ನೀರಾವರಿ ಯೋಜನೆಗಳು, ಸುಧಾರಿತ ಬೀಜಗಳನ್ನು ಕೃಷಿಕರಿಗೆ ಪೂರೈಸುವಿಕೆ, ರಾಸಾಯನಿಕ ಗೊಬ್ಬರ ಸರಬರಾಯಿ, ಇವೇ ಮೊದಲಾದವುಗಳು ಶ್ರದ್ಧೆಯಿಂದ ನಿರ್ವಹಿಸಲ್ಪಡುವವು. ಆದರೆ ಇದರಿಂದ ಯಾವ ಸತ್ಪರಿಣಾಮವಾಗಿರಬಹುದೆಂದು ಈಗಾಗಲೇ ಪರಿಗಣಿಸುವುದು ಸ್ವಲ್ಪ ಕಷ್ಟ. ಸಿಂದರಿ ಎಂಬಲ್ಲಿ ಸ್ಥಾಪಿಸಲ್ಪಟ್ಟ ರಾಸಾ

ಮಾಸಿಕ [illegible] ಸರಿ ಪೂರ್ಣವಾಗುವ [illegible] ವರ್ಷಗಳ ಹೋಗುವ 1915ರಲ್ಲಿ ಅದು ಉತ್ಪತ್ತಿಗಾರಂಭಿಸಬಹುದು. ತನ್ನಷ್ಟು ದೇಶವು ಇದ್ದುದರಲ್ಲಿ ಸಂಭಾಳಿಸಿಕೊಳ್ಳಬೇಕಾಗಿದೆ ಅಲ್ಪ ಪ್ರಮಾಣದ ರಾಸಾಯನಿಕ ಗೊಬ್ಬರವನ್ನು ಹೊರಗಿನಿಂದ ತರಲಾಗುವುದು ಪ್ರತಿ ವರ್ಷ ಒಂದು ಮಿಲಿಯ ಟನ್‌ಗಳಷ್ಟು ಗೊಬ್ಬರದ ಸರಬರಾಯಿ [illegible]

ತ್ತಿಯು ದೇಶಗಳ ಕಳೆದ ವರ್ಷ ಕಳುಹಿಸಿದ ಕ್ಕಿಂತ ಕಮ್ಮಿ [illegible] ವನ್ನು ಈ ವರ್ಷ ಕಳುಹಿಸಲು ತಮ್ಮದೇ ಆದ ಕಾರಣಗಳನ್ನು ಕೊಟ್ಟಿರುವರು. ಅಪೇಕ್ಷಕದಲ್ಲಿಂತಲೂ ಶೇಕಡಾ 10ರಷ್ಟು ಗೋಧಿ ಉತ್ಪತ್ತಿ ಕಡಿಮೆಯಾಗಿದೆ

ಮುಂಬರುವ ಹೆಚ್ಚೆಂದರೆ 10 ವಾರಗಳು ಅತಿ ಕಠಿಣವಾದವು ಆದರಲ್ಲಿ ಕೆಲವು ಕಡೆ ಎರಡು ಮೂರು ವಾರಗಳಲ್ಲಿ ಹೊಸ

THE

UNITED INDIA LIFE ASSURANCE CO., LTD.

ESTD 1906 | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE

K S. Rao Road, Mangalore.

ಮಾಡುವ ಕರಾರನ್ನು ಮಾಡಿಕೊಳ್ಳುವ ಮಾತುಕತೆಗಾಗಿ ಸದ್ಯದಲ್ಲೇ ಒಂದು ಶಿಷ್ಟ ಮಂಡಳವು ಆಸ್ಟ್ರೇಲಿಯಕ್ಕೆ ಹೋಗಲಿದೆ.

ನಿರಾಶ್ರಿತರ ಮಿತಿಮಿಕ್ಕಿದ ಸಂಖ್ಯೆಯಿಂದ ನಮ್ಮ ಆಹಾರ ಹಂಚಾಟದಲ್ಲಿ ಇನ್ನಷ್ಟು ಅಸ್ತವ್ಯಸ್ತತೆಯುಂಟಾಗಿದೆ. ಅಕ್ಕಿ ಉತ್ಪ

ಬೆಳೆಯಿಂದ ಪರಿಸ್ಥಿತಿ ಸುಧಾರಿಸಬಹುದು ಹೊಸ ಬೆಳೆಯಾದ ನಂತರ ನಮ್ಮ ಕಷ್ಟಗಳು ಪೂರ್ಣ ಕಡಿಮೆಯಾಗುವುದಿಲ್ಲವಾದರೂ ಬಿಕ್ಕಟ್ಟಿನಿಂದ ಪಾರಾದಂತಾಗುವುದು

ಪ್ರಾಂತ್ಯದ ಪರಿಸ್ಥಿತಿ

“ಈಗ ನಡೆದಂತೆ ಸಂಗ್ರಹ ಕಾರ್ಯವು ಮುಂದರಿದರೆ ಮುಂದಿನ ಎರಡು ಮೂರು ವಾರಗಳಲ್ಲೇ ನಾವು ಆಹಾರ ಬಿಕ್ಕಟ್ಟನ್ನು ನಿಶ್ಚಯವಾಗಿ ದಾಟುತ್ತೇವೆ” ಹೀಗೆಂದು ಮದ್ರಾಸ್ ಪ್ರಾಂತ್ಯದ ಆಹಾರ ಮಂತ್ರಿ ಡಾ ರಾಜನರು ಮದ್ರಾಸ್ ನ್ಯಾಯವಿಧಾಯಕ ಸಭೆಯ ಚರ್ಚೆಯಲ್ಲಿ ಉತ್ತರ ಕೊಡುತ್ತಾ ತಿಳಿಸಿದರು. ಸಾರ್ವಜನಿಕರ ಸಹಕಾರವು ಈ ಪ್ರಸಂಗದಲ್ಲಿ ಅತ್ಯಂತ ಮಹತ್ವದ್ದೆಂದೂ ಅವರು ಹೇಳಿಕೊಂಡರು.

ಈ ಮಂತ್ರಿಮಂಡಳ ಅಧಿಕಾರ ತೆಗೆದುಕೊಳ್ಳುವಾಗ ಪ್ರಾಂತದಲ್ಲಿ 290 ಸಾವಿರ ಟನ್ ಅಕ್ಕಿ ದಾಸ್ತಾನು ಇತ್ತು 324 ಸಾವಿರ ಗೋಧಿ ಮತ್ತದರ ಉಪವಸ್ತುಗಳಿದ್ದುವು ಕಳೆದ 1946ರ ಏಪ್ರಿಲ್ಲಿ ದಾಸ್ತಾನು 174 ಸಾವಿರ ಟನ್ನುಗಳಷ್ಟಿತ್ತು ಪ್ರಕಾಶಂ ಮಂಡಳವು ಆಹಾರ ಕೊರತೆ ನೀಗಿಸಲು ಉತ್ಪತ್ತಿ ಮತ್ತು ಗ್ರಾಹಕರ ಪರಸ್ಪರ ಸಹಕಾರ ಸಂಘಗಳನ್ನು ಸ್ಥಾಪಿಸಿದ್ದರು ಈಗ ಈ ಸಂಸ್ಥೆಗಳಿಂದ ಸಂಗ್ರಹ ಹೆಚ್ಚಿಸಲು ಸಾಧ್ಯವಾಗಲಿಲ್ಲವೆಂಬ ಸಂಗತಿ ಕಂಡುಬಂದಿದೆ ಅದಕ್ಕೆ ಕಾರಣಗಳೂ ಇವೆ ಭಾರತ ಸರಕಾರದ ಸಹಾಯವೂ ಇಲ್ಲ ಜಾಗತಿಕ ಪರಿಸ್ಥಿತಿಯೂ ವಿರೋಧವಿದೆ ನಮ್ಮ ಪ್ರಾಂತ್ಯದಲ್ಲಿ ಉಪವಾಸದಿಂದ ಮರಣಗಳಾಗುತ್ತಿವೆಯೆಂಬ ವರದಿಗಳು ಕೇವಲ ಅಸತ್ಯದವು ಅಂತಹ ಪರಿಸ್ಥಿತಿ ಇನ್ನೂ ಬಂದಿಲ್ಲ “ಉಪವಾಸದಿಂದ ಒಂದು ಜೀವವನ್ನು ಸಾಯಬಿಡುವುದರ ಮೊದಲು ನಾನೇ ಸಾಯಬಯಸುತ್ತೇನೆ ನಾವು ನಮ್ಮ ಕಛೇರಿ ಕೆಲಸ ಬಿಟ್ಟು ಸಂಚಾರಕ್ಕಾರಂಭಿಸಿದುದರ ಪರಿಣಾಮವಾಗಿಂದು ಎರಡು ಘೋರ ವಾರಗಳ ತನಕ ಉಪವಾಸದ ದುರಂತ ಮುಂದೆ ಬಿದ್ದಂತಾಗಿದೆ. ಇದೇ ರೀತಿ ಮುಂದರಿದರೆ ನಮ್ಮ ಸಂಕಷ್ಟದಿಂದ ಪಾರಾಗುತ್ತೇವೆ.” ಹೀಗೆಂದು ನಮ್ಮ ಆಹಾರ ಮಂತ್ರಿ ಡಾ। ರಾಜನರು ನ್ಯಾಯವಿಧಾಯಕ ಸಭೆಯಲ್ಲಿ ಹರ್ಷೋದ್ಗಾರಗಳ ನಡುವೆ ತಿಳಿಸಿದರು.

ದೇಶದ ಸ್ವಂಪತ್ತುಗಳಲ್ಲಿ ಅರಣ್ಯ ಸಂಪತ್ತು ಅತ್ಯಂತ ಪ್ರಾಮುಖ್ಯವಾಗಿದೆ. ಹೆಚ್ಚೇಕೆ ನಿಜವಾಗಿ ಹೇಳುವುದಾದರೆ ಚಿನ್ನಕ್ಕಿಂತಲೂ ಅರಣ್ಯಕ್ಕೆ ಬೆಲೆ ಹೆಚ್ಚು ಕೊಡಬೇಕಾಗಿದೆ, ಅರಣ್ಯಗಳನ್ನು ಎಚ್ಚರದಿಂದ ನೋಡಿಕೊಂಡರೆ ಅವು ಕಡಿದಷ್ಟೂ ಮುಗಿಯವು. ಈ ವಿಷಯದಲ್ಲಿ ಕೆಲವು ಕಾಲದ ಅವಧಿಯಲ್ಲಿ ಮುಗಿದುಹೋಗುವ ಚಿನ್ನ, ಎಣ್ಣೆ, ಕಲ್ಲಿದ್ದಲುಗಳ ಮೂಲಗಳಿಂದ ಅರಣ್ಯಗಳ ಮೂಲವು ತೀರಾ ಭಿನ್ನವಾಗಿದೆ.

ಸಸ್ಯಗಳು ಬೇಸಾಯಕ್ಕಾಗಿ, ಇಲ್ಲವೇ ಕಟ್ಟಿಗೆಗಳಿಗಾಗಿ ಉಪಯೋಗಿಸಲ್ಪಟ್ಟರೂ, ಸೂರ್ಯನ ಶಕ್ತಿಯು ಉಪಯೋಗಕ್ಕೆ ಒದಗುವ ರೂಪಗಳಲ್ಲಿ ಅರಣ್ಯವು ಅತಿ ದೊಡ್ಡ ಪ್ರಮಾಣವುಳ್ಳುದಲ್ಲದೆ ಸಾಧಾರಣವಾದುದೂ ಆಗಿದೆ ಅರಣ್ಯಗಳನ್ನು ಸೂರೆಗೊಳ್ಳುವುದರಿಂದ ಅವನ್ನು ಕಣ್ಣಿಗೆ ಕಾಣದಂತೆ ಮಾತ್ರ ಮಾಡಿದಂತಾಗುತ್ತದೆ. ಆದರೆ ಸಸ್ಯಗಳು ತಾವು ಹುಟ್ಟಿದ ಭೂಮಿಗಳಲ್ಲೇ ರೂಪಾಂತರದಲ್ಲಿ ಸೇರಿಕೊಳ್ಳುತ್ತವೆ ಸೂರ್ಯನ ರಶ್ಮಿಗಳು ಭೂಮಿಯಿಂದ ನೀರನ್ನೂ, ಗಾಳಿಯಿಂದ ಕಾರ್ಬನ್ ಡೆಯೋಕ್ಸೈಡ್‌ನ್ನೂ ಎಳೆದುಕೊಂಡು ಅರಣ್ಯಗಳಿಗೆ ಒದಗಿಸುತ್ತವೆ ಎಲಾ ಸಂದರ್ಭಗಳಲ್ಲೂ ಕಾಡುಗಳು ತಾವಾಗಿಯೇ ಹುಟ್ಟಿ ಬೆಳೆಯುವವುಗಳಾಗಿವೆ ಈ ದೃಷ್ಟಿಯಿಂದ ಗಣಿಗಳಿಂದಲೂ ಅರಣ್ಯಗಳು ಹೆಚ್ಚಿನ ಬೆಲೆಯುಳ್ಳ ಸಂಪತ್ತಿನ ಮೂಲಗಳೆಂದು ತಿಳಿಯಬೇಕು

ಸಂಯುಕ್ತ ಪ್ರಾಂತ, ಅಸ್ಸಾಮ್ ಮದ್ರಾಸುಗಳನ್ನು ಬಿಟ್ಟರೆ, ಒಂದೇ ನಮೂನೆಯ ಅರಣ್ಯಗಳು ಕಾಣಸಿಗುತ್ತವೆ ಮುಂಗಾರು ಮಳೆಯು ಅರಣ್ಯಗಳ ಬಳವಣಿಗೆಯಲ್ಲಿ ಹೆಚ್ಚುಕಡಿಮೆ ಮಾಡುತ್ತಿದೆ ಹಿಂದುಸ್ಥಾನದಲ್ಲಿ ಸುಮಾರು 5,000 ತರದ ಸಸ್ಯಗಳಿವೆಯೆಂದು ಲೆಕ್ಕಿಸಲಾಗಿದೆ ಇವುಗಳಲ್ಲಿ ಅರ್ಧಾಂಶಕ್ಕೂ ಹೆಚ್ಚು ಮರಗಳಾಗಿವೆ ಉಳಿದುವುಗಳು ಪೊದರುಗಳೂ ಬಳ್ಳಿಗಳೂ ಆಗಿವೆ ಇವುಗಳಲ್ಲಿ ಆರ್ಥಿಕ ದೃಷ್ಟಿಯಿಂದ ಉಪಯುಕ್ತವಾಗುವ ನೂರಾರು ತರದ ಸಸ್ಯಗಳಿವೆ

ನಮ್ಮ ದೇಶದ ಪ್ರಾಮುಖ್ಯವಾದ ಮರವೆಂದರೆ ಸಾಗುವಾನಿ, ಸಾಲ, ಬೀಟೆ, ದೇವದಾರ, ಪೈನ್, ಶಂಕುಫಲಿ, ಸ್ಪ್ರಸ್ ಮರ (ಮುಳ್ಳಿನ ಮರ) ಇವೇ ಆಗಿವೆ ಅವುಗಳಲ್ಲಿ ಕೊನೆಯ ಶಂಕುವಿನಾಕಾರದ ಕಾಯಿ ಬಿಡುವ ನಾಲ್ಕು ಬಗೆಯ ಮರಗಳು ಹಿಮಾಲಯದಲ್ಲಿ ಮಾತ್ರ ದೊರೆಯುವವು ಸಾಗುವಾನಿ ಮತ್ತು ಬೀಟೆ ಮರಗಳು ಹಿಂದುಸ್ಥಾನದಲ್ಲಿ ಹೆಚ್ಚಿನ ಉಪಯೋಗವುಳ್ಳ ಮರಗಳು ನಮ್ಮ ಭಾಗ್ಯವೋ ಎಂಬಂತೆ ನಮ್ಮ ಪ್ರಾಂತವು ಈ ಮರಗಳಿಗೆ ತವರುಮನೆಯಾಗಿದೆ ಈ ಪ್ರಾಂತವು ಸುಮಾರು 7 ಲಕ್ಷ ಘನ ಅಡಿಗಳ ಸಾಗುವಾನಿ ಮರಗಳನ್ನು ಒದಗಿಸುತ್ತದೆ

ಇನ್ನೂ ನಮ್ಮ ಪ್ರಾಂತದ ಮರಗಳ ವಿಷಯ ಹೇಳುವುದಿದ್ದರೆ ಗಂಧದ ಮರಗಳನ್ನೂ ಬಿದಿರುಗಳನ್ನೂ ಈ ಸಾಲಿಗೆ ಸೇರಿಸಿಕೊಳ್ಳಬಹುದು. ಮೈಸೂರಿನೊಡನೆ ಸೇರಿಕೊಂಡು ಮದ್ರಾಸ್ ಪ್ರಾಂತವು ಗಂಧದ ಮರಗಳ ವಿಷಯದಲ್ಲಿ ಸರ್ವ ಸ್ವಾಮ್ಯವುಳ್ಳುದಾಗಿದೆ.

ಬೊಂಬೈ, ಮಧ್ಯಪ್ರಾಂತ, ಹೈದರಾಬಾದುಗಳಲ್ಲೂ ಸ್ವಲ್ಪ-ಸ್ವಲ್ಪ ಗಂಧದ ಮರಗಳು ಬೆಳೆಯುತ್ತಿವೆ. ನಮ್ಮ ಪ್ರಾಂತದಲ್ಲಿ ವರ್ಷ ಒಂದಕ್ಕೆ ದೊರೆಯುವ ಗಂಧದ ಮರಗಳ ಉತ್ಪತ್ತಿಯೆಂದರೆ ಸುಮಾರು 850

ಭಾರತದ ಅರಣ್ಯ ಸಂಪತ್ತು

ಸುಡುವುದು — ಕಡಿಯುವುದು — ಮೇವಿಗೆ ಬಿಡುವುದು
ಇವುಗಳಿಂದ ಕಾಡಿಗೆ ಕೆಡುಕಾಗುವುದು

(ಮಾನ್ಯ ಮಂತ್ರಿ ಶ್ರೀ ಕೆ. ಮಾಧವ ಮೇನನ್ ಇವರಿಂದ)

ಟನ್‌ಗಳು. ಇವುಗಳಿಗೆ ಸುಮಾರು 35 ಲಕ್ಷದಿಂದ 40 ಲಕ್ಷ ರೂಪಾಯಿಗಳಷ್ಟು ಬೆಲೆಯಾಗುವುದು ನಮ್ಮ ಪ್ರಾಂತದ ಕಾಡುಗಳಲ್ಲಿ ಎರಡು ಬಗೆಯ ಉಪಯೋಗಕಾರಿಯಾದ ಬಿದಿರುಗಳು ದೊರೆಯುತ್ತವೆ ಬಿದಿರು ಬಡವರ ತೊಲೆ ಎಂದು ಹೆಸರು ಪಡೆದಿದೆ. ಆದರೆ ಈಗ ಬಿದಿರು ಕಾಗದ ತಯಾರಿಗೆ ಬೇಕಾದ ಒಂದು ಉತ್ತಮವಾದ ಅಸಿದ್ಧ ವಸ್ತುವಾಗಿ ಪರಿಗಣಿಸಲಾಗಿದೆ

ಅಡಿಗೆಗೆ ಬೇಕಾದ ಸೌದೆಗಳನ್ನೊದಗಿಸುವುದಕ್ಕೆ ನಮ್ಮ ಕಾಡುಗಳೇ ಪ್ರಾಮುಖ್ಯವಾದ ಮೂಲಗಳಾಗಿವೆ ಕಳೆದ ಯುದ್ಧದಲ್ಲಿ ಸೌದೆಯ ಹೆಚ್ಚಿನ ಭಾಗವನ್ನು ಮಸಿಮಾಡಿ ಬಸ್-ಲಾರಿಗಳಿಗೆ 'ಗ್ಯಾಸ್' ದೊರಕಿಸಲು ಉಪಯೋಗಿಸಲಾಗಿದೆ 'ಪೆಟ್ರೋಲ್' ಸಾಕಷ್ಟು ಸಿಗದಿದ್ದುದೇ ಇದಕ್ಕೆ ಕಾರಣ. ಆದರಿಂದಾಗಿ ಖಾಸಗಿ ಕಾಡುಗಳೆಲ್ಲಾ ನಾಶವಾಗಿ ಸೌದೆಯ ಅಭಾವವು ಎಲ್ಲೆಲ್ಲೂ ತಲೆದೋರಿತು ಈಗಲೂ ಆ ಕಷ್ಟದಿಂದ ನಾವು ಪಾರಾಗಲಿಲ್ಲ ಖಾಸಗಿ ಕಾಡುಗಳ ಮಾಲಿಕರು ಹೆಚ್ಚಿನ ಕ್ರಯದ ಆಸೆಯಿಂದ ತಮ್ಮ ಕಾಡುಗಳನ್ನು ನಿರ್ಮೂಲನಮಾಡಿದರು ಇದು ಖಾಸಗಿ ಯಜಮಾನತ್ವದ ಪರಿಣಾಮವೆಂದರೆ ಹೆಚ್ಚಲ್ಲ

ನಮ್ಮ ಜಾನುವಾರುಗಳಿಗೆ ಬೇಕಾದ ಮೇವನ್ನು ಒದಗಿಸುವ ದೃಷ್ಟಿಯಿಂದಲೂ ಕಾಡುಗಳು ತುಂಬ ಪ್ರಯೋಜನಕಾರಿಗಳಾಗಿವೆ ಮೈದಾನು ಪ್ರದೇಶದ ಹುಲ್ಲುಗಾವಲಿನಲ್ಲಿರುವ ಹುಲ್ಲು ಬೇಗನೆ ಒಣಗಿ ಹೋಗುವುದು ಸಹಜ ಆದರೆ ಕಾಡುಗಳಲ್ಲಿ ಹುಲ್ಲು ಬೇಗನೆ ಒಣಗಿ ಹೋಗುವುದಿಲ್ಲ ಅನೇಕ ಕಡೆಗಳಲ್ಲಿ ಕಾಡುಗಳೇ ಜಾನುವಾರುಗಳಿಗೆ ಮೇಯುವ ಸ್ಥಳಗಳಾಗಿವೆ

ಮಿತಿಯಿಲ್ಲದೆ ಮೇಯಬಿಟ್ಟರೆ ಕಾಡುಗಳು ಹಾಳಾಗಬಹುದಾದರೂ ಮಿತಿಯಿಂದ ನೋಡಿಕೊಂಡರೆ ಇಲ್ಲವೇ ಹುಲ್ಲುಗಾವಲುಗಳನ್ನು ರಚಿಸಿದರೆ ಹೆಚ್ಚಿನ ಕೆಡುಕಾಗಲಿಕ್ಕಿಲ್ಲ. ಕೆಲವು ಸಂದರ್ಭಗಳಲ್ಲಿ ಕಾಡುಗಳಿಗೆ ಪ್ರಯೋಜನವಾದರೂ ಆಗಬಹುದು

ಭಾರತದಲ್ಲಿ ಹೆಚ್ಚಿನ ಭಾಗವು ಕಾಡಿನ ಹವೆಯನ್ನು ಅನುಭವಿಸುತ್ತಿದೆ ಹೆಚ್ಚೇಕೆ ಒಂದು ಕಾಲದಲ್ಲಿ ವಿಸ್ತೀರ್ಣದ ಶೇಕಡಾ 50ರಷ್ಟು ಭೂಮಿಯು ಗೊಂಡಾರಣ್ಯಗಳಿಂದ ತುಂಬಿತ್ತು ಎನ್ನಲು ಸಂದೇಹವಿಲ್ಲ ಕಳೆದ ಮೂವತ್ತು ವರುಷಗಳಿಂದ ಅರಣ್ಯ ಪ್ರದೇಶಗಳು ನಮ್ಮ ಪ್ರಾಂತ್ಯದಲ್ಲಿ ಕಡಮೆಯಾಗುತ್ತಾ ಬರುತ್ತಿರುವುದನ್ನು ನಾವು ಗಮನಿಸಬಹುದು ಕೆಲವು ಕಾಡುಗಳನ್ನು ಮನ್ನಪಡಿಸಿ ತಕ್ಕ ಎಚ್ಚರ ತೆಗೆದುಕೊಳ್ಳದಿದ್ದರೆ ಕಾಡುಗಳ [illegible] ನಾಶವು ಇನ್ನಷ್ಟು ಹೆಚ್ಚುತ್ತಿತ್ತು [illegible] ನಮ್ಮ ಪ್ರಾಂತದಲ್ಲಿ [illegible] ಕಾಡುಗಳ ವಿಸ್ತೀರ್ಣವು 206 500 000 ಎಕರೆಗಳಾಗಿವೆ ಅಂದರೆ ದೇಶದ ವಿಸ್ತೀರ್ಣದಲ್ಲಿ ಶೇಕಡಾ 19 3 ಪಾಲಿನಷ್ಟನ್ನು ಕಾಡುಗಳು ಆವರಿಸಿದಂತಾಯಿತು

ಧನಸಂಪತ್ತಿನ ದೃಷ್ಟಿಯಿಂದ ನೋಡಿದರೆ ದೇಶದ ವಿಸ್ತೀರ್ಣದಲ್ಲಿ ಶೇಕಡಾ [illegible] 10-25 ಪಾಲಿನಷ್ಟು ಅರಣ್ಯ ಪ್ರದೇಶವಾಗಿರಬೇಕು. ಭಾರತದ ಅರಣ್ಯ [illegible] ಪ್ರಮಾಣವು [illegible] ಇದರಲ್ಲಿ [illegible] ಗಳೂ, ಸ್ಥಾನದ ಕಾಡುಗಳು [illegible] ಉಪಯೋಗಕ್ಕೆ [illegible] ಪಟ್ಟಿಗಳ ಅರಣ್ಯ ಪ್ರದೇಶಗಳು [illegible]

ಹಾಗೆಯೇ ಸಿಂಧೂ ಗಂಗಾ ನದಿಗಳ ಅಕ್ಕಪಕ್ಕಗಳಲ್ಲೂ ಪೂರ್ವ ಕರಾವಳಿಯಲ್ಲಿಯೂ ಹೇಳತಕ್ಕಷ್ಟು ಕಾಡುಗಳೇ ಇಲ್ಲ. ಈ ಪ್ರದೇಶಗಳೆಲ್ಲಾ ನಿಬಿಡವಾದ ಜನಸಂಖ್ಯೆಯುಳ್ಳುದ್ದಾಗಿದೆ ಇದರಿಂದ ಇಲ್ಲಿ ಸೌದೆ ಹಾಗೂ ಮರಮುಟ್ಟುಗಳ ಕೊರತೆಯಿಂದ ಜನರು ಕಷ್ಟಪಡಬೇಕಾಗಿದೆ

ಬೇಸಾಯದ ಅಭಿವೃದ್ಧಿ ವಿಸ್ತರಣೆಗಳೂ ಜನಸಂಖ್ಯೆಯು ಹೆಚ್ಚುತ್ತಿರುವುದೂ ಕಾಡುಗಳ ವಿನಾಶಕ್ಕೆ ಕಾರಣಗಳಾದುವು. ನಾಗರಿಕತೆಯ ಪರಿಣಾಮವಾದ ಕೈಗಾರಿಕೆ ಬೇಸಾಯ ಇತ್ಯಾದಿ ಪ್ರತಿಯೊಂದೂ ಕಾಡುಗಳ ವಿನಾಶಕ್ಕೆ ಕಾರಣವಾಗಿದೆ

ಹಿಂದಿನ ಕಾಲದಲ್ಲಿ ಸರಕಾರದ ದೊರೆತನವೆಲ್ಲಾ ಆದಾಯದ ಮೇಲೆ ಹೆಚ್ಚಾಗಿ ಆಧರಿಸಿಕೊಂಡಿತ್ತು ಇದರಿಂದ ಕಾಡು ಕಡಿದು ಬೇಸಾಯಕ್ಕೆ ಒದಗಿಸುವುದೆಂದರೆ ಮಹತ್ವಾದ ಹಿತಕಾರ್ಯವೆಂದು ಪರಿಗಣಿಸಲ್ಪಟ್ಟು ಅದಕ್ಕೆ ಪ್ರೋತ್ಸಾಹ ದೊರೆಯುತ್ತಿತ್ತು ಅಲ್ಲದೆ ಕಾಡುಗಳಿಂದ ಎಂದೂ ದೊರೆಯಲಾರದಷ್ಟು ಉತ್ಪನ್ನವನ್ನು ಹೀಗೆ ನಿರ್ಮಾಣವಾದ ಭೂಮಿಗಳಿಂದ ಪಡೆಯಬಹುದಾಗಿತ್ತು ಕಳೆದ ಕೆಲವು ವರುಷಗಳಿಂದ "ಹೆಚ್ಚು ಆಹಾರ ಬೆಳೆಸಿರಿ" ಎಂಬ ಚಳವಳದ [illegible] ಬೇಸಾಯಕ್ಕೆ [illegible] ಇದರಲ್ಲಿ ಈ [illegible] ವಾಗಿ [illegible]

[illegible] ಬಿದಿರು ಇವುಗಳು ನಮ್ಮ ದೇಶದಲ್ಲಿ ಅಧಿಕವಾಗಿದೆಯೆಂದು ತಪ್ಪಾಗಿ [illegible] ಹೆಚ್ಚಿನ [illegible] ದಲ್ಲಿ [illegible] ಅರಣ್ಯ [illegible] ಅರ [illegible] ಗಳ [illegible] ಕಾಡುಗಳು [illegible]

[illegible] ದೇಶದಲ್ಲಿ ಮರದ [illegible] ಹೆಚ್ಚುಯಿತು. ಇನ್ನು [illegible] ಕಷ್ಟದಿಂದ [illegible]

[illegible] ಕಾಡುಗಳ [illegible] ಇವೆಲ್ಲಾ ಕಾಡುಗಳಿಗೆ [illegible] ಮಾಡುವವು ಅಲ್ಲದೆ ಆ ಸ್ಥಳಗಳಲ್ಲಿ ಪುನಃ ಕಾಡು ಬೆಳೆಸಲೂ ತುಂಬ ಕಷ್ಟವಿದೆ ಸುಡುವುದೇ ಮೊದಲಾದುವುಗಳಿಂದ ಕಾಡು ಹೆಚ್ಚಾಗಿ ಬೆಳೆಯುವುದೆಂಬುದು ತಪ್ಪು ತಿಳುವಳಿಕೆಯಾಗಿದೆ ಕಾಡುಗಳು ಮರಮುಟ್ಟುಗಳಿಗೆ ಪ್ರಾಮುಖ್ಯ ಮೂಲಗಳಾಗಿವೆ ಮರಗಳಿಂದರೆ ಜಗತ್ತಿನಲ್ಲಿ ಅತಿ ಶ್ರೇಷ್ಠವಾದ ಅಸಿದ್ಧ ವಸ್ತುಗಳಾಗಿವೆ ಅಲ್ಲದೆ ಕಾಡುಗಳು ನಾನಾ ಬಗೆಯ ಗಿಡಮೂಲಿಕೆಗಳಿಗೂ, ಬಣ್ಣಗಳಿಗೂ ಮೂಲ ಸ್ಥಾನಗಳಾಗಿವೆ ನಮ್ಮ ದೇಶದ ಮೃಗಗಳಿಗೆ ಮನೆಗಳೆಂದರೆ ಕಾಡುಗಳು ಅಲ್ಲದೆ ನೆಲದ ಸಾರವು ಹೋಗಿ ಬಂಜರಾಗದಂತೆ ಮಾಡುವುವುಗಳೇ ಕಾಡುಗಳು ನೆರೆಗಳಿಗೆ ಎದುರಾಗಿ ಬಿರುಗಾಳಿಗಳನ್ನು ತಡೆದು, ನದಿಗಳನ್ನು ಒಣಗದಂತೆ ಮಾಡಿ, ಹವೆಯನ್ನು ತಂಪಾಗಿರಿಸಿ, ಜನರಿಗೆ ಬಗೆ ಬಗೆಯಿಂದ ಉಪಕಾರಿಯಾಗುವ ಕಾಡನ್ನು ಕಾಪಾಡುವುದು ರಾಷ್ಟ್ರೀಯ ಕರ್ತವ್ಯಗಳಲ್ಲಿ ಮೊತ್ತ ಮೊದಲನೆಯದಾಗಿದೆ.

—'ಮದ್ರಾಸ್ ಸಮಾಚಾರ'

ಅಂತರ್ ಶುದ್ಧಿಯಿಂದ ಸೌಂದರ್ಯತೆಯನ್ನು ಕಾಯ್ದುಕೊಳ್ಳಬಹುದು ವನಸ್ಪತಿ ಮೂಲಿಕೆಗಳಿಂದ ತಯಾರಿಸಿದ ಈ ಭೇದಿ ಔಷಧಿಯು ದಿನನಿತ್ಯ ತಿಂದ ಉಳಿದ ಆಹಾರ ಭಾಗವನ್ನು ಹೊರ ಹಾಕಿ ರಕ್ತ ಸಂಚಾರವು ಸರಿಯಾಗುವಂತೆ ಮಾಡಿ ಜೀರ್ಣ ಕಾರ್ಯವು ಸರಿಯಾಗುವಂತೆ ಮಾಡುವುದು

ವನಸ್ಪತಿ ಔಷಧಿಗಳಿಂದ ತಯಾರಿಸಿದ

BILE BEANS

ಬೈಲ್ ಬೀನ್ಸ್ ಆರೋಗ್ಯ ಮತ್ತು ಶಕ್ತಿ ಪ್ರದರ್ಶಕ.

ರಾಷ್ಟ್ರೀಯ ಸೇವಕ ಸಂಘದ ಸದಸ್ಯರಿಗೆ

(೧೬ನೆಯ ದಿನಾಂಕ ಬೆಳಿಗ್ಗೆ ಗಾಂಧೀಜಿ ರಾ. ಸ್ವೇ. ಸಂಘದ ಸದಸ್ಯರಿಗೆ ಕೆಲವು ಮಾತುಗಳನ್ನು ಹೇಳಿದರು. ಅವನ್ನು ಕೆಳಗೆ ಕೊಡಲಾಗಿದೆ. —ಸುಶೀಲಾ ನಯ್ಯರ)

ತ್ಯಾಗವೊಂದೇ ಸಾಲದು

ಈ ಬೆಳಗ್ಗೆ ಭಂಗಿ ವಸತಿಯಲ್ಲಿ ಸುಮಾರು ಐನೂರು ಜನ ರಾಷ್ಟ್ರೀಯ ಸೇವಕ ಸಂಘದ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತ, ಸ್ಥಾಪಕರಾದ ಶ್ರೀ ಹೆಡ್ಗೇವರರು ಬದುಕಿದ್ದಾಗ ರಾ. ಸೇ. ಸಂಘದ ಶಿಬಿರಕ್ಕೆ ತಾವು ಬಹಳ ವರ್ಷಗಳ ಕೆಳಗೆ ಭೇಟಿಯಿತ್ತುದಾಗಿ ಗಾಂಧೀಜಿ ಹೇಳಿದರು. ದಿವಂಗತರಾದ ಶ್ರೀ ಜಮನಾಲಾಲ ಬಜಾಜರು ತಮ್ಮನ್ನು ಅಲ್ಲಿಗೆ ಕರೆದೊಯ್ದರೆಂದೂ ಆಗ ತಮಗೆ ಅಲ್ಲಿಯವರ ಶಿಸ್ತು, ಸಂಪೂರ್ಣ ಅಸ್ಪೃಶ್ಯತೆ ಮತ್ತು ಉಗ್ರ ಸರಳತೆಗಳ ಮೆಚ್ಚುಗೆಯಾದವೆಂದು ಅವರು ಅಭಿಪ್ರಾಯಪಟ್ಟರು. ಅಂದಿನಿಂದ ಸಂಘವು ಬಹಳ ಮಟ್ಟಿಗೆ ಬೆಳೆದಿದೆ. ಗಾಂಧೀಜಿಯು ಮತದಂತೆ ಸೇವೆ ಸ್ವಾರ್ಥತ್ಯಾಗಗಳನ್ನು ಧ್ಯೇಯವನ್ನಾಗಿಟ್ಟುಕೊಂಡ ಯಾವ ಸಂಸ್ಥೆಯಾದರೂ ಬಲಿತು ಸಮರ್ಥವಾಗಿ ಸಿಲ್ಲದಿರದು. ಆದರೆ ನಿಜವಾಗಿಯೂ ಉಪಯುಕ್ತ ಸಂಸ್ಥೆಯಾಗಿರಬೇಕಾದರೆ ಸ್ವಾರ್ಥತ್ಯಾಗದ ಜೊತೆಗೆ ಉದ್ದೇಶ ಪಾವಿತ್ರ್ಯ ಮತ್ತು ಯಥಾರ್ಥ ಜ್ಞಾನ ಇವು ಇರುವುದವಶ್ಯಕ. ಇವೆರಡಿಲ್ಲದ ಬರಿಯ ತ್ಯಾಗವು ಸಮಾಜಕ್ಕೆ ಹಾನಿಕರವಾಗಿ ಪರಿಣಮಿಸುವುದು ಅನುಭವ ಸಿದ್ಧವಾದುದು.

ಸನಾತನಿ ಹಿಂದು

[illegible]ಮೊದಲು ಹಾಡಲಾದ ಪ್ರಾರ್ಥನಾ ಪದ್ಯವು ಭಾರತ ಮಾತೆ ಹಿಂದು ಸಂಸ್ಕೃತಿ ಮತ್ತು ಹಿಂದುಧರ್ಮಗಳ ಸ್ತುತಿಪರವಾಗಿದ್ದಿತು. ತಾವು ಸನಾತನಿ ಹಿಂದುವೆನಿಸುವೆನೆಂದು ಗಾಂಧೀಜಿ ಹೇಳಿದರು. ಅವರು ಸನಾತನ ಶಬ್ದದ ಯೌಗಾರ್ಥವನ್ನು ಗ್ರಹಿಸಿದರು. ಹಿಂದು ಶಬ್ದದ ಮೂಲವನ್ನು ಸರಿಯಾಗಿ ಯಾರೂ ಅರಿಯರು. ಆ ಹೆಸರನ್ನು ನಮಗೆ ಕೊಡಲಾಯಿತು ಮತ್ತು ನಾವು ಸ್ವಾಭಾವಿಕವಾಗಿ ಅದನ್ನು ಸ್ವೀಕರಿಸಿದೆವು. ಹಿಂದುಧರ್ಮವು ಜಗತ್ತಿನ ಎಲ್ಲ ಧರ್ಮಗಳ ಅತ್ಯುತ್ತಮಾಂಶಗಳನ್ನು ತನ್ನಲ್ಲಿ ಅಡಕಮಾಡಿಕೊಂಡಿದೆ ಮತ್ತು ಆ ಅರ್ಥದಲ್ಲಿ ಅದೊಂದು ವಿಶಿಷ್ಟ ಧರ್ಮವೇ ಅಲ್ಲವೆನ್ನಬಹುದು. ಅದುದರಿಂದ ಅದಕ್ಕೆ ಇಸ್ಲಾಂ ಅಥವಾ ಅದರ ಅನುಯಾಯಿಗಳಲ್ಲಿ ಜಗಳವಿಲ್ಲ—ಇಂದು ಹಾಗೆ ಕಲಹವುಂಟಾಗಿರುವುದು ದುರ್ದೈವದ ಸಂಗತಿ. **ಹಿಂದು ಧರ್ಮದಲ್ಲಿ ಅಸ್ಪೃಶ್ಯತೆಯ ಕಾಲಕೂಟವು ಹೊಕ್ಕೊಡನೆ ಅದರ ಇಳಿಗಾಲ ಆರಂಭವಾಯಿತು.** ಒಂದು ಮಾತ್ರ ಖಂಡಿತ ಅದನ್ನು ಗಾಂಧೀಜಿ ಬಹಳಯಂತೆ ಧ್ವನಿಗೊಟ್ಟಿದ್ದಾರೆ ಅಸ್ಪೃಶ್ಯತೆ ಉಳಿದರೆ ಹಿಂದುಧರ್ಮ ಸಾಯುತ್ತದೆ. ಹಾಗೇ ಹಿಂದುಸ್ತಾನದಲ್ಲಿ ಹಿಂದುಗಳಿಲ್ಲದೆ ಅನ್ಯರಿಗೆ ಅದರಲ್ಲೂ ಮುಸ್ಲಿಮೇತರರಿಗೆ, ವಿಶೇಷತ ಮುಸ್ಲಿಮರಿಗೆ ಸ್ಥಳವಿಲ್ಲವೆಂದು ಹಿಂದು ತಿಳಿದರೆ—ಇಲ್ಲಿರಬೇಕಾದರೆ ಅವರು ಹಿಂದುಗಳ ಗುಲಾಮರಾಗಿ ಬದುಕಬೇಕು—ಎಂದಾದರೆ ಅವರು ಹಿಂದು ಧರ್ಮವನ್ನೆ ಕೊಲ್ಲುತ್ತಾರೆ. ಅದೇ ರೀತಿಯಿಂದ ಪಾಕಿಸ್ಥಾನದಲ್ಲಿ ಮುಸ್ಲಿಮರಿಗೆ ಮಾತ್ರ ನ್ಯಾಯಬದ್ಧ ಸ್ಥಾನವಿದೆಯೆಂದು ಅದು ತಿಳಿದರೆ—ಮುಸ್ಲಿಮೇತರರು ಪೀಡಿತರಾಗಿ ಬಾಳಬೇಕು—ಎಂದಾದರೆ ಅದು ಭರತಖಂಡದಲ್ಲಿ ಇಸ್ಲಾಮಿಗೆ ಮೃತ್ಯುಪಾಶವೇ ಸರಿ.

ಕೇಡಿಗೆ ಬದಲು ಒಳಿತು

ಹಿಂದುಸ್ಥಾನವು ವಿಭಕ್ತವಾಗಿರುವುದು ದುರ್ಭಾಗ್ಯ. ಒಂದು ವಿಭಾಗ ಉನ್ಮತ್ತವಾಗಿ ಕುತ್ಸಿತ ಕಾರ್ಯಗಳನ್ನು ಮಾಡಿದೊಡನೆ ಇನ್ನೊಂದು ವಿಭಾಗವೂ ಹಾಗೆ ಮಾಡಬೇಕೆಂದು ಯಾವ ನಿಯಮವಿದೆ? ಕೇಡಿಗೆ ಕೇಡೆಂಬುದರಲ್ಲಿ ಅರ್ಥವಿಲ್ಲ. **ಧರ್ಮವು ನಮಗೆ ಕೇಡಿಗೆ ಬದಲು ಒಳಿತು ಮಾಡಬೇಕೆಂದು ಬೋಧಿಸುತ್ತದೆ.**

ಸಂಘದ ಸಮರ್ಥನೆ

ಗಾಂಧೀಜಿ ರಾ. ಸೇ. ಸಂಘದ ಗುರುಗಳನ್ನು ಕೆಲತಿಂಗಳ ಹಿಂದೆ ನೋಡಿದ್ದರು. ಕಲಕತ್ತ ಮತ್ತು ದಿಲ್ಲಿಯಲ್ಲಿ ತಮ್ಮೆಡೆಗೆ ಸಂಘದ ವಿರುದ್ಧ ಬಂದ ದೂರುಗಳನ್ನು ಅವರು ಈ ಗುರುಗಳಿಗೆ ಹೇಳಿದ್ದರು. ತಮಗೆ ಸಂಘದ ಪ್ರತಿಯೊಬ್ಬ ಸದಸ್ಯನ ನಡತೆಯ ಬಗ್ಗೆ ಹೊಣೆ ಕೊಡಲಾಗದಿದ್ದರೂ ಇಡೀ ಸಂಘದ ಪ್ರಸಿದ್ಧ ಧೋರಣವು ಹಿಂದುಗಳ ಮತ್ತು ಹಿಂದು ಧರ್ಮದ ಸೇವೆಯೇ ಆದರೂ ಯಾವನಾದರೊಬ್ಬನ ವಿತ್ತಜೀವಿತಾದಿಗಳನ್ನು ಬಲಿ ತೆಗೆದುಕೊಂಡಲ್ಲ—ಎಂಬುದರ ಬಗ್ಗೆ ಆಶ್ವಾಸನ ಕೊಡುವುದಾಗಿ ಸಂಘದ ಗುರುಗಳು ಹೇಳಿದರು. ಹಿಂಸೆಯಲ್ಲಿ ಅದಕ್ಕೆ ನಂಬಿಗೆಯಿಲ್ಲ. ಆತ್ಮರಕ್ಷಣಾಕಲೆಯನ್ನು ಅದು ಬೋಧಿಸುತ್ತದೆ. ಅದು ಸೇಡನ್ನೆಂದೂ ಉಪದೇಶಿಸಿಲ್ಲ.

ಅಜಾತ ಶತ್ರು

'ಭಾರತಕ್ಕೆ ಕೀರ್ತಿ ತಂದು ವಿಷಮ ಜಲರಾಶಿಯಲ್ಲಿ ತೇಲಿ ನಡೆಸಿದ ಸರಕಾರದಲ್ಲಿ ಅಧಿಕತರಾದ ಮಂತ್ರಿಗಳು [illegible] ಅತ್ಯುತ್ತಮರು. ಕೆಲವರಿಗೆ ಅವರಲ್ಲಿ ತೃಪ್ತಿಯಿಲ್ಲ. ಅಂಥವರು ಈಗಿನ ಮಂತ್ರಿಮಂಡಲಕ್ಕಿಂತ ಉತ್ತಮರಾದವರನ್ನು ತರಲಿ, ಹಾಗೆ ತಂದರೆ ಅವರಿಗೆ ತಾವು ಅಧಿಕಾರ ವಹಿಸಿ ಕೊಡುವಂತೆ ಸಲಹೆ ಕೊಡುವೆನೆಂದು ಗಾಂಧೀಜಿ ಹೇಳಿದರು. **ಎಷ್ಟಾದರೂ ಸರದಾರ ಪಟೇಲರು ಮುದುಕರಾಗಿದ್ದಾರೆ. ವಯಸ್ಸಿನಲ್ಲಿ ಮುದುಕರಲ್ಲದಿದ್ದರೂ ತಮ್ಮ ಹೆಗಲು ಹೊತ್ತ ಭಾರದಿಂದ ಪಂಡಿತ ಜವಾಹರರು ಮುಪ್ಪಡಸಿದ ನಿಸ್ತೇಜ ಮನುಷ್ಯರಾಗಿ ಕಾಣುತ್ತಾರೆ.** ಅವರ ಜನಸೇವೆಗಾಗಿ ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದಾರೆ. ಆದರೆ ಅವರು ತಮ್ಮ ಅನುಭವದ [illegible] ಯಾವುದೋ ಒಂದು ದಾರಿ ಹಿಡಿದರೆ ಅದನ್ನು ತಡೆಯುವುದು ಯಾರಿಂದಲೂ ಸಾಧ್ಯವಿಲ್ಲ. ಆದರೆ ಯಾವನೇ ಆಗಲಿ ಒಬ್ಬ ವ್ಯಕ್ತಿಗೆ ಅವನ ವಿರುದ್ಧ ದನಿಯೆತ್ತಲು ಮತ್ತು ಅದಕ್ಕೆ ಎಚ್ಚರಕೊಡಲು ಹಕ್ಕಿದೆ. ಅದನ್ನೇ ತಾವು ಮಾಡುತ್ತಿರುವುದಾಗಿ ಗಾಂಧೀಜಿಯೆಂದರು. ಅವರು ಮುಸ್ಲಿಮರ ಮಿತ್ರರು ಹಾಗೂ ಹಿಂದು ಶೀಖ ವೈರಿಗಳೆಂದು ಹೇಳುವವರಿದ್ದಾರೆ. ಆದರೆ ಅದು ತಪ್ಪು—ಅವರು ಮುಸ್ಲಿಮರಿಗೆ ಹೇಗೋ ಶೀಖ ಪಾರಸಿಗಳಿಗೂ ಹಾಗೇ ಗೆಳೆಯರು. ಈ ವಿಷಯದಲ್ಲಿ ಅವರು ೧೨ ವರ್ಷ ವಯಸ್ಸಿನಿಂದ ಇಂದಿನ ವರೆಗೂ ಅದೇ ರೀತಿಯ ನಡೆಯುಳ್ಳವರಾಗಿದ್ದಾರೆ. ಆದರೆ ಅವರನ್ನು ಹಿಂದು ಶೀಖರ ಶತ್ರುವೆಂದು ಕರೆದವರು ಗಾಂಧೀಜಿಯನ್ನು ಚೆನ್ನಾಗಿ ತಿಳಿದವರಲ್ಲ. ಗಾಂಧೀಜಿ ಅಜಾತ ಶತ್ರು. ಹಿಂದು ಶೀಖರಿಗಂತೂ ಎಂದಿಗೂ ಹಗೆಯಲ್ಲ.

ದುಷ್ಕೃತ್ಯದ ಪರಿಣಾಮ

ಪಾಕಿಸ್ಥಾನ ತಪ್ಪು ದಾರಿಯಲ್ಲಿ ನಡೆಯುತ್ತಲೇ ಹೋದರೆ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಯುದ್ಧವಾಗಿಯೇ ತೀರುವುದು. ತಮ್ಮನ್ನು ಕೇಳುವುದಾದರೆ ಸೈನ್ಯ, ಪೋಲೀಸು ಬಲ ಯಾವುದೂ ಅಗತ್ಯವಿಲ್ಲವೆಂದು ಗಾಂಧಿಯವರೆಂದರು. ಆದರೆ ಇದೆಲ್ಲ ದೊಡ್ಡ ದೊಡ್ಡ ಮಾತುಗಳೆಂದೂ ತಾವೇನೂ ಸರಕಾರವಲ್ಲೆಂದೂ ಅವರು ಹೇಳಿದರು. ಮನೆಬಿಟ್ಟು ಹೋಗಬೇಡಿರೆಂದು ಹಿಂದೂ ಶೀಖರಿಗೆ ಭಿನ್ನವಿಸಿಕೊಂಡು ಅವರ ಸಂಪೂರ್ಣ ಸುರಕ್ಷಿತತೆಯನ್ನು ಪಾಕಿಸ್ತಾನವೇಕೆ ವಹಿಸಿಕೊಡಲಿಲ್ಲ? ಹಿಂದೀ ಒಕ್ಕೂಟದಲ್ಲಿ ಅವ

(೬ನೆ ಪುಟಕ್ಕೆ ಮುಂದುವರಿದಿದೆ)

ಒಕ್ಕೂಟದಲ್ಲಿಯ ಮುಸಲ್ಮಾನರಿಗೆ

(ಈ ತಿಂಗಳ ೧೯ನೆಯ ದಿನಾಂಕ ದರಿಯಾ ಗಂಜಿನ ಮಸೀದೆಯಲ್ಲಿ ಗಾಂಧೀಜಿ ಒಂದು ಸಣ್ಣ ಮುಸ್ಲಿಮರ ಸಭೆಯಲ್ಲಿ ಭಾಷಣಮಾಡಿದರು. ಅದನ್ನು ಇಲ್ಲಿ ಕೊಡಲಾಗಿದೆ. ಸುಶೀಲಾನಯ್ಯರ)

ಗಾಬರಿಗೊಂಡರೆ ಕೆಲಸವಾಗದು

ನಗರದ ಕೆಲಭಾಗದಲ್ಲಿ ಇನ್ನೂ ಉಳಿದಿರುವ ಮುಸ್ಲಿಮರು, ಗಾಬರಿಯಿಂದ ಬಿಟ್ಟೋಡದಿರುವಂತೆ ಮಾಡಲು ಗಾಂಧೀಜಿ ಆ ಸ್ಥಳಗಳಿಗೆ ಭೇಟಿ ಕೊಡಬೇಕೆಂದು ಕೆಲವು ಮುಸ್ಲಿಂ ಗೆಳೆಯರು ಗಾಂಧೀಜಿಯನ್ನು ಕೇಳಿಕೊಂಡರು. ಕೂಡಲೆ ಅದಕ್ಕೆ ಒಪ್ಪಿ ಗಾಂಧೀಜಿ ಆದಿನ ಸಂಜೆ ದರಿಯಾಗಂಜಿನ ಪ್ರದೇಶಕ್ಕೆ ತಿರುಗಾಡಲು ಹೊರಟರು. ಲೂಟಿಗೊಳಗಾದ ಮನೆ ಮಠ ಅಂಗಡಿ ಬೀದಿಗಳನ್ನು ಕಂಡು ಗಾಂಧೀಜಿಗೆ ಬಹಳ ವ್ಯಥೆಯಾಯಿತು. ಆಸಫ್ ಅಲಿ ಸಾಹೇಬರ ಮನೆಯಲ್ಲಿ ಸುಮಾರು ನೂರು ಜನ ಮುಸಲ್ಮಾನರು ಸೇರಿದ್ದರು. ಒಕ್ಕೂಟದ ನಿಷ್ಠ ಪ್ರಜೆಗಳಾಗಿ ತಾವು ಬಾಳಬೇಕೆಂದಿರುವುದಾಗಿ ಅವರು ಹೇಳಿದರು, ಆದರೆ ವಿಶೇಷತಃ ಪೋಲಿಸರ ಪಕ್ಷಪಾತದಿಂದ ತಮಗೆ ರಕ್ಷಣೆಯ ಆಶ್ವಾಸನೆಬೇಕೆಂದು ಅವರು ಕೇಳಿದರು. ತಮ್ಮ ವ್ಯಥೆಯ ಕಥೆಯನ್ನು ಹೇಳುವಾಗ ಅವರಲ್ಲಿ ಕೆಲವರಿಗೆ ಕಣ್ಣೀರು ತುಂಬಿಬಂದಿತು. ಪಾಕಿಸ್ತಾನದಲ್ಲಿಯ ಮುಸಲ್ಮಾನರ ಕೃತ್ಯವನ್ನು ಅವರ ನ್ಯಾಯ ಸಮ್ಮತವೆನ್ನಲೊಪ್ಪಲಿಲ್ಲ. ಆದರೆ ಅನ್ಯರ ಪಾಪಕ್ಕೆ ನಿಷ್ಪಾಪರಾದ ಜನರ ಪ್ರಾಯಶ್ಚಿತ್ತ ಕೊಡುವಂತೆ ಮಾಡಬಾರದೆಂದು ಅವರು ವಿನ್ನವಿಸಿಕೊಂಡರು.

ದೇವರ ಮೇಲೆ ಭಾರಹಾಕಿರಿ

ಅವರನ್ನುದ್ದೇಶಿಸಿ ಮಾತನಾಡುತ್ತ ಗಾಂಧೀಜಿಯೆಂದರು—[illegible] ಆಗಲಿ ಮನೆ ಬಿಡುವ [illegible] ಪ್ರೋತ್ಸಾಹಿಸಬೇಕು. ನಿಮ್ಮ ಸುರಕ್ಷಿತತೆ [illegible] ಸಂರಕ್ಷಣ ದೇವರ ಮೇಲೆ ಭಾರಹಾಕಿರಿ. ನಾನು ಯಥಾಶಕ್ತಿ ಕರ್ತವ್ಯವನ್ನು ನಿರ್ವಹಿಸುತ್ತೇನೆ. ನವಖಾಲಿ ಬಿಹಾರ ಕಲಕತ್ತ, ಮತ್ತು ಈಗ ದಿಲ್ಲಿಯಲ್ಲಿ ನಾನು ಮಾಡುವೆನು ಇಲ್ಲವೆ ಮಡಿಯುವೆನು ಎಂದು ಪ್ರತಿಜ್ಞೆ ಮಾಡಿದೇನೆ. ನಿಜವಾದ ಶಾಂತಿಯುಂಟಾಗುವ ವರೆಗೆ ನಿರ್ವಾಸಿತರು ತಮ್ಮ ಮನೆಗಳಿಗೆ ಹಿಂದಿರುಗಬೇಕೆಂದು ನಾನು ಹೇಳಲಾರೆ. ಹಿಂದು, ಮುಸ್ಲಿಂ ಮತ್ತು ಶೀಖರು ಸೈನ್ಯದ ಇಲ್ಲವೆ ಪೋಲಿಸರ ಸಹಾಯವಿಲ್ಲದೆ ಸೋದರ ಭಾವದಿಂದ ಬದುಕಲೊಪ್ಪುವ ವರೆಗೆ ಓಡಿಹೋದವರು ಬರಬೇಕೆಂದು ನಾನು ಬಯಸೆನು.

ಸರಕಾರದ ಸಹಕಾರ

ಮತ್ತೆ ಗಾಂಧೀಜಿ ಮುಂಬರಿದರು 'ನಾನು ಹಿಂದು ಹಾಗೂ ಅನ್ಯರಿಗೆ ಗೆಳೆಯನೂ ಆಳೂ ಆಗಿರುವಂತೆ ಮುಸ್ಲಿಮರಿಗೂ ಆಗಿದ್ದೇನೆ. ರಾಷ್ಟ್ರನಿಷ್ಠ ಪ್ರಜೆಯಾಗಿ ಬಾಳುವೆನೆಂಬ ಒಕ್ಕೂಟದ ಪ್ರತಿಯೊಬ್ಬ ಮುಸಲ್ಮಾನನೂ ಮನೆಗೆ ಹಿಂದಿರುಗಿ ಸುರಕ್ಷಿತವಾಗಿ ಮತ್ತು ಶಾಂತವಾಗಿ ಬದುಕುವಂತಾಗುವ ವರೆಗೆ, ಅದರಂತೆಯೇ ಹಿಂದು ಶೀಖರೂ ಸ್ವಗೃಹಗಳಿಗೆ ಹಿಂದಿರುಗುವಲ್ಲಿಯವರೆಗೆ ನಾನು ವಿರಮಿಸಲಾರೆ. ನಾನು ಜೀವಾವಧಿ ದ ಆಫ್ರಿಕದಲ್ಲೂ ಭಾರತದಲ್ಲೂ ಮುಸಲ್ಮಾನರ ಸೇವೆಗೈದಿದ್ದೇನೆ. ಖಿಲಾಫತ್ ದಿನಗಳ ಐಕ್ಯವನ್ನು ನಾನೆಂದೂ ಮರೆಯಲಾರೆ. ಅದೇನೋ ಕೊನೆ ವರೆಗೆ ಉಳಿಯಲಿಲ್ಲ, ಆದರೆ ಅದು ಹಿಂದು ಮುಸಲ್ಮಾನರಲ್ಲಿ ಸ್ಥಾಯಿಯಾದ ಸ್ನೇಹ ಶಕ್ಯವಿದೆಯೆಂಬುದನ್ನು ತೋರಿಸಿಕೊಟ್ಟಿತು. ಅದಕ್ಕಾಗಿಯೇ ನಾನು ಬದುಕಿದ್ದೇನೆ, ಮತ್ತು ಶ್ರಮಿಸುತ್ತಿದ್ದೇನೆ. ಪಾಕಿಸ್ತಾನದಿಂದ ಹೊರಗಟ್ಟಲಾದ ಹಿಂದು ಶೀಖರು ಪುನಃ ಅಲ್ಲಿಗೆ ಹೋಗಿ ಸುರಕ್ಷಿತವಾಗಿಯೂ ಗೌರವದಿಂದಲೂ ಬಾಳುವಂತೆ ನೋಡಿಕೊಳ್ಳುವುದರ ಸಲುವಾಗಿ ನಾನು ಪಂಜಾಬಿಗೆ ಹೋಗತಕ್ಕವನಿದ್ದೇನೆ. ಆದರೆ ಮಾರ್ಗಮಧ್ಯದಲ್ಲಿ ದಿಲ್ಲಿಯಲ್ಲೇ ಉಳಿವ ಪ್ರಸಂಗ ಸಂಭವಿಸಿತು. ಮತ್ತು ರಾಜಧಾನಿಯಲ್ಲಿ ಶಾಂತಿಯುಂಟಾದ ಹೊರತು ನಾನು ಇಲ್ಲಿಂದ ಕದಲಲಾರೆ. ನಾನೊಬ್ಬನೇ ಹಾಗೆ ಹೇಳುವವನಾಗಿ ಉಳಿದರೂ ಮುಸ್ಲಿಮರು ಮನೆ ಬಿಟ್ಟು ಹೋಗಬೇಕೆಂದು ನಾನೆಂದೂ ಬೋಧಿಸಲಾರೆ. ಅವರು ಶಾಸನ ವಿಧೇಯರೂ, ಪ್ರಾಮಾಣಿಕರೂ, ರಾಷ್ಟ್ರಭಕ್ತರೂ ಆದ ಪ್ರಜೆಗಳಾಗಿ ಉಳಿದರೆ ಅವರನ್ನು ಯಾರೂ ಮುಟ್ಟರು. ನಾನು ಸರಕಾರವಲ್ಲದಿದ್ದರೂ ಸರಕಾರದಲ್ಲಿರುವವರಲ್ಲಿ ನನ್ನ ವರ್ಚಸ್ಸಿದೆ. ಅವರೊಡನೆ ಈ ಸಂಬಂಧವಾಗಿ ನಾನು ಬಹಳವಾಗಿ ಮಾತುಕತೆ ನಡೆಸಿದ್ದೇನೆ. **ಹಿಂದುಸ್ತಾನದಲ್ಲಿ ಮುಸಲ್ಮಾನರಿಗೆ ಸ್ಥಾನವಿಲ್ಲವೆಂದು ಅವರು ನಂಬಿಲ್ಲ; ಮತ್ತು ಹಿಂದುಸ್ತಾನದಲ್ಲಿ ಮುಸ್ಲಿಮರು ಹಿಂದುಗಳ ದಾಸರಾಗಿ ಬಾಳಬೇಕೆಂದು ಅವರು ಹೇಳುವುದಿಲ್ಲ. ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗುವುದಕ್ಕೆ ಸರದಾರ ಪಟೇಲರು ಬೆಂಬಲವಿತ್ತರೆಂದು ಕೆಲವರೆಂದರು. ಇದನ್ನು ಕೇಳಿದೊಡನೆಯೇ ಸರದಾರರು ಕಿಡಿ ಕಿಡಿಯಾದರು.** ಆದರೆ ಮುಸಲ್ಮಾನರಲ್ಲಿ ಬಹಳ ಜನರು ಹಿಂದುಸ್ತಾನಕ್ಕೆ ನಿಷ್ಠರಾಗಿಲ್ಲವೆಂದು ಸಂಶಯ ಪಡಲು ಬಹಳ ಕಾರಣಗಳಿವೆ. ಅಂಥವರು ಪಾಕಿಸ್ತಾನಕ್ಕೆ ಹೋಗುವುದು ಉತ್ತಮ. ಆದರೆ ಸರದಾರರು ತಮ್ಮ ಮೇಲೆ ಒಂದೆರಗಿದ ಸಂದೇಹವನ್ನು ತಮ್ಮ ಕೃತಿಯಲ್ಲಿ ಕಾಣಗೊಡಲಿಲ್ಲ. ಹಿಂದೀ ಒಕ್ಕೂಟದಲ್ಲಿರಬಯಸುವ ಮುಸಲ್ಮಾನರಿಗೆ ಎಲ್ಲಕ್ಕಿಂತ ಮೊದಲು ರಾಷ್ಟ್ರನಿಷ್ಠೆಯಿರುವುದವಶ್ಯ, ಅವರು ಇಡೀ ಜಗತ್ತೇ ಎರಗಿ ಬಂದರೂ ತಮ್ಮ ರಾಷ್ಟ್ರಕ್ಕಾಗಿ ಹೋರಾಡಲು ತಯಾರಾಗಿರಬೇಕು. ಪಾಕಿಸ್ತಾನಕ್ಕೆ ಹೋಗಬಯಸುವವರು ಸುಖವಾಗಿ ಹೋಗಬಹುದು, ಅವರಿಗೆ ಅಡ್ಡಿ ಯಾವುದೂ ಇಲ್ಲ. ಹಿಂದು ಅಥವಾ ಶೀಖರ ಹೆದರಿಕೆಗಾಗಿ ಒಬ್ಬ ಮುಸಲ್ಮಾನನೂ ಹಿಂದುಸ್ತಾನವನ್ನು ಬಿಟ್ಟು ಹೋಗುವುದನ್ನು ನಾನು ಬಯಸುವುದಿಲ್ಲ. ತಾವು ಒಕ್ಕೂಟದ ನಿಷ್ಠ ಪ್ರಜೆಗಳೆಂದು ದಿಲ್ಲಿಯ ಮುಸಲ್ಮಾನರು ನನಗೆ ಬರೆದು ಕೊಟ್ಟಿದ್ದಾರೆ. ಇಷ್ಟೆಲ್ಲರು ನನ್ನ ಮಾತಿನಲ್ಲಿ ವಿಶ್ವಾಸವಿಡಬೇಕೆಂಬ ನನ್ನ ಅಪೇಕ್ಷೆಯಂತೆ ನಾನು ಅವರ ಆ ಘೋಷಣೆಯಲ್ಲಿ ನಂಬಿಗೆಯಿಡುತ್ತೇನೆ. ಹಾಗಿರುವಾಗ ಅವರ ರಕ್ಷಣೆಯ ಹೊಣೆ ಹೊರುವುದು ಸರಕಾರದ ಕರ್ತವ್ಯ. ಅದನ್ನು ಸಾಧಿಸಲಾಗದಿದ್ದರೆ ನಾನು ಬದುಕಲು ಬಯಸುವುದಿಲ್ಲ. ಎಲ್ಲೇ ಇರಲಿ, [illegible] ನಿಲ್ಲಿಯೇ ತೀರಬೇಕು. ಅಪಹೃತ ಸ್ತ್ರೀಯರನ್ನು ತಿರುಗಿತಂದು ಕೊಡಬೇಕು. ಬಲಾತ್ಕಾರ ಮತಾಂತರವು ನಿರರ್ಥಕವೆಂದು ತಿಳಿಯಲ್ಪಡಬೇಕು. ಪಾಕಿಸ್ತಾನ ಮತ್ತು ಒಕ್ಕೂಟಗಳಲ್ಲಿ ಯಾವ ಧರ್ಮಕ್ಕೆ ಸೇರಿದವಳೇ ಆಗಲಿ, ಒಬ್ಬಳು ಚಿಕ್ಕ ಹುಡುಗಿಯೂ ಅರಕ್ಷಿತಳಾಗಿರದಂತಹ ಸನ್ನಿವೇಶವನ್ನು ಉಂಟುಮಾಡಬೇಕು. ಖಲೀಕುಜ್ಜಮಾನರ ಹಾಗೂ ಮುಜಫರನಗರದ ಮುಸಲ್ಮಾನರ ಹೇಳಿಕೆಯನ್ನು ಓದಿ ಆನಂದಿಸಿದೆ. ಪಾಕಿಸ್ತಾನಕ್ಕೆ ಹೋಗುವ ಮುನ್ನ ನಾನು ದಿಲ್ಲಿಯಲ್ಲಿಯ ದಾವಾನಲವನ್ನು ಶಾಂತಗೊಳಿಸಬೇಕಾಗಿದೆ. **ಹಿಂದುಸ್ಥಾನ ಪಾಕಿಸ್ಥಾನಗಳು ಎಂದೆಂದೂ ಹಗೆಗಳಾಗಿಯೇ ಉಳಿದು ಪರಸ್ಪರರ ಮೇಲೇರಿ ಹೋಗುತ್ತಿದ್ದರೆ ಅದು ಎರಡೂ (ಸಾಮಂತ ರಾಜ್ಯಗಳ) ನಾಶಕ್ಕೆ ಕಾರಣವಾಗುವುದಲ್ಲದೆ ಕಷ್ಟಪಟ್ಟು ಸಂಪಾದಿಸಿದ ಸ್ವಾತಂತ್ರ್ಯವು ಕ್ಷಣಾರ್ಧದಲ್ಲಿ ಕಳೆದು ಹೋಗುವುದು.** ಅಂಥ ದಿನವನ್ನು ನೋಡಲು ನಾನು ಬದುಕಿರಬಾರದೆಂದು ನನ್ನ ಅಪೇಕ್ಷೆ.

ಅನಂತರ ಮೌಲಾನಾ ಅಹ್ಮದ್ ಸಯ್ಯದರು ಅನಧಿಕೃತ ಶಸ್ತ್ರಗಳನ್ನು ಒಪ್ಪಿಸಲಾಗುವಂತೆ ನೋಡಿಕೊಳ್ಳಲು ಮುಸ್ಲಿಮರಿಗೆ ಭಿನ್ನವಿಸಿಕೊಂ

(೬ನೇ ಪುಟಕ್ಕೆ ಮುಂದುವರಿದಿದೆ)

(ಸಣ್ಣ ಕತೆ)

ಸ್ವರ್ಗ ಪತ್ರ

...ಇನ್ಶೂರೆನ್ಸ್ ಕಂಪೆನಿಯ ಕತೆ ಎಂದೊಡನೆ ಹೀಗು ಶ್ರೀಘ್ರವಾಯಿತೆ ವಾಚಕರನೇಕರಿಗೆ ಹುಟ್ಟು. ಆದರೆ ಸುಬ್ಬನು-ಏನೂ ಅರಿಯದ ಬಡ ಪೋಲಿ ತ್ರಾತಿ ಸುಬ್ಬನು-೫ ಸಾವಿರದ ಇನ್ಶೂರ್ ಇಳಿಸಿದನೆಂದರೆ ಯಾರಿಗೆ ತಾನೆ ಆಶ್ಚರ್ಯವಾಗಲಿಕ್ಕಿಲ್ಲ? ಈ ಕತೆಯನ್ನೋದಿ ಮುಗಿಸಲೂ ಕುತೂಹಲವೂ ಉಂಟಾಗುವುದು.

ಇನ್ಶೂರ್ ಬೀಥಿಯಲ್ಲಿ ಕೊಳ್ಳಿ ನಗದೆ ಬಂ ಸಾಕ್ರಾಂತರಾಗಿದ್ದ ವಿಶ್ವನಾಥರಾಯರು ಮಂಗಳೂರಿನ ಅರಡಿ ರಸ್ತೆಯ (ಬಸ್ಸಿನ ಅಗಲವು ಕಿಷ್ಕಿತಿದೆ. ಆದ್ದರಿಂದ ಚಕ್ರಗಳು ಚರಂಡಿಯಲ್ಲಿಳಿಯಬಹುದೆಂದು ಗಾಬರಿಯಾಗಬೇಡಿ.) ಕೊನೆಯ ಒಂದು ಕುಟೀರದಲ್ಲಿ ಸೊಳ್ಳೆಗಾನವನ್ನಾಲಿಸುತ್ತ ಒಂದು ಆರಾಮ ಕುರ್ಚಿಯ ಮೇಲೆ ಕುಳಿತಿದ್ದರು. ಪುಣ್ಯದಿಂದವರು ಅಲಂಕರಿಸಿದ್ದ ಆಸನದಲ್ಲಿ ತಗಣೆಗಳ ಸಂಖ್ಯೆ ಕಡಿಮೆಯಾಗಿತ್ತು. ಆದ್ದರಿಂದ ಅವರಿಗೆ ಸಿಡುಬು ರೋಗವು ಊರಲ್ಲಿ ಹಬ್ಬಿರುವ ಸಮಯದಲ್ಲಿ ಇಂಜಕ್ಷನ್ ತೆಗೆದುಕೊಳ್ಳಬೇಕಾದ ಆವಶ್ಯಕತೆ ಯಿರಲಿಲ್ಲ.

ವಿಶ್ವನಾಥರಾಯರ ಮನೋರಾಜ್ಯದಲ್ಲಿ ದಂಗೆಯೆದ್ದಿತ್ತು. ಅವರು ತನ್ನಲ್ಲಿ ಹಾವಳಿಮಾಡುತಿದ್ದ ನಿಷ್ಕ್ರಿಯಾ ಪ್ರವೃತಿಗೆ 'ಕ್ವಿಟ್' ನೋಟಿಸು ಕೊಡುವ ಯೋಜನೆಯಲ್ಲಿದ್ದರು. ತಾನೀ ವೃತ್ತಿಯನ್ನು ಪ್ರಧಾನವಾಗಿ ಕೈಕೊಂಡದ್ದೇ ತಪ್ಪೆಂದೂ ಅವರು ಆತ್ಮಗತವಾಗಿ ಭಾವಿಸುತಿದ್ದರು. ಮತ್ತೆ ಪಕ್ಕನೆ ವಿಮಾ ವ್ಯವಹಾರವನ್ನು ಯಶಸ್ವಿಯಾಗಿ ಸಾಗಿಸಿ ಸುಖ ಸಂಪತ್ತನ್ನು ಗಳಿಸಿದವರ ಯೋಚನೆ ಜ್ಞಾಪಕಕ್ಕೆ ಬಂದೊಡನೆ ತಮ್ಮ ಅಸಾಮರ್ಥ್ಯಕ್ಕಾಗಿ ವ್ಯಥೆ ಪಡುತಿದ್ದರು.

ಅಷ್ಟರಲ್ಲಿ ಬಾಗಿಲು ತಟ್ಟಿದ ಶಬ್ದವು ಅವರನ್ನು ಯೋಚನೆಯ ಮಬ್ಬಿನಿಂದೆಬ್ಬಿಸಿತು. ಕದ ತೆರೆದು ನೋಡಲು ಸುಬ್ಬನು ಬಾಗಿಲಲ್ಲಿ ನಿಂತಿದ್ದನು. ಏನೋ ಅನಿಷ್ಟ ಬಂತೆಂದು ತಿರಸ್ಕಾರದಿಂದ ವಿಶ್ವನಾಥರಾಯರು ಪುನಃ ಕದವನ್ನು ಮುಚ್ಚಲಿದ್ದರು. ಕಾರಣ ಆಗಲೇ ಮಹಾ ನವಮಿಯ ಸಮಯ. ಸರಕಾರಿ ಕಛೇರಿ ಪೇದೆಗಳು ಲಿಂಬೆಹಣ್ಣು ತಂದು ಇನಾಮು ಕೇಳುವ ಮಾಮೂಲು (ಈಗ ರದ್ದಾಗಿದೆಯನ್ನಿ) ಇನ್ನೂ ಜಾರಿಯಲ್ಲೇ ಯಿತ್ತು. "ಸ್ವಾಮಿ ಇನ್ಶೂರ್" ಎಂದು ಸುಬ್ಬನು ಮಾತುಕತೆ ಪ್ರಾರಂಭಿಸಿದಾಗ ವಿಶ್ವನಾಥರಾಯರಿಗೆ ದಿಗಿಲಾಯಿತು. "ಏನು ಸುಬ್ಬಾ! ಏನು ಸಮಾಚಾರ?" ಎಂದವರು ಪ್ರಶ್ನಿಸಿದರು. "ನಿಮ್ಮ ಕಂಪೆನಿಯಲ್ಲಿ ವಿಮೆ ಇಳಿಸಬೇಕೆಂದಿದ್ದೇನೆ" ಎಂದು ಸುಬ್ಬನು ಉತ್ತರವಿತ್ತ. ದೃಢ ನಿರ್ಧಾರವೂ ಅವನ ಮಾತುಗಳಲ್ಲಿ ಸೂಚಿತವಾಗಿತ್ತು. ಸ್ವಯಂ ಪ್ರೇರಿತವಾಗಿ ಕೊಳ್ಳಿ ಬಲೆಗೆ ಬೀಳುವುದು ವಿಶ್ವನಾಥರಾಯರ ಪ್ರಥಮ ಅನುಭವವಿದು! ಕೌತುಕವನ್ನು ಹೊರಗೆಡಹದೆ ಸಹಜ ಇನ್ಶೂರೆನ್ಸ್ ಮಂದಹಾಸದಿಂದ ವಿಶ್ವನಾಥರಾಯರು "ಏನೂರಕ್ಕೆ ತೆಗೆಯುತ್ತೀಯೊ ಹೇಗೆ?" ಎಂದು ವ್ಯಂಗವಾಗಿ ಪ್ರಶ್ನಿಸಿದರು. ಮಾನವ ಯೋಗ್ಯತೆಯನ್ನು ತೂಕ ಮಾಡುವ ಕಜ್ಜತೆಯೂ ಅವರ ಮಾತುಗಳಲ್ಲಿ ಸೂಚಿತವಾಗಿತ್ತು. "ಏನೂರಕ್ಕಲ್ಲ ಸ್ವಾಮಿ" ೫ ಸಾವಿರಕ್ಕೆ" ಎಂದು ಸುಬ್ಬ ತಿಳಿಸಿದಾಗ ವಿಶ್ವನಾಥರಾಯರು ಇದು ಕನಸ್ಸಲ್ಲವೆಂದು ಮೊದಲು ಖಚಿತ ಮಾಡಿಕೊಳ್ಳಲು ಸುತ್ತಲೂ ನೋಡಿದರು. "ಏನು ಐದು ಸಾವಿರವೆ?" ಎಂಬೊಂದು ಪ್ರಶ್ನೆ ಮಾತ್ರ ಅವರ ಬೆರಗು ಬಾಯಿಯಿಂದ ಹೊರಟು ಮತ್ತೆ ದಿಗ್ಮೂಢವಾದ ಚಿತ್ರವನ್ನು ಸ್ಥಿರಪಡಿಸುವ ಹೋರಾಟದಲ್ಲವರು ಮಗ್ನರಾದರು.

ರಾಯರು ಬೆರಗಾಗಲು ಕಾರಣಗಳಿಲ್ಲದಿರಲ್ಲ. ಸುಬ್ಬನು ಬಡವ, ಏನೂ ತಿಳುವಳಿಕೆಯಿಲ್ಲದ ಅಲ್ಪ ಜ್ಞಾನಿ. ಬೋಳೇ ಸ್ವಭಾವದವ. ೫ನೇ ತರಗತಿಯಲ್ಲಿ 4 ಸಲ ಫೈಲ್ ಹೊಡೆದ ಬೃಹಸ್ಪತಿ ಆವನು. ಅವನಿಗೆ ಫಿಪ್ತ್ ಕ್ಲಾಸ್ ಹೊನರ್ಸ್-ಗ್ರೇಜುವೇಟ್ ನೆಂದೂ ಕರೆಯುತಿದ್ದರು. ಇಂತಹನು 'ಐದು ಸಾವಿರದ ಇನ್ಶೂರ್, ತೆಗೆಯುವುದು ಆಶ್ಚರ್ಯವಲ್ಲದೇನು?

ಸುಬ್ಬನು ಅಷ್ಟು ದೊಡ್ಡ ಸಂಖ್ಯೆಯ ವಿಮೆ ಇಳಿಸಿದ ಸುದ್ದಿ ಅರಡಿ ರಸ್ತೆಯಲ್ಲಿಯೂ ಇತರ ಆಸುಪಾಸಿನ ರಸ್ತೆಗಳಲ್ಲಿಯೂ ಹಬ್ಬಿತು. ಅನೇಕರು ಈ ವಿಶೇಷವನ್ನು ಅನೇಕ ವಿಧವಾಗಿ ವಿಮರ್ಶಿಸಿದರು. "ಸುಬ್ಬನು ಆತ್ಮಹತ್ಯೆ" ಮಾಡಿಕೊಳ್ಳಲು ಹವಣಿಸಿದ್ದಾನೆಂದು ಕೆಲವರೂ, 'ಅವನಿಗೆ ಕೊಪ್ಪರಿಗೆ ಸಿಕ್ಕಿದೆ' ಎಂದು ಕೆಲವರೂ, "ಅವನಿಗೆ ಶಿರಭ್ರಮಣಕ್ಕಾರಂಭ"ವಾಗಿರಬೇಕೆಂದು ಕೆಲವರೂ, ಹೀಗೆ ವಿವಿಧವಾಗಿ ಊಹಾಪೋಹೆಗಳನ್ನು ಮಾಡಿದರು. ಸುಬ್ಬನ ಇನ್ಶೂರ್ ವಿಷಯವೇ ಜನರ ವಿನೋದ ಸಂಭಾಷಣೆಯಾಗತೊಡಗಿತು. ಸುಬ್ಬನು ತಾನು ಯಾಕೆ ಅಷ್ಟು ದೊಡ್ಡ ಮೊಬಲಗನ್ನು ಇಳಿಸಿಕೊಂಡನೆಂಬುದನ್ನು ಯಾರಿಗೂ ಹೇಳಲೇ ಇಲ್ಲ. ಕೇಳಿದವರಿಗೆಲ್ಲ ಅವನು ಪಂಡಿತ ಲಕ್ಷಣವನ್ನೇ ತೋರಿಸುತಿದ್ದ.

ಮತ್ತೆ ಕೆಲವು ದಿನಗಳಲ್ಲಿ ಸುಬ್ಬನ ಎದುರುವಾದಿಗಳು ಅವನು ಅದೃಶ್ಯನಾಗಿರುವ ಸುದ್ದಿಯನ್ನು ತಂದರು. ಸುಬ್ಬನು ಮಂಗಳೂರಿನಿಂದ ಕಾಣೆಯಾದುದೂ ಹೌದು. ಅವನು ಆತ್ಮಹತ್ಯೆ ಮಾಡಿಕೊಳ್ಳುವನೆಂದು ಭವಿಷ್ಯ ಹೇಳಿದವರು ನಗರದ ಹಾಳು ಭಾವಿ ಕೆರೆಗಳಲ್ಲೊ, ಬಡಾವಣೆಯ ಕಾಡು ಗುಡ್ಡಗಳಲ್ಲೊ ಅವನು ಇರಬಹುದೆಂದು ಶಂಕಿಸಿದರು. ತಮ್ಮ ಭವಿಷ್ಯ ಜ್ಞಾನಕ್ಕಾಗಿ ಅವರು ಹೆಮ್ಮೆಪಟ್ಟುಕೊಂಡರು. ಏಜಂಟ್ ವಿಶ್ವನಾಥರಾಯರು ಮಾತ್ರ ದಿಗ್ಭ್ರಾಂತರಾಗಿದ್ದರು! ಹೆಚ್ಚಿಗೆ ಉತ್ಪನ್ನವಿಲ್ಲದ ಸುಬ್ಬನಿಗೆ ೫ ಸಾವಿರದ ಯೋಗ್ಯತೆ ಇಲ್ಲವಾದರೂ ಅದನ್ನು ಅಡಗಿಸಿ ಇದಕ್ಕೆ ತಾನು ಒಪ್ಪಿದ್ದು ಶುದ್ಧ ಅವಿವೇಕತನವೆಂದವರಿಗೆ ಈಗ ಹೊಳೆಯಿತು. ಆದರೆ ಕಾರ್ಯವು ಮಿಂಚಿಹೋಗಿದೆ. ಸಂದರ್ಭಗಳು ಹತೋಟಿ ಮೀರಿವೆ. ಬರುವುದಕ್ಕೆಲ್ಲ ಸಿದ್ಧರಾಗಿರುವುದೇ ಉಚಿತವೆಂದವರು ನಿರ್ಧರಿಸಿದರು. ತನ್ನ ವಿಮಾ ಗಿರಾಕಿ ಊರಿನಿಂದ ಮಾಯವಾದುದು ನಿಜವೊ ಎಂದವರು ಮೊದಲು ಅವನ ಮನೆಗೆ ಹೋಗಿ ಖಚಿತಮಾಡಿಕೊಂಡರು. ಸುಬ್ಬನು ಮಿಲಿಟರಿಗೆ ಸೇರಿದ್ದಾನೆಂದೂ ಅವನನ್ನು ಕೊಯಮುತ್ತೂರಿಗೆ ಒಯ್ದಿರುವರೆಂದೂ ಅವನ ಅರ್ಧಾಂಗಿ ತಿಳಿಸುವವಳಾದಳು. ತುಸು ಸಮಾಧಾನಗೊಂಡ ರಾಯರು ಸುಬ್ಬನ ವಿಧಳನ್ನು ಮನದಲ್ಲೇ ಕೊಂಡಾಡಿದರು.

ಹದಿನೈದು ದಿವಸಗಳ ನಂತರ ರಾಯರಿಗೆ ಸುಬ್ಬನ ಪತ್ರ ಬಂತು. ಅದರಲ್ಲಿ ಹೀಗೆ ತಪ್ಪು ತಪ್ಪು ಗೀಚಲಾಗಿತ್ತು. "ವಿಶ್ವನಾಥರಾಯರೇ, ನಿಮಗೆ ಸುಬ್ಬನು ಮಾಡುವ ನಮಸ್ಕಾರ. ತಮ್ಮಲ್ಲಿ ಇನ್ಶೂರ್ ತೆಗೆದ ನಾನು ಜಪಾನಿಯವರೊಡನೆ ಯುದ್ಧ ಮಾಡುವಾಗ ಸತ್ತಿದ್ದೇನೆ. ನಾನು ಬರಮುದಲ್ಲಿ ಹೂಳಲ್ಪಟ್ಟಿದ್ದೇನೆ. ಆದ್ದರಿಂದ ಆ ೫ ಸಾವಿರದಲ್ಲಿ ಎರಡನ್ನು ನನ್ನ ಮನೆಗೆ ತಲುಪಿಸಿ ಉಳಿದುದನ್ನು ನಾನು ಬಂದಾಗ ಕೊಡುವುದು" ಯಾರೊ ಸುಬ್ಬನಿಗೆ ಈ ಬಡ್ಡ ಪ್ಲೇನನ್ನು ಹೇಳಿಕೊಟ್ಟು ಮೋಸಮಾಡಿದ್ದಾರೆಂದು ವಿಶ್ವನಾಥರಾಯರಿಗೆ ತಿಳಿಯಿತು. ಸುಬ್ಬನ ಪ್ರಥಮ ಕಂತು ಮುಳುಗಿತು. ರಾಯರಿಗೆ ಕಮಿಶನ್ ಏನೊ ಸಿಕ್ಕಿ ತಿಂಗಳ ಖರ್ಚು ಅಲ್ಲಲ್ಲಿಗೆ ಆಯಿತು. ಸುಬ್ಬನ ಮರಳುತನಕ್ಕಾಗಿ ಅವರಿಗೆ ಸ್ವಲ್ಪ ಕನಿಕರವೂ ಆಯಿತು.

FOR ALL CLASSES OF INSURANCE

LIFE-FIRE-MARINE-ACCIDENT

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA

ASSURANCE CO. LTD.

(H O. BOMBAY)

*

A Tata's Promotion & India's Largest Composite Insurance Office.

Total Assets - - About 9 Crores.

For Agency and other particulars:-

Apply to

K. GANAPATHI Esq., *Branch Manager.* 4/5, First Line Beach, MADRAS.

K. N. NAYAK, Esq., *Secretary, Sub Office* Hampankatta, MANGALORE

ದೀಪ ಜ್ವಾಲೆ ಹೊರಗೆ ಕೆಂಪು ಒಳಗೆ ನೀಲವೇಕೆ?

ಸ್ಟೌವ್ ಮೊದಲಾದ ಗೇಸ್ ಜ್ವಾಲೆಗಳ ಮೇಲಿನ ಹೊರ ಭಾಗದಲ್ಲಿ ಕೆಂಪಾಗಿಯೂ, ಒಳ ಭಾಗದಲ್ಲಿ ನೀಲವಾಗಿಯೂ ಇರುವುವು. ಹೊರಭಾಗಕ್ಕೆ ಹೆಚ್ಚು ಆಮ್ಲಜನಕವು ದೊರಕುವುದೇ ಇದಕ್ಕೆ ಕಾರಣ. ಹೀಗಾಗಿ ಹೊರಭಾಗದ ಅಗ್ನಿ ಕಣಗಳು ಪ್ರಕಾಶಮಾನವಾಗಿಯೂ ಒಳಭಾಗದವು ಮಬ್ಬಾಗಿಯೂ ಉರಿಯುವುದರಿಂದ ಈ ವರ್ಣ ಭೇದವು ಕಾಣಿಸುತ್ತದೆ.

೩ನೇ ಪುಟದಿಂದ

ರಾಷ್ಟ್ರೀಯ ಸೇವಕ ಸಂಘದ ಸದಸ್ಯರಿಗೆ

ರೀಕೆ ಪತಿಯೊಬ್ಬ ಮುಸ್ಲಿಮನ ಸುರಕ್ಷಿತತೆಗೆ ಹೊಣೆಯಾಗಲಿಲ್ಲ.

ಇಂದು ಎರಡೂ ಪಕ್ಷಗಳು ಭಮಿಷ್ಠರಾದಂತೆ ತೋರುತ್ತದೆ. ಅದರ ಪರಿಣಾಮವು ವಿನಾಶ ಹಾಗೂ ದುಃಖವಲ್ಲದೆ ಬೇರೆಯಾಗಲಾರದು.

ಮಾತು ಮತ್ತು ಕೃತಿ

ಸಂಘವು ಸುಸಂಘಟಿತವೂ ಸುನಿಯತವೂ ಆದ ಒಂದು ಜನಮಂಡಲ. ಅದರ ಶಕ್ತಿಯನ್ನು ಹಿಂದುಸ್ತಾನದ ಹಿತದ ಪರವಾಗಿ ಇಲ್ಲವೆ ವಿರುದ್ಧವಾಗಿ ಬಳಸಬಹುದು.

ಸಂಘದ ವಿರುದ್ಧ ಮಂಡಿಸಿದ ಆಪಾದನೆಗಳಲ್ಲಿ ಸತ್ಯಾಂಶವಿದೆಯೋ ಇಲ್ಲವೋ ತಮಗೆ ತಿಳಿಯದೆಂದು ಗಾಂಧೀಜಿ ಹೇಳಿದರು. ಆಪಾದನೆಗಳಿಗೆ ಬುಡವಿಲ್ಲವೆಂಬುದನ್ನು ತನ್ನ ಅವ್ಯಾಹತ ಹಾಗೂ ಏಕರೂಪದ ನಡತೆಯಿಂದ ಸಂಘವು ತೋರಿಸಿ ಕೊಡಬೇಕು.

ಯಾರು ಶಿಕ್ಷಿಸಬಲ್ಲರು

ಉಪಸಂಹಾರ ಕಾಲದಲ್ಲಿ ಗಾಂಧೀಜಿ ಪತ್ರಿಗಳಿದ್ದರೆ ಉತ್ತರಿಸುವುದಾಗಿ ಹೇಳಿದರು. ದುರ್ಜನನ್ನು ಕೊಲ್ಲಲು ಹಿಂದು ಧರ್ಮದ ಅಪ್ಪಣೆಯಿದೆಯೇ? ಎಂದು ಒಬ್ಬ ಕೇಳಿದ. ಅಪ್ಪಣೆಯಿದೆ ಮತ್ತು ಇಲ್ಲ-ಎಂದು ಹೇಳಿ ಹಿಂದು ಧರ್ಮವು ಒಬ್ಬ ದುರ್ಜನನಿಗೆ ಇನ್ನೊಬ್ಬನನ್ನು ಕೊಲ್ಲಲು ಅಪ್ಪಣೆ ಕೊಡದೆಂದು ಗಾಂಧೀಜಿ ಉತ್ತರಿಸಿದರು. **ಶಿಕ್ಷಿಸುವುದು ಸರಕಾರದ ಕೆಲಸ, ಜನತೆಯದಲ್ಲ ಎಂದು-ಅವರು ಸಾರಿದರು**

"ಕರ್ಮವೀರ ಹರಿಜನ ಪುರವಣಿ"

ಪ್ರಪಂಚ ಪರಿಚಯ

ಸಂಯುಕ್ತ ರಾಷ್ಟ್ರಗಳ ಸಂಘದ ಅಧಿವೇಶನವು ಸಾಗುತ್ತಾಯಿದೆ. ಸಂಯುಕ್ತ ಅಮೇರಿಕಾ ಮತ್ತು ರಷ್ಯಗಳ ನಡುವಿನ ಭೇದವು ಖಂಡಿತ ರೂಪವನ್ನು ಹೊಂದುವ ಕ್ರಿಯೆಯು ಇಲ್ಲಿ ಕಾಣಿಸುತ್ತಿದೆ. ಸಂಯುಕ್ತ ಅಮೇರಿಕಾದ ಪತ್ರಿಕೆಗಳೆಲ್ಲಾ, ಅಮೇರಿಕಾ-ಸೋವಿಯಟ್ ಯುದ್ಧದ ಕುರಿತು ಪ್ರಚಾರದಲ್ಲಿ ತೊಡಗಿದಂತೆ ಕಾಣುತ್ತದೆ. ಒಂದು ಮಹಾ ಭಯಂಕರ ಯುದ್ಧ ಮುಗಿದು, ಇನ್ನೂ ಹಲವು ದಿನಗಳಾಗಲಿಲ್ಲ, ಇದೇನು ಈಗ ಇನ್ನೊಂದು ಯುದ್ಧದ ಕುರಿತು ಮಾತು, ಎಂಬುದಾಗಿ, ಕೆಲವರಿಗೆ ಆಶ್ಚರ್ಯವಾಗಬಹುದು ಆದರೆ ಪ್ರಜಾಸತ್ತಾತ್ಮಕ ಅಮೇರಿಕಾದಲ್ಲಿ, ನಿಜವಾದ ಪ್ರಜಾಸತ್ತೆಯುಯಿಲ್ಲ ಅಲ್ಲಿ ಬಾಂಡವಳಿಗರ ಕೈವಾಡವೆ ಹೆಚ್ಚು ಅಧ್ಯಕ್ಷ ಟ್ರೂಮೇನರ ಧೋರಣವೂ ಶ್ರೀಮಂತರನ್ನನುಸರಿಸಿಕೊಂಡಿದೆ ಇನ್ನೊಂದು ಸಾಂಪತ್ತಿಕ ವೈಶಮತೆಯನ್ನು ಮುನ್ನೋಡುತ್ತಿರುವ ಅಮೇರಿಕದ ಶ್ರೀಮಂತರು, ರೋಗಕ್ಕೆ ತಕ್ಕ ಚಿಕಿತ್ಸೆಯನ್ನು ಕೈಗೊಳ್ಳುವ ಬದಲಾಗಿ, ಬರಲಿರುವ ನಿರುದ್ಯೋಗ ಸಮಸ್ಯೆಯನ್ನು ತಡೆಯಲು, ಇನ್ನೊಂದು ಮಹಾಯುದ್ಧ ಕೂಗನ್ನು ಎಬ್ಬಿಸಿರುವರು ಗತಿಗೆಟ್ಟ ಜಗತ್ತನ್ನು ಸುಧಾರಿಸಲು, ಟ್ರೂಮೇನರು ಪ್ರಜಾಸತ್ತ ನೀತಿಗೆನೆ ಮಹತ್ವ ಕೊಡಬೇಕಾಗಿತ್ತು ಆದರೆ ಡೊಲ್ಲರಿನ ಪ್ರಯೋಗ ಬೇರೆ ಇನ್ನಿತರ ರೀತಿಯಲ್ಲಾಗುತ್ತಿದೆ

ಯುರೋಪಿನ ಉದ್ಧಾರಕ್ಕಾಗಿ ಅಮೇರಿಕದ ಮಾರ್ಶೆಲ್ಲರ ಪ್ಲೇನೊಂದು ಹೊರಟಿತು. ಪಶ್ಚಿಮ ಯುರೋಪದ ಮಟ್ಟಿಗ ಅದು ಅನ್ವಯಿಸುವಂತಾಯಿತು, ಈ ಪ್ಲೇನಿನೊಳಗೆ ಬರುವ ದೇಶಗಳು ತಮ್ಮ ಕೊರತೆಗಳ ಪಟ್ಟಿಯನ್ನು ರಚಿಸಿದಾಯಿತು ಅವುಗಳಿಗೆ ಡೊಲರಿನ ನೆರವು ಕೂಡುವುದೆಂದಾಯಿತು ಆದರೆ ಅಮೇರಿಕದ ಕಾಂಗ್ರೆಸ್ಸಿನ ಅನುಮೋದನೆಯು ಮಾತ್ರ ಈ ಪ್ಲೇನಿಗೆ ಈ ವರೆಗೆ ದೊರಕಿಲ್ಲ ಶ್ರೀಮಂತಶಾಹಿ, ರಿಪಬ್ಲಿಕನ್ನರ ಹಿಡಿತಕ್ಕೆ ಸೇರಿದ ಕೊಂಗ್ರೆಸ್ಸು, ಇಷ್ಟು ಹಣವನ್ನು ಯುರೋಪದಲ್ಲಿ ಸುಮ್ಮನೆ ಸುರಿಸಲು ಸಮ್ಮತಿಸುವುದೆ? ಅವರಿಗೆ ತಕ್ಕ ಪರಿಹಾರ ಬೇಡವೆ? ಸಾಲ ತೆಕ್ಕೊಳ್ಳುವವರ ಪೌಲೆ, ತಮ್ಮ ಹಣದ ಭದ್ರತೆಗಾಗಿ ಯಾವರೂ ಹತೋಟಿ ಬೇಡವೆ? ಇದೆಲ್ಲಾ ಪ್ರಶ್ನೆಮಾಲೆಯು ಈಗ ಹೊರಟಿರುತ್ತದೆ

ಪಶ್ಚಿಮ ಜರ್ಮನಿಯ ಮಟ್ಟಿಗೆ, ಅಮೇರಿಕನ್ ಯೋಜನೆಯೊಂದು ಈಗಾಗಲೆ ಕಾರ್ಯರೂಪಕ್ಕೆ ಬಂದಿರುತ್ತದೆ ಬೇಸತ್ತ ಜರ್ಮನರಿಗೆ ಇದರಿಂದ ಸ್ವಲ್ಪಮಟ್ಟಿನ ಸಮಾಧಾನವಾಗಿದ್ದರೂ, ಅಮೇರಿಕನ್ನರು ತಮ್ಮ ಸ್ವಾರ್ಥಕ್ಕಾಗಿಯೆ ಹೀಗೆ ವರ್ತಿಸುತ್ತಿರುವರೆಂಬ ಅಭಿಪ್ರಾಯವು ಅವರಲ್ಲುಂಟಾಗಿರುವುದಂತೆ ಪ್ರಜಾಸತ್ತಾತ್ಮ ಅಮೇರಿಕಾದ ನೆರವಿನಲ್ಲಿ, ಪಶ್ಚಿಮ ಜರ್ಮನಿಯಲ್ಲಿ ಪ್ರತಿಗಾಮಿಗಳಿಗೆನೆ ಬೆಂಬಲದೊರಕುತ್ತಿರುವುದನ್ನು ನೋಡಿ ಅವರಲ್ಲಿ ಜಿಗುಪ್ಸೆ ಉಂಟಾಗಿರುವುದಂತೆ ಯುರೋಪಿನ ಲೋಹ ಕೇಂದ್ರ ರೂರದ ಪುನರುದ್ಧಾರವಾಗುವುದು ಅವಶ್ಯವಿದೆ ಈ ಕಾರ್ಯವು, ಯುರೋಪದಲ್ಲಿ ಇನ್ನೊಂದು ಯುದ್ಧದ ಬೀಜವನ್ನು ಹಾಕುತ್ತಿರುವುದೊ ಎಂಬ ಸಂದೇಹವು ಉಂಟಾಗಿರುತ್ತದೆ

ಮಾರ್ಶೆಲ್ ಪ್ಲೇನಿನಿಂದ ಪಶ್ಚಿಮ ಯುರೋಪವನ್ನು ಬಿಗಿದು ಹಿಡಿಯುವ, ಆಂಗ್ಲೊ ಅಮೇರಿಕನ್, ಮುಖ್ಯವಾಗಿ ಅಮೇರಿಕನ್ ಯತ್ನಗಳಾಗಿರುತ್ತಿರುವಾಗ, ರಷ್ಯಾದ ಮಾಲ್ಟೋವ್‌ರವರು, ತಾನು ಸುಮ್ಮಗೆ ಕುಳಿತಿರುವರೆ? ಅವರದೂ ಒಂದು ಪ್ಲೇನು ಹೊರಡಿದೆ. ಪೂರ್ವ ಯುರೋಪದ ದೇಶಗಳನ್ನು ರಷ್ಯದ ಸುತ್ತಲೂ ಕೋಟೆಗಳಾಗಿ ಕಟ್ಟಿಕೊಳ್ಳಲು ಆ ಪ್ಲೇನಿನ ಉದ್ದೇಶವಾಗಿರುತ್ತದೆ ಅದು ಬಿರುಸಾಗಿ ಕಾರ್ಯರೂಪಕ್ಕೆ ಬರುತ್ತಿದೆ. ಬಲ್ಗೇರಿಯಾದಿಂದ ಹಿಡಿದು ಬಾಲ್ಟಿಕದವರೆಗೆ, ಮಾಲ್ಟೋವ್ ಪ್ಲೇನು ಬಹಳ ಯಶಸ್ವಿಯಾಗಿ ಕಾರ್ಯಸಾಧನೆ ಮಾಡುತ್ತಿರುವ ವರದಿಗಳು ತುಂಬಾ ಬಂದಿವೆ.

ಮಾರ್ಶೆಲ್ಲರ ಪ್ಲೇನು ರೂರದ ಲೋಹದ ಕೈಗಾರಿಕೆಗಳನ್ನು ವಶೀಕರಿಸಿ, ಪೂರ್ವ ಯುರೋಪದ ದೇಶಗಳ ಮೇಲೆ ವರ್ಚಸ್ಸು ಬೀರಲು [ಪೂರ್ವ ಯುರೋಪ ದೇಶಗಳಿಗೆ ಲೋಹದ ಒಡವೆಗಳು ಈ ಮೊದಲು, ಪಶ್ಚಿಮ ಯುರೋಪದಿಂದ, ಮುಖ್ಯವಾಗಿ ಜರ್ಮನಿಯಿಂದಲೆ ಹೋಗಬೇಕಾಗಿತ್ತು] ಪ್ರಯತ್ನಪಡುತ್ತಿರುವಾಗ ಪೂರ್ವದ ಧಾರಾಳ ಆಹಾರ ಪದಾರ್ಥವನ್ನುಪಯೋಗಿಸಿ ಮಾಲ್ಟೋವ್‌ರವರು, ತಮ್ಮ ವರ್ಚಸ್ಸನ್ನು ಪಶ್ಚಿಮ ಯುರೋಪದಲ್ಲಿ ಬೀರಲು ಯತ್ನಪಡುತ್ತಿರುವರು. ಈ ಎರಡು ಪ್ಲೇನುಗಳ ಯುದ್ಧವು ಹೇಗೆ ಸಾಗುತ್ತದೆಂದು ನೋಡಬೇಕು.

ಜರ್ಮನಿಯ ಕುರಿತು, ಮಿತ್ರರು ಬ್ರಿಟನು, ಅಮೇರಿಕಾ, ರಷ್ಯ ಫ್ರಾನ್ಸು-ಬೇಗನೆ ಒಂದು ಇತ್ಯರ್ಥಕ್ಕೆ ಬಂದು, ಜರ್ಮನಿಯೊಡನೆ ಶಾಂತಿ ಕರಾರುವೊಂದನ್ನು ನಡೆಸಬೇಕು ಆದರೆ ಅಮೇರಿಕಾ ರಷ್ಯ ಭೇದವು ಬೆಳೆಯುತ್ತಾ ಹೋಗುತ್ತಿರುವಾಗ, ಜರ್ಮನರಿಗೆ ಶಾಂತಿಯ ಸುದಿನವು ಇನ್ನಷ್ಟು ದೂರವಿರುವುದೊ ಎಂಬ ಭೀತಿಯು ಉಂಟಾಗುತ್ತದೆ ರಷ್ಯವನ್ನು ಬೆದರಿಸಿಯಾದರೂ ತಿದ್ದಲು ಅಮೇರಿಕನರು ಆಗಾಗ್ಯೆ ಅಟಂ ಬಾಂಬಿನ ಮಾತು ತೆಗೆಯುತ್ತಿರುವಾಗ, ಚಾಲಕರಿಲ್ಲದ ವಿಮಾನಗಳ ಪ್ರದರ್ಶನ ಮಾಡುತ್ತಿರುವಾಗ ಸಂ. ರಾ. ಸಂಘದಲ್ಲಿ ರಷ್ಯನರ ತಂಟೆಯನ್ನು ಕಡಿಮೆ ಮಾಡಲು ಅಮೇರಿಕಾದ ಯತ್ನಗಳು ನಡೆಯುತ್ತಿರುವಾಗ ರಷ್ಯವು ಹೆದರೀತೊ? ಪೂರ್ವ ಯುರೋಪದ ಎಲ್ಲಾ ಪಶ್ಚಿಮ ಯುರೋಪದ ಗಡಿಗಳಲ್ಲಿ, ಕೆಂಪು ಸೇನೆಯ ಭಾರಿ ಕವಾಯತು ಸಿದ್ಧತೆಗಳು ನಡೆಯುತ್ತವೆ ಎಂದೂ ವಾರ್ತೆಯು ಬಂದಿರುತ್ತದೆ ಅಟಂ ಬಾಂಬು ತನ್ನಲ್ಲಿದೆ ಎಂದೂ ಅದು ಕೊಚ್ಚಿಕೊಳ್ಳುತ್ತಿದೆ ಅಮೇರಿಕದ ಬೆದರಿಕೆಗೆ ಇದು ರಷ್ಯದ ಪ್ರತಿ ಬೆದರಿಕೆ.

ಅಂದರೆ, ಏಕಾಭಿಪ್ರಾಯದಿಂದ ಯುರೋಪಿನ ಪುನರುದ್ಧಾರ ನಡೆಯುವ ಹಾಗಿಲ್ಲ. ಪಶ್ಚಿಮದಲ್ಲಿ ಅಮೇರಿಕಾದ ಉಪಚಾರದಲ್ಲೂ, ಪೂರ್ವದಲ್ಲಿ ರಷ್ಯದ ಉಪಚಾರದಲ್ಲೂ, ಇದು ನಡೆಯುವಂತಾಗಿದೆ. ಇನ್ನೊಂದು ಸಾಂಪತ್ತಿಕ ವೈಶಮ್ಯತೆಯು ಬಂದೊದಗದಿದ್ದರೆ, ಮಾರ್ಶೆಲ್ಲರ ಪ್ಲೇನು ಪಶ್ಚಿಮದಲ್ಲಿ ಯಶಸ್ವಿಯಾಗುವುದು, ಪೂರ್ವದಲ್ಲಿ ಮಲ್ಟೋಟೋವ್‌ರವರ ಪ್ಲೇನು ಯಶಸ್ವಿಯಾಗುವುದು

ಬಾಲ್ಕನ್ಸ್ ಪ್ರಕರಣವು ಸಂ. ರಾ. ಸಂಘ ಅಧಿವೇಶನ ಮುಂದೆ ಬಂತು ಗ್ರೀಸಿನ ಗಡಿನಾಡಿನಲ್ಲಿ, ಕೊಮ್ಯುನಿಷ್ಟರ ಆಗಮನವಾಗದಂತೆ, ಸಂ. ರಾ. ಸಂಘದ ವತಿಯಲ್ಲಿ ಒಂದು ನಿರೀಕ್ಷಣ ಮಂಡಳಿಯಾಗುವುದಕ್ಕೆ ರಷ್ಯದ ವಿರೋಧವು ಬಂತು ಸಂ. ರಾ. ಸಂಘದಿಂದ ಈ ವ್ಯವಸ್ಥೆ ಸಾಧ್ಯವಾಗದೆ ಹೋದರೆ, ಗ್ರೀಸಿನಲ್ಲಿ ಕಾಪಲಿಗಾಗಿ, ಅಮೇರಿಕನ್ ಸೈನ್ಯ ದಳಗಳನ್ನು ಕಳುಹಿಸಿಕೊಡಲಾಗುವುದೆಂದು ಅಮೇರಿಕಾವು ತಿಳಿಸಿರುವುದು ಗ್ರೀಸ್ಸಿನ ಸಮುದ್ರದಲ್ಲಿ ಈಗಲೆ ಅಮೇರಿಕನ್ ಯುದ್ಧ ನಾವೆಗಳು ಚಲಿಸುತ್ತಿರುವವು ಅಂದರೆ, ಗ್ರೀಸ್ಸನ್ನು ತೊರೆದುಬಿಟ್ಟರೆ, ಅಲ್ಲಿ ಕೊಮ್ಯುನಿಷ್ಟರ ಪ್ರವೇಶವಾಗಬಹುದೆಂಬ ಭೀತಿಯು ಅಮೇರಿಕಾವನ್ನು ಬಲವಾಗಿ ಕಾಡುತ್ತದೆ ಎಂದಾಯಿತು

ಗ್ರೀಸ್ಸಿನ ಪಟ್ಟಿಗೆ ಹಾಗಾದ್ದರೆ, ಇಟಲಿಯಲ್ಲಿ ಇಟಲಿಯೊಡನ ಶಾಂತಿ ಒಪ್ಪಂದವು ನಡೆದುಬಿಟ್ಟಿದೆ ಅಲ್ಲಿಂದ ಇನ್ನೂ ಮಿತ್ರರ ಸೈನ್ಯವು ಬೇಗನೆ ಹೊರಡಬೇಕಾಗಿದೆ ಈ ಬಳಿದ ಆಶ್ರಯದಲ್ಲಿ ಅಲ್ಲಿಗ ಅಧಿಕಾರದಲ್ಲಿರುವ ಸರಕಾರವು ಇನ್ನೂ ಈ ಎಲ್ಲವನ್ನು ಹಿಡಿದು ತೂಗಾಡಲು ಯತ್ನಿಸುತ್ತಿದೆ. ಅಮೇರಿಕಾದ ಡೊಲ್ಲರುಗಳು ಅಲ್ಲಿ ತುಂಬಾ ಸುರಿದವೆ ಆದರೆ ಮಿತ್ರರ ತುಪಾಕಿಗಳ ಎದುರು ತಣ್ಣಗಾದ ಅಲ್ಲಿನ ಎಡ ಪ್ರಬಾವಗಳು ಮುಖ್ಯವಾಗಿ ಕೊಮ್ಯುನಿಷ್ಟರು (ಇವರಿಗೆ ಶ್ರಮಿಕರಲ್ಲಿ ಒಳ್ಳೆ ಹಿಡಿತವಿದೆ), ತಲೆ ಎತ್ತಲು ಸಂದರ್ಭ ಕಾಯುತ್ತಿರುವರು ಮಿತ್ರರ ಬಲಗಳು ಹೊರಡುವ ವೊಡಲೆ, ಇವರ ಶಸ್ತ್ರಗಳು ಉಪಯೋಗಿಸಲ್ಪಟ್ಟಿವೆ. ಇಟಲಿಯ ಕೈಗಾರಿಕೆಗಳೆಲ್ಲಾ ಸಂಪಿನ ಪೀಡೆಯಿಂದ ತಟಸ್ಥವಾಗಿಬಿಟ್ಟಿವೆ. ಇನ್ನೂ ಮಿತ್ರರು ಹೊರ ನಡೆದ ಮೇಲೆ, ಅಧಿಕಾರ ಸೆಳೆದುಕೊಳ್ಳುವ ಕೆಲಸ ಮಾತ್ರ ಬಾಕಿ ಉಳಿದಿದೆ. ಆದರೆ ಅಮೇರಿಕಾವು ಇಟಲಿಯನ್ನು ಪೂರ್ಣ ತ್ಯಜಿಸುವ ಮನಸ್ಸು ಮಾಡಿದಂತೆ ಕಾಣುವುದಿಲ್ಲ. ಮೆಡಿಟರೆನಿಯನ್‌ದಲ್ಲಿ ಚಲಿಸುತ್ತಿರುವ ಅಮೇರಿಕನ್ ನೌಕಾ ಬಲದ ದೃಷ್ಟಿಯು ಇಟಲಿ ಮೇಲೂ ಇರಬಹುದು.

ಪೆಲೆಸ್ತೀನದಿಂದ ಬ್ರಿಟಿಷರು, ಹೊರಟು ಹೋಗುವರೆಂದು, ಸಂ. ರಾ. ಸಂಘದ ಅಧಿವೇಶನಿನಲ್ಲಿ ತಿಳಿದು ಬಂದಿದೆ ಆ ಮೇಲೆ ಪೆಲೆಸ್ತೀನ ಆಳ್ವಿಕೆ ಹೇಗೆ ನಡೆಯುವುದು. ಪ್ರಜಾಸತ್ತಾತ್ಮ ರೀತಿಯಲ್ಲಿ ನಡೆಯುವ ಕೇಂದ್ರ ಸರಕಾರವೊಂದು ಸ್ಥಾಪನೆಯಾಗಬೇಕೆಂಬ ಅರಬರ ಉದ್ದೇಶಕ್ಕೆ, ಯಹೂದಿಯರ ವಿರೋಧವು ಇರುವುದು. ಪೆಲೆಸ್ತೀನವನ್ನು ತುಂಡೀಕರಿಸುವ ಇತ್ಯರ್ಥವು ಅದರ ಮೇಲೆ ಹೊರಿಸಲ್ಪಟ್ಟರೆ, ಅದರ ವಿರೋಧ ಹೋರಾಡಲು ಅರಬ ದೇಶಗಳು ಸಿದ್ಧವಾಗಿವ ಆದರೆ ಅರಬರಲ್ಲೂ ಯಾದವೀ ಕಲಹವೊಂದು ಪ್ರಾರಂಭವಾಗಿದೆ ಪೆಲೆಸ್ತೀನವನ್ನು ಇಂರಾಕದೊಡನೆ ಕೂಡಿಸಲ್ಕು ಒಂದು ಯತ್ನವಿದೆ. ಪೆಲೆಸ್ತೀನವನ್ನು ಅರಬ ಸಂಯೋಗದಲ್ಲಿ ಕೂಡಿಸುವ ಇನ್ನೊಂದು ಯತ್ನವಿದೆ

ಸಂ. ರಾ. ಸಂಘದ ಅಧಿವೇಶನದಲ್ಲಿ, ಪಾಕಿಸ್ತಾನವನ್ನು ಸಂಘದ ಸಧಸ್ಯತನಕ್ಕೆ ಸೇರಿಸಿಕೊಳ್ಳುವ ವಿಚಾರ ಬಂದಾಗ ಅಫಘಾನಿಸ್ಥಾನದ ವಿರೋಧವು ವ್ಯಕ್ತವಾಯಿತು ಕಾರಣ ಗಡಿನಾಡಿನ ಪ್ರಕರಣ. ಪಾಕಿಸ್ಥಾನದಿಂದ ಈ ಭಾಗಕ್ಕೆ ಸ್ವಾತಂತ್ರ್ಯ ದೊರಕದೆ, ಪಾಕಿಸ್ಥಾನಕ್ಕೆ ಸದಸ್ಯತ್ವ ಕೊಡಬಾರದೆಂದು ಅಫಘಾನಿಸ್ಥಾನದವಾದವಿತ್ತು.

ನೇಪಾಲದಲ್ಲಿ ಜನ ಜಾಗೃತಿಯು ಉಂಟಾಗಿರುವುದು. ತಮ್ಮನ್ನು ಕೇಳದೆ ಗುರ್ಕಾ ದಳವನ್ನು ಬ್ರಿಟಿಷರಿಗೆ ಒಪ್ಪಿಸುವ ಕುರಿತು, ಒಪ್ಪಂದ ಮಾಡುದದರಿಂದ, ನೇಪಾಲಿನ ಜನರಿಗೆ ಖತಿ ನೊಂದಿರುವುದಂತೆ ನೇಪಾಲಿನ ಅರಸರು, ಪ್ರಜಾಪ್ರೇಮಿಗಳು, ಪ್ರಜಾಸತ್ತಾ ಪ್ರೋತ್ಸಾಹಕರೂ, ಆಗಿರುವರು, ಆದಷಂತೆ ಅವರ ಮಂತ್ರಿಗಳು ಆದರೆ ನೇಪಾಲದ ಆಡಳಿತದಲ್ಲಿ ಕೈಪಡಿರುವ ವ್ಯಕ್ತಿಗಳಾದರೊ ಪ್ರತಿಗಾಮಿಗಳು. ಈ ಕಾರಣದಿಂದ ಅಲ್ಲಿ, ಜವಾಬ್ದಾರಿ ಸರಕಾರಕ್ಕಾಗಿ ಹೋರಾಟವು ಪ್ರಾರಂಭವಾಗಿರುವುದು

ತಮ್ಮ ಮೇಲೇರಿ ಬಂದ, ಸಾಂಪತ್ತಿಕ ದುರ್ದಶೆಯನ್ನು ನಿವಾರಿಸಿಕೊಳ್ಳಲು, ಬ್ರಿಟನಿನ ಲೇಬರ್ ಸರಕಾರವೂ, ಮಹಾ ಯತ್ನಗಳನ್ನು ಮಾಡುತ್ತಿರುವುದು ಈ ನಿಮಿತ್ತ ಮಂತ್ರಿ ಮಂಡಳದಲ್ಲಿ ಕೆಲವು ಬದಲಾವಣೆಗಳು ನಡೆದುಬಿಟ್ಟವೆ. ಬ್ರಿಟಿಷ್ ಜನತೆಯು, ತಮಗೆ ದೊರೆತ ಸಾಮ್ಯವಾದೀ ಸರಕಾರವನ್ನು ರಕ್ಷಿಸಿಕೊಳ್ಳಲು, ಬ್ರಿಟನಿನಲ್ಲಿ ನೂತನ ಜಗತ್ತನ್ನು ಬರಮಾಡಿಕೊಳ್ಳಲು, ಸರಕಾರಕ್ಕೆ ತಮ್ಮ ಯಾವತ್ತೂ ಬೆಂಬಲ, ಸಹಕಾರವನ್ನೀಯಲು ಶ್ರದ್ಧಾಪೂರ್ವಕ ಮನಸ್ಸು ಮಾಡಿರುವುದು. ಆದರೆ ಬ್ರಿಟಿಷ್ ಜನತೆಯಲ್ಲಿ ಉಂಟಾಗಿದ್ದಷ್ಟು ವಿಕಾಸವು, ಅದರ ನಾಯಕರಲ್ಲಿ, ಲೇಬರ್ ಮಂತ್ರಿಮಂಡಳದಲ್ಲಾಗಲಿಲ್ಲ. ಆದರಿಂದಲೆ, ಈಗ[illegible] ಮಾರ್ಕ್ ಡೊನಾಲ್ಡರ ದುಡುಕ[illegible] ಟೋರಿ ರೂಪು, ಸ್ವಲ್ಪವು[illegible] ಕಾಣಿಸುತ್ತದೆ. ಅವರನ[illegible] ಗಳು ನಡೆಯುತ್ತ[illegible]

KANA / COMMERCIAL BANK LTD.

PUTTUR

H. O Puttur] Estd. 1920 [Branch Vittal.

All kinds of Banking Business transacted.

Deposits Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

(ಸಣ್ಣ ಕತೆ)

ಸ್ವರ್ಗ ಪತ್ರ

...ಇನ್ಶೂರೆನ್ಸ್ ಕಂಪೆನಿಯ ಕೆಲಸ ಸಿಕ್ಕಿದುದರಿಂದ ಹೋಗಲು ಕೈಬಿಡುತ್ತಿರುವ ಬಾಡಿಗೆ ಮನೆಗಳ ಕೇರಿಗೆ ಬಿಟ್ಟಿದ್ದ. ಆದರೆ ಸುಬ್ಬನು—ಏನೂ ಅರಿಯದ ಏಳೆ ಮೊದ್ದು ಪ್ರಾಣಿ ಸುಬ್ಬನು—5 ಸಾವಿರದ ಇನ್ಶೂರ್ ಇಳಿಸಿದನೆಂದರೆ ಯಾರಿಗೆ ತಾನೆ ಆಶ್ಚರ್ಯವಾಗಲಿಕ್ಕಿಲ್ಲ! ಈ ಕತೆಯನ್ನೋದಿ ಮುಗಿಸಲೂ ಕುತೂಹಲವೂ ಉಂಟಾಗುವುದು.

ಇನ್ಶೂರ್ ಬೀದಿಯಲ್ಲಿ ಕೊಳ್ಳಿ ಅಂಗಡಿ ಬಿಂಗ್ರಾಕ್ರಾಂತರಾಗಿದ್ದ ವಿಶ್ವನಾಥರಾಯರು ಮಂಗಳೂರಿನ ಆರಡಿ ರಸ್ತೆಯ (ಬಸ್ಸಿನ ಅಗಲವು ಕಿಕ್ಕಿರಿದು. ಆದ್ದರಿಂದ ಚಕ್ರಗಳು ಚರಂಡಿಯಲ್ಲಿಳಿಯಬಹುದೆಂದು ಗಾಬರಿಯಾಗಬೇಡಿ.) ಕೊನೆಯ ಒಂದು ಕುಟೀರದಲ್ಲಿ ಸೊಳ್ಳೆಗಾನವನ್ನಾಲಿಸುತ್ತ ಒಂದು ಆರಾಮ ಕುರ್ಚಿಯ ಮೇಲೆ ಕುಳಿತಿದ್ದರು. ಪುಣ್ಯದಿಂದವರು ಅಲಂಕರಿಸಿದ್ದ ಆಸನದಲ್ಲಿ ತಗಣೆಗಳ ಸಂಖ್ಯೆ ಕಡಿಮೆಯಾಗಿತ್ತು. ಆದ್ದರಿಂದ ಅವರಿಗೆ ಸಿಡುಬು ರೋಗವು ಊರಲ್ಲಿ ಹಬ್ಬಿರುವ ಸಮಯದಲ್ಲಿ ಇಂಜಕ್ಷನ್ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇರಲಿಲ್ಲ.

ವಿಶ್ವನಾಥರಾಯರ ಮನೋರಾಜ್ಯದಲ್ಲಿ ದಂಗೆಯೆದ್ದಿತ್ತು. ಅವರು ಕನ್ನಡಿಯಲ್ಲಿ ಹಾವಳಿಮಾಡುತ್ತಿದ್ದ ನಿಷ್ಕ್ರಿಯ ಪ್ರನ್ಯತಿಗೆ 'ಕ್ವಿಟ್' ನೋಟಿಸು ಕೊಡುವ ಯೋಜನೆಯಲ್ಲಿದ್ದರು. ತಾನೇ ವೃತ್ತಿಯನ್ನು ಪ್ರಧಾನವಾಗಿ ಕೈಕೊಂಡದ್ದೇ ತಪ್ಪೆಂದೂ ಅವರು ಆತ್ಮಗತವಾಗಿ ಭಾವಿಸುತಿದ್ದರು ಮತ್ತೆ ಪಕ್ಕನೆ ವಿಮಾ ವ್ಯವಹಾರವನ್ನು ಯಶಸ್ವಿಯಾಗಿ ಸಾಗಿಸಿ ಸುಖ ಸಂಪತ್ತನ್ನು ಗಳಿಸಿದವರ ಯೋಚನೆ ಜ್ಞಾಪಕಕ್ಕೆ ಬಂದೊಡನೆ ತನ್ನ ಅಸಾಮರ್ಥ್ಯಕ್ಕಾಗಿ ವ್ಯಥೆ ಪಡುತಿದ್ದರು.

ಅಷ್ಟರಲ್ಲಿ ಬಾಗಿಲು ತಟ್ಟಿದ ಶಬ್ದವು ಅವರನ್ನು ಯೋಚನೆಯ ಮಬ್ಬಿನಿಂದೆಬ್ಬಿಸಿತು ಕದ ತೆರೆದು ನೋಡಲು ಸುಬ್ಬನು ಬಾಗಿಲಲ್ಲಿ ನಿಂತಿದ್ದನು. ಏನೋ ಅನಿಷ್ಟ ಬಂತೆಂದು ತಿರಸ್ಕಾರದಿಂದ ವಿಶ್ವನಾಥರಾಯರು ಪುನಃ ಕದವನ್ನು ಮುಚ್ಚಲಿದ್ದರು. ಕಾರಣ ಆಗಲೇ ಮಹಾ ನವಮಿಯ ಸಮಯ ಸರಕಾರಿ ಕಛೇರಿ ಪೇದೆಗಳು ಲಿಂಬೆಹಣ್ಣು ತಂದು ಇನಾಮು ಕೇಳುವ ಮಾಮೂಲು (ಈಗ ರದ್ದಾಗಿದೆಯನ್ನಿ) ಇನ್ನೂ ಜಾರಿಯಲ್ಲೇ ಇತ್ತು "ಸ್ವಾಮಿ ಇನ್ಶೂರ್" ಎಂದು ಸುಬ್ಬನು ಮಾತುಕತೆ ಪ್ರಾರಂಭಿಸಿದಾಗ ವಿಶ್ವನಾಥರಾಯರಿಗೆ ದಿಗಿಲಾಯಿತು "ಏನು ಸುಬ್ಬಾ! ಏನು ಸಮಾಚಾರ? ಎಂದವರು ಪ್ರಶ್ನಿಸಿದರು "ನಿಮ್ಮ ಕಂಪೆನಿಯಲ್ಲಿ ವಿಮೆ ಇಳಿಸಬೇಕೆಂದಿದ್ದೇನೆ" ಎಂದು ಸುಬ್ಬನು ಉತ್ತರವಿತ್ತ. ದೃಢ ನಿರ್ಧಾರವೂ ಅವನ ಮಾತುಗಳಲ್ಲಿ ಸೂಚಿತವಾಗಿತ್ತು. ಸ್ವಯಂ ಪ್ರೇರಿತವಾಗಿ ಕೊಳ್ಳಿ ಬಲೆಗೆ ಬೀಳುವುದು ವಿಶ್ವನಾಥರಾಯರ ಪ್ರಥಮ ಅನುಭವವಿದು! ಕೌತುಕವನ್ನು ಹೊರಗೆಡಹದೆ ಸಹಜ ಇನ್ಶೂರೆನ್ಸ್ ಮಂದಹಾಸದಿಂದ ವಿಶ್ವನಾಥರಾಯರು "ಐನೂರಕ್ಕೆ ತೆಗೆಯುತ್ತೀಯೊ ಹೇಗೆ?" ಎಂದು ವ್ಯಂಗವಾಗಿ ಪ್ರಶ್ನಿಸಿದರು. ಮಾನವ ಯೋಗ್ಯತೆಯನ್ನು ತೂಕ ಮಾಡುವ ತಜ್ಞತೆಯೂ ಅವರ ಮಾತುಗಳಲ್ಲಿ ಸೂಚಿತವಾಗಿತ್ತು. "ಐನೂರಕ್ಕಲ್ಲ ಸ್ವಾಮಿ" 5 ಸಾವಿರಕ್ಕೆ" ಎಂದು ಸುಬ್ಬ ತಿಳಿಸಿದಾಗ ವಿಶ್ವನಾಥರಾಯರು ಇದು ಕನಸ್ಸಲ್ಲವೆಂದು ಮೊದಲು ಖಚಿತ ಮಾಡಿಕೊಳ್ಳಲು ಸುತ್ತಲೂ ನೋಡಿದರು "ಏನು ಐದು ಸಾವಿರವೆ?" ಎಂಬೊಂದು ಪ್ರಶ್ನೆ ಮಾತ್ರ ಅವರ ಬೆರಗು ಬಾಯಿಯಿಂದ ಹೊರಟು ಮತ್ತೆ ದಿಗ್ಮೂಢವಾದ ಚಿತ್ತವನ್ನು ಸ್ಥಿರಪಡಿಸುವ ಹೋರಾಟದಲ್ಲವರು ಮಗ್ನರಾದರು.

ರಾಯರು ಬೆರಗಾಗಲು ಕಾರಣವೇನಿಲ್ಲದಿರಲಿಲ್ಲ. ಸುಬ್ಬನು ಬಡವ. ಏನೂ ತಿಳುವಳಿಕೆಯುಳ್ಳದ ಅಲ್ಪಜ್ಞಾನಿ. ಭೋಳೇ ಸ್ವಭಾವದವ. ಶನೀ ಊಯಕ್ಕೆಯಲ್ಲಿ 4 ಸಲ ಫೈಲ್ ಹೊಡೆದ ಬೃಹಸ್ಪತಿ ಅವನು. ಅವನಿಗೆ ಫಸ್ಟ್ ಕ್ಲಾಸ್ ಹೋನರ್ಸ್ ಗ್ರೇಜುವೇಟ್‌ನೆಂದೂ ಕರೆಯುತಿದ್ದರು. ಇಂತಹನು 'ಐದು ಸಾವಿರದ ಇನ್ಶೂರ್ ತೆಗೆಯುವುದು ಆಶ್ಚರ್ಯವಲ್ಲದೇನು?

ಸುಬ್ಬನು ಅಷ್ಟು ದೊಡ್ಡ ಸಂಖ್ಯೆಯ ವಿಮೆ ಇಳಿಸಿದ ಸುದ್ದಿ ಆರಡಿ ರಸ್ತೆಯಲ್ಲಿಯೂ ಇತರ ಆಸುಪಾಸಿನ ರಸ್ತೆಗಳಲ್ಲಿಯೂ ಹಬ್ಬಿತು. ಅನೇಕರು ಈ ವಿಶೇಷವನ್ನು ಅನೇಕ ವಿಧವಾಗಿ ವಿಮರ್ಶಿಸಿದರು. "ಸುಬ್ಬನು ಆತ್ಮಹತ್ಯೆ ಮಾಡಿಕೊಳ್ಳಲು ಹವಣಿಸಿದ್ದಾನೆಂದು ಕೆಲವರೂ, 'ಅವನಿಗೆ ಕೊಪ್ಪರಿಗೆ ಸಿಕ್ಕಿದೆ' ಎಂದು ಕೆಲವರೂ, "ಅವನಿಗೆ ತಿರಭ್ರಮಣಕ್ಕಾರಂಭ"ವಾಗಿರಬೇಕೆಂದು ಕೆಲವರೂ, ಹೀಗೆ ವಿವಿಧವಾಗಿ ಊಹಾಪೋಹೆಗಳನ್ನು ಮಾಡಿದರು ಸುಬ್ಬನ ಇನ್ಶೂರ್ ವಿಷಯವೇ ಜನರ ವಿನೋದ ಸಂಭಾಷಣೆಯಾಗತೊಡಗಿತು. ಸುಬ್ಬನು ತಾನು ಯಾಕೆ ಅಷ್ಟು ದೊಡ್ಡ ಮೊಬಲಗನ್ನು ಅಪ್ಪಿಕೊಂಡೆನೆಂಬುದನ್ನು ಯಾರಿಗೂ ಹೇಳಲೇ ಇಲ್ಲ ಕೇಳಿದವರಿಗೆಲ್ಲ ಅವನು ಪಂಡಿತ ಲಕ್ಷಣವನ್ನೇ ತೋರಿಸುತಿದ್ದ

ಮತ್ತೆ ಕೆಲವು ದಿನಗಳಲ್ಲಿ ಸುಬ್ಬನ ಎದುರುವಾದಿಗಳು ಅವನು ಅದೃಶ್ಯನಾಗಿರುವ ಸುದ್ದಿಯನ್ನು ತಂದರು. ಸುಬ್ಬನು ಮಂಗಳೂರಿನಿಂದ ಕಾಣೆಯಾದುದೂ ಹೌದು ಅವನು ಆತ್ಮಹತ್ಯ ಮಾಡಿಕೊಳ್ಳುವನೆಂದು ಭವಿಷ್ಯ ಹೇಳಿದವರು ನಗರದ ಹಾಳು ಭಾವಿ ಕೆರೆಗಳಲ್ಲೊ, ಬಡಾವಣೆಯ ಕಾಡು ಗುಡ್ಡಗಳಲ್ಲೊ ಅವನು ಇರಬಹುದೆಂದು ಶಂಕಿಸಿದರು ತಮ್ಮ ಭವಿಷ್ಯ ಜ್ಞಾನಕ್ಕಾಗಿ ಅವರು ಹೆಮ್ಮೆಪಟ್ಟುಕೊಂಡರು ಏಜಂಟ್ ವಿಶ್ವನಾಥರಾಯರು ಮಾತ್ರ ಧಿಗ್ಭ್ರಾಂತರಾಗಿದ್ದರು! ಹೆಚ್ಚಿಗೆ ಉತ್ಪನ್ನವಿಲ್ಲದ ಸುಬ್ಬನಿಗೆ 5 ಸಾವಿರದ ಯೋಗ್ಯತೆ ಇಲ್ಲವಾದರೂ ಅದನ್ನು ಅಡಗಿಸಿ ಇದಕ್ಕೆ ತಾನು ಒಪ್ಪಿದ್ದು ಶುದ್ಧ ಅವಿವೇಕತನವೆಂದವರಿಗೆ ಈಗ ಹೊಳೆಯಿತು ಆದರೆ ಕಾರ್ಯವು ಮಿಂಚಿಹೋಗಿದೆ ಸಂದರ್ಭಗಳು ಹತೋಟಿ ಮೀರಿವೆ ಬರುವುದಕ್ಕೆಲ್ಲ ಸಿದ್ಧರಾಗಿರುವುದೇ ಉಚಿತವೆಂದವರು ನಿರ್ಧರಿಸಿದರು ತನ್ನ ವಿಮಾ ಗಿರಾಕಿ ಊರಿನಿಂದ ಮಾಯವಾದುದು ನಿಜವೊ ಎಂದವರು ಮೊದಲು ಅವನ ಮನೆಗೆ ಹೋಗಿ ಖಚಿತಮಾಡಿಕೊಂಡರು. ಸುಬ್ಬನು ಮಿಲಿಟರಿಗೆ ಸೇರಿದ್ದಾನೆಂದೂ ಅವನನ್ನು ಕೊಯಮುತ್ತೂರಿಗೆ ಒಯ್ದಿರುವರೆಂದೂ ಅವನ ಅರ್ಧಾಂಗಿ ತಿಳಿಸುವವಳಾದಳು. ತುಸು ಸಮಾಧಾನಗೊಂಡ ರಾಯರು ಸುಬ್ಬನ ಮಿದುಳನ್ನು ಮನದಲ್ಲೇ ಕೊಂಡಾಡಿದರು.

ಹದಿನೈದು ದಿವಸಗಳ ನಂತರ ರಾಯರಿಗೆ ಸುಬ್ಬನ ಪತ್ರ ಬಂತು. ಅದರಲ್ಲಿ ಹೀಗೆ ತಪ್ಪು ತಪ್ಪು ಗೀಚಲಾಗಿತ್ತು. "ವಿಶ್ವನಾಥರಾಯರೇ, ನಿಮಗೆ ಸುಬ್ಬನು ಮಾಡುವ ನಮಸ್ಕಾರ. ತಮ್ಮಲ್ಲಿ ಇನ್ಶೂರ್ ತೆಗೆದ ನಾನು ಜಪಾನಿಯವರೊಡನೆ ಯುದ್ಧ ಮಾಡುವಾಗ ಸತ್ತಿದ್ದೇನೆ ನಾನು ಬರಮುದಲ್ಲಿ ಹೂಳಲ್ಪಟ್ಟಿದ್ದೇನೆ ಆದ್ದರಿಂದ ಆ 5 ಸಾವಿರದಲ್ಲಿ ಎರಡನ್ನು ನನ್ನ ಮನೆಗೆ ತಲುಪಿಸಿ ಉಳಿದುದನ್ನು ನಾನು ಬಂದಾಗ ಕೊಡುವುದು" ಯಾರೊ ಸುಬ್ಬನಿಗೆ ಈ ಬಡ್ಡ ಪ್ಲೇನನ್ನು ಹೇಳಿಕೊಟ್ಟು ಮೋಸಮಾಡಿದ್ದಾರೆಂದು ವಿಶ್ವನಾಥರಾಯರಿಗೆ ತಿಳಿಯಿತು ಸುಬ್ಬನ ಪ್ರಥಮ ಕಂತು ಮುಳುಗಿತು, ರಾಯರಿಗೆ ಕಮಿಶನ್ ಏನೊ ಸಿಕ್ಕಿ ತಿಂಗಳ ಖರ್ಚು ಅಲ್ಲಲ್ಲಿಗೆ ಆಯಿತು ಸುಬ್ಬನ ಮರಳುತನಕ್ಕಾಗಿ ಅವರಿಗೆ ಸ್ವಲ್ಪ ಕನಿಕರವೂ ಆಯಿತು

ದೀಪ ಜ್ವಾಲೆ ಹೊರಗೆ ಕೆಂಪು ಒಳಗೆ ನೀಲವೇಕೆ?

ಸ್ಟೌವ್ ಮೊದಲಾದ ಗ್ಯಾಸ್ ಜ್ವಾಲೆಗಳ ಬೆಂಕಿಯು ಹೊರ ಭಾಗದಲ್ಲಿ ಕೆಂಪಾಗಿಯೂ, ಒಳ ಬಾಗದಲ್ಲಿ ನೀಲವಾಗಿಯೂ ಇರುವುವು ಹೊರಭಾಗಕ್ಕೆ ಹೆಚ್ಚು ಆಮ್ಲಜನಕವು ದೊರಕುವುದೇ ಇದಕ್ಕೆ ಕಾರಣ ಹೀಗಾಗಿ ಹೊರಭಾಗದ ಅಗ್ನಿ ಕಣಗಳು ಪ್ರಕಾಶಮಾನವಾಗಿಯೂ, ಒಳಭಾಗದವು ಮಬ್ಬಾಗಿಯೂ ಉರಿಯುವುದರಿಂದ ಈ ವರ್ಣ ಭೇದವು ಕಾಣಿಸುತ್ತದೆ

(3ನೇ ಪುಟದಿಂದ)

ರಾಷ್ಟ್ರೀಯ ಸೇವಕ ಸಂಘದ ಸದಸ್ಯರಿಗೆ

ರೇಕೆ ಪ್ರತಿಯೊಬ್ಬ ಮುಸ್ಲಿಮನ ಸುರಕ್ಷಿತತೆಗೆ ಹೊಣೆಯಾಗಲಿಲ್ಲ

ಇಂದು ಎರಡೂ ಪಕ್ಷಗಳು ಭ್ರಮಿಷ್ಟರಾದಂತೆ ತೋರುತ್ತದೆ ಅದರ ಪರಿಣಾಮವು ವಿನಾಶ ಹಾಗೂ ದುಃಖವಲ್ಲದೆ ಬೇರೆಯಾಗಲಾರದು.

ಮಾತು ಮತ್ತು ಕೃತಿ

ಸಂಘವು ಸುಸಂಘಟಿತವೂ ಸುನಿಯತವೂ ಆದ ಒಂದು ಜನಮಂಡಲ ಅದರ ಶಕ್ತಿಯನ್ನು ಹಿಂದುಸ್ತಾನದ ಹಿತದ ಪರವಾಗಿ ಇಲ್ಲವೆ ವಿರುದ್ಧವಾಗಿ ಬಳಸಬಹುದು

ಸಂಘದ ವಿರುದ್ಧ ಮಂಡಿಸಿದ ಆಪಾದನೆಗಳಲ್ಲಿ ಸತ್ಯಾಂಶವಿದೆಯೋ ಇಲ್ಲವೋ ತಮಗೆ ತಿಳಿಯದೆಂದು ಗಾಂಧೀಜಿ ಹೇಳಿದರು ಆಪಾದನೆಗಳಿಗೆ ಬುಡವಿಲ್ಲವೆಂಬುದನ್ನು ತನ್ನ ಅವ್ಯಾಹತ ಹಾಗೂ ಏಕರೂಪದ ನಡತೆಯಿಂದ ಸಂಘವು ತೋರಿಸಿ ಕೊಡಬೇಕು

ಯಾರು ಶಿಕ್ಷಿಸಬಲ್ಲರು

ಉಪಸಂಹಾರ ಕಾಲದಲ್ಲಿ ಗಾಂಧೀಜಿ ಪ್ರಶ್ನೆಗಳಿದ್ದರೆ ಉತ್ತರಿಸುವುದಾಗಿ ಹೇಳಿದರು ದುರ್ಜನನ್ನು ಕೊಲ್ಲಲು ಹಿಂದು ಧರ್ಮದ ಅಪ್ಪಣೆಯಿದೆಯೇ? ಎಂದು ಒಬ್ಬ ಕೇಳಿದ ಅಪ್ಪಣೆಯಿದೆ ಮತ್ತು ಇಲ್ಲ-ಎಂದು ಹೇಳಿ ಹಿಂದು ಧರ್ಮವು ಒಬ್ಬ ದುರ್ಜನನಿಗೆ ಇನ್ನೊಬ್ಬನನ್ನು ಕೊಲ್ಲಲು ಅಪ್ಪಣೆ ಕೊಡದೆಂದು ಗಾಂಧೀಜಿ ಉತ್ತರಿಸಿದರು ಶಿಕ್ಷಿಸುವುದು ಸರಕಾರದ ಕೆಲಸ, ಜನತೆಯದಲ್ಲ ಎಂದು-ಅವರು ಸಾರಿದರು

"ಕರ್ಮವೀರ ಹರಿಜನ ಪುರವಣಿ"

FOR ALL CLASSES OF INSURANCE

LIFE-FIRE-MARINE-ACCIDENT

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA ASSURANCE CO. LTD.

(H. O. BOMBAY)

*

A Tata's Promotion & India's Largest Composite Insurance Office.

Total Assets - - - About 9 Crores.

For Agency and other particulars:-

Apply to

K. GANAPATHI Esq., *Branch Manager.* 4/5, First Line Beach, MADRAS.

K. N. NAYAK, Esq., *Secretary, Sub Office* Hampankatta, MANGALORE.

ಪ್ರಪಂಚ ಪರಿಚಯ

ಸಂಯುಕ್ತ ರಾಷ್ಟ್ರಗಳ ಸಂಘದ ಅಧಿವೇಶನವು ಸಾಗುತ್ತಾಯಿದೆ. ಸಂಯುಕ್ತ ಅಮೇರಿಕಾ ಮತ್ತು ರಷ್ಯಗಳ ನಡುವಿನ ಭೇದವು ಖಂಡಿತ ರೂಪವನ್ನು ಹೊಂದುವ ಕ್ರಿಯೆಯು ಇಲ್ಲಿ ಕಾಣಿಸುತ್ತಿದೆ ಸಂಯುಕ್ತ ಅಮೇರಿಕಾದ ಪತ್ರಿಕೆಗಳೆಲ್ಲಾ, ಅಮೇರಿಕಾ-ಸೋವಿಯಟ್ ಯುದ್ಧದ ಕುರಿತು ಪ್ರಚಾರದಲ್ಲಿ ತೊಡಗಿದಂತೆ ಕಾಣುತ್ತದೆ ಒಂದು ಮಹಾ ಭಯಂಕರ ಯುದ್ಧ ಮುಗಿದು, ಇನ್ನೂ ಹಲವು ದಿನಗಳಾಗಲಿಲ್ಲ, ಇದೇನು ಈಗ ಇನ್ನೊಂದು ಯುದ್ಧದ ಕುರಿತು ಮಾತು, ಎಂಬುದಾಗಿ, ಕೆಲವರಿಗೆ ಆಶ್ಚರ್ಯವಾಗಬಹುದು ಆದರೆ ಪ್ರಜಾಸತ್ತಾ ಅಮೇರಿಕಾದಲ್ಲಿ, ನಿಜವಾದ ಪ್ರಜಾಸತ್ತೆಯುಯಿಲ್ಲ ಅಲ್ಲಿ ಬಂಡವಳಿಗರ ಕೈವಾಡವೆ ಹೆಚ್ಚು ಅಧ್ಯಕ್ಷ ಟ್ರುಮೇನರ ಧೋರಣವೂ ಶ್ರೀಮಂತರನ್ನನುಸರಿಸಿಕೊಂಡಿದೆ ಇನ್ನೊಂದು ಸಾಂಪತ್ತಿಕ ವೈಶಮ್ಯತೆಯನ್ನು ಮುನ್ನೋಡುತ್ತಿರುವ ಅಮೇರಿಕದ ಶ್ರೀಮಂತರು, ರೋಗಕ್ಕೆ ತಕ್ಕ ಚಿಕಿತ್ಸೆಯನ್ನು ಕೈಗೊಳ್ಳುವ ಬದಲಾಗಿ, ಬರಲಿರುವ ನಿರುದ್ಯೋಗ ಸಮಸ್ಯೆಯನ್ನು ತಡೆಯಲು, ಇನ್ನೊಂದು ಮಹಾಯುದ್ಧ ಕೂಗನ್ನು ಎಬ್ಬಿಸಿರುವರು ಗತಿಗೆಟ್ಟ ಜಗತ್ತನ್ನು ಸುಧಾರಿಸಲು, ... ರು ಪ್ರಜಾಸತ್ತೆ ನೀತಿಗೆ ಮಹತ್ವ ಕೊಡಬೇಕಾಗಿತ್ತು ಆದರ ಡಾಲರಿನ ಪ್ರಯೋಗ ಬೇರೆ ಇತರ ರೀತಿಯಲ್ಲಾಗುತ್ತದೆ

ಯುರೋಪಿನ ಉಪಶಮನಕ್ಕಾಗಿ ಅಮೇರಿಕದ ಮಾರ್ಶೆಲ್ಲರ ಪ್ಲೇನೊಂದು ಪ್ರಕಟಿತು. ಪಶ್ಚಿಮ ಯುರೋಪದ ಮಾರ್ಕೆಟು ಅದು ಅಸ್ವಯಿಸುವಂತಾಯಿತು ಈ ಪ್ಲೇನೊಳಗೆ ಬರುವ ದೇಶಗಳು ತಮ್ಮ ಕೊರತೆಗಳ ಪಟ್ಟಿಯನ್ನು ರಚಿಸಿದಂಯಿತು ಅವುಗಳಿಗೆ ಡಾಲರಿನ ನೆರವು ಕೊಡುವುದೆ ದಾಯಿತು ಆದರೆ ಅಮೇರಿಕದ ಕಾಂಗ್ರೆಸ್ಸಿನ ಅನುಮೋದನೆಯು ಮಾತ್ರ ಈ ಪ್ಲೇನಿಗೆ ಈ ವರೆಗೆ ದೊರಕಿಲ್ಲ ಶ್ರೀಮಂತರಾದ ರಿಪಬ್ಲಿಕನ್ನರ ಹಿಡಿತಕ್ಕೆ ಸೇರಿದ ಕಾಂಗ್ರೆಸ್ಸು ಇಷ್ಟು ಹಣವನ್ನು ಯುರೋಪದಲ್ಲಿ ಸುರಿಸಲು ಸಮ್ಮತಿಸುವುದೆ? ಅವರಿಗೆ ತಕ್ಕ ಪರಿಹಾರ ಬೇಡವೆ? ಸಾಲ ತಕ್ಕೊಳ್ಳುವವರ ಮೇಲೆ ತಮ್ಮ ಹಾವ ಭಾವ ತಗಿಂಗಿ ಯಾದರೂ, ಹತೋಟಿ ಬೇಡವೆ? ಇದೆಲ್ಲ ಪ್ರಶ್ನೆಮಾಲೆಯು ಈಗ ಹೊರಟಿರುತ್ತದೆ

ಪಶ್ಚಿಮ ಜರ್ಮನಿಯ ಮಟ್ಟಿಗೆ, ಅಮೇರಿಕನ್ ಯೋಜನೆಯೊಂದು ಈಗಾಗಲ ಕಾರ್ಯರೂಪಕ್ಕೆ ಬಂದಿರುತ್ತದೆ ಬೇಸತ್ತ ಜರ್ಮನರಿಗೆ ಇದರಿಂದ ಸ್ವಲ್ಪಮಟ್ಟಿನ ಸಮಾಧಾನವಾಗಿದ್ದರೂ, ಅಮೇರಿಕನ್ನರು ತಮ್ಮ ಸ್ವಾರ್ಥಕ್ಕಾಗಿಯೆ ಹೀಗ ವರ್ತಿಸುತ್ತಿರುವರೆಂಬ ಅಭಿಪ್ರಾಯವು ಅವರಲ್ಲುಂಟಾಗಿರುವುದಂತೆ ಪ್ರಜಾಸತ್ತಾ ಅಮೇರಿಕಾದ ನೆರವಿನಲ್ಲಿ, ಪಶ್ಚಿಮ ಜರ್ಮನಿಯಲ್ಲಿ ಪ್ರತಿಗಾಮಿಗಳಿಗೆನೆ ಬೆಂಬಲದೊರಕುತ್ತಿರುವುದನ್ನು ನೋಡಿ ಅವರಲ್ಲಿ ಜಿಗುಪ್ಸೆ ಉಂಟಾಗಿರುವುದಂತೆ. ಯುರೋಪಿನ ಲೋಹ ಕೇಂದ್ರ ರ್‍ಹೂರದ ಪುನರುದ್ಧಾರವಾಗುವುದು ಅವಶ್ಯವಿದೆ ಈ ಕಾರ್ಯವು, ಯುರೋಪದಲ್ಲಿ ಇನ್ನೊಂದು ಯುದ್ಧದ ಬೀಜವನ್ನು ಹಾಕುತ್ತಿರುವುದೂ ಎಂಬ ಸಂದೇಹವು ಉಂಟಾಗಿರುತ್ತದೆ

ಮಾರ್ಶಲ್ ಪ್ಲೇನಿನಿಂದ ಪಶ್ಚಿಮ ಯುರೋಪನ್ನು ಬಿಗಿದು ಹಿಡಿಯುವ, ಆಂಗ್ಲೊ ಅಮೇರಿಕನ್, ಮುಖ್ಯವಾಗಿ ಅಮೇರಿಕನ್ ಯತ್ನಗಳಾಗುತ್ತಿರುವಾಗ, ರಷ್ಯಾದ ಮಾಲ್ಟೋವ್‌ರವರು, ತಾನು ಸುಮ್ಮಗೆ ಕುಳಿತಿರುವರೆ? ಅವರದೂ ಒಂದು ಪ್ಲೇನು ಹೊರಡಿದೆ ಪೂರ್ವ ಯುರೋಪದ ದೇಶಗಳನ್ನು ರಷ್ಯದ ಸುತ್ತಲೂ ಕೋಟೆಗಳಾಗಿ ಕಟ್ಟಿಕೊಳ್ಳಲು ಆ ಪ್ಲೇನಿನ ಉದ್ದೇಶವಾಗಿರುತ್ತದೆ ಅದು ಬಿರುಸಾಗಿ ಕಾರ್ಯರೂಪಕ್ಕೆ ಬರುತ್ತಿದೆ. ಬಲ್ಗೇರಿಯಾದಿಂದ ಹಿಡಿದು ಬಾಲ್ಟಿಕದ ವರೆಗೆ, ಮಾಲ್ಟೋವ್ ಪ್ಲೇನು ಬಹಳ ಯಶಸ್ವಿಯಾಗಿ ಕಾರ್ಯಸಾಧನೆ ಮಾಡುತ್ತಿರುವ ವರದಿಗಳು ತುಂಬಾ ಬಂದಿವೆ

ಮಾರ್ಶೆಲ್ಲರ ಪ್ಲೇನು ರ್‍ಹೂರದ ಲೋಹದ ಕೈಗಾರಿಕೆಗಳನ್ನು ವಶೀಕರಿಸಿ, ಪೂರ್ವ ಯುರೋಪದ ದೇಶಗಳ ಮೇಲೆ ವರ್ಚಸ್ಸು ಬೀರಲು [ಪೂರ್ವ ಯುರೋಪ ದೇಶಗಳಿಗೆ ಬೇಕಾದ ಒಡವೆಗಳು ಈ ಮೊದಲು, ಪಶ್ಚಿಮ ಯುರೋಪದಿಂದ, ಮುಖ್ಯವಾಗಿ ಜರ್ಮನಿಯಿಂದಲೆ ಹೋಗಬೇಕಾಗಿತ್ತು] ಪ್ರಯತ್ನಿಸುತ್ತಿರುವಾಗ ಪೂರ್ವದ ಧಾನ್ಯಗಳ ಆಮದನ್ನು ನಿಲ್ಲಿಸುವ ಯೋಗಿಸಿ ಮಾಲ್ಟೋವ್‌ರವರ ತಮ್ಮ ವರ್ಚಸ್ಸನ್ನು ಪಶ್ಚಿಮ ಯುರೋಪದಲ್ಲಿ ... ಯತ್ನ ಪಡುತ್ತಿರುವರು ಈ ಎರಡು ಪ್ಲೇನುಗಳ ಮುಖಾಮುಖಿ ... ಸಾಗುತ್ತದೆಂದು ನೋಡಬೇಕು

ಜರ್ಮನಿಯ ಕುರಿತು, ಮಿತ್ರರು ಬ್ರಿಟನ್, ಅಮೇರಿಕಾ ರಷ್ಯ, ಫ್ರಾನ್ಸ-ಜರ್ಮನಿಯ ಒಂದು ಐಕ್ಯತೆಯ ಒಂದು ಜರ್ಮನ್ ಯೊಜನೆ ... ಕೊಡುವುದನ್ನು ನಡೆಸುತ್ತು ... ಅಮೇರಿಕಾ ರಷ್ಯ ಭೇದವು ಹೆಚ್ಚಿತು ... ಹೀಗ ... ಆಗ ಜರ್ಮನಿಯ ... ದಿನವು ಇನ್ನಷ್ಟು ದೂರವಿರು ... ಸ್ಥಿತಿಯು ಉಂಟಾಗುತ್ತದೆ ರಷ್ಯವನ್ನು ... ಅಮೇರಿಕಾದ ... ಮಾತು ಕೇಳುತ್ತಿರ ... ವಿಮಾನಗಳ ಪ್ರದರ್ಶನ ಮಾಡುತ್ತಿರುವಾಗ ... ರಷ್ಯನರ ತೆಪಯನ್ನು ಕಡಿಮೆ ಮಾಡಲು ಅಮೇರಿಕಾದ ಯತ್ನಗಳು ನಡೆಯುತ್ತಿರುವಾಗ ರಷ್ಯ ಹೆದರಿತೆ? ಪೂರ್ವ ಯುರೋಪದ ಎಲ್ಲಾ ಪಶ್ಚಿಮ ಯುರೋಪದ ಗಡಿಗಳಲ್ಲಿ, ಕೆಂಪು ಸೇನೆಯ ಭಾರಿ ಕವಾಯತು ನಿಧಿತೆಗಳು ನಡೆಯುತ್ತವೆ ಎಂದೂ ವಾರ್ತೆಯು ಬಂದಿರುತ್ತದೆ ಆಟಂ ಬಾಂಬು ತನ್ನಲ್ಲಿದೆ ಎಂದೂ ಅದು ಕೊಚ್ಚಿಕೊಳ್ಳುತ್ತಿದೆ ಅಮೇರಿಕದ ಬೆದರಿಕೆಗೆ ಇದು ರಷ್ಯದ ಪ್ರತಿ ಬೆದರಿಕೆ

ಅಂದರೆ, ಏಕಾಭಿಪ್ರಾಯದಿಂದ ಯುರೋಪಿನ ಪುನರುದ್ಧಾರ ನಡೆಯುವ ಹಾಗಿಲ್ಲ ಪಶ್ಚಿಮದಲ್ಲಿ ಅಮೇರಿಕಾದ ಉಪಚಾರದಲ್ಲೂ, ಪೂರ್ವದಲ್ಲಿ ರಷ್ಯದ ಉಪಚಾರದಲ್ಲೂ, ಇದು ನಡೆಯುವಂತಾಗಿದೆ ಇನ್ನೊಂದು ಸಾಂಪತ್ತಿಕ ವೈಶಮ್ಯತೆಯು ಬಂದೊದಗದಿದ್ದರೆ, ಮಾರ್ಶೆಲ್ಲರ ಪ್ಲೇನು ಪಶ್ಚಿಮದಲ್ಲಿ ಯಶಸ್ವಿಯಾಗುವುದು ಪೂರ್ವದಲ್ಲಿ ಮಲ್ಟೋಟೊವ್‌ರವರ ಪ್ಲೇನು ಯಶಸ್ವಿಯಾಗುವುದು.

ಬಾಲ್ಕನ್ಸ್ ಪ್ರಕರಣವು ಸಂಯುಕ್ತ ರಾಷ್ಟ್ರ ಸಂಘದ ಅಧಿವೇಶನ ಮುಂದೆ ಬಂತು ಗ್ರೀಸಿನ ಗಡಿನಾಡಿನಲ್ಲಿ, ಕೊಮ್ಯುನಿಷ್ಟರ ಆಗಮನವಾಗದಂತೆ, ಸಂಯುಕ್ತ ರಾಷ್ಟ್ರ ಸಂಘದ ವತಿಯಲ್ಲಿ ಒಂದು ಸಂರಕ್ಷಣ ಮಂಡಳಿಯಾಗುವುದಕ್ಕೆ ರಷ್ಯದ ವಿರೋಧವು ಬಂತು ಸಂಯುಕ್ತ ರಾಷ್ಟ್ರ ಸಂಘದಿಂದ ಈ ವ್ಯವಸ್ಥೆ ಸಾಧ್ಯವಾಗದೆ ಹೋದರೆ ಗ್ರೀಸಿನಲ್ಲಿ ಕಾವಲಿಗಾಗಿ ಅಮೇರಿಕನ್ ಸೈನ್ಯದಳಗಳನ್ನು ಕಳುಹಿಸಿಕೊಡಲಾಗುವುದೆಂದು ಅಮೇರಿಕಾವು ತಿಳಿಸಿರುವುದು. ಗ್ರೀಸ್ಸಿನ ಸಮುದ್ರದಲ್ಲಿ ಈಗಲೆ ಅಮೇರಿಕನ್ ಯುದ್ಧ ನೌಕೆಗಳು ಚಲಿಸುತ್ತಿರುವವು ಅಂದರೆ ಗ್ರೀಸನ್ನು ತೊರೆದುಬಿಟ್ಟರೆ, ಅಲ್ಲಿ ಕೊಮ್ಯುನಿಷ್ಟರ ಪ್ರವೇಶವಾಗಬಹುದೆಂಬ ಭೀತಿಯು ಅಮೇರಿಕಾವನ್ನು ಬಲವಾಗಿ ಕಾಡುತ್ತಿದೆ ಎಂದಂತಾಯಿತು

ಗ್ರೀಸ್ಸಿನ ... ಹಾಗಾದರೆ, ಇಟಲಿ ... ಇಟಲಿಯೊಡನ ಶಾಂತಿ ಒಪ್ಪಂದವು ನಡೆದುಬಿಟ್ಟಿದೆ ಅಲ್ಲಿ ... ಮಿತ್ರರ ಸೈನ್ಯವು ... ಈ ಒಪ್ಪಂದ ಆಶ್ರಯದಲ್ಲಿ ಅಲ್ಲಿಗ ಅಧಿಕಾರದಲ್ಲಿರುವ ಸರಕಾರವು ಎನ್ನು ಈ ಒಡಿವನ್ನು ಹಿಡಿದು ತಗಿಂಡಾ ಇತ್ತಿಸುತ್ತಿದೆ ಅಮೇರಿಕಾದ ಸೈನ್ಯದಳಗಳು ಅಲ್ಲಿ ತುಂಬಾ ಸೂಕ್ತವೆ ಆದರೆ ಮಿತ್ರರ ತುಪಾಕಿಗಳ ಎದುರು ತಗ್ಗಿದ ಅಲ್ಲಿನ ಎಡ ಪ್ರಭಾವಗಳು ಮುಖ್ಯವಾಗಿ ಕೊಮ್ಯುನಿಷ್ಟರು (ಇವರಿಗೆ ಶ್ರಮಿಕರಲ್ಲಿ ಒಳ್ಳೆ ಹಿಡಿತವಿದೆ) ತಲೆ ಎತ್ತಲು ಸಂದರ್ಭ ಕಾಯುತ್ತಿರುವರು ಮಿತ್ರ ಬಲಗಳು ಹೊರಡುವ ಮೊದಲೆ, ಇವರ ಶಸ್ತ್ರಗಳು ಉಪಯೋಗಿಸಲ್ಪಟ್ಟವೆ. ಇಟಲಿಯ ಕೈಗಾರಿಕೆಗಳೆಲ್ಲಾ ಸಂಪಿನ ಪೀಡೆಯಿಂದ ತಟಸ್ಥವಾಗಿಬಿಟ್ಟವೆ. ಇನ್ನೂ ಮಿತ್ರರು ಹೊರ ನಡೆದ ಮೇಲೆ, ಅಧಿಕಾರ ಸೆಳೆದುಕೊಳ್ಳುವ ಕೆಲಸ ಮಾತ್ರ ಬಾಕಿ ಉಳಿದಿದೆ. ಆದರೆ ಅಮೇರಿಕಾವು ಇಟಲಿಯನ್ನು ಪೂರ್ಣ ತ್ಯಜಿಸುವ ಮನಸ್ಸು ಮಾಡಿದಂತೆ ಕಾಣುವುದಿಲ್ಲ. ಮೆಡಿಟರೆನಿಯನ್‌ದಲ್ಲಿ ಚಲಿಸುತ್ತಿರುವ ಅಮೇರಿಕನ್ ನೌಕಾ ಬಲದ ದೃಷ್ಟಿಯು ಇಟಲಿ ಮೇಲೂ ಇರಬಹುದು

ಪೆಲೆಸ್ಟೀನದಿಂದ ಬ್ರಿಟಿಷರು ಹೊರಟು ಹೋಗುವರೆಂದು, ಸಂ. ರಾ ಸಂಘದ ಅಧಿವೇಶನದಲ್ಲಿ ತಿಳಿದು ಬಂದಿದೆ ಆ ಮೇಲೆ ಪೆಲೆಸ್ಟೀನ ಆಳ್ವಿಕೆ ಹೇಗೆ ನಡೆಯುವುದು. ಪ್ರಜಾಸತ್ತಾ ರೀತಿಯಲ್ಲಿ ನಡೆಯುವ ಕೇಂದ್ರ ಸರಕಾರವೊಂದು ಸ್ಥಾಪನೆಯಾಗಬೇಕೆಂಬ ಅರಬರ ಉದ್ದೇಶಕ್ಕೆ, ಯಹೂದಿಯರ ವಿರೋಧವು ಇರುವುದು ಪೆಲೆಸ್ತೀನವನ್ನು ತುಂಡೀಕರಿಸುವ ಇತ್ಯರ್ಥವು ಅದರ ಮೇಲೆ ಹೊರಿಸಲ್ಪಟ್ಟರೆ, ಅದರ ವಿರೋಧ ಹೋರಾಡಲು ಅರಬ ದೇಶಗಳು ಸಿದ್ಧವಾಗಿವ ಆದರೆ ಅರಬರಲ್ಲೂ ಯಾದವೀ ಕಲಹವೊಂದು ಪ್ರಾರಂಭವಾಗಿದ ಪೆಲೆಸ್ತೀನವನ್ನು ಇರಾಕದೊಡನೆ ಕೂಡಿಸಲು, ಒಂದು ಯತ್ನವಿದ ಪೆಲೆಸ್ತೀನವನ್ನು ಅರಬ ಸಂಯೋಗದಲ್ಲಿ ಕೂಡಿಸುವ ಇನ್ನೊಂದು ಯತ್ನವಿದೆ

ಸಂ. ರಾ. ಸಂಘದ ಅಧಿವೇಶನದಲ್ಲಿ, ಪಾಕಿಸ್ತಾನವನ್ನು ಸಂಘದ ಸದಸ್ಯತನಕ್ಕೆ ಸೇರಿಸಿಕೊಳ್ಳುವ ವಿಚಾರ ಬಂದಾಗ ಅಫಘಾನಿಸ್ತಾನದ ವಿರೋಧವು ವ್ಯಕ್ತವಾಯಿತು ಕಾರಣ ಗಡಿನಾಡಿನ ಪ್ರಕರಣ ಪಾಕಿಸ್ತಾನದಿಂದ ಈಭಾಗಕ್ಕೆ ಸ್ವಾತಂತ್ರ್ಯ ದೊರಕದೆ, ಪಾಕಿಸ್ತಾನಕ್ಕೆ ಸದಸ್ಯತ್ವ ಕೊಡಬಾರದೆಂದ್ ಅಫಘಾನಿಸ್ತಾನದ ವಾದವಿತ್ತು

ನೇಪಾಳದಲ್ಲಿ ಜನ ಜಾಗೃತಿಯು ಉಂಟಾಗಿರುವುದು ತಮ್ಮನ್ನು ಕೇಳದೆ ಗುರ್ಕಾ ದಳವನ್ನು ಬ್ರಿಟಿಷರಿಗೆ ಒಪ್ಪಿಸುವ ಕುರಿತು, ಒಪ್ಪಂದವಾದ ದರಿಂದ ನೇಪಾಳಿನ ಜನರಿಗೆ ಮನ ನೊಂದಿರುವುದಂತೆ ನೇಪಾಳಿನ ಅರಸರು, ಪ್ರಜಾಪ್ರೇಮಿಗಳು, ಪ್ರಜಾಸತ್ತಾ ಪ್ರೋತ್ಸಾಹಕರೂ, ಆಗಿರುವರು. ಅದರಂತೆ ಅವರ ಮಂತ್ರಿಗಳು ಆದರೆ ನೇಪಾಳದ ಆಡಳಿತದಲ್ಲಿ ಕೂಡಿರುವ ವ್ಯಕ್ತಿಗಳಾದರೊ ಪ್ರತಿಗಾಮಿಗಳು. ಈ ಕಾರಣದಿಂದ ಅಲ್ಲಿ, ಜವಾಬ್ದಾರಿ ಸರಕಾರಕ್ಕಾಗಿ ಹೋರಾಟವು ಪ್ರಾರಂಭವಾಗಿದುವುದು

ತಮ್ಮ ಮೇಲೇರಿ ಬಂದ, ಸಾಂಪತ್ತಿಕ ದುರ್ದೆಶೆಯನ್ನು ನಿವಾರಿಸಿಕೊಳ್ಳಲು, ಬ್ರಿಟನಿನ ಲೇಬರ್ ಸರಕಾರವೂ, ಮಹಾ ಯತ್ನಗಳನ್ನು ಮಾಡುತ್ತಿರುವುದು ಈ ನಿಮಿತ್ತ ಮಂತ್ರಿ ಮಂಡಳದಲ್ಲಿ ಕೆಲವು ಬದಲಾವಣೆಗಳು ನಡೆದುಬಿಟ್ಟವೆ ಬ್ರಿಟಿಷ್ ಜನತೆಯು, ತಮಗೆ ದೊರೆತ ಸಾಮ್ಯವಾದಿ ಸರಕಾರವನ್ನು ರಕ್ಷಿಸಿಕೊಳ್ಳಲು, ಬ್ರಿಟನಿನಲ್ಲಿ ನೂತನ ಜಗತ್ತನ್ನು ಬರಮಾಡಿಕೊಳ್ಳಲು, ಸರಕಾರಕ್ಕೆ ತಮ್ಮ ಯಾವತಿಷ್ಟು ಬೆಂಬಲ, ಸಹಕಾರವನ್ನೀಯಲು ಶ್ರದ್ಧಾಪೂರ್ವಕ ಮನಸ್ಸು ಮಾಡಿರುವುದು. ಆದರೆ ಬ್ರಿಟಿಷ್ ಜನತೆಯಲ್ಲಿ ಉಂಟಾಗಿದ್ದಷ್ಟು ವಿಕಾಸವು, ಆದರೆ ನಾಯಕರಲ್ಲಿ, ಲೇಬರ್ ಮಂತ್ರಿಮಂಡಳದಲ್ಲಾಗಲಿಲ್ಲ. ಅದರಿಂದಲೆ, ಈಗಲೂ ಮಾರ್ಕ್ ಡೊನಾಲ್ಡರ ದುಮುಕತನವೂ, ಟೋರಿ ರೂಪು, ಸ್ವಲ್ಪಮಟ್ಟಿಗೆ ಅವರಲ್ಲಿ ಕಾಣಿಸುತ್ತದೆ. ಅವರನ್ನು ತಿದ್ದಲು ಪ್ರಯತ್ನಗಳು ನಡೆಯುತ್ತಿವೆ

KANA COMMERCIAL BANK LTD.

PUTTUR

H. O. Puttur] Estd. 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ಸ್ವದೇಶಾಭಿಮಾನಿ

ತಾರೀಕು 3-10-1947

ಗಾಂಧೀ ಜಯಂತಿ

ಸ್ವತಂತ್ರ ಹಿಂದುಸ್ಥಾನವು ಮೊದಲ ಬಾರಿ ಆ ಸ್ವಾತಂತ್ರ್ಯದ ಸ್ಥಾಪಕರಲ್ಲಿ ಆಚಾರ್ಯ ಸ್ಥಾನದಲ್ಲಿರುವ ಮಹಾತ್ಮಾ ಗಾಂಧಿಯವರ ಜನ್ಮದಿನೋತ್ಸವವನ್ನು ನಿನ್ನೆ ಅಕ್ಟೋಬರ ತಾರೀಕು 2ನೇ ದಿವಸ ಅತ್ಯಂತ ಉತ್ಸಾಹದಿಂದ ಸರ್ವತ್ರ ಆಚರಿಸಿತು. ಇದೊಂದು ಸಾರ್ವಜನಿಕ ರಜಾದಿನವನ್ನಾಗಿ ಸರಕಾರದವರು ಏರ್ಪಡಿಸಿರುವರು.

ದೇಶದ ಸ್ವಾತಂತ್ರ್ಯ ಸಾಧನೆಗೆ ಗಾಂಧೀಜಿಯವರಿಂದ ಆದ ಕಾರ್ಯ ಎಲ್ಲರಿಗೂ ಪರಿಚಯವುಳ್ಳ ವಿಷಯ. ಇವರು ಹಿಂದುಸ್ಥಾನದ ರಾಜಕೀಯರಂಗದಲ್ಲಿ ಪದಾರ್ಪಣ ಮಾಡುವಲ್ಲಿ ತನಕ ಸ್ವರಾಜ್ಯವೆಂಬುದು ಒಂದು ದೂರದ ಧ್ಯೇಯ ಮಾತ್ರವಿತ್ತು. ಅದನ್ನು ಕಾರ್ಯರೂಪದಲ್ಲಿ ಸಾಧಿಸುವುದು ಸಾಧ್ಯವೆಂಬ ವಿಶ್ವಾಸ ಪ್ರಾಯಶಃ ಅತ್ಯಲ್ಪ ಮಂದಿಯಲ್ಲಿ ಇದ್ದಿರಬಹುದು ಇಂಥವರಿಗೆ ಕೂಡಾ ತಮ್ಮ ಧ್ಯೇಯವನ್ನು ಹೇಗೆ ಸಾಧಿಸಬೇಕೆಂಬ ಬಗ್ಗೆ ಸರಿಯಾದ ವ್ಯವಹಾರ್ಯವಾದ ದಾರಿ ಯಾವದೆಂಬ ಬಗ್ಗೆ ಸ್ಪಷ್ಟವಾದ ಕಲ್ಪನೆಯಂತೂ ಖಂಡಿತವಾಗಿಯೂ ಇರಲಿಲ್ಲ

ಗಾಂಧೀಜೀಯವರು ದಕ್ಷಿಣ ಆಫ್ರಿಕದಲ್ಲಿ ನಮ್ಮ ಜನರ ಮುಂದಾಳಾಗಿ ನಡೆಸಿದ ಸತ್ಯಾಗ್ರಹ ಚಳವಳದ ಅನುಭವ ಪಡೆದು ಈ ದೇಶಕ್ಕೆ ಬಂದು ತನ್ನ ಅಭಿಪ್ರಾಯಗಳನ್ನು ತನ್ನ ರಾಜಕೀಯ ಗುರುವೆಂದು ಅವರು ಭಾವಿಸುತ್ತಿದ್ದ ದಿವಂಗತ ಗೋಖಲೆಯವರ ಮುಂದೆ ಇಟ್ಟಾಗ ಒಂದು ವರ್ಷದ ತನಕ ಯಾವ ಕಾರ್ಯದಲ್ಲಿಯೂ ಕೈಹಾಕದೆ ಇಲ್ಲಿಯ ಪರಿಸ್ಥಿತಿಯ ಪರಿಶೀಲನದಲ್ಲಿಯೇ ಕಳೆಯಬೇಕೆಂದು ಅವರ ಆಜ್ಞೆಯಾಯಿತು ಯೋಗ್ಯ ಶಿಷ್ಯನಿಗೆ ಅನುಗುಣವಾಗುವಂತೆ ಗಾಂಧಿಜೀಯವರು ಈ ಆಜ್ಞೆಯನ್ನು ಪಾಲಿಸಿದರು

ಆ ಬಳಿಕ ನಡೆದ ಚಂಪಾರಣ್ಯ ಮತ್ತು ಕೈರಾ ಪ್ರಕರಣಗಳು ಗಾಂಧೀಜಿಯವರಲ್ಲಿ ತನ್ನ ಹಾದಿಯಲ್ಲಿ ವಿಶ್ವಾಸವನ್ನು ಬೆಳೆಸಿದವೆನ್ನಬಹುದು ಇವು ಇಡೀ ದೇಶದ ಲಕ್ಷ್ಯವನ್ನು ಗಾಂಧೀಜಿಯವರತ್ತ ಸೆಳೆದವು

ಮೊದಲನೆಯ ಮಹಾಯುದ್ಧದ ಬಳಿಕ ಹಿಂದುಸ್ಥಾನಕ್ಕೆ ದೊರೆತ ರೌಲೆಟ್ ಕಾನೂನು ಮತ್ತು ಖಿಲಾಫತ್ ಪ್ರಶ್ನೆಗಳು ಗಾಂಧೀಜಿಯವರನ್ನು ಅಖಿಲ ಭಾರತದ ರಾಜಕೀಯ ರಂಗದಲ್ಲಿ ಮುಂದಾಳಾಗಿ ನಿಲ್ಲುವ ಸಂದರ್ಭ ಕಲ್ಪಿಸಿಕೊಟ್ಟವು. ಹಿಂದುಸ್ಥಾನದ ಪ್ರಮುಖ ರಾಜಕೀಯ ಸಂಸ್ಥೆಯಾದ ಕಾಂಗ್ರೆಸು ಗಾಂಧೀಯವರ ಮುಂದಾಳ್ತನವನ್ನು ಸ್ವೀಕರಿಸಿ ಅಸಹಕಾರ ಚಳವಳವನ್ನು ಮಂಜೂರು ಮಾಡಿತು. ಹಿಂದುಸ್ಥಾನವು ಮೊದಲ ಬಾರಿ ಸ್ವರಾಜ್ಯವು ಕೇವಲ ವ್ಯವಹಾರದೊಳಗಿನ ಪ್ರಶ್ನೆಯೆಂಬುದನ್ನು ಆಗ ಸರಿಯಾಗಿ ತಿಳಿದುಕೊಂಡಿತು.

ಅಂದಿನಿಂದ ಇಂದಿನ ತನಕ ಮಹಾತ್ಮಾ ಗಾಂಧೀಯವರು ಹಿಂದುಸ್ಥಾನದ ಅಗ್ರಗಣ್ಯ ಮುಂದಾಳುಗಳಾಗಿ ಬಂದಿದ್ದಾರೆ. ಕಾಂಗ್ರೆಸ್ ಸಂಸ್ಥೆ ಹಾಗೂ ನಮ್ಮ ರಾಜಕೀಯ ಮುಂದಾಳುಗಳು ಯಾವಾಗಲೂ ಗಾಂಧೀಯವರ ಉಪದೇಶಗಳಂತೆ ವರ್ತಿಸುತ್ತ ಬಂದಿರುವರೆಂದು ಇದರ ಅಭಿಪ್ರಾಯವಲ್ಲ. ಭಿನ್ನಾಭಿಪ್ರಾಯಗಳು ಬಂದಾಗಲೆಲ್ಲ ಕಾಂಗ್ರೆಸ್ ಸಂಸ್ಥೆ ತನ್ನ ಹಾದಿಯಲ್ಲಿ ಹೋಗುವಂತೆ ಉಪದೇಶಿಸಿ ತಾನು ಬದಿ ಸರಿದು ನಿಂತು ಇವರು ಇತರ ಮುಂದಾಳುಗಳ ಹಾಗೂ ಕಾಂಗ್ರೆಸ್ ಸಂಸ್ಥೆಯ ವರ್ಚಸ್ಸಿಗೆ ಹಾನಿ ಬಾರದಂತೆ ಜಾಗರೂಕತೆಯಿಂದ ವರ್ತಿಸುತ್ತ ಬಂದಿದ್ದಾರೆ. ಭಿನ್ನ ಹಾದಿಯಲ್ಲಿ ನಡೆಯುವಾಗ ಕೂಡಾ ಕಾಂಗ್ರೆಸ್ ಮುಂದಾಳುಗಳು ಗಾಂಧೀಜಿಯವರ ಸಲಹೆಗಳನ್ನು ಪಡೆಯುತ್ತಲೇ ಇದ್ದು ಅವರೇ ತಮ್ಮ ಮುಖಂಡರೆಂದು ಒಪ್ಪುತ್ತ ಬಂದಿದ್ದಾರೆ ಕಠಿಣ ಪ್ರಸಂಗಗಳು ಬಂದಾಗ ಗಾಂಧೀಯವರ ಮುಂದಾಳ್ತನವಿಲ್ಲದೆ ಗತ್ಯಂತರವಿಲ್ಲವೆಂಬುದು ನಮ್ಮ ಇತರ ಮುಖಂಡರ ಇದು ತನಕದ ಅನುಭವ

ಈಗ ಇತ್ತೀಚೆಗೆ ಸ್ವಲ್ಪ ಸಮಯದಿಂದ ಕಾಂಗ್ರೆಸಿನ ಮುಂದಾಳುಗಳು ಗಾಂಧೀಯವರಿಂದ ಭಿನ್ನಾಭಿಪ್ರಾಯದಲ್ಲಿರುವುದರಿಂದ ಗಾಂಧೀಜಿಯವರು ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗದೆ ತನ್ನ ಹಾದಿಯನ್ನು ಸ್ವತಂತ್ರವಾಗಿ ಅನುಸರಿಸುತ್ತ ಇದ್ದಾರೆ ಎಂದಿನಂತೆ ಇತರ ಮುಂದಾಳುಗಳಿಗೆ ಅವಶ್ಯವುಳ್ಳ ಸಲಹೆಗಳನ್ನು ಕೊಡುತ್ತ ಅವರೊಡನೆ ನಿಕಟ ಸಂಬಂಧವನ್ನಿಟ್ಟುಕೊಳ್ಳುತ್ತಾ ವರ್ತಿಸುತ್ತಿದ್ದಾರೆ ಇದು ಈಗ ನಡೆಯುತ್ತಿರುವ ಪರಿಸ್ಥಿತಿ

ಗಾಂಧೀಜಿಯವರ ಮೇಲೆ ಆದರ ಗೌರವ ಹಾಗೂ ಭಕ್ತಿಭಾವವಿಲ್ಲದ ಜನರು ದೇಶದಲ್ಲಿ ಕೇವಲ ಸ್ವಲ್ಪ ಮಂದಿ ಮಾತ್ರ. ಅವರ ಉಪದೇಶಗಳನ್ನು ಸರಿಯಾಗಿ ತಿಳಿದುಕೊಂಡು ಅದರಂತೆ ವರ್ತಿಸುವವರ ಸಂಖ್ಯೆಯೂ ಅದೇ ರೀತಿ ಸ್ವಲ್ಪ ಮಾತ್ರವಿರುತ್ತದೆ ಹೀಗಿದ್ದರೂ ನಮ್ಮ ಜನಾಂಗ ಜೀವನವನ್ನು ರೂಪಿಸುವುದರಲ್ಲಿ ಗಾಂಧೀಜಿಯವರು ಇಂದಿಗೂ ಅತ್ಯಂತ ದೊಡ್ಡ ಭಾಗವಹಿಸುತ್ತಿದ್ದಾರೆಂಬುದು ಮಾತ್ರ ನಿರ್ವಿವಾದವಿರುತ್ತದೆ

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಮುಂದೆ ಬಂದಿರುವ ಅತ್ಯಂತ ಮಹತ್ವದ ಪ್ರಶ್ನೆ ಪಂಜಾಬ ಮೊದಲಾದ ಉತ್ತರ ಹಿಂದುಸ್ಥಾನದ ಪ್ರದೇಶಗಳಲ್ಲಿ ಜರಗುತ್ತಿರುವ ಹಿಂದೂ ಮುಸ್ಲೀಮರೊಳಗಿನ ಭಯಂಕರ ಹತ್ಯಾಕಾಂಡ ಈ ಕಠಿಣ ಪರಿಸ್ಥಿತಿಯನ್ನು ಎದುರಿಸಲು ಹಿಂದುಸ್ಥಾನ ಸರಕಾರವು ಸರ್ವ ಪ್ರಯತ್ನ ಮಾಡುತ್ತಿದೆ ಈಗಿನ ಹಿಂದುಸ್ಥಾನ ಸರಕಾರವಾದರೂ ಕಾಂಗ್ರೆಸಿನ ಹಾಗೂ ದೇಶದ ಪ್ರಥಮ ಶ್ರೇಣಿಯ ಮುಂದಾಳುಗಳಿಂದ ಕೂಡಿರುತ್ತದೆಂಬುದು ಎಲ್ಲರೂ ಒಪ್ಪುವ ವಿಷಯ. ಆಧುನಿಕ ಸರಕಾರವೊಂದು ಈ ಪರಿಸ್ಥಿತಿಯಲ್ಲಿ ಎಷ್ಟು ಉತ್ತಮ ರೀತಿಯಿಂದ ವರ್ತಿಸುವುದು ಸಾಧ್ಯವೋ ಅಷ್ಟು ಉತ್ತಮ ರೀತಿಯಲ್ಲಿ ನಮ್ಮ ಕೇಂದ್ರ ಸರಕಾರವು ವರ್ತಿಸುತ್ತಿದೆಯೆಂದು ಒಪ್ಪಲೇ ಬೇಕು ಮಾತ್ರವಲ್ಲ ನಿಷ್ಪಕ್ಷ ದೃಷ್ಟಿಯಿಂದ ನೋಡುತ್ತಿರುವ ಪರಕೀಯರು ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಇಷ್ಟು ಸಾಹಸ ಮಾಡುತ್ತಿದ್ದರೂ ಕೂಡ ಪರಿಸ್ಥಿತಿಯು ಇನ್ನೂ ಸುಧಾರಿಸುವಂತೆ ಕಾಣುವುದಿಲ್ಲ ಮಾತ್ರವಲ್ಲ ಇದೇ ರೀತಿ ಮುಂದರಿಸುತ್ತ ಹೋದಲ್ಲಿ ಈ ಪ್ರಶ್ನೆಯ ಇತ್ಯರ್ಥವಾಗುವ ಲಕ್ಷಣಗಳು ಕಾಣುವುದಿಲ್ಲ.

ಈ ಭಯಂಕರ ಪರಿಸ್ಥಿತಿಯನ್ನು ಎದುರಿಸಲು ಈ ಹಾಲಾಹಲವನ್ನು ತಡೆಯಲು ಮಹಾತ್ಮಾ ಗಾಂಧೀಯವರೊಬ್ಬರೇ ಸಮರ್ಥರಿದ್ದಾರೆಂದು ಒಡೆದು ಕಾಣುತ್ತಿದೆ ಕಲ್ಕತ್ತಾ ಹಾಗೂ ಪೂರ್ವ ಬಂಗಾಳದಲ್ಲಿ ಇತ್ತ ಶಾಂತಿಯು ನೆಲೆಸಿಂತು ಹಿಂದೂ ಮುಸ್ಲಿಮರೊಳಗೆ ಸೌಹಾರ್ದವು ಬೆಳೆಯುತ್ತಿರುವುದು ಮಹಾತ್ಮಾ ಗಾಂಧೀಯವರ ಪ್ರಭಾವದಿಂದಲೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ ಪಂಜಾಬು ಹಾಗೂ ಡೆಲ್ಲಿಗಳಲ್ಲಿ ಮಹಾತ್ಮಾ ಗಾಂಧೀಯವರ ಯತ್ನಗಳು ಯಶಸ್ವಿಯಾಗುವವೆಂದು ಹಾರೈಸಬೇಕಾಗಿದೆ ಗಾಂಧೀಜಿಯವರು ತಾನು ಈಗ "ಬೇಕ್ ನ ಬರ್" ಎಂದು ಹೇಳಿಕೊಳ್ಳಬಹುದು ಆದರೆ ಅವರು ವಸ್ತುತಃ ದೇಶದ ಅದ್ವಿತೀಯ ಮುಂದಾಳುಗಳಾಗಿ ಇಂದಿಗೂ ಇದ್ದಾರೆಂಬುದು ಸ್ವಲ್ಪ ಪರಿಶೀಲನದಿಂದ ತಿಳಿದುಕೊಳ್ಳಬಹುದು

ಗಾಂಧೀಜಿಯವರು ಹಿಂದುಸ್ಥಾನದ ಜೀವನವನ್ನು ರೂಪಿಸುವವರು ಮಾತ್ರವಲ್ಲ ಇಡೀ ಪ್ರಪಂಚದ ಜೀವನವನ್ನು ರೂಪಿಸುವುದರಲ್ಲಿಯೂ ಪ್ರಮುಖ ಭಾಗ ಸಲ್ಲಿಸಲಿರುವ ಜಗದ್ವಂದ್ಯ ಮುಂದಾಳುಗಳು ಇದು ಈಗಲೇ ಸ್ಪಷ್ಟವೆನ್ನಿಸುತ್ತ ಇಲ್ಲದಿದ್ದರೂ ಕಾಲವು ಇದನ್ನು ಸ್ವತಃ ಸ್ಪಷ್ಟಗೊಳಿಸುವುದೆಂಬುದಕ್ಕೆ ಸಂಶಯ ಬೇಡ

ಮಹಾತ್ಮಾ ಗಾಂಧೀಯವರು ಇನ್ನು ಅನೇಕ ವರ್ಷ – ಅವರ ಆಸೆಯಂತೆ 125 ವರ್ಷಗಳ ಪ್ರಾಯದ ತನಕ ಬಾಳಿ ಬದುಕಿ ನಮ್ಮ ಜನಾಂಗದ ಹೊಸದಾಗಿ ಸಿಕ್ಕಿದ ಸ್ವಾತಂತ್ರ್ಯ ನಮ್ಮ ಜನರಿಗೂ ಪ್ರಪಂಚಕ್ಕೂ ಶ್ರೇಯಸ್ಕರವಾಗುವಂತೆ ಸಾಧಿಸುವಂತಾಗಲೆಂದು ಈ ಸಂದರ್ಭದಲ್ಲಿ ನಾವು ಹಾರೈಸುತ್ತೇವೆ.

ಟೀಕೆ-ಟಿಪ್ಪಣಿಗಳು

ಅನ್ನಿಬಿಸೆಂಟ್ ಶತಾಬ್ದಿ.

ಇದೇ ಅಕ್ಟೋಬರ ತಾ. 1ರಲ್ಲಿ ಅನ್ನಿಬಿಸೆಂಟ್ ಶತಾಬ್ದಿ ಉತ್ಸವವು ಅಖಿಲ ಭಾರತದಲ್ಲಿ ಆಚರಿಸಲ್ಪಟ್ಟಿತು ಭಾರತದ ಉದ್ಧಾರಕ್ಕಾಗಿ ರಾಜಕೀಯ, ಸಾಮಾಜಿಕ, ಧಾರ್ಮಿಕವೇ ಮೊದಲಾದ ಎಲ್ಲಾ ಕಾರ್ಯರಂಗಗಳಲ್ಲಿ ಸರ್ವತೋಮುಖವಾಗಿ ದುಡಿದ ಮಹನೀಯರಲ್ಲಿ ಅನ್ನಿಬಿಸೆಂಟಮ್ಮನವರೊಬ್ಬರು ಇವರ ಈ ಶತಾಬ್ದಿ ಸಮಾರಂಭದ ಸಂದರ್ಭದಲ್ಲಿ ಜನಾಂಗವು ಇಂಥವರು ಸಲ್ಲಿಸಿದ ಸೇವೆಯನ್ನು ಕೃತಜ್ಞತಾಭಾವದಿಂದ ಸ್ಮರಿಸುವುದು ಎಲ್ಲರ ಕರ್ತವ್ಯವಿರುತ್ತದೆ. ಇಂಥ ಕೃತಜ್ಞತಾಭಾವವನ್ನು ಕಾರ್ಯರೂಪದಲ್ಲಿ ವ್ಯಕ್ತಗೊಳಿಸುವುದು ಸಮಾರಂಭವನ್ನು ಆಚರಿಸುವ ಉತ್ತಮ ರೀತಿ ಬಿಸೆಂಟಮ್ಮನವರಿಂದಲೇ ಸ್ಥಾಪಿಸಲ್ಪಟ್ಟ ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಹೈಸ್ಕೂಲು ಮೊದಲಾದ ಸಂಸ್ಥೆಗಳಿಗೆ ಸಹಾಯ ನೀಡುವುದು ಇಂಥ ಕಾರ್ಯಗಳಲ್ಲಿ ಒಂದೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇವೆ

ಮೈಸೂರು ಸುಧಾರಣೆಗಳು.

ಮೈಸೂರು ಮಹಾರಾಜರ ಸರಕಾರದ ವತಿಯಿಂದ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರುವ ವಿಷಯದಲ್ಲಿ ಒಂದು ಜಾಹೀರು ಪ್ರಕಟನೆಯು ಈ ವಾರ ಪ್ರಕಟವಾಗಿರುತ್ತದೆ. ಪ್ರಜಾಪ್ರತಿನಿಧಿಗಳಿಂದ ಕೂಡಿದ ಶಾಸನ ಸಭೆಗೆ ಜವಾಬ್ದಾರಿಯಿರುವ ಹಾಗೂ ಜಂಟಿ ಜವಾಬ್ದಾರಿಯಿರುವ ಮಂತ್ರಿ ಮಂಡಲಕ್ಕೆ ಆಡಳಿತೆಯನ್ನು ವಹಿಸಿಕೊಡಲಾಗುವುದೆಂದು ಇದರಲ್ಲಿ ಸೂಚಿಸಲಾಗಿದೆ. ಹೀಗೆ ವಹಿಸಿಕೊಡುವ ಅಧಿಕಾರವು ಮಾತ್ರ ತೃಪ್ತಿಕರವೆಂದು ಹೇಳುವಂತಿಲ್ಲ. ಈ ಪ್ರಕಟನೆಯ ಎರಡನೆಯ ಶೆಡ್ಯೂಲಿನಲ್ಲಿ ಯಾವ ಅಧಿಕಾರಗಳೆಲ್ಲ ಮಹಾರಾಜರಿಗೇನೇ ಕಾದಿಡಲಾಗಿದೆಯೆಂದು ವಿವರಿಸಲ್ಪಟ್ಟಿರುತ್ತದೆ ಈ ಸುಧಾರಣೆಗಳು ಪ್ರಜೆಗಳು ಒಪ್ಪುವ ರೀತಿಯಲ್ಲಿಲ್ಲವೆಂಬುದು ಶೋಚನೀಯವಿರುತ್ತದೆ

ಅಂತೂ ಸತ್ಯಾಗ್ರಹ ಚಳವಳ ಹಾಗೂ ಇದನ್ನು ಮುರಿಯಲೆತ್ನಿಸುವ ಅಮಾನುಷ ದಬ್ಬಾಳಿಕೆ ಇವು ನಿಲ್ಲದೆ ಯಾವ ಸುಧಾರಣೆಗಳ ಜಾಹೀರು ಪ್ರಕಟನೆಗಳಿಂದಲೂ ಫಲವಾಗುವಂತಿಲ್ಲವೆಂಬುದು ಸ್ಪಷ್ಟವಿರುತ್ತದೆ ಮಹಾರಾಜರ ಸರಕಾರದವರು ಕಾಂಗ್ರೆಸ್ ಮುಂದಾಳುಗಳ ಬಿಡುಗಡೆ ಮಾಡಿ ಅವರೊಡನೆ ಚರ್ಚಿಸಿ ಮುಂದಿನ ಸುಧಾರಣೆಗಳ ಯೋಜನೆ ಸಿದ್ಧಗೊಳಿಸುವುದೇ ನ್ಯಾಯವಾದ ದಾರಿಯೆಂದು ಹೇಳಬೇಕಾಗಿದ

ಜುನಾಗಡ ಪ್ರಕರಣ.

ಕಾಠಿಯಾವಾಡಿನ ಸಂಸ್ಥಾನಗಳಲ್ಲಿ ಜುನಾಗಡ ಒಂದು ಇಲ್ಲಿಯ ಜನ ಸಂಖ್ಯೆ ಬಹುಸಂಖ್ಯಾಕರು ಹಿಂದುಗಳಾಗಿದ್ದರೂ ಆಡಳಿತೆ ಒಬ್ಬ ಮುಸ್ಲಿಮ ನವಾಬನ ಕೈಯಲ್ಲಿದ್ದು ಇವರು ಪ್ರಜಾಭಿಪ್ರಾಯದ ಕಡೆಗೆ ಗಮನ ಕೊಡದೇನೆ ತನ್ನ ಸಂಸ್ಥಾನವನ್ನು ಪಾಕಿಸ್ಥಾನಕ್ಕೆ ಸೇರಿಸಿಬಿಟ್ಟರು ಕಾಠಿಯಾವಾಡಿನ ಇತರ ಸಂಸ್ಥಾನಗಳೆಲ್ಲ ಹಿಂದೀ ಸರಕಾರಕ್ಕೆ ಸೇರಿವೆ ಇದು ಇವುಗಳ ಮಧ್ಯದಲ್ಲಿದ್ದು ಪಾಕಿಸ್ಥಾನಕ್ಕೂ ಇದಕ್ಕೂ ಭೌಗೋಲಿಕ ಸಂಬಂಧವೇನೂ ಇಲ್ಲ ಮಾತ್ರವಲ್ಲ ಜುನಾಗಡ ಸಂಸ್ಥಾನದ ಕೆಲವಂಶ ಇತರ ಸಂಸ್ಥಾನಗಳ ಒಳ ವ್ಯಾಪ್ತಿಯಲ್ಲಿವೆ ನವಾಬರು ಮುಸ್ಲಿಮರೆಂಬ ದೊಂದೇ ಪಾಕಿಸ್ಥಾನಕ್ಕೆ ಸೇರಲು ಕಾರಣ ಯಾರು ನ್ಯಾಯ ಹೇಳಿದರೂ ನವಾಬರು ಕೇಳುವ ಲಕ್ಷಣ ಕಾಣಲಿಲ್ಲ ಬ್ರಿಟಿಶರ ಕೈಬಿಟ್ಟೊಡನೆ ಸಂಸ್ಥಾನಾಧೀಶರು ಬೇಕಾದಂತೆ ಆರಿಸಲು ಸ್ವತಂತ್ರರೆಂಬ ಕಾನೂನಿನ ಅಕ್ಷರಾಭಿಪ್ರಾಯವನ್ನೇ ನವಾಬರೂ ಪಾಕಿಸ್ಥಾನದ ಅಧಿಕಾರಿಗಳೂ ಹೇಳುತ್ತಲಿದ್ದಾರೆ ಜುನಾಗಡದ ಹಿಂದೂ ಪ್ರಜೆಗಳಲ್ಲಿ ಕೆಲವರು ದೇಶತ್ಯಾಗವೇ ಗತಿಯೆಂದು ಹೊರಡುತ್ತಲಿದ್ದಾರೆ ಪ್ರಜಾಭಿಪ್ರಾಯದ ಬಹುಮತವಿದ್ದಂತೆ ವರ್ತಿಸುವುದು ಯುಕ್ತವೆಂದು ಹಿಂದುಸ್ಥಾನ ಸರಕಾರದವರು ಸೂಚಿಸಿದ್ದಾರೆ

ಜುನಾಗಡದ ಕೆಲವು ಮುಂದಾಳುಗಳು ಸಂಸ್ಥಾನದ ಹೊರಗೆ ಇದ್ದವರು ಜುನಾಗಡಕ್ಕೆ ಒಂದು ಪ್ರತಿ ಸರಕಾರ ಸ್ಥಾಪನೆ ಮಾಡಿದರು ಜುನಾಗಡದ ಹೆಚ್ಚಿನ ಪ್ರಜೆಗಳು ಕಾಠಿಯಾವಾಡಿನ ಇತರ ಸಂಸ್ಥಾನಗಳು ಮೊದಲಾದ ಪ್ರಮುಖರೆಲ್ಲ ಈ ಪ್ರತಿ ಸರಕಾರಕ್ಕೆ ಬೆಂಬಲ ಕೊಟ್ಟಿರುತ್ತಾರೆ. ಪ್ರತಿ ಸರಕಾರ ಸ್ಥಾಪನೆಯ ಈ ಪ್ರಯೋಗವು ಬಹಳ ಪರಿಣಾಮಕಾರಿಯಾಗುವ ಪರಿಸ್ಥಿತಿ ಇರುತ್ತದೆ.

ಕಾಂಗ್ರೆಸ್ ಸಂಸ್ಥೆಯ ಪುನರ್ಘಟನೆ

ಶಾಂತ ಮತ್ತು ನ್ಯಾಯವಾದ ರೀತಿಗಳಿಂದ ದೇಶಕ್ಕೆ ಸ್ವರಾಜ್ಯ ಸಂಪಾದಿಸುವುದೇ ಕಾಂಗ್ರೆಸ್ ಸಂಸ್ಥೆಯ ಧ್ಯೇಯವಿತ್ತು. ದೇಶದ ರಾಜಕೀಯ ಸ್ವಾತಂತ್ರ್ಯವು ಈಗ ಸಾಧಿಸಲ್ಪಟ್ಟಿರುತ್ತದೆ. ಅಂದ ಮೇಲೆ ಈಗ ಈ ಸಂಸ್ಥೆಯನ್ನು ಮುಕ್ತಾಯಗೊಳಿಸುವುದೇ ನ್ಯಾಯವಾದ ದಾರಿಯೆಂದು ಶ್ರೀ ಜಯಪ್ರಕಾಶ ನಾರಾಯಣರು ಪ್ರಚಾರ ಮಾಡುತ್ತಿದ್ದುದನ್ನು ಇಲ್ಲಿಯೂ ಹಲವರು ಕೇಳಿರುತ್ತಾರೆ. ಕಾಂಗ್ರೆಸ್ ಸಂಸ್ಥೆಯ ಮೇಲೆ ಶ್ರೀ ಜಯಪ್ರಕಾಶರಿಗೆ ಗೌರವವಿಲ್ಲದೆ ಇವರು ಈ ರೀತಿ ಹೇಳಿದ್ದಲ್ಲ. ಇವರು ಕಾಂಗ್ರೆಸಿನಲ್ಲಿಯೇ ದುಡಿದ ಒಬ್ಬ ಪ್ರಸಿದ್ಧ ಮುಂದಾಳು. ಅವರು ಕಂಡುಕೊಂಡ ತೀರ್ಮಾನವು ಕೇವಲ ತರ್ಕಬಾಹಿರವಾದುದೇನೂ ಅಲ್ಲ. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವುದಕ್ಕಾಗಿ ಅನೇಕ ಪ್ರಶ್ನೆಗಳ ಕುರಿತು ಎಷ್ಟು ಭಿನ್ನಾಭಿಪ್ರಾಯಗಳಿದ್ದರೂ ಇದು ತನಕ ಎಲ್ಲರೂ ಐಕ್ಯದಿಂದ ಕಾಂಗ್ರೆಸಿನಲ್ಲಿ ದುಡಿದರು. ಈಗ ಬ್ರಿಟಿಷರೊಡನೆ ಹೋರಾಡುವ ಪ್ರಶ್ನೆ ಇಲ್ಲ. ದೇಶದ ಮುಂದಿನ ವ್ಯವಸ್ಥೆಯ ಕುರಿತು ಇದೇ ಬಗೆಯ ಒಮ್ಮತದಿಂದ ಮುಂದೆ ಸಾಗುವುದು ಅಸಾಧ್ಯ. ಮುಂದೆ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಲು ಕಾರಣವಿಲ್ಲ. ಅವರವರ ಅಭಿಪ್ರಾಯದಂತೆ ಅವರವರು ದುಡಿಯುವುದೇ ಶ್ರೇಯಸ್ಕರ. ಹೀಗೆ ಬೇರೆ ಬೇರೆ ಪಂಗಡಗಳು ತಮ್ಮ ತಮ್ಮ ದಾರಿ ಹಿಡಿಯುವಾಗ ಯಾವುದೋ ಒಂದು ವಿಶಿಷ್ಟ ಪಂಗಡಕ್ಕೆ ಕಾಂಗ್ರೆಸಿನ ಹಿಂದಿನ ಹೆಸರಿನ ಗೌರವ ಏಕೆ ಸಲ್ಲಬೇಕು? ಕಾಂಗ್ರೆಸಿಗೆ ತನ್ನ ಇದು ತನಕದ ಕೆಲಸದಿಂದಾಗಿ ಜನರ ಮೇಲೆ ಹೆಚ್ಚು ಪರಿಣಾಮಕಾರಿಯಾಗುವ ಒಂದು ಪ್ರತಿಷ್ಠೆ ಪ್ರಾಪ್ತವಾಗಿರುತ್ತದೆ. ಇದರ ಲಾಭವನ್ನು ಒಂದೇ ಪಂಗಡದವರು ಸೂರೆಗೊಳ್ಳಲು ಬಿಡುವುದಕ್ಕಿಂತ ಈ ಸಂಸ್ಥೆಯನ್ನೇ ಅಂತ್ಯಗೊಳಿಸಿ ಎಲ್ಲ ಪಂಗಡಗಳು ಸಮನಾಗಿ ತಮ್ಮ ಕಾರ್ಯ ಮುಂದೊತ್ತುವಂತೆ ಮಾಡುವುದೇ ಉತ್ತಮವೆಂಬುದು ಇವರ ತರ್ಕವಿರುತ್ತದೆ. ಕಾಂಗ್ರೆಸ್ ಸಂಸ್ಥೆಯನ್ನು ದೊಡ್ಡ ದೊಡ್ಡ ಶ್ರೀಮಂತರು ಬಂಡವಲದಾರರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಇದರ ಶಕ್ತಿಯನ್ನು ದುರುಪಯೋಗಪಡಿಸುವರೆಂಬುದೇ ಇವರ ಹೆದರಿಕೆ.

ಇಷ್ಟೆಲ್ಲ ತರ್ಕವನ್ನು ಪರಿಶೀಲಿಸಿ ನೋಡಿದರೆ ಇದೆಲ್ಲದರಲ್ಲಿ ಒಂದು ಮಾತು ಮಾತ್ರ ಸತ್ಯವಿರುತ್ತದೆ. ಮುಂದೆ ಕಾಂಗ್ರೆಸ್ ಸಂಸ್ಥೆಯಲ್ಲಿ ವಿವಿಧ ಪಂಗಡಗಳು ತಮ್ಮ ಅಭಿಪ್ರಾಯಗಳನ್ನು ಬದಿಗಿಟ್ಟು ಒಮ್ಮತದಿಂದ ಕಾರ್ಯ ಸಾಧಿಸಬೇಕಾದ ಪ್ರಬಲ ಕಾರ್ಯಕ್ರಮವಿರುವಂತಿಲ್ಲವೆಂಬುದು. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವುದು ಎಲ್ಲರಿಗೂ ಬೇಕಾಗಿತ್ತು. ಈಗ ಅದು ಸಾಧಿಸಲ್ಪಟ್ಟಿರುತ್ತದೆ. ಮುಂದೆ ಕಾಂಗ್ರೆಸಿನಲ್ಲಿ ವಿವಿಧ ಪಂಗಡಗಳಿಗೆ ಆಸ್ಪದವಿಲ್ಲ. ದೇಶದ ಮುಂದಿನ ಬೆಳವಣಿಗೆಯ ಕುರಿತು ಕಾಂಗ್ರೆಸ್ ಯಾವುದಾದರೂ ಒಂದೇ ಕಾರ್ಯಕ್ರಮದ ಧ್ಯೇಯವನ್ನಿಟ್ಟುಕೊಂಡು ಅದಕ್ಕೆ ಒಪ್ಪುವವರು ಮಾತ್ರ ಅದರಲ್ಲಿ ಸೇರಬೇಕಾಗಿದೆ. ಮುಂದೆ ದೇಶದಲ್ಲಿಯ ವಿವಿಧ ಪಂಗಡಗಳಲ್ಲಿ ಕಾಂಗ್ರೆಸು ಒಂದು ಪಂಗಡವಾಗಬಲ್ಲುದಲ್ಲದೆ ಅದು ಇಡೀ ರಾಷ್ಟ್ರದ ಪ್ರತಿನಿಧಿ ಸಂಸ್ಥೆಯಾಗಿ ಎಲ್ಲ ಪಂಗಡಗಳನ್ನು ಒಳಗೊಂಡಿರುವುದು ಸಾಧ್ಯವಿಲ್ಲ.

ಕಾಂಗ್ರೆಸ್ ಸಂಸ್ಥೆಯನ್ನೇ ಮುಕ್ತಾಯಗೊಳಿಸಬೇಕೆಂಬ ತರ್ಕವು ಹಾಸ್ಯಾಸ್ಪದವೆಂದೇ ಹೇಳಬೇಕು. ದೇಶಕ್ಕಾಗಿ ಇಷ್ಟೊಂದು ದುಡಿದು ಜನಾಂಗದ ಇಷ್ಟು ಪ್ರೀತಿ ವಿಶ್ವಾಸಗಳನ್ನು ಗಳಿಸಿದ ಇಂಥ ಪ್ರಮುಖ ಸಂಸ್ಥೆಯ ಸದುಪಯೋಗವನ್ನು ಮುಂದೆ ಮಾಡಲು ಸಾಧ್ಯವಿಲ್ಲವೆಂಬುದು ಅರ್ಥವಿಲ್ಲದ ಮಾತು. ಕಾಂಗ್ರೆಸು ಪ್ರಜಾಸತ್ತಿನ ಕ್ರಮದಲ್ಲಿ ನಡೆದ ಸಂಸ್ಥೆ. ದೇಶದಲ್ಲಿ ಯಾರಿಗೆ ಹೆಚ್ಚು ಬೆಂಬಲ ದೊರೆಯುವುದೋ ಅವರು ಈ ಸಂಸ್ಥೆಗೆ ಬಹುಮತದಲ್ಲಿ ಸೇರಿ ಸಂಸ್ಥೆಯನ್ನು ತಮ್ಮ ಕಾರ್ಯಕ್ರಮಕ್ಕಾಗಿ ಉಪಯೋಗಿಸುವುದು ನ್ಯಾಯವಾಗಿಯೇ ಇರುತ್ತದೆ. ಎಲ್ಲ ಪಂಗಡಗಳಿಗೂ ಈ ಆಸ್ಪದ ಇದ್ದೇ ಇದೆ. ಜನರ ಬೆಂಬಲವಿಲ್ಲದವರು ಅದು ತಮ್ಮ ಕಡೆಗೆ ಒಲಿಯುವ ತನಕ ಸಂಸ್ಥೆಯ ಹೊರಗೆ ನಿಂತೇ ತಮ್ಮ ಕಾರ್ಯವನ್ನು ಮುಂದೊತ್ತಬೇಕಾಗುತ್ತದೆ. ಯಾವಾಗ ತಮಗೆ ಜನರ ಬೆಂಬಲ ಸಿಕ್ಕುತ್ತದೋ ಆಗ ಅವರು ಕಾಂಗ್ರೆಸನ್ನು ತಮ್ಮದನ್ನಾಗಿ ಮಾಡಿಕೊಂಡು ಅದರ ಕಾರ್ಯಕ್ರಮಗಳನ್ನು ತಮ್ಮ ಅಭಿಪ್ರಾಯದಂತೆ ರೂಪಿಸಿಕೊಳ್ಳಲು ಆತಂಕವಿರಲಾರದಷ್ಟೆ?

ಕಾಂಗ್ರೆಸು ಶ್ರೀಮಂತರ ಕೈಗೊಂಬೆಯಾಗಿ ಇದರ ದುರುಪಯೋಗವಾಗುವ ಸಂದರ್ಭವೇ ಹೆಚ್ಚು ಕಾಣುವುದರಿಂದ ಇದನ್ನು ಮುಕ್ತಾಯಗೊಳಿಸುವುದೇ ಹಿತಕರವೆಂಬ ಮಾತು ನ್ಯಾಯವಲ್ಲ. ಇಂದಿನ ಕಾಂಗ್ರೆಸ್ ಮುಂದಾಳುಗಳು ಶ್ರೀಮಂತರ ಬಂಡವಲಗಾರರ ಕೈಗೊಂಬೆಗಳೆಂಬ ಇದರಲ್ಲಿ ಅಡಕವಾಗಿರುವ ಭಾವವು ಕೇವಲ ಅನ್ಯಾಯದ ಆರೋಪವಿರುತ್ತದೆ. ಅಂತೂ ಈ ಸಂಸ್ಥೆಯನ್ನು ದುರುಪಯೋಗಪಡಿಸಿದರೆ ಮುಂದೆ ಕಾಂಗ್ರೆಸನ್ನು ವಿರೋಧಿಸುವ ಸ್ವಾತಂತ್ರ್ಯವು ಎಲ್ಲರಿಗೂ ಇದ್ದೇ ಇರುವುದರಿಂದ ಅಂಥ ಪಂಗಡವನ್ನು ಹೊರಗೆ ಹಾಕಲು ಯತ್ನಿಸಬೇಕಾದುದೇ ನ್ಯಾಯವಾದ ದಾರಿಯಾಗಿರುತ್ತದೆ. ಬ್ರಿಟಿಷರೆಂಬ ಮೂರನೆ ಹೊರಗಿನ ಪಂಗಡದವರೊಡನೆ ಹೋರಾಡುವಾಗ ಕಾಂಗ್ರೆಸನ್ನು ವಿರೋಧಿಸಿ ಅದರ ಬಲವನ್ನು ಕುಗ್ಗಿಸುವುದು ಯಾರಿಗೂ ಇಷ್ಟದಾಯಕವಿದ್ದಿಲ್ಲ. ಮುಂದಿನ ಸ್ಥಿತಿ ಹಾಗಿಲ್ಲ. ಕಾಂಗ್ರೆಸು ದೇಶದ ಹಲವು ಪಂಗಡಗಳಲ್ಲಿ ಒಂದು. [illegible] ಯವುಳ್ಳವರು ಇದನ್ನು ಎದುರಿಸುವುದು ನ್ಯಾಯವೂ ಅಗತ್ಯವೂ ಇರುತ್ತದೆ. ಹೀಗಿರುವಾಗ ಯಾರಾದರೂ ಕಾಂಗ್ರೆಸ್ ಸಂಸ್ಥೆಯ ದುರುಪಯೋಗ ಮಾಡಲು ಹವಣಿಸಿದರೆ ಅದು ಬಹಳ ಸಮಯ ಸಾಧ್ಯವಾಗುವಂತಿಲ್ಲ. ಜನತೆಯು ಬುದ್ಧಿಹೀನವೆಂದು ಸಾಧಿಸುವುದು ಸರಿಯಲ್ಲ. ಜನತಾಸೇವೆಯಿಂದ ಜನರನ್ನು ಒಲಿಸಿ ಕಾಂಗ್ರೆಸನ್ನು ಸುಧಾರಿಸಿ ನಡೆಸುವುದೇ ನಿಜವಾದ ಶ್ರೇಯಸ್ಕರವಾದ ದಾರಿಯಾಗಿರುತ್ತದೆ.

ಕಾಂಗ್ರೆಸ್ ಸಂಸ್ಥೆಯಾದರೂ ತನ್ನ ಇದು ತನಕದ ಪ್ರತಿಷ್ಠೆಯಿಂದಲೇ ಮುಂದೆ ಪ್ರಮುಖ ಸ್ಥಾನ ಕಾಯ್ದುಕೊಳ್ಳುವಂತಿಲ್ಲ. ಈಗ ಹಾಗೂ ಮುಂದೆ ಅದು ಜನರಿಗೆ ಸಲ್ಲಿಸುವ ಸೇವೆಯಿಂದ ಮಾತ್ರ ಅದು ಬದುಕಬಲ್ಲುದು. ಈ ಪರಿಸ್ಥಿತಿ ಕಾಂಗ್ರೆಸ್ ಮುಂದಾಳುಗಳಿಗೆ ಚೆನ್ನಾಗಿ ಗೊತ್ತಿರುವುದರಿಂದಲೇ ಕಾಂಗ್ರೆಸಿನ ಅಧ್ಯಕ್ಷರ ಸೂಚನೆ ಮೇರೆಗೆ ಕಾಂಗ್ರೆಸ್ ಸಂಸ್ಥೆಯ ಪುನರ್ಘಟನೆಯ ಬಗ್ಗೆ ವಿಚಾರಿಸಿ ಸೂಚನೆಗಳನ್ನು ಕೊಡಲು ಅದು ಒಂದು ವಿಶೇಷ ಕಮಿಟಿಯನ್ನು ನೇಮಕ ಮಾಡಿತು. ಇದರಲ್ಲಿ ಎಲ್ಲ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳ ಅಧ್ಯಕ್ಷ ಹಾಗೂ ಕಾರ್ಯದರ್ಶಿಯರಿದ್ದು ಇದರ ವರದಿಯು ಈಗ ತಾನೇ ಪ್ರಕಟವಾಗಿರುತ್ತದೆ. ಇದರಲ್ಲಿ ಕಾಣಿಸಿದ ಸೂಚನೆಗಳ ಕಡೆಗೆ ದೇಶಹಿತಚಿಂತಕರೆಲ್ಲರೂ ಸಾಕಷ್ಟು ಗಮನ ಕೊಟ್ಟು, ಈ ಪ್ರಶ್ನೆಯ ಸರಿಯಾದ ಚರ್ಚೆಯಾಗಿ ಕಾಂಗ್ರೆಸಿನ ಮುಂದಿನ ವ್ಯವಸ್ಥೆ ಉತ್ತಮ ರೀತಿಯಲ್ಲಿ ಸಾಧಿಸಲ್ಪಡಬೇಕಾಗಿದೆ.

ಕಾಂಗ್ರೆಸು ಬಡಜನರ ಹಿತ ಸಾಧಿಸುವುದೇ ತನ್ನ ಮುಖ್ಯ ಧ್ಯೇಯವನ್ನಾಗಿ ಇಟ್ಟುಕೊಂಡ ಸಂಸ್ಥೆ. ಇದು ಸ್ವರಾಜ್ಯಕ್ಕಾಗಿ ಇದು ತನಕ ಹೋರಾಡಿದ್ದಾದರೂ ದೇಶದ ಜನರ ಸಂಕಷ್ಟ ನಿವಾರಣೆಗೆ ರಾಜಕೀಯ ಸ್ವಾತಂತ್ರ್ಯವಿಲ್ಲದೆ ಬೇರೆ ದಾರಿ ಇಲ್ಲವೆಂಬುದರಿಂದ ಮಾತ್ರವಿರುತ್ತದೆ. ರಾಜಕೀಯ ಸ್ವಾತಂತ್ರ್ಯವು ಮುಂದಿನ ಹಿತ ಸಾಧನೆಗೆ ಒಂದು ದಾರಿ ಮಾತ್ರವಿದ್ದು ಜನರ ಯೋಗಕ್ಷೇಮವೇ ಕಾಂಗ್ರೆಸಿನ ಮುಂದೆ ಸತತ ಇದ್ದ ನಿಜವಾದ ಧ್ಯೇಯವಿರುತ್ತದೆ. ರಾಜಕೀಯ ಸ್ವಾತಂತ್ರ್ಯ ದೊರೆತ ಕೂಡಲೆ ಕಾಂಗ್ರೆಸಿನ ಧ್ಯೇಯ ಕೈಗೂಡಿದಂತಾಗಿಲ್ಲ. ದೇಶದ ಜನರೆಲ್ಲ ಸುಖಿಗಳಾಗಿ ಬಾಳುವಂಥ ನಿಜವಾದ ಸ್ವರಾಜ್ಯ ಸ್ಥಾಪನೆ ಸಾಧಿಸುವುದು ಇನ್ನೂ ಆಗಲಿಕ್ಕಿರುವ ಕಾರ್ಯವಿರುತ್ತದೆ. ಶ್ರೀಮಂತರ ಐಶ್ವರ್ಯ ಹೆಚ್ಚುತ್ತಾ ಹೋಗಿ ಬಡಜನರ ಗೋಳು ಇನ್ನಷ್ಟು ಅಧಿಕವಾಗುತ್ತಾ ಹೋದರೆ ರಾಜಕೀಯ ಸ್ವಾತಂತ್ರ್ಯದಿಂದ ಉಪಯೋಗವೇನು? ಕಾಂಗ್ರೆಸು ಎಂದೂ ಶ್ರೀಮಂತರ ಕೈಗೊಂಬೆಯಾಗಿ ಅವರ ಪಕ್ಷವನ್ನು ಕಟ್ಟಿಕೊಂಡಿರುವ ಸಂಸ್ಥೆಯಾಗಲಾರದು. ದೇಶದಲ್ಲಿ ಸಂಪತ್ತು ಸಮೃದ್ಧಿಯಾಗಿ ಇದನ್ನು ಎಲ್ಲರೂ ಸಮಾನವಾಗಿ ಅನುಭವಿಸಿ ಸುಖದಲ್ಲಿ ಬಾಳುವಂತೆ ಪ್ರಜಾಸತ್ತಾತ್ಮಕ ದಾರಿಯಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಭಂಗಬಾರದಂಥ, ಅಹಿಂಸಾತ್ಮಕ ಹಾಗೂ ಸತ್ಯದ ಹಾದಿಯಲ್ಲಿ ಸಾಧಿಸುವಂಥ ಕಾರ್ಯಕ್ರಮ ಹಾಗೂ ಧ್ಯೇಯಗಳನ್ನು ಕಾಂಗ್ರೆಸು ತನ್ನ ಮುಂದೆ ಸ್ಪಷ್ಟವಾದ ರೀತಿಯಲ್ಲಿ, [illegible] ಕಲ್ಪಿಸಿಕೊಳ್ಳಬೇಕು, ಇದೇ ವಿಶೇಷ ಕಮಿಟಿಯು ರೂಪಿಸಿಕೊಟ್ಟ ಧ್ಯೇಯವಿರುತ್ತದೆ.

ಸಂಸ್ಥೆಯ ವ್ಯವಸ್ಥೆಯ ದೃಷ್ಟಿಯಿಂದ ಕಾಂಗ್ರೆಸಿನಲ್ಲಿ ಮುಂದೆ ಭಿನ್ನ ಪಂಗಡಗಳಿಗೆ ಆಸ್ಪದವಿರಬಾರದೆಂದು ಸ್ಪಷ್ಟಪಡಿಸಲಾಗಿದೆ. ಈ ಅಹಿಂಸಾತ್ಮಕ ಸಮತಾವಾದಿ ಧ್ಯೇಯವುಳ್ಳ ಒಂದೇ ಪಂಗಡ ಮಾತ್ರ ಕಾಂಗ್ರೆಸಿನಲ್ಲಿರಬೇಕು. ಈ ಪಂಗಡವು ಆಗಾಗ ಸರಕಾರೀ ಜವಾಬ್ದಾರಿಯನ್ನು ಹೊತ್ತುಕೊಳ್ಳುವ ಪ್ರಸಂಗ ಬರುವುದು ಸಹಜವಿರುವುದರಿಂದ ಈ ಸಂಸ್ಥೆಗೆ ಒಬ್ಬ ಪ್ರೆಸಿಡೆಂಟ್ ಮುಂದೆ ಅಗತ್ಯವಿಲ್ಲವೆಂದೂ ಹೇಳಲಾಗಿದೆ. ಇಂಗ್ಲಂಡಿನ ಬೇರೆ ಬೇರೆ ರಾಜಕೀಯ ಪಂಗಡಗಳ ಹಾಗೂ ರಷ್ಯಾದ ಕಮ್ಯೂನಿಸ್ಟ್ ಪಕ್ಷದ ಉದಾಹರಣೆಗಳನ್ನು ಹೇಳಲಾಗಿದೆ. ಕಾರ್ಯದರ್ಶಿಯರೇ ಸಾಕೆಂದು ಇವರ ಅಭಿಪ್ರಾಯವಿರುತ್ತದೆ.

ಕಾಂಗ್ರೆಸಿನ ಆಶ್ರಯದಲ್ಲಿ ಇಂಡಿಯನ್ ನೇಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸು, ಕಿಸಾನ ಕಾಂಗ್ರೆಸು, ಗ್ರಾಮ ಉದ್ಯೋಗಗಳಲ್ಲಿಯ ಕೆಲಸಗಾರರ ಸಂಸ್ಥೆ ಮೊದಲಾದ ಸಂಸ್ಥೆಗಳು ನಡೆಸಲ್ಪಡಬೇಕು ಮತ್ತು ಕೆಲಸಗಾರರ ಈ ಸಂಸ್ಥೆಗಳಿಗೆ ಕಾಂಗ್ರೆಸಿನಲ್ಲಿ ನಿರ್ದಿಷ್ಟ ಪ್ರಾತಿನಿಧ್ಯ ಕೊಡುವ ವ್ಯವಸ್ಥೆ ಬೇಕೆಂದು ಹೇಳಲಾಗಿದೆ. ಪ್ರಾಥಮಿಕ ಕಾಂಗ್ರೆಸ್ ಕಮಿಟಿಗಳಿಗೆ ಮಾತ್ರ ಸದಸ್ಯರಿಂದ ಸೀದಾ ಚುನಾವಣೆಗಳು ಸಾಕೆಂದೂ ಮೇಲಿನ ಎಲ್ಲಾ ಕಮಿಟಿಗಳಿಗೆ ಅದರ ಕೆಳ ಕಮಿಟಿಯವರೇ ಚುನಾವಣೆ ಮಾಡಿದ್ದರೆ ಸಾಕೆಂದೂ ಇಂಥ ಚುನಾವಣೆಗಳು ನಡೆವಾಗ ಸಂಸ್ಥೆಯಲ್ಲಿಯ ಕಡಮೆ ಸಂಖ್ಯಾಕರಿಗೂ ಪ್ರಾತಿನಿಧ್ಯ ದೊರೆಯಲು ಸಹಕಾರಿಯಾಗುವ ಮತದಾನ ಪದ್ಧತಿ ಜಾರಿಯಲ್ಲಿಡಬೇಕೆಂದೂ ಸೂಚಿಸಲಾಗಿದೆ. ಕಾಂಗ್ರೆಸ್ ಸಂಸ್ಥೆಯ ಕಾರ್ಯಕ್ಷೇತ್ರ ಹಿಂದೀ ಸರಕಾರಕ್ಕೆ ಸೇರಿದ ಪ್ರದೇಶ ಮಾತ್ರವಲ್ಲ. ಈ ಸರಕಾರದಿಂದ ಹೊರಗೆ ಹೋದ ಪ್ರದೇಶ ಅಂದರೆ ಪಾಕಿಸ್ತಾನ ಹಾಗೂ ಪರದೇಶಗಳಲ್ಲಿ ಹಿಂದೀಯರು ಎಲ್ಲೆಲ್ಲಿ ವಾಸಿಸುವರೋ ಆ ಎಲ್ಲ ಪ್ರದೇಶಗಳಲ್ಲಿಯೂ ಕಾಂಗ್ರೆಸು ತನ್ನ ಶಾಖೆಯನ್ನು ಸ್ಥಾಪಿಸಬೇಕೆಂದು ಸೂಚಿಸಲಾಗಿದೆ.

ಮುಂದಿನ ಕಾಂಗ್ರೆಸಿನ ಕಾರ್ಯಕ್ರಮವನ್ನು ಚರ್ಚಿಸುತ್ತಾ ಕಮಿಟಿಯವರು ಸಮತಾವಾದವೇ ತಮ್ಮ ಧ್ಯೇಯವಾದರೂ ಅದು ಕಾರ್ಲ್ ಮಾರ್ಕ್ಸನ ತತ್ವಗಳ ಸಮತಾವಾದವಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಆಯಾ ಜನಾಂಗದ ಪರಿಸ್ಥಿತಿಗನುಗುಣವಾದ ತತ್ವಗಳಂತೆ ಮುಂದರಿಸುವುದು ಅಗತ್ಯ. ಇಲ್ಲಿಯ ಪರಿಸ್ಥಿತಿ ಸುಧಾರಿಸಿ ಇಲ್ಲಿ ನಿಜವಾದ ರೀತಿಯ ಸಮತಾವಾದ ಸಾಧಿಸಲು ಮಹಾತ್ಮಾ ಗಾಂಧಿಯವರು ನಮಗೆ ದಾರಿ ತೋರಿಸಿ ಕೊಟ್ಟಿದ್ದಾರೆ. ಹಿಂದುಸ್ತಾನ ಮತ್ತು ಇತರ ಪೌರ್ವಾತ್ಯ ದೇಶಗಳ ಅಭಿವೃದ್ಧಿ ಸಾಧನೆಗೆ ಇದಕ್ಕಿಂತ ಉತ್ತಮವಾದ ಹಾದಿ ಇಲ್ಲ. ಈ ತತ್ವಗಳಿಗೆ ಅನುಗುಣವಾಗಿ ಈ ಕೆಳಗಿನಂತೆ ತಮ್ಮ ಕಾರ್ಯಕ್ರಮವನ್ನು ರೂಪಿಸಬಹುದೆಂದು ಕಮಿಟಿಯವರು ಸೂಚಿಸಿದ್ದಾರೆ:

1 ಕೃಷಿ ಭೂಮಿಯೆಲ್ಲವೂ ಸರಕಾರಕ್ಕೇನೆ ಸೇರಬೇಕು. ವ್ಯಕ್ತಿಗಳಿಗೆ ಮಾಲಿಕತನ ಬಿಟ್ಟಲ್ಲಿ ಶಾಸ್ತ್ರೀಯ ಕ್ರಮದಲ್ಲಿ ಕೃಷಿ ಅಭಿವೃದ್ಧಿ ಸಾಧಿಸಲು ಅಡ್ಡಿಯಾಗುತ್ತದೆ. ಸಾಗು ಭೂಮಿಯು ವಿಪರೀತ ವಿಭಜನೆಗೆ ಅಡ್ಡಕಟ್ಟಿ ಸಹಕಾರೀ ಕ್ರಮದಲ್ಲಿ ಕೃಷಿ ಮುಂದೆ ಸಾಗಬೇಕು.

2 ಗುಡಿ ಕೈಗಾರಿಕೆಗಳನ್ನು ಸಹಕಾರೀ ಕ್ರಮದಲ್ಲಿ ವ್ಯವಸ್ಥೆಗೊಳಿಸಿ ಇವಕ್ಕೆ ಸುಧಾರಿತ ಉಪಕರಣಗಳನ್ನು ಒದಗಿಸಿ ಚಿಕ್ಕ ಚಿಕ್ಕ ಕಾರ್ಖಾನೆಗಳ ರೂಪ ಕೊಡಬೇಕು.

3 ವಸ್ತ್ರ ಕಾರ್ಖಾನೆ ಹಾಗೂ ಕೈಗಾರಿಕೆಗಳ ಮಟ್ಟಿಗೆ ಇವು ರಾಷ್ಟ್ರೀಯ ಸಂಸ್ಥೆಗಳಾಗುವಂತೆಯೇ ಯತ್ನಿಸಬೇಕು. ಮೂಲ ಕೈಗಾರಿಕೆಗಳನ್ನಾದರೂ ಕೂಡಲೇ ಸರಕಾರವೇ ವಹಿಸಿಕೊಂಡು ನಡಸಬೇಕು.

4 ಸರಕಾರವು ಧಾರ್ಮಿಕ ವಿಚಾರಗಳಲ್ಲಿ ಕೈಹಾಕಬಾರದು. ಧಾರ್ಮಿಕ ಹಾಗೂ ವ್ಯಾಪಾರೀ ಭೇದಗಳು ಕಡಮೆಯಾಗುತ್ತಾ ಬರುವಂತೆ ಕಾಂಗ್ರೆಸು ಸಾಧಿಸಬೇಕು.

5 ಅಸ್ಪೃಶ್ಯತೆ ಮಾತ್ರವಲ್ಲ ಎಲ್ಲಾ ಜಾತಿಭೇದವನ್ನು ತೆಗೆಯಬೇಕು.

6 ಗ್ರಾಮಾಭಿವೃದ್ಧಿ ಸಾಧಿಸಿ ಗ್ರಾಮ ಪಂಚಾಯತುಗಳೇ ಮುಂದಿನ ರಾಷ್ಟ್ರದ ತಳಹದಿಯಾಗುವಂತೆ ಅನತಿ ದೂರದಲ್ಲೇ ಸಾಧಿಸಬೇಕು. ಗ್ರಾಮ ಪಂಚಾಯತುಗಳು ಸ್ವತಂತ್ರ ಸಂಸ್ಥೆಗಳಾಗಿ ಹಿಂದುಸ್ಥಾನದಲ್ಲಿ ಬಾಳುವಂತಾಗಬೇಕು.

ಕಮಿಟಿಯವರು ಮೇಲೆ ಕೊಟ್ಟ ಕಾರ್ಯಕ್ರಮದಲ್ಲಿ ಹಲವರಿಗೆ ಭಿನ್ನಾಭಿಪ್ರಾಯಗಳಿರುವುದು ಸಹಜ. ಅಂತೂ ಈ ವಿಚಾರಗಳ ಸರಿಯಾದ ಚರ್ಚೆಯಾಗಿ ನಿರ್ದಿಷ್ಟ ಧ್ಯೇಯ ಹಾಗೂ ಕಾರ್ಯಕ್ರಮಗಳನ್ನು ನಿಶ್ಚಯಿಸಿ ಕಾಂಗ್ರೆಸಿನ ಪುನರ್ಘಟನೆಯಾಗಬೇಕೆಂಬುದು ಮುಖ್ಯ ವಿಷಯವಿರುತ್ತದೆ. ಈ ಪ್ರಶ್ನೆಯ ಕಡೆಗೆ ದೇಶದ ಹಿತಚಿಂತಕರೆಲ್ಲರೂ ಗಮನಕೊಡಬೇಕು.

ಸತ್ಯಾನುಯಾಯಿ ಎನ್ನಿಬೆಸೆಂಟ್ ಮಹಿಳೆ

ಎರಡು ಜನಾಂಗಗಳ ಸೇವೆ ಗೈದ ಭವ್ಯವ್ಯಕ್ತಿ

ಅರ್ಧ ಶತಮಾನದ ಮಾನವೋದ್ಧಾರದ ಸೇವೆ

ಈ ವಾರವು ಅತ್ಯಂತ ಮಹತ್ವಪೂರ್ಣವಾದುದು. ಜಗತ್ತಿನ ಹಲವು ಭಾಗಗಳಲ್ಲಿ ಅಪ್ರತಿಮ ವ್ಯಕ್ತಿಗಳಿಬ್ಬರ ಹುಟ್ಟು ಹಬ್ಬಗಳಾಚರಿಸಲ್ಪಡುತ್ತವೆ ಅವರೆಂದರೆ ಭಾರತ ಸೇವೆಗಾಗಿ ತನುಮನಧನಗಳನ್ನು ಸವೆದ ಪೂರ್ವ ಮಹಾ ಮಹಿಳೆ ಮತ್ತೊರ್ವ ಮಹಾ ಪುರುಷ ಬೆಸೆಂಟ್ ಮತ್ತು ಗಾಂಧಿ. ಈ ವಾರದಲ್ಲಿ ನಮ್ಮ ಪ್ರಾಂತ್ಯದ ಹಲವು ಕಡೆಗಳಲ್ಲಿ ಈ ಉದಾತ್ತ ಜೀವರುಗಳಿಗೆ ಅತ್ಯಾಪ್ತವಾಗಿದ್ದೊಂದು ಮಾನವ ಕುಲೋದ್ಧಾರದ ಸುಧಾರಣೆಯೂ ಜಾರಿಗೆ ತರಲ್ಪಡುವುದು. ಅದೆಂದರೆ ಮಧ್ಯಪಾನ ನಿರೋಧ

ಬೆಸೆಂಟ್ ಗಾಂಧಿಗಳಿಬ್ಬರೂ ಮಹೋನ್ನತ ಧ್ಯೇಯಾದರ್ಶಗಳ, ಸೇವಾಶ್ರದ್ಧೆಗಳುಳ್ಳ ವ್ಯಕ್ತಿಗಳು. ಇವರಿರ್ವರೂ ಒಂದು ಕಾಲದಲ್ಲಿ ಪರಸ್ಪರ ಅನ್ಯೋನ್ಯತೆಯಿಂದ ತಮ್ಮ ಏಕ ಮಾತ್ರ ಧ್ಯೇಯವಾಗಿದ್ದ ಭಾರತ ಬಂಧ ವಿಮೋಚನೆಗಾಗಿ ಪಾಶವೀ ಸಾಮ್ರಾಜ್ಯ ಶಕ್ತಿಯೊಂದರೊಡನೆ ಜೀವನ್ಮರಣದ ಹೋರಾಟವನ್ನು ನಡೆಸಿದ್ದರು ಇರ್ವರೂ ಅವಿಶ್ರಾಂತ ಸತ್ಯ ಶೋಧಕರಾಗಿದ್ದು ಅಸದೃಶ್ಯವಾದ ಅಂತರಾತ್ಮ ಪ್ರೇರಣೆಗನುಸಾರವಾಗಿ ಕಾರ್ಯಗೆಯ್ಯುತ್ತಿರುವ ಕರ್ಮಯೋಗಿಗಳು. ಮಹಾತ್ಮಾಗಾಂಧೀಜಿಯವರ ಜೀವನ ಇತಿಹಾಸವೆಂಬುದೊಂದು ತೆರೆದ ಪುಸ್ತಕವೇ ಆಗಿದ್ದು ಅದನ್ನು ಅರಿಯದ ಭಾರತೀಯರೇ ವಿರಳ ಆದರೆ ಬೆಸೆಂಟಮ್ಮನವರು ಕೆಲಕಾಲದ ನಂತರ ರಾಜಕೀಯ ರಂಗವನ್ನು ತ್ಯಜಿಸಿ ಮೌನರೂಪವಾದ ಕರ್ಮ ತಪಸ್ಸನ್ನು ಕೈಕೊಂಡು ಭಾರತೀಯರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ನೈತಿಕ ಶ್ರೇಯೋಭಿವೃದ್ಧಿಗಾಗಿ ಮರಣಾಂತ್ಯದ ತನಕ ಶ್ರಮಿಸಿದರು ಇಂದಿನ ಭಾರತೀಯ ಜನ ಜೀವನದಲ್ಲಿ ಅವರ ಜೀವನಾದರ್ಶದ ಪರಿಣಾಮವು ಅದೆಷ್ಟು ಮಟ್ಟಿಗೆ ಪ್ರಭಾವಿಸಿದೆ ಎಂಬ ವಿಷಯವು ಸಂಕ್ಷೇಪವಾಗಿ ಅವರ ಜೀವನ ಇತಿಹಾಸದಿಂದ ತಿಳಿದು ಬರುತ್ತದೆ

1947ರ ಒಕ್ಟೋಬರ ಒಂದರಂದು ಗೋಧೂಳಿ ಕಾಲದ ಲಂಡನಿನಲ್ಲಿ ಬೆಸೆಂಟಮ್ಮನ ಜನನವಾಯಿತು ಅವಳ ಜನನದಿಂದ ಜಗತ್ತಿಗೊಂದು ಪರಿಶುದ್ಧ ಹೆಸರೂ, ಭಾರತಕ್ಕೋರ್ವ ದೇಶೋದ್ಧಾರಕಳೂ ಸಿಗುವಂತಾಯಿತು ಬೆಸೆಂಟಮ್ಮನದು ಲಂಡನಿನ ಗೌರವಂತ ಮಧ್ಯಮ ವರ್ಗದ ಕುಟುಂಬ ಇಂಗ್ಲಿಷ್ ಮತ್ತು ಐರಿಷ್ ವಂಶಗಳು ಅದರಲ್ಲಿ ಮಿಲನಗೊಂಡಿದ್ದವು

ಬೆಸೆಂಟಮ್ಮನ ಬಾಲ್ಯವು ಅತ್ಯಂತ ಆನಂದದಾಯಕವಾಗಿ ಕಳೆಯಿತು ಅವಳ ಗೃಹ ಜೀವನದಲ್ಲಿ ನೆಲೆಸಿದ ನೆಮ್ಮದಿಯು ಆರೋಗ್ಯವಂತ ಗುಣ ಶೀಲಗಳನ್ನು ಬೆಳೆಸಿ ಬೆಳೆಯಲು ಚಿಕ್ಕ ಎನ್ನಿಗೆ ಉತ್ತಮ ಸಂದರ್ಭವನ್ನು ಕಲ್ಪಿಸಿಕೊಟ್ಟಿತು ಆದರೆ ಐದನೇ ವರ್ಷದಲ್ಲಿ ದುರ್ದೈವದಿಂದವಳ ತಂದೆಯು ಮೃತಪಟ್ಟಿದ್ದರಿಂದ ಎನ್ನಿಯ ಆರೈಕೆ ಧೃಡಚಿತ್ತಳಾಗಿದ್ದ ಅವಳ ತಾಯಿಯ ಪಾಲಿಗೆ ಬಿತ್ತು ಅದೆಷ್ಟು ಕಷ್ಟಗಳನ್ನಾದರೂ ಎದುರಿಸಿ ತನ್ನಿರ್ವ ಮಕ್ಕಳನ್ನು ಸುಖ ಸಂತೃಪ್ತಿಯಿಂದ ಪೋಷಿಸಲು ಆಕೆ ನಿರ್ಧಾರಯುಕ್ತಳಾದಳು ಎನ್ನಿಯ ಅಣ್ಣನು ಹೆರೊ ಶಾಲೆಗೆ ಕಳುಹಿಸಲ್ಪಟ್ಟ, ಎನ್ನಿಯ ಶಿಕ್ಷಣ ಭಾರವನ್ನು ಓರ್ವ ಪ್ರತಿಭಾವಂತ ಅಧ್ಯಾಪಕಿಯೋರ್ವಳು ವಹಿಸಿಕೊಂಡಳು. ತನ್ನ ಅಧ್ಯಾಪಕಿಯ ವಿಷಯ ಬೆಸೆಂಟಮ್ಮನು ಹೀಗೆ ತಿಳಿಸುತ್ತಾಳೆ "ನಾನು ಅವಳಿಗೆಷ್ಟು ಋಣಿಯಾಗಿದ್ದೇನೆಂದು ವರ್ಣಿಸಲಸದಳ. ಅವಳು ನನ್ನಲ್ಲಿ ತುಂಬಿದ ಆ ಜ್ಞಾನಪ್ರೇಮವು ಇಂದಿಗೂ ನನ್ನಲ್ಲಿ ಬೇರೂರಿದೆ"

ಹತ್ತೊಂಬತ್ತನೇ ವರ್ಷದ ತನಕ ಎನ್ನಿಯು ತಾರುಣ್ಯದೆಲ್ಲಾ ಸೊಬಗಿನಿಂದ ರಾಜಿಸಿದಳು ನಂತರ ಸ್ವಲ್ಪ ಕಾಲದಲ್ಲೇ ಫ್ರೆಂಕ್ ಬೆಸೆಂಟ್ ಎಂಬೋರ್ವ ಪ್ರೊಟೆಂಸ್ಟೆಂಟ್ ಪಾದ್ರಿಯೊಡನೆ ಅವಳ ವಿವಾಹವಾಯಿತು. ಬೆಸೆಂಟ್ ಎಂಬೀ ಉಪನಾಮವು ಎನ್ನಿಗೆ ಈಗ ಡನಿಂದ ಬಂತು ಮತ್ತೆ ಅದಿಂದು ಜಗತ್ಪ್ರಾನ್ಯತೆ ಪಡೆದಿದೆ ಆದರೆ ಈ ವಿವಾಹವು ಮಾತ್ರ ಅಷ್ಟೊಂದು ತೃಪ್ತಿಕರವಾಗಿ ಪರಿಣಮಿಸಲಿಲ್ಲ ಕಾರಣ ಎನ್ನಿ ಬೆಸೆಂಟಳಿಗೆ ಅದೇ ಕಾಲಕ್ಕೆ ತನ್ನ ಕ್ರೈಸ್ತ ಮತದ ತತ್ವಗಳ ಮೇಲೆ ಇದ್ದ ವಿಶ್ವಾಸವು ಶಿಥಿಲವಾಗುತ್ತ ಬರುತಿತ್ತು ಕ್ರೈಸ್ತ ಅರ್ಚಕನೊಬ್ಬನ ಪತ್ನಿಯ ಈ ಮನೋಭಾವವು ಸಮಾಜದಲ್ಲಿ ಕೌತುಕವನ್ನುಂಟುಮಾಡುವಂತದಾಗಿತ್ತು ಆದರೆ ತನ್ನ ಹೃತ್ಪೂರ್ವಕ ಭಾವಗಳನ್ನು ಮುಚ್ಚಿಟ್ಟು ಕಪಟ ನಟನೆಯಿಂದ ವರ್ತಿಸುವ ಅಪ್ರಾಮಾಣಿಕ ಸ್ವಭಾವ ಬೆಸೆಂಟಳಲ್ಲಿರಲಿಲ್ಲ ಅವಳು ಕ್ರೈಸ್ತ ದೇವಾಲಯಕ್ಕೆ ಹೋಗುವುದನ್ನು ತ್ಯಜಿಸಿದಳು ಅವಳ ತಾಯಿಯು ಅಂಗಲಾಚಿ ಬೇಡಿಕೊಂಡರೂ ತನಗೆ ಅಸತ್ಯವಾಗಿ ಕಂಡದನ್ನು ಒಪ್ಪಲು ಎಂದೂ ಅವಳು ಸಿದ್ಧಳಾಗಲಿಲ್ಲ

"ನನ್ನೀ ವಿವಾಹದ ಅವಮಾನ ನನ್ನ ತಲೆಯ ಮೇಗೂ ತಗಲಿದರೂ ಆ ಸಂಕಷ್ಟದಲ್ಲಿಯೂ ನಾನು ಸತ್ಯಕ್ಕೇನೇ ಬಲಿವಾಗಿ ಅಪ್ಪಿಕೊಂಡೆ ಆ ವೇಳೆ ಎರಡು ಪರ್ಥಿನ್ಯ ದಾರಿಗಳು ನನ್ನೆದುರು ಇಡಲ್ಪಟ್ಟವು ಅಸತ್ಯವನ್ನು ಒಪ್ಪಬೇಕು ಇಲ್ಲವೆ ಮನೆಯಿಂದ ಹೊರಡಬೇಕು—ಬೇರೆ ಮಾತುಗಳಲ್ಲಿ ಹೇಳುವುದಾದರೆ ವಂಚನೆ ಇಲ್ಲವೆ ಬಹಿಷ್ಕಾರ ನಾನು ಕೊನೆಯದನ್ನೇ ಅನುಸರಿಸಿದೆ ಪರಿಣಾಮವಾಗಿ ಅತ್ಯಂತ ಸಂಕಷ್ಟದಾಯಕವಾದ ಕಾಲವೊಂದು ಹಿಂಬಾಲಿಸಿತು"

ಅಂದಿನಿಂದ ಎನ್ನಿ ಬೆಸೆಂಟಳ ಜೀವನವು ಸತ್ಯ ಸೇವೆಗಾಗಿಯೇ ಶ್ರದ್ಧಾಬದ್ಧವಾಯಿತು ಮೊದಲು ಅವಳೊಂದು ನಾಸ್ತಿಕ ಪಂಥಕ್ಕೆ ಸೇರಿದಳು ಮತ್ತೆ ಥಿಯೋಸೋಫಿ ಎಂಬ ಸಕಲ ಮತ ಸಾರಗಳನ್ನು ಅನುಮೋದಿಸುವ ಸಂಸ್ಥೆಗೆ ಸೇರಿದಳು ಅವಳು ದೀನ ದಲಿತರ ಆಪ್ತಳಾಗಿ ಅವರ ದುಃಖ ವಿಮೋಚನಗಾಗಿ ರಾತ್ರೆ ಹಗಲು ದುಡಿಯ ವವಳಾದಳು

1893ರಲ್ಲಿ ಶ್ರೀಮತಿ ಬೆಸಂಟರ ಪ್ರಥಮ ಸಲಕ್ಕೆ ಭಾರತಕ್ಕೆ ಬಂದರು ಕ್ರಮೇಣ ಈ ದೇಶವು ಅವರ ಸಾಕ ತಾಯಿನಾಡಾಯಿತು ಹಿಂದೂಮತ ತತ್ವಗಳಿಂದಾಕರ್ಷಿತರಾಗಿ ಅವರು ದೇಶವನ್ನೆಲ್ಲ ಸಂಚರಿಸಿ ಹಿಂದೂತ್ವದ ಕುರಿತು ಅಮೋಘ ಭಾಷಣಗಳನ್ನು ಕೊಟ್ಟರು

ಎರಡು ವರ್ಷಗಳ ನಂತರ ಅವರು ಕಾಶೀ ಪಟ್ಟಣದಲ್ಲಿ ತಮ್ಮ ವಸತಿ ಮಾಡಿಕೊಂಡರು ಅಲ್ಲಿ ಸಂಪೂರ್ಣ ಹಿಂದೂ ಯೋಗಿನಿಯಂತೆ ಜೀವನ ಮಾಡತೊಡಗಿದರು

"ಅವರು ಭಾರತೀಯ ಉಡಪು ತೊಡಪುಗಳನ್ನು ಧರಿಸಿ, ಆಚಾರದಲ್ಲಿ ಹಿಂದೂ ಳಂತೆ ಉಂಡು ತಿಂದು ಪೂಜೆ ಪುರಸ್ಕಾರಗಳನ್ನು ಮಾಡುತ್ತ ಹಿಂದುಗಳಂತೆ ಜೀವಿಸುತ್ತಿದ್ದರು" ಎಂದು ಅವರ ಶಿಷ್ಯರಲ್ಲೊಬ್ಬರಾದ ದಿವಂಗತ ಡಾ ಅರುಂಡೇಲರು ಬರೆದಿದ್ದಾರೆ.

ಅದೇ ಸಮಯಕ್ಕೆ ಬೆಸೆಂಟರು ಪ್ರಗಲ್ಭ ವಿಚಾರಗಳನ್ನೊಳಗೊಂಡ ಹಿಂದೂ ತತ್ವಜ್ಞಾನ ಸಂಬಂಧ ಗ್ರಂಥಗಳನ್ನು ಬರೆದಿದ್ದರು

1898ರಲ್ಲಿ ಅವರು ಸೆಂಟ್ರಲ್ ಹಿಂದೂ ಕೊಲೇಜ್ ಎಂಬ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿದರು 15 ವರ್ಷಗಳ ನಂತರ ಅದನ್ನು ಪಂಡಿತ ಮದನ ಮೋಹನ ಮಾಲವೀಯರವಶಕ್ಕೆ ಬಿಟ್ಟುಕೊಟ್ಟರು ಈಗದು ಜಗದ್ವಿಖ್ಯಾತ ಬೆನಾರಿಸ್ ಹಿಂದೂ ವಿಶ್ವವಿದ್ಯಾಲಯವಾಗಿದೆ ಅವರ ರಾಷ್ಟ್ರೀಯ ಚಟುವಟಿಕೆಯಿಂದಾಗಿ ಥಿಯೋಸೊಫಿಕಲ್ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ದೇಶದ ಅನೇಕ ಭಾಗಗಳಲ್ಲಿ ಅನೇಕ ವಿದ್ಯಾ ಸಂಸ್ಥೆಗಳು ತಲೆಯೆತ್ತಿದುವು

ಹಿಂದೂ ಧರ್ಮವನ್ನು ಪ್ರಚಾರ ಮಾಡುತ್ತ ಬೆಸೆಂಟಮ್ಮನವರು ಭಾರತದಲ್ಲೂ ಪಾಶ್ಚಾತ್ಯ ದೇಶಗಳಲ್ಲೂ ವಿಶಾಲವಾಗಿ ಸಂಚರಿಸಿದರು ಇದೇ ಸಮಯಕ್ಕೆ ಮಹಿಳೆಯರಿಗೆ ಸಮಾನ ಹಕ್ಕು ಬಾಧ್ಯತೆಗಳು ಸಿಗಬೇಕೆಂದೂ ಅವರ ಚಳವಳವಾರಂಭಿಸಿದರು ಅವರ ರಾಜಕೀಯ ಕಾರ್ಯವಾದರೂ ಇತರ ಕಾರ್ಯಗಳಷ್ಟೇ ಪ್ರಖ್ಯಾತಿ ಪಡೆದಿದೆ 1916ರಲ್ಲಿ ಹೋಂರೂಲ್ ಎಂಬ ಸ್ವರಾಜ್ಯ ಚಳವಳಿಯನ್ನು ಹೂಡಿದರು ಎರಡು ವರ್ಷಗಳ ನಂತರ ಭಾರತೀಯ ರಾಷ್ಟ್ರೀಯ ಕೊಂಗ್ರೆಸಿನ ಪ್ರಥಮ ಮಹಿಳಾ ಅಧ್ಯಕ್ಷೆಯರಾಗಿ ಚುನಾಯಿಸಲ್ಪಟ್ಟು ಜನಾಂಗದ ಅಪೂರ್ವ ಮನ್ನಣೆ ಆದರಗಳಿಗೆ ಪಾತ್ರರಾದರು ಆದರೆ ಸಂಪೂರ್ಣ ಅಸಹಕಾರದ ಘೋಷಣೆಯಲ್ಲಿ ಅವರಿಗೂ ಮಹಾತ್ಮ ಗಾಂಧಿಯವರಿಗೂ ಅಭಿಪ್ರಾಯ ಭೇದಗಳಾಗಿ ಅವರು ಕೊಂಗ್ರೆಸನ್ನು ತ್ಯಜಿಸಿ ಪುನಃ ತಮ್ಮ ಮಾನವ ಧರ್ಮದ ಪ್ರಚಾರ ಕಾರ್ಯಕ್ಕೆ ತೆರಳಿದರು

ಬೆಸೆಂಟಮ್ಮನವರು ಅಸಾಧಾರಣ ರಾಜನೀತಿ ತಂತ್ರಜ್ಞತೆಯಿದ್ದ ವ್ಯಕ್ತಿ ಅವರ ಅಪ್ರತಿಮ ಭಾಷಣ ಶಕ್ತಿಯು ಅದೆಂತಹ ತೀಕ್ಷ್ಣ ವಿರೋಧಿಗಳನ್ನು ಪರಿವರ್ತಿಸುವಂತಿತ್ತು ಹೀಗೆ ಹಲವು ಹದಿನೆಂಟು ದಿಶೆಗಳಲ್ಲಿ ಲೋಕೋದ್ಧಾರದ ಕಾರ್ಯವೆಸಗಿ 40 ವರ್ಷಗಳ ಅವಿರತ ಸೇವೆಯಿಂದ ಭಾರತೀಯರ ಕೃತಜ್ಞತೆಗೆ ಪಾತ್ರರಾದ ಎನ್ನಿ ಬೆಸೆಂಟ್ ಮಹಿಳೆ ತನ್ನ 81ನೇ ವಯಸ್ಸಿನಲ್ಲಿ ಮದ್ರಾಸಿನ ಅಡ್ಯಾರದ ತನ್ನ ನಿವಾಸದಲ್ಲಿ ದೈವಾಧೀನರಾದರು ಅವಳ ಜೀವನದ ಉದ್ದೇಶವನ್ನು ಅವಳೇ ಸ್ವತಃ ಹೀಗೆ ವಿವರಿಸಿದ್ದಾಳೆ **"ಅವಳು ಸತ್ಯವನ್ನನುಸರಿಸಲು ಪ್ರಯತ್ನಿಸಿದಳು."**

ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ತುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು



ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು

ಒಕ್ಕಾಟದಲ್ಲಿಯ ಮುಸಲ್ಮಾನರಿಗೆ

(೩ನೇ ಪುಟದಿಂದ)

ದರು ಅಲ್ಲಿಂದ ಹೊರಡುವದರೊಳಗೆ ಗಾಂಧೀಜಿಯನ್ನು ಕೆಲವು ಘೋಷಾಸ್ತ್ರೀಯರಿರುವಲ್ಲಿಗೆ ಕರೆದೊಯ್ಯಲಾಯಿತು ಅವರೆಲ್ಲರೂ ಅವರ ಮೇಲೆಯೇ ಭರವಸೆಯನ್ನಿಟ್ಟಿರುವುದಾಗಿ ಹೇಳಿದರು ಅದಕ್ಕೆ ಉತ್ತರವಾಗಿ ದೇವರ ಮೇಲಲ್ಲದೆ ಅನ್ಯರ ಮೇಲೆ ಅವಲಂಭಿಸಬಾರದೆಂದೂ ತಾವು ತಮ್ಮ ಶಕ್ತಿ ಮೀರಿ ಮಾಡತಕ್ಕದನ್ನು ಮಾಡಲು ಪ್ರಯತ್ನಿಸುವದಾಗಿಯೂ ಅವರಿಗೆ ಗಾಂಧೀಜಿ ಹೇಳಿದರು

"ಕರ್ಮವೀರ ಹರಿಜನ ಪುರವಣಿ"

ಜಿಲ್ಲಾ ಪರಿಚಯ

ನಗರ ಚುನಾವಣೆಗಳು: ಕಳೆದ ತಾ 29ರಂದು ಜರಗಿದ ನಗರ ಸಭೆಯ ಚುನಾವಣೆಗಳಲ್ಲಿ ಸ್ಪರ್ಧೆಯುದ್ಧ ಸುಮಾರು 23 ವಾರ್ಡುಗಳಲ್ಲಿ ಮತದಾನ ನಡೆಯಿತು ಈ ಕೆಳಗಿನ ಮಹನೀಯರು ಜಯಶೀಲರಾಗಿ ಚುನಾಯಿತರಾಗಿರುವರು. ಅವರು ತಮ್ಮ ಎದುರಾಳಿಗಿಂತ ಹೆಚ್ಚಾಗಿ ಪಡೆದ ಓಟುಗಳ ಸಂಖ್ಯೆಯೂ ಅವರ ಹೆಸರಿನೊಡನೆ ಕೊಡಲಾಗಿದೆ ದೇರೆಬೈಲು ಪೌಲ್ ಡಿ'ಸೋಜ (92), ಕೊಡಿಯಾಲಬೈಲು ಡಾ| ನೇಮಿರಾಜ ಆಳ್ವ (82), ಮಣ್ಣಗುಡ್ಡೆ ಮಿಜಾರ ಗೋವಿಂದ ಪೈ (167), ಕದ್ರೋಳಿ ಡಾ| ಬಿ. ಆರ್ ಹೆಗ್ಡೆ (824), ಬಂದರ-ಥುಂಡಿ ಗಣಪತಿ ಕಾಮತ್ (104), ಸೆಂಟ್ರಲ್ ಡಾ| ನಾಗಪ್ಪ ಆಳ್ವ (58), ಡೊಂಗರಕೇರಿ-ಜಿ ಎಸ್ ನಗರ್ಕಾರ್ (40), ಮಾರ್ಕೆಟು-ಎಂ ರಾಘವೇಂದ್ರ ಪೈ (215), ಇವರಲ್ಲದೆ ಶ್ರೀಗಳಾದ ನಾರಾಯಣ ಕಿಲ್ಲೆ, ಕೂರಗಪ್ಪ ರೈ, ಎಸ್ ನರಸಪ್ಪಯ್ಯಾ ಗಂಗಾಧರ ದಾಸ್ ಇವರುಗಳೂ ಚುನಾಯಿತರಾಗಿರುವರು

ಕೆಲವು ವಾರ್ಡುಗಳಲ್ಲಿ ಮತದಾನದ ಸಂಬಂಧ ಅನೇಕ ಲೋಪದೋಷಗಳುತ್ಪನ್ನವಾಗಿರುವುದಾಗಿಯೂ, ಆ ಕುರಿತು ಚುನಾವಣಾ ತೀರ್ಪು ಮಂಡಳಿಕ್ಕೆ ದೂರು ಹೋಗಿರುವುದಾಗಿಯೂ ವದಂತಿಯಿದೆ ಈ ತಿಂಗಳಾಂತ್ಯದೊಳಗೆ ಅಧ್ಯಕ್ಷ ಚುನಾವಣೆಯಾಗಬಹುದೆಂದು ನಿರೀಕ್ಷಿಸಲಾಗಿದೆ

ಜಿಲ್ಲೆಯಲ್ಲಿ ಮದ್ಯಪಾನ ನಿಷೇಧ ಕಾನೂನು ವಿಜೃಂಭಣೆಯಿಂದ ಜಾರಿಗೆ ಬಂತು

ಇದೇ ಕಳೆದ ಅಕ್ಟೋಬರ ಒಂದರಂದು ಮದ್ಯಪಾನ ನಿಷೇಧಕಾಜ್ಞೆಯು ನಮ್ಮ ಜಿಲ್ಲೆಯಲ್ಲಿ ಜಾರಿಗೆ ಬಂತು ಮಂಗಳೂರಲ್ಲಿ ಒಂದೆರಡು ದಿನಗಳ ಮೊದಲೇ ಈ ಕುರಿತು ಭಾಷಣ ಪ್ರಚಾರ, ಮೆರವಣಿಗೆ, ಕೂಟಗಳಾಗಿದ್ದವು ಅಂದ ಸಂಜೆ ಮೈದಾನಿನಲ್ಲಿ ಸಾರ್ವಜನಿಕ ಸಭೆಯು ಏರ್ಪಡಿಸಿದ್ದು ವಿಶಾಲ ಜನಸಂಖ್ಯೆ ನೆರೆದಿತ್ತು ಮದ್ರಾಸ್ ಸರಕಾರದ ಮದ್ಯ ಖಾತೆ ಮಂತ್ರಿ ನಾನ್ನ ಸೀತಾರಾಮ ರೆಡ್ಡಿಯವರು ಆರು ಘಂಟೆ ಸುಮಾರಿಗೆ ನಿಷೇಧ ಸಮಾರಂಭವನ್ನು ಉದ್ಘಾಟಿಸಿ ಜನತಾ ಹಿತದ ಈ ಚಳವಳವನ್ನೆಲ್ಲರೂ ಹೃತ್ಪೂರ್ವಕ ಬೆಂಬಲವಿತ್ತು ಯಶಸ್ವಿ ಮಾಡಬೇಕೆಂದು ವಿನಂತಿಸಿಕೊಂಡರ ಶ್ರೀ ನಾರಾಯಣ ಕಿಲ್ಲೆಯವರು ತುಳುವಿನಲ್ಲಿ ಹೃದಂಗವ ವಾದ ಮನವಿ ಮಾಡಿಕೊಂಡರು ಅಂದು 6 ಗಂಟೆಗೆ ಕ್ರೈಸ್ತ ದೇವಾಲಯಗಳಲ್ಲಿ ಘಂಟಾನಾದ ಪೋಲಿಸ್‌ಮೇನುಗಳ ಸಂಚಾರ, ಹರಿಜನರ, ಶಾಲಾ ಮಕ್ಕಳ ಮೆರವಣಿಗೆಗಳಿದ್ದವು ಶೇಂದಿ ಅಂಗಡಿಗಳೆಲ್ಲವನ್ನು ಮುಂಚಿನ ದಿನವೇ ಸೀಲ್ ಮಾಡಲಾಗಿದ್ದು ಮರುದಿನ ಅವುಗಳನ್ನು ಉಪಹಾರ ಗೃಹಗಳನ್ನಾಗಿ ಪರಿವರ್ತಿಸಲಾಗಿತ್ತು ಮೈದಾನಿನಲ್ಲಿ ಶೇಂದಿ ರಕ್ಕಸನ ಗೊಂಬೆಯನ್ನು ಸುಡಲಾದ ಮೇಲೆ ಕುಡಿತಾಭ್ಯಾಸಿಗಳನ್ನು ಕೆಲ ಧುರೀಣರು ಈ ಫಲಾಹಾರ ಮಂದಿರಗಳಿಗೊಯ್ದು ಉಪಹಾರ ಮಾಡಿಸಿದರು ಜನತೆಯಲ್ಲಿ ಅತ್ಯಂತ ಉತ್ಸಾಹ ಹರ್ಷಾನಂದಗಳು ತೋರುತಿದ್ದವು

ಮಾಂಸದ ಬೆಲೆ ಏರಿಕೆ: ಇದು ವರೆಗೆ ಕುರಿ ಮಾಂಸ ಪೌಂಡಿಗೆ ಇಲ್ಲಿ 14 ಆಣೆಯಂತೆ ಮಾರುತಿದ್ದುದನ್ನು ಜಿಲ್ಲಾ ಕಲೆಕ್ಟರರು ರೂಪಾಯಿಗೇರಿಸಿದ್ದಾರೆ

ಜಿಲ್ಲಾ ಕ್ಷೇಮ ಚಿಂತನ ನಿಧಿ: ಮೇ ಲ್ಕಂಡ ನಿಧಿಗಾಗಿ ತಾ 7, 8 ಮತ್ತು 9ರಲ್ಲಿ ಸ್ಥಳೀಯ ಸೆಂಟ್ರಲ್ ಟಾಕೀಸಿನಲ್ಲಿ "ಬನ್ಸಾರಿ" ಎಂಬ ರಣಜಿತ್ ಫಿಲ್ಮನ್ನು ನಿತ್ಯವೂ ಎರಡು ಬಾರಿ ಪ್ರದರ್ಶಿಸಲಾಗುವುದು ಟಿಕೇಟ್ ದರ ಎಂದಿನಂತೆ, ಆದರ ಉತ್ಪತ್ತಿ ಈ ನಿಧಿಗೆ ಸರ್ವರ ಪ್ರೋತ್ಸಾಹ ಕೋರಲಾಗಿದೆ

ಟೌನ್ ಸಬ್ ಕಮಿಟಿ: ಜಿಲ್ಲಾ ಕ್ಷೇಮ ನಿಧಿಯ ಸಂಬಂಧವಾದ ಒಂದು ನಗರ ಉಪ ಸಮಿತಿ ಈಚೆಗೆ ಸ್ಥಾಪಿಸಲ್ಪಟ್ಟಿದೆ ಡಾ| ಯು. ಪಿ ಮಲ್ಯ ಎಂ ಎಲ್ ಎ ಅವರು ಅಧ್ಯಕ್ಷರು, ಶ್ರೀಗಳಾದ ವಿ ಆರ್ ಕಕ್ಕೇರ, ಮತ್ತು ಎ ಮೂಸಬ್ಬ ಅವರು ಉಪಾಧ್ಯಕ್ಷರು, ಶ್ರೀ ಮೋಹನ ರಾವ್ ಜತೆಕಾರ್ಯದರ್ಶಿಗಳು.

ಮದ್ಯ ನಿಷೇದ ಅಂಕೆ ಸಂಖ್ಯೆ: ಮದ್ಯ ನಿಷೇದ ಕ್ರಮ ಜಾರಿಗೆ ಬರುವುದರಿಂದ ಜಿಲ್ಲೆಯಲ್ಲಿ ಹೆಂಡವಿಳಿಸುವ ಸುಮಾರು 11,117 ಮಂದಿಗೂ, ಅವರ ಸುಮಾರು 55585 ಮಂದಿ ಆಶ್ರಿತರಿಗೂ ಈ ವೃತ್ತಿ ಇಲ್ಲದೆ ತಾಪತ್ರಯ ಒದಗುವುದು (ಇವರನ್ನು ಇತರ ಗೌರವಕ್ಕೆ ಮಡೂರ ಉದ್ಯಮಕ್ಕೆ ಹಚ್ಚುವ ಏರ್ಪಾಡುಗಳಾಗಬಹುದೆಂದು ನಿರೀಕ್ಷೆಯೂ ಇದೆ)

ಈ 11,117 ಮಂದಿಯಲ್ಲಿ ತೆಂಗಿನಿಂದ ಹೆಂಡವಿಳಿಸುವವರು ಸುಮಾರು 5684 ಮಂದಿ ತಾಳೆಯಿಂದ ಇಳಿಸುವವರು ಸುಮಾರು 5488 ಮಂದಿ ಮದ್ಯ ನಿಷೇಧದಿಂದ ಜಿಲ್ಲೆಗೆ 58 ಲಕ್ಷದಷ್ಟು ಎಕ್ಸೈಸ್ ಕಂದಾಯ ನಷ್ಟವಿದೆ ಆದರೂ ಇಲ್ಲಿಯ ಪಾನಾಭ್ಯಾಸಿಗಳೆಲ್ಲರೂ ವರ್ಷಕ್ಕೆ ಖರ್ಚು ಮಾಡುತಿದ್ದ ಸುಮಾರು 2 ಕೋಟಿ ರೂಪಾಯಿಗಳು ಇಲ್ಲೇ ಉಳಿಯುವಂತಾಗುತ್ತದೆ

ರಹಸ್ಯ ಘಾತಕ: ಮಂಗಳೂರು ಬೊಳ್ಳಾ ಸಮೀಪದೊಂದು ಕಾಡಿನಲ್ಲಿ ಒರ್ವ ತರುಣನ ಶವವು ಹೂಳಲ್ಪಟ್ಟದ್ದು ಗಮನಕ್ಕೆ ಬಂದು ಆ ಕಡೆ ಪೋಲಿಸ್ ದಳ ಹೋಗಿ ತನಿಖೆ ನಡೆಸುವುದೆಂದು ತಿಳಿದು ಬರುತ್ತದೆ ತರುಣನ ರುಂಡ ಕಡಿದು ಪ್ರತ್ಯೇಕ ಗುಳಿ ಮಾಡಿ ಹೂಳಲ್ಪಟ್ಟಿತಂತೆ ಇದರಿಂದ ಕೊಲೆಯಾಗಿರಬೇಕೆಂದು ಶಂಕೆಯಾಗಿ ಈ ಸಂಬಂಧ ಇವರ್ರ ದಸ್ತಗಿರಿಯೂ ಆಗಿರವುದಾಗಿ ತಿಳಿದು ಬರುತ್ತದೆ

ಪುಣ್ಯತಿಥಿ. ಇಲ್ಲಿ ಬ್ರಹ್ಮ ಸಮಾಜದಲ್ಲಿ ರಾಜಾರಾಮ ಮೋಹನ ರಾಯರ 118 ನೇ ಪುಣ್ಯತಿಥಿಯು ವಕೀಲ ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಕಳೆದ ತಾ 27ರಂದು ಆಚರಿಸಲ್ಪಟ್ಟಿತು

ಗಾಂಧಿ ಜಯಂತಿ. ಜಿಲ್ಲೆಯಲ್ಲೆಲ್ಲ ತಾ 2ರಂದು ಗಾಂಧಿ ಜಯಂತಿಯು ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು ಮಂಗಳೂರಿನಲ್ಲಿ ಅಂದ ಬೆಳಗ್ಗೆ ಪ್ರಭಾತಫೇರಿ ಧ್ವಜಾರೋಹಣ ನೂಲುವಿಕೆ ಕಾರ್ಯಕ್ರಮಗಳ ಕೇಂದ ಮೈದಾನಿನಲೂ ಹಲವು ಶಿಕ್ಷಣ ಸಂಸ್ಥೆಗಳಲ್ಲೂ ನಡೆದುವು

ಅಂದು ಸಾಯಂಕಾಲ ಸಾರ್ವಜನಿಕ ಮೈದಾನಿನಲ್ಲಿ ಅಭಿನಂದನಾ ಸೂಚಕ ಸಭೆಯೂ ಭಾಷಣಗಳೂ ಇದ್ದವು ಇಷ್ಟು ಒಂದ ತರದ ಗಾಂಧಿ ಜಯಂತಿ ಸಂಬಂಧ ಕಾರ್ಯಕ್ರಮಗಳು ಜರಗುವುವು

ಕ್ರಿಕೆಟ್ ಪಂದ್ಯಾಟ: ಮದ್ರಾಸಿನ ಸುಪ್ರಸಿದ್ಧ ಕ್ರಿಕೆಟ್ ಟೀಮುಗಳಲ್ಲೆರಡಾಗಿರುವ ಸೌಂಡರ್ ಕ್ಲಬ್ ಮತ್ತು ಸ್ಟೇನ್ಲಿ ಮೆಡಿಕೋಸ್ ಈ ಎರಡು ಟೀಮುಗಳು ಇಲ್ಲಿಗೆ ಬಂದಿದ್ದವು ಸೌಂಡರ್ ಕ್ಲಬ್ಬಿನವರು ಮೊದಲ್ಗೊಂಡು ಮೇಚನ್ನು ಇಲ್ಲಿಯ ಎಂ ಸಿ ಸಿ ಯವರೊಡನೆ ಆಡಿ ವಿಜಯಿಗಳಾದರು ನಂತರ ಅವರು ಸಂಯುಕ್ತ ಮಂಗಳೂರಿನವರ ಬಳಿ ಆಡಿದ ಮೇಚು ಡ್ರೊ ಆಯಿತು ಸೌಂಡರಿನಲ್ಲಿದ್ದ ಇಲ್ಲಿಯವರೇ ಆದ ಶ್ರೀ ಚಂದಹಾಸ ಆಳ್ವರವರು ಬೇಟಿಂಗ್ ಬೌಲಿಂಗಳೆರಡರಲ್ಲೂ ಅಸಾಮಾನ್ಯ ಚಾತುರ್ಯ ತೋರಿಸಿದರು ಸ್ಟೇನ್ಲಿ ಮೆಡಿಕಲ್ ಟೀಮಿನವರು ಇಲ್ಲಿಯ ಎಲೋಸಿಯಸ್ ಕೋಲೇಜಿನವರೊಂದಿಗೆ ಆಡಿ ಸೋತರು ಕೋಲೇಜಿನ ಪರವಾಗಿ ಶ್ರೀ ಬಸ್ತಿ ವಾಮನ ಶೆಣೈ ಅವರು ಉತ್ತಮ ಆಟ ಹಿರಿಮೆಯನ್ನು ಪ್ರದರ್ಶಿಸಿದುದು

ಇದಲ್ಲದೆ ಇಲ್ಲಿಯ ಅಂತರ ಶಾಲೆ, ಕೋಲೇಜುಗಳೊಳಗಿನ ಕಪ್ ಮೇಚುಗಳು ಪ್ರಾರಂಭವಾಗಿವೆ

ಹವಾಮಾನ: ಮಂಗಳೂರಲ್ಲಿ ಇಷ್ಟರ ತನಕ ಸುಮಾರು 120 ಇಂಚಿಗೆ ಮಿಕ್ಕಿ ಮಳೆ ಬಿದ್ದಿದೆ ಈಚೆಗೆ ನಾಲ್ಕೈದು ದಿವಸಗಳಿಂದ ಮಳೆಯು ಹೆಚ್ಚು ಕಡಿಮೆ ಕಾಣೆಯಾಗಿದೆ ಬಿಸಿಲುಗಳು ಭರದಿಂದು ಮೆರೆಯುತ್ತವೆ ಅನೇಕ ಕಡೆಗಳಲ್ಲಿನ ಮಾರ್ಗ ರಿಪೇರಿ ಕೆಲಸವು ತೃಪ್ತಿಕರವಾಗಿ ಸಂಪೂರ್ಣಗೊಂಡಿದೆ

ನೇಮಕ: ಇಲ್ಲಿ ಮೊದಲು ಡೆಪ್ಯುಟಿ ರಿಜಿಸ್ಟ್ರಾರರಾಗಿದ್ದ ಶ್ರೀ ಕೆ ಪುರುಷೋತ್ತಮರಾಯರು ಜಿಲ್ಲಾ ಪಾನ ನಿರೋಧ ಆಫೀಸರರಾಗಿ ನೇಮಿಸಲ್ಪಟ್ಟಿದ್ದಾರೆ ಪಾನ ನಿರೋಧಾರಂಭದಿಂದ ನಾಲ್ಕೈದು ಅಮಲು ಪಾನದ 'ಕೇಸು'ಗಳು ಹಿಡಿಯಲಾಗಿವೆಯೆಂದು ವದಂತಿಯಿದೆ

ಮೈಸೂರಿಗೆ ಮಂಗಳೂರು ಸತ್ಯಾಗ್ರಹಿಗಳು: ಇಲ್ಲಿಂದ ಮೈಸೂರಿಗೆ ಸತ್ಯಾಗ್ರಹಿಗಳ ಪಥಕವೊಂದು ಶ್ರೀ ಶಿವಶಂಕರ ಎಂಬವರ ನಾಯಕತ್ವದಲ್ಲಿ ಕಳೆದ ತಿಂಗಳ ತಾ 26 ರಲ್ಲಿ ಹೋಗಿದೆಯೆಂದು ತಿಳಿದು ಬರುತ್ತದೆ

ಪುತ್ತೂರು: ಈ ಮೊದಲು ಇಲ್ಲಿ ತಹಶೀಲ್ದಾರರಾಗಿದ್ದ ಶ್ರೀ ಪಿ ಎಸ್ ತಿಮ್ಮಪ್ಪ ಸೆಟ್ಟಿ ಬಿ ಎ ಅವರು ಕೆಮ್ಮಿಂಜೆ ಗ್ರಾಮದ ಪಟೇಲರೊಬ್ಬರನ್ನು ಅವಮಾನಿತ ಪಡಿಸಿದರ ಕುರಿತು ರೆವಿನ್ಯೂ ಬೋರ್ಡಿನ ಕಡೆಯ ವಿಚಾರಣೆಯಾಗಿ ಪಟೇಲರನ್ನು ಪುನ ಕೆಲಸಕ್ಕೆ ತೆಗೆದುಕೊಳ್ಳಲಾಯಿತು ರೆವಿನ್ಯೂ ಡಿವಿಜನಲ್ ಆಫೀಸರರ ಅನುಮತಿ ಇಲ್ಲದೆ ಕಾರ್ಯಕ್ಕೆ ತೆಗೆದುಕೊಂಡದಕ್ಕೆ ಪಟೇಲರ ಅವಮಾನಿತ ಅವಧಿಯ ಸಂಬಳವನ್ನು ಸದ್ರಿ ತಹಶೀಲ್ದಾರರೇ ತೆರಬೇಕೆಂದಾಗಿದೆ

ಕಾರ್ಕಳ ಇಲ್ಲಿಯ ಎಲ್ಲಾ ಹಿಂದೂ ದೇವ ಮಂದಿರಗಳಿಗೆ ನಿಶ್ಚಿತ [illegible] ಹರಿಜನರಿಗೆ ಪ್ರವೇಶವಿರುವುದಾಗಿ ಸಂಬಂಧಪಟ್ಟ ಅಧಿಕಾರಿಗಳ ನಿಶ್ಚೈಸಿದರಾಗಿ ತಿಳಿದ ಒಂದಿದೆ ಇದೆ ಅಕ್ಟೋಬರ 2 ಗಾಂಧಿ ಜಯಂತಿ ದಿನ ಹರಿಜನರು ಸ್ಥಳೀಯ ಎಲ್ಲಾ ದೇವಳಗಳನ್ನು ಪ್ರವೇಶಿಸುವರೆಂದು ಪ್ರಕಟವಾಗಿತ

ಮೂಡಬಿದ್ರೆ: ಇಲ್ಲಿಯ ಶ್ರೀ ಸರಸ್ವತಿ ಸೇವಾ ಸಂಘದವರು ಈ ಸಲ ದಸರಾ ಸಮಯದಲ್ಲಿ 'ಸಾಹಿತ್ಯೋತ್ಸವ ವನ್ನ ಜರಗಿಸಬೇಕೆಂದು ನಿಶ್ಚೈಸಿರುವರು

ಉಡುಪಿ

ಪಾನ ನಿಷೇಧ ದಿನಾಚರಣೆ: ಪಾನ ನಿರೋಧ ಸಮಾರಂಭದ ಸಭೆಯು ಇದೇ ತಾ 1ರಲ್ಲು ಸ್ಥಳೀಯ ಬೋರ್ಡು ಹೈಸ್ಕೂಲ್ ಹೀಪ್ಪಲ್ ಹಾಲಿನಲ್ಲಿ ಶ್ರೀ ಸದಾನಂದ ಪೈ ತಹಶಿಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಬೆಳಗೆ ಜರಗಿತು ಮಿ ಆರ್ ಫೆರ್ನಾಂಧಿಸ್, ಶ್ರೀಮತಿ ಪಾರ್ವತಿ ಬಾಯಿ, ಶ್ರೀಗಳಾದ ಕೆ ವಿ ಶೆಣೈ ಎಸ್ ಆರ್ ಕೊರಡ್ಕಲ್ ಮತ್ತು ಜನಾಬ್ ಎಮ್ ವಿ. ಉಸ್ಮಾನ್ ಸಾಹೇಬರು ಭಾಷಣ ಮಾಡಿದರು. ರಾಷ್ಟ್ರ ಸೇವಾ ದಳದವರು ಸುಶ್ರಾವ್ಯವಾಗಿ ಕೆಲು ಲಾವಣಿ ಹಾಡಿದರು. ಸಭಾರಂಭದ ಮುನ್ನ ಸರ್ವ ಶಾಲಾಮಕ್ಕಳು ಪತ್ರಿಕರರು ಕೂಡಿಕೊಂಡು ಪ್ರಚಂಡ ಮೆರವಣಿಗೆಯಿತ್ತು ಮಕ್ಕಳಿಗೆ ಲಾಡು ಹಂಚಲಾಯಿತು

ಮೋಸದ ನೋಟು ಮೊಕದ್ದಮೆ: ಉಡುಪಿ ತಾಲೂಕಿನ ಬ್ರಹ್ಮಾವರ, ಕಲ್ಯಾಣಪುರ, ಕುಂದಾಪುರಾದಿಗ್ರಾಮಗಳಿಂದ ಬಂದಿರುವ ಆರೋಪಿ ನೋಟುಗಳಂತ ಆರೋಪಿಸಲ್ಪಟ್ಟ ಮೊಕದ್ದಮೆಗಳು ಸ್ಪೆಶಲ್ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟ್ ರಾ ಸಾ ಕಾರ್ಲ್ ಎಸ್ ಜೋನ್ಸರವರಿಂದ ಮಂಗಳೂರಲ್ಲಿ ವಿಚಾರಣೆಯಾಗುತ್ತಲಿವೆ ಈ ಸಂಬಂಧ 26 ಸಾಕ್ಷಿಗಳ ವಿಚಾರಣೆಯಾದೆ

ಹೊಸ ಪತ್ರಿಕೆಗಳು

ಪ್ರಕಾಶ: ಕನ್ನಡ ಮಾಸ ಪತ್ರಿಕೆ, ಕ್ರೌ 1/8 ಆಕೃತಿಯ 82 ಪುಟಗಳು ಬೆಲೆ 4 ಆಣೆ ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು ಉ ವ್ಯಾಸರಾವ್ ಮುದ್ರಕರು ಮೆಜೆಸ್ಟಿಕ್ ಪ್ರೆಸ್, ಕಾರ್ ಸ್ಟ್ರೀಟ್ ಉಡುಪಿ ನಾಡ ನುಡಿಗಳ ಮೇಲ್ಮೆ ಸಂಘಟನೆಯೇ ಪತ್ರಿಕೆಯ ಉದ್ದೇಶವಾಗಿದೆ ವಿಚಾರಪರ ಲೇಖನ, ಕವಿತೆ, ಸಣ್ಣ ಕತೆ ಚಲಚಿತ್ರ ವಾರ್ತೆಗಳಿಂದ ಕೂಡಿದ ವಿಷಯ ವಿಭಾಗಗಳು ಪ್ರಥಮ ಪ್ರಯತ್ನದಲ್ಲೇ ಆಕರ್ಷಕವಾಗಿ ಸಂಪಾದಿಸಲಾಗಿವೆ ಯಶಸ್ವಿ ಧ್ಯೇಯ ಸಾಧನದ ಲಕ್ಷಣಗಳು ಪತ್ರಿಕೆಯಲ್ಲಿ ಕಾಣಿಸುತ್ತಿವೆ ಕನ್ನಡದ ಅನುಭವಸ್ಥ ಲೇಖನ ವ್ರತ ಸಾಹಿಗಳ ಕೃತಿಗಳ ಈ ಸಂಚಿಕೆಯಲ್ಲಿವೆ ಮುಂದೆಯೂ ಅಖಿಲ ಕರ್ನಾಟಕದ ಪ್ರಮುಖ ಸಾಹಿತಿಗಳ ಒರೆಹಗಳ ಪ್ರಕಟ ಮಾಡುವ ಉತ್ಸಾಹವು ಸಂಪಾದಕ ಮಂಡಳಿಯಲ್ಲಿದೆಯೆಂದು ತೋರುತ್ತದೆ

ಅರುಣ: ಪ್ರಗತಿಶೀಲ ಸಾಹಿತ್ಯ ಪ್ರಚಾರದ ಧ್ಯೇಯಬದ್ಧವಾದ ಕನ್ನಡ ಮಾಸ ಪತ್ರಿಕೆ ಕ್ರೌ 1/8 ಆಕೃತಿಯ 34 ಪುಟಗಳು ಬೆಲೆ 4 ಆಣೆ ಸಂಪಾದಕ ಶಿ ಯು ಎಸ್ ಶ್ರೀನಿವಾಸ ಭಟ್ಟ ಅವರಿಂದ ರಥಬೀದಿಯ ಅರುಣ ಕಾರ್ಯಾಲಯದಲ್ಲಿ ಪ್ರಕಟಿಸಲ್ಪಡುತ್ತದೆ ಅಭಿರುಚಿದಾಯಕವೂ ಸುರಸ ವಿಚಾರಗಳನ್ನೊಳಗೊಂಡವೂ ಆದ ಹಲವು ಲೇಖನಗಳು, ವಿಮರ್ಶೆಗಳ ಕವಿತೆ ಕತೆಗಳು ಈ ಹೊಸ ಪತ್ರಿಕೆಯಲ್ಲಿರುವುದ ಉತ್ತರೋತ್ತರ ಅಭಿವೃದ್ಧಿಯ ಪೂರ್ವ ಸಂಕೇತವಾಗಿವೆ ಪತ್ರಿಕೆ ದ್ವಿವರ್ಣದ ಹೊದಿಕೆಯಿಂದಲೂ ಚಿತ್ರಗಳಿಂದಲೂ ಕೂಡಿರುವುದ ಇದರ ನಿರ್ವಾಹಕರ ಉತ್ಸಾಹವು ಯೋಗ್ಯಪಥದಲ್ಲಿ ಸಾಗುತ್ತಿದೆಯೆಂದು ಸೂಚಿಸುತ್ತವೆ

ಜಯಂತಿ ಗೀತ

(ಮಂಗಲ ಗೀತ)
(ಭಾಗ್ಯದ ಲಕ್ಷ್ಮೀ ಬಾರಮ್ಮ)
ರಾಗ (ಮಧ್ಯಮಾವತಿ ಆದಿತಾಳ)

ಗಾಂಧಿ ದೀರ್ಘಾಯುವಾಗಿರಲಿ ಪ್ರಪಂಚ ಪೂಜ್ಯ ಪ
ಮಾನ್ಯ ದಿವಾನ ಕರಮಚಂದನಾ
ಪುಣ್ಯ ಸತೀಮಣಿ ಲಕ್ಷ್ಮೀಸುತನ
ಧನ್ಯ ಮಹಾತ್ಮಾ ಮೋಹನದಾಸನ
ಪುಣ್ಯ ಧರಣಿಯಲಿ ಪೊರೆಯಲಿ ಶರಣ ೧
ಶ್ರೀ ಕಸ್ತೂರಿ ಸುಮಂಗಲನಾಗಿ
ಲೋಕಮಾನ್ಯ ನೆಹರು ಪ್ರಿಯನಾಗಿ
ಶ್ರೀಕರ ಭಾರತ ಧಾರಿಣಿಗಾಗಿ
ಲೋಕದಿ ಬೆಳಗುವ ಕರ್ಮಯೋಗಿ ೨
ಸತ್ಯಾತ್ರಯ ಬುದ್ಧನವೋಲ್ ನಡೆದು
ಸತ್ಯಾಹಿಂಸಾವ್ರತ ಪಥ ಹಿಡಿದು॥
ಸ್ತುತ್ಯ ಶಾಂತಿ ಸಂದೇಶವನೊಸೆದು
ನಿತ್ಯಾತ್ಮನ 'ಕರೆ' ಗೊಪ್ಪುವ ಸಾಧು ॥೩॥
ಧರೆಯ ಸೇವೆಯಲಿ ತನುವನು ಸವೆಸಿ
ಹರಿಜನ ದೀನಾರ್ತರನುದ್ಧರಿಸಿ
ಭರತ ಭುವಿಗೆ ಸ್ವಾತಂತ್ರ್ಯವ ಕೊಡಿಸಿ।
ಮೆರೆವ ರಾಷ್ಟ್ರಜನಕಾ ರಾಜರ್ಷಿ ೪॥
ಸರ್ವರ ಸಮತಾಭಾವದೆ ಕೂಡಿ।
ಸರ್ವಜಗದ ಕಲ್ಯಾಣವ ನೋಡಿ॥
ಉರ್ವಿಯೊಳವತರಿಸಿದ ಕಲಿಪುರುಷನ।
ಸರ್ವೇಶನು ಸಲಹಲಿ ಶ್ರೀರಮಣ! ॥೫॥

ಮುಂಡೂರು ಲಕ್ಷ್ಮೀನಾರಾಯಣ
ಪುಣಿಂಚತ್ತಾಯ.



ಮಜೂರ ಶ್ರೇಯೋಭಿವೃದ್ಧಿ ಯೋಜನೆ

ರಶ್ಯದ ಅನುಕರಣೀಯ ಆದರ್ಶ

ಕಾರ್ಖಾನೆ ಸ್ಥಳದ ಅನಿವಾರ್ಯ ವಾತಾವರಣವು ಮಜೂರನ ಆರೋಗ್ಯಕ್ಕೆ ಹಾನಿ ತಂದೊಡ್ಡುವುದರೊಂದಿಗೆ ಅಪ್ರತ್ಯಕ್ಷ ರೀತಿಯಲ್ಲಿ ಸೈರುಹಾಜರು, ಕಾರ್ಯ ನ್ಯೂನತೆ, ಮತ್ತಿತರ ಅನೇಕ ಅನಿಷ್ಟಗಳಿಗೂ ಕಾರಣವಾಗುತ್ತದೆ. ಇದರ ಪರಿಣಾಮವಾಗಿ ಮಜೂರನಿಗೆ ಸಿಗುವ ವೇತನದಲ್ಲೂ ಕಡಿತವುಂಟಾಗಿ ಸಹಜವಾಗಿ ಅವನ ಜೀವನ ಖರ್ಚಿಗೂ ತುಟಾಗ್ರ ಇದಿರಾಗಬಹುದು ಇದರಿಂದ ಪುನಃ ಅವನ ಆರೋಗ್ಯಕ್ಕೆ ಧಕ್ಕೆ ತಗಲುವ ಗಂಡಾಂತರವನ್ನು ತಂದೊಡ್ಡುತ್ತದೆ. ಮಾತ್ರವಲ್ಲ ಅವನ ಮನೋವಿಚಾರಗಳು ದುರ್ಬಲ ಭಾವನೆಯಿಂದೊಡಕೂಡಿದ್ದಂತಾಗಿ ಅವನ ವ್ಯಕ್ತಿತ್ವವು ನಶಿಸಿಹೋಗುವಂತಾಗುತ್ತದೆ. ಜಗತ್ತಿನ ಜನಜೀವನದ ನೆಮ್ಮದಿಯು ಮಜೂರನ ನೆಮ್ಮದಿಯ ಮೇಲೆ ಅನಿವಾರ್ಯವಾಗಿ ಅವಲಂಬಿಸಿಕೊಂಡಿರುವುದರಿಂದ ಅವನ ಶ್ರೇಯೋಭಿವೃದ್ಧಿಯ ಪ್ರಯತ್ನಗಳು ಅವಶ್ಯವಾಗಿ ನಡೆಯಬೇಕು.

ಕೆಲವು ಪ್ರಬುದ್ಧ ಮಾಲಕರು ಸದಾ ತಮ್ಮ ಕೆಲಸಗಾರರ ಜೀವನವನ್ನು ಸುಖಸಂತೃಪ್ತಿಮಯವಾಗಿ ಮಾಡುವುದರ ಕಡೆಗೆ ತುಂಬಾ ಸಹಾನುಭೂತಿಯುಳ್ಳವರಾಗಿರುತ್ತಾರೆ. ಇತ್ತೀಚೆಗಿನ ಯಂತ್ರ ಪ್ರಧಾನ ಯುದ್ಧ ಪ್ರಕರಣವು ಮಜೂರರ ಸುಸ್ಥಿತಿಯ ಮೇಲೆ ಜನಾಂಗದ ಭದ್ರತೆಯು ಅದೆಷ್ಟು ಹೊಂದಿಕೊಂಡಿದೆ ಎಂಬ ವಿಷಯವನ್ನು ಸುಸ್ಪಷ್ಟಪಡಿಸಿದೆ ಜನಜೀವನದ ಎಲ್ಲಾ ಸೌಕರ್ಯಗಳಲ್ಲಿ ಉತ್ತಮ ಶರೀರ ಶ್ರಮದ ಶಕ್ತಿಯು ಮಹತ್ವದ್ದೆಂಬ ಸಂಗತಿಯು ನಿರ್ವಿವಾದವಾಗಿದೆ ಕೈಗಾರಿಕೆಯಲ್ಲಿ ಮಾನವೀಯತೆಯ ಅಂಶವು ಅತೀ ಮುಖ್ಯವಾದುದು

ಮಜೂರರಿಗೆ ಉತ್ತಮ ನಿವಾಸ ಸ್ಥಾನಗಳನ್ನೂ, ಆರೋಗ್ಯಕರ ಕೆಲಸ ಕೇಂದ್ರಗಳನ್ನೂ, ಹೆರಿಗೆ ವ್ಯವಸ್ಥೆಯನ್ನೂ, ಶೈಕ್ಷಣಿಕ ಸೌಕರ್ಯವನ್ನೂ ಒದಗಿಸಿಕೊಡುವುದೇ ಮಜೂರ ಶ್ರೇಯಸ್ಸಿನ ಬಹು ಮುಖ್ಯಾಂಗ ಮಜೂರ ಅಭಿವೃದ್ಧಿಯ ಕಾರ್ಯವು ಕೇವಲ ಕಾರ್ಖಾನೆಯ ಮಟ್ಟಿಗೆ ಮಾತ್ರವಲ್ಲ ಅವನ ಹೊರಗಡೆಯ ಜೀವನವನ್ನು ಸುಧಾರಿಸುವುದರಲ್ಲೂ ಅದರ ಕ್ಷೇತ್ರವು ವಿಸರಿಸಿಕೊಂಡಿದೆ ಆರೋಗ್ಯಕರ ಮನೆಗಳ, ಉತ್ತಮ ವೈದ್ಯಕೀಯ ಸಹಾಯ, ಆಕರ್ಷಕವಾದ ಮನರಂಜನೆಯ ಚಟುವಟಿಕೆಗಳು ಇದರ ಮಟ್ಟಿಗೆ ಅತೀ ಪ್ರಾಮುಖ್ಯವಾದವುಗಳು.

ನಮ್ಮ ದೇಶದಲ್ಲಿ ಮಜೂರಿಯು ಇತರ ದೇಶಗಳಿಗಿಂತ ತುಂಬಾ ಕಮ್ಮಿ ಮಟ್ಟದ್ದಾಗಿರುತ್ತದೆ ಕೆಲಸಗಾರರು ತಾವು ನಡೆಯುವ ಕಾಲಗಳಿಗೆ ತೆರುವ ಅಗಾಧ ಪ್ರಮಾಣದ ಬಡ್ಡಿ ದರಗಳು ಅವರ ಆರ್ಥಿಕ ಪರಿಸ್ಥಿತಿಯನ್ನು ಇನ್ನಷ್ಟು ನಿಕೃಷ್ಟ ಸ್ಥಿತಿಗೆ ತರುತ್ತವೆ ಅದೇ ಸಮಯಕ್ಕೆ ನಿರಕ್ಷರತೆಯ ಅಜ್ಞಾನದಿಂದ ಅವರು ಅತೀ ನಿಕೃಷ್ಟ ಜೀವನ ರೀತಿನೀತಿಗಳನ್ನನುಸರಿಸಿ ಇನ್ನಷ್ಟು ಖೇದಕರವಾದ ಅವಸ್ಥಾಂತರಗಳನ್ನು ತಂದೊಡ್ಡುತ್ತವೆ ಸಾಂಕ್ರಾಮಿಕ ರೋಗರುಜೆಗಳು ಅವರೊಳಗೆ ಉತ್ತಮ ಕೊಳ್ಳೆಯನ್ನು ಕಂಡುಹಿಡಿವಂತಾಗುತ್ತದೆ. ಕೆಲವು ಮಾಲಕರು ತಮ್ಮ ಕೆಲಸಗಾರರಿಗೆ ಯೋಗ್ಯ ಶುಶ್ರೂಷಾ ಸೌಕರ್ಯಗಳನ್ನು ಒದಗಿಸುತ್ತಾರೆಂಬ ಸಂಗತಿ ನಿಜವಿದ್ದರೂ ಈ ಸೌಕರ್ಯಗಳು ಸಂಪೂರ್ಣವಾದವುಗಳಲ್ಲ ಅಂದರೆ ಇವು ಇನ್ನಷ್ಟು ಪರಿಪೂರ್ಣವಾಗಬೇಕು. ಅನಾರೋಗ್ಯದ ಕೆಲಸಗಾರನು ಸುಶ್ರಮಗೆ ಯ್ಯಲಾರನೆಂಬ ಸಂಗತಿಯು ಅನೇಕ ಮಾಲಕರಿಗೆ ಇನ್ನೂ ಸ್ಪಷ್ಟ ತಿಳಿದಿಲ್ಲ.

ಇತ್ತೀಚೆಗೆ ಸರಕಾರವು ಕೂಡ ನಿಸ್ಸಂದೇಹವಾಗಿ ಮಜೂರ ಹಿತಾಭಿವೃದ್ಧಿಯ ಚಟುವಟಿಕೆಗಳನ್ನು ಹೆಚ್ಚಿಸಿದೆಯೆಂಬ ಸಂಗತಿಯೂ ನಿಸ್ಸಂದೇಹವಾದುದು ಆದರೆ ಈಗಿನ ಹೆಚ್ಚಿದ ಜನಸಂಖ್ಯೆ ಮತ್ತು ವಿಕಾಸಗೊಂಡ ಪಟ್ಟಣಗಳ ಪ್ರಮಾಣವನ್ನು ಹೋಲಿಸುವಾಗ ಈ ಎಲ್ಲ ಸೌಕರ್ಯಗಳು ಕೇವಲ ಅತ್ಯಲ್ಪವೆಂದು ತೋರುತ್ತವೆ.

ಸರಕಾರಕ್ಕಿಂತ ಮಾಲಕರೇ ಈ ಕಡೆ ಹೆಚ್ಚಿನ ಗಮನ ತೆರಬೇಕಾಗಿದೆ ಸರಕಾರವು ಹೆಚ್ಚೆಂದರೆ ಈ ಕೆಲಸವನ್ನು ದೃಢಗೊಳಿಸಲು ಪ್ರಯತ್ನ ಮಾಡಬಹುದು ಮುಂದುವರಿದ ಪಾಶ್ಚಾತ್ಯ ದೇಶಗಳೊಡನೆ ಹೋಲಿಸುವಾಗ ನಮ್ಮ ದೇಶ ಬಹಳ ಹಿಂದೆ ಬಿದ್ದದ್ದು ಗಮನಕ್ಕೆ ಬಾರದಿರದು ಒಂದೇ ಒಂದು ನಿದರ್ಶನ ಇಂಗ್ಲೆಂಡಿನಲ್ಲಿ 1943 ರಲ್ಲಿ 5759 ಮಜೂರ ಸೌಕರ್ಯ ಅಧಿಕಾರಿಗಳೂ, 3679 ಮಜೂರ ಹಿತಕೇಂದ್ರಗಳೂ ಇದ್ದುವು ರಶ್ಯದಲ್ಲಿ ಕೆಲಸಗಾರರ ವಸತಿಗಳು ಅತ್ಯಂತ ಯೋಗ್ಯ ಪಂತಾವರಣದಲ್ಲಿ ಸೃಜಿಸಲಾಗಿವೆ ಎಲ್ಲಾ ಆಧುನಿಕ ಸೌಕರ್ಯಗಳೊಂದಿಗೆ ರಶ್ಯದ ಹಳ್ಳಿ ಪ್ರದೇಶಗಳ ಸೃಷ್ಟಿ ಸೌಂದರ್ಯವೂ ಒಂದು ಆಕರ್ಷಕ ದೃಶ್ಯವೇ ಆಗುತ್ತದೆ

ಅಲ್ಲಿನ ಕೆಲಸಗಾರನು [illegible] ಮನೋವಿಭ್ರಮಣೆಯ ದೃಶ್ಯನಿರೀಕ್ಷಣವನ್ನು ಎದುರುಗೊಳ್ಳಬೇಕೆಂತಿಲ್ಲ ಹಳ್ಳಿಯಿಂದ ಪಟ್ಟಣಕ್ಕೆ ಬಂದರೂ ಜೀವನ ಪರಿಸ್ಥಿತಿಯನ್ನು ತಕ್ಕಂತೆ ಮಾರ್ಪಡಿಸಿಕೊಳ್ಳಲು ಅವನಿಗೆ ಕಷ್ಟತರವಾಗುವುದಿಲ್ಲ ಅಲ್ಲಿನ ಕಾರ್ಖಾನೆಗಳಲ್ಲಿ ಇನ್ನೂ ಹೆಚ್ಚಿನ ರಕ್ಷಣೆಯ ಸೌಕರ್ಯಗಳಿರುತ್ತವೆ ಅಲ್ಲಿನ ಕಾರ್ಖಾನೆಗಳು ಜೀವನಾರ್ಥ ಸಾಧಕಗಳೂ ಮಾತ್ರವಲ್ಲ ಜೀವನ ಸ್ಫೂರ್ತಿ ಪ್ರಚೋದಕವೂ ಆಗಿವೆ.

ರಶ್ಯನ್ ಕಾರ್ಖಾನೆಗಳಲ್ಲಿ ಮನರಂಜನೆಯ ಏರ್ಪಾಡುಗಳು ಸಾಂಸ್ಕೃತಿಕ ಮಾದರಿಯಲ್ಲೇರ್ಪಡಿಸಲ್ಪಡುತ್ತವೆ ಸಂಗೀತ ಕಛೇರಿಗಳೂ, ನಾಟ್ಯ ಪ್ರದರ್ಶನಗಳೂ ಇವುಗಳಲ್ಲಿ ಹೆಚ್ಚು ಜನಪ್ರಿಯವಾದವುಗಳಲ್ಲಿ ಕೆಲವು ಕಾರ್ಖಾನೆಗಳಿಗೆ ಸಂಬಂಧಿಸಿ ಅಲ್ಲಿ ಚಿತ್ರಕಲೆ, ಸಂಗೀತ, ವಿಜ್ಞಾನ, ನಾಟ್ಯಕಲೆ ಮೊದಲಾದನ್ನು ಕಲಿಸುವ ಏರ್ಪಾಡೂ ಇದೆ ಸಂಕ್ಷೇಪವಾಗಿ ಹೇಳುವುದಾದರೆ ಕಾರ್ಖಾನೆಗಳು ರಶ್ಯದ ಜನಾಂಗ ಸಂಘಟನೆ ಕೇಂದ್ರಗಳೂ ಅದರ ಸಾಮಾಜಿಕ ಮತ್ತು ನೈತಿಕ ಶಕ್ತಿಯ ಉಗಮ ಸ್ಥಾನಗಳೂ ಆಗಿವೆ

ಮೇಲಿನ ವಿವರಣೆಯನ್ನು ನಮ್ಮ ದೇಶದ ಹೆಚ್ಚಿನ ಮಜೂರ ಅಭಿವೃದ್ಧಿ ಕೇಂದ್ರದೊಡನೆ ಸರಿ ಹೋಲಿಸಿದರೆ ಲಜ್ಜಾಸ್ಪದವಾಗಿ ಭಾಸವಾಗುತ್ತದೆ ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟ ಕಾರ್ಖಾನೆಗಳಲ್ಲಲ್ಲದೆ ಇತರ [illegible] ಕಡೆಗಳಲ್ಲಿ [illegible] ಮಜೂರ ಹಿತ [illegible] ಅಧಿಕಾರಿಗಳಲ್ಲಿ ಮಜೂರ ಶ್ರೇಯಸ್ಸನ್ನು ಸರಿಯಾಗಿ [illegible] ಸಮರ್ಥರಾದ ತರಬೇತಿ ಹೊಂದಿದ ಕೆಲಸಗಾರರು [illegible] ಬಹಳ ಕಡಿಮೆ ಇದ್ದಾರೆ

ಈ ಸಂದರ್ಭದಲ್ಲಿ ಮಜೂರ ಶ್ರೇಯಸ್ಸಿನ ಸೌಕರ್ಯಗಳ [illegible] ವ್ಯವಸ್ಥೆಗೊಳಿಸುವವರು ಆ ಕ್ಷೇತ್ರದಲ್ಲಿ ಈಗಾಗಲೇ ಸ್ಥಾಪನೆಗೊಂಡಿರುವ ಇತರ [illegible] ಸಂಸ್ಥೆಗಳೊಡನೆ ಸಂಬಂಧಪಟ್ಟು ಕೆಲಸ ಮಾಡುತ್ತಿದ್ದರೆ [illegible] ಕರ ಇದರಿಂದ ಉದ್ದೇಶದ ಸಂಘಟನೆಗಾಗಿ ಸಂಘಟನೆಯ ಗಟ್ಟಿ [illegible] ತಹ ಸಂಸ್ಥೆಗಳನ್ನೆಲ್ಲ ಒಟ್ಟುಸೇರಿ ಶಾಶ್ವತವಾದೊಂದು ಕೇಂದ್ರ ಸಂಸ್ಥೆಯನ್ನು ಸ್ಥಾಪಿಸುವುದೂ ಅತ್ಯಾವಶ್ಯಕವಿದೆ.

ಕೊನೆಯಲ್ಲಿ ಇನ್ನೊಂದು ಮಾತು. ಎಲ್ಲಾ ಕೆಲಸಗಾರರ ಆವಶ್ಯಕತೆಗಳು ಸರ್ವಸಾಮಾನ್ಯವಾಗಿ ಒಂದೇಯೆನ್ನಬಹುದು. ಮಜೂರ ಶ್ರೇಯೋಭಿವೃದ್ಧಿಯ ಕಾರ್ಯವು ಕೇವಲ ಸಾರ್ವಜನಿಕ ಪ್ರದರ್ಶನಕ್ಕಾಗಿ ಮಾತ್ರ ಕೈಕೊಳ್ಳುವುದಲ್ಲ ನಮ್ಮೆಲ್ಲ ಚಟುವಟಿಕೆಗಳು ಒಂದು ಉತ್ತಮ ಸಮಾಜ ರಚನೆಗಾಗಿ ಕೇಂದ್ರೀಕರಿಸಲ್ಪಡಬೇಕು. ಮಜೂರನ ಶಾರೀರಿಕ ಹಾಗೂ ನೈತಿಕ ಪ್ರಕೃತಿಗಳು ಸುಧಾರಿತವಾಗಬೇಕು ಅಂದರೆ ನಮ್ಮ ರಾಷ್ಟ್ರವು ಚಿರ ನೆಮ್ಮದಿಯಲ್ಲಿ ಬಾಳಲನುಕೂಲವಾಗುತ್ತದೆ

ಉಬ್ಬಸಕ್ಕೆ ರಾಮಬಾಣ

ಪೂರ್ವ ಭೂಮಧ್ಯ ಸಮುದ್ರ ಪ್ರದೇಶದ ನಿವಾಸಿಗಳು ಶತಮಾನಗಳಿಂದ ಉಪಯೋಗಿಸುತ್ತಿದ್ದ ಖೆಲಿನ್ ಎಂಬೊಂದು ಔಷಧಿಯು ಉಬ್ಬಸ ಮತ್ತು ಕೆಲವು ತರದ ಹೃದಯ ವಿಕಾರ ವ್ಯಾಧಿಗಳಿಗೆ ಅತ್ಯುತ್ತಮ ಗುಣಕಾರಿಯೆಂದು [illegible] ನಗರದ ನಾಲ್ವರು ತಜ್ಞ ವೈದ್ಯರು ಬ್ರಿಟಿಷ್ ಮೆಡಿಕಲ್ ಜರ್ನಲಿನಲ್ಲಿ ವರದಿ ಮಾಡಿದ್ದಾರೆ ಈ ಔಷಧಿಯು [illegible] ಗಳಲ್ಲಿ [illegible] ಒಂದು ತರದ [illegible] ಗಳಿಂದ [illegible] ಲ್ಪಡುತ್ತದೆ [illegible] ನಡೆಸಿದಾಗ 45 ಉಬ್ಬಸ ವ್ಯಾಧಿಗ್ರಸ್ತರಲ್ಲಿ 41 ಜನರಿಗೆ ಇದರಿಂದ ಪರಿಹಾರ ದೊರಕಿದ್ದು ಸಿದ್ಧಾಂತವಾಗಿ ಕಂಡುಬಂದಿದೆ

ಕಿಕ್ಕಿರಿದ ಕೋಣೆಯಲ್ಲಿ ಅಸ್ವಸ್ಥವುಂಟಾಗುವುದು ಹೇಗೆ?

ಕಿಕ್ಕಿರಿದ ಕೋಣೆಯಲ್ಲಿನ ಜನರು [illegible]

[illegible]

[illegible] ಜನರು [illegible] ಗಾಳಿಯು [illegible] ಪ್ರಮಾಣ [illegible] ಸಂಗತಿ [illegible] ಅದರೊಳಗಿನ ಜನರ ಮೈಯ [illegible] ಅವರು [illegible] ಸುತ್ತಿನಲ್ಲಿರುವ [illegible] ಮುಖ್ಯ ಕಾರಣಗಳು ಉಷ್ಣತೆ ತೇವವುಳ್ಳ ಗಾಳಿಯು ಹಾನಿಕಾರಕ ಏಕೆಂದರೆ ಅದರಿಂದ ಶರೀರವು ಹೆಚ್ಚಿನ ಉಷ್ಣವನ್ನು ಬಿಡಲಾಗಲಿ, ಬೆವರನ್ನು ತಣಿಸಲಿಕ್ಕಾಗಲಿ ಸಾಧ್ಯವಾಗುವುದಿಲ್ಲ

ಹೆದರಿಕೊಂಡ ಗರ್ಭಿಣಿಯ ಮಗುವಿನ ಮೈಮೇಲೆ ಮಡಚೆಗಳಾಗುವುದು ನಿಜವೆ?

ತಾಯಿಯು ಹೆದರಿಕೆಗೂ ಮಗುವಿನ ದೇಹದ ಮೇಲಿನ ಮಡಚೆ ಕಲೆಗಳಿಗೂ ಯಾವ ಸಂಬಂಧವಿರುವುದಿಲ್ಲ ಇಂತಹ ಶಾರೀರಿಕ ಚಿಹ್ನೆಗಳು ತಾಯಿಯ ಎಲುಬುಗಳು ಹೊಟ್ಟೆಯೊಳಗಿನ ಮಗುವಿನ ಮೇಲೆ ಒತ್ತಿದಂತಾಗಿ ಉಂಟಾಗುವುವು, ಇಲ್ಲವೆ ಅವು ಆನುವಂಶೀಕ ಶಾರೀರಿಕ ಚಿಹ್ನೆಗಳೂ ಆಗಿರುತ್ತವೆ. ಇಲಿಯಿಂದ ಹೆದರಿದ ಗರ್ಭಿಣಿಯ ಮಗುವಿನ ಮೈಮೇಲೆ ಇಲಿಯಾಕಾರದ ಚಿಹ್ನೆ ಇರುತ್ತದೆಂಬುದು ಸುಳ್ಳು. ಕೆಲವು ಕಪ್ಪು ಕಲೆಗಳು ಇಲಿಯ, ಚೇಳಿನ ಇಲ್ಲವೆ ಜೇಡನಾಕೃತಿಯಂತೆ ಸಹಜವಾಗಿರುತ್ತವೆ.

CANARA BANK, LIMITED.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟ ಬ್ರಿಟಿಷ್ ಇಂಡಿಯಾದಲ್ಲಿ ರಾಜಿಸ್ಟರಿಸಿದ್ದು)

(ಸ್ಥಾಪಿತ: ೧೯೦೬)

ಹೆಡ್ ಆಫೀಸು — ಚಾವಟಿಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು — 75 ಎಪೋಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು:—

ಮದರಾಸು ಪ್ರಾಂತ್ಯ: ಮಂಗಳೂರು-ಸಿಟಿ, ಮಂಗಳೂರು-ಬಂದರ್, ಮುಲ್ಕಿ, ಗಂಗೊಳ್ಳಿ, ಕುಂದಾಪುರ, ಉಡುಪಿ, ಕಾರ್ಕಳ, ಬಂಟ್ವಾಳ, ಪುತ್ತೂರು, ಕಾಸರಗೋಡು, ಮದರಾಸು, ಪಯ್ಯನ್ನೂರು, ಕಲ್ಲಿಕೋಟೆ, ಕನ್ನಾನ್ನೂರು, ಕೊಯಮುತ್ತೂರು, ತಿರುಚಿನಾಪಳ್ಳಿ, ತುತುಕುಡಿ, ಸೇಲಂ, ಇರೋಡ್

ಹೈದರಾಬಾದ್‌ಸಂಸ್ಥಾನ: ಸಿಕಂದರಾಬಾದು

ತಿರುವಾಂಕುರು ಸಂಸ್ಥಾನ: ಅಲ್ಲೆಪ್ಪಿ, ಕಿಲೋನ್

ಮಧ್ಯ ಪ್ರಾಂತ್ಯ: ನಾಗಪುರ, ಅಕೋಲಾ, ಅಮರಾವತಿ

ಮುಂಬೈ ಪ್ರಾಂತ್ಯ: ಬೆಳಗಾಂವ್, ಧಾರವಾಡ, ಹುಬ್ಬಳ್ಳಿ, ಶೋಲಾಪುರ, ಪೂಣೆ, ಮುಂಬೈ-ಫೋರ್ಟ್, ಮುಂಬೈ ಮಾಂಡ್ವಿ, ಮುಂಬೈ ಕಾಲ್ಬಾದೇವಿ, ಮುಂಬೈ ಗಿರ್‌ಗಾಂವ್, ಮುಂಬೈ ಕಲ್ಯಾಣ

ಮೈಸೂರು ಸಂಸ್ಥಾನ: ಮೈಸೂರು, ಶಿವಮೊಗ್ಗೆ, ಚಿಕ್ಕಮಗಳೂರು, ಬೆಂಗಳೂರು ಸಿಟಿ, ಅರಸಿಕೆರೆ, ದಾವಣಗೆರೆ

ಸಿಂದ್ ಪ್ರಾಂತ್ಯ: ಕರಾಚಿ

ಕೊಚ್ಚಿ ಸಂಸ್ಥಾನ: ಕೊಚ್ಚಿ, ಎರ್ನಾಕುಲಾಮ್

ವಿದೇಶ ರಾಜಕೀಯ

ಕೆನ್ ಬೆರಾದಲ್ಲಿ (ಆಸ್ಟ್ರೇಲಿಯದ ರಾಜಧಾನಿ) ಸೇರಿದ ಡೋಮಿನಿಯನ್ ಸಮ್ಮೇಳನ ಜಪಾನಿನೊಡನೆ ಮಾಡಿಕೊಳ್ಳಬೇಕಾಗಿರುವ ಶಾಂತಿ ಒಪ್ಪಂದವನ್ನು ಕೂಲಂಕಷವಾಗಿ ಚರ್ಚಿಸಿ "ಶಾಂತಿ ಒಪ್ಪಂದವಾದೊಡನೆ ಜಪಾನಿಗೆ ಆದಷ್ಟು ಸ್ವಾತಂತ್ರ್ಯ ಕೊಡಬೇಕೆಂದೂ ಆದರೆ ಇನ್ನೊಂದು ಸಲ ಅದು ಆಕ್ರಮಣ ಚೈತನ್ಯ ಪಡೆಯದಂತೆ ಅದರ ಶಕ್ತಿಗೊಂದು ಮಿತಿಯನ್ನು ಕಲ್ಪಿಸಬೇಕೆಂದೂ" ನಿರ್ಧರಿಸಲಾಗಿದೆ

卐

ಪಲೇಸ್ಟೀನದಲ್ಲಿ ಯಾವೊಂದು ತರದ ಇತ್ಯರ್ಥವಾಗದಿದ್ದರೆ ಬ್ರಿಟನ್ನು ತನ್ನ ಸೈನ್ಯಗಳನ್ನು ಶೀಘ್ರದಲ್ಲಿ ಅಲ್ಲಿಂದ ಹಿಂತೆಗೆಯುವುದಾಗಿ ಸಾರಿದೆ ಪಲೇಸ್ಟೀನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಅಲ್ಲಿಯವರೇ ಎಲ್ಲಾ ರಾಜಕೀಯ ಬಿಕ್ಕಟ್ಟುಗಳನ್ನು ಬಿಡಿಸುವಂತೆ ಸಂದರ್ಭ ಕಲ್ಪಿಸಿಕೊಡುವುದು ಉತ್ತಮವೆಂಬ ಅಭಿಪ್ರಾಯವು ಬ್ರಿಟಿಷ್ ಸರಕಾರದ್ದಿದೆ

卐

ಇಂಡೋನೇಶಿಯದ ಜನತಾ ಪ್ರತಿನಿಧಿಗಳನ್ನು ಕರೆದು ಶಾಂತಿಯ ಮಾತುಕತೆಗಳನ್ನಾಡಲು ಡಚ್ ಸರಕಾರವು ಸದಾ ಸಿದ್ಧವಿದೆಯೆಂದು ಅಲ್ಲಿನ ಪ್ರಧಾನ ಡಾ। ಲೂಯಿ ಬೀಲರು ತಿಳಿಸುತ್ತಾರೆ

卐

ಈಜಿಪ್ತಿನಿಂದ ಎಲ್ಲಾ ಬ್ರಿಟಿಷರನ್ನು ಹೊರದೊಬ್ಬುವ ಉದ್ದೇಶದಿಂದ "ಮುಸ್ಲಿಂ ಸೋದರ ಸಂಘ"ವೊಂದು ಕೈರೋದಲ್ಲಿ ಕಾರ್ಯಮಗ್ನವಾಗಿದೆ ಜೀವವನ್ನು ಅರ್ಪಿಸಲು ಸಿದ್ಧರಾದ ೬೨ ಸಾವಿರ "ಸತ್ಯಾಗ್ರಹಿ"ಗಳು ಇದರಲ್ಲಿ ಸೇರಿದ್ದಾರೆ ಈಗಾಗಲೇ ಈ ಸಂಘದವರು ಅನೇಕ ಕೈಗಾರಿಕೆ ಸಂಸ್ಥೆಗಳಿಗೆ ಎಚ್ಚರಿಕೆ ಪತ್ರ ಕಳುಹಿಸಿ "ಅವರು ಶೀಘ್ರದಲ್ಲಿ ತಮ್ಮಲ್ಲಿ ನೌಕರಿಗಿರುವ ಬ್ರಿಟಿಷರನ್ನು ಹೊರಹಾಕದಿದ್ದರೆ ಉಗ್ರೋಪಾಯ ಕೈಕೊಳ್ಳುವುದಾಗಿ" ತಿಳಿಸಿದ್ದಾರೆ

卐

ಇನ್ನು ಮೂರು ತಿಂಗಳೊಳಗೆ ಅಮೇರಿಕವು ತನ್ನ ಸೈನ್ಯಗಳನ್ನು ಕೊರಿಯಾದಿಂದ ಹಿಂತೆಗೆದರೆ ರಶ್ಯನ್ ಸೈನ್ಯಗಳು ಅದೇ ರೀತಿ ಹಿಂತೆಗೆಯಲ್ಪಡಲು ಸಿದ್ಧವಿರುವುದಾಗಿ ಓರ್ವ ರಶ್ಯನ್ ಸರಕಾರಿ ವಕ್ತಾರರು ತಿಳಿಸಿದ್ದಾರೆ

卐

ಫ್ರಾನ್ಸಿಗೆ ಅಮೇರಿಕದ ೭೦ ಕೋಟಿ ಡಾಲರ್ ಸಿಗದಿದ್ದರೆ ಅಲ್ಲಿ ಆಹಾರ ಪರಿಸ್ಥಿತಿಯು ಕಠಿಣವಾಗುತ್ತದೆಂದು ನಿರೀಕ್ಷಿಸಲಾಗಿದೆ ಅಮೇರಿಕವು ಮಾರ್ಶಲ್ ಯೋಜನೆಯನ್ನು ನಿಲ್ಲಿಸಬೇಕಾದರೆ ಫ್ರಾನ್ಸಿನಲ್ಲಿ ಬಲಪಕ್ಷೀಯ ಸರಕಾರವು ಸ್ಥಾಪನೆಯಾಗಬೇಕೆಂಬ ಅಭಿಪ್ರಾಯವುಳ್ಳದ್ದಾಗಿದೆ ಅಲ್ಲಿ ಕಮ್ಯೂನಿಸ್ಟ್ ಮತ್ತು ಸೋಶಲಿಸ್ಟರೊಳಗಿನ ಬಿಕ್ಕಟ್ಟು ಇನ್ನಷ್ಟು ವಿಶಾಲವಾಗಿದೆ ರಿಮೇಡಿಯರ ಸರಕಾರ ಬೇಗನೆ ರಾಜಿಕೊಡಬಹುದೆಂದೂ ನಿರೀಕ್ಷಿಸಲ್ಪಟ್ಟಿದೆ

卐

ಇಂಡೋನೇಶಿಯದ ಪ್ರಜಾ ರಾಜ್ಯಕ್ಕೆ ಅಫಘಾನಿಸ್ಥಾನದ ಮನ್ನಣೆ ಕೊಟ್ಟಿರುವುದು.

ಸ್ವದೇಶ ವಾರ್ತೆ

★ ಜುನಾಗಡದ ಪರಿಸ್ಥಿತಿ ಸಮಸ್ಯಾತ್ಮಕವಾಗಿದೆ. ಕಾಥಿಯಾವಾಡದ ಎಲ್ಲಾ ಸಂಸ್ಥಾನಗಳೂ ಭಾರತ ಒಕ್ಕೂಟಕ್ಕೆ ಸೇರಿದ್ದರೂ ಇದೊಂದು ಮಾತ್ರ ಪಾಕಿಸ್ತಾನಕ್ಕೆ ಕೂಡಿದೆ. ಇಲ್ಲಿಯ ಜನಸಂಖ್ಯೆ ಶೇಕಡಾ 81ರಷ್ಟು ಹಿಂದೂ ನವಾನಗರದ ಜಾಮ ಸಾಹೇಬರು 'ಜುನಾಗಡವು ಪಾಕಿಸ್ತಾನದ ಕುಹಕದ ಗೊಂಬೆ' ಎಂದಿರುವರು ಉತ್ತರದಲ್ಲಿ ಸಿಂಧದಿಂದ ದಕ್ಷಿಣದಲ್ಲಿ ಹೈದರಾಬಾದಿನಿಂದ ಗೊಂದಲವೆಬ್ಬಿಸಿ ಭಾರತದ ಐಕ್ಯತೆ ಮುರಿಯುವ ಯೋಜನೆಯೊಂದು ಗುಪ್ತ ಕಾರ್ಯಸಾಧನೆ ಮಾಡುತ್ತಿದೆಯೆಂದೂ ಕಾಥಿಯಾವಾಡದಲ್ಲಿ ಭದ್ರತೆ ಕಾಪಾಡುವುದು ನಮ್ಮ ಕರ್ತವ್ಯವೆಂದೂ ಜಾಮ ಸಾಹೇಬರು ತಮ್ಮ ಸಂಸ್ಥಾನದಲ್ಲಿ ಹಿಂದೂಗಳಿಗೆ ಅನ್ಯಾಯವಾಗುತ್ತಿಲ್ಲವೆಂದು ಜುನಾಗಡದಿಂದವರು ತಿಳಿಸುತ್ತಾರೆ ಆದರೆ ಸಾವಿರಾರು ಹಿಂದೂಗಳು ಭೀತಿಯಿಂದ ಆಸುಪಾಸಿನ ಹಿಂದು ಸಂಸ್ಥಾನಗಳಿಗೆ ಪ್ರತಿದಿನವೆಂಬಂತೆ ಓಡಿಹೋಗುತ್ತಿರುವರು ಅಲ್ಲಿ ನಮ್ಮದು ಕಾಯುವ ಭಾರತ ಸರಕಾರ ನಿರ್ಧರಿಸಿದೆಯಾಗಿ ಸರ್ದಾರ್ ಪಟೇಲರು ತಿಳಿಸಿದ್ದಾರೆ ಜುನಾಗಡದ ಪ್ರಜೆಗಳು ಸ್ವತಂತ್ರ ಸರಕಾರವೊಂದನ್ನು ರಚಿಸಿ ಅದರ ಸೈನ್ಯಗಳು ಜುನಾಗಡದತ್ತ ಸಾಗಿವೆ ಅನೇಕ ಚಿಕ್ಕ ಪುಟ್ಟ ಜಾಗಿರುದಾರರು ಈ ಪ್ರಜಾ ಸರಕಾರಕ್ಕೆ ವಿಧೇಯತೆ ಸಲ್ಲಿಸಿವೆ

★ ಹೈದರಾಬಾದಿನಲ್ಲಿ ಸಮಸಂಖ್ಯೆಯ ಹಿಂದೂ ಮುಸಲ್ಮಾನ ಮಂತ್ರಿಗಳಿರುವ ಮಂತ್ರಿಮಂಡಲವನ್ನು ಸ್ಥಾಪಿಸುವ ಯೋಜನೆಯು ಹೊಸ ಸುಧಾರಣೆಗಳನ್ನು ಸದ್ಯದಲ್ಲೇ ನಿಜಾಮರು ಸಾರಲಿರುವರೆಂದು ಸುದ್ದಿ ಹಬ್ಬಿದೆ ಅಲ್ಲಿ ಜನತಾ ಚಳವಳಿಯೂ ದಬ್ಬಾಳಿಕೆಯೂ ಇನ್ನೂ ಮುಂದುವರಿಯುತ್ತಲೇ ಇದೆ

★ ಮೈಸೂರು ಮಹಾರಾಜರ ಘೋಷಣೆ [illegible] ಪ್ರಜಾ ಸರಕಾರ [illegible] ರನ್ನು ಕಾರಾಗೃಹ ಮುಕ್ತಗೊಳಿಸಿ ಉದಾರ ಹೃದಯದಿಂದ ಮಹಾರಾಜರು ಕೊಚ್ಚಿಯ ಮಹಾರಾಜರಂತೆ ಪ್ರಜೆಗಳೊಡನೆ ನೇರವಾದ ಒಪ್ಪಂದ ಮಾಡಿಕೊಳ್ಳಬೇಕೆಂದು ಮದ್ರಾಸಿನ ಪ್ರಮುಖ ಪತ್ರಿಕೆ 'ಹಿಂದು'ವು ತನ್ನ ಅಗ್ರಲೇಖನದಲ್ಲಿ ತಿಳಿಸಿದೆ

★ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾಕರಿಗೆ ನಿರ್ಭೀತವಾದ ರಕ್ಷಣೆ ಭದ್ರತೆಗಳನ್ನು ಕೊಡಲು ಅದರ ಮಂತ್ರಿಗಳಲ್ಲೋರ್ವರಾದ ಗಜ್ನಾಫರ ಅಲಿಯವರು ಲಾಹೋರಿನಲ್ಲಿ ತಮ್ಮ ಶಿಬಿರವನ್ನು ಸ್ಥಾಪಿಸಿದ್ದಾರೆ ಸಹಕಾರಕ್ಕಾಗಿ ಅವರು ಎಲ್ಲಾ ಕೋಮುಗಳವರನ್ನೂ ವಿನಂತಿಸಿಕೊಂಡಿದ್ದಾರೆ

★ ಸಿಂಧದಲ್ಲಿನ ಹಿಂದೂಗಳು ತಮ್ಮ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಸೊತ್ತುಗಳನ್ನು ಬಿಟ್ಟೋಡುತ್ತಿರುವುದು ಕೇವಲ ಕಾಲ್ಪನಿಕ ಭಯದಿಂದಲ್ಲ ಅವರಲ್ಲಿ ದಿಗಿಲೂ ಉಂಟಾಗಿರುವುದೆಂದು ಆ ಕಡೆ ಪರಿಶೀಲನೆಗಾಗಿ ಹೋದ ಕೃಪಲಾನಿಯವರು ತಿಳಿಸಿದ್ದಾರೆ

★ ಬಿಹಾರ ಜಮೀನ್ದಾರಿಗಳನ್ನು ವಶಪಡಿಸಿಕೊಳ್ಳುವ ಮಸೂದೆಯು ಸ್ವೀಕೃತವಾದ ನಂತರ ಜಮೀನ್ದಾರರಿಗೆ ಪರಿಹಾರ ಕೊಡಲು ಬೇಕಾಗುವ ಹಣದ ಸಂಬಂಧದಲ್ಲಿ ರಿಜರ್ವ್ ಬ್ಯಾಂಕಿನೊಡನೆ ೫೦ ಕೋಟಿ ರೂಪಾಯಿ ಸಾಲ ತೆಗೆದುಕೊಳ್ಳುವ ಬಗ್ಗೆ ಬಿಹಾರ ಸರಕಾರದವರು ಯೋಚಿಸಿದ್ದಾರೆ

★ ಹಿಂದೂಸ್ಥಾನದೊಡನೆ ಯುದ್ಧ ಶಕ್ಯವಿಲ್ಲ ನಾವು ಹಿಂದೂಸ್ಥಾನದೊಡನೆ ಯುದ್ಧ ಮಾಡುವುದಿಲ್ಲವೆಂದು ಪಾಕಿಸ್ಥಾನ ಆಹಾರ ಮಂತ್ರಿಗಳಾದ ಗಜ್ನಾಫರ ಅಲಿಯವರು ಸಿಮ್ಲಾದಲ್ಲಿ ಒಂದು ಕೊಟ್ಟ ಹೇಳಿಕೆಯಲ್ಲಿ ತಿಳಿಸಿದ್ದಾರೆ

★ ಗಾಂಧೀ ಜಯಂತಿಯ ಪ್ರಯುಕ್ತ ಮೈಸೂರು ಸರಕಾರವು ಅಕ್ಟೋಬರ್ 2ನೇ ತಾರೀಕನ್ನು ಸಾರ್ವಜನಿಕ ರಜಾ ದಿನವಾಗಿ ಘೋಷಿಸಿದ್ದಾರೆ ಗಾಂಧೀಜಿಯ ಪರಿಗೆ ಅಷ್ಟ [illegible]

ಇದಕ್ಕಿಂತ ಉತ್ತಮ ಧೋರಣವೆಂದೋರ್ವ ಮುಖಂಡರು ನಿರೂಪಿಸಿದ್ದಾರೆ.

★ ಕಾಶೀ ಮಹಾರಾಜರು ತಮ್ಮ ಸಂಸ್ಥಾನ ಕೊಂಗ್ರೆಸಿನೊಡನೆ ಒಪ್ಪಂದ ಮಾಡಿಕೊಂಡು ಜವಾಬ್ದಾರಿ ಸರಕಾರ ಸ್ಥಾಪಿಸುವುದಾಗಿ ಸಾರಿದ್ದಾರೆ ಪಂಡಿತ್ ಕುಂಜುರು ಅವರ ನೇತೃತ್ವದಲ್ಲಿ ಸದ್ಯದಲ್ಲೇ ಅಲ್ಲಿ ತಾತ್ಕಾಲಿಕ ಸರಕಾರ ಸ್ಥಾಪನೆಯಾಗುವುದು

ಸಿಹಿಸುದ್ದಿ ಸಂಗ್ರಹ

ಬ್ರಿಟನಿನ ಸೌತ್ ಎಂಡ್ ಎಂಬಲ್ಲಿ ಹಿಡಿಯಲ್ಪಟ್ಟ ಓರ್ವ 25 ವರ್ಷದ ತರುಣ ಕಳ್ಳನು ತನ್ನ ದರೋಡೆ ಕಾರ್ಯಕ್ರಮಗಳಿಗಾಗಿ ವಿಮಾನಗಳನ್ನು ಬಾಡಿಗೆಗೆ ಪಡೆದುಕೊಳ್ಳುತಿದ್ದನೆಂದು ವಿಚಾರಣೆಯಲ್ಲಿ ತಿಳಿದು ಬಂದಿದೆ

★

ಕಲ್ಲಿಕೋಟೆಯ ಬಳಿಯ ಕಸಿಚು ಕುಲಾಗಾರಂ ಎಂಬ ಸಮುದ್ರ ತೀರ ಹಳ್ಳಿಯ ಬೆಸ್ತನೊಬ್ಬನು ಬಲೆಗೆ ಹೋಗಿದ್ದವನು ಪರಿಕಾನ್ ಎಂಬ ದೊಡ್ಡ ಮೀನೊಂದರಿಂದ ಹಿಡಿಯಲ್ಪಟ್ಟು ಸಮುದ್ರ ತಳಕ್ಕೊಯ್ಯಲ್ಪಟ್ಟನಂತೆ ಅವನ ಮೃತ ಶರೀರವನ್ನಾದರೂ ಹಿಡಿಯಲು ಮಾಡಿದ ಇತರ ಬೆಸ್ತರ ಯತ್ನಗಳೂ ನಿಷ್ಫಲವಾಗಿವೆ

★

ಜೀವನದ ಮೇಲೆ ಜಿಗುಪ್ಸೆಗೊಂಡ ಕೇಪಟೌನಿನ ಓರ್ವ ಮುದುಕನು ಅದನ್ನು ಅಂತ್ಯಮಾಡಲು ಮೊಳೆಗಳನ್ನು ನುಂಗಿದನು ಕಡೆಗೆ ಜೀವನದಲ್ಲಿ ಪುನಃ ಸಿಹಿ ಕಂಡ ಅವನು ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಕೊಂಡಾಗ ವೈದ್ಯರು ಅವನ ಹೊಟ್ಟೆಯಿಂದ 2 ರಾತ್ತಲ್ ಆಣೆಗಳನ್ನು ತೆಗೆದರು ಈಗವನು ಗುಣಮುಖನಾಗಿದ್ದಾನೆ

★

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಲೋಕ್ಕಳ ಪಟ್ರೋಲ್ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಡುತ್ತಿರುವುದರಿಂದ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಲಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲ್ ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು–ಮುಲ್ಕಿ ಲ್ಯಾಸಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲ್ ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರೆಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರೆಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರಪೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಆಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜೊಯಿಂಟ್ ಮೆನೇಜರ್ಸ್,
ದಿ-ಕೆಂಬ್ಯಾಂಡ್-ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs 15,98,220
Reserves	Rs 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಬದಿನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಢಿವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years avialable to you for arranging Insurance Investment It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:

MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. ~~A specific for the puerperal~~ diseases and also valuable to puerperal women as tonic. increases the vitality and sexual vigour Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ, ~~ಗರ್ಭಕೋಶದ ಪೀಡೆ~~ಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಹಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದು

ಡಿಪೋ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 10—10—1947 [ಸಂಚಿಕೆ 40]

ಅಮೇರಿಕನ್ ಜನರೂ ಅವರ ಜೀವನವೂ

ಭಾರತೀಯ ಸಂಸಾರ ಜೀವನವನ್ನವರು ಮೆಚ್ಚುತ್ತಾರೆ

ತಮ್ಮ ಹನ್ನೊಂದು ವರ್ಷದ ಸಾರ್ವಜನಿಕ ಅಭಿಪ್ರಾಯ ಶೇಖರಿಸುವಿಕೆಯ ಅವಿಶ್ರಾಂತ ಶ್ರಮದಿಂದ ಅಮೇರಿಕದ ಡಾ. ಜೋರ್ಜ್ ಗೆಲಪ್ ಎಂಬವರು ಅಮೇರಿಕನ್ ಜನ ಜೀವನದ ಕುರಿತು ಕೆಲವು ಸ್ವಾರಸ್ಯವಾದ ಸಂಗತಿಗಳನ್ನು ಪ್ರಕಟಿಸಿದ್ದಾರೆ ಅವರು ಕೊಟ್ಟ ಚಿತ್ರೀಕರಣದ ವಿವರ ಹೀಗಿದೆ

ಅಮೇರಿಕನ್ ನಾಗರೀಕರು: ಹತ್ತರಲ್ಲಿ ಆರು ಅಮೇರಿಕನ್ನರು ತಂಬಾಕು ಸೇದುತ್ತಾರೆ, ಮದ್ಯ ಸೇವನ ಮಾಡುತ್ತಾರೆ, ಅದರ ಮೇಲೂ ತಮ್ಮ ಆರೋಗ್ಯ ಚೆನ್ನಾಗಿದೆ ಎಂದೂ ಹೇಳುತ್ತಾರೆ ಶೇಕಡಾ 66 ರಷ್ಟು ಮಂದಿ ಕನ್ನಡಕ ಧರಿಸುವವರೂ ಚಳಿಗಾಲದಲ್ಲಿ ಶೀತ ಬಾಧೆಯಿಂದ ನರಳುವವರೂ ಮತ್ತು ಸ್ವತಂತ್ರ ಉದ್ಯಮಪ್ರಿಯರೂ ಆಗಿದ್ದಾರೆ ಮೂರನೇ ಒಂದಂಶ ಜನಸಂಖ್ಯೆ ಕಾಲು ನೋವಿನಿಂದ ನರಳುತ್ತಿದೆ ಕಾಲಂಶ ಜನರಿಗೆ ಪಿಯಾನೋ ಗೊತ್ತಿದೆ ಐದನೇ ಒಂದಂಶ ಜನರಿಗೆ ಶೈತ್ಯಪೆಟ್ಟಿಗೆಯಿದ್ದು, ಸಿಳ್ಳು ಹಾಕಲಿಕ್ಕೆ ಬರುವುದಿಲ್ಲ ಹತ್ತನೇ ಒಂದಂಶ ಜನರು ಎಡಗೈಯವರು ⅓ ಜನಸಂಖ್ಯೆ ಕಂದು ಕೂದಲಿನದು, ⅓ ಕಂದು ಕಣ್ಣು ಗುಡ್ಡೆಯದು, ¼ ಬಿಳಿ ಕೂದಲಿನದು, ಹೆಂಗಸರಲ್ಲಿ $\frac{1}{6}$ ಅಂಶ ಬಿಳಿ ಕೂದಲಿನವರು ⅓ ಅಂಶ ನೀಲ ಕಣ್ಣಿನವರು. ಶೇಕಡಾ 96 ಮಂದಿ ದೇವರನ್ನು ನಂಬುವವರು, 76ರಷ್ಟು ಮಂದಿ ಮರಣಾನಂತರ ಜೀವನವಿದೆಯೆಂಬ ವಿಶ್ವಾಸವುಳ್ಳವರು, (ಹಿಂದೂಗಳಂತೆ!), ಅರ್ಧಾಂಶ ಮಾತ್ರ ದೇವಾಲಯಕ್ಕೆ ಹೋಗುತ್ತದೆ. ಊಟಕ್ಕೆ ಮೊದಲು ಪ್ರಾರ್ಥನೆ ಮಾಡುವವರು ಶೇಕಡಾ 33 ಮಂದಿ ಮಾತ್ರ

ಗಂಡಸರು: ಅಮೇರಿಕನ್ ಗಂಡಸರು ಸರಾಸರಿ 5¾ ಅಡಿ ಉದ್ದ, 158 ರಾತ್ತಲ್ ಭಾರವಿರುತ್ತಾರೆ ಪ್ರತಿಯೊಬ್ಬನು ಸರಾಸರಿ ತನ್ನ ಕೆಲಸಕ್ಕಾಗಿ 15 ಮಿನಿಟುಗಳಲ್ಲಿ 2 ಮೈಲು ನಡೆದು ಹೋಗುತ್ತಾನೆ ಎಂದಾದರೂ ಜುಗಾರಿಯಾಡುವುದಿದೆ, ಸಾಮಾನ್ಯವಾಗಿ ಎಲ್ಲರೂ ಲಾಭಕ್ಕಿಂತ ನಷ್ಟವನ್ನೇ ಹೆಚ್ಚಾಗಿ ಹೊಂದುತ್ತಾರೆ

ಈ ಗಂಡಸರಲ್ಲಿ ⅙ ಅಂಶ ಕರಿಗೂದಲಿನ ಹೆಂಗಸರನ್ನು ಅಪೇಕ್ಷಿಸುವವರು, $\frac{1}{6}$ ಅಂಶ ಮಾತ್ರ ಬಿಳಿ ಕೂದಲಿನವರನ್ನು ಪ್ರೀತಿಸುತ್ತಾರೆ, ಉಳಿದವರಿಗೆ ಕೆಂಪು ಕೂದಲಿನವರೆಂದರೆ ಇಷ್ಟ ವಿವಾಹವಂತರು ಬ್ರಹ್ಮಚಾರಿಗಳಿಗಿಂತ ಹೆಚ್ಚು ಸುಖವಂತರೆಂದು ಹೆಚ್ಚಿನ ಅಮೇರಿಕನ್ನರ ಅಭಿಪ್ರಾಯವಿದೆ ಹೆಂಡತಿಯಾದವಳಲ್ಲಿ ಸೌಂದರ್ಯಕ್ಕಿಂತಲೂ, ಉತ್ತಮ ಸಂಗಾತಿಶೀಲ ಬುದ್ಧಿಕುಶಲತೆ ಗೃಹಕಾರ್ಯ ಚಾತುರ್ಯಗಳೇ ಹೆಚ್ಚಾಗಿರಬೇಕೆಂದು ಬಹುಸಂಖ್ಯಾಕ ಅಮೇರಿಕನ್ ಪುರುಷರ ದೃಢಾಭಿಪ್ರಾಯ—(ಭಾರತೀಯ ಶಾಸ್ತ್ರಗಳು ಇದೇ ಸ್ತ್ರೀ ಲಕ್ಷಣವನ್ನು ಗೃಹಿಣಿಯಲ್ಲಿರಬೇಕೆಂದು ಸೂಚಿಸಿವೆ!) ಹೆಂಗಸರು ಅತೀ ಹೆಚ್ಚು ಮೆರೆಯುತ್ತಿರುವರೆಂದವರ ಅಭಿಪ್ರಾಯ ಮಹಿಳೆ ಜನಾಂಗದ ಅಧ್ಯಕ್ಷಿಯಾಗುವುದನ್ನವರು ವಿರೋಧಿಸುತ್ತಾರೆ

ಹೆಂಗಸರು: ಅಮೇರಿಕನ್ ಹೆಂಗಸು ಸರಾಸರಿ 5⅓ ಅಡಿ ಎತ್ತರ, 132 ರಾತ್ತಲ್ ಭಾರವುಳ್ಳವಳಾಗಿದ್ದಾಳೆ. ಅವಳು ಈಜುಪ್ರಿಯಳೂ, ವ್ಯಾಯಾಮಪ್ರಿಯಳೂ, ಇಸ್ಪೀಟ್ ಪ್ರೇಮಿಯೂ ಆಗಿರುತ್ತಾಳೆ ತಾನು ತನ್ನ ಆರೋಗ್ಯಕ್ಕೆ ಮಿಕ್ಕಿ ತಿನ್ನುವೆನೆಂದವಳ ಭಾವನೆ ಸಂಸಾರ ನಡೆಸಲು ಗಂಡನೊಡನೆ ತಾನೂ ದುಡಿಯಲಿಚ್ಛಿಸುತ್ತಾಳೆ ಉದ್ಯೋಗ ಮಾಡುವುದಕ್ಕಿಂತ ಮದುವೆಮಾಡಿಕೊಳ್ಳುವುದನ್ನವಳು ಇಷ್ಟಪಡುತ್ತಾಳೆ ಗಂಡನು ಕರುಣಾಳುವೂ, ಮಿತಕೋಪಿಯೂ, ಸಹಾನುಭೂತಿಪರನೂ ಆಗಿರಬೇಕೆಂದವಳ ಅಭಿಪ್ರಾಯ ಸಂಸಾರಕ್ಕೆ ಮೂರೇ ಮಕ್ಕಳು ಸಾಕೆಂದೂ ಗಂಡನೂ ಅವರ ಆರೈಕೆ ಮಾಡಬೇಕೆಂದೂ ನಿರೀಕ್ಷಿಸುವಳು.

ರಾಜಕೀಯ ಬೇಡ

ಸಂಸಾರಗಳು: ಪುರುಷರು 25ರ, ಸ್ತ್ರೀಯರು 21ರ ನಂತರ ಮದುವೆಯಾಗಬೇಕೆಂದು ಅಮೇರಿಕನ್ ಸಾರ್ವಜನಿಕರ ನಂಬಿಕೆ ವಾರಕ್ಕೆ 50 ಡಾಲರಿನ ಕಮ್ಮಿ ಆದಾಯದಲ್ಲಿ ಮದುವೇ ಮಾಡಿಕೊಳ್ಳಲೇ ಬಾರದು ಮದುವೆಗೆ ಮುಂಚೆ ಮಧುವರರು ತಮ್ಮ ಪರಸ್ಪರ ಸ್ವಭಾವ ಶೀಲಗಳನ್ನು ತಿಳಿಕೊಳ್ಳುವುದುತ್ತಮವೆಂದೂ, ಇರ್ವರೂ ಯೋಗ್ಯ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳುವುದುತ್ತಮವೆಂದೂ ತಿಳಕೊಳ್ಳಲಾಗಿದೆ ವಿವಾಹ ವಿಚ್ಛೇದ ಕಾನೂನುಗಳನ್ನು ಸಡಿಲುಮಾಡಬೇಕೆಂದವರು ಇಚ್ಛಿಸುವುದಿಲ್ಲ ಹೈಸ್ಕೂಲುಗಳಲ್ಲಿ ಲೈಂಗಿಕ ಶಿಕ್ಷಣವನ್ನು ಕೊಡಬೇಕೆಂದೂ, ಹೆಚ್ಚಿನ ಸಂಸಾರ ಒಡಕುಗಳು ಹಣ, ಅಸೂಯೆ, ಮತ್ತು ಮಕ್ಕಳಿಂದುತ್ಪನ್ನವಾಗುವಂತಹವೆಂದೂ ಅಮೇರಿಕನ್ ಸಾರ್ವಜನಿಕ ಅಭಿಪ್ರಾಯ ನಾಯಿ ಬೆಕ್ಕುಗಳನ್ನವರು ಸಾಕಲು ಇಷ್ಟಪಡುತ್ತಾರೆ

ಮಕ್ಕಳ ದುರ್ನಡತೆಗೆ ಹೆತ್ತವರೆ ಕಾರಣರೆಂದೂ, ರಾಜಕೀಯಕ್ಕಿಂತ ತಮ್ಮ ಮಕ್ಕಳಿಗೆ ವೈದ್ಯ, ಯಾಂತ್ರ, ವಕಾಲತು, ಕೃಷಿ ಅರ್ಥಕ, ವ್ಯಾಪಾರ ಮತ್ತು ಉಪಾಧ್ಯಾಯ ವೃತ್ತಿಗಳೇ ಯೋಗ್ಯವೆಂದೂ ಅಲ್ಲಿಯ ಸಾರ್ವಜನಿಕ ಅಭಿಪ್ರಾಯ. 10 ಗಂಟೆಗೆ (ಶನಿವಾರ 11ಕ್ಕೆ) ನಿದ್ರೆ, 6¾ಗೆ ಎಚ್ಚರ (ಆದಿತ್ಯವಾರ 8ಕ್ಕೆ) ಇದು ಹೆಚ್ಚಿನವರ ರೂಢಿ ಅವರು ಸಂದರ್ಶಿಸಲು ಇಷ್ಟಪಡುವ ದೇಶಗಳು ಕ್ರಮವಾಗಿ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ರಶ್ಯಾ, ಇಟಲಿ, ಸ್ವಿಟ್ಸರ್ಲೆಂಡ್, ಐಯರ್ಲೆಂಡ್ ಮತ್ತು ನೊರ್ವೆ.

FOR ALL CLASSES OF INSURANCE

LIFE-FIRE-MARINE-ACCIDENT

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA

ASSURANCE CO. LTD.

(H. O. BOMBAY)

A Tata's Promotion & India's Largest Composite Insurance Office.

Total Assets - - - About 9 Crores.

For Agency and other particulars:-

Apply to

K. GANAPATHI Esq., *Branch Manager.* 4/5, First Line Beach, MADRAS.

K. N. NAYAK, Esq., *Secretary, Sub Office* Hampankatta, MANGALORE.

ಭಾವೀ ಭಾರತೀಯ ವಿಶ್ವವಿದ್ಯಾಲಯಗಳ ರೂಪರೇಷೆ

ಶಿಕ್ಷಣವು ಗ್ರಾಮಪ್ರಧಾನವಾಗಿರಬೇಕು

ಗಾಂಧೀ ಪುರಸ್ಕಾರ ಪಡೆದ ಉತ್ಕ್ರಾಂತಿ ಯೋಜನೆ

ಡಾ| ಕಿಣಿಯವರ ಅಮೂಲ್ಯ ಸಲಹೆಗಳು

[ಮೈಸೂರು ಸಂಸ್ಥಾನದಲ್ಲಿಗ ವಿದ್ಯಾಂಗ ಸಲಹೆಗಾರರಾಗಿರುವ, ಮಂಗಳೂರಿನ, ಡಾ| ಕೆ. ಜಿ. ಕಿಣಿ, ಎಂ.ಎ.,ಪಿಎಚ್.ಡಿ., ಅವರು ಕಳೆದ ವರ್ಷ 'ವಿಶ್ವವಿದ್ಯಾಲಯ ಶಿಕ್ಷಣದ ಗ್ರಾಮೀಕರಣ' ಎಂಬೊಂದು ವಿಚಾರಪೂರ್ಣ ಲೇಖನವನ್ನು ಮಹಾತ್ಮಾಜಿಯವರಿಗೆ ಕಳುಹಿಸಿದ್ದು 1946ರ ಅಕ್ಟೋಬರ 6ರ ಹರಿಜನ ಪತ್ರಿಕೆಯಲ್ಲಿದ್ದು ಪ್ರಕಟವಾಯಿತು. ತಮ್ಮ ವಿಚಾರಗಳ ಸವಿಸ್ತಾರ ಯೋಜನೆಯೊಂದನ್ನು ಸಿದ್ಧಪಡಿಸಿರೆಂದು ಮಹಾತ್ಮರು ಅವರಿಗೆ ಸೂಚಿಸಿದ್ದರು. ಈಗ ಡಾ| ಕಿಣಿಯವರು ಅಂತಹದೊಂದು ಯೋಜನೆಯನ್ನು ಸಿದ್ಧಗೊಳಿಸಿರುವರು. ಅದರ ಸ್ಥೂಲರೂಪರೇಷೆಗಳು ಈ ಕೆಳಗಿನಂತಿವೆ.]

ಹಳ್ಳಿಜನತೆಯ ದೃಷ್ಟಿಯಿಂದ ಇಂದಿನ ವಿಶ್ವವಿದ್ಯಾಲಯ ಶಿಕ್ಷಣವು ನಿಷ್ಪ್ರಯೋಜಕವಾಗಿದೆ. ಅದು ಕೇವಲ ಪಟ್ಟಣ ಮತ್ತು ನಗರವಾಸಿಗಳ ಉದ್ಯೋಗ ವ್ಯವಹಾರಗಳ ಆವಶ್ಯಕತೆಯನ್ನು ಪೂರೈಸುವುದರಿಂದ ಪದವೀಧರರು ನಗರಗಳಲ್ಲೇ ತೂಗಾಡುವಂತಾಗಿದೆ. ಇದರಿಂದ ಆಹಾರ, ಬಟ್ಟೆ ಮತ್ತು ಕಟ್ಟಡ ನಿರ್ಮಾಣ ವಸ್ತುಗಳ ಕೊರತೆ ಹೆಚ್ಚಲು ಕಾರಣವಾಗಿದೆ

ಇತ್ತೀಚೆಗಿನ ತನಕ ನಾವು ಪರದೇಶಗಳಲ್ಲಿ ತಯಾರಾದ ವಸ್ತುಗಳನೇಕವನ್ನು 'ತರಿಸುತ್ತಿದ್ದೆವು, ಈಗ ವಿಪರೀತ ಬೆಲೆಕೊಟ್ಟು ಆಹಾರವಸ್ತುಗಳನ್ನು ಪರದೇಶಗಳಿಂದಲೇ ತರಿಸುವ ವಿಧಿ ಪ್ರಾಪ್ತವಾಗಿದೆ. ಇದೇ ಪರಿಸ್ಥಿತಿ ಇನ್ನು ಕೆಲವು ವರ್ಷಗಳ ತನಕ ಮುಂದರಿದರೆ ನಮ್ಮ ಜನಾಂಗವು ಖಂಡಿತ ದೀವಾಳಿಯಾಗುವುದು ಮಾತ್ರವಲ್ಲ ನಮ್ಮ ಜನಾಂಗದ ಸ್ವಾಭಿಮಾನವೂ ಕುಂದುವುದು

ನಮ್ಮ ಇಂದಿನ ಪದವೀಧರರು ಕೇವಲ ವಿಚಾರ ಸಮರ್ಥರಿರುವರು. ಆದರೆ ಅವರು ಕಾರ್ಯ ಸಮರ್ಥರೂ ಆಗಬೇಕು ಇದಕ್ಕಾಗಿ 'ನಮ್ಮ ಉಚ್ಚ ಶಿಕ್ಷಣ ಕೇಂದ್ರಗಳು ಗ್ರಾಮಪ್ರದೇಶಗಳಲ್ಲಿ ಸ್ಥಳಾಂತರಿಸಲ್ಪಡಬೇಕು ಅವುಗಳಲ್ಲಿ ತರಬೇತು ಹೊಂದುವವರು ಹಳ್ಳಿ ಉದ್ಯಮ, ಕೈಗಾರಿಕೆಗಳ ಸಂಪೂರ್ಣವೂ ಪರಿಪೂರ್ಣವೂ ಆದ ಜ್ಞಾನಾನುಭವವುಳ್ಳವರಾಗಬೇಕು ತಮ್ಮ ಜೀವನವೆಲ್ಲವನ್ನವರು ಗುಡಿಕೈಗಾರಿಕೆಗಳ ಅಭಿವೃದ್ಧಿಗಾಗಿ ಶ್ರಮಿಸುವಂತಹರಾಗಬೇಕು. ಹೀಗಾದರೆ ಮಾತ್ರ ಅವರು ವಿಚಾರ ಮತ್ತು ಕಾರ್ಯಕ್ಷೇತ್ರಗಳ ಧುರೀಣರಾಗಬಲ್ಲರು ಕೇವಲ ಹತ್ತು ವರ್ಷಗಳಲ್ಲಿ ನಮ್ಮ ಜನಾಂಗ ಜೀವನದಲ್ಲಿ ಶ್ರೇಯಸ್ಕರವಾದ ಕ್ರಾಂತಿಯನ್ನುಂಟುಮಾಡಬಹುದು

ಉಚ್ಚ ಶಿಕ್ಷಣಕ್ಕಾಗಿ

ಹೈಸ್ಕೂಲುಗಳು ಅತೀ ಹೆಚ್ಚು ಸಂಖ್ಯೆಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ಸ್ಥಾಪಿಸಲ್ಪಡಬೇಕು. ಇಲ್ಲಿಯ ಶಿಕ್ಷಣ ಮುಗಿದಾಕ್ಷಣ ವಿದ್ಯಾರ್ಥಿಗಳಿಗೆ ಗ್ರಾಮವಿಶ್ವವಿದ್ಯಾಲಯಗಳಲ್ಲಿ ಸಂದರ್ಭಗಳನ್ನು ಒದಗಿಸಬೇಕು ಕೃಷಿಗಾರಿಕೆ, ತೋಟಗಾರಿಕೆ, ಕುರಿಸಾಕುವಿಕೆ, ಹಳ್ಳಿ ನೇಯುವಿಕೆ, ಮೊದಲಾದ ವಿಷಯಗಳನ್ನವರು ಐಚ್ಛಿಕ (optional) ವಿಷಯವಾಗಿ ತೆಗೆದುಕೊಂಡು ವಿಸ್ತಾರ ಅಭ್ಯಾಸ ಮಾಡಬೇಕು. ಅಂದರೆ ವಿಜ್ಞಾನ, ಗ್ರಾಮಸಮಾಜ ಶಾಸ್ತ್ರ, ಗ್ರಾಮ ಆರ್ಥಿಕ ಶಾಸ್ತ್ರ, ಗ್ರಾಮ ಶಿಕ್ಷಣ ಶಾಸ್ತ್ರ ಈ ವಿಷಯಗಳಲ್ಲಿ ಅವರು ಪದವಿ ಪಡೆಯಲು ಯೋಗ್ಯರಾಗುವರು. ಇಂಟರ್‌ಮಿಡಿಯಟ್-ಅಂದರೆ ಕೋಲೇಜ್ ಶಿಕ್ಷಣದ ಮೊದಲೆರಡು ವರ್ಷಗಳ-ಅವಧಿಯಲ್ಲಿ ಅವರು ತಮ್ಮ ಶಿಕ್ಷಣ ಸಮಯದ ಮೂರನೇ ಎರಡಂಶ ಕಾಲವನ್ನು ಈ ವಿಷಯಗಳಿಗೂ ಉಳಿದ ಸಮಯವನ್ನು ಭಾಷಾ ಸಾಹಿತ್ಯಾಭ್ಯಾಸಗಳಿಗೂ ವ್ಯಯಿಸಬಹುದು. ಭಾಷೆಗಳಲ್ಲಿ ಪ್ರಾದೇಶಿಕ, ಹಿಂದೂಸ್ಥಾನಿ ಮತ್ತು ಇಂಗ್ಲಿಷನ್ನು ಕಲಿಯಬೇಕು ಉನ್ನತ ತರಗತಿಗೆ ತಲುಪಿದೊಡನೆ ಸಂಪೂರ್ಣ ಸಮಯವನ್ನವರು, ವೈಜ್ಞಾನಿಕ, ಯಾಂತ್ರಿಕ, ಮತ್ತು ಕಲಾಭ್ಯಾಸ ಸಂಬಂಧ ವಿಷಯಗಳ ಅಭ್ಯಾಸ ಮತ್ತು ಪರಿಶೋಧನೆಗಳಿಗಾಗಿ ವ್ಯಯಿಸುವಂತಾಗಬೇಕು

ಉಪಕರಣಗಳನ್ನು ಮಾಡುವ ಮತ್ತು ಉಪಯೋಗಿಸಿಕೊಳ್ಳುವ ಗ್ರಾಮ ಕಸಬು ಕೈಗಾರಿಕೆಗಳಿಗೆ ಬೇಕಾಗುವ ಯಂತ್ರ ನಿರ್ಮಾಣ ಮಾಡುವ ತರಬೇತಿಯ ಕಡೆ ಹೆಚ್ಚಿನ ಗಮನ ತೆರಬೇಕು ಸಾಧ್ಯವಿದ್ದಷ್ಟು ಮಟ್ಟಿಗೆಲ್ಲ ಈ ಯಂತ್ರೋಪಕರಣಗಳನ್ನೆಲ್ಲಾ ಆಯಾ ಪ್ರದೇಶದಲ್ಲೇ ತಯಾರಿಸಲು ಪ್ರಯತ್ನಗಳಾಗಬೇಕು

ವಿಶ್ವವಿದ್ಯಾಲಯಗಳ ಕೊರತೆ

ನಮ್ಮ ದೇಶದಲ್ಲಿನ ಪ್ರತಿ ಹತ್ತು ಲಕ್ಷ ಜನಸಂಖ್ಯೆಯಲ್ಲಿ 23 ಸಾವಿರ ಮಂದಿ ತೀಕ್ಷ್ಣ ಬುದ್ಧಿಶಕ್ತಿಯುಳ್ಳವರೆಂದೂ, ಮತ್ತೆ ಅಷ್ಟೇ ಸಂಖ್ಯೆಯವರು ಉಚ್ಚಶಿಕ್ಷಣದಿಂದ ಉತ್ತಮ ಅನುಕೂಲ ಪಡೆಯಲು ಸಮರ್ಥರಿರುವರೆಂದೂ ಲೆಕ್ಕ ಹಾಕಲಾಗಿದೆ ಇವರಲ್ಲಿ 5000 ಮಂದಿ- ವರ್ಷಂಪ್ರತಿ ವಿಶ್ವವಿದ್ಯಾಲಯಗಳಲ್ಲಿರುತ್ತಾರೆ 10 ಲಕ್ಷ ಜನಸಂಖ್ಯೆಗೆ ಒಂದು ಗ್ರಾಮವಿಶ್ವವಿದ್ಯಾಲಯವು ಅತೀ ಹೆಚ್ಚಿನ ಖರ್ಚಿನದೆಂದು ಹೇಳಲಾಗುವುದಿಲ್ಲ ಸಂಯುಕ್ತ ಅಮೇರಿಕದಲ್ಲಿ ಪ್ರತಿ 75 ಸಾವಿರ ಜನಸಂಖ್ಯೆಗೆ ಒಂದೊಂದರಂತೆ ವಿಶ್ವವಿದ್ಯಾಲಯ ಇಲ್ಲವೆ ಅಂತಹ ಸಮಾನ ಮಟ್ಟದ ಉಚ್ಚ ಶಿಕ್ಷಣ ಸಂಸ್ಥೆಯಿದೆ ಕೆನಡಾದಲ್ಲಿ ಪ್ರತಿ ಐದು ಲಕ್ಷಕ್ಕೊಂದು ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣಾಲಯವಿದೆ 2½ ಲಕ್ಷಕ್ಕೊಂದು ವಿಶ್ವವಿದ್ಯಾಲಯ ರಷ್ಯದಲ್ಲಿದೆ ಭಾರತದಲ್ಲಿ ಮಾತ್ರ 200 ಲಕ್ಷಕ್ಕೊಂದು ವಿಶ್ವವಿದ್ಯಾಲಯವಿದೆಯೆಂಬುದು ಅತೀ ಕೌತುಕದ ಸಂಗತಿ ಆದುದರಿಂದಲೇ ಮೇಲೆ ಹೇಳಿದ ದೇಶಗಳ ಜನರು ಆರ್ಥಿಕವಾಗಿ ತುಂಬಾ ಅಭಿವೃದ್ಧಿಯಲ್ಲಿದ್ದು ನಮ್ಮ ದೇಶದ ಜನರು ಅತೀ ನಿಕೃಷ್ಟಾವಸ್ಥೆಯಲ್ಲಿರಲು ಕಾರಣ

ಸರಕಾರವು ವೆಚ್ಚಮಾಡಬೇಕು

ಗ್ರಾಮ ವಿಶ್ವವಿದ್ಯಾಲಯಗಳು ವಿಶೇಷ ತರಗತಿಗಳನ್ನು ನಡೆಸಿ ಪ್ರೌಢವಯಸ್ಕರ (15ರಿಂದ 90 ವಯಸ್ಸಿನವರ) ಶಿಕ್ಷಣವನ್ನು ಕೈಕೊಳ್ಳಬೇಕು. ಈ ಶಿಕ್ಷಣವು ವಯಸ್ಕರ ಅಭಿರುಚಿ ಮತ್ತು ಬಿಡು ಸಮಯಕ್ಕನುಗುಣವಾಗಿ ಧರ್ಮಾರ್ಥವಾಗಿ ಕೊಡಬೇಕು. ಈ ಹಳ್ಳಿ ವಿಶ್ವವಿದ್ಯಾಲಯಗಳ ವೆಚ್ಚವನ್ನು ಸರಕಾರವು ವಹಿಸಬೇಕು ಹೀಗೆ ವ್ಯಯಿಸಿದ ಹಣವು ದೇಶದಲ್ಲಿ ಮುಂದೆ ಬರಬಹುದಾದ ಕ್ಷಾಮ, ರೋಗರುಜಿನಗಳ ಪ್ರತಿಬಂಧಕವಾಗೆಂದು ತಿಳಕೊಳ್ಳಬೇಕು ಹಳ್ಳಿ ಜೀವನಾಭಿವೃದ್ಧಿಯ ಎಲ್ಲಾ ಕಾರ್ಯಗಳಲ್ಲೂ ಹಳ್ಳಿ ವಿಶ್ವವಿದ್ಯಾಲಯಗಳ ಪದವೀಧರರನ್ನೇ ನೇಮಿಸಬೇಕು ಹಾಗಾದರೆ ಮಾತ್ರ ಹಳ್ಳಿಗಳಲ್ಲಿ ವಾಸಮಾಡುವ ಶೇಕಡಾ 85ರಷ್ಟು ನಮ್ಮ ಜನತೆ ಅಭಿವೃದ್ಧಿ ಹೊಂದುವುದು

ಉದ್ದೇಶ

ಹಳ್ಳಿ ವಿಶ್ವವಿದ್ಯಾಲಯಗಳ ಉದ್ದೇಶಗಳು ಹೀಗಿವೆ

1. ಬುದ್ಧಿಶಕ್ತಿಯುಳ್ಳವರೂ, ಸಮರ್ಥರೂ ಆದ ಹಳ್ಳಿ ಯುವಕರೂ ವಯಸ್ಕರೂ ತಮ್ಮ ಅನ್ನ ವಾಸಸ್ಥಾನ ವಾತಾವರಣದ ಸಬು ಕೈಗಾರಿಕೆಯಲ್ಲಿ ಶಾಸ್ತ್ರೀಯವೂ ಸುವ್ಯವಸ್ಥಿತವೂ ಆದ ಜ್ಞಾನಾನುಭವವನ್ನು ಪಡೆಯುವಂತೆಯೂ, ಅವುಗಳಲ್ಲಿ ಪರಿಶೋಧನೆ ನಡೆಸುವಂತೆಯೂ, ತನ್ಮೂಲಕ ಹಳ್ಳಿ ಜನರ ಜ್ಞಾನ ತಿಳುವಳಿಕೆಯನ್ನು ಅಭಿವೃದ್ಧಿ ಪಡಿಸುವರು.

2. ಹಳ್ಳಿ ಸಂಸ್ಕೃತಿಯಲ್ಲಿ ಅತೀ ಶ್ರೇಷ್ಠತೆಯ ವಿಷಯಗಳೆಲ್ಲವನ್ನು ಅಭಿವೃದ್ಧಿಗೊಳಿಸಿ ಹಳ್ಳಿಗರ ಶಾರೀರಿಕ, ಬೌದ್ಧಿಕ, ನೈತಿಕ, ಸಾಮಾಜಿಕ ಮತ್ತು ಕಲಾತ್ಮಕ ಜೀವನವನ್ನು ಉತ್ತಮಗೊಳಿಸುವುದು.

3. ಧೃಢತೆ, ಐಕ್ಯತೆ ಮತ್ತು ಸುವ್ಯವಸ್ಥೆಯಿಂದ ಹಳ್ಳಿ ಜನತೆಯು ತಮ್ಮ ಶ್ರೇಯೋಭಿವೃದ್ಧಿಯನ್ನು ಮಾಡಿಕೊಂಡು ಉತ್ತಮ ಗ್ರಾಮ ನಾಗರೀಕತೆಯನ್ನು ಪ್ರಗತಿಗೊಳಿಸುವುದು

4 ವಯಸ್ಕರ ಶಿಕ್ಷಣದ ಒಂದು ವ್ಯವಸ್ಥೆಯ ಮೂಲಕ ಅವರ ಜೀವನಾಂತ್ಯದ ತನಕವೂ ಅವರಿಗೆ ತಮ್ಮ ಆಪ್ತವಾತಾವರಣದ ಚಟುವಟಿಕೆಯಲ್ಲಿ ಆಸಕ್ತಿ ಹುಟ್ಟುವಂತೆ ಮಾಡುವುದ

(ಈ ಯೋಜನೆಯ ಸವಿಸ್ತಾರ ಪರಿಚಯಕ್ಕಾಗಿ ಡಾ ಕಿಣಿಯವರಿಗೇ ಬರಕೊಳ್ಳಬಹುದು ಸ ಸ್ವ)

ಸಿಹಿಸುದ್ದಿ ಸಂಗ್ರಹ

ಗಂಜಾಮ್ ಜಿಲ್ಲೆಯ ಮಿಗುಡಾ ಎಂಬಲ್ಲಿ ಓರ್ವ ಗೌಳಿಗಿತ್ತಿಗೆ ಹುಟ್ಟಿದ ಮಗುವಿಗೆ ಹಣೆಯಲ್ಲಿ ಆರು ಕಣ್ಣುಗಳಿದ್ದವು ಆದರೆ ಒಂದಕ್ಕೂ ಹುಬ್ಬುಗಳಿರಲಿಲ್ಲ ಅದರ ಮೂಗು ಕೂಡಾ ಅತಿ ದೊಡ್ಡದಾಗಿತ್ತು ಮಗುವು 5 ದಿವಸಗಳ ತನಕ ಜೀವಂತವಿತ್ತು

★

ಬರುವ ಸಲದ ಅಮೇರಿಕನ್ ಶಾಸನ ಸಭಾ ಚುನಾವಣೆಗೆ ಜಿಂಜರ್ ರೋಜರ್ಸ್ ಎಂಬ ಚಲಚಿತ್ರ ನಟಿಯು ಓರ್ವ ಉಮೇದುವಾರಳಾಗಿ ನಿಲ್ಲುವಳು

★

2 ತಿಂಗಳ ಹಿಂದೆ ಹೊರ ಮೊಂಗೋಲಿಯದ ಓರ್ವ ಚೀನಿ ತಾಯಿಗೆ ಒಂದೇ ಸಲ 8 ಮಕ್ಕಳು ಹುಟ್ಟಿವೆ 7 ಗಂಡು 1 ಹೆಣ್ಣು ಅವುಗಳಲ್ಲಿ ಒಂದು ತೀರಿ ಹೋಗಿದ್ದು ಉಳಿದೇಳು ಆರೋಗ್ಯವಂತನಾಗಿ ಬೆಳೆಯುತ್ತವೆ

★

ಕಾರ್ಖಾನೆಯಲ್ಲಿ ಕೆಲಸ ಮಾಡುವ ಸ್ತ್ರೀಯರು ಹೆಚ್ಚೆಚ್ಚು ಶೃಂಗಾರ ಶೈಲಿಯನ್ನು ಪ್ರದರ್ಶಿಸಿದರೆ ಕೆಲಸಗಾರರು ಅತ್ಯಂತ ಆನಂದಾಯಕರಾಗಿರುವರೆಂಬುದನ್ನು ಕಂಡುಹಿಡಿದು ಲಿಂಕೋಶಾಯರಿನ ಒಂದು ಗಿರಣಿಯವರು ತಮ್ಮ ಆರು ಸ್ತ್ರೀಯರನ್ನು ವಿಶೇಷ ವೇಷ ಭೂಷಣಗಳ ಮಾದರಿ ಕಲಿತು ತರಬೇತು ಹೊಂದಿ ಬರಲು ಲಂಡನಿಗೆ ಕಳುಹಿಸಿದ್ದಾರೆ

★

ಮದ್ಯಪಾನ ಕುಡಿತದಲ್ಲಿ ನಿರುತ್ಸಾಹಗೊಳಿಸಲು ಬಿಹಾರಿನ ಅಬಕಾರಿ ಇಲಾಖೆ ಮಂತ್ರಿ ಗಿರಿಧರಲಾಲರು ಒಂದು ಹೊಸ ಸೂಚನೆಯನ್ನು ಅಲ್ಲಿನ ಮಡಿವಾಳ ಸಂಘದ ಸಭೆಯೊಂದರಲ್ಲಿ ತಿಳಿಸಿದಾಗ, ಆ ಸಂಘದವರು ತಮ್ಮ ಕಸುಬಿನವರಲ್ಲಿ ಯಾರಾದರೂ ಕುಡಿದವರು ಕಂಡು ಹಿಡಿಯಲ್ಪಟ್ಟಲ್ಲಿ ಅವರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಮಾಡಬೇಕೆಂದು ಠರಾವು ಮಾಡಿದರು.

★

ಮಿದುಳ ಶಸ್ತ್ರ ಚಿಕಿತ್ಸೆಯು ಅತೀ ಪ್ರಾಚೀನಕಾಲದಿಂದ ನಡೆದು ಬಂದಿದೆ ಹಿಂದಿನ ಕಾಲದಲ್ಲಿ ಹುಚ್ಚು ಹಿಡಿದವರ ತಲೆ ಬುರುಡೆಗೆ ತೂತು ತೆಗೆದು ಮಿದುಳಿನ ಒಂದಂಶವನ್ನು ಕೆರೆದು ತೆಗೆಯುವ ರೂಢಿಯಿತ್ತು ಈಗಲೂ ಅತಿ ಹೆಚ್ಚು ಬುದ್ಧಿ ಶಕ್ತಿಯು ಪ್ರಾಪ್ತವಾಗಿ ತಲೆ ಕೆಟ್ಟು ಆಸ್ಪತ್ರೆಗೆ ಕಳುಹಲ್ಪಡುತ್ತಾರೆ ಅಲ್ಲಿ ಮಿದುಳು ಶಸ್ತ್ರ ಚಿಕಿತ್ಸೆ ನಡೆದು ಮಿದುಳಿನ ಐದನೇ ಒಂದು ಭಾಗ ತೆಗೆಯಲ್ಪಟ್ಟ ವ್ಯಕ್ತಿ ಹುಷಾರಾಗಿ ಹೊರಬರುತ್ತಾನೆ ಹೀಂಡೋರ್ವ ಲಂಡನಿನ ಪ್ರಖ್ಯಾತ ಶಸ್ತ್ರ ಚಿಕಿತ್ಸಕರು ತಿಳಿಸುತ್ತಾರೆ

★

ನ್ಯೂ ಜೆರ್ಸಿಯ ರಾಜ ಮಾರ್ಗದ ಮೇಲ್ಭಾಗವು ವಿಶೇಷವಾದೊಂದು ತರದಲ್ಲಿ ರಚಿಸಲ್ಪಟ್ಟಿದೆ ಮೋಟಾರುಗಳು ಇದರ ಮೇಲೆ ಮಿತಿ ಮೀರಿದ ವೇಗದಿಂದ ಚಲಿಸಿದರೆ ಅವುಗಳ ಚಕ್ರಗಳು ವಿಶೇಷವಾದೊಂದು ಶಬ್ದವನ್ನುಂಟು ಮಾಡುತ್ತವೆ

★

ಬ್ರಿಟಿಷ್ ಆಕ್ರಮಿತ ಜರ್ಮನಿಯ ಒಸ್ನಾಬ್ರುಕ್ ಎಂಬಲ್ಲಿನ ನಾಗರೀಕರು ಒಂದು ಶವದ ಪೆಟ್ಟಿಗೆ ಹೋಗುತಿದ್ದಾಗ ತುಂಬಾ ಸಹಾನುಭೂತಿಪರರಾದರು ಪೆಟ್ಟಿಗೆಯೊಳಗೇನಿದ್ದಿತೆಂದು ಸ್ಮಶಾನಾಧಿಕಾರಿಗಳಿಗೂ ತಿಳಿಯಲಿಲ್ಲ ಅದರಲ್ಲಿ ಕಳ್ಳಸಂತೆ ಮಾರಾಟಕ್ಕಾಗಿ ಹೋಗುತಿದ್ದ ಒಂದು ಹೆಣ್ಣು ಹಂದಿ ಮತ್ತು ಅದರ 23 ಮರಿಗಳಿದ್ದವು!

★

ಜಯಪುರದಲ್ಲಿ ಓರ್ವ ಗ್ರಹಸ್ಥನು ಸ್ತ್ರೀವೇಶಧಾರಿಯಾಗಿ ಅಲ್ಲಿನ ಶ್ರೀಮಂತ ಮಹಿಳೆಯೊಡನೆ ಸ್ನೇಹ ಬೆಳೆಸಿ ಈಗ ಸುಮಾರು 2ಲಕ್ಷ ರೂಪಾಯಿ ಬೆಲೆ ಬಾಳುವ ಆಭರಣಗಳೊಂದಿಗೆ ಕಾಣೆಯಾಗಿರುವನು.

★

ನಮ್ಮ ಪ್ರಾಂತದಲ್ಲಿ

ಬೀಡಿ ಚುರುಟು ನಸ್ಯ ಕೈಗಾರಿಕೆ

ಬಿಡುವಿದ್ದಾಗ ಮನೆಯಲ್ಲೇ ಸ್ತ್ರೀಯರು ಕೈಕೊಳ್ಳತಕ್ಕ ಕಸಬು

[ನಮ್ಮ ಪ್ರಾಂತದಲ್ಲಿ ಬೀಡಿ – ಚುರುಟು – ನಸ್ಯ ಇವುಗಳ ತಯಾರಿಯಲ್ಲದೆ ಹೊಗೆಸೊಪ್ಪನ್ನು ಒಣಗಿಸುವುದು, ತೊಗಲು ಹದಮಾಡುವುದು, ಎಂಬು ಈ ಐದು ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕೆಲಸಗಾರರ ಸ್ಥಿತಿಗತಿಗಳ ಸುಧಾರಣೆಗೆ ಸರಕಾರವು ನೇಮಿಸಿದ ವಿಚಾರಣ ಸಮಿತಿಯು ಇತ್ತೀಚೆಗೆ ಒಪ್ಪಿಸಿದ ವರದಿಯಲ್ಲಿ ಮೊದಲಿನ ಮೂರು ಕೈಗಾರಿಕೆಗಳ ಕುರಿತ ಸಮಿತಿಯ ವಿಚಾರಣೆ ಶಿಫಾರಸುಗಳನ್ನು ಇಲ್ಲಿ ಸಂಕ್ಷೇಪವಾಗಿ ಕೊಡಲಾಗಿದೆ]

ಬೀಡಿ

ಹಿಂದುಸ್ಥಾನದಲ್ಲಿ ಬೀಡಿ ತಯಾರಿಸುವ ದೊಡ್ಡ ಪ್ರದೇಶಗಳಲ್ಲಿ ಮದ್ರಾಸ್ ಪ್ರಾಂತವು ಒಂದಾಗಿದೆ ಈ ಪ್ರಾಂತ್ಯದಲ್ಲಿ ದಿನಕ್ಕೆ ಸುಮಾರು 3,586 ಕೋಟಿಗಳಷ್ಟು ಬೀಡಿ ತಯಾರಾಗುತ್ತದೆ. 1941ನೇ ಇಸವಿಯಲ್ಲಿ ತೆಗೆದ ಲೆಕ್ಕ ಪ್ರಕಾರ ಇಲ್ಲಿ ಒಬ್ಬನು 202 ರಷ್ಟು ಬೀಡಿ ಸೇದುತ್ತಾನೆ ಈ ಕೈಗಾರಿಕೆಯು ಪ್ರಾಂತದ 90,000ಕ್ಕಿಂತಲೂ ಹೆಚ್ಚಿಗೆ ಜನರಿಗೆ ಕೆಲಸಕೊಡುತ್ತದೆ ಇವರ ಪೈಕಿ ಸುಮಾರು 26,600 ಮಂದಿ ಸ್ತ್ರೀಯರು. ಬೀಡಿ ಕೆಲಸಗಾರರಿಗೆ ಸಹಾಯ ಮಾಡುವ ಬಗ್ಗೆ ವಯಸ್ಕರಾದ ಗಂಡು ಕೆಲಸಗಾರರ ಶೇಕಡ ಸುಮಾರು 38 06ರಷ್ಟು ಮಂದಿ ಮಕ್ಕಳು ಕೆಲಸ ಮಾಡುತ್ತಾರೆ

ಬೀಡಿ ಕೆಲಸಗಾರರಿಗೆ ವರ್ಷವೆಲ್ಲ ತಿಂಗಳಿಗೆ 20 ದಿನಗಳ ಕಾಲ ಸಹ ಕೆಲಸ ದೊರೆಯಲು ಸಾಧ್ಯವಾಗುವುದಿಲ್ಲ ಅಸಂಖ್ಯಾತ ಸಿರುದ್ಯೋಗಿಗಳು ತಮ್ಮ ಯಜಮಾನರ ಡನೆ ಕೆಲಸ ಹುಡುಕಾಡುತ್ತಾ ಕಾರ್ಖಾನೆಗಳ ಸುತ್ತ ಅಲೆದಾಡುತ್ತಿರುತ್ತಾರೆ ಬೀಡಿ ಕೆಲಸಗಾರರು 40ರ ಪ್ರಾಯದಲ್ಲಿಯೇ ಮುದುಕರಾಗುತ್ತಾರೆ ಬೀಡಿ ಕೈಗಾರಿಕೆಗ [illegible] ಕಾರ್ಯ[illegible]ಗಳಲ್ಲಿ ಈ ಅಕಾಲದಲ್ಲಿ ಯೇ ಮುದುಕರಾಗುವ ಹಾಗೆ [illegible] ತ್ಯಜಿಸಲ್ಪಟ್ಟ ಬೀಡಿ ಕೆಲಸಗಾರರನ್ನು [illegible] ಅವಕಾಶ ವಿರಬೇಕು.

ಮುಂಗಡಗಳನ್ನು ಕೊಡುವ ಪದ್ಧತಿ ಎಲ್ಲಾ ಕಡೆಗಳಲ್ಲಿಯೂ ಇದೆ ಆದರೆ ಪಶ್ಚಿಮ ಕರಾವಳಿಯಲ್ಲಿ ವಿಶೇಷ [illegible] ತೆಗೆ ಬರಲಿಲ್ಲ

ಬೀಡಿ ತಯಾರಿಸುವ ಎಲ್ಲಾ ಕೇಂದ್ರಗಳಲ್ಲಿಯೂ ವೇತನಗಳು [illegible] ಗಿಲ್ಲ "ಸಾದಾ ಸುತ್ತು" ಬೀಡಿ ಬೀಡಿಗಳ ಮಟ್ಟಿಗೆ ವೇತನಗಳಲ್ಲಿ [illegible] ತಿನ್ನವೆಲ್ಲಿ ಜಲೆಯಲ್ಲಿ ಸ್ತ್ರೀಯರು [illegible] ಕಟ್ಟುತ್ತಾರೆ [illegible] ಜಲೆಗಳಲ್ಲಿ ಹೆಚ್ಚಾಗಿ ಸ್ತ್ರೀಯರು [illegible] ಕತ್ತರಿಸುವ ಮತ್ತು [illegible] ಅಂಟಿಸುವ ಕೆಲಸಗಳನ್ನು ಮಾಡುತ್ತಿರುವರು. ಇವರಿಗೆ ವೇತನ ಅತಿ ಕಡಿಮೆ ಕೆಲಸದ ಸ್ಥಿತಿಗತಿ ಶರತ್ತುಗಳೂ ಸ್ವಲ್ಪವೂ ತೃಪ್ತಿಕರವಾಗಿಲ್ಲ

ಆತ್ಯರ್ಥಿಸತಕ್ಕ ವಿಷಯ

1 ಕೆಲಸದ ತಾಸುಗಳು ಕ್ರಮ ಪ್ರಕಾರವಾಗಿರತಕ್ಕದ್ದು ದಿನಕ್ಕೆ ಹೆಚ್ಚೆಂದರೆ 8 ತಾಸುಗಳ ಕೆಲಸವೆಂದು ಗೊತ್ತುಪಡಿಸತಕ್ಕದ್ದು ಪ್ರತಿ ಆದಿತ್ಯವಾರವಾಗಲೀ ಶುಕ್ರವಾರವಾಗಲೀ ರಜಾ ದಿನವಾಗಿರಬೇಕು.

2 ಬೀಡಿ ಕೈಗಾರಿಕೆಯಲ್ಲ ಯಾವ ಸಮಯದಲ್ಲಿಯೂ ಯಾವ ರೀತಿಯಲ್ಲಿಯೂ ಮಕ್ಕಳು ಕೆಲಸ ಮಾಡುವುದನ್ನು ತಡೆಯಬೇಕು ಈ ಬಗ್ಗೆ ಮಕ್ಕಳ ಉದ್ಯೋಗ' ಶಾಸನವನ್ನು ಕಠಿಣವಾಗಿ ಜಾರಿಗೆ ತರತಕ್ಕದ್ದು

ಸ್ತ್ರೀಯರ ಕೆಲಸವನ್ನು ಕ್ರಮವಾಗಿರಿಸಿ, ಅವರಿಗೆ ಸ್ವಲ್ಪ ವೇತನ ತೆರುವುದೇ ಮೊದಲಾದ ವಿಷಯಗಳನ್ನು ತಡೆಯುವುದಕ್ಕೆ "ವೇತನ ಪಟ್ಟಿ"ಗಳ ಪದ್ಧತಿಯನ್ನು ಜಾರಿಗೆ ತರುವುದೇ ಅತಿ ಸುಲಭದ ಕ್ರಮ. ಮನೆಗಳಲ್ಲಿಯೇ ಇದ್ದು ಕೆಲಸ ಮಾಡುವ ಸ್ತ್ರೀಗೆ ಅವಳಿಗೆ ಕೊಟ್ಟ ಅಸಿದ್ಧ ಸಾಮಾಗ್ರಿಗಳ ಪ್ರಮಾಣ, ಮಾಡಿ ಮುಗಿಸಿದ ಪ್ರತಿ ನಮೂನೆಯ ಕೆಲಸ, ದಿನಕ್ಕೆ ಸಂಪಾದಿಸಿದ ಕೂಲಿ ಇತ್ಯಾದಿ ವಿಷಯಗಳನ್ನು ಕೂಲಂಕಷವಾಗಿ ಬರೆದಿರುವ ವೇತನ ಪಟ್ಟಿಯನ್ನು ಕೊಡಬೇಕು ಅತ್ಯಧಿಕ ಕೆಲಸವಾಗದಂತೆ, ದಿನ ಕತ್ತರಿಸಬೇಕಾದ ಎಲೆಗಳ, ಅಥವಾ ಕಟ್ಟಬೇಕಾದ ಬೀಡಿಗಳ ಪರಮಾಧಿಕ ಸಂಖ್ಯೆಗಳನ್ನು ಗೊತ್ತುಪಡಿಸಬೇಕು ಆಗಿಂದಾಗ್ಯೆ ವೇತನ ಪಟ್ಟಿಗಳನ್ನು ಅಕಸ್ಮಾತ್ ಪರೀಕ್ಷಿಸುವುದರಿಂದ ಕೆಲಸದ ಸ್ಥಿತಿಗತಿ ಕೂಲಿ ಇತ್ಯಾದಿಗಳನ್ನು ಸುಧಾರಿಸಬಹುದು.

ವಿಚಾರಣಾ ಸಮಿತಿಯ ಶಿಫಾರಸು

ವೇತನಗಳ [illegible] ಒಂದು [illegible] ಸ್ಥಳಗಳಲ್ಲಿನ [illegible] ಸ್ಥಿತಿಗತಿಗಳಿಗನುಸಾರವಾಗಿ ಜಿಲ್ಲೆಗೆ [illegible] ಗೊತ್ತುಪಡಿಸಬೇಕು [illegible] ಗಳನ್ನು [illegible] ತರುವುದರಿಂದ ಕೈಗಾರಿಕೆಯನ್ನು [illegible] ಕಲಿಸುವ [illegible] ಸಂಭವಗಳು ಹೆಚ್ಚು [illegible] ಮಾಡುವುದರಿಂದ 3 [illegible] ವರ್ಷಗಳಲ್ಲಿ ವೇತನಗಳನ್ನು [illegible] ಸಲ್ಪವಾಗ ವುದು

[illegible] ವೇತನ ಪದ್ಧತಿಯ [illegible] ಕೆಳಗಿನಂತೆ [illegible]

(1) [illegible] ಬೀಡಿ ಕಟ್ಟುವುದಕ್ಕೆ ರೂ 1 2 0ರಿಂದ ಕಡಿಮೆ ವೇತನ ವಿರಕೂಡದು.

(2) ವಿವಿಧ ಕೇಂದ್ರಗಳಲ್ಲಿ ರೂ 0 15 0 ರಿಂದ 1–12–0ರಷ್ಟರವರೆಗೆ ಈಗ ತೆರುವ ಕೂಲಿದರಗಳನ್ನು ಶೇಕಡ 25ರಷ್ಟು ಹೆಚ್ಚಿಸಬೇಕು.

ಮೇಲೆ ಸೂಚಿಸಿದಂತೆ [illegible] ವೇತನಗಳು ಜೀವನದ ವೆಚ್ಚ ಸೂಚಿಕೆಯು 300ಕ್ಕಿಂತ ಹೆಚ್ಚದಿರುವವರೆಗೆ [illegible]ರತಕ್ಕದ್ದು 300ಕ್ಕೆ ಮೀರಿದರೆ ಈ ಕೆಳಗಿನಂತೆ ಭತ್ತೆ ಕೊಡಬೇಕು

ಜೀವನದ ವೆಚ್ಚದ ಸೂಚಿಕೆ	300 [illegible] ರಿಂದ 325 ವರೆಗೆ	3?0 [illegible] 350	[illegible] 375	350 [illegible] 400	375 [illegible] 400
ಒಂದು ರೂಪಾಯಿ ಕೂಲಿಗೆ ತೆರಬೇಕಾದ ಭತ್ತೆ	[illegible]	2 ಆಣೆ	3 ಆಣೆ	4 ಆಣೆ	ಆಣೆ

ಚುರುಟು

ಈ ಕೈಗಾರಿಕೆಯು 12 000ಕ್ಕಿಂತಲೂ ಹೆಚ್ಚು ಕೆಲಸಗಾರರಿಗೆ ಉದ್ಯೋಗ ಒದಗಿಸುತ್ತದೆ 50 000 ಜನ [illegible] ಈ ಕೈಗಾರಿಕೆಯ [illegible] ಅವಲಂಬಿಸಿದ್ದಾರೆ ಈ ಕೈಗಾರಿಕೆಯ [illegible] ಕಡೆಗಳ [illegible] ಕೇಂದ್ರೀಕೃತವಾದರೂ [illegible] ಕಡೆಗಳಲ್ಲಿ ಅದು ಕೇಂದ್ರೀಕೃತವಾಗಿದೆ

ಈ ಕೈಗಾರಿಕೆಯಲ್ಲಿ ಹೆಚ್ಚು ಮಂದಿ ಮಕ್ಕಳು ಗೆಲಿಯುತ್ತಿರುವದು ದೊಡ್ಡ ಸಂಕಟದ ಸಮಸ್ಯೆಯಾಗಿದೆ ಚುಟ್ಟದ ಒಳಗೆ ತುಂಬುವ ಹುಡಿ ತಯಾರಿಸುವುದಕ್ಕೆ ಮತ್ತು ಹೊಗೆಸೊಪ್ಪನ್ನು ಚೂರು ಗಯ್ಯಲು ಹುಡುಗರನ್ನೂ, ಚುಟ್ಟದ ಸುತ್ತು ಪಟ್ಟಿ ಅಂಟಿಸುವುದಕ್ಕೆ ಹೆಚ್ಚಾಗಿ ಹುಡುಗಿಯರನ್ನೂ ನೇಮಿಸಲಾಗುತ್ತದೆ

ಸಾಧಾರಣವಾಗಿ ಒಬ್ಬ ಚುರುಟು ಕೆಲಸಗಾರನಿಗೆ ತಿಂಗಳಲ್ಲಿ ಸುಮಾರು 20 ದಿನಗಳ ಮಟ್ಟಿಗೆ ಕೆಲಸ ದೊರೆಯುತ್ತದೆ

ಆತ್ಯರ್ಥಿಸತಕ್ಕ ವಿಷಯ

(1) ಕೆಲಸದ ಸಮಯಗಳನ್ನು ಕ್ರಮದಲ್ಲಿರಿಸುವುದಲ್ಲದೆ, ದಿನಕ್ಕೆ ಹೆಚ್ಚೆಂದರೆ 8 ತಾಸುಗಳೆಂದು ನಿಶ್ಚಯಿಸಬೇಕು. ಪ್ರತಿ ಆದಿತ್ಯವಾರವು ರಜಾ ದಿನವಾಗಿರಬೇಕು

(2) ಹದಿನೈದು ವರ್ಷ ಪ್ರಾಯಕ್ಕಿಂತ ಕಡಿಮೆಯವರು ಚುರುಟು ಕೈಗಾರಿಕೆಯಲ್ಲಿ ಯಾವ ರೀತಿಯಲ್ಲಿಯೂ ಕೆಲಸ ಮಾಡುವುದನ್ನು ತಡೆಯಬೇಕು

(3) ವಿದ್ಯುತ್ ಇಲ್ಲದ ಕಾರ್ಖಾನೆಗಳ ಮಸೂದೆಯು ಚುರುಟು ವರ್ಕ್‌ಶಾಪುಗಳಿಗೂ ಅನ್ವಯಿಸಬೇಕು. ಈಗಿರುವ ಅತೃಪ್ತಿಕರ ಪರಿಸ್ಥಿತಿಗೆ ಇದೊಂದೇ ಪರಿಹಾರದ ಔಷಧವಾಗಿದೆ

(4) ಮುಂಗಡ ಕೊಡುವುದೂ ಪಡೆಯುವುದೂ ನಿಲ್ಲಬೇಕು

ವಿಚಾರಣಾ ಸಮಿಯ ಶಿಫಾರಸು

ವಿವಿಧ ನಮೂನೆಗಳ ಚುರುಟುಗಳಿಗೆ ಒಂದೇ ರೀತಿಯಲ್ಲಿ ವೇತನ ಹೆಚ್ಚಿಸುವುದು ಸರಿಯಲ್ಲ ಕೆಲಸಗಾರರ ಜೀವನಕ್ಕೆ ಸುಲಭವಾಗುವಂತೆ ವೇತನವನ್ನು ಹೆಚ್ಚಿಸುವುದಾಗಿದೆ ಆದರೆ ಡ್ಯೂಟಿ ಇಲ್ಲದ ಕೆಳವರ್ಗದ [illegible] ಗಳ [illegible] ವೇತನ ಹೆಚ್ಚಿಸುವ [illegible] ಡ್ಯೂಟಿ [illegible] ಉತ್ತಮ ವರ್ಗದ ಚುರುಟುಗಳಿಗಿಂತ ಕಡಿಮೆಯಾಗಿರಬೇಕು. ಈ ಪಾಠವು [illegible] ವೇತನ [illegible] ಒಂದೇ [illegible] ಸುವುದಾಗಲೀ [illegible] ಸುವುದಾಗಲೀ ಸಾಧ್ಯವಿಲ್ಲ ಆದ್ದರಿಂದ [illegible] ಚುರುಟುಗಳನ್ನು [illegible] ಹೆಚ್ಚಿಗೆ ವೇತನವನ್ನು ಗೊತ್ತುಪಡಿಸುವುದು ಜೀವನದ ವೆಚ್ಚದ ಸೂಚಿಕೆಗನುಸಾರವಾಗಿ ಕನಿಷ್ಠ ವೇತನವನ್ನು ಗೊತ್ತುಪಡಿಸುವುದೂ ಅವಶ್ಯ ಮೇಲೆ ಹೇಳಿದ ಎಲ್ಲಾ ವಿಷಯಗಳ ಮಟ್ಟಿಗೆ ಈ ಕೆಳಗಿನಂತೆ ಮಾಡಬಹುದು

(i) ಡ್ಯೂಟಿ ಇಲ್ಲದ ಕೆಳವರ್ಗದ ಚುರುಟುಗಳ ಮಟ್ಟಿಗೆ, ಪ್ರಾಂತದ ಯಾವ ಸ್ಥಳಗಳಲ್ಲಿಯೂ ಕೂಲಿಯು 1,000ಕ್ಕೆ ರೂ. 1–4–0ರಿಂದ ಕಡಿಮೆಯಾಗ ಕೂಡದು. 1947ನೇ ಇಸವಿ ಜನವರಿಯಲ್ಲಿ ಎಲ್ಲಾ ಕಡೆಗಳಲ್ಲಿಯೂ ಇದ್ದ ಕೂಲಿಗಳು ಶೇಕಡ 25ರಷ್ಟು ಹೆಚ್ಚಬೇಕು.

(ii) ಡ್ಯೂಟಿ ತೆರುವ ಚುಟ್ಟಗಳ ಮಟ್ಟಿಗೆ, ಈ ಕೆಳಗೆ ಕಾಣಿಸಿದಂತೆ ಕೂಲಿ ಹೆಚ್ಚಿಸಬೇಕು –

1947ನೇ ಇಸವಿ ಜನವರಿಯಲ್ಲಿ ವೇತನ	ಹೆಚ್ಚಿಗೆ ಶಿಫಾರಸು ಮಾಡಿದುದರ ಶೇಕಡ ದರ
ರೂ 1–8–0ರಿಂದ ರೂ 3ರ ವರೆಗೆ	20
ರೂ. 3 ರಿಂದ ರೂ 5ರ ವರೆಗೆ.	25
ರೂ. 5 ರಿಂದ ರೂ 10ರ ವರೆಗೆ.	30
ರೂ. 10 ರ ಮೇಲೆ	33 1/3

(ನಾಲ್ಕನೇ ಪುಟ ನೋಡಿ)

CANARA BANK, LIMITED.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟ ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

(ಸ್ಥಾಪಿತ: ೧೯೦೬)

ಹೆಡ್ ಆಫೀಸು — ಬಾವಟಿಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು — 75 ಎಪ್ಲೊಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು:—

ಮದರಾಸು ಪ್ರಾಂತ್ಯ:	ಸೇಲಂ	ಮುಂಬೈ–ಫೋರ್ಟ್
ಮಂಗಳೂರು ಸಿಟಿ	ಇರೋಡ್	ಮುಂಬೈ–ಮಾಂಡ್ವಿ
ಮಂಗಳೂರು–ಬಂದರ್	**ಹೈದರಾಬಾದ್ ಸಂಸ್ಥಾನ:**	ಮುಂಬೈ–ಕಾಲ್ಬಾದೇವಿ
ಮುಲ್ಕಿ	ಸೆಕುಂದರಾಬಾದು	ಮುಂಬೈ–ಗಿರ್ ಗಾಂವ್
ಗಂಗೊಳ್ಳಿ		ಮುಂಬೈ–ಕಲ್ಯಾಣ
ಕುಂದಾಪುರ	**ತಿರುವಾಂಕೂರು ಸಂಸ್ಥಾನ:**	**ಮೈಸೂರು ಸಂಸ್ಥಾನ:**
ಉಡುಪಿ	ಅಲ್ಲೆಪ್ಪಿ	ಮೈಸೂರು.
ಕಾರ್ಕಳ	ಕ್ವಿಲೋನ್	ಶಿವಮೊಗ್ಗೆ
ಬಂಟ್ವಾಳ	**ಮಧ್ಯ ಪ್ರಾಂತ್ಯ:**	ಚಿಕ್ಕಮಗಳೂರು.
ಪುತ್ತೂರು	ನಾಗಪುರ	ಬೆಂಗಳೂರು ಸಿಟಿ
ಕಾಸರಗೋಡು	ಅಕೋಲಾ	ಅರಸೀಕೆರೆ
ಮದರಾಸು.	ಅಮರಾವತಿ	ದಾವಣಗೆರೆ.
ಪಯ್ಯನ್ನೂರು	**ಮುಂಬೈ ಪ್ರಾಂತ್ಯ:**	**ಸಿಂಧ್ ಪ್ರಾಂತ್ಯ:**
ಕಲ್ಲಿಕೋಟೆ	ಬೆಳಗಾಂವ್.	ಕರಾಚಿ
ಕಣ್ಣಾನ್ನೂರು	ಧಾರವಾಡ.	**ಕೊಚ್ಚಿ ಸಂಸ್ಥಾನ:**
ಕೊಯಮುತ್ತೂರು	ಹುಬ್ಬಳ್ಳಿ.	ಕೊಚ್ಚಿ.
ತಿರುಚಿನಾಪಳ್ಳಿ.	ಶೋಲಾಪುರ.	ಎರ್ನಾಕುಲಾಮ್.
ತುತುಕುಡಿ.	ಪೂನಾ.	

(ನೇ ಪುಟದಿಂದ)

ಮೇಲೆ ಸೂಚಿಸಿದ ವೇತನ ದರಗಳನ್ನು ಜಾರಿಗೆ ತರುವುದಲ್ಲದೆ, ಕೆಲಸಗಾರನಿಗೆ ತಿಂಗಳಿಗೆ 26 ದಿನ ಎಡೆಬಿಡದೆ ಕೆಲಸ ದೊರೆಯುವ ಭರವಸೆ ಇರಬೇಕು. ಚುರುಟು ತಯಾರಿಸುವವರು ತಿಂಗಳಲ್ಲಿ ಕಡಿಮೆಯಲ್ಲಿ 26 ದಿನ ಕೆಲಸ ದೊರೆಯುವಂತೆ ತಮ್ಮ ಉತ್ಪಾದನೆಯನ್ನು ಕ್ರಮದಲ್ಲಿರಿಸಬೇಕು. ಈ ಬಗ್ಗೆ ತಮ್ಮ ಕಾಯಂ ಕೆಲಸಗಾರರಿಗೆ ಕೆಲಸ ಒದಗಿಸಲು ಸಾಧ್ಯವಿಲ್ಲವೆಂದಾದ ಕಾಲದಲ್ಲಿ ದಿನಕ್ಕೆ ಒಂದು ರೂಪಾಯಿಯಂತೆ ಯಜಮಾನರು ಸ್ವಮನಸ್ಸಿನಿಂದ ಒಪ್ಪಂದ ಮಾಡಿಕೊಳ್ಳಬೇಕು.

ಜೀವನದ ವೆಚ್ಚದ ಸೂಚಿಕೆಯು 300 ರಿಂದ ಹೆಚ್ಚಾದರೆ, ಈ ಕೆಳಗಿನಂತೆ ತುಟ್ಟಿ ಭತ್ತೆ ತರಬೇಕು.

ಸೂಚಿಕೆ ನಂಬ್ರ	300 ರ ವರೆಗೆ	300 ರಿಂದ 325	325 ರಿಂದ 350	350 ರಿಂದ 375	375 ರಿಂದ 400
ಒಂದು ರೂಪಾಯಿ ಸಂಪಾದನೆಗೆ ಭತ್ತೆ	...	1 ಆಣೆ.	2 ಆಣೆ.	3 ಆಣೆ.	4 ಆಣೆ.

ನಸ್ಯ

ಕಳೆದ ಮೂರು ವರ್ಷಗಳಲ್ಲಿ ನಸ್ಯ ತಯಾರಿಸುವುದಕ್ಕೋಸ್ಕರ ತಿಂಗಳಿಗೆ ಸರಾಸರಿ 2·18, 2·64, 2·89 ಲಕ್ಷ ಪೌಂಡುಗಳಷ್ಟು ಹೊಗೆಸೊಪ್ಪು ವೆಚ್ಚವಾಗುತ್ತಿತ್ತು. 1938-39ರಲ್ಲಿ ಇಡೀ ಪ್ರಾಂತದಲ್ಲಿ ಒಟ್ಟು 23 ಲಕ್ಷ ಪೌಂಡುಗಳಷ್ಟು ನಸ್ಯದ ಉಪಯೋಗವಾಗಿದೆ. ಎಲ್ಲಾ ಕಾರ್ಖಾನೆಗಳಲ್ಲಿ ಒಟ್ಟು ಸುಮಾರು 1,100 ಕೆಲಸಗಾರರಿರುವರು. ಹೆಂಗಸರ ಮತ್ತು ಹುಡುಗರ ಸಂಖ್ಯೆಯು ಗಂಡಸರ ಸಂಖ್ಯೆಯ ಸುಮಾರು ಕಾಲು ಪಾಲಷ್ಟಿರಬಹುದು. ಹೀಗೆ ನಸ್ಯದ ಕೈಗಾರಿಕೆಯೂ ಸುಮಾರು 1,365 ಮಂದಿಗೆ ಕೆಲಸ ಒದಗಿಸುತ್ತದೆ. ಈ ದೊಡ್ಡ ಹಾಗೂ ಸಣ್ಣ ಕಾರ್ಖಾನೆಗಳಲ್ಲದೆ ವೀಳ್ಯದೆಲೆಯ ಹಾಗೂ ಇತರ ಅಂಗಡಿಗಾರರು ಉಪ-ವ್ಯಾಪಾರವಾಗಿ ಅಸಂಖ್ಯಾತ ಮಂದಿ ನಸ್ಯ ತಯಾರಿಸಿ ಮಾರುತ್ತಾರೆ. ಈ ಜನರೆಲ್ಲ ಸ್ವತಹ ನಸ್ಯ ತಯಾರಿಸಿ ತಮ್ಮ ಅಂಗಡಿಗಳಿರುವ ಗ್ರಾಮದ ಜನರಿಗೋಸ್ಕರ ಬೇಕಾದಷ್ಟನ್ನು ಒದಗಿಸುತ್ತಾರೆ. ನಸ್ಯದ ಉತ್ಪತ್ತಿಯಲ್ಲಿ ಸುಮಾರು ಮುಕ್ಕಾಲರಷ್ಟು ಕೆಲಸವು ಶಹರುಗಳಲ್ಲಿಯೇ ಕೇಂದ್ರೀಕರಿಸಿಕೊಂಡಿರುವುದು.

ಇತ್ಯರ್ಥಿಸತಕ್ಕ ವಿಷಯ

ಹೆಂಗಸರನ್ನು ಕೆಲಸಕ್ಕಿಟ್ಟಿರುವಲ್ಲೆಲ್ಲಾ ಕಾರ್ಖಾನೆಗಳ ಶಾಸನವನ್ನೂ ಇತ್ತೀಚೆಗೆ ಜಾರಿಗೆ ಬಂದ ಮಿದ್ಯುತ್ ಇಲ್ಲದ ಕಾರ್ಖಾನೆಗಳ ಮಸೂದೆಯನ್ನೂ ಖಂಡಿತ ರೀತಿಯಲ್ಲಿ ನಡೆಸಬೇಕು. ಹೆಂಗಸರನ್ನು ಕಾಯಂ ಕೆಲಸಗಾರರನ್ನಾಗಿ ಮಾಡಬೇಕು. ಅವರಿಗೆ ಹೆರಿಗೆ ಸಹಾಯ ಮಸೂದೆಯ ಪ್ರಯೋಜನ ದೊರೆಯುವಂತಾಗಬೇಕು. ಕೆಲಸದ ಸಮಯ ಅವರ ಮಕ್ಕಳ ಕುರಿತು ತಕ್ಕ ಜಾಗ್ರತೆ ತೆಗೆದುಕೊಳ್ಳುವ ಏರ್ಪಾಡು ಮಾಡಬೇಕು. ಮಿದ್ಯುತ್ ಇಲ್ಲದ ಕಾರ್ಖಾನೆಗಳ ಮಸೂದೆಯ ನಿಯಮಗಳನ್ನು ಜಾರಿಗೆ ತಂದು ನಸ್ಯ ತಯಾರಿಸುವ ವರ್ಕ್‌ಶಾಪುಗಳಲ್ಲಿ ಕೆಲಸಗಾರರ ಸ್ಥಿತಿಗತಿ, ಕೆಲಸದ ಶರತ ಇತ್ಯಾದಿಗಳನ್ನು ಕ್ರಮದಲ್ಲಿರಿಸಬೇಕು. ಕೆಲಸಗಾರರಿಗೆ ಮುಂಗಡ ಕೊಡುವ ಪದ್ಧತಿಯು ಸಂಪೂರ್ಣ ರದ್ದಾಗಬೇಕು.

ಮದ್ರಾಸು ನಗರದಲ್ಲಿ ಕೂಲಿಯು 1939ರಲ್ಲಿ ವೀಸಕ್ಕೆ 3¼ ಆಣೆ ಇದ್ದುದು 1947ರಲ್ಲಿ 7 ಆಣೆಗೆ ಏರಿಗೆ. 1943-46ನೇ 4 ಇಸವಿಗಳೊಳಗೆ ಅದು ವೀಸಕ್ಕೆ 6 ಆಣೆಯಂತೆ ಅಥವಾ ಯುದ್ಧ ಪೂರ್ವದರದ ಶೇಕಡ 170ರಷ್ಟು ಇತ್ತು. ಈ ನಾಲ್ಕು ವರ್ಷಗಳಲ್ಲಿ ಜೀವನದ ವೆಚ್ಚ ಸೂಚಿಕೆಯು 250 ಕ್ಕೇರಿತ್ತು. ಈಗಲೂ ಕೂಲಿಯು ಯುದ್ಧ ಪೂರ್ವದ ಶೇಕಡ 228·5ರಷ್ಟು ಮಾತ್ರ ಇದೆ. ಈಗ ಜೀವನ ವೆಚ್ಚ ಸೂಚಿಕೆಯು 260 ಮಿಕ್ಕಿದೆ. ಮೇಲಿನ ನಾಲ್ಕು ವರ್ಷಗಳಲ್ಲಿ ಕೆಲಸಗಾರರು ಅತಿ ಕಡಿಮೆ ಕೂಲಿ ಪಡೆಯುತ್ತಿದ್ದುದರಿಂದ ಎಲ್ಲಾ ಕಾಯಂ ಕೆಲಸಗಾರರಂತೆ ಒಂದು ತಿಂಗಳ ಬೋನಸ್ಸು ಕೊಡಬೇಕು. ಮೂರು ವರ್ಷಕ್ಕೆ ಕಡಿಮೆಯಾಗದಷ್ಟು ಸರ್ವಿಸ್ ಇರುವವರಿಗೆ ಮೂರು ತಿಂಗಳ ಬೋನಸ್ಸು ಕೊಡಬೇಕು.

ವಿಚಾರಣಾ ಸಮಿತಿಯ ಶಿಫಾರಸು

ಇಡೀ ಪ್ರಾಂತದಲ್ಲಿ ವೀಸಕ್ಕೆ 10 ಆಣೆಗೆ ಕಡಿಮೆಯಾಗದಷ್ಟು ಕೂಲಿ ಗೊತ್ತುಪಡಿಸಬೇಕು.

ಯಜಮಾನರು ಪ್ರತಿ ಕೆಲಸಗಾರರಿಗೆ ದಿನಕ್ಕೆ 3 ವೀಸಕ್ಕೆ ಕಡಿಮೆಯಾಗದಂತೆ ತಿಂಗಳಲ್ಲಿ 26 ದಿನಗಳಿಗೆ ಕೆಲಸ ಕೊಡಬೇಕು. ಕೆಲಸವಿಲ್ಲದ ಪ್ರತಿ ದಿನಕ್ಕೆ ಯಜಮಾನರು ಪ್ರತಿ ಕಾಯಂ ಕೆಲಸಗಾರನಿಗೆ ಒಂದು ರೂಪಾಯಿ ಕೊಡಬೇಕು. ಕೈಗಾರಿಕಾ ಶಾಂತಿಯನ್ನು ಕಾದಿಟ್ಟುಕೊಳ್ಳುವ ಉದ್ದೇಶದಿಂದ ವಿಚಾರಣಾ ಸಮಿತಿಯು ಈ ಶಿಫಾರಸು ಮಾಡಬೇಕಾಯಿತು.

ಹೆಂಗಸರ ಕೂಲಿಯು ಈ ಕೆಳಗಿನ ದರಗಳಿಗಿಂತ ಕಡಿಮೆಯಾಗಿರಕೂಡದು:-

	ರೂ.	ಆ.	ಪೈ.
ಒಂದು ವೀಸ ಹೊಗೆಸೊಪ್ಪು ಸುಲಿದುದಕ್ಕೆ	0	1	6
ಒಂದು ವೀಸ ಹೊಗೆಸೊಪ್ಪು ಕತ್ತರಿಸಿದ್ದಕ್ಕೆ	0	9	6
ಒಂದು ವೀಸ ಹೊಗೆಸೊಪ್ಪು ಹುರಿದುದಕ್ಕೆ	0	8	0

ಜೀವನದ ವೆಚ್ಚದ ಸೂಚಿಕೆಯು 300 ಕ್ಕೆ ಮೀರಿದರೆ ಈ ಕೆಳಗಿನಂತೆ ಗಂಡಸರಿಗೂ ಹೆಂಗಸರಿಗೂ ತುಟ್ಟಿ ಭತ್ತೆ ಕೊಡಬೇಕು.

ಸೂಚಿಕೆ ನಂಬ್ರ	300 ರ ವರೆಗೆ	300 ರಿಂದ 325	325 ರಿಂದ 350	350 ರಿಂದ 375	375 ರಿಂದ 400
ಒಂದು ರೂಪಾಯಿ ಸಂಪಾದನೆಗೆ ಭತ್ತೆ	...	1 ಆಣೆ.	2 ಆಣೆ.	3 ಆಣೆ.	4 ಆಣೆ.

ಸಾಮಾನ್ಯ ಶಿಫಾರಸುಗಳು

1. ಮಕ್ಕಳ ಉದ್ಯೋಗದ ಶಾಸನವನ್ನು ಖಂಡಿತವಾಗಿ ಜಾರಿಗೆ ತರಬೇಕು.
2. ಎಲ್ಲಾ 5 ಕೈಗಾರಿಕೆಗಳಿಗೂ ವೇತನ ಶಾಸನ ಪ್ರಕಾರ ಮುಂಗಡ ತೆರಬಹುದೆಂದಾದರೆ, ಮುಂಚಿನ ಎರಡು ತಿಂಗಳುಗಳಲ್ಲಿ ಕೆಲಸಗಾರನು ಸಂಪಾದಿಸಿದ ಕೂಲಿಯ ಮೊಬಲಿಗೆ ಸರಿಯಾಗಿರಬೇಕು. ಅಥವಾ ಕೆಲಸಗಾರನು ಆ ಎರಡು ತಿಂಗಳುಗಳಲ್ಲಿ ಕೆಲಸದಲ್ಲಿರಲ್ಲವಾದರೆ, ನಂತರ ತಿಂಗಳಲ್ಲಿ ಅವನು ಸಂಪಾದಿಸಬಹುದಾದ ಮೊಬಲಗಿನ ಇಮ್ಮಡಿಯಾಗಿರಬೇಕು.
3. 1936ನೇ ಇಸವಿ ಮದ್ರಾಸ್ ಹೆರಿಗೆ ಸಹಾಯ ಶಾಸನವು ಈ 5 ಕೈಗಾರಿಕೆಗಳಿಗೂ ಅನ್ವಯಿಸಬೇಕು.
4. ಈ 5 ಕೈಗಾರಿಕೆಗಳಿಗೂ ಕೆಲಸಗಾರರ ಪರಿಹಾರ ಶಾಸನವು ಕೂಡಲೇ ಅನ್ವಯಿಸಬೇಕು.
5. ಪ್ರತಿ ಸಂಸ್ಥೆಯಲ್ಲಿ ಕೆಲಸಗಾರರ ಹೆಸರು, ಕೆಲಸದ ತಾಸು, ಉದ್ಯೋಗದ ಸ್ವಭಾವ ಇತ್ಯಾದಿಗಳನ್ನು ಬರೆದಿಟ್ಟ ರಿಜಿಸ್ಟರುಗಳು ಇರತಕ್ಕದ್ದು. ಹಾಜರಿಪಟ್ಟಿಯಲ್ಲದೆ ಕೂಲಿಯ ಪಟ್ಟಿ ಪುಸ್ತಕವು, ಪ್ರತ್ಯೇಕವಾಗಿರಬೇಕು. ರೂ. 20ಕ್ಕಿಂತ ಹೆಚ್ಚಿನ ಕೂಲಿಗೆ ಸ್ಟಾಂಪು ಒಟ್ಟಿದ ರಶೀದಿ ಪಡೆಯತಕ್ಕದ್ದು.
6. ಪ್ರತಿ ಸಂಸ್ಥೆಯು ಅದರ ಸ್ಥಾಯಿಕ ಅಪ್ಪಣೆ, ಉದ್ಯೋಗದ ಶರತ, ಶಿಸ್ತಿನ ಕ್ರಮ, ಇತ್ಯಾದಿ ವಿಷಯಗಳ ಪ್ರತಿಗಳನ್ನು ಪ್ರಕಟಿಸಬೇಕು.
7. ಪ್ರತಿಯೊಬ್ಬ ಕೆಲಸಗಾರನಿಗೆ ಮಾಲಿಕನು ಕೆಲಸದ ಸಾಮಾನು ಉದಾಹರಣೆಗಾಗಿ ಬೀಡಿ ಕೈಗಾರಿಕೆಯಲ್ಲಿ ಕತ್ತರಿ, ನೂಲು, ಇತ್ಯಾದಿ ಅಸಿದ್ಧ ಸಾಮಗ್ರಿಗಳನ್ನು ಒದಗಿಸಬೇಕು.
8. ಕೆಲಸಗಾರರ ಆರೋಗ್ಯ ಭದ್ರತೆಗಳ ರಕ್ಷಣೆಗಾಗಿ, ಬೀಡಿ, ನಸ್ಯ, ಚುರುಟು ಕೆಲಸಗಾರರಿಗೆ ಕುಳಿತು ಕೊಳ್ಳಲು ಸ್ವಚ್ಛವಾದ ಸೌಕರ್ಯಗಳು ಒದಗಿಸಲಾಗಬೇಕು.

ಮನೆಯಲ್ಲಿ ಕೈಗಾರಿಕಾ ಕೆಲಸ-ಬೀಡಿ

ಮನೆಯಲ್ಲಿ ಪ್ರತಿ ಹೆಂಗಸಿನ ಹೆಸರು, ವಿಳಾಸಗಳನ್ನು ಪ್ರತಿ ಮಾಲಿಕ, ಕಮಿಶನ್ ಏಜಂಟ ವಾ. ಮಧ್ಯಸ್ಥನು ಬರೆದಿಟ್ಟ ರಿಜಿಸ್ಟ್ರಿಯನ್ನಿಟ್ಟಿರಬೇಕು. 1,000 ಬೀಡಿ ಕಟ್ಟಿದರೆ ಕೊಡುವ ಕೂಲಿಯ ದರವನ್ನು ಬೀಡಿಗೋಸ್ಕರ ಅಸಿದ್ಧ ಸಾಮಗ್ರಿಗಳನ್ನು ಕೊಡುವ ಹಾಗೂ ಬೀಡಿ ಪಡೆಯುವ ಕೋಣೆಯಲ್ಲಿ ಕಾಯಂ ಆಗಿ ಅಂಟಿಸಿಡಬೇಕು. ಮನೆಯಲ್ಲಿ ಕೆಲಸ ಮಾಡಲು ಹೆಂಗಸು ಅಸಿದ್ಧ ಸಾಮಗ್ರಿಗಳನ್ನು ಪಡೆಯುವಾಗ ಕೆಲಸದ ಹೆಸರು, ತಾರೀಕು, ಕೂಲಿ ಇತ್ಯಾದಿಗಳನ್ನು ಬರೆದ ಒಂದು ಕಾರ್ಡು ವಾ. ಒಂದು ಪುಸ್ತಕವನ್ನು ಅವಳಿಗೆ ಕೊಡಬೇಕು. ಬೀಡಿ ಪಡೆಯುವಾಗ ಆ ಕಾರ್ಡು ವಾ. ಪುಸ್ತಕದಲ್ಲಿ ಕೊಟ್ಟ ತಾರೀಕು, ಸಂಪಾದಿಸಿದ ಹಣ, ಇತ್ಯಾದಿಗಳನ್ನು ಬರೆಯಬೇಕು. ಈ ವಿಷಯಗಳನ್ನೆಲ್ಲಾ ವೇತನದ ರಿಜಿಸ್ಟ್ರಿ ಪುಸ್ತಕದಲ್ಲಿ ಬರೆದಿಡಬೇಕು. ಈ ಪುಸ್ತಕವನ್ನು ಯಜಮಾನನು ಕಡಿಮೆಯಲ್ಲಿ ಒಂದು ವರ್ಷದಷ್ಟು ಕಾಲ ಇಡಬೇಕು. ಇದು ಪರೀಕ್ಷೆಗೆ ಸಿದ್ಧವಾಗಿಡಬೇಕು. ಈ ಕೆಲಸವು ಸ್ತ್ರೀ ಕೆಲಸಗಾರರಿಗೆ ಮಾತ್ರ ಅನ್ವಯಿಸುತ್ತದೆ.

"ಮದರಾಸ್ ಸಮಾಚಾರ"

ಗಡ್ಡ, ಮೀಸೆಗಳ ಇತಿಹಾಸ

ಮಾನವ ಪೂರ್ವದ ಪ್ರಾಣಿಗಳಿಗೆ ತಮ್ಮ ಶತ್ರುಗಳನ್ನು ಭೀತಿಪಡಿಸಲು ಬಿರುಸಾದ ಗಲ್ಲ ಕೂದಲುಗಳು ಬೆಳೆಯುತ್ತಿದ್ದವು. ಈಗಲೂ ಅನೇಕ ಜಾತಿಯ ಕಪಿಗಳಿಗೆ ಈ ಮುಖ ಕೇಸರಗಳಿವೆ. ಸಿಂಹದ 'ಗಡ್ಡ'ವು ಅತೀ ವಿಶಾಲವೂ ವಿಪುಲವೂ ಆದ ಬೆಳವಣಿಗೆಯದು. ಆದ್ದರಿಂದದು ಕರಾಳವಾಗಿಯೂ ಕಾಣುತ್ತದೆ. ಶತ್ರುವನ್ನು ಕಂಡೊಡನೆ ಬೆಕ್ಕುಗಳು ಶರೀರದ ರೋಮಗಳನ್ನೆಲ್ಲ ಸಿಗುರಿಸುತ್ತವೆ. ಭೀತಿಪಡಿಸುವ ವಿಧಾನಗಳಲ್ಲಿದೊಂದು. ಮನುಷ್ಯನಿಗೆ ಇವುಗಳ ಆವಶ್ಯಕತೆ ಅವನು ಗವಿಗಳಲ್ಲಿ ವಾಸಮಾಡುತಿದ್ದಾಗ ಇತ್ತು. ನಾಗರೀಕನಾದ ಮೇಲೆ ಗಡ್ಡವು ಪ್ರಭುದ್ಧತೆಯ ಸಂಕೇತವಾಗಿ ಪರಿಗಣಿಸಲ್ಪಟ್ಟಿತು. ಈಗಲೂ ಅನೇಕ ಗುಡ್ಡ ಬೆಟ್ಟ ಪಂಗಡದ ಜನರು ತಮ್ಮ ರೂಪಾಕೃತಿಗಳನ್ನು ಭೀಕರ ಕಾಣಿಸಲು ಇವನ್ನು ಬೆಳೆಸುತ್ತಾರೆ. ಇದರಲ್ಲಿ ಸ್ತ್ರೀ ವರ್ಗಕ್ಕೆ ಜೀವನ ಹೋರಾಟದ ಪ್ರಸಂಗಗಳು ಇಲ್ಲವೇ ಇಲ್ಲವಾದುದರಿಂದ ಸಾಮಾನ್ಯವಾಗಿ ಅವರಿಗೆ ಗಡ್ಡ ಮೀಸೆಗಳು ಬೆಳೆಯುವುದಿಲ್ಲ, ಎಂದೊಬ್ಬ ತಜ್ಞರ ವಿವರಣೆ.

ಕ್ರಿಮಿಕೀಟಗಳಿಗೆ ಕಿವಿಗಳಿವೆಯೊ?

ಕೆಲವೇ ಜಾತಿಯ ಕ್ರಿಮಿಕೀಟಗಳಿಗೆ ಒಂದು ತರದ ಶ್ರವಣೋಪಕರ ವ್ಯವಸ್ಥೆಯಿರುತ್ತದೆ. ಕೆಲವಕ್ಕೆ ಕಾಲುಗಳಲ್ಲೂ, ಕೆಲವಕ್ಕೆ ಹೊಟ್ಟೆಯ ಬದಿಯಲ್ಲೂ 'ಕಿವಿ'ಗಳಿರುವುದು ಕಂಡುಬಂದಿದೆ.

ಕಫ, ಶೀತ, ಎದೆನೋವುಗಳನ್ನು ದಿನಂಪ್ರತಿ ಪೆಪ್ಸು ತೆಗೆದು ಕೊಳ್ಳುವುದರಿಂದ ಗುಣಪಡಿಸಿರಿ

ಸಾಂಕ್ರಾಮಿಕ ಕಫ, ಎದೆನೋವು, ಶೀತಾದಿಗಳನ್ನು ಬೆಳೆಯಬಿಡಬೇಡಿರಿ. ಅದು ನಿಮ್ಮ ಜೀವನಾಂದವನ್ನು ಕೆಡಿಸುವುದು. ಕೆಲವು ಪೆಪ್ಸುಗಳನ್ನು ಕೈಯಲ್ಲಿ ತೆಗೆದುಕೊಳ್ಳಿ. ಅಗತ್ಯಬಿದ್ದಾಗೆಲ್ಲ ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳನ್ನು ಸೇವಿಸಿರಿ.

ಬಾಯಲ್ಲಿ ಹಾಕಿದ ಕೂಡಲೇ ಕರಗುವುದು. ಪೆಪ್ಸು ಮಾತ್ರೆಗಳು ಉತ್ತಮ ಔಷಧಿ ತತ್ವದಿಂದ ಕೂಡಿದ ರಸವನ್ನು ನಿಮ್ಮ ಶ್ವಾಸಕೋಶದ ನೋವವನ್ನು ಪೆಪ್ಸು ಗುಣಗೊಳಿಸಿ ಕಫವನ್ನು ನಿಲ್ಲಿಸುವುದು. ಕಂಠನಾಳವನ್ನು ಸರಿಗೊಳಿಸುವುದು.

ಕೆಟ್ಟ ಶೀತ, ಇಂಪ್ಲುಯೆಂಜಾ, ಕಫ, ಮೊದಲಾದುವುಗಳಿಗೆಲ್ಲ ಇದು ಅತ್ಯುತ್ತಮ ಔಷಧಿ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರೀ ಶ್ವಾಸಯೋಗ್ಯಮಾತ್ರೆಗಳು

ಪ್ರಪಂಚ ಪರಿಚಯ

ಭದ್ರತಾ ಮಂಡಳದ ಯುದ್ಧ ನಿಲ್ಲಿಸಿರಿ ಎಂಬ ಹುಕುಮನ್ನು ಡಚ್ ಇಂಡೋನೇಶಿಯನ್ನರು ಎಷ್ಟರಮಟ್ಟಿಗೆ ಪಾಲಿಸಿದ್ದಾರೆಂಬ ವನ್ನು ಅಭ್ಯಸಿಸಲು ಯುಕ್ತ ರಾಷ್ಟ್ರ ಸಂಸ್ಥೆಯು ಆರು ರಾಷ್ಟ್ರಗಳ ರಾಯಭಾರಿಗಳ ನೇಮಿಸಿದೆ. ಈಗ ಅಮೇರಿಕೆಯು ಪ್ರತ್ಯೇಕವಾಗಿ ಈ ಬಗ್ಗೆ ವಿಚಾರಣೆ ನಡೆಸಿದೆಂದೂ ಅದು ಮುಗಿದ ಬಳಿಕ ಮಾತ್ರ ಮಂಡಳದ ವರದಿಗೆ ಅಮೇರಿಕನ್ ಪ್ರತಿನಿಧಿಯು ಸಹಿಹಾಕುವನೆಂದೂ ಡಾ। ಫ್ರೃಚ್‌ರವರು ಸಾರಿದರು.

ಸಂಯುಕ್ತ ರಾಷ್ಟ್ರ ಸಂಘದಿಂದ ಡಚ್ ಇಂಡೋನೇಶಿಯನ್ನರೊಳಗೆ ರಾಜಿ ಇತ್ಯರ್ಥದ ಮಾತುಕತೆಗಳಾಗುವಂತೆ ನಿರೀಕ್ಷಿಸಲು ನೇಮಿಸಲ್ಪಟ್ಟ ತ್ರಿರಾಷ್ಟ್ರ ಸಮಿತಿಯೊಂದರ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ಇಂಡೋನೇಶಿಯದ ಪ್ರಜಾಪ್ರಭುತ್ವದವರು ಡಾ। ಸುಟನ್ ಜಾಹೀರನ್ನು ನೇಮಿಸಿದೆ

ಡೆನ್ಮಾರ್ಕಿನ ಈಗಿನ ಲಿಬರಲ್ ಸರಕಾರದ ಮೇಲೆ ಅಲ್ಲಿನ ಪ್ರಜಾಪ್ರತಿನಿಧಿ ಸಭೆಯು ಪ್ರಗತಿಶೀಲ ಪಕ್ಷದವರು ತಂದ ಅವಿಶ್ವಾಸದ ಠರಾವು ಬಹುಮತದಿಂದ ಸ್ವೀಕೃತವಾಯಿತು. ಈಗ ಅಲ್ಲಿನ ಮುಖ್ಯ ಮಂತ್ರಿಗಳು ಶಾಸನ ಸಭೆಯನ್ನು ರದ್ದುಮಾಡಿ ಹೊಸ ಚುನಾವಣೆಗಳನ್ನು ನಡೆಸುವ ತೆ ಅರಸನ ಅನುಮತಿ ಕೇಳಿದ್ದಾರೆ

ಮುಂದಿನ ಅಮೇರಿಕನ್ ರಕ್ಷಾಗಳೊಳಗಿನ ಪರ್ಷಣ ರಂಗವೆನಿಸುವ ಇಟಲಿಯ ಪ್ರಸ್ತುತ ಗಾಸ್ಪರಿ ಸರಕಾರದ ಮೇಲೆ ತರಲ್ಪಟ್ಟ ಅವಿಶ್ವಾಸದ ಠರಾವು ಬಹುಮತದಿಂದ ಬಿದ್ದುಹೋಯಿತು. ಅಲ್ಲಿ ಸಮತಾವಾದಿಗಳಿಗೆ ಸಾಕಷ್ಟು ಬೆಂಬಲವಿಲ್ಲ

ಇಡೀ ಒವರ್ಸ ದೇಶದಲ್ಲಿ ಮುಂಚಿನ ಸರಕಾರಿ ಅನುಮತಿಯಿಲ್ಲದೆ ಜಾನುವಾರುಗಳನ್ನು ಕಡಿಯಬಾರದೆಂಬ ಶಾಸನ ಕಳೆದ ತಿಂಗಳ 15ರಿಂದ ಜಾರಿಗೆ ಬಂದಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಜುಲ್ಮಾನೆಗಳಿವೆ

ಗ್ರೀಸಿನಲ್ಲಿನ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಲ್ಲಿ ಶುದ್ಧ ರಾಜಕೀಯ ಉದ್ದೇಶವಿದ್ದವರು ಕೇವಲ ಶೇಕಡಾ 40 ಮಂದಿಗಳೆಂದೂ ಆ ಪಾರ್ಟಿಯ ಉಳಿದ ಸದಸ್ಯರು ಖೂನಿಕಾರರೂ, ದರೋಡೆಗಾರರೂ ಪುಂಡರೂ ಆಗಿರುವರೆಂದೂ ಅಮೇರಿಕದ ಆಫ್ರಿಕಾ ಮತ್ತು ಸಮೀಪ ಪೂರ್ವ ದೇಶಗಳ ವ್ಯವಹಾರ ಕಛೇರಿಯ ಅಧಿಕಾರಿ ರೊಯ್ ಹೆಂಡರ್ಸನ್ನರು ತಿಳಿಸಿದರು. ಈ ಪುಂಡರು ಅಲ್ಲಿನ ಕಮ್ಯುನಿಸ್ಟ್ ಮುಖಂಡರ ಕೈಗೊಂಬೆಗಳಾಗಿರುವರೆಂದೂ, ಅಲ್ಲಿನ ಹೆಚ್ಚಿನ ಸಂಖ್ಯೆ ಪ್ರಜಾಪ್ರಭುತ್ವಪ್ರಿಯವಿದ್ದು ನೆಮ್ಮದಿಯನ್ನು ಬಯಸುತ್ತದೆಯೆಂದೂ, ಆದುದರಿಂದ ಅಮೇರಿಕವು ತಾನು ವಚನವಿತ್ತ ಸಹಾಯವನ್ನು ಗ್ರೀಸಿಗೆ ಕೊಟ್ಟೇ ಕೊಡುವುದೆಂದು ಅವರು ತಿಳಿಸಿದರು.

ಸಾಮ್ರಾಜ್ಯಶಾಹಿ ರಾಷ್ಟ್ರಗಳ ಕೈಕೆಳಗಿನ್ನ ವಸಾಹತುಗಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟುಬಿಟ್ಟರೆ "ಜಗತ್ತಿನ ಅನೇಕ ಭಾಗಗಳಲ್ಲಿ ಗಲಿಬಿಲಿಯೂ ಅರಾಜಕತೆಯೂ ಉಂಟಾಗುವುದೆಂದು" ರಾಷ್ಟ್ರ ಸಂಘದ ವಿಶ್ವಸ್ಥರ ಸಭೆಯಲ್ಲಿ ಅಮೇರಿಕದ ಪ್ರತಿನಿಧಿ ಫ್ರೆನ್ಸಿಸ್ ಸ್ಯಾರೆಯವರು ತಿಳಿಸಿದರು.

ಇತ್ತೀಚೆಗೆ ಬ್ರೈಟನ್ನಿನಲ್ಲಿ ನಡೆದ ಕನ್ಸರ್ವೇಟಿವ್ ಪಕ್ಷದ ಪರಿಷತ್ತಿನಲ್ಲಿ ಚರ್ಚಿಲ್ಲರು ಈಗಿನ ಲೇಬರ್ ಸರಕಾರವನ್ನು ಖಂಡಿಸಿ "ಸಾಮ್ರಾಜ್ಯವನ್ನು ಕರಗಿಸುವ ಧೋರಣೆಗಾಗಿ" ಚಡಪಡಿಸಿದರು. ಪ್ರಜಾಪ್ರಭುತ್ವ ಸರಕಾರಗಳು ನಿರಂಕುಶತ್ವದ ಮತ್ತು ಕಮ್ಯೂನಿಸ್ಟ್ ಪ್ರಚೋದನೆಯ ಆಡಳಿತಗಳಿದ್ದಲ್ಲಿ ಅವನ್ನು ಅಣಗಿಸಲು ಸರ್ವಚೈತನ್ಯವನ್ನುಪಯೋಗಿಸಬೇಕೆಂದೂ ಅವರು ಸೂಚಿಸಿದರು.

ಬ್ರಿಟನ್ನು ಭಾರತ ಮತ್ತು ಈಜಿಪ್ತುಗಳಿಗೆ ತೆರಬೇಕಾಗಿರುವ ಸ್ಟರ್ಲಿಂಗ್ ಸಾಲದ ಕುರಿತು ಚರ್ಚಿಲ್ಲರು "ಆ ದೇಶಗಳನ್ನು ಜಪಾನಿ ಜರ್ಮನಿಗಳಿಂದ ರಕ್ಷಿಸಿದಕ್ಕೆ ನಮಗೇ ಋಣಿಗಳಾಗಿರಬೇಕು" ಎಂದು ತಿಳಿಸುತ್ತಾ ಆ ಸಾಲವನ್ನು ರದ್ದುಮಾಡುವಂತೆ ಪ್ರತಿಶರ್ತಗಳನ್ನು ಹಾಕಬೇಕೆಂದೂ ಸಲಹೆ ಕೊಟ್ಟರು.

ಮೂರನೇ ವಿಶ್ವಯುದ್ಧ ಕಿಡಿಯಾದ ಭಾರತ

ಕೆಲವು ಪ್ರತಿಗಾಮಿ ಮುಸ್ಲಿಮ್ ಲೀಗಿನವರನ್ನು, ದೇಶಿ ರಾಜರನ್ನು ಹಿಡಿದು ಅವರ ಒಳಸಂಚಿನ ಮೂಲಕ ಪುನಃ ಭಾರತವನ್ನು ಹಿಡಿಯುವ ಯೋಜನೆಯೊಂದು ಸಂಪೂರ್ಣವಾಗುತ್ತಲಿದೆಯೆಂದು ಹಿಂದೂಸ್ಥಾನ ಸ್ಟೆಂಡಾರ್ಡ್ ಪತ್ರಿಕೆಯ ಲಂಡನ್ ಬಾತ್ಮೀದಾರನು ಒಂದು ವಿಶೇಷ ವರದಿಯಲ್ಲಿ ತಿಳಿಸುತ್ತಾನೆ. ಅವನು ತಿಳಕೊಂಡ ವಿಷಯಗಳ ಸಂಕ್ಷೇಪ ಸಂಗತಿಗಳು ಹೀಗಿವೆ.

ಭಾರತದಲ್ಲಿನ ಮುಸಲ್ಮಾನರ ಮೇಲೆ ಸಹಾನುಭೂತಿ ಹುಟ್ಟಿಸಿ ನೆಹರು ಸರಕಾರದ ಮೇಲೆ ದ್ವೇಷವನ್ನುಂಟುಮಾಡುವ ಅಗಾಧ ಅಪಪ್ರಚಾರವು ಮಧ್ಯಪೂರ್ವದ ಅರಬ ದೇಶಗಳಲ್ಲಿ ಬಲವಾಗಿ ನಡೆಯುತ್ತಿದೆ. ಅರಬ ಲೀಗಿನ ಕಾರ್ಯದರ್ಶಿ ಅಜ್ಜಾಮ್ ಪಾಶಾರವರ ಹತ್ತಿರದ ಸಂಪರ್ಕವಿದ್ದವರಿಂದ ತಿಳಿದುಬಂದ ಸಂಗತಿಯೆಂದರೆ ಕೆಲವೊಂದು ಹಿತಸಾಧಕರಿಂದ ನಡೆದ ಅಪಪ್ರಚಾರದ ಪರಿಣಾಮವಾಗಿ ಭಾರತದಲ್ಲಿನ ಮುಸಲ್ಮಾನರು ಲೀಗಿನ ಮುಂದಾಳುತನದ ಹಿಂದೂಗಳಿಂದ ವಿಶಾಲ ಸಂಖ್ಯೆಯಲ್ಲಿ ಕೊಲ್ಲಲ್ಪಡುತ್ತಿರುವರೆಂದೂ, ಇಸ್ಲಾಮ್ ಧರ್ಮವು ಗಂಡಾಂತರಕ್ಕೊಳಗಾಗಿದೆಯೆಂದೂ ಅರಬರು ಉದ್ವೇಗಗೊಂಡಿರುವರು. ಈ ಅಪಪ್ರಚಾರಕರು ಭಾರತದ ಮುಸ್ಲಿಮರ ಸಹಾಯಕ್ಕೆ ಮುಸ್ಲಿಮ್ ದೇಶಗಳು ಮುಂದಾಗಬೇಕೆಂದೂ ವಿನಂತಿಸಿಕೊಂಡಿರುತ್ತಾರೆ.

ದಂಗೆಯ ಚಲಚಿತ್ರ

ಲಂಡನಿನ ಮುಸ್ಲಿಂ ಲೀಗಿನವರು ಸಂಯುಕ್ತ ರಾಷ್ಟ್ರ ಸಂಘವು ಭಾರತದ ಮಧ್ಯಸ್ಥಿಕೆವಹಿಸುವಂತೆ ಚಳವಳ ಮಾಡುತ್ತಿದ್ದಾರೆ. ಪಂಜಾಬ್ ದಂಗೆಯ ಚಲಚಿತ್ರಗಳನ್ನು ಸೀಖರು ಅಪರಾಧಿಗಳೆಂದು ತೋರುವಂತಹ ರೀತಿಯಲ್ಲಿ ತೆಗೆದು ಪ್ರದರ್ಶಿಸಲಾಗಿದೆ. ಬರಗಾಲದ ಚಿತ್ರಗಳನ್ನು ತೆಗೆದು ತೋರಿಸಲು ಬ್ರಿಟಿಷ್ ಚಲಚಿತ್ರ ಸಂಸ್ಥೆಗಳು ಮನಸ್ಸುಮಾಡಿರಲಿಲ್ಲ. ಈಗ ಪ್ರತಿವಾರವೂ ಪಂಜಾಬ ದಂಗೆಯ ಚಿತ್ರಗಳು ಪ್ರದರ್ಶಿತವಾಗುತ್ತಿವೆ.

ಅದೇ ರೀತಿ ಮಧ್ಯಪೂರ್ವದಲ್ಲೂ 'ಹಿಂದೂ ಸೀಖರ ಅತ್ಯಾಚಾರ'ವನ್ನು ತೋರಿಸುವ ವಾರ್ತಾ ಚಿತ್ರಗಳು ಪ್ರದರ್ಶಿತವಾಗುತ್ತಲಿವೆ. ಮಿ। ಜಿನ್ನಾರವರು ಕೆಲವು ಅರಬ ದೇಶದೊಡನೆ ಗುಪ್ತ ಒಪ್ಪಂದವನ್ನು ಈ ಕುರಿತು ಮಾಡಿಕೊಂಡಿರುವರೆಂದೂ ನಂಬಲರ್ಹವಾದ ಕಡೆಗಳಿಂದ ತಿಳಿದು ಬರುತ್ತದೆ.

ರಕ್ತದ ಬೆದರಿಕೆ

ಬ್ರಿಟನಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು "ಭಾರತಕ್ಕೂ ಪಾಕಿಸ್ತಾನಕ್ಕೂ ಸರಿಸಮವಾಗಿ ಸೈದಕೀಯ ಸಹಾಯ ಬ್ರಿಟನ್ ಅಮೇರಿಕಾಗಳಿಂದ ಕಳುಹಲ್ಪಡಬೇಕು. ಬ್ರಿಟಿಷ್ ಸೈನಿಕರನ್ನು ಕೇವಲ ಐರೋಪ್ಯರ ಮತ್ತು ಸರಿಹದ್ದಿನ ರಕ್ಷಣೆಗೆ ಮಾತ್ರ ಇಟ್ಟಿರಬೇಕು" ಎಂದು ಬರೆದಿದ್ದರೂ ಟೋರಿ ಪಕ್ಷದ ಡೈಲಿ ಗ್ರಾಫಿಕ್ ಪತ್ರಿಕೆ ಬಹಿರಂಗವಾಗಿ "ಭಾರತವನ್ನು ಪುನಃ ಹಿಡಿಯಬೇಕು" ಎನ್ನುವ ಸೂಚನೆಯನ್ನು ಕೊಟ್ಟಿದೆ. ಅದೇ ಪತ್ರಿಕೆ ಮತ್ತೆ ಹೀಗೆ ಬರೆದಿದೆ: "ಬ್ರಿಟನ್ನು ಆಶಿಸ್ಟ್ ಮಾಡಿದಂತೆ ರಕ್ತವು ಸುರಿಯಲಿಲ್ಲ. ಭಾರತದಲ್ಲಿ ನಡೆಯುತ್ತಿರುವುದು ಮೊದಲಿನಿಂದ ಆಸಕ್ತಿದಾಯಕವಾಗಿ ಸಿಂಹಾವಲೋಕನ ಮಾಡಲಾಗುವುದು. ಶುಭ ಮುಹೂರ್ತವೊಂದರಲ್ಲಿ ಕೆಂಪು ಸೇನೆಯು ನೆಲ ಇಲ್ಲವೆ ಆಕಾಶ ಮಾರ್ಗವಾಗಿ ಭಾರತವನ್ನು ಪ್ರವೇಶಿಸಿ ದೇಶವನ್ನು ಸ್ವಮಿತದಲ್ಲಿರಿಸುವುದು."

ಭಾರತವನ್ನು ಮೂರನೇ ವಿಶ್ವಯುದ್ಧದ ಪ್ರಾರಂಭ ರಂಗವನ್ನಾಗಿ ಮಾಡಿಕೊಳ್ಳುವ ಎಂಗ್ಲೋ ಅಮೇರಿಕನ್ನರ ಕುತಂತ್ರವಿದಾಗಿರಬಹುದೇ ಎಂದು ವಿಚಾರವಂತ ಜನರು ಶಂಕಿಸಹತ್ತಿದ್ದಾರೆ.

ಇತ್ತೀಚೆಗೆ ನಡೆದ ಪಾಕಿಸ್ತಾನ ಮತ್ತು ಬ್ರಿಟಿಷ್ ಸರಕಾರದೊಳಗಿನ ಪತ್ರವ್ಯವಹಾರವೂ, ಚರ್ಚಿಲ್ಲರ ಉದ್ಗಾರಗಳೂ ಮೇಲ್ಕಂಡ ಸಂಗತಿಗಳಿಗೆ ಬಲವಾದ ಆಧಾರಗಳಾಗಿವೆ.

ಗಾಂಧೀ ವಿಚಾರ ದರ್ಪಣ

ರಹಸ್ಯ ಶಕ್ತಿ

ಎಲ್ಲವನ್ನೂ ಆವರಿಸಿಕೊಂಡಿರುವ ಅವರ್ಣನೀಯವಾದೊಂದು ನಿಗೂಢ ಶಕ್ತಿಯಿದೆ. ನೋಡಲಾರೆನಾದರೂ ನನ್ನ ಅಂತರಾತ್ಮಕ್ಕದು ಭಾಸವಾಗುತ್ತದೆ. ಅದೃಷ್ಟನಾದೀ ಶಕ್ತಿಯೇ ಎಲ್ಲಾ ನಿದರ್ಶನಗಳನ್ನು ಮೀರಿ ತನ್ನ ಅಸ್ತಿತ್ವವನ್ನು ತೋರಿಸುತ್ತದೆ. ಕಾರಣ ನನ್ನೆಲ್ಲಾ ಇಂದ್ರಿಯಾನುಭವಕ್ಕೊಳಗಾಗುವ ಇತರ ವಿಷಯಗಳಂತಿರುವುದಿಲ್ಲ. ಇದು ಇಂದ್ರಿಯ ಸಾಮರ್ಥ್ಯಕ್ಕೆ ಮೀರಿದ್ದು. ಆದರೆ ದೇವರ ಅಸ್ತಿತ್ವವನ್ನು ಒಂದು ನಿರ್ದಿಷ್ಟ ಮಿತಿಯ ತನಕ ತರ್ಕಸಿದ್ಧಾಂತಪಡಿಸಬಹುದು.

—ಗಾಂಧೀಜಿ

ಪತ್ರಿಕೋದ್ಯೋಗಿಗೆ ಎಚ್ಚರಿಕೆ

ಜೊರ್ಜ್ ಸ್ಲೊಕೊಂಬೆ ಎಂಬ ಆಂಗ್ಲ ಪತ್ರಿಕಾ ಪ್ರತಿನಿಧಿಯೊಬ್ಬನು ಹಿಂದೆ ಪ್ರಿನ್ಸ್ ಆಫ್ ವೇಲ್ಸನು ಭಾರತಕ್ಕೆ ಬಂದಿದ್ದಾಗ ಗಾಂಧೀಜಿ ಅವರಿಗೆ ಉದ್ಧಂತ ನಮಸ್ಕಾರ ಮಾಡಿದ್ದಾಗಿ ವರದಿ ಮಾಡಿದ್ದನು. ಈ ಕುರಿತು ಅವರು ಹೀಗೆಂದಿದ್ದರು: "ಈ ತರದ ಕಲ್ಪನೆಯು ಯಾರಿಗೂ ಭೂಷಣವಲ್ಲ. ಭಾರತದಲ್ಲಿನ ಅಸ್ಪೃಶ್ಯರೆನಿಸುವ ಅತಿ ದೀನ ತೋಟಿಗನಾದರೂ ನಾನು ಅಪ್ಪಬೇಳುವೆ. ಕಾರಣ ಶತಮಾನಗಳಿಂದ ಅವನು ನಮ್ಮಿಂದ ತುಳಿತಕ್ಕೊಳಗಾಗಿರುವನು. ಆ ಕಾರ್ಯದಲ್ಲಿ ನನ್ನ ಹೊಣೆಯಿದೆ. ನಾನವನ ಕಾಲಿನ ಧೂಳನ್ನು ಒರಸಲೂ ಸಿದ್ಧನಿದ್ದೇನೆ. ಆದರೆ ಅರಸನೊಬ್ಬನಿಗೆ ಎಂದೂ ಸಾಷ್ಟಾಂಗ ಬೀಳಲಿಚ್ಛಿಸುವುದಿಲ್ಲ. ಮತ್ತೆ ಯುವರಾಜನಾದ ಪ್ರಿನ್ಸ್ ಆಫ್ ವೇಲ್ಸನ ಮಾತೇನು!

ಪ್ರತಿಜ್ಞೆಗಳ ಸಂಕೇತ

ಎಲ್ಲಾ ನಿರ್ಧಾರ ಇಲ್ಲವೆ ಪ್ರತಿಜ್ಞೆಗಳ ಮೂರ್ತಿಯೇ ದೇವರು. ತನ್ನ ಸ್ವಂತ ಸೂತ್ರದಿಂದವನು ಒಂದೇ ಒಂದು ಕೂದಲಿನಷ್ಟು ತಪ್ಪಿದರೆ ದೇವರು ದೇವರೆನಿಸಲಿಕ್ಕಿಲ್ಲ. ಸೂರ್ಯನು ನಿಯಮಗಳನ್ನು ತಪ್ಪದೆ ಅನುಸರಿಸುವ ಮಹಾ ಶಕ್ತಿ. ಆದುದರಿಂದ ಜ್ಯೋತಿಷ್ಯ ಗಣನೆಯನ್ನೂ ಪಂಚಾಂಗ ನಿರ್ಮಿಸಲೂ ಸಾಧ್ಯ. ಕ್ರಮಬದ್ಧ ಕಾಲಗಣನೆಗೆ ಪ್ರಖ್ಯಾತಿಪಟ್ಟದ್ದರಿಂದ ನಾವು ಪಂಚಾಂಗಗಳನ್ನು ಇಟ್ಟುಕೊಳ್ಳುತ್ತೇವೆ. ಎಲ್ಲ ವ್ಯವಹಾರಗಳೂ ಕೊಟ್ಟ ವಚನಗಳನ್ನು ಪಾಲಿಸುವುದರ ಮೇಲೇ ಹೊಂದಿಕೊಂಡಿವೆ. ಆದುದರಿಂದಲೇ ಪ್ರತಿಜ್ಞೆಗಳು ವಿಶ್ವದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಗುಣಶಕ್ತಿಯನ್ನೂ ವ್ಯಕ್ತಿತ್ವ ಶ್ರೇಷ್ಠತೆಯನ್ನೂ ಅಭಿವೃದ್ಧಿಪಡಿಸಲು ನಮಗವು ಇಲ್ಲದೆ ಸಾಧ್ಯವಿಲ್ಲ. ಆದುದರಿಂದ ಪ್ರತಿಜ್ಞೆಗಳ ಮಹತ್ವವು ನಮ್ಮಿಂದ ಕಡೆಗಾಣಿಸಲ್ಪಡದಿರಲಿ.

—ಗಾಂಧೀಜಿ.

KANARA COMMERCIAL BANK LTD.

PUTTUR

H. O Puttur.] Estd. 1920 [Branch Vittal.

All kinds of Banking Business transacted.

Deposits: Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ಸ್ವದೇಶಾಭಿಮಾನಿ

ತಾರೀಕು 10-10-1947

ಪಾಕಿಸ್ಥಾನದವರ ಅಪಪ್ರಚಾರ

ಪಶ್ಚಿಮ ಪಾಕಿಸ್ಥಾನದ ಹಿಂದೂ ಮತ್ತು ಸೀಖ ಮುಂದಾಳುಗಳೊಂದು ಹೇಳಿಕೆಯನ್ನು ಪ್ರಕಟಿಸಿದ್ದಾರೆ ಇದರಲ್ಲಿ ಪಶ್ಚಿಮ ಪಾಕಿಸ್ಥಾನದಲ್ಲಿ ಅಂದರೆ ಪಂಜಾಬ, ಸಿಂಧ, ಗಡಿನಾಡು ಹಾಗೂ ಬಲುಚಿಸ್ಥಾನದಲ್ಲಿ ಹಿಂದೂ ಮತ್ತು ಸೀಖ ಜನರು ವಾಸಿಸುವುದು ಅಸಾಧ್ಯವೆಂದೂ ತಮ್ಮನ್ನು ಹಿಂದೀ ಸರಕಾರದವರು ಅಲ್ಲಿಂದ ಸಾಗಿಸಲು ಏರ್ಪಾಡು ಮಾಡಬೇಕೆಂದೂ ಕೇಳಿದ್ದಾರೆ ಪಾಕಿಸ್ಥಾನದವರು ಕಡಮೆ ಸಂಖ್ಯಾಕರಿಗೆ ಎಲ್ಲಾ ರಕ್ಷಣೆಯನ್ನು ಕೊಡುವುದಾಗಿ ವಾಗ್ದಾನ ಮಾಡುತ್ತಿರುವುದೆಲ್ಲ ಲೋಕದ ಕಣ್ಣಿಗೆ ಮಣ್ಣೆರಚಲಿಕ್ಕೆ ಮಾತ್ರವಿದ್ದು ಇವರಿಗೆ ನಿಜವಾಗಿಯೂ ಕಡಮೆ ಸಂಖ್ಯಾಕರು ಅಂದರೆ ಹಿಂದೂ ಮತ್ತು ಸೀಖ ಜನರು ತಮ್ಮಲ್ಲಿರುವುದೇ ಇಷ್ಟವಿಲ್ಲವೆಂದೂ ಇಲ್ಲಿ ಇವರ ಮೇಲೆ ಅಮಾನುಷ ಅತ್ಯಾಚಾರಗಳು ನಡೆಸಲ್ಪಡುತ್ತಿವೆಯೆಂದೂ ಈ ಕುರಿತು ನಿಜವಾದ ವಾರ್ತೆ ಹೊರಗೆ ಹೋಗದಂತೆ ಸರಕಾರ ತಡೆಹಾಕುತ್ತಿದೆಯೆಂದೂ ಈ ಪ್ರಕಟಣೆಯಲ್ಲಿ ಹೇಳಲಾಗಿದೆ

ಪ್ರಕಟಣೆಗೆ ಸಹಿ ಮಾಡಿದವರು ದೇಶಕ್ಕಾಗಿ ಹಲವು ವರ್ಷಗಳಿಂದ ದುಡಿಯುತ್ತಿದ್ದ ಕಾಂಗ್ರೆಸ್ ಮುಂದಾಳುಗಳೇ ಇದ್ದಾರೆ ಹಿಂದೂ ಮುಸ್ಲೀಮರ ಐಕ್ಯಕ್ಕಾಗಿ ದುಡಿದವರು ಅಂದಮೇಲೆ ಇದರಲ್ಲಿ ಹೇಳಿರುವ ಸಂಗತಿಗಳು ವಸ್ತುಸ್ಥಿತಿಯೇ ಇರಬೇಕು

ಪೂರ್ವ ಮತ್ತು ಪಶ್ಚಿಮ ಪಂಜಾಬುಗಳಲ್ಲಿ ನಡೆದ ಅತ್ಯಾಚಾರಗಳನ್ನು ತಡೆಗಟ್ಟಲು ಪಾಕಿಸ್ಥಾನ ಹಾಗೂ ಹಿಂದೀ ಸರಕಾರದವರು ಹಲವು ಭಾರಿ ಒಟ್ಟುಸೇರಿ ಇಬ್ಬರೂ ಅನುಸರಿಸುವ ಅನೇಕ ಕಾರ್ಯಕ್ರಮಗಳ ನಿರ್ಣಯಗಳಾಗಿ ಇತ್ತಂಡದವರ ದಸ್ಕತುಗಳೊಡನೆ ಪ್ರಕಟವಾಗುತ್ತಲಿದ್ದುವಷ್ಟೆ ಇಂಥ ಏರ್ಪಾಡುಗಳನ್ನು ಪೂರ್ವ ಪಂಜಾಬದಲ್ಲಿ ಸರಿಯಾಗಿ ಪಾಲಿಸುವ ಯತ್ನಗಳು ನಡೆದರೂ ಪಾಕಿಸ್ಥಾನದವರು ಅವನ್ನು ಪಾಲಿಸಿಲ್ಲವೆಂದು ತಿಳಿದುಬರುತ್ತದೆ

ಪೂರ್ವ ಪಂಜಾಬದಲ್ಲಿ ಹಾಗೂ ಡೆಲ್ಲಿ ಮೊದಲಾದ ಇನ್ನೂ ಕೆಲವು ಕಡೆಗಳಲ್ಲಿ ಇಲ್ಲಿಯ ಬಹುಸಂಖ್ಯಾಕರಾದ ಹಿಂದೂ ಮತ್ತು ಸೀಖ ಜನರು ಕಡಮೆ ಸಂಖ್ಯಾಕರಾದ ಮುಸ್ಲೀಮರ ಮೇಲೆ ಬಹಳ ಅನ್ಯಾಯ ಮಾಡಿರುವರೆಂಬುದೂ ಅಮಾನುಷ ಅತ್ಯಾಚಾರಗಳನ್ನು ಮಾಡಿರುವರೆಂಬುದೂ ನಿಜವಿರುತ್ತದೆ ಇಂಥ ಅತ್ಯಾಚಾರಗಳನ್ನು ನಿಲ್ಲಿಸಲಿಕ್ಕೆ ಹಿಂದೀ ಸರಕಾರ ಮತ್ತು ಇಲ್ಲಿಯ ಮುಂದಾಳುಗಳು ಸರ್ವ ಯತ್ನಗಳನ್ನು ಮಾಡಿದ್ದಾರೆ ಮತ್ತು ಮಾಡುತ್ತ ಇದ್ದಾರೆ ತಮ್ಮ ಜನರು ಮಾಡುವ ಅನ್ಯಾಯಗಳನ್ನು ಸರಿಯಾಗಿ ಪ್ರಕಟಿಸಿ ಅವನ್ನು ಖಂಡಿಸಲು ಎಂದೂ ಹಿಂಜರಿದಿಲ್ಲ ಇಂಥ ಘಟನೆಗಳ ವಾರ್ತೆ ಜಗತ್ತಿಗೇನೆ ಪ್ರಕಟವಾಗಿವೆ ಪಶ್ಚಿಮ -ಪಾಕಿಸ್ಥಾನದ ಪರಿಸ್ಥಿತಿ ಇದಕ್ಕೆ ತೀರ ವಿರುದ್ಧವಿರುತ್ತದೆ. ಪಾಕಿಸ್ಥಾನ ಸರಕಾರದವರು ಕೊಡುತ್ತಿರುವ ಪ್ರಕಟಣೆಗಳಲ್ಲಿ ಪೂರ್ವ ಪಂಜಾಬದ ಅತ್ಯಾಚಾರಗಳ ವರ್ಣನೆಯೇ ಇದ್ದು ಈ ಕುರಿತು ಖಂಡನೆಗಳೇ ಬರುತ್ತಿವೆಯಲ್ಲದೆ ತಮ್ಮಲ್ಲಿ ನಡೆಯುವ ಅನ್ಯಾಯದ ಕುರಿತು ಒಂದಕ್ಷರವನ್ನಾದರೂ ಹೇಳುತ್ತ ಇಲ್ಲ. ಮಾತ್ರವಲ್ಲ ಪ್ರಾಯಶಃ ಅಲ್ಲಿಯ ವಾರ್ತೆಗಳು ಹೊರಗೆ ಪ್ರಕಟವಾಗದಂತೆ ಜಾಗ್ರತೆ ವಹಿಸಲಾಗುತ್ತಿದೆಯೆಂಬ ಮಾತು ಬಲುಮಟ್ಟಿಗೆ ಸತ್ಯವಿರುತ್ತದೆ ಇದು ಅತ್ಯಂತ ಶೋಚನೀಯ ಪರಿಸ್ಥಿತಿಯೆನ್ನಬೇಕು.

ಇದೆಲ್ಲದರ ಮೇಲೆ ಮತ್ತೆ ಪಾಕಿಸ್ಥಾನ ಸರಕಾರದವರು ಹಿಂದೀ ಸರಕಾರ ಹಾಗೂ ಇಲ್ಲಿಯ ಜನರ ಮೇಲೆ ಲೋಕದ ಎದುರು ದೂರು ಹೊರಿಸಲು ಯತ್ನಿಸುತ್ತಿದ್ದಾರೆ ಪಾಕಿಸ್ಥಾನ ಹೊಸ ರಾಜ್ಯ ಇದರ ಅಸ್ತಿತ್ವ ಹೊರಗಿನವರಿಗೆ ಇಷ್ಟವಿಲ್ಲ ಇದನ್ನು ಮುರಿಯಲಿಕ್ಕಾಗಿ ಇದೆಲ್ಲ ಮುಸ್ಲೀಮರ ಮೇಲೆ ಅತ್ಯಾಚಾರಗಳು ಹಿಂದೀ ಸರಕಾರದ ಸಹಾಯದಿಂದಲೇ ನಡೆಯುತ್ತಿವೆ ಯುನ್ನಾಟೆಡ್ ನೇಶನ್ಸಿನವರು ತಮ್ಮ ಜನರನ್ನು ಇಲ್ಲಿಗೆ ಕಳುಹಿಸಿ ವಸ್ತುಸ್ಥಿತಿಯನ್ನು ಕಣ್ಣಾರೆ ಕಾಣುವ ಏರ್ಪಾಡು ಮಾಡಬೇಕು ಈ ರೀತಿ ಕೇಳುವುದರಲ್ಲಿ ಹಿಂದೀ ಸರಕಾರ ಮತ್ತು ಪಾಕಿಸ್ಥಾನ ಸರಕಾರ ಇಬ್ಬರೂ ಕೂಡಿ ಕೇಳೋಣವೆನ್ನುತ್ತಾರೆ ಪಾಕಿಸ್ಥಾನ ಹಾಗೂ ಹಿಂದೀ ಸರಕಾರ ಇವೆರಡೂ ಈಗ ಬ್ರಿಟಿಷ ಸಾಮ್ರಾಜ್ಯದ ವಸಾಹತುಗಳಷ್ಟೆ ಪಾಕಿಸ್ಥಾನದವರು ಇಂಗ್ಲಾಂಡಿನ ಸರಕಾರ ಹಾಗೂ ಇತರ ಕೆನಡಾ, ದಕ್ಷಿಣ ಆಫ್ರಿಕ ಆಸ್ಟ್ರೇಲಿಯಾ ಮೊದಲಾದ ಸಾಮ್ರಾಜ್ಯಾಂತರ್ಗತ ಸರಕಾರಗಳಿಗೂ ತಮ್ಮ ಮೇಲಾಗುತ್ತಿರುವ ಈ ಅನ್ಯಾಯದಿಂದ ತಮ್ಮನ್ನು ರಕ್ಷಿಸಲು ಸಹಾಯಮಾಡಬೇಕೆಂದು ಕೇಳಿದ್ದಾರೆ ಯುನ್ನಾಟೆಡ್ ನೇಶನ್ಸ್ ಸಭೆಯಲ್ಲಿ ಪಾಕಿಸ್ಥಾನದ ಪ್ರತಿನಿಧಿ ತಮ್ಮ ಜನರ ಮೇಲೆ ಹಿಂದೀ ಸರಕಾರ ಅಮಾನುಷ ಅತ್ಯಾಚಾರ ನಡೆಸುತ್ತಿದೆಯೆಂದು ದೂರು ಹೇಳಿದ್ದಾರೆ ಈ ರೀತಿ ಎಲ್ಲಾ ತಪ್ಪು ಹಿಂದೀ ಸರಕಾರ ಹಾಗೂ ಇಲ್ಲಿಯ ಜನರ ಮೇಲೆ ಹೊರಿಸಲು ಬೇಕಾದಷ್ಟು ಪ್ರಚಾರ ಕಾರ್ಯ ಅಥವಾ ಅಪಪ್ರಚಾರದ ಕಾರ್ಯ ಪಾಕಿಸ್ಥಾನದವರಿಂದ ನಡಿಸಲಾಗುತ್ತಿದೆ

ವಸ್ತುಸ್ಥಿತಿಯನ್ನು ನೋಡಿ ಪ್ರಕಟಿಸಲು ಯುನ್ನಾಟೆಡ್ ನೇಶನ್ಸಿನ ಪ್ರತಿನಿಧಿಗಳು ಬರುವುದಾದರೂ ಏತಕ್ಕೆ? ಬಂದರೆ ಹಿಂದೀ ಸರಕಾರಕ್ಕೆ ಆಕ್ಷೇಪವಿರುವಂತಿಲ್ಲ ಇದೀ ಹಿಂದೂಸ್ಥಾನದಲ್ಲಿ ನಿಷ್ಪಕ್ಷಪಾತ ದೃಷ್ಟಿಯುಳ್ಳ ಹ್ಯಾಕೋರ್ಟು ಜಡ್ಜರೇ ಮೊದಲಾದ ನ್ಯಾಯಸ್ಥರನ್ನು ಎರಡು ಸರಕಾರಗಳೂ ಆರಿಸಿ ಒಂದು ಶಿಷ್ಟಮಂಡಲದ ಮೂಲಕ ಸರಿಯಾದ ವಸ್ತುಸ್ಥಿತಿಯನ್ನು ಪರಿಶೀಲಿಸಿ ಪ್ರಕಟಿಸಲಿ ಇದಕ್ಕೆ ಪಾಕಿಸ್ಥಾನವೆಂದೂ ಒಪ್ಪುವಂತಿಲ್ಲ ಬ್ರಿಟಿಷ ಸಾಮ್ರಾಜ್ಯದೊಡನೆ ದೂರು ಕೊಟ್ಟಲ್ಲಿ ಸಾರ್ಥಕತೆಯಾದರೂ ಏನು? ಅವರ ಪ್ರತಿನಿಧಿಯೇ ಆದ ಲಾರ್ಡ ಮೌಂಟ್‌ಬೇಟನರೇ ಹಿಂದೀ ಸರಕಾರದ ಗವರ್ನರ ಜನರಲರಾಗಿ ಇರುವಾಗ ಇಂಗ್ಲಿಷ್ ಸರಕಾರಕ್ಕೆ ಇಲ್ಲಿಯ ನಿಜಸ್ಥಿತಿ ತಿಳಿದಿರಲಿಕ್ಕೆ ಬೇಕು ಈ ಪರಿಸ್ಥಿತಿಯನ್ನು ನೀವೆ ಇತ್ತಂಡದವರು ಸೇರಿ ತೀರ್ಮಾನಿಸಿಕೊಳ್ಳಿರೆಂಬ ಉತ್ತರ ಮಾತ್ರ ಅವರು ಕೊಡಬಲ್ಲರು ಯುನ್ನಾಟೆಡ್ ನೇಶನ್ ಸಭೆಯಲ್ಲಿ ದೂರು ಹೇಳಿದಾಗ ಅಲ್ಲಿದ್ದ ಹಿಂದೀ ಸರಕಾರದ ಪ್ರತಿನಿಧಿ ಸರಿಯಾದ ಉತ್ತರ ಕೊಟ್ಟರು ಹಿಂದೀ ಸರಕಾರ ಹಿಂದುಗಳ ಸರಕಾರ ಮಾತ್ರವಿರದೆ ಇದರಲ್ಲಿ ಮುಸ್ಲಿಮರೂ ಇದ್ದಾರೆಂಬುದನ್ನೂ ಹಿಂದೀ ಸರಕಾರಕ್ಕೆ ಸೇರಿದ ಪ್ರದೇಶಗಳಲ್ಲಿ ಮಿಲಿಯಾಂತರ ಮುಸ್ಲಿಮರು ಈಗ ಶಾಂತರೀತಿಯಿಂದ ಜೀವಿಸುತ್ತ ಇರುವ ಪ್ರದೇಶವೇ ಹೆಚ್ಚೆಂದೂ ಸ್ಪಷ್ಟಪಡಿಸಿದರು

ಪಾಕಿಸ್ಥಾನ ಸರಕಾರದವರಾದರೂ ಈ ಬಗೆಯ ಧೋರಣೆ ಏತಕ್ಕೆ ಅನುಸರಿಸುತ್ತಿದ್ದಾರೆ? ಇದರಿಂದ ಅವರಿಗಾಗುವ ಸಾರ್ಥಕತೆಯಾದರೂ ಏನು? ತಮ್ಮ ಜನರು ಮಾಡುತ್ತಿರುವ ಅತ್ಯಾಚಾರಗಳನ್ನು ತಡೆಗಟ್ಟಲು ಪಾಕಿಸ್ಥಾನದ ಮುಂದಾಳುಗಳು ಪ್ರಾಯಶಃ ಸಮರ್ಥರಿಲ್ಲ ತಾವೇ ಬಿತ್ತಿದ ದ್ವೇಷದ ಬೀಜದ ಪರಿಣಾಮ ಈಗ ಉಣ್ಣಬೇಕಾದ ಪ್ರಸಂಗ ಬಂದಿದೆಯೆಂದು ಕಾಣುತ್ತದೆ ಈ ತಮ್ಮ ದೌರ್ಬಲ್ಯವನ್ನು ಅಡಗಿಸಲು ಇದೆಲ್ಲ ಅಪಪ್ರಚಾರವೆಂದು ಕಾಣುತ್ತದೆ ಜರ್ಮನಿಯಲ್ಲಿ ಹಿಟ್ಲರ್ ಕಡೆಯ ನಾಜಿ ಜನರ ಕ್ರಮಗಳೆಲ್ಲವನ್ನೂ ಪಾಕಿಸ್ಥಾನದವರು ಅನುಸರಿಸುತ್ತಿದ್ದಾರೆಂದು ಪಂಡಿತ ಜವಾಹರಲಾಲರು ಆಗಿಂದಾಗ ಹೇಳುತ್ತಿದ್ದಾರೆ ಈ ಮಾತುಗಳು ಅಕ್ಷರಶಃ ಸತ್ಯವಿರುವಂತೆ ಕಾಣುತ್ತದೆ ಪೆಸಿಸ್ಟ ಸರ್ವಾಧಿಕಾರಿಗಳ ಪರಿಸ್ಥಿತಿಯಲ್ಲಿಯೇ ಪಾಕಿಸ್ಥಾನದ ಮುಂದಾಳುಗಳಿದ್ದು ಅದೇಬಗೆಯ ಧೋರಣೆ ಕೈಕೊಂಡಿದ್ದಾರೆ

ಇದರ ಪರಿಣಾಮವಾದರೂ ಏನಾದೀತು? ಇದೇ ರೀತಿ ಪಾಕಿಸ್ಥಾನದವರು ಅನ್ಯಾಯ ಮಾಡುತ್ತ ಹೋದರೆ ಇತ್ತಂಡಗಳೊಳಗೆ ಯುದ್ಧ ಪ್ರಾಪ್ತಿಯಾಗುವುದೆ ಖಚಿತವೆಂದು ಮಹಾತ್ಮಾ ಗಾಂಧಿಯವರು ಸಾರಿಹೇಳುತ್ತಿದ್ದಾರೆ ಪ್ರಾಯಶಃ ಪಾಕಿಸ್ಥಾನದವರಿಗೆ ಒಂದು ಯುದ್ಧವನ್ನು ಕೈಕೊಳ್ಳೋಣವೆಂದಿದೆಯೋ ಏನೋ? ಯುದ್ಧ ಒಂದಲ್ಲಿ ಅಲ್ಲಿಯ ಮುಂದಾಳುಗಳ ಸ್ಥಾನ ಭದ್ರವಾಗುವುದಷ್ಟೆ? ತಮ್ಮ ಪ್ರಜೆಗಳ ತಮ್ಮ ಮುಸ್ಲಿಮ ಪ್ರಜೆಗಳ ಹಿತವನ್ನಾದರೂ ಇವರು ರಕ್ಷಿಸಲು ಆತುರತೆ ತೋರದಿರುವುದು ಆಶ್ಚರ್ಯ

ಹಿಂದೀ ಸರಕಾರದವರೂ ಇಲ್ಲಿಯ ಜನರೂ ಪಾಕಿಸ್ಥಾನದವರು ಏನ್ ಮಾಡಲಿ ತಾವು ನ್ಯಾಯರೀತಿಯಲ್ಲಿ ವರ್ತಿಸಲು ದೃಢ ನಿರ್ಧಾರ ಮಾಡುವುದೆ ಈ ಶೋಚನೀಯ ಪರಿಸ್ಥಿತಿಯ ಏಕಮಾತ್ರ ನಿವಾರಣೋಪಾಯವಿರುತ್ತದೆ ನಮ್ಮಲ್ಲಿ ಕಡಮೆ ಸಂಖ್ಯಾಕರಿರುವ ಮುಸ್ಲೀಮರಿಗೆ ಪೂರ್ಣ ನ್ಯಾಯದಲ್ಲಿ ನಡೆಸಬೇಕು ಅವರ ಯಾವ ಹೆದರಿಕೆಯೂ ಇಲ್ಲದೆ ಇತರ ಪ್ರಜೆಗಳೊಡನೆ ಸಮಾನ ಹಕ್ಕು ಬಾಧ್ಯತೆಯುಳ್ಳವರಾಗಿ ಶಾಂತರೀತಿಯಿಂದ ಜೀವಿಸುವಂತಾಗಬೇಕು ಇಂಥ ಧೋರಣೆಯನ್ನೇ ಕೈಕೊಳ್ಳಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನಿರ್ಣಯಿಸಿರುತ್ತದೆ ಹಿಂದೀ ಸರಕಾರವೂ ಇದನ್ನೇ ಅನುಸರಿಸುತ್ತಿದೆ

ಮಹಾತ್ಮಾ ಗಾಂಧಿಯವರು ಪೂರ್ಣ ಆಶಾವಾದಿಗಳು ಇಂಥ ಪರಿಸ್ಥಿತಿಯಲ್ಲಿ ಕೂಡಾ ಪಾಕಿಸ್ಥಾನದಲ್ಲಿ ಹಿಂದೂ ಸೀಖರಿಗೆ ನ್ಯಾಯ ಸಿಕ್ಕುವಂತೆ ಮಾಡಬಹುದೆಂಬುದು ಅವರ ವಿಶ್ವಾಸ. ಇದಕ್ಕಾಗಿಯೇ ಸುಹ್ರವರ್ದಿಯವರನ್ನು ಅವರು ಪಾಕಿಸ್ಥಾನಕ್ಕೆ ಕಳುಹಿಸಿದ್ದಾರೆ ಅವರು ಕಡಮೆ ಸಂಖ್ಯಾಕರ ಹಕ್ಕು ಹಾಗೂ ಬಾಧ್ಯತೆಗಳನ್ನೊಳಗೊಂಡ ಒಂದು ಮಸೂದೆ ತಯಾರಿಸಿ ಪಾಕಿಸ್ಥಾನ ಹಾಗೂ ಹಿಂದೀ ಸರಕಾರಗಳ ಒಪ್ಪಿಗೆ ಪಡೆಯುವ ಕಾರ್ಯದಲ್ಲಿ ತೊಡಗಿದ್ದಾರೆ ಇದು ಯಶಸ್ವಿಯಾಗಲೆಂದು ನಾವೂ ಹಾರೈಸೋಣ ಇತ್ತಂಡದವರ ಒಪ್ಪಿಗೆ ಮಾತ್ರವಲ್ಲ ಇತ್ತಂಡವರೂ ಅದನ್ನು ಪಾಲಿಸುವಂತಾಗಲೆಂದೂ ಹಾರೈಸೋಣ

ಟೀಕೆ-ಟಿಪ್ಪಣಿಗಳು

ಕರ್ನಾಟಕ ಸಾಹಿತ್ಯ ಪರಿಷತ್ತು

ಈ ಬಾರಿಯ ಸಾಹಿತ್ಯ ಪರಿಷತ್ತು ಇದೇ ದಶಂಬರ ತಿಂಗಳಲ್ಲಿ ಕಾಸರಗೋಡಿನಲ್ಲಿ ನಡೆಯತಕ್ಕದ್ದಿದೆಯೆಂದೂ ಈ ಬಗ್ಗೆ ಈಗಾಗಲೇ ಶ್ರೀ ಎಂ ಉಮೇಶರಾಯರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಸಮಿತಿಯು ಏರ್ಪಡು ಆಗಿರುತ್ತದೆಂದೂ ಹೆಚ್ಚಿನವರಿಗೆ ಗೊತ್ತಿರಬಹುದು ಮಲೆಯಾಳಿಗಳ ಆಕ್ರಮಣದ ಪ್ರದೇಶವಾದ ಕಾಸರಗೋಡಿನಲ್ಲಿ ಇದನ್ನು ಸೇರಿಸುವ ಯೋಜನೆ ಸಕಾರಣವಾಗಿಯೇ ನಿರ್ಣಯಿಸಲ್ಪಟ್ಟಿದೆಯೆಂದು ಕಾಣುತ್ತದೆ ಅಂತೂ ಅಖಿಲ ಕರ್ನಾಟಕದ ಈ ಸಾಹಿತ್ಯ ಪರಿಷತ್ತು ಯಶಸ್ವಿಯಾಗಿ ನಡೆಯುವಂತೆ ಮಾಡುವ ಜವಾಬ್ದಾರಿಯು ಇಡೀ ದಕ್ಷಿಣ ಕನ್ನಡಕ್ಕೆ ಸೇರಿರುತ್ತದೆ

ಕರ್ನಾಟಕವು ಒಂದೇ ಪ್ರಾಂತ್ಯವಾಗುವ ದಿನಗಳು ಇನ್ನು ದೂರವಿರಲಾರವು ಈ ಕರ್ನಾಟಕದ ಏಕೀಕರಣಕ್ಕೆ ಸಾಹಿತ್ಯ ಪರಿಷತ್ತಿನಿಂದಾದ ಕಾರ್ಯವು ಅಷ್ಟಿಷ್ಟಲ್ಲ ಸಾಹಿತ್ಯ ಪರಿಷತ್ತನ್ನು ಯಶಸ್ವಿಗೊಳಿಸುವುದು ದಕ್ಷಿಣ ಕನ್ನಡದ ಸ್ವತಃ ಸಾಹಿತಿಗಳಿದ್ದವರ ಕಾರ್ಯ ಮಾತ್ರ ಪಂದೆಣಿಸಬಾರದು ಇಲ್ಲಿಯ ಕನ್ನಡಿಗರೆಲ್ಲರ ಕರ್ತವ್ಯವಿರುತ್ತದೆ ಮುಖ್ಯವಾಗಿ ಸ್ವಾಗತ ಸಮಿತಿಯವರಿಗೆ ಧನಸಹಾಯದ ಆವಶ್ಯಕತೆ ಇರುವುದು ಸಹಜ ಸಮಿತಿಯ ಸದಸ್ಯರಾಗಿ ಸೇರಿ ಅಥವಾ ಇತರ ಸಾಧನಗಳಿಂದ ಬೇಕಾಗುವ ಧನ ಸಹಾಯವನ್ನು ಈಗಲೆ ಒದಗಿಸಿಕೊಟ್ಟು ಕಾರ್ಯಕರ್ತರಲ್ಲಿ ಉತ್ಸಾಹವ ದ್ವಿಗುಣಿತವಾಗುವಂತೆ ಎಲ್ಲರೂ ನೆರವಾಗಬೇಕಾಗಿ ಆಗ್ರಹಪೂರ್ವಕ ನಮ್ಮ ವಿನಂತಿ ಇದೆ

ಗುತ್ತೆದಾರರು ಮತ್ತು ಮುರ್ತೆದಾರರು

ಮದರಾಸು ಸರಕಾರದ ಕೈಗಾರಿಕೆ ಖಾತೆಯ ಮಂತ್ರಿಗಳಾದ ಶ್ರೀ ಎಚ್ ಸಿತಾರಾಮ ರೆಡ್ಡಿಯವರ ಮೊನ್ನೆ ತಾರೆ ಮಂಗಳೂರಿಗೆ ಬಂದಾಗ ಜಿಲ್ಲಾ ಬಿಲ್ಲವ ಯೂನಿಯನ ಮತ್ತು ಇಲ್ಲಿಯ ಗುತ್ತೆದಾರ ಹಾಗೂ ಮುರ್ತೆದಾರರ ಸಂಘದ ಆಶ್ರಯದಲ್ಲಿ ಶ್ರೀ ಗೋಕರ್ಣನಾಥ ದೆವಸ್ಥಾನದಲ್ಲಿ ಸೇರಿದ ಸಭೆಯಲ್ಲಿ ಇವೆರಡು ಸಂಸ್ಥೆಗಳ ಪರವಾಗಿ ರಾವ್ ಬಹದ್ದೂರ್ ಶ್ರೀ ಎಮ್ ಗಿರಿಯಪ್ಪನವರು ಮಂತ್ರಿಯವರಿಗೆ ಒಂದು ಮನವಿಯನ್ನು ಒಪ್ಪಿಸಿದರು ಮದ್ಯಪಾನ ನಿರೋಧದಿಂದ ತಮ್ಮ ವೃತ್ತಿಯೇ ಹೋಗುವಂತಾಗಿದೆ ಆದರೂ ನಾವು ಈ ಕಾರ್ಯದಲ್ಲಿ ಪೂರ್ಣ ಸಹಕಾರ ಕೊಡುತ್ತೇವೆ ಸರಕಾರದವರೂ ತಮ್ಮ ಈ ಪರಿಸ್ಥಿತಿ ಸುಧಾರಿಸಲು ಅಗತ್ಯವುಳ್ಳ ಸಹಾಯ ಮಾಡುವುದು ಸರಕಾರದ ಕರ್ತವ್ಯವೆಂದು ಇದರಲ್ಲಿ ಹೇಳಿ ಈ ಬಗ್ಗೆ ಕೆಲವು ಸೂಚನೆಗಳನ್ನು ಕೊಡಲಾಗಿತ್ತು ಸಹಕಾರೀ ಕ್ರಮದಲ್ಲಿ ಸಾಗುವಳಿ ಕೈಕೊಳ್ಳಲು ಅನುಕೂಲವಾಗುವಂತೆ ಸರಕಾರೀ ಹಾಳು ಭೂಮಿಯನ್ನು ಮುರ್ತೆದಾರರಿಗೆ ಕೊಡುವುದು, ಕತ್ತದ ಕೈಗಾರಿಕೆ, ತಾಳೆ ಬೆಲ್ಲ ತಯಾರಿ ಮೊದಲಾದ ಕೈಗಾರಿಕೆ ಮೂಲಕ ಕೆಲಸ ಒದಗಿಸುವುದು, ಸರಕಾರೀ ಕಂಟ್ರಾಕ್ಟು ಕೆಲಸಗಳನ್ನು ಗುತ್ತೆದಾರರಿದ್ದವರಿಗೆ ಕೊಡುವುದು, ಶೇಂದಿ ಶರಾಬು ಅಂಗಡಿಗಳಿದ್ದಲ್ಲಿ ಹೊಸ ಹೊಟೇಲು ತೆರೆಯುವ ಗುತ್ತೆದಾರರಿಗೆ ಸಾಕಷ್ಟು ಸಕ್ಕರೆ ಒದಗಿಸುವುದು, ಕಂಟ್ರೋಲ್ ಮಾಲುಗಳ ವ್ಯಾಪಾರಕ್ಕೆ ಅನುಮತಿ ಕೊಡುವುದು, ಬರುವ ಹತ್ತು ವರ್ಷಗಳ ಮಟ್ಟಿಗೆ ಈ

ವರ್ಗದ ಜನರ ಏಳಿಗೆಯನ್ನು ಸಾಧಿಸಲು ಒಬ್ಬ ಸ್ಪೆಶ್ಯಲ್ ಆಫೀಸರರನ್ನು ನೇಮಿಸುವುದು ಇವೇ ಮೊದಲಾದ ಸೂಚನೆಗಳನ್ನು ಇದರಲ್ಲಿ ಮಾಡಲಾಗಿತ್ತು. ಸಾಧ್ಯವಿದ್ದುದನ್ನೆಲ್ಲ ಮಾಡುವುದಾಗಿ ಮಂತ್ರಿಗಳು ಆಶ್ವಾಸನೆಯಿತ್ತರು. ಮನವಿಯಲ್ಲಿ ಕೊಟ್ಟಿರುವ ಸೂಚನೆಗಳೆಲ್ಲ ನ್ಯಾಯವಾಗಿಯೇ ಇವೆಯೆಂದೂ ಈ ವರ್ಗದ ಜನರಿಗೆ ಅಗತ್ಯವುಳ್ಳ ಸಹಾಯ ಮಾಡುವುದು ಸರಕಾರದ ಕೆಲಸವೆಂದೂ ನಾವೂ ಈ ಸಂದರ್ಭದಲ್ಲಿ ಒತ್ತಿ ಹೇಳಬಯಸುತ್ತೇವೆ. ಮುಖ್ಯವಾಗಿ ಆ ಕತ್ತದ ಕೈಗಾರಿಕೆ ಹಾಗೂ ಬೆಲ್ಲ ತಯಾರಿ ಇವನ್ನು ಬಲವತ್ತರವಾಗಿ ಮುಂದೊತ್ತಬೇಕೆಂದು ಸೂಚಿಸಬಹುದು. ಕತ್ತದ ಕೈಗಾರಿಕೆ ಮಲಬಾರಿನಲ್ಲಿ ಅಷ್ಟು ಮುಂದರಿದಿರುವಾಗ ದಕ್ಷಿಣ ಕನ್ನಡದಲ್ಲಿಯೂ ಏತಕ್ಕೆ ಅಷ್ಟೇ ಪ್ರಮಾಣದಲ್ಲಿ ನಡೆಯಬಾರದು?

ಕಾರ್ಕಳದಲ್ಲಿ ಹರಿಜನ ದೇವಸ್ಥಾನ ಪ್ರವೇಶ

ಕಾರ್ಕಳದಲ್ಲಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಹಾಗೂ ಶ್ರೀ ಅನಂತಶಯನ ದೇವಸ್ಥಾನದಲ್ಲಿ ಹರಿಜನರಿಗೆ ಗಾಂಧೀ ಜಯಂತಿ ದಿನ ಪ್ರವೇಶ ಕೊಡಲಾಯಿತೆಂದು ಪ್ರಕಟವಾಗಿದೆ. ಕಾರ್ಕಳ ಹರಿಜನ ಸೇವಾ ಸಂಘದವರಿಗೂ ಇಲ್ಲಿಯ ಸಮಾಜ ಸುಧಾರಕರಿಗೂ ನಮ್ಮ ಅಭಿನಂದನೆಗಳು. ಮಂಗಳೂರಲ್ಲಿ ಶ್ರೀ ಮಂಗಳಾದೇವಿ ದೇವಸ್ಥಾನ ಪ್ರವೇಶವಾದ ಬಳಿಕ ಈ ಕಾರ್ಯ ಅಲ್ಲಿಗೇ ನಿಂತಿದೆಯೇಕೆಂದು ನಾವು ಈ ಮೊದಲು ಕೇಳಿದಂತೆ ಪುನಃ ಕೇಳಬೇಕಾಗಿದೆ. ಇಲ್ಲಿಯ ಹರಿಜನ ಸೇವಾ ಸಂಘದವರು ನಿದ್ರಿಸುತ್ತಿರಬಹುದೆ? ಜಿಲ್ಲೆಯಲ್ಲಿಯ ಪ್ರಮುಖ ದೇವಸ್ಥಾನಗಳಲ್ಲೆಲ್ಲಾ ಹರಿಜನ ಪ್ರವೇಶವಾಗುವತನಕ ಈ ಪ್ರಶ್ನೆಯನ್ನು ನಾವು ಪುನಃ ಪುನಃ ಕೇಳಬೇಕಾಗುತ್ತದೆ. ದೇವಸ್ಥಾನ ಪ್ರವೇಶದ ಕಾನೂನು ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಕಾಗದದಲ್ಲಿಯೇ ಉಳಿಯುವಂತಿದೆ. ಜಿಲ್ಲೆಯ ಕಾಂಗ್ರೆಸಿಗರೂ ಇದರ ಕಡೆಗೆ ಸ್ವಲ್ಪ ಗಮನ ಕೊಡಬೇಕು. ನಾವು ಹರಿಜನ ಸೇವಕ ಸಂಘದ ಅಧ್ಯಕ್ಷರೆ ಅಥವಾ ಕಾರ್ಯದರ್ಶಿಯರು ಎಂದು ಪದವಿಗಳನ್ನು ತಾಳಿ ಜನರ ಕಣ್ಣೆದುರು ಮಿಂಚಿದರೆ ಸಾಲದು. ಇಂಥ ಕಾರ್ಯಗಳು ಎಂದಾಗ ಮುಂದೊತ್ತಿ ಕಾರ್ಯ ಸಾಧಿಸಬೇಕು. ಈ ಬಾರಿ ಇಷ್ಟೇ ಹೇಳಿ ಸಧ್ಯಕ್ಕಿಯೂ ಈ ಕಾರ್ಯಕ್ರಮ ಬೇಗನೆ ಪೂರ್ಣವಾಗುವುದೆಂದು ಹಾರೈಸುತ್ತೇವೆ.

ಹೊಸ ಕೌನ್ಸಿಲರುಗಳಿಗೆ ಅಭಿನಂದನೆಗಳು

ಮುನಿಸಿಪಲ್ ಚುನಾವಣೆಗಳು ಈಗ ತಾನೆ ಮುಗಿದವು. ಸೋತವರಿಗೆ ಮೊದಲು ಸಮಾಧಾನ ಹೇಳಬೇಕು. ಐನೂರು ರೂಪಾಯಿಗಳಿಗೆ ಒಳಪಟ್ಟು ಖರ್ಚು ಮಾಡಿದವರು ನಾವು ಇನ್ನಷ್ಟು ಹಣ ಹಾಳು ಮಾಡಲಿಲ್ಲವಲ್ಲ ಎಂದು ಸಮಾಧಾನ ತಾಳಬೇಕು. ಹೆಚ್ಚು ಹಣ ಖರ್ಚು ಮಾಡಿ ಸೋತವರು ಹಣದಿಂದ ಓಟು ಪಡೆಯುವ ದಿನಗಳು ಈಗ ಕಳೆದುಹೋಗಿವೆಯೆಂಬ ಪಾಠ ಈಗಲಾದರೂ ಕಲಿತಂತಾಯಿತೆಂದು ಸಮಾಧಾನ ಪಡಬೇಕು. ಹಣ ಖರ್ಚು ಮಾಡದೆ ಸೀದಾ ಕೆಲಸಮಾಡಿ ಸೋತವರು ಇನ್ನೊಮ್ಮೆ ಗೆಲ್ಲಬಹುದೆಂದು ಸಮಾಧಾನ ತಾಳಬೇಕು.

ಈ ಚುನಾವಣೆಗಳಲ್ಲಿ ಗೆದ್ದ ಕೆಲವು ವೀರರ ಕೊರಳು ಹೊರುವಷ್ಟು ಹೂಮಾಲೆಗಳನ್ನು ಹಾಕಿ ಜಯಘೋಷದೊಂದಿಗೆ ಇವರಿಗೆ ಮಾಡಿದ ಮೆರವಣಿಗೆಯ ದೃಶ್ಯ ದೇವತೆಗಳು ಕಂಡಾವಿರಬೇಕು. ಆಕಾಶ ಮಾರ್ಗದಲ್ಲಿ ನಿಂತು ಇವರ ಮೇಲೆ ಹೂ ಮಳೆಗರೆದಿರೆ. ಇಲ್ಲವೂ ನಮಗೆ ಗೊತ್ತಿಲ್ಲ. ಅಂತೂ ನಾವು ಗದ್ದವಗೆ ಗೆದ್ದು ಬಂದ ಇವರೆಲ್ಲರಿಗೆ ನಮ್ಮ ಅಭಿನಂದನೆಗಳನ್ನು ಸಮರ್ಪಿಸುತ್ತೇವೆ.

ಈ ಸಂದರ್ಭದಲ್ಲಿ ನಗರದ ಅವಶ್ಯಕತೆಗಳ ಕಡೆಗೆ ಈ ಆನಂದ ಸಮಾರಂಭಗಳ ಮಧ್ಯ ಕಿಂಚಿತ್ ಲಕ್ಷ್ಯ ಕೊಡುವಂತೆ ನಾವು ಕೇಳಿಕೊಂಡರೆ ಅಕ್ಷಮ್ಯ ಅಪರಾಧವಾಗಬಾರದಷ್ಟೆ? ಮುನಿಸಿಪಾಲಿಟಿಗೆ ಹೊಸದಾಗಿ ಸೇರಿಸಿದ ಅನೇಕ ಪ್ರದೇಶಗಳಿಂದ ಮುನಿಸಿಪಲ್ ತೆರಿಗೆ ಸರಾಗವಾಗಿ ವಸೂಲಾಗುತ್ತಿದೆ. ಆದರೆ ಇಲ್ಲಿ ಮುನಿಸಿಪಲ್ ಸೌಕರ್ಯಗಳು ಒಂದೂ ಇಲ್ಲ. ಉದಾಹರಣೆಗೆ ಹೊಸ ಕೌನ್ಸಿಲರುಗಳಲ್ಲಿ ಯಾರಾದರೊಬ್ಬ ಪುಣ್ಯಾತ್ಮರು ರಾತ್ರೆ 7½ ಅಥವಾ 8 ಗಂಟೆಗೆ ಕಾವೂರು ಮಾರ್ಗದಲ್ಲಿ ಮುನಿಸಿಪಲ್ ಗಡಿವರೆಗೆ ಹೋಗಿ ಬರುವ ಸಾಹಸ ಮಾಡಬೇಕು. ನಡೆದುಕೊಂಡು ಹೋಗಬೇಕು. ಇಲ್ಲಿ ಇಲೆಕ್ಟ್ರಿಕ್ ದೀಪಗಳು ಮಾತ್ರವಲ್ಲ ಲಾಟಾನು ದೀಪಗಳೂ ಇಲ್ಲವೆಂದು ನಾವು ಮುಂದಾಗಿ ಹೇಳದಿದ್ದರೆ ಪಾಪದ ಈ ಹೊಸ ಕೌನ್ಸಿಲರು ಚರಂಡಿಯಲ್ಲಿ ಬಿದ್ದು ಇವರನ್ನು ಹೊತ್ತುಕೊಂಡು ಹೋಗಬೇಕಾದ ಪ್ರಸಂಗ ಬಂದೀತು. ಇಂತ ಕೆಲವು ಪ್ರಶ್ನೆಗಳ ಕಡೆಗೆ ಹೊಸ ಕೌನ್ಸಿಲರುಗಳು ಸ್ವಲ್ಪ ಗಮನ ಕೊಡತಕ್ಕದಿದೆಯೆಂದು ಅಭಿನಂದನೆಗಳ ಜೊತೆಯಲ್ಲಿ ಹೇಳಿ ಅಧ್ಯಕ್ಷ ಪದವಿಯ ಸ್ಪರ್ಧೆ ಚೆನ್ನಾಗಿ ನಡೆಯುವಂತಾಗಲೆಂದು ಹಾರೈಸುತ್ತೇವೆ.

ದಕ್ಷಿಣ ಕನ್ನಡ ಜಿಲ್ಲಾ ಅಭಿವೃದ್ಧಿ ಸಂಘ

ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಡಿಸ್ಟ್ರಿಕ್ಟ್ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನ್ ಅಥವಾ ಜಿಲ್ಲಾ ಅಭಿವೃದ್ಧಿ ಸಂಘ ಎಂಬ ಒಂದು ಸಂಸ್ಥೆ ಈಗ ಹಲವು ವರ್ಷಗಳಿಂದ ಇದೆ. ವರ್ಷಕ್ಕೊಮ್ಮೆ ಫಲಪುಷ್ಪ ಪ್ರದರ್ಶನ ಹಾಗೂ ಹೂದೋಟಗಳ ಸ್ಪರ್ಧೆ ನಡೆಸುವುದು ಈ ಸಂಸ್ಥೆಯ ಇದುವರೆಗಿನ ಕೆಲಸವಿತ್ತು. ಇತ್ತೀಚೆಗೆ ಮೂಲ್ಕಿ ಕೇಂದ್ರದಲ್ಲಿ ಇದು ಒಂದೆರಡು ಕೈಗಾರಿಕೆ ಪ್ರದರ್ಶನಗಳನ್ನೂ ಏರ್ಪಡಿಸಿತು. ಈ ಸಂಸ್ಥೆಯನ್ನು ಬಲಪಡಿಸಿ ಇದರ ಕಾರ್ಯಕ್ರಮ ವಿಸ್ತರಿಸಿ ಇದರ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಅಗತ್ಯವಿರುವ ಹಲವು ಕಾರ್ಯಗಳನ್ನು ಸಾಧಿಸಬೇಕೆಂದು ಇತ್ತೀಚೆಗೆ ನಿರ್ಣಯವಾಗಿರುತ್ತದೆ. ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜಿಲ್ಲೆಯ ಹಲವು ಮಂದಿ ಮುಂದಾಳುಗಳಿಂದ ಕೂಡಿದ ಒಂದು ಸಭೆ ಇದಕ್ಕಾಗಿಯೇ ಸೇರಿ ಹಲವು ಪ್ರಶ್ನೆಗಳ ಚರ್ಚೆಯಾಗಿ ಆಯಾ ಪ್ರಶ್ನೆಗಳ ಬಗ್ಗೆ ಕಾರ್ಯ ಮುಂದೊತ್ತಲು ಏಳು ಉಪಸಮಿತಿಗಳ ನೇಮಕವಾಗಿದೆಯೆಂದು ತಿಳಿದುಬರುತ್ತದೆ. ಈ ಸಭೆಯವರು ಚರ್ಚಿಸಿದ ಹಾಗೂ ಈ ಉಪಸಮಿತಿಯವರು ಕೈಕೊಳ್ಳಲಿರುವ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಪಟ್ಟ ಕೆಲವು ಪ್ರಶ್ನೆಗಳ ಮಾಹಿತಿಯನ್ನು ಇಲ್ಲಿ ಕೆಳಗೆ ಚರ್ಚಿಸಲಾಗಿದೆ.

ವೈದ್ಯಕೀಯ ಸಹಾಯವನ್ನು ಜಿಲ್ಲೆಯಲ್ಲಿ ಹೆಚ್ಚಿಸುವ ವಿಚಾರದಲ್ಲಿ ಒಂದು ಉಪಸಮಿತಿಯ ನೇಮಕವಾಗಿರುತ್ತದೆ. ಈಗ ಅನೇಕ ಹಳ್ಳಿಗಳಲ್ಲಿ ಯಾವ ವೈದ್ಯಕೀಯ ಸಹಾಯವೂ ಸಿಕ್ಕುತ್ತ ಇಲ್ಲ. ಆಧುನಿಕ ವೈದ್ಯಕೀಯ ಶಾಸ್ತ್ರವನ್ನು ಕಲಿತ ಒಬ್ಬ ವೈದ್ಯನನ್ನು ಕಾಣುವ ಪ್ರಸಂಗ ಬಂದರೆ ಎಷ್ಟೊ ದೂರಕ್ಕೆ ಹೋಗಬೇಕು. ಹಳ್ಳಿಯ ವೈದ್ಯರು ಅಲ್ಲಲ್ಲಿರುವುದು ನಿಜ. ಆದರೆ ಇವರಲ್ಲಿ ಹೆಚ್ಚಿನವರು ಏನೂ ತಿಳಿಯದವರೆಂದು ಸ್ಪಷ್ಟವಾಗಿ ಹೇಳಿದರೆ ದೇಶೀಯ ವೈದ್ಯದ ಅಭಿಮಾನಿಗಳು ಕ್ಷಮಿಸಬೇಕು. ಚಿಲ್ಲರೆ ಕಾಯಿಲೆಗಳಿಗೆ ಇವರಿಂದ ತುಂಬಾ ಉಪಕಾರವಿದೆಯೆಂದು ಒಪ್ಪಲೇಬೇಕು. ಆದರೆ ಕಾಯಿಲೆ ಸ್ವಲ್ಪ ಕಠಿಣತರದ್ದಾದರೆ ಹಳ್ಳಿಯವರು ಡಾಕ್ಟರರನ್ನು ಹುಡುಕಿ ಹೋಗುವಾಗ ಕಾಯಿಲೆ ವಿಪರೀತ ಹೋಗುವ ಪ್ರಸಂಗಗಳನ್ನು ನಾವು ಎಷ್ಟೊ ಬಾರಿ ಕಾಣುತ್ತೇವೆ. ಗ್ರಾಮ ಆಸ್ಪತ್ರೆಗಳ ಸಂಖ್ಯೆ ಹೆಚ್ಚಿಸುವುದೊಂದೇ ಈ ಪರಿಸ್ಥಿತಿಯನ್ನು ಸುಧಾರಿಸಲು ಬೇಕಾದ ಕಾರ್ಯ. ಯಾವ ಹಳ್ಳಿಗನಿಗಾದರೂ ಐದು ಮೈಲುಗಳ ದೂರದ ಒಳಗೆ ಒಂದು ಗ್ರಾಮ ಆಸ್ಪತ್ರೆಯ ಅನುಕೂಲತೆ ದೊರೆಯುವಂತಾಗಬೇಕು. ಶಾಸ್ತ್ರೀಯ ರೀತಿಯಿಂದ ಹೆರಿಗೆ ಮಾಡಿಸುವ ದಾಯಿಯರ ಸಂಖ್ಯೆ ಈಗ ಹೆಸರಿಗೆ ಮಾತ್ರವೆಂಬಂತೆ ಇದೆ. ಹಳ್ಳಿಯ ಅಶಿಕ್ಷಿತ ದಾಯಿಯರ ಅಜಾಗರೂಕತೆಯಿಂದಾಗಿ ಎಷ್ಟೊಂದು ಮಂದಿ ಸ್ತ್ರೀಯರು ಬಾಣಂತಿತನದಲ್ಲಿ ಸಾಯುವ ರೀತಿಯನ್ನು ವಿಚಾರಿಸಿದರೆ ಈಗಿನ ಶೋಚನೀಯ ಪರಿಸ್ಥಿತಿ ಸ್ಪಷ್ಟವಾಗುವುದು. ಸುಶಿಕ್ಷಿತ ದಾಯಿಯರು ಮಾತ್ರವಲ್ಲ ಒಪಜನರಿಗೆ ಹೆರಿಗೆಯ ಅನುಕೂಲತೆಗಳನ್ನು ಒದಗಿಸುವ ಏರ್ಪಾಡೂ ಗ್ರಾಮ ಆಸ್ಪತ್ರೆಗಳೊಂದಿಗೆ ಸಿಗುವಂತಾಗಬೇಕು. ನರ್ಸುಗಳ ಸಂಖ್ಯೆ ಹೆಚ್ಚಾಗಬೇಕು. ಈಗ ಸ್ವರಾಜ್ಯ ಬಂದು ನಮ್ಮದೇ ಸರಕಾರ ನಡೆಯುವಾಗ ಇಂಥ ವೈದ್ಯಕೀಯ ಸೌಕರ್ಯಗಳು ನಮ್ಮ ಜನರೆಲ್ಲರಿಗೂ ಸಿಕ್ಕುವುದು ಅವಶ್ಯವಾದ ಕೀಯ ಸಹಾಯದೊಂದಿಗೆ ಆರೋಗ್ಯ ರಕ್ಷಣೆಯ ಬಗ್ಗೆ ಅಗತ್ಯವಿರುವ ಶಿಕ್ಷಣ ಪ್ರಚಾರವೂ ಆಗಬೇಕೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಮಂಗಳೂರು ಪಟ್ಟಣದಲ್ಲಿ ನಳ್ಳಿನೀರಿನ ಸರಬರಾಯಿ ಹಾಗೂ ಶುದ್ಧ ನೀರ ಡ್ರೇನ್ ವ್ಯವಸ್ಥೆಯನ್ನು ಸಾಧಿಸಲು ಇನ್ನೊಂದು ಉಪಸಮಿತಿಯ ನೇಮಕವಾಗಿರುತ್ತದೆ. ಹಲವು ವರ್ಷಗಳಿಂದ ಮಂಗಳೂರು ಮುನಿಸಿಪಾಲಿಟಿಯ ಮುಂದಿರುವ ಪ್ರಶ್ನೆಯಿದು. ಈ ಬಗ್ಗೆ ಯೋಜನೆ ತಯಾರಿಸಲಿಕ್ಕೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಮಂಗಳೂರು ನಗರದ ಆರೋಗ್ಯ ಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಲಿದೆ. ಇಲ್ಲಿಯ ವ್ಯಾಪಕ ಜ್ವರ ವೊದಲಾದುವಕ್ಕೆ ಶುದ್ಧ ನೀರಿನ ಅಭಾವವೇ ಕಾರಣವೆಂದು ಎಲ್ಲರೂ ಬಲ್ಲರು. ಸ್ವಚ್ಛ ಚರಂಡಿಗಳಿಲ್ಲದಿದ್ದುದರಿಂದ ಪರಿಣಾಮವೆಂದರೆ ಕಾಲು ಘೋರ ಆಗುವ ಕಾಯಿಲೆ. ಇದು ಎಷ್ಟೊಂದು ದುಃಖಕ್ಕೆ ಕಾರಣವಾಗುತ್ತಿದೆಯೆಂದು ಇಲ್ಲಿ ವಿವರಿಸಬೇಕಾಗಿಲ್ಲ. ಈಗ ನಮ್ಮವರೇ ಆದ ಶ್ರೀ ಎ. ಬಿ. ಶೆಟ್ಟರು ಆರೋಗ್ಯಖಾತೆಯ ಮಂತ್ರಿಗಳಿರುವಾಗ ಮಂಗಳೂರಿನ ಈ ಆವಶ್ಯಕತೆ ಪೂರೈಸಲ್ಪಡದಿದ್ದರೆ ಮತ್ತಾವಾಗ ಸಾಧ್ಯವಾದೀತು? ಶ್ರೀ ಶೆಟ್ಟರು ಇಡೀ ಪ್ರಾಂತದ ದೃಷ್ಟಿಯಿಂದ ತನ್ನ ಕರ್ತವ್ಯ ಪಾಲಿಸಬೇಕಾಗುತ್ತದೆಂಬುದನ್ನೂ ಮರೆಯಲಾಗದು. ಆದರೂ ಈ ಕೆಲಸ ಸಾಧಿಸಲು ಇದು ಅತೀ ಅನುಕೂಲದ ಸಮಯವೆನ್ನಬಹುದು.

ಸಭೆಯವರು ನೇಮಕ ಮಾಡಿದ ಮೂರನೆಯ ಉಪಸಮಿತಿ ಘಾಟಿ ಸರಹದ್ದಿನ ಮೂಡಲಾಗಿನ ಹಳ್ಳಿಗಳಲ್ಲಿ ಮಲೇರಿಯಾ ನಿವಾರಣೆ ಸಾಧಿಸುವುದು. ಮಲೇರಿಯಾದಿಂದಾಗಿ ಇಲ್ಲಿ ಜನಶಕ್ತಿ ಬಹಳ ಕಡಿಮೆ. ಸಾಗುವಳಿ ಸರಿಯಾಗಿ ಆಗದೆ ಎಷ್ಟೋ ಸಾಗು ಭೂಮಿ ಬಂಜರು ಬೀಳುತ್ತಿದೆ. ಈ ಮಲೇರಿಯಾ ಒಂದನ್ನು ತಡೆಗಟ್ಟಿದರೆ ಇಲ್ಲಿಯೂ ಜನರು ನೆಲೆ ನಿಂತು ಸಾಗುವಳಿ ಮಾಡುವಂತಾದರೆ ನಮ್ಮ ಜಿಲ್ಲೆಯ ಆಹಾರಕ್ಕಾಗಿ ಇತರರ ಮೋರೆ ನೋಡುವ ಅಗತ್ಯಬೀಳದು. ಬೆಳ್ತಂಗಡಿ ಪ್ರದೇಶದಲ್ಲಿ ಮಲೇರಿಯಾ ನಿವಾರಣಾ ಕಾರ್ಯಕ್ಕೆ ಒಮ್ಮೆ ಒಂದು ಯೋಜನೆ ಸಿದ್ಧವಾಯಿತು. ಆದರೆ ಅದು ಜಾರಿಗೆ ಬಾರದೆ ಮೂಲೆ ಪಾಲಾಯಿತು. ಈ ಬಾರಿ ನಮ್ಮ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಕೈಕೊಳ್ಳುವಂತೆ ಈ ಉಪಸಮಿತಿಯವರು ಪೂರ್ಣ ಯತ್ನ ಮಾಡುವರೆಂದು ಹಾರೈಸಬಹುದು.

ನಮ್ಮ ಜಿಲ್ಲೆಗೆ ವಿದ್ಯುತ್ ಶಕ್ತಿಯನ್ನು ಒದಗಿಸುವಂತೆ ಮಾಡುವ ಕಾರ್ಯ ಇನ್ನೊಂದು ಉಪಸಮಿತಿಗೆ ಕೊಡಲಾಗಿದೆ. ಈಗ ಮಂಗಳೂರು ಉಡುಪಿಗಳಲ್ಲಿ ಬೆಳಕಿನ ಮಟ್ಟಿಗೆ ಚಿಕ್ಕ ಪ್ರಮಾಣದಲ್ಲಿ ಇದನ್ನು ಒದಗಿಸಲಾಗುತ್ತದೆ. ಚಿಕ್ಕ ದೊಡ್ಡ ಕೈಗಾರಿಕೆಗಳು ಹಲವು ಕೃಷಿ ಸಂಬಂಧದ ಕೆಲಸಗಳು ಇವನ್ನೆಲ್ಲ ವಿದ್ಯುತ್ ಶಕ್ತಿಯನ್ನು ಉಪಯೋಗಿಸಿ ಮುಂದೊತ್ತಲು ಸಾಧ್ಯವಿದೆ. ಇದು ನಮ್ಮ ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ಬಹು ಮುಖ್ಯ ಆವಶ್ಯಕತೆಯೆಂಬ ವಿಚಾರದಲ್ಲಿ ಸಂಶಯವಿಲ್ಲ. ಪ್ಯಾಕಾರಾದಿ ದ ಅಥವಾ ಆರ್ಥಿಕ ಸುಲಭವಾಗಿ ಗೇರುಸೊಪ್ಪೆಯಿಂದ ಈ ಜಿಲ್ಲೆಗೆ ಅದಷ್ಟು ಶೀಘ್ರದಲ್ಲಿ ವಿದ್ಯುತ್ ಶಕ್ತಿ ಒದಗಿಸುವ ಏರ್ಪಾಡು ಆಗಬೇಕು. ಗೇರುಸೊಪ್ಪೆಯಲ್ಲಿ ವಿದ್ಯುತ್ ಶಕ್ತಿ ಉತ್ಪಾದನೆಗಾಗಿ ನಮ್ಮ ಜಿಲ್ಲೆಯ ಮಂತ್ರಿ ಗ್ರಾಮಗಳನ್ನು ಕೊಡಲಾಗಿದೆ. ಇದರ ಪ್ರತಿಫಲ ನಮಗೆ ಸಿಕ್ಕಲು ಯುಕ್ತಿಯರ ಸಾಧ್ಯವಾಗದೆ ಹೋಗಲಿಕ್ಕಿಲ್ಲ.

ಮಂಗಳೂರನ್ನು ಪಶ್ಚಿಮ ಕರಾವಳಿಯಲ್ಲಿಯ ದೊಡ್ಡ ಬಂದರುಗಳಲ್ಲಿ ಒಂದಾಗುವ ಕ ಸಾಧಿಸುವುದು ಇನ್ನೊಂದು ಕೆಲಸ. ಗೋವೆ ಮತ್ತು ಕೊಚ್ಚಿ ಬಂದರುಗಳ ನಡುವೆ ಒಂದು ದೊಡ್ಡ ಬಂದರದ ವ್ಯವಸ್ಥೆ ಆಗುತ್ತಿದೆ. ಇದು ಭಟ್ಕಳದಲ್ಲಿ ಆಗಬೇಕೆಂದು ಅನೇಕರು ಸೂಚಿಸುತ್ತಿದ್ದಾರೆ. ಹೀಗಾದರೆ ನಮ್ಮ ಜಿಲ್ಲೆಯ ಅಭಿವೃದ್ಧಿಗೆ ಇದೊಂದು ಕುಂದಾಗುತ್ತದೆ. ಮಂಗಳೂರೇ ಈ ದೊಡ್ಡ ಬಂದರವಾಗಿ ಮಾರ್ಪಟ್ಟಲ್ಲಿ ಜಿಲ್ಲೆಗೆ ತುಂಬಾ ಪ್ರಯೋಜನವುಂಟಾಗುವುದು. ನಿರ್ಮಾಣದ ಮಲ್ಪೆಯೇ ಆಗಬೇಕೆಂದು ಉಡುಪಿಯ ತ್ರಾಸವೆದ್ದಿದೆ ನಮ್ಮೊಳಗಿನ ಇತ್ತಂಡ ವಾದದಿಂದಲ್ಲಿ ನಮಗೆ ಯಾವುದೂ ದೊರೆಯದಂತಾಗುವ ಪ್ರಸಂಗ ಬಂದೀತೆಂಬುದರಿಂದ ಎಲ್ಲರೂ ಮಂಗಳೂರನ್ನೇ ಸಮರ್ಥಿಸುವುದು ಜಿಲ್ಲೆಯ ಹಿತ ದೃಷ್ಟಿಯಿಂದ ಅಗತ್ಯವಿರುತ್ತದೆ.

ನಮ್ಮ ಪ್ರಿಯ ಪೇಟೆಗಳಲ್ಲೆಲ್ಲಿ ಮನೆ ಕಟ್ಟಡಗಳ ಅಭಾವ ಬಹಳವಾಗಿದೆ. ಮಂಗಳೂರಲ್ಲಿ ಈ ಪ್ರಶ್ನೆ ಬಹಳ ತೊಂದರೆ ಕೊಡುತ್ತಿದೆ. ಯೋಗ್ಯ ಸ್ಥಳ ಆರಿಸಿ ಪಟ್ಟಣವನ್ನು ವಿಸ್ತಾರಿಸಿ ಸಹಕಾರೀ ಕಟ್ಟಡ ಸಂಘದ ಮೂಲಕ ಈ ಮನೆಗಳ ಅಭಾವದ ಸಂಕಷ್ಟ ನಿವಾರಿಸಬೇಕಾಗಿದೆ. ಇದಕ್ಕೂ ಒಂದು ಉಪ ಸಮಿತಿಯು ನೇಮಕವಾಗಿದೆ.

ಕೊನೆಯದಾಗಿ ನಮ್ಮಲ್ಲಿ ರಸ್ತೆಗಳನ್ನು ಹೆಚ್ಚಿಸಲಿಕ್ಕೆ ಮಂಗಳೂರಲ್ಲೇ ಈಗ ನಿಂತಿ

(ಆನೇ ಪುಟಕ್ಕೆ ಮುಂದುವರಿದಿದೆ)

ನಾರದ ಕಥೆ

ಅಕ್ಟೋಬರ್ ಒರೆದರ ನಂತರ

[ಬರೆದವರು: ಶ್ರೀ. ಯಂ. ವೆಂಕಟೇಶ ಪ್ರಭು]

ಆ ದಿನ ಆ ಮೂವರೂ ಮಿತ್ರರೂ ಒಟ್ಟು ಸೇರಿದರು, ತಾರೀಕು ಅಕ್ಟೋಬರ್ ೨! ಗಾಂಧಿ ಜಯಂತಿಯ ದಿನ. ಗಾಂಧಿ ಜಯಂತಿಯಾದರೇನು? ಊರಿನಲ್ಲಿ "ಅಮೃತ"ದ ಮಾರಾಟವಿಲ್ಲದಿದ್ದರೆ ಗಾಂಧಿ ಜಯಂತಿ ಯಾರಿಗೆ ಬೇಕು?

"ಇಷ್ಟೆಲ್ಲಾ ಮಾಡಿದ್ದು ಕಾಂಗ್ರೆಸ್ ಸರಕಾರ! ನಾವು ಕುಡಿದರೆ ಈ ಮಂತ್ರಿಗಳ ತಲೆಗೆ ಅಮಲು ಹತ್ತುವುದೆಂದರೆ ಏನಯ್ಯಾ!" ಎಂದರು ಒಬ್ಬರು.

"ಸುರೆ ಬಂದು ಮಾಡಲ್ಲು ನಿಮ್ಮ ಜಾತಿಯ ಮಂತ್ರಿಗಳೇ ಮುಖ್ಯ ಕಾರಣರಂತೆ. ಡಾನ್ನಿಯಲ್‌ರಂತೆ ಅವರ ಹೆಸರು!" ಎಂದರು ಇನ್ನೊಬ್ಬರು

"ಡಾನಿಯಲ್‌ರಾದರೇನು? ಯಾರೂ ಆದರೇನು ನಾವು ಈ ದಿನ ದುಡಿಯಲೇ ಬೇಕು" ಎಂದರು ಮೂರನೇಯವರು.

"ದುಡಿಯಲೇ ಬೇಕು ಹೌದು. ಆದರೆ ಕೇಂದಿ ಅಂಗಡಿಗಳೂ ಹೋಟೆಲುಗಳಾಗಿವೆ! ಕಾಫಿ ಕುಡಿಯುವುದೇನು?" ಒಂದನೇ ಮಹಾಶಯರು ಹೇಳಿದರು.

"ಇದಕ್ಕೇನು ಉಪಾಯವಿಲ್ಲವೆ? ಯಾರಾದರೂ ಸಂಗ್ರಹಿಸಿದ ಅಮೃತವಿಲ್ಲವೆ?" ಎರಡನೇ ಮಹಾಶಯರು ಕೇಳಿದರು

"ಇಲ್ಲದೆ ಏನು? ಸಪ್ಟಂಬರದ ಅಂತ್ಯದಲ್ಲಿ ಅರ್ಧ ಕ್ರಯಕ್ಕೆ ಬೇರು ಮಾರಿದ್ದಾರೆ ನೀವು ಒಪ್ಪಿದರೆ ಅಂತಹ ಸ್ಥಳ ಉಂಟು" ಎಂದರು ೩ನೇ ಮಹಾಶಯರು

ಈ "ಸುವಾರ್ತೆ" ಕೇಳಿದ ಕೂಡಲೇ ಇಬ್ಬರೂ ಮಿತ್ರರ ಕಿವಿಗಳೂ ನೆಟ್ಟಗಾದವು

"ಎಲ್ಲಿ! ಎಲ್ಲಿ!" ಎಂದು ಇಬ್ಬರೂ ಕೇಳಿದರು

"ಹಾಗೆ ಬೊಬ್ಬೆ ಹಾಕದಿರಿ! ಯಾರಾದರೂ ಕೇಳಿದರೆ ಅನರ್ಥವಾದೀತು" ಎಂದು ೩ನೇ ಮಹಾಶಯರು ಹೇಳಿದರು

ಅಂತೂ ೩ನೇ ಮಹಾಶಯರು "ಅಮೃತ"ವಿರುವ ಗುಪ್ತ ಸ್ಥಳದ ಪರಿಚಯ ಹೇಳಿದರು ಆ ರಾತ್ರಿಯೇ ಹೋಗುವುದೆಂದು ಮೂವರೂ ನಿರ್ಧರಿಸಿದರು ಆ ದಿನ ಅಲ್ಲಿ ಒಂದು ಯಕ್ಷಗಾನವೂ ಇದೆಯೆಂದು ಮೂರನೆಯವರು ಹೇಳಿದರು

ಅಂತೂ ಕಾಯಿಸಿದ ಮೀನಿನ ತುಂಡುಗಳನ್ನು ಕಟ್ಟಿಯೇ ಮೂವರು ಮಿತ್ರರು ಹೊರಟರು ಕುಡಿದು ಬರುವಾಗ ಬಾಯಿಯ "ಸುಗಂಧ" ಹೊರಬರಬಾರದೆಂದು ೨ ತೊಲೆ ಏಲಕ್ಕಿ, ಒಂದು ಕಟ್ಟು ಬೀಡಾ ಸಹಿತವಾಗಿಯೇ ೩ ಯೋಧರು ಹೊರಟರು

"ಈ ದಿನ ಯಥೇಷ್ಟ ಕುಡಿಯಬೇಕು" ಒಬ್ಬರು ಹೇಳಿದರು "ನಿನ್ನ ವಿಷಯದಲ್ಲಿ ನಾವು ಜಾಗ್ರತೆವಹಿಸಬೇಕು ದಸರ ಹತ್ತಿರ ಬಂದಿದೆ ನೀನು ಕುಡಿದು "ಹುಲಿಯಾಟ"ಯಾಡಿದರೆ ನಾವು ಮಾವನ ಮನೆ ಸೇರಬೇಕಾದೀತು" ಮೂರನೇಯವರು ಎಚ್ಚರಿಸಿದರು ಅವರು ಈ ವಿದ್ಯೆಯ ಖದೀಮರು ಅದಕ್ಕಾಗಿಯೇ ಈ ಅಲ್ಪ ಮೋಟಂ ಕೊಟ್ಟರು

ಆ ಸ್ಥಳ ಹತ್ತಿರ ಬಂದಂತೆ ಮೂವರಿಗೂ ಉಲ್ಲಾಸದಿಂದ ನೆಲದ ಮೇಲೆ ನಡೆಯುವಂತೆ ತೋರಲಿಲ್ಲ ಸ್ವರ್ಗವೇ ಹತ್ತಿರ ಬಂದಂತಾಯಿತು ಆದರೆ ಸ್ವರ್ಗದ ಬಾಗಿಲನ್ನು ಬಂಗಾರದ ಬೀಗದ ಕೈಯಿಂದ ತೆರೆಯುವ ಸಂಪ್ರದಾಯ ಇರುವುದರಿಂದ ಮೂವರೂ ಆ ದಿನದ ಸುರೆಗೆ ಬೆರಸಿದ ಯಥೇಷ್ಟ ನೀರಿನಂತೆ ಹಣವನ್ನು ಸುರಿದರು.

ಮೂವರೂ ಕುಡಿದರು ಮತ್ತೂ ಕುಡಿದರು. ನೀರಿನ ಪರಿಮಾಣ ಹೆಚ್ಚಿದ್ದು ಅಮಲು ಕಮ್ಮಿಯಾದರೂ 'ಸಿಹಿ' ಇದೆಯೆಂದು ಬಾಯಿ ಚಪ್ಪರಿಸಿದರು. ಒಂದನೇ ಮಹಾಶಯರು ಜಗತ್ತನ್ನೇ ಮರೆತ ಭಂಗಿಯಲ್ಲಿದ್ದರು.

ಕುಡಿದಾದ ಮೇಲೆ ವೀಳ್ಯ ಜಗಿದು ಏಲಕ್ಕಿ ಬಾಯಿಯಲ್ಲಿ ಹಾಕಿ ಮೂವರು ಯಕ್ಷಗಾನದ ಬಯಲಿಗೆ ಬಂದರು.

ಕುಡಿಯಲು ಹೋಗಲು ಮೊದಲು ಉಲ್ಲಾಸದಿಂದ ಅವರ ಹೆಜ್ಜೆ ನೆಲದ ಮೇಲಿದೆಯೆಂದು ಅವರಿಗೆ ತಿಳಿದಿರಲಿಲ್ಲ. ಈಗಲೂ ಅಮಲಿನಿಂದ ತಾವು ನೆಲದ ಮೇಲೆ ನಡಿಯುತ್ತಿರುವೆವೆಂದು ಅವರಿಗೆ ತಿಳಿಯಲಿಲ್ಲ.

"ಸುರೆ"ಯನ್ನು ಮರೆತು ಬಿಡಲು ಹಳ್ಳಿಯಲ್ಲಿ ಆ ದಿನ ಯಕ್ಷಗಾನದ ಏರ್ಪಾಡಾಗಿತ್ತು. ಸಭೆಯ ಮೊದಲು ಮಹನೀಯರೊಬ್ಬರು ಮದ್ಯದ ದುಷ್ಪರಿಣಾಮಗಳನ್ನು ವಿವರಿಸುತ್ತಾ ಜನರು ಇನ್ನು ಮುಂದಾದರೂ ಜೀವನದ ಸದುಪಯೋಗ ಮಾಡಲಿ ಎಂದರು. "ಮಹಾತ್ಮ ಗಾಂಧೀ ಕೀ ಜೈ!" ಎಂದು ಅವರು ತಮ್ಮ ಭಾಷಣದ ಅಂತ್ಯದಲ್ಲಿ ಹೇಳಲು ಸಭೆಯು ಜಯಕಾರ ಮಾಡಿತು.

ಜಯಕಾರ ನಿಂತರೂ ನಮ್ಮ ಮೂವರು ಮಿತ್ರರಲ್ಲಿ ಮೊದಲನೇಯವರು "ಜೈ ಜೈ!" ಎನ್ನುತ್ತಲೇ ಇದ್ದರು ಎಲ್ಲರ ಧ್ಯಾನವೂ ಇವರ ಕಡೆಗೆ ಹೊರಳಿತು. ಉಳಿದ ಇಬ್ಬರು ಮಿತ್ರರು ಇವರ ಬಾಯ ಮೇಲೆ ಕೈಯಿಟ್ಟ ಮೇಲೆಯೇ ಜೈಕಾರ ನಿಂತಿತು

ಆ ದಿನದ ಯಕ್ಷಗಾನ ಪ್ರಸಂಗವು ಕೀಚಕ ವಧೆಯಾಗಿತ್ತು. ಮೊದಲು ಸೈರಂಧ್ರಿಯು ಮಾತಾಡಿದಳು ಅವಳ ಕಷ್ಟದ ವರ್ಣನೆ ಕೇಳಿದಾಗ್ಗೆ ಕುಡಿಕರಿಗೆ ತಮ್ಮ ಕಷ್ಟ ದೊಡ್ಡದಲ್ಲವೆಂದು ಭಾವನೆಯಾಯಿತು

ನಂತರ ಕೀಚಕನ ಪಾತ್ರದವರು ಮಾತಾಡುವವರಿದ್ದರು ಭಾಗವತರು ಹಾಡು ಮುಗಿಸಿ ಕೀಚಕ ಪಾತ್ರದವರು ಮಾತಾಡಲು ಬಾಯಿ ತೆರೆಯುವ ಮೊದಲೇ ಒಂದನೇ ಮಹಾಶಯರು ತಾವೇ ಕೀಚಕರೆಂದು ಭಾವಿಸಿ ಅಮಲಿನ ಭರದಲ್ಲಿ ಮಾತು ಪ್ರಾರಂಭಿಸಿದರು

"ಎಲೈ ಭೀಮಾ! ನಿನ್ನ ಅಂತಸ್ತೇನು ನನ್ನ ಅಂತಸ್ತೇನು? ಅಮೃತ ಪಾನ ಮಾಡಲು ನನಗೆ ಬೇಡವೆಂದು ಹೇಳುವೆಯಾ ಏನೆಂದು ತಿಳಿದಿರುವೆ ನೀಚಾ!" ಎಂದು ಮಹಾಶಯರು ತಾವೇ ಕೀಚಕರೆಂಬ ಹುರುಪಿನಿಂದ ಬಳಿಯಲ್ಲಿದ್ದ ಮಹನೀಯರೊಬ್ಬರ ಮೇಲೆ ಅವರು ಭೀಮನೆಂದು ಭಾವಿಸಿ ಹಾರಿದರು

ಸಭೆಯಲ್ಲಿ ಕೂಡಲೇ ಗೊಂದಲವೆದ್ದಿತು. "ಕುಡಿಕರ ಗಲಾಟೆ!" ಎಂದರು ಒಬ್ಬರು "ಪೋಲಿಸ್! ಪೋಲಿಸ್" ಎಂದರು ಇನ್ನೊಬ್ಬರು ನಮ್ಮ ಮಹಾಶಯರು ಮಾತ್ರ ಯಾರ ಪರಿವೆ ಇಲ್ಲದೆ ಭೀಮನೆಂದು ಭಾವಿಸಿ ಆ ಅಪರಿಚಿತ ಮಹಾಶಯರ ಮರ್ದನಕ್ಕೆ ಪ್ರಾರಂಭ ಮಾಡಿದ್ದರು

ಗಲಭೆ ಪ್ರಾರಂಭವಾದ ಕೂಡಲೇ ಮೊದಲನೇ ಮಹಾಶಯರ ಇಬ್ಬರೂ ಗೆಳೆಯರು ಪರಾರಿಯಾದರು ಅಮೃತ ಕುಡಿದು ಲೋಕವು ಸ್ವರ್ಗದಲ್ಲಿ ಇರಲು ಅವರು ಸಿದ್ಧರಿದ್ದಿಲ್ಲ

ಯಕ್ಷಗಾನದ ಮಧ್ಯದಲ್ಲಿಯೇ ಬಿಳಿ ಡ್ರೆಸಿನ ಇಬ್ಬರು ನಗರ ರಕ್ಷಕರಿದ್ದರು

ಅವರು ಸಾವಧಾನದಿಂದ ಎದ್ದು ಈ ಕೀಚಕನ ಕೈ ಹಿಡಿದರು ಆ ಕಬ್ಬಿಣ ಮುಷ್ಟಿಯಲ್ಲಿ ತನ್ನ ಕೈ ಹೋದೊಡನೆ ಕೀಚಕರಿಗೆ ಸ್ವಲ್ಪ ಅಮಲು ಇಳಿದಂತಾಯಿತು

ಆದರೂ ಅಮಲಿನಲ್ಲಿಯೇ ಹೇಳಿದರು "ಎಲೈ ಅಪರಿಚಿತರೇ ನೀವಾರು? ನಾನು ವಿರಾಟನ ಭಾವ ಕೀಚಕನೆಂದು ಗೊತ್ತಿಲ್ಲವೆ?"

ಬಿಳಿ ಡ್ರೆಸಿನವರಿಗೆ ಕೀಚಕರ ಗುರುತಿತ್ತು ಅವರು ಕೀಚಕರನ್ನು ಬೀಮನ ಎದೆಯ ಮೇಲಿಂದ ಎಳೆದು ತಮ್ಮೊಡನೆ ಒಯ್ದರು

ಆ ದಿನ ರಾತ್ರಿ ಶ್ರೀಮಾನ ಕೀಚಕರು ಇಡೀ ರಾತ್ರಿ ಅಂತಃಪುರದಲ್ಲಿಯೇ ಕಾವಲುಗಾರರ ಮಧ್ಯದಲ್ಲಿ ಕಳೆಯಬೇಕಾಯಿತು.

ಮರುದಿನ ಬೆಳಿಗ್ಗೆ ಕೋರ್ಟಿಗೆ ಹಾಜರು ಪಡಿಸಲು ಇವರನ್ನು ಒಯ್ಯುವಾಗ ಕೆಲ ಶಾಲಾ ಹುಡುಗರು ತಾವು ನೋಡಿದ ಚಿತ್ರದ ಹಾಡೊಂದನ್ನು ಹೇಳುತ್ತಿದ್ದರು. "ದಾರೂ ಪೀನಾ ಹರಾಮ್ ಹೈ"

ನಮ್ಮ ಮಹಾಶಯರು ವಿರಾಟನಗರಿಯ ಸ್ವರ್ಗಲೋಕದಿಂದ ಒಂದೇ ಸವನೇ ಪಾತಾಳಕ್ಕೆ ಇಳಿದರು.

ಗಾಂಧೀ ವಿಚಾರದರ್ಶನ

ಕೋಪವೇ ಶತ್ರು

"ಕೋಪದಿಂದ ದ್ವೇಷವು ಉತ್ಪನ್ನವಾಗುತ್ತದೆ. ದ್ವೇಷದಿಂದ ಪ್ರತೀಕಾರದ ದುಷ್ಟ ಪ್ರವೃತ್ತಿ ಕೆರಳುತ್ತದೆ. ಇಂದಿನ ಭೀಕರ ಅಕೃತ್ಯ ಸಂಭವಗಳಿಗೆ ಇದೇ ಕಾರಣ. ಡಿಲ್ಲಿಯಲ್ಲಿ ತಮ್ಮ ಸಹಮತಸ್ಥರ ಮೇಲೆ ನಡೆದ ಅತ್ಯಾಚಾರದ ಸೇಡು ತೀರಿಸಿಕೊಳ್ಳುವುದರಿಂದ ಲಾಹೋರದ ಮುಸ್ಲಿಮರಿಗೂ ಗಡಿನಾಡು ಮತ್ತು ಪಶ್ಚಿಮ ಪಂಜಾಬದಲ್ಲಾದ ಅಕೃತ್ಯಗಳ ಸೇಡನ್ನು ತೀರಿಸಲು ಹಿಂದು ಸೀಖರಿಗೂ ಆಗುವ ಲಾಭವೇನು? ಒಬ್ಬನ ಇಲ್ಲವೆ ಕೆಲವರ ತಲೆ ಕೆಟ್ಟುಹೋದರೆ ನಾವೂ ಅವರ ಹಾಗೆ ಆಗಬೇಕೆಂದಿದೆಯೆ? ಈ ಕೊಲೆ ಸುಲಿಗೆಗಳಿಂದ ಹಿಂದೂ ಸೀಖರು ತಮ್ಮ ಮತದ ಪವಿತ್ರತೆಯನ್ನು ಕಳಂಕಿಸಿಕೊಳ್ಳುತ್ತಾರೆ"

ಹಿಂದಿನದನ್ನು ಮರೆಯಿರಿ

"ಮೃತರಿಗಾಗಿ ಅಳುವುದೇನೂ ಪ್ರಯೋಜನವಿಲ್ಲ ಸತ್ತವರು ಮರುಳುವುದೆಂದೂ ಇಲ್ಲ ಈ ಭವ್ಯ ದೇಶದ ಭವಿಷ್ಯವನ್ನುಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಡಿಲ್ಲಿಯಲ್ಲಿ ಮುಸಲ್ಮಾನರ ಜೀವವಿತ್ತಗಳು ಅಪಾಯದಲ್ಲಿರುವುದು ಖೇದದ ಸಂಗತಿ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವುದರಲ್ಲಿ ಯಾವ ಪುರುಷಾರ್ಥವೂ ಇಲ್ಲ ಕೆಡಕಿಗೆ ಒಳಿತನ್ನು ಮಾಡುವುದೇ ಯೋಗ್ಯ ಕರ್ತವ್ಯ"

ಭ್ರಾತೃತ್ವ

'ಭಾರತ ಒಕ್ಕೂಟಕ್ಕೆ ಸೇರಿದ ಮುಸ್ಲಿಮರು ಹೆಮ್ಮೆಪಟ್ಟುಕೊಳ್ಳಬೇಕು ತ್ರಿವರ್ಣ ಅಶೋಕ ಚಕ್ರಾಂಕಿತ ಧ್ವಜವನ್ನವರು ವಂದಿಸಬೇಕು ಅವರು ತಮ್ಮ ಮತಕ್ಕೆ ವಿಧೇಯರಾಗಿರುವುದಾದರೆ ಯಾವ ಹಿಂದೂವೂ ಅವರ ಶತ್ರುವಾಗಿರಲಾರ ಅದೇ ರೀತಿ ಹಿಂದೂ ಸೀಖರು ಶಾಂತಿಪ್ರಿಯ ಮುಸಲ್ಮಾನರನ್ನು ತಮ್ಮ ಮಧ್ಯದೊಳಗೆ ಸ್ವಾಗತಿಸಬೇಕು ಮುಸಲ್ಮಾನರು ತಮ್ಮ ಬಳಿಯಿರುವ ಅನಧಿಕೃತ ಶಸ್ತ್ರಾಸ್ತ್ರಗಳನ್ನು ಬಿಟ್ಟುಕೊಡಬೇಕು ಇದರಿಂದ ಹೊರತು ಸುಖವಿಲ್ಲ ಡಿಲ್ಲಿಯಲ್ಲಿ ಪ್ರಶಾಂತತೆಯನ್ನು ಕಾಪಾಡಲು ಎಲ್ಲರೂ ನೆರವಾಗಿ ನನ್ನನ್ನು ಪಂಜಾಬಕ್ಕೆ ಹೋಗಲು ಆಸ್ಪದ ಕಲ್ಪಿಸಬೇಕೆಂದು ನಾನು ಅರಿಕೆಮಾಡಿಕೊಳ್ಳುವೆ

ಎಲ್ಲರ ರಕ್ಷಕ

"ದೇವರು ಎಲ್ಲರ ಸಂರಕ್ಷಕನಲ್ಲದೆ ಮಾನವನಲ್ಲ ಮನುಷ್ಯನು ಕೆಡಿಸಿದನ್ನು ದೇವರು ಸರಿಪಡಿಸುತ್ತಾನೆ ಡಿಲ್ಲಿಯಲ್ಲಿ ಶಾಂತತೆಯು ಮತ್ತೊಮ್ಮೆ ನೆಲೆಸುವ ತನಕ ನಾನು ವಿಶ್ರಾಂತಿಯಿಂದಿರಲಾರೆ ಹಿಂದೆ ಅನೇಕ ಮತದವರು ಡಿಲ್ಲಿಯಲ್ಲಿ ಆಳಿರುವಂತೆ ಈ ಸಲ್ಲ ಶಾಂತತೆಯು ಅಲ್ಲಿ ಆಳಿಕೊಂಡಿರುವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ."

ಸರಕಾರಗಳ ಕರ್ತವ್ಯ

"ಪಶ್ಚಿಮ ಪಂಜಾಬದಿಂದ ಇಷ್ಟೊಂದು ಹಿಂದೂ ಸೀಖರೇಕೆ ಓಡಿಬರುತ್ತಿರುವರು? ಪಶ್ಚಿಮದಲ್ಲಿ ಅವರ ಸ್ವಮತಸ್ಥರು ಮಾಡಿದ ತಪ್ಪಿಗೆ ಇದು ಶಿಕ್ಷೆಯೇನು? ಇಲ್ಲವೆ ಅವರು ಕೇವಲ ಭಯದಿಂದ ಬರುತ್ತಿರುವರೇ? ಡಿಲ್ಲಿಯ ಮುಸಲ್ಮಾನರು ದಿಗಿಲುಗೊಳ್ಳಲು ಕಾರಣವೇನು? ಅಲ್ಪ ಸಂಖ್ಯಾಕರನ್ನು ರಕ್ಷಿಸಲಿಕ್ಕಾಗದಿದ್ದ ಸರಕಾರ ರಾಜಿನಾಮೆಯಿತ್ತು ಬೇರೆಯವರಿಗೆ ದಾರಿ ಮಾಡಿಕೊಡಬೇಕು ಸರಕಾರವು ಜನರಿಗಾಗಿ, ಜನರು ಕೂಡಾ ನ್ಯಾಯತಪ್ಪಿ ತಡೆಯಲಾರರು."

ಸ್ವಯಂಸೇವಕ ಸಂಘದ ಉದ್ದೇಶ

"ರಾಷ್ಟ್ರೀಯ ಸ್ವಯಂಸೇವಕ ಸಂಘದ ಗುರುಜಿಯೊಡನೆ ಮಾತುಕತೆ ಮಾಡಿದೆ ಈ ಸಂಸ್ಥೆಯ ಕೈಗಳು ಕೊಲೆಪಾತಕದಿಂದ ರಕ್ತಮಯವಾಗಿವೆಯೆಂದು ಕೇಳಿದ್ದನ್ನು ಅವರಿಗೆ ತಿಳಿಸಿದೆ ಆದರೆ ಇದು ಅಸತ್ಯವಾದುದೆಂದು ಗುರುಜಿಯವರು ತಿಳಿಸಿದರು ಈ ಸಂಸ್ಥೆಯು ಯಾರ ಶತ್ರುವೂ ಆಗಿಲ್ಲ ಮುಸಲ್ಮಾನರನ್ನು ಕೊಲ್ಲುವುದು ಈ ಸಂಸ್ಥೆಯ ಉದ್ದೇಶವಲ್ಲ ಕೇವಲ ಹಿಂದೂತ್ವವನ್ನು ರಕ್ಷಿಸುವುದು ಅದರ ಗುರಿಯಾಗಿದೆ"

卐

(೭ನೇ ಪುಟದಿಂದ)

ದಕ್ಷಿಣ ಕನ್ನಡ ಜಿಲ್ಲಾ ಅಭಿವೃದ್ಧಿ ಸಂಘ

... ಜಿಲ್ಲೆಯ ಇತರ ಕಡೆಗೂ ಹೋಗಿ ಎಲ್ಲರಿಗೂ ಇದರಿಂದ ಪ್ರಯೋಜನವಾಗುವಂತೆ ಹಾಗೆ ಜಿಲ್ಲೆಯಲ್ಲಿ ಒಂದು ವಿಮಾನ ನಿಲ್ದಾಣವೂ ಏರ್ಪಾಡಾಗುವಂತೆ ಪ್ರಯತ್ನ ಮಾಡಲು ಇನ್ನೊಂದು ಉಪಸಮಿತಿಯು ನೇಮಕವಾಗಿರುತ್ತದೆ

ಹೀಗೆ ಜಿಲ್ಲಾ ಅಭಿವೃದ್ಧಿ ಸಂಘದವರು ಜಿಲ್ಲೆಯ ಹಲವು ಅಭಿವೃದ್ಧಿ ಪ್ರಶ್ನೆಗಳನ್ನು ಕೈಕೊಂಡು ಕೆಲವು ಮುಂದೊತ್ತಲು ನಿರ್ಧಾರ ಮಾಡಿರುವುದು ಸಮಯೋಚಿತವೂ ಉಪಯುಕ್ತವೂ ಇರುವುದರಿಂದ ಸಂಘದ ಸಂಚಾಲಕರಿಗೆ ಹಾಗೂ ಅದರ ಅಧ್ಯಕ್ಷರಾದ ಕಲೆಕ್ಟರರಿಗೆ ನಾವು ಅಭಿನಂದಿಸಿ ಇವರ ಸಾಹಸ ಯಶಸ್ವಿಯಾಗಲೆಂದು ಕೋರುತ್ತೇವೆ

ಸೌಂದರ್ಯ ಸಾಧನೆ
ಪ್ರತಿ ಸಲ ಕುಟಿಕೂರಾದಿಂದ
ತಿಕ್ಕಿ ತೊಳೆದಾಗ
ಈ ಸೌಗಂಧ ಸಾಬೂನಿನಲ್ಲಿ ಔಷಧೀಯ ಮತ್ತು ಶೃಂಗಾರ ಮಹೌಲ್ಯವಿದೆ ಚರ್ಮವನ್ನು ಸ್ವಚ್ಛವಾಗಿ ತೊಳೆದು ಅದಕ್ಕೆ ಹೊಸ ಕಾಂತಿ ಕೊಟ್ಟು ಎಲ್ಲಾ ಅದರ ಅವಗುಣಗಳನ್ನು ಹೋಗಲಾಡಿಸುತದೆ


555
ಕುಟಿಕೂರಾ ಸಾಬೂನು
CUTICURA SOAP

ಮಂಗಳೂರಿನ ಪತ್ರಿಕೋದ್ಯೋಗಿಗಳ ಅವಸರದ ಸಭೆಯೊಂದು ತಾ 1ರಂದು ಕಂಠೀರವ ಪತ್ರಿಕೆಯ ಕಚೇರಿಯಲ್ಲಿ, ಶ್ರೀ ಕುರುಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿ, ಹೈದರಾಬಾದು ಸರಕಾರವು ಹಿಂದುಸ್ಥಾನ್ ಟೈಮ್ಸ್ ಪತ್ರಿಕೆಯ ಮತ್ತು ಅ. ಪ್ರೆ ಸುದ್ದಿಗಾರರ ಮೇಲೆ ಕೈಮಾಡಿದ್ದನ್ನೂ, ಸಂಸ್ಥಾನದ ಪುರೋಗಾಮಿ ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಿದ್ದನ್ನೂ ನಿಷೇಧಿಸಲಾಯಿತು

ಹೊಸ ಪತ್ರಿಕೆ

ಪ್ರಪಂಚ: ಸಂಪಾದಕರು ಶ್ರೀ ಬಿ ನರಸಪ್ಪ. ಕ್ರೌನ್ ¼ ಆಕೃತಿಯ 28 ಪುಟಗಳು ಬೆಲೆ ನಾಲ್ಕಾಣೆ. ನಿರ್ವಂಚನೆಯ ಧ್ಯೇಯದ ಮತ್ತು ಭಾಷಾ ಸೇವೆಯ ಉದ್ದೇಶದ ಕನ್ನಡ ಮಾಸ ಪತ್ರಿಕೆ "ಕಠೋರ ಸತ್ಯವನ್ನು ಆತ್ಮವಂಚನೆ ಮಾಡಿಕೊಳ್ಳದೆ ಬಹಿರಂಗ ಪಡಿಸುವುದು," ಇದನ್ನು ಒತ್ತಿಹೇಳಲಾಗಿದೆ ಪತ್ರಿಕೆಯೊಳಗೆ ವಿಡಂಬನಾತ್ಮಕವಾದ ಹಾಸ್ಯಲೇಖನಗಳೂ, ವಿಚಾರ ಪರಿಪ್ಲುತ ಕವಿತೆ, ಪ್ರಬಂಧಗಳೂ, ಸಾರ್ವಜನಿಕ ವ್ಯವಹಾರದ ಲೋಪದೋಷಗಳನ್ನು ಚರ್ಚಿಸುವ ವಿಮರ್ಶೆಗಳೂ, ವಿನೋದಪರ ಸಣ್ಣ ಕತೆ, ಭೌಗೋಲಿಕ ವಿಷಯಗಳ ಅಂಕೆಸಂಖ್ಯೆಗಳೂ, ಅಗ್ರಗಣ್ಯ ವ್ಯಕ್ತಿಗಳ ಜೀವನ ಸಾರಾಂಶಗಳೂ ಇವೆ ಅನುಭವಸ್ಥ ಸಂಪಾದಕರು ಪತ್ರಿಕೆಯನ್ನು ಅಭಿರುಚಿದಾಯಕವಾದ ಪ್ರಗತಿಶೀಲ ಪಥದಲ್ಲಿ ಮುನ್ನಡೆಸಲು ನಿರ್ಧರಿಸಿದ ಸಲ್ಲಕ್ಷಣಗಳು ತೋರುತ್ತಿವೆ ಶಾಲೆ, ವಾಚನಾಲಯಗಳಲ್ಲಿಯೂ ಅವಶ್ಯ ತರಿಸಿಕೊಳ್ಳಬಹುದು 'ಪ್ರಪಂಚ'ಕ್ಕೆ ಉತ್ತರೋತ್ತರ ಯಶಸ್ಸನ್ನು ಕೋರುವೆವು

ದ ಕ ಜಿಲ್ಲಾ ಎಡ್ವಾನ್ಸ್‌ಮೆಂಟ್ ಸೊಸೈಟಿಯ ಚಟುವಟಿಕೆಗಳನ್ನು ವಿಸ್ತರಿಸುವ ಬಗ್ಗೆ ತಾ 30ರಂದು ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಒಂದು ಸಭೆಯು ಸೇರಿತು. ಸಭಾರಂಭದಲ್ಲಿ ಜೆ ಎಫ್ ಸೊಂಡರ್ಸ್‌ರವರು ಹೊಸ ಕಾರ್ಯಕ್ಷೇತ್ರಗಳ ವಿಚಾರವಾಗಿ ಮಾತನಾಡಿದರು ಹಲವು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದರು ಒಂದರದ ಪಕ್ಷೆ ಒಂದಾಗ ಮಲ್ಪೆಯೇ ಆಗಬೇಕೆಂದು ಡಾ ಮಾಧವ ಶೈಗಳ ವಾದಿಸಿದರು

ಚರ್ಚೆಯಾದ ಮೇಲೆ ಸಭೆಯು ತೀರ್ಮಾನದಂತೆ 1 ಜಿಲ್ಲಾ ವೈದ್ಯಕೀಯ ಸಹಾಯಕ್ಕಾಗಿ, 2-ಮಂಗಳೂರಿಗೆ ಶುದ್ಧ ನೀರು ಮತ್ತು ಚರಂದಿಗಳ ವ್ಯವಸ್ಥೆಗಾಗಿ, ಜಿಲ್ಲೆಯ ವಿದ್ಯುಚ್ಛಕ್ತಿ ಸರಬರಾಯಿಗಾಗಿ 4-ಜಿಲ್ಲೆಯ ಪೂರ್ವ ಭಾಗದ ಬಂದರನ್ನು ಸಾಗುಗೊಳಿಸುವ ಸಲುವಾಗಿ 5-ಜಿಲ್ಲೆಯ ಪ ಬುದ್ಧ ಬಂದರದ ವ್ಯವಸ್ಥೆಗಾಗಿ, 6-ಮಂಗಳೂರು ಪದವಿನ ಕಟ್ಟಡಗಳ ಯೋಜನೆಗಾಗಿ, 7 ಜಿಲ್ಲೆಯ ರಸ್ತೆ ರೈಲು ಕಾಲುವೆ ವಿಮಾನ ನಿಲ್ದಾಣಗಳ ವ್ಯವಸ್ಥೆಗಾಗಿ ಹೀಗೆ ಏಳು ಸಮಿತಿಗಳು ರಚಿಸಲ್ಪಟ್ಟವು.

ಬೆಸೆಂಟ್ ಶತಾಬ್ಧಿ ಉತ್ಸವ: ತಾ 1ರಂದು ಸ್ಥಳೀಯ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ ಬೆನೆಗಲ್ ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು ಡಾ। ಕೇಶವ ಪೈಗಳ ಸ್ವಾಗತ ಭಾಷಣವಾದೊಡನೆ ಬೆಸೆಂಟ್ ಅಮ್ಮನ ತೈಲ ಚಿತ್ರಕ್ಕೆ ಪುಷ್ಪಹಾರಗಳನ್ನು ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಅರ್ಪಿಸಿದರು ಆ ಬಳಿಕ ಶ್ರೀಗಳಾದ ವಿಮಲಾನಂದ ಸ್ವಾಮಿ, ಎಂ ಎಸ್ ಮಾಧವ ರಾವ್, ಕೆ ಎಸ್ ಕಾರಂತ ಅವರು ಬೆಸೆಂಟ್‌ರವರ ಜೀವನ ಉಪದೇಶಗಳನ್ನು ತಿಳಿಸಿ ತಮ್ಮ ಅಭಿವಂದನೆಗಳನ್ನು ಅರ್ಪಿಸಿದರು ಬೆಸೆಂಟ್ ಶಾಲೆಯ ಮುಖ್ಯೋಪಾಧ್ಯಾಯಿನಿಯರು ಶಾಲೆಯ ಪರದಿ ಓದಿದ ಮೇಲೆ ಬಹುಮಾನ ವಿತರಣೆಯಾಯಿತು, ಆ ಮೇಲೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬೆಸೆಂಟ್ ಅವರೊಡನೆ ಅವರು ಇದ್ದಾಗ ಆದ ಮಾತುಕತೆಗಳು, ಅವರ ಜಾಣ್ಮೆ ವ್ಯಕ್ತಿತ್ವ ಇತ್ಯಾದಿಗಳನ್ನೂ ದೇಶದ ಶಿಕ್ಷಣಕ್ಕಾಗಿ ಅವರು ಸಲ್ಲಿಸಿದ ಸೇವೆಯನ್ನೂ ವಿವರಿಸುತ್ತ—"ಮಾನವತೆಯ ಸೇವಕರಲ್ಲಿ ಇವರು ಅಗ್ರಗಣ್ಯರು" ಎಂದು ಹೇಳಿದರು

ಆ ಮೇಲೆ ವಿನೋದಾವಳಿಯೊಡನೆ ಸಮಾರಂಭವು ಕೊನೆಗೊಂಡಿತು. ಈ ಸಮಾರಂಭಕ್ಕಾಗಿಯೇ ಬರೆದ ದರ್ಶನವೆಂಬ ಬೆಸೆಂಟ್ ಮಾತೆಯ ಜೀವನದ 6 ಘಟನೆಗಳನ್ನು ಚಿತ್ರಿಸುವ ಗೀತಾ ರೂಪಕವು ಅತ್ಯಂತ ಯಶಸ್ವಿಯಾಗಿ ಎಲ್ಲರ ಮೆಚ್ಚುಗೆಯನ್ನು ಪಡೆಯಿತು

ಜಿಲ್ಲಾ ಪರಿಚಯ

ಹಿಂದುಸ್ಥಾನ್ ಸ್ಕೌಟ್. ಇದರ ಒಂದು ಮೇಳವು ತಾ 1ರಂದು ಬೆಳಗ್ಗೆ ಜರಗಿತು. ಈ ಮೇಳಕ್ಕೆ ನಗರದ 300 ಸ್ಕೌಟು ಬಾಲಕರೂ ಬಾಲಕಿಯರೂ ಭಾಗವಹಿಸಿದ್ದರು ಭಾರತ ಧ್ವಜವನ್ನೂ ಸ್ಕೌಟ್ ಧ್ವಜವನ್ನೂ ಅರಳಿಸಿದ ಮೇಲೆ ಎಂ ಎಸ್ ಏಕಾಂಬರ ರಾಯರೂ, ಕೆ. ಎಸ್ ಕಾರಂತರೂ ಸಂದರ್ಭೋಚಿತವಾಗಿ ಮಾತನಾಡಿದರು ಸ್ಕೌಟುಗಳು ತಮ್ಮ ಪ್ರಮಾಣವನ್ನು ಉಚ್ಚರಿಸಿದ ಬಳಿಕ ಕಬ್ಬುಗಳ ಹಂಚೋಣದೊಂದಿಗೆ ಸಮಾರಂಭವು ಕೊನೆಗೊಂಡಿತು

ಅದೇ ದಿನ ಸಂಜೆಗೆ ಸ್ಥಳೀಯ ಥಿಯಾಸಾಫಿಕಲ್ ಸೊಸೈಟಿಯಲ್ಲಿ ಜರಗಿದ ಸಭೆಯಲ್ಲಿ ಲಾಜಿನ ಹೆಸರನ್ನು 'ಬೆಸೆಂಟ್ ಮಂದಿರ'ವೆಂದು ಬದಲಾಯಿಸುವ ಸಮಾರಂಭವು ನಡೆಯಿತು ಬೆಸೆಂಟ್‌ರವರ ಕುರಿತು ಬೆನೆಗಲ್ ಸಂಜೀವರಾಯರು ಮಾತನಾಡಿದರು

ಹರಿಕಥಾ ಸಪ್ತಾಹ: ಇದೇ ತಾ 5ರಿಂದ 12ರ ವರೆಗೆ ಇಲ್ಲಿಯ ಡಿ। ಬೋ। ಆಫೀಸು ಹಿಂಬದಿ ಇರುವ ಶ್ರೀ ಕುಲಾಲರ ಶ್ರೀ ರಾಮ ಸೇವಾ ಭಜನಾ ಮಂದಿರದಲ್ಲಿ ರಾತ್ರಿ 8 30 ರಿಂದ 11-30ರ ವರೆಗೆ ಹರಿಕಥಾ ಸಪ್ತಾಹ ಜರಗುತ್ತದೆ ಜಮೆಯಾದ ಹಣವನ್ನು ಡಿಲ್ಲಿ ಪಂಜಾಬು ಹಿಂದೂ ನಿರಾಶ್ರಿತರ ಸಹಾಯಾರ್ಥವಾಗಿ ರವಾನಿಸಲಾಗುವುದು

ಹರಿಜನ ನವಚೇತನ ಸಭಾ: ಈ ಸಂಘದ ವತಿಯಿಂದ ಕಳೆದ ತಾರೀಕ ರಲ್ಲಿ ಶ್ರೀ ಗೋಪಾಲ ಸಾಲಿನ್ಸರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿ ಉತ್ಸವವು ಯುಕ್ತ ಕಾರ್ಯಕ್ರಮಗಳೊಂದಿಗೆ ಜರಗಿತು ಶ್ರೀಗಳಾದ ಜೆ ವಾಮನ ಜೆ ರಾಮಣ್ಣ, ಕಾಂತಪ್ಪ ಮತ್ತು ಪಿ ಡಿ ಬಂಗೇರ ಮೊದಲಾದವರ ಭಾಷಣಗಳಾಗಿ ಸಂಘಕ್ಕೆ ಹೊಸ ಕಾರ್ಯಕಾರಿ ಸಮಿತಿಯನ್ನು ಆರಿಸಲ್ಪಟ್ಟ ಮೇಲೆ ಲಘು ಫಲಹಾರದೊಂದಿಗೆ ಸಭಾಂತ್ಯವಾಯಿತು

ಮಾನ್ಯ ಮಂತ್ರಿ ಸೀತಾರಾಮ ರೆಡ್ಡಿಯವರ ಕಾರ್ಯಕಲಾಪ

ಮಂಗಳೂರಿನ ಕಾಂಗ್ರೆಸ್ ಕೆಲಸಗಾರರನ್ನು ಮಾನ್ಯ ಮಂತ್ರಿಗಳು ತಾ 1ರಂದು ಮಧ್ಯಾಹ್ನ 2½ ಗಂಟೆಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಕಂಡು ಅವರೊಡನೆ ವಿಚಾರ ವಿನಿಮಯ ಮಾಡಿ ತ್ತಾ ಕಾಂಗ್ರೆಸ್ ಕೆಲಸಗಾರರ ಪಾನನಿರೋಧವು ಯಶಸ್ವಿಯಾಗುವಂತೆ ದುಡಿಯಬೇಕೆಂದು ಕೇಳಿಕೊಂಡರು

ಅಲ್ಲಿಂದ ಮಂತ್ರಿಗಳು ವಾಣಿಜ್ಯ ಸಂಘದ ಆಫೀಸಿಗೆ ಹೋದರು ದ ಕ ಜಿಲ್ಲಾ ವಣಿಜ ಸಂಘದ ಅಧ್ಯಕ್ಷ ಶ್ರೀ। ಪಿ ಎಸ್ ಕುದ್ವರು ಮಂತ್ರಿಗಳಿಗೆ ಹೂವಿನ ಹಾರಹಾಕಿ ಸ್ವಾಗತಿಸಿದರು, ಕಾರ್ಯದರ್ಶಿಗಳಾದ ಶ್ರೀ। ದೇವಿದಾಸ ಗಿರಿಧರಲಾಲರು ಸಂಘದ ಮಾನಪತ್ರವನ್ನು ಓದಿ ಹೇಳಿದರು, ಪತ್ರದಲ್ಲಿ, ಜಿಲ್ಲೆಗೆ ಕಬ್ಬಿಣ, ಸಿಮೆಂಟು ಇತ್ಯಾದಿಗಳ ಪೂರೈಕೆ ಕಡಿಮೆಯೆಂದೂ ಹೊರಗಿನಿಂದ ವಿದ್ಯುತ್ ತರುವ ಬದಲು ಇಲ್ಲಿಯೇ ಸಿದ್ಧಗೊಳಿಸುವ ಯೋಜನೆಯನ್ನು ಸರಕಾರವಾಗಲಿ, ಖಾಸಗಿ ಸಂಸ್ಥೆಯಾಗಲೀ ಕೈಕೊಳ್ಳಬೇಕೆಂದೂ ಸೂಚಿಸಿದ್ದಲ್ಲದೆ ಸರಕಾರಕ್ಕೆ ಸಹಕಾರವೀಯಲು ಸಂಘವು ಸಿದ್ಧವಾಗಿದೆಯೆಂದೂ ಸೂಚಿಸಲಾಗಿತ್ತು, ಮಂತ್ರಿಗಳು ತನ್ನ ಅಧಿಕಾರಕ್ಕೊಳಪಟ್ಟ ವಿಚಾರಗಳನ್ನು ಎತ್ತಿಕೊಂಡು ಉತ್ತರವೀಯುತ್ತ ಕಬ್ಬಿಣದ ವಿತರಣೆಯ ಕಷ್ಟವನ್ನು ವಿವರಿಸಿದರಲ್ಲದೆ ಜಿಲ್ಲೆಗೆ ಸರಕಾರವು ತನ್ನಿಂದಾದಷ್ಟು ಸಹಾಯ ಮಾಡುವುದೆಂದರು ಮಂಗಳೂರಿನ ಕ್ರೈಸ್ತ ಸೇವಕ ಸಂಘವು ಕೂಡ ಮಂತ್ರಿಗಳಿಗೊಂದು ಬಿನ್ನವತ್ತಳೆಯನ್ನು ಅರ್ಪಿಸಿ ಪಾನನಿರೋಧದ ಕುರಿತು ಕೆಲವು ಧಾರ್ಮಿಕ ಕೇಳಿಕೆಗಳನ್ನು ಕೇಳಿದ್ದರು. ಮಂತ್ರಿಗಳು ಆ ಕುರಿತು ಆಲೋಚಿಸುವುದಾಗಿ ಭರವಸೆಯಿತ್ತರಲ್ಲದೆ ಧರ್ಮದ ವಿಚಾರದಲ್ಲಿ ತಾವು ಕೈಹಾಕುವುದಿಲ್ಲವೆಂದರು.

ತಪಾಸನೆ.

ಸ್ಥಳೀಯ ಕೆಥೋಲಿಕ್ ಬೇಂಕಿನಿಂದ ಕೆಲವು ಸಮಯದ ಹಿಂದೆ ಸುಮಾರು 30 ಸಾವಿರ ರೂಪಾಯಿಗಳನ್ನು ಅಲ್ಲಿನೊರ್ವ ಉದ್ಯೋಗಸ್ಥನು ವಂಚಿಸಿ ಪರಾರಿಯಾಗಿದ್ದನೆಂದೂ, ಅವನೊಡನೆ ಮೋಸದ ಈ ಕಾರ್ಯದಲ್ಲಿ ಸಹಕರಿಸಿದನೆಂಬ ಇಲ್ಲಿಯ ಕೆಲವರ ಮನೆಗಳು ಇಲ್ಲಿಯ ಪೋಲೀಸರಿಂದ ಜಪ್ತಿ ಮಾಡಲ್ಪಟ್ಟು ಮುಂದಿನ ಮೊಕದ್ದಮೆಗೆ ಸಹಾಯಕವಾಗುವ ಪೊತ್ತನ್ನೂ, ಕಾಗದ ಪತ್ರವನ್ನೂ ವಶಪಡಿಸಿಕೊಂಡಿರುವರೆಂದೂ ವದಂತಿಯಿದೆ

ನೋಟೀಸು

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ-ತುಪಾಕಿ, ರಿವಾಲ್ವರು ಮೊದಲಾದ ಆಯುಧಗಳ ಲೈಸೆನ್ಸುಗಳನ್ನು ಸಂ, 1948ನೇ ಇಸವಿಗೆ ರಿನ್ಯೂವಲ್ ಬಗ್ಗೆ ಮಾಡೋಣಾಗುವ ಅರ್ಜಿಗಳನ್ನು ತಾ 1-11-1947 ರಿಂದ ಈ ಆಫೀಸಿನಲ್ಲಿ ಸ್ವೀಕರಿಸೋಣಾಗುವದು ತಾ 31-12-1947ರ ಮೊದಲು ತಲ್ಪುವ ಅರ್ಜಿಗಳ ವಿಷಯದಲ್ಲಿ, ತೋಟಕೋವಿಗಳ ಮತ್ತು ರಿವಾಲ್ವರ್ ಇತ್ಯಾದಿ ಕುರಿತು ಫೋರ್ಮು XVI ಲೈಸೆನ್ಸ್ ರಿನ್ಯೂವಲ್ ಬಗ್ಗೆ ಅರ್ಧ ಫೀಸನ್ನೂ, ಅನಂತರ ಬರುವ ಅರ್ಜಿಗಳಿಗೆ ಲೈಸೆನ್ಸ್ ರಿನ್ಯೂವಲ್ ಬಗ್ಗೆ ಕ್ರಮ ಪ್ರಕಾರ ಸಂಪೂರ್ಣ ಫೀಸನ್ನೂ ಹೊರಿಸಲಾದೀತು ಈ ಕಾರಣ ರಿನ್ಯೂವಲ್ ಬಗ್ಗೆ ಅರ್ಜಿ ಮಾಡುವ ಲೈಸೆನ್ಸ್‌ದಾರರು ಅದರ ಅರ್ಜಿಗಳನ್ನು ಕ್ಲಪ್ತ ಸಮಯದಲ್ಲಿ ಈ ಆಫೀಸಿಗೆ ತಲ್ಪಿಸುವಂತೆ ಈ ಮೂಲಕ ಅಪೇಕ್ಷೆ ಮಾಡೋಣಾಗುತ್ತದೆ

ದ ಕ ಜಿಲ್ಲಾ ಕಲೆಕ್ಟರರ ಪ್ರಕಟಣೆ

ಪುತ್ತೂರು

ಶ್ರೀ ಸಿದ್ಧವನ ಗುರುಕುಲಕ್ಕೆ ಟ್ರಸ್ಟ್ ಇಂದಿಗೆ 7-8 ವರ್ಷಗಳಿಂದಲೂ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗಡೆಯವರು ನಡೆಸಿಕೊಂಡು ಬರುತ್ತಿರುವ ಶ್ರೀ 'ಸಿದ್ಧವನ' ಗುರುಕುಲ ಎಂಬ ವಿದ್ಯಾ ಸಂಸ್ಥೆಯು ಮುಂದಕ್ಕೂ ಶಾಶ್ವತವಾಗಿ ಯೋಗ್ಯ ವ್ಯವಸ್ಥೆಯಿಂದ ನಡೆದು ಬರುವುದಕ್ಕಾಗಿ ನಾಲ್ಕು ಜನರ ಟ್ರಸ್ಟಿಗಳುಳ್ಳ ಸಿದ್ಧವನ ಗುರುಕುಲ ಟ್ರಸ್ಟ್ ಎಂಬ ಹೆಸರಿನ ಸಂಸ್ಥೆಯನ್ನು ರಚಿಸಿ, ವರ್ಷಕ್ಕೆ ಅಂದಾಜು ನಾಲ್ಕು ಸಾವಿರ ರೂಪಾಯಿ ಉತ್ಪನ್ನ ಬರತಕ್ಕ ಸ್ಥಿರಾಸ್ತಿಗಳನ್ನು ಬಿಟ್ಟುಕೊಟ್ಟು ಯೋಗ್ಯ ವ್ಯವಸ್ಥೆ ಮಾಡಲಾಗಿದೆ

ಕಾಸರಗೋಡು

ಆಹಾರ ಸಮಿತಿ ಸದಸ್ಯತನಗಳಿಗೆ ರಾಜೀನಾಮೆ. ಅಕ್ಕಿ, ಬಟ್ಟೆ ಎಣ್ಣೆ ಸಕ್ಕರೆ ಕೃಷಿಯ ಉಪಕರಣ ಇವುಗಳ ವಿತರಣೆಗಳಲ್ಲಿ ಹಾಗೂ ಸಗಟು ವಿತರಣೆಯ ಕಾರ್ಯಗಳಲ್ಲಿ ಅನ್ಯಾಯವನ್ನು ನಿಷೇಧಿಸಿ ಮತ್ತು ಗ್ರಾಮ ಸಮಿತಿಗಳ ಮನವಿಗಳನ್ನು ಅಲಕ್ಷಿಸಿದ ಸರಕಾರದ ವರ್ತನೆಯನ್ನು ನಿಷೇಧಿಸಿ ಕಾಸರಗೋಡು ತಾಲೂಕು ಆಹಾರ ಸಮಿತಿಯ ಸದಸ್ಯರಾದ ಶ್ರೀ ಉಳಿಯತ್ತಡ್ಕ ಕೃಷ್ಣಭಟ್ಟರು ಮತ್ತು ಶ್ರೀ ಬಿ ದೇವಪ್ಪಾಳ್ವರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿದ್ದಾರೆ ಈಗಾಗಲೇ ಪೆರಡಾಲ ಮತ್ತು ಬೇಳ ಗ್ರಾಮ ಸಮಿತಿಗಳು ಮೇಲೆ ಕಾಣಿಸಿದ ಆರೋಪ ಪ್ರಕಾರ ಸಂಪೂರ್ಣ ರಾಜಿನಾಮೆ ಕೊಟ್ಟಿರುತ್ತವೆ 20 8-47ರಂದು ಆದ ಕುಂಬ್ಳೆ ಫಿರ್ಕಾ ಗ್ರಾಮ ಸಮಿತಿಗಳ ಯೂನಿಯನಿನ ನಿರ್ಣಯದಂತೆ, ಈ ಫಿರ್ಕಾದ ಇನ್ನಿರುವ ಗ್ರಾಮ ಸಮಿತಿಗಳೂ ಸಂಪೂರ್ಣವಾಗಿ ತಮ್ಮ ರಾಜಿನಾಮೆ ಕಳುಹಿಸಲು ನಿಶ್ಚಯಿಸಿರುತ್ತವೆ ಎಂದು ತಿಳಿದು ಬರುತ್ತದೆ

ಸ್ವೀಕಾರ ಮತ್ತು ವಿಮರ್ಶೆ

ರಾಷ್ಟ್ರ ಪುರುಷ – ಬರೆದವರು – ಮಿರ್ಜಿ ಅಣ್ಣಾರಾಯರು – ಮನೋಹರ ಗ್ರಂಥಮಾಲೆಯ ಐದು ತಿಂಗಳ ಸಂಯುಕ್ತ ಪ್ರಕಟನೆ 720 ಪುಟಗಳು – ಬೆಲೆ ರೂ 7.

"ನಿಸರ್ಗ"ವನ್ನು ಬರೆದ ಅಣ್ಣಾರಾಯರು ತಮ್ಮ ಈ ಬೃಹತ್ ಕಥಾನಕದಲ್ಲಿ ಭಾಷೆಯ ಮಾದರಿ ಬದಲಾಯಿಸಿದ್ದು ಈ ಕಡೆಯ ಓದುಗರ ಪುಣ್ಯ ಇದು ಪ್ರಚಲಿತ ಐತಿಹಾಸಿಕ ಘಟನೆಯ ತಳಹದಿಯ ಮೇಲೆ ಕಟ್ಟಿದ ಕಲ್ಪಿತ ಕಾದಂಬರಿ 1921ರ ಅಸಹಕಾರ ಚಳವಳದ ಕಾಲದಲ್ಲಿ ಹುಡುಗನಾಗಿದ್ದ ಅಜಿತ ನೂಲುವುದನ್ನು ಕಂಡು ರೇಗಿದ ಅವನ ಕಕ್ಕ—ಊರ ಗೌಡ ಆದಗೌಡನೆಂಬವನು ಒಗೆದ ಬಡಿಗೆ ಪಂಚಮ ಜಾರ್ಜ ಬಾದಶಹರ ಪಟವನ್ನು ನೆಲಕ್ಕಿಳಿಸಿದ ದೃಶ್ಯದಿಂದ ಆರಂಭವಾಗಿ 1942ನೇ ಇಸವಿಯ ಕ್ರಾಂತಿಯ ಬಳಿಕ ಈಗ ದೊಡ್ಡವನಾದ ಅಜಿತ ಜಯತುನಬಿಯೆಂಬ ಮುಸ್ಲೀಮ ಯುವತಿಯನ್ನು ವಿವಾಹ ಮಾಡಿಕೊಳ್ಳಲು ಕುಳಿತಿದ್ದ ಜಯಾ ಇನ್ನು ಬಂದಿಲ್ಲವೆಂಬ ಚಿಂತೆಯ ಮಾತಿನಿಂದ ಅಂತ್ಯವಾಗುತ್ತಿದೆ ಭಾರತದ ರಾಷ್ಟ್ರೀಯ ಹೋರಾಟವನ್ನು ಚಿತ್ರಿಸುವುದು ಲೇಖಕರ ಉದ್ದೇಶ ಈ ಉದ್ದೇಶಪೂರ್ತಿಗಾಗಿ ಪಾತ್ರಸೃಷ್ಟಿ ಹಾಗೂ ಕಥಾನಕವನ್ನು ಕಲ್ಪಿಸಲಾಗಿದೆ

ಭಾರತದಲ್ಲಿ ಬ್ರಿಟಿಷ ಸತ್ತೆಯ ತಳಹದಿಯಾದ ಆದಗೌಡ ಸರಕಾರಕ್ಕೆ ವಿರೋಧ ಹೋದರೆ ಗ್ರಾಂಟು ತಪ್ಪೀತೆಂಬ ಹೆದರಿಕೆಯ ಶಾಲೆಯ ಹೆಡ್ ಮಾಸ್ತರರು, ಉಜ್ವಲ ರಾಷ್ಟ್ರಾಭಿಮಾನಿಗಳಿದ್ದ ಮಾಸ್ತರ ಕೆಲಸದಲ್ಲಿರುವ ಜಾಧವ ಮಾಸ್ತರರು ಕಮ್ಯೂನಿಸ್ಟ್ ಒಲವಿನ ಸುಧೀರ, ಸುಖದ ವಾತಾವರಣದಲ್ಲಿಯೂ ತನ್ನ ಸುಖವನ್ನೇ ಬಯಸುವ ಯುವಕ ರಾವ ಸಾಹೇಬ ವಸಂತ ಮೊದಲಾದ ಪೋಲಿಸ ಅಧಿಕಾರದಲ್ಲಿರುವ ಪಾತ್ರಗಳು ಹಾಗೂ ಕಥಾನಾಯಕ ಅಜಿತ ಹಾಗೂ ಅವನ ಗೆಳೆಯರು ಇವೆಲ್ಲ ಈ ಚಳವಳದ ಕಾಲದಲ್ಲಿ ಎಲ್ಲಾ ಊರುಗಳಲ್ಲಿಯೂ ನೋಡಸಿಕ್ಕುವ ಮಾದರಿಯ ವ್ಯಕ್ತಿಗಳು ಈ ವ್ಯಕ್ತಿಗಳ ಗುಣವಿಶೇಷವು ಸರಿಯಾಗಿ ಕಂಡುಬರಲು ಅನುಕೂಲವಾಗುವಂಥ ಅವರವರ ಸಂಸಾರ ಚಿತ್ರ ಹಾಗೂ ಕಥಾನಕದಲ್ಲಿಯ ಘಟನೆಗಳು-- ಈ ಘಟನೆಗಳಿಗೂ ರಾಷ್ಟ್ರೀಯ ಚಳವಳದ ಘಟನೆಗಳಿಗೂ ನಿಕಟಸಂಬಂಧ-ಈ ರೀತಿ ಈ ದೊಡ್ಡ ಕಥೆಯನ್ನು ರಚಿಸಲಾಗಿದೆ

ಐತಿಹಾಸಿಕ ವ್ಯಕ್ತಿಗಳಲ್ಲಿ ಮಹಾತ್ಮಾ ಗಾಂಧಿಯವರನ್ನು ದೂರದಲ್ಲಿ ತರಲಾಗಿದೆ

ಗಾಂಧೀವಾದ ಕಮ್ಯೂನಿಸ್ಟ್ ತತ್ತ್ವ ರಾಯಿಸ್ಟ್ ಪಂಥ ಮೊದಲಾದ ವಿವಿಧ ರೀತಿಯ ತಾತ್ವಿಕ ವಿಮರ್ಶೆಯನ್ನು ಸ್ವಲ್ಪ ಮಟ್ಟಿಗೆ ನಿರ್ದೇಶಿಸಲು ಲೇಖಕರ ಯತ್ನಿಸಿದಂತೆ ಕಾಣುತ್ತದೆ

ಕಥೆಯಲ್ಲಿಯ ಪಾತ್ರವರ್ಗವೆಲ್ಲ ಸಜೀವವಿರುತ್ತದೆ ಮುರದೇವಿಯ ಚಿತ್ರ ಚೆನ್ನಾಗಿ ಮೂಡಿ ಬಂದಿದೆ ಸರಸ್ವತಿ ಗಂಗವ್ವ ಗುಣವಂತಿ, ಇಂದಿರೆ ರಾವಸಾಹೇಬನ ಪತ್ನಿ ಇವರಿಗೆಲ್ಲ ಪ್ರತ್ಯೇಕ ವ್ಯಕ್ತಿತ್ವ ಸ್ಪಷ್ಟವಾಗಿ ಚಿತ್ರಿಸಲ್ಪಟ್ಟಿರುತ್ತದೆ

ರಾಷ್ಟ್ರೀಯ ಚಳವಳಿಯ ವಿಚಾರ ಒತ್ತಟ್ಟಿಗಿಟ್ಟು ಕೇವಲ ಕಥೆಯ ದೃಷ್ಟಿಯಿಂದ ನೋಡಿದರೂ ಕಥೆ ಸ್ವಾರಸ್ಯವಾಗಿ ಮುಂದೆ ಸಾಗುತ್ತದೆ

1942ನೇ ಇಸವಿಯ ಕ್ರಾಂತಿಯ ಸಂದರ್ಭದ ಘಟನೆಗಳ ಚಿತ್ರವನ್ನು ಲೇಖಕರು ಇದ್ದಹಾಗೆ ಚಿತ್ರಿಸಿದ್ದಾರೆ ಟಪಾಲು ಪೆಟ್ಟಿಗೆಯಲ್ಲಿ ಫೊಸ್ಫರಸ್ ಹಾಕುವುದು, ತಂತಿ ಕಡಿಯುವುದು, ರೈಲು ಕಂಬಿ ಕೀಳುವುದು, ರೈಲ್ವೇ ಸ್ಟೇಶನ್ ಸುಡುವುದು ಇತ್ಯಾದಿ ಕಾರ್ಯಕ್ರಮಗಳನ್ನು ಒಳ್ಳೆಯ ಅಭಿಮಾನದಿಂದಲೇ ಚಿತ್ರಿಸಿದ್ದಾರೆ. ಇವೆಲ್ಲ ಅಕೃತ್ಯಗಳೆಂಬ ಭಾವನೆ ಲೇಖಕರಲ್ಲಿ ಒಡಮೂಡಿಲ್ಲವಾದರೆ ಅದು ಅವರ ತಪ್ಪಲ್ಲ. ಕರ್ನಾಟಕದಲ್ಲಿ ಗಾಂಧೀವಾದಿಗಳೆನ್ನಿಸಿಕೊಂಡು ಸತ್ಯಾಗ್ರಹದ ಹೆಸರಲ್ಲಿ ಅಡಗಿಕೊಳಿತು ಇಂಥ ಕಾರ್ಯಗಳಿಗೆ ಪ್ರೋತ್ಸಾಹ ಕೊಟ್ಟ ಮುಂದಾಳುಗಳಿಗೆ ಇದರ ದೋಷ ಸಲ್ಲಬೇಕಲ್ಲದೆ ಗ್ರಂಥಕರ್ತರು ತಾನು ಕಂಡುದನ್ನು ಕಂಡಂತೆ ಬರೆದಿದ್ದಾರೆಂಬುದರಿಂದ ಅವರು ತಮ್ಮ ಕರ್ತವ್ಯವನ್ನು ಸರಿಯಾಗಿಯೇ ಪಾಲಿಸಿದ್ದಾರೆನ್ನಬಹುದು.

"ನಿಸರ್ಗ" ಬರೆದ ಮಿರ್ಜಿ ಅಣ್ಣಾರಾಯರು ಸಹಜ ಸಾಹಿತಿಗಳಿದ್ದುದರಿಂದ ಮಾತ್ರ, ಈ ಗ್ರಂಥವು ಇಷ್ಟು ಯಶಸ್ವಿಯಾಗಿರುತ್ತದೆ ಇತರರ ಕೈಯಲ್ಲಾದರೆ ನೀರಸವಾಗುವ ಸಂಭವವೇ ಹೆಚ್ಚೆಂದು ಕಾಣುತ್ತದೆ.

ಪಾಶ್ಚಾತ್ಯ ಲೇಖಕರಲ್ಲಿ ಅಪ್‌ಟನ್ ಸಿಂಕ್ಲೆಯರ್ ಮೊದಲಾದವರು ಬರೆಯುವ ಮಾದರಿಯ ಈ ಗ್ರಂಥ ಕನ್ನಡಿಗರಿಗೆಲ್ಲರ ಆದರಕ್ಕೆ ಪಾತ್ರವಾಗುವುದರಲ್ಲಿ ಸಂಶಯವಿಲ್ಲ.

ಗ್ರಂಥಲೇಖಕರಿಗೂ ಮನೋಹರ ಗ್ರಂಥಮಾಲೆಗೂ ನಮ್ಮ ಅಭಿನಂದನೆಗಳು.

ಹಿಂಸೆ ಹತ್ತಿಕ್ಕಲು ಕಲಾಸಾಹಿತಿಗಳು

ಕೊಲೆಯನ್ನು ಕೊಲ್ಲಲು ಕಲೆ

ಪ್ರಖ್ಯಾತ ಪತ್ರಿಕೋದ್ಯೋಗಿಗಳಾದ ಅಘುದ್ ಅಬ್ಬಾಸರು ಒಂದು ಲೇಖನದಲ್ಲಿ ದೇಶದ ಕಲಾ ಸಾಹಿತಿಗಳು ಇಂಥ ಪಾಶವೀ ಪ್ರವೃತ್ತಿಗಳನ್ನು ಶಮನಿಸಲು ಹೇಗೆ ಪ್ರಯತ್ನಿಸಬಹುದೆಂಬುದರ ಕುರಿತು ಸ್ವಾರಸ್ಯವೂ ವಿಚಾರಣೀಯವೂ ಆದ ಈ ಕೆಳಗಿನ ಸಲಹೆಗಳನ್ನು ಕೊಡುತ್ತಾರೆ:

ಶಿಪಾಯಿಗಳು ಶಾಂತಿ ಶಿಸ್ತನ್ನು ತಾತ್ಕಾಲಿಕವಾಗಿ ಮಾತ್ರ ಕಾಯಬಲ್ಲರೆಂದು ಪಂಡಿತ್ ನೆಹರೂರವರು ಮೊದಲೊಂದು ಸಲ ತಿಳಿಸಿದ್ದಾರೆ. ಜನತೆಯಲ್ಲಿ ಬೇರೂರಿದ ಭಯ, ದ್ವೇಷಾಸೂಯೆಗಳನ್ನು ನಿರ್ಮೂಲಿಸಲು ಸೈನಿಕ ಶಿಪಾಯಿಗಳಿಂದೆಂದಿಗೂ ಸಾಧ್ಯವಿಲ್ಲ. ಮಹಾತ್ಮಾಗಾಂಧಿಯವರಂತಹ ಮಾನವ ಸೌಹಾರ್ದ ಸಾಧಕರು ಪ್ರತಿಯೊಂದು ಪ್ರಾಂತ್ಯದ ಕಲಾಗಾರರ, ಸಾಹಿತಿಗಳ, ಕವಿಗಳ ಮತ್ತಿತರ ಸಾಂಸ್ಕೃತಿಕ ಉದ್ಯಮಿಗಳ ಸಹಾಯದಿಂದ ಈ ಭೀಕರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿದೆ ಸರಕಾರಗಳೂ ತಮ್ಮ ರೂಢಿಬದ್ಧವಾದ ಕಛೇರಿ ಕಾರ್ಯಕ್ರಮಗಳ ಒರಟು ಕೂಪಗಳಿಂದ ಹೊರ ಬಂದು ಹೃತ್ಪೂರ್ವಕವಾಗಿ ಇಂತಹ ಸಾಂಸ್ಕೃತಿಕ ಪ್ರಚಾರದ ಸಾರ್ವಜನಿಕ ಸಂಸ್ಥೆಗಳೊಡನೆ ಸಹಕರಿಸಬೇಕು ದಿಲ್ಲಿಯಿಂದ ಪಂಡಿತ್ ನೆಹರುಗಳಂತಹರು ನಿರ್ದಿಷ್ಟವಾದ ಮಾದರಿಯನ್ನು ಹಾಕಿಕೊಡುವುದೂ ಈ ಸಂದರ್ಭದಲ್ಲಿ ಅತ್ಯಾವಶ್ಯವಿದೆ

ಹಿಂಸೆಯ ಮೇಲೆ ಯುದ್ಧ ಸಾರಿಕೆ

ಇಂದಿನ ಕರಾಳ ಪರಿಸ್ಥಿತಿಯನ್ನು ಯುದ್ಧ ಮಟ್ಟದಿಂದೆದುರಿಸಬೇಕಾದುದೂ ಅತ್ಯಾವಶ್ಯಕ. ನೆಹರುಗಳು ಈ ಕುರಿತು ಸ್ಪಷ್ಟ ನಿರೂಪವನ್ನೂ ಕೊಟ್ಟಿರುವರು ಶತ್ರು ಪ್ರಚಾರವನ್ನು ತಡೆಗಟ್ಟಿ, ಜನತೆಯ ಸ್ಥೈರ್ಯವನ್ನು ಸ್ಥಿಮಿತದಲ್ಲಿರಿಸಲು ಸಾಂಸ್ಕೃತಿಕ ಸಂಸ್ಥೆಗಳು ಎದೆಷ್ಟರಮಟ್ಟಿಗೆ ಸಹಾಯಕವಾಗಬಹುದೆಂದು ಕಳೆದ ಯುದ್ಧದಲ್ಲಿ ಅವುಗಳ ಸದುಪಯೋಗವನ್ನು ಮಾಡಿ ಸತ್ಪರಿಣಾಮಗಳನ್ನು ಹೊಂದಿದ ಚೀನ, ರಶ್ಯ ಮತ್ತು ಬ್ರಿಟನಿನ ಆದರ್ಶಗಳನ್ನು ಜ್ಞಾಪಿಸಿಕೊಳ್ಳಬಹುದು. ಈ ಸಂಬಂಧದಲ್ಲಿ ನಾನು ನಮ್ಮ ರಾಷ್ಟ್ರ ಪ್ರಧಾನರೂ, ಉಪಪ್ರಧಾನರೂ, ಪ್ರಾಂತೀಯ ಪ್ರಧಾನರೂ, ನಮ್ಮ ಪ್ರಚಾರ ಸಂಸ್ಥೆಗಳಾದ ರೇಡಿಯೊ ನಿರ್ದೇಶಕಧಿಕಾರಿಗಳೂ ಗಮನಿಸಬೇಕಾದ ಈ ಕೆಳಗಿನ ಸೂಚನೆಗಳನ್ನು ಅವರ ಮುಂದಿಡಬಯಸುತ್ತೇನೆ

1 ಕಲ್ಕತ್ತದಲ್ಲಿ ಮಾಡಿದಂತೆ ನಮ್ಮ ಕವಿಗಳೂ, ಕಲಾಗಾರರೂ, ಸಿನೀಮಾನಟನಟಿಯರೂ, ವಿದ್ಯಾರ್ಥಿಗಳೂ, ಐಕ್ಯ ಶಾಂತಿಯ ಘೋಷಗಳುಳ್ಳ ಪ್ರದರ್ಶನಾ ಪಟಗಳನ್ನು ಹಿಡಿದು ನಗರಗಳ ಹಿಂದೂ ಮತ್ತು ಮುಸ್ಲಿಂ ನಿವಾಸ ಸ್ಥಾನಗಳ ರಸ್ತೆಯಿಂದ ಮೆರವಣಿಗೆ ಹೋಗಬೇಕು

2. ರೇಡಿಯೋದಲ್ಲಿ ದೇಶದ, ಪ್ರಾಂತ್ಯದ ಇಲ್ಲವೆ ಆಯಾ ಪ್ರದೇಶದ ಪ್ರಖ್ಯಾತ ಕವಿಗಳ ಕವನಗಳೂ, ಶಾಂತಿ ಹಾಡುಗಳೂ, ಗ್ರಂಥಕಾರರ ಸಣ್ಣ ಕತೆಗಳೂ, ಅಲ್ಲದೆ ನಾಟಕ, ಸಿನೇಮಾ ನಟ ನಟಿಯರ ಭಾಷಣಗಳೂ, ಹಾಡುಗಳೂ ಪ್ರಚಾರಿಸಲ್ಪಡಬೇಕು. ಇಂದಿನ ಬಡ್ಡು ಸಾಂಪ್ರದಾಯಿಕ ಕಾರ್ಯಕ್ರಮವು ಬದಲಾಯಿಸಲ್ಪಡಬೇಕು. ಈ ಸಂಧಿಗ್ಧ ಸಮಯದಲ್ಲಿ ತಾತ್ಕಾಲಿಕವಾಗಿಯಾದರೂ ರೇಡಿಯೋ ಪ್ರಸರಣ ಕೇಂದ್ರಗಳು ಜನತೆಯ ರೇಡಿಯೊಗಳಾಗಿ ಪರಿವರ್ತಿಸಲ್ಪಡಲಿ.

3. ಶಾಂತಿ, ಐಕ್ಯ, ಶಿಸ್ತುಗಳನ್ನು ಕಾಪಾಡುವುದರ ಆವಶ್ಯಕತೆಯ ಕುರಿತು ಪ್ರದರ್ಶನಾ ಪತ್ರಗಳೂ, ಕೈಪತ್ರಗಳೂ, ಗೋಡೆಪತ್ರಗಳೂ, ಸಣ್ಣ ಪುಸ್ತಿಕೆಗಳೂ, ಚಿತ್ರಗಳೂ ಮಿಲಿಯ ಗಟ್ಲೆಯಲ್ಲಿ ವಿಮಾನಗಳಿಂದ ಚೆಲ್ಲಲ್ಪಡುವಂತೆ ಮಾಡಬೇಕು ಈ ಕಾರ್ಯದಲ್ಲಿ ಸಾಹಿತಿಗಳೆಲ್ಲರ ಸಹಕಾರವನ್ನು ಸುಲಭವಾಗಿ ಪಡೆಯಬಹುದು. ಮಾತ್ರವಲ್ಲ ವೃತ್ತ ಪತ್ರಿಕೆಗಳ, ಸ್ವತಂತ್ರ ಸಾರ್ವಜನಿಕ ಸಂಸ್ಥೆಗಳ ನೆರವೂ ಸಂಕೋಚವಿಲ್ಲದೆ ಖಂಡಿತ ದೊರೆಯುವುದು

ಈಗಿನ ಹತ್ಯಾಕಾಂಡವು ಒಂದು ಯುದ್ಧವೆ ಎಂದಾದರೆ ಯುದ್ಧ ಮಟ್ಟದಿಂದಲೇ ನಾವದನ್ನು ಹೋರಾಡೋಣ-ಶಸ್ತ್ರಾಸ್ತ್ರಗಳಿಂದ ಮಾತ್ರವಲ್ಲ ಪ್ರಚಾರಾಸ್ತ್ರದಿಂದಲೂ ಸೆಣಸಾಡೋಣ ಇಂದಿನ ಪರಿಸ್ಥಿತಿಯು ಕೇವಲ ಪ್ರಚಾರದಿಂದಲೇ ಸೃಜಿಸಲ್ಪಟ್ಟಿದ್ದೆಂಬ ಸಂಗತಿಯನ್ನು ನಾವು ಮರೆಯಬಾರದು ಈ ದ್ವೇಷದ ಪ್ರಚಾರವನ್ನು ಪ್ರೀತಿಯ ಪ್ರಚಾರದಿಂದ ಕಾದಾಡೋಣ ಹಿಂಸೆಯ ಪ್ರಚಾರವನ್ನು ಅಹಿಂಸೆಯಿಂದ ಕಾದೋಣ ಅವಿಚಾರ, ಮತಾಂಧತೆಯ ಪ್ರಚಾರವನ್ನು ವಿವೇಕದ ಮತ್ತು ಸೌಹಾರ್ದತೆಯ ಪ್ರಚಾರದಿಂದೆದುರಿಸೋಣ

ನಾವಿಷ್ಟನ್ನು ಮಾಡಲೇಬೇಕು, ನಮಗಿದು ಮಾಡಲು ಸಾಧ್ಯವಿದೆ. ನಾವಿದನ್ನು ಖಂಡಿತ ಮಾಡುತ್ತೇವೊ? ನಮಗಿದನ್ನು ಖಂಡಿತ ಮಾಡಲು ಬಿಡಲ್ಪಡುವುದೊ?

ಅವ್ಯಕ್ತವಾದ ಹಸ್ತ

ಇಂದಿನ ಪರಿಸ್ಥಿತಿಯನ್ನು ನಾವೊಬ್ಬ ಪಾಶ್ಚಾತ್ಯನೊಡನೆ ತರ್ಕಿಸಲು ಸಾಧ್ಯವಿಲ್ಲ ಕಾರಣ ಕೂಡಲೇ ಅವನು ತನ್ನ ದೇಶದ ಪತ್ರಿಕೆಗಳಿಗೆ "ಸ್ವಾತಂತ್ರ ಸಿಕ್ಕಿದೊಡನೆ ಭಾರತೀಯರು ಪರಸ್ಪರ ಕೊಲೆ ಸುಲಿಗೆಯಲ್ಲಿ ಮಗ್ನರಾಗಿರುವರು" ಎಂಬ ಅಪಪ್ರಚಾರವನ್ನು ಗೀಚಿ ಕಳುಹಿಸುತ್ತಾನೆ ಪಾಶ್ಚಾತ್ಯ ಪತ್ರಿಕೆಗಳನ್ನೋದಲೂ ನಮಗಿಂದು ಧೈರ್ಯವಿಲ್ಲ "ಭಾರತದಲ್ಲಿ ಅರಾಜಕತೆ, ರಕ್ತಪಾತಗಳು ನಡೆಯುತ್ತಿವೆ" ಎಂಬುದನ್ನು ಅದರಲ್ಲಿ ಓದಲು ನಮಗೆ ಮನಸ್ಸಿಲ್ಲ ಆದರೆ ಒಂದು ದೃಷ್ಟಿಯಿಂದ ಇವೆಲ್ಲ ಸಂಭವಿಸಿದುದು ನಮ್ಮ ದುರ್ದೈವ!

ಚರ್ಚಿಲ್ಲರು ಹೇಳಿದ್ದರು ಭಾರತದಿಂದ ಬ್ರಿಟಿಷರು ಹೊರಟರೆ ಅಲ್ಲಿ ಅರಾಜಕತೆ ರಕ್ತಪಾತಗಳಾಗುವುವು ಅವರ ಭವಿಷ್ಯ ನಿಜವಾದುದು ಮತ್ತೊಂದು ದುರ್ದೈವ!

ಆದರೆ ನಾವೊಂದು ವಿಷಯ ತಿಳಿಯಬಯಸುತ್ತೇವೆ. ಚರ್ಚಿಲ್ಲರು ಹೇಳಿದ್ದು ಭವಿಷ್ಯವೊ ಇಲ್ಲವೆ ಅದೊಂದು ಭಾವೀ ಗದರಿಕೆಯೊ? ಸ್ವಾತಂತ್ರ್ಯ ಕೇಳಿದ ಪಾಪಕ್ಕೆ ಇದೊಂದು ಶಿಕ್ಷೆಯೊ?

ಪಂಜಾಬಿನ ಓರ್ವ ಕಮ್ಯೂನಿಸ್ಟ್ ಮುಖಂಡರು ಎಲ್ಲಾ ಆರೋಪಗಳನ್ನು ಬ್ರಿಟಿಷ್ ಸೈನಾಧಿಕಾರಿಗಳ ಮೇಲೆ ಹೊರಿಸಿ ಪರಿಸ್ಥಿತಿಯ ಗಂಭೀರತೆಯನ್ನು ಸಣ್ಣದಾಗಿ ಮಾಡಿ ತೋರಿಸಿರುವರು. ಬ್ರಿಟಿಷರು ನಮ್ಮ ಯಾದವೀ ಕಲಹವನ್ನು ಪ್ರೋತ್ಸಾಹಿಸುತಿದ್ದರೇನೊ ನಿಜ. ಆದರೆ ನಾವೇಕೆ ಅವರ ಮಂಕುಬೂದಿಗೆ ಗುರುಳಾದೆವೊ ಎಂಬುದು ಯಾರಿಗೂ ಗೊತ್ತಿಲ್ಲ ಆ ಕಮ್ಯೂನಿಸ್ಟ್ ಮುಖಂಡರು ಕೆಲವು ನಿಜ ಸಂಗತಿಗಳನ್ನು ಕೊಟ್ಟಿದ್ದಾರೆ.

ಪಂಜಾಬದಲ್ಲಿ ಹಾನಿಗೊಳಗಾದ ಜೀವವಿತ್ತಗಳ ಪ್ರಮಾಣವು ಪತ್ರಿಕೆಗಳಲ್ಲಿ ಪ್ರಕಟವಾದುದಕ್ಕಿಂತ ಎಷ್ಟೊ ಪಾಲು ಹೆಚ್ಚಾಗಿದೆ

ಅತ್ಯಾಚಾರ ಅಕೃತ್ಯಗಳ ಕಳುತ್ತವನ್ನು ಗ್ರಹಿಸುವಾಗ ಎರಡು ಪಕ್ಷದವರೂ ಒಂದೇ ಪ್ರಕಾರದ ಕ್ರೂರತನ ಮತ್ತು ಪಾಶವೀತನವನ್ನು ಪ್ರದರ್ಶಿಸಿರುವರು

ಇಷ್ಟಾದರೂ ಕೆಲವು ಸಂದರ್ಭ ಹಿಂದೂ ಸೀಖರೂ ಮುಸಲ್ಮಾನರಿಗೂ, ಮುಸಲ್ಮಾನರು ಹಿಂದೂ ಸೀಖರಿಗೂ ರಕ್ಷಣೆ ಕೊಟ್ಟ ನಿದರ್ಶನಗಳೂ ಇವೆ

ಆಧುನಿಕ ಅಸ್ತ್ರಗಳು

ಪಂಜಾಬದಿಂದ ಈ ಕಡೆ ಒಂದವರ ಹೇಳಿಕೆಗಳಿಂದ ಅಲ್ಲಿನ ದಂಗೆಗಾರರ ಬಳಿಯಿರುವ ಹೇರಳವಾದ ಆಧುನಿಕ ಶಸ್ತ್ರಾಸ್ತ್ರಗಳ ವಿವರಣೆಗಳು ಸಿಕ್ಕಿವೆ ಅವು ಅವರಿಗೆ ಎಲ್ಲಿಂದ ದೊರೆಯಿತು? ಅಮೃತಸರದ ಬಳಿಯೊಂದ ನೆಲಾಂತರ ಶಸ್ತ್ರಾಸ್ತ್ರ ಕಾರ್ಖಾನೆಯಿದೆಯಾಗಿಯೂ, ಅಲ್ಲಿ ಸಾವಿರ ಗಟ್ಲೆ ಬಂದೂಕುಗಳೂ, ಬಾಂಬುಗಳೂ ಕಮ್ಮಿ ಕ್ರಯಕ್ಕೆ ಮಾರಲ್ಪಡುತ್ತವೆಯಂತೆ! ಭಗತಸಿಂಗ ಮೊದಲಾದ ಕ್ರಾಂತಿಕಾರರಿಗೆ ಕೆಲವು ಪಿಸ್ತೂಲುಗಳು ಸಿಗಬೇಕಾದರೆ ಅದೆಷ್ಟು ಕಷ್ಟವಾಗುತಿತ್ತೆಂಬ ಸಂಗತಿಯನ್ನು ನೆನಸುವಾಗ ಪಂಜಾಬದ ಹಿಂದೂ ಮುಸ್ಲಿಂ, ಮತ್ತು ಸೀಖ್ ದಂಗೆಗಾರರು ಇಷ್ಟೊಂದು ಅಸ್ತ್ರ ಸಂಗ್ರಹವನ್ನೆಲ್ಲಿಂದ ಮಾಡಿದರೆಂದು ಕೌತುಕವಾಗುತ್ತದೆ

ಈ ಪ್ರಶ್ನೆಯನ್ನು ಮೊದಲು ಉತ್ತರಿಸಬೇಕಾಗಿದೆ ಸರಕಾರಗಳು ಈ ಸಂಬಂಧ ಪರಿಶೀಲನೆ ನಡಸಿ ಶೀಘ್ರದಲ್ಲಿ ಅದರ ಕುರಿತು ಸಾರ್ವಜನಿಕ ತಿಳುವಳಿಕೆಗಾಗಿ ಪ್ರಕಟಣೆ ಹೊರಡಿಸಬೇಕು

ಲಾಹೋರಿನ ಪಾಕಿಸ್ತಾನ್ ಟೈಮ್ಸ್ ಪತ್ರಿಕೆಯಲ್ಲಿ "ಕೆಲವು ಬ್ರಿಟಿಷ್ ಗುಪ್ತಚಾರ ದಳದ ಅಧಿಕಾರಿಗಳಿಗೆ ಇದರಲ್ಲಿ ಭಾಗವಿದೆ ಎಂದು ಪ್ರಕಟಿಸಿತ್ತು ಇದರ ಕುರಿತು ಆ ಪತ್ರಿಕೆ ಕೆಲವು ಪತ್ರಗಳ ಪಡಿಯಚ್ಚುಗಳನ್ನು ಪ್ರಕಟಿಸಿತ್ತು ನಮ್ಮ ಸರಕಾರಗಳು ಈ ಕುರಿತು ಏನು ವಿಚಾರಿಸಿ ಮಾಡಿವೆ ಎಂಬ ಸಂಗತಿಯು ಇನ್ನೂ ತಿಳಿದು ಬಂದಿಲ್ಲ

ಕೊಲೆ ನಾಶಕ್ಕೆ ಕಲೆ

ಇಂದು ದೇಶದ ಕಲಾಗಾರರನ್ನೆಲ್ಲ ಒಟ್ಟುಗೂಡಿಸಿ ಜನರಿಗೆ ತಮ್ಮ ಪಾಶವೀ ಪ್ರವೃತ್ತಿಯಿಂದ ತಿರುಗಿಸಲು ಸಂಗೀತ, ನಾಟ್ಯ, ನಟನೆ, ಚಿತ್ರಗಾರಿಕೆ ಮೊದಲಾದ ಕಲೆಗಳನ್ನು ಕಲಿಸುವ ವ್ಯವಸ್ಥೆ ಮಾಡಬೇಕು ಬೊಂಬಾಯಿಯಲ್ಲಿ ಆಗಲೇ ಕೆಲವು ಕಲಾಪ್ರಚಾರ ಸಂಸ್ಥೆಗಳು ಈ ತರದ ಕಾರ್ಯಕ್ರಮಗಳನ್ನು ಕೈಕೊಂಡಿರುವುದು ಸ್ತುತ್ಯ ಕಲೆಯು ಖಂಡಿತವಾಗಿ ಕೊಲೆಗಡುಕತನದ ಕ್ರೂರ ಹವ್ಯಾಸವನ್ನು ನಮ್ರಗೊಳಿಸಲು ಸಹಾಯವಾಗುತ್ತದೆಂಬುದು ನಿಸ್ಸಂದೇಹ

ನ್ಯೂಯೋರ್ಕಿನ 23 ವರ್ಷದ ದಾದಿ ಕ್ರುಟ್ಜರಳು ಕೆಮ್ಮುವಾಗ ಅವಳು ಏಳು ವರ್ಷ ಪ್ರಾಯದವಳಿರುವಾಗ ನುಂಗಿದ ಒಂದು ಚಿನ್ನದ ಸೆಫ್ಟಿಪಿನ್ನು ಹೊರಗೆ ಬಂತು ಅದು ಅವಳ ಬಲ ಶ್ವಾಸಕೋಶದಲ್ಲಿತ್ತೆಂದು ನಂತರದ ಎಕ್ಸ್‌ರೇ ಪರೀಕ್ಷೆ ತಿಳಿಸಿತು.

'ಪಾಕಿಸ್ತಾನದ ಸುಖ ಸಾಕು'

ಮುಸಲ್ಮಾನನೊಬ್ಬನ ಕರುಣಾಜನಕ ಕತೆ

ಲಕ್ನೋದಲ್ಲಿರುವ ತನ್ನೊಬ್ಬ ಸ್ನೇಹಿತನಿಗೆ ಬರೆದ ಪತ್ರವೊಂದರಲ್ಲಿ ಪಾಕಿಸ್ತಾನಕ್ಕೆ ಸರಕಾರ ಕಛೇರಿ ಕೆಲಸಗಾರನಾಗಿ ಹೋದ ಮುಸಲ್ಮಾನರು ಹೇಗೆ ಸಂಕಷ್ಟಪಡುತ್ತಿದ್ದಾರೆಂದು ಓರ್ವ ಮುಸಲ್ಮಾನನು ಬರೆಯುತ್ತಾನೆ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾದ ಆ ಪತ್ರದ ಸಾರಾಂಶ ಹೀಗಿದೆ

"ನಾನು ಪಾಕಿಸ್ತಾನಕ್ಕೆ ಹೋದುದು ಯಾವೊಂದು ಜಾತೀಯತೆಯ ಮೋಹದಿಂದಲ್ಲವೆಂಬ ಸಂಗತಿಯನ್ನು ನೀನು ಬಲ್ಲೆ. ದಿಲ್ಲಿಯಲ್ಲಿರುವುದು ಭಯಕಾರಕವೆಂದೇ ನಾನು ಹಾಗೆ ಮಾಡಿದ್ದು ದಿಲ್ಲಿಯಲ್ಲಿರುತ್ತಿದ್ದರೆ ಈಗ ನಾನು ಮುಂಚೆ ವಾಸಮಾಡುತ್ತಿದ್ದಲ್ಲಿ ನಡೆಯುತ್ತಿರುವ ದಂಗೆಯಲ್ಲಿ ಖಂಡಿತ ಸಾಯುತ್ತಿದ್ದೆನು

ನಾಯಿ ಆಹಾರ

"ಕಣ್ಣು ಬಿಚ್ಚಿಟ್ಟು ನಾನೀ ನಿರ್ಧಾರಕ್ಕೆ ಬಂದಿರುವೆನಾದರೂ ನಾನೀಗ ಇಲ್ಲಿ ಬಹಳ ಸಂಕಷ್ಟಪಡುತ್ತಿದ್ದೇನೆ ನನಗೆ ಇಲ್ಲಿಯ ಪ್ರದೇಶವು ಉತ್ತಮವಾಗಿ ಕಾಣುತ್ತಿದೆಯಾದರೂ ಇಲ್ಲಿಯ ಜನರ ಮೇಲೆ ನನಗೆ ತುಂಬಾ ದ್ವೇಷ ಹುಟ್ಟಿದೆ ಢಾಕಾ ನಗರವು ಬಹುಸಂಖ್ಯಾಕ ಮುಸಲ್ಮಾನರಿಂದೊಡಗೂಡಿದೆ ಆದರೆ ನಾನು ಮಾತ್ರ ವಿಚಿತ್ರವಾದೊಂದು ದೇಶದಲ್ಲಿರುವಂತೆ ಭಾಸವಾಗುತ್ತಿದೆ ನನಗೂ ಇಲ್ಲಿಯ ಮುಸಲ್ಮಾನರಿಗೂ ಯಾವ ಸಾಮಾನ್ಯತೆಯೂ ಇರುವುದಿಲ್ಲ ಅವರ ಆಚಾರ ವಿಚಾರ ಶಿಷ್ಟ ಸಾಂಪ್ರದಾಯ ಸಾಹಿತ್ಯ ಆಹಾರ ವೇಷಭೂಷ, ಸಂಕ್ಷೇಪವಾಗಿ ಹೇಳುವುದಾದರೆ ನಮ್ಮ ಮತ್ತವರ ಜೀವನವೇ ಸಂಪೂರ್ಣ ಉತ್ತರ ದಕ್ಷಿಣಗಳು [illegible] ಅಕ್ಕಿಯಿಲ್ಲದೆ ತುತ್ತು [illegible] ರೊಟ್ಟಿಯೇ [illegible] ಆದರೆ 25 ಶುಭ ದಿನಗಳಾದುವು- ನಾನು ರೊಟ್ಟಿ ಮುಖವನ್ನು ನೋಡಲಿಲ್ಲ ಸರ್ವಸಾಧಾರಣವಾಗಿ ನಾನು ವ್ಯಕ್ತಿಶಃ ಸ್ವಲ್ಪ ಉತ್ತಮ ಆಹಾರ ವಸ್ತುಗಳನ್ನು ತಿನ್ನುವ ಅಭ್ಯಾಸದವ ಆದರೆ [illegible] ನಾಯಿಗೆ ಹಾಕುವ ಆಹಾರವು ನಮಗಿಲ್ಲಿ ಕೊಡಲ್ಪಡುತ್ತದೆಂದು [illegible] ಹೃದಯಕ್ಕೆ [illegible] ಗೊತ್ತು

ಪರದೇಶಿಗಳು

"[illegible] ಮತಿಯರಾದ ಇಲ್ಲಿಯ ಹೆಚ್ಚಿನ ಮುಸಲ್ಮಾನರು ಅಪ್ರಾಮಾಣಿಕರೂ, ಕ್ರೂರಿಗಳೂ, ಅತಿಥಿ ಸತ್ಕಾರ ಬಲ್ಲದವರೂ ಆಗಿದ್ದಾರೆ ನಾವವರನ್ನು ತುಚ್ಛೀಕರಿಸುವಂತೆ ಅವರು ನಮ್ಮನ್ನು ದ್ವೇಷಿಸುತ್ತಾರೆ. ಸ್ವಜನಪ್ರಿಯರೂ, ಸ್ವಹಿತಾಕಾಂಕ್ಷಿಗಳೂ ಆದ ಇಲ್ಲಿಯ ಸಭ್ಯರು ರಾಜಕೀಯವಾಗಿ ನಮ್ಮ ಕಡೆಯ ಹಳ್ಳಿಗರಷ್ಟು ಕೂಡ ಚೇತನಗೊಂಡವರಲ್ಲ ಹೊರಗಿನವರಾದ ನಾವು ಅಧಿಕಪ್ರಸಂಗಿಗಳೆಂದೂ, ತಮಗೆ ಪರಕೀಯ ಒಡೆಯರ ಆವಶ್ಯಕತೆಯಿಲ್ಲವೆಂದೂ ಅವರು ಬಹಿರಂಗವಾಗಿ ಹೇಳಹತ್ತಿದ್ದಾರೆ. ಅವರಿಗೆ ಹೊರಗಿನವರೆಲ್ಲ ಬಂಗಾಳೇತರರೆಂದೇ ಭಾವನೆ ಬಂಗಾಳಿಗಳಲ್ಲದವರೆಲ್ಲ ಸುಲಿಗೆಗಾರರೂ, ತೊಂದರೆ ಕೊಡುವವರೂ, ಹೊರಟುಹೋದ ಒಡೆಯರ (ಬ್ರಿಟಿಷರ) ಸ್ಥಾನದಲ್ಲಿ ಬಂದ ಪಂಜಾಬಿಗಳೆಂದೂ ಅವರ ಎಣಿಕೆ "

ಭಾರತೀಯ ರಾಜಕಾರಂಗಕ್ಕಿಳಿದಾಗ ಗಾಂಧೀಜಿಯವರೇನೂ ಅವಳಕ್ಕೆ ಅನುಭವಸ್ಥರಲ್ಲ. ಅವರು ಪರಿಪೂರ್ಣ ತಜ್ಞತೆ ಪಡೆದಿದ್ದರು. ಭಾರತೀಯ ರಾಜಕೀಯ ದಿಗಂತದಲ್ಲಿ ಅವರ ಉದಯದಿಂದ ಇಲ್ಲಿನ ರಾಜಕೀಯ ಮುಂದಾಳುಗಳಲ್ಲೊಂದು ವಿಶಿಷ್ಟ ಅಲ್ಲೋಲ ಕಲ್ಲೋಲತೆಯುಂಟಾಯಿತು. ಎನ್ನಿ ಬೆಸೆಂಟ್ ಮಹಿಳೆಯು ಅವರಿಗೆ ಒಂದು ಬಿರುದು ಕೊಟ್ಟು 'ಮಹಾತ್ಮ' ನೆಂದು ಕರೆದಳು. ಆದರೆ ಮಹಾತ್ಮರು ಅದನ್ನು ಸ್ವೀಕರಿಸಲು ತುಂಬಾ ಸಂಕೋಚಪಟ್ಟರು. ತಾನು ನಾಯಕನಲ್ಲ, ಅನುಯಾಯಿಯಾಗಿದ್ದೇನೆಂದವರು ಸ್ಪಷ್ಟಪಡಿಸಿದರು. ಅವರು ಗೋಪಾಲ ಕೃಷ್ಣ ಗೋಖಲೆಯವರನ್ನು ತಮ್ಮ ಗುರುವಾಗಿ ಅಪ್ಪಿಕೊಂಡರು. ಆದರೆ ಬೆಸೆಂಟಮ್ಮನ ಬಿರುದು ಗಾಂಧೀಜಿಗೆ ಶಾಶ್ವತವಾಗಿ ಅಂಟಿಕೊಂಡಿತು. ವಿಧಿ ನಿಯಮವೆಂಬಂತೆ ಅವರಿಂದು ಜಗತ್ತಿನಲ್ಲೇ ಆ ಬಿರುದಿನಿಂದ ಗುರುತಿಸಲ್ಪಡುವರು ಮಾತ್ರವಲ್ಲ, ಈ ಮಹಾತ್ಮಾ ಭಾರತದ ದೀನ ಅತ್ಮರುಗಳ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಬಂಧವಿಮೋಚನಾ ಮೂರ್ತಿಗಳೂ ಆಗಿರುವರು.

卐

ನಮ್ಮಲ್ಲಿ ಹಲವರು ಬಾಲಕರಾಗಿರುವಾಗಲೇ ದಕ್ಷಿಣ ಆಫ್ರಿಕದಲ್ಲಿ ಗಾಂಧಿ ಎಂಬ ವ್ಯಕ್ತಿ ಅಹಿಂಸಾತ್ಮಕ ಚಳವಳವೊಂದನ್ನು ನಡೆಸುತ್ತಿದ್ದರೆಂದು ಕೇಳಿದ್ದೇವೆ. ಮದ್ರಾಸಿನಿಂದಲೂ ಅವರಿಗಾಗಿ ನಿಧಿ ಶೇಖರಿಸಿ ಕಳುಹಿಸಲ್ಪಟ್ಟಿದ್ದವು. ಆ ವೇಳೆ ಸ್ವಲ್ಪ ಅವಧಿಯ ನಂತರ ಅವರು ಪ್ರತ್ಯಕ್ಷ ಮದ್ರಾಸಿಗೆ ಸಂದರ್ಶನವಿತ್ತು ನಾಗರಿಕರ ಮನ್ನಣೆ ಆದರಗಳಿಗೆ ಪಾತ್ರರಾದರು. ಮದ್ರಾಸಿನಲ್ಲಿ ಅವರಿಗೆ ಅಭೂತಪೂರ್ವ ಸ್ವಾಗತವು ಕೊಡಲ್ಪಟ್ಟಿತು.

ಎನ್ನಿ ಬೆಸೆಂಟರನ್ನು ಕಾಂಗ್ರೆಸ್ ಸಭೆಗೆ ಕಳುಹಿಸಲ್ಪಟ್ಟಾಗ ಅವರನ್ನು ಹೊರ ತರಲು ಯಾವ ಯೋಜನೆ ಮಾಡಬಹುದೆಂಬುದರ ಕುರಿತು ಪ್ರಶ್ನೆಗೆ ಗಾಂಧೀಜಿಯು ಸಲಹೆ ಕೇಳಲಾಯಿತು. ಅವರು ಕೂಡಲೇ ಅಹಿಂಸಾತ್ಮಕ ಚಳವಳವೇ ಮದ್ದು ಎಂದು ತಿಳಿಸಿದರು. ಸಾರ್ವಜನಿಕ ಸಭೆ ಭಾಷಣಗಳ ಮೇಲಿರುವ ನಿರ್ಬಂಧಗಳನ್ನು ಸುಲಭವಾಗಿ ಉಲ್ಲಂಘಿಸಬಹುದೆಂದವರು ತಿಳಿಸಿದರು. ಕೂಡಲೇ ಶಾಸನಭಂಗದ ಕಾರ್ಯಕ್ರಮವೊಂದು ಯೋಜಿಸಲ್ಪಟ್ಟಿತು. ಆದರೆ ಅದು ಕಾರ್ಯರೂಪಕ್ಕೆ ತರಲ್ಪಡುವ ಮೊದಲೇ ಬೆಸೆಂಟಮ್ಮನವರನ್ನು ಬಿಟ್ಟು ಬಿಡಲಾಯಿತು. ಹೀಗೆ ಅಂದಿನ ರಾಜಕೀಯ ಚಳವಳವು ಮುಂದಕ್ಕೆ ಬಿತ್ತು.

卐

ಮಹಾತ್ಮರ ಜೀವನ ಕಾರ್ಯಕ್ಕೆ ಸರಿಗಟ್ಟುವ ಒಂದೇ ಒಂದು ಸಮಾನ ನಿದರ್ಶನ ಭಾರತದ ಇಲ್ಲವೆ ಜಗತ್ತಿನ ಇತಿಹಾಸದಲ್ಲೇ ಕಾಣಸಿಗುವುದಿಲ್ಲ. ಶಿವಾಜಿ ಮತ್ತು ರಾಮದಾಸರ ಇತಿಹಾಸಗಳು ಗಾಂಧಿ ನೆಹರುಗಳದಕ್ಕೆ ಅತೀ ಹೆಚ್ಚಿನ ಸಮ ದಾಖಲೆಗಳೆನ್ನಬಹುದು. ಈ ಎರಡು ಸಂಯುಕ್ತ ಮೇಳಗಳೂ ಭಾರತ ಇತಿಹಾಸದಲ್ಲಿ ಪರಕೀಯ ಸಾಮ್ರಾಜ್ಯಶಾಹಿಗಳನ್ನು ಕಿತ್ತೊಗೆದು ಯಶಸ್ವಿಯಾಗಿವೆ. 'ಸ್ವರಾಜ್ಯ' ಎಂಬ ಚಳವಳವು ಶಿವಾಜಿ, ರಾಮದಾಸರುಗಳ ಕಾಲದಲ್ಲಿ ಪ್ರಚಾರಕ್ಕೆ ಬಂದು ಗಾಂಧಿ ನೆಹರುಗಳ ಕಾಲದಲ್ಲದು ಪರಮಾವಧಿ ವೈಶಿಷ್ಟ್ಯಕ್ಕೆ ಮುಟ್ಟಿತೆನ್ನಬಹುದು.

ರಾಜ್ಯಘಟನಾ ಶಾಸನದಲ್ಲಿ ಚಕ್ರವರ್ತಿ

ಶಿವಾಜಿಯಿಂದ ಗಾಂಧೀಜಿಯ ವರೆಗೆ

ಎಂದರೆ ಅವನ ನಂತರದ ಉತ್ತರಾಧಿಕಾರಿಗಳೂ, ಅವನಿಂದ ಆಳಲು ಅಧಿಕೃತರಾದವರೂ ಎಂಬರ್ಥವಿದೆ. ಆ ದೃಷ್ಟಿಯಿಂದ ದಿಲ್ಲಿಯಲ್ಲಿ ಯಾವ ಚಕ್ರವರ್ತಿ ಆಳಿಕೊಂಡಿರದಿದ್ದರೂ ಮೊಗಲರ ಕೊನೆಯವನಾದ ಷಹಾ ಅಲಮನು ತನ್ನ ಹಕ್ಕನ್ನು ರೊಬರ್ಟ್ ಕ್ಲೈವ್ ಎಂಡ್ ಕಂಪನಿಗೆ ಕೊಟ್ಟದ್ದನ್ನು ಸರ್ದಾರ್ ವಲ್ಲಭ್ಭಾ ಎಂಡ ಬ್ರದರ್ಸ್ ಅವರು ಅಂತ್ಯಗೊಳಿಸಿದರು.

1921ರಲ್ಲಿ ಕರ್ನಾಟಕದ ಬೆಳಗಾಂವಿನಲ್ಲಾದ ರಾಷ್ಟ್ರೀಯ ಕೊಂಗ್ರೆಸಿನ ಅಧಿವೇಶನವು ಭಾರತ ಇತಿಹಾಸದಲ್ಲಿ ಒಂದು ಸಂಧಿಗ್ಧಕಾಲವಾಗಿ ಪರಿಣಮಿಸಿದೆ. ಗಾಂಧೀಜಿಯವರು ಅಂದಿನ ಅಧ್ಯಕ್ಷತೆವಹಿಸಿದ್ದರು. ಅಂದಿನ ಅಧ್ಯಕ್ಷ ಪದವಿಯಾದರೋ ಅವರಿಗೆ ಸುಲಭದಲ್ಲಿ ದೊರೆಯಲಿಲ್ಲ. ಮಹಾರಾಷ್ಟ್ರಿಗಳ ಪಂಗಡ ಅರವಿಂದ ಘೋಷರ ಪಂಗಡಗಳು ಅವರಿಗೆದುರಾಗಿ ಸ್ಪರ್ಧಿಸಿದುವು. ತಪಸ್ವಿಗಳಾಗಿದ್ದ ಅರವಿಂದರನ್ನು ರಾಜಕೀಯ [illegible] ಗಕ್ಕೆ ಕರೆ[illegible] ಪ್ರಯತ್ನಗಳಾಗಿದ್ದುವು. ಆದರೆ ಆ ದೇಶಭಕ್ತ ತಪಸ್ವಿಗಳು ಆ ಸಮಯಕ್ಕೆ ಸಾಕಷ್ಟು ತನ್ನ ಸಹಕಾರ [illegible] ಗಾಂಧಿಯೇ ಭಾರತ ಭಾಗ್ಯ ನಿಧಾನವೆಂದು ಕಂಡ [illegible] ಅಂತೆಯೆ ಗಾಂಧೀಜಿಯವರು ಕೊಂಗ್ರೆಸಿನ ಅಧ್ಯಕ್ಷರೂ ದೇಶದ ಅಪ್ರತಿಮ ನಾಯಕರೂ ಆದರು. ಅಹಿಂಸಾತ್ಮಕ ಚಳವಳವು ಬಂಧಿತ ಜನತೆಯ ಅಸ್ತ್ರವೂ ಆಯಿತು.

卐

ಗಾಂಧೀಜಿಯ ಯಶಸ್ಸು ಅವರ ರಚನಾತ್ಮಕ ಕಾರ್ಯಗಳೆಡೆಯಿಂದ ಉಂಟಾಯಿತು. ಅವರ ರಾಜಕೀಯ ವಿಚಾರಗಳು ಅಷ್ಟೊಂದು ಪ್ರಾಮುಖ್ಯವಾದುವುಗಳಲ್ಲ. ಕಾರಣ ತಾತ್ವಿಕವಾದ ಎಷ್ಟೋ ರಾಜಕೀಯ ಸಿದ್ಧಾಂತಗಳಿಗೆ ನಮ್ಮ ದೇಶದಲ್ಲಿಂದೂ ಕಡಿಮೆಯಿಲ್ಲ. ಕೊರತೆಯೆಂದರೆ ಪ್ರತ್ಯಕ್ಷ ಕಾರ್ಯಾಚರಣೆಯದು. ಬೆಸೆಂಟಮ್ಮನ ಹಿಂದೆ ಅವರ ಧರ್ಮಾನುಯಾಯಿಗಳ ವಿಶಾಲ ತಂಡವಿದ್ದುದರಿಂದ ಅವರ ಚಳವಳ ತಕ್ಕಮಟ್ಟಿಗೆ ಪರಿಣಾಮಕಾರಿಯಾಯಿತು. ಆದರೆ ಮಹಾತ್ಮರ ಬಳಿಯಲ್ಲಿ ಅಸಾಧಾರಣ ತ್ಯಾಗ ಬಲಿದಾನ ಮಾಡಲು ಸಿದ್ಧರಿದ್ದ ಅಸಂಖ್ಯಾತ ರಚನಾತ್ಮಕ ಕಾರ್ಯಕರ್ತರ ತಂಡವೊಂದು ಸದಾ ಸಿದ್ಧವಿತ್ತು. ಈ ಕಾರಣವೇ ಅವರ ಯಶಸ್ಸಿಗೆ ಹೇತು.

卐

ಭಾರತ ಇತಿಹಾಸದಲ್ಲಿ ಮಹಾತ್ಮರ ಸ್ಥಾನ ಮಾನವೆಂತಹುದೆಂದು ಭಾವೀ ಇತಿಹಾಸಕಾರರು ಮಾತ್ರ ನಿರ್ಧರಿಸಬಲ್ಲರು. ಅವರ ಜೀವನ ನಿತ್ಯದ ಸಂಭವ ಸಂಗತಿಗಳಲ್ಲಿ ಅದೆಷ್ಟು ಹತ್ತಿರದ ಸಂಪರ್ಕವಿದ್ದವರಾಗಿದ್ದರೂ ಅವರ ಇಂದಿನ ಕಾರ್ಯ ಮಹತ್ವದ ಸಿಂಹಾವಲೋಕನ ಮಾಡುವ ಕಾರ್ಯವು ಕಠಿಣವೆನಿಸುತ್ತದೆ. ಆ ಕಾಲಿಗೆ ಸರಿಯಾದ ಸ್ವಾತಂತ್ರ್ಯ [illegible] ಇತ್ಯರ್ಥಕ್ಕೆ ಒದಗುವ ಈಗ ಕಷ್ಟ ಸಾಧ್ಯವೇ ಸರಿ. ಅವರು ಅದೆಂತಹ ಶುದ್ಧ ಅಹಿಂಸಾತ್ಮಕ ರೀತಿಯಿಂದ ಗಳಿಸಿಕೊಟ್ಟ ಸ್ವಾತಂತ್ರ್ಯದ ನಂತರ ಇಂದು [illegible] ಹಿಂಸಾ[illegible]ತವೊಂದು ಅವ್ಯಾಹತವಾಗಿ ನಡೆಯುತ್ತಿದೆ.

ಶಿವಾಜಿಯ ಅಹಿಂಸಾತ್ಮಕ ಹೋರಾಟ [illegible] ಆದರೆ ಅವನು ಸ್ವರಾಜ್ಯ ಸ್ಥಾಪಿಸಿದ ನಂತರ ಹಿಂಸಾಕಾಂಡವು ಅತ್ಯಲ್ಪವಾಗಿತ್ತು. ಅವನ ಕಾಲದವರು ಸಾಯುವಾಗಲೂ ವೀರರಂತೆ ಹೋರಾಡಿ ಮಡಿಯುತ್ತಿದ್ದರು. ಆದರೆ ಇಂದು ನಿರಪರಾಧಿ ಜೀವರುಗಳು ಮೂಕ ಜೀವಿಗಳಂತೆ ಕತ್ತರಿಸಲ್ಪಡುತ್ತಿರುವರು.

ಶಿವಾಜಿಯಿಂದ ಗಾಂಧೀಜಿಯವರೆಗಿನ-ಹಿಂಸೆಯಿಂದ ಅಹಿಂಸೆಯವರೆಗಿನ-ಈ ಕಾಲವು ಭಾರತಕ್ಕೆ ದುರ್ದೈವಕಾಲ. ಎರಡು ಪರಕೀಯ ಸಾಮ್ರಾಜ್ಯಶಾಹಿಗಳು—ಮೊಗಲ್ ಮತ್ತು ಬ್ರಿಟಿಷ್ ಈ ಅವಧಿಯಲ್ಲಿ ಮುರಿದು ಬಿದ್ದವೆ. ಭಾರತದ ಆತ್ಮವು ತನ್ನ ಶಕ್ತಿಯನ್ನು ಪ್ರದರ್ಶಿಸಿ ಇನ್ನೂ ಮೆರೆಯುತ್ತಿದೆ. ಭಾರತದ ನಂಬುವ ಮಿಲಿಯಾವಧಿಗಳ ಜೀವನದಲ್ಲಿ ಪ್ರಾಚೀನವಾದ ಸನಾತನ ಧರ್ಮವು ಒಂದು ಪ್ರಭಾವಿತ ಶಕ್ತಿಯಾಗಿ ಇಂದಿಗೂ ಉಳಿದಿದೆ. ಈ ಸಂಗತಿಯು ನಿದರ್ಶನವೆಂಬಂತೆ ದಕ್ಷಿಣದ ಅತಿ ಪ್ರಾಚೀನ ಮಠ ಕೇಂದ್ರವೊಂದರ ಸ್ವಾಮಿ ಲಿಂಬಾಲವಣ ದೇಶಿಗರು ಪ್ರಾಚೀನ ನಾಗಸ್ವರ ದುಂಧುಭಿಯ ಘೋಷದೊಡನೆ ಉತ್ತರದ ವಿಭಿತ್ ನೆಹರುಗಳಿಗೆ ಚಿನ್ನದ ರಾಜ್ಯದಂಡವನ್ನರ್ಪಿಸಿದುದು ಸ್ವತಂತ್ರ ನಾಡೊಂದು ಸಂಗತಿಯಾಗಿದೆ.

—ಸಂಜೀವ ಕಾಮತ್ ಬಿ. ಎ. ಬಿ. ಎಲ್.

ಆಹಾರ ಸಾಧನಗಳ ದಾಸ್ತಾನು: ಕಳೆದ ತಿಂಗಳ ಅಂತ್ಯದ ವರೆಗೆ ಈ ಜಿಲ್ಲೆಗೆ ಬಿಲಾಟಾದ ಅಕ್ಕಿ ಸುಮಾರು 1 ಸಾವಿರ ಟನ್ ಇನ್ನೂ ನಮ್ಮಲ್ಲಿಗೆ ಬರಬೇಕಾಗಿದೆ. ಈಗಿರುವ ಅಕ್ಕಿ ಕೆಲವು ದಿನಗಳಿಗೆ ಮಾತ್ರ ಸಾಕು. ಹೊಸ ಅಕ್ಕಿ ತಯಾರಾಗಲು ಇನ್ನೂ ಕೊಂಚ ಕಾಲ ಬೇಕು. ಅಂತೂ ಆಹಾರ ಸಾಧನಗಳ ಬಿಕ್ಕಟ್ಟು ಇನ್ನೂ ಮುಗಿದಿಲ್ಲವಾದರೂ ಕೂಡಲೇ 1 ಸಾವಿರ ಟನ ಕಳುಹಿಸುತ್ತಾರೆಂಬುದು ಸಂತೋಷ

ಪ್ರಯಾಣಿಕರಿಗೆ ಸೂಚನೆ.

ಸಕೃತ ಮುಖ್ಯ [illegible] ಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವೀಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವೀಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವೀಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ ಕೆಲವು ರೂಟುಗಳಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು, ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲೈನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T. O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶಲುಗಳನ್ನು ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು ಸ್ಪೆಶಲುಗಳ ಬಗ್ಗೆ ಪರ್ಮಿಶನ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇ ~~ಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.~~

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ. ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜ್ವೊಂಟ್ ಮೆನೇಜರ್ಸ್,
ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವೃಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ · ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 – 3.28 Crores.

Our Chief Agency New Business in 1946 } **About 54 lakhs**

Our experience of 37 years avialable to you foi arranging Insuiance Investment
It therefore pays you to consult us to insure oi to iepiesent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:-

MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ. ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 17—10—1947 [ಸಂಚಿಕೆ 41]

ಬಾಪೂಜಿಯವರ ಜನಪ್ರಿಯತೆಯ ರಹಸ್ಯ

ಗಾಂಧೀಜಿ ಜನತೆಯನ್ನು ತಮ್ಮ ಹೃದಯಾಂತರಾಳದಿಂದ ಪ್ರೀತಿಸುವುದೇ ಅವರ ಜನಪ್ರಿಯತೆಗೆ ಕಾರಣವಾಗಿದೆ. ಜೀವಂತ ವ್ಯಕ್ತಿಗಳಲ್ಲಿ ಅವರಷ್ಟು ಮಾನವಪ್ರೇಮಿಗಳು ಅತಿ ವಿರಳ. ಜನತೋದ್ಧಾರಕ್ಕಾಗಿ ಅವರು ಅವಿಶ್ರಾಂತವಾಗಿ ಈ ತುಂಬು ವೃದ್ಧಾಪ್ಯದಲ್ಲೂ ಶರೀರವನ್ನು ಸವೆಸುತ್ತಿರುವುದಕ್ಕೆ ಅವರ ಈ ಅನಂತವಾದ ಮಾನವ ಪ್ರೇಮವೇ ಕಾರಣ. ಜನತೆಯು ತಮ್ಮ ಮೇಲೆ ಇಟ್ಟ ಈ ಶ್ರೇಷ್ಠ ವಿಶ್ವಾಸಕ್ಕೆ ತಾವು ಅಯೋಗ್ಯರಾದರೆಂದು ಅವರಿಗೆ ಖಚಿತವಾದರೆ ಅವರು ತಮ್ಮೀ ಭೌತಿಕ ಶರೀರವನ್ನು ದೀರ್ಘ ನಿರಶನ ವ್ರತದಿಂದಲೂ ಪರಮಾತ್ಮ ಧ್ಯಾನದಿಂದಲೂ ಪ್ರಶಾಂತವಾಗಿ ತ್ಯಜಿಸಲು ಸಿದ್ಧರಾಗುವ ರಹಸ್ಯವನ್ನೂ ಈ ವಿಷಯವು ವಿವರಿಸುತ್ತದೆ. ಪ್ರತಿಯೊಂದು ಸಲ ಹಿಂದೂ ಮುಸಲ್ಮಾನ ಗಲಭೆಯಾದಾಗ ಅವರು ಕೈಕೊಂಡ ಉಪವಾಸಗಳ ಮರ್ಮವನ್ನೂ ಈ ಸಂಗತಿಯು ವಿವರಿಸುತ್ತದೆ. ಇಷ್ಟೇ ಅಲ್ಲ. ತಾನು ಯಾರ ಉದ್ಧಾರಕ್ಕೆ ಜೀವಮಾನವೆಲ್ಲ ಸವೆದಿರುವರೋ ಮತ್ತು ತನ್ನಿಂದ ಪರಿವರ್ತಿಸಲಾಗ ಅವರಲ್ಲಿ ಕೆಲವರು ಮಾಡಿದ ಅತ್ಯಲ್ಪ ತಪ್ಪಿಗಾಗಿಯೂ ತಾನು ಅತಿ ಕಠಿಣದ ಜೈಲು ವಾಸದ ಶಿಕ್ಷೆಯನ್ನು ಅನುಭವಿಸಲೂ ಸಿದ್ಧರಿರುವುದಾಗಿ ಅವರು ಬಹಿರಂಗವಾಗಿ ಸರಕಾರಕ್ಕೆ ತಿಳಿಸಿದ್ದೂ ಅವರ ಆಳ ಸಹಮಾನವ ಪ್ರೇಮ ಉದಾತ್ತ ನಿದರ್ಶನ. ಬಡತನದಿಂದ ದೀನರಾದವರನ್ನು ವಿಮೋಚಿಸಲಿಕ್ಕಾಗಿ ಅವರು ಉಕ್ಕುವ ಪ್ರೀತ್ಯಾಸಕ್ತಿಯಿಂದ ಅವರ ಉದ್ಧಾರಕ್ಕಾಗಿ ನಿರಂತರ ಸಂಕಷ್ಟವನ್ನು ಸಹಿಸಿ ಪ್ರಾರ್ಥನಾಸಕ್ತರಾಗಿರುತ್ತಿದ್ದು ಅವರೊಡನೆ ತನ್ನ ಬಂಧುತ್ವ ಭಾವವನ್ನೂ ತೋರಿಸ ತೋಸುಗ ಗೇಣುದ್ದ ಬಟ್ಟೆಯನ್ನುಡುತ್ತಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಶ್ರದ್ಧಾವಂತ ರಾಜಕಾರಣ ಪಟುಗಳಾದ ಚರ್ಚಿಲ್ಲರು ಅವರ ಈ ವೇಷಕ್ಕಾಗಿ "ಭಾರತದ ಅತಿ ನಗ್ನ ಫಕೀರ"ನೆಂದು ಅಣಕಿಸಿದರು. ಈ ವೇಷದಲ್ಲೇ ಅವರು ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ನಮ್ರಗೊಳಿಸಿದ ಸಂಗತಿಯೂ ಲೋಕವಿದಿತವಿದೆ.

ಸತ್ಯಪ್ರಕಾಶ

ಕೆಡುಕುತನ ಮತ್ತು ನರಳುವಿಕೆಯನ್ನು ಅವು ಎಲ್ಲಿದ್ದರೂ ಗಾಂಧೀಜಿ ಸಹಿಸಲಾರರು. ಅದೇ ಸಮಯಕ್ಕೆ ಅವರು ಸರ್ವಸಾಮಾನ್ಯವಾಗಿ ತಿಳಿಯಲ್ಪಡುವಂತಹ ದೇಶಭಕ್ತರಲ್ಲ. ಅವರು ತಮ್ಮನ್ನು ದಬ್ಬಾಳುವವರ ಮೇಲೆ ಒಂದು ಕಿಂಬೆರಳನ್ನು ಕೂಡ ಎತ್ತುವವರಲ್ಲ. ಕಾರಣ ತಮ್ಮನ್ನು ಸಂಕಷ್ಟಕ್ಕೆ ಗುರಿಪಡಿಸುವವರು ಕೂಡ ತಮ್ಮ ರಕ್ತ ಬಂಧುಗಳೇ ಎಂಬುದನ್ನು ಅವರೆಂದಿಗೂ ಮರೆಯುವವರಲ್ಲ. ಈ ಬಂಧುವು ದುರ್ಮಾರ್ಗಿಯೂ, ದುಷ್ಕೃತ್ಯಗಳಿಗೆ ಒಳಗಾದವನೂ, ಕೆಟ್ಟವನೂ ಆಗಿರಬಹುದು. ಗಾಂಧೀಜಿಯವರು ದೇಶಭಕ್ತರೂ, ಮಾನವ ಪ್ರೇಮಿಗಳೂ, ದೇವಭಕ್ತರೂ ಆಗಿರುವರು. ಅವರಿಗೆ ಯಾವೊಂದು ವ್ಯಕ್ತಿ ಇಲ್ಲವೆ ವ್ಯಕ್ತಿಗಳ ಮೇಲೆ ದ್ವೇಷವಿಲ್ಲ. ಕಾರಣ ತಾನೂ ಇತರರಂತೇ ಎಂದವರು ಭಾವಿಸುತ್ತಾರೆ.

ಗಾಂಧೀಜಿ ಭಾರತ ಪ್ರೇಮಿಗಳು. ಈಗ ಪ್ರಸ್ತುತಕ್ಕೆ ಭಾರತದ ಜನತೆ ಇತರ ಎಲ್ಲಾ ಜನರಿಗಿಂತ ಹೆಚ್ಚು ದುರ್ದೆಸೆಗೆ ಒಳಗಾದವರಾಗಿರುತ್ತಾರೆ. ಅವರು ಇಂದು ದೀನರೂ, ದರಿದ್ರರೂ, ದಬ್ಬಲ್ಪಟ್ಟವರೂ ಮತ್ತು ಅಸಹಾಯಕರೂ ಆಗಿರುತ್ತಾರೆ. ಆದುದರಿಂದ ಒಂದು ಸಲಕ್ಕೆ ಅವರು ಈ ಭಾರತವನ್ನು ಚೇತನಗೊಳಿಸಿ ಕಾರ್ಯಮಗ್ನವಾಗುವಂತೆ ಮಾಡಿದರೆಂದರೆ ಮತ್ತೆ ಈ ದೇಶವು ತನ್ನ ಪ್ರಾಚೀನ ನಾಗರಿಕತೆಯ ವೈಭವದಿಂದ ಪುನಃ ಒಮ್ಮೆ ಪ್ರಕಾಶಮಾನವಾಗಿ ಜಗತ್ತಿಗೆ ಮಾರ್ಗದರ್ಶಕವಾಗುವುದರಲ್ಲಿ ಸಂದೇಹವಿಲ್ಲ.

ಭಾರತದ ಪರವಾಗಿ ಅವರು ಸಹಿಸಿದ ಕಷ್ಟ ನಿಷ್ಠುರಗಳಿಗೆ ಎಣೆಯುಲ್ಲ. ಇಷ್ಟಾದರೂ ಅವರಾರ್ಯದರೂ ದ್ವೇಷಭಾವವೆಂಬುದವರಲ್ಲಿಲ್ಲ. ಈ ಕಾರಣವೊಂದರಿಂದಲೇ ಅವರು ಭಾರತದ ನಶಿಸಿಹೋದ ಆತ್ಮವನ್ನು ಪುನರ್ಜೀವಿಸಲು ಕಾರಣಭೂತರಾಗುವರು. ಕ್ರೈಸ್ತ ಸಿದ್ಧಾಂತದಂತೆ ಪರಮಾತ್ಮನು ತಾನು ಪ್ರೀತಿಸುವ ಮಾನವ ವರ್ಗದ ಸೇವೆ ಮಾಡುವವನನ್ನು ಶಿಲುಬೆಯಲ್ಲಿ ಹಾಕಲು ಒಪ್ಪುವನು. ಗಾಂಧೀಜಿಯು ಮಾನವನೆಮ್ಮದಿಗಾಗಿ ಅತ್ಯಂತ ಸಂತೋಷಚಿತ್ತದಿಂದ ಪ್ರಾಣಾರ್ಪಣೆ ಮಾಡಲೂ ಸಿದ್ಧರಿರುವರು. ಮಾನವನು ಅದೆಷ್ಟು ಉಚ್ಚ ಇಲ್ಲವೆ ನೀಚನಿರಲಿ, ಸ್ನೇಹಿತನಿರಲಿ, ಶತ್ರುವಿರಲಿ, ಅವನನ್ನು ಪ್ರೀತಿಸುವುದು ಗಾಂಧೀಜಿಯ ಜನ್ಮಸಿದ್ಧ ಗುಣವೈಶಿಷ್ಟ್ಯ. ಆದುದರಿಂದಲೇ ನಾವಿಂದು ಅವರಲ್ಲಿ ಹಿಂದೂ ಮುಸ್ಲಿಂ ಐಕ್ಯದ, ಹರಿಜನೋದ್ಧಾರದ ಅಸದೃಶ ಶ್ರದ್ಧೆಯನ್ನು ಕಾಣುತ್ತೇವೆ. ಗಾಂಧೀಜಿಯು ರಾಜಕೀಯದಲ್ಲಿ ಇಂದಿನ ಆಧುನಿಕ ರಾಜನೀತಿಯ ಕೃತಕ ಸೋಗನ್ನು ಕಾಣಲಾರೆವು. ನಿಜವಾಗಿ ಹೇಳುವುದಾದರೆ ಗಾಂಧೀಜಿಯವರನ್ನುವ ಆಧ್ಯಾತ್ಮಿಕ ಧ್ಯೇಯಬದ್ಧವಾದ ಮಾನವ ಪ್ರೇಮ, ನಿರಂತರ ಸಂಕಷ್ಟ ಸಹಿಷ್ಣುತೆ ಮತ್ತು ತ್ಯಾಗ ಬಲಿದಾನದ ತತ್ವಗಳನ್ನು ನಾವಿಂದು ಜಗತ್ತಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳಿಗೆ ಅನ್ವಯಿಸಿದರೆ ಜಗತ್ತು ತನ್ನ ಇಂದಿನ ದುರಂತದಿಂದ ಖಂಡಿತ ಪಾರಾಗುವುದು. ಇಂದು ಜಗತ್ತು ಸ್ವಾರ್ಥಸಾಧನೆಯಲ್ಲಿಯೂ ಮಗ್ನವಾಗಿದೆ. ಭಾರತದ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಅವರ ವಿಧಾನವು ಜಗತ್ತನ್ನು ರಕ್ಷಿಸಬಲ್ಲುದು.

ದೈವದತ್ತ ಶಕ್ತಿ

ಗಾಂಧೀಜಿಯು ಈ ಎಲ್ಲ ವಿಶಿಷ್ಟ ಗುಣ ಶಕ್ತಿಗಳಿಂದಲೇ ಇಂದವರು ಮಹಾ ಆತ್ಮನೆಂದೆನಿಸಿಕೊಳ್ಳುತ್ತಾರೆ. ಆದರೆ ಎಲ್ಲಾ ಮಹಾ ಪುರುಷರಂತೆ ಅವರು ತಮ್ಮ ಸ್ವಂತ ಶ್ರೇಷ್ಠತ್ವದ ಕುರಿತು ಹೆಮ್ಮೆಪಡುವವರಲ್ಲ. ತಾನೂ ಇತರರಂತೆ ಓರ್ವ ಪಾಪಿಷ್ಠನೆಂದೂ ಅವರು ಹೇಳಿದ್ದುಂಟು. ಆದರೆ ಆದಷ್ಟು ಕಮ್ಮಿ ಪಾಪಾಚರಣೆ ಮಾಡುವುದೇ ತನ್ನ ಉದ್ದೇಶವೆಂತಲೂ ಅವರು ತಿಳಿಸಿದ್ದಾರೆ. ಅವರು ಪ್ರೀತಿ, ಕರುಣೆ ಮತ್ತು ಸಹಾನುಭೂತಿಯ ಮೂರ್ತಿಗಳೇ ಆಗಿರುವರು. ಇಂದವರು ನಮ್ಮ ಮಧ್ಯದಲ್ಲಿದ್ದು ಶ್ರಮಿಸುವವರಾದರೂ ದೈವ ಸೃಷ್ಟಿಯು ಸಾಗಿಸಲ್ಪಡುವ ಮುಳುಗಿಹೋಗಿದ್ದಾರೆ. ಇಂಥಾ ಮಹಾ ಆತ್ಮ ವೈಶಿಷ್ಟ್ಯವನ್ನು ಅರಿತುಕೊಳ್ಳುವುದು ಸಾಮಾನ್ಯ ಮಾನವ ಕಲ್ಪನಾ ಸಾಮರ್ಥ್ಯಕ್ಕೆ ಮಿಕ್ಕಿದ ವಿಷಯ. ನಾವು ಅವರ ಉನ್ನತ ಶೀಲಗಳನ್ನು ನಮ್ಮ ಸಾಮಾನ್ಯ ದೃಷ್ಟಿಕೋನದಿಂದಲೇ ನೋಡುತ್ತೇವೆ. ಇಷ್ಟಾದರೂ ದೂರ ದಿಗಂತದಲ್ಲಿನ ಪ್ರಜ್ವಲ ನಕ್ಷತ್ರವೊಂದು ಶೋಭಿಸುವಂತವರು ನಮ್ಮ ಕಣ್ಣಿಗೆ ಮಿನುಗುತ್ತಾರೆ. ಗಾಂಧೀಜಿ ಎಂದರೊಂದು ಮಹಾ ಶಕ್ತಿ. ಅವರಿಂದು ಇಡೀ ಮಾನವ ಜಗತ್ತಿನ ಸಂಕಷ್ಟ ಪರಿಹಾರಕ್ಕಾಗಿ ತಮ್ಮ ದುರ್ಬಲ ಶರೀರ ಶಕ್ತಿಯನ್ನು ವ್ಯಯಿಸಿಲ್ಲವಾದರೂ ಅವರ ಈ ಶಕ್ತಿಯು ಕಾಲಾಂತ್ಯದ ವರೆಗೂ ಬಾಳುವುದು ಮತ್ತು ಭಾವೀ ಜಗತ್ತಿನ ಜನಾಂಗಗಳ ವಿಧಿಯನ್ನು ರೂಪುಗೊಳಿಸಲು ಅದು ತನ್ನ ಪ್ರಭಾವವನ್ನು ಬೀರುವುದು ಖಂಡಿತ. ಕಾರಣ ಅವರ ಹಿಂದೆ ಪರಮಾತ್ಮನ ಅಪ್ರತಿಮವಾದ ಶಕ್ತಿ ಇದೆ. ಈ ಶಕ್ತಿಯೇ ಅವರನ್ನು ಕೊನೆಯ ತನಕ ಕರ್ಮಯೋಗಿಗಳಾಗಿರುವಂತೆ ಪ್ರೇರೇಪಿಸುವುದು ಮಾತ್ರವಲ್ಲ ಮಾನವ ಉದ್ಧಾರಕ್ಕೆ ಕಳುಹಿಸಲ್ಪಟ್ಟ ದೈವ ಸಂಭೂತ ಶಕ್ತಿಯೇ ಅವರಾಗಲೂಬಹುದು.

—(ಓರ್ವ ಗಾಂಧಿ ಭಕ್ತರು)

THE

UNITED INDIA LIFE ASSURANCE

ESTD 1906 CO., LTD. [H. O. MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to:—

INSPECTORATE OFFICE

K. S. Rao Road, Mangalore.

ಹಿರೋಶಿಮಾದಲ್ಲಿ ಬಿದ್ದ ದ್ವೇಷದ ಬೊಂಬು

ವಿಜ್ಞಾನಿ ತತ್ವಜ್ಞರ ಹೃದಯಂಗಮ ವರದಿ

ಹರಿಜನದಲ್ಲಿನ ಸಾರಾಂಶ ಪ್ರಕಟಣೆ

ಹಿರೋಶಿಮಾ ಮತ್ತು ನಾಗಸಾಕಿಗಳಲ್ಲಿ ಬಿದ್ದ ಏಟಂ ಬೊಂಬಿನ ದುಷ್ಪರಿಣಾಮಗಳನ್ನು ಪರಿಶೀಲಿಸಲು ಒಂದು ಬ್ರಿಟಿಷ್ ವೈಜ್ಞಾನಿಕ ಮಂಡಳವು ಜಪಾನಿಗೆ ಹೋಗಿತ್ತು. ಡಾ। ಬ್ರೊನೊಸ್ಕಿ ಎಂಬೊರ್ವ ವಿಜ್ಞಾನಿಗಳೂ ಆ ಮಂಡಳದ ಸದಸ್ಯರು. ತಾತ್ವಿಕ ಭಾವನೆಯುವರಾದ ಅವರು ತಾವು ಕಂಡದ್ದನ್ನು ಕುರಿತು ಕೊಟ್ಟ ಒಂದು ರೇಡಿಯೋ ಭಾಷಣದ ಸಾರಾಂಶವನ್ನು 'ಹರಿಜನ'ದಲ್ಲಿ ಕೊಡಲಾಗಿದೆ. ಅದು ಹೀಗಿದೆ:

1945ರ ಆಗಸ್ಟ್ 6ರಂದು ವಿಘಾತುಕವಾದ ಆ ಬೊಂಬೊಂದು ಹಿರೋಶಿಮಾ ನಗರದ ಮಧ್ಯದಲ್ಲಿ ಸ್ಫೋಟ ಗೊಂಡಿತು. ಪರಿಣಾಮವಾಗಿ ತತ್‌ಕ್ಷಣದಲ್ಲೇ 4 ಚದರ ಮೈಲು ವಿಸ್ತೀರ್ಣದಲ್ಲಿನ ಕೊಂಕ್ರೀಟ್ ಕಟ್ಟಡಗಳಲ್ಲದೆ ಉಳಿದೆಲ್ಲವೂ ಭಸ್ಮೀ ಭೂತವಾದುವು. ಈ ಕೇಂದ್ರದಲ್ಲಿ ಸ್ಫೋಟದ ಅತಿ ಭಯಂಕರ ದುಷ್ಪರಿಣಾಮವಾಯಿತು. ಮಾಲಿದ ಟೆಲಿಗ್ರಾಫ್ ಕಂಬಗಳು, ಧೂಳಾದ ಕಟ್ಟಡಗಳು, ಮತ್ತು ಕೊನೆಯಲ್ಲಿ ಬೋಳಾದ ಉದ್ಯಾನ ವನಗಳು.

ಇಷ್ಟೊಂದು ಅಗಾಧ ಪ್ರಮಾಣದ ವಿನಾಶವು ಮಾನವ ಮನಸ್ಸಿನ ಮೇಲೆ ಅದೆಂತಹ ಆಳವಾದ ಭಾವನೆಯನ್ನುಂಟು ಮಾಡುತ್ತದೆಂದು ವಾಚಕರು ಕಲ್ಪಿಸಬಹುದು. ವಿನಾಶದ ಕುರಿತು ಇಲ್ಲಿ ಹೇಳಬೇಕಾಗಿರುವ ಸಂಗತಿಯೆಂದರೆ ಅದರ ವೈಶಾಲ್ಯ ಕಾರಣ ಹಾನಿಯ ಮಟ್ಟಿಗೆ ಅಲ್ಲಿ ಸಂಭವಿಸಿದ್ದು ಸಾಮಾನ್ಯ ಸಿಡಿಮದ್ದುಗಳ ಬೊಂಬುಗಳಂತಹದೇ ಆಗಿದೆ. ಆದರೆ ಸಿಡಿಮದ್ದಿನದಕ್ಕಿಂತ ಅದು ಅತ್ಯಂತ ವಿಶಾಲ ಪ್ರಮಾಣದಲ್ಲಿ ಮಾತ್ರ ಸಂಭವಿಸಿತ್ತು. ಇದರದೊಂದು ಕಲ್ಪನೆಯಾಗಬೇಕಾದರೆ ನಾವು ಒಂದು ಇರುವೆಯ ಗೂಡಿನ ಮೇಲೆ ಸಾಮಾನ್ಯವಾದೊಂದು ಆರ್. ಎ. ಎಫ್. ವಿಮಾನದ ಬೊಂಬು ಬಿದ್ದರೆ ಏನಾಗಬಹುದೆಂಬುದನ್ನು ಮಾತ್ರ ಊಹಿಸಿ ಕೊಂಡರೆ ಸಾಕು.

ಕುದಿಯುವ ಉಷ್ಣ

ಇಷ್ಟಲ್ಲದೆ ಸಾಮಾನ್ಯ ಬೊಂಬು ಸ್ಫೋಟದಿಂದುಂಟಾಗಲಾರದ ಇತರ ಕೆಲವು ನವೀನ ಪರಿಣಾಮಗಳೂ ಈ ಹೊಸ ಬೊಂಬಿನಿಂದಾಗಿವೆ. ಸ್ಫೋಟಗೊಳ್ಳುವಾಗ ಅಣು ಬೊಂಬು ಅತ್ಯಧಿಕ ಪ್ರಮಾಣದ ಚೈತನ್ಯ ಶಕ್ತಿಯನ್ನು ಬಿಟ್ಟು ಬಿಡುತ್ತದೆ. ಈ ಅಗಾಧ ಚೈತನ್ಯ ಶಕ್ತಿಯು ವಿಶಾಲ ದೂರದ ತನಕ ಪಸರಿಸುತ್ತದೆ. ಅದರ ಬಹು ಭಾಗವು ಕೆಲವೊಂದು ವಿನಾಶಕಾರಿಯಾದ ಅದೃಶ್ಯ ಪ್ರಕಾಶದ ಕಿರಣಗಳನ್ನು ಬೀರುತ್ತದೆ. ಈ ಕಾರಣದಿಂದಲೇ ಆ ಬೊಂಬು ಸ್ಫೋಟಗೊಂಡಾಗ ಅತ್ಯಂತ ಪ್ರಜ್ವಲ ಪ್ರಕಾಶ ಜ್ವಾಲೆಯು ಕಂಡು ಬಂತು. ಇದರಿಂದ ಕಣ್ಣು ಕಳಕೊಂಡವರೆಷ್ಟೊ ಮಂದಿಗಳಿದ್ದಾರೆ. ಅನೇಕ ಮೈಲು ದೂರದಲ್ಲಿದ್ದವರು ಕೂಡ ತಾತ್ಕಾಲಿಕವಾಗಿ ದೃಷ್ಟಿ ಕಳಕೊಂಡಿದ್ದಾರೆ. ಸೂರ್ಯ ಪ್ರಕಾಶದಂತೆ ಈ ಪ್ರಕಾಶವು ಉಷ್ಣತೆಯುಳ್ಳದ್ದಾಗಿರುವುದರಿಂದ ಚರ್ಮವನ್ನೂ ವಿವರ್ಣ ಮಾಡುವಷ್ಟು ಶಕ್ತಿಯುಳ್ಳದ್ದಾಗಿದೆ. ಮಾತ್ರವಲ್ಲ ಅಣು ಬೊಂಬಿನ ಪ್ರಕಾಶಕ್ಕೆ ಸೂರ್ಯನ ಬಿಸಿಲಿಗಿಂತ ಹೆಚ್ಚು ಉಷ್ಣತೆಯೂ ಇದೆ. ಆದರೆ ಅದು ಕ್ಷಣ ಮಾತ್ರ ಬಾಳುವಂತಾದ್ದು—ಇಷ್ಟಾದರೂ ಎರಡು ಮೈಲು ದೂರದಲ್ಲಿರುವ ಓರ್ವ ಮನುಷ್ಯನ ಶರೀರ ಶಾಖವು ಒಂದು ಕ್ಷಣದ ಮಟ್ಟಿಗೆ ಕುದಿಯುವ ನೀರಿನ ಉಷ್ಣತೆಗೇರುತ್ತದೆ!

ಬೆಂಕಿಯ ಬೇಗೆ

ಅಣು ಬೊಂಬಿನ ಈ ಪ್ರಸರಿಸುವ ತಪ್ತ ಪ್ರಕಾಶದಿಂದಲೇ ಹಿರೋಶಿಮಾದಲ್ಲಿ ಬೆಂಕಿ ರಾಶಿಗಳೆದ್ದುವು. ಆದರೆ ಇದರ ಕಟುವಾದ ಅನಿಷ್ಟಕಾರ ಪರಿಣಾಮ ಹೊರ ಪ್ರದೇಶದಲ್ಲಿದ್ದ ಜನತೆಯ ಮೇಲಾಯಿತು. ಈ ಜ್ವಲನ ಪ್ರಕಾಶದ ಸುಡುವಿಕೆಯಿಂದ ಅನೇಕ ಮಂದಿ ಮೃತಪಟ್ಟರು. ನಗರ ಮಧ್ಯ ಭಾಗದಲ್ಲಿದ್ದ ಚರ್ಮಗಳು ಒಂದೇ ಸವನೆ ಕರ್ರಗಾಗಿ ಅವರು ತಕ್ಷಣ ಮೃತ್ಯುವಿಗೊಳಗಾದರು.

ಇದಲ್ಲದೆ ಅತೀ ಭೀಕರವೂ ಅತೀ ನೂತನವೂ ಆದ ಮೂರನೆಯದೊಂದು ಪರಿಣಾಮವು ಇದೆ. ಅದೆಂದರೆ ರೇಡಿಯೊ ಕಿರಣ ಶಕ್ತಿಯ ಚಟುವಟಿಕೆ. ಸ್ಫೋಟವಾಗುವಾಗ ಅದೆಂತಹ ಕಣ್ಣು ಕುಕ್ಕುವ ಜ್ಯೋತಿ ಚೈತನ್ಯವು ಉದ್ಭವಿಸುವುದೆಂದು ಮೇಲೆ ವಿವರಿಸಲಾಗಿದೆ. ಇದರ ಪ್ರಭಾವವು ಮಾನವ ಶರೀರಗಳನ್ನು ಪ್ರವೇಶಿಸಿ ಕಲ್ಪನಾತೀತ ಹಾನಿಗೆಯ್ಯುತ್ತದೆ.

ಈ ಪ್ರಭಾವೀಕರಣಕ್ಕೆ ಗ್ಯಾಮಾ ಕಿರಣಗಳೆನ್ನುತ್ತಾರೆ. ಇದು ಸ್ಫೋಟದ ಕೆಲವೇ ಸೆಕುಂಡುಗಳಲ್ಲೇ ಶೋಭಿಸಿ ಕೊನೆಗೊಂಡಿತು. ಆದರೆ ಅದು ತನ್ನ ಕೊಳ್ಳೆಗಳನ್ನು ಕೂಡಲೇ ಕೊಲ್ಲಲಿಲ್ಲ. ಶರೀರದ ಎಲುಬು ತುಂಡಗಳೊಳಗಿನ ಪುನರ್‍ರಚನೆ ಮಾಡುವ ರಕ್ತ ಕಣಗಳನ್ನಿದು ಹಾನಿಗೊಳಪಡಿಸುವುದು. ಎಲುಬಿನ ಈ ಅಂತರಾಳ ಭಾಗಗಳು ನಾಶವಾದರೆ ರಕ್ತದೊಳಗಿನ ಕೆಂಪು ಮತ್ತು ಬಿಳಿ ಕಣಗಳು ಕೆಲವು ಸಮಯದ ತನಕ ಕಾರ್ಯಗೆಯ್ಯುವವಾದರೂ ಸವೆಯಲ್ಪಡುವ ಇಂತಹ ಕಣಗಳು ಹೊಸದಾಗಿ ನಿರ್ಮಿಸಲ್ಪಡುವುದಿಲ್ಲ. ಪರಿಣಾಮವಾಗಿ ಇದರ ಹಾನಿಗೊಳಗಾದವರು ಒಂದೆರಡು ದಿವಸಗಳ ತನಕ ಯಾವ ಬಾಧಕವನ್ನು ಕಾಣುವುದಿಲ್ಲ. ಕೆಲವರು ಹಲವು ವಾರಗಳ ತನಕವೂ ಬದುಕಿರುತ್ತಾರೆ.

ಖಂಡಿತ ಮರಣ

ಆದರೆ ಈ ರೇಡಿಯೊ ಚಟುವಟಿಕೆಯ ಕಿರಣಗಳಿಂದ ಸೋಂಕಲ್ಪಟ್ಟವನು ಖಂಡಿತ ಮೃತ್ಯುವಿಗೀಡಾದನೆಂದೇ ತಿಳಿಯಬೇಕು. ಸರಿಯಾದ ಚಿಕಿತ್ಸೆ ನಡೆಯದಿದ್ದರೆ ಅವನು ರಕ್ತ ನಿರ್ಬಲತೆಯಿಂದ ಮಡಿಯುವನು, ಕಾರಣ ಶಕ್ತಿಯನ್ನು ಕೊಡುವ ಕೆಂಪು ಕಣಗಳು ಅವನ ರಕ್ತದಲ್ಲಿ ಪುನರ್ನಿರ್ಮಾಣ ಹೊಂದುವುದಿಲ್ಲ. ಇಲ್ಲವೆ ಅವನು ಒಂದು ತರದ ನಂಜು ಜಾಡ್ಯಗಳನ್ನು ಗುಣ ಮಾಡುವ ಶಕ್ತಿಯುಳ್ಳ ಅವನ ರಕ್ತದೊಳಗಿನ ಬಿಳಿ ಕಣಗಳು ಪುನರ್ನಿರ್ಮಾಣ ಹೊಂದುವುದಿಲ್ಲ. ಇಲ್ಲವೆ ಅವನು ವಿದುಳಿನಲ್ಲಾಗುವ ರಕ್ತ ಸ್ರಾವದಿಂದ ಮಡಿಯುವನು. ಕಾರಣ ರಕ್ತವನ್ನು ಘನೀಕರಿಸುವ ಶಕ್ತಿಯು ಆ ಕಿರಣಗಳಿಂದ ಲೋಪವಾಗಿದೆ.

ಅಸಂಖ್ಯಾತ ಹಾನಿ

ಈ ಗಾಮಾ ಕಿರಣಗಳಿಂದ ಮಡಿದವರೆಷ್ಟೆಂದು ಲೆಕ್ಕ ಹಾಕಲು ಸಾಧ್ಯವಾಗುವುದಿಲ್ಲ. ಮುಕ್ಕಾಲು ಮೈಲು ದೂರದಲ್ಲಿದ್ದು ಈ ಕಿರಣಗಳಿಂದ ಸ್ಪರ್ಶಿಸಲ್ಪಟ್ಟ ಪ್ರತಿ ಇರ್ವರಲ್ಲಿ ಒಬ್ಬನು ಮರಣ ಪಟ್ಟಿರುವನು. ಗರ್ಭಿಣಿಯರ ಮೇಲೂ ಈ ಕಿರಣಗಳ ಅನಾಹುತ ವಿಪರೀತವಾಗಿದೆ. ಇದರ ಪ್ರಭಾವಕ್ಕೊಳಗಾದ ಗರ್ಭಿಣಿಯರ ಒಂದು ಮಗುವು ಜೀವಂತವುಳಿಯಲಿಲ್ಲ. ಅತೀ ದೂರದಲ್ಲಿದ್ದು ಇದರ ಅಲ್ಪ ಪ್ರಭಾವಕ್ಕೊಳಗಾದ ಸ್ತ್ರೀ ಪುರುಷರ ಸಂತಾನ ಸೃಷ್ಟಿಸುವ ಶಕ್ತಿಯು ಬಹಳ ಕುಂದಿ ಹೋಗಿದೆ.

ದ್ವೇಷಾಗ್ನಿ ತಾಂಡವ

ಹಿರೋಶಿಮಾದ ಜನರು ಹೇಗೆ ಸತ್ತರೆಂದು ನಾವು ತಿಳಕೊಂಡಂತಾಯಿತು. ಅದೆಷ್ಟು ಮಂದಿ ಸತ್ತರೆಂದು ತಿಳಿಯಲು ಎಲ್ಲರೂ ಆಸಕ್ತಿ ಪಡುತ್ತಾರೆ. ಹಿರೋಶಿಮಾಗಿಂತ ಸ್ವಲ್ಪ ಚಿಕ್ಕ ನಗರವಾದ ನಾಗಸಾಕಿಯಲ್ಲಿ ಈ ಬೊಂಬು ಮಧ್ಯ ಭಾಗ ಬಿಟ್ಟು ಸ್ವಲ್ಪ ಹೊರ ಪ್ರದೇಶದಲ್ಲಿ ಬಿದ್ದುದರಿಂದ 40 ಸಾವಿರ ಮಂದಿ ಮಡಿದಿರುವರು. ಲಂಡನ ಮೇಲಾದ ವಿಮಾನ ದಾಳಿಯಿಂದ ಮಡಿದವರ ಒಟ್ಟು ಸಂಖ್ಯೆಗಿಂತ ಇದೆಷ್ಟೊ ಪಾಲು ಹೆಚ್ಚು. ಹಿರೋಶಿಮಾದಲ್ಲಿ ಬಿದ್ದ ಒಂದೇ ಬೊಂಬು 80 ಸಾವಿರ ಮಾನವ ಜೀವಿಗಳ ಬಲಿ ತೆಗೆಯಿತು. ಇಡೀ ಯುದ್ಧಾವಧಿಯಲ್ಲಿ ಇಡೀ ಇಂಗ್ಲೆಂಡಿನಲ್ಲಿ ಬೊಂಬು ದಾಳಿಯಿಂದ ಸತ್ತವರ ಸಂಖ್ಯೆಗಿಂತ ಇದೆಷ್ಟೊ ಮಿಗಿಲಾದುದು. ನಗರ ಮಧ್ಯದಿಂದ ½ ಮೈಲು ವಿಸ್ತೀರ್ಣದಲ್ಲಿ ಸ್ಫೋಟದ ಕಾಲದಲ್ಲಿದ್ದ ಪ್ರತಿ ನಾಲ್ಕು ಜನರಲ್ಲಿ ಮೂವರಂತೆ ಸತ್ತಿರುವರು. ಕೇಂದ್ರದಿಂದ ಒಂದು ಮೈಲು ದೂರದಲ್ಲಿದ್ದ ಪ್ರತಿ ನಾಲ್ವರಲ್ಲಿ ಒಬ್ಬನು ಹತನಾಗಿರುವನು.

ಹೊಲ್ಲೆಂಡಿನಲ್ಲಿ ಮೋಟಾರು ಕಾರು ಪಡೆಯಲು ಸರಕಾರಿ ಅನುಮತಿ ಬೇಕು. ಈ ಪರ್ಮಿಟುಗಳನ್ನು ಕೊಡುವ ಇಲಾಖೆಗೆ ಕಳುಹಲ್ಪಡುವ ಅರ್ಜಿಗಳೊಡನೆ ಅಲ್ಲಿ ಭಾವೀ ಕಾರು ಚಾಲಕರು ಕೆಲವೊಂದು ಪಾರಿತೋಷಕಗಳನ್ನು ಕಳುಹಿಸುವರು—ಶೀಘ್ರ ಅನುಮತಿ ಸಂಕ್ಷನಿಗಾಗಿ. ಆದರೆ ಪ್ರಾಮಾಣಿಕರಾದ ಅಲ್ಲಿನ ಈ ಇಲಾಖೆಯವರು ಅದನ್ನು ಪುನ ಕಳುಹಿಸಿ ಕೊಡುವರು. ಇದಕ್ಕಾಗಿ ಆ ಇಲಾಖೆಗೆ ಪ್ರತಿ ತಿಂಗಳು 20 ಪವನುಗಳಷ್ಟು ಟಪ್ಪಾಲು ಖರ್ಚು ವ್ಯಯವಾಗುತ್ತದೆ.

FOR ALL CLASSES OF INSURANCE

LIFE—FIRE—MARINE—ACCIDENT

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA ASSURANCE CO. LTD.

(H. O. BOMBAY)

A Tata's Promotion & India's Largest Composite Insurance Office.

Total Assets - - - About 9 Crores.

For Agency and other particulars:-

Apply to

K. GANAPATHI Esq.,	K. N. NAYAK, Esq.,
Branch Manager.	*Secretary, Sub Office*
4/5, First Line Beach,	Hampankatta,
MADRAS.	MANGALORE.

ವಾರದ ಕಥೆ

ಜವಾಬುದಾರಿ ಸರಕಾರ

ಲೇಖಕರು.—ಲಕ್ಷ್ಮೀನಾರಾಯಣ ಕಿಣಿ, ಮುಲ್ಕಿಕರ್, ಮಂಗಳೂರು.

"ಏನೆ ಚ್ಚೈಯಲ್ಲಿ ಸೌಖ್ಯವಿಲ್ಲವೇ?"

ಆ ಬಂದಿರಾ? ಸೌಖ್ಯ. ಹೌದು ಸೌಖ್ಯವನ್ನೆಲ್ಲ ನೀವೆ ಹರಣಮಾಡಿದ್ದೀರಿ. ಮದುವೆಯಾದಂದಿನಿಂದ ಇಂದಿನ ವರೆಗೆ ಸೌಖ್ಯ ಎಲ್ಲಿ? ಇನ್ನು ಆಗಬೇಕೆಂದಿದ್ದೇನೆ ಅದನ್ನೆ ಆಲೋಚಿಸಿ ಕುಳಿತಿದ್ದೆ."

"ಏನು ಯೋಚನೆ?"

"ಯೋಚನೆ ಏನಿಲ್ಲ ಇವತ್ತು ಇಪ್ಪತ್ತೈದನೆ ತಾರೀಕು. ಒಂದನೆ ತಾರಿಕಿಗೆ ನನ್ನ ಕೈಗೆ ಈ ಮನೆಯ ಸಂಪೂರ್ಣ ಜವಾಬುದಾರಿ ವಹಿಸಿ ಕೊಡಬೇಕು"

"ಜವಾಬುದಾರಿ! ಎಂತಹ ಜವಾಬುದಾರಿ? ಈ ಮನೆಯ ಜವಾಬುದಾರಿಯೆಲ್ಲ ನಿನ್ನದೆ"

"ಯಾವ ಜವಾಬುದಾರಿ? ಅಡಿಗೆ ಮನೆದ್ದ ಅಲ್ಲದೆ ನೀವು ಆಫೀಸಿಗೆ ಹೋದಾಗ ಮನೆ ಕಾಯುವ ಜವಾಬುದಾರಿ ಅಲ್ಲವೇ? ನಿಮ್ಮ ಹಣ ಕಾಸಿಗೆ ಯಾರು ಜವಾಬುದಾರಿ?"

"ಹಣ ಕಾಸಿಗೆ ನನ್ನದೆ"

"ಆಗಿರಬಹುದು ಆದರೆ ಇನ್ನಿಲ್ಲ ನಿಮಗೆ ಕುಶಿ ಬಂದಂತೆ ಖರ್ಚು ಮಾಡಿ ಸಿಕ್ಕಾಬಟ್ಟೆ ಸಾಲಮಾಡಿ ಇದ್ದ ಒಂದು ಮನೆಯೂ ಮಾರಿ ಹೋದರೆ ಮುಂದೆ ನನ್ನ ಗತಿಯೇನು ಎಂದು ಈಗಲೇ ನನ್ನಲ್ಲಿ ಜಾಗೃತಿ ಉಂಟಾಗಿದೆ ನೀವು ಕೈಯಲ್ಲಿ ಸಂಬಳ ಇಟ್ಟುಕೊಂಡರೆ ಹಾಗೆ ತಿಂಗಳ ಆಖೈರಿಗೆ ತೋಂದರೆ ತಪ್ಪಿದಿಲ್ಲ ಏನಾದರೂ ಬೇಕೆಂದರೆ 'ನನಗೆ ಗೊತ್ತಿಲ್ಲ ನನ್ನೊಡನೆ ಕಾಸಿಲ್ಲ' ಎಂದು ಮೂಗು ಮುದುಡಿಕೊಳ್ಳುತ್ತೀರಿ ಇನ್ನು ನೀವು ಸಂಬಳವನ್ನು ಇಟ್ಟುಕೊಳ್ಳಕೂಡದು ನನ್ನ ಕೈಗೇ ಕೊಡಿ ನಾನೇ ಎಲ್ಲವನ್ನು ಚೊಕ್ಕವಾಗಿ ನೋಡಿಕೊಂಡು ತೊಡಕುಗಳನ್ನೆಲ್ಲ ನಿವಾರಿಸುತ್ತೇನೆ ನೋಡಿ, ಈಗ ದೇಶದ ವಾತಾವರಣವೇ ಬೇರೆಯಾಗಿದೆ, ಹಾಗೆಯೇ ಈ ಮನೆಯ ವಾತಾವರಣವೂ ಸಂಪೂರ್ಣ ಬದಲಾಗಬೇಕು ಈಗ ಪ್ರಜಾ ಸರಕಾರ ಈ ಮನೆಯಲ್ಲೂ ಪ್ರಜಾರಾಜ್ಯ ಸ್ಥಾಪನೆಮಾಡಬೇಕೆಂದಿದ್ದೇನೆ"

"ಅಯ್ಯೋ ಈ ಮನೆಯಲ್ಲಿ ರಾಜರಾರು ಪ್ರಜೆಗಳಾರು"?

ಬಿಟ್ಟು ಹೇಳಬೇಕೆ? ರಾಜರು ತಾವು ನಿರಂಕುಶ ಪ್ರಭುತ್ವಕ್ಕೆ ಒಳಗಾದ ಪ್ರಜೆ ನಾನು ನೀವು ಮಾಡಿದ್ದೆ ಕಾನೂನು ಬಾ ಎಂದರೆ ಬರಬೇಕು ಹೋಗೆಂದರೆ ಹೋಗಬೇಕು ಹಾಗಲ್ಲ ಹೀಗೆಂದರೆ ನಿಮಗೆ ಸಿಟ್ಟು ಬರುತ್ತದೆ ಹೊರಡುತ್ತದೆ ನಿಮ್ಮ ಹೊಸ ಆರ್ಡಿನೆನ್ಸು 144 ಸೆಕ್ಷನು, ಕೈಗೆ ಸಿಕ್ಕಿದ ಕೋಲಲ್ಲೋ ದೊಣ್ಣೆಯಲ್ಲೋ ನಾಯಿಗೆ ಒಡೆದಂತೆ ಒಡಿಯುತ್ತಿರಿ ಸತಿಗೆ ಪತಿಯೇ ದೈವ ಎಂಬ ಹಿರಿಯರ ನಾಣ್ಣುಡಿ ನಂಬಿದ್ದೆ ಈಗ ನೋಡಿದರೆ ನೀವು ದೈವವಲ್ಲದೆ ನೀವು ದೆವ್ವದ ರೂಪ ತಾಳಿದರೆ ನಾನು ಬ್ರಹ್ಮರಾಕ್ಷಸಿಯ ರೂಪ ತಾಳುತ್ತೇನೆ ನಿಮ್ಮ ಸಾರ್ವಭೌಮಾಧಿಕಾರ ಕಿತ್ತೆಗೆದು ಪ್ರಜಾಸರಕಾರ ಸ್ಥಾಪಿಸುತ್ತೇನೆ

"ಸಾಕೆ ತಮಾಷೆ ಬಾ ಕಾಫಿ ಕೊಡು ಕ್ಲಬ್ಬಿಗೆ ಹೋಗಲು ಹೊತ್ತಾಯಿತು

"ಓ ತಮಾಷೆ ಎಂದು ನೆನಸಿದ್ದಿರಾ? ಅಲ್ಲ ದಿಟವಾಗಿ ಹೇಳಿದ್ದು ಏಕೆ ಅಡಿಗೆ ಮನೆಗೆ ಹೋಗುತ್ತೀರಿ" ನಾನು ಸಂಪು ಹೂಡಿದ್ದೇನೆ ಜವಾಬುದಾರಿ ಸರಕಾರ ನನಗೆ ವಹಿಸಿ ಕೊಡದೆ ನಾನು ಒಲೆಗೆ ಬೆಂಕಿ ಹಚ್ಚೆನು'

"ಕಾಫಿ ಮಾಡಿಟ್ಟಿಲ್ಲ' ಏನು ಕತ್ತೆ ಭಾರಿ ಹಟ ಹಿಡಿದ ಹುಚ್ಚು ಬಿಡಿಸುತ್ತೇನೆ ಕಾನೂನು ಮಾತನಾಡುತ್ತಿಯಾ ಬಡಿಯುತ್ತೇನೆ"

'ಬಾಯಿ ತೆರೆದು ಕಿರುಚಬೇಡಿ ಭರುತ್ತದೆ ಬೀಡಿ ವಾಸನೆ ಓ, ಹೊಡೆಯಬಹುತ್ತೀರಾ? ನೋಡುವಾ ಹೊಡೆಯಿರಿ ನಾನು ಸತ್ಯಾಗ್ರಹ, ಸಂಪು ಹೂಡಿದ್ದೇನೆ ಮಾಡಿರಿ ನಿಮ್ಮ ಲಾಠಿ ಚಾರ್ಜು ನನ್ನ ಮೇಲೆ ಗಾಂಧೀಜಿಯ ಅಹಿಂಸೆಯ ಮಂತ್ರ ಜಪಿಸಿಯೇ ಈ ಮನೆಯ ಸಂಪೂರ್ಣ ಜವಾಬುದಾರಿ ತೆಗೆದುಕೊಳ್ಳದಿದ್ದರೆ ನಾನು ನಿಮ್ಮ ಹೆಂಡತಿಯೇ ಅಲ್ಲ"

ತಮ್ಮಾಕೆಯ ರುದ್ರಾವತಾರ ಕಂಡು ರಾಯರ ಧೈರ್ಯ ಕುಸಿದು ಬಿತ್ತು ಅವಳ ಮೇಲೆ ಎಷ್ಟೋ ಸರ್ತಿ ಲಾಠಿ ಚಾರ್ಜು ಮಾಡಿದ ಪೋಲೀಸು ಅವರು. ಆದರೆ ಇಂದು ಕಂಗೆಟ್ಟರು ಕಾರಣ ಅವಳ ರೂಪ ಅಷ್ಟು ಗಂಭೀರವಾಗಿತ್ತು.

ಅಲ್ಲೆ ಇದ್ದ ಒಂದು ಕುರ್ಚಿಯ ಮೇಲೆ ಕುಳಿತರು ಬಂದ ಗಂಡಾಂತರ ತಪ್ಪಿಸಲು ಆಲೋಚಿಸತೊಡಗಿದರು ಸೇದುವುದಕ್ಕೆ ಬೀಡಿ ತೆಗೆದರು

"ಆ' ಹೌದು, ಈಗ ಎಳೆಯುವ ಬೀಡಿ ಕೊನೇದು ನನ್ನ ಕೈಗೆ ಅಧಿಕಾರ ಬಂದಕೂಡಲೇ ನಾನು ಮೊತ್ತಮೊದಲು ಮಾಡುವ ಸುಧಾರಣೆ ನೀವು ಎಳೆಯುವ ಬೀಡಿಯ ಮೇಲೆ ನಿಷೇಧ ಬಾಯಿ ತೆರೆದರೆ ತಂಬಾಕಿನ ವಾಸನೆ ಪ್ರಜಾ ಸರಕಾರದಲ್ಲಿ ತಂಬಾಕಿನ ಹೊಗೆ ಕೂಡ ಎಳಬಾರದು ಎರಡನೆಯದಾಗಿ ಜುಗಾರಿಯ ಮೇಲೆ ನಿರ್ಬಂಧ ನೀವು ನಾಳೆಯಿಂದ ಕ್ಲಬ್ಬಿಗೆ ಕಾಲಿಡಬಾರದು

ರಾಯರಿಗೆ ಕೊಂಚ ಉತ್ತೇಜನ ಬಂತು, ಬೀಡಿ ಎಳೆದು ಸ್ವಲ್ಪ ಧೈರ್ಯ ತಂದುಕೊಂಡರು ಭಾರಿ ಆಲೋಚಿಸಿ ಅವಳ ಹೆದರುವಂತೆ ಅಸ್ತ್ರ ಎಸೆಯ ತೊಡಗಿದರು

"ಅಬ್ಬಾ ಸೊಕ್ಕು' ನೊಡಿಯೇ ಒಡುತ್ತೇನೆ ಊರಿ ಪಿಸ್ಸರಿ ಎನ ಮಾತ ತ್ತಿ

"ಓ ನಿಮ್ಮ ಪೊಳ್ಳು ಬೆದರಿಕೆಗೆ ಹೆದರುವವಳು ನಾನೆ ಹಾಗೋ ಏನು ಮಾಡುತ್ತಿಯೆಂದು ಕೇಳುತ್ತೀರಾ? ನಿಮ್ಮ ಹೆಸರು ಹೇಳಿಯೇ ಭಿಕ್ಷೆ ಬೇಡಿ ಇಂತವರ ಹೆಂಡತಿ ಎಂದು ನಿಮಗೆ ಹೆಸರು ತರುತ್ತೇನೆ

ಮಾನನಷ್ಟಕ್ಕೆ ಒಂತಲ್ಲ ರಾಯರಿಗೆ ಜಿಟ್ಟಿ ಅಸ್ತ್ರ ನಿಷ್ಫಲ ಮೋಜನವಾಯಿತು

"ಏನ ಜವಾಬ ದಾರಿ ಕೊಡುತ್ತಿರಾ ಇಲ್ಲ'" ರಾಯರು ಗಮ್ಮನಂತೆ ಕುಳಿತಿದ್ದರು

"ಇಲ್ಲ ಇನ್ನು ಅಹಿಂಸೆಯಿಂದ ಸತ್ಯಾಗ್ರಹ ಹೂಡಿದರಾಗದು ಇನ್ನು ಪ್ರತ್ಯಕ್ಷ ಹೋರಾಟ ಡೈರೆಕ್ಟ್ ಏಕ್ಷನ್ ಕೈಗೊಳ್ಳುತ್ತೇನೆ ನೋಡಿ ಈ ಮನೆಯ ಸಾಮಾನಿಗೆ ಬೆಂಕಿ ಇಟ್ಟು ಒಂದೀತ' ತೆಗೆತೆಗೆದು ಗಗನಕ್ಕೆ ಏಸಾಡುತ್ತೇನೆ

ರಾಯರ ತಮ್ಮಲ್ಲಿನ ಕೊನೆಯ ಮಹಾ ಅಸ್ತ್ರ ಬಿಟ್ಟರು ಪೋಲಿಸರನ್ನು ಕರೆತರುತ್ತೇನೆ"

"ಓ ಪೋಲಿಸರನ್ನೆ ಬಹಳ ಒಳ್ಳೆಯದಾಯಿತು ಅವರು ಹಿಡಿಯುವುದು ನನ್ನನ್ನೆ ಅಲ್ಲ ನಿಮ್ಮನೆಂದು ನೋಡುವಿರಿ ಬಾವಿಗೆ ಹಾರಿ ಪ್ರಾಣ ಕಳಕೊಳ್ಳುತ್ತೇನೆ' ನೆರೆಕರೆಯ ಹೆಂಗಸರಿಂದ ನೀನೇ ಹೊಡೆದು ಬಾವಿಗೆ ದೂಡಿದಿರೆಂದು ಸಾಕ್ಷಿ ಹೇಳಿಸಿ ಜೇಲಿಗೆ ಕಳಿಸುತ್ತೇನೆ

ಆತ್ಮಹತ್ಯದ ನಿರ್ಧಾರ ತಮ್ಮಾಕೆ ನಿರ್ಧರಿಸಿದುದನ್ನು ಕಂಡು ರಾಯರಿಗೆ ದಿಗಿಲು ಬಿತ್ತು ಇನ್ನು ಗರಮಿನಲ್ಲಾಗದು ರಾಜಿಯಿಂದಲೇ ಸಮಜಾಯಿಸಬೇಕು ಎಂದು ಸವಿಮಾತುಗಳನ್ನಾಡತೊಡಗಿದರು

"ಬಾವಿಗೆ ಹಾರಿದರೆ ಹೇಗೆ? ನೀನು ನಮ್ಮಾಕೆಯಲ್ಲವೇ? ನನ್ನ ನಚ್ಚಿನವಳಲ್ಲವೇ? ಹೀಗೆ ಹಟ ಮಾಡಿದರೆ ಹೇಗೆ?

"ಅದೆಲ್ಲ ಬೇಡ ನಿಮ್ಮದು, ನಾನು ನಿಮ್ಮಾಕೆಯೂ ಅಹುದು ನಿಮ್ಮ ನಚ್ಚಿನವಳೂ ಅಹುದು ಆದರೆ ನಚ್ಚಿನವಳನ್ನು ಮೆಚ್ಚಿಸದೆ ಅವಳಿಗೆ ದುಃಖ ಕೊಡಬಾರದು. ಓಹೋ ಈಗ ಸಮಾಧಾನದಿಂದ ರಾಜಿ ಮಾಡಿಕೊಂಡು ಒಲೆಗೆ ಬೆಂಕಿ ಹಚ್ಚುವಂತೆ ಮಾಡಲು ಹವಣಿಸುತ್ತೀರಾ? ಇಲ್ಲ ಜವಾಬುದಾರಿ ಸರಕಾರ ಶರ್ತಗಳಿಗೆ ನೀವು ಒಪ್ಪದಿರೆಂದು ಸಹಿಮಾಡದೆ ಒಲೆಗೆ ಕಿಡಿ ಹಚ್ಚೆನು"

"ಹಾಗಾದರೆ ಇವತ್ತು ರಾತ್ರಿ ಅಡಿಗೆ ಮಾಡುವುದಿಲ್ಲ ಅಲ್ಲಾ?

"ಇವತ್ತೆಂದಲ್ಲ ಸರಕಾರ ನನ್ನ ಕೈಗೆ ಸಿಗುವ ವರೆಗೆ ಕೇಲ್ಲ ನನಗೂ ಉಪವಾಸ ನಿಮಗೂ ಉಪವಾಸ."

"ನಾನೇಕೆ ಉಪವಾಸ ಬೀಳುತ್ತೇನೆ ನನ್ನ ಮಿತ್ರ ರಾಮರಾಯರಲ್ಲಿಗೆ ಹೋಗುತ್ತೇನೆ"

"ಆಯಿತು ಯಾರ ಬೇಡ ಅಂದಿದ್ದಾರೆ ಹೋಗಿ ಈಗಲೇ ಹೋಗಿ ಹೇಳಿ ಊಟಕ್ಕಿದ್ದೀರಿ ದು ಅವರ ಅಕ್ಕಿ ಹಾಕಬೇಕಲ್ಲ""

"ಮತ್ತೆ ಹೊಗದೆ" ರಾಯರು ರಾಮರಾಯರಲ್ಲಿಗೆ ಹೋಗಲು ಕುರ್ಚಿಯಿಂದ ಎದ್ದರು

ಆದರೆ ಎಷ್ಟಂತೆಯೋ ಕೂತರು. ರಾಮರಾಯರೇ ಅಲ್ಲಿ ಬಂದಿದ್ದರು.

"ಕೃಷ್ಣರಾಯರೆ ಇವತ್ತು ನಾನು ನಿಮ್ಮಲ್ಲಿ ಊಟಕ್ಕಿದ್ದೇನೆ"

"ಅಂ, ಏನು ಊಟಕ್ಕೆ, ಏನು? ನಿಮ್ಮಾಕೆ ತವರಿಗೆ ಹೋದಳೋ"

"ತವರಲ್ಲ, ತಕರಾರು ಪ್ರಾರಂಭಿಸಿದ್ದಾಳೆ ಏನು ಪಿತ್ತ ನೆತ್ತಿಗೇರಿದೆ ಜವಾಬುದಾರಿ ಸರಕಾರ ಕೊಡಬೇಕಂತೆ"

"ಅಯ್ಯೋ ನಿಮ್ಮ ಅಷ್ಟು ಪಾಪದ ಹೆಂಡತಿಯೂ ಸಂಪು ಹೂಡಿದ್ದಾಳೋ ಹಾಗಾದರೆ ನಿಮಗೆ ವನವಾಸ ಪ್ರಾಪ್ತಿಯಾಯಿತು ಇಲ್ಲ, ಹಾಗಾದರೆ ಇವರೆಲ್ಲ ಸಂಘಟನೆಯಾಗಿದ್ದಾರೆ ನಮ್ಮ ಸೊಕ್ಕು ಮುರಿಯುತ್ತಾರೆ ಬನ್ನಿ ಕ್ಲಬ್ಬಿಗೆ ಹೋಗೋಣ ಆಲೋಚಿಸುವ"

"ಹೋಗಿ ಬನ್ನಿ ಕೊನೆಯ ಬಾರಿ ಕ್ಲಬ್ಬಿಗೆ"

॥ ೨ ॥

ಇಬ್ಬರು ರಾಯರುಗಳೂ ಕ್ಲಬ್ಬಿಗೆ ಓಡಿದರು ಅಲ್ಲಿ ಆಟವೇ ನಡೆಯುತಿದ್ದಿಲ್ಲ ಎಲ್ಲರೂ ಕೂತು ಏನನ್ನೋ ಆಲೋಚಿಸುತ್ತಿದ್ದರು ಇವರನ್ನು ನೋಡಿದೊಡನೆಯೇ "ಬಂದಿರಾ, ರಾಮ-ಕೃಷ್ಣ ರಾಯರೇ ನಿಮ್ಮಲ್ಲಿಯೂ ಸಂಪೋ"

"ಹೌದು"

"ಕೃಷ್ಣರಾಯರೇ ಹೇಳಿ ಏನಾದರೊಂದು ಆಲೋಚನೆ ಬದುಕಬೇಕಲ್ಲ ಅವರ ಬಾಯಿಂದ ಬೆದರಿಸಿದರಾಗದು ಬಾವಿಗೆ ಹಾರಿ ಈ ಕ್ಲಬ್ಬಿನವರಿಗೆಲ್ಲ ಕರಿನೀರು ಕುಡಿಸಿಯಾರು?

"ಆಲೋಚಿಸುವುದೇನು ಜವಾಬುದಾರಿ ಕೊಟ್ಟು ಬಿಡುವುದು ಇಲ್ಲದಿದ್ದರೆ ಇವತ್ತು ಇಪ್ಪತ್ತೈದು ತಾರೀಕು, ಇವತ್ತು ರಾತ್ರಿಯಿಂದ ಒಂದನೆ ತಾರೀಕು ಮೂರು ಗಂಟೆಗೆ ಸಂಬಳ ಕೈಗೆ ಸಿಗುವ ವರೆಗೆ ಉಪವಾಸ ಕೈಗೊಳ್ಳುವುದು ಹೇಗೆ? ಹೊಟೇಲಿಗೆ ಹೋಗಿ ಕಾಫಿ ಕುಡಿದು ಕ್ಲಬ್ಬಿನಲ್ಲಿ ಮಲಗಿ ಅವರ ಸೊಕ್ಕು ಮುರಿಯುವ ಎಂದರೆ ತಿಂಗಳ ಆಕೇರಿ ಕೈಯಲ್ಲಿ ಕಾಸಿಲ್ಲ, ಏನು ಮಾಡುವುದು""

"ಆಯಿತು ಬೇರೆ ಉಪಾಯವಿಲ್ಲ ಒಪ್ಪಿದರೆ ನಮ್ಮ ಅವಸ್ಥೆ ಹೇಳುವುದೇನು? ಕ್ಲಬ್ಬಿಗೆ ಕಾಲಿಡಬಾರದಂತಲ್ಲ ಕ್ಲಬ್ಬಿಗೆ ಬಾರದಿದ್ದರೆ ಸಂಜೆ ಮತ್ತು ಆಡಿತ್ಯವಾರಗಳನ್ನು ಹೇಗೆ ಕಳಿಯುವುದು" ಎಂದರು ರಾಮರಾಯರು

"ಕ್ಲಬ್ಬಿಗೆ ಕೂಗುತ್ತಾರಲ್ಲ ಇವರು ಜೀವ ಎಳೆಯ ಬಾರದಂತೆ ಬೀಡಿ ಇದಕ್ಕಿಂತ ಹೆಚ್ಚಿನ ಮತ್ತೊಂದು ಕಷ್ಟ ಸಂಕಟ ಇನ್ನೊಂದ ಉಂಟೋ?

"ಹೌದು ಬಾರಿ ಕಜತಿಗೆ ಒಂತಲ್ಲ ಮಹಾರಾಯ "ಉಪಾಯ ಯಾರಿಗೂ ತೋಚದು ಅಲ್ಲ"

ಕೃಷ್ಣರಾಯರ ತಿಕ್ಷ್ಣ ಬುದ್ಧಿಗೆ ಥಕ್ಕನೆ ಯುಕ್ತಿಯೊಂದು ಹೊಳೆಯಿತು "ಬೆಷ್ ಉಪಕಿದೆಪ ಎಂದು ಹಾರಿದರು ಅದೇನೆದು ಕೇಳಲು ಎಲ್ಲರೂ ಅವರನ್ನು ಸುತ್ತುಗಟ್ಟಿದರ

"ನೀವಿ ನಾಳಿನ ಒಂದನೆಯ ತಾರೀಕಿಗೆ ನಮ್ಮ ಮಿಲ್ಲಿನ ನೌಕರರಿಗೆಲ್ಲ ಹತ್ತು ಹತ್ತು ರೂಪಾಯಿ ಸಂಬಳ ಹೆಚ್ಚಿಸುತ್ತಾರೆಂದು ಪ್ರೊಪ್ರೈಟರರ ನೋಟೀಸು ನೋಡಿದಿರಲ್ಲ""

"ಹೌದು"

"ಆ ಹತ್ತು ರೂಪಾಯಿಗಳು ಏರಿದ ಸುದ್ದಿ ನಮ್ಮ ಹೆಂಡಿರಿಗೆ ತಿಳಿಸದೆ ನಮ್ಮ ಈಗಿನ ಸಂಬಳವನ್ನು ಮಾತ್ರವೇ ಅವರ ಕೈಯಲ್ಲಿ ಕೊಡುವುದು ಮತ್ತೆ ಬಚ್ಚಿಟ್ಟ ಆ ಹತ್ತು ರೂಪಾಯಿಗಳಿಂದ ಬೀಡಿ, ಸಿಗರೇಟು ಎಳೆಯುವುದು ಒಬ್ಬರ ಲೆಕ್ಕದಲ್ಲಿ ಇನ್ನೊಬ್ಬರಿಗೆ ಕಾಫಿ ಹಾಗೆ ಗುಟ್ಟಿನಲ್ಲಿ ಗಮ್ಮತ್ತು ಮಾಡುವ"

"ಬೇಷ್ ನಿಮ್ಮ ಆಲೋಚನೆ ಆದರೆ?"

"ಆದರೆ ಏನು?"

"ಬೀಡಿ ಗುಟ್ಟಿನಲ್ಲಿಯೇ ಎಳೆವ ಆದರೆ ಬಾಯಿಗೆ ವಾಸನೆ ಬರುತ್ತಲ್ಲ ಮಾರಿ?"

"ಓ ಅದಕ್ಕೋ, ಒಂದು ಉಪಾಯ ಉಂಟು ಎರಡೆರಡು ಏಲಕ್ಕಿ ಬಾಯಿಗೆ ಹಾಕಿ. ವಾಸನೆ ಎಲ್ಲಾ ಹೋಗುತ್ತದೆ.

(೮ನೆ ಪುಟಕ್ಕೆ ಮುಂದುವರಿದಿದೆ)



ತಂಪು, ಶುದ್ಧಿ, ಗುಣ ಮಾಡುವುದು—

೫೦ ವರ್ಷ ನಿಕ್ಕಿದ ಖ್ಯಾತಿ

ಜಾಂಬಕ್ ವನಸ್ಪತಿ ಮುಲಾಮು ಮುದ್ದಣ, ಕಜ್ಜಿ, ಕುರು, ಕಾಲು ಹುಣ್ಣು ಇತ್ಯಾದಿ ಎಲ್ಲಾ ಚರ್ಮ ಗಾಯ, ವ್ಯಾದಿಗಳ ಅತೀ ಯಶಸ್ವಿ ಮತ್ತು ತೀವ್ರ ಗುಣಕಾರಿ ಎಂದು ವಿಶ್ವ ಖ್ಯಾತಿ ಪಡೆದಿದೆ

ಜಾಂಬಕಿನೊಳಗಿನ ಪರಿಶುದ್ಧ ಎಣ್ಣೆಗಳು ಸುಲಭವಾಗಿ ಚರ್ಮ ರಂಧ್ರದೊಳಗೆ ಹೀರಲ್ಪಡುವವು ರೋಗಗ್ರಸ್ತ ಇಲ್ಲವೆ ಧಕ್ಕೆಗೊಂಡ ಚರ್ಮಾಣುಗಳನ್ನವು ಶುದ್ಧಮಾಡಿ ಅವುಗಳಲ್ಲಿನ ವಿಷ, ನೋವು, ಊದುವಿಕೆಗಳನ್ನು ಪರಿಹರಿಸುವುದು ಕೀವು ಆರಿ ಹೋಗಿ ಚರ್ಮವು ತ್ವರಿಯಾಗಿ ಗುಣ ಹೊಂದುವುದು

Zam-Buk

ವಿಶ್ವ ವಿಖ್ಯಾತ ವನಸ್ಪತಿ ಮಲಾಮು
ಖಂಡಿತ ಪ್ರಾಣಿ ಕೊಬ್ಬು ರಹಿತವಾದುದು

(ನೇ ಪುಟದಿಂದ)

"ಹೌದು ಯಾವಾಗಲೂ ಎಳ್ಳಿನ ವಾಸನೆ ಅವರಿಗೆ ಸೇರುವುದು ಎನ್ನರೆ?"

"ರಕ್ತ ಶುದ್ಧಿಗಾಗಿ ಎಳ್ಳುಂಡೆ ತಿನ್ನುವ ಅಭ್ಯಾಸ ಮಾಡಿದ್ದೇನೆ ಎಂದು ಹೇಳಬೇಕು"

"ಹಾಸು ಎಲ್ಲಿಂದ ಎಂದರೆ?"

"ಮನೆಯಲ್ಲಿ ಯಾವಾಗಲೂ ಎಳ್ಳುಂಡೆ ಮಾಡಿಯಿಡಬೇಕು ಎಂದು ಅವರಿಗೆ ಹೇಳುವುದು. ಅವರಿಂದ ಆಗಾಗ ತೆಗೆದುಕೊಂಡು ಬಾಯಿಗೆ ಹಾಕುವುದು. ಹೊರಗೆ ಹೀಗೆ ಬಾಯಲ್ಲಿ ಹಾಕಿಕೊಂಡು ವಾಸನೆ ಹೋಗಲಾಡಿಸುವುದು. ಹಾಗಾದರೆ ಗುಟ್ಟು ರಟ್ಟಾಗದು.

"ಬೇಷ್ ನಿಮ್ಮ ಆಲೋಚನೆ! ಬದುಕಿಸಿದಿರಿ. ಕೃಷ್ಣರಾಯ ಜಿಂದಾಬಾದ್" ಎಂದು ಕೂಗಿ ಎಲ್ಲರೂ ಜವಾಬುದಾರಿ ಸರಕಾರಕ್ಕೆ ಒಪ್ಪಿಗೆಯಿತ್ತು ಮನೆಗೆ ಓಡಿದರು.

॥ ೩ ॥

"ಆಯಿತು ಮಹಾರಾಯತಿ ಜವಾಬುದಾರಿ ನಿನಗೆ ಕೊಟ್ಟೆ"

"ಹಾ, ಹಾಗೆ ಬನ್ನಿ, ಹಾಕಿ ಇದಕ್ಕೆ ಸಹಿ."

"ಹಾಗಾದರೆ ಇನ್ನು ಬೀಡಿ ಎಳೆಯಬಾರದು?"

"ಆಡೀತು"

"ಕ್ಲಬ್ಬಿಗೆ ಕಾಲಿಡಬಾರದು?"

"ಒಂದು ವಹಾತಿದೆ. ಕ್ಲಬ್ಬಿಗೆ ಹೋಗದಿದ್ದರೆ ಮನೆಯಲ್ಲಿ ಕೂತು ಬೇಸರ ಕಳೆಯುವುದು ಹೇಗೆ?"

"ಬೇಸರ ಕಳೆಯಲು ಉಪಾಯ ಹುಡುಕಿದ್ದೇನೆ. ಆಫೀಸಿನಿಂದ ಬಂದ ಕೂಡಲೇ ಕಾಫಿ ಕುಡಿದು ನಂತರ ನನ್ನ ಜೊತೆಗೆ ವಾಕಿಂಗ್ ಹೋಗಿ ಬರಬೇಕು. ಆಗ ಬೇಸರವೆಲ್ಲ ಹೋಗುತ್ತದೆ."

"ಯಾವಾಗಲೂ, ಛೀ ನಾಚಿಕೆ!"

"ನಾಚಿಕೆ ಏನು? ಊರಿನ ಊರೇ ಹೋಗುತ್ತದೆ. ನೋಡುವಿರಿ!"

"ಆಯಿತು ಮಹಾರಾಯತಿ, ನೀನು ಹೇಳಿದಂತೆ." ಕೃಷ್ಣರಾಯರು ಸಹಿ ಹಾಕಿಯೂ ಆಯಿತು. ಹಸಿವು ಅವರನ್ನು ಬಹಳ ಬಾಧಿಸುತ್ತಿತ್ತು.

"ಇನ್ನು ಒಲೆಗೆ ಬೆಂಕಿ ಹಚ್ಚು"

"ಹಚ್ಚುತ್ತೇನೆ ಬನ್ನಿ. ನೋಡುವ, ಕಟ್ಟಿಗೆಯ ಕೋಣೆಯಿಂದ ಎರಡು ಕಟ್ಟಿಗೆ ತನ್ನಿ; ಒಂದು ಕೊಡ ನೀರೂ ತನ್ನಿ; ಈ ತರಕಾರಿಯನ್ನೂ ಹೆಚ್ಚಿ."

"ಇದು ಪ್ರಜಾ ಸರಕಾರವಲ್ಲ ಕಮ್ಯೂನಿಸಮ್!"

"ಹೌದು ನಿಮಿನಿಸಮೇ. ನಾನು ಮೈಮುರಿದು ಬೆವರು ಸುರಿಸಿ ಬೇಯಿಸಿದನ್ನು ನೀವು ಹಾಯಾಗಿ ಕೂತು ಉಣ್ಣುವುದಲ್ಲ. ನಾನು ಬೇಯಿಸಬೇಕಾದರೆ ನೀವು ಆಫೀಸಿನಲ್ಲಿ ದುಡಿಯಬೇಕು ಅಹುದು, ಅದಕ್ಕೆ ಬದಲು ನಾನು ಇಲ್ಲಿ ಮನೆ ಕಾಯುತ್ತೇನಲ್ಲ. ಆದುದರಿಂದ ಇಬ್ಬರೂ ಕೂಡಿ ಬೇಯಿಸುವ. ಇಬ್ಬರೂ ಕೂಡಿ ಉಣ್ಣುವ." ಆಫೀಸಿನ ರಾಯರು 'ಅಸಿಸ್ಟೆಂಟ್' ಅಡಿಗೆ ಭಟ್ಟರಾದರು.

॥ ೪ ॥

ಒಂದನೆಯ ತಾರೀಕು ಬಂತು. ಸಂಬಳ ಸಿಕ್ಕಿತು. ಅದನ್ನು ಹೆಂಡತಿಯ ಕೈಗೆ ಒಪ್ಪಿಸಬೇಕು. ಈ ತಿಂಗಳಿಗೆ ಹೆಚ್ಚಿದ ಹತ್ತು ರೂಪಾಯಿಗಳನ್ನು ಬೇರೆ ಕಿಸೆಯಲ್ಲಿ ಗುಟ್ಟಿನಿಂದ ಅಡಗಿಸಿಟ್ಟು ಮನೆಗೆ ಬಂದರು. "ತಕೋ ಮಹಾರಾಯತಿ ಸಂಬಳ." ಲೆಕ್ಕ ಮಾಡಿದಳು.

"ಇನ್ನು ಹತ್ತು ರೂಪಾಯಿ?"

"ಕೃಷ್ಣರಾಯರ ಹೃದಯದಲ್ಲಿ ಬಾಂಬು ಸಿಡಿದಂತಾಯಿತು. ಹತ್ತು ರೂಪಾಯಿ ಇನ್ನೆಲ್ಲಿಂದ?"

"ಈ ತಿಂಗಳು ಹೆಚ್ಚಾದ ಸಂಬಳ."

"ಯಾರು ಹೇಳುತ್ತಾರೆ ನಮಗೆ ಸಂಬಳ ಹೆಚ್ಚಾಗಿದೆ ಎಂದು?"

"'ಗೃಹಿಣಿ' ಸಂಘದ ಅಧ್ಯಕ್ಷರು ನಿಮ್ಮ ಬಿಲ್ಲಿನ ಮಾಲಿಕರ ಹೆಂಡತಿ." ದಸಕ್ ಆಯಿತು ಕೃಷ್ಣರಾಯರ ಎದೆಯಲ್ಲಿ. ಕಣ್ಣಿಗೆ ಕತ್ತಲೆ ಕಟ್ಟಿದಂತಾಯಿತು. ಅಲ್ಲಿ ಇದ್ದ ಕುರ್ಚಿಯ ಮೇಲೆ ಒರಗಿದರು.

"ಹುಂ, ಕೊಡಿ ಆ ಹತ್ತು ರೂಪಾಯಿಗಳನ್ನು. ನನಗೆ ಗೊತ್ತು. ನೀವು ಬೀಡಿ ಎಳೆಯಲು ಅವುಗಳನ್ನು ಅಡಗಿಸಿದಿರೆಂದು."

"ಇಲ್ಲ ಮಹಾರಾಯತಿ. ನಾನು ಬೀಡಿ ಎಳೆಯದಿದ್ದರೆ ಬದುಕೆನು."

"ಏಕೆ ಬದುಕಲಿಕ್ಕಿಲ್ಲ. ಬದುಕುವುದಕ್ಕಿಂತ ನಾಲ್ಕು ವರ್ಷ ಹೆಚ್ಚೆ ಬದುಕುತ್ತೀರಿ. ನೀವು ಬೀಡಿ ಎಳೆದು ದೇಹವನ್ನು ಹಣವನ್ನು ದುಂದು ವ್ಯಯ ಮಾಡುತ್ತೀರಿ. ಈ ಹತ್ತು ರೂಪಾಯಿಗಳಿಂದಲೇ ನಾನೊಂದು ಇನ್ಶೂರು ತೆಗೆಯುತ್ತೇನೆ." ಪಾಪ, ಕೃಷ್ಣರಾಯರಿಗೆ ಅವುಗಳನ್ನು ಕೊಡಲು ಕೈಗಳು ಹೇಗೆ ಬಂದಾವು. ಆದರೂ ಕೊಡಬೇಕಾಗಿದೆ. ದೀನ ದೃಷ್ಟಿಯನ್ನು ಅವುಗಳ ಮೇಲೆ ಬೀರಿ, ಹೆಂಡತಿಯ ಕೈಗೆ ಕೊಟ್ಟರು.

ಈಗ ಹೊಳೆಯಿತು ಕೃಷ್ಣರಾಯರಿಗೆ. ಎಂಟು ದಿವಸಗಳಿಂದಲೂ ಲಾರ್ಡ್ಸ್ ಕ್ಲಬ್ಬಿಗೆ ಬೀಗ ಬಿದ್ದಿತ್ತು. ಏನು ಎಂದು ಕಾಮನ್ಸ್ ಕ್ಲಬ್ಬಿನವರೆಲ್ಲ ಆಲೋಚಿಸುತ್ತಿದ್ದುದನ್ನು ಅವರು ಕಂಡಿದ್ದರು. ತನ್ನ ಬಿಲ್ಲಿನ ಮಾಲಿಕರು ಹೆಂಡತಿ ಮಕ್ಕಳನ್ನು ಮೋಟಾರಿನಲ್ಲಿ ತುಂಬಿಸಿ ಬೀದಿ ಬೀದಿಗಳಲ್ಲಿ ಓಡಾಡುತ್ತಿದ್ದರು. ಹಾಗಾದರೆ ತನಗಿಂತ ಮೊದಲೇ ಅವರು ಹೆಂಡತಿಯ ಬೆದರಿಕೆಗೆ ಬೆದರಿ ಸಂಪೂರ್ಣ ಜವಾಬುದಾರಿ ಕೊಟ್ಟರೆಂದು.

॥ ೫ ॥

ಹೋದರೆ ಆಫೀಸಿಗೆ. ಬಂದರೆ ಮನೆಗೆ. ಮತ್ತೆ ಹೆಂಡತಿಯ ಜೊತೆಗೆ ವಾಕಿಂಗ್. ಈಗ ಕೃಷ್ಣರಾಯರು ತಮ್ಮಾಕೆ ಜೊತೆಗೆ ವಾಕಿಂಗಿಗೆ ಹೋಗುವಾಗ ತಮ್ಮ ಕ್ಲಬ್ಬಿನ ಕಡೆಗೆ ದೈನ್ಯ ದೃಷ್ಟಿಯನ್ನು ಬೀರುವುದುಂಟು. ಅಲ್ಲಾರಿದ್ದಾರೆ ಸಂಸಾರಿಗಳೊಬ್ಬರೂ ಇಲ್ಲ. ನಾಲ್ಕು ಬ್ರಹ್ಮಚಾರಿಗಳು ಕೂತು ಆಡುತ್ತಾರೆ. ತಮ್ಮ ಮಿತ್ರರಾದ ಸಂಸಾರಿಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ತಮ್ಮ ಹೆಂಡಿರಿಗೆ ದಾಸಾನುದಾಸರಾದ ಪರಿವರ್ತನೆ ಅವರ ಬ್ರಹ್ಮಚರ್ಯದಲ್ಲಿ ಜಾಗ್ರತಿ ಉಂಟುಮಾಡಿದೆ. "ನೋಡಬೇಕು ಇವರ ಬ್ರಹ್ಮಚರ್ಯ. ಎಷ್ಟರ ವರೆಗೆ ಪಾಲಿಸುತ್ತಾರೆ" ಎಂದು ಕೃಷ್ಣರಾಯರು ಆಗಾಗ ಮನಸ್ಸಿನಲ್ಲೇ ಹೇಳುವುದುಂಟು.

++ ++ ++

ಸ್ವದೇಶ ವಾರ್ತೆ

★ ಹೈದರಾಬಾದಿನ ಚಳವಳಿವೂ ಸಾಗುತ್ತಲೇ ಇದೆ. ಕೆಲವು ದಿವಸಗಳ ಹಿಂದೆ ದಿವಾಣರಾದ ಚಟ್ಟಾರಿ ನವಾಬರು "ಹೈದರಾಬಾದು ಸ್ವತಂತ್ರವಾಗಿಯೇ ಉಳಿಯುವುದು" ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿರುವರು. ಮಧ್ಯ ಪ್ರಾಂತದಿಂದ ಈ ಸಂಸ್ಥಾನಕ್ಕೆ ಬರುತ್ತಿದ್ದ ಮುಸ್ಲಿ ನಿರಾಶ್ರಿತ ಹರಿವು ಈಗ ನಿಂತಿದೆ. ಮಧ್ಯ ಪ್ರಾಂತ್ಯದ ಸರಕಾರ ನಾಗಪ್ಪುರದಲ್ಲಿ ಶಾಂತಿ ಚಟುವಟಿಕೆಗಳನ್ನು ಕೈಕೊಂಡು ಅಲ್ಪ ಸಂಖ್ಯಾಕರಲ್ಲಿ ಭರವಸೆಯನ್ನುಂಟುಮಾಡಿದೆ.

★ ಮಹಾತ್ಮರ ಸಸ್ಸಿಧಾನದಿಂದಲೂ, ಡಿಲ್ಲಿ ಪ್ರಮುಖರ ಮತ್ತು ಮಂತ್ರಿಗಳ ಪ್ರತ್ಯಕ್ಷ ಶ್ರಮದಿಂದಲೂ ಆ ನಗರವು ಶಾಂತ ಸ್ಥಿತಿಗೆ ಬಂದಿದೆ. ಆದರೂ ಪಾಕಿಸ್ತಾನಕ್ಕೆ ಕಳುಹಲ್ಪಡಲಿರುವ ಲಕ್ಷಾಂತರ ಮುಸ್ಲಿಮರು ಅಲ್ಲಿದ್ದಾರೆ.

★ ಗಡಿನಾಡು, ಬಲೂಚಿಸ್ತಾನ ಮತ್ತು ಪಶ್ಚಿಮ ಪಂಜಾಬುಗಳಲ್ಲಿನ ಮುಸ್ಲಿಮೇತರ ಅಲ್ಪ ಸಂಖ್ಯಾಕರು ಗಂಡಾಂತರದಲ್ಲಿರುವರೆಂದು ಗಡಿನಾಡಿನ ಸರಕಾರಿ ಹುದ್ದೆಯಿಂದ ನಿವೃತ್ತರಾಗಿ ಬಂದಿರುವ ಒರ್ವ ಹಿಂದೂ ಅಧಿಕಾರಿಗಳು ತಿಳಿಸುತ್ತಾರೆ. ಪಶ್ಚಿಮ ಪಂಜಾಬದ ಕಾಂಗ್ರೆಸ್ ದುರೀಣರು 'ಸ್ಥಳಾಂತರದ' ಕಾರ್ಯ ಶೀಘ್ರವಾಗಿ ಸಾಗದಿದ್ದರೆ ಹಿಂದೂ ಸಿಖರು ನಾಶಪಡಲಾಗುವರೆಂದು ಪ್ರಕಟಣೆ ಹೊರಡಿಸಿದ್ದಾರೆ.

★ "ಭಾರತದಲ್ಲಿರ ಬಯಸುವ ಮುಸ್ಲಿಮರು ಅಲ್ಲಿನ ಸರಕಾರಗಳಿಗೆ ವಿಧೇಯರಾಗಿರಬೇಕು." ಎಂದು ಹೊಂಬಾಯಿಯ ಮುಸ್ಲಿಮ್ ಲೀಗಿನ ಪಾರ್ಲಿಮೆಂಟರಿ ಕಾರ್ಯಕಾರಿ ಸಮಿತಿಯ ಸದಸ್ಯರು ಪ್ರಕಟಿಸಿದ್ದಾರೆ. "ಪಾಕಿಸ್ತಾನದಲ್ಲಿ ಹೃತ್ಪೂರ್ವಕವೂ ಶ್ರದ್ಧೆಯಿಂದಲೂ ಕೆಲಸ ಮಾಡುವವರಿಲ್ಲದಿದ್ದುದರಿಂದಲೇ ಅಲ್ಲಿ ಅಷ್ಟೊಂದು ಗಲಾಟೆಯಾಗಲು ಕಾರಣ"ವೆಂದವರ ಅಭಿಪ್ರಾಯ.

★ ತಾನು ಅಧಿಕಾರದಲ್ಲಿರುವ ವರೆಗೆ ಭಾರತದಲ್ಲಿ ಹಿಂದೂಗಳದೇ ಆದ ಏಕ ಮತೀಯರ ರಾಜ್ಯ ಸ್ಥಾಪನೆ ಮಾಡಲು ಬಿಡುವುದಿಲ್ಲವೆಂದು ಪಂಡಿತ್ ಜವಾಹರಲಾಲ್ ನೆಹರು ಅವರು ಒಂದು ಭಾಷಣದಲ್ಲಿ ತಿಳಿಸಿದರು.

★ ಪಾಕಿಸ್ತಾನ ಹಿಂದೂಸ್ಥಾನದೊಳಗೆ ಯುದ್ಧವಾಗುವುದರ ಕುರಿತು ಮಾತನಾಡುತ್ತ ಪಂಡಿತ್ ನೆಹರುರವರು 'ಪಾಕಿಸ್ತಾನ ಈಗ ಅಷ್ಟು ಬಲಾಢ್ಯವಿಲ್ಲವೆಂದೂ ಒಂದು ವೇಳೆ ಆ ಯುದ್ಧವಾದರೆ ಪಾಕಿಸ್ತಾನವು ಸಂಪೂರ್ಣ ನಾಶವಾಗುವುದೆಂದೂ, ಅದೇ ಸಮಯಕ್ಕೆ ಹಿಂದೂಸ್ತಾನವು ಕೂಡ ಅನೈಕ್ಯ ಒಳ ಕಚ್ಚಾಟಗಳಿಂದ ಜರ್ಝರಿತವಾಗಿ ನಿರ್ಬಲವಾಗುವುದೆಂದೂ ಅವರು ತಿಳಿಸಿದರು.

★ ಪಾಕಿಸ್ತಾನ ಮತ್ತು ಭಾರತಗಳಲ್ಲಿರುವ ಅಲ್ಪ ಸಂಖ್ಯಾಕರನ್ನು ರಕ್ಷಿಸುವ ಒಂದು ಯೋಜನೆಯನ್ನು ಸುಹೃರ್ವರ್ದಿಯವರು ತಯಾರಿಸಿರುವರು. ಇದಕ್ಕೆ ಗಾಂಧಿ ಜಿನ್ನಾರವರ ಸಮ್ಮತಿಯನ್ನು ಪಡೆಯಲವರು ಯತ್ನಿಸುವರು. ಎರಡೂ ಡೊಮಿನಿಯನ್ನುಗಳ ಸರಕಾರದವರು ಕೆಲವೊಂದು ವಿಶೇಷ ಹಕ್ಕು ಭಾದ್ಯತೆಗಳನ್ನು ಕೊಡುವುದರ ಮೂಲಕ ಅಲ್ಪ ಸಂಖ್ಯಾಕರನ್ನು ಸುಭದ್ರವಾಗಿಡುವಮಾಡುವ ಈ ಯೋಜನೆಯ ಸಾರಾಂಶವೆಂದೆನ್ನಲಾಗಿದೆ.

★ ನ್ಯಾಸ್‌ರಾಯ್ ವೇವಲ್ಲರು ಸ್ಥಾಪಿಸಿದ ಮೊದಲ ತಾತ್ಕಾಲಿಕ ಸರಕಾರದಲ್ಲಿ ಮಂತ್ರಿಗಳಾಗಿದ್ದ ಸಯ್ಯದ್ ಅಲಿ ಜಾಹೀರರನ್ನು ಇರಾನದ ಭಾರತ ರಾಯಭಾರಿಗಳಾಗಿ ನೇಮಿಸಲಾಗಿದೆ.

★ ಸರ್ದಾರ್ ಪಟೇಲರ ಮನವಿಯನ್ನು ಮನ್ನಿಸಿ ಅಮೃತ ಸರದ ಸಿಕ್ಕರು ತಮ್ಮ ಪ್ರದೇಶದಿಂದ ಹಾದು ಹೋಗುವ ಮುಸಲ್ಮಾನ್ ನಿರಾಶ್ರಿತರಿಗೆ ಭದ್ರತೆಯ ಆಶ್ವಾಸನವನ್ನು ಕೊಟ್ಟಿರುವರು. ಈಚೆಗೆ ಆ ಕಡೆಯಲ್ಲಿ ನಿರಾಶ್ರಿತರ ಮೇಲಿನ ದಾಳಿಗಳಾಗುತ್ತಿಲ್ಲ.

CANARA BANK, LIMITED.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು, ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು.)

(ಸ್ಥಾಪಿತ: ೧೯೦೬.)

ಹೆಡ್ ಆಫೀಸು: ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು: 75 ಎಪ್ಲೊಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು:—

ಮದರಾಸು ಪ್ರಾಂತ್ಯ: ಮಂಗಳೂರು-ಸಿಟಿ. ಮಂಗಳೂರು-ಬಂದರ್. ಮುಲ್ಕಿ. ಗಂಗೊಳ್ಳಿ. ಕುಂದಾಪುರ. ಉಡುಪಿ. ಕಾರ್ಕಳ. ಬಂಟ್ವಾಳ. ಪುತ್ತೂರು. ಕಾಸರಗೋಡು. ಮದರಾಸು. ಪಯ್ಯನ್ನೂರು. ಕಲ್ಲಿಕೋಟೆ. ಕನ್ನಾನ್ನೂರು. ಕೊಯಮುತ್ತೂರು. ತಿರುಚಿನಾಪಳ್ಳಿ. ತುತುಕುಡಿ. ಸೆಲಂ. ಇರೋಡ್.

ಹೈದರಾಬಾದ್ ಸಂಸ್ಥಾನ: ಸೆಕುಂದರಾಬಾದು.

ತಿರುವಾಂಕುರು ಸಂಸ್ಥಾನ: ಅಲ್ಲೆಪ್ಪಿ. ಕ್ವಿಲೋನ್.

ಮಧ್ಯ ಪ್ರಾಂತ್ಯ: ನಾಗಪುರ. ಅಕೋಲಾ. ಅಮರಾವತಿ.

ಮುಂಬೈ ಪ್ರಾಂತ್ಯ: ಬೆಳಗಾಂವ್. ದಾರವಾಡ. ಹುಬ್ಬಳ್ಳಿ. ಶೋಲಾಪುರ. ಪೂಣೆ. ಮುಂಬೈ-ಫೋರ್ಟ್. ಮುಂಬೈ-ಮಾಂಡ್ವಿ. ಮುಂಬೈ-ಕಾಲ್ಬಾದೇವಿ. ಮುಂಬೈ-ಗಿರ್‌ಗಾಂವ್. ಮುಂಬೈ-ಕಲ್ಯಾಣ.

ಮೈಸೂರು ಸಂಸ್ಥಾನ: ಮೈಸೂರು. ಶಿವಮೊಗ್ಗ. ಚಿಕ್ಕಮಗಳೂರು. ಬೆಂಗಳೂರು ಸಿಟಿ. ಅರಸಿಕೆರೆ. ದಾವಣಗೆರೆ.

ಸಿಂದ್ ಪ್ರಾಂತ್ಯ: ಕರಾಚಿ.

ಕೊಚ್ಚಿ ಸಂಸ್ಥಾನ: ಕೊಚ್ಚಿ. ಎರ್ನಾಕುಲಾಮ್.

NOTICE

In the Court of the District Munsiff of Kasaragod

O. S. No. 233/47.

The Manjeshwar Sri Madanantheshwar Temple by its Executive Officer, Sri K. Padmanabha Kamath. — Plaintiff

and

Badaje Shri Machampadi Jamath Mosque, by its Moktessors Mammunhi Beary and another. — Defendant

Take notice that the above suit filed by Plaintiff for the relief claimed in the plaint is posted to 27-10-1947 for notice to 1st Defendant.

Kasaragod 12-10-47. — K. Devadas Shenoi, Vakil for Plaintiff.

ಪ್ರಪಂಚ ಪರಿಚಯ

ಮುಂದಿನ ಯುದ್ಧ ಹೇಗೆ?

ದೊಡ್ಡದಾದೊಂದು ಕಾರ್ಮೋಡದಂತೆ ಮುಂದಿನ ಯುದ್ಧದ ಕತ್ತಲ ಛಾಯೆಯು ಜಗತ್ತನ್ನು ಮುತ್ತುತ್ತಿದೆ. ಅಮೇರಿಕದ ಪ್ರಜೆಗಳೂ ಪತ್ರಿಕೆಗಳೂ ಅದರ ಕುರಿತು ಈಗಲೇ ಗುಡುಗುಡಿಸಹತ್ತಿವೆ. ಯುರೋಪಿನಲ್ಲಿ ಆ ಕುರಿತು ಮೌನವನ್ನೇ ತಾಳಲಾಗಿದೆ; ಕಾರಣ ಅಲ್ಲಿನ ಜನರು ಯುದ್ಧ ಯೋಚನೆಯನ್ನೇ ತಮ್ಮ ಮನಸ್ಸಿನಿಂದ ತೊಡೆದು ಹಾಕಲು ಪ್ರಯತ್ನಿಸುತ್ತಿರುವರು. ಒಂದು ವೇಳೆ ಯುದ್ಧವಾದರೆ ಪಶ್ಚಿಮ ಯುರೋಪಿಗೆ ಪುನಃ ಗಂಡಾಂತರವೊದಗುವುದು ಖಂಡಿತವೆಂದೂ, ಮತ್ತೆ ಈ ಸಲವೂ ಹಾಗಾದರೆ ಚೇತರಿಸಿಕೊಳ್ಳುವುದು ಅಸಾಧ್ಯವೆಂದೂ ಅವರ ಭಾವನೆ.

ಇಷ್ಟಾದರೂ ಯುರೋಪಿನ ಜನತೆಗೆ ಇನ್ನೊಂದು ಯುದ್ಧವು ಅನಿವಾರ್ಯವೆಂದು ಖಚಿತವಾಗಿದೆ. ಬ್ರಿಟನಿನ ಮಟ್ಟಿಗೆ ಹೊರನೋಟಕ್ಕೆ ನೆಮ್ಮದಿಯೂ ಜನರಲ್ಲಿ ಆಶಾದಾಯಕ ಭಾವನೆಯೂ ಕಂಡುಬರುತ್ತದೆ.

ಬ್ರಿಟಿಷ್ ಜನತೆ ಶಾಂತಿ ಬಯಸುತ್ತಿರುವುದೊಂದು ಸಲ್ಲಕ್ಷಣ. ಯುದ್ಧಗಳಿಗೆ ಕಾರಣವಾಗುವ ಭಾವೋದ್ರೇಕಕ್ಕೆ ಅವರು ಆಸ್ಪದ ಕೊಡದೆ ಪ್ರಶಾಂತ ಚಿತ್ತದಿಂದಿರುವರು. ಆದರೆ ಇಲ್ಲಿಯ ಜನರು ನಿಜ ಸ್ಥಿತಿಗಳನ್ನೆದುರಿಸಲು ಇಷ್ಟಪಡದುದರಿಂದುಂಟಾದ ಈ ಶಾಂತತಾಭಾವವು ಒಂದು ದೃಷ್ಟಿಯಿಂದ ಅಪಾಯಕಾರಕವೇ ಆಗಿದೆ.

ಅನಿವಾರ್ಯ

ಬ್ರಿಟಿಷ್ ಜನತೆಯದು ಯಾವಾಗಲೂ ಉಷ್ಟ್ರಪಕ್ಷಿಯ ಧೋರಣ (ಆ ಪಕ್ಷಿ ಶತ್ರುಗಳು ಓಡಿಸಿಕೊಂಡು ಬಂದಾಗ ಮರಳಿನಲ್ಲಿ ತಲೆ ಹೂತುಕೊಂಡು ತನಗೆ ಯಾರೂ ಕಾಣುವುದಿಲ್ಲವಾದುದರಿಂದ ತಾನೂ ಯಾರಿಗೂ ಕಾಣಿಸುವುದಿಲ್ಲವೆಂಬ ತಪ್ಪು ಕಲ್ಪನೆ ಮಾಡುತ್ತದೆಯಂತೆ) 1919ರಿಂದ 1938ರ ತನಕದ ಅವಧಿಯ ಗಂಡಾಂತರಗಳನ್ನೆಲ್ಲ ಬ್ರಿಟನ್ನು ನಿವಾರಿಸಿಕೊಂಡಿತು. ವಿಜಯಿಗಳಾಗಿದ್ದರೂ ಇಂದದು ಯುದ್ಧಕಾಲದ ಲಕ್ಷ್ಮಿ ಮತ್ತದರ ಮುಂಚೆಯೂ ವಹಿಸಿದ ಅಂಥ ಧೋರಣೆಯ ದುಷ್ಪರಿಣಾಮವನ್ನುಣ್ಣುತ್ತಿದೆ. ಅವರು ಹೊಂದಿದ ಜಯವು ಚಿರಶಾಂತಿಯ ಲಕ್ಷಣಗಳುಳ್ಳದಾಗಿಲ್ಲ.

ಮುಂದಿನ ಯುದ್ಧದಲ್ಲಿ ಏನೆಲ್ಲ ಸಂಭವಿಸಬಹುದೆಂಬುದರ ಕುರಿತು ಅನೇಕರು ಅನೇಕ ರೀತಿಯ ಅಭಿಪ್ರಾಯಗಳನ್ನು ಮಾಡಿಕೊಳ್ಳುವುದಾದರೂ, ಅದು ಖಂಡಿತವಾಗಿ ಹೆಚ್ಚು ವಿಘಾತುಕವಾದುದೆಂಬುದರ ಕುರಿತು ಎರಡಭಿಪ್ರಾಯಗಳಿಲ್ಲ. ಆದುದರಿಂದ ಈ ಪ್ರಶ್ನೆಯನ್ನು ಅಲಕ್ಷ್ಯ ಮಾಡಲಾಗದು—ಮುಂದಿನ ಯುದ್ಧವನ್ನು ತಡೆಯಲಿಕ್ಕಾಗಲಿ ಇಲ್ಲವೆ ಅದನ್ನು ಗೆಲ್ಲಲಿಕ್ಕಾಗಲಿ ಪೂರ್ವ ಯೋಚನೆ, ಯೋಜನೆಗಳು ಅತ್ಯಾವಶ್ಯಕ. ಉಷ್ಟ್ರಪಕ್ಷಿ ಧೋರಣವು ಆತ್ಮಹತ್ಯೆಯದ್ದು.

ಮುಂದಿನ ಯುದ್ಧದಲ್ಲಿ ಹೆದರಬೇಕಾದ ಒಂದೇ ಅಸ್ತ್ರವೆಂದರೆ ಅಣುಬೊಂಬು ಎಂದು ಸಾರ್ವಜನಿಕರ ಅಭಿಪ್ರಾಯ. ಇದರೆದುರು ಯಾವ ರಕ್ಷಣೆಯೂ ಸಾಧ್ಯವಿಲ್ಲವೆಂದೂ ನಂಬಲಾಗಿದೆ. ಇನ್ನುಳಿದ ಒಂದು ದಾರಿಯೆಂದರೆ ವಿಧಿ ಮಾಟದ ಮೇಲೆ ಭಾರ ಹಾಕುವುದು. ಇಂತಹ ವಿಧಿ ವಿಶ್ವಾಸದಿಂದ ನಮ್ಮಲ್ಲಿ ಖೇದಾಸ್ಪದವಾದ ನಿಷ್ಕ್ರಿಯೆಯುಂಟಾಗುವುದು.

ಸಂದರ್ಭ ವೈಶಿಷ್ಟ್ಯ

ಅಣುಬೊಂಬಿನ ಕುರಿತು ಈಗಿನ ಸೈನಿಕ ವರ್ಗವೂ ತುಂಬಾ ಕಳವಳ ಪಡುತ್ತಿದೆ. ತಮ್ಮದು ಹಳೆ ವಿಧಾನವೆಂದವರ ವಿಶ್ವಾಸ. ಆದರೂ ಹಿರೋಶಿಮಾ ಪ್ರಕರಣದ ಮೊದಲು ತಾವು ಹೇಗಿದ್ದರೋ ಅದೇ ರೀತಿಯ ಸಿದ್ಧತೆಯನ್ನು ಮಾಡಿಕೊಳ್ಳಲು ಅವರು ಪ್ರಯತ್ನಿಸುತ್ತಾರೆ.

ಈ ಹೊಸ ಬೊಂಬು ಶಕ್ತಿಯ ಭೀಕರತೆಯಿಂದೆದುರಿಸಿದವರಾಗಿ ಸೈನ್ಯ ಮುಖಂಡರು ವಿಶಾಲ ಪರಿಮಾಣದಲ್ಲಿ ಸೈನ್ಯ ಶಸ್ತ್ರಾಸ್ತ್ರ, ಒಯ್ಯುವಿಕೆಯ ಸಾಧನಗಳನ್ನುಪಯೋಗಿಸಿ ಶತ್ರುಗಳನ್ನು ಮುತ್ತಿ ಅವರ ಒಳಯಿರುವ ಅಣುಬೊಂಬುಗಳನ್ನು ಕಿತ್ತುಕೊಳ್ಳುವದೊಂದೇ ಯೋಚನೆಯಲ್ಲಿದ್ದಾರೆ. ತಮ್ಮ ಹಳೇ ಸಮರ ನೀತಿಯಾದ 'ಮೊದಲು ದಾಳಿಮಾಡುವುದೇ ಉತ್ತಮ ರಕ್ಷಣೋಪಾಯ'ವೆಂಬುದನ್ನು ಈಗಲೂ ಅಕ್ಷರಶಃ ಅನುಸರಿಸಿ ಪ್ರಯತ್ನಿಸುತ್ತಿರುವರು. [illegible] ಆದರೆ ಮುಂದಿನ ಯುದ್ಧದಲ್ಲಿ [illegible] ಕಲ್ಪಿಸುವುದಿಲ್ಲ. [illegible] ಕಾಣಿಸುತ್ತವೆ.

ಇಂದು ಸಾಮಾನ್ಯ ನಾಗರೀಕನೊಬ್ಬನು ಕೂಡ ಅಣುಶಕ್ತಿಯ ಎದುರು ನಮ್ಮ [illegible] ಸೈನ್ಯ ಸಿದ್ಧತೆಗಳೆಲ್ಲ ಮಕ್ಕಳಾಟವೆಂದು ತಿಳಿದಿರುವನು. ಅವನು ಕೇಳುವ ಪ್ರಶ್ನೆಯೆಂದರೆ:

- "ಅಣು ಬೊಂಬಿಗೆ ನಗರಗಳೇ ಏಕೆ ಜನಾಂಗಗಳೂ ನಿರ್ನಾಮವಾಗದೆ ಉಳಿದಾವೆ?"
- "ವಿಜಯಿಗಳಾರೆಂದು ಇತ್ಯರ್ಥಿಸಲು ಎಷ್ಟು ಅಣುಬೊಂಬುಗಳು ಬೇಕಾದಾವು?"
- "ಇಂತಹ ಯುದ್ಧದಲ್ಲಿ ವಿಜಯಿಗಳಾದರೆ ಸಾರ್ಥಕವೇನಾದರಿದೆಯೆ?"
- "ಖಂಡಿತವಾಗಿಯೂ ಅಣುಬೊಂಬುಗಳುಪಯೋಗಿಸಲ್ಪಡುವವೆ?"
- "ಈ ದುರಿತವನ್ನು ಇಲ್ಲದಾಗಿ ಮಾಡುವ ಯಾವದಾದರೊಂದುಪಾಯವಿದೆಯೆ?"
- "ಮುಂದಿನ ಯುದ್ಧದಲ್ಲಿ ಸೈನ್ಯಗಳು ನೌಕಾಬಲವೂ ಗಣನೀಯವಾಗಬಲ್ಲವೆ?"

ಈ ಪ್ರಶ್ನೆಗಳಿಗೆಲ್ಲ ಒಂದೇ ವಾಕ್ಯದ ಉತ್ತರವನ್ನು ಹೇಳಬಹುದು "ಇದೆಲ್ಲವೂ ಸಂದರ್ಭಗಳ ಮೇಲೆ ಹೊಂದಿಕೊಂಡಿದೆ" ಇದೇನೂ ಅಷ್ಟೊಂದು ಅಸ್ಪಷ್ಟ ಉತ್ತರವಲ್ಲ.

ಅಣುಬೊಂಬುಗಳ ಶಕ್ತಿ

ಬೆಲ್ಜಿಯಂ ಇಲ್ಲವೆ ಹೊಲೆಂಡಿನಂತಹ ಚಿಕ್ಕ ರಾಷ್ಟ್ರವು ಅಣುಬೊಂಬಿನ ರಾಷ್ಟ್ರವೊಂದನ್ನೆದುರಿಸುವಾಗ ಅದರ ಸೈನ್ಯ ಬಲವು ನಿಷ್ಪ್ರಯೋಜಕ. ಎರಡು ಇಲ್ಲವೆ ಮೂರು ಅಣುಬೊಂಬುಗಳಲ್ಲಿ ಅವುಗಳ ವಿಧಿಯು ಇತ್ಯರ್ಥವಾಗುವುದು. ಆದರೆ ರಶ್ಯದಂತಹ ವಿಶಾಲ ದೇಶಕ್ಕೆ ನೂರು ಅಣುಬೊಂಬುಗಳೂ ಸಾಕಾಗವು. ಚೀನವನ್ನು ಸೋಲಿಸಲು ಇನ್ನು ಕಷ್ಟವಾಗಬಹುದು.

ಹೆಚ್ಚು ಯಂತ್ರ ಕೈಗಾರಿಕೆಯುಳ್ಳ ದೇಶಕ್ಕೆ ಬದುಕಿಕೊಳ್ಳುವ ಹೆಚ್ಚು ಸಂದರ್ಭಗಳಿವೆ. ಅದೇ ಸಮಯಕ್ಕೆ ಹಾನಿಯ, ಅನಾನುಕೂಲವೂ ಹೆಚ್ಚು. ಕಾರಣ ಕೈಗಾರಿಕೆ ಕೇಂದ್ರಗಳನ್ನು ಪುಡಿಗೈಯುವುದು ಹೆಚ್ಚು ಸುಲಭ. ಪ್ರಕೃತಿಯಲ್ಲಿ ಕೂಡ ಹೆಚ್ಚು ಇಂದ್ರಿಯೋಪಕರಣವಿದ್ದ ವಸ್ತುವಿನ ಉಪಕರಣಗಳು ಹೆಚ್ಚು ಸೂಕ್ಷ್ಮವಾಗಿವೆ. ಅತೀ ಚಿಕ್ಕ ಘಾತದಿಂದವು ಹಾಳಾಗುವವು.

ಯುದ್ಧದ ಮೂರು ದಾರಿಗಳು

ಇಂದಿನ ವಿಶ್ವ [illegible]ದಲ್ಲಿ ಮೂರು ಗಂಭೀರ ಗಂಡಾಂತರಗಳು ತೋರುತ್ತವೆ.

ಮೊದಲನೇದಾಗಿ ಸಂಯುಕ್ತ ಅಮೇರಿಕಾ ಮತ್ತು ರಶ್ಯಗಳೊಳಗಾಗಬಹುದಾದ ನೇರವಾದ ಘರ್ಷಣೆ.

ಎರಡನೆಯದಾಗಿ ಅಮೇರಿಕನ್ ಪ್ರಭಾವದೊಳಗಿದ್ದೊಂದು ರಾಷ್ಟ್ರವನ್ನು ರಶ್ಯವು ಕೆಣಕಿದರೆ ಯುದ್ಧವು ಖಂಡಿತ. ಕಾರಣ ಇಂದು ರಶ್ಯಕ್ಕೆ ವಿರೋಧವಾದ ಪ್ರತಿಯೊಂದು ರಾಷ್ಟ್ರವೂ ಅಮೇರಿಕನ್ ಪ್ರಭಾವದೊಳಗಿದೆ.

ರಶ್ಯಾ ಅಮೇರಿಕಾಗಳೆರಡರ ಮಿತ್ರ ರಾಷ್ಟ್ರಗಳೆರಡರೊಳಗೆ ಘರ್ಷಣೆಯಾದರೆ ರಶ್ಯಾ ಅಮೇರಿಕಾಗಳು ರಂಗಕ್ಕಿಳಿಯಬೇಕಾಗುವುದು.

ಹೀಗೆ ಈ ಮೂರು ವಿಧಾನಗಳ ಪರಿಣಾಮ ಒಂದೆ ರಶ್ಯಾ ಅಮೇರಿಕಗಳೊಳಗೆ ಸ್ಪರ್ಧೆ.

ಇದರಲ್ಲಿ ಮೊದಲನೆ ಸ್ಪರ್ಧೆ ಪೆಸಿಫಿಕ್ ಸಾಗರದಲ್ಲಿ ಇಲ್ಲವೆ ಧ್ರುವ ಸಾಗರ (ಇಲ್ಲಿ ಎಟಂ ಶಕ್ತಿ ತಯಾರಕ ಧಾತುಗಳಿವೆ)ದಲ್ಲುಂಟಾಗಬಹುದು. ಅಲ್ಲಿಂದ ಅದು ಯುರೋಪಿಗೆ ಹರಡುವುದು ಖಂಡಿತ.

ಎರಡನೇ ವಿಧಾನದ ಪ್ರಕಾರ ಯುರೋಪ್ ಖಂಡವೇ ಪ್ರಥಮ ರಂಗವಾಗಬಹುದು. ಆದರೂ ಚೀನಾ ಇಲ್ಲವೆ ಮಧ್ಯಪೂರ್ವಗಳಲ್ಲಿಯೂ ಇದು ಅಸಂಭವವಲ್ಲ. ಅಲ್ಲಿ ಬ್ರಿಟನಿನ ಹಿತಗಳಿಗೆ ಧಕ್ಕೆ ಬರುತ್ತದೆ.

ಮೂರನೇ ವಿಧಾನದ ಪ್ರಕಾರ ಯುರೋಪಿನಲ್ಲಿ ಯಾವ ಸಮಯದಲ್ಲೂ ಯುದ್ಧ ಕಿಡಿ ಹೊತ್ತಬಹುದು. ಹೀಗಾದರೆ ಯುರೋಪಿಗೆ ಮಾತ್ರವಲ್ಲ ಬ್ರಿಟನಿಗೆ ಅವರ್ಣನೀಯ ದುರಂತವುಂಟಾಗುವುದು.

ಒಂದೇ ಗುಂಡು ಸಾಕು

ಇಂದು ಯುರೋಪಿನ ಪ್ರದೇಶಗಳು ಉಕ್ಕಿನ ಪ್ರಾಕಾರಗಳಿಂದ ರಶ್ಯನ್ ವಿಭಾಗ, ಅಮೇರಿಕನ್ ವಿಭಾಗ ಮತ್ತು ಬ್ರಿಟಿಷ್, ಫ್ರೆಂಚ್ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದ್ದು ಅಲ್ಲಿ ಯುದ್ಧ ಉದ್ವೇಗಗಳು ಪರಮಾವಧಿಗೆ ಮುಟ್ಟಿವೆ. ಅಲ್ಲಿನ ವಾತಾವರಣವೀಗ ತಪ್ತವಾಗಿದೆ. ಯಾವ ಕ್ಷಣಕ್ಕೆ ಪೂರ್ವಯೋಜಿತ ಸಮರಾಗ್ನಿಯ ಜ್ವಾಲೆ ಹೊತ್ತಿಕೊಳ್ಳುವುದೆಂದು ಹೇಳಬರುವುದಿಲ್ಲ.

ಈ ಸಂದರ್ಭಗಳಲ್ಲಿ ಬೆವಿನ್ನರ "ನಾನು ತಿಳಿದಮಟ್ಟಿಗೆ ಈ ತಲಾಂತರದಲ್ಲಿ ಯುದ್ಧ ಸಂಭವವು ಶಕ್ಯವಿಲ್ಲ"ವೆಂಬ ಆಶ್ವಾಸನೆಯು ಹಿಟ್ಲರನ ಭರವಸೆಯಂತಿದೆ. 1914ರ ಮತ್ತು 1939ರ ಯುದ್ಧಗಳ ಮೊದಲು ಬ್ರಿಟಿಷ್ ವಿದೇಶಾಂಗ ಅಧಿಕಾರಿಗಳು ಇದೇ ಅಭಿಪ್ರಾಯವುಳ್ಳವರಾಗಿದ್ದರು.

ಮೂವತ್ತು ವರ್ಷಗಳ ಹಿಂದೆ ಉನ್ಮತ್ತ ರಾಷ್ಟ್ರೀಯತೆಯ ಸ್ಲಾವ್ ತರುಣನು ಹಾರಿಸಿದ ಪಿಸ್ತೂಲಿನ ಗುಂಡಿನಿಂದ ಅತಿ ಭೀಕರ ದುಷ್ಪರಿಣಾಮದ ಯುದ್ಧವಾಯಿತು. ಈ ಮೊದಲನೆ ಜಾಗತಿಕ ಯುದ್ಧವು ಎರಡನೆಯದಾದೊಂದರ ಸ್ಫೋಟಕ ಅಸ್ತಿವಾರವನ್ನು ಹಾಕಿತು. ಇದೇ ತರದ ಇನ್ನೊಂದು ಘಟನೆಯು [illegible] ಅಪಾಯಗರ್ಭಿತ [illegible] ಜಗತ್ತು [illegible] ವಾಗ್ನಿಯಲ್ಲಿ [illegible] ಖಂಡಿತ.

ಯುದ್ಧ ಗತಿ

ಒಂದು ವೇಳೆ ಯುದ್ಧವಾದರೆ ಅದು ಯಾವ ಕ್ರಮದಲ್ಲಿ ನಡೆಯುವದು? ರಶ್ಯದ ಎದುರು ಅಣುಬೊಂಬುಗಳಿರದಿದ್ದಲ್ಲಿ ಅದರ ಅಪಾರ ಸೈನ್ಯಶಕ್ತಿ ಅದ್ವಿತೀಯವಾಗಿಯೇ ಇದೆ. ಅದೇ ಸಮಯಕ್ಕೆ ಅಮೇರಿಕನ್ ಸೈನಿಕರೂ ಬ್ರಿಟಿಷ್ ಸೈನಿಕರೂ ಉದ್ಯೋಗ ನಿವೃತ್ತಿ ಮಾಡಲ್ಪಟ್ಟಿದ್ದಾರೆ. ಜರ್ಮನ್ ಸೈನ್ಯವು ಮಾಯವಾಗಿದೆ. ಯುರೋಪಿನ ಅಟ್ಲಾಂಟಿಕ್ ಮತ್ತು ಭೂಮಧ್ಯ ಸಮುದ್ರ ತೀರದ ಕಡೆ ರಶ್ಯನ್ ಸೇನೆಗಳು ಆಕ್ರಮಣ ಮಾಡುವ ಕಲ್ಪನೆಯನ್ನು ನಾವು ಈ ಸಂದರ್ಭದಲ್ಲಿ ಮಾಡಿಕೊಳ್ಳಬಹುದು. ಎಟಂ ಬೊಂಬುಗಳು ರಶ್ಯದ ಮುನ್ನಡೆಯನ್ನು ತಡೆಯಬಲ್ಲವೆಂಬುದು ತೀರ ತಪ್ಪು ಕಲ್ಪನೆ. ಅದರ ವಿನಾಶಕ ಶಕ್ತಿಗೂ ಒಂದು ಮಿತಿಯಿದೆ. ಅದರ ತಯಾರಿಕೆಯೂ ಅತ್ಯಲ್ಪ ಪ್ರಮಾಣದ್ದಾಗಿದೆ. ರಶ್ಯದ ಅಗಾಧ ಶಕ್ತಿಯನ್ನು ಮುರಿಯುವುದು ಅವುಗಳಿಂದ ಅಸಾಧ್ಯವೆಂದೇ ನಿರೀಕ್ಷಕರ ಅಭಿಪ್ರಾಯ. ಇಂತಹ ಪರಿಸ್ಥಿತಿಯಲ್ಲಿ ಯುಕ್ತರಾಷ್ಟ್ರಗಳು ಶಾಂತಿಗಾಗಿಯೇ ಯತ್ನಿಸುವುದೊಳಿತೆಂದು ತೋರುತ್ತದೆ.



ಕುಟಿಕೂರಾ ಟಾಲ್ಕಮ್ ಪೌಡರನ್ನು ದೊಡ್ಡವರೂ ಮಕ್ಕಳೂ ಉಪಯೋಗಿಸುತ್ತಾರೆ. ಇದರ ತಂಪಾದ ಗುಣ, ಬಾಳುವೆಯ ಪರಿಮಳ ಸುಖಕರವಾಗಿದೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಮಕ್ಕಳ ಮೃದು ಚರ್ಮಕ್ಕೆ ಕುಟಿಕೂರಾ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ-ಅದು ಅವುಗಳಿಗೆ ಸೆಕೆಗಾಲದಲ್ಲಂತೂ ಬಹಳ ಆನಂದವೀಯುತ್ತದೆ.

ಸ್ವದೇಶಾಭಿಮಾನಿ

ತಾರೀಕು 17-10-1947

ಜಮೀನ್ದಾರೀ-ರದ್ದತಿ ಮಸೂದೆ

ದಕ್ಷಿಣ ಕನ್ನಡದಲ್ಲಿ ಜಮೀನ್ದಾರೀ ಪದ್ಧತಿ ಇಲ್ಲವೆಂಬುದರಿಂದ ಮದ್ರಾಸು ಶಾಸನ ಸಭೆಯ ಮುಂದೆ ಬಂದಿರುವ ಈ ಮಸೂದೆ ನಮ್ಮ ಜಿಲ್ಲೆಯವರಿಗೆ ಸಂಬಂಧಪಟ್ಟದ್ದಲ್ಲ ಆದರೂ ಈಗಿನ ಸರಕಾರ ನಮಗೂ ಸಂಬಂಧಪಟ್ಟದೆಂಬುದರಿಂದ ಇದರ ಕಾರ್ಯಕ್ರಮಗಳಿಗೆ ನಾವೂ ಜವಾಬ್ದಾರರಿರುತ್ತೇವೆಂಬುದನ್ನು ಮರೆಯಲು ಸಾಧ್ಯವಿಲ್ಲ.

ಜಮೀನ್ದಾರಿಗಳನ್ನು ರದ್ದುಮಾಡಿ ಅವುಗಳಿದ್ದಲ್ಲಿ ರೈತವಾರೀ ಪದ್ಧತಿ ಜಾರಿಗೆ ತರುವುದೇ ಮಸೂದೆಯ ಮುಖ್ಯ ಅಭಿಪ್ರಾಯ ಜಮೀನ್ದಾರರಿಂದ ಅವರ ಜಮೀನನ್ನು ತೆಗೆದ ಬಗ್ಗೆ ಅವರಿಗೆ ಹಣದ ರೂಪದಲ್ಲಿ ಪ್ರತಿಫಲ ಕೊಡುವ ಏರ್ಪಾಡು ಇದರಲ್ಲಿದೆ ಕಾಂಗ್ರೆಸಿನ ಚುನಾವಣಾ ಘೋಷಣೆಯಲ್ಲಿ ಈ ಧೋರಣೆ ಜಾಹೀರುಪಡಿಸಲಾಗಿತ್ತು ಇದನ್ನು ಆದಷ್ಟು ಬೇಗನೆ ಕೈಕೊಳ್ಳುವಂತೆ ಕಾಂಗ್ರೆಸು ಎಲ್ಲಾ ಪ್ರಾಂತಿಕ ಸರಕಾರಗಳಿಗೂ ಸೂಚಿಸಿಯದೆ ಮತ್ತು ಅದರಂತೆ ಇತರ ಪ್ರಾಂತ್ಯಗಳಲ್ಲಿ ಈ ಬಗ್ಗೆ ಕಾನೂನುಗಳು ಆಗುತ್ತಿವೆ

ಜಮೀನ್ದಾರಿಗಳಲ್ಲಿ ಈ ಜಮೀನ್ದಾರರ ಕೈಯೊಳಗಿರುವ ರೈತರು ಹಲವು ತಾಪತ್ರಯಗೊಳಗಾಗಿರುವುದು ನಿಜ ಮಾತ್ರವಲ್ಲ ಜಮೀನ್ದಾರರಿಂದ ಈಗ ಇವರಿಗೆ ಯಾವ ಬಗೆಯ ಪ್ರಯೋಜನವೂ ದೊರೆಯುತ್ತ ಇಲ್ಲವೆಂಬುದು ಇಲ್ಲಿಯ ಪರಿಸ್ಥಿತಿ ಪರಿಶೀಲಿಸಿದವರೆಲ್ಲ ಹೇಳಿದ್ದಾರೆ ಇಂಥ ಸ್ಥಿತಿಯಲ್ಲಿ ರೈತರಿಗೂ ಸರಕಾರಕ್ಕೂ ಸೀದಾ ಸಂಬಂಧ ಕಲ್ಪಿಸಿ ಮಧ್ಯದಲ್ಲಿರುವ ಈ ಜಮೀನ್ದಾರರನ್ನು ನಿವೃತ್ತರನ್ನಾಗಿ ಮಾಡುವುದು ಅಲ್ಲಿಯ ಸಾಗುವಳಿಯ ದೃಷ್ಟಿಯಿಂದ ಕೂಡಾ ಶ್ರೇಯಸ್ಕರವೆಂಬ ಬಗ್ಗೆ ಸಂಶಯವಿಲ್ಲ

ಜಮೀನ್ದಾರರಿಗೆ ಇಷ್ಟೊಂದು ವಿಸ್ತೃತ ಭೂಮಿಗಳ ಮೇಲೆ ಹಕ್ಕಾದರೂ ಹೇಗೆ ಬಂದೀತೆಂಬ ಬಗ್ಗೆ ಕೂಡಾ ಸಾಕಷ್ಟು ವಿಚಾರ ನಡೆದಿರುತ್ತದೆ ಹೆಚ್ಚಿನ ಜಮೀನ್ದಾರರು ಆ ಕಾಲದ ಸರಕಾರದವರಿಂದ ರೈತರ ಕಂದಾಯ ವಸೂಲಿಯ ಏಜಂಟಾಗಿ ನೇಮಿಸಲ್ಪಟ್ಟವರೆಂದು ತಿಳಿದುಬರುತ್ತದೆ ಪ್ರತಿಯೊಬ್ಬ ರೈತನಿಂದ ಕಂದಾಯ ಎತ್ತಲು ರಗಳೆಯಾಗಿ ಒಂದು ಸಾಕಷ್ಟು ವಿಸ್ತೃತ ಪ್ರದೇಶದಲ್ಲಿ ಈ ಕೆಲಸವನ್ನು ಒಬ್ಬನಿಗೆ ಬಿಟ್ಟುಕೊಟ್ಟು ಅವನು ಇಂತಿಷ್ಟೆ ಹಣವನ್ನು ಸರಕಾರಕ್ಕೆ ಕೊಟ್ಟು ಬಿಡಬೇಕೆಂದು ಕಾಯಮಾಗಿ ನಿರ್ಧರಿಸಿಬಿಟ್ಟಂತೆ ಕಾಣುತ್ತದೆ. ಅಂದರೆ ಈ ಬಗೆಯ ಜಮೀನ್‌ದಾರರು ಒಂದು ಬಗೆಯ ಕಾಯಂ ಗುತ್ತೇದಾರರೆನ್ನಬಹುದು. ಇವರಿಗೆ ಇದರಿಂದ ತುಂಬಾ ಲಾಭವಿದ್ದಿರಬೇಕೆಂದು ನಿರ್ವಿವಾದ. ಈಗ ಇವರ ಈ ಕೆಲಸವನ್ನು ತೆಗೆದುಹಾಕಿ ರೈತರಿಂದ ಕಂದಾಯವನ್ನು ವಸೂಲುಮಾಡುವ ಕೆಲಸವನ್ನು ಸರಕಾರದವರೇ ಕೈಕೊಂಡರೆ ಅದರಲ್ಲಿ ತಪ್ಪೇನೂ ಇರುವುದಿಲ್ಲ. ಅದರ ಮೇಲೆ ಸರಕಾರದವರು ಇವರಿಗೆ ನಷ್ಟಭರ್ತಿ ಮಾಡಿಕೊಡಲು ಪ್ರತಿಫಲ ಕೂಡಾ ಕೊಡುವ। ನಿರ್ಧಾರ ಮಾಡಿರುವರೆಂದ ಮೇಲೆ ಇದರಲ್ಲಿ ಅನ್ಯಾಯವೇನೂ ಇರುವುದಿಲ್ಲ.

ಪ್ರತಿಫಲದ ದರಗಳು ಈಗ ನಿರ್ಣಯಿಸಲ್ಪಟ್ಟಂತೆ ಬಹಳ ಅತೃಪ್ತಿಕರವಿರುತ್ತವೆಂದು ಹೇಳಲಾಗುತ್ತಿದೆ ಇದರಲ್ಲಿ ಸತ್ಯಾಂಶವಿದ್ದರೆ ಸರಕಾರದವರು ಈ ದರಗಳನ್ನು ತಿದ್ದಬೇಕು. ಯಾಕೆಂದರೆ ಶಾಸನಸಭೆಗೆ ಅಧಿಕಾರವಿದೆಯೆಂಬುದರಿಂದ ಪ್ರಜೆಗಳಲ್ಲಿ ಯಾವ ವರ್ಗಕ್ಕಾದರೂ ಅನ್ಯಾಯವಾಗದಂತೆ ವರ್ತಿಸುವುದು ಅವರ ಕರ್ತವ್ಯವಿರುತ್ತದೆ

ಮದ್ರಾಸಿನ ಸರಕಾರದ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಾದ ಶ್ರೀ ತಾಲಾ ವೆಂಕಟ್ರಾಯರು ಈ ಮಸೂದೆಯನ್ನು ಇಷ್ಟಕ್ಕೆ ನಿಲ್ಲಿಸದೆ ಇದರಲ್ಲಿ ಇನಾಮ್ ಭೂಮಿಗಳ ರದ್ದತಿಯನ್ನೂ ಸೇರಿಸಿದ್ದಾರೆ ಇನಾಮ್‌ದಾರರಾದ ವ್ಯಕ್ತಿಗಳಿಂದ ಇಂಥ ಭೂಮಿಗಳನ್ನು ತೆಗೆಯುವುದು ಮಾತ್ರವಲ್ಲ ದೇವಸ್ಥಾನಗಳು, ಇಗರ್ಜಿ, ಮಸೀದಿ ಮೊದಲಾದ ಧರ್ಮ ಸಂಸ್ಥೆಗಳಿಗೆ ಸಿಕ್ಕಿದ ಇನಾಮುಗಳನ್ನು ರದ್ದತಿಗೊಳಿಸುವ ಏರ್ಪಾಡೂ ಈ ಮಸೂದೆಯಲ್ಲಿ ಸೇರಿಸಲಾಗಿದೆ

ಇನಾಮುದಾರರೂ ದಕ್ಷಿಣಕನ್ನಡ ಜಿಲ್ಲೆಯಲ್ಲಿಲ್ಲವೆಂಬುದರಿಂದ ಈ ಮಸೂದೆ ನಮಗಂತೂ ಸೀದಾ ಸಂಬಂಧವುಳ್ಳದ್ದಲ್ಲ ಇನಾಮುಗಳೆಂದರೆ ಹಿಂದೆ ವಿಶಿಷ್ಟ ಕಾರಣಗಳಿಗಾಗಿ ಕೆಲವರಿಗೆ ಆಗಿನ ರಾಜರು ಅಥವಾ ಸರಕಾರದವರ ದತ್ತಿಯಾಗಿ ಕೊಟ್ಟ ಭೂಮಿ ಧಾರ್ಮಿಕ ಸಂಸ್ಥೆಗಳು ಸರಿಯಾಗಿ ಇತರರ ಹಂಗಿಲ್ಲದೆ ಸ್ವಾತಂತ್ರ್ಯದಿಂದ ನಡೆದುಬರುವಂತೆ ಅವರಿಗೆ ಬಿಟ್ಟ ಭೂಮಿ ಇತ್ಯಾದಿಗಳನ್ನು ಇನಾಮೆನ್ನುತ್ತಾರೆ ಈ ಭೂಮಿಗಳು ಇನಾಮುದಾರರಿಗೆ ಅಥವಾ ಇಂಥ ಸಂಸ್ಥೆಯವರಿಗೆ ಸೇರಿದ ಭೂಮಿಗಳೆಂಬ ವಿಷಯದಲ್ಲಿ ಸಂಶಯವಿಲ್ಲ

ಜಮೀನ್ದಾರಿ ಭೂಮಿಗಳ ಕುರಿತು ಚೆನ್ನಾಗಿ ಪರಿಶೀಲನೆ ನಡಸಿದಂತೆ ಇನಾಮ್ ಭೂಮಿಗಳ ಪರಿಸ್ಥಿತಿಯ ಪರಿಶೀಲನ ನಡದದ್ದಿಲ್ಲ ಇನಾಮ ದಾರರಾದರೂ ಹೆಚ್ಚಿನವರು ಜಮೀನ್ದಾರರಂತೆ ಶ್ರೀಮಂತ ವರ್ಗಕ್ಕೆ ಸೇರಿದವರೂ ಅಲ್ಲವೆನ್ನುತ್ತಾರೆ ಇದರಿಂದಾಗಿ ಈ ಇನಾಮುದಾರರ ವಿಚಾರವನ್ನು ಈ ಮಸೂದೆಯಲ್ಲಿ ಸೇರಿಸದೆ ಸರಿಯಾದ ವಿಚಾರ ನಡೆಸಿದ ಮೇಲೆ ಇದಕ್ಕಾಗಿಯೇ ಪ್ರತ್ಯೇಕ ಮಸೂದೆಯೊಂದನ್ನು ಮುಂದೆ ತರುವಂತೆ ಅನೇಕರು ಸೂಚಿಸುತ್ತಿದ್ದಾರೆ

ದೇವಸ್ಥಾನ ಮೊದಲಾದ ಧಾರ್ಮಿಕ ಸಂಸ್ಥೆಗಳ ಇನಾಮುಗಳನ್ನು ರದ್ದುಗೊಳಿಸುವ ವಿಚಾರದಲ್ಲಿ ಇನ್ನೂ ಹೆಚ್ಚಿನ ಆಕ್ಷೇಪಗಳಿರುತ್ತವೆ. ಇಂಥ ಉಂಬಳಿ ಉತಾರಗಳಿದ್ದುದರಿಂದಲೇ ನಮ್ಮ ಧಾರ್ಮಿಕ ಸಂಸ್ಥೆಗಳು ಶತಮಾನಗಳಿಂದ ನಡೆದು ಬಂದಿವೆಯೆಂಬುದು ನಿರ್ವಿವಾದ. ಇವುಗಳನ್ನು ರದ್ದುಮಾಡಿ ಪ್ರತಿಫಲವಾಗಿ ಸ್ವಲ್ಪ ಹಣ ಇಂಥ ಸಂಸ್ಥೆಗಳಿಗೆ ಕೊಟ್ಟಲ್ಲಿ ಈ ಸಂಸ್ಥೆಗಳು ಮುಂದೆ ಹೆಚ್ಚು ಕಾಲ ಬಾಳುವಂತಿಲ್ಲವೆಂಬುದೂ ಸ್ಪಷ್ಟವಿರುತ್ತದೆ.

ಮದ್ರಾಸಿನ ಶಾಸನ ಸಭೆಯಲ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯೊಂದರಲ್ಲಿ ಈ ಮಸೂದೆಯ ಪರಿಶೀಲನೆ ನಡೆಯಿತು. ಇನಾಮು ಭೂಮಿಗಳನ್ನು ಇದರಲ್ಲಿ ಸೇರಿಸಿದ ಬಗ್ಗೆ ಹಲವರು ಆಕ್ಷೇಪವೆತ್ತಿದರು ಆದರೆ ಬಹುಮತ ಮಾನ್ಯ ಮಂತ್ರಿ ತಾಲಾ ವೆಂಕಟ್ರಾಯರ ಮಸೂದೆಗೆ ಸಿಕ್ಕಿತು ಮುಂದೆ ಧಾರ್ಮಿಕ ಇನಾಮುಗಳನ್ನು ಸೇರಿಸಿದ ವಿಚಾರವೂ ಬಂದಿತು ಇದಕ್ಕೆ ಇನ್ನೂ ಹೆಚ್ಚಿನ ಆಕ್ಷೇಪ ಮುಂದೆ ಬಂದಿತು ಆದರೆ ಇದರಲ್ಲಿಯೂ 81 ಮಂದಿ ಮಸೂದೆಯ ಪರವಾಗಿಯೂ 76 ಮಂದಿ ವಿರೋಧವಾಗಿಯೂ ಮತಕೊಟ್ಟು ಮಂತ್ರಿಯವರೇ ಗೆದ್ದರು

ಇದರಲ್ಲಿ ವಿಶೇಷವೆಂದರೆ ಮುಖ್ಯ ಮಂತ್ರಿಯವರು ಧಾರ್ಮಿಕ ಇನಾಮುಗಳನ್ನು ಮಸೂದೆಯಲ್ಲಿ ಸೇರಿಸಲು ವಿರೋಧವಿದ್ದರು ಮಂತ್ರಿಮಂಡಲದ ಇತರ ಹತ್ತು ಮಂದಿ ಮಂತ್ರಿಗಳೂ ವಿರುದ್ಧ ಪಕ್ಷದಲ್ಲಿ ತಮ್ಮ ಮತಕೊಟ್ಟರು ಆದರೂ ಸ್ವಲ್ಪ ಬಹುಮತದಿಂದ ಇದು ಮಂಜೂರಾಗಿ ಬಿಟ್ಟಿತು

ಒಂದು ಮಸೂದೆಯನ್ನು ತಯಾರಿಸಿ ಅದನ್ನು ಕಾಂಗೆಸು ಪಕ್ಷದ ಸದಸ್ಯರ ಸಭೆಗೆ ಕೊಂಡೊಯ್ಯುವ ಮೊದಲು ಮಂತ್ರಿಮಂಡಲದವರು ತಮ್ಮೊಳಗೆ ಈ ಕುರಿತು ವಿಚಾರಿಸಿ ತಮ್ಮ ಮಂಡಲದ ಧೋರಣೆ ಮುಂದಾಗಿ ನಿಶ್ಚೈಸಿ ಮುಂದೆ ಅದನ್ನು ಸಭೆಯ ಎದುರು ಇಡಬೇಕಿತ್ತು ಅದರ ಬದಲು ಮಂತ್ರಿಮಂಡಲದಲ್ಲಿಯೇ ಬಹುಮತ ವಿರೋಧವಿದ್ದ ಈ ವಿಚಾರ ಈ ಸಭೆಯ ಮುಂದಿಟ್ಟದ್ದು ಮಂತ್ರಿಗಳ ಗೌರವ ಹಾಸ್ಯಾಸ್ಪದವಾಗುವಂತೆ ಮಾಡಿರುತ್ತದೆ ಎಂದು ಸ್ಪಷ್ಟವಿರುತ್ತದೆ

ಅಂತೂ ಆ ಮೇಲೆ ಈ ವಿಚಾರವನ್ನು ಮಂತ್ರಿಮಂಡಲದಲ್ಲಿ ಚರ್ಚಿಸಿ ಈಗ ಧಾರ್ಮಿಕ ಇನಾಮುಗಳನ್ನು ಈ ಮಸೂದೆಯಿಂದ ಬಿಡುವ ನಿರ್ಣಯ ಮಾಡಿರುವುದಾಗಿ ತಿಳಿದುಬರುತ್ತದೆ ಇಷ್ಟು ಮಟ್ಟಿಗೆ ಇದು ತೃಪ್ತಿಕರವೆಂದು ಸಮಾಧಾನ ತಾಳಬೇಕಾಗಿದೆ.

ಧಾರ್ಮಿಕ ಇನಾಮುಗಳನ್ನು ಮಾತ್ರವಲ್ಲ ಇತರ ಇನಾಮುದಾರರ ವಿಚಾರವನ್ನು ಈಗಿನ ಮಸೂದೆಯಿಂದ ಹೊರಪಡಿಸುವುದು ಅಗತ್ಯವೆಂದೇ ಕಾಣುತ್ತದೆ ಸಾಕಷ್ಟು ಪರಿಶೀಲನ ಹಾಗೂ ವಿಚಾರಣೆಯಿಲ್ಲದೆ ಅವಸರದಿಂದ ಇಂಥ ಮಸೂದೆಗಳನ್ನು ಮುಂದೊತ್ತುವುದು ಶ್ರೇಯಸ್ಕರವಲ್ಲ

ಇನಾಮುಗಳನ್ನು ಹೊರಗಿರಿಸುವುದು ಮಾತ್ರವಲ್ಲ ಜಮೀನ್ದಾರರಿಗೂ ಅನ್ಯಾಯವಾಗಬಾರದೆಂದೇ ನಮ್ಮ ಅಭಿಪ್ರಾಯವಿರುತ್ತದೆ ಇತರ ಪ್ರಾಂತಿಕ ಸರಕಾರದವರು ಇವರಿಗೆ ಯಾವ ರೀತಿ ಪ್ರತಿಫಲ ಕೊಡುತ್ತಿದ್ದಾರೆಂದು ನೋಡಿ ಅದರಂತೆಯೇ ನಮ್ಮ ಸರಕಾರವೂ ವರ್ತಿಸಬೇಕು ಅಧಿಕಾರ ಉಂಟೆಂದು ಅದನ್ನು ದುರುಪಯೋಗಪಡಿಸುವುದು ತರವಲ್ಲ ಮದ್ರಾಸಿನ ಮಂತ್ರಿಮಂಡಲದವರು ಈ ಕುರಿತು ಜಾಗರೂಕತೆಯಿಂದ ವರ್ತಿಸದಿದ್ದಲ್ಲಿ ಮುಂದೆ ಅವರು ತೊಂದರೆಗೆ ಬೀಳುವುದು ಖಂಡಿತವೆಂದು ಎಚ್ಚರಿಸಿ ಅವರು ನ್ಯಾಯದಲ್ಲಿ ವರ್ತಿಸುವರೆಂದು ಹಾರೈಸುತ್ತೇವೆ

ಟೀಕೆ-ಟಿಪ್ಪಣಿಗಳು

ಮಾರಾಟ ತೆರಿಗೆಯ ದರ ಏರಿಸುತ್ತಾರೆ.

ಮದ್ರಾಸಿನ ಶಾಸನ ಸಭೆಯಲ್ಲಿ ಮಾರಾಟ ತೆರಿಗೆಯ ದರಗಳನ್ನು ಹೆಚ್ಚಿಸುವ ಇನ್ನೊಂದು ಮಸೂದೆಯು ಈಗ ಚರ್ಚಿಸಲ್ಪಡುತ್ತಿದೆ. ರೂಪಾಯಿಗೆ ಎರಡು ಪೈ ಇದ್ದ ಈ ತೆರಿಗೆ ಸಾಮಾನ್ಯ ಮೂರು ಪೈಯಷ್ಟಕ್ಕೇ ಹೆಚ್ಚಿಸಲಾಗುತ್ತದೆ. ವಿವಿಧ ಬಗೆಯ ಮಾಲುಗಳಿಗೆ ತೆರಿಗೆಯ ದರಗಳು ಭಿನ್ನವಾಗಿ ಇರಿಸಲಾಗುತ್ತದೆ ಕೆಲವು ಸುಖ ಸಾಮಗ್ರಿಗಳಿಗೆ ರೂಪಾಯಿಗೆ ಎರಡು ಆಣೆ ವರೆಗೆ ಈ ದರಗಳು ಹೋಗುತ್ತವೆ. ಇದುವರೆಗೆ ತೆರಿಗೆ ಹೊರಿಸದೆ ಇದ್ದ ಹಲವು ಮಾಲುಗಳಿಗೆ ಈಗ ಇದನ್ನು ಹೊರಿಸುತ್ತಾರೆ ಕೇವಲ ಏಜಂಟಾಗಿ ವರ್ತಿಸುವವರಿಂದ ಕೂಡಾ ಇದನ್ನು ಮುಂದೆ ವಸೂಲು ಮಾಡುವ ಯೋಜನೆ ಇದರಲ್ಲಿದೆ

ಮದ್ಯಪಾನ ನಿರೋಧದಿಂದಾಗಿ ಕೋಟಿ ಸಂಖ್ಯೆಯಲ್ಲಿ ಉತ್ಪತ್ತಿಯನ್ನು ಕಳೆದುಕೊಂಡ ಸರಕಾರ ಈ ರೀತಿ ಅದನ್ನು ಭರ್ತಿಕೊಳ್ಳಲು ಪ್ರಯತ್ನಿಸುವಾಗ ಇದಕ್ಕೆ ಆಕ್ಷೇಪ ಹೇಳುವುದರಲ್ಲಿ ಯಾವ ನ್ಯಾಯವೂ ಇಲ್ಲ ಇದುವರೆಗೆ ಕುಡುಕರೇ ಹೊರುತ್ತಿದ್ದ ಭಾರ ಈಗ ಎಲ್ಲರೂ ಹಂಚಿಕೊಂಡು ಹೊತ್ತಂತಾಗುವುದರಿಂದ ಇದು ಎಲ್ಲರ ಬೆಂಬಲಕ್ಕೂ ಯೋಗ್ಯವಿದ್ದ ಮಸೂದೆಯೇ ಇರುತ್ತದೆ

ಈ ಮಸೂದೆಯಲ್ಲಿ ತೆರಿಗೆ ಹೊರಿಸಿದ ಬಗ್ಗೆ ಅಪೀಲು ಮಾಡಲು ಅಸ್ಪದವಿಟ್ಟಿಲ್ಲವೆಂಬ ಒಂದು ದೂರು ಕೇಳಿಬರುತ್ತದೆ ಇಂಥ ಹಕ್ಕು ಇರುವುದು ಅಗತ್ಯವಿರುತ್ತದೆಂದು ಹೆಚ್ಚಿನವರು ಅಭಿಪ್ರಾಯಪಡದೆ ಇರಲಿಕ್ಕಿಲ್ಲವೆಂಬುದರಿಂದ ಮಸೂದೆಯಲ್ಲಿ ಈ ಬಗ್ಗೆ ಅಗತ್ಯವುಳ್ಳ ತಿದ್ದುಪಡಿ ಮಾಡುವರೆಂದು ಆಶಿಸುತ್ತೇವೆ ಮಾತ್ರವಲ್ಲ ಈ ತೆರಿಗೆಯ ಭಾರವನ್ನು ಹೊರಲು ಯಾರೂ ಆಕ್ಷೇಪಿಸಬಾರದಾಗಿಯೂ ಕೇಳಿಕೊಳ್ಳುತ್ತೇವೆ

ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಹರಿಜನ ಪ್ರವೇಶ

ಅಕ್ಟೋಬರ ತಾರೀಕು 11ನೇ ದಿನ ಹಿಂದೂ ಪದ್ಧತಿಯಂತೆ ಮಹಾತ್ಮಾ ಗಾಂಧಿಯವರ ಜನ್ಮದಿನ ಈ ದಿನ ಮಂಗಳೂರಿನ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ನಮ್ಮ ಜಿಲ್ಲಾ ಹರಿಜನ ಸಂಘದ ಅಧ್ಯಕ್ಷರಾದ ಶ್ರೀ ಡಾಕ್ಟರ್ ಯು ಪಿ ಮಲ್ಯ ಎಮ್ ಎಲ್ ಎ ಮೊದಲಾದ ಕಾಂಗ್ರೆಸ್ ಮುಂದಾಳುಗಳು ಹಲವು ಮಂದಿ ಹರಿಜನ ಹಾಗೂ ಬಿಲ್ಲವ ಸಮಾಜದವರನ್ನು ದೇವಸ್ಥಾನದ ಒಳಗೆ ಕರೆದೊಯ್ದು ಪ್ರಸಾದ ಕೊಡಿಸಿದರೆಂಬುದು ಸಂತೋಷದ ವಾರ್ತೆ ಇವರು ಹಣ್ಣುಕಾಯಿ ಮಾಡಿಸಿ ಕಾಣಿಕೆ ಹಾಕಿ ಪ್ರಸಾದ ಸ್ವೀಕರಿಸಿ ದಕ್ಷಿಣೆಕೊಟ್ಟು ಬಂದರೆಂದು ತಿಳಿದುಬರುತ್ತದೆ

ಜಿಲ್ಲೆಯಲ್ಲಿ ಇನ್ನುಳಿದ ಪ್ರಮುಖ ದೇವಸ್ಥಾನಗಳಲ್ಲಿ ಗೌಡ ಸಾರಸ್ವತ ಸಮಾಜಕ್ಕೆ ಸೇರಿದ ಮೂಲ್ಕಿ ಮತ್ತು ಮಂಜೇಶ್ವರ ದೇವಸ್ಥಾನಗಳು, ಉಡುಪಿ ಕ್ಷೇತ್ರದ ಪ್ರಸಿದ್ಧ ದೇವಸ್ಥಾನಗಳು, ಕೊಲ್ಲೂರು, ಸುಬ್ರಹ್ಮಣ್ಯ ಮತ್ತು ಧರ್ಮಸ್ಥಳ ಕ್ಷೇತ್ರಗಳು ಇವಿಷ್ಟು ಸ್ಥಳಗಳಲ್ಲಿ ಹರಿಜನರ ಪ್ರವೇಶವಾಗದೆ ಈ ಕಾರ್ಯಕ್ರಮ ಪೂರ್ಣವಾದಂತಾಗುವುದಿಲ್ಲವೆಂದು ನಾವು ಪುನಃ ಎಚ್ಚರಿಸಬೇಕಾಗಿದೆ.

ಈಗಿನ ಕಾನೂನಿನಂತೆ ಇವೆಲ್ಲ ಸ್ಥಳಗಳಲ್ಲಿಯೂ ಹರಿಜನರಿಗೆ ಪ್ರವೇಶ ಕೊಡಲೇಬೇಕು. ಅಲ್ಲಲ್ಲಿ ಕಾನೂನಿನ ಆಕ್ಷೇಪಗಳಿವೆಯೆಂದು ಸುಳ್ಳು ಪ್ರಚಾರಕ್ಕೆ ಆರಂಭವಾಗಿದೆಯೆಂದು ಕೇಳಿಬರುತ್ತದೆ ಇಂಥ ಅಪಪ್ರಚಾರದಲ್ಲಿ ತಿರುಳಿಲ್ಲವೆಂದು ಕಾರ್ಯತಃ ತೋರಿಸುವ ಜವಾಬ್ದಾರಿ ಹರಿಜನ ಸೇವಾ ಸಂಘದವರಿಗೂ ಕಾಂಗ್ರೆಸಿಗರಿಗೂ ಸೇರಿದೆಯೆಂಬುದನ್ನು ಅವರು ಮರೆಯಬಾರದೆಂದು ಸೂಚಿಸಬಯಸುತ್ತೇವೆ

ಮುರ್ತೆದಾರರ ಸಂಕಷ್ಟಗಳು ಮತ್ತು ನಮ್ಮ ಕಮ್ಯೂನಿಸ್ಟ್ ಬಂಧುಗಳು

ಮಧ್ಯಪಾನ ನಿರೋಧದಿಂದಾಗಿ ಮುರ್ತೆದಾರರು ತಮ್ಮ ಕಸಬು ಕಳೆದುಕೊಂಡು ಸಂಕಷ್ಟಕ್ಕೆ ಒಳಗಾಗಿರುವರೆಂಬುದೂ ಇವರ ಸ್ಥಿತಿ ಸುಧಾರಿಸಲು ಸರಕಾರದವರು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂಬುದೂ ನಿರ್ವಿವಾದದ ಸಂಗತಿಗಳು ಜಿಲ್ಲಾ ಬಿಲ್ಲವ ಯೂನಿಯನು ಮತ್ತು ಗುತ್ತೆದಾರ ಹಾಗೂ ಮುರ್ತೆದಾರರ ಸಂಘದವರೂ ಈ ಕುರಿತು ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಸಭೆ ಸೇರಿ ತಮ್ಮ ಸೂಚನೆಗಳನ್ನು ಮಾನ್ಯ ಮಂತ್ರಿ ಶ್ರೀ ಸೀತಾರಾಮ ರೆಡ್ಡಿಯವರಿಗೆ ಕೊಟ್ಟರು. ಇದೇ ರೀತಿ ಮಲೆಯಾಳ ಪ್ರದೇಶದ ಮುರ್ತೆದಾರರೆಲ್ಲರೂ ಹೊಸದುರ್ಗದಲ್ಲಿ ಎಸ್ ಎನ್ ಡಿ ಪಿ ಯೋಗವೆಂಬ ತಮ್ಮ ಸಮಾಜದ ಆಶ್ರಯದಲ್ಲಿ ದೊಡ್ಡ ಸಭೆ ಜರಗಿಸಿ ತಮ್ಮ ಸೂಚನೆಗಳನ್ನು ಸರಕಾರಕ್ಕೆ ಕಳುಹಿಸಿದ್ದಾರೆ ಈ ಸಭೆಯಲ್ಲಿ ಈ ಕುರಿತು ಸ್ಪೆಶ್ಯಲ್ ಡೆವಲಪ್‌ಮೆಂಟ್ ಆಫೀಸರರಾಗಿ ಈ ಜಿಲ್ಲೆಗೆ ನೇಮಿಸಲ್ಪಟ್ಟಿರುವ ಶ್ರೀ ಸರ್ವೋತ್ತಮರಾಯರೂ ಹಾಜರಿದ್ದರು ಮುರ್ತೆದಾರರ ಈ ಸೂಚನೆಗಳಿಗೆಲ್ಲ ಸರಕಾರದವರು ಯೋಗ್ಯ ವಿಚಾರ ನಡಸಿ ತಕ್ಕ ಕಾರ್ಯಕ್ರಮ ಕೈಕೊಳ್ಳುವರೆಂಬ ಬಗ್ಗೆ ಸಂಶಯಪಡಲು ಕಾರಣವಿಲ್ಲ

ಈ ಸನ್ನಿವೇಶ ಒಂದೆಡೆಯಿಂದ ನಮ್ಮ ಕಮ್ಯೂನಿಸ್ಟ ಬಂಧುಗಳು ಇನ್ನೊಂದೆಡೆಯಿಂದ ನಮ್ಮ ಸೋಶಿಯಲಿಸ್ಟ್ ಬಂಧುಗಳೂ ಇದರಲ್ಲಿ ಪ್ರವೇಶಮಾಡಿ ತಮ್ಮ ಬೇಳೆ ಬೇಯಿಸಲು ಯತ್ನಿಸುವುದು ಮಾತ್ರ ಶೋಚನೀಯವಿರುತ್ತದೆ ಎಲ್ಲಿ ಜನರಿಗೆ ಸಂಕಷ್ಟವಿದೆ ಎಲ್ಲಿ ತೊಂದರೆ ಇದೆ ಅಲ್ಲಿ ತಾವು ಪ್ರವೇಶಿಸಿ ತಮ್ಮ ಪಕ್ಷ ಬಲಪಡಿಸಿಕೊಳ್ಳಲು ಹವಣಿಸುವ ಈ ಧೋರಣೆ ನಿಜವಾಗಿಯೂ ಖಂಡನೀಯವಿರುತ್ತದೆ

ತಮ್ಮ ಸ್ವಂತದ ಉದ್ದೇಶವಿಟ್ಟುಕೊಂಡು ಸಹಾಯಕರಾಗಿ ಮುಂದೆ ಬರುವ ಯಾವುದೇ ರಾಜಕೀಯ ಪಂಗಡದ ಬಲೆಗೆ ಬೀಳದಂತೆ ಎಲ್ಲ ವರ್ಗದ ಕೆಲಸಗಾರರು ಎಚ್ಚರಿಕೆಯಿಂದ ವರ್ತಿಸಬೇಕಾದುದು ಅವರವರ ಹಿತದ ದೃಷ್ಟಿಯಿಂದಲೇ ಅಗತ್ಯವಿರುತ್ತದೆ

ಕೆಲಸಗಾರರು ತಮ್ಮ ಕಾಲ ಮೇಲೆ ತಾವು ನಿಲ್ಲಲು ಕಲಿತರೆ ಮಾತ್ರ ತಮ್ಮ ನಿಜವಾದ ಉನ್ನತಿ ಸಾಧಿಸಲು ಸಮರ್ಥರಾಗುವರು ಇತರರ ಸಹಾಯ ಪಡೆಯಬಾರದೆಂದಲ್ಲ ಸಹಾಯಕ್ಕೆ ಬಂದವರು ಕೊಡುವ ಸೂಚನೆಗಳನ್ನು ಸ್ವತಂತ್ರ ಬುದ್ಧಿಯಿಂದ ವಿಚಾರಿಸಿ ಇವುಗಳಲ್ಲಿ ತಮ್ಮ ಹಿತಕ್ಕೆ ಇದ್ದಷ್ಟನ್ನು ಮಾತ್ರ ಆರಿಸಿ ಸ್ವೀಕರಿಸುವ ಎಚ್ಚರಿಕೆವಹಿಸಬೇಕೆಂದು ಮಾತ್ರ ನಮ್ಮ ಸೂಚನೆಯ ಅಭಿಪ್ರಾಯವಿರುತ್ತದೆ

ಮೈಸೂರು ಸ್ವಾತಂತ್ರ್ಯ ಸಮರದ ವಿಜಯ.

ಮೈಸೂರಿನಲ್ಲಿ ಸ್ವಾತಂತ್ರ್ಯ ಸಮರವು ವಿಜಯದಲ್ಲಿ ಕೊನೆಗೊಂಡಿತೆಂಬ ವಾರ್ತೆ ಸಂತೋಷವನ್ನು ಉಂಟುಮಾಡುವಂತಹುದು ಕಾಂಗ್ರೆಸಿನವರೇ ತಾತ್ಕಾಲಿಕ ಸರಕಾರ ರಚಿಸಬೇಕೆಂದೂ ಒಂಬತ್ತು ಮಂದಿಯ ಮಂತ್ರಿಮಂಡಲದಲ್ಲಿ ಮೂರು ಸ್ಥಾನಗಳನ್ನು ಮಾತ್ರ ಇತರ ಪಂಗಡಗಳಿಗೆ ಕೊಟ್ಟರೆ ಸಾಕೆಂದೂ ಈ ತಾತ್ಕಾಲಿಕ ಸರಕಾರದವರು ಪಟನಾಸಮಿತಿಯ ವ್ಯವಸ್ಥೆ ಮಾಡತಕ್ಕದ್ದೆಂದೂ ದಿವಾನರು ಕೇವಲ ಶಾಸನಬದ್ಧ ಅಧಿಕಾರಿ ಮಾತ್ರ ಇರತಕ್ಕದ್ದೆಂದೂ ತೀರ್ಮಾನವಾಯಿತೆಂದು ತಿಳಿದುಬರುತ್ತದೆ. ಮುಂದೆ ಘಟನೆ ತಯಾರಾಗಿ ನಡೆಯುವ ಸರಕಾರದಲ್ಲಿ ಮಹಾರಾಜರೇ ಶಾಸನಬದ್ಧ ಅರಸರಾಗಲಿರುವುದರಿಂದ ದಿವಾನ ಪದವಿಯೊಂದು ಪ್ರತ್ಯೇಕ ಬೇಕಾಗುವಂತಿಲ್ಲವೆಂದೂ ಹೇಳಲಾಗುತ್ತಿದೆ ಇಷ್ಟಕ್ಕೆ ಒಪ್ಪಿಕೊಳ್ಳದೆ ಸರಕಾರಕ್ಕೆ ನಿವೃತ್ತಿ ಇರಲಿಲ್ಲವೆಂಬುದು ಸ್ಪಷ್ಟ.

ಈಗಿನ ದಿನಗಳಲ್ಲಿ ಇದು ಈ ರೀತಿಯಲ್ಲಿಯೇ ಕೊನೆಗೊಳ್ಳುವುದೆಂದು ಮೊದಲೇ ತಿಳಿಯಲು ಕಷ್ಟವಿದ್ದಿಲ್ಲ ಅಂದಮೇಲೆ ಪ್ರಜೆಗಳನ್ನು ವ್ಯರ್ಥವಾಗಿ ಗೋಳಾಡಿಸುವುದು ಸರಿಯಲ್ಲವೆಂದು ನಾವು ಈ ಮೊದಲೇ ಸೂಚಿಸಿದ್ದೆವು ಅಂತೂ ಪ್ರಜೆಗಳು ಧೈರ್ಯದಿಂದ ಕಾದಾಡಿದುದರಿಂದ ಈ ವಿಜಯ ದೊರಕಿತೆಂಬುದರಿಂದ ನೂರಾರು ಮಂದಿ ಸಹಿಸಿದ ಈ ಸಂಕಷ್ಟಗಳೆಲ್ಲ ವ್ಯರ್ಥವೆನ್ನುವಂತಿಲ್ಲ. ಈಗಲಾದರೂ ಸರಕಾರದವರು ರಾಜಿಗೆ ಬಂದುದು ಸ್ತುತ್ಯವೆಂದೇ ಹೇಳೋಣ. ಮೈಸೂರಿನ ಪ್ರಜೆಗಳು ಸ್ವಾತಂತ್ರ್ಯದಲ್ಲಿ ಬಾಳಿ ಅಖಿಲ ಕರ್ನಾಟಕದ ಜೊತೆಯಲ್ಲಿ ಮುಂದೆ ಶ್ರೇಯಸ್ಸನ್ನು ಪಡೆಯಲೆಂದು ಹಾರೈಸುತ್ತೇವೆ

ಮಂಗಳೂರು ನಗರ ಸಭೆಯ ಅಧ್ಯಕ್ಷರ ಚುನಾವಣೆ.

1947ನೇ ಇಸ್ವಿ ಅಕ್ಟೋಬರ ತಾರೀಕು 14ನೇ ಮಂಗಳವಾರ ಸಾಯಂಕಾಲ ಗಂಟೆ 5 30ಕ್ಕೆ ಸರಿಯಾಗಿ ಮಂಗಳೂರು ನಗರ ಸಭೆಯ ಸಭಾ ಭವನದಲ್ಲಿ ಹೊಸ ಚುನಾವಣೆಯಲ್ಲಿ ಸಭಾಸದರಾಗಿ ಆರಿಸಲ್ಪಟ್ಟ ಮೂವತ್ತೆರಡು ಮಂದಿ ಸದಸ್ಯರೂ ಹಾಜರಾಗಿ ತಮ್ಮ ತಮ್ಮ ಕುರ್ಚಿಗಳನ್ನು ಅಲಂಕರಿಸಿದರು ಕಾನೂನಿನಂತೆ ಮಂಗಳೂರು ರೆವೆನ್ಯೂ ಡಿವಿಜನಲ್ ಆಫೀಸರರು ಅಂದಿನ ಸಭಾಧ್ಯಕ್ಷ ಸ್ಥಾನವನ್ನು ಕೈಕೊಂಡರು

ಆರಂಭದಲ್ಲಿ ಅಂದಿನ ಸಭಾಧ್ಯಕ್ಷರು ಮೊದಲನೇ ಕಾರ್ಯ ಸದಸ್ಯರೆಲ್ಲರೂ ಹಿಂದುಸ್ಥಾನ ಹಾಗೂ ಅದರ ಸರಕಾರಕ್ಕೆ ವಿಧೇಯರೆಂದು ಪ್ರತಿಜ್ಞೆ ಕೈಕೊಳ್ಳುವುದೆಂದು ಹೇಳಿ ತಾನು ಮೊದಲಾಗಿ ಈ ಪ್ರತಿಜ್ಞೆ ಉಚ್ಚರಿಸಿದರು ಪ್ರತಿಜ್ಞೆಯನ್ನು ಕೈಕೊಳ್ಳುವವರು ದೇಶ ಭಾಷೆಯಲ್ಲಿಯೂ ಉಚ್ಚರಿಸಬಹುದೆಂದು ಸೂಚಿಸಿದರು

[illegible] ಸಭಾಸದರು [illegible] ತಮ್ಮ ಕೈಯಲ್ಲಿ [illegible] ಈ ಪ್ರತಿಜ್ಞಾ ಪತ್ರವನ್ನು ನೋಡಿ ಪ್ರತಿಜ್ಞೆಯನ್ನು ಉಚ್ಚರಿಸಿದರು [illegible] ದಾಮೋದರ ಬಾಳಿಗರು ಮತ್ತು [illegible] ನಾಗಪ್ಪ ರೈ ಇವರಿಬ್ಬರು ಮಾತ್ರ ಪ್ರತಿಜ್ಞೆಯನ್ನು ಕನ್ನಡ ಭಾಷೆಯಲ್ಲಿ ಉಚ್ಚರಿಸಿದರು ಉಳಿದವರೆಲ್ಲರೂ ಇಂಗ್ಲಿಷ್ ಭಾಷೆಯಲ್ಲಿ ಸ್ವೀಕರಿಸಿದರು

ಆ ಬಳಿಕ ಸಭಾಧ್ಯಕ್ಷರು ಅಂದಿನ ಸಭೆ ನಗರ ಸಭೆಯ ಅಧ್ಯಕ್ಷರ ಚುನಾವಣೆ ನಡೆಸುವುದಕ್ಕಾಗಿ [illegible] ಈ ಚುನಾವಣೆ ನಡೆಸುವ ಕ್ರಮ [illegible] ಓದಿ ಹೇಳಿದರು ಮತ್ತು ಉಮೇದ್ವಾರರ ಹೆಸರುಗಳನ್ನು ಸೂಚಿಸಲು ಹೇಳಿದರು

ಶ್ರೀ ದಾಮೋದರ ಬಾಳಿಗರು ಎದ್ದು [illegible] ಕಾಂಗ್ರೆಸ್ [illegible] ಶ್ರೀ [illegible] ವ್ಯಾಸರ ಹೆಸರನ್ನು ಅಧ್ಯಕ್ಷ ಪದವಿಗೆ ಉಮೇದ್ವಾರರನ್ನಾಗಿ ಸೂಚಿಸಿದರು ಶ್ರೀ ಎಸ್ ಸರ್ವಪ್ಪಯ್ಯನವರು ಇದನ್ನು ಅನುಮೋದಿಸಿದರು

ಆ ಬಳಿಕ ಶ್ರೀ ಗಂಗಾಧರ ದಾಸರು ಎದ್ದು ನಿಂತು ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿರುವ ಶ್ರೀ ಡಾ। ನಾಗಪ್ಪ ಆಳ್ವರ ಹೆಸರನ್ನು ಅಧ್ಯಕ್ಷ ಪದವಿಗೆ ಉಮೇದ್ವಾರರನ್ನಾಗಿ ಸೂಚಿಸಿದರು ಶ್ರೀ ಬಿ. ಎಸ್. ಭಾಸ್ಕರ ರೈಯವರು ಇದನ್ನು ಅನುಮೋದಿಸಿದರು

ಬೇರೆ ಉಮೇದ್ವಾರರನ್ನು ಯಾರೂ ಸೂಚಿಸಲಿಲ್ಲ

ಮುಂದೆ ಮತದಾನದ ಎರಡು ಪೆಟ್ಟಿಗೆಗಳನ್ನು ತಂದು ಅವನ್ನು ಎಲ್ಲರಿಗೂ ತೋರಿಸಿ ಇವುಗಳಿಗೆ ಬೀಗ ಮುದ್ರೆಯಾಯಿತು ಇಂಗ್ಲಿಷ್ ಭಾಷೆಯ ಅಕ್ಷರ ಕ್ರಮದಲ್ಲಿ ನಾಗಪ್ಪ ಆಳ್ವರ ಹೆಸರಿನ ಮೊದಲಕ್ಷರ ಮುಂದಾಗಿ ಬರುವುದರಿಂದ ಇವರ ಪೆಟ್ಟಿಗೆಗೆ I ನಂಬ್ರ ವ್ಯಾಸರ ಹೆಸರಿನ ಮೊದಲ ಅಕ್ಷರ ಆ ಮೇಲೆ ಬರುವುದರಿಂದ ಇವರ ಪೆಟ್ಟಿಗೆಗೆ II ನಂಬ್ರ ಕೊಡಲಾಯಿತು

ಪೆಟ್ಟಿಗೆಗಳ ಮೇಲೆ ಇವರ ಹೆಸರುಗಳನ್ನು ಬರೆಯಲಾಯಿತು ಇಷ್ಟಾದರೂ ಪೆಟ್ಟಿಗೆಗಳ ಗುರುತು ಸದಸ್ಯರಿಗೆ ತಪ್ಪಿ ಹೋಗಬಹುದೆಂಬುದರಿಂದ ಅಗತ್ಯವಿದ್ದರೆ ಪೆಟ್ಟಿಗೆಗಳ ಮೇಲೆ ಬೇರೆ ಬೇರೆ ಗುರುತುಗಳನ್ನು ಹಾಕಲು ಕ್ರಮಗಳಲ್ಲಿ ಅವಕಾಶವಿದೆಯೆಂಬುದರಿಂದ ಇಂಥ ಗುರುತುಗಳು ಬೇಕೇ? ಎಂದು ಸಭಾಧ್ಯಕ್ಷರು ಕೇಳಿದರು.

ಡಾ। ನಾಗಪ್ಪ ಆಳ್ವರು ತನ್ನ ಪೆಟ್ಟಿಗೆಯ ಮೇಲೆ ಅಶೋಕನ ಚಕ್ರ ಬಿಡಿಸಬೇಕೆಂದರು ಶ್ರೀ ವ್ಯಾಸರು ತನ್ನ ಪೆಟ್ಟಿಗೆಯ ಮೇಲೆ ಇಂಡಿಯದ ನಕ್ಷೆ ಬಿಡಿಸಬೇಕೆಂದರು ಈ ನಕ್ಷೆಗಳ ಏರ್ಪಾಡೂ ಆಯಿತು.

ಪೆಟ್ಟಿಗೆಗಳನ್ನು ಮತದಾನ ಕೋಣೆಯಲ್ಲಿರಿಸಲಾಯಿತು. ಮೊಹರು ಹಾಕಿದ ಮತದಾನದ ಪತ್ರ ಕೊಡುವುದಾಗಿಯೂ ಅದರಲ್ಲಿ ಏನನ್ನು ಬರೆಯದೆ ತಮಗೆ ಬೇಕಾದ ಉಮೇದ್ವಾರರ ಪೆಟ್ಟಿಗೆಯಲ್ಲಿ ಹಾಕಬೇಕೆಂದೂ ಏನಾದರೂ ಬರೆದರೆ ಆ ಮತವು ಅಸಿಂಧುವಾಗುವುದೆಂದೂ ವಿವರಿಸಲಾಯಿತು. ಮತ ಕೊಡಲು ಹೋಗುವಾಗ ಒಂದು ದಾರಿಯಿಂದ ಹೋಗಿ ಕೊಟ್ಟು ಮರಳುವಾಗ ಬೇರೆ ಸುತ್ತು ತೆಗೆದು ಬಂದು ತಮ್ಮ ಸ್ಥಾನ ಅಲಂಕರಿಸಬೇಕಾಗಿಯೂ ಸೂಚಿಸಲಾಯಿತು [illegible] ವರು [illegible] ಸವಲತ್ತು [illegible] ಮಾಡಲ್ಪಡುವುದಕ್ಕೆ ಈ ಸುತ್ತು ತೆಗೆಯುವ ಏರ್ಪಾಡು ಹೇಳಲಾಯಿತು.

ಆ ಬಳಿಕ ಒಬ್ಬೊಬ್ಬರೇ ಸದಸ್ಯರು ಎದ್ದು ಬಂದು ಮತದ ಪತ್ರ ಪಡೆದು ಮತದಾನ ಮಾಡಿ ಸೂಚಿಸಿದ ಕ್ರಮದಂತೆ ಸುತ್ತು ಬಂದು ತಮ್ಮ ತಮ್ಮ ಕುರ್ಚಿ ಅಲಂಕರಿಸಿದರು.

ಹೀಗೆ ಇಬ್ಬರು ಉಮೇದ್ವಾರರನ್ನು ಬಿಟ್ಟು ಉಳಿದ ಮೂವತ್ತು ಮಂದಿ ಮತದಾನ ಮಾಡಿದ ಆ ಬಳಿಕ ಎರಡೂ ಪೆಟ್ಟಿಗೆಗಳನ್ನು ಹೊರಗೆ ತಂದು ಮೊದಲ ನಂಬ್ರ Iನೇ ಪೆಟ್ಟಿಗೆಯ ಬೀಗ ತೆಗೆದು ಮತಗಳನ್ನು ಲೆಕ್ಕ ಮಾಡಲಾಯಿತು ಹನ್ನೊಂದು ಮತದ ಪತ್ರಗಳಿದ್ದವು. ಆ ಬಳಿಕ ನಂಬ್ರ IIನೇ ಪೆಟ್ಟಿಗೆಯ ಬೀಗ ತೆಗೆದು ಮತಗಳನ್ನು ಲೆಕ್ಕ ಮಾಡಲಾಯಿತು ಇದರಲ್ಲಿ ಹತ್ತೊಂಭತ್ತು ಮತದ ಪತ್ರಗಳಿದ್ದವು

ಶ್ರೀ ಎಲ್ ಸಿ ವ್ಯಾಸರಿಗೆ ಹೆಚ್ಚಿನ ಮತಗಳು ಸಿಕ್ಕಿರುವುದರಿಂದ ಇವರು ನಗರ ಸಭೆಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವುದಾಗಿ ಅಂದಿನ ಸಭಾಧ್ಯಕ್ಷರು ಜಾಹೀರು ಮಾಡಿ ಶ್ರೀ ಎಲ್. ಸಿ ವ್ಯಾಸರು ಅಧ್ಯಕ್ಷ ಸ್ಥಾನವನ್ನು ಕೂಡಲೇ ಕೈಕೊಳ್ಳಬೇಕಾಗಿ ಕೇಳಿಕೊಂಡು ತಮ್ಮ ಆಸನವನ್ನು ಅವರಿಗ ಬಿಟ್ಟುಕೊಟ್ಟರು ಶ್ರೀ ಎಲ್. ಸಿ ವ್ಯಾಸರು ಬಂದು ಅಧ್ಯಕ್ಷರಾಗಿ ಕುಳಿತುಕೊಂಡರು

ಎಂಬಲ್ಲಿಗೆ ಸ್ವತಂತ್ರ ಭಾರತದಲ್ಲಿ ನಡೆದ ನಮ್ಮ ಹೊಸ ಚುನಾಯಿತ ನಗರ ಸಭೆಯ ಅಧ್ಯಕ್ಷರ ಚುನಾವಣೆಯ ಕಾರ್ಯಕ್ರಮ ಮುಗಿಯಿತು

ಇನ್ನು ಮುಂದೆ ಸಭೆಯಲ್ಲಿ ನಡೆದ ಕಾರ್ಯಕಲಾಪಗಳನ್ನು ಇಷ್ಟೇ ವಿವರವಾಗಿ ಬರೆದರೆ ಸಂಪಾದಕರು ಮುದ್ರಿಸುವುದಿಲ್ಲವೆಂಬುದರಿಂದ ಮುಂದಿನ ಕಥೆಯನ್ನು ಸ್ವಲ್ಪ ಸಂಕ್ಷೇಪದಲ್ಲಿ ಹೇಳಬೇಕು.

ಶ್ರೀ ಎಲ್ ಸಿ ವ್ಯಾಸರು ಅಧ್ಯಕ್ಷರಾಗಿ ಕುಳಿತ ಬಳಿಕ ಒಬ್ಬೊಬ್ಬರೇ ಸಭಾಸದರು ತಮ್ಮ ಕುರ್ಚಿಯಿಂದ ಎದ್ದು ನಿಂತು ಅಧ್ಯಕ್ಷರನ್ನು ಅಭಿನಂದಿಸುವ ಭಾಷಣ ಮಾಡಿದರು ಹೀಗೆ ಹತ್ತೊಂಭತ್ತು ಮಂದಿ ಸಭಾಸದರು ಹತ್ತೊಂಬತ್ತು ಭಾಷಣಗಳನ್ನು ಮಾಡಿದರು ಶ್ರೀ ಎಲ್ ಸಿ ವ್ಯಾಸರೇ ಈ ಅಧ್ಯಕ್ಷ ಪದವಿಯನ್ನಲಂಕರಿಸಲು ಯೋಗ್ಯ ಜನವೆಂದು ಹತ್ತೊಂಭತ್ತು ಜನರು ಹತ್ತೊಂಭತ್ತು ಸಾರಿ ಹೇಳಿದರು ಅಧ್ಯಕ್ಷರಿಗೆ ಬಹಳ ದೊಡ್ಡ ಜವಾಬ್ದಾರಿ ಇದೆಯೆಂದು ಹತ್ತೊಂಭತ್ತು ಮಂದಿ ಹತ್ತೊಂಭತ್ತು ಸಾರಿ ಹೇಳಿದರು ಆ ಬಳಿಕ ಮಂಗಳೂರಿಗೆ ನಳ್ಳಿನೀರು ಮತ್ತು ಶುದ್ಧ ಚರಂಡಿಗಳ ಆವಶ್ಯಕತೆ ಹತ್ತೊಂಭತ್ತು ಮಂದಿಯೂ ಒತ್ತಿ ಹೇಳಿದರು

ಈ ಹತ್ತೊಂಭತ್ತು ಮಂದಿಯೂ ಶ್ರೀ ವ್ಯಾಸರಿಗೆ ಮತದಾನ ಮಾಡಿದ ಹತ್ತೊಂಭತ್ತು ಮಂದಿಯೂ ಒಂದೇ ಎಂದು ತಿಳಿದರೆ ತಪ್ಪು. ಒಂದನೆಯದಾಗಿ ಮಾತನಾಡಿದ ಶ್ರೀ ಬಿ ಎಸ್ ಭಾಸ್ಕರ ರೈಯವರು ತಾನು ವಿರುದ್ಧ ಕೆಲಸ ಮಾಡಿದವನೆಂದು ಹೇಳಿಕೊಂಡು ಮುಂದೆ ತಾನೂ ತನ್ನ ಪಕ್ಷದವರೂ ಸಹಕರಿಸಿರುವುದಾಗಿ ಹೇಳಿ ಒಂದು ಪಕ್ಷದ ಮುಂದಾಳು ತಾನೆಂಬುದನ್ನು ಜಾಹೀರು ಮಾಡಿದ್ದರು

ಕಮ್ಯೂನಿಸ್ಟ ಐದು ಮಂದಿ ಉಮೇದ್ವಾರರಲ್ಲಿ ಚುನಾವಣೆ ಹೊಂದಿದ ಒಬ್ಬರೇ ಬಂಧುಗಳು ಮುನಿಸಿಪಲ್ ಕಸಗುಡಿಸುವವರ ಮತ್ತು ತೋಟಿಗಳ ಬೇಡಿಕೆಗಳನ್ನು ಮುಂದಿಡುವ ಪ್ರಸಂಗವೀರಿಕೆ ಹಾಕದೆ ಬಿಡಲಿಲ್ಲ. ಬೇಡಿಕೆಗಳನ್ನು ಮನ್ನಿಸದಿದ್ದಲ್ಲಿ ಮುಷ್ಕರವಾದೀತೆಂಬ ನೋಟೀಸನ್ನು ಮಾತ್ರ ಮೊದಲ ಸಭೆಯೆಂಬುದರಿಂದೇನೋ ಕೊಡಲಿಲ್ಲ.

ಶ್ರೀ ಎಲ್. ಸಿ ವ್ಯಾಸರನ್ನು ಸೂಚಿಸಿದವನು ತಾನೆಂಬುದರಿಂದ ಕೊನೆಗೆ ಮಾತಾಡುವ ಹಕ್ಕು ತನ್ನದೆಂದು ಶ್ರೀ ದಾಮೋದರ

(ಆನೇ ಪುಟಕ್ಕೆ ಮುಂದುವರಿದಿದೆ)

ಐಕ್ಯವೇ ಜೀವನ - ವಿಭಾಗೀಕರಣವೇ ಮರಣ

ಭಾರತ ಮುಸಲ್ಮಾನ ಪಶ್ಚಾತ್ತಾಪ

ಪಾಕಿಸ್ತಾನ ಮುಸಲ್ಮಾನರ ಕಳವಳ

ದೇಶದ ವಿಭಾಗೀಕರಣದ ವಿರುದ್ಧ ಧ್ವನಿಯೆತ್ತಿದ ರಾಷ್ಟ್ರೀಯವಾದಿ ಲೀಗ್ ಧುರೀಣರ ಘೋಷಣೆಯು ಅನ್ವಿಚಾರದ್ದೆಂದು ಸಾರಿದ ಹಿರಿಸ್ಥದ ಮುಸ್ಲಿಂಲೀಗ್ ಮುಖಂಡರ ಮತ್ತಿತರ ಡಿಲ್ಲಿ, ಯುಕ್ತ ಪ್ರಾಂತ್ಯ ಮತ್ತು ಬೊಂಬಾಯಿಯ ಮುಸಲ್ಮಾನರ ಹೇಳಿಕೆಗಳು ಇಂದಿನ ಕಾರ್ಗತ್ತಲೆಯ ಪರಿಸ್ಥಿತಿಯಲ್ಲಿ ಬೆಳ್ಳಿ ಚುಕ್ಕಿಯಂತಿರುವವು. ಎರಡು ಜನಾಂಗದ ತತ್ವವನ್ನು ಸಮರ್ಥಿಸಿ ಪಾಕಿಸ್ತಾನಕ್ಕಾಗಿ ತಾವೆಲ್ಲರೂ ಶ್ರಮಿಸಿದ್ದು ದೊಡ್ಡ ಪ್ರಮಾದವೆಂದೇ ಅವರ ಪಶ್ಚಾತ್ತಾಪ.

ಇಂದಿನ ರಕ್ತಪಾತಕ್ಕೆ ಅಖಂಡವಾಗಿರುವ ದೇಶವನ್ನು ವಿಚ್ಛೇಧಿಸಿದ್ದೇ ಮೂಲ ಕಾರಣವೆಂದವರ ಧೃಡವಾದ ನಂಬಿಕೆಯಾಗಿದೆ. ಮುಸಲ್ಮಾನರು ಪಾಕಿಸ್ಥಾನವೆಂಬ ಭೂತಛಾಯೆಯನ್ನು ಕಂಡೂಹಿಡಿಯಲು ಶ್ರಮಿಸಿ ಇಂದು ತಮಗೆ ಅತ್ಯಾವಶ್ಯಕವಾಗಿ ಬೇಕಾಗಿರುವ ಭದ್ರತೆ ಅಭಿವೃದ್ಧಿ ಗಳ ಅನುಕೂಲತೆಗಳನ್ನು ಕಳೆಕೊಂಡಿರುವರೆಂದು ಇವರು ಕಂಡುಹಿಡಿದಿರುವರು. ಹಿಂದೊಮ್ಮೆ ರಾಜಾಜಿಯವರು "ಪಾಕಿಸ್ತಾನದ ಕಲ್ಪನೆಯು ಕೇವಲವೊಂದು ಭೂತಛಾಯೆ, ಅದನ್ನು ಕೊಟ್ಟು ಬಿಟ್ಟರೆ ಮತ್ತೆ ನಿಜಸ್ಥಿತಿಯ ಅರಿವಾಗಿ ಐಕ್ಯವು ತನ್ನಷ್ಟಕ್ಕೆ ಸಾಧಿಸುವುದು" ಎಂದು ಭವಿಷ್ಯ ಹೇಳಿದ್ದು ಇಂಥದು ಅಕ್ಷರಶ ನಿಜವೆಂದು ಭಾವನೆಯಾಗ ಹತ್ತಿದೆ.

ಕಡು ದ್ವೇಷ ಮತ್ತು ನಿರಂತರ ಭಯಭೀತಿ ಅಭದ್ರತೆಗಳನ್ನುಂಟು ಮಾಡುವ ತುಂಡು ತುಂಡು ದೇಶ ಭಾಗಗಳ ರಾಜ್ಯದಿಂದೇನು ಪ್ರಯೋಜನ? ಬಲಿಷ್ಠರೂ ಜಯಿಸುವ ಶಕ್ತಿಯುಳ್ಳವರೂ ಇತರ ಮೃದು ಸ್ವಭಾವವನ್ನು ಯಾವಾಗಲೂ ಸದೆ ಬಡಿಯಬಹುದೆಂಬ ಅವಿವೇಕದ ತಪ್ಪು ಕಲ್ಪನೆಯು ಪೋಷಿಸಲ್ಪಡುವ ತನಕ ಎಲ್ಲವೂ ಸರಿಯೆಂದು ಭಾವಿಸಲಾಗಿತ್ತು. ಆದರೆ ಈಗ ನಮ್ರರೆಂದು ಭಾವಿಸಲ್ಪಟ್ಟ ಜನರು ಶೂರರೆಂದು ತಿಳಕೊಳ್ಳಲ್ಪಟ್ಟವರಷ್ಟೇ (ಅವರಿಗಿಂತಲೂ ಒಂದು ಪಾಲು ಹೆಚ್ಚೆಂದರೂ ಅತಿಶಯವಲ್ಲ) ಪಾಶವೀ ಅಕೃತ್ಯಗಳನ್ನು ಮಾಡಲು ಸಮರ್ಥರಿರುವರೆಂಬ ಸಂಗತಿ ಎಲ್ಲರಲ್ಲೂ ಕೌತುಕವನ್ನು ಕಳವಳವನ್ನು ಉಂಟು ಮಾಡಿದೆ.

ಹಿಂದೂ ಮುಸಲ್ಮಾನರಿರ್ವರೂ ತಮ್ಮ ಕೈಗಳನ್ನ ರಕ್ತಪಾತದಿಂದ ಕೊಳೆ ಮಾಡಿಕೊಂಡಿರುವರು ಮಾತ್ರವಲ್ಲ ತಮ್ಮ ಆತ್ಮಗಳನ್ನೇ ಅವಮಾನಿಸಿಕೊಂಡಿರುವರು. ಅರಾಜಕತ್ವ ದಂಗೆಗಳಿಂದ ಇವರು ದೇಶಕ್ಕೆ ಮಾಡಿದ ಹಾನಿಯನ್ನು ಸರಿಪಡಿಸಲು ಇನ್ನೊಂದು ತಲಾಂತರದ ಸತ್ಕಾರ್ಯಗಳಾದರೂ ಸಾಲದೆನಿಸುತ್ತದೆ. ಇಂದು ಇರ್ವರೂ ಸಮಾನವಾಗಿ ಖಂಡನಾರ್ಹರಾದ್ದಾರೆ.

ಮತ್ತೆ ಈ ಭ್ರಾತೃ ಕಲಹದ ಮಧ್ಯದಲ್ಲಿ ನಾವಿಂದು ಪಶ್ಚಾತ್ತಾಪದ ಕೂಗನ್ನೂ ಕೇಳುತಿದ್ದೇವೆ. ಇಲ್ಲೊಂದು ಸಮಸ್ಯೆ ಪರಿಹಾರದ ದಾರಿಯೂ ಸಿಕ್ಕುವ ಆಶೆ ಕಂಡು ಬಂದಿದೆ

ನಿರಾಶ್ರಿತರ ಸ್ವಗೃಹ ಚಿಂತೆ

ಎರಡು ಡೊಮಿಯನ್ನುಗಳ ಗಡಿಗಳಿಂದ ಸ್ಥಳಾಂತರಗೆಯ್ಯುವ ಈ ನಿರಾಶ್ರಿತ ತಂಡಗಳ ಮನಸ್ಸಿನಲ್ಲಿಂದು ಯಾವ ತರದ ಹೋರಾಟ ನಡೆಯಬಹುದು? ಭಯ ಬೆದರಿಕೆಗಳಿಂದ ಇಂದವರಿಗೆ ಮನಸ್ಸೆಂಬುದೊಂದು ಸಂಪೂರ್ಣ ಇಲ್ಲದಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಅವರನ್ನು ಸಮಾಧಾನಗೊಳಿಸಿ ಅವರಿಗೆ ಪುನರ್ಜೀವನದ ವ್ಯವಸ್ಥೆಯನ್ನು ಮಾಡಿಕೊಡಬೇಕಾದುದು ಪ್ರಥಮ ಕರ್ತವ್ಯವೆನಿಸುತ್ತದೆ. ಆದರೆ ಅವರಲ್ಲನೇಕರು ಇನ್ನು ತಮ್ಮ ಪೂರ್ವ ವಸಾಹತುಗಳಿಗೆ ಹೋಗುವ ಹಾರೈಕೆಯುಳ್ಳವರಾಗಿರುವರು. ನಿರಾಶ್ರಿತ ಶಿಬಿರಗಳಲ್ಲವರು ಕೇವಲ ತಾತ್ಕಾಲಿಕವಾಗಿ ಬಾಳಲು ಇಚ್ಛಿಸುವರು.

ನಿರಾಶ್ರಿತರಿಗೆ ಅವರ ಹೊಸ ವಾಸಸ್ಥಾನ ಪ್ರದೇಶದಲ್ಲಿ ಉದ್ಯೋಗವನ್ನು ಕೊಡುವುದರಿಂದಲೇ ಅವರ ಸಮಸ್ಯೆಯು ಬಗೆಹರಿಯಲಾರದು. ತಮ್ಮ ಹುಟ್ಟು ಪ್ರದೇಶದಲ್ಲಿ ಶಾಂತಿ ಶಿಸ್ತು ಪಾಲನೆಯು ಸುಗಮಗೊಂಡಾಗ ಅವರು ಪುನ ಅಲ್ಲಿಗೇ ಹೋಗ ಬಯಸುವರೆಂಬುದು ಖಂಡಿತ.

ಈ ವಿಷಯಗಳೆರಡನ್ನು ಪರಿಶೀಲಿಸುವಾಗ ಇಂದು ದೇಶ ವಿಭಾಗೀಕರಣಕ್ಕಾಗಿ ಮುಸಲ್ಮಾನರು ಪಡುತ್ತಿರುವ ಪಶ್ಚಾತ್ತಾಪವೇಕೆಂದರ್ಥವಾಗುತ್ತದೆ. ಆದುದರಿಂದ ಇಂದಿನ ಅರಾಜಕತೆಯಿಂದ ಮುಕ್ತಗೊಳ್ಳಬೇಕಾದರೆ ದೇಶವನ್ನು ಪೂರ್ವದ ಐಕ್ಯತೆಗೇ ಪರಿವರ್ತಿಸುವುದೇ ಯೋಗ್ಯವೆಂಬ ಸಂಗತಿಯು ಮುಂದಟ್ಟಾಗದಿರದು.

ಭೌಗೋಲಿಕವಾಗಿಯೂ, ರಾಜಕೀಯವಾಗಿಯೂ, ಸಾಂಸ್ಕೃತಿಕವಾಗಿಯೂ ಭಾರತವು ಎಂದೂ ವಿಭಾಗೀಕರಣವಾಗಲು ಯೋಗ್ಯವಾಗಿಲ್ಲವೆಂಬ ಸಂಗತಿಯು ಈಗಲಾದರೂ ಸ್ವಯಂ ಸ್ಪಷ್ಟವಾಗದಿರದು. ಬ್ರಿಟಿಷ್ ಆಡಳಿತವಾಗಲಿ, ಮೊಗಲ್ ಬಾದಶಾಹಿಯಾಗಲಿ, ಇಲ್ಲವೆ ಅವರಿಗಿಂತ ಮುಂಚಿನ ತುಂಡು ತುಂಡು ಭಾಗಗಳನ್ನಾಳುತಿದ್ದ ಅರಸರಾಗಲಿ ಭಾರತದ ಈ ಸಾರ್ವತ್ರಿಕ ಅಖಂಡತೆಯನ್ನು ಅಲಕ್ಷ್ಯ ಮಾಡಿರಲಿಲ್ಲ. ಹಾಗ ಮಾಡಲೂ ಅವರಿಗೆ ಸಾಧ್ಯವೂ ಆಗಲಿಲ್ಲ. ನಗರಗಳಲ್ಲಿನ ಜನತೆ ಒಂದು ವೇಳೆ ವಿವಿಧ ಆಜ್ಞಾಂಗಗಳಿಗೆ ಭಿನ್ನ ವಿಧೇಯತೆಯನ್ನು ಸಲ್ಲಿಸುತಿದ್ದರೂ ಹಳ್ಳಿ ನಾಡಿನ ಜನತೆಯು ಮಟ್ಟಿಗೆ ಈ ದೇಶದಲ್ಲಿ ಸರ್ವತ್ರವೂ ಸಾಮಾನ್ಯವೂ ಆದ ಐಕ್ಯತೆಯು ತು ವಿಚ್ಛೇಧಿಕರಣವನ್ನವರು ಇಂದಿಗೂ ಮನಂದು ತಿಳಕೊಂಡಿಲ್ಲ. ಪ್ರಾಚೀನ ಕಾಲದಿಂದಲೂ ನಮ್ಮ ಹಳ್ಳಿ ಜನತೆ ಏಕ ಪ್ರಕಾರವಾದ ಜೀವನ ವಿಧಾನವನ್ನನುಸರಿಸಿ ಬಂದಿರುತ್ತದೆ. ಭಾರತ ಅಭಿವೃದ್ಧಿಯು ಚೆನ್ನಾಗಿ ಬಿನಂತಿದ್ದ ರೀತಸಿಗೆ ಯಾವ ಜಾತಿ ಮತ ವೈಷಮ್ಯ ಬಾಧೆಯಿರಲಿಲ್ಲ.

ಈಗಿನ ಈ ವಿಭಾಗೀಕರಣ ಒಂದೇ ಏಟಿಗೆ ಈ ಎಲ್ಲ ಸ್ವಾಭಾವಿಕ ಬಾಂಧವ್ಯದ ಕಟ್ಟನ್ನು ಕಡಿದು ಹಾಕಿ ಐಕ್ಯಮತ್ಯದಿಂದಿದ್ದ ಜನತೆಯೊಳಗೆ ಮತೀಯ ಭಿನ್ನತೆಯನ್ನುಂಟುಮಾಡಿದೆ. ಮಾತ್ರವಲ್ಲ ಇದು ಒಂದು ಕುರೂಪವಾದೊಂದು ಪ್ರತ್ಯೇಕ ರಾಜ್ಯವನ್ನು ನಿರ್ಮಿಸಿ ಆ ಭಾಗದ ಸುಕ್ರಮವೂ ಸಮರಸವೂ ಆದ ಅಭಿವೃದ್ಧಿಗೆ ಅಸಹ್ಯವಾದ ಆತಂಕವನ್ನುಂಟು ಮಾಡಿದೆ.

ಅಲ್ಪಸಂಖ್ಯಾಕ ಓಟ

ಪಾಕಿಸ್ತಾನದಿಂದಿಂದು ಚತುರ ಕೆಲಸಗಾರರು ತಳ ಕೀಳುತಿದ್ದಾರೆ. ಅಲ್ಲಿನ ಬಂಡವಾಳವು ಸ್ಥಳಾಂತರಿಸಲ್ಪಡುತ್ತದೆ. ಅದರ ಅಭಿವೃದ್ಧಿಗೆ ಬೇಕಾಗಿರುವ ಸೌಕರ್ಯಗಳಾಗಲೀ, ಇದ್ದುದನ್ನು ತೃಪ್ತಿಕರವಾಗಿಯೂ ಪ್ರಗತಿ ಪರವಾಗಿಯೂ ಉಪಯೋಗಿಸಿಕೊಳ್ಳಲು ಸಮರ್ಥರಿರುವ ತಜ್ಞ ವ್ಯಕ್ತಿಗಳೂ ಅಲ್ಲಿಲ್ಲದಾಗಿದ್ದಾರೆ. ಈಗ ಒಂದು ವೇಳೆ ಅಲ್ಲಿ ಭದ್ರತೆಯನ್ನುಂಟು ಮಾಡಿದರೂ ಅಲ್ಲಿಂದ ಓಡಿ ಹೋದವರನ್ನು ಪುನ ಬರಿಸಿಕೊಳ್ಳದಿದ್ದರೆ ಪಾಕಿಸ್ತಾನವು ಎಂದಿಗೂ ಸುಕ್ರಮ ಶ್ರೇಯಸ್ಸನ್ನು ಹೊಂದಲಾರದು. ಭಾರತದಿಂದ ಅಲ್ಲಿಗೆ ನಿರಾಶ್ರಿತರಾಗಿ ಹೋದ ಮುಸಲ್ಮಾನರ ಅಲ್ಲಿಂದ ಬಂದ ನಿಪುಣ ಕೆಲಸಗಾರರ ಇಲ್ಲವೆ ಬಂಡವಾಳದ ಲೋಪವನ್ನು ತುಂಬಲು ಸಮರ್ಥರಿರುವುದಿಲ್ಲ.

ಆದುದರಿಂದ ತನ್ನ ಸ್ವಂತ ಹಿತ ದೃಷ್ಟಿಯಿಂದ ಪಾಕಿಸ್ತಾನವು ಓಡಿ ಹೋದ ಅಲ್ಪಸಂಖ್ಯಾಕರಿಗೆ ಮರಳಿ ಬರುವಂತೆ ಪ್ರೇರೇಪಿಸುವುದು ಅತ್ಯಾವಶ್ಯಕವೆನಿಸುತ್ತದೆ. ಅವರಿಗೆ ಭದ್ರತೆ ಮತ್ತು ಸಂಪೂರ್ಣ ನಾಗರೀಕ ಸ್ವಾತಂತ್ರ್ಯಗಳ ಆಶ್ವಾಸನೆಗಳನ್ನು ಕೊಡಬೇಕು.

ಭಾರತದಲ್ಲಿರುವ ನಮಗೂ ನಮಾನ ಅಗಾಧತೆಯ ಸಮಸ್ಯೆಯುಂಟಾಗಿದೆ. ಆದರೆ ಸ್ವಪ್ರಿಯವಿರದ ಪಾಕಿಸ್ತಾನದ ಅನುಕೂಲತೆ ನಮಗಿಲ್ಲ. ನಮ್ಮ ಸಮಸ್ಯೆ ಕೇವಲ ತಾತ್ಕಾಲಿಕವಾದುದು. ನಾಡಿನಲ್ಲಿ ಭದ್ರತೆಯನ್ನು ಸುಸ್ಥಾಪಿಸಿ, ಆಹಾರ ಬಟ್ಟೆ ಮತ್ತು ವಸತಿಗಳ ತೃಪ್ತಿಕರ ಏರ್ಪಾಡನ್ನು ಊರ್ಜಿತಗೊಳಿಸಿದರಾಯಿತು. ನಮ್ಮ ದೇಶದ ಭವಿಷ್ಯವು ಭವ್ಯವಾಗಿದೆ. ಆದರೆ ಕಳೆದ ಕೆಲವು ತಿಂಗಳುಗಳ ರಕ್ತಮಯ ಪ್ರಮಾದಗಳನ್ನು ಮಾತ್ರ ನಾವು ಮತ್ತೊಮ್ಮೆ ನಿರ್ವಹಿಸಬಾರದು. ಎಲ್ಲಾ ಪರಿಸ್ಥಿತಿಯನ್ನು ಸುಧಾರಿಸುವ ಸರಕಾರದೊಡನೆ ಸಹಕರಿಸುವುದು ಇಂದು ನಮ್ಮೆಲ್ಲರ ಕರ್ತವ್ಯವಾಗಿದೆ.

ಐಕ್ಯದ ವಿವಿಧಾವಲೋಕನ

ಇಂದಿನ ಅವರ್ಣನೀಯವಾದೀ ಬಿಕ್ಕಟ್ಟಿನಿಂದ ಪಾರಾಗಲು ಮತ್ತು ಅಪಾರ ಹಾನಿ ಸಂಕಷ್ಟಕ್ಕೆ ನಮ್ಮ ಅಸಂಖ್ಯಾತ ಜನತೆ ತುತ್ತಾಗದಂತೆ ತಡೆಯಲು ನಾವಿಂದು ಒಂದೇ ಒಂದು ಅತೀ ಪ್ರಾಮುಖ್ಯವಾದ ವಿಚಾರವನ್ನು ಪ್ರಚಾರ ಮಾಡಬೇಕು. **ಐಕ್ಯದಲ್ಲಿಯೇ ಸುಗಮ ಜೀವನವಿದೆ. ವಿಭಾಗೀಕರಣವೇ ಮರಣ. ಸತ್ಯಸ್ಥಿತಿಯನ್ನರಿಸಲು ಅಸಮ್ಮತಿ ಪಡುವವರಿಗೆ ಮೂರನೇಯದಾದ ಬೇರೆ ದಾರಿಯೇ ಇಲ್ಲ.**

ಇಲ್ಲಿ ಐಕ್ಯತೆಯೆಂದರೆ ಒಂದು ಪಕ್ಷದವರು ಇನ್ನೊಂದು ಸಂಪೂರ್ಣ ನಾಶಗೊಳಿಸುವುದಲ್ಲವೆಂಬುದನ್ನೂ ನಾವು ಮರೆಯಬಾರದು.

★ ಹಿಂಸೆಯು ಹೇಯವಾದುದು, ಕ್ಷಮೆ ದಮೆಗಳೇ ಶಾಂತಿಯ ಮಾರ್ಗಗಳು. ಎಲ್ಲರೂ ಸರಕಾರದೊಡನೆ ಸಹಕರಿಸಬೇಕು.

★ ಈ ದೇಶದಲ್ಲಿನ ಜನ ಜೀವನದಲ್ಲಿ ಕೆಲವೊಂದ ಸರ್ವ ಸಮಾನಾಂತರವಾದ ರೀತಿ ನೀತಿಗಳಿವೆಯೆಂಬುದನ್ನೆಲ್ಲರೂ ಮನಗಂಡು ಜನಾಂಗೋದ್ಧಾರಕ್ಕಾಗಿ ಜಾತಿ, ಮತ, ಪಂಥ ಭಾವನೆಗಳನ್ನು ಮರೆತು ವರ್ತಿಸುವುದು ಅತ್ಯಾವಶ್ಯಕ.

ಐಕ್ಯವು ಮಾನವ ಪ್ರಗತಿಯ ಸಾಧನ. ಅದು ದೈವಿಕ ವರ ಪ್ರಧಾನವೂ ಆಗಿದೆಯೆಂಬುದನ್ನರಿತುಕೊಳ್ಳಬೇಕು. ಆದುದರಿಂದ ಹಿಂದೂ ಮುಸಲ್ಮಾನರಲ್ಲಿ ಇಂದು ವಿಭಾಗೀಕರಣವು ತಪ್ಪೆಂದು ಕಂಡು ಬಂದ ನಿರ್ಣಯವನ್ನು ಬಹಿರಂಗವಾಗಿ ಒಪ್ಪಿ ಆ ತಪ್ಪನ್ನು ಒಪ್ಪಾಗಿ ಮಾಡಲು ಎಲ್ಲರೂ ಉಪೇಕ್ಷೆಗ ರಹಿತರಾಗಿ ಕರ್ತವ್ಯ ಪರಾಯಣರಾದರೆಂದರೆ ನಮ್ಮ ಇಂದಿನ ಸಂಕಷ್ಟಗಳೆಲ್ಲ ಶೀಘ್ರದಲ್ಲಿ ಮಾಯವಾಗುವವು.

ನಗರ ಸಭೆಯ ಅಧ್ಯಕ್ಷರ ಚುನಾವಣೆ

(ಒನೇ ಪುಟದಿಂದ)

ವಾಳಗರು ಕೊನೆಗೆ ಭಾಷಣ ಮಾಡಿದರು. ಕೆಲಸಗಾರರ ತಂಡವೊಂದನ್ನು ಬೆಂಬಲಕ್ಕೆ ಕೊಡುವುದಾಗಿ ವ್ಯಾಸರಿಗೆ ಧೈರ್ಯ ಕೊಟ್ಟರು. ಪ್ರತಿಜ್ಞೆಯನ್ನು ಕನ್ನಡದಲ್ಲಿ ಓದಿದುದರಿಂದ ತನಗೆ ಇಂಗ್ಲಿಷು ಬರುವುದಿಲ್ಲವೆಂಬ ತಪ್ಪು ಅಭಿಪ್ರಾಯ ಯಾರಲ್ಲಿಯೂ ಬರಬಾರದೆಂದು ಈ ಭಾಷಣವನ್ನು ಇಂಗ್ಲೀಷಿನಲ್ಲಿ ಮಾಡಿದರು.

ಕೊನೆಗೆ ಶ್ರೀ ಎಲ್ ಸಿ ವ್ಯಾಸರು ತನಗೆ ಮತ ಕೊಟ್ಟವರಿಗೆ ಕೊಡದಿದ್ದವರಿಗೆ ಎಲ್ಲರಿಗೂ ವಂದಿಸಿದರು.

ಪ್ರೇಕ್ಷಕ ವರ್ಗದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯರೂ ಇದ್ದು ಇಬ್ಬರು ಪ್ರಮುಖ ಕಾಂಗ್ರೆಸ್ ವ್ಯಕ್ತಿಗಳೊಳಗಿನ ಈ ಸ್ಪರ್ಧೆಯ ಫಲಿತಾಂಶ ಆತುರದಿಂದ ನಿರೀಕ್ಷಿಸುತ್ತಿದ್ದರು. ಪತ್ರಿಕಾಪ್ರತಿನಿಧಿಯೊಬ್ಬರು ಹತ್ತೊಂಭತ್ತು ಭಾಷಣಗಳನ್ನು ಸಂಪೂರ್ಣ ಬರೆದುಕೊಂಡಿದ್ದಾರೆಂದು ತಿಳಿಸಿ ಇದ್ದುದನ್ನು ಇದ್ದಂತೆ ಬರೆದ ಇದನ್ನು ಇಲ್ಲಿಗೆ ಮುಗಿಸಿಬಿಡಲಾಗುತ್ತದೆ.

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits: Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ಮುರ್ತೆದಾರ ಸಂಘದ ಸಮ್ಮೇಲನ: ದ. ಕನ್ನಡ ಜಿಲ್ಲೆಯ ಮುರ್ತೆದಾರರ ಪ್ರಚಂಡ ಮೆರವಣಿಗೆಯು ಘೋಷಣೆಗಳನ್ನು ಮಾಡುತ್ತಾ ಇರ್ದೇ ಕಳೆದ ತಾ. 12ನೇ ರವಿವಾರ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾ ಸಂಜೆ ಕೇಂದ್ರ ಮೈದಾನಿನಲ್ಲಿ ಸ್ಥಿರಿತು ಕಾಂಗ್ರೆಸ್ ಧ್ವಜದಡಿಯಲ್ಲಿ ಶ್ರೀ. ಬಿ. ಗಂಗಾಧರ ಎಡ್ವೋಕೇಟ್ ಅವರ ಅಧ್ಯಕ್ಷತೆಯಲ್ಲಿ ಸಭಾಕಾರ್ಯ ಆರಂಭವಾಯಿತು. ಶ್ರೀಗಳಾದ, ಎಸ್. ಎಸ್ ಕಿಲ್ಲೆ, ಕೆ. ಟಿ. ಕರ್ಕೇರ, ಸುಬ್ಬಣ್ಣ ಶೆಟ್ಟಿ, ಎಸ್ ಎಸ್, ಕಿಲ್ಲೆ, ಕಕ್ಕಿಲ್ಲಾಯ ಇವರೇ ಮೊದಲಾದ ಹತ್ತಾರು ಮಹನೀಯರು ಮಧ್ಯನಿರೋಧದಿಂದ ನಿರುದ್ಯೋಗಿಗಳಾಗಿರುವ ಮುರ್ತೆದಾರರ ಉನ್ನತಿಯನ್ನು ಹಾರೈಸಿ ಭಾಷಣವಿತ್ತರು ಸುಮಾರು 11ಸಾವಿರ ಮಂದಿ ಮುರ್ತೆದಾರರಿಗೆ ಯೋಗ್ಯ ಪರಿಹಾರವನ್ನು ಸರಕಾರವು ಕೊಡಬೇಕೆಂದು ಕೇಳಿಕೊಳ್ಳಲಾಯಿತು ಕೆಲವರು ಸರಕಾರದ ಅನುಮತಿಯನ್ನು ನಿರೀಕ್ಷಿಸದೆ ಓಲೆ ಬೆಲ್ಲ ತಯಾರಿಯನ್ನು ಆರಂಭಿಸಬೇಕೆಂದು ಕ್ರಾಂತಿಕಾರ ಭಾಷಣವಿತ್ತರು ಬಿಲ್ಲವ ಸಮಾಜದ ಇತಿಹಾಸದಲ್ಲೇ ಅಪೂರ್ವವಾದ ಈ ಮಹಾಸಭೆಗೆ 5 ಸಾವಿರಕ್ಕೆ ಮಿಕ್ಕಿ ಜನರು ಕಿಕ್ಕಿರಿದಿದ್ದರು

ಪಂಡಿತ ಸಂಘದ ಸಭೆ: ತಾ 5ನೇ ಭಾನುವಾರ ಸಂಜೆ ಗಣಪತಿ ಹ್ಯಾಸ್ಕೂಲಿನಲ್ಲಿ ನಡೆಯಿತು. ಶ್ರೀ ಮುಳಿಯ ತಿಮ್ಮಪ್ಪಯ್ಯ ವಿದ್ವಾನ್ ಇವರು ಅಧ್ಯಕ್ಷರಾಗಿದ್ದರು. ಇತರ ಅಧ್ಯಾಪಕರ ವೇತನದ ಕುರಿತು ಮದ್ರಾಸ್ ಸರಕಾರವು ಒಂದು ನಿರ್ಧಾರ ಮಾಡಿದ್ದರೂ ಪಂಡಿತರ ವೇತನದ ಕುರಿತು ನಿಶ್ಚಿತವಾದೊಂದು ವ್ಯವಸ್ಥೆಯನ್ನು ಇನ್ನು ಕೂಡ ಮಾಡದಿರುವುದಕ್ಕಾಗಿ ದಕ ಪಂಡಿತ ಸಂಘದ ಈ ಮಹಾಸಭೆಯು ವಿಷಾದ ಸೂಚಿಸಿತು ಬಳಿಕ ಹೊಸ ವರ್ಷದ ಕಾರ್ಯಕಾರಿ ಸಮಿತಿಯನ್ನು ಸೇಡಿಯಾಪು ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು. ಅಧ್ಯಕ್ಷರು ದೇಶ ಭಾಷೆಗಳ ಸ್ಥಿತಿ ಹತ್ತೇ ವರ್ಷಗಳೊಳಗೆ ಸುಧಾರಿಸಿ ಅವುಗಳಿಗೆ ಅಗ್ರಸ್ಥಾನ ಸಿಗುವುದೆಂದೂ ಪಂಡಿತರು ತಮ್ಮ ಸಂಸ್ಕೃತಿಯನ್ನು ಬೆಳೆಯಿಸಬೇಕೆಂದೂ ಬಿನ್ನವಿಸಿದರು

ಹೊಸ ಡಿಸ್ಟ್ರಿಕ್ಟ್ ಮುನ್ಸಿಫರು: ಕಲ್ಯಾಣಪುರ ಸೀತಾರಾಮರಾವ್, ಎಡ್ವೋಕೇಟ್ ಇವರು ಜಿಲ್ಲೆಯ ಹೊಸ ಮುನ್ಸಿಫರಾಗಿ ನೇಮಕ ಹೊಂದಿದ್ದಾರೆ

ನಾಡಹಬ್ಬ: ಕಳೆದ ವರ್ಷದಂತೆ ಈ ವರ್ಷವೂ ಮಂಗಳೂರಲ್ಲಿ ನಾಡಹಬ್ಬವು ಇದೇ ತಾ 20ರಿಂದ ಜರಗಲಿದೆ ಪ್ರತಿದಿನವೂ ತಾ 29ರ ವರೆಗೆ ಊರಿನ ಮತ್ತು ಪರವೂರಿನ ಪ್ರಸಿದ್ಧ ಸಾಹಿತಿಗಳಿಂದ ಭಾಷಣಗಳು ನಡೆಯಲಿವೆ ಅಲ್ಲದೆ ಯಕ್ಷಗಾನ, ಪುರಾಣ ಪ್ರವಚನ, ನಾಟಕ ಇತ್ಯಾದಿ ವಿನೋದಾವಳಿಗಳೂ ಇರುವುವು

ವರ್ಧಂತ್ಯುತ್ಸವ:—ಸ್ಥಳೀಯ ಗಣಪತಿ ಹ್ಯಾಸ್ಕೂಲಿನವರ್ಧಂತ್ಯುತ್ಸವವು ತಾ 20 10 47 ರಲ್ಲು ಪ್ರಾತಃಕಾಲ ಗಂಟೆ 9ಕ್ಕೆ ಶಾರದಾ ಪೂಜೆಯೊಡನೆ ಪ್ರಾರಂಭವಾಗುವುದು ತಾ 23–10–47ರಲ್ಲು ಮಹಿಳೆಯರಿಗಾಗಿ ಮಾತ್ರ ಶಾಲಾ ವರದಿ ವಿನೋದಗಳು ಜರಗುವುವು ತಾ. 24–10–47ರಲ್ಲು ನಮ್ಮ ಸಂಸ್ಥಾನದ ವಿದ್ಯಾಧಿಕಾರಿಗಳಾದ ಮಾನ್ಯ ರಾವ್ ಬಹದ್ದೂರ್ ಡಾ। ಎಸ್ ಆರ್ ಯು ಸಪ್ರಾಂ ಎಂ. ಎ ಡಿ ಯಸ್ ಸಿ ಯವರ ಅಧ್ಯಕ್ಷತೆಯಲ್ಲಿ ವರ್ಧಂತ್ಯುತ್ಸವವು ಜರಗಲಿರುವುದು

ಇದೇ ಸಂದರ್ಭದಲ್ಲಿ ಹಳೇ ವಿದ್ಯಾರ್ಥಿಗಳ ಸಂಘದ ಮಹಾಧಿವೇಶನವು ತಾ 23-10–47 ರಲ್ಲು ಸಂಜೆ ಗಂಟೆ 4ಕ್ಕೆ ಜರುಗುವುದು ಹಳೇ ವಿದ್ಯಾರ್ಥಿಗಳಲ್ಲಿ ಅನೇಕರಿಗೆ ಈ ಸಂದರ್ಭದಲ್ಲಿ ಮೇಲ್ವಿಳಾಸ ತಿಳಿಯದಿರುವುದೇ ಮೊದಲಾದ ಕಾರಣಗಳಿಂದ ಆಮಂತ್ರಣವು ತಪ್ಪದೆ ಇರಬಹುದು ಶಾಲೆಯ ಮೇಲೆ ಅಭಿಮಾನವುಳ್ಳ ಹಳೇ ವಿದ್ಯಾರ್ಥಿಗಳೆಲ್ಲರೂ ಈ ಕೊರತೆಯನ್ನು ಮನಸ್ಸಿಗೆ ತೆಗೆದುಕೊಳ್ಳದೆ ಸಂಘಕ್ಕೆ ಆಜೀವ ಅಥವಾ ಸಾಮಾನ್ಯ ಸದಸ್ಯರಾಗಿ ಸೇರಿ ಸಂಘದ ಕಾರ್ಯ ಕಲಾಪಗಳು ಅಭಿವೃದ್ಧಿಗೊಳ್ಳುವಂತೆ ನೆರವಾಗಬೇಕಾಗಿ ಸಂಘದ ಜತೆ ಕಾರ್ಯದರ್ಶಿಗಳು ಅಪೇಕ್ಷಿಸುತ್ತಿರುವರು.

ಜಿಲ್ಲಾ ಪರಿಚಯ

ಮಂಗಳೂರು

ಗಾಂಧೀಜಿಯವರ ಜನ್ಮದಿನ

ಮಂಗಳೂರು ಮಹತ್‌ಬಾರ ಶ್ರೀ ವೆಂಕಟ್ರಮಣ ದೇವಳದಲ್ಲಿ ಹರಿಜನರ ಭಕ್ತಿ ಪೂರ್ವಕ ಪ್ರಸಾದ ಸ್ವೀಕಾರ

11 10 47ಈ ದಿನ ಭಾದ್ರಪದ ಬಹುಳ ದ್ವಾದಶಿ, ಗಾಂಧೀಜಿಯವರ ಜನ್ಮದಿನ ಮಂಗಳೂರಲ್ಲಿ ಗೌಡಸಾರಸ್ವತ ಬ್ರಾಹ್ಮಣರ ಪ್ರಖ್ಯಾತ ದೇವಸ್ಥಾನವಾದ ಶ್ರೀ ವೆಂಕಟ್ರಮಣ ದೇವಳದಲ್ಲಿ ಹರಿಜನರೂ, ಬಿಲ್ಲವ ಸಮಾಜದವರೂ ಮತ್ತು ಹಿಂದೂ ಸಮಾಜದ ಇತರ ಸದಗ್ರಹಸ್ಥರೊಡನೆ 11–30ಕ್ಕೆ ಸರಿಯಾಗಿ ದೇವಳಕ್ಕೆ ಹೋಗಿ ಹಣ್ಣುಕಾಯಿ, ಕಾಣಿಕೆ, ದಕ್ಷಿಣೆ ಭಕ್ತಿಪೂರ್ವಕ ಸಲ್ಲಿಸಿ, ತೀರ್ಥ ಗಂಧ ಪ್ರಸಾದವನ್ನು ಸ್ವೀಕರಿಸಿದರು ಈ ಭಜಕ ವೃಂದವು 50ಕ್ಕೆ ಮಿಕ್ಕಿತ್ತು ಜಿಲ್ಲಾ ಹರಿಜನ ಸೇವಕ ಸಂಘದ ಅಧ್ಯಕ್ಷರಾದ ಡಾ। ಯು ಪಿ ಮಲ್ಯ ಯಂ ಎಲ್, ಎ ಮತ್ತು ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಡಾ। ಕೆ ನಾಗಪ್ಪ ಆಳ್ವ ಮತ್ತು ಇನ್ನಿತರ ಕಾಂಗ್ರೆಸ್ ಕೆಲಸಗಾರರು ಪ್ರಸಾದ ಸ್ವೀಕಾರದಲ್ಲಿ ಕೂಡಿಕೊಂಡಿದ್ದರು.

ನುಚ್ಚೆ ಆರೋಪಿಗಳ ಕೈಸೆರೆ. ಕಳೆದ ಮೇ ತಿಂಗಳಲ್ಲಿ ಮಂಜೈ ಗವರ್ನಮೆಂಟ್ ಸ್ಟೋರ್ಸಿನವರ ಉತ್ತಾಗಿರಿಗೆ - ಗೋಣಿ ಅಕ್ಕಿಯನ್ನು ಒಪ್ಪವಚೆಯಲ್ಲಿ ಕೇಳಿಸಿದ್ದರು. ಆ ಮಚ್ಚೆಯು ಸಮುದ್ರದಲ್ಲಿ ಮುಳುಗಿಹೋಯಿತು ಆದರೆ ಆ ಮಚ್ಚೆಯನ್ನು ಉದ್ದೇಶಪೂರ್ವಕವಾಗಿ ಮುಳುಗಿಸಿದ್ದರೆಂದು ಇದೀಗ ಪ್ರಕಟವಾಗಿ ಆರೋಪಿಗಳನ್ನು ಸೆರೆಹಿಡಿಯಲಾಗಿದೆ ಅಕ್ಕಿಯನ್ನು ಕಳ್ಳಸಂತೆಯಲ್ಲಿ ಮಾರಿ ಆ ಮೇಲೆ ಇವರು ಕೆಗೆದ ಆ ಮಚ್ಚೆಯನ್ನು ಧೂರ್ತರು ಮುಳುಗಿಸಿದರು ಈ ಸಂಬಂಧ ಸೆರೆಯಾದವರಲ್ಲಿ ಹಟಿ ಸವರ ಗಂಗೊಳ್ಳಿಯವರ

ಉಡುಪಿ

ಉಡುಪಿ ಮುನಿಸಿಪಲ್ ಚುನಾವಣೆ ಫಲಿತಾಂಶ: ಸ್ಪರ್ಧೆಯಿಂದ ಗುಂಡಿಬೈಲು ಮತ್ತು ಮಾಡ ಸಿಟಂಬೂರು ವಾರ್ಡುಗಳಿಂದ ಶ್ರೀಗಳಾದ ಕೇಶವ ಕಾಮತ್ ಉದ್ಯಾವರ ಮತ್ತು ಎಚ್ ಎನ್. ನಾಯಕ್‌ರವರು ಬಹುಮತಗಳಿಂದ ಆರಿಸಿಬಂದಿರುವರು.

ನಿಷೇಧ ಸಭೆಗಳು: ಮೈಸೂರು ಸತ್ಯಾಗ್ರಹಕ್ಕೆ ಬೆಂಬಲವೀಯುವ ಜಿಲ್ಲೆಯ ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸುವ ಸಭೆಗಳೆರಡು ರಥಬೀದಿಯಲ್ಲಿ ಇತ್ತೀಚೆಗೆ ಕಾಂಗ್ರೆಸ್ ಕಮಿಟಿಯ ಮತ್ತು ಕಮ್ಯೂನಿಸ್ಟ್ ಪಾರ್ಟಿಯವರ ವತಿಯಿಂದ ಜರಗಿದುವು

ಭೂಗತ ಶರಾಬಿನ ಪತ್ತೆ: ಪಾನನಿರೋಧಾಜ್ಞೆ ಜಿಲ್ಲೆಯಲ್ಲಿ ಜ್ಯಾರಿಗೆ ಬಂದ ಎರಡು ಮೂರು ದಿವಸಗಳೊಳಗಾಗಿ ಚಿಟ್ಪಾಡಿ ಬೀಡಿನ ಗುಡ್ಡೆಯ ಬಳಿಯ ಒಂದು ಮನೆಯ ಕಂಪೌಂಡಿನಲ್ಲಿ ಏಳು ಬಾಟ್ಲಿಗೂ ಮಿಕ್ಕಿದ ಶರಾಬು ಮರದಡಿಯಲ್ಲಿ ಭೂಗತವಾಗಿದ್ದುದನ್ನು ಇಲಾಖಾ ಆಫೀಸರರು ಪತ್ತೆ ಹಚ್ಚಿ ಚಾರ್ಜು ಶೀಟು ತಯಾರಿಸಿರುವರು ಈ ಸಂಬಂಧವಾಗಿ ಸಬ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಮಿ। ಪ್ರಸಾದ ಎಂಬವರ ವಿಚಾರಣೆ ನಡೆಯಲಿದೆಯಂತೆ

ಕಾಸರಗೋಡು

31ನೆಯ ಕನ್ನಡ ಸಾಹಿತ್ಯ ಸಮ್ಮೇಳನ:—ಇದರ ಕಾರ್ಯಕಾರಿ ಸಮಿತಿಯ ಸಭೆಯು ತಾ 5ರಂದು ಜರಗಿ ಈ ನಿರ್ಣಯಗಳಾದುವು. ಬಂದಿನ ಸಭೆಯು ಬೋರ್ಡು ಹ್ಯಾಸ್ಕೂಲು ಮತ್ತು ಅದರ ವಠಾರವನ್ನು ಸಮ್ಮೇಳನ ಸ್ಥಳವಾಗಿ ಆರಿಸಬಹುದಾಗಿ ಉಪಸಮಿತಿಯವರ ಸಲಹೆಯನ್ನು ಮಂಜೂರು ಮಾಡಲಾಯಿತು ಸಮ್ಮೇಳನದ ಸಂಬಂಧವಾಗಿ ಊಟ ಉಪಚಾರ ವಾಸ್ತವ್ಯಗಳ ಬಗ್ಗೆ ಯೋಗ್ಯ ಏರ್ಪಾಡುಗಳನ್ನು ಮಾಡುವ ಸಲುವಾಗಿ, ವಿವಿಧ ವಿನೋದಾವಳಿಗಳ ಏರ್ಪಾಡಿನ ಬಗ್ಗೆ, ಮತ್ತು ಚಪ್ಪರ, ತೋರಣ ಇತ್ಯಾದಿ ಏರ್ಪಾಡುಗಳನ್ನು ಮಾಡುವ ಬಗ್ಗೆ ಉಪಸಮಿತಿಗಳನ್ನು ರಚಿಸಲಾಯಿತು ವಸ್ತು ಪ್ರದರ್ಶನದಲ್ಲಿ ಸಾಹಿತ್ಯ ಕಲೆಗಳಿಗೆ ಸಂಬಂಧವಾದ ವಸ್ತುಗಳನ್ನು ಪ್ರದರ್ಶಿಸುವವರಿಗೆ ಜಾತಿಗೆಯಿಲ್ಲ ಮಿಕ್ಕವರ ಬಾಡಿಗೆಯನ್ನು ತೆರಕ್ಕದ್ದು. ಶ್ರೀ ಯು. ಶುಕನಾಥಾಚಾರ್, ಇವರನ್ನು ಸ್ವಯಂಸೇವಕ ದಳದ ನಾಯಕರನ್ನಾಗಿ ಈ ಸಮಿತಿಯು ನೇಮಿಸುತ್ತದೆ, ವಸ್ತು ಪ್ರದರ್ಶನದಲ್ಲಿ ಉತ್ತಮವಾದ ವಸ್ತುಗಳ ಪ್ರದರ್ಶನದವರಿಗೆ ಯೋಗ್ಯತಾ ಪತ್ರಗಳನ್ನು ಕೊಡಬೇಕಾಗಿಯೂ ವಿದ್ಯಾರ್ಥಿಗಳ ಕತೆ, ಕವಿತೆ ಲೇಖನಗಳಿಗೆ 1ನೆಯ, 2ನೆಯ ತರಗತಿಯ ಪಾರಿತೋಷಕಗಳನ್ನು ಕೊಡಬೇಕಾಗಿಯೂ ನಿರ್ಣಯಿಸಲಾಯಿತು

ಗಂಗೊಳ್ಳಿ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಆಯ್ಕೆ: ಸ್ಥಳೀಯ ಸರಸ್ವತಿ ವಿದ್ಯಾಲಯ ಹೈಸ್ಕೂಲಿನ ವಠಾರದಲ್ಲಿ ಶ್ರೀಯುತ ಎಚ್ ರಾಮಕೃಷ್ಣ ಕಾಮತರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸದಸ್ಯರ ಸಭೆಯು ಇತ್ತೀಚೆಗೆ ಸೇರಿ ಗಂಗೊಳ್ಳಿ ಕೇಂದ್ರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು ಚುನಾಯಿಸಲಾಯಿತು

ಜಿ ಸುರೇಂದ್ರನಾಥ ನಾಯಕ್ ಅಧ್ಯಕ್ಷ, ಪಾಂಗಾಳ ದೇವದಾಸ ನಾಯಕ್ ಉಪಾಧ್ಯಕ್ಷ, ನಗರ ವೇಣುಗೋಪಾಲ ನಾಯಕ್ ಕಾರ್ಯದರ್ಶಿ, ಟಿ ಆನಂದರಾವ್ ಶೆಣೈ ಜತೆ ಕಾರ್ಯದರ್ಶಿ, ನಗರ ಭುಜಂಗ ನಾಯಕ್ ಕೋಶಾಧಿಕಾರಿ, ಪಂಡಿತ ನಾರಾಯಣರಾವ್, ಬೈಲೂರು ನಾರಾಯಣ ಶೆಣೈ ಮತ್ತು ವಿ ವಿ ಫೆರ್ನಾಂಡಿಸ್ ಸದಸ್ಯರು

ಕಾರ್ಕಳ

ಸತ್ಯಾಗ್ರಹಿಗಳ ಬಂಧನ: ಸಪ್ಟೆಂಬರ ತಾ 30ರಲ್ಲು ಕಾರ್ಕಳದಿಂದ ಮೈಸೂರು ಸತ್ಯಾಗ್ರಹಕ್ಕಾಗಿ ಹೋದ ಶ್ರೀಗಳಾದ ಕೆ ಕೃಷ್ಣಪ್ರಭು, ನರಸಿಂಹ ಶೆಣೈ ವಿಟ್ಠಪ್ಪ ಶೆಣೈ ಮತ್ತು ಮಾಧವ ಪೈ ಈ ನಾಲ್ಕು ಮಂದಿ ಸೇವಾ ದಳದ ಸತ್ಯಾಗ್ರಹಿಗಳು ತೀರ್ಥಹಳ್ಳಿಯಲ್ಲಿ ಧ್ವಜ ಸತ್ಯಾಗ್ರಹ ಮಾಡುವಾಗ ಬಂಧಿಸಲ್ಪಟ್ಟು ಶಿವಮೊಗ್ಗಕ್ಕೆ ಸ್ಥಳಾಂತರಿಸಲ್ಪಟ್ಟಿರುವರೆಂದು ಕೇಳಬರುತ್ತದೆ

ಪ್ರಕಟಣೆ

ಉಡಿಪಿ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

O P No 61/1947.

1 ರಮಾಬಾಯಿ H ಸಂಜೀವ ನಾಯ್ಕನ ವಿಧವೆ

2 ದುರ್ಗಮ್ಮ—ಶ್ರೀನಿವಾಸ ಶ್ಯಾನಭಾಗರ ವಿಧವೆ

3 H ಗೋಪಾಲ ಶ್ಯಾನಭಾಗ } ಡಿ—

4 H ವೆಂಕಟೇಶ ಶ್ಯಾನಭಾಗ } ಮಕ್ಕಳು

ಉಡ್ಪಿ ಕಸಬಾ ವಳಕಾಡು ವಾರ್ಡು—

ಅರ್ಜಿದಾರರು

ಈ ಮೂಲ್ಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ಅರ್ಜಿಯು 1ನೆ ಅರ್ಜಿದಾರಳ ಗಂಡ, 2ನೆ ಅರ್ಜಿದಾರಳ ಮಗ, ವ 3—4ನೆ ಅರ್ಜಿದಾತ್ರಿ ಸಹೋದರ—ನಂತ್ರ ಸ್ವರ್ಗಸ್ಥನಾದ H ಸಂಜೀವ ಶೆಣೈ—ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಉಡ್ಪಿ ಬ್ರಾಂಚಿನಲ್ಲಿ No.518ನೆಗೆ ಸೇವಿಂಗ್ಸ್‌ಬ್ಯಾಂಕ Account ಬಾಬ್ತು ಇರುವ ರೂ. 151–0–0 ವಾರ್ಸಿದಾರರಾದ ಅರ್ಜಿದಾರರ ಬಗ್ಗೆ 1ನೆ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲ್ಮಾಡಿದ ಮೇಲ್ಕಂಡ ಅರ್ಜಿ ತಾ 8–11–1947ಕ್ಕೆ ಇಡೋಣಾಗಿಯದೆ. ಆಕ್ಷೇಪ ಹೇಳತಕ್ಕವರು ಸದ್ರಿ ದಿವಸ ಮೇಲ್ಕಂಡ ಕೋರ್ಟ ಮುಂದೆ 10 ಗಂಟೆಗೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಪ್ರಕಟಿಸೋಣಾಗಿಯದೆ.

By order of the Court,
Narashima Vittal Kamath.
Advocate for Petitioners.

ಉಡ್ಪಿ 14.10 47.

ಇದೆಲ್ಲವೂ ಅಂತರ್ಯ ಆರೋಗ್ಯವು ನೆಟ್ಟಗಿರುವುದರ ಮೇಲೆ ಹೊಂದಿಕೊಂಡಿದೆ ಈ ಉತ್ತಮ ಸ್ಥಿತಿಯು ಬೈಲ್‌ಬೀನ್ಸ್‌ಗಳು ಒದಗಿಸಿಕೊಡುತ್ತವೆ ಇದೊಂದು ಶುದ್ಧ ವನಸ್ಪತಿಯ ಮೂಲ ಶಕ್ತಿದಾಯಕ ಬೇದಿ ಮದ್ದು ಇದು ನಮ್ಮ ಜೀರ್ಣ ಕ್ರಿಯೆಯನ್ನು ಉತ್ತಮಗೊಳಿಸುತ್ತದೆ ರಕ್ತ ಸಂಚಲನವನ್ನು ಆರೋಗ್ಯದಲ್ಲಿಡುತ್ತದೆ ಮತ್ತು ನಿತ್ಯಲೂ ದೇಹದೊಳಗಿನ ಕಶ್ಮಲ ವಿಸರ್ಜನೆಯನ್ನು ಮಾಡುತ್ತದೆ

ಶಕ್ತಿ ಮನೋಹರತೆ ಉತ್ತಮ ಆರೋಗ್ಯದ ತಳಹದಿಯನ್ನು ಹಾಕಿಕೊಳ್ಳಲು ಇದೀ ಸುಸಂಧಿಯು—ಬೈಲ್‌ಬೀನ್ಸ್‌ಗಳಿಂದ ಇದನ್ನು ನೆರವೇರಿಸಕೊಳ್ಳಬಹುದು.

BILE BEANS

ಬೈಲ್‌ಬೀನ್ಸ್ ಕ್ರಮವನ್ನು ಯಾವಾಗಲೂ ಜ್ಞಾಪಕದಲ್ಲಿಡಿರಿ.

ಸಹಕಾರ ಚಳವಳದ ಅಭಿವೃದ್ಧಿ

ಬಗೆಬಗೆಯ ಯೋಜನೆಗಳೂ ಉದ್ದೇಶಗಳೂ

ಕೃಷಿ ಸಂಶೋಧನೆ–ಆಡಳಿತಗಳ ಬಗ್ಗೆ

ಸಹಕಾರ ಇಲಾಖೆಯಲ್ಲಿರುವ ಸಿಬಂಧಿಯನ್ನು ಬೇರೆ ಬೇರೆ ಮಾಡುವುದು ಅಗತ್ಯವಾಗಿದೆ. ವಿಜಯ ರಾಘವಾಚಾರ್ಯರ ಸಮಿತಿಯು 1940ನೇ ಇಸವಿಯಲ್ಲಿ ಇದೇ ಅಭಿಪ್ರಾಯವನ್ನು ಬಲಪಡಿಸಿತಲ್ಲದೆ 15ನೇ ರಿಜಿಸ್ಟ್ರಾರರ ಮಹಾ ಸಭೆಯೂ ಹೀಗೆ ಬೇರೆ ಮಾಡುವುದರಲ್ಲಿ ತನ್ನ ಆಸಕ್ತಿಯನ್ನು ವ್ಯಕ್ತಪಡಿಸಿತು. ಸರಕಾರವೂ ಈ ವಿಷಯದಲ್ಲಿ ಆಲೋಚಿಸ ತೊಡಗಿದೆ. ಲೆಕ್ಕಪರಿಶೋಧನ ಸಿಬಂಧಿಯನ್ನು ಪ್ರತ್ಯೇಕ ಮಾಡಬೇಕೆಂದೂ ಆಡಳಿತೆಯ ಇಲಾಖೆಯ ಹೆಚ್ಚಿನ ಸಹಾಯವಿಲ್ಲದೆ ಸ್ವತಂತ್ರವಾಗಿ ಈ ಪರಿಶೋಧಕ ಇಲಾಖೆಯು ಕೆಲಸ ಮಾಡತಕ್ಕದ್ದು. ಆದರೆ ಇವೆರಡೂ ಶಾಖೆಗಳು ಸಹಕಾರ ಸಂಘಗಳ ರಿಜಿಸ್ಟ್ರಾರರ ಅಧೀನದಲ್ಲಿರತಕ್ಕವುಗಳು

ಹಳ್ಳಿಗಳಲ್ಲಿ

ಈಗ ಒಟ್ಟಾರೆ 11,000 ಸಾಲಕೊಡುವ ವ್ಯವಸಾಯ ಸಹಕಾರಿ ಸಂಘಗಳಿವೆ. ಇವುಗಳೆಲ್ಲಾ ಸಾಕಷ್ಟು ಜವಾಬ್ದಾರಿಕೆಯಿಂದ ಕೂಡಿದೆ. ಇಂತಹ ಸಂಘಗಳು ನಮ್ಮ ಪ್ರಾಂತದ ಕೆಲವೆಡೆಗಳಲ್ಲಿ ಯಶ್ವಸಿಯಾಗಿ ಕೆಲಸ ಮಾಡುತಿದ್ದರೆ ಇನ್ನು ಕೆಲವು ಭಾಗಗಳಲ್ಲಿ ಏನೂ ವ್ಯಾಪಾರವಿಲ್ಲದೆ ಸುಮ್ಮನಾಗಿವೆ. ಚಿಕ್ಕದಾದ ಕಾರ್ಯಕ್ಷೇತ್ರ, ವೇತನ ತೆಕ್ಕೊಳುವ ನೌಕರರ ಅಭಾವ, ಧನಿಕರು ಸದಸ್ಯರಾಗದಿರುವುದು, ಸಾಕಷ್ಟು ಸಾಲಕೊಡುವ ಅನುಕೂಲತೆ ಇಲ್ಲದಿರುವುದು ಇತ್ಯಾದಿ ಕಾರಣಗಳಿಂದ ಇಂತಹ ಅನೇಕ ಸಂಘಗಳು ಅವನತಿಗೀಡಾದುವು ಈ ದುಸ್ಥಿತಿಯನ್ನು ಪರಿಹರಿಸಲು ಹಳ್ಳಿಯಲ್ಲಿ ಬೇಂಕುಗಳು ಸ್ಥಾಪಿಸಲ್ಪಡಬೇಕು ಇವು ನಾಲ್ಕು ಅಥವಾ ಐದು ಗ್ರಾಮಗಳಿಗೆ ಒಂದರಂತೆ ತೆರೆಯಲ್ಪಟ್ಟ ನಿಯಮಿತ ಜವಾಬ್ದಾರಿಕೆಯಲ್ಲಿ ನಡೆಸಲ್ಪಡಬೇಕು. ಈ ಬೇಂಕುಗಳ ಕಾರ್ಯಕಲಾಪಗಳು ಈಗ ಪಟ್ಟಣಗಳಲ್ಲಿರುವ ಬೇಂಕುಗಳಂತೆಯೇ ಇರತಕ್ಕವು ಇಂತಹ ಸಂಸ್ಥೆಗಳು ಸ್ಥಿರ ಆಸ್ತಿಗಳ ಮೇಲೆ ಮಾತ್ರವಲ್ಲ, ಚಿನ್ನ, ದವಸ ಧ್ಯಾನಗಳ ಮೇಲೆಯೂ ಸಾಲಕೊಡುವುವು ಹಳ್ಳಿಗರು ತಮ್ಮ ಹಣವನ್ನು ಬೇಂಕುಗಳಲ್ಲಿಟ್ಟು ಚೆಕ್ಕುಗಳ ಮೂಲಕ ಬೇಕಾದಾಗ ಪಡಕೊಳ್ಳುವ ಅಭ್ಯಾಸವನ್ನು ಹಳ್ಳಿಗರಲ್ಲೂ ಉಂಟುಮಾಡುವುವು ಕಡಿಮೆ ಬಡ್ಡಿಯ ರೇವಣಾತಿಯಿಂದ ಸಾಲತೆಕ್ಕೊಳುವವರಿಗೂ ಸುಲಭ ಬಡ್ಡಿಯಲ್ಲಿ ಸಾಲ ದೊರೆಯುವಂತೆ ಯತ್ನಿಸುವುವು. ಈ ಬೇಂಕುಗಳು ಈ ಹಳ್ಳಿಗಳಲ್ಲಿರುವ ಸಾಲಕೊಡುವ ಚಿಕ್ಕ ಚಿಕ್ಕ ಸಂಸ್ಥೆಗಳು ಕೊಡುವುದಕ್ಕಿಂತ ಹೆಚ್ಚಿಗೆ ವೇತನ ಕೊಟ್ಟು ಚೆನ್ನಾಗಿ ತರಬೇತಿ ಹೊಂದಿದ ಇಡೀ ದಿನ ಕೆಲಸ ಮಾಡುವ ನೌಕರರನ್ನು ನೇಮಿಸಬಲ್ಲುವು. ಇಂತಹ ಬೇಂಕುಗಳನ್ನು ಕೆಲವು ಉತ್ತಮ ಸ್ಥಳಗಳನ್ನು ಆರಿಸಿಕೊಂಡು ಸ್ಥಾಪಿಸುವಂತೆ ಸಹಕಾರವು ಅಧಿಕಾರ ಕೊಟ್ಟಿದೆ ತರಬೇತಿ ಹೊಂದಿದ ಅಧಿಕಾರಿಗಳಲ್ಲದೆ ವ್ಯಕ್ತಿಗಳು ದೊರೆಯದಿದ್ದರೆ ತಾತ್ಕಾಲಿಕ ಯೋಗ್ಯರಾದ ಅಧಿಕಾರಿಗಳನ್ನೇ ಈ ಬೇಂಕುಗಳ ಕಾರ್ಯದರ್ಶಿಗಳಾಗಿ ನೇಮಿಸಬಹುದು.

ಜಾನುವಾರು ಸಂಪತ್ತನ್ನು

ಹೆಚ್ಚಿಸುವುದಕ್ಕಾಗಿ ನಮ್ಮ ಪ್ರಾಂತ್ಯದಲ್ಲಿ ಹಾಲು ಪೂರೈಕೆ ಮಾಡುವ ಸಹಕಾರಿ ಸಂಘಗಳು ಆರಿಸಲ್ಪಟ್ಟ ಕೆಲವು ಇತರ ಸಹಕಾರಿ ಸಂಘಗಳೂ ಉತ್ತಮ ಜಾನುವಾರುಗಳನ್ನು ಪಡೆಯುವಂತೆ ಮಾಡಲು ಬೀಜದ ಹೋರಿಗಳನ್ನೊದಗಿಸಿ ಕೊಡುವ ವಿಷಯದಲ್ಲಿ ಸರಕಾರವು ಆಲೋಚಿಸುತ್ತಿದೆ. ಇಂತಹ ಎತ್ತುಗಳನ್ನು ಜವಾನು ವಸಾಹತು ಸಹಕಾರಿ ಸಂಘಗಳಿಗೂ ಒದಗಿಸುವ ವಿಷಯವು ಪರ್ಯಾಲೋಚನೆಯಲ್ಲಿದೆ. ಕರೆಯುವ ಜಾನುವಾರುಗಳನ್ನು ತೆಕ್ಕೊಳ್ಳುವುದಕ್ಕಾಗಿ ಹಾಲು ಪೂರೈಕೆಯ ಸಹಕಾರಿ ಸಂಘಗಳಿಗೆ ಬಡ್ಡಿಯಿಲ್ಲದ ಸಾಲವನ್ನು ಸರಕಾರವು ಮಂಜೂರು ಮಾಡುತ್ತಿದೆ. ಇದಕ್ಕಾಗಿ 1947 48ನೆಯ ವರ್ಷದಲ್ಲಿ 4 30 ಲಕ್ಷ ಹಣವನ್ನು ಸರಕಾರವು ಕೋಪರೇಟಿವ್ ರಿಜಿಸ್ಟ್ರಾರರ ಅಧೀನದಲ್ಲಿ ಪ್ರತ್ಯೇಕಿಸಿಟ್ಟಿದೆ. ಪಟ್ಟಣಗಳಿಗಾಗಿ-ಕೋಪರೇಟಿವ್ ರಿಜಿಸ್ಟ್ರಾರರಿಂದ ರಚಿಸಲ್ಪಟ್ಟ ತ್ರೈವಾರ್ಷಿಕ ಯೋಜನೆಯನ್ನು ನಮ್ಮ ಸರಕಾರವು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದೆ ಈ ಯೋಜನೆಯಲ್ಲಿ, ಹಾಲು ಪೂರೈಕೆಯ ಸಹಕಾರಿ ಸಂಸ್ಥೆಗಳ ವಿಸ್ತರಣೆಗೆ ಬೇಕಾದಷ್ಟು ಅವಕಾಶ ಕೊಡಲಾಗಿದೆ ಉತ್ತರಾರ್ಕಾಡಿನ ಅಂಬೂರು ಎಂಬಲ್ಲಿ, ಮೊದಲು ಕಳ್ಳು ತೆಗೆಯುತ್ತಿದ್ದವರಿಗೆ ಈಗ ಕೆಲಸ ಒದಗಿಸುವ ಉದ್ದೇಶದಿಂದ ಒಂದು ಹಾಲು ಪೂರೈಕೆಯ ಸಹಕಾರಿ ಸಂಘವನ್ನು ಆರು ಶಾಖೆಗಳೊಡನೆ ತೆರೆಯಬೇಕೆಂದು ಸೂಚನೆ ಇದೆ ಹೀಗೆ ಮಾಡುವುದರಿಂದ ಪಟ್ಟಣಕ್ಕೆ ಸಾಕಷ್ಟು ಹಾಲು ನಿರುದ್ಯೋಗಿಗಳಿಗೆ ಉದ್ಯೋಗವೂ ದೊರೆತಂತಾಗುವುದು ಇದರ ಶಾಖೆಗಳಿಗೆ ತಿಂಗಳಿಗೆ 100 ರೂಪಾಯಿಗಳ ಧನಸಹಾಯವನ್ನು ಒಬ್ಬನುರಿತ ಕೋಪರೇಟಿವ್ ಇನ್ಸ್‌ಪೆಕ್ಟರು ಆರು ತಿಂಗಳು ಸಂಘದಿಂದ ಯಾವ ಬಗೆಯ ಪ್ರತಿಫಲವನ್ನು ತೆಕ್ಕೊಳ್ಳದೆ ಕೆಲಸ ಮಾಡುವ ಏರ್ಪಾಡನ್ನು ಮಾಡಲಾಗಿದೆ ಈ ಸಂಸ್ಥೆಗಳು ಯಶಸ್ವಿಯಾದರೆ ಮದ್ಯಪಾನ ನಿರೋಧವು ಜಾರಿಯಲ್ಲಿರುವ ಇತರ ಜಿಲ್ಲೆಗಳಲ್ಲೂ ಇವುಗಳ ಪ್ರಚಾರವು ಕ್ರಮವಾಗಿ ಸಾಗುವುದು

ಗುಡಿಕೈಗಾರಿಕೆಗಳ ಬಗ್ಗೆ

ಸಮಿತಿಗಳನ್ನು ರಚಿಸುವ ವಿಚಾರದಲ್ಲಿ ಸರಕಾರವು ಆಲೋಚಿಸುತ್ತಿದೆ ಇವು ಗುಡಿಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಪಟ್ಟ ಕಾರ್ಯಕಲಾಪಗಳನ್ನು ನಡೆಸುವ ಒಗ್ಗ ಸಹಕಾರಿ ಸಂಘಗಳನ್ನು ಸ್ಥಾಪಿಸುವುವು ಸರಕಾರವು ಕೊಡುವ ಧನ ಸಹಾಯವನ್ನೂ, ಇತರ ಸಹಕಾರ ಸಂಘಗಳಿಂದ ಪಡೆಯುವ ನಿಧಿಗಳನ್ನೂ ಸರಿಯಾಗಿ ಉಪಯೋಗಿಸಿಕೊಂಡು ಆಡಳಿತೆ ನಡೆಸುವ ಜವಾಬ್ದಾರಿಕೆ ಈ ಸಮಿತಿಗಳಿಗಿದೆ. ಇಷ್ಟೇ ಅಲ್ಲ, ಅಸಿದ್ಧ ವಸ್ತುಗಳನ್ನು ತೆಕ್ಕೊಳ್ಳುವದಕ್ಕೂ ಸಿದ್ಧ ವಸ್ತುಗಳನ್ನು ಮಾರುವುದಕ್ಕೂ ತಕ್ಕ ಅನುಕೂಲತೆಗಳನ್ನು ಕಲ್ಪಿಸಿಕೊಡುವುದೂ ಇವುಗಳ ಕರ್ತವ್ಯವಾಗಿದೆ ಬೇಕಾದ ಕಡೆಗಳಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಈ ಸಮಿತಿಗಳು, ಚರ್ಮದ ಸಾಮಾನುಗಳ ತಯಾರಿ, ಹುರಿಹಗ್ಗ, ಚಾಪೆ-ಕುಕ್ಕೆಗಳ ತಯಾರಿ, ಕಂಬಳಿ ನೇಯುವುದು, ಕಂಚು-ಹಿತ್ತಾಳೆ, ಕಬ್ಬಿಣ ಇತ್ಯಾದಿ ಲೋಹದ ಕೆಲಸ, ಬಡಗಿ ಕೆಲಸ ಕೈನೂಲು ಕೈಮಗ್ಗ ಇತ್ಯಾದಿ ನಾನಾ ಕೈಗಾರಿಕೆಗಳಿಗೆ ಸಹಾಯ ಮಾಡುವುವು. ಪ್ರತಿ ವರ್ಷವೂ ಕಡಿಮೆಯೆಂದರೆ 100 ಸಹಕಾರ ಸಂಘಗಳನ್ನು ಸ್ಥಾಪಿಸಿ ನಡೆಯಬಹುದೆಂದು ಆಶಿಸಲಾಗಿದೆ. ಸರಕಾರವು ಇಂತಹ ಕೈಗಾರಿಕೆಗಳಿಗೆ ಬೇಕಾದ ಬಿರುದು, ಕೋರಾ ಹುಲ್ಲು ಇತ್ಯಾದಿ ಅಸಿದ್ಧ ವಸ್ತುಗಳನ್ನು ಒದಗಿಸಲು ಸಿದ್ಧವಾಗಿದೆ

ನೇಯುವವರಿಗಾಗಿ ಏರ್ಪಡಿಸಲ್ಪಟ್ಟ

ಸಹಕಾರ ಸಂಘಗಳ ಸಂಖ್ಯೆ 1947ನೇ ಇಸವಿ ಮೇ ತಿಂಗಳ ಕೊನೆಗೆ 344ರಿಂದ 673ಕ್ಕೇರಿತು ಈ ಸಂಘಗಳ ಅಧೀನದಲ್ಲಿರುವ ಮಗ್ಗಗಳ ಸಂಖ್ಯೆಯೂ 42,399ರಿಂದ 83,967ಕ್ಕೆ ತಲುಪಿತು ಈ ಸಂಘಗಳಿಗೆ, ನಿಶ್ಚಿತ ತಾರೀಕಿನೊಳಗೆ ಸೇರದವರಿಗೆ ನೂಲನ್ನು ಕೊಡುವುದಿಲ್ಲವೆಂದು ಹೇಳುವ ವಿಷಯವು ಸರಕಾರದ ಪರ್ಯಾಲೋಚನೆಯಲ್ಲಿದೆ ಹಾಗೆ ಮಾಡಿದರೆ ಕಳ್ಳಸಂತೆಯು ಕಡಿಮೆಯಾಗಿ ನಿಜವಾಗಿ ನೇಯುವವರಿಗೆ ಬೇಕಷ್ಟು ನೂಲು ದೊರೆಯಬಹುದೆಂದು ಆಶಿಸಲಾಗಿದೆ ಈ ಬಗೆಯ ನಿಯಮವನ್ನು ಜಾರಿಗೆ ತರುವುದರಿಂದ ಎಲ್ಲಾ ನೇಯುವವರೂ ಸಹಕಾರ ಸಂಘಗಳಿಗೆ ಸೇರುವಂತಾಗಬಹುದೆಂದು ಆಶಿಸಲಾಗಿದೆ ಸರಕಾರದ ಈಗಿನ ಅಪ್ಪಣೆಯಂತೆ ಸಹಕಾರಿ ಸಂಘದ ಸದಸ್ಯರಿಗೆ ಶೇಕಡಾ 20ರಷ್ಟು ಹೆಚ್ಚಿಗೆ ನೂಲು ದೊರೆಯುವುದು ನೇಯುವವರು ಸಂಘಗಳಿಗೆ ಸೇರುವಂತೆ ಮಾಡಲು ಇದೊಂದು ಸಾಧನವಾಗಿದೆ

ವಸತಿಗಾಗಿ ಮನೆಗಳನ್ನು

ಒದಗಿಸಿಕೊಡುವ ಉದ್ದೇಶದಿಂದ ಸರಕಾರವು ಪ್ರಾಂತ್ಯದಲ್ಲೆಲ್ಲಾ ವ್ಯಾಪಿಸುವಂತಹ ಒಂದು ದೊಡ್ಡ ಯೋಜನೆಯನ್ನು ಕೈಕೊಂಡಿದೆ ಗೃಹ ನಿರ್ಮಾಣ ಸಹಕಾರಿ ಸಂಘವೊಂದು ಈಗಾಗಲೇ ಮದರಾಸಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ ವಸತಿಗೆ ಸಾಕಷ್ಟು ಮನೆಗಳಿಲ್ಲದೆ ಎಲ್ಲಾ ಪಟ್ಟಣಗಳಲ್ಲೂ ಈ ಯೋಜನೆಯನ್ನು ಜಾರಿಗೆ ತರಲಾಗುವುದು ಇದಕ್ಕಾಗಿ ಸರಕಾರವು, ನಗರಸಭೆ ದೊಡ್ಡ ದೊಡ್ಡ ಪಂಚಾಯತಿ ಪ್ರದೇಶಗಳಲ್ಲಿ ಸಮಿತಿಗಳನ್ನು ರಚಿಸಿ ಅಲ್ಲಿಯ ಪರಿಸ್ಥಿತಿಯ ಕುರಿತು ವರದಿ ಒಪ್ಪಿಸುವಂತೆ ಏರ್ಪಡಿಸಿದೆ ಸದ್ಯಕ್ಕೆ ಪ್ರತಿ ಪಟ್ಟಣಗಳಲ್ಲೂ 100 ಮನೆಗಳ ಒಂದು ವಸಾಹತನ್ನು ಏರ್ಪಡಿಸುವಂತೆ ಸೂಚನೆ ಬಂದಿದೆ ಇದಕ್ಕಾಗಿ ಒಂದು ಪ್ರಾಂತ ಸಮಿತಿಯೂ ರಚಿಸಲ್ಪಟ್ಟಿದೆ ಇದು ಅನೇಕ ಸಮಸ್ಯೆಗಳನ್ನು ಪರಿಶೀಲಿಸಿ ವಸತಿಯ ಕೊರತೆಯನ್ನು ಹೋಗಲಾಡಿಸಲು ಎಲ್ಲಾ ವಿಧದಿಂದಲೂ ಯತ್ನಿಸುವುದು ಈ ವಿಷಯದಲ್ಲಿ ಕಟ್ಟಡ-ಸಂಘಗಳಿಗಾಗಿ ಕೊಡುವ ಸರಕಾರಿ ಸಾಲದ ಬಡ್ಡಿಯನ್ನು ಶೇಕಡಾ 4ರ ಸಲೆಯಿಂದ 3¼ಗೆ ಇಳಿಸುವುದು, ಕಟ್ಟಡಗಳಿಗೆ ಸ್ಥಳಗಳನ್ನು ಸ್ವಾಧೀನಮಾಡಿಕೊಳ್ಳುವ ಕೆಲಸವನ್ನು ಶೀಘ್ರವಾಗಿ ಮುಂದುವರಿಸುವುದು, ಕಟ್ಟಡ ಕಟ್ಟುವ ಸ್ಥಳಗಳ ಕ್ರಯವನ್ನು ನಿಯಂತ್ರಣಗೊಳಿಸುವುದು ಬೇಕಾದಷ್ಟು ಮರಮುಟ್ಟುಗಳು, ಕಬ್ಬಿಣ, ಉಕ್ಕು, ಸಿಮೆಂಟ್, ಇಟ್ಟಿಗೆ ಇತ್ಯಾದಿಗಳನ್ನು ಒದಗಿಸುವುದು, ಸರಕಾರಿ ನೌಕರರಿಗೂ ಇನ್ನಿತರ ಬಡಕೆಲಸಗಾರರಿಗೂ ಸಾಕಷ್ಟು ರಿಯಾಯಿತಿ ತೋರಿಸುವುದು ಇತ್ಯಾದಿಗಳು ಸರಕಾರದ ಪರ್ಯಾಲೋಚನೆಯಲ್ಲಿವೆ.

ವ್ಯಾಪಾರ ಸಹಕಾರಿ ಸಂಘಗಳನ್ನು

ಪ್ರಾಂತದಲ್ಲಿ ವ್ಯವಸಾಯದ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕಾಗಿ ಸ್ಥಾಪಿಸುವ ಐದು ವರ್ಷಗಳ ಯೋಜನೆಯನ್ನು ಸರಕಾರವು ಪರಿಶೀಲಿಸುತ್ತಿದೆ. ಇಂತಹ ಯೋಜನೆಯಿಂದ ಕೃಷಿಕರಿಗೆ ಹೆಚ್ಚಿನ ಪ್ರಯೋಜನವಾಗಬಹುದು ಕೇಂದ್ರ ಸರಕಾರವು ವ್ಯವಸಾಯದ ಉತ್ಪನ್ನಗಳಿಗೆ ಅತಿ ಕಡಿಮೆ ಮತ್ತು ಅತಿ ಹೆಚ್ಚಿನ ಬೆಲೆಗಳಲ್ಲಿ ವ್ಯಾಪಾರಸಮಿತಿಯ ಶಿಫಾರಸು ಮೇರೆಗೆ ನಿಯಂತ್ರಣವಿಟ್ಟು ಅಖಿಲ ಭಾರತ ದೃಷ್ಟಿಯಿಂದ ಕೆಲಸಮಾಡುವಾಗ ಈ ಪ್ರಾಂತದಲ್ಲಿರುವ ಈ ವ್ಯಾಪಾರ ಸಹಕಾರಿ ಸಂಘಗಳಿಗೆ ಆ ಸಮಿತಿಯು ಪ್ರತಿನಿಧಿಯಾಗಿರಬಹುದು

ಭೂಮಿ ಅಡವು ಮಾಡುವಾಗ

ಬಡ್ಡಿ ಕಡಿಮೆಯಾಗಬೇಕೆಂದು ಅನೇಕರು ಒತ್ತಾಯಿಸುತ್ತಿದ್ದಾರೆ ಕಡಮೆಯೆಂದರೆ ಬಡ್ಡಿಯ ದರ ಶೇಕಡಾ 2½ ಆಗಿರಬೇಕೆಂದು ಸೂಚಿಸಲಾಗಿದೆ ಭೂಮಿ ಅಡವಿನ ಮೇಲೆ ಸಾಲಕೊಡುವ ಕೇಂದ್ರ ಬೇಂಕಿನ ಬಡ್ಡಿಯನ್ನು ಇಳಿಸುವಂತೆ ಸರಕಾರವು ಅನುಮತಿ ಇತ್ತಿದೆ ಅಲ್ಲದೆ ಸಾಲತೆಕ್ಕೊಳ್ಳುವ ದರವನ್ನು ಶೇಕಡಾ 3ರಿಂದ 2¾ಕ್ಕೆ ಇಳಿಸುವಂತೆ ಮಾಡಿದೆ. ಭೂಮಿ ಅಡವಿನ ಮೇಲೆ ಸಾಲ ಕೇಳುವವರೂ, ಭೂಮಿಯನ್ನು ಊರ್ಜಿತಗೊಳಿಸಲು ಸಾಲ ಕೇಳುವವರೂ ದಿನದಿನ ಹೆಚ್ಚಾಗಿದ್ದಾರೆ ಇದರಿಂದ ಸೆಂಟ್ರಲ್ ಬೇಂಕಿನವರು ಭೂಮಿಯ ಮೇಲೆ ಕೊಡುವ ಸಾಲದ ಬಡ್ಡಿಯನ್ನು ಶೇಕಡಾ 5¾ಕ್ಕೆ ಎಂದು ನಿಶ್ಚಯಿಸಿದ್ದಾರೆ ಇನ್ನು ಅನುಕೂಲತೆ ದೊರೆತರೆ ಬಡ್ಡಿಯದರವನ್ನು ಶೇಕಡಾ 5ಕ್ಕೆ ಇಳಿಸಲಾಗುವುದು ನಮ್ಮಲ್ಲಿ ಈಗಿರುವ ಸಾಲದ ಬಡ್ಡಿಯದರ ಇಡೀ ಹಿಂದುಸ್ಥಾನದಲ್ಲೇ ಅತಿ ಕಮ್ಮಿಯಾಗಿದೆ

ಕೊನೆಯದಾಗಿ

ಯುದ್ಧಕಾಲದಲ್ಲಿಯೂ ಯುದ್ಧದ ಅನಂತರವೂ ಸಹಕಾರಿ ಸಂಘಗಳು ಪ್ರಾಂತದ ಆಹಾರ ಕೊರತೆಯನ್ನು ಹೋಗಲಾಡಿಸುವುದರಲ್ಲಿ ಕೈಕೊಂಡ ಕಾರ್ಯಕಲಾಪಗಳು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ ನಿಯಂತ್ರಣವು ತೆಗೆಯಲ್ಪಟ್ಟಾಗ ಈ ಸಂಘಗಳು ಇತರ ವ್ಯಾಪಾರಿಗಳೊಡನೆ ಸ್ಪರ್ಧೆಗೆ ಸಿಲ್ಲವೇಕಾಗಬಹುದು ಇದಕ್ಕಾಗಿ ಪ್ರಾಂತೀಯ ರಖಂ ವ್ಯಾಪಾರ ಸಹಕಾರಿ ಸಂಘವನ್ನು ಸ್ಥಾಪಿಸಿ ಅಂತಹ ಸ್ಪರ್ಧೆಯನ್ನು ತಡೆಯಬಹುದೆಂದು ಆಶಿಸಲಾಗಿದೆ ಸರಕಾರವು ಮೊದಲು ಹೆಂಡ ತಯಾರಿಸುತ್ತಿದ್ದವರ ಏಳಿಗೆಗಾಗಿ ಬೆಲ್ಲ ತಯಾರಿಸುವ ಸಹಕಾರಿ ಸಂಘಗಳನ್ನು ಸ್ಥಾಪಿಸಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುತ್ತಿದೆ

'ಮದ್ರಾಸ ಸಮಾಚಾರ'

ಜಗತ್ತಿನ ಅತಿ ದೊಡ್ಡ ನದಿ ಎಮೆಜನ್ 4 ಸಾವಿರ ಮೈಲು ಉದ್ದವಿದೆ. 1 ಸಾವಿರ ಮೈಲು ಉದ್ದದ 20 ಉಪನದಿಗಳು ಅದಕ್ಕೆ ಸೇರುತ್ತದೆ ಅದರ ಒಂದು ಉಪನದಿ 2 ಸಾವಿರ ಮೈಲು ಉದ್ದವಿದೆ

✱

ವಾರದ ವಿಜ್ಞಾನ ವರದಿಗಳು

ರೇಡಿಯೊ ಕಿರಣ ಪ್ರಭಾವಿತ ಕ್ಷೇತ್ರ

ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ಸಂಶೋಧನಾಲಯದಲ್ಲಿ ಗಿಡಗಳು ಸೂರ್ಯನ ಬಿಸಿಲಿನೊಳಗಿನ ಚೈತನ್ಯ ಶಕ್ತಿಯನ್ನು ಹೇಗೆ ಹೀರಿಕೊಳ್ಳುತ್ತವೆಂಬುದನ್ನು ಕಂಡುಹಿಡಿಯುವ ಪ್ರಯೋಗಗಳಾಗುತ್ತಿವೆ ಈ ರಹಸ್ಯವು ತಿಳಿಯಿತೆಂದರೆ ಜಗತ್ತು ಮುಂದೆ ಆಹಾರ ಅಭಾವದ ಸಂಕಷ್ಟದಿಂದ ಪಾರಾಗುವುದು ಸೂರ್ಯನಲ್ಲಿರುವ ಅಗಾಧ ಶಕ್ತಿಯನ್ನು ಸಂಪೂರ್ಣವಾಗಿ ಹೀರಿಕೊಳ್ಳುವ ವ್ಯವಸ್ಥೆ ಸಸ್ಯಗಳಲ್ಲಿಲ್ಲ ಅವು ಈಗ ಕೇವಲ ಅದರ ಶೇಕಡಾ 10ರಿಂದ 20ರಷ್ಟನ್ನು ಮಾತ್ರ ಹೀರಬಲ್ಲವು ಈಗ ಸಸ್ಯಗಳು ಹೆಚ್ಚೆಚ್ಚಿನ ಸೂರ್ಯ ಶಕ್ತಿಯನ್ನು ಗ್ರಹಿಸಲು ಸಾಧ್ಯವಾಗುವಂತೆ ಮಾಡುವ ಒಂದು ವಿಧಾನವು ಕಂಡುಹಿಡಿಯಲ್ಪಟ್ಟರೆ ನಮ್ಮ ಗದ್ದೆ ಹೊಲಗಳೂ, ತೋಟ [illegible]ಗಳೂ ಸಮೃದ್ಧಿಯಾದ ಫಲವಸ್ತುಗಳಿಂದ ತುಂಬಿ ತುಳುಕುವಂತಾಗುವವು

ಹುಳಗಳಿಂದ ಕಳೆ ಕೀಳುವುದು

ಕೆಲವೊಂದು ಕ್ರಿಮಿಕೀಟಗಳಿಂದ ಬೆಳೆಗಳ ಮಧ್ಯ ಬೆಳೆಯುವ ಕಳೆಗಿಡಗಳನ್ನು ನಾಶಮಾಡುವ ಒಂದು ವಿಧಾನವನ್ನು ಆಸ್ಟ್ರೇಲಿಯದ ವೈಜ್ಞಾನಿಕ ಮತ್ತು ಕೈಗಾರಿಕಾ ಪರಿಶೋಧನಾ ಮಂಡಳದವರು ಕಂಡುಹಿಡಿದಿರುವರು ಅನೇಕ ಕಳೆಗಿಡಗಳು ಪೈರನ್ನು ನಾಶ ಮಾಡುವವು ಕೆಲವು ಜಾನುವಾರಗಳಿಗೆ ವಿಷಪ್ರಾಯವಾಗವವು ಇದುತನಕ ಇಂತಹ ಕಳೆಗಳ ಮೇಲೆ ಉಪ್ಪು ನೀರನ್ನು ಚಿಮುಕಿಸಿ ಅವುಗಳ ಬೆಳೆವಣಿಗೆಯನ್ನು ನಿರುತ್ಸಾಹಗೊಳಿಸುವ ಒಂದು ವಿಧಾನವನ್ನು ಮಾತ್ರ ಅನುಸರಿಸಲಾಗುತ್ತಿತ್ತು ಮೇಲ್ಕಂಡ ಆಸ್ಟ್ರೇಲಿಯನ್ ಸಂಸ್ಥೆಯವರು ಮೊದಲು ಬ್ರಿಟನ್ನಿನ ಒಂದು ಜಾತಿಯ ಹಾತೆಯನ್ನು ಈ ವಿನಾಶಕಾರಿ ಗಿಡಗಳನ್ನು "ಮೇಯಲಿಕ್ಕೆ" ಬಿಟ್ಟರು ಇವುಗಳ ಸಂಸಾರ ಹೆಚ್ಚಲು ಅವನ್ನು ಬೇರೆ ಗದ್ದೆಗಳಿಗೆ ಸ್ಥಳಾಂತರಿಸಲಾಯಿತು ಈ ಬೇರೆ ಕೆಲವು ಇಂತಹ ಕ್ರಿಮಿಗಳನ್ನು ವೃದ್ಧಿಗೊಳಿಸುವ ಕಾರ್ಯವು ಭರದಿಂದ ನಡೆಯುತ್ತಿದೆ

ಹೆಚ್ಚು ಆಹಾರ ಬೆಳೆಸುವ ಯಂತ್ರ

ಬೀಜಗಳನ್ನು ಕೆಲವೊಂದು ಯಂತ್ರೋಪಕರಣ ಖಜಾನೆಗಳಲ್ಲಿ "ಬೇಯಿ"ಸುವುದರ ಮೂಲಕ ಅವುಗಳ ಫಲಕೊಡುವ ಶಕ್ತಿಯನ್ನು ಹೆಚ್ಚಿಸಬಹುದೆಂದು ಕರ್ಟ್ ವೊನ್ ಫಿಶರ್ ಎಂಬ ಆಸ್ಟ್ರಿಯಾ ದೇಶದ ಕೃಷಿ ತಜ್ಞರು ಕಂಡುಹಿಡಿದಿದ್ದಾರೆ ಈ ವಿಧಾನದಿಂದ ಸಂಸ್ಕರಿಸಲ್ಪಟ್ಟ ಬೀಜಗಳನ್ನು ತಾನು ಬೀಜ ಬಿತ್ತುವ ಸಮಯದ ಎರಡು ತಿಂಗಳ ನಂತರ ಬಿತ್ತಿ ಶೇಕಡಾ 50ರಷ್ಟು ಹೆಚ್ಚಿನ ಫಲವನ್ನು ತೆಗೆದುಕೊಡುವೆನೆಂದು ಅವರು ಧೈರ್ಯದಿಂದ ತಿಳಿಸುತ್ತಾರೆ ಬೀಜಗಳ ಮೊಳೆಯುವಿಕೆಯ ಶಕ್ತಿಯನ್ನು ಕೆಲವೊಂದು ವೈಜ್ಞಾನಿಕ ವಿಧಾನದಿಂದ ಹೆಚ್ಚಿಸಲು ಸಾಧ್ಯವಿದೆಯೆಂದವರ ವಿಶ್ವಾಸ ಇದೇ ರೀತಿ ಮೊಟ್ಟೆ ಮಾಂಸಗಳ ಪೋಷಕ ದ್ರವ್ಯಗಳನ್ನು ವಿಕಾಸಗೊಳಿಸಿ ಮಾನವ ಉಪಯೋಗದ ಈ ವಸ್ತುಗಳ ಆಹಾರ ಮೌಲ್ಯವನ್ನೂ ಹೆಚ್ಚಿಸಬಹುದೆಂಬ ಅವರ ತತ್ವವನ್ನು ಈಗ ಬ್ರಿಟಿಷ್ ವಿಜ್ಞಾನಿಗಳು ಪ್ರಯೋಗ ಮೂಲಕ ಸಿದ್ಧಾಂತಗೊಳಿಸಲು ಪ್ರಯತ್ನಿಸುತ್ತಿರುವರು.

ಬೆಳಕಿನ ವೇಗ

ಬೆಳಕು ಕಿರಣಗಳು ಒಂದು ಸೆಕುಂಡಿಗೆ 186000 ಮೈಲು ವೇಗದಲ್ಲಿ ಚಲಿಸುತ್ತವೆ. ಬೆಳಕಿನ ವೇಗವನ್ನು 1676ರಲ್ಲಿ ಓಲೌಸ್ ರೋಮರ್ ಎಂಬ ಡನ್ಮಾರ್ಕಿನ ಜ್ಯೋತಿಷ್ಯ ಶಾಸ್ತ್ರಜ್ಞನು ಪ್ರಥಮತ ಕಂಡುಹಿಡಿದನು ಭೂಮಿಗೊಂದು ಚಂದ್ರನಿರುವಂತೆ ಇತರ ಎಲ್ಲಾ ಗ್ರಹಗಳಿಗೂ ಅದೇ ತರದ ಗ್ರಹಗಳಿವೆ ಕುಜ ಗ್ರಹದ ಚಂದ್ರನು ಆ ಗ್ರಹದ ಹಿಂದೆ ಗಣಿತಜ್ಞರು ನಿರೀಕ್ಷಿಸಿದ ವೇಗಕ್ಕಿಂತ 8 ಮಿನಿಟು ಮೊದಲೇ ಕಂತುವುದನ್ನು ರೋಮರನು ಒಂದು ದಿನ ಕಂಡನು. ಕುಜಗ್ರಹವು ಭೂಮಿಗೆ ಬಹಳ ಹತ್ತಿರವಿದೆ ಆದುದರಿಂದ ಅದರ ಪ್ರಕಾಶವು ಭೂಮಿಗೆ ಬಹುಬೇಗನೆ ತಲಪುತ್ತದೆ ಭೂಮಿಗೂ ಕುಜಕ್ಕೂ ಇರುವ ಅಂತರವೆಷ್ಟೆಂದು ಬಲ್ಲ ಆ ತಜ್ಞನು ತನ್ನ ಸಿದ್ಧಾಂತೀಕರಣದಿಂದ ಬೆಳಕಿನ ವೇಗವನ್ನು ಕಂಡುಹಿಡಿದನು.

ಹುಚ್ಚರು ಕೊಲ್ಲುವುದೇಕೆ?

ಕೆಲವು ಮಾನಸಿಕ ಅವ್ಯವಸ್ಥೆಗಳಲ್ಲಿ ವಿದಳನ ವಿಚಾರಸಮರ್ಥ ಭಾಗವು ಮನಸ್ಸಿನ [illegible] ತಣ [illegible] ಹೋಗುತ್ತದೆ ಆಗ ಮನುಷ್ಯನ ಕಲ್ಪನಾ [illegible] ಮನೋವಿಕಾರಗಳ ದ ನರಕ [illegible] ಶಿಕ್ಷೆ [illegible] ಹಿಡಿದವನಾಗಿ ಅವನು ಕಲ್ಪನಾ ಸಾಮ್ರಾಜ್ಯದಲ್ಲಿ ತಿರುಗಾಡುತ್ತಾನೆ ತಾನು ಅನೇಕ ಶಬ್ದಗಳನ್ನು ಕೇಳುವಂತೆಯೂ ಅವನು ಭಾವಿಸುತ್ತಾನೆ ಈ ಶಬ್ದಗಳು ಹೊರಗಿನಿಂದ ಬಂದವುಗಳೆಂದು ಅವನು ತಿಳಿದರೂ ನಿಜವಾಗಿ ಅವು ಸುಪ್ತಾವಸ್ಥೆಯಲ್ಲಿರುವ ಜೀವನ ವಿದಳನ ಇನ್ನೊಂದು ಭಾಗದ ಸ್ಪರ್ಶೆಯಿಂದ [illegible] ಇಂತಹ ಕಲ್ಪಿತ [illegible] ತಾವಸ್ಥೆಯಲ್ಲಿ [illegible] ಸರಿಬುದ್ಧಿಯ ಮನಿಸನಾಗ ತನ್ನ ಸ್ನೇಹಿತರನ್ನು [illegible] ಕೊಲ್ಲುವ ಪ್ರಯತ್ನ ಕ್ಕೂ ಕೈಹಾಕುವನು

ಸಂಗೀತದಿಂದ ಹುಚ್ಚು ನಿವಾರಣೆ

ಬ್ರಿಟಿಷ್ ಮಾನಸಿಕ ವ್ಯಾಧಿ ಶುಶ್ರೂಷಾಲಯಗಳಲ್ಲಿ ವಿಶೇಷ ಸಂಗೀತ ಸಲಕರಣೆಗಳನ್ನು ಕೈಕೊಳ್ಳಲಾಗಿದೆ. ಕೆಲವು ಇಂಪಾದ ರಾಗಗಳು ನಿರ್ದಿಷ್ಟವಾದೊಂದು ರೀತಿಯಲ್ಲಿ ಬಾರಿಸಲ್ಪಟ್ಟರೆ ಅವುಗಳಿಂದ ಮಾನಸಿಕ ವ್ಯಾಧಿಗಳ ಮೇಲೆ ಶಮನಗೊಳಿಸುವ ಪರಿಣಾಮ ಉಂಟಾಗಿದೆಯೆಂದು ತಿಳಿದುಬಂದಿರುವುದೇ ಈ ಹೊಸ ಏರ್ಪಾಡಿಗೆ ಕಾರಣ ಬ್ರಿಟನಿನ ಸಂಗೀತ ಪ್ರಚಾರ ಖಾತೆಯ ನಿರ್ದೇಶಕಾಧಿಕಾರಿಗಳಾಗಿರುವ ಸ್ಟುವರ್ಟ್ ವಿಲ್ಸನ್ ಅಲ್ಲಿನ ಹುಚ್ಚು ನಿಯಂತ್ರಣ ಸಂಸ್ಥೆಯವರ ಸಹಕಾರದಿಂದ ಬೇರೆ ಬೇರೆ ದೇಶಗಳ ಸಂಗೀತ ವಿಧಾನಗಳನ್ನೂ ಅವುಗಳ ರಾಗಗಳಲ್ಲಿರುವ ಮನೋವಿಕಾರಗಳನ್ನೂ ಗುಣಪಡಿಸುವ ಶಕ್ತಿ ಎಷ್ಟಿದೆಯೆಂಬುದನ್ನೂ ಕಂಡುಹಿಡಿಯುವ ಪ್ರಯೋಗಗಳನ್ನು ಮಾಡುತ್ತಿರುವರು

ನಿತ್ಯ ತಾರುಣ್ಯ

ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯದ ಡಾ। ಫ್ಲೆಮಿಂಗ್ ಕೊರೆಂಚೆವಿಸ್ಕಿ ಎಂ. ರಸ್ಕಿನ್ ವಿಜ್ಞಾನಿಗಳು ನಿರಂತರ ತಾರುಣ್ಯವನ್ನಿಟ್ಟುಕೊಳ್ಳುವ ವಿಧಾನವನ್ನು ಕಂಡುಹಿಡಿಯಲು ಪರಿಶ್ರಮಿಸುತ್ತಿರುವರು ವೃದ್ಧಾಪ್ಯವು ಒಂದು ವ್ಯಾಧಿಯೆಂದೂ ಅದು ಸ್ವಾಭಾವಿಕವಾದೊಂದು ಶರೀರಾವಸ್ಥೆಯಲ್ಲವೆಂದೂ ಅವರ ಕಲ್ಪಿತ ಸಿದ್ಧಾಂತ ಇವರ ಅಭಿಪ್ರಾಯದಂತೆ ಪುರುಷರು 100 ಮತ್ತು ಸ್ತ್ರೀಯರು 112 ವರ್ಷಗಳ ತನಕ "ಸುಲಭವಾಗಿ" ಬದುಕಬಹುದಾಗಿದೆ [illegible] ಅದಕ್ಕೆಂದು ಯೋಗ್ಯ ಆರೋಗ್ಯ [illegible] ಮದ ಅವಶ್ಯಕತೆಯಿದೆ

ಪ್ರಾಚೀನ ಭಾರತದಲ್ಲಿ ವಿಷವಾಯು ಯುದ್ಧ

ಸಿಡಿಮದ್ದುಗಳೂ ಇಲ್ಲೇ ಕಂಡುಹಿಡಿಯಲ್ಪಟ್ಟಿವು

ನ್ಯೂಯೋರ್ಕಿನಲ್ಲಿರುವ ಡಾ। ವಾಮನ್ ಕೊಕಟ್ನೂರ್ ಎಂಬ ಹಿಂದೀ ರಾಸಾಯನಿಕ ಪರಿಶೋಧಕರು "ಸಿಡಿಮದ್ದು ಮತ್ತು ರಾಸಾಯನಿಕ ವಸ್ತುಗಳುಪಯೋಗ ಯುದ್ಧ ವಿಧಾನಗಳು ಭಾರತದಲ್ಲೇ ಕಂಡುಹಿಡಿಯಲ್ಪಟ್ಟವು" ಎಂದು ಅಮೇರಿಕದ ರಾಸಾಯನಿಕ ವಿಜ್ಞಾನಿ ಮಂಡಳದ ಸಭೆಯೊಂದರಲ್ಲಿ ತಿಳಿಸಿದರು "ಪ್ರಾಚೀನ ಹಿಂದೂಗಳು ಆಗ್ನ್ಯಾಸ್ತ್ರಗಳನ್ನೂ, ಅಗ್ನಿ ಪ್ರಸಾರಕಗಳನ್ನೂ, ಹೊಗೆ ಪರದೆಗಳನ್ನೂ, ಸೀನು ಚೂರ್ಣಗಳನ್ನೂ ಮಾತ್ರವಲ್ಲ ಸಿಡಿಮದ್ದುಗಳನ್ನೂ ಉಪಯೋಗಿಸುತಿದ್ದರೆಂಬುದಕ್ಕೆ ಐತಿಹಾಸಿಕ ನಿದರ್ಶನಗಳು ದೊರೆಯುತ್ತಿವೆ ಇದೇ ಕಾಲಕ್ಕೆ ಚೀನಿಯರು ಇವನ್ನು ಉಪಯೋಗಿಸುತಿದ್ದರೆಂಬುದರ ಕುರಿತು ಯಾವ ದಾಖಿಲೆಗಳೂ ಸಿಕ್ಕಿಲ್ಲ" ಎಂದು ತಿಳಿಸುತ್ತಾ ಡಾ। ಕೊಕಟ್ನೂರರು "ಪ್ರಾಚೀನ ಭಾರತದ ಗ್ರಂಥಗಳು ಚೆನ್ನಾಗಿ ಪರಿಶೀಲಿಸಲ್ಪಟ್ಟರೆ ಇಂದಿನ ಯುದ್ಧ ವಿಧಾನಗಳನ್ನು ಇನ್ನೂ [illegible] ಧಾರಣೆಗೊಳಿಸುವ ಅನೇಕ ರಹಸ್ಯಗಳು ಸಿಗಲು ಸಾಧ್ಯವಿದೆ ಭಾರತೀಯರಿಗೆ ರಸಾಯನಿಕ ಶಾಸ್ತ್ರದ ವಿಶಾಲ ಪರಿಜ್ಞಾನವಿದ್ದುದರಿಂದ ಅವರಿಗೆ ಅನೇಕ ಸಸ್ಯಜನ್ಯ ಮತ್ತು ಪ್ರಾಣಜನ್ಯ ವಿಷಧಾತುಗಳ ಪರಿಚಯವಿತ್ತು ಅವರದನ್ನು ಅನೇಕ ಔಷಧಿಗಳಲ್ಲಿ ಇಂದಿಗೂ ಉಪಯೋಗಿಸುವವನ್ನರಿತಿದ್ದಾರೆ" ಎಂದು ನಿರೂಪಿಸಿದರು

ಪ್ರಯಾಣಿಕರಿಗೆ ಸೂಚನೆ.

ಪಕ್ಕೆತ್ತ ಮೂರು ತಿಂಗಳಿಗೆ ಸಿಗರೇಕಿಂದ [illegible] ಲಿಯಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ [illegible] ಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ [illegible] ವ ಸಂಭವ [illegible] ವುದರಿಂದಲೂ, ಮತ್ತು ಗೇಸ ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು [illegible] ನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಲಿಕ್ಕಾಗುತ್ತದೆ ಅಲ್ಲದೆ [illegible] ಕೆಲವು ಕಡೆಗಳಲ್ಲಿ [illegible] ಮತ್ತು ಕೆಲವು ಕಡೆಗಳಲ್ಲಿ [illegible] ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲ್ ರನ್ ಮಾಡಬೇಕಾಗಿರುತ್ತವೆ. ಉದಾಹರಣೆಗಾಗಿ ಮಂಗ್ಳೂರು–ಮುಲ್ಕಿ ಲ್ಯಾನಲ್ಲಿ ಪಾವಂಜೆಯಿಂದ ಮುಲ್ಕಿಗೆ [illegible] ಬಸ್ಸು ಮಾತ್ರ ರನ್ ಆಗುತಿರುವುದರಿಂದ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸ್ ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕೊಂಡೇ ಅಂಥಾ ಸ್ಪೆಶ್ಯಲುಗಳನ್ನು [illegible] ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಪಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜ್ಯೋಂಟ್ ಮೇನೇಜರ್ಸ್,
ದಿ. ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪ್ರೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 — **About 54 lakhs.**

Our experience of 37 years avialable to you for arranging Insurance Investment. It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 24—10—1947 [ಸಂಚಿಕೆ 42]

ಶಾಂತಿ ಸ್ಥಾಪನೆಯು ಹೇಗಾಗಬಹುದು?

ಸೀಖ್ ಸಂಘದ ಅಭಿಪ್ರಾಯ

"ಈ ಕೊಲೆ ಪಾತಕದ ಪ್ರಕರಣ ಮುಂದರಿಯಬೇಕೆಂದು ಯಾರು ಇಚ್ಛಿಸುವರು?" ಎಂದು ಪ್ರಶ್ನಿಸುತ್ತ ಬೋ. [illegible] ಸಿಂಗ್ ಸಭೆಯವರು ಶಾಂತಿ ಸ್ಥಾಪನೆಗೆ ಈ ಕೆಳಗಿನ ಸೂಚನೆಗಳನ್ನು ಕೊಡುತ್ತಾರೆ:

ಪಾಕಿಸ್ಥಾನದಲ್ಲಿಂದು ನಡೆಯುವ ಪಾಶವೀ ಪ್ರದರ್ಶನದ ಹಿಂದಿರುವವರು ಅಲ್ಲಿನ ಶ್ರೀಮಂತ ವರ್ಗದ ಮತ್ತು ಸ್ವಾರ್ಥಿ ಹಿತಗಳವರು. ಭೀತಿ ಬೆದರಿಕೆಗಳನ್ನು ಪಸರಿಸಿ ಅವರು ತಮ್ಮ ರಾಜ್ಯದಿಂದ ಹಿಂದೂ ಬಂಡವಾಳಗಾರರನ್ನು ಆಸ್ತಿ ಮಾಲಕರನ್ನು ಓಡಿಸಲು ಇಚ್ಛಿಸುವರು. ಹಾಗೆ ಮಾಡಿದರೆ ಅಲ್ಲಿನ ವ್ಯಾಪಾರವನ್ನು ತಾವು ವಶ ಮಾಡಿ ಸಾಮಾನ್ಯ ಜನತೆಯನ್ನು ಚೆನ್ನಾಗಿ ಸುಲಿಯಬಹುದೆಂದವರ ಉದ್ದೇಶವಿರುತ್ತದೆ. ಭಾರತದಲ್ಲಿ ಇದಕ್ಕೆ ವಿರುದ್ಧವಾದ ಪರಿಸ್ಥಿತಿಯಿರುತ್ತದೆ. ಇಲ್ಲಿ ಶ್ರೀಮಂತ ವರ್ಗದವರು ಹಿಂದೂಗಳು. ಈಗಿನ ಗಲಭೆ ಇಲ್ಲಿ ಮುಂದುವರಿಯುವಂತಾದರೆ ಅವರಿಗೆ ತುಂಬಾ ನಷ್ಟವೇ ಉಂಟಾಗುತ್ತದೆ. ಆದುದರಿಂದ ಮುಸ್ಲಿಂ ಜನತೆಯನ್ನು ತಮ್ಮ ಮಧ್ಯದಲ್ಲಿಟ್ಟುಕೊಳ್ಳಲು ಅವರು ಬಯಸುತ್ತಾರೆ. ಕಾರಣ ಅವರನ್ನು ಕಮ್ಮಿ ಮಜೂರಿಗೆ ಉಪಯೋಗಿಸಿಕೊಳ್ಳಬಹುದಾಗಿದೆಂದು ಹಿಂದೂ ಬಂಡವಾಳಗಾರರ ಎಣಿಕೆಯಿರುತ್ತದೆ. ಇಲ್ಲಿ ಏನೂ ಇಲ್ಲದ ಸಾಮಾನ್ಯ ಜನರೇ ಕೊಲೆ ಪಾತಕವನ್ನು ಮುಂದರಿಸುತ್ತಾರೆ. ಅದರಿಂದ ಏನಾದರೂ ಲಾಭಗಳಿಸುವುದು ಅವರ ಉದ್ದೇಶವಿಲ್ಲ. ಆದರೆ ತಮ್ಮದೆಲ್ಲವನ್ನು ಕಳಕೊಂಡು ಉದ್ವೇಗಪೂರಿತರು, ಮತ್ತು ತಮ್ಮನ್ನು ಆ ಪರಿಸ್ಥಿತಿಗೆ ತಂದ ಇನ್ನೊಂದು ಮತದವರನ್ನು ಕಂಡ ಕೂಡಲೆ ದ್ವೇಷ ಭರಿತರಾಗುವುದಿನ್ನೊಂದು. ಹೀಗೆ ಅವರು ಹತೋಟಿ ಮೀರುವಂತಾಗುತ್ತದೆ.

ಆದುದರಿಂದ ಶಾಂತಿಯನ್ನುಂಟುಮಾಡಲು ಮಾನವ ಜೀವದ ಮೌಲ್ಯದ ಕುರಿತು ಕೊಡಲ್ಪಡುವ ಉಪದೇಶವು ಮಾತ್ರ ಸಾಕಾಗಲಾರದು. ಮಾನವ ಜೀವಗಳ ಕುರಿತು ಇಲ್ಲಿಯ ಧುರೀಣರಿಗೆ ಯಾವದೇ ಮಹತ್ವದ ಅಭಿಪ್ರಾಯವಿರುತ್ತಿದ್ದರೆ ಅವರೆಂದಿಗೂ ಈ ವಿಭಾಗೀಕರಣಕ್ಕೆ [illegible] ಒಪ್ಪುತ್ತಿರಲಿಲ್ಲ. ಒಂದು ವೇಳೆ ಅವರು ಹೀಗೆ ಮಾಡುವುದೇ ಒಳ್ಳೆಯದು ಎಂಬ ವಿಚಾರವಿದ್ದರೆ ಜನಸಂಖ್ಯೆಯನ್ನು ಬೇಡದೆ ಪರಸ್ಪರ ಸ್ಥಳಾಂತರಗೊಳಿಸುವರ ಪ್ರಯತ್ನ ಮಾಡಬೇಕಿತ್ತು.

ಈಗಲಾದರೂ ಶಾಂತಿಸ್ಥಾಪನೆ ಮಾಡಲು ಅವರು ಬಯಸುವುದಾದರೆ ಜನತೆಯು ಇದಲ್ಲೇ ಇರುವಂತೆ ಬೋಧನ ಮಾಡುವುದರ ಬದಲು ಅವರು ಒಂದು ಕಡೆಯಿಂದ ಮುಸಲ್ಮಾನರನ್ನೂ ಇನ್ನೊಂದು ಕಡೆಯಿಂದ ಸೀಖ್ ಹಿಂದೂಗಳನ್ನೂ ಸ್ಥಳಾಂತರಿಸಲು ಪ್ರಯತ್ನಿಸಬೇಕು. ಈಗ ದುರೀಣರಿಗೆ ಸಲಹೆಗಳನ್ನು ಕೊಡುವುದೂ ಅಪ್ರಸ್ತುತವಾಗುತ್ತದೆ. ಜನರ ಮೇಲೆ ತಮಗಿರುವ ಹಿಡಿತವನ್ನವರು ಕಳಕೊಂಡಿರುವರು. ಸರಕಾರದವಷ್ಟೇ ಅವರೂ ನಿರಾಶಾಜನಕವಾದ ಅಸಹಾಯಕ ಪರಿಸ್ಥಿತಿಯಲ್ಲಿ ಅವರೂ ಇದ್ದಾರೆ. ನಿರಾಶ್ರಿತರ ತಂಡಗಳು ಸಾಲುಸಾಲಾಗಿ ಹರಿಯುತ್ತಿರುವ ತನಕ ಈ ಅಕೃತ್ಯಗಳು ಮುಂದರಿಯುವವು. ನಿರಾಶ್ರಿತರು ಸಂಪೂರ್ಣ ಅದಲುಬದಲು ಮಾಡಲ್ಪಡುವ ತನಕವೂ ಇವು ಮುಂದರಿವವು. ಅನಂತರ ಎರಡೂ ಡೊಮಿನಿಯನ್ನುಗಳೂ ಮುಂದಿನ ಶಾಂತಿ ಸ್ಥಾಪನೆಯ ಕುರಿತು ಪರ್ಯಾಲೋಚಿಸಲು ಸಮಯ ಸಿಗುತ್ತದೆ.

ಅಲ್ಪ ಸಂಖ್ಯಾಕರ ಕಡೆಗೆ ಈ ಎರಡು ಡೊಮಿನಿಯನ್ನುಗಳು ತಳೆಯುವ ಧೋರಣೆಯ ಮೇಲೆ ಮುಂದಿನ ನೆಮ್ಮದಿಯು ಅವಲಂಭಿಸಿದೆ. ಭಾರತ ಒಕ್ಕೂಟ ಸರಕಾರವು ಈಗಾಗಲೇ ಸರಿಯಾದ ಧೋರಣೆಯನ್ನನುಸರಿಸಿದೆ. ಎಲ್ಲಾ ನಾಗರೀಕರಿಗೂ ಸಮಾನ ಹಕ್ಕು ಬಾಧ್ಯತೆಗಳಿರುವ ರಾಜ್ಯ ಘಟನೆಯನ್ನು ಅವರು ರಚಿಸಿರುವರು. ಆ ಸರಕಾರವು ಜಾತಿ ಪಂಥ ಪ್ರಧಾನವಾಗಿರದೆ ನಿಷ್ಪಕ್ಷಪಾತಿಯಾಗಿರುವುದು. ಪಾಕಿಸ್ತಾನವೂ ಇದೇ ರೀತಿಯ ರಾಜ್ಯಘಟನೆಯನ್ನು ಸಾರಿ ತಮ್ಮ ರಾಜ್ಯದಲ್ಲಿ ಮುಸ್ಲಿಂ ಮತ್ತು ಮುಸ್ಲಿಮೇತರರಿಗೆ ಸಮಾನ ಹಕ್ಕು ಬಾಧ್ಯತೆಗಳಿರುವುದಾಗಿಯೂ, ಅಲ್ಪ ಸಂಖ್ಯಾಕರ ಮತೀಯ ಭಾವನೆಗಳಿಗೆ ತೊಡಕು ಬಾರದಂತೆಯೂ, ಸರಕಾರಿ ಹುದ್ದೆಗಳಲ್ಲಿ ಎಲ್ಲರಿಗೂ ನಿಷ್ಪಕ್ಷಪಾತದ ಸಂದರ್ಭಗಳು ಸಿಕ್ಕುವಂತೆಯೂ ಸಾರಬೇಕು.

ಇನ್ನೊಂದು ವಿಚಾರವೆಂದರೆ ಆಸ್ತಿಪಾಸ್ತಿಗಳನ್ನು ಅದಲುಬದಲು (ಮೌಲ್ಯದಲ್ಲಿ) ಮಾಡುವ ಕುರಿತೂ ಎರಡು ಸರಕಾರಗಳು ಒಂದು ಸಾಮಾನ್ಯ ಇತ್ಯರ್ಥವನ್ನು ಮಾಡಬೇಕು. ನಿರಾಶ್ರಿತರು ಹಿಂದೆ ಬಿಟ್ಟುಬಂದ ಆಸ್ತಿಪಾಸ್ತಿಗಳು ಕಳಕೊಂಡಂತೇ ಆಗಿದೆ. ಪರಸ್ಪರ ಡೊಮಿನಿಯನ್ನುಗಳಲ್ಲಿ ನಿರಾಶ್ರಿತರಿಗೆ ತಮ್ಮ ಮೂಲ ಪ್ರಾಂತ್ಯದಲ್ಲಿದ್ದ ಆಸ್ತಿಪಾಸ್ತಿಗಳಷ್ಟೇ ಸಿಗುವಂತಾಗಬೇಕು.

FOR ALL CLASSES OF INSURANCE

LIFE-FIRE-MARINE-ACCIDENT.

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA ASSURANCE CO. LTD.

(H O BOMBAY)

✻

A Tata's Promotion & India's Largest Composite Insurance Office.

Total Assets - - - About 9 Crores.

For Agency and other particulars:-

Apply to

K. GANAPATHI Esq., *Branch Manager*, 4/5, First Line Beach, MADRAS.

K. N. NAYAK, Esq., *Secretary, Sub Office* Hampankatta, MANGALORE.

ಸಂತನಿಗೆ ಕವಯಿತ್ರಿಯ ಶ್ಲಾಘನೆ

ಗಾಂಧೀಜಿಯ ದೈವೀಕ ಗುಣ ವೈಶಿಷ್ಟ್ಯಗಳು

ಅವರ ಪ್ರೀತಿಯ ಸುವಾರ್ತೆ

ಲಕ್ನೋ ರೇಡಿಯೋದಿಂದ ಸಂಯುಕ್ತ ಪ್ರಾಂತ್ಯದ ಗವರ್ನರರಾದ ಶ್ರೀಮತಿ ಸರೋಜಿನಿ ದೇವಿಯವರು ಗಾಂಧೀ ಜಯಂತಿಯ ದಿವಸ ಕೊಟ್ಟ ಒಂದು ಪ್ರಸಾರ ಭಾಷಣದಲ್ಲಿ ಹೀಗೆಂದರು.

ಲಂಡನಿನ ಒಂದು ಹಳೇ ಮಾದರಿಯ ಒಂದು ಮನೆಯ ಮುರುಕು ಮೆಟ್ಟಲುಗಳನ್ನು ಹತ್ತಿ ನಾನೊಂದು ತೆರೆದ ಬಾಗಿಲಿನೆದುರು ನಿಂತೆ. ಒಳಗಿನ ಕೋಣೆಯಲ್ಲಿ ತನ್ನ ಸುತ್ತಲೂ ಕೆಲವೊಂದು ಹಾಸ್ಯಾಸ್ಪದ ಪೆಟ್ಟಿಗೆಗಳನ್ನಿರಿಸಿ ಒಂದು ಕಪ್ಪು ಜಮಖಾನೆಯ ಮೇಲೆ ಕುಳಿತ ವ್ಯಕ್ತಿಯೋರ್ವನನ್ನು ನಾನಲ್ಲಿ ಕಂಡೆ. ಅವರು ಒಂದು ಮರದ ಬಟ್ಟಲಿಂದ ಭೀಕರವಾಗಿ ಕಾಣುವ ಆಹಾರ ವಸ್ತುಗಳನ್ನು ಒಂದು ಮರದ ಚಮಚದ ಆಧಾರದಿಂದ ತಿನ್ನುತಿದ್ದರು

ನಮ್ಮ ಕಡೆಗೆ ನೋಡಿ "ಓ ನೀವೊ?" ಎಂದು ಪ್ರಶ್ನಿಸಿದರು. "ಹೌದು ನಾನು" ನಾನೆಂದೆ. "ನನ್ನ ಊಟದಲ್ಲಿ ಸ್ವಲ್ಪ ಭಾಗವಹಿಸುವಿರೊ?" ಎಂದದರು ಮತ್ತೆ ಕೇಳಿದರು "ಖಂಡಿತವಾಗಿಯೂ ಇಲ್ಲ ಇದು ಭಯಂಕರ ಕಾಣುತ್ತದೆ" ಎಂದು ನಾನು ಹೇಳಿದ ಆ ಮೇಲೆ ನಗುತ್ತ ನಾವೊಂದು ಸ್ನೇಹ ಭಾವವನ್ನು ಬೆಳೆಸಿದೆವು ಅಂದಿನಿಂದದು ಬೆಳೆದು ಅಭಿವೃದ್ಧಿಯಾಗಿ ಇದುತನಕ ಬಾಳಿ ಬಂದಿದೆ. ಅವರೇ ಗಾಂಧೀಜಿಯವರಾಗಿದ್ದರು ಇಂದೂ ಜಗತ್ತಿಗೆ ಅವರೊಬ್ಬ ವಿಚಿತ್ರ ಪುರುಷರಾಗಿರುವರು.

卐

ಗಾಂಧಿಜಿಯವರ ಆ ಅತಿಶ್ರೇಷ್ಠವೆನಿಸುವ ನೈತಿಕ ಶಕ್ತಿ ಅದ್ಯಾವುದಾಗಿದೆ? ಇತಿಹಾಸದಲ್ಲೆಲ್ಲಾ, ಕಾಲಕಾಲಕ್ಕೂ ಪ್ರತಿಯೊಂದು ದೇಶದಲ್ಲೂ ಹೆಸರಾಂತ ವ್ಯಕ್ತಿಗಳೂ, ಶ್ರೇಷ್ಠ ಮಹಾಪುರುಷರೂ, ಅರಸರೂ, ಯೋಧರೂ, ನ್ಯಾಯ ಸೂತ್ರಧಾರರೂ, ಕವಿಗಳೂ, ಜನ್ಮವೆತ್ತಿದ್ದಾರೆ ಅವರ ಕೀರ್ತಿಯೂ ಬಹು ಕಾಲದ ತನಕ ಬಾಳಿದೆ. ಇನ್ನೂ ಬಹುಕಾಲದ ನಂತರ ಅವರ ಕೀರ್ತಿ ನಶಿಸಿಹೋಗಿದೆ, ಮರೆತುಹೋಗಿದೆ ಇಲ್ಲವೆ ಅದೃಶ್ಯವೇ ಆಗಿದೆಯೆಂದರೂ ಅತಿಶಯವಲ್ಲ ಆದರೆ ಬುದ್ಧ, ಯೇಸುಕ್ರಿಸ್ತ, ಮಹಮ್ಮದ ಮೊದಲಾದ ಕೆಲವೇ ಮಂದಿಗಳ ಹೆಸರುಗಳು ಇಂದಿಗೂ ಅಚ್ಚಳಿಯದೆ ಪ್ರಜ್ವಲಿಸುತ್ತಿವೆ ಮಾನವ ಭಾವನಾ ಶಕ್ತಿಯನ್ನು ಉದಾತ್ತೀಕರಣಗೊಳಿಸುವುದೇ ಇವರ ಸುವಾರ್ತೆಯಾಗಿತ್ತು. ಇಂದು ಗಾಂಧೀಜಿಯವರಿದ್ದಾರೆ ಚಿಕ್ಕ ಮನುಷ್ಯ, ದುರ್ಬಲ ಶರೀರದವ, ದೊಡ್ಡ ವಿದ್ವಾಂಸನೂ ಅಲ್ಲ, ದೊಡ್ಡ ಶ್ರೀಮಂತನೂ ಅಲ್ಲ, ಚಿಕ್ಕಾಸಿನ ಭೌತಿಕ ಸಂಪತ್ತುಳ್ಳವನೂ ಅಲ್ಲ. ಇಷ್ಟಾದರೂ ಅವರು ಚಕ್ರವರ್ತಿಗಳಿಂದೆಷ್ಟೊ ಮಿಗಿಲಾದ ವ್ಯಕ್ತಿ

卐

ಚಕ್ರವರ್ತಿಗಳು ತಮ್ಮ ಸ್ವಂತ ರಾಜಧಾನಿಗಳ ರಾಜರಸ್ತೆಗಳಿಂದ ವಿಜೃಂಭಣೆಯಿಂದ ಮೆರವಣಿಗೆ ಹೋಗಿರುವರು ವಿಧೇಯರಾದ ಪ್ರಜೆಗಳು ಅವರಿಗೆ ಮನ್ನಣೆಯನ್ನು ಸಲ್ಲಿಸಿರುವರು ಕೆಲವು ಸಲ ಪ್ರೀತಿಪೂರ್ವಕವಾಗಿಯೂ, ಕೆಲವು ಸಲ ಭೀತಿಪೂರ್ವಕವಾಗಿಯೂ ಈ ಸಲ್ಲತಕ್ಕ ಆದರ ಸಲ್ಲಿಸಲ್ಪಟ್ಟಿದೆ. ಅದೊಂದು ಸಾಂಪ್ರದಾಯವೂ ಆಗಿದೆ. ಆದರೆ ಮುರುಟು ಎಲುಬಿನ, ಹಲ್ಲಿಲ್ಲದ ಬಾಯಿಯ, ಗೇಣುದ್ದ ಬಟ್ಟೆಯ ಈ ಮನುಷ್ಯ ನಮ್ರವಾಗಿ ಸಂವತ್ಸರ ಪಥದಲ್ಲಿ ಹಾದುಹೋಗುತ್ತಿರುವನು. ಅವನು ಯುದ್ಧ ಸನ್ನದ ಶಕ್ತಿಗಳನ್ನೆದುರಿಸುವನು, ಸಾಮ್ರಾಜ್ಯಗಳನ್ನುರುಳಿಸುವನು, ಮೃತ್ಯುವನ್ನು ಜಯಿಸುವನು.

卐

ಈ ಐಂದ್ರಜಾಲ, ಈ ವರ್ಚಸ್ಸು, ಈ ಅಧಿಕಾರ, ಈ ಗೌರವ ಅವರಿಗೆ ಹೇಗೆ ಬಂದವು? ಜಗತ್ತಿನ ಕೆಲವೇ ಧರ್ಮ ಪ್ರವರ್ತಕರಿಗೆ ಸಲ್ಲುವ ಮನ್ನಣೆ ಆದರಗಳು ಇವರಿಗೂ ಸಲ್ಲುವಂತಾದುದೇ ದೈವೀಕ ಗುಣ ಶಕ್ತಿ ಹೇಗೆ ಉಂಟಾದುವು ಶ್ರೇಷ್ಠ ಮತಸ್ಥಾಪಕರಂತೆ ದೀನರಲ್ಲಿ ಧೈರ್ಯವನ್ನುಂಟು ಮಾಡುವ, ಭೀತರಲ್ಲಿ ಸ್ಥೈರ್ಯವನ್ನು ತುಂಬುವ, ಪಾಶವೀ ಶಕ್ತಿಯನ್ನು ನಮ್ರಗೊಳಿಸುವ ಈ ಮಹಾ ಆತ್ಮ ಬಲಗಳು ಹೇಗುಂಟಾದುವು?

ಪ್ರೀತಿಯೇ ಎಲ್ಲಾ ಧರ್ಮ ಶಾಸ್ತ್ರಗಳ ಸಾರವೆಂಬ ಕ್ರಿಸ್ತನ ತತ್ವವನ್ನು ಗಾಂಧೀಜಿ ಬೋಧಿಸುತ್ತಾರೆ ಮಹಮ್ಮದನಂತೆ ಅವರು ಮಾನವ ಭ್ರಾತೃತ್ವವನ್ನು ಸಾರುತ್ತಾರೆ ಜೀವನದ ಧ್ಯೇಯವು ಸತ್ಯವನ್ನರಸುವುದು, ಅಹಿಂಸೆಯೇ ನಿತ್ಯ ಸತ್ಯಮಾರ್ಗವೆಂಬ ಭಗವಾನ್ ಬುದ್ಧನ ತತ್ವವನ್ನವರು ಪ್ರಚಾರಿಸುತ್ತಾರೆ

ಮಾನವನಿಗೆ ಉಜ್ವಲ ಭವಿಷ್ಯವು ಕಾದು ನಿಂತಿದೆಯೆಂಬ ಮಾನವನ ಉದಾತ್ತ ಭವಿಷ್ಯವನ್ನು ಹಾಳುಗೆಡವಲು ಯಾರಿಂದಲೂ ಸಾಧ್ಯವಿಲ್ಲವೆಂಬ, ಪಾಪವು ತನ್ನಷ್ಟಕ್ಕೆ ಭಸ್ಮೀಭೂತವಾಗುತ್ತದೆಂಬ, ಪ್ರೀತಿ ಮಾನವೀಯತೆಗಳೇ ನಿರಂತರ ಬಾಳುವಂತಹುಗಳೆಂಬ ವಿಶ್ವ ಕವಿಗಳ ಭವಿಷ್ಯ ದರ್ಶನವನ್ನವರೂ ಕಂಡಿರುವರು

卐

ತಮ್ಮ ಹುಟ್ಟಿಗೆ ಗಾಂಧೀಜಿಯವರೊಂದು ಅಗಣನೀಯ ವ್ಯಕ್ತಿ ಈ ಲೋಕದಲ್ಲಿ ಅವರಿಗಿಂತ ಮಿಗಿಲಾದ ಅದೆಷ್ಟೊ ವ್ಯಕ್ತಿಗಳಿದ್ದಾರೆ, ಅಧಿಕಾರ ಸಂಪತ್ತಿನ ಅದೆಷ್ಟೊ ವ್ಯಕ್ತಿಗಳಿದ್ದಾರೆ, ಹೆಸರಾಂತ ಪುರುಷರಿದ್ದಾರೆ. ಆದರೆ ಒಂದು ನಿರ್ಬಲ ಶರೀರ ಕವಚದೊಳಗೆ ಅಪ್ರತಿಮ ಸ್ಥೈರ್ಯ, ಅಚಲ ವಿಶ್ವಾಸ, ಮತ್ತು ವಿಶ್ವಮಾನವ ಪ್ರೇಮಗಳೆಂಬ ಅತ್ಯುಚ್ಚ ಶೀಲಗಳನ್ನೊಳಗೊಂಡ ವ್ಯಕ್ತಿಗಳೆಷ್ಟು ಮಂದಿಗಳಿದ್ದಾರೆ?

ಸೂರ್ಯ ಪ್ರಕಾಶದಂತೆ ಯಾವ ಜಾತಿ ಮತ, ಜನಾಂಗ ದೇಶಗಳ ಪಕ್ಷಪಾತವಿಲ್ಲದ ಮಾನವ ಪ್ರೇಮ, ನಿನ್ನೆಯೂ, ಇಂದಿಗೂ, ನಾಳೆಗೂ ಸಹಮಾನವೋದ್ಧಾರಕ್ಕಾಗಿ ಸಿರ್ವಹಿಸಲ್ಪಡುವ ಶ್ರದ್ಧಾವಂತ ಸೇವೆ ಇದೇ ಗಾಂಧೀ ಚಮತ್ಕಾರದ ಕತೆಯಾಗಿದೆ ಇದು ನಮ್ಮ ಕಣ್ಣೆದುರಿಗೆ ನಡೆಯುವ ಉಜ್ವಲ ಇತಿಹಾಸ ಚಮತ್ಕಾರ ಕೃತಿಗಳ ಯುಗ ದಾಟಿತೆಂದು ಹೇಳಿದವರಾರು? ಚಮತ್ಕಾರ ಕೃತಿಗಳ ಮೂರ್ತಿವೆತ್ತ ಮಹಾ ನಿದರ್ಶನವೊಂದು ನಮ್ಮ ಮಧ್ಯದಲ್ಲೇ ಇರುವಾಗ ಚಮತ್ಕಾರ ಕೃತಿಗಳ ಕಾಲ ಹೇಗೆ ಕಳೆದು ಹೋದೀತು?

卐

ಇಡೀ ಜಗತ್ತೇ ಈ ಮನುಷ್ಯನನ್ನು ಗೌರವಿಸಲಿ ಇತರ ಮನುಷ್ಯರಂತೆ ಅವರು ಜನ್ಮಿಸಿದರು ಇತರರಂತೆ ಅವರು ಮಡಿಯುವರು ಆದರೆ ಕೆಲವೊಂದು ವಿಷಯಗಳಲ್ಲಿ ಅವರು ಇತರರನ್ನು ಮೀರಿಸುತ್ತಾರೆ ದ್ವೇಷವನ್ನು ದ್ವೇಷದಿಂದ ಜಯಿಸಲಾಗುವುದಿಲ್ಲ, ಜಗತ್ತನ್ನು ದ್ವೇಷದಿಂದ ಜಯಿಸಲಾಗುವುದಿಲ್ಲ, ಅಧಿಕಾರವನ್ನು ನಿರ್ಬಲ ಅಧಃಪತನವಾದ ಜನತೆಯ ಮೇಲೆ ನಡೆಸಲು ಸಾಧ್ಯವಿಲ್ಲ, ಅತ್ಯಂತ ಪ್ರಭಾವಶಾಲಿಯಾದ ಅಹಿಂಸಾ ಸಂದೇಶವು ಮುಂದೆ ರಚಿತವಾಗಲಿರುವ ನವನಾಗರೀಕತೆಯ ನಿಜವಾದ ಅಸ್ತಿವಾರವಾಗಿದೆ.

ನನ್ನ ನಾಯಕರೂ, ನನ್ನ ಸ್ನೇಹಿತರೂ, ನನ್ನ ಪಿತೃ ಸಮಾನರೂ ಆಗಿರುವ ಈ ಮಹಾ ಪುರುಷರಿಗೆ ನಾನು ನನ್ನೀ ಅಭಿವಂದನೆಗಳನ್ನು ಸಲ್ಲಿಸುತ್ತೇನೆ ನನ್ನ ಅವರೊಳಗೆ ಒಂದು ವಿನೋದಕ್ಕಾಗಿ ಉಂಟಾದ ಸ್ನೇಹವು ಇಂದು ಗುರು ಶಿಷ್ಯ ಸಂಬಂಧವಾಗಿ, ತಂದೆ ಮಗಳ ಸಂಬಂಧವಾಗಿ ಬೆಳೆದಿದೆ ಗೀತಗಾರರ ಮತ್ತು ನೀತಿ ಪುರುಷರ ಧ್ಯೇಯಗಳು ಒಂದೆ ಅವರ ದಾರಿಗಳು ಬೇರೆ ಬೇರೆಯಾಗಿರಬಹುದು ಆದರೆ ಉದ್ದೇಶವು ಒಂದೇ

ವಿದೇಶ ರಾಜಕೀಯ

ಕಮ್ಯುನಿಷ್ಟರನ್ನು ನಿರ್ಮೂಲಿಸುವ ಯೋಜನೆಯೊಂದನ್ನು ಬ್ರೆಜಿಲ್ ಸರಕಾರವು ಸದ್ಯದಲ್ಲೇ ಕೈಕೊಳ್ಳಲು ನಿರ್ಧರಿಸಿದೆಯೆಂದು ರ್‍ಯಾಟರ್ ಬಾತ್ಮಿದಾರನು ತಿಳಿಸುತ್ತಾನೆ ಬ್ರೆಜಿಲ್ ರಷ್ಯದೊಡನೆ ಸಂಬಂಧ ತ್ಯಜಿಸಿತು

卐

ಪಶ್ಚಿಮದ ಮೇಲೆ ಪಾಶ್ಚಾತ್ಯ ದೇಶಗಳು ಸದ್ಯದಲ್ಲೇ ದಾಳಿ ಮಾಡುವ ಸಂಭವವಿದೆಯೆಂದೂ ಆದುದರಿಂದ ಪರ್ಶಿಯನ್ ಸೈನ್ಯ ಸುವ್ಯವಸ್ಥೆಗಾಗಿ ಹೆಚ್ಚಿನ ಹಣ ವ್ಯಯಿಸಬೇಕೆಂದೂ, ಒಂದು ವೇಳೆ ಯಾರಾದರೂ ಪರ್ಶಿಯವನ್ನು ವಶಪಡಿಸಲು ಪ್ರಯತ್ನಿಸಿದರೆ ದೇಶದ 15 ಮಿಲಿಯ ಪ್ರಜೆಗಳೂ ಜೀವಾಂತ್ಯದ ತನಕ ಹೋರಾಡಲು ಸಿದ್ಧರಿರುವರೆಂದೂ ಆ ದೇಶದ ಮುಖ್ಯ ಸೈನ್ಯಾಧಿಕಾರಿಗಳ ತಿಳಿಸುತ್ತಾರೆ ಇಸ್ಪಹಾನಿನ ಬ್ರಿಟಿಷ್ ಅಪೀಸು ರಷ್ಯಾ ತೆರೆದಿಸಿದು,

卐

ಸಂಯುಕ್ತ ರಾಷ್ಟ್ರ ಸಂಘದ 57 ಜನಾಂಗಗಳ ಪಾರ್ಲಿಮೆಂಟರಿ ಸಭೆಯೊಂದನ್ನು ಶಾಂತಿ ಭದ್ರತೆಗಳ ಪರಿರಕ್ಷಣೆಗಾಗಿ ಸ್ಥಾಪಿಸಲ್ಪಡುತ್ತದೆಂಬ ಸಂಯುಕ್ತ ಅಮೇರಿಕದ ಸೂಚನೆಯನ್ನು ಭಾರತದ ಪ್ರತಿನಿಧಿ ಶ್ರೀ ಸೆಟಲ್‌ವಾಡರು ಸಮರ್ಥಿಸಿದರು ಬ್ರಿಟಿಷ್ ಪ್ರತಿನಿಧಿಗಳು ಇಂತಹ ಬೇರೊಂದು ನಿರೀಕ್ಷಣಾ ಮಂಡಳಿಯನ್ನು ರಚಿಸಬೇಕೆಂಬ ಸೂಚನೆಯನ್ನು ಮುಂದೆ ತಂದಿರುವರು

卐

ಯುಕ್ತ ರಾಷ್ಟ್ರ ಸಂಘದ ದೂರ ಪ್ರಾಚ್ಯ ದೇಶಗಳ ಆರ್ಥಿಕ ಸಮಿತಿಯ ಕಾರ್ಯಕಲಾಪಗಳಲ್ಲಿ ಸ್ವತಂತ್ರ ಆಡಳಿತೆ ಸ್ಥಾಪಿಸಲ್ಪಡದ ವಸಾಹತುಗಳು ಭಾಗವಹಿಸಬಾರದು, ಕಾರಣ ಅವು ತಮ್ಮ ಆಳೊಡೆಯ ಸಾಮ್ರಾಜ್ಯಶಾಹಿಗಳ ಕೈಗೊಂಬೆಗಳಾಗಿರುತ್ತವೆ ಎಂಬ ರಶ್ಯನ್ ಸೂಚನೆಯನ್ನು ಬ್ರಿಟಿಷ್ ಪ್ರತಿನಿಧಿಗಳು ರುಜುವಾತು ಮಾಡಿ ತೋರಿಸಬೇಕೆಂದು ತಿಳಿಸಿರುವರು

卐

ಬರುವ ಜನವರಿ 6ರ ನಂತರ ಬರ್ಮವು ಸಂಪೂರ್ಣ ಸ್ವತಂತ್ರವಾಗುವುದು ಆನಂತರ ಬ್ರಿಟನ್ ಬರ್ಮಗಳೊಳಗೆ ಒಂದು ಒಪ್ಪಂದವು ಮಾಡಿಕೊಳ್ಳಲ್ಪಡುವುದು.

卐

ಕಫ, ಶೀತ, ಎದೆನೋವುಗಳನ್ನು ದಿನಂಪ್ರತಿ ಪೆಪ್ಸು ತೆಗೆದು ಕೊಳ್ಳುವುದರಿಂದ ಗುಣಪಡಿಸಿರಿ

ಸಾಂಕ್ರಾಮಿಕ ಕಫ, ಎದೆನೋವು, ಶೀತಾದಿಗಳನ್ನು ಬೆಳೆಯಬಿಡಬೇಡಿರಿ ಅದು ನಿಮ್ಮ ಜೀವನಾಂದವನ್ನು ಕೆಡಿಸುವುದು ಕೆಲವು ಪೆಪ್ಸುಗಳನ್ನು ಕೈಯಲ್ಲಿ ತೆಗೆದುಕೊಳ್ಳಿ ಆಗತ್ಯಬಿದ್ದಾಗೆಲ್ಲ ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳನ್ನು ಸೇವಿಸಿರಿ

ಬಾಯಲ್ಲಿ ಹಾಕಿದ ಕೂಡಲೇ ಕರಗುವುದು ಪೆಪ್ಸು ಮಾತ್ರೆಗಳು ಉತ್ತಮ ಔಷಧಿ ತತ್ವದಿಂದ ಕೂಡಿದ ರಸವನ್ನು ನಿಮ್ಮ ಶ್ವಾಸಕೋಶದ ನೋವವನ್ನು ಪೆಪ್ಸು ಗುಣಗೊಳಿಸಿ ಕಫವನ್ನು ನಿಲ್ಲಿಸುವುದು ಕಂಠನಾಳವನ್ನು ಸರಿಗೊಳಿಸುವುದು

ಕೆಟ್ಟ ಶೀತ, ಇಂಪ್ಲುಯೆಂಜಾ, ಕಫ, ಮೊದಲಾದುವುಗಳೆಲ್ಲ ಇದು ಅತ್ಯುತ್ತಮ ಔಷಧಿ

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರೀ ಶ್ವಾಸಯೋಗ್ಯಮಾತ್ರೆಗಳು

ಪ್ರಪಂಚ ಪರಿಚಯ

ಪಲೆಸ್ತೀನದ ವಿಭಾಗೀಕರಣ

ಸಂಯುಕ್ತ ರಾಷ್ಟ್ರ ಸಮಿತಿಯು ಬಹು ಸಂಖ್ಯಾಕರ ವರದಿಯು ಮೇರೆ ಪಲೆಸ್ತೀನವನ್ನು ವಿಭಾಗೀಕರಿಸಬೇಕೆಂದೂ ಅಂತರಾಷ್ಟ್ರೀಯ ಪೋಲಿಸ್ ದಳವೊಂದರ ಸಹಾಯದಿಂದ ಆ ಇತ್ಯರ್ಥವನ್ನು ನಿರ್ವಹಿಸಬೇಕೆಂದೂ ಅಮೇರಿಕನ್ ಪ್ರತಿನಿಧಿಯಾದ ಹರ್ಷಲ್ ಜೊನ್ಸನ್ನರು ಒತ್ತಿ ತಿಳಿಸಿರುವರು ವಿಭಾಗೀಕರಣ ಮಾಡಿದರೆ ಅರಬರು ಸರ್ವತ್ರ ಸಂಘಟನೆಯಿಂದ ದಂಗೆಯೆದ್ದು ಅದನ್ನು ಎದುರಿಸುವರೆಂದೂ, ಅರಬ ದೇಶಗಳಿಂದೆಲ್ಲ ಪಾಶ್ಚಾತ್ಯರನ್ನು ಓಡಿಸಲಾಗುವುದೆಂದೂ ಅರಬ ಸಮಿತಿಯವರು ಎಚ್ಚರಿಕೆ ಕೊಟ್ಟಿರುವರು ಪಲೆಸ್ತೀನದಿಂದ ತಮ್ಮ ಸೈನ್ಯ ದಳಗಳನ್ನು ಹಿಂತೆಗೆಯಲು ಬ್ರಿಟನ್ನು ಒಪ್ಪಿದೆ ಮಧ್ಯಪೂರ್ವದಲ್ಲಿ ಅನೇಕ ಬ್ರಿಟಿಷ್ ಮತ್ತು ಅಮೇರಿಕನ್ ಹಿತಗಳೂ, ಅವರ ವ್ಯಾಪಾರ ಕೇಂದ್ರಗಳೂ, ಎಣ್ಣೆಗಣಿಗಳೂ, ವಿಮಾನ ನಿಲ್ದಾಣಗಳೂ ಇವೆ ಇವುಗಳೆಲ್ಲದರ ಮೇಲೆ ರಶ್ಯನ್ನರ ಸ್ವಾರ್ಥ ದೃಷ್ಟಿಯೂ ಬಿದ್ದಿರುತ್ತದೆ ಒಂದು ಕಡೆಯಿಂದ ತಮ್ಮ ಹಿತಗಳಿಗೆ ಗಂಡಾಂತರ ಉಂಟಾಗುವುದೆಂಬ ಭಯ, ಇನ್ನೊಂದೆಡೆ ಯಹೂದಿ ಒಂದು ವಾಳಗಾರರನ್ನು ಒಲಿಸುವ ಇಚ್ಛೆ, ಅದೇ ಸಮಯಕ್ಕೆ ಮಧ್ಯಪೂರ್ವದಲ್ಲಿ ರಶ್ಯನ್ ಪ್ರಭಾವವು ಹೆಚ್ಚಬಹುದೆಂಬ ಭಯ ಇವೆಲ್ಲ ಕಾರಣಗಳಿಂದ ಬ್ರಿಟಿಷ್ ಅಮೇರಿಕನ್ನರು ಕಳವಳಗೊಂಡಿದ್ದಾರೆ

ಆದರೆ ಮೇಲಿನ ಕಾರಣಗಳೆಲ್ಲ ತಮ್ಮ ವಿರೋಧವಾಗಿದ್ದರೂ ಅಮೇರಿಕನ್ನರು ಬಹಿರಂಗವಾಗಿ ಯೆಹೂದಿ ಪರವಾದ ಬೆಂಬಲದ ಧೋರಣೆಯನ್ನು ಪ್ರದರ್ಶಿಸುವುದರಲ್ಲಿಯೂ ವೈಶಿಷ್ಟ್ಯವಿದೆ. ಪಲೆಸ್ತೀನದ ಪ್ರಶ್ನೆಯನ್ನು ಅರಬರ ಅನುಕೂಲತೆಗೆ ತಕ್ಕಂತೆ ಇತ್ಯರ್ಥಿಸಿದರೂ ಮುಂದೆ ಅರಬರು ರಶಿಯನ್ ಸಹಾನುಭೂತಿಯನ್ನು ಬಿಡಲೊಲ್ಲರೆಂಬ ಸಂಗತಿಯು ಅಮೇರಿಕನ್ನರಿಗೆ ವಿಹಿತವಾಗಿರಬೇಕು, ಬ್ರಿಟಿಷರಂತೂ ಮಧ್ಯಪೂರ್ವದಲ್ಲಿ ತಮ್ಮ ಮೇಲೆ ಈಗಾಗಲೇ ದ್ವೇಷವು ಮಿತಿಮೀರಿದೆಯೆಂದೂ ಅದನ್ನು ಪರಮಾವಧಿಗೆ ಮುಟ್ಟಿಸುವುದರಿಂದ ತಮ್ಮ ದೇಶದ ವ್ಯಾಪಾರವ್ಯವಹಾರಗಳಿಗೆ ಶಾಶ್ವತ ಧಕ್ಕೆ ತಟ್ಟಿದಂತಾಗಿ ಈಗಾಗಲೇ ನಿರ್ಬಲಗೊಂಡ ತಮ್ಮ ಆರ್ಥಿಕ ಮತ್ತು ಆಹಾರ ಪರಿಸ್ಥಿತಿಯು ಇನ್ನಷ್ಟು ವಿಷಮವಾಗಬಹುದೆಂದೂ ಅಂಜಿಕೊಂಡಿದ್ದಾರೆಂಬುದಕ್ಕೆ ಅವರ ಇತ್ತೀಚಿನ ಧೋರಣೆಯು ನಿದರ್ಶನವಾಗಿದೆ ಈ ಚಿಂತೆಯಿಂದಲೂ ಅವರು ತಮ್ಮ ಸೈನ್ಯಗಳನ್ನು ಹಿಂತೆಗೆಯುವರು ಆದರೆ ಬ್ರಿಟಿಷರು ಅಮೇರಿಕನ್ನರನ್ನು ತಪ್ಪಿತಸ್ಥರನ್ನಾಗಿ ತೋರಿಸಲು ಇಚ್ಛಿಸಿದರೂ ಅಮೇರಿಕದ ಆರ್ಥಿಕ ಸಹಾಯ ಮತ್ತು ಸೈನ್ಯ ಸಹಾಯಗಳ ಮೇಲೆ ಹೊಂದಿಕೊಂಡಿರುವ ತಮ್ಮ ಅಸಹಾಯತೆಯು ಅವರಿಗೆ ಚೆನ್ನಾಗಿ ಅರಿತಿರುವುದರಿಂದ ಪರಿಸ್ಥಿತಿಯು ಕೊನೆಯ ಹಂತಕ್ಕೆ ಮುಟ್ಟಿ ಘರ್ಷಣೆಯು ಅನಿವಾರ್ಯವಾದಾಗ ಅವರು ಅಮೇರಿಕನ್ನರ ಪರವಾಗಿಯೇ ಹೋರಾಡುವರೆಂಬುದು ನಿಸ್ಸಂದೇಹ.

ಈ ಸಂದರ್ಭದಲ್ಲಿ ಅರಬ ದೇಶಗಳಲ್ಲಿ ಅಲ್ಲಿನ ಗ್ರೆಂಡ್ ಮುಫ್ತಿಯ ಪ್ರಭಾವವು ಹೆಚ್ಚುತ್ತಿರುವುದನ್ನು ಗೊಟೆಮಾಲಾದ ಪ್ರತಿನಿಧಿಗಳಾದ ಡಾ। ಗ್ರೆನಾಡೋಸ್ ಅವರು ಯುಕ್ತ ರಾಷ್ಟ್ರ ಸಂಘದ ಪಲೆಸ್ತೀನ್ ಸಮಿತಿಯಲ್ಲಿ ಎಚ್ಚರಿಸಿದರು ಪಲೆಸ್ತೀನದಲ್ಲಿ ಇಂದು ನಡೆಯುತ್ತಿರುವ ಭೀಕರ ಭಾತೃಕಲಹಕ್ಕೆ ಒಂದು ಕಾಲದಲ್ಲಿ ಹಿಟ್ಲರನ ಪಕ್ಷಪಾತಿಯಾದ ಈ ಮುಫ್ತಿಯೇ ಕಾರಣನೆಂದೂ ಅವನ ವರ್ಚಸ್ಸನ್ನು ಮುರಿಯುವುದರಲ್ಲೇ ಎಲ್ಲಾ ಇತ್ಯರ್ಥಗಳ ಯಶಸ್ಸು ಅಡಗಿದೆಯೆಂದೂ ಅವರು ತಿಳಿಸಿದರು ಮುಫ್ತಿಯಾದರೊ ಬಹಿರಂಗವಾಗಿ ಬ್ರಿಟಿಷ್ ಅಮೇರಿಕನ್ನರ ವಿಷಯವಾಗಿ ಅರಬರಲ್ಲಿ ದ್ವೇಷವನ್ನುಂಟುಮಾಡಿದವನು ಹಿಂದೆ ಅವನು ಬಹಿರಂಗವಾಗಿ ಹಿಟ್ಲರನನ್ನು ಸಮರ್ಥಿಸಿದವನು ಈಗವನು ಹಿಂದಿನ ತನ್ನ ದ್ವೇಷವನ್ನು ಇಂದಿನ ಸ್ಥಿತಿಗನುಕೂಲವಾಗಿ ಪರಿವರ್ತಿಸಿ ಗುಪ್ತ ಕಾರಸ್ಥಾನದಿಂದ ಅರಬ ದೇಶಗಳನ್ನು ಬ್ರಿಟಿಷ್ ಅಮೇರಿಕನ್ನರ ವಿರುದ್ಧವಾಗಿ ಹುರಿದುಂಬಿಸುತ್ತಿರುವನು ಮಧ್ಯಪೂರ್ವ ದೇಶಗಳಿಂದ ಪಾಶ್ಚಾತ್ಯ ಪ್ರಭಾವವನ್ನು ಸಂಪೂರ್ಣ ಕಿತ್ತುಹಾಕಬೇಕೆಂಬುದೊಂದೇ ಅವನ ನಿರಂತರ ಸಾಧನೆ

ಯಹೂದಿ ಧೋರಣೆ

ಇತ್ತ ಅರಬ ಯಹೂದಿಗಳೊಳಗಿನ ದ್ವೇಷವು ದಿನಹೋದಂತೆ ವಿಷಮವಾಗುತ್ತಿದೆ ಪಲೆಸ್ತೀನವನ್ನು ವಿಭಾಗಿಸಿದರೆ ಅರಬರು ಬಲಾತ್ಕಾರವನ್ನುಪಯೋಗಿಸುವರೆಂಬ ನಿರ್ಧಾರಕ್ಕೆ ಯಹೂದಿ ಸಂಪದವರು ಅದನ್ನು ಎದುರಿಸಲು ತಾವು ಸಿದ್ಧರಿರುವುದಾಗಿ ತಿಳಿಸುತ್ತಾರೆ ಪಲೆಸ್ತೀನವನ್ನು ವಿಭಾಗಿಸುವುದಕ್ಕೆ ಮೊದಲು ಎರಡು ಕಡೆಗಳಲ್ಲಿ ಅಲ್ಪಸಂಖ್ಯಾಕರಾಗುವವರನ್ನು ಸ್ಥಳಾಂತರಿಸಬೇಕೆಂದೂ ಅಮೇರಿಕೆಯ ಪ್ರತ್ಯೇಕ ವಸತಿಗಳು ಸ್ಥಾಪಿಸಲ್ಪಡಬೇಕೆಂದೂ ಸೂಚಿಸಿದ್ದಾರೆ ಹೀಗೆ ಮಾಡದಿದ್ದರೆ ಹಿಂದುಸ್ಥಾನದಲ್ಲಿದ್ದಂತೆ ಘೋರ ರಕ್ತಪಾತವುಂಟಾಗುವುದೆಂದು ಅವರು ತಿಳಕೊಂಡಿರಬಹುದು. ಮತ್ತು ಹಾಗಾಗುವುದೂ ಅಸಂಭವವಲ್ಲ

ಒಟ್ಟಿನಲ್ಲಿ ಪಲೆಸ್ತೀನವು ಮುಂದಿನ ವಿಶ್ವ ಮಹಾಯುದ್ಧದ ಘರ್ಷಣ ಕೇಂದ್ರವಾಗಬಹುದೆಂಬುದಕ್ಕೆ ಅಲ್ಲಿನ ಘಟನೆಗಳು ಧಾರಾಳ ಉದಾಹರಣೆಯಾಗಿವೆ 1914ರ ಮಹಾಯುದ್ಧವು ಆಸ್ಟ್ರೀಯದಲ್ಲಿ ಓರ್ವ ತಲೆತಿರುಕನು ಹಾರಿಸಿದ ಗುಂಡಿನಿಂದ ಪ್ರಾರಂಭವಾಯಿತಂತೆ ಅದೇ ರೀತಿ ಮಧ್ಯಪೂರ್ವದಲ್ಲಿ ಪರಿಸ್ಥಿತಿಯು ರಾಷ್ಟ್ರಗಳ ಶಕ್ತಿ ಸ್ಪರ್ಧೆಯಿಂದ ತಪ್ತವಾಗಿದೆ ಇದಕ್ಕೊಂದು ಕಿಡಿಯು ಪಲೆಸ್ತೀನದಲ್ಲಾಗಲಿ, ಇರಾಕಿನಲ್ಲಾಗಲಿ ಇಲ್ಲವೆ ಒಂದು ಬಾರತದಲ್ಲಾಗಲಿ ತಗಲಬಹುದೆಂದು ರಾಜಕೀಯ ತಜ್ಞರ ಅಭಿಮತವಿದೆ

ಆದರೆ ಇಂದು ಅಮೇರಿಕದ ಪ್ರಬಲ ಸಂಪತ್ ಶಕ್ತಿಗೂ, ಅವರ ಬಳಿಯಿರಬಹುದಾದ ಅಣುಶಕ್ತಿಗೂ ಎಲ್ಲಾ ರಾಷ್ಟ್ರಗಳೂ ಅಂಜಿಕೊಂಡಿವೆಯೆಂಬ ಸಂಗತಿಯು ಯುಕ್ತರಾಷ್ಟ್ರ ಸಂಘದಲ್ಲಿ ನಡೆಯುವ ಕಾರ್ಯಕಲಾಪಗಳಿಂದ ಸ್ಪಷ್ಟವಾಗುತ್ತದೆ ರಶ್ಯದ ಬಳಿ ಅಪಾರವಾದ ಸೈನ್ಯ ಶಕ್ತಿಯಿರುವುದಾಗಿಯೂ ಅವರ ಶಸ್ತ್ರಾಸ್ತ್ರ ದಳಗಳು ಅತ್ಯಂತ ಸುಸಜ್ಜಿತವೂ ಸುವ್ಯವಸ್ಥಿತವೂ ಅಪ್ರತಿಮ ಶಕ್ತಿಯುಳ್ಳವೂ ಆಗಿವೆಯೆಂದು ಹೇಳಲ್ಪಟ್ಟಿದೆ ಅದೇ ಸಮಯಕ್ಕೆ ಅಮೇರಿಕನ್ ಸೈನ್ಯ ವಿಭಾಗಗಳು ಯುದ್ಧಾನಂತರದ ವಿಶ್ರಾಂತಿ ಹೊಂದುತ್ತಿವೆಯೆಂದೂ, ಅವರು ಯುದ್ಧ ಸನ್ನಾಹಕ್ಕಿಂತಲೂ ಕೈಗಾರಿಕ ಅಭಿವೃದ್ಧಿಯ ಕಡೆ ಹೆಚ್ಚಿನ ಗಮನಕೊಡುವುದಾಗಿಯೂ ಭಾಸವಾಗುತ್ತದೆ ಅಮೇರಿಕವು ತನ್ನ ಬಳಿ ಇರುವ [illegible] ಸಮಾಸ್ತ್ರ[illegible]ವಿಲ್ಲದೆ ಇಷ್ಟೊಂದು ಅನಾಸಕ್ತ ಧೋರಣೆಯನ್ನು ಅನುಸರಿಸಿಲ್ಲವೆಂದೂ ತಜ್ಞರು ಊಹಿಸಿದ್ದಾರೆ. ಮತ್ತು ಅಮೇರಿಕದ ಬಳಿ ಅಣು ಶಕ್ತಿಯ ಸನ್ನಾಹವು ಖಂಡಿತವಾಗಿ ದೆಂದು ಸಂದೇಹಪಡಬೇಕಾಗಿಯೂ ಇಲ್ಲ. ಅದಿಲ್ಲವೆಂದು ಖಂಡಿತವಾಗುತಿದ್ದರೆ ರಶ್ಯವು ಇದುತನಕ ಒಂದಿಲ್ಲೊಂದು ನೆಪದಿಂದ ಮುಂದೊತ್ತುತಿತ್ತು ಬ್ರಿಟಿಷರಾದರೊ ಶಕ್ತಿಸ್ಪರ್ಧೆಯಲ್ಲಿನ ತಮ್ಮ ಓಟವನ್ನು ನಿಧಾನಿಸುತ್ತಿರಲಿಲ್ಲ. ಅಲ್ಲದೆ ಹಿರೋಶೀಮಾ ನಾಗಸಾಕಿಗಳ ಮೇಲೆ ಹಾಕಲ್ಪಟ್ಟವುಗಳು ಅಮೇರಿಕನ್ ತಯಾರಿಯ ಅಣು ಬೊಂಬುಗಳೆಂಬ ಸಂಗತಿಯು ಲೋಕ ವಿದಿತವೇ ಆಗಿದೆ ಹಲವು ಸಲ ರಶ್ಯವು ಇಂತಹ ಶಕ್ತಿಯು ತನ್ನ ಬಳಿಯುಳ್ಳಾ ಇರುವುದಾಗಿ ಬಹಿರಂಗಪಡಿಸಿದರೂ ಅದು ಕೇವಲ ಪೊಳ್ಳು ಬೆದರಿಕೆಯೆಂದು ಎಲ್ಲರಿಗೂ ಖಚಿತವಾಗಿದೆ

ಫ್ರೆಂಚ್ ಸಾಮ್ರಾಜ್ಯಶಾಹಿ

ಇಂಡೋಚೀನದೊಳಗೆ ಫ್ರೆಂಚರು ವಿಶಾಲ ಪರಿಮಾಣದಲ್ಲಿ ವೀಟ್‌ನಾಮ್ ದಳಗಳ ಮೇಲೆ ದಾಳಿಯಾರಂಭಿಸಿದ್ದಾರೆ ಒಂದು ಕಡೆಯಿಂದ ಫ್ರಾನ್ಸಿನ ಡಿಗಾಲರು ರಶ್ಯವನ್ನು ಖಂಡಿಸುತ್ತಿರುವರು ಇನ್ನೊಂದು ಕಡೆಯಿಂದವರು ತಮ್ಮ ಸಾಮ್ರಾಜ್ಯವನ್ನು ಇದ್ದಕ್ಕಿದ್ದ ಹಾಗೆ ಇರಿಸಲು ಪ್ರಯತ್ನಿಸುತ್ತಿರುವರು ಹೀಗೆ ಫ್ರಾನ್ಸು ಸಾಮ್ರಾಜ್ಯಶಾಹಿಯ ಕಳಂಕವನ್ನು ತೊಡೆದುಹಾಕಲು ಇಚ್ಛಿಸುವುದಿಲ್ಲ ವೀಟ್‌ನಾಮದ ಕ್ರಾಂತಿಕಾರರು ಫ್ರೆಂಚ್ ಸಹಾನುಭೂತಿ ತೋರಿಸುತ್ತಿದ್ದ ಇಂಡೋಚೀನದ ಮುಖಂಡರನ್ನು ಕೊಲೆಮಾಡಲಾರಂಭಿಸಿರುವರು ಅನ್ನಾಮಿನ ಮಾಜಿ ಚಕ್ರವರ್ತಿ ಬಾವ್ದೋಯಿ ಅವರು ಇತ್ತಂಡಗಳವರಲ್ಲಿ ಸಂಧಾನವನ್ನು ಮಾಡಲು ಪ್ರಯತ್ನಿಸುತ್ತಿದ್ದಾರೆ ಸದ್ಯದಲ್ಲೆ ಸ್ವಾತಂತ್ರ್ಯ [illegible] ದಶಕಗಳ ಸಂಧಾನಾರ್ಹರಾಗುವುದರಲ್ಲಿ ಸಂದೇಹವಿಲ್ಲ

ಯುದ್ಧ ಸನ್ನಾಹ

ಜರ್ಮನಿಯ ಯುದ್ಧಾನಂತರದ [illegible] ದಿನಗಳೂ ಮಿತ್ರರಾಷ್ಟ್ರಗಳು ಕೈಕೊಂಡ ಪ್ರಯತ್ನಗಳು ತೃಪ್ತಿಕರವಾಗಿ ಸಾಗುತ್ತಿಲ್ಲ ಯುದ್ಧಕಾಲದ ನಾಜಿಗಳು ವಿವಿಧ ರಾಜಕೀಯ ಪಕ್ಷಗಳ ಸೋಗುಹಾಕಿ ಮೆಲ್ಲನೆ ತಲೆಯೆತ್ತುತ್ತಿರುವುದಾಗಿ ರಾಜಕೀಯ ನಿರೀಕ್ಷಕರು ವರದಿ ಮಾಡಿದ್ದಾರೆ ಇನ್ನು ಅಲ್ಲಿನ ಹಲವು ಕೇಂದ್ರಗಳಲ್ಲಿ ಹಿಟ್ಲರೋಪಾಸನೆಯು ಭಕ್ತಿ ಶ್ರದ್ಧೆಗಳಿಂದ ನಡೆಯುತ್ತಿದೆಯೆಂದೂ, ಚಾಣಾಕ್ಷರಾದ ಜರ್ಮನರು ಎಂಗ್ಲೊ-ಅಮೇರಿಕನ್ ಮತ್ತು ರಶ್ಯನ್ನರೊಳಗಿನ ಶಕ್ತಿ ಸ್ಪರ್ಧೆಯ ಅನುಕೂಲತೆ ತೆಗೆದುಕೊಂಡು ಜರ್ಮನಿಯನ್ನು ಸ್ವತಂತ್ರಗೊಳಿಸಲು ಸನ್ನಾಹಮಾಡುತ್ತಿರುವರೆಂದೂ ತಿಳಿದುಬರುತ್ತದೆ ಅಲ್ಲಿ ಇನ್ನು ಕೆಲವು ಕಡೆ ಗುಪ್ತ ಶಸ್ತ್ರಾಸ್ತ್ರ ಕಾರ್ಖಾನೆಗಳು ಕೆಲಸಗೈಯುತ್ತಿರುವುದಾಗಿ ಶಂಕಿಸಲಾಗಿದೆ

ಬ್ರಿಟನಿನ ಮೇಲೆ ಹಾರುವ ವಿಮಾನಗಳ ಆಕಾಶ ಮಾರ್ಗಗಳನ್ನು ಐದು ಪ್ರತಿಪ್ರತ್ಯೇಕ ಕ್ಷೇತ್ರವಾಗಿ ವಿಂಗಡಿಸಿದ್ದಾರೆ. ಪ್ರತಿ ಕ್ಷೇತ್ರದಲ್ಲೂ ಆಯಾ ದಿನದ ಹವಾಮಾನವನ್ನು ತಿಳಿಸುವ ಕಛೇರಿಯೊಂದು ಸ್ಥಾಪಿಸಲಾಗುವುದು. ಕಠಿಣ ಹವೆಯಲ್ಲಿ ವಿಮಾನ ಘಟನೆಗಳೂ ಈ ವ್ಯವಸ್ಥೆಯಿಂದ ಕಡಿಮೆಯಾಗಬಹುದೆಂದೂ ನಿರೀಕ್ಷಿಸಲ್ಪಟ್ಟಿದೆ.

★

CANARA BANK, LIMITED.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟ ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

(ಸ್ಥಾಪಿತ: [illegible])

ಹೆಡ್ ಆಫೀಸು: ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು: 75 ಎಪೊಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು:—

ಮದರಾಸು ಪ್ರಾಂತ್ಯ:	ಸೇಲಂ	ಮುಂಬೈ-ಫೋರ್ಟ್
ಮಂಗಳೂರು-ಸಿಟಿ	ಇರೋಡ್	ಮುಂಬೈ-ಮಾಂಡ್ವಿ
ಮಂಗಳೂರು-ಬಂದರ್	**ಹೈದರಾಬಾದ್ ಸಂಸ್ಥಾನ:**	ಮುಂಬೈ-ಕಾಲ್ಬಾದೇವಿ
ಮುಲ್ಕಿ	ಸಿಕಂದರಾಬಾದು	ಮುಂಬೈ-ಗಿರ್‌ಗಾಂವ್
ಗಂಗೊಳ್ಳಿ.	**ತಿರುವಾಂಕುರು ಸಂಸ್ಥಾನ:**	ಮುಂಬೈ-ಕಲ್ಯಾಣ
ಕುಂದಾಪುರ	ಅಲ್ಲೆಪ್ಪಿ.	**ಮೈಸೂರು ಸಂಸ್ಥಾನ:**
ಉಡುಪಿ	ಕ್ವಿಲೋನ್	ಮೈಸೂರು
ಕಾರ್ಕಳ	**ಮಧ್ಯ ಪ್ರಾಂತ್ಯ:**	ಶಿವಮೊಗ್ಗೆ
ಬಂಟ್ವಾಳ.	ನಾಗಪುರ.	ಚಿಕ್ಕಮಗಳೂರು
ಪುತ್ತೂರು	ಅಕೋಲಾ	ಬೆಂಗಳೂರು ಸಿಟಿ
ಕಾಸರಗೋಡು.	ಅಮರಾವತಿ.	ಅರಸಿಕೆರೆ.
ಮದರಾಸು.	**ಮುಂಬೈ ಪ್ರಾಂತ್ಯ:**	ದಾವಣಗೆರೆ.
ಪಯ್ಯನ್ನೂರು.	ಬೆಳಗಾಂವ್.	**ಸಿಂದ್ ಪ್ರಾಂತ್ಯ:**
ಕಲ್ಲಿಕೋಟೆ.	ಧಾರವಾಡ.	ಕರಾಚಿ.
ಕನ್ನಾನ್ನೂರು	ಹುಬ್ಬಳ್ಳಿ.	**ಕೊಚ್ಚಿ ಸಂಸ್ಥಾನ:**
ಕೊಯಮುತ್ತೂರು.	ಶೋಲಾಪುರ.	ಕೊಚ್ಚಿ.
ತಿರುಚಿನಾಪಳ್ಳಿ.		ಎರ್ನಾಕುಲಮ್.
ತುತುಕುಡಿ.	ಪುಣೆ.	

ವಾರದ ವಿಜ್ಞಾನ ವರದಿಗಳು

ಕ್ಲಾರ್ಕ್ ಯಂತ್ರ

ಸಂಯುಕ್ತ ಅಮೇರಿಕದ ಟಪ್ಪಾಲು ಇಲಾಖೆಯವರು ಕಾರಕೂನರ ಕೆಲಸವಮಾಡುವ ಯಂತ್ರಗಳನ್ನು ತಮ್ಮ ಆಫೀಸುಗಳಲ್ಲಿ ಜೋಡಿಸಲು ಯೋಜಿಸಿರುವರು. ಒಂದು ನಾಣ್ಯವನ್ನು ತುರುಕಿಸಿ ಒಂದು ಗುಂಡಿಯನ್ನೊತ್ತಿದಾಕ್ಷಣ ಕಾಗದದ ಭಾರ, ಹಚ್ಚಬೇಕಾದ ಸ್ಟೇಂಪಿನ ವಿವರ, ಇವುಗಳು ತಿಳಿಯುವವು. ಮಾತ್ರವಲ್ಲ ದಿವಸದ ಯಾವ ಅವಧಿಯಲ್ಲಾದರೂ ಪತ್ರಗಳನ್ನು ಹಾಕುವ ಏರ್ಪಾಡೂ ಮತ್ತವುಗಳನ್ನು ಕೂಡಲೇ ರವಾನೆಮಾಡಲು ತಿಳಿಸುವ ಏರ್ಪಾಡೂ ಅದರಲ್ಲಿದೆ.

ನಾಣ್ಯ ಪತ್ತೆಯ ಯಂತ್ರ

ಖೋಟಾ ನಾಣ್ಯಗಳನ್ನು ಕಂಡುಹಿಡಿಯುವ ಯಂತ್ರಗಳನ್ನು ಆಸ್ಟ್ರೇಲಿಯದ ಬೇಂಕುಗಳಲ್ಲಿಡಲಾಗಿದೆ ಯಂತ್ರದೊಳಗಿನ ಒಂದು ವಿದ್ಯುತ್ ಉಪಕರಣವು ನಾಣ್ಯದೊಳಗಿನ ಬೆಳ್ಳಿಯ ಅಂಶವೆಷ್ಟೆಂಬುದನ್ನು ಪರಿಶೀಲಿಸುತ್ತದೆ ಸ್ವಲ್ಪವೇ ಹೆಚ್ಚು ಕಡಿಮೆಯಿದ್ದರೆ ಕೂಡಲೇ ಅದನ್ನು ಹೊರಹಾಕುತ್ತದೆ ಅಲ್ಲಿನ ಪ್ರತಿ ಸಾವಿರ ನಾಣ್ಯಗಳಲ್ಲಿ 15 ಖೋಟಾ ತಯಾರಿಯವು ಎಂದು ಈ ಯಂತ್ರ ಸ್ಥಾಪನೆಯ ನಂತರ ತಿಳಿದುಬಂದಿದೆ. ಅವನ್ನು ಕಂಡುಹಿಡಿದ ಕೂಡಲೇ ನಾಶಮಾಡಲಾಗುವುದು

ಸಮುದ್ರ ಸಸ್ಯಗಳಿಂದ ಮನೆ

ಮೆಲ್ಬೋರ್ನ್ ನಗರದಲ್ಲಿರುವ ಚಾರ್ಲ್ಸ್ ವೆಲ್ಸ್ ಎಂಬ ಕಟ್ಟಡ ಶಿಲ್ಪಿಯು ಸಮುದ್ರ ಸಸ್ಯಗಳಿಂದ ಮನೆ ಕಟ್ಟುವ ವಸ್ತುಗಳನ್ನು ತಯಾರಿಸಲು ಸಾಧ್ಯವಿದೆಯೆಂದು ಸಾರಿರುವನು. ಇದು ನಿಜವಾದರೆ ಈಗಿನ ಮನೆಗಳ ಕೊರತೆಯನ್ನು ನೀಗಿಸಲು ತುಂಬಾ ಸಹಾಯವಾಗುವುದು

ಸಮುದ್ರದಲ್ಲಿನ ಬಳ್ಳಿ ಪೊದರುಗಳನ್ನು ಸಿಮೆಂಟ್ ಮತ್ತು ಬೂದಿಯೊಂದಿಗೆ ಮಿಶ್ರ ಮಾಡಿದರೆ ಗೋಡೆ ಕಟ್ಟುವ ಗಟ್ಟಿಯಾದ ಹಲಗೆಗಳನ್ನು ತಯಾರಿಸಬಹುದೆಂದೂ, ಅವು ಮರಗಿಂತಲೂ ಗಟ್ಟಿಯಿರುವುದೆಂತಲೂ ದೊಡ್ಡ ಕಾರ್ಖಾನೆಯನ್ನು ಸ್ಥಾಪಿಸಿದರೆ ಇವನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸಬಹುದೆಂದೂ ಮೇಲಿನ ಕಟ್ಟಡ ವಿಶಾರದನು ತಿಳಿಸುತ್ತಾನೆ

ಜಗತ್ತಿನ ಅತೀ ಪ್ರಾಚೀನ ವಸ್ತುಗಳು

ಕೆಲಿಫೋರ್ನಿಯದ ಕೆಂಪು ತೊಗಟೆಯ ಮರಗಳು ಜಗತ್ತಿನ ಅತೀ ಹಳೆಯ ವಸ್ತುಗಳೆಂದು ಸಸ್ಯವಿಜ್ಞಾನಿಗಳು ತಿಳಿಸುತ್ತಾರೆ ಇವುಗಳಲ್ಲಿ ಕಡಿಯಲ್ಪಟ್ಟ ಕೆಲವು ಮರಗಳ ಒಳಪದರುಗಳನ್ನು ಲೆಕ್ಕಮಾಡಿ ಪರಿಶೋಧಿಸಿದಾಗ ಅವು 3 ಸಾವಿರ ವರ್ಷಕ್ಕೂ ಹಿಂದಿನವೆಂದು ತಿಳಿದುಬಂತು ಅಲ್ಲಿರುವ ಇನ್ನು ಕೆಲವು ಇಂತಹ ಮರಗಳ ಇನ್ನೂ ಹಳೆಯವೆಂದು ಭಾವಿಸಲಾಗಿದೆ.

ಸ್ತ್ರೀಯರು ನಿಜವಾಗಿ ನಿರ್ಬಲರಲ್ಲ

ಕೆಲವು ವಿಷಯಗಳಲ್ಲಿ ಮಾತ್ರ ಸ್ತ್ರೀಯರು ಪುರುಷರಷ್ಟು ಶಕ್ತಿವಂತರಲ್ಲವೆಂದು ತಿಳಿದುಬರುತ್ತದೆ. ಉದಾ. ಶಾರೀರಿಕ ಶಕ್ತಿ ಸಾಮರ್ಥ್ಯದ ಕೆಲಸಗಳಲ್ಲಿ ಸ್ತ್ರೀಯರು ಪುರುಷರನ್ನು ಮಿಗಿಸಲಾರರು ಆದರೆ ಇನ್ನು ಬೇರೆ ಕೆಲವು ವಿಷಯಗಳಲ್ಲಿ ಪುರುಷ ವರ್ಗವು ನಿರ್ಬಲವೆನಿಸುತ್ತದೆ. ಹುಟ್ಟುವ ಮೊದಲೂ ಅನಂತರವೂ ಗಂಡು ಶಿಶುಗಳು ಹೆಣ್ಣುಗಳಿಗಿಂತ ಶೀಘ್ರವಾಗಿ ಸಾಯುತ್ತವೆ. ಇಂದು ಜಗತ್ತಿನಲ್ಲಿ 80 ವರ್ಷಕ್ಕೆ ಮಿಕ್ಕಿದ ವಯಸ್ಸಾಗಿ ಬಾಳಿಕೊಂಡಿದ್ದವರಲ್ಲಿ ಸ್ತ್ರೀಯರ ಸಂಖ್ಯೆಯು ಪುರುಷರಗಿಂತ ಎರಡು ಮಡಿಯಷ್ಟಿದೆಯಂತೆ ಸ್ತ್ರೀಯರ ಶರೀರ ಗ್ರಂಥಿಗಳಲ್ಲಿರುವ ಒಂದು ವಿಶಿಷ್ಟ ಶಕ್ತಿಯೇ ಈ ದೀರ್ಘ ಬಾಳಿಕೆಗೆ ಕಾರಣವೆಂದು ವೈದ್ಯ ತಜ್ಞರು ತಿಳಿಸುತ್ತಾರೆ

ಚಂದ್ರನಿಗೆ ಮಾನವ ಚಟುವಟಿಕೆಯ ಮೇಲೆ ಪ್ರಭಾವವಿದೆಯೆ?

ಚಂದ್ರಗ್ರಹದ ಚಲನವಲನಗಳು ಮಾನವ ಚಟುವಟಿಕೆಯ ಮೇಲೆ ಪ್ರಭಾವವುಳ್ಳದಾಗಿವೆ ಎಂಬ ಹಳೇ ಅಭಿಪ್ರಾಯವನ್ನು ಆಧುನಿಕ ವಿಜ್ಞಾನಿಗಳು ತಪ್ಪೆಂದು ತಿಳಿಸುತ್ತಾರೆ. ಚಂದ್ರನು ಶುಕ್ಲಪಕ್ಷದಲ್ಲಿ ದೊಡ್ಡದಾಗುತ್ತಿರುವ ಹಾಗೆ ತಲೆ ಕೆಟ್ಟವರ ಹುಚ್ಚು ಹೆಚ್ಚಾಗುತ್ತದೆಂದು ಹೇಳುತ್ತಾರೆ ಯಾರಿಗೊ ಒಂದು ಸಲ ಅಕಸ್ಮಾತ್ ಹೀಗಾಗಿರಬಹುದಲ್ಲದೆ ಅದು ಸರ್ವಸಾಮಾನ್ಯ ಸಂಭವವಲ್ಲ.

ಎಟಂ ಶಕ್ತಿ ಯಂತ್ರಗಳು

ಇನ್ನು ಐದು ವರ್ಷಗಳ ಅವಧಿಯಲ್ಲಿ ಬ್ರಿಟನಿನ ಹೆಚ್ಚಿನ ಯಂತ್ರೋಪಕರಣಗಳು ಎಟಂ ಶಕ್ತಿ ಮೂಲಕ ನಡೆಸಲ್ಪಡುವಂತಹುಗಳಾಗುವುವೆಂದು ಲಂಡನಿನ ಓರ್ವ ವಿಜ್ಞಾನಿಗಳು ತಿಳಿಸುತ್ತಾರೆ ಅಲ್ಲಿನ ಡಿಡ್‌ಕೊಟ್ ಎಂಬಲ್ಲಿ ಬ್ರಿಟಿಷ್ ವಿಜ್ಞಾನಿಗಳು ಎಟಂ ಶಕ್ತಿಯನ್ನು ಯಂತ್ರಗಳಿಗೆ ಉಪಯೋಗಿಸುವುದರ ಕುರಿತು ರಾತ್ರೆ ಹಗಲು ಪರಿಶೋಧನೆ ನಡೆಸುತ್ತಿರುವರು ಈ ಪ್ರಯೋಗಕ್ಕೆ ಬೇಕಾಗುವ ಎಲ್ಲಾ ವಸ್ತು ಉಪಕರಣಗಳನ್ನು ಸರಕಾರವು ಪೂರೈಸುತ್ತದೆ ಹೆಚ್ಚೆಚ್ಚಿನ ಸಂಖ್ಯೆಯಲ್ಲಿ ಈ ಕೆಲಸಕ್ಕಾಗಿ ಮಜೂರರನ್ನು ಉಪಯೋಗಿಸಲಾಗುತ್ತದೆ ಮೊದಲು ಎಟಂ ಶಕ್ತಿಯಿಂದ ವಿದ್ಯುತ್ ಯಂತ್ರಗಳನ್ನು ಚಲಾಯಿಸುವ ಪ್ರಯೋಗಗಳು ನಡೆಯುವವು ಒಂದು ಸಲಕ್ಕೆ ಈ ಶಕ್ತಿಯನ್ನು ಕೈಗಾರಿಕೆಗೆ ಉಪಯೋಗಿಸುವಂತಾದರೆ ಮತ್ತೆ ಅದರ ಉಪಯೋಗಗಳು ಅನಂತ್ಯವಾಗಿ ಮಾಡಲ್ಪಡುವುವೆಂದು ಹೇಳಲಾಗಿದೆ

ವಿದ್ಯಾರ್ಥಿಯ ಉಭಯ ಸಂಕಟ

(ಮೋ. ಕ. ಗಾಂಧಿ)

ಶಿಕ್ಷಕನೊಬ್ಬನು ತನಗೆ ತನ್ನ ವಿದ್ಯಾರ್ಥಿಯೊಬ್ಬನು ಬರೆದ ಪತ್ರವನ್ನು ನನ್ನ ಕಡೆಗೆ ಅಭಿಪ್ರಾಯಾರ್ಥ ಕಳುಹಿಸಿಕೊಟ್ಟಿದ್ದಾನೆ ಅದು ಇಂತಿದೆ

"ರಾಷ್ಟ್ರಪ್ರೇಮ ಮತ್ತು ವಿಷಯಲೋಲುಪತೆ ಇವೆರಡು ನನ್ನನ್ನು ಪರವಶನನ್ನಾಗಿಸಿವೆ ಇವೆರಡೂ ನನ್ನ ನಡವಳಿಕೆಯಲ್ಲಿ ಪರಸ್ಪರ ವಿರೋಧಾಭಾಸವನ್ನು ಹುಟ್ಟಿಸುತ್ತಿವೆ, ನನ್ನ ನಿರ್ಣಯಗಳಲ್ಲಿ ಅಸಂಬದ್ಧತೆಯನ್ನು ಕಾಣಿಸಿಕೊಡುತ್ತಿವೆ ನಾನು ಉತ್ತಮ ರೀತಿಯ ರಾಷ್ಟ್ರಸೇವಕನೂ ಆಗಬೇಕು ಐಹಿಕ ಸುಖೋಪಭೋಗಗಳನ್ನೂ ಸವಿಯಬೇಕು ಎಂಬ ಇಚ್ಛೆಯುಳ್ಳವನಾಗಿದ್ದೇನೆ ದೇವರಲ್ಲಿ ನನಗೆ ನಂಬುಗೆಯಿಲ್ಲವಾದರೂ ಒಮ್ಮೊಮ್ಮೆ ನಾನವನಿಗೆ ಹೆದರಿ ಕೈಕಾಲು ಕೆಳೆದುಕೊಂಡಿದ್ದೇನೆ ಜೀವನವೇ ನನಗೊಂದು ಸಮಸ್ಯೆಯಾಗಿದೆ ನನ್ನ ಕೊನೆ ಎಂತಾಗುವದೊ ಯಾರು ಬಲ್ಲರು? ಮಸಣದಲ್ಲಿ ಹೆಣಗಳನ್ನು ಸುಡುತ್ತಿರುವುದನ್ನು ನೋಡಿದ್ದೇನೆ ನಾನು ನೋಡಿದ ಇತ್ತೀಚಿಗಿನ ಚಿತೆಯೆಂದರೆ ತಾಯಿಯದು ಆ ದೃಶ್ಯ ನನ್ನ ಹೃದಯವನ್ನು ಕಲಕಿದೆ ನನಗೂ ಅಂಥ ಗತಿ ಒದಗೀತು ಎಂಬ ಕಲ್ಪನೆಯನ್ನೂ ಸಹಿಸಲಾರೆ ಒಂದು ಗಾಯವನ್ನು ಕಂಡರೆ ನನ್ನೆದೆ ಅಲುಕುತ್ತದೆ ಅಂದ ಮೇಲೆ ನನ್ನ ದೇಹ ಚಿತೆಯ ಮೇಲೆ ಉರಿದು ಹೋಗುವದು ಎಂದು ಕಲ್ಪಿಸುವದಾದರೂ ಎಂತು. ಆದರೇನು, 'ಜಾತಸ್ಯ ಮರಣಂ ಧ್ರುವಂ' ತದನಂತರದ ಜೀವನದಲ್ಲಿ ನನಗೆ ವಿಶ್ವಾಸವಿಲ್ಲ ಆದ್ದರಿಂದ ಹೆದರಿಕೊಂಡಿದ್ದೇನೆ

"ಈಗ ನನಗೆರಡು ದಾರಿಗಳು ತೆರೆದಿವೆ ಲೌಕಿಕ ಸುಖದ ಚಿಂತನೆಯಲ್ಲಿಯೆ ಕೊರಗಿ ಕೊರಗಿ ಸತ್ತುಹೋಗುವೆನು. ಇಲ್ಲವೆ ಐಹಿಕ ಸುಖವನ್ನು ಯಥೇಷ್ಟ ಉಪಭೋಗಿಸಿ ಧ್ಯೇಯವನ್ನು ಮರೆತುಬಿಡುವುದು ಯಾರೆದುರಿಗೂ ಮನಸ್ಸುಬಿಚ್ಚಿ ಹೇಳದಂಥ ಸಂಗತಿಯನ್ನು ಅಂದರೆ ನಾನು ಎರಡನೇ ಮಾರ್ಗವನ್ನು ಆರಿಸಿಕೊಂಡಿದ್ದೇನೆಂಬುದನ್ನು ನಿಮ್ಮ ಮುಂದೆ ಹೇಳುತ್ತೇನೆ

ಇಂದಿನದು ವಾಸ್ತವ ಜಗತ್ತು ಇಲ್ಲಿಯ ಸುಖಗಳೆಲ್ಲ ಅತ್ಯಂತ ಉಪಭೋಗಪಿಟ್ಟವೆ ಯಾವ ಬೆಲೆಯನ್ನಾದರೂ ಕೊಟ್ಟು ಅವನ್ನು ಸವಿಯಬೇಕು ಇತ್ತೀಚೆಗೆ ಮಡಿದ ನನ್ನ ಹೆಂಡತಿಯ ಬಗ್ಗೆ ನಾನು ಬಹಳ ನೊಂದುಕೊಂಡಿದ್ದೇನೆ ಆದರೆ ಅವಳು ಸತ್ತಳೆಂದಲ್ಲ ಆದರೆ ಏಕಾಕಿ ಉಳಿದೆನಲ್ಲ ಎಂದು ಸತ್ತವರಿಗೆ ಸಮಸ್ಯೆಗಳೇ ಇಲ್ಲ ಇದ್ದವರಿಗೆ ಮಾತ್ರ ಅದನ್ನು ಎದುರಿಸಬೇಕಾಗುತ್ತದೆ ಶುದ್ಧ ಪ್ರೇಮದಲ್ಲಿ ನನಗೆ ವಿಶ್ವಾಸವಿಲ್ಲ ಪ್ರೇಮವೆಂದುದೆಲ್ಲ ವಿಷಯಾಭಿಲಾಷೆಯೆ. ಹಾಗೆ ವಿರುದ್ಧ ಪ್ರೇಮವೇನಾದರೂ ಇದ್ದಿದ್ದರೆ ನಾನು ನನ್ನ ಹೆಂಡತಿಗಿಂತ ತಾಯಿಯಿಂದಗಾಗಿ ಹೆಚ್ಚು ನೊಂದುಕೊಳ್ಳಬೇಕಾಗಿತ್ತು ಆದರೆ ವಿದ್ಯಮಾನವು ತದ್ವಿಪರೀತವಾಗಿದೆ ಅವಳಿರುವ ವರೆಗೆ ನಾನು ಏಕಪತ್ನೀವ್ರತಸ್ಥನಾಗಿದ್ದರೂ ಅವಳ ಮರಣದ ನಂತರ ಕೂಡ ಹಾಗೇ ಉಳಿಯುವೆನೆಂದು ಅವಳಿಗೆ ನಾನು ಆಶ್ವಾಸನ ಕೊಡಲಾರದವನಾಗಿದ್ದೆ ಅವಳ ಮರಣದಿಂದ ಉಂಟಾದ ಅನನುಕೂಲತೆಯಿಂದ ನನ್ನಲ್ಲಿ ಇಂಥ ಭಾವನೆಗಳು ಹುಟ್ಟಿರಬಹುದು ನೀವಿದನ್ನು ಉಪಹಾಸವೆಂದೆನ್ನಬಹುದು ಏನೇ ಇರಲಿ ದಯವಿಟ್ಟು ದಾರಿ ತೋರಿರಿ

ಈ ಪತ್ರದಲ್ಲಿ ಮೂರು ವಿಷಯಗಳ ಉಲ್ಲೇಖವಾಗಿದೆ (೧) ರಾಷ್ಟ್ರಪ್ರೇಮ ವಿಷಯಲೋಲುಪತೆಯ ತಿಕ್ಕಾಟ (೨) ದೇವರು ಮತ್ತು ಮರಣೋತ್ತರ ಜೀವನ (೩) ವಿಶುದ್ಧ ಪ್ರೇಮ ಲೈಂಗಿಕ ಸಮಾಗಮ

ಮೊದಲನೆಯ ವಿಷಯವನ್ನು ಚೆನ್ನಾಗಿ ಹೇಳಲಾಗಿದೆ ವಿಷಯಾಭಿಲಾಷೆಯು ವಾಸ್ತವವಾದುದು ರಾಷ್ಟ್ರಪ್ರೇಮವು ಇಂದಿನ ಲಹರಿಯಾಗಿದೆ ಅಧಿಕಾರ ಲಾಲಸೆಯ ಸ್ವರೂಪದ ರಾಷ್ಟ್ರಪ್ರೇಮವು ವಿಷಯಾಭಿಲಾಷೆಗೆ ಹೊಂದಿಕೊಂಡದ್ದೇ ಆಗಿದೆ. ಈ ಬಗ್ಗೆ ಬೇಕಾದಷ್ಟು ಉದಾಹರಣೆಗಳನ್ನು ಹೇಳಬಹುದು ದೇಶದ ಸಲುವಾಗಿ ಇದ್ದ ಉಜ್ವಲ ಪ್ರೇಮವೇ ರಾಷ್ಟ್ರಪ್ರೇಮವೆಂಬುದು ನನ್ನ ಭಾವನೆ. ಈ ರಾಷ್ಟ್ರಪ್ರೇಮವು ವಿಷಯಾಭಿಲಾಷೆ ಮುಂತಾದವುಗಳನ್ನೆಲ್ಲ ಸುಟ್ಟುಹಾಕಬಲ್ಲದಾಗಬೇಕು. ಆದ್ದರಿಂದ ಈ ಉಭಯ ವಿಷಯಗಳಲ್ಲಿ ಘರ್ಷಣೆ ಉಂಟಾಗದೆ ರಾಷ್ಟ್ರಪ್ರೇಮಕ್ಕೆ ವಿಜಯ ದೊರೆಯಲೇಬೇಕು. ಸರ್ವವ್ಯಾಪೀ ರಾಷ್ಟ್ರಪ್ರೇಮವು ಇತರ ವಿಷಯಗಳಿಗೆ ಒಂದು ನಿಮಿಷ ಕೂಡ ಎಡೆಗೊಡಲಾರದು ವಿಷಯಲೋಲುಪನಾಗಿದ್ದವನು ಇದ್ದೂ ಸತ್ತಂತೆ

ಐಹಿಕ ಜೀವನದ ಬಗ್ಗೆ ಇರುವ ಮೋಹದಿಂದ ದೇವರಲ್ಲಿ, ಭವಿತವ್ಯದಲ್ಲಿ ಅವಿಶ್ವಾಸ ಹುಟ್ಟುತ್ತದೆ ಈ ಮೋಹದಿಂದ ಆ ವ್ಯಕ್ತಿಯ ದಿಕ್ಕು ತಪ್ಪುತ್ತದೆ ಸಂಶಯವು ಅವರ ಬೆನ್ನು ಬಿಡುವುದೇ ಇಲ್ಲ ಪಾಶವೀ ವಿಚಾರಗಳೆಲ್ಲ ಅಳಿದುಹೋದ ನಂತರ ದೇವರಲ್ಲಿ ವಿಶ್ವಾಸ ಬೆಳೆಯುತ್ತದೆ ಇವೆರಡೂ ಒಂದೇ ಕಾಲಕ್ಕೆ ಒಟ್ಟನಲ್ಲಿ ಉಳಿಯಲಾರವು

ಮೂರನೆಯ ಸಮಸ್ಯೆಯು ಮೊದಲನೆಯದರ ಪುನರುಚ್ಚಾರವಿದ್ದಂತಿದೆ ಪತಿ-ಪತ್ನಿಯರಲ್ಲಿಯ ವಿಶುದ್ಧ ಪ್ರೇಮವು, ಇತರ ಯಾವ ಪ್ರೇಮಕ್ಕಿಂತ ಅವರನ್ನು ದೇವರ ಸಮೀಪಕ್ಕೆ ಹೆಚ್ಚಾಗಿ ಕರೆದೊಯ್ಯುತ್ತದೆ ಈ ವಿಶುದ್ಧ ಪ್ರೇಮದಲ್ಲಿ ವಿಷಯಾಭಿಲಾಷೆಯು ಬೆರೆಯಿತೆಂದರೆ ಅವರು ದೇವರಿಗೆ ದೂರ ಉಳಿಯುತ್ತಾರೆ ಆದರಿಂದ ಕಾಮಭಾವನೆ ಸಮಾಗಮವಿಲ್ಲದಿದ್ದರೂ ಮದುವೆಗೆ ಅವಕಾಶವಿದೆಯೇ ಇಂದು ಹೊಂದು ಪಕ್ಷೆ ಹೆಂಡತಿಯ ಬಗೆ ಶುದ್ಧ ಪ್ರೇಮವಿದ್ದಿರಲಿಲ್ಲೆಂದು ಆ ವಿದ್ಯಾರ್ಥಿಯು ಸಾರಿಹೇಳಿದ್ದಾನೆ ಅವನದು ನಿಸ್ವಾರ್ಥ ಪ್ರೇಮವೆಂದಿದ್ದರೆ ಅವನ ಜೀವನ ತುಂಬಿಕೊಳ್ಳಬೇಕಾಗಿತ್ತು ಆಗಲಿ, ಹೋದ ಜೀವನಸಂಗಾತಿಯ ನೆನಪು ಪತಿತಸಮಾಜದ ಸೇವೆಗಾಗಿ ಅವನನ್ನು ಪ್ರೇರೇಪಿಸುತಿತ್ತು

(ಕರ್ಮವೀರ ಹರಿಜನ ಪುರವಣಿ)

(ಮೂಲ ಗುಜರಾತಿಯಿಂದ)



ಸೇಲ್ಸ್ ಆಫೀಸು
64. ಪಥೋರಿಯಾ ಘಾಟ್ ಸ್ಟ್ರೀಟ್, ಕಲ್ಕತ್ತಾ

ನಾಯಕರೂ ವಿಮೋಚಕರೂ ಆದ ನೆಹರು

ಮಧ್ಯಪೂರ್ವ ಮುಸ್ಲಿಮರಲ್ಲಿ ನವಜಾಗೃತಿ

ಬ್ರಿಟಿಷರ ಮೇಲಿನ ವಿರೋಧ

[ಬ್ಲಿಟ್ಜ್ ಪತ್ರಿಕೆಯ ಸಂಪಾದಕ ಶ್ರೀ ಆರ್. ಕೆ. ಕರಂಜಿಯಾ ಅವರು ಇತ್ತೀಚೆಗೆ ವಿಶ್ವ ಸಂಚಾರ ಮಾಡುತ್ತಿರುವರು. ತಮ್ಮ ಅನುಭವಗಳನ್ನವರು ಒಂದು ಲೇಖನ ಮಾಲೆಯಾಗಿ ಪ್ರಕಟಿಸಿರುವರು. ಮಧ್ಯ ಪೂರ್ವದಲ್ಲಿ ನಡೆದ ಕೆಲವು ಘಟನೆಗಳನ್ನು ಅದರಿಂದೆತ್ತಿ ಈ ಕೆಳಗೆ ಕೊಡಲಾಗಿದೆ]

ನಮ್ಮ ವಿಮಾನ ಕೈರೊದಲ್ಲಿಳಿಯಿತು ಸುದೈವದಿಂದ ನಮ್ಮ ವಿಮಾನದ ಪ್ರಯಾಣಿಕರೂ ಯಂತ್ರ ಚಾಲಕರೂ ಒಂದು ದಿನ ಆ ನಗರದಲ್ಲಿ ವಿಹಾರ ಮಾಡಲು ನಿರ್ಧರಿಸಿದ್ದು ಸಂತೋಷದ ಸಂಗತಿ ನಾವು ಪ್ರಖ್ಯಾತವಾದ ಕೈರೊ ನಗರದ ಗುಪ್ತ ರಾಜಕೀಯ ಚಟುವಟಿಕೆಗಾರರೊಡನೆ ಸಂಪರ್ಕ ಬೆಳೆಸಲು ಆ ರಾತ್ರೆ ಪ್ರಯತ್ನಿಸಿದೆವು

ನಾನು ಸಂಚಾರಮಾಡುವ ವರದಿಯು ಕೈರೊ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿತ್ತು ಅಲ್ಲಿನ ಒಂದು ಪತ್ರಿಕೆಯು ನನ್ನ ಕುರಿತಾಗಿ ದೀರ್ಘ ಪರಿಚಯ ಲೇಖನವೊಂದನ್ನು ಪ್ರಕಟಿಸಿ ನನ್ನ ಪತ್ರಿಕೆಯು (ಬ್ಲಿಟ್ಜ್) "ಭಾರತದ ಗುಪ್ತ ರಾಜಕೀಯ ಚಟುವಟಿಕೆಯ ಮುಖಪತ್ರವೆಂದೂ, ನಾನೊಬ್ಬ ಸಮತಾವಾದಿ ಪತ್ರಿಕೋದ್ಯೋಗಿಯೆಂದೂ, ಸಾರಿತ್ತು

ಇದನ್ನೋದಿದ ಕೆಲವರು ನನ್ನನ್ನು ಕಾಣಲು ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಅವರು ನೇರವಾಗಿ ನಾ ಇಳಿದ ವಸತಿ ಗೃಹದ ಕೋಣೆಗೆ ಬಂದು ನನ್ನ ಪೆಟ್ಟಿ ವ್ಯವಸ್ಥೆಗೊಳಿಸಿದರು. ಈ ಆರು ಮಂದಿ ಮುಸ್ಲಿಂ ಯುವಕರು ನನ್ನ ಕೋಣೆಯ ಹೊರಗೆ "ದಯವಿಟ್ಟು ತೊಂದರೆ ಕೊಡಬೇಡಿ" ಎಂಬ ಪಟ್ಟಿಯೊಂದನ್ನು ತೂಗಾಡಿಸಿ ನನ್ನ ಕೋಣೆಯನ್ನು ಭದ್ರವಾಗಿ ಒಳಗಿಂದ ಮುಚ್ಚಿದರು ಈ ಆರು ತರುಣರು ಇಜಿಪ್ಟಿನ ಬೇರೆ ಬೇರೆ ಗುಪ್ತ ಕ್ರಾಂತಿಕಾರಕ ದಳಗಳ ಪ್ರತಿನಿಧಿಗಳಾಗಿದ್ದರು ಸಂಯುಕ್ತ ಜನಾಂಗ ಸಂಘದ ನಿರ್ಣಯಕ್ಕೆ ಆಗಲಿ ಬ್ರಿಟಿಷ್ ಧೋರಣೆಯ ಮೇಲಾಗಲಿ ಏನಷ್ಟಾದರೂ ವಿಶ್ವಾಸವಿಲ್ಲದ ಇವರು ಹಿಂಸಾಕೃತ್ಯಗಳಿಂದ ತಮ್ಮ ಉದ್ದೇಶ ಸಾಧಿಸಲು ಪ್ರತಿಜ್ಞಾಬದ್ಧರಾಗಿದ್ದರು ಸೂಡಾನನ್ನು ಬ್ರಿಟಿಷ್ ಹಿಡಿತದಿಂದ ವಿಮೋಚನೆ ಮಾಡಲೂ ಅವರು ಪಣ ತೊಟ್ಟಿದ್ದರು ಪಲೆಸ್ತೀನದಲ್ಲಿ ಯಹೂದಿಗಳು ನಡೆಸುತ್ತಿದ್ದ ಅತ್ಯಾಚಾರಗಳಿಂದ ಸ್ಫೂರ್ತಿ ಗೊಂಡವರಾಗಿ ಇವರು ಅವರಿಗಿಂತಲೂ ಮಿಗಿಲಾದುದನ್ನು ಸಾಧಿಸಲು ನಿರ್ಧರಿತರಾಗಿದ್ದರು

ಇಂತಹ ಧೋರಣೆಯ ಅವಿವೇಕದ ಕುರಿತು ನಾನವರಿಗೆ ಉಪದೇಶಿಸಿದೆ ಭಾರತವು ಅಹಿಂಸೆಯಿಂದಲೇ ಹೇಗೆ ಸ್ವಾತಂತ್ರ್ಯ ಸಂಪಾದಿಸಿತೆಂಬ ಸಂಗತಿಯನ್ನು ನಾನವರಿಗೆ ತಿಳಿಸಿದೆ ಕೂಡಲೇ ನನ್ನ ಅವರೊಳಗಿನ ತರ್ಕ ವಿತರ್ಕಗಳಿಗಾರಂಭವಾಯಿತು.

"ನಿನಗೆ ಸಿಕ್ಕಿದ ಸ್ವಾತಂತ್ರ್ಯವೆಂತಹದೆಂದು ನಮಗೆ ಗೊತ್ತಿಲ್ಲವೆ? ಪಾಕಿಸ್ತಾನ, ವಿಭಾಗಿಕರಣ ಮತ್ತು ರಕ್ತಪಾತದ ಸ್ವಾತಂತ್ರ್ಯವಲ್ಲವೆ ಅದು? ನಾವು ಈಗಲೇ ಕಾರ್ಯವೆಸಗದಿದ್ದರೆ ಅವರು ನಮಗೂ ಅಂತಹದನ್ನೇ ಕೊಡುವರು ನಿಮಗೆ ಪಾಕಿಸ್ತಾನಿಗಳನ್ನು ವಿರೋಧವಾಗುವಂತೆ ಮಾಡಿದವರು ಸೂಡಾನಿಗಳಿಗೆ ನಮ್ಮ ಮೇಲೆ ವಿರೋಧ ಹುಟ್ಟುವಂತೆ ಮಾಡುವರು ಭಾರತದಂತೆ ಇಜಿಪ್ತನ್ನು ಅವರು ವಿಭಾಗಿಸಿ ಕತ್ತರಿಸುವರು. ಆದುದರಿಂದಲೇ ನಾವೀ ಧೋರಣೆಯನ್ನು ಕೈಗೊಂಡಿದ್ದೇವೆ ನಾವವರನ್ನು ಈ ನ್ಯಾಲ್ ನದಿ ಕಣಿವೆಯಿಂದ ಹೊಡೆದೋಡಿಸುತ್ತೇವೆ," ಹೀಗೆಂದವರು ನನ್ನೊಡನೆ ಪೀಠಿಕೆ ಪ್ರಸ್ತಾಪ ಹಾಕಿದರು

ಆಗಲೇ ನನಗೆ ಇಜಿಪ್ತಿನ ಗುಪ್ತ ಕಾರಸ್ಥಾನಿಗಳ ಪ್ರಥಮ ಪರಿಚಯವೂ ಆಯಿತು

ನಂತರ ನಾವೊಂದು ನೆಲದ ಕೆಳಗಿರುವ ಹೋಟೇಲನ್ನು ಹೊಕ್ಕೆವು ಅದರ ಹೊರಗೆ ದೊಡ್ಡ ಬಂದೂಕು ಧಾರಿಯಾದ ಪೋಲಿಸನು ಕಾವಲು ನಿಂತಿದ್ದನು ಇವನೂ ಗುಪ್ತ ಕ್ರಾಂತಿಕಾರಕ ಒಳ ಸಂಚಿನವನು!! ಅಲ್ಲಿ ನಾನು ಈ ಕ್ರಾಂತಿಕಾರಕ ಮುಖಂಡನು ಓರ್ವ ಪತ್ರಿಕಾ ಬಾತ್ಮಿದಾರನಾಗಿ ನನ್ನನ್ನು ಭೇಟಿಯಾಗಿದ್ದ!!!

ಈ ಮುಖಂಡ ನನ್ನನ್ನು ತನ್ನ ಸಂಗಾತಿಗಳಿಗೆ ಹೀಗೆ ಪರಿಚಯ ಮಾಡಿಕೊಟ್ಟ "ನಮ್ಮ ಕಾಲದ ಅತ್ಯಮೋಘ ಕ್ರಾಂತಿಕಾರನಾದ ಭವ್ಯ ಜವಾಹರಲಾಲ್ ನೆಹುರುಗಳವರು ಬ್ರಿಟಿಷರಿಂದ ವಿಮೋಚನಗೊಳಿಸಿದ ನಾಡಿನಿಂದ ಬಂದ ಗಣನೀಯ ಮಹನೀಯರನ್ನು ನಾನು ನಿಮಗೆ ಪರಿಚಯ ಮಾಡಿಕೊಡಲು ಸಂತೋಷಿಸುತ್ತೇನೆ."

ಈ ಮಾತುಗಳು ಮತಾಂಧತೆಯಿಂದ ಉನ್ಮತ್ತನಾಗಿರುವರೆಂದು ಹೇಳಲ್ಪಡುವ ಮುಸ್ಲಿಂ ತರುಣನೋರ್ವನಿಂದ ಉದ್ಗರಿಸಲ್ಪಟ್ಟವು

ಮತ್ತೂ ಅವನು ಹೀಗೆಂದ

"ಗೆಳೆಯರೆ ಬ್ರಿಟಿಷರು ಇಜಿಪ್ತಿನ ಮೇಲೆ ಸ್ವಾತಂತ್ರ್ಯವನ್ನು ಹೊರಿಸಿದ್ದು ಇದು 65ನೇ ಬಾರಿಯಾಯಿತು. ಪ್ರತಿ ಸಲವೂ ಇದು ಕೆಲವೊಂದು ದೇಶದ್ರೋಹಿಗಳ ಮತ್ತು ಮಾರ್ಶಲ್ ಲೊ ಮೂಲಕ ಜಾರಿಗೆ ತರಲಾಗಿದೆ. . ."

ಇದರಿಂದ ಮಧ್ಯ ಪೂರ್ವದ ಒಂದು ಭಾಗದಲ್ಲಿ ಬ್ರಿಟಿಷರ ಮೇಲ ಅದೆಷ್ಟು ಕಡುತ್ವವಿದೆಯೆಂದರಿವಾಗುವುದು

ನಾನು ಪಲೆಸ್ತೀನಿನಲ್ಲಿ ಕೆಲವು ದಿವಸವಿದ್ದೆ ~~ಅಲ್ಲಿನ ಅರಬಿ ಯೆಹೂದಿ ಅಂತಃಕಲಹವು~~ ಸಂಪೂರ್ಣ ಬ್ರಿಟಿಷ್ ಪ್ರೇರಣೆಯದೆಂದು ಇತ್ತಂಡದವರ ಅಭಿಪ್ರಾಯವಿದೆ ಬ್ರಿಟಿಷರ ಧೋರಣೆಯಿಂದ ಅಲ್ಲಿ ಅನಾಹುತವುಂಟಾಗಿರುವುದೆಂಬಭಿಪ್ರಾಯವು ಯುಕ್ತ ರಾಷ್ಟ್ರ ಸಂಘದ ಅಧಿವೇಶನದಲ್ಲೂ ನಿರೂಪಿಸಲ್ಪಟ್ಟ ಸಂಗತಿಯು ನನಗೆ ಗೊತ್ತಿದೆ ಅದು ಹೇಗಿದ್ದರೂ ಯೆಹೂದಿಗಳು ಭಾರತ ಜನನಾಯಕರ ದಿಕ್ಕಿನ ಕಡೆಗೆ ಹೇಗೆ ಸಹಾಯ ಕೋರುವರೆಂಬ ಸಂಗತಿಯು ಈ ಕೆಳಗಿನ ಘಟನೆಯಿಂದ ತಿಳಿಯುವುದು

~~ಪೆಲೆಸ್ತೀನದ ಜೆರುಸಲೇಮ್ ನಗರದಲ್ಲಿ~~ ನಾನು ವಿಮಾನ ಹತ್ತಿದೆ ಕೂಡಲೇ ನಮ್ಮ ವಿಮಾನದಲ್ಲಿ ಓರ್ವ ಯೆಹೂದಿ ಗುರುವು ಅವನ ಮಗಳೊಡಗೂಡಿ ಸೇರಿದ ಅವರು ಕೆನಡದವರು ತಮ್ಮ ಮೂಲಸ್ಥಾನದ (ಪಲೇಸ್ತಿನದ) ಪರಿಸ್ಥಿತಿಯನ್ನು ಕಣ್ಣಾರೆ ನೋಡಿ ಅವರು ಹಿಂತಿರುಗುತ್ತಿದ್ದರು ಆ ಯೆಹೂದಿಯು ಭವ್ಯಾಕಾರದ ವ್ಯಕ್ತಿ ನಮ್ಮ ವಿಮಾನವು ಮೊದಲೊಂದು ಸಲಕ್ಕೆ ಜೆರುಸಲೇಮ್ ನಗರದ ಮೇಲೆ ಸುತ್ತುತ್ತ ಹಾರಿತು ಟೆಲ್ ಎವಿಲ್ ಎಂಬಲ್ಲಿ ಯೆಹೂದಿ ಕ್ರಾಂತಿಕಾರ ಮತ್ತು ಬ್ರಿಟಿಷ್ ಸೈನಿಕರೊಳಗೆ ಯಾವಾಗಲೂ ಸ್ಫೋಟ ನಡೆಯುತ್ತಿತ್ತು ಟೆಲ್‌ಎವಿಲಿನ ಮೇಲೂ ನಮ್ಮ ವಿಮಾನ ಸುತ್ತು ತೆಗೆಯಿತು. ಆಗ ಆ ಮುದಿ ಯೆಹೂದಿಯು ವಿಮಾನದ ಕಿಟಿಕಿಯಿಂದ ಹೊರ ಇಣುಕುತ್ತ ಒಂದು ಸಲ ಕೆಳಗಿನ ಪ್ರದೇಶವನ್ನು ನೋಡುತ್ತ ಚಿಕ್ಕ ಮಗುವಿನಂತೆ ಬಳಬಳನೆ ಅಳ ಹತ್ತಿದ ಹೀಗೆ ಒಂದು ತಾಸಿನ ತನಕ ಆತ ಅತ್ತುಬಿಟ್ಟ

"ತಂದೆಯವರು ಉಪವಾಸ ಮಾಡುತ್ತಿಲಿದ್ದಾರೆ ಅವರು ತುಂಬಾ ನಿರ್ಬಲರಾಗಿರುವರು" ಹೀಗೆಂದು ಅವನ ಮಗಳು ನನಗೆ ತಿಳಿಸಿದಳು. ಕೂಡಲೇ ವಿಮಾನವು ಒಂದು ಬಿರುಗಾಳಿಯನ್ನು ತಪ್ಪಿಸಲು 17 ಸಾವಿರ ಅಡಿ ಮೇಲಕ್ಕೇರಿತು ಆಗ ಯೆಹೂದಿಗೆ ಮೂರ್ಛೆ ತಪ್ಪಿತು ಆಗ ನನ್ನ ಬಳಿ ಕೂತಿದ್ದ ಅರಬಿಯನೊಬ್ಬನು ಅವನಿಗೆ ಅನ್ನಜನಕವಾಯು ಕೊಡಿಸಿದ ಮೂರ್ಛೆ ತಿಳಿದೆದ್ದ ಯೆಹೂದಿಯು ಅರಬಿಯನ್ನು ಆಶೀರ್ವದಿಸಿದ ನಮ್ಮ ವಿಮಾನವು ಕೈರೊ ಕಡೆ ಓಡುತಿತ್ತು ಈ ಸಮಯದಲ್ಲಿ ಯೆಹೂದಿಯ ಮಗಳು ನನ್ನೊಡನೆ ಮಾತುಕತೆಗಾರಂಭಿಸಿದ

"ನೀವು ಹಿಂದೂಗಳೇನು?"

"ಹೌದು ನಾನೊಬ್ಬ ಭಾರತೀಯ.

"ಹಾಗಾದರೆ ಮಿಸ್ಟರ್ ಪಂಡಿತರನ್ನು ನೀವು ಬಲ್ಲಿರಿಲ್ಲವೆ?"

"ಮಿಸ್ಟರ್ ಪಂಡಿತರೆಂದರಾರು?"

"ಹೌದ ಹೌದು ಮಿಸ್ಟರ್ ಪಂಡಿತ್ ಜವಾಹರಲಾಲ್ ನ"

"ಓಹೊ ಪಂಡಿತ್ ಜವಾಹರ್ ನೆಹರು ಗಳೇನು! ಅವರನ್ನು ಅರಿಯದ ಭಾರತೀಯನಿಲ್ಲ"

"ಹಾಗಾದರೆ ದಯವಿಟ್ಟು ನನ್ನ ತಂದೆಯ ಬಳಿ ಕುಳಿತುಕೊಳ್ಳುವಿರಾ? ಒಬ್ಬೊಡನೆ ಮಾತುಕತೆಯಾಡಲು ಅವರು ತುಂಬಾ ಸಂತೋಷಿಸುವರು"

ನಾನು ಮುದುಕನ ಬಳಿ ಕೂತೆ ನೆಹುರುಗಳು ಕೂಡಲೇ ಪಲೆಸ್ತೀನಕ್ಕೆ ಕರತರಲ್ಪಡಬೇಕೆಂದೂ, ಅರಬಿ ಯೆಹೂದಿಗಳೊಳಗೆ ಅವರು ಮಧ್ಯಸಿಕೆ ನಡೆಸಿ ಈಗಿನ ಕಲಹವನ್ನು ಕೊನೆಗಾಣಿಸಬೇಕೆಂದೂ ಅವನು ಸೂಚಿಸಿದ • ಈ ಸೂಚನೆಯನ್ನು ಉಪವಾಸ ಮಾಡುತಿದ್ದಾಗ ದೇವರು ಅವನಿಗೆ ತಿಳಿಸಿದರೆಂದೂ ಅವನು ತಿಳಿಸಿದ

"ಮೊದಲು ನೆಹುರು ಬಂದು ಬ್ರಿಟಿಷರನ್ನು ಇಲ್ಲಿಂದ ಹೊರಡಿಸಬೇಕು, ಅವರೇ ಈ ಅಂತಃಕಲಹವನ್ನು ಪ್ರೇರೇಪಿಸುತಿದ್ದಾರೆ. ನೆಹರೂರವರು ಕೂಡಲೇ ಈ ಕಡೆ ಬರಬೇಕು"

ನೆಹುರುಗಳಿಗೆ ಭಾರತದಲ್ಲಿ ಸಾಕಷ್ಟು ಕೆಲಸವಿದೆಯೆಂದು ನಾನು ವಿವರಿಸಲು ಪ್ರಯತ್ನಿಸಿದೆ. ಆದರೆ ಆತ ಕೇಳಲೊಲ್ಲ

"ನನಗೆ ಗೊತ್ತಿದೆ. ಭಾರತದಲ್ಲಿ ನೆಹುರುಗಳ ಕೆಲಸವು ಸಂಪೂರ್ಣಗೊಂಡಿದೆ. ಇನ್ನೂ ಅವರು ಅಲ್ಲೇ ನಿಂತರೆ ಮುದುಕರಾಗುವರು. ಮತ್ತೆ ಅವರು ನಿರ್ಬಲರೂ ಪ್ರತಿಗಾಮಿಗಳೂ ಆಗುವ ಸಂಭವವಿದೆ. ಡಿವೇಲೆರಾಗಳಂತಹ ಕ್ರಾಂತಿಕಾರರಿಗೆ ತಗಲಿದ ಆ ನಿಷ್ಕ್ರಿಯಾ ಪ್ರವೃತ್ತಿಯು ಅವರಿಗೂ ತಗಲುವುದು. ಇನ್ನು ಮುಂದೆ ಅವರು ಇಡೀ ಜಗತ್ತಿನಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನಿಸಬೇಕು. ನೆಹುರುರವರು ಇಡೀ ಏಸ್ಯದ ನಾಯಕರು. ಏಸ್ಯದಲ್ಲಿ ಪಾಶ್ಚಾತ್ಯರ ಆಕ್ರಮಣ ತಡೆಯಬೇಕೆಂಬ ಘನ ಗಂಭೀರ ಘೋಷಣೆಯನ್ನು ಅವರು ಸಾರಿದ್ದಾರೆ ಯೆಹೂದಿಗಳಾದ ನಾವು ಏಸ್ಯಾ ಜನಾಂಗಿಕರಲ್ಲವೆ? ನಮ್ಮ ವ್ಯವಹಾರದಲ್ಲಿ ಕೈಯಿಕ್ಕಲು ಬ್ರಿಟಿಷರಿಗೆ ಏನು ಹಕ್ಕಿದೆ? ಅರಬ ಮತ್ತು ಯೆಹೂದಿಗಳಿಬ್ಬರೂ ಅವರನ್ನು ಸ್ವಾಗತಿಸುವರು ದೇವರ ಸೇವೆ ಮಾಡುವ ಓರ್ವ ಮನುಷ್ಯನಿಂದ ಮಾಡಿಕೊಂಡ ಈ ವಿನಂತಿಯನ್ನು ನೆಹುರುಗಳಿಗೆ ತಿಳಿಸಿರಿ."

ನೆಹುರುಗಳು ಪಲೆಸ್ತೀನಕ್ಕೆ ಹೋಗುವರೆ?

ಅನಂತರ ಆ ಮುದುಕನು ನೆಹುರು ವಿಚಾರ ಇನ್ನೂ ಸವಿಸ್ತಾರವಾಗಿ ಕೇಳಿದನು. ಜಗತ್ತಿನ ಸಂಕಷ್ಟವನ್ನು ಅವರು ತನ್ನ ಸಂಕಷ್ಟವಾಗಿ ಈಗಲೂ ತಿಳಕೊಳ್ಳುತ್ತಾರೆಯೆ? ತಮ್ಮ ವಿಜಯ ಮತ್ತು ಅಧಿಕಾರ ಸ್ವೀಕಾರದಿಂದವರು ಒರಟಾಗಿರುವರೆ? ಇದಕ್ಕುತ್ತರವಾಗಿ ನಾನವರಿಗೆ ನೆಹುರುರವರು "ಚೀನಾ ಸ್ಪೈನ್ ಮತ್ತು ಯುದ್ಧ" ಎಂಬ ಗ್ರಂಥವನ್ನು ಕೊಟ್ಟೆ ಅದರಲ್ಲವರು ಕರುಣಾಜನಕವಾಗಿ ಬರೆದ ಈ ಅಂಶವನ್ನು ತೋರಿಸಿದ "ಸ್ಪೈನಿನಲ್ಲಿ ನಾನು ಅನೇಕ ಸ್ತ್ರೀ ಪುರುಷರನ್ನು ಕಂಡೆ ಅವರು ಧೈರ್ಯವಂತರೂ, ಪನಸ್ಥಿತಿಯವರೂ ಮತ್ತು ಚೈತನ್ಯ ಸ್ವರೂಪಿಗಳೂ ಆಗಿದ್ದು ಜನಾಂಗವೊಂದರ ಆಶೆ ಹಾರೈಕೆಗಳ ಸಜೀವತವಾಗಿದ್ದರು"

ಅದೇ ಗ್ರಂಥದ ಇನ್ನೊಂದು ಕಡೆಯಲ್ಲಿದ್ದ ಮತ್ತೊಂದು ಹಣ್ಣುಗಳು ಸಿರೊಪಣಿಯನ್ನು ವೃದ್ಧ ಯೆಹೂದಿಗಳು ಓದಿದರ

"ಅನೇಕರು ಮಡಿದರು ಇನ್ನು ಅನೇಕರು ನಿರಾಶ್ರಿತರಾಗಿ ಅಲೆದಾಡುತ್ತಿರುವರು. ಸ್ಪೈನಿನಲ್ಲಿ ನಾನು ನೋಡಿದ ದೃಶ್ಯಗಳು ಸ್ಮೃತಿಪಟಲದಲ್ಲಿ ಸತತ ಬಾಳಿಕೊಂಡಿರುವಂತಹುಗಳು. ಕೆಲವು ಸಲ ಅಲ್ಲಿನ ಸ್ಮೃತಿ ಚಿತ್ರಗಳು ಈಗ ತಾನೆ ನೋಡಿದಂತೆ ನೆನಪಿಗೆ ಬರುತ್ತವೆ. ಮತ್ತೆ ಕೆಲವು ಸಹಸ್ರ ವರ್ಷಗಳ ಹಿಂದೆ ಕಂಡಂತೆ ಅಸ್ಪಷ್ಟ ಸ್ಮರಣೆಯಾಗುತ್ತವೆ. ಕೆಲವು ಸಲ ನಾನು ಅತೀ ಮುದುಕನಾದಂತೆ ಭಾಸವಾಗುತ್ತದೆ. ಗತಯುಗಗಳ ದುರಂತಗಳು ನಮ್ಮನ್ನು ಕಳವಳಗೊಳಿಸುತ್ತವೆ."

ನಾನು ಮುದುಕನ ಕಡೆ ನೋಡಿದೆ ಅವನು ಮೌನನಾಗಿದ್ದನು ಅವನ ಕಣ್ಣಿನಿಂದ ಅಶ್ರುಧಾರೆಯು ಒಂದೇ ಸವನೆ ಇಳಿಯುತ್ತಿತ್ತು "ಜವಾಹರರು ಕಠಿಣ ಹೃದಯಿಗಳಾಗಬಲ್ಲರೆ? ಇದನ್ನು ಬರೆದವರ ಕುರಿತು ನಿಮ್ಮಭಿಪ್ರಾಯವೇನು?" ಎಂದು ಪ್ರಶ್ನಿಸಿದೆ. ಯೆಹೂದಿಯ ಅಗಾಧ ಶರೀರ ನಡುಗುತಿತ್ತು. ಗದ್ಗದಿತನಾಗಿ ಅವನು "ನೆಹುರುವನ್ನು ದೇವರು ಕಾಪಾಡಲಿ. ದೇವರು ಅವರನ್ನು ಪಲೆಸ್ತೀನಕ್ಕೆ ಕಳುಹಲಿ" ಎಂದು ಪ್ರಾರ್ಥಿಸಿದ.

ಸ್ವದೇಶಾಭಿಮಾನಿ

ತಾರೀಕು 24 – 10 – 1947

ಅನ್ನಬಟ್ಟೆಗಳ ನಿಯಂತ್ರಣ ಅಗತ್ಯವೆ?

ಅನ್ನ ಮತ್ತು ಬಟ್ಟೆಗಳ ನಿಯಂತ್ರಣ ಹಾಗೂ ರೇಶನ್ ಪದ್ಧತಿಗಳನ್ನು ಈಗ ತೆಗೆದುಹಾಕಬಹುದೆಂದು ಮಹಾತ್ಮಾ ಗಾಂಧಿಯವರು ಹೇಳುತ್ತಾರೆ ಹಿಂದೀ ಸರಕಾರದವರು ನೇಮಿಸಿದ ಆಹಾರ ಧಾನ್ಯ ಧೋರಣ ಸಮಿತಿಯವರೊಡನೆಯೂ ಅವರು ಈ ತನ್ನ ಅಭಿಪ್ರಾಯ ಚರ್ಚಿಸಿದರು ಶ್ರೀ ಪುರುಷೋತ್ತಮದಾಸ ಠಾಕೂರದಾಸರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಈ ಸಮಿತಿಯವರು ಆಯಾ ಪ್ರಾಂತಿಕ ಸರಕಾರಗಳ ಆಹಾರಖಾತೆ ಅಧಿಕಾರಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಗಾಂಧೀಜಿಯವರ ಅಭಿಪ್ರಾಯವನ್ನು ಈಗಲೆ ಜಾರಿಗೆ ತರುವುದು ಅಸಾಧ್ಯವೆಂದೂ, ಸದ್ಯದ ಧೋರಣೆಯಾಗಿ ಆಹಾರ ಧಾನ್ಯಗಳ ಕಂಟ್ರೋಲ್ ಮತ್ತು ರೇಶನಿಂಗ್ ಇವನ್ನು 1948ನೇ ಇಸ್ವಿಯ ಅಖೈರು ತನಕ ಮುಂದರಿಸಬೇಕೆಂಬ ನಿರ್ಣಯಕ್ಕೆ ಬಂದಿರುವರೆಂದೂ ತಿಳಿದುಬರುತ್ತದೆ ನಮ್ಮ ಮದ್ರಾಸ್ ಸರಕಾರದ ಆಹಾರ ಖಾತೆ ಮಂತ್ರಿಯವರೂ ಶಾಸನ ಸಭೆಯಲ್ಲಿ ಗಾಂಧೀಜಿಯವರ ಅಭಿಪ್ರಾಯದಂತೆ ಈಗ ವರ್ತಿಸುವುದು ಅಸಾಧ್ಯವೆಂಬ ಭಾವನೆಯನ್ನೇ ವ್ಯಕ್ತಪಡಿಸಿದರು

ಯುದ್ಧ ಮುಗಿದು ಇಷ್ಟು ಸಮಯವಾದ ಮೇಲೆ ಕೂಡಾ ಈ ನಿಯಂತ್ರಣಗಳೇಕೆ? ಎಂಬುದು ಗಾಂಧಿಜಿಯವರ ಪ್ರಶ್ನೆ. ಸಾಕಷ್ಟು ಆಹಾರ ಧಾನ್ಯಗಳು ದೇಶದಲ್ಲಿ ಬೆಳೆಯುತ್ತ ಇಲ್ಲ ಪರದೇಶಗಳಿಂದ ತರಿಸಿ ನಮ್ಮ ಆವಶ್ಯಕತೆಗಳನ್ನು ಪೂರೈಸಬೇಕಾದ ಪರಿಸ್ಥಿತಿ ಇನ್ನೂ ಹೋಗಿಲ್ಲ ಇಂಥ ಪರಿಸ್ಥಿತಿಯಲ್ಲಿ ಆಹಾರ ಧಾನ್ಯಗಳ ನಿಯಂತ್ರಣ ತೆಗೆದು ಹಾಕಿದರೆ ಬಂಗಾಳದ ಬರಗಾಲ ಇಡೀ ಹಿಂದೂಸ್ಥಾನದಲ್ಲಿ ನೋಡುವ ಪ್ರಸಂಗ ಬಂದೀತು. ನಾಳೆ ಅಕ್ಕಿಯ ಮೇಲಿನ ಕಂಟ್ರೋಲ್ ತೆಗೆದರೆ ವರ್ಗದಾರರು ಅಕ್ಕಿ ಮುಡಿಯೊಂದರ ರೂಪ್ಯಾ 40 ಅಥವಾ 50 ರಂತೆ ಇದ್ದ ಅಕ್ಕಿಯನ್ನೆಲ್ಲ ಸಾಹುಕಾರರಿಗೆ ಮಾರುವರು ಸಾಹುಕಾರರು ಇದನ್ನೆಲ್ಲ ಕೊಂಡುಕೊಂಡು ದಾಸ್ತಾನು ಮಾಡಿ ಮುಡಿ ಒಂದರ ರೂ 100 ಕ್ರಯ ಸಿಕ್ಕಬೇಕೆಂದು ಕಾಯುವರು ಈ ಶ್ರೀಮಂತರ ಲಾಭದ ಸಂಪಾದನೆಯ ಪ್ರಯತ್ನ ನಡೆಯುತ್ತಿರುವಾಗ ಬಡಜನರು ಊಟಕ್ಕಿಲ್ಲದೆ ಸಾಯುವರು ಬಂಗಾಲದಲ್ಲಿ ಮಿಲಿಯಗಟ್ಟಲೆ ಜನರು ಸತ್ತದ್ದಾದರೂ ಇಂಥ ಪರಿಸ್ಥಿತಿಯಲ್ಲಿಯೇ ಇರುತ್ತದೆ ಇದು ನಿಯಂತ್ರಣ ತೆಗೆದು ಹಾಕುವುದು ಅಸಾಧ್ಯವೆನ್ನುವವರ ಅಭಿಪ್ರಾಯದ ಸಾರಾಂಶವಿರುತ್ತದೆ.

ಹಾಗಿದ್ದರೆ ಈ ಕಂಟ್ರೋಲು ಮತ್ತು ರೇಶನ್ ಎಷ್ಟರ ತನಕ ಇರಬಹುದು? ಎಲ್ಲಿಯ ತನಕ ನಮ್ಮಲ್ಲಿ ನಮಗೆ ಸಾಕಷ್ಟು ಆಹಾರ ಧಾನ್ಯಗಳು ಬೆಳೆಯುವುದಿಲ್ಲವೋ ಅಲ್ಲಿ ವರೆಗೆ ಈ ನಿಯಂತ್ರಣದ ಧೋರಣೆ ಅಗತ್ಯವೆಂಬುದು ಇವರ ಸ್ಪಷ್ಟ ಅಭಿಪ್ರಾಯ. ಆಹಾರ ಧಾನ್ಯಗಳ ಬೆಳೆ ನಮ್ಮ ಆವಶ್ಯಕತೆ ಪೂರೈಸುವಷ್ಟು ಯಾವಾಗ ಹೆಚ್ಚಾಗಬಹುದು? ಯಾವಾಗ ಎಂದು ಈಗ ಸ್ಪಷ್ಟವಾಗಿ ಹೇಳುವಂಥ ಯೋಜನೆ ಹಿಂದುಸ್ಥಾನ ಸರಕಾರದವರ ಅಥವಾ ನಮ್ಮ ಪ್ರಾಂತಿಕ ಸರಕಾರದವರ ಮುಂದೆ ಇಲ್ಲವೆಂಬುದರಿಂದ ಎಲ್ಲಿಯ ತನಕ ಕಂಟ್ರೋಲು ನಡೆಯಬೇಕಾಗುವುದೆಂದು ಈಗ ಹೇಳುವಂತಿಲ್ಲ. ಆಹಾರ ಬೆಳೆ ಹೆಚ್ಚಿಗೆ ಬೆಳೆಸಿರಿ ಎಂಬ ಸರಕಾರೀ ಚಳವಳ ನಡೆಯುತ್ತಿದೆಯಷ್ಟೆ? ಈ ಚಳವಳವು ಫಲಪ್ರದವಾಗಿ ಸಾಕಷ್ಟು ಬೆಳೆ ಬೆಳೆದರೆ ಆಗ ಕಂಟ್ರೋಲು ಹೋಗುವುದು. ಹೆಚ್ಚು ಬೆಳೆ ಬೆಳೆಸಿರೆಂಬ ಚಳವಳ ನಮ್ಮಲ್ಲಿ ಎಷ್ಟು ಫಲಪ್ರದವಾಗುತ್ತಿದೆಯೆಂದು ಎಣಿಸಿ ನೋಡಿದರೆ ಕಂಟ್ರೋಲು ಹೋಗಲು ಇನ್ನು ಎಷ್ಟು ಕಾಲ ಹಿಡಿಯಬಹುದೆಂಬುದನ್ನು ಯೋಚಿಸಬಹುದು

ಅಂದರೆ ಇನ್ನೂ ಹಲವು ಕಾಲದ ತನಕ ನಮ್ಮ ಹಳ್ಳಿಯವರು ಬೆಳೆಸುವ ಅಕ್ಕಿ ಅವರ ಊಟಕ್ಕೆ ತಕ್ಕ ಬಿಟ್ಟು ಉಳಿದುದನ್ನು ಸರಕಾರದವರು ಕೊಂಡು ಹೋಗುವುದು ನಿಲ್ಲುವಂತಿಲ್ಲ ಪೇಟೆಯವರು ರೇಶನ್ ಅಂಗಡಿ ಬಾಗಿಲು ಕಾದು ಅವರು ಕೊಟ್ಟ ಬಗೆಯ ಅಕ್ಕಿ ಉಣ್ಣಬೇಕಾದ ಪ್ರಸಂಗ ಸದ್ಯಕ್ಕೆ ನಿವಾರಣೆಯಾಗುವ ಲಕ್ಷಣಗಳಿಲ್ಲ ಸಾರ್ವಜನಿಕ ಹಿತದ ದೃಷ್ಟಿಯಿಂದ ಈ ಸಂಕಷ್ಟಗಳನ್ನು ಅನುಭವಿಸುವುದು ಅಗತ್ಯವೆಂದಾದರೆ ಇದಕ್ಕಾಗಿ ಬೇಸರಪಟ್ಟು ಫಲವೇನು? ಎಲ್ಲ ಜನರಿಗೂ ಆಹಾರ ಒದಗಿಸಿಕೊಡುವುದು ಸರಕಾರದ ಜವಾಬ್ದಾರಿಯೆಂದ ಮೇಲೆ ಅವರಾದರೂ ಈ ನಿಯಂತ್ರಣ ಬಿಟ್ಟುಬಿಡಲಿಕ್ಕೆ ಹೇಗೆ ಬಂದೀತು?

ಜನರಿಗೆ ಅನ್ನ ಬಟ್ಟೆ ತಯಾರಿಸಿ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಾಗುವಂತೆ ಮುತ್ತಿಸಿ ಅದನ್ನು ಎಲ್ಲರಿಗೂ ಕೊಡುವ ಕೆಲಸ ಸರಕಾರಕ್ಕೆ ಸೇರಿದುದು ಎಂಬ ಭಾವನೆ ಈ ಸರಕಾರೀ ಧೋರಣೆಯ ಮೂಲದಲ್ಲಿರುತ್ತದೆ ಈ ಭಾವನೆ ಇರುವ ತನಕ ಅಂದರೆ ಎಲ್ಲಿಯ ತನಕ ಆಹಾರ ಕೊಡಬೇಕಾದವರು ಸರಕಾರದವರೆಂಬ ಅಭಿಪ್ರಾಯ ಪ್ರಚಾರದಲ್ಲಿರುವುದೋ ಆ ತನಕ ಜನರು ತಮ್ಮ ಕಾಲ ಮೇಲೆ ತಾವು ನಿಲ್ಲುವುದು ಅಸಾಧ್ಯವೆಂಬುದು ಗಾಂಧೀಜಿಯವರ ಅಭಿಪ್ರಾಯ ಅನ್ನ ಬಟ್ಟೆಯ ಆವಶ್ಯಕತೆ ಪೂರೈಸಿಕೊಳ್ಳುವುದು ಪ್ರಜೆಗಳ ಕೆಲಸ ಇದಕ್ಕೆ ಬೇಕಾದ ಅನುಕೂಲತೆಗಳನ್ನು ಒದಗಿಸಿ ಕೊಡುವುದು ಮಾತ್ರ ಸರಕಾರದ ಕೆಲಸವೆಂಬುದು ಇವರ ಅಭಿಪ್ರಾಯ ಬೇಕಷ್ಟು ಆಹಾರ ನೀವೇ ಬೆಳೆಸುವುದು ನಿಮ್ಮ ಜವಾಬ್ದಾರಿಯೆಂದು ಸರಕಾರದವರು ಸ್ಪಷ್ಟವಾಗಿ ಹೇಳಿದರೆ ಹೆಚ್ಚು ಬೆಳೆಯನ್ನು ಜನರು ತಾವಾಗಿ ಬೆಳೆಸುತ್ತಾರೆಂಬುದು ಇವರ ವಿಶ್ವಾಸವಿರುತ್ತದೆ ಮಾತ್ರವಲ್ಲ ಹೆಚ್ಚು ಬೆಳೆ ಬೆಳೆದಂತೆ ವರ್ಗದಾರರ ಹಾಗೂ ಸಾಹುಕಾರರ ಲೋಭಕ್ಕೂ ಹೆಚ್ಚಿನ ಆಸ್ಪದ ಉಳಿಯುವಂತಿಲ್ಲ ಕ್ರಯ ಸ್ವಲ್ಪ ಹೆಚ್ಚಿಸುವ ಯತ್ನ ನಡೆದಂತೆ ಬೆಳೆಯನ್ನು ಸಹಜವಾಗಿ ಜನರು ಹೆಚ್ಚಿಸುವರಷ್ಟೆ! ಪರಕೀಯ ಸರಕಾರದ ಅಡಿಯಲ್ಲಿ ಯುದ್ಧವು ಬಾಗಿಲಿಗೆ ಬಂದಿದ್ದ ಆ ಕಾಲದಲ್ಲಿ ಬಂಗಾಳದಲ್ಲಿ ಬರಗಾಲ ಬಂದಂತೆ ಈಗ ಖಂಡಿತವಾಗಿಯೂ ಆ ಪರಿಸ್ಥಿತಿ ಬರುವಂತಿಲ್ಲವೆಂಬುದು ಗಾಂಧೀಜಿಯವರ ಹೇಳಿಕೆ ಇರುತ್ತದೆ

ಹಿಂದುಸ್ಥಾನದಲ್ಲಿ ಸಾಕಷ್ಟು ಭೂಮಿ ಉಂಟು. ಬೇಕಾದಷ್ಟು ಕೆಲಸ ಮಾಡಲು ಜನರಿದ್ದಾರೆ. ಈ ಜನರೆಲ್ಲ ಇದ್ದ ಭೂಮಿಯನ್ನೆಲ್ಲ ಉಪಯೋಗಿಸಿ ದುಡಿದರೆ ನಮ್ಮ ಆಹಾರದ ಆವಶ್ಯಕತೆ ಬಹಳ ಸುಲಭದಲ್ಲಿ ಪೂರೈಸಬಹುದೆಂದು ಗಾಂಧೀಯವರು ಹೇಳುತ್ತಾರೆ. ನಮ್ಮಲ್ಲಿ ನಮಗೆ ಬೇಕಾದುದಕ್ಕಿಂತ ಹೆಚ್ಚೇ ಹತ್ತಿ ಬೆಳೆಯುತ್ತಿದೆ. ಇದರ ಬಟ್ಟೆ ಮಾಡಿಕೊಳ್ಳಲಿಕ್ಕೆ ಬೇಕಾದಷ್ಟು ಕೆಲಸಗಾರರೂ ಇದ್ದಾರೆ ಅಂದರೆ ಬಟ್ಟೆಯ ಆವಶ್ಯಕತೆ ಪೂರೈಸಲು ಕಷ್ಟವೇನು? ಎಂದು ಇವರು ಕೇಳುತ್ತಾರೆ. ಆದಷ್ಟು ಬೇಗನೆ ನಮ್ಮ ಅನ್ನಕ್ಕಾಗಿ ನಾವು ಪರರ ಮೋರೆ ನೋಡುವುದನ್ನು ಬಿಡಬೇಕೆಂಬುದು ಇವರ ಬುದ್ಧಿವಾದದ ಸಾರಾಂಶವಿರುತ್ತದೆ ಈಗ ಹಿಂದುಸ್ಥಾನ ಸರಕಾರ ಅಮೇರಿಕದವರೋ ಆಸ್ಟ್ರೇಲಿಯದವರೋ ಯಾರು ನಮಗೆ ಅನ್ನ ಕೊಡುವರೆಂದು ಅವರ ಮೋರೆ ನೋಡುತ್ತಿದ್ದಾರೆ. ಮದ್ರಾಸು ಪ್ರಾಂತ್ಯದವರು ಹಿಂದುಸ್ಥಾನ ಸರಕಾರದವರೊಡನೆ ಬೇಡುತ್ತಾರೆ ದಕ್ಷಿಣ ಕನ್ನಡ ಜಿಲ್ಲೆಯವರು ಮದ್ರಾಸು ಸರಕಾರದವರೊಡನೆ ಬೇಡುತ್ತಾರೆ ನಮ್ಮಲ್ಲಿಯ ಹಳ್ಳಿ ಕೇಂದ್ರಗಳಿಂದ ಅಕ್ಕಿ ಕಳುಹಿಸಿರೆಂದು ಶ್ರೀ ಶಿವರಾಯರಿಗೆ ತಂತಿಗಳೂ, ಪತ್ರದಳೂ ಮೇಲಿಂದ ಮೇಲೆ ಬರುತ್ತವೆ ಅಂದರೆ ತುದಿಯಿಂದ ಬುಡದ ತನಕ ಎಲ್ಲರೂ ಅನ್ನ ಬೇಡುವುದೇ ಈಗಿನ ಪರಿಸ್ಥಿತಿ ಇರುತ್ತದೆ ಇದು ಅತ್ಯಂತ ನಾಚಿಕೆಯ ಪರಿಸ್ಥಿತಿ ಮಾತ್ರವಲ್ಲ ಇದರಿಂದ ಆರ್ಥಿಕ ಹಾನಿಯಾದರೂ ಎಷ್ಟಿರುತ್ತದೆ? ಹಿಂದುಸ್ಥಾನವು ಆಹಾರಕ್ಕಾಗಿ ಈಗ ಎಷ್ಟು ಕೋಟಿ ರೂಪಾಯಿ ಪರಕೀಯರಿಗೆ ಕೊಡುತ್ತ ಇದೆ! ಹೀಗೆ ನಮ್ಮ ಹಣವನ್ನು ಇತರರಿಗೆ ಕೊಡುತ್ತ ಹೋಗುವುದು ಸಾಧ್ಯವೆ?

ನಮ್ಮ ದೇಶ, ನಮ್ಮ ಪ್ರಾಂತ್ಯ, ನಮ್ಮ ಜಿಲ್ಲೆ, ನಮ್ಮ ಹಳ್ಳಿ ಪ್ರತಿಯೊಂದೂ ಅನ್ನ ಬಟ್ಟೆಗಳ ಮಟ್ಟಿಗೆ ಸ್ವಾವಲಂಬಿಯಾಗಿ ಸ್ವತಂತ್ರವಾಗುವ ಪರಿಸ್ಥಿತಿ ಅನತಿ ದೂರದಲ್ಲಿ ಬಂದೇ ತೀರಬೇಕು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತೆಂದ ಸಂಭ್ರಮದ ಉತ್ಸವ ಮಾಡಿದೊಡನೆ ಪ್ರಜೆಗಳು ಸ್ವಾತಂತ್ರ್ಯವನ್ನು ಅನುಭವಿಸುವುದಿಲ್ಲ ಅನ್ನ ಬಟ್ಟೆಗಳಿಗಾಗಿ ಪರರ ಮೋರೆ ನೋಡಿ ಇವುಗಳಿಗಾಗಿ ಕಾತೊರೆಯುತ್ತಲಿರುವ ಪರಿಸ್ಥಿತಿ ಸ್ವಾತಂತ್ರ್ಯದ ಅಥವಾ ಸ್ವರಾಜ್ಯದ ಲಕ್ಷಣ ಎಂದೂ ಇರಲಾರದು. ಒಂದು ಪಾವು ಅಕ್ಕಿ ಇಲ್ಲದೆ ಉಪವಾಸವಿರತಕ್ಕ ಪರಿಸ್ಥಿತಿಗೆ ಸ್ವಾತಂತ್ರ್ಯದ ಸುಖವೆಂದರೆ ಯಾವ ಜನರು ಒಪ್ಪುವರು?

ಉಡುಪಿಯ ಅಕ್ಕಿಯನ್ನು ಮಂಗಳೂರಿಗೆ ಕಳುಹಿಸುವುದು ಮತ್ತು ಎಲ್ಲೆಲ್ಲಿಯದೋ ಅಕ್ಕಿಯನ್ನು ಉಡುಪಿ ತನಕ ಸಾಗಿಸಿ ಅದನ್ನು ಅಲ್ಲಿಯವರಿಗೆ ಉಣ್ಣಿಸುವ ಈ ನಿಯಂತ್ರಣ ಧೋರಣೆಯು ವ್ಯವಹಾರದಕ್ಷತೆ ಎಷ್ಟು ಬೇಗ ನಿಲ್ಲುವುದೋ ಅಷ್ಟು ಉತ್ತಮ ರೇಶನ್ ಅಂಗಡಿ ಬಾಗಿಲುಗಳಲ್ಲಿ ಜನರು ವ್ಯರ್ಥ ಮಾಡುವ ಅಷ್ಟು ಗಂಟೆಗಳನ್ನು ಅವರು ಸದುಪಯೋಗ ಮಾಡುವ ಪರಿಸ್ಥಿತಿ ಬೇಗನೆ ಬರಬೇಕು ನಮ್ಮೆಲ್ಲರ ಊಟದ ಜವಾಬ್ದಾರಿ ಸರಕಾರದವರು ಹೊತ್ತುಕೊಂಡು ನಮಗೆ ದಿನ ಒಂದರ ಒಂದು ಪಾವು ಉಣ್ಣಲು ಸಾಧ್ಯವಿಲ್ಲದ ಅಕ್ಕಿ ಕೊಟ್ಟು ಕೃತಕೃತ್ಯರಾಗುವ ಅಗತ್ಯವಿಲ್ಲ ಸರಕಾರದವರು ಪ್ರಜೆಗಳನ್ನು ಅವರವರ ಸ್ವಾವಲಂಬನದಿಂದಲೇ ತಮ್ಮ ಆವಶ್ಯಕತೆ ಪೂರೈಸಿಕೊಳ್ಳಲು ಬಿಟ್ಟರೆ ಅದೇ ಒಂದು ದೊಡ್ಡ ಉಪಕಾರವೆನ್ನಬಹುದು ಜನರ ನಿತ್ಯ ಜೀವನದಲ್ಲಿ ಯಾವ ಸರಕಾರವು ಆದಷ್ಟು ಕಡಮೆ ಕೈಹಾಕುವುದೋ ಅದೇ ಉತ್ತಮ ಸರಕಾರವೆಂದು ಹಿಂದೊಬ್ಬ ತತ್ವಜ್ಞಾನಿ ಹೇಳಿದ ಮಾತು ಅಕ್ಷರಶಃ ಸತ್ಯವಿರುತ್ತದೆ

ಈ ಲೇಖನದಲ್ಲಿ ಚರ್ಚಿಸಲ್ಪಟ್ಟಿರುವ ವಿಷಯವನ್ನು ಕುರಿತು ಮಹಾಜನರು ಸಾಕಷ್ಟು ವಿಚಾರಿಸುವುದು ಅತೀ ಅಗತ್ಯವಿರುತ್ತದೆ ಪೇಟೆಗಳಲ್ಲಿ ಒಂದ ಪಾವು ಅಥವಾ ಬಹಳವೆಂದರೆ ಒಂದೂವರೆ ಪಾವು ಅಕ್ಕಿಯಲ್ಲಿಯೇ ಆ ಅಕ್ಕಿಯಲ್ಲಿ ಕಾಲು ಪಾವು ಭತ್ತ ಅಥವಾ ಕಲ್ಲು ಇರುತ್ತದೆಂಬುದನ್ನು ಕೂಡಾ ಎಣಿಸಿ ಸ್ಟೋರಿನಿಂದ ಮನೆಗೆ ಕೊಂಡುಹೋಗಿ ಎಣಿಸುವಾಗ ಅಳತೆ ಕಡಮೆ ಬರುತ್ತದೆಂಬುದನ್ನು ಲಕ್ಷಿಸಿ ಈ ಪರಿಸ್ಥಿತಿ ನಾವು ಸಹಿಸಿಕೊಂಡಿರಬೇಕೆ? ಎಂದು ಚೆನ್ನಾಗಿ ವಿಚಾರಿಸಬೇಕು ಹಳ್ಳಿಯವರು ತಾವು ಬೆಳೆಸಿದ ಬೆಳೆ–ಕೆಲವು ಬಾರಿ ಊಟಕ್ಕೆ ಸಾಕಷ್ಟು ಬಿಟ್ಟು, ಕೆಲವು ಬಾರಿ ಊಟಕ್ಕೆ ಇಟ್ಟದ್ದು ಕೂಡಾ ಸರಕಾರದವರು ಕೊಂಡುಹೋಗಿ ಮತ್ತೆ ತಮಗೆ ಕಾರ್ಡು ಕೊಟ್ಟು ಡಿಪೋ ಬಾಗಿಲು ಕಾಯುವಂತೆ ಮಾಡುವ ಹಾಗೂ ಆಗಾಗ ಉಪವಾಸ ಬೀಳುವಂತೆ ಮಾಡುವ ಈಗಿನ ಪರಿಸ್ಥಿತಿ ತಾವು ಸಹಿಸಿಕೊಂಡಿರಬೇಕೆ? ಎಂದು ವಿಚಾರಿಸಬೇಕು ಈ ಕಂಟ್ರೋಲು ಮತ್ತು ರೇಶನ್ ಅನಿವಾರ್ಯವೆಂದು ಕೈಕಟ್ಟಿಕೊಂಡು ಇರುವುದು ಸರಿಯಲ್ಲ ನಿಯಂತ್ರಣ ಬೇಡವೆಂದು ಗಾಂಧೀಜಿ ಹೇಳುತ್ತಾರೆ ಬೇಡವೆಂದು ನಮಗೂ ಕಂಡರೆ ಕಂಟ್ರೋಲು ಮತ್ತು ರೇಶನ್ ಹೋಗಲೇ ಬೇಕು

ಟೀಕೆ–ಟಿಪ್ಪಣಿಗಳು

ವಿವಾಹ ಪದ್ಧತಿ ಸುಧಾರಣಾ ಮಸೂದೆ

ಶ್ರೀ ಎ ಕಾಳೇಶ್ವರರಾಯರು ಮದ್ರಾಸ್ ಶಾಸನ ಸಭೆಯ ಮುಂದಿಟ್ಟ ಈ ಮಸೂದೆ ಹೆಚ್ಚಿನ ಪರಿಶೀಲನದ ಬಗ್ಗೆ ಒಂದು ಸಿಲೆಕ್ಟ ಕಮಿಟಿಗೆ ಒಪ್ಪಿಸಲಾಗಿದೆ ಒಬ್ಬ ಪುರುಷನು ತನ್ನ ಮೊದಲ ಹೆಂಡತಿ ಇರುವಾಗ ಇನ್ನೊಬ್ಬಳನ್ನು ಮದುವೆಯಾಗುವುದನ್ನು ಈ ಮಸೂದೆಯು ನಿಷೇಧಿಸುತ್ತದೆ ಅಂದರೆ ಬಹುಪತ್ನೀತ್ವವನ್ನು ವಿರೋಧಿಸುವುದೇ ಇದರ ಮುಖ್ಯ ಉದ್ದೇಶವಿರುತ್ತದೆ ಈ ಬಗೆಯ ಕಾನೂನು ಹೆಚ್ಚಿನ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈಗ ಪ್ರಚಾರದಲ್ಲಿದೆ ಸುಸಂಸ್ಕೃತವೆನ್ನಿಸುವ ಹಿಂದೂ ಸಮಾಜದಲ್ಲಿ ಮಾತ್ರ ಒಬ್ಬ ಹೆಂಡತಿ ಇರುವಾಗಲೇ ಗಂಡನು ಇನ್ನೊಬ್ಬಳನ್ನು ಮದುವೆಯಾಗಲು ಆಸ್ಪದ ಉಂಟು ಮಾತ್ರವಲ್ಲ ಇಂಥ ಎಷ್ಟೋ ಮದುವೆಗಳಾಗುತ್ತಿರುವುದನ್ನು ನಾವು ಕಾಣುತ್ತೇವೆ ಈ ರೀತಿ ದ್ವಿತೀಯ ವಿವಾಹಕ್ಕೊಳಗಾದ ಪತಿಯಿಂದ ತ್ಯಜಿಸಲ್ಪಟ್ಟ ಪ್ರಥಮ ಪತ್ನಿಯ ಕರುಣಾಜನಕ ಪರಿಸ್ಥಿತಿಯನ್ನು ನೋಡಿದವರೆಲ್ಲರೂ ಈ ಸುಧಾರಣೆಯ ಆವಶ್ಯಕತೆಯನ್ನು ಮನಃಪೂರ್ವಕ ಒಪ್ಪಿಕೊಳ್ಳುವರೆನ್ನಲು ಅಡ್ಡಿಯಿಲ್ಲ

ಪತ್ನೀತ್ವಕ್ಕೆ ಯೋಗ್ಯಳಲ್ಲದ ಒಬ್ಬ ಸ್ತ್ರೀಯನ್ನು ವಿವಾಹ ಮಾಡಿಕೊಂಡ ಪುರುಷನ ಗತಿಯೇನು? ಎಂಬ ಒಂದು ಪ್ರಶ್ನೆ ಸಹಜವಾಗಿ ಬರುತ್ತದೆ ಆತನು ಇನ್ನೊಂದು ಮದುವೆಯಾಗಬಾರದೆಂದರೆ ನ್ಯಾಯವಾದೀತೆ? ಇಂಥ ಸಂದರ್ಭದಲ್ಲಿ ವಿವಾಹ ವಿಚ್ಛೇದಕ್ಕೆ ಕಾನೂನಿನಲ್ಲಿ ಆಸ್ಪದವಿಟ್ಟು ಮೊದಲಿನ ವಿವಾಹವನ್ನು ಕಾನೂನಿನ ಪ್ರಕಾರ ರದ್ದುಗೊಳಿಸಿ ಮತ್ತೆ ಪುನರ್ವಿವಾಹ ಮಾಡಿಕೊಳ್ಳಲು ಅಡ್ಡಿಯಿಲ್ಲದಂತೆ ಏರ್ಪಡಿಸಬೇಕೆಂದು ಸುಧಾರಕರ ಸೂಚನೆ ಇರುತ್ತದೆ

ಪಾಶ್ಚಾತ್ಯರಲ್ಲಿ ವಿವಾಹ ವಿಚ್ಛೇದ ಕಾನೂನುಗಳಿಂದಾಗುವ ಹಾವಳಿ ಕಂಡವರು

ಹಿಂದೂ ಸಮಾಜಕ್ಕೆ ಇಂಥ ಕಾನೂನು ಎಂದಿಗೂ ಬೇಡವೆನ್ನುವವರಿದ್ದಾರೆ. ಮಾತ್ರವಲ್ಲ ನಮ್ಮ ಸಾಮಾಜಿಕ ಪದ್ಧತಿಗಳೆಂದರೆ ನಮ್ಮ ಧರ್ಮಕ್ಕೆ ಸಂಬಂಧಪಟ್ಟ ವಿಷಯಗಳು ಇವುಗಳಲ್ಲಿ ಸರಕಾರದ ಶಾಸನ ಸಭೆಯವರು ಕೈ ಹಾಕುವಂತಾದರೆ ಧರ್ಮನಾಶವಾಗುತ್ತದೆ ಎನ್ನುವವರೂ ಇದ್ದಾರೆ.

ಇಂಥ ಧರ್ಮಸ್ವಾತಂತ್ರ್ಯದ ಕೂಗಿನಲ್ಲಿ ಹೆಚ್ಚಿನ ತಿರುಳಿಲ್ಲವೆಂದು ಈ ಮೊದಲು ಎಷ್ಟೋ ಬಾರಿ ರುಜುವಾಗಿರುತ್ತದೆ. ಸಮಾಜದಲ್ಲಿ ಜೀವವಿಲ್ಲದೆ ಅದು ತಾನಾಗಿ ಸುಧಾರಿತವಾಗುವ ಪರಿಸ್ಥಿತಿ ಇಲ್ಲದಿರುವಾಗ ಜನರ ಪ್ರತಿನಿಧಿಗಳೇ ಆದ ಶಾಸನ ಸಭೆಯವರಾದರೂ ಇಂಥ ಸುಧಾರಣೆಗಳನ್ನು ತಂದೊಡ್ಡುವುದರಲ್ಲಿ ಅನ್ಯಾಯವೇನೂ ಇರುವುದಿಲ್ಲ. ವಿವಾಹ ವಿಚ್ಛೇದವೆಂದೊಡನೆ ಗಾಬರಿಗೊಳ್ಳುವ ಆವಶ್ಯಕತೆಯೂ ಇರುವುದಿಲ್ಲ. ಅಸಾಧ್ಯ ದಾಂಪತ್ಯಕ್ಕಿಂತ ವಿವಾಹ ವಿಚ್ಛೇದವು ಹೆಚ್ಚು ಧಾರ್ಮಿಕವೆಂಬ ಬಗ್ಗೆ ಅನುಮಾನವೇಕೆ? ಈ ವಿಚ್ಛೇದ ಕಾನೂನು ಈ ದೇಶದಲ್ಲಿ ದುರುಪಯೋಗಕ್ಕೆ ಒಳಗಾದೀತೆಂದು ಎಣಿಸಲು ಕಾರಣವಿಲ್ಲ. ಪಾಶ್ಚಾತ್ಯರ ಪರಿಸ್ಥಿತಿಗೂ ಇಲ್ಲಿಯ ಪರಿಸ್ಥಿತಿಗೂ ತಾರತಮ್ಯವಿದೆಯೆಂದು ಎಲ್ಲರೂ ಒಪ್ಪುವರಷ್ಟೆ?

ಈ ಸಂದರ್ಭದಲ್ಲಿ ಒಂದು ಮಾತು ಮಾತ್ರ ಹೇಳತಕ್ಕದ್ದಿರುತ್ತದೆ. ಇಂಥ ಸುಧಾರಣಾ ಕಾನೂನುಗಳಲ್ಲಿ ಸ್ತ್ರೀಯರ ಹಾಗೂ ಪುರುಷರ ಹಕ್ಕು ಬಾಧ್ಯತೆಗಳನ್ನು ಸಮವಾಗಿ ಇರಿಸುವುದು ಅಗತ್ಯವಿರುತ್ತದೆ. ಮಾತ್ರವಲ್ಲ ಇಂಥ ಕಾನೂನುಗಳನ್ನು ಅವಸರದಲ್ಲಿ ಮುಂದೊತ್ತದೆ ಸಾಕಷ್ಟು ಜನಬಲವಿದ್ದರೆ ಮಾತ್ರ ಮುಂದೊತ್ತಬೇಕು. ಅನುಕೂಲ ಪ್ರಜಾಭಿಪ್ರಾಯವಿದ್ದರೆ ಮಾತ್ರ ಇಂಥ ಸಾಮಾಜಿಕ ಕಾನೂನುಗಳು ಸಾರ್ಥಕವಾಗುವವು.

ಹೈದರಾಬಾದಿನ ಧೋರಣೆ ಏನು?

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಮರ ವಿಜಯಿಯಾದುದು ಕನ್ನಡಿಗರೆಲ್ಲರಿಗೂ ಸಂತೋಷದ ವಿಚಾರವೆಂಬುದನ್ನು ಕಳೆದ ಬಾರಿ ಹೇಳಲಾಯಿತಷ್ಟೆ. ಈ ಸಂತೋಷವನ್ನು ಕಟ್ಟಿಕೊಂಡು ಕನ್ನಡಿಗರು ವಿರಮಿಸಿಕೊಂಡಿರುವುದು ಸರಿಯಲ್ಲ. ಹೈದರಾಬಾದು ಸಂಸ್ಥಾನದ ಪ್ರಶ್ನೆಯೂ ನಮಗೆಲ್ಲರಿಗೂ ನಿಕಟ ಸಂಬಂಧವುಳ್ಳ ಪ್ರಶ್ನೆಯೆಂದು ವಿವರಿಸುವ ಅಗತ್ಯವಿಲ್ಲ. ಈ ಸಂಸ್ಥಾನದಲ್ಲಿಯ ಪರಿಸ್ಥಿತಿ ನಿಜವಾಗಿಯೂ ಚಿಂತಾಜನಕವಿರುತ್ತದೆ. ಹೈದರಾಬಾದು ಸಂಸ್ಥಾನದವರು ಹಿಂದೀ ಸರಕಾರದ ಆಶ್ರಯವನ್ನು ಸ್ವೀಕರಿಸಲು ಇನ್ನೂ ಒಪ್ಪಿಗೆ ಕೊಟ್ಟಿಲ್ಲ. ಆಶ್ರಯವೆಂದು ಹೇಳಬೇಕೆಂದಿಲ್ಲ. ಒಂದು ಬಗೆಯ ಒಪ್ಪಂದವೆಂದಾದರೂ ಮಾಡಿಕೊಳ್ಳೋಣವೆಂಬ ಧೋರಣೆಯನ್ನು ಹಿಂದೀ ಸರಕಾರವು ಮುಂದಿಟ್ಟು ಈಗ ಮಾತುಕತೆಗಳು ನಡೆಯುತ್ತಿವೆ. ಹಿಂದೀ ಸರಕಾರಕ್ಕೂ ಸಂಸ್ಥಾನಗಳಿಗೂ ಕಲ್ಪಿಸಲಾಗುತ್ತಿರುವ ಸಂಬಂಧ ಕೇವಲ ರಹದಾರಿ, ಸೈನ್ಯ ಖಾತೆ ಮತ್ತು ಪರಕೀಯ ಧೋರಣೆ ಈ ಮೂರು ವಿಷಯಗಳಲ್ಲಿ ಮಾತ್ರವಿರುತ್ತದೆ. ಹಿಂದೀ ಸರಕಾರಕ್ಕೆ ಸೇರಿದ ಪ್ರದೇಶದ ನಡುವೆ ಇರುವ ಸಂಸ್ಥಾನಗಳು ಈ ಮೂರು ವಿಚಾರಗಳಲ್ಲಿ ಹಿಂದೀ ಸರಕಾರಕ್ಕೆ ಅಧಿಕಾರ ಕೊಡದೆ ನಿವೃತ್ತಿ ಇಲ್ಲ. ಅಂತೂ ಈಗ ಈ ಕುರಿತು ಹೈದರಾಬಾದು ಸಂಸ್ಥಾನದೊಡನೆ ನಡೆಯುತ್ತಿರುವ ಮಾತುಕತೆಗಳು ಯಶಸ್ವಿಯಾಗಿ ಕೊನೆಗೊಳ್ಳಲೆಂದು ಆಶಿಸಬೇಕಾಗಿದೆ.

ಈ ತನ್ಮಧ್ಯೆ ಹೈದರಾಬಾದಿನಲ್ಲಿ ಮುಸ್ಲೀಮ ಪ್ರಜೆಗಳ ಸಂಖ್ಯೆ ಹೆಚ್ಚಿಸುವ ಒಂದು ವಿಶೇಷ ಯತ್ನ ನಡೆಸಲಾಗುತ್ತಿದೆಯೆಂಬ ವಾರ್ತೆಯೊಂದು ಪ್ರಕಟವಾಗಿರುತ್ತದೆ. ಇತರ ಕಡೆಗಳಲ್ಲಿ ನಿಜವಾಗಿ ಸಂಕಷ್ಟಕ್ಕೊಳಗಾದ ಅಥವಾ ಸಂಕಷ್ಟದ ಹೆದರಿಕೆಗೆ ಒಳಗಾದ ಮುಸ್ಲೀಮ ಪ್ರಜೆಗಳಿಗೆ ಆಶ್ರಯ ಕೊಡುವ ಧೋರಣೆ ಮಾತ್ರವಿದ್ದರೆ ಇದು ಸಹಜವಿದ್ದು ಯೋಚನೆಪಡುವ ಅಗತ್ಯವಿದ್ದಿಲ್ಲ. ಇದು ಹಾಗಿರದೆ ಇತರಕಡೆ ತೃಪ್ತರಾಗಿರುವ ಜನರಿಗೆ ಇಲ್ಲದ ಲೋಭ ತೋರಿಸಿ ಅವರು ಹೈದರಾಬಾದಿಗೆ ಹೋಗುವಂತೆ ಪ್ರೇರೇಪಿಸುವ ಒಂದು ಚಳವಳ ನಡೆಯುತ್ತಿದೆಯೆಂದು ತಿಳಿದುಬರುತ್ತದೆ. ಈ ರೀತಿ ಮುಸ್ಲೀಮರು ಸಮುದಾಯವಾಗಿ ಹೈದರಾಬಾದಿಗೆ ಹೋಗುವುದನ್ನು ತಡೆಗಟ್ಟಲು ಹಿಂದೀ ಸರಕಾರದವರು ಅವಶ್ಯವುಳ್ಳ ಕಾರ್ಯ ಕೈಕೊಂಡರೆ ತಪ್ಪೇನೂ ಇರುವುದಿಲ್ಲ.

ಇವೆಲ್ಲಕ್ಕಿಂತ ಮುಖ್ಯ ಪ್ರಶ್ನೆಯೆಂದರೆ ಹೈದರಾಬಾದಿನಲ್ಲಿ ಪ್ರಜಾ ಜವಾಬ್ದಾರಿಯುಳ್ಳ ಸರಕಾರದ ಸ್ಥಾಪನೆ. ಈ ಬಗ್ಗೆ ನಡೆಯುತ್ತಿರುವ ಚಳವಳವನ್ನು ಮೈಸೂರಿನಲ್ಲಿ ನಡೆದುದಕ್ಕಿಂತಲೂ ಎಷ್ಟೋ ಬಾರಿ ಹೆಚ್ಚಿನ ದಬ್ಬಾಳಿಕೆಯಿಂದ ಹತ್ತಿಕ್ಕುವ ಯತ್ನಗಳು ನಡೆಯುತ್ತಿವೆ. ಈ ದಬ್ಬಾಳಿಕೆಯನ್ನು ಎದುರಿಸಿ ಈ ಸಂಸ್ಥಾನದಲ್ಲಿಯೂ ಜವಾಬ್ದಾರಿ ಸರಕಾರದ ಸ್ಥಾಪನೆಯಾದರೆ ಉಳಿದ ಎಲ್ಲ ಪ್ರಶ್ನೆಗಳೂ ತಾವಾಗಿ ಬಿಡಿಸಲ್ಪಡುವವು. ಆದುದರಿಂದ ಹೈದರಾಬಾದಿನಲ್ಲಿಯ ಸ್ವಾತಂತ್ರ್ಯ ಸಮರಕ್ಕೆ ಅಖಿಲ ಕರ್ನಾಟಕವು ಒಮ್ಮನಸ್ಸಿನಿಂದ ಸಹಾಯ ಮಾಡಬೇಕಾಗಿದೆ. ಮೈಸೂರು ಸಮರ ವಿಜಯಿಯಾದಂತೆ ಇಲ್ಲಿಯೂ ಕೊನೆಗೆ ವಿಜಯ ಪ್ರಾಪ್ತಿಯಾಗುವುದು ನಿಶ್ಚಯ. ಆದರೆ ಇಲ್ಲಿ ಹೆಚ್ಚಿನ ತ್ಯಾಗ ಹಾಗೂ ಪ್ರಯತ್ನಗಳು ಬೇಕಾಗುವವೆಂಬುದನ್ನು ಮರೆಯಲಾಗದು.

ನಾಡಹಬ್ಬದ ಆಚರಣೆ

ನವರಾತ್ರಿಯ ಅಥವಾ ದಸರೆಯ ಈ ದಿನಗಳನ್ನು ಕನ್ನಡಿಗರು ಇತ್ತೀಚೆಗೆ ನಾಡಹಬ್ಬವಾಗಿ ಪುನರುತ್ಥಾನಗೊಳಿಸಲು ಯತ್ನಿಸುತ್ತಿರುವರಷ್ಟೆ. ಈ ಕುರಿತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ರೀ। ಶಿವರಾಮ ಕಾರಂತರ ಉತ್ಸಾಹದಿಂದಾಗಿ ಪುತ್ತೂರು ಇದರಲ್ಲಿ ಮೊದಲ ಹೆಜ್ಜೆಯಿಟ್ಟಿತು. ಈ ಉದಾಹರಣೆಯನ್ನು ಜಿಲ್ಲೆಯ ಇತರ ಭಾಗದವರೂ ಅನುಸರಿಸುತ್ತಿರುವರು. ಇತ್ತೀಚೆಗೆ ಈ ಕಾರ್ಯಕ್ರಮವು ಉಡುಪಿಯಲ್ಲಿ ವಿಶೇಷ ಉತ್ಸಾಹದಿಂದ ಆಚರಿಸಲ್ಪಡುತ್ತಿರುವುದು ಅಭಿನಂದನೀಯವಿರುತ್ತದೆ. ಬದಿಯಡ್ಕ, ಮಂಗಳೂರು ಮೊದಲಾದೆಡೆಗಳಲ್ಲಿಯೂ ಇಂಥ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ. ಈ ಉತ್ಸವವು ಇನ್ನೂ ಹೆಚ್ಚಿನ ವ್ಯವಸ್ಥೆಯಿಂದ ಸಾರ್ವತ್ರಿಕವಾಗಿ ಆಚರಿಸಲ್ಪಡುವಂತೆ ಯತ್ನಿಸುವುದು ಸಾಧ್ಯವಾಗಬಹುದು. ಯಾಕೆಂದರೆ ನವರಾತ್ರಿಯ ಉತ್ಸವಗಳು ನಮ್ಮ ಜನರಿಗೆ ಹೊಸ ವಿಷಯವಲ್ಲ. ಈ ಕುರಿತು ಹಲವು ಸಂಪ್ರದಾಯ ರೀತ್ಯಾ ಬಂದ ಆಚಾರಗಳು ನಮ್ಮ ಜಿಲ್ಲೆಯಲ್ಲಿಯೂ ಪ್ರಚಾರದಲ್ಲಿವೆ. ಈ ಹಳೆಯ ಆಚರಣೆಗಳನ್ನು ಹೊಸ ಕಾರ್ಯಕ್ರಮಗಳೊಡನೆ ಜೊತೆಗೂಡಿಸಿದರೆ ಈಗ ಕೆಲವೆಡೆ ನಡೆಸಲ್ಪಡುತ್ತಿರುವ ಬಗೆಯ ಸಾಹಿತ್ಯೋತ್ಸವಗಳನ್ನು ಸಾರ್ವತ್ರಿಕವಾಗುವಂತೆ ಸಾಧಿಸಬಹುದು. ಇದಕ್ಕೆ ಬೇರೆ ಬೇರೆ ಕೇಂದ್ರಗಳಲ್ಲಿ ಸ್ವತಂತ್ರವಾಗಿ ತಮ್ಮ ತಮ್ಮ ಕಾರ್ಯಕ್ರಮಗಳನ್ನು ನಡೆಸುವವರು ಒಂದುಗೂಡಿ ವಿಚಾರವಿನಿಮಯ ಮಾಡುವುದು ಅಗತ್ಯವೆನ್ನಿಸುತ್ತದೆ. ಸದ್ಯದಲ್ಲಿ ಬರಲಿರುವ ಕಾಸರಗೋಡಿನಲ್ಲಿಯ ಸಾಹಿತ್ಯ ಪರಿಷತ್ತಿನ ಸಂದರ್ಭವನ್ನು ಉಪಯೋಗಿಸಿಕೊಂಡು ನಾಡಹಬ್ಬದ ಒಂದು ಸಾರ್ವತ್ರಿಕ ಕಾರ್ಯಕ್ರಮವನ್ನು ರೂಪಿಸುವ ಪ್ರಯತ್ನ ಮಾಡಬಹುದಾಗಿ ಈ ಸಂದರ್ಭದಲ್ಲಿ ಸೂಚಿಸ ಬಯಸುತ್ತೇವೆ.

ಅಸ್ಪೃಶ್ಯತೆ ಹಿಂದೂಧರ್ಮದ ಮೇಲಿನ ಕಲಂಕ

ಅಸ್ಪೃಶ್ಯತಾ ನಿವಾರಣೆಯ ಚಳವಳ ಈಗ ಮೂವತ್ತು ವರ್ಷಗಳಿಂದ ಮಹಾತ್ಮಾಗಾಂಧಿಯವರ ಮುಂದಾಳ್ತನದಲ್ಲಿ ಸತತವಾಗಿ ನಡೆದಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸುಧಾರಣೆಗಾಗಿ ತಮ್ಮ ಜೀವಮಾನವನ್ನೇ ಅರ್ಪಿಸಿ ದಿವಂಗತ ಕುದ್ಮುಲ ರಂಗರಾಯರು, ಪಡಮುನ್ನೂರು ರಾಮಚಂದ್ರರಾಯರು, ಕಾರ್ನಾಡು ಸದಾಶಿವರಾಯರೇ ಮೊದಲಾದ ಅನೇಕ ಮಂದಿ ಮಹನೀಯರು ದುಡಿದಿದ್ದಾರೆ. ಇಷ್ಟಾದರೂ ಈ ಅಸ್ಪೃಶ್ಯತೆಯು ಇನ್ನೂ ನಮ್ಮ ಜಿಲ್ಲೆಯಲ್ಲಿ ಮಾಯವಾಗದಿರುವುದು ನಿಜವಾಗಿಯೂ ಖೇದಜನಕವಿರುತ್ತದೆ.

ಅಖಿಲ ಹಿಂದುಸ್ಥಾನದಲ್ಲಿ ದೇಶದ ಹಾಗೂ ಸಮಾಜದ ಮುಂದಾಳುಗಳೆನ್ನಿಸುವವರೆಲ್ಲ ಈಗ ಅಸ್ಪೃಶ್ಯತೆಯು ಹಿಂದೂ ಧರ್ಮದ ಮೇಲಿನ ಒಂದು ದೊಡ್ಡ ಕಳಂಕವೆಂದೂ ಹಿಂದೂ ಧರ್ಮವು ಉಳಿಯಬೇಕಾದರೆ ಈ ಅಸ್ಪೃಶ್ಯತೆಯೆಂಬ ಕ್ರೂರ ಪದ್ಧತಿಯನ್ನು ಸಂಪೂರ್ಣವಾಗಿ ಕಿತ್ತೊಗೆಯಬೇಕೆಂದೂ ಒಪ್ಪುತ್ತಾರೆ. ದಕ್ಷಿಣ ಹಿಂದುಸ್ಥಾನದಲ್ಲಿ ಕೂಡ ತಿರುಪತಿ ರಾಮೇಶ್ವರ, ಮಧುರೆ, ಶ್ರೀರಂಗ ಮೊದಲಾದ ಪ್ರಸಿದ್ಧ ಧರ್ಮಕ್ಷೇತ್ರಗಳಲ್ಲೆಲ್ಲ ಕೂಡಾ ಹರಿಜನರಿಗೆ ಪ್ರವೇಶ ದೊರಕಿರುತ್ತದೆ. ಇಷ್ಟಾದರೂ ನಮ್ಮ ಜಿಲ್ಲೆಯಲ್ಲಿ ಇನ್ನೂ ಈ ಅಸ್ಪೃಶ್ಯತೆಯೆಂಬುದು ನಮ್ಮ ಧರ್ಮವೆಂಬ ಭಾವನೆ ಇನ್ನೂ ಅಲ್ಲಲ್ಲಿ ಉಳಿದಿರುವುದೇಕೆ?

ಇದು ನಮ್ಮಲ್ಲಿ ಇತರ ಎಲ್ಲಾ ಕಡೆಗಿಂತ ಹೆಚ್ಚಾಗಿ ಧರ್ಮಪ್ರೇಮವುಳ್ಳವರಿರುತ್ತಾರೆಂದು ಸೂಚಿಸುತ್ತದೆಯೆ? ಅಥವಾ ನಮ್ಮಲ್ಲಿ ಈ ಕುರಿತು ಸರಿಯಾಗಿ ವಿಚಾರಿಸುವಷ್ಟು ಧರ್ಮಜಾಗ್ರತಿ ಇಲ್ಲವೆಂದು ಸೂಚಿಸುತ್ತದೆಯೋ ಎಂಬುದನ್ನು ಪರಿಶೀಲಿಸಬೇಕಾಗಿದೆ. ಅಸ್ಪೃಶ್ಯತಾ ನಿವಾರಣ ಹಾಗೂ ಹರಿಜನರ ದೇವಸ್ಥಾನ ಪ್ರವೇಶ ಇವು ಒಂದು ರಾಜಕೀಯ ಕಾರ್ಯಕ್ರಮವೆಂದೂ ರಾಜಕೀಯ ಕಾರಣಗಳಿಂದಾಗಿ ದೇಶದ ಮುಂದಾಳುಗಳು ಇದನ್ನು ಮುಂದೊತ್ತಿರುವರೆಂದೂ ಈಗ ರಾಜಕೀಯ ಅಧಿಕಾರ ಇವರ ಕೈಸೇರಿರುವುದರಿಂದ ಆ ಅಧಿಕಾರ ಬಲದಿಂದ ದೇವಸ್ಥಾನ ಪ್ರವೇಶ ಇತ್ಯಾದಿಗಳನ್ನು ಜಾರಿಗೆ ತರುತ್ತಿದ್ದಾರೆಂದೂ ನಮ್ಮಲ್ಲಿಯ ಧಾರ್ಮಿಕ ಮುಂದಾಳುಗಳೂ ಗುರುಜನರೂ ಭಾವಿಸಿರುವಂತೆ ಕಾಣುತ್ತದೆ. ಇದು ಸರಿಯಾದ ಅಭಿಪ್ರಾಯವಲ್ಲ. ಮಹಾತ್ಮಾ ಗಾಂಧಿಯವರು ಅಸ್ಪೃಶ್ಯತೆಯೆಂಬುದು ಸನಾತನ ಹಿಂದೂ ಧರ್ಮಕ್ಕೆ ವಿರುದ್ಧವೆಂಬುದರಿಂದಲೇ ಅದನ್ನು ನಿವಾರಿಸಲು ಹೆಣಗುತ್ತಿದ್ದಾರಲ್ಲದೆ ಕೇವಲ ರಾಜಕೀಯ ಉದ್ದೇಶದಿಂದಾಗಿ ಅಲ್ಲ. ಆದುದರಿಂದ ಕೇವಲ ಧರ್ಮದ ದೃಷ್ಟಿಯಿಂದಲೇ ಈ ಪ್ರಶ್ನೆಯನ್ನು ವಿವೇಚಿಸುವುದು ಯೋಗ್ಯವೇ ಇರುತ್ತದೆ.

ಪ್ರಾಣಿವರ್ಗದೆಡೆಗೆ ಕೂಡಾ ಅಹಿಂಸೆಯನ್ನು ಬೋಧಿಸುವ ಹಿಂದೂ ಧರ್ಮವು ಮನುಷ್ಯವರ್ಗದವರನ್ನು ಇಷ್ಟು ಕ್ರೂರವಾಗಿ ನಡೆಸಬೇಕೆಂದು ಎಂದೂ ಉಪದೇಶಿಸುವಂತಿಲ್ಲವೆಂಬುದೇ ಗಾಂಧೀಜಿಯವರ ಮುಖ್ಯವಾದವಿರುತ್ತದೆ. ಅಖಿಲ ಹಿಂದುಸ್ಥಾನದಲ್ಲಿ ಅದೆಷ್ಟೋ ಮಂದಿ ಪ್ರೊಫೆಸರ್ ಧ್ರುವರಂತಹ ವಿದ್ವಾಂಸರು ಹಿಂದೂ ಧರ್ಮದಲ್ಲಿ ಈ ಅಸ್ಪೃಶ್ಯತೆಗೆ ಯಾವ ಸ್ಥಾನವೂ ಇಲ್ಲವೆಂದು ಕಂಠೋಕ್ತವಾಗಿ ಹೇಳಿರುತ್ತಾರೆ. ಪಂಡಿತ ಮಾಳವೀಯರಂಥ ಶುದ್ಧ ಸನಾತನೀ ಹಿಂದೂ ಮುಂದಾಳುಗಳು ಗಾಂಧೀಜಿಯವರ ಅಭಿಪ್ರಾಯ ಸರಿಯೆಂದು ಒಪ್ಪಿದ ಮೇಲೆ ಮತ್ತೆಯೂ ಈ ವಿಚಾರದಲ್ಲಿ ಸಂಶಯವೇತಕ್ಕೆ?

ನಮ್ಮ ಸ್ಮೃತಿಗಳಲ್ಲಿ ಅಲ್ಲಲ್ಲಿ ಅಸ್ಪೃಶ್ಯತೆಯ ಕುರಿತು ಮಾತುಗಳಿಲ್ಲವೆಂದಾದರೂ ನಾವು ಹೇಳುತ್ತಿಲ್ಲ. ಸ್ಮೃತಿಗಳಲ್ಲಿ ಹೇಳಿದ ಮಾತುಗಳೆಲ್ಲವೂ ತ್ರಿಕಾಲಾಬಾಧಿತ ಧರ್ಮವೆಂದು ಯಾವ ಪಂಡಿತರೂ ವಾದಿಸುವುದಿಲ್ಲವಷ್ಟೆ? ಧರ್ಮದ ಮೂಲ ತತ್ವಗಳು ಮಾತ್ರ ತ್ರಿಕಾಲಾಬಾಧಿತಗಳಷ್ಟೆ ಇದ್ದು ಅವುಗಳ ಆಧಾರದಿಂದ ಆಯಾ ದೇಶ ಕಾಲ ಪರಿಸ್ಥಿತಿಗೆ ತಕ್ಕಂತೆ ರಚಿಸಿದ ಆಚಾರಗಳು ದೇಶ ಕಾಲ ಪರಿವರ್ತನದೊಂದಿಗೆ ಪರಿವರ್ತನಗೊಂಡತಕ್ಕವುಗಳು. ಸತ್ಯ ಅಹಿಂಸೆ ಪ್ರೇಮ ಇಂಥ ಮೂಲ ತತ್ವಗಳು ಎಂದೂ ಏಕಪ್ರಕಾರ ಉಳಿಯುವಂಥವು. ಸಮಾಜದ ಆಚಾರಗಳೆಲ್ಲ ಏಕಪ್ರಕಾರವಾಗಿ ಯಾವ ಕಾಲಕ್ಕೂ ಉಳಿಯುವಂಥವುಗಳಾದರೆ ಭಿನ್ನ ಸ್ಮೃತಿಗಳ ಅವಶ್ಯಕತೆಯೇ ಉಳಿಯುತ್ತಿರಲಿಲ್ಲವಷ್ಟೆ?

ಧರ್ಮದ ಮೂಲ ತತ್ವಗಳ ಅನುಷ್ಠಾನದ ಬಗೆಗೆ ಸರಿಯಾದ ಆಚಾರಗಳನ್ನು ಆಯಾ ಕಾಲಕ್ಕೆ ಸರಿಯಾಗಿ ರೂಪಿಸಿಕೊಳ್ಳುವುದು ಸಾಧ್ಯ. ಇಂಥ ಅನುಷ್ಠಾನವಿದ್ದುದರಿಂದಲೇ ಮಹಾತ್ಮಾ ಗಾಂಧೀಯವರಿಗೆ ಈ ಧಾರ್ಮಿಕ ಸುಧಾರಣೆಯನ್ನು ಮುಂದೊತ್ತಲು ಬೇಕಾದ ಅಧಿಕಾರ ಪ್ರಾಪ್ತವಾಗಿರುತ್ತದೆ. ಇದನ್ನು ಸರಿಯಾಗಿ ತಿಳಿದುಕೊಂಡು ಅಸ್ಪೃಶ್ಯತೆಯು ಆಚಾರ ಧರ್ಮಬಾಹಿರವೆಂದು ನಮ್ಮ ಧರ್ಮಗುರುಗಳು ಸ್ಪಷ್ಟವಾಗಿ ಒಪ್ಪಿಕೊಳ್ಳುವುದು ಎಲ್ಲರ ದೃಷ್ಟಿಯಿಂದಲೂ ಶ್ರೇಯಸ್ಕರವಿರುತ್ತದೆ.

ಇದಕ್ಕೆ ಬದಲು ತಾವು ಹೇಳಿದ್ದೇ ಧರ್ಮವೆಂದು ಹಟ ಹಿಡಿದು ಕುಳಿತರೇ ನಮ್ಮ ಧರ್ಮಪೀಠಗಳೇ ಉರುಳಿ ಹೋಗುತ್ತಾವೆಂಬ ಬಗ್ಗೆ ಎಳ್ಳಷ್ಟೂ ಸಂಶಯ ಬೇಡ. ಅಂಥ ಪರಿಸ್ಥಿತಿಗೆ ಆಸ್ಪದ ಕೊಡದೆ ತಮ್ಮಲ್ಲಿ ಸಾಕಷ್ಟು ಧರ್ಮಜಾಗ್ರತಿ ಉಂಟೆಂಬುದನ್ನು ತೋರಿಸಿಕೊಟ್ಟು ಅಸ್ಪೃಶ್ಯತೆಯೆಂಬ ಈ ಕಲಂಕವನ್ನು ಹೋಗಲಾಡಿಸಿ ಹಿಂದೂ ಧರ್ಮದ ಪಾವಿತ್ರ್ಯವನ್ನು ಅವರು ರಕ್ಷಿಸಬೇಕಾಗಿರುತ್ತದೆ. ನಮ್ಮ ಪುಣ್ಯಕ್ಷೇತ್ರಗಳಲ್ಲಿ ದೇವಸ್ಥಾನಗಳಲ್ಲಿ ಯಾವ ದಿನ ಹರಿಜನರಿಗೆ ಪ್ರವೇಶ ಕೊಟ್ಟು ಆ ಸ್ಥಾನಗಳು ನಿಜವಾದ ಧರ್ಮದ ಕ್ಷೇತ್ರಗಳಾಗುವವೋ ಅಂದು ನಮ್ಮಲ್ಲಿಂದ ಈ ದುರಾಚಾರವು ತೊಲಗಿತೆಂದು ತಿಳಿಯಬೇಕು. ಅಲ್ಲಿಯ ತನಕ ನಮ್ಮಲ್ಲಿಯ ಹರಿಜನ ಸೇವಾ ಸಂಘದ ಹಾಗೂ ಕಾಂಗ್ರೆಸಿಗರ ಹಾಗೂ ಸನಾತನಿ ಹಿಂದುಗಳ ಕರ್ತವ್ಯ ಪೂರ್ಣವಾಗುತ್ತದೆಂದು ತಿಳಿಯಲಾಗದು.

ಜನತಾ ಮುಖಂಡರಿಲ್ಲದ ಪಾಕಿಸ್ತಾನ

ಅಮೇರಿಕನ್ ಪತ್ರಿಕೋದ್ಯಮಿಯ ವರದಿ

ಜನತೆ ಮತ್ತು ಮುಖಂಡರೊಳಗೆ ಕಲಹ ಖಂಡಿತ

ಅಮೇರಿಕನ್ ವರ್ತಮಾನ ಸಂಗ್ರಹಕಾರದ ಎಂಡ್ರ್ಯೂರೊಸ್ ಎಂಬ ಅನುಭವಸ್ಥ ರಾಜಕೀಯ ನಿರೀಕ್ಷಕರು ಈಗಾಗಲೇ ಭಾರತೀಯ ಜನಾಂಗ ಜೀವನದ ಹಲವು ಸಮಸ್ಯೆಗಳ ಕುರಿತು ವಿಚಾರಪರ ವರದಿ ವಿಮರ್ಶೆಗಳನ್ನು ಪ್ರಕಟಿಸಿದ್ದಾರೆ. ನೂತನ ರಾಜ್ಯವಾದ ಪಾಕಿಸ್ತಾನದ ಕುರಿತು ಅವರು ಪರಿಶೀಲಿಸಿದ ಸಂಗತಿಗಳ ವಿವರದ ಸಾರಾಂಶ ಈ ಕೆಳಗೆ ಕೊಡಲಾಗಿದೆ:

ಜಿನ್ನರು ಪಾಕಿಸ್ತಾನವನ್ನು ಅತೀ ದೊಡ್ಡ ಮುಸ್ಲಿಂ ರಾಜ್ಯವೆಂದೂ . . . . . ಐದನೇ ದೊಡ್ಡ ಸ್ವತಂತ್ರ ರಾಜ್ಯವೆಂದೂ ವರ್ಣಿಸಿರುವರು. ಅವರಭಿಪ್ರಾಯಗಳು ಅದೆಷ್ಟು ಚರ್ಚಾಸ್ಪದವಿದ್ದರೂ ಈ ಹೊಸ ರಾಜ್ಯವು ಎಂಗ್ಲೋ-ಅಮೇರಿಕನ್ ಮತ್ತು ರಶ್ಯನ್ನರ ಕುಹಕ ರಾಜಕೀಯ ಸಂಧಿಗ್ಧ ಗಡಿಯಲ್ಲಿರುವುದಾದ್ದರಿಂದ ಇದಕ್ಕೊಂದು ವಿಶಿಷ್ಟ ಮಹತ್ವ ಬಂದಿರುತ್ತದೆಂಬ ಸಂಗತಿಯು ನಿರ್ವಿವಾದ.

ಪಾಕಿಸ್ತಾನದ ಭವಿಷ್ಯವನ್ನು ಹೇಳುವುದು ಕಷ್ಟಕರ ಕಾರಣ ಅದು ನಿರ್ಮಾಣವಾದ ಸಂದರ್ಭಗಳೂ ಅದನ್ನೆದುರಿಸಿರುವ ಸಮಸ್ಯೆಗಳೂ ವಿಶೇಷ ಲಕ್ಷಣದವಾಗಿವೆ. ಸದ್ಯಕ್ಕೆ ಇದು ಇರಾಕಿನ ಪರಿಸ್ಥಿತಿಗೆ ಹೋಲುತ್ತದೆ. ಅದರ ವಿಧಿಯು ಕೆಲವೇ ವರಿಷ್ಟ ಮುಖಂಡರ ಕೈಯಲ್ಲಿದ್ದು ಶಕ್ತಿವಂತರಾದ ಕಛೇರಿ ಅಧಿಕಾರಿ ವರ್ಗವು ಅದರ ಆಳ್ವಿಕೆಯನ್ನು ನಡೆಸುತ್ತದೆ ಮಾತ್ರವಲ್ಲ ವಿದೇಶಾಂಗ ಧೋರಣೆಯ ಮಟ್ಟಿಗೂ, ಆರ್ಥಿಕ ವಿಚಾರದಲ್ಲೂ ಮತ್ತು ರಕ್ಷಣೆಯ ವಿಚಾರದಲ್ಲೂ ಪಾಕಿಸ್ತಾನವು ಬ್ರಿಟನಿನ ಮೇಲೆ ಹೊಂದಿಕೊಂಡಿದೆ. ಹೊಸತಾಗಿ ರಚಿತವಾದ ಅದರ ಸರಕಾರವು ಲಂಚಗುಳಿತನದ ಮತ್ತು ಪಕ್ಷಪಾತದ ಆರೋಪಕ್ಕೊಳಗಾಗಿದೆ. ಪಾಕಿಸ್ತಾನದ ಸಾಮಾಜಿಕ ವ್ಯವಸ್ಥೆಯು ಇಸ್ಲಾಂ ಧರ್ಮಸೂತ್ರಕನ್ವಯ ರಚಿತವಾಗಿದ್ದು ಅಲ್ಲಿನ ಮಹಿಳಾ ವರ್ಗವು ಅತ್ಯಂತ ಹಿಂದಿನ ಮಟ್ಟದಲ್ಲಿದೆ ಆದರೆ ಪಾಕಿಸ್ತಾನವನ್ನು ಹೊಸ ರೂಪರೇಖೆಗಳ ಮೇಲೆ ರಚಿಸಲೂ ಅಲ್ಲಿ ಈಗ ಪ್ರಯತ್ನಗಳಾಗುತ್ತಿವೆ

ಶ್ರೀಮಂತ ಇಲ್ಲವೆ ಬಡದೇಶವೊ?

ತಮ್ಮ ದೇಶಕ್ಕೆ ಅಗಾಧ ಪ್ರಮಾಣದ ಪ್ರಾಕೃತಿಕ ಅನುಕೂಲತೆಗಳಿವೆಯೆಂದು ಜಿನ್ನರು ಹೇಳಿಕೊಳ್ಳುವುದರಲ್ಲಿ ಸ್ವಲ್ಪ ವಿಶೇಷಣವು ಹೆಚ್ಚಿದೆ ಈಗ ಅಲ್ಲಿನ ಜನಜೀವನ ಮಟ್ಟವು ಅತೀ ನಿಕೃಷ್ಟ ಮಟ್ಟದಲ್ಲಿರುವುದರಿಂದ ಪ್ರಸ್ತುತದಲ್ಲಿ ಅಲ್ಲಿನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬಹುದೇನೊ ನಿಜ. 1933ರ ಜರ್ಮನಿಯಂತೆ ಅಲ್ಲಿ 7 ಕೋಟಿ ಶ್ರಮಜೀವಿಗಳಿದ್ದಾರೆ ಕೃಷಿಪ್ರಧಾನ ಆಹಾರ ವಸ್ತುಗಳೂ ಅಲ್ಲಿನ ಜನತೆಗೆ ಸಾಕಾಗಿ ಮಿಗುವಷ್ಟಿವೆಯೆಂಬ ಸಂಗತಿಯೂ ಒಪ್ಪಬೇಕಾದುದೇ. ಕೆಲವು ನಿರಾಶಾವಾದಿ ಲೀಗ್ ತರುಣರು ಅದನ್ನು ಕಾಕೀಸ್ತಾನ್ (ಮರುಭೂಮಿ ಪ್ರದೇಶ) ವೆನ್ನುತ್ತಾರೆ. ಕಾರಣ ಕೈಗಾರಿಕೆಯ ಮಟ್ಟಿಗೆ ಅದು ತುಂಬಾ ಹಿಂದಿದೆಯೆಂದು ಅವರ ಕಳಕಳಿ. ಅಲ್ಲಿ ಇಡೀ ದೇಶದ ಶೇಕಡಾ 85ರಷ್ಟು ಸಣಬು ಬೆಳೆಯುವುದಾದರೂ ಸಣಬಿನ ಕಾರ್ಖಾನೆಗಳೆಲ್ಲ ಹಿಂದೂಸ್ಥಾನದಲ್ಲಿವೆ. ಪಾಕಿಸ್ತಾನದ ಏಕಮಾತ್ರ ಬಂದರಾದ ಕರಾಚಿಯು ಹಿಂದೂಸ್ಥಾನದ ಬಂದರುಗಳಂತೆ ಎಲ್ಲಾ ಕಡೆಗೂ ಸಾರಿಗೆಯ ಸಂಬಂಧವುಳ್ಳದಾಗಿಲ್ಲ. ಅಲ್ಲಿ ಕಬ್ಬಿಣ ಕಲ್ಲಿದ್ದಲುಗಳಂತೂ ಇಲ್ಲವೆ ಇಲ್ಲ. ಜನರಲ್ಲಿ ಶೇಕಡಾ 4ರಲ್ಲಿ ಮಾತ್ರ ಅಕ್ಷರಸ್ಥರು. (ಹಿಂದೂಸ್ಥಾನದಲ್ಲಿ ಶೇಕಡಾ 12). ಇದ್ದ ಸ್ವಲ್ಪ ಶಿಕ್ಷಿತರಲ್ಲಿ ಹೆಚ್ಚಿನವರು ವಕೀಲರು ಇಲ್ಲವೆ ಇಂಜಿನಿಯರರು. ಸದ್ಯಕ್ಕೆ ಚಿಕ್ಕ ಕೈಗಾರಿಕೆಗಳನ್ನು ಮಾತ್ರ ಅಲ್ಲಿ ಪ್ರಾರಂಭಿಸಬಹುದಾಗಿದೆ. ಅಲ್ಲಿ ನಡೆಯುವ ಜಾತೀಯ ದಂಗೆಗಳಿಂದಂತೂ ಹೊಸ ರಾಜ್ಯದ ಆರ್ಥಿಕ ದುರ್ದೆಶೆಯು ಇನ್ನೂ ಹೆಚ್ಚಿದೆ

ಯೋಗ್ಯ ನಾಯಕರ ಅವಶ್ಯಕತೆ

ಪಾಕಿಸ್ತಾನದ ತೊಂದರೆಗಳಿಷ್ಟಿದ್ದರೂ ಅಲ್ಲಿನ ಸಾಮಾನ್ಯ ಯೋಗ್ಯತೆಯ ಮುಂದಾಳುಗಳಿಗೆ ಅವನ್ನು ಬಗೆಹರಿಸಲು ಕಷ್ಟಸಾಧ್ಯವೇ ಆಗುವುದು. ಜಿನ್ನರೊಬ್ಬರು ಅವರಲ್ಲಿ ಸ್ವಲ್ಪ ಹೆಚ್ಚಿನ ಸಾಮರ್ಥ್ಯದವರಿದ್ದರೂ ಅವರೊಬ್ಬರಿಂದಲೇ ಎಲ್ಲವೂ ಸಾಧ್ಯವಾಗದು, ಅವರಿಗೂ ಪ್ರಾಯ 70ಕ್ಕೆ ಮಿಕ್ಕಿದ್ದು ಆರೋಗ್ಯವೂ ಕೃಷಿಸುತ್ತ ಬರುತ್ತಿದೆ. ಆಡಳಿತದ ಶ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂಬುದಕ್ಕೆ ಅವರು ಮುಖ್ಯ ಪ್ರಧಾನರ ಹುದ್ದೆಗಿಂತ ಗವರ್ನರ್ ಜನರಲ್ಲರ ಸ್ಥಾನ ಸ್ವೀಕರಿಸಿದ್ದು ಆಗಿಂದಾಗ್ಗೆ ಅವರು ತಮ್ಮ ಹಿಂಬಾಲಗರಿಗೆ ಹೇಳುತ್ತಿರುತ್ತಾರೆ. 'ನನ್ನ ಪಾಲಿನ ಕೆಲಸ ಮಾಡಿ ಕೊಟ್ಟೆ ಪಾಕಿಸ್ತಾನವನ್ನು ನಿಮಗೆ ತೆಗೆಸಿ ಕೊಟ್ಟಿದ್ದೇನೆ ಅದನ್ನು ಬೆಳೆಸುವುದು ನಿಮ್ಮ ಪಾಲಿನದು'

ಜಿನ್ನರು ಸಲಹೆಗಾರರಾಗಿ ಉಳಿಯುವುದಾದರೂ ಪಾಕಿಸ್ತಾನದ ಮುಖ್ಯ ಶಿಲ್ಪಿಗಳು ಲಿಯಾಖತ್ ಅಲಿಖಾನರೇ ಆಗುವರು ಇವರು ಸಮರ್ಥ ಆಡಳಿತಗಾರರೂ, ಸಾಂಪ್ರದಾಯವಾದಿಗಳೂ, ಬ್ರಿಟಿಸರೊಡನೆ ಸ್ನೇಹ ಸಂಪರ್ಕ ಬಯಸುವವರೂ ಆಗಿದ್ದಾರೆ. ಇವರು ಕೂಡ ದೊಡ್ಡ ರಾಜಕೀಯ ಮುತ್ಸದ್ದಿತನ ಬಲ್ಲಿವರಲ್ಲ ಮತ್ತೆ ಇವರು ಆರಿಸಿದ ಇತರ ಪಾಕಿಸ್ತಾನ ಮಂತ್ರಿಗಳು ಮಧ್ಯಮ ಯೋಗ್ಯತೆಯವರೇ ಆಗಿದ್ದಾರೆ

ಆಹಾರ ಮಂತ್ರಿಗಳಾದ ಗಜ್ನಾಫರ್ ಅಲಿಖಾನರು ಪುಟ್ಟ ರಾಜಕೀಯ ಚಳವಳಗಾರರು ಕೃಷಿ ಸಮಸ್ಯೆಯ ಸೂಕ್ಷ್ಮ ಸಮಸ್ಯೆಗಳನ್ನು ಒಂದಿಷ್ಟೂ ಇವರು ಅಭ್ಯಸಿಸಿದವರಲ್ಲ.

ರೈಲು, ಟಪ್ಪಾಲು ಇತ್ಯಾದಿಗಳ ಸಾರಿಗೆ ಮಂತ್ರಿಗಳಾದ ಅಬ್ದುಲ್ ರಾಬ್ ನಿಸ್ತಾರರು ಒರ್ವ ಪಠಾಣರು. ಕಪ್ಪುಸಂತೆ ವ್ಯಾಪಾರದಲ್ಲಿ ಇವರು ಕುಲಕೀರ್ತಿವಂತರಾದ ಪರಿಣಾಮವಾಗಿ ಗಡಿನಾಡಿನ ಚುನಾವಣೆಯಲ್ಲಿ ಕೊಂಗ್ರೆಸ್ ಇದಿರಾಳಿಯ ಎದುರು ಇವರು ಸೋತುಹೋದರು ಕಡೆಗೆ ಇವರನ್ನು ಪಂಜಾಬಕ್ಕೆ ತಂದು ಅಲ್ಲಿಂದ ಪಟನಾ ಸಮಿತಿಗೆ ಚುನಾಯಿಸಲಾಯಿತು

ಆಂತರಿಕ ಆಡಳಿತ ಮಂತ್ರಿಗಳಾದ ಫಜ್ಲುರ್ ರಹ್ಮಮಾನರು ಕಲ್ಕತ್ತದ ಒರ್ವ ಚರ್ಮ ತೊಗಲು ವ್ಯಾಪಾರಿಗಳು ಇವರು ಹೇಗೆ ಮಂತ್ರಿ ಮಾಡಲ್ಪಟ್ಟರೆಂದೂ ಯಾರಿಗೂ ತಿಳಿಯಲಿಲ್ಲ ಆ ಪದವಿ ಇವರಿಗೆ ಸಲ್ಲುವುದೆಂದೂ ಯಾರೂ ನಿರೀಕ್ಷಿಸಲಿಲ್ಲ ಆಗಸ್ಟ್ 15ರಂದು ಇವರು ಮಂತ್ರಿಗಳಿಗೆ ಏರ್ಪಡಿಸಿದ ಮುಂದಿನ ಆಸನಗಳಲ್ಲಿ ಕೂತಾಗ ಇವರ ಒರ್ವ ಹಳೇ ಸ್ನೇಹಿತರು "ಜನಾಬ್ ಅದು ಮಂತ್ರಿಗಳಿಗೆ ಇಡಲ್ಪಟ್ಟಿದೆ" ಎಂದರಂತೆ

ಪಾಕಿಸ್ತಾನದ ಉನ್ನತ ಶ್ರೇಣಿಯ ದೊರೆಗಳೆಲ್ಲರೂ ಹೆಚ್ಚಾಗಿ ಮಧ್ಯಕಾಲದ ಜಮೀನ್ದಾರಿ ವರ್ಗದವರು ಆಧುನಿಕ ಯೋಜನೆಗಳ ವ್ಯವಹಾರ ತಜ್ಞರೆನಿಸುವ ಹಸನ್ ಇಸ್ಪಹಾನಿಯೆಂಬವರನ್ನು ಮಂತ್ರಿಗಳಾಗಿ ಮಾಡುವ ಬದಲಿಗೆ ಅಮೇರಿಕಾಕ್ಕೆ ರಾಯಭಾರಿಗಳಾಗಿ ಕಳುಹಿಸಲಾಗಿದೆ ಪಾಕಿಸ್ತಾನ ಪ್ರಾಂತ್ಯ ಮುಖಂಡತ್ವವೂ ಇದೇ ಮಾದರಿಯದು ಪಶ್ಚಿಮ ಪಂಜಾಬದ ಮಮದೋತಿನ ನವಾಬರು 'ಶೂರ ಜಟ್ಟಿ' ಗಳೆನಿಸಿಕೊಳ್ಳುತ್ತಾರೆ ಕಾರಣ ಅವರ ಮಾತನಾಡುವುದೇ ವಿರಳ ಜೊತೆಗೆ ಅತಿ ದೊಡ್ಡ ಜಮೀನ್ದಾರರೂ ಆಗಿರುವರು

ವಿರೋಧ ಹೆಚ್ಚುತ್ತಿದೆ

ಇನ್ನೂ ವ್ಯವಸ್ಥಿತವಾಗಿರದಿದ್ದರೂ ಈಗಿನ ಲೀಗ್ ಮುಖಂಡತ್ವಕ್ಕೆ ವಿರೋಧ ಪಕ್ಷಗಳು ಹೆಚ್ಚುತ್ತಲಿವೆ ಇದುತನಕ ಹಿಂದೂ ಮತ್ತು ಸಿಖ ಒಂಡವಳಗಾರರ ವಿರುದ್ಧ ನಡೆಸಲ್ಪಡುತ್ತಿದ್ದ ಲೂಟಿ ಸುಲಿಗೆ, ಸುಡುವಿಕೆಗಳು ಈಗೀಗ ಈ ಶ್ರೀಮಂತ ಲೀಗ್ ಧುರೀಣರ ಮೇಲೆ ನಿರ್ವಹಿಸಲ್ಪಡುತ್ತವೆ ಕೆಲವು ದಿವಸಗಳ ಹಿಂದೆ ಪಶ್ಚಿಮ ಪಂಜಾಬದ ಮಂತ್ರಿಗಳಲ್ಲೊರ್ವರಾದ ಮಮ್ದಾಟ್ ದೌಲ್ತಾನಾ ಅವರು ತಮ್ಮ ಆಸ್ತಿಯಿದ್ದಲ್ಲಿ ಹೋದಾಗ ಅವರ ಒರ್ವ ಒಕ್ಕಲು "ನಮಗೆ ಜಮೀನು ಯಾವಾಗ ಹಂಚಲ್ಪಡುತ್ತದೆ" ಎಂದು ಕೇಳಿದನಂತೆ. ಕಾರಣ ಮುಸ್ಲಿಂ ಕೃಷಿಕರು ಅತೀ ದರಿದ್ರರೂ ಅತೃಪ್ತಿಗಳೂ ಆಗಿದ್ದು, ಲೀಗ್ ಧುರೀಣರು ಅವರಿಗೆ ದೊಡ್ಡ ಸುಧಾರಣೆಗಳನ್ನು ತರುವುದಾಗಿ ಆಶೆ ತೋರಿಸಿದ್ದರು.

ಲೀಗ್ ಅನುಯಾಯಿಗಳಲ್ಲಿ ತರುಣರಾದವರು ಆಧುನಿಕ ವಿಚಾರಗಳಿಂದ ಪ್ರೇರಿತರಾದವರೂ, ಯುದ್ಧದಿಂದ ಪಾಶ್ಚಾತ್ಯ ದೇಶ ಸಂಚಾರದಿಂದ ಉದಾರ ಮನೋಭಾವನೆಯವರೂ ಆಗಿದ್ದು ಹಳೇ ನಾಯಕತ್ವದ ವಿರುದ್ಧವಾಗಿಯೂ, ಹಳೇ ಸಮಾಜ ಪದ್ಧತಿಯ ವಿರುದ್ಧವಾಗಿಯೂ ಅವರು ಬಲವಾದ ಆಕ್ಷೇಪವನ್ನು ಮುಂದೊತ್ತುತಿದ್ದಾರೆ.

ಪಾಕಿಸ್ತಾನವನ್ನು ಹೊಂದಲು ಲೀಗು ಬ್ರಿಟನ್ ಅಮೇರಿಕನ್‌ರಿಗೆ ತುಂಬಾ ಆಶೆಯನ್ನು ತೋರಿಸಿದೆ ಅದನ್ನು ಸ್ಥಾಪಿಸುವುದರಿಂದ ಬ್ರಿಟನ್ ಅಮೇರಿಕಗಳಿಗೆ ರಶ್ಯದ ವಿರುದ್ಧ ಹೋರಾಡಲು ಬಲವಾದ ಸೈನ್ಯ ಕೇಂದ್ರವೂ, ವ್ಯಾಪಾರಕ್ಕೆ ದೊಡ್ಡ "ಸಂತೆ" ಯೂ ಸಿಕ್ಕಿದಂತಾಗುವುದೆಂದು ಲೀಗ್ ಧುರೀಣರು ತಮ್ಮ ಅನೇಕ ಭಾಷಣಗಳಲ್ಲಿ ಮೇಲಿಂದ ಮೇಲೆ ತಿಳಿಸಿದ್ದಾರೆ ಇಷ್ಟಾದರೂ ಅವರಲ್ಲಿನ ಸಾಮಾನ್ಯ ವರ್ಗದವರು ರಶ್ಯದ ಕಡೆ ಒಲವು ತೋರಿಸಿದ್ದಾರೆ ಪಾಕಿಸ್ತಾನವು ರಶ್ಯಕ್ಕೆ ಹತ್ತಿರವಿರುವುದರಿಂದಲೂ ರಶ್ಯವು ಈ ಪ್ರದೇಶದಲ್ಲಿ ಹೆಚ್ಚಿನ ಅಭಿರುಚಿ ಸ್ನೇಹ ಪ್ರಚಾರವನ್ನು ಕೈಕೊಂಡಿದ್ದರಿಂದಲೂ ಬ್ರಿಟನಿನ ಧೋರಣೆಯ ಮೇಲೆ ಬಲವಾದ ಒತ್ತಡ ಬಿದ್ದಂತಾಗಿ ಪಾಕಿಸ್ತಾನ ಸ್ಥಾಪನೆಯು ನಿರೀಕ್ಷಿಸಿದ್ದಕ್ಕಿಂತ ಶೀಘ್ರವಾಗಿ ಕಾರ್ಯರೂಪಕ್ಕೆ ಬಂತು. ಈಗ ತಾವು ಯಾರೊಡನೆಯೂ ಪಕ್ಷ ವಹಿಸುವುದಿಲ್ಲವಾಗಿ ಅವರು ಮುಖಂಡರು ಹೇಳುತ್ತಿದ್ದಾರೆ ರಶ್ಯಕ್ಕೆ ಹತ್ತಿರವಿರುವುದರಿಂದ ಬಹಿರಂಗವಾಗಿ ಬ್ರಿಟನ್ ಅಮೇರಿಕಗಳೊಡನೆ ಸಹಾನುಭೂತಿ ತೋರಿಸಲು ಅವರು ಸ್ವಲ್ಪ ಅಳುಕುತ್ತಾರೆ

ಭವಿಷ್ಯ

ಈಗ ಕೆಲವೇ ವಾರಗಳ ನಂತರ ಪಾಕಿಸ್ತಾನದ ಲೀಗನ್ನು ದಮೀಕರಿಸುವ ಕುರಿತು ಬಲವಾದ ಚಳವಳಿಯಾರಂಭವಾಗಿದೆ. ಮೊಸ್ಲೆನೆ ಪಾಕಿಸ್ತಾನಿ ಧುರೀಣರು ಲೀಗನ್ನು ದಮನಮಾಡುತ್ತ ಭದ್ರವಾಗಿ ಕಛೇರಿ ಅಧಿಕಾರಿಗಳ ಮೇಲೆ ಹೊಂದಿಕೊಂಡಿರಬಯಸುತ್ತಾರೆ ಒಳ್ಳೇ ಸಂಬಳದ ಹುದ್ದೆಗಳನ್ನು ಬಾಯಿ ಚಳವಳಗಾರರಿಗೆ ಕೊಟ್ಟು ಅವರ ಬಾಯಿ ಮುಚ್ಚಿಸುವ ಬ್ರಿಟಿಷ್ ಧೋರಣೆ ಅಲ್ಲಿ ಈಗ ಆರಂಭವಾಗಿದೆ ಪೋಲಿಸ್ ಅಧಿಕಾರಿಗಳಿಗೆ ಹೆಚ್ಚೆಚ್ಚು ಅಧಿಕಾರಗಳು ಕೊಡಲ್ಪಡುತ್ತವೆ ಆದರೆ ಪಾಕಿಸ್ತಾನದ ವಿಧಿಯನ್ನು ರೂಪಿಸಲು ಯಾವ ಶಕ್ತಿಗಳು ಹೇಗೆ ಮೇಲೆ ಬರುತ್ತವೆಂದು ಭವಿಷ್ಯವೇ ತಿಳಿಸಬೇಕಾಗಿದೆ

ಹೆಚ್ಚು ಪುಷ್ಟಿಕರವೂ ಪೋಷಕ ದ್ರವ್ಯಗಳೂ ಉಳ್ಳ ಕೆಲವೊಂದು ವಿಶಿಷ್ಟ ಮಾದರಿಯ ಅಕ್ಕಿಯನ್ನು ರಶ್ಯದ ಕೃಷಿ ತಜ್ಞರು ಹಲವು ಕಾಲದ ಪ್ರಯೋಗಗಳಿಂದ ತಯಾರಿಸಿದ್ದಾರೆ ಇವನ್ನು ಹೊಸದಾಗಿ ವಿಸ್ತರಿಸಲ್ಪಡುವ ಕುಬಾನ್ ನದಿ ಪ್ರದೇಶದ 75 ಸಾವಿರ ಎಕ್ರೆ ಜಮೀನಿನಲ್ಲಿ ಬಿತ್ತಲಾಗುವುದು.

KANARA COMMERCIAL BANK LTD.

PUTTUR

H. O Puttur]   Estd. 1920   [Branch Vittal

All kinds of Banking Business transacted.

Deposits. Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ಮಂಗಳೂರು

ಸಂದರ್ಶನ

ಸ್ಥಳೀಯ ಸಂಸ್ಥೆಗಳ ಮಂತ್ರಿಗಳಾದ ಮಾನ್ಯ ಚಂದ್ರಮೌಳಿಯವರು ಇಂದು ಮಧ್ಯಾಹ್ನ ಘಂಟೆ 12ಕ್ಕೆ ಮಂಗಳೂರು ಮುನ್ಸಿಪಲ್ ಆಫೀಸನ್ನು ಸಂದರ್ಶಿಸಿದರು

ಭಾಷಣ

ಪಾನ ನಿರೋಧಕ ಮಂತ್ರಿಗಳಾದ ಮಾನ್ಯ ಡೇನಿಯಲ್ ಥೋಮಸರು ಇಂದು ಮಧ್ಯಾಹ್ನ ಘಂಟೆ 2ಕ್ಕೆ ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಮುರ್ತೆದಾರರ ಮತ್ತು ಗುತ್ತೆದಾರರ ಸಭೆಯಲ್ಲಿ ಭಾಷಣಮಾಡಿದರು

ಪಂಡಿತ ವಿದ್ಯಾರ್ಥಿ ಸಂಘ, ಗವರ್ನಮೆಂಟ್ ಕಾಲೇಜು

ಗವರ್ನಮೆಂಟ್ ಕಾಲೇಜಿನಲ್ಲಿ ಈ ವರ್ಷ ಹೊಸತಾಗಿ ತರಬೇತಿಯನ್ನು ಹೊಂದುತ್ತಿರುವ ಕನ್ನಡ ಪಂಡಿತ ವಿದ್ಯಾರ್ಥಿಗಳ ಸಂಘದ ಉದ್ಘಾಟನಾ ಸಮಾರಂಭವು ಪ್ರಿನ್ಸಿಪಾಲ್ ವರ್ಗೀಸರ ಅಧ್ಯಕ್ಷತೆಯಲ್ಲಿ ತಾ ೨೦ರಲ್ಲಿ ಗವರ್ನಮೆಂಟ್ ಕಾಲೇಜಿನಲ್ಲಿ ನಡೆಯಿತು ಸೈಂಟ್ ಎಲೋಸಿಯಸ್ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಭುಜಂಗರಾಯರು ಉದ್ಘಾಟನಾ ಭಾಷಣವನ್ನು ಮಾಡುತ್ತ ಕನ್ನಡ ಪಂಡಿತರ ಕರ್ತವ್ಯ ಶಾಲಾ ಕಾಲೇಜುಗಳಲ್ಲಿ ಕನ್ನಡದ ಮುಂದಿನ ಸ್ಥಾನ ಪ್ರಗತಿಶೀಲ ಸಾಹಿತ್ಯದ ನಿಜವಾದ ಸ್ವರೂಪ ಮೊದಲಾದ ವಿಷಯಗಳನ್ನು ನಿರೂಪಿಸಿದರು ಪ್ರಿನ್ಸಿಪಾಲರು ಭಾಷಣ ಮಾಡುತ್ತ ಈ ವರ್ಷದ ನಮ್ಮ ಕಾಲೇಜ ವರ್ಧಂತಿಯು ಮಂಗಳೂರಿನ ಇತಿಹಾಸದಲ್ಲಿಯೇ ಅಪೂರ್ವವಾಗುವಂತೆ ನಡೆಸಲು ಪಂಡಿತ ವಿದ್ಯಾರ್ಥಿಗಳು ಮುನ್ನುಗ್ಗಬೇಕೆಂದೂ ಗವರ್ನಮೆಂಟ್ ಕಾಲೇಜು ಕೇವಲ ಕಲಾ ಶಾಲೆ ಮಾತ್ರವಲ್ಲ ಇಂತಹ ತರಬೇತಿಗಳಿಗೆ ಸಹ ಆಶ್ರಯ ಕೊಡುತ್ತದೆಂದೂ ಭಾಷಣವಿತ್ತರು.

[ಶ್ರೀ ಟಿ ಶೀನಪ್ಪ ಹೆಗ್ಗಡೆ B O L L T ಮತ್ತು ಶ್ರೀ ನಾಲಿಯನ್ಸ್ B A L T ಇವರು ಪ್ರಾಧ್ಯಾಪಕರಾಗಿರುವ ಕನ್ನಡ ಪಂಡಿತರ ತರಗತಿಯು ವ್ಯವಸ್ಥಿತವಾಗಿ ನಡೆಯುತ್ತಿದೆ |

ಆಹಾರ ಪರಿಸ್ಥಿತಿ:—ದಕ್ಷಿಣ ಕನ್ನಡ ಜಿಲ್ಲೆಗಾಗಿ ಕಳೆದ ಸಪ್ಟೆಂಬರ್ ತಿಂಗಳಲ್ಲಿ ಮಂಜೂರಾದ ಆಹಾರ ಧಾನ್ಯಗಳ ವಿವರ ಈ ರೀತಿಯಾಗಿದೆ ಅಕ್ಕಿ [illegible] ಟನ್ ಗೋಧಿ ೨೪ ಟನ್ ಗೋಧಿ ಹಿಟ್ಟು ಮತ್ತು [illegible] ೯ ಟನ್ ರಾಗಿ ೨ ಟನ್, ಮೈಲೋ ೧ ೨೬ ಟನ್ ಜೋಳ ೦ ೧೬ ಟನ್ ಒಟ್ಟಿಗೆ ೬೯೮೭ ಟನ್

ಮದ್ರಾಸಿನಿಂದ ೫ [illegible] ಟನ್ ಅಕ್ಕಿ ಈ ಜಿಲ್ಲೆಗೆ ಈಗಾಗಲೇ ಬಂದಿರುವುದ [illegible] ಟನ್ ಗೋಧಿ ಮತ್ತು ೨೦ ಟನ್ ಮೈಲೋ ಬರಲುಂಟು ಇನ್ನೂ ೧೦೦೦ ಟನ್ ಮೈಲೋ ಇತ್ತ ರವಾನಿಸುವಂತೆ ಮದ್ರಾಸು ಸರಕಾರಕ್ಕೆ ಜಿಲ್ಲಾ ಕಲೆಕ್ಟರರು ಬರೆದುಕೊಂಡಿದ್ದಾರಾಗಿ ತಿಳಿದಿದೆ ಸರಕಾರವು ಈ ವಿನಂತಿಯನ್ನು ಮನ್ನಿಸುವುದಾಗಿ ಹಾರೈಸಲಾಗಿದೆ

ರೈಲ್ವೇ ಸ್ಟೇಶನಿಗೆ ವಿದ್ಯುದ್ದೀಪ — ಮಂಗಳೂರು ರೈಲ್ವೇ ಸ್ಟೇಶನಿಗೆ ವಿದ್ಯುದ್ದೀಪಗಳನ್ನಿರಿಸುವಂತಾಗಬೇಕು ಮತ್ತು ಗೂಡ್ಸ್ ಸ್ಟೇಶನಿಗೆ ಹೋಗುವ ರಸ್ತೆಯನ್ನು ಉತ್ಕೃಷ್ಟ ರೀತಿಯಲ್ಲಿರಿಸಬೇಕು ಎಂದು ಕೆನರಾ ಚೇಂಬರ್ ಒಫ್ ಕೊಮರ್ಸಿನವರು ಸೌತ್ ಇಂಡಿಯನ್ ರೈಲ್ವೇ ಕಂಪೆನಿಗೆ ಬರೆದುಕೊಂಡುದಕ್ಕೆ ಮಂಗಳೂರು ಸ್ಟೇಶನಿಗೆ ವಿದ್ಯುದ್ದೀಪಗಳನ್ನಿರಿಸುವ ಕುರಿತು ಅಂದಾಜು ಪಟ್ಟಿ ತಯಾರಾಗುತ್ತಿದೆ ಶೀಘ್ರದಲ್ಲೇ ಈ ಕೆಲಸ ಕೈಕೊಳ್ಳಲಾಗುವುದು, ಗೂಡ್ಸ್ ಸ್ಟೇಶನ್ ರಸ್ತೆಯ ಕುರಿತು ಈ ಆಫೀಸಿನ ಚೀಫ್ ಇಂಜಿನಿಯರರು ಅವಶ್ಯವಿದ್ದ ಕೆಲಸ ಕೈಕೊಳ್ಳುವಂತೆ ತಿಳಿಸಲಾಗುತ್ತದೆ' ಎಂದು ಉತ್ತರ ಬಂದಿರುತ್ತದೆ

31ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಬರುವ ಡಿಸೆಂಬರ್ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡಿನಲ್ಲಿ ನಡೆಯುವ 31ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಶ್ರೀಮಾನ್ ತಿರುಮಲೆ ತಾತಾಚಾರ್ಯ ಶರ್ಮರ್ ಅವರು ಬಹುಮತಗಳಿಂದ ಆಯ್ಕೆಯಾಗಿರುವರೆಂದು ಕಾರ್ಯದರ್ಶಿಯವರು ತಿಳಿಸುತ್ತಾರೆ

ಜಿಲ್ಲಾ ಪರಿಚಯ

ವಿದ್ಯಾ ಸಂಸ್ಕೃತಿ ಸಮಾರಂಭ

ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ತಾ ೨೧-೧೦-೧೯೪೭ರಿಂದ ವಿದ್ಯಾ ಸಂಸ್ಕೃತಿ ಸಮಾರಂಭವು ವಿವಿಧ ಮುಖವಾಗಿ ಆರಂಭವಾಗಿದೆ ಜಿಲ್ಲಾ ಟೀಚರ್ಸ್ ಗಿಲ್ಡ್, ವಸಂತ ಪ್ರೇಮಿ ಮಂಡಲ, ಪಂಡಿತ ಸಂಘ, ಸಾಹಿತ್ಯ ಪರಿಷತ್ತಿನ ಪ್ರಾದೇಶಿಕ ಸಮಿತಿಯ ಮೇಲ್ವಿಚಾರಣೆಯಲ್ಲಿ ಈ ಸಮಾರಂಭವು ಯಶಸ್ವಿಯಾಗಿ ನಡೆಯುತ್ತದೆ ತಾ ೨೧-೧೦-೪೭ರಲ್ಲಿ ವಿದ್ಯಾಂಗದ ಡೈರೆಕ್ಟರರಾದ ಡಾ ಎಸ್ ಆರ್ ಯು ಸವೂರ್ ಇವರು ಬೆಳಿಗ್ಗೆ ಈ ಸಮಾರಂಭದ ಉದ್ಘಾಟನೆಯನ್ನು ಮಾಡಿದರು ಸಾಯಂಕಾಲ ಗೆಳೆಯರ ಕೂಟದವರಿಂದ ಅಭಿನಯಿಸಲ್ಪಟ್ಟ ಪರೀಕ್ಷೆ ಎಂಬ ಏಕಾಂಕ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು ಹಿಂದೂ ತರುಣಿಯು ಕ್ರೈಸ್ತ ಯುವಕನನ್ನು ವಿವಾಹವಾಗಲು ಬಯಸಿ ಕೊನೆಗೆ ನಿರಾಶೆಗೊಳ್ಳುವುದೇ ಕಥಾ ವಸ್ತುವಾಗಿತ್ತು

ಮೂಡಬಿದ್ರೆ

ಸಾಹಿತ್ಯೋತ್ಸವ: ಕಳೆದ ತಾ [illegible] ದ [illegible] ವರೆಗೆ ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ದಸರಾ ಸಾಹಿತ್ಯೋತ್ಸವವು ಯಶಸ್ವಿಯಾಗಿ ಜರಗಿತು [illegible] ಗಳಾದ ಕೆ ಶಿವರಾಮ ಕಾರಂತ [illegible] ಎಸ್ ಆರ್ ನಾರಾಯಣರಾವ್ [illegible] ರಾವ್ ಪಿ ಕೆ ನಾರಾಯಣ [illegible] ಗೋವಿಂದರಾವ್ ಮೊದಲಾದವರ ಭಾಷಣಗಳು ಏರ್ಪಡಿಸಲ್ಪಟ್ಟು [illegible] ಪ್ರತಿದಿನ ನಾಟಕ ಯಕ್ಷಗಾನ ಮೊದಲಾದ [illegible] ನಡೆದುವು

ಉಡುಪಿ

ಶ್ರೀಕೃಷ್ಣ ಸೂಕ್ತಿಯ ಪುನರ್ಜನ್ಮ— [illegible] ಪ್ರಕಟವಾಗುತ್ತಿದ್ದ ಶ್ರೀ ಕೃಷ್ಣ ಸೂಕ್ತಿ ಎಂಬ ಪತ್ರಿಕೆಯು ಅದರ ಮೊದಲಿನ ಸಂಪಾದಕರಾದ ಶ್ರೀ ಕೆ ರಾಜಗೋಪಾಲಕೃಷ್ಣರಾಯರ ಸಂಪಾದಕತ್ವದಲ್ಲಿ ಪುನಃ ಇದೇ ವಿಜಯದಶಮಿಯ ಸಮಯದಲ್ಲಿ ಪ್ರಕಟವಾಗುವುದೆಂದು ತಿಳಿದುಬರುತ್ತದೆ

ಪ್ರಕಟಣೆ

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ

ದಕ್ಷಿಣಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಕುಂದದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು 1947ನೇ ಇಸವಿ ನವಂಬರ ತಾರೀಕು 28ರಿಂದ ದಶಂಬ ತಾರೀಕು 12ರ ತನಕ ಜರಗುವುದು ಅಂದರೆ, ಸಂತೆಯು ಕಾರ್ತಿಕ ಪೌರ್ಣಮಿ ದಿವಸ ಪ್ರಾರಂಭವಾಗಿ, ಕಾರ್ತಿಕ ಅಮಾವಾಸ್ಯೆ ದಿವಸದ ಯಾ ಸುಬ್ರಹ್ಮಣ್ಯ ದೀಪೋತ್ಸವದ ಪರಿಯಂತರ ಜರಗುವುದು

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ [illegible] ತಲೆಯೊಂದರ ಎರಡು ಆಣೆಯ ಮೇರೆಗೆ ಫೀಸ ವಸೂಲ ಮಾಡಲಾಗುವುದು [illegible] ಸಂದರ್ಭ ಒದಗಿದಲ್ಲಿ ಸದ್ರಿ ಫೀಸನ್ನು ಏರಿಸಲೂ ಬಹುದು, ಯಾ ಅಧಿಕ ಫೀಸನ್ನು ವಸೂಲ ಮಾಡಲೂ ಬಹುದು

ಪರಂತು [illegible] ಅವಶ್ಯವಿದ್ದ [illegible] ಜಾನುವಾರುಗಳನ್ನು ಸದ್ರಿ [illegible] ಹಿತಪಡಿಸಬಹುದು

ಮೈಸೂರ [illegible] ಜಾನುವಾರ ರಫ್ತುಮಾಡುವ [illegible] ಗಳಿಗನುಸಾರವಾಗಿ ಮೈಸೂರ [illegible] ಸಂಬಂಧಪಟ್ಟ ಜಿಲ್ಲಾ ಮಜಿಸ್ಟ್ರೇಟರ ಕೊಡುವ ರಹದಾರಿಗಳ ಮೂಲಕ ಮಾತ್ರ ರಫ್ತು ಮಾಡುವದೆ ಸಾಧ್ಯವಿರುತ್ತದೆ. ಆದ ಪ್ರಯುಕ್ತ, ಚಾಲ್ತಿ ವರ್ಷದಲ್ಲಿ ಜರಗುವ ಕುಲುಕುಂದ ಜಾನುವಾರು ಸಂತೆಗೆ ಮೈಸೂರು ಪ್ರಾಂತ್ಯದಿಂದ ಜಾನುವಾರುಗಳನ್ನು ತಂದು ಮಾರಾಟ ಮಾಡಲು ಅಪೇಕ್ಷಿಸುವ ವ್ಯಾಪಾರಿಗಳು, ಮೈಸೂರು ಪ್ರಾಂತ್ಯದ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟರಿಂದ ಅವಶ್ಯವುಳ್ಳ ರಹದಾರಿಗಳನ್ನು ಮುಂಚಿತವಾಗಿಯೇ ಪಡಕೊಳ್ಳತಕ್ಕದ್ದು ಎಂದು ರೆವೆನ್ಯೂ ಡಿವಿಜನಲ್ ಆಫೀಸರರಾದ ಬಿ ಸಿಂಹಾದ್ರಿಯವರು ತಿಳಿಸುತ್ತಾರೆ

INDIAS FOREMOST REMEDY

ಖಂಡಿತ ಗುಣಕಾರಿ ಇದನ್ನು ಉಪಯೋಗಿಸಿರಿ

For Aches and Pains

ಒಳ್ಳೆಯದನ್ನು ಪಡಕೊಳ್ಳಿ ಹೆಚ್ಚಿಗೆ ಕೊಡಬೇಕಾಗಿಲ್ಲ

[illegible] ಪ್ರಗಳಿಗೆ ಲಿಟಲ್ಸ ಓರಿಯಂಟಲ್ ಬಾಮನ್ನು ಉಪಯೋಗಿಸಿರಿ.



ಬೇಸಗೆಯಲ್ಲಿ ನೀರಿನ ಸರಬರಾಯಿ

ಇಂಗ್ಲಾಂಡಿನಲ್ಲಿ ಮಳೆಯಿಲ್ಲದಿದ್ದರೂ ಬೇಸಾಯ ನಡೆಯಿಸುವ ಉಪಾಯವನ್ನು ಕಂಡುಹಿಡಿದಿದ್ದಾರೆ
ಕೊಳವೆಗಳ ಮೂಲಕ ಮೇಲಿಂದ ನೀರನ್ನು ಚಿಮುಕಿಸಿ, ನೀರನ್ನು ಒದಗಿಸುವುದು ಈ ಚಿತ್ರದಲ್ಲಿ ಕಾಣಬಹುದು

ಹಿಂದೂ ಸೀಖರ ವಿರುದ್ಧ ಅಪಪ್ರಚಾರ

ಸೀಖೀ-ಸ್ಥಾನದ ಯೋಜನೆಯ ನಿಜಸ್ವರೂಪ

"ಇಂದು ಕೆಲವು ಹಿತಸಾಧಕರು ಹಿಂದುಗಳ ಸೀಖರೊಳಗೆ ಒಡಕನ್ನುಂಟುಮಾಡಲು ಅವಿಚಾರದ್ದೂ ತರ್ಕರಹಿತವಾದುದೂ ಆದ ಅಪಪ್ರಚಾರವೊಂದು ಬಲವಾಗಿ ನಡೆಯುತ್ತಿದೆ" ಎಂದು ತಿಳಿಸುತ್ತ ಬೊಂಬಾಯಿಯ ಗುರುಸಿಂಗ್ ಸಭಾ ಎಂಬ ಸಂಸ್ಥೆಯವರು ಸೀಖ್ ಜನತೆಯ ನಿಜವಾದ ಧ್ಯೇಯ ಧೋರಣೆಗಳೇನೆಂಬುದರ ಕುರಿತು ಒಂದು ಪ್ರಕಟಣೆಯಲ್ಲಿ ಹೀಗೆ ತಿಳಿಸುತ್ತಾರೆ

ಸೀಖರು ಹಿಂದೂಗಳೊಡನೆ ಸೇರಿ ಒಂದು ಮತೀಯ ರಾಜ್ಯಸ್ಥಾಪನೆಗಾಗಿ ಗುಪ್ತಾಲೋಚನೆ ನಡೆಸಿರುವರೆಂದು ಬೊಂಬಾಯಿಯ ಫ್ರಿಪ್ರೆಸ್ ಜರ್ನಲ್ ಪತ್ರಿಕೆಯು ಪ್ರಕಟಿಸಿದ ಅಭಿಪ್ರಾಯವು ಶುದ್ಧ ತಪ್ಪು ತಿಳುವಳಿಕೆಯದು ಪಾಕಿಸ್ತಾನವು ಮುಸ್ಲಿಂ ಮತೀಯ ರಾಜ್ಯವಾಗಿರುವಂತಹ ಅರ್ಥದಲ್ಲಿ ಸೀಖರು ತಮ್ಮದೊಂದು ರಾಜ್ಯ ಸ್ಥಾಪನೆ ಮಾಡಲು ಎಳಿಸುವುದಿಲ್ಲ ಯಾವದಾದರೊಂದು ಜಾತಿಪಂಥದವರು ಇನ್ನೊಂದು ಜಾತಿ ಮತದವರ ಮೇಲೆ ಆಳ್ವಿಕೆ ನಡೆಸುವ ಯೋಜನೆಗೆ ಸದಾ ವಿರೋಧ ಸೂಚಿಸಿದ್ದಾರೆ. ಗುರು ನಾನಕರು "ಹುಚ್ಚರು ಮತ್ತು ನೀಚರು ಮಾತ್ರ ಇತರರ ಮೇಲೆ ಆಳಲು ಪ್ರಯತ್ನಿಸುವರು" ಎಂದು ಹೇಳಲಿಲ್ಲವೆ? ಸೀಖರ ಇತಿಹಾಸವನ್ನೂ ಪರಿಶೀಲಿಸಿದರೆ ಅವರು ಪಂಜಾಬದಲ್ಲಿ ಹೊರಗಿನವರ ದಬ್ಬಾಳಿಕೆಯನ್ನು ಕಾಪಾಡಲು ಆದೆಷ್ಟು ಹೆಣಗಾಡಿರುವರೆಂಬ ಸಂಗತಿಯು ವಿಶದವಾಗುತ್ತದೆ.

ಇತ್ತೀಚೆಗೆ ಪಂಜಾಬದ ಮುಸಲ್ಮಾನರು ತಮ್ಮದೇ ಆದ ಪಾಕಿಸ್ತಾನವೆಂಬ ಮತೀಯ ಸೂತ್ರಧಾರರ ರಾಜ್ಯಕ್ಕಾಗಿ ಪ್ರಯತ್ನಿಸುತ್ತಿರುವಾಗ ಮತ್ತು ಅವರ ಪ್ರಬಲವಾದ ಕೇಳಿಕೆಗೆ ಅಲ್ಲಿನ ಹಿಂದೂಗಳು ನಿರ್ಬಲತ್ವದಿಂದ ಅದನ್ನು ಬಿಟ್ಟುಕೊಡುವುದರಲ್ಲಿರುವಾಗ ಮಾತ್ರ ಸೀಖರು ಪಂಜಾಬದ ಎಲ್ಲಾ ಮುಖ್ಯ ಮತಪಂಥದವರಿಂದೊಡಗೂಡಿದ 'ಸ್ವತಂತ್ರ ಪಂಜಾಬ'ವೊಂದು ಸ್ಥಾಪನೆಯಾಗಬೇಕೆಂಬ ಯೋಜನೆಯೊಂದನ್ನು ಮುಂದಕ್ಕೆ ತಂದರು "ಸ್ವತಂತ್ರ ಪಂಜಾಬ"ವು ಸೀಖರದೊಬ್ಬರದೇ ರಾಜ್ಯವಲ್ಲ. ಕಡೆಗಂತೂ ಪಾಕಿಸ್ತಾನವು ಕೊಡಲ್ಪಟ್ಟ ಪರಿಣಾಮವಾಗಿ ಅಲ್ಲಿ ಯಾವ ಪ್ರಕೋಪಕ್ಕೂ ಕಾರಣರಾಗದ ಸೀಖ್ ಮತ್ತು ಹಿಂದೂಗಳು ನಿಷ್ಕಾರುಣ್ಯವಾಗಿ ಕೊಲ್ಲಲ್ಪಟ್ಟಾಗ ಸೀಖರು ತಮ್ಮ ಮತದವರಲ್ಲಿ ಆದಷ್ಟು ಹೆಚ್ಚಿನವರನ್ನು ರಕ್ಷಿಸಲೋಸುಗ ಪಾಕಿಸ್ತಾನದ ಗಡಿಯು ಚೇನಾಬ್ ನದಿಗಿಂತ ಮುಂದಕ್ಕೆ ಬರಬಾರದೆಂಬ ಕೇಳಿಕೆಯನ್ನು ಮುಂದೆ ತಂದರು ಇದನ್ನು ಕೊಟ್ಟರೂ ಸೀಖರಿಗೆ ತಮ್ಮದೇ ಸ್ಥಾನವೊಂದನ್ನು ಸ್ಥಾಪಿಸಲು ಯಾವ ಸಹಾಯವೂ ಆಗುವುದಿಲ್ಲ ಆದರೆ ಇದರಿಂದ "ಸ್ವತಂತ್ರ ಪಂಜಾಬ" ಪ್ರಾಂತ್ಯವೊಂದನ್ನು ರಚಿಸಲಿಕ್ಕೆ ಸ್ವಲ್ಪ ಅನುಕೂಲವೇನೊ ಆಗುತ್ತದೆ. ಅದರಲ್ಲೂ ಸೀಖರು ಅಲ್ಪಸಂಖ್ಯಾಕರಾಗಿಯೇ ಉಳಿಯುವರು. ಆದರೆ ಪಾಕಿಸ್ತಾನದಲ್ಲಿರುವಂತೆ ಅವರು ಅಸಹಾಯಕರೂ ಸಂಕಷ್ಟದಲ್ಲಿರುವವರೂ ಆಗುವುದಿಲ್ಲ.

ಪಾಕಿಸ್ತಾನ ಸ್ಥಾಪನೆಯ ನಂತರ ಅಲ್ಲಿನ ಇಡೀ ಸೀಖ್ ಜಾತಿಯನ್ನೇ ನಿರ್ಮೂಲ ಮಾಡುವ ನೀಚ ಯೋಜನೆಯೊಂದು ನಿರ್ವಹಿಸಲಾಯಿತು. ಆಗಲೂ ಸೀಖರು ತಮಗೆ ಪ್ರತ್ಯೇಕ ಸ್ಥಾನವೊಂದು ಬೇಕೆಂದು ಕೇಳಲಿಲ್ಲ. ಕೆಲವೊಬ್ಬೊಬ್ಬ ಸೀಖ್ ಮುಖಂಡರೇನೋ ಎಲ್ಲಾ ಸೀಖ್ ದೇಶಿ ಸಂಸ್ಥಾನಗಳ ಒಕ್ಕೂಟವೊಂದು ಸ್ಥಾಪಿಸಬೇಕೆಂದು ಕೇಳಿಕೆಗಳನ್ನು ಮುಂದೆ ತಂದಿರುವರು. ಅದು ಕೂಡ ಹೊಸತೊಂದು ಸ್ಥಾಪನೆಯ ಪ್ರಯತ್ನವಾಗಿರದೆ ಪೂರ್ವದಿಂದಲೂ ನಡೆದುಕೊಂಡು ಬಂದ ಸಂಸ್ಥಾನಗಳನ್ನು ದೃಢೀಕರಿಸುವ ಉದ್ದೇಶವು ಅದಾಗಿತ್ತು.

ಇತ್ತೀಚೆಗೆ ಮಾಸ್ಟರ್ ತಾರಾಸಿಂಗರು ಒಂದು ಹೇಳಿಕೆಯಲ್ಲಿ "ಸೀಖರು ಸೀಖೀಸ್ಥಾನ ಸ್ಥಾಪನೆಯ ಯೋಜನೆಯನ್ನು ಬಿಟ್ಟಿರುವರು" ಎಂದು ತಿಳಿಸಿರುವರೆಂದು ಪ್ರಕಟವಾಗಿದೆ ಇದೂ ಸಂಪೂರ್ಣ ಅಶುದ್ಧವಾದುದು ಕಾರಣ ಅವರು ಇದುತನಕವೂ ಸೀಖರಿಗಾಗಿಯೇ ಪ್ರತ್ಯೇಕವಾದ ಸ್ಥಾನ ಬೇಕೆಂಬ ಚಳವಳವನ್ನು ಮಾಡಿದವರೇ ಅಲ್ಲ ಸೀಖೇತರರಿಗೆ ಅಸಮಾನತೆಯಿರುವ ವಿಭಾಗಿತ ಪ್ರಾಂತ್ಯದ ಉದ್ದೇಶವು ಅವರಲ್ಲೆಂದಿಗೂ ಇರಲಿಲ್ಲ ನಿಜ ಸಂಗತಿಯು ಹೀಗಿತ್ತು

ಯಾರೊ ಒಬ್ಬ ಪತ್ರಿಕಾ ಪ್ರತಿನಿಧಿಗಳು ಅವರಿಗೆ "ಜನರ ಸ್ಥಳಾಂತರದಿಂದ ಈಗ ಜುಲುಂದರ, ಅಮೃತಸರ, ಗುರುದಾಸಪುರ ಮತ್ತು ಅಂಬಾಲಾದ ಕೆಲವು ಭಾಗಗಳು ಸೀಖ್ ಬಹು ಸಂಖ್ಯಾಕ ಪ್ರದೇಶಗಳಾಗಿರುವುದರಿಂದ ಅವನ್ನೊಟ್ಟುಗೂಡಿಸಿ ಒಂದು ಸೀಖ್ ಒಕ್ಕೂಟವನ್ನೇಕೆ ಮಾಡಬಾರದು' ಎಂದು ಪ್ರಶ್ನಿಸಿದರು ಅದಕ್ಕವರು "ಹೌದು ಹಾಗೆ ಮಾಡಲು ಸಾಧ್ಯವಿದೆ ಪಂಜಾಬೀ ಭಾಷೆಯನ್ನಾಡುವ ಜನರದೊಂದು ಪ್ರದೇಶವನ್ನು ರಚಿಸುವ ಆವಶ್ಯಕತೆಯ ಕುರಿತು ಸಹ ನು ಭಾರತ ಸರಕಾರದೊಡನೆ ಮಾತುಕತೆ ನಡೆಸಬಯಸುತ್ತೇನೆ ಆ ಪ್ರದೇಶದಲ್ಲಿ ಸೀಖರು ಬಹುಸಂಖ್ಯಾಕರಾಗುವರು ಈ ಪ್ರದೇಶಗಳನ್ನು ನೆರೆಯ ಸೀಖ್ ದೇಶಿ ರಾಜ್ಯಗಳೊಡನೆ ಸೇರಿಸಿದರೆ ಅದೊಂದು ಪ್ರಬಾವಿತ ಸೀಖ್ ಒಕ್ಕೂಟ ಪ ದೇಶವಾಗುವುದು. ಅದರಿಂದ ಭಾರತ ಒಕ್ಕೂಟದ ಶಕ್ತಿ ಹೆಚ್ಚುವುದು ಆದರೆ ಈ ವಿಷಯವು ಕೇವಲ ನಮಗೇ ಸೀಖರಿಗೆ ಮತ್ತು ಭಾರತ ಒಕ್ಕೂಟಕ್ಕೆ ಮಾತ್ರ ಸಂಬಂಧಿಸಿದ್ದು ಬ್ರಿಟಿಷರಿಗೂ ಮುಸಲ್ಮಾನರಿಗೂ ಅದರ ಕುರಿತು ಕಳಕಳಿಪಡುವ ಯಾವ ಸಂಕಷ್ಟವಿಲ್ಲ' ಹೀಗೆಂದು (ತಾರಾಸಿಂಗರು) ತಿಳಿಸಿರುವರು

ಅದೇ ಸಮಯಕ್ಕೆ ಬ್ರಿಟಿಷ್ ಪತ್ರಿಕೆಗಳು ಸೀಖರ ವಿರುದ್ಧ ಹಿಂದೂಗಳ ಮನಸ್ಸುಗಳನ್ನು ದ್ವೇಷಭರಿತವಾಗಿ ಮಾಡಲು ಪ್ರಯತ್ನಿಸುವುದನ್ನೂ ತಾರಾಸಿಂಗರು ಖಂಡಿಸಿರುವರು ಸೀಖೀಸ್ಥಾನವೊಂದನ್ನು ಸ್ಥಾಪಿಸಿ ಅಲ್ಲಿಂದ ಹಿಂದೂ ಮುಸಲ್ಮಾನರನ್ನು ಹೊರ ಅಟ್ಟುವುದು ಸೀಖರ ಉದ್ದೇಶವಿರುವುದಾಗಿ ಅವು ಅಪಪ್ರಚಾರ ಮಾಡಹತ್ತಿವೆ ಖಂಡಿತವಾಗಿಯೂ ಸೀಖರಿಗೆ ಅಂತಹ ಯಾವ ಆಶಯವೂ ಇಲ್ಲ. ಪೂರ್ವ ಪಂಜಾಬನ್ನು ಹಿಂದೂ ಬಹುಸಂಖ್ಯಾಕವಾಗಿ ಮಾಡಲೂ ಅವರು ಪ್ರಯತ್ನಿಸುತ್ತಾರೆ. ಮುಸ್ಲಿಮರು ಪೂರ್ವ ಪಂಜಾಬದಲ್ಲಿರುವಾಗ ಅಲ್ಲಿ ಸಮ ಸಂಖ್ಯಾಕರಾಗಿರುವ ಅವರ ಮತ್ತು ಹಿಂದೂಗಳೊಳಗೆ ಶಕ್ತಿ ಸ್ಥಿಮಿತವಿರಿಸುವ ಅನುಕೂಲತೆಯನ್ನು ಸೀಖ ಈ ಸಂದರ್ಭದಲ್ಲಿ ಕಳಕೊಳ್ಳಲೂ ಹಿಂದೆ ಮುಂದೆ ನೋಡಲಿಲ್ಲ.

ಕಿರುಸುದ್ದಿ ಸಂಗ್ರಹ

ಆರು ಪದರುಗಳುಳ್ಳ 250 ರಾತ್ನು ಭಾರದ ಒಂದು ಕೇಕ್ ರಾಜಕುಮಾರಿ ಎಲಿಜಬೇತಳ ವಿವಾಹ ಉಡುಗೊರೆಯಾಗಿ ಆಸ್ಟ್ರೇಲಿಯದ ಮಹಿಳಾ ಸಂಸ್ಥೆಯವರು ಕಳುಹಿಸಿರುವರು.

✠

ಕಳ್ಳ ಸಂತೆಯಲ್ಲಿ ಪ್ರಖ್ಯಾತಿ ಪಡೆದು ಕೋರ್ಟಿನಲ್ಲಿ ಸಜೆ ವಿಧಿಸಲ್ಪಟ್ಟವರಿಗೆ ಪುನಃ ಹೊಸ ಬಟ್ಟೆ ವಿತರಣೆಯ ಲ್ಯಾಸನ್ಸ್ ಕೊಟ್ಟಿರುವುದನ್ನು ನಾಗ್ಪುರದ ಚಿಲ್ಲರೆ ಬಟ್ಟೆ ವ್ಯಾಪಾರಿ ಸಂಘದವರು ನಿಷೇಧಿಸಿರುವರು

✠

ಗರ್ಭಿಣಿ ಮಹಿಳೆಯರು ಹೆರಿಗೆ ಅವಧಿಯಲ್ಲಿ ತಮ್ಮ ಮಕ್ಕಳನ್ನು ಸಾಕಣೆಗೆ ಹಾಕಲು ಅನುಕೂಲವಾಗುವ ಒಂದು ಹೊಟೇಲನ್ನು ಸ್ಥಾಪಿಸಬೇಕೆಂದೂ ಶಿಶು ಆರೈಕೆಯ ಎಲ್ಲಾ ಸಲಕರಣೆಗಳೂ ಅದರಲ್ಲಿರಬೇಕೆಂದೂ ಬ್ರಿಟಿಷ್ ಮಹಿಳೆಯರ ರಾಷ್ಟ್ರೀಯ ಸಂಘದವರು ಸರಕಾರಕ್ಕೊಂದು ಮನವಿ ಮಾಡಿಕೊಂಡಿರುವರು

✠

ಮಲಯದಲ್ಲಿ ಇಂದು ಜಗತ್ತಿನ ಅತೀ ಹೆಚ್ಚು ಪ್ರಮಾಣದ ರಬ್ಬರು ಸಿಗುತ್ತದೆ ಆದರ ಮೊದಲ ರಬ್ಬರ್ ಗಿಡವನ್ನು ಅಲ್ಲಿ ಲಂಡನಿನ ಕ್ಯೂಗಾರ್ಡನಿನಿಂದ ತಂದು ನೆಡಲಾಯಿತು 1875ರಲ್ಲಿ

✠

ಮೋಡಗಳ ಮೇಲೆ ಮಂಜುಗಡ್ಡೆಯ ಹುಡಿಯನ್ನು ವಿಮಾನದಿಂದ ಪಸರಿಸುವ ಮೂಲಕ ಮಳೆಯನ್ನುಂಟುಮಾಡುವ ಪ್ರಯತ್ನಕ್ಕಾಗಿ ಸಂಯುಕ್ತ ಅಮೇರಿಕದ ಒಕ್ಲಹಾಮಾ ಪ್ರಾಂತ್ಯ ಸರಕಾರದವರು 25 ಸಾವಿರ ಪವನು ಖರ್ಚುಮಾಡಲಿರುವರು

✠

ತನ್ನ ಉದ್ಯಮದ ರಜತೋತ್ಸವವನ್ನೂ ತನ್ನ ಮಗಳ ಮದುವೆಯನ್ನೂ ಜರಗಿಸಿದ ಸಂತೋಷಾರ್ಥವಾಗಿ ಇಸಾಕ್ ಹಬಿಬಿ ಎಂಬ ಪಲೆಸ್ಟೈನದ ಕ್ಷೌರಿಕನು ತನ್ನ ಗಿರಾಕಿಗಳಿಗೆಲ್ಲ ಒಂದು ದಿನ ಧರ್ಮಾರ್ಥ ಕೂದಲು ಕತ್ತರಿಸುವಿಕೆ ಮತ್ತು ಗಡ್ಡ ಮುಂಡಣನವನ್ನು ಮಾಡಿದನು

✠

ಆಹಾರ ವಸ್ತುಗಳನ್ನು ಪಡೆಯಲು ಜರ್ಮನಿಯ ಗೃಹಿಣಿಯರು ತಮ್ಮ ಲಗ್ನ ದುಂಗುರಗಳನ್ನೂ ಇತರ ಆಭರಣಗಳನ್ನೂ ಮಾರುತ್ತಿರುವರಂತೆ ಒಂದು ಲಗ್ನದುಂಗುರಕ್ಕೆ 2 ಮಣ ಬಟಾಟೆ ದೊರೆಯುತ್ತದೆ

✠

ಐದು ಮೊಲಗಳು ಒಂದು ಕುರಿಯಷ್ಟು ಹುಲ್ಲು ಮೇಯುತ್ತವೆಯೆಂದು ಆಸ್ಟ್ರೇಲಿಯದ ರೈತ ಸಂಘದವರು ಲೆಕ್ಕ ಹಾಕಿರುವರು

✠

ಕೈರೋದಲ್ಲಿ ಹಿಡಿಯಲ್ಪಟ್ಟ ಓರ್ವ ಜರ್ಮನ್ ಕೈದಿಯು ನಾಲ್ಕು ಊಟದ ಚಮಚಗಳನ್ನು ತುಂಡುಮಾಡಿ ನುಂಗಿ ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಿಸಿದನು

✠

ದಿಲ್ಲಿಯ ಸರಕಾರಿ ಅಧಿಕಾರಿಗಳ ಮನೆಗಳೆದುರು ದೇವನಾಗರಿ ಲಿಪಿಯ ಹಿಂದೀ ನ್ಯಾನು ಬೋರ್ಡುಗಳನ್ನೂ ತೂಗಾಡಿಸಲಾರಂಭಿಸಿರುವರು

✠

ಅತ್ಯಲ್ಪ ಉಷ್ಣತೆಯನ್ನೂ ತಡೆಯಲು ಸಾಧ್ಯವಿಲ್ಲದ ಸುಸನ್ ಪಿಟರ್ಸ್ ಎಂಬ ಅಮೇರಿಕನ್ ಸಿನೇಮಾ ನಟಿಯು ಚಲಚಿತ್ರ ವೆತ್ತುವಾಗ ಅವಳಿಗಾಗಿ ತಂಪನ್ನುಂಟು ಮಾಡುವ ವಿಶೇಷ ತರದ ರಿಫ್ರಿಜರೇಟರ್ ಸಲಕರಣವೊಂದನ್ನು ಸ್ಟುಡಿಯೋದಲ್ಲಿರಿಸಲಾಗಿದೆ

★

1950ರಷ್ಟಕ್ಕೆ ಮೊಸ್ಕೋದ ಸ್ಟೆಲಿನ್ ಮೋಟರು ಕಾರ್ಖಾನೆ ವರ್ಷಕ್ಕೆ 1 ಲಕ್ಷ ಮೋಟಾರು ಇಂಜಿನುಗಳನ್ನು ತಯಾರಿಸುವಷ್ಟು ಅಭಿವೃದ್ಧಿಪಡಿಸಲ್ಪಡುತ್ತದೆಂದೂ, ಗೊರ್ಕಿ ಎಂಬ ಅಲ್ಲಿನ ಇನ್ನೊಂದು ಕಾರ್ಖಾನೆ ವರ್ಷಕ್ಕೆ 2½ ಲಕ್ಷ ಲೋರಿಗಳನ್ನು ಸಿದ್ಧಪಡಿಸಲು ಸಮರ್ಥವಾಗುವುದೆಂದು ಸಾರಲಾಗಿದೆ

★

ಇಂಗ್ಲೆಂಡಿನ ಲೋಗ್ ಬೊರೆ ತಾಲೂಕಿನ ಇಗರ್ಜಿಗಳಲ್ಲಿ ವಿವಾಹವೇರ್ಪಡಿಸಲ್ಪಟ್ಟಾಗ ವಧುವು ಲಗ್ನ ಕಾಲಕ್ಕಿಂತ 5 ಮಿನಿಟು ಹೊತ್ತು ಮಾಡಿ ಬಂದರೆ 5 ಶಿಲಿಂಗು ಜುಲ್ಮಾನೆ ವಿಧಿಸಲಾಗುವುದೆಂದು ನಿರ್ಣಯಿಸಲ್ಪಟ್ಟಿದೆ

★

ಅಮೇರಿಕದಲ್ಲಿನ ಪತಿಮರು ಜನರಲ್ಲಿ ಓರ್ವನು ಒಂದಲ್ಲ ಒಂದು ತರದ ಜೀವವಿಮೆ ಮಾಡಿ ತನ್ನ ಭಾವಿ ದುರಂತ ಘಟನೆ ಇಲ್ಲವೆ ಅನಾರೋಗ್ಯದ ಕುರಿತು ಭದ್ರತೆ ಮಾಡಿಕೊಂಡಿರುತ್ತಾನೆ

★

ಮಧ್ಯ ಪ್ರಾಂತ್ಯದ ಬೆಟುಲ್ ಜಿಲ್ಲೆಯ ಮುಲ್ತೇ ಎಂಬ ಪಟ್ಟಣದ ಓರ್ವ ವಕೀಲರ ಮನೆಯಲ್ಲಿನ ಬಟ್ಟೆಗಳೂ ಬಳೆಗಳೂ, ಲೇಖನಿಗಳೂ ತನ್ನಷ್ಟಕ್ಕೆ ಹಾರಿ ಹೋಗುವುದೂ ಅವಕ್ಕೆ ತನ್ನಷ್ಟಕ್ಕೆ ಬೆಂಕಿ ಹಿಡಿಯುವುದೂ ಕಂಡುಬಂದಿದೆ ಸ್ಥಳೀಯ ಪೋಲಿಸರಿಗೆ ಈ ಅದೃಶ್ಯ ಶಕ್ತಿಯ ರಹಸ್ಯವಿನ್ನೂ ಪತ್ತೆಯಾಗಲಿಲ್ಲ

★

ಸಂಯುಕ್ತ ಅಮೇರಿಕದ ಒಂದು ರೈಲ್ವೆ ಸಂಸ್ಥೆಯವರು ಗಂಟೆಗೆ 150 ಮೈಲು ವೇಗದಲ್ಲಿ ಓಡುವ ಜಗತ್ತಿನ ಅತೀ ವೇಗದ ರೈಲು ಇಂಜಿನನ್ನು ದಿನನಿತ್ಯದ ಪ್ರಯಾಣಕ್ಕೆ ಉಪಯೋಗಿಸಲು ತಯಾರು ಮಾಡುತ್ತಲಿರುವರು

★

ಪೊಲ್ ಮೇನಾರ್ಡ್ ಎಂಬ 24 ವರ್ಷದ ಕೊಲೆಗಡುಕನು ತನ್ನನ್ನು ಫಾಸಿಗೆ ಹಾಕಿದ ಕೂಡಲೆ ತನ್ನ ಕಣ್ಣುಗಳನ್ನು ಜೈಲಿನ ವಾರ್ಡನನ ಕಣ್ಣು ಸರಿಮಾಡಲು ಉಪಯೋಗಿಸಬೇಕೆಂದು ಮರಣ ಪತ್ರ ಬರೆದನು ಒಂದು ಗುಂಡಿನವಘಡದಲ್ಲಿ ವಾರ್ಡನನ ಕಣ್ಣೊಂದು ಹಾಳಾಗಿತ್ತು ಶಸ್ತ್ರ ಚಿಕಿತ್ಸಕರು ಮೇನಾರ್ಡನ ಆಶಯದಂತೆ ಮಾಡಲು ವಾರ್ಡನನ ದೃಷ್ಟಿ ಸರಿಯಾಯಿತು. ಜೈಲಿನಲ್ಲಿದ್ದಾಗ ವಾರ್ಡನನಿಗೂ ಮೇನಾರ್ಡನಿಗೂ ತುಂಬಾ ಸ್ನೇಹ ಬೆಳೆದಿತ್ತು

★

ಬೆಳ್ಳಿಯ ಕೊರತೆಯಿಂದಾಗಿ ಹೈದರಾಬಾದ್ ಸರಕಾರದವರು ನಿಕ್ಕೆಲಿನ ರೂಪಾಯಿ ನಾಣ್ಯಗಳನ್ನು ಮಾಡಲು ನಿರ್ಧರಿಸಿರುವರು

★

ತಿಂದ ಆಹಾರ ಕಲ್ಲಾಗುವ ರೀತಿನೀತಿಗಳು

ಊಟದ ಸಮಯ ಪ್ರಶಾಂತತೆಯಿರಬೇಕು

ಊಟ ಮಾಡುವಾಗ ನಿಮ್ಮ ಮಾನಸೀಕ ಪರಿಸ್ಥಿತಿ ಹೇಗಿರುವುದೆಂದು ತಿಳಕೊಂಡಿರುವಿರೇನು? ಇಲ್ಲವಾದರೆ ಇನ್ನೊಂದು ಸಲ ಪರಿಶೀಲಿಸಿ ನೋಡಿರಿ ಆಗ ನಿಮಗೆ ಕೆಲವು ಉಪಯುಕ್ತ ವಿಷಯಗಳು ತಿಳಿಯುವವು ಅನೇಕ ಸಲ ನೀವು ಅವಸರದಿಂದ ಉಣ್ಣುತ್ತೀರಿ ಆಗ ನಿಮ್ಮ ಮನಸ್ಸಿನಲ್ಲಿ ಜೀವನದ ಹಲವು ಸಮಸ್ಯೆಗಳು ಕಳವಳವನ್ನುಂಟು ಮಾಡುವುದೂ ಇದೆ ಪರಿಣಾಮವಾಗಿ ಹೆಂಡತಿಯ ಇಲ್ಲವೆ ಆಳಿನ ದುಂದುಗಾರಿಗೆಯ ವಿಷಯವಾಗಿ ಆಗಲಿ, ಇಲ್ಲವೆ ಮಕ್ಕಳ ದುರ್ನಡತೆಯ ವಿಷಯವಾಗಿ ಆಗಲಿ, ಇಲ್ಲವೆ ಮಕ್ಕಳ ಪಾಠ ಕಲಿಯುವ ವಿಷಯವಾಗಿ ಆಗಲಿ ನೀವು ರೇಗಿ ಬೀಳುತ್ತೀರಿ

ಒಂದು ತಲಾಂತರದ ಹಿಂದಿನ ನಮ್ಮ ಪೂರ್ವಜರು ತುಂಬಾ ವಿವೇಕಿಗಳಾಗಿದ್ದರು ಮತೀಯ ಆಚಾರಗಳಷ್ಟೇ ಮಹತ್ವವನ್ನವರು ಊಟೋಪಚಾರಕ್ಕೆ ಕೊಡುತಿದ್ದರು ಕೆಲವು ಸಮಯ ಔತಣದ ಆಡಂಬರವು ಇತರ ಎಲ್ಲಾ ವಿಷಯಗಳಿಗಿಂತಲೂ ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತಿತ್ತೆಂದರೂ ಅತಿಶಯವಲ್ಲ ಇಷ್ಟಾದರೂ ಅವರು ತಮ್ಮ ಭೋಜನವನ್ನ ಸಾವಧಾನವಾಗಿಯೂ, ಪ್ರಶಾಂತತೆಯಿಂದಲೂ ಭುಂಜಿಸುತಿದ್ದರು ಈಗ ಆ ಹಿಂದೂ ಮುಸಲ್ಮಾನರಿಗೆ ಊಟದ ಸಮಯವು ದಿನದ ಕಾರ್ಯಕ್ರಮದ ಅತೀ ಮುಖ್ಯ ಕಾರ್ಯಕ್ರಮಗಳಲ್ಲೊಂದೆನಿಸುತ್ತದೆ ಅಡಿಗೆ ಮನೆಯ ಮತ್ತು ಭೋಜನ ಮಂದಿರದ ನೆಮ್ಮದಿಯನ್ನು ಕೆಡಿಸಲ ಅವರೆಂದಿಗೂ ಇಷ್ಟಪಡುವುದಿಲ್ಲ "ಯಾವುದಕ್ಕೂ ಊಟವೊಂದಾಗಲಿ" "ಸುಖದಲ್ಲಿ ಬಂಡಗಳ ತಿನ್ನುವಂತೆ ದೇವರು ಕರುಣಿಸಲಿ" ಎಂದು ಹೇಳುವುದು ಸಾಮಾನ್ಯವಾಗಿ ಅನುಭವಕ್ಕೆ ಬರುತ್ತದೆ ಮತ್ತೆ ಅಡಿಗೆ ಮನೆಯ ನಿರ್ಮಲತ್ವ, ಕೈಕಾಲುಗಳ, ಬಾಯಿ ಹಲ್ಲುಗಳ ಶುದ್ಧತೆಗೆ ಅತ್ಯಂತ ಮಹತ್ವ ಕೊಡಲಾಗುತ್ತದೆ ಕಾರಣ ಆರಾಮವಾಗಿ ಕುಳಿತುಣ್ಣುವ ವಾತಾವರಣವು ಬಹಳ ತೃಪ್ತಿಯನ್ನುಂಟುಮಾಡುವುದು. ಊಟದ ಮೊದಲೇ ಸ್ನಾನ ಮಾಡುವುದರಿಂದ ಶರೀರವು ಶುದ್ಧವಾಗಿ ಅದರ ಪರಿಣಾಮದಿಂದ ಮನಸ್ಸೂ ಶಾಂತವಾಗುತ್ತದೆ

ಗೃಹಿಣಿಯ ನಾಯಕತ್ವ

ಅಡಿಗೆ ಮನೆಯ ಪೌರೋಹಿತ್ಯವನ್ನು ಮನೆಯ ಯಜಮಾನಿಯು ವಹಿಸುವಳು ಅವಳು ಎಲ್ಲರದ್ದೂ ಮುಗಿದ ನಂತರವೇ ಊಟ ಮಾಡುವುದರಲ್ಲೂ ಒಂದು ವೈಶಿಷ್ಟ್ಯವಿದೆ ತಯಾರಿಸಿದ ಆಹಾರವನ್ನು ಶುದ್ಧವಾಗಿಯೂ ಆಕರ್ಷಕವಾಗಿಯೂ ವಿತರಣೆ ಮಾಡಲು ಅವಳಿಗೆ ಅದರಿಂದ ಸಾಧ್ಯವಾಗುವುದು ಸರ್ವ ಸಾಧಾರಣವಾಗಿ ಹಿಂದೂ ಪದ್ಧತಿಯ ಪ್ರಕಾರ ಊಟವಾರಂಭಕ್ಕೆ ಮೊದಲು ದೇವ ಪ್ರಾರ್ಥನೆಯನ್ನು ಮಾಡಬೇಕು ಆಹಾರದ ಒಂದು ಭಾಗವನ್ನು ಗೋವುಗಳಿಗೂ, ಕಾಗೆ ನಾಯಿಗಳಿಗೂ, ಬಡ ಬಗ್ಗರಿಗಾಗಿಯೂ ಪ್ರತ್ಯೇಕಿಸಿಡಲಾಗುವುದು ಊಟದ ಸಮಯದ ವಾತಾವರಣವನ್ನು ಉದಾತ್ತ ಭಾವ ಭರಿತವಾಗಿ ಮಾಡುವುದಕ್ಕೂ ಉಣ್ಣುವವರ ಮನಸ್ಸಿನಲ್ಲಿ ನೆಮ್ಮದಿಯನ್ನುಂಟುಮಾಡುವುದಕ್ಕೂ ಈ ಪದ್ಧತಿಯು ತುಂಬಾ ಸಹಾಯಕಾರಿಯಾಗುತ್ತದೆಂದು ಪೂರ್ವಿಕರು ಇದನ್ನು ನಮ್ಮ ಆಚಾರ ವಿಚಾರಗಳಲ್ಲಿ ಸೇರಿಸಿರುವರು ಕ್ರೈಸ್ತ ಮುಸಲ್ಮಾನರಲ್ಲೂ ಊಟಕ್ಕೆ ಮೊದಲು ದೇವ ಪ್ರಾರ್ಥನೆಯ ಸಾಂಪ್ರದಾಯವಿದೆ

ಆದರೆ ಆಧುನಿಕ ಜನ ಜೀವನದಲ್ಲಿ ಇಂತಹ ಉಪಯುಕ್ತ ರೂಢಿ ಅಭ್ಯಾಸಗಳು ಮರೆಯಲ್ಪಟ್ಟಿವೆ ಊಟವೆಂಬುದೊಂದು ಇಂದು ಕೇವಲ ಯಾಂತ್ರಿಕ ಕಾರ್ಯಕ್ರಮವಾಗಿದೆ ಅದಕ್ಕೆ ಬೇಕಾಗುವ ಸಾವಧಾನದ ಬಿಡುವೂ ನಮಗಿಲ್ಲವಾಗಿದೆ ಖಂಡಿತವಾಗಿಯೂ ನಾವು ಉಣ್ಣಲಿಕ್ಕೋಸುಗವೇ ಬದುಕುವುದಲ್ಲವಾದರೂ ಕೇವಲ ಬದುಕಲಿಕ್ಕೆ ಮಾತ್ರ ಉಣ್ಣಬೇಕೆಂಬುದೂ ಶುದ್ಧ ತಪ್ಪು, ಆದರೆ ಸರಿಯಾಗಿ ಜೀವಿಸಿಕೊಂಡಿರಬೇಕಾದರೆ ಮತ್ತು ಆಯುರಾರೋಗ್ಯಗಳು ಉತ್ತಮವಾಗಬೇಕಾದರೆ ಯೋಗ್ಯ ಆಹಾರೋಪಚಾರದ ಶಿಸ್ತನ್ನೂ ನಾವು ಇಟ್ಟುಕೊಳ್ಳಬೇಕಾದುದು ಅತ್ಯಾವಶ್ಯಕ

ಊಟದ ಕೋಣೆಯಲ್ಲಿನ ಪ್ರಶಾಂತ ವಾತಾವರಣವು ಜೀರ್ಣ ಕಾರ್ಯಕ್ಕೆ ತುಂಬಾ ಸಹಾಯಕಾರಿಯಾಗಿದೆ ಮಾನಸೀಕ ನೆಮ್ಮದಿಯಿಲ್ಲದಿದ್ದರೆ ಊಟವನ್ನೆ ಮಾಡದಿರುವುದೊಳಿತು ಕಾರಣ ಅದರಿಂದ ಕೆಡುಕಲ್ಲದೆ ಒಳಿತಿಲ್ಲ ಆದರೆ ಇಂದಿನ ನಗರ ಜೀವನದ ಒಂದು ಸುರ್ದೆಶೆಯೆಂದರೆ ತಂದೆ ಯಾದವನಿಗೆ ತನ್ನ ಮಕ್ಕಳೊಡನೆ ಮಾತನಾಡಲು ಸಿಗುವ ಸಮಯವು ಅದೊಂದೇಯಾಗಿರುವುದು ಆಗಲೇ ಅವನು ಬೈಯುವ ಮತ್ತು ಬೋಧಿಸುವ ತನ್ನ 'ಕರ್ತವ್ಯ'ವನ್ನು ತೀರಿಸಿ ಬಿಡುತ್ತಾನೆ

ಚಿಕ್ಕ ಬಾಲಕನು ಊಟದ ಸಮಯದಲ್ಲಿ ಒಳ್ಳೇ ತಿಂಡಿ ಪದಾರ್ಥ ಇಲ್ಲವೆ ಭಕ್ಷ್ಯ ಭೋಜನಗಳ ಬದಲಿಗೆ ತನಗೆ ಚೆನ್ನಾದ ಭೀತಿ ಬೆದರಿಕೆ ಗದರಿಕೆಗಳ ಪ್ರಸಾದ ಸಿಕ್ಕುವದೆಂದೇ ನಿರೀಕ್ಷಿಸಿ ಕೊಂಡಿರುತ್ತಾನೆ. ಪಾಟ ಓದದಕ್ಕೆ, ಊಟ ಮಾಡಿದಕ್ಕೆ ಮಾರ್ಕು ಕಡಿಮೆ ಸಿಕ್ಕಿದಕ್ಕೆ, ಪೈಲಾದಕ್ಕೆ, ಶಾಲೆ ತಪ್ಪಿಸಿ ಮೇಚ್ ನೋಡಲು ಹೋದದಕ್ಕೆ ತನಗೆ ಪುರಸ್ಕಾರ ಸಿಗುವ ಸಮಯವೇ ಊಟದ ಕಾಲವೆಂದವನು ಕಳವಳಗೊಳ್ಳುವನು ಹಸಿದ ತಂದೆಯಾದರೊ ಉದ್ರೇಕಗೊಡವನಾಗಿ ತನ್ನ ಪಚನ ಕ್ರಿಯೆಗೆ ತೊಡಕನ್ನು ತಂದು ಕೊಳ್ಳುವನು ಹೀಗೆ ತಂದೆ ಮಕ್ಕಳಿರ್ವರೂ ಆರೋಗ್ಯ ಹಾನಿಗೀಡಾಗುವರು

ಹೊಟ್ಟೆಯೊಳಗಿನ ಕಾರ್ಯ

ಊಟದ ಸಮಯದಲ್ಲಿ ಗದರಿಸಲ್ಪಡುವ ಮಕ್ಕಳ ಉದರ ಪರಿಸ್ಥಿತಿಯೂ ಕಂಗೆಡುತ್ತದೆ ಕೆಲವೊಂದು ಅನಿಷ್ಟ ರಸಗಳು ಉತ್ಪನ್ನವಾಗುವವು ಉದ್ರೇಕಗೊಳ್ಳುವ ತಂದೆಯಾದರೂ ಈ ಕಂಟಕದಿಂದ ಪಾರಾಗುವುದಿಲ್ಲ ಅವನ ಹೊಟ್ಟೆಯೊಳಗೂ ಈ ಕೆಟ್ಟ ರಸ ಧಾತುಗಳು ಒಸರುವಂತಾಗುವವು ಮಾತ್ರವಲ್ಲ ಅವನ ಹೃತ್ಕೋಶಕ್ಕೂ ಸ್ವಲ್ಪ ದಕ್ಕೆ ತಗಲುತ್ತದೆ ಅವನು ತನ್ನ ನಿತ್ಯದ ಉದ್ಯೋಗಕ್ಕೆ ಹೋಗುವಾಗಲೂ ಅತೃಪ್ತಿಯಿಂದಲೂ ಕಳವಳದಿಂದಲೂ ಹೋಗುವನು ಪರಿಣಾಮವಾಗಿ ಅವನ ಸಂಸಾರ ಸಮಸ್ಯೆಗಳು ಇನ್ನಷ್ಟು ಕಠಿಣವಾಗುವವು

ಆಧುನಿಕ ವಿಜ್ಞಾನವು ಇಷ್ಟೊಂದು ವಿಕಾಸಗೊಂಡ ಈ ಕಾಲದಲ್ಲೂ, ಆಹಾರ ಮೌಲ್ಯಗಳ ಜ್ಞಾನವು ವಿಶಾಲವಾಗಿ ಪ್ರಚಾರಗೊಂಡಿರ ವಾಗಲೂ ಹೆತ್ತವರು ತಪ್ಪು ಊಟದ ಸಮಯದ ವಾತಾವರಣವನ್ನು ಕೆಡಿಸುವ ತಪ್ಪನ್ನು ಮಾಡುತ್ತಲಿರುವುದು ಅತ್ಯಂತ ಖೇದಕರವಾದ ವಿಷಯ.

ಆದುದರಿಂದ ನಾವು ಯಾವಾಗಲೂ ಜಾಗರೂಕತೆಯಿಂದಿರೋಣ—ಶಾರೀರಿಕವಾಗಿಯೂ ಮಾನಸೀಕವಾಗಿಯೂ ನಾವು ನೈರ್ಮಲ್ಯ ನೆಮ್ಮದಿಗಳನ್ನು ಕಾಪಾಡೋಣ. ಊಟದ ಸಮಯವು ಸಂಸಾರ ಕಾಟದ ಕಾಲವಾಗದಿರಲಿ. ಪ್ರತಿಯೊಬ್ಬರೂ ದುಃಖವನ್ನುಂಟುಮಾಡುವ ಸಂಗತಿಗಳನ್ನು ಊಟದ ಕೊಠಡಿಯಲ್ಲಿ ಎತ್ತದಂತೆ ನೋಡಿ ಕೊಂಡರೆ ನಮ್ಮ ಅನೇಕ ಸಂಸಾರ ತಾಪತ್ರಯಗಳು ನೆಮ್ಮದಿಯಿಂದ ನಿವಾರಣೆಯಾಗಬಲ್ಲವು.

★ 1948ರ ಜನವರಿ 1ರಿಂದ ಫ್ರೆಂಚ್ ವಸಾಹತುಗಳಾದ ಕಾರೈಕಲ್ ಮತ್ತು ಮಾಹೆಗಳಲ್ಲಿ ಪಾನನಿರೋಧವು ಜಾರಿಗೆ ತರಲ್ಪಡುತ್ತದೆಂದು ಸಾರಲಾಗಿದೆ

★ ಮೈಸೂರಲ್ಲಿ ತಾತ್ಕಾಲಿಕ ಸರಕಾರವನ್ನು ರಚಿಸುವ ವಿಧಾನದ ಕುರಿತು ಅಲ್ಲಿನ ಕೊಂಗ್ರೆಸ್ ಕಾರ್ಯಕಾರಿ ಮಂಡಳವು ಪರ್ಯಾಲೋಚಿಸುತ್ತದೆ ಈ ಸರಕಾರದಲ್ಲಿ ಆರು ಸಂಸ್ಥಾನ ಕೊಂಗ್ರೆಸ್ ಪ್ರತಿನಿಧಿಗಳೂ ಮೂರು ಕೊಂಗ್ರೆಸ್ಸೇತರರೂ ಇರುವರು ಸಂಸ್ಥಾನ ಮುಸ್ಲಿಂ ಲೀಗಿನಿಂದ ಓರ್ವ ಮಂತ್ರಿಯನ್ನು ಆರಿಸಲಾಗುವುದು

★ ಪಶ್ಚಿಮ ಪಂಜಾಬ ಮತ್ತು ಗಡಿನಾಡಿನ 39 ಲಕ್ಷ ಮುಸ್ಲಿಮೇತರರಲ್ಲಿ 19 ಲಕ್ಷ ಮಂದಿಗಳು ಭಾರತಕ್ಕೆ ಬಂದಿರುವರು ಉಳಿದವರಲ್ಲಿ 18 ಲಕ್ಷ ಮಂದಿಗಳು ಪಾಕಿಸ್ಥಾನ ಪ್ರದೇಶದ ನಿರಾಶ್ರಿತ ಶಿಬಿರಗಳಲ್ಲಿ ಅತಿ ಕನಿಕರಾಸ್ಪದಾವಸ್ಥೆಯಲ್ಲಿರುವರೆಂದೂ ನವೆಂಬರ್ 15ರೊಳಗ ಅವರನ್ನು ಈ ಕಡೆ ತರಿಸದಿದ್ದರೆ ಅವರೆಲ್ಲರೂ ಚಳಿ ಮತ್ತು ಉಪವಾಸದಿಂದ ನಾಶವಾಗಬಹುದೆಂದೂ ಒಂದು ಪತ್ರಿಕೆಯು ಎಚ್ಚರಿಸುತ್ತದೆ

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಿಕ್ಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟ ನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೆಲವು ಲ್ಯಾಯಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣಗಾಗಿ ಮಂಗ್ಳೂರು–ಮುಲ್ಕಿ ಲ್ಯಾಯಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಿಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜೊಯಿಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs 5,26,000

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ

ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:

MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಕಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 31—10—1947 [ಸಂಚಿಕೆ 43]

ಆಧುನಿಕ ಸ್ತ್ರೀಯರ ಸಮಸ್ಯೆಗಳು

ಮದುವೆಯೊ ಉದ್ಯೋಗವೊ ಎಂಬ ಪ್ರಶ್ನೆ

ಭಾರತೀಯ ಸಂಸ್ಕೃತಿಯ ಆದರ್ಶ

ಇಂಗ್ಲಿಷ್ ಸಮಾಜದಲ್ಲಿ ವಿವಾಹಿತ ಸ್ತ್ರೀಯರಿಗೊಂದು ಪ್ರತ್ಯೇಕ ಗೌರವದ ಸ್ಥಾನಮಾನವಿದೆ ಆದುದರಿಂದ ಅಲ್ಲಿನ ಸ್ತ್ರೀಯರು ಮದುವೆಮಾಡಿಕೊಳ್ಳುವುದರಲ್ಲಿ ನಾಲ್ಕು ಉದ್ದೇಶಗಳಿವೆ ಪ್ರೀತಿಗಾಗಿ ಸಂಸಾರಕ್ಕಾಗಿ, ಮತ್ತು ಗೌರವಕ್ಕಾಗಿ ಕೊನೆಯದಾಗಿ ತಮ್ಮಿಂದ ಸ್ವಂತ ಸಂಪಾದನೆ ಮಾಡಲಿಕ್ಕಾಗದವರು ಇತರರ ಮೇಲೆ ಹೊಂದಿಕೊಂಡಿರಲಿಕ್ಕಾಗಿ ಮದುವೆ ಮಾಡಿಕೊಳ್ಳುವವರ ವರ್ಗವೊಂದೂ ಅಲ್ಲಿದೆ

ಮೇಲ್ಕಂಡ ನಾಲ್ಕು ಉದ್ದೇಶಗಳಲ್ಲಿ ಮೊದಲನೆ ಎರಡಾದ—ಪ್ರೀತಿ ಮತ್ತು ಸಂಸಾರ ಉದ್ದೇಶವುಗಳು—ಹೆಚ್ಚಾಗಿ ಇಂಗ್ಲೆಂಡಿನಲ್ಲಿ ಈಗ ಸಂಭವಿಸುವ ವಿವಾಹಗಳು. ಇವುಗಳ ಸಂಖ್ಯೆ ಹೆಚ್ಚಾಗಿದ್ದರೂ ಹೀಗೆ ವಿವಾಹವಾದವರು ಕೊನೆಯ ತನಕ ಸಂಸಾರ ಬಂಧನದಲ್ಲಿರುತ್ತಾರೆಂದು ಹೇಳಬರುವುದಿಲ್ಲ ಹೆಚ್ಚಿನವು ವಿವಾಹ ವಿಚ್ಛೇದದಲ್ಲಿ ಕೊನೆಗೊಳ್ಳುತ್ತವೆ ಮೂರನೆಯದಾದ ಗೌರವದ ಉದ್ದೇಶವು ಈಗ ಕಡಿಮೆ ಯಾಗುತ್ತಲಿದೆ ಕಾರಣ ಅವಿವಾಹಿತೆಯಾಗಿಯೆ ಓರ್ವ ಮಹಿಳೆಯು ಸ್ವಂತ ಸಾಮರ್ಥ್ಯದಿಂದ ತನ್ನ ಉದರ ಪೋಷಣೆ ಮಾಡುವುದರೊಡನೆ ಗೌರವ ಮನ್ನಣೆಗಳನ್ನು ಪಡೆಯಲೂ ಈಗಲ್ಲಿ ತುಂಬಾ ಸಂದರ್ಭಗಳಿವೆ ಸ್ತ್ರೀ ಪುರುಷರಿಗೆ ಸಮಾನವಾಗಿ ತೆರವಾಗಿರುವ ಉದ್ಯೋಗ ಸಂದರ್ಭಗಳಿಂದಲೂ ಅಲ್ಲಿನ ಜನರು ವಿಶೇಷವಾದ ಯಾವ ಆರ್ಥಿಕ ತೊಡಕಿಗೂ ಸಿಲುಕದೆ ಜೀವನ ನಿರ್ವಹಿಸಲು ಬರುವುದರಿಂದ ಈ ಸಂಗತಿಯು ವಿವಾಹ ಮಾಡಿಕೊಳ್ಳುವುದರ ವಿರೋಧ ತುಂಬಾ ಪ್ರತಿಬಂಧಕವಾಗಿದೆ.

ಭಾರತದಂತೆ ಈಗೀಗ ಇಂಗ್ಲೆಂಡಿನ ಸ್ತ್ರೀಯರೂ ಸ್ವಂತ ದುಡಿಮೆಯ ಸಂಕಷ್ಟದಿಂದ ಪಾರಾಗಲೋಸುಗವೇ ಹೆಚ್ಚಾಗಿ ವಿವಾಹವನ್ನು ಮಾಡಿಕೊಳ್ಳುವ ವಿಧಾನವೇ ಅಲ್ಲಿ ಹೆಚ್ಚುತ್ತಿದೆ ಸ್ತ್ರೀಯರಿಗೆ ಗೃಹಿಣಿತ್ವವೇ ಯೋಗ್ಯವಾದುದೆಂಬ ಭಾವನೆಯು ಅಲ್ಲಿ ಹೆಚ್ಚುತ್ತಿದೆ. ಸ್ವಲ್ಪ ಸಮಯದ ತನಕ ಸ್ತ್ರೀಯರು ಯಾವುದಾದರೊಂದು ಉದ್ಯೋಗ ಮಾಡಿ ಸಂಪಾದನೆ ಮಾಡಲು ಆಕರ್ಷಿತರಾಗುವರಾದರೂ ಹೆಚ್ಚಿನವರು ಪುರುಷರಂತೆ ಎಲ್ಲಾ ತರದ ಉದ್ಯೋಗಗಳಲ್ಲೂ ಯಶಸ್ವಿಯಾಗಿ ಸಂಪಾದನೆಗೈಯ್ಯುವುದು ಕಷ್ಟತರವೆಂದೇ ಕಂಡುಕೊಂಡಿರುವರು ಜೀವನವೆಲ್ಲವನ್ನು ದಿನನಿತ್ಯದ ಮಜೂರಿ ಶ್ರಮದಿಂದ ಕಳೆಯುವ ಆಕರ್ಷಣೆಯೂ ಬಹಳ ಕಡಿಮೆಯಾಗುತ್ತಿದ್ದು ಇಂದಿನ ಆಂಗ್ಲ ತರುಣಿಯರು ವಿವಾಹವನ್ನು 'ಶುಭಸ್ಯ ಶೀಘ್ರಂ' ಎಂಬ ತತ್ವಕ್ಕನುಸಾರವಾಗಿ ಮಾಡಿಕೊಳ್ಳುತ್ತಿರುವರು ಹೀಗೆ ಸಂಸಾರ ಜೀವನಕ್ಕಾಗಿ ತನ್ನ ಉದ್ಯೋಗಕ್ಕೆ ತಿಲಾಂಜಲಿ ಕೊಡುವ ಮೂಲಕ ತರುಣಿಯು ತನ್ನ ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವಳು

ಕಠಿಣ ಸಮಸ್ಯೆ

ಆದರೆ ಪ್ರಣತಿಯ ಆವಶ್ಯಕತೆಯುಳ್ಳ ಉದ್ಯೋಗಗಳಲ್ಲಿದ್ದ ಸ್ತ್ರೀಯರ ತಮ್ಮ ದಂಧೆಯನ್ನು ಬಿಡುವ ಮೊದಲು ಕೆಲವು ವಿಷಯಗಳನ್ನು ವಿಮರ್ಶಿಸಬೇಕಾಗುತ್ತದೆ ಆಸ್ಪತ್ರೆಯಲ್ಲಿ ಅವಳಿಗೆ ಸಿಗುವುದ [illegible] ಗಳಿಂದ ಅವಳ ತನ್ನ ಶಿಕ್ಷಣ ತರಬೇತಿಗಾಗಿ ಪಡೆದ ಸಾಲ ಆ ಕುರಿತು ಅವಳು ಕಡ್ಡಾಯವಾಗಿ ನಿರ್ವಹಿಸಬೇಕಾದ ಕರ್ತವ್ಯಗಳು, ಮ [illegible] ವುಗಳು ಅವಳ ಮನಸ್ಸನ್ನು ನಿರುತ್ಸಾಹಗೊಳಿಸುವವು ಕಾರಣ ಓರ್ವ ಸ್ತ್ರೀಯು ವೈದ್ಯ ವ್ಯಕ್ತಿಯಾಗಲಿ, ಗಂಧ ಒಡಾರ ಚಾಲಿಕಳಾಗಿಯಾಗಲಿ ಇಲ್ಲವೆ ಉಪಾಧ್ಯಾಯಿನಿಯಾಗಿ ಆಗಲಿ ಇದ್ದರೆ ವಿವಾಹಾನಂತರ ಒಂದೇ ಈ ಉದ್ಯೋಗಗಳನ್ನು ಸಂಪೂರ್ಣ ಬಿಟ್ಟು ಬಿಡಬೇಕಾಗುವುದು ಇವನ್ನು ಇಚ್ಛೆಪಟ್ಟಾಗ ಅರ್ಧ-ಪೂರ್ಣವಾಗಿ ಮುಂದರಿಸಲು ಸಾಧ್ಯವಿಲ್ಲ ಮಾತ್ರವಲ್ಲ ಇಂತಹ ಉದ್ಯೋಗಗಳಲ್ಲಿ ಆನಂದದಾಯಕವಾದ ಒಂದು ಆತ್ಮತೃಪ್ತಿಯೂ ದೊರಕುತ್ತದೆ ಆದುದರಿಂದ ಇವನ್ನು ಬಿಟ್ಟು ಬಿಡುವಾಗ ಸಹಿಸಲಸದಳವಾದ ಮಾನಸಿಕ ವೇದನೆಯಾಗುವುದುಂಟು ಅದೇ ಸಮಯಕ್ಕೆ ಎರಡು ವರ್ಗದವರಾದ ಮಹಿಳೆಯರಿಗೆ ತಮ್ಮ ವೃತ್ತಿಗಳೊಡನೆಗೆ ಕೊನೆಯ ತನಕ ನಿರ್ವಹಿಸಿಕೊಂಡಿರುವುದು ಕಷ್ಟಸಾಧ್ಯವೆಂದು ತೋರುತ್ತದೆ

ಇಂಗ್ಲೆಂಡಿನಲ್ಲಿ ಮೊದಲನೇ ಸಲ ಮಹಿಳಾ ಚಳವಳಿಯಾರಂಭಿಸಲ್ಪಟ್ಟಾಗ ಅದರ ಕರ್ತೃಗಳಿಗೆ ಈ ವೊಂದು ಸಮಸ್ಯೆಯು ಬಲವಾಗಿ ಎದುರಿಸಿತು ಸಂಸಾರಿಗಳಾಗಿಯೂ ತಮ್ಮ ಉದ್ಯೋಗವನ್ನೂ ಇಟ್ಟುಕೊಳ್ಳಲು ಪ್ರಯತ್ನಿಸಿದವರು ತಮ್ಮ ಮನೆಕೆಲಸವನ್ನು ಬೇರೆ ಚಾಕರಿಗೆ ಬಿಲ್ಲುವ ಸ್ತ್ರೀಯರಿಂದ ಮಾಡಿಸಬಹುದೆಂದೂ, ತಮ್ಮ ಮಕ್ಕಳನ್ನು ದಾದಿಗಳಿಟ್ಟು ಸಲಹಬಹುದೆಂದೂ ಧೈರ್ಯ ತಾಳಿರುತ್ತಾರೆ

ಆದರೆ ಇಂದಿನ ಪರಿಸ್ಥಿತಿಯಲ್ಲಿ ಮನೆಕೆಲಸದವರನ್ನಿಟ್ಟುಕೊಳ್ಳುವುದು ಇಂಗ್ಲೆಂಡಿನಂತಹ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದ ದೇಶದಲ್ಲಿ ಬಹಳ ಕಠಿಣವೇ ಆಗಿದೆ ಆಹಾರ ಬಟ್ಟೆಯ ತೊಂದರೆಗಳಂತೂ ಹೆಚ್ಚಿನ ಸುಖಲೋಲುಪತೆಗೆ ಎಡೆಕೊಡಲಾರವು ಮಾತ್ರವಲ್ಲ ಆಧುನಿಕ ಗೃಹ ವಿಜ್ಞಾನ ಕಲಿತ ತರುಣಿಯರು ಮನೆಗೆಲಸವನ್ನು ಅನೇಕ ಯಂತ್ರೋಪಕರಣಗಳ ಸಹಾಯದಿಂದ ನಿರ್ವಹಿಸಲು ಹೆಚ್ಚು ಆಸಕ್ತರಾಗಿರುವರು. ಅಲ್ಲದೆ ಇಂದಿನ ಮನೆಗಳಲ್ಲಿ ಮಾಡಬೇಕಾದ ಕೆಲಸವೂ ಹೆಚ್ಚಿದೆ ಅದೇ ಸಮಯಕ್ಕೆ ಕೆಲಸದವರು ಸಿಗುವುದು ದುರ್ಲಭ ಇಂತಹ ಪರಿಸ್ಥಿತಿಯಲ್ಲಿ ಉದ್ಯೋಗದಲ್ಲಿರುವ ಮಹಿಳೆ ತನ್ನ ವ್ಯಾಪ್ತಿಯ ಕೆಲಸ ಮುಗಿಸಿ ಮತ್ತೆ ಗೃಹಕೃತ್ಯಗಳನ್ನೆಸಗುವುದೆಂದರೆ ವಿಪರೀತ ಶ್ರಮವೇ ಆಗುತ್ತದೆ ಆದುದರಿಂದ ಅವಳು ಒಂದೋ ತನ್ನ ಉದ್ಯೋಗವನ್ನೇ ನೋಡಿಕೊಳ್ಳಬೇಕು ಇಲ್ಲವೆ ಸಂಪೂರ್ಣ ಮನೆ ಕೆಲಸದಲ್ಲಿ ಮಗ್ನಳಾಗಿರಬೇಕಾಗುತ್ತದೆ

ಇದಲ್ಲದೆ ಹೆತ್ತವರು ತಮ್ಮ ಉದ್ಯೋಗದಲ್ಲೇ ಮಗ್ನರಾಗಿರುವಂತಹರಾದರೆ ಆರೈಕೆ ಸರಿಯಿಲ್ಲದ ಅವರ ಮಕ್ಕಳ ಮಾನಸಿಕ ಬೆಳವಣಿಗೆಯು ಯೋಗ್ಯ ವಾತಾವರಣದ ಕೊರತೆಯಿಂದ ಕುಂಠಿತವಾಗುವುದೆಂದು ಮನೋಶಾಸ್ತ್ರಜ್ಞರು ತಿಳಿಸುತ್ತಾರೆ ಈ ಸಂಗತಿಯು ಪ್ರಾಚೀನ ಭಾರತೀಯರಿಗೆ ಚೆನ್ನಾಗಿ ತಿಳಿದಿತ್ತು ಆದುದರಿಂದಲೇ ಅವರು ಮಹಿಳೆಗೆ ಗೃಹಿಣಿತ್ವವೇ ಯೋಗ್ಯವಾದುದೆಂದು ಉಪದೇಶಿಸಿದ್ದರು. ಗೃಹಪರಾಯಣೆಯಾದ ಸ್ತ್ರೀಯು ಕೇವಲ ಕಟ್ಟಿಹಾಕಿದ ಜಾನುವಾರದಂತಿರಬೇಕೆಂದಿಲ್ಲ. ಅವಳು ತನ್ನ ಗಂಡನ ಆರ್ಥಿಕ ಸಂಪಾದನೆಯನ್ನು ಹೆಚ್ಚಿಸಲು ಅನೇಕ ಗೃಹಕೈಗಾರಿಕೆಗಳನ್ನು ವಿರಾಮ ಕಾಲದಲ್ಲಿ ಕೈಕೊಳ್ಳಬಹುದು. ಈ ಮರ್ಮವನ್ನಿಂದು ಪಾಶ್ಚಾತ್ಯ ಮಹಿಳೆಯರು ಮನ

(೨ನೆ ಪುಟಕ್ಕೆ ಮುಂದುವರಿದಿದೆ)

THE

UNITED INDIA LIFE ASSURANCE CO., LTD.

ESTD 1906 | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs 5,26,000

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 { **About 54 lakhs**

Our experience of 37 years available to you for arranging Insurance Investment

It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಹುಟ್ಟುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದು

ಡಿಪೋ. ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 31—10—1947 [ಸಂಚಿಕೆ 43]

ಆಧುನಿಕ ಸ್ತ್ರೀಯರ ಸಮಸ್ಯೆಗಳು

ಮದುವೆಯೋ ಉದ್ಯೋಗವೋ ಎಂಬ ಪ್ರಶ್ನೆ

ಭಾರತೀಯ ಸಂಸ್ಕೃತಿಯ ಆದರ್ಶ

ಇಂಗ್ಲಿಷ್ ಸಮಾಜದಲ್ಲಿ ವಿವಾಹಿತ ಸ್ತ್ರೀಯರಿಗೊಂದು ಪ್ರತ್ಯೇಕ ಗೌರವದ ಸ್ಥಾನಮಾನವಿದೆ. ಆದುದರಿಂದ ಅಲ್ಲಿನ ಸ್ತ್ರೀಯರು ಮದುವೆಮಾಡಿಕೊಳ್ಳುವುದರಲ್ಲಿ ನಾಲ್ಕು ಉದ್ದೇಶಗಳಿವೆ. ಪ್ರೀತಿಗಾಗಿ, ಸಂಸಾರಕ್ಕಾಗಿ ಮತ್ತು ಗೌರವಕ್ಕಾಗಿ ಕೊನೆಯದಾಗಿ ತಮ್ಮಿಂದ ಸ್ವಂತ ಸಂಪಾದನೆ ಮಾಡಲಿಕ್ಕಾಗದವರು ಇತರರ ಮೇಲೆ ಹೊಂದಿಕೊಂಡಿರಲಿಕ್ಕಾಗಿ ಮದುವೆ ಮಾಡಿಕೊಳ್ಳುವವರ ವರ್ಗವೊಂದು ಅಲ್ಲಿದೆ.

ಮೇಲ್ಕಂಡ ನಾಲ್ಕು ಉದ್ದೇಶಗಳಲ್ಲಿ ಮೊದಲನೆ ಎರಡಾದ-ಪ್ರೀತಿ ಮತ್ತು ಸಂಸಾರ ಉದ್ದೇಶವವುಗಳು-ಹೆಚ್ಚಾಗಿ ಇಂಗ್ಲೆಂಡಿನಲ್ಲಿ ಈಗ ಸಂಭವಿಸುವ ವಿವಾಹಗಳ ಇವುಗಳ ಸಂಖ್ಯೆ ಹೆಚ್ಚಾಗಿದ್ದರೂ ಹೀಗೆ ವಿವಾಹವಾದವರು ಕೊನೆಯ ತನಕ ಸಂಸಾರ ಬಂಧನದಲ್ಲಿರುತ್ತವೆಂದು ಹೇಳುವುದಿಲ್ಲ. ಹೆಚ್ಚಿನವು ವಿವಾಹ ವಿಚ್ಛೇದದಲ್ಲಿ ಕೊನೆಗೊಳ್ಳುತ್ತವ. ಮರ್ಯಾದೆಯಿಂದ ಗೌರವದ ಉದ್ದೇಶವು ಈಗ ಕಡಿಮೆಯಾಗುತ್ತಲಿದೆ. ಕಾರಣ ಅವಿವಾಹಿತೆಯಾಗಿಯೇ ಓರ್ವ ಮಹಿಳೆಯು ಸ್ವಂತ ಸಾಮರ್ಥ್ಯದಿಂದ ತನ್ನ ಉದರ ಪೋಷಣ ಮಾಡುವುದರೊಡನೆ ಗೌರವ ಮನ್ನಣೆಗಳನ್ನು ಪಡೆಯಲೂ ಈಗಲ್ಲಿ ತುಂಬಾ ಸಂದರ್ಭಗಳಿವೆ. ಸ್ತ್ರೀ ಪುರುಷರಿಗೆ ಸಮಾನವಾಗಿ ತೆರವಾಗಿರುವ ಉದ್ಯೋಗ ಸಂದರ್ಭಗಳಿಂದಾಗಿ ಅಲ್ಲಿನ ಜನರು ವಿಶೇಷವಾದ ಯಾವ ಆರ್ಥಿಕ ತೊಡಕಿಗೂ ಸಿಲುಕದೆ ಜೀವನ ನಿರ್ವಹಿಸಲು ಬರುವುದರಿಂದ ಈ ಸಂಗತಿಯು ವಿವಾಹ ಮಾಡಿಕೊಳ್ಳುವುದರ ವಿರೋಧ ತುಂಬಾ ಪ್ರತಿಬಂಧಕವಾಗಿದೆ.

ಭಾರತದಂತೆ ಈಗೀಗ ಇಂಗ್ಲೆಂಡಿನ ಸ್ತ್ರೀಯರೂ ಸ್ವಂತ ದುಡಿಮೆಯ ಸಂಕಷ್ಟದಿಂದ ಪಾರಾಗಲೋಸುಗವೇ ಹೆಚ್ಚಾಗಿ ವಿವಾಹವನ್ನು ಮಾಡಿಕೊಳ್ಳುವ ವಿಧಾನವೇ ಅಲ್ಲಿ ಹೆಚ್ಚುತ್ತಿದೆ. ಸ್ತ್ರೀಯರಿಗೆ ಗೃಹಿಣಿತ್ವವೇ ಯೋಗ್ಯವಾದುದೆಂಬ ಭಾವನೆಯು ಅಲ್ಲಿ ಹೆಚ್ಚುತ್ತಿದೆ. ಸ್ವಲ್ಪ ಸಮಯದ ತನಕ ಸ್ತ್ರೀಯರು ಯಾವದಾದರೊಂದು ಉದ್ಯೋಗ ಮಾಡಿ ಸಂಪಾದನೆ ಮಾಡಲು ಆಕರ್ಷಿತರಾಗುವರಾದರೂ ಹೆಚ್ಚಿನವರು ಪ್ರಚಲಿತ ಎಲ್ಲಾ ತರದ ಉದ್ಯೋಗಗಳಲ್ಲೂ ಯಶಸ್ವಿಯಾಗಿ ಸಂಪಾದನೆಗೆಯ್ಯುವುದು ಕಷ್ಟತರವೆಂದೇ ಕಂಡುಕೊಂಡಿರುವರು. ಜೀವನವೆಲ್ಲವನ್ನು ದಿನನಿತ್ಯದ ಮಜೂರಿ ಶ್ರಮದಿಂದ ಕಳೆಯುವ ಆಕರ್ಷಣೆಯೂ ಬಹಳ ಕಡಿಮೆಯಾಗುತಿದ್ದು ಇಂದಿನ ಆಂಗ್ಲ ತರುಣಿಯರು ವಿವಾಹವನ್ನು 'ಶುಭಸ್ಯ ಶೀಘ್ರ' ಎಂಬ ತತ್ವಕ್ಕನುಸಾರವಾಗಿ ಮಾಡಿಕೊಳ್ಳುತ್ತಿರುವರು. ಹೀಗೆ ಸಂಸಾರ ಜೀವನಕ್ಕಾಗಿ ತನ್ನ ಉದ್ಯೋಗಕ್ಕೆ ತಿಲಾಂಜಲಿಕೊಡುವ ಮಹಿಳೆ ತರುಣಿಯು ತನ್ನ ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವಳು.

ಕಠಿಣ ಸಮಸ್ಯೆ

ಆದರೆ ನಿಪುಣತೆಯ ಆವಶ್ಯಕತೆಯುಳ್ಳ ಉದ್ಯೋಗಗಳಲ್ಲಿದ್ದ ಸ್ತ್ರೀಯರು ತಮ್ಮ ದಂಧೆಯನ್ನು ಬಿಡುವ ವೇಳೆ ಕೆಲವು ವಿಷಯಗಳನ್ನು ಪರ್ಯಾಲೋಚಿಸಲಿದೆ. ಹತ್ತವರ ಆಸ್ಪತ್ರೆಯಲ್ಲಿ ಅವಳಿಗೆ ಸಿಗುತ್ತಿರುವ ಗೌರವ, ಸಾರ್ವಜನಿಕ ಸ್ಥಿತಿಗಳು ಅವಳ ತನ್ನ ಶಿಕ್ಷಣ ತರಬೇತಿಗಾಗಿ ಪಡೆದ ಪಾಡು ಆ ಕುರಿತು ಅವಳು ಕಡ್ಡಾಯವಾಗಿ ನಿರ್ವಹಿಸಬೇಕಾದ ಕರ್ತವ್ಯಗಳು, ಕೆಲಬಾರದುವುಗಳು ಅವಳ ಮನಸ್ಸನ್ನು ಸಿಲುಕಿಸಿಕೊಳ್ಳುವವು. ಕಾರಣ ಓರ್ವ ಸ್ತ್ರೀಯು ವೈದ್ಯ ವೃತ್ತಿಯವಳಾಗಲಿ, ಗಂಧ ಉದಾರ ಬಾಲಿಕಳಾಗಿಯಾಗಲಿ ಇಲ್ಲವೆ ಉಪಾಧ್ಯಾಯಿನಿಯಾಗಿ ಆಗಲಿ ಇದ್ದರೆ ವಿವಾಹಾನಂತರ ಒಮ್ಮೆ ಈ ಉದ್ಯೋಗಗಳನ್ನು ಸಂಪೂರ್ಣ ಬಿಟ್ಟು ಬಿಡಬೇಕಾಗುವುದು. ಇವನ್ನು ಇಚ್ಛೆಪಟ್ಟಾಗ ಅರ್ಧ ಸಮರ್ಥವಾಗಿ ಮುಂದರಿಸಲು ಸಾಧ್ಯವಿಲ್ಲ. ಮಾತ್ರವಲ್ಲ ಇಂತಹ ಉದ್ಯೋಗಗಳಲ್ಲಿ ಆನಂದದಾಯಕವಾದ ಒಂದು ಆತ್ಮತೃಪ್ತಿಯೂ ದೊರಕುತ್ತಿದೆ. ಆದುದರಿಂದ ಇವನ್ನು ಬಿಟ್ಟುಬಿಡುವಾಗ ಸಹಿಸಲಸದಳವಾದ ಮಾನಸಿಕ ವೇದನೆಯಾಗುವುದುಂಟು. ಅದೇ ಸಮಯಕ್ಕೆ ನಿರ್ದಿಷ್ಟ ವರ್ಗದವರಾದ ಮಹಿಳೆಯರಿಗೆ ತಮ್ಮ ವೃತ್ತಿಗಳೊಂದಿಗೆ ಕೊನೆಯ ತನಕ ನಿರ್ವಹಿಸಿಕೊಂಡಿರುವುದೇ ಕಷ್ಟಸಾಧ್ಯವೆಂದು ತೋರುತ್ತದೆ.

ಇಂಗ್ಲೆಂಡಿನಲ್ಲಿ ಮೊದಲನೇ ಸಲ ಮಹಿಳಾ ಚಳವಳವಾರಂಭಿಸಲ್ಪಟ್ಟಾಗ ಅದರ ಕರ್ತೃಗಳಿಗೆ ಈವೊಂದು ಸಮಸ್ಯೆಯು ಬಲವಾಗಿ ಎದುರಿಸಿತು. ಸಂಸಾರಿಗಳಾಗಿಯೂ ತಮ್ಮ ಉದ್ಯೋಗವನ್ನೂ ಇಟ್ಟುಕೊಳ್ಳಲು ಪ್ರಯತ್ನಿಸಿದವರು ತಮ್ಮ ಮನೆಕೆಲಸವನ್ನು ಬೇರೆ ಚಾಕರಿಗೆ ನಿಲ್ಲುವ ಸ್ತ್ರೀಯರಿಂದ ಮಾಡಿಸಬಹುದೆಂದೂ ತಮ್ಮ ಮಕ್ಕಳನ್ನು ದಾದಿಗಳ ಕೈಲಿಟ್ಟು ಸಲಹಬಹುದೆಂದೂ ಧೈರ್ಯತಾಳಿರುತ್ತಾರೆ.

ಆದರೆ ಇಂದಿನ ಪರಿಸ್ಥಿತಿಯಲ್ಲಿ ಮನೆಕೆಲಸದವರನ್ನಿಟ್ಟುಕೊಳ್ಳುವುದು ಇಂಗ್ಲೆಂಡಿನಂತಹ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದ ದೇಶದಲ್ಲಿ ಬಹಳ ಕಠಿಣವೇ ಆಗಿದೆ. ಆಹಾರ ಒಟ್ಟೆಯ ತೊಂದರೆಗಳಂತೂ ಹೆಚ್ಚಿನ ಸುಖಲೋಲುಪ್ತತೆಗೆ ಎಡೆಕೊಡಲಾರವು. ಮಾತ್ರವಲ್ಲ ಆಧುನಿಕ ಗೃಹ ವಿಜ್ಞಾನ ಕಲಿತ ತರುಣಿಯರು ಮನೆಗೆಲಸವನ್ನು ಅನೇಕ ಯಂತ್ರೋಪಕರಣಗಳ ಸಹಾಯದಿಂದ ನಿರ್ವಹಿಸಲು ಹೆಚ್ಚು ಆಸಕ್ತರಾಗಿರುವರು. ಅಲ್ಲದೆ ಇಂದಿನ ಮನೆಗಳಲ್ಲಿ ಮಾಡಬೇಕಾದ ಕೆಲಸವು ಹೆಚ್ಚಿದೆ. ಅದೇ ಸಮಯಕ್ಕೆ ಕೆಲಸದವರು ಸಿಗುವುದೂ ದುರ್ಲಭ. ಇಂತಹ ಪರಿಸ್ಥಿತಿಯಲ್ಲಿ ಉದ್ಯೋಗದಲ್ಲಿರುವ ಮಹಿಳೆ ತನ್ನ ವ್ಯಾಪ್ತಿಯ ಕೆಲಸ ಮುಗಿಸಿ ಮತ್ತೆ ಗೃಹಕೃತ್ಯಗಳನ್ನೆಸಗುವುದೆಂದರೆ ವಿಪರೀತ ಶ್ರಮವೇ ಆಗುತ್ತದೆ. ಆದುದರಿಂದ ಅವಳು ಒಂದೋ ತನ್ನ ಉದ್ಯೋಗವನ್ನೇ ನೋಡಿಕೊಳಬೇಕು ಇಲ್ಲವೆ ಸಂಪೂರ್ಣ ಮನೆ ಕೆಲಸದಲ್ಲಿ ಮಗ್ನಳಾಗಿರಬೇಕಾಗುತ್ತದೆ.

ಇದಲ್ಲದೆ ಹೆತ್ತವರು ತಮ್ಮ ಉದ್ಯೋಗದಲ್ಲೇ ಮಗ್ನರಾಗಿರುವಂತಹರಾದರೆ ಆರೈಕೆ ಸರಿಯಿಲ್ಲದ ಅವರ ಮಕ್ಕಳ ಮಾನಸಿಕ ಬೆಳವಣಿಗೆಯು ಯೋಗ್ಯ ವಾತಾವರಣದ ಕೊರತೆಯಿಂದ ಕುಂಠಿತವಾಗುವುದೆಂದು ಮನೋಶಾಸ್ತ್ರಜ್ಞರು ತಿಳಿಸುತ್ತಾರೆ. ಈ ಸಂಗತಿಯು ಪ್ರಾಚೀನ ಭಾರತೀಯರಿಗೆ ಚೆನ್ನಾಗಿ ತಿಳಿದಿತ್ತು. ಆದುದರಿಂದಲೇ ಅವರು ಮಹಿಳೆಗೆ ಗೃಹಿಣಿತ್ವವೇ ಯೋಗ್ಯವಾದುದೆಂದು ಉಪದೇಶಿಸಿದ್ದರು. ಗೃಹಪರಾಯಣೆಯಾದ ಸ್ತ್ರೀಯು ಕೇವಲ ಕಟ್ಟಿಹಾಕಿದ ಜಾನುವಾರದಂತಿರಬೇಕೆಂದಿಲ್ಲ. ಅವಳು ತನ್ನ ಗಂಡನ ಆರ್ಥಿಕ ಸಂಪಾದನೆಯನ್ನು ಹೆಚ್ಚಿಸಲು ಅನೇಕ ಗೃಹಕೈಗಾರಿಕೆಗಳನ್ನು ವಿರಾಮ ಕಾಲದಲ್ಲಿ ಕೈಕೊಳ್ಳಬಹುದು. ಈ ಮಾರ್ಗವನ್ನಿಂದು ಪಾಶ್ಚಾತ್ಯ ಮಹಿಳೆಯರು ಮನ

(೨ನೆ ಪುಟಕ್ಕೆ ಮುಂದುವರಿದಿದೆ)

THE

UNITED INDIA LIFE ASSURANCE CO., LTD.

ESTD 1906 — H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE

K S. Rao Road, Mangalore.

ಅಮೇರಿಕನ್ ದೃಷ್ಟಿಯ ಜವಾಹರ್ ನೆಹರು

ಅಧ್ಯಕ್ಷ ರೂಸವೆಲ್ಟರೊಡನೆ ಹೋಲಿಕೆ

ಆತ್ಯಾಕರ್ಷಕ ರಾಜಕೀಯ ಕನಸುಗಾರ

ಪ್ರಖ್ಯಾತ ಅಮೇರಿಕನ್ ಪತ್ರಿಕೋದ್ಯೋಗಿಗಳಾದ ಮಿ। ಎಂಡ್ರೂರೆತ್ ಎಂಬವರು ಪಂಡಿತ್ ನೆಹರೂರವರನ್ನು 'ಜಗತ್ತಿನ ಅತ್ಯಾಕರ್ಷಕ ದೇಶಾಡಳಿತ ಮುಖಂಡ'ನೆಂದು ನಿರೂಪಿಸುತ್ತ ತಮ್ಮೊಂದು ಲೇಖನದಲ್ಲಿ ಭಾರತ ಜನನಾಯಕನ ವ್ಯಕ್ತಿ ಚಿತ್ರವೊಂದನ್ನು ಸಾರಸ್ಯವಾದ ರೀತಿಯಲ್ಲಿ ವರ್ಣಿಸಿರುವರು:

ಅಮೇರಿಕದ ಮಾಜಿ ವಿದೇಶಾಂಗ ಮಂತ್ರಿ ಹೆನ್ರಿ ವೊಲೆಸರ ಇಲ್ಲವೆ ಫ್ರಾನ್ಸಿನ ಅಧ್ಯಕ್ಷ ಲಿಯನ್ ಬ್ಲಮ್ಮರ ಆಕರ್ಷಕ ವ್ಯಕ್ತಿತ್ವ, ದೂರದರ್ಶಿತ್ವ, ಮತ್ತು ಮಾನವೀಯತೆಗಳು ನೆಹುರುರವರಲ್ಲಿ ಒಟ್ಟುಗೂಡಿವೆ ಹೀಗೆಂದು ಓರ್ವ ಪಾಶ್ಚಾತ್ಯ ನೆಹುರು ಭಕ್ತರು ಭಾರತದ ಈ ಶ್ರೇಷ್ಠ ಜನನಾಯಕರನ್ನು ವರ್ಣಿಸಿದ್ದರು. ಆದರೆ ಭಾರತದ ಇಂದಿನ ಕಳವಳಾಸ್ಪದ ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸಲು ಅಧ್ಯಕ್ಷ ರೂಸ್‌ವೆಲ್ಟರಂತವರ ರಾಜಕೀಯ ನೈಪುಣ್ಯವೂ, ಲೆನಿನಸಂತಹರ ನಿರ್ದಾಕ್ಷಿಣ್ಯ ಧೃಢಚಿತ್ತ ಧೋರಣೆಯೂ ಅತ್ಯಾವಶ್ಯಕವೆನಿಸುತ್ತವೆಂದೂ ಅದೇ ನೆಹುರು ಭಕ್ತರು ಸೂಚಿಸಿದ್ದರು.

ನೆಹುರುಗಳ ಶಕ್ತಿ ಮತ್ತು ನಿರ್ಬಲತೆಗಳ ಕುರಿತು ಭಾರತದ ವಿವಿಧ ರಾಜಕೀಯ ಕೇಂದ್ರಗಳಲ್ಲಿ ವಿವಿಧ ರೀತಿಯ ಅಭಿಪ್ರಾಯಗಳಿವೆ ಅವರು ಮುಸಲ್ಮಾನರನ್ನು ಬಹಿರಂಗವಾಗಿ ಒಲೈಸುತ್ತಿರುವರೆಂದೂ ಗರ್ಜಿಸುವ ಹಿಂದೂ ಸೀಖ್ ಪಕ್ಷಗಳಿದ್ದಾವೆ. ಧರ್ಮಾಂಧ ಹಿಂದೂಗಳು ಮತ್ತು ಸಾಂಪ್ರದಾಯ ಪ್ರಿಯದಾರವರು ಮುಂದೆ ಅಧಿಕಾರ ವಹಿಸುವ ಸಂಭವವು ಅಲ್ಲಿ ತೋರಿಬರುವುದರಿಂದ ಸಮತಾವಾದಿ ಮನೋಭಾವದ ಭಾರತೀಯ ಮುಖಂಡರಲ್ಲಿ ಕಂಪನವನ್ನುಂಟುಮಾಡಿದೆ

卐

ನೆಹುರುರವರೊಡನೆ ಸಂಪರ್ಕ ಪಡೆದವರು ಅವರನ್ನು ಬಿಟ್ಟು ಹೋಗಲು ಸ್ವಲ್ಪವೂ ಇಷ್ಟಪಡುವುದಿಲ್ಲ ಕಾರಣ 'ಜಗತ್ತಿನ ಅತ್ಯಾಕರ್ಷಕ ದೇಶಾಡಳಿತ ಮುಖಂಡ'ನೆಂಬದರಲ್ಲಿ ಅವರಿಗೆ ಪ್ರತಿಸ್ಪರ್ಧಿಗಳೇ ಇಲ್ಲವೆನ್ನಬಹುದು ಅಸಾಮಾನ್ಯ ಮೇಧಾವಿಗಳೂ ಪ್ರಥಮ ಶ್ರೇಣಿಯ ಲೇಖಕರೂ ಆಗಿರುವ ಅವರ ಸಂಭಾಷಣೆಯಲ್ಲಿ ಅತ್ಯದ್ಭುತ ವಿನೋದಾಭಿರುಚಿಯೂ ಕೂಡಿಕೊಂಡಿದೆ. ಬೌಧಿಕ ವಿಚಾರದ ಅತ್ಯುನ್ನತ ಮಟ್ಟದಲ್ಲವರು ವಿಹರಿಸುತಿದ್ದರೂ ತಮ್ಮ ಸುತ್ತಮುತ್ತಲಿನ ಸಾಮಾನ್ಯ ಜನತೆಯಲ್ಲವರು ಸ್ನೇಹಪರವೂ ಆದ ಅಭಿರುಚಿಯನ್ನು ತಾಳುವರು. ಸಾಮಾನ್ಯರಂತೆ ಅವರು ತಮ್ಮ ಭೋಜನ ಕಾಲದಲ್ಲಿ ರೇಶನ್ ಕಾರ್ಡು ವ್ಯವಸ್ಥೆಯ ಕುರಿತು ಸಂಭಾಷಿಸುವರು.

卐

ಆದರೆ ದುರ್ದೈವವಶಾತ್ ಎಂಬಂತೆ ಇಂದು ನೆಹುರುಗಳನ್ನ ನಾವು ಓರ್ವ ಅತ್ಯಾಕರ್ಷಕ ವ್ಯಕ್ತಿಯಾಗಿ ವಿಮರ್ಶಿಸದೆ ಅವರನ್ನು ಜಗತ್ತಿನ ಅತೀ ನಿಬಿಡ ಜನಸಂಖ್ಯೆಯುಳ್ಳ ದೇಶವೊಂದರ ಆಡಳಿತ ಮುಖಂಡರನ್ನಾಗಿ ನಾವು ಅವರನ್ನು ಈಕ್ಷಿಸಬೇಕಾಗಿದೆ, ಆದರಲ್ಲಿಯೂ ಅವರಾಳುವ ದೇಶವು ಕ್ರಮಾಗತವಾಗಿ ಆರ್ಥಿಕ, ರಾಜಕೀಯ ಮತ್ತು ಜಾತೀಯ ಸಮಸ್ಯೆಗಳ ಮುಗ್ಗಟ್ಟಿನಿಂದ ಕ್ಲೇಶಗೊಂಡದ್ದಿರುತ್ತದೆಂಬುದನ್ನು ನಾವು ಮರೆಯಬಾರದು.

ಒಂದು ಉದಾತ್ತ ರಾಷ್ಟ್ರನಿರ್ಮಾಣ ಕಲ್ಪನಾದೃಶ್ಯದ ಶಿಲ್ಪಿಗಳಾದ ನೆಹುರುಗಳು ಮೇಲಿಂದ ಮೇಲೆ ಪಸಾಹತು ಜನತೆಯೆದುರು ತಮ್ಮ ಉಚ್ಚ ಧ್ಯೇಯಗಳನ್ನು ಎತ್ತಿಹಿಡಿದಿರುವರು. ಭಾರತದ ಮತ್ತು ಮಧ್ಯಪೂರ್ವದ ತರುಣ ಜನಾಂಗದ ಮನೋಭಾವನೆಗಳನ್ನು ರೂಪಿಸಲು ಅವರು ಬಹಳ ಮಟ್ಟಿಗೆ ಕಾರಣಭೂತರಾಗಿದ್ದಾರೆ. ಅವರ ಗ್ರಂಥಗಳನ್ನೋದಿ ಸ್ಫೂರ್ತಿಗೊಂಡು ತಮ್ಮ ಜನತೆಯ ಉದ್ಧಾರಕ್ಕೆ ಕಂಕಣತೊಟ್ಟ ಎಷ್ಟೋ ಭಾರತೀಯ ತರುಣರನ್ನು ಕಾಣಬಹುದು

卐

ನೆಹುರುಗಳು ಯಾವ ರಾಜಕೀಯ ತಕ್ಷನಿಷ್ಟರೂ ಆಗಿಲ್ಲ ಪಾಶ್ಚಿಮಾತ್ಯಕರಣಗೊಂಡವರಾಗಿ ಸಮತಾವಾದಿ ದೃಷ್ಟಿಕೋನದಿಂದ ಜಾಗತ್ತಿಕ ವ್ಯವಹಾರವನ್ನು ಈಕ್ಷಿಸುವ ಪ್ರಜಾಪ್ರಭುತ್ವಪ್ರಿಯರವರು ಭಾರತದ ಕೈಗಾರಿಕೆಯು ರಾಷ್ಟ್ರೀಕರಣವಾಗಬೇಕೆಂದವರು ಆಶಿಸುವುದಾದರೂ ಅಲ್ಲಿನ ಕೈಗಾರಿಕೆ ಮಾಲಕರೊಡನವರು ಅತ್ಯಂತ ಸ್ನೇಹದಿಂದಿದ್ದು ಸಮಾಜೀಕರಣವು ಅತೀ ದೂರ ಭವಿಷ್ಯದ ಸಂಭವದ್ದೆಂಬಭಿಪ್ರಾಯವುಳ್ಳವರಾಗಿದ್ದಾರೆ. ರೈತನ ಸಂಕಷ್ಟ ನಿವಾರಣೆಗಾಗಿ ಅವರು ಹೃದಯಂಗಮವಾಗಿ ಬರೆದು ಭಾಷಿಸಿರುವರಾದರೂ ಜಮೀನ್ದಾರೀ ಒಡೆತನವನ್ನು ರದ್ದು ಮಾಡಲು ಅವರು ತಮ್ಮ ಬಲವಾದ ಒತ್ತಡವನ್ನು ಇನ್ನು ಹಾಕಿಲ್ಲ. ಇದುತನಕ ಅವರ ಚೈತನ್ಯವು ಭಾರತವನ್ನು ರಾಜಕೀಯವಾಗಿ ಸ್ವತಂತ್ರಗೊಳಿಸಿ ಜಗತ್ತಿನಲ್ಲಿ ಒಂದು ಸ್ಥಾನಗಳಿಸುವುದಕ್ಕಾಗಿ ಕೇಂದ್ರೀಕೃತವಾಗಿತ್ತು. ಅವರ ಮಟ್ಟಿಗೆ ರಾಜಕೀಯ ಮತ್ತು ಆರ್ಥಿಕ ವಿಚಾರಗಳು ಪ್ರತ ಪ್ರತ್ಯೇಕವೆನ್ನಿದವೆ.

卐

ಅಮೇರಿಕದಲ್ಲಿ ಅಧ್ಯಕ್ಷ ರೂಸ್‌ವೆಲ್ಟರು ವಿವಿಧ ರಾಜಕೀಯ ಪಕ್ಷ ಪಂಥಗಳನ್ನು ಐಕ್ಯಗೊಳಿಸಲು ಪ್ರಯತ್ನಿಸಿದಂತೆ ನೆಹುರುಗಳು ಭಾರತದ ತರುಣ ಮತ್ತು ವೃದ್ಧ ನಾಯಕರನ್ನು ಒತ್ತಟ್ಟಿಗೆ ತಂದಿರುವರು. ಅವರ ಪ್ರಭಾವಶಾಲೀ ಮನವಿಗಳಿಂದ ಉದ್ವೇಗಪರ ತರುಣ ವರ್ಗವು ಹಳೇಯ ಪಕ್ಷ ನಾಯಕರನ್ನು ಹಿಂಬಾಲಿಸಲು ಒಪ್ಪಿಕೊಂಡಿದೆ. ಕೊಂಗ್ರೆಸ್ ನಾಯಕತ್ವದಲ್ಲಿ ಸಾಂಪ್ರದಾಯವಾದಿಗಳೂ, ಪ್ರಾಚೀನ ರೂಢಿಬದ್ಧರೂ ಇರುವುದು ಆಧುನಿಕ ಮನೋಭಾವನೆಯವರಿಗೆ ತೃಪ್ತಿಯಿಲ್ಲವಾದರೂ ಪಾಶ್ಚಾತ್ಯೀಕರಣಗೊಂಡ ಮತ್ತು ಶ್ರೇಷ್ಠ ಮೇಧಾವಿಗಳೆನಿಸುವ ನೆಹುರುಗಳು ಅವರ ಅಂಜಿಕೆಗಳನ್ನು ಬದಿಗೊತ್ತಿರುವರು.

ಆದರೆ ದುರ್ದೈವವಶಾತ್ ಜನತೆಯನ್ನು ತಮ್ಮ ಕಡಗೆ ಒಲಿಸುವ ರೂಸ್‌ವೆಲ್ಟರ ಸಾಮರ್ಥ್ಯವು ನೆಹುರುರವರಲಿಲ್ಲ ತಮ್ಮದೊಂದು ಉದ್ದೇಶದ ಧೋರಣೆ ಪೂರ್ತಿಗಾಗಿ ರೂಸ್‌ವೆಲ್ಟರು ಎಲ್ಲಾ ಪ್ರಗತಿಶೀಲ ಪಕ್ಷಗಳನ್ನು ಒಲೈಸಿಕೊಂಡು ಅವರ ಪ್ರತಿನಿಧಿಗಳನ್ನು ತಮ್ಮ ಮಂತ್ರಿಮಂಡಳದಲ್ಲಿ ಸೇರಿಸಿಕೊಂಡು ಕಾರ್ಯಸಾಧಿಸುತಿದ್ದರು ಅವರ ಯತ್ನಗಳು ಅಸಾಮಾನ್ಯ ಫಲಪ್ರದವಾಗಿಯೂ ಪರಿಣಮಿಸುತಿದ್ದವು

ತಮ್ಮ ಸಮರ್ಥಕರನ್ನು ಸ್ಫೂರ್ತಿಗೊಳಿಸುವ ರೂಸ್‌ವೆಲ್ಟರ ಭಾಷಣ ಶಕ್ತಿ ನೆಹುರುಗಳಲ್ಲಿದೆ ಆದರೆ ಅವರ ಶಕ್ತಿಯನ್ನು ಸಂಯುಕ್ತಗೊಳಿಸಲು ರೂಸ್‌ವೆಲ್ಟರಂತೆ ನೆಹುರುಗಳು ಇಷ್ಟಪಡುವುದಿಲ್ಲ ಅವರವ ಟ್ಟಿಗೆ ಅದು ಆತ್ಮಸಿಕೃಷ್ಟವಾದುದೆನಿಸುತ್ತದೆ ನೆಹುರುರವರಿಗೆ ಮಜೂರ ಹಿತದ ಮೇಲೆ ತುಂಬಾ ಶದ್ಧೆಯಿರುವುದು ಮಾತ್ರವಲ್ಲ ಹಲವು ಸಲ ಅವರು ಮಜೂರ ಪರಿಷತ್ತುಗಳ ಅಧ್ಯಕ್ಷರಾಗಿಯೂ ಶ್ರಮಿಸಿದ್ದಾರೆ ಆದರೆ ಮಜೂರ ಪಕ್ಷದೊಡನೆ ನೇರವೂ ಸಮೀಪವದ್ದೂ ಆದ ಸೌಹಾರ್ದವನ್ನವರು ಇನ್ನೂ ಬೆಳೆಸಲಿಲ್ಲ

卐

ಈಗ ನೆಹುರುಗಳು ರಾಷ್ಟ್ರೀಯ ಸೇವಕ ಸಂಘವೆಂಬ ಸಂಸ್ಥೆಯೊಂದರ ಕುರಿತು ತುಂಬಾ ಪರ್ಯಾಲೋಚನೆಗೊಳಗಾಗಿರುವರು, ಇತ್ತೀಚೆಗಿನ ಡಿಲ್ಲಿ ಗಲಭೆಯಲ್ಲಿ ಈ ಸಂಸ್ಥೆಯವರ ಕೈವಾಡ ಬಹಳವಿದೆ ಯೆನ್ನಲಾಗಿದೆ. ಈ ಸಂಘವು ಹಿಟ್ಲರನ ನಾಜೀ ಪಡೆಯೊಂದಿಗೆ ಹೋಲುವುದೆಂದವರ ಅಭಿಪ್ರಾಯವಿದೆ. ಈ ಆರ್. ಎಸ್. ಎಸ್. ಸಂಸ್ಥೆಯ ಹೆಚ್ಚಿನ ಸದಸ್ಯರು ಸರಕಾರಿ ಉದ್ಯೋಗಸ್ಥರೇ ಆಗಿರುವರೆಂದು ಕಮಲಾದೇವಿಯವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ತಿಳಿಸಿರುವರು.

(೧ನೇ ಪುಟದಿಂದ)

ಆಧುನಿಕ ಸ್ತ್ರೀಯರ ಸಮಸ್ಯೆಗಳು

ಗಂಡಂತೆ ತೋರುತ್ತದೆ ನಿರ್ವಾಹವಿಲ್ಲದ ಸಂದರ್ಭಗಳಲ್ಲದೆ ಇತರೆಲ್ಲ ಸಂದರ್ಭಗಳಲ್ಲೂ ಮಹಿಳೆಯರು ಪ್ರಶಾಂತವೂ, ಆತ್ಮತೃಪ್ತಿಯದೂ ಆದ ಗೃಹ ಜೀವನವನ್ನೇ ಬಯಸಿ ವಿವಾಹಿತರಾಗಿ ಬಾಳಲು ಇಚ್ಛಿಸುತ್ತಾರೆ ಏಕಾಂಗಿಯಾಗಿದ್ದು ತನ್ನ ಹೃದಯದ ಪ್ರೀತಿಭಾವಗಳನ್ನು ಯೋಗ್ಯ ರೀತಿಯಲ್ಲಿ ವ್ಯಕ್ತಿಸಲು ಸಾಧ್ಯವಿಲ್ಲದ ಪರಿಸ್ಥಿತಿಯನ್ನು ಯಾರೂ ಮೆಚ್ಚುವುದಿಲ್ಲ ಅದು ಮಾನವ ಸ್ವಭಾವಕ್ಕೇ ವಿರೋಧವಾದುದು ಅಂದಮೇಲೆ ಮೃದು ಹೃದಯಿಗಳಾದ ಸ್ತ್ರೀಯರಾದರೂ ಅದನ್ನು ಹೇಗೆ ಬಯಸುವರು?

ಈ ಸಂದರ್ಭದಲ್ಲಿ ಪಾಶ್ಚಾತ್ಯ ಸ್ತ್ರೀಯರ ಈ ಕರುಣಾಜನಕ ಪರಿಸ್ಥಿತಿಗೆ ಅಲ್ಲಿ ಪ್ರಗತಿ ಹೊಂದಿದೆಯೆನ್ನಲ್ಪಡುವ ಇಂದಿನ ಯಾಂತ್ರಿಕ ನಾಗರೀಕತೆಯೇ ಒಂದು ಪ್ರಬಲವಾದ ಕಾರಣವಲ್ಲದೆ ಸ್ವಾಭಾವಿಕವಾಗಿ ಅಲ್ಲಿನ ಸ್ತ್ರೀಯರು ಗೃಹ ದ್ವೇಷಿಗಳಾಗಲಿ ಸಂಸಾರ ದ್ವೇಷಿಗಳಾಗಲಿ ಅಲ್ಲವೆಂಬುದೂ ಸತ್ಯ ಸಂಗತಿಯಾಗಿದೆ ಕಳೆದೆರಡು ಯುದ್ಧಗಳ ನಂತರ ಪಾಶ್ಚಾತ್ಯ ನಾಗರೀಕತೆಯ ನಿಸ್ಸಾರತೆಯು ಅಲ್ಲಿನ ಜನತೆಗೆ ಮನಗಂಡು ಭೌತಿಕ ಸುಖಸಾಧನಗಳ ಅಸ್ಥಿರತೆಯು ಅವರಲ್ಲಿ ಹೆಚ್ಚಿನ ಆತ್ಮ ನೆಮ್ಮದಿಯ ನಾಗರೀಕತೆಯ ಕಡೆಗೆ ದೃಷ್ಟಿ ಚಲಿಸುವಂತೆ ಮಾಡಿದೆ. ಆದುದರಿಂದಲೇ ಇಂದು ಹೆಚ್ಚೆಚ್ಚಾಗಿ ಪಾಶ್ಚಾತ್ಯರು ಸರಳ ಜೀವನಪ್ರಿಯರೂ, ಹಳ್ಳಿ ನಾಡು ವಾಸಪ್ರಿಯರೂ ಆಗಿರುತ್ತಾರೆ ಪೌರ್ವಾತ್ಯ ದೇಶದ ಜನತೆಯ ಜೀವನ ತತ್ತ್ವಜ್ಞಾನದ ಕಡೆಗೆ ಹೆಚ್ಚೆಚ್ಚು ಪಾಶ್ಚಾತ್ಯರು ಆಶಾದಾಯಕವಾಗಿ ನೋಡುತ್ತಿರುವರು. ಭಾರತೀಯರ ಸಾಂಸ್ಕೃತಿಕ ಜನ ಜೀವನ ಕ್ರಮವು ಪಾಶ್ಚಾತ್ಯರಿಗೆ ಇಂದು ಹೆಚ್ಚು ಆಕರ್ಷಕವಾಗಿದೆ

ಇಂತಹ ಸಂಧಿಗ್ದ ಸಮಯದಲ್ಲಿ ಭಾರತ ಸ್ತ್ರೀಯರಾದರೂ ತಮ್ಮ ಪಾಶ್ಚಾತ್ಯ ಅನುಕರಣವನ್ನು ತ್ಯಜಿಸುವುದು ಅತ್ಯಂತ ಯೋಗ್ಯವೆನಿಸುತ್ತದೆ ಆದರಲ್ಲೂ ಸ್ವಾತಂತ್ರ್ಯ ಗಳಿಸಿದ ನಾವಿಂದು ನಮ್ಮ ಪ್ರಾಚೀನ ಸಂಸ್ಕೃತಿಯ ಉದಾತ್ತ ವ್ಯಕ್ತಿತ್ವವನ್ನು ಬದಲಾಯಿಸಲು ಪ್ರಯತ್ನಿಸುವುದು ಹಾನಿಕಾರಕವೂ ನಿಷ್ಪ್ರಯೋಜಕವೂ ಎನಿಸುವುದು. ಭಾರತದ ಸ್ತ್ರೀಯರು ಹಿಂದಿನಂತೆ ಇಂದೂ ಜಗತ್ತಿಗೆ ತಮ್ಮ ಅದ್ವಿತೀಯ ಆದರ್ಶವನ್ನು ಪ್ರದರ್ಶಿಸುವುದು ಅತ್ಯಾವಶ್ಯಕವೆನಿಸುತ್ತದೆ.

ಎದೆನೋವನ್ನು ನಿವಾರಿಸಿರಿ

ನಿಮಗೆ ಬೇಗನೆ ಶೀತವಾಗುವುದೇ? ನೀವು ಆಗಾಗ ಕೆಮ್ಮು, ಶ್ವಾಸಕೋಶದ ದೌರ್ಬಲ್ಯಗೊಳಿಸುವ ಶೀತಬಾಧೆಯಿಂದ ನರಳುತೀರಾ? ಹಾಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸುಗಳನ್ನು ಸೇವಿಸಿ ಗುಣಹೊಂದಿರಿ

ಪೆಪ್ಸು ಬಾಯಲ್ಲಿ ಹಾಕಿದ ಕೂಡಲೇ ಉತ್ತಮ ಸುಗಂಧ ಔಷಧಿ ರಸ ಹೊರಡಿಸುತ್ತದೆ ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುವುದು. ಹಾಗೆ ಸೇರಿ, ಎದೆನೋವು, ಕಫ, ಗಂಟಲು ನೋವು, ಶೀತಬಾಧೆ, ಕೆಮ್ಮು ಮೊದಲಾದುವುಗಳನ್ನು ಗುಣಪಡಿಸುವುದು ನೆಗಡಿ ಮತ್ತು ಶೀತಜ್ವರಗಳಿಗೂ ಪರಮೌಷಧ

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ಶ್ವಾಸಯೋಗ್ಯ ವಿಷಹಾರಿ ಮಾತ್ರೆಗಳು

ಪ್ರಪಂಚ ಪರಿಚಯ

ಯುರೋಪಿಗೆ ಅಮೇರಿಕದ ಡೊಲರ್ ತಂತ್ರ ನಿಯೋಜಿತ ಮಾರ್ಶಲ್ ಪ್ಲೇನು ಬೇಕಾಗಿಲ್ಲವೆಂದು ಯುಕ್ತ ರಾಷ್ಟ್ರ ಸಂಘದಲ್ಲಿ ರಶ್ಯವು ನಿರಾಕರಿಸಿತಷ್ಟೇ. ಆಗ ರಶ್ಯಕ್ಕೆ ಯುರೋಪದ ಇತರ ಎಂಟು ರಾಷ್ಟ್ರಗಳು ಬೆಂಬಲವಿತ್ತವು ಈ ರಾಷ್ಟ್ರಗಳಿಗೆ ಮಾರ್ಶಲ್ ಯೋಜನೆಯು ಅನಿವಾರ್ಯವಾಗಿ ಬೇಕಾಗುವುದೆಂದು ಅಮೇರಿಕವು ಈಗ ಪ್ರಚುರಿಸಹತ್ತಿದೆ. ಪೂರ್ವ ಪಶ್ಚಿಮ ಯುರೋಪಗಳ ಮತ್ತು ಅಮೇರಿಕದ ನಡುವೆ ವಿಶಾಲ ಪ್ರಮಾಣದ ವಾಣಿಜ್ಯ ವ್ಯವಹಾರ ಸಾಗುತ್ತಿತ್ತೆಂದೂ ಇದು ಎಂದಿನಂತೆ ಮುಂದರಿಯದಿದ್ದರೆ ರಶ್ಯದ ಪ್ರಭಾವದೊಳಗೆ ಬಂದಿರುವ ಈ ರಾಷ್ಟ್ರಗಳ ಆರ್ಥಿಕ ಸ್ಥಿತಿಯು ನೆಟ್ಟಗಾಗಲಿಕ್ಕಿಲ್ಲವೆಂದೂ ಈ ಪ್ರಚಾರದ ಪಲ್ಲವಿಯಾಗಿದೆ.

ಪೂರ್ವ ಯುರೋಪು ಪಶ್ಚಿಮ ಯುರೋಪು ಮತ್ತು ಅಮೇರಿಕಗಳಿಂದ ತುಂಬಾ ಯಂತ್ರೋಪಕರಣಗಳನ್ನು ತರಿಸಿಕೊಳ್ಳುತ್ತಿತ್ತೆಂಬುದು ನಿಜ. ಬದಲಾಗಿ ಆಹಾರ ವಸ್ತು ಮರಮುಟ್ಟುಗಳನ್ನು ಆ ದೇಶಗಳು ರಫ್ತು ಮಾಡುತ್ತಿದ್ದವು ಇಂದು ರಶ್ಯವು ಸ್ವತಃ ಯುದ್ಧ ಜರ್ಝರಿತ ದೇಶವಾಗಿದ್ದು ತನ್ನ ಕೈಗೊಂಬೆಗಳಾದೀ ದೇಶಗಳಿಗೆ ಅದು ಏನನ್ನೂ ಪೂರೈಸಲಾರದು. ಹೀಗೆಂಬ ಅಮೇರಿಕನ್ ಪ್ರಚಾರವು ಆ ದೇಶಗಳನ್ನು ರಶ್ಯನ್ ಪ್ರಭಾವದಿಂದ ತಪ್ಪಿಸುವ ಒಂದು ಹಂಚಿಕೆ ಯೆಂದೆಣಿಸಲ್ಪಟ್ಟಿದೆ ಅದರೆ ಕಮ್ಯೂನಿಸ್ಟ್ ಒಡೆತನಕ್ಕೊಳಗಾದೀ ದೇಶಗಳು ಅಮೇರಿಕನ್ ಪ್ರಚಾರಕ್ಕೆ ಕಿವಿಗೊಡದಾಗಿವೆ

ರಶ್ಯವು ಪೂರ್ವ ಪಶ್ಚಿಮ ಯುರೋಪುಗಳೊಳಗೆ ಭೇದವನ್ನುಂಟುಮಾಡಿ ಅವನ್ನು ವಿಚ್ಛೇದಿಸುವ ಹವಣಿಕೆಯಲ್ಲಿದೆಯೆಂದು ಆಗಾಗ ಆರೋಪಿಸಲಾಗುತ್ತದೆ ಆದರೆ ಇದು ಅಮೇರಿಕದ ಕುತಂತ್ರವೆಂದೂ "ಯುರೋಪಿಗೆ ಸಹಾಯ ನೀಡುವ ಹಲವು ಯೋಜನೆಗಳು ಇದರ ಅಂಗಗಳೆಂದೂ ರಶ್ಯದ ಅಂಬೋಣ ಯುರೋಪಿನ ಸಂಗತಿಯನ್ನು ಒತ್ತಟ್ಟಿಗಿರಿಸಿ ಜಗತ್ತಿನ ಇತರ ಕಡೆಗಳಲ್ಲಿಣಿಕಿದರೂ ಅಲ್ಲೂ ಈ ಮಹಾರಾಷ್ಟ್ರಗಳೆರಡು ಪ್ರಭಾವ ವಿಭಾಗೀಕರಣವನ್ನು ಮಾಡುವ ಧೋರಣೆಯು ಕಂಡುಬರುತ್ತದೆ

ರಶ್ಯನ್ ಪ್ರಭಾವಿತ ದೇಶಗಳ ಕ್ರಮೇಣ ಒಂದು ಸಂಯುಕ್ತ ಐಕ್ಯತೆಯ ಕಡೆಗೆ ಒಡುತ್ತಿವೆ ಅವು ಒಂದು ಅಖಂಡ ರಾಜಕೀಯ ಭಾಗವಾಗಿ ಪೋಣಿಸಲ್ಪಡುತ್ತದೆ ಆದರೆ ಆರ್ಥಿಕ ದೃಷ್ಟಿಯಿಂದ ಅವುಗಳ ಸಂಕಷ್ಟಗಳು ಅಸಂಖ್ಯಾತವಿವೆ

ಉದಾಹರಣೆಗಾಗಿ ಜೆಕೊಸ್ಲೊವೇಕಿಯನ್ನು ತೆಗೆದುಕೊಳ್ಳೋಣ ಇದು ಕೊನೆಯ ಗಳಿಯಲ್ಲೆಂಬಂತೆ ರಶ್ಯವನ್ನನುಸರಿಸಿ ಮಾರ್ಶಲ್ ಯೋಜನೆಯಿಂದ ಹೊರ ಉಳಿಯಲು ಪ್ರಯತ್ನಿಸಿತು ಈ ವರ್ಷದ ಮೊದಲ ನಾಲ್ಕು ತಿಂಗಳುಗಳಲ್ಲಿ ರಶ್ಯವು ಈ ದೇಶಕ್ಕೆ ಶೇಕಡಾ 12ರಷ್ಟು ಆಮದುಗಳನ್ನು ಕಳುಹಿಸಿತ್ತು, ಶೇಕಡಾ 15ರಷ್ಟು ರಫ್ತುಗಳನ್ನು ತರಿಸಿಕೊಂಡಿತು. ಜೆಕೊಸ್ಲೊವೇಕಿಯದ ವಾಣಿಜ್ಯ ಸಂಬಂಧಿಕರು ಪಶ್ಚಿಮ ಯುರೋಪಿನ ರಾಷ್ಟ್ರಗಳು ಮತ್ತು ಅಮೇರಿಕಗಳಾಗಿವೆ

ಅದೇ ರೀತಿ ಪೋಲೆಂಡ್ ಫಿನ್‌ಲೆಂಡ್ ಯುಗೊಸ್ಲೇವಿಯಾ, ಹಂಗರಿ, ಬಲ್ಗೇರಿಯಾ, ರುಮೇನಿಯಾ ಮತ್ತು ಆಲ್ಬೇನಿಯಗಳ ವಾಣಿಜ್ಯ ಪರಿಸ್ಥಿತಿಯು ಹೀಗೇ ಆಗಿದೆ. ರಶ್ಯದಿಂದ ನಿಜವಾಗಿ ಅವಕ್ಕೆ ಹೆಚ್ಚಿನ ಯಾವ ಸಹಾಯವೂ ದೊರಕಲಾರದು. ರಶ್ಯವು ಕೂಡ ಅವುಗಳ ಲಾಭಕರ ಗಿರಾಕಿಯೂ ಆಗಲಾರದು

ಪರಿಣಾಮವಾಗಿ ಮೇಲ್ಕಂಡ ದೇಶಗಳು ಪಶ್ಚಿಮ ಯುರೋಪಿನಿಂದ ವಿಚ್ಛೇದಿತವಾದರೂ ಅವು ಹಿಂದಿನಂತೆ ತಮ್ಮ ವಾಣಿಜ್ಯ ಸಂಪರ್ಕಗಳನ್ನು ಮುಂದರಿಸಬೇಕಾಗುತ್ತದೆ ಪಶ್ಚಿಮ ಯುರೋಪಿನ ಕೈಗಾರಿಕೆಗೆ ಅವುಗಳ ಕಲ್ಲಿದ್ದಲೂ ಮರಗಳೂ ಬೇಕಾಗುವುವು ಸದ್ಯವಲ್ಲ ಯುರೋಪಿನ ಜನತೆಯಲ್ಲಿ ಆರ್ಥಿಕ ಜಾಗೃತಿಯು ಉತ್ಪನ್ನವಾಗಿ ಪೂರ್ವ ಪಶ್ಚಿಮ ಯುರೋಪುಗಳು ಒಂದುಗೂಡಬಹುದೆಂದು ನಿರೀಕ್ಷಿಸಲಾಗಿದೆ ಆದರೆ ಈ ದೇಶಗಳಲ್ಲಿ ಏನೇ ಆದರೂ ವಾಗಬೇಕಾದರೆ ಅವು ತಮ್ಮನ್ನು ಆರ್ಥಿಕ ದಾಸ್ಯಕ್ಕೊಳಪಡಿಸ ಪ್ರಯತ್ನಿಸುವ ಬೃಹತ್ ಶಕ್ತಿರಾಷ್ಟ್ರಗಳ ಕುತಂತ್ರದಾಟಗಳನ್ನು ಮನಗಾಣಬೇಕಾಗಿ ಬರುವುದು. ಅತ್ಯಾವಶ್ಯಕ. ಸದ್ಯಕ್ಕೆ ಅವು ಸ್ವಾತಂತ್ರ್ಯದ ಬದಲಿಗೆ ಪಾರತಂತ್ರ್ಯವನ್ನು ಒಪ್ಪಿದಂತೆ ತೋರುತ್ತದೆ ಯುರೋಪು ಇಂದು ವೈಜ್ಞಾನಿಕವಾದರೂ ಕ್ರಮೇಣವಾಗಿ ಅನ್ಯೋನ್ಯಗತಿಗೆ ಏರುತ್ತಿದೆ ಯುರೋಪಿನ ರಾಷ್ಟ್ರಗಳನ್ನು ಪಗಡೆ ತುಂಡುಗಳಂತೆ ಆಡಿಸುವ ಆ ಅದೃಶ್ಯ ಮಹಾಶಕ್ತಿಗಳಾವುವು?

ಕಮ್ಯೂನಿಸ್ಟ್ ಪ್ರಧಾನಿಗಳು

ಇಂದು ಜೆಕೊಸ್ಲೊವೇಕಿಯದ ಅತಿ ಪ್ರಖ್ಯಾತ ವ್ಯಕ್ತಿ ಎಂದರೆ ಅಲ್ಲಿನ ಕಮ್ಯೂನಿಸ್ಟ್ ಪ್ರಧಾನರಾದ ಕ್ಲೆಮೆಂಟ್ ಗೊಟ್ವಾಲ್ಡ್ ಅಲ್ಲಿನ ಕಮ್ಯೂನಿಸ್ಟ್ ಪಕ್ಷವನ್ನು ಪುಷ್ಟೀಕರಿಸಿ ಶಕ್ತಿಯುಕ್ತವಾಗಿ ಮಾಡಿದ ಕೀರ್ತಿ ಇವರಿಗೆ ಸಲ್ಲುವುದು ಆದರೆ ಇವರ ಅತಿರೇಕ ಧೋರಣೆಯು ಪಕ್ಷಪಾತದ್ದಾಗಿರುವುದಿಲ್ಲ ಇವರ ಮಂತ್ರಿಮಂಡಳವು ಮಿಶ್ರ ಮಂಡಳವಾದ ಕಮ್ಯೂನಿಸಮಿನ ಕುರಿತು ಕೇವಲ ಇವರು ಹೆಚ್ಚಾಗಿ ಮಾತನಾಡುವುದಿಲ್ಲ. ಕಮ್ಯೂನಿಸ್ಟರಲ್ಲಿ ಅವರು ಸ್ವಲ್ಪ ಉದಾರವಾದಿಗಳು ಅದರಿಂದ ಇವರ ನಾಯಕತ್ವದಲ್ಲಿ ಪೂರ್ವ ಪಶ್ಚಿಮ ಯುರೋಪುಗಳು ಒಂದು ಗೂಡಿ ಯುರೋಪಿನಲ್ಲಿ ಯುದ್ಧ ಘರ್ಷಣೆಯ ಸಂಭವವನ್ನು ಕಡಿಮೆಮಾಡುವುದಕ್ಕೆ ಸಹಾಯವಾಗಬಹುದು

ಬರ್ಮದ ಸ್ವಾತಂತ್ರ್ಯ

ಬರುವ ವರ್ಷದ ಪ್ರಾರಂಭದಲ್ಲಿ ಬರ್ಮಾವು ಸ್ವತಂತ್ರವಾಗುವುದು. ಕೇವಲ ಜನಪ್ರಿಯ ಮಂತ್ರಿಗಳ ಕೊಲೆಯಲ್ಲಿ ಅಂತ್ಯವಾದ ಅಲ್ಪ ಕಾಲದ ಅಲ್ಲಿದ್ದ ಅರಾಜಕತೆಯು ಪರಿಚ್ಛೇದವು ಅಂತ್ಯಗೊಂಡಂತಾಯಿತು. ಕಳೆದ ತಿಂಗಳಲ್ಲಿ ಬರ್ಮಾದ ಘಟನಾ ಸಮಿತಿಯು ಹೊಸ ರಾಜ್ಯಾಂಗ ಘಟನೆಯನ್ನು ಸರ್ವಾನುಮತದಿಂದ ಸ್ವೀಕರಿಸಿತು, ಬರ್ಮಾ ಗಡಿನಾಡಿನ ಜನರು ಕೂಡಾ ಅದನ್ನು ಸಂತೋಷದಿಂದ ಅನುಮೋದಿಸಿರುವರು. ಇದು ತನಕ ಬ್ರಿಟಿಷರಡಿಯಲ್ಲಿ ಸ್ವಾಯತ್ತತೆಯನ್ನನುಭವಿಸುತ್ತಿದ್ದ ಅಲ್ಲಿನ ಕರೆನ್ನಿ ಸಂಸ್ಥಾನವು ಕೂಡಾ ಬರ್ಮಾಕ್ಕೆ ಸೇರಲು ಒಪ್ಪಿದೆ ಅಲ್ಲೀಗ ಶಾಂತಿ ಶಿಸ್ತುಗಳು ಸ್ಥಾಪಿಸಲ್ಪಟ್ಟಿದ್ದು ರಾಜಕೀಯ ಗುಪ್ತ ಚಟುವಟಿಕೆಗಳು ನಿಯಂತ್ರಿಸಲ್ಪಟ್ಟಿವೆ ಬರ್ಮಾ ಸರಕಾರವು ತಮ್ಮ ದೇಶದಲ್ಲಿ ವಾಸಿಸುತ್ತಿದ್ದ ಭಾರತೀಯರಿಗೆ ಸಂಪೂರ್ಣವೂ ಸಮಾನವೂ ಆದ ನಾಗರಿಕ ಹಕ್ಕು ಬಾಧ್ಯತೆಗಳನ್ನು ಕೊಡಲೊಪ್ಪಿದೆ ಇದರಿಂದ ದ ಆಫ್ರಿಕದ ಸರಕಾರವೂ ಒಂದು ಪಾಠವನ್ನು ಕಲಿಯಬಹುದು

ವಿಜ್ಞಾನಿಗಳ ರಾಜಕೀಯ

ಯುಕ್ತ ರಾಷ್ಟ್ರ ಸಂಘವು ಈಗ ಪ್ರದರ್ಶಿಸುತ್ತಿರುವ ಸಂದೇಹದ ಧೋರಣೆಯನ್ನೇ ಮುಂದರಿಸಿದರೆ ಮಾನವ ಜನಾಂಗಕ್ಕೆ ಅದರಿಂದ ಯಾವ ಸಹಾಯವೂ ಆಗಲಾರದೆಂದು ಪ್ರಖ್ಯಾತ ಗಣಿತಜ್ಞರಾದ ಪ್ರೊ. ಐನ್‌ಸ್ಟೈನ್ನರು ತಿಳಿಸುತ್ತಾರೆ ಯುಕ್ತ ರಾಷ್ಟ್ರ ಸಂಘವನ್ನು ಒಂದು ವಿಶ್ವ ಶಾಸನ ಸಭೆಯಾಗಿ ಪರಿವರ್ತಿಸಬೇಕೆಂದೂ ಕಲಹವನ್ನು ಕೆಣಕುವ ರಾಷ್ಟ್ರಗಳನ್ನು ಹತ್ತಿಕ್ಕಲು ಅದು ತನ್ನ ಅಧೀನ ಪ್ರಯೋಗಿಸುವಂತಾಗಬೇಕೆಂದೂ ಅವರು ಸೂಚಿಸುತ್ತಾರೆ ಈ ವಿಶ್ವ ಶಾಸನ ಸಭಾ ಪ್ರತಿನಿಧಿಗಳನ್ನು ಆಯಾ ಸರಕಾರಗಳು ನೇಮಿಸದೆ ಅವರು ಜನತೆಯ ಮತಗಣನೆಯ ಮೂಲಕ ಚುನಾಯಿಸಲ್ಪಡಬೇಕೆಂದು ಅವರು ಒತ್ತಿ ತಿಳಿಸುತ್ತಾರೆ

ಯುಕ್ತ ರಾಷ್ಟ್ರ ಸಂಘವು ಕೇವಲ ಒಂದು ಚರ್ಚಾ ಕೂಟವಾಗಿರುವ ತನಕ ಅದರಿಂದ ಯಾವ ಹಿತವೂ ಸಾಧಿಸಲಾರದು. ಈಗಿನ ಪರಿಸ್ಥಿತಿಯಲ್ಲಿ ಶಕ್ತಿ ರಾಷ್ಟ್ರಗಳು ಜನಾಂಗ ಸಂಘಕ್ಕೆ ವಿಶ್ವ ರಾಜಕಾರಣಗಳನ್ನು ನಿಯಂತ್ರಿಸುವ ಅಧಿಕಾರವನ್ನು ಕೊಡಲೊಪ್ಪುವುದಿಲ್ಲ ಈ ಒಂದು ಕಾರಣದಿಂದಲೇ ಮೂರನೇ ವಿಶ್ವ ಯುದ್ಧಕ್ಕೆ ಸಿದ್ಧತೆಯಾಗುತ್ತಿದೆಂಬ ಸಂದೇಹಕ್ಕೆ ಬಲವಾದ ಆಧಾರ ದೊರಕಿದಂತಾಗುತ್ತದೆ.

ಹಿರೋಶಿಮಾ

ಹಿರೋಶಿಮಾ ಎಂದ ಮಾತ್ರಕ್ಕೆ ಜಗತ್ತಿನ ಕಣ್ಮುಂದೆ ಅತ್ಯಂತ ಭೀಕರ ವಿನಾಶದ ದೃಶ್ಯವೊಂದು ಬಂದು ನಿಂತಂತಾಗುವುದು. ಇಷ್ಟಾದರೂ ಮಾನವ ಕೋಟಿಯು ಇನ್ನೊಂದು ಮಹಾ ಯುದ್ಧದ ಕುರಿತು ಮಾತನಾಡುತ್ತಿದೆ! ಅದೆಷ್ಟು ಭೀಕರವಾಗಿರಬಲ್ಲದು? ಮುಂದಿನ ಯುದ್ಧವು ಎಟಂ ಬೊಂಬಿನಿಂದಾರಂಭಿಸಲ್ಪಡುವುದೆಂದು ಹೇಳಲ್ಪಟ್ಟಿದೆ ಇದು ಖಂಡಿತವಾದರೆ ಜಗತ್ತಿನ ಅಂತ್ಯಕ್ಕೆ ದೀರ್ಘ ಕಾಲ ಹಿಡಿಯಲಾರದು

ಈಗ ಹಿರೋಶಿಮಾವು ಇನ್ನು ಮಸಣ ಭೂಮಿಯಾಗಿಯೇ ಉಳಿದಿಲ್ಲ. ಮೆಲ್ಲನೆ ಜನಜೀವನವು ಪುನ ಒಮ್ಮೆ ಅಲ್ಲಿ ತಲೆಯೆತ್ತುತ್ತಿದೆ ಮಾನವ ಕೋಟಿಯ ಭವಿಷ್ಯವನ್ನು ಉಳಿಸುವ ಇಲ್ಲವೆ ಅಳಿಸುವ ಶಕ್ತಿಯುಳ್ಳ ಎರಡು ರಾಷ್ಟ್ರಗಳಾದ ರಶ್ಯಾ ಅಮೇರಿಕಗಳಿಂದು ಯುಕ್ತ ರಾಷ್ಟ್ರ ಸಂಘದಲ್ಲಿ ಕಚ್ಚಾಡಿಕೊಳ್ಳುವುದನ್ನು ನೋಡಿದರೆ ಅವುಗಳೊಳಗಿನ ಬಾಂಧವ್ಯದ ಕಟ್ಟು ದಿನ ಹೋದಂತೆ ಸಡಿಲಿಸುವುದೆಂದರ್ಥವಾಗುವುದು ಅಮೇರಿಕದಲ್ಲಿ ಯುದ್ಧ ಪ್ರೇರಕರು ತಮ್ಮ ಜನತೆಯಲ್ಲಿ ಸಮರ ಮನೋಭಾವವನ್ನುಂಟು ಮಾಡಲು ಪ್ರಯತ್ನಿಸುತ್ತಿರುವರು ರಶ್ಯಾ ಅಮೇರಿಕಗಳ ಶಸ್ತ್ರಾಸ್ತ್ರ ತಯಾರಿ ಚಟುವಟಿಕೆಯೂ ಭರದಿಂದ ಸಾಗುತ್ತಿದೆ. ಕತ್ತಿಯನ್ನು ನಿತ್ಯ ಹರಿತಪಡಿಸುವ ಧೋರಣೆಯೇ ಶಕ್ತಿ ರಾಷ್ಟ್ರಗಳ ಮೆಚ್ಚಿನ ನಿಯಮವಾಗಿದೆ

ಒಂದು ಕಾಲದಲ್ಲಿ ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳ ತವರೂರುಗಳೆಂದೆನಿಸಲ್ಪಟ್ಟ ಬ್ರಿಟನ್ನು ಫ್ರಾನ್ಸುಗಳು ಇಂದು ಶಕ್ತಿ ಸ್ಪರ್ಧಾಂಗಣದಿಂದ ಮಾಯವಾಗಿವೆ. ಈ ದೇಶಗಳು ತಮ್ಮ ಸ್ವಂತ ಆಂತರಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನರಳುತ್ತಿದ್ದು ವಿಶ್ವ ದೃಶ್ಯದಿಂದ ಮರೆಯಾಗಿವೆ

★ ಕಾಥಿಯಾವಾಡದಲ್ಲಿ ಹೆಚ್ಚೆಚ್ಚು ಹಿಂದೀ ಸೈನ್ಯ ದಳಗಳು ಇರಿಸಲ್ಪಡುವ ವಿಚಾರ ದು ನಡೆದಿದೆ ಭಾರತ ನೌಕಾ ದಳದ ಮೂಲಕ ಸೈನ್ಯಗಳು ಅಲ್ಲಿ ಇಳಿಸಲ್ಪಟ್ಟಿವೆ

★ ಹೈದರಾಬಾದು ಮತ್ತು ಜುನಾಗಡಗಳ ಕುತಂತ್ರದ ಧೋರಣದ ಉದ್ದೇಶವು ಭಾರತದಲ್ಲಿ ಪಾಕಿಸ್ತಾನ ಸಹಾನುಭೂತಿಯ ಪ್ರತಿಗಾಮಿ ಪ್ರದೇಶಗಳನ್ನು ಸ್ಥಾಪಿಸುವುದಾಗಿದೆಯೆಂದು ರಾಜಕೀಯ ನಿರೀಕ್ಷಕರು ಅಭಿಪ್ರಾಯಪಡುತ್ತಾರೆ ಅಲ್ಲಿ ಮುಸ್ಲಿಂ ನಿರಾಶ್ರಿತರಿಗೆ ಆಶ್ರಯ ಕೊಡುವ ಕಾರಣವು ಇದೇ ಉದ್ದೇಶದ್ದೆಂದು ಹೇಳಲ್ಪಟ್ಟಿದೆ

ಶ್ರೀ ವಾಗೀಶ್ವರಿ ಸಂಗೀತ ಶಾಲಾ

ಈ ಶಾಲೆಯ ಪ್ರಥಮ ವಾರ್ಷಿಕ ಉತ್ಸವ ಈಚೆಗೆ ಈ ಶಾಲೆಯಲ್ಲಿ ಶ್ರೀ ಬಿ ಲಕ್ಷ್ಮಣದೇವ ವಿದ್ಯಾರ್ಥಿ ಅವರ ಅಧ್ಯಕ್ಷತೆಯಲ್ಲಿ ಜರಗಿತು ಶಾಲೆಯ ಸಂಸ್ಥಾಪಕರೂ ಮುಖ್ಯ ಶಿಕ್ಷಕರೂ ಆಗಿರುವ ಶ್ರೀ ಎಚ್. ಕೆ ಸಾಲಿಯಾನ್ ಇವರು ಪ್ರಾರ್ಥನೆ ನಡೆಸಿದರು. ಶಾಲಾ ವಿದ್ಯಾರ್ಥಿಗಳು ಸಂಗೀತ ಹಾಡಿದರು. ನೆರೆದವರಲ್ಲಿ ಶ್ರೀಗಳಾದ ಡಿ. ಎ. ಶಂಕ್ರ, ಪದವು ಶೀನಪ್ಪ, ಬಿ ನಾಗಪ್ಪ, ಬಿ. ಕೃಷ್ಣ ಮೊದಲಾದವರೂ ಹಾಡಿದರು. ಆ ಮೇಲೆ ಶ್ರೀ. ಡಿ. ಎ. ಶಂಕರಗಳೂ, ಶ್ರೀ ಪದವು ಶೀನಪ್ಪನವರೂ ಸಂಗೀತ ಶಿಕ್ಷಣದ ಆವಶ್ಯಕತೆಯ ಕುರಿತು ಭಾಷಣವಿತ್ತರು. ಅಧ್ಯಕ್ಷರ ಭಾಷಣ ಧನ್ಯವಾದ ಲಘು ಉಪಹಾರಗಳಾಗಿ ಮುಗಿಯಿತು.



ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್ರಚಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆಗಳ ಬೇನೆಯನ್ನ ತಗಿಸುತ್ತದೆ. ಚರ್ಮ ಸ್ವಚ್ಛವಿರಿಸಿ ಗುಣಪಡಿಸುತ್ತದೆ.

ಕುಟಿಕೂರಾ ಮುಲಾಮು

CUTICURA OINTMENT

ಜೀವವಿತ್ತಗಳನ್ನು ರಕ್ಷಿಸಲೇಬೇಕು

ಈಗಲೇ ಬಿಗಿಯಾದ ಕಾರ್ಯಕ್ರಮ ಕೈಕೊಳ್ಳಲಿ

ಸರ್ ಮಿರ್ಜಾ ಇಸ್ಮಾಯೀಲರ ಸೂಚನೆ

ಇಂದು ನಮ್ಮವರು ಹೊಸದಾಗಿ ರಚಿಸಲ್ಪಟ್ಟೆರಡು ಡೊಮಿನಿಯನ್ನುಗಳಲ್ಲೂ ಜೀವವಿತ್ತಗಳ ಸುರಕ್ಷಿತೆಯು ಗಂಡಾಂತರಕ್ಕೊಳಗಾಗಿದೆ. ಜನತೆ ಸ್ವತಾರ್ಕಿಕವಾಗಿ ವಿಚಾರ ವಿವೇಚನೆಗಳನ್ನು ಮಾಡುವುದರ ಬದಲಿಗೆ ಪರಸ್ಪರ ಶಂಕೆ ದ್ವೇಷಗಳನ್ನು ಹೆಚ್ಚಿಸುವುದರಲ್ಲಿ ಮಗ್ನರಾಗಿರುವಾಗ, ಅತ್ಯಲ್ಪದಾದೊಂದು ಘಟನೆಯು ಕೂಡಾ ದೊಡ್ಡ ದೊಂಬಿಯು ಅನಾಹುತವಾಗಿ ಸಂಭವಿಸಬಹುದಾಗಿರುವಾಗ ಎರಡು ಪ್ರದೇಶಗಳಲ್ಲೂ ಅಲ್ಪಸಂಖ್ಯಾಕರ ರಕ್ಷಣೆಯಾಗಬೇಕಾದುದು ಪ್ರಥಮ ಕರ್ತವ್ಯವಾಗಿದೆ ಕೇವಲ ಸದುದ್ದೇಶಗಳು ಕೇವಲ ಭಾಷಣಗಳಷ್ಟೇ ನಿಷ್ಪರಿಣಾಮಕಾರಿಯಾಗಿವೆ. ವಿಜ್ಞಾನದ ಈ ಯುಗದಲ್ಲಿ ಕಾಲ ರಹಿತವಾದ ಬಲಾತ್ಕಾರದ ಶಕ್ತಿಯು ಎಂದಿನಂತೆ ಬಾಳಿಕೊಂಡಿದೆ ನಿಷ್ಪಕ್ಷಪಾತವಾಗಿಯೂ ನಿರ್ವಂಚನೆ ವಿವೇಕ ಪರವಾಗಿಯೂ ಈ ಬಲಾತ್ಕಾರಕ್ಕೆ ಪ್ರತಿಯಾದ ಬಲಾತ್ಕಾರವನ್ನು ಒಡ್ಡಿದರೆ ಮಾತ್ರ ಈಗ ಎರಡು ಕಡೆಗಳಲ್ಲಿ ನಡೆಯುತ್ತಿರುವ ಅಲ್ಪ ಸಂಖ್ಯಾಕರನ್ನು ನಿರ್ಮೂಲ ಮಾಡುವ ಈ ದುಷ್ಟ ಕಾರ್ಯವನ್ನು ನಿಲ್ಲಿಸಬಹುದಾಗಿದೆ. ಇದನ್ನು ಮುಂದರಿಯ ಬಿಟ್ಟರೆ ನಮಗೆಲ್ಲರಿಗೂ ಅದರಿಂದ ವಿನಾಶವು ಕಟ್ಟಿಟ್ಟದ್ದು

ಆದರೆ ಈ ಕರ್ತವ್ಯವು ಪರಿಣಾಮಕಾರಿಯಾಗಿ ನಿರ್ವಹಿಸಲ್ಪಡುತ್ತದೆಂಬುದರ ಕುರಿತು ಯಾವ ನಿದರ್ಶನಗಳೂ ಇದುವರೆಗೆ ಕಂಡು ಬರುತ್ತಿಲ್ಲ ಎರಡು ಡೊಮಿನಿಯನ್ನುಗಳೂ ಅಗಾಧ ಸಮಸ್ಯೆಗಳೊಡನೆ ಜನ್ಮತಾಳಿವೆ. ಇವುಗಳಲ್ಲನೇಕವು ಅವುಗಳ ಸ್ವಂತ ಸೃಷ್ಟಿಯೆನ್ನಬಹುದು ದೇಶದ ವಿಭಾಗೀಕರಣದಿಂದುತ್ಪನ್ನವಾದ ಸಮಸ್ಯೆಗಳು ಸ್ನೇಹ ಸೌಹಾರ್ದ ಸಹಕಾರದಿಂದ ಮಾತ್ರ ಸುಧಾರಿಸಲು ಸಾಧ್ಯವಿದೆ ಮತ್ತೆ ಜಾತೀಯ ಕಲಹದ ಸಮಸ್ಯೆಯಿದ ಇದೂ ಕೂಡಾ ಒಂದು ಕಲ್ಪನಾರಹಿತವಾದ ಕೃತ್ರಿಮ ರಚನೆಯ ಸಮಸ್ಯೆ ಆದರೆ ಇಂದು ಇದು ಎರಡು ಡೊಮಿನಿಯನ್ನುಗಳ ಇತರ ಎಲ್ಲಾ ಸಮಸ್ಯೆಗಳಿಗಿಂತಲೂ ಅಗಾಧವಾಗಿದೆ. ಇದನ್ನು ಕೂಡಾ ಸಂಯುಕ್ತ ಶಕ್ತಿಯ ಪ್ರತಿ ಬಲಾತ್ಕಾರದ ಧೋರಣೆಯಿಂದ ಅಂತ್ಯಗೊಳಿಸಬಹುದೂ

ನಿಜ ಸಂಗತಿ ಎದುರಿಸಿರಿ

ಬಹು ಪ್ರಾಚೀನದಿಂದ ಭಾರತವು ಭಾವೋದ್ರೇಕ ಪ್ರಧಾನ ರಾಷ್ಟ್ರವಾಗಿದೆ ಇಂದು ನಾವು ಕೆಲವು ನಿಜ ಸಂಗತಿಗಳನ್ನೆದುರಿಸಬೇಕಾಗಿದೆ. ನಮ್ಮ ಹಳೆಯ ಆಡಳಿತ ವಿಧಾನವು ಸಂಪೂರ್ಣ ನೂತನ ರೀತಿಯಲ್ಲಿ ಪರಿವರ್ತಿಸಲ್ಪಟ್ಟ ಇಂದಿನ ಈ ಕರುಣಾಜನಕ ಪರಿಸ್ಥಿತಿಯನ್ನು ನೀಗಿಸಲು ಸಂಯುಕ್ತ ಸಹಕಾರದ ಕಾರ್ಯಕ್ರಮವನ್ನನುಸರಿಸಬೇಕೆಂಬೊಂದು ಸತ್ಯ ಸಂಗತಿ ಇಲ್ಲದಿದ್ದರೆ ನಾವು ಬೇರೊಂದು ಸಂಗತಿಯನ್ನೆದುರಿಸಬೇಕಾಗುತ್ತದೆ ಇಂದು ನಮ್ಮೊಳಗೆ ಪರಸ್ಪರ ದ್ವೇಷಾಸೂಯೆಯ ಬೀಜವು ಬಿತ್ತಲ್ಪಟ್ಟಿದೆ. ಪರಿಣಾಮವಾಗಿ ನಾವು ಮುಂದೆ ಕಷ್ಟ ಕಣ್ಣೀರುಗಳಿಂದ ತುಂಬಿದ್ದ ಅದರ ಫಲವನ್ನು ತಿನ್ನಲೂ ಸಿದ್ಧರಿರಬೇಕು. ಕಂಗಾಲು ಪರಿಸ್ಥಿತಿಯು ನಮ್ಮ ಪಾಲಿನದಾಗುವುದು. ಆ ಸಂಕಷ್ಟದಲ್ಲಿ ಜಾತಿಮತ ಭೇದವಿಲ್ಲದೆ ಎಲ್ಲರೂ ಭಾಗಿಗಳಾಗುವರು. ಈ ಕಾರಣದಿಂದಾಗಿ ಪಾಕಿಸ್ತಾನ ಸರಕಾರವು ಬ್ರಿಟನ್ ಮತ್ತಿತರ ಡೊಮಿನಿಯನ್ನುಗಳಿಗೆ ಮಾಡಿದ ಬಿನ್ನಹವನ್ನು ನಾವಿಂದು ಸ್ವಾಗತಿಸಬೇಕು ಮಾತ್ರವಲ್ಲ ನಮ್ಮ ದೇಶದ ಹೊರಗಿನವರು ಕೂಡಾ ಅದನ್ನು ಸ್ವಾಗತಿಸಬೇಕು. ಜರ್ಮನ್ ಮುತ್ಸದ್ದಿಯಾದ ಬಿಸ್ಮಾರ್ಕನು ಹೇಳಿದಂತೆ ಈ ಮಾನವ ಕೋಟಿಯ ಮೂರ್ಖತನಕ್ಕೆ ಎಣೆಯಿಲ್ಲ ಆ ಹೇಳಿಕೆಯು ನಮಗಿಂದು ಎಲ್ಲರಿಗಿಂತ ಹೆಚ್ಚಾಗಿ ಅನ್ವಯಿಸುತ್ತದೆ ಕಾರಣ ಇಂದು ಅತ್ಯಂತ ದುಃಖಾಸ್ಪದವಾದ ನಮ್ಮೊಳಗಿನ ಈ ವಿಭಾಗೀಕರಣದ ಮನೋಭಾವವು ಕೆತ್ತೊಗೆಯಲ್ಪಡದಿದ್ದರೆ ಮುಂದೆ ಅನತಿ ದೂರದಲ್ಲಿ ಇಡೀ ಜನಾಂಗವೇ ಭ್ರಾತೃ ಕಲಹದಿಂದ ಉದ್ದಿಪ್ತವಾಗುವುದರಲ್ಲಿ ಸಂದೇಹವಿಲ್ಲ ಅಷ್ಟಾದರೂ ಅದು ಅಲ್ಲೇ ಅಂತ್ಯವಾಗದು

ಇಂದು ಬೇರೆಯವರು ನಮ್ಮನ್ನು ಕಾಯುತ್ತಿರುವರು ಇಂದಿನ ಶಕ್ತಿ ರಾಷ್ಟ್ರಗಳು ನಮಗೆಲ್ಲ ನೂತನವಾದೊಂದು ಉಪದೇಶವನ್ನು ಬೋಧಿಸಿವೆ, "ನಿಮಗೆ ನಮ್ಮದೇ ಯುದ್ಧವಲ್ಲದೆ ಬೇರೆ ಯಾರ ಯುದ್ಧದಲ್ಲೂ ನೀವು ಭಾಗವಹಿಸಬಾರದು ಎಂದವರ ಹಿತೋಪದೇಶ ಆದುದರಿಂದ ನಾವು ಅಂತಃಕಲಹದ ಕಿಡಿಯನ್ನು ಹೊತ್ತಿಸಿದರೆ ಮತ್ತದನ್ನು ಆರಿಸುವ ಶಕ್ತಿ ನಮ್ಮಲ್ಲಿಲ್ಲದೆ ಮೂರನೇಯವರ ಮಧ್ಯಸ್ಥಿಕೆಗೆ ನಾವು ಅನಿವಾರ್ಯವಾಗಿ ಒಳಗಾಗಬೇಕಾಗುವುದು ಮತ್ತೆ ಅವರು ಬಂದು ಅದನ್ನು ಇತ್ಯರ್ಥಿಸುವಾಗ ನಮಗೇನೂ ಉಳಿಯಲಾರದೆಂಬುದೂ ಸ್ವಾನುಭವವೇ ಆಗಿದೆ ಹಾಗಾದರೆ ನಾವು ಕೈಕೊಳ್ಳಬೇಕಾದ ಧೋರಣೆ ಇಲ್ಲವೆ ಕಾರ್ಯಕ್ರಮ ಎಂತಹದ್ದಿರಬೇಕು? ಖಂಡಿತವಾಗಿ ಈಗ ನಾವೇನು ಮಾಡಬೇಕಾಗಿದೆ?

ಮುಖಂಡರ ಪರಿಷತ್ತು

ಪಾಕಿಸ್ತಾನ ಸರಕಾರ ಜಗತ್ತಿಗೆ ಮಾಡಿಕೊಂಡ ವಿನಂತಿ ಮೇಲಿನ ಪ್ರಶ್ನೆಯನ್ನು ಉತ್ತರಿಸಲು ಸ್ವಲ್ಪ ಸಹಾಯ ಮಾಡುತ್ತದೆ ಸಂಪೂರ್ಣ ಉತ್ತರವೆಂದರೆ ಭಾರತದ ಮತ್ತು ಹೊರ ದೇಶಗಳ ನಾಯಕರ ಒಂದು ಪರಿಷತ್ತು ಜರಗಬೇಕು ಅವರು ಭಾರತ ಪಾಕಿಸ್ತಾನಗಳ ಸಂಪೂರ್ಣ ಪರಿಸ್ಥಿತಿಯನ್ನು ಪರಿಶೀಲಿಸಬೇಕು ಇಲ್ಲಿನ ಗೊಂದಲವನ್ನು ಇತ್ಯರ್ಥಿಸುವುದರಿಂದ ಇದೇ ಭಾರತ ದೇಶಕ್ಕೆ ಆಗುವ ಸತ್ಕಲ್ಯಾಣವನ್ನು ಇತ್ಯರ್ಥಿಸದಿದ್ದರೆ ಇಡೀ ಲೋಕದ ಶಾಂತಿಗೆ ಉಂಟಾಗಬಹುದಾದ ಗಂಡಾಂತರವನ್ನೂ ಅಲ್ಲಿ ಪರ್ಯಾಲೋಚಿಸಬೇಕು

ಈ ಪರಿಷತ್ತಿಗೆ ಎರಡು ಡೊಮಿನಿಯನ್ನುಗಳ ಗವರ್ನರ್ ಜನರಲ್ಲುಗಳ ಮುಖ್ಯ ಪ್ರಧಾನಿಗಳ ದೇಶಿ ಸಂಸ್ಥಾನಗಳಿಂದ ಒಬ್ಬಿಬ್ಬ ಪ್ರತಿನಿಧಿಗಳೂ, ಮತ್ತು ಪರದೇಶಗಳ ಮೂರು ಪ್ರಭಾವಿತ ಪ್ರತಿನಿಧಿಗಳೂ ಒಟ್ಟು ಸೇರಬೇಕು ಹೊರಗಿನವರಲ್ಲಿ ಅಮೇರಿಕದ ಮಾಜಿ ಅಧ್ಯಕ್ಷ ಹರ್ಬರ್ಟ್ ಹೂವರ್, ಇಲ್ಲವೆ ವಿಲಿಯಂ ಫಿಲಿಪ್ಸ್ ಇಲ್ಲವೆ ಸಮ್ನರ್ ವೆಲ್ಸ್ ಇವರಾಗಲಿ, ಆಸ್ಟ್ರೇಲಿಯದಿಂದ ಡಾ। ಇವೆಟ್ ಇಲ್ಲವೆ ಎ. ಜಿ ಕೆಸೆಯವರಾಗಲಿ, ಇಲ್ಲವೆ ಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿಗಳಾದ ಟ್ರಾಗ್ವಿವ್ ಲ್ಯಾ ಅವರಾಗಲಿ ನಿಯೋಜಿತರಾಗಬೇಕು ಇಡೀ ಮಾನವ ಕೋಟಿಯ ಪ್ರತಿನಿಧಿಗಳಾಗಿ ಮಹಾತ್ಮಾ ಗಾಂಧಿಯವರನ್ನಂತೂ ಮೇಲ್ಕಂಡ ಪರಿಷತ್ತಿಗೆ ಬರುವಂತೆ ಪ್ರಯತ್ನಿಸಲೇ ಬೇಕು

ನಮ್ಮ ಪ್ರಸ್ತುತದ ಮತ್ತು ಭವಿಷ್ಯದ ಸಮಸ್ಯೆಗಳನ್ನು ಸುಧಾರಿಸುವ ರೀತಿ ನೀತಿಗಳ ಕುರಿತು ಪರಿಷತ್ತು ಸಲಹೆ ಸೂಚನೆಗಳನ್ನು ಕೊಡಬೇಕು ನಮ್ಮ ಮುಖಂಡರು ಆ ಸಲಹೆ ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಪ್ರತಿಜ್ಞಾ ಬದ್ಧರಾಗಿರಬೇಕು ಕಾರಣ ಎರಡೂ ಕಡೆಯ ನಮ್ಮ ಮುಖಂಡರೇ ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯನ್ನುಂಟುಮಾಡಲು ಕಾರಣ ಭೂತರಾದವರು. ಆದುದರಿಂದ ಅವುಗಳ ನಿವಾರಣೆ ಮತ್ತು ಇತ್ಯರ್ಥಗಳೂ ಅವರಿಂದಲೇ ಸಾಧಿಸಲ್ಪಡಬೇಕಾಗಿದೆ ಅವರು ತಾಳ್ಮೆ ಪರಸ್ಪರ ಸೌಹಾರ್ದ ಸಹಕಾರಗಳಿಂದ ವರ್ತಿಸಬೇಕಾದುದು ಅತ್ಯಾವಶ್ಯಕ ಅವರು ಕರ್ತವ್ಯ ಪರಾಯಣರಾದ ರಾಜಕೀಯ ಮುತ್ಸದ್ದಿಗಳಂತೆ ಕ್ರಿಯಾತ್ಮಕ ಕೇವಲ ಭಾವನಾತ್ಮಕ ತತ್ವ ವಿಚಾರಗಳನ್ನು ಪ್ರತಿಪಾದಿಸಿ ಕಾಲ ವಿಳಂಬ ಮಾಡದೆ ಅವರು ನಮ್ಮೀ ದೇಶದ 40 ಕೋಟಿ ಜನತೆಯ ಪ್ರಸ್ತುತದ ಮತ್ತು ಭಾವೀ ಶ್ರೇಯಸ್ಸಿನ ಕುರಿತ ಸ್ಥಾಯಿ ಯೋಜನೆಗಳನ್ನು ಕೈಕೊಳ್ಳುವ ಕುರಿತ ಧೀರರ ಯುಕ್ತರಾಗತಕ್ಕದ್ದು ನಮ್ಮ ನಿಷ್ಪಕ್ಷಪಾತ ಬುದ್ಧಿಗೂ, ನ್ಯಾಯಪ್ರಿಯತೆಗೂ ಮತ್ತು ವಿಶ್ವ ನ್ಯಾಯ ... ಖ್ಯಾತರಿಂದ ಹೊರದೇಶಗಳ ಪ್ರತಿನಿಧಿಗಳ ಸಹಾಯವು ನಮಗೀ ಬೃಹತ್ಕಾರ್ಯದಲ್ಲಿ ... ಅವಶ್ಯವಿದ್ದಾಗಿದೆ ... ನಮ್ಮ ಚಿಂತೆಯೆಂದರೆ ಅವರು ನಮ್ಮ ಸಹಾಯಕ್ಕೆ ಸಿಗಬಲ್ಲರ ... ಪ್ರತಿಯೊಂದು ಸರಕಾರದ ಪ್ರಥಮ ಕರ್ತವ್ಯವೆಂದರೆ ಆಳುವುದು ತಾವು ಯಾರ ಪರವಾಗಿ ಆಳುತ್ತಿದ್ದರೂ ಆ ಜನರ ಜೀವವಿತ್ತಗಳನ್ನು ರಕ್ಷಿಸಿ ಜೀವನವು ಜೀವಿಸಲು ಯೋಗ್ಯವಾಗಿ ಮಾಡುವುದು ಅವರ ಕರ್ತವ್ಯವೆಂಬುದು ಇದರ ಅರ್ಥವಿರುತ್ತದೆ ಆದುದರಿಂದ ಜೀವವಿತ್ತಗಳ ರಕ್ಷಣೆಯಾಗಲೇ ಬೇಕು ಪವಿತ್ರವಾಗಿರುವ ಈ ಕರ್ತವ್ಯವನ್ನು ಧೈರ್ಯ ಸ್ಥೈರ್ಯ ಪ್ರಶಾಂತತೆಗಳಿಂದ ನಿರ್ವಹಿಸಬೇಕು

ಆದರೆ ಭಾರತ ಪಾಕಿಸ್ತಾನಗಳಿಂದೊಂದು ಸಂಯುಕ್ತ ಮನವಿಯನ್ನು ಮಾಡಿಕೊಂಡರೆ ಒಂದು ವೇಳೆ ಅವರು ಇಲ್ಲಿಗೆ ಬರಲು ಮನಸ್ಸು ಮಾಡಲೂಬಹುದು ಕಾರಣ ಹೊರಗಿನವರ ಸಹಾಯವನ್ನು ಕೋರುವುದು ಇಂದಿನ ಕಾಲ ಮಹಿಮೆಗೆ ಅನುಸಾರವಾದದ್ದಾಗಿದೆ ಏಕೆಂದರೆ ಇಂದಿನ ರಾಷ್ಟ್ರೀಯ ಇಲ್ಲವೆ ಅಂತರಾಷ್ಟ್ರೀಯ ಸಮಸ್ಯೆಗಳು ಕೇವಲ ಸದುದ್ದೇಶ ಮತ್ತು ಆಶೆ ಹಾರೈಕೆಗಳಿಂದಲೇ ನಿವಾರಣೆಯಾಗವು, ಅವುಗಳ ಪರಿಹಾರಕ್ಕೆ ವಿವೇಕಪರ ಸಲಹೆಗಳೂ, ವಿಮೋಚನಾ ಪರ ಕಾರ್ಯ ಧೋರಣೆಯೂ ಅತ್ಯಾವಶ್ಯಕವಿವೆ.

CANARA BANK, LIMITED.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

(ಸ್ಥಾಪಿತ: ೧೯೦೬)

ಹೆಡ್ ಆಫೀಸು: ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು: 75 ಎಪ್ಲೊಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು:—

ಮದರಾಸು ಪ್ರಾಂತ್ಯ: ಮಂಗಳೂರು-ಸಿಟಿ, ಮಂಗಳೂರು-ಬಂದರ್, ಮುಲ್ಕಿ, ಗಂಗೊಳ್ಳಿ., ಕುಂದಾಪುರ, ಉಡುಪಿ, ಕಾರ್ಕಳ, ಬಂಟ್ವಾಳ, ಪುತ್ತೂರು., ಕಾಸರಗೋಡು, ಮದರಾಸು., ಪಯ್ಯನ್ನೂರು, ಕಲ್ಲಿಕೋಟೆ., ಕನ್ನಾನ್ನೂರು, ಕೊಯಮುತ್ತೂರು., ತಿರುಚಿನಾಪಳ್ಳಿ., ತುತುಕುಡಿ, ಸೇಲಂ, ಇರೋಡ್

ಹೈದರಾಬಾದ್ ಸಂಸ್ಥಾನ: ಸಿಕಂದರಾಬಾದು

ತಿರುವಾಂಕುರು ಸಂಸ್ಥಾನ: ಅಲ್ಲೆಪ್ಪಿ, ಕ್ವಿಲೋನ್

ಮಧ್ಯ ಪ್ರಾಂತ್ಯ: ನಾಗಪುರ, ಅಕೋಲಾ, ಅಮರಾವತಿ

ಮುಂಬೈ ಪ್ರಾಂತ್ಯ: ಬೆಳಗಾಂವ್, ಧಾರವಾಡ., ಹುಬ್ಬಳ್ಳಿ., ಶೋಲಾಪುರ., ಪೂಣೆ, ಮುಂಬೈ-ಫೋರ್ಟ್, ಮುಂಬೈ ಮಾಂಡ್ವಿ, ಮುಂಬೈ-ಕಾಲ್ಬಾದೇವಿ, ಮುಂಬೈ-ಗಿರ್‌ಗಾಂವ್, ಮುಂಬೈ-ಕಲ್ಯಾಣ

ಮೈಸೂರು ಸಂಸ್ಥಾನ: ಮೈಸೂರು, ಶಿವಮೊಗ್ಗೆ, ಚಿಕ್ಕಮಗಳೂರು, ಬೆಂಗಳೂರು ಸಿಟಿ, ಅರಸಿಕೆರೆ, ದಾವಣಗೆರೆ

ಸಿಂದ್ ಪ್ರಾಂತ್ಯ: ಕರಾಚಿ

ಕೊಚ್ಚಿ ಸಂಸ್ಥಾನ: ಕೊಚ್ಚಿ, ಎರ್ನಾಕುಲಾಮ್

[ವಾರದ ಕತೆ]

ಪುನಃ ಸಮಾಗಮ

(ಕತೆಗಾರರು ಶ್ರೀ ಎಚ್. ವಿಟ್ಠಲ್ ಶೆಣೈ, –ವಿದ್ವಾನ್)

ಸುಬ್ಬಣ್ಣನು ತಂದೆಯನ್ನು ಒಲಿಸಿ ಮದ್ರಾಸಿಗೆ ಹೊರಡಲು ಸಜ್ಜಾದನು. ಅವನ ತಂದೆಯು ಮಹಾ ಧನಿಕನಾದರೂ ಸುಬ್ಬಣ್ಣನನ್ನು ಮದ್ರಾಸಿಗೆ ಕಳುಹಿಸಲು ಮೊದಲು ಒಪ್ಪಿರಲಿಲ್ಲ. ಸುಬ್ಬಣ್ಣನ ಹಠದಿಂದಲೋ ಅಥವಾ ತನ್ನ ಮಗನು ಅದ್ವಿತೀಯನಾಗಿ ತನ್ನ ಕೀರ್ತಿಯನ್ನು ಶಾಶ್ವತಗೊಳಿಸಿಯಾನು ಎಂಬ ಮಹದಾಸೆಯಿಂದಲೋ ಎಂಬಂತೆ, ಸುಬ್ಬಣ್ಣನ ಛಲವೇ ಗೆದ್ದಿತು ಎಷ್ಟೆಂದರೂ ಶ್ರೀಮಂತರ ಮಗನಲ್ಲವೇ? ಅವನ ಮಿತ್ರರನೇಕರು ಅವನನ್ನು ಕಳುಹಿಸುವುದಕ್ಕಾಗಿ ನೆರೆದರು ಅವನಿಗೊಂದು ಚಹಾ ಸಮಾರಂಭವನ್ನೇ ಏರ್ಪಡಿಸಿದರು. ಈ ಮಿತ್ರರ ಹಂಗಡದಲ್ಲಿ ಬಿ ಎ ಸೀನಿಯರದಲ್ಲಿ ಓದುತಿದ್ದ ಗಿರಿಧರನು ಸುಬ್ಬಣ್ಣನ ಜೀವದ ಗೆಳೆಯನಾಗಿದ್ದನು ಅವನು ಹೊರಡುವಾಗ ಗಿರಿಧರನನ್ನು ಕುರಿತು "ಗಿರಿ, ನಾನು ಒಂಬತ್ತು ಗಂಟೆಯ ರೈಲಿಗೆ ಹೋಗಬೇಕಾಗಿದೆ ಇನ್ನೊಂದು ತಾಸು ಉಳಿಯಿತು ನೀನು ರೈಲ್ವೆ ಸ್ಟೇಶನ್ನಿನ ವರೆಗೆ ಬರುವೆಯಾ?" ಎಂದು ಪ್ರಶ್ನಿಸಿದನು ಗಿರಿಧರನು "ಅಗತ್ಯವಾಗಿ ಬರುತ್ತೇನೆ, ಸುಬ್ಬಣ್ಣ. ನೀನು ಹೇಳದಿದ್ದರೂ ಬರುತಿದ್ದೆ" ಎನ್ನುತ್ತ ಸುಬ್ಬಣ್ಣನಿಗಿಂತ ಮೊದಲೇ ಜಟ್ಕಾವನ್ನೇರಿದನು ಅಪರಿಚಿತರಾದರೂ ಅಲ್ಲಿದ್ದರೆ ಗಿರಿಧರನೆ ಮದ್ರಾಸಿಗೆ ಹೊರಡಲು ಸಿದ್ಧನಾಗಿದ್ದಾನೆಂದು ಊಹಿಸುತಿದ್ದರು

ತಂದೆಯ ಮತ್ತು ತಾಯಿಯ ಉಪದೇಶ ವಚನಾಮೃತ ಧಾರೆಯು ಕಿವಿಯಲ್ಲಿ ಹೊಕ್ಕು ಮನೋಸಾಗರಕ್ಕೆ ಸಂಗಮವಾಗಿ ಅಲ್ಲಿ ಕಲ್ಲೋಲವುಂಟಾದ ವೇಳೆ ಸುಬ್ಬಣ್ಣನು ಜಟಕಾದ ಸಮೀಪ ಮೆಲ್ಲಮೆಲ್ಲನೆ ಬಂದನು ಅವನ ತಲೆಯು ದುಃಖದಿಂದ ಭಾರವಾಗಿತ್ತು ಊರನ್ನು ಬಿಡುವಾಗ ಉತ್ಪನ್ನವಾಗುವ ವ್ಯಥೆಯನ್ನವನು ಅರಿತ ದ ಇದೀಗ ಜಟಕಾವನ್ನು ಹತ್ತುವಾಗ ಸುಬ್ಬಣ್ಣನ ಬೀಳುವುದರಲ್ಲಿದ್ದನ ಆದರೆ ಜಟಕಾದಲ್ಲಿ ಮೊದಲೇ ಆಸೀನನಾದ ಚತುರ ಗಿರಿಧರನು ಇದನ್ನು ಗಮನಿಸಿ, ಹಸ್ತಲಾಘವವನ್ನು ನಟಿಸಿ ಅವನನ್ನು ಒಳಗೊಳಕ್ಕೆ ಜಗಿದನು ಮಿತ್ರನ ಮಾನ ಉಳಿಸಿದನು

ಜಟಕಾ ಹೊರಟಿತು ಸುಬ್ಬಣ್ಣನ ಮನೆಯ ಕಡೆಗೆ ನೋಡುತಿದ್ದನು ಅದು ಕಾಣಿಸುವವರೆಗೂ ನೋಡುತಿದ್ದನು ಅದು ಮರೆಯಾದೊಡನೆ ನಿಟ್ಟುಸಿರು ಬಿಟ್ಟನು! ಒರೆ ಹುಚ್ಚ ಇಲ್ಲದಿದ್ದರೆ ಇಂದು ಮಾತ್ರವೇಕೆ ಅವನಿಗೆ ತನ್ನ ಮನೆಯ ಮೇಲೆ ಎಂದಿಲ್ಲದ ಎಲ್ಲಿಲ್ಲದ ಮೋಹ!

ಸುಬ್ಬಣ್ಣನು ಹೇಳಿದನು "ಗಿರಿ ಇದುವರೆಗೆ ನಾನು ಮಂಗಳೂರಿನಲ್ಲೇ ಇದ್ದೆ ಊರನ್ನು ಬಿಟ್ಟು ನನಗೆ ಅಭ್ಯಾಸವಿಲ್ಲ ನಿನ್ನಂಥ ಆದರಲ್ಲೂ ನಿನ್ನಂಥ ಮಿತ್ರರನ್ನು ಬಿಟ್ಟುಹೋಗುವುದು ಹೇಗೆಂದು ನಿನ್ನೆ ರಾತ್ರಿಯಿಂದಲೂ ನನ್ನ ಮನಸ್ಸನ್ನು ಕಳವಳಿಸುತ್ತದೆ

ಗಿರಿಧರನು "ಚಿಂತೆಯನ್ನೇಕೆ ಮಾಡುವೆ ಸುಬ್ಬಣ್ಣ? ಬರುವ ಕ್ರಿಸ್‌ಮಸ್‌ನಲ್ಲಿ ನೀನು ಬರುವೆಯಲ್ಲ? ಕೆಲವು ದಿನ ಪರಪ್ಪೂರಿನಲ್ಲಿದ್ದರೆ ಹಾಗೆಯೇ ಆಗುವುದು ಮತ್ತೆ ನಮ್ಮನ್ನು ನೀನು ಕನಸಿನಲ್ಲಾದರೂ ನೆನಸುತ್ತಿಯೋ? ಇಲ್ಲವೋ? ಎಂದು ಸಂದೇಹ ನನಗೆ'

"ತಮಾಷೆ ಮಾಡುವೆಯ ಗಿರಿ? ನಿನ್ನಂಥವನನ್ನು ನಾನು ಮರೆತರೆ ಹೇಗೆ? ನಿನ್ನ ಸಹಾಯವಿಲ್ಲದಿದ್ದರೆ ನಾನು ಡಿಗ್ರಿಯನ್ನೇ ಹೊಂದುತ್ತಿರಲಿಲ್ಲ"

"ಈಗ ಹಾಗೆ ಹೇಳುವಿ ಮದ್ರಾಸಿನಲ್ಲಿ ಶ್ರೀಮಂತ ಗೆಳೆಯರು ಸಿಕ್ಕಿದ ಮೇಲೆ ನನ್ನ ನೆನಪು ನಿನಗಾಗುವುದು ನನ್ನ ಭಾಗ್ಯ!"

'ಅದನ್ನೆಲ್ಲ ಬಿಡು ಗಿರಿ, ನನಗೀಗ ಹುಟ್ಟಿದ ಊರನ್ನು ಬಿಡುವಾಗ ಎಷ್ಟು ಸಂಕಟವಾಗುವುದೆಂದು ಊಹಿಸಬಲ್ಲೆಯಾ?"

"ಅದು ನನಗೆ ಗೊತ್ತು ಸುಬ್ಬಣ್ಣ ನನ್ನ ಊರು ಸಹ ಪುತ್ತೂರು ಅಲ್ಲಿಂದ ಮಂಗಳೂರಿಗೆ ಬರುವಾಗ ಮೊದಮೊದಲು ನನಗೂ ಹಾಗೆಯೇ ಆಗುತಿತ್ತು ಆದರೆ ನಿನ್ನಂಥ ಮಿತ್ರರು ನನಗೆ ಸಿಕ್ಕಿ, ನನ್ನ ಕಾಲೇಜು ಜೀವನವು ನನ್ನಲ್ಲಿ ಆನಂದವನ್ನು ತಂದಿದೆ ಪುತ್ತೂರಿನ ಮಿತ್ರರ ನೆನಪೇ ನನಗೀಗ ಇಲ್ಲ. ಅದರಂತೆ ಮದರಾಸಿನಲ್ಲಿ ನೀನು ನನ್ನನ್ನು ಮರೆತರೆ ನನಗಾಶ್ಚರ್ಯವೆನಿಸಲಾರದು"

ರೈಲ್ವೆ ನಿಲ್ದಾಣವು ಬಂತು ಇಬ್ಬರೂ ಗಾಡಿಯಿಂದಿಳಿದರು. ರೈಲುಗಾಡಿಯು ಹೊರಡಲು ಐದು ನಿಮಿಷಗಳು ಮಾತ್ರ ಉಳಿದಿದ್ದುವು. ಸುಬ್ಬಣ್ಣನು ರೈಲನ್ನು ಹತ್ತಿದನು ಗಿರಿಧರನು ಪ್ಲಾಟ್‌ಫೋರ್ಮಿನಲ್ಲಿ ನಿಂತನು ಸುಬ್ಬಣ್ಣನ ಮುಖವು ಗಂಭೀರವಾಗಿತ್ತು ಅವನೆಂದನು "ಗಿರಿ, ಹೋದೊಡನೆ ಪತ್ರ ಬರೆಯುತ್ತೇನೆ ನೀನೂ ಆಗಾಗ ಉತ್ತರಗಳನ್ನು ಬರಿ' ಎಂದನು ಗಿರಿಧರನ ಮುಖದಲ್ಲಿ ಎಳೆನಗು ಮೂಡಿತು ಸುಬ್ಬಣ್ಣನು ಮತ್ತೂ ಹೇಳಿದ್ದೇನೆಂದರೆ "ಗಿರಿ, ಕಳೆದ ವರ್ಷದಂತೆ ನೀನು ಈ ವರ್ಷ ಸಿಕ್ಕಿದ ಕಡೆ ತಿರುಗಾಡದಿರು ನೀನು ಬುದ್ಧಿವಂತನಾದರೂ ಅದರಿಂದ ಅಪಾಯವಿದೆ ಆದ್ದರಿಂದ ಅಭ್ಯಾಸದ ಕಡೆ ಗಮನ ಕೊಡು ಎಂದು ಅವನ ಕಣ್ಣಿನಿಂದಾಗ ನೀರಿನ ಹನಿಗಳು ಉದುರುತಿದ್ದುವು ಅದನ್ನು ನೋಡದೆ ಇರುತಿದ್ದರೆ ವಿನೋದ ಪ್ರಿಯನಾದ ಗಿರಿಧರನು "ನೀನು ಭಾರಿ ಓದಿದ್ದೀಯೋ? ಏನು ಉಪದೇಶ? ಅಜ್ಜಯ್ಯನಾಗಿ ಬಿಟ್ಟಿಯಾ?" ಎಂದು ಅಣಕಿಸದೆ ಇರುತ್ತಿರಲಿಲ್ಲ

ಗಾಡಿಯು ಕೂ ಎನ್ನುತ್ತ ಹೊರಟಿತು ಜನರಹಿತವಾದ ಆ ಸ್ಥಳವು ಗಿರಿಧರನಿಗೆ ಶೂನ್ಯವಾಯಿತು ಅವನು ತನ್ನ ಎದೆಯನ್ನು ಮುಟ್ಟಿ ನೋಡಿದನು ಹೌದು ಸುಬ್ಬಣ್ಣನು ಕುಳಿತ ಗಾಡಿಯ ಜತೆ ತನ್ನ ಹೃದಯವೂ ಢಕ್ಕಕಕ ಢಕ್ಕಕಕ ಎನ್ನುತ್ತಿದೆ ಈ ಬರೀ ನನ್ನ ಗಾಡಿಯ ಶಬ್ದಕ್ಕೆ ಈಗ ಹೋದ ಗಾಡಿಗೂ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ ನನ್ನ ಸುಬ್ಬಣ್ಣನು ಈ ಗಾಡಿಯಲ್ಲೇ ಇರುವನು" ಎಂದವನು ಭಾವಿಸಿ ತನ್ನ ಕಲ್ಪನಾ ಶಕ್ತಿಯನ್ನು ಅರಿತು ಬೆಚ್ಚಿದನು ನಕ್ಕನು ಕೂಡ ಅನಂತರ ಕಾಲೇಜಿಗೆ ಹೋಗಬೇಕೆಂದು ನೆನಪಾಯಿತು ತನ್ನ ಕಾಲೇಜಿನ ಕಡೆಗೆ ಕಾಲು ಹಾಕಿದನು

೨

ಮದರಾಸಿನ ಮೊದಲನೆಯ ಪತ್ರವು ಬಂತು ಅದರಲ್ಲಿ ಮದರಾಸಿನ ವಿಸ್ತಾರ ಲಾ ಕಾಲೇಜಿನ ವರ್ಣನೆ ಬೀಚಿನಲ್ಲೂ ಪಾರ್ಕುಗಳಲ್ಲೂ ಪ್ರಾಯಃ ವಿಹಾರ ಮಾಡುವ ಜನರ ನಡೆ ನುಡಿಗಳು, ದೊಡ್ಡ ದೊಡ್ಡ ಕಾಲೇಜುಗಳ ಕಟ್ಟಡಗಳ ವಿವರಣೆ, ಮೊದಲಾದುವು ತುಂಬಿದ್ದುವು

ಮೂರು ತಿಂಗಳ ಅನಂತರ ಮತ್ತೊಂದು ಪತ್ರವು ಗಿರಿಧರನಿಗೆ ತಲುಪಿತು ಇಷ್ಟು ದೀರ್ಘ ಸಮಯದಲ್ಲಿ ಗೆಳೆಯನ ಪತ್ರದ ಬರವನ್ನೆ ಹಾರೈಸಿ ಬೇಸತ್ತಿದ್ದ ಗಿರಿಧರನು ಆಸಕ್ತಿಯಿಂದ ಅದನ್ನು ಓದ ತೊಡಗಿದನು

ಲಾ ಕಾಲೇಜು,

ಗೆಳೆಯಾ ಮದರಾಸು

ನಿನಗೆ ಪತ್ರ ಬರೆಯದೆ ಬಹಳ ಸಮಯವಾಯಿತು ಬರೆಯಲು ಸಮಯವೂ ಆಗಲಿಲ್ಲ ನಿನ್ನ ಎಂಟು ಪತ್ರಗಳೂ ತಲುಪಿವೆ ನಿನ್ನಂತಹ ಹಲವರು ಮಿತ್ರರು ನನಗೆ ಸಿಕ್ಕಿದ್ದಾರೆ ಇಲ್ಲಿಯ ನನ್ನ ಮಿತ್ರರೆಲ್ಲರೂ ಬಹಳ ಒಳ್ಳೆಯ ಸ್ವಭಾವದವರು ಹೆಚ್ಚಿಗೆ ಬರೆಯಲು ಸಮಯವಿಲ್ಲ

ನಿನ್ನ – ಸುಬ್ಬಣ್ಣ

ಗಿರಿಧರನಿಗೆ ಪತ್ರವನ್ನೋದಿ ಅಸೂಯೆಯು ಉಂಟಾಯಿತು ಅವನಿಗೆ ನಾಲ್ಕು ವರ್ಷ ಪ್ರಯತ್ನಪಟ್ಟರೂ ಸುಬ್ಬಣ್ಣನಂತಹ ಗೆಳೆಯರು ಸಿಕ್ಕಿಲ್ಲ ಸುಬ್ಬಣ್ಣನಿಗಾದರೋ ನಾಲ್ಕು ತಿಂಗಳುಗಳೊಳಗೆ ಗಿರಿಧರನಂತಹ ಹಲವು ಮಂದಿ ಗೆಳೆಯರು! ಗಿರಿಧರನಿಗೆ ಸುಬ್ಬಣ್ಣನ ವಿಷಯ ತುಸು ಅಸಮಾಧಾನವೆನಿಸಿತು!

ಇದನ್ನೇ ಮಥಿಸುತ್ತಿರುವ ಸಮಯ ಅವನ ಶರೀರದಲ್ಲಿ ದುಃಖಜ್ವಾಲೆಯನ್ನೆಬ್ಬಿಸುವ ಸುದ್ದಿಯೊಡನೆ ಒಬ್ಬನು ಪ್ರವೇಶಿಸಿದನು. ಹಠಾತ್ತಾಗಿ ಬಂದ ಪುರುಷನನ್ನು ಕಂಡು ಅವನು ಎದ್ದು ನಿಂತು "ಏನು ವಿಶೇಷ ಚಿಕ್ಕಪ್ಪಾ?" ಎಂದು ಕೇಳಿದನು. ಅವನ ಚಿಕ್ಕಪ್ಪನ ಮೋರೆಯು ಅನಿಷ್ಟವನ್ನು ಸಾರುವಂತಿತ್ತು. ಚಿಕ್ಕಪ್ಪನು "ಗಿರಿ, ನಿನ್ನೆಯಿಂದ ನಿನ್ನ ತಂದೆಯು ಅಕಸ್ಮಾತ್ತಾಗಿ ಹಾಸಿಗೆ ಹಿಡಿದಿದ್ದಾನೆ ಆದ್ದರಿಂದ ಕೂಡಲೇ ಹೊರಡು" ಎಂದನು

"ತಂದೆಗೆ ಯಾವ ಕಾಯಿಲೆ ಚಿಕ್ಕಪ್ಪಾ?" ಎಂದು ಭೀತನಾದ ಗಿರಿಧರನು ಕೇಳಿದನು.

"ಯಾವ ಕಾಯಿಲೆಯೆಂದು ಗೊತ್ತಾಗುವುದಿಲ್ಲ ಮಾತನಾಡಲು ಸಮಯವಿಲ್ಲ ಕೂಡಲೇ ಹೊರಡು ಮೋಟಾರು ಕಾರು ಸಿದ್ಧವಾಗಿಯೆ ಇದೆ"

"ನೀನು ಪುತ್ತೂರಿನಿಂದಲೆ ಕಾರು ಮಾಡಿ ಬಂದಿರುವೆಯಾ ಚಿಕ್ಕಪ್ಪಾ?

"ಹೌದು'

ಗಿರಿಧರನು ವಿದ್ಯುತ್ ಘಾತಕ್ಕೊಳಗಾದವನಂತಾದನು ಹೃದಯಕ್ಕೆ ನಡೆದ ಸಂಗತಿ ತಿಳಿಯಿತು ಅದನ್ನು ಚಿಕ್ಕಪ್ಪನೊಡನೆ ಕೇಳುವಷ್ಟು ಸಾಮರ್ಥ್ಯವು ಅವನಲ್ಲುಳಿದಿರಲಿಲ್ಲ

ಪುತ್ತೂರಿಗೆ ಕಾರು ತಲಪಿತು ಗಿರಿಧರನು ಊಹಿಸಿದಂತೆ ಅವನ ತಂದೆಯು ಗತಾತ್ಮನಾಗಿದ್ದನು ಅದರಿಂದ ಗಿರಿಧರನ ಬಲಕೈ ಮುರಿದಂತಾಯಿತು. ಸಂಸಾರದ ಹೊರೆಯು ಅವನ ತಲೆಯಲ್ಲಿ ಹೊರಿಸಲ್ಪಟ್ಟಿತು ಅವನು ಕಾಲೇಜಿಗೆ ಶರಣುಹೊಡೆದನು ಬಿ ಎ ಮುಗಿಸಲಾರದ ವ್ಯಸನವೊಂದಿತ್ತು ಕುಟುಂಬವನ್ನು ಪೋಷಿಸುವ ಭಾರವೊಂದತ್ತ ಗಿರಿಧರನು ಪರಿಗ್ರಹಿತನಾದನು ಪುತ್ತೂರಿನ ಒಂದು ಶಾಲೆಯ ಮೇಷ್ಟರಾದನು

ಈ ಸುದ್ದಿ ಮದರಾಸಿನಲ್ಲಿ ವ್ಯಾಸಂಗ ನಿರತನಾಗಿರುವ ಸುಬ್ಬಣ್ಣನ ಕಿವಿಗೆ ಮುಟ್ಟಿತ ಮೊದಲೇ ಗಿರಿಧರನ ಮೇಲಿನ ಅವನ ಮಮತೆಯು ಕಡಿಮೆಯಾಗುತ್ತ ಬಂದಿತ್ತು ಈ ಪ್ರಸಂಗದಿಂದ ಅವನು ಗಿರಿಧರನನ್ನು ಮರೆತ ಬಿಟ್ಟನು ಬಡತನ ಸಿರಿತನಗಳ ಸಂಗಮವಾಗ ಬೇಕೆಂದು ಬಯಸುವುದುಂಟೆ?

ಗಿರಿಧರನು ಎಷ್ಟು ಪತ್ರಗಳನ್ನು ಬರೆದರೂ ಉತ್ತರವಿರಬೇಕಲ್ಲ! ಗಿರಿಧರನು ಸಂತಪ್ತನಾದನು! ಬಿ ಎ ಪರೀಕ್ಷೆಯ ಸಮಯ ಅವನ ಸುಬ್ಬಣ್ಣನಿಗೆ ತುಂಬು ಮನಗಳಿಂದ ಸಹಾಯ ಮಾಡಿದ್ದನು ಹೆಚ್ಚೇಕೆ ಗಿರಿಧರನ ಸಹಾಯವಿಲ್ಲದಿದರೆ ಸುಬ್ಬಣ್ಣನು ಪದವೀಧರನಾಗುತ್ತಲೇ ಇರಲಿಲ್ಲ ಐಶ್ವರ್ಯಕ್ಕೂ ಬಡತನಕ್ಕೂ ವೈರತ್ವ ಎಂದಿನ ವರೆಗೆ ಎಂಬುದನ್ನವನು ಅರಿತನು ಇದೀಗ

ಸುಬ್ಬಣ್ಣ ಗಿರಿಧರರ ಗೆಳೆತನವು ಆ ದಿನದಿಂದೊಂದಿಗೆ ಕೊನೆಗಂಡಿತು

೩

ಭೂಮಿಯು ಮೂರು ಸಲ ಸೂರ್ಯನ ಸುತ್ತು ತಿರುಗಿತು ಇಷ್ಟೊಂದು ಅಲ್ಪಾವಧಿಯಲ್ಲಿ ನಾನಾ ಚಮತ್ಕಾರಗಳು ಈ ಸೃಷ್ಟಿಯಲ್ಲಿ ಘಟಿಸಿವೆ ಆ ಘಟನೆಗಳ ಒಂದು ನಿದರ್ಶನವೋ ಎಂಬಂತೆ ನಮ್ಮ ಗಿರಿಧರನು ಮದರಾಸಿನ ಎಸ್‌ಪ್ಲೇನೇಡ್ ರಸ್ತೆಯಲ್ಲಿ ಇಂದು ತಿರುಗಾಡುತಿದ್ದಾನೆ ಅವನು ಲಾ ಕಾಲೇಜಿನ ವಿದ್ಯಾರ್ಥಿಗಳು ಹೊರಬರುವುದನ್ನೇ ನಿರೀಕ್ಷಿಸುತ್ತಿದ್ದಾನೆ ಅಷ್ಟರಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಮಾರ್ಗಕ್ಕೆ ಕಾಲಿಟ್ಟರು

ಗಿರಿಧರನು ಸುಬ್ಬಣ್ಣನನ್ನು ನಿರೀಕ್ಷಿಸುತಿದ್ದನು ಸುಬ್ಬಣ್ಣನು ದೃಷ್ಟಿಗೋಚರನಾದನು ಗಿರಿಧರನು ಅವನು ಬರುವ ಕಾಲುದಾರಿಯಿಂದಲೇ ಹಾದು ಹೋಗುವವನಂತೆ ನಟಿಸಿದನು. ಸುಬ್ಬಣ್ಣನು ಇವನ ಮೋರೆಯ ಕಡೆ ನೋಡುತ್ತ ನಿಂತನು. ಗಿರಿಧರನು ನೋಡದೆ ಮುಂದುವರಿದನು ಸುಬ್ಬಣ್ಣನು ಬೆರಗಾಗಿ ಅವನನ್ನೇ ಹಿಂಬಾಲಿಸಿದನು. ಗಿರಿಧರನಿಗೆ ನಗು ಉಕ್ಕಿ ಬರುತಿತ್ತು.

"ಗಿರಿ" ಎಂಬ ಕರೆಯು ಗಿರಿಧರನನ್ನು ಹಿಂತಿರುಗಿ ನೋಡಿಸಿತು ಅವನು ಸುಬ್ಬಣ್ಣನನ್ನು ನೋಡಿ "ಯಾರು ನೀವು? ನಾನು ನೀವೆಣಿಸಿದಂತೆ ಗಿರಿಯಲ್ಲ" ಎಂದನು. ಸುಬ್ಬಣ್ಣನು "ಕ್ಷಮಿಸಿರಿ. ನನಗೆ ಹಿಂದೆ ಗಿರಿಧರನೆಂಬ ಸ್ನೇಹಿತನಿದ್ದನು. ನೀವು ಅವನನ್ನೇ ಹೋಲುತ್ತಿರುವಿರಿ. ಅದರಿಂದಾಗಿ ಮೋಸಹೋದೆ."

"ಅನೇಕರು ನನ್ನನ್ನು ಗಿರಿಧರನೆಂದೇ ತಿಳಿದು ವಂಚಿಸಲ್ಪಟ್ಟಿದ್ದಾರೆ ನಾನು ಗಿರಿಧರನ ಚಿಕ್ಕಪ್ಪನ ಮಗ. ನೀವು ಗಿರಿಧರನ ಸ್ನೇಹಿತರೆಂದು ತಿಳಿದು ಸಂತೋಷವಾಯಿತು" ಎಂದು ಗಿರಿಧರನು ಮತ್ತೂ ನನ್ನ ಮಾತನ್ನು ಮುಂದುವರಿಸಿದನು "ಅವನು ಬಹಳ ಸಿಡುಕಿನ ಮನುಷ್ಯ. ನನಗೆ ಅಣ್ಣನಾದರೂ ಆತನ ನಡತೆಯು ನನಗೆ ಅತೃಪ್ತಿಕರವಾಗಿ ತೋರುತಿತ್ತು ಅಲ್ಲವೇ?' ಎಂದು ಪ್ರಶ್ನಿಸಿದನು

"ಅವನ ನಡತೆಯು ಅಷ್ಟೊಂದು ಕೆಟ್ಟದ್ದೆಂದು ನನ್ನ ಗಮನಕ್ಕೆ ಬಂದುದಿಲ್ಲ"

"ಅದೇನೇ ಇರಲಿ ಅವನಂತೂ ನಮ್ಮನ್ನಗಲಿ ಹೋದನು ನಾನು ಒಬ್ಬ ಅಣ್ಣನನ್ನೂ ನೀವು ಒಬ್ಬ ಗೆಳೆಯನನ್ನೂ ಕಳಕೊಂಡೆವು ಸತ್ತವನನ್ನು ದೂರಿ ಫಲವೇನು?" ಎಂದು ಸುಬ್ಬಣ್ಣನ ಹೃದಯದಾಳವನ್ನು ಕಂಡುಹಿಡಿಯಲು ಗಿರಿಧರನು ಒಂದು ಬಾಣವನ್ನು ಬಿಟ್ಟನು

ಈ ಬಾಣವು ಸುಬ್ಬಣ್ಣನ ಹೃದಯವನ್ನು ಭೇದಿಸಿ ಬಿಟ್ಟಿತು ಅವನು ದುಃಖಾಶ್ಚರ್ಯಗಳಿಂದ "ನನ್ನ ಗಿರಿಯು ತೀರಿಹೋದನೇ? ಅವನಿಗೇನಾಗಿತ್ತು?" ಎಂದು ಕೇಳಿದನು

"ಆಗುವುದೇನು? ಒಂದು ಚಿಕ್ಕ ಮಲೇರಿಯಾ ಜ್ವರವೆ ಅವನನ್ನು ಮೃತ್ಯುಮುಖಕ್ಕೆ ತಳ್ಳಿತು"

ಸುಬ್ಬಣ್ಣನ ಹೃದಯವು ಪಶ್ಚಾತ್ತಾಪದಿಂದ ದಹಿಸತೊಡಗಿತ್ತು ಗಿರಿಧರನು ಅವನ ಮುಖಮಂಡಲದಲ್ಲಾದ ಬದಲಾವಣೆಗಳನ್ನು ನಿರೀಕ್ಷಿಸಿದನು ಅವನ ಹೃದಯದ ಬೇನೆಯನ್ನು ಅರಿತನು ಗಲ್ಲಗಳ ಮೇಲೆ ಉದುರುವ ಕಂಬನಿಗಳನ್ನು ಕಂಡನು!

ಅವರಿಬ್ಬರೂ ಅವರವರ ಹಾದಿ ಹಿಡಿದರು. ಗಿರಿಧರನು ತನ್ನ ಜಾಣತನಕ್ಕೆ ತಲೆದೂಗಿದನೊ ಮ್ಮೆಯಾದರೆ ಇನ್ನೊಮ್ಮೆ ಮಿತ್ರನ ಎದೆಯಲ್ಲುಂಟಾದ ಉತ್ಪಾತಕ್ಕೆ ತಾನೇ ಕಾರಣನೆಂದು ಭಾವಿಸಿದನು ಸುಬ್ಬಣ್ಣನು ಇಂದಿನ ರಾತ್ರಿಯನ್ನು ವೇದನೆಯಿಂದ ಕಳೆಯದಿರನೆಂದು ಗಿರಿಧರನು ನೆನಸಿದಾಗ ಅವನಿಗೆ ಅತೀವ ವ್ಯಸನವಾಯಿತು 'ಅಂತರಂಗವೆ ನೀನೆಷ್ಟು ನಿರ್ದಯನು' ಎಂದವನು ತನ್ನನ್ನೆ ದೂರಿಕೊಂಡನು

ಮರುದಿನ ಸುಬ್ಬಣ್ಣನಿಗೊಂದು ಕಾಗದ ತಲುಪಿತು ಆತುರದಿಂದ ಅವನದನ್ನು ಓದಹತ್ತಿದನು

ಟೀಚರ್ಸ್ ಕಾಲೇಜ್ ಹಾಸ್ಟೆಲ್

ಗೆಳೆಯಾ ಸೈದಾಪೇಟೆ, 10 8-40

ನಿನ್ನನ್ನು ನಾನು ನಿನ್ನೆ ತಿಳಿದೆ ನಿನ್ನೆ ಸಂಜೆ ನಿನಗೆ ಸಿಕ್ಕಿದವನು ಈ ನಿನ್ನ ಗಿರಿಧರನೇ ನಿನ್ನ ಸ್ನೇಹದಾಳವನ್ನು ಪರೀಕ್ಷಿಸುವುದಕ್ಕಾಗಿ ನಾನು ಹಾಗೆ ಅಭಿನಯಿಸಿದೆ ನಿನ್ನನ್ನು ದುಃಖದಲ್ಲಿ ಕೆಡಹಿದೆ ಅದನ್ನು ಮರೆತು ಬಿಡು ನಾನು ಮೂರು ವರ್ಷಗಳಿಂದ ನಿನಗೆ ಪತ್ರ ಬರೆದುದೂ ಇಲ್ಲ ನಿನ್ನಿಂದ ಪಡೆದುದೂ ಇಲ್ಲ ನನ್ನ ತಂದೆಯು ತೀರಿದ ನಂತರ ನಾನು ನಮ್ಮೂರಿನಲ್ಲಿ ಶಾಲಾಧ್ಯಾಪಕನಾಗಿ ಒಂದು ವರ್ಷವನ್ನು ಕಳೆದೆನು ಪ್ರಸಂಗವಶಾತ್ ನನಗೆ ನಮ್ಮ ಸಂಬಂಧಿಕರ ಒಂದು ಆಸ್ತಿಯು ಸಿಕ್ಕಿತು ಅದು ಹೇಗೆಂದು ಬರುವ ಭಾನುವಾರ ನಿನ್ನೊಡನೆ ಹೇಳುತ್ತೇನೆ ಅನಂತರ ನಾನು ಪುನಃ ಕಾಲೇಜನ್ನು ಸೇರಿ B A ಪರೀಕ್ಷೆಯನ್ನು ಮುಗಿಸಿದೆ ಆ ಮೇಲೆ L T ಮುಗಿಸಬೇಕೆಂದಾಲೋಚಿಸಿ ಟ್ರೈನಿಂಗ್ ಕಾಲೇಜಿಗೆ ಸೇರಿದ್ದೇನೆ ಉಳಿದ ವಿಷಯಗಳನ್ನು ನಿನ್ನ ಸಮಕ್ಷಮದಲ್ಲಿಯೇ ಹೇಳುತ್ತೇನೆ ನಿನ್ನೆಯ ನನ್ನ ಅಭಿನಯವನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ

ನಿನ್ನವನೇ ಆಗಿರುವ–ಗಿರಿಧರ.

ಪತ್ರಾಂತರ್ಗತ ಸುದ್ದಿಯಿಂದ ಸುಬ್ಬಣ್ಣನು ಬೆಪ್ಪಾಗಿ ಹೋದನು! ಕೂಡಲೇ ಅವನು ಕೆಲಸದವನನ್ನು ಕೂಗಿ "ಆನಂದಾ, ಕಾರ್‌ಸ್ಟ್ಯಾಂಡಿಗೆ ಹೋಗಿ ಒಂದು ಕಾರನ್ನು ಈ ಕ್ಷಣವೇ ತರಿಸು" ಎಂದು ತನ್ನ ಡ್ರೆಸ್ಸಿಂಗ್ ರೂಮನ್ನು ಶೀಘ್ರವಾಗಿ ಪ್ರವೇಶಿಸಿದನು!

ಸ್ವದೇಶಾಭಿಮಾನಿ

ತಾರೀಕು 31 – 10 – 1947

ಕಾಶ್ಮೀರ ಪ್ರಕರಣ

ಕಾಶ್ಮೀರ ಸಂಸ್ಥಾನವು ಪಾಕಿಸ್ಥಾನದ ಆಶ್ರಯಕ್ಕೆ ಬರಬೇಕೆಂಬ ಉದ್ದೇಶದಿಂದ ಪಾಕಿಸ್ಥಾನದ ಮುಂದಾಳುಗಳು ವಿವಿಧ ಬಗೆಯ ಪ್ರಯೋಗಗಳನ್ನು ಕೈಕೊಂಡಂತೆ ಕಾಣುತ್ತದೆ. ತಮ್ಮ ಸೈನಿಕರ ಮನೆಯವರು ಕಾಶ್ಮೀರದ ಪ್ರದೇಶದಲ್ಲಿದ್ದು ಅಲ್ಲಿ ಅವರ ಮೇಲೆ ಬಗೆಬಗೆಯ ಹಿಂಸೆ ನಡೆಸಲ್ಪಡುತ್ತಿದೆಯೆಂದೂ ಅವರ ಮನೆಮಾರುಗಳನು, ಸುಟ್ಟುಹೋಗೆ ಕಾಣುತ್ತದೆಯೆಂದೂ ಅವರ ಇಂಥ ಅತ್ಯಾಚಾರಗಳನ್ನು ಪಾಕಿಸ್ಥಾನವು ಸಹಿಸುವಂತಿಲ್ಲನೆಂಬುದರಿಂದ ಈ ಕುರಿತು ತಕ್ಕೆ ವ್ಯವಸ್ಥೆ ಮಾಡಿ ಆ ಬಗ್ಗೆ ತಮಗೆ ಕಾಶ್ಮೀರ ಸರಕಾರ ಬರೆದುಕೊಳ್ಳಬೇಕೆಂದೂ ಪಾಕಿಸ್ಥಾನದವರ ಪ್ರಕಟಣೆಯಾಯಿತು ಕಾಶ್ಮೀರ ಸರಕಾರವು ಇದನ್ನು ಅಲ್ಲಗಳೆದು ನಿಜವಾದ ಸ್ಥಿತಿಯೆಂದರೆ ಪಾಕಿಸ್ಥಾನದ ಸರಕಾರವೇ ಕಾಶ್ಮೀರಕ್ಕೆ ಹಲವು ಬಗೆಯ ತೊಂದರೆಗಳನ್ನು ಕೊಡುತ್ತಿದೆಯಾಗಿ ಪ್ರಕಟಿಸಿತು ಕಾಶ್ಮೀರದವರ ಹೇಳಿಕೆಯಲ್ಲಿ ಅಸತ್ಯವೆಂದು ಪಾಕಿಸ್ಥಾನದವರು ಒಂದೇ ಮಾತಿನಲ್ಲಿ ನಿರಾಕರಿಸಿದರು. ಈಗ ಕಾಶ್ಮೀರ ಗಡಿ ಹೊರಗಿನ ಅಂದರೆ ಪಾಕಿಸ್ಥಾನದಲ್ಲಿಯ ಮುಸ್ಲೀಮ ಜನರು ಇವರಲ್ಲಿ ಹೆಚ್ಚಿನವರು ನಿವೃತ್ತ ಸೈನಿಕರು ದೇಶದ ಮೇಲೆ ದಂಡೆತ್ತಿ ಒಳನುಗ್ಗಿರುವರು. ಇವರೊಡನೆ ಆಧುನಿಕ ಯುದ್ಧ ಸಾಮುಗ್ರಿಗಳೆಲ್ಲ ಇವೆ ಮಾತ್ರವಲ್ಲ ಸರಿಯಾದ ಯುದ್ಧದ ಮುತ್ಸದ್ದಿತನದಿಂದ ಈ ದಂಡಯಾತ್ರೆ ಮುಂದೆ ಸಾಗುತ್ತಿದೆ. ಇವರು ಎಲ್ಲಿಯ ತನಕ ಮುನ್ನುಗ್ಗಿರುವರೆಂದರೆ ರಾಜಧಾನಿಯಾದ ಶ್ರೀನಗರ ಮುಟ್ಟಲು ಇನ್ನು 35 ಮೈಲುಗಳು ಮಾತ್ರವಿವೆಯೆಂದು ಪ್ರಕಟವಾಗಿರುತ್ತದೆ ಈ ಕಾರ್ಯಕ್ರಮ ಪಾಕಿಸ್ಥಾನ ಸರಕಾರದ ಹೆಸರಲ್ಲಿ ನಡೆಯುತ್ತ ಇಲ್ಲ. ಗಡಿಯ ಜನರು ಕಾಶ್ಮೀರದಲ್ಲಿಯ ಅತ್ಯಾಚಾರ ಕಂಡು ಉದ್ರೇಕಗೊಂಡು ಹೀಗೆ ವರ್ತಿಸುತ್ತಿರುವರೆಂದು ಪಾಕಿಸ್ಥಾನದ ಸರಕಾರ ಪ್ರಕಟಿಸುವುದರಲ್ಲಿ ಸಂದೇಹವಿಲ್ಲ

ಕಾಶ್ಮೀರ ಸಂಸ್ಥಾನದ ಮುಖ್ಯ ಮಂತ್ರಿ ಮಹಾರಾಜರ ವಿನಂತಿಯಂತೆ ಹಿಂದುಸ್ಥಾನ ಸರಕಾರದ ಸಹಾಯ ಬೇಡಿದ್ದಾರೆ ಕಾಶ್ಮೀರದ ರಾಷ್ಟ್ರೀಯ ಪರಿಷತ್ತಿನ ಅಧ್ಯಕ್ಷ ಶೇಕ್ ಅಬ್ದುಲ್ಲಾರು ಸ್ವಯಂಸೇವಕರನ್ನು ಸೇರಿಸಿ ಶಾಂತಿ ರಕ್ಷಣೆಗಾಗಿ ಹೆಣಗುತ್ತಿದ್ದಾರೆ ಕ್ವಾಯ್ದೇ ಅಜಾಮ್ ಜಿನ್ನಾರವರು ಲಾಹೋರಿಗೆ ಬಂದು ಹತ್ತಿರದಿಂದ ಕಾಶ್ಮೀರ ಪ್ರಕರಣದ ಪ್ರಗತಿಯನ್ನು ಪರಿಶೀಲಿಸುತ್ತಿದ್ದಾರೆ ಇದಿಷ್ಟು ಇದನ್ನು ಬರೆವಾಗ ಪ್ರಕಟವಾಗಿರುವ ವಾರ್ತೆ. ಪರಿಸ್ಥಿತಿಯು ಕ್ಷಣಕ್ಷಣಕ್ಕೆ ಗಂಭೀರವಾಗುತ್ತ ಬರುತ್ತಿದೆಯೆಂಬುದು ಸ್ಪಷ್ಟವಿರುತ್ತದೆ.

ಹಿಂದುಸ್ಥಾನ ಮತ್ತು ಪಾಕಿಸ್ಥಾನ ಇವುಗಳೊಳಗೆ ಸಂಸ್ಥಾನಗಳು ಬೇಕಾದವರ ಆಶ್ರಯ ಪಡೆಯಲು ಪೂರ್ಣ ಸ್ವತಂತ್ರವೆಂದು ಪಾಕಿಸ್ಥಾನದವರು ತತ್ವ ಸಾರಿದ್ದಾರೆ ಕಾಥಿಯಾವಾಡಿನ ಹಿಂದೂ ಸಂಸ್ಥಾನಗಳ ನಟ್ಟನಡುವಿದ್ದ ಜುನಾಗಡವನ್ನು ಪಾಕಿಸ್ಥಾನದ ಆಶ್ರಯಕ್ಕೆ ಸೇರಿಸಲು ಇದೇ ತತ್ವ ಮುಂದೊತ್ತಿದ್ದರು. ಸಂಸ್ಥಾನಗಳು ಈ ವಿಷಯದಲ್ಲಿ ಸ್ವತಂತ್ರರೆಂಬುದು ನಿಜ ಆದರೆ ಈ ಹಕ್ಕು ಆಯಾ ಸಂಸ್ಥಾನದ ಪ್ರಜಾಭಿಪ್ರಾಯದಂತೆ ಜಾರಿಗೆ ತರತಕ್ಕದ್ದು. ಜುನಾಗಡದ ಪ್ರಜಾಭಿಪ್ರಾಯ ನಿರ್ಣಯಿಸುವುದು ಅಗತ್ಯವೆಂದು ಪಾಕಿಸ್ಥಾನದ ಅಭಿಪ್ರಾಯ ಕೇಳಿದ ಹಿಂದುಸ್ಥಾನ ಸರಕಾರದ ಪತ್ರಕ್ಕೆ ಅವರು ಉತ್ತರವನ್ನು ಕೊಡುವಷ್ಟು ಮರ್ಯಾದೆಯನ್ನೂ ತೋರಿಸಲಿಲ್ಲ ಕಾಶ್ಮೀರದ ಪ್ರಶ್ನೆ ಬಂದಾಗ ಆ ಸಂಸ್ಥಾನಗಳ ಸ್ವಾತಂತ್ರ್ಯದ ತತ್ವ ಮುಂದೆ ಬರುವಂತೆ ಕಾಣುವುದಿಲ್ಲ ಹಿಂದುಸ್ಥಾನ ಸರಕಾರವಾದರೋ ಕಾಶ್ಮೀರದ ಪ್ರಜೆಗಳ ಅಭಿಪ್ರಾಯದಂತೆ ಆಶ್ರಯದ ಪ್ರಶ್ನೆ ಇತ್ಯರ್ಥವಾಗಬೇಕೆಂದು ಈಗಲೂ ಹೇಳುತ್ತಿದೆ

ಅಂತೂ ಕಾಶ್ಮೀರದಲ್ಲಿ ಈ ಬಗೆಯ ಗಲಾಟೆಯಾಗುವುದನ್ನು ನಿಲ್ಲಿಸುವುದು ಹಿಂದುಸ್ಥಾನದ ಸುರಕ್ಷಿತತೆಯ ದೃಷ್ಟಿಯಿಂದ ಅತೀ ಅಗತ್ಯವಿರುತ್ತದೆ ಮಹಾರಾಜರು ಕೇಳಿಕೊಂಡಂತೆ ಹಿಂದುಸ್ಥಾನ ಸರಕಾರದವರು ಸಹಾಯ ನೀಡಿದರೆ ಅನ್ಯಾಯವೇನೂ ಇಲ್ಲ. ಗಲಾಟೆಯೆಬ್ಬಿಸಿದವರು ಗಡಿಯ ಜನರು ಮಾತ್ರ ಪಾಕಿಸ್ಥಾನ ಸರಕಾರದವರಲ್ಲವೆಂದು ಅವರು ಹೇಳುತ್ತಿರುವುದರಿಂದ ಕಾಶ್ಮೀರದ ಸಹಾಯಕ್ಕೆ ಹಿಂದುಸ್ಥಾನ ಸರಕಾರದ ಸೈನ್ಯ ಕಳುಹಿಸಿದರೆ ಇದು ಪಾಕಿಸ್ತಾನಕ್ಕೆ ವಿರೋಧವಾದ ಕಾರ್ಯವೆಂದು. ಅವರಾದರೂ ದೂರಲು ಕಾರಣವಿಲ್ಲ ಪಾಕಿಸ್ತಾನದ ಧೋರಣೆಯಿಂದ ಜುಗುಪ್ಸೆಗೊಂಡು ಕಾಶ್ಮೀರವು ಹಿಂದುಸ್ಥಾನ ಸರಕಾರದ ಆಶ್ರಯಕ್ಕೆ ಸೇರುವ ನಿರ್ಧಾರ ಮಾಡಿದರೆ ಅದಕ್ಕೂ ಪಾಕಿಸ್ಥಾನದವರು ಆಕ್ಷೇಪ ಹೇಳಲಾರರು ಯಾಕೆಂದರೆ ಸಂಸ್ಥಾನಗಳಿಗೆ ಬೇಕಾದವರ ಆಶ್ರಯ ಆರಿಸುವ ಹಕ್ಕಿದೆಯೆಂದು ಅವರೇ ಸಾರಿರುತ್ತಾರಷ್ಟೆ?

ತಮ್ಮ ತತ್ವಗಳನ್ನು ಬದಿಗೊತ್ತಿ ಪಾಕಿಸ್ತಾನದವರು ಬಲಾತ್ಕಾರಕ್ಕೇನೇ ಮನಸ್ಸು ಕೊಡುವ ಪರಿಸ್ಥಿತಿ ಬಂದೀತೆಯೆಂದು ಈಗ ಹೇಳುವಂತಿಲ್ಲ ಈ ರೀತಿ ಕಾರ್ಯರಂಗದಲ್ಲಿ ಇಳಿಯುವುದು ಅಪಪ್ರಚಾರ ಮಾಡಿದಷ್ಟು ಸುಲಭಸಾಧ್ಯವಲ್ಲ

ಹಿಂದುಸ್ಥಾನ ಸರಕಾರದವರಾದರೂ ಪಾಕಿಸ್ತಾನದ ಬೆದರಿಕೆಗಳಿಗೆ ಸೊಪ್ಪುಹಾಕುವಂತಿಲ್ಲವೆಂಬುದು ಸ್ಪಷ್ಟವಾಗುತ್ತದೆ ಹಿಂದುಸ್ಥಾನ ಸರಕಾರದವರು ಅನ್ಯಾಯಗಳನ್ನು ಸಹಿಸಿಕೊಂಡಿರುವಂತಿಲ್ಲ ಮಾತ್ರವಲ್ಲ ಹಾಗೆ ಇರುವುದು ಸರಿಯೂ ಅಲ್ಲ ಪಾಕಿಸ್ತಾನದವರು ಅನ್ಯಾಯ ಮಾಡುತ್ತಾ ಹೋದರೆ ಹಿಂದುಸ್ಥಾನ ಸರಕಾರ ಅದನ್ನು ಎದುರಿಸಲೇಬೇಕಾಗುತ್ತದೆ ಇಂಥ ಸಂದರ್ಭಗಳು ಮೇಲಿಂದ ಮೇಲೆ ಬಂದರೆ ಇತ್ತಂಡದೊಳಗೆ ಯುದ್ಧ ಪ್ರಾಪ್ತಿಯಾಗುತ್ತದೆಂದು ಗಾಂಧೀಜಿಯವರು ಮೊದಲೇ ಹೇಳಿರುತ್ತಾರೆ ಶಾಂತಿಭಂಗವಾದೀತೆಂದು ಹೆದರಿಕೆಯಿಂದ ಅಥವಾ ತಪ್ಪಾದ ಶಾಂತಿಪ್ರೇಮದಿಂದ ಅನ್ಯಾಯ ಸಹಿಸುತ್ತ ಹೋದರೆ ಕೊನೆಗೆ ಇನ್ನಷ್ಟು ವಿಸ್ತೃತ ಪ್ರಮಾಣದಿಂದ ಶಾಂತಿಭಂಗವಾಗುವುದು ನಿಶ್ಚಯ ಹಿಟ್ಲರನೆದುರು ಚೇಂಬರ್‌ಲೇನರು ಕೈಕೊಂಡ ಬಗೆಯ ಧೋರಣೆಯು ಮಹಾಯುದ್ಧಕ್ಕೆ ಕಾರಣವಾಯಿತು ಶಾಂತಿಯನ್ನು ಕಾಪಾಡಬೇಕು. ಆದರೆ ಅನ್ಯಾಯವನ್ನು ಸಹಿಸಿಕೊಂಡಿದ್ದು ಅದನ್ನು ಕಾಪಾಡಲು ಸಾಧ್ಯವಿಲ್ಲ. ಅನ್ಯಾಯವನ್ನು ಯುದ್ಧಕ್ಕೆ ಇಳಿಯಬೇಕಾಗಿ ಬಂದರೂ ಚಿಂತೆಯಿಲ್ಲವೆಂಬ ದೃಢ ನಿರ್ಧಾರದಿಂದ ಎದುರಿಸಬೇಕು ಪಾಕಿಸ್ಥಾನದವರೊಡನೆ ವರ್ತಿಸಲು ಬೇರೆ ದಾರಿಯಿಲ್ಲ

ಪರಿಸ್ಥಿತಿಯು ವಿಪರೀತಕ್ಕೆ ಹೋಗದೆ ಪಾಕಿಸ್ಥಾನದವರು ಸಕಾಲದಲ್ಲಿ ಬುದ್ಧಿಕಲಿತು ದೇಶದಲ್ಲಿ ಶಾಂತಿಯೇ ನೆಲಸಲೆಂದು ಎಲ್ಲರೂ ಹಾರೈಸಬೇಕಾಗಿದೆ.

ಟೀಕೆ-ಟಿಪ್ಪಣಿಗಳು

ಏಸಿಯದ ಪ್ರಾದೇಶಿಕ ಮಜೂರ ಪರಿಷತ್ತು

ಅಂತರ್‌ರಾಷ್ಟ್ರೀಯ ಮಜೂರ ಸಂಸ್ಥೆಯ ಆಶ್ರಯದಲ್ಲಿ ಪ್ರಥಮಬಾರಿ ನಡೆಯುವ ಈ ಏಸಿಯಾ ಪ್ರಾದೇಶಿಕ ಮಜೂರ ಪರಿಷತ್ತು ಹೊಸಡಿಲ್ಲಿಯಲ್ಲಿ ಈಗ ತಾನೇ ಆರಂಭವಾಗಿರುತ್ತದೆ ಏಸಿಯಾ ಮತ್ತು ಶಾಂತಸಾಗರ ಪ್ರದೇಶದ ಒಟ್ಟು ಇಪ್ಪತ್ತು ರಾಷ್ಟ್ರಗಳಿಂದ ಆಯಾ ಸರಕಾರಗಳ ಆಲ್ಲಿಯ ಮ್ಹಾಲಿಕ ಮತ್ತು ಮಜೂರ ಸಂಸ್ಥೆಗಳ ಸುಮಾರು 300 ಮಂದಿ ಪ್ರತಿನಿಧಿಗಳು ಒಟ್ಟು ಸೇರಿದ್ದಾರೆ ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಪರಿಷತ್ತಿನ ಉದ್ಘಾಟನಾ ಸಮಾರಂಭ ನಡೆಸಿದರು. ಹಿಂದುಸ್ಥಾನ ಸರಕಾರದ ಮಜೂರ ಮಂತ್ರಿ ಶ್ರೀ ಜಗಜ್ಜೀವನರಾಮ್ ಇವರು ಪರಿಷತ್ತಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು

ಪರಿಷತ್ತನ್ನು ತೆರೆಯುವಾಗ ಪಂಡಿತ ನೆಹರು ಅವರು ಏಸಿಯದ ರಾಷ್ಟ್ರಗಳ ಮಜೂರರ ಮುಂದಿರುವ ಮುಖ್ಯ ಪ್ರಶ್ನೆಯನ್ನು ಬೆಟ್ಟುಮಾಡಿ ತೋರಿದ್ದಾರೆ ಇಲ್ಲಿಯ ಮಜೂರರ ಜೀವನ ಸೌಕರ್ಯ ಪ್ರಮಾಣವು ಬಹಳ ಕೆಳಗಿನಮಟ್ಟದಲ್ಲಿದೆ, ಇದನ್ನು ಏರಿಸುವುದು ಅಗತ್ಯ ಏಸಿಯದ ಹೆಚ್ಚಿನ ಪ್ರದೇಶಗಳು ಈಗ ಕೃಷಿಪ್ರಧಾನವೇ ಇರುವುದರಿಂದ ಕೃಷಿಕ ಮಜೂರರ ದೃಷ್ಟಿಯಿಂದ ಈ ಪ್ರಶ್ನೆ ಪರಿಶೀಲಿಸುವುದು ಅಗತ್ಯ ಭೂಮಾಲಿಕತನದ ಪದ್ಧತಿಯಲ್ಲಿ ಸುಧಾರಣೆಯಾಗದೆ ಕೃಷಿಕಮಜೂರರ ಸ್ಥಿತಿ ಸುಧಾರಿಸುವಂತಿಲ್ಲ, ಆದುದರಿಂದಲೇ ಜಮೀನ್‌ದಾರಿ ಪದ್ಧತಿ ತೆಗೆಯಲು ನಾವು ನಿರ್ಣಯಿಸಿದ್ದೇವೆ ಅಂತರ್‌ರಾಷ್ಟ್ರೀಯ ಮಜೂರ ಸಂಸ್ಥೆ ಕೈಗಾರಿಕೆ ಮಜೂರರ ಬಗ್ಗೆ ಇದುವರೆಗೆ ತುಂಬಾ ಉಪಯುಕ್ತ ಕೆಲಸ ಸಾಧಿಸಿರುತ್ತದೆ ಈ ಮಜೂರ ವರ್ಗವು ಉನ್ನತ ಸ್ಥಿತಿಯಲ್ಲಿರುವುದು ಅಗತ್ಯ ನಮ್ಮಲ್ಲಿ ಇನ್ನು ಕೈಗಾರಿಕೆಗಳ ಬೆಳೆಯಲಿವೆಯೆಂಬುದರಿಂದ ಅದರಲ್ಲಿಯ ಮಜೂರ ಪ್ರಶ್ನೆಯೂ ಮುಖ್ಯವಿರುತ್ತದೆ ಏಸಿಯಾ ರಾಷ್ಟ್ರಗಳ ಈ ಪರಿಷತ್ತು ಚಾರಿತ್ರ್ಯಾರ್ಹ ವಿಷಯ ಹಿಂದುಸ್ಥಾನದಲ್ಲಿ ಇದು ಸೇರಿದ್ದು ಸಂತೋಷ ಜಪಾನು ಮೊದಲಾದ ಕೆಲವು ರಾಷ್ಟ್ರಗಳ ಪ್ರತಿನಿಧಿಗಳಿಲ್ಲದಿದ್ದುದು ಖೇದಜನಕ ಅಂತೂ ಪರಿಷತ್ತು ಯಶಸ್ವಿಯಾಗಿ ಜರಗಲೆಂದು ಹಾರೈಸಿದರು ಪಂಡಿತ ನೆಹರುಗಳು ಹೇಳಿದ ಅಭಿಪ್ರಾಯಗಳಲ್ಲಿ ಎಲ್ಲರೂ ಒಪ್ಪುವಂಥ ಮಾತುಗಳಿರುವುದರಿಂದ ಇವರ ಜೊತೆಯಲ್ಲಿ ಎಲ್ಲರೂ ಈ ಪರಿಷತ್ತು ಯಶಸ್ವಿಯಾಗಲೆಂದು ಹಾರೈಸಬೇಕು

ನೆಹರು ಸರಕಾರಕ್ಕೆ ಕಮ್ಯೂನಿಸ್ಟ್ ಬೆಂಬಲ

ಕಮ್ಯೂನಿಸ್ಟ್ ಸಂಘದ ಮುಂದಾಳು ಶ್ರೀ ಪಿ. ಸಿ. ಜೋಶಿಯವರು ನೆಹರು ಸರಕಾರಕ್ಕೆ ಬೆಂಬಲ ಕೊಡುವಂತೆ ವಿನಂತಿ ಮಾಡಿದರು ಎಲ್ಲಾ ಕಮ್ಯೂನಿಸ್ಟರೂ ಈ ರೀತಿ ಅಲ್ಲಲ್ಲಿ ವಿನಂತಿ ಮಾಡುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಕಂಡುಬರುತ್ತಿದೆ. ಈ ರೀತಿ ನೆಹರು ಸರಕಾರಕ್ಕೆ ತಮ್ಮ ಅಮೂಲ್ಯ ಬೆಂಬಲ ಕೊಟ್ಟ ಬಗ್ಗೆ ನೆಹರುಗಳು ಇವರಿಗೆ ಕೃತಜ್ಞರಿರಲೇಬೇಕು. ಮಾತ್ರವಲ್ಲ ಇಡೀ ಹಿಂದುಸ್ಥಾನವೇ ಕೃತಜ್ಞರಿರಬೇಕು. ಇವರ ಬೆಂಬಲದಿಂದ ನೆಹರು ಸರಕಾರ ಬಲವಾಗಿ ಇನ್ನು ಮುಂದೆ ನಡೆಯುವುದರಲ್ಲಿ ಸಂಶಯವಿಲ್ಲ

ಪತ್ರಿಕೆಗಳಲ್ಲಿ ಅಥವಾ ಭಾಷಣಗಳಲ್ಲಿ ಮಾತ್ರ ಈ ರೀತಿ ವಿನಂತಿ ಮಾಡುವುದಿದ್ದರೆ ಅದು ತಮ್ಮ ಪ್ರತಿಷ್ಠೆ ತಾವೇ ಬೆಳೆಸಿಕೊಳ್ಳುವ ಒಂದು ಹಂಚಿಕೆ ಮಾತ್ರವೆನ್ನಿಸುವುದು. ನೆಹರು ಸರಕಾರ ಬಲವಾಗಿ ನಡೆಯುತ್ತಿದ್ದರೆ ಅದಕ್ಕೆ ನಮ್ಮ ವಿನಂತಿಯೇ ಕಾರಣವೆಂದು ಹೇಳಿಕೊಳ್ಳಬಹುದು

ಕಮ್ಯೂನಿಸ್ಟರು ನಿಜವಾಗಿಯೂ ಸರಕಾರಕ್ಕೆ ಬೆಂಬಲ ಕೊಡುವರೆಂದಾದರೆ ಮೇಲಿಂದ ಮೇಲೆ ನಡೆಯುವ ಮಜೂರ ಮುಷ್ಕರಗಳು ನಿಲ್ಲಬೇಕು ಇಂಥ ಮುಷ್ಕರಗಳಿಂದ ಅತ್ಯಾವಶ್ಯಕ ಮ್ಹಾಲುಗಳ ತಯಾರಿಗೆ ತೊಂದರೆ ಬರುತ್ತಿದೆ ಸರಕಾರಕ್ಕೆ ಸಹಾಯ ಮಾಡುವುದಿದ್ದರೆ ಉತ್ಪತ್ತಿ ಹೆಚ್ಚಿಸಲು ಸಹಾಯ ಮಾಡಬೇಕು ಈಗಿನ ನೆಹರು ಸರಕಾರದವರೂ ಮಜೂರರ ಶ್ರೇಯಸ್ಸಿಗೆ ನಿಜವಾಗಿ ಅನುಕೂಲವಾಗಿಯೇ ಇದೆ ಇಂಥ ಪರಿಸ್ಥಿತಿಯಲ್ಲಿ ಮಜೂರ ಅತೃಪ್ತಿ ಬೆಳೆಸುವ ಯತ್ನ ಕಮ್ಯೂನಿಸ್ಟ್ ಪಂಗಡ ಬೆಳೆಸುವ ದಾರಿ ಮಾತ್ರವಿರುತ್ತದೆ ಮುಂದೆ ಈ ಅಡ್ಡದಾರಿ ಬಿಟ್ಟು ಕಮ್ಯೂನಿಸ್ಟರು ಸರಕಾರಕ್ಕೆ ನಿಜವಾದ ಸಹಾಯ ನೀಡುವರು ಎಂದು ಈ ವಿನಂತಿಗಳಿಂದ ನಿರೀಕ್ಷಿಸಬಹುದೆ?

ಜಿಲ್ಲೆಯಲ್ಲಿ ಮಲೇರಿಯಾ ನಿವಾರಣೆ

ದಕ್ಷಿಣ ಕನ್ನಡ ಜಿಲ್ಲೆಯ ಮುಂಡಾಜೆಯಲ್ಲಿ ಇಂಡಿಯಾ ಸರಕಾರದವರು ಒಂದು ಮಲೇರಿಯಾ ನಿವಾರಣೆಯ ಕಾರ್ಯಕ್ರಮ ನಡೆಸುತ್ತಿದ್ದಾರೆ ಜಿಲ್ಲೆಗೆ ಬಂದಿದ್ದ ಮದ್ರಾಸ್ ಗವರ್ನರರು ಅಲ್ಲಿಯ ಕೆಲಸದ ವಿಧಾನಗಳನ್ನು ಅಲ್ಲಿ ಸಾಧಿಸಲಾದ ಕೆಲಸದ ಪ್ರಗತಿಯನ್ನು ಕಂಡು ತೃಪ್ತರಾಗಿ ಈಗ ಕಾಡು ಗುಡ್ಡಗಳ ನಡುವೆ ನಡೆಯುತ್ತಿದ್ದ ಕೆಲಸಗಾರರಿಗೆ ಪ್ರಶಂಸಾರ್ಹ ಸೇವೆಯ ಕಾರ್ಯ ಮಾಡುತ್ತಿದ್ದಿರಿ ಎಂದು ಹೇಳಿದರು

1947ನೇ ಏಪ್ರಿಲು ಆರಂಭದಿಂದ ಒಂದು ವರ್ಷಕ್ಕೆ ಈ ಕೆಲಸ ಇಂಡಿಯಾ ಸರಕಾರ ನಡೆಸಲು ನಿಶ್ಚೈಸಿ ಇಲ್ಲಿ ಕೆಲಸ ಮಾಡುತ್ತಿದ್ದಾರೆ ಬರುವ ಮಾರ್ಚಿ ಆಖೈರಿಗೆ ಅವಧಿ ಮುಗಿಯುತ್ತದೆ ಆ ಬಳಿಕ ಈ ಕಾರ್ಯವನ್ನು ನಮ್ಮ ಪ್ರಾಂತಿಕ ಸರಕಾರ ಕೈಕೊಳ್ಳಬೇಕಾಗಿದೆ ಅವರಾದರೂ ಇದನ್ನು ಅಲ್ಲಿಗೆ ಬಿಟ್ಟುಬಿಡದೆ ಮುಂದರಿಸುವುದು ಅತ್ಯಗತ್ಯವೆಂದು ನಾವು ಆಗ್ರಹಪೂರ್ವಕ ವಿನಂತಿ ಮಾಡುತ್ತೇವೆ

ಘಟ್ಟದ ಬುಡದ ನಮ್ಮ ಹಳ್ಳಿಗಳಲ್ಲಿ ಮಲೇರಿಯದಿಂದಾಗುವ ಹಾವಳಿ ಅಷ್ಟಿಷ್ಟಲ್ಲ ಇಂಥ ಹಳ್ಳಿಗಳಲ್ಲಿ ಮನೆ ಬಿಡದೆ ಜ್ವರದಿಂದ ಮಲಗುವ ಜನಗಳಿರುತ್ತವೆ. ಇದರಿಂದಾಗಿ ಈ ಪ್ರದೇಶಗಳಲ್ಲಿ ಜನರು ನಿವೃತ್ತಿ ಇಲ್ಲದಿದ್ದರೆ ಮಾತ್ರ ವಾಸಿಸುವರು ಸಾಗುವಳಿಗೆ ಬೇಕಾದ ಜನ ಸಿಕ್ಕದೆ ಇಲ್ಲಿ ಎಷ್ಟೋ ಭೂಮಿ ಬಂಜರುಬೀಳುತ್ತಿದೆ. ಮಲೇರಿಯಾ ಹಾವಳಿ ನಿಲ್ಲಿಸಿ ಇಲ್ಲಿಯೂ ಜನರು ಸುಖದಲ್ಲಿ ಬಾಳುವಂತಾದರೆ ಇದೆಲ್ಲ ಭೂಮಿಯಲ್ಲಿ ಸಾಗುವಳಿಯಾಗಿ ಜಿಲ್ಲೆಯ ಪ್ರಥಮ ಪ್ರಶ್ನೆಯಾದ ಆಹಾರ ಪ್ರಶ್ನೆ ಬಿಡಿಸಲಿಕ್ಕೂ ಸಹಾಯವಾಗುವುದು.

ಗವರ್ನರರು ಮತ್ತು ಅವರ ಪತ್ನಿ ಹಾಗೂ ಮಂತ್ರಿದ್ವಯರ ಜಿಲ್ಲಾ ಸಂಚಾರ

ಗವರ್ನರರ ಸಂಚಾರದ ಕಥೆ ಮೊದಲಾಗಿ ಹೇಳ ತೊಡಗಿದೆವೆಂಬುದರಿಂದ ಮೊದಲು ಬಂದವರು ಗವರ್ನರರು ಇದೇಕೆ ಕಥೆ ಮುಂದೆ ಹಿಂದೆ ಮಾಡುವಿರೆಂದು ಕೇಳಬಹುದು. ಮಂತ್ರಿಗಳಿಗಿಂತಲೂ ಗವರ್ನರರು ಈ ದಿನಗಳಲ್ಲಿ ದೊಡ್ಡವರೇ ಎತ್ತದೂ ಕೇಳಬಹುದು. ಕಥೆಯನ್ನು ಕೊನೆಯಿಂದ ಸುರು ಮಾಡಿ ಮತ್ತೆ ಬುಡಕ್ಕೆ ಬರುವುದು ಈಗಿನ ಹೊಸ ಕತೆ ಅಥವಾ ಅವುಗಳ ಕ್ರಮ ಬೇಕಿದ್ದವರು ಇದನ್ನು ಅಕ್ರಮವೆಂದರೂ ಅಡ್ಡಿಯಿಲ್ಲ

ಅಂತೂ ಗವರ್ನರರು ಪತ್ನೀ ಸಮೇತರಾಗಿ ತಾ 26ನೇ ಮಧ್ಯಾಹ್ನ ಮಂಗಳೂರಿಗೆ ಬಂದರು ಆ ದಿನ ಸಂಜೆ ಶ್ರೀ ಕೆ ಆರ್. ಕಾರಂತರಲ್ಲಿಗೆ ಇಬ್ಬರೂ ಹೋಗಿ ಕಾಫಿ ಕುಡಿದರು ಮಾರನೆ ಬೆಳಿಗ್ಗೆ ಜಿಲ್ಲಾ ಕಲೆಕ್ಟರರಾಗಿರುವ ಶ್ರೀ ಎಸ್ ಬಾಲಾಜಿ ರಾಯರು ಪೋಲೀಸ್ ಸುಪರಿಂಟೆಂಡೆಂಟ್ ಇ ಎಲ್ ಸ್ಟೇಸಿಯವರು ಮೊದಲಾದ ಅಧಿಕಾರಿಗಳೊಡಗೂಡಿ ಮುಂಡಾಜೆಗೆ ಹೋದರು ಇಲ್ಲಿ ಅಖಿಲ ಭಾರತ ಸುಪಾರಿ ಸಂಘದ ಅಧ್ಯಕ್ಷ ಶ್ರೀ ಎಮ್ ಎನ್ ಭಿಡೆಯವರು ಇವರಿಗೆ ಅಡಿಕೆ ಹೂವಿನ ಬಂಗಾರದ ಮಾಲೆ ಹಾಕಿ ಸ್ವಾಗತವಿತ್ತು ಅಡಿಕೆ ತೋಟವೊಂದಕ್ಕೆ ಕರೆದೊಯ್ದು ಅಲ್ಲಿಯ ಕೆಲಸದ ವಿಧಾನವನ್ನು ತೋರಿಸಿ ಬೇಕಾದ ಅನುಭವ ಹೇಳಿದರು 1936 ರಿಂದ ಮಹಾಳಿ ರೋಗದ ಹಾವಳಿ ಹೇಗೆ ಮದ್ದು ಚಿಮುಕಿಸಿ ತೋರಿಸಿದರು. ಅಡಿಕೆ ಬೆಳೆಸುವವರ ಕೇಳಿಕೆ ಅಂದರೆ ತಮ್ಮ ಕೂಲಿಗಳಿಗೆ ಬೇಕಾದ ಅಕ್ಕಿ ಎರಡು ಪಾವಿನಂತೆ ಇಟ್ಟುಕೊಳ್ಳಲು ಬಿಡಬೇಕೆಂಬ ಕೇಳಿಕೆ ಗವರ್ನರರಿಗೂ ಮುಟ್ಟಿಸದೆ ಬಿಡಲಿಲ್ಲ ಅಲ್ಲಿಂದ ಮುಂದೆ ಮಲೇರಿಯ ನಿವಾರಣಾ ಕೇಂದ್ರ ಸಂದರ್ಶಿಸಿದರು ಮಲೇರಿಯಾ ನಿವಾರಣಾ ಕೇಂದ್ರದ ಅಸಿಸ್ಟೆಂಟ್ ಡ್ಯಾರೆಕ್ಟರ್ ಡಾ। ರಾಮಕೃಷ್ಣ ಇವರು ಅನುಭವ ಕೇಳಲು ಕಾನೂರಿನಿಂದ ಬಂದಿದ್ದರೂ ಮುಂದೆ ಧರ್ಮಸ್ಥಳಕ್ಕೆ ಹೋದರು ಗದ್ದೆಗಳಲ್ಲಿ ಪೈರು ಕಟಾವಾಗುತ್ತಿದ್ದುದನ್ನು ಪರಿಶೀಲಿಸಿದರು ಶ್ರೀ ಡಿ ಮಂಜಯ್ಯ ಹೆಗ್ಡೆಯವರು ಸ್ವಾಗತವಿತ್ತರು ದೇವಸ್ಥಾನಕ್ಕೆ ಕರೆದೊಯ್ದು ಪ್ರಸಾದವಿತ್ತರು ಹಿಂದೆ ಬರುತ್ತ ಉಜಿರೆ ಕರ್ನಾಟಕ ವಿದ್ಯಾಸಂಸ್ಥೆಯದಲ್ಲಿ ಕುಂಬಾರರ ಕೆಲಸದ ಪ್ರದರ್ಶನವೊಂದನ್ನು ಇವರಿಗೆ ತೋರಿಸಲಾಯಿತು ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ರಂಜಾಳ ಹರಿ ಶೆಣೈಯವರು ಬೇಕಾದ ಮಾಹಿತಿ ವಿವರಿಸಿದರು. ಈಗ ಹೈಸ್ಕೂಲಾಗಿರುವ ಈ ಶಾಲೆ ನಡೆಸುವ ಗುರುಕುಲ ಕಮಿಟಿಯವರ ವಿನಂತಿ ಪತ್ರವೊಂದನ್ನು ಒಪ್ಪಿಸಲಾಯಿತು

ಇವರು ಇಷ್ಟು ಕೆಲಸ ಸಾಧಿಸಿ ಮರಳಿ ಮಂಗಳೂರು ಸೇರುವುದರೊಳಗೆ ಇವರ ಪತ್ನಿಯವರು ಕಂಕನಾಡಿ ಬಾಲಿಕಾಶ್ರಮ ಸೈಂಟ್ ಅಂತೋನಿ ಅನಾಥಾಲಯ ಸೂಟರ್ ಪೇಟೆ ಹರಿಜನ ಶಾಲೆ ಈ ಸಂಸ್ಥೆಗಳಿಗೆ ಸಂದರ್ಶನವಿತ್ತು, ಕಲೆಕ್ಟರರ ಆಫೀಸಿನಲ್ಲಿ ಜರಗಿದ ಪ್ರಾಂತಿಕ ವೆಲ್‌ಫೇರ್ ಫಂಡಿನ ಸ್ಥಳೀಕ ಕಮಿಟಿಯ ಒಂದು ಸಭೆಯಲ್ಲಿ ಭಾಗವಹಿಸಿದರು

ಆ ದಿನ ಮಧ್ಯಾಹ್ನ ಗವರ್ನರರು ಕುಲಶೇಖರದಲ್ಲಿ ಗೇರುಬೀಜ ಕಾರ್ಖಾನೆ ಪರಿಶೀಲಿಸಿ ಇಲ್ಲಿಯ ಕೈಗಾರಿಕೆಯ ಕ್ರಮ ಗೇರು ಬೀಜ ವ್ಯಾಪಾರದ ಮಾಹಿತಿ ಮಜೂರರ ಪರಿಸ್ಥಿತಿ ಎಲ್ಲವನ್ನು ವಿಚಾರಿಸಿ ಕೇಳಿಕೊಂಡರು. ಮುಂದೆ ಕಂಕನಾಡಿಯಲ್ಲಿ ಸರಕಾರದವರು ನಡೆಸುತ್ತಿರುವ ಕೃಷಿ ಶೋಧನಾ ಕ್ಷೇತ್ರ ಕಂಡರು ಭತ್ತದ ಶಾಸ್ತ್ರಜ್ಞ ನರಸಿಂಗರಾಯರು ಇವರಿಗೆ ಬೇಕಾದ ಮಾಹಿತಿ ಕೊಡಲು ಕೊಯಮುತ್ತೂರಿಂದ ಬಂದಿದ್ದರು

ಅದೇ ಮಧ್ಯಾಹ್ನ ಲೇಡಿ ನ್ಯಾಯನರು ಬಿಸೆಂಟ್ ಶಾಲೆಯಲ್ಲಿ ರೆಡ್‌ಕ್ರಾಸ್ ಕೆಲಸಗಾರರನ್ನು ಕಂಡು ಉತ್ತರ ಹಿಂದುಸ್ಥಾನದ ನಿರಾಶ್ರಿತರಿಗೆ ಸಹಾಯ ಮಾಡುವ ಆವಶ್ಯಕತೆ ಒತ್ತಿ ಹೇಳಿದರು ಗರ್ಲ ಗೈಡ್ಸ್ ಪ್ರದರ್ಶನಗಳನ್ನು ಕಂಡು ಸಂತೋಷಪಟ್ಟರು

ಮಾರನೆ ದಿನ ಬೆಳಗ್ಗೆ ಗವರ್ನರರು ಪತ್ನೀ ಸಮೇತ ಮೂಡಬಿದ್ರೆಗೆ ಹೋಗಿ ಅಲ್ಲಿಯ ತ್ರಿಭುವನ ತಿಲಕ ಚೂಡಾಮಣಿ ಬಸದಿಯಲ್ಲಿ ಪೂಜೆ ನೋಡಿ ಫಾದರ್ ಎಸ್ ಎ ಡಿ ಸೋಜರ ಕ್ಷಯ ರೋಗ ಆಸ್ಪತ್ರೆ ಸಂದರ್ಶಿಸಿ ಮುಂದೆ ಮಿಶನ್ ಫಾರ್ಮಿನಲ್ಲಿ ಪಿ ಜಿ ಸೋನ್ಸರು ಸಾಧಿಸುತ್ತಲಿರುವ ಕೃಷಿ ಕಾರ್ಯಗಳನ್ನು ಕಂಡರು ಲೇಡಿ ನ್ಯಾಯನರ ಅಲ್ಲಿಂದ ಮಂಗಳೂರಿಗೆ ಹಿಂತಿರುಗಿದರು. ಗವರ್ನರರು ಕಾರ್ಕಳದ ಮೂಲಕ ದಾರಿ ದಾರಿಯಲ್ಲಿ ಕೆಸರು ಗದ್ದೆ ಸಾಗುವಲ್ಲಿ ಕಾದಿದ್ದ ಜನರ ಆದರ ಸ್ವೀಕರಿಸಿ ಕಾರ್ಕಳದಲ್ಲಿ ಗೋಮಟೇಶ್ವರ ದರ್ಶನ ಮಾಡಿ ಹಿಂದೆ ಮಂಗಳೂರನ್ನು ಸೇರಿ ಕಲೆಕ್ಟರರ ಬಂಗಲೆಯಲ್ಲಿ ಬಂದಿದ್ದ ನಾಲ್ಕು ಮಹಿಳೆಯರಿಗೆ ಭೇಟಿ ಕೊಟ್ಟರು ಲೇಡಿ ನ್ಯಾಯನರು ಭಗಿನೀ ಸಮಾಜ ಹಾಗೂ ಇವರು ನಡೆಸುವ ಶಿಶು ಸಂಗೋಪನ ಕೇಂದ್ರ ಸಂದರ್ಶಿಸಿ ಮಹಿಳಾ ಸಭೆಗೆ ಹೋಗಿ ಇಲ್ಲಿ ಭಾರತ ಮಹಿಳಾ ಸಿವಿಕ್ ಕೋರಿನ ಶಾಖೆಯವರನ್ನು ಕಂಡು ಇವರ ಸದಸ್ಯತನ ಹಾಗೂ ಚಟುವಟಿಕೆ ವಿಸ್ತರಿಸುವಂತೆ ಸೂಚಿಸಿದರು.

ಅಂದು ಸಾಯಂಕಾಲ ಸಮುದ್ರದಲ್ಲಿ ಐದು ಮೈಲು ಇಬ್ಬರೂ ಹೋಗಿ ಸಮುದ್ರದಲ್ಲಿ ಮೀನು ಹಿಡಿಯುವ ಕಾರ್ಯ ಪರಿಶೀಲಿಸಿದರು ಆ ಬಳಿಕ ಬಂದರದಿಂದ ಸೈಂಟ್ ಆಗ್ನೇಸ್ ಕಾಲೇಜು ತನಕ ಇಬ್ಬರೂ ಮೆರವಣಿಗೆ ಹೋಗಿ ಅಲ್ಲಿ ಇಬ್ಬರಿಗೆ ಕೈಸರೀ ಹಿಂದ್ ಮೆಡಲು ಮತ್ತು ರಿಕ್ರೂಟಿಂಗ್ ಬೇಜ್ ಕೊಟ್ಟು ವೆಲ್ ಫೇರ್ ಫಂಡಿನ ಸಹಾಯಾರ್ಥ ಕಾಲೇಜು ಹುಡುಗಿಯರು ಆಡಿದ ವಿನೋದಾವಳಿ ಕಂಡು. ಅದೇ ರಾತ್ರೆ ಮಂಗಳೂರು ಬಿಟ್ಟು ಪ್ರಯಾಣ ಬೆಳೆಸಿದರು.

ಒಂದು ವಿಷಯ ಬಿಟ್ಟು ಹೋಯಿತು ಮೊದಲ ದಿನ ಮಧ್ಯಾಹ್ನ ಇಬ್ಬರೂ ನಮ್ಮ ಹೊಸ ಮುನಿಸಿಪಲ್ ಚೆಯರ್‌ಮೇನ್ ಎಲ್ ಸಿ. ಪ್ಯಾಸರಲ್ಲಿ ಊಟಕ್ಕೆ ಹೋಗಿದ್ದರು ಕಾರಂತರ ಕಾಫಿ ಮತ್ತು ಪ್ಯಾಸರ ಊಟ ಇವೆರಡೇ ಇವರು ಹೊರಗಿನವರಿಂದ ಪಡೆದ ಸತ್ಕಾರಗಳು ಮುಂಡಾಜೆಗೆ ಹೋಗುವಾಗ ಬೆಳ್ತಂಗಡಿ ಬಂಗಲೆಯಲ್ಲಿ ಕಾರ್ಕಳಕ್ಕೆ ಹೋಗುವ ಮೂಡಬಿದ್ರೆ ಬಂಗ್ಲೆಯಲ್ಲಿ ನಡೆಸಿದ ಫಲಾಹಾರ ಸಾಹಿತ್ಯಗಳನ್ನು ಅವರ ರೈಲು ಗಾಡಿಯಿಂದಲೇ ಕೊಂಡು ಹೋಗಿದ್ದರು. ಅಲ್ಲಲ್ಲಿ ಎಳನೀರು ಕೊಟ್ಟದನ್ನು ಬೇಡವೆನ್ನದೆ ಸ್ವೀಕರಿಸಿದರು.

ಇಲ್ಲಿಗೆ ಗವರ್ನರರ ಮತ್ತು ಅವರ ಪತ್ನಿಯವರ ಸಂಚಾರ ಕಥೆ ಮುಗಿಯಿತು.

ಸಾರಾಂಶವಾಗಿ ಹೇಳುವುದಿದ್ದರೆ ಗವರ್ನರರು ಹಳ್ಳಿಯಲ್ಲಿ ಆಗುವ ಗದ್ದೆ ಕೊಯ್ಲು ಕೃಷಿ ಶೋಧನಾ ಕ್ಷೇತ್ರ ಮಿಶನ್ ಫಾರ್ಮು ಹಾಗೂ ವ್ಯಾಪಾರೀ ಬೆಳೆಯಾದ ಅಡಿಕೆ ತೋಟ ಇಷ್ಟು ಕೃಷಿ ವಿಷಯದಲ್ಲಿ ನೋಡಿದರು ಕುಂಬಾರ ಗುಡಿಕೈಗಾರಿಕೆ–ಗೇರು ಬೀಜದ ಕಾರ್ಖಾನೆ ಕೈಗಾರಿಕೆ ಕಂಡು ಕರಾವಳಿ ಪ್ರಾಂತ್ಯವೆಂಬುದರಿಂದ ಸಮುದ್ರ ಮೀನಿನ ಕಸುಬಿನ ಮಾಹಿತಿಯನ್ನು ಮಾಡಿಕೊಂಡರು ಮಲೇರಿಯ ನಿವಾರಣೆಯ ಕಾರ್ಯ ಹಾಗೂ ಕ್ಷಯ ರೋಗ ಆಸ್ಪತ್ರೆ ಇವನ್ನು ಕಂಡರು ಕೊನೆಗೆ ಧರ್ಮಸ್ಥಳ ಕ್ಷೇತ್ರ ಪ್ರಸಿದ್ಧ ಜೈನ ಬಸದಿ ಹಾಗೂ ಗೋಮಟೇಶ್ವರನನ್ನು ಕಂಡರು ಕೃಷಿ–ಕೈಗಾರಿಕೆ–ಆರೋಗ್ಯ ಹಾಗೂ ಸಂಸ್ಕೃತಿ ಈ ದೃಷ್ಟಿಗಳಿಂದ ಎರಡು ದಿನಗಳಲ್ಲಿ ಇದಕ್ಕಿಂತ ಹೆಚ್ಚಿನ ಕಾರ್ಯ ಯಾರೂ ಸಾಧಿಸುವಂತಿಲ್ಲವೆಂದರೆ ಅತಿಶಯೋಕ್ತಿ. ಇಲ್ಲಿ ಕಾರಂತರ ಕಾಫಿ ಹಾಗೂ ಪ್ಯಾಸರ ಊಟ ನಮ್ಮ ಜನರ ಒಡನಾಟಬೇಕೆಂಬ ಆತುರ ಸೂಚಿಸುವ ಏರ್ಪಾಡುಗಳು. ರೈಲು ಗಾಡಿಯಿಂದ ಫಲಾಹಾರ ಒಯ್ದುದು ದೊಡ್ಡ ಸರಕಾರೀ ಅಧಿಕಾರಿಗಳು ಸಿಕ್ಕಿದವರ ಆತಿಥ್ಯಕ್ಕೆ ಒಳಗಾಗಬಾರದೆಂದು ತೋರಿಸುವಂಥ ಏರ್ಪಾಡು. ಗವರ್ನರರಂಥ ದೊಡ್ಡ ಅಧಿಕಾರಿಯೊಬ್ಬರು ಆದರ್ಶ ರೀತಿಯ ಕಾರ್ಯಕ್ರಮ ಹೇಗಿಟ್ಟುಕೊಳ್ಳಬೇಕೆಂಬುದಕ್ಕೆ ಇವರ ಸಂಚಾರ ಉದಾಹರಣೆಯೆನ್ನಲು ಅಡ್ಡಿಯಿಲ್ಲ

ಜೊತೆಯಲ್ಲಿ ಇವರ ಪತ್ನಿಯವರು ಒಂದ ಅನಾಥಾಲಯ ಹರಿಜನ ಶಾಲೆ ಹಾಗೆಯೇ ವಸತಿ, ಸ್ತ್ರೀಯರ ಚಟುವಟಿಕೆಗಳು ಶಿಶು ರಕ್ಷಣಾ ಆಸ್ಪತ್ರೆ ಇಂಥ ಸಂಸ್ಥೆಗಳನ್ನು ಸಂದರ್ಶಿಸಿದ ಇವರ ಕಾರ್ಯಕ್ರಮ ಸ್ತ್ರೀ ಸಹಜವಿದ್ದು ಸಮಾಜದಲ್ಲಿ ಮುಂದಾಳುಗಳಾಗುವ ಸ್ತ್ರೀಯರು ಆದರ್ಶವಾಗಿಟ್ಟುಕೊಳ್ಳಬಹುದೆಂದು ನಿಸ್ಸಂಕೋಚವಾಗಿ ಹೇಳಬಹುದು

ಇನ್ನು ನಮ್ಮ ಜನಪ್ರಿಯ ಮಂತ್ರಿಗಳ ಕಾರ್ಯಕ್ರಮವನ್ನು ವಿವರಿಸಬೇಕು. ಸ್ಥಳೀಕ ಸಂಸ್ಥೆಗಳ ಆಡಳಿತೆ ಖಾತೆ ಹಾಗೂ ಸಹಕಾರೀ ಖಾತೆಯ ಮಂತ್ರಿ ಶ್ರೀ ಕೆ ಚಂದ್ರಮೌಳಿಯವರು ತಾ 21ರ ರಾತ್ರೆ ಬಂದವರೇ ಉಡುಪಿಗೆ ಹೋದರು. 22ನೇ ಬೆಳಿಗ್ಗೆ ಮಣಿಪಾಲದಲ್ಲಿ ಪ್ರಾಂತಿಕ ಸ್ಕೌಟು ಕಮಿಶನರುಗಳ ಪರಿಷತ್ತಿನ ಉದ್ಘಾಟನೆ ನಡೆಸಿದರು. ಮುಂದೆ ಉಡುಪಿಯಲ್ಲಿ ಉಡುಪಿ ಮುನಿಸಿಪಲ್ ಕೌನ್ಸಿಲಿನವರು ವಿನಂತಿ ಪತ್ರ ಒಪ್ಪಿಸಿದರು. ಅಜ್ಜರಕಾಡು ಮೈದಾನಿನಲ್ಲಿ ಜಿಲ್ಲಾ ಸ್ಕೌಟುರ‍್ಯಾಲಿ ನೋಡಿದರು ಶ್ರೀ ಕೊಚ್ಚಿಕಾರ ಪದ್ಮನಾಭ ಪೈವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಮಾರನೆ ಬೆಳಿಗ್ಗೆ ಕಾರ್ಕಳಕ್ಕೆ ಹೋದರು ಸಾರ್ವಜನಿಕ ಸಭೆ ನಡೆಯಿತು. ಪಂಚಾಯತು ಬೋರ್ಡಿನ ಮಾನಪತ್ರ ಕೊಟ್ಟರು. ಮಂತ್ರಿಯವರು ಭಾಷಣ ಮಾಡಿದರು. ಮುಂದೆ ಮೂಡಬಿದ್ರ ಸಿದ್ಧಕಟ್ಟೆ ಕಿನ್ನಿಗೋಳಿಗಳಲ್ಲಿ ಮಾನಪತ್ರಗಳನ್ನು ಕೊಟ್ಟರು; ಮಂತ್ರಿಗಳು ಭಾಷಣ ಮಾಡಿದರು. ಅಲ್ಲಿಂದ ಮೂಲ್ಕಿಗೆ ಹೋಗಿ ಮನೋರಮಾ ಮಂದಿರದಲ್ಲಿ ಸಭೆಯಾಯಿತು. ಮಾನಪತ್ರಗಳನ್ನು ಕೊಟ್ಟರು. ಮಂತ್ರಿಗಳ ಭಾಷಣವಾಯಿತು. ಅಲ್ಲಿಂದ ಮಂಗಳೂರಿಗೆ ಬಂದರು. ಮಾರನೆ ದಿನ ಗವರ್ನಮೆಂಟ್ ಕಾಲೇಜಿನಲ್ಲಿ ಫಲಪುಷ್ಪ ಪ್ರದರ್ಶನ ತೆರೆದರು. ಮುನಿಸಿಪಲ್ ಕೌನ್ಸಿಲಿನ ವಿನಂತಿ ಪತ್ರ ಸ್ವೀಕರಿಸಿ ಉತ್ತರ ಕೊಟ್ಟರು ಮುನಿಸಿಪಲ್ ನೌಕರರ ಸಂಘ, ಜಿಲ್ಲಾ ಬೋರ್ಡು ನೌಕರರ ಸಂಘ ಮೊದಲಾದವರ ವಿನಂತಿ ಪತ್ರ ಸ್ವೀಕರಿಸಿ ಉತ್ತರ ಕೊಟ್ಟರು ಸಂಜೆ ಸಹಕಾರಿಗಳ ಒಂದು ಸಭೆಯಲ್ಲಿ ಭಾಗವಹಿಸಿದರು. ಮಾರನೆ ದಿನ ಪುತ್ತೂರಿಗೆ ಹೋದರು ಅಲ್ಲಿ ಸಹಕಾರೀ ಕಟ್ಟಡದಲ್ಲಿ ಸಭೆಯಾಯಿತು ಮಾನಪತ್ರಗಳನ್ನು ಕೊಟ್ಟರು ಮಂತ್ರಿಗಳು ಭಾಷಣ ಮಾಡಿದರು ಮುಂದೆ ಕಾಸರಗೋಡಿಗೆ ಹೋದರು ಮಹಮ್ಮದ ಶಮ್ನಾಡ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮಾನಪತ್ರಗಳನ್ನು ಕೊಟ್ಟರು ಮಂತ್ರಿಗಳು ಭಾಷಣ ಮಾಡಿದರು ಮಾರನೆ ಬೆಳಿಗ್ಗೆ ಈ ಮಂತ್ರಿಯವರು ಕಾಸರಗೋಡಿನಿಂದಲೇ ಮದ್ರಾಸಿಗೆ ತೆರಳಿದರು.

ಮೇಲೆ ಮಾನಪತ್ರಗಳನ್ನು ಕೊಡಲಾಯಿತು ಎಂದು ಹೇಳುತ್ತ ಹೋಗಲಾಗಿದೆ. ಇವುಗಳಲ್ಲಿ ಒಂದು ಅಲ್ಲಿಯ ಸರ್ಕಲ್ ಕಾಂಗ್ರೆಸ್ ಕಮಿಟಿ ಇನ್ನೊಂದು ಪಂಚಾಯತು ಬೋರ್ಡು ಇವುಗಳ ಕಡೆಯ ಪತ್ರಗಳೆಂದು ತಿಳಿಯಬೇಕು. ಇವುಗಳಲ್ಲಿಯ ವಿಷಯಗಳೆಂದರೂ ಎಲ್ಲ ಕಡೆ ಒಂದೇ ಬಗೆ. ಬಾವಿ ಬೇಕು ರಸ್ತೆ ಬೇಕು, ಆಸ್ಪತ್ರೆ ಬೇಕು ಇತ್ಯಾದಿಗಳು ಬೇಕು ಎಂಬುದೇ ಇರುತ್ತದೆ ಮಂತ್ರಿಗಳ ಉತ್ತರವೂ ಸಾಮಾನ್ಯ ಒಂದೇ ಎನ್ನಬಹುದು. ಸರಕಾರದ ಕೈಯಲ್ಲಿ ಹಣವಿಲ್ಲ ನಿಮ್ಮ ಕಾಲ ಮೇಲೆ ನಿಲ್ಲಿರಿ ಆದಷ್ಟು ಸಹಾಯ ಕೊಡುತ್ತೇವೆ ಆ ಮಾನಪತ್ರಗಳ ಕಟ್ಟು ಕೊನೆಗೆ ಏನಾಗುತ್ತದೆಂದು ನಾವು ಊಹಿಸಿ ಹೇಳುವುದು ಇಲ್ಲಿ ಉಚಿತವೆನಿಸಲಾರದು

ಈ ಕಾರ್ಯಕ್ರಮದಲ್ಲಿ ಕಾಫಿ ಫಲಾಹಾರ ಊಟ ಇತ್ಯಾದಿ ವಿವರ ಕೊಟ್ಟಿಲ್ಲ ಅದು ಬೇರೆ ಒಂದು ವಿಷಯ. ಮಾತ್ರ ಹೇಳದ ನಿವೃತ್ತಿ ಇಲ್ಲ ಕಾರ್ಯಕ್ರಮ ತಯಾರಿಸಿದವರ ಯಾರೆಂದು ಗೊತ್ತಿಲ್ಲ ಅದು ಗಳಿಗೆಗೊಮ್ಮೆ ಬದಲಾವಣೆಯಾಗುತ್ತಿತ್ತು ಮಂತ್ರಿಗಳ ಕಾರ್ಯಕ್ರಮ ಮುಂದಾಗಿ ಸರಿಯಾಗಿ ಯೋಚಿಸಿ ತಯಾರಿಸಬೇಕು. ಅನಿವಾರ್ಯವೆಂದಲ್ಲದಿದ್ದರೆ ಮಾಡಿದ ಕಾರ್ಯಕ್ರಮದಂತೆ ವರ್ತಿಸಬೇಕು. ಇಷ್ಟನ್ನೂ ಕ್ರಮದಂತೆ ಮಾಡಲು ಅಸಾಧ್ಯವೆ?

ಇನ್ನೊಬ್ಬ ಮಂತ್ರಿಯವರ ಕಡೆ ಹೇಳಿ ಮುಗಿಸುತ್ತೇನೆ ಗುತ್ತಿಗೆ ಒಂದು ಮಾಡಿದ ಇಲಾಖೆಯ ಮಂತ್ರಿ ಶ್ರೀ ಡೇನಿಯೆಲ್ ಥಾಮಸರು ತಾ 23ರಲ್ಲಿ ಕಾಂಞಂಗಾಡಿನಲ್ಲಿ ಮುರ್ತೆಯವರ ಸಭೆಯಲ್ಲಿ ಅವರ ವಿನಂತಿ ಪತ್ರ ಪಡೆದು ಉತ್ತರ ಕೊಟ್ಟರು. ಮುಂದೆ ರಾತ್ರೆ ಮಂಗಳೂರಿಗೆ ಬಂದರು. ಮಾರನೆ ಬೆಳಿಗ್ಗೆ ಕೊಂಚಾಡಿ ಪದವಿನಲ್ಲಿ ಹೊಸ ಮನೆಗಳನ್ನು ಕಟ್ಟುವ ಯೋಜನೆ ಸ್ಥಳ ನೋಡಿದರು. ಯೋಜನೆ ಮುಂದೆ ಆಲೋಚನೆ ಮಾಡುವುದು ಅಗತ್ಯವೆಂದರು. ಕಲೆಕ್ಟರರ ಆಫೀಸಿನಲ್ಲಿ ಗುತ್ತಿಗೆ ಬಂದು ಚಳವಳದ ಕುರಿತು ಸೇರಿದ ಸಭೆಗೆ ಭಾಷಣ ಮಾಡಿದರು. ಮತ್ತೆ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಮುರ್ತೆಯವರ ವಿನಂತಿ ಪತ್ರ ಸ್ವೀಕರಿಸಿ ಉತ್ತರ ಕೊಟ್ಟರು. ಸೈಂಟ್ ಎಲೋಸಿಯುಸ್ ಕಾಲೇಜು ಡೇಯಲ್ಲಿ ಅಧ್ಯ—

(ಆನೇ ಪುಟಕ್ಕೆ ಮುಂದುವರಿದಿದೆ)

ರಾಷ್ಟ್ರೀಯ ಶಕ್ತಿ ಬೆಳೆಸಿದ ಕವಿವರೇಣ್ಯರು

ಸುಬ್ರಹ್ಮಣ್ಯ ಭಾರತೀಯ ಕ್ರಾಂತಿ ಕವಿತೆಗಳು

ದಳಿತರ ಉದ್ಧಾರಕ್ಕಾಗಿ ಶ್ರಮಿಸಿದ ಉದಾತ್ತ ವಾಗ್ಮಿ

ತಮಿಳುನಾಡಿನ ಜನಜೀವನದಲ್ಲಿ ಸುಬ್ರಹ್ಮಣ್ಯ ಭಾರತಿಯವರು ಹಾಸುಹೊಕ್ಕಾಗಿ ಸೇರಿಕೊಂಡಿದ್ದಾರೆ. ಕನ್ಯಾಕುಮಾರಿಯಿಂದ ಹಿಡಿದು ಉತ್ತರ ಆರ್ಕಾಟ್ ಜಿಲ್ಲೆಯವರೆಗೆ ಆವರಿಸಿರುವ ತಮಿಳುಲೋಕದಲ್ಲಿ ಈ ಕವಿವರ್ಯರ ಜನಪ್ರಿಯತೆ ಅಷ್ಟಿಷ್ಟಲ್ಲ. ಬದುಕಿದ್ದಾಗ ಅವರ ಕಡೆ ಯಾರೂ ಲಕ್ಷಿಸಲಿಲ್ಲ. ಕೇವಲ ಬಡತನದಲ್ಲೇ ಈ ಉದ್ದಾಮ ಕವಿ ಶಿರೋಮಣಿಯು ತನ್ನ ಸರ್ವಶಕ್ತಿ ಚೈತನ್ಯವನ್ನು ರಾಷ್ಟ್ರೀಯ ಭಾವನೆಯ ಬೆಳವಣಿಗೆಯ ಕಡೆ ವಿನಿಯೋಗಿಸಿದರು. ಆದರೆ ಆ ಕವಿಪುಂಗವರು ಇಹಲೋಕ ತ್ಯಜಿಸಿದ ಮೇಲೆ ಅವರ ಕೃತಿ ಭಂಡಾರವನ್ನು ಜನತೆ ಹೊಕ್ಕು ವಿಕಸಿತವಾಗಿ ಅರಳಿ ಸುವಾಸನೆ ಬೀರುತಿದ್ದ ಅವರ ಪ್ರಬುದ್ಧ ಕವಿತೆಗಳ ಸೌಗಂಧವನ್ನು ಆಘ್ರಾಣಿಸಿತು.

"ನಮ್ಮ ಭಾರತಿಯಾರ್" ಎಂಬ ಆ ಅಭಿಮಾನದ ನುಡಿ, ಸಂಗೀತ ಕಛೇರಿಗಳು ನಡೆಯುವಾಗ ಭಾರತಿ ಹಾಡುಗಳನ್ನು ಹಾಡಿರಿ ಎಂಬ ಒತ್ತಾಯ, ಪ್ರತಿ ಸೆಪ್ಟಂಬರ್ ತಿಂಗಳಲ್ಲಿ ಅವರ ಆತ್ಮ ಪ್ರೀತ್ಯರ್ಥವಾಗಿ ನಡೆಯುವ ಮಹೋತ್ಸವಗಳು ಇವೆಲ್ಲವೂ ಆ ಅಮರ ಕವಿಗಳ ಸ್ಮರಣಾರ್ಥದಲ್ಲಿ ನಡೆಯುವ ಭಕ್ತಿ ಕಾಣಿಕೆಗಳು. ಅವರ ಕೃತಿಗಳು ಕೆಲವು ಅಚ್ಚಾಗಿವೆ, ಕೆಲವು ಇನ್ನೂ ಅಚ್ಚಾಗಿಲ್ಲ. ಅವರ ಜೀವನ ಚರಿತ್ರೆಯು ಇನ್ನೂ ಸಹ ವಿಶಾಲವಾಗಿ ಇನ್ನೂ ಪ್ರಕಾಶಕ್ಕೆ ಬಂದಿಲ್ಲ. ತಮಿಳು ಪತ್ರಿಕೆಗಳಲ್ಲಿ ಆಗಾಗ ಬರುತ್ತಿರುವ ಈ ಕವಿವರೇಣ್ಯರ ಕೆಲವೊಂದು ಜೀವನ ವಿವರಗಳಲ್ಲದೆ ಮತ್ತಾವುದೂ ಸವಿಸ್ತಾರವಾದ ಗ್ರಂಥರೂಪಕ್ಕೆ ತರಲ್ಪಡಲಿಲ್ಲ. ಆದರೂ ಪ್ರತಿ ಮನೆಯವರೂ ಭಾರತಿಯವರ ಭಾವಚಿತ್ರವನ್ನೂ ಅಲಂಕರಿಸಿ ಅವರ ಪರಾಶಕ್ತಿಯ ಪರವಶವೇಶದಲ್ಲಿ ತಾವೂ ತಲ್ಲೀನರಾಗಿ ಅವರು ಹಾಕಿ ಕೊಟ್ಟ ಆದರ್ಶಗಳನ್ನು ಇಂದಿಗೂ ನಾಳೆಗೂ ಯುಗ ಯುಗಾಂತರಗಳಿಗೂ ಅನುಸರಿಸುವರೆಂಬ ನಂಬಿಕೆ ಅವರ ಮೆಚ್ಚಿಗೆಗಾರರಲ್ಲಿ ಅನೇಕರಿಗೆ ಮೂಡಿದೆ.

ಸುಬ್ರಹ್ಮಣ್ಯ ಭಾರತಿಗಳು ಕವಿಗಳೂ ಕ್ರಾಂತಿ ಪುರುಷರೂ ಆಗಿದ್ದರು. ಪರದಾಸ್ಯವನ್ನು ಸ್ವಲ್ಪವೂ ಸಹಿಸದ ವ್ಯಕ್ತಿ. ಅರವಿಂದ ಘೋಷ್, ವಿ. ವಿ. ಎಸ್. ಅಯ್ಯರ್ ಮುಂತಾದ ಪ್ರಭೃತಿಗಳೊಡನೆ ರಾಜ್ಯಕ್ರಾಂತಿಯ ಮಹಾ ಯತ್ನದಲ್ಲಿ ಕೈ ಒಡ್ಡಿದರು. ಅರವಿಂದ ಘೋಷರು ಒಂದು ವಿಧದಲ್ಲಿ ಯೋಗಿಗಳಾದರೆ ಇವರು ಮತ್ತೊಂದು ವಿಧದಲ್ಲಿ ಯೋಗಿಯಾದರು. ಇರ್ವರ ಉದ್ದೇಶವೂ ಒಂದೇ. ದೇಶವು ಪರದಾಸ್ಯದಿಂದ ವಿಮೋಚನೆಗೊಂಡು ಪ್ರಗತಿಗೇರಲೆಂಬ ಆಶೆ. ಈ ಆಶೆಯು ಅವರ ಜೀವಮಾನದಲ್ಲಿ ಸಫಲಗೊಳ್ಳಲಿಲ್ಲ. ಅವರು ಈ ಲೋಕದ ವ್ಯಾಪಾರವನ್ನು ತ್ಯಜಿಸಿದ ಬಹು ವರ್ಷಗಳ ಮೇಲೆ ಭಾರತಕ್ಕೆ ಸ್ವಾತಂತ್ರ್ಯ ಬಂದಿತು. ಚಿಂತೆಯಿಲ್ಲ. ಅವರ ಭೌತಿಕ ದೇಹ ಅಳಿದಿದ್ದರೂ ಅವರ ಆತ್ಮವು ಎಂದಿಗೂ ಅಳಿಯಲಾರದು.

ಭಾರತಿಯವರು ಎಟ್ಟಿಯಾಪುರದವರು. ತಿನ್ನವೆಲ್ಲಿ ಜಿಲ್ಲೆಯ ಅಪ್ಪಟ ತಮಿಳಿನವರು. ಎಟ್ಟಿಯಾಪುರದ ಜಮೀನ್ದಾರಿಯಲ್ಲಿದ್ದರೂ ಅವರ ರಾಷ್ಟ್ರೀಯ ಭಾವನಾವೇಶಗಳಿಗೆ ಚ್ಯುತಿ ಬರಲಿಲ್ಲ. ದೇಶದ ಪರಾಧೀನತೆಯನ್ನೂ ನೋವನ್ನೂ ಚೆನ್ನಾಗಿ ಕಂಡು ಅದರ ವಿಮೋಚನೆಯ ದಾರಿಯನ್ನು ಹುಡುಕಿದರು. ಪ್ರಜಾ ಜೀವನದಲ್ಲಿ ಹುರುಪು ಉತ್ಸಾಹಗಳಿರಲಿಲ್ಲ. ದೇಶ ನಮ್ಮದು ಎಂಬ ಅಭಿಮಾನ ಬರುವುದೇ ಕಷ್ಟವಾಗಿತ್ತು. ಇಂತಹ ಸನ್ನಿವೇಶದಲ್ಲಿ ಸುಬ್ರಹ್ಮಣ್ಯ ಭಾರತಿಯವರು ತಮ್ಮ ಅಮರ ಗೀತೆಗಳನ್ನು ರಚಿಸಿ ಧೈರ್ಯ ಸಾಹಸ ತುಂಬಿದರು. ಅವರ ಗೀತೆಗಳು ರಾಜದ್ರೋಹಕರವೆಂದು ಪರಕೀಯ ಸರಕಾರ ಸಾರಿದುದರಲ್ಲಿ ಆಶ್ಚರ್ಯವೇನಿಲ್ಲ. ಅವರು ಬದುಕಿದ್ದ ಕಾಲದಲ್ಲಿ ದಬ್ಬಾಳಿಕೆಯ ತೀವ್ರತೆಯಿಂದ ಅವರ ಕೆಲಸಗಳಿಗೆ ಅಡಚಣೆಯಾದರೂ ಇಂದಿನ ಸ್ವಾತಂತ್ರ್ಯ ಶುಭೋದಯದಲ್ಲಿ ಅವರ ಕಾರ್ಯಸಾಧನೆಗೆ ದಿವ್ಯಮಾನವಾದ ಮೆರಗು ದೊರೆತಿದೆ.

ಜಾತಿಮತ ಭೇದಗಳನ್ನು ಪ್ರತಿಭಟಿಸಿ ನಿಂತ ವೀರರವರು. ಒಮ್ಮೆ ಈರೋಡ್ ಸಮೀಪದ ಹಳ್ಳಿಗೆ ಬಂದಿದ್ದಾಗ ಸುಬ್ರಹ್ಮಣ್ಯ ಭಾರತಿಯವರು ಕ್ಷೌರ ಮಾಡಿಸಿಕೊಳ್ಳಬೇಕಾಯಿತು. ಆ ಕಾಲದಲ್ಲಿ ಏಕೆ ಈ ಕಾಲದಲ್ಲೂ ಇನ್ನೂ ಇಡೀ–ಹೊರಗಡೆ ಪಡಸಾಲೆಯಲ್ಲಿಯೋ ಕೂಡಿಸಿ ಕ್ಷೌರ ಮಾಡಿಸಿಕೊಂಡ ಮೇಲೆ ಆ ಸ್ಥಳವನ್ನು ಶುದ್ಧಿ ಮಾಡುವುದು ಸಂಪ್ರದಾಯವಾಗಿತ್ತು. ಕ್ಷೌರಿಕನ ಕೈಯಿಂದ ಚಿಲ್ಲರೆ ನಾಣ್ಯ ತೆಗೆದುಕೊಳ್ಳುವಾಗ ಅದಕ್ಕೆ ನೀರನ್ನು ಚಿಮುಕಿಸಿ ತೆಗೆದುಕೊಳ್ಳುತಿದ್ದರು. ಭಾರತೀಯರಿಗೆ ಇದೆಲ್ಲಾ ಸಹಿಸದು. ಕ್ಷೌರಿಕನನ್ನು ಒಳಗಡೆ ಬಾ ಎಂದರು. ಆತನು ಬರಲಿಲ್ಲ. ಮತ್ತು ಯಾರ ಮನೆಯಲ್ಲಿ ಸುಬ್ರಹ್ಮಣ್ಯ ಭಾರತಿಯವರು ಅತಿಥಿಗಳಾಗ ತಂದಿದ್ದರೊ ಆ ಮನೆಯಾಕೆ ಅದಕ್ಕೆ ಅದಕ್ಕೆ ಒಪ್ಪಲಿಲ್ಲ. "ಕ್ಷೌರಿಕನನ್ನು ಮನೆಯೊಳಗೆ ಬಿಡುವುದು ಒಂದೇ, ಹಾಳು ಬಾವಿಗೆ ಬೀಳುವುದೂ ಒಂದೇ" ಎಂದಂದುಬಿಟ್ಟಳು. ಭಾರತಿಯವರಿಗೆ ಈ ಜಾತಿಭೇದದ ಬಾಧೆ ಬಹಳವಾಯಿತು. ಬಂದದ್ದೆಲ್ಲಾ ಬರಲಿ ಎಂದು ಹಠ ಸಾಧಿಸಿ ಆತನನ್ನು ಒಳಗಡೆ ಬರಮಾಡಿಕೊಂಡರು.

ಅಸ್ಪೃಶ್ಯರ ಕರುಣಾಜನಕ ಸ್ಥಿತಿಯನ್ನು ಕಂಡು ಅದನ್ನು ಕಿತ್ತೊಗೆಯಬೇಕೆಂದು ಚಳವಳಿ ಹೂಡಿದವರಲ್ಲಿ ಭಾರತಿಯವರೇ ಮೊದಲಿನವರು. ಜಾತಿಯ ಹೆಸರಿನಲ್ಲಿ ಯಾರನ್ನೂ ಹೊಡೆದೂಡುವುದು ಬೇಡ ಎಂದಾಗಿ ತಮ್ಮ ಗೀತೆಗಳಲ್ಲಿವರು ಹಾಡಿದ್ದಾರೆ. ಸರ್ವಸಮಾನತೆಯಿರಬೇಕೆಂದವರು ಘೋಷಿಸಿದ್ದಾರೆ. ಸ್ತ್ರೀಯರು ಅಬಲೆಯರಲ್ಲ, ಶಕ್ತಿಯುಳ್ಳವರು, ಸಾಹಸಿಗಳು ಎಂಬುದಾಗಿ ಅವರಲ್ಲಿ ಪೂಜ್ಯ ಭಾವನೆ ವ್ಯಕ್ತಗೊಳಿಸಿದ್ದಾರೆ. ಒಂದು ಕಡೆ ದೇಶಾಭಿಮಾನ ಇನ್ನೊಂದು ಕಡೆ ಬಡನಾಡಿಗಳ ವಿಷಯದಲ್ಲಿ ಕನಿಕರ, ದಬ್ಬಾಳಿಕೆ, ನಿರಂಕುಶಾಧಿಕಾರ ಇವುಗಳನ್ನು ಕಂಡರೆ ರೋಷ. ಈ ಭಾವನೆಗಳ ಆಧಾರದ ಮೇಲೆ ಭಾರತಿಯರು ಅಮರ ಕವಿಗಳಾದರು.

ಇವರಿಗೆ ಐಶ್ವರ್ಯ ಬೇಕಿಲ್ಲ. "ನಿಧಿ ಚಾಲ ಸುಖಮಾ" ಎಂಬ ತ್ಯಾಗಯ್ಯನವರ ತ್ಯಾಗದಂತೆ ಧನವನ್ನು ಧಿಕ್ಕರಿಸಿದರು. ಒಮ್ಮೆ ಎಟ್ಟಿಯಾಪುರದ ಮಹಾರಾಜರು ಅವರನ್ನು ಮದರಾಸಿಗೆ ಕರೆದೊಯ್ದರು. ಹೋಗುವ ಮೊದಲು ಇವರ ಧರ್ಮಪತ್ನಿ ಚೆಲುವಮ್ಮಾಳ್‌ರವರು "ಬರುವಾಗ ಏನಾದರೂ ತರುವಿರಾ?" ಎಂದು ಕೇಳಿದರು. ಮದರಾಸ್ ರಾಜಧಾನಿಗೆ ಬೆಟ್ಟಿಕೊಟ್ಟು ಹಿಂತಿರುಗುವಾಗ ಎಟ್ಟಿಯಾಪುರದ ಇವರ ಮನೆಯ ಮುಂದೆ ಗಾಡಿಯು ನಿಂತು, ಅದರಲ್ಲಿ ತುಂಬಾ ಪೆಟ್ಟಿಗೆಗಳಿದ್ದುವು. ಶ್ರೀಮತಿ ಚೆಲುವಮ್ಮಾಳ ಆನಂದಕ್ಕೆ ಪಾರವೇ ಇರಲಿಲ್ಲ. "ಇನ್ನೇನು ನಮ್ಮ ಯಜಮಾನರು ಪೆಟ್ಟಿಗೆ ತುಂಬಾ ಸೀರೆಗಳನ್ನೂ, ಬೆಳ್ಳಿ ಪಾತ್ರೆಗಳನ್ನೂ ತಂದಿದ್ದಾರೆ" ಎಂಬುದಾಗಿ ಉತ್ಸಾಹಪಟ್ಟರು. ಏನೆಂದು ಕೇಳಲಾಗಿ ಅವುಗಳಲ್ಲಿ ತುಂಬ ತಮಿಳು ಗ್ರಂಥಗಳಿವೆ ಎಂದರು. "ಧನ ಕನಕಾದಿಗಳು ಯೋಗ್ಯವಲ್ಲ. ಜ್ಞಾನವೇ ಭೂಷಣ" ಎಂದರು. ಅವರ ತ್ಯಾಗಬುದ್ಧಿಯು ಆದರ್ಶಗಳಲ್ಲೊಂದಿದು.

"ಜಯಮುಂಡು ಭಯಮಿಲ್ಲೈ" ಎಂಬ ಗೀತೆಯಲ್ಲಡಕವಾಗಿರುವ ತತ್ವವು ದೇಶದ ಸ್ವಾತಂತ್ರ್ಯಕ್ಕೆ ಬಹುಮಟ್ಟಿಗೆ ಬೆಂಬಲವಾಗಿದೆ. "ಶಾಂತಮು ಲೇಕ ಸೌಖ್ಯಮು ಲೇದು" ಎಂಬ ತ್ಯಾಗಯ್ಯನವರ ಕೃತಿಯಂತೆಯೇ ಭಾರತಿಯವರ ಕೃತಿಗಳು ರಸಪುಷ್ಟಿಯಾಗಿವೆ. "ಪಾರ ಕುಳ್ಳೆ ನಲ್ಲ ನಾಡು" ಎಂಬ ಪರ ರಾಷ್ಟ್ರಾಭಿಮಾನದ ಗೀತೆಗಳು ಪರಾಶಕ್ತಿಯ ಆರಾಧಕರಾದ ಭಾರತಿಯವರ ಅಪಾರ ಕೀರ್ತಿ ಕೊಂಡಾಡದ ತಮಿಳು ಪ್ರಜೆಯಿಲ್ಲ.

ಎಟ್ಟಿಯಾಪುರದಲ್ಲಿ ನಿರ್ಮಾಣವಾಗಿರುವ ಅವರ ಸ್ಮಾರಕವು ಮೊನ್ನೆ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರಿಂದ ಉದ್ಘಾಟಿಸಲ್ಪಟ್ಟಿತು. ಯುಗಯುಗಾಂತರಗಳಲ್ಲಿ ಈ ಕವಿಶ್ರೇಷ್ಠರ ರಾಷ್ಟ್ರೀಯ ಸೇವೆಯನ್ನು ಕೊಂಡಾಡುವ ನಿರಂತರ ಭಾಗ್ಯ ಒದಗಿದಂತಾಯಿತು.

ತಮಿಳು ನಾಡಿನಲ್ಲಿ ಕಾವೇರಿ ತೀರದ ವೈಶಿಷ್ಟ್ಯವೊಂದಾದರೆ ತಾಂಬ್ರಪರ್ಣಿಯ ವೈಶಿಷ್ಟ್ಯವು ಬೇರೆ ರೀತಿ ಕಣ್ಗೊಳಿಸುತ್ತದೆ. ಒಂದು ಕಡೆ ಕಾವೇರಿ ತೀರದಲ್ಲಿ ತಿರುವಯ್ಯಾರಿನ ಸೊಗಸು. ಅಲ್ಲಿ ಆಧ್ಯಾತ್ಮಿಕ ತತ್ವ ಪ್ರತಿಪಾದನೆಯ ಸಂಗೀತ ಸಾಮ್ರಾಜ್ಯ. ಇನ್ನೊಂದು ಕಡೆ ತಿನ್ನವೆಲ್ಲಿ ಜಿಲ್ಲೆಯ ಎಟ್ಟಿಯಾರಪುರದಲ್ಲಿ ರಾಷ್ಟ್ರೀಯ ಶಕ್ತಿಯ ಅಮರ ಗಾನ. ಅದು ತಾಮ್ರಪರ್ಣಿಯ ಸಮೀಪ. ತಮಿಳುನಾಡಿನ ಯೋಗ ವೈಭವವು ಈ ಮಹಾ ನದಿಗಳ ಮಧ್ಯೆ ಪ್ರಜ್ವಲಿಸಿದ ಹಿಂದಿನ ಕಾಲವೇ ಕಾಲ. ಕನ್ನಡ ನಾಡಿನವರಾದ ನಾವು ಭಾರತಿಯವರಿಗೆ ವಂದಿಸುತ್ತೇವೆ.

–(ಓರ್ವ ಕನ್ನಡ ಪತ್ರಿಕೋದ್ಯೋಗಿ)

★ ಭಾರತ ಸರಕಾರದಿಂದ ಕಾಶ್ಮೀರಕ್ಕೆ ಕಳುಹಲ್ಪಟ್ಟ ಬಟ್ಟೆ, ಪೆಟ್ರೋಲು, ಉಪ್ಪು ಮತ್ತು ಗೋದಿ ಮೂಟೆಗಳನ್ನು ಸಾಯಲ್ಕೋಟ್ ಮತ್ತು ರಾವಲ್ ಪಿಂಡಿಗಳಲ್ಲಿ ಪಾಕಿಸ್ತಾನ ಸರಕಾರವು ತಡೆದು ಹಿಡಿದಿದೆಯೆಂದೂ, ಪಾಕಿಸ್ತಾನ ಸೈನ್ಯಗಳು ಕಾಶ್ಮೀರ ಗಡಿಯಲ್ಲಿ ಲೂಟಿಮಾಡುತ್ತಿವೆಯೆಂದೂ ಕಾಶ್ಮೀರದ ಹತ್ತಿರದ ಚಿಕ್ಕ ಚಿಕ್ಕ ಸಂಸ್ಥಾನಗಳು ದಂಗೆ ಏಳುವಂತೆ ಪಾಕಿಸ್ತಾನ ಪತ್ರಿಕೆಗಳೂ, ರೇಡಿಯೊವೂ ಪ್ರೋತ್ಸಾಹಿಸುತ್ತವೆಂದೂ ಕಾಶ್ಮೀರ ಸರಕಾರವು ಪ್ರಕಟಿಸಿದೆ.

★ ಮುಂದಿನ ಕೆಲವೇ ತಿಂಗಳಲ್ಲಿ ಭಾರತದ ಹೊಸ ರಾಜ್ಯ ಘಟನೆಯನ್ನು ಜಾರಿಗೆ ತರಬೇಕು, ನಂತರ ಕೂಡಲೇ ಭಾರತದ ಸಾಮಂತ ರಾಜ್ಯಾವಸ್ಥೆಯನ್ನು ಕೊನೆಗೊಳಿಸಬೇಕು, ಬರುವ ವರ್ಷದ ಮಧ್ಯದೊಳಗೆ ಹೊಸ ಚುನಾವಣೆಗಳನ್ನು ಜರಗಿಸಬೇಕು, ಭಾರತವನ್ನು ಕೂಡಲೇ ಪ್ರಜಾಪ್ರಭುತ್ವವಾಗಿ ಘೋಷಿಸಬೇಕು, ಹೀಗೆಂದು ಭಾರತ ಸೋಶಲಿಸ್ಟ ಪಕ್ಷದವರು ಸವಿಸ್ತಾರವಾದೊಂದು ನಿರ್ಣಯವೊಂದನ್ನು ಪ್ರಕಟಿಸಿರುವರು.

(೭ನೇ ಪುಟದಿಂದ)

ಗವರ್ನರರು ಮತ್ತು ಅವರ ಪತ್ನಿ

ಕ್ಷರಾಗಿ ಬಹುಮಾನ ಹಂಚಿದರು. ಈ ತನ್ಮಧ್ಯೆ ಉಳ್ಳಾಲಕ್ಕೆ ಹೋಗಿ ಫಲಿಕ್ಸರ ಚೋಟಾ ಮಂಗಳೂರಿನಲ್ಲಿ ಅನಾಥ ಗೃಹದ ಶಂಕುಸ್ಥಾಪನೆ ಮಾಡಿದರು. ಮಾರನೆ ದಿನ ಹಿಂದೆ ಹೋದರು.

ಮುತ್ಸದ್ದಿಯವರ ವಿನಂತಿಗಳನ್ನು ಇವರಿಗೆ ಟಪ್ಪಾಲಿನಲ್ಲಿ ಮೊದಲೇ ಕೊಟ್ಟಿತ್ತು. ಜಿಲ್ಲೆಯ ಸಂಘಗಳನ್ನು ಮಾಡುವರೆಂಬ ಇವರ ಉತ್ತರ ಸರಕಾರದಿಂದ ಮೊದಲೇ ಪ್ರಕಟವಾಗಿತ್ತು. ಪದವು ಯೋಜನೆ ಬಗ್ಗೆ ಪದವು ನೋಡಿದ್ದು ಮಾತ್ರ. ಉಳಿದುದೆಂದರೆ ಒಂದು ಶಂಕುಸ್ಥಾಪನೆ, ಒಂದು ಕಾಲೇಜುಡೇ. ಎರಡೂ ಔಪಚಾರಿಕ ಕಾರ್ಯಕ್ರಮಗಳು. ಇಷ್ಟಕ್ಕಾಗಿ ಮದ್ರಾಸಿನಿಂದ ಇಲ್ಲಿಯ ತನಕ ಬರುವ ಪ್ರಯಾಸಪಟ್ಟ ಬಗ್ಗೆ ಮಂತ್ರಿಯವರಿಗೆ ಜಿಲ್ಲೆಯವರು ಕೃತಜ್ಞರೇ ಇರಬೇಕು.

ಈ ಕಥೆ ಇನ್ನು ಬೆಳೆಸುವ ಅಗತ್ಯವಿಲ್ಲ. ಆಯಾ ಕಾರ್ಯಕ್ರಮಗಳ ಮೇಲೆ ಹೆಚ್ಚಿನ ಟೀಕೆಯು ಅಗತ್ಯವೂ ಇಲ್ಲ ಇಲ್ಲಿಯ ವಿವರಗಳನ್ನು ಜನರ ಮುಂದಿಟ್ಟರೆ ಸಾಕು. ಟೀಕೆ ಬೇಕೆ?

KANARA COMMERCIAL BANK LTD.

PUTTUR.

H. O. Puttur.] Estd. 1920 [Branch: Vittal.

All kinds of Banking Business transacted.

Deposits: Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ಗಣಪತಿ ಹೈಸ್ಕೂಲಿನ ವರ್ಷ ವರ್ಧಂತಿ

ವಿಜಯ ದಶಮಿಯಂದು, ಮೋಲ್ಕಂಡ ಹೈಸ್ಕೂಲಿನ ವರ್ಷವರ್ಧಂತಿ, ನಮ್ಮ ಆಧಿಪತ್ಯದ ವಿದ್ಯಾಂಗದ ಡೈರೆಕ್ಟರ್ ಡಾ ಸವೂರರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರು "ವಿದ್ಯಾರ್ಥಿಗಳ ಕರ್ತವ್ಯ, ಅವರಲ್ಲಿರಬೇಕಾದ ಸತ್ಯ, ಅಹಿಂಸೆ ಶಿಸ್ತು ಮೊದಲಾದ ಸದ್ಗುಣ"ಗಳ ಕುರಿತು ಮೊದಲು ನಾಲ್ಕು ಮಾತಾಡಿದ ಮೇಲೆ ಶಾಲಾ ಹೆಡ್ಮಾಸ್ತರ್ ಶ್ರೀ ಎಚ್ ಪಾಂಡುರಂಗರಾವ್ ಅವರು ಶಾಲಾ ವರದಿಯನ್ನೋದಿದರು ಶಾಲಾ ಶ್ರೀಯುತ ಪ್ರಾರ್ಥನೆಯನ್ನು ಮಂಗಳೂರು ತಹಶಿಲ್ದಾರ ಶ್ರೀ ಬಿ ಗಣೇಶ ಅವರು ಮಾಡಿದರು ಅಧ್ಯಕ್ಷರು ಬಹುಮಾನ ವಿತರಣ ಮಾಡಿ, ಕೊನೆಯ ಭಾಷಣ ಮುಗಿಸಿದ ಮೇಲೆ ಶ್ರೀ ಬಿ ಸೋಮಶೇಖರರಾಯರು ವಂದಿಸಿದರು. ವಿವಿಧ ವಿನೋದಾವಳಿಗಳಿದ್ದುವು

ನಮ್ಮ ಮಾನ್ಯ ಸಚಿವರುಗಳಾದ ಶ್ರೀ ಚಂದ್ರಮೌಳಿಯವರೂ, ಶ್ರೀ ಡಾ. ಥೋಮಸರೂ ಇಬ್ಬರೂ ಈ ಸಮಾರಂಭ ಕಾಲದಲ್ಲಿ ಅಲ್ಲಿಗೆ ದಯಮಾಡಿಸಿ ಸ್ವಲ್ಪ ಹೊತ್ತು ಇದ್ದರು

ಮಂಗಳೂರಲ್ಲಿ ಗವರ್ನರ್ ದಂಪತಿಗಳು

ಕಳೆದ ಆದಿತ್ಯವಾರ ತಾ ೨೬ನೇ ಸಂಜೆ ನಮ್ಮ ಘನವೆತ್ತ ಗವರ್ನರರು ಪತ್ನಿಸಹಿತರಾಗಿ ಮಂಗಳೂರಿಗೆ ದಯಮಾಡಿಸಿ ಅಂದು ಶ್ರೀ ಕೆ ಆರ್ ಕಾರಂತರ (ಮಾಜಿ ರೆವೆನ್ಯೂ ಮಂತ್ರಿ) ಎಂ ಎಲ್ ಎ ಅವರಲ್ಲಿ ಚಹಾ ಸತ್ಕಾರವನ್ನು ಸ್ವೀಕರಿಸಿ ನಿನ್ನೆ ಬೆಳಗೆ ಮುಂದಾಜೆ ಧರ್ಮಸ್ಥಳಗಳನ್ನು ಪರಾಂಬರಿಸಿ, ಅಪರಾಹ್ನ ಸ್ಥಳೀಯ ಕೆಲ ಕಾರ್ಖಾನೆಗಳನ್ನು ಸಂದರ್ಶಿಸಿದರು, ಮಾರನೆ ದಿನ ಕಾರ್ಕಳ ಮೂಡಬಿದರೆಗಳನ್ನು ನೋಡಿಕೊಂಡು ಬಂದಿರುವರು.

ಗವರ್ನರರ ಪತ್ನಿಯವರು ಮಂಗಳೂರಿನ ಹಲವು ಸಾರ್ವಜನಿಕ ಸಂಸ್ಥೆಗಳಿಗೆ ಆಗಲೇ ಭೇಟಿ ಕೊಟ್ಟಿರುವರು, ೩ನೇ ದಿನ ಸಂಜೆ ಗವರ್ನರರ ಪತ್ನೀ ಸಹಿತರಾಗಿ ಪ್ರಾಂತಿಕ ಕ್ಷೇಮಚಿಂತನೆಯ ನಿಧಿಯ ಸಹಾಯಾರ್ಥವಾಗಿ ಸೈಂಟ್ ಆಗ್ನೇಸ್ ಕಾಲೇಜಿನಲ್ಲಿ ನಡೆಯುವ ವಿವಿಧ ವಿನೋದಾವಳಿಗಳಿಗೆ ದಯಮಾಡಿಸಿದರು.

ವರ್ಗ

ಮಂಗಳೂರು ರೆ ಡಿ ಆಫೀಸರರಾದ ಶ್ರೀ ಎಸ್ ಬಾಲಾಜಿರಾಯರು (ಅದೇ ಹುದ್ದೆಯವರಾಗಿ) ಉತ್ತರ ಆರ್ಕಾಟಿಗೆ ವರ್ಗಾಯಿಸಲ್ಪಟ್ಟು, ರಾಯರ ಸ್ಥಾನಕ್ಕೆ ಜನಾಬ್ ಅಬ್ದುಲ್ ರಹಿಮಾನ್ ಸಾಹೇಬರು ಇಲ್ಲಿಗೆ ಬರುವರೆಂದೂ, ಪುತ್ತೂರು ರೆ ಡಿ ಆಫೀಸರ್ ಶ್ರೀ ಸಿಂಹಾದ್ರಿಯವರು ಅನಂತಪುರಕ್ಕೆ ವರ್ಗಾಯಿಸಲ್ಪಟ್ಟು ಅವರ ಸ್ಥಾನಕ್ಕೆ ಶ್ರೀ ಕಾರಿಯಪ್ಪ ಅವರು ಅಲ್ಲಿಗೆ ಬರುವರೆಂದೂ ತಿಳಿದುಬಂದಿದೆ

"ಚಾಲಂಜ್" ಬಟ್ಟಲಿನ ಬಹುಮಾನ

ಮಂಗಳೂರಿನ ಫಲಪುಷ್ಪ ಪ್ರದರ್ಶನದ ೧೧ನೇ ಅಧಿವೇಶನದ ಬಹುಮಾನ ವಿತರಣೆಯು ಮ್ಯಾ॥ ಚೆಯರ್‌ಮ್ಯಾನ್ ಮಿ ಎಲ್ ಸಿ ಪಾಯಸ್ ಎಂ ಎಲ್ ಎ ಅವರಿಂದ ಕಳೆದ ತಾ ೨೫ನೇ ಸಂಜೆ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಜರುಗಿ 'ಚಾಲಂಜ್' ಬಟ್ಟಲಿನ ಬಹುಮಾನ ಇಲ್ಲಿಯ ಗವರ್ನಮೆಂಟ್ ಕಾಲೇಜಿಗೆ ದೊರಕಿದೆ

ಜಿಲ್ಲಾ ಸಾಯಕಲ್ ವ್ಯಾಪಾರಿಗಳ ಸಂಘ

ಮೋಲ್ಕಂಡ ಸಂಘದ ವರ್ಧಂತಿ ಕಳೆದ ಆದಿತ್ಯವಾರ ಸಂಜೆ ಅದರ ಕಾರ್ಯಾಲಯದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಹರಿಶ್ಚಂದ್ರರಾವ್ (ಮೆ॥ ರಾವ್ ಎಂಡ್ ರಾವ್‌ನವರು) ಅವರ ಅಧ್ಯಕ್ಷತೆಯಲ್ಲಿ ಜರುಗಿ, ಮುಂದಿನ ವರ್ಷಕ್ಕೆ ಅವರೇ ಅಧ್ಯಕ್ಷರು, ಶ್ರೀ ಮಂಜುನಾಥ ಅವರು ಕಾರ್ಯದರ್ಶಿ ಮತ್ತು ಶ್ರೀ ಗೋವಿಂದ ಅವರು ಖಜಾಂಚಿಗಳಾಗಿ ತಿರುಗಿ ಚುನಾಯಿಸಲ್ಪಟ್ಟು, ೭ ಮಂದಿ ಸದಸ್ಯರ ಒಂದು ಕಾರ್ಯಕಾರಿ ಸಮಿತಿಯೂ ಆರಿಸಲ್ಪಟ್ಟಿತು. ಶ್ರೀ ಎಚ್. ಭೀಮರಾಯರೇ ಮೊದಲಾದವರು ಮಾತಾಡಿದ ಬಳಿಕ ಅಧ್ಯಕ್ಷರ ಭಾಷಣ, ಕಾರ್ಯದರ್ಶಿಯವರ ವಂದನಾರ್ಪಣೆಗಳಿದ್ದುವು. ಸಭೆಗೆ ಮುನ್ನ ಫಲಾಹಾರ ಗ್ರೂಪ್ ಫೋಟೋ ಕಾರ್ಯಕ್ರಮವಿತ್ತು.

ಜಿಲ್ಲಾ ಪರಿಚಯ

ಮಂಗಳೂರಲ್ಲಿ ಮಾನ್ಯ ಸಚಿವ ಶ್ರೀ. ಡಾನ್ಯಿಯಲ್ ತೋಮಸ್ ಅವರು

ಮದ್ಯನಿಷೇಧ ಖಾತೆಯ ಮತ್ತು ನಿವಾಸ ನಿರ್ಮಾಣ ಇಲಾಖೆಯ ಮಾನ್ಯ ಮಂತ್ರಿ ಶ್ರೀ ಡಾನಿಯೆಲ್ ಥೋಮಸ್ ಅವರು ಕಳೆದ ತಾ 23ರಲ್ಲಿ ಮಂಗಳೂರಿಗೆ ಬಂದು ತಾ 24ನೇ ಬೆಳಗ್ಗೆ "ಥೋಟಾಮಂಗಳೂರಿನ ಕಾಲನಿ"ಗೆ ದಯಮಾಡಿಸಿದರು ಅಲ್ಲಿ ಶ್ರೀ ಫೆಲಿಕ್ಸ್ ಪೈಯವರ ಆಮಂತ್ರಣದಂತೆ ನೆರೆದಿದ್ದ ಹಲವಾರು ಮಂದಿ ಅಧಿಕಾರಿಗಳು, ಇತರ ಖಾಸಗಿ ದೊಡ್ಡ ಮನುಷ್ಯರ ಸಭೆಯ ಮುಂದೆ ಶ್ರೀ ಫೆಲಿಕ್ಸ್ ಪೈಗಳವರು ಒಂದು ಬಿನ್ನವತ್ತಲೆಯನ್ನು ಮಾನ್ಯ ಮಂತ್ರಿಗಳಿಗೆ ಸಮರ್ಪಿಸುತ್ತ, ಅದರಲ್ಲಿ ಈ ಕಾಲನಿಯ ಸ್ಥಾಪನೆಯ ಉದ್ದೇಶವನ್ನು ಪ್ರಕಟಪಡಿಸಿದ ಬಳಿಕ ಶ್ರೀ ಫೆಲಿಕ್ಸ್ ಪೈಗಳವರ ಅರಿಕೆಯಂತೆ, ಮಾನ್ಯ ಸಚಿವರು ಒಂದು ಅನಾಥಾಲಯ ಮತ್ತು ಉದ್ಯಾನವನಕ್ಕೆ ಶಂಕುಸ್ಥಾಪನೆ ಮಾಡಲಾಗಿ ಮಂಗಳೂರು ಬಿಶೋಪರಾದ ರ್‍ಯಾಟ್ ರೆವರೆಂಡ್ ಡಾ ವಿ ಆರ್ ಫೆರ್ನಾಂದೀಸರು ಆ ಶಿಲೆಗಳನ್ನಾಶೀರ್ವದಿಸಿದರು.

ಕಲೆಕ್ಟರರ ಆಫೀಸಿನಲ್ಲಿ

ಅನಂತರ ಅಲ್ಲಿಂದ ಮರಳಿ ಬೆಳಗೆ 11 ಗಂಟೆಗೆ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ನೆರೆದ ಪ್ರಮುಖ ಅಧಿಕಾರಿಗಳ ಮತ್ತು ನಾಗರಿಕರ ಸಭೆಯಲ್ಲಿ, ಮಾನ್ಯ ಸಚಿವರು "ಮದ್ಯನಿಷೇಧ"ದ ವಿಚಾರದಲ್ಲಿನ ಕೆಲವು ಏರ್ಪಾಡುಗಳನ್ನು ಅರುಹಿದರು ಕೆಲಹೊತ್ತು ಈ ಕುರಿತು ಚರ್ಚೆಯೂ ನಡೆಯಿತು

ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ

ಅಪರಾಹ್ನ ಗಂಟೆ 3ಕ್ಕೆ ಶ್ರೀ ಡಾ ಥೋಮಸರು ಕುದ್ರೋಳಿಯ ಶ್ರೀ ಗೋಕರ್ಣನಾಥ ಕ್ಷೇತ್ರಕ್ಕೆ ದಯಮಾಡಿಸುತ್ತಲೇ, ಅಲ್ಲಿ ನೆರೆದ ಸಭೆಯಲ್ಲಿ ರಾ॥ ಬ ಎನ್ ಎಸ್ ಸುವರ್ಣರು ಸಚಿವರನ್ನು ಸ್ವಾಗತಿಸಿದರು ರಾ॥ ಬ॥ ಎಂ ಗಿರಿಯಪ್ಪನವರು ಒಂದು ಮೆಮೊರೆಂಡಮನ್ನು ಸಚಿವರಿಗೊಪ್ಪಿಸಿ ಅದರಲ್ಲಿ ಮದ್ಯನಿಷೇಧ ಕ್ರಮದಿಂದ ಮೂರ್ತೆಯವರಿಗೆ ಉಂಟಾಗಿರುವ ಜೀವನ ಸಂಕಷ್ಟಗಳನ್ನು ನಿವೇದಿಸಿದರು ಮಂತ್ರಿಗಳು ಉತ್ತರ ಕೊಡುತ್ತ "ಬಿಲ್ಲವ ಸಮಾಜ ಅಷ್ಟೇನೂ ಹಿಂದುಳಿದುದಲ್ಲ, ಅವರದು ತಕ್ಕಷ್ಟು ಮುಂದುವರಿದ ಸಮಾಜ, ಬ್ರಹ್ಮಶ್ರೀ ನಾರಾಯಣ ಸ್ವಾಮಿಜಿಯವರೂ ಪಾನನಿಷೇಧ ಮಾಡಿರುವುದರಿಂದ, ಆ ಉಪದೇಶವು ಅನುಕರಣೀಯವಾಗಿದೆ, ಹಾಗೆ ಈ ಮದ್ಯನಿಷೇಧ ಕ್ರಮ ಬಂದಿರುವುದೂ ನ್ಯಾಯವಾಗಿದೆ ನಿಮ್ಮ ಗುರುವರ್ಯರ ಆ ಉಪದೇಶವನ್ನು ನೀವು ಅವಶ್ಯವಾಗಿಯೂ ಪಾಲಿಸಿರಿ, ನೀವು ಬೆಲ್ಲ ಮಾಡಬಹುದು; ಅದಕ್ಕೆ ಸರಕಾರದ ಅಪ್ಪಣೆಯುಂಟು. ತೆಂಗಿನ ಬೆಲ್ಲ ಮಾಡುವಂತೆ ಅಪ್ಪಣೆ ಕೊಡುವ ಮನಸ್ಸೂ ಅಪೇಕ್ಷೆಯೂ ಸರಕಾರಕ್ಕಿದೆ. ಅದಕ್ಕಾಗಿ ನೀವು ಸಹಕಾರಿ ಸಂಘಗಳನ್ನು ರಚಿಸಿಕೊಂಡು ಅವುಗಳ ಮೆಂಬರರಾಗಿರಿ" ಎಂದು ಆ ಮೂರ್ತೆದಾರರ ಸಭೆಗೆ ತಿಳಿಸಿದರು ಶ್ರೀ. ಬಿ. ಗಂಗಾಧರ ದಾಸರು ವಂದಿಸಿದರು.

ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ

ಮಾನ್ಯ ಸಚಿವ ಶ್ರೀ ಡಾ. ಥೋಮಸರು ಮೋಲ್ಕಂಡ ಕಾಲೇಜಿನ ದಿನಾಚರಣೆಯ ಉತ್ಸವದ ಅಧ್ಯಕ್ಷತೆ ವಹಿಸಿ, ಬಹುಮಾನ ವಿತರಣ ಮಾಡಿ, ವಿನೋದಾವಳಿಗಳನ್ನು ಕಂಡು ಆನಂದಿಸಿದರು

ಉಚ್ಚಿಲ-ಇಲ್ಲಿಯ ಬೋವಿ ಎಲಿಮೆಂಟರಿ ಶಾಲೆಯಲ್ಲಿ ಇದೇ ಬರುವ 1948ನೇ ಜೂನ್ ತಿಂಗಳಲ್ಲಿ VIನೇ ದರ್ಜೆ ತೆರೆಯಲು ಮಾನ್ಯ ಡಿವಿಜನಲ್ ಇನ್‌ಸ್ಪೆಕ್ಟರರಿಂದ ಪರವಾನೆ ಸಿಕ್ಕಿದೆಂದು ಬೋವಿ ವಿದ್ಯಾಸಂಘದ ಎಲ್ಲಾ ಸದಸ್ಯರಿಗೂ ಊರ ನಿವಾಸಿಕರಿಗೂ, ತಿಳಿಸಲು ಶಾಲಾ ಆಡಳಿತೆಯವರು ಸಂತೋಷಪಡುತ್ತಾರೆ

ಉಡುಪಿಯಲ್ಲಿ ನಾಡಹಬ್ಬ

ಪ್ರತಿ ಸಲದಂತೆ ಈ ಸಲವೂ ಕರ್ನಾಟಕ ಸಂಘದವರಿಂದ ನಾಡಹಬ್ಬವು ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ತಾ ೨1ರಂದು ಶ್ರೀ ಶಿವರಾಮ ಕಾರಂತರು ಅಗ್ರಾಸನವನ್ನಲಂಕರಿಸಿದ್ದರೂ ಶ್ರೀ ಜಿ ಎಸ್ ಶಕ್ಕಿಲ್ಲಾಯರು ಭಾಷಣವಿತ್ತರು. ಅಧ್ಯಕ್ಷರು ವಿಚಾರ ಸ್ವಾತಂತ್ರ್ಯ ಮತ್ತು ಭಾಷೆ ಎಂಬ ವಿಚಾರವಾಗಿ ಸೊಗಸಾದ ಉಪನ್ಯಾಸವಿತ್ತರು. ಕೊನೆಯಲ್ಲಿ ಶ್ರೀ ಕೊಳ್ಯೂರು ನಾರಾಯಣ ಶೆಟ್ಟರ ವಿನೋದಾಭಿನಯವೂ ಬೋರ್ಡ ಹೈಸ್ಕೂಲಿನ ವಿದ್ಯಾರ್ಥಿನಿಯರ ನಾಟಕಾಭಿನಯ, ಬೋರ್ಡ ಹೈಸ್ಕೂಲಿನ ವಿದ್ಯಾರ್ಥಿಗಳ ಪ್ರಹಸನಾಭಿನಯ, ಕಡಪಾಡಿ ಹೈಸ್ಕೂಲಿನ ವಿದ್ಯಾರ್ಥಿಗಳ ಭಾಗವತರಾಟವೂ ಇದ್ದುವು ತಾ 22ರಂದು ಶ್ರೀ ಎಚ್ ಕೆ ಚನ್ನಕೇಶವಯ್ಯಂಗಾರರು ಅಧ್ಯಕ್ಷರಾಗಿದ್ದರು. ಶ್ರೀ ಎನ್. ಎಸ್ ಕಿಲ್ಲೆಯವರು ಭಾರತದಲ್ಲಿ ಕಲೆ ಎಂಬ ವಿಚಾರವಾಗಿ ಉಪನ್ಯಾಸವಿತ್ತರು. ಅಧ್ಯಕ್ಷರ ಭಾಷಣವಾದ ತರುವಾಯ ಶ್ರೀ ಎಚ್ ಕೆ. ರಂಗನಾಥ ಎಂ ಎ ಎ ಟಿಯವರು ಕಾವ್ಯ ವಾಚನ ಮಾಡಿದರು ಶ್ರೀ ನರಸಿಂಹ ಸೇರಿಗಾರರು ಮತ್ತು ಪಾರ್ಟಿಯವರ ವಾದ್ಯ ವಾದನವೂ ಶ್ರೀ ಕೊಳ್ಯೂರು ನಾರಾಯಣ ಶೆಟ್ಟರ ವಿನೋದಾಭಿನಯವೂ ಕ್ರಿಶ್ಚಿಯನ್ ಹೈಸ್ಕೂಲಿನ ವಿದ್ಯಾರ್ಥಿಗಳಿಂದ ಶ್ಯಾಮಣ್ಣನ ಸಾಹಸ ನಾಟಕಾಭಿನಯವೂ ಇದ್ದುವು. ತಾ 23ರಂದು ಶ್ರೀ ಎಂ ಶೇಷಾದ್ರಿ ಎಂ ಎ ಎಲ್ ಟಿ ಅವರು ಅಧ್ಯಕ್ಷರಾಗಿದ್ದರು. ಶ್ರೀ ಚೆನ್ನ ಕೇಶವಯ್ಯಂಗಾರರು ರನ್ನನ ಗದಾಯುದ್ಧದ ಕುರಿತು ಉಪನ್ಯಾಸವಿತ್ತರು. ಶ್ರೀ ಉಪೇಂದ್ರರ ಕಾವ್ಯ ವಾಚನವಾದ ಮೇಲೆ ಉಡುಪಿಯ ರಾಷ್ಟ್ರ ಸೇವಾದಳದವರು ಶ್ರೀ ಎಂ ಪಿ ಹೆಗ್ಡೆಯವರ ತುಳು ಲಾವಣಿಯನ್ನು ಶ್ರೀ ಕೆ ವಿಠಲ ಶೆಟ್ಟಿ ಬಿ ಎ ಎಲ್ ಟಿಯವರ ಕನ್ನಡ ಲಾವಣಿಯನ್ನು ಸುಶ್ರಾವ್ಯವಾಗಿ ಹಾಡಿದರು. ಆ ಮೇಲೆ ಉಡುಪಿಯ ಕಲಾವೃಂದದ ಗೆಳೆಯರು "ನಚಿಕೇತ" ನಾಟಕವನ್ನು ಅಭಿನಯಿಸಿದರು. ತಾ 24ರಂದು ಶ್ರೀ ಎಂ. ಮರಿಯಪ್ಪ ಭಟ್ಟರವರು ಆಗ್ರಾಸನವನ್ನಲಂಕರಿಸಿದ್ದರು ಶ್ರೀ ಜಿ ಎಸ್ ಕೇಶವಾಚಾರ್ಯರು ಬಿ ಎಸ್ ಸಿ, ಬಿ ಟಿ ಯವರು ಶತ್ರುಪೆಡೂ ಶಿಶು ಶಿಕ್ಷಣವು, ಎಂಬುದರ ಕುರಿತು ಉಪನ್ಯಾಸವಿತ್ತರು ಅಧ್ಯಕ್ಷರು ಗನ್ನಡಿಗರ 'ಸಹಿಷ್ಣುತೆ'ಯ ಕುರಿತು ಮಾತಾಡಿದರು ತಾ. 20-24ರ ವರೆಗೆ ಪ್ರತಿ ದಿನ ಬೆಳಗ್ಗೆ ಭಾಷಣ-ಲೇಖನ-ಕಾವ್ಯವಾಚನ-ದಾಸರ ಪದಗಳ ಹಾಡುಗಾರಿಕೆ - ಇವುಗಳ ಸ್ಪರ್ಧೆಗಳಿದ್ದುವು. ಇವುಗಳಲ್ಲಿ ಅನೇಕರು ಭಾಗವಹಿಸಿದ್ದರು ಗೆದ್ದವರಿಗೆಲ್ಲ 24ನೇ ತಾರೀಕಿನ ದಿನ ಬಹುಮಾನ ಹಂಚಲಾಯಿತು. ಕನ್ನಡದ ಈ ಉತ್ಸವವು ಇಷ್ಟು ಯಶಸ್ವಿಯಾಗುವಂತೆ ನೆರವಿತ್ತ ಸಮಸ್ತರಿಗೂ ಪ್ರಧಾನ ಕಾರ್ಯದರ್ಶಿಗಳು ಕೃತಜ್ಞತೆಯನ್ನು ಸಲಿಸಿಹರು. ರಾತ್ರೆ ಯಕ್ಷಗಾನದ ಕಾಲಕ್ಷೇಪವೂ ಇತ್ತು.

FOR ALL CLASSES OF INSURANCE

LIFE-FIRE-MARINE-ACCIDENT

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA ASSURANCE CO. LTD.

(H O. BOMBAY)

A Tata's Promotion & India's Largest Composite Insurance Office.

Total Assets - - - About 9 Crores.

For Agency and other particulars:-

Apply to

K. GANAPATHI Esq.,	**K. N. NAYAK, Esq.,**
Branch Manager.	*Secretary, Sub Office*
4/5, First Line Beach,	Hampankatta,
MADRAS.	MANGALORE.

ಜುನಾಗಡ್ ಸಂಸ್ಥಾನದ ಪವಿತ್ರ ಪ್ರಾಮುಖ್ಯತೆ

ಪರಕೀಯ ಆಕ್ರಮಣದ ಪ್ರಥಮ ಗುರಿ

ಜುನಾಗಡ ಸಂಸ್ಥಾನವು 3500 ಚದರ ಮೈಲು ವಿಸ್ತೀರ್ಣವಿದೆ; 6½ ಲಕ್ಷ ಜನ ಸಂಖ್ಯೆಯುಳ್ಳ-ಸೇಕಡಾ 85ರಷ್ಟು ಹಿಂದೂ ಗಳು ಇಲ್ಲಿ ಅತೀ ಪವಿತ್ರವೆನಿಸಲ್ಪಡುವ ಹಿಂದೂಗಳು ಅನೇಕಾನೇಕ ಪವಿತ್ರ ಕ್ಷೇತ್ರ ಸ್ಥಳಗಳು ಇವೆಯಾದುದರಿಂದ ಇಂದಿನ ಜುನಾಗಡದ ಪ್ರಶ್ನೆಯು ಅಖಿಲ ಭಾರತಕ್ಕೇ ಸಂಬಂಧಿಸಿದೆಂದೂ, ಭಾರತ ಸರಕಾರದ ವರು ಅಲ್ಲಿನ ಜನತೆಯು ಮತ ಗಣನೆಯ ನ್ನಯು ಆ ಸಂಸ್ಥಾನವು ಯಾವ ಡೊಮಿನಿಯನ್ನಿಗೆ ಸೇರುವಂತಾಗಬೇಕೆಂಬ ಧೋರಣೆಯನ್ನು ತಳೆದಿರುವುದು ಶುದ್ಧ ತಪ್ಪಾದುದೆಂದೂ ತಿಳಿಸುತ್ತ ಬಿನಾಯ್ ದತ್ತರೆಂಬ ಸುಪ್ರಸಿದ್ಧ ಬಂಗಾಳಿ ಪ್ರತಿಕೋದ್ಯೋಮಿಗಳು ಈ ಕೆಳಗಿನ ಸಂಗತಿಗಳನ್ನು ವಿವರಿಸುತ್ತಾರೆ.

ಐದು ಸಾವಿರ ವರ್ಷಗಳ ಹಿಂದೆ ಭಗವಾನ್ ಶ್ರೀ ಕೃಷ್ಣನು ಈ ಪುರಾತನವಾದ ಭಾರತ ಭೂಮಿಯಲ್ಲಿ ಸಂಯುಕ್ತ ಪ್ರಾಂತ್ಯದ ಪವಿತ್ರ ನಗರ ಮಥುರೆಯಲ್ಲಿ ಹುಟ್ಟಿದುದಾದರೆ ಅವನು ತನ್ನ ನಶ್ವರ ಕಾಯವನ್ನು ಜುನಾಗಡ ಸಂಸ್ಥಾನದೊಳಗಿನ ಪ್ರಭಾಸ್ ಎಂಬಲ್ಲಿ ಹಿರಣ್ಯ ಹೊಳೆಯ ದಡದಲ್ಲಿ ತ್ಯಾಗ ಮಾಡಿದ್ದ. ಈ ಸ್ಥಳವು ಹಿರಣ್ಯ ಹೊಳೆಯು ಅರಬಿಸಮುದ್ರಕ್ಕೆ ಸಂಗಮವಾಗುವಲ್ಲಿದೆ ಶ್ರೀ ಕೃಷ್ಣನ ದೇಹೋತ್ಸರ್ಗ ಸ್ಥಳವೆಂದು ಪ್ರಭಾಸ್ ಎಲ್ಲಾ ಹಿಂದೂಗಳಿಗೂ ಗೊತ್ತಿರುವ ಸ್ಥಳ. ಭಗವಾನ್ ಶ್ರೀ ಕೃಷ್ಣನ ಕಾಲಾನುಕ್ರಮವಾಗಿ ಅತಿ ಪವಿತ್ರ ಹಾಗೂ ಧರ್ಮ ಪ್ರಾಮುಖ್ಯದ್ದೆಂದು ಭಾರತದ ಆ ಮೂಲೆಯಿಂದ ಮೂಲೆಯ ವರೆಗಿನ ಎಲ್ಲಾ ಹಿಂದುಗಳೂ ಆ ಸ್ಥಳದ ಪುಣ್ಯ ಸ್ಮರಣೆ ಮಾಡುತ್ತಾರೆ.

ಮೂರ್ತಿ ಭಂಜಕರ ಧಾಳಿ

ಪಜ್ನಿ ಮಹಮ್ಮದನ ಕಾಲದಿಂದಲೂ ಹಿಂದೂ ದೇವಾಲಯಗಳ ಮೇಲೆ ಮುಸ್ಲಿಮ್ ಆಕ್ರಮಣಗಾರರ ಚರಿತ್ರೋಲ್ಲೇಖಿತ ಧಾಳಿಗಳು ನಡೆದಿದ್ದುದು ಇಲ್ಲಿಯೇ. ಹಲವು ಶತಮಾನಗಳು ಕಳೆದರೂ ಶೈವರ ಸೋಮನಾಥದ ಧ್ವಂಸಾವಶೇಷಗಳು ಜೋಡಣೆ ತಪ್ಪಿದ ಅಸ್ಥಿಗೂಡು ಸ್ಥಿತಿಯಲ್ಲಿ ಈಗಲೂ ಅಲ್ಲಿವೆ, ಮಹಾ ಭಾರತ ಕಾಲದಲ್ಲಿ ಇಡೀ ಕಾಥಿಯಾ ವಾಡವು ಸೌರಾಷ್ಟ್ರನಾವ ಧಾರಿಯಾಗಿ ಮೆರೆಯುತಿತ್ತು. ಭಗವಾನ್ ಶ್ರೀ ಕೃಷ್ಣನು ತನ್ನ ಬಾಲಲೀಲೆ ಮಾಡಿದ್ದ ಮಥುರಾ ನಗರವನ್ನು ಬಿಟ್ಟು ಬಂದ ಮೇಲೆ ಈ ಇಡೀ ಸೌರಾಷ್ಟ್ರವನ್ನು ಆಳಿದ್ದ. ಈ ಸೋಮನಾಥ ತೀರ್ಥಸ್ನಾನ ಮತ್ತು ದೇಹೋತ್ಸರ್ಗವು ಪ್ರತಿಯೊಬ್ಬ ಹಿಂದುವಿಗೂ ಗೊತ್ತು. ಪುರಾಣ ಗ್ರಂಥಗಳಲ್ಲಿ ಕೂಡಾ ಈ ಸ್ಥಳಗಳ ಉಲ್ಲೇಖವಿದೆ. ದ್ವಾರಕೆಗೆ ಕೇವಲ ನೂರು ಮೈಲು ದೂರದಲ್ಲಿ ಪ್ರಭಾಸ್ ಇದೆ. ಭಗವಾನ್ ಶ್ರೀ ಕೃಷ್ಣನು ತನ್ನ ಜೀವ ಮಾನದ ಕೊನೆಯ ದಿನಗಳನ್ನು ಕಳೆದಿದ್ದುದು ದ್ವಾರಕೆಯಲ್ಲೇ.

ಪುಣ್ಯ ಭೂಮಿ

ಸುಪ್ರಸಿದ್ಧ ಗಿರ್ನಾರ್ ಪರ್ವತವು ಈ ಸಂಸ್ಥಾನದ ಕೇಂದ್ರ ಸ್ಥಳದಲ್ಲೇ ಅರಬೀ ಸಮುದ್ರ ದಡಕ್ಕೆ 20 ಮೈಲು ದೂರದಲ್ಲಿದೆ. ಶಂಕರಾಚಾರ್ಯ ಪಂಥಿಗಳ ದತ್ತಾತ್ರೇಯ ಆಸ್ಥಾನ, ವೈಷ್ಣವರ ರಾಸ್ತೇ (ಕೃಷ್ಣನು ರಾಸ ಲೀಲೆ ಮಾಡಿದ್ ಸ್ಥಳ) ಮತ್ತು ಜೈನರ ಅಖಿಲ ಭಾರತ ಖ್ಯಾತಿಯ ಹಲವು ಪ್ರಸಿದ್ಧ ದೇವಾಲಯಗಳು ಈ ಗಿರ್ನಾರ್ ಪರ್ವತಗಳಲ್ಲೂ ಆಸುಪಾಸಿನಲ್ಲೂ ಇವೆ. ಗಿರ್ನಾರ್ ಪರ್ವತ ಬುಡದಲ್ಲೇ ಅಶೋಕ ಚಕ್ರವರ್ತಿಯ ಚಾರಿತ್ರಿಕ ಶಿಲಾಲಿಪಿಗಳಿವೆ. ಅವುಗಳ ಚರಿತ್ರಾವಶೇಷ ಮಹತ್ವದಿಂದಾಗಿ ಈಗಲೂ ಅವನ್ನು ಜೋಪಾನ ಮಾಡಲಾಗಿದೆ. ಈಗ ಕೂಡಾ ನಮ್ಮ ಆ ಕಾಲದ ಸತ್ಕೀರ್ತಿ ಪ್ರಭೆ ಬೀರುತ್ತಾ ಅವು ಅಲ್ಲಿ ನಿಂತಿವೆ. ರೈಲ್ವೇ ಮತ್ತಿತರ ಆಧುನಿಕ ಸಂಚಾರ ಸೌಕರ್ಯಗಳಿಲ್ಲದ ಆ ದಿನಗಳಲ್ಲಿ ಕೂಡಾ ಮಹಾಭಾರತ ಕಾಲದ ಸೌರಾಷ್ಟ್ರ ದೇಶದ ತೀರ್ಥಗಳಾದ ದ್ವಾರಕೆ ಪ್ರಭಾಸ್ ಮತ್ತಿತರ ಪವಿತ್ರ ಸ್ಥಳಗಳಿಗೆ ಹಿಂದೂಗಳು ಭಾರತದ ಮೂಲೆ ಮೂಲೆಗಳಿಂದ ಯಾತ್ರೆ ಹೋಗುವುದಿತ್ತು.

ಆಕ್ರಮಣಗಾರರ ಧಾಳಿ

ಈ ಪವಿತ್ರ ಸ್ಥಳಗಳಲ್ಲಿರುವ ಪ್ರಾಮುಖ್ಯತೆ ಮತ್ತು ಪವಿತ್ರತೆಯು ಮಹಮ್ಮದ್ ಬಿನ್ ಕಾಸೀಮನ ಕಾಲದಿಂದ ಈ ವರೆಗೂ ಮುಸ್ಲಿಮರ ಲಕ್ಷ್ಯವನ್ನಾಕರ್ಷಿಸುತ್ತಾ ಬಂದಿದೆ. ಇಲ್ಲಿನ ಪ್ರತಿಯೊಂದು ಹಿಂದು ಪವಿತ್ರ ಮಂದಿರವು ಪರಕೀಯರ ಧಾಳಿಗ ತುತ್ತಾಗಿದೆನ್ನಬಹುದು. ಅನೇಕವು ನೆಲ ಸಮವಾದುವು, ಧ್ವಂಸ ಹೊಂದಿದುವು ಜರ್ಝರಿತವಾದುವು. ಪಜ್ನಿ ಮಹಮ್ಮದನು ಸೋಮನಾಥ ದೇವಾಲಯದ ಮೇಲೆ ಹದಿಮೂರು ಸರ್ತಿ ಧಾಳಿ ಮಾಡಿದಂದಿನಿಂದ ಈ ವಿಧ್ವಂಸಕ ಚಟುವಟಿಕೆಗಾರಂಭವಾಗಿದೆ. ಸೌರಾಷ್ಟ್ರ ಇಷ್ಟೊಂದು ಪವಿತ್ರ ಪ್ರದೇಶವೆಂದೆನಿಸಲ್ಪಟ್ಟದ್ದರಿಂದಲೇ ಪರಮತಸ್ಥರು ಇದನ್ನು ಆಕ್ರಮಿಸಿದ ಕಾರಣಗಳಲ್ಲೊಂದೆಂದು ಇತಿಹಾಸದಿಂದ ಅಭಿಪ್ರಾಯವಾಗುತ್ತದೆ.

ಜುನಾಗಡಿನ ಗತಿ

ಈ ಸಂಸ್ಥಾನದ ಇಂದಿನ ರಾಜರ ಹೆಸರು ಸರ್ ಮಹಬತ್ ಖಾಬಿ ಎಂದು "ಖಾಬಿ" ಎಂಬ ಹೆಸರು ಗುಡ್ಡ ನಾಡಿನವರದು. ಅರ್ಥಾತ್ ಇಂದಿನ ನವಾಬನ ಹಿರಿಯರು ವಿದೇಶಿ ಮುಸಲ್ಮಾನರಿದ್ದರೆಂಬುದು ಈ ರೀತಿ ಖಚಿತವಾಗುತ್ತದೆ.

ಗಿರ್ನಾರ್ ಪರ್ವತ ಬುಡದಲ್ಲಿ ಶ್ರೀ ಶಂಕರ ಮಹಾದೇವ ದೇವಸ್ಥಾನಕ್ಕೆ ಸಮೀಪ ಅನುಸೂಯ ದೇವಸ್ಥಾನವೂ ಇದೆ. ಧರ್ಮ ಶಾಲೆಗಳೂ ಕೆಲವಿವೆ. ಅವುಗಳ ಪೈಕಿ ಒಂದು ತಮ್ಮದೆಂದು ಮುಸ್ಲಿಮರು ವಾದವೆಬ್ಬಿಸಿರುವರು. ಈ ಪರ್ವತಕೆ ಹೋಗುವ ರಸ್ತೆಯ ಹೆಸರು ವಾಗೇಶ್ವರಿ ರಸ್ತೆಯೆಂದು. ಅಲ್ಲಿ ಅಸಂಖ್ಯಾತ್ ದೇವಾಲಯಗಳೂ ಪೂಜಾಸ್ಥಳಗಳೂ, ಧರ್ಮ ಶಾಲೆಗಳೂ ಇವೆ. ಇವುಗಳ ನಡುವೆ ಮುಸ್ಲಿಮರು ತಮ್ಮ ಕೆಲವು ಗೋರಿಗಳನ್ನು ಕಟ್ಟಿದ್ದಾರ. ದೇಹೋತ್ಸರ್ಗ ಸ್ಥಳಕ್ಕೆ ಹೋಗುವ ಹಿಂದುಗಳಿಗ ತುಂಬಾ ಆತಂಕಗಳುಂಟುಮಾಡಲ್ಪಟ್ಟವೆಯೆಂಬ ಸಂಗತಿ ಅಲ್ಲಿ ಪ್ರತ್ಯಕ್ಷ ಹೋದರೆ ತಿಳಿಯುವುದು. ಈ ಕಾರಣಗಳಿಂದಾಗಿ ಹಿಂದೂಗಳಲ್ಲಿ ಅತೃಪ್ತಿ ಉದ್ವೇಗಗಳು ಹೆಚ್ಚಲಿಕ್ಕೆ ಕಾರಣವಾಯಿತೆನ್ನಬಹುದು. ಕೆಲವು ಕಡೆ 'ದನಗಳನ್ನು ಆಹುತಿ' ಕೊಡುವ ಗೋಮಾಂಸ ಮಾರಾಟದಂಗಡಿಗಳೂ ಇವೆ. ತಮ್ಮ ಭಾವನೆಗೆ ಆಘಾತವೊಡ್ಡಿ, ಧಾರ್ಮಿಕ ಆಚರಣೆ ಮತ್ತು ನಂಬಿಕೆಗಳಿಗೆ ಅವಮಾನ ಮಾಡಿ ರಾಷ್ಟ್ರ ಕಾನೂನಿಗೆ ವಿರುದ್ಧವಾಗಿ ತಾವು ಹೀಗೆ ಮಾಡುತಿದ್ದೇವೆಂದು ಅರಿತುಕೊಂಡೇ ಮುಸ್ಲಿಮರು ಹೀಗೆ ಮಾಡುತ್ತಿರುವರೆಂದು ಅಲ್ಲಿನ ಹಿಂದೂ, ಜೈನರ ಅಭಿಪ್ರಾಯವಿದೆಯೆಂದು ತಿಳಿಯಬಹುದು.

ಅಖಿಲ ಭಾರತ ಪ್ರಶ್ನೆ

ಈ ಎಲ್ಲಾ ಕಾರಣಗಳಿಂದಾಗಿ ಜುನಾಗಡಿನ ಪ್ರಶ್ನೆ ಅಖಿಲ ಭಾರತಕ್ಕೆ ಸಂಬಂಧಿಸಿದೆಂದು ಹಿಂದೂ ಧರ್ಮಾಭಿಮಾನಿಗಳು ತಿಳಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ. ಜುನಾಗಡ ಪಾಕಿಸ್ತಾನಕ್ಕೆ ಸೇರಿದುದರಿಂದಂತೂ ಅಲ್ಲಿನ ನವಾಬರ ಸ್ವಧರ್ಮ ಪಕ್ಷಪಾತವು ಬಹಿರಂಗವಾದಂತೆಣಿಸಲ್ಪಟ್ಟಿತು. ಇದರಿಂದ ಒಬ್ಬ ರೈತನ ದನ ಇನ್ನೊಬ್ಬನ ಹಟ್ಟಿಯಲ್ಲಿ ಕಟ್ಟಿದಂತಾಗಿದೆಯೆಂದೂ, ಇದರಿಂದ ಎರಡು ಡೋಮಿನಿಯನ್ನಿನೊಳಗೆ ಘರ್ಷಣ ಖಂಡಿತ ಸಂಭವಿಸುವುದೆಂದೂ ಹಿಂದೂ ಜಾತೀಯವಾದಿಗಳು ದೃಢವಾಗಿ ನಂಬಿರುವರು.

ಈ ಪಾಕಿಸ್ತಾನ ಸೇರಿದಂದಿನ ಸಂದರ್ಭಗಳಾದರೂ ಬಹಳ ಕೌತುಕದ್ದಿವೆ. ಆಗಸ್ಟ್ 15ರ ವರೇಗೆ ಜುನಾಗಡ ಹಿಂದೂಸ್ಥಾನಕ್ಕೆ ಸೇರುತ್ತದೆಂದೇ ಹೆಚ್ಚಿನವರೆಲ್ಲರ ವಿಶ್ವಾಸವಿತ್ತು. ಮತ್ತೆ ಕೆಲವು ದಿನ ಅದು ಪಾಕಿಸ್ತಾನಕ್ಕೆ ಸೇರುತ್ತದೆಂಬ ಗಾಳಿ ವಾರ್ತೆ ಹರಡಿದಾಗ ಜುನಾಗಡದ ಗಜೇಟಿನಲ್ಲಿ ಅದು ಸುಳ್ಳೆಂದ ಪ್ರಕಟಿಸಲ್ಪಟ್ಟಿತು. ಗವರ್ನರ್ ಜನರಲ್ಲರ ಕರೆದ ಸಭೆಗೆ ಜುನಾಗಡ ಪ್ರತಿನಿಧಿಗಳ ಹೋಗಿದ್ದು ಭಾರತ ಒಕ್ಕೂಟ ಸೇರುವ ಒಪ್ಪಂದ ಪತ್ರಿಕೆಯ ನಕಲುಗಳನ್ನು ಅವರ ತಮ್ಮ ಸಂಸ್ಥಾನಕ್ಕೆ ಒಯ್ದರು. ಮತ್ತೆ ಕೆಲವೇ ದಿವಸಗಳಲ್ಲಿ ಆ ಪ್ರತಿನಿಧಿಗಳು ಡಿಸ್‌ಮಿಸ್ ಮಾಡಲ್ಪಟ್ಟರು. ಜುನಾಗಡ ಪಾಕಿಸ್ತಾನಕ್ಕೆ ಸೇರುತ್ತದೆಂದು ಅಧಿಕೃತ ಪ್ರಕಟಣೆಯೂ ಮಾಡಲ್ಪಟ್ಟಿತು.

ಜುನಾಗಡ ಪಾಕಿಸ್ತಾನ ಗಡಿಯಿಂದ 500 ಮೈಲು ದೂರದಲ್ಲಿದೆ. ಅದರ ಟಪ್ಪಾಲು ತಂತಿ ರೈಲ್ವೆ ಸಾರಿಗೆಗಳು ಭಾರತ ಸರಕಾರಕ್ಕೊಳಪಟ್ಟಿವೆ. ಅದರ ಪ್ರದೇಶಗಳನೇಕವು ನೆರೆಯ ಸಂಸ್ಥಾನಗಳ ನಡುವಿನಲ್ಲಿವೆ. ಮೇಂಗ್ರೋಲ್ ಮತ್ತು ಬಾಬರಿಯಾ ವಾಡ್ ಎಂಬ ಚಿಕ್ಕ ಜಾಗೀರುಗಳು ಜುನಾಗಡಕ್ಕೆ ಬ್ರಿಟಿಷರಿಂದ ಸೇರಿಸಲ್ಪಟ್ಟವು. ಬ್ರಿಟಿಷರು ಹೋದ ಕೂಡಲೇ ಇವು ಸ್ವಾತಂತ್ರ್ಯವಾಗಿ ಭಾರತ ಒಕ್ಕೂಟಕ್ಕೆ ಸೇರಿದುವು. ಆದರೆ ಜುನಾಗಡದ ಬಂದೂಕುಗಳು ಬೆದರಿಕೆ ಹಾಕಿದುವು. ಭಾರತ ಸರಕಾರ ತನ್ನ ಪೋಲಿಸ್ ಪೌಜನ್ನು ಅದರ ರಕ್ಷಣೆಗೆ ಕಳುಹಿಸಿದೆ. ಇತ್ತ ಪ್ರಜೆಗಳ ಪ್ರತಿ ಸರಕಾರವೂ ಅಲ್ಲಿ ಸ್ಥಾಪನೆಯಾಗಿದೆ. ಪಾಕಿಸ್ತಾನ ಸರಕಾರ ಆಟ ನೋಡುತ್ತಿದೆ. ಈ ಸಮಸ್ಯೆ ತೃಪ್ತಿಕರವಾಗಿ ಬಿಡಿಸಲ್ಪಡದಿದ್ದರೆ ಅನರ್ಥವು ಕಟ್ಟಿಟ್ಟದ್ದು.



ಜೀವನ ಕಾರ್ಯವು ಸಾಂಗವಾಗಿ ನಡೆಯಬೇಕಾದರೆ ನಷ್ಟವಾಗುವ ಶಕ್ತಿಯು ಭರ್ತಿಯಾಗಬೇಕು. ನಿಮ್ಮ ಶೋಭೆಯನ್ನೂ ಕಾಂತಿಯನ್ನೂ ರಕ್ಷಿಸಬೇಕಾದರೆ ನಿಮ್ಮಲ್ಲಿ ಅಂತರಾರೋಗ್ಯವಿರಬೇಕು. ಈ ಬಗ್ಗೆ ನಿಮಗೆ ಬೇಕಾದುದು ಬೈಲ್ ಬೀನ್ಸ್. ಅವುಗಳಿಂದ ನಿಮ್ಮ ದೇಹಾರೋಗ್ಯವು ನೆಟ್ಟಗಾಗುವುದು. ನಿಮ್ಮ ರಕ್ತವು ಪರಿಶುದ್ಧವಾಗುವುದು. ನಿಮ್ಮ ದೇಹದ ವಿಸರ್ಜನಾ ಕಾರ್ಯಗಳು ಸರಿಯಾಗಿ ನಡೆಯುವವು. ಈ ವನಸ್ಪತಿ ಮೂಲ ಮದ್ದಿನಿಂದ ನಿಮಗೆ ಹೊಸ ಹುರುಪು ದೊರಕುವುದು. ಶುಭ್ರ ಲೋಚನಗಳೂ, ನಿಷ್ಕಳ ಚರ್ಮವೂ ನಿಮಗೆ ಒದಗುವವು. ನಿಮ್ಮನ್ನು ಆಕರ್ಷಣೀಯರಾಗಿ ಮಾಡುವುದು.

BILE BEANS

ಶಯನ ಸಮಯ ನಿತ್ಯಲೂ ಸೇವಿಸಿರಿ.

ಕಿರಿಸುದ್ದಿ ಸಂಗ್ರಹ

ಪ್ರಖ್ಯಾತ ಅಮೇರಿಕನ್ ವಿದ್ಯಾಭ್ಯಾಸ ಪ್ರಚಾರಕರೂ ವಿಜ್ಞಾನಿಗಳೂ ಆದ ವಾಶಿಂಗ್ಟನ್ ಕಾರ್ವರ್ ಎಂಬ ನಿಗ್ರೊ ಮಹಾಶಯನ ಗೌರವಾರ್ಥವಾಗಿ ಅಮೇರಿಕನ್ ಟಪ್ಪಾಲು ಖಾತೆಯವರು ಅವನ ಭಾವಚಿತ್ರವುಳ್ಳ ಟಪ್ಪಾಲು ಚೀಟಿಯೊಂದನ್ನು ಬರುವ ತಿಂಗಳಲ್ಲಿ ಚಲಾವಣೆಗೆ ಹಾಕಲಿರುವರು.

✠

ಹತ್ತು ಲಕ್ಷ ಹಣ್ಣುಗಳನ್ನು ಸೆಕುಂಡಿಗೆ ಒಂದರಂತೆ ಲೆಕ್ಕಮಾಡಲು ಒಬ್ಬನಿಗೆ 11½ ದಿವಸಗಳು ಬೇಕಾಗುವವು

✠

ಕೊಯಮುತ್ತೂರಿನ ಧಾರಾಪುರಂ ಎಂಬಲ್ಲಿರುವ ಆನಂದ ಆಶ್ರಮದ ಸ್ವಾಮಿ ಆನಂದ ತೀರ್ಥರು ತಮ್ಮ ಬಳಿಯಲ್ಲಿ ವಿಷ ಹಾವು ಕಡಿತವನ್ನು ಗುಣಪಡಿಸುವ ಚೂರ್ಣವಿದೆಯಾಗಿ ಪ್ರಕಟಿಸಿದ್ದಾರೆ

✠

ಜಗತ್ತಿನ ಅತೀ ದೊಡ್ಡ ಇರುವೆಗಳು ಆಸ್ಟ್ರೇಲಿಯದಲ್ಲಿವೆ ಇವುಗಳ ಗಂಡು ಜಾತಿಯವನ್ನು ಅಮೇರಿಕನ್ ವಿಜ್ಞಾನಿಗಳು ತಮ್ಮ ಪ್ರಯೋಗ ಶಾಲೆಗೆ ತರಿಸಿಕೊಳ್ಳಲೇರ್ಪಡಿಸಿದ್ದಾರೆ ಆಗಲೇ ಒರ್ವ ತಜ್ಞನು ಇವುಗಳ ಒಂದು ಪಾರ್ಸೆಲನ್ನು ತೆಗೆದುಕೊಂಡು ಅಮೇರಿಕಕ್ಕೆ ಹೊರಟಿದ್ದಾನೆ

✠

ಸಂಯುಕ್ತ ಅಮೇರಿಕದ ಕೆಂಟುಕಿ ಪ್ರಾಂತ್ಯದ ಜೈಲಿನಲ್ಲಿ ಜೆಕ್ ರ್ಯಾಟ್ ಎಂಬ ನಿಗ್ರೊ ಕೊಲೆಪಾತಕಿಯನ್ನು ಗಲ್ಲಿಗೇರಿಸಲು ಅಧಿಕಾರಿಗಳು ಮರೆತುಬಿಟ್ಟರೇನೂ ಮರಣದಂಡನೆಯಾದ ಎರಡು ವರ್ಷಗಳ ತನಕ ಅವನನ್ನು ಗಲ್ಲಿಗೇರಿಸಲ್ಪಡಲಿಲ್ಲ ಈಗವನ ಶಿಕ್ಷೆಯನ್ನು ಜನ್ಮಾಂತ ಜೈಲುವಾಸಕ್ಕೆ ಪರಿವರ್ತಿಸಲಾಗಿದೆ

✠

ಸಂಯುಕ್ತ ರಾಷ್ಟ್ರಸಂಘದ ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಉಪಸಂಘದ ಕಾರ್ಯಕಲಾಪಗಳಿಗೆ 70 ಲಕ್ಷ ಎಕ್ಸರ್‌ಸೈಜ್ ಪುಸ್ತಕಗಳೂ 150 ಲಕ್ಷ ಪೆನ್ಸಿಲುಗಳೂ ಬೇಕಾಗುತ್ತವೆ

✠

ಶೇವಂತಿಗೆ ಹೂವುಗಳಲ್ಲಿ 700 ವಿವಿಧ ಜಾತಿಯವುಗಳಿವೆಯಾಗಿ ವಿಜ್ಞಾನಿಗಳಿಗೆ ತಿಳಿದುಬಂದಿದೆ

✠

ಯುದ್ಧಾನಂತರ ಒಂದು ವರ್ಷದಲ್ಲಿ ರಶ್ಯದಲ್ಲಿ ದಾಳಿಗೊಳಗಾದ ಪ್ರದೇಶದಲ್ಲಿ 8 ಲಕ್ಷ ಮನೆಗಳನ್ನು ಕಟ್ಟಲಾಗಿದೆ ಈ ವರ್ಷ ಪುನಃ 12 ಲಕ್ಷ ಮನೆಗಳನ್ನು ಕಟ್ಟಲೇರ್ಪಡಿಸಿದೆ

✠

"ನನ್ನನ್ನು ನೀವು ಕೇವಲ ಕೈಗೊಂಬೆಯನ್ನಾಗಿ ಮಾಡಬಯಸುತ್ತಿರುವಿರಿ" ಹೀಗೆಂದು ಸಂಯುಕ್ತ ಪ್ರಾಂತದ ಲೀಗ್ ಅಧ್ಯಕ್ಷರಾದ ಮಹಮ್ಮದ್ ಇಸ್ಮಾಯೀಲ್ ಖಾನರು ಅಲ್ಲಿರುವ ಲೀಗ್ ದುರೀಣರಿಗೆ ಒಂದು ರಾಜೀನಾಮೆ ಕಳುಹಿಸಿದ್ದಾರೆ

✠

ಅಮೇರಿಕದಲ್ಲೀಗ ಹಲ್ಲು ಮುಲಾಮಿನ ಬದಲಿಗೆ ಹಲ್ಲು ಹುಡಿಯ ಗುಳಿಗೆಗಳನ್ನು ತಯಾರಿಸಿದ್ದಾರೆ ಅದನ್ನು ಕಡಿದರೆ ನೊರೆ ಬರುವುದು, ಆ ಮೇಲೆ ಯಥಾ ಕ್ರಮದಂತೆ ಬ್ರಶ್ಶಿನಿಂದ ಶಿಕ್ಕಿದರಾಯಿತು

ವಾರದ ವಿಜ್ಞಾನ ವರದಿಗಳು

ಮಾತನಾಡುವ ಟ್ಯಾಪ್‌ರ್ಯಾಟರ್

ಟ್ಯಾಪ್ ಮಾಡುವಾಗ ಒತ್ತಲ್ಪಡುವ ಯಾವದೇ ಅಕ್ಷರ ಇಲ್ಲವೆ ಸಂಖ್ಯೆಯನ್ನು ಶಬ್ದದ ಮೂಲಕ ತಿಳಿಸುವ ಒಂದು ಟ್ಯಾಪ್‌ರ್ಯಾಟರ್ ಉಪಕರಣವನ್ನು ಸಂಯುಕ್ತ ಅಮೇರಿಕದ ರೋಡ್ ಐಲೆಂಡಿನ ಒರ್ವ ಯಾಂತ್ರಿಕ ತಜ್ಞನು ರಚಿಸಿರುವನು ಅದರಲ್ಲಿ ಜೋಡಿಸಿರುವ ಒಂದು ರೇಡಿಯೋ ಉಪಕರಣವು ಈ ಕೆಲಸವನ್ನು ಮಾಡುತ್ತದೆ ಈ ಯಂತ್ರವು ಟ್ಯಾಪ್‌ರ್ಯಾಟಿಂಗ್ ಕಲಿಯುವ ಕುರುಡ ಪ್ರಾರಂಭಕರಿಗೆ ಅತ್ಯಂತ ಸಹಾಯಕಾರಿಯೆಂದು ಸಂಶೋಧಕರು ತಿಳಿಸುತ್ತಾರೆ ಇವರು 60 ವರ್ಷದ ಜೋರ್ಜ್ ಕೋಫೆ ಎಂಬವರು

ಚಚೌಕ ಮೊಟ್ಟೆ

ಮೊಟ್ಟೆಗಳನ್ನು ಪರದೇಶಕ್ಕೆ ಕಳುಹಿಸುವಾಗ ಪಾರ್ಸೆಲುಗಳಲ್ಲಿ ಅವುಗಳ ಆಕೃತಿಯಿಂದಾಗಿ ತುಂಬಾ ಸ್ಥಳವು ಅನಾವಶ್ಯಕ ವ್ಯರ್ಥವಾಗುವುದರಿಂದ ಅಮೇರಿಕದ ಡೇವಿಡ್ ಎಡವರ್ಡ್ಸ್ ಎಂಬ ತಜ್ಞನು ಪ್ಲಾಸ್ಟಿಕಿನ ಚಚೌಕ ಪೆಟ್ಟಿಗೆಗಳಲ್ಲಿ ಮೊಟ್ಟೆಗಳೊಳಗಿನ ಆಹಾರ ವಸ್ತುಗಳನ್ನು ಹಾಕಿ ಅವನ್ನು ಗಾಳಿಪ್ರತಿಬಂಧಕವಾಗಿ ಮುಚ್ಚುವ ಪದ್ಧತಿಯೊಂದನ್ನು ಕಂಡುಹಿಡಿದಿರುವನು ಈ ಚಚೌಕಾಕೃತಿಯಿಂದ ತುಂಬ ಸ್ಥಳ ಉಳಿತಾಯವಾಗುವುದಲ್ಲದೆ ಮೊಟ್ಟೆಗಳು ಒಡೆದು ಹೋಗುವ ಸಂಭವವೂ ಇಲ್ಲದಂತಾಗುತ್ತದೆ

ವಿಚಿತ್ರ ಗಾಜು

ಗಾಜು ತಯಾರಿಕೆಯಲ್ಲಾದ ನೂತನ ಪರಿಶೋಧನೆಗಳಿಂದ ಈಗ ಮರದಂತೆ ಸಿಗಿಯಬಹುದಾದ, ಮೊಳೆ ಹೊಡೆಯಬಹುದಾದ, ಮತ್ತು ನೀರಿನಲ್ಲಿ ತೇಲುವಂತಹ ಇಲ್ಲವೆ ರಬ್ಬರಿನಂತೆ ಬಗ್ಗಿಸಲಾಗುವಂತಹ ಗಾಜನ್ನು ತಯಾರಿಸಿರುವರು ಇಂದು ಸಂಯುಕ್ತ ಅಮೇರಿಕದಲ್ಲಿ ಸುಮಾರು 180 ಕಾರ್ಖಾನೆಗಳು ಒಂದು ಸಾವಿರ ನಮೂನೆಯ ಗಾಜುಗಳನ್ನು ತಯಾರಿಸುತ್ತಿವೆ. ಇಷ್ಟೊಂದು ವಿವಿಧ ಜಾತಿಯ ಲೋಹಗಳಿಲ್ಲ ಗಾಜಿನ ಬಲವಾದ ಸ್ಪ್ರಿಂಗುಗಳನ್ನೂ, ಹಲಗೆಗಳನ್ನೂ ಮಾಡಲು ಸಾಧ್ಯವಿದೆಯೆಂದು ಕೆಲವು ಪರಿಶೋಧಕರು ತಿಳಿಸುತ್ತಾರೆ ಅಮೇರಿಕನ್ ತಯಾರಕರು ಸಂಪೂರ್ಣ ಗಾಜಿನ ಹೊದಿಕೆಯಿರುವ ವಿಮಾನವೊಂದನ್ನು ತಯಾರಿಸುವ ಪ್ರಯತ್ನದಲ್ಲಿರುವರು

ಸೂರ್ಯ ಶಕ್ತಿ

ಹ್ಯಾಡ್ರೊಜನ್ ಎಂಬ ಜಲಜನಕ ಅನಿಲ ಅಣುಗಳಿಂದುತ್ಪನ್ನವಾಗುವ ಹಿಲಿಯಂ ಎಂಬ ಅನಿಲದ ಅಣುಗಳಿಂದ ಸೂರ್ಯನ ಬಿಸಿಲಿಗೆ ಅಷ್ಟೊಂದು ಶಕ್ತಿಯಿರಲು ಕಾರಣವೆಂದು ವಿಜ್ಞಾನಿಗಳ ಅಭಿಪ್ರಾಯ ಮೇಲ್ಕಂಡ ಎರಡು ಅನಿಲಗಳನ್ನು ಸಂಯೋಗಗೊಳಿಸಿ ಭೂಮಿಯ ಮೇಲೂ ಅಂತಹದೇ ಸಮಾನ ಶಕ್ತಿಯನ್ನುತ್ಪನ್ನಗೊಳಿಸಬಹುದೆಂದು ಸಂಯುಕ್ತ ಅಮೇರಿಕದ ಮಾಜಿ ಯುದ್ಧ ಮಂತ್ರಿಗಳಾದ ಜೋನ್ ಜೆ ಮೊಕ್ಲ್ಯ ಅವರು ತಿಳಿಸುತ್ತಾರೆ ಹೀಗೆ ಮಾಡಿದರೆ ಇಂದು ಯುರೇನಿಯಮಿನಂಥಾ ಧಾತುವಿನಿಂದ ಪಡೆವ ಅಂತಹ ಎಟಂ ಶಕ್ತಿಗಿಂತಲೂ ಸಾವಿರ ಪಾಲು ಮಿಗಿಲಾದ ಶಕ್ತಿಯನ್ನು ಪಡೆಯಬಹುದೆಂದವರ ವಿಶ್ವಾಸ

ರೇಡಿಯೋ ಪತ್ರಿಕೆ

ರೇಡಿಯೋದಲ್ಲಿ ವರ್ತಮಾನವು ಹೇಳಲ್ಪಡುತ್ತಿರುವಾಗಲೇ ಅದರಲ್ಲಿನ ಶಬ್ದ ಸಂಗ್ರಹಗಳು ಅಚ್ಚಿನಕ್ಷರಗಳಾಗಿ ಪರಿವರ್ತನೆಹೊಂದಿ ಒಂದ ಪತ್ರಿಕೆಯೇ ಮುದ್ರಿತವಾಗಿ ತಯಾರು ಮಾಡಲ್ಪಡುವ ಪರಿಶೋಧನೆಯು ಅಮೇರಿಕದಲ್ಲಿ ನಡೆಯುತ್ತಲಿದೆ ಈ ವಿಧಾನವು ಈಗ ತಂತಿಮೂಲಕ ವಿದ್ಯುತ್ ಕಿರಣಗಳ ಸಹಾಯದಿಂದ ಕಳುಹಿಸಲ್ಪಡುವ ವಿಧಾನದಂತೆಯೇ ಇರುತ್ತದೆ.

ಸೂಕ್ಷ್ಮ ಅಳೆಯುವಿಕೆ

ಮನುಷ್ಯನ ಕೂದಲಿನ ಮುನ್ನೂರನೆ ಒಂದಂಶದಷ್ಟು ಗಾತ್ರವಿರುವ ಸೂಕ್ಷ್ಮ ಸರಿಗೆಗಳನ್ನು ಅಳತೆಮಾಡುವ ಯಂತ್ರವೊಂದನ್ನು ಇಂಗ್ಲೆಂಡಿನ ಒಂದು ಕಾರ್ಖಾನೆಯಲ್ಲಿಡಲಾಗಿದೆ ಇದು ಒಂದು ಇಂಚಿನ ಸಾವಿರನೇ ಒಂದು ಪಾಲಿನ ನೂರನೇ ಒಂದು ಪಾಲನ್ನು ಅಂದರೆ ಇಂಚಿನ ಲಕ್ಷ ಪಾಲಿನ ಒಂದು ಪಾಲನ್ನು ಅಳೆಯುವುದು.

ಗುಲಾಬಿಯ ಅದ್ಭುತ

ಬ್ರಿಟನಿನ ಚೆಶ್ಶೈರ್ ಜಿಲ್ಲೆಯ ಒಂದು ಕೆಥೋಲಿಕ್ ಇಗರ್ಜಿಯ ದೇವ ವಿಗ್ರಹದ ಮೇಲೆ ಇಂದಿಗೆ ಐದು ತಿಂಗಳ ಹಿಂದೆ ಅಲಂಕಾರಕ್ಕಾಗಿ ಇಟ್ಟ ಗುಲಾಬಿ ಹೂವುಗಳು ಇಂದಿಗೂ ಬಾಡದೆ ಇರುವುದನ್ನು ನೋಡಲು ಆಸುಪಾಸಿನ ಜನರು ಗುಂಪು ಗುಂಪಾಗಿ ಹೋಗುತ್ತಿರುವರು ಐದು ತಿಂಗಳ ಹಿಂದೆ ಒರ್ವ 7 ವರ್ಷದ ಬಾಲಕಿಯು ಇದನ್ನು ಮರಿಯಮ್ಮನ ವಿಗ್ರಹದ ತಲೆಯ ಮೇಲೆ ಕಿರೀಟದೋಪಾದಿಯಲ್ಲಿ ಪೋಣಿಸಿ ಇಟ್ಟಿದ್ದಳು ಈ ಗುಲಾಬಿ ಅದ್ಭುತವು ಎಲ್ಲಾ ಪ್ರಾಕೃತಿಕ ವಿಜ್ಞಾನ ನಿಯಮವನ್ನು ಮೀರುವುದರಿಂದ ಅಲ್ಲಿನ ಮುಖ್ಯ ಅರ್ಚಕರು ಅದು ದೇವರ ಕಾರ್ಯವೆಂದೇ ತಿಳಿಸುತ್ತಾರಾದರೂ ಸಸ್ಯ ಶಾಸ್ತ್ರಜ್ಞರು ಮತ್ತು ತೋಟ ತಜ್ಞರು ಆ ಇಗರ್ಜಿಯ ಮುಚ್ಚಿದ ಕಟ್ಟಡ ರಚನೆಯಿಂದಾಗಿ ಅಲ್ಲಿ ಉಂಟಾಗುವ ಸಮಾನ ಪ್ರಮಾಣದ ಶೀತ ಹವೆಯಿಂದ ಹಾಗಾಗಲು ಸಾಧ್ಯವಿದೆಯೆಂದು ವಿವರಣೆ ಕೊಟ್ಟಿರುತ್ತಾರೆ ಇಷ್ಟಾದರೂ ಪರೀಕ್ಷಾರ್ಥವಾಗಿ ಇಗರ್ಜಿಯೊಳಗಿನ ಇತರ ಸ್ಥಳಗಳಲ್ಲಿ ಇರಿಸಲ್ಪಟ್ಟ ನೂರಾರು ಗುಲಾಬಿಗಳು ಒಂದು ವಾರದೊಳಗೆ ಬಾಡಿ ಮುದುಡಿ ಹೋಗಿರುತ್ತವೆ

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಯಾನಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣಗಾಗಿ ಮಂಗ್ಳೂರು–ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ಸಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29-3-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years avialable to you for arranging Insurance Investment

It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY

..nendra Products Limited,

..ATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಹುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಹಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 7—11—1947 [ಸಂಚಿಕೆ 44]

ರಾಮಕೃಷ್ಣ ಪರಮಹಂಸರು ಜಟ್ಟಿಕಾಳಗ ಮಾಡಿದರು

ಆಧ್ಯಾತ್ಮ ಜ್ಞಾನ ದರ್ಶನವನ್ನೀಯುವ ಪ್ರಯತ್ನ

ಶಿಷ್ಯರೊಬ್ಬರ ಪೂರ್ವಸ್ಮರಣೆ

ರಾಮಕೃಷ್ಣ ಪರಮಹಂಸರ ಮುಖ್ಯ ಶಿಷ್ಯರಲ್ಲೊಬ್ಬರಾದ ಸ್ವಾಮಿ ವಿಜಯಾನಂದ ಅವರು ದಕ್ಷಿಣೇಶ್ವರದ ಮಠದಲ್ಲಿನ ಒಂದು ಭಕ್ತ ಮಂಡಳಿಯ ಸಭೆಯಲ್ಲಿ ಭಾಷಣ ಕೊಡುತ್ತ ತಮ್ಮ ಮತ್ತು ತಮ್ಮ ಗುರುವಿನೊಳಗಾದ ಆಧ್ಯಾತ್ಮಿಕ ಘರ್ಷಣೆಯೊಂದರ ಘಟನೆಯನ್ನು ವಿವರಿಸಿದರು.

"ಪರಮಹಂಸರು ನನ್ನನ್ನೊಂದು ಜಟ್ಟಿಕಾಳಗಕ್ಕೆ ಆಹ್ವಾನಿಸಿದರು. ನನಗಾಗ ಕೇವಲ ಹದಿನೆಂಟು ವರ್ಷ ಪ್ರಾಯವಿದ್ದು ಕಲ್ಕತ್ತದ ಕೋಲೇಜೊಂದರಲ್ಲಿ ನಾನು ಕಲಿಯುತ್ತಿದ್ದೆ. ಒಂದು ದಿನ ಮಧ್ಯಾಹ್ನ ನಾವು ಕೆಲವರು ಗುರುಗಳನ್ನು ನೋಡಲು ದಕ್ಷಿಣೇಶ್ವರಕ್ಕೆ ಹೋದೆವು. ಅಲ್ಲಿ ಮುಟ್ಟಲು ಅವರ ಕೋಣೆಯು ಜನಸ್ತೋಮದಿಂದ ಕಿಕ್ಕಿರಿದುದನ್ನು ಕಂಡೆವು. ವಂದಿಸುತ್ತಾ ನಾವೊಂದು ಮೂಲೆಯಲ್ಲಿ ಕುಳಿತೆವು. ಒಂದು ಮಂಚದ ಮೇಲೆ ಕುಳಿತು ಗುರುಗಳು ಜನರೊಡನೆ ಸಂತೋಷ ಚಿತ್ತದಿಂದ ಮಾತನಾಡುತ್ತಿದ್ದರು. ಕುಳಿತಲ್ಲಿಂದಲೇ ನಾವು ಅವರ ಮಾತುಕತೆಗಳನ್ನು ಕೇಳುತ್ತ ಅತ್ಯಾನಂದವನ್ನನುಭವಿಸಿದೆವು. ಧೀರ್ಘ ಅವಧಿಯ ತನಕ ಅವರ ಸಾನಿಧ್ಯ ಲಾಭವು ನಮಗಾಯಿತು.

ಸ್ಫೂರ್ತಿಗೊಂಡೆವು

ಆದರೆ ನನಗೆ ಅವರ ಮಾತುಕತೆಗಳನ್ನು ಕೇಳುವುದಕ್ಕಿಂತ ಅವರನ್ನು ನೋಡುವುದರಲ್ಲೇ ಹೆಚ್ಚು ಆನಂದವಾಗುತ್ತಿತ್ತು. ನಾನವರೊಂದಿಗೆ ಏನನ್ನು ಕೇಳಲಿಲ್ಲ, ಅವರು ನನಗೆ ಏನನ್ನು ಹೇಳಲಿಲ್ಲ. ಕ್ರಮೇಣ ಎಲ್ಲರೂ ಆ ಕಡೆ ಈ ಕಡೆ ಹೊರಟು ಹೋದರು. ನಾನು ಮತ್ತು ಗುರುಗಳು ಮಾತ್ರ ಉಳಿದೆವು. ಕೂತಲ್ಲಿಂದಲೇ ಅವರು ದೃಷ್ಟಿಯನ್ನು ನನ್ನತ್ತ ಹೊರಳಿಸಿದರು. ಹೊರಡಲನುವಾಗಿ ನಾನವರ ಅನುಮತಿ ಕೇಳುತ್ತ ಅಭಿವಂದಿಸಿದೆ. ಆಗವರು ನನಗೆ ಕೌತುಕವಾಗುವಂತೆ "ನಿನಗೆ ಕುಸ್ತಿಯಾಡಲು ಬರುತ್ತದೆಯೆ? ಬಾ, ನನ್ನೊಡನೆ ಜಟ್ಟಿ ಕಾಳಗ ಮಾಡಬಲ್ಲೆಯಾ? ಒಂದು ಕೈ ನೋಡೋಣವೆ" ಎಂದರು. ನಂತರ ಕೂಡಲೇ ನೆಲದ ಮೇಲೆ ನಿಂತು ನನ್ನನ್ನವರು ಆಹ್ವಾನಿಸಿದರು. ನನ್ನ ಶರೀರವಾದರೂ ಆ ಸಮಯದಲ್ಲಿ ಬಲಿಷ್ಠವಾಗಿದ್ದು ಓರ್ವ ಜಟ್ಟಿಯಂತೆ ತೋರುತ್ತಿದ್ದೆ. ಆದರೆ ಗುರುಗಳ ಈ ತರದ ವರ್ತನದಿಂದ ಕಂಗಾಲಾದ ನಾನು "ಇವರೆಂತಹ ಸಾಧುಗಳು? ನಾನೆಂತಹ ಸನ್ಯಾಸಿಗಳನ್ನು ನೋಡಬಂದೆ? ನನ್ನೊಡನೆ ಈತ ಜಗಳಾಡಬಯಸುತ್ತಾನೆ!" ಎಂದು ಕೊಂಡೆ.

ಇದೇ ಸಮಯಕ್ಕೆ ಗುರುಗಳು ಜಟ್ಟಿಯ ಕುಸ್ತಿ ಭಾವದಲ್ಲಿ ನಿಂತು ನನ್ನನ್ನು ನಿರೀಕ್ಷಣೆ ಮಾಡುತ್ತಿದ್ದರು. ಮೆಲ್ಲನೆ ಅವರು ನನ ಬಳಿಗೆ ಬರುತ್ತ ನನ್ನ ಕೈಗಳನ್ನು ಹಿಡಿದು ಹಿಂದಕ್ಕೆ ತಳ್ಳಲು ಪ್ರಯತ್ನಿಸಿದರು. ಆದರೆ ನನ್ನೊಡನೆ ಅವರಿಗೆಲ್ಲಿ ಸರಿಸಾಟಿ! ಸುಲಭವಾಗಿ ನಾನವರನ್ನು ಒಂದು ಮೂಲೆಗೆ ತಳ್ಳಿ ಬಿಟ್ಟು ಒತ್ತಿ ಹಿಡಿದೆ. ಆಗಲೂ ಗುರುಗಳು ಮುಗುಳ್ನಗೆಯುಳ್ಳವರಾಗಿದ್ದು ನನ್ನ ಕೈಗಳನ್ನು ಹಿಡಿದಿದ್ದರು. ಆದರೆ ಯಾವುದೋ ಒಂದು ವಿದ್ಯುತ್ ಪ್ರವಾಹವು ಅವರ ಕೈಯೊಳಗಿಂದ ನನ್ನ ದೇಹದೊಳಗೆ ಪ್ರವೇಶಿಸಿದಂತೆ ನನಗೆ ಭಾಸವಾಯಿತು. ನನಗೆ ರೋಮಾಂಚವಾಯಿತು. ನಿಂತಲ್ಲೇ ನಾನು ನಿರ್ಬಲಗೊಂಡಂತವನಾಗಿ ಶರಣಾಗತ ಸ್ಥಿತಿಗೆ ಬಂದೆ.

ಸ್ವಲ್ಪ ಸಮಯದ ನಂತರ ಅವರು ನನ್ನ ಕೈಗಳನ್ನು ಬಿಟ್ಟು ನಗುತ್ತ "ನನ್ನನ್ನು ಸೋಲಿಸಿದೆಯಲ್ಲವೆ?" ಎಂದು ಪ್ರಶ್ನಿಸಿದರು. ಹೀಗೆನ್ನುತ್ತ ಅವರು ಮೊದಲಿನಂತೆ ತಮ್ಮ ಮಂಚದ ಮೇಲೆ ಕುಳಿತರು. ಅದಕ್ಕೆ ಉತ್ತರವನ್ನು ಕೊಡಲು ನಾನು ಕೇವಲ ಅಸಮರ್ಥನಾಗಿ ಹೋಗಿದ್ದೆ. ಅದೇ ಸಮಯಕ್ಕೆ ನನ್ನ ಹೃದಯದಲ್ಲಿ ಅವರ್ಣನೀಯವಾದೊಂದು ಆನಂದಲಹರಿಯು ಓಲಾಡುತ್ತಿತ್ತು. ನಾನವರನ್ನು ಶಾರೀರಿಕ ಶಕ್ತಿಯಿಂದ ಸೋಲಿಸಿದರೂ ಅವರು ತಮ್ಮ ಆಧ್ಯಾತ್ಮಿಕ ಶಕ್ತಿಯಿಂದ ನನ್ನನ್ನು ಜಯಿಸಿದರೆಂದು ನನಗೆ ವಿದಿತವಾಗತೊಡಗಿತು. ಆ ದಿಗ್ಭ್ರಾಂತಾವಸ್ಥೆಯಲ್ಲಿ ಅವರು ನನ್ನ ಬಳಿಗೆ ಬಂದು ಬೆನ್ನು ಚಪ್ಪರಿಸುತ್ತ 'ಯಾವಾಗಲೂ ಇಲ್ಲಿಗೆ ಬಂದು ಹೋಗುತ್ತಲಿರು. ಒಂದು ಸಲ ಇಲ್ಲಿ ಬರುವುದರಿಂದ ಏನು ಪ್ರಯೋಜನ?' ಎಂದು ಕೇಳಿದರು. ಆ ಮೇಲೆ ಅವರು ತಿನ್ನಲು ನನಗೆ ಸ್ವಲ್ಪ ಪ್ರಸಾದವನ್ನು ಕೊಟ್ಟರು. ಆ ದಿವಸದ ಮಟ್ಟಿಗೆ ನಾನವರ ಅನುಮತಿ ಪಡೆದು ಕಲ್ಕತ್ತಕ್ಕೆ ಬಂದೆ. ಆದರೆ ಸ್ವಲ್ಪ ಸಮಯದಲ್ಲೇ ಗುರುಗಳು ನನ್ನಲ್ಲಿ ಸತ್ಪರಿವರ್ತನೆ ಮಾಡಿರುವರೆಂದೂ, ನನ್ನಲ್ಲಿ ಅಧ್ಯಾತ್ಮಿಕ ಶಕ್ತಿ ತುಂಬಿರುವರೆಂದೂ ನನಗೆ ಸ್ಪಷ್ಟವಾಯಿತು.

FOR ALL CLASSES OF INSURANCE

LIFE-FIRE-MARINE-ACCIDENT.

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA ASSURANCE CO. LTD.

(H. O. BOMBAY)

A Tata's Promotion & India's Largest Composite Insurance Office.

Total Assets - - - About 9 Crores.

For Agency and other particulars:-

Apply to

K. GANAPATHI Esq.,	K. N. NAYAK, Esq.,
Branch Manager.	*Secretary, Sub Office*
4/5, First Line Beach,	Hampankatta,
MADRAS.	MANGALORE.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years avialable to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೋ· ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 7—11—1947 [ಸಂಚಿಕೆ 44]

ರಾಮಕೃಷ್ಣ ಪರಮಹಂಸರು ಜಟ್ಟಿಕಾಳಗ ಮಾಡಿದರು

ಅಧ್ಯಾತ್ಮ ಜ್ಞಾನ ದರ್ಶನವನ್ನೀಯುವ ಪ್ರಯತ್ನ

ಶಿಷ್ಯರೊಬ್ಬರ ಪೂರ್ವಸ್ಮರಣೆ

ರಾಮಕೃಷ್ಣ ಪರಮಹಂಸರ ಮುಖ್ಯ ಶಿಷ್ಯರಲ್ಲೊಬ್ಬರಾದ ಸ್ವಾಮಿ ವಿಜಯಾನಂದ ಅವರು ದಕ್ಷಿಣೇಶ್ವರದ ಮಠದಲ್ಲಿ ಒಂದು ಭಕ್ತ ಮಂಡಳಿಯ ಸಭೆಯಲ್ಲಿ ಭಾಷಣ ಕೊಡುತ್ತ ತಮ್ಮ ಮತ್ತು ತಮ್ಮ ಗುರು ಮಿನೊಳಗಿನ ಆಧ್ಯಾತ್ಮಿಕ ಘರ್ಷಣೆಯೊಂದರ ಘಟನೆಯನ್ನು ವಿವರಿಸಿದರು.

"ಪರಮಹಂಸರು ನನ್ನನ್ನೊಂದು ಜಟ್ಟಿ ಕಾಳಗಕ್ಕೆ ಆಹ್ವಾನಿಸಿದರು. ನನಗಾಗ ಕೇವಲ ಹದಿನೆಂಟು ವರ್ಷ ಪ್ರಾಯವಿದ್ದು ಕಲ್ಕತ್ತದ ಕಾಲೇಜೊಂದರಲ್ಲಿ ನಾನು ಕಲಿಯುತ್ತಿದ್ದೆ. ಒಂದು ದಿನ ಮಧ್ಯಾಹ್ನ ನಾವು ಕೆಲವರ ಗುರು ಜನ್ನು ಸಂದರ್ಶಿಸಲು ದಕ್ಷಿಣೇಶ್ವರಕ್ಕೆ ಹೋದೆವು. ಅಲ್ಲಿ ಮೃತ್ತಿ ಅವರ ಕೋಣೆಯು ಜನಸಂದಣಿಯಿಂದ ಕಿಕ್ಕಿರಿಯುದನ್ನು ಕಂಡೆವು. ವಂದಿಸುತ್ತಾ ನಾವೊಂದು ಮೂಲೆಯಲ್ಲಿ ಕುಳಿತೆವು. ಒಂದು ಮಂಚದ ಮೇಲೆ ಕುಳಿತು ಗುರುಗಳು ಜನರೊಡನೆ ಸಂತೋಷ ಚಿತ್ತದಿಂದ ಮಾತನಾಡುತಿದ್ದರು. ಕುಳಿತಲ್ಲಿಂದಲೇ ನಾವು ಅವರ ಮಾತುಕತೆಗಳನ್ನು ಕೇಳುತ್ತ ಅತ್ಯಾನಂದವನ್ನನುಭವಿಸಿದೆವು. ದೀರ್ಘ ಅವಧಿಯ ತನಕ ಅವರ ಸಾನಿಧ್ಯ ಲಾಭವು ನಮಗಾಯಿತು.

ಸ್ಫೂರ್ತಿಗೊಂಡೆವು

ಆದರೆ ನನಗೆ ಅವರ ಮಾತುಕತೆಗಳನ್ನು ಕೇಳುವುದಕ್ಕಿಂತ ಅವರನ್ನು ನೋಡುವುದರಲ್ಲೇ ಹೆಚ್ಚು ಆನಂದವಾಗುತಿತ್ತು. ನಾನವರೊಂದಿಗೆ ಏನನ್ನು ಕೇಳಲಿಲ್ಲ, ಅವರು ನನಗೆ ಏನನ್ನು ಹೇಳಲಿಲ್ಲ. ಕ್ರಮೇಣ ಎಲ್ಲರೂ ಆ ಕಡೆ ಈ ಕಡೆ ಹೊರಟು ಹೋದರು. ನಾನು ಮತ್ತು ಗುರುಗಳು ಮಾತ್ರ ಉಳಿದೆವು. ಕೂತಲ್ಲಿಂದಲೇ ಅವರು ದೃಷ್ಟಿಯನ್ನು ನನ್ನತ್ತ ಹೊರಳಿಸಿದರು. ಹೊರಡಲನುವಾಗಿ ನಾನವರ ಅನುಮತಿ ಕೇಳುತ್ತ ಅಭಿನಂದಿಸಿದೆ. ಆಗವರ ಮುಖ ಕೌತುಕವಾಗುವಂತೆ "ನಗೆ ಕುಸ್ತಿಯಾಡಲು ಬರುತ್ತದೆಯೆ? ನೀನು ನನ್ನೊಡನೆ ಜಟ್ಟಿ ಕಾಳಗ ಮಾಡಬಲ್ಲೆಯಾ? ಒಮ್ಮೆ ಕೈ ನೋಡೋಣ" ಎಂದರು. ಉತ್ತರ ಕೊಡಲೇ ನೆಲದ ಮೇಲೆ ನಿಂತು ನನ್ನನ್ನವರು ಆಹ್ವಾನಿಸಿದರು. ನನ್ನ ಶರೀರವಾದರೂ ಆ ಸಮಯದಲ್ಲಿ ಬಲಿಷ್ಠವಾಗಿದ್ದು ಓರ್ವ ಜಟ್ಟಿಯಂತೆ ತೋರುತಿದ್ದ. ಆದರೆ ಗುರುಗಳ ಈ ತರದ ವರ್ತನದಿಂದ ಕಂಗಾಲಾದ ನಾನು "ಇವರೆಂತಹ ಸಾಧುಗಳು? ನಾನೆಂತಹ ಸನ್ಯಾಸಿಗಳನ್ನು ನೋಡಬಂದೆ? ನನ್ನೊಡನೆ ಈತ ಜಗಳಾಡಬಯಸುತ್ತಾನೆ!" ಎಂದು ಕೊಂಡೆ.

ಇದೇ ಸಮಯಕ್ಕ ಗುರುಗಳು ಜಟ್ಟಿಯ ಕುಸ್ತಿ ಭಾವದಲ್ಲಿ ನಿಂತು ನನ್ನನ್ನು ನಿರೀಕ್ಷಣೆ ಮಾಡುತಿದ್ದರು. ಮೆಲ್ಲನೆ ಅವರು ನನ ಬಳಿಗೆ ಬರುತ್ತ ನನ್ನ ಕೈಗಳನ್ನು ಹಿಡಿದು ಹಿಂದಕ್ಕೆ ತಳ್ಳಲು ಪ್ರಯತ್ನಿಸಿದರು. ಆದರೆ ನನ್ನೊಡನೆ ಅವರಿಗಲ್ಲ ಸರಿಸಾಟಿ! ಸುಲಭವಾಗಿ ನಾನವರನ್ನು ಒಂದು ಮೂಲೆಗೆ ತಳ್ಳಿ ಬಿಟ್ಟು ಒತ್ತಿ ಹಿಡಿದೆ. ಆಗಲೂ ಗುರುಗಳು ಮುಗುಳ್ನಗೆಯಲ್ಲಿದ್ದು ನನ್ನ ಕೈಗಳನ್ನು ಹಿಡಿದಿದ್ದರು. ಆದರೆ ಯಾವುದೊ ಒಂದು ವಿದ್ಯುತ್ ಪ್ರವಾಹವು ಅವರ ಕೈಯೊಳಗಿಂದ ನನ್ನ ದೇಹದೊಳಗೆ ಪ್ರವೇಶಿಸಿದಂತೆ ನನಗೆ ಭಾಸವಾಯಿತು. ನನಗೆ ರೋಮಾಂಚವಾಯಿತು. ನಿಂತಲ್ಲೇ ನಾನು ನಿರ್ಬಲಗೊಂಡಂತವನಾಗಿ ಶರಣಾಗತ ಸ್ಥಿತಿಗೆ ಬಂದೆ.

ಸ್ವಲ್ಪ ಸಮಯದ ನಂತರ ಅವರು ನನ್ನ ಕೈಗಳನ್ನು ಬಿಟ್ಟು ನಗುತ್ತ "ನನ್ನನ್ನು ಸೋಲಿಸಿದೆಯಲ್ಲವೆ?" ಎಂದು ಪ್ರಶ್ನಿಸಿದರು. ಹೀಗೆನ್ನುತ್ತ ಅವರು ಮಂಚದ ಮೇಲೆ ಕುಳಿತರು. ಆದರೆ ಉತ್ತರವನ್ನು ಕೊಡಲು ನಾನ ಕೇವಲ ಅಸಮರ್ಥನಾಗಿ ಹೋಗಿದ್ದೆ. ಅದೇ ಸಮಯಕ್ಕೆ ನನ್ನ ಹೃದಯದಲ್ಲಿ ಅವರ್ಣನೀಯವಾದೊಂದು ಆನಂದಲಹರಿಯು ಓಲಾಡುತಿತ್ತು. ನಾನವರನ್ನು ಶಾರೀರಿಕ ಶಕ್ತಿಯಿಂದ ಸೋಲಿಸಿದರೂ ಅವರು ತಮ್ಮ ಆಧ್ಯಾತ್ಮಿಕ ಶಕ್ತಿಯಿಂದ ನನ್ನನ್ನು ಜಯಿಸಿದರೆಂದು ನನಗೆ ವಿದಿತವಾಗತೊಡಗಿತು. ಆ ದಿಗ್ಮೂಢಾವಸ್ಥೆಯಲ್ಲಿ ಅವರು ನನ್ನ ಬಳಿಗೆ ಒಂದು ಬೆನ್ನು ಚಪ್ಪರಿಸುತ್ತ 'ಯಾವಾಗಲೂ ಇಲ್ಲಿಗೆ ಬಂದು ಹೋಗುತ್ತಲಿರು. ಒಂದು ಸಲ ಇಲ್ಲಿ ಬರುವುದರಿಂದ ಏನು ಪ್ರಯೋಜನ?' ಎಂದು ಹೇಳಿದರು. ಆ ಮೇಲೆ ಅವರು ತಿನ್ನಲು ನನಗೆ ಸ್ವಲ್ಪ ಪ್ರಸಾದವನ್ನು ಕೊಟ್ಟರು. ಆ ದಿವಸದ ಮಟ್ಟಿಗೆ ನಾನವರ ಅನುಮತಿ ಪಡೆದು ಕಲ್ಕತ್ತಕ್ಕೆ ಬಂದೆ. ಆದರೆ ಸ್ವಲ್ಪ ಸಮಯದಲ್ಲಿ ಗುರುಗಳು ನನ್ನಲ್ಲಿ ಸತ್ಪರಿವರ್ತನೆ ಮಾಡಿರುವರೆಂದೂ, ನನ್ನಲ್ಲಿ ಅಧ್ಯಾತ್ಮಿಕ ಶಕ್ತಿ ತುಂಬಿರುವರೆಂದೂ ನನಗೆ ಸ್ಪಷ್ಟವಾಯಿತು.

FOR ALL CLASSES OF INSURANCE

LIFE-FIRE-MARINE-ACCIDENT

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA ASSURANCE CO. LTD.

(H O BOMBAY)

❋

A Tata's Promotion & India's Largest Composite Insurance Office.

Total Assets - About 9 Crores.

For Agency and other particulars:-

Apply to

K. GANAPATHI Esq.,	K. N. NAYAK, Esq.,
Branch Manager.	*Secretary, Sub Office*
4/5, First Line Beach,	Hampankatta,
MADRAS.	MANGALORE

ಎಲ್ಲಾ ಭಾರತೀಯರಿಗೂ ಉದ್ಯೋಗ ಭರವಸೆಯಿರಬೇಕು

ನಮ್ಮ ಜನತೆಯ ಜೀವನಮಟ್ಟವೇರಿಸಬೇಕು

ಕೇಂದ್ರ ಮಜೂರ ಮಂತ್ರಿಗಳ ಪಂಚವಾರ್ಷಿಕ ಯೋಜನೆ

ಭಾರತದ ಮಾತ್ರವಲ್ಲ ಅತಿ ಜನನಿಬಿಡವಾದ ಏಸ್ಯಾಖಂಡದ ಜನತೆಯದೇ ಜೀವನ ಮಟ್ಟವನ್ನೇರಿಸುವ ಆವಶ್ಯಕತೆ ಮತ್ತು ಪ್ರಾಮುಖ್ಯತೆಗಳನ್ನು ಪಂಡಿತ ಜವಾಹರಲಾಲ್ ನೆಹುರುಗಳು ಡಿಲ್ಲಿಯಲ್ಲಿ ಸೇರಿದ ಏಸ್ಯದ ಪ್ರಾದೇಶಿಕ ಮಜೂರ ಪರಿಷತ್ತಿನಲ್ಲಿ ಒತ್ತಿ ತಿಳಿಸಿದರು. ಮಜೂರರಿಗೆ ಸಂಪೂರ್ಣ ಉದ್ಯೋಗ ಮತ್ತು ಜೀವನ ಭರವಸೆಗಳನ್ನು ಕೊಡುವ ಮಜೂರ ಮಂತ್ರಿ ಜಗಜ್ಜೀವನರಾಮರ ಯೋಜನೆಯನ್ನು ಆ ಪರಿಷತ್ತಿನಲ್ಲಿ ವಿವರಿಸಲಾದಂತೆ ಅದರ ಸಾರಾಂಶವು ಈ ಕೆಳಗೆ ಕೊಡಲ್ಪಟ್ಟಿದೆ:

ಜೀವನ ಯೋಗ್ಯ ಮಜೂರಿ, ತೃಪ್ತಿಕರ ಮಜೂರ ವಾತಾವರಣ. ಉನ್ನತ ಜೀವನ ಮಟ್ಟ, ಸಾಮಾಜಿಕ ಭದ್ರತೆ, ಮತ್ತು ಔದ್ಯೋಗಿಕ ನೆಮ್ಮದಿಗಳನ್ನುಂಟು ಮಾಡುವುದು 1946ರಲ್ಲಿ ಮಜೂರ ಮಂತ್ರಿ ಜಗಜ್ಜೀವನರಾಮರು ಸೂಚಿಸಿದ ಪಂಚವಾರ್ಷಿಕ ಯೋಜನೆಯ ಮೂಲ ಉದ್ದೇಶಗಳಾಗಿವೆ.

ಈ ಯೋಜನೆಯು ಸುವ್ಯವಸ್ಥಿತ ಕಾರ್ಖಾನೆಯೊಳಗಿನ ಶ್ರಮಾಳುಗಳಿಗೆ ಮಾತ್ರವಲ್ಲ ಕೃಷಿಗಾರಿಕೆ, ವಾಣಿಜ್ಯ ವ್ಯವಹಾರಗಳಲ್ಲಿರುವ ಕೆಲಸಗಾರರಿಗೂ ಅನ್ವಯಿಸುತ್ತದೆ. ಪ್ರಾಂತ್ಯ ಮತ್ತು ಸಂಸ್ಥಾನಗಳ ಎಲ್ಲಾ ಮಜೂರ ಮಂತ್ರಿಗಳ ಪುರಸ್ಕಾರವೂ ಈ ಯೋಜನೆಗೆ ದೊರಕಿರುವುದು ಮಾತ್ರವಲ್ಲ ಮಜೂರ ಮಾಲಕ ಪ್ರತಿನಿಧಿಗಳೂ ಇದನ್ನು ಸ್ವಾಗತಿಸಿರುವರು

ಆರೋಗ್ಯ ವಿಮೆ

ಈ ಪಂಚ ವಾರ್ಷಿಕ ಯೋಜನೆಯ ಮುಖ್ಯೋದ್ದೇಶವು ಮಜೂರರ ಆರೋಗ್ಯ ಭದ್ರತೆ, ಯೋಗ್ಯ ಮಜೂರಿ, ತರಬೇತಿಯ ಸೌಕರ್ಯ, ನಿವಾಸ ಏರ್ಪಾಡು, ಮುತ್ತು ಔದ್ಯೋಗಿಕ ನೆಮ್ಮದಿಗಳಿಗೆ ಸಂಬಂಧಿಸಿರುತ್ತದೆಂಬುದನ್ನು ಮತ್ತೊಮ್ಮೆ ಹೇಳಬೇಕಾಗುತ್ತದೆ ಕಾರಣ ಇಂದು ಈ ಅತ್ಯಾವಶ್ಯಕ ವಿಷಯಗಳೇ ಅಲಕ್ಷಿಸಲ್ಪಟ್ಟಿದ್ದು ಹೆಚ್ಚಿನ ಮಜೂರ ಅಶಾಂತಿಗೆ ಕಾರಣವಾಗಿದೆ ಈಗಿನ ಮಜೂರ ಶಾಸನವು ಕಾರ್ಖಾನೆಯಲ್ಲಿನ ಕೆಲಸಗಾರರಿಗಲ್ಲದೆ, ಗನಿ, ರೈಲು, ಮೋಟಾರು ಮತ್ತು ವಿಮಾನ ಮೊದಲಾದ ಸಾರಿಗೆ ವ್ಯವಸ್ಥಾಪನೆಯೊಳಗಿನವರಿಗೆಲ್ಲರಿಗೂ ಅನ್ವಯಿಸುವಂತೆ ಅದನ್ನು ವಿಕಸಿತಗೊಳಿಸುವ ವಿಚಾರವೂ ಈ ಯೋಜನೆಯೊಳಗಿದೆ

ಆದರೆ ಸದ್ಯಕ್ಕೆ ಈ ಯೋಜನೆಯಲ್ಲಿ ವಿವರಿಸಲ್ಪಟ್ಟ ಆರೋಗ್ಯ ಭದ್ರತೆಯ ಕುರಿತು ಅವಶ್ಯವಾಗಿ ವಿಮೆಯಿಳಿಸಲ್ಪಡಬೇಕೆನ್ನುವ ಏರ್ಪಾಡು ಕೇವಲ ಕಾರ್ಖಾನೆ ಕೆಲಸಗಾರರಿಗೆ ಅನ್ವಯಿಸುವಂತಹದಾಗಿದೆ. ಕೆಲಸಗಾರರಿಗೆ ವೈದಕೀಯ ಸೌಕರ್ಯವನ್ನೊದಗಿಸುವುದು, ಅನಾರೋಗ್ಯ ಸಮಯದಲ್ಲಿ ದ್ರವ್ಯ ಸಹಾಯವನ್ನೊದಗಿಸುವುದು, ಹೆರಿಗೆ ಸೌಕರ್ಯಗಳನ್ನೇರ್ಪಡಿಸುವುದು, ಆಕಸ್ಮಾತ್ ಘಟನೆಗಳಲ್ಲಿ ಸಹಾಯವನ್ನು ಕೊಡುವುದು ಮೊದಲಾದ ಸೌಕರ್ಯಗಳು ವಿಶಾಲ ಪ್ರಮಾಣದಲ್ಲಿ ಸ್ಥಾಪಿಸಬೇಕೆಂದೂ ಈ ಯೋಜನೆಯು ಒತ್ತಾಯಪಡಿಸುತ್ತದೆ. ಈಗಾಗಲೇ ಒಂದು ಮಸೂದೆಯು ಪ್ರಕಟಿಸಲ್ಪಟ್ಟಿದ್ದು ಸದ್ಯದಲ್ಲೇ ಅದು ಶಾಸನವಾಗುವುದು. ಈ ಯೋಜನೆಗೆ ಕೇಂದ್ರ ಮತ್ತು ಪ್ರಾಂತಿಯ ಸರಕಾರಗಳ ಧನ ಸಹಾಯವಲ್ಲದೆ ಮಜೂರ ಮಾಲಕ ಸಂಘಗಳಿಂದಲೂ ಆರ್ಥಿಕ ಸಹಾಯವು ಕೊಡಲ್ಪಡುವುದು.

ಮಜೂರಿ ಮತ್ತು ಸಹಾಯ ನಿಧಿ

ಸಾಧ್ಯವಿದ್ದಷ್ಟು ಎಲ್ಲಾ ವರ್ಗದ ಮಜೂರರಿಗೆ ಹೆರಿಗೆ ಸೌಕರ್ಯಗಳನ್ನೊದಗಿಸಲು, ಮತ್ತು ಹೆರಿಗೆ ಕಾಲದಲ್ಲಿ ಧನ ಸಹಾಯವನ್ನು ನೀಡಲು ಒತ್ತಾಯ ಪಡಿಸುವಂತೆ ಈಗಿರುವ ಆ ಕುರಿತಾದ ಶಾಸನವನ್ನು ಪುನರಾವರ್ತಿಸಲಾಗುವುದು

ಮಜೂರ ಮಾಲಕರೊಳಗೆ ಯೋಗ್ಯ ಮಜೂರಿಯ ಕುರಿತು ಒಪ್ಪಂದವೊಂದನ್ನುಂಟುಮಾಡುವುದು ಸರಕಾರದ ಉದ್ದೇಶವಿರುತ್ತದೆ. ಕನಿಷ್ಠ ಪ್ರಮಾಣದ ಮಜೂರಿಯನ್ನು ನಿರ್ಧರಿಸುವ ಒಂದು ಮಸೂದೆಯು ಈಗ ಶಾಸನ ಸಭೆಯ ಮುಂದಿದೆ. ಉದ್ಯೋಗ ಶರ್ತಗಳು ಎಲ್ಲಾ ಕಡೆಗಳಲ್ಲೂ ಒಂದೇ ಸಮನಾಗಿರುವಂತೆಯೂ, ಅದೇ ರೀತಿ ಮಜೂರಿ ಪ್ರಮಾಣವೂ ಏಕ ಪ್ರಕಾರದ ಮಟ್ಟದ್ದಾಗಿರುವಂತೆಯೂ, ಅಲ್ಲದೆ ಅಧಿಕ ಬೆಲೆಯ ಭತ್ತೆಯೂ ಒಂದೇ ರೀತಿಯಾಗಿ ಕೊಡಲ್ಪಡುವಂತೆಯೂ ಮಾಡುವ ಉದ್ದೇಶವು ಈ ಪಂಚ ವಾರ್ಷಿಕ ಯೋಜನೆಯೊಳಗಿದೆ ಸರಕಾರ, ಮಾಲಕ ಮತ್ತು ಮಜೂರ ಪ್ರತಿನಿಧಿಗಳ ತ್ರಿಪಕ್ಷ ಸಮಿತಿಯೊಂದು ನ್ಯಾಯ ಸಮ್ಮತವಾದ ಮಜೂರಿಯನ್ನು ಯಶಸ್ವಿಯಾಗಿ ನಿರ್ಣಯಿಸಲು ಪ್ರಯತ್ನಿಸುವುದು.

ಉದ್ಯೋಗ ಶರ್ತಗಳು

ಕೆಲಸಗಾರರಿಗೆ ಅನ್ವಯಿಸುವ ಉದ್ಯೋಗ ಶರ್ತಗಳು ಹೀಗಿರಬೇಕೆಂದು ಉದ್ದೇಶವಿದೆ: ಗನಿಗಳಲ್ಲಿ ದಿನಕ್ಕೆ 8 ಗಂಟೆ ಕಾಲದ ಅವಧಿ, ಅಲ್ಲಿ ಬೆಳಕು, ಗಾಳಿ, ರಕ್ಷಣೋಪಾಯ, ಆರೋಗ್ಯ, ಮತ್ತು ಮಜೂರ ಅಭಿವೃದ್ಧಿಗಳ ಸೌಕರ್ಯವನ್ನೊದಗಿಸಲು ಈಗಿನ ಶಾಸನವನ್ನು ತಿದ್ದಲಾಗುವುದು ಗನಿ, ವಾಣಿಜ್ಯ ಮತ್ತು ವಾಹನ ಸಾರಿಗೆ ಕ್ಷೇತ್ರಗಳಲ್ಲಿರುವ ಕೆಲಸಗಾರರಿಗೆ ವಿರಾಮ ಕಾಲ, ಸಂಬಳ ಸಮೇತವಾದ ರಜಾ ದಿನಗಳ ಕುರಿತು ಯೋಗ್ಯ ಸವಲತ್ತು ಸಿಗುವಂತೆ ಶಾಸನವನ್ನು ಮಾಡಲಾಗುವುದು ಈ ಶಾಸನಗಳನ್ನು ತೃಪ್ತಿಕರವಾಗಿ ನಿರ್ವಹಿಸುವಂತೆ ನೋಡಲೂ ಯೋಗ್ಯ ಪರಿಶೀಲನಾ ಶಾಖೆಯೂ ಸ್ಥಾಪಿಸಲ್ಪಡುವುದು ಸುವ್ಯವಸ್ಥಿತ ವ್ಯವಸ್ಥಾಪನೆಯಿಲ್ಲದ ಕೈಗಾರಿಕೆಗಳಲ್ಲಿರುವ ಕೆಲಸಗಾರರ ಪರಿಸ್ಥಿತಿಯನ್ನು ಸುಧಾರಿಸಲು ಇವಿಷ್ಟು ಕಾರ್ಯಕಲಾಪಗಳು ಜಾರಿಗೆ ಬರುತ್ತವೆ

ಕಂಟ್ರಾಕ್ಟು ಪದ್ಧತಿ ರದ್ದು

ಉದ್ಯೋಗದ ಅವಧಿಯ ಕುರಿತು ಭದ್ರತೆಯನ್ನುಂಟುಮಾಡಲು ಎಲ್ಲಾ ವಿಧದ ಮಜೂರರು ಒಂದು ಪರಸ್ಪರ ಉದ್ಯೋಗ ನಿಯಂತ್ರಣದ ಸಂಸ್ಥೆಯೊಂದನ್ನು ಸ್ಥಾಪಿಸಲಾಗುವುದು. ಮಜೂರ ಮಾಲಕರೊಳಗೆ ಆಗಬೇಕಾದ ಉದ್ಯೋಗ ಶರ್ತಗಳ ಕುರಿತು ಈ ಸಂಸ್ಥೆಗೆ ತಕ್ಕ ಏರ್ಪಾಡು ಮಾಡುವುದು. ಮಾಲಕರು ಯಾವ ರೀತಿಯಲ್ಲೂ ಶ್ರಮಾಳುಗಳ ಮಜೂರಿಯನ್ನು ವಂಚಿಸದಂತೆಯೂ ಶಾಸನವನ್ನು ಮಾಡಲಾಗುವುದು.

ಮಜೂರ ಸಂಘಗಳು ಆರೋಗ್ಯದಾಯಕ ಚಟುವಟಿಕೆ ಚಳವಳಿಗಳನ್ನು ಗೆಯ್ಯುವಂತೆ ನೋಡಿ ಕೊಳ್ಳಲೂ ಪ್ರತ್ಯೇಕ ಶಾಸನ ಮಾಡಲಾಗುವುದು. ಮಜೂರ ಮಾಲಕರೊಳಗಿನ ವಿವಾದಗಳನ್ನು ತೀರ್ಮಾನಿಸಲೂ ಇದರಲ್ಲಿ ಆಸ್ಪದವಿಡಲಾಗುವುದು. ದಿನನಿತ್ಯದ ಕೆಲಸದಲ್ಲಿ ಅಡ್ಡಿ ಆತಂಕಗಳುತ್ಪನ್ನವಾಗದೆ ಮಜೂರಿಗೆ ತೃಪ್ತಿಯನ್ನುಂಟುಮಾಡುವುದೂ ಇದರ ಉದ್ದೇಶವಾಗಿದೆ

ಜೀವನ ಯೋಗ್ಯ ಮಜೂರಿ

ಪಂಚ ವಾರ್ಷಿಕ ಯೋಜನೆಯಲ್ಲಿ ಮಜೂರ ಕೇಂದ್ರಗಳಲ್ಲಿ ಊಟ ತಿಂಡಿಯ ಏರ್ಪಾಡಿರಬೇಕಾದ ಆವಶ್ಯಕತೆ, ಶಿಕ್ಷಣ ಮತ್ತು ವಿಹಾರ ಸೌಕರ್ಯದ ಆವಶ್ಯಕತೆ ಮತ್ತು ಆರೋಗ್ಯ ಪ್ರಚಾರ ಕೇಂದ್ರಗಳ ಆವಶ್ಯಕತೆಗಳನ್ನು ಒತ್ತಿ ಹೇಳಿದೆ

ಮಜೂರರ ಜೀವನ ಯೋಗ್ಯ ವೇತನವನ್ನು ಗಳಿಸಲೂ, ನಿವಾಸ ಗೃಹಗಳನ್ನೂ, ವೈಯಕ್ತಿಕ ಸಂರಕ್ಷಣೆಯನ್ನು ಹೊಂದಲೂ, ವಾರದ ಮತ್ತಿತರ ವಿಶ್ರಾಂತಿ ಕಾಲಗಳನ್ನು ಪಡೆಯಲೂ, ಬೇರೆ ಎಲ್ಲಾ ತರದ ಮಜೂರಾಭಿವೃದ್ಧಿಯ ಸೌಕರ್ಯಗಳನ್ನು ಪಡೆಯಲೂ ಅನುಕೂಲವಾಗುವಂತೆ ಮಾಡುವುದು ಈ ಯೋಜನೆಯ ಸಾರಾಂಶವಾಗಿರುವಾಗ ಬಂದರ ಸ್ಥಳ ಕೆಲಸಗಾರರಿಗೂ ಸ್ಥಳೀಕ ಆಡಳಿತಗಳ ಶ್ರಮ ಜೀವಿಗಳಿಗೂ ಇದು ಅನ್ವಯಿಸುವಂತೆ ಜಾಗತೆ ವಹಿಸಲಾಗುವುದು ಈ ಸಂದರ್ಭದಲ್ಲಿ ಕೃಷಿ ಮಜೂರರ ಆದಾಯದ ಕುರಿತು ಅಂಕೆ ಸಂಖ್ಯೆಗಳನ್ನು ಸಂಗ್ರಹಿಸಲೊಂದು ಸಮಿತಿಯು ಏರ್ಪಟ್ಟಿದೆ ರಾಜ್ಯಾಡಳಿತವು ಯೋಜಿಸುವ ಮಜೂರಾಭಿವೃದ್ಧಿಯ ಈ ಸೌಕರ್ಯಗಳು ಎಲ್ಲಾ ತರದ ಮತ್ತು ಹೆಚ್ಚಾಗಿ ಕೃಷಿ ಮಜೂರರಿಗೆ ಅನ್ವಯಿಸುವಂತೇ ನೋಡಿಕೊಳ್ಳಲಾಗುವುದು

'ನಮ್ಮ ಮಜೂರ ಶಾಸನಗಳು ಕಾರ್ಯ ರೂಪಕ್ಕೆ ತರಲಾಗದ ಶೂನ್ಯ ಸೂತ್ರಗಳಾಗದಂತೆಯೂ, ನಮ್ಮ ಮಜೂರ ಆಡಳಿತ ಖಾತೆಯ ಕರ್ತವ್ಯ ನಿರ್ವಹಣಸಾಮರ್ಥ್ಯಕ್ಕೆ ಮಿಕ್ಕಿದುದಾಗಿರಬಾರದಂತೆಯೂ ನೋಡಿಕೊಳ್ಳುವುದು ನಮ್ಮ ಅತ್ಯಾಸಕ್ತಿಯ ಉದ್ದೇಶವಿರುತ್ತದೆ." ಹೀಗೆಂದು ಮಜೂರ ಸಚಿವ ಮಾನ್ಯ ಜಗಜ್ಜೀವನರಾಮ ಅವರು ಭಾರತ ಸರಕಾರದ ಉದ್ದೇಶವನ್ನು ನಿರೂಪಿಸಿದರು ಈಗಾಗಲೇ ಈ ಯೋಜನೆಯ ಸಂಬಂಧವಾದ ಕಾರ್ಯದ ರೂಪರೇಷಗಳು ಅನುಷ್ಠಾನಕ್ಕೆ ತರುವ ಪ್ರಯತ್ನಗಳು ಕೈಕೊಳ್ಳಲಾಗಿವೆ ಮತ್ತು ಐದು ವರ್ಷಗಳಲ್ಲಿವು ತೃಪ್ತಿಕರವಾಗಿ ಪರಿಪೂರ್ಣ ಪಡೆಯುತ್ತವೆಂದೆಲ್ಲರೂ ಹಾರೈಸುವರು

ಶೇಕಡಾ 40ರಷ್ಟು ಕಿವುಡುತನವು ಹಲ್ಲುಬಾಧೆಯುಂಟಾಗುವುದೆಂದು ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಡಾ। ಡೆವಿಡ್ಸ್ ಗುಡ್‌ಫ್ರೆಂಡ್ ಅವರು ತಿಳಿಸುತ್ತಾರೆ.

ಸಮರ್ಥತೆ, ಬಲ, ಶುಭ್ರತೆ ಮತ್ತು ಮನೋಹರತೆ, ಇವುಗಳನ್ನು ಸುಭದ್ರ ಮತ್ತು ಸುಲಭವಾದ ಈ ರೀತಿಯಲ್ಲಿ ನಿಮ್ಮದಾಗಿ ಮಾಡಿಕೊಳ್ಳಬಹುದು ವನಸ್ಪತಿ ಮೂಲಗಳಿಂದ ಸಿದ್ಧವಾಗುವ, ಬ್ಯಾಲ್ ಬೀನ್ಸ್, ಎಂಬ ಈ ಶಕ್ತಿಕಾರಕ ಬೇದಿ ಮದ್ದನ್ನು ಕ್ರಮವಾಗಿ ಸೇವಿಸಿದಲ್ಲಿ ರಕ್ತದಿಂದ ವಿಷವಸ್ತುಗಳು ವಿಸರ್ಜನೆಯಾಗಿ, ಜೀರ್ಣಶಕ್ತಿಯು ವೃದ್ಧಿಯಾಗಿ ನಿಮ್ಮ ಅಂತರ್ಯ ಆರೋಗ್ಯವು ಉತ್ತಮಗೊಳ್ಳುವುದು

ಶುಭ್ರ ಆರೋಗ್ಯದಲ್ಲಿರಬೇಕಾದರೆ, ನಿಮಗೆ ಬ್ಯಾಲ್ ಬೀನ್ಸ್‌ಗಳ ಅವಶ್ಯವಿದೆ ಎಂದು ಸದಾ ಜ್ಞಾಪಕದಲ್ಲಿಡಿರಿ.

ಮಲಗುವ ಮುನ್ನ ಶುದ್ಧ ವನಸ್ಪತಿಯಾದ

BILE BEANS

ಬ್ಯಾಲ್ ಬೀನ್ಸ್‌ಗಳನ್ನು ನಿತ್ಯಲೂ ಸೇವಿಸಿ

ನಂದನವನದಲ್ಲಿ ಕಾಳಸರ್ಪ

ಕಾಶ್ಮೀರೂ ಮುಸ್ಲಿಮ್ ಲೀಗು

ಕಾಶ್ಮೀರೆಂದರೆ ಹಿಂದುಸ್ಥಾನದ ನಂದನವನ–ನೈಸರ್ಗಿಕ ಸೌಂದರ್ಯದ ಬೀಡು–ಭಾರತಮಾತೆಯ ತಲೆಯ ಕಿರೀಟದ ಶುಭ್ರ ಮಣಿ. ಅಲ್ಲೀಗ ಪಾಕಿಸ್ಥಾನದ ಶಸ್ತ್ರಪಾಣಿಗಳಾದ ಪಠಾಣರೂ ಗುಡ್ಡಗಾಡಿನ ಮುಸ್ಲಿಮರೂ ದುರಾಶೆಯಿಂದ ಉನ್ಮತ್ತರಾಗಿ ನುಗ್ಗಿ–ನಿಶ್ಶಸ್ತ್ರರಾದ ಸ್ತ್ರೀಪುರುಷ, ಬಾಲವೃದ್ಧರನ್ನು ಕೊಲೆ, ಲೂಟಿ, ಚಿತ್ರಹಿಂಸೆ, ಅಪಮಾನಗಳಿಗೆ ಗುರಿಮಾಡುತ್ತಿದ್ದಾರೆ

ವಿಸ್ತೀರ್ಣದಲ್ಲಿ ಕಾಶ್ಮೀರು ದೊಡ್ಡದೊಂದು ರಾಷ್ಟ್ರವೆಂದು ಭೂಪಟದಲ್ಲಿ ತೋರಿದರೂ ಅಲ್ಲಿ ಜನನಿಬಿಡತೆ ಇಲ್ಲ, ಹೆಚ್ಚಿನ ಭಾಗವು ಪರ್ವತ ಪ್ರದೇಶವಾಗಿ ಕೃಷಿಗಾಗಲಿ ಮನುಷ್ಯನ ವಾಸ್ತವ್ಯಕ್ಕಾಗಲಿ ಪ್ರಯೋಜನವಿಲ್ಲ. ಆದರೆ ಹಿಂದುಸ್ಥಾನದ ಸ್ವಾತಂತ್ರ್ಯವು ಸಹಜವಾಗಬೇಕಾದರೆ ಕಾಶ್ಮೀರು ಹಿಂದುಸ್ಥಾನದ ವಿರೋಧಿಗಳ ಕೈಯಲ್ಲಿರಬಾರದೆಂಬುದಕ್ಕೆ ಸಂಶಯವಿಲ್ಲ. ಬಲಿಷ್ಠ ಸೋವಿಯಟ್ ರಶ್ಯವೂ ವಿಶಾಲ ಚೀನವೂ ಕಾಶ್ಮೀರದ ಉತ್ತರ ಗಡಿಯಲ್ಲಿ ಹಿಂದುಸ್ಥಾನವನ್ನು ಸ್ಪರ್ಶಿಸುತ್ತಿವೆ. ಕಾಶ್ಮೀರು ಈಗ ಹಿಂದೀ ಯೂನಿಯನ್ನಿಗೆ ಸೇರಿದ್ದರಿಂದ ಹಿಂದುಸ್ಥಾನಕ್ಕೆ ಆ ಕಡೆಯ ಸಂಪರ್ಕ ಉಳಿದ, ಗಡಿನಾಡು ಪ್ರಾಂತ್ಯಕ್ಕೂ ಸೋವಿಯಟ್ ರಶ್ಯಕ್ಕೂ ಚೀನಕ್ಕೂ ಹೋಗಿ ಬರುವದಕ್ಕೆ ಹಿಂದೀ ಯೂನಿಯನ್ನಿಗೆ ದಾರಿಯೊಂದು ಸಹಾ ಉಳಿದುಕೊಂಡಿದೆ

ಪಾಕಿಸ್ತಾನದಲ್ಲಿ ಕಾಶ್ಮೀರ್‌ವನ್ನು ಸೇರಿಸಿಕೊಂಡು, ತಮ್ಮ ಸ್ವಾರ್ಥಕಲುಷಿತ ಮತಾಶೆಯ ಬಲಿಷ್ಠ ಮುಸ್ಲಿಮ್ ರಾಷ್ಟ್ರವನ್ನು ಸುಲಭದಲ್ಲಿ ಸ್ಥಾಪಿಸಿಕೊಳ್ಳಬೇಕೆಂದು ಈ ತನಕ ಲೀಗಿನ ಜಿನಾರ ಕನಸಾಗಿತ್ತು. ಅವರ ಆಶೆಯು ಸಂಪೂರ್ಣವಾಗಿದ್ದರೆ ಹಿಂದುಸ್ಥಾನದ ತಲೆಗೆ ಅವರ ಪಿಸ್ತೂಲಿನ ಗುರಿಯು ಯಾವ ಕಾಲದಲ್ಲಿಯೂ ತಪ್ಪುತ್ತಿದ್ದಿಲ್ಲ. ಪಂಜಾಬ ವಿಭಜನೆಯಾಗದೆ, ಅದು ಪೂರ್ತಿಯಾಗಿ ಪಾಕಿಸ್ತಾನಕ್ಕೆ ದೊರೆತಿದ್ದರೆ ಕಾಶ್ಮೀರು ಪಾಕಿಸ್ತಾನಕ್ಕೆ ಸೇರದೆ [illegible] ಆದರೆ ಪಂಜಾಬಿನ ವಿಭಜನೆಯಿಂದ ಕಾಶ್ಮೀರಿನ ದಕ್ಷಿಣ ಗಡಿಯ ಒಂದಂಶವು ಈಗ ಹಿಂದೀ ಯೂನಿಯನ್ನಿಗೆ ತಾಗಿಕೊಂಡಿರುವ [illegible] ಯಾವ ರಾಷ್ಟ್ರಕ್ಕೆ ತಾನು ಸೇರುವುದೆಂಬ ಸಮಸ್ಯೆಯು ಕಾಶ್ಮೀರಿನ ಮಹಾರಾಜರನ್ನು ಈಗ ಕೆಲವು ತಿಂಗಳುಗಳಿಂದ ಪೀಡಿಸುತ್ತಿತ್ತು

ಕಾಶ್ಮೀರಿನ ಜನರಲ್ಲಿ ಬಹುಮಂದಿ ಮುಸ್ಲಿಮರು ಆದರೆ ಕಾಶ್ಮೀರಿನ ಮುಸ್ಲಿಮರಿಗೂ ಉಳಿದ ಪಾಕಿಸ್ತಾನದ ಮುಸ್ಲಿಮರಿಗೂ ಹೇರಳ ಭೇದವಿದೆ ಪಾಕಿಸ್ತಾನದ ಸಿಂಧೂಪ್ರಾಂತ್ಯದಲ್ಲಿ ಮುಸ್ಲಿಮರು ಸೇರಿದ್ದು ಕ್ರಿ. ಶ 712ರಲ್ಲಿ ಅಲ್ಲಿ ಸೇರಿದವರು ಪೈಗಂಬರನ ನಿಜಭಕ್ತರೂ, ಸ್ವದೇಶವವರೂ ಆದ ನಾಗರೀಕ ಅರಬರು ಪಂಜಾಬು ಗಡಿನಾಡು ಪ್ರಾಂತ್ಯಗಳಲ್ಲಿ ಮುಸ್ಲಿಮ್ ಧಾಳಿಗಳು ಪ್ರಾರಂಭವಾದ್ದು ಹನ್ನೆರಡನೆ ಶತಮಾನದಲ್ಲಿ–ಘಜಿನಿ ಮಾಮೂದನ ಕಾಲದಿಂದ ಪರ್ವತಗಳ ನಡುವೆ ಭದ್ರವಾಗಿರುವ ಕಾಶ್ಮೀರು ಘಜಿನೀ ಮಾಮೂದನ ಕಾಲದಲ್ಲಿಯೂ ತನ್ನ ನೈಸರ್ಗಿಕ ಬಲದಿಂದ ತನ್ನ ಸ್ವಾತಂತ್ರ್ಯವನ್ನಿಟ್ಟುಕೊಂಡಿತ್ತು ಕ್ರಿ. ಶಕ 1587ರಲ್ಲಿ ಮೊಗಲ್ ಬಾದಶಹನಾದ ಅಕ್ಬರನು ಅದನ್ನು ತನ್ನ ವಿಸ್ತಾರವಾದ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳುವ ತನಕ ಅದು ಪಂಜಾಬು, ಢಿಲ್ಲಿಗಳೊಳಗೆ ನುಗ್ಗಿದ ತುರ್ಕ, ಅಫಘಾನ್ ಮೊಂಗೋಲ ರಕ್ತದ ಹೊರ ಮುಸ್ಲಿಮರ ಯವನರ ಬಾಧೆಯಿಂದ ಸುರಕ್ಷಿತವಾಗಿತ್ತು. ಯವನ ಸೈನ್ಯಗಳ ಪಾದಧೂಳಿಯಿಂದ ನಿರಂತರ ಕಳಂಕಿತವಾಗುತ್ತಿದ್ದ ಗಡಿನಾಡು ಪ್ರಾಂತ್ಯ ಪಂಜಾಬುಗಳಲ್ಲಿಯ ಮುಸ್ಲಿಮರಿಗೂ– ಆ ಪಾದಧೂಳಿಯ ಸ್ಪರ್ಶದಿಂದ ದೂರ ಭದ್ರವಾಗಿ ಬೆಳೆದ ಕಾಶ್ಮೀರದ ಮುಸ್ಲಿಮರಿಗೂ ಹೀಗಾಗಿ ನಡೆ, ನುಡಿ, ದೇಹ, ಧ್ಯೇಯಗಳಲ್ಲಿ ಅಜಗಜಾಂತರ ಭೇದಗಳಿದ್ದವು. ಕಾಶ್ಮೀರಿನಲ್ಲಿ ಇಸ್ಲಾಂಮತವು ಕ್ರಿ. ಶ 1330ರಷ್ಟಕ್ಕೆ ಮುಸ್ಲಿಮ್ ಪ್ರಚಾರಕರಿಂದ ಶಾಂತರೂಪದಲ್ಲಿ, ಸ್ವತಂತ್ರರೀತಿಯಿಂದ ತಲೆದೋರಿದ್ದು, ಮೊಗಲ್ ಬಾದಶಹರ ಸಾಮ್ರಾಜ್ಯಕ್ಕೆ ಸೇರಿದ ಬಳಿಕ ಕಾಶ್ಮೀರು ಮೊಗಲ್ ಬಾದಶಹರ ಪ್ರೀತಿಯ ಉಪವನದಂತಿತ್ತು. ಅಲ್ಲಿ ಮುಸ್ಲಿಮರ ಅತ್ಯಾಚಾರಗಳಿಲ್ಲದಿದ್ದುದರಿಂದ ಹಿಂದೂ ಮುಸ್ಲಿಮರು ಸಹಬಾಳ್ವೆಯಿಂದ ಜೀವಿಸಿಕೊಂಡು ಬಂದು ಹಿಂದು ಮುಸ್ಲಿಮ್ [illegible] ಅಲ್ಲಿ [illegible] ಕಾಶ್ಮೀರಿನ ಮುಸ್ಲಿಮರು [illegible] ಅವರಿಗೆ [illegible] ಕಾಶ್ಮೀರಿನ [illegible] ಹಿಂದೂ ಧರ್ಮ ಪ್ರಚಾರಕ [illegible] ಕಾಶ್ಮೀರಿನಲ್ಲಿ ಸುತ್ತಿಕೊಂಡಿದೆ

ಈಗಿನ ಕಾಶ್ಮೀರಿನ ರಾಜಧಾನಿ [illegible] ಶ್ರೀನಗರದ [illegible] ಅಶೋಕನ [illegible] ಶ್ರೀನಗರವೆಂಬ ಹೆಸರಿನ ಹಳೇ ಪಟ್ಟಣದ ಕುರುಹಿದೆ. ಆ ಪಟ್ಟಣವು ಹಾಳುಬಿದ್ದು, ಬಳಿಕ ಈಗಿರುವಲ್ಲಿ ಪಟ್ಟಣವನ್ನು ರಚಿಸುವಾಗ, ಶ್ರೀನಗರವೆಂಬ ಹೆಸರು ಈಗಿನ ಹೊಸ ಪಟ್ಟಣಕ್ಕೆ ಬಂದದ್ದಾಗಿರುತ್ತದೆ. ಮೌರ್ಯರ ಕಾಲದಲ್ಲಿ ಕಾಶ್ಮೀರು ಹಿಂದುಸ್ಥಾನದ ಮುಖ್ಯ ಪ್ರಾಂತ್ಯಗಳಲ್ಲೊಂದಾಗಿತ್ತು. ಮೌರ್ಯ ಅರಸರ ಹಿಂದೂ ಸಾಮ್ರಾಜ್ಯವು ಆಗ ಕಾಶ್ಮೀರಿನ ಆಚೆ ಹಿಂದುಕುಶ್ ಪರ್ವತ ತನಕ ಹರಡಿತ್ತು ಅಶೋಕನ ಬಳಿಕ, 21 ಶತಮಾನಗಳು ಕಳೆದಾದ ಮೇಲೆ, ಆತನ ಉಳಿದ ಸಾಮ್ರಾಜ್ಯವು ಆಂಗ್ಲರ ಸ್ವಾಧೀನ ಹೋದಾಗ ಕಾಶ್ಮೀರು ಧರ್ಮ ಕರ್ಮ ಸಂಯೋಗದಿಂದ ಜಮ್ಮುವಿನ ಹಿಂದೂ ಮಹಾರಾಜರ ಕೈಕೆಳಗೆ ಸೇರಿತು ಗುಡ್ಡನಾಡಿನ ಕಾಶ್ಮೀರಿನ ಕಡೆ ದುರಾಶೆಯ ದೃಷ್ಟಿ ಯಾರದೂ ಬೀಳದೆ ಆ ಮಹಾರಾಜರ ಕೆಳಗೆ ಕಾಶ್ಮೀರಿನ ಹಿಂದೂ ಮುಸ್ಲಿಮರು ಸುಮಾರು ಒಂದು ಶತಮಾನ ಕಾಲ ಪರಸ್ಪರ ಭ್ರಾತೃಭಾವದಿಂದ ಕಳೆದರು. ಲೀಗು ಪಾಕಿಸ್ತಾನದ ಧ್ಯೇಯವನ್ನು ಕ್ರಿ. ಶಕ 1940ರಲ್ಲಿ ಸಾರಿದ ತನಕ ಕಾಶ್ಮೀರಿನ ಜನರು [illegible] ಕಾಶ್ಮೀರಿನ [illegible] 1946ರ ತನಕ ಲೀಗಿನ ಚಟುವಟಿಕೆಗಳ ವಿಶೇಷವಿರಲಿಲ್ಲ ಹೀಗಾಗಿ ಕಾಶ್ಮೀರಿನ ಮುಸ್ಲಿಮರಲ್ಲಿ ಪ್ರಜಾಸತ್ತಾತ್ಮಕ ಅಧಿಕಾರವನ್ನು ಅಲ್ಲಿ ಸ್ಥಾಪಿಸಬೇಕೆಂಬ ಆಶೆಯೇ ಬಲವಾಗಿತ್ತಲ್ಲದೆ ಪಾಕಿಸ್ತಾನ [illegible] ಗೊಳಿಸುವ ಆಶೆಯು ಬಲಹೊಂದಲಿಲ್ಲ

ಕಳೆದ ಆಗೋಸ್ಟ 15ರಲ್ಲಿ ಪಾಕಿಸ್ತಾನ, ಹಿಂದೀ ಯುನಿಯನುಗಳು ಬೇರೆಯಾದ ಬಳಿಕ ಕಾಶ್ಮೀರಿನ ಮೇಲೆ ಪಾಕಿಸ್ತಾನಗಳ ಗಿಡುಗನ ದೃಷ್ಟಿಯು ಸಂಪೂರ್ಣ ಬೀಳತೊಡಗಿತು. ಇದ್ದು ಕಾಶ್ಮೀರಿಗೆ ಸಮಯಕೊಡದೆ ಬಲತ್ಕಾರದಿಂದಾಗಲಿ ಒಪ್ಪಿಗೆಯಿಂದಾಗಲಿ ಅದನ್ನು ಪಾಕಿಸ್ತಾನಕ್ಕೆ ಸೇರಿಸಬೇಕೆಂದು ಪಾಕಿಸ್ತಾನಿ ವೀರರು ಸೊಂಟ ಕಟ್ಟಿದರು. ಕೆಲವು ಕಾಲ ತಿರುವಾಂಕೂರೂ ಭೋಪಾಲವೂ ಪಾಕಿಸ್ತಾನಕ್ಕೆ ಸೇರುತ್ತವೋ ಎಂಬ ಹಾಗೆ ತೋರಿದ್ದು ಕೂಡ ಕೊನೆಗೆ ನಿರರ್ಥಕವಾಗಿದ್ದರಿಂದ ಪಾಕಿಸ್ತಾನಿಗಳ ಆಕ್ರೋಶವು ಇಮ್ಮಡಿಯಾಯಿತು ಅವರಿಗೆ ಕಾಶ್ಮೀರು, ಜುನಾಘಾಡು, ಹೈದರಾಬಾದು ಇವುಗಳಲ್ಲಾದರೂ ಅರ್ಧಚಂದ್ರಾಂಕಿತ ಧ್ವಜವನ್ನು ಹಾರಿಸಿ ಅವುಗಳಿಂದ ಹಿಂದೂ ಸಿಕ್ಖರನ್ನು ಓಡಿಸಬೇಕೆಂಬ ಆಲೋಚನೆಗಳು ಬರಹತ್ತಿದವು ಈಗ ಕಾಶ್ಮೀರಿನಲ್ಲಿ ನಡೆಯುತ್ತಿರುವ ಪ್ರಸಂಗವೂ ಈ ಹಿಂದುಸ್ಥಾನದಲ್ಲಿ ಪಾಕಿಸ್ತಾನವು ಸರ್ವತ್ರ ಸ್ಥಾಪಿಸುವ ಅವರ ಅಂತರಂಗದ ಆಶೆಯ ಪರಿಣಾಮವಾಗಿವೆಯೆಂಬುದರಲ್ಲಿ ಸಂಶಯಕ್ಕೇನೂ ಕಾರಣವಿಲ್ಲ

ಕಾಶ್ಮೀರಿನ ಮುಖ್ಯ ಪಶ್ಚಿಮ ಪಂಜಾಬಿನ ಕಡೆ ಇದೆ ಕಾಶ್ಮೀರಿಗೆ ಬೇಕಾದ ಆಹಾರ ಸಾಮಗ್ರಿಗಳಾಗಲಿ ಇತರ ಸರಕುಗಳಾಗಲಿ ಪಶ್ಚಿಮ ಪಂಜಾಬಿನ ಕಾಶ್ಮೀರಿಗೆ ಹೋಗುವ ರಾಜ ಮಾರ್ಗಗಳಿಂದಲೇ [illegible] ಪೂರ್ವ ಪಂಜಾಬಿಗೂ ಕಾಶ್ಮೀರಿಗೂ [illegible] ಗುಡ್ಡ ಕಾಡುಗಳಲ್ಲದೆ ಸರಿಯಾದ ಹೆದ್ದಾರಿಗಳಿಲ್ಲ ಪಾಕಿಸ್ತಾನ ಮುಸ್ಲಿಮರು ಕಾಶ್ಮೀರಿನ ಮಹಾರಾಜರನ್ನು ಒಗಿಸಿ ಅವರು ಪಾಕಿಸ್ತಾನದೊಳಗೆ ಪ್ರವೇಶಿಸಲಿಕ್ಕೆ ಒಪ್ಪುವಂತೆ ಮಾಡಬೇಕೆಂದು ಪಶ್ಚಿಮ ಪಂಜಾಬಿನ ಹೆದ್ದಾರಿಗಳಿಂದ ಕಾಶ್ಮೀರಿಗೆ ಹೋಗುವ ಆಹಾರ ಸಾಮಗ್ರಿ, ಸರಕುಗಳನ್ನು ತಡೆಯತೊಡಗಿದರು ಮಹಾರಾಜರು ಪಾಕಿಸ್ತಾನ ಸರಕಾರದೊಡನೆ ಆ ಕುರಿತು ಮಾಡಿದ ಬಿನ್ನಹಗಳ ಕಡೆ ಆ ಸರಕಾರವು ಉದಾಸೀನವನ್ನು ತೋರಿಸಿ ಕಾಶ್ಮೀರಿನ ಜನರು ಮಹಾರಾಜರ [illegible] ಸಿಟ್ಟಾಗುವಂತೆ ಪ್ರಯುಕ್ತಿಸಿತು ಇದರಿಂದೇನೂ ಫಲ ದೊರಕದ್ದರಿಂದ [illegible] ಪ್ರಾರಂಭವಾದ ಗಡಿನಾಡು ಪ್ರಾಂತ್ಯದಿಂದಲೂ ಪಶ್ಚಿಮ ಪಂಜಾಬಿನಿಂದಲೂ ಆಧುನಿಕ ಶಸ್ತ್ರಗಳನ್ನು ಹೊಂದಿಸಿ ಕೊಂಡಿರುವ ಆಫ್ರಿದಿಗಳೆಂಬ ಗುಡ್ಡನಾಡಿನ ಮುಸ್ಲಿಮರೂ ಇತರ ಮುಸ್ಲಿಮ್ ಯೋಧರೂ ಕಾಶ್ಮೀರಿನೊಳಗೆ ನಾಲ್ಕು ಕಡೆಯಿಂದಲೂ ನುಗ್ಗಿ ಅಲ್ಲಿ ಹಾವಳಿಯನ್ನು ಪ್ರಾರಂಭಿಸಿದ್ದಾರೆ ಮಹಾರಾಜರ ದಂಡಾಳುಗಳಿಂದ ಆ ಪಾಕಿಸ್ತಾನೀ ಪುಂಡರನ್ನು ತಡೆಯಲಿಕ್ಕೆ ಸಾಧ್ಯವಾಗದೆ–ಮಹಾರಾಜರು ಆಂಗ್ಲರಿಂದಲೂ ಪಾಕಿಸ್ತಾನ ಸರಕಾರದಿಂದಲೂ ಬೇಡಿದ ಸಹಾಯವು ಅವರಿಗೆ ದೊರಕದೆ ಇದ್ದುದರಿಂದ–ಕಾಶ್ಮೀರು ಇನ್ನು ಪಾಕಿಸ್ತಾನದ ಬಲೆಯೊಳಗೆ ಬೀಳುವುದು ನಿಶ್ಚಯವೆಂದು ಕೆಲವು ದಿನಗಳ ಹಿಂದೆ ತೋರತೊಡಗಿತು ಇಷ್ಟಾಗುವಲ್ಲಿ ಮಹಾರಾಜರು ಎಚ್ಚತ್ತು, ತನ್ನ ಸಂಸ್ಥಾನಕ್ಕೆ ಬರುವ ಗಂಡಾಂತರವನ್ನು ನೋಡಿ ಪಾಕಿಸ್ತಾನಿಗಳೊಡನೆ ಮೈತ್ರತ್ವದಲ್ಲಿದ್ದ ತನ್ನ ಮಂತ್ರಿಯನ್ನು ಕೆಲಸದಿಂದ ನಿವೃತ್ತಿ ಪಡಿಸಿ, ರಾಷ್ಟ್ರೀಯ ಮುಸ್ಲಿಮರ ನಾಯಕರಾದ ಶೇಕ್ ಅಬ್ದುಲ್ಲರನ್ನು ಕಾರಾಗೃಹದಿಂದ ಬಿಡುಗಡೆ ಮಾಡಿ, ಹಿಂದೀ ಯುನಿಯನ್ನಿನ ಧುರೀಣರೊಡನೆ ಕಾಶ್ಮೀರಿನ ಭದ್ರತೆಯ

(೪ನೆ ಪುಟಕ್ಕೆ ಮುಂದುವರಿದಿದೆ)

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪಿತ: ೧೯೦೬)

ದೇಶೋನ್ನತಿಯನ್ನು ಬಯಸುವುದು ಪ್ರತಿಯೊರ್ವ ವ್ಯಕ್ತಿಯ ಕರ್ತವ್ಯವು ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು, ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು, ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906

CANARA BANK, LIMITED.

ನಂದನವನದಲ್ಲಿ ಕಾಳಸರ್ಪ

(೩ನೇ ಪುಟದಿಂದ)

ಕುರಿತು ಸಹಾಯವನ್ನು ಬೇಡ ತೊಡಗಿದರು. ಅತ್ತ ಈ ವಿಚಾರಗಳಿಗೆ ಪಾಕಿಸ್ತಾನಿಗಳು ಅವಕಾಶ ಕೊಡದೆ ಮುಂದರಿಯುತ್ತಾ ಇದದ್ದು ಕೊನೆಗೆ ಅವರು ಶ್ರೀನಗರಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವ 'ಪವರ್ ಹೌಸ'ನ್ನು ನಾಶ ಮಾಡಿ, ಶ್ರೀನಗರದಿಂದ ಹತ್ತು ಹನ್ನೆರಡು ಮೈಲುಗಳ ದೂರವಿದ್ದು ವಾಗ, ಅಕ್ಟೋಬರ 23ನೇ ದಿನ ಕಾಶ್ಮೀರಿನ ಮಹಾರಾಜರು ತಾವು ಹಿಂದೀ ಯುನಿಯನಿಗೆ ಸೇರಲೊಡಂಬಟ್ಟು—ತನ್ನ ಸಹಿಯ ಪತ್ರವೊಂದನ್ನು ನ್ಯೂಡಿಲ್ಲಿಗೆ ಕಳುಹಿಸಿ—ಹಿಂದೀ ಯುನಿಯನಿನಿಂದ ಸಹಾಯವನ್ನು ಬೇಡಿದರು. ಹಿಂದೀ ಸರಕಾರದವರು ಕಾಶ್ಮೀರಿನ ಭದ್ರತೆಯು ಹಿಂದುಸ್ಥಾನದ ಭದ್ರತೆಗೆಷ್ಟು ಅವಶ್ಯವಾದ್ದೆಂದು ಮೊದಲೇ ತಿಳಿದವರಾಗಿದ್ದು ಕಾಶ್ಮೀರಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಕಡೆ ತಮ್ಮ ಸಂಪೂರ್ಣ ದೃಷ್ಟಿಯನ್ನಿಟ್ಟಿದ್ದರು, ಅವರು ಮಹಾರಾಜನ ಆರ್ತಸ್ವರದ ಪತ್ರವು ಮುಟ್ಟುತ್ತಲೇ ಸಮಯ ಕಳೆಯಲಿಲ್ಲ ಮುಂದೆ ಕಾಶ್ಮೀರಿನ ಜನರ ಮತವನ್ನು ಪಡೆಯುವುದಕ್ಕೋಸ್ಕರ ಮಹಾರಾಜರ ಬಿನ್ನಹ ಪತ್ರವನ್ನು ಅವರು ಸ್ವೀಕರಿಸಿ,—ಕಾಶ್ಮೀರನ್ನು ಹಿಂದೀ ಯುನಿಯನಿನ ಅಂಗವಾಗಿ ಸೇರಿಸಿಕೊಂಡರು, ಮಾತ್ರವಲ್ಲ ಒಂದೆರಡು ತಾಸುಗಳೊಳಗೆ ವಿಮಾನ ದಾರಿಯಿಂದ ತಮ್ಮ ಸೈನಿಕರನ್ನು ಕಾಶ್ಮೀರಿಗೆ ಮಹಾರಾಜರ ಸಹಾಯಕ್ಕಾಗಿ ಕಳುಹಿಸಿ ಕೊಟ್ಟರು

ಈಗ ಕಾಶ್ಮೀರಿನಲ್ಲಿ ಪಾಕಿಸ್ತಾನ ಸರಕಾರದಿಂದ ಪ್ರೇರಿತರಾದ ಹೊರಗಿನ ಮುಸ್ಲಿಮರೊಡನೆ ಒಳಗಿನ ಕೆಲವು ಮುಸ್ಲಿಮರೂ ಸೇರಿ ಮಹಾರಾಜರ ಸರಕಾರಕ್ಕೆ ಹಿಂದೀ ಯುನಿಯನಿಗೂ ವಿರೋಧವಾಗಿ ಹೋರಾಡುತ್ತಿದ್ದಾರೆ ಆದರೆ ಮಹಾರಾಜರೀಗ ಶೇಕ್ ಅಬ್ದುಲ್ಲರನ್ನು ತನ್ನ ಮಹಾ ಪ್ರಧಾನರಾಗಿ ನೇಮಿಸಿ, ಕಾಶ್ಮೀರಿನ ಭದ್ರತೆಯ ಹೊಣೆಗಾರಿಕೆಯನ್ನು ಶೇಕ್ ಅಬ್ದುಲ್ಲರಿಗೇನೇ ಬಿಟ್ಟಿರುವುದರಿಂದ ಕಾಶ್ಮೀರಿನ ಮುಸ್ಲಿಮರಲ್ಲಿ ಹೆಚ್ಚಿನ ಜನರೆಲ್ಲಾ ಅಲ್ಲಿಯ ಸಿಕ್ಖರೊಡನೆ ಸೇರಿ, ಶೇಕ್ ಅಬ್ದುಲ್ಲರ ನಾಯಕತ್ವದಲ್ಲಿ ಕಾಶ್ಮೀರಿನಿಂದ ಪಾಕಿಸ್ತಾನವರನ್ನು ಹೊರ ಅಟ್ಟುತಿದ್ದಾರೆ ಕಾಶ್ಮೀರಿನಲ್ಲಿ ಹೋರಾಟವಿನ್ನೂ ಮುಗಿಯಲಿಲ್ಲ, ನಡೆಯುತ್ತಲೇ ಇದೆ

ಇತ್ತ ಕಾಶ್ಮೀರಿನ ಘಟನೆಗಳಿಂದ ಪಾಕಿಸ್ತಾನದ ನಾಯಕರಲ್ಲಿ ತುಂಬಾ ವಿಕಾರಗಳುಂಟಾಗಿವೆ ಗಡಿನಾಡು ಪ್ರಾಂತ್ಯದ ಮುಖ್ಯ ಸಚಿವನಾದ ಅಬ್ದುಲ್ ಕಾಯಮನು ಹೊರ ಮುಸ್ಲಿಮ್ ರಾಷ್ಟ್ರಗಳ ಸಹಾಯವನ್ನು ಬೇಡಿ ಕಾಶ್ಮೀರನ್ನು ಹೇಗಾದರೂ ಪಾಕಿಸ್ತಾನಕ್ಕೆ ಸೇರಿಸದೆ ಬಿಡೆನೆಂದು ಗರ್ಜಿಸುತ್ತಿದ್ದಾನೆ. ಪಾಕಿಸ್ತಾನದ ಮಹಾರಾಷ್ಟ್ರಪತಿಯಾದ ಜಿನ್ನಾಸಾಹೇಬರು ಮುಸ್ಲಿಮರನ್ನೆಲ್ಲಾ ಜಿಹದ್ದಿಗೆ ತಯಾರಿಸುತ್ತಿದ್ದಾರೆ "ಆಕ್ರೋಶ ಭರಿತವಾದ ಜಿನ್ನಾ ಸಾಹೇಬರ ಭಾಷಣವನ್ನು ಲಾಹೋರಿನಿಂದ ಅಕ್ಟೋಬರ 20ಕ್ಕೆ ಕೇಳಿದವರಲ್ಲಿ ಇನ್ನು ಪಾಕಿಸ್ತಾನಿಗಳ ಮುಂದಣ ಚಟುವಟಿಕೆಗಳ ಕುರಿತು ಸಂಶಯ ಉಳಿಯ ಕಾರಣವಿಲ್ಲ.

"ಇದರೊಂದಿಗೆ ನೀವು ಮಾಡಬೇಕಾದಿನ್ನೊಂದಿದೆ. ನೀವು ಮರಣದ ಭೀತಿಯನ್ನು ಬಿಟ್ಟು, ಧೈರ್ಯವನ್ನು ತಾಳಿ ಪಾಕಿಸ್ತಾನ ಮತ್ತು ಇಸ್ಲಾಮಿನ ಮಾನ ರಕ್ಷಣೆಗೆ ಕಂಕಣ ಬದ್ಧರಾಗಬೇಕು ನ್ಯಾಯವಾದ ಉದ್ದಿಶ್ಯಕ್ಕಾಗಿ ಪ್ರಾಣವನ್ನೀಯುವ ಮುಸ್ಲಿಮ್ ವೀರರಿಗೆ ಮುಕ್ತಿಗೆ ಇದಕ್ಕಿಂತಲೂ ಒಳ್ಳೇಯ ದಾರಿ ಇಲ್ಲವೆಂದು ಮರೆಯದಿರಿ' ಈ ರೀತಿಯ ಸ್ಫೂರ್ತಿದಾಯಕ ವೀರಾವೇಶದ ಭಾಷಣವನ್ನು ಜಿನ್ನಾ ಸಾಹೇಬರಿಂದ ಹೊರಡಿಸಿದ್ದು ಕಾಶ್ಮೀರಿನ ಕುರಿತು ಅವರಿಗುಂಟಾದ ನಿರಾಶೆಯೆಂಬುದಕ್ಕೆ ಅನುಮಾನವಿಲ್ಲ

ಆದರೆ ಹಿಂದೀಯರಿಗೆ ಈಗ ಗಂಡಾಂತರಗಳು ಶೀಘ್ರದಿಂದ, ಬಲವತ್ತಾಗಿ ಬರಲಿಕ್ಕಿವೆಯೆಂಬುದನ್ನು ನಾವು ಅಲಕ್ಷಿಸ ಸಾಧ್ಯವಿಲ್ಲ ಇತ್ತ ಹೈದರಾಬಾದಿನಲ್ಲಿ ಕೋಟಿ ರೂಪಾಯಿ ಬೆಲೆಬಾಳುವ ಶಸ್ತ್ರಗಳನ್ನು ವಿಮಾನ ದಾರಿಯಾಗಿ ನಿಜಾಮರು ಇಂಗ್ಲಾಂಡಿನಿಂದ ತರಿಸಿರುವರೆಂಬ ವಾರ್ತೆಯೂ ಇದೆ ಉಷ್ಟ್ರಪಕ್ಷಿಯಂತೆ ಕೊರಳನ್ನು ನೆಲದೊಳಗೆ ಹಾಕಿ ಗಂಡಾಂತರಗಳನ್ನು ನಾವು ಮರೆಯ ಸಾಧ್ಯವಿಲ್ಲ "ಇಂದು ಉದಯಿಸಿದ ಹಿಂದೀ ಸ್ವಾತಂತ್ರ್ಯದ ತಾರೆಯು ನಭೋ ಮಂಡಲದಲ್ಲೆಂದೂ ಅಸ್ತಮಿಸದಿರಲಿ" ಎಂದು ನಮ್ಮ ಪ್ರಮುಖ ನಾಯಕರಾದ ಜವಾಹರಲಾಲರು ಆ ದಿನ ಡಿಲ್ಲಿಯಲ್ಲಿ ಜಗದೀಶ್ವರನೊಡನೆ ಬೇಡಿದ್ದರು ಹಿಂದೀ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನೀಯಲಿಕ್ಕೆ ಹೇಸದ ಹಿಂದೀಯರಿರುವ ತನಕ ಆ ತಾರೆಯೆಂದೂ ಅಸ್ತಮಿಸದ ಆದರೆ ಇನ್ನು ನಿದ್ರಿಸಲಿಕ್ಕೆ ಸಮಯವಿಲ್ಲ

"C"

KANARA COMMERCIAL BANK LTD.

PUTTUR

H. O. Puttur] Estd. 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted.

—Fixed Deposits for periods of 3 months and above up to 24 months are accepted.

ಸ್ವೀಕಾರ ಮತ್ತು ವಿಮರ್ಶೆ

ಸಂಸಾರಚಿತ್ರ

ಲೇಖಕರು—ಆನಂದ ಕಂದ—ಹುಬ್ಬಳ್ಳಿಯ ಸಾಹಿತ್ಯ ಭಂಡಾರದ 17ನೇ ಪ್ರಕಟಣೆ—ಮೊದಲ ಮುದ್ರಣ 1934 2ನೇ ಮುದ್ರಣ 1947.

ಬೆಲೆ ರೂ 2—

ಇದರಲ್ಲಿ ಆನಂದಕಂದರ ಒಂಬತ್ತು ಕತೆಗಳನ್ನು ಕೊಡಲಾಗಿದೆ ಈ ಸಂಗ್ರಹಕ್ಕೆ ಲೇಖಕರೇ ಮೊದಲ ನುಡಿಯೊಂದನ್ನು ಬರೆದು ಅದರಲ್ಲಿ ತನ್ನ ಈ ಕತೆಗಳೆಲ್ಲವೂ ಕಲಾ ಪರಿಪೂರ್ಣವಾದವುಗಳೆಂದು ತನ್ನ ವಿಶ್ವಾಸ ಹೇಳಿಕೊಂಡಿದ್ದಾರೆ

'ಆ ಪರಿತೋಷಾ ದ್ವಿದುಷಾಂ' ಇತ್ಯಾದಿ ಹೇಳಿಕೊಂಡ ಕಾಳಿದಾಸನಲ್ಲಿದ್ದ ಆ ವಿನಯ ನಮ್ಮ ಕನ್ನಡ ಕವಿಗಳ ಪಾರಂಪರ್ಯಕ್ಕೆ ಹೊಂದಿಕೆಯಾಗುವಂತಹುದಲ್ಲ ಕನ್ನಡ ಲೇಖಕರು ತನ್ನ ಕವಿತೆ ಪರೀಕ್ಷಿಸುವವನಿಗೆ ಎಂಟು ಎದೆಗಳು ಬೇಕೆಂದು ಸಾರಿದ ರನ್ನನ ವಂಶಜರೆಂದ ಮೇಲೆ ತನ್ನ ಕತೆಗಳು ಕಲಾ ಪರಿಪೂರ್ಣವೆಂದು ಈ ಲೇಖಕರು ಹೇಳಿಕೊಂಡುದರಲ್ಲಿ ಅಚ್ಚರಿಪಡತಕ್ಕುದೇನೂ ಇರುವುದಿಲ್ಲ

ಈ ಒಂಭತ್ತು ಕತೆಗಳು ನಿಜವಾಗಿಯೂ ಕಲಾ ಪರಿಪೂರ್ಣವಿರುತ್ತವೆಂಬುದರಿಂದ ಲೇಖಕರ ನಂಬಿಗೆ ಆತ್ಮಶ್ಲಾಘನೆಯ ದೋಷಕ್ಕೆ ಪಾತ್ರವಾಗುವಂತಿಲ್ಲವೆಂದು ಹೇಳಲೇಬೇಕು ಒಂಬತ್ತು ಕತೆಗಳು ಒಂಬತ್ತು ರತ್ನಗಳಂತಿವೆ ಸುಂದರವಾದ ಕೆತ್ತನೆಯ ಕೆಲಸಕ್ಕೆ ಒಳಗಾದ ರತ್ನಗಳು

ಈ ಕತೆಗಾರರು ವೀಣೆ ಸಿತಾರುಗಳಂತೆ ಅಲಂಕಾರ ವರ್ಣಗಳ ವೈವಿಧ್ಯವನ್ನು ಹೊರಡಿಸಿ ನುಡಿಸುತ್ತಿರುವ ಗಾಯಕನ ಮಾದರಿಯಲ್ಲಿ ಅಥವಾ ಕುಸುರು ಕುಸುರಿನ ಚಿತ್ರ ಶಿಲೆಗಳಿಂದ ಮಂದಿರವನ್ನು ಕಟ್ಟುವ ಶಿಲ್ಪಿಯ ಮಾದರಿಯಲ್ಲಿ ತನ್ನ ಕತೆಗಾರ ಕಲೆಯನ್ನು ಸಾಧಿಸಿ ಕೃತಕೃತ್ಯರಾಗಿರುವರೆಂದರೆ ಅತಿಶಯೋಕ್ತಿಯೆನ್ನಬಾರದು

'ಜೀವದ ಹೂವು' 'ಬಾಡಿಬಿದ್ದ ಹೂ ಮತ್ತು ಸೀನು' ಪುಟ್ಟನ ತಾಯಿ ಇಂಥ ಕರುಣ ಕಥೆಗಳನ್ನು ದುಃಖಪರ್ಯವಸಾಯಿಯಾಗಿ ಮಾಡಿ ಓದುಗರಲ್ಲಿ ಅತೀವ ಶೋಕವುಂಟುಮಾಡುವುದರಿಂದ ಕವಿಗೆ ಸಿಕ್ಕುವ ಪುರುಷಾರ್ಥವೇನೆಂದು ಯಾರಿಗೆ ಗೊತ್ತು? ಸಂಸಾರದಲ್ಲಿ ಇಂಥ ಘಟನೆಗಳನ್ನು ತಂದೊಡ್ಡಿ ವಿಧಾತನಿಗೆ ಸಿಕ್ಕುವ ಪುರುಷಾರ್ಥವೇನೆಂದು ಕವಿಯು ಉತ್ತರಕೊಡಬಹುದು ಸಂಸಾರದಲ್ಲಿ ಒದಗುವ ದುಃಖ ಸಹಿಸದೆ ಗತ್ಯಂತರವಿಲ್ಲ ಕವಿಯೂ ದುಃಖ ಕೊಡಬೇಕೆ? ಕನ್ನಡ ಕತೆಗಾರರ ಪ್ರಥಮ ಶ್ರೇಣಿಯಲ್ಲಿರಲು ಯೋಗ್ಯರಾದ ಆನಂದಕಂದರು ಈ ಪ್ರಶ್ನೆಯನ್ನು ವಿಚಾರಿಸಬೇಕಾಗಿ ವಿನಂತಿ

ಅಂತೂ ಕೊನೆಯಲ್ಲಿ ನನ್ನ ಹುಚ್ಚು ಮತ್ತು ಸಂಸಾರವೆಂದರೆ ಸೂಜಿಗಲ್ಲು ಕತೆಗಳನ್ನು ಕೊಟ್ಟು ಪುಸ್ತಕವನ್ನು ಓದಿ ಕೆಳಗಿಡುವಾಗ ಆನಂದದಲ್ಲಿಯೇ ಮುಗಿಸುವಂತೆ ಉಪಕಾರ ಮಾಡಲಾಗಿದೆ

ಈ ಕತೆಗಳಲ್ಲೆಲ್ಲ ಕತೆಗಳಷ್ಟೆ ಕತೆಗಳಗಳನ್ನು ಹೇಳುವವರ ಸಾಹಿತ್ಯ ಸಂಸ್ಕೃತಿಯೂ ಸ್ವಾರಸ್ಯವಾಗಿ ಚಿತ್ರಿಸಲ್ಪಡುತ್ತಿದೆ ಯಾವ ಅವಸರವೂ ಇಲ್ಲದೆ ನಿಧಾನವಾಗಿ ಕತೆಗಳನ್ನು ರಸಭರಿತವಾಗಿ ಹೇಳಲಾಗುತ್ತಿದೆ

ಈ ಬಗೆಯ ಬರಹಗಳಲ್ಲಿ ಒಂದು ಬಗೆಯ ಕೃತಕತೆ ಇದೆಯೆಂದು ಒಮ್ಮೊಮ್ಮೆ ಭಾಸವಾಗುತ್ತದೆ ವಿಚಾರಿಸಿದರೆ ಕೊನೆಗೆ ಕೃತಕತೆ ಇಲ್ಲದೆ ಯಾವ ಕಲೆಯೂ ಕೃತಕೃತ್ಯವಾಗುವಂತಿಲ್ಲವೆಂಬುದೇ ಖಚಿತವಾಗುತ್ತದೆ ವಿದ್ಯಾವಂತರಲ್ಲದವರಿಗೆ ಈ ಕತೆಗಳನ್ನು ಓದುವಾಗ ಅಥವಾ ಕೇಳುವಾಗ ಬೇಸರ ಬರುವ ಸಂಭವವುಂಟು ಇದು ಎಲ್ಲಾ ಕಲೆಗಳಲ್ಲಿಯೂ ಇದೇ ಬಗೆಯಾಗುವುದೆಂದು ಹೇಳಿ ಕೆ ಮುಗಿಸಬಹುದು

ಸಂಪಿಗೆ

ಲೇಖಕರು—ಶ್ರೀ ಕುಲಕರ್ಣಿ ಶ್ರೀನಿವಾಸರು ಹುಬ್ಬಳ್ಳಿ ಸಾಹಿತ್ಯ ಭಂಡಾರದ ಹದಿನೆಂಟನೆ ಪ್ರಕಟನೆ ಬೆಲೆ 0—10—0

ಆರ್ ವಿ ಜಾಗೀರದಾರರು ಇದಕ್ಕೊಂದು ಮುನ್ನುಡಿ ಬರೆದಿದ್ದಾರೆ. ನೋಡುವ ಬುದ್ಧಿ, ಅನುಭವಿಸುವ ಶಕ್ತಿ—ಇವೆರಡು ಸಾಹಿತಿಯ ಮುಖ್ಯ ಲಕ್ಷಣಗಳೆಂದು ಇದರಲ್ಲಿ ನಿರೂಪಿಸಿರುವರು. ತಾನು ನೋಡಿದ್ದನ್ನು 'ಇತರರಿಗೆ ತೋರಿಸುವ ಹಾಗೂ ತಾನು ಅನುಭವಿಸಿದ್ದುದನ್ನು ಇತರರು ಅನುಭವಿಸುವಂತೆ ಮಾಡುವ ಶಕ್ತಿಯು ಸಾಹಿತಿಯ ನಿಜವಾದ ಲಕ್ಷಣವೆಂಬುದನ್ನು ಇವರೇಕೆ ಹೇಳಲಿಲ್ಲವೊ ಗೊತ್ತಾಗುವುದಿಲ್ಲ ಯಾಕೆಂದರೆ ಜಾಗೀರುದಾರರು ಹೇಳಿದ ಎರಡು ಲಕ್ಷಣಗಳಿಂದ ಮಾತ್ರ ಒಬ್ಬ ಸಾಹಿತಿಯಾಗುವುದು ಅಸಂಭವ ತಾನು ಉಂಡ ಸಂಸಾರದ ಸವಿಯನ್ನು ಇನ್ನೊಬ್ಬರಿಗೆ ಉಣ್ಣಿಸುವ ಸಾಮರ್ಥ್ಯವಿದ್ದವನು ಮಾತ್ರ ಸಾಹಿತಿಯಾಗಬಲ್ಲನು

ಈ ಗ್ರಂಥದಲ್ಲಿ ಕಂಡಬರುವ ಸೂಕ್ಷ್ಮ ನಿರೀಕ್ಷಣೆ ಸರಳ ಅಂತಃಕರಣ, ಸಲಿಗೆಯ ಶೈಲಿ ಇಂದು ನಾಳೆ ಎನ್ನುವುದರೊಳಗಾಗಿ ಕೆ ಶ್ರೀನಿವಾಸರಾಯರನ್ನು ಸಾಹಿತ್ಯದ ಮೇಲ್ಮೆಟ್ಟಿಗೆ ಮುಟ್ಟಿಸುವುವೆಂಬುದರಲ್ಲಿ ಸಂದೇಹವಿಲ್ಲವೆಂದು ಜಾಗೀರುದಾರರು ಹೇಳುತ್ತಾರೆ ಈ ಬರಹಗಳು ಸಾಹಿತ್ಯದ ಮೇಲ್ಮೆಟ್ಟನ್ನು ಮುಟ್ಟಿ ಮೆರೆಯುತ್ತಿವೆಯೆಂದೇ ನಮಗನ್ನಿಸುತ್ತದೆ

ಪ್ರಣಯದ ಹುಚ್ಚಾಟವನ್ನು ಹುಚ್ಚು ಹಿಡಿಸುವಂತೆ ಶ್ರೀನಿವಾಸರು ಚಿತ್ರಿಸಿದ್ದಾರೆ ಮಧುರವಾದ ಶೃಂಗಾರದೊಡನೆ ನಯವಾದ ಹಾಸ್ಯ ಬೆರೆಸಿದ್ದಾರೆ. ಎಷ್ಟೋ ವಿಷಯಗಳ ವಿಶಾಲ ಅನುಭವವನ್ನು ಜೊತೆಗೂಡಿಸಿದ್ದಾರೆ ಈ ಸುಂದರ ಬರವಣಿಗೆಯ ಸ್ವಾರಸ್ಯ ಅನುಭವಿಸಿಯೇ ತಿಳಿದುಕೊಳ್ಳಬೇಕು ಸರಿಯಾಗಿ ಚಿತ್ರಿಸಿ ಹೇಳಬೇಕಾದರೆ ಕುಲಕರ್ಣಿ ಶ್ರೀನಿವಾಸರ ಶೈಲಿಗೆ ಮಾತ್ರ ಅದು ಸಾಧ್ಯ ರಾಗಿಣಿಯ ನರ್ತನವನ್ನು ಶಬ್ದಗಳಲ್ಲಿ ಚಿತ್ರಿಸಿ ಕಣ್ಣೆದುರು ನಿಲ್ಲಿಸುವ ಆ ಶೈಲಿಯ ಸಾಮರ್ಥ್ಯ ನಮ್ಮಲ್ಲಿಲ್ಲವೆಂಬುದರಿಂದ ಈ ಚಿಕ್ಕ ಗ್ರಂಥದನ್ನು ಓದಿಯೇ ಇದರ ಸೌಂದರ್ಯ ಅನುಭವಿಸಿರೆಂದು ಹೇಳಿ ನಾವು ತೃಪ್ತರಾಗಬೇಕಾಗಿದೆ

ಭಾರತದಿಂದ ತೊಲಗಿರಿ

ಹುಬ್ಬಳ್ಳಿ ಸಾಹಿತ್ಯ ಭಂಡಾರದ ಹದಿನಾಲ್ಕನೆಯ ಪ್ರಕಟನೆ ಬೆಲೆ 1—4—0

ಮುಂಬಾಯಿಯ ಪದ್ಮಾ ಪ್ರಕಟನಾಲಯದವರು ಪ್ರಕಟಿಸಿದ ಗಾಂಧೀಜಿಯವರ ಕ್ವಿಟ್ ಇಂಡಿಯಾ ಎಂಬ ಪುಸ್ತಕದ ಭಾಷಾಂತರವಿದು ಇದಲ್ಲದೆ ಭಾರತದಿಂದ ತೊಲಗಿರಿ'ಗೆ ತತ್ಸಂಬಂಧಿಯನ್ನೂ ಗಾಂಧಿಜಿಯವರ ಮುಖ್ಯ ಭಾಷಣವನ್ನೂ ಇದರಲ್ಲಿ ಬೇರೆ ಕಡೆಯಿಂದ ಸಂಗ್ರಹಿಸಿದೆಯೆಂದು ಪ್ರಕಾಶಕರು ತಿಳಿಸುತ್ತಾರೆ

ಕ್ವಿಟ್ ಇಂಡಿಯಾ ಎಂಬುದು ಗಾಂಧೀಜಿಯವರು ಈ ಕುರಿತ ಬರೆದ ಬರವಣಿಗೆಗಳ ಸಂಗ್ರಹ ಸಂಗ್ರಹಿಸಿದವರು ಶ್ರೀ ಆರ್ ಕೆ ಪ್ರಭು ಮತ್ತು ಶ್ರೀ ಯು ಆರ್ ರಾವ್

ಗಾಂಧಿಜಿಯವರ ಬರವಣಿಗೆಯ ಸಂಗ್ರಹವೆಂದ ಮೇಲೆ ವಿಷಯ ವಿಮರ್ಶೆಯ ಆವಶ್ಯಕತೆ ಇಲ್ಲ ಭಾಷಾಂತರವು ತಿಳಿಯಾಗಿಯೂ ಸರಿಯಾಗಿಯೂ ಇದೆಯೆಂದರೆ ಸಾಕು

ಕಾಸರಗೋಡು

ವರ್ಗ: ಸ್ಥಳೀಯ ರೇಶನಿಂಗ್ ಆಫೀಸರರಾಗಿದ್ದ ಶ್ರೀ ಕೆ ಕೊರಗಪ್ಪನವರು ಮಂಗಳೂರಿಗೆ ವರ್ಗಾಯಿಸಲ್ಪಟ್ಟಿರುವರು

ಪ್ರಾಣಿ ಬಲಿ ನಿಲ್ಲುವುದು: ಕಾಸರಗೋಡಿನ ಅತೀ ಪುರಾತನವೂ ವಿಶೇಷ ಕೀರ್ತಿಪ್ರದವೂ ಆದ ಶ್ರೀ ಕೊರ್ಕೊಡು ಮಹಾದೇವಿ ಅಮ್ಮನವರ ದೇವಸ್ಥಾನದಲ್ಲಿ ಶ್ರೀ ಮಲ್ಲಿಕಾರ್ಜುನ ಕೀರ್ತನಕಾರ ಸಂಘದವರು ದೇವಸ್ಥಾನಕ್ಕೆ ಸಂಬಂಧಪಟ್ಟ ಹತ್ತು ಸಮಸ್ತರಿಂದೊಡಗೂಡಿ ಶ್ರೀ ಮಹಾದೇವಿ ದರ್ಶನದ ಸಮಕ್ಷಮದಲ್ಲಿ, ಈ ಪವಿತ್ರವಾದ ಕ್ಷೇತ್ರದಲ್ಲಿ ಆಗ್ಯಾಗ್ಗೆ ನಡೆಯುವ ಪ್ರಾಣಿ ಬಲಿಯನ್ನು ನಿಲ್ಲಿಸಲು ಅಪ್ಪಣೆ ಕೊಡಿಸಬೇಕಾಗಿ ಕೇಳಿಕೊಂಡಾಗ, ನವರಾತ್ರಿ ಉತ್ಸವವು ಕಳೆದ ಬಳಿಕ ಈ ಕ್ಷೇತ್ರದಲ್ಲಿ ಪ್ರಾಣಿ ಬಲಿಯನ್ನು ನಿಲ್ಲಿಸಬಹುದಾಗಿಯೂ ಅಂತಹ ಹರಿಕೆಗಳ ಬದಲಿಗೆ ಬೇಕಾದ ವ್ಯವಸ್ಥೆಯನ್ನು ಶ್ರೀ ದೇವಸ್ಥಾನದ ತಂತ್ರಿಯವರ ಸಹಕಾರದೊಡನೆ ದೇವಸ್ಥಾನಕ್ಕೆ ಸಂಬಂಧಪಟ್ಟವರು ಏರ್ಪಡಿಸಬೇಕಾಗಿಯೂ ಶ್ರೀ ದೇವಿದರ್ಶನದಲ್ಲಿ ಅಭಯ ಪ್ರಸಾದವಾಗಿದೆ

ಸಣ್ಣ ಕತೆ

ದುರ್ಭಾಗ್ಯ

ಕತೆಗಾರ — ಲಕ್ಷ್ಮೀನಾರಾಯಣ ಕಿಣಿ,
ಮೆಲ್ಪೀಕರ್, ಮಂಗಳೂರು

ಕವಿಯೂ ಕತೆಗಾರನೂ ಆದ ತರುಣನ ಕೈ ಹಿಡಿಯುವ ಸೌಭಾಗ್ಯ ತನಗೆ ಲಭಿಸಿತೆಂದು ರಾಧೆ ಹಿಗ್ಗಿನಿಂದ ಶಾಲೆ ತೊರೆದುದು ನಿಜ ಆದರೆ ಅವಳೇ ರಾಧೆ ನಾಲ್ಕು ವರ್ಷಗಳ ನಂತರ ಶೋಕ ತುಂಬಿದ ಭಾರವಾದ ಹೃದಯವನ್ನು ಹೊತ್ತು ಮತ್ತೆ ಶಾಲೆಯ ಮೆಟ್ಟಲೇರಿದಳು.

ಸೌಭಾಗ್ಯದ ಎದುರಿಗೆ ದುರ್ಭಾಗ್ಯದ ಗೋಡೆ ಎದ್ದು ನಿಂತಹಾಯಿತು ಎಳೆಯ ತರುಣಿಯೋರ್ವಳು ವಿಧವೆಯಾಗಿ ಅವಳ ಬಾಳು ಬೀಳಾದ ಅವಳಲ್ಲಿ ಮೂಡುವ ಆಶೆಗಳು, ನೆರವೇರಿಸಲು ಸಮಾಜದ ನೀತಿಗೆ ಭೀತಿಪಡುವ ಆ ಹೃದಯ ಅವಳ ಬಯಕೆಗಳು ಅವಳನ್ನು ಬಲವಾಗಿ ಕಾಡಲು ಕೊನೆಗೆ ಅವುಗಳನ್ನು ನೆರವೇರಿಸಹೋಗಿ ಬಾಳ್ವೆಗೆ ಕಲಂಕವನ್ನು ತಂದುಕೊಳ್ಳುವಳು ಆ ಕಲಂಕಕ್ಕೆ ಅವಳ ಬಯಕೆಗಳೇ ಕಾರಣವೆಂದು ಅವಳ ಬಗೆ ಕುರಿತು ತಪ್ಪು-ಒಪ್ಪುಗಳನ್ನು ನಿರ್ಣಯಿಸದ ಸಮಾಜ ಮತ್ತೆ ಪಶ್ಚಾತ್ತಾಪಪಟ್ಟು ಕಳಂಕಿತಟ್ಟಿದ ಮೊಗವನ್ನು ಮರೆಯಿಸಿಕೊಳ್ಳಲು ಅವಳು ಮಾಡಿಕೊಂಡ ಭಯಾನಕ ನಿರ್ಧಾರ ಇವುಗಳನ್ನು ಕುರಿತು ರಾಧೆಯ ಗಂಡ ಸಮಾಜದ ಹೃದಯ ಹಿಂಡಿ ಅದು ಕಣ್ಣು ತೆರೆವಂತೆ ಹೃದಯಂಗಮವಾದ ಕಾದಂಬರಿಯೊಂದನ್ನು ಬರೆದ ಆದರೆ ಅದು ಅಚ್ಚಿನಲ್ಲಿರುವಾಗಲೇ ಬರಹಗಾರ ಕಣ್ಣು ಮುಚ್ಚಿದ

ಇದು ದೇವರ ಲೀಲೆಯೋ? ತನ್ನ ಪತಿಯೇ ಬರೆದ 'ವಿಧವೆ' ಕಾದಂಬರಿಯನ್ನು ವಿಧವೆ ರಾಧೆ ಓದುವಳು ಅಳುವಳು ಅವಳ ಕಣ್ಣಿನಿಂದ ಹರಿದ ಕಂಬನಿ ಒಂದುಗೂಡಿದರೆ ಹಳ್ಳ ಈಗ ಅವಳ ಪಾಲಿಗುಳಿದುದೇನು? ಪತಿಯ ಪ್ರೇಮದ ಕುರುಹಾಗಿ ನಾಲ್ಕು ವರ್ಷದ ಜಯ ಒಬ್ಬಳು ಇನ್ನು ತನ್ನ ಪತಿಗೆ ಹೃದಯ ಉಕ್ಕಿ ಬಂದಾಗ ಅವನು ರಚಿಸಿದ ಕವಿತೆ ಮತ್ತು ಕತೆಗಳೇ ಅವಳ ಹೃದಯದ ಸಂಪತ್ತು

ಅವಳನ್ನು ಸಂತಯಿಸುವವರಾರು? ಬರಹಗಾರನ ತಾಯಿ ರಾಧೆಗೆ ಅತ್ತೆ ರಾಧೆಯ ದುಃಖ ಒಂದಾದರೆ ಅವಳಿಗೆ ಎರಡು ತನ್ನ ಕರುಳು ಕಡಿದು ಹೋದ ಪುತ್ರಶೋಕ ಒಂದು ಸೊಸೆಯ ವೈಧವ್ಯ ಇನ್ನೊಂದು ಈ ಎರಡೂ ದುಃಖಗಳನ್ನು ತನ್ನ ಹೃದಯದ ಒಂದು ಮೂಲೆಗೆ ತಳ್ಳಿ ರಾಧೆಗೆ ಧೈರ್ಯ ಕೊಡುವ ಗಂಡಸುತನ ಅವಳಲ್ಲಿತ್ತು ಬೆಂದ ಹೃದಯ ಕೊಂಚ ತಂಪಾಗಲೆಂದು ರಾಧೆಯನ್ನು ಶಾಲೆಗೆ ಅಟ್ಟಿದಳು

ರಾಧೆ ತನ್ನ ಸಹಪಾಠಿಗಳೊಡನೆ ಕಲೆತು ಒಂದು ಮಾತು ಆಡಳು ನಗೆಯೊಂದು ಬೀರಳು ಶಾಲೆಗೆ ಮೋಟಾರಿನಲ್ಲಿ ಬರುವ ಸೌಭಾಗ್ಯ ಅವಳಿಗಿರಬಹುದು ಆದರೆ ತನ್ನ ಸಹಪಾಠಿಗಳಂತೆ ಮುಡಿಗೆ ಹೂ ಸಿಗಿಸಿ ಮೊಗಕ್ಕೆ ಮಂಗಳವನ್ನು ಸೂಚಿಸುವ ಆ ಪವಿತ್ರವಾದ ಕುಂಕುಮ ಇಡುವ ಆ ಅಧಿಕಾರ ಅವಳಿಗೆಲ್ಲಿಂದ?

॥ ೨ ॥

ಎಸ್ ಎಸ್ ಎಲ್ ಸಿ ತರಗತಿಯಲ್ಲಿ ಕನ್ನಡ ಪಾಠ ನಡೆಯುತ್ತಿತ್ತು ಮಾಸ್ತರು ಕವಿತೆಯೊಂದನ್ನು ಓದಿ ಬಣ್ಣಿಸತೊಡಗಿದರು "ನೋಡಿ ಈ ಕವಿತೆಯ ಶೈಲಿ ಚರಣಗಳ ಜೋಡಣೆ ಅಕ್ಷರಕ್ಷರಗಳಲ್ಲಿ ಹರಿವ ರಸ, ಹಣೆದ ರೀತಿ ಎಷ್ಟು ಸೊಗಸು ಈ ಕವಿತೆ ಬರೆದ ಕವಿಗಳು ಈಗ ಜೀವಿಸಿದ್ದರೆ ನಾವು ಸಾಹಿತ್ಯದ ಹೆಚ್ಚಿನ ಲಾಭವನ್ನು ಪಡೆಯುತ್ತಿದ್ದೆವು ವಿಧಿ ಅವರನ್ನು ಸಾಯಗೊಡಿಸಿತು" ಎಂದರು

ಆಗ ಓರ್ವ ವಿದ್ಯಾರ್ಥಿನಿಯ ಮೊಗ ಬಾಡಿತ್ತು ಕಣ್ಣು ಹನಿಯಿತು ಮೊಗಕ್ಕೆ ಪುಸ್ತಕ ಅಡ್ಡವಿಟ್ಟು ಅಳುವವಳಾರು? ಹತಭಾಗಿನಿ ರಾಧೆ ರಾಧೆ ಅಳುವಳೆಂದು ಮಾಸ್ತರಿಗೆ ಹೇಗೆ ಗೊತ್ತಾಗಬೇಕು? ಬಹುಶಃ ಪುಸ್ತಕ ಮೊಗಕ್ಕೆ ಅಡ್ಡವಿಟ್ಟು ಪಾಠ ಹೇಳುವಾಗ ಕೇಳುವುದನ್ನು ಬಿಟ್ಟು ನಿದ್ದೆ ತೆಗೆಯುತ್ತಾಳೆ ಎಂದು ನೆನಸಿದರು. ಇನ್ನು ಕ್ಲಾಸಿನಲ್ಲಿ ನಿದ್ದೆ ಹೋಗುವವರನ್ನು ಎಬ್ಬಿಸುವ ಅಧಿಕಾರ ಮಾಸ್ತರಿಗಿದೆಯಷ್ಟೆ ಅದ ಕಾರಣವೇ ರಾಧೆಯನ್ನು ಗಟ್ಟಿಯಾಗಿ ಕೂಗಿ ಓದಹೇಳಿದರು

ರಾಧೆ ಎದ್ದು ನಿಂತಳು ಒಂದು ಚರಣ ಓದಿದಳು ಮುಂದೆ ಸೊಲ್ಲು ಹೊರಡದು. ದುಃಖ ಬಿಡದು ಅವಳ ದುಃಖ ಪ್ರಸನ್ನ ಮೊಗ ಕಂಡ ಮಾಸ್ತರು ದಿಗಿಲುಗೊಂಡರು

"ಏನಮ್ಮಾ ರಾಧಾ ನಿನಗೆ ಸೌಖ್ಯವಿಲ್ಲವೇನು?"

"ಇದ್ದೇನೆ ಸರ್

"ಮತ್ತೇಕೆ ಹಾಗೆ ಒಂದೇ ಸಮನೆ ಕಣ್ಣೀರು ಸುರಿಸುವೆ?" ರಾಧೆ ಮಾತನಾಡಳು ಮಾಸ್ತರಿಗೆ ಇದೊಂದು ಸಮಸ್ಯೆಯಾಯಿತಲ್ಲ ಅವರಲ್ಲಿ ರಾಧೆಯ ಬಗ್ಗೆ ಕಳವಳವೂ ಉಂಟಾಯಿತು ಥಕ್ಕನೆ ಅವರು ಯಾರಿಗಾಗಿಯೂ ಕನಿಕರಪಡುವವರಲ್ಲ ಆದರೆ ಅವರಿಗೆ ಹಾಗೆ ಕೇಳಲು ಅದೇನು ತೋಚಿತೋ?

"ಏನಮ್ಮಾ ರಾಧಾ ಮತ್ತೂ ಅಳುವಿಯಲ ಈ ಕವಿತೆ ಬರೆದ ಕವಿಗಳು ನಿನ್ನ ಸಂಬಂಧಿಗಳೇನು?

ರಾಧೆ ತಲೆ ಹೊತ್ತು ತೆಗೆದ "ಹೂಂ ಎಂದಳು

"ಏನಾಗ-ಬೇಕೊ

ಆಗುವುದೇನು ಕೈ ಹಿಡಿದ ಗಂಡ

"ರಾಮ-ರಾಮಾ ಕವಿಗಳ ವಿಧಿ ಹಾಗಾಯಿತು ನಿನ್ನ ಬಾಳು ಬೀಳಾಗಿ ಹೋಯಿತೋ ಮಗೂ ನಿನಗೆ ಓದ ಹೇಳಿದ್ದು ನನ್ನ ಮಹಾ ತಪ್ಪು ಕ್ಷಮಿಸಮ್ಮ

"ಅದರಲ್ಲಿ ನಿಮ್ಮ ತಪ್ಪೇನು ಸರ್ ನನ್ನ ದುರ್ಭಾಗ್ಯ ಉರಿಯುವ ಬೆಂಕಿಗೆ ತುಪ್ಪ ಎರೆದೆನಲ್ಲಾ ಎಂದು ಮಾಸ್ತರು ನೊಂದುಕೊಂಡರು

ಒಂದು ವೇಳೆ ರಾಧೆಯ ಗಂಡ ಜೀವಿಸಿದ್ದರೆ ಆಗ ಅವಳು ಶಾಲೆಗೆ ಹೋಗುತ್ತಿದ್ದರೆ ಅಲ್ಲ ತುಂಬಿದ ಕ್ಲಾಸಿನಲ್ಲಿ ಅವರಿಗೆ ತನ್ನ ಪತಿಯೇ ಬರೆದ ಕವಿತೆ ಓದ ಹೇಳಿದ್ದರೆ ಅವಳಲ್ಲಿ ಯಾವ ಲಕ್ಷಣಗಳು ಕಾಣುತ್ತಿದ್ದವೋ ಸಹ ಪಾಠಿಗಳೆದುರು ಬೇರೆ ತರದ ನಾಚಿಕೆ ವಯ್ಯಾರ ಮತ್ತು ಹಿಡಿದ ತನ್ನ ಗತ ತನಗೆ ಅದನ್ನು ರಾಗದಿಂದ ಹಾಡಿ ತೋರಿಸಿದಂತೆ ರಾಗವಾಗಿ ಹಾಡುತ್ತಿದ್ದಳೊ ಏನೊ

॥ ೩ ॥

ರಾಧೆ ಜಯಳಿಗೆ ತಲೆ ಬಾಚಿ ಹೂವಿಡುವಾಗ "ನೋಡು ಜಯ ಈ ಗುಲಾಬಿ ಎಷ್ಟು ಚಂದ ಇದೆ"

"ಹೌದಮ್ಮ ನಿನಗೆ ಬೇಕೇನ?" ತಾಯಿಯ ಕಣ್ಣು ಹನಿಯಿತು

"ಬೇಡ ನನ್ನ ಕಂದ ನಾನಿಟ್ಟರೆ ನಿನಗೆ ಬೇರೆ ಎಲ್ಲಿಂದ?

"ನನಗೆ ಬೇಡ"

"ಛಿ ಹುಡಿಗೆಯರು ಹೂ ಬೇಡ ಎನ್ನಬಾರದು

"ಅದೀತಮ್ಮ ಇನ್ನು ಹಾಗೆ ಹೇಳುವುದಿಲ್ಲ ಅಂ ನೀನು ಹೂ ಇಟ್ಟಿದ್ದು ನಾನು ನೋಡಲೇ ಇಲ್ಲಮ್ಮ ಏಕಮ್ಮಾ ಅದು?"

"ನನಗೆ ಆಗದು. ನನಗೆ ಬೇಡ ಅದು."

"ಹುಂ ಹುಡಿಗೆಯರು ಹೂ ಬೇಡ ಅನ್ನಬಾರದು ಎಂದು ನನಗೆ ಗೌಜಿ ಹಾಕಿದಿಯಲ್ಲಮ್ಮ ಹಾಗಾದರೆ ನೀನು ಹುಡುಗನೇನಮ್ಮಾ?" ಆ ಅರಿಯದ ಮಗುವಿನ ಒಂದೊಂದು ಪುಟ್ಟ ಪ್ರಶ್ನೆ ಆ ತಾಯಿಯ ಹೃದಯದ ಸಮಾಧಾನತೆಯ ಕಟ್ಟನ್ನು ಒಡೆದು ದುಃಖದ 'ಪ್ರಳಯವನ್ನು ಹರಿಸುವಂತೆ ಮಾಡಿತು ಈ ಪ್ರಶ್ನೆಗಳಿಗೆ ಆ ತಾಯಿ ಏನೆಂದು ಉತ್ತರವೀಯಬೇಕು ತಾನು ವಿಧವೆಯೆಂದು ಆ ಮಗುವಿಗೆ ಅರುಹಬೇಕೆ? ಅರುಹಿದರೆ ಜಯಳಿಗೆ ತಿಳಿದೀತೇ? ಇಲ್ಲ. ಜಯ ಮಾತ್ರ ಅಲ್ಲಿಗೆ ಮಾತು ಮುಗಿಸಲಿಲ್ಲ.

"ರೋಹಿಣಿಯ ಅಮ್ಮ ಹೂ ಇಡುತ್ತಾಳೆ ಪ್ರೇಮನ ಅಮ್ಮನೂ ತಲೆಗೆ ಹೂ ಇಡುತ್ತಾಳೆ ನನ್ನ ಅಮ್ಮ ನೀನು ಏಕೆ ಇಡುವುದಿಲ್ಲ ಅಮ್ಮಾ?"

"ಹೂ ತಲೆಗೆ ಸಿಗಿಸಿದರೆ ಅದರ ಪರಿಮಳಕ್ಕೆ ನನಗೆ ತಲೆ ತಿರುಗುತ್ತದೆ ಮಗೂ'

"ಸುಳ್ಳು ಹೇಳುತ್ತಿ ಹೌದು, ಯಾವಾಗಲೂ ನೀನು ನನ್ನ ತಲೆಗೆ ಹೂ ಇಡುತ್ತಿ ಇನ್ನು ನಾನು ನಿನ್ನ ತಲೆಗಿಡುತ್ತೇನಮ್ಮ ಆಗದೆ? ಎಂದು ಗುಲಾಬಿ ಹೂವನ್ನು ತಾಯಿಗೆ ಮುಡಿಯಲೆದ್ದಳು

"ಏನು ಮುಡಿಯ ಬರುತ್ತಿ' ಬೇಡ ಅಂದರೆ ಕೇಳಬೇಕು ಹೂ ಮುಡಿಯುವ ಅಧಿಕಾರವಿಲ್ಲದ ಈ ಹತಭಾಗಿನಿಗೆ ಮುಡಿಯ ಬರುವಳು ಎಂದು ಮಮತೆಯಿಂದ ಮುಡಿಯ ಬಂದ ಮಗುವನ್ನು ಹೊಡೆದಳು, ನಿನ್ನಿಂದ ಹೂ ಮುಡಿದುಕೊಳ್ಳಲು ನನ್ನ ಹಣೆಯಲ್ಲಿ ದೇವರು ಬರೆದಿಲ್ಲ ಎಂದು ತಾಯಿ ಗೋಳೋ ಅತ್ತಳು ಮನಸ್ಸೂ ಅತ್ತಿತು

ತೊಟ್ಟ ಹಟ ಮಧ್ಯದಲ್ಲಿ ತಡೆಯುವವಳು ಜಯಳಲ್ಲ ಜಯಳು ತಾಯಿಂದ ಬಹಳ ಏಟು ತಿಂದಳು ಆದರೆ ಹಟವನ್ನೂ ನಿಲ್ಲಿಸಲಿಲ್ಲ ಅಳುವನ್ನೂ ನಿಲ್ಲಿಸಲಿಲ್ಲ ಹಾಗಾದರೆ ವಿಧವೆ ತಾಯಿ ಹೂ ಮುಡಿಯಬೇಕೇ? ಸಮಾಜದ ನೀತಿಗೆ ಅದು ವಿರೋಧವಲ್ಲ ಹಾಗೇಯೇ ಅಳುವ ಮಗುವನ್ನು ಸಂತಯಿಸದೆ ಅದನ್ನು ಮತ್ತಷ್ಟು ಅಳಿಸಗೊಡುವ ಆ ಗುಣ ತಾಯ್ತನಕ್ಕೆ ಸೇರಿದ್ದೆ?

"ಆಯಿತು ಮಗು ಜಯ ಇವತ್ತೊಂದೇ ಸರ್ತಿ ಮಾತ್ರ ಹೂ ಮುಡಿಯುತ್ತೇನೆ ಇನ್ನು ಮುಂದೆ ಮಾತ್ರ ಹಾಗೆ ಹಟ ಹಿಡಿಯ ಬಾರದು. ಮತ್ತೆ ಅಮ್ಮ ಹೂ ಇಟ್ಟಿದ್ದು ಯಾರೊಡನೆಯೂ ಹೇಳ ಬೇಡ

"ಆಯ್ತಮ್ಮ"

ವಿಧವೆಗೆ ಹೂ ಮುಡಿಯಲು ಕೈಗಳು ಹೇಗೆ ಬಂದಾವು? ಸಮಾಜದ ನೀತಿಗೆ ಹೆದರಿ ನಡುಗಿದವು ತಾನು ನೀತಿಗೆ ವಿರೋಧ ಹೋದುದನ್ನು ಯಾರಾದರೂ ಕಾಣುವರೇ ಎಂದು ಮನ ಬೆದರಿತು ಮೈ ಬೆವತಿತು ಹೇಗೋ ಹೂ ಮುಡಿಯಲು ಕಲಿತ ಕೊಂಡಳ ರಾತ್ರಿಯಲ್ಲಿ ಸೂರ್ಯ ಮೂಡಿದಂತೆ ವಿಧವೆಯ ಮುಡಿಯಲ್ಲಿ ಹೂ ತಾನು ಸಮಾಜದ ನೀತಿಯನ್ನು ವಂಚಿಸಿದಕ್ಕಾಗಿ ರಾಧೆಯ ತಲೆ ತಗಿತು ತನ್ನ ಹಟಕ್ಕೆ ಜಯವಾಯಿತೆಂದು ಜಯ ಹಿಗ್ಗಿನಿಂದ ತಲೆ ಎತ್ತಿದಳು ಹೂ ಮುಡಿದ ತಾಯನ್ನು ಕಂಡು ನಿಜವಾಗಿಯೂ ಅವಳಲ್ಲಿ ಸಂತೋಷವುಂಟಾಯಿತು

"ಹೂ ಇಟ್ಟರೆ ನೀನು ಎಷ್ಟು ಚಂದ ಕಾಣುತ್ತಿಯಮ್ಮ ನೀನು ಯಾವಾಗಲೂ ಇಡಬೇಕಮ್ಮ"

ರಾಧೆ ಮಾತನಾಡಲೇ ಇಲ್ಲ ತಾಯಿ ಮುಡಿಯಲ್ಲಿ ಹೂ ನೋಡುತ್ತ ಅತ್ತು ಅತ್ತು ಒದ್ದೆಯಾದ ಜಯಳ ಕಣ್ಣುರೆಪ್ಪೆಗಳು ಒಂದನ್ನೊಂದು ಅಪ್ಪಿಕೊಂಡವು

ಹೌದು ಆ ತಾಯಿ ಮಗುವನ್ನು ಸಂತಯಿಸಿದ್ದಾಯಿತು ಇನ್ನು ಸಮಾಜದ ನೀತಿಯನ್ನು ಸಂತಯಿಸಬೇಕು ಮಗು ನಿದ್ದೆ ಹೋದೊಡನೆಯೇ ಮುಡಿಯಿಂದ ಹೂವನ್ನು ಕಿತ್ತು ಹಾಕಿದಳು ತಾಯ್ತನದ ಹೃದಯಕ್ಕೆ ಸುತ್ತಿಕೊಳ್ಳುವ ಬಯಕೆಯ ಬಳ್ಳಿಗಳಲ್ಲಿ ಹೂ ಮುಡಿಸಿಕೊಳ್ಳುವುದು ಒಂದು ಹಾಗೆಯೇ ಕುಂಕುಮ ಮಗಳಿಂದ ಇಡಿಸಿ ಕೊಳ್ಳುವುದೂ ಇನ್ನೊಂದು. ಆದರೆ ರಾಧೆಯ ನಿರಾಶಾ ಹೃದಯಕ್ಕೆ ಅವುಗಳೆಂದು ಬಣಲತೆಗಳು.

॥ ೪ ॥

ಜಯ ಕಡಲನ್ನು ಕಾಣಲು ಹಟ ತೊಟ್ಟಳು. ರಾಧೆ ಕರೆದೊಯ್ದಳು. ಅಲ್ಲಿ ತೆರೆಯೊಳಗೆ ಮರೆಯಾಗಲು ಹೊರಟ ರವಿಯನ್ನು ಕಂಡು ಎಳೆಯ ಬಾಲಕಿ ಜಯಳ ಮನ ಹಿಗ್ಗಿತು. "ನೋಡಮ್ಮ ಸೂರ್ಯ ಎಷ್ಟು ಚಂದ. ನಿನಗೆ ಕಾಣುವುದಿಲ್ಲವೇ?" ಎನಲು ರಾಧೆಯ ಮನ ನಾಲ್ಕು ವರ್ಷಗಳ ಹಿಂದಕ್ಕೆ ಸರಿಯಿತು.

ಕಡಲ ತೀರ, ತಾನು ಪತಿಯೊಡನೆ ಮರಳ ರಾಶಿಯಲ್ಲಿ ಕೂತದ್ದು, ಅಲ್ಲಿಯ ಸೃಷ್ಟಿ ಸೌಂದರ್ಯ ಕಂಡಾಗ ಕವಿಯಾದ ಅವನ ಹೃದಯದಲ್ಲಿ ಕವಿತಾ ರಸ ಹರಿದದ್ದು ಆಗ ಅಲ್ಲೇ ಒಂದು ಕವನ ಕಟ್ಟಿ ಹಾಡಿ ತೋರಿದ್ದ, ಅದನ್ನು ತನಗೆ ಬಣ್ಣಿಸಿದ್ದ

"ಆಗೋ ನೋಡು ರಾಧಾ ಹೊನ್ನ ಬಣ್ಣದ ರವಿ ರವಿಯು ಬೀರುವ ಹೊನ್ನ ಬೆಳಕಿನೆದುರು ನಿಂತು ತಾವು ಹೊನ್ನ ಮುಗಿಲಾಗಿ ಕೊಂಚ ನಲಿಯಬೇಕೆಂದು ಅವನೆಡೆಗೆ ಓಡಿ ಬರುವ ಆ ಬೆಳ್ಳಿಯ ಮುಗಿಲುಗಳು ಇಗೋ ರಾಧಾ ಇತ್ತ ತಿರುಗಿ ನೋಡು ಮುಗಿಲುಗಳನ್ನು ಕಂಡು ಬಣ್ಣಕ್ಕೆ ಮನ ಸೋತು ಅವುಗಳನ್ನು ಮುದ್ದಿಡಲು ಹಾತೊರೆವ ಶಿಖರ ನೋಡಿದೆಯಾ? ರವಿ ತೆರೆಯೊಳಗೆ ಮರೆಯಾದ ಈಗ ಕಾಣೆ ಮೇಘ ಪರದೆಯನ್ನು ಬದಿಗೆ ತಳ್ಳಿ ಬಾನರಂಗದಲ್ಲಿ ಮೂಡಿದ ಶಶಿ ಸಾವಿರಾರು ತಾರೆಗಳೊಡನೆ ತನ್ನ ಲೀಲೆಯಾಡುವನು ಶಶಿಯ ಹೃದಯದಲ್ಲಿ ಪ್ರೇಮ ರಸ ತುಂಬಿದೆ ಮನ ತಾರೆಗಳಿಗೆ ಮುತ್ತಿಡಲು ಕಾಡುತ್ತದೆ ತನ್ನ ಲೀಲೆ ಸೃಷ್ಟಿ ನೋಡಿ ನಗುತ್ತದೆಂದು ನಾಚಿದ ಶಶಿ ಮುಗಿಲ ಪರದೆಯನ್ನು ಅಡ್ಡಕ್ಕೆ ಎಳೆದ ನನ್ನ ಮನವೂ ನನ್ನ ತಾರೆಗೆ ಮುತ್ತಿಡಲು ಕಾಡುತ್ತದೆ ಎಂದು ತನ್ನನ್ನು ಅಪ್ಪಿ ಮುದಿಟ್ಟ ದೃಶ್ಯ—ಅವನು ಆಡಿದ ಮಾತಗಳೂ ಅವಳ ಮನಸಿನಲ್ಲಿ ಬಂದು ಹೋದವು

ಸೃಷ್ಟಿ ಸೌಂದರ್ಯವು ಸ್ಥಿರವೇ? ಅಲ್ಲ ಅದು ಆಗಾಗ ಬದಲಾಗುವುದು ಅಂದಿನ ಸೃಷ್ಟಿ ಸೌಂದರ್ಯಕ್ಕಿಂತ ಇಂದಿನ ನೋಟವು ಚಲುವಾಗಿದ್ದರೂ ರಾಧೆಗೆ ಅದು ಭಯಾನಕವಾಗಿ ಕಂಡಿತು ಕಾರಣ ಅದನ್ನು ತೋರಿಸಿ ಬಣ್ಣಿಸುವ ಅವಳ ಜೀವನದ ಸಂಗಾತಿ ಅಗಲಿರುವನು ನೋಟವು ರಾಧೆಯ ಹೃದಯಕ್ಕೆ ನಾಟಿತು ಕಣ್ಣುಗಳಲ್ಲಿ ಕಂಬನಿ ನಲಿಯಲು ಅದು ತಾಳತಪ್ಪಿ ಗಲ್ಲಕ್ಕೆ ಜಾರುವಾಗ ಅದು ಕಡಲ ತಂಗಾಳಿಯಲ್ಲಿ ಆವಿಯಾಯಿತು

॥ ೫ ॥

ಎಸ್ ಎಸ್ ಎಲ್ ಸಿ ಪರೀಕ್ಷೆ ನಾಳೆ ಕನ್ನಡಕ್ಕೆ ಆರತಿ ಎತ್ತಿ ಮಂಗಳವಾಡುವುದು. ರಾಧೆ ಕನ್ನಡ ಪುಸ್ತಕ ತೆರೆದಳು ಮುಖ್ಯವಾಗಿ ಕಲಿಯಬೇಕಾದ ಪಾಠಗಳಲ್ಲಿ ತನ್ನ ಪತಿ ಬರೆದ ಕತೆಯೂ ಕವಿತೆಯೂ ಇದೆ ಪಠಿಸಲು ಅವಳಿಗೆ ಅಸಾಧ್ಯ ಆದರೂ ಮನ ಬಿಗಿಹಿಡಿದು ಓದತೊಡಗಿದಳು ದುಃಖದ ಆವೇಗದೆದುರು ಮನದ ಬಿಗಿತವೆಲ್ಲಿ?

ಕಿಟಿಕಿಯಿಂದ ಬಾನಕಡೆಗೆ ನೋಡಿದಳು ಅಲ್ಲಿ ತಾರೆಗೆ ಶಶಿಯು ಸಂಗತನಾಗಿರುವುದನ್ನು ಕಂಡಳು ಸತಿಪತಿಗಳು ಹೀಗೆ ಒಂದಾಗಿರಬೇಕು ತನಗೂ ತನ್ನ ಪತಿಗೂ ಅದಾವ ಅಂತರ—ಇಹ ಮತ್ತು ಪರ

ಆ ರಾತ್ರಿ ಮೈ ಕಾಯಿತು ಮರುದಿನದ ಪರೀಕ್ಷೆ ಅವಳಿಗಾಗಿ ನಿಲ್ಲದೆ ಓಡಿಹೋಯಿತು ಆರನೆಯ ದಿನ ನಗೆ ಮರೆತ ರಾಧೆಯ ಮೊಗದಲ್ಲಿ ತವಕದ ನಗೆಯೊಂದು ಮಿನುಗಿತು ದಿಗಂತದಲ್ಲಿರುವ ಪತಿಯನ್ನು ಸೇರುವಳೆಂದು ಒಲವು ತನ್ನ ಕರುಳಿನ ತುಂಡೊಂದು—ಜಯ—ಅನಾಥಳಾಗುವಳೆಂದು ಖೇದ!

"ಅಯ್ಯೋ ಜಯ ನನ್ನ ಅಮ್ಮ ನಿನ್ನನ್ನು ಬಿಟ್ಟು ಹೋದಳು,

"ಎಲ್ಲಿ ಅಜ್ಜಮ್ಮ ಅಮ್ಮ ಇಲ್ಲೇ ಮಲಗಿರುವಳಲ್ಲ'

ಸಾವು ಎಂಬುದು ಏನೆಂದು ಅರಿಯದ ಆ ಬಾಲೆಯೊಡನೆ ಆ ಅಜ್ಜಿ ಮತ್ತೇನೆಂದಾಳು? ದೀರ್ಘ ಬಾಳ್ವೆ ಘೋರ ದುಃಖದಿಂದ ನೊಂದು ಬೇಯುವುದಕ್ಕಿಂತ ಅದು ಕೊನೆಗೊಂಡದ್ದೇ ಉಚಿತವೆಂದು ಆ ಅತ್ತೆ ಆಡಿಕೊಂಡಳು. ನಿತ್ಯ ಜೀವ ಲೋಕದಲ್ಲಿನ ಪತಿಯನ್ನು ಸೇರ ಹೋಗುವ ಸತಿಯ ತಲೆಗೊಂದು ಹೂ ಮುಡಿದಳು.

ಸ್ವದೇಶಾಭಿಮಾನಿ

ತಾರೀಕು 7-11-1947

ಯುದ್ಧವೆ?

ಕಾಶ್ಮೀರ ಸಂಸ್ಥಾನವು ಹಿಂದುಸ್ಥಾನಕ್ಕೆ ಸೇರುವುದಾಗಿಯೂ ದಂಡೆತ್ತಿ ಬಂದ ಜನರಿಗೆ ತುರು ಸಹಾಯ ಕೊಡಬೇಕಾಗಿಯೂ ಹಿಂದುಸ್ಥಾನ ಸರಕಾರವನ್ನು ಕೇಳಿಕೊಂಡಿತು. ಕಾಶ್ಮೀರದಲ್ಲಿ ಶಾಂತಿ ಸ್ಥಾಪನೆ ಹಿಂದುಸ್ಥಾನ ಸರಕಾರಕ್ಕೆ ಅತ್ಯಗತ್ಯವೆಂಬುದ ರಿಂದ ಸರಕಾರವು ಇದಕ್ಕೊಪ್ಪಿ ತನ್ನ ಸೈನ್ಯವನ್ನು ವಿಮಾನಗಳ ಮೂಲಕ ಕೂಡಲೆ ಶ್ರೀನಗರಕ್ಕೆ ಕಳುಹಿಸಿತು. ಪಾಕಿಸ್ಥಾನದಿಂದ ಮುಖ್ಯವಾಗಿ ಗಡಿನಾಡಿನಿಂದ ಬಂದ ಈ ಜನರಿಗೂ ಹಿಂದೀ ಸೈನ್ಯದವರಿಗೂ ಯುದ್ಧವಾಗುತ್ತ ಇದೆ. ಆರಂಭದಲ್ಲಿಯೇ ಹಿಂದೀ ಸೈನ್ಯಗಳ ನಾಯಕರಾಗಿ ಹೋದ ಕರ್ನಲ್ ರೈಯವರು ಯುದ್ಧದ ಮೊದಲ ಆಹುತಿಯಾಗಿ ಪ್ರಾಣ ಅರ್ಪಿಸಿದರು.

ಕಾಶ್ಮೀರ ಸಂಸ್ಥಾನವು ಹಿಂದುಸ್ಥಾನಕ್ಕೆ ಸೇರುವುದಾಗಿ ಹೇಳಿದ್ದನ್ನು ಹಿಂದೀ ಸರಕಾರವು ಒಪ್ಪಿಕೊಳ್ಳುವಾಗ ಶಾಂತಿ ಸ್ಥಾಪನೆ ಮಾಡೊಡನೆಯೇ ಪ್ರಜೆಗಳ ಅಭಿಪ್ರಾಯ ನಿರ್ಣಯಿಸಿ ಹಿಂದುಸ್ಥಾನ ಅಥವಾ ಪಾಕಿಸ್ಥಾನ ಬಹುಮತವಿದ್ದಂತೆ ಈ ಪ್ರಶ್ನೆ ತೀರ್ಮಾನಿಸತಕ್ಕದ್ದೆಂಬ ಶರ್ತ ಹಾಕಿ ಈಗ ಸೈನ್ಯ ಕಳುಹಿಸಲು ಅಧಿಕಾರ ಸ್ಪಷ್ಟವಾಗುವಂತಾಗಲೆಂಬುದಕ್ಕೆ ಮಾತ್ರ ತಾತ್ಕಾಲಿಕವಾಗಿ ಕಾಶ್ಮೀರದ ಸೂಚನೆಯನ್ನು ಒಪ್ಪಿಕೊಂಡಿತು

ಕಾಶ್ಮೀರದಲ್ಲಿ ರಾಷ್ಟ್ರೀಯ ಮುಸ್ಲೀಮ ಪರಿಷತ್ತಿನ ಅಧ್ಯಕ್ಷರಾದ ಶೇಕ್ ಅಬ್ದುಲ್ಲಾರವರಿಗೆ ಮುಖ್ಯ ಮಂತ್ರಿತ್ವವನ್ನು ಒಪ್ಪಿಸಿ ಪ್ರಜಾ ಸರಕಾರ ಸ್ಥಾಪಿಸುವಂತೆ ಮಹಾರಾಜರು ತಿಳಿಸಿದಂತೆ ಶೇಕ್ ಅಬ್ದುಲ್ಲಾರವರು ಈಗ ತಾನೆ ಆ ಪದವಿಯನ್ನು ಅಂಗೀಕರಿಸಿರುತ್ತಾರೆ. ಈ ಸುಧಾರಣೆ ಮೈಸೂರಿನ ಮಾದರಿಯಲ್ಲಿ ಜಾರಿಗೆ ತರಲಾಗುವುದೆಂದು ತಿಳಿದುಬರುತ್ತದೆ

ಜುನಾಗಡದಲ್ಲಿ ಶ್ರೀ ಸಾಮಲ್‌ದಾಸ ಗಾಂಧಿಯವರು ಪ್ರತಿ ಸರಕಾರ ಸ್ಥಾಪಿಸಿ ಮುಂದೊತ್ತಿ ಯಶಸ್ವಿಯಾಗುತ್ತಿದ್ದುದನ್ನು ಕಂಡು ಕಾಶ್ಮೀರದ ಮುಸ್ಲೀಮ್ ಲೀಗ್ ನಂಗಡದವರು ಆಜಾದ್ ಕಾಶ್ಮೀರ ಸರಕಾರವೆಂಬ ಹೆಸರಲ್ಲಿ ಪ್ರತಿ ಸರಕಾರವೊಂದನ್ನು ಸ್ಥಾಪಿಸಿಕೊಂಡು ದಂಡೆತ್ತಿ ಬಂದವರ ಮುಂದಾಳ್ತನ ವಹಿಸಿಕೊಂಡಿರುತ್ತಾರೆ

ಗಡಿನಾಡು ಪ್ರಾಂತ್ಯದ ಈಗಿನ ಮುಖ್ಯ ಮಂತ್ರಿ ಪಾಕಿಸ್ಥಾನದ ನಾಯಕರೊಬ್ಬರು ಹಿಂದೀ ಸೈನ್ಯಗಳು ಕಾಶ್ಮೀರಕ್ಕೆ ಬಂದುದು ಮುಸ್ಲೀಮ ಜಗತ್ತಿಗೇನೆ ವಿರೋಧ ಕಟ್ಟಿಕೊಂಡಂತಾಯಿತೆಂದೂ ಗಡಿನಾಡಿನ ಪಠಾನರೆಂದಿಗೂ ಈ ಬಲಾತ್ಕಾರ ಸಹಿಸುವಂತಿಲ್ಲವೆಂದೂ ಪಾಕಿಸ್ಥಾನದ ಪ್ರತಿಯೊಬ್ಬ ಮುಸ್ಲೀಮನೂ ಹಿಂದೀ ಸರಕಾರದೊಡನೆ ಯುದ್ಧಕ್ಕೆ ಸನ್ನದ್ಧನಾಗಬೇಕೆಂದೂ ಟರ್ಕಿ ಇರಾನು ಮೊದಲಾದ ಮುಸ್ಲೀಮ ರಾಷ್ಟ್ರಗಳೆಲ್ಲ ಪಾಕಿಸ್ಥಾನದ ಸಹಾಯಕ್ಕೆ ಬರಬೇಕೆಂದೂ ಆರ್ಭಟಿಸಿದರು.

ಆದರೆ ಕರಾಚಿಯಲ್ಲಿ ಪಾಕಿಸ್ಥಾನದ ರಾಜಧಾನಿಯಲ್ಲಿ ಈ ಅಭಿಪ್ರಾಯಗಳು ಸರಿಯಲ್ಲವೆಂದು ಭಾವಿಸಲಾಗುತ್ತಿದೆಯೆಂದು ಪ್ರಕಟವಾಗಿದೆ. ಕಾಶ್ಮೀರವು ಹಿಂದುಸ್ಥಾನ ಸರಕಾರದ ಆಶ್ರಯ ಸ್ವೀಕರಿಸಿರುವುದರಿಂದ ಹಿಂದೀ ಸರಕಾರಕ್ಕೆ ಕಾಶ್ಮೀರಕ್ಕೆ ಸಹಾಯ ಸೈನ್ಯಗಳನ್ನು ಕಳುಹಿಸಲು ಹಕ್ಕು ಇದೆಯೆಂದು ಇಲ್ಲಿ ಒಪ್ಪಿಕೊಳ್ಳಲಾಗುತ್ತಿದೆ. ಇದನ್ನು ಪಾಕಿಸ್ಥಾನ ಸರಕಾರಕ್ಕೆ ವಿರುದ್ಧ ಕಾರ್ಯವೆಂದು ಕಾನೂನಿನಂತೆ ಹೇಳಲು ಬರುವುದಿಲ್ಲವೆಂದು ಹೇಳಲಾಗುತ್ತಿದೆ.

ಪಾಕಿಸ್ಥಾನ ಸರಕಾರದವರು ಕಾಶ್ಮೀರ ಸಂಸ್ಥಾನವು ಹಿಂದೀ ಸರಕಾರಕ್ಕೆ ಸೇರಿದ ವಿಷಯವನ್ನು ಪರಿಶೀಲಿಸಿ ಉದ್ವೇಗದ ಪ್ರಕಟನೆಯೊಂದನ್ನು ಪ್ರಕಟಿಸಿರುತ್ತಾರೆ. ಕಾಶ್ಮೀರದಲ್ಲಿ ಮುಸ್ಲೀಮರನ್ನು ಹಿಂಸೆಗೊಳಪಡಿಸಿದುದರ ಪರಿಣಾಮವಾಗಿ ಉದ್ರೇಕಗೊಂಡು ಪಠಾನ ಜನರು ತಾವಾಗಿ ದಂಡೆತ್ತಿ ಬಂದರೆಂದೂ ಪಾಕಿಸ್ಥಾನ ಸರಕಾರದವರು ಬಲಾತ್ಕಾರ ಪ್ರಯೋಗವಲ್ಲದೆ ಇವರನ್ನು ತಡೆಯಲು ಸಾಧ್ಯವಿದ್ದಿಲ್ಲವೆಂದೂ ಇದಕ್ಕೆ ಕಾಶ್ಮೀರೇ ಜವಾಬ್ದಾರನೆಂದೂ ಹೇಳಲಾಗಿದೆ ಈಗ ಕಾಶ್ಮೀರ ಸರಕಾರವು ಹಿಂದೀ ಸರಕಾರದ ಆಶ್ರಯಕ್ಕೆ ಸೇರಿದ್ದನ್ನು ಪಾಕಿಸ್ಥಾನವು ಒಪ್ಪಿಕೊಳ್ಳುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ ಮುಂದೆ ಪ್ರಜಾಭಿಪ್ರಾಯದಂತೆ ವರ್ತಿಸತಕ್ಕದೆಂಬ ಹಿಂದೀ ಸರಕಾರದ ಶರ್ತ ಕೇವಲ ಪ್ರಚಾರಕ್ಕಾಗಿ ಹೇಳಲಾಗಿದೆಯೆಂದೂ ಹಿಂದೀ ಸರಕಾರದ ಪಕ್ಷ ಕಾಶ್ಮೀರದಲ್ಲಿ ಬಲವಾದ ಬಳಿಕ ಪ್ರಜಾಭಿಪ್ರಾಯ ನಿರ್ಣಯವು ನಿಷ್ಪಕ್ಷವಾಗಿ ನಡೆಯುವಂತಿಲ್ಲವೆಂದೂ ಈ ಶರ್ತಕ್ಕೆ ಹೀಗಾಗಿ ಯಾವ ಬೆಲೆಯೂ ಇಲ್ಲವೆಂದು ಹೇಳಲಾಗಿದೆ ಕಾಶ್ಮೀರ ಸರಕಾರ ಮೊದಲಿಂದ ಹಿಂದೀ ಸರಕಾರಕ್ಕೆ ಸೇರುವ ಹಂಚಿಕೆ ನಡೆಸಿತ್ತೆಂದೂ ಹಿಂದೀ ಸರಕಾರದೊಡನೆ ಮೊದಲೇ ಈ ಕುರಿತು ಒಳಸಂಚು ನಡೆಸಿತ್ತೆಂದೂ ಈಗ ಒಂದು ನೆವ ಹಿಡಿದು ಮುಂದರಿಸಲಾಗಿದೆಯೆಂದೂ ಹೇಳಲಾಗಿದೆ ಕಾಶ್ಮೀರಸಂಸ್ಥಾನದ ಕುರಿತು ಈ ಹೇಳಿಕೆಯಲ್ಲಿರುವ ಅಪಪ್ರಚಾರಕ್ಕೆ ಕಾಶ್ಮೀರ ಸರಕಾರವು ಸ್ಪಷ್ಟವಾದ ಉತ್ತರ ಕೊಟ್ಟಿರುತ್ತದೆ

ಪಾಕಿಸ್ಥಾನದ ಮುಂದಾಳುಗಳ ಹೇಳಿಕೆಗಳಲ್ಲಿ ಹಿಂದೀ ಸರಕಾರದ ಮೇಲೆ ಅಪಪ್ರಚಾರಕ್ಕೇನೂ ಕಡಮೆ ಇಲ್ಲ ಪಾಕಿಸ್ಥಾನವನ್ನು ಮುರಿಯಲು ಹಿಂದೀ ಸರಕಾರವು ತಂತ್ರ ನಡೆಸುತ್ತದೆಯೆಂಬುದೇ ಆರೋಪದ ಮುಖ್ಯ ಸಾರಾಂಶವಿದ್ದು ಇದು ಎಂದೂ ಯಶಸ್ವಿಯಾಗುವಂತಿಲ್ಲವೆಂಬ ಪಾಕಿಸ್ಥಾನದ ನಿರ್ಧಾರ ಪ್ರಕಟಿಸಲಾಗುತ್ತಿದೆ

ಪಾಕಿಸ್ಥಾನದ ಮುಂದಾಳುಗಳಾದ ಕ್ವಾದೇ ಆಜಾಮ್ ಜಿನ್ನಾರವರು, ಲಿಯಾಖತ್ ಆಲೀಯವರು ಹಾಗೂ ಹಿಂದೀ ಸರಕಾರದ ಕಡೆಯಿಂದ ಪಂಡಿತ ಜವಾಹರಲಾಲರೇ ಮೊದಲಾದವರು ಲಾಹೋರಿನಲ್ಲಿ ಕಾಶ್ಮೀರ ಪ್ರಶ್ನೆಯ ಕುರಿತು ಮಾತುಕತೆ ನಡೆಸಬೇಕೆಂಬ ಏರ್ಪಾಡು ಪಂಡಿತ ಜವಾಹರಲಾಲರ ಅಸ್ವಸ್ಥದಿಂದಾಗಿ ನಡೆಯಲಿಲ್ಲ.

ಇತ್ತ ಜುನಾಗಡ ಪ್ರಕರಣವಾದರೂ ಪಾಕಿಸ್ಥಾನಕ್ಕೆ ಅನುಕೂಲವಾಗಿ ಮುಂದೆ ಸಾಗುತ್ತಿಲ್ಲ ಇಲ್ಲಿಯ ನವಾಬ ಸರಕಾರದ ಅಧಿಕಾರಿಗಳು ರಾಜಿಕೊಟ್ಟ ವಾರ್ತೆ ಪ್ರಕಟವಾಗಿದೆ. ಹಿಂದೀ ಸರಕಾರವಾದರೋ ವ್ಯರ್ಥ ಚರ್ಚೆಯಲ್ಲಿ ಸಮಯ ಕಳೆಯುವುದಕ್ಕಿಂತ ತನಗೆ ನ್ಯಾಯ ಕಂಡಂತೆ ಕಾರ್ಯರಂಗದಲ್ಲಿ ಮುಂದೊತ್ತುವುದೇ ಹಿತಕರವೆಂಬ ನಿರ್ಧಾರಕ್ಕೆ ಬಂದಂತೆ ಕಂಡುಬರುತ್ತದೆ. ಬಾಬಾರಿಯಾವಾಡ ಮತ್ತು ಮಂಗ್ರೋಲಗಳನ್ನು ಕೊಟ್ಟರು ಮತ್ತು ಅವು ಸ್ವೀಕೃತವಾದವು. ಹೊಸಬರ ನೇಮಕವಾಗಿ ಅವರೀಗ ಹೊಸ ದಿಲ್ಲಿಗೆ ಹೋಗಿ ಪುನಃ ಆರಂಭದಿಂದ ಮಾತುಕತೆಗಳು ನಡೆಯುತ್ತಿವೆ. ಈ ಎರಡನೆ ತಂಗಡದವರು ಪಾಕಿಸ್ಥಾನದೆಡೆ ಸಹಾನುಭೂತಿಯುಳ್ಳವರೆಂದು ತಿಳಿದುಬರುತ್ತದೆ.

ಈ ತೆನ್ಮಧ್ಯೆ ಹೈದರಾಬಾದಿನಲ್ಲಿ ಪ್ರಜಾಧಿಕಾರ ಸ್ಥಾಪನೆಗಾಗಿ ಅಲ್ಲಿಯ ಸಂಸ್ಥಾನ ಕಾಂಗ್ರೆಸ್ ಸಂಸ್ಥೆ ಹಾಗೂ ಹಿಂದೂ ಮಹಾಸಭೆಯ ಮುಂದಾಳುಗಳ ಚಳವಳ ಭರದಿಂದ ಸಾಗುತ್ತಿದೆ ಇವರ ಮೇಲೆ ದಬ್ಬಾಳಿಕೆಯೂ ಉಗ್ರವಾಗಿ ನಡೆಯುತ್ತಿದೆ. ಇಷ್ಟೆ ಆಗಿದ್ದರೆ ಚಿಂತೆ ಇದ್ದಿಲ್ಲ ಸ್ವಾತಂತ್ರ್ಯಕ್ಕಾಗಿ ಹೋರಾಡುವವರು ಕಷ್ಟಸಹನೆಗೆ ಸಿದ್ಧರಿರಲೇಬೇಕು ಆದರೆ ಚಳವಳದ ದಿಕ್ಕು ತಪ್ಪಿಸಿ ಇದಕ್ಕೆ ಹಿಂದೂ ಮುಸ್ಲೀಮ ಕಲಹದ ಸ್ವರೂಪ ಕೊಡಲು ಯತ್ನಪೂರ್ವಕ ಸಾಧನೆಗಳು ನಡಯುತ್ತಿರುವಂತೆ ಕಂಡುಬರುತ್ತಿದೆ

ಸಿಕಂದರಾಬಾದಿನ ಸಮೀಪದ ಹಳ್ಳಿಗಳಿಗೆ ಹೋಗಿ ಮನೆಗಳನ್ನು ಸುಟ್ಟು ಹೆಂಗಸರ ಮಕ್ಕಳ ಮೇಲೆ ಕೂಡಾ ಹಿಂಸೆ ನಡೆಸಿದ ವಾರ್ತೆ ಕೇಳುವಾಗ ಪ್ರಜೆಗಳನ್ನು ಹೇಗಾದರೂ ಮಾಡಿ ತಾಳ್ಮೆಗೆಡಿಸಿ ಜಾತಿಕಲಹವನ್ನು ಭಯಂಕರವಾಗಿ ಹಬ್ಬಿಸಬೇಕೆಂಬ ಯತ್ನವೆಂದೇ ಊಹಿಸಬೇಕಾಗುತ್ತದೆ ಇಂಥ ಯತ್ನದ ಪರಿಣಾಮವು ಬೆಳೆದರೆ ಹೈದರಾಬಾದಿನ ಗತಿಯೇನಾದೀತೆಂದು ಕ್ಷಣ ಹೊತ್ತು ವಿಚಾರಿಸಲಿಕ್ಕೆ ಕೂಡ ಇವರಿಗೆ ವಿರಾಮವಿಲ್ಲವೊ ಏನೋ? ಸಂಸ್ಥಾನದ ಪ್ರಜಾವರ್ಗದಲ್ಲಿ ಶೇಕಡಾ 90ರಷ್ಟು ಮಂದಿ ಹಿಂದುಗಳೆಂದು ಮರೆತು ವರ್ತಿಸುವಂತೆ ಕಾಣುತ್ತದೆ

ಹೈದರಾಬಾದು ಹಿಂದೀ ಸರಕಾರದೊಡನೆ ಯಾವ ಒಪ್ಪಂದ ಮಾಡಿಕೊಳ್ಳಬೇಕೆಂದು ನಿರ್ಧರಿಸುವ ಪ್ರಶ್ನೆಗಿಂತಲೂ ಅಲ್ಲಿ ಪ್ರಜಾಸರಕಾರ ಸ್ಥಾಪನೆಯ ಪ್ರಶ್ನೆಯು ಹೆಚ್ಚು ಮಹತ್ವವುಳ್ಳದ್ದು ಇಂದಿನ ಮುಂದಿನ ವ್ಯವಹಾರ ಸುಗಮವಾಗುವುದು ಹೈದರಾಬಾದಿನ ಪರಿಸ್ಥಿತಿ ಇನ್ನೂ ಕೆಡದ ನೈಜಾಮ ಸರಕಾರವು ಸಕಾಲದಲ್ಲಿ ಎಚ್ಚರಗೊಂಡು ವರ್ತಿಸುವಂತಾಗಲೆಂದು ಹಾರೈಸೋಣ

ಟೀಕೆ-ಟಿಪ್ಪಣಿಗಳು

ಹೈದರಾಬಾದು ಎತ್ತ ಸಾಗುತ್ತಿದೆ?

ಹೈದರಾಬಾದಿನ ನೈಜಾಮರ ಕಡೆಯಿಂದ ಶಿಷ್ಟಮಂಡಲವೊಂದು ಹಿಂದೀ ಸರಕಾರದೊಡನೆ ಮಾಡಿಕೊಳ್ಳಬಹುದಾದ ಒಪ್ಪಂದದ ಶರ್ತಗಳನ್ನು ಸ್ವಲ್ಪ ಸಮಯ ಚರ್ಚಿಸಿತು ಒಂದು ಬಗೆಯ ತೀರ್ಮಾನಕ್ಕೆ ಬರುವ ಸಂಭವ ಕಂಡು ಬಂದಿತು ತಾವು ನಡೆಸಿದ ಮಾತುಕತೆಗಳ ವರದಿಯನ್ನು ನೈಜಾಮರಿಗೆ ಒಪ್ಪಿಸಲು ಮರಳಿ ಊರಿಗೆ ಬಂದರು ಇವರು ನಡೆಸಿದ ಮಾತುಕತೆಗಳಿಗೆ ನೈಜಾಮ ಸರಕಾರದ ಒಪ್ಪಿಗೆ ದೊರಿಯಲಿಲ್ಲ ಇವರೆಲ್ಲ ತಮ್ಮ ರಾಜಿ ಅರ್ಜಿ

ಹಿಂದೀ ಸರಕಾರೀ ಸೇನೆಗಳು ಪ್ರವೇಶಿಸಿ ಅಲ್ಲಿಯ ಆಡಳಿತೆ ವಹಿಸಿಕೊಂಡ ವಾರ್ತೆ ಈಗ ತಾನೆ ಪ್ರಕಟವಾಗಿರುತ್ತದೆ

ಇದೆಲ್ಲದರ ಪರಿಣಾಮವೇನಾದರೂ ಏನಾದೀತೆಂಬುದು ಎಲ್ಲರಿಗೂ ಸಂಬಂಧಪಟ್ಟ ಮುಖ್ಯ ಪ್ರಶ್ನೆ ಇರುತ್ತದೆ ಸ್ಪಷ್ಟವಾಗಿ ಹೇಳುವುದಿದ್ದರೆ ಪಾಕಿಸ್ಥಾನ ಹಿಂದುಸ್ಥಾನಗಳೊಳಗೆ ಯುದ್ಧವಾಗುವ ಸಂಭವವಿದೆಯೆ?

ಈ ಪ್ರಶ್ನೆಯ ಉತ್ತರವು ಪಾಕಿಸ್ಥಾನ ಸರಕಾರದ ಮೇಲೆ ಹೊಂದಿಕೊಂಡಿರುತ್ತದೆ ಹಿಂದೀ ಸರಕಾರಕ್ಕೆ ಯುದ್ಧ ಬೇಕಾಗಿಲ್ಲ ಆದರೆ ಅದು ಅನ್ಯಾಯವನ್ನು ಸಹಿಸಿಕೊಂಡಿರುವಂತೆಯೂ ಇಲ್ಲವೆಂಬುದು ಈಗ ಸ್ಪಷ್ಟವಾಗಿರುತ್ತದೆ ಅಖಂಡ ಹಿಂದುಸ್ಥಾನವನ್ನು ಒಂದುಗೂಡಿಸಬೇಕೆಂಬ ಆಕಾಂಕ್ಷೆ ಹಿಂದೀ ಮುಖಂಡರಲ್ಲಿ ಇಲ್ಲವೆಂದಲ್ಲ ಆದರೆ ಇದು ಬಲಾತ್ಕಾರದಿಂದ ಅಲ್ಲ ಇತ್ತಂಡದವರಿಗೂ ಐಕ್ಯದ ಪ್ರಯೋಜನ ಮನದಟ್ಟಾಗಿ ಒಂದಾಗಬೇಕೆಂಬ ಹಂಬಲವಿರಬಹುದು ಬಲಾತ್ಕಾರದಿಂದ ಪಾಕಿಸ್ಥಾನ ಮುರಿಯಲು ಇವರು ಯತ್ನಿಸುವಂತಿಲ್ಲ ಈ ಕುರಿತು ಮುಸ್ಲೀಮರು ಯಾರೂ ಸಂಶಯಪಡಬೇಕಾಗಿಲ್ಲ ಹಿಂದುಸ್ಥಾನದ ಜನರ ಪರಿಸ್ಥಿತಿ ಸುಧಾರಿಸುವ ಕಾರ್ಯ ಮೊದಲು ಈಗ ನಮಗೆ ಶಾಂತಿಯೇ ಬೇಕಾಗಿದೆ

ಪಾಕಿಸ್ಥಾನಕ್ಕಾದರೂ ಈಗ ಶಾಂತಿಯ ಆವಶ್ಯಕತೆ ತುಂಬಾ ಇರುತ್ತದೆ ಹಿಂದೀ ಸರಕಾರವು ತಮ್ಮನ್ನು ಬಲಾತ್ಕಾರದಿಂದ ಮುರಿಯಲೆತ್ನಿಸುತ್ತಿದೆಯೆಂಬ ದೌರ್ಬಲ್ಯಜನಿಕ ಹುಚ್ಚನ್ನು ಇವರು ಬಿಟ್ಟು ನ್ಯಾಯರೀತಿಯಲ್ಲಿ ವರ್ತಿಸುವುದೇ ಅಲ್ಲಿಯ ಪ್ರಜೆಗಳ ಹಿತಕ್ಕೂ ಅಗತ್ಯವಿರುತ್ತದೆ

ಜುನಾಗಡ ಹಿಂದೀ ಸರಕಾರಕ್ಕೆ ಸೇರಲಿ ಕಾಶ್ಮೀರ ಬೇಕಿದ್ದರ ಪಾಕಿಸ್ಥಾನಕ್ಕೇನೆ ಸೇರಲಿ ಯಾರೂ ಬೇಡವೆನ್ನುವಂತಿಲ್ಲ ಪಾಕಿಸ್ಥಾನದಲ್ಲಿಯೂ ಹಿಂದುಸ್ಥಾನದಲ್ಲಿಯೂ ಜಾತಿಭೇದವೆಣಿಸದೆ ಎಲ್ಲಾ ಪ್ರಜೆಗಳ ಹಿತವು ಸಾಧಿಸಲ್ಪಡುವಂತಾಗಲಿ ಇದು ಎಲ್ಲರಿಗೂ ಶ್ರೇಯಸ್ಕರವಾದ ಹಾದಿ ಆದರೆ ಕ್ವಾದೇ ಅಜಾಮ ಜಿನ್ನಾ ಸಾಹೇಬರು ಆಗಿಂದಾಗ ಪ್ರಕಟಿಸುವ ಹೇಳಿಕೆಗಳನ್ನು ಕಂಡರೆ ಅವರು ತಮ್ಮ ಆ ಹಿಂದಿನ ರಾಜಕೀಯ ಮುತ್ಸದ್ದಿತನ ಬಿಟ್ಟು ಸರಳ ಹಾದಿಗೆ ಬರುವ ಲಕ್ಷಣಗಳು ಕಾಣುವುದಿಲ್ಲ ತಮ್ಮ ಮುಂದಾಳ್ತನದ ದೌರ್ಬಲ್ಯವನ್ನಡಗಿಸಲು ಪ್ರಜಾಹಿತವನ್ನು ಕೂಡಾ ಅಲಕ್ಷಿಸಿ ಇವರು ಯುದ್ಧವನ್ನು ತಂದೊಡ್ಡುವಷ್ಟಕ್ಕೂ ಮುಂದೆ ಸಾಗಬಹುದೆ?

ಗ್ರಾಮ ಸಮಿತಿಗಳ ಮುಕ್ತಾಯ

ಆಹಾರ ಧಾನ್ಯಗಳ ಅಂದರ ಮುಖ್ಯವಾಗಿ ಅಕ್ಕಿ ಸಂಗ್ರಹದ ಕಾರ್ಯದಲ್ಲಿ ಸರಕಾರಕ್ಕೆ ಸಹಾಯ ಮಾಡಲು ಪ್ರಕಾಶಮ್ ಮಂತ್ರಿಮಂಡಲದ ಕಾಲದಲ್ಲಿ ಗ್ರಾಮ ಸಮಿತಿಗಳ ಏರ್ಪಾಡಾಗಿತ್ತಷ್ಟೆ ಈ ಸಮಿತಿಗಳಿಂದ ಉಪಕಾರವಾಗುವ ಬದಲು ಸಂಗ್ರಹ ಕಾರ್ಯಕ್ಕೆ ತೊಂದರೆಯೇ ಹೆಚ್ಚಾಯಿತೆಂಬ ಕಾರಣದಿಂದ ಈ ಕಮಿಟಿಗಳನ್ನು ಈಗಿನ ಸರಕಾರದವರು ಅಂತ್ಯಪಡಿಸಿರುತ್ತಾರೆ ಆಡಳಿತದಲ್ಲಿ ಗ್ರಾಮಸ್ಥರಿಗೆ ಹಕ್ಕು ಬಾಧ್ಯತೆಗಳನ್ನು ಕೊಡುವ ಈ ಮೊದಲ ಪ್ರಯತ್ನವು ಈ ರೀತಿ ಅಪಯಶಸ್ಸಿನಲ್ಲಿ ಕೊನೆಗೊಂಡದ್ದು ಶೋಚನೀಯವೆನ್ನಬೇಕು

ಗ್ರಾಮ ಸಮಿತಿಗಳಲ್ಲಿ ಆಯಾ ಗ್ರಾಮಗಳ ಮುಂದಾಳುಗಳೇ ಹೆಚ್ಚಿನ ಮಟ್ಟಿಗೆ ಸೇರಿಸಲ್ಪಟ್ಟಿದ್ದರೆಂಬುದನ್ನು ಅಲ್ಲಗಳೆಯುವಂತಿಲ್ಲ ಆದರೂ ಈ ಸಮಿತಿಗಳು ಸರಿಯಾಗಿ ವರ್ತಿಸಲಿಲ್ಲವೇಕೆ? ತಮ್ಮ ತಮ್ಮ ಸ್ವಾರ್ಥವನ್ನೇ ಮುಂದರಿಸಿಕೊಂಡು ತಾವು ಯಾವ ಸಾರ್ವಜನಿಕ ಜವಾಬ್ದಾರಿಗೂ ಅಯೋಗ್ಯರೆಂದು ನಮ್ಮ ಗ್ರಾಮಸ್ಥರು ತೋರಿಸಿಕೊಂಡರೆ!

ಭಾಷಾವಾರು ಪ್ರಾಂತ ರಚನೆ.

ಮದ್ರಾಸಿನ ಶಾಸನ ಸಭೆಯಲ್ಲಿ ಡಾ। ರಾಜನರು ಭಾಷಾವಾರು ಪ್ರಾಂತ ರಚನೆಯಾಗಬೇಕೆಂದು ತಂದ ನಿರ್ಣಯವು ಸಾಕಷ್ಟು ಚರ್ಚೆಯಾದ ಬಳಿಕ ಮಂಜೂರಾಯಿತು. 1921ರಿಂದ ಕಾಂಗ್ರೆಸು ಒಪ್ಪಿಕೊಂಡು ಬಂದ ಈ ವಿಚಾರದಲ್ಲಿ ಇಷ್ಟು ಆಕ್ಷೇಪ ಬರಬಹುದೆಂದು ಪ್ರಾಯಶಃ ಯಾರೂ ಭಾವಿಸಿರಲಿಲ್ಲ. ವಿರುದ್ಧ ಪಕ್ಷದವರು ತಂದೊಡ್ಡಿದ ತರ್ಕ ಸರಣಿಯಲ್ಲಿ ಸಾಕಷ್ಟು ಸತ್ಯಾಂಶ ಕಂಡುಬಂದುದರಿಂದ ಈ ಕುರಿತಾದ ತರ್ಕವು ಮೇಲ್ಮಟ್ಟದಲ್ಲಿ ನಡೆಯಿತೆಂದು ಡಾ। ರಾಜನರೇ ಒಪ್ಪುವಂತಾಯಿತು.

ಭಾಷಾವಾರು ಪ್ರಾಂತ ರಚನೆಗೆ ವಿರುದ್ಧ ಪಕ್ಷದವರು ಹೇಳುವ ವಿಚಾರಗಳು ಸಾಮಾನ್ಯ ಜನರಿಗೆ ಪರಿಚಿತವಿಲ್ಲದ ವಿಷಯಗಳೆಂಬುದರಿಂದ ಅವನ್ನು ಸಂಗ್ರಹಿಸಿ ಮಹಾಜನರ ಅವಗಾಹನೆಗಾಗಿ ಮುಂದಿಡುವುದು ಅಗತ್ಯವಿರುತ್ತದೆ. ಅನೇಕರು ಹೇಳುತ್ತ ಬಂದಿರುವರೆಂಬುದರಿಂದ ಒಂದು ವಿಷಯವನ್ನು ಒಪ್ಪಿಕೊಳ್ಳುವ ಅಭ್ಯಾಸ ಒಳ್ಳೆಯದಲ್ಲ. ಸ್ವತಂತ್ರ ಜನರ ಲಕ್ಷಣವಲ್ಲ. ಸ್ವತಂತ್ರ ಹಿಂದುಸ್ಥಾನವು ನಿಜವಾದ ಪ್ರಗತಿಯನ್ನೈದಬೇಕಾದರೆ ಪ್ರತಿಯೊಬ್ಬ ಪ್ರಜೆಯೂ ಸ್ವತಂತ್ರವಾಗಿ ವಿಚಾರ ಮಾಡುವ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಮಾತ್ರವಲ್ಲ ಹತ್ತು ಮಂದಿಯ ಅಭಿಪ್ರಾಯಕ್ಕೆ ವಿರುದ್ಧವಾಗಿಯಾಗಿಯಾದರೂ ತನ್ನ ಭಿನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಿಂಜರಿಯಬಾರದು. ಭಾಷಾವಾರು ಪ್ರಾಂತ ರಚನೆಯ ವಿಷಯವು ಕೂಡಾ ಭಿನ್ನಾಭಿಪ್ರಾಯಗಳಿಗೆ ಆಸ್ಪದ ಕೊಡುವಂತಹದೆಂದು ಹೇಳಿದರೆ ಕರ್ನಾಟಕದ ಏಕೀಕರಣದ ವೀರರು ನಮ್ಮನ್ನು ಕ್ಷಮಿಸಬೇಕು.

ಒಮ್ಮೆ ಮನುಷ್ಯ ಕುಲದವರು ಒಟ್ಟುಸೇರಿ ಆಕಾಶಕ್ಕೆ ಮುಟ್ಟುವ ಒಂದು ಕಟ್ಟಡ ಕಟ್ಟಲು ಯತ್ನಿಸಿದರೆಂದೂ ಇದಾಗಗೊಡಲು ಮನಸ್ಸಿಲ್ಲದ ದೇವರು ಇವರು ಭಾಷಾಭೇದವನ್ನು ತಂದೊಡ್ಡಿದರೆಂದೂ ಆಗ ಇವರೊಳಗೆ ಸಾಕಷ್ಟು ಭೇದಬುದ್ಧಿಯು ತಲೆದೋರಿ ಇವರ ಯತ್ನವು ಫಲಿಸದಂತಾಯಿತೆಂದೂ ಕ್ರೈಸ್ತರ ಬೈಬಲ್ ಗ್ರಂಥದಲ್ಲಿ ಒಂದು ಕಥೆ ಇದೆ. ಭಾಷೆಗೆ ಪ್ರಾಮುಖ್ಯತೆಯನ್ನು ಕೊಟ್ಟು ಪ್ರಾಂತ ವಿಭಾಗ ಮಾಡುವುದರಿಂದ ಪರಸ್ಪರ ಅಂತಃಕಲಹ ಹೆಚ್ಚಿಸಲು ಬಹಳ ಸಹಕಾರಿಯಾಗುವುದರಿಂದ ಬ್ರಿಟಿಷರು ಭಾಷಾವಾರು ಪ್ರಾಂತಗಳನ್ನಾಗಿ ಹಿಂದುಸ್ಥಾನವನ್ನು ವಿಭಾಗಿಸಿದ್ದರೆ ಆದರೆ ಅವರು ಇನ್ನೂ ಒಂದು ಶತಮಾನ ಹಿಂದುಸ್ಥಾನ ಆಳಬಹುದಿತ್ತೆಂದು ಒಬ್ಬ ಮಿತ್ರರು ವಾದಿಸುತ್ತಿದ್ದರು. ಇವರ ಮಾತಿನಲ್ಲಿ ತುಂಬಾ ಸತ್ಯಾಂಶವಿದೆಯೆಂದು ಹೇಳಲು ಕಷ್ಟವಿಲ್ಲ.

ಕರ್ನಾಟಕ ಪ್ರಾಂತರಚನೆಯ ಚಳವಳದ ಆದಿಯಿಂದ ಬೆಳಗಾವಿ ಮೊದಲಾದೆಡೆ ಕನ್ನಡಿಗರಿಗೂ ಮಹಾರಾಷ್ಟ್ರದವರಿಗೂ ಆಗುವ ಜಗಳಗಳ ವಾರ್ತೆ ಕೇಳಿ ಹಲವರು ಬೇಸತ್ತಿರಬೇಕು. ದೇಶಭಕ್ತ ಗಂಗಾಧರರಾಯರಂಥ ಉಜ್ವಲ ಮುಂದಾಳುಗಳನ್ನು ಕೂಡ ದೂಷಿಸಲು ಕನ್ನಡಿಗರು ಹಿಂಜರಿಯದಷ್ಟು ಈ ಕನ್ನಡದ ಅಭಿಮಾನವು ಕುರುಡು ಬುದ್ಧಿಯನ್ನು ತಾಳಿತ್ತು. ಬಳ್ಳಾರಿಯಲ್ಲಿ ಕನ್ನಡಿಗರಿಗೂ ತೆಲುಗರಿಗೂ ಕಲಹ. ಕೇಳಪ್ಪನವರನ್ನು ನಿಂದಿಸಿದಷ್ಟು ನಮ್ಮ ಜಿಲ್ಲೆಯ ಕನ್ನಡಾಭಿಮಾನಿಗಳಿಗೆ ಇನ್ನೂ ತೃಪ್ತಿಯೆನಿಸುತ್ತಿಲ್ಲ. ಸಂದರ್ಭ ಸಿಕ್ಕಿದಾಗಲೆಲ್ಲ ಒಂದು ಕಲ್ಲು ಎಸೆಯದೆ ಬಿಡುವುದಿಲ್ಲ. ಹೀಗೆ ಭಾಷಾವಾರು ಪ್ರಾಂತ ಆಗುವ ಮೊದಲೇ ಈ ಬಗೆಯ ಪರಿಣಾಮವಾದರೆ ಮುಂದೆ ಹೇಗೆ?

ಈಗ ಇದ್ದ ಪ್ರಾಂತದ ಸರಕಾರದವರು ಆರ್ಥಿಕ ಅಭಿವೃದ್ಧಿಗಾಗಿ ಕೈಕೊಂಡಿರುವ ಹಲವು ಯೋಜನೆಗಳನ್ನು ಅಲ್ಲಲ್ಲಿಗೆ ಬಿಟ್ಟು ಹೊಸ ಸರಕಾರಗಳನ್ನು ರಚಿಸಿಕೊಳ್ಳುವುದರಿಂದ ಆರ್ಥಿಕ ಪ್ರಗತಿಗೆ ತಾತ್ಕಾಲಿಕವಾಗಿ ಯಾವ ಬಗೆಯ ತೊಂದರೆಗಳು ಬರಲಿವೆಯೆಂಬುದನ್ನು ಮದ್ರಾಸಿನ ಶಾಸನ ಸಭೆಯಲ್ಲಿ ಮಾತನಾಡಿದ ಹಲವರು ಸ್ಪಷ್ಟಪಡಿಸಿದ್ದಾರೆ. ಆರ್ಥಿಕ ಯೋಜನೆಗಳಿಗೆ ಪ್ರಾಂತ್ಯವು ಭಾಷಾವಾರು ಇರಬೇಕೆಂದಿಲ್ಲ. ಭೌಗೋಲಿಕ ಅನುಕೂಲತೆಗಳು ಇದಕ್ಕೆ ಮುಖ್ಯ. ಈ ಅಂಶವನ್ನು ಅಲ್ಲಗಳೆಯಲು ಸಾಧ್ಯವಿದೆಯೆ?

ಮದ್ರಾಸು ಪ್ರಾಂತದಲ್ಲಿ ತೆಲುಗರು, ತಮಿಳರು, ಕೇರಳದವರು ಮತ್ತು ಕನ್ನಡಿಗರು ಇವರು ಪರಸ್ಪರ ಸ್ಪರ್ಧೆ ... ಕೊಂಡು ಕಾರ್ಯನಿರತರಾಗುತ್ತಿದ್ದೆಂದು ತೋರಿಸಿದರೆ ಈ ಬಗೆಯ ಭೇದ ... ಭಾಷಾವಾರು ಪ್ರಾಂತ ರಚನೆಯ ತಳವಳದ ದಸೆಯಿಂದ ಎಂದು ... ಹೇಳಲು ಕಷ್ಟವಿಲ್ಲ.

ಇನ್ನು ಸಂಸ್ಕೃತಿಯ ಮಾತೆ. ಅಖಿಲ ಭಾರತದ ಸಂಸ್ಕೃತಿಯು ನಿಜವಾಗಿ ನೋಡಿದರೆ ಹೆಚ್ಚಿನವುಗಳಲ್ಲಿ ಒಂದೇ ಇದ್ದು ಆಯಾ ಭಾಷೆಯವರ ಸಂಸ್ಕೃತಿ ಭಿನ್ನವೆಂಬುದು ಕೇವಲ ಕಾಲ್ಪನಿಕ ಭಾವನೆಯೆಂದು ವಾದಿಸಬಹುದು.

ಸಾರಾಂಶ ಆಯಾ ಭಾಷೆಯ ಜನರ ಪ್ರಾಂತ್ಯ ಪ್ರತ್ಯೇಕ ಮಾಡಿ ಹಿಂದುಸ್ಥಾನದಲ್ಲಿ ಹಲವು ರಾಷ್ಟ್ರಗಳನ್ನು ಮಾಡಿ ಕೇಂದ್ರ ಸರಕಾರವನ್ನು ದುರ್ಬಲಗೊಳಿಸುವ ಈ ಧೋರಣೆ ಈಗಿನ ದಿನಗಳಲ್ಲಿ ಪ್ರಯೋಜನವಿದೆಯೆ? ಎಂದು ಸರಿಯಾಗಿ ವಿಚಾರಿಸಬೇಕು.

ಹಿಂದುಸ್ಥಾನವು ಬಲವಾದ ಕೇಂದ್ರ ಸರಕಾರದಿಂದ ಕೂಡಿದ ಆಧುನಿಕ ರಾಷ್ಟ್ರವಾಗಬೇಕು. ನಮ್ಮಲ್ಲಿಯ ದೊಡ್ಡ ಕೈಗಾರಿಕೆಗಳನ್ನು ಪಾಶ್ಚಾತ್ಯರಿಗಿಂತ ಮಿಗಿಲಾಗಿ ಬೆಳೆಸಬೇಕು. ಇತ್ಯಾದಿ ಆಕಾಂಕ್ಷೆಗಳನ್ನಿಟ್ಟುಕೊಂಡು ಈ ಪ್ರಶ್ನೆಯನ್ನು ಪರಿಶೀಲಿಸಲು ಹೊರಡುವ ರಾಜಕೀಯ ಮುತ್ಸದ್ದಿಗಳಿಗೆ 'ಭಾಷಾವಾರು ಪ್ರಾಂತರಚನೆಯ ಚಳವಳವೊಂದು ಅರ್ಥರಹಿತ ಉಪಟಳವೆಂದೇ ಭಾಸವಾಗಲು ಸಾಕಷ್ಟು ಕಾರಣಗಳಿವೆ.

ಅಹಿಂಸಾತ್ಮಕ ಸಂಸ್ಕೃತಿಯುಳ್ಳ ಅಖಂಡ ವಿಶ್ವಾಸವಿಟ್ಟು ಕೇಂದ್ರೀಕೃತವಾದ ಬಲಿಷ್ಠ ಆಡಳಿತೆಗಿಂತ ವಿಕೇಂದ್ರೀಕರಣವೇ ಉತ್ತಮವೆಂದು ವಾದಿಸಿ ಸನ್ನಿಧಿಯಲ್ಲಿ ಐಕ್ಯತೆಯನ್ನು ಸಾಧಿಸುವಷ್ಟು ಮಟ್ಟಿಗೆ ಮಾತ್ರ ಕೇಂದ್ರ ಸರಕಾರ ಅಗತ್ಯವೆಂಬ ದೃಷ್ಟಿಯನ್ನಿಟ್ಟುಕೊಂಡು ಈ ಪ್ರಶ್ನೆಯ ಪರಿಶೀಲನ ಮಾಡಿದರೆ ಭಾಷಾವಾರು ಪ್ರಾಂತ ರಚನೆಯು ದೇಶವನ್ನು ಪ್ರಾಂಶಗಳನ್ನಾಗಿ ವಿಭಜಿಸುವ ಸಹಜ ಕ್ರಮವೆಂಬುದು ಮಂದಟ್ಟಾಗುವುದು. ಗ್ರಾಮ ಸಮಾಜಗಳನ್ನು ಸ್ವತಂತ್ರವಾಗಿ ಬೆಳೆಸಬೇಕೆಂಬ ಧ್ಯೇಯವಿದ್ದಲ್ಲಿ ದೊಡ್ಡ ಕೈಗಾರಿಕೆಗಳ ಪ್ರಾಮುಖ್ಯತೆ ಕಡಮೆಯಿರುವುದರಿಂದ ಪ್ರಾಂತ್ಯ ರಚನೆಯ ತತ್ವವು ಭೌಗೋಲಿಕವಿರುವುದಕ್ಕಿಂತ ಮನುಷ್ಯವರ್ಗದ ಅನುಕೂಲತೆಗಳನ್ನೇ ಅನುಸರಿಸುವುದು. ಭಾರತೀಯ ಸಂಸ್ಕೃತಿಯು ಬಹು ಅಂಶದಲ್ಲಿ ಸಮಾನವೆಂಬ ಮಾತು ನಿಜವಿದ್ದರೂ ಆಯಾ ಭಾಷೆಯನ್ನಾಡುವ ಜನರು ಆ ಭಾರತೀಯ ಸಂಸ್ಕೃತಿಗೆ ತಮ್ಮದೇ ಆದ ವಿಶಿಷ್ಟ ದಾನವನ್ನು ಕೊಡಬಲ್ಲರೆಂಬ ಮಾತು ಪೂರ್ಣ ಕಾಲ್ಪನಿಕವೆಂದು ಕಿತ್ತೊಗೆಯುವಂತಿಲ್ಲ. ಒಂದು ನುಡಿಯನ್ನಾಡುವವರು ಒಂದು ಜನವಿದ್ದು ಅವರು ಸುಲಭವಾಗಿ ಕಲೆತು ತಮ್ಮ ಪ್ರಗತಿಯನ್ನು ಸಾಧಿಸಬಲ್ಲರೆಂಬುದು ನಿರ್ವಿವಾದವಿರುತ್ತದೆ.

ಭಾಷಾಭಿಮಾನ ಅಥವಾ ಕರ್ನಾಟಕ ಏಕೀಕರಣದಂದ ಚಳವಳ ಸಂಕುಚಿತ ಬುದ್ಧಿಯನ್ನೇ ತೋರಿ ನಡೆಯಬೇಕೆಂಬ ನಿಯಮವಿಲ್ಲ. ಇದು ಜಗಳವನ್ನು ತಂದೊಡ್ಡಲೇಬೇಕೆಂದಿಲ್ಲ. ಕರ್ನಾಟಕವು ಒಂದಾಗಬೇಕು ಮತ್ತು ಅದು ಇತರ ಪ್ರಾಂತಗಳೊಡನೆ ಸಮರಸದಲ್ಲಿ ಸಮನ್ವಯಗೊಂಡು ಭಾರತದ ಪ್ರಗತಿಯನ್ನು ಸಾಧಿಸುವುದರಲ್ಲಿ ಸಹಕರಿಸಬೇಕು ಎಂಬ ಭಾವನೆ ಏಕೀಕರಣಕ್ಕಾಗಿ ದುಡಿಯುವ ಹೆಚ್ಚಿನ ಕೆಲಸಗಾರರಲ್ಲಿ ಇದೆಯೆಂಬ ಬಗ್ಗೆ ಸಂಶಯವಿಲ್ಲ. ಕೆಲವು ಮಂದಿ ಸಂಕುಚಿತ ಬುದ್ಧಿ ತೋರಿದ ಮಾತ್ರಕ್ಕೆ ಇಡೀ ಚಳವಳವನ್ನೇ ದೂರುವುದು ನ್ಯಾಯವಾಗಲಾರದು.

ಕೊನೆಗೆ ಆರಂಭದಲ್ಲಿ ಹೇಳಿದ ಆ ಬೈಬಲಿನ ಕಥೆ ಸೂಚಿಸುವುದಾದರೂ ಏನು? ಒಂದೇ ಭಾಷೆಯನ್ನು ಆಡುವವರು ಒಟ್ಟುಸೇರಿದಲ್ಲಿ ಮಹಾತ್ಕಾರ್ಯ ಸಾಧಿಸಲು ಸಾಧ್ಯವಲ್ಲವೆ?

ಮಹಾತ್ಮಾ ಗಾಂಧಿಯವರು ತಮ್ಮ ದೃಷ್ಟಿಯಿಂದ ವಿವೇಚಿಸಿ ಭಾಷಾವಾರು ಪ್ರಾಂತ ರಚನೆಯ ಆವಶ್ಯಕತೆಯನ್ನು ಕಂಡುಕೊಂಡರು. ಕಾಂಗ್ರೆಸು ಸಂಸ್ಥೆಯು ಇದನ್ನು ಅಂಗೀಕರಿಸಿ ಆ ಸಂಸ್ಥೆಯು ಈ ತತ್ವದ ಮೇಲೆಯೇ ತನ್ನ ಕಾರ್ಯಗಳನ್ನು ನಡೆಸುತ್ತ ಬಂದಿದೆ. ಆದರೆ ಮುಂದೆ ಏನು? ಎಂಬ ಪ್ರಶ್ನೆ ಈಗ ನಮ್ಮೆದುರು ಬರುತ್ತಿದೆ. ಗಾಂಧೀಜಿಯವರು ತೋರಿಕೊಟ್ಟ ತತ್ವಗಳಲ್ಲಿ ಒಮ್ಮನದಾಗಿ ಜನರು ಹಿಡಿದುಕೊಂಡಿರುವ ಸಮಯವಿದು. ಅವರ ಈ ಭಾಷಾವಾರು ಪ್ರಾಂತ ರಚನೆಯ ಭಾವನೆಯೂ ಮಾಯವಾಗುವಂತಿದೆಯೆ?

ಮಹಾಜನರು ಇಂಥ ಪ್ರಶ್ನೆಗಳಿಗೆ ಸಂಬಂಧಪಟ್ಟ ನಿಜವಾದ ವಿಚಾರಗಳ ಪರಿಚಯವನ್ನು ಚೆನ್ನಾಗಿ ಮಾಡಿಕೊಳ್ಳಬೇಕು. ಅವನ್ನು ಕುರಿತು ಸರಿಯಾಗಿ ಮನನಮಾಡಬೇಕು. ಸ್ವತಂತ್ರ ಬುದ್ಧಿಯಿಂದ ತೀರ್ಮಾನಿಸಬೇಕು. ಇದು ಎಲ್ಲಕ್ಕೂ ಮುಖ್ಯ ವಿಷಯವೆಂಬುದನ್ನು ಮರೆಯಬಾರದು. ತೀರ್ಮಾನವು ಸರಿಯಿರಲಿ ತಪ್ಪಿರಲಿ ದೊಡ್ಡದಲ್ಲ. ತಪ್ಪಾದರೆ ಮತ್ತೆ ಸರಿಮಾಡಲು ಬರುತ್ತದೆ. ಪ್ರಜಾಜನರು ತಾವೇ ವಿಚಾರಮಾಡಿ ತೀರ್ಮಾನಿಸಲು ಕಲಿತರೆ ಮಾತ್ರ ದೇಶದ ಅಭ್ಯುದಯ ಸಾಧ್ಯವಾಗುತ್ತದೆ.

ರೆವೆನ್ಯೂ ಇಲಾಖೆಯ ನೌಕರರಿಗೂ ನಮ್ಮ ಗ್ರಾಮ ಸಮಿತಿಯವರಿಗೂ ಆರಂಭದಿಂದಲೂ ಸರಿಬೀಳುತ್ತಿರಲಿಲ್ಲವೆಂಬ ಮಾತು ನಿಜವಿರುತ್ತದೆ. ಈ ಅಧಿಕಾರಿಗಳು ಗ್ರಾಮ ಸಮಿತಿಯವರೊಡನೆ ಮೊದಲಿಂದಲೂ ಸಹಕರಿಸಿ ಕೆಲಸಮಾಡಲಿಲ್ಲ. ಇದೊಂದು ತಮ್ಮ ಸ್ವಾತಂತ್ರ್ಯಕ್ಕೆ ಅಡ್ಡಿಯೆಂಬ ಭಾವನೆಯಿಂದ ನಡೆದಂತೆ ಕಾಣುತ್ತದೆ. ಕೊನೆಗೆ ಗ್ರಾಮ ಸಮಿತಿಗಳು ಸಂಗ್ರಹ ಕಾರ್ಯ ಹಿಂದೆ ಬೀಳಲು ಮುಖ್ಯ ಕಾರಣವೆಂಬ ವರದಿಯೂ ಇವರ ಕಡೆಯಿಂದಲೇ ಬಂದಿರಬೇಕು.

ಅಂತೂ ಗ್ರಾಮ ಸಮಿತಿಯವರಿಗೆ ಮುಂದಾಗಿ ಅಧಿಕಾರಗಳನ್ನು ಕೊಡಲು ಏರ್ಪಡಿಸಿದ ವ್ಯವಸ್ಥೆಯೇ ತಪ್ಪೆನ್ನಬೇಕಲ್ಲದೆ ಗ್ರಾಮಸ್ಥರೆಲ್ಲರೂ ಅಯೋಗ್ಯರೆನ್ನುವ ಮಾತು ಸರಿಯಾಗಲಾರದು. ಆಹಾರ ಬೆಳೆ ಹೆಚ್ಚಿಸುವುದೇ ಮೊದಲಾದ ಕರ್ತವ್ಯ ಹಾಗೂ ಜವಾಬ್ದಾರಿಯ ಕಾರ್ಯಗಳನ್ನು ಇವರಿಗೆ ಒಪ್ಪಿಸುವುದೇ ಯೋಗ್ಯವಿತ್ತು. ಅದರ ಬದಲು ಒಂದೇ ಅಧಿಕಾರಕ್ಕೆ ಇತ್ತಂಡದವರ ನೇಮಕ ಮಾಡಿದಲ್ಲಿ ಇದು ಸರಿಯಾಗಿ ನಡೆಯದಿದ್ದುದರಲ್ಲಿ ಆಶ್ಚರ್ಯವಿಲ್ಲ.

ತಾಲೂಕು ಹಾಗೂ ಜಿಲ್ಲಾ ಆಹಾರ ಸಮಿತಿಯ ಭವಿಷ್ಯವೇನೆಂದು ಸ್ಪಷ್ಟವಾಗಿಲ್ಲ. ಇವುಗಳನ್ನಾದರೂ ಇಟ್ಟುಕೊಂಡು ಇವುಗಳನ್ನು ಕೇವಲ ಭೂಷಣಕ್ಕಾಗಿ ಇಟ್ಟು ಉಪಚಾರಿಕವಾಗಿ ಇವುಗಳ ಅಭಿಪ್ರಾಯ ಕೇಳುತ್ತಲಿರುವುದಕ್ಕಿಂತ ಈ ಸಮಿತಿಗಳಾದರೂ ಪ್ರಜಾ ಮುಂದಾಳುಗಳು ಆಹಾರ ಪ್ರಶ್ನೆಗಾಗಿ ದುಡಿಯತಕ್ಕ ರೀತಿಯಲ್ಲಿ ಇವರು ದುಡಿಯುವಂತೆ ಸಾಧಿಸುವುದು ಶ್ರೇಯಸ್ಕರ.

ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ಹಿಂದುಸ್ಥಾನದ ವಿಜಯ

ಜನರಲ್ ಸ್ಮಟ್ಸರ ದಕ್ಷಿಣ ಆಫ್ರಿಕ ಸರಕಾರದವರು ಪಶ್ಚಿಮ ಆಫ್ರಿಕದ ಮೇಲೆ ಕಣ್ಣಿಟ್ಟು ಇಡೀನ್ನ ತಮ್ಮ ರಾಜ್ಯಕ್ಕೇನೆ ಸೇರಿಸಿಕೊಳ್ಳುವ ನಿರ್ಧಾರ ಮಾಡಿಕೊಂಡಿದ್ದರು. ಪ್ರಥಮ ಮಹಾಯುದ್ಧಾನಂತರ ಸ್ಥಾಪಿತವಾದ ಲೀಗ್ ಆಫ್ ನೇಶನ್ಸ್ ಸಂಸದವರು ಅಲ್ಲಲ್ಲಿ ಮಾಡಿಟ್ಟ ಮ್ಯಾಂಡೇಟ್ ಪ್ರದೇಶಗಳಿಗೆ ಈಗ ಈ ಮಹಾಯುದ್ಧಾನಂತರ ಸ್ಥಾಪಿತವಾದ ಸಂಯುಕ್ತ ರಾಷ್ಟ್ರಗಳ ಸಂಸದವರು ಟ್ರಸ್ಟಿಶಿಪ್ ಸ್ಕೀಮುಗಳನ್ನು ತಯಾರಿಸುತ್ತಲಿರುವ ತೆ ಪಶ್ಚಿಮ ಆಫ್ರಿಕಕ್ಕೆ ಸ್ಮಟ್ಸ್ ಸರಕಾರದವರು ಒಂದು ಯೋಜನೆ ತಯಾರಿಸಬೇಕೆಂಬ ಸೂಚನ ಹಿಂದೀ ಸರಕಾರದ ಕಡೆಯಿಂದ ಮುಂದೊತ್ತಲಾಗಿತ್ತು. ದಕ್ಷಿಣ ಆಫ್ರಿಕ ಸರಕಾರಕ್ಕೆ ಇದು ಇಷ್ಟವಿಲ್ಲದ ವಿಷಯವಾದರೂ ಪಶ್ಚಿಮ ಆಫ್ರಿಕದ ಭಾವೀ ಹಿತಕ್ಕಾಗಿ ಅಲ್ಲಿದ್ದ ಆಫ್ರಿಕನ್ ನಿವಾಸಿಗಳ ಶ್ರೇಯಸ್ಸಿಗಾಗಿ ಈ ಹಿಂದೀ ಸರಕಾರದ ಈ ಸೂಚನೆಯು ಅತ್ಯಾವಶ್ಯಕ ವಿಷಯವೆನ್ನಲು ಅಡ್ಡಿಯಿಲ್ಲ.

ಈ ಕುರಿತು ಸಾಕಷ್ಟು ಚರ್ಚೆಯಾಗಿ ಕೊನೆಗೆ ಬ್ರಿಟಿಷ್ ಸರಕಾರ ಕೂಡಾ ವಿರೋಧ ಮತ ಕೊಟ್ಟರೂ ಹಿಂದೀ ಸರಕಾರದ ಸೂಚನೆ 41 ಅನುಕೂಲ 10 ಪ್ರತಿಕೂಲ ಮತಗಳಿಂದ ಮಂಜೂರಾಯಿತೆಂದು ಈಗ ತಾನೆ ಪ್ರಕಟವಾದ ವಾರ್ತೆ ಸಂತೋಷವನ್ನುಂಟುಮಾಡುವಂತಹುದು.

ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ಹಿಂದೀ ಸರಕಾರದ ಸೂಚನೆಗೆ ಈ ರೀತಿ ದೊರಕಿತ ವಿಜಯಕ್ಕೆ ಶ್ರೀಮತೀ ವಿಜಯಲಕ್ಷ್ಮೀ ಪಂಡಿತರೇ ಮೊದಲಾದ ಇಲ್ಲಿಯ ಪ್ರತಿನಿಧಿಗಳ ಜಾಣ್ಮೆ ಮಾತ್ರವಲ್ಲ ಆ ಸಭೆಯಲ್ಲಿ ಸೇರಿದ ರಾಷ್ಟ್ರ ಪ್ರತಿನಿಧಿಗಳ ನ್ಯಾಯಬುದ್ಧಿಯೂ ಕಾರಣವಾಗಿವೆಯೆನ್ನಬಹುದು.

ಸಂಯುಕ್ತ ರಾಷ್ಟ್ರಗಳ ಸಭೆಯು ಬಲಕುಗ್ಗುವಂತಾಗದೆ ಇದರ ಪ್ರತಿಷ್ಠೆ ಹೆಚ್ಚುತ್ತ ಹೋಗಿ ಜಗತ್ತಿನ ಕ್ಷೇಮ ಇದರಿಂದ ಸಾಧಿತವಾಗುವಂತೆ ಎಲ್ಲಾ ರಾಷ್ಟ್ರಗಳೂ ಹಾರೈಸಬೇಕು.

ಜನತೆಯನ್ನು ಬೆರಗುಗೊಳಿಸುವ ಮಹಾ ವ್ಯಕ್ತಿ

ಸೈನ್ಯಗಳಿಗೆ ಸಾಧ್ಯವಿಲ್ಲದ ಕೆಲಸ ಮಾಡಿದ ಮಹಾತ್ಮಾ

ಕ್ರೈಸ್ತ ವಿಜ್ಞಾನ ಪ್ರಸಾರಕರ ಗಾಂಧೀ ಶ್ಲಾಘನ

ಸಂಯುಕ್ತ ಅಮೇರಿಕದ ಕ್ರಿಶ್ಚಿಯನ್ ಸಾಯನ್ಸ್ ಮೊನಿಟರ್ ಪತ್ರಿಕೆಯ ದಿಲ್ಲಿ ಬಾತ್ಮಿದಾರನು ಕಳೆದೆರಡು ವಾರಗಳ ಹಿಂದೆ ತಾನು ಮಹಾತ್ಮರನ್ನು ಸಂದರ್ಶಿಸಿ ಸಂಭಾಷಣೆ ನಡೆಸಿದುದನ್ನು ಕ್ರೈಸ್ತ ತತ್ವ ವಿಜ್ಞಾನ ಪ್ರಸಾರಕ ಧ್ಯೇಯದ ತನ್ನ ಪತ್ರಿಕೆಯ ಓದುಗರಿಗಾಗಿ ಪ್ರಕಟಿಸಿದ್ದಾನೆ. ರೊನಾಲ್ಡ್ ಸ್ಟೀಡ್ ಎಂಬಾ ಪತ್ರಿಕಾ ಪ್ರತಿನಿಧಿಯು ಹೀಗೆ ಬರೆದಿದ್ದಾನೆ:

ಭಾರತದ ಪ್ರಖ್ಯಾತ ಮುಖಂಡನೊಡನೆ ವ್ಯಕ್ತಿಗತವಾದ ನನ್ನ ಸಂದರ್ಶನವು ಅತ್ಯಪೂರ್ವ ಅನುಭವದ್ದಾಗಿದೆ. ನಮ್ಮ ಓದುಗರೂ ಅದರ ಸ್ವಲ್ಪ ಸವಿಯನ್ನು ನೋಡಲೆಂದಿದನ್ನು ಬರೆದಿದ್ದೇನೆ. ಇದೊ ನೋಡಿ! ಇದು ಮಹಾತ್ಮಾಗಾಂಧಿಯ ಶ್ರದ್ಧಾವಂತ ಅನುಯಾಯಿಗಳಲ್ಲೊರ್ವರಾದ ಶ್ರೀಮಂತ ಬಿರ್ಲಾರವರ ಬಂಗಲೆ. ನಿಮ್ಮ ಪಾದ ರಕ್ಷೆಗಳನ್ನು ತೆಗೆದು ಒಳ ಬನ್ನಿ. ಬಿಸಿಲಿನ ಕಿರಣಗಳಿಣುಕುವ ಇದೇ ಕೋಣೆಯೊಳಗೆ ಗಾಂಧಿಯವರು ನನ್ನನ್ನು ಸ್ವಾಗತಿಸಿದರು. ಮರೆಯದಿರಿ, ಸಾವಿರ ಸೈನಿಕರಿಂದ ನಿಲ್ಲಿಸಲು ಸಾಧ್ಯವಾಗದ ಹಿಂದೂ ಮುಸಲ್ಮಾನ ದಂಗೆಯನ್ನು 'ಮರಣಾಂತ್ಯ ಉಪವಾಸ ಮಾಡುವೆ'ನೆಂಬೊಂದು ನಿರ್ಧಾರ ಪ್ರಕಟಣೆಯಿಂದಲೇ ಶಾಂತತೆಯನ್ನು ಸ್ಥಾಪಿಸಿದ ಮಹಾ ವ್ಯಕ್ತಿ ಇವರು.

ತಲೆಗಿಂಬುಗಳಿಗೆ ಬೆನ್ನಂಟಿಸಿ ಕಾಲುಗಳನ್ನು ಅಡ್ಡಕ್ಕಡ್ಡವಾಗಿ ಮಡಚಿಟ್ಟು ಹಾಸಿಗೆಯೊಂದರಲ್ಲಿ ಗಾಂಧಿ ಕುಳಿತಿದ್ದರು. ನೆರಿಬಿದ್ದ ಮುಖವನ್ನು ಪ್ರಕಾಶಿಸುವ ಮುಗುಳ್ನಗೆಯಿಂದ ಕೈಗಳನ್ನು ಕೆಳದವಡೆ ಬಳಿ ಜೋಡಿಸಿ ಹಿಂದೂ ಪದ್ಧತಿಯಂತೆ ನಮಸ್ಕಾರ ಮಾಡಿ ಸ್ವಾಗತಿಸುವುದು ಅವರ ಕ್ರಮ. ಇಷ್ಟೊಂದು ಹೃತ್ಪೂರ್ವಕ ವಂದನಾ ಕ್ರಮವು ಪಾಶ್ಚಾತ್ಯರ ಯಾವ ಸ್ವಾಗತ ವಿಧಿಯಲ್ಲೂ ಇಲ್ಲವೆನ್ನಬೇಕು.

ಮೂರು ಮಂಗಗಳು

ಅವರೆದುರು ನೆಲದಲ್ಲಿ ಪವಡಿಸಿದವರು ಭಾರತ ಇತಿಹಾಸದಲ್ಲಿ ಬೃಹತ್ ವ್ಯಕ್ತಿಯಾಗಿರುವ ಈ ಪುಟ್ಟ ವಕೀಲನ ಸುತ್ತಲೇ ನಿದೆಯೆಂದು ಅವಲೋಕಿಸುವರು. ಅತೀ ದರಿದ್ರ ಭಾರತೀಯ ರೈತನಂತೇ ಸೊಂಟದ ಮೇಲಿನ ಇವರ ಶರೀರ ಭಾಗವೆಲ್ಲ ಬರಿದಾಗಿದೆ. ಮುಖದ ಮೇಲಿಲ್ಲದೆ ಬೇರೆ ಯಾವ ಭಾಗದಲ್ಲೂ ಇವರಲ್ಲಿ ಮುದಿತನ ಕಾಣುವುದಿಲ್ಲ. ಸ್ವರವಾದರೊ ಅತೀ ಹತ್ತಿರದವರಿಗೆ ಪಿಸುಗುಟ್ಟಿದಂತೇ ಕೇಳಿಸುತ್ತದೆ. ಅವರ ಹತ್ತಿರ ಗಿಡ್ಡ ಕಾಲಿನ ಲೇಖನ ಮಂಚವೊಂದಿದೆ. ಅದರಲ್ಲಿ ಉತ್ತರ ಕಾಯುವ ಪತ್ರಗಳು ಹಲವು ಬಿದ್ದಿರುತ್ತವೆ. ಮತ್ತೊಂದು ಪುಟ್ಟ ಗೊಂಬೆಯೂ ಅಲ್ಲಿ ಅಲಂಕೃತವಾಗಿದೆ. ಈ ಗೊಂಬೆ ಪಾಶ್ಚಾತ್ಯ ದೇಶಗಳಲ್ಲಿ ಪ್ರಖ್ಯಾತವಾಗಿರುವ ಮೂರು ಮಂಗಗಳದ್ದು ಅದರಲ್ಲೊಂದು. ತನ್ನ ಕೈಗಳನ್ನು ಕಣ್ಣುಗಳ ಮೇಲೂ, ಇನ್ನೊಂದು ಕಿವಿಗಳ ಮೇಲೂ ಮತ್ತೊಂದು ಬಾಯಿಯ ಮೇಲೂ ಮುಚ್ಚುವಂತೆ ಇಟ್ಟಿರುತ್ತವೆ. ಅನಿಷ್ಟವನ್ನು ಕಾಣಬಾರದು, ಅನಿಷ್ಟವನ್ನು ಕೇಳಬಾರದು, ಮತ್ತು ಅನಿಷ್ಟವನ್ನು ನುಡಿಯಬಾರದು ಎಂಬುದಿದರ ತಾತ್ವಿಕ ಸಂಕೇತ.

ಭಾರತದಲ್ಲಿಂದು ಪರಸ್ಪರ ಬಡಿದಾಡುವ ಜಾತಿ ಪಕ್ಷದವರಿಗೂ ಮಹಾತ್ಮಾ ಗಾಂಧಿಯವರು ಒಬ್ಬರಿನ್ನೊಬ್ಬರ ವಿಷಯವಾಗಿ ಇದೇ ರೀತಿಯ ವರ್ತನೆಯನ್ನನುಸರಿಸಬೇಕೆಂದು ಬಿನ್ನವಿಸುತ್ತಾರೆ. ಇದೇ ತತ್ವಕ್ಕನುಸಾರವಾಗಿಯೇ ಅವರು ಇತ್ತೀಚೆ ತಮ್ಮ ದೇಶದಲ್ಲಿ ಕಳೆದ ಗೊಂದಲಮಯ ಘಟನೆಗಳ ಕುರಿತು ಮಾತನಾಡಲಿಚ್ಛಿಸುವುದಿಲ್ಲ.

ಮುಸ್ಲಿಮರ ಮತ್ತು ಮುಸ್ಲಿಮೇತರರೆಲ್ಲರ ತಪ್ಪು ವರ್ತನೆಯನ್ನವರು ಏಕ ಪ್ರಕಾರವಾಗಿ ಖಂಡಿಸಿದ್ದಾರೆ. ಈ ಸಂದರ್ಭದಲ್ಲಿ ಅವರು ಅತ್ಯಲ್ಪ ಕಿರುನಗೆಯೊಂದನ್ನು ಬೀರುತ್ತ ಹೀಗೆಂದರು: ನನ್ನನ್ನು ಮುಸಲ್ಮಾನರ ಶತ್ರುವೆಂದೂ ಟೀಕಿಸಲಾಗಿದೆ. ಈಗ ಮುಸಲ್ಮಾನರಂತೇ ಅಕೃತ್ಯಗಳನ್ನು ಮಾಡಿದ ಹಿಂದೂಗಳನ್ನು ಖಂಡಿಸಿದಕ್ಕಾಗಿ ಈಗೀಗ ಕೆಲವು ಕಡೆ ನನ್ನನ್ನು ವೈರಿಯೆಂದೂ ವರ್ಣಿಸಲಾಗುತ್ತದೆ. ನಿಜ ಸಂಗತಿಯೆಂದರೆ ನಾನು ಅಕೃತ್ಯಗಳ ವೈರಿಯಾಗಿದ್ದೇನೆ.

ಕಲ್ಕತ್ತದ ಪರಿಸ್ಥಿತಿಯು ಶಾಂತವಾಗಿದೆಂದು ನಿರೂಪಿಸುತ್ತಾ ಗಾಂಧೀಯವರು ಡಿಲ್ಲಿಯದು ತದ್ವಿರೋಧವಾಗಿದೆನ್ನುತ್ತಾರೆ. ಆದುದರಿಂದಲೇ ಪಂಜಾಬಕ್ಕೆ ಹೋಗುವ ಅವರ ಕಾರ್ಯಕ್ರಮವು ನಿಲ್ಲಿಸಲ್ಪಟ್ಟಿತು. "ಇಲ್ಲಿಯೇ ಮಾಡಲಿಕ್ಕಿರುವ ಸೇವೆ ಬಹಳವಿರುವಾಗ ಅಲ್ಲಿ ಹೇಗೆ ಹೋಗಲಿ?" ಎಂದವರ ಪ್ರಶ್ನೆ.

ಡಿಲ್ಲಿಯಲ್ಲಿ ಕಮ್ಮಿಯೆಂದರೆ 3 ಲಕ್ಷ 40 ಸಾವಿರ ನಿರಾಶ್ರಿತರಿದ್ದರು. ಅಲ್ಲಿನ ನಿರಾಶ್ರಿತ ಶಿಬಿರಗಳಲ್ಲಿ 1 ಲಕ್ಷ 80 ಸಾವಿರ ಮುಸಲ್ಮಾನರು ರಕ್ಷಣೆ ಹೊಂದಿದ್ದರು. ಮತ್ತುಳಿದವರು ಪಶ್ಚಿಮ ಪಂಜಾಬದಿಂದ ಬಂದ ಮುಸ್ಲಿಮೇತರರು. ಇವರು ಹೆಚ್ಚಾಗಿ ತಮ್ಮ ಸಹಧರ್ಮಿಯರ ಮನೆಗಳಲ್ಲಿ ಕಿಕ್ಕಿರಿದಿದ್ದರು.

ದೀರ್ಘ ಕಾಲ ಯೋಜನೆ

ಜಾತೀಯ ವೈಷಮ್ಯದ ಸ್ಥಾನದಲ್ಲಿ ಜಾತೀಯ ತಾಳ್ಮೆ ಸಹಿಷ್ಣುತೆಗಳನ್ನು ಸ್ಥಾಪಿಸುವ ಗಾಂಧಿಯವರ ದೀರ್ಘಾವಧಿ ಯೋಜನೆಗಳು ಈಗ ಪ್ರತ್ಯಕ್ಷ ಅವರಿಂದಲೇ ನಿರ್ವಹಿಸಲ್ಪಡುತ್ತವೆ. ಈಗೀಗ ಇವರು ಆದಷ್ಟು ಹೆಚ್ಚಿನ ಜನಸಂಖ್ಯೆ ಸೇರುವ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುತ್ತ ಜನತೆಯನ್ನು ಪರಿವರ್ತಿಸಲಿಚ್ಛಿಸುತ್ತಾರೆ. ಅವರ ಪ್ರಾರ್ಥನಾ ನಂತರ ಭಾಷಣ ಕಾಲವು ಇದಕ್ಕೆ ಉತ್ತಮ ಸಂಧಿಯನ್ನೊದಗಿಸುತ್ತದೆ.

ನಿರಾಶ್ರಿತರ ಶಿಬಿರಗಳಿಗೆ ಹೋಗಿಯೂ ಅವರು ಭಾಷಣ ಮಾಡುತ್ತ ಅಲ್ಪಸಂಖ್ಯಾಕರಲ್ಲಿ ಭರವಸೆಯನ್ನು ತುಂಬುತ್ತಿದ್ದಾರೆ. ಅಲ್ಪಸಂಖ್ಯಾಕರು ಸ್ಥಳಾಂತರ ಹೋಗಬಾರದೆಂದೂ ಬಹುಸಂಖ್ಯಾಕರಲ್ಲಿ ಅವರ ವಿಷಯವಾಗಿ ತಾಳ್ಮೆ ಆದರಗಳನ್ನು ಪ್ರಚೋದಿಸುವುದಾಗಿಯೂ ಅವರು ಆಶ್ವಾಸನೆಯನ್ನು ಕೊಡುತ್ತಿರುವರು.

ಗಡುತರದ ಕೆಲಸ

ಗಾಂಧಿಯವರ ತತ್ವೋಪದೇಶಗಳೆಲ್ಲ ರೇಡಿಯೋ ಮತ್ತು ಪತ್ರಿಕೆಗಳ ಮೂಲಕ ದೇಶದಲ್ಲೆಲ್ಲ ಪ್ರಚಾರಿಸಲ್ಪಡುತ್ತವೆ. ಗಲಭೆಯದ್ದ, ಮತ್ತು ಏಳಬಹುದಾದ ಸ್ಥಳಗಳನ್ನವರು ಸಂದರ್ಶಿಸುತ್ತಿರುವರು. ಅವರು ಕೈಕೊಂಡ ಕಾರ್ಯವು ಖಂಡಿತವಾಗಿ ಗಡುತರವಾದುದು. ಇತರ ಭಾರತೀಯ ಮುಖಂಡರೂ ಅವರೊಂದಿಗೆ ಶ್ರಮಿಸುತ್ತಿರುವರು.

ಆದರೆ ಇಂದಿನ ಪರಿಸ್ಥಿತಿಯಲ್ಲಿ ಜನತೆಯಲ್ಲಿ ಶಾಂತಿ ನೆಮ್ಮದಿಯನ್ನುಂಟು ಮಾಡುವ ಈ ಕಾರ್ಯಕ್ಕೆ ಅವಶ್ಯವಾಗಿ ಬೇಕಾಗಿರುವಷ್ಟು ನಾಯಕರ ಸಂಖ್ಯೆಗೆ ಕೊರತೆಯಿದೆ. ಮಹಾತ್ಮಾ ಗಾಂಧಿಯವರಂತೆ ಮನ್ನಣೆ ಗೌರವಗಳನ್ನು ಆಕರ್ಷಿಸುವ ಮುಂದಾಳುಗಳೂ ಬಹಳ ಕಮ್ಮಿಯಿರುವರು. ತಮ್ಮ ಸೂಚನೆಗಳನ್ನು ಜನತೆ ಮನ್ನಿಸುವಂತೆ ಮಾಡುವ ಗಾಂಧಿಯವರ ಸಾಮರ್ಥ್ಯ ಅದ್ವಿತೀಯವಾದುದು. ಅವರನ್ನೂ ಅವರ ತತ್ವೋಪದೇಶವನ್ನು ಭಕ್ತಿಪೂರ್ವಕವಾಗಿ ಅನುಸರಿಸಲು ಸಿದ್ಧರಿರುವ ಅಸಂಖ್ಯಾತ ಜನತೆ ಇಲ್ಲಿದೆ.

ಹೀಗೆಂದ ಮಾತ್ರಕ್ಕೆ ಅವರನ್ನು ಟೀಕಿಸುವವರಿಲ್ಲವೆಂದರ್ಥವಲ್ಲ. ಅವರನ್ನು ಖಂಡಿಸುವ ಅತಿ ಕಟುತ್ವದ ಟೀಕಾಗಾರರಿದ್ದಾರೆ. ಅವರು ಉತ್ತಮ ಪ್ರದರ್ಶನಗಾರರಿರುವುದರಿಂದ ಅವರಲ್ಲಿರುವುದು ಅದೊಂದೇ ವಿಷಯವೆನ್ನುವವರಿದ್ದಾರೆ. ಅವರ ತಾತ್ವಿಕಾರ್ಥ ಗರ್ಭಿತವಾದ ಉಪದೇಶಗಳನ್ನರಿಯಲು ಸಮರ್ಥರಲ್ಲದವರು ಅವರಿಂದ ಅರಿತುಕೊಳ್ಳುವಂತಹದೇನೂ ಇಲ್ಲವೆಂದಭಿಪ್ರಾಯಪಡುತ್ತಾರೆ.

ತೀಕ್ಷ್ಣ ರಾಜತಂತ್ರಜ್ಞ

ಆದರೆ ಗಾಂಧಿಯವರು ಭಾರತದ ಹಿರಿಯ ಮಾವಧಿ ಜನರಿಗೆ ಸದ್ವರ್ತನೆಯ ಆದರ್ಶ ಮೂರ್ತಿಗಳಾಗಿರುವರೆಂಬುದಕ್ಕೆ ಎರಡಭಿಪ್ರಾಯಗಳಿಲ್ಲ. ಅಧಿಕಾರದ ಉನ್ನತ ಕೇಂದ್ರಗಳಲ್ಲೂ ಅವರ ಅಭಿಪ್ರಾಯಗಳಿಗೆ ಆದರದ ಮನ್ನಣೆ ದೊರಕುತ್ತದೆಂಬುದೂ ಸರ್ವವಿದಿತವಾದುದು. ಒಂದು ನಿದರ್ಶನವನ್ನು ನಾನು ಪ್ರತ್ಯಕ್ಷ ಕಂಡೆ: ನನ್ನ ಸಂದರ್ಶನ ಮುಗಿದಕ್ಷಣ ಭಾರತ ಒಕ್ಕೂಟದ ಮುಖ್ಯ ಪ್ರಧಾನ ಜವಾಹರಲಾಲ್ ನೆಹರೂಗಳು ಅವರನ್ನು ಕಾಣಲು ಬಂದರು. ನಾವು ಹೊರ ಹೋಗುವಷ್ಟರಲ್ಲಿ ಅವರು ಬಂದು ಮಹಾತ್ಮರ ಬಳಿಯಲ್ಲಿ ಅತ್ಯಾಸಕ್ತಿಯಿಂದಲೂ ಆದರ ಪೂರ್ಣರಾಗಿಯೂ ಮಾತನಾಡಲು ಕೂತು ಕೊಂಡರು.

ಗತ ರಾಜಕೀಯದ ಅನುಭವವನ್ನು ಭವಿಷ್ಯ ರಾಜತಂತ್ರದ ರೂಪ ರಚನೆಗಾಗಿ ಅನುವರ್ತಿಸಿಕೊಳ್ಳುವ ಅವರ ಪ್ರಶಾಂತ ವಿವೇಚನಾ ಶಕ್ತಿ ಮತ್ತು ಆಳವಾದ ದೂರದರ್ಶಿತ್ವಗಳು ಅವರನ್ನೊರ್ವ ತೀಕ್ಷ್ಣ ರಾಜಕೀಯ ಮುತ್ಸದ್ಧಿಯನ್ನಾಗಿ ಮಾಡಿವೆ. ಅದೇ ಅನುಭವದಿಂದವರು ಇಂದಿನ ಭಾರತೀಯ ರಾಜಕೀಯದ ಹಾಸು ಹೊಕ್ಕುಗಳನ್ನು ಬಲ್ಲ ಮತ್ತು ಅವುಗಳ ಸಮಸ್ಯೆಗಳನ್ನು ಬಿಡಿಸಲು ಸಮರ್ಥರಿರುವ ಏಕಮಾತ್ರ ವ್ಯಕ್ತಿ ಅವರೇ ಆಗಿದ್ದಾರೆ.

ಬೆರಗುಗಾರರು

ನನ್ನ ಅತ್ಯಲ್ಪ ಅವಧಿಯ ಸಂದರ್ಶನದಲ್ಲೂ ಜನತೆಯನ್ನು ಬೆರಗುಗೊಳಿಸುವ ಮಹಾಶಕ್ತಿಯುಳ್ಳ ಈ ವ್ಯಕ್ತಿಯ ಸಾಮರ್ಥ್ಯ ದರ್ಶನವನ್ನು ಮಾಡಿದೆ. ಯಾವ ಸಮಯಲ್ಲಿ ಎಂತಹದನ್ನು ಮಾಡಬೇಕೆಂಬ ಪ್ರಗಲ್ಭ ಜ್ಞಾನವುಳ್ಳ, ಜನತೆಯ ಭಾವಾವೇಶಗಳನ್ನರಿತು ಅವರ ಸರಿಯಾದ ಆಕಾಂಕ್ಷೆಗಳನ್ನು ಅರಿಯ ಬಲ್ಲ ಅದ್ಭುತ ವ್ಯಕ್ತಿಯವರೆಂದು ಅವರೊಡನೆ ಸ್ವಲ್ಪ ಸಂಭಾಷಣೆ ಮಾಡಿದಾಗಲೇ ತಿಳಿಯುವುದು.

ರಾಜಕೀಯದ ಮತ್ತು ಆಡಳಿತದ ಭಾರ ಕರ್ತವ್ಯಗಳಿಂದವರನ್ನು ವಿಮುಕ್ತಗೊಳಿಸಿ ಮುಂದೆ ಇವರಿಗೆ ಭಾರತ ಮತ್ತು ಪಾಕಿಸ್ತಾನಗಳೊಳಗೆ ಜಾತೀಯ ವೈಷಮ್ಯದ ಬದಲಿಗೆ ಜಾತೀಯ ಬಾಂಧತ್ವವನ್ನುಂಟು ಮಾಡಲು ಆಸ್ಪದ ಕೊಡಬೇಕಾದುದು ಅತ್ಯಾವಶ್ಯಕ. ಇಂದಿನ ಗಲಭೆ ಪರಿಸ್ಥಿತಿಯಲ್ಲಿ ಈ ಸೂಚನೆಯು ಕೇವಲ ಕಲ್ಪನಾತ್ಮಕವೆಂದೆನಿಸುತ್ತಾದರೂ ಇತರ ಶ್ರೇಯಸ್ಕರ ಕಾಲಗಳಲ್ಲಿ ಇದು ಅತ್ಯಂತ ಉಪಯುಕ್ತವಿದೆ. ಹಿಂದೂ ಮುಸಲ್ಮಾನರು ಸಾಮರಸ್ಯದಿಂದಿರಬೇಕಾಗುವ ವಿಶ್ವಾಸಾರ್ಹ ಸಂದರ್ಭ ಸನ್ನಿವೇಶಗಳನ್ನೊದಗಿಸಲು ಗಾಂಧಿಯವರಂತಹ ವ್ಯಕ್ತಿಗಳಲ್ಲದೆ ಬೇರಾರೂ ಅರ್ಹರಿಲ್ಲ.

ಸಿಹಿಸುದ್ದಿ ಸಂಗ್ರಹ

ಆಸ್ಟ್ರೇಲಿಯದ ಟಕೂವಾ ಎಂಬಲ್ಲಿ ಎರೆಹುಳಗಳನು ಸಾಕುವುದು ಎಸ್ ಹಿರಿಯಟ್ ಎಂಬವಳ ವೃತ್ತಿ. ಅದನ್ನು ವೈಜ್ಞಾನಿಕ ಪರಿಶೋಧನಾಲಯಗಳಿಗೆ ಕಳುಹಿಸಿ ಜೀವನ ಮಾಡುತ್ತಾಳೆ. ಬರುವ ಕ್ರಿಸ್‌ಮಸ್ ಹಬ್ಬಕ್ಕೆ "ಎರೆಹುಳಗಳನ್ನು ಪಾರಿತೋಷಕ ಕೊಡಿರಿ" ಎಂದವಳ ಪ್ರಚಾರ. ಅವುಗಳನ್ನು ಟಪ್ಪಾಲಿನಲ್ಲಿ ಕಳುಹಿಸಲಾಗುವಂತೆ ಅಂದವಾದ ಪೆಟ್ಟಿಗೆಗಳನ್ನು ಅವಳು ತಯಾರಿಸಿಟ್ಟಿದ್ದಾಳೆ.

✠

ಕಾಶ್ಮೀರದ ನೆಲದಲ್ಲಿ ಪೆಟ್ರೋಲ್ ಎಣ್ಣೆಯ ಗಣಿಗಳನ್ನು ತೋಡಬಹುದೆಂದು ತಜ್ಞರು ತಿಳಿಸಿರುವ ಮೇರೆಗೆ ಅಲ್ಲಿನ ಸರಕಾರದವು ತಮ್ಮ ಸಂಸ್ಥಾನಕ್ಕೆ ಬೇಕಾಗುವಷ್ಟು ಎಣ್ಣೆಯನ್ನು ತೆಗೆಯಲು ಯೋಚಿಸಿರುವರು.

✠

ಕೃತಕ ಬೆಣ್ಣೆ ತುಪ್ಪಗಳನ್ನು ತಯಾರಿಸುವಂತೆ ಓರ್ವ ಡಚ್ ರಾಸಾಯನಿಕ ತಜ್ಞರು ವಿಟಮಿನ್ ಜೀವಧಾತುಗಳನ್ನು ತಯಾರಿಸಬಹುದೆಂದು ತಿಳಿಸುತ್ತಾರೆ. ಈಗಾಗಲೇ ಅವರು ವಿಟಮಿನ್ ಎ ಯನ್ನು ತಯಾರಿಸಿರುವರು.

ಮಂಗಳೂರು ಮ್ಯುನ್ಸಿಪಲ್ ಕೌನ್ಸಿಲ್ ಮೀಟಿಂಗ್

ಈ ಕೌನ್ಸಿಲಿನ ಮೀಟಿಂಗ್ ಕಳೆದ ಬುಧವಾರ ತಾ. ೨೯ರಲ್ಲಿ ಕೌನ್ಸಿಲ್ ಚಾಲ್ಡ್‌ನ ಚೆಯರ್‌ಮ್ಯಾನರ ಅಧ್ಯಕ್ಷತೆಯಲ್ಲಿ ಜರುಗಿತು. ಕೆಲ ಬಿಲ್ಲುಗಳು ಮಂಜೂರಾತಿಯೂ ಕೌನ್ಸಿಲಿನ ಮುಂದೆ ಬಂದ ಕೆಲವು "ಅಪೀಲು"ಗಳ ಬಗ್ಗೆ ಕಮಿಟಿಗಳ ನೇಮಕವೂ ಆಗಿ ಹಲವೊಂದು ವಿಚಾರಗಳನ್ನು ಕೌನ್ಸಿಲಿನ ನಾನಾ ಸಮಿತಿಗಳ ಪರ್ಯಾಲೋಚನೆಗೊಪ್ಪಿಸಲಾಯಿತು ಅಗಲ ಮಾಡಿದ ಭಾಗದ ಕದ್ರಿ ರಸ್ತೆ, ಮಾರ್ಕೆಟ್ ರೋಡು, ಗೋಳಿಕಟ್ಟೆ ಜಮ್ಮಾ ಮಸೀದಿ ರಸ್ತೆ, ಮಂಗಳಾದೇವಿ ರಸ್ತೆ (ಹಳೇ ಪೋಸ್ಟಾಫೀಸಿನಿಂದ ಪಾಂಡೇಶ್ವರದ ವರೆಗೆ) ಮಹಾತ್ಮಾ ಗಾಂಧೀ ರಸ್ತೆ (ಕೊಡಿಗುಡ್ಡೆ ಜಂಕ್ಷನಿನಿಂದ ಬಿಸೆಂಟ್ ಶಾಲೆ ವರೆಗೆ) ಕಾರ್ನಾಡ್ ಸದಾಶಿವರಾವ್ ರಸ್ತೆ ಇವಿಷ್ಟಕ್ಕೆ ತಾರು ಹಾಕುವ ಸಂಬಂಧ ಅಂದಾಜಾದ ಸುಮಾರು ೭೫ ಸಾವಿರ ರೂಗಳ ಖರ್ಚಿನಲ್ಲಿ ಅರ್ಧಾಂಶ ತೆರಲು ಕೌನ್ಸಿಲು ಒಪ್ಪಿತು. ನಗರದ ರಸ್ತೆಗಳ ವಿದ್ಯಮಾನದ ಪೂರ್ವಾಪರ ತಿಳಿಯುವಂತೆ ತಕ್ಕ "ಮಾಹಿತಿ" ಸಂಗ್ರಹಿಸುವ ಏರ್ಪಾಡಾಯಿತು. ಮುನಿಸಿಪಾಲಿಟಿಗೆ ಬೇಕಾದ ಹೆಚ್ಚಿನ ಸಿಬ್ಬಂಧಿ (ವರ್ಷಕ್ಕೆ ಇವರ ಸಂಬಳ ಸುಮಾರು ರೂ ೯೫೦೦)ಯನ್ನು ಕೌನ್ಸಿಲು ಮಂಜೂರು ಮಾಡಿ, ಸರಕಾರದ ಪರ್ಯಾಲೋಚನೆಗೊಪ್ಪಿಸಿತು. ಮುನ್ಸಿಪಾಲಿಟಿಯ ವಕೀಲ್ ಶ್ರೀ ಎಂ ಪಿ ಕಿಣಿ ಅವರು ತಮ್ಮ ಸಂಭಾವನೆಯನ್ನು ಹೆಚ್ಚಿಸಬೇಕೆಂದು ಬರೆದುಕೊಂಡ ಮನವಿಯ ವಿಚಾರ ಮಾಡುವಂತೆ ಕಮಿಟಿಗೆ ಒಪ್ಪಿಸಲಾಯಿತು. ಮಂಗಳೂರು ಮುನಿಸಿಪಾಲಿಟಿಯ ರಿಸರ್ವ್ ಬಗ್ಗೆ ರೂ ೫೨ ಸಾವಿರದಲ್ಲಿ ೨ ಸಾವಿರದಷ್ಟು ಈ ಕೌನ್ಸಿಲ್ ಖರ್ಚು ಮಾಡುವುದು ವ್ಯರ್ಥವೆಂಬ ಶ್ರೀ ನರಸಪ್ಪಯ್ಯನವರ ಅಭಿಪ್ರಾಯದಂತೆ ಅದು "ಬಾಕಿ" ಆಯಿತು. ಹೆಣ್ಣು ನಾಯಿ ಹಿಡಿದರೆ ಒಂದಕ್ಕೆ ೬ ಆಣೆ, ಗಂಡು ನಾಯಿ ಒಂದಕ್ಕೆ ೫ ಆಣೆಯಿಂದ ದರವೇರಿಸಿತು. ಒಂದರದ ದಕ್ಕೆಯಲ್ಲಿ ಮೂತ್ರ ಶಾಯಿಖಾನೆಗಳನ್ನು ಕಟ್ಟಿಸಬೇಕೆಂಬ ಬಗ್ಗೆ ಶ್ರೀ ಎಚ್ ಗಣಪತಿ ಕಾಮತರು ತಂದ ಆ ಠರಾವಿನ ಚರ್ಚೆ ನಡೆದು ಈ ಬಗ್ಗೆ ಕಮಿಟಿಯಿಂದ ವಿಸ್ತಾರ ಯೋಜನೆಯ ವರದಿಯನ್ನು ಅಪೇಕ್ಷಿಸಲಾಯಿತು.

ಮುನಿಸಿಪಲ್ ಹಣ ಕೂಡಿಸುವ ಸಿಬ್ಬಂದಿ ಸಂಘದವರು ಈ ಕೌನ್ಸಿಲಿಗೆ ಅರ್ಪಿಸಿದ ಭಾರತದ ಪ್ರಥಮ ಪ್ರಧಾನ ಪಂಡಿತ ಜವಹರಲಾಲರ ಒಂದು ತೈಲ ಚಿತ್ರವನ್ನು ಅಂಗೀಕರಿಸುವಾಗ ಇಂಥ ಚಿತ್ರಗಳಿಗೆ ಸಂಬಂಧಿಸಿದ ಸ್ಥಾನಮಾನ ಇತ್ಯಾದಿಗಳ ಕುರಿತು ಸಮಾಲೋಚಿಸಿ ಇತ್ಯರ್ಥಪಡಿಸಲು ಒಂದು ಹೊಸ ಸಮಿತಿಯ ರಚನೆಯಾಯಿತು. ಈ ಸಂಬಂಧದ ಕಮಿಟಿ ಹಿಂದೆ ಈ ಕೌನ್ಸಿಲಿನಲ್ಲಿ ಇರಲಿಲ್ಲ

ದ. ಕ ವಾಣಿಜ್ಯ ನೌಕರರ ಸಂಘ

ಈ ಸಂಘದ ಕಾರ್ಯಕಾರಿ ಸಭೆ ಈಚೆಗೆ ಸಂಘದ ಕಚೇರಿಯಲ್ಲಿ ಜರಗಿ ಈ ಒಂದು ಸಾರ್ವಜನಿಕ ಸಭೆಯನ್ನು ಅಜಾದ ಮೈದಾನಿನಲ್ಲಿ ಜರುಗಿಸಬೇಕಾಗಿ ನಿರ್ಧರಿಸಿ ಆ ಬಗ್ಗೆ ಒಂದು ಉಪಸಮಿತಿಯನ್ನು ನಿರ್ಮಿಸಲಾಯಿತು. ಸಂಘವು ಟ್ರೇಡ್ ಯೂನಿಯನಿನ ಕಾನೂನು ಮೇರೆಗೆ ರಿಜಿಸ್ಟ್ರ ಆಗಿದೆ ಎಂದು ಲೇಬರ ಕಮಿಶನರಿಂದ ಬಂದ ಪತ್ರವನ್ನು ರಿಕಾರ್ಡು ಮಾಡಲಾಯಿತು. ಕಾರ್ಯಕಾರೀ ಸಮಿತಿಯಲ್ಲಿ ಶ್ರೀ ಡಿ ಕೃಷ್ಣರಾಯರನ್ನೂ ಉಪಾಧ್ಯಕ್ಷ ಸ್ಥಾನಕ್ಕೆ ಪಿ ಶಿವರಾಯರನ್ನೂ ಸೇರಿಸಿಕೊಳ್ಳಲಾಯಿತು.

ಸ್ಕೌಟು ಸಪ್ತಾಹ

ದಕ್ಷಿಣ ಕನ್ನಡ ಬೊಯಿಸ್ ಸ್ಕೌಟ್ ಎಸೋಸಿಯೇಶನ್‌ದವರು ಕಳೆದ ಅಕ್ಟೋಬರ್ ತಾ ೭೦ರಿಂದ ನವೆಂಬರ್ ತಾ ೧ರ ವರೆಗೆ ಸ್ಕೌಟು ವಾರವನ್ನು ವಿವಿಧ ಕಾರ್ಯಕ್ರಮಗಳಿಂದ ಜರಗಿಸಿದರು ಮಂಗಳವಾರ ದಿನ ಮಿಶ್ಯನ್ ಹೈಸ್ಕೂಲಿನಲ್ಲಿ ಉದ್ಘಾಟನಾ ಸಮಾರಂಭವೂ, ಸಂಜೆ ದೋಣಿ ಪ್ರವಾಸ, ಎರಡನೇ ದಿನ ಸೆಂಟ್ರಲ್ ಮೈದಾನಿನಲ್ಲಿ ಆಟಗಳು, ಗುರುವಾರ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಹಿರಿಯರ ದಿನ, ಶುಕ್ರವಾರ ದೇರೆಬೈಲ್ ಸೈಂಟ್ ಪೀಟರ್ ಎಲಿಮೆಂಟರಿ ಶಾಲೆಯಲ್ಲಿ ಮಧ್ಯ ನಿರೋಧ ನಾಟಕ, ಕೊನೆಯ ದಿನ ಸಾಯಂಕಾಲ ೪.೩೦ ಗಂಟೆಗೆ ಕೆನರಾ ಹೈಸ್ಕೂಲಿನಲ್ಲಿ ಆಟ ಪ್ರದರ್ಶನ, ಭಾಷಣ,

ಜಿಲ್ಲಾ ಪರಿಚಯ

ಶಿಬಿರಾಗ್ನಿ ಮುಂತಾದ ಕಾರ್ಯಕ್ರಮಗಳು ನಡೆದುವು

ಕೂಳೂರಿನಲ್ಲಿ ಚಾಲಗೇಣಿ ಒಕ್ಕಲುಗಳ ಸಭೆ

ಇದೇ ತಾ 2ನೇ ಆದಿತ್ಯವಾರ ಅಪರಾಹ್ನ ಘಂಟೆ 8ಕ್ಕೆ ಕೂಳೂರಿನ ಪಡುಕೋಡಿ ಗ್ರಾಮದಲ್ಲಿ ಬಂಗ ಕೂಳೂರು, ತಣ್ಣೀರು ಬಾವಿ ಮತ್ತು ಪಣಂಬೂರು ಗ್ರಾಮಗಳ ಚಾಲಗೇಣಿ ಒಕ್ಕಲುಗಳ ಸಭೆಯೊಂದು ಮಲಕಿಯಸ್ ಡಿ'ಸೋಜರವರ ಅಧ್ಯಕ್ಷತೆಯಲ್ಲಿ ನಡೆಯಿತು ಆಸುಪಾಸಿನ ಗ್ರಾಮಗಳ ಸುಮಾರು 100 ಮಂದಿ ಚಾಲಗೇಣಿ ಒಕ್ಕಲುಗಳು ಹಾಜರಿದ್ದರು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ ಕೆ ಕೆ ಶೆಟ್ಟಿ ಮತ್ತು ಎನ್ ಎಸ್ ಕಿಲ್ಲೆಯವರು ಆಮಂತ್ರಿತರಾಗಿ ಬಂದಿದ್ದರು. ಕೃಷಿಕರ ಹಿತಸಾಧನೆ ಮತ್ತು ಹಕ್ಕು ಬಾಧ್ಯತೆ ರಕ್ಷಣೆಗಾಗಿ ಕೃಷಿಕರೇ ಸಂಘಟಿತರಾಗಿ ಸಂಘವನ್ನು ಸ್ಥಾಪಿಸುವ ಆವಶ್ಯಕತೆಯ ಕುರಿತು ಶ್ರೀ ಕೆ ಕೆ ಶೆಟ್ಟಿ ಮಾತಾಡಿದ ಮೇಲೆ ಶ್ರೀ ಎನ್ ಎಸ್ ಕಿಲ್ಲೆಯವರು ಚಾಲಗೇಣಿ ಒಕ್ಕಲುಗಳ ಈಗಿನ ಶೋಚನೀಯ ಪರಿಸ್ಥಿತಿಯನ್ನು ಹೃದಯಂಗಮವಾಗಿ ವಿವರಿಸಿ ಅವರ ಉದ್ಧಾರದ ಕಾಲವು ಈಗ ಬಂದಿರುವುದರಿಂದ ತೀರಿ ಅದಕ್ಕಾಗಿ ಅವರು ಸಂಘಟಿತರಾಗುವ ಆವಶ್ಯಕತೆಯನ್ನು ಮನಗಾಣಿಸಿದರು. ಅಧ್ಯಕ್ಷರು ಕೆಲವು ಮಾತುಗಳನ್ನು ಆಡಿದ ಮೇಲೆ ಈ ಕೆಳಗಿನ ಠರಾವುಗಳು ಸರ್ವಸಮ್ಮತಿಯಿಂದ ಮಂಜೂರಾದುವು

"(1) ಪಡುಕೋಡಿ, ಬಂಗ ಕೂಳೂರು ತಣ್ಣೀರುಬಾವಿ ಮತ್ತು ಪಣಂಬೂರು ಗ್ರಾಮಗಳಿಗಾಗಿ ಕೃಷಿಕರ ಸಂಘವೊಂದನ್ನು ಸ್ಥಾಪಿಸುವುದು ಅತ್ಯವಶ್ಯವೆಂದು ಈ ಸಭೆಯು ನಿರ್ಧರಿಸುತ್ತದೆ ಮತ್ತು ಆ ಬಗ್ಗೆ ಅಗತ್ಯವಾದ ಕೆಲಸವನ್ನು ಮಾಡುವರೆ ಒಂದು ಸಮಿತಿಯನ್ನು ಸ್ಥಾಪಿಸಲ್ಪಟ್ಟಿದೆ

ಚಾಲಗೇಣಿ ಒಕ್ಕಲುಗಳಿಗೆ ತಾವು ಸಾಗುವಳಿ ಮಾಡುವ ಹೊಲಗಳ ಮೇಲೆ ಕಾಯಂ ಹಕ್ಕು ಕೊಡುವ ಮತ್ತು ಗೇಣಿಯನ್ನು ಕಾಯಮ್ ನಿಶ್ಚಯಿಸುವ ಒಕ್ಕಲು ಹಿತ ಮಸೂದೆಯನ್ನು ಸರಕಾರವು ಜಾರಿಗೆ ತರಬೇಕು

ಜಿಲ್ಲೆಯ ಹಲವು ಕಡೆಗಳಲ್ಲಿ ಭೂಮಾಲಿಕರು ಇಚ್ಛಾನುಸಾರವಾಗಿ ಒಕ್ಕಲುಗಳನ್ನು ಎಬ್ಬಿಸುವುದರಿಂದಲೂ ಗೇಣಿ ಏರಿಸುವುದರಿಂದಲೂ ಅವರ ಹಾನಿ ಮಾಡದಂತೆ ತಾತ್ಕಾಲಿಕ ಸ್ಟೇ ಕಾನೂನನ್ನು ಸರಕಾರವು ಕೂಡಲೇ ಜಾರಿಗೆ ತರಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ

ದಿವಾನ್ ಬಹದ್ದೂರ್ ಶ್ರೀ ಪಿ ಸಿ ಲೋಬರು ಪಡುಕೋಡಿ ಉಳಿಯದ ಅವರ ಆಸ್ತಿಯಲ್ಲಿ ಹಲವು ತಲಾಂತರಗಳಿಂದ ವಾಸ್ತವ್ಯ ಮಾಡಿಕೊಂಡು ಬಂದಿರುವ ಮತ್ತು ಹೆಚ್ಚಿನ ಕೃಷಿ ಮಾಡಿರುವ ಸುಮಾರು ನೂರು ಮಂದಿ ಜನರಿರುವ ಹದಿನೈದು ಮಂದಿ ಒಕ್ಕಲುಗಳನ್ನು ವಿನಾಕಾರಣ ಒಕ್ಕಲೆಬ್ಬಿಸಿ ನಿರ್ಗತಿಕರನ್ನಾಗಿ ಮಾಡಲು ಪ್ರಯತ್ನಿಸುತ್ತಿರುವದನ್ನು ಅವರು ಹಾಗೆ ಮಾಡದಂತೆ ತಡೆಮಾಡಬೇಕಾಗಿ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರನ್ನೂ ಮದ್ರಾಸು ಸರಕಾರದ ರೆವಿನ್ಯೂ ಮಂತ್ರಿಗಳನ್ನೂ ಈ ಸಭೆಯು ಕೇಳಿಕೊಳ್ಳುತ್ತದೆ

ಕಾಂಗ್ರೆಸ್ ಸದಸ್ಯತನದ ಪುಸ್ತಕಗಳು

ಅಕ್ಟೋಬರ್ ತಾ ೩೧ರೊಳಗೆ ಇಡೀ ಜಿಲ್ಲೆಯಲ್ಲಿ ಕಾಂಗ್ರೆಸ್ ಸದಸ್ಯತನದ ಕೆಲಸ ಮುಗಿಸಿ ಎಲ್ಲಾ ಪುಸ್ತಕಗಳನ್ನೂ ಈ ಸಂಬಂಧದಲ್ಲಿ ಜಮೆಯಾದ ಹಣವನ್ನು ಸರ್ಕಲ್ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯವರಿಗೆ ತಾ. ೩ ೧೧-೪೭ರೊಳಗೆ ರವಾನಿಸಬೇಕೆಂತಲೂ ಆಯಾ ಸರ್ಕಲ್‌ಗಳಲ್ಲಿ ಸದಸ್ಯರಾದವರ ಸಂಖ್ಯೆಯನ್ನು ವಿವರವಾಗಿ ಒಂದು ವರದಿಮಾಡಿ ತಿಳಿಸಬೇಕೆಂತಲೂ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳು ಕೇಳಿಕೊಂಡಿದ್ದಾರೆ

ಜನತಾ ರಂಗಭೂಮಿ

ಪಂಜಾಬ ನಿರಾಶ್ರಿತರಿಗೆ ಯಾವುದಾದರೊಂದು ಕಾರ್ಯಕ್ರಮ ಕೈಕೊಳ್ಳಲು ಭಾರತ ಜನತಾ ರಂಗಭೂಮಿಯ ಮಂಗಳೂರು ಶಾಖೆಯು ನಿರ್ಧರಿಸಿದೆ ಆ ಬಗ್ಗೆ ಒಂದು ಸಮಿತಿ ರಚಿಸಲು ಮಂಗಳೂರಿನ ಮಹಾಜನರ ಸಹಕಾರ ಕೋರಿರುವುದು. ಮಂಗಳೂರಿನ ಕಲಾಗಾರರ ಸಹಾಯದಿಂದ ಜನತಾ ರಂಗಭೂಮಿಯವರು ನಿರಾಶ್ರಿತರ ಸಹಾಯಾರ್ಥ ಸದ್ಯದಲ್ಲೆ ವಿವಿಧ ವಿನೋದಾವಳಿಗಳನ್ನು ಏರ್ಪಡಿಸಲಿದ್ದಾರೆಂದ ಕೇಳಬರುತ್ತದೆ

ವರ್ಗ

ಮಂಗಳೂರ ರಿ ಡಿ ಆಫೀಸರರಾದ ಶ್ರೀ ಎಸ್ ಬಾಲಾಜಿರಾಯರು ಉತ್ತರ ಆರ್ಕಾಟಿಗೆ ವರ್ಗಾಯಿಸಲ್ಪಟ್ಟು ಅವರ ಸ್ಥಾನಕ್ಕೆ ಅಬ್ದುಲ್ ರಹಿಮಾನ್ ಸಾಹೇಬರು ಇಲ್ಲಿಗೆ ಬರುವರೆಂದೂ ಪುತ್ತೂರು ರಿ ಡಿ ಆಫೀಸರಾದ ಶ್ರೀ ಸಿಂಹಾದ್ರಿಯವರು ಅನಂತಪುರಕ್ಕೆ ವರ್ಗಾಯಿಸಲ್ಪಟ್ಟು ಅವರ ಸ್ಥಾನಕ್ಕೆ ಶ್ರೀ ಕರಿಯಪ್ಪನವರ ಅಲ್ಲಿಗೆ ಬರುವರೆಂದೂ ತಿಳಿಯುತ್ತದೆ

ಹೊಸ ಸಹಕಾರಿ ಸಂಘ

ಜಿಲ್ಲೆಯಲ್ಲಿ ಬೆಲ್ಲ ತಯಾರಿಸುವ ಸಹಕಾರಿ ಸಂಘಗಳನ್ನು ಸರಕಾರವು ಸ್ಥಾಪಿಸಿ ಬೆಲ್ಲ ಮಾಡಲು ಪ್ರೋತ್ಸಾಹ ನೀಡಲು ಏರ್ಪಾಡು ಮಾಡಿದೆ ಅದಕ್ಕಾಗಿ ಅಸಿಸ್ಟಾಂಟ್ ಡಿಸ್ಟ್ರಿಕ್ಟ್ ಅಧಿಕಾರಿಗಳ ಜಿಲ್ಲಾ ನಿಲ್ಲವ ಯೂನಿಯನ್ನಿನ ಓರ್ವ ಪ್ರತಿನಿಧಿಯೊಡನೆ ಜಿಲ್ಲೆಯಲ್ಲಿ ಸಂಚರಿಸುವರು. ಆ ವಿಚಾರವಾಗಿ ಪರವರ ಆಯಾ ಗ್ರಾಮಗಳಲ್ಲಿ ಪ್ರಚಾರ ಮಾಡುತ್ತಾರೆ ಈ ಸಂದರ್ಭದಲ್ಲಿ ಪಾನನಿರೋಧ ಶಾಸನದಿಂದ ಸಂಕಷ್ಟಕ್ಕೊಳಗಾದವರು ಬೆಲ್ಲ ಸಿದ್ಧತೆಯ ಸಹಕಾರಿ ಸಂಘಕ್ಕೆ ಮೆಂಬರರಾಗಿ ಬೆಲ್ಲ ಮಾಡಬಹುದು ಆ ಸಹಕಾರಿ ಸಂಘಕ್ಕೆ ಸದಸ್ಯರಾಗಲು ಐದು ರೂಪಾಯಿ ತೆರಬೇಕಾಗಿದೆ

ಉಚ್ಚ ಶಿಕ್ಷಣ

ನಮ್ಮ ಜಿಲ್ಲೆಯವರಾದ ಡಾ ಕೊಡಿಕ್ಕೂರು ನರಸಿಂಹ ಉಡುಪರು ಕಾಶಿಯ ಹಿಂದೂ ವಿಶ್ವವಿದ್ಯಾಲಯದ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ, ಕಳೆದ ಮೂರು ವರ್ಷಗಳಲ್ಲಿ ಬೊಂಬಯಿ ಸರಕಾರದ ಪೋದ್ದಾರ್ ಮೆಡಿಕಲ್ ಕಾಲೇಜಿನಲ್ಲಿ ಶಸ್ತ್ರ ಚಿಕಿತ್ಸಾಧ್ಯಾಪಕರಾಗಿದ್ದು ಕಳೆದ ತಾ. ೧೫—೧೦ ೪೭ರಲ್ಲಿ ಶಸ್ತ್ರ ಚಿಕಿತ್ಸೆಯಲ್ಲಿ ವಿಶೇಷ ತರಬೇತಿ ಹೊಂದಲು ಅಮೇರಿಕಕ್ಕೆ ಹೋಗಿರುವರು

ಶ್ರೀ ಸಿದ್ಧವನ ಗುರುಕುಲಕ್ಕೆ ಟ್ರಸ್ಟ್

ಇದರಿಗೆ 7–8 ವರ್ಷಗಳಿಂದಲೂ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೇಯವರಿಂದ ನಡೆಸಿಕೊಂಡು ಬರುತ್ತಿರುವ ಶ್ರೀ "ಸಿದ್ಧವನ" ಗುರುಕುಲ ಎಂಬ ವಿದ್ಯಾ ಸಂಸ್ಥೆಯು ಮುಂದಕ್ಕೂ ಶಾಶ್ವತವಾಗಿ ಯೋಗ್ಯ ವ್ಯವಸ್ಥೆಯಿಂದ ನಡೆದು ಬರುವುದಕ್ಕೋಸ್ಕರ, ನಾಲ್ಕು ಜನರು ಟ್ರಸ್ಟಿಗಳುಳ್ಳ "ಸಿದ್ಧವನ ಗುರುಕುಲ ಟ್ರಸ್ಟ್" ಎಂಬ ಹೆಸರಿನ ಸಂಸ್ಥೆಯನ್ನು ರಚಿಸಿ, ವರ್ಷಕ್ಕೆ ಅರಡಾಯ ನಾಲ್ಕು ಸಾವಿರ ರೂಪಾಯಿ ಉತ್ಪನ್ನ ಬರತಕ್ಕ ಸ್ಥಿರಾಸ್ತಿಗಳನ್ನು ಬಿಟ್ಟು ಕೊಟ್ಟು ಯೋಗ್ಯ ವ್ಯವಸ್ಥೆ ಮಾಡಿರುವುದು ಎಲ್ಲರಿಗೂ ಸಂತೋಷ ವಾರ್ತೆ

ಪ್ರಕೃತ ಈ ಗುರುಕುಲದಲ್ಲಿ 80 ಹಿಂದು ಮತ್ತು ಜೈನ ವಿದ್ಯಾರ್ಥಿಗಳು, 6 ಉಪಾಧ್ಯಾಯರುಗಳು ಇತರ ಕೆಲವು ನೌಕರರು ಇರುವರು ಇತ್ತೀಚೆಗೆ ಇಲ್ಲಿ ಪ್ರಾಥಮಿಕ ಸಂಸ್ಕೃತ ಶಾಲೆಯು ಕೂಡಾ ಸರಕಾರದವರಿಂದ ಮಂಜೂರು ಮಾಡಲ್ಪಟ್ಟು ತೆರೆಯಲ್ಪಟ್ಟಿದೆ ಕ್ರಮೇಣ ಸಂಸ್ಕೃತ ಎಂಟ್ರೆನ್ಸ್ ಶಾಲೆಯೂ ಆಗಲಿಕ್ಕಿರುವುದು. ಹೀಗೆ ಇಲ್ಲಿ ಕಲಿತ ವಿದ್ಯಾರ್ಥಿಗಳು ಸಮೀಪದಲ್ಲಿಯೇ ಇರತಕ್ಕ ಕರ್ನಾಟಕ ಹೈಸ್ಕೂಲಿಗೆ ಸೇರಿ ವಿದ್ಯಾಭ್ಯಾಸ ಹೊಂದಬಹುದು. ಹೀಗೆ ಕಲಿತು ಉತ್ತೀರ್ಣರಾಗುವ ವಿದ್ಯಾರ್ಥಿಗಳು ಸಂಸ್ಕೃತ, ಹಿಂದಿ ಕನ್ನಡ ಇಂಗ್ಲಿಷ್ ಸಂಗೀತ ಮತ್ತು ಇತರ ಕಲೆಗಳಲ್ಲಿ ಸಾಕಷ್ಟು ಪರಿಜ್ಞಾನ ಹೊಂದಿದವರಾಗಿ, ಜೈನ ಮತ್ತು ವೇದಾಂತ ಧರ್ಮಗಳನ್ನು ಕೂಡಾ ತಿಳಿದು ಭಾರತೀಯ ಸಂಸ್ಕೃತಿ ಪಡೆದು, ದೇಶ ಮತ್ತು ಸಮಾಜದ ಸೇವೆ ಮಾಡತಕ್ಕ ಯೋಗ್ಯತೆ ಉಳ್ಳವರಾಗುವರು

ಪ್ರಕೃತದ ಟ್ರಸ್ಟಿಗಳು

ಶ್ರೀ ಡಿ ಮಂಜಯ್ಯ ಹೆಗ್ಡೆ ಎಮ್ ಎಲ್ ಸಿ, ಅಧ್ಯಕ್ಷರು ಶ್ರೀ ಕೆ ಬಿ ಜಿನರಾಜ ಹೆಗ್ಡೆ ಬಿ ಎಸ್‌ಸಿ, ಎಲ್ ಎಲ್ ಬಿ ಎಡ್ವೊಕೇಟ್ ಶ್ರೀ ಎಚ್ ಪದ್ಮರಾಜ ಅರಿಗ ಜೈನ ಬಿ ಎ, ಬಿ ಎಲ್ ವಕೀಲ್ ಶ್ರೀ ಡಿ ಪುಟ್ಟಸ್ವಾಮಿ ಬಿ ಎ, ಬಿ ಎಲ್ ಎಡ್ವೊಕೇಟ್

ಗ್ರಾಮ ಆಹಾರ ಸಮಿತಿ ರದ್ದು

ಈ ಆಧಿಪತ್ಯದ ಗ್ರಾಮ ಆಹಾರ ಸಮಿತಿಗಳನ್ನು ರದ್ದು, ತಾಲೂಕು ಜಿಲ್ಲಾ ಆಹಾರ ಸಮಿತಿಗಳ ವಿಚಾರ ನಿರ್ಣಯವಾಗಿಲ್ಲ

ಮಂಗಲಪಾಡಿ

ಹರಿಜನ ಪ್ರವೇಶ: ಉಪ್ಪಳ ಸೋರಿಯಾ ಮೊದಲಾದ ಗ್ರಾಮಗಳಲ್ಲಿ ಇತ್ತೀಚೆಗೆ ಹರಿಜನರು ಮೆರವಣಿಗೆಯ ಮೂಲಕ ಪ್ರತೀ ಹೋಟೇಲುಗಳಲ್ಲಿ ಪ್ರವೇಶಿಸಿ ಚಾ ಕಾಫಿ ಮುಂತಾದುವುಗಳನ್ನು ಕ್ರಮ ಪ್ರಕಾರ ಸೇವಿಸಿದರು ತೇರೋಗೋಳಿ ಎಂಬಲ್ಲಿಯ ಒಂದೆರಡು ಹೋಟೇಲುಗಳಲ್ಲಿ ಮಾತ್ರ ಹರಿಜನರಿಗೆ ಪ್ರವೇಶ ದೊರಕಿಲ್ಲವೆಂದು ತಿಳಿದುಬರುತ್ತದೆ

ಸ್ವದೇಶ ವಾರ್ತೆ

★ ಭಾರತ ಕೇಂದ್ರ ಸರಕಾರದ ವಿದ್ಯುಚ್ಛಕ್ತಿ, ಗಣಿ ಮತ್ತು ಕಾಮಗಾರಿ ಇಲಾಖೆಯ ಮಂತ್ರಿಗಳಾದ ಶ್ರೀ ಗೆಡ್ಗಿಲರು ತಮ್ಮ ಇಲಾಖೆಯಲ್ಲಿ ಲಂಚ ವಂಚನೆಯನ್ನು ಪತ್ತೆ ಮಾಡುವ ಬಿರುಸಾದ ಕಾರ್ಯಕ್ರಮವನ್ನಾರಂಭಿಸಿರುವರು. ಆಗಲೇ 12 ಮಂದಿ ಈ ಇಲಾಖೆಯ ಆಫೀಸರರು ಅಪಮಾನಿತರಾಗಿ ತೆಗೆಯಲ್ಪಟ್ಟಿದ್ದಾರೆ ಇತರರು ತಮ್ಮ ಉದ್ಯೋಗದ ಅವಧಿಯಲ್ಲಿ ಕೊಂಡುಕೊಂಡ ಆಸ್ತಿಪಾಸ್ತಿಗಳ ವಿವರ ಕೊಡಬೇಕೆಂದು ನಿರ್ದೇಶಿಸಲ್ಪಟ್ಟಿದ್ದಾರೆ.

卐

ಮಗುವಿನ ಮೃದು ಚರ್ಮಕ್ಕೆ ಹೆಚ್ಚು ರಕ್ಷಣೆಬೇಕು.

ಕುಟಿಕ್ಯುರಾ ಸಾಬೂನು ಮಗುವಿನ ಮೃದು ಚರ್ಮರಕ್ಷಣೆ ಮಾಡುತ್ತದೆ ಅದನ್ನು ನಿಜ ಆರೋಗ್ಯದಲ್ಲಿರಿಸಿ ಅದರ ಸಹಜ ತೇವವನ್ನು ಕಾಪಾಡುತ್ತದೆ ಉಷ್ಣ ಪ್ರದೇಶಗಳಲ್ಲಿ ಇದು ಅವಶ್ಯ.

554

ಕುಟಿಕೂರಾ ಸಾಬೂನು

CUTICURA SOAP

ಪ್ರತಿಯೊಬ್ಬ ವ್ಯಕ್ತಿಯ ಜೀವಾಳದ ಪ್ರಶ್ನೆ

ನಾವು ಸುಖಿಗಳಾಗುವುದು ಹೇಗೆ? (ಸುಖವೆಲ್ಲಿ?)

[ಬರೆದುದು—ಸಾಮ್ಯವಾದಿ]

ತಾನು ಸುಖಿಯಾಗಿರಬೇಕೆಂದು ಯಾರಿಗೆ ತಾನೆ ತೋರುವುದಿಲ್ಲ? ಸುಖಿಯಾಗಿರಬೇಕೆಂದು ಯೋಚಿಸುವುದರಲ್ಲಿ ತಪ್ಪಾದರೂ ಏನು? ಸ್ವಲ್ಪ ಮಟ್ಟಿಗಾದರೂ ಸುಖಿಯಾಗಿರುವುದು ಪ್ರತಿಯೊಬ್ಬನ ಜೀವನದಲ್ಲಿಯ ಹಕ್ಕಾಗಿರುತ್ತದೆ. ಹೀಗಿದ್ದರೂ ಎಷ್ಟೋ ಜನರ ಬಾಯಿಂದ "ನನ್ನ ಪಾಲಿಗೆ ದುಃಖವೇ ಹೆಚ್ಚಾಗಿ ಬಂದಿರುತ್ತದೆ!" ಎಂಬ ಮಾತೇ ಹೊರಬೀಳುವುದು. ಹಾಗಾದರೆ ನಮಗೆ ಸುಖವು ದೊರಕುವುದಾದರೂ ಹೇಗೆ ಎಂಬ ವಿಷಯ ವಿಚಾರ ಮಾಡುವ.

ಸುಖವು ತೀರಾ ಕಾಲ್ಪನಿಕವಾಗಿದೆ. ಯಾವುದಾದರೂ ಒಂದು ಸಂಗತಿಯಿಂದ ನಮಗೆ ಸುಖವು ಪ್ರಾಪ್ತವಾಯಿತು ಎಂದು ನಾವು ಹೇಳುತ್ತೇವೆ. ಉದಾಹರಣಾರ್ಥ: ಹಸಿವೆಯಿಂದ ಬಳಲುತ್ತಿದ್ದಾಗ ಒಳ್ಳೆಯ ಮೃಷ್ಟಾನ್ನವು ದೊರಕಿದರೆ ನಮಗೆ ಬಹಳ ಆನಂದ ಮತ್ತು ಸುಖವು ಕಾಣುತ್ತದೆ ನಿಜ ವಾಗಿಯೂ ಅನ್ನದಿಂದ ದೊರಕುವ ಸಮಾಧಾನವನ್ನು ನಾವು ಹಸಿವೆಯ ಕಷ್ಟದೊಂದಿಗೆ ತುಲನೆ ಮಾಡುತ್ತೇವೆ. ಅನಂತರ ನಾವು ಹೇಳುತ್ತೇವೇನಂದರೆ ಅನ್ನದಿಂದ ಸುಖವು ದೊರಕಿತು ಎಂಬುದಾಗಿ, ಯಾರಿಗೆ ಹಸಿವೆಯೆಂಬುದೇ ಇಲ್ಲವೊ ಅವನಿಗೆ ಹಸಿವೆಯಿಂದ ಎಂದಾದರೂ ಕಷ್ಟವಾಗಿ ಕಾಣಲಿಕ್ಕಿಲ್ಲ, ಅಂತಹ ದುರ್ದೈವಿ ಮನುಷ್ಯನಿಗೆ ಅನ್ನದಿಂದ ಸುಖವು ಎಂದಾದರೂ ಕಾಣುವುದೇನು? ಸತ್ಯಕ್ಕೂ ಕಾಣಲಿಕ್ಕಿಲ್ಲ ಅವನಿಗೆ ಅನ್ನದ ಮೇಲಿನ ಅಭಿರುಚಿಯು ಸಂಪೂರ್ಣವಾಗಿ ನಷ್ಟವೇ ಆಗಿರುತ್ತದೆ ಅವನಿಗೆ ಅಲ್ಪ ಸ್ವಲ್ಪ ಹಸಿವೆಯಾಗುವುದರಿಂದಲೇ ಸೌಖ್ಯವು ತೋರಲಿಕ್ಕೆ ಸಾಕು ತಾತ್ಪರ್ಯವೇನೆಂದರೆ ಸುಖವು ಸಾಪೇಕ್ಷಕಲ್ಪನೆಯಾಗಿದೆ ಎಂಬುದನ್ನು ಮೊದಲು ಲಕ್ಷ್ಯದಲ್ಲಿಡಬೇಕು

ಎರಡನೇಯದೇನಂದರೆ, ಸುಖವು ಒಂದೇ ಪ್ರಮಾಣದಲ್ಲಿ ಯಾವಾಗಲೂ ಸಿಕ್ಕುತ್ತಾ ಇರಬಹುದೆಂಬ ಕಲ್ಪನೆಯು ಕೂಡ ತಪ್ಪಾಗಿರುತ್ತದೆ ಸುಖವನ್ನು ನಾವು ತುಲನೆಯ ಆಧಾರದ ಮೇಲೆ ಗಣಿಸುತ್ತಿದ್ದೇವೆ, ಆದುದರಿಂದಲೇ ದುಃಖವನ್ನು ಸಂಪೂರ್ಣವಾಗಿ ದೂರೀಕರಿಸಲಿಕ್ಕೆ ಇಷ್ಟವಾಗಿ ತೋರುವುದಿಲ್ಲ ಮತ್ತು ಅದು ~~ಶಕ್ಯವು ಕೂಡ ಅಲ್ಲ~~ ~~ಯಾರ ಮನೆಯಲ್ಲಿ~~ ವರ್ಷಂಪ್ರತಿ ಉಯ್ಯಾಲೆಯು ತೂಗಾಡುತ್ತಿದೆಯೋ ಅವನಿಗೆ ಆಪತ್ತು ಲಾಭದ ಸುಖವು ಏನು ತಾನೆ ತಿಳಿದೀತು? ತದ್ವಿರುದ್ಧ ಅವನಿಗೆ ಅದೊಂದು ಆಪತ್ತೇ ತೋರಲಿಕ್ಕೆ ಸಾಕು! ಅಸ್ವಸ್ಥತೆಯಿಂದ ಕೆಲವು ದಿವಸ ಹೋದ ವಿನಹ ಆರೋಗ್ಯದ ಆನಂದವು ಅನುಭವಕ್ಕೆ ಬರಲಿಕ್ಕಿಲ್ಲ ಹಣದ ತಗಾದೆಯಿಂದ ಕೆಲವು ಸಮಯವನ್ನಾದರೂ ಕಳೆದ ವಿನಹ ಧನಲಾಭದ ಸ್ವಸಂತೋಷವು ತಿಳಿಯಲಿಕ್ಕಿಲ್ಲ ಒಂದು ವೇಳೆ ಹೀಗೆ ಇರುವುದೇ ಆದರೆ ಸುಖಿಯಾಗಿರುವುದು ಪ್ರತಿಯೊಬ್ಬನ ಹಕ್ಕಾಗಿರುತ್ತದೆಂಬ ಹೇಳಿಕೆಯ ಅರ್ಥವಾದರೂ ಏನು? ಈ ವಿಷಯದ ಅರ್ಥವು ಇಷ್ಟೇ, ಅಂದರೆ ಪ್ರತಿಯೊಬ್ಬನಿಗೆ ಹೆಚ್ಚೆಚ್ಚಾಗಿ ಸುಖವು ಅನುಭವಿಸಲಿಕ್ಕೆ ಸಿಕ್ಕಬೇಕು. ಅತ್ಯಂತ ದುರ್ದೈವಿ ನರಜೀವಿಯನ್ನು ತೆಗೆದುಕೊಂಡರೂ ಕೂಡ ಅವನ ಆಯುಷ್ಯದಲ್ಲಿಯೂ ಸುಖದ ಸ್ವಲ್ಪಾಂಶವು ಇರುತ್ತದೆ. ಜಗತ್ತಿನಲ್ಲಿ ಸಂಪೂರ್ಣ ಸುಖಿಯು ಹೇಗೆ ದೊರಕುವುದಿಲ್ಲವೊ ಹಾಗೆಯೇ ಸಂಪೂರ್ಣ ದುಃಖಿಯಾಗಬೇಕೆಂಬುದೇ ಇದರ ಗೂಢಾರ್ಥ.

ನಮ್ಮ ದುಃಖಕ್ಕೆ ಕಾರಣಗಳು

ನಮ್ಮ ಆಯುಷ್ಯದಲ್ಲಿ ದುಃಖವು ಯಾವುದರಿಂದ ನಿರ್ಮಾಣವಾಗುತ್ತದೆಂಬ ಪ್ರಶ್ನೆಯನ್ನು ಪರಿಶೋಧಿಸುವಾಗ ವಿದ್ವಾಂಸರಿಗೆ ಈ ರೀತಿ ತೋರಿ ಬಂದಿದೆ, ನಮ್ಮ ದುಃಖದ ಬಹುತೇಕ ಕಾರಣಗಳು ಇದಾಗಿರುತ್ತವೆ 1 ಮೃತ್ಯುವಿನಿಂದಾಗುವ ಪ್ರಿಯ ಜನರ ವಿಯೋಗ. 2 ಪ್ರೀತಿ ಮತ್ತು ತತ್ಸಂಬಂಧ ಅಪೇಕ್ಷೆಯ ಭಂಗ 3 ಅಧಿಕಾರ ಮತ್ತು ಮಾನ ಮಾನ್ಯತೆಯ ವಿಯೋಗ 4 ಆರ್ಥಿಕ ಆಪತ್ತು 5 ಕುಟುಂಬದ ಕಲಹ ಈಗ ಇವುಗಳಲ್ಲಿಯ ಒಂದೊಂದರ ವಿಷಯ ಸ್ವಲ್ಪ ವಿಸ್ತಾರವಾಗಿ ವಿಚಾರ ಮಾಡುವ.

1 ಮೃತ್ಯುವಿನಿಂದ ಸಂಭವಿಸುವ ಪ್ರಿಯ ಜನರ ವಿಯೋಗ

ಇದೊಂದು ಮಾನವ ಜೀವನದಲ್ಲಿಯ ಮರೆಯಲಿಕ್ಕಾಗದಂತಹ ಆಪತ್ತಾಗಿದೆ ಯಾವ ಪ್ರಾಣಿಯು ಜನ್ಮಕ್ಕೆ ಬರುತ್ತದೊ ಅದು ಒಂದಲ್ಲ ಒಂದು ದಿನ ಸಾಯುತ್ತದೆ, ಈ ಸತ್ಯ ಸಂಗತಿಯು ಅತ್ಯಂತ ಪ್ರಾಚೀನ ಕಾಲದಲ್ಲಿಯೂ ಕೂಡ ಮಾನವನ ಪ್ರತ್ಯಕ್ಷ ತಿಳುವಳಿಕೆಗೆ ತೋರಿಬಂದಿದೆ ಮರಣವನ್ನು ಎಷ್ಟರ ವರೆಗೆ ತಪ್ಪಿಸಲಿಕ್ಕಾಗುವುದಿಲ್ಲವೊ ಅಷ್ಟರ ವರೆಗೆ ಈ ಸತ್ಯವು ಶಾಶ್ವತವಾಗಿಯೇ ಉಳಿಯುವುದು ಮಾನವನ ಜೀವನದಲ್ಲಿ ಈ ಅನಿವಾರ್ಯ ಆಪತ್ತಿಗೆ ಎದೆಯೊಡ್ಡಲಿಕ್ಕೆ ಮಾನವನನ್ನು ಸಮರ್ಥನನ್ನಾಗಿ ಮಾಡುವುದಕ್ಕೋಸ್ಕರವೇ ತತ್ವಜ್ಞಾನದಲ್ಲಿಯ ಬಹುಭಾಗವು ರಚಿತವಾಗಿದೆ ಆತ್ಮವು ಅಮರವಾಗಿದೆ, ದೇಹವು ನಶ್ವರವಾಗಿದೆ, ಜಗತ್ತೆಂದರೆ ಮಾಯೆಯಿಂದ ಕೂಡಿದೆ, ಪ್ರೀತಿಯು ಮೃತ್ಯುವನ್ನೂ ಕೂಡ ಗೆದ್ದು ಬರುವುದು ಇತ್ಯಾದಿ ತಾತ್ವಿಕ ವಿಚಾರವು ಸರ್ವ ಜನರಿಗೆ ತಿಳಿದೇ ಬಂದಿದೆ ಇದಕ್ಕೋಸ್ಕರ ಈ ವಿಚಾರಕ್ಕಿಂತ ಹೆಚ್ಚಿಗೆ ಏನೂ ಹೇಳಲಿಕ್ಕಾಗುವುದಿಲ್ಲ ಇಷ್ಟು ಮಾತ್ರ ಸತ್ಯ ಏನೆಂದರೆ ಈ ತಾತ್ವಿಕ ವಿಚಾರಕ್ಕಿಂತ ಕಾಲಗತಿಯೇ ಈ ದುಃಖದ ಉಪಶಮನಕ್ಕೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಈ ರೀತಿಯ ದುಃಖಕ್ಕೆ ಮುಖವೊಡ್ಡುವುದಕ್ಕೋಸ್ಕರ ತತ್ವಜ್ಞಾನದ ಆಶ್ರಯ ಮಾಡುವುದರಲ್ಲಿ ಕೂಡ ಏನೂ ಗೌರವವಿಲ್ಲ ಎಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು

2 ಪ್ರೀತಿ ಅಥವಾ ತತ್ಸಂಬಂಧ ಅಪೇಕ್ಷೆಯ ಭಂಗ

ಪ್ರಣಯ ಭಂಗವು ಅನೇಕ ದುಃಖಕ್ಕೆ ಕಾರಣಭೂತವಾಗಿದೆ ಆ ದುಃಖದಿಂದ ವಿಮೋಚನೆ ಮಾಡುವುದಕ್ಕೋಸ್ಕರ ಮದ್ಯಪಾನದಂತಹ ಭಯಂಕರ ವ್ಯಾಧಿಯ ಆಶ್ರಯವನ್ನು ಕೂಡ ಎಷ್ಟೋ ಜನರು ಮಾಡುತ್ತಾರೆ ಅಂದಹ ವ್ಯಾಧಿಯ ಆಶ್ರಯವು ಈ ದುಃಖ ನಿವಾರಣೆಯ ಉಪಾಯವಲ್ಲ. ಆ ವ್ಯಸನದಿಂದ ಬರುವ ಅಮಲಿನಿಂದ ಮನುಷ್ಯನಿಗೆ ಎಷ್ಟೋ ವೇಳೆ ತನ್ನ ದುಃಖದ ನೆನಪು ಮಾತ ಹೋಗುತ್ತದೆಂಬುದು ನಿಜ, ಆದರೆ ಆ ದುಂದು ವ್ಯಸನವು ಇಳಿದ ನಂತರ ಆ ದುಃಖದ ಹೊಡತವು ಅಧಿಕವಾಗುತ್ತಾ ಬರುತ್ತದೆ ಇದು ಸಿನಹ ಈ ತರದ ವ್ಯಸನದ ಮನುಷ್ಯನ ಆರೋಗ್ಯದ ವೈಯಕ್ತಿಕ ಮತ್ತು ಸಾಮಾಜಿಕ ಜೀವನದ ಮತ್ತು ಹಣದ ಎಷ್ಟೋ ತರಹದಲ್ಲಿ ವಿನಾಶಗಳಾಗುತ್ತವೆ. ಅದು ವಿನಹ ಆ ವ್ಯಸನದ ಆಶ್ರಯ ಮಾಡಿ ಜೀವಿಸುವುದೆಂದರೆ ಆಪತ್ತಿನ ಮುಂದುಗಡೆಯಿಂದ ಓಡಿಹೋದ ಹಾಗಲ್ಲವೇನು? ಈ ತರದ ವ್ಯಸನದ ಬದಲು ಉಪಾಯ ಹೀಗೆ ತೋರಿಸಬಹುದು, ಅಂದರೆ ನಿಷ್ಪಕ್ಷವಾದ ಬುದ್ಧಿಯಿಂದ ಆತ್ಮನಿರೀಕ್ಷಣೆ ಮಾಡಿ ತನ್ನದು ತಪ್ಪಾಗಿದೆ ಎಂದು ತೋರಿಬಂದರೆ ಅದನ್ನು ಒಪ್ಪಿಕೊಳ್ಳುವುದು ಮತ್ತು ಪುನಹ ಹಿಂದಕ್ಕೆ ತೆಗೆದುಕೊಳ್ಳುವ ಇಚ್ಛೆಯನ್ನು ಪ್ರಕಟಗೊಳಿಸಿ ದೂರೀಕರಿಸಿದ ಪ್ರೀತಿಯನ್ನು ಹತ್ತಿರ ಮಾಡುವುದೇ ಸದುಪಾಯ ಇಷ್ಟರಲ್ಲಿಯೂ ಕೂಡ ಕಾರ್ಯವು ಸಾಧಿಸದ ಪಕ್ಷದಲ್ಲಿ ಅದೊಂದು ಸಹಿಸಲಾಗದ ಆಪತ್ತಾಗಿದೆಯೆಂದು ತೋರಿಬಂದರೆ ಪ್ರೀತಿಯ ಸ್ಥಾನವನ್ನು ಬದಲಿಸುವುದೇ ಉಪಾಯವಾಗಿದ ಪ್ರೀತಿಯ ಭಾವನೆಯನ್ನು (ಪ್ರೀತಿಯೆಂದರೆ ಬರೇ ಪ್ರಣಯ ಎಂಬುದಲ್ಲ) ಮಾನವನ ಅಂತಃಕರಣದಿಂದ ಸಂಪೂರ್ಣ ನಷ್ಟಗೊಳಿಸುವುದಕ್ಕೆ ಶಕ್ಯವಿಲ್ಲ, ಮತ್ತು ಇಷ್ಟವೂ ಆಗುವುದಿಲ್ಲ, ಹೀಗೆ ಆಧುನಿಕ ಮಾನಸ ಶಾಸ್ತ್ರಜ್ಞರು ಸಿದ್ಧ ಮಾಡಿ ತೋರಿಸಿದ್ದಾರೆ ಬಂದರಗಳಲ್ಲಿರುವ ಧಾನ್ಯದವಸಗಳಿಗೆ ಹೇಗೆ ನೇಗಿಲಿನ ಅಗತ್ಯವೋ ಹಾಗೆಯೇ ಜೀವನಕ್ಕೆ ಪ್ರೀತಿಯೂ ಅಗತ್ಯವಾಗಿರುತ್ತದೆ ಆದುದರಿಂದ ಪ್ರೀತಿಯ ಸಮುಸ್ಥಾನವನ್ನು ಜೀರ್ಣಾವಸ್ಥೆಗೆ ತಾರದೆ ಅದನ್ನು ನೆಲೆಗೊಳಿಸುವುದಕ್ಕೆ ಹೊಸ ಆಧಾರವನ್ನು ನಿರ್ಮಿಸಬೇಕು

3 ಅಧಿಕಾರ ಅಥವಾ ಮಾನ್ಯತೆಯ ವಿಯೋಗ

ಅಧಿಕಾರ ಅಥವಾ ಮಾನ್ಯತೆಯನ್ನು ದೊರಕಿಸಿಕೊಳ್ಳುವುದರಲ್ಲಿ ಎಷ್ಟು ಸುಖವಾಗುತ್ತದೋ ಅದರ ವಿಯೋಗದಿಂದ ಅಷ್ಟೇ ಕ್ಲೇಶವು ತೋರುತ್ತದೆ ಈ ಕ್ಲೇಶವನ್ನು ತಾಳಲಾರದೆ ಎಷ್ಟೋ ಜನರು ಆತ್ಮಹತ್ಯದ ತಹ ಹೀನವಾದ ಕಾರ್ಯವನ್ನು ಕೈಗೊಂಡಿದ್ದಾರೆ, ಅವಮಾನ ಯೋರತನವನ್ನು ಸಹಿಸಿಕೊಳ್ಳಲಿಕ್ಕಾಗದೆ ಚಲಿಸುವ ರೈಲ್ವೆ ಗಾಡಿಯ ಮುಂದೆ ತನ್ನ ದೇಹವನ್ನು ಆಹುತಿಕೊಡುವ ಒಬ್ಬ ತರುಣ ವ್ಯಾಪಾರಿಯ ನೆನಪು ಈ ಸಂದರ್ಭದಲ್ಲಿ ನನಗೆ ಕಣ್ಣ ಮುಂದೆ ಗೋಚರಿಸುತ್ತದೆ ಆತ್ಮಹತ್ಯೆಯು ತಿಳಿಗೇಡಿತನದ ಮಾರ್ಗವಾಗಿರುತ್ತದೆಂಬ ಈ ಸಿದ್ಧಾಂತವನ್ನು ನಾನು ಪುನಹ ಪ್ರಸ್ತಾವನೆ ಮಾಡುವ ಏನೂ ಆವಶ್ಯಕತೆಯಿಲ್ಲ. ಮುಂಬಯಿಯಂದ ಒಂದು ಕತೆಯಲ್ಲಿ ದಿವಾಳಿಖೋರನಾದರೆ ಮದ್ರಾಸಿಗೆ ಅಥವಾ ಕಲ್ಕತ್ತೆಗ ಹೋಗಿ ವ್ಯಾಪಾರ ವ್ಯವಹಾರವನ್ನು ಮಾಡಿ ಅಲ್ಲೆ ನೆಲೆಯಾಗುವ ಎಷ್ಟೋ ವ್ಯಾಪಾರಿ ಜನರ ಕಡೆಗೆ ಬೆರಳ ತೋರಿಸಿದರೆ ನನ್ನ ಅಭಿಪ್ರಾಯವು ತಮ್ಮೆಲ್ಲರ ಲಕ್ಷ್ಯಕ್ಕೆ ಬರುವುದು ಯಾವ ಸ್ಥಳದಲ್ಲಿ ತಮ್ಮ ಮಾನ್ಯತೆಯು ಭಂಗವಾಯಿತೋ ಆ ಸ್ಥಳವನ್ನು ಬಿಟ್ಟು ಹೊಸ ಸ್ಥಳದಲ್ಲಿ ಹೊಸ ಉದ್ಯೋಗವನ್ನು ಪ್ರಾರಂಭ ಮಾಡುವುದು ಮತ್ತು ಗತಿಸಿದ ತಪ್ಪು ತಿರುಗಿ ಆಗದ ರೀತಿಯಲ್ಲಿ ಮುಂಜಾಗ್ರತೆ ವಹಿಸುವುದು ಇದೇ ಮೇಲಿನ ಕಷ್ಟನಿವಾರಣೆಗೆ ಸದುಪಾಯ, ಕೆಲವು ವೇಳೆ ನಮ್ಮ ದುಃಖವನ್ನು ನಾವು ಅನಾವಶ್ಯಕವಾಗಿ ಏನೇನೋ ಊಹನೆಯಿಂದಲೇ ಉಂಟುಮಾಡುತ್ತೇವೆ. ಇದಕ್ಕೊಂದು ನನ್ನ ನಿದರ್ಶನವನ್ನು ತಿಳಿಸುತ್ತೇನೆ ಒಬ್ಬ ಗೃಹಸ್ಥನ ಮೇಲೆ ಒಬ್ಬ ಸಾಹುಕಾರನು ಕೋರ್ಟಿನಿಂದ ಹುಕುಮ್

೧೧ನೇ ಪುಟ ನೋಡಿ



ನೋವಿನ ಎದೆ ಗಂಡಾಂತರದ ಅಣುಗಳನ್ನು ತೋರಿಸುತ್ತದೆ ಪೆಪ್ ವಿಷಹಾರಿ ಮಾತ್ರೆ ಸೇವಿಸಿ ಈ ಗಂಡಾಂತರವನ್ನು ಪಾರುಗೊಳಿಸಿರಿ

ಬಾಯಲ್ಲಿ ಕರಗುತ್ತಲೆ ಪೆಪ್ಸಿನ ಅಮೂಲ್ಯ ಔಷಧೀಯ ಸತ್ವಗಳು ಶ್ವಾಸಕೋಶಕ್ಕೊಯಲ್ಪಟ್ಟು ಅಣು ನಾಶ, ಶಮನ, ಪರಿಹಾರಗಳನ್ನು ಗೆಯ್ಯುತ್ತದೆ ಕಫ ಸಡಿಲಾಗಿ ಎದೆ ಒತ್ತಾಟ ಕಮ್ಮಿಯಾಗುತ್ತದೆ ಶ್ವಾಸ ಸುಲಭವಾಗುತ್ತದೆ ಕೆಮ್ಮು, ಗೂರಲು, ಶೀಘ್ರ ಕಮ್ಮಿಯಾಗಿ ಅವನ್ನು ತಡೆಯುವ ಶರೀರ ಶಕ್ತಿ ಹೆಚ್ಚುತ್ತದೆ ಕೆಮ್ಮು ಶೀತ, ನೆಗಡಿ, ಗಂಟಲು ಬೇನೆ, ವಿಷಮ ಜ್ವರ, ಗೂರಲು ಮತ್ತಿತರ ಎದೆ ಶ್ವಾಸಕೋಶ ಬಾಧೆಗಳಿಗೆ ಪೆಪ್ಸ್ ವಿಶ್ವ ವಿಖ್ಯಾತವಾದುದು

ಈಗಲೇ ಪೆಪ್ಸ್

PEPS



ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ.

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವವು.

ಪ್ರತಿಯೊಬ್ಬ ವ್ಯಕ್ತಿಯ ಜೀವಾಳದ ಪ್ರಶ್ನೆ

(೧೦ನೇ ಪುಟದಿಂದ)

ಸಾಮೆಯನ್ನು ತೆಗೆಯಿಸಿ ಅವನ ಸ್ತೊತ್ತನ್ನು ತನ್ನ ವಶ ಪಡಿಸಿದ ಅದರಿಂದ ಆ ಗೃಹಸ್ಥನು ಎಷ್ಟು ನಾಚಿಕೆಪಟ್ಟನೆಂದರೆ, ಎಷ್ಟೋ ದಿವಸಗಳ ವರೇಗೆ ಮನೆಯಿಂದ ಹೊರಗೆ ಬಂದ ಹಾಗೆಯೇ ಮುರುಟಿಕೊಂಡ! ಆಕಸ್ಮಾತ್ತಾಗಿ ನಾನು ಒಂದು ಸಲ ಅವನ ಭೇಟಿಯಾದೆ. ಆಗ ಅವನ ಅಭಿಪ್ರಾಯವನ್ನು ಹೊರಗೆಡಹಿದನೇನಂದರೆ 'ತಾನು ರಸ್ತೆಯಲ್ಲಿ ತಿರುಗಾಡಿದರೆ ಜನರು ನನ್ನನ್ನೇ ನೋಡಿಯಾರು, ತನ್ನ ವಿಷಯ ಚರ್ಚೆ ಮಾಡಿಯಾರು, ಹಾಸ್ಯ ಮಾಡಿಯಾರು, ತನ್ನನ್ನು ತುಚ್ಛೀಕರಿಸಿಯಾರು, ಮತ್ತು ಆ ಸಮಯ ತಾನು ಸತ್ತ ಹಾಗೆಯೇ ಆಗುವುದು" ಎಂದು ಹೇಳಿದನು. ಮತ್ತೊಂದು ದಿನ ಏನೋ ಪ್ರಸಂಗದಿಂದ ನಾನು ಅವನನ್ನು ಮನೆಯ ಹೊರಗೆ ಕರೆದೆ, ರಸ್ತೆಯಲ್ಲಿ ತಿರುಗಿಸಿದೆ, ಅವನ ಕಡೆಗೆ ಯಾರೂ ನೋಡುತ್ತಿದ್ದಿಲ್ಲ ಮತ್ತು ಅವನ ಚೇಷ್ಟೆಯನ್ನೂ ಮಾಡುತ್ತಿದ್ದಿಲ್ಲ ಎಂದು ಅವನ ದೃಷ್ಟಿಗೆ ತೋರಿಸಿಕೊಟ್ಟ ನಿಮ್ಮ ಕಡೆಗೆ ನೋಡುತ್ತಾ ಕುಳಿತುಕೊಳ್ಳುವುದಕ್ಕೆ ಜನರಿಗೆ ಉದ್ಯೋಗವಿಲ್ಲವೇನು? ನೀವು ದೊಡ್ಡ ನಪೋಲಿಯನ್ ಅಥವಾ ಹಿಟ್ಲರ್ ಆಗಿದರೇ ತಾನೆ, ಜನರು ತಮ್ಮ ತಮ್ಮ ಉದ್ಯೋಗ ಬಿಟ್ಟು ನೋಡುತ್ತಾ ಇರಲಾಪರು ಒಂದು ವೇಳೆ ಅನಪೇಕ್ಷಿತ ಸಂಗತಿಯಿಂದ ಸಮಾಜದಲ್ಲಿ ಕಳವಳವು ಉಂಟಾಗುತ್ತದೆಂಬುದು ನಿಜವಾದರೆ ಈ ತರದ ಸಂಗತಿಯಿಂದ ಸಮಾಜದ ಕ್ರಿಯೆಯು ಕೂಡ ಬಹಳ ಸಮಯ ಉಳಿಯುವುದಿಲ್ಲವೆಂಬುದು ನಿಜವಾಗಿ ದುತಷ್ಟೆ ಈ ಸಂಗತಿಯನ್ನು ಲಕ್ಷ್ಯ ತೆಗೆದುಕೊಂಡು ಅಧಿಕಾರ ಅಥವಾ ಪ್ರತಿಷ್ಠೆಯ ವಿಯೋಗದಿಂದ ನಿರ್ಮಾಣವಾಗುವ ದುಃಖದ ದೊಡ್ಡ ಉರಿಯನ್ನು ಊರ್ಜಿತಗೊಳಿಸಬಾರದು ಎಂದು ಕಠೋರವಾಗಿ ಹೇಳಬಹುದು.

4 ಆರ್ಥಿಕ ಆಪತ್ತು

ನಮ್ಮ ಪೈಕಿ ಹೆಚ್ಚು ಜನರ ಅಭಿಪ್ರಾಯವೇನಂದರೆ, ಹಣವೇ ಸರ್ವಸ್ವವು. ಮರ್ಯಾದೆಯ ಮುಂದೆ ನಾವು ಅದರ ಮಹತ್ವವನ್ನು ಅತಿಶಯಗೊಳಿಸಬಾರದೆಂದೇ ನನಗೆ ಹೇಳಬೇಕಾಗಿದೆ. ಸುಖವು ಹಣದಿಂದ ಕ್ರಯಕ್ಕೆ ಪಡೆಯುವ ವಸ್ತುವಲ್ಲ. ಅದರ ನಿರ್ಮಾಣವು ನಮ್ಮ ಅಂತರ್ಯದಿಂದಲೇ ಮಾಡಬೇಕು ಹಣಕ್ಕೆ ನಾವು ಬಹಳ ಹುಚ್ಚುತನದ ಮಹತ್ವ ಕೊಡಬಾರದೆಂದು ನಾನು ಹೇಳುವ ಇನ್ನೊಂದು ಕಾರಣವೇನಂದರೆ ನಮ್ಮ ಉದ್ಯೋಗದ ಮತ್ತು ಕರ್ತವ್ಯದ ಯೋಗ್ಯ ಪ್ರಮಾಣದಲ್ಲಿಯೇ ಹಣವೇ ನಮಗೆ ಅಲಂಕಾರ, ಉದ್ಯೋಗ ಇತ್ಯಾದಿ ಸಿಕ್ಕಿತೆಂದರೆ ಸುಖವು ದೊರೆತ ಹಾಗೆಯೇ ಎಂದು ಆದರೆ ಈ ಕಲ್ಪನೆಯು ಮಾತ್ರ ತಪ್ಪಾಗಿರುತ್ತದೆ ಬರೇ ದುಡ್ಡಿನಿಂದ ಸುಖವು ದೊರಕುವುದಾದರೆ, ಯಾರ ಕೈಯಲ್ಲಿ ಹಣವಿದೆಯೋ ಆ ಜನರು ಸುಖಿಗಳಾಗಿರಬೇಕಿತ್ತು ಆದರೆ ಈ ತರದ ಸಿರಿವಂತ ಜನರನ್ನು ವಿಚಾರಿಸಿದರೆ ಬಡವರ ಹಾಗೆಯೇ ಅವರಲ್ಲಿಯೂ ಕೂಡ ದುಃಖವು ಇರುತ್ತದೆಂದು ನಿಮಗೆ ತೋರಿಬರುವುದು ಹೀಗೆ ಹೇಳುವಾಗ ನಾನು ಹಣದ ಮಹತ್ವವನ್ನು ಕಡೆಗಣಿಸುತ್ತೇನೆಂದಲ್ಲ ನಮ್ಮ ಸಮಾಜದ ಸದ್ಯದ ವ್ಯವಸ್ಥೆಯಲ್ಲಿ ಹಣಕ್ಕೆ ಮಹತ್ವವಿದೆ ಹಣದಿಂದ ಬೇಕಾದಂತಹ ಅನೇಕ ವಸ್ತುಗಳನ್ನು ಖರೀದಿ ಮಾಡಲಿಕ್ಕೆ ಬರುತ್ತದೆ, ಹಣದಿಂದಲೇ ನಮಗೆ ಅಗತ್ಯ ಬೇಕಾದ ಅನ್ನವಸ್ತ್ರವನ್ನು ಪಡೆಯುವೆವು ಈ ಸಂಗತಿಯು ಒಪ್ಪತಕ್ಕದ್ದೇ ಹಿಂಗಿದ ದಿನದ ಸುಖದ ಇಚ್ಛೆಪಡುವ ಮಾನವನು ಹಣ ಸಂಪಾದನೆ ಮಾಡುವ ಉದ್ಯೋಗವನ್ನು ಮೊದಲು ಪ್ರಾರಂಭ ಮಾಡಬೇಕು ಎಂಬುದು ಕೂಡ ಸತ್ಯವಾಗಿದೆ ಆದರೆ ದುಡ್ಡಿನ ಮಹತ್ವಕ್ಕೆ ಮರ್ಯಾದೆಯಿದೆ ಮತ್ತು ಆ ನಮಗೆ ದುಡ್ಡು ಸಿಕ್ಕುವುದೆಂದಿಲ್ಲ ಹಣ ಸಂಪಾದನೆಯ ಸಂಬಂಧದಲ್ಲಿ ಮನೀ ಯೋಗಾಯೋಗ ಸಂಬಂಧವು ಬರುತ್ತದೆ ವೇಗಾಯೋಗ್ಯತೆಯೆಂದರೆ ಮಾನವನ ಹಿಂದಿನ ಪ್ರಯತ್ನದ ಫಲವು ಬರಲೇಬೇಕು. ಆದುದರಿಂದ ಯಾವುದನ್ನೂ ಸಂಪಾದನೆ ಮಾಡುವುದಕ್ಕೆ ನಮ್ಮ ಕೈಯಿಂದ ಸಾಧ್ಯವಾಗುವುದಿಲ್ಲವೋ, ಆ ಸಂಪಾದನೆಯ ವಿಷಯ ಅನಾವಶ್ಯಕವಾದ ಅಪೇಕ್ಷೆಯನ್ನು ಇಟ್ಟುಕೊಳ್ಳುವುದು ಎಷ್ಟರ ಮಟ್ಟಿಗೆ ಯೋಗ್ಯವಾಗಿದೆ? ಈ ಅಪೇಕ್ಷೆಯು ಸಫಲವಾಗುವುದೆಂದು ತೋರಿಬಂದರೆ ನಮ್ಮ ಜೀವನದಲ್ಲಿ ದುಃಖದ ಪ್ರವೇಶವು ಆದ ಹಾಗೆಯೇ ಎಷ್ಟೋ ಆರ್ಥಿಕ ದುಃಖದ ಮೂಲವು ಈ ಅಪೇಕ್ಷೆ ಭಂಗದಲ್ಲಿಯೇ ಇದೆ ಆದುದರಿಂದ ಈ ರೀತಿಯ ಏನೇನೋ ಅಪೇಕ್ಷೆ ಇರಬಾರದು ಇದೇ ಬಹಳ ಬುದ್ಧಿವಂತಿಕೆ. ಅಲ್ಲವೇನು? ಆರ್ಥಿಕ ಆಪತ್ತು ಮಾತ್ರ ಬರಗೊಡದ ದೃಷ್ಟಿಯಿಂದ ಒಂದು ಬೆಲೆಯುಳ್ಳ ಸೂಚನೆ ಮಾಡಲು ಅಪೇಕ್ಷಿಸುತ್ತೇನೆ ನಮ್ಮ ಆರ್ಥಿಕ ಜಮಾಖರ್ಚಿನಲ್ಲಿ ಜಮದ ಬಾಬ್ತು ನಮಗೆ ಎಷ್ಟು ಊರ್ಜಿತಗೊಳಿಸಲಿಕ್ಕೆ ಬರುತ್ತದೊ ಅಷ್ಟು ಊರ್ಜಿತಗೊಳಿಸುವ ಪ್ರಯತ್ನವನ್ನು ಮಾಡಲೇ ಬೇಕು ಆದರೆ ಅದರೊಟ್ಟಿಗೆ ಖರ್ಚಿನ ಬಾಬು ಪ್ರತಿಯೊಂದು ಕಲಮಿನ ಮೇಲೆ ನಮ್ಮ ಮುಂಜಾಗ್ರತೆಯ ಪಹರೆಯು ಬೇಕೇ ಬೇಕು ಎಷ್ಟೋ ಸಮಯಗಳಲ್ಲಿ ದುಡ್ಡು ನಮ್ಮ ಕೈಯಿಂದ ವಿವಂಚನೆಯಿಂದ ಖರ್ಚಾಗಿ ಹೋಗುವುದಿದೆ ಎಂದು ನಮ್ಮೆಲ್ಲರ ಅನುಭವದ ಸಂಗತಿಯಾಗಿದೆ ಆದುದರಿಂದಲೇ ಈ ವಿಷಯದ ಮೇಲೆ ನಮ್ಮ ಜಾಗ್ರತೆಯ ಪಹರೆಯು ಬೇಕೆಂದು ನನ್ನ ಸೂಚನೆ ಆರ್ಥಿಕ ಆಪತ್ತನ್ನು ಸಹಿಸುವ ದೃಷ್ಟಿಯಿಂದ ಇನ್ನೊಂದು ದಕ್ಷತೆ ತೆಗೆದುಕೊಳ್ಳುವುದು ಅವಶ್ಯವಾಗಿದೆ ಅದೇನೆಂದರೆ, ನಮ್ಮ ಸ್ವಭಾವವನ್ನು ಸಾದಾ ರೀತಿಯಲ್ಲಿಡುವ ಪ್ರಯತ್ನ ಮಾಡಬೇಕು ನಮ್ಮ ಸ್ವಭಾವವನ್ನು ಅನಾವಶ್ಯಕವಾದ ಖರ್ಚು ದಾರಿಗೆ ಹೋಗಗೊಡಕೂಡದು, ಅದರಿಂದ ಆರ್ಥಿಕ ಆಪತ್ತನ್ನು ಆಮಂತ್ರಿಸಿದ ಹಾಗೆಯೇ ಆಗುವುದು ಸಾಮಾನ್ಯವಾಗಿ ಮನುಷ್ಯನು ತನ್ನ ಸ್ವಭಾವದ ಗುಲಾಮನಾಗಿರುತ್ತಾನೆ, ಈ ಸಂಗತಿಯನ್ನು ಒಪ್ಪಿಕೊಳ್ಳದಿರುವುದಕ್ಕೆ ಅರ್ಥವಿಲ್ಲ. ವ್ಯರ್ಥವಾಗಿ ಖರ್ಚು ಮಾಡುವ ಸ್ವಭಾವವು ಹತ್ತಿದ ನಂತರ ಮನುಷ್ಯನ ಹತ್ತಿರ ಹಣವಿಲ್ಲದಿದ್ದರೂ ಕೂಡ ಸಾಲಮಾಡಿ ಜೀವಿಸಿಯಾನು; ಮತ್ತು ಸಾಲವೆಂಬ ಬಲೆಯೊಳಗೆ ಒಂದು ಸಲ ಸಿಕ್ಕಿಬಿದ್ದ ಮೇಲೆ ತಪ್ಪಿ ಮೇಲೆ ಬರುವುದು ಅವನಿಗೆ ಅಶಕ್ಯವಾಗದಿದ್ದರೂ ಕಠಿಣವಾಗಿಯೇ ಇರುವುದು (ಸಶೇಷ)

Germex

ಗುಣಪಡಿಸುವ ವಿಷಹಾರಿ

ಅಟ್‌ಲ್ಸ್ ಓರಿಯಂಟಲ್ ಬಾಮ್

ಇವರ ತಯಾರಿ

ಎಲ್ಲಾ ಚರ್ಮ ವ್ಯಾಧಿಗಳಿಗೆ

ಜರ್ಮೆಕ್ಸನ್ನು

ಉಪಯೋಗಿಸಿರಿ

ನೋಟೀಸು

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

O S 416/47

E A ಫ್ಯಾಸ್ — ವಾದಿ.

ಮತ್ತು

ಚಿಕ್ಕಪ್ಪ ಪೈಲಿ — ಪ್ರತಿವಾದಿ.

ಪ್ರತಿವಾದಿ—ಮಂಗ್ಳೂರು ತಾಲ್ಲೂಕು ಸೋಮೇಶ್ವರ ಗ್ರಾಮದಲ್ಲಿರುವ, ಶಾಂತಪ್ಪ ಪೈಲಿಯವರ ಅಳಿಯ, ಚಿಕ್ಕಪ್ಪ ಪೈಲಿಯವರಿಗೆ ಈ ಮೂಲಕ ತಿಳಿಯಪಡಿಸುವದೇನಂದೆ —

ಮೇಲ್ಕಂಡ ವಾದಿಯು, ನಿಮ್ಮ ಮೇಲೆ ~~ಗೇಣಿ ಬಾಕಿಗೆ ಮತ್ತು ಆಸ್ತಿ ಸ್ವಾಧೀನತೆಗೆ ಕೂಡಾ~~ ಈ ಕೋರ್ಟಿನಲ್ಲಿ ದಾವಾ ದಾಖಲು ಮಾಡಿರುತ್ತಾರೆ ಸದ್ರಿ ದಾವೆಯು ಆಖೈರು ತನಿಖೆ ಬಗ್ಗೆ ತಾರೀಕು 10–11–47ಕ್ಕೆ ಈ ಕೋರ್ಟಿನ ಮುಂದೆ ಇಟ್ಟಿರುತ್ತದೆ. ಸದ್ರಿ ತಾರೀಕಿನಲ್ಲಿ ನೀವು ಖುದ್ದಾಗಲೀ ವ, ವಕೀಲ್ ಮುಖಾಂತ್ರವಾಗಲೀ ಹಾಜರಾಗಿ ನಿಮ್ಮ ಉದಾಹರಣೆ ದಾಖಲು ಮಾಡುವರೇ ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ತಿಳಿದಿರುವದು

ಮಂಗ್ಳೂರು,
31–10–'47

By Order
(Sd) Basil Lobo
Advocate for Plaintiff

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೋಟರು ಬಸ್ಸುಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ನಡೆಸಲ್ಪಟ್ಟ ನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗಿದೆ ಅಲ್ಲದೆ ಕೆಲವು ಲೈನ್ನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೇಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು–ಮುಲ್ಕಿ ಲೈನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶಲುಗಳನ್ನು ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವದಿಲ್ಲವೆಂಬ ದಾಸಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡೂ ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29–3–1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ದೀಪಾವಳಿಯ ಶುಭಸಂದೇಶಗಳು

ನಮ್ಮ ಎಲ್ಲಾ ಪೊಲಿಸಿದಾರರಿಗೆ, ವೈದ್ಯಕೀಯ ಪರೀಕ್ಷಕರಿಗೆ, ಏಜಂಟರಿಗೆ ಮತ್ತು ಹಿತಚಿಂತಕರಿಗೆ

ದೀಪಾವಳಿ ಮತ್ತು ಮುಂಬರುವ ವರುಷವು ಶುಭದಾಯಕವಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದುಸ್ಥಾನ, ಮೈಸೂರು, ಟ್ರಾವನ್ಕೂರ್,

—o— ಕೊಚ್ಚಿನ್ ಮತ್ತು ಪುದುಕೋಟೆ ಸಂಸ್ಥಾನಗಳ ಚೀಫ್ ಏಜಂಟರು —o—

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಮದ್ರಾಸು, ಬೆಂಗಳೂರು, ಬೊಂಬಾಯಿ, ಟ್ರಿವೆಂಡ್ರಮ್,

ಕಲ್ಲಿಕೋಟೆ, ಮಂಗಳೂರು ಮಧುರಾ, ಮತ್ತು ಉಡ್ಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 14—11—1947 [ಸಂಚಿಕೆ 45]

ಭೂಲೋಕದಲ್ಲಿ ನರಕಯಾತನೆಯ ದೃಶ್ಯ

ಪಂಜಾಬ ನಿರಾಶ್ರಿತರ ಸ್ಥಳಾಂತರ ಸಂಕಷ್ಟ

ಪ್ರಯಾಣ ಮಾಡುವಾಗ ಪ್ರಸವ ಪ್ರಸಂಗ

ಯಮಲೋಕದಲ್ಲಿ ಪಾಪಿಷ್ಟರು ನರಕ ಯಾತನೆಯನ್ನನುಭವಿಸುವ ಭೀಕರ ದೃಶ್ಯ ವನ್ನು ವರ್ಣನೆಯಲ್ಲಾದರೂ ಓದುಗರು ಕೇಳಿರಬಹುದು. ಆದರೆ ಪಂಜಾಬದಲ್ಲಿನ ನಿರಾಶ್ರಿತರು ಒಂದು ಡೊಮಿನಿಯನ್ನಿನಿಂದ ಇನ್ನೊಂದಕ್ಕೆ ಕಾಲ್ನಡೆಯಲ್ಲಿ ಸ್ಥಳಾಂತರ ಹೋಗುವ ಸಾಲು ಮೆರವಣಿಗೆಯ ದೃಶ್ಯವನ್ನು ಒಂದು ಸಲ ನೋಡಿ ಅವರು ಪಟ್ಟ ಸಂಕಷ್ಟಗಳನ್ನು ಕೇಳಿದರೆ ಆ ಅನುಭವವು ಬಹಳ ಕಾಲದ ತನಕ ನಮ್ಮ ಮನಸ್ಸನ್ನು ಕಳವಳಗೊಳಿಸದಿರದು. ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯ ವಿಶೇಷ ಬಾತ್ಮಿದಾರನೊಬ್ಬನು ತಾನು ಕಂಡದ್ದೊಂದು ನಿರಾಶ್ರಿತರ ಕರವಾನದ ದೃಶ್ಯವನ್ನು ಹೀಗೆ ವರ್ಣಿಸಿದ್ದಾನೆ

ಸೈನ್ಯದಂತೆ ಒಂದು ನಿರಾಶ್ರಿತ ದಳದಲ್ಲಿ 50 ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಮಂದಿಗಳಿರುತ್ತಾರೆ ದೂರದಿಂದ ಈ ನಿರಾಶ್ರಿತರು ಹಿಂದೂಗಳೊ ಮುಸ್ಲಿಮರೊ ಎಂದು ಗುರುತಿಸಲಸಾಧ್ಯವಾಗುತ್ತದೆ ಅವರ ದುರ್ದೆಶೆ, ಪರಿಸ್ಥಿತಿಗಳಲ್ಲಿ ಯಾವುದೊಂದು ವ್ಯತ್ಯಾಸವೂ ಇಲ್ಲ ಮಾತ್ರ ಅವರು ಪರಸ್ಪರ ವಿರೋಧ ದಿಕ್ಕುಗಳಲ್ಲಿ ಚಲಿಸುತ್ತಿರುತ್ತಾರೆ

ಜಾನುವಾರು ಮುಂದೆ

ಈ ಸಾಲುಗಳ ಮುಂಭಾಗದಲ್ಲಿ ಇಡೀ ಕುಟುಂಬಗಳನ್ನೊಯ್ಯುವ ಎತ್ತಿನ ಬಂಡಿಗಳಿರುತ್ತವೆ ಅಲ್ಲಿ ಇಲ್ಲಿ ಒಬ್ಬಿಬ್ಬರು ಕುದುರೆಗಳಲ್ಲಿ ಕುಳಿತು ಸಾಗುತ್ತಿರುವರು ಕೆಲವು ಕತ್ತೆ ಒಂಟೆಗಳೂ ಉಪಯೋಗಿಸಲ್ಪಡುತ್ತವೆ ಹಿಂಬದಿಗಳಲ್ಲಿನ ಜನರು ಪಾದಚಾರಿಗಳಾಗಿಯೇ ಚಲಿಸುವರು

ಈ ದಳಗಳ ಮಧ್ಯದಲ್ಲಿ ಜಾನುವಾರುಗಳೂ ಚಲಿಸುತ್ತಿವೆ ಅಸಂಖ್ಯಾತ ದನ ಕುರಿ ಆಡುಗಳೂ ಕತ್ತೆ ಕುದುರೆ ಎಮ್ಮೆ ಕೋಣಗಳೂ ಮತ್ತೆ ಅಲ್ಲಲ್ಲಿ ನಾಯಿಗಳೂ ತಮ್ಮ ಒಡೆಯರನ್ನು ಹಿಂಬಾಲಿಸುವುದನ್ನು ಕಾಣಬಹುದು.

ಈ ನಿರ್ಗತಿಕರ ಸಾಲುಗಳು ನಡೆಯುವಾಗುಂಟಾದ ಮಾರ್ಗದ ಧೂಳಿನ ಮೋಡಗಳು ನಭೋ ಮಂಡಲವನ್ನೇ ಮುಚ್ಚುತ್ತಿವೆ ಅವುಗಳ ನಡುವೆ ಹೋಗುತ್ತಿರುವ ನೊಣ ನುಸಿಗಳ ಸಾಲುಗಳು ಸ್ನಾನ ಒಗೆತಗಳಿಲ್ಲದೆ ಕೊಳಕಾದ ಆ ಜನರ ಮೈಮೇಲೆ ಕುಳಿತು ಹಾವಳಿ ಮಾಡುತ್ತಿರುವವಲ್ಲದೆ ನಾನಾ ತರದ ರೋಗ ಗಾಯಗಳಿಂದ ನರಳುವ ಜಾನುವಾರುಗಳ ಮೇಲೆಯೂ ಅವು ತಂಡತಂಡವಾಗಿ ದಾಳಿಯಾಡುತ್ತಿದ್ದವು ಜಾನುವಾರುಗಳಾದರೊ ಯಾವ ತಿನಸಿಲ್ಲದೆ ಹೆಜ್ಜೆ ತೆಗೆಯಲೂ ಕಷ್ಟಪಡುವಾಗ ಮೈಮೇಲೆ ಕುಳಿತ ನೊಣಗಳನ್ನು ಓಡಿಸಲು ಬಾಲವನ್ನು ಹೇಗೆ ಎತ್ತಿಯಾವು?

ದುರ್ಗಂಧದ ಬೀಡು

ಈ ಸಾಲುಗಳಿಂದ ಬಹಳ ದೂರವಿರುವಾಗಲೇ ಉಸಿರು ಕಟಿಸುವ ದುರ್ಗಂಧವೊಂದು ನಿಮ್ಮ ಮೂಗುಗಳನ್ನು ಮುಚ್ಚುತ್ತದೆ ಬೆವರು, ಮಲ ಮೂತ್ರ ಮತ್ತು ಕೊಳೆಯುವ ಮಾಂಸಗಳಿಂದ ಈ ದುರ್ವಾಸನೆಯು ಹೊರಡುತ್ತದೆಂಬ ಸಂಗತಿಯು ಹತ್ತಿರ ಹೋದರೆ ತಿಳಿಯುತ್ತದೆ

ಒಂದು ಕಡೆ ಎತ್ತೊಂದು ಸತ್ತು ಬಿದ್ದಿರುತ್ತದೆ ಮಾಲೀಕನು ಅದನ್ನು ಬದಿಗೆತ್ತಿ ಬಿಸಾಡುವರು. ಮತ್ತೆ ಸ್ವಲ್ಪ ದೂರದ ಗದ್ದೆಯೊಂದರಲ್ಲಿ ಎಮ್ಮೆಯೊಂದು ಕೊಳೆಯುತ್ತಿದೆ ರಣಹದ್ದುಗಳು ಅದರ ಭಕ್ಷಣೆಗಾಗಿ ಸುತ್ತ ಕೂಡಿರುತ್ತವೆ ಹದಗೆಟ್ಟು ತಿಂದು ಈ ಹದ್ದುಗಳಿಗೆ ಹಾರಲಿಕ್ಕಾಗದೆ ಅವು ಅತ್ಯಂತ ಆಲಸಿಗಳಾಗಿವೆ ಮನುಷ್ಯರನ್ನವು ಒಂದು ತರದ ತಿರಸ್ಕಾರ ದೃಷ್ಟಿಯಿಂದ ನೋಡುವುದನ್ನು ಕಂಡರೆ ದೇಹವೆಲ್ಲ ತತ್ತರಿಸುತ್ತದೆ. ಸತ್ತವರನ್ನು ತಿನ್ನುವ ಇವು ಬದುಕಿದ್ದವರ ಮೇಲೆ ಹಲ್ಲೆ ಮಾಡಲೆಳಸುವೆವೊ ಎಂಬ ಭೀತಿ ಹುಟ್ಟುತ್ತದೆ ಕೆಲವು ವೇಳೆ ಮಾರ್ಗದಲ್ಲಿ ಕೂತ ಇವು ದೊಡ್ಡ ಮೋಟಾರ್ ಲಾರಿ ಬರುವಾಗಲೂ ಕದಲುವುದಿಲ್ಲ

ಭೀಕರ ದೃಶ್ಯ

ಒಂದು ಲೇಖನದಲ್ಲಿ ಸುಖಾಸೀನರಾಗಿ ಕೂತು ನೀವು ನಿರಾಶ್ರಿತ ದಳದ ಹಿಂಭಾಗದಲ್ಲಿರುವಾಗ ಅವರ ಮಲಿನವಾದ ವೇಷಭೂಷದೊಂದಿಗೆ ನಿಮ್ಮ ಸ್ವಚ್ಛ ಉಡುಪುಗಳನ್ನು ಹೋಲಿಸುವಾಗ ನೀವು ಸ್ವರ್ಗದಿಂದಿಳಿದ ದೇವತೆಯೆಂದು ತಿಳಕೊಳ್ಳುವ ಸಂಭವವಿದೆ ನಾವು ಕಾಣುವ ಈ ಕೊಳಕು ಜೀವಿಗಳು ಪ್ರತಪ್ರತ್ಯೇಕ ವ್ಯಕ್ತಿತ್ವವಿರುವ ಮಾನವ ಪ್ರಾಣಿಗಳೆಂಬ ಸಂಗತಿಯು ಒಂದು ಕ್ಷಣಕ್ಕೆ ಮರೆತುಹೋಗಬಹುದು ಆದರೆ ಜಗತ್ತಿನ ಶ್ರೇಷ್ಠ ಪುರುಷರೂ, ರಾಜನೀತಿಜ್ಞರೂ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂದೂ, ಮಾನವನ ವೈಯಕ್ತಿಕ ವ್ಯಕ್ತಿತ್ವ ವಿಕಾಸಕ್ಕೆಡೆ ಸಿಗಬೇಕೆಂದೂ ಹೆಣಗಾಡುವ ಸಂಗತಿಯೆಲ್ಲಿ? ಮಾನವೀಯತೆಯನ್ನು ಕೆಸರಿನಲ್ಲಿ ತಳ್ಳಿ ಪಾಶವೀ ವರ್ತನೆಯ ಫಲವಾಗಿ ನರಳುವ ಈ ಜೀವಿಗಳೆಲ್ಲಿ! ನಾವು ಅದ್ಯಾವ ನರಕದಲ್ಲಿದ್ದೇವೆ!

"ಮೊದಲ ಸಲ ಈ ನಿರಾಶ್ರಿತ ತಂಡವನ್ನು ನೋಡಿದಂದು ನನಗೆ ಇಡೀ ರಾತ್ರೆ ನಿದ್ದೆ ಬೀಳಲಿಲ್ಲ ಅದರಲ್ಲಿನ ಸ್ತ್ರೀಪುರುಷ ಬಾಲಕ್ಕಳ ಭೀತಿಪೂರ್ಣ ಕಣ್ಣುಗಳು ನನ್ನನ್ನೆ ಆಗಾಗ್ಗೆ ಕಳವಳಗೊಳಿಸುತ್ತಿದ್ದವು ಆದರೆ ಕೆಲವು ದಿವಸಗಳ ನಂತರ ಆ ಭಾವನೆಗಳೆಲ್ಲ ಮಾಯವಾಗಿ ಈ ಭೀಕರತೆಯು ನನ್ನ ಮಟ್ಟಿಗೀಗ ಸಾಮಾನ್ಯ ವಿಷಯವಾಗಿದೆ. ಹಾಯ್! ಮಾನವನ ಮನಸ್ಸು ತನ್ನ ವಾತಾವರಣಕ್ಕೆ ತಕ್ಕಂತೆ ಪರಿವರ್ತಿಸಿಕೊಳ್ಳುವ ಅದೆಂತಹ ಶಕ್ತಿಯುಳ್ಳದ್ದಾಗಿದೆ!" ಹೀಗೆಂದೊರ್ವ ಮಿಲಿಟರಿ ಅಧಿಕಾರಿಗಳು ನನ್ನೊಡನೆ ತಿಳಿಸಿದರು.

"ನಾನು ಬರ್ಮದಲ್ಲಿದ್ದು ಅಲ್ಲಿನ ಯುದ್ಧ ಅನಾಹುತ ಕಂಡಿದ್ದೇನೆ ಆದರೆ ಈ ನರಕ ನನಗೆ ಬೇಕೆಂದೆನಿಸುವುದಿಲ್ಲ" ಹೀಗೆಂದು ಇನ್ನೊಬ್ಬ ಮಿಲಿಟರಿಯವನ ಹೇಳಿಕೆ.

ಮಾನವ ಪಶುಗಳು

ಮುಂದೆ ಸ್ವಲ್ಪ ದೂರದಲ್ಲಿನ ಒಂದು ಎತ್ತಿನ ಗಾಡಿಯಲ್ಲಿ ಓರ್ವ ಹೆಂಗಸು ಕುಳಿತು ತನ್ನ ಮಗಳ ತಲೆಯಿಂದ ಹೇನು ಹೆಕ್ಕುತ್ತಿದ್ದಳು ಇನ್ನೋರ್ವಳು ಮಗುವಿಗೆ ಹಾಲುಣ್ಣಿಸುತ್ತಿದ್ದಳು. ನಿರಾಶೆ, ಅಸಹಾಯಕತೆ, ಸಂಕಷ್ಟಗಳು ಅವರ ಮುಖಗಳಲ್ಲಿ ಅಚ್ಚು ಹೊಡೆದಂತಿದ್ದವು. ಹೆಂಗಸರಲ್ಲಿ ಕುಲೀನ ಕುಟುಂಬಕ್ಕೆ ಸೇರಿದವರ ಶರೀರರಚನೆಯಲ್ಲೂ ಇದೇ ತರದ ಬದಲಾವಣೆಗಳಾಗಿದ್ದುವು.

"ಇವರನ್ನು ಏನು ಮಾಡುವುದೆಂದು ಯಾರಿಗೂ ಗೊತ್ತಿಲ್ಲ. ಇವರ ಭವಿಷ್ಯವೇನೆಂದು ದೇವರಿಗೇ ಪ್ರೀತಿ. ಸಾಕಷ್ಟು ಆಹಾರವಿಲ್ಲ, ಮತ್ತೆ ಇವರನ್ನು ಎಲ್ಲಿಗೊಯ್ದು ಹೇಗೆ ವಸತಿ ನಿಲ್ಲಿಸುವುದು

(೨ನೇ ಪುಟ ನೋಡಿ)

THE
UNITED INDIA LIFE ASSURANCE CO., LTD.
ESTD 1906 [H. O. MADRAS]

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to.—

INSPECTORATE OFFICE
K. S. Rao Road, Mangalore.

ಭೂಲೋಕದಲ್ಲಿ ನರಕಯಾತನೆಯ ದೃಶ್ಯ

(೧ನೇ ಪುಟದಿಂದ)

ಎಂಬುದೇ ದೊಡ್ಡ ಸಮಸ್ಯೆ? ಹೀಗೆಂದು ಓರ್ವ ಮಿಲಿಟರಿ ಅಧಿಕಾರಿಗಳು ತಿಳಿಸುವವರಾದರು.

ಅಗಾಧ ಸಮಸ್ಯೆ

ಖಂಡಿತವಾಗಿ ಇದೊಂದು ಕಠಿಣ ಸಮಸ್ಯೆ. ಕೆಲವರು ಹತ್ತು ದಿನಗಳಿಂದ ನಡೆಯುತ್ತಲಿದ್ದಾರೆ. ಅವರನ್ನು ಗುಂಡಿಕ್ಕಿ ಕೊಲ್ಲುವುದು ಮಾಡಲೂ ಇಲ್ಲ, ಪಾಕಿಸ್ತಾನದಿಂದ ಭಾರತಕ್ಕೆ ಬರುವಾಗ ಅವರ ಮೇಲೆ ಯಾವ ಹಲ್ಲೆಯೂ ಆಗಲಿಲ್ಲವೆಂದವರು ತಿಳಿಸಿದರು. ಆದರೆ ಹಸಿವು ತೃಷೆಗಳನ್ನು ಮಾತ್ರ ಎಷ್ಟು ದಿನ ತಡೆಯಬಹುದು. ಮತ್ತೆ ಯಾವ ಸ್ಥಾನಕ್ಕಾದರೂ ಹೋದರೂ ನೆಲೆಸುವುದೆಲ್ಲಿ ಎಂಬ ಪ್ರಶ್ನೆಯೇ ಹೆಚ್ಚಿನ ನಿರಾಶ್ರಿತರಲ್ಲಿ ಆಸಕ್ತಿಯನ್ನುಂಟು ಮಾಡಿತ್ತು.

"ಹೌದು, ಉಳಕೊಳ್ಳಲು, ಜೀವನ ಸಾಗಿಸಲು ಸ್ಥಳವೂ, ಹೊಲಗದ್ದೆಗಳೂ ಬೇಕು. ಇವರಲ್ಲಿ ಹೆಚ್ಚಿನ ಜನರು ಪಂಜಾಬದ ನೀರಾವರಿ ಕಾಲುವೆ ಪ್ರದೇಶದಲ್ಲಿದ್ದವರು. ಈ ಪ್ರದೇಶವು ಇಡೀ ಭಾರತದಲ್ಲೇ ಫಲವತ್ತಾಗಿರುವ ಸ್ಥಳ. ಅಲ್ಲಿಂದ ಬೇರು ಕಿತ್ತಂತಾದ ಅವರು ಹೊಸ ಸ್ಥಳಗಳನ್ನು ನೋಡಲು ಹಾತೊರೆಯುತ್ತಿರುವರು.

ಆದರೆ ಇವರಿಗೆಲ್ಲ ಪೂರ್ವ ಪಂಜಾಬದಲ್ಲಿ ನೆಲಹೊಲಗಳು ದೊರೆತಿವೆ? ಈ ತಲಾಂತರದಲ್ಲೇ ಅದು ದುಸ್ಸಾಧ್ಯವಾದ ಸಂಗತಿಯಾದುದರಿಂದ ನಮ್ಮ ಕಣ್ಣೆದುರಿಗೇ ಲಕ್ಷಾಂತರ ಸಂಚಾರಿ ಪಂಗಡಗಳ ಸೃಷ್ಟಿಯಾಗುವುದನ್ನು ನಾವು ನಿರೀಕ್ಷಿಸುತ್ತಿದ್ದೇವೆ.

ಆರ್ತನಾದ

ಫಕ್ಕನೇ ಪಾದಚಾರಿಗಳ ತಂಡವು ಒಂದು ಸಲಕ್ಕೆ ಚಲನ ಸ್ತಬ್ಧವಾಗುವುದು "ಏನು ಸಂಗತಿ ನಡೆಯಿತಪ್ಪಾ?" ಎಂದು ಮಿಲಿಟರಿ ಅಧಿಕಾರಿ ಬೊಬ್ಬಿಟ್ಟು ಪ್ರಶ್ನಿಸುತ್ತಾನೆ ಬಳಲಿ ಬೆಂಡಾದೊಂದು ಎತ್ತು ಡಬ್ಬನೇ ಬಿದ್ದು ನಿರ್ಜೀವವಾಗಿದೆ ಆ ಗಾಡಿಯನ್ನು ಅಲ್ಲೇ ಬಿಟ್ಟು ಪಕ್ಕದಿಂದ ಹಾದುಹೋಗುವುದಕ್ಕೆ ಆ ಮಾರ್ಗ ಅತೀ ಅಗಲ ಕಿರಿದಾಗಿದೆ. ಮಿಲಿಟರಿ ಸಿಬಂಧಿಯವರು ಗಾಡಿಯನ್ನೆತ್ತಿ ಎಳೆದೊಯ್ಯಲಾರಂಭಿಸಿದ ಮೇಲೆ ದಳ ಚಲಿಸುವುದು

ದಳದೊಳಗಿನ ಒಂದು ದನ ಕರು ಹಾಕಿದೆ. ಅದರ ಯಜಮಾನ ಎಳೆ ಕರುವನ್ನು ಹೊತ್ತುಕೊಂಡು ಮುಂದರಿಯುತ್ತಿದ್ದಾನೆ.

"ಇದೊಂದು ದನ ಮಾತ್ರ ನವಮಾಸ ತುಂಬಿದ ಗರ್ಭಿಣಿಯರೆಷ್ಟೋ ಈ ತಂಡಗಳಲ್ಲಿದ್ದಾರೆ. ಇವರ ವ್ಯವಸ್ಥೆ ಮಾಡುವುದು ಅತ್ಯಂತ ದುರ್ಗಮವಾದ ಸಮಸ್ಯೆಯಾಗುತ್ತದೆ ಕೆಲವು ಸಲ ಮಾತ್ರ ವೈದ್ಯರು ದೊರಕುವರು. ಅವರಿಲ್ಲದಿರುವಾಗ ಮಾಡುವುದಾದರೂ ಏನು!" ಎಂದು ಮಿಲಿಟರಿ ಅಧಿಕಾರಿಯು ತಿಳಿಸಿದನು.

ಸ್ವಲ್ಪ ಮುಂದೆ ಹೋಗುತ್ತಲೆ ಇನ್ನೊಂದು ರೋಧನ ಕೇಳಿತು. ಈ ಸಲ ಒಂದು ಮಾನವ ಜೀವಿ ಇಹಲೋಕ ತ್ಯಜಿಸಿದ್ದಾನೆ. "ಸತ್ತು ಮರಗಟ್ಟಿದ್ದಾನೆ." ಎಂದವನ ಅರ್ಧಾಂಗಿ ಮೊರೆಯಿಡುತ್ತಿದ್ದಳು. ಮಿಲಿಟರಿಯವರು ಮೃತ ಶರೀರವನ್ನು ತೆಗೆಯುವರು. ಹತ್ತಿರದ ಗದ್ದೆಯೊಂದರಲ್ಲಿ ಅದರ ಸಂಸ್ಕಾರ. ಕೆಲವೇ ಮಿನಿಟುಗಳಲ್ಲಿ ಜೀವನಾಪ್ತನನ್ನು ಕಳಕೊಂಡ ಹೆಂಗಸು ತನ್ನ ಯಾತ್ರೆ ಮುಂದರಿಸುವಳು. ಬಹಳ ದೂರದ ತನಕ ಅವಳು ಕೂಗುತ್ತಾ ಇರುವಳು.

"ಕೆಲವು ಸಲ ದಿನಕ್ಕೆ 30-40 ಮಂದಿ ಮಡಿಯುವುದೂ ಇದೆ. ಇವುಗಳನ್ನು ಸಂಸ್ಕರಿಸುವುದೂ ನಮ್ಮ ಪಾಲಿನ ಕರ್ತವ್ಯವಾಗಿದೆ. ನಮ್ಮ ಸೈನ್ಯಕ್ಕೆ ಹೆಣ ಹೂಳುವ ದಳವೆಂದರೂ ಸಲ್ಲುವುದು" ಎಂದು ಮಿಲಿಟರಿಯವ ತಿಳಿಸಿದ. ಅವನಿಗಿದೊಂದು ಸಾಮಾನ್ಯ ವಿಷಯವಾಗಿರುವುದರಲ್ಲಿ ಆಶ್ಚರ್ಯವಿಲ್ಲ

ನಿಶಾಚರ ಶಿಬಿರ

ಇಷ್ಟು ಹೊತ್ತಿಗೆ ನಿರಾಶ್ರಿತರ ಮೆರವಣಿಗೆ ರಾತ್ರಿ ಶಿಬಿರದ ಸ್ಥಳಕ್ಕೆ ಮುಟ್ಟಿದೆ ಆ ರಾತ್ರೆ ಅಲ್ಲೇ ಉಳಕೊಳ್ಳಬೇಕು ಮಿಡತೆಗಳಂತೆ ನಿರಾಶ್ರಿತರು ತಂಗಿಕೊಳ್ಳಲೇರ್ಪಡಿಸ ಹತ್ತಿದರು. ಬದಿಯ ಗದ್ದೆಗಳಲ್ಲಿ ಎತ್ತಿನ ಗಾಡಿಗಳ ರಾಶ್ಯ. ಎಲ್ಲರಿಗೂ ಆಹಾರ ವಸ್ತುಗಳ ರೇಶನ್ ಕೊಡಲಾಯಿತು ಕಲ್ಲು ಒಲೆಗಳ ಮೇಲೆ ಆಸುಪಾಸಿನ ಮರಗಳ ಒಣ ಕಟ್ಟಿಗೆ ತರಗೆಲೆಗಳಿಂದ ಮಾಡಿದ ಬೆಂಕಿಯ ಮೇಲೆ ಚಪಾತಿ ತಯಾರಾದುವು.

"ಈಗ ಈ ಸ್ಥಳ ಅದೆಷ್ಟು ನಿರ್ಮಲವಾಗಿದೆ ನೋಡಿ. ನಾಳೆ ಬೆಳಿಗ್ಗೆ ನೋಡಬೇಕು. ಇಲ್ಲಿ ಒಂದು ಕ್ಷಣ ನಿಲ್ಲುವುದೇ ಕಷ್ಟವಾಗುತ್ತೆ" ಎಂದು ಮಿಲಿಟರಿ ಅಧಿಕಾರಿ ವಿವರಿಸಿದ-ಅವನ ಹೇಳಿಕೆಯ ಸತ್ಯತೆಯನ್ನೂ ನಾವೂ ಊಹಿಸಿಕೊಳ್ಳಬಹುದು.

ಇಡೀ ಪಂಜಾಬದಲ್ಲೇ ಈ ನಿರಾಶ್ರಿತ ತಂಡಗಳು ಅತ್ತಿತ್ತ ಸಾಗುತ್ತಿವೆ ಅಂದ ಮೇಲೆ ಹಳ್ಳಿ ಪ್ರದೇಶಗಳು ಅದೆಷ್ಟು ಮಲೀನವಾಗಬಹುದೆಂದು ವಾಚಕರಿಗೆ ಕಲ್ಪನೆಯಾಗದಿರದು. ಮೇಜರ್ ಜನರಲ್ ತಿಮ್ಮಯ್ಯನವರು ಈ ದಳಗಳ ಮುಖ್ಯಾಧಿಕಾರಿಗಳು ನಿರಾಶ್ರಿತರು ತಂಗಿದ ಸ್ಥಳಗಳನ್ನು ವಿಮಾನದ ಮೇಲಿಂದ ಡಿ ಡಿ ಟಿ ರೋಗಾಣು ವಿನಾಶಕ ರಾಸಾಯನಿಕ ದ್ರಾವಕವನ್ನು ಚಿಮುಕಿಸುವುದರ ಮೂಲಕ ಶುದ್ಧಗೊಳಿಸಬೇಕೆಂದವರು ಯೋಚಿಸಿದ್ದಾರೆ ಭೀಕರ ಸಾಂಕ್ರಾಮಿಕಗಳನ್ನು ತಡೆಗಟ್ಟಲು ಇದೊಂದೇ ಮಾರ್ಗ

ಸ್ವದೇಶ ವಾರ್ತೆ

★ ಜುನಾಗಡದಿಂದ ಕೇವಲ 20 ಮೈಲು ದೂರದಿರುವ ನವಾಬಗಡವನ್ನು ಮತ್ತು ಅದರ ಸುತ್ತಲಿನ ಎಂಟು ಹಳ್ಳಿಗಳನ್ನು ಜುನಾಗಡ ಪ್ರಜಾ ರಾಜ್ಯದ ಸೈನ್ಯವು ವಶಪಡಿಸಿದೆ. ಅವರಿಗೆ ಯಾರೂ ಪ್ರತಿಭಟಿಸಲಿಲ್ಲ-ಆಕ್ರಮಿತ ಪ್ರದೇಶದ ಪ್ರಜೆಗಳು ಪಾಕಿಸ್ತಾನದಿಂದ ವಿಮೋಚನೆ ಗೊಂಡದಕ್ಕೆ ಆನಂದಿತರಾಗಿರುವರೆಂದು ಪ್ರಜಾ ರಾಜ್ಯದ ಅಧ್ಯಕ್ಷ ಶ್ಯಾಮಲ್‌ದಾಸ್ ಗಾಂಧಿಯವರು ತಿಳಿಸುತ್ತಾರೆ.

★ ಜುನಾಗಡದ ನವಾಬರು ಸಾಮಾನ್ಯ ಜನ ಪ್ರಖ್ಯಾತ ನಕಲಿ ಚಲಚಿತ್ರ ನಟರಾದ ಚಾರ್ಲಿಯನ್ನು ಆಪ್ತ ಕಾರ್ಯದರ್ಶಿಯಾಗಿ ಮಾಡಿಕೊಂಡು ಪಾಕಿಸ್ತಾನ ರಾಜಧಾನಿಗೆ ಹೋಗಿದ್ದಾರೆ ಕಟ್ಟಡಗಳ ಕೊರತೆಯ ಆ ಪಟ್ಟಣದಲ್ಲವರಿಗೊಂದು ಬಂಗಲೆ ಹುಡಕಲಾಗಿದೆ ಇತ್ತ ಜುನಾಗಡ ಮುಸಲ್ಮಾನ ಪ್ರಜೆಗಳ ಶಿಷ್ಟ ಮಂಡಳವೊಂದು ಪ್ರಜಾ ರಾಜ್ಯದ ಅಧ್ಯಕ್ಷ ಶ್ಯಾಮಳ ದಾಸ್ ಗಾಂಧಿಯವರನ್ನು ಕಂಡು ತಮ್ಮ ನವಾಬನ ಪಟ್ಟವನ್ನು ಸುರಕ್ಷಿತ ಮಾಡುವುದಾದರೆ ಜುನಾಗಡ ಭಾರತ ಒಕ್ಕೂಟಕ್ಕೆ ಸೇರುವಂತೆ ಪ್ರಯತ್ನ ನಡುಪುಥಾಗಿ ಬಿನ್ನವಿಸಿಕೊಂಡಿದ್ದಾರೆ

★ ಮದ್ರಾಸ್ ಸರಕಾರದ ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ "ಫಾನೆನ್ಸ್ ಕೊರ್ಪೂರೇಶನ್" ಸ್ಥಾಪಿಸಲು 50 ಲಕ್ಷ ರೂಪಾಯಿ ತೆಗೆದಿಟ್ಟಿದ್ದರೂ ಇನ್ನೂ ಅದು ಸ್ಥಾಪಿತವಾಗಿಲ್ಲವೇಕೆಂದು ಶಾಸನ ಸಭೆಯಲ್ಲಿ ಪ್ರಶ್ನಿಸಲ್ಪಟ್ಟಿತು ಇದಕ್ಕೆ ಉದ್ಯೋಗ ಯೋಜನಾ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗುವುದೆಂದು ಅರ್ಥ ಸಚಿವ ಗೋಪಾಲ ರೆಡ್ಡಿಯವರು ಉತ್ತರವಿತ್ತರು ತಂಜಾವೂರ ಮತ್ತು ರಾಮನಾಡು ಜಿಲ್ಲೆಗಳಿಂದ ಆಹಾರ ಸೀದಾ ಪದಾರ್ಥಗಳು ಸಿಂಹಳ ದ್ವೀಪಕ್ಕೆ ಕಳ್ಳತನದಿಂದ ಸಾಗಿಸಲ್ಪಡುತ್ತಿರುವ ಬಗ್ಗೆ ವಿಚಾರಿಸಲಾದ ಪ್ರಶ್ನೆಗೆ ಆಹಾರ ಮಂತ್ರಿಗಳಾದ ರಾಜನ್ನರು ಅದನ್ನು ನಿಲ್ಲಿಸಲಾಗುವುದೆಂದು ಆಶ್ವಾಸನವಿತ್ತಿರುವರು.

★ ಹಿಂದೂಸ್ಥಾನದ ವಿಷಯವಾಗಿ ಸ್ನೇಹದ ಧೋರಣ ತಳೆಯಬೇಕೆಂದೂ, ಮತ್ತು ಹೈದರಾಬಾದು ಭಾರತ ಒಕ್ಕೂಟಕ್ಕೆ ಸೇರಬೇಕೆಂದು ನಿಜಾಮರ ಹಿರಿಯ ಸೊಸೆ ರಾಜ ಪುತ್ರಿ ದುರಾಶಾವಾರ ಇವಳು ಪೆರಿಸಿನಿಂದ ತಮ್ಮ ಮಾವನಿಗೆ ನಮ್ರ ಪೂರ್ವಕ ತಂತಿ ಬಿಟ್ಟಿರುವಳು

★ ಕನಿಷ್ಟ ಇನ್ನು ಆರು ತಿಂಗಳೊಳಗಾಗಿ ಎಲ್ಲ ನಿಯಂತ್ರಣಗಳನ್ನು ತೆಗೆದು ಹಾಕಬೇಕೆಂದು ಗಾಂಧೀಜಿಯವರು ಪ್ರಾರ್ಥನೋತ್ತರ ಭಾಷಣದಲ್ಲಿ ಹೇಳಿರುವರು

★ ಕರಾಚಿ ಜಿಲ್ಲಾ ಮೆಜಿಸ್ಟ್ರೇಟರು ತಮ್ಮ ಜಿಲ್ಲೆಯಲ್ಲಿ ಆರ್ ಎಸ್ ಎಸ್. ಮತ್ತು ಆರ್ ಎಸ್ ಡಿ ಸ್ವಯಂ ಸೇವಕರ ಎಲ್ಲಾ ಚಟುವಟಿಕೆಗಳನ್ನು ಸಂರಕ್ಷಣ ದೃಷ್ಟಿಯಿಂದ ಪ್ರತಿಬಂಧಿಸಿರುವರು.

★ ಬಿಹಾರದ ದರ್ಭಾಂಗಾ ಜಿಲ್ಲೆಯಲ್ಲಿ ಸುಮಾರು ಲಕ್ಷ ಮುಸಲ್ಮಾನರು ಕೊಂಗ್ರೆಸಿಗೆ ಸೇರಿರುವರೆಂದು ತಿಳಿದುಬರುತ್ತದೆ.

卐

FOR ALL CLASSES OF INSURANCE

LIFE-FIRE-MARINE-ACCIDENT

Motor Cars (Third Party & Comprehensive) Fidelity Guarantee, Workmen's Compensation, Railrisks, Postal Insurance, Aviation, etc.

INSURE WITH

NEW INDIA

ASSURANCE CO. LTD.

(H. O. BOMBAY)

A Tata's Promotion & India's Largest Composite Insurance Office.

Total Assets - - - About 9 Crores.

For Agency and other particulars:-

Apply to

K. GANAPATHI Esq., *Branch Manager.* 4/5, First Line Beach, MADRAS.

K. N. NAYAK, Esq., *Secretary, Sub Office* Hampankatta, MANGALORE.

ರಾಷ್ಟ್ರಾಂತರ ಸಮತಾವಾದ

ಪೌರ್ವಾತ್ಯ ಯುರೋಪಿನಲ್ಲಿ ರಶ್ಯವು ಅಧಿಕಾರ ವಿಕಾಸ ಮಾಡುವುದನ್ನು ಫ್ರಾನ್ಸಿನ ಜನಪ್ರಿಯ ಜನರಲ್ ದಿಗಾಲರು ಖಂಡಿಸುತ್ತಿರುವಾಗ ಇತ್ತ ಬ್ರಿಟನಿನ ಬಿಗಿತುಟಿಯ ಕನ್ಸರ್ವೇಟಿವ್ ಪಕ್ಷ ಧುರೀಣರು ತಮ್ಮ ಸ್ವಂತ ದೇಶದಲ್ಲಿನ ಸರ್ವಾಧಿಕಾರತತ್ವ ಅನುಯಾಯಿಗಳನ್ನೂ ಸಮತಾವಾದಿಗಳನ್ನೂ ಏಕಕಾಲದಲ್ಲಿ ನಿರ್ನಾಮ ಮಾಡಬೇಕೆಂದು ಕೇಳಿರುವರು. ಇದೇ ಸಮಯಕ್ಕೆ ಬಂಡವಾಳಶಾಹಿ ಪ್ರಪಂಚವನ್ನೇ ತಬ್ಬಿಬ್ಬುಗೊಳಿಸುವ ವರ್ತಮಾನವೊಂದು ಬೆಲ್ಗ್ರೇಡಿನಿಂದ ಬಂತು. ರಶ್ಯಾ, ಯುಗೊಸ್ಲೇವಿಯಾ, ಬಲ್ಗೇರಿಯಾ, ರುಮೇನಿಯಾ, ಹಂಗೇರಿ, ಪೋಲೆಂಡ್, ಫ್ರಾನ್ಸ್, ಇಟಲಿ ಮತ್ತು ಜೆಕೊಸ್ಲೊವೇಕಿಯಾ ಈ ಒಂಬತ್ತು ದೇಶಗಳ ಕಮ್ಯೂನಿಸ್ಟರು ಒಟ್ಟು ಸೇರಿ ಯುದ್ಧಕಾಲದಲ್ಲಿ ರಶ್ಯದಿಂದ ವಿಸರ್ಜಿಸಲ್ಪಟ್ಟ ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಸಂಸ್ಥೆಯನ್ನು ಪುನರ್‌ಸ್ಥಾಪಿಸುವುದಕ್ಕೆ ನಿಶ್ಚಯಿಸಿದರು.

1919ರಲ್ಲಿ ಪ್ರಥಮತಃ ಸ್ಥಾಪಿಸಲ್ಪಟ್ಟ ಕೊಮಿಂಟರ್ನ್ ಎಂಬ ರಾಷ್ಟ್ರಾಂತರ ಕಮ್ಯೂನಿಸ್ಟ್ ಸಂಸ್ಥೆಯು ನಾಜಿತ್ವವನ್ನೆದುರಿಸಬೇಕಾದ ಕಠಿಣ ಪ್ರಸಂಗದಲ್ಲಿ 1943ರಲ್ಲಿ ಅಂತ್ಯಗೊಳಿಸಲ್ಪಟ್ಟಿತು. ಯುದ್ಧಾನಂತರ ಎಚ್ಚೆತ್ತ ಜಗತ್ತು ಪುನಃ ಜಗತ್ತಿನ ಭಾವಿ ಶಾಂತಿ ನಿರ್ಮಾಪಕ ಶಕ್ತಿ ರಾಷ್ಟ್ರಗಳೊಳಗೆ ಹಿಂದಿನ ತಾತ್ವಿಕ ಭೇದಾಭಿಪ್ರಾಯಗಳೇ ಪರಸ್ಪರ ಸ್ಪರ್ಧೆ ತೋರುತ್ತಿರುವುದನ್ನು ಕಂಡಿತು. ಪರಿಣಾಮವಾಗಿ ಮೂರನೆ ಯುದ್ಧದ ಕುರಿತು ಬಿರುಸಾದ ಮಾತುಕತೆಗಳು ನಡೆಯುತ್ತಲೇ ಇವೆ.

ಎಟಂಬಾಂಬಿನ ಭೀತಿ

ಮೂರನೇ ಯುದ್ಧವು ಇಷ್ಟರೊಳಗೆ ಸಂಭವಿಸದಿರುತ್ತಿರಲಿಲ್ಲ. ಒಂದು ಪ್ರಬಲವಾದ ಕಾರಣದಿಂದ ಮಾತ್ರ ರಶ್ಯ ಮತ್ತದರ ಬೆಂಬಲಿಗ ರಾಷ್ಟ್ರಗಳು ಸ್ತಬ್ಧವಾಗಿವೆ. ಅದೆಂದರೆ ಅಮೇರಿಕದ ಹತ್ತಿರ ಎಟಂ ಶಕ್ತಿಯು ಬೊಂಬಿರುವುದೆಂಬ ಸಂಗತಿ. ಇದು ನಾಗಸಾಕಿ ಮತ್ತು ಹಿರೋಶಿಮಾ ನಗರಗಳ ಮೇಲೆ ಬೀಳುವ ತನಕ ರಶ್ಯವೂ ಈ ಕುರಿತು ಸಂಪೂರ್ಣ ಬರವಸೆ ತಾಳಲಿಲ್ಲ. ಮತ್ತೆ ಒಂದೇ ಸಲಕ್ಕೆ ಜಗತ್ತಿನ ರಾಷ್ಟ್ರಗಳ ಶಕ್ತಿ ಕೆಳಮಟ್ಟಕ್ಕಿಳಿಯಿತು. ಜಗತ್ತಿನಲ್ಲಿ ಅಮೇರಿಕವೊಂದೇ ಅದ್ವಿತೀಯವೆನಿಸಿತು. ಅದರೊಡನೆ ಯಾರಲ್ಲಿಲ್ಲದ ಅಣುಶಕ್ತಿ ಸ್ಫೋಟಕಗಳಲ್ಲದೆ ಅಪಾರವಾದ ಆರ್ಥಿಕ ಸಂಪತ್ತು ಜಮೆಯಾಗಿತ್ತು. ಅಂದಿನಿಂದದು ತನ್ನ ಡಾಲರ್ ಪ್ರಭಾವದಿಂದ ವಿಶ್ವವನ್ನೇ ನುಂಗ ಪ್ರಯತ್ನಿಸುತ್ತಿದೆಯೆಂದು ದೂಷಿಸಲ್ಪಡುತ್ತದೆ.

ಅಮೇರಿಕದ ಈ ಡೋಲರ್ ದಂಡಾಚಾರದಿಂದ ಅನೇಕ ರಾಷ್ಟ್ರಗಳು ದಂಗುಬಡಿದಂತೆ ಕಂಗಾಲಾಗಿವೆ. ಇಂಗ್ಲೆಂಡ್ ಫ್ರಾನ್ಸ್‌ಗಳಂತೂ ಈ ಶಕ್ತಿ ಸ್ಪರ್ಧೆಯಲ್ಲಿ ತಮ್ಮ ಅಸಮರ್ಥತೆಯನ್ನು ನಮ್ರತೆಯಿಂದ ಒಪ್ಪಿಕೊಂಡಂತೆ ಹಿನ್ನೆಲೆಗೆಸೆಯಲ್ಪಟ್ಟಿವೆ. ಇಷ್ಟಾದರೂ ವಸಾಹತುಗಳಿಗೆ ಸ್ವಾತಂತ್ರ್ಯ ಕೊಡುತ್ತೇವೆಂಬ ವಚನ ಪಾಲನೆಯ ಪ್ರಾಮಾಣಿಕತನದಿಂದ ಇತ್ತೀಚೆಗೆ ಬ್ರಿಟನ್ನು ಜಗತ್ತಿನ ನೈತಿಕ ಬೆಂಬಲವನ್ನು ಪಡೆದಿದ್ದು ಮುಂಬರುವ ಘರ್ಷಣೆಯಲ್ಲಿ ಪ್ರಜಾಪ್ರಭುತ್ವಗಳ ಕಡೆಯಲ್ಲಿಯೇ ತನ್ನ ಹೋರಾಟವನ್ನು ಸಾಗಿಸುವುದು ಖಂಡಿತ.

ಪ್ರಪಂಚ ಪರಿಚಯ

ಅಂತರಾಷ್ಟ್ರೀಯ ವ್ಯವಹಾರ

ರಶ್ಯದ ರಹಸ್ಯ

ಅಮೇರಿಕದ ಅಣು ರಹಸ್ಯ ರಶ್ಯಕ್ಕೊಂದು ದೊಡ್ಡ ಸಮಸ್ಯೆಯಾಗಿದೆ. ತನ್ನ ಬಳಿಯೂ ಅಂತಹ ಶಕ್ತಿಯಿರುವುದಾಗಿ ರಶ್ಯವು ಬಡಾಯಿ ಕೊಚ್ಚುತ್ತದೆ. ಆದರೆ ಇತ್ತೀಚೆಗಿನ ಅದರ ಚಲನ ವಲನಗಳು ಕೇವಲ ಅಂಜಿಕೆಯಿಂದೆಂಬಂತೆ ನಿರ್ವಹಿಸಲ್ಪಡುತ್ತಿರುವುದನ್ನು ಕಾಣುವಾಗ ಇನ್ನೂ ಈ ಅಗಾಧ ಶಕ್ತಿ ಸಂಚಯದಿಂದ ಅದು ಬಹಳ ದೂರವಿದೆಯೆಂದು ತುಂಬಾ ಖಚಿತವಾಗುತ್ತದೆ. ಅದೀಗ ತನ್ನ ವಿಕಾಸ ಧೋರಣೆಯನ್ನು ಹಿಂದಿನ ಚೈತನ್ಯದಿಂದ ನಡೆಸುತ್ತಿಲ್ಲ. ಕ್ಷಣಕ್ಷಣಕ್ಕೂ ಅದರ ಕಾರ್ಯಕಲಾಪಗಳಲ್ಲಿ ಈ ಅಣು ಶಕ್ತಿಯ ಲೋಪವೊಂದು ಅಭ್ಯಂತರವಾಗಿ ನಿಂದು ತಪ್ಪು ಹೆಜ್ಜೆಯು ತನ್ನನ್ನು ಅಮೇರಿಕದೊಡನೆ ಘರ್ಷಣೆಗೊಳಪಡಿಸುತ್ತದೆಂದು ಅದು ಮನಗಂಡಿದೆ.

ಮುಂದಾಗಲಿರುವ ಈ ಯುದ್ಧವಾದರೂ ರಶ್ಯ ಅಮೇರಿಕಗಳೊಳಗೇ ಆದರೂ ನಿಸ್ಸಂದೇಹವಾದುದು. ಕಾರಣ ಹಿಂದೆ ಹೇಳಿದಂತೆ ಇಂದಿನ ಶಕ್ತಿ ಸ್ಪರ್ಧೆಯ ಕ್ರೀಡಾಂಗಣದಲ್ಲಿ ಈ ಎರಡು ರಾಷ್ಟ್ರಗಳು ಮಾತ್ರ ಎದುರಾಗಿ ವ್ಯಾಯಾಮ ನಡೆಸುತ್ತಿವೆ. ತನ್ನ ಉಗ್ರ ಸಮತಾವಾದವನ್ನು ಸಮಗ್ರ ಜಗತ್ತಿನಲ್ಲಿ ಹರಡಿರುವುದನ್ನು ಕಾಣುವ ಸಿಹಿಗನಸು ಕಾಣುತ್ತಿದ್ದ ಸ್ಟೇಲಿನ್ ಮೊದಲಾದ ಪ್ರವೃತ್ತಿಗಳಿಗೆ ತಮ್ಮ ಕಾಂಕ್ಷೆಗಳು ಗಾಳಿಗೋಪುರವಾಗಿ ಪರಿವರ್ತನ ಹೊಂದಿರುವುದು ಅದೊಂದು ಅತ್ಯಂತ ಕಳವಳದ ಸಂಗತಿಯಾಗಿದೆ.

ಇದೇ ಸಮಯಕ್ಕೆ ಅಮೇರಿಕವು ಬಂಡವಾಳಶಾಹಿ ರಾಷ್ಟ್ರಗಳ ನಾಯಕತ್ವವನ್ನು ವಹಿಸಿದಂತೆ ಗಂಭೀರ ಮೌನದಿಂದ ತನ್ನ ಪ್ರಬಲ ಶಕ್ತಿಯನ್ನು ಸಂಪೂರ್ಣ ಅರಿತುಕೊಂಡಂತಿದ್ದು ಧೀರೋದಾತ್ತ ಪಾತ್ರವನ್ನು ವಹಿಸಿದೆ. ಕಮ್ಯೂನಿಸಂ ತತ್ವವಾದವು ಅಮೇರಿಕನ್ ಪ್ರಜಾಪ್ರಭುತ್ವ ಪ್ರಿಯತೆಯ ವಿಕಾಸಕ್ಕೊಂದು ಒಳವಾದ ಅಭ್ಯಂತರವಾಗಿದೆ. ಆದರೆ ತನ್ನ ಇಷ್ಟಸಿದ್ಧಿಯು ಹೆಚ್ಚಿನ ಯಾವ ಘರ್ಷಣೆಯಿಲ್ಲದೆ ಸಾಗುವ ತನಕ ಅದು ಯಾರನ್ನು ಕೆಣಕಲಾರದು. ತೃಪ್ತಿಗೊಂಡ ನಿದ್ರಿಸುವ ಮೃಗರಾಜನಂತೆ ಸ್ವೇಚ್ಛೆಯಾಗಿಂದೀ ದೇಶವು ಜಗತ್ತಿನ ವ್ಯವಹಾರ ಸೂತ್ರಗಳನ್ನು ತನ್ನ ನಿಯಂತ್ರಣದಲ್ಲಿರಿಸಿಕೊಂಡಿದೆ. ಸಂದರ್ಭಾನುಗತವಾಗಿ ಬಂದ ಈ ಸೌಭಾಗ್ಯವನ್ನು ಗಂಡಾಂತರಕ್ಕೆ ಕೈಕೊಳ್ಳಲು ಅಮೇರಿಕವು ಬಯಸುವುದಿಲ್ಲ. ಮತ್ತು ಅದರ ಬಲಿಷ್ಠ ಕೈಗಳಿಂದ ಈ ವಿಶ್ವ ಪ್ರಭಾವವನ್ನು ಕಿತ್ತುಕೊಳ್ಳಲು ರಶ್ಯವೇ ಕೆಣಕಾಟಕ್ಕಾರಂಭಿಸಬೇಕಾಗುವುದು. ಆದರೆ ರಶ್ಯವು ಈ ಸಾಹಸಕ್ಕಿಳಿಯುವುದೇ ಎಂಬುದು ಸಂಶಯಾಸ್ಪದ.

ಸಮತಾವಾದ ಪ್ರಭಾವ

ಇದು ತನಕ ನಡೆದ ಅದೆಷ್ಟು ಪ್ರಚಾರದಿಂದಲಾದರೂ ಈ ಕಮ್ಯೂನಿಸಂ ತತ್ವವು ಇದರ ಸ್ಥಾಪಕರೆಣಿಸಿದಷ್ಟು ಜನಾಕರ್ಷಕವಾಗಿಲ್ಲ. ಇದಕ್ಕೆ ಕಾರಣಗಳು ಹಲವಿವೆ. ಮೊದಲನೆಯದಾಗಿ ಬ್ರಿಟನ್ ಅಮೇರಿಕಾಗಳಂತಹ ರಾಷ್ಟ್ರಗಳು ಇದಕ್ಕೆ ಕಡು ವಿರೋಧವುಳ್ಳವುಗಳು. ಆ ದೇಶಗಳಲ್ಲಿನ ಮಜೂರರು ಸೋಶಲಿಸ್ಟ್ ಮಜೂರ ತತ್ವಕ್ಕಿಂತ ಉತ್ತಮವಾದುದು ಬೇರೊಂದಿದೆಯೆಂದು ನಂಬುವುದಿಲ್ಲ. ಅಲ್ಲಿನ ಮಜೂರ ಪರಿಸ್ಥಿತಿಯಾದರೂ ತೃಪ್ತಿಕರವಾಗಿದ್ದು ಅಲ್ಲಿ ವ್ಯಕ್ತಿಕ ವಿಕಾಸಕ್ಕೆ ತುಂಬಾ ಸಂದರ್ಭಗಳುಳ್ಳದಾಗಿದೆ. ಜೀವನವೆಲ್ಲ ಸರಕಾರದಿಂದಲೇ ನಿಯಂತ್ರಿಸಲ್ಪಡುವುದಕ್ಕೆ ಹೇರಳ ಕೈಗಾರಿಕೆ ಕೇಂದ್ರಗಳಿರುವ ಆ ದೇಶದ ಮಜೂರರಿಗೆ ಒಪ್ಪದು. ಶ್ರಮಜೀವಿಗಳಿಗೆ ಉತ್ತಮ ಜೀವನ ಸೌಕರ್ಯಗಳಿರಬೇಕು. ಅದರೊಡನೆ ವ್ಯಕ್ತಿತ್ವ ವಿಕಾಸಕ ಸರ್ವ ಸ್ವತಂತ್ರ ಭೋಗಗಳಿರಬೇಕೆಂಬುದರಲ್ಲಿ ಅವರಿಗೆ [illegible] ಭಾವನೆಯಿದೆ.

ಹಿಂಸೆ ಸರ್ವಾಧಿಕಾರ

ರಶ್ಯದ ಮಾದರಿ ಹಿಂಸೆಯ ಮೇಲೆ ಕಟ್ಟಿದ್ದು, ನೈತಿಕ ದೃಷ್ಟಿಯಿಂದಲೂ ಮಾರ್ಮಿಕ ಸ್ವದೃಷ್ಟಿಯಿಂದಲೂ ಈ ಮಾದರಿ ಸಾಮ್ರಾಜ್ಯವಾದಕ್ಕೆ ಸಮ ಶಾಶ್ವತವೆಂಬುದು ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿನ ಮಜೂರರಿಗೆ ತಿಳಿದಿದೆ. ಕಾರಣ ಹಿಂಸಾ ಪ್ರಧಾನದ ಪ್ರಭುತ್ವವು ನಿರಂಕುಶತ್ವದ ಸರ್ವಾಧಿಕಾರದಿ ಪಕ್ಷಪಾತವೇ ಬೇರೆಯಾಗದು. ಈ ಪರಿಸ್ಥಿತಿಯಲ್ಲಿ ಸಾಗುವ ಅಂತರಾಷ್ಟ್ರೀಯ ಪ್ರತಿಕ್ರಿಯೆಯಾದರೂ ಅಂತಹ ರಾಜ್ಯಪದ್ಧತಿಯನ್ನು ನಾಶಗೊಳಿಸಲು ಐಕ್ಯಗೊಳ್ಳುವಂತಹದ್ದಿರುತ್ತದೆ.

ಇಂದು ರಶ್ಯದ ಬೆಂಬಲಕ್ಕಿರುವ ಕೆಲವೇ ಕಿರಿಯ ಅಗಣನೀಯವಾದ ರಾಷ್ಟ್ರಗಳನ್ನು ಬಿಟ್ಟರೆ ಉಳಿದ ಜಗತ್ತಿನ ಪ್ರಧಾನ ರಾಷ್ಟ್ರಗಳೆಲ್ಲ ಅದರ ವಿರುದ್ಧ ನಿಂತಿರುವುದು ಕಂಡುಬರುತ್ತದೆ. ಬ್ರಿಟನ್ನು ಸೋಶಲಿಸ್ಟ್ ಸಮತಾವಾದಕ್ಕಿಂತಲೂ ಹೆಚ್ಚಿನದನ್ನು ಅಪೇಕ್ಷಿಸುವುದಿಲ್ಲ. ಅಮೇರಿಕವಂತೂ ರಶ್ಯವನ್ನು ನಿರ್ನಾಮ ಮಾಡುವ ಉದ್ದೇಶಕ್ಕಾಗಿಯೇ ಹವಣಿಸುತ್ತಿದೆಯೆಂದು ಇತ್ತೀಚೆಗೆ ಅವರೊಳಗೆ ನಡೆಯುವ ಪ್ರಚಾರ ಪ್ರತಿಪಚಾರಗಳಿಂದ ತಿಳಕೊಳ್ಳಬಹುದು. ದಕ್ಷಿಣ ಅಮೇರಿಕದಲ್ಲಂತೂ ಬ್ರೆಜಿಲ್ ಅರ್ಜಂಟಿನಾ ದೇಶಗಳು ರಶ್ಯದೊಡನೆ ತಮಗಿದ್ದ ಅತ್ಯಲ್ಪ ಸಂಬಂಧವನ್ನು ಕಡಿದುಕೊಂಡಿವೆ. ಚೀನವು ರಶ್ಯನ್ ಪ್ರೇರಿತ ಅಲ್ಲಿನ ಕಮ್ಯೂನಿಸ್ಟರನ್ನು ನಾಮಶೇಷ ಮಾಡಲು ನಿರ್ಧರಿಸಿದೆ. ಫ್ರಾನ್ಸಿನಲ್ಲಂತೂ ದಿಗಾಲರು ಮಾತ್ರವಲ್ಲ ಹೆಚ್ಚಿನ ಪ್ರಭಾವಿತ ಪಕ್ಷಗಳು ಕಮ್ಯೂನಿಸ್ಟ ವಿರೋಧಿಗಳಾಗಿರುವರು. ಮಧ್ಯಪೂರ್ವದ ದೇಶಗಳಲ್ಲಿ ಒಂದು ಕಾಲದಲ್ಲಿ ತುಂಬಾ ಆಕರ್ಷಣೆ ಪಡೆದ ಕೆಂಪು ತತ್ವಗಳಿಗೆ ಹಿಂದಿನ ಮನ್ನಣೆ ಕೊಡಲ್ಪಡುವುದಿಲ್ಲ. ಭಾರತದಲ್ಲಿನ ಕಮ್ಯೂನಿಸ್ಟ್ ಪಕ್ಷವು ನಹರು ಸರಕಾರಕ್ಕೆ ಬಹಿರಂಗ ಬೆಂಬಲ ಸಾರಿ ರಾಷ್ಟ್ರೀಯತ್ವದ ಕಡೆ ತಿರುಗಿದೆ. ಏಕೆಂದರೆ ನೆಹರು ಸರಕಾರಕ್ಕೆ ಬೆಂಬಲ ಕೊಡುವುದೆಂದರೆ ಇದು ತನಕದ ಮುಷ್ಕರದ ಧೋರಣೆಗಳು ಬದಲಾಯಿಸಲ್ಪಡಬೇಕೆಂದರ್ಥವಾಗುತ್ತದೆ.

ಒಟ್ಟಿನಲ್ಲಿ ಇದು ತನಕ ಜಗತ್ತಿನ ಎಲ್ಲಾ ದೇಶಗಳ ಕಮ್ಯೂನಿಸ್ಟ್ ಪಕ್ಷಗಳು ರಶ್ಯದ ಶಕ್ತಿ ಅಪ್ರತಿಮವಾದುದೆಂದು ತಿಳಕೊಂಡಿದ್ದು, ಎಂದಾದರೊಂದು ದಿನ ತಮಗೆ ಅಲ್ಲಿಂದ ಸಹಾಯ ದೊರಕಬಹುದೆಂಬ ನಿರೀಕ್ಷೆಯಲ್ಲಿದ್ದವು. ಆದರೆ ಎಟಂ ಬಾಂಬಿನ ಈ ಒಂದು ರಹಸ್ಯದಿಂದಾಗಿ ಮೂಲದೇಶವಾದ ರಶ್ಯವೇ ಅಮೇರಿಕವೆದುರು ಕಿರಿದಾಗಿ ಕಾಣುವಾಗ ಅದರ ಮೇಲೆ ಹೊಂದಿಕೊಂಡಿರುವುದರಿಂದಾಗುವ ಲಾಭವೇನು? ಹೀಗಾಗಿ ಜಗತ್ತಿನ ಕಮ್ಯೂನಿಸ್ಟರು ಕಂಗೆಟ್ಟಂತಾಗಿದೆ. ರಶ್ಯವು ಬೇಗನೆ ಎಟಂಬಾಂಬಿನ ತಯಾರಿಯ ರಹಸ್ಯವನ್ನು ಕಂಡುಹಿಡಿಯುವ ತನಕ ಜಗತ್ತಿನ ಕೆಂಪು ಪಕ್ಷದವರಿಗೆ ತಿರುಗ ನಿರ್ಗಮನವೇ ಗತಿ. ಅಲ್ಲಿಯ ತನಕ ಸಮಧೈರ್ಯ ತಾಳಿಕೊಂಡಿದ್ದರೆ ಇದು ತನಕ ಏಳಿಸಿಕೊಂಡು ಬಂದ ಪಕ್ಷಯಂತ್ರವು ತಕ್ಕ ಹಿಡಿತ ಬಗ್ಗಬಹುದಾಗುತ್ತದೆ. ಮುಂದಿನ ದಿನ ರಶ್ಯವು ಎಟಂಬಾಂಬಿನ ರಹಸ್ಯವನ್ನು ಕಂಡುಹಿಡಿಯುವುದು ಅಮೇರಿಕವನ್ನು ಸಂಕಷ್ಟವ್ಯಾಪಿಯನ್ನಾಗುವುದಕ್ಕಾಗಿ ಸಂಭವಿಸುವುದೆಂಬುದರಲ್ಲಿ ಯಾ ಸಂದೇಹವಿಲ್ಲ. ಹಿಷ್ಟಾದರೂ ಅದು ಮತ್ತೆ ನಿರಂತರವಾಗಿ ಜಗತ್ತನ್ನಾಳುವುದೆಂದೂ ಹೇಳಬರುವುದಿಲ್ಲ. ಕಾರಣ ವ್ಯಕ್ತಿ ಸ್ವಾತಂತ್ರ್ಯಪ್ರಿಯವಾದ ಮಾನವರು ಕೆಲವೇ ಮುಖಂಡರ ಹಿಂದೆ ಜಾನುವಾರುಗಳಂತೆ ಸದಾಕಾಲ ಹಿಂಬಾಲಿಸಿಕೊಂಡಿರುವರೆಂದೂ ಹೇಳಬರುವುದಿಲ್ಲ.

ಜೆ. ಕೊರೊವೊಸ್ಕಿ

KANARA COMMERCIAL BANK LTD.
PUTTUR
H O Puttur.] Estd. 1920 [Branch Vittal
All kinds of Banking Business transacted.
Deposits: Current, Savings, Cumulative Deposits are accepted.
Fixed Deposits for periods of 3 months and above up to 24 months are accepted.

ಕುಡಿತವು ವಿನಾಶದ ಮೂಲವಾಗಿದೆ

ಅಧಿಕಾರಿಗಳು ಹಣಕ್ಕಾಗಿ ಮಾಡುವ ಕೆಲಸವೆಂದು ತಿಳಿಯದೆ

ತಮಗೊದಗಿದ ಸಮಾಜ ಸೇವೆಗಾಗಿ ಹೆಮ್ಮೆ ಪಡಬೇಕು

"ಪ್ರಖ್ಯಾತ ತಮಿಳ ಕವಿ ತಿರುವಳ್ಳುವರ್ ಅವರ "ಕುರಲ್" ಎಂಬ ಪವಿತ್ರ ಗ್ರಂಥದಲ್ಲಿ ಕುಡುಕರು ನಿದ್ರಾಪರವಶರಾದವರಂತೆಯೂ ಮೃತರಾದವರಂತೆಯೂ ಇರುವರೆಂದೂ ಅವರು ಅವರ ಜಾಗೃತಿಯನ್ನು ಕಳೆಕೊಳ್ಳುವರೆಂದೂ ವಿಷಪಾನ ಮಾಡುವವರಂತೆ ಅವರು ಅಕಾಲ ಮೃತ್ಯುವಿಗೆ ತುತ್ತಾಗುವರೆಂದೂ ಹೇಳಿರುವುದು"

ಇದರಿಂದ ಹೆಂಡ ಕುಡಿಕರೆಲ್ಲರೂ ನಿಜವಾಗಿ ವಿಷಪಾನ ಮಾಡುವವರೆಂಬ ವಿಷಯವನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಹೆಂಡವು ಕೂಡಲೇ ಮೆದುಳಿಗೆ ಬಾಧಿಸಿ, ಮನುಷ್ಯನು ತನ್ನ ತಿಳುವಳಿಕೆಯನ್ನು ಕಳೆಕೊಂಡು, ದುಷ್ಟ ಕೆಲಸಗಳಲ್ಲಿ ಪ್ರವೃತ್ತನಾಗುತ್ತಾನೆ. ಶೇಕಡ 8ರಷ್ಟು ಅಮಲು ಪದಾರ್ಥವಿರುವ ಹೆಂಡವೇ ಇಷ್ಟು ಅನಾಹುತ ಮಾಡುವಾಗ, ಶೇಕಡ 45ರಷ್ಟು ಅಮಲಿರುವ ಬ್ರಾಂಡಿ, ವಿಸ್ಕಿ ಮತ್ತು ಇತರ ಸಾರಾಯಿಗಳು ಎಂತಹ ಅಪಾಯಕಾರಿಗಳೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ ಕುಡಿಕತನವು ಮನುಷ್ಯನ ಶಾರೀರಿಕ ಶಕ್ತಿಯನ್ನು ಕುಂದಿಸಿ, ಅವರ ಜ್ಞಾನವನ್ನು ಮಬ್ಬುಗೊಳಿಸುವುದಲ್ಲದ್ದೆ, ಅವನನ್ನು ಮೂಕ ಪ್ರಾಣಿಗಳ ಮಟ್ಟಕ್ಕೆ ತರುತ್ತದೆ ಕುಡಿಕನು ಒಳ್ಳೇದು ಕೆಡುಕುಗಳನ್ನು ತಿಳಿಯಲು ಅಸಮರ್ಥನು ಕುಡಿತದ ಪ್ರಭಾವದಿಂದ ಕೊಲೆ, ಕಳ್ಳತನ ಮತ್ತು ಇತರ ದುರಾಚಾರಗಳನ್ನು ಮಾಡಲು ಅವನು ಹೇಸುವುದಿಲ್ಲ ಹುರುಳಿಲ್ಲದ ಗೊಡ್ಡು ಹರಟೆ, ಅಸಭ್ಯ ಭಾಷೆ, ಸುಳ್ಳು ಮಾತುಗಳು ಸುಲಭವಾಗಿ ಅವನ ಬಾಯಿಯಿಂದ ಹೊರಬೀಳುತ್ತವೆ ಅವನು ಯಾರನ್ನೂ ಗೌರವಿಸುವುದಿಲ್ಲ ಅವನ ಶಾರೀರಕ ಶಕ್ತಿಯೂ ಸಂಪೂರ್ಣ ಕೆಟ್ಟು ಹೋಗುವುದು ಮಾತ್ರವಲ್ಲದೆ, ಸ್ವಂತ ಕುಟುಂಬವನ್ನು ಇತರ ಜವಾಬುದಾರಿಕೆಗಳನ್ನು ಅವನು ನಿರ್ಲಕ್ಷಿಸುತ್ತಾನೆ ಅವನು ವಿವಿಧ ಜಗಳ ವಿವಾದಗಳಲ್ಲಿ ಗಂಟು ಬಿದ್ದು ಕೊನೆಗೆ ಕೋರ್ಟಿನ ಮುಂದೆ ಎಳೆಯಲ್ಪಡುತ್ತಾನೆ ಹೀಗೆ ಕುಡಿತವು ಅನೇಕ ಕುಟುಂಬಗಳ ನಾಶಕ್ಕೆ ಕಾರಣವಾಗಿದೆ ಹೀಗೆ ನಾಶವಾಗಿ ಹೋಗುವ ಅಸಂಖ್ಯಾತ ಕುಟುಂಬಗಳನ್ನು ರಕ್ಷಿಸುವುದಕ್ಕೋಸ್ಕರವೇ ಮಹಾತ್ಮಾ ಗಾಂಧಿಯವರು ಮಧ್ಯಪಾನ ನಿಷೇಧದ ಮಂತ್ರವನ್ನು ಸಾರಿದುದು ಕಾಂಗ್ರೆಸ್ಸು ಸದಾ ಈ ಸಿದ್ಧಾಂತವನ್ನೆ ಉಪದೇಶಿಸುತ್ತಿದೆ ಜನತೆಯ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕೋಸ್ಕರ ಸರಕಾರವು ಅನೇಕ ಅಭಿವೃದ್ಧಿ ಯೋಜನೆಯನ್ನು ಕೈಗೊಂಡತೆಂಯೇ, ಮದ್ಯಪಾನ ನಿಷೇಧದ ಈ ಯೋಜನೆಯನ್ನು ಕಾರ್ಯ ರೂಪವಾಗಿ ಜಾರಿಗೆ ತರುವ ಜವಾಬುದಾರಿಕೆಯನ್ನು ನಮ್ಮ ಸರಕಾರವು ಈಗ ವಹಿಸಿಕೊಂಡಿದೆ

ಈಗ ಈ ಪ್ರಾಂತದಲ್ಲಿ ಅಬ್ಕಾರಿ ಆದಾಯವು 17 ಕೋಟಿ ರೂಪಾಯಿಯಷ್ಟಿದೆ ರೈತುವಾರಿ, ಜಮೀನ್ದಾರಿ, ಇನಾಮು ಭೂಮಿಗಳಿಂದ ದೊರೆಯುವ ಆದಾಯ ಬರೀ 10 ಕೋಟಿ ರೂಪಾಯಿಗಳಾಗಿವೆ ಅಬ್ಕಾರಿ ಆದಾಯದಲ್ಲಿ ಹೆಚ್ಚಿನ ಅಂಶವು ಕೂಲಿಗಳಿಂದಲೂ ಬಡಬಗ್ಗರಿಂದಲೂ ಬರುತ್ತದೆ ಬಡವನು ಕುಡಿತದ ದುರಭ್ಯಾಸದಲ್ಲಿ ಸಿಕ್ಕಿಬಿದ್ದು, ಅವನ ಸಂಪಾದನೆಯನ್ನು ವೆಚ್ಚ ಮಾಡಿ ಇನ್ನಷ್ಟು ಬಡವನಾಗುತ್ತಾನೆ 1900ನೇ ಇಸವಿಯಲ್ಲಿ ನಮ್ಮ ಪ್ರಾಂತದಲ್ಲಿ ಅಬ್ಕಾರಿ ಆದಾಯವು 1 ಕೋಟಿ 45 ಲಕ್ಷ ರೂಪಾಯಿಗಳಷ್ಟಿತ್ತು. ದ್ವಿತೀಯ ಮಹಾಯುದ್ಧಕ್ಕಿಂತ ಮುಂಚೆ ಈ ಆದಾಯವು 5½ ಕೋಟಿ ರೂಪಾಯಷ್ಟಕ್ಕೇರಿತು ಈಗ ಈ ಆದಾಯವು 17 ಕೋಟಿ ರೂಪಾಯಿಯಷ್ಟಿದೆ. ಈ ಪ್ರಾಂತದಲ್ಲಿ 35 ಲಕ್ಷ ಗೆಲನುಗಳಷ್ಟು ಸಾರಾಯಿಯು ಮಾರಾಟವಾಗುತ್ತದೆ ಈ ಪ್ರಮಾಣವು ಯುದ್ಧ ಪೂರ್ವದಲ್ಲಿ ವೆಚ್ಚವಾಗುತ್ತಿದ್ದುದರ ಮೂರು ಪಾಲಷ್ಟಾಗಿದೆ ಕುಡಿಯುವ ದುಷ್ಟ ಅಭ್ಯಾಸವು ನಮ್ಮ ದೇಶದ ಇತರ ಪ್ರಾಂತಗಳಿಗಿಂತ ನಮ್ಮ ಪ್ರಾಂತದಲ್ಲಿ ಹೆಚ್ಚು ಹಬ್ಬಿಕೊಂಡಿದೆ ಕುಡಿಯುವುದಕ್ಕೆ ಮಾತ್ರ ವೆಚ್ಚಮಾಡುವ ಹಣವಲ್ಲದೆ ವಿವಾದ, ಜಗಳ, ಹೊಡದಾಟಗಳೇ ಮೊದಲಾದ ಕುಡಿತದ ಪರಿಣಾಮಗಳಿಗೆ ಮಾಡುವ ವೆಚ್ಚಗಳನ್ನು ಸಹ ಎಣಿಸಿದರೆ, ಒಟ್ಟು ಸುಮಾರು 50 ಕೋಟಿ ರೂಪಾಯಿಗಳು ಈ ರೀತಿ ಅನಾವಶ್ಯಕ ಖರ್ಚಾಗುತ್ತದೆಂದು ತಿಳಿಯಬಹುದು

ಪ್ರಜೆಗಳು ತಮ್ಮ ಕರ್ತವ್ಯವನ್ನು ತಿಳಿದು ವಿವೇಕದಿಂದ ನೆರವೇರಿಸಿದರೆ ಮಾತ್ರವೇ, ದೇಶದ ಸ್ವಾತಂತ್ರ್ಯವನ್ನು ಭದ್ರತೆಯಿಂದ ಕಾಪಾಡಿಕೊಂಡು ಬರಲು ಸಾಧ್ಯವಾಗುವುದು. ಬಡತನ, ರೋಗರುಜೆಗಳಿಂದ ಬಳಲುತ್ತಿರುವ ಹಾಗೂ, ಸ್ವಂತ ಜವಾಬುದಾರಿಕೆಗಳನ್ನು ತಿಳಿಯದೆ ಅನೀತಿಯ ಜೀವನ ನಡೆಸುವ ಜನರು ವಾಸಿಸುತ್ತಿರುವ ಯಾವ ದೇಶನಾದರೂ, ಅದಕ್ಕೆ ಅದರ ಸ್ವಾತಂತ್ರ್ಯವನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಬೇಕಾದ ಸಾಮಾನ್ಯ ಬಲವಿರಲಿಕ್ಕಿಲ್ಲ ಮದ್ಯಪಾನ ನಿಷೇಧ ಕ್ರಮವನ್ನು ಆರಂಭಿಸಿದುದರಿಂದ ಈ ಸರಕಾರಕ್ಕೆ 17 ಕೋಟಿ ರೂಪಾಯಿ ನಷ್ಟವಾಗುತ್ತದೆ ಆದರೂ ಈ ಏರ್ಪಾಡಿನಿಂದ ಜನತೆಯು ಸುಖ ಶಾಂತಿ ಸೌಭಾಗ್ಯಗಳ ಜೀವನ ನಡೆಸಲು ಅನುಕೂಲವಾಗುವುದೆಂಬ ಹಾಗೂ ಕೊನೆಗೆ ದೇಶ ಕಲ್ಯಾಣಕ್ಕೆ ಸೋಪಾನವಾಗುವುದೆಂಬ ಭರವಸೆಯಿಂದ ಸರಕಾರವು ಈ ನಷ್ಟವನ್ನು ವಹಿಸಿಕೊಳ್ಳಲು ಸಿದ್ಧವಿದೆ

ಕಳೆದ ವರ್ಷ ನಮ್ಮ ಪ್ರಾಂತದ 8 ಜಿಲ್ಲೆಗಳಲ್ಲಿ ಮದ್ಯಪಾನ ವಿರೋಧಕಾಜ್ಞೆಯನ್ನು ಜಾರಿಗೆ ತರಲಾಗಿತ್ತು. ಅದರಿಂದ ಸರಕಾರವು 5½ ಕೋಟಿ ರೂಪಾಯಿಗಳ ನಷ್ಟ ಅನುಭವಿಸಿತ್ತು ಈ ತಿಂಗಳ 1ನೇ ತಾರೀಕಿನಿಂದ ಇನ್ನೂ 8 ಜಿಲ್ಲೆಗಳಲ್ಲಿ ನಿಷೇಧಾಜ್ಞೆಯನ್ನು ಜಾರಿಗೆ ತರಲು ಸರಕಾರವು ನಿಶ್ಚಯಿಸಿದೆ ಇದರಿಂದ ಪುನಃ 2 ಕೋಟಿ ರೂಪಾಯಿ ನಷ್ಟವಾದಂತಾಯಿತು ಈ 8 ಜಿಲ್ಲೆಗಳಲ್ಲಿ 9½ ಲಕ್ಷ ಗೆಲನುಗಳಷ್ಟು ಸಾರಾಯಿ ವೆಚ್ಚವಾಗುತ್ತದ

ಮದ್ಯಪಾನ ನಿಷೇಧವು ಯಶಸ್ವಿಯಾಗಿ ಜರಗುವುದು, ಸರಕಾರಿ ಅಧಿಕಾರಿಗಳು, ಕಾಂಗ್ರೆಸ್ ಸದಸ್ಯರು, ಹಾಗೂ ಸಾಮಾನ್ಯ ಜನತೆಯೇ ಮೊದಲಾದ ಎಲ್ಲಾ ಪಕ್ಷ ಪಂಗಡಗಳ ಹೃತ್ಪೂರ್ವಕ ಸಹಕಾರದ ಮೇಲೆ ಹೊಂದಿಕೊಂಡಿದೆ ಈ ಏರ್ಪಾಡಿನ ಕಡೆಗೆ ಸರ್ವಜನಾಭಿಪ್ರಾಯ ರೂಪುಗೊಳ್ಳುವಂತೆ ಮಾಡಬೇಕು ಮದ್ಯಪಾನ ನಿಷೇಧದಿಂದುಂಟಾಗುವ ಸಾಮಾಜಿಕ ಆರ್ಥಿಕ ನೈತಿಕ ಪ್ರಯೋಜನಗಳನ್ನು ಸರ್ವರಿಗೂ ಮನದಟ್ಟು ಮಾಡಬೇಕು ಅಧಿಕಾರಿಗಳು ಇದು ಬರೇ ಹಣಕ್ಕಾಗಿ ಮಾಡುವ ಕೆಲಸವೆಂದು ಭಾವಿಸದೆ, ಸ್ವಸಂತೋಷದಿಂದ ಜನತೆಯನ್ನು ಉದ್ಧರಿಸುವುದಕ್ಕೆ ಬಂದ ಸಂದರ್ಭವನ್ನು ಒದಗಿದ ದಕ್ಕೋಸ್ಕರ ಹೆಮ್ಮೆಯಿಂದ ಕಾರ್ಯ ಪ್ರವೃತ್ತರಾಗಬೇಕು. ಕುಡಿತದ ಕೆಟ್ಟ ಚಾಳಿಗೆ ಬಲಿಯಾದವರಿಗೆ ಅದನ್ನು ಬಿಟ್ಟು ಬಿಡುವಂತೆ ಬುದ್ಧಿ ಹೇಳುವುದು ಸರ್ವಜನರ ಕರ್ತವ್ಯವಾಗಿದೆ ಕಳ್ಳಾಟಿಕೆಯಲ್ಲಿ ಸಾರಾಯಿ ತಯಾರಿಸುವುದರ ಕುರಿತು ಸರಕಾರಕ್ಕೆ ವರ್ತಮಾನ ತಿಳಿಸುವುದು ಸಹ ಅವರ ಕರ್ತವ್ಯವಾಗಿದೆ. ಕಳ್ಳತನದಿಂದ ಸಾರಾಯಿ ತಯಾರಿಸಿ ಕುಡಿಯುವುದನ್ನು ನಿರ್ಮೂಲಗೊಳಿಸುವಂತೆ ಸಾಮಾಜಿಕ ಜಾಗೃತಿಯನ್ನುಂಟುಮಾಡಬೇಕು. ಈ ಉದ್ದೇಶಕ್ಕೆ ಮೂರು ವಾ ನಾಲ್ಕು ಗ್ರಾಮಾಧಿಕಾರಿಗಳಿಂದ ಕೂಡಿದ ಗ್ರಾಮ ಸಮಿತಿಗಳನ್ನು ಹಳ್ಳಿಗಳಲ್ಲಿ ರಚಿಸುವುದು ಈ ಸಮಿತಿಯು ತನ್ನ ಗ್ರಾಮದಲ್ಲಿ ಮದ್ಯಪಾನ ನಿಷೇಧವು ಜಯಪ್ರದವಾಗಿ ನಡೆಯುವುದಕ್ಕೆ ಹೊಣೆಯಾಗಿದೆ ಸಮಿತಿಯು ತನ್ನ ಕರ್ತವ್ಯವನ್ನು ಮನಪೂರ್ವಕವಾಗಿ ನೆರವೇರಿಸಿದರೆ ಜನತೆಯ ಅಭ್ಯುದಯಕ್ಕೆ ಖಂಡಿತ ಅಸಿವಾರವನ್ನು ಹಾಕಿದಂತಾಗುವುದು ಈ ಶಾಸನವನ್ನು ಉಲ್ಲಂಘಿಸುವ ಗ್ರಾಮಗಳಲ್ಲಿ ಸಾಮೂಹಿಕ ದಂಡ ಹೊರಿಸುವ ಪಕ್ಷೆಯು ಸರಕಾರದ ಪರ್ಯಾಲೋಚನೆಯಲ್ಲಿದೆ. ಅಂಥ ಕಠಿಣ ಕ್ರಮಕ್ಕೆ ಅವಕಾಶವಿರಲಾರದೆಂದು ನನ್ನ ನಿರೀಕ್ಷೆ

ಕೇವಲ ಕಳ್ಳತನಗಳಿಂದಲೂ ಕುಡಿಕತನದಿಂದಲೂ ದೂರವಿರುವವರು ಮಾತ್ರವೇ ದೇವರ ಪ್ರೀತಿಗೆ ಪಾತ್ರರಾಗುವರೆಂದು "ದಾಮುನವರ್" ಋಷಿಯು ಹೇಳುತ್ತಾರೆ ಆದುದರಿಂದ ಮನುಷ್ಯನು ಅವನ ಅವಗಾನ ಸತ್ವವನ್ನು ತಿಳಿಯುವಂತೆ ಪ್ರತಿಯೊಬ್ಬನಲ್ಲಿಯೂ ದಿವ್ಯತೆಯು ಮೂರ್ತೀಭವಿಸುವಂತೆ ಮಾಡುವ ಈ ಪವಿತ್ರ ಕಾರ್ಯದಲ್ಲಿ ಅಧಿಕಾರಿಗಳ, ಸಾಮಾನ್ಯ ಜನತೆಯ, ಕಾಂಗ್ರೆಸ್ ಸ್ವಯಂಸೇವಕರ ನ್ಯಾಯವಿಧಾಯಕ ಸಭೆಗಳ ಸದಸ್ಯರ ಮತ್ತು ಇತರರ ಯತ್ನಗಳು ಸಫಲವಾಗಲಿ

ಶುಭ ಲಗ್ನ ಸಂದೇಶ

ಭಾರತ ಗವರ್ನರ್ ಜನರಲ್ ಮೌಂಟ್ ಬೇಟನ್ನರು ರಾಜಕುಮಾರಿ ಎಲಿಜಬೇತ್ ಮತ್ತು ಫಿಲಿಫ್ ಮೌಂಟ್ ಬೇಟನ್ನರ ವಿವಾಹ ನಿಶ್ಚಯ ಕಾಲದಲ್ಲಿ ಇಂಗ್ಲೆಂಡಿನಲ್ಲಿದ್ದರು. ಆಗ ತಮ್ಮ ಅಣ್ಣನ ಮಗನನ್ನು ಶುಭಕೋರಿ ಶ್ಲಾಘಿಸಿದ ಹಸ್ತಲಾಘವದ ಚಿತ್ರವಿದು ಚಿಕ್ಕಪ್ಪ ಮೌಂಟ್ ಬೇಟನ್ನರು ರಾಜಾಜಿಯವರಿಗೆ ತಾತ್ಕಾಲಿಕ ಗವರ್ನರ್ ಜನರಲ್ ಪಟ್ಟವಹಿಸಿ ಮೊನ್ನೆ ರಾಜ ವಿವಾಹ ಲಗ್ನಕ್ಕಾಗಿ ಲಂಡನ್ನಿಗೆ ಹೋಗಿರುವರು.

ಸಣ್ಣ ಕತೆ

ನಿರ್ದೋಷಿ

ಮೂಲ ಲೇಖಕರು

ಶ್ರೀ ರಾಜಗೋಪಾಲಾಚಾರ್ಯ

(ಭಾರತದ ಗವರ್ನರ ಜನರಲ್ಲರು)

ತಾಯಿ ಇಲ್ಲದ ಮಗು ಬಾಲು. ನಾಲ್ಕು ವರ್ಷ ಪ್ರಾಯ. ತಂದೆ ಮಾಧವರಾಯರಿಗೆ ಬಾಲುವಿನ ಮೇಲೆ ತುಂಬ ಅಕ್ಕರೆಯಾದರೆ ಮಲತಾಯಿ ಸೀತಮ್ಮನವರಿಗೆ ಮಾತ್ರ ಬಾಲುವನ್ನು ಕಂಡರೆ ಸೇರುತ್ತಿದ್ದಿಲ್ಲ. ಹೌದು ಮಲತಾಯಿಂದಿರಿಗೆ ಮಲಮಕ್ಕಳ ಮೇಲೆ ಅಕ್ಕರೆ ಎಂದರೆ ಅಷ್ಟಕಷ್ಟೆಯಷ್ಟೆ. ಬಾಲು ನಡತೆಗೆಟ್ಟವ, ತುಂಟ ಎಂದು ಸೀತಮ್ಮನವರ ಆಕ್ಷೇಪ.

ಅಂದು ದೀಪಾವಳಿ. ಸಂಜೆ ಆಡ್ಡಾಡ ಹೊರಟ ಬಾಲು ಬಹಳ ಹೊತ್ತಾದರೂ ಹಿಂತಿರುಗಿರಲಿಲ್ಲ. ಈಗ ಬಂದಾನು, ತಡೆದು ಬಂದಾನೆಂದು ಕಾದು ಕಾದು ಬೇಸತ್ತರು ಮಾಧವರಾಯರು ಮತ್ತು ಸೀತಮ್ಮನವರು. ರಾತ್ರಿ ಹತ್ತಾಯಿತು. ಆದರೂ ಬಾಲು ಕಾಣನು. ದಂಪತಿಗಳಿಗೆ ದಿಗಿಲು ಬಿತ್ತು. ತಮ್ಮ ನೆರೆಕರೆಗಳಲ್ಲಿ ಸ್ನೇಹಿತರಲ್ಲಿ ಹೋಗಿರಬಹುದೆಂದು ಚರ್ಚಿಸಿದರು. ಜನವನ್ನು ಅಟ್ಟಿದರು. ಆದರೆ ಬಾಲು ಕಾಣೆ! ದಂಪತಿಗಳು ಹತಾಶರಾದರು. ಕೊನೆಗೇನು? ಪೋಲಿಸರಿಗೆ ಬಾಲು ಕಾಣೆ ಎಂದು ಕಾಣೆ ಅರ್ಜಿ ಕೊಟ್ಟರು.

॥ ೨ ॥

"ಹುಡುಗನ ಮೈಮೇಲೆ ಆಭರಣಗಳಿದ್ದವೇನು? ಸವಾಲು ಹಾಕಿದರು ಪೋಲಿಸು ಇನಿಸ್ಪೆಕ್ಟರರು. "ಕಾಲಲ್ಲಿ ಒಂದು ಜೋಡು ಗೆಜ್ಜೆ ಮಾತ್ರವಿತ್ತು" ಎಂದರು ಮಾಧವರಾಯರು. "ಎಷ್ಟು ಬೆಲೆಯವು?" "ಹಾಗೇನಿಲ್ಲ ಬೆಳ್ಳಿಯವು ಅವೂ ಒಳಗೆ ಪೊಳ್ಳು. ಕ್ರಯ ಹಿಡಿಯುವುದಾದರೆ ಬರಿ ಮೂರು ರೂಪಾಯಿಗಳು."

ನೆರೆಕರೆಗಳಲ್ಲಿ ದೀಪಾವಳಿಯ ಸಡಗರ. ಮಾಧವರಾಯರ ಮನೆಯಲ್ಲಿ ಮಾತ್ರ ಎಲ್ಲರೂ ತಲೆಯ ಮೇಲೆ ಕೈಯಿಟ್ಟು ಬಾಳುಗಳೆಯುತ್ತಿದ್ದರು.

"ನಾನು ಕಿಟ್ಟನ ಬಗೆ ಈ ಮೊದಲು ಎಷ್ಟೋ ಸರ್ತಿ ಆಕ್ಷೇಪ ಎತ್ತಿದ್ದೆ. ನೀವು ಮಾತ ಕಿವಿಗೆ ಹಾಕಿಕೊಳ್ಳಲಿಲ್ಲ. ಇಂದಾದರೂ ತಿಳಿಯಿತಷ್ಟೇ. ಕಿಟ್ಟನೇ ಬಾಲುವನ್ನು ಕಾಣೆ ಮಾಡಿರಬೇಕು" ಎಂದು ಸೀತಮ್ಮನವರ ಊಹನೆ.

"ಛೆ ಕಿಟ್ಟ! ಆ ಬಡ ಜೀವಿ. ಅವನ ಮೇಲೇಕೆ ಆರೋಪ ಹೊರಿಸುತ್ತಿ. ಅವನು ರಾತ್ರಿ ಎಂಟರ ವರೆಗೆ ಇಲ್ಲೇ ಇದ್ದನಲ್ಲ. ಮಗ ನಾಲ್ಕಕ್ಕೆ ಕಾಣೆಯಾಗಿರಬೇಕು" ಎಂದರು ಮಾಧವರಾಯರು.

"ಹೌದು ಮಗು ನಾಲ್ಕಕ್ಕೆ ಕಾಣೆಯಾಗಿರಬೇಕು. ನಾಲ್ಕು ಗಂಟೆಗೆ ಕಿಟ್ಟನೂ ಮನೆಯಲ್ಲಿರಲಿಲ್ಲ. ಯಾವಾಗಲೂ ಊಟದ ಮೂರು ಗಂಟೆಗೆ ಕೆಲಸಕ್ಕೆ ಹಾಜರಾಗುವವನು ಅಂದು ಎರಡು ಗಂಟೆ ಹೊತ್ತು ತಡಮಾಡಿ ಬಂದ. ತಡವಾಗಿದ್ದ ಹೊತ್ತೇನೆಂದು ಕೇಳಿದಾಗ 'ಪೇಟೆಗೆ ಹೋಗಿದ್ದೆ. ದೀಪಾವಳಿಗಾಗಿ ನನ್ನ ಮನೆಗೆ ಸ್ವಲ್ಪ ಸಾಮಾನುಗಳನ್ನು ತರಲು ಹೋಗಿದ್ದೆನು' ಅಂದ. ಆದುದರಿಂದಲೇ ಅವನ ಮೇಲೆ ಸಂಶಯಕ್ಕೆ ಆಸ್ಪದ."

"ಸರಿ. ಮಾಧವರಾಯರೆ ಕಿಟ್ಟನ ಮೇಲೆ ಸಂಶಯಕ್ಕೆ ಎಡೆಯಿದೆ. ಅವನ ಮನೆ ನನಗೆ ಗೊತ್ತು. ಪೋಲಿಸರನ್ನು ಕರಕೊಂಡು ಹೋಗಿ ದಸ್ತಗಿರಿ ಮಾಡಿಸುತ್ತೇನೆ" ಎಂದ ಒಬ್ಬ ನೆರೆಮನೆಯವ.

ಅಂತೂ ರಾತ್ರಿ ಸರಿಯಿತು. ಬೆಳಗು ಸರಿಯಿತು. ಊರವರ ದೀಪಾವಳಿಯ ಸಂಭ್ರಮದಲ್ಲಿ ಆನಂದಾಶ್ರುಗಳಿಂದ ಮೈಮರೆತಾಗ ಪುತ್ರಶೋಕದಿಂದ ಮಾಧವರಾಯರು ದುಃಖಾಶ್ರುಗಳನ್ನು ಮಿಡಿಯತೊಡಗಿದರು.

"ಅಯ್ಯೋ ದೇವರೆ, ನನ್ನ ಮುದ್ದು ಕಂದ ಏನಾದನೋ? ಏನಾಗುವನೋ? ಎಂತಹ ನಿರ್ದಯಿಗಳ ಕೈಗೆ ಸಿಲುಕಿದನೋ. ಅದನ್ನು ಹೇಗೆ ಸಹಿಸುವನೋ" ಎಂದು ಮರುಗುತ್ತಿದ್ದರು.

"ಹಾಗೇನು ಏನಾಗುವನು ದೇವರಿದ್ದಾನೆ. ನೀವೇಕೆ ಹೀಗೆ ಮರುಗುತೀರಿ" ಎಂದು ಸೀತಮ್ಮನವರು ಸಮಜಾಯಿಸುತಿದ್ದರು.

॥ ೩ ॥

ಕಿಟ್ಟನಿಗೆ ದಸ್ತಗಿರಿಯಾಯಿತು. ಮಾಧವರಾಯರಿಗೆ ಪೋಲಿಸರ ಕರೆ ಹೋಯಿತು. ಮಾಧವರಾಯರು ಬಂದರು. ಇನ್ಸ್‌ಪೆಕ್ಟರರು ತಾವು ಕಿಟ್ಟನ ಮನೆ ಶೋಧಿಸಿದಾಗ ಸಿಕ್ಕಿದ ಒಂದೆರಡು ಅಂಗಿಗಳನ್ನೂ ಒಂದು ಪಟಾಕಿಯ ಪೆಟ್ಟಿಗೆಯನ್ನೂ ಮಾಧವರಾಯರಿಗೆ ತೋರಿಸಿದರು.

"ಅಲ್ಲ ಇವು ಬಾಲುವಿನವಲ್ಲ" ಅಂದರು ಅಂಗಿಗಳನ್ನು ನೋಡಿ ಮಾಧವರಾಯರು. ಆದರೆ ಅವರ ಭಾವ ಬಾಲುವಿನ ಮಾವನವರು ಪಟಾಕಿ ಪೆಟ್ಟಿಗೆಯನ್ನು ಕಂಡು ಇದನ್ನು ನಾನು ಹಿಂದಿನ ದಿನ ಬಾಲುವಿಗೆ ಕೊಟ್ಟಿದೆ ಎಂದು ರುಜುಪಡಿಸತೊಡಗಿದರು. ಇನ್ನು ಪ್ರತ್ಯಕ್ಷ ಕಂಡವರ ಸಾಕ್ಷಿಗಳೂ ಇನ್ಸ್‌ಪೆಕ್ಟರರಿಗೆ ಸಿಕ್ಕಿದವು. ಹಲವರು ತಾವು ಬಾಲುವನ್ನು ಕಿಟ್ಟನೊಡನೆ ಪೇಟೆಯಲ್ಲಿ ಕಂಡಿರುವೆವೆಂದೂ ಇನ್ನು ಕೆಲವರು ಅವನ ಕೈಯಲ್ಲಿ ಪಟಾಕಿಯ ಪೆಟ್ಟಿಗೆ ಇದ್ದುದನ್ನು ತಾವು ಕಂಡಿರುವೆವೆಂದೂ ಮತ್ತು ಶಾಲೆಯ ಪೇದೆಯೊಬ್ಬಳು ಕಿಟ್ಟನು ಬಾಳೆ ಹಣ್ಣನ್ನೊಂದು ಬಾಲುವಿಗೆ ಕೊಡುವಾಗ ತಾನು ನೋಡಿರುವೆನೆಂದೂ ಸಾಕ್ಷಿ ಹೇಳಿದರು. ಇನ್ನು ಸಮಸ್ಯೆಯನ್ನು ಬೇಗನೇ ಬಗೆಹರಿಸಬಹುದೆಂದು ಇನ್ಸ್‌ಪೆಕ್ಟರರು ಮನಗಂಡರು. ಕಿಟ್ಟನ ಕಡೆಗೆ ತಿರುಗಿ "ಇದಕ್ಕೆ ನೀನೇನೆನ್ನುವೆ?" ಎಂದು ಪ್ರಶ್ನಿಸಿದರು.

"ಇಲ್ಲ ಇದು ತೀರ ಸುಳ್ಳು. ಅವರು ಹಾಗೇಕೆ ನನ್ನ ಮೇಲೆ ಹೇಳುವರೋ ನನಗೆ ತಿಳಿಯದು" ಎಂದು ಕಿಟ್ಟನ ಉತ್ತರ.

"ಇಲ್ಲ ಬಿಸಿಯಾಗದೆ ಬೆಣ್ಣೆ ಕರಗದು. ಚಿತಹಿಂಸೆಗೆ ಅವನನ್ನು ಗುರಿಪಡಿಸದೆ ಅವನ ಬಾಯಿಂದ ಗುಟ್ಟು ರಟ್ಟಾಗದು" ಎಂದು ಸೀತಮ್ಮನವರ ಗರ್ಜಿಸಿದರು.

"ಅಯ್ಯೋ ದೇವರೆ ನನ್ನ ಮಗನನ್ನು ನಿಷ್ಕಾರಣವಾಗಿ ಹಿಂಸಿಸುವುದು ಉಗುರುಗಳೆಡೆ ಸೂಜಿಯಿಂದ ಚುಚ್ಚುತ್ತಾರೆ" ಎಂದ ಕಿಟ್ಟನ ತಾಯಿ ರಂಜಿ ರೋಧಿಸಿದಳು.

"ಇದ್ದದ್ದ ಇದ್ದ ಹಾಗೆ ಹೇಳಿದರೆ ಪೋಲಿಸ್ ಕೆ ಹಿಂಸಿಸುವರು" ಅಂದರು ಇನ್ಸ್‌ಪೆಕ್ಟರರ.

"ಇಲ್ಲ ಸ್ವಾಮಿ ನಾವು "ಡೇ" ಪಿಗಳ ನೀವು ನನ್ನನ್ನು ನಿಷ್ಕಾರಣವಾಗಿ ಹಿಂಸಿಸುವುದು ಈ ತಾಯಿನಾಣೆ ಹೇಳುತ್ತೇನೆ ಕಿಟ್ಟ ನಿರಪರಾಧಿ" ಎಂದು ನ ಜಿ ಸೊಂಟದಲ್ಲಿ ಕಟ್ಟಿದ ನಿದ್ದೆಹೋಗುವ ಕೂಸನ್ನು ತೋರಿಸಿ ಪ್ರಮಾಣ ಮಾಡತೊಡಗಿದಳು.

"ಬಾಯಿ ಮುಚ್ಚು. ಅರಚಿದರೆ ಜಾಗತೆ ನಿನ್ನನ್ನೂ ಜೇಲಿಗೆ ದೂಡುವೆನು" ಎಂದು ಇನ್ಸ್‌ಪೆಕ್ಟರರ ಗುಡುಗಿದರು.

॥ ೪ ॥

ಮರುದಿನ ಬೆಳಿಗ್ಗೆ ಪೇಟೆಯ ಒಳಯಲ್ಲಿರುವ ನೀರಿನ ಕೊಳವೊಂದರಲ್ಲಿ ಶವ ಒಂದು ತೇಲುವುದನ್ನು ಪೋಲಿಸರು ಕಂಡರು. ಮಾಧವರಾಯರು ಅಲ್ಲಿಗೆ ಧಾವಿಸಿದರು. ಅದು ಬಾಲುವಿನದೇ ಶವವಾಗಿತ್ತು. ನೋಡಿದರೆ ಕುತ್ತಿಗೆ ಹಿಸುಕಿ ಕೊಂದು ಕೊಳದಲ್ಲಿ ಒಗೆದಿರಬೇಕೆಂದು ಎಲ್ಲರೂ ಊಹಿಸುತಿದ್ದರು. ಅಂತು ಸ್ಪಷ್ಟವಾಗಬೇಕಷ್ಟೆ? ಹೆಣವನ್ನು ಆಸ್ಪತ್ರೆಗ ಸಾಗಿಸಿ ಸಿಗಿಸಿದರು. ಸಿಗಿದಾಗ ಹೆಣದ ಕರುಳಲ್ಲಿ ಕರಗದ ಬಾಳೆಹಣ್ಣಿನ ತುಂಡುಗಳು ಗೋಚರಕ್ಕೆ ಒಂದವು. ಸರಿ ಕಿಟ್ಟನ ಮೇಲೆ ಆರೋಪ ಬಲವಾಯಿತು. ಇನ್ಸ್‌ಪೆಕ್ಟರರು ಕಿಟ್ಟನನ್ನು ಪುನಹ ವಿಚಾರಿಸತೊಡಗಿದರ.

"ನೀನು ಬಾಳೆ ಹಣ್ಣನ್ನು ಕೊಡಲಿಲ್ಲವೆಂದು ಹೇಳುವಿ. ಕೊಟ್ಟದ್ದು ಶಾಲೆಯ ಪೇದೆ ಕಂಡಿರುವಳಂತೆ. ಕರಗದ ಬಾಳೆಯ ಹಣ್ಣು ಕರುಳಲ್ಲಿ ಸಿಕ್ಕಿದೆ. ಇದಕ್ಕೇನೆನ್ನುವೆ?"

"ಹೌದು ದೀಪಾವಳಿಯೆಂದು ಹಬ್ಬಕ್ಕಾಗಿ ಬಾಳೆ ಹಣ್ಣನ್ನು ತೆಗೆದೆ. ಬಾಲು ಒಂದನ್ನು ಕೇಳಿದ. ನಾನು ಕೊಟ್ಟು ಮನೆಗೆ ಕಳಿಸಿದೆ. ಮತ್ತೆ ಸ್ವಲ್ಪ ಎಣ್ಣೆಯನ್ನೂ ಬೆಲ್ಲವನ್ನೂ ತೆಗೆದುಕೊಂಡು ಮನೆಗೆ ನಡೆದೆ. ಮತ್ತೆ ಧನಿಯಲ್ಲಿ ಹೋಗುವಾಗ ಹೊತ್ತಾಗಿತ್ತು. ಹೊತ್ತೇಕೆ ಎಂದು ಸೀತಮ್ಮನವರು ಕೇಳಿದರು. ನನ್ನಲ್ಲಿ ಹಬ್ಬಕ್ಕಾಗಿ ಸಾಮಾನು ತರಹೋಗಿದ್ದೆ ಅಂದೆ. ನಾನು ಹೇಳಿದ್ದೂ ಸೀತಮ್ಮನವರು ನನಗೆ ಕೇಳಿದ್ದೂ ಸುಳ್ಳೋ ಸತ್ಯವೆಂದು ಸೀತಮ್ಮನವರೊಡನೆಯೇ ವಿಚಾರಿಸಿ" ಎಂದ ಕಿಟ್ಟ.

॥ ೫ ॥

ಇಂದು ಕಿಟ್ಟನ ಮೊಕದ್ದಮೆ ಮೆಜಿಸ್ಟ್ರೇಟರ ಕೋರ್ಟಿನಲ್ಲಿ. ಎರಡು ಪಕ್ಷಗಳ ಹೇಳಿಕೆಯನ್ನು ಕೇಳಲಾಯಿತು. ಬಾಲು ಕಿಟ್ಟನೊಡನೆ ಪೇಟೆಯಲ್ಲಿದ್ದನೆಂದೂ ಬಾಳೆಹಣ್ಣು ಕೊಟ್ಟದ್ದಕ್ಕೆ ಶಾಲೆಯ ಪೇದೆಯ ಸಾಕ್ಷಿ. ಬಾಳೆಹಣ್ಣು ಕೊಟ್ಟು ಬಾಲುವನ್ನು ತಾನು ಹಿಂದಕ್ಕೆ ಕಳಿಸಿರುವೆನೆಂದು ಕಿಟ್ಟನ ಹೇಳಿಕೆ. ಕಿಟ್ಟನ ಮನೆಯಲ್ಲಿ ದೊರೆತ ಪಟಾಕಿ ಪೆಟ್ಟಿಗೆ ತಾನು ಬಾಲುವಿಗೆ ದೀಪಾವಳಿಯೆಂದು ಕೊಟ್ಟದೆಂದು ಬಾಲುವಿನ ಮಾವನವರ ಹೇಳಿಕೆ. ಈ ವಿಚಾರಣೆ ಕೇಳಿದ ಜನರೆಲ್ಲರೂ ಕಿಟ್ಟ ಆರೋಪಿ ಎಂದೂ ಶಿಕ್ಷೆಗೊಳಗಾಗುವನೆಂದೂ ನೆನಸಿದರು.

ನಾಲ್ಕು ದಿನಗಳ ನಂತರ ಮೆಜಿಸ್ಟ್ರೇಟರ ತೀರ್ಪು ಹೊರಬಿತ್ತು. "ಬಡ ಜೀವವೊಂದರ ಬಲಿ ಆಗಲೇ ಆಗಿದೆ. ಅದಕ್ಕೆ ಯಾರೂ ಬೆಲೆ ಕಟ್ಟರು. ಅವನ ಮೇಲಿನ ಆರೋಪವನ್ನು ಕೂಲಂಕಷವಾಗಿ ವಿಚಾರಿಸಿದೆ. ಆರೋಪಿಯ ಮೇಲೆ ಹೇಳಿದ ಸಾಕ್ಷಿಗಳು ಹಲವು. ಸಾಕ್ಷಿಗಳು ಹೇಳುವುದನ್ನು ಕೇಳುವಾಗ ಅವು ಸ್ಪಷ್ಟವಾದವಲ್ಲವೆಂದು ತೋರುತ್ತದೆ. ಹುಡುಗ ಕೊಲೆಯಾಗಿರುವನೆಂದು ದೃಢಪಡುವುದರಿಂದ ಕಿಟ್ಟನಲ್ಲಿ ತಿರಸ್ಕಾರ ಉಂಟಾಗಿ ತೋರುವಂತಿವೆ ಅವು. ಆದುದರಿಂದ ಆರೋಪಿಯು ನಿರಪರಾಧಿ ಎಂದು ಪರಿಗಣಿಸಲಾಗುವುದು." ಎಂದರು. ಕಿಟ್ಟನ ಬಿಡುಗಡೆಯಾಯಿತು.

ಈ ತೀರ್ಪಿನಿಂದ ಮಾಧವರಾಯರ ಆಪ್ತರಿಗೂ ಸ್ನೇಹಿತರಿಗೂ ಸಮಾಧಾನ ಉಂಟಾಗಲಿಲ್ಲ. ಮೆಜಿಸ್ಟ್ರೇಟರು ಸರಿಯಾಗಿ ಅನುಭವವಿಲ್ಲದವರು. ಮೇಲಿನ ಕೋರ್ಟಿಗೆ ಅಪೀಲು ಮಾಡಬೇಕೆಂದು ಮಾಧವರಾಯರನ್ನು ಬಾಧಿಸಿದರು. "ಈ ಮೊಕದ್ದಮೆ ಇಲ್ಲಿಗೆ ಸಾಕು. ಇನ್ನು ಅಪೀಲೇತಕ್ಕೆ? ನನಗೆ ಗುಣವಾದರೇನು, ಅವಗುಣವಾದರೇನು. ಸತ್ತ ನನ್ನ ಬಾಲು ಮರಳಿ ಜೀವಿಸುವನೇ?" ಎಂದು ಅವರು ಎಷ್ಟು ಉದಾಸೀನ ತೋರಿಸಿದರೂ ಅವರನ್ನು ಒತ್ತಾಯಗೊಳಿಸಿ ಮೇಲಿನ ಕೋರ್ಟಿಗೆ ಹತ್ತಿಸಿದರು. ಸರಿ, ಕಿಟ್ಟನಿಗೆ ಮತ್ತೊಮ್ಮೆ ದಸ್ತಗಿರಿಯಾಯಿತು. ಬಾಲುವಿನ ಮಾವನವರು ಕಿಟ್ಟನ ಮನೆಯಲ್ಲಿ ಪೋಲಿಸರಿಗೆ ಸಿಕ್ಕಿದ ಪಟಾಕಿ ಪೆಟ್ಟಿಗೆ ಅದೇ ತಾವು ದೀಪಾವಳಿಯೆಂದು ಬಾಲುವಿಗೆ ಕೊಟ್ಟದೆಂದು ವಾದಿಸಿದರು.

ಕೋರ್ಟಿನಲ್ಲಿ ಮೇಜಿನ ಮೇಲೆ ಹಲವು ಪಟಾಕಿ ಪೆಟ್ಟಿಗೆಗಳನ್ನು ತಂದಿರಿಸಿ ಜಡ್ಜರು ಬಾಲುವಿನ ಮಾವನವರನ್ನು ಕರೆದು 'ಹುಡುಕಿ ತೆಗೆಯಿರಿ. ಇದರಲ್ಲಿ ನೀವು ಬಾಲುವಿಗೆ ಕೊಟ್ಟ ಪೆಟ್ಟಿಗೆ ಯಾವುದೆಂದು' ಅಂದರು.

ಬಾಲುವಿನ ಮಾವನವರು ತಬ್ಬಿಬ್ಬಾದರು. ಅವುಗಳಲ್ಲಿ ಅವರು ಯಾವುದನ್ನು ಎತ್ತುವುದು. ಅಲ್ಲಿದ್ದ ಎಲ್ಲಾ ಪೆಟ್ಟಿಗೆಗಳು ತಾವು ಬಾಲುವಿಗೆ ಕೊಟ್ಟ ಪೆಟ್ಟಿಗೆಯಂತೆಯೇ ಇದ್ದವು. "ಇವುಗಳೆಲ್ಲ ನಾನು ಬಾಲುವಿಗೆ ಕೊಟ್ಟ ಪೆಟ್ಟಿಗೆಯಂತಿವೆ. ಆದುದರಿಂದ ನಾನು ಯಾವುದೆಂದು ಆರಿಸಲಿ?" ಎಂದು ಜಡ್ಜರನ್ನು ಕೇಳಿದರು.

"ಹೌದು ಹಾಗೆಯೇ ಇದ್ದ ಪೆಟ್ಟಿಗೆಯೊಂದನ್ನು ಕಿಟ್ಟ ಕ್ರಯಕೊಟ್ಟು ಅಂಗಡಿಯಿಂದ ಎತ್ತಬಾರದೇನು. ನಿಮ್ಮ ಪೆಟ್ಟಿಗೆಯಂತೆ ಅದೂ ತೋರಿದರೆ ಅದು ನೀವು ಅಂಗಡಿಯಿಂದ ತಂದ ಪೆಟ್ಟಿಗೆಯೆಂದಾಗುವುದೇನು. ಸರಿ ಇನ್ನು ಇದರಲ್ಲಿ ವಿಚಾರಿಸುವುದೇನಿಲ್ಲ" ಎಂದು ಜಡ್ಜರು ತೀರ್ಪು ಕೊಟ್ಟರು.

"ಕಿಟ್ಟ ಅಪರಾಧಿ ಅನ್ನುವುದಕ್ಕೆ ನಿಮ್ಮ ಸಾಕ್ಷಿಯಿಂದ ಸಾಕಷ್ಟು ಪುಷ್ಟಿ ಸಿಕ್ಕದು. ಅವನು ಬಡತನದ ಸಂಕಷ್ಟ ಉಳ್ಳ ಮನುಷ್ಯನೆಂದು ಕೇವಲ ಆತನ ಸ್ಥಿತಿಯ ಮೇಲಿನಿಂದ ಅವನನ್ನು ನಿಷ್ಕಾರಣವಾಗಿ ದೋಷಾಪರೋಕ್ಷಕ್ಕೆ ಒಳಪಡಿಸುವುದು ನ್ಯಾಯಾಲಯದ ಧರ್ಮವಲ್ಲ. ಆದುದರಿಂದ ಕಿಟ್ಟನನ್ನು ನಿರ್ದೋಷಿಯೆಂದು ಸಾರಲಾಗಿದೆ" ಎಂದಿತ್ತು ಜಡ್ಜರ ತೀರ್ಪು.

॥ ೬ ॥

'ಈಗಲಾದರೂ ತಿಳಿಯಿತೋ ಸೀತಮ್ಮ ನಾನಂದೇ ಕಿಟ್ಟ ನಿರ್ದೋಷಿ ಎಂದು ಹೇಳಿದ್ದೆ. ಇಂದು ಮಕ್ಕಳನ್ನು ಕಾಣೆ ಮಾಡಿದ ಕಳ್ಳರ ತಂಡ ಒಂದರ ಕೈದಾಗಿದೆ. ಅದರಲ್ಲಿನ ಒರ್ವ ಹೆಂಗಸು ಒಪ್ಪಿದ್ದಾಳಂತೆ. ತಾನು ಮೂರು ವರ್ಷಗಳ ಹಿಂದೆ ಒಬ್ಬ ನಾಲ್ಕು ವರ್ಷದ ಬಾಲಕನನ್ನು ಎತ್ತಿಕೊಂಡು ಹೋಗಿ ಕಳ್ಳರ ತಂಡಕ್ಕೆ ಒಪ್ಪಿಸಿದ್ದಳೆಂದು. ತಂಡದವರು ಹುಡುಗನ ಕಾಲಲ್ಲಿದ್ದ, ಒಂದು ಜೋಡು ಗೆಜ್ಜೆಯನ್ನು ತೆಗೆದು ನಂತರ ಕುತ್ತಿಗೆ ಹಿಸುಕಿ ಕೊಂದು ಊರಲ್ಲಿನ ನೀರ ಕೊಳಕ್ಕೆ ಒಸುಟರಂತೆ. ನೋಡಿದಿಯಾ ಅಂದು ಆ ಬಡ ಆಳು ಕಿಟ್ಟ ಅನ್ಯಾಯವಾಗಿ ಗಲ್ಲಕ್ಕೆ ಹಾಕಲ್ಪಡುತ್ತಿದ್ದ."

"ಹೌದು ಮಗುವಿನ ಹೊಟ್ಟೆಯಲ್ಲಿ ಅಂದು ಬಾಳೆ ಹಣ್ಣಿತ್ತಲ್ಲ. ಕಿಟ್ಟ ಅದೇತಕ್ಕೆ ಕೊಟ್ಟನಂತೆ?"

"ಕೊಡಬಾರದೇನು. ಧನಿ ಕೇಳುವಾಗ ಆ ಹಾಡವ ಸಂತೋಷದಿಂದ ಕೊಡುವನು. ಅದು ಸಹ ಕೇವಲ ಒಂದು ಹಣ್ಣು. ಹಣ್ಣು ತಿನಿಸಿ ಮನೆಗೆ ಕಳಿಸಿದ ಕಿಟ್ಟ. ಹಿಂತಿರುಗಿ ಮನೆಗೆ ಬರುವಾಗ ಮಗು ಕಳ್ಳರ ಕೈಗೆ ಸಿಲುಕಿತು."

"ಹಾಗಾದರೆ ಪಟಾಕಿ ಪೆಟ್ಟಿಗೆಯ ಬಗ್ಗೆ ಏನೆನ್ನುವಿರಿ?"

"ಒಂದರ ಹಾಗೆ ಇನ್ನೊಂದು ಇರಬಾರದೇನು."

"ಮಾಧವರಾಯರೇ ನಿಮ್ಮ ಅಭಿಪ್ರಾಯ ತಪ್ಪು. ಅಂದು ಕಿಟ್ಟನ ಮನೆಯಲ್ಲಿ ದೊರೆತ "ಪಟಾಕಿ ಪೆಟ್ಟಿಗೆ ಬಾಲುವಿನದ್ದೇ" ಎಂದು ಹೇಳುತ್ತ ಅಂದು ಕಿಟ್ಟನ ಕಡೆ ನಿಂತು ವಾದಿಸಿದ ವಕೀಲರ ಅಲ್ಲಿಗೆ ಬಂದಿದ್ದರು. ವಕೀಲರು ಅಂದು ನಡೆದ ನಿಜ ಸಂಗತಿಯೊಂದನ್ನು ಹೇಳತೊಡಗಿದರು. ಹೌದು. ಅಂದು ನಾನು ನನ್ನ ಕಕ್ಷಿಗಾರ ಕಿಟ್ಟನಿಂದ ಕೇಳಿದ ಕತೆ ಇದು.

"ಸ್ವಾಮಿ ನನ್ನ ಮಗ ಪಟಾಕಿಗಾಗಿ ಹಟ ಹಿಡಿದನು. ಅದನ್ನು ತಂದು ಅವನಿಗೆ ಕೊಡಲು ನನ್ನ ಕೈಯಲ್ಲಿ ಕಾಸಿರಲಿಲ್ಲ. ಬಾಲುವಿಗೆ ಬಾಳೆ ಹಣ್ಣನ್ನು ಕೊಟ್ಟು ಅವನಿಂದ ಅದನ್ನು ತೆಗೆದುಕೊಂಡೆ" ಅಂದ. ನಾನು ಕೂಡಲೆ ಕಿಟ್ಟನನ್ನು ಎಚ್ಚರಿಸಿದೆ. ಈ ಪಟಾಕಿಯ ಕತೆ ನೀನು ಕೋರ್ಟಿನಲ್ಲಿ ಹೇಳಿದೆಯಾದರೆ ನೀನು ಗಲ್ಲಕ್ಕೇರುವೆ. ಪಟಾಕಿಯ ಸುದ್ದಿ ಬಂದಾಗ ನನಗೆ ಅದರ ವಿಷಯ ಅರ್ಥವೇ ಆಗುವುದಿಲ್ಲ ಅನ್ನು ಎಂದು ಅವನಿಗೆ ಹೇಳಿಕೊಟ್ಟಿದ್ದೆ.

"ಏನು ವಕೀಲರೆ ಸುಳ್ಳು ಹೇಳಲು ಹೇಳಿ ಕೊಡುವುದು ವಕೀಲರ ಕಸಬೇನು."

"ನೀವು ಏನು ಹೇಳುತ್ತೀರಿ ಸೀತಮ್ಮನವರೇ ವಕೀಲರು ಸತ್ಯವನ್ನೂ ಆಡುತ್ತಾರೆ. ಸುಳ್ಳನ್ನೂ ಆಡುತ್ತಾರೆ. ಕ್ರಿಮಿನಲ್ ಅಪರಾಧಿಗಳು ತಮ್ಮ ಗುಟ್ಟನ್ನೆಲ್ಲ ವಕೀಲರಲ್ಲಿ ಹೇಳುತಾರೆ. ಅವನು ಅಪರಾಧಿ ಎಂದು ನಮ್ಮ ಮನಸಾಕ್ಷಿಗೆ ತೋರಿದರೂ ನಾವು ಅಪರಾಧಿಯು ಅಪರಾಧಿಯಲ್ಲವೆಂದು ಕೋರ್ಟಿನಲ್ಲೇಕೆ ವಾದಿಸುವೆವು? ನಮಗೆ ಜೀವನ ಸಾಗಬೇಕಲ್ಲ."

"ಇಲ್ಲಪ್ಪ ದೊಡ್ಡವರ ಮನೆಗಳಲ್ಲಿ ಬಡವರು ಕೆಲಸಕ್ಕೆ ನಿಲ್ಲುವುದು ಒಂದು ದೊಡ್ಡ ಜವಾಬುದಾರಿಯ ಕೆಲಸ. ನಾನು ಆಗಾಗ ಹೇಳುತ್ತೇನಲ್ಲಮ್ಮ ಮಕ್ಕಳ ಮೈಮೇಲೆ ಆಭರಣಗಳನ್ನು ಹಾಕಿ ಮಾರ್ಗಕ್ಕೆ ಬಿಡಬಾರದೆಂದು–ಅದೂ ಇಂತಹ ದಿನಗಳಲ್ಲಿ! ಹೌದು ದೊಡ್ಡವರಲ್ಲಿ ದೀನರು ಕಾಲಿಡಲೇಬಾರದು. ಕಾರಣ ಏನಾದರೂ ಕಾಣೆಯಾದರೆ ಬಡವರ ಮೇಲೆ ಸಂಶಯ ಏಳುವುದು ಸಹಜ. ಬಡವರಾದವರು ಇಷ್ಟೆಲ್ಲ ತಿಳಿದೂ ದೊಡ್ಡವರಲ್ಲಿ ಬರಬೇಕಾಗಿದೆ ದುಡಿಯಬೇಕಾಗಿದೆ. ದುಡಿಯದಿದ್ದರೆ ಅವರು ತಮ್ಮ ಬಾಳನ್ನು ಹೇಗೆ ನೂಕಬೇಕು!" ಎಂದಳು ಚಾಕರಿಯವಳೊಬ್ಬಳು.

ಸ್ವದೇಶಾಭಿಮಾನಿ

ತಾರೀಕು 14-11-1947

ಸೋವಿಯಟ್ ರಷ್ಯದ ಮೂವತ್ತನೆಯ ವಾರ್ಷಿಕೋತ್ಸವ

ನವಂಬರ ತಾರೀಕು 7ನೇ ದಿನ ಸೋವಿಯಟ್ ರಷ್ಯದ 30ನೇ ವಾರ್ಷಿಕೋತ್ಸವವನ್ನು ಇಡೀ ಜಗತ್ತಿನಲ್ಲಿ ಎಲ್ಲೆಲ್ಲ ಕಮ್ಯೂನಿಸ್ಟ್ ಪಂಗಡಗಳಿವೆಯೊ ಅಲ್ಲೆಲ್ಲ ಆಚರಿಸಲಾಯಿತು.

ರಷ್ಯದ ಪ್ರಸಿದ್ಧ ಮುಂದಾಳು ಮೊಲೊಟೊವ್ ಇವರು ಈ ಸಂದರ್ಭದಲ್ಲಿ ಮಾತನಾಡುತ್ತ ಯುದ್ಧಾನಂತರ ಈಗ ಪುನಃ ರಷ್ಯ ಸಾಧಿಸಿರುವ ಆರ್ಥಿಕ ಹಾಗೂ ಇತರ ವಿಧಾಯಕ ಪ್ರಗತಿಯನ್ನು ವಿವರಿಸಿರುತ್ತಾರೆ. ರಷ್ಯ ಬಲಿಷ್ಠವಾಗುತ್ತಿದೆ ಪಾಶ್ಚಾತ್ಯ ಧಂಡವಲ ಶಾಹಿಗಳು ಮುರಿದು ಬೀಳಲು ಸಿದ್ಧವಾಗುತ್ತಿವೆಯೆಂದೂ ಎಟಮ್ ಬಾಂಬಿನ ಗುಟ್ಟು ಈಗ ಅಮೇರಿಕದ ಕೈಯಲ್ಲಿ ಮಾತ್ರ ಉಳಿದಿಲ್ಲವೆಂದೂ ಹೇಳಿದರು

ಎಟಮ್ ಬಾಂಬಿನ ಶಾಸ್ತ್ರೀಯ ರಹಸ್ಯ ರಷ್ಯ ಮಾತ್ರವೇಕೆ ಜಗತ್ತಿನ ಎಲ್ಲ ಪ್ರಸಿದ್ಧ ವಿಜ್ಞಾನಿಗಳಿಗೂ ಈಗ ಗೊತ್ತಿರಬಹುದು ಆದರೆ ರಷ್ಯ ಈ ಬಾಂಬುಗಳನ್ನು ತಯಾರಿಸಲು ಸಮರ್ಥ ಇಲ್ಲವೆಂದು ಹೇಳುತ್ತ ಅಮೇರಿಕದ ಮುಂದಾಳುಗಳು ತಮ್ಮನ್ನು ತಾವು ಸಮಾಧಾನಪಡಿಸಿಕೊಳ್ಳುತ್ತಿದ್ದಾರೆ

ಈ ಮೂವತ್ತು ವರ್ಷಗಳಲ್ಲಿ ರಷ್ಯದವರು ಸಾಧಿಸಿದ ಪ್ರಗತಿ ನಿಜವಾಗಿಯೂ ಅದ್ಭುತವಾದದ್ದೆಂಬ ಬಗ್ಗೆ ಯಾವ ಸಂಶಯವೂ ಇಲ್ಲ ಅಮೇರಿಕೆದ ಪತ್ರಿಕೆಗಳು ಇಂದಿಗೂ ರಷ್ಯದಲ್ಲಿಯ ಪರಿಸ್ಥಿತಿಯನ್ನು ನಿಂದಿಸಿ ಬರೆಯುತ್ತಿವೆ ಆದರೆ ಇದರಲ್ಲಿ ಹೆಚ್ಚಿನ ಅಂಶ ಪ್ರಚಾರ ಮಾತ್ರವಿರಬೇಕೆಂದು ಓದುವಾಗಲೇ ಭಾಸವಾಗುತ್ತದೆ ಅದೇ ರೀತಿ ರಷ್ಯದವರು ವರ್ಣಿಸುವ ಸುಂದರ ಚಿತ್ರಗಳಲ್ಲಿಯೂ ಪ್ರಚಾರದ ಅಂಶವು ಸೇರಿಕೊಳ್ಳದೆ ಇಲ್ಲವೆಂಬುದೂ ಸ್ಪಷ್ಟವಿರುತ್ತದೆ ಇದ್ದುದನ್ನು ಇದ್ದಂತೆ ಹೇಳುವ ಅಭ್ಯಾಸವು ಇತ್ತಂಡದವರಿಗೂ ಇಲ್ಲವೆಂಬುದರಿಂದ ನಿಜಸ್ಥಿತಿಯನ್ನು ಊಹಿಸಿ ಮಾತ್ರ ತಿಳಿದುಕೊಳ್ಳಬೇಕಾಗುತ್ತದೆ ಅಮೇರಿಕದ ಶ್ರೀಮಂತಿಕೆ ರಷ್ಯ ಇನ್ನೂ ಸಾಧಿಸಿಲ್ಲವೆಂಬ ಮಾತು ನಿಜವಿರಬೇಕು ಪ್ರಾಯಶಃ ಅಮೇರಿಕನ್ ಕೆಲಸಗಾರರ ಜೀವನ ರೀತಿಯ ಪ್ರಮಾಣ ಇಂದಿಗೂ ಕೆಲಸಗಾರರ ರಾಜ್ಯದಲ್ಲಿಗಿಂತ ಮೇಲ್ಪಟ್ಟದಲ್ಲಿದೆಯೆಂಬ ಮಾತಿನಲ್ಲಿಯೂ ತುಂಬಾ ಸತ್ಯಾಂಶವಿರಬೇಕು. ಇದು ನಿಜವಿದ್ದರೂ ಕೂಡಾ ರಷ್ಯದ 30 ವರ್ಷಗಳ ಕೆಳಗಿನ ಪರಿಸ್ಥಿತಿಯನ್ನು ಇಂದಿನ ಪರಿಸ್ಥಿತಿಯನ್ನೂ ಹೋಲಿಸಿದರೆ ಸೋವಿಯಟ್ ರಷ್ಯ ಸಾಧಿಸಿದ ಪ್ರಗತಿ ಚೆನ್ನಾಗಿ ವೇದ್ಯವಾಗುತ್ತದೆಂಬುದನ್ನು ಯಾರೂ ಅಲ್ಲಗಳೆಯಲಾರರು.

ಅಮೇರಿಕವು ಇಂದು ತನ್ನ ಒಳಗಿನ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಇರುವ ಕಷ್ಟಗಳನ್ನು ಜನರು ಮರೆಯುವಂತೆ ಮಾಡಲು ಜಗತ್ತಿನ ಎಲ್ಲೆಡೆಗಳಲ್ಲಿಯೂ ತನ್ನ ಸಾಮ್ರಾಜ್ಯಶಾಹಿಯನ್ನು ಬೆಳೆಸಲು ಯತ್ನಿಸುತ್ತಿದೆಯೆಂದು ಮೊಲೊಟೊವ್ ಇವರು ಹೇಳಿದರು. ಈ ಸಾಮ್ರಾಜ್ಯಶಾಹಿಯನ್ನು ಮುರಿಸಲು ಜಗತ್ತಿನ ಪ್ರಗತಿಪರ ಪಂಗಡಗಳೆಲ್ಲ ಒಟ್ಟು ಸೇರಬೇಕೆಂದೂ ಸಾರಿದರು.

ಯುದ್ಧ ಕಾಲದಲ್ಲಿ ರಷ್ಯ ಅಮೇರಿಕ ಮೊದಲಾದವರೆಲ್ಲ ಒಟ್ಟು ಸೇರಿ ಕೆಲಸ ಮಾಡಬೇಕಾದ ಪ್ರಸಂಗ ಬಂದಾಗ ಸೋವಿಯಟ್ ರಷ್ಯದವರು ತಮ್ಮ ಅಂತರ್‌ರಾಷ್ಟ್ರೀಯ ಚಳವಳವನ್ನು ಬದಿಗಿರಿಸಿದರು. ಅದನ್ನು ಈಗ ಪುನಃ ಕೈಕೊಂಡಿರುತ್ತಾರೆಂಬುದು ಸ್ಪಷ್ಟವಾಗುತ್ತಿದೆ

ಅಂತೂ ಈಗ ಜಗತ್ತಿನ ರಾಷ್ಟ್ರಗಳು ರಷ್ಯ ಮತ್ತು ಅಮೇರಿಕಗಳನ್ನು ಮುಂದಾಳಾಗಿಟ್ಟುಕೊಂಡು ಎರಡು ಪಂಗಡಗಳಾಗಿ ವಿಭಾಗಿಸಲ್ಪಡುತ್ತಿವೆ. ಇತ್ತಂಡಗಳೂ ಎಟಮ್ ಬಾಂಬಿನ ಮೂರನೇ ಮಹಾಯುದ್ಧಕ್ಕೆ ಸಿದ್ಧವಾಗುತ್ತಿವೆ ಎಂಬ ಇಷ್ಟು ವಿಚಾರ ಈಗ ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತ ಇದೆ

ಸ್ವತಂತ್ರ ಹಿಂದುಸ್ಥಾನವು ಇವುಗಳಲ್ಲಿ ಯಾವ ಪಂಗಡವನ್ನು ಕಟ್ಟಿಕೊಳ್ಳಬೇಕೆಂಬುದು ನಾವಿಂದು ವಿಚಾರಿಸಬೇಕಾದ ಮುಖ್ಯ ಪ್ರಶ್ನೆ ಇರುತ್ತದೆ

ಸ್ವತಂತ್ರ ಹಿಂದುಸ್ಥಾನವು ರಷ್ಯ ಅಥವಾ ಅಮೇರಿಕಗಳ ಬೆನ್ನು ಹಿಡಿದು ಹೋಗಿ ಎರಡು ಪಂಗಡಗಳಲ್ಲಿ ಒಂದನ್ನು ಕಟ್ಟಿಕೊಳ್ಳಬೇಕಾದಂಥ ಸಣ್ಣ ಜನಾಂಗವಲ್ಲ ಈಗ ಎಚ್ಚರ ಹೊಂದುತ್ತಿರುವ ಏಸಿಯಾ ಖಂಡದ ರಾಷ್ಟ್ರಗಳ ಮುಂದಾಳ್ತನವನ್ನು ವಹಿಸತಕ್ಕ ಕೆಲಸವು ಹಿಂದುಸ್ಥಾನದ ಪಾಲಿಗೆ ಸಹಜವಾಗಿ ಪ್ರಾಪ್ತವಾಗಿರುತ್ತದೆ ಈ ಮುಂದಾಳ್ತನವನ್ನು ಸರಿಯಾಗಿ ನಡೆಸಿ ಪಾಶ್ಚಾತ್ಯ ರಾಷ್ಟ್ರಗಳು ಮೂರನೆ ಎಟಮ್ ಬಾಂಬಿನ ಯುದ್ಧ ಕಟ್ಟಿಕೊಳ್ಳದಂತೆ ಸಾಧಿಸಿ ಜಗತ್ತಿನ ಶಾಂತಿಯನ್ನು ಕಾಪಾಡಿ ಎಲ್ಲ ಜನಾಂಗಗಳೂ ಪರಸ್ಪರ ಸಹಕರಿಸಿ ಮಾನವ ಪ್ರಗತಿಯನ್ನು ಶಾಂತ ರೀತಿಯಲ್ಲಿ ಸಾಧಿಸುವಂತೆ ಯತ್ನಿಸುವುದು ಹಿಂದುಸ್ಥಾನದ ಸ್ಪಷ್ಟವಾದ ಧ್ಯೇಯವಿರುತ್ತದೆ

ಏಸಿಯದ ಪ್ರಾದೇಶಿಕ ಮಜೂರ ಪರಿಷತ್ತಿನ ಪ್ರತಿನಿಧಿಗಳಿಗೆ ಇತ್ತ ಒಂದು ಸತ್ಕಾರ ಕೂಟದಲ್ಲಿ ಮಾತನಾಡುತ್ತ ನಮ್ಮ ಮುಂದಾಳು ಪಂಡಿತ ಜವಾಹರಲಾಲರು ಹಿಂದುಸ್ಥಾನದ ಈ ಧ್ಯೇಯವನ್ನು ಸರಿಯಾಗಿ ಒತ್ತಿ ಹೇಳಿದರು

ಹಿಂದುಸ್ಥಾನವು ಈಗ ಪುನಃ ಜೀವಂತ ರಾಷ್ಟ್ರವಾಗಿದೆ ಇತ್ತೀಚೆಗೆ ನಡೆದಿರುವ ಅಂತ:ಕಲಹಗಳು ಇದು ಜೀವಂತ ರಾಷ್ಟ್ರವೆಂಬುದನ್ನೇ ತೋರಿಸುತ್ತಿವೆ ಈ ಪರಿಸ್ಥಿತಿ ಸದ್ಯದಲ್ಲಿ ಸುಧಾರಿಸಲ್ಪಟ್ಟು ಇಲ್ಲಿಯ ವಿಧಾಯಕ ಕಾರ್ಯಗಳು ತೀವ್ರ ಗತಿಯಿಂದ ಮುಂದೆ ಸಾಗಲಿವೆಯೆಂದು ಹಿಂದುಸ್ಥಾನದ ಈಗಿನ ಸ್ಥಿತಿಯನ್ನು ಪಂಡಿತ ಜವಾಹರಲಾಲರು ಚಿತ್ರಿಸಿದರು

ಮುಂದೆ ಏಶಿಯದ ಜನಾಂಗಗಳು ಎದ್ದು ನಿಲ್ಲುತ್ತಿವೆಯೆಂದೂ ನಾವು ಪರಸ್ಪರ ಸಹಕರಿಸಿ ಜೊತೆಯಾಗಿ ಮುಂದರಿದರೆ ಪಾಶ್ಚಾತ್ಯ ರಾಷ್ಟ್ರಗಳಿಗೆ ನಾವು ಕಲಿಸತಕ್ಕ ಹಲವು ಪಾಠಗಳಿವೆಯೆಂದೂ ಹೇಳಿದರು ಪಾಶ್ಚಾತ್ಯರಿಂದ ನಾವು ಕಲಿಯತಕ್ಕ ಹಲವು ಅಂಶಗಳಿವೆಯೆಂದೂ ಹೇಳಿದರು ಅಂತೂ ಇನ್ನು ಮುಂದೆ ಪಾಶ್ಚಾತ್ಯರು ಏಶಿಯಾವನ್ನು ಮರೆತು ಬಿಟ್ಟು ತಿರಸ್ಕಾರದಿಂದ ವರ್ತಿಸುವ ದಿನಗಳು ಕಳೆದು ಹೋಗಿವೆಯೆಂಬುದನ್ನು ಒತ್ತಿ ಹೇಳಿದರು.

ಸೋವಿಯಟ್ ರಷ್ಯದ 30ನೇ ವಾರ್ಷಿಕೋತ್ಸವದ ಈ ಸಂದರ್ಭದಲ್ಲಿ ಹಿಂದುಸ್ಥಾನದಲ್ಲಿಯ ಕಮ್ಯೂನಿಸ್ಟರು ಈ ವಿಚಾರಗಳನ್ನು ಚೆನ್ನಾಗಿ ತಿಳಿದುಕೊಳ್ಳುವುದು ಅಗತ್ಯವಿರುತ್ತದೆ ಇಲ್ಲಿಯ ಕಮ್ಯೂನಿಸ್ಟ್ ಪಂಗಡದ ಧ್ಯೇಯ ಇಲ್ಲಿಯ ಕೆಲಸಗಾರರ ಶ್ರೇಯಸ್ಸನ್ನು ಸಾಧಿಸುವುದಿದ್ದರೆ ಅದಕ್ಕೆ ಎಲ್ಲರ ಸಹಾನುಭೂತಿಯೂ ಇರುತ್ತದೆ ಸೋವಿಯಟ್ ರಷ್ಯದ ಮುಂದಾಳ್ತನ ಕಟ್ಟಿಕೊಳ್ಳುವಂತೆ ಈ ರಾಜ್ಯದಲ್ಲಿ ಪ್ರಚಾರ ಮಾಡುವ ಉದ್ದೇಶವಿದ್ದರೆ ಅದು ಆಕ್ಷೇಪಣೀಯವಿದ್ದು ಹಿಂದುಸ್ಥಾನದ ದ್ರೋಹವಿರುವುದರಿಂದ ಅದನ್ನು ಯಾರೂ ಸಹಿಸುವಂತಿಲ್ಲವೆಂಬುದನ್ನು ನಮ್ಮ ಕಮ್ಯೂನಿಸ್ಟರು ಚೆನ್ನಾಗಿ ತಿಳಿದುಕೊಳ್ಳಬೇಕು

ಸೋವಿಯಟ್ ರಷ್ಯದೊಡನೆ ಹಿಂದುಸ್ಥಾನವು ಮೈತ್ರಿಯಲ್ಲಿಯೇ ವರ್ತಿಸುವುದೆಂಬ ಬಗ್ಗೆ ಸಂಶಯ ಬೇಡ ಅದೇ ರೀತಿ ಅಮೇರಿಕದೊಡನೆಯೂ ಹಿಂದುಸ್ಥಾನವು ಮೈತ್ರಿಯಲ್ಲಿಯೇ ವರ್ತಿಸುವುದು ನಮಗೆ ಪಾಶ್ಚಾತ್ಯರಲ್ಲಿಯ ಇತ್ತಂಡಗಳೊಡನೆಯೂ ವಿರೋಧ ಕಟ್ಟಿಕೊಳ್ಳಬೇಕಾದ ಆವಶ್ಯಕತೆ ಇರುವುದಿಲ್ಲ ಇತ್ತಂಡದವರೊಡನೆಯೂ ಸ್ನೇಹದಿಂದ ವರ್ತಿಸುವುದರಿಂದ ನಮಗೆ ಪ್ರಯೋಜನವುಂಟು ಮಾತ್ರವಲ್ಲ ಇದರಿಂದ ಮುಂದೆ ಜಗತ್ತಿನ ಕಲ್ಯಾಣವೇ ಸಾಧಿಸಲ್ಪಡಲಿದೆ ಎಂಬುದೇ ನಮ್ಮ ವಿಶ್ವಾಸವಿರುತ್ತದೆ.

ಟೀಕೆ-ಟಿಪ್ಪಣಿಗಳು

ಪಾಕಿಸ್ತಾನದ ವಿಚಾರ

ಜುನಾಗಡವು ಶರಣು ಬಂದಿತು. ಕಾಶ್ಮೀರದಲ್ಲಿ ದಂಡೆತ್ತಿ ಬಂದವರನ್ನು ಬಾರಾಮೂಲಾದಿಂದ ಹಿಂದೆ ಓಡಿಸಲಾಯಿತು. ಇವು ಈಗ ತಾನೆ ಪ್ರಕಟವಾಗಿರುವ ವಾರ್ತೆಗಳು ಗಡಿನಾಡಿನಲ್ಲಿ ಆಜಾದ್ ಪಠಾನಿಸ್ಥಾನ ಸರಕಾರವೊಂದು ಸ್ಥಾಪಿತವಾಗಿದೆಯೆಂದೂ ಕೇಳಿ ಬರುತ್ತದೆ ಅಂತೂ ಕ್ವಾದೇ ಆಜಾಮ್ ಜಿನ್ನಾರವರಿಗೂ ಪಾಕಿಸ್ಥಾನದ ಮುಖ್ಯ ಮಂತ್ರಿ ಲಿಯಾಖತ್ ಅಲ್ಲೀಖಾನರಿಗೂ ಈಗ ನಿದ್ರೆ ಸರಿ ಬರುತ್ತಾ ಇಲ್ಲವೆಂಬುದು ಅವರು ಆಗಾಗ ಕೊಡುತ್ತಿರುವ ಹೇಳಿಕೆಗಳಿಂದ ಸ್ಪಷ್ಟವಾಗುತ್ತಿದೆ

ಪಾಕಿಸ್ತಾನದ ಮುಂದಾಳುಗಳು ತಮ್ಮ ಗಡಿಯನ್ನು ವಿಸ್ತರಿಸುವ ಹವ್ಯಾಸಕ್ಕೆ ಹೋಗುವ ಬದಲು ತಮ್ಮ ಕೈಗೆ ಬಂದಿರುವ ಪ್ರದೇಶಗಳಲ್ಲಿ ಪ್ರಜೆಗಳ ಹಿತವನ್ನು ಸಾಧಿಸುವ ಕಾರ್ಯಕ್ಕೆ ಕೈ ಹಚ್ಚುವುದು ನಿಜವಾಗಿಯೂ ಶ್ರೇಯಸ್ಕರವಾದ ದಾರಿಯಿರುತ್ತದೆ

ಜುನಾಗಡ ಹಾಗೂ ಕಾಶ್ಮೀರಗಳ ವಿದ್ಯಮಾನಗಳನ್ನು ನೋಡಿಯಾದರೂ ಹೈದರಾಬಾದಿನ ಮುಸ್ಲೀಮರು ಪಾಠ ಕಲಿತರೆ ಉತ್ತಮವಿತ್ತು ಹಿಂದೂಸ್ಥಾನ ಸರಕಾರವು ಸಾಕಷ್ಟು ಬಲಿಷ್ಠವಾಗಿದೆಯೆಂಬುದು ಈಗ ಕಂಡುಬಂದಿದೆ ಮಾತ್ರವಲ್ಲ ಅಗತ್ಯಕಂಡಲ್ಲಿ ತನ್ನ ಶಕ್ತಿಯನ್ನುಪಯೋಗಿಸಲು ಅದು ಹಿಂದೆ ಮುಂದೆ ನೋಡುವುದಿಲ್ಲವೆಂಬುದನ್ನು ಕಾಣಬಹುದು. ಮಾತ್ರವಲ್ಲ ಹೈದರಾಬಾದಿನಲ್ಲಿ ಶೇಕಡಾ 80ಕ್ಕೆ ಮಿಕ್ಕಿ ಮುಸ್ಲಿಮೇತರ ಪ್ರಜಾ ಸಂಖ್ಯೆ ಇದೆ ಇಂಥ ಪರಿಸ್ಥಿತಿಯಲ್ಲಿ ಪುಂಡಾಟಿಕೆ ಆರಂಭ ಮಾಡಿದರೆ ಅದು ಖಂಡಿತವಾಗಿಯೂ ಯಶಸ್ವಿಯಾಗುವಂತಿಲ್ಲ ವ್ಯರ್ಥ ತೊಂದರೆಯನ್ನು ಕಟ್ಟಿಕೊಳ್ಳಬಹುದು. ಇದಕ್ಕೆ ಬದಲು ಹಿಂದೂಸ್ಥಾನ ಸರಕಾರದೊಡನೆ ನ್ಯಾಯವಾದ ರೀತಿ ಒಪ್ಪಂದ ಮಾಡಿಕೊಂಡು ಹೈದರಾಬಾದಿನ ಪ್ರಜೆಗಳ ಹಿತಕ್ಕಾಗಿ ದುಡಿಯುವ ಕಾರ್ಯಕ್ಕೆ ಕೈ ಹಚ್ಚುವುದೇ ಶ್ರೇಯಸ್ಕರವಾದ ದಾರಿಯಲ್ಲವೆ?

ಇದೇ ರೀತಿ ಹಿಂದೂಸ್ಥಾನದಲ್ಲಿಯ ಇತರ ಮುಸ್ಲೀಮ ಬಂಧುಗಳಾದರೂ ಕ್ವಾದೇ ಆಜಾಮ್ ಜಿನ್ನರವರ ಮುಂದಾಳ್ತನವನ್ನು ಮರೆತು ಬಿಡುವುದು ಶ್ರೇಯಸ್ಕರ. ಕ್ವಾದೇ ಆಜಾಮ ಜಿನ್ನರವರು ಈಗ ಹಿಂದೂಸ್ಥಾನದಲ್ಲಿಲ್ಲ ಅವರು ಬೇರೆ ಹೋಗಿ ಪಾಕಿಸ್ಥಾನದ ಗವರ್ನರ್ ಜನರಲ್ ಆಗಿದ್ದಾರೆ ಅವರು ಈಗ ಹಿಂದೂಸ್ಥಾನದಲ್ಲಿಯ ಮುಸ್ಲೀಮರ ಮುಂದಾಳ್ತನವನ್ನು ಬಿಟ್ಟುಕೊಟ್ಟಿದ್ದಾರೆ ಇಷ್ಟು ತಿಳಿದೂ ಇನ್ನೂ ಅವರ ಮುಂದಾಳ್ತನದ ಹವ್ಯಾಸವೇಕೆ ಕಟ್ಟಿಕೊಳ್ಳಬೇಕು?

ಹಿಂದೂಸ್ಥಾನದ ಮುಸ್ಲೀಮರನ್ನು ಒಂದೆಡೆಯಿಂದ ಮೌಲಾನಾ ಆಜಾದರೂ ಇನ್ನೊಂದೆಡೆ ಸುಹ್ರವರ್ದಿಯವರೂ ಒಟ್ಟು ಸೇರಿಸಿ ಮುಂದಿನ ಧೋರಣೆ ನಿಶ್ಚಯಿಸುವ ಯತ್ನಗಳಾಗುತ್ತವೆ ಇವುಗಳಲ್ಲಿ ಯಾವ ಪಂಗಡ ಬೇಕಿದ್ದರೂ ಅದನ್ನು ವಹಿಸಿ ಇಲ್ಲಿಯ ಮುಸ್ಲೀಮರು ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವ ಯತ್ನ ಕೈಕೊಂಡಲ್ಲಿ ಅವರಿಗೆ ಎಲ್ಲರ ಸಹಾನುಭೂತಿ ಸಹಕಾರಗಳು ಸಿಕ್ಕುತ್ತವೆ ಇದೇ ಶ್ರೇಯಸ್ಕರವಲ್ಲವೆ?

ದಕ್ಷಿಣ ಆಫ್ರಿಕದ ಹಿಂದೀಯರ ಪ್ರಶ್ನೆ

ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ಈ ಪ್ರಶ್ನೆ ಪುನಃ ಮುಂದೆ ಬಂದಿತು ಕಳೆದ ವರ್ಷ ಸಂಯುಕ್ತ ರಾಷ್ಟ್ರ ಸಭೆಯು ದಕ್ಷಿಣ ಆಫ್ರಿಕ ಸರಕಾರವು ಹಿಂದೀ ಸರಕಾರದೊಡನೆ ಈ ಕುರಿತು ಇತ್ಯರ್ಥಿಸಿ ಕೊಂಡು ಮುಂದಿನ ಸಭೆಗೆ ವರದಿಯೊಪ್ಪಿಸಬೇಕೆಂಬ ನಿರ್ಣಯವನ್ನು ಜನರಲ್ ಸ್ಮಟ್ಸರು ಮೂಲೆಗೊತ್ತಿ ವರ್ತಿಸಿದರು ಇದಕ್ಕಾಗಿ ಅವರ ಮೇಲೆ ಶಿಸ್ತು ಜಾರಿ ಮಾಡಬೇಕೆಂದು ಕೇಳುವ ಬದಲು ಹಿಂದೂಸ್ಥಾನದವರು ಪುನ ತಾಳ್ಮೆಯನ್ನು ವಹಿಸಿ ಮುಂದೆ ದಕ್ಷಿಣ ಆಫ್ರಿಕ ಹಾಗೂ ಹಿಂದೀ ಸರಕಾರಗಳು ಸಂಧಾನ ಪರಿಷತ್ತು ಜರಗಿಸಿ ಈ ಪ್ರಶ್ನೆಯ ತೀರ್ಮಾನ ಮಾಡಿಕೊಳ್ಳಬೇಕೆಂಬ ನಿರ್ಣಯವನ್ನು ಪುನ ಸಂಯುಕ್ತ ರಾಷ್ಟ್ರ ಸಭೆಯ ಮುಂದೆ ತಂದಿರುತ್ತಾರೆ ಜನರಲ್ ಸ್ಮಟ್ಸರು ಈ ಬಾರಿಯಾದರೂ ಸಂಯುಕ್ತ ರಾಷ್ಟ್ರ ಸಭೆಯ ನಿರ್ಣಯಕ್ಕೆ ಮನ್ನಣೆ ಕೊಡುವರೇ ಎಂಬುದು ಪ್ರಶ್ನೆ

ಮೊದಲ ಮಹಾಯುದ್ಧದ ಬಳಿಕ ಲೀಗ್ ಆಫ್ ನೇಶನ್ಸ್ ಎಂಬ ಸಂಸ್ಥೆ ಜಗತ್ತಿನ ಶಾಂತಿ ರಕ್ಷಣೆಗಾಗಿ ಸ್ಥಾಪಿಸಲ್ಪಟ್ಟಿತು ದೊಡ್ಡ ಶಕ್ತಿವಂತ ರಾಷ್ಟ್ರಗಳು ಇದನ್ನು ತಮ್ಮ ಸ್ವಾರ್ಥಕ್ಕೆ ಅನುಕೂಲವಾಗುವಾಗ ಮಾತ್ರ ಉಪಯೋಗಿಸಿಕೊಂಡವು ಸಂಸ್ಥೆಯನ್ನು ಬೆಳೆಸುವ ಯತ್ನ ಮಾಡಲಿಲ್ಲ ಪರಿಣಾಮ ಎರಡನೆ ಮಹಾಯುದ್ಧವಾಯಿತು

ಈಗಿನ ಈ ಸಂಯುಕ್ತ ರಾಷ್ಟ್ರಗಳ ಸಭೆಯನ್ನು ಕೂಡಾ ತಮಗೆ ಬೇಕಾದಾಗ ಮಾತ್ರ ಮನ್ನಿಸುವ ಧೋರಣೆ ಈ ಬಾರಿಯಾದರೂ ಬಿಡಬೇಕು ಜಗತ್ತಿನಲ್ಲಿ ಶಾಂತಿ ನೆಲಿಸಬೇಕಾದರೆ ಈ ಸಂಸ್ಥೆಯನ್ನು ಬಲಪಡಿಸಬೇಕು ಇದರ ಬಲವನ್ನು ಕುಗ್ಗಿಸಬಾರದೆಂದಿದ್ದರೆ ತಮಗೆ ಅನುಕೂಲ ಅಥವಾ ಪ್ರತಿಕೂಲ ಯಾವ ನಿರ್ಣಯವನ್ನಾದರೂ ಎಲ್ಲರೂ ಶಿಸ್ತಿನಿಂದ ಪಾಲಿಸಬೇಕು ಇಷ್ಟು ವಿಚಾರವನ್ನು ಜಗತ್ತಿನಲ್ಲಿ ಪ್ರಸಿದ್ಧ ರಾಜಕೀಯ ಮುತ್ಸದ್ದಿಗಳಲ್ಲಿ ಒಬ್ಬರೆನ್ನಿಸುವ ಜನರಲ್ ಸ್ಮಟ್ಸರವರು ತಿಳಿಯಲಾರರೆ?

ಹಿಂದೀ ಮತ್ತು ಕನ್ನಡ

ಈ ಬಾರಿಯ ನಾಡ ಹಬ್ಬದ ಸಂದರ್ಭದಲ್ಲಿ ಮಂಗಳೂರಲ್ಲಿ ಆಚರಿಸಿದ ವಿದ್ಯಾ ಸಂಸ್ಕೃತಿ ಸಪ್ತಾಹದ ವಿವಿಧ ಕಾರ್ಯಕ್ರಮಗಳಲ್ಲಿ ಒಂದು ಸಂಜೆ "ಹಿಂದೀ ಮತ್ತು ಕನ್ನಡ" ಎಂಬ ವಿಷಯದಲ್ಲಿ ಶ್ರೀ ಶೇಡಿಯಾಪು ಕೃಷ್ಣಭಟ್ಟರ ಉಪನ್ಯಾಸವಿದ್ದಿತು. ಹಿಂದೀ ಭಾಷೆ ಅಂತರ್ ಪ್ರಾಂತೀಯ ವ್ಯವಹಾರದ ರಾಷ್ಟ್ರ ಭಾಷೆ ಹಾಗೂ ಕನ್ನಡವು ನಮ್ಮ ಪ್ರಾಂತ್ಯದ ಭಾಷೆ ಎಂಬುದಾಗಿ ಶ್ರೀ ಕೃಷ್ಣ ಭಟ್ಟರು ಒಂದು ಗಂಟೆಯ ಕಾಲ ಸುರಸವಾಗಿ ಒಂದು ಉಪನ್ಯಾಸವಿತ್ತರು

ಹಿಂದೀ ರಾಷ್ಟ್ರೀಯ ವ್ಯವಹಾರದ ಭಾಷೆ ಮತ್ತು ಕನ್ನಡ ಪ್ರಾಂತಿಕ ಭಾಷೆಯೆಂಬ ಇವರ ಈ ತೀರ್ಮಾನವನ್ನು ಯಾರೂ ಎಲ್ಲಿಯೂ ಎಂದೂ ಅಲ್ಲಗಳೆದಿರುವುದನ್ನು ನಾವು ಕಂಡಿಲ್ಲ. ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ಎಲ್ಲಿಯೋ ಮೂಸೆ ಹೊಕ್ಕಿಸಲು ಪ್ರಯತ್ನ ಪಡುತ್ತಿದ್ದರೆಂದು ಅದೇ ಸಭೆಯಲ್ಲಿ ಶ್ರೀ ಎಸ್ ಮುಕುಂದ ರಾಯರು ಒಂದು ವಿಚಿತ್ರ ಮಾತನ್ನು ಹೇಳಿದರು ಇದೇನೆಂಬುದು ಸ್ಪಷ್ಟವಾಗಲಿಲ್ಲ ಅಂತೂ ಯಾವ ಹಿಂದೀ ಪ್ರಚಾರಕರಾದರೂ ಪ್ರಾಂತಿಕ ಭಾಷೆಯನ್ನು ದೂರಿದ್ದು ನಮ್ಮ ತಿಳುವಳಿಕೆಗೆ ಬಂದಿಲ್ಲ

ಹೀಗಾಗಿ ಶ್ರೀ ಕೃಷ್ಣ ಭಟ್ಟರ ಉಪನ್ಯಾಸದಲ್ಲಿಯ ಶೇಕಡ 99ರಷ್ಟು ಅಂಶ ಚರ್ಚಾಸ್ಪದವಿರುವ ವಿಷಯವೇ ಅಲ್ಲವೆಂದು ನಮಗನ್ನಿಸುತ್ತದೆ ಅಂದರೆ ಈ ಕುರಿತು ಅವರು ಉಪನ್ಯಾಸ ಮಾಡಿದ್ದೇ ವ್ಯರ್ಥವೆಂಬ ಅಭಿಪ್ರಾಯವಲ್ಲ ಚರ್ಚಾಸ್ಪದವಲ್ಲದ ದ್ದರೂ ಒಂದು ವಿಷಯವನ್ನು ಸ್ಪಷ್ಟವಾಗುವಂತೆ ವಿವೇಚಿಸುವುದು ವ್ಯರ್ಥವೆನ್ನುವಂತಿಲ್ಲ ಅವರು ಸಕಾರಣವಾಗಿ ಹಿಂದೀ ಮತ್ತು ಕನ್ನಡ ಇವುಗಳ ಸ್ಥಾನವನ್ನು ಚೆನ್ನಾಗಿ ವಿಮರ್ಶಿಸಿ ಸ್ಪಷ್ಟಗೊಳಿಸಿರುತ್ತಾರೆ

ಮೇಲೆ ಶೇಕಡಾ 99ರಷ್ಟು ಅಂಶವೆನ್ನುವಾಗ ಯಾವುದೋ ಒಂದು ಮಾತು ಚರ್ಚಾಸ್ಪದವೆನ್ನಬಹುದೆಂಬ ಅಭಿಪ್ರಾಯ ಕಂಡು ಬರುತ್ತಿದೆಯಷ್ಟೆ? ಇದು ಕೊಂಕಣಿ ಭಾಷೆ ಮಾತನಾಡುವವರಿಗೆ ಹಿಂದೀ ಭಾಷೆ ಶಿಕ್ಷಣ ಭಾಷೆಯಾಗಬೇಕೆಂಬ ಕೆಲವರ ವಾದವಿರುತ್ತದೆ ಈ ಪ್ರಶ್ನೆಯನ್ನು ಶ್ರೀ ಕೃಷ್ಣ ಭಟ್ಟರು ಚರ್ಚಿಸಿದ್ದಾರೆ ಇದರಲ್ಲಿ ಭಿನ್ನಾಭಿಪ್ರಾಯಗಳಿಗೆ ಎಡೆಯುಂಟೆಂಬುದರಿಂದ ಇದನ್ನು ಸ್ವಲ್ಪ ಮಟ್ಟಿಗೆ ವಿಚಾರಿಸುವುದು ಅಗತ್ಯವಿರುತ್ತದೆ

ಶ್ರೀ ಕಾಕಾ ಕಾಲೇಲಕರರು ಕೊಂಕಣಿ ಸ್ಥಾನವೆಂದು ಯಾವ ಪ್ರದೇಶವನ್ನು ಕುರಿತು ಹೇಳಿದರೋ ಆ ಪ್ರದೇಶಗಳಲ್ಲಿ ಕೊಂಕಣಿ ಭಾಷೆ ಆಡುವವರ ಸಂಖ್ಯೆ ತುಂಬಾ ಇರುತ್ತದೆ ಗೋವಾ ಮೊದಲಾದ ಪ್ರಾಂತಗಳಲ್ಲಿ ಸಂಪೂರ್ಣವಾಗಿ ಕೊಂಕಣಿ ಭಾಷೆಯನ್ನೇ ಎಲ್ಲರೂ ಆಡುತ್ತಾರೆ ನಮ್ಮ ಮಂಗಳೂರನ್ನೇ ತೆಗೆದುಕೊಂಡಲ್ಲಿ ಇಲ್ಲಿಯ ಕಥೊಲಿಕ ಕ್ರೈಸ್ತರೂ ಸಾರಸ್ವತರೂ ಕೊಂಕಣಿಯನ್ನೇ ಮಾತಾಡುವವರು ಹೀಗೆ ಕನ್ನಡದಿಂದ ಭಿನ್ನ ಮಾತೃ ಭಾಷೆಯುಳ್ಳ ಈ ಜನರಿಗೆ ಕನ್ನಡವನ್ನು ಶಿಕ್ಷಣ ಭಾಷೆಯಾಗಿ ಉಪಯೋಗಿಸುವುದಕ್ಕಿಂತ ಹಿಂದೀಯನ್ನೇ ಉಪಯೋಗಿಸಿದರೆ ಹೆಚ್ಚು ಅನುಕೂಲವೆಂಬ ಅಭಿಪ್ರಾಯವು ಹಲವರಲ್ಲಿದೆಯೆಂಬ ಮಾತು ನಿಜವಿರುತ್ತದೆ ಕೊಂಕಣಿ ಸ್ಥಾನ ಮಾಡಬಹುದೆಂದು ಸೂಚಿಸಿದ ಶ್ರೀ ಕಾಲೇಲಕರರೂ ಇಲ್ಲಿ ಹಿಂದೀಯನ್ನೇ ಶಿಕ್ಷಣ ಭಾಷೆ ಮಾಡಬಹುದೆಂದು ಸೂಚಿಸಿದ್ದಾರೆ

ಕೊಂಕಣಿ ಸ್ಥಾನ ಮಾಡಬಹುದೆಂಬ ಶ್ರೀ ಕಾಕಾ ಕಾಲೇಲಕರರ ಸೂಚನೆಯನ್ನು ಈ ಸಂದರ್ಭದಲ್ಲಿ ಸ್ವಲ್ಪ ವಿಚಾರಿಸಬಹುದು ಶ್ರೀ ಕೃಷ್ಣ ಭಟ್ಟರು ಇದರ ವಿವೇಚನೆ ಮಾಡುವಷ್ಟು ಕೂಡಾ ಇದರಲ್ಲಿ ಸ್ವಾರಸ್ಯವಿಲ್ಲವೆಂದು ಇದನ್ನು ತೇಲಿಸಿಯೇ ಬಿಟ್ಟರು ಭಾಷಾವಾರು ಪ್ರಾಂತ್ಯ ರಚನೆಯ ಮೂಲ ತತ್ವಗಳ ದೃಷ್ಟಿಯಿಂದ ಪರಿಶೋಧಿಸಿದರೆ ಶ್ರೀ ಕಾಕಾ ಕಾಲೇಲಕರರ ಸೂಚನೆ ಅಷ್ಟೊಂದು ಹಾಸ್ಯಾಸ್ಪದವೆನ್ನುವಂತಿಲ್ಲ ಕೊಂಕಣಿ ಮಾತನಾಡುವವರು ನಿಜವಾಗಿಯೂ ಒಂದು ಜನ ಇವರದೇ ಒಂದು ಪ್ರಾಂತ ನಿರ್ಮಾಣ ವ್ಯವಹಾರ್ಯವಾದಂದಾದರೆ ಏತಕ್ಕೆ ಸಾಧಿಸಬಾರದು?

ಕೊಂಕಣಿ ಸ್ಥಾನವೆಂಬ ಪ್ರದೇಶವು ಐತಿಹಾಸಿಕ ದೃಷ್ಟಿಯಿಂದ ಕನ್ನಡನಾಡಿರಬಹುದು ಕೊಂಕಣಿ ಮಾತನಾಡುವವರು ಮತ್ತೆ ಇಲ್ಲಿ ಒಂದು ನೆಲಸಿದವರಿರಬಹುದು ಆದರೆ ಪ್ರಾಂತ್ಯ ರಚನೆಯು ಇತಿಹಾಸವನ್ನೇ ಹೊಂದಿಕೊಂಡಿಲ್ಲ ಇತಿಹಾಸವನ್ನು ಹೊಂದಿಕೊಂಡಿದೆಯಾದರೆ ಶ್ರೀ ರಾಮಸ್ವಾಮಿ ನ್ಯಾಕರರ ದ್ರಾವಿಡ ಸ್ಥಾನವೇಕೆ ಬೇಡ? ಇಂದಿನ ಪರಿಸ್ಥಿತಿ ಮತ್ತು ಮುಂದಿನ ಅಭಿವೃದ್ಧಿಯ ದೃಷ್ಟಿಯೇ ಮುಖ್ಯ ವಿಚಾರ ಅಂದ ಮೇಲೆ ಇದು ಎಷ್ಟರ ಮಟ್ಟಿಗೆ ವ್ಯವಹಾರ್ಯವೆಂಬುದೇ ನಿಜವಾದ ಪ್ರಶ್ನೆ

ಇಷ್ಟೇ ಮುಖ್ಯವಾದ ಇನ್ನೊಂದು ಪ್ರಶ್ನೆಯೆಂದರೆ ಕೊಂಕಣಿ ಸ್ಥಾನವೆಂದು ನಿರ್ದೇಶಿಸಿದ ಪ್ರದೇಶದಲ್ಲಿ ಬಹುಸಂಖ್ಯಾಕ ಜನರು ಕೊಂಕಣಿ ಮಾತನ್ನೇ ಆಡುವವರೆ? ಎಂಬುದು ರತ್ನಾಗಿರಿ ಗೋವೆಗಳಲ್ಲಿ ಕೊಂಕಣಿಯನ್ನೇ ಆಡಬಹುದು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದಲ್ಲಿ ಈ ಪರಿಸ್ಥಿತಿ ಇದೆಯೇ? ಬಹುಸಂಖ್ಯಾಕರು ಬೇರೆ ಭಾಷೆ ಆಡುವವರಿದ್ದರೆ ಕೊಂಕಣಿ ಸ್ಥಾನವೆನುವುದಕ್ಕೆ ಸ್ವಾರಸ್ಯವಿದೆಯೆ? ಈ ಪ್ರಶ್ನೆಗಳನ್ನೆಲ್ಲ ಸ್ವಲ್ಪ ವಿವರವಾಗಿ ಚರ್ಚಿಸುವ ಆವಶ್ಯಕತೆ ಇದೆಯಾದರೂ ಅದು ನಮ್ಮ ಈ ಲೇಖನಕ್ಕೆ ಅಪ್ರಕೃತವೆಂಬುದರಿಂದ ಕೊಂಕಣಿ ಸ್ಥಾನದ ವಿಚಾರವನ್ನು ಇಲ್ಲಿಗೇನೆ ಬಿಟ್ಟು ಕೊಂಕಣಿ ಮಾತನಾಡುವವರಿಗೆ ಹಿಂದೀ ಶಿಕ್ಷಣ ಭಾಷೆಯಾಗಬೇಕೆಂಬ ವಿಚಾರ ಪರಿಶೀಲಿಸಬೇಕಾಗಿದೆ

ಶಿಕ್ಷಣ ಮಾಧ್ಯಮವು ಮಾತೃ ಭಾಷೆಯೇ ಇರಬೇಕೆಂಬ ತತ್ವವು ಈಗ ಸರ್ವಮಾನ್ಯವಾಗಿರುತ್ತದೆ ಕೊಂಕಣಿ ಮಾತನಾಡುವವರಿಗೆ ಕನ್ನಡವು ಮಾತೃ ಭಾಷೆಯಲ್ಲ ಅವರಿಗೆ ಕನ್ನಡಕ್ಕಿಂತ ಹಿಂದೀಯೇ ಸಮೀಪದ ಭಾಷೆ ಈ ಮಾತನ್ನು ಅಲ್ಲಗಳೆಯಲು ಶ್ರೀ ಕೃಷ್ಣ ಭಟ್ಟರು ಪ್ರಯತ್ನಿಸಿದ್ದು ಸರಿಯಾಗಿಲ್ಲ ಎರಡೂ ಆರ್ಯ ಭಾಷೆಗಳೆಂಬ ಬಾದರಾಯಣ ಸಂಬಂಧ ಮಾತ್ರವಿರುವುದಲ್ಲಾ ಹಿಂದೀ ಮತ್ತು ಕೊಂಕಣಿ ಭಾಷೆಗಳೊಳಗೆ ಕೊಂಕಣಿ ಭಾಷೆ ಮತ್ತು ಹಿಂದೀ ಭಾಷೆಗಳ ವ್ಯಾಕರಣದಲ್ಲಿ ಬಹಳ ಹೋಲಿಕೆ ಇದೆ ಮಾತ್ರವಲ್ಲ ಶಬ್ದ ಭಾಂಡಾರದಲ್ಲಿಯೂ ಬಹಳ-ಸಾಮಿಪ್ಯವಿರುತ್ತದೆ ಕೊಂಕಣಿ ಭಾಷೆ ಮಾತನಾಡುವವರು ಹಿಂದೀ ಕಲಿಯುವಷ್ಟು ಸುಲಭವಾಗಿ ಕನ್ನಡ ಅಥವಾ ತುಳು ಮಾತನಾಡುವವರಿಗೆ ಕಲಿಯಲು ಸಾಧ್ಯವಿಲ್ಲವೆಂಬುದನ್ನು ಶ್ರೀ ಕೃಷ್ಣ ಭಟ್ಟರು ಪ್ರತ್ಯಕ್ಷ ಪರಿಶೀಲನದಿಂದ ಬೇಕಿದ್ದರೆ ಕಾಣಬಹುದು. ಇದರಿಂದ ಕೊಂಕಣಿ ಮಾತಿನವರಿಗೆ ಕನ್ನಡಕ್ಕಿಂತ ಹಿಂದೀ ಸಮೀಪದ ಭಾಷೆಯೆಂಬ ಬಗ್ಗೆ ಸಂಶಯವಿಲ್ಲ ಇವರಿಗೆ ಕನ್ನಡವನ್ನು ಶಿಕ್ಷಣ ಭಾಷೆ ಮಾಡುವುದಕ್ಕಿಂತ ರಾಷ್ಟ್ರ ಭಾಷೆಯಾದ ಹಿಂದೀಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಏಕೆ ಮಾಡಬಾರದು? ಎಂಬುದು ಪ್ರಶ್ನೆ

ಕೊಂಕಣಿ ಮಾತನಾಡುವವರಿಗೆ ಕನ್ನಡವು ಇಲ್ಲಿ ಸಹಜವಾಗಿ ಬರುತ್ತದೆ ಸುತ್ತ ಕನ್ನಡ ಆಡುವ ಜನರಿದ್ದಾರೆ. ಕನ್ನಡವನ್ನೇ ಶಿಕ್ಷಣ ಭಾಷೆಯನ್ನಾಗಿ ಇಡುವುದರಿಂದ ಇವರಿಗೆ ನಿಜವಾದ ತೊಂದರೆ ಇಲ್ಲವೆಂದು ಶ್ರೀ ಕೃಷ್ಣ ಭಟ್ಟರು ಹೇಳುವ ಮಾತಿನಲ್ಲಿ ತುಂಬಾ ಸತ್ಯಾಂಶವಿರುತ್ತದೆ

ಕೊಂಕಣಿ ಆಡುವವರಿಗೆ ಹಿಂದೀಯೇ ಶಿಕ್ಷಣ ಭಾಷೆ ಆಗಬೇಕೆಂದು ವಾದಿಸುವವರು ತಂದೊಡ್ಡುವ ಇನ್ನೊಂದು ತರ್ಕವೆಂದರೆ ನಮ್ಮ ಯುವಕರು ಶಿಕ್ಷಣ ಮುಗಿದ ಬಳಿಕ ಬೊಂಬಾಯಿ ಮೊದಲಾದೆಡೆ ಹೋಗುವವರಿದ್ದಾರೆ ಅವರಿಗೆ ಕನ್ನಡಕ್ಕಿಂತ ಹಿಂದೀಯೇ ಪ್ರಧಾನವೆನ್ನುತ್ತಾರೆ ಇದು ಬೊಂಬಾಯಿ ಮೊದಲಾದ ಪರ ಪ್ರಾಂತ್ಯಗಳಿಗೆ ಹೋಗುವವರ ಮಟ್ಟಿಗೆ ನಿಜವಿರಬಹುದು ಕೊಂಕಣಿ ಆಡುವವರೆಲ್ಲರೂ ಪರ ಪ್ರಾಂತ್ಯಕ್ಕೆ ಹೋಗುವವರೆನ್ನುವಂತಿಲ್ಲವಷ್ಟೆ! ಮಾತ್ರವಲ್ಲ ಪರ ಪ್ರಾಂತ್ಯಕ್ಕೆ ಹೋಗುವವರು ರಾಷ್ಟ್ರ ಭಾಷೆಯಾಗಿ ಹಿಂದೀಯನ್ನು ಹೇಗೂ ಕಲಿಯಲಿಕ್ಕಿದೆಯೆಂಬುದರಿಂದ ಶಿಕ್ಷಣ ಭಾಷೆಯಲ್ಲಿ ಹಿಂದೀಯಾಗಬೇಕೆಂಬ ಬಗ್ಗೆ ಇದು ಸಮಂಜಸವಾದ ತರ್ಕವಾಗಲಾರದು

ಇದು ಕನ್ನಡ ಪ್ರಾಂತ್ಯವಿದ್ದು ಇಲ್ಲಿ ಶಿಕ್ಷಣ ಭಾಷೆ ಸಾಮಾನ್ಯವಾಗಿ ಕನ್ನಡವನ್ನೇ ಇಟ್ಟಲ್ಲಿ ಕಡಮೆ ಸಂಖ್ಯಾಕರಿದ್ದವರಿಗೆ ಅವರವರಿಗೆ ಬೇಕಾದ ಶಿಕ್ಷಣ ಮಾಧ್ಯಮವನ್ನು ಬದಲಾಯಿಸಿ ಕೊಡುವುದು ಅವ್ಯವಹಾರ್ಯವಲ್ಲವೆ? ಎಂಬುದು ಇನ್ನೊಂದು ಪ್ರಶ್ನೆ ಕೊಂಕಣಿಯನ್ನೇ ಶಿಕ್ಷಣ ಭಾಷೆ ಮಾಡಬೇಕೆಂದರೆ ಈ ಆಕ್ಷೇಪ ಹೇಳಬಹುದು ಹಿಂದೀ ಹೇಗೂ ಕಲಿಯತಕ್ಕ ಭಾಷೆ ಇದನ್ನು ಶಿಕ್ಷಣ ಮಾಧ್ಯಮವಾಗಿ ಮಾಡಲು ಅಡ್ಡಿಯೇನು? ಎಂದು ಕೇಳಬಹುದು

ಅಂತೂ ಕೊಂಕಣಿ ಆಡುವವರಿಗೆ ಹಿಂದೀ ಶಿಕ್ಷಣ ಭಾಷೆಯಾಗಬೇಕೆಂಬ ಸೂಚನೆಯು ಮಟ್ಟಿಗೆ ಅನುಕೂಲ ಮತ್ತು ಪ್ರತಿಕೂಲ ಎರಡು ಬಗೆಯ ಕಾರಣಗಳೂ ಸಾಕಷ್ಟಿವೆಯೆಂಬುದರಿಂದ ಇದು ಒಂದು ಚರ್ಚೆಗೆ ಆಸ್ಪದವಿರುವ ವಿಷಯವೆಂದು ತೋರಿಸುವುದಷ್ಟು ನಮ್ಮ ಇಲ್ಲಿಯ ಉದ್ದೇಶವಿರುತ್ತದೆ ಈ ಪ್ರಶ್ನೆಯ ಕುರಿತು ಇನ್ನು ಹೆಚ್ಚಿನ ವಿಚಾರ ಅಗತ್ಯವಿರುತ್ತದೆ ಸಂಬಂಧಪಟ್ಟವರು ಇದರ ಹೆಚ್ಚಿನ ಪರಿಶೀಲನ ಮಾಡಬೇಕೆಂದು ಕೋರುತ್ತೇವೆ

ಅಂಗಡಿ ಕೆಲಸಗಾರರ ಬಗ್ಗೆ ಕಾನೂನು

ಮದ್ರಾಸು ಶಾಸನ ಸಭೆಗಳಲ್ಲಿ ಮಂಜೂರಾಗಿರುವ ಈ ಕಾನೂನು ಅಂಗಡಿ ಮೊದಲಾದ ಸಂಸ್ಥೆಗಳಲ್ಲಿ ದುಡಿಯುವ ಕೆಲಸಗಾರರಿಗೆ ವರ್ಷದಲ್ಲಿ 36 ದಿನಗಳ ಸಂಬಳ ಸಮೇತ ರಜೆ ಇತ್ಯಾದಿ ಕೆಲವು ~~ಅನುಕೂಲತೆಗಳನ್ನು~~ ಒದಗಿಸುತ್ತಿದೆ

ಕಾರ್ಖಾನೆಗಳಲ್ಲಿಯ ಮಜೂರರ ಬಗ್ಗೆ ಪ್ರತ್ಯೇಕ ಕಾನೂನು ಮೊದಲಿನಿಂದ ಜಾರಿಯಲ್ಲಿದೆ ಆದರೆ ನಮ್ಮ ಭಂಡಸಾಲೆ ಅಥವಾ ಅಂಗಡಿಗಳಲ್ಲಿ, ಹೋಟೇಲು ಇತ್ಯಾದಿ ಸಂಸ್ಥೆಗಳಲ್ಲಿ ದುಡಿಯುವ ನೌಕರರ ಬಗ್ಗೆ ಇದು ತನಕ ಯಾವ ಕಾನೂನು ಇರಲಿಲ್ಲ ಬೆಳಗ್ಗೆ ಹೋದರೆ ರಾತ್ರೆ ತನಕ ದುಡಿಯಬೇಕು ರಜೆ ಇತ್ಯಾದಿ ಯಾವ ವ್ಯವಸ್ಥೆಯೂ ಇಲ್ಲ ಈ ಪರಿಸ್ಥಿತಿ ಸುಧಾರಿಸುವುದು ಈ ಕಾನೂನಿನ ಉದ್ದೇಶ

~~— ಅಂಗಡಿಯ ಮಾಲೀಕರಿಗೆ ಸ್ವಲ್ಪ ತೊಂ~~ದರೆಯೆಂದು ತೋರಿದರೂ ನಿಜವಾಗಿಯೂ ಕೆಲಸಗಾರರನ್ನು ಒಳ್ಳೆಯ ರೀತಿಯಿಂದ ನಡೆಸುವುದು ಅಂಗಡಿಯ ಹಿತ ದೃಷ್ಟಿಯಿಂದಲೂ ಅಗತ್ಯವೇ ಇರುತ್ತದೆಂಬುದನ್ನು ಸ್ವಲ್ಪ ವಿಚಾರಿಸಿದರೆ ಇವರಿಗೂ ಮನದಟ್ಟಾಗದೆ ಇರದು

ಕೆಲಸಗಾರರಿಗೆ ಒದಗಿಸಬೇಕಾದ ಎಲ್ಲ ಹಕ್ಕುಗಳೂ ಈ ಕಾನೂನಿನಲ್ಲಿಲ್ಲವೆಂಬ ಮಾತೂ ನಿಜವಿರುತ್ತದೆ ಆದರೆ ಒಮ್ಮೆ ಕಾನೂನು ಆಯಿತೆಂದ ಬಳಿಕ ಇದರಲ್ಲಿ ಮುಂದೆ ಬೇಕಾದ ಸುಧಾರಣೆಗಳನ್ನು ಆಗಿಂದಾಗ ಸೇರಿಸಲು ಅನುಕೂಲವಾಗುತ್ತದೆಂಬುದನ್ನು ಎಣಿಸಿ ಎಲ್ಲ ಕೆಲಸಗಾರರೂ ಈ ಕಾನೂನನ್ನು ಸ್ವಾಗತೀಕರಿಸಬೇಕಾಗಿಯದೆ

ಮಾತ್ರವಲ್ಲ ಮುಂದೆ ಅಂಗಡಿ ಮಾಲಿಕರೊಡನೆ ಜಗಳಾಡಿಯೇ ತಮ್ಮ ಪ್ರಗತಿಯನ್ನು ಸಾಧಿಸಬಹುದೆಂಬ ಭಾವನೆಯನ್ನು ಮಾತ್ರ ಕಟ್ಟಿಕೊಳ್ಳಲಾಗದು ಸಹಕರಿಸಿ ವರ್ತಿಸುವುದರಿಂದಲೇ ಇತ್ತಂಡದವರಿಗೂ ಶ್ರೇಯಸ್ಕರವೆಂಬುದನ್ನು ಮನಗಾಣಬೇಕು ಮುಷ್ಕರ ಮೊದಲಾದ ಬೇಡದ ಕೆಲಸಗಳಿಗೆ ಹೋಗದೆ ತಮ್ಮ ಹಕ್ಕುಗಳನ್ನು ಹೆಚ್ಚಿಸಲು ಶಾಂತ ರೀತಿಯ ದಾರಿಗಳು ಎಷ್ಟೋ ಇವೆ

ಇಂದಿನ ಸರಕಾರವಾದರೂ ಕೆಲಸಗಾರರ ಮೇಲ್ಮೆಯನ್ನು ಮರೆಯುವಂತಿಲ್ಲವೆಂಬ ನಂಬಿಗೆಯನ್ನಿಟ್ಟುಕೊಳ್ಳುವುದು ಮುಖ್ಯ ವಿಚಾರ ಯಾಕೆಂದರೆ ಈಗಿನ ಮಂತ್ರಿಮಂಡಲವಾಗಲಿ ಇನ್ನಾವ ಮಂತ್ರಿಮಂಡಲವಾಗಲಿ ಮುಂದೆ ಎಲ್ಲಾ ಪ್ರಾಯಸ್ಥರ ಮತದಾನದಿಂದ ಅಧಿಕಾರಕ್ಕೆ ಬರುವ ಪರಿಸ್ಥಿತಿ ಸದ್ಯದಲ್ಲೆ ಬರುತ್ತಿದೆಯೆಂಬುದರಿಂದ ಸಾಮಾನ್ಯ ಜನರ ಹಿತದ ಕಡೆಗೆ ಇವರು ಲಕ್ಷ್ಯ ಕೊಡಲೇ ಬೇಕಾಗುತ್ತದೆ

ಪ್ರಜೆಗಳ ಹಕ್ಕಿನ ರಾಜ್ಯ ಪದ್ಧತಿ ಜಾರಿಗೆ ಬರುವಾಗ ಮುಷ್ಕರ ಇತ್ಯಾದಿ ಕಾರ್ಯಕ್ರಮಗಳ ಆವಶ್ಯಕತೆ ನಿಜವಾಗಿಯೂ ಇರುವುದಿಲ್ಲವೆಂಬುದನ್ನು ಎಲ್ಲಾ ಕೆಲಸಗಾರರೂ ತಿಳಿಯಬೇಕಾಗಿದೆ

ಮಂಗಳೂರವರಿಗೆ ಗಣ್ಯ ಹುದ್ದೆ

ಮಂಗಳೂರಿನ ಶ್ರೀ ಗೋಪಾಲಕೃಷ್ಣ ಕಾಮ~~ತ್ ಬಿ ಎಸ್‌ಸಿ (ಆನರ್ಸ್) ಅವರು ಇದೇ~~ ನವಂಬರ ೩ನೇ ತಾರೀಕಿನಿಂದ ಹೊಸದಿಲ್ಲಿಯಲ್ಲಿ ಇಂಡಿಯಾ ಸರಕಾರದ "ಫ್ಯಾನೆನ್ಸ್ ಮಿನಿಸ್ಟ್ರಿ" (ಡಿಫೆನ್ಸ್)ಗೆ ಅಸಿಸ್ಟೆಂಟ್ ಫ್ಯಾನೆನ್ಸಿಯಲ್ ಎಡ್ವೈಜರರಾಗಿ ನೇಮಿಸಲ್ಪಟ್ಟಿದ್ದಾರೆಂದು ತಿಳಿಸಲು ತುಂಬ ಸಂತೋಷ ಈ ಸಂದರ್ಭದಲ್ಲಿ ಮಿಲಿಟರಿ ಎಕೌಂಟ್ಸ್ ಶಾಖೆಯ ೫ ಮಂದಿ ಆಫೀಸರರಲ್ಲಿ ಆರಿಸಲ್ಪಟ್ಟ ಇಬ್ಬರಲ್ಲಿ ಇವರೊಬ್ಬರು. ಮಿಲಿಟರಿ ಎಕೌಂಟ್ ಶಾಖೆಯ ಇತಿಹಾಸದಲ್ಲಿ "ಹಣಕಾಸಿನ ಮಂತ್ರಿಮಂಡಲ" (ಡಿಫೆನ್ಸ್)ದ ಈ ಹುದ್ದೆಗೆ ಕೇವಲ ೩೦ ವರ್ಷದವರನ್ನು ನೇಮಿಸಿದ್ದು ಇದೇ ಪ್ರಥಮ ಬಾರಿ. ಇವರು ಇಲ್ಲಿನ ಶ್ರೀ ವಿ. ಡಿ. ಕಾಮತ್ ಬಿ. ಎ. ಬಿ. ಬಿ. ಇವರ ಮಕ್ಕಳು.

ಸಾಮಾಜಿಕ ವಾರ್ತಾವಳಿ

ಪ್ರಣಯ ವಿವಾಹಗಳು ಬಹುಕಾಲ ಬಾಳವು

ಕೇವಲ ಶಾರೀರಿಕ ಆಕರ್ಷಣೆಯು ಸಾಲದು

ಓರ್ವ ಮತ ಸಿದ್ಧಾಂತಿಯ ವಿವರಣೆ

ಅಮೇರಿಕದ ನ್ಯೂಕೆಸಲ್ ಪ್ರಾಂತ್ಯದ ರೆವರೆಂಡ್ ರೊಯ್‌ಸ್ಟನ್ ಯೋರ್ಕರು ಕೆಲವು ವರ್ಷಗಳ ಹಿಂದೆ ತಾನು "ಜಗತ್ತಿನ ಅತೀ ಮುದ್ದು ಹುಡುಗಿ" ಎಂದೆಣಿಸಿ ಪ್ರಣಯ ವ್ಯವಹಾರದಿಂದ ವಿವಾಹ ಮಾಡಿಕೊಂಡು, ತತ್ಸಂಬಂಧವಾದ ದಾಂಪತ್ಯದ 'ಸುಖ'ದ ಅನುಭವವನ್ನು ಪಡೆದು ಈಗ ತನ್ನ ದೇವಾಲಯಕ್ಕೆ ಬರುವ ಭಕ್ತ ವೃಂದಕ್ಕೆ "ಪ್ರಣಯಕ್ಕಾಗಿ ವಿವಾಹವಾಗದಿರಿ" ಎಂದು ಉಪದೇಶಿಸುತ್ತಿರುವರು. ಹೊಲಿವುಡ್ ಚಲಚಿತ್ರ ಕತೆಗಳಲ್ಲಿ ನಿರೂಪಿಸಲ್ಪಡುವಂತ ಕೇವಲ ಶರೀರಾಕರ್ಷಣೆಗೆ ಮನಸೋತು ಮದುವೆ ಮಾಡಿಕೊಳ್ಳುವುದರಿಂದಾಗುವ ಗಂಡಾಂತವೇನೆಂದವರು ತನ್ನ ಪ್ರಾಂತದ ತರುಣ ತರುಣಿಯರಿಗೆ ಬೋಧಿಸುತ್ತಿದ್ದಾರೆ ತಾನು ಮಾಡಿ ಕಷ್ಟಕ್ಕೆ ಸಿಲುಕಿರುವನೆಂದೂ ಅವರು ತಿಳಿಸುತ್ತಾರೆ

ಇದರಲ್ಲಿ ಇಂದ್ರಜಾಲವಿಲ್ಲ

"ಮೊದಲ ನೋಟಾಕರ್ಷಣೆಯಲ್ಲೇ ಪ್ರೀತಿಯಲ್ಲಿ ಬೀಳುವ ಈ ರೀತಿಯೊಂದೇ ಸಾಲದು. ತಾವು ಪ್ರೀತಿಗಾಗಿ ಮದುವೆ ಮಾಡಿಕೊಳ್ಳುವುದೆಂದು ಜನರಾಡಿಕೊಳ್ಳುತಿದ್ದಾರೆ. ಆದರೆ ಪ್ರಾರಂಭದಲ್ಲಿ ಅವರೊಳಗಿರುವುದು ಕೇವಲ ಶಾರೀರಿಕ ಆಕರ್ಷಣೆ ಮಾತ್ರ ಇದರ ಅತ್ಯಂತ ಕರುಣಾಜನಕ ಪರಿಣಾಮವೆಂದರೆ ಇಂತಹ ವಿವಾಹಗಳು ದೀರ್ಘಕಾಲ ಬಾಳಲಾರವು ತಮ್ಮ ವಿವಾಹಗಳನ್ನು ಯಶಸ್ವಿ ದಾಂಪತ್ಯ ಜೀವನವನ್ನಾಗಿ ಮಾಡುವ ಮಂತ್ರ ಮೋಡಿಯೊಂದನ್ನು ಕಲಿಸಿಕೊಡಬೇಕೆಂದು ಹಲವು ತರುಣ ತರುಣಿಯರು ನನ್ನೆಡೆ ಬರುತಿದ್ದಾರೆ ಈ ಸಂಬಂಧ ಯಾವ ಇಂದ್ರಜಾಲವೂ ಇಲ್ಲ ವಿವಾಹ ಜೀವನವನ್ನು ಸುಖಮಯ ಮಾಡುವುದಕ್ಕೆ ದಂಪತಿಗಳೇ ಪ್ರಯತ್ನಿಸಬೇಕು" ಹೀಗೆಂದು ಮೇಲ್ಕಂಡ ಅರ್ಚಕರ ಉಪದೇಶ

ವಿವಾಹ ವಿಚ್ಛೇದಗಳ ವಿಧಾನಗಳು

ಬಿಶಪ್ಪರೊಬ್ಬರ ಖಂಡನೆ

ಯೋರ್ಕಿನ ಬಿಶಪರಾದ ಡಾ। ಗಾರ್ಬೆಟ್ ಅವರು 'ಇಗರ್ಜಿ ಸಂಸ್ಥೆಗಳ ವಿವಾಹ ವಿವಾದ ತೀರ್ಮಾನಾಲಯ'ಗಳಿಗೆ ತಮ್ಮ ಸಮ್ಮತಿ ಕೊಡಲು ನಿರಾಕರಿಸಿದರು ವಿವಾಹವೊಂದನ್ನು ರದ್ದುಪಡಿಸುವಾಗ ನಿಜವಾದ ತಪ್ಪಿತಸ್ಥರೊಡನೆ ನಿರಪರಾಧಿಗಳಾದವರೂ ಸಂಕಷ್ಟಕ್ಕೊಳಗಾಗಿ ಅವರಿಗೆ ಅನ್ಯಾಯವಾಗುವ ಸಂಭವವಿದೆಯೆಂಬುದವರ ಅಸಮ್ಮತಿಗೆ ಕಾರಣ ಮಾತ್ರವಲ್ಲ ಅದರಿಂದ ನಾಗರಿಕ ಶಾಸನಗಳು ತಿರಸ್ಕಾರಕ್ಕೊಳಗಾಗಬಹುದೆಂದೂ ಅವರು ತಿಳಿಸುತ್ತಾರೆ ಗಂಡ ಇಲ್ಲವೆ ಹೆಂಡತಿ ಇರುವವರಿಗೆ ಇಗರ್ಜಿಗಳಲ್ಲಿ ಪುನರ್ವಿವಾಹ ಮಾಡುವುದೂ ದೊಡ್ಡ ಅನ್ಯಾಯವೆಂದೂ ಅವರ ಅಭಿಪ್ರಾಯ.

"ಸಾರ್ವಜನಿಕರಲ್ಲಾಗುವ ವಿಚಾರ ಮತ್ತು ಹೃದಯ ಪರಿವರ್ತನೆಯಿಂದಲೇ ಇಂದಿನ ವಿವಾಹ ವಿಚ್ಛೇದಗಳ ಸಂಖ್ಯೆ ಕಡಿಮೆಯಾಗಬಹುದು

"ಹಿಂದಿನ ಕಾಲದಲ್ಲಿ ಸ್ತ್ರೀಯರನ್ನು ಚಿನ್ನದ ಗೂಡಿನೊಳಗಿನ ಮುದ್ದು ಗಿಳಿಯಂತೆ ಇಲ್ಲವೆ ಮಕ್ಕಳನ್ನು ಹರುವ ಗುಲಾಮಳಂತೆ ಭಾವಿಸುತಿದ್ದರು. ಈ ಭಾವನೆಗಳು ಶುದ್ಧ ಅವಿಚಾರದ್ದವು.

"ತನ್ನ ಮನಸ್ಸಿಗೆ ಒಪ್ಪಿದ ಸ್ತ್ರೀಯೋರ್ವಳೊಡನೆ ಇಡೀ ರಾತ್ರಿಯನ್ನು ಕಳೆದು ತನ್ನ ಹೆಂಡತಿಗೆ ವಿಚ್ಛೇದನ ಕಟ್ಟಿಗೆ ಆಸ್ಪದ ಕೊಡುವ ಸಂಗತಿಗಳನ್ನು ಸಾರ್ವಜನಿಕರು ಖಂಡಿಸಬೇಕು" ಹೀಗೆಂದು ಗಾರ್ಬೆಟರ ಅಭಿಮತ.

ಬಾಲಪರಾಧಿಗಳ ಸಂಖ್ಯೆ ಹೆಚ್ಚುತ್ತಿದೆ

ಚಿಕ್ಕ ತರುಣಿಯರಿಂದ ಪ್ರೋತ್ಸಾಹ

ತಮ್ಮ ಎಳೆಯ ಹುಡುಗ ಸ್ನೇಹಿತನೊಡನೆ ತಿರುಗಾಟಕ್ಕೆ ಹೋಗುವಾಗ ಹುಡುಗಿಯರು ತಮ್ಮ ಪಾಲಿನ ಖರ್ಚನ್ನು ವಹಿಸಿಕೊಂಡರೆ ಇಂದು ಬಾಲಕರು ಹಣ ಸಂಗ್ರಹಕ್ಕಾಗಿ ಮಾಡುವ ಖೂನಿ ಕೃತ್ಯಗಳು ಕಡಿಮೆಯಾಗುತ್ತಿದ್ದವು

ನಚ್ಚಿನ ತರುಣ ನಲ್ಲೆಯರನ್ನು ಮೆಚ್ಚಿಸಲೋಸುಗ ಹುಡುಗರು ತುಂಬಾ ಉತ್ಸಾಹಪಡುತ್ತಾರೆ. 14ರಿಂದ 17ರ ಒಳಗಿನ ಹುಡುಗರಲ್ಲಿ ಈ ಆಸಕ್ತಿಯು ಪ್ರಬಲವಾಗಿ ಕಂಡುಬರುತ್ತದೆ ಆ ಪ್ರಾಯದವರೇ ಹೆಚ್ಚಿನವರು ಬಾಲ ಖೂನಿಕಾರರಾಗುತ್ತಾರೆ

ಮೇಲ್ಕಂಡ ಅಭಿಪ್ರಾಯವನ್ನು ಗ್ಲಾಸ್ಗೋದ ರೆವರೆಂಡ್ ಜೊನ್ಸಟನ್ ಅವರು ನಿರೂಪಿಸುತ್ತಾರೆ ಮೊದಲನೇ ಜಾಗತ್ತಿಕ ಯುದ್ಧದ ಮಕ್ಕಳಿಗಿಂತ ಎರಡನೇ ಜಾಗತ್ತಿಕ ಯುದ್ಧದ ಮಕ್ಕಳು ಹೆಚ್ಚು ಸದ್ವರ್ತನೆಯವರಾಗಿದ್ದಾರೆಂದವರ ಅಭಿಮತ

"ಇಂದು ಕೊಲೆಕಾರಕ ಚಟುವಟಿಕೆ ಎಂದೆಣಿಸಲ್ಪಡುವಂತಹುದು ಮೂವತ್ತು ವರ್ಷಗಳ ಹಿಂದೆ ಹಾಗೆ ತಿಳಕೊಳ್ಳಲ್ಪಡುತ್ತಿರಲಿಲ್ಲ

'ಆಗ ಓರ್ವ ಬಾಲಕನು ಒಂದು ಗಾಜಿನ ಕಿಟಕಿಗೆ ಕಲ್ಲು ಹೊಡೆದರೆ ಹಾದು ಹೋಗುವ ಯೌವನಸ್ಥನೊಬ್ಬನು ಅವನನ್ನು ಚೆನ್ನಾಗಿ ಥಳಿಸುತಿದ್ದನು ಅಷ್ಟಕ್ಕೇ ಆ ಪ್ರಕರಣವು ಮುಗಿಯುತಿತ್ತು

"ಆದರೆ ಈಗ ನಾಗರೀಕರು ಇನ್ನೊಬ್ಬರ ವ್ಯವಹಾರದಲ್ಲಿ ಕೈಯಿಕ್ಕಲು ದಿಗಿಲುಪಡುತ್ತಾರ ಕಾರಣ ಹುಡುಗರು ಕೂಡ ಅವರ ಮೇಲ್ಕೆ ಅತಿಕ್ರಮಣದ ಹಲ್ಲೆಮಾಡಿದರೆಂಬ ಆರೋಪ ಹೊರಿಸಿ ಕಟ್ಟೆಹೂಡುವ ಸಂಭವವಿದೆ." ಹೀಗೆಂದು ರೆ। ಜೊನ್ಸಟನ್ನರು ತಿಳಿಸುತ್ತಾರೆ.

ರಜತಪರದೆಯ ಅಶ್ಲೀಲ ಪರಿಣಾಮ

ತರುಣವರ್ಗದ ಮೇಲಾಗುವ ಪ್ರತಿಕ್ರಿಯೆ

ಚಲಚಿತ್ರಗಳ ಮೇಲೆ ಆರೋಪ

"ವಿವಾಹದಲ್ಲಿ ಭಾವನಾತ್ಮಕವಾದ ಸಾರಸ್ಯವಿದೆ ಆದರೆ ಪ್ರಣಯ ವ್ಯವಹಾರವು ಸಿನೇಮಾ ಚಿತ್ರಗಳಲ್ಲಿ ತೋರಿಸಲ್ಪಡುವ ಚುಂಬನ ದೃಶ್ಯಗಳಿಂದಲೇ ಆಕರ್ಷಕವಾಗಲಾರದು ಇಂದು ಅದೆಷ್ಟೋ ಯುವಕರು ಕಾಮ ಪ್ರವೃತಿ ಪ್ರಚೋದನೆಯಿಂದ ಇಂತಹ ದೃಶ್ಯಾಪೇಕ್ಷಿಗಳಾಗಿ ಚಲಚಿತ್ರ ಮಂದಿರಗಳೆನ್ನು ತುಂಬುತ್ತಿರುವರು" ಹೀಗೆಂದು ಲಂಡನಿನ ವಿವಾಹ ಸಲಹಾಮಂಡಳದ ಅಧ್ಯಕ್ಷರಾದ ವಿ। ಕ್ಲೊಡ್ ಮುಲಿನ್ಸರು ಒಂದು ಭಾಷಣದಲ್ಲಿ ಉದ್ಗರಿಸಿದರು.

ಭಾವನಾಪರ ವಶರಾದ ಯುವಕರು ಚಲಚಿತ್ರದ ಈ ದೃಶ್ಯಗಳು ದಾಂಪತ್ಯ ಜೀವನದ ಜೀವಾಳವೆಂದು ತಿಳಕೊಳ್ಳುತ್ತಾರೆ

"ನಾನು ವಿವಾಹವಾಗಿ ಎಷ್ಟೋ ವರ್ಷಗಳಾಗಿದ್ದರೂ ಅಂತಹ ಚೇಷ್ಟೆಗಳಲ್ಲಿ ನಾನೆಂದೂ ಮಗ್ನನಾಗಿಲ್ಲ

"ಇಂತಹ ಭಾವಾವೇಶಪರಿವೃತ ತರುಣರ ಮೇಲೆ ಸಿನೇಮಾ ಚಿತ್ರಗಳು ಅತ್ಯಂತ ದುಷ್ಪರಿಣಾಮಗೆಯ್ಯುತ್ತವೆ ಅದರಿಂದ ಅವರ ಶಿಕ್ಷಣವೂ ನಿರೀಕ್ಷಿಸಿದಷ್ಟು ಪರಿಪೂರ್ಣತೆಯನ್ನು ಹೊಂದುವುದಿಲ್ಲ

"ಆದರೆ ಆರೋಗ್ಯಕರ ಸನ್ನಿವೇಶ ಪಟನಾ ನಿರೂಪಣೆ ಮತ್ತು ವೈಜ್ಞಾನಿಕ ಸಂಬಂಧದ ಘಟನೆಗಳ ದೃಶ್ಯಗಳನ್ನು ಕೊಡುವುದರ ಮೂಲಕ ಚಲಚಿತ್ರಗಳು ಖೂನಿಕಾರರ ಚಟುವಟಿಕೆಗಳ ಪ್ರಚೋದನೆಯನ್ನು ಕಡಿಮೆ ಮಾಡಬಹುದು ಎಂದು ಪಿ ಮುಲಿನ್ಸರು ತಿಳಿಸುತ್ತಾರೆ

ಸಾಗರಾಂತರ-ಪ್ರಯಾಣ ಮಾಡುವ ಶಾಲೆ

ಅಮೇರಿಕನನೊಬ್ಬನ ಯಶಸ್ವಿ ಯೋಜನೆ

ಕಳೆದ ಸಪ್ಟಂಬರ ತಿಂಗಳಲ್ಲಿ ಜಗತ್ತಿನ ಮೊದಲ "ಸಮುದ್ರ ಶಿಕ್ಷಣ"ದ ಹಾಯಸ್ಕೂಲನ್ನು ತೆರೆಯಲಾಗಿದೆ ಸಮುದ್ರ ಸಂಬಂಧವಾದ ನೌಕಾ, ಮತ್ತು ವಾಣಿಜ್ಯ ವ್ಯವಹಾರ ಉದ್ಯೋಗಗಳನ್ನನುಸರಿಸುವವರಿಗೆ ಮಾತ್ರ ಇದರಲ್ಲಿ ಪ್ರವೇಶವಿದೆ

ಸಂಯುಕ್ತ ಅಮೇರಿಕದ ಮಾಜಿ ಯುದ್ಧ ಹಡಗವೊಂದನ್ನು ಅಲ್ಲಿನ ನೌಕಾ ಇಲಾಖೆಯವರು ನ್ಯೂಯೋರ್ಕಿನ ಈ ಶಿಕ್ಷಣ ಇಲಾಖೆಯವರಿಗೆ ಕೊಟ್ಟಿದ್ದರು ಈ ಹಡಗವೇ ಮೇಲ್ಕಂಡ ಸಮುದ್ರ ಶಿಕ್ಷಣ ಶಾಲೆಗೆ ಮುಖ್ಯ ಸಲಕರಣೆಯಾಗಿದೆ

ಈ ಶಿಕ್ಷಣವು 4 ವರ್ಷ ಅವಧಿಯದಾಗಿದ್ದು ಈಗ 16–18 ವರ್ಷಕ್ಕೆ ಮೇಲ್ಪಟ್ಟ 300 ಪ್ರೌಢ ವಿದ್ಯಾರ್ಥಿಗಳು ಸೇರಿಸಲ್ಪಟ್ಟಿದ್ದಾರೆ ಪ್ರತ್ಯಕ್ಷಾನುಭವದ ಶಿಕ್ಷಣವು ಹಡಗದಲ್ಲೇ ಕೊಡಲಾಗುವುದು ವಿದ್ಯಾರ್ಥಿಗಳು ರಾತ್ರೆ ಕಾಲದಲ್ಲಿ ಮಾತ್ರ ಮನೆಗೆ ಹೋಗುವರು

ಹಡಗ ನಡಸುವ ಎಲ್ಲಾ ಯಂತ್ರೋಪಕರಣ ಚಲಾಯಿಸುವ ವಿಧಾನಗಳನ್ನು ಕಲಿಸಿಕೊಡುವುದರೊಂದಿಗೆ ರೆಡಿಯೊ ಕೆಲಸ, ಹಡಗ ಕಟ್ಟುವಿಕೆ ಮೊದಲಾದುವುಗಳನ್ನು ಕಲಿಸಲಾಗುವುದು ಒಂಭತ್ತು ತಿಂಗಳ ನಂತರ ಸಮುದ್ರ ಪ್ರಯಾಣಾನುಭವದ ತರಬೇತಿ ಪ್ರಾರಂಭವಾಗುವುದು

ವಿದೇಶ ರಾಜಕೀಯ

ಬ್ರಿಟಿಷ್ ಕೂಲಿಕಾರ ಪಕ್ಷದ ಚುನಾವಣೆ ಉಪಸಮಿತಿಯು ಮೊನ್ನಿನ ನಗರ ಸಭೆಗಳ ಚುನಾವಣೆಗಳಲ್ಲಿ 700 ಸ್ಥಳಗಳನ್ನು ಕಳೆದು ಕೊಂಡದ್ದರಿಂದುಂಟಾದ ಪರಿಸ್ಥಿತಿಯನ್ನು ವಿಚಾರಿಸಿ ಉತ್ಕ್ರಾಂತಿಯಲ್ಲಿ ಇಂತಹ ಪ್ರಸಂಗಗಳು ತಪ್ಪಿದ್ದಲ್ಲವೆಂದೂ ಇನ್ನು ಮೂರ್ ವರ್ಷ ಅಧಿಕಾರದಲ್ಲಿರುವುದರಿಂದ ಅಷ್ಟರಲ್ಲಿ ಪರಿಸ್ಥಿತಿ ಸುಧಾರಿಸಬಹುದೆಂದೂ ಅವರ ಅಭಿಪ್ರಾಯವಿದೆ ಚರ್ಚಿಲ್ಲರೂ ಈ ಸೋಲುಗಳನ್ನು ಹಿರಿದಾಗಿ ಮಾಡಿ ತಮ್ಮ ಪಕ್ಷದ ಪ್ರಚಾರ ಮಾಡುತ್ತಿರುವರು

卐

ಮಂಚೂರಿಯದ ಮಹತ್ವ ನಗರವು ವಿದ್ಯುತ್ಶಕ್ತಿ ಕೇಂದ್ರವೂ ಆದ ಕಿರಿನ್ ನಗರದ ರಕ್ಷಣೆಗೆ ಚಿಯಾಂಗ್ ಸರಕಾರವು ಭಗೀರಥ ಪ್ರಯತ್ನ ನಡೆಸಿದೆ 4 ಸಾವಿರ ನಾಗರಿಕರನ್ನು ಕಂದಕಗಳನ್ನು ತೋಡಲು ಹಚ್ಚಲಾಗಿದೆ ಹಾಗೂ ಬೀದಿಂಕದಕದ ವ್ಯವಸ್ಥೆಯನ್ನು ಮಾಡಲಾಗಿದೆ ಕಮ್ಯೂನಿಸ್ಟರ ಧಾಳಿ ಕೆಲವು ಕಡೆಗಳಲ್ಲಿ ರಭಸದಿಂದ ನಡೆಯುತ್ತಿವೆ

卐

ಪೆಲೆಸ್ತೀನಿನ ಒಗ್ಗೆ ರಾಷ್ಟ್ರ ಯುಕ್ತ ಸಂಘದಲ್ಲಿ ಹೀಗೆ ತಿಳಿಸಿದೆ ಜನವರಿ 1ಕ್ಕೆ ಬ್ರಿಟಿಷ್ ಅಧಿಕಾರ ಹಿಂತೆಗೆಯಲ್ಪಡಬೇಕು ಮತ್ತೆ 4 ತಿಂಗಳಲ್ಲಿ ಅವರ ಸೈನ್ಯವೂ ಖಾಲಿಯಾಗಬೇಕು ಭದ್ರತಾ ಮಂಡಳದ ಶಿಷ್ಯಮಂಡಳ ಬೇಗನೆ ಪಾಲಿಸ್ತಾನಕ್ಕೆ ಹೋಗಬೇಕು. ಅರಬ ಮತ್ತು ಯಹೂದಿ ರಾಷ್ಟ್ರಗಳಿಗಾಗಿ ಕೂಡಲೇ ತಾತ್ಪೂರ್ತಿಕ ಸರಕಾರ ಸ್ಥಾಪಿತವಾಗಬೇಕು



ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು ಜಾಂಬಕಿನಲ್ಲಿರುವ ಶುದ್ಧವಾದ ಗಿಡ ಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮೂಲವ್ಯಾಧಿಯನ್ನು ತುರಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು

ವರದಿ ವಿನಿಮಯ

ದಿ ಬೊಂಬಾಯಿ ಲೈಫ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್:- ಈ ಸಂಸ್ಥೆಯ 1946ನೇ ವರ್ಷದ ಉದ್ಯಮ ವ್ಯವಹಾರದ ವರದಿ ಸ್ವೀಕರಿಸಲು ಸಂತೋಷಿಸುತ್ತೇವೆ ಸಂಸ್ಥೆಯ ಶ್ರೇಯಸ್ಕರ ಪ್ರಗತಿ ಮತ್ತು ಸುದೃಢ ಕಾರ್ಯಕ್ಷೇತ್ರ ವಿಸ್ತರೀಕರಣದ ವಿಶ್ವಾಸನೀಯ ಲಕ್ಷಣಗಳು ಈ ಕೆಳಗಿನ ಅಂಕೆಸಂಖ್ಯೆಗಳಿಂದ ತಿಳಿಯಬಹುದು. 1946ರಲ್ಲಿ 11890ವಿಮಾ ಪೋಲಿಸಿಗಳು ಕೊಡಲ್ಪಟ್ಟಿದ್ದು ಇವುಗಳ ಸಂಖ್ಯೆ ಹಿಂದಿನ ವರ್ಷಕ್ಕಿಂತ 1646ರಷ್ಟು ಹೆಚ್ಚಾಗಿದೆ ಇದರ ವಾರ್ಷಿಕ ಪ್ರೀಮಿಯಂ ಆದಾಯವು ಅದೇ ರೀತಿ ರೂ. 18, 24, 498 ರಷ್ಟಾಗಿದೆ 1945ರಲ್ಲಿ ಒಟ್ಟು ಪ್ರೀಮಿಯಂ ಆದಾಯವು 69·07 ಲಕ್ಷ 1946ರಲ್ಲಿ 80 01 ಲಕ್ಷದಷ್ಟಾಗಿದೆ. ವ್ಯಯದ ಲೆಕ್ಕವೂ ಕಳೆದ ವರ್ಷಕ್ಕಿಂತ ಬಹಳ ಕಡಿಮೆ ಕಂಪೆನಿಯು ಲಾಭಕರ ವಸ್ತು ಉದ್ಯಮಗಳ ಮೇಲೆ ವ್ಯಯಿಸಿದ ಧನದ ಮೌಲ್ಯವು ಇಂದು 27 86 ಲಕ್ಷದಷ್ಟು ಹೆಚ್ಚಿದೆ ಎಂಬ ಸಂಗತಿ ವಿವೇಕಪರ ಧನಸಂಚಯ ಧೋರಣೆಯ ಸೂಚಕವಾಗಿದೆ ನಮ್ಮ ಜಿಲ್ಲೆಯ ಶ್ರೀ ಸುಜೀರ್ ಪುಂಡಲೀಕ ನ್ಯಾಕರವರು ಕಂಪೆನಿಯ ಓರ್ವ ಡೈರೆಕ್ಟರರಾಗಿ ಚುನಾಯಿಸಲ್ಪಟ್ಟದ್ದು ಗಣನೀಯ ವಿಷಯ ಸಂಸ್ಥೆಯ ಜನಪ್ರಿಯತೆ, ದೃಢತ್ವ ಮತ್ತು ವಿಶ್ವಾಸ ಪಿಕಾಸತೆಗಳಿಗೆ ಈ ಮೇಲಿನ ಸಂಖ್ಯೆ ಸಂಗತಿಗಳಿಗಿಂತಲೂ ಹೆಚ್ಚಿನದೇನುಬೇಕು? ಈ ವಿಮಾ ವ್ಯವಹಾರ ಸಂಸ್ಥೆಗೆ ಉತ್ತರೋತ್ತರ ಶ್ರೇಯೋಭಿವೃದ್ಧಿ ಕೋರುವೆವು

ಪ್ರಕಟಣೆ

ಸರ್ವರಿಗೂ ಈ ಮೂಲಕ ತಿಳಿಸುವುದೆ ನಂದರೆ, ಇದೇ 1947ನೇ ಇಸವಿ ನವಂಬರ ತಿಂಗಳ 30ನೇ ತಾರೀಕಿನ ಒಳಗೆ ತಮ್ಮಲ್ಲಿದ್ದ ಕಳ್ಳ ರೇಶನ್ ಕಾರ್ಡುಗಳನ್ನು ಇಚ್ಛಾನುಸಾರ ರೇಶ್ಪನ್ ಆಫೀಸುಗಳಿಗೆ ಮುಟ್ಟಿಸಿದಲ್ಲಿ ಯಾ ತಮ್ಮ ಮನೆಯಲ್ಲಿ ಇಲ್ಲದವರ, ಮನೆಬಿಟ್ಟು ಹೋದವರ ಯಾ ತೀರಿ ಹೋದವರ ರೇಶನ್‌ಗಳನ್ನು ತಮ್ಮ ಕಾರ್ಡುಗಳಿಂದ ಇಚ್ಛಾನುಸಾರ ತೆಗೆಸಿದಲ್ಲಿ ಅಂಥವರ ಮೇಲೆ ಯಾವ ತರದ ದಾವೆಯಾ ದಂಡನೆ ವಿಧಿಸುವುದಿಲ್ಲ ಆದರೆ 1947ನೇ ಇಸವಿ ಡಿಸೆಂಬರ್ ತಾ 1ರಿಂದ ಯಾವತ್ತೂ ಆಹಾರದ ವಿಷಯದಲ್ಲಿ ಮಾಡುವ ಅಪರಾಧಗಳಿಗೆಲ್ಲ ಕಠಿಣ ಶಿಕ್ಷೆಯನ್ನು ವಿಧಿಸಲಾಗುವುದು

ಮುಸ್ಲಿಂ ಮಹಿಳೆಯ ಕೈದು

ಈಚೆಗೆ ಇಲ್ಲಿಯ ಪೋಲೀಸರು ಕೈದುಮಾಡಿದ್ದ ಬೊಂಬಾಯಿ ಜೋಹಾರ (ಮುಸ್ಲಿಂ ಮಹಿಳೆ) ಮತ್ತು ನಾಲ್ಕು ಮಂದಿ ಇತರರ ಜಾಮೀನು ಅರ್ಜಿಗಳ ಹಿಯರಿಂಗ್ ಕಳೆದ ತಾ ೬ರಲ್ಲಿ ಇಲ್ಲಿಯ ಸ್ಟೆಶನ ಮೇಜಿಸ್ಟ್ರೇಟ್ ಶ್ರೀ ಎಚ್ ಬಿ ಕೆದಿಲಾಯ ಅವರ ಮುಂದೆ ನಡೆದು ಮಂಗಳೂರಿನ ಮುಹ್ಮದ್ ಮಕಿ ಮುಹಮ್ಮದ್ ಖಾನ್ ಮತ್ತು ಅಬ್ದುಲ್ ಅಜೀಜ ಎಂಬ ಮೂವರಲ್ಲಿ ಪ್ರತಿಯೊಬ್ಬರಿಂದ ರೂ ೨೫೦ರ ಸೆಕ್ಯೂರಿಟಿ ಬಾಂಡ್ ಪಡೆದು ಜಾಮೀನಿನ ಮೇಲೆ ಬಿಡಲಾಯಿತು ಜೋಹಾರ ಮತ್ತು ಕಾಪಿನ ಅಮನುಲ್ಲಾ ಸಾಹೇಬನಿಗೆ ಇದೇ ತಾ ೧೪ರ ವರೆಗೆ ರಿಮಾಂಡು ಕೊಡಲಾಗಿದೆ ಜೋಹಾರಿನ ವಯಸ್ಸು ಸುಮಾರು ೨೪, ಆಕೆಯೊಡನಿರುವ ಆಭರಣಗಳ ಬೆಲೆ ಸುಮಾರು ೧೫ ಸಾವಿರವಾಗಬಹುದೆಂದು ತಿಳಿದುಬಂದಿದೆ.

ಜೋಹರನ ಪತಿಯೂ ಸಹೋದರನೊಬ್ಬನೂ ತಾವಿಲ್ಲಿಗೆ ಕೂಡಲೇ ಬರುತ್ತೇವೆ, ಅದುವರೆಗೆ ಜೋಹಾರ ಮತ್ತು ಅಮಾನುಲ್ಲ ಸಾಹೇಬನನ್ನು ತಡೆಹಿಡಬೇಕೆಂದು ಇಲ್ಲಿನ ಅಧಿಕಾರಿಗಳಿಗೆ ಟೆಲಿಗ್ರಾಂ ಮೂಲಕ ತಿಳಿಸಿರುವುದಾಗಿ ಗೊತ್ತಾಗಿದೆ

ಪ್ರಾಂತೀಯ ಪ್ರೋಸ್ಟ್‌ಮ್ಯಾನ್ ಸಮ್ಮೇಳನ

ಮೇಲ್ಕಂಡ ಸಮ್ಮೇಳನವು ಇದೇ ತಾ ೧೫, ೧೬ರಲ್ಲಿ ಇಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ ಜರಗುವುದು ತಾ. ೧೫ರಂದು ಮೆರವಣಿಗೆ, ಬಹಿರಂಗ ಅಧಿವೇಶನ, ವಿಷಯನಿಯಾಮಕ ಸಮಿತಿ ಮೀಟಿಂಗೂ, ತಾ ೧೬ರಂದು ಪಿ॥ ಸಿ॥ ಸಮಿತಿ ಸಭೆ, ಬಹಿರಂಗ ಅಧಿವೇಶನ, ವಿವಿಧ ವಿನೋದಾವಳಿಗಳೂ ಇರುವವು.

ಜಿಲ್ಲಾ ಸಮಾಚಾರ

ಮದ್ಯ ನಿಷೇಧದ ತಕ್ಸೀರುಗಳು

ಕಳೆದ ಒಂದು ತಿಂಗಳಲ್ಲಿ ಜಿಲ್ಲೆಯಲ್ಲಿ ಮದ್ಯ ನಿಷೇಧದ ಅಪರಾಧಗಳು ಸುಮಾರು ೧೫೦, ಅವುಗಳಲ್ಲಿ ಹಲವು ಅಪರಾಧಗಳಿಗೆ ಭಾರಿ ಮೊತ್ತದ ಜುಲ್ಮಾನೆಗಳೂ, ಕೆಲವದರಲ್ಲಿ ೨ ೩ ತಿಂಗಳ ವರೆಗಿನ ಸಜೆಯೂ ವಿಧಿಸಲ್ಪಟ್ಟಿದೆ ಎಂದು ಪತ್ರಿಕೋದ್ಯಮಿಗಳಿಗೆ ಭೇಟಿ ಕೊಟ್ಟಾಗ ಮಂಗಳೂರು ಸರ್ಕಲಿನ ಡೆಪ್ಯುಟಿ ಪ್ರೊಹಿಬಿಶನ್ ಆಫೀಸರ್ ಶ್ರೀ ಕೆ ಅನಂತನಾರಾಯಣ ಅಯ್ಯರ್ ಅವರು ತಿಳಿಸಿದರು

ಮದ್ಯ ನಿಷೇಧ ಮತ್ತು ನೀರಾವರಿ ಕಮಿಶನರರ ಸಂಚಾರ

ನಮ್ಮ ಆಧಿಪತ್ಯದ ಮದ್ಯ ನಿಷೇಧ ಮತ್ತು ನೀರಾವರಿ ಕಾಮಗಾರಿಗಳ ಶಾಖಾ ಕಮಿಶನರ್ ಶ್ರೀ ಎ ಎಸ್ ಕುಡ್ವರು ಕಳೆದ ತಾ ೮ರಿಂದ ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ಸಂಚರಿಸಿ ಕಳೆದ ತಾ ೧೧ರಲ್ಲಿ ಹಿಂದಿರುಗಿದರು ಅವರು ಉಡುಪಿ, ಬ್ರಹ್ಮಾವರ, ಬಂಟ್ವಾಳ, ಪಾಣೆಮಂಗಳೂರು, ಪುತ್ತೂರು, ಕಾರ್ಕಳ ಮೊದಲಾದ ಕಡೆಗಳಿಗೆ ಭೇಟಿ ಕೊಟ್ಟು—ಉಡುಪಿ ಬಂಟ್ವಾಳ, ಪಾಣೆಮಂಗಳೂರು ಪುತ್ತೂರುಗಳ ಮುಕ್ತೇಸರರ ಸಭೆಗಳಲ್ಲಿ ಜಿಲ್ಲೆಯಲ್ಲಿನ ಮುಕ್ತೇಸರ ಕೆಲಸದ ವಿಚಾರದಲ್ಲಿ ವಿವರಿಸಿದರು. ಸೀಲ್ಡೆಕ್ಕರ ಮತ್ತು ಬೈಂದೂರುಗಳಲ್ಲಿ ಮಾತ್ರವೇ ತೆಂಗಿನ ಮರಗಳಿಂದ ಬೆಲ್ಲ ಮಾಡಲು ಅಪ್ಪಣೆ ಕೊಟ್ಟರೆ ಸಾಲದು ಜಿಲ್ಲೆಯ ಎಲ್ಲಾ ಕಡೆಯ ತೆಂಗಿನ ಮರಗಳಿಂದಲೂ ಬೆಲ್ಲ ಮಾಡುವ ಸೌಕರ್ಯಗಳೊದಗಬೇಕೆಂದು ಮುಕ್ತೇಸರರ ಪರವಾಗಿ ವಿನಂತಿಸಲಾಯಿತು

ಅಡಿಕೆ ವ್ಯವಸಾಯಕ್ಕೆ ಭತ್ತದ ಸರಬರಾಯಿ

ತೋಟಗಳ ವ್ಯವಸಾಯಕ್ಕೆ ಬೇಕಾದ ಭತ್ತವನ್ನು ತೋಟಿಗಾರರ ಇಷ್ಟ ಕೊಳ್ಳುವ ವಿಚಾರದಲ್ಲಿ ಮದ್ರಾಸ್ ಸರಕಾರವು ಪುನಃ ಆಲೋಚಿಸುತ್ತದೆಂದೂ ಮತ್ತು ತೋಟಗಳ ಲೆಕ್ಕ ವಗೈರೆಗಳನ್ನು ಕೂಡಲೇ ಕಳುಹಿಸಬೇಕೆಂದು ಕೂಡಾ ಜಿಲ್ಲಾ ಅಧಿಕಾರಿಗಳಿಗೆ ಹುಕುಂ ಬಂದಿದೆಯೆಂದು ತಿಳಿಯುತ್ತದೆ ಸರಕಾರದ ಹುಕುಂ ಜಾರಿಗೆ ಬರುವ ಮೊದಲು ಅಕ್ಕಿ ಭತ್ತವನ್ನು ಸ್ಟೋರಿಗೆ ಹಾಕಿದ್ದಲ್ಲಿ ಈ ರಿಯಾಯಿತಿಯ ಪ್ರಯೋಜನವು ತೋಟಗಾರರಿಗೆ ಸಿಗಲಾರದು, ಸರಕಾರದ ಆಜ್ಞೆಯು ತೀರ್ಮಾನವಾಗುವ ಮೊದಲು ತೋಟಗಾರರ ಭತ್ತವನ್ನು ಸ್ಟೋರಿಗೆ ಒಯ್ಯುವಂತೆ ಬಲಾತ್ಕರಿಸಬಾರದೆಂದು ಅಡಿಕೆ ಬೇಸಾಯಗಾರರ ಸಂಘದ ಪರವಾಗಿ ಸರಕಾರಕ್ಕೂ ಜಿಲ್ಲಾ ಕಲೆಕ್ಟರರಿಗೂ ಮನವಿ ಹೋಗಿರುತ್ತದೆ

ಮೂಲ್ಕಿ

ಮೂಲ್ಕಿ ಕೋಡಿಯಲ್ಲಿ 'ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಕೊಯರ್ ಇಂಡಸ್ಟ್ರೀಸ್' ಎಂಬ ಕೈಗಾರಿಕೆ ಸಂಸ್ಥೆಯೊಂದು ಇತ್ತೀಚೆಗೆ ಕೋಡಿ ಫಿಶರೀಸ್ ಶಾಲಾ ಮಾಸ್ತರ್ ಶ್ರೀ ಪಿ ಯ ಜ್ಞೇಶ್ವರರಿಂದ ತೆರೆಯಲಾಯಿತು ಶ್ರೀಗಳಾದ ಕೂಕ ಮಾಸ್ತರ್, ಶಿವಣ್ಣ ಹೆಗ್ಡೆ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು

ನೇರಳಕಟ್ಟೆ:- ಬೋರ್ಡ್ ಶಾಲೆಯಲ್ಲಿ ಕಳೆದ ತಾ ೩೧ರಂದು ಪಟೇಲರಾದ ಶ್ರೀ ಕುಳವಾಮಣ್ಣರೈಗಳ ಅಧ್ಯಕ್ಷತೆಯಲ್ಲಿ ನೆಡ್ಲಮುಡ್ನೂರು ಮತ್ತು ಪೆರಾಜೆ ಗ್ರಾಮಸ್ಥರ ಸಭೆ ಸೇರಿದಾಗ ಆಫೀಸರ್ ಪಾರ್ಥಸಾರಥಿಯವರು ರೂರಲ್ ರಿಕಿಯೇಶನ್ ಗ್ರಾಮೋದ್ಧಾರ ಸಂಘದ ಉದ್ದೇಶ ಮತ್ತು ಕಾರ್ಯಕ್ರಮಗಳ ಕುರಿತು ಭಾಷಣ ಮಾಡಿದರು ಆ ನಂತರ ನೆಟ್ಲಮುಡ್ನೂರು ಮತ್ತು ಪೆರಾಜೆ ಗ್ರಾಮಗಳಿಗೆ ಒಂದು ಗ್ರಾಮೋದ್ಧಾರ ಸಂಘ ಸ್ಥಾಪನೆಯಾಯಿತು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪಿತ: ೧೯೦೬)

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು, ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು, ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿ ಕೊಡುವುದು ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906

CANARA BANK, LIMITED.

ನಿಧನ:- ಶ್ರೀ ಉಡುಪಿ ಗೋವಿಂದರಾಯರು ಇದೇ ತಾ. 11-11-1947ನೇ ಮಂಗಳವಾರ ರಾತ್ರಿ 2.30ಕ್ಕೆ ತಮ್ಮ ಕರಂಗಲಪಾಡಿಯಲ್ಲಿಯ ಮನೆಯಲ್ಲಿ ತನ್ನ 58ನೇ ವರ್ಷದ ಪ್ರಾಯದಲ್ಲಿ ನಿಧನ ಹೊಂದಿದರು.

ಇವರು 1921ನೇ ಇಸವಿಯಲ್ಲಿ ತನ್ನ ಬಿ ಎ ಪರೀಕ್ಷೆಯನ್ನು ಬಿಟ್ಟು ಅಸಹಕಾರ ಚಳವಳಿಕ್ಕೆ ಸೇರಿದ್ದರು ಆಗ ಸ್ಥಾಪಿತವಾದ ತಿಲಕ ವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದರು ಆಗ ಹಲವು ವರ್ಷ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿದ್ದರು 1928ರಲ್ಲಿಯ ಜಿಲ್ಲೆಯ ಅತ್ಯಂತ ದೊಡ್ಡ ನೆರೆಯ ಸಮಯದಲ್ಲಿ ನೆರೆಹಾವಳಿ ನಿವಾರಣೆ ಬಗ್ಗೆ ವಿಶೇಷ ಶ್ರಮಪಟ್ಟು ದುಡಿದುದಲ್ಲದೆ ಜಿಲ್ಲಾ ನೆರೆಹಾವಳಿ ನಿವಾರಣೆ ಸಮಿತಿ, ಉಡುಪಿ, ಇದರ ಆಡಳಿತ ಸದಸ್ಯರಾಗಿ ಈಗಿನ ತನಕವೂ ಇದ್ದರು ಬೆಳಗಾಂವಿಯಲ್ಲಿ ಸೇರಿದ ಭಾರತ ರಾಷ್ಟ್ರ ಸಭೆಯ ಅಧಿವೇಶನದ ಸ್ವಾಗತ ಕಮಿಟಿಯಲ್ಲಿ ಕೆಲಸ ಮಾಡಲು ಒಂದು ವರ್ಷ ಬೆಳಗಾಂವಿಯಲ್ಲಿ ಕಳೆದಿದ್ದರು ಮರಳಿ ಮಂಗಳೂರಿಗೆ ಬಂದ ಬಳಿಕ ಇಲ್ಲಿಯ ಡಿಪ್ರೆಸ್ಡ್ ಕ್ಲಾಸಸ್ ಮಿಶನಿನ ಕೋರ್ಟುಹಿಲ್ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕಳೆದ ವರ್ಷದ ತನಕವೂ ಕೆಲಸ ಮಾಡಿದರು ಮಿಶನಿನ ಸಂಸ್ಥೆಗಳಲ್ಲಿಯ ಎಲ್ಲಾ ಮಕ್ಕಳನ್ನು ಅತ್ಯಾದರದಿಂದ ನಡೆಸುತ್ತಿದ್ದರು ಈಗ ಜಿಲ್ಲೆಯಲ್ಲಿ ವಿದ್ಯಾವಂತರಾಗಿರುವ ಹರಿಜನರಲ್ಲಿ ಪ್ರಾಯಶಃ ಹೆಚ್ಚಿನವರು ಇವರಿಂದ ಶಿಕ್ಷಣ ಪಡೆದಿರುವರು ಜಿಲ್ಲಾ ಲೇಬರ್ ಎಡ್ವಾಯಿಜರಿ ಕಮಿಟಿಗೆ ಸರಕಾರದವರು ಇವರನ್ನು ಹಲವು ಬಾರಿ ನೇಮಿಸಿ ಇವರು ಆ ಕಮಿಟಿಯಲ್ಲಿಯೂ ಕೆಲಸ ಮಾಡುತ್ತಿದ್ದರು ಉಪಾಧ್ಯಾಯ ವೃತ್ತಿಯಲ್ಲಿದ್ದುದರಿಂದ ಉಪಾಧ್ಯಾಯ ಸಂಘಗಳಲ್ಲಿಯೂ ಜಿಲ್ಲಾ ಟೀಚರ್ಸ್ ಗಿಲ್ಡಿನ ಆಡಳಿತ ಸಭೆಯಲ್ಲಿಯೂ ಇವರು ಪ್ರಮುಖ ಭಾಗ ವಹಿಸುತ್ತಿದ್ದರು ಈಚೆಗೆ ಹಲವು ವರ್ಷಗಳಿಂದ ಇವರು ಮದ್ರಾಸಿನ ಮೈಲ್ ಪತ್ರಿಕೆಯ ಸ್ಥಳೀಕ ಸುದ್ದಿಗಾರರಾಗಿದ್ದು ಪತ್ರಿಕೋದ್ಯಮದಲ್ಲಿಯೂ ಪತ್ರಿಕೋದ್ಯಮಿಗಳ ಸಂಘದಲ್ಲಿಯೂ ಚಟುವಟಿಕೆಯಿಂದ ದುಡಿದಿದ್ದರು ಇವರು ಕನ್ನಡದಲ್ಲಿಯೂ ಒಳ್ಳೆಯ ಬರೆಹಗಾರರಿದ್ದು ಶಾಕಾಹಾರೀಲ ಕಾರರ ಸದೇಶಿ ಮೊದಲಾದುವುಗಳನ್ನು ಕನ್ನಡಿಸಿ ಪ್ರಕಟಿಸಿದ್ದರು ಸಹಕಾರೀ ಚಳವಳಿದಲ್ಲಿಯೂ ಇವರಿಗೆ ಆಸಕ್ತಿ ಇದ್ದು ದಕ್ಷಿಣ ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘದ ಕಾರ್ಯದರ್ಶಿಯರಾಗಿಯೂ ಆ ಬಳಿಕ ಈಗಿನ ತನಕ ಅದರ ಡೈರೆಕ್ಟರರಾಗಿಯೂ ಇದ್ದರು ಹೀಗೆ ವಿದ್ಯಾರ್ಥಿ ದೆಸೆಯ ಅಂತ್ಯದಿಂದ ಕೊನೆಯ ತನಕ ಇವರ ಎಂದಲ್ಲ ಒಂದು ಬಗೆಯ ಸಾರ್ವಜನಿಕ ಸೇವೆಯಲ್ಲಿಯೇ ತನ್ನ ಜೀವನ ಕಳೆದರೆಂದರೆ ಹುಚ್ಚಲ್ಲ

ಇವರ ಪತ್ನಿ ಮತ್ತು ಮೂವರು ಹುಡುಗರು ... ಹುಡುಗಿ ಇದ್ದಾರೆ ಇವರ ಮಕ್ಕಳು ಇತರ ಬಂಧು ಬಾಂಧವರ ದುಃಖದಲ್ಲಿ ನಾವೂ ಸಹಾನುತಾಪ ಸೂಚಿಸಬಯಸುತ್ತೇವೆ

ಉಡುಪಿ

ದಕ್ಷಿಣ ಹಿಂದೂ ಮಹಾಸಭೆಯ ವಾರ್ಷಿಕಾಧಿವೇಶನ ಇದೇ ತಾ 2ರಲ್ಲಿ ಉಡುಪಿ ಕಾರ್ಯಾಲಯದಲ್ಲಿ ಜರಗಿ ಜಾಲ್ತಿ ಪಕ್ಷದ ಕಾರ್ಯಕಾರೀ ಮಂಡಲ ರಚನೆಯಾಯಿತು ಅಂದು ಅಪರಾಹ್ನ ರಥಬೀದಿಯಲ್ಲಿ ಸಾರ್ವಜನಿಕ ಸಭೆಯು ಶ್ರೀ ಕೆ ಅಣ್ಣಪ್ಪ ನಾಗಪ್ಪ ಭಕ್ತರ ಅಧ್ಯಕ್ಷತೆಯಲ್ಲಿ ಸೇರಿ ಹಲವರ ಭಾಷಣಗಳಾದುವು

ಬೊಂಬಯಿ ಕನ್ನಡ ಅಭ್ಯಾಸ ಮಂಡಲ

ಇದರ ಆಶ್ರಯದಲ್ಲಿ ತಾ ೨೭ರಂದು ಶ್ರೀ ಎಚ್ ಎಸ್ ಪಾಟೀಲರ ಅಧ್ಯಕ್ಷತೆಯಲ್ಲಿ, ಶಿವಾಜಿ ಪಾರ್ಕಿನಲ್ಲಿರುವ ಹವಾಲಗಾರರ ಮಹಡಿಯಲ್ಲಿ ಶ್ರೀ ಸಿ ಕೆ ನಾಗರಾಜರಾಯರು ಶ್ರೀ ಕೈಲಾಸಂ ಮತ್ತು ಶ್ರೀ ಕ್ಷೀರಸಾಗರರ ನಾಟಕಗಳನ್ನು ವಾಚನ ಮಾಡಿದರು ನಂತರ ಪರಿಷತ್ತಿನ ವಿಚಾರ ಪ್ರಸ್ತಾಪಿಸಿ ಸದಸ್ಯ ಸಂಖ್ಯೆಯನ್ನು ಬೆಳೆಸಬೇಕೆಂದೂ ಅದಕ್ಕೆ ಮುಂಬಯಿ ಕನ್ನಡಿಗರು ಸಹಾಯ ನೀಡಬೇಕೆಂದೂ ವಿನಂತಿ ಮಾಡಿಕೊಂಡರು.

ಸ್ವರದ ವಿಜ್ಞಾನ ವರದಿಗಳು
ನೂತನ ಧ್ವನಿಗ್ರಾಹಕ

ಇತ್ತೀಚೆಗೆ ಇಂಗ್ಲೆಂಡಿನಲ್ಲಿ ಜರಗಿದ ರೇಡಿಯೊ ಪ್ರದರ್ಶನದಲ್ಲಿ ಅತ್ಯದ್ಭುತವೂ ಅಧುನಿಕವೂ ಆದೊಂದು ಧ್ವನಿಗ್ರಾಹಕ (ಗ್ರೆಮೋಫೋನ್) ಯಂತ್ರವೊಂದು ಪ್ರದರ್ಶಿತವಾಗಿತ್ತು. ಇದು ನಾವು ಮಾತನಾಡುವ ಪ್ರತಿಯೊಂದು ಸ್ವರವನ್ನೂ ಗ್ರಾಹಿಸಿಕೊಂಡು ಒಂದು ಅತೀ ತೆಳ್ಳಗಾದ ಕಾಗದದ ಮೇಲೆ ದಾಖಲೆ ಮಾಡುವುದು. ಇದನ್ನುಪಯೋಗಿಸುವವರು ಈ ಕಾಗದವನ್ನು ಕೂಡಲೇ ಮುಗುಚಿಟ್ಟು ತಾನು ನುಡಿದದೇನೆಂದು ಪುನಃ ಕೇಳಬಹುದು. ಈ ರಿಕಾರ್ಡುಗಳನ್ನು ಮಡಚಿ ಲಕೋಟೆಯಲ್ಲಿ ಹಾಕಿ ಟಪ್ಪಾಲಿನಲ್ಲಿ ಕಾಗದದಂತೆ ಕಳುಹಿಸಬಹುದು ಶಬ್ದಗ್ರಾಹಕ, ಧ್ವನಿಪೂರಕ ಎರಡು ಯಂತ್ರಗಳು ಕನಿಷ್ಟ ಗಾತ್ರದವಾಗಿದ್ದು ಚಿಕ್ಕ ಟ್ರೈಪ್‌ರೈಟರ್ ಯಂತ್ರದಂತೆ ಕಂಕಳಲ್ಲಿ ಹಿಡಿದೊಯ್ಯಬಹುದು.

ಖೂನಿ ಕೃತ್ಯದಲ್ಲಿ ಚಂದ್ರ ಸಹಾಯ

ಲಂಡನಿನ ಕೋರ್ಟುಗಳಲ್ಲಿ ಕೋಲ್ ಎಂಬ ಖೂನಿಕಾರನೊಬ್ಬನ ವಿಚಾರಣೆಯಾಗುತ್ತಿದೆ ಅವನ ಅಕೃತ್ಯಗಳೆಲ್ಲ ಚಂದ್ರಕಿರಣಗಳಿಂದ ಪ್ರೇರೇಪಿತವಾದುದೆಂಬೊಂದು ರುಜುವಾತು ಸಿದ್ಧಪಡಿಸಲ್ಪಟ್ಟಿದೆ ವಿದುಳು ತಜ್ಞರಾದ ಅನೇಕ ಲಂಡನ್ ವೈದ್ಯರು ಚಂದ್ರಕಿರಣ ತತ್ವವನ್ನೇ ಸಮರ್ಥಿಸುತ್ತಾರೆ ಹುಣ್ಣಿಮೆಯ ಪಕ್ಷದಲ್ಲಿ ಮನುಷ್ಯರ ಮಿದುಳು ಹೆಚ್ಚು ಕಾರ್ಯಮಗ್ನವಾಗುತ್ತದೆಂದೂ ಸ್ವಲ್ಪ ತಲೆಕೆಟ್ಟವರು ಹೆಚ್ಚು ಗಲಾಟೆಯನ್ನು ಆ ಅವಧಿಯಲ್ಲಿ ಮಾಡುತ್ತಾರೆಂದೂ ಹೇಳಲಾಗಿದೆ ನಿದ್ರೆಯಲ್ಲಿ ನಡೆಯುವ ನಿದರ್ಶನಗಳು ಆ ಪಕ್ಷದಲ್ಲಿ ಹೆಚ್ಚು ಗಮನಕ್ಕೆ ಬಂದಿರುತ್ತವೆಯಂತೆ

ಚಂದ್ರನೂ ಪ್ರಾಣಿಜೀವನವೂ

ಮೋಲ್ಕಂಡ ಮೊಕದ್ದಮೆಯ ಕುರಿತು ಚರ್ಚಿಸುತ್ತ ಚೇಪ್‌ವೇನ್ ಪಿಂಚರ್ ಎಂಬ ಖಗೋಳ ತಜ್ಞರು ಹೀಗೆ ತಿಳಿಸುತ್ತಾರೆ "ಚಂದ್ರನಿಗೆ ಪ್ರಾಣಿಗಳ ಮೇಲೆ ಪ್ರಭಾವವಿಲ್ಲವೆಂದು ಅಲ್ಲಗಳೆಯಲಾಗುವುದಿಲ್ಲ ಚಂದ್ರನು ಗಗನದುಸರಿ ಮಧ್ಯಭಾಗವನ್ನು ಹಾದುಹೋಗುವಾಗ ಮುತ್ತು ಚಿಪ್ಪುಗಳು ಬಾಯ್ದೆರೆದು ಆಹಾರವನ್ನು ತಿನ್ನುತ್ತವ ಶುಕ್ಲಪಕ್ಷದ ಒಂದು ನಿರ್ದಿಷ್ಟ ದಿನದಂದು ಈಲ್ ಮೀನುಗಳು ಮೊಟ್ಟೆಗಳನ್ನಿಡುವ ಜಲಭಾಗಕ್ಕೆ ಸಂಚಾರಹೋಗುತ್ತವೆ ಚಂದ್ರನು ಭೂಮಿಯ ಕೊನೆಯ ಕಾಲಾಂಶದ ಸುತ್ತುವರಿಯುವಾಗ ಕೆಲವೊಂದು ಉಷ್ಣವಲಯದ ಎರೆಹುಳುಗಳು ತಮ್ಮ ಸ್ಥಾನವನ್ನು ಬದಲಿಸಿ ತಮ್ಮ ಬಚ್ಚಿಕೂತ ಸ್ಥಳದಿಂದ ಹೊರಬರುತ್ತವೆ. ಮಾನವ ಶರೀರದ ಕೆಲವೊಂದು ಜೀವಾಣುಗಳ ಮೇಲೆ ಚಂದ್ರರಶ್ಮಿಗಳು ಪ್ರಭಾವ ಬೀರುತ್ತವೆಂದು ವಿಜ್ಞಾನಿಗಳು ನಂಬುತ್ತಾರೆ."

ಮೊಸಳೆ ಪ್ರಸ್ತಕ್ಕೆ ಸಂಗೀತ

ಸಂಯುಕ್ತ ಅಮೇರಿಕದ ಬ್ರೂಕ್‌ಫೀಲ್ಡಿನ ಮೃಗಾಲಯದ ಮೇಲಾಧಿಕಾರಿಗಳಾದ ರೋಬರ್ಟ್ ಸ್ನೈಡಿಗರ್ ಎಂಬವರು ಮೊಸಳೆಗಳನ್ನು ಪ್ರಣಯಮಗ್ನರನ್ನಾಗಿ ಮಾಡುವ ಕೆಲವೊಂದು ಸಂಗೀತ ರಾಗಗಳನ್ನು ಕಂಡುಹಿಡಿದಿರುವರು ಅವು ಸಂಯೋಗಗೊಳ್ಳುವ ಋತುವಿನಲ್ಲಿ ಸಂಗೀತವು ಅವರನ್ನು ಹೆಚ್ಚು ಆಕರ್ಷಿಸುತ್ತದೆಯಂತೆ. ತನ್ನ ಮೃಗಲಾಯದಲ್ಲಿರುವ ಹೆಣ್ಣು ಗಂಡ ಮೊಸಳೆಗಳನ್ನು ಒಟ್ಟುಗೂಡಿಸಲು ಹಲವು ಪ್ರಯತ್ನಗಳನ್ನು ಮಾಡಿ ನಿರಾಶರಾದ ಮೇಲೆ ಅವರು ನಗರದಿಂದ ಮೂರು ತಜ್ಞರಾದ ಸಂಗೀತವಾದ್ಯಗಾರರನ್ನು ಕರೆಸಿ ಕೆಲವೊಂದು ನಿರ್ದಿಷ್ಟ ರಾಗಗಳನ್ನು ಬಾರಿಸುವಂತೆ ನಿರ್ದೇಶಿಸಿದರು. ಆಗ ಗಂಡು ಮೆಲ್ಲನೆ ನೀರಿನಿಂದ ಹೊರಬಂದು ಹೆಣ್ಣನ್ನು ಅನುಸರಿಸಿ ಹೋಯಿತಂತೆ. ಬರುವ ವರ್ಷ ಮೊಸಳೆ ಮರಿಗಳ ಸುಗ್ಗಿಯೊಂದನ್ನೇ ಕೊಯ್ಯಲು ಸ್ನೈಡಿಗರರು ನಿರೀಕ್ಷಿಸುತ್ತಾರೆ.

ಕರು ಹಾಕುವ ಮುಂಚೆ ಹಾಲು

ಇಜತ್ನಗರ್ ನಗರದ ಪಶುಶಾಸ್ತ್ರ ಸಂಶೋಧನಾಲಯದವರು ಕರು ಹಾಕುವ ಮುಂಚೆ ದನಗಳಿಂದ ಹಾಲು ತೆಗೆಯುವ ವಿಧಾನದ ಕುರಿತು ನಡೆಸಿದ ಸಂಶೋಧನೆಗಳು ಫಲಪ್ರದವಾಗುತ್ತ ಬಂದಿವೆಯಂತೆ ಸ್ಟಿಲ್ಬೋಸ್ಟ್ರಾಲಿನ ಮಾತ್ರೆಗಳನ್ನು ದನದ ಗಂಟಲ ಬಳಿಯ ಚರ್ಮದಲ್ಲಿ ತುರುಕಿಸುವುದರಿಂದ ಹಾಲು ಗ್ರಂಥಿಗಳು ಪ್ರಚೋದಿಸಲ್ಪಡುತವೆ. ಸ್ವಲ್ಪ ಅವಧಿಯ ನಂತರ ಈ ಮಾತ್ರೆಗಳು ತೆಗೆಯಲ್ಪಡುತ್ತವೆ ಇದು ಸಂಪೂರ್ಣ ಯಶಸ್ವಿಯಾದಾಗ ನಮ್ಮ ದೇಶದ ಹಾಲಿನ ಕೊರತೆಯು ಬಹಳ ಮಟ್ಟಿಗೆ ನೀಗಬಹುದೆಂದು ನಿರೀಕ್ಷಿಸಲ್ಪಡುತ್ತದೆ

★

ಆಹಾರ ಸಂಬಂಧದಲ್ಲಿ ಹರಿಜನ ಲೇಖ

ಇಂಗ್ಲಿಷ್ ಮತ್ತು ಹಿಂದೀ ಜನತೆಯ ಕ್ರಮ ಬದಲಾವಣೆ

ಶ್ರೀಯುತ ಜೆ ಸಿ ಕೇಮಾರಪ್ಪನವರು 'ಕಳಕೊಂಡ ಸಂದರ್ಭ' ಎಂಬೊಂದು ಹರಿಜನ ಪತ್ರಿಕಾ ಲೇಖದಲ್ಲಿ ಹೀಗೆ ಬರೆಯುತ್ತಾರೆ

ಬ್ರಿಟಿಷ್ ಜನರ ಪ್ರಾಮುಖ್ಯ ಆಹಾರವೆಂದರೆ ಮಾಂಸ. ಯುದ್ಧದಿಂದ ಅವರ ಆಹಾರ ಸೇವನೆಯ ಕ್ರಮಗಳೆಲ್ಲ ತಲೆಕೆಳಗಾದವು ಇಂದು ಆ ಜನರು ತಮ್ಮ ಪೂರ್ಣವ ಆಹಾರ ವಸ್ತು ವಿಧಾನಗಳನ್ನು ಬದಲಿಸಿರುವರು. ಮಾಂಸ ಪ್ರಧಾನವಾದ ಆಹಾರದಲ್ಲಿ ದವಸ ಧಾನ್ಯಗಳಿಗೆ ಸಹಜವಾಗಿ ಎರಡನೇ ಸ್ಥಾನ ಸಲ್ಲುವುದು ಇಷ್ಟಾದರೂ ಅಲ್ಲಿನ ಸರಕಾರವು ತಮ್ಮ ಜನಾಂಗದ ಆವಶ್ಯಕತೆಗಳನ್ನು ಅಲಕ್ಷಿಸಿಲ್ಲ ಒಂದು ಕಾಲದಲ್ಲಿ ಅಲ್ಲಿ ತುಂಬಾ ಸಿಗುತ್ತಿದ್ದ ಬಿಳಿ ರೊಟ್ಟಿಯು ಈಗ ಸಿಗುತ್ತಿಲ್ಲ ಗೋಧಿಯೊಳಗಿನ ಪೋಷಕ ವಸ್ತುಗಳನ್ನು ಬಿಸಾಡಿ ಬಿಟ್ಟು ಇದನ್ನು ತಯಾರಿಸುವುದರ ಅವಿವೇಕತನವನ್ನವರಿಂದು ತೊಡೆದುಹಾಕಿರುವರು ಆದರ ಜನಾಂಗವಿಂದು ಅತ್ಯಾವಶ್ಯಕ ಆಹಾರ ವಸ್ತು ಕೊರತೆಯಿಂದ ನರಳುತ್ತಿದೆ ಅಂತೇ ಇಂದವರು ಗೋಧಿಯ ಇಡೀ ಕಣಗಳಿಂದ ಮಾಡಲ್ಪಟ್ಟ ಕಂದು ರೊಟ್ಟಿಗಳನ್ನೇ ಬಳಸುತ್ತಿದ್ದಾರೆ.

ಆದರೆ ನಮ್ಮ ದೇಶದಲ್ಲಿ?

ಮೇಲಿನ ನಿದರ್ಶನಕ್ಕೆ ನಮ್ಮ ದೇಶದೊಂದು ಪ್ರತಿ ವಿರುದ್ಧ ಉದಾಹರಣೆ ನಮ್ಮದು ಧಾನ್ಯ ಪ್ರಧಾನ ಆಹಾರ ಧಾನ್ಯಗಳೇ ನಮ್ಮ ಪೋಷಣೆಯ ಜೀವಾಳ ಅಂತೆಯೇ ನಮ್ಮ ಸಾಮಾನ್ಯ ಜನತೆ ಅಕ್ಕಿಯ ಮೇಲೆ ಹೊಂದಿಕೊಂಡಿದೆ ನಮ್ಮ ಆಹಾರ ವಿತರಣೆ ಖಾತೆಗಳು ಆದೆಷ್ಟು ಸರ್ಕಾರ ನಿರ್ಧಾರದವುಗಳೆಂದರೆ ನಮ್ಮ ಸರಕಾರಿ ರೇಶನ್ ಅಂಗಡಿಗಳಲ್ಲಿ ಕೂಡಾ ಜನರಿಗೆ ಮಿಲ್ಲು ತಯಾರಿತ ಪೆಟ್ಟು ತೆಗೆದ ಅಕ್ಕಿ ಮಾರಲ್ಪಡುತ್ತದೆ ಅಕ್ಕಿ ಗಿರಣಿಗಳನ್ನು ರದ್ದು ಮಾಡಿ ಜನರಿಗೆ ಆರೋಗ್ಯಕರ ಪೆಟ್ಟು ತೆಗೆಯಲ್ಪಡದ ಅಕ್ಕಿಯನ್ನು ಸರಬರಾಜು ಮಾಡುವ ಒಂದು ಸುಸಂದರ್ಭವನ್ನು ನಾವು ಕಳೆದುಕೊಂಡ ಹಾಗಾಗಲಿಲ್ಲವೇ? ನಮ್ಮ ಜನತೆಯ ಪೋಷಣಾವಸ್ತುಗಳ ನಾಶ್ಯವಾದರೂ ಹೆಚ್ಚುತ್ತಿರಲಿಲ್ಲವೇನು? ಈಗಲಾದರೂ ಈ ಕೊರತೆಯನ್ನು ಸರಿಪಡಿಸಲು ವಿಳಂಬವಾಗಲಿಲ್ಲ

ಚಿಕ್ಕಸುದ್ದಿ ಸಂಗ್ರಹ

ಒರಿಸ್ಸಾ ಪ್ರಾಂತ್ಯದಲ್ಲಿರುವ ಸೋನೇಪುರ ಸಂಸ್ಥಾನಾಧೀಶರು ತಮ್ಮ ಸಂಸ್ಥಾನದೊಳಗೆ ಮಹಾತ್ಮಾ ಗಾಂಧಿಯವರ ಹೆಸರನ್ನು ಕೂಡ ಯಾರೂ ಎತ್ತಬಾರದೆಂಬಾಜ್ಞೆಯನ್ನು ಜಾರಿ ಮಾಡಿರುವರು ತಪ್ಪಿತಸ್ಥರಿಗೆ 6 ತಿಂಗಳ ಸಜೆಯೂ 50 ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಡುವುದು

✠

ಎಲ್ಲೋರಿನ ಬಳಿ ಶಾಸ್ತ್ರಿ ಎಂಬಾತ ತನ್ನ ನಾಲ್ಕು ವರ್ಷದ ಮಗುವಿನ ಕೈಯ ಉಂಗುರವನ್ನು ತೆಗೆದು ಹುಡುಗನನ್ನು ಗೋದಾವರಿ ನದಿಯಲ್ಲಿ ಮುಳುಗಿಸಿ ಕೊಂದನು. ಜಗಳಗಂಟಿಯಾದ ಹೆಂಡತಿಯ ಮೇಲೆ ಪ್ರತಿಕಾರ ತೆಗೆದುಕೊಳ್ಳುವುದು ಅವನ ಉದ್ದೇಶವೆಂದು ಹೇಳಲಾಗಿದೆ

✠

ಬರುವ ವರ್ಷದ ವಿಶ್ವ ಒಲಿಂಪಿಕ್ ಪಂದ್ಯಾಟಗಳನ್ನು ನೋಡಲು ಮಾರಲ್ಪಡುವ ಟಿಕೇಟುಗಳು ಈಗಾಗಲೇ ಮಾರಿ ಹೋಗಿವೆ ಭಾರತೀಯರ ಹೊಕ್ಕಿ ಆಟ ನೋಡಲು ವಿಶೇಷ ಸ್ಥಳಗಳ ಏರ್ಪಾಡು ಮಾಡಬೇಕೆಂದು ಅರಿಕೆ ಮಾಡುವ ಅರ್ಜಿಗಳ ರಾಶಿ ಬಿದ್ದಿದೆ

✠

ಅಮೇರಿಕದ ಅತೀ ವೃದ್ಧ ವೈಮಾನಿಕನಾದ ಮಿ। ಜೇಮ್ಸ್ ಮೊಂಟ್ಗಿ ಎಂಬವ ಫ್ಯಾಲಿಥನು ತನ್ನ 85ನೇ ಜನ್ಮ ದಿನವನ್ನು ವಿಮಾನವೊಂದರೊಳಗೇ ಆಚರಿಸಿದ. ಕುಟುಂಬ ಸಮೇತನಾಗಿ ಅವನು ತನ್ನೂರಿನ ಒಂದು ಸುತ್ತು ತೆಗೆದ

✠

ಸಿನ್ಸಿನ್ನಟಿ ಎಂಬುದು ಅಮೇರಿಕದ ಮಾದರಿ ನಾಗರೀಕರಿರುವ ನಗರವೆಂದು ಪರಿಗಣಿಸಲ್ಪಟ್ಟಿದೆ. ಯುಕ್ತ ಜನಾಂಗ ಸಂಘದ ಅಧಿಕಾರಿಗಳು ತಮ್ಮ ಸಂಘದ ಕುರಿತು ಅಲ್ಲಿನ ನಾಗರೀಕರಲ್ಲಿ ಯಾವ ತರದ ಸನಭಿಪ್ರಾಯವಿದೆಯೆಂದು ತಿಳಕೊಳ್ಳಲೋಸುಗ ಒಂದು ಮತಗಣನೆ ನಡೆಸಿದಾಗ ಅಲ್ಲಿನ ಮೂರನೇ ಒಂದಾಂಶದಷ್ಟು ಜನರಿಗೆ ಈ ವಿಶ್ವ ಸಂಘ ಅಸ್ತಿತ್ವದಲ್ಲಿದೆಯೆಂಬ ಸಂಗತಿಯೇ ಗೊತ್ತಿಲ್ಲವೆಂದು ತಿಳಿದು ಬಂತು!

✠

ಜಪಾನಿನ ರಾಜ ಕುಟುಂಬದವರಿಗೆ ಪೆನ್ಶನ್ ಕೊಡಲು ವರ್ಷಕ್ಕೆ 750 ಸಾವಿರ ಪವನುಗಳಷ್ಟು ಖರ್ಚಿದೆ ಅವರು ಇತರರಿಗಿಂತ ಸ್ವಲ್ಪ ಹೆಚ್ಚು ತೆರಿಗೆ ಕೊಡುವುದಾದರೆ ಅವರಿಗೆ ತಮ್ಮ ಹಿಂದಿನ ಆಸ್ತಿಪಾಸ್ತಿಗಳನ್ನಿಟ್ಟುಕೊಳ್ಳಲು ಬಿಡಲಾಗುವುದು ಆದರೆ ಅವರ ಬಿರುದಾವಳಿಗಳು ತೆಗೆದುಹಾಕಲ್ಪಡುವವು ರಾಜ ಕುಟುಂಬದ ಗೌರವಕ್ಕೆ ಹಾನಿತರುವ ಯಾವ ಉದ್ಯೋಗವನ್ನಾದರೂ ಅವರು ಮಾಡಿಕೊಂಡಿರಲು ಚಕ್ರವರ್ತಿಯು ಅನುಮತಿ ಇತ್ತಿದ್ದಾನೆ

✠

ಬಿಹಾರಿನ ಕಲ್ಲಿದ್ದಲು ಮತ್ತು ಕಬ್ಬಿಣಗನಿ ಪ್ರದೇಶಗಳಲ್ಲಿ ಸ್ತ್ರೀ ಕೆಲಸಗಾರರೇ ಹೆಚ್ಚಾಗಿರುವುದರಿಂದ ಬಿಹಾರ್ ಸರಕಾರದವರು ಆ ಪ್ರದೇಶದ ಶಿಸ್ತು ಸುವ್ಯವಸ್ಥೆಗಾಗಿ ಒಂದು ಸ್ತ್ರೀ ಪೋಲಿಸ್ ಫೌಜನ್ನು ಸ್ಥಾಪಿಸಲು ಯೋಜಿಸಿರುವುದು

✠

ಆನೆಗಳಕ ... ಪ ವಿಶೇಷ ಕಾಡುಗಳಲ್ಲಿ ಅವು ಹಿಂಡು ಹಿಂಡಾಗಿ ವಾಸಿಸುವುದಾದರೂ ಮುದಿ ಆನೆಗಳು ರೋಗಗ್ರಸ್ತವಾದುವುಗಳು ಎಲ್ಲಿ ಹೋಗಿ ಸಾಯುತ್ತವೆಂಬ ಸಂಗತಿಯು ಇದ ತನಕ ಯಾರಿಗೂ ತಿಳಿದು ಬಿಲ್ಲ ಅವುಗಳ ಮೃತ ಶರೀರಗಳೂ ಸಿಗುವುದಿಲ್ಲ ಈಗ ಲಂಡನಿನ ಒರ್ವ ಹಾಲು ಮಾರುವ ತರುಣನಿಗೆ ಈ ರಹಸ್ಯ ತಿಳಿದಿದೆಯಂತೆ ಸದ್ಯದಲ್ಲೇ ಅವನು ಕೆಲವು ತಜ್ಞರನೊಡಗೂಡಿ ಆಫ್ರಿಕಕ್ಕೆ ಹೋಗ ನಿದ್ದಾನೆ

✠

... ಬಿರುಗಾಳಿಗಳನ್ನು ನಾಶಮಾಡುವ, ತೇವ ಪ್ರದೇಶಗಳನ್ನು ಒಣಗಿಸುವ ಮತ್ತು ಹವಾಪರಿಸ್ಥಿತಿಯನ್ನು ಬದಲಿಸಲು ಸಾಧ್ಯವಾಗುವ ದಿನಗಳು ಶೀಘ್ರ ಬರುತ್ತಿವೆ ಆಗ ಪ್ರತಿಯೊಂದು ಪ್ರದೇಶವೂ ಕೆಲಿಫೋರ್ನಿಯದಂತೆ ಫಲವತ್ತಾದ ಧಾನವಾಗುವುದು ಹೀಗೆಂದು ಚಿಕಾಗೋದ ಹವಾ ಸ್ಥಿತಿ ತಜ್ಞ ರಿಚೆ ಡೆರ್‌ಪಾರನ ತಿಳಿಸುತ್ತಾನೆ ಈಗಾಗಲೇ ಮೋಡಗಳನ್ನು ಕೆಲವೊಂದು ರಾಸಾಯನಿಕ ಪದಾರ್ಥಗಳ ಬಾಂಬು ಸಿಡಿಸಿ ಮಳೆ ತರಿಸುವ ವಿಧಾನ ಯಶಸ್ವಿಯಾಗಿದೆ

✠

ಅಯೋಧ್ಯಾ ನಗರದಲ್ಲಿ ಸುಮಾರು 2 ಸಾವಿರ ವರ್ಷಗಳ ಹಿಂದಿನೊಬ್ಬ ಹಿಂದೂ ಅರಸನ ಚಿನ್ನದ ನಾಣ್ಯಗಳು ಕೆಲವು ದೊರಕಿವೆ

✠

ಕಡಿತ, ಘಾಯ, ಚರ್ಮ ಘಾತಗಳಿಗೆ
ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ



550

ಕುಟಿಕೂರಾ ಮುಲಾಮು
CUTICURA OINTMENT

ಪ್ರತಿಯೊಬ್ಬ ವ್ಯಕ್ತಿಯ ಜೀವಾಳದ ಪ್ರಶ್ನೆ

ನಾವು ಸುಖಿಗಳಾಗುವುದು ಹೇಗೆ? (ಸುಖವೆಲ್ಲಿ?)

[ಬರೆದುದು—ಸಾಮುವಾದಿ]

ಕಳೆದ ಸಂಚಿಕೆಯಿಂದ ಮುಂದುವರಿದುದು)

(೮) ಕುಟುಂಬದಲ್ಲಿಯ ಕಲಹ

ಇದು ನಮ್ಮ ದುಃಖದ ಇನ್ನೊಂದು ವಿಧಾನವಾಗಿದೆ. ಪತಿಪತ್ನಿಯರಲ್ಲಿ ಕಲಹ, ತಾಯಿ ತಂದೆ ಮಕ್ಕಳಲ್ಲಿ ಕಲಹ, ಅಣ್ಣ ತಮ್ಮಂದಿರಲ್ಲಿ ಕಲಹ, ಇದೇ ಪ್ರಕಾರದ ಅನೇಕ ಘಟನೆಗಳು ಸಂಭವಿಸುತ್ತವೆ ನಮ್ಮ ಸಮಾಜದಲ್ಲಿ ಸದ್ಯದ ಸಂಕ್ರಮಣಾವಸ್ಥೆಯು ಈ ತರದ ಕಲಹಕ್ಕೆ ಬಹಳ ಕಾರಣವಾಗಿರುತ್ತದೆ ಹಿಂದಿನ ಜನರ ಆಚಾರ ವಿಚಾರ—ಉಚ್ಚಾರಗಳಲ್ಲಿ ಎಷ್ಟೋ ವೇಗದಿಂದ ವ್ಯತ್ಯಾಸನ್ನಾಗಿ ಪರಿಣಮಿಸುತ್ತದೆ, ಅಂದರೆ ಹೊಸ ಹಳತಿನ ಜಗಳ ಇದು ನಮ್ಮ ಕುಟುಂಬದ ಜೀವನದಲ್ಲಿ ನಿತ್ಯದ ಕೆಲಸವೇ ಆಗಿ ಹುಟ್ಟಾಗಿ ನೋಡುತ್ತಿದೆ ತಾಳ್ಮೆ, ತಿಳಿವಳಿಕೆ, ಪ್ರೀತಿ, ಧೈರ್ಯ ಮತ್ತು ಸೌಹಾರ್ದತೆಯಿಂದ ತೆಗೆದುಕೊಳ್ಳಬೇಕಾದ ವೃತ್ತಿ ಇದರ ಮೇಲಿನ ಸದುಪಾಯವಾಗಿದೆ. ಕುಟುಂಬದಲ್ಲಿ ಹಿರಿಯರು ಕಿರಿಯರ ಭೂಮಿಕೆಯಲ್ಲಿ ಹೊಕ್ಕು ಒಂದು ವೇಳೆ ಅವರ ಪ್ರಶ್ನೆಯ ಕಡೆಗೆ ಲಕ್ಷ್ಯ ಕೊಡಬೇಕು ಮತ್ತು ಕಿರಿಯರು ಹಿರಿಯರ ದೃಷ್ಟಿಕೋನದೊಳಗಿಂದ ಅವರ ಪ್ರಶ್ನೆಯ ಕಡೆಗೆ ನೋಡಬೇಕು ಆಗ ಎಷ್ಟೋ ಕಲಹದ ನಿರಾಶೆಯು ಸ್ಪಷ್ಟವಾಗಿ ಕಾಣುವುದು ಯಾವ ಕುಟುಂಬದಲ್ಲಿ ತಿಳಿವಳಿಕೆ ಜನರಿಗೆ ತಿಳಿವಳಿಕೆಯ ಅಭಾವವಿರುತ್ತದೋ, ಅಲ್ಲಿ ಉಳಿದ ಜನರು ತ್ಯಾಗದ ಸಿದ್ಧತೆಯನ್ನು ತೋರಬೇಕು ತ್ಯಾಗದ ಈ ಕಲ್ಪನೆಯು ನಮ್ಮ ಕಡೆಯಿಂದ ಕುಟುಂಬದಲ್ಲಿ ಹೊಸತೆಂದಲ್ಲ ನೀವು ನಿಮ್ಮ ಸುತ್ತಮುತ್ತಿನ ಕುಟುಂಬದ ಕಡೆಗೆ ದೃಷ್ಟಿ ಹೊರಳಿಸಿದರೆ ಅದರಿಂದ ಕುಟುಂಬದಲ್ಲಿಯ ಜನರ ಸುಖಕ್ಕೋಸ್ಕರ ತಮ್ಮ ಸುಖದ ಮೇಲೆ ಅಂಗಾರಕ ದೃಷ್ಟಿ ತೋರಿಸುವ ಎಷ್ಟೋ ಸ್ತ್ರೀಪುರುಷರು ತೋರಿಬರದವರು! ಈ ತ್ಯಾಗಿ ಜನರು ತಮ್ಮ ಕೆಲವು ಸುಖಕ್ಕೋಸ್ಕರ ಅಂಟಿಕೊಂಡಿರುತ್ತಾರೆ ಎಂದು ನಿಜ, ಆದರೆ ಅದರಿಂದ ಸಿಕ್ಕುವ ಸಮಾಧಾನದ ಸುಖವು ಅವರ ಸ್ವಂತ ಸೊತ್ತುಗಳದ್ದೇ ಆಗಿದ ಈ ದಿವ್ಯ ಸುಖವನ್ನು ಅವರಿಂದ ಯಾರಿಗೂ ಜಂಡಿಸಿ ತೆಗೆದುಕೊಳ್ಳಲಿಕ್ಕೆ ಆಗಲಿಕ್ಕಿಲ್ಲ ಇಷ್ಟರವರೆಗೆ ಮಾನವನ ದುಃಖದ ಕಾರಣಗಳು ಯಾವುದು ಮತ್ತು ಆ ದುಃಖದ ಪರಿಹಾರವನ್ನು ಹೇಗೆ ಮಾಡಬಹುದು ಎಂಬ ಈ ದೃಷ್ಟಿಯಿಂದಲೇ ನಾವು ವಿಚಾರ ಮಾಡಿದೆವು. ಆದರೆ ಚತುರ ವೈದ್ಯನಿಗೆ ರೋಗದ ಮೇಲಿನ ಔಷಧದಷ್ಟೇ ಮಾಹಿತಿಯಿದ್ದರೆ ಸಾಲದು ಅಂದರೆ ರೋಗವು ಇನ್ನು ಮುಂದೆ ರೋಗಿಗೆ ತಗಲದ ಹಾಗೆ ಏನು ಮಾಡಬೇಕೆಂಬ ಪರಿಜ್ಞಾನವು ಕೂಡ ಅವನಿಗೆ ಅವಶ್ಯವಾಗಿ ಗೊತ್ತಿರಬೇಕು ಈ ದೃಷ್ಟಿಯಿಂದ ದುಃಖದ ನಿರ್ಮೂಲವನ್ನೇ ಮಾಡುವ ಉದ್ದೇಶದಿಂದ ಜೀವನದ ವಿಷಯ ಹಲವು ತತ್ವಜ್ಞಾನವನ್ನು ನಾವು ಸಂಪಾದಿಸಿಕೊಳ್ಳಬೇಕು ಅಲ್ಲದೆ, ಆ ಜ್ಞಾನವನ್ನು ನಮ್ಮ ಅಂಗಾಂಗಗಳಲ್ಲಿ ಪಕ್ವ ಮಾಡಿಸಿಕೊಳ್ಳಬೇಕು

ಜೀವನದ ವಿಷಯ ತತ್ವಜ್ಞಾನ

ತತ್ವಜ್ಞಾನದ ವಿಚಾರ ಮಾಡುವುದಕ್ಕಿಂತ ಮೊದಲು ಸುಖಸಂಪಾದನೆಗೋಸ್ಕರ ಅಗತ್ಯವಿರುವ ಒಂದೆರಡು ನಿಯಮಗಳನ್ನು ವಿಚಾರಮಾಡುವ ಒಂದನೇಯದಾಗಿ ಆರೋಗ್ಯವನ್ನು ಹೇಗೆ ಸಂಪಾದಿಸಿಕೊಳ್ಳಬೇಕೆಂಬುದು ಸ್ವತಂತ್ರ ವಿಚಾರವಾಗಿದೆ. ಆದರೆ ಸೂತ್ರರೂಪದಿಂದ ಆ ವಿಷಯವನ್ನು ಹೀಗೆ ಮಂಡಿಸಬಹುದು ಸ್ವಾದಾ ಕೊಟ್ಟಣ ಅಕ್ಕಿಯ ಅನ್ನ, ನಿಯಮಿತವಾದ ಆಹಾರ ವಿಹಾರ, ವ್ಯಾಯಾಮ, ಸ್ವಚ್ಛವಾದ ಗಾಳಿ ಮತ್ತು ಸೂರ್ಯ ಪ್ರಕಾಶ, ಮಿತವಾದ ವಿಶ್ರಾಂತಿ, ಅಂತರ್ಬಾಹ್ಯ ಸ್ವಚ್ಛತೆ ಮತ್ತು ಮಾನಸಿಕ ಪ್ರಸನ್ನತೆ ಇವುಗಳ ಸಹಾಯದಿಂದ ನಮಗೆ ಆರೋಗ್ಯವನ್ನು ದಕ್ಷತೆಯಿಂದ ಇಟ್ಟುಕೊಳ್ಳಬಹುದು ಆರೋಗ್ಯದ ಅಭಾವವು ಎಷ್ಟೋ ತರದ ದುಃಖಕ್ಕೆ ಕಾರಣವಾಗುತ್ತದೆ ಅದೂ ಅಲ್ಲದೆ ಆರೋಗ್ಯದ ಅಭಾವದಿಂದ ನಮ್ಮ ಜೀವನದ ಮಾಧುರ್ಯವನ್ನು ನೆಲೆಗೊಳಿಸಲಿಕ್ಕೆ ಬರುವುದಿಲ್ಲ. ಈ ದೃಷ್ಟಿಯಿಂದ, ಆರೋಗ್ಯವನ್ನು ರಕ್ಷಿಸುವುದು ಸುಖದ ಸಂಬಂಧಕ್ಕೋಸ್ಕರ ಅವಶ್ಯವಾಗಿದೆ ಮತ್ತೊಂದು ವಿಷಯವೇನಂದರೆ ಮಾನಸಿಕ ಆರೋಗ್ಯ ಶರೀರದ ಆರೋಗ್ಯವನ್ನು ಕಾಪಾಡುವುದಕ್ಕೋಸ್ಕರ ಮಾನಸಿಕ ಪ್ರಸನ್ನತೆಯು ಅಗತ್ಯವಿರುತ್ತದೆಂಬ ಸಂಗತಿಯು ಮೇಲೆ ಒಂದಿರುತ್ತದೆ ಆದರೆ ಈ ಬಿದ್ದು ಹೋದ ಉಲ್ಲೇಖಿಸಿದ ಮಾನಸಿಕ ಆರೋಗ್ಯದ ಮಹತ್ವವು ಒಕ್ಕೊಕ್ಕೆ ಎನಿತ್ತದೆ ವಸ್ತುವಿಕವಾಗಿ ಇದು ಪ್ರತ್ಯೇಕ ಪರಿಚ್ಛೇದದ ವಿಷಯಕ್ಕೋಸ್ಕರ ಯೋಜಿಸಿರುತ್ತದೆ ಬೇರೆ ಬೇರೆ ರೋಗದಿಂದ ಶರೀರವು ಟೊಳ್ಳಾಗಿ ಹೋಗುವುದರಿಂದ ಸಂತಾಪ, ಅಸೂಯೆ, ಶೋಕಜ್ವಾಲೆ, ಅಸಂತೋಷ ಅಪರಿಮಿತವಾದ ವ್ಯಾಧಿಯಂತಹ ಕ್ಷೋಭೆ ಕಾರಕವಾದ ಕಾರಣದಿಂದ ಮನಸ್ಸಿನ ಆರೋಗ್ಯವು ಕುಸಿದು ಬೀಳುತ್ತದೆ ಆಗ ಈ ತರದ ವಿಕಾರಕ್ಕೆ ವಿಚಾರದ ಧೃಡತ್ವವನ್ನು ಇಡುವುದು ಎಲ್ಲಾ ದೃಷ್ಟಿಯಿಂದಲೂ ಆವಶ್ಯಕವಾಗಿರುತ್ತದೆ ಮೇಲೆ ಹೇಳಿದ ಸಂಗತಿಯನ್ನು ನಮ್ಮ ತಿಳಿವಳಿಕೆಗೆ ತೆಗೆದುಕೊಂಡರೆ, ಜೀವನದ ಕಡೆಗೆ ನೋಡುವ ನಮ್ಮ ದೃಷ್ಟಿಕೋನವು ತನ್ನಷ್ಟಕ್ಕೇನೇ ಆಶಾದಾಯಕವಾಗಿ ತೋರುವುದು. ಹೀಗೆ ಸ್ವಲ್ಪ ಮಟ್ಟಿಗಾದರೂ ಆಗದಿದ್ದರೆ, ಅದು ಆಗಬೇಕೆಂದೇ ನಾವು ಬುದ್ಧಿಪುರಸ್ಸರವಾಗಿ ಪ್ರಯತ್ನ ಮಾಡಬೇಕು. 'ಖಾಲಿ ಮನಸ್ಸಿನೊಳಗೆ ಭೂತವು ತನ್ನ ಕಾರ್ಖಾನೆಯನ್ನು ತೆರೆಯುತ್ತದೆ,' ಎಂದು ಇಂಗ್ಲಿಷ್ ಭಾಷೆಯಲ್ಲಿ ಈ ಅರ್ಥದ ಒಂದು ಗಾದೆ ಅದರಲ್ಲಿ ತುಂಬಾ ಅರ್ಥವಿದೆ ನಮ್ಮ ನಿತ್ಯದ ವ್ಯವಹಾರವು ಮುಗಿದ ನಂತರ, ಎಷ್ಟೆಷ್ಟು ಸಮಯ ದೊರೆಯುತ್ತದೊ ಅದರ ವಿನಿಯೋಗವನ್ನು ಏನಾದರೊಂದು ಆನಂದ ಅಥವಾ ಕಲೆಯ ಕಡೆಗೆ ಉಪಯೋಗಿಸಬೇಕು ವಾಚನ, ಲೇಖನ, ಸಂಗೀತ, ವಾದನ, ತೋಟ, ಫೋಟೊಗ್ರಾಫ ಚಿತ್ರಕಲೆ ಮುಂತಾದ ಎಷ್ಟೊ ಸೌಂದರ್ಯ ವಸ್ತುಗಳಿವೆ, ಅದರೆ ಅವುಗಳಿಂದ ನಮ್ಮಲ್ಲಿ ಎಷ್ಟೋ ಆನಂದದ ಸುಗಂಧ ಬೆಳೆಯುತ್ತದೆ ಗೆಳೆಯ ಗೆಳತಿ, ಇಷ್ಟಮಿತ್ರ, ಇವರೊಟ್ಟಿಗೆ ಸೇರಿ ಸುಖದುಃಖದ ಸಂಗತಿಗಳನ್ನು ಮಾತನಾಡುವುದು ತರತರದ ಆಟವನ್ನು ಆಡುವುದು ವನವಿಹಾರ ಮತ್ತು ಪ್ರವಾಸ ಮಾಡುವುದು ಮುಂತಾದ ಎಷ್ಟೊ ವಿಷಯಗಳಿವೆ ದಿನಕ್ಕೆ ಅರ್ಧ ಘಂಟೆ ಬಾದರೂ ನಗೆ ವಿನೋದದಿಂದಿರಬೇಕು. ನಗೆಯ ಹೊಳೆಯ ಉಲ್ಲಾಸದಿಂದ ಇಲ್ಲದ ಊಟದ ಹಾಗೆ, Laugh and grow fat ಎಂದು ಇಂಗ್ಲಿಷಿನಲ್ಲಿ ಹೇಳುತ್ತಾರೆ. ನಕ್ಕು ನಕ್ಕು ಹೊಟ್ಟೆ ಬೆಳೆಸು ಎಂದು ತನ್ನ ತಪ್ಪನ್ನು ಬೆನ್ನಿಗಟ್ಟಿ ಅನ್ಯರ ತಪ್ಪು ಎಣಿಸುವವನಿಗೆ ಬೆಳೆಯುವುದು ಹೊಟ್ಟೆಯಲ್ಲ, ಗರ್ವ. ಹಾಸ್ಯವು ನಯವಾಗಿ, ಹಗುರವಾಗಿ, ಶುಚಿಯಾಗಿ, ಸಭ್ಯವಾಗಿ ಇರಬೇಕಾದರೆ ನಮ್ಮ ಕಣ್ಣೆದುರಿಗೇ ಕನ್ನಡಿ ಹಿಡಿದುಕೊಳ್ಳುವ ಯೋಗ್ಯತೆ ಬೇಕು. ಅಂಥಲ್ಲಿ ಗಾಯಕ್ಕೆ ಮದ್ದನ್ನು ಕತ್ತಿಗೇ ಸವರಿ ಹೊಡೆವ ಹಾಗೆ ಬೈಯುತ್ತಲೇ ನಗಿಸುವ ಹಾಸ್ಯ ಕುಶಲತೆ' ತಲೆದೋರುತ್ತದೆ ಇವುಗಳಿಂದ ನಮ್ಮ ಜೀವನದಲ್ಲಿ ಆನಂದಮಯ ಸುಖವನ್ನು ಊರ್ಜಿತಗೊಳಿಸಲಿಕ್ಕೆ ಬರುತ್ತದೆ ಪಾಲುಗಾರರು ದೊರೆತರೆ ಸುಖವು ಕಡಮೆಯಾಗುವ ಬದಲು ವಿಸ್ತಾರವಾಗುವುದು. ಇದೊಂದು ಸುಖದ ವೈಶಿಷ್ಟ್ಯವಲ್ಲವೇ?

ಫ್ರಾನ್ಸಿನಲ್ಲಿ ನಾಬೂನಿಗೂ ರೇಶನಿದೆ ಜೀನ್ ಲೈಗ್ರೆಟ್ ಎಂಬ ಫ್ರೆಂಚ್ ಪ್ರೊಫೆಸರರೊಬ್ಬರು ತಮಗೆ ಸಿಗುವ ಸಾಬೂನು ಪಡಿಯಿಂದ ಪೆಟ್ರೋಲು ಎಣ್ಣೆಯನ್ನು ತೆಗೆಯುವ ವಿಧಾನವನ್ನು ಕಂಡುಹಿಡಿದು ಅದನ್ನು ತಮ್ಮ ಮೋಟಾರು ಸ್ಕೂಟರಿಗೆ ಉಪಯೋಗಿಸುತ್ತಿರುವರಂತೆ

✠

ಅಮೇರಿಕನ್ ವಿವಾಹ ಕಾಯಿದೆ ಪ್ರಕಾರ ಓರ್ವನು ತಾನು ವಿಚ್ಛೇದಿಸಿ ಬಿಟ್ಟುಬಿಟ್ಟ ಹೆಂಡತಿಯ ತಂಗಿಯನ್ನು ಮದುವೆ ಮಾಡಿಕೊಳ್ಳಲಾಗದು. ಆದರೆ ವಿಚ್ಛೇದಿಸಲ್ಪಟ್ಟವಳು ತನ್ನ ಮಾಜಿ ಗಂಡನ ತಮ್ಮನನ್ನು ಮದುವೆಯಾಗುವುದರ ಕುರಿತು ಯಾವ ನಿಷೇಧವಿಲ್ಲ

✠

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಯಾಂಡಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲೈನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳುವುದು ತಿಳಿದುಬರುತ್ತದೆ ಇದರಿಂದ ಸ್ಥಳವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳೆಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು.
29-3-1947.

ಜೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up ..	Rs. 15,98,220
Reserves ..	Rs. 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದೀಪಾವಳಿಯ ಶುಭಸಂದೇಶಗಳು

ನಮ್ಮ ಎಲ್ಲಾ ಪೊಲಿಸಿಧಾರರಿಗೆ, ವೈದ್ಯಕೀಯ ಪರೀಕ್ಷಕರಿಗೆ, ಏಜಂಟರಿಗೆ ಮತ್ತು ಹಿತಚಿಂತಕರಿಗೆ

ದೀಪಾವಳಿ ಮತ್ತು ಮುಂಬರುವ ವರುಷವು ಶುಭದಾಯಕವಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದುಸ್ಥಾನ, ಮೈಸೂರು, ಟ್ರಾವನ್ಕೂರ್,

—o— ಕೊಚ್ಚಿನ್ ಮತ್ತು ಪುದುಕೋಟೆ ಸಂಸ್ಥಾನಗಳ ಚೀಫ್ ಏಜಂಟರು —o—

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಮದ್ರಾಸು, ಬೆಂಗಳೂರು, ಬೊಂಬ್ಯಾ, ಟ್ರಿವೆಂಡ್ರಮ್,

ಕಲ್ಲಿಕೋಟೆ, ಮಂಗಳೂರು, ಮಧುರಾ, ಮತ್ತು ಉಡ್ಪಿ.

Bhuvanendra Products Limited,

Katapadi S. Kanara.

Head Office & Factory.	Depot Maharata Galli, Hubli.
KATAPADI S Kanara	KUMTA N. Kanara.

ನಮ್ಮ ಏಜಂಟ್, ಸ್ಟಾಕಿಸ್ಟ್, ಗಿರಾಕಿ ವ ಎಲ್ಲಾ ಹಿತಚಿಂತಕರಿಗೆ

ದೀಪಾವಳಿಯ ನಮ್ಮ ಶುಭಾಶಯಗಳು.

ಹೊಸ ವರ್ಷವು ಅನ್ನ, ಬಟ್ಟೆ, ಅನ್ಯೋನ್ಯ ಪ್ರೀತಿ,

ಸುಖ ಶಾಂತಿಯುಕ್ತವಾಗಲಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ - ದಕ್ಷಿಣ ಕನ್ನಡ.

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 21—11—1947 [ಸಂಚಿಕೆ 46]

ಪಾಕಿಸ್ಥಾನ ಪ್ರಧಾನರ ಕುತರ್ಕ ವಿಧಾನ

ಆಳುವ ಅಸಮರ್ಥತೆ ಮುಚ್ಚುವ ಪ್ರಯತ್ನ

ಮದ್ರಾಸ್ ಪತ್ರಿಕೆಯೊಂದರ ವಿವರಣೆ

ಪಾಕಿಸ್ತಾನ ವ್ಯವಸ್ಥಾಪಕರು ತಮ್ಮ ಹೊಸದಾಗಿ ಪಡೆದ ರಾಜ್ಯದ ಆಂತರಿಕ ಆಡಳಿತವನ್ನು ತೃಪ್ತಿಕರವಾಗಿ ನಡೆಸಲು ಸಾಧ್ಯವಾಗುವುದಿಲ್ಲ ಸಂಗತಿ ಲೋಕ ವಿಧಿತವಾಗಿದೆ ಕಾರಣ ಅಲ್ಲಿನ ಸಾಧಾರಣ ಜನತೆಯ ಜೀವನ ಸಮಸ್ಯೆಗಳು ಅಗಾಧವಿರುವುದಾದರೂ ಪಾಕಿಸ್ತಾನ ಆಡಳಿತಗಾರರಲ್ಲಿ ಒಂದನಾಳಿಗೂ ಹಿತಚಿಂತಕರಿರುವರೆಂಬ ಸಂಗತಿಯೂ, ಧರ್ಮ ಗಂಡಾಂತರ ಕಲ್ಪನಾತ್ಮಕ ಬೀತಿಯನ್ನು ಅರಿಕ್ತವಾದ ಹೆಚ್ಚಿನ ತಮ್ಮ ಹಿಂಬಾಲಕರೆದುರಿನಲ್ಲಿ ಪ್ರದರ್ಶಿಸಿಯೇ ಜನರು ಧರ್ಮತತ್ವ ಸಂಕಷ್ಟದ ಪರಿಸ್ಥಿತಿಯ ಅನುಕೂಲತೆಯನ್ನು ಪಡೆದು ಪತ್ಯೇಕ ಸ್ವರಾಜ್ಯವನ್ನು ಪಡೆದು ಯಶಸ್ವಿಯಾದರೆಂಬುದೂ ಸರ್ವ ವಿಧಿತ ಪಾಕಿಸ್ತಾನ ಸ್ಥಾಪನೆಯಾದ ಮೇಲೆ ಅಲ್ಲಿನ ಸರಕಾರ ಮಂಡಳಿವು ಜನರ ಉದ್ಧಾರದ ಕಾರ್ಯಕ್ರಮಗಳನ್ನು ಕೈಕೊಳ್ಳುವುದರ ಬದಲಿಗೆ ನೆರೆಕೆರೆಯ ಪ್ರದೇಶಗಳ ಮೇಲೆ ಹಲ್ಲೆ ಮಾಡುವುದರ ಕಡೆ ತಮ್ಮ ಜನತೆಯ ಗಮನವನ್ನು ತಿರುಗಿಸಲು ಪ್ರಯತ್ನಿಸುತ್ತಿರುವರು ಈ ಕುರಿತ ಮದ್ರಾಸಿನ ಪ್ರಮುಖ ಪತ್ರಿಕೆಯೊಂದು ಇತ್ತೀಚೆಗಿನ ಕಾಶ್ಮೀರ ಮತ್ತು ಜುನಾಗಡಗಳ ಸಂಗತಿಗಳನ್ನು ಸಮನ್ವಯಿಸಿ ಈ ರೀತಿ ಬರೆಯುತ್ತಿದೆ

ಲೀಗ್ ಗುಲ್ಲು

ಜುನಾಗಡದ ಕುರಿತು ಹೊರಡಿಸಿದ ಒಂದು ಹೇಳಿಕೆಯಲ್ಲಿ ಪಾಕಿಸ್ತಾನ ಸರಕಾರವು "ಜುನಾಗಡ ಸಂಸ್ಥಾನಕ್ಕೆ ಸೈನ್ಯವಾದ ಸಹಾಯ ಮಾಡಲಿಚ್ಛಿಸುತ್ತಿದ್ದರೆ ಭಾರತ ಸರಕಾರವು ಅಲ್ಲಿನ ಜನತಾ ಸರಕಾರದ ಚಟುವಟಿಕೆಗಳನ್ನು ನಿಲ್ಲಿಸಬಹುದಿತ್ತು" ಎಂದು ತಿಳಿಸುತ್ತದೆ

ನಾಲ್ಕು ವಾರಗಳ ಹಿಂದೆ ಪಂಡಿತ್ ನೆಹುರುರವರು ಕಾಶ್ಮೀರದೊಳಗೆ ಕೊಳ್ಳೆ ಸುಲಿಗೆಗಳನ್ನು ಮಾಡುತ್ತಿರುವ ಮುಸ್ಲಿಂ ದಾಳಿಗಾರರನ್ನು ತಡೆಯಲು ಪಾಕಿಸ್ತಾನಾಧಿಕಾರಿಗಳಿಗೊಂದು ಮನವಿಯನ್ನು ಮಾಡಿಕೊಂಡಿದ್ದರು.

ಆದರೆ ಕಾಶ್ಮೀರ ಗೊಂದಲವು ಅಲ್ಲಿನ ಡೋಗ್ರಾ ರಜಪೂತ ವಂಶದವರ ದಬ್ಬಾಳಿಕೆಯ ಪರಿಣಾಮದಿಂದ ಒಂದೇ ಸನಸೆವುಂಟಾದ ದಂಗೆಯೆಂದು ಪಾಕಿಸ್ತಾನ ಪ್ರಧಾನ ಲಿಯಾಖತರು ಸಾರುತ್ತಿದ್ದರು

ಸುಳ್ಳಿನ ಕಂತೆ

ಲಿಯಾಖತ್ ಅಲಿಖಾನರು ಹೇಳಿದ್ದು ಶುದ್ಧ ಸುಳ್ಳೆಂದೀಗ ಇಡೀ ಜಗತ್ತೇ ತಿಳಕೊಂಡಿದೆ ಬಹುಸಂಖ್ಯಾಕ ಕಾಶ್ಮೀರಿ ಮುಸಲ್ಮಾನರು ಶೇಕ ಅಬ್ದುಲ್ಲಾರ ಬೆಂಬಲಕ್ಕಿರುವರೆಂಬ ಸಂಗತಿಯೂ, ಅವರು ಭಾರತೀಯ ಸೈನ್ಯದೊಡನೆ ಸಹಕರಿಸಿ ಸಂಸ್ಥಾನದ ದಾಳಿಗಾರರನ್ನು ಉಚ್ಚಾಟನೆ ಮಾಡಲು ಸಹಾಯ ಮಾಡುತ್ತಿರುವರೆಂದೂ ಜಗತ್ತು ಅರಿಯಿತು .

ಲಿಯಾಖತ್ ಅಲಿಖಾನರು ಆಗ ಮುಂದೊಡ್ಡಿದ ವಿವರಣೆಯು ಈಗ ಹೆಚ್ಚಿನ ನ್ಯಾಯತತ್ಪರತೆಯಿಂದ ಜುನಾಗಡಕ್ಕೆ ಅನ್ವಯಿಸಬಹುದಾಗಿದೆ ಮಾತ್ರವಲ್ಲ ಜುನಾಗಡ ದಿವಾನರು ಭಾರತ ಸರಕಾರಕ್ಕೆ ಸಹಾಯ ಮನವಿ ಮಾಡಿಕೊಳ್ಳುವುದರ ಬದಲಿಗೆ ತಾವು ಸೇರಿದ ಪಾಕಿಸ್ತಾನ ಸರಕಾರಕ್ಕೆ ಅದನ್ನು ಮಾಡಿಕೊಳ್ಳಬಹುದಾಗಿತ್ತು. ಅವರು ಹಾಗೆ ಮಾಡಿದ್ದನ್ನು ವಿವೇಚಿಸುವಾಗ ಜುನಾಗಡದ ಚಳವಳವು ಬಹುಸಂಖ್ಯಾಕ ಪ್ರಜಾ ಪ್ರೇರಿತವಾದುದೆಂದೂ, ಜುನಾಗಡವು ಪಾಕಿಸ್ತಾನಕ್ಕೆ ಸೇರಿದ್ದು ಶುದ್ಧ ತಪ್ಪೆಂದೂ ಸ್ಪಷ್ಟವಾಗುತ್ತದೆ

ಹೇಗಾದರೂ ಪಾಕಿಸ್ತಾನ ಈ ಸರಕಾರದ ಬಳಿಯಾಣೆಯು ಸ್ಪಷ್ಟವಿಲ್ಲವಾಗಿ ತಿಳಿಸುತ್ತದೆ ಆದರೆ ಇದು ಬಲಾತ್ಕಾರದ ಒದಲಾವಣೆಯಲ್ಲ ಕಾರಣ ಸಂಸ್ಥಾನವು ಯಾವ ಡೊಮಿನಿಯನ್ನಿಗೆ ಸೇರಬೇಕೆಂದು ಜನಮತಗಣನೆಯಿಂದಲೇ ಇತ್ಯರ್ಥವಾಗಬೇಕೆಂದು ಭಾರತ ಸರಕಾರವು ಸ್ಪಷ್ಟಪಡಿಸಿದೆ ಸರ್ದಾರ್ ವಲ್ಲಭಭಾಯಿ ಪಟೇಲರು ಜುನಾಗಡದ ಸಾರ್ವಜನಿಕ ಸಭೆಯನ್ನುದ್ದೇಶಿಸಿ "ನೀವು ಯಾವುದಕ್ಕೆ ಸೇರಲಿಚ್ಛಿಸುತ್ತೀರಿ ಎಂದು ಪ್ರಶ್ನಿಸಿದಾಗ "ಭಾರತಕ್ಕೆ" ಭಾರತಕ್ಕೆ ಎಂಬ ಏಕಕಂಠದ ಉದ್ಘೋಷವೆದ್ದು ಬಂತು. ಮತ್ತೆ ಪಾಕಿಸ್ತಾನಕ್ಕೆ ಸೇರಲಿಚ್ಛಿಸುವವರಾರೆಂದು ಕೇಳಲ್ಪಟ್ಟಾಗ ಒಂದು ಸಿಳ್ಳೆಯೂ ಬಾಯಿತೆರಲಿಲ್ಲ ಆದುದರಿಂದ ಯಾರು ತಪ್ಪುಗಾರರು?

★ ಕಾರಿಯಾ ಜಿಲ್ಲಾ ಮುಸ್ಲಿಂಲೀಗಿನ ಕಾರ್ಯಕಾರೀ ಸಮಿತಿಯು ಸೇರಿ ತಮ್ಮ ಜಿಲ್ಲೆಯಲ್ಲಿನ ಮುಸ್ಲಿಂಲೀಗು ವಿಸರ್ಜಿಸಲ್ಪಡಬೇಕೆಂದು ಒಂದು ಗೊತ್ತುವಳಿಯನ್ನು ಸ್ವೀಕರಿಸಿದ್ದಾರೆ ಪಾಕಿಸ್ತಾನ ರಚನೆಯ ನಂತರ ಭಾರತ ಒಕ್ಕೂಟದಲ್ಲಿನ ಎಲ್ಲಾ ಪ್ರಜೆಗಳು ಐಕ್ಯಮತ್ಯದಿಂದ ತಮ್ಮ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸತಕ್ಕದ್ದೆಂದು ಅವರ ಸೂಚನೆ.

ಇನ್ಶುರೆನ್ಸ್

ವಿಷಯವಿದ್ದರೆ

ನ್ಯೂ ಇಂಡಿಯಾ

ನೆನಪಿರಲಿ

ಪ್ರಮುಖ ಹಿಂದೀ ವಿಮಾ ಸಂಸ್ಥೆ

1946ರ ಪ್ರಗತಿಯ ಕೆಲವು ಮುಖ್ಯ ವಿಷಯಗಳು

(ಜೀವವಿಮೆ) ಹೊಸ ವಹಿವಾಟು	ರೂ.	12	ಕೋಟಿಗಳಿಗೆ ಮಿಕ್ಕಿದೆ	
ಊರ್ಜಿತದಲ್ಲಿರುವ ಪೋಲಿಸಿಗಳು	ರೂ.	38	,,	,,
ಜಮ್ಮಾ ಸೊತ್ತು	ರೂ.	10	,,	,,
ಸ್ಥಾಪಿತವಾದಂದಿನಿಂದ ತೆತ್ತ ಕ್ಲೈಮುಗಳು	ರೂ.	13	,,	,,

ಜೀವವಿಮೆ, ಬೆಂಕಿ, ನೌಕೆ, ಮೋಟಾರು ವಾಹನ, ವಾಯುಯಾನ, ಕೆಲಸಗಾರರ ವಿಷಯ ಪರಿಹಾರ, ಪ್ರಾಮಾಣಿಕತೆಯ ಗ್ಯಾರಂಟಿ ಮೊದಲಾದ ಎಲ್ಲಾ ತರದ ವಿಮೆಗೆ ಸಂಬಂಧಪಟ್ಟ ವಹಿವಾಟುಗಳನ್ನು ನಡೆಸುತ್ತದೆ

ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಹೆಡ್ ಆಫೀಸು: ಬೊಂಬಾಯಿ)

ಮದ್ರಾಸು ಬ್ರಾಂಚ್: 4 ಮತ್ತು 5, ಫಸ್ಟ್ ಲ್ಯಾನ್ ಬೀಚ್.

ಸಬ್ ಆಫೀಸು: ಹಂಪನಕಟ್ಟಾ, ಮಂಗಳೂರು.

ಗಾಂಧೀಜಿ ಮತ್ತು ರೊಮೈನ್ ರೋಲಾಂಡ್ ಭೇಟಿ

ಪೂರ್ವ ಪಾಶ್ಚಿಮಾತ್ಯ ಶಾಂತಿಸಾಧಕ ಸಮಾಗಮ

ಸೋಡ್ತಿ ನಂಬರು ತಿಳಿಸಲು ಗಾಂಧಿಗೆ ಪತ್ರ

[ಆಧ್ಯಾತ್ಮಿಕ ತತ್ವಜ್ಞಾನಿಗಳೂ, ಸಾಹಿತಿಗಳೂ ಮತ್ತು ಫ್ರಾನ್ಸಿನ ತತ್ವಜ್ಞಾನಿಗಳೂ ಆಗಿರುವ ರೊಮೈನ್ ರೋಲಾಂಡರನ್ನು ಗಾಂಧೀಜಿ ದುಂಡುಮೇಜಿನ ಪರಿಷತ್ತಿಗೆ ಹೋದಾಗ ಕಡೆಸಿನ ಬಳಿಯ ಒಂದು ಅವರ ಹಳ್ಳಿ ಮನೆಯಲ್ಲಿ ಭೇಟಿಯಾಗಿದ್ದರು. ಈ ಸಂಧರ್ಭದ ಕುರಿತು ರೋಲಾಂ ಅವರು ತಮ್ಮೊರ್ವ ಅಮೇರಿಕನ್ ಸ್ನೇಹಿತರಿಗೆ ಬರೆದ ಪತ್ರದ ಸಾರಾಂಶ ಈ ಕೆಳಗೆ ಕೊಡಲಾಗಿದೆ.]

ನನ್ನ ಕೆಲ ಭಾರತೀಯ ಸ್ನೇಹಿತರು ಇಲ್ಲಿಗೆ ಭೇಟಿಯಿತ್ತಾಗ ನೀವು ಇಲ್ಲಿ ಇರುತ್ತಿದ್ದರೆ ಅದೆಷ್ಟು ಚೆನ್ನಾಗಿತ್ತು! ಅವರು ಐದಾರು ದಿವಸ ಇಲ್ಲಿ ಉಳಿಕೊಂಡಿದ್ದರು. ಕನ್ನಡಕವಿಟ್ಟಿದ್ದು ಹಲ್ಲಿಲ್ಲದ ಆ ಚಿಕ್ಕ ಮನುಷ್ಯ ಒಂದು ಬಿಳಿ ಬಟ್ಟೆ ಮೈಗೆ ಸುತ್ತಿ, ಸೊರಗಿದ ಕಡ್ಡಿಗಳಂತಿರುವ ತನ್ನ ಬರಿಕಾಲುಗಳಿಂದ ಇಲ್ಲಿ ಒಂದಿದ್ದ. ಕೆಲವೇ ಬಿರುಸು ಕೂದಲುಗಳಿರುವ ಅವನ ಬರಿ ತಲೆ ಮಳೆನೀರಿನಿಂದ ಒದ್ದೆಯ್ಯಾಗಿತ್ತು. ಪ್ರಾಮಾಣಿಕ ನಾಯಿಯೆಂದು ಶ್ವಾಸಿಸುವಂತೆ ತೆರೆದ ಬಾಯಲ್ಲಿ ಒಣ ನಗೆ ಧರಿಸಿಕೊಂಡು ಆತ ನನ್ನ ಬಳಿ ಬಂದ. ಒಂದು ಕೈಯನ್ನು ನನ್ನ ಬೆನ್ನನ್ನು ಸುತ್ತಿ ಹೆಗಲ ಮೇಲೆ ಗಲ್ಲಗಳನ್ನೂ ಒತ್ತಿದ. ಅವನ ಒದ್ದೆ ತಲೆ ನನ್ನ ಗಲ್ಲಕ್ಕೇ ಸ್ಪರ್ಶಿಸಿತು. ಸಂತ ಡೊಮಿನಿ ಮತ್ತು ಸಂತ ಫ್ರಾನ್ಸಿಸರು ಒಟ್ಟುಗೂಡಿದಾಗ ತೆಗೆದುಕೊಂಡ ಚುಂಬನದಂತದಾಗಿತ್ತೆಂದು ನನ್ನ ವಿನೋದವರ ಯೋಚನೆ.

ಅವನ ಹಿಂದೆ ಗಂಭೀರ ಶರೀರಾಕೃತಿಯ ಮಿರಾಬೆನ್ನಳೂ, ಇತರ ಮೂರು ಭಾರತೀಯರೊಡನಿದ್ದ ಅವರ ಮಗ ದೇವದಾಸ್ ಗಾಂಧಿಯೂ ಬಂದರು. ಅವನು ಬಹು ನಯನಡೆನುಡಿಯವನಿದ್ದ, ತನ್ನ ಹೆಸರಿನ ಭವ್ಯತೆಯನ್ನು ಹೆಚ್ಚು ಅರಿತುಕೊಂಡವನಿರಲಿಲ್ಲ. ಇತರರು ಅವನ ಕಾರ್ಯದರ್ಶಿಗಳೂ, ಶಿಷ್ಯರೂ ಆಗಿದ್ದರು ಅವರೆಂದರೆ ಅತ್ಯಪೂರ್ವ ಮನಸ್ಸು ಹೃದಯಗಳುಳ್ಳ ಮಹದೇವ ದೇಸಾಯಿ ಮತ್ತು ಪ್ಯಾರೇಲಾಲರು

ಆಗ ನಾನೊಂದು ಎದೆಶೀತ ಕಟ್ಟಿಕೊಂಡವನಾಗಿದ್ದೆನಾದುದರಿಂದ ನನ್ನ ನಿವಾಸದ ಎರಡನೇ ಮಾಳಿಗೆಯಲ್ಲಿ ಮಲಗಿರುತಿದ್ದೆ ಅಲ್ಲಿ ಅವರು ದಿನಾ ಬೆಳಗ್ಗೆ ಮಾತುಕತೆಯಾಡಲು ಬರುತಿದ್ದರು. ಮತ್ತು ನನ್ನ ತಂಗಿಯ ಸಹಾಯದಿಂದ ನಾನು ಭಾಷಾಂತರ ಮಾಡಿ ಚರ್ಚಿಸುತಿದ್ದೆ ನನ್ನ ರಶ್ಯನ್ ಕಾರ್ಯದರ್ಶಿ ಮತ್ತು ಸ್ನೇಹಿತೆ ನಮ್ಮ ಮಾತುಕತೆಯನ್ನು ಬರಕೊಳ್ಳುತಿದ್ದಳು ನಮ್ಮೊಬ್ಬ ನೆರೆಯ ಫೊಟೋಗ್ರಾಫರನು ನಮ್ಮ ಭಾವಚಿತ್ರ ತೆಗೆದ

ಸಾಯಂಕಾಲ ಏಳು ಗಂಟೆ ಹೊತ್ತಿಗೆ ಕೆಳಗಡೆಯಲ್ಲಿ ಪ್ರಾರ್ಥನೆಗಳಾಗುತ್ತಿದ್ದವು. ಆಗ ದೀಪಗಳನ್ನು ಮಂದ ಪ್ರಕಾಶವಾಗಿ ಉರಿಸುತ್ತಿದ್ದರು. ಗಾಂಧಿ ನೆಲದ ಮೇಲಿನ ಚಾಪೆಯೊಂದರಲ್ಲಿ ಕುಳಿತುಕೊಳ್ಳುತಿದ್ದ. ಅವನ ಅನುಯಾಯಿಗಳು ಸುತ್ತಲೂ ನೆರೆಯುತಿದ್ದರು. ಪ್ರಾರ್ಥನೆಯಲ್ಲಿ ಮೂರು ಕಾರ್ಯಕ್ರಮಗಳಿದ್ದವು. ಮೊದಲನೇಯದು ಗೀತೆಯ ಒಂದು ಶ್ಲೋಕ, ಎರಡನೇಯದು ಪ್ರಾಚೀನ ಸಂಸ್ಕೃತದ ಪಾಠ ಗಾಂಧಿ ಇದನ್ನು ಭಾಷಾಂತರ ಮಾಡಿದ್ದ— ಮೂರನೇಯದು ಸೀತಾರಾಮರ ಸಂಬಂಧ ಭಜನೆ. —ಇದನ್ನು ಮೀರಳು ಹಾಡುತಿದ್ದಳು.

ಗಾಂಧಿಯ ಇತರ ಪ್ರಾರ್ಥನೆಗಳು ಪ್ರಾತಃ ಮೂರು ಗಂಟೆಗೆ ಜರಗಿಸಲ್ಪಡುತಿದ್ದವು. ಲಂಡನಿನಲ್ಲಿರುವಾಗ ರಾತ್ರಿ ಒಂದು ಗಂಟೆಗೆ ಮಲಗಿದ್ದರೂ ಗಾಂಧಿ ತನ್ನ ಬಳಗವನ್ನ ಬೇಗನೇ ಎಬ್ಬಿಸಿ ತೊಂದರೆ ಕೊಡುತಿದ್ದ. ಇಷ್ಟೊಂದು ಕೃಶನಾಗಿ ಕಾಣುವ ಈ ಮನುಷ್ಯ ಅವಿಶ್ರಾಂತ ಕೆಲಸಗಾರ. ಆಯಾಸವೆಂಬ ಅರ್ಥ ಅವನ ಶಬ್ದಕೋಶದಲ್ಲೇ ಇಲ್ಲ. ಮುಖದ ಮೇಲೆ ಒಂದು ನೆರಿ ಹಾಕದೆ ಆತ ತನಗೆ ಚುಚ್ಚಿ ಕೇಳಲ್ಪಡುವ ಎಲ್ಲಾ ಪ್ರಶ್ನೆಗಳಿಗೂ ಬಿಡದೆ ನಾಲ್ಕು ಗಂಟೆಗಳ ತನಕವಾದರೂ ಉತ್ತರ ಕೊಡಬಲ್ಲ. ಜಿನೋವಾ ಮತ್ತು ಲೊಸೇನ್ ನಗರಗಳಲ್ಲಿ ಸಂದರ್ಭ ಹಾಗೇ ಬಿತ್ತು ಒಂದು ಮೇಜಿನ ಮೇಲೆ ಸ್ಥಿರ ಶರೀರನಾಗಿ ಕುಳಿತು ತನ್ನ ವಿರೋಧಿಗಳನ್ನು ಮೌನ ಮತ್ತು ಉಸಿರುಕಟ್ಟಿಸುವಂತೆ ಮಾಡುವ ಸರಳವೂ ಒರಟಾದುದೂ ಆದ ಸತ್ಯಗಳನ್ನವ ನಿರೂಪಿಸುತಿದ್ದ

ಇಟಲಿಯಲ್ಲಿ ಅವನನ್ನು ಕುಹಕ ಚಿತ್ತವೃತ್ತಿಯಿಂದ ಸ್ವಾಗತಿಸಿದ ಶ್ರೀಮಂತ ಮತ್ತು ರಾಷ್ಟ್ರೀಯವಾದಿ ರೋಮನರು ಅವನು ಹೊರಟುಹೋದ ಮೇಲೆ ರೋಷದಿಂದ ತತ್ತರಿಸಿದರು ಅಲ್ಲವನು ಇನ್ನೂ ಕೆಲವು ದಿವಸ ಇರುತಿದ್ದರೆ ದೊಡ್ಡ ದೊಂಬಿಯಾಗಿ ಸಾರ್ವಜನಿಕ ಸಭೆಗಳೇ ನಿಷೇಧಿಸಲ್ಪಡುತಿದ್ದವು ಸಶಸ್ತ್ರೀಕರಣ ಮತ್ತು ಬಂಡವಾಳ ಮಜೂರರೊಳಗಣ ಸಂಬಂಧದ ಕುರಿತು ಆತ ಸ್ಪಷ್ಟವಾದ ಅಭಿಪ್ರಾಯ ಪ್ರಕಟಿಸುತಿದ್ದ

ಅವನು ಕಾರ್ಯಗಳನ್ನೆಲ್ಲ ಪ್ರಯೋಗ ರೀತ್ಯಾ ಮಾಡಿ ನೋಡುತ್ತಾನೆ ಕಾರ್ಯನೀತಿಯಾದರೋ ನೇರವಾದುದೆ. ಆದರೆ ಎಲ್ಲಿಯೂ ನಿಲ್ಲುವಂತಿಲ್ಲ ಹತ್ತು ವರ್ಷಗಳ ಹಿಂದೆ ಅವನು ಹೇಳಿದ್ದರ ಮೇಲೆ ಯಾರಾದರೂ ಅವನನ್ನು ವಿಮರ್ಶಿಸ ಹೊರಟರೆ ತಪ್ಪಿ ಬೀಳುವುದೇ ಖಂಡಿತ ಕಾರಣ ಅವನ ವಿಚಾರಗಳು ಸದಾ ಕ್ರಾಂತಿಗೈಯುತ್ತವೆ ನಾನೊಂದು ನಿದರ್ಶನ ಕೊಡುತ್ತೇನೆ

ದೇವರೇ ಸತ್ಯ

ಲೊಸೇನ್ ನಗರದಲ್ಲಿ ದೇವರೆಂದರೇನೆಂದರ್ಥವೆಂದು ಅವನಿಗೆ ಕೇಳಲಾಯಿತು. ಹಿಂದೂ ಶಾಸ್ತ್ರಗಳು ಯಾವ ಉದಾತ್ತ ವಿಷಯಗಳನ್ನು ದೈವೀಕವಾದುವುಗಳೆಂದು ವಿವರಿಸಿರುವುದನ್ನು ತಿಳಿಸುತ್ತ ತಾನು ಚಿಕ್ಕಂದಿನಿಂದ 'ಸತ್ಯವೆಂಬುದನ್ನು ಹೇಗೆ ಮೂಲಭೂತ ಶಕ್ತಿಸ್ವರೂಪವಾಗಿ ನಂಬಿಕೊಂಡದ್ದನ್ನವನು ವಿವರಿಸಿದ ಆಗ ಅವನು ಹೇಳಿದ್ದ 'ಸತ್ಯವೇ ದೇವರು" ಎಂದು ಮತ್ತೆ ಹೀಗೆ ಹೇಳಿದ "ಎರಡು ವರ್ಷಗಳ ಹಿಂದೆ ನಾನೆಂದು ಹೆಜ್ಜೆ ಮುಂದರಿದಿದ್ದೇನೆ ಈಗ ನಾನು ಹೇಳುವುದು ದೇವರೇ ಸತ್ಯವೆಂದು ಕಾರಣ ನಾಸ್ತಿಕರು ಕೂಡ ಸತ್ಯಕ್ಕೆ ಶಕ್ತಿಯಿರಬೇಕಾದ ಅವಶ್ಯಕತೆಯನ್ನು ಅಲ್ಲಗಳೆಯುವುದಿಲ್ಲ ಸತ್ಯಶೋಧನೆಯ ತಮ್ಮ ಆಸಕ್ತಿಯಲ್ಲಿ ನಾಸ್ತಿಕರು ಕೂಡಾ ದೇವರ ಅಸ್ತಿತ್ವವನ್ನು ಅಲ್ಲಗಳೆಯಲೂ ಸಂಕೋಚಪಡುವುದಿಲ್ಲ "ಅವರ ದೃಷ್ಟಿಕೋನದಿಂದ ಅವರ ಮತವೇ ಸರಿಯೆಂದೆನಿಸುತ್ತದೆ."

ಈ ಹೇಳಿಕೆಯಿಂದ ಪೌರ್ವಾತ್ಯ ತತ್ವಜ್ಞಾನದ ಸ್ಥಿರತೆ ಮತ್ತು ಸ್ವತಂತ್ರತೆ ಎಷ್ಟಿದೆಂಬುದನ್ನು ನಾವು ತಿಳಕೊಳ್ಳಬಹುದು. ವಿವೇಕಾನಂದನಲ್ಲಿರುವ ಗುಣವೈಶಿಷ್ಟ್ಯಗಳೇ ನನಗೆ ಅವನಲ್ಲಿ ಕಂಡುಬಂದುವು.

ಇಷ್ಟಾದರೂ ಯಾವೊಂದು ರಾಜಕೀಯ ವಿಷಯವನ್ನೇ ಆಗಲಿ ಉತ್ತರಕೊಡುವುದರಲ್ಲಿ ಅವನು ಸದಾಸಿದ್ಧನೇ ಆಗಿದ್ದ- ತನ್ನ ರಾಜಕೀಯ ಧೋರಣೆಗಳು ಎಲ್ಲರಿಗಾಗಿ ಬಹಿರಂಗವಾದವುಗಳೆಂದವದ ತಿಳಕೊಂಡು ಒಂದನ್ನೂ ಬಚ್ಚಿಡುವುದಿಲ್ಲ

ಕೊನೆಯ ದಿನ ಸಾಯಂಕಾಲ ಬಿತೋವನನ ರಾಗವೊಂದನ್ನು ಬಾರಿಸಿ ತೋರಿಸಲು ಗಾಂಧಿ ನನ್ನನ್ನು ವಿನಂತಿಸಿದ ಆದರೆ ಅವನಿಗೆ ಬಿತೋವನನು ಯಾರೆಂದು ಗೊತ್ತಿಲ್ಲ ಮೀರಳಿಗೆ ಮಾತ್ರ ಆದಾಗ ತಿಳಿಯುತಿತ್ತು ಅವಳು ಗಾಂಧಿಗೆ ವಿವರಿಸುತಿದ್ದಳು

ಗಾಂಧಿ ತನ್ನ ದೇಶದ ಮತೀಯ ಸಂಗೀತದ ಮೇಲೆ ತುಂಬಾ ಶ್ರದ್ಧೆಯುಳ್ಳವ, ನಮ್ಮ ಕಡೆಯ ಜೋರ್ಜಿಯನ್ ರಾಗಗಳಿಗೆ ಅವು ಹೋಲುತ್ತವೆ ಅಂತಹ ಅನೇಕ ರಾಗಗಳನ್ನವನು ಶೇಖರಿಸಿಕೊಂಡಿದ್ದಾನೆ ಕಲೆಯ ಕಲಿತು ನಾವು ಪರಸ್ಪರ ಅಭಿಪ್ರಾಯ ಸಂಗ್ರಹಿಸಿಕೊಂಡೆವು ಈ ವಿಷಯದಲ್ಲೂ ಸತ್ಯವೇ ಸರ್ವಸ್ವವೆಂದೂ ಅದೇ ನಿತ್ಯ ಆನಂದದಾಯಕವೆಂದೂ ಅವನು ಅರ್ಥಮಾಡಿಕೊಳ್ಳುತ್ತಾನೆ ಸಾಹಸವಿಲ್ಲದೆ ಜೀವನವುಂಟಾಗದೆಂದೂ ಕಷ್ಟಪಡದೆ ಸುಖವುಂಟಾಗದೆಂದೂ ಅವನ ನಂಬಿಕೆ "ಸತ್ಯ ಶೋಧಕನ ಹೃದಯವು ಕಮಲದೆಸಳಿನಷ್ಟು ಮೃಧುವೂ, ಶಿಲೆಯಷ್ಟು ಕಠಿಣವೂ ಇದೆ ಎನ್ನುವನವನು

ನಮ್ಮ ಸಂದರ್ಶನ ಕಾಲವನ್ನು ಅನೇಕ ಕುಹಕಗಾರರೂ, ಅಧಿಕ ಪ್ರಸಂಗಗಳೂ ಬಾಯಿಬಡಕರೂ ಆಗಾಗ್ಗೆ ಟೆಲಿಫೋನಿನಲ್ಲಿ ಕರೆಯುವುದರ ಮೂಲಕ ಕೆಡಿಸಿದರು ಭಾವಚಿತ್ರಗ್ರಾಹಕರೂ ಅಲ್ಲಲ್ಲಿ ಪೊದರುಗಳ ಹಿಂದೆ ಅವಿತುನಿಂತು ತಮ್ಮ ಉಪಕರಣಗಳನ್ನು ಝಳಪಿಸುತಿದ್ದರು ಲೆಮೆನ್ ಪಟ್ಟಣದ ಹಾಲು ಮಾರುವವರ ಸಂಘದವರು ಈ 'ಭಾರತ ರಾಜನ' ಸಂಪೂರ್ಣ ಆಹಾರ ಸರಬರಾಯಿ ತಾವು ಮಾಡುವುದಾಗಿ ನನಗೆ ತಿಳಿಸಿದರು ನಮಗೆ 'ದೇವರ ಪುತ್ರ'ರನೇಕರಿಂದಲೂ ಪತ್ರಗಳು ಬಂದಿದ್ದವು ಕೆಲವು ಇಟಲಿಯಾನರು ಈ ಮಹಾತ್ಮರಿಗೆ ಪತ್ರ ಬರೆದು ಮುಂದಿನ ವಾರ ತೆಗೆಯಲ್ಪಡುವ ಅವನ ಹೆಸರಿನ ರಾಷ್ಟ್ರೀಯ ಸೋಡ್ತಿಯಲ್ಲಿ ಜಯಶೀಲವಾಗುವ ಸೌಭಾಗ್ಯದ ಹತ್ತು ಸಂಖ್ಯೆಗಳನ್ನು ತಿಳಿಸಬೇಕೆಂದೂ ಬಿನ್ನವಿಸಿಕೊಂಡಿದ್ದರು!

ಈ ಶ್ರಮದಿಂದ ಬದುಕಿದ ನನ್ನ ತಂಗಿ ವಿಶ್ರಾಂತಿಗಾಗಿ ತೆರಳಿರುವಳು ನನಗಾದರೊ ನಿದ್ರಾಶಕ್ತಿಯೇ ಲೋಪವಾದಿದೆ. ನಿಮ್ಮಲ್ಲೇನಾದರೂ ಇದ್ದರೆ ದಯಮಾಡಿ ಮರು ಟಪ್ಪಾಲಿನಲ್ಲೇ ಅದನ್ನು ಕಳುಹಿಸಿಕೊಡಿರಿ.



ರಾತ್ರಿ ಹವೆಯು ಅಪಾಯಕರವಿರಬಹುದು ರಕ್ಷಣೋಪಾಯವಿಲ್ಲದಿದ್ದರೆ ಶೀತದಿಂದ ಗೂರಲು, ಕೆಮ್ಮು, ವಿಷಮ ಜ್ವರಗಳುಂಟಾಗಬಹುದು ಪೆಪ್ಸ್ ಶ್ವಾಸನೀಯ ವಿಷಹಾರಿ ಮಾತ್ರೆ ಸೇವಿಸಿರಿ

ಪೆಪ್ಸಿನ ಅಮೂಲ್ಯ ಔಷಧ ಸಾರಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೊಯಲ್ಪಡುವುವು ಅಲ್ಪ ಊದುಕೊಂಡಿರುವ ಶ್ವಾಸನಾಳ ಮತ್ತು ಪರೆಗಳನ್ನದು ಶಮನಿಸಿ ಕೆಮ್ಮು ನಿಲ್ಲಿಸುವುದು ಶ್ವಾಸೇಂದ್ರಿಯಗಳು ಬಲಗೊಂಡು ಚೇತನಗೊಳ್ಳುವವು ರೋಗಾಣು ನಾಶವಾಗಿ ಭಾವಿ ಸಂಕಷ್ಟವನ್ನು ತಡೆಯುವುದು.

ಕೆಮ್ಮು, ಶೀತ, ಗಂಟಲು ನೋವು, ವಿಷಮ ಜ್ವರ, ಗೂರಲು ಮತ್ತಿತರ ಎದೆ ತೊಂದರೆಗಳಿಗೆ ಪೆಪ್ಸ್ ಪ್ರಖ್ಯಾತ ನಿವಾರಣೆ ಔಷಧಿ

ಈಗಲೇ ಪೆಪ್ಸ್

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ.

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವುದು.

ಜುನಾಗಡಿನ ನಾಟಕ

ಸೋಮನಾಥನ ಪುನಃಪ್ರತಿಷ್ಠೆ

ಹಿಂದುಸ್ಥಾನದ ಭೂಪರದಲ್ಲಿ ಪಾಕಿಸ್ಥಾನದ ರಾಜಧಾನಿಯಾದ ಕರಾಚಿಯಿಂದ ನಿಜಾಮು ಸಂಸ್ಥಾನದ ಅವರಂಗಾಬಾದಿಗೆ ಸರಳ ರೇಖೆಯನ್ನೆಳೆದು ಬಳಿಕ ಕರಾಚಿಯಿಂದ ಜುನಾಘಾಡಿಗೂ, ಜುನಾಘಾಡಿನಿಂದ ಅವರಂಗಾಬಾದಿಗೂ ಹಾಗೆಯೇ ರೇಖೆಗಳನ್ನೆಳೆದರೆ ಗಣಿತಜ್ಞರು "ದ್ವಿಭುಜ ತ್ರಿಕೋಣ"ವೆಂದು ಕರೆಯುವ ತ್ರಿಕೋಣವೊಂದು ನಮಗೆ ದೊರಕುವದು ಈ ಪುಣ್ಯ ಭೂಮಿಯನ್ನಿಡೀ ಇಸ್ಲಾಮಿನ ಪವಿತ್ರ ಭೂಮಿಯಾಗಿ ಮಾಡಬೇಕೆಂದು ಹೊರಟ ಮೊಗಲ್ ಬಾದಶಾಹನಾದ ಅವರಂಗಜೇಬನು ತನ್ನ ಆಶೆಯನ್ನು ಸಂಪೂರ್ಣಗೊಳಿಸಲು ಸಾಧ್ಯವಾಗುವ ಮೊದಲೇ ತನ್ನ ಐಹಿಕ ಯಾತ್ರೆಯನ್ನು ಆ ಅವರಂಗಾಬಾದಿನಲ್ಲಿ ಮುಗಿಸಿದ್ದನು ಈಗ 2½ ಶತಮಾನಗಳ ಬಳಿಕ ಮುಸ್ಲಿಮ್ ರಾಷ್ಟ್ರವೊಂದನ್ನು ಪುನಃ ಸ್ಥಾಪಿಸಿದ ಮಹಾ ಮಂಡಲೇಶ್ವರನಾದ ಜಿನ್ನಾ ಸಾಹೇಬನು ಕರಾಚಿಯಲ್ಲಿ ಈಗ ತನ್ನ ರಾಜಧಾನಿಯನ್ನು ಮಾಡಿಕೊಂಡಿದ್ದಾನೆ ನಡುವೆ ಇರುವ ಈ ಜುನಾಘಾಡು ಮೊನ್ನೆ ತನಕ ಹಿಂದುಗಳ ಮಧ್ಯದಲ್ಲಿರುವ ಮುಸ್ಲಿಮರ ಕೇಂದ್ರವಾಗಿತ್ತು

ಕಥಿಯಾವಾಡು ಅಂದರೆ ಹಿಂದುಗಳು ಸೌರಾಷ್ಟ್ರವೆಂದು ಕರೆಯುವ ಶ್ರೀ ಕೃಷ್ಣನ ದ್ವಾರಕೆಯಿರುವ ಅರ್ಧದ್ವೀಪವೊಂದಾಗಿದೆ ಸುಮಾರು 220 ಮೈಲು ತನಕ ಉದ್ದ 165 ಮೈಲು ತನಕ ಅಗಲವಿರುವ ಆ ಕಥಿಯಾವಾಡು ಅರ್ಧದ್ವೀಪವು ವಿಸ್ತೀರ್ಣದಲ್ಲಿ ಸುಮಾರು 23,300 ಚದರ ಮೈಲುಗಳಿದೆ ಇದರಲ್ಲಿ 7 ಚದರ ಮೈಲುಗಳ ವಿಸ್ತೀರ್ಣವು ಪೋರ್ತುಗೀಸರ ದೀಯು ಎಂಬ ದ್ವೀಪಕ್ಕೆ ಸೇರಿದೆ 1100 ಚದರ ಮೈಲುಗಳ ಭೂಮಿಯು ಪ್ರಾಂತ್ಯದ ಅಹ್ಮದಾಬಾದ ಜಿಲ್ಲೆಯಲ್ಲಿದೆ 1320 ಚದರ ಮೈಲುಗಳಲ್ಲಿ ಬರೋಡಾ ಸಂಸ್ಥಾನವು ಚಾಚಿಕೊಂಡಿದೆ ಉಳಿದ ವಿಸ್ತೀರ್ಣವೆಲ್ಲಾ ಚಿಕ್ಕ, ದೊಡ್ಡ ನರೇಂದ್ರರ ಕೈವಶವಿವೆ ಚಿಕ್ಕ ದೊಡ್ಡ ನರೇಂದ್ರರ ಸಂಸ್ಥಾನಗಳು 187 ಇದ್ದರೂ ಅವುಗಳಲ್ಲಿ ಭವನಗರ, ಜುನಾಘಾಡು, ಮೋರ್ವಿ, ಪೋರಬಂದರ್ ಧ್ರಾಂಗಧರ, ನವನಗರ ಗೊಂಡಾಲ್ ಮೊದಲಾದ ಒಂಭತ್ತು ಸಂಸ್ಥಾನಗಳು ಮಾತ್ರ ಆ ಹೆಸರಿಟ್ಟುಕೊಳ್ಳಲಿಕ್ಕೆ ಯೋಗ್ಯತೆ ಇರುವವುಗಳಾಗಿವೆ. ಉಳಿದವುಗಳು ನಮ್ಮಲ್ಲಿ ದೊಡ್ಡ ಜಮೀನುದಾರರಿಗಿರುವ ಆಸ್ತಿಯಷ್ಟೇ ಇವೆ ರಾಷ್ಟ್ರವೆಂದು ಕರೆಯಲಿಕ್ಕೆ ಸಾಕಾಗದ ವಿಸ್ತೀರ್ಣವಾಗಲಿ ಪ್ರಾಮುಖ್ಯತೆಯಾಗಲಿ ಅವುಗಳಿಗಿಲ್ಲ ಈ ಪುಟ್ಟ ಪಾಳ್ಯಗಾರರಲ್ಲಿ 79 ಜನರು ಬರೋಡೆಯ ಗಾಯಕವಾಡರಿಗೆ ಕಪ್ಪವನ್ನು ಕೊಡಬೇಕಾಗಿದೆ ಉಳಿದವರಲ್ಲಿ ಕೆಲವರು ಜುನಾಘಾಡಿನ ನವಾಬರಿಗೂ ಕಪ್ಪವನ್ನು ತೆರುತ್ತಾರೆ

ಕಥಿಯಾವಾಡು ಅಶೋಕ ಮಹಾ ಚಕ್ರವರ್ತಿಯ ಕಾಲದಲ್ಲಿ ಹಿಂದೂ ಸಾಮ್ರಾಜ್ಯದ ಮುಖ್ಯ ಪ್ರಾಂತ್ಯಗಳಲ್ಲೊಂದಾಗಿತ್ತು ಜುನಾಘಾಡು ಸಂಸ್ಥಾನದಲ್ಲಿರುವ ಗಿರ್ನಾರೆಂಬ ಮಹಾ ಬಂಡೆಯ ಮೇಲೆ ಹಿಂದುಗಳ ಗತ ವೈಭವವನ್ನು ಇಂದೂ ನಮ್ಮ ನೆನಪಿಗೆ ತರಲಿಕ್ಕಾಗಿ ಅಶೋಕನ ಶಿಲಾಲೇಖವೊಂದು 22 ಶತಮಾನಗಳಿಂದ ಬಾಳಿಕೊಂಡು ಬಂದಿದೆ ಘಜನೀ ಮಹಮ್ಮದನು ಭ್ರಷ್ಟಪಡಿಸಿದ ಸೋಮನಾಥ ದೇವಾಲಯದ ಹಾಳು ಬಿದ್ದ ಕಲ್ಲಿನ ರಾಶಿಯು ಅದೇ ಜುನಾಘಾಡು ಸಂಸ್ಥಾನದ ಕರಾವಳಿಯ ಬಳಿ ಇದೆ. ಸ್ವದೇಶ ರಕ್ಷಣೆಯನ್ನರಿಯದ ಹಿಂದುಗಳನ್ನು ಸೋಮನಾಥನು ಕೂಡ ರಕ್ಷಿಸನೆಂದು ಆ ಕಲ್ಲಿನ ರಾಶಿಯು ನಮ್ಮನ್ನು ಎಚ್ಚರಿಸುತ್ತಲಿದೆ

ಜುನಾಘಾಡು ಸಂಸ್ಥಾನವು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಷ್ಟಿರುವುದಿಲ್ಲ ವಿಸ್ತೀರ್ಣದಲ್ಲಿ ಅದರ ನಾಲ್ಕರಲ್ಲಿ ಮೂರು ಪಾಲಷ್ಟಾಗಿ, ಜನಸಂಖ್ಯೆಯಲ್ಲಿ ಅದು ನಮ್ಮ ಜಿಲ್ಲೆಯ ಬರೇ ಮೂರರಲ್ಲಿ ಒಂದಂಶವಾಗಿದೆ ಜುನಾಘಾಡು ಸಂಸ್ಥಾನದ ಮತ್ತು ಕಥಿಯಾವಾಡಿನ ಜನರಲ್ಲಿ ನೂರಕ್ಕೆ 85 ರಷ್ಟು ಹಿಂದುಗಳು, 12ರಷ್ಟು ಮುಸ್ಲಿಮರು 3ರಷ್ಟು ಇತರರಿದ್ದಾರೆ ಆದರೆ ಜುನಾಘಾಡು ಸಂಸ್ಥಾನದ ರಾಜಧಾನಿಯಾದ ಜುನಾಘಾಡಿನಲ್ಲಿ ಹಿಂದುಗಳು 50, ಮುಸ್ಲಿಮರು 49 ಇತರರು 1 ಹೀಗಿದ್ದಾರೆ ಆ ಸಂಸ್ಥಾನದ ಮುಖ್ಯ ಬಂದರವು ವೀರಾವಲ್ ಎಂಬದಾಗಿದೆ

ಪಾಕಿಸ್ತಾನ ಸ್ಥಾಪನೆಯ ಮೊದಲು ಕಥಿಯಾವಾಡಿನ ನರೇಂದ್ರರೆಲ್ಲಾ ಸಹೋದರ ಭಾವದಿಂದಲೇ ನಡಕೊಳ್ಳುತ್ತಿದ್ದರು ಜುನಾಘಾಡಿನಿಂದ ಪಾಕಿಸ್ತಾನಕೆ ನೆಲದಾರಿಯಾಗಿ ಹೋಗಬೇಕಾದರೆ ಹಿಂದೂ ರಾಷ್ಟ್ರಗಳಾದ ಜಮುನಾಗರ (ನವನಗರ), ಧರಂಗಧರ ಮೋರ್ವಿ ಮೊದಲಾದವುಗಳನ್ನು ದಾಟದೆ ಹೋಗಸಾಧ್ಯವಿಲ್ಲವಾದ್ದರಿಂದ ಜುನಾಘಾಡು ನವಾಬನಿಗೆ ಪಾಕಿಸ್ತಾನದ ಚಿಂತೆಯು ಮೊನ್ನೆ ತನಕ ಹತ್ತಿರಲಿಲ್ಲ ಆಗೋಸ್ತು 15ನೇ ದಿನ ಆಂಗ್ಲರು ನರೇಂದರ ಮೇಲಿನ ತಮ್ಮ ಸಾರ್ವಭೌಮತ್ವವನ್ನು ತ್ಯಜಿಸಿ ಹಿಂದೀ ಯುನಿಯನ್ ಮತ್ತು ಪಾಕಿಸ್ತಾನಗಳನ್ನು ಡಾಮಿನಿಯನ್‌ಗಳಾಗಿ ಸ್ಥಾಪಿಸಿದಂದಿನಿಂದ ಪಾಕಿಸ್ತಾನಿಗಳಲ್ಲಿ ಜುನಾಘಾಡನ್ನು ಕಾಶ್ಮೀರು, ಹೈದರಾಬಾದುಗಳೊಂದಿಗೆ ಪಾಕಿಸ್ತಾನಕ್ಕೆ ಸೇರಿಸಿಕೊಳ್ಳಬೇಕೆಂಬ ಆಶೆಯು ಬಲವಾಗತೊಡಗಿತು ಹೈದರಾಬಾದು ಬಲಿಷ್ಠ ನಿಜಾಮನ ಕೆಳಗಿದ್ದರೂ ಅದಕ್ಕೆ ಸುತ್ತಲೂ ಹಿಂದೂ ಪ್ರಾಂತ್ಯಗಳಿವೆ, ಒಳಗೆ ಪ್ರಜೆಗಳಲ್ಲಿ ನೂರಕ್ಕೆ 85ರಷ್ಟು ಹಿಂದುಗಳಿದ್ದಾರೆ ಹೊರಗಣ ಸಂಪರ್ಕವಿಲ್ಲದೆ ನಿಜಾಮನು ತನ್ನ ಐಶ್ವರ್ಯ ಮತ್ತು ತನ್ನ ಮದಾಂಧ ಮುಸ್ಲಿಮ್ ಅಧಿಕಾರಿಗಳ ಸಹಾಯ ಮಾತ್ರದಿಂದ ಬಾಳಿಕೊಂಡಿರ ಸಾಧ್ಯವಿಲ್ಲವೆಂದು ಪಾಕಿಸ್ತಾನಿಗಳಿಗೆ ತಿಳಿದು ಹೈದರಾಬಾದನ್ನು ಪಾಕಿಸ್ತಾನಕ್ಕೆ ವಿಮಾನ ದಾರಿಯಾಗಿ ಸೇರಿಸಬಹುದೆಂದು ಅವರು ನಿಶ್ಚೈಸಿದರು ಜುನಾಘಾಡು ಪಾಕಿಸ್ತಾನದಿಂದ ಹೈದರಾಬಾದಿಗೆ ಹಾರ್‍ಯಾಡುವ ವಿಮಾನಗಳಿಗೆ ನಿಲ್ದಾಣವಾಗಿಯೂ ಸಮುದ್ರ ದ್ವಾರಾ ಹೈದರಾಬಾದಿನ ಬಹು ಸಮೀಪಕ್ಕೆ ಸೈನ್ಯವನ್ನು ಮುಟ್ಟಿಸಲಿಕ್ಕೆ ಯೋಗ್ಯವಾದ ನೌಕಾ ರಾಣ್ಯವಾಗಿಯೂ ಅತ್ಯಂತ ಪ್ರಯೋಜನವಿದೆಯೆಂದು ಅವರು ನಿಶ್ಚಯಿಸಿ ಜುನಾಘಾಡು ನವಾಬನನ್ನು ಕಥಿವಾಡಿನ ನರೇಂದರ ಸಹವಾಸದಿಂದ ತಪ್ಪಿಸಿ ಪಾಕಿಸ್ತಾನಕ್ಕೆ ಸೇರಲಿಕ್ಕೆ ಉತ್ತೇಜಿಸಿದರು

ಆದರೆ ಪಾಕಿಸ್ತಾನದಿಂದ ಮುಸ್ಲಿಮ ಸೈನಿಕರು ಜುನಾಘಾಡಿನೊಳಗೆ ಸೇರಬಹುದೆಂಬ ಭೀತಿ ಪಾಕಿಸ್ತಾನದ ನೌಕೆಯು ಜುನಾಗಾಡಿನ ಬಂದರದ ಬಳಿ ಸಂಚರಿಸುತ್ತಿರುವಾಗ ಉಳಿದ ಕಥಿಯಾವಾಡಿನ ನರೇಂದ್ರರು ಒಟ್ಟಾಗಿ ಹಿಂದೀ ಯುನಿಯನ್ನಿನೊಡನೆ ತಮ್ಮ "ರಕ್ಷಣೆ" ಸಹಾಯವನ್ನು ಬೇಡಿದರು. ಹಿಂದೀ ಯುನಿಯನ್ನಿಗೆ ಪಾಕಿಸ್ತಾನದ ದುರಾಲೋಚನೆಗಳೆಲ್ಲವೂ ತಿಳಿದಿದೆಯಾದ್ದರಿಂದ ಅವರು ಜುನಾಘಾಡಿನ ಸುತ್ತಲೂ ಹಿಂದೀ ಸೈನ್ಯವನ್ನಿಟ್ಟು ಹಿಂದೀ ನೌಕೆಯನ್ನು ಕಥಿಯಾವಾಡಿನ ಒಳ ಸಾಗರದಲ್ಲಿ ಸಂಚರಿಸಿಕೊಂಡಿರಲಿಕ್ಕೆ ನೇಮಿಸಿದರು. ಜುನಾಘಾಡಿನ ನವಾಬನಿಗೆ ಮುಂದಿನ ದಾರಿ ತಿಳಿಯದಂತಾಗಿ ಅವನು ಪಾಕಿಸ್ತಾನಕ್ಕೆ ಪಲಾಯನ ಮಾಡಿದನು

ಪ್ರಜಾನಿರ್ಮಿತವಾದ ಸರಕಾರವೊಂದು ಅಷ್ಟರಲ್ಲಿ ಜುನಾಘಾಡಿನ ಹೊರಗೆ ಆವಿರ್ಭವಿಸಿ, ಜುನಾಘಾಡಿನೊಳಗೆ ಒಂದೊಂದೇ ಗ್ರಾಮವನ್ನು ತನ್ನ ಸ್ವಾಧೀನ ಮಾಡಿಕೊಳ್ಳ ಪ್ರಾರಂಭಿಸಿದ್ದರಿಂದ ನವಾಬನ ಆಳಿಕೆಯು ಜುನಾಘಾಡಿನಲ್ಲಿ ಸಂಪೂರ್ಣ ಅಳಿಸಿ ಹೋಗಿ ಆತನ ಮಂತ್ರಿಯೇ ಹಿಂದೀ ಸರಕಾರದವರು ಜುನಾಘಾಡನು ತಮ್ಮ ಸ್ವಾಧೀನಪಡಿಸಿಕೊಂಡು, ಅಲ್ಲಿ ಅರಾಜ್ಯಕತೆಯನ್ನು ನಿವಾರಿಸಬೇಕಾಗಿ ಅವರೊಡನೆ ಬೇಡಬೇಕಾಯಿತು ಅದರ ಬಳಿಕ ಹಿಂದೀ ಸರಕಾರದ ಆಜ್ಞೆಯ ಮೇರೆಗೆ, ಜುನಾಘಾಡಿನ ಜನರ ಅಪೇಕ್ಷೆಗನುಸಾರವಾಗಿ ಹಿಂದೀ ದಳಪತಿಗಳು ಜುನಾಘಾಡಿನೊಳಗೆ ಪ್ರವೇಶಿಸಿ ಅಲ್ಲಿ ನೆಲೆಗೊಂಡಿದ್ದಾರೆ

ನವಂಬರ 12ನೇ ದಿನ ಹಿಂದೀ ಪ್ರಭುತ್ವದ ಗೃಹಮಂತ್ರಿಯೂ ಸಂಸ್ಥಾನ ಶಾಖೆಯ ಸಚಿವರೂ ಆಗಿರುವ ಶ್ರೀ ವಲ್ಲಭಭಾಯಿ ಪಟೇಲರು ಜಾಮನಗರ, ರಾಜಕೋಟೆಗಳಿಗೆ ಅಲ್ಲಿಯ ಜನರ ಅಪೇಕ್ಷೆಯ ಮೇರೆಗೆ ವಿಮಾನ ದಾರಿಯಾಗಿ ಹೋಗಿ, ರಾಜಕೋಟದಲ್ಲಿ, ಕೂಡಿದ ಲಕ್ಷೋಪಲಕ್ಷ ಜನರ ಮುಂದೆ ತನ್ನ ಉಜ್ವಲ ಭಾಷಣವೊಂದನ್ನು ಮಾಡಿದರು ಕಥಿಯಾವಾಡಿನ ನರೇಂದ್ರರಲ್ಲಿ ಹಿಂದೀ ಯುನಿಯನ್ನಿನ ಕಡೆ ಇರುವ ಕಡುಭಕ್ತಿಯು ಶ್ರೀ ಪಟೇಲರ ಕಥಿಯಾವಾಡನ್ನು ಸಂಚರಿಸುವಾಗ ವ್ಯಕ್ತವಾಯಿತು

ಪಾಕಿಸ್ತಾನದ ಸರಕಾರವು ಜುನಾಘಾಡಿನ ಮೇಲೆ ಇನ್ನೂ ತಮಗೆ ಹಕ್ಕಿದೆಯೆಂದು ಕೂಗುತ್ತಿದೆ ಆದರೆ ಈ ಕೂಗನ್ನು ಮನ್ನಿಸುವವರ್‍ಯಾರ ತೋರುವುದಿಲ್ಲ ಈ ಪ್ರಸಂಗದ ನಡುವೆ ದೀಯುವಿನ ಪೋರ್ತುಗೀಸರು ಪಾಕಿಸ್ತಾನಿಗಳಿಗೆ ಶಸ್ತ್ರಸಂಗ್ರಹ ಮಾಡಿ ಕೊಡುತ್ತಿದ್ದರು ಪೋರ್ತುಗೀಸರು ಹಿಂದುಸ್ಥಾನದಲ್ಲಿನ್ನು ಹೆಚ್ಚು ಕಾಲ ಬಾಳುವಂತಿಲ್ಲ ಅವರು ಬಾಳಿಕೊಂಡಿದ್ದರೆ ಹಿಂದುಸ್ಥಾನಕ್ಕೆ ಭದ್ರತೆ ಉಳಿಯದು ಜುನಾಘಾಡು ಸಂಸ್ಥಾನದಲ್ಲಿ ನಿರ್ವೀರ್ಯರಾದ ಹಿಂದುಗಳನ್ನು ಧಿಕ್ಕರಿಸಿ ಒಂಭತ್ತು ಶತಮಾನಗಳ ಹಿಂದೆ ಅಂತರ್ಧಾನನಾದ ಸೋಮನಾಥನು ಹಿಂದುಗಳಲ್ಲೀಗ ತೋರಿಬರುವ ನೂತನ ಶಕ್ತಿಯನ್ನು ಮೆಚ್ಚಿ ಪುನಃ ಕಾಣಿಸಿಕೊಳ್ಳುವಂತಿದ್ದಾನೆ ಸೋಮನಾಥ ದೇವಾಲಯವನ್ನು ಅದರ ಹಿಂದಿನ ವೈಭವದಲ್ಲಿಯೇ ಪುನಃ ಕಟ್ಟಿಸಲಿಕ್ಕಾಗಿ ಜಾಮ ನಗರದ ನರೇಂದ್ರರು ಒಂದು ಲಕ್ಷ ರೂಪಾಯಿಯ ದ್ರವ್ಯ ಸಹಾಯವನ್ನು ಮಾಡಿರುತ್ತಾರೆ, ಶ್ರೀ ವಲ್ಲಭಭಾಯಿಯವರು ಆ ಕಾರ್ಯವನ್ನು ವಹಿಸಿರುತ್ತಾರೆ ಜುನಾಘಾಡಿನ ಆಶೆಯನ್ನು ಬಿಟ್ಟು ಪಾಕಿಸ್ತಾನಿಗಳು ಕಾಶ್ಮೀರಿನಲ್ಲೀಗ ತಮ್ಮ ಚಟುವಟಿಕೆಗಳನ್ನು ಪ್ರದರ್ಶಿಸುತ್ತಿದ್ದಾರೆ ಆದರೆ ಅಲ್ಲಿಯೂ ಅವರ ದುರಾಶೆಯು ಸಫಲವಾಗುವಂತಿಲ್ಲ. ತ್ರಿವರ್ಣ ಧ್ವಜವು ಹಿಮಾಲಯದ ಶಿಖರದಿಂದ ಕನ್ಯಾಕುಮಾರಿ ತನಕ ಪ್ರಭೆಯನ್ನು ಬೀರಿ ಬೆಳಗಬೇಕಾದರೆ ಆ ಕಾಶ್ಮೀರನ್ನು ಪಾಕಿಸ್ತಾನಕ್ಕೆ ಬಿಡಲು ಸಾಧ್ಯವಿಲ್ಲ.

"ಲ"

ಜೀವನ ಕಾರ್ಯವು ಸಾಂಗವಾಗಿ ನಡೆಯಬೇಕಾದರೆ ನಷ್ಟವಾಗುವ ಶಕ್ತಿಯು ಭರ್ತಿಯಾಗಬೇಕು ನಿಮ್ಮ ಶೋಭೆಯನ್ನೂ ಕಾಂತಿಯನ್ನೂ ರಕ್ಷಿಸಬೇಕಾದರೆ ನಿಮ್ಮಲ್ಲಿ ಅಂತರಾರೋಗ್ಯ ನೆಲೆಸಬೇಕು. ಈ ಬಗ್ಗೆ ನಿಮಗೆ ಬೇಕಾದುದು ಬೈಲ್‌ಬೀನ್ಸ್ ಅವುಗಳಿಂದ ನಿಮ್ಮ ದೇಹಾರೋಗ್ಯವು ನೆಟ್ಟಗಾಗುವುದು ನಿಮ್ಮ ರಕ್ತವು ಪರಿಶುದ್ಧವಾಗುವುದು ನಿಮ್ಮ ದೇಹದ ವಿಸರ್ಜನಾ ಕಾರ್ಯಗಳು ಸರಿಯಾಗಿ ನಡೆಯುವವು. ಈ ವನಸ್ಪತಿ ಮೂಲ ಮದ್ದಿನಿಂದ ನಿಮಗೆ ಹೊಸ ಹುರುಪು ದೊರಕುವುದು. ಶುಭ್ರ ಲೋಚನಗಳೂ, ನಿಶ್ಚಳ ಚರ್ಮವೂ ನಿಮಗೆ ಒದಗುವವು. ನಿಮ್ಮನ್ನು ಆಕರ್ಷಣೀಯರಾಗಿ ಮಾಡುವುವು.

BILE BEANS

ಶಯನ ಸಮಯ ನಿತ್ಯಲೂ ಸೇವಿಸಿರಿ.

ಗಾಂಧಿ ವಿಚಾರ ದರ್ಶನ

ಪ್ರಜಾಪ್ರಭುತ್ವ ಕಾರ್ಯದಲ್ಲಿ

ಸರಕಾರ ರೇಶನ್ ಅಂಗಡಿಗಳಲ್ಲಿ ನಿಯಂತ್ರಿತ ಆಹಾರದ ಬದಲು ಒಳ್ಳೆಯ ಧಾನ್ಯಗಳನ್ನು ಮಾರಬಹುದು. ಅವನು ಜನರು ಸಂತೆಯಲ್ಲಿ ಕೊಂಡಂತೆಯೇ ಕೊಳ್ಳಬಹುದು. ಹಾಗೆ ಮಾಡಿದರೆ ಬೆಲೆಗಳು ತನ್ನಷ್ಟಕ್ಕೆ ಹತೋಟಿಗೆ ಬರುವವು; ಕೂಡಿಟ್ಟ ಕಾಳುಗಳೂ ಹೊರಗೆ ಬರುವವು. ಜನತೆಯ ಜೀವನ ಸಂಬಂಧ ವ್ಯವಹಾರವನ್ನು ಬಹುಕಾಲ ಲಗಾಮು ಹಾಕಿ ಹಿಡಿದರೆ ಪ್ರಜಾಪ್ರಭುತ್ವ ಕಂಗಾಲಾಗುವುದು ಬೆಳೆಸುವ, ಮಾರುವ ಮತ್ತು ಕೊಳ್ಳುವವರ ಮೇಲೆ ನಂಬಿಕೆ ಇಟ್ಟುಕೊಳ್ಳುವುದೇ ಒಳಿತು.

ಕೋಪ ತಾಪ

ಈಚೆಗೆ ನನ್ನ ಮೇಲೆ ಹಿಂದೂ, ಸೀಖ ಮತ್ತು ಮುಸಲ್ಮಾನ ನಿರಾಶ್ರಿತರ ಕರುಣ ಕಥೆ ಕೇಳುವುದರಲ್ಲೇ ವಿನಿಯೋಗಿಸಲ್ಪಡುತ್ತದೆ. ನನ್ನ ಹೃದಯ ಕರಗಿದೆ, ನೊಂದಿದೆ ಆದರೂ ಅದರಿಂದ ಭಾವನಾಪರವಶನಾದರೆ ಅಹಿಂಸಾ ಚರಣೆಗೆ ಭಂಗವಾಗುತ್ತದೆ ಆದರೆ ದುಃಖ ಸಂಕಷ್ಟಗಳನ್ನು ಸಹಿಸುವುದರಲ್ಲಿ ತುಂಬಾ ತರಬೇತು ಹೊಂದಿದ್ದೇನೆ ಹೃದಯ ಕಲ್ಲು ಮಾಡಿ ಸಂಕಟಗಳೊಡನೆ ಕಾಳಗ ಹೂಡಲು ಶಕ್ತನಾಗಿದ್ದೇನೆ. ಅಹಿಂಸಾಪೂರ್ಣನು ವಜ್ರದಂತೆ ಕಠಿಣನೂ, ಕುಸುಮದಂತೆ ಮೃದುವೂ ಆಗಿರಬೇಕು. ಅನೇಕರು ತಾವನುಭವಿಸಿದ ದುರಂತಮಯ ಸಂಕಷ್ಟದಿಂದ ಕೋಪಾನ್ವಿತರಾಗಿ ನನಗೆ ಪತ್ರ ಬರೆಯುತ್ತಾರೆ ಇದಕ್ಕಿಂತ ಅವರು ನನ್ನಂತೆ ತಾಳ್ಮೆಯನ್ನು ಭ್ಯಸಿಸುವುದು ಒಳಿತು

ಸಿರಿವಂತ ನಿರಾಶ್ರಿತ

ಪ್ರಸಿದ್ಧ ಕಾಂಗ್ರೆಸ್ಸಿಗರು ಪಶ್ಚಿಮ ಪಂಜಾಬನ್ನು ಇಲ್ಲವೆ ಪಶ್ಚಿಮ ಪಾಕಿಸ್ತಾನದ ಯಾವದಾದರೊಂದು ಭಾಗವನ್ನು ಬಿಟ್ಟು ಹೊರಟು ನಿರಾಶ್ರಿತರಂತೆ ಕಷ್ಟದಿಂದ ಬದುಕದೆ ಪಾಕಿಸ್ತಾನದಲ್ಲಿ ಅವರಿಗಿದ್ದುದಕ್ಕಿಂತ ಉತ್ತಮಪಾದುಬಂಗಲೆಗಳಲ್ಲಿ ವಾಸಮಾಡುತ್ತಾರೆ ಅವರು ನಿರಾಶ್ರಿತರಿಂದ ದೂರವಾಗಿ ಏಕಾಂಗಿಯಾಗಿ ಜೀವಿಸಿದರು ನಿರಾಶ್ರಿತರಿಗೆ ನೀರಿಲ್ಲ, ನೆರಳಿಲ್ಲ, ಹೊಟ್ಟೆಗಿಲ್ಲ, ಬಟ್ಟೆಗಿಲ್ಲ! ಈ ದೂರು ನಿಜವಿದ್ದರೆ ಇದು ಖಂಡನೀಯವಾದ ಹೇಯ ಪ್ರವೃತ್ತಿ ಬಡ ನಿರಾಶ್ರಿತರ ಸುಖ ದುಃಖಗಳೊಡನೆ ಬೆರಕೆ ಹೊಂದದೆ ದೂರವಿರುವ ಸಿರಿವಂತ ನಿರಾಶ್ರಿತರನ್ನು ನಾನು ಎಷ್ಟೋ ಬಾರಿ ತೆಗಳಿದ್ದೇನೆ

ಹಂದಿ ಕಡಿತ

ಪಾಕಿಸ್ತಾನದಲ್ಲಿ ಹಂದಿ ಕೊಲ್ಲುವುದನ್ನು ನಿಲ್ಲಿಸಿರುವಾಗ ಹಿಂದೂಸ್ಥಾನದಲ್ಲೇಕೆ ಗೋಹತ್ಯ ನಿಲ್ಲಿಸಬಾರದು ಎಂದು ಕೇಳಲಾಗಿದೆ. ಕಾಯದೆಯಂತೆ ಹಂದಿ ಕೊಲ್ಲಬಾರದೆಂದು ಪಾಕಿಸ್ತಾನದಲ್ಲಿ ನಿಯಮವಿದೆಯೆಂಬುದು ನನಗೆ ಗೊತ್ತಿಲ್ಲ. ಈ ದೂರು ನಿಜವಾದರೆ ನಾನು ನಿಜವಾಗಿ ವ್ಯಸನಪಡುತ್ತೇನೆ. ಹಂದಿಯ ಮಾಂಸ ಇಸ್ಲಾಮ್ ಕಾಯದೆಯಲ್ಲಿ ನಿಷೇಧಿಸಲ್ಪಟ್ಟಿದೆಯೆಂಬೂ ನನಗೆ ಗೊತ್ತಿದೆ ಆದರೆ ಉಳಿದವರೇಕೆ ಉಪಯೋಗಿಸಬಾರದೆಂದು ನನಗೆ ತಿಳಿಯದಾಗಿದೆ

ಧರ್ಮ ರಾಜ್ಯ

ಪಾಕಿಸ್ತಾನ ಧರ್ಮ ಪ್ರಧಾನ ರಾಜ್ಯವಲ್ಲ, ಅದು ಲೋಕ ಪ್ರಧಾನ ರಾಜ್ಯವೆಂದು ಕಾಯ್ದೆ ಆಜಾಮರು ಹೇಳಿಲ್ಲವೆ? ಆದರೆ ಆ ಮಾತನ್ನು ನಾವಿಂದು ಕಾರ್ಯದಲ್ಲಿ ಕಾಣಲಾರೆವು. ಹಿಂದೂಸ್ತಾನ ಕೂಡ ಹಾಗೇ ಧಾರ್ಮಿಕ ರಾಜ್ಯವೇಕಾಗಬೇಕು? ಹಿಂದೂ ಧರ್ಮ ತತ್ವಗಳನ್ನು ಬಲಾತ್ಕಾರದಿಂದ ಉಳಿದವರ ಮೇಲೆ ಹೇರಬೇಕೆ? ನಾನು ಒಪ್ಪಲಾರೆ. ಹಾಗಾದರೆ ಹಿಂದೂಸ್ತಾನವೊಂದು ಆಶೆ, ಭರವಸೆಯ ನಾಡೆಂಬುದು ಅಲ್ಲವಾದೀತು. ಭಾರತದಿಂದ ಸಂಕುಚಿತನ ಮತ್ತು ಧರ್ಮಾಂಧತೆಗಳನ್ನು ಜಗತ್ತು ನಿರೀಕ್ಷಿಸುವುದಿಲ್ಲ. ಜಗತ್ತು ಭಾರತವು ಆದರ್ಶವಾಗಲೆಂದು ನಿರೀಕ್ಷಿಸುತ್ತದೆ.

ಗೋ ಭಕ್ತಿ

ನಾನೋರ್ವ ಗೋಪೂಜಕ. ಈ ಭಕ್ತಿ ಕಾಯಿದೆ ಬಲಾತ್ಕಾರದ್ದಲ್ಲ ಬಲಾತ್ಕಾರಕ್ಕೆಂದೂ ನಾನು ಮಣಿಯುವುದಿಲ್ಲ. ಸರಿಯಾದ ಗೋ ಭಕ್ತಿ, ಉತ್ತಮ ನಡತೆ ಮುಸಲ್ಮಾನ, ಹಿಂದ್ವೇತರೊಡನೆ ಸ್ನೇಹ ಬೆಳೆಸುವುದರಿಂದ ಸಾಧ್ಯವಾಗುತ್ತದೆ ಗುಜರಾತಿಗಳು, ಮಾರ್ವಾಡಿಗಳೂ ಗೋರಕ್ಷಣಾ ಸಕ್ತಿಗಳು ಇತರರ ಮೇಲೆ ಬಲವಂತದ ಆಜ್ಞೆ ಹೊರಿಸಿ ತಾವು ಹಸುಗಳನ್ನು ಕೆಟ್ಟ ರೀತಿಯಿಂದ ನಡೆಸಿಕೊಳ್ಳುವುದು ಹಿಂದೂ ಧರ್ಮತತ್ವ ವಿರೋಧವೆಂದವರು ಮರೆತಿದ್ದಾರೆ ಉದಾರಿ ಗುಜರಾತಿ ಮಾರ್ವಾಡಿಗಳು ಗೋರಕ್ಷಣಾರ್ಥವಾಗಿ ಹೇರಳ ಹಣ ದಾನ ಮಾಡುತ್ತಾರೆ. ಆದರೆ ಈ ಗೋರಕ್ಷಣಾಲಯಗಳಲ್ಲಿ ದನಕರುಗಳನ್ನು ವೈಜ್ಞಾನಿಕ ಮತ್ತು ವಿಚಾರ ಪೂರ್ಣವಾದ ಬಗೆಯಿಂದ ಸಾಕುತ್ತಿಲ್ಲ ಹಾಗೆ ಭಾರತೆ ಗೋವುಗಳ ಪುನರುಜ್ಜೀವನವಾಗದು ನಾನು ಮುಸಲ್ಮಾನರ ಗೆಳೆಯನಾಗಿರುವುದರಿಂದ ಕಾಯಿದೆಯ ಸಹಾಯವಿಲ್ಲದೆ ಉಳಿದ ಎಲ್ಲರಿಗಿಂತ ಹೆಚ್ಚಾಗಿ ಕಟುಕರ ಕೈಯಿಂದ ಹಸುಗಳನ್ನು ಉಳಿಸಿದ್ದೇನೆ

ಒತ್ತಾಯದ ಸಸ್ಯಾಹಾರ

ಭಾರತ ಒಕ್ಕೂಟ ಪ್ರಜೆಗಳು ಕೆಲವು ಕಡೆ ತಮ್ಮ ಮಧ್ಯದಲ್ಲಿ ವಾಸಿಸುವ ಮುಸಲ್ಮಾನರ ಮೀನು ಕುರಿಮಾಂಸಗಳನ್ನು ಕೂಡ ತಿನ್ನಬಾರದೆಂದು ಒತ್ತಾಯ ಪಡಿಸುತ್ತಿರುವರೆಂದು ಕೆಲವರು ನನಗೆ ಬರೆದಿದ್ದಾರೆ ಭಾರತದ ಉದ್ದಗಲಕ್ಕಿರುವ ಬಹುಸಂಖ್ಯಾಕ ಹಿಂದೂಗಳೂ ಸಿಕ್ಕಿದಲ್ಲಿ ಮೀನು ಮಾಂಸ, ಕೋಳಿಗಳನ್ನು ತಿನ್ನಲು ಹಿಂದೆಗೆಯುತ್ತಿಲ್ಲ ಮುಸಲ್ಮಾನರ ಮೇಲೆ ಈ ಬಲಾತ್ಕಾರವೇಕೆ? ಧಾರ್ಮಿಕ ಶ್ರದ್ಧೆಯಿಂದ ಸಸ್ಯಾಹಾರಿ ಗಳೆನಿಸಿದವರು ಭಾರತದಲ್ಲಿ ಬಹುವಿರಳ ಸಸ್ಯಾಹಾರ ಸೌಂದರ್ಯವನ್ನು ವಿವರಿಸಿ ಹೇಳಿ ಹೃದಯ ಪರಿವರ್ತನೆಯಿಂದ ಇತರರನ್ನು ಒಲಿಸಿಕೊಳ್ಳುವುದೇ ರಾಜ ಮಾರ್ಗ.

ಮಂತ್ರಿಗಳ ಮೇಲೆ ಒತ್ತಾಯ

ಹಿಂದೀ ಒಕ್ಕೂಟದ ಮಂತ್ರಿಗಳು ನನ್ನ ನಿಕಟ ಸ್ನೇಹಿತರಾಗಿದ್ದರೂ ನನ್ನ ನಂಬಿಕೆಗಳನ್ನು ಹೆರವರ ಮೇಲೆ ನಾನು ಒತ್ತಾಯದಿಂದ ಹೇರಲಾರೆ ಅವರು ತಮಗಿದ್ದ ನಂಬಿಕೆಗಳನ್ನು ತೊರೆಯುವರೆಂದು ನಾನೇನು ನಿರೀಕ್ಷಿಸಲಾರೆ ! ಅವರ ಮೇಲಿದ್ದ ನನ್ನ ಮೊದಲಿನ ಪ್ರಭಾವವನ್ನು ಕಳೆದು ಕೊಂಡಿರುವೆನೆಂದು ನಾನು ಪ್ರಾಂಜಲವಾಗಿ ಒಪ್ಪಿಕೊಳ್ಳುತ್ತೇನೆ. ಇದನ್ನು ನೀವು ಸಂತೋಷದಿಂದ ಸ್ವೀಕರಿಸಬೇಕು ಅಹಿಂಸೆಯ ಬಗ್ಗೆ ಹಿಂದೀ ಒಕ್ಕೂಟದಲ್ಲಿದ್ದ ಅಧಿಕಾರಿಗಳ ಮನವೊಲಿಸುವಷ್ಟು ಪ್ರಭಾವ ನನ್ನಲ್ಲಿಲ್ಲವೆಂಬುದನ್ನು ನಾನು ಪದೇ ಪದೇ ಹೇಳಿದ್ದೇನೆ ನನ್ನ ಮಟ್ಟಿಗೆ ನಾನು ಅಹಿಂಸೆಗೇ ಅಂಟಿಕೊಂಡಿರುತ್ತೇನೆ.

ವಾರದ ವಿಜ್ಞಾನ ವರದಿಗಳು

ಪಾರ್ಶ್ವವಾತಕ್ಕೆ ಸಂಗೀತ ಮದ್ದು

ಕಳೆದ ಯುದ್ಧ ಕಾಲದಲ್ಲಿ ಮುಳುಗಿಸಲ್ಪಟ್ಟ ಒಂದು ಸಬ್‌ಮೇರಿನಲ್ಲಿದ್ದು ಅದು ಮುಳುಗುವ ಭರದಲ್ಲಿ ತಗಲಿದ ಧಕ್ಕೆಯಿಂದ ಪಾರ್ಶ್ವವಾತ ಪೀಡಿತನಾದೊಬ್ಬ 18 ವರ್ಷದ ಯುವಕನು ಸಂಗೀತದಿಂದ ಸಂಪೂರ್ಣ ಗುಣಪಡಿಸಲ್ಪಟ್ಟಿದ್ದಾನೆಂದು ಡಿಟ್ರಾಯಿಟ್ ನಗರದ ಆಸ್ಪತ್ರೆಯ ಮುಖ್ಯ ಶುಶ್ರೂಷಕಳಾದ ಮೇಡಮ್ ಹೆಲನ್ ಮೆಜಿವಾಸ್ಕಿ ಎಂಬವಳು ತಿಳಿಸುತ್ತಾಳೆ ಮನೋಭ್ರಾಂತಿ, ಅಪಸ್ಮಾರ, ಶಿರೋಭ್ರಮಣ, ಹುಚ್ಚು ಮೊದಲಾದ ಮಾನಸಿಕ ವ್ಯಾಧಿ ಗ್ರಸ್ತರನ್ನು ಅವಳು ಸಂಗೀತದ ಮೂಲಕ ಗುಣಪಡಿಸುವ ವಿಧಾನವನ್ನರಿತಿದ್ದಾಳೆ

"ಪಾರ್ಶ್ವವಾಯು ಮತ್ತು ಮಾನಸಿಕ ವ್ಯಾಧಿಗ್ರಸ್ತರಾದವರ ಪರಿಸ್ಥಿತಿಯನ್ನು ಸಂಪೂರ್ಣ ಗುಣಪಡಿಸಲು ಇಲ್ಲದೆ ತಕ್ಕ ಮಟ್ಟಿಗೆ ಸುಧಾರಿಸಲು ಸಂಗೀತವು ಅತ್ಯಂತ ಸಹಾಯಕಾರಿಯಾಗುತ್ತದೆ ರೋಗಪೀಡಿತ ಮಕ್ಕಳನ್ನು ಗುಣಪಡಿಸಲೂ ಇದು ಅತ್ಯುತ್ತಮ ವಿಧಾನ ಮೇಲ್ಕಂಡ ಕಲಾಸಿಯು ದಿನಕ್ಕೆ ಮೂರು ಸಲ ವಿಶಿಷ್ಟವಾದ ಕೆಲವು ರಾಗಗಳನ್ನು ಕೇಳುತಿದ್ದುದರಿಂದ ಎರಡು ವಾರದೊಳಗ ತನ್ನ ಪಾರ್ಶ್ವವಾತದಿಂದ ಗುಣ ಹೊಂದಿ ಕೆಲಸಕ್ಕೆ ಹೋಗುವವನಾದ ಹೀಗೆಂದವಳು ತಿಳಿಸುವಳು

ಜರ್ಮನಿಯಲ್ಲಿ ಗುಪ್ತ ಶೋಧಗಳು

ಇಂದು ಜಗತ್ತಿನ ಹಲವು ದೇಶಗಳ ಯಾಂತ್ರಿಕ ಪರಿಶೋಧಕರು ತಮ್ಮ ನೂತನ ಶೋಧಗಳನ್ನು ಸರಕಾರಿ ಪೇಟೆಂಟ್ ಕಛೇರಿಗಳಲ್ಲಿ ರಿಜಿಸ್ಟರ್ ಮಾಡಲು ತುಂಬುತ್ತಿರುವಾಗ ಜಗತ್ತಿನ ಅಗ್ರಗಣ್ಯ ಸಂಶೋಧಕರೆನಿಸಿದ ಜರ್ಮನ್ ತಜ್ಞರು ಮೌನವಾಗಿರುವುದನ್ನು ನೋಡುವಾಗ ಅನೇಕರಿಗೆ ಕೌತುಕವನ್ನುಂಟುಮಾಡಿದೆ. ಸೋತು ಹೋದುದರಿಂದ ಜರ್ಮನಿಯ ಹಿಂದಿನ ಎಲ್ಲಾ ಸಂಶೋಧನೆಗಳ ಮೇಲಿನ ಅವರ ಹಕ್ಕನ್ನು ರದ್ದುಮಾಡಲಾಗಿದೆ. ಇನ್ನು ಮುಂದೆ ಮಾಡಲ್ಪಡುವವುಗಳಿಗೆ ಯೋಗ್ಯ ರಕ್ಷಣೆ ಸಿಗುವುದು ಸಂದೇಹಾಸ್ಪದವೆಂದು ಜರ್ಮನ್ ತಜ್ಞರು ತಿಳಕೊಂಡಿರುವುದೇ ಇದಕ್ಕೆ ಕಾರಣ. ಆದುದರಿಂದವರು ನೆಲದಡಿಯ ಗುಪ್ತ ಕಾರ್ಯಾಗಾರದೊಳಗೆ ಅತ್ಯದ್ಭುತ ಯಂತ್ರ ಶೋಧನೆಗಳನ್ನು ಮಾಡಿರುವರೆಂದು ಇತರ ದೇಶಗಳ ಯಂತ್ರ ಶಿಲ್ಪಿಗಳು ಶಂಕಿಸಿದ್ದಾರೆ

ಕಳವಳದಿಂದ ಮರಣ

ಸ್ವಪ್ನ ದೃಶ್ಯಗಳಿಂದ ಹೃದ್ಕ್ರಿಯೆಸ್ತಬ್ಧವಾಗಬಹುದೆಂದು ಚಿಕಾಗೋದ ಡಾ। ಸಿಲ್ವೇನ್ ರೊಬರ್ಟ್ಸನ್ನರು ತಿಳಿಸುತ್ತಾರೆ. ನಿದ್ದೆಯಲ್ಲಿ ಹೃದಯಸ್ತಂಬನ ಹೊಂದಿದವರು ಕೆಲವೊಂದು ಕಳವಳಾಸ್ಪದ ಸ್ವಪ್ನಗಳಿಂದ ಹಾಗಾದರು, ನಿರಾಶೆ, ಬೆದರಿಕೆ, ದಿಗಿಲುಗಳುಂಟಾದುದರಿಂದ ಇಂತಹ ಸ್ವಪ್ನಗಳು ಬೀಳಬಹುದು. ಅತಿ ಕೋಪವು ನುಂಗಲ್ಪಟ್ಟಾಗ ಅದು ಹೃದಯದ ಮೇಲೆ ಕೆಲವೊಂದು ಒತ್ತಡವನ್ನುಂಟು ಮಾಡುವುದು

ನಿದ್ರೆಯಲ್ಲಿ ಹೃತ್ಕ್ಲೇಶ ವೇದನೆಯುಂಟಾಗುವವರನ್ನು ಪರೀಕ್ಷಿಸುವಾಗ ವೈದ್ಯರು ರೋಗಿಯು ಯಾವ ಕಾರಣಗಳಿಂದ ಮಾನಸಿಕ ಸಂಕಷ್ಟಕ್ಕೊಳಗಾಗಿದ್ದಾನೆಂಬ ಸಂಗತಿಯನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕು ಕೆಲವೊಂದು ಸಲ ವಿನಾಕಾರಣವಾದ ಚಿಂತೆಯಿಂದ ಅನೇಕರು ನರಳುವುದುಂಟು—ಹೀಗೆಂದು ಮೇಲ್ಕಂಡ ತಜ್ಞರು ತಿಳಿಸುತ್ತಾರೆ

ಆಯಾಸ ಮಾಪಕ

ಕಣ್ಣುಗಳನ್ನುಪಯೋಗಿಸಿ ಕೆಲಸ ಮಾಡುವಾಗ ಅದೆಷ್ಟು ಅವಧಿಯಲ್ಲಿ ಆಯಾಸವಾಗುತ್ತದೆಂಬುದನ್ನು ಕಂಡುಹಿಡಿಯುವ ಕೆಲಸವು ವೃಷ್ಟಿ ವೈದ್ಯರ ಪಾಲಿಗೆ ಬಿದ್ದಿದೆ

ಮಿಮೆ ಲ್ಯೊಂವ್ ಚೊರ್ಲೆಟನ್ ಎಂಬ ಶರೀರ ಶಾಸ್ತ್ರತಜ್ಞರು ಫೆಸಿಫಿಕ್ ಸಾಗರದ ಮೇಲೆ ಹಾರುವ ವೈಮಾನಿಕರಿಗೆ ಅದೆಷ್ಟು ಸಮಯದ ಕೆಲಸ ಅವಧಿಯನ್ನು ಕೊಡಬೇಕೆಂದು ಕಂಡುಹಿಡಿಯಲು ಒಂದು "ಪ್ರಕಾಶ" ವಿಧಾನವನ್ನು ಕಂಡುಹಿಡಿದಿರುವರು

ಸಿರಿಸುದ್ದಿ

ಇಂಗ್ಲೆಂಡಿನ ಶೆಫೀಲ್ಡಿನ ವಾಚನಾಲಯಗಳಲ್ಲಿ ಸಣ್ಣ ಮಕ್ಕಳಿಗೆ ಅಜ್ಜಿ ಕತೆಗಳನ್ನು ಹೇಳುವ ಏರ್ಪಾಡು ಮಾಡಲಾಗಿದೆ ಮಕ್ಕಳಿಗೆ ಕತೆ ಹೇಳಲು ಸಮಯವಿಲ್ಲದ ಹೆತ್ತವರು ಅವರನ್ನು ಈ ವಾಚನಾಲಯಕ್ಕೆ ಕಳುಹಿಸಿದರಾಯಿತು

ರಕ್ಷಣಾ ಮಂಡಳದಲ್ಲಿ ಈಜಿಪ್ತಿನ ಪರವಾಗಿ ಸಮರ್ಥನೆ ಮಾಡಿದಕೆ ಆಲಿಯಲ್ ಮುರಾಕ್‌ಬೇ ಎಂಬ ಈಜಿಪ್ತ ಮಜೂರ ಸಂಘದ ಸದಸ್ಯರು ತನ್ನೀರ್ವ ಮಕ್ಕಳನ್ನು ರಶಿಯಾ ಮತ್ತು ಪೋಲೆಂಡ್ ರಾಯಭಾರಿಗಳಿಗೆ ಅರ್ಪಿಸಿರುವನು



ಮಲಬಾರಿನ ಭೂತಪ್ರೇತ ವಿಶ್ವಾಸಗಳು

ವೀಳ್ಯಕೊಟ್ಟು ವೈಯ್ಯಾರಮಾಡುವ ಪಿಶಾಚಿ

ಕಬ್ಬಿಣಕ್ಕೆ ಪ್ರೇತಗಳು ಬೆದರುತ್ತವೆ!

"ನೀವೆಂದಾದರೂ ಭೂತಗಳನ್ನು ಕಂಡದ್ದುಂಟೆ? ನೀವುದನ್ನು ಕಂಡಿರುವಿರಾದರೆ ನಿಜವಾಗಿ ಅದೊಂದು ರೋಮಾಂಚಕ ಅನುಭವವೇ ಸರಿ. ನನ್ನ ಮಟ್ಟಿಗೆ ನನಗೊಂದು ಸಲ ಆ ಅನುಭವವಾಗಿದ್ದು ನಾನದರ ಸಂಬಂಧವಾದೆಲ್ಲ ವಿಸ್ಮಯಗಳನ್ನನುಭವಿಸಿದ್ದೇನೆ" ಹೀಗೆಂದು ರಾಮಕೃಷ್ಣನ್ ಎಂಬ ಬಿ. ಎಸ್. ಸಿ ವಿದ್ಯಾರ್ಥಿಗಳೊಬ್ಬರು ಒಂದು ಲೇಖನದಲ್ಲಿ ತಮ್ಮ ನಾಡಾದ ಮಲಬಾರಿನ ಕೆಲವು ಭೂತಪ್ರೇತ ವಿಶ್ವಾಸ ಸಂಬಂಧವಾದ ಅನುಭವವನ್ನು ತಿಳಿಸುತ್ತಾರೆ

ಒಂದು ಚಳಿಗಾಲದ ರಾತ್ರಿ ನಾನು ನನ್ನ ಹಳ್ಳಿ ಮನೆ ಕಡೆ ಹೋಗುತ್ತಿದ್ದೆ. ನಾನಿದ್ದ ಪಟ್ಟಣದಿಂದ ಐದು ಮೈಲು ದೂರದಲ್ಲಿ ಅದಿತ್ತು. ಒಂದು ಅತ್ಯಾವಶ್ಯಕ ಕೆಲಸದ ಸಲುವಾಗಿ ನಾನು ಪ್ರಯಾಣ ಕೈಕೊಂಡಿದ್ದೆ ಆ ಕಡೆ ಕತ್ತಲಾದ ನಂತರ ಒಂದೇ ಒಂದು ನರಪ್ರಾಣಿ ಕೂಡ ಸುಳಿಯುವುದಿಲ್ಲ ಎರಡು ಮೈಲು ಬಂದಿದ್ದೇನೆ ನನ್ನಿಂದ ಸುಮಾರು 30 ಗಜ ದೂರದಲ್ಲೊಂದು ಬಿಳಿ ವಸ್ತ್ರ ಭೂಷಿತ ಆಕೃತಿಯೊಂದು ಕಾಣ ಹತ್ತಿತು ಅದೂ ಮೆಲ್ಲನೆ ಚಲಿಸುತ್ತಿದ್ದು ನಾನದೆಷ್ಟು ವೇಗವಾಗಿ ನಡೆದರೂ ನನ್ನ ಮತ್ತಾ ಬಿಳಿ ಛಾಯೆಯ ನಡುವಿನ ಮೂವತ್ತು ಗಜ ಅಂತರವು ಕಡಿಮೆಯಾಗದಿರುವುದು ನನ್ನ ಅರಿವಿಗೆ ಬಂತು ಗಲಿಬಿಲಿ ಭಯಗಳಿಂದೊಡಗೂಡಿದವನಾಗಿ ದಿಗಿಲು ಬಿದ್ದ ನನ್ನಲ್ಲಿ ಜನರಾಡಿಕೊಳ್ಳುತ್ತಿದ್ದ ಭೂತ ಪಿಶಾಚಿಗಳ ಸಂಗತಿಗಳು ನೆನಪಿಗೆ ಬಂದವು ಇಂತಹದೊಂದು ಬಿಳಿ ಭೂತವಿದೆಯೆಂದೂ ಅದು ನಮ್ಮಿಂದ ಮೂವತ್ತೆ ಗಜ ಅಂತರದಲ್ಲಿ ಚಲಿಸಿ ಕೊನೆಗ ಫಕ್ಕನೆ ಹಿಂದಕ್ಕೆ ತಿರುಗಿ ಕೆನ್ನೆಗೊಂದು ನ್ಯೃತ್ಯ್ಯಕಾರಕ ಏಟನ್ನು ಕೊಡುವುದೆಂದದರ ವಿಷಯ ಪ್ರತೀತಿ ಇತ್ತು

ಏನೂ ತಿಳಿಯದವನಂತಾಗಿ ಓಡಲು ಮನಸ್ಸು ಮಾಡಿದೆ, ಆದರೆಲ್ಲಿಗೆ ಹೋಗಲಿ? ಆ ಸುಪಾಸಿನಲ್ಲಿ ಮಾನವ ಸುಳಿವಿಲ್ಲ ಯಾರು ಸಹಾಯ ಕೊಡುವರು? ಹೆದರಿಕೆಯಿಂದ ಸಂಪೂರ್ಣ ಬೆವರಿದೆ ಮತ್ತೆ ಧೈರ್ಯ ತಂದುಕೊಳ್ಳಲು ಯತ್ನಿಸಿ ಕೆಲವು ಮಾರಷ್ಟು ಹೇಗೋ ನಡೆದೆ, ಮತ್ತೂ ಆ ಆಕೃತಿ ಅಷ್ಟೇ ದೂರದಲ್ಲಿತ್ತು, ಸ್ಮೃತಿಗೆ ಬಂದ ಎಲ್ಲಾ ದೇವ ದೈವಗಳನ್ನು ಜ್ಞಾಪಿಸಿದೆ ದೇವರುಗಳಿಗೆ ನನ್ನ ಮೊರೆ ಕೇಳಿತೋ ಏನೊ, ಕೂಡಲೇ ಮುಸುಕಾಗಿ ಪ್ರಕಾಶಿಸುತ್ತಿದ್ದ ಚಂದ್ರನನ್ನು ಕರಿ ಮುಗಿಲುಗಳು ಮುತ್ತಿ ಬಿಟ್ಟು ಅಂಧಕಾರವನ್ನುಂಟುಮಾಡಿದುವು ಈ ಮೃತ್ಯು ಮುಖದಿಂದ ತಪ್ಪಿಸಿಕೊಳ್ಳುವ ದಾರಿ ನನಗೊಂದೂ ತೋಚದೆ ನನ್ನೀ ಭೌತಿಕ ಜೀವನಾಂತ್ಯವೆಂದಾಗುವುದೆಂದು ನಿರೀಕ್ಷಿಸುತ್ತಲಿದ್ದೆ ಒಂದು ಮರದ ಕೆಳಗೆ ನಂತೆ-ಭೂತವೂ ನಿಂತು ಬಿಟ್ಟಿತು!

ನನ್ನ ಶರೀರವೆಲ್ಲ ತತ್ತರಿಸುತ್ತಿತ್ತು ಆಗೊಂದು ಅಸಾಧಾರಣ ಸಂಗತಿಯು ನಡೆಯಿತು . ನಾನು ನಗಾಡ ಹತ್ತಿದೆ. ಭಯದಿಂದ ನನ್ನ ತಲೆ ಕೆಟ್ಟು ಈ ಪರಿಸ್ಥಿತಿಗೆ ಮುಟ್ಟಿರಬಹುದು. ಮತ್ತೆ ಅದ್ಯಾವ ನಿರ್ಧಾರವು ನನ್ನನ್ನು ಪ್ರೇರಿಪಿಸಿತೋ ಆ ಭೂತವನ್ನು ಹಿಡಿಯಬೇಕೆಂದಿಚ್ಛಿಸಿ ಮುಂದಕ್ಕೆ ಓಡಿದೆ . . . ನನಗೂ ಭೂತಕ್ಕೂ ಕೆಲವೇ ಗೇಣುಗಳ ಅಂತರ ಮಾತ್ರ ಉಳಿದಿತ್ತು . ಫಕ್ಕನೆ ಅದು ತಿರುಗಿ ಕೊಂಡು ಮಾತನಾಡಹತ್ತಿತು! "ಏನಪ್ಪಾ ತರುಣಾ, ನನ್ನ ಬಿಳಿ ಕರುವನ್ನೆಲ್ಲಾದರೂ ಕಂಡಿರುವಿಯೇನಪ್ಪಾ?" ಎಂಬ ಪ್ರಶ್ನೆ ನನ್ನನ್ನೊಂದು ಸಲಕ್ಕೆ ದಿಗ್ಭ್ರಾಂತನನ್ನಾಗಿ ಮಾಡಿತು ಪರಾಂಬರಿಸಿ ನೋಡಲು ಆಕೆಯೊಬ್ಬಳು ನನ್ನ ಪರಿಚಯಸ್ಥಳು-ತನ್ನ ಕಾಣೆಯಾದ ಕರುವೊಂದನ್ನು ಹುಡುಕಾಡುತ್ತಿದ್ದ ವೃದ್ಧ ಬ್ರಾಹ್ಮಣ ವಿಧವೆಯವಳು ಮುಸುಕು ಮೋಡದ ಬೆಳದಿಂಗಳ ರಾತ್ರಿಯಲ್ಲಿ ಅವಳುಟ್ಟ ಬಿಳಿ ಬಟ್ಟೆ ಮಾತ್ರ ಕಾಣುತ್ತಿತ್ತು-ಅದೇ ನನ್ನನಿಷ್ಟು ಭೀತಿಗೊಳಮಾಡಿದ್ದು ತನ್ನ ಕರುವನ್ನು ನೋಡಲು ಅವಳು ಆಗಾಗ್ಗೆ ನಿಲ್ಲುತ್ತಿದ್ದಳಾದದಿಂದ ನನ್ನ ಅವಳೊಳಗಿನ ಅಂತರದಲ್ಲಿ ಅಷ್ಟೊಂದು ಕಣ್ಣು ಕಟ್ಟಾಗುತ್ತಿತ್ತು ಇದೊಂದು ಭಯಾನಕ ಭೀಭತ್ಸ ದೃಶ್ಯದ ಪರಮಾವಧಿ ಆದರೆ ಅದು ನಿಜವಾಗಿ ಭೂತವಾಗಿದ್ದರೆ ಏನಾಗುತ್ತಿತ್ತೆಂದು ಯಾರಿಗೆ ಗೊತ್ತು!

✱

ನೀವೆಂದಾದರೂ ಯಕ್ಷಿ ಎಂಬ ಭೂತ ವಿಚಾರ ಕೇಳಿದ್ದೀರೋ? ಮಲಬಾರು ಕಡೆಗಳಲ್ಲಿದು ತುಂಬಾ ಜನಪ್ರಿಯ ಪಿಶಾಚಿ ನೋಟಕ್ಕೆ ಅತ್ಯಂತ ಸುಂದರವಾಗಿದೆಯೆಂದೂ ಹೇಳುತ್ತಾರೆ ಒರ್ವ ಸುಂದರ ಸ್ತ್ರೀಯಂತೆ ಇದು ಕತ್ತಲಲ್ಲಿ ನಿಂತುಕೊಂಡಿರುತ್ತದಂತೆ ದಾಟಿ ಹೋಗುವ ವ್ಯಕ್ತಿಯನ್ನದು ಬಲಿತೆಗೆದುಕೊಳ್ಳುವುದಂತೆ ಅದನ್ನು 'ಜವಾದ ವೈಯಾರಿಯೆಂದೆ' ನೀವೇನಾದರೂ ನಿಶಾಪ್ರಣಯಕ್ಕಾರಂಭಿಸಿದರೆ ಮೃತ್ಯು ಕಟ್ಟಿಟ್ಟದ್ದು ಕೂಡಲೆ ಬೃಹತ್ಪ್ರಾಕಾರ ತಾಳಿ ನಿಮ್ಮನ್ನು ಬೀಳ ಹೊಡೆದು ರಕ್ತಪಾತ ಮಾಡುವುದದರ ರೂಢಿಯಂತೆ. ಮನುಷ್ಯನ ದೇಹದ ಕೂದಲು ಮತ್ತು ಉಗುರುಗಳನ್ನು ಮಾತ್ರ ಇದು ಬಿಡುವುದು-ಮತ್ತೆಲ್ಲ ಅದರ ಹಸಿದ ಹೊಟ್ಟೆಗೆ ಸೇರುವುದು! ಮೊದಲು ಯಕ್ಷಿಯು ವೀಳ್ಯದೆಲೆ ತೋರಿಸಿ ಸುಣ್ಣ ಕೇಳುವಳು ಅಂತಹ ಸುಂದರ ಸ್ತ್ರೀಗೆ ವೀಳ್ಯ ಭಕ್ತರಾರಾದರೂ ಸುಣ್ಣದ ಸೇವೆ ತಿರಸ್ಕರಿಸ್ಯಾರೆ? ಮತ್ತೆ ನೀವು ಒಂದು ಹೆಜ್ಜೆ ಮುಂದರಿದರೆ ಸಾಕು, ನಿಮ್ಮ ಸರ್ವನಾಶ ಮಾಡಿ ಅದು ತನ್ನ ನಿವಾಸವಾದ ತಾಳೆ ಮರದೆಡೆ ಹೋಗುವುದು

'ಮಾರುತ'ನೆಂಬದಿನ್ನೊಂದು ಜನಪ್ರಿಯ ಪ್ರೇತ ಯಕ್ಷಿಯಷ್ಟು ಸಾರಸ್ಯಮಯವಾದುದಲ್ಲ ಆದರೆ ಕತ್ತಲಲ್ಲಿ ಏಕಾಂಗಿಯಾಗಿ ಪ್ರಯಾಣ ಮಾಡುವವರು ಇದರ ಕೈಯಿಂದ ತಪ್ಪಿಸಿ ಕೊಂಡದ್ದು ವಿರಳವೆಂದೇ ಹೇಳಲ್ಪಡುತ್ತದೆ ಈ ಭೂತ ಪ್ರಾಣಿ ರೂಪತಾಳಿ ನಿಮ್ಮನ್ನನುಸರಿಸುವುದು ಒಂದು ಸಲ ತಿರುವಾಂಕೂರಿನ ಅಲಪ್ಪೆಯಲ್ಲೊಂದು ದಿನ ರಾತ್ರೆ ಒರ್ವ ಎಂಗ್ಲೊ ಇಂಡಿಯನ್ ಯುವಕನು ಸಿನೇಮಾ ನೋಡಿ ಮನೆಗೆ ತಿರುಗುತ್ತಿದ್ದ ಅವನ ಮನೆಗೆ ಸತ್ತ್ರೊಡೆಯ ದಾರಿವೊಂದಿದೆ ಒಣಿ ಒಳ ಬರುತ್ತಲೇ ನಾಯಿಯೊಂದರ ಬೊಗಳಿಕೆ ಆತ ಕೇಳಿದ ತಿರುಗುತ್ತಾ ಅವನು ನಾಯಿಗೊಂದು ಕಲ್ಲು ಬಿಸುಟ ಮುಂದರಿದ ಕೂಡಲೇ ಎರಡು ನಾಯಿಗಳು ಅವನ ಹಿಂದಿನಿಂದ ಬೊಬ್ಬಿಡುತ್ತ ಬಂದುವು. ಪುನಃ ಒಮ್ಮೆ ನಿಂತವನು ಮತ್ತೆರಡು ಕಲ್ಲುಗಳನ್ನು ಹೊಡೆದು ಮುಂದೆ ಸಾಗಿದ. ಕೆಲವೇ ಕ್ಷಣಗಳೊಳಗೆ ಅನೇಕ ನಾಯಿಗಳು ಅವನ ಹಿಂದೆ ಗರ್ಜಿಸಿ ಬರತೊಡಗಿದುವು. ಇದು ರಾತ್ರಿ ಕಾಲದಲ್ಲಿ ನಾಯಿಗಳ ಸಹಜ ಸ್ವಭಾವವೆಂದರಿತ ಅವನು ತನ್ನಿಂದ ಸ್ವಲ್ಪ ದೂರದಲ್ಲೇ ಎಂಬಂತೆ ಬೊಗಳುವ ಆಶುತನಕಗಳಿಗೆ ಮತ್ತೆ ಕಲ್ಲು ಹೊಡೆಯುವ ಪ್ರಯತ್ನ ಮಾಡಲಿಲ್ಲ,

ಆ ಸಮಯಕ್ಕೆ ಹತ್ತಿರದ ಹೋಟೇಲಿನವನೊಬ್ಬ ನಾಯಿ ಬೊಬ್ಬೆಗಿದ್ದು ಹೊರ ಬಂದು ಆ ನಾಯಿ ಗುಂಪನ್ನು ನೋಡಿ ಬೆರಗಾದ ಇವನು ಅದಕ್ಕೆ ಅಷ್ಟೊಂದು ಮಹತ್ವ ಕೊಡದೆ ಪುನಃ ನಿದ್ದೆ ಮಾಡಲು ಒಳ ಹೋಗಿದ್ದಾನೆ ಮಾತ್ರ, ತಕ್ಷಣವೊಂಬಂತೆ ರಕ್ತ ನಿಗುರಿಸುವ ಕರ್ಕಶ ಕಿರಚಾಟವೊಂದು ಅವನ ಕಿವಿಗೆ ಬಿತ್ತು ಕೂಡಲೇ ಅವನು ತನ್ನ ಮನೆಯವರನ್ನೆಲ್ಲ ಎಬ್ಬಿಸಿ ಕೂಗು ಕೇಳಿ ಬಂದ ಕಡೆ ಧಾವಿಸಿದ. ಐವತ್ತು ಗಜ ದೂರದಲ್ಲಿ ಎಂಗ್ಲೊ ಇಂಡಿಯಾನನು ರಕ್ತ ಮಡುವೊಂದರಲ್ಲಿ ಮೃತನಾಗಿ ಬಿದ್ದಿದ್ದ ಒಂದೇ ಒಂದು ನಾಯಿಯಾದರೂ ಹತ್ತಿರವಿರಲಿಲ್ಲ! ಇದೊಂದು ಮಾರುತನ ಕಾರ್ಯವೆಂದು ನೆರೆಕೆರೆಯವರು ಈಗಲೂ ನಂಬುತ್ತಾರೆ

ಮಲಬಾರಿನ ಹಳ್ಳಿ ಕಡಗಳಲ್ಲಿ ಭೂತದ ಕತೆ ಗೊತ್ತಿಲ್ಲದವರಾರೂ ಇಲ್ಲ ಭೂತಗಳಲ್ಲಿ ಕನಿಷ್ಠ ವರ್ಗದವೂ ಇವೆ ಇವು ಪ್ರಾಣ ತೆಗೆಯುವಂತಹುಗಳಲ್ಲ ಆದರೆ ಮನುಷ್ಯನು ಯಾವದಾದರೊಂದು ಇಂದ್ರಿಯವನ್ನು ಹಾನಿ ಮಾಡುತ್ತವೆ 'ಕುಟ್ಟಿಚ್ಚಾತನ್' ಎಂಬುದೊಂದು ಈ ಜಾತಿಯದು ಗರ್ಭಿಣಿ ಸ್ತ್ರೀಯರು ಮಡಿದು ಉಂಟಾದ ಪ್ರೇತಗಳಿವಂತೆ ಇವು ಯಾವ ತೊಂದರೆ ಕೊಡದಿದ್ದರೂ ಒಂದು ಸಲಕ್ಕೆ ನಿಮ್ಮನ್ನು ತತ್ತರಿಸುತ್ತವೆ ಕೆಲವು ಸಲ ಇವು ದಾರಿ ಹೋಕರ ಮುಂದೆ ಒಂದು ಕೆಂಕಿಯ ಕೆಂಡವಾಗಿ ಹಾರಿ ಹೋಗುವುವಂತೆ ಮರದ ಗೆಲ್ಲುಗಳಲ್ಲಿ ಅವಿತು, ಮರಳು, ಕಲ್ಲು ಬಿಸಾಡುವವುಗಳೂ, ಕೆಲವು ಸಲ ತಪ್ಪಿ ತೂಗು ಗೆಲ್ಲುಗಳ ಕೆಳಗಿಂದ ಹಾದು ಹೋಗುವವರನ್ನು ಕತ್ತು ಹಿಚುಕಿ ಮೂರ್ಛೆಗೊಳಿಸುವಂತಹುಗಳೂ ಇವುಗಳಲ್ಲಿ ಕೆಲವು.

ಇತ್ತೀಚೆಗೆ ಹೆಚ್ಚೆಚ್ಚು ಜನರು ಭೂತ ಪ್ರೇತ ವಿಶ್ವಾಸವುಳ್ಳರಾಗುತ್ತಿದ್ದಾರೆ ಕೆಲವರು ಭೂತ ಕೃತ್ಯಗಳನ್ನು ವೈಜ್ಞಾನಿಕ ವಿವರಣೆಗಳಿಂದ ವರ್ಣಿಸಲು ಪ್ರಯತ್ನಿಸುತ್ತಾರೆ ಸ್ಮಶಾನ ಭೂಮಿಯಲ್ಲಿ ಇಡೀ ರಾತ್ರೆ ಕಳೆಯುವವರನ್ನು ಅಸಾಮಾನ್ಯ ಧೀರರೆನ್ನಲೇಬೇಕು ಕೆಲವರು ಕಬ್ಬಿಣದ ಕತ್ತಿಯನ್ನು ತಲೆಗಿಂಬಿನಡಿ ಇಟ್ಟು ಮಲಗುತ್ತಾರೆ ಕಬ್ಬಿಣ ಲೋಹಕ್ಕೆ ಇರುವ ಕೆಲವೊಂದು ಶಕ್ತಿಯನ್ನು ಭೂತಗಳು ಎದುರಿಸಲಾರವಂತೆ

ಒಂದು ತುಂಡು ಕಬ್ಬಿಣದಿಂದ ಭೂತದ ಬೆದರಿಕೆಯನ್ನು ತಡೆಯಬಹುದಂತಾಗುವುದಾದರೆ ಅದು ಬಹಳ ಉಪಕಾರದ ಸಂಗತಿಯೇ ಆಗಿರಬೇಕು. ನನ್ನ ಅಭಿಪ್ರಾಯದಲ್ಲಿ ವಿಶಿಷ್ಟವಾದೊಂದು ತತ್ವ ಜ್ಞಾನವು ಈ ಭೂತ ಭಯ ನಿವಾರಣೆಗೆ ಅವಶ್ಯವೆಂದು ತೋರುತ್ತದೆ. ಆದರೆ ಆ ತತ್ವ ಜ್ಞಾನವಾವುದೆಂದು ನಾನರಿಯೆ. ನಾನರಿತಿರುವ ಒಂದೇ ಒಂದು ತತ್ವ ಜ್ಞಾನವೆಂದರೆ ನಿಷೇಧಾತ್ಮಕವಾದದ್ದು ಅದೆಂದರೆ -ಎಲ್ಲವೂ ವಿಧಿ. ಆದರೆ ಅದು ಮಾತ್ರ ನಮ್ಮ ಸಹಾಯಕ್ಕೆಂದೂ ಬಾರದು

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪಿತ: [illegible])

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು, ವಣಿಜರಿಗೂ ಕೃಷಿಕರಿಗೂ ಕ್ಲಿಷ್ಟಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು, ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿ ಕೊಡುವುದು ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906

CANARA BANK, LIMITED.

ಸ್ವದೇಶಾಭಿಮಾನಿ

ತಾರೀಕು 21-11-1947

ನಿಯಂತ್ರಣ ಬೇಡ

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸೇರಿದ ಆಹಾರ ಪರಿಷತ್ತಿನಲ್ಲಿ ಆಹಾರ ಇತ್ಯಾದಿ ಆವಶ್ಯಕತೆಗಳ ಸರಕಾರೀ ನಿಯಂತ್ರಣ ಕೂಡಲೇ ತೆಗೆದುಹಾಕಬೇಕೆಂಬ ನಿರ್ಣಯವು ಮಂಜೂರಾಯಿತು.

ಹೀಗೆ ಆಹಾರ ನಿಯಂತ್ರಣವನ್ನು ತೆಗೆದುಹಾಕಿದರೆ ಯಾವ ಪರಿಸ್ಥಿತಿಯು ಬಂದೀತು ಮತ್ತು ಅದನ್ನು ಹೇಗೆ ಎದುರಿಸಬಹುದೆಂಬ ಪ್ರಶ್ನೆ ಮಹತ್ವದ ವಿಷಯವಿರುತ್ತದೆ. ಈ ಪ್ರಶ್ನೆಯನ್ನು ಮುಂದೆ ಚರ್ಚಿಸುವ ಬದಲು ಪರಿಷತ್ತು ನಿಯಂತ್ರಣ ತೆಗೆದುಹಾಕುವಲ್ಲಿ ತನಕ ಸಂಗ್ರಹ ಕಾರ್ಯದಲ್ಲಿ ಯಾವ ತಿದ್ದುಪಡಿಗಳಾಗಬೇಕೆಂಬ ವಿಚಾರವನ್ನೇ ಮುಂದೊತ್ತಿ ಈ ಪ್ರಶ್ನೆಯಲ್ಲಿಯೇ ತನ್ನ ಇಡೀ ಸಮಯ ಕಳೆಯಿತು.

ನಿಯಂತ್ರಣವನ್ನು ಕೂಡಲೇ ತೆಗೆದುಹಾಕಬೇಕೆಂಬ ನಿರ್ಣಯ ಮಾಡಿದ ಬಳಿಕ ತೆಗೆದುಹಾಕುವಲ್ಲಿಯ ತನಕ ಎಂಬ ಮಾತಿಗೆ ಬೆಲೆ ಇಲ್ಲವೆಂಬುದು ಇವರಿಗೆ ಅರ್ಥವಾದಂತೆ ಕಾಣುವುದಿಲ್ಲ ಅಥವಾ ಕೂಡಲೆ ನಿಯಂತ್ರಣ ತೆಗೆದುಹಾಕಬೇಕೆಂಬ ವಿಷಯದಲ್ಲಿ ಮಾಡಿರುವ ನಿರ್ಣಯವು ಪುನಃಪೂರ್ವಕ ವಿಶ್ವಾಸದಿಂದ ಮಾಡಿರುವ ನಿರ್ಣಯವಲ್ಲವೆಂದೇ ಹೇಳಬೇಕಾಗುತ್ತದೆ.

ನಿಯಂತ್ರಣ ತೆಗೆದುಹಾಕಬೇಕೆಂದು ಮಹಾತ್ಮಾ ಗಾಂಧಿಯವರು ಹೇಳುತ್ತಾರೆ. ಆದ್ದರಿಂದ ಅವರನ್ನು ಸಮರ್ಥಿಸಿ ನಾವು ಒಂದು ಔಪಚಾರಿಕ ನಿರ್ಣಯ ಮಾಡೋಣವೆಂಬ ಭಾವನೆಯಿಂದ ಈ ಪರಿಷತ್ತು ಈ ನಿರ್ಣಯವನ್ನು ಮಂಜೂರು ಮಾಡಿದಂತೆ ಕಾಣುತ್ತದೆ.

ಅಂತೂ ಈ ಪರಿಷತ್ತು ಜಿಲ್ಲೆಯಲ್ಲಿ ಸಂಗ್ರಹ ಕಾರ್ಯಕ್ರಮದಿಂದ ಆಗುತ್ತಿರುವ ಉಪಟಳಗಳನ್ನು ಸ್ಪಷ್ಟೀಕರಿಸಿತೆಂಬುದು ಸಂತೋಷದ ವಿಷಯ. ಪರಿಷತ್ತಿನಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಅಲ್ಲಲ್ಲಿಯ ಪರಿಸ್ಥಿತಿ ಚೆನ್ನಾಗಿ ಬಲ್ಲ ಮಹಾಜನರು ಭಾಗವಹಿಸಿದ್ದು ಇದು ನಿಜವಾದ ಜಿಲ್ಲೆಯ ಅಭಿಪ್ರಾಯವನ್ನು ವ್ಯಕ್ತಗೊಳಿಸುವ ಯೋಗ್ಯತೆಯುಳ್ಳ ಪರಿಷತ್ತಾಗಿತೆಂಬ ಮಾತು ನಿರ್ವಿವಾದ. ಸಂಗ್ರಹ ಕಾರ್ಯಕ್ರಮದ ಗೋಳನ್ನು ಪ್ರತಿ ಕಡೆಯವರು ಒಂದೇ ಬಗೆಯಾಗಿ ವ್ಯಕ್ತಗೊಳಿಸಿದ್ದನ್ನು ನೋಡುವಾಗ ಈ ಕಾರ್ಯಕ್ರಮವು ಎಷ್ಟು ಬೇಗನೆ ನಿಲ್ಲುವುದೊ ಅಷ್ಟು ಹಿತಕರವೆನಿಸುತ್ತಿತ್ತು.

ಈ ಸಂಗ್ರಹ ಪದ್ಧತಿಯನ್ನು ಸುಧಾರಿಸಲು ಪರಿಷತ್ತು ತನ್ನ ಮುಖ್ಯ ಲಕ್ಷ್ಯವನ್ನು ಕೊಟ್ಟಿತೆಂದು ಮೇಲೆಯೇ ಹೇಳಲಾಗಿದೆ. ಇದಾದರೂ ಸಾಧ್ಯವಿದೆಯೇ ಎಂದು ಯೋಚಿಸೋಣ.

ಸಂಗ್ರಹ ಕಾರ್ಯದ ಉಪಟಳಕ್ಕೆ ಸ್ಥಳೀಕ ಅಧಿಕಾರಿಗಳನ್ನು ದೂರಿ ಫಲವಿಲ್ಲವೆಂಬ ಮಾತನ್ನು ಹಲವರು ಹೇಳಿದರು. ಕೆಲವು ಮಂದಿ ಲಂಚ ತಿಂದು ಹಾವಳಿ ಮಾಡುವ ಅಧಿಕಾರಿಗಳಿರಬಹುದು. ಅಂದರೆ ಶ್ರೀಮಂತರಿಂದ ಅಕ್ಕಿಯನ್ನು ಸಂಗ್ರಹ ಮಾಡದೆ ಬಿಟ್ಟು ಬಡವರನ್ನು ಬೇಕಾದುದಕ್ಕಿಂತಲೂ ಹೆಚ್ಚು ಗೋಳಾಡಿಸಬಹುದು. ಆದರೂ ಎಲ್ಲರೂ ಹೀಗಿನವರೇ ಎನ್ನುವಂತಿಲ್ಲವಷ್ಟೆ? ಅದಷ್ಟು ಹೆಚ್ಚು ಅಕ್ಕಿ ಸಂಗ್ರಹಿಸುವಂತೆ ಅವರಿಗೆ ಆಜ್ಞೆ ಇರುವಾಗ ಅವರಾದರೂ ಏನು ಮಾಡಬೇಕು?

ಸರಕಾರದವರಾದರೂ ಆದಷ್ಟು ಹೆಚ್ಚು ಸಂಗ್ರಹ ಮಾಡುವಂತೆ ಆಜ್ಞೆ ಕೊಡುವುದು ತಪ್ಪೆನ್ನಬಹುದೆ? ಅವರು ಜನರಿಗೆ ಅಕ್ಕಿ ಎಲ್ಲಿಂದ ಒದಗಿಸಬೇಕು? ಕೇಂದ್ರ ಸರಕಾರದವರು ನಿಮ್ಮ ಕಾಲ ಮೇಲೆ ನೀವು ನಿಲ್ಲಬೇಕು. ನಾವು ಅಕ್ಕಿ ಕಳುಹಿಸುವಂತಿಲ್ಲವೆಂಬಾಗ ಅವರಾದರೂ ಆದಷ್ಟು ಹೆಚ್ಚು ಸಂಗ್ರಹ ಮಾಡಲೆತ್ನಿಸುವುದು ಅವರ ತಪ್ಪೆ?

ಕೇಂದ್ರ ಸರಕಾರದವರು ಹೇಳುವುದು ತಪ್ಪೆ? ಅವರಾದರೂ ಪ್ರಾಂತ್ಯಗಳಿಗೆ ಬೇಕಾದ ಅಕ್ಕಿ ಎಲ್ಲಿಂದ ಒದಗಿಸಬೇಕು? ಎಷ್ಟೆಂದು ಪರರಾಷ್ಟ್ರಗಳಿಂದ ದುಡ್ಡು ಕೊಟ್ಟು ತರಿಸುತ್ತ ಹೋಗಲು ಸಾಧ್ಯವಿದೆ? ಸರಕಾರಕ್ಕೆ ಪರದೇಶ ವ್ಯಾಪಾರಕ್ಕೆ ಇದ್ದ ಹಣವೆಲ್ಲ ಆಹಾರಕ್ಕಾಗಿಯೇ ಉಪಯೋಗಿಸಿದರೆ ಬೇರೆ ಅಭಿವೃದ್ಧಿಗೆ ಬೇಕಾದ ಮ್ಯಾಲುಗಳನ್ನು ಹೇಗೆ ತರಿಸಬೇಕು?

ಹೀಗೆ ವಿಚಾರಿಸಿದರೆ ಕೇಂದ್ರ ಸರಕಾರದಿಂದ ಕೆಳ ನೌಕರರ ತನಕ ತಪ್ಪು ಯಾರದೂ ಹೇಳುವಂತಿಲ್ಲ. ನಿಜವಾದ ತಪ್ಪು ಈ ನಿಯಂತ್ರಣ ಮತ್ತು ಸಂಗ್ರಹ ಕಾರ್ಯಕ್ರಮದಲ್ಲಿಯೇ ಇದೆಯೆಂಬುದು ಸ್ಪಷ್ಟವಾಗುತ್ತದೆ. ಇದನ್ನು ಎಷ್ಟು ಉತ್ತಮ ಮಂತ್ರಿಮಂಡಲವಿದ್ದರೂ ಸುಧಾರಿಸಲು ಸಾಧ್ಯವಿಲ್ಲ. ಈ ಕಾರ್ಯಕ್ರಮವನ್ನು ಅಂತ್ಯಗೊಳಿಸುವುದೇ ಗೋಳನ್ನು ನಿಲ್ಲಿಸಲು ಇರುವ ಒಂದೇ ದಾರಿ. ಮಾತ್ರವಲ್ಲ ನಿಯಂತ್ರಣ ನಿಲ್ಲಿಸಿದರೆ ಆ ಲಂಚ ತಿನ್ನುವ ಅಧಿಕಾರಿಗಳ ವರ್ತನ ಕೂಡಾ ಸುಧಾರಿಸಲು ಸಹಾಯವಾದೀತು.

ಆದುದರಿಂದ ಈ ಪರಿಷತ್ತಿನವರು ಸಂಗ್ರಹ ಕಾರ್ಯಕ್ರಮಕ್ಕೆ ತಿದ್ದುಪಡಿಗಳನ್ನು ತಂದೊಡ್ಡಲು ಭಗೀರಥ ಪ್ರಯತ್ನ ಮಾಡುವುದಕ್ಕಿಂತ ತಾವೇ ಪೂರ್ಣ ತಿಳಿದೋ ತಿಳಿಯದೆಯೋ ಮಂಜೂರು ಮಾಡಿರುವ ನಿಯಂತ್ರಣ ತೆಗೆದುಹಾಕುವಂತೆ ಮಾಡಲು ತಮ್ಮ ಪೂರ್ಣ ಯತ್ನ ಮಾಡುವುದು ಶ್ರೇಯಸ್ಕರವಿರುತ್ತದೆ

ನಿಯಂತ್ರಣ ತೆಗೆದರೆ ಏನಾದೀತು? ಸಂಗ್ರಹ ಕಾರ್ಯಕ್ರಮದ ಉಪಟಳ ಕೂಡಲೇ ನಿಲ್ಲುವುದು ಎಂಬುದು ಮೊದಲ ಉತ್ತರ. ಆಹಾರ ಬೆಳೆ ಹೆಚ್ಚಿಸಲು ನಿಜವಾದ ಪ್ರಯತ್ನ ಮಾಡಲು ಹೆಚ್ಚಿನ ಅನುಕೂಲತೆ ದೊರೆಯುವುದು. ಪ್ರತಿ ಗ್ರಾಮದವರೂ ತಮಗೆ ಬೇಕೆಂಬಷ್ಟು ಆಹಾರವನ್ನಾದರೂ ತಾವು ಬೆಳೆಸದಿದ್ದರೆ ಸರಕಾರ ಅಕ್ಕಿ ತಂದುಕೊಡುವಂತಿಲ್ಲವೆಂಬುದನ್ನು ತಿಳಿದು ತಾವು ಉಪವಾಸ ಬೀಳಬೇಕಾದೀತೆಂಬುದನ್ನು ತಾವಾಗಿ ತಿಳಿಯುವದು ಅಥವಾ ಇದನ್ನು ಅವರಿಗೆ ತಿಳಿಯಹೇಳುವುದು ಕಷ್ಟವಾಗುವಂತಿಲ್ಲ. ಆಹಾರದ ಮಟ್ಟಿಗೆ ಪ್ರತಿ ಹಳ್ಳಿಯೂ ಸ್ವಾವಲಂಬಿಯಾಗುವಂತೆ ಸಾಧಿಸುವುದು ಸುಲಭ ಸಾಧ್ಯವಿರುತ್ತದೆ.

ಪೇಟೆಯಲ್ಲಿ ಅಕ್ಕಿ ಬೆಳೆಸುವುದಿಲ್ಲವಲ್ಲ? ಪೇಟೆಯವರ ಗತಿ ಏನು? ಎಂಬ ಪ್ರಶ್ನೆ ಬರುತ್ತದೆ. ಹಳ್ಳಿಗಳು ಪೇಟೆಗಳಿಂದ ಎಷ್ಟೋ ಮಾಲುಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಅದಕ್ಕೆ ಹಣ ಬೇಕು. ತಮಗೆ ಬೇಕಾದುದಕ್ಕಿಂತ ಸ್ವಲ್ಪ ಹೆಚ್ಚಿನ ಅಕ್ಕಿಯನ್ನು ಬೆಳೆಸಿ ಪೇಟೆಯವರಿಗೆ ಮಾರುವುದರಿಂದ ಮಾತ್ರ ಈ ಬಗ್ಗೆ ಬೇಕಾಗುವ ಹಣ ಹಳ್ಳಿಯವರಿಗೆ ಸಿಕ್ಕುತ್ತದೆ ಎಂಬುದರಿಂದ ಪೇಟೆಯವರೂ ಇಂಥ ಸಂದರ್ಭದಲ್ಲಿ ಉಪವಾಸ ಬೀಳಲಿಕ್ಕಿಲ್ಲವೆಂದೇ ಹೇಳಬಹುದು. ಸರಕಾರದವರು ಪೇಟೆಯವರಿಗೆ ಅಕ್ಕಿ ಕೊಡುವ ಮೊದಲು ಪೇಟೆಗಳಲ್ಲಿ ಜನರು ಊಟಮಾಡಿಕೊಂಡಿದ್ದರಷ್ಟೆ?

ಹಳ್ಳಿಗಳಲ್ಲಿ ದುಷ್ಟಿದ್ದ ವರ್ಗದಾರರು ಬೆಳೆದ ಅಕ್ಕಿಯನ್ನೆಲ್ಲ ಕೊಂಡುಕೊಂಡು ತಮ್ಮ ಶ್ರೀಮಂತಿಕೆ ಇನ್ನೂ ಬೆಳೆಸಲು ಹೆಚ್ಚಿನ ಕ್ರಯಕ್ಕೆ ಪೇಟೆಯ ಸಾಹುಕಾರರಿಗೆ ಮಾರಿದರೆ? ಪೇಟೆಯ ಸಾಹುಕಾರರು ತುಂಬಾ ಧನವುಳ್ಳವರಿದ್ದು ಇವರು ಇಂಥ ಅಕ್ಕಿಯನ್ನೆಲ್ಲ ಸಂಗ್ರಹಿಸಿ ಇನ್ನೂ ಹೆಚ್ಚು ಕ್ರಯ ಬರಲೆಂದು ದಾಸ್ತಾನಿಟ್ಟರೆ ಅಥವಾ ಮಲಬಾರಿಗೂ ಗೋವೆಗೋ ಕಳುಹಿಸಿದರೆ? ಅಕ್ಕಿ ಕ್ರಯ ಮುಡಿ ಒಂದಕ್ಕೆ ರೂ 50 ಸಿಂತರೆ? ಹಳ್ಳಿಯಲ್ಲಿಯೂ ಪೇಟೆಯಲ್ಲಿಯೂ ಇದ್ದ ಬಡಜನರು ಬಂಗಾಲದಲ್ಲಾದಂತೆ ಉಪವಾಸ ಸಾಯುವ ಗತಿ ಬಂದೀತೆ? ಇವು ಮುಖ್ಯ ಪ್ರಶ್ನೆಗಳು

ಮೇಲೆ ಕಾಣಿಸಿದ ಬಗೆಯ ಗಂಡಾಂತರ ಬಾರದಂತೆ ಮಾಡಲು ನಿಯಂತ್ರಣವಿಲ್ಲದೆ ಸಾಧ್ಯವಿದೆಯೆ? ಒಂದು ಬಗೆಯ ನಿಯಂತ್ರಣವಿಲ್ಲದೆ ಸಾಧ್ಯವಾಗಲಾರದೆಂದೇ ಕಾಣುತ್ತದೆ. ಅದು ಸರಕಾರದವರು ಜಾರಿಮಾಡುವ ಕೇಂದ್ರೀಕೃತ ನಿಯಂತ್ರಣವಿರಬೇಕೆ? ಅಲ್ಲಲ್ಲಿಯ ಪ್ರಜೆಗಳೇ ಸಾಧಿಸತಕ್ಕ ನಿಯಂತ್ರಣವಿರಬೇಕೆ ಎಂಬುದು ಪ್ರಶ್ನೆ. ಸರಕಾರದವರ ನಿಯಂತ್ರಣ ನಾವು ಕಂಡಿದ್ದೇವೆ. ಪ್ರಜೆಗಳೇ ಇದನ್ನು ಹೇಗೆ ನಿಯಂತ್ರಿಸಬಹುದು? ಇದು ಸಾಧ್ಯವೆ?

ಮೊದಲನೆಯದಾಗಿ ವರ್ಗದಾರರೂ ಸಾಹುಕಾರರೂ ತಮ್ಮ ಲಾಭಕ್ಕಾಗಿ ಜನರನ್ನು ಉಪವಾಸ ಹಾಕುವಷ್ಟರ ಮಟ್ಟಿಗೆ ಈಗಿನ ದಿನಗಳಲ್ಲಿ ಹೋದಾರು ಎಂದು ನಂಬಲು ಕಾರಣವಿಲ್ಲ. ಬ್ರಿಟಿಷ ಅಧಿಕಾರದಲ್ಲಿ ಅಥವಾ ಯುದ್ಧಕಾಲದಲ್ಲಿ ಹೀಗೆ ನಡೆದಿರಬಹುದು. ಸ್ವತಂತ್ರ ಹಿಂದುಸ್ಥಾನದಲ್ಲಿ ಶಾಂತಿಯ ಕಾಲದಲ್ಲಿ ಅದೇ ರೀತಿ ಆದೀತೆನ್ನಲಾಗದು

ಗ್ರಾಮಸ್ಥರಲ್ಲಿ ಸ್ವಲ್ಪ ಎಚ್ಚರಿಕೆ ಬರುವಂತೆ ಈಗ ಮಾಡುವುದು ಸುಲಭ ಸಾಧ್ಯ. ತಮ್ಮಲ್ಲಿ ಅನ್ಯಾಯ ಮಾಡುವ ವರ್ಗದಾರರಿದ್ದರೆ ಅವರನ್ನು ಗ್ರಾಮಸ್ಥರು ಮನಸ್ಸು ಮಾಡಿದರೆ ಹೆಚ್ಚು ಕಷ್ಟವಿಲ್ಲದೆ ಹತೋಟಿಗೆ ತರಬಹುದು. ಇದೇ ರೀತಿ ಪೇಟೆಯ ಸಾಹುಕಾರರು ಅನ್ಯಾಯ ಮಾಡಲು ಹೊರಟರೆ ಅವರೂ ಈಗಿನ ದಿನಗಳಲ್ಲಿ ಬೇಗನೆ ಬುದ್ಧಿ ಕಲಿಯುವಂತಾಗುವುದೆಂಬ ಬಗ್ಗೆ ಸಂಶಯ ಬೇಡ. ಹೀಗೆ ಜನರೇ ಈ ಪ್ರಶ್ನೆಗೆ ಬೇಕಾದ ನಿಯಂತ್ರಣ ಒದಗಿಸುವುದು ಉತ್ತಮ ದಾರಿಯಿರುತ್ತದೆ.

ಪ್ರತಿ ಗ್ರಾಮದಲ್ಲಿಯೂ ಪ್ರತಿ ಪೇಟೆಯಲ್ಲಿಯೂ ನಾವೇ ಆಹಾರ ಸಮಿತಿಗಳನ್ನು ಏರ್ಪಡಿಸಿಕೊಳ್ಳೋಣ. ಸರಕಾರದವರು ನೇಮಿಸಿದ ಇಂಥ ಕಮಿಟಿಗಳು ನಿಷ್ಪ್ರಯೋಜಕವೆಂದು ಈಗ ಸಿದ್ಧವಾಗಿರುತ್ತದಷ್ಟೆ? ಜನರೇ ಇಂಥ ಕಮಿಟಿಗಳನ್ನು ಏರ್ಪಡಿಸಿದರೆ ಇವು ಚೊಕ್ಕವಾದ ರೀತಿ ಕೆಲಸ ಸಾಧಿಸಬಲ್ಲವು.

ಪ್ರತಿಗ್ರಾಮದ ಆಹಾರ ಸಮಿತಿಯು ತಮ್ಮ ಗ್ರಾಮದ ಕೃಷಿ ಎಷ್ಟಾಗಬೇಕು? ಹೇಗಾಗಬೇಕು? ಎಂದು ನಿರ್ಣಯಿಸಿಕೊಂಡು ಆಹಾರ ಬೆಳೆ ಹೆಚ್ಚಿಸಲು ಯತ್ನಿಸಲಿ. ಎಷ್ಟು ಅಂಶವನ್ನು ಪೇಟೆಯವರಿಗೆ ಮಾರಬಹುದೆಂಬುದನ್ನು ನಿರ್ಣಯಿಸಲಿ. ಯಾವ ಕ್ರಯದಲ್ಲಿ ಮಾರಬೇಕೆಂಬುದನ್ನೂ ನಿರ್ಣಯಿಸಲಿ. ಗ್ರಾಮಸ್ಥರು ಒಟ್ಟುಸೇರಿ ಈ ಬಗೆಯಲ್ಲಿ ಮಾಡುವ ನಿರ್ಣಯಗಳನ್ನು ಮೀರುವುದು ಯಾವ ದೊಡ್ಡ ವರ್ಗದಾರನಿಗೂ ಸಾಧ್ಯವಿಲ್ಲವೆಂಬುದು ಖಂಡಿತವಾದ ಮಾತು

ಹಳ್ಳಿಗರು ಹೀಗೆ ವ್ಯವಸ್ಥೆ ಮಾಡಿಕೊಳ್ಳಬಲ್ಲರಾದರೆ ಪೇಟೆಯವರೂ ಏಕೆ ಮಾಡಿಕೊಳ್ಳಲಾರರು? ಪೇಟೆಗೆ ಅಕ್ಕಿ ಎಷ್ಟು ಬೇಕಾಗುತ್ತದೆ? ಎಲ್ಲೆಲ್ಲಿಂದ ಎಷ್ಟು ಕ್ರಯಕ್ಕೆ ತರಿಸಬಹುದು? ಇತರ ಕಡೆಗಳಿಗೆ ಕಳುಹಿಸುವುದಾದರೆ ಎಷ್ಟು ಸಾಧ್ಯ? ಈ ಪ್ರಶ್ನೆಗಳನ್ನು ಪೇಟೆಯವರೂ ಒಗ್ಗಟ್ಟಿನಲ್ಲಿ ನಿರ್ಣಯಿಸಿಕೊಳ್ಳುವುದು ಅವ್ಯವಹಾರ್ಯವಲ್ಲ. ಮಾತ್ರವಲ್ಲ ಇಂಥ ವ್ಯವಸ್ಥೆ ತಂದೊಡ್ಡಿದರೆ ಯಾವ ಸಾಹುಕಾರರೂ ಇದನ್ನು ಮುರಿಯುವುದು ಸಾಧ್ಯವಿಲ್ಲ

ನಮ್ಮ ಆಹಾರದ ಬೆಳೆ ಹೆಚ್ಚಿಸುವುದು, ಅದರ ಕ್ರಯ ನಿರ್ಣಯಿಸುವುದು, ಬೇಕಾದಂತೆ ಸಂಗ್ರಹಿಸುವುದು, ಬೇಕಾದಲ್ಲಿ ವಿತರಣೆ ಮಾಡುವುದು ಈ ಪ್ರಶ್ನೆಗಳೆಲ್ಲವನ್ನು ನಾವೇ ಅಂದರೆ ಇಲ್ಲಿಯ ಪ್ರಜೆಗಳೇ ತಮ್ಮ ವ್ಯವಸ್ಥೆಯಿಂದ ಸಾಧಿಸತಕ್ಕ ವಿಷಯಗಳು

ಇದನ್ನು ದೂರದ ಸರಕಾರಕ್ಕೆ ಒಪ್ಪಿಸಿಕೊಟ್ಟು ನಾವು ಕೈಕಟ್ಟಿ ಕುಳಿತು ಸರಕಾರ ನಮ್ಮ ಬಾಯಿಗೆ ಅನ್ನ ತಂದುಕೊಡಬೇಕೆಂದು ಹಾರೈಸಿ ಕುಳಿತರೆ ಫಲವಿಲ್ಲ. ಕೇಂದ್ರಿಕೃತ ಸರಕಾರಕ್ಕೆ ಈ ಪ್ರಶ್ನೆ ಬಿಡಿಸಲು ಸಾಧ್ಯವಿಲ್ಲ

ಇಷ್ಟೆಲ್ಲ ಎಲ್ಲಿ ನಡೆಯುವುದು ಸಾಧ್ಯ? ವೆಂದು ಕೇಳಬಹುದು. ಈಗ ನಾವು ಗುಲಾಮಗಿರಿಯ ಹಿಂದುಸ್ಥಾನದ ಪ್ರಜೆಗಳಲ್ಲವೆಂದು ನಾವು ನೆನಪು ಮಾಡಿಕೊಳ್ಳಬೇಕು. ಸ್ವತಂತ್ರ ಹಿಂದುಸ್ಥಾನದ ಪ್ರಜೆಗಳು ತಮ್ಮ ಆಹಾರದ ವ್ಯವಸ್ಥೆ ತಾವು ಮಾಡಿಕೊಳ್ಳಲು ಕಲಿಯಬೇಕಾದು ನಾವು ಕಲಿಯತಕ್ಕ ಮೊದಲನೆಯ ಪಾಠವಿರುತ್ತದೆ

ಮಕ್ಕಳು ನಡೆಯಲು ಕಲಿಯುವಾಗ ಬೀಳುವಂತೆ ನಾವೂ ಎಡವಿ ಬೀಳಬಹುದು. ತೊಂದರೆಗಳು ಬರಬಹುದು. ವರ್ಗದಾರರೂ ಸಾಹುಕಾರರೂ ಸ್ವಾತಂತ್ರ್ಯ ಬಂದಿದೆಯೆಂಬುದನ್ನು ಮರೆತು ವರ್ತಿಸಬಹುದು. ಪರಿಣಾಮವಾಗಿ ನಾವು ಉಪವಾಸ ಬೀಳುವ ದಿನಗಳು ಬರಬಹುದು. ಹಲವರು ಸಾಯಬಹುದು. ಇಷ್ಟೆಲ್ಲ ಆಗಬಹುದಾದರೂ ಚಿಂತೆಯಿಲ್ಲ. ನಾವು ಉತ್ತಮವಾದ ಅತ್ಯಾವಶ್ಯಕವಾದ ಒಂದು ಪಾಠ ಕಲಿತಂತಾಗುವುದು. ಮುಂದೆಯಾದರೂ ನಾವು ನಿಜವಾಗಿ ಸ್ವತಂತ್ರರಾಗಿ ನಮ್ಮ ಕಾಲಮೇಲೆ ನಿಲ್ಲುವಂತಾದೀತು.

ಇದಕ್ಕೆ ಬದಲು ಇತರರ ಮೋರೆ ನೋಡಿ ಕುಳಿತುಕೊಳ್ಳುವ ಗುಲಾಮಗಿರಿಯನ್ನೇ ನಾವು ಏತಕ್ಕೆ ಅಪ್ಪಿಕೊಳ್ಳಬೇಕು? ಇದೆ ಮಹಾತ್ಮಾ ಗಾಂಧೀಜಿಯವರು ಕೇಳುವ ಪ್ರಶ್ನೆ.

ಟೀಕೆ-ಟಿಪ್ಪಣಿಗಳು

ಮೌಲಾನಾ ಅಜಾದ್ ಮತ್ತು ಸುಹ್ರವರ್ದಿ ಪರಿಷತ್ತುಗಳು

ಹಿಂದುಸ್ಥಾನದಲ್ಲಿಯ ಮುಸ್ಲೀಮರ ಮುಂದಿನ ಧೋರಣೆಯನ್ನು ನಿರ್ಣಯಿಸುವ ಉದ್ದೇಶದಿಂದ ಸುಹ್ರವರ್ದಿಯವರ ಮುಂದಾಳ್ತನದಲ್ಲಿ ಕಲ್ಕತ್ತೆಯಲ್ಲಿಯೂ ಮೌಲಾನಾ ಅಜಾದರ ಮುಂದಾಳ್ತನದಲ್ಲಿ ಹೊಸ ಡಿಲ್ಲಿಯಲ್ಲಿಯೂ ಎರಡು ಮುಸ್ಲೀಮರ ಪರಿಷತ್ತುಗಳು ಸೇರಿದವು

ಸುಹ್ರವರ್ದಿ ಪರಿಷತ್ತಿನಲ್ಲಿ ಹಿಂದುಸ್ಥಾನ ಮತ್ತು ಪಾಕಿಸ್ಥಾನಗಳು ಪರಸ್ಪರ ರಂಜಿಯಲ್ಲಿರುವ ಆವಶ್ಯಕತೆ ಎರಡು ರಾಜ್ಯಗಳಲ್ಲಿಯೂ ಕಡಿಮೆ ಸಂಖ್ಯಾಕರನ್ನು ನ್ಯಾಯವಾದ ರೀತಿಯಲ್ಲಿ ನಡೆಸುವುದರ ಆವಶ್ಯಕತೆ ಇತ್ಯಾದಿ ಹೇಳಲಾಯಿತು ಇದನ್ನೆಲ್ಲ ಯಾರೂ ಅಲ್ಲಗಳೆಯುವಂತಿಲ್ಲ ಹಿಂದುಸ್ಥಾನದಲ್ಲಿಯ ಮುಸ್ಲೀಮರು ಮುಂದೆ ಯಾವ ರೀತಿ ವರ್ತಿಸಬೇಕು ಎಂಬುದನ್ನು ಮಾತ್ರ ಈ ಪರಿಷತ್ತು ಸರಿಯಾಗಿ ನಿರ್ಣಯಿಸಲಿಲ್ಲ ತಾವು ಕಡಿಮೆ ಸಂಖ್ಯಾಕರು ತಮಗೆ ಇಂಥ ಹಕ್ಕುಗಳೆಲ್ಲ ಬೇಕೆಂಬ ಅಭಿಪ್ರಾಯಗಳೇ ಮುಂದೆ ತರಲಾಯಿತಲ್ಲದೆ ತಮ್ಮ ಕರ್ತವ್ಯಗಳೇನು ಎಂಬುದರ ಕಡೆಗೆ ಇವರು ಸಾಕಷ್ಟು ಲಕ್ಷ್ಯ ಕೊಟ್ಟಂತೆ ಕಾಣುವುದಿಲ್ಲ

ಮೌಲಾನಾ ಅಜಾದರಾದರೊ ತಮ್ಮ ಸಂದೇಶವನ್ನು ಹಿಂದುಸ್ಥಾನದಲ್ಲಿಯ ಮುಸ್ಲೀಮರಿಗೆ ಖಂಡಿತೋಕ್ತಿಯಲ್ಲಿ ಹೇಳಿರುವರು ಮುಸ್ಲೀಮ ಲೀಗು ತಳೆವಳಿಕ್ಕೆ ಇನ್ನು ಮುಂದೆ ಹಿಂದುಸ್ಥಾನದಲ್ಲಿ ಅರ್ಥವಿಲ್ಲ ಲೀಗನ್ನು ವಿಸರ್ಜಿಸಿ ಎಲ್ಲ ಮುಸ್ಲೀಮರು ಈ ರಾಷ್ಟ್ರದ ಅಭಿಮಾನ ಕಟ್ಟಿಕೊಳ್ಳಬೇಕು ಈ ರಾಷ್ಟ್ರವು ಜಾತೀಯತೆಯ ಮೇಲೆ ರಚಿಸಲ್ಪಡುತ್ತ ಇಲ್ಲ ಸಾರ್ವಜನಿಕ ಪ್ರಜಾಸತ್ತಾತ್ಮಕ ರಾಜ್ಯ ಇಲ್ಲಿ ಹಿಂದೂಗಳ ಹಾಗೆ ಮುಸ್ಲೀಮರ ಜಾತಿಗೆ ರಾಷ್ಟ್ರಕ್ಕೂ ಯಾವ ಸಂಬಂಧವೂ ಇಲ್ಲ ಇಂಥ ರಾಷ್ಟ್ರದಲ್ಲಿರುವ ಎಲ್ಲರಿಗೂ ಸಮಾನವಾದ ಪ್ರಜಾಧರ್ಮ ಹಾಗೂ ಪ್ರಜೆಗಳ ಹಕ್ಕು ಬಾಧ್ಯತೆಗಳಿವೆ ಇವನ್ನು ಮುಸ್ಲೀಮರು ತಾವು ಮಾತ್ರ ಬೇರೆ ಎನ್ನುವುದನ್ನು ಬಿಟ್ಟು ಎಲ್ಲರೊಡನೆ ಸಹಕರಿಸಿ ವರ್ತಿಸುವುದು ಯುಕ್ತ ಇದೇ ಅಜಾದ ಸಂದೇಶದ ಅಭಿಪ್ರಾಯ

ಹಿಂದುಸ್ಥಾನದಲ್ಲಿಯ ಮುಸ್ಲೀಮ ಬಂಧುಗಳು ಹಲವರು ಕ್ವಾದೇ ಆಜಾಮ ಜಿನ್ನಾರವರ ಉಪದೇಶ ಮರೆಯಲು ಅಸಮರ್ಥರಿರುವುದು ಆಶ್ಚರ್ಯವಲ್ಲ ಆ ಉಪದೇಶವನ್ನು ಅವರೊಳಗೆ ಅಷ್ಟು ಬಲವತ್ತರವಾಗಿ ಪ್ರಚಾರ ಮಾಡಲ್ಪಟ್ಟಿರುತ್ತದೆ ಈಗ ಸ್ಥಿತಿಗತಿಗಳು ಭಿನ್ನವಿರುತ್ತವೆಂಬುದನ್ನು ಅವರು ಕೂಡಲೇ ತಿಳಿಯಲಾರರು ಇದಕ್ಕಾಗಿ ಅವರನ್ನು ದೂರದೆ ಇಂಥವರನ್ನು ತಾಳ್ಮೆಯಿಂದಲೂ ಸಹಾನುಭೂತಿಯಿಂದಲೂ ಇತರರು ಒಲಿಸಿಕೊಳ್ಳಬೇಕು ಕ್ವಾದೇ ಆಜಾಮ ಜಿನ್ನಾರವರು ಈಗ ಹಿಂದುಸ್ಥಾನ ಬಿಟ್ಟಿದ್ದಾರೆಂಬುದನ್ನು ಇವರು ಸರಿಯಾಗಿ ತಿಳಿಯುವಂತೆ ಹೇಳಬೇಕು. ಈಗ ಅವರು ಬೇರೆ ರಾಷ್ಟ್ರದ ಅಧಿಪತಿ ಇದ್ದಾರೆಂಬುದನ್ನು ಪುನಃ ಪುನಃ ಹೇಳುವುದು ಅಗತ್ಯವೆನ್ನಿಸುತ್ತದೆ. ಹಿಂದುಸ್ಥಾನದಲ್ಲಿ ಉಳಿದ ಮುಸ್ಲೀಮರು ಇಲ್ಲಿಯ ಪ್ರಜೆಗಳು. ಅಂದರೆ ತಾವೂ ಹಿಂದೂ ರಾಜ್ಯದಲ್ಲಿ ಉಳಿದಿದ್ದೇವೆ ಎಂಬ ಭಾವನೆ ಕಟ್ಟಿಕೊಳ್ಳಬಾರದು ಇದು ಹಿಂದೂ ರಾಜ್ಯವಲ್ಲ. ಇದು ಇಲ್ಲಿ ಇರುವ ಹಿಂದೂ ಮುಸ್ಲೀಮ ಕ್ರೈಸ್ತ ಪಿಲ್ಲ ಪ್ರಜೆಗಳ ರಾಜ್ಯ, ಈ ರಾಜ್ಯವನ್ನು ಜಾತೀಯತೆಯ ದೃಷ್ಟಿಯಿಂದ ಕಟ್ಟುತ್ತ ಇಲ್ಲ ಇಲ್ಲಿಯ ಪ್ರಜೆಗಳೆಲ್ಲ ಸಮಾನರು ಅವರು ಯಾವ ಜಾತಿಯವರೇ ಇರಲಿ ಅವರೆಲ್ಲರೂ ಇದು ತಮ್ಮ ರಾಷ್ಟ್ರ ಇದರ ಅಭ್ಯುದಯಕ್ಕೆ ಕೆಲಸ ಮಾಡುವುದು ತಮ್ಮ ಕರ್ತವ್ಯ. ಮುಂದೆ ತಮ್ಮ ಮಕ್ಕಳ ಶ್ರೇಯಸ್ಸನ್ನು ಇಂದಿನ ನಮ್ಮ ಕರ್ತವ್ಯ ಪಾಲನೆಯಿಂದ ಸಾಧಿಸಬೇಕು ಎಂಬ ಭಾವನೆಯನ್ನು ಎಲ್ಲ ಪ್ರಜೆಗಳೂ ತಿಳಿದುಕೊಳ್ಳಬೇಕು. ನಮ್ಮ ಮುಸ್ಲೀಮ ಬಂಧುಗಳಾದರೂ ಈ ವಿಚಾರಗಳನ್ನು ಬೇಗನೆ ಅರಿತು ಅಂತೆ ವರ್ತಿಸುವರೆಂಬ ಬಗ್ಗೆ ನಮಗೆ ಸಂಶಯವಿಲ್ಲ

ಹೈದರಾಬಾದಿಗೆ ಸರದಾರ ಪಟೇಲರ ಹಿತೋಕ್ತಿ

ಹೈದರಾಬಾದಿನಲ್ಲಿ ಇತಿಹಾದ್ ಉಲ್ ಮುಸಲ್ಮೀನ್ ಎಂಬ ಒಂದು ಮುಸ್ಲಿಮ ಪಂಗಡವಿದೆ ಇವರು ಪಾಕಿಸ್ಥಾನ ಕಡೆಯವರೆಂಬುದು ಸ್ಪಷ್ಟವಿರುತ್ತದೆ ಹೈದರಾಬಾದು ಹಿಂದೀ ಸರಕಾರದೊಡನೆ ರಂಜಿಯಲ್ಲಿರುವುದು ಇವರಿಗೆ ಇಷ್ಟವಿದ್ದಂತೆ ಕಾಣುವುದಿಲ್ಲ ಹೈದರಾಬಾದಿನ ಸರಕಾರ ಏಕೆ ಕಲೋ ಅಥವಾ ಈ ಪಂಗಡಕ್ಕೆ ಹೆದರಿಯೋ ಯದ್ವಾತದ್ವಾ ವರ್ತಿಸುತ್ತಿದೆ ಜುನಾಗಢ ನವಾಬರಿಗೂ ಇದೇ ರೀತಿ ದುರ್ಬುದ್ಧಿ ಕಲಿಸಿ ಪಾಕಿಸ್ಥಾನಕ್ಕೆ ಸೇರುವಂತೆ ಮಾಡಿದ ಮಿತ್ರರಿದ್ದರು ಅವರಿಂದಾಗಿ ಜುನಾಗಡ ನವಾಬರ ಗತಿ ಏನಾಯಿತು? ಕೊನೆಗೆ ಪಾಕಿಸ್ಥಾನ ಇವರ ಸಹಾಯಕ್ಕೆ ಬರಲಿಲ್ಲ ಇನ್ನು ನವಾಬರು ತನ್ನ ನವಾಬ ಪದವಿ ಉಳಿಸಿಕೊಳ್ಳಬೇಕಾದರೆ ಹಿಂದೀ ಸರಕಾರದ ನೆರೆ ನೋಡಬೇಕಾದ ಪರಿಸ್ಥಿತಿ ಒದಗಿದೆ ಹೈದರಾಬಾದಿನ ನೈಜಾಮರಾದರೂ ಈ ಮುಸ್ಲೀಮ್ ಪಂಗಡದ ದುರ್ಬುದ್ಧಿ ಕೇಳಿದರೆ ಇವರ ಹಾಡೂ ಇದೇ ರೀತಿ ಪರಿಣಮಿಸುವುದರಲ್ಲಿ ಯಾವ ಸಂಶಯವೂ ಬೇಡ ಹತ್ತಿರದ ಜುನಾಗಡಕ್ಕೆ ಸಹಾಯ ಮಾಡಲು ಬಾರದ ಪಾಕಿಸ್ಥಾನದವರು ಹೈದರಾಬಾದಿನ ಸಹಾಯಕ್ಕೆ ಬರುವುದು ಅಸಾಧ್ಯವೆಂಬುದು ಸ್ಪಷ್ಟವಿರುತ್ತದೆ

ಹೈದರಾಬಾದಿನ ನೈಜಾಮರು ತಮ್ಮ ಪ್ರತಿಷ್ಠೆ ಉಳಿಸಿಕೊಳ್ಳಲು ಇರುವುದು ಒಂದೇ ದಾರಿ ತಮ್ಮ ಪ್ರಜೆಗಳ ಬೆಂಬಲ ಸಂಪಾದಿಸುವುದು ಪ್ರಜಾಧಿಕಾರ ಸ್ಥಾಪಿಸುವುದು ದುರ್ಬುದ್ಧಿ ಹೇಳಬಂದವರನ್ನು ಸುಮ್ಮನಾಗಿಸುವುದು ಹೀಗೆ ಪ್ರಜೆಗಳನ್ನು ತಮ್ಮ ಬಲಕ್ಕೆ ಕಟ್ಟಿಕೊಂಡಲ್ಲಿ ನೈಜಾಮರ ಪ್ರತಿಷ್ಠೆಯೂ ಬೆಳೆಯುವುದು. ಹೈದರಾಬಾದು ಸಂಸ್ಥಾನದ ಅಭಿವೃದ್ಧಿಯೂ ಸಾಧಿಸಲ್ಪಡುವುದು.

ಹೀಗೆ ಜುನಾಗಡದಲ್ಲಿ ಮಾತನಾಡುತ್ತ ಸರದಾರ ಪಟೇಲರು ಸ್ಪಷ್ಟವಾದ ಮಾತುಗಳಲ್ಲಿ ಹೇಳಿರುವರು ನೈಜಾಮರು ಈ ಹಿತೋಕ್ತಿಗಳಿಗೆ ಕಿವಿಗೊಡುವರೆಂದು ಹಾರೈಸೋಣ.

ನಾಲ್ಕು ಪರಿಷತ್ತುಗಳು

ದಕ್ಷಿಣ ಕನ್ನಡ ಜಿಲ್ಲೆಯ 7ನೇ ಮಹಿಳಾ ಪರಿಷತ್ತು, ಜಿಲ್ಲಾ ವಿದ್ಯಾರ್ಥಿ ಪರಿಷತ್ತು, ಪ್ರಾಂತಿಕ ಪೋಸ್ಟಮೆನ್ ಮತ್ತು ಲೋವರ್ ಗ್ರೇಡ್ ಸ್ಟಾಫ್ ಇವರ ಪರಿಷತ್ತು ಹಾಗೂ ಜಿಲ್ಲಾ ಆಹಾರ ಪರಿಷತ್ತು ಹೀಗೆ ಕಳೆದ ಕೆಲವು ದಿನಗಳೊಳಗೆ ಜಿಲ್ಲೆಯಲ್ಲಿ ನಾಲ್ಕು ಪರಿಷತ್ತುಗಳು ಸೇರಿದವು

ಮಹಿಳೆಯರಿಗೆ ಪ್ರಥಮ ಸ್ಥಾನ ಕೊಡಬೇಕೆಂಬುದು ನಾಗರಿಕ ಶಿಷ್ಟ ಸಂಪ್ರದಾಯವೆಂಬುದರಿಂದ ಮಹಿಳಾ ಪರಿಷತ್ತಿನ ವಿಚಾರ ಮೊದಲಾಗಿ ಹೇಳಬೇಕು ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಹಾಯಸ್ಕೂಲಿನ ಸಭಾಭವನದಲ್ಲಿ ದ ಕ ಜಿಲ್ಲಾ 7ನೇ ಮಹಿಳಾ ಪರಿಷತ್ತು ನವೆಂಬರ ತಾರೀಕು 8 ಮತ್ತು 9ರಲ್ಲಿ ಜರಗಿತು ಪರಿಷತ್ತಿನ ಅಧ್ಯಕ್ಷೆ ಶ್ರೀಮತಿ ಸುಶೀಲಾ ಬ್ಯಾ ಸರ್ವೋತ್ತಮ ರಾವ್ ಸ್ವಾಗತಾಧ್ಯಕ್ಷ ಶ್ರೀಮತಿ ಲೀಲಾ ಬ್ಯಾ ಏಕಂಬರ ರಾವ್ ಶ್ರೀಮತಿ ಲೀಲಾ ಬ್ಯಾ ಬಾಳಿಗ ಇವರ ಸ್ವಾಗತ ಗೀತೆಯೊಡನೆ ಪರಿಷತ್ತಿನ ಕಾರ್ಯಾರಂಭವಾಯಿತು

ಸ್ವಾಗತಾಧ್ಯಕ್ಷೆಯರು ತಮ್ಮ ಭಾಷಣದಲ್ಲಿ ನಾವು ಪ್ರತಿವರ್ಷ ಅನೇಕ ಠರಾವು ಮಾಡುತ್ತೇವೆ ಅವನ್ನು ಜಾರಿಗೆ ತಂದು ಕಾರ್ಯ ಸಾಧಿಸುವುದಿಲ್ಲವೆಂದು ನಮ್ಮನ್ನು ಟೀಕಿಸುವವರಿದ್ದಾರೆ ನಾವು ಹೀಗೆ ಒಟ್ಟು ಸೇರುವುದರಲ್ಲಿಯೇ ಒಂದು ಬಗೆಯ ಪ್ರಯೋಜನವಿದೆಯಷ್ಟೆ? ಸ್ತ್ರೀಯರ ಬಗ್ಗೆ ದುಡಿಯುವ ಹತ್ತಾರು ಸಂಸ್ಥೆಗಳು ಜಿಲ್ಲೆಯಲ್ಲಿವೆ ಅವುಗಳ ಕಾರ್ಯವನ್ನೆಲ್ಲ ಒಂದುಗೂಡಿಸಿ ನಡೆಸುವ ಯತ್ನ ಮಾಡಿದರೆ ನಮ್ಮ ಕಾರ್ಯ ಹೆಚ್ಚು ಫಲಕಾರಿಯಾದೀತು ಎಂದರು

ಅಧ್ಯಕ್ಷ ಭಾಷಣದಲ್ಲಿ ಕಲಿಕೆ ಮಾಡಲಿಚ್ಛಿಸುವವರಿಗೆ ಸರಿಯಾದ ತರ್ಬೇತಿ ಕೊಡುವುದರ ಆವಶ್ಯಕತೆ ವ್ಯವಸ್ಥಿತ ರೀತಿಯಲ್ಲಿ ಅತ್ಯಾಧುನಿಕ ಕ್ರಮಗಳಲ್ಲಿ ಶಿಕ್ಷಣದ ಕೆಲಸ ಸಾಗಿಸುವ ಆವಶ್ಯಕತೆ ಬಗ್ಗೆ ಹೇಳಲಾಯಿತು

ಆ ಮೇಲೆ ಪ್ರಾಂತಿಕ ಹಾಗೂ ಕೇಂದ್ರ ಸರಕಾರಗಳ ಶಾಸನ ಸಭೆಗಳಲ್ಲಿ ಚರ್ಚಿಸಲ್ಪಡುತ್ತಿರುವ ಸ್ತ್ರೀಯರ ಹಕ್ಕು ಬಾಧ್ಯತೆಗಳ ಹಾಗೂ ವಿವಾಹ ಸಂಬಂಧದ ಮಸೂದೆಗಳಿಗೆ ಬೆಂಬಲ ಕೊಡುವ ತಮ್ಮ ಅಭಿಪ್ರಾಯ ವ್ಯಕ್ತಗೊಳಿಸುವ ಇಲ್ಲಿಯ ಮುನಿಸಿಪಾಲಿಟಿಗಳು ಶಿಶು ಸಂಗೋಪನ ಕೇಂದ್ರಗಳನ್ನು ಹೆಚ್ಚಿಸಬೇಕೆಂಬ, ಕಾರ್ಖಾನೆಗಳಲ್ಲಿ ದುಡಿಯುವ ಸ್ತ್ರೀಯರಿಗೂ ಗಂಡಸರಷ್ಟೇ ಮಜೂರಿ ಇತ್ಯಾದಿ ದೊರೆಯಬೇಕೆಂಬ ಇತ್ಯಾದಿ ಹಲವು ನಿರ್ಣಯಗಳನ್ನು ಮುಂದೆ ತಂದು ಈ ಕುರಿತು ಭಾಷಣಗಳಾಗಿ ಇವನ್ನೆಲ್ಲ ಮಂಜೂರು ಮಾಡಲಾಯಿತು

ಕೊನೆಗೆ ಶ್ರೀಮತಿ ವಿಮಲಾ ಗಣೇಶರ ಧನ್ಯವಾದ ಅರ್ಪಣೆಯೊಡನೆ ಪರಿಷತ್ತು ಮುಕ್ತಾಯವಾಯಿತು

ಮಹಿಳೆಯರ ಈ ಪರಿಷತ್ತಿನ ಕುರಿತು ನಾವು ಮಾಡಬೇಕಾದ ಒಂದೇ ಒಂದು ಟೀಕೆಯಿದೆ ಅವರು ಕೆಲಸ ಮಾಡುವುದಿಲ್ಲವೆಂಬುದಲ್ಲ ಅವರು ನಿಜವಾಗಿಯೂ ಉತ್ತಮ ಕೆಲಸ ಸಾಧಿಸುತ್ತಿದ್ದಾರೆ ಅವರು ನಡೆಸುತ್ತಿರುವ ಶಿಶು ಸಂಗೋಪನ ಕೇಂದ್ರಗಳು ಅತ್ಯಾವಶ್ಯಕ ಸಂಸ್ಥೆಗಳೆಂಬ ಬಗ್ಗೆ ಯಾವ ಸಂಶಯವೂ ಬೇಡ. ನಮ್ಮ ಟೀಕೆಯ ವಿಷಯ ಇಷ್ಟೆ ಈ ಮಹಿಳೆಯರು ತಮ್ಮ ಹೆಸರುಗಳನ್ನು ಹೇಳಿಕೊಳ್ಳುವ ಈ ಹೊಸ ಪದ್ಧತಿ ಸರಿಯೆ? ಎಂಬ ವಿಚಾರ ಮಾತ್ರ, ಶ್ರೀಮತಿ ಸುಶೀಲಾಬ್ಯಾ ಸರ್ವೋತ್ತಮ ರಾವ್, ಲೀಲಾ ಬ್ಯಾ ಏಕಂಬರ ರಾವ್, ಲೀಲಾ ಬ್ಯಾ ಬಾಳಿಗ, ವಿಮಲಾ ಗಣೇಶ ಇತ್ಯಾದಿ ಇವರು ತಮ್ಮ ಗಂಡಂದಿರ ಹೆಸರುಗಳನ್ನು ತಮ್ಮ ಹೆಸರ ಜೊತೆಗೆ ಸೇರಿಸಿ ತಮ್ಮ ಹೆಸರನ್ನು ಹೇಳುವ ಈ ಪದ್ಧತಿಯೆಲ್ಲಿಂದ ಬಂದಿತೆಂದು ನಮಗಂತೂ ತಿಳಿಯುವುದಿಲ್ಲ ಸೀತಾರಾಮ, ರಾಧಾಕೃಷ್ಣ ಎಂಬುದಾಗಿ ಸ್ತ್ರೀಯ ಹೆಸರನ್ನು ಗಂಡನ ಹೆಸರಿಗೆ ಸೇರಿಸಿ ಗಂಡಂದಿರನ್ನು ಸಂಶೋಧಿಸುವುದು ವಾಡಿಕೆಯ ಹಳೆಯ ಪದ್ಧತಿ ಈಗಿನ ಕ್ರಮದಂತೆ ಸೀತಾರಾಮ ಎಂದರೆ ಸೀತೆಯ ಹೆಸರಾಗುವುದು ರಾಧಾಕೃಷ್ಣ ಎಂಬುದು ರಾಧೆಯ ಹೆಸರಾಗುವುದು, ಈ ಪ್ರಶ್ನೆಯನ್ನು ಇಲ್ಲಿ ಚರ್ಚಿಸಲು ನಮಗೆ ಸ್ಥಳವಿಲ್ಲ ಇದರ ಕುರಿತು ಮುಂದಿನ ಮಹಿಳಾ ಸಮ್ಮೇಳನವು ಸರಿಯಾಗಿ ಚರ್ಚೆ ನಡೆಸುವುದು ಅಗತ್ಯವೆಂದು ಮಾತ್ರ ಸೂಚಿಸಬಯಸುತ್ತೇವೆ

ಜಿಲ್ಲಾ ವಿದ್ಯಾರ್ಥಿ ಪರಿಷತ್ತು ತಾ 9ನೇ ದಿನ ಕಾರ್ಕಳದಲ್ಲಿ ಸೇರಿತು ನಮ್ಮ ಪ್ರಸಿದ್ಧ ಸಾಹಿತಿಗಳಾದ ಶ್ರೀ ಕೋ ಶಿ ಕಾರಂತರು ಅಧ್ಯಕ್ಷರು ಕರ್ನಾಟಕ ಪ್ರಾಂತ್ಯದ ವಿದ್ಯಾರ್ಥಿ ಸಂಘದ ಮುಂದಾಳು ಶ್ರೀ ಗೋಖಲೆ ಯವರ ಪರಿಷತ್ತಿನ ಉದ್ಘಾಟನೆ ನಡೆಸಿದರು ಧ್ವಜವಂದನೆ, ಪ್ರಭಾತಪೇರಿಗಳೂ ಇದ್ದವು ಶ್ರೀ ಅಲಂಕಾರಿ ಮೊದಲಾದ ಹಿತಚಿಂತಕರ ಭಾಷಣಗಳೂ ಇದ್ದವು

ಮೈಸೂರು, ಕಾಶ್ಮೀರ ಜುನಾಗಡ, ಹೈದರಾಬಾದು ಇಂಡೋನೇಸಿಯ ಮೊದಲಾದ ಎಲ್ಲ ವಿಷಯಗಳ ಕುರಿತು ನಿರ್ಣಯಗಳು ಮುಂದೆ ಬಂದುವು ಅವುಗಳ ಕುರಿತು ಉತ್ಸಾಹಭರಿತ ಭಾಷಣಗಳಾಗಿ ನಿರ್ಣಯಗಳು ಮಂಜೂರಾದವು ಕಾಲೇಜು ಕ್ಲಾಸುಗಳಲ್ಲಿಯೂ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂಬ ಒಂದು ನಿರ್ಣಯವೂ ಈ ತನ್ಮಧ್ಯೆ ಮಂಜೂರಾಯಿತು ಕೊನೆಗೆ ಧನ್ಯವಾದ ಹಾಗೂ ವಿವಿಧ ವಿನೋದಾವಳಿಗಳಿಂದ ಪರಿಷತ್ತು ಕೊನೆಗೊಂಡಿತು.

ಲೋಕದ ವಿಚಾರಗಳನ್ನೆಲ್ಲ ವಿದ್ಯಾರ್ಥಿಗಳು ಪರಿಶೀಲಿಸಬೇಕು ಮಾತ್ರ ನಿಜ ನಮ್ಮ ವಿದ್ಯಾರ್ಥಿಗಳು ಅದಕ್ಕಾಗಿಯೇ ಜಗತ್ತಿನ ಮುಂದಿರುವ ಎಲ್ಲಾ ಪ್ರಶ್ನೆಗಳ ಕುರಿತು ನಿರ್ಣಯಗಳನ್ನು ಮಾಡುವ ಅಭ್ಯಾಸ ಇಟ್ಟುಕೊಂಡಂತೆ ಕಾಣುತ್ತದೆ ಈ ಲೋಕದಲ್ಲಿ ತಮ್ಮ ಕರ್ತವ್ಯಗಳೇನೆಂಬ ಕುರಿತು ವಿದ್ಯಾರ್ಥಿ ವೃಂದವು ಸ್ವಲ್ಪ ಮಟ್ಟಿಗಾದರೂ ವರ್ತಿಸುವ ಆವಶ್ಯಕತೆ ಕಾಣುವುದು ಅಗತ್ಯವೆಂದು ನಮಗನ್ನಿಸುತ್ತದೆ

ಪೋಸ್ಟ್ ಮೆನ್ ಮತ್ತು ಲೋವರ್ ಗ್ರೇಡ್ ಸ್ಟಾಫ್ ಇವರದು ಇಡೀ ಮದ್ರಾಸ್ ಅಧಿಪತ್ಯದ ಪರಿಷತ್ತು ನಮ್ಮ ಜಿಲ್ಲೆಯವರು ಇದಕ್ಕೆ ಸ್ವಾಗತ ಸಮಿತಿಯವರು. ಇದೇ ತಾರೀಕು 15 ಮತ್ತು 16ಕ್ಕೆ ಇದು ಮಂಗಳೂರಲ್ಲಿ ಜರಗಿತು ಇವರ ಪ್ರಾಂತಿಕ ಯೂನಿಯನಿನ ಅಧ್ಯಕ್ಷರಾದ ಶ್ರೀ ರಾಮಾನುಜಮ್ ಇವರು ಪರಿಷತ್ತಿನ ಅಧ್ಯಕ್ಷರಾಗಿದ್ದರು.

ಬಿಸೆಂಟ್ ಬಾಲಿಕಾ ಪಾಠಶಾಲೆಯ ಸ್ಕೌಟು ಹುಡುಗಿಯರ ಪ್ರಾರ್ಥನಾ ಗೀತೆಯೊಡನೆ ಕಾರ್ಯಾರಂಭವಾಯಿತು. ಸ್ವಾಗತಾಧ್ಯಕ್ಷ ಶ್ರೀ ಬಿ. ಎಸ್. ಭಾಸ್ಕರ ರೈ

(ಆನೇ ಪುಟ ನೋಡಿ)

(೬ನೇ ಪುಟದಿಂದ)

ಇವರನ್ನು ಪ್ರತಿನಿಧಿಗಳನ್ನು ಸ್ವಾಗತೀಕರಿಸಿದರು. ತಿರುಚಿನಾಪಳ್ಳಿಯ ಮಜೂರ ಮುಂದಾಳು ಶ್ರೀ ಪಿ. ಜಗನ್ನಾಥನ್ ಇವರು ಪರಿಷತ್ತಿನ ಉದ್ಘಾಟನೆ ಮಾಡುತ್ತ ಪೋಸ್ಟ್‌ಮೇನ್ ಅಂದರೆ ದೇವರಿಗೆ ಸಮಾನನೆಂದು ರುಜುಪಡಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪೋಸ್ಟ್‌ಮೇನರ ಚಳವಳದ ಮುಖ್ಯ ಪ್ರಶ್ನೆಗಳನ್ನು ವಿವರಿಸಿ ಎಲ್ಲರೂ ಇವರಿಗೆ ಸಹಾನುಭೂತಿ ತೋರಬೇಕೆಂದರು. ಕೇರಳ ಟ್ರೇಡ್ ಯೂನಿಯನ್ ಕೌನ್ಸಿಲಿನ ಶ್ರೀ ಕೆ. ಬಿ. ಕೆ. ಮೆನೊನರೂ ಒಂದು ಭಾಷಣವಿತ್ತರು. ಕಲ್ಲಿಕೋಟೆಯ ಪೋಸ್ಟ್‌ಮೇನ್ ಯೂನಿಯನಿನ ಅಧ್ಯಕ್ಷ ಶ್ರೀ ನಾನು ನಾಯರರ ನಿಧನದ ಕುರಿತು ದುಃಖಸೂಚಕ ನಿರ್ಣಯವನ್ನು ಮಂಜೂರು ಮಾಡಿ ಮೊದಲನೆ ದಿನದ ಕಾರ್ಯಕ್ರಮ ಮುಗಿಯಿತು. ಎರಡನೆ ದಿನ ವಿಷಯ ನಿಯಾಮಕ ಕಮಿಟಿಯಲ್ಲಿ ಸರಿಯಾಗಿ ಚರ್ಚಿಸಿ ತೀರ್ಮಾನಿಸಿದ ನಾಲ್ಕು ನಿರ್ಣಯಗಳನ್ನು ಸರಿಯಾಗಿ ವಿವರಿಸಿ ಮಂಜೂರು ಮಾಡಲಾಯಿತು. ಪರಿಷತ್ತು ಯಶಸ್ವಿಯಾಗಿ ನಡೆಯಿತು.

ಈ ಪರಿಷತ್ತನ್ನು ಇಷ್ಟು ಯಶಸ್ವಿಯಾಗಿ ಜರಗಿಸಿದ ಬಗ್ಗೆ ನಮ್ಮ ಜಿಲ್ಲೆಯ ಪೋಸ್ಟ್‌ಮೇನ್ ಯೂನಿಯನಿನವರಿಗೂ ಅದರ ಅಧ್ಯಕ್ಷ ಶ್ರೀ ಬಿ ಎಸ್ ಭಾಸ್ಕರ ರೈ ಅವರಿಗೂ ನಮ್ಮ ಧನ್ಯವಾದಗಳನ್ನು ಕೊಟ್ಟರೆ ಸಾಕು ಆದರೂ ಪರಿಷತ್ತಿನ ಕಾರ್ಯಭರದಲ್ಲಿ ಕೆಲವೆಡೆ ಒಂದು ದಿನದ ಕಾಗದ ಬಟ್ವಾಡೆಯನ್ನೇ ನಿಲ್ಲಿಸಿದ್ದು ಸರಿಯೇ ಎಂಬ ಪ್ರಶ್ನೆಯನ್ನು ನಮ್ಮ ಪೋಸ್ಟ್‌ಮೇನ್ ಯೂನಿಯನಿನಲ್ಲಿ ಚರ್ಚಿಸಬೇಕಾಗಿ ಒಂದು ಸೂಚನೆ ಕೊಡಬಯಸುತ್ತೇವೆ

ಜಿಲ್ಲಾ ಆಹಾರ ಪರಿಷತ್ತನ್ನು ಕುರಿತು ನಾವು ಹೆಚ್ಚು ಬರೆಯಲು ಸ್ಥಳ ಮಿಕ್ಕಿ ಹೋಯಿತು ಜಿಲ್ಲಾ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಯರು ತಮ್ಮಲ್ಲಿಗೆ ಸಂಗ್ರಹ ಕಾರ್ಯಕ್ರಮದ ಕುರಿತು ಬಹಳ ದೂರು ಬರುತ್ತಿವೆಯಾಗಿ ಪರಿಷತ್ತು ಕರೆಯಬೇಕಾಯಿತೆಂದರು ಶ್ರೀ ಬಿ ವೈಕುಂಠ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಕೆ ಆರ್ ಕಾರಂತರು ಪರಿಷತ್ತಿನ ಉದ್ಘಾಟನೆ ನಡೆಸುತ್ತ ತಾನು ಆಹಾರ ಸಂಗ್ರಹ ಕಾರ್ಯಕ್ರಮ ತಿದ್ದಲು ಯಾವ ಎಲ್ಲ ಪ್ರಯತ್ನ ಮಾಡಿದೆನೆಂಬುದನ್ನು ಪ್ರಕಟಿಸಿ ಇನ್ನು ಮುಂದಿನ ದಾರಿ ತನಗೆ ಕಾಣುವುದಿಲ್ಲವೆಂದು ಹೇಳಿ ನೀವು ಸತ್ಯಾಗ್ರಹ ಹೂಡುವುದಾದರೆ ನಾನು ಸೇರುತ್ತೇನೆಂದರು ಮತ್ತೆ ಶ್ರೀಗಳಾದ ಮುದ್ರಾಡಿ ಕೃಷ್ಣಶೆಟ್ಟರು, ಮಹಮ್ಮದ ಶಮ್ನಾಡರು ಕಮ್ಯೂನಿಸ್ಟ್ ಬಂಧುಗಳಾದ ಶಾಂತಾರಾಮ ಪೈಯವರು, ಗೋಪಾಲ ಸಾಲೆನ್ನರು, ಇನ್ನಂಜೆಯ ಡಾಕ್ಟರ್ ಶಿವಪ್ಪಯನವರು ಭಾಷಣ ಮಾಡಿದರು ಶ್ರೀ ಸಿ. ಎಸ್ ಶಾಸ್ತ್ರಿಯವರು ಸಂಗ್ರಹ ಕಾರ್ಯಕ್ರಮದಲ್ಲಿ ಯಾವ ತಿದ್ದುಪಡಿಗಳು ಬೇಕೆಂಬ ಒಂದು ದೊಡ್ಡ ನಿರ್ಣಯ ಸಭೆಯ ಮುಂದಿಟ್ಟರು. ಈ ಮಧ್ಯೆ ಜಿಲ್ಲಾ ಕಾಂಗ್ರೆಸಿನ ಉಪಾಧ್ಯಕ್ಷ ಶ್ರೀ ಎಚ್ ನಾರಾಯಣ ರಾಯರು ನಿಯಂತ್ರಣಗಳನ್ನು ಕೂಡಲೇ ತೆಗೆದು ಹಾಕಬೇಕೆಂಬ ಠರಾವು ತಂದರು ಶ್ರೀ ಗೋಕುಲದಾಸ್ ಕಾಮತರು ತಾನು ಅನುಮೋದಿಸುವುದಾಗಿ ಹೇಳಿದರು ಠರಾವಿಗೆ ಶ್ರೀ ಎ. ಕೃಷ್ಣಶೆಟ್ಟರು ಮತ್ತು ಗೋಪಾಲ ಸಾಲೆನ್ನರು ವಿರೋಧಿಸಿದರು. ಅದು ಬಹುಮತದಿಂದ ಮಂಜೂರಾಯಿತು.

ತಿರುಗಿ ಶಾಸ್ತ್ರಿಗಳು ತಮ್ಮ ಠರಾವಿನ ಕುರಿತು ಭಾಷಣ ಮಾಡಿ ಕಳ್ಳ ಸಂತೆಯವರು ತಮ್ಮನ್ನು ಬದುಕಿಸುವವರೆಂದು ಕಳ್ಳ ಸಂತೆಯವರಿಗೆ ಧನ್ಯವಾದ ಕೊಟ್ಟರು ಶ್ರೀ ನಾಗರಾಜಯ್ಯನವರು ಮುಂದೆ ಬಂದು ತಮ್ಮ ಅಸ್ಖಲಿತ ವಾಣಿಯಿಂದ ಸಂಗ್ರಹ ಕಾರ್ಯದ ಅವ್ಯವಸ್ಥೆಯ ಇತಿಹಾಸವನ್ನೆಲ್ಲ ವಿವರಿಸಿ ಅದರ ಮೂಲ ಶೋಧಿಸಿ ಸರಕಾರಕ್ಕೆ ಏಳು ದಿನದ ನೋಟೀಸು ಕೊಟ್ಟು ಸತ್ಯಾಗ್ರಹ ಆರಂಭಿಸಬೇಕೆಂದರು ಜಿಲ್ಲಾ ಕಮಿಟಿಯ ಪ್ರಧಾನ ಕಾರ್ಯದರ್ಶಿಯರು ಶ್ರೀ ನಾಗರಾಜಯ್ಯನಿಗೆ ಸಮಾಧಾನ ಮಾಡಿ ಒಂದು ಕಮಿಟಿ ಮಾಡೋಣವೆಂದು ಸೂಚಿಸಿದಂತೆ ಒಂದು ಕಮಿಟಿಯ ನೇಮಕವಾಗಿ ಪರಿಷತ್ತು ಮುಕ್ತಾಯ ಹೊಂದಿತು

ಈ ಪರಿಷತ್ತಿನ ಕುರಿತು ಟೀಕೆ ಮಾಡುವ ಅಗತ್ಯವೇ ಉಳಿದಿಲ್ಲ

ಸ್ವದೇಶ ವಾರ್ತೆ

★ ಜಿನಿವಾ ಪರಿಷತ್ತಿನಲ್ಲಿ ಭಾಗವಹಿಸಿ ಹಿಂದೂಸ್ಥಾನಕ್ಕೆ ಮರಳಿದ ಹಾಗೂ ಹವಾನಾದಲ್ಲಿ ಜರಗುವ ವಿಶ್ವ ವಾಣಿಜ್ಯ ಪರಿಷತ್ತಿಗೆ ಕೇಂದ್ರ ಮಂತ್ರಿ ಭಾಭಾರವರೊಡನೆ ಹೋಗಲಿರುವ ಶ್ರೀ ಕರಮಳಕರರು ಜಿನೀವಾ ಪರಿಷತ್ತಿನಲ್ಲಿ ಹಿಂದೀ ಪ್ರತಿನಿಧಿಗಳ ಭಾಗ ಎಲ್ಲರಿಗೂ ಮೆಚ್ಚುಗೆಯಾಯಿತೆಂದು ಹೇಳಿದರು.

★ ಸಪ್ಟಂಬರ ತಿಂಗಳಲ್ಲಿ ಡಿಲ್ಲಿಯಲ್ಲಾದ ಗಲಭೆಯಿಂದ ಸುಮಾರು 1 ಸಾವಿರ ಜನರ ಕೊಲೆಯಾಗಿದೆ. 20 ಸಾವಿರ ಅಂಗಡಿಕಾರರು ಅಂಗಡಿ ಬಿಟ್ಟೋಡಿದ್ದಾರೆ ಮನೆಮಾರು ಬಿಟ್ಟು ಓಡಿದವರ ಸಂಖ್ಯೆ 1 ಲಕ್ಷ 85 ಸಾವಿರ. ಇದರಲ್ಲಿ 1 ಲಕ್ಷಕ್ಕೂ ಮಿಕ್ಕಿದ ಜನರು ಪಾಕಿಸ್ಥಾನಕ್ಕೆ ಹೋಗಿದ್ದಾರೆ ಗಲಭೆ ಹತ್ತಿಕ್ಕಲು ಪೋಲಿಸ್ ಮತ್ತು ಮಿಲಿಟರಿಯವರಿಗೆ ಸುಮಾರು 10 ಸಾವಿರ ಗೆಲನ್ ಪೆಟ್ರೋಲು ಖರ್ಚಾಗಿದೆ ಸುಮಾರು 40 ಸಾವಿರ ಕೂಲಿಗಾರರು ತಮ್ಮ ಗಳಿಕೆಗೆ ಎರವಾಗಿದ್ದಾರೆ. ಹೋದ ವರ್ಷಕ್ಕಿಂತ ಈ ವರ್ಷದ ಸಪ್ಟಂಬರದಲ್ಲಿ ಡಿಲ್ಲಿ ಮುನ್ಸಿಪಾಲಿಟಿಯ ಆದಾಯ ಏಳು ಲಕ್ಷ ಕಡಿಮೆಯಾಗಿದೆ ಅಲ್ಲಿನ ಎಷ್ಟೋ ಸುಂಕದ ಕಟ್ಟೆ ಮತ್ತು ಟಪ್ಪಾಲಾಫೀಸುಗಳು 15 ದಿನ ಮುಚ್ಚಿದ್ದವು

★ ಕಾಶ್ಮೀರ ದಾಳಿಗಾರರ ಮುಖ್ಯ ರಾಣೆಯು ಗಡಿನಾಡಿನ ಹಜಾರಾದಲ್ಲಿದ್ದು ಅದರ ಎಲ್ಲ ಚಟುವಟಿಕೆಗಳನ್ನು ಗಡಿಪ್ರಾಂತ್ಯದ ಮುಖ್ಯ ಮಂತ್ರಿಗಳಾದ ಖಾನ್ ಅಬ್ದುಲ್ ಕ್ವಯೂಮ್ ಖಾನರು ನಿರ್ದೇಶಿಸುತಿದ್ದಾರೆಂದೂ ಅವರ ತಮ್ಮಂದಿರು ಒಳಗಿಂದೊಳಗೆ ಅದರ ಸೇನಾಪತಿಗಳಾಗಿದ್ದರೆಂದೂ ಅಮೃತ ಬಜಾರ ಪತ್ರಿಕೆಯ ವಿಶೇಷ ಸುದ್ದಿಗಾರರು ತಿಳಿಸುತ್ತಾರೆ.

★ ಪಶ್ಚಿಮ ಬಂಗಾಲ ಮುಸಲ್ಮಾನ ಪರಿಷತ್ತಿನಲ್ಲಿ ಮುಸಲ್ಮಾನರು ಕೊಂಗ್ರೆಸಿಗೆ ಸೇರಬೇಕೆಂದು ನಿರ್ಣಯ ಮಾಡಲಾಗಿದೆ.

★ ಸುಹರ್ವರ್ದಿಯವರು ಸೇರಿಸಿದ ಲೀಗ್ ಮುಸಲ್ಮಾನರ ಪರಿಷತ್ತಿನ ನಿರ್ಣಯಗಳಲ್ಲಿ ಭಾರತ ಒಕ್ಕೂಟಕ್ಕೆ ಮುಕ್ತಕಂಠವಾದ ವಿಧೇಯತೆ ಸೂಚಿತವಾಗಿಲ್ಲವೆಂದೂ, ಈ ಮುಸಲ್ಮಾನರು ಪಂಚಮ ದಳದ ಚಟುವಟಿಕೆಗೆ ಸಂದರ್ಭ ಕಾಯುಲಿಚ್ಛಿಸುವಂತೆ ತೋರುತ್ತದೆಂದೂ ಹಲವು ಪತ್ರಿಕೆಗಳು ಟೀಕಿಸಿವೆ

★ ಮಧ್ಯಪ್ರಾಂತ ಮತ್ತು ಬಿರಾರದ ಮುಸಲ್ಮಾನರ ಪರಿಷತ್ತಿನಲ್ಲಿ ಭಾರತ ಮುಸಲ್ಮಾನರೆಲ್ಲರೂ ಕೊಂಗ್ರೆಸಿಗೆ ಸೇರಬೇಕೆಂದೂ, ನಿಜಾಮರು ಬಹು ಸಂಖ್ಯಾಕರಾದ ತಮ್ಮ ಹಿಂದೂ ಪ್ರಜೆಗಳ ಆಶೆ ಹಾರೈಕೆಗಳನ್ನು ಸಲ್ಲಿಸಬೇಕೆಂದೂ ವಿನಂತಿಸಲಾಗಿದೆ

★ ಜುನಾಗಡ ಮತ್ತು ಕಾಶ್ಮೀರದ ಪ್ರಶ್ನೆಗಳನ್ನು ಅಂತರಾಷ್ಟ್ರೀಯ ತೀರ್ಮಾನಕ್ಕೊಪ್ಪಿಸಲು ತಾವು ಸಿದ್ಧರಾಗಿರುವುದನ್ನು ನೆಹರುಗಳು ಮೊದಲೇ ತಿಳಿಸಿದ್ದರೂ, ಪಾಕಿಸ್ತಾನ ಪಧಾನ ಲಿಯಾಖತರು ಇತ್ತೀಚಿನ ಹೇಳಿಕೆಯಲ್ಲಿ ಅದೇ ಮುದ್ದೆಯನ್ನು ಒತ್ತಿ ಹೇಳಿರುವರು

★ ಮೇಲ್ಕಂಡ ಹೇಳಿಕೆಯಲ್ಲಿ ಲಿಯಾಖತರು ಶೇಕ ಅಬ್ದುಲ್ಲರನ್ನು ಕ್ವಿಸ್ಲಿಂಗರೆಂದೂ, ಮುಸ್ಲಿಂ ದ್ರೋಹಿಗಳೆಂದೂ ಸಂಬೋಧಿಸಿದ್ದಾರೆ ಅಬ್ದುಲ್ಲರಾದರೋ ಪಾಕಿಸ್ತಾನ ಮೆಚ್ಚಿಸಲು ಕಾಶ್ಮೀರದಲ್ಲಿ ಜನಮತ ಗಣನೆ ಮಾಡಲಾಗುವುದಿಲ್ಲ ಅದರ ಬದಲಿಗೆ ಸಾರ್ವತ್ರಿಕ ಚುನಾವಣೆ ನಡಸುವೆವು ಎಂದು ಹೇಳಲಾಗಿದೆ.

★ ಕೊಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಬಾಬು ರಾಜೇಂದ್ರ ಪ್ರಸಾದರು ಮುಂದಿನ ಭಾರತದ ಶಾಶ್ವತ ಗವರ್ನರ ಜನರಲ್ಲರಾಗಿ ಮಾಡಲಿದ್ದಾರೆಂದು ನಿರೀಕ್ಷಿಸಲಾಗಿದೆ

★ ಕೊಂಗ್ರೆಸ್ ವರ್ಕಿಂಗ್ ಕಮಿಟಿಗೆ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಧೋರಣೆಯ ಮೇಲೆ ಹತೋಟಿಯಿರಬೇಕೆಂಬ ಮಾಜಿ ಅಧ್ಯಕ್ಷ ಕೃಪಾಲಾನಿಯವರ ಸೂಚನೆಯು ಇಂದಿನ ಸ್ವತಂತ್ರ ಭಾರತದ ಪರಿಸ್ಥಿತಿಯಲ್ಲಿ ಸಮಂಜಸವಾದುದಲ್ಲವೆಂದು ಹಲವು ಪತ್ರಿಕೆಗಳು ತಿಳಿಸಿವೆ ರಾಜಕೀಯ ಪಕ್ಷ ಪ್ರಧಾನ ಚಟುವಟಿಕೆಗಳು ಹೊಸ ಭಾರತದಲ್ಲಿ ಜನಪ್ರಿಯವಾಗಲಾರವೆಂದು ಅವು ಕಾರಣ ಕೊಟ್ಟಿವೆ

ಈ ಪಂಥದವರಿಗೆ ಎಟಂಬೊಂಬಿನ ಭಯವಿಲ್ಲ!
ವಿಶ್ವಪ್ರಳಯದಲ್ಲಿ ಇವರು ಮಾತ್ರ ಬದುಕುವರು!
ಪೆರಿಸಿನ ನೂತನ ಸನ್ಯಾಸಿ ಸಂಘ

"ನೀವು ಉಪ್ಪು, ಮಾಂಸ ಮತ್ತು ಪ್ರಾಣಿಜನ್ಯ ಪದಾರ್ಥಗಳನ್ನು ತ್ಯಜಿಸಿದರೆ ಎಟಂಬೊಂಬಿನ ಅನಾಹುತವು ನಿಮಗೆ ತಗಲಲಾರದು" ಹೀಗೆಂದು ಪೆರಿಸಿನ "ಪವಿತ್ರ ಮಂಡೆಯ ಭಾತೃತ್ವ" ಸಂಘದ ಮುಂದಾಳುಗಳಾದ ಬರ್ನಾರ್ಡ್ ಸಯರ್ಸ್ ಅವರು ತಮ್ಮ 'ಶಿಷ್ಯ' ವರ್ಗದ ಪರಿಷತ್ತಿನಲ್ಲಿ ತಿಳಿಸಿದರು ಸಭೆಯಲ್ಲಿ ಈ ಭಾತೃತ್ವದ 5 ಸಾವಿರ ಅನುಯಾಯಿಗಳು ಹಾಜರಿದ್ದರು

ಮತ್ತು ಅವರು ಹೀಗೆಂದರು 'ಜಗತ್ತಿನ ಅಂತ್ಯವು ಸಮೀಪಿಸುತ್ತಿದೆ ಇಂದಿನ ನಾಗರಿಕತೆಯ ಕಟ್ಟಡವು ಕುಸಿದು ಬೀಳುವುದು. ಮುಂದಿನ ವಿಶ್ವ ಪ್ರಳಯದ ಸಂಬಂಧದಲ್ಲಿ ನಮ್ಮದಿದು ಕೊನೆಯ ಸಭೆಯಾಗಿರುತದೆ ಹೊಸ ಯುದ್ಧವೊಂದು ಹೆಚ್ಚಿನ ಮಾನವಕೋಟಿಯನ್ನು ಧ್ವಂಸಿಸುತ್ತದೆ ನಾವು ನಮ್ಮ ತತ್ವಗಳಲ್ಲಿ ವಿಶ್ವಾಸ ತಾಳಿಕೊಂಡಿದ್ದರೆ ಮಾತ್ರ ಬದುಕುವೆವು ನಮ್ಮ ಧರ್ಮ ತತ್ವಗಳಿಂದಲೇ ನಾವು ಜಯಶೀಲರಾಗುವೆವು"

ಸೂಕ್ಷ್ಮವಾಗಿ ವಿವೇಚಿಸಿದರೆ ಈ ಸಂಘದವರು ಪ್ರಾಚೀನ ಭಾರತದ ಸರಳ ಆಶ್ರಮ ಜೀವನವನ್ನನುಸರಿಸುತ್ತಿರುವರೆಂದು ತಿಳಿಯುತ್ತದೆ ಸರಳ ಜೀವನ ಉನ್ನತ ವಿಚಾರಗಳು ಇವರದೂ ಧ್ಯೇಯವಾಗಿದೆ ಇದರ ಸವಿಸ್ತರ ಹೊಟ್ಟೆಯ ಮಟ್ಟಿಗೆ ಸ್ವಲ್ಪ ಕಷ್ಟಪರವಾದರೂ ಬೌದ್ಧಿಕ ವಿಚಾರ ಪ್ರಶ್ನೆಗಳಿಗೆ ಇದು ಸುಲಭವಾಗುವುದು

ಹಣ್ಣು ಹಂಪಲುಗಳು ತರಕಾರಿಗಳು ಮತ್ತು ಸಿರಿಧಾನ್ಯಗಳು ಇವರ ಆಹಾರವಾಗಿರುವುದನ್ನು ನೋಡಿದಾಗ ರಾಜಸ ತಾಮಸ ಸ್ಥಿತಿಯನ್ನು ಹೊಂದುವುದು ಇವರ ಉದ್ದೇಶವಾಗಿರುವುದೆಂದು ಅರ್ಥವಾಗುತದೆ ಪಿಷ್ಟ ಮೊಸರು, ಹಾಲು ಮಾಂಸಗಳನ್ನು ಇವರು ಮುಟ್ಟುವುದಿಲ್ಲ ಅಷ್ಟೆ ಏಕೆ ಉಪ್ಪನ್ನು ಕೂಡ ಇವರು ತೆಗೆದುಕೊಳ್ಳುವುದಿಲ್ಲ ಮಾದಕ ಪದಾರ್ಥ ತಂಬಾಕುಗಳಂತೂ ಇವರಿಗೆ ಅತಿ ತ್ಯಾಜ್ಯಗಳಾದುವುಗಳು ಸೇವಾಗ್ರಾಮದ ಗಾಂಧಿ ಆಶ್ರಮದಲ್ಲೂ ಇಂಥಹದೇ ನಿಯಮಗಳಿವೆ "ಕರುಣೆಯುಳ್ಳವರಾಗಿರಿ" ಎಂದುವೇ ಇವರ ಜೀವನದ ಮುಖ್ಯತತ್ವ

ಈ ಪಂಥದವರ ಮುಖಭಾವಗಳೇ ಅವರ ವಿಷಯವಾಗಿ ಪ್ರಚಾರ ಮಾಡುವ ಉತ್ತಮ ಜಾಹೀರಾತುಗಳಾಗಿವೆ ಸರಳ ಸ್ವಚ್ಛ ವೇಷಭೂಷಣಧಾರಿಗಳೂ, ನಮ್ರರೂ, ಗಂಭೀರ ಪ್ರಶಾಂತತೆಯವರೂ ಆದ 5 ಸಾವಿರ ವಿಶ್ವಾಸಿಗರ ದೃಶ್ಯವು ನೋಡುವವರ ಮೇಲೆ ಸತ್ಪರಿಣಾಮವನ್ನುಂಟು ಮಾಡುತಿತ್ತು ದ್ವೇಷ, ವೈಷಮ್ಯ, ಲೋಭ ಅಸೂಯೆಗಳನ್ನವರು ತೊಡೆದುಹಾಕಿರುವರೆಂದು ಸ್ಪಷ್ಟ ಅರಿವಾಗುತ್ತದೆ "ಮಾನವರ ಮಧ್ಯದೊಳಗಿದೊಂದು ದೈವೀಕ ಶಕ್ತಿ, ಇನ್ನು ಮುಂದೆ ಯಾವ ಸಂಕಷ್ಟಗಳೂ ಇಲ್ಲ, ಯಾವ ಹೆದರಿಕೆಯೂ ಇಲ್ಲ, ಯಾವ ವೈರಿಗಳೂ ಇಲ್ಲ, ಯಾವ ವ್ಯಾಧಿಗಳೂ ಇಲ್ಲ ಮತ್ತು ಮರಣವೂ ಇಲ್ಲ" ಇದೇ ಅವರ ವಿಶ್ವಾಸ.

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted

Fixed Deposits for periods of 3 months and above up to 24 months are accepted.

ದಕ್ಷಿಣ ಕನ್ನಡ ಜಿಲ್ಲೆಯ ಮಹಾ ಜನರಲ್ಲಿ ವಿನಂತಿ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಇದೇ ಕಳೆದ ತಾ. 16-11-47 ರಲ್ಲು ಮಂಗಳೂರಿನ ಜಿಲ್ಲಾ ಬೋರ್ಡು ಸಭಾ ಮಂದಿರದಲ್ಲಿ ಶ್ರೀ ಬಿ. ವೈಕುಂಠ ಬಾಳಿಗ ಬಿ. ಏ. ಬಿ. ಎಲ್‌ರವರ ಅಧ್ಯಕ್ಷತೆಯಲ್ಲಿ ಜರಗಿದ ದ. ಕ. ಜಿಲ್ಲಾ ಆಹಾರ ಪರಿಷತ್ತಿನಲ್ಲಿ ನಡೆದ ಕಾರ್ಯಕಲಾಪ ಮತ್ತು ಮಂಜೂರಾದ ನಿರ್ಣಯಗಳು ಮುಂದೆ ಪ್ರಕಟಿಸಲ್ಪಡುವುವು ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ನೆರೆದು ಬಂದಿದ್ದ ಸುಮಾರು 100 ಮಂದಿಗೆ ಮಿಕ್ಕಿದ ಪ್ರತಿನಿಧಿಗಳ ಈ ಪರಿಷತ್ತಿನಲ್ಲಿ ಜಿಲ್ಲೆಯಲ್ಲಿ ಈಗ ನಡೆಯುತ್ತಿರುವ ಆಹಾರ ಸಂಗ್ರಹ ಮತ್ತು ವಿತರಣಾ ಪದ್ಧತಿಯು ಹಾನಿಕರವಿದ್ದು ಅದನ್ನು ಕೂಡಲೇ ಸರಿಪಡಿಸಬೇಕೆಂಬುದರ ಕುರಿತು ಒಮ್ಮತವಾಗಿ ನಿರ್ಧಾರವಾಗಿರುವುದು. ಆ ವಿಷಯದಲ್ಲಿ ಈ ವರೆಗೆ ಸರಕಾರಕ್ಕೆ ಮಾಡಿಕೊಂಡ ಮನವಿಗಳಿಂದ ಯಾವ ಪ್ರಯೋಜನವೂ ಆಗದೆ ನಿರಾಶೆಯೇ ತೋರಿ ಬರುವುದರಿಂದ ಆ ಕುರಿತು ಜಿಲ್ಲೆಯ ಎಲ್ಲಾ ಪಕ್ಷ ಮತ್ತು ವರ್ಗಗಳವರು ಒಂದು ಕೂಡಿ ಈಗ ಕಾರ್ಯಕ್ರಮ ಕೈಕೊಳ್ಳುವುದು ಆವಶ್ಯವೆಂದು ಕೂಡ ಒಮ್ಮತದ ತೀರ್ಮಾನವಾಗಿರುವುದು.

ಅದಕ್ಕೆ ಮುಂಚಿತವಾಗಿ ಇಡೀ ಜಿಲ್ಲೆಯಲ್ಲಿ ತಾ 23-11 47ನೇ ಆದಿತ್ಯವಾರವನ್ನು **ಸರಕಾರದ ಧೋರಣೆಯ ನಿಷೇಧದಿನವಾಗಿ** ಆಚರಿಸಬೇಕೆಂದು ನಿರ್ಣಯಿಸಲ್ಪಟ್ಟಿರುವುದು. ಆ ಪ್ರಕಾರ ಜಿಲ್ಲೆಯ ಎಲ್ಲಾ ಸರ್ಕಲ್ ಮತ್ತು ಕಾಂಗ್ರೆಸ್ ಕಮಿಟಿಗಳವರು ಇತರ ಪಕ್ಷ ಮತ್ತು ಸಂಘದವರೂ ಈ ದಿನವನ್ನು ಅತ್ಯಂತ ಉದ್ಯೋಗಶೀಲವಾಗಿ ಇಡೀ ಜಿಲ್ಲೆಯಲ್ಲಿ ಆಚರಿಸಿ ಅದಷ್ಟು ಹೆಚ್ಚಿನ ಕಡೆಗಳಲ್ಲಿ ಸಭೆಗಳನ್ನು ಜರಗಿಸಿ ಈ ಕೆಳಗಿನ ನಿರ್ಣಯವನ್ನು ಆವುಗಳಲ್ಲಿ ಮಂಜೂರ ಮಾಡಿ ತಂತಿ ಮೂಲಕ ಅದನ್ನು ಮದ್ರಾಸ್ ಸರಕಾರದ ಮುಖ್ಯ ಮಂತ್ರಿಗಳಿಗೂ ಆಹಾರ ಮಂತ್ರಿಗಳಿಗೂ ಕೇಂದ್ರ ಸರಕಾರದ ಆಹಾರ ಮಂತ್ರಿಗಳಿಗೂ ಕೂಡಲೇ ಕಳುಹಿಸಬೇಕಾಗಿ ವಿನಂತಿ.

ಸಭೆಗಳ ವರದಿಯನ್ನು ನಮಗೂ ಜಿಲ್ಲಾ ಕಲೆಕ್ಟರವರಿಗೂ ಕೂಡಲೇ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇವೆ.

ನಿರ್ಣಯ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಸದ್ಯ ಕಾನೂನಾಗಿ ನಡೆಯುತ್ತಿರುವ ಆಹಾರ ಸಂಗ್ರಹ ಮತ್ತು ವಿತರಣಾ ವಿಧಾನದಿಂದ ಜನರಿಗೆ ಆಗುವ ಪೀಡೆ ಮತ್ತು ಸಂಕಷ್ಟಗಳ ಕುರಿತು ಈ ಸಭೆಯು ತೀವ್ರ ನಿಷೇಧ ಪಡಿಸುತ್ತದೆ ಮತ್ತು ಸರಕಾರವು ಅದನ್ನು ಕೂಡಲೇ ಸರಿಪಡಿಸಬೇಕೆಂದು ಒತ್ತಾಯ ಪಡಿಸುತ್ತದೆ.

ಹರಿಜನ ಪರಿಷತ್ತು

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಪರಿಷತ್ತೊಂದನ್ನು ದಶಂಬರ್ ತಿಂಗಳಲ್ಲಿ ಜರಗಿಸಬೇಕೆಂದು ಗೊತ್ತುಮಾಡಿಯಾಗಿ ಆ ಬಗ್ಗೆ ಒಂದು ಸ್ವಾಗತ ಸಮಿತಿಯ ಸಭೆಯು ಇತ್ತೀಚೆಗೆ ಜರಗಿ ಪರಿಷತ್ತಿನ ಪ್ರಚಾರ, ಆರ್ಥಿಕ ಹಾಗು ಉಪಚಾರ ಮತ್ತು ಏರ್ಪಾಡುಗಳ ಬಗ್ಗೆ ಉಪಸಮಿತಿಗಳನ್ನು ರಚಿಸಲಾಯಿತು. ಪರಿಷತ್ತಿನ ಉದ್ಘಾಟನೆ ನಡೆಸುವ ಬಗ್ಗೆ ಮದ್ರಾಸಿನ ರೂರಲ್ ಡೆವಲಪ್‌ಮೆಂಟ್ ಮತ್ತು ಹರಿಜನೋದ್ಧಾರ ಮಂತ್ರಿಗಳಾದ ಮಾನ್ಯ ವಿ ಕೂರ್ಮಯ್ಯರನ್ನು ಆಮಂತ್ರಿಸುವುದಾಗಿ ನಿರ್ಣಯವಾಯಿತು.

ಭಾಷಣ

ಇದೇ ತಾ 16-11 47ನೇ ಆದಿತ್ಯವಾರ ಸಾಯಂಕಾಲ ಗಂಟೆ 4ಕ್ಕೆ ಕೆನರಾ ಹಾಯ್ ಸ್ಕೂಲಿನ ಭುವನೇಂದ್ರ ಭವನದಲ್ಲಿ, ದಕ್ಷಿಣ ಭಾರತದ ಹಿಂದೀ ಪ್ರಚಾರ ಸಭೆಯ ಮಂತ್ರಿಯವರಾದ ಶ್ರೀ ತೀಜ ನಾರಾಯಣ್ಜೀಯವರು ಹಿಂದುಸ್ತಾನೀ ಮಜಲಿಸ್ ಮಂಗಳೂರು ಈ ಸಂಸ್ಥೆಯ ಆಶ್ರಯದಲ್ಲಿ ಭಾಷಣ ಮಾಡಿದರು.

ನಿಧನ

ಮೊನ್ನೆಯ ತನಕ ಕಮ್ಯೂರ್ಶಿಯಲ್ ಟೀಕ್ಸ್ ಆಫೀಸರಾಗಿದ್ದು ನಿವೃತ್ತರಾದ ಶ್ರೀ ಗಣಪತಿಯವರು ನಿನ್ನೆ ಕಾಲಾಧೀನರಾದರೆಂದು ತಿಳಿಸಲು ವಿಷಾದಪಡುತ್ತೇನೆ. ಮೃತರ ಆತ್ಮಕ್ಕೆ ಶಾಂತಿ ದೊರಕಲಿ.

ಜಿಲ್ಲಾ ಸಮಾಚಾರ

ಸೀಮೆಯೆಣ್ಣೆ ಬೆಲೆ

ತಾ 20-8-47ರ ದ ಕ. ಜಿಲ್ಲಾ ಗಜೇಟಿನಲ್ಲಿ ಪ್ರಸಿದ್ಧಿಸಲ್ಪಟ್ಟ ತಾ. 21-7-47ರ ನೊಟಿಫಿಕೇಶನಿನನ್ವಯದ ನಮ್ಮ ಜಿಲ್ಲೆಯಲ್ಲಿನ ಚಿಮ್ಣಿ ಎಣ್ಣೆ ದರಗಳು, ಡಬ್ಬಿಯ ಮೇಲೆ, ಎಲ್ಲ ತರಗತಿಗಳಿಗೆ ಒಂದಾಣೆಯಂತೆ ಹೆಚ್ಚಿಸಲ್ಪಟ್ಟಿದೆಯೆಂದು ಡಿಪ್ಯುಟಿ ಕಲೆಕ್ಟರ್-ಇನ್ ಚಾರ್ಜ್, ಶ್ರೀ ಎಸ್ ಬಾಲಾಜಿರಾವ್‌ರವರು ತಾ 12 11-47ರ ಪ್ರಕಟಣೆಯಲ್ಲಿ ತಿಳಿಸುತ್ತಾರೆ.

ಮದ್ರಾಸ್ ಪ್ರಾಂತೀಯ ಪೋಸ್ಟ್ ಮೇನ್ ಮತ್ತು ಲೋವರ್ ಗ್ರೇಡ್ ಸ್ಟಾಫ್ ಯೂನಿಯನ್ ಸಮ್ಮೇಳನ

ಪೂರ್ವ ಸೂಚಿತವಾದಂತೆ ಮೇಲ್ಕಂಡ ಸಮ್ಮೇಳನಾಧಿವೇಶನವು ಕಳೆದ ತಾ 15ರಲ್ಲಿ ಆರಂಭವಾಯಿತು. ಇದಕ್ಕೆ ನಾಗಪಟ್ಟಣಂ, ಮಧುರೆ, ಕೊಚನಾಡು, ಚೆಂಗಲ್ಪೇಟ್, ಕುಂಭಕೋಣ, ಪಳನಿ ದಿಂಡಿಗಲ್ ಮೊದಲಾದ ಅಧಿಪತ್ಯದ ಎಲ್ಲ ಕಡೆಗಳಿಂದಲೂ, ಮೈಸೂರು, ಪುದುಚೇರಿಯಿಂದಲೂ ಸುಮಾರು 65 ಮಂದಿ ಡೆಲಿಗೇಟರು ಬಂದಿದ್ದರು. ಊಟ ವಸತಿಗಳ ಏರ್ಪಾಡುಗಳು ಹೆಡ್ ಪೋಸ್ಟಾಫೀಸಿನ ಮಾಳದಲ್ಲಿ ಸುವ್ಯವಸ್ಥೆಯಿಂದ ನಡೆದಿತ್ತು.

ಅಂದು ಬೆಳಗ್ಗೆ ಮದ್ರಾಸ್ ಪ್ರಾಂತೀಯ ಪೋಸ್ಟ್‌ಮೆನ್ ಮತ್ತು ಲೋವರ್ ಗ್ರೇಡ್ ಸ್ಟಾಫ್ ಸಂಘದ ಅಧ್ಯಕ್ಷರಾದ ಶ್ರೀ ಟಿ ಎಸ್ ರಾಮಾನುಜಂ ಬಿ ಎ ಬಿ ಎಲ್ ಎಲ್ ಬಿ ಯವರಿಂದ ಧ್ವಜವಂದನೆಯಾಯಿತು. ಬಳಿಕ ಸಂಜೆ ಸಾಂತೀಯ ಮೆರವಣಿಗೆ ಪೋಸ್ಟಾಫೀಸಿನಿಂದ ಹೊರಟು ನಗರದ ಕೆಲವು ಬೀದಿಗಳಲ್ಲಿ ಸುತ್ತಿ ಮೈದಾನಿಗೆ ಬಂದು ಅಲ್ಲಿ ಶ್ರೀ ರಾಮಾನುಜಂ ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಅಧಿವೇಶನ ನಡೆಯಿತು.

ಕೈಮಗ್ಗ ಬಟ್ಟೆ ತಯಾರಿಸುವವರಿಗೆ

ಇತ್ತೀಚೆಗೆ ಸರಕಾರವು ಪ್ರಕಟಿಸಿದ G O ನಂ 4488 ತಾ 16-9-47ನೇ ಹುಕುಂ ಪ್ರಕಾರ ವಸ್ತ್ರ ತಯಾರು ಅಥವಾ ಉತ್ಪತ್ತಿ ಮಾಡುವ ಕೈಮಗ್ಗಗಳ ವ್ಯಾಪಾರಿಗಳು ನೇಕಾರರೆಲ್ಲರು ತಾವು ಉತ್ಪತ್ತಿ ಮಾಡುವ ಪ್ರತೀ ವಸ್ತ್ರದ ಮೇಲೆ (1) ಲೈಸೆನ್ಸ್ ನಂಬ್ರ (2) ವೌಚರು ನಂಬ್ರ ಮತ್ತು (3) ಸದರಿ ವಸ್ತ್ರ ಉತ್ಪನ್ನ ಮಾಡುವ ಬಗ್ಗೆ ಮಾಸ್ತವವಾಗಿ ತಗಲುವ ಖರ್ಚು ಈ ವಿವರಗಳನ್ನು ಕಾಣಿಸಿ ಒಂದು ಲೇಬಲ್ ಹಚ್ಚತಕ್ಕದು. ವಸ್ತ್ರ ಉತ್ಪತ್ತಿ ಮಾಡುವವನಿಗೆ ವ್ಯಾಪಾರೀ ಲೈಸೆನ್ಸ್ ಇಲ್ಲದಿದ್ದರೆ (1) ನೂಲು ರೇಶನ್ ಕಾರ್ಡು ನಂಬ್ರ (2) ಉತ್ಪತ್ತಿ ಮಾಡುವ ಲೈಸೆನ್ಸ್ ನಂಬ್ರ ಅದು ಸಿಕ್ಕಿದಾಗ ಕಾಣಿಸುವುದಲ್ಲದೆ ವೌಚರು ನಂಬ್ರ ಬದಲಿಗೆ ವಸ್ತ್ರ ಉತ್ಪತ್ತಿ ಮಾಡಿದ ತಾರೀಕು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಪ್ರತೀ ಒಬ್ಬ ಕೈಮಗ್ಗದ ವಸ್ತ್ರ ಉತ್ಪತ್ತಿ ಮಾಡುವವನು ಸದ್ರಿ ವಸ್ತ್ರ ಉತ್ಪತ್ತಿ ಮಾಡುವರೆ ವಾಸ್ತವಿಕವಾಗಿ ತಗಲುವ ಖರ್ಚು ರುಜು ಪಡಿಸುವ ಕುರಿತು ತೋರಿಸುವರೆ ಅವಶ್ಯವುಳ್ಳ ಲೆಕ್ಕಗಳನ್ನು ಆಗತ್ಯ ಇಡತಕ್ಕದ್ದು. ಹೆಚ್ಚಿನ ಮಾಹಿತಿ ಅವಶ್ಯವುಳ್ಳವರು ಮಂಗಳೂರು ಹಂಪನಕಟ್ಟೆ ಫೆಲಿಕ್ಸ್‌ಪೈ ಬಿಲ್ಡಿಂಗ್ಸ್‌ದಲ್ಲಿರುವ ಮಂಗಳೂರಿನ ಕೈಮಗ್ಗಗಳ ಮಾಲಿಕರ ಸಂಘದ ಆಫೀಸಿನಲ್ಲಿ ತಿಳಕೊಳ್ಳಬಹುದು.

ಅ. ಭಾ ನಿರಾಶ್ರಿತರ ಸಹಾಯಾರ್ಥ

ಮಂಗಳೂರು ಜನತಾ ರಂಗಭೂಮಿಯವರು ತಾ 16-15-47ನೇ ರವಿವಾರ ಸಂಜೆ 6.30 ಗಂಟೆಗೆ ಮಿಶನ್ ಹೈಸ್ಕೂಲ್ ಸೆಂಟೆನರಿ ಹಾಲ್‌ದಲ್ಲಿ ಒಂದು ವಿವಿಧ ವಿನೋದಾವಳಿ ಕೂಟ ಏರ್ಪಡಿಸಿದರು. ಸಂಗ್ರಹವಾದ ನಿಧಿಯನ್ನು ಪಂಡಿತ ಜವಾಹರಲಾಲ್ ನೆಹರು ಅವರಿಗೆ ಕಳುಹಿಸಿ ಕೊಡಲಾಗುವುದು.

ವರ್ಧಂತಿ

ಬರುವ ತಾ. 22ನೇ ಶನಿವಾರ ಸಂಜೆ 6 ಗಂಟೆಗೆ ನಡೆಯಲಿರುವ ಬಿ ಇ ಎಮ್ ಹೈಸ್ಕೂಲಿನ ಶಾಲಾ ವರ್ಧಂತಿಯುತ್ಸವದ ಅಧ್ಯಕ್ಷತೆ ವಹಿಸಲು ರಾವ್ ಸಾಹೇಬ್ ಚಾರ್ಲ್ಸ್ ಜೋನ್, ಬಿ. ಎ, (ಡಿಪ್ಯುಟಿ ಕಲೆಕ್ಟರ್ ಮತ್ತು ಸ್ಪೆಶಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್, ಮಂಗಳೂರು) ಇವರು ಸಮ್ಮತಿಸಿರುವರು. ಶ್ರೀಮತಿ ಜೋನ್‌ರವರು ಬಹುಮಾನ ವಿತರಣ ಮಾಡುವರು. ಶ್ರೀ ಎಸ್ ಎ ಶಾಸ್ತ್ರಿ ಜಿ ಎಮ್ ವಿ ಸಿ, ಡಿಸ್ಟ್ರಿಕ್ಟ್ ವೆಟರ್ನರಿ ಆಫೀಸರ್ ಇವರು ಶಾಲಾ ಶ್ರೇಯೋ ಪ್ರಾರ್ಥನೆ ಮಾಡುವರು. ಶಾಲಾ ಹಳೇ ವಿದ್ಯಾರ್ಥಿಗಳೆಲ್ಲರೂ ಉತ್ಸವದಲ್ಲಿ ಭಾಗವಹಿಸಬೇಕೆಂದು ಹಳೇ ವಿದ್ಯಾರ್ಥಿ ಸಂಘದ ಕಡೆಯಿಂದ ಆಗ್ರಹದ ವಿನಂತಿಯಿದೆ.

ಕಂಟ್ರೋಲ್ ತೆಗೆದುಹಾಕಲಾಯಿತು

ಇಂಡಿಯಾ ಗವರ್ನಮೆಂಟಿನವರು ಕಡ್ಲೆ ಅಲ್ಲದೆ ಇತರ ಎಲ್ಲಾ ಧಾನ್ಯಗಳ ಕಂಟ್ರೋಲನ್ನು ತೆಗೆದುಹಾಕಿರುವರು. ಈ ಕುರಿತು ಮದ್ರಾಸು ಸರಕಾರದ ಹುಕುಂ ಬರಲಿರುತ್ತದಾಗಿ ನಾವು ತಿಳಿಯುತ್ತೇವೆ. ಆದ್ದರಿಂದ ಕಂಟ್ರೋಲಿನಲ್ಲಿ ಇನ್ನುಳಿದ ಧಾನ್ಯಗಳೆಂದರೆ, ಅಕ್ಕಿ, ಗೋದಿ ಮತ್ತು ಕಡ್ಲೆ ಮಾತ್ರ.

ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕಾಸರಗೋಡು

ಇನ್ನೂರು ವರ್ಷಕ್ಕಿಂತಲೂ ಮಿಕ್ಕಿ ಪರರಾಳ್ವಿಕೆಗೆ ಒಳಗಾಗಿದ್ದ ಭಾರತವು ಆಗಸ್ಟ್ 15 ರಿಂದ ಸ್ವತಂತ್ರವಾಯಿತು. ಆದರೂ ಹರಿದು ಹಂಚಾಗಿ ಹೋದ ಕರ್ನಾಟಕವು 19 ಆಡಳಿತೆಗಳಿಂದ ಆಳಲ್ಪಡುತ್ತದೆ. ಕರ್ನಾಟಕದ ಜನತೆಯು ಒಂದೇ ಆಡಳಿತೆಯಿಂದ ಆಳಲ್ಪಟ್ಟು ಒಂದೇ ಚೌಕಟ್ಟಿನಲ್ಲಿ ಕೂಡಿ ಬಾಳಬೇಕೆಂಬ ಕೂಗು ಅನೇಕ ವರ್ಷಗಳಿಂದ ಕೇಳಿ ಬರುತ್ತದೆ. ಆ ಕನಸಿನ ಕೂಗು ಇಂದು ನನಸಾಗುವ ಸಂದರ್ಭವೊದಗಿದೆ. ಈ ಸಮಯದಲ್ಲಿ ಸಾಹಿತ್ಯ ಮೂಲಕವಾಗಿ ಕರ್ನಾಟಕವನ್ನು ಸಂಘಟಿಸಿ ಜೀವಂತ ನಾಡಿನ ಜನರ ಹೊಂಚು ಹಾಕುತ್ತಿರುವ ಕೇರಳದವರು ಇಡೀ ದಕ್ಷಿಣ ಕನ್ನಡವನ್ನೇ ಕೇರಳಕ್ಕೆ ಸೇರಿಸಬೇಕೆಂಬ ಆಲೋಚನೆಯಲ್ಲಿದ್ದಾರೆಂಬುದು ಸರ್ವವಿದಿತ ವಿಷಯವಾಗಿದೆ. ಇಂತಹ ಸಂದಿಗ್ಧ ಸಮಯದಲ್ಲಿ ದಕ್ಷಿಣ ಕನ್ನಡ ಕೇರಳಗಳ ಗಡಿನಾಡಾದ ಕಾಸರಗೋಡಿನಲ್ಲಿ 31ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜರಗಿಸುವ ಸಂದರ್ಭವೊದಗಿದ್ದು ಕನ್ನಡ ಜನತೆಯ ಭಾಗ್ಯವೆಂದೇ ಹೇಳಬೇಕು.

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಎಮ್ ಎಲ್ ಸಿ ಇವರು ಸ್ವಾಗತಾಧ್ಯಕ್ಷರಾಗಲು ಒಪ್ಪಿದ್ದಾರೆ. ಪ್ರಸಿದ್ಧ ಪತ್ರಿಕೋದ್ಯೋಗಿಗಳೂ, ಸುಪ್ರಸಿದ್ಧ ಸಾಹಿತಿಗಳೂ, ಮೊನ್ನೆ ತಾನೇ ನಡೆದ ಮೈಸೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ತುಂಬಾ ಕೆಲಸಗಳನ್ನು ಮಾಡಿ ಜೈಲುವಾಸವನ್ನನುಭವಿಸಿದವರೂ ಆದ ಶ್ರೀ <u>ತಿರುಮಲೆ ತಾತಾಚಾರ್ಯ ಶರ್ಮರು</u> ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದು ಕನ್ನಡಿಗರ ಭಾಗ್ಯವೇ ಸರಿ.

ಈ ಮಹತ್ವದ ಸಾಹಿತ್ಯ ಸಮ್ಮೇಳನವು ದಶಂಬರ 28, 29, 30ರಲ್ಲಿ ಜರಗಲಿದೆ. ಈ ಬಗ್ಗೆ ಸಾಧಾರಣ 10 ಸಾವಿರ ರೂಪಾಯಿ ಬೇಕೆಂದು ಅಂದಾಜು ಮಾಡಲಾಗಿದೆ. ಈಗಾಗಲೇ ಸುಮಾರು ಮೂರು ಸಾವಿರ ರೂಪಾಯಿಗಳ ಸಂಗ್ರಹವಾಗಿದೆ. ಜಿಲ್ಲೆಯ ಹಾಗೂ ಪರ ಊರುಗಳಲ್ಲಿರುವ ದಕ್ಷಿಣ ಕನ್ನಡಿಗರು. ಸಮ್ಮೇಳನವನ್ನು ನಡೆಸುವ ಜವಾಬ್ದಾರಿಯು ತಮ್ಮದೆಂದು ನೆನಸಿಕೊಂಡು ಮುಕ್ತಹಸ್ತದಿಂದ ಧನಸಹಾಯ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಹಣ ಕೊಡುವವರನ್ನು ರೂ. 100; 50, 25, 10, 5 ಹಾಗೆ ವಿಭಾಗಗಳಾಗಿ ಮಾಡಲಾಗಿದೆ. ಹಣ ಕಳುಹಿಸುವವರು "ಕಾರ್ಯದರ್ಶಿ, 31ನೆಯ ಕನ್ನಡ ಸಮ್ಮೇಳನ, ಕಾಸರಗೋಡು ದ. ಕ." ಈ ವಿಳಾಸಕ್ಕೆ ಕಳುಹಿಸಬಹುದು.

ಎಂ. ಉಮೇಶರಾವ್, ಎಡ್ವೊಕೇಟ್.
ಬಿ. ಶ್ರೀಧರ ಕಕ್ಕಿಲ್ಲಾಯ, ಎಡ್ವೊಕೇಟ್.
ಕಾರ್ಯದರ್ಶಿಗಳು

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್, ಉಡುಪಿ

1906ನೇ ಇಸವಿಯಲ್ಲಿ ಸ್ಥಾಪಿತವಾದ ಈ ಬ್ಯಾಂಕಿಗೆ, ಅದರ 25ಲಕ್ಷ ರೂಪಾಯಿಯ ಅಧಿಕೃತ ಭಂಡವಾಳದಲ್ಲಿ, ಚಂದಾ ಹಾಕಲಿಕ್ಕೆ ಬಾಕಿ ಇದ್ದ ರೂಪಾಯಿ 9 ಲಕ್ಷ ಭಂಡವಾಳದ ಪೈಕಿ, 4 ಲಕ್ಷ ರೂಪಾಯಿಯಷ್ಟು ಭಂಡವಾಳವನ್ನು ಚಂದಾ ಹಾಕಲಿಕ್ಕೆ ಅರ್ಪಿಸುವುದಕ್ಕಾಗಿ ಮಾಡಿದ ಮನವಿಗೆ ಕೇಂದ್ರ ಸರಕಾರದ ಅನುಮತಿಯು ಈಗ ತಾನೇ ಸಿಕ್ಕಿಯದೆ. ರೂಪಾಯಿ 50/-ರ ಪ್ರತಿಯೊಂದು ಒರ್ಡಿನರಿ ಶಾರಿಗೆ ರೂ 55/-ಕ್ಕಿಂತ ಜಾಸ್ತಿಯಾಗದಷ್ಟು ಪ್ರೀಮಿಯಮು ಹಾಕಬಹುದಾಗಿಯೂ ಅನುಮತಿ ದೊರೆತಿದೆ. ಈ 8000 ಶಾರುಗಳನ್ನು ಶೀಘ್ರದಲ್ಲಿ ಚಂದಾಹಾಕಲಿಕ್ಕೆ ಅರ್ಪಿಸಲ್ಪಡುವುವು ಎಂದು ತಿಳಿಯುತ್ತೇವೆ.

ಕಲ್ಯಾಣಪುರ:—ಸ್ಥಳೀಯ ಹೈಸ್ಕೂಲಿನ ಓರ್ವ ಉಪಾಧ್ಯಾಯರನ್ನು ಶಾಲೆಯ ಹಿತದೃಷ್ಟಿಯಿಂದ ತೆಗೆದುಹಾಕಲಾಗಿತ್ತು. ಮತ್ತೆ ಅವರನ್ನು ಪುನಃ ನೇಮಿಸಬೇಕೆಂದು ಸರಕಾರಿ ಹುಕುಂ ಬಂದಿದ್ದು, ಇದನ್ನು ಖಂಡಿಸುವ ಸಲುವಾಗಿ ಸ್ಥಳೀಯ ನಿವಾಸಿಗಳ ದೊಡ್ಡ ಸಭೆಯೊಂದು ಅಲ್ಲಿನ ಗಣ್ಯರಾದ ಜವಿನಾಸ್ತ್ರರವರ ಅಧ್ಯಕ್ಷತೆಯಲ್ಲಿ ಕಳೆದ ತಾ. 9ರಂದು ನೆರೆದು ಶಾಲೆಯ ಆಂತರೀಕ ವ್ಯವಹಾರದಲ್ಲಿ ಸರಕಾರವು ಕೈಹಾಕುವುದರ ಕುರಿತು ನಿಷೇಧ ಸೂಚಿಸಿ ಭಾಷಣಗಳಾದುವು. ಇದರ ಮೇಲೂ ಈ ಹುಕುಂ ಒತ್ತಾಯ ಪೂರ್ವಕ ಹೊರಿಸಲ್ಪಡುವಂತಾಗುವ ಸಂದರ್ಭದಲ್ಲಿ ಹೆತ್ತವರು ಸದ್ರಿ ಹೈಸ್ಕೂಲಿಗೆ ಮಕ್ಕಳನ್ನು ಕಳುಹಿಸಿಕೊಡಬಾರದೆಂದು ಸೂಚನೆಗಳಾದುವು. ಮಾನ್ಯ ವಿದ್ಯಾ ಸಚಿವರಿಗೆ ಸದ್ರಿ ಹುಕುಮನ್ನು ಹಿಂತೆಗೆಯಲು ವಿನಂತಿಸುವ ನಿರ್ಣಯಗಳಾದವೆಂದು [illegible] ತಿಳಿಸುತ್ತಾರೆ.

NOTICE

IN THE COURT OF THE DISTRICT MUNSIF OF MANGALORE

O S No 148 1947

Between
Jodmut Venkatraya Bhat and other — Plaintiffs
and
P Vasudeva Bhat and others — Defendants

To 1st Defendant
P Vasudeva Bhat S/o Narayana alias Cherda Bhat
Chamagaragalli
Mangalore Town

Whereas the plaintiff above-<u>named</u> <u>has</u> <u>instituted</u> a <u>suit</u> for the reliefs claimed in the plaint filed in the above suit and whereas the said suit is posted to 28—11—1947 at 11 a m. before the said court for final disposal.

You are hereby warned to appear either in person or by a pleader on the said date and hour and contest the same. Otherwise the same will be decided exparte.

By Order of Court

Mangalore — **M. V. Kamath**
15-11-1947 — Advocate for Plaintiff

ಲಿಂಬೆ ಹಣ್ಣಿನ ಔಷಧಿಗಳು

ಸಾಮಾನ್ಯ ವ್ಯಾಧಿಗಳಿಗೆ ಸರಳ ಪರಿಹಾರ.

ಸೇಲಮಿನ ಬಳಿಯಿರುವ ಧರ್ಮಪುರದ ಆನಂದ ಆಶ್ರಮದ ಸ್ವಾಮಿ ಆನಂದ ತೀರ್ಥರು ಕೆಲವೊಂದು ಸಾಮಾನ್ಯ ವ್ಯಾಧಿಗಳಿಗೆ ಈ ಕೆಳಗಿನ ಸರಳ ಪರಿಹಾರೋಪಾಯಗಳನ್ನು ತಿಳಿಸಿದ್ದಾರೆ.

ಆಯುರ್ವೇದ ವಿಜ್ಞಾನವು ಲಿಂಬೆಹಣ್ಣಿಗೆ ಅತ್ಯುನ್ನತ ಸ್ಥಾನವನ್ನು ಕೊಟ್ಟಿದೆ. ಪ್ರಾಚೀನಕಾಲದಿಂದಲೂ ಲಿಂಬೆಹಣ್ಣನ್ನು ದೇವದರ್ಶನಕ್ಕಾಗಲಿ, ಮಹಾಪುರುಷರ ಸಂದರ್ಶನಕ್ಕಾಗಲಿ ಹೋದಾಗ ಫಲ ಕಾಣಿಕೆಯಾಗಿ ಕೊಂಡೊಯ್ಯಬಹುದೆಂದು ನಿರ್ದೇಶಿಸಿದ್ದಾರೆ. ಸುಮಾರು 64 ವ್ಯಾಧಿಗಳನ್ನು ಗುಣಪಡಿಸುವ ಶಕ್ತಿಯು ಈ ಲಿಂಬೆ ಹಣ್ಣಿಗಿದೆ. ಈ ಕೆಳಗಿನ ವ್ಯಾಧಿಗಳನ್ನು ಲಿಂಬೆ ಹಣ್ಣಿನಿಂದ ಯಾರಾದರೂ ಗುಣಪಡಿಸಬಹುದು. ದೀರ್ಘ ಕಾಲದ ವ್ಯಾಧಿಗಳಿಗೆ ಮಾತ್ರ ಇವು ತಗಲಲಾರವು

ಕೆಮ್ಮು: ಒಂದು ಲಿಂಬೆ ಹಣ್ಣಿನ ರಸದಲ್ಲಿ ಎರಡು ಕಾಳುಗಳಷ್ಟು ಲವಂಗದ ಹುಡಿಯನ್ನು ಹಾಕಿ 2 ಔನ್ಸು ನೀರನ್ನು ಬೆರಸಬೇಕು. ಇಷ್ಟನ್ನು ಎಂಟು ಗಂಟೆಗೊಂದಾವರ್ತಿ ಕುಡಿಯಬೇಕು

ಮುಖ ಮುದ್ದಣಗಳಿಗೆ: ಬೆಳಿಗ್ಗೆ ಎಳಿರಿ. ಕುದಿಸಿದ ಹಾಲಿಗೆ ನಿಂಬೆ ಹಣ್ಣಿನ ರಸ ಬೆರಸಿ ನೊರೆಯುಂಟಾಗುವ ತನಕ ಬಿಡಬೇಕು. ಈ ನೊರೆಯನ್ನು ಮುದ್ದಣಗಳಿಗೆ ತಿಕ್ಕಬೇಕು.

ತುರಿ ಕಜ್ಜಿಗಳಿಗೆ: ತೆಂಗಿನ ಕಾಯಿಯ ಹೂವಿನ ಹಾಲಿಗೆ 2 ನಿಂಬೆ ಹಣ್ಣಿನ ರಸ ಸೇರಿಸಿ ಕುದಿಸಬೇಕು ನಂತರ ಕಜ್ಜಿ ವ್ರಣಗಳಿಗಿದನ್ನು ಹಚ್ಚಬೇಕು

ವಾಕರಿಕೆ: 2 ಔನ್ಸ್ ನೀರಿನಲ್ಲಿ ಅರ್ಧ ನಿಂಬೆಹಣ್ಣಿನ ರಸ 2 ಕಾಳಿನಷ್ಟು ಜೀರಿಗೆ, 1 ಕಾಳಿನಷ್ಟು ಏಲಕ್ಕಿ ಹುಡಿ ಹಾಕಿ ಬೆರಸುವುದು. ಮತ್ತೆ ಪ್ರತಿ 6 ತಾಸಿಗೊಂದಾವರ್ತಿ ಸೇವಿಸುವುದು

ತಲೆನೋವು: ನಿಂಬೆ ಹಣ್ಣಿನ ಮತ್ತು ಒಣ ಶುಂಠಿ ಹುಡಿಯನ್ನು ಬೆರಸಿ ಹಣೆಗೂ ಕಪಾಲಕ್ಕೂ ಲೇಪಿಸುವುದ

ಗಂಟು ನೋವು: ಲಿಂಬೆ ಹಣ್ಣಿನ ರಸ ಮತ್ತು ತೆಂಗಿನೆಣ್ಣೆಯನ್ನು ಬೆರಸಿ ನೋವಿರುವ ಗಂಟುಗಳಿಗೆ ಸವರಿ ಬಿಸಿ ನೀರಿನ ಶಾಖ ಕೊಡತಕ್ಕದ್ದು

ಕಣ್ಣು ನೋವು ಮತ್ತು ಉರಿ ತೆಂಗಿನ ಹೂವಿನ ಹಾಲು ಮತ್ತು ಲಿಂಬೆ ರಸವನ್ನು ಮಿಶ್ರಮಾಡಿ ತಲೆಗ ಲೇಪಿಸಬೇಕು. ಅರ್ಧ ತಾಸಿನ ನಂತರ ಬಿಸಿ ನೀರಿನ ಸ್ನಾನ ಮಾಡಬೇಕು

ಕಿವಿ ನೋವು: 1 ಔನ್ಸ್ ಎಳ್ಳೆಣ್ಣೆ, ½ ಔನ್ಸ್ ತುಲಸಿ ಎಲೆ ರಸ, ½ ಔನ್ಸ್ ಲಿಂಬೆ ರಸ, ಇವಿಷ್ಟನ್ನು ಕುದಿಸಿ 3 ದಿನಗಳ ತನಕ ಇಡಬೇಕು. ನಂತರ ಮಲಗುವ ಸಮಯದಲ್ಲಿ ಕೆಲವು ಬೊಟ್ಟುಗಳನ್ನು ಕಿವಿಗೆ ಹಾಕುವುದು.

ಹೊಟ್ಟೆ ನೋವು: ಕಾಲು ತೊಲೆ ಉಪ್ಪು, 6 ಔನ್ಸ್ ಬಿಸಿ ನೀರು, ಸಕ್ಕರೆ 6 ಔನ್ಸ್ ಇವುಗಳೊಂದಿಗೆ 1 ಲಿಂಬೆ ಹಣ್ಣಿನ ರಸವನ್ನು ಬೆರಸಿ ಕುಡಿಯುವುದು.

ಅಜೀರ್ಣ: 3 ಔನ್ಸ್ ನೀರು, 1 ಕಾಳಿನಷ್ಟು ಓಮ ಹುಡಿ, 2 ಕಾಳಿನಷ್ಟು ಜೀರಿಗೆ ಹುಡಿ, 3 ಕಾಳಿನಷ್ಟು ಸಕ್ಕರೆ, ½ ಲಿಂಬೆ ಹಣ್ಣಿನ ರಸ ಇವಿಷ್ಟನ್ನು ಬೆರಸಿ ಕುಡಿಯುವುದು.

ಹಲ್ಲು ನೋವು: ಒಂದು ಚಮಚ ತುಂಬಾ ಲವಂಗದ ಹುಡಿಯೊಡನೆ ಲಿಂಬೆ ರಸ ಸೇರಿಸಿ ಈ ಮುಲಾಮನ್ನು ಹಲ್ಲುಗಳಿಗೆ ತಿಕ್ಕುವುದು.

ಕ್ಷೌರ-ಹುಳ ಮೇಯುವಿಕೆ: ವೀಳ್ಯದೆಲೆಯ ರಸ ಮತ್ತು ಲಿಂಬೆ ರಸಗಳನ್ನು ಬೆರಸಿ ಹುಳವಿದ್ದ ಭಾಗಕ್ಕೆ ಸವರಿ ಅರ್ಧ ಗಂಟೆ ನಂತರ ಸ್ನಾನ ಮಾಡುವುದು.

ವಿಧಿಲಿಖಿತ ತಪ್ಪಿಸಲಾಗದು

ಹೈದರಾಬಾದಿಗೆ ಜುನಾಗಡದ್ದೆ ಪ್ರಾಪ್ತಿ

ಸ್ವತಂತ್ರ ಹಳ್ಳಿಗಳು ಭಾರತಕ್ಕೆ ಸೇರುತ್ತವೆ

ಸರ್ದಾರ್ ಪಟೇಲರ ಭಾಷಣದ ಪರಿಣಾಮವೇ ಹಾಗೆ. ಕೆಲವು ಸಮಯ ಅವರು ಮಾತನಾಡದೇ ಕಾರ್ಯ ಸಾಗಿಸುವರು ಮತ್ತೆ ಅವರು ಗರ್ಜಿಸಲಾರಂಭಿಸಿದರೆಂದರೆ ನೀಚ ಶಕ್ತಿಗಳೆದುರು ಅಪ್ರತಿಹತವಾದ ಚಳವಳವೆದ್ದು ಆ ಶಕ್ತಿಯನ್ನು ಮಣ್ಣು ಮುಕ್ಕಿಸುವ ಪರಿಣಾಮವುಂಟಾಗುವುದೂ ಖಂಡಿತ. ಅವರು ಮಾತನಾಡದೇ ಮೈಸೂರು, ತಿರುವಾಂಕೂರ್, ಕೊಲ್ಹಾಪುರಗಳು ಜನತಾ ಸರಕಾರಕ್ಕೆಡೆಕೊಟ್ಟವು ಜುನಾಗಡ ಸಮಸ್ಯೆ ಪರಿಹಾರವಾದ ಮೇಲೇ ಅವರು ಮಾತನಾಡಿದ್ದು ಆಗಲೇ ಅವರು ಹೈದರಾಬಾದಿಗೂ ಎಚ್ಚರಿಕೆ ಕೊಟ್ಟರು.

ಸಂಸ್ಥಾನದ ದ್ರವೀಕರಣ

ಹೈದರಾಬಾದಿನ ಗಡಿನಾಡಿನ ಹಳ್ಳಿಗಳು ಗುಂಪುಗುಂಪಾಗಿ ಸ್ವಾತಂತ್ರ್ಯ ಘೋಷಿಸಿ ಭಾರತ ಡೊಮಿನಿಯನ್ನಿಗೆ ಸೇರಲಾರಂಭಿಸಿವೆ. ಇನ್ನೂ ಕೆಲವೇ ವಾರಗಳಲ್ಲಿ ಇಡೀ ಸಂಸ್ಥಾನವು ನಿಜಾಮರ ಹಿಡಿತದಿಂದ ಮಾಯವಾದರೆ ಆಶ್ಚರ್ಯವಿಲ್ಲ ತನ್ನ ರಾಜದಂಡವನ್ನು ಒಂದು ಜಾತೀಯ ಪಕ್ಷದ ಕೈಯಲ್ಲಿ ಕೊಟ್ಟು ನಿಶ್ಚಿಂತರಾಗಿರುವ ನಿಜಾಮ ಸಾಹೇಬರು ದೊಡ್ಡ ಅರಬ ಸೇನೆಯನ್ನು ಸಿದ್ಧಗೊಳಿಸಿರುವರೇ ನೋ ನಿಜ ಇಂಗ್ಲೆಂಡ್ ಅಮೇರಿಕಗಳ ಕಳ್ಳಸಂತೆಯಲ್ಲಿ ಕೊಂಡ ಶಸ್ತ್ರಾಸ್ತ್ರಗಳೂ ಹೈದರಾಬಾದ ರಕ್ಷಣೆಗೆ ಕೊಳ್ಳಲ್ಪಡುವುದೂ ನಿಜ ಸಂಸ್ಥಾನಕ್ಕೆ ಹೊರಗಿನ ಮುಸಲ್ಮಾನರನ್ನು ತುಂಬಿಸಿ ಹಿಂದುಗಳ ಜನಸಂಖ್ಯೆಯ ಪ್ರಮಾಣಕ್ಕೆ ತಂದು ನಿಲ್ಲಿಸುವ ಹುಚ್ಚು ಕಾರ್ಯ ಯತ್ನವೂ ಅಲ್ಲಿ ಸಾಗುತ್ತಿದೆ ಇದು ಅವಿವೇಕದ ಪರಮಾವಧಿಯೂ ಹೌದು.

ಪುಂಡ ಪ್ರತಾಪ

ನಿಜಾಮರು ತಮ್ಮ 'ಪ್ರೀತಿಯ ಪ್ರಜೆಗಳನ್ನು ದಬ್ಬಾಳಲು ಸಶಸ್ತ್ರ ಪುಂಡ ಅರಬರನ್ನು ಸಜ್ಜುಗೊಳಿಸಿದ್ದಾರೆ ಪರಿಣಾಮವಾಗಿ ಹಿಂದೂಗಳು ವಿಶಾಲ ಸಂಖ್ಯೆಯಲ್ಲಿ ಸಂಸ್ಥಾನದಿಂದೋಡುತ್ತಿರುವರು. ಮದ್ರಾಸ್ ಸರಕಾರದ ಪೂರ್ವ ಮಾನ್ಯ ಮಂತ್ರಿಗಳಾದ ಕಲಾ ವೆಂಕಟ್ರಾಯರು ತಮ್ಮ ಗಡಿಯ ಬಳಿಯ ಪರಿಸ್ಥಿತಿಯನ್ನು ನಿರೀಕ್ಷಿಸಿ ಭದ್ರತೆಯ ಏರ್ಪಾಡು ಮಾಡಿ ಬಂದಿರುವರು. ಭಾರತ ಸರಕಾರವಾದರೂ ಈ ಗಂಭೀರ ಪರಿಸ್ಥಿತಿಯ ಕುರಿತು ಸದಾ ಎಚ್ಚರವಿದೆ. ಕೊನೆಯದಾದ ಹೈದರಾಬಾದಿನ ಭವಿತವ್ಯ ನಿರ್ಣಯಕ್ಕೆ ಹೆಚ್ಚು ವಿಳಂಬವಾಗಲಾರದು.

ಸಿಹಿಸುದ್ದಿ ಸಂಗ್ರಹ

ಬಿಗಿಯಾದ ಒಳ ರವಕೆಗಳನ್ನು ಹಾಕಿದರೆ ಹೆಂಗುಸರ ಆರೋಗ್ಯಕ್ಕೆ ಹಾನಿವುಂಟೊ ಎಂಬುದನ್ನು ನೋಡಲಿಕ್ಕೆ ಸಂಯುಕ್ತ ಅಮೇರಿಕ ಜೇಕ್ಸ್ನವಿಲ್ ಎಂಬಲ್ಲಿನ ಉಡುಪು ತಯಾರಕರು ನಾಲ್ವತ್ತು ಮಂಗಗಳಿಗೆ ಎರಡು ವರ್ಷಗಳ ತನಕ ಬಿಗಿ ರವಕೆಗಳನ್ನು ತೊಡಿಸಲೇರ್ಪಡಿಸಿರುವರು

✠

ಸಿಂಧಿಗೆ ಬಂದ ನಿರಾಶ್ರಿತರಿಗೆ ಕೊಟ್ಟ ಮನೆಗಳು ಅತೃಪ್ತಿಕರವಾಗಿದ್ದುವು ಅದಕ್ಕಾಗಿ ರೋಷಗೊಂಡ ಅವರು ಬಾಡಿಗೆ ನಿಯಂತ್ರಣ ಅಧಿಕಾರಿಯ ಕಚೇರಿಯ ಕಾರಕೂನರ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದಾಗ ಪೋಲಿಸರು ಬಂದು ಶಾಂತತೆ ಕಾಪಾಡಬೇಕಾಯಿತು

✠

ಅವಿವಾಹಿತ ತರುಣರ ಆರ್ಥಿಕ ಮತ್ತು ನೈತಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಪ್ರಯತ್ನ ಮಾಡುವ ಉದ್ದೇಶದ ಸಂಘವೊಂದು ಅಲಹಾಬಾದಿನಲ್ಲಿ ಸ್ಥಾಪಿತವಾಗಿದೆ! ತಮ್ಮ ಉದ್ದೇಶವು ಪೂರ್ತಿಯಾಗಿ ತರುಣರ ಜೀವದ ಮಟ್ಟವು ಉತ್ತಮಗೊಳ್ಳುವ ತನಕ ಬ್ರಹ್ಮಚಾರಿಗಳೆಲ್ಲರೂ ತಮ್ಮ ವಿವಾಹ ಯೋಜನೆಗಳನ್ನು ಮುಂದ ರಿಸ[illegible]ದು ಈ ಸಂಘದವರು ವಿನಂತಿ ಹೊರಡಿಸಿದ್ದಾರೆ.

✠

ತನ್ನ ಜನ್ಮ ದಿನವು ಆರಂಭವಾಗುವುದೆಂದು ಕೇಪ್‌ಟೌನ ಹೆಸಿ ಲೆಡೆರೊ ಎಂಬುವನು ತನ್ನ 30ನೇ ಜನ್ಮೋತ್ಸವಗಳನ್ನು ಹಾಸಿಗೆಯ ಮೇಲೆ ಆಚರಿಸಿದ್ದ ಆದರೆ 31ನೇ ಜನ್ಮದಿನವನ್ನವನು [illegible] ಹಾಸಿಗೆ ಬಿಟ್ಟನು. ಪರಿಣಾಮ ಹುಡುಗರ ಕ್ರಿಕೆಟ್ ಚೆಂಡೊಂದು ಅವನಿಗೆ ಹೊಡೆಯಿತು, ಕೆಲಸಗಾರರು [illegible] ಏನಾಯಿತೆಂದು ಅವನನ್ನು [illegible] ಮಾರ್ಗದ ಮಧ್ಯದಲ್ಲಿ ವಾಹನಗಳನ್ನು ನಿರ್ದೇಶಿಸುವ ಪೋಲೀಸ ಜವಾನನ ಕೈ ತಗಲಿ[illegible] ಅವನ [illegible] ಕೆಡಪಿಟ್ಟ ಇಷ್ಟು [illegible] ಮತ್ತೆ ತನ್ನ ಹಾಸಿಗೆ ಸೇರಿದ

✠

[illegible] ದೇಶದ ಹೋಟೆಲುಗಳಲ್ಲಿ ಒಂದು ಹಾಸಿಗೆಯ ಕೋಣೆಗಳ ಪದ್ಧತಿಯಲ್ಲಿ ಎಲ್ಲಕಸ್ಕೂ ಎರಡು ಹಾಸಿಗೆಗಳು

✠

ಲಂಡನಿನ ಹೈಡ್ ಪಾರ್ಕ್ [illegible] ದಿಂದ ದಿನಕ್ಕೆ ಸರಾಸರಿ 71 ಸಾವಿರ ಮೋಟಾರು ವಾಹನಗಳು ಹಾದುಹೋಗುತ್ತವೆ

NOTICE

IN THE DISTRICT COURT OF SOUTH KANARA

O. P. No. 186/1947

In the matter of the minors (1) Abdulrazak (2) Mahamad (3) Abdul Rauf (4) Abdul Hameed sons of A Idinabba (deceased)

Between

1 Abdulkhadar 2. Bipathumma 3. A. Jakriabba (4) A. Moosabba (5) A Ahmad Bava (6) Salimama (7) Hasan Bava Petitioners

and

A Mahmad Abbu-Respondent

Take Notice that the Petitioners have filed the above petition to the above court praying that 2nd petitioner may be appointed guardian of the person of the above minors and 1st Petitioner as guardian of the property of the minors and that 18-12-1947 at 11 a m has been fixed for the hearing of the above application Those who are concerned in the affair of the said minors may appear in person or by Vakil in the above court

Mangalore 21 11 1947

K B Shanker Rao

Vakil for Petitioners

INDIAS [illegible] REMEDY

For Aches and Pains

ಒಳ್ಳೆಯದನ್ನು ಪಡೆಕೊಳ್ಳಿ ಹೆಚ್ಚಿಗೆ ಕೊಡಬೇಕಾಗಿಲ್ಲ

[illegible] ನೋವುಗಳಿಗೆ ಲಿಟಿಲ್ಸ ಓರಿಯಂಟಲ್ ಬಾಮನ್ನು ಉಪಯೋಗಿಸಿರಿ.

ಕುಟಿಕೂರಾ ಟಾಲ್ಕಮ್ ಪೌಡರನ್ನು ತಾಯಂದಿರೂ ಮಕ್ಕಳೂ ಉಪಯೋಗಿಸುತ್ತಾರೆ ಇದರ ತಂಪಾದ ಗುಣ, ಬಾಳವೆಯ ಪರಿಮಳ ಸುಖಕರವಾಗಿದೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಮಕ್ಕಳ ಮೃದು ಚರ್ಮಕ್ಕೆ ಕುಟಿಕೂರಾ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ-ಅದು ಅವುಗಳಿಗೆ ಸೆಕೆಗಾಲದಲ್ಲಂತೂ ಬಹಳ ಆನಂದವೀಯುತ್ತದೆ.

ಭಾರತೀಯ ಜಟ್ಟಿಗಳು ಅದ್ವಿತೀಯರೇಕೆ?

ಜಗಜಟ್ಟಿ ಗಾಮಾ ಮತ್ತವನ ಸಾಹಸ

ಇವರು ಸದಾ ಅಪ್ರತಿಹತರು

ಜಟ್ಟಿ ಕಾಳಗ ಪ್ರಪಂಚದಲ್ಲಿ ಗಾಮಾ ಮೊದಲಾದ ಭಾರತೀಯ ಕುಸ್ತಿಗಾರರು ಜಗದ್ವಿಖ್ಯಾತರಾಗಿದ್ದಾರೆ. ಅವರಿಗೆ ಜಗತ್ತಿನಲ್ಲಿ ಸರಿಸಮಾನರೇ ಇಲ್ಲದಿರಲು ಕಾರಣವೇನು? ಇದಕ್ಕೆ ಅವರ ಬೃಹತ್ಕಾಯದ ಶಕ್ತಿಯು ಕಾರಣವಲ್ಲದೆ ಅವರ ಕುಸ್ತಿ ಶಾಸ್ತ್ರವಲ್ಲ. ಏಕೆಂದರೆ ಶಾಸ್ತ್ರೀಯ ಕುಸ್ತಿ ಪ್ರವೀಣತೆಗಳಲ್ಲಿ ಅವರನ್ನು ಮೀರಿಸುವ ಎಷ್ಟೊ ಮಂದಿ ಇದ್ದಾರೆ. ತನ್ನ ಅಪರಮಿತವಾದೀ ಶಕ್ತಿ ಸಾಮರ್ಥ್ಯವೊಂದರಿಂದಲೇ ಗಾಮಾನು ಇಂದಿಗೂ ಇದಿರಾಳಿಗಳಿಲ್ಲದ ಜಗಜಟ್ಟಿಯಾಗಿದ್ದಾನೆ ಹೀಗೆಂದು ಅಮೇರಿಕದ ಎಸ್ಕ್ವಾಯರ್ ಪತ್ರಿಕೆಯಲ್ಲಿ ಚಾರ್ಲ್ಸ್ ಬಿರೊತ್ ಎಂಬವರು ಗಾಮನ ಕುರಿತೊಂದು ವ್ಯಕ್ತಿ ಪರಿಚಯ ಲೇಖನವನ್ನು ಬರೆದಿದ್ದಾರೆ.

ಜಗತ್ತಿನ ಅಗ್ರಗಣ್ಯ ಕ್ರೀಡಾಪಟುಗಳನ್ನಾರಿಸುವಾಗ ಅಮೇರಿಕನ್ನರು ತಮ್ಮ ದೇಶದವರನ್ನೇ ಅಪ್ರತಿಮರೆಂದು ತಿಳಕೊಳ್ಳುತ್ತಾರೆ. ಆದರೆ ಇಂದು ಜಗತ್ತಿನ ಅತೀ ಶ್ರೇಷ್ಠ ಶಕ್ತಿವಂತನು ಅಮೇರಿಕವು ಯಾವ ಕಡೆಯಲ್ಲಿದೆಯೆಂದು ಕೂಡ ಅರಿತಿರದ ಒರ್ವ ಭಾರತೀಯನಾಗಿದ್ದಾನೆ. ಅವನ ಹೆಸರು ಗಾಮಾ ಎಂದು. ಅವನ ವಯಸ್ಸು ಎಪ್ಪತ್ತು ವರ್ಷ.

ಪ್ರೋತ್ಸಾಹಪರ ಘೋಷಣೆ

1910ರ ಸ ಮಾರ್ಚ್ ಗಾಮನು ಪಾಶ್ಚಿಮಾತ್ಯ ಜಗತ್ತಿನ ಕಣ್ಣಿಗೆ ಗೋಚರಿಸಿದನು. ಒರ್ವ ಕುತಂತ್ರ ಆಂಗ್ಲನಾದ ಬೆಂಜಮಿನನೆಂಬವನು ಭಾರತೀಯ ಕುಸ್ತಿ ಪಟುಗಳನ್ನು ಇಂಗ್ಲೆಂಡಿಗೆ ತರಿಸಿಕೊಳ್ಳಲು ಸಾಧ್ಯವಿದೆಂದು ನಿರ್ಧರಿಸಿದನು. ಆಗ ಇಂಗ್ಲೆಂಡಿಗೆ ಬಂದ ಪ್ರಥಮ ಕುಸ್ತಿಗಾರರ ಕೂಟದಲ್ಲಿ ಇಪ್ಪತ್ತೆರಡು ವರ್ಷದ ಗಾಮನು, ಹದಿನೇಳು ವರ್ಷದ ಅವನ ತಮ್ಮ ಇಮಾಮು ಬಕ್ಷನೂ ಇದ್ದರು. ಆಗ ಯುರೋಪಿನಲ್ಲಿ ವಿಶ್ವಮಹಿಮರಾದ ಮಲ್ಲಯುದ್ಧ ಪ್ರವೀಣರಿದ್ದರು. ಹೇಕನ್‌ಸ್ಮಿತ್, ಜಿಬೆಸ್ಕೊ ಬಂಧುಗಳು, ಬೋರಿಸ್ ಲವಾ ಎಂಬ ಸ್ವಿಸ್‌ನು, ಪೆಟ್ರಿಲ್ಲೊ ಎಂಬ ಫ್ರೆಂಚನು ಇವರಲ್ಲಿ ಹೆಸರು ವಾಸಿಗಳು. ಇವರೆಲ್ಲರೂ ಭಾರತದ ಪಂಜಾಬಿನಿಂದ ಬಂದ ಈ ಕಂದು ಬಣ್ಣದ 'ಬಾಲಕ'ರನ್ನು ತುಂಬಾ ಪ್ರೋತ್ಸಾಹಿಸಿದರು. ಆದರೆ ಅವರು ತಮಗಿಂತ ಮಿಗಿಲಾದ ಶಕ್ತಿಸಂಪನ್ನರೆಂಬ ಸಂಗತಿಯನ್ನವರು ಅಲಕ್ಷಿಸಿದರು. "ನಮ್ಮೊಡನೆ ಕೈ ಕೊಡಬೇಕಾದರೆ ಮೊದಲು ಚಿಕ್ಕ ಚಿಕ್ಕ ಜಟ್ಟಿಗಳನ್ನು ಸೋಲಿಸಿ ಸ್ವಲ್ಪ ಕೀರ್ತಿ ಪಡೆಯಿರಿ" ಎಂಬ ಭಾವನೆಯನ್ನವರು ಅಪ್ರತ್ಯಕ್ಷವಾಗಿ ಸೂಚಿಸಿದ್ದರು.

ಗಾಮಾ ಕೂಟವನ್ನು ಇಂಗ್ಲೆಂಡಿಗೆ ತರಿಸಿದ ಬೆಂಜಮಿನನು ತನ್ನ ಯೋಜನೆಗಳೆಲ್ಲ ನಷ್ಟಕರವಾದವುಗಳೆಂದು ಮೊದಲು ನಿರಾಶೆಪಟ್ಟನು. ಕಾರಣ ತುಂಬಾ ಹಣವನ್ನು ತರುವ ಖ್ಯಾತಿ ಜಟ್ಟಿಗಳೊಡನೆ ಪಂದ್ಯಾಟವೇರ್ಪಡಿಸಲು ಸಾಧ್ಯವಾಗಲಿಲ್ಲ. ಕಡೆಗಂತೂ ಮಹಾ ಬಲಿಷ್ಠನಾದ ಫ್ರೆಂಚ್ ಡಿರಿಯುಜನೊಡನೆ ಒಂದು ಕುಸ್ತಿಯು ಏರ್ಪಟ್ಟಾಗ ಬೆಂಜಮಿನನಿಗೆ ಸ್ವಲ್ಪ ಜೀವ ಬಂತು. ಆದರೆ ಈ ಕುಸ್ತಿಯು ಗಾಮನೊಡನಲ್ಲ—182 ರಾತ್ತಲ್ಲ ಭಾರದ ಅವನ ತಮ್ಮ ಇಮಾಮು ಬಕ್ಷನೊಡನೆ. ಡಿರಿಯುಜನು 200 ರಾತ್ತಲುಗಳಷ್ಟಿದ್ದನು. ಅವನ ಶರೀರ ಸ್ನಾಯುಗಳಾದರೊ ಅತ್ಯದ್ಭುತ ಗಾತ್ರದವವಿದ್ದವು.

ಪಂದ್ಯಾಟಕ್ಕೆ ಕೆಲವೇ ಸಾವಿರ ಪ್ರೇಕ್ಷಕರು ಬಂದಿದ್ದರು. ಡಿರಿಯುಜನ ಕೀರ್ತಿ ಬಲ್ಲವರು ಫಲಿತಾಂಶವೇನೆಂದು ಮೊದಲೇ ಊಹಿಸಿದ್ದರು. ಪಂಜಾಬ ತರುಣನಿಗೆ ಸೋಲು ಖಂಡಿತವೆಂದು ನಿರ್ಣಯಿಸಲಾಗಿತ್ತು. ಸರ್ವ ಸಾಮಾನ್ಯವಾಗಿ ಹಾಗೇ ಆಗುತ್ತಿತ್ತು. ಆದರೆ ಅಂದು ಕಾಳಗ ನಡೆದಾಗ ಸಂಪೂರ್ಣ ಸೋತವ ಇಮಾಮ ಬಕ್ಷನಲ್ಲ—ಡಿರಿಯುಜನಿಗೆ ಪೂರ್ಣ ಪರಾಭವವಾಯಿತು. ಡಿರಿಯುಜನನ್ನು ಅದೆಷ್ಟು ಶೀಘ್ರದಲ್ಲಿ ತೆಗೆದು ಬಿಸಾಡಲಾಯಿತೆಂದರೆ ಮತ್ತು ಅದೆಷ್ಟು ಸ್ಪಷ್ಟತೆಯಿಂದ ಬೆನ್ನಂಟಿಸಲಾಯಿತೆಂದರೆ ತನ್ನ ಎದುರಾಳಿಯ ಹೆಸರನ್ನು ಜ್ಞಾಪಿಸಿಕೊಳ್ಳಲು ಅವನಿಗೆ ಐದು ಮಿನಿಟುಗಳು ಹಿಡಿದವು. ಅಷ್ಟು ಕಂಗಾಲಾಗಿ ಹೋಗಿದ್ದನವ.

ಅದೊಂದು ಆಕಸ್ಮಾತ್ ಸಂಭವವೆಂದು ಡಿರಿಯುಜನು ವಾದಿಸಿ ಪುನಃ ಮತ್ತೊಂದು ಸಲ ಕಾಳಗವಾಗಬೇಕೆಂದನು. ಹತ್ತು ಮಿನಿಟುಗಳ ನಂತರ ಮತ್ತೊಂದು ಕಾಳಗಕ್ಕೆ ಹತ್ತಿತು. ಆಗಲೂ ಸಂಭವಿಸಿದ್ದು ಅದೇ. ಫ್ರೆಂಚನು ಕ್ಷಣ ಮಾತ್ರದಲ್ಲಿ ಮತ್ತೆ ನೆಲಸಮನಾಗಿದ್ದನು.

ಧೈರ್ಯದ ಸೆಣೆತ

ಈ ಘಟನೆಯ ನಂತರ ಯುರೋಪ್ಯ ಕುಸ್ತಿಗಾರರು ಭಾರತೀಯರೊಡನೆ ಕೈಕೊಡುವುದನ್ನು ತಪ್ಪಿಸಿಕೊಳ್ಳುತ್ತಿದ್ದರು. ಅವರ ಕಾರಣವೂ ಬೇರೆ. ನಂತರದೊಂದು ಸಲ ಸಂಭವಿಸಿದ್ದು ಗಾಮನು ಕ್ರೀಡಾ ಪಂದ್ಯಾಟಗಳ ಇತಿಹಾಸದಲ್ಲಿ ಅಸಾಮಾನ್ಯವೆನಿಸುವ ಸವಾಲನ್ನು ಹಾಕಿ ಯುರೋಪ್ಯ ಜಟ್ಟಿಗಳನ್ನು ಕೆರಳಿಸಿ ತಟ್ಟು ಕಾಳಗಕ್ಕೆ ಆಹ್ವಾನಿಸಿದನು. ಒಬ್ಬರ ನಂತರ ಒಬ್ಬರಂತೆ ಇಂಗ್ಲೆಂಡಿನ ಯಾವ ಇಪ್ಪತ್ತು ಜಟ್ಟಿಗಳನ್ನಾದರೂ ಉರುಳಿಸಿ ಬಿಸಾಡುವೆನೆಂದು ಗಾಮನು ಪಂಥ ಹಾಕಿದನು—ಅದೂ ಒಂದು ಗಂಟೆಯ ಅವಧಿಯೊಳಗೆ. ಈ ಆಹ್ವಾನವನ್ನೂ ಯಾರೂ ಸ್ವೀಕರಿಸಲಿಲ್ಲ.

ಆ ಸಮಯದಲ್ಲಿ ಜಿಬೆಸ್ಕೊ ಎಂಬವನು ಪಾಶ್ಚಿಮಾತ್ಯ ಮಲ್ಲಯುದ್ಧ ಪ್ರಪಂಚದಲ್ಲಿ ತುಂಬಾ ಕೀರ್ತಿಶಾಲಿಯಾಗಿದ್ದನು. ಇವನನ್ನು ಯಾರೊ ಹುರಿದುಂಬಿಸಿದುದರ ಪರಿಣಾಮವಾಗಿ ಅವನು ಗಾಮನೊಡನೆ ಕೈ ಕೊಡಲು ಮುಂದೆ ಬರುವವನಾದನು. ಜಿಬೆಸ್ಕೊ ಗಾಮರೊಳಗಾದ ಆ ಕುಸ್ತಿ ಸ್ಪರ್ಧೆಯು ಮಲ್ಲಯುದ್ಧ ಇತಿಹಾಸದಲ್ಲಿ ಅತ್ಯವೇಳಾಸ್ಪದವಾದುದೆಂದೇ ಸಲ್ಲುತ್ತಿದೆ. ಇಮಾಮು ಬಕ್ಷನ ಕೈಯಲ್ಲಿ ಸೋತ ಡಿರಿಯುಜನ ಅನುಭವ ಕಣ್ಣಾರೆ ಕಂಡ ಜಿಬೆಸ್ಕೊವು ಗಾಮನೊಡನೆ ಸೆಣಸಾಡಿದಾಗ ಬಹಳ ಜಾಗರೂಕನಾಗಿದ್ದ. ಫ್ರೆಂಚ್ ಮಲ್ಲನ ಪಾಡು ತನ್ನದಾಗಬಾರದೆಂದು ಅವನು ತುಂಬಾ ಎಚ್ಚರದಿಂದಿದ್ದ.

ಆದರೆ ಗಾಮನು ಇವನಾವ ಎಚ್ಚರಿಕೆಗೂ ತಪ್ಪಿ ಸೀಳಾದವನಲ್ಲ. ಜಿಬೆಸ್ಕೊವಿನ ಕೈ ಹಿಡಿದು ಸರಿಯಾಗಿ ಅವನನ್ನು ಸೆಳೆದು ಕಾಲುತಪ್ಪಿಸಿ ಕತ್ತು ಹಿಡಿದು ನೆಲಕ್ಕೆ ಒತ್ತಿ ಬಿಟ್ಟನು. ಕೆಸರು ... ಜಿಬೆಸ್ಕೊ ನಿಗ್ರಹಿತನಾಗಿ ಕಾಲಕ್ಷಣ ... ಗಾಮನ ಅವಡು ಮೇಲೆ ... ಬಲವಾಗಿ ... ಹೆಚ್ಚಳಿಸಿದ. ಯುರೋಪ್ಯ ಕುಸ್ತಿಗಾರರ ಚಳಕಿನ ... ತನದಿಂದ ಜಿಗುಪ್ಸೆಗೊಂಡವನಾಗಿ ಗಾಮನು ಬೇಗನೇ ಇಂಗ್ಲೆಂಡಿನಿಂದ ಮರಳಲು ದ್ಯುಕ್ತನಾದನು. ಆದರೆ ಶ್ರೇಷ್ಠ ಅಮೇರಿಕನ್ ಜಟ್ಟಿಯೋರ್ವನು ಅವನೊಡನೆ ಗುಟ್ಟಿನಲ್ಲಿ ಕುಸ್ತಿ ಮಾಡಲಿಚ್ಛಿಸಿದನು.

ಮರಳಿ ಮನೆಗೆ

ರೊಲ್ಲರ್ ಎಂದು ಅಮೇರಿಕನನ ಹೆಸರು. ಗಾಮನ ಅಗಾಧ ಶಕ್ತಿಗೆ ಇವನೂ ಬಲಿಯಾದನು. ಗಾಮನು ಒಂದು ಲಂಡನಿನ ಸಣ್ಣ ಗರಡಿಯಲ್ಲಿ ಕೆಲವೇ ಕುಸ್ತಿ ತಜ್ಞರಿದಿರಿನಲ್ಲಿ ರೊಲ್ಲರನನ್ನು 15 ಮಿನಿಟುಗಳಲ್ಲಿ 13 ಸಾರಿ ಮಣ್ಣು ಮುಕ್ಕಿಸಿದನು. ನಂತರ ಗಾಮಾ ಭಾರತಕ್ಕೆ ಬಂದ.

ಕೀರ್ತಿ ಭಗ್ನನಾದ ಜಿಬೆಸ್ಕೊ ಮತ್ತೆ ಗಾಮನನ್ನು ಹುಡುಕಿ ಭಾರತಕ್ಕೆ ಬಂದ. ತನ್ನ ಶ್ರೇಷ್ಠತ್ವವನ್ನು ಕಾಪಾಡುವ ಹೊಣೆ ಹೊತ್ತ ಗಾಮನು ಬಹಳ ಎಚ್ಚರದಿಂದಿದ್ದನು. ಪಾಟಿಯಾಲದಲ್ಲಾದ ಇತರ ಪಂದ್ಯಾಟದಲ್ಲಿ ಗಾಮನು ಜಿಬೆಸ್ಕೊವಿನ ಯಾವ ಕಸರತ್ತುಗಳಿಗೂ ಎಡೆಗೊಡದೆ ಅದೆಷ್ಟು ಬಲವಾಗಿ ಅಪ್ಪಳಿಸಿ ಬಿಟ್ಟನೆಂದರೆ ಮುಂದೆ ಮತ್ತೊಮ್ಮೆ ಕೈ ಕೊಡುವುದು ಅನಾವಶ್ಯಕವೆಂದರ್ಥವಾಯಿತು. ಇಷ್ಟು ನಡೆದುದು ಕೇವಲ 21 ಸೆಕೆಂಡುಗಳಲ್ಲಿ."

"ಭಾರತೀಯ ಮಲ್ಲರ ಶಾಂತಿತ್ವವನ್ನು ... ವುದೆಂದರೆ ಗೋಪಾಲನ ಮೂರ್ತಿಯನ್ನು ಅಲುಗಾಡಿಸಿದಷ್ಟು ಸುಲಭ!" ಹೀಗೆಂದು ಕೆನೆಡದ ಪ್ರಖ್ಯಾತ ಕುಸ್ತಿಗಾರನೂ, ಜಗತ್ತಿನ ಇಂದಿನ ಅತೀ ಬಲಿಷ್ಠ ಮನುಷ್ಯನೆಂದೆನಿಸಲ್ಪಡುವ ಜೋರ್ಜ್ ಜೊವಟ್ ಎಂಬಾತನು ನುಡಿದುದು ಅಕ್ಷರಶಃ ನಿಜ. ಭಾರತೀಯ ಕುಸ್ತಿಗಾರರು ತಮ್ಮ ಅಸಾಧಾರಣ ಶಕ್ತಿ ಸಾಮರ್ಥ್ಯದಿಂದಲೇ ಗೆಲ್ಲುತ್ತಾರೆ.

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಎದುರಾಗುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನಚರಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟ ನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ ಕೋಸ್ಟಲ್ಲ್ಯಾಂಡಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲೈನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಯಂಬತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ. ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳೆಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29—3—1947.

ಜ್ಯೋಂಟ್ ಮೆನೇಜರ್ಸ್,
ದಿ. ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವೃಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದೀಪಾವಳಿಯ ಶುಭಸಂದೇಶಗಳು

ನಮ್ಮ ಎಲ್ಲಾ ಪೋಲಿಸಿದಾರರಿಗೆ, ವೈದ್ಯಕೀಯ ಪರೀಕ್ಷಕರಿಗೆ, ಏಜಂಟರಿಗೆ ಮತ್ತು ಹಿತಚಿಂತಕರಿಗೆ
ದೀಪಾವಳಿ ಮತ್ತು ಮುಂಬರುವ ವರುಷವು ಶುಭದಾಯಕವಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದುಸ್ಥಾನ, ಮೈಸೂರು, ಟ್ರಾವನ್ಕೂರ್,
—o— ಕೊಚ್ಚಿನ್ ಮತ್ತು ಪುದುಕೋಟೆ ಸಂಸ್ಥಾನಗಳ ಚೀಫ್ ಏಜಂಟರು —o—

ದಿ ಬೊಂಬೆ ಲ್ಯಾಫ್ ಎಶೂರೆನ್ಸ್ ಕಂಪೆನಿ, ಲಿಮಿಟೆಡ್

ಮದ್ರಾಸು, ಬೆಂಗಳೂರು, ಬೊಂಬ್ಯಾ, ಟ್ರಿವೆಂಡ್ರಮ್,
ಕಲ್ಲಿಕೋಟೆ, ಮಂಗಳೂರು, ಮಧುರಾ, ಮತ್ತು ಉಡ್ಪಿ.

Bhuvanendra Products Limited,

Katapadi S. Kanara.

Head Office & Factory: KATAPADI S Kanara
Depot: Maharata Galli, Hubli. KUMTA N. Kanara.

ನಮ್ಮ ಏಜಂಟ್, ಸ್ಟಾಕಿಸ್ಟ್, ಗಿರಾಕಿ ವ ಎಲ್ಲಾ ಹಿತಚಿಂತಕರಿಗೆ
ದೀಪಾವಳಿಯ ನಮ್ಮ ಶುಭಾಶಯಗಳು.
ಹೊಸ ವರ್ಷವು ಅನ್ನ, ಬಟ್ಟೆ, ಅನ್ಯೋನ್ಯ ಪ್ರೀತಿ,
ಸುಖ ಶಾಂತಿಯುಕ್ತವಾಗಲಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ - ದಕ್ಷಿಣ ಕನ್ನಡ.

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

... Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 28—11—1947 [ಸಂಚಿಕೆ 47]

ಕರ್ನಾಟಕ ಏಕೀಕರಣಕ್ಕೆ ಅರಸು ಬೇಕೆ?

ಲೇಖಕ ಶಿವರಾಮ ಕಾರಂತ

ಈ ತನಕ ಕನ್ನಡಿಗರು ಏಕೀಕರಣದ ಒಂದೇ ಕೂಗು ಕೂಗುತ್ತಿದ್ದರೆ, ಈ ಜತೆಗೆ ಆ ಹಾಡಿಗೊಂದು ಹೊಸ ಸೊಲ್ಲು ಸೇರಿಸಿದ್ದಾರೆ. ಆ ಏಕೀಕರಣ ಮೈಸೂರದರಸರ ಕೈಕೆಳಗೆ ನಡೆಯತಕ್ಕುದೆಂದು ಏಕೀಕರಣದ ಜನಗಳಲ್ಲಿ ಇಬ್ಬಣ ಮಾಡಲು ಇದಕ್ಕಿಂತ ಬೇರೆ ದಾರಿ ಕೈಕೊಳ್ಳಬೇಕಿಲ್ಲ. ಕನ್ನಡಿಗರೆಲ್ಲ ಏಕೀಕರಣಕ್ಕೆ ಹಾತೊರೆಯುತ್ತಿರುವರು ನಿಜವಾದರೂ – ಎಂತಹ ಸ್ಥಿತಿಯಿಂದಲಾದರೂ ಅವರು ಪ್ರತ್ಯೇಕ ಪ್ರಾಂತ್ಯ ರಚನೆಗೆ ಮುಂದಾಗಬೇಕೇ?

ಮೈಸೂರಿಗೆ ಅರಸುತನ ಇವತ್ತಿನ ರಾಜಕೀಯ ದೃಷ್ಟಿಯಿಂದ ಅನಿವಾರ್ಯವಾಗಬಹುದು. ಆದರೆ ದೇಶೀಯ ರಾಜರ ಸಮಸ್ಯೆ ನಮಗೊಬ್ಬರಿಗೇನೆ ಅಲ್ಲ, ಎಲ್ಲ ಭಾಷಾವಾರು ಪ್ರಾಂತಗಳಿಗೂ ಇದೆ. ಉಳಿದ ಯಾವೊಂದು ಸ್ವತಂತ್ರ ಪ್ರಾಂತದವರು ಮಾಡದ ಕೂಗನ್ನು ನಾವೆಬ್ಬಿಸುತ್ತಿರುವ ಕಾರಣವೇನು? ಬ್ರಿಟಿಷ್ ಕರ್ನಾಟಕದ ಭಾಗಗಳಷ್ಟೇ ಒಂದು ಪ್ರಾಂತವಾಗಲು ಸಾಲದೆಂದೇ? ಈ ತನಕ ಅಂಕೆಸಂಖ್ಯೆಗಳಿಂದ ಅದು ಸಾಧ್ಯವೆಂದು ಕೂಗಿದ ಮುಂದಾಳುಗಳೇ – ಅರಸರಿಗಾಗಿ ಬಾಯ್ಬಿಡುವ ಕಾಲ ಬಂತೇ? ಮರಾಟರು ಬಡೋದೆಯ ಅರಸರ ಇಲ್ಲವೆ ಇಂದೋರ ಅರಸರ ಆಶ್ರಯದಲ್ಲಿ ರಾಜ್ಯ ಕಟ್ಟಲು ಒಯ್ಯುತ್ತಲಿಲ್ಲ. ಹಿಂದೀ ಪ್ರಾಂತದವರು ರಾಜಪುತಾನದ ಅರಸರಿಗೆ ಶರಣು ಬರಲು ಸಿದ್ಧರಾಗಿಲ್ಲ, ಆಂಧ್ರರೂ ಹೀಗೆ ಕೂಗುತ್ತಲಿಲ್ಲ. ಈ ನವೀನ ಕೂಗು ಕನ್ನಡಿಗರಿಗೇಕೇ ಬಂತು?

ಈ ಅರಸರ ಪ್ರಶ್ನೆ ಭಾರತೀಯ ಪ್ರಶ್ನೆ. ಈ ತನಕ ಇಂಡಿಯನ್ ಡೊಮಿನಿಯನಿಗೆ ಸೇರಿದ ಅರಸರು ತಮ್ಮೆಲ್ಲ ಹಕ್ಕುಗಳನ್ನು ಇರಿಸಿಕೊಂಡು ಬರಿಯ–ರಕ್ಷಣೆ, ಸಾಗುವಾಹ ಸಂಬಂಧ, ವಿದೇಶೀಯ ಸಂಬಂಧಗಳನ್ನಷ್ಟು ಬಿಟ್ಟುಕೊಟ್ಟದ್ದಾರೆ. ಉಳಿದ ಪ್ರಾಂತಗಳ ಮೇಲೆ ಕೇಂದ್ರ ಸರಕಾರಕ್ಕೆ ಬಹುವಾದ ಹತೋಟಿ, ಸಂಬಂಧಗಳಿವೆ. ಕರೆನ್ಸಿ, ಸುಂಕ, ಕಾಯಿದೆ ಮೊದಲಾದಲ್ಲಿ ವಿಷಯಗಳಲ್ಲೂ ನಮ್ಮ ಮೇಲಿನ ಅಧಿಕ ಹತೋಟಿ ಕೇಂದ್ರಕ್ಕಿದೆ, ಇಂಥ ಪ್ರಾಂತಕ್ಕೂ, ಬರಿಯ ಮೂರು ವಿಷಯಗಳಲ್ಲಷ್ಟೇ ಪರತಂತ್ರವಾದ ಆಶ್ರಿತ ರಾಜ್ಯಕ್ಕೂ ಹೇಗೆ ಸಂಪರ್ಕ ಕೂಡುತ್ತೀರಿ!

ತನಗೆ ಪ್ರಾಂತದ ಮೇಲಿರುವ ಅಧಿಕಾರಗಳನ್ನು ಕೇಂದ್ರ ಸರಕಾರವು ಈ ಅರಸಂಗೆ ಬಿಟ್ಟುಕೊಡಬೇಕೆ? ಇಲ್ಲವೇ ಈಗಿನ ಅರಸರು ಪೆನ್‌ಶನ್ ಪಡೆದು ತಮ್ಮೆಲ್ಲ ಅಧಿಕಾರಗಳನ್ನು ಕೇಂದ್ರಕ್ಕೆ ಒಪ್ಪಿಸಬೇಕೆ? ಈ ಸಂಬಂಧ ಬ್ರಿಟಿಷ್ ಭಾಗವಾಗಿದ್ದ ಪ್ರಾಂತಗಳಿಗೂ ದೇಶೀಯರ ಅರಸರ ರಾಜ್ಯಗಳಿಗೂ ಒಂದೇ ತೆರನಾಗಿರುವ ತನಕ ಈ ಯೋಚನೆ ಸಾಧ್ಯವೆಂತು?

ಈ ಕೂಗಿಗೆ ಕಾರಣರಾದ–ದಿವಾಕರರವರು, ನಿಜಲಿಂಗಪ್ಪನವರು ಕಾಂಗ್ರೆಸ್ಸಿನಿಂದ ಅಧಿಕಾರ ಪಡೆದು ಈ ಚಳವಳಿಕ್ಕೆ ಮುಂದಾಗಿದ್ದಾರೆಯೇ ಅಥವಾ ತಮ್ಮ ವ್ಯಕ್ತಿ ಅಭಿಪ್ರಾಯವನ್ನು ಪ್ರಚಾರ ಮಾಡುತ್ತಿದ್ದಾರೆಯೇ? ಶ್ರೀ ನಿಜಲಿಂಗಪ್ಪನವರಂತೂ ಮಹಾರಾಜರೊಡನೆ ಸಂಧಾನಕ್ಕೆ ಹೊರಟು ಆಯಿತೆಂದು ತಿಳಿಸಿದರು. ಇದು ಕಾಂಗ್ರೆಸ್ ಪ್ರಾಂತ ಸಮಿತಿ ಅವರಲ್ಲಿರಿಸಿದ ಅಧಿಕಾರದ ದುರುಪಯೋಗವಲ್ಲವೇ! ಇಂಥ ರಾಜಕೀಯ ಸಂಧಾನ ಕನ್ನಡಿಗರ ಹೆಸರಿನಲ್ಲಿ ಯಾರು ಮಾಡ ಹೇಳಿದರಂತೆ?

ಬ್ರಿಟಿಷ್ ಭಾಗವಾಗಿದ್ದ ಕನ್ನಡಿಗರಿಗಂತೂ–ಯಾವ ಅರಸರ ಮೇಲಿನ ಮೋಹವು ಇಲ್ಲ. ಮೈಸೂರವರು ತಮ್ಮ ಹೊರೆಯನ್ನು ನೀಗಿಸಲಾರರಲಾದರೆ ಗತ್ಯಂತರವಿಲ್ಲ. ಆಗ ಬ್ರಿ. ಕರ್ನಾಟಕವಷ್ಟು ಪ್ರಾಂತವಾಗಬೇಕು. ಆಗ ಕೆಲವೊಂದು ಉದ್ಯೋಗ, ಯೋಜನೆಗಳಲ್ಲಿ ಮೈಸೂರಿನೊಡನೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಮುಂದುವರಿಯಬಹುದೇ ಹೊರತ ಬೇರೆ ದಾರಿಯಿಲ್ಲ.

ಇನ್ನೂ ಈ ಅರಸರನ್ನು ಒಟ್ಟು ಕರ್ನಾಟಕದ ಅಧ್ಯಕ್ಷರಾಗಿ ಇರಿಸುವ ವಿಚಾರ. ಇದಕ್ಕೆ ಕೇಂದ್ರದ ಸಂಘಟನಾ ಸಮಿತಿಯ ರಾಜ್ಯರಚನೆಯಲ್ಲಿ ಅವಕಾಶವಿದೆಯೇ? ಪ್ರಾಂತದ ಅಧ್ಯಕ್ಷರು ಜನರಿಂದ ಆರಿಸಲ್ಪಡುವ ಸಂದರ್ಭವಿರುವಲ್ಲಿ ಪರಂಪರಾಗತ ಅಧ್ಯಕ್ಷ ವಂಶಕ್ಕೆ ಅದರಲ್ಲಿ ಎಡವಿದೆ... ಬೇಕೆ? ಅದು ಬರಿಯ ಕನ್ನಡಿಗರ ... ಯ ತೃಪ್ತಿಗಾಗಿ ಯೆ ...

ಅಧ್ಯಕ್ಷನಿಗೆ ಹೆಚ್ಚಿಗೆ ಕೆಲಸವಿರದಿ... ಆದರೆ ಕಾಯಿದೆ ... ಮಂಡಲಿ ಮಾಡಿದ ವಿದ್ವಾಗ ... ಕಾರಿಯಂತಾಗ ... ದಲ್ಲಿ ಅಧ್ಯಕ್ಷ ಪ್ರತ್ಯೇಕ ... ಅನುವಂಶಿಕ ... ಪದಾರ್ಥವನ್ನು ಅಲ್ಲಿ ತುಂಬಬಹುದೆಂಬ ಯೋಚನೆಯಿಂದ–ರಾಜ್ಯಾಂಗ ರಚನೆಯಲ್ಲಿ ಅವನಿಗೆ (ಅಧ್ಯಕ್ಷನಿಗೆ) ಸ್ಥಾನ ಕಲ್ಪಿಸಲಾರನು.

ಅದೂ ಅಲ್ಲದೆ ಬೇರೊಂದು ಪ್ರಶ್ನೆ ಏಳುತ್ತದೆ. ಕರ್ನಾಟಕದಲ್ಲಿ ಹಲವಾರು ಅರಸರಿದ್ದಾರೆ. ಕೆಲವರು ಚಿಕ್ಕವರಿದ್ದಾರೆ, ಕೆಲವರು ಹಿರಿಯರಿರಬಹುದು. ನಾಳೆ ದಿನ ನಿಜಾಮರೂ ಕೆಳಕ್ಕಿಳಿದರೆ ಸಾಕಷ್ಟು ಕನ್ನಡ ಭಾಗ ಅವರಲ್ಲಿಯೇ ಉಳಿಯುತ್ತದೆ. ಆಗ ಕರ್ನಾಟಕದ ಯಾವ ಅರಸು ಅಖಿಲ ಕರ್ನಾಟಕದ ದೊರೆಯಾಗಬೇಕು.

(1) ಏಕೀಕೃತ ಕರ್ನಾಟಕದಲ್ಲಿ ಬರಿಯ ಮೈಸೂರನ್ನಷ್ಟೇ ಸೇರಿಸಿಕೊಳ್ಳುವವರೇನು ನೀವು?

(2) ಹೈದ್ರಾಬಾದಿನ ಕನ್ನಡ ಭಾಗ, ಸೊಂಡೂರು, ಜತ್, ಜಮಖಂಡಿ, ಸಾಂಗ್ಲಿ ಮಿರ್ಜೆಗಳ ಭಾಗ ನಿಮಗೆ ಬೇಡವೇ?

(3) ಮೈಸೂರು ಅರಸರನ್ನು ತಂದೆ ಸಂಬಂಧವಿಲ್ಲದ ಬ್ರಿಟಿಷ್ ಕನ್ನಡಿಗರ ಮೇಲೆ ಹೊರಿಸಲು ಬಯಸುವಂತೆ–ಆ ಸಂಸ್ಥಾನಗಳ ಜನರ ಮೇಲೆ ಹೊರಿಸುತ್ತೀರಾ?

(4) ಅದಿಲ್ಲವಾದರೆ ಉಳಿದ ಆಶ್ರಿತ ರಾಜ್ಯದ ಕನ್ನಡಿಗರು ಬೇಕೆಂದಾದರ್ಲ್ಲಿ–ಆಗ ನಿಮ್ಮ ಅಧ್ಯಕ್ಷ ಪಟ್ಟಕ್ಕೆ ಆ ಎಲ್ಲ ದೇಶೀಯ ಅರಸು ತಕ್ಕವರೆಂದು ತಿಳಿಯಬೇಕು. ಈ ಅರಸುಗೊಂಚಲಗಳನ್ನು ಸರದಿಯಿಂದ ಕರ್ನಾಟಕದ ಗವರ್ನರ ಪದವಿಗೆ ಏರಿಸುವ ಪ್ರಸಂಗ ಬರಬಹುದು. ಆಗಲೂ ಕರ್ನಾಟಕದ ಅಧ್ಯಕ್ಷ ನಿಜಾಮರಾದರೆ ಮೈಸೂರಿನ ತಲೆಯ ಮೇಲೆ, ಮೈಸೂರಿನ ಅರಸ ಅಧ್ಯಕ್ಷರಾದಲ್ಲಿ ನಿಜಾಮರ ತಲೆಯ ಮೇಲಿನ ಅಧ್ಯಕ್ಷನಾಗುತ್ತಾರೆಂಬುದನ್ನು ಮರೆಯಬೇಡಿ.

(5) ಈ ಆಭಾಸ ಕಾರ್ಯರೂಪಕ್ಕೆ ಬರಲು ಶಕ್ಯವೇ? ಸಣ್ಣ ಸಣ್ಣ ಜಮಖಂಡಿ, ಜತ್ ದೊರೆಗಳನ್ನು ಪೆನಶನ್ ~~ಕೊಟ್ಟು ಕಳುಹಿಸಬೇಕೆನ್ನುತ್ತೀರಾ? ಹೀಗಿ~~ದ್ದರೆ ಅದೇ ತತ್ವವು ಹಿರಿಯ ಮಹಾನುಭಾವರುಗಳಿಗೂ ಬಾರದೆನ್ನುತ್ತೀರಾ?

ಇನ್ನೂ ಬ್ರಿಟಿಷ ಕರ್ನಾಟಕ ಏಕೀಕೃತವಾಗಿಲ್ಲ, ಮೈಸೂರಿನ ಜನತೆಯ ಸರಕಾರ ಹಸಿಯಾಗಿದೆ. ರಾಜ್ಯಾಂಗ ನಿರ್ಮಾಣಗೊಂಡಿಲ್ಲ. ಹುಟ್ಟಲಿರುವ ಕೂಸುಗಳ ಲಗ್ನಮಾಡುವ ನಂಟರು ಬೀಗರಂತೆ ಈ ಪ್ರಶ್ನೆಯನ್ನೂ ಈಗಲೇ ಎತ್ತಿಗೊಂಡು ಫಲವೇನು?

(3ನೇ ಪುಟ ನೋಡಿ)

THE

UNITED INDIA LIFE ASSURANCE

ESTD 1906 | CO., LTD. | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore.

[illegible] ಮನೆಗಳು

[illegible]

...ಯಾಜು. ಕಾಯುವವು ಕಣ್ಣಿಗೆ ಬೀಳ ಎಷ್ಟೆಷ್ಟೋ ಈ ಪ್ರವೃತ್ತಿಗಳು ಎಂತಹ [illegible] ಕ್ಷತ್ತುವಿದು. ಸದ್ಯ ಪ್ರಾಂತ ಸರಕಾರಗಳು 'ಕೇಂದ್ರದೊಡನೆ ಸಹಕರಿಸಿ ಹೊಸ ಹೊಸ ಗೃಹನಿರ್ಮಾಣ ಯೋಜನೆಗಳನ್ನು ಆದಷ್ಟು ಬೇಗ ಮುಂದೆ ಬರಬೇಕು. [illegible] ಜೀವನವು ನರಕ ಜೀವನ [illegible]

ಉತ್ಪಾದನೆ ಹೆಚ್ಚಿಸುವುದೆಂತು?

[illegible]

'ಸ್ವಾತಂತ್ರ್ಯ ಸಿಕ್ಕಿದ್ದರಿಂದ ಉತ್ಪಾದನೆಯನ್ನು ಸ್ವಲ್ಪ ದಿವಸದಿಂದಲೂ ಹೆಚ್ಚಿಸಿಕೊಳ್ಳುವುದು ಅತ್ಯವಶ್ಯವಾಗಿದೆ. ಮುಂಬಯಿ ಸರಕಾರದ ಕೈಗಾರಿಕಾ ಮಂತ್ರಿಗಳಾದ ಶ್ರೀ ನಂದಾರವರು ಈ ಸಂಬಂಧದಲ್ಲಿ ಒಂಭತ್ತು ಮುಖ್ಯ ಸಂಘ ಮಾತುಗಳನ್ನು ಹೇಳಿರುವರು. ಮುಂದಾಳುಗಳನ್ನು ಆರಿಸಿಕೊಳ್ಳುವಾಗ ಪೂರ್ಣ ವಿಚಾರ ಮಾಡಬೇಕು; ತಂಟೆಗಳನ್ನು ತೆಕ್ಕಿಸುವದರಿಂದ ದೂರ ಉಳಿಯಬೇಕು, ವಿಚಾರವಿನಿಮಯದಿಂದ ಕೆಲಸ ಬಗೆಹರಿಯುವಾಗ ಸಂಪಿನ ಮಾರ್ಗವನ್ನು ಹಿಡಿಯಬಾರದು, ಸರಕಾರದ ಸವಲತ್ತುಗಳನ್ನೆಲ್ಲ ಪೂರ್ಣ ಉಪಯೋಗಿಸಿಕೊಳ್ಳಬೇಕು, ಕೆಲಸ ತಪ್ಪಿಸಬಾರದು. ಕೆಲಸ ಮಾಡುವಾಗ ಅತ್ಯ ಪೂರ್ಣ ಗಮನ ಕೊಡಬೇಕು. [illegible] ಹಾಗು [illegible] ಮಾಡಬೇಕು, [illegible] ಉತ್ಪಾದನ ಮಂಡಲ [illegible] ಕಾರ್ಯ [illegible] ಮಂತ್ರಿಗಳ [illegible] ಸಾಮಗ್ರಿಗಳನ್ನು [illegible] ಮಾಡಿ

ದಂತಾಗುವುದು. ಉತ್ಪಾದನೆ ಹೆಚ್ಚಿಸುವ ಸೂಚನೆಗಳನ್ನು ಸಂಘಟಕರಿಗೆ ಉತ್ಪಾದನ ಸಮಿತಿಗಳಿಗೆ ತಿಳಿಸಬೇಕು. ಶ್ರೀ ನಂದಾರವರು ಮಾಡಿದ ಈ ಸೂಚನೆಗಳು ಮಹತ್ವದ್ದಾಗಿದ್ದು ಪ್ರತಿಯೊಬ್ಬ ಕೆಲಸಗಾರರು ಮತ್ತು ಕೆಲಸಗಾರರ ಸಂಘಗಳು ಅತ್ತ ಗಮನಿಸಿ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಒತ್ತಾಯ ಪೂರ್ವಕ ವಿನಂತಿಸುತ್ತೇವೆ.

ಶಿಕ್ಷಣದ ಬೆಲೆ

ಅಮೇರಿಕದ ಸುಪ್ರಸಿದ್ಧ ಬರಹಗಾರಳೂ ಶಿಕ್ಷಕಿಯೂ ಆದ ಲೌಲಾ ಗ್ರೇಸ್ ಅರ್ಡಮನ್ನಳು "ನಾನು ಶಿಕ್ಷಕಿಯಾಗಿಯೇ ಉಳಿಯುತ್ತೇನೆ" ಎಂಬ ಪ್ರಬಂಧದಲ್ಲಿ ಶಿಕ್ಷಣದಿಂದ ಶಿಕ್ಷಕರಿಗಾಗುವ ಮಾನಸಿಕ 'ಬೆಳವಣಿಗೆ' ಮತ್ತು ಸಹಾನುಭೂತಿಯ ಹೆಚ್ಚಳ ಇವುಗಳನ್ನು ಬಣ್ಣಿಸುತ್ತ 'ಶಿಕ್ಷಕರ ಸಂಬಳ ರಾಷ್ಟ್ರಕ್ಕೊಂದು ಅವಮಾನ' ಎಂದಿದ್ದಾರೆ ಇದರಿಂದ ಹಿಂದುಸ್ಥಾನದಲ್ಲಿ ಮಾತ್ರವೇ ಅಲ್ಲ ಜಗತ್ತಿನ ಅನೇಕ ರಾಜ್ಯಗಳಲ್ಲಿ ಶಿಕ್ಷಣದ ಬೆಲೆಯನ್ನು ಜನತೆ ಅರಿತುಕೊಳ್ಳದೆ ಶಿಕ್ಷಕರಿಗೆ ಜೀವನ ನಿರ್ವಹಣ ಮಾಡಲು ತಕ್ಕ ಆರ್ಥಿಕ ವ್ಯವಸ್ಥೆ ಮಾಡಿಕೊಡುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇದು ಭಾರತೀಯರಿಗೊಂದು ಪಾಠ. ಏಕೆಂದರೆ ಮೇಲಿನ ವಿಷಯ್ನ ಲೇಖಿಕೆ ಹೇಳುವಂತೆ ಸಾರ್ವಜನಿಕ ಶಾಲೆಯೇ ರಾಷ್ಟ್ರೀಯ ಜೀವನದ ನೆಲೆಗಟ್ಟು.

(೧ನೇ ಪುಟದಿಂದ)

ಅದರಿಂದಾಗುವ ಮುಖ್ಯ ಕೆಡುಕೆಂದರೆ ಉಳಿದ ಕನ್ನಡ ಭಾಗಗಳ ದೇಶೀಯ ಅರಸರ ಪ್ರಜೆಗಳನ್ನೂ ನೋಯಿಸಿ ಅವರನ್ನು ಏಕೀಕರಣದಿಂದ ದೂರ ಮಾಡುವುದು.

ಎರಡು ಬ್ರಿಟಿಷ ಕನ್ನಡ ಭಾಗವೊಂದೇ ಸ್ವತಂತ್ರ ಪ್ರಾಂತವಾಗಲಾರದು ಎಂಬ ಕೆಲವರ ಅನುಮಾನಕ್ಕೆ ಇದೊಂದು ಕಾರಣವನ್ನು ಒದಗಿಸಿ-ನಾಳೆಯು ಬ್ರಿಟಿಷ್ ಕರ್ನಾಟಕವನ್ನು ಮಹಾರಾಷ್ಟ್ರಕ್ಕೋ ಆಂಧ್ರಕ್ಕೋ ಸೇರಿಸುವಂತೆ ಮಾಡುವುದಕ್ಕೆ ಪ್ರೇರೇಪಿಸಿದಂತಾದೀತು.

ಶ್ರೀ ದಿವಾಕರರು, ನಿಜಲಿಂಗಪ್ಪ ಮೊದಲಾದ ಪ್ರಭೃತಿಗಳು ಕಾಂಗ್ರೆಸ್ಸಿನಂತಹ ಸಂಸ್ಥೆಯ ಗಣ್ಯ ಅಧಿಕಾರಿಗಳಾಗಿರುವಾಗ ಅದರ [illegible] ಅನುಮತಿಯಿಲ್ಲದೆ, ಈ [illegible] ಕೈಕೊಳ್ಳುವುದರಿಂದ ಜನತೆಗೆ, [illegible] ಅನುಮಾನ [illegible]

[illegible] ಅಭಿಮಾನಗಳು [illegible]

KANARA COMMERCIAL BANK LTD.

PUTTUR

Branch Vittal

All kinds of Banking Business transacted.

Current, Savings, Cumulative Deposits are accepted

Fixed Deposits for periods of 3 months and above up to [illegible] months are accepted

ಕೆನರಾ ಬ್ಯಾಂಕ್, ಲಿಮಿಟೆಡ್.

[illegible]

ESTD: 1906

CANARA BANK, LIMITED.

ತೆಂಗಿನ ಕೃಷಿಯ ಉತ್ತಮ ವಿಧಾನಗಳು

ಅನುಭವಸ್ಥ ಪ್ರಯೋಗಕರ ಸೂಚನೆಗಳು

ನಮ್ಮ ಜನಾಂಗ ಜೀವನದಲ್ಲಿ ತೆಂಗಿನ ಕಾಯಿಯು [illegible] ಅಷ್ಟಿಷ್ಟಲ್ಲ. [illegible] ತೆಂಗಿನ ಮರ ಕಲ್ಪವೃಕ್ಷವಾಗಿ [illegible]. ದಕ್ಷಿಣ ಕನ್ನಡ ಜಿಲ್ಲೆಯು ಸಮುದ್ರ ಕರಾವಳಿಗೆ [illegible] ವಿಪುಲ ತೆಂಗಿನ ತೋಟಗಳಿಂದ [illegible]. ಈ ಸಂದರ್ಭದಲ್ಲಿ ನಮ್ಮ ಕೃಷಿಗಾರರು ವಿಶ್ವಸನೀಯ ಸಣ್ಣ ಪುಟ್ಟ ತೋಟಗಳಿದ್ದವರು ಕೂಡ ತೆಂಗಿನ ಕೃಷಿಯ ವೈಜ್ಞಾನಿಕ ವಿಧಾನಗಳ [illegible] ಯುಕ್ತವೆನಿಸುತ್ತದೆ. ಶ್ರೀ ಕಲ್ಲಿಪೂರ ಸಂಜೀವ ರಾವ್ ಬಿ. ಎ., ಎಲ್ ಟಿ. ಎಂಬ ನಾಡುಸೇವಕರು ಈ ಕುರಿತಾದ ತನ್ನ ಸ್ವಾನುಭವವನ್ನು ಒಂದು ಲೇಖನದಲ್ಲಿ ನಿರೂಪಿಸಿರುವುದು ಗಮನೀಯವಾಗಿದೆ.

ತೆಂಗಿನ ಮರಗಳ ಭಾಗಗಳೆಲ್ಲ ಹಾಗೂ ಉತ್ಪತ್ತಿಗಳೆಲ್ಲ ಪ್ರತಿಯೊಂದನ್ನು ಉಪಯೋಗ ಮಾಡಿಕೊಳ್ಳಬಹುದೆಂದು ಎಲ್ಲರಿಗೂ ಗೊತ್ತಿದ್ದ ವಿಷಯ. ಇವನ್ನು ನಡುವಲ್ಲಿ ಸಾಕುವಲ್ಲಿ ಸಾಕಷ್ಟು ಲಕ್ಷ್ಯ ಪೂರೈಸದಿದ್ದರೆ ಇವುಗಳಿಂದ ನಾವು ಪಡೆಕೊಳ್ಳಬಹುದಾದ ಲಾಭವು ಸರಿಯಾದ ಪ್ರಮಾಣದಿಂದ ದೊರಕಲಿಕ್ಕಿಲ್ಲ.

ಉತ್ತಮ ಬೀಜಗಳನ್ನು ಆರಿಸುವುದರಲ್ಲೂ ಹಲವರು ಸಾಕಷ್ಟು ಗಮನಕೊಡುವುದಿಲ್ಲ. ತೆಂಗಿನ ಮರ 60ರಿಂದ 100 ವರ್ಷಗಳ ತನಕ ಬಾಳುತ್ತವೆ. ಆದ್ದರಿಂದ ಪ್ರಾರಂಭದಲ್ಲಿ ತೋಟಗಾರರು ಯಾವುದಾದರೂ ತಪ್ಪು ಮಾಡಿದರೆ ಅದರ ದುಷ್ಪರಿಣಾಮವನ್ನು 2 ಯಾ 3 ತಲಾಂತರಗಳವರೆಗೆ ಅನುಭವಿಸಬೇಕಾಗುತ್ತದೆ.

ತೆಂಗಿನ ಮರದ ಬೇರುಗಳು ತಮಗೆ ಬೇಕಾದ ಆಹಾರವನ್ನು ಹುಡುಕುತ್ತ ಬಹಳ ದೂರದ ತನಕ ಹರಿಯುತ್ತವೆ. ಈ ಕಾರಣದಿಂದ ಅವು ಮುಂದೆ ಮುಂದೆ ಹೋಗಲಿಕ್ಕೆ ಅನುಕೂಲವಾಗುವಂತೆ ನೆಲವನ್ನು ಅನುಕೂಲ ಮಾಡಿ ಕೊಡಬೇಕಾಗುತ್ತದೆ. ಆದುದರಿಂದ ಮರಳಿನ ದಿನ್ನೆಗಳು ತೆಂಗಿನ ತೋಟಗಳಿಗೆ ಉತ್ತಮ ಸ್ಥಳಗಳು. [illegible] ಕೊಚ್ಚಿನ್ ಪ್ರಾಂತ್ಯದಲ್ಲಿ ಮಾಡಿದ ಪ್ರಯೋಗಗಳಿಂದ ಕಪ್ಪಿನವುಳ್ಳ ಕೆಂಪು ಮಣ್ಣಿನ [illegible] ಸ್ಥಳಗಳು [illegible]. ತಗ್ಗು [illegible] ಸ್ಥಳಗಳಲ್ಲಿ ಬೆಳೆಸಲ್ಪಡುವ ಸಸಿಗಳು [illegible] ಬಾಳುತ್ತವೆ. [illegible] ರೋಗಗಳೂ [illegible] ಲುವುದಿಲ್ಲ. [illegible] ಕ್ಕವೆ. ಅವುಗಳಲ್ಲಿ ಕೆಲವು (Tall) [illegible] ಮರಗಳು ಫಲ [illegible] ಕೊಡುತ್ತವೆ.

ತೆಂಗಿನ ಜಾತಿಗಳಲ್ಲಿ [illegible] ಜಾತಿಗಳಿರುತ್ತವೆ. ಕೆಲವು [illegible] ವರ್ಷಗಳಲ್ಲಿ ಫಲ ಬಿಡುತ್ತವೆ. [illegible] ಕುಬ್ಜ [illegible] ತೆಂಗಿನ [illegible] ಗಳ ಬಾಧೆಗಳೂ [illegible] ಗಳ [illegible] ಬೆಳೆದ [illegible] ಕೊಡುತ್ತವೆ. [illegible]

ಆದರೆ [illegible] ಈ ಗಿಡಗಳಿಂದ [illegible] ಫಲ ಬರುವಂಥ ಗಿಡಗಳನ್ನು ಆರಿಸುವುದು

ಯೋಗ್ಯ. [illegible] ಯವುಗಳಿಗೆ ಬೇಗ ರೋಗ ತಗಲುವುದಿಲ್ಲ. ಇವುಗಳಲ್ಲಿ ಸುಮಾರು 25ರಿಂದ 35 ವರ್ಷಗಳ [illegible] ಅತಿ ಶ್ರೇಷ್ಠ.

ಕೆಲವು ತೆಂಗಿನ ಕಾಯಿಗಳು [illegible] ದಲ್ಲಿ ದುಂಡಗಾಗಿ, [illegible] ಗಳಲ್ಲಿ [illegible]

[illegible]

ಇನ್ಶೂರೆನ್ಸ್

ವಿಷಯದಲ್ಲಿ

ನ್ಯೂ ಇಂಡಿಯಾ

ನೆನಪಿರಲಿ

[illegible]

1946ರ [illegible]

(ಜೀವವಿಮೆ) [illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]

ಜೀವವಿಮೆ, ಬೆಂಕಿ, [illegible]

[illegible]

ನ್ಯೂ ಇಂಡಿಯಾ

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಹೆಡ್ ಆಫೀಸು: ಬೊಂಬಾಯಿ)

[illegible] 4 [illegible] 5, [illegible]

[illegible]

[illegible]

ಸಾಮಾಜಿಕ ವಾರ್ತಾವಿಭಾಗ

ಕಡಿಮೆ ಬೆಲೆಯ ಮನೆಗಳು

ಯುದ್ಧಗಳಿಂದ ಜನವಸತಿಯಲ್ಲಿ ವ್ಯತ್ಯಾಸ ಉಂಟಾಗುವದು ಸಹಜವಿದೆ. ಕೇಂದ್ರ ಸ್ಥಳಗಳಲ್ಲಿ ವಿಶೇಷ ಜನಸಂಖ್ಯೆ ಬೆಳೆಯುವುದು ಆಧುನಿಕ ನಾಗರಿಕತೆಯ ಒಂದು ರೋಗ. ಇಂದು ನಿರ್ವಾಸಿತರ ಮತ್ತು ನಿರಾಶ್ರಿತರ ಸಮಸ್ಯೆಯಿಂದ ಅನೇಕ ನಗರಗಳಲ್ಲಿ ಮನೆಮಠಗಳ ಅಭಾವವು ದುರ್ಧರವಾಗಿದೆ. ಭಾರತದಲ್ಲಿ ಮಾತ್ರವಲ್ಲ. ಇಡೀ ಜಗತ್ತಿನಲ್ಲೀ ಮನೆಗಳ ಕೊರತೆ ಅಸಾಧ್ಯವಾಗಿದೆ. ಇಲ್ಲಿಯ ಶ್ರೀಮಂತರಂತೆ ಅಮೇರಿಕದ ಶ್ರೀಮಂತರಾದರೂ ಹೆಚ್ಚು ಹೆಚ್ಚಾಗಿ ಮನೆಗಳನ್ನು ಕಟ್ಟುತ್ತಿಲ್ಲ. ಇದ್ದ ಮನೆಗಳಿಗೆ ಗಿರಾಕಿ ಹೆಚ್ಚಿದಾಗ ಬಾಡಿಗೆ ಏರಿಸಿ ಕುಬೇರರಾಗುವುದು ಮನೆ ಮಾಲಿಕರ ತಂತ್ರ. ಆದರೆ ಅಮೇರಿಕದಲ್ಲಿಂದು ಕೆಲವು ಕಂಪನಿಗಳು ವಿಶೇಷ ಬಂಡವಾಳ ಹಾಕಿ ದೊಡ್ಡ ದೊಡ್ಡ ಕಾರಖಾನೆ ಮೂಲಕ ಮನೆ ಕಟ್ಟುವುದಕ್ಕೆ ಅನುಕೂಲವಾದ ಸಾಮುಗ್ರಿಗಳನ್ನು ಲಕ್ಷಗಟ್ಟಲಿಯಿಂದ ತಯಾರಿಸ ತೊಡಗಿದ್ದಾರೆ.

ಈ ವರ್ಷ ಅಮೇರಿಕದಲ್ಲಿ ಲೆವಿಟ್ ಅಂಡ್ ಸನ್ಸ್ ಕಂಪನಿಯು 6990 ಮನೆಗಳನ್ನು ಕಟ್ಟಲಿದೆ ಆ ಒಂದೊಂದು ಮನೆಯಲ್ಲಿ ನಾಲ್ಕು ಕೋಣೆಗಳಿರುತ್ತವೆ ಅಕ್ಕಸಾಲಿಗನ ಅಂಗಡಿಯಲ್ಲಿ ಅಚ್ಚು ಹೊಯ್ದು ತಯಾರಿಸುವ ಒಡವೆಗಳಂತೆ ಈ ಮನೆಗಳು ಅಳತೆ ಆಕಾರಗಳಲ್ಲಿ ಒಂದೇ ಸಮವಾಗಿರುತ್ತವೆ ಸಾವಿರಾರು ಮನೆಗಳನ್ನು ಕಟ್ಟುವ ಈ ಯೋಜನೆಯಿಂದ ಕಡಿಮೆ ಖರ್ಚಿನಿಂದ ಕೆಲಸ ಮುಗಿಯುತ್ತದೆ. ಈ ಪ್ರಕಾರ ಕಟ್ಟಿದ ಮನೆ ಒಂದನ್ನು 60 ಡಾಲರಿಗೆ ಬಾಡಿಗೆಗೆ ಕೊಡಲಾಗುತ್ತದೆ ಈ 6990 ಮನೆಗಳಿಗೆ ಆಗಲೇ 10,000 ಗಿರಾಕಿಗಳು ಕಾದಿದ್ದಾರೆ ಕಂಪನಿಯು ಮನೆಕಟ್ಟಲು ಅಗತ್ಯವಾದ ಸಾಮಾನುಗಳನ್ನು ಒಂದೇ ಅಳತೆಯಲ್ಲಿ ತಯಾರಿಸಿ ಪ್ರತಿಯೊಂದು ನೆಲಗಟ್ಟಿನ ಎದುರು ಸುರಿದು ಬಿಡುತ್ತದೆ ಅದನ್ನು ಕೆಲಸಗಾರರು ಹಲಿಗೆಯನ್ನು ಕೂಡಿಸಿ 1 ಪೆಟ್ಟಿಗೆ ತಯಾರಿ ಮಾಡುವಂತೆ ಜೋಡಿಸಿ ಅತ್ಯಲ್ಪ ವೇಳೆಯಲ್ಲಿ ಮನೆಗಳನ್ನು ಸಿದ್ಧಪಡಿಸುತ್ತಾರೆ ಆ ಮನೆಗಳಲ್ಲಿ ಗೂಡು ಕಪಾಟು, ಅಡಿಗೆ ಮನೆ, ಬಚ್ಚಲುಮನೆ, ಅಗ್ನಿಷ್ಟಿಕೆ ಮೊದಲಾದ ಎಲ್ಲ ವ್ಯವಸ್ಥೆಗಳನ್ನೂ ಮಾಡಲಾಗುತ್ತದೆ

ಈ ಮೇರೆಗೆ ಅಮೇರಿಕವಿಂದು ಗೃಹಾಭಾವವನ್ನು ನೀಗಿಸಲು ಅವಿಶ್ರಾಂತವಾಗಿ ದುಡಿಯುತ್ತಿದೆ ಮತ್ತು ಕಟ್ಟಡದ ಖರ್ಚನ್ನು ಕಡಿಮೆಮಾಡಿ ತನ್ಮೂಲಕ ಇನ್ನೂ ಕಡಿಮೆ ಬಾಡಿಗೆಗೆ ಮನೆಗಳು ದೊರೆವಂತೆ ಮಾಡುವ ಪ್ರಯತ್ನ ಸಾಗಿದೆ! ಭೂಮಿತಾಯಿಯಾ ತೊಡೆಯ ಮೇಲೆ ಆಗಸದ ಒಟ್ಟೆಯನ್ನು ಹೊದೆದು ಮಲಗುವ ಭಾರತದ ನಿರಾಶ್ರಿತರ ಮೂಲನಿವಾಸ ಇಲ್ಲದಂತಾಗಬೇಕಾದರೆ ಅಮೇರಿಕದಂತೆ ಹಿಂದುಸ್ಥಾನ ಸರಕಾರವಾದರೂ ತನ್ನ ತಜ್ಞರ ಸಹಾಯದಿಂದ ಸುಲಭ ದರದಲ್ಲಿ ಪರಿಮಿತಾನುಕೂಲದ ಮನೆಗಳನ್ನು ಜನವಸತಿ ಹೆಚ್ಚಿರುವ ಸ್ಥಳಗಳಲ್ಲಿ ಕಟ್ಟಿಸಲು ತಕ್ಕ ಯೋಜನೆಗಳನ್ನು ಹೂಡಬೇಕಾಗಿದೆ ಇಲ್ಲದೆ ಹೋದರೆ ಕುಬೇರ ಕುಮಾರರಾದ ಬಂಡವಾಳಶಹರು ಸ್ವಯಂಬ್ರಹ್ಮರಾಗಿ ಅನಾನುಕೂಲ ಸಂಪನ್ನವಾದ ಮನೆಗಳಿಗೆ ಆನೆ ಮೇಲೆ ಅಂಬಾರಿ ಹಾಕಿ ಕವಚೆ ಚಿಮ್ಮಿದಷ್ಟು ಎತ್ತರದ ಧನರಾಶಿಯನ್ನು ಬಾಡಿಗೆಗಾಗಿ ಬೇಡಿಯಾರು. ಕಾಯ್ದೆದರು ಕಣ್ಣಿಗೆ ಬೂದಿ ಎರಚಬಲ್ಲ ಈ ಬೃಹಸ್ಪತಿಗಳು, ಎಂತಹ ಸರಕಾರಕ್ಕಾದರೂ ನೀರುಕುಡಿಸಿ ತಮ್ಮ ಲಾಭವನ್ನು ಶುಕ್ಲಪಕ್ಷದ ಚಂದ್ರನಂತೆ ಹೆಚ್ಚಿಸಬಲ್ಲರು. ನಮ್ಮ ಪ್ರಾಂತ ಸರಕಾರಗಳು ಕೇಂದ್ರದೊಡನೆ ಸಹಕರಿಸಿ ಹೊರ ಹೊಸ ಗೃಹನಿರ್ಮಾಣ ಯೋಜನೆಗಳನ್ನು ಅಮಲಿನಲ್ಲಿ ತರಲು ಮುಂದೆ ಬರಬೇಕು ಇಲ್ಲದಿದ್ದರೆ ನಿವಾಸಿಗಳ ಧನ ಸೂರೆಯಾಗಿ ಲಾಭಬಡಕತನ ಹೆಚ್ಚಾಗಿ, ಅನಾರೋಗ್ಯ ಬೆಳೆದು ನಗರ ಜೀವನವು ನರಕ ಜೀವನದಿಂದ ತೀರ ಭಿನ್ನವೆನಿಸಲಾರದು

ಉತ್ಪಾದನೆ ಹೆಚ್ಚಿಸುವುದೆಂತು?

ಪ್ರಚಂಡ ನಿಸರ್ಗ ಸಂಪತ್ತು, ಜನಬಲವಿರುವ ಹಿಂದುಸ್ಥಾನ ಇಷ್ಟು ದಿನಗಳವರೆಗೆ ಪರಕೀಯ ಆಳಿಕೆಯಲ್ಲಿ ಸಿಕ್ಕುಬಿದ್ದದ್ದರಿಂದ ದೇಶದಲ್ಲಿ ಉತ್ಪಾದನೆ ಹೆಚ್ಚದೆ ಅನೇಕತನ ಮಾಡಿ ಕೆಲಸ ಕಡಿಮೆ ಮಾಡುವದು ವಿಷಯಗಳಲ್ಲಿ ಅದು ಪರದೇಶಗಳನ್ನೆ ಅವಲಂಬಿಸುವ ಪ್ರಸಂಗವಿದ್ದಿತು ಅದರೀಗ ಸ್ವಾತಂತ್ರ್ಯ ಸಿಕ್ಕಿದ್ದರಿಂದ ಉತ್ಪಾದನೆಯನ್ನು ಸರ್ವ ವಿಧದಿಂದಲೂ ಹೆಚ್ಚಿಸಿಕೊಳ್ಳುವುದು ಅತ್ಯಾವಶ್ಯವಾಗಿದೆ. ಮುಂಬಯಿ ಸರಕಾರದ ಕೂಲಿಕಾರ ಮಂತ್ರಿಗಳಾದ ಶ್ರೀ ನಂದಾರವರು ಈ ಸಂಬಂಧದಲ್ಲಿ ಒಂಭತ್ತು ಮುತ್ತಿನಂಥ ಮಾತುಗಳನ್ನು ಹೇಳಿರುವರು ಮುಂದಾಳುಗಳನ್ನು ಆರಿಸಿಕೊಳ್ಳುವಾಗ ಪೂರ್ಣ ವಿಚಾರ ಮಾಡಬೇಕು ತಂಟೆಗಳನ್ನು ಹೆಚ್ಚಿಸುವವರಿಂದ ದೂರ ಉಳಿಯಬೇಕು, ವಿಚಾರವಿನಿಮಯದಿಂದ ಕೆಲಸ ಬಗೆಹರಿಯುವಾಗ ಸಂಪಿನ ಮಾತನಾಡಬಾರದು, ಸರಕಾರದ ಸವಲತ್ತುಗಳನ್ನೆಲ್ಲ ಪೂರ್ಣ ಉಪಯೋಗಿಸಿಕೊಳ್ಳಬೇಕು, ಕೆಲಸ ತಪ್ಪಿಸಬಾರದು ಕೆಲಸ ಮಾಡುವಾಗ ಅತ್ತ ಪೂರ್ಣ ಗಮನ ಕೊಡಬೇಕು, ವೈಗಳ್ಳಿ ಪಾಪ, ಪ್ರತಿಯೊಬ್ಬನು ತನ್ನ ಶಕ್ತಿಯಿದ್ದಷ್ಟು ಹಾಗು ತೃಪ್ತಿಕರ ಕೆಲಸ ಮಾಡಬೇಕು, ಸಂಯುಕ್ತ ಉತ್ಪಾದನ ಮಂಡಲ ನಿಯಮಿಸಿ ಅದರ ಕಾರ್ಯ ಯಶಸ್ವಿಯಾಗುವಂತೆ ನೋಡಿಕೊಳ್ಳಬೇಕು ಯಂತ್ರಗಳನ್ನು ಮುರಿದರೆ ಕಚ್ಚಾ ಸಾಮುಗ್ರಿಗಳನ್ನು ಹಾಳು ಮಾಡಿದರೆ ದೇಶಕ್ಕೆ ಅಹಿತ ಮಾಡಿದಂತಾಗುವುದು. ಉತ್ಪಾದನೆ ಹೆಚ್ಚಿಸುವ ಸೂಚನೆಗಳನ್ನು ಸಂಘಕ್ಕಾಗಲಿ ಉತ್ಪಾದನ ಸಮಿತಿಗಾಗಲಿ ತಿಳಿಸಬೇಕು. ಶ್ರೀ ನಂದಾರವರು ಮಾಡಿದ ಈ ಸೂಚನೆಗಳು ಮಹತ್ವದ್ದಾಗಿದ್ದು ಪ್ರತಿಯೊಬ್ಬ ಕೆಲಸಗಾರ ಮತ್ತು ಕೆಲಸಗಾರ ಸಂಘಗಳು ಅತ್ತ ಗಮನಿಸಿ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಒತ್ತಾಯ ಪೂರ್ವಕ ಬಿನ್ನವಿಸುತ್ತೇವೆ

ಶಿಕ್ಷಣದ ಬೆಲೆ

ಅಮೇರಿಕದ ಸುಪ್ರಸಿದ್ಧ ಕಾದಂಬರಿಕಾರಳೂ ಶಿಕ್ಷಕಿಯೂ ಆದ ಲೌಲಾ ಗ್ರೇಸ್ ಅರ್ಡ್ಮನ್ನಳು "ನಾನು ಶಿಕ್ಷಕಿಯಾಗಿಯೇ ಉಳಿಯುತ್ತೇನೆ" ಎಂಬ ಪ್ರಬಂಧದಲ್ಲಿ ಶಿಕ್ಷಣದಿಂದ ಶಿಕ್ಷಕರಿಗಾಗುವ ಮಾನಸಿಕ ಬೆಳವಣಿಗೆ ಮತ್ತು ಸಹಾನುಭೂತಿಯ ಹೆಚ್ಚಳ ಇವುಗಳನ್ನು ಬಣ್ಣಿಸುತ್ತ 'ಶಿಕ್ಷಕರ ಸಂಬಳ ರಾಷ್ಟ್ರಕ್ಕೊಂದು ಅವಮಾನ' ಎಂದಿದ್ದಾರೆ ಇದರಿಂದ ಹಿಂದುಸ್ಥಾನದಲ್ಲಿ ಮಾತ್ರವೇ ಅಲ್ಲ ಜಗತ್ತಿನ ಅನೇಕ ರಾಜ್ಯಗಳಲ್ಲಿ ಶಿಕ್ಷಣದ ಬೆಲೆಯನ್ನು ಜನತೆ ಅರಿತುಕೊಳ್ಳದೆ, ಶಿಕ್ಷಕರಿಗೆ ಜೀವನ ನಿರ್ವಹಣ ಮಾಡಲು ತಕ್ಕ ಆರ್ಥಿಕ ವ್ಯವಸ್ಥೆ ಮಾಡಿಕೊಡುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ ಇದು ಭಾರತೀಯರಿಗೊಂದು ಪಾಠ ಏಕೆಂದರೆ ಮೇಲಿನ ಮಾನ್ಯ ಲೇಖಿಕೆ ಹೇಳುವಂತೆ ಸಾರ್ವಜನಿಕ ಶಾಲೆಯೇ ರಾಷ್ಟ್ರೀಯ ಜೀವನದ ನೆಲೆಗಟ್ಟು

(೧ನೇ ಪುಟದಿಂದ)

ಅದ...ದಾಗುವ ಮುಖ್ಯ ಕೆಡುಕೆಂದರೆ ಉಳಿದ ಕನ್ನಡ ಭಾಗಗಳ ದೇಶೀಯ ಅರಸರ, ಪ್ರಜೆಗಳನ್ನೂ ನೋಯಿಸಿ ಅವರನ್ನು ಏಕೀಕರಣದಿಂದ ದೂರ ಮಾಡುವುದು

ಎರಿಯು ಬ್ರಿಟಿಷ ಕನ್ನಡ ಭಾಗವೊಂದೇ ಸ್ವತಂತ್ರ ಪ್ರಾಂತವಾಗಲಾರದು ಎಂಬ ಹಂವರ ಅನುಮಾನಕ್ಕೆ ಇದೊಂದು ಕಾರಣವನ್ನು ಒದಗಿಸಿ–ನಾಳೆಯ ಬ್ರಿಟಿಷ್ ಕರ್ಣಾಟಕವನ್ನು ಮಹಾರಾಷ್ಟ್ರಕ್ಕೋ ಆಂಧ್ರಕ್ಕೋ ತಗಲಿಸುವಂತೆ ಮಾಡುವುದಕ್ಕೆ ಪ್ರೇರೇಪಿಸಿದಂತಾದೀತು.

ಶ್ರೀ ದಿವಾಕರರೂ ನಿಜಲಿಂಗಪ್ಪ ಮೊದಲಾದ ಪ್ರಭೃತಿಗಳು ಕಾಂಗ್ರೆಸ್ಸಿನಂತಹ ಸಂಸ್ಥೆಯ ಗಣ್ಯ ಅಧಿಕಾರಿಗಳಾಗಿರುವಾಗ ಅದರ ನಿರ್ದಿಷ್ಟ ಅನುಮತಿಯಿಲ್ಲದೆ, ಈ ಪ್ರಚಾರ ತೊಡಗುವುದರಿಂದ ಜನತೆಗೆ, ಕಾಂಗ್ರೆಸ ನಿಷ್ಠೆಯುಳ್ಳವರಿಗೆ ಅನುಮಾನ ಬರುವಂತಾಗುತ್ತದೆ

ಅವರಿಗೆ ಅಂತಹ ಆಸೆ ಅಭಿಮಾನಗಳು ಮೈಸೂರ ಅರಸರ ವಿಷಯದಲ್ಲಿರುವುದಾದರೆ–ನಾವಿನಲ್ಲಿ ಈ ಚಳವಳ ಎಬ್ಬಿಸುವ ಮೊದಲು, ರಾಜ್ಯಾಂಗ ನಿರ್ಮಿಸುವ ಘಟನಾ ಸಮಿತಿಯಲ್ಲೇನೆ–ದೇಶೀಯ ಅರಸರಿಗೆ ಬ್ರಿಟಿಷ ಭಾಗಗಳನ್ನು ದಾನಮಾಡುವ ಪ್ರಸ್ತಾಪ ಮಾಡುವುದೊಳ್ಳೆಯದು

ಅಖಂಡ ಬ್ರಿಟಿಷ್ ಕರ್ಣಾಟಕದ ಜನತೆಯಲ್ಲಿ ಅಲ್ಲಲ್ಲಿ ತೀವ್ರವಾಗಿ ಇಂಥ ಚಳವಳವನ್ನು ವಿರೋಧಿಸದೆ ಹೋದರೆ ಮುಂದೆ ತುಂಬ ಹಾನಿಯಾದೀತು. ಅಖಿಲ ಕರ್ಣಾಟಕಕ್ಕೆ ಮೈಸೂರು ಸೇರಿಕೊಳ್ಳುವುದು ಎಲ್ಲರಿಗೂ ಸಂತೋಷವೇ, ಆದರೆ, ಆ ಅನುಕೂಲತೆ ಅವರಿಂದ ಕಲ್ಪಿತವಾಗಬೇಕು ಕೇಂದ್ರಕ್ಕೆ ಅವರು ನಮ್ಮಂತೆ ಎಲ್ಲ ವಿಧದಿಂದಲೂ ಅನುವರ್ತಿಗಳಾಗಬೇಕು, ಹೊರತು ಕರ್ಣಾಟಕವೆಲ್ಲ–ಮೈಸೂರರಸರ ಕಾಲ್ಪನಿಕ ದೈವತ್ವಕ್ಕೆ ತಲೆವಾಗುವದಲ್ಲ

ಆ ದೈವತ್ವವನ್ನು ನಿಜಾಮರಿಗೊಪ್ಪಿಸಲು ಕನ್ನಡಿಗರು ಸಿದ್ಧರಿದ್ದಾರೆಯೇ?

KANARA COMMERCIAL BANK LTD.
PUTTUR
H O Puttur | Estd 1920 | Branch Vittal
All kinds of Banking Business transacted
Deposits Current, Savings Cumulative Deposits are accepted
Fixed Deposits for periods of 3 months and above up to 24 months are accepted.

ಕೆನರಾ ಬ್ಯಾಂಕ್, ಲಿಮಿಟೆಡ್.
(ಸ್ಥಾಪಿತ: ೧೯೦೬)
ದೇಶೋನ್ನತಿಯನ್ನು ಬಯಸುವುದು ಪ್ರತಿಯೊರ್ವ ವ್ಯಕ್ತಿಯ ಕರ್ತವ್ಯವು ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು, ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು, ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು
ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹುರುಪಿನಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು
ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ
ESTD: 1906
CANARA BANK, LIMITED.

ತೆಂಗಿನ ಕೃಷಿಯ ಉತ್ತಮ ವಿಧಾನಗಳು

ಅನುಭವಸ್ಥ ಪ್ರಯೋಗಕರ ಸೂಚನೆಗಳು

ನಮ್ಮ ಜನಾಂಗ ಜೀವನದಲ್ಲಿ ತೆಂಗಿನ ಕಾಯಿಯ ಪ್ರಾಶಸ್ತ್ಯ ಅಷ್ಟಿಷ್ಟಲ್ಲ; ಪಶು ವರ್ಗದಲ್ಲಿ ದನವು ಕಾಮಧೇನುವೆಂದೆನಿಸಿ ಪೂಜಾರ್ಹವಾಗಿಪ್ಪರೆ ತೆಂಗಿನ ಮರ ಕಲ್ಪವೃಕ್ಷವಾಗಿ ಪೂಜನೀಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯು ಸಮುದ್ರ ಕರಾವಳಿಗೆ ಸಮೀಪವಾಗಿರುವುದರಿಂದ ವಿಪುಲ ತೆಂಗಿನ ತೋಟಗಳಿಂದ ಮೆರೆಯುತ್ತದೆ ಈ ಸಂದರ್ಭದಲ್ಲಿ ನಮ್ಮ ಕೃಷಿಗಾರರು ಮಾತ್ರವಲ್ಲ ಸಣ್ಣ ಪುಟ್ಟ ತೋಟಗಳಿದ್ದವರೂ ಕೂಡ ತೆಂಗಿನ ಕೃಷಿಯ ವೈಜ್ಞಾನಿಕ ವಿಧಾನಗಳ ನ್ನರಿತುಕೊಳ್ಳುವುದು ಯುಕ್ತವೆನಿಸುತ್ತದೆ ಶ್ರೀ ಕಲ್ಲಾಪೂರ ಸಂಜೀವ ರಾವ್ ಬಿ ಎ ಎಲ್ ಎಲ್ ಬಿ ಎಂಬ ಮಹನೀಯರು ಈ ಕುರಿತಾದ ತಮ್ಮ ಸ್ವಾನುಭವವನ್ನು ಒಂದು ಲೇಖದಲ್ಲಿ ನಿರೂಪಿಸಿರುವುದು ಗಮನೀಯವಾಗಿದೆ

ತೆಂಗಿನ ಮರಗಳ ಭಾಗಗಳಲ್ಲಿ ಹಾಗೂ ಉತ್ಪತ್ತಿಯಲ್ಲಿ ಪ್ರತಿಯೊಂದನ್ನು ಉಪಯೋಗ ಮಾಡಿಕೊಳ್ಳಬಹುದೆಂದು ಎಲ್ಲರಿಗೂ ಗೊತ್ತಿದ್ದ ಮಾತು ಇವನ್ನು ನಡುವಲ್ಲಿ ಸಾಕುವಲ್ಲಿ ಸಾಕಷ್ಟು ಲಕ್ಷ್ಯ ಪೂರೈಸದಿದ್ದರೆ ಇವುಗಳಿಂದ ನಾವು ಪಡಕೊಳ್ಳಬಹುದಾದ ಲಾಭವು ಸರಿಯಾದ ಪ್ರಮಾಣದಿಂದ ದೊರಕಲಿಕ್ಕಿಲ್ಲ

ಉತ್ತಮ ಬೀಜಗಳನ್ನು ಆರಿಸುವುದರಲ್ಲೂ ಹಲವರು ಸಾಕಷ್ಟು ಗಮನಕೊಡುವುದಿಲ್ಲ ತೆಂಗಿನ ಮರ 60ರಿಂದ 100 ವರ್ಷಗಳ ತನಕ ಬಾಳುತ್ತವೆ ಆದ್ದರಿಂದ ಪ್ರಾರಂಭದಲ್ಲಿ ತೋಟಗಾರರು ಯಾವುದಾದರೂ ತಪ್ಪು ಮಾಡಿದರೆ ಅದರ ದುಷ್ಪರಿಣಾಮವನ್ನು 2 ಯಾ 3 ತಲಾಂತರಗಳ ವರೆಗೆ ಅನುಭವಿಸಬೇಕಾಗುತ್ತದೆ

ತೆಂಗಿನ ಮರದ ಬೇರುಗಳು ತಮಗೆ ಬೇಕಾದ ಆಹಾರವನ್ನು ಹುಡುಕುತ್ತ ಬಹಳ ದೂರದ ತನಕ ಹರಿಯುತ್ತವೆ ಈ ಕಾರಣದಿಂದ ಅವು ಮುಂದೆ ಮುಂದೆ ಹೋಗಲನುಕೂಲವಾಗುವಂತೆ ನೆಲವನ್ನು ಅನುಕೂಲ ಮಾಡಿ ಕೊಡಬೇಕಾಗುತ್ತದೆ ಆದುದರಿಂದ ಮರಳಿನ ದಿಣ್ಣೆಗಳು ತೆಂಗಿನ ತೋಟಗಳಿಗೆ ಉತ್ತಮ ಸ್ಥಳಗಳು ಇತ್ತೀಚಿಗೆ ಕೊಚ್ಚಿನ್ ಪ್ರಾಂತ್ಯದಲ್ಲಿ ಮಾಡಿದ ಪ್ರಯೋಗಗಳಿಂದ ಕಬ್ಬಿಣವುಳ್ಳ ಕೆಂಪು ಮಣ್ಣಿನ ಇಳಿಜಾರಿನ ಸ್ಥಳಗಳು ಸಹ ಶ್ರೇಷ್ಠವೆಂದು ತಿಳಿದು ಬಂದಿದೆ. ಇಂತಹ ಸ್ಥಳಗಳಲ್ಲಿ ಬೆಳೆಸಲ್ಪಡುವ ಗಿಡಗಳು ದೀರ್ಘ ಕಾಲ ಬಾಳುತ್ತವೆ ಇವಕ್ಕೆ ರೋಗಗಳೂ ತಗಲುವುದಿಲ್ಲ ಅವುಗಳಿಗಾಗುವ ಕಾಯಿಗಳೂ ಸವಿಯಾಗಿಯೂ ದೊಡ್ಡದಾಗಿಯೂ ಆಗುತ್ತವೆ ಅವುಗಳಲ್ಲಿ ಕೊಬ್ಬು (fat)ಗಳೂ ಹೆಚ್ಚಾಗಿರುತ್ತವೆ ಆದರೆ ಇಂತಹ ಸ್ಥಳದ ಮರಗಳು ಫಲ ಬಿಡಲು ಹೆಚ್ಚು ಸಮಯ ತೆಗೆಯುತ್ತವೆ

ತೆಂಗಿನ ಮರಗಳಲ್ಲಿ ಹಲವು ವಿಧದವುಗಳಿರುತ್ತವೆ, ಕೆಲವು ನೆಟ್ಟ 3-4 ವರ್ಷಗಳಲ್ಲಿ ಫಲ ಬಿಡುತ್ತವೆ, ಆದರೆ ಇವು ಅಲ್ಪಾಯುಷಿಗಳಾಗಿದ್ದು 30 ವರ್ಷಕ್ಕೂ ಮಿಕ್ಕಿ ಬಾಳಲಾರವು ಇವು ಅತಿ ಗಿಡ್ಡವೂ ಆಗಿರುತ್ತವೆ ಇವುಗಳಿಗೆ ತಟಿತರದ ರೋಗಗಳ ಬಾಧೆಗಳೂ ತಗಲುವುದುಂಟು ಇವುಗಳ ಕಾಯಿಗಳಲ್ಲಿ ಎಣ್ಣೆ ಅಂಶವೂ ಕಡಿಮೆ ಹೆಚ್ಚಿನ ಮರಗಳು ಅತೀ ಸಣ್ಣ ಕಾಯಿ ಕೊಡುತ್ತವೆ ಬೇಗನೆ ಫಲ ಬರುವುದರಿಂದ ಅನೇಕರು ಇವನ್ನೇ ನೆಡುತ್ತಾರೆ

ಆದರೆ ವಿಚಾರ ಮಾಡಿ ನೋಡಿದರೆ ಈ ಗಿಡಗಳಿಂತ ಸ್ವಲ್ಪ ಸಮಯದ ಮೇಲೆ ಫಲ ಬರುವಂಥ ಗಿಡಗಳನ್ನು ಆರಿಸುವುದು ಯೋಗ್ಯ. ಅತೀ ಎತ್ತರ ಬೆಳೆಯುವ ಜಾತಿಯವುಗಳಿಗೆ ಬೇಗ ರೋಗ ತಗಲುವುದಿಲ್ಲ ಇವುಗಳಲ್ಲಿ ಸುಮಾರು 3ರಿಂದ 35 ವರ್ಷಗಳ ಪ್ರಾಯದ ಮರಗಳ ಬೀಜವು ಅತೀ ಶ್ರೇಷ್ಠ

ಕೆಲವು ತೆಂಗಿನ ಕಾಯಿಗಳು ಆ ಕಾಲದಲ್ಲಿ ದುಂಡಗಾಗಿ, ಇನ್ನೂ ಕೆಲವು ಉದ್ದವಾಗಿರುತ್ತವೆ ಇವುಗಳಲ್ಲಿ ದುಂಡಗಾಗಿರುವವುಗಳಲ್ಲಿ ಕೊಬ್ಬರಿ ಹೆಚ್ಚಾಗಿ ದೊರೆಯುತ್ತದೆ ಆದ್ದರಿಂದ ಇಂತಹ ಬೀಜಗಳನ್ನೇ ವಿಶೇಷವಾಗಿ ಆರಿಸತಕ್ಕದ್ದು

ಮಾಘ, ಫಾಲ್ಗುಣ, ಚೈತ್ರ ಈ ತಿಂಗಳುಗಳಲ್ಲಿ ದೊರೆಯುವ ತೆಂಗಿನ ಕಾಯಿಗಳು ಬಹು ಬಲಿಷ್ಟವಾಗಿರುತ್ತವೆ ಇವುಗಳಲ್ಲಿ ನೀರೂ, ಕೊಬ್ಬೂ ಹೆಚ್ಚಾಗಿರುತ್ತವೆ ಇಂತಹ ಕಾಯಿಗಳು ಸರಿಯಾಗಿ ಬಲಿಯುವ ವರೆಗೆ ಗಿಡಗಳ ಮೇಲೆ ಇರಗೊಟ್ಟು ಅವುಗಳೊಳಗಿನ ನೀರು ಒಣಗುವ ಪೂರ್ವದಲ್ಲಿ ಅವುಗಳಿಗೆ ಪೆಟ್ಟಾಗದ ರೀತಿಯಿಂದ ಇಡೀ ಗೊಂಚಲನ್ನೇ ಹಗ್ಗದ ಆಧಾರದಿಂದ ಕೆಳಗಿಳಿಸಿ ಕಾಯಿಗಳನ್ನು ಬಿತ್ತುವ ವರೆಗೆ ಅತಿ ತಂಪಾದ ಸ್ಥಳಗಳಲ್ಲಿ ಮುಖವನ್ನು ಮೇಲೆ ಮಾಡಿ ಸಂಗ್ರಹಿಸಿಡತಕ್ಕದ್ದು. ಆ ಮೇಲೆ ಅವುಗಳನ್ನು ಬಿತ್ತಲು ಯೋಗ್ಯವಾದ ಸ್ಥಳವನ್ನು ಹುಡುಕಿ ಅದರಲ್ಲಿಯ ಮಣ್ಣನ್ನು ಕೆದರಿ ಆ ಮಣ್ಣಿನಲ್ಲಿ ಒಣ ಎಲೆ ಮುಂತಾದವುಗಳನ್ನು ಬೆರಸಿ ಅದನ್ನು ಸುಡತಕ್ಕದ್ದು ಹೀಗೆ ಮಾಡುವುದರಿಂದ ಆ ಮಣ್ಣಿನೊಳಗಿನ ಕ್ರಿಮಿಗಳು ಹಾಗೂ ರೋಗವನ್ನುಂಟು ಮಾಡುವಂಥ ಇತರ ಸಾಧನಗಳು ನಾಶವಾಗುತ್ತವೆ. ಇದರಲ್ಲಿ ಉಪ್ಪು, ಉಸುಬು, ಹಾಗು ಬೇವಿನ ಹಿಂಡಿಗಳನ್ನು ಕಲ ಪ್ರಮಾಣದಲ್ಲಿ ಕೂಡಿಸಿದರೆ ವರಲೆಗಳು ಬಿಳಿ ಇರುವೆಗಳು (white ants) ಹತ್ತುವುದಿಲ್ಲ

ಬಿತ್ತಲಿಕ್ಕೆ 15 ದಿನಗಳ ಮೊದಲು ಈ ಮೊದಲು ಹೇಳಿದಂತೆ ಸಂಗ್ರಹಿಸಿದಾದ ಬೀಜದ ತೆಂಗಿನ ಕಾಯಿಗಳನ್ನು ಒಂದು ಬಾವಿ ಇಲ್ಲವೆ ಕೆರೆಯಲ್ಲಿ ಇಡತಕ್ಕದ್ದು ಆ ಮೇಲೆ ಅವುಗಳನ್ನು ಹೊರ ತೆಗೆದು ಬಿತ್ತಿಗೆಗೆ ತಯಾರಿಸಿದ ಸ್ಥಳದಲ್ಲಿ ಅವೆಲ್ಲವುಗಳನ್ನು ಒಂದೊಂದು ಅಡಿ (foot) ಅಂತರದಲ್ಲಿ ಮುಕ್ಕಾಲು ಮಟ್ಟಿಗೆ ಮಣ್ಣಿನಲ್ಲಿ ಹೂಳಿಡತಕ್ಕದ್ದು ಕೆಲವರು ಮುಖವನ್ನು ಮೇಲಿರುವಂತೆ ಬಿತ್ತುತ್ತಾರೆ ಆದರೆ ನೀರಿನಲ್ಲಿ ಹಾಕಿದಾಗ ಅವು ಎಷ್ಟು ಓರೆಯಾಗಿ ತೇಲುತ್ತವೋ, ಅಷ್ಟೇ ಓರೆಯಾಗಿ ಬಿತ್ತುವುದು ಯೋಗ್ಯವೆಂದು ಪ್ರಯೋಗಗಳಿಂದ ತಿಳಿದುಬಂದಿದೆ. ಹೀಗೆ ಮಾಡಿದರೆ ಕೇವಲ 2ನೇ ತಿಂಗಳುಗಳಲ್ಲಿ ಮೊಳಕೆಗಳು ಸಂಪೂರ್ಣ ಎದ್ದು ಬರುತ್ತವೆ. ಆದಾಗಿ ಒಂದು ವರ್ಷದ ವರೆಗೂ ಅದೇ ಸ್ಥಳದಲ್ಲಿ ಇರಗೊಡತಕ್ಕದ್ದಲ್ಲ ಮತ್ತೆ ಅವುಗಳನ್ನು ನೆಡುವ ಹವ್ಯಾಸವನ್ನೂ ಮಾಡತಕ್ಕದ್ದಲ್ಲ ಅಲ್ಲಿಯ ವರೆಗೂ 2 ದಿನಗಳಿಗೊಂದಾವರ್ತಿಯಾದರೂ ನೀರನ್ನೂ ಅವುಗಳಿಗೆ ಹಾಕತಕ್ಕದ್ದು ಬೇಸಿಗೆಯಲ್ಲಿ ಸಸಿಗಳು ಸುಟ್ಟುಹೋಗದ ರೀತಿಯಿಂದ ತೆಂಗಿನ ಹೆಡೆಗಳಿಂದ ಸ್ವಲ್ಪ ನೆರಳನ್ನು ಕಲ್ಪಿಸಿಕೊಡತಕ್ಕದ್ದು ಹೀಗೆ ಮಾಡುವುದರಿಂದಲೇ ಸಸಿಗಳಿಗೆ ಚೈತನ್ಯವುಂಟಾಗುತ್ತದೆ ಈ ಅವಧಿಯಲ್ಲಿ ನೆಡಲು ಯೋಗ್ಯ ಮತ್ತು ಅಯೋಗ್ಯವಾದವುಗಳು ಯಾವುವೆಂದು ತಿಳಿದುಬರುತ್ತದೆ ಸರಿಯಾದ ಪೋಷಣೆ ಸಾಕಿದರೆ ಶೇಕಡಾ 99ರಷ್ಟು ಸರಿಯಾಗಿ ಎದ್ದುಬರುತ್ತವೆ ಉಳಿದವನ್ನು ನೆಡುವುದು ಯೋಗ್ಯವಲ್ಲ

ಕೆಲವರು 2—3 ವರ್ಷದ ವರೆಗೂ ಸಸಿಗಳನ್ನು ಇರಗೊಟ್ಟು ಆ ಮೇಲೆ ನೆಡುತ್ತಾರೆ ಇದು ಸರಿಯಲ್ಲವೆಂಬುದು ಅನುಭವದಿಂದ ಕಂಡುಬಂದಿದೆ ಒಂದುವರೆ ವರ್ಷ ಪ್ರಾಯದ ಸಸಿಗಳನ್ನು ನೆಡುವುದರಿಂದ ಹೆಚ್ಚು ಪ್ರಯೋಜನ ಬರುತ್ತದೆ 3 ಅಡಿ ಉದ್ದ, 3 ಅಡಿ ಅಗಲ, 3 ಅಡಿ ಆಳದ ಹೊಂಡಗಳನ್ನೂ ತೆಗೆದು ಅದರಲ್ಲಿ ಸಸಿಗಳನ್ನು ನೆಡುವ ಕ್ರಮವು ಸರ್ವಸಾಮಾನ್ಯ ಎಲ್ಲಾ ಕಡೆಗಳಲ್ಲಿ ಅನುಸರಿಸಲ್ಪಡುತ್ತದೆ ಎತ್ತರ ಸ್ಥಳದಲ್ಲಿ ಈ ಕ್ರಮ ಸರಿ ಆದರೆ ತಗ್ಗಿನಲ್ಲಿ ನೀರು ನಿಲ್ಲುವ ಸಂಭವವಿರುವುದರಿಂದ ಆಳ ಹೊಂಡ ಅನಾವಶ್ಯಕ ಗಿಡಗಳು ಕೊಳೆತುಹೋಗುವ ಸಂಭವವಿದೆ ಇಂತಹ ಸ್ಥಳಗಳಲ್ಲಿ ಮಣ್ಣಾಷ್ಟು ಗಪ್ಪು ಕಟ್ಟಿ ನೆಲದ ಪಾತಳಿಯ ಮೇಲ್ಭಾಗದಲ್ಲಿಯೇ ನಡುವುದು ವಾಡಿಕೆಯಾಗಿದೆ ಎರಡು ಗಿಡಗಳೊಳಗಿನ ಅಂತರವು 20 ಫೂಟಿನಷ್ಟಾದರೂ ಇರಬೇಕು ಕೊಚ್ಚಿನ್ ಪ್ರಾಂತ್ಯದಲ್ಲಿ ಪ್ರಯೋಗಕ್ಕಾಗಿ ಎಕ್ರೆಗೆ 60—75, ಮತ್ತು 90 ಪ್ರಮಾಣದಲ್ಲಿ ಸಸಿ ನೆಟ್ಟರು ಇವುಗಳಲ್ಲಿ ಎಕ್ರೆಗೆ 60ರಂತೆ ನೆಟ್ಟ ತೋಟಗಳಲ್ಲಿಯೇ ಅತಿ ಹೆಚ್ಚಾದ ಉತ್ಪನ್ನವು ದೊರಕಿತು. ಎಕ್ರೆಗೆ 56ರಂತೆ ನೆಡುವುದರಿಂದ ಇನ್ನೂ ಹೆಚ್ಚಿನ ಉತ್ಪನ್ನ ದೊರಕುತ್ತದೆಂದು ಕಂಡುಬಂದಿದೆ. ಈ ಪ್ರಕಾರವಾಗಿ ನೆಟ್ಟ ಗಿಡಗಳು ಒಳ್ಳೆ ಬಲಿಷ್ಟವಾಗಿ ಬೆಳೆಯುತ್ತವೆ.

~~ಸಸಿಗಳನ್ನು ನೆಡಲು ತಯಾರಿಸಿದ~~ ಹೊಂಡಗಳಲ್ಲಿ ಅವುಗಳನ್ನು ಇಟ್ಟು ಅದೇ ನೆಲದ ಮೇಲ್ಭಾಗದ ಪುಡಿಯಾದ ಮಣ್ಣನ್ನು ಬೂದಿಯನ್ನು ಮತ್ತು ಕೆಲವು ಪ್ರಮಾಣದಿಂದ ಉಪ್ಪನ್ನೂ ಮಿಶ್ರಮಾಡಿ ನೆಡುವುದು ಉತ್ತಮ. ಆ ಮೇಲೆ ಗಿಡಗಳು 2 ವರ್ಷಗಳ ಪ್ರಾಯಗಳಾಗುವ ವರೆಗೆ ಬೇಸಿಗೆಯಲ್ಲಿ ದಿನ ಬಿಟ್ಟು ದಿನ ಹಾಗೂ ಆ ಮೇಲೆ 3 ವರ್ಷಗಳ ವರೆಗೆ ವಾರಕ್ಕೆ 2 ಸಲ ನೀರನ್ನು ಹಾಕುವುದರಿಂದ ಉತ್ಪತ್ತಿಯು ಹೆಚ್ಚಾಗಿ ದೊರೆಯುತ್ತದೆ!

ಇನ್ಶ್ಯುರೆನ್ಸ್

ವಿಷಯವಿದ್ದರೆ

ನ್ಯೂ ಇಂಡಿಯಾ

ನೆನಪಿರಲಿ

ಪ್ರಮುಖ ಹಿಂದೀ ವಿಮಾ ಸಂಸ್ಥೆ

1946ರ ಪ್ರಗತಿಯ ಕೆಲವು ಮುಖ್ಯ ವಿಷಯಗಳು

(ಜೀವವಿಮೆ) ಹೊಸ ವಹಿವಾಟು	ರೂ. 12	ಕೋಟಿಗಳಿಗೆ ಮಿಕ್ಕಿದೆ
ಊರ್ಜಿತದಲ್ಲಿರುವ ಪೋಲಿಸಿಗಳು	ರೂ. 38	,, ,,
ಜುಮ್ಲಾ ಸೊತ್ತು	ರೂ. 10	,, ,,
ಸ್ಥಾಪಿತವಾದಂದಿನಿಂದ ತೆತ್ತ ಕ್ಲೈಮುಗಳು	ರೂ. 13	,, ,,

ಜೀವವಿಮೆ, ಬೆಂಕಿ, ನೌಕೆ, ಮೋಟಾರು ವಾಹನ, ವಾಯುಯಾನ, ಕೆಲಸಗಾರರ ವಿಷಯ ಪರಿಹಾರ, ಪ್ರಾಮಾಣಿಕತೆಯ ಗ್ಯಾರಂಟಿ ಮೊದಲಾದ ಎಲ್ಲಾ ತರದ ವಿಮೆಗೆ ಸಂಬಂಧಪಟ್ಟ ವಹಿವಾಟುಗಳನ್ನು ನಡೆಸುತ್ತದೆ

ನ್ಯೂ ಇಂಡಿಯಾ
ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್.
(ಹೆಡ್ ಆಫೀಸು: ಬೊಂಬಾಯಿ)
ಮದ್ರಾಸು ಬ್ರಾಂಚ್: 4 ಮತ್ತು 5, ಫಸ್ಟ್ ಲ್ಯಾನ್ ಬೀಚ್.
ಸಬ್ ಆಫೀಸು: ಹಂಪನಕಟ್ಟಾ, ಮಂಗಳೂರು.

ಸ್ವದೇಶಾಭಿಮಾನಿ

ತಾರೀಕು 28-11-1947

ಹಿಂದೀ ರಾಷ್ಟ್ರದ ಧ್ಯೇಯ

ಹಿಂದೀ ರಾಷ್ಟ್ರದ ಭಾವೀ ಸ್ವರೂಪದ ಐವರೇಖೆಯನ್ನು ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಚೆನ್ನಾಗಿ ಚಿತ್ರಿಸಿರುತ್ತದೆ. ಈ ಕುರಿತು ಮಾಡಿರುವ ನಿರ್ಣಯವನ್ನು ಪ್ರಜೆಗಳೆಲ್ಲರೂ ಬಾರಿಬಾರಿಗೆ ಓದಿ ಮನನಮಾಡಿ ಆ ಮುಂದಿನ ಚಿತ್ರವನ್ನು ಕಲ್ಪಿಸಿಕೊಳ್ಳುವುದು ಈ ಧ್ಯೇಯ ಸಾಧನೆಯ ಮೊದಲ ಮೆಟ್ಟಲು.

ಬ್ರಿಟಿಷರ ಆಳ್ವಿಕೆಯಿಂದ ಈಗ ಬಿಡುಗಡೆ ಹೊಂದಿದೆವೆಂಬುದರಿಂದ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯವೇನೊ ಬಂದಿದೆ. ಆದರೆ ಇಷ್ಟು ಮಾತ್ರಕ್ಕೆ ನಿಜವಾದ ಸ್ವರಾಜ್ಯ ಬಂದಂತಾಗಲಿಲ್ಲ. ಪ್ರಜೆಗಳು ಬರೇ ರಾಜಕೀಯ ಸ್ವಾತಂತ್ರ ಸಿಕ್ಕಿದೊಡನೆ ನೆಮ್ಮದಿಯಾಗಿ ಸುಖದಲ್ಲಿ ಬಾಳುವರೆಂದು ತಿಳಿಯುವುದು ಸರಿಯಲ್ಲ. ಸಿಕ್ಕಿದ ರಾಜಕೀಯ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡು ಮುಂದಿನ ಸ್ವರಾಜ್ಯವನ್ನು ಕಟ್ಟಬೇಕು. ಮುಂದಿನ ಸ್ವರಾಜ್ಯವು ಹೇಗಿರಬೇಕು? ಈ ಪ್ರಶ್ನೆಯನ್ನು ಮೊದಲು ತಿಳಿದರೆ ಅದನ್ನು ಸ್ಥಾಪಿಸಿಕೊಳ್ಳುವ ಯತ್ನವನ್ನು ಕೈಕೊಳ್ಳಲು ಸಾಧ್ಯವಾಗುವುದು.

ರಾಷ್ಟ್ರಕ್ಕೆ ಸೇರಿದ ಪ್ರತಿಯೊಬ್ಬ ಪ್ರಜೆಗೂ ರಾಷ್ಟ್ರದ ಆಡಳಿತದಲ್ಲಿ ಪರಿಣಾಮಕಾರಿಯಾದ ಭಾಗವಿರಬೇಕು. ಪ್ರಜಾಸತ್ತಾತ್ಮಕ ರಾಜ್ಯವೆಂದು ಹೆಸರಿಗೆ ಮಾತ್ರವಿದ್ದರೆ ಫಲವೇನು? ಪ್ರಾಯ ಬಂದವರಿಗೆ ಎಲ್ಲರಿಗೆ ಮತದಾನದ ಹಕ್ಕು ಕೊಟ್ಟರೆ ತೀರಿತೆ? ಶ್ರೀಮಂತರು ಅಥವಾ ವಿಶೇಷ ಕೌಶಲಗಳಿದ್ದವರು ನಾನಾವಿಧದಿಂದ ಆ ಮತಗಳನ್ನು ಸೆಳೆದುಕೊಳ್ಳುತ್ತಾರೆ. ಮತ್ತೆ ಮತದಾರರನ್ನು ಕೇಳುವವರ್‍ಯಾರು? ಇನ್ನೊಮ್ಮೆ ಚುನಾವಣೆ ಬರುವಾಗ ಮಾತ್ರ ಅವರ ನೆನಪಾಗುವುದು ನಮ್ಮ ಮುಂದಾಳುಗಳಿಗೆ. ಇಂಥ ಮತದಾನದ ಹಕ್ಕು ಮಾತ್ರವೆ ನಿಜವಾದ ಸ್ವರಾಜ್ಯವೆಂದರೆ?

ಸ್ವರಾಜ್ಯವೆಂದರೆ ಸ್ವಂತ ರಾಜ್ಯವೆಂದೇ ಅರ್ಥವಾಗುತ್ತದೆ. ಪ್ರತಿಯೊಂದು ಗ್ರಾಮದಲ್ಲಿ ಸ್ವರಾಜ್ಯ ಸ್ಥಾಪನೆಯಾದರೆ ಪ್ರತಿಯೊಂದು ಮನೆಯಲ್ಲಿ ಸ್ವರಾಜ್ಯ ಸ್ಥಾಪನೆಯಾದರೆ ಮಾತ್ರ ನಿಜವಾದ ಸ್ವರಾಜ್ಯವು ದೇಶದಲ್ಲಿ ನೆಲೆನಿಲ್ಲುವುದು. ಈ ಬಗೆಯ ಸ್ವರಾಜ್ಯ ಸ್ಥಾಪಿಸಿಕೊಂಡವರು ಮಾತ್ರ ರಾಷ್ಟ್ರದ ಆಡಳಿತದಲ್ಲಿ ಪರಿಣಾಮಕಾರಿಯಾದ ಭಾಗವಹಿಸಬಲ್ಲರು.

ಆದುದರಿಂದಲೇ ಮುಂದಿನ ಸರಕಾರವು ಕೇವಲ ಕೇಂದ್ರೀಕೃತ ಅಧಿಕಾರದಿಂದಲೇ ನಡೆಯಬಾರದು. ಅಧಿಕಾರದ ವಿಕೇಂದ್ರೀಕರಣವಾಗಬೇಕು. ಗ್ರಾಮದ ಆಡಳಿತೆ ಬಲುಮಟ್ಟಿಗೆ ಗ್ರಾಮಸ್ಥರ ಕೈಯಲ್ಲಿಯೇ ಉಳಿಯಬೇಕು. ಅಂದರೆ ಬಲವಾದ ಕೇಂದ್ರ ಸರಕಾರ ನಮಗೆ ಬೇಡವೆಂದಲ್ಲ. ದೇಶದ ರಕ್ಷಣೆಗೆ ಬಲಿಷ್ಠ ಕೇಂದ್ರ ಸರಕಾರವು ಅಗತ್ಯವಿರುತ್ತದೆ. ಗ್ರಾಮ, ಜಿಲ್ಲೆ, ಪ್ರಾಂತ್ಯ ಹಾಗೂ ಕೇಂದ್ರ ಸರಕಾರಗಳ ಪರಸ್ಪರ ಸಂಬಂಧವನ್ನೂ ಅವುಗಳ ಕೆಲಸಗಳನ್ನೂ ಸರಿಯಾದ ರೀತಿಯಲ್ಲಿ ನಿರ್ದೇಶಿಸಿ ಸ್ಥಳೀಕ ಸ್ವಾತಂತ್ರ್ಯವು ನಿಜವಾಗುವಂತೆ ಮೇಲಿನ ಸರಕಾರಗಳ ಅಧಿಕಾರ ರೂಪಿಸುತ್ತ ಹೋಗುವುದು ಅತ್ಯಾವಶ್ಯಕ ವಿಚಾರವಿರುತ್ತದೆ.

ಪ್ರತಿಯೊಬ್ಬ ಪ್ರಜೆಗೆ ನಿಜವಾದ ಸಾಮಾಜಿಕ ಹಾಗೂ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಮೇಲೆ ಸೂಚಿಸಿದ ಏರ್ಪಾಡು ಸಾಧ್ಯವಾಗುವಂತಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಗ್ರಾಮದ ಆಡಳಿತೆ ಗ್ರಾಮಸ್ಥರಿಗೇನೆ ಬಿಟ್ಟುಕೊಟ್ಟರೆ ಹೇಗೆ ನಡೆದೀತೆಂದು ಊಹಿಸಲು ಕಷ್ಟವಿಲ್ಲ.

ಸಾಮಾಜಿಕ ಸಮಾನತೆ ಸಾಧಿಸುವುದು ಅತ್ಯಗತ್ಯ. ನಮ್ಮ ಸಮಾಜದಲ್ಲಿ ಮೇಲು ಕೀಳೆಂಬ ಭಾವನೆ ಸಂಪೂರ್ಣ ಅಳಿಸಿಹೋಗಬೇಕು. ಪ್ರಜೆಗಳೆಲ್ಲರೂ ಸಮಾನರೆಂಬ ಭಾವ ಸ್ಥಿರವಾಗಿ ನೆಲಸಬೇಕು. ಕಡಮೆ ಸಂಖ್ಯಾಕರೆನ್ನಿಸುವವರಿಗೆ ಎಂದಿಗೂ ಅನ್ಯಾಯವಾಗುವಂತಿಲ್ಲವೆಂಬ ವಿಶ್ವಾಸ ಚಿರಸ್ಥಾಯಿಯಾಗಬೇಕು.

ಇದೆಲ್ಲದ್ದಕ್ಕೆ ಆರ್ಥಿಕ ಸಮಾನತೆಯೇ ಮೂಲ ಸಾಧನವೆಂದರೆ ಹೆಚ್ಚಲ್ಲ. ಸಮಾಜದಲ್ಲಿಯ ಭೇದಭಾವಗಳು, ರಾಜಕೀಯ ಮತದಾನದ ದುರುಪಯೋಗ ಇವೆಲ್ಲದಕ್ಕೆ ಆರ್ಥಿಕ ವಿಷಮತೆಯೇ ನಿಜವಾದ ಕಾರಣವಿರುತ್ತದೆ.

ಆರ್ಥಿಕ ಸಮಾನತೆಯನ್ನು ಹೇಗೆ ಸಾಧಿಸಬೇಕೆಂಬುದನ್ನು ರಾಷ್ಟ್ರಸಭೆಯ ನಿರ್ಣಯವು ಸ್ಪಷ್ಟಗೊಳಿಸುತ್ತದೆ. ಪ್ರಾದೇಶಿಕ ಹಾಗೂ ರಾಷ್ಟ್ರದ ಆರ್ಥಿಕ ಸ್ವಾವಲಂಬನವನ್ನೇ ಸಾಧ್ಯವಿದ್ದ ಮಟ್ಟಿಗೆ ಸಾಧಿಸಬೇಕೆಂದು ಸೂಚಿಸಲಾಗಿದೆ. ಅವಶ್ಯಕ ಮಾಲುಗಳ ಮಟ್ಟಿಗೆ ಪ್ರತಿ ದೇಶವು, ಪ್ರತಿ ಗ್ರಾಮವು, ಸಾಧ್ಯವಿದ್ದ ಮಟ್ಟಿಗೆ ಸ್ವಾವಲಂಬಿಯಾದರೆ ಮಾತ್ರ ಅದು ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಬಲ್ಲುದು.

ಸ್ವಭಾವತಃ ದೊಡ್ಡ ಪ್ರಮಾಣದಲ್ಲಿ ನಡೆಸಬೇಕಾದ ಕೈಗಾರಿಕೆಗಳನ್ನು ಸರಕಾರವೇ ನಡೆಸಬೇಕೆಂದು ಹೇಳಲಾಗಿದೆ. ಭೂಮಿಯೆಲ್ಲವೂ ಸರಕಾರಕ್ಕೆ ಸೇರಬೇಕೆಂದು ಹೇಳಲಾಗಿದೆ. ದೊಡ್ಡ ಕೈಗಾರಿಕೆಗಳ ಆಡಳಿತದಲ್ಲಿ ಕೆಲಸಗಾರರೂ ಸಹಭಾಗಿಗಳಾಗುವ ಏರ್ಪಾಡು ಬೇಕೆಂದಿದ್ದಾರೆ. ಪೇಟೆ ಹಾಗೂ ಹಳ್ಳಿಗಳ ಅಭಿವೃದ್ಧಿಯನ್ನು ಪರಸ್ಪರ ವಿರೋಧ ಬಾರದಂತೆ ಸಾಧಿಸಬೇಕೆಂದು ಹೇಳಲಾಗಿದೆ. ಆರ್ಥಿಕ ವ್ಯವಸ್ಥೆಯ ಕೇಂದ್ರೀಕರಣವು ಭಂಡವಲಶಾಹಿಯ ಮೂಲ. ಆ ಬಗೆಯ ಏರ್ಪಾಡಿನಿಂದ ಶ್ರೀಮಂತರು ಶ್ರೀಮಂತರಾಗುತ್ತ, ಬಡವರು ಬಡವರಾಗುತ್ತ ಹೋಗುವರು. ಇದನ್ನು ತಡೆಗಟ್ಟಲು ಇಂಥ ಕೇಂದ್ರೀಕೃತವಾಗಿಯೇ ನಡೆಯತಕ್ಕ ದೊಡ್ಡ ಕೈಗಾರಿಕೆಗಳನ್ನು ಸರಕಾರವೇ ನಡೆಸಬೇಕೆಂದು ಹೇಳಲು ಕಾರಣ.

ಟೀಕೆ-ಟಿಪ್ಪಣಿಗಳು

ಸೆಣಬಿನ ಮೇಲೆ ಪಾಕಿಸ್ಥಾನದ ತೆರಿಗೆ

ಗೋಣಿ ಚೀಲಗಳನ್ನು ಮಾಡುವ ಸೆಣಬಿನಾರು ಬಲು ಮಟ್ಟಿಗೆ ಪೂರ್ವ ಬಂಗಾಳದಲ್ಲಿ ಅಂದರೆ ಪಾಕಿಸ್ಥಾನದ ಪ್ರದೇಶದಲ್ಲಿ ಬೆಳೆಯುವುದು. ಅಲ್ಲಿಂದದು ಹಿಂದುಸ್ಥಾನಕ್ಕೆ ಬಂದು ಕಲ್ಕತ್ತೆ ಮೊದಲಾದ ಬಂದರುಗಳ ಮೂಲಕ ನಾನಾ ದೇಶಗಳಿಗೆ ರಫ್ತಾಗುವುದು. ಈಗ ಈ ನಾರು ಪಾಕಿಸ್ಥಾನದ ಗಡಿಯಿಂದ ಹೊರಡುವಾಗ ಅದಕ್ಕೆ ಒಂದು ಸುಂಕ ವಸೂಲು ಮಾಡುವ ಏರ್ಪಾಡನ್ನು ಪಾಕಿಸ್ಥಾನ ಸರಕಾರದವರು ಮಾಡಿರುತ್ತಾರೆ.

ದೇಶದಲ್ಲಿ ಎರಡು ರಾಜ್ಯಗಳ ಸ್ಥಾಪನೆಯಾದ ಅಗೋಸ್ತು ತಾರೀಕು 15ರಿಂದ ಈ ಸರಕಾರೀ ವರ್ಷದ ಆಖೈರು ತನಕ ಅಂದರೆ ಬರುವ ಮಾರ್ಚಿ ತಾರೀಕು 31ರವರೆಗೆ ಎರಡು ರಾಜ್ಯಗಳೊಳಗಿನ ವ್ಯಾಪಾರ ವಹಿವಾಟುಗಳಿಗೆ ಇತ್ತಂಡದವರೂ ಯಾವ ತೆರಿಗೆಯನ್ನು ಹೊರಿಸಲಾಗದೆಂದು ಇತ್ತಂಡದ ಸರಕಾರಗಳೊಳಗೆ ಒಪ್ಪಂದವಾಗಿತ್ತು.

ಎಲ್ಲ ಮಾಲುಗಳನ್ನೂ ಇದೇ ರೀತಿ ತಯಾರಿಸಿದರೆ ಸ್ಥಳೀಕ ಸ್ವಾವಲಂಬನ ಸ್ವಾತಂತ್ರ್ಯಗಳಿಗೆ ಭಂಗಬರುವುದು ಖಂಡಿತ. ಆಹುದರಿಂದ ಜೀವನದ ಆವಶ್ಯಕ ಮಾಲುಗಳನ್ನು ವಿಕೇಂದ್ರೀಕೃತವಾಗಿಯೇ ಸಿದ್ಧಗೊಳಿಸಿ ಉಪಯೋಗಿಸಬೇಕೆಂದು ಹೇಳಲಾಗಿದೆ.

ನಮ್ಮ ಸಂಪತ್ತು ಬೆಳೆಯಬೇಕು. ಆದರೆ ಅದು ಕೆಲವರ ಕೈಯನ್ನು ಮಾತ್ರ ಸೇರಬಾರದು. ಇಷ್ಟೇ ಇದೆಲ್ಲರ ಅರ್ಥವಿರುತ್ತದೆ. ಇಂಥ ರೀತಿಯಲ್ಲಿ ಆರ್ಥಿಕ ವ್ಯವಸ್ಥೆಯಾದರೆ ಮಾತ್ರ ನಿಜವಾದ ಸಾಮಾಜಿಕ ಹಾಗೂ ರಾಜಕೀಯ ಸಮಾನತೆ ಸಾಧ್ಯವಾಗುವುದು.

ಈ ಬಗೆಯ ಏರ್ಪಾಡುಗಳಿಂದ ರಾಷ್ಟ್ರದ ಬಲವು ಕುಗ್ಗದೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ಭಂಗ ಬಾರದೆ ಮುಂದಿನ ಜೀವನವು ಸುಗಮವಾಗಿ ಸಾಗುವುದು ಸಾಧ್ಯವಿರುತ್ತದೆ.

ಮುಂದಿನ ನಮ್ಮ ರಾಷ್ಟ್ರವು ಅಮೇರಿಕ ಮೊದಲಾದ ಭಂಡವಲಶಾಹೀ ರಾಷ್ಟ್ರಗಳ ಮಾರ್ಗವನ್ನು ಅನುಸರಿಸದೇನೇ ಸಂಪತ್ಸಮೃದ್ಧವಾಗಲು ಬಯಸುವುದು. ರಷ್ಯಾ ಮೊದಲಾದ ಸರ್ವಾಧಿಕಾರ ರಾಷ್ಟ್ರಗಳಂತೆ ವ್ಯಕ್ತಿ ಸ್ವಾತಂತ್ರ್ಯವನ್ನು ಹೋಗಲಾಡಿಸದೇನೆ ಪ್ರಜೆಗಳೊಳಗೆ ಸಮಾನತೆಯನ್ನು ಸಾಧಿಸಲು ಬಯಸುವುದು. ಈ ಭಾವಗಳನ್ನು ರಾಷ್ಟ್ರಸಭೆಯ ನಿರ್ಣಯವು ಸ್ಪಷ್ಟವಾಗಿ ಹೇಳಿರುತ್ತದೆ.

ಈ ಚಿತ್ರದಲ್ಲಿ ಕಲ್ಪಿಸಿರುವಂಥ ಸ್ವರಾಜ್ಯವನ್ನು ಇಲ್ಲಿ ಸ್ಥಾಪಿಸಿ ಯಶಸ್ವಿಯಾದರೆ ನಮ್ಮ ರಾಷ್ಟ್ರವು ಜಗತ್ತಿನಲ್ಲಿ ಹೊಸತೊಂದು ಪದ್ಧತಿಯ ರಾಷ್ಟ್ರವಾಗುವುದು. ಇದರಿಂದ ಇತರರೂ ಪಾಠ ಕಲಿಯುವಂತಾಗುವುದು.

ಈ ಧ್ಯೇಯವನ್ನು ಸಾಧಿಸುವುದೇ ಮುಂದೆ ಕಾಂಗ್ರೆಸ್ ಸಂಸ್ಥೆಯ ಉದ್ದೇಶವೆಂದು ಕಾಂಗ್ರೆಸ್ ಕಮಿಟಿಯು ನಿರ್ಧರಿಸಿಯದೆ. ಇದನ್ನು ಸಾಧಿಸಬಯಸುವವರು ಕಾಂಗ್ರೆಸಿಗೆ ಸೇರಿ ಆ ಸಂಸ್ಥೆಯನ್ನು ಮುಂದರಿಸಿ ತನ್ಮೂಲಕ ಈ ಮಹಾ ಕಾರ್ಯವನ್ನು ಸಾಧಿಸಬೇಕು.

ಆದರೆ ಈ ಒಪ್ಪಂದವನ್ನು ಪಾಕಿಸ್ಥಾನವು ಈಗ ಮುರಿದು ಈ ರೀತಿ ಹೊಸ ತೆರಿಗೆಯೊಂದನ್ನು ಹೊರಿಸಿರುತ್ತದೆ. ಈ ಕುರಿತು ತನ್ನ ನ್ಯಾಯವನ್ನು ಸಾಧಿಸಿ ಒಂದು ಹೇಳಿಕೆಯನ್ನು ಪ್ರಕಟಿಸಿರುತ್ತದೆ. ಇದಕ್ಕೆ ಹಿಂದೀ ಸರಕಾರವು ಪ್ರತ್ಯುತ್ತರವಿತ್ತು ನಾವೂ ಇದೇ ರೀತಿ ತೆರಿಗೆಗಳನ್ನು ಹೊರಿಸುವ ಯೋಚನೆ ಮಾಡುವುದಾಗಿ ಪ್ರಕಟ ಪಡಿಸಿರುತ್ತದೆ.

ಮೊದಲು ಪಂಜಾಬದಲ್ಲಿ ಆ ಮೇಲೆ ಜುನಾಗಡ ಕಾಶ್ಮೀರಗಳಲ್ಲಿ ಪಾಕಿಸ್ಥಾನ ಮತ್ತು ಹಿಂದೂಸ್ಥಾನದ ಜನರು ಪರಸ್ಪರ ಹೊಡೆದು ಕೊಂಡರು. ಈಗ ಎರಡು ಸರಕಾರಗಳೊಳಗೆ ಆರ್ಥಿಕ ಯುದ್ಧಕ್ಕೂ ಅರಂಭವಾಗುತ್ತಿದೆಯೆ? ನೆರೆ ಹೊರೆಯ ಈ ರಾಷ್ಟ್ರಗಳ ಒಳಗೆ ಈ ಬಗೆಯ ತಿಕ್ಕಾಟ ಶ್ರೇಯಸ್ಕರವಲ್ಲ. ಆದರೆ ಮಾಡುವುದೇನು? ಪಾಕಿಸ್ಥಾನದ ಸ್ವೇಚ್ಛಾಚಾರವನ್ನು ಸಹಿಸಿಕೊಂಡಿದ್ದರೆ ಅವರ ಉಪಟಳ ಹೆಚ್ಚು ಲಕ್ಷಣಗಳೇ ಕಂಡು ಬರುವುದರಿಂದ ಇಂಥ ಕೃತ್ಯಗಳನ್ನು ಎದುರಿಸದೆ ಹಿಂದೀ ಸರಕಾರಕ್ಕೆ ನಿಸ್ಕೃತಿ ಇಲ್ಲವೆಂಬುದನ್ನು ಎಲ್ಲರೂ ಒಪ್ಪಬೇಕು.

ಪೆಲೆಸ್ತಾ್ಯನು ವಿಭಜನೆ

ಪೆಲೆಸ್ತಾ್ಯನು ಅರಬರ ದೇಶ. ಮೊದಲಿನ ಮಹಾಯುದ್ಧದ ಬಳಿಕ ಲೀಗ್ ಆಫ್ ನೇಶನ್ಸಿನವರು ಇದನ್ನು ಬ್ರಿಟಿಷರ ಮೆಂಡೇಟ್ ಪ್ರದೇಶವಾಗಿ ಏರ್ಪಡಿಸಿ ಇಲ್ಲಿ ಯೆಹೂದಿಯರಿಗೂ ನಿವಾಸಸ್ಥಾನ ಕಲ್ಪಿಸಿಕೊಡಬೇಕೆಂದು ಏರ್ಪಡಿಸಿದರು. ಅಂದಿನಿಂದ ಇದು ವರೆಗೆ ಅಲ್ಲಿ ಅನೇಕ ಯೆಹೂದಿಯರು ಬಂದು ನೆಲೆನಿಂತಿದ್ದಾರೆ. ಆಡಳಿತೆಯನ್ನು ಬ್ರಿಟಿಷರೇ ನಡೆಸುತ್ತ ಬಂದಿದ್ದಾರೆ.

ಈಗಿನ ಯುದ್ಧಾನಂತರದ ಸಂಯುಕ್ತ ರಾಷ್ಟ್ರ ಸಭೆಯು ಈ ಪ್ರದೇಶದ ಮುಂದಿನ ವ್ಯವಸ್ಥೆಯನ್ನು ಕುರಿತು ಯೋಚಿಸಿ ಈ ರಾಜ್ಯವನ್ನು ಯೆಹೂದಿ ಮತ್ತು ಅರಬರೊಳಗೆ ಹಂಚಿ ಕೊಡಲು ನಿರ್ಧಾರ ಮಾಡಿರುತ್ತಾರೆ. ಎರಡೂ ರಾಜ್ಯಗಳೂ ಸ್ವತಂತ್ರ ರಾಷ್ಟ್ರಗಳಾಗುವವು. ಬ್ರಿಟಿಷರು ತಮ್ಮ ಸೈನ್ಯಗಳನ್ನು ಅಲ್ಲಿಂದ ಹಿಂದಕ್ಕೆ ಕರೆದೊಯ್ಯಲು ತೀರ್ಮಾನಿಸಿದ್ದಾರೆ. ಈ ಏರ್ಪಾಡಿಗೆ ಅಮೇರಿಕ ಹಾಗೂ ರಷ್ಯ ದೇಶಗಳು ಒಟ್ಟಿಗೆ ಸೇರಿ ಒಪ್ಪಿಗೆ ಕೊಟ್ಟಿರುತ್ತವೆ.

ಅರಬ ಜನರು ಮಾತ್ರ ತಮ್ಮ ರಾಜ್ಯವನ್ನು ಈ ರೀತಿ ತುಂಡು ಮಾಡಿ ಯೆಹೂದಿಯರ ಒಂದು ಸ್ವತಂತ್ರ ರಾಷ್ಟ್ರವನ್ನು ತಮ್ಮ ನಡುವೆ ಸ್ಥಾಪಿಸಲು ಒಪ್ಪುವುದಿಲ್ಲ. ಸಂಯುಕ್ತ ರಾಷ್ಟ್ರ ಸಭೆಯ ವಿಭಜನಾ ಯೋಜನೆಯನ್ನು ಜಾರಿಗೆ ತಂದರೆ ಎಲ್ಲ ಆರಬ ರಾಷ್ಟ್ರಗಳು ಒಟ್ಟು ಸೇರಿ ಯುದ್ಧ ಹೂಡಿ ಎದುರಿಸಲು ನಿರ್ಣಯ ಮಾಡಿರುತ್ತವೆ. ಅಮೇರಿಕ ಮತ್ತು ರಷ್ಯ ದೇಶಗಳ ಬಲದೊಡನೆ ಅರಬ ರಾಷ್ಟ್ರಗಳು ಹೊಡೆದಾಡಿ ಜಯ ಹೊಂದುವುದೇನೊ ಕಷ್ಟ ಸಾಧ್ಯವಿರಬಹುದು ಆದರೆ ಪೆಲೆಸ್ತಾ್ಯನು ಅರಬರ ರಾಜ್ಯವೆಂಬ ನ್ಯಾಯವೇನೂ ತಪ್ಪಲ್ಲ. ಆದರೆ ಈಗಿನ ಜಗತ್ತಿನಲ್ಲಿ ನ್ಯಾಯಕ್ಕೆ ಸ್ಥಾನವೆಲ್ಲಿದೆ?

ಪರ್ಶಿಯಾದ ಎಣ್ಣೆಗಾಗಿ ರಷ್ಯದ ಪ್ರಯತ್ನ

ಪರ್ಶಿಯಾ ದೇಶದಲ್ಲಿ ಪೆಟ್ರೋಲ್ ಎಣ್ಣೆ ಬಹಳ ಸಿಕ್ಕುತ್ತದೆ. ಇದರ ದಕ್ಷಿಣ ಪ್ರದೇಶದಲ್ಲಿ ಬ್ರಿಟಿಷರು ಎಣ್ಣೆಯನ್ನು ತೆಗೆದು ಉಪಯೋಗಿಸುವ ಹಕ್ಕನ್ನು ಮೊದಲೇ ಪಡೆದು ಉಪಯೋಗಿಸುತ್ತ ಇದ್ದಾರೆ. ಉತ್ತರ ಭಾಗಗಳಲ್ಲಿಯೂ ಎಣ್ಣೆ ಇದೆಯಂತೆ. ಅದನ್ನುಪಯೋಗಿಸಲು ತಮಗೆ ಬಿಡಬೇಕೆಂದು ರಷ್ಯ ಸರಕಾರವು ಪರ್ಶಿಯಾ ಸರಕಾರ

★ ಎ. ಐ. ಸಿ. ಸಿ. ಸಭೆ ★

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯು ಹೊಸದಿಲ್ಲಿಯಲ್ಲಿ ಸೇರಿ ಹಲವು ಪ್ರಾಮುಖ್ಯ ವಿಚಾರಗಳನ್ನು ಚರ್ಚಿಸಿ ತೀರ್ಮಾನಿಸಿತು.

ಮೊದಲಾಗಿ ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಒಂದು ಸ್ವಾರಸ್ಯವಾದ ಹೇಳಿಕೆಯನ್ನಿತ್ತು ರಾಜಿನಾಮೆ ಕೊಟ್ಟರು. ಸಭೆಯ ಕಾರ್ಯಕ್ರಮ ಮುಗಿದಾಗ ಇದನ್ನು ಸ್ವೀಕರಿಸಿ ಬಾಬು ರಾಜೇಂದ್ರ ಪ್ರಸಾದರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಪ್ರಸಾದರ ಕೇಂದ್ರ ಸರಕಾರದ ಆಹಾರ ಖಾತೆಯ ಮಂತ್ರಿಪದವಿಯನ್ನು ಬಿಟ್ಟುಕೊಡುವುದಾಗಿ ನಿರ್ಧರಿಸಿದರು.

ಹಿಂದೀ ಸರಕಾರಕ್ಕೂ ರಾಷ್ಟ್ರ ಸಭೆಗೂ ಯಾವ ಬಗೆಯ ಸಂಬಂಧವಿರತಕ್ಕದ್ದೆಂಬುದು ಆಚಾರ್ಯರ ರಾಜಿನಾಮೆಯ ಮುಖ್ಯ ವಿಚಾರ. ಹಿಂದೆ ಪ್ರಾಂತ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಮಂತ್ರಿಮಂಡಲಗಳಿರುವಾಗ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಇವರೆಲ್ಲರ ಮೇಲೆ ಅಧಿಕಾರ ನಡೆಸುತ್ತಿತ್ತು. ಈಗ ಕೇಂದ್ರದಲ್ಲಿಯೂ ಕಾಂಗ್ರೆಸ್ ಸರಕಾರವಿರುತ್ತ ಕಾಂಗ್ರೆಸ್ ಸಂಸ್ಥೆಯನ್ನು ವಿಚಾರಿಸುವವರಿಲ್ಲ. ಇದು ಸರಿಯಲ್ಲವೆಂಬುದು ಆಚಾರ್ಯರ ತರ್ಕ.

ಇತರ ದೇಶಗಳಲ್ಲಿ ಸರಕಾರ ನಡೆಸುವ ರಾಜಕೀಯ ಪಕ್ಷಕ್ಕೂ ಅಲ್ಲಿಯ ಸರಕಾರಕ್ಕೂ ಯಾವ ಬಗೆಯ ಸಂಬಂಧವಿರುತ್ತದೆಂದು ವಿಚಾರಿಸಿದಲ್ಲಿ ಕೆಲವೆಡೆ ಅಂಥ ರಾಜಕೀಯ ಪಕ್ಷದ ಅಧ್ಯಕ್ಷರೇ ಸರಕಾರ ನಡೆಸುವ ಮುಖ್ಯಾಧಿಕಾರಿಯಾಗುವರೆಂದೂ ಕೆಲವೆಡೆ ಬೇರೆ ಅಧ್ಯಕ್ಷರಿರುವಲ್ಲಿ ರಾಜಕೀಯ ಪಕ್ಷವು ಸರಕಾರದ ಮುಖ್ಯ ಧೋರಣೆ ನಿರ್ಣಯಿಸುವುದಲ್ಲದೆ ಬೇರೆ ನಿತ್ಯದ ಆಡಳಿತದಲ್ಲಿ ಕೈಹಾಕುವುದಿಲ್ಲವೆಂದೂ ತಿಳಿದುಬರುತ್ತದೆ. ಪ್ರಾಂತಿಕ ಸರಕಾರಗಳನ್ನು ಹಿಡಿತದಲ್ಲಿಟ್ಟಂತೆ ಹಿಂದೀ ಸರಕಾರವನ್ನು ಇರಿಸುವುದು ಅಸಾಧ್ಯ. ಕಾಂಗ್ರೆಸ್ ಪಕ್ಷದ ಪುನರ್ಘಟನೆಯಾದ ಬಳಿಕ ಮಾತ್ರ ನಮ್ಮಲ್ಲಿ ಪಕ್ಷ ಮತ್ತು ಸರಕಾರಗಳ ಸಂಬಂಧವು ಸ್ಪಷ್ಟವಾಗಬಹುದು.

ಆಚಾರ್ಯರು ಗಾಂಧೀವಾದಿಗಳು. ಈಗಿನ ಸರಕಾರ ಗಾಂಧೀ ವಾದವನ್ನೇ ಕಟ್ಟಿಕೊಂಡು ನಡೆಯುತ್ತ ಇಲ್ಲವೆಂಬುದು ಅವರ ಅತೃಪ್ತಿಯ ಮೂಲ ಕಾರಣವೆನ್ನಬಹುದು. ಸ್ವತಃ ಗಾಂಧಿಯವರಾದರೋ ಕಾಂಗ್ರೆಸ್ ಸಂಸ್ಥೆಯ ಸದಸ್ಯತನವನ್ನೆ ಬಿಟ್ಟು ಸ್ವಾತಂತ್ರ್ಯ ಪಡೆದಿರುವರೆಂದ ಮೇಲೆ ಕೃಪಲಾನಿಯವರಿಗೆ ಅಧ್ಯಕ್ಷ ಪದವಿ ಬಿಟ್ಟುಕೊಡುವುದೇ ಯುಕ್ತವಾದ ದಾರಿಯಿತ್ತೆಂಬುದು ಸ್ಪಷ್ಟವಿರುತ್ತದೆ. ಅವರ ರಾಜಿ ಕೊಟ್ಟುದು ತಪ್ಪಲ್ಲ.

ಕಾಂಗ್ರೆಸ್ ಅಧ್ಯಕ್ಷಪದವಿ ಬಾಬು ರಾಜೇಂದ್ರ ಪ್ರಸಾದರಿಗೆ ಒಪ್ಪಿಸಿದುದು ಉತ್ತಮವಾಯಿತು. ಇಂದಿನ ಕಾಂಗ್ರೆಸ್ ಮುಖಂಡರುಗಳಲ್ಲಿ ಇವರು ಸಕಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಿರುವರು. ಬಿಕ್ಕಟ್ಟಿನ ಸ್ಥಿತಿಯಲ್ಲಿ ಈ ಜವಾಬ್ದಾರಿ ಹೊರಲು ಇವರು ತಕ್ಕವರೆಂಬ ಬಗ್ಗೆ ಸಂಶಯವಿಲ್ಲ.

ಎ. ಐ. ಸಿ. ಸಿ. ಯು ಮಂಜೂರು ಮಾಡಿದ ಮುಖ್ಯ ನಿರ್ಣಯಗಳ ಪರಿಚಯವನ್ನು ಎಲ್ಲರೂ ಮಾಡಿಕೊಳ್ಳುವುದು ಅಗತ್ಯ. ಸಂಸ್ಥಾನಗಳ ರಾಜರುಗಳು ತಮ್ಮ ಪ್ರಜೆಗಳಿಗೆ ಪೂರ್ಣ ಜವಾಬ್ದಾರಿ ಕೊಡಬೇಕೆಂದೂ ಇದಕ್ಕೆ ವಿರುದ್ಧ ವರ್ತಿಸುವ ರಾಜರಿಗೆ ಕಾಂಗ್ರೆಸು ಯಾವ ಸಹಾಯವನ್ನೂ ಕೊಡಲಾರದೆಂದೂ ನಿರ್ಣಯವಾಯಿತು. ಜಾತಿ ಜಗಳದಿಂದ ನಿರಾಶ್ರಿತರಾಗಿ ಬಂದ ಜನರನ್ನು ಯಾವ ರೀತಿ ನಡೆಸತಕ್ಕದ್ದೆಂಬ ಕುರಿತು ಧೋರಣೆಯನ್ನು ಸ್ಪಷ್ಟಪಡಿಸಲಾಯಿತು. ಖಾಸಗಿ ಸೈನ್ಯಗಳನ್ನು ಮುಕ್ತಾಯಗೊಳಿಸಬೇಕೆಂದು ನಿರ್ಣಯವಾಯಿತು.

ಕೆಲವು ಸಂಸ್ಥೆಗಳು ತಮ್ಮ ಸ್ವಂತ ಸೈನ್ಯಗಳನ್ನು ವ್ಯವಸ್ಥೆಗೊಳಿಸಲು ಬಯಸುತ್ತಿವೆ. ಮುಸ್ಲಿಮ ನೇಶನಲ್ ಗಾರ್ಡ್, ರಾಷ್ಟ್ರೀಯ ಸ್ವಯಂಸೇವಕ ಸಂಘ, ಅಕಾಲೀ ಸ್ವಯಂಸೇವಕರು ಇತ್ಯಾದಿ ಸಂಸ್ಥೆಗಳು ಉದಾಹರಣೆಗಳು. ಇವೆಲ್ಲ ದೇಶದ ಸ್ವಾತಂತ್ರ್ಯಕ್ಕೆ ಭಂಗ ತರುವಂಥವುಗಳು. ಸರಕಾರ ಮಾತ್ರ ಸೈನ್ಯಗಳನ್ನೂ ಇತರ ಜನಸಂರಕ್ಷಕ ದಳಗಳನ್ನೂ ಏರ್ಪಡಿಸಬೇಕಲ್ಲದೆ ಇಂಥ ಖಾಸಗಿ ಸಂಸ್ಥೆಗಳನ್ನು ಮುಚ್ಚಬೇಕೆಂಬುದೇ ಈ ನಿರ್ಣಯದ ಕಂಠೋಕ್ತ ಅಭಿಪ್ರಾಯವಿರುತ್ತದೆ.

ಈಗಿನ ವಿವಿಧ ನಿಯಂತ್ರಣಗಳು ಪ್ರಜೆಗಳ ಸ್ವಾವಲಂಬನ ಪ್ರವೃತ್ತಿಯನ್ನು ತಡೆಗಟ್ಟಿ ಹೆಚ್ಚಿನ ಉತ್ಪತ್ತಿ ಮಾಡಲು ಇರುವ ಪ್ರೋತ್ಸಾಹವನ್ನು ಕುಗ್ಗಿಸುವವೆಂಬುದರಿಂದ ಇವನ್ನು ತೆಗೆದುಹಾಕುವ ಪ್ರಶ್ನೆಯನ್ನು ಸರಕಾರಗಳು ಕೂಡಲೆ ವಿಚಾರಿಸತಕ್ಕದ್ದೆಂಬ ನಿರ್ಣಯವು ಮಂಜೂರಾಯಿತು. ಆಹಾರ ಮತ್ತು ವಸ್ತ್ರಗಳ ಮೇಲಿನ ನಿಯಂತ್ರಣವನ್ನು ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ತೆಗೆದುಹಾಕಬೇಕೆಂಬ ನಿರ್ಣಯದ ತಿದ್ದುಪಡಿಯೊಂದು 55 ಅನುಕೂಲ 65 ಪ್ರತಿಕೂಲ ಮತಗಳಿಂದ ಬಿದ್ದುಹೋಯಿತು. ಅಂದರೆ ಸಭೆಯು ಸರಕಾರಗಳಿಗೆ ಸ್ಪಷ್ಟವಾದ ಅಜ್ಞೆ ಕೊಡುವುದು ಯುಕ್ತವಲ್ಲವೆಂಬುದು ಮಾತ್ರ ಇದರ ಅಭಿಪ್ರಾಯವಿರುತ್ತದೆ. ನಿಯಂತ್ರಣಗಳ ಹಾವಳಿಯನ್ನು ಮುಖ್ಯ ನಿರ್ಣಯದಲ್ಲಿ ಸ್ಪಷ್ಟಪಡಿಸಿ ಈ ಪ್ರಶ್ನೆ ಸರಕಾರಗಳು ಕೂಡಲೆ ವಿಚಾರಿಸಬೇಕೆಂದು ಹೇಳುವುದೇ ಈ ಸಭೆಗೆ ಯೋಗ್ಯವೆಂಬುದು ಬಹುಮತದ ಅಭಿಪ್ರಾಯವಿತ್ತು. ಅಂತೂ ಸಭೆಯು ನಿಯಂತ್ರಣಗಳಿಗೆ ವಿರುದ್ಧವಿತ್ತೆಂಬುದು ಸ್ಪಷ್ಟವಾಗಿತ್ತು.

ಮುಂದಿನ ಕಾಂಗ್ರೆಸ್ ಘಟನೆಯನ್ನು ರೂಪಿಸಲು ಆಚಾರ್ಯ ನರೇಂದ್ರದೇವ, ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯ, ಆಚಾರ್ಯ ಜುಗಲ ಕಿಶೋರ, ಶ್ರೀಗಳಾದ ಆರ್ ಆರ್ ದಿವಾಕರ, ಬಿ ಪಿ ತಾಂಡನ್, ಎಸ್ ಕೆ ಪಾಟೀಲ ಮತ್ತು ಸುರೇಂದ್ರ ಮೋಹನ ಘೋಷ ಇವರನ್ನೊಳಗೊಂಡ ಒಂದು ಕಮಿಟಿಯನ್ನು ಏರ್ಪಡಿಸಲಾಯಿತು. ಈ ಕಮಿಟಿಯವರು ತಯಾರಿಸಿದ ಘಟನೆಯನ್ನು ಎ. ಐ. ಸಿ. ಸಿ. ಯು ಒಂದು ವಿಶೇಷ ಅಧಿವೇಶನ ಸೇರಿಸಿ 1948ನೇ ಜನವರಿ ಅಂತ್ಯದೊಳಗೆ ಒಪ್ಪಿಸಬೇಕೆಂದೂ ಅಲ್ಲಿಯ ತನಕ ಈಗಿನ ಘಟನೆಯಂತೆ ಕಾಂಗ್ರೆಸ್ ಚುನಾವಣೆಗಳನ್ನು ನಡೆಸದೆ ಬಾಕಿ ಇಡಬೇಕೆಂದೂ ಸೂಚಿಸಿದ ತಿದ್ದುಪಡಿ ಸ್ವೀಕೃತವಾಯಿತು.

ಕಾಂಗ್ರೆಸಿನ ಮುಂದಿನ ಧ್ಯೇಯದ ಕುರಿತು, ವರ್ಕಿಂಗ್ ಕಮಿಟಿಯವರು ತಯಾರಿಸಿಟ್ಟ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು. ... ಈ ... ಸಭೆಯ ... ಯನ್ನು ... ಯಲ್ಲಿ ಈ ನಿರ್ಣಯವು ಈ ರೀತಿ ಇದೆ:

"ರಾಜಕೀಯ ಸ್ವಾತಂತ್ರ್ಯವು ಈಗ ... ಮಾದ ದೇಶದಲ್ಲಿ ಮುಂದಿನ ನಿಜವಾದ ಪ್ರಜಾಸತ್ತೆ ಮತ್ತು ನ್ಯಾಯ ಮತ್ತು ಸಮಾನತೆಯುಳ್ಳ ಸಮಾಜ ಇವನ್ನು ಸಾಧಿಸುವ ಮಹಾಕಾರ್ಯವನ್ನು ಮುಂದೆ ಕಾಂಗ್ರೆಸು ಕೈಕೊಳ್ಳಬೇಕು. ಇಂಥ ಸಮಾಜವು ಪ್ರತಿಯೊಬ್ಬ ಸ್ತ್ರೀ ಪುರುಷರಿಗೆ ಸಂದರ್ಭದ ಸಮಾನತೆಯೊದಗಿಸಬೇಕು. ತನ್ನ ವ್ಯಕ್ತಿತ್ವದ ನಿರಾತಂಕ ಬೆಳವಣಿಗೆಗೆ ದುಡಿಯಲು ಸ್ವಾತಂತ್ರ್ಯ ಕೊಡಬೇಕು. ರಾಜಕೀಯ ರಂಗದಿಂದ ಸಾಮಾಜಿಕ ಮತ್ತು ಆರ್ಥಿಕ ರಂಗಕ್ಕೆ ಪ್ರಜಾಸತ್ತೆ ಹಬ್ಬಿದರೆ ಮಾತ್ರ ಇದು ಸಾಧ್ಯ. ಈಗಿನ ಕಾಲದಲ್ಲಿ ಪ್ರಜಾಸತ್ತೆಯಲ್ಲಿ ಕೇಂದ್ರೀಕೃತ ಯೋಜನೆ ನಡೆಸುವ ಅಗತ್ಯ ಬೀಳುತ್ತದೆ. ಮಾತ್ರವಲ್ಲ ರಾಷ್ಟ್ರದ ಭದ್ರತೆ, ದಕ್ಷತನದ ಉತ್ಪತ್ತಿ, ಇಡೀ ಸಮಾಜದ ಸಾಂಸ್ಕೃತಿಕ ಪ್ರಗತಿ ಇವುಗಳಿಗೆ ಅಡ್ಡಿಯಾಗದಷ್ಟರ ಮಟ್ಟಿಗೆ ರಾಜಕೀಯ ಹಾಗೂ ಆರ್ಥಿಕ ಶಕ್ತಿಗಳ ವಿಕೇಂದ್ರೀಕರಣವೂ ಅಗತ್ಯವಿರುತ್ತದೆ. ಅತೀ ಚಿಕ್ಕ ಪ್ರದೇಶವು ಕೂಡಾ ಜನರು ಆರಿಸುವ ಪಂಚಾಯತುಗಳ ಮೂಲಕ ರಾಷ್ಟ್ರ ಜೀವನದ ಮೇಲೆ ಪ್ರಭಾವ ಬೀರಲು ಸಮರ್ಥವಾಗಬೇಕು. ಸಾಧ್ಯವಿದ್ದ ಮಟ್ಟಿಗೆ ಜೀವನದ ಆವಶ್ಯಕ ವಸ್ತುಗಳ ಮಟ್ಟಿಗೆ ಪ್ರಾದೇಶಿಕ ಹಾಗೂ ರಾಷ್ಟ್ರೀಯ ಸ್ವಾವಲಂಬನವನ್ನು ಗುರಿಯಾಗಿ ಇಟ್ಟುಕೊಳ್ಳಬೇಕು. ಯಾವ ಕೈಗಾರಿಕೆಗಳನ್ನು ಸ್ವಭಾವತಃ ದೊಡ್ಡ ಪ್ರಮಾಣದಲ್ಲಿ ಕೇಂದ್ರೀಕೃತವಾಗಿ ನಡೆಸಬೇಕಾಗುತ್ತದೆಯೊ ಅವನ್ನು ರಾಷ್ಟ್ರವೇ ಕೈಕೊಂಡು ನಡೆಸಬೇಕು. ಅವನ್ನು ವ್ಯವಸ್ಥೆಗೊಳಿಸುವಾಗ ಕೆಲಸಗಾರರಿಗೆ ಲಾಭದ ಪಾಲು ಕೊಡುವುದು ಮಾತ್ರವಲ್ಲ ಆ ಕೈಗಾರಿಕೆಗಳ ಆಡಳಿತೆ ನಡೆಸುವುದರಲ್ಲಿಯೂ ಕೆಲಸಗಾರರು ಭಾಗಿಗಳಾಗುವಂತೆ ಸಾಧಿಸಬೇಕು. ಭೂಮಿ ಅದರಲ್ಲಿಯ ನಿಸರ್ಗ ಸಂಪತ್ತು ಸಮೇತ ಹಾಗೂ ಉತ್ಪತ್ತಿ ವಿತರಣ ಮತ್ತು ವಿನಿಮಯ ಸಾಧನಗಳ ಸಮೇತ ಇಡೀ ಸಮಾಜದ ಸೊತ್ತಾಗಿದ್ದು ಎಲ್ಲರ ಹಿತಕ್ಕಾಗಿ ಇದರ ಉಪಯೋಗ ನಡೆಯಿಸಲ್ಪಡಬೇಕು.

ಆಡಳಿತೆಯ ದಕ್ಷತೆ ಮತ್ತು ವ್ಯಕ್ತಿ ಸ್ವಾತಂತ್ರ್ಯಗಳನ್ನು ಜೊತೆಗೂಡಿಸುವ ರಾಜಕೀಯ ವ್ಯವಸ್ಥೆ, ಖಾಸಗಿ ಶ್ರೀಮಂತಿಕೆಯೊಡೆತನ ಮತ್ತು ಐಶ್ವರ್ಯದ ಕೇಂದ್ರೀಕರಣಕ್ಕೆ ಕಾರಣವಾಗದಂತೆ ಅತ್ಯಂತ ಹೆಚ್ಚಿನ ಉತ್ಪತ್ತಿಯನ್ನು ಕೊಡುವ ಆರ್ಥಿಕ ವ್ಯವಸ್ಥೆ, ಪಟ್ಟಣಗಳ ಮತ್ತು ಹಳ್ಳಿಗಳ ಆರ್ಥಿಕ ಅಭಿವೃದ್ಧಿಯನ್ನು ಏಕಕಾಲದಲ್ಲಿ ಸಾಧಿಸುವಿಕೆ ಇವು ನಮ್ಮ ಧ್ಯೇಯ. ಇದನ್ನು ಸಾಧಿಸಿದರ ಮಾತ್ರ ಕೊಳ್ಳೆ ಹೊಡೆಯುವ ಭಂಡವಲಶಾಹಿ ಮತ್ತು ರಾಷ್ಟ್ರವೇ ಸರ್ವಸ್ವವಿರುವಲ್ಲಿಯ ಯಾಂತ್ರಿಕ ವರ್ಗೀಕರಣ ಇವುಗಳಿಂದ ಭಿನ್ನವಾದ ಬೇರೊಂದು ದಾರಿಯನ್ನು ಸಾಧಿಸಿದಂತಾಗುವುದು."

ಕೊನೆಯದಾಗಿ ಸಭೆಯು ಆಚಾರ್ಯ ಕೃಪಲಾನಿಯವರ ರಾಜಿನಾಮೆಯನ್ನು ಸ್ವೀಕರಿಸಿ ಅವರು ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಕೊಂಡಾಡುವ ನಿರ್ಣಯ ಮಾಡಿ ಬಾಬು ರಾಜೇಂದ್ರ ಪ್ರಸಾದರನ್ನು ಅಧ್ಯಕ್ಷಪದವಿಗೇರಿಸಿ ಮುಕ್ತಾಯವಾಯಿತು.

ವನ್ನು ಒತ್ತಾಯಪಡಿಸುತ್ತಿದೆ. ತನ್ನ ಈ ಕೇಳಿಕೆಯನ್ನು ಮನ್ನಿಸದಿದ್ದರೆ ಪರಿಣಾಮವು ಬಹಳ ತೀಕ್ಷ್ಣವಾದೀತೆಂದು ಬೆದರಿಕೆಯನ್ನು ಹಾಕಿದ್ದಾರೆ. ಪ್ರಾಯಶಃ ರಷ್ಯದ ಸೈನ್ಯಗಳೂ ಪರ್ಶಿಯಾದ ಗಡಿನಾಡಿಗೆ ಬಂದು ನಿಂತಿರಬಹುದು. ಪರ್ಶಿಯಾ ಸರಕಾರವು ಇನ್ನೂ ಈ ಕೇಳಿಕೆಗೆ ತನ್ನ ಒಪ್ಪಿಗೆ ಕೊಟ್ಟಿಲ್ಲ. ಕೊಡದಿದ್ದರೆ ಮುಂದೆ ಯಾವ ಪರಿಣಾಮವಾದೀತೆಂದು ಈಗ ಊಹಿಸಿ ಹೇಳುವಂತಿಲ್ಲ. ರಷ್ಯ ಸರಕಾರವು ಪರ್ಶಿಯಾವನ್ನು ನುಂಗಿ ಬಿಟ್ಟೀತೆ? ನುಂಗಲು ಹೊರಟರೆ ಬ್ರಿಟನು ಅಮೇರಿಕಗಳು ಸುಮ್ಮನೆ ಕುಳಿತು ನೋಡಲು ಸಾಧ್ಯವಿದೆಯೆ? ಇಷ್ಟರಲ್ಲಿ ಮುಂದಿರುವ ದಿನ ಇದರ ಇತ್ಯರ್ಥವಾದೀತೆಂದು ಹಾರೈಸೋಣ.

ಕೃಷಿಕ ಮಜೂರರ ಪರಿಸ್ಥಿತಿ

ಕೃಷಿಕ ಮಜೂರರ ಪರಿಸ್ಥಿತಿಯನ್ನು ಸುಧಾರಿಸುವುದು ಅತ್ಯಾವಶ್ಯಕವೆಂದು ಹಿಂದೀ ಸರಕಾರದ ಮಜೂರ ಮಂತ್ರಿ ಮಾನ್ಯ ಜಗಜ್ಜೀವನರಾಮರು ಕೇಂದ್ರ ಶಾಸನ ಸಭೆಯಲ್ಲಿ ಎತ್ತಿ ಹೇಳಿದರು. ಈ ಪ್ರಶ್ನೆಯ ಕಡೆಗೆ ಇವರ ಲಕ್ಷ್ಯ ಹೋದುದು ಮಹತ್ವದ ಸಂಗತಿಯೆನ್ನಬೇಕು.

ಕೈಗಾರಿಕೆಗಳಲ್ಲಿ ನಿರತರಾದ ಮಜೂರರ ಬಗ್ಗೆ ಹಲವು ಕಾನೂನುಗಳು ಜಾರಿಯಲ್ಲಿರುತ್ತವೆ. ಈ ಕಾನೂನುಗಳಲ್ಲಿ ಹಲವು ಸುಧಾರಣೆಗಳು ಆಗಿಂದಾಗ ಆಗುತ್ತಲಿವೆ. ಮಾತ್ರವಲ್ಲ ಇತ್ತೀಚೆಗೆ ಇಂಥ ಮಜೂರರೊಳಗೆ ಸಂಘಟನೆಯೂ ಬೆಳೆಯುತ್ತಿದೆ.

ಕೃಷಿಕ ಮಜೂರರ ಪರಿಸ್ಥಿತಿಯಾದರೋ ಕರುಣಾಜನಕವಿರುತ್ತದೆ. ಇವರ ಬಡತನದ ಸಂಕಷ್ಟಗಳು ಅಸಹನೀಯವಿರುತ್ತವೆ. ಇವರಲ್ಲಿ ಸಂಘಟನೆಯನ್ನು ತಂದೊದಗಿಸುವುದಾದರೂ ಸುಲಭ ಸಾಧ್ಯವಲ್ಲ.

ಈ ಜನರ ಕಡೆಗೆ ನಮ್ಮ ಸರಕಾರಗಳು ಲಕ್ಷ್ಯ ಕೊಡುವುದು ಅತ್ಯಾವಶ್ಯಕವಿರುತ್ತದೆಂದು ಮಜೂರ ಮಂತ್ರಿಗಳು ಹೇಳಿದ ಮಾತು ಸತ್ಯವಿರುತ್ತದೆ. ಸರಕಾರಗಳೂ ಮಹಾ ಜನರೂ ಸೇರಿ ಈ ಬಡ ಜನರ ಸಂಕಷ್ಟಗಳನ್ನು ಸ್ವಲ್ಪವಾದರೂ ದೂರ ಮಾಡಿದರೆ ದೇಶಕ್ಕೆ ಸಿಕ್ಕಿದ ಸ್ವಾತಂತ್ರ್ಯವು ಸಾರ್ಥಕವಾಗುವುದು.

ಸ್ವೀಕಾರ - ವಿಮರ್ಶೆ

ಶ್ರೀ ಕೃಷ್ಣಸೂಕ್ತಿ:- ಉಡುಪಿಯಿಂದ ಕಳೆದ ತಿಂಗಳಲ್ಲಿ ಹೊರಟ ಮಾಸ ಪತ್ರಿಕೆ. ಸಂಪಾದಕರು ಶ್ರೀ ಪಿ. ರಾಜಗೋಪಾಲ ಕೃಷ್ಣರಾಯರು. ವಾರ್ಷಿಕ ... ಬಿಡಿ ಸಂಚಿಕೆ ... ಕ್ರೌನ್ ... 48 ಪುಟಗಳು.

ಹಲವಾರು ವರ್ಷಗಳ ಹಿಂದೆ ನಿಂತುಹೋಗಿದ್ದ ಶ್ರೀ ಕೃಷ್ಣಸೂಕ್ತಿಯು ಪೂರ್ವ ಸಂಪಾದಕ ಶ್ರೀ ರಾಜಗೋಪಾಲಕೃಷ್ಣರಾಯರ ಸಂಪಾದಕತ್ವದಲ್ಲಿಯೇ ಪುನಃ ಪ್ರಕಟವಾದದ್ದು ಸಂತೋಷಕರ. ನಮ್ಮ ಕೈಸೇರಿದ ಅಕ್ಟೋಬರ ತಿಂಗಳ ಸಂಚಿಕೆಯಲ್ಲಿ ಮುಳಿಯ ತಿಮ್ಮಪ್ಪಯ್ಯ ಮತ್ತು ಅನಂತ ಪದ್ಮನಾಭರಾಯರ ಉತ್ತಮ ಕವಿತೆಗಳಿವೆ. ಅದಲ್ಲದೆ ಕೆಲವು ಹೊಸ ಕವಿತೆಗಳೂ ಈ ಮೊದಲಿನ ಸಂಚಿಕೆಯಲ್ಲಿದ್ದುದು ಸಹಜ. ಲೇಖನಗಳಲ್ಲಿ ಶ್ರೀ ಕೇಶವ ಸೆರ್ವರ 'ಛಂದೋರಚನೆ'ಯೂ ಸುಬ್ರಾಯನರ ಕವಿತೆಯ ಕುರಿತೂ, ಮುಕುಂದರಾಯರ 'ಜನಾಂಗದ ಜೀರ್ಣೋದ್ಧಾರ' ಮೊದಲಾದುವು ವಾಚನೀಯವಾಗಿವೆ. ಹಿಂದಿನಂತೆ ಇಂದೂ ಈ ಸೂಕ್ತಿ ವಿರಾಜಮಾನವಾಗಿ ಬೆಳಗಿ ಉತ್ತರೋತ್ತರ ಅಭಿವೃದ್ಧಿಹೊಂದಲೆಂದು ಹಾರೈಸುತ್ತೇವೆ.

H. V. Shenoy, Vidwan.

ಉಪ್ಪಿನ ಮಾರಾಟ–ರಖಂ ಮತ್ತು ಚಿಲ್ಲರೆ ವ್ಯಾಪಾರಕ್ಕೆ ಬೆಲೆಯನ್ನು ಇದೇ ತಾ. 14–11–47ರಿಂದ ಜಿಲ್ಲಾ ಕಲೆಕ್ಟರರು ಈ ಕೆಳಗಿನಂತೆ ನಿರ್ಧರಿಸಿದ್ದಾರೆ: ಮಂಗಳೂರು ಮುನಿಸಿಪಾಲಿಟಿಯೊಳಗೆ ಮತ್ತು ಆಸುಪಾಸಿನ ರಖಂ ವ್ಯಾಪಾರಿಗಳಲ್ಲಿ ಮುಡಿಗೆ ರೂ. 2-9-0; ಸೇರಿಗೆ ರೂ. 0–1–1; ಮಂಗಳೂರು, ಉಡುಪಿ, ಮತ್ತು ಕಾಸರಗೋಡು ತಾಲೂಕುಗಳ ಕೇಂದ್ರಗಳಲ್ಲಿ ಮುಡಿಗೆ ರೂ. 2–12–0; ಸೇರಿಗೆ 0–1–2, ಕುಂದಾಪುರ, ಕಾರ್ಕಳ, ಮತ್ತು ಪುತ್ತೂರು ತಾಲೂಕುಗಳ ಕೇಂದ್ರಗಳಲ್ಲಿ ಮುಡಿಗೆ ರೂ. 2–15–0 ಸೇರಿಗೆ 0–1–3.

ಕದ್ರಿ ಲಕ್ಷದೀಪೋತ್ಸವವು–ಎಂದಿನಂತೆ ಇದೇ ಬರುವ ದಶಂಬರ ತಾ. 11ನೇ ಗುರುವಾರ ನೆರವೇರುವುದು.

ಕದ್ರಿ ಕಂಬಳವು–ಇದೇ ಬರುವ ತಾ. 30–11–47ನೇ ಆದಿತ್ಯವಾರ ಮಾಮೂಲು ಪ್ರಕಾರ ಜರಗುವುದು.

ಪೇಜಾವರ ಮಠದ ಮೊಕದ್ದಮೆ ಈ ಮೊಕದ್ದಮೆಯು ಅಪೀಲು ನಮ್ಮ ಜಿಲ್ಲಾ ಸೆಶ್ಶನ್ ಜಡ್ಜರಲ್ಲಿ ನಡೆದಿತ್ತು; ಅದರಲ್ಲಿ ಮಿಯಾರ್ ನರಸಿಂಹಾಚಾರ್ಯರಿಗೆ 4 ವರ್ಷ ಸಜೆ ಎಂದೂ ಇತರ ಮೂವರಾದ ಬೈಕಾಡಿ ಶ್ರೀನಿವಾಸರಾವ್ ಎಸ್. ವಿ. ತೋಳ್ಪಾಡಿ, ಗುರುರಾಜ ಉಡುಪ ಇವರಿಗೆ ಬಿಡುಗಡೆ ಎಂದೂ ತೀರ್ಪು ಕೊಡಲಾಗಿದೆ.

ಜಿಲ್ಲಾ ಕಲೆಕ್ಟರರು–ರಜೆಯ ಮೇಲೆ ತೆರಳಿದ್ದ ನಮ್ಮ ಜಿಲ್ಲಾ ಕಲೆಕ್ಟರ್ ಮಿ. ಸಾಂಡರ್ಸ್ ಅವರು ಇಷ್ಟರಲ್ಲೇ ಮರಳಿ ಕಲೆಕ್ಟರರ ಚಾರ್ಜು ವಹಿಸಿರುವರು.

ಜಿಲ್ಲೆಯಲ್ಲಿ ಸುಧಾರಣಾ ಕಾರ್ಯಗಳು–ಜಿಲ್ಲೆಯ ಸುಧಾರಣಾ ಸಿಬಂದಿಯವರ ಪ್ರಯತ್ನದ ಫಲವಾಗಿ ಜಿಲ್ಲೆಯಲ್ಲಿ ಇದು ವರೆಗೆ ಏರ್ಪಟ್ಟ 40 ಗ್ರಾಮ ಸಂಘಗಳವರು (ಇದರಲ್ಲಿ 18 ಮಂಗಳೂರು ತಾಲೂಕಿನವು) ನಾಟಕ, ಭಜನೆ, ಆಟಪಾಟಗಳನ್ನು ಏರ್ಪಡಿಸಿ ಹಿಂದಿನ ಮದ್ಯಪಾಯಿಗಳ ಚಿತ್ರವನ್ನು ಆ ಕಡೆ ಸೆಳೆದಿರುವರಲ್ಲದೆ, ಮಂಗಳೂರು ಬಾಯ್ ಸ್ಕೌಟ್ ಎಸೋಸಿಯೇಶನಿನವರು ದೇರಿಬೈಲಿನಲ್ಲಿಯೂ, ಇಡ್ಯ ಹ್ಯಾಸ್ಕೂಲ್ ಸುರತ್ಕಲಿನಲ್ಲಿಯೂ ಎರಡು ನಾಟಕವಾಡಿಯೂ ಇದ್ದಾರೆ; ಬಿಲ್ಲವರ ಸಂಘದ ಕಡೆಯಿಂದ ನಾಟಕ ದಳವೊಂದು ಏರ್ಪಟ್ಟು ಅವರು ಕಳೆದ ನವಂಬರ ತಾ. 15ರಲ್ಲಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಒಂದು ನಾಟಕವನ್ನೂ ಅಭಿನಯಿಸಿದ್ದಾರೆ.

ಜಿಲ್ಲಾ ಸಮಾಚಾರ

ಹಿಂದಿನ ಮುರ್ತೆದಾರರಿಗಾಗಿ 18 ಸೊಸೈಟಿಗಳು ತಾಳೆ ಬೆಲ್ಲ ಮಾಡುವವರ ಮತ್ತು 6 ತೆಂಗಿನ ಬೆಲ್ಲ ಮಾಡುವವರ ಬಗ್ಗೆ ಅಂತೂ 19 ಆಗಲೇ ಸ್ಥಾಪಿಸಲ್ಪಟ್ಟಿದ್ದು ಇದೇ ದಶಂಬರ ಅಂತ್ಯದೊಳಗೆ ಇಂಥ 50 ಸೊಸೈಟಿಗಳನ್ನು ಸ್ಥಾಪಿಸಲಾಗುವುದು. ಇದರಿಂದ 5 ಸಾವಿರ ಮಂದಿ ಮುರ್ತೆದಾರರಾಗಿದ್ದವರಿಗೆ ಉದ್ಯೋಗ ದೊರಕುವುದು.

ಪ್ರಾಂತಿಕ ಕ್ಷೇಮಚಿಂತನೆಯ ನಿಧಿಯ ಸಮಿತಿ–ಕಳೆದ ತಾ. 19ನೇ ಸಂಜೆ ಬಿಸೆಂಟ್ ರಾ. ಬಾಲಿಕಾ ಹ್ಯಾಸ್ಕೂಲಲ್ಲಿ, ಸಮಿತಿಯ ಚೆಯರ್‌ಮ್ಯಾನ್ ರಾ. ಬ. ಡಾ. ಎಂ. ಕೇಶವ ಪೈಗಳ ಆಮಂತ್ರಣದ ಮೇರೆಗೆ ಜಿಲ್ಲಾ ಕಲೆಕ್ಟರ್ ಮಿ. ಸಾಂಡರ್ಸ್ ಮತ್ತು ಇತರ ಅಧಿಕಾರಿಗಳೂ ಖಾಸಗಿ ದೊಡ್ಡ ಮನುಷ್ಯರೂ ಮಹಿಳೆಯರೂ ನೆರೆದಿದ್ದಾಗ ಡಾ. ಪೈಗಳು ಈ ನಿಧಿಯ ಉದ್ದೇಶಗಳನ್ನು ವಿವರಿಸುತ್ತ ಈ ನಿಧಿಯಿಂದ ಪೂರೈಸಬೇಕಾದ ಇಲ್ಲಿನ ದೊಡ್ಡದೊಂದು ಆಸ್ಪತ್ರೆ ಮತ್ತದರ ಶಾಖೆಗಳ ವಿಚಾರವನ್ನು ಅರುಹಿ ನೆರೆದವರ ಹಿತಸೂಚನೆಗಳನ್ನು ಕೋರಿದರು; ಧನ ಸಹಾಯಕ್ಕಾಗಿ ಪ್ರಾರ್ಥಿಸಿದರು. ಸಭಿಕರಲ್ಲಿ ರಾ. ಸಾಹೇಬ್ ಸಿ. ಆರ್. ಆರ್. ಪೂಂಜ. ಮಿ. ಪಿ. ಪಿ. ಡಿಸೋಜ, ಶ್ರೀಗಳಾದ ವಿ ಎಸ್. ಕುಡ್ವ, (ವಾಣಿಜ್ಯ ಸಂಘದ ಅಧ್ಯಕ್ಷ) ಡಾ. ಯು. ಪಿ. ಮಲ್ಯ, ಎಂ. ಎಲ್. ಎ. ಶ್ರೀಗಳಾದ ಎಂ. ವೆಂಕಟೇಶ ಪೈ. ಬಿ. ವೈಕುಂಠ ಬಾಳಿಗಾ ಇವರು ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟರು. ಡಾ. ಪೈಯವರು ವಂದಿಸಿದ್ದರು. ಚಾ. ಸತ್ಕಾರವೂ ಇತ್ತು.

ವಾಣಿಜ್ಯ ನೌಕರರ ಸಭೆ–ತಾ. 23ರಂದು ಈ ಸಂಘದ ಸಾರ್ವಜನಿಕ ಸಭೆ ಮೈದಾನಿನಲ್ಲಿ ಶ್ರೀ. ಬಿ. ದಾಮೋದರ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸ್ ಸರಕಾರದ 'ಶೋಪ್ ಅಸಿಸ್ಟ್ಯಾಂಟ್ಸ್ ಬಿಲ್ಲ'ನ್ನು ವಿವರಿಸಲಾಯಿತು. ಡಾ. ಆಳ್ವ, ಶ್ರೀ. ಕಿಲ್ಲೆ ಮೊದಲಾದ ಪ್ರಮುಖರ ಭಾಷಣಗಳಿದ್ದುವು. ಈ ಸಂಘದ ಅಧ್ಯಕ್ಷರಾಗಿ ಶ್ರೀ. ಸುಮಿತ್ರ ಭಟ್ಟರು ಆರಿಸಲ್ಪಟ್ಟಿದ್ದಾರೆ.

ಗವರ್ನಮೆಂಟ್ ಕಾಲೇಜ್ I ಗ್ರೇಡ್ ಆಗುವುದು?–ಈ ಕಾಲೇಜಿನ ವಾರ್ಷಿಕ ಸಮಾರಂಭ ಕಳೆದ ತಾ. 22ರಲ್ಲಿ ಕಾಲೇಜ್ ಭವನದಲ್ಲಿ ರಾ. ಬ. ಡಾ. ಎಂ. ಕೇಶವ ಪೈಯವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು; ಪ್ರಿನ್ಸಿಪಾಲ್ ಶ್ರೀ. ಕೆ. ಐ. ವರ್ಗೀಸರಿಂದ ವರದಿ, ಅಧ್ಯಕ್ಷರಿಂದ ಬಹುಮಾನ ವಿತರಣ, ವಕೀಲ್ ಸೋಮಶೇಖರ ರಾಯರಿಂದ ಕಾಲೇಜಿನ ಶ್ರೇಯಃಪ್ರಾರ್ಥನೆ, ಅದಕ್ಕೆ ಕಾಲೇಜ್ ವಿದ್ಯಾರ್ಥಿ ಶ್ರೀ. ಮಧುಕರರಾಯರ ಉತ್ತರ, ಅಧ್ಯಕ್ಷರ ಕೊನೆನುಡಿ, ವಿವಿಧ ವಿನೋದಾವಳಿಗಳು ಮೊದಲಾದವೆಲ್ಲ ಇದ್ದವು. ಈ ಸಂದರ್ಭದಲ್ಲಿ, ಈ ಕಾಲೇಜು ಬರುವ ವರ್ಷ I ಗ್ರೇಡ್ ಆಗಲಿರುವುದೆಂಬ ಆಶೋತ್ತರವು ಕಂಡುಬಂದಿದೆ.

ಬೆಳಗ್ಗೆ ಹಳೆ ವಿದ್ಯಾರ್ಥಿಗಳ ಸಂಘದ ಮೀಟಿಂಗು ಅದರ ಅಧ್ಯಕ್ಷ ರಾ. ಬ. ಕೆ. ಟಿ. ಆಳ್ವರ ಅಧ್ಯಕ್ಷತೆಯಲ್ಲಿ ನಡೆದಿತ್ತು.

ಬಿ. ಇ. ಎಂ. ಹೈಸ್ಕೂಲ್ ವರ್ಷವರ್ಧಂತಿ–ಈ ವರ್ಧಂತಿ ನಾಳೆ ಸಂಜೆ 6 ಗಂಟೆಗೆ ರಾವ್ ಸಾಹೇಬ್ ಚಾರ್ಲ್ಸ್ ಜಾನ್ (ಡೆಪ್ಯುಟಿ ಕಲೆಕ್ಟರ್) ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಅಡಿಕೆ ವ್ಯವಸಾಯಕ್ಕೆ ಬೇಕಾದ–ಅಕ್ಕಿ ಭತ್ತ ಸರಬರಾಯಿ ವಿಚಾರದಲ್ಲಿ ನಾವು ಆಲೋಚಿಸುತ್ತೇವೆ, ಎಂದು ಮದ್ರಾಸ್ ಸರಕಾರವು ತಾ. 14–11–47ರಲ್ಲಿ ಅಡಿಕೆ ಬೇಸಾಯ ಸಂಘದ ಕಾರ್ಯದರ್ಶಿಗಳಿಗೆ ತಿಳಿಸಿರುವರು.

ಅಡಿಕೆ ಅಭಿವೃದ್ಧಿಯೋಜನಾ ಸಮಿತಿಯು ಮುಂಬಯಿಯಲ್ಲಿ ಸಭೆ ಸೇರಿ ಕಾಫಿ, ಚಾ, ಮೊದಲಾದ ಪದಾರ್ಥಗಳಿಗಿರುವಂತಹ ಒಂದು ಶಾಶ್ವತವಾದ ಅಡಿಕೆ ಅಭಿವೃದ್ಧಿ ಕಮಿಟಿಯನ್ನು ಇಂಡಿಯಾ ಸರಕಾರವು ಸ್ಥಾಪಿಸಿ ಆ ಕಮಿಟಿಯು ಅಡಿಕೆಯ ವ್ಯವಸಾಯ ಮತ್ತು ವ್ಯಾಪಾರದ ಅಭಿವೃದ್ಧಿಗೆ ಬೇಕಾದ ಸಕಲ ನಿರ್ಧಾರಗಳನ್ನು ಕೈಕೊಳ್ಳಬೇಕೆಂದು ನಿಶ್ಚಯಿಸಲಾಗಿದೆ.

ಮಂಗಳೂರಿನ ಪಿಯರ್‌ಲೆಸ್ಲಿಯವರ ಎರಡು ಗೇರುಬೀಜದ ಕಾರ್ಖಾನೆಗಳಲ್ಲಿ ಸಾಗುತ್ತಿದ್ದ ಮುಷ್ಕರವು ತಾ. 15ರಂದು ನಿಲ್ಲಿಸಲ್ಪಟ್ಟಿದೆ. ಸರಕಾರವು ಪಂಚಾಯತರನ್ನು ನೇಮಿಸಿ ವಿವಾದವನ್ನು ತೀರ್ಮಾನಿಸಲಿರುವುದೆಂದು ಮಜೂರ ಸಂಘಕ್ಕೆ ತಿಳಿದುಬಂದುದರಿಂದ ಮುಷ್ಕರ ನಿಲ್ಲಿಸಲಾಗಿದೆ.

ವೈದ್ಯಮಂಡಲದ ತೃತೀಯ ಸಭೆಯು ತಾ. 16ರಂದು ನಡೆಯಿತು. ಶ್ರೀ. ಪಿ. ಕೆ. ಪಣಿಕ್ಕರ್ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮದ್ರಾಸು ಸರಕಾರದವರು ಆಸವಾರಿಷ್ಟಗಳ ಮೇಲೆ ಮದ್ಯನಿಷೇಧ ಕಾನೂನಿನನ್ವಯ ತೆರಿಗೆ ಹಾಕಿರುವುದು ಅನ್ಯಾಯ. ಸರಕಾರದವರು ಕೂಡಲೇ ಈ ನಿರ್ಬಂಧವನ್ನು ತೆಗೆದು ಹಾಕಬೇಕು. ಎಂಬ ನಿರ್ಣಯ ಮಾನ್ಯವಾಯಿತು.

ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಕಾಸರಗೋಡು ಇದೇ ದಶಂಬರ ತಿಂಗಳ 28,29,30ನೆಯ ತಾರೀಕುಗಳಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಸಾಹಿತ್ಯ ಗೋಷ್ಠಿ, ಮಹಿಳಾ ಗೋಷ್ಠಿ, ಏಕೀಕರಣ ಸಮ್ಮೇಳನಗಳು ಜರಗುತ್ತವಷ್ಟೆ ಆಯಾ ಗೋಷ್ಠಿಗಳಲ್ಲಿ ಪ್ರಬಂಧ ಉಪನ್ಯಾಸಗಳನ್ನು ಓದಲು ಇಚ್ಛಿಸುವವರು ತಮ್ಮ ಪ್ರಬಂಧ, ಉಪನ್ಯಾಸಗಳನ್ನು ಆಯಾ ಗೋಷ್ಠಿಗಳ ಕಾರ್ಯದರ್ಶಿಗಳಿಗೆ (ಕಾರ್ಯದರ್ಶಿ, ಕಾಸರಗೋಡು, ದ. ಕ.) ದಶಂಬರ ತಾ 20ರ ಒಳಗೆ ತಲಪುವ ವ್ಯವಸ್ಥೆ ಮಾಡಬೇಕು ಪ್ರಬಂಧ ಉಪನ್ಯಾಸಗಳು ಹೆಚ್ಚೆಂದರೆ ಇಪ್ಪತ್ತು ಮಿನಿಟುಗಳಲ್ಲಿ ಮುಗಿಯುವಂತೆ ಇರಬೇಕು.

1948 ಶಾರದಾ 1948
ಡೈರಿ
ಮತ್ತು
ಕೆಲೆಂಡರುಗಳು
ಮಾರಾಟಕ್ಕೆ ಸಿದ್ಧವಾಗಿವೆ.



ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು. ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ಕಸಿಗೆಯನ್ನು ಒಣಗಿಸಿ ಗುಣಪಡಿಸುವುದು. ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು.

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ಸುರಿಕಜ್ಜಿ, ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು.

ಜಾಂಬಕನ್ನೇ ಉಪಯೋಗಿಸಿರಿ.
Zam-Buk
ಜಗತ್ಖ್ಯಾತಿಯ ಗಿಡಮೂಲಿಕೆಯ ಮುಲಾಮು.
ಪ್ರಾಣಿಕೊಬ್ಬು ವಿರಹಿತವಾದ್ದು.

ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್‌ರಚಿಸಿ, ಚಿಕ್ಕಪುಟ್ಟ ಎಲ್ಲಾ ಚರ್ಮ ತೊಂದರೆಗಳ ಬೇನೆಯನ್ನ ಡಗಿಸುತ್ತದೆ. ಚರ್ಮ ಸ್ವಚ್ಛವಿರಿಸಿ ಗುಣಪಡಿಸುತ್ತದೆ.

ಕುಟಿಕೂರಾ ಮುಲಾಮು
CUTICURA OINTMENT

ಬಿಡಿಸಲಾಗದೊಂದು ಕಠಿಣ ಸಮಸ್ಯೆ

ಪಾಕಿಸ್ತಾನ ವಿರುದ್ಧ ಮುಸ್ಲಿಮರ ಹೋರಾಟ

ಮಹಾತ್ಮಾ ಗಾಂಧಿಯವರು ಇತ್ತೀಚಿಗಿನ ಹರಿಜನದಲ್ಲಿ ಒಂದು ಅಗ್ರಲೇಖ ಬರೆದುದರಲ್ಲಿ ಹೀಗೆ ತಿಳಿಸುತ್ತಾರೆ

ಓರ್ವ ಸ್ನೇಹಿತರು ಬರೆದಿದ್ದಾರೆ

"ಭಾರತ ಮತ್ತು ಪಾಕಿಸ್ತಾನಗಳೊಳಗೆ ಘರ್ಷಣೆಯಾಗುವುದರ ಕುರಿತು ವಿನೋದಕ್ಕಾಗಿಯಾದರೂ ಮಾತನಾಡದಿರುವುದೊಳಿತು. ಆದರೆ ನೀವು ಮಾತ್ರ ಇದಕ್ಕಿಂತಲೂ ಸ್ವಲ್ಪ ಮುಂದೆ ಸರಿದು ಎರಡು ಡೊಮಿನಿಯನ್ನುಗಳೊಳಗೆ ಯುದ್ಧವಾದಾಗ ಭಾರತದ ಮುಸ್ಲಿಮರು ಪಾಕಿಸ್ತಾನದ ಮುಸ್ಲಿಮರ ವಿರುದ್ಧ ಹೋರಾಡಬೇಕಾದುದು ಕರ್ತವ್ಯವೆಂದಿದ್ದೀರಿ ಅದೇ ರೀತಿ ಪಾಕಿಸ್ತಾನದೊಳಗಿನ ಹಿಂದೂಗಳು ಮತ್ತು ಇತರ ಮುಸ್ಲಿಮೇತರರು ಕೂಡಾ ಹಾಗೇ ಮಾಡಬೇಕಾದುದು ಅತ್ಯಾವಶ್ಯಕವೆಂಬುದ ಸ್ಪಷ್ಟವಾಗುವುದಿಲ್ಲವೆ? ಮುಂದಿನ ಈ ಯುದ್ಧ ಜಾತೀಯ ವ್ಯತ್ಯಾಸದ ತಳಹದಿಯಲ್ಲಿ ಸಂಭವಿಸಿದರ ಭಾರತ ಒಕ್ಕೂಟದ ಮುಸಲ್ಮಾನರ ಪಾಕಿಸ್ತಾನದ ಮುಸಲ್ಮಾನರೊಡನೆ ಕೈಮಾಡಬೇಕೆಂದು ಎಂದೂ ಒಪ್ಪರು ಅದೇ ರೀತಿ ಪಾಕಿಸ್ತಾನಗಳ ಮುಸಲ್ಮಾನೇತರರೂ ಒಪ್ಪಸುವರು ಒಂದು ವೇಳೆ ಈ ಯುದ್ಧವು ಜಾತೀಯವಲ್ಲದ ಇತರ ಕಾರಣಗಳಿಂದಾಗಿ ಆರಂಭಿಸಲ್ಪಟ್ಟರೆ ಪಾಕಿಸ್ತಾನದ ಹಿಂದೂಗಳು ಮತ್ತು ಭಾರತದ ಮುಸಲ್ಮಾನರು ಪಾಕಿಸ್ತಾನದ ವಿರೋಧವಾಗಿ ಹೋರಾಡಬೇಕೆಂದು ನೀವು ಹೇಳಲಿಚ್ಛಿಸಲಾರಿರಿ

ಎರಡು ಪ್ರಭುತ್ವಗಳೊಳಗೆ ಘರ್ಷಣೆಯಾಗುವುದರ ಕುರಿತು ವಿನೋದಕ್ಕಾಗಿ ಚರ್ಚಿಸಬಾರದೆಂಬುದು ನಿಸ್ಸಂದೇಹವಾಗಿ ಸತ್ಯಸಂಗತಿ ಆದರೆ ಯುದ್ಧ ಸಂಭವವು ಖಂಡಿತವಾದರೆ ಆ ಕುರಿತು ಚರ್ಚೆ ನಡೆಸುವುದು ಕರ್ತವ್ಯವೆನಿಸುವುದ ನಿಜ ಈ ಸಂದರ್ಭದಲ್ಲಿ ಯೋಗ್ಯ ಚರ್ಚೆ ನಡೆಸದಿದ್ದರೆ ಅವಿವೇಕವೆನಿಸಬಹುದು

ಭಾರತ ಒಕ್ಕೂಟದ ಮುಸಲ್ಮಾನರ ತತ್ವ ಪಾಕಿಸ್ತಾನದ ಮುಸ್ಲಿಮೇತರರಿಗೂ ಅನ್ವಯಿಸುವುದ ಇದನ್ನು ಹಲವು ಸಾರಿ ಒತ್ತಿ ಹೇಳಿದ್ದೇನೆ

ಈ ಅಭಿಪ್ರಾಯದ ಹಿಂದ ಕಾರಣ ಮಾಲಿಯೊಂದಿದೆ ನಿರ್ದೇಯತೆಯನ್ನು ಒತ್ತಾಯದಿಂದ ಗಳಿಸಲಾಗುವುದಿಲ್ಲ ಸಂದರ್ಭಗಳು ಅನಿಶ್ಚಿತವಾಗಿದ್ದರೆ ಅದನ್ನು ಹೊಂದುವುದು ಕಷ್ಟಸಾಧ್ಯ ನನ್ನ ಅಭಿಪ್ರಾಯಕ್ಕೆ ಹಾಸ್ಯ ಮಾಡುವವರು ಇದಾದ್ದರೆ ಕರ್ತವ್ಯವೆಂದು ತಿಳಿದರೆ ಭಾರತ ಮುಸ್ಲಿಮರು ಪಾಕಿಸ್ತಾನದವರ ವಿರುದ್ಧ ಖಂಡಿತ ಹೋರಾಡುವರು ಪಾಕಿಸ್ತಾನದಲ್ಲಿನ ಮುಸಲ್ಮಾನೇತರರು ಭಾರತದ ಮುಸಲ್ಮಾನರನ್ನು ಎಲ್ಲೋ ರೀತಿಯಲ್ಲಿ ನಡೆಸಲ್ಪಡಲಿಲ್ಲವೆಂಬ ಸಂಗತಿಯೂ ಅವರಿಗೆ ಸ್ಪಷ್ಟವಾಗಬೇಕು ಇದೇನು ಅಸಂಭವವಲ್ಲ

ಇದೇ ರೀತಿ ಪಾಕಿಸ್ತಾನದ ಮುಸ್ಲಿಮೇತರರಾದರೂ ಸತ್ಯಾಸತ್ಯ ನ್ಯಾಯಾನ್ಯಾಯಗಳನ್ನು ವಿವೇಚಿಸಿ ತಮ್ಮ ಕರ್ತವ್ಯವನ್ನೆಸಗಬಹುದು ಈ ಸಂದರ್ಭದಲ್ಲಿ ಅಲ್ಪಸಂಖ್ಯಾಕರನ್ನು ಒಲ್ಮೆಸಿಕೊಳ್ಳುವ ಯಾವ ಅವಶ್ಯಕತೆಯೂ ಇರುವುದಿಲ್ಲ

ನಮ್ಮ ದೇಶ ವಿಭಾಗಿಸಲ್ಪಟ್ಟದ್ದೊಂದು ದುರ್ವಿಧಿ, ಅದರಲ್ಲೂ ಜಾತೀಯ ವ್ಯತ್ಯಾಸ ಕಚ್ಚಾಟಗಳಿಂದದು ಆದದ್ದು ಇನ್ನಷ್ಟು ದುಃಖದ ಸಂಗತಿ. ಅದರ ಹಿನ್ನೆಲೆಯಲ್ಲಿ ಬೇರೆ ಆರ್ಥಿಕ ಕಾರಣಗಳೂ ಇರಬಹುದು ಆದರೆ ಅವು ಇಷ್ಟೊಂದು ವೈಷಮ್ಯವನ್ನು ತಂದೊಡ್ಡುತ್ತಿರಲಿಲ್ಲ. ಇಂದಿನ ನಂಜು ವಾತಾವರಣ ಜಾತೀಯತೆಯಿಂದಲೇ ಉಂಟಾಯಿತು ಅಮತೀಯತೆ ಮತೀಯತೆಯಾಗಿ ವಿರಾಜಿಸುತ್ತಿದೆ ಜಾತೀಯ ಪ್ರಶ್ನೆ ಇಲ್ಲದಿದ್ದರೆ ಒಳ್ಳೆದಿತ್ತೆಂದು ಹೇಳಿಕೊಳ್ಳಬಹುದು ಆದರೆ ನಿಜ ಸಂಗತಿಯನ್ನು ಮುಚ್ಚುವುದು ಹೇಗೆ? ಒಂದು ಜನತೆಯ ನಿಧೇಯತೆಯ ಕುರಿತು ಸಂದೇಹ ತಾಳುವುದು ಹಾಗೆ ಸಂದೇಹ ತಾಳದಿರುವುದಕ್ಕಿಂತ ಹಾನಿಕಾರಕವಾದುದು ಸತ್ಯ ಮತ್ತು ನ್ಯಾಯಕ್ಕಾಗಿ ಇತ್ತಂಡದ ಹಿಂದೂ ಮುಸಲ್ಮಾನರು ಇತ್ತಂಡದ ತಮ್ಮ ಸಹಮತೀಯರ ವಿರುದ್ಧ ಹೋರಾಡ ಬಲ್ಲರೆ? ಎಂಬುದು ಸರಳ ಪ್ರಶ್ನೆ ಚರಿತ್ರೆಯಲ್ಲಿ ಇಂತಹ ನಿದರ್ಶನಗಳಿಲ್ಲವೇನು" ಎಂಬಿನ್ನೊಂದು ಪ್ರಶ್ನೆಯಿಂದ ಇದನ್ನುತ್ತರಿಸಬಹುದು

ಇಂದು ಸತ್ಯಕ್ಕೆ ಮನ್ನಣೆ ಕಡಿಮೆಯಾಗಿರುವುದೇ ದೊಡ್ಡ ತೊಡಕಾಗಿದೆ ಇಂತಹ ಕಂಗಾಲು ಪರಿಸ್ಥಿತಿಯಲ್ಲಾದರೂ ಸತ್ಯವಿಜಯಕ್ಕಾಗಿ ಸ್ಥಿರ ನಿಲ್ಲುವವರಿದ್ದಾರೆಂಬುದನ್ನು ವಿಶ್ವಾಸಿಸಿ ನಾವು ಸಮಾಧಾನ ತಳೆದುಕೊಂಡಿರೋಣ

ಕಿರುಸುದ್ದಿ ಸಂಗ್ರಹ

ಹೊಗೆ ಸೊಪ್ಪಿನೊಳಗೆ ನಿಕೊಟಿನ್ ಎಂಬ ವಿಷ ಧಾತುವಿದೆ ಈ ಧಾತುವನಷ್ಟು ಇಲಿಯ ದೇಹದೊಳಗೆ ಸೇರಿಸಿ ಪ್ರಯೋಗ ನೋಡಿದಾಗ ನಿಕೊಟಿನ್ ಪಡೆದ ಇಲಿಯ ಸಂತಾನ ಸೃಷ್ಟಿಸುವ ಸಾಮರ್ಥ್ಯವು ನಿಕೊಟಿನ್ ರಹಿತವಾದ ಇಲಿಗಿಂತ ಅರ್ಧದಷ್ಟು ಕುಂದಿಹೋಗಿದೆಯೆಂದು ತಿಳಿದು ಬಂತು ಇಲಿಗಳಿಗಿಂತಲೂ ಮಾನವ ಶರೀರಗಳ ಮೇಲೆ ನಿಕೊಟಿನಿನ ದುಷ್ಪರಿಣಾಮವು ಹೆಚ್ಚಾಗಿರುತ್ತದೆ

✠

ಹನ್ನೊಂದು ವರ್ಷ ಪ್ರಾಯದ ಹುಡುಗನ ಹೊಟ್ಟೆಯಲ್ಲೊಂದು ಐದು ತಿಂಗಳ ಮಗುವಿತ್ತೆಂದು ರುಮೇನಿಯನ್ ಪತ್ರಿಕೆಗಳು ಪ್ರಕಟಿಸಿವೆ ಹೊಟ್ಟೆ ನೋವಿಗೆಂದು ಶಸ್ತ್ರಚಿಕಿತ್ಸೆ ನಡಸಿದಾಗ ಈ ವಿಚಿತ್ರ ಬೆಳಕಿಗೆ ಬಂತು ಅವಳಿ ಜವಳಿ ಹುಟ್ಟುವ ಬದಲು ಈ ರೀತಿ ಮಾರ್ಪಟ್ಟಿರಬಹುದೆಂದು ನಂಬಲಾಗಿದೆ

✠

ನ್ಯೂಯೋರ್ಕಿನ ಆಸ್ಪತ್ರೆಯಲ್ಲಿ ನಡೆದ ಶಸ್ತ್ರಚಿಕಿತ್ಸೆಯ ದೃಶ್ಯವೊಂದನ್ನು ... ವೈದಕೀಯ ಪರಿಷತ್ತಿನಲ್ಲಿ ಟೆಲಿವಿಜನ್ ಮೂಲಕ ಪ್ರದರ್ಶಿಸಲಾಯಿತು

✠

ಅಮೇರಿಕದಲ್ಲಿ ಹಲವು ಸ್ತ್ರೀಯರು ಸಿಂಹಗಳನ್ನು ಸರ್ಕಸಿಗಾಗಿ ಸಾಧು ಮಾಡುವ ವೃತ್ತಿಯನ್ನಿಟ್ಟುಕೊಂಡವರಿದ್ದಾರೆ ಆದರೆ ಇವರಲ್ಲೊಂದು ನಿರ್ಬಲತೆ ಸಾಮಾನ್ಯವಾಗಿರುವುದು ಕಂಡು ಬಂದಿದೆ ಇಲಿಯನ್ನು ಕಂಡರೆ ಗಾಬರಿಯಿಂದ ಮೂರ್ಛೆ ಹೋಗುವರು

✠

ನಿಕೋಲೆ ಎಂಬ ರಷ್ಯನ್ ವೈಮಾನಿಕನು ತನ್ನ 25 ವರ್ಷ ಅನುಭವದಲ್ಲಿ 1,875,000 ಮೈಲು ಹಾರಿರುವನಂತೆ. ತನ್ನದೇ ಜಗತ್ತಿನ ದಾಖಲೆ ಎಂದವನ ವಾದ.

✠

ವೀರ ಬಚ್ಚಾ

ಬಿರ್ಲಾ ಲೆಬೊರೇಟರೀಸ್

ಸೇಲ್ಸ್ ಆಫೀಸು

... ವಿಕ್ಟೋರಿಯಾ ಘಾಟ್ ಸ್ಟ್ರೀಟ್, ಕಲ್ಕತ್ತಾ

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೋಟಾರುಗಳಿಗೆ ಸಿಗುವ ಪೆಟ್ರೋಲು ... ದಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ... ವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ... ಅವುಗಳಿಂದ ... ನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡ... ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಂಭವಿಸ ... ಮಾತ್ರ ಸ್ಪೆಶಲು ರನು ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗಳೂರು ... ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡ... ಸಂದರ್ಭಗಳಲ್ಲಿ ... ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗ ವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ... ಸ್ಪೆಶ್ಯಲುಗಳು ... ಸಂದರ್ಭಗಳಲ್ಲಿ R T O ಕೊಯಂಬುತ್ತೂರು ಇವರಿಂದ ಪರ್ಮಿಶನ ಪಡೆಯ... ಸ್ಪೆಶ್ಯಲುಗಳಿಗೆ ... ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ ... ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು ಸ್ಪೆಶ್ಯಲುಗಳ ಒಪ್ಪಿ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ... 20 ದಿನಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ ಪ್ರಯಾಣಿಸದೆ ... ಗಳ ಚಾರ್ಜಿನ ಒಟ್ಟೆ ರಿಫಂಡ್ ಪಡಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪಾದವೂರಿಸುವ ಯಾ ಇತರ ಕಡೆಗೆ ಹೋಗ... ಪ್ರಯಾಣಿಕರಿಗೆ ಸಿಗ್ಗ... ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳೆಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು.
29-3-1947.

ಜ್ವೊಂಟ್ ಮೆನೇಜರ್ಸ್,
ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿಯು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years avialable to you for arranging Insurance Investment

It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:

MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra' 'ಭುವನೇಂದ್ರ'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour Also useful in habitual abortion and all diseases pertaining to the heart & lungs

Depot: **Maharaja Galli, Hubli**

Bhuvanendra Products Ltd.

Factory & Head Office

KATAPADI S. Kanara

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮಹಾರಾಜಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 4—12—1947 [ಸಂಚಿಕೆ 48]

ಏಕೀಕೃತ ಕರ್ನಾಟಕ ಮತ್ತು ವಿಶ್ವವಿದ್ಯಾಲಯ

ಸಾಹಿತ್ಯ ಪರಿಷತ್ತಿಗೊಂದು ಸಲಹೆ

ಅವು ಈಗ ಎಲ್ಲಿ ತನಕ ಪರಿಪೂರ್ಣಗೊಂ ವರ್ಷಗಳ ಸಂಗ್ರ ಸಂಭವಗಳಿಂದ ತಿಳಿಕೊ ದಿವೆಯೆಂದು ವಾಚಕರಿ ಈ ಮಧ್ಯದ 20 ಳ್ಳಬಹುದು.

1926ನೇ ಜೂನ್ 11ರ ಸ್ವದೇಶಾಭಿಮಾನಿಯು ಅಗ್ರಲೇಖದಲ್ಲಿ ಕರ್ನಾಟಕ ಏಕೀಕರಣ ಮತ್ತು ವಿಶ್ವವಿದ್ಯಾಲಯದ ಸಮಸ್ಯೆಗಳನ್ನು ಪರಿಹರಿಸುವುದರ ಕುರಿತು ಕೆಲವೊಂದು ಉಪಯುಕ್ತ ಸಲಹೆಗಳು ಕೊಡಲ್ಪಟ್ಟದ್ದನ್ನು ಈ ಕೆಳಗೆ ಉದಹರಿಸಲಾಗಿದೆ —

"ಕರ್ನಾಟಕ ವಿಶ್ವವಿದ್ಯಾಲಯ ರಚನೆಯೂ ಕರ್ನಾಟಕ ಏಕೀಕರಣವೂ ಅತೀ ಹತ್ತಿರದ ಸಂಬಂಧವುಳ್ಳ ಪ್ರಶ್ನೆಗಳಾಗಿವೆ ಮುಖ್ಯತಃ ಕರ್ನಾಟಕ ವಿಶ್ವ ವಿದ್ಯಾಲಯ ರಚನೆಯು ಕರ್ನಾಟಕ ಏಕೀಕರಣದ ಮೇಲೆಯೇ ಹೊಂದಿಕೊಂಡಿದೆ ಯಾವಾಗ ಕರ್ನಾಟಕ ಏಕೀಕರಣದ ಪ್ರಶ್ನೆಯು ತೀರಿ ಕರ್ನಾಟಕ ಏಕೀಕರಣವಾಗುವುದೊ ಆಗ ಮಾತ್ರವೇ ಕರ್ನಾಟಕ ವಿಶ್ವ ವಿದ್ಯಾಲಯದ ರಚನೆಯೂ ಸಾಧ್ಯವಾಗುವುದು

"ಮಾತ್ರವಲ್ಲದೆ ಗ್ರಂಥ ರಚನೆಗೂ ಸಂಪಾದನ ಮತ್ತು ಪ್ರಚಾರಣೆಗೂ ಕರ್ನಾಟಕ ಏಕೀಕರಣವೇ ಅಡಿಗಲ್ಲಾಗಬೇಕಾಗಿದೆ ಕರ್ನಾಟಕೀಯರೂ ಯಾವ ಪಕ್ಷಗಿಂತಲೂ ಇದನ್ನು ಮುಂದಾಗಿಟ್ಟು ತಮ್ಮ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸುವುದ ಅಗತ್ಯವಿದೆ ಕರ್ನಾಟಕ ಏಕೀಕರಣದಿಂದ ಮಾತ್ರ ಪ್ರಾಂತ್ಯ ರಚನೆಯಿಂದ ಒಳ್ಳೆ ಕರ್ನಾಟಕ ಉಜ್ಜೀವನಕ್ಕೆ ಅಗತ್ಯವಾದ ಎಲ್ಲ ಸಾಧನೆಗಳು ತನ್ನಷ್ಟಕ್ಕೆ ಸಾಧ್ಯವಾಗುವವು

"ಕರ್ನಾಟಕ ಸಾಹಿತ್ಯ ಸಮ್ಮೇಲನದ ಸಂಘಟನೆಗೆ ಕೂಡ ಕರ್ನಾಟಕ ಏಕೀಕರಣವೇ ಕಾರಣವಾಗತಕ್ಕುದ್ದಿದೆ"

ಪರಿಷತ್ತಿನ ಧ್ಯೇಯ

ಈ ಕುರಿತು ಮೇಲ್ಕಂಡ ನಮ್ಮ ಪತ್ರಿಕೆಯಲ್ಲಿ ಹೀಗೆ ಸೂಚಿಸಲಾಗಿದೆ 'ಜನತೆಯೊಳಗೆ ಕರ್ನಾಟಕ ಜ್ಞಾತನಾಭಿರುಚಿಯನ್ನು ಉಂಟುಮಾಡುವ ಬಗ್ಗೆ ಪರಿಷತ್ತಿನವರು ಹೆಚ್ಚು ಲಕ್ಷ್ಯ ಕೊಡತಕ್ಕದ್ದು ಯಾವ ತರದ ಗ್ರಂಥರಚನೆ ಯಾ ಸಾಹಿತ್ಯಾಭಿರುಚಿ ಪ್ರಚಾರಕ್ಕೆ ಇದು ಅತ್ಯಾವಶ್ಯಕ ಭಾಷಾಭಿಮಾನದಿಂದಲೇ ಹಿಂದೀ, ಗುಜರಾಥಿ, ಮರಾಠಿ, ಬಂಗಾಲಿ ಇತ್ಯಾದಿ ಭಾಷೆಗಳಲ್ಲಿಂದು ಉತ್ತಮ ಪುಸ್ತಕಗಳಾಗಿವೆ

"ಕರ್ನಾಟಕ ಪ್ರಾಂತ್ಯ ರಚನೆಯ ಸಮಸ್ಯೆಗಳನ್ನು ರಾಜಕೀಯವೆಂದು ಹೊರದೂಡದೆ ಕರ್ನಾಟಕ ಸಾಹಿತ್ಯ ಪರಿಷತ್ತು ಮುಂದೊತ್ತುವುದು ಅಗತ್ಯವಿದೆ."

1927ನೇ ಇಸವಿಯ ಮೇ 27ನೆಯ ಸಂಚಿಕೆಯಲ್ಲಿ ಸ್ವದೇಶಾಭಿಮಾನಿಯು ಈ ಕೆಳಗಿನ ಸೂಚನೆಗಳನ್ನೂ ಕೊಟ್ಟಿತ್ತು.

ಇನ್ಶೂರೆನ್ಸ್

ವಿಷಯವಿದ್ದರೆ

ನ್ಯೂ ಇಂಡಿಯಾ

ನೆನಪಿರಲಿ

ಪ್ರಮುಖ ಹಿಂದೀ ವಿಮಾ ಸಂಸ್ಥೆ

1946ರ ಪ್ರಗತಿಯ ಕೆಲವು ಮುಖ್ಯ ವಿಷಯಗಳು

(ಜೀವವಿಮೆ.) ಹೊಸ ವಹಿವಾಟು	ರೂ.	12	ಕೋಟಿಗಳಿಗೆ ಮಿಕ್ಕಿದೆ
ಊರ್ಜಿತದಲ್ಲಿರುವ ಪೋಲಿಸಿಗಳು	ರೂ	38	,, ,,
ಜುಮ್ಲಾ ಸೊತ್ತು	ರೂ.	10	,, ,,
ಸ್ಥಾಪಿತವಾದಂದಿನಿಂದ ತೆತ್ತ ಕ್ಲೈಮುಗಳು	ರೂ.	13	,, ,,

ಜೀವವಿಮೆ, ಬೆಂಕಿ, ನೌಕೆ, ಮೋಟಾರು ವಾಹನ, ವಾಯುಯಾನ, ಕೆಲಸಗಾರರ ವಿಷಯ ಪರಿಹಾರ, ಪ್ರಾಮಾಣಿಕತೆಯ ಗ್ಯಾರಂಟಿ ಮೊದಲಾದ ಎಲ್ಲಾ ತರದ ವಿಮೆಗೆ ಸಂಬಂಧಪಟ್ಟ ವಹಿವಾಟುಗಳನ್ನು ನಡೆಸುತ್ತದೆ

ನ್ಯೂ ಇಂಡಿಯಾ ಎಶೂರೆನ್ಸ್ ಕಂಪೆನಿ ಲಿಮಿಟೆಡ್.

(ಹೆಡ್ ಆಫೀಸು: ಬೊಂಬಾಯಿ)

ಮದ್ರಾಸು ಬ್ರಾಂಚ್: 4 ಮತ್ತು 5, ಫಸ್ಟ್ ಲ್ಯಾನ್ ಬೀಚ್.

ಸಬ್ ಆಫೀಸು: ಹಂಪನಕಟ್ಟಾ, ಮಂಗಳೂರು.

ಕರ್ನಾಟಕ ಪ್ರಾಂತ್ಯವಾಗದೆ ಕರ್ನಾಟಕ ವಿಶ್ವವಿದ್ಯಾಲಯವಾಗುವುದು ಕಷ್ಟಸಾಧ್ಯ. ಹಾಗೆ ಸಾಧ್ಯವಾದರೂ ಬ್ರಿಟಿಷ್ (ಈಗ ಭಾರತ) ಕರ್ನಾಟಕದ ಜನರಿಗೆ ಹಾನಿಯಾಗುತ್ತದೆ ವಿಶ್ವ ವಿದ್ಯಾಲಯ ಸ್ಥಾಪಿಸಿ ಆ ಮೂಲಕ ಏಕೀಕರಣ ಸಾಧಿಸುವುದು ಅಸಾಧ್ಯ

ಏಕೀಕರಣ ಮಾಡಲ್ಪಡುವ ಪ್ರಾಂತ್ಯ ಭಾಗಗಳನ್ನು ರೈಲು ಮಾರ್ಗಗಳಿಂದ ಸಂಬಂಧಿಸುವುದು ಅವಶ್ಯವಿದೆ

ಕರ್ನಾಟಕ ದೈನಿಕ ಪತ್ರಿಕೆಗಳನು ಇಂಗ್ಲಿಷ್ ದಿನ ಪತ್ರಿಕೆಯಂತೇ ಪ್ರಚಾರಗೊಳಿಸಿ ವಿಸ್ತೃತ ರೈಲು ದಾರಿಗಳ ಮೂಲಕ ಪ್ರಾಂತ್ಯಕ್ಕೆಲ್ಲಾ ತಲುಪಿಸಬೇಕು ಇದರಿಂದ ಸಂಪರ್ಕ ಹೆಚ್ಚುಗೊಳ್ಳುವುದು

ಮುಖ್ಯ ಮತ್ತು ಅತ್ಯಾವಶ್ಯಕತೆಯ ವಿಷಯಗಳನ್ನೇ ಬಿಟ್ಟು ಬಿಡುವುದು ಸಾಹಿತ್ಯ ಪರಿಷತ್ತಿನದೊಂದು ಸಾಮಾನ್ಯ ರೂಢಿಯಾಗಿದೆ

"ಪರಿಷತ್ತಿನ ಮತ್ತು ಸಮ್ಮೇಲನದ ಅಭಾವಗಳನ್ನೇ ನಾವು ತೋರಿಸಿರುವೆವಾದರೂ ಸಮ್ಮೇಲನದ ಕಠಿಣ ಅಭಿಮಾನವು ತಿಲಾಂಶವಾದರೂ ನಮ್ಮಲ್ಲಿ ಕಡಿಮೆಯಾಗಿಲ್ಲವೆಂಬುದನ್ನು ನಾವು ಇಲ್ಲಿ ಸೂಚಿಸಬಯಸುತ್ತೇವೆ"

ಇಂದಿನ ಪರಿಸ್ಥಿತಿ

ಇಂದಿನ ಸಾಹಿತ್ಯ ಪರಿಷತ್ತು ಸಾಹಿತ್ಯ ಮತ್ತು ರಾಜಕೀಯ ಸಂಘಟನೆ ಈ ಎರಡು ಪ್ರಮುಖ ವಿಷಯಗಳ ಮಧ್ಯ ತೂಗಾಡುತ್ತಿದೆ ಇವು ಒಂದಕ್ಕೊಂದು ಹೊಂದಿಕೊಂಡಿರುವ ಸಂಗತಿಗಳು. ಸಾಹಿತ್ಯ ಪರಿಷತ್ತು ವಾಙ್ಮಯ ಕ್ಷೇತ್ರದ ಪುನರುಜ್ಜೀವನಕ್ಕಾಗಿ ಹೇಗೊ ಜರ್ಝರಿತ ನಾಡಒಕ್ಕೂಟಕ್ಕಾಗಿಯೂ ಶಕ್ತಿ ವೆಚ್ಚ ಶ್ರಮಿಸಬೇಕು ಇಲ್ಲದಿದ್ದರೆ ಈ ಕಾರ್ಯವು ಬೇರೊಂದು ಪ್ರತ್ಯೇಕ ಪಕ್ಷದ ಹೆಗಲ ಮೇಲೆ ಬಿದ್ದು ಪರಿಷತ್ತು ಮುಂದೆ ಅನಾದರಕ್ಕೂ ಅಲಕ್ಷ್ಯಕ್ಕೂ ಪಾತ್ರವಾಗಬಹುದು

ಈಗಾಗಲೇ ವಿಶ್ವ ವಿದ್ಯಾಲಯ ರಚಿಸುವುದರ ಕುರಿತು ನೇಮಿಸಲ್ಪಟ್ಟ ಒಂದು ತಜ್ಞ ಸಮಿತಿ ಕರ್ನಾಟಕದ ಹಲವು ಭಾಗಗಳ ಶಿಕ್ಷಣಾಭಿಮಾನಿಗಳ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿದೆ. ಕರ್ನಾಟಕವನ್ನು ನಿರಂಕುಶ ಪಟ್ಟದರಸರ ಸೊಂಟಕ್ಕೆ ಸಿಕ್ಕಿಸುವ ಯೋಜನೆಯೂ ಒಂದು ವೇಗ ತಳೆಯುತ್ತಿದೆ. ಇದರ ನಿರ್ದಿಷ್ಟ ಸಾಧ್ಯಾಸಾಧ್ಯತೆ ಗುಣಾವಗುಣಗಳನ್ನು ವಿವೇಚಿಸಿ ಒಂದು ಇತ್ಯರ್ಥಕ್ಕೆ ಬರಲು ಪರಿಷತ್ತು ಪ್ರಯತ್ನಿಸತಕ್ಕದ್ದು.

ತುಳಸಿ ಎಲೆಯ ಹಲವು ಉಪಯೋಗಗಳು

ಪವಿತ್ರ ಪತ್ರದ ವಿಚಿತ್ರ ಗುಣ ಶಕ್ತಿ

ಅತಿ ಪ್ರಾಚೀನ ಕಾಲದಿಂದ ತುಲಸೀ ಪತ್ರವು ಭಾರತೀಯರಿಂದ ಪೂಜನೀಯ ವಾಗಿದೆ. ಈ ಸಸ್ಯ ಮಾನವಕೋಟಿಗೆ ಪರಮಾತ್ಮನಿಂದೊಂದು ವರಪ್ರಧಾನವೆಂದೆನಿಸ ಲ್ಪಟ್ಟಿದೆ. ಆಯುರ್ವೇದ ಶಾಸ್ತ್ರದಲ್ಲೂ ತುಳಸಿ ಎಲೆಗೆ ಅತ್ಯುಚ್ಚ ಪ್ರಾಶಸ್ತ್ಯ ಕೊಡ ಲಾಗಿದೆ. ಈ ಗಿಡದಿಂದ ಅದೆಷ್ಟು ದೀರ್ಘ ಕಾಲದ ಕಾಯಿಲೆಯನ್ನಾದರೂ ಗುಣಪಡಿ ಸಬಹುದಾದ ಔಷಧಿಯನ್ನು ತಯಾರಿಸ ಬಹುದೆಂದು ಹೇಳಲ್ಪಟ್ಟಿದೆ. ಸೇಲಮಿನ ಬಳಿಯಿರುವ ಆನಂದಾಶ್ರಮದ ಸ್ವಾಮಿಜಿ ಯವರು ತಮ್ಮ ಅನುಭವದಿಂದ ಈ ಕೆಳ ಗಿನ ತುಳಸಿ ಎಲೆ ಪರಿಹಾರಗಳನ್ನು ಸೂಚಿ ಸಿದ್ದಾರೆ:

ಉಬ್ಬಸಕ್ಕೆ: 25 ತೊಲಿ ತುಳಸಿ ಎಲೆ ಗಳು 16 ತೊಲೆ ಶುಂಠಿ ಹುಡಿ, 3 ತೊಲೆ ಲವಂಗ ಹುಡಿ, 4 ತೊಲೆ ಕಲ್ಲುಸಕ್ಕರೆ, ಇವಿಷ್ಟನ್ನೂ 25 ತೊಲೆ ನೀರಲ್ಲಿ 2 ಗಂಟೆ ಕುದಿಸಿ, ಮತ್ತೆ ಗಾಳಿಸಬೇಕು. ತಣ್ಣಗಾದ ಮೇಲೆ ಬಾಟ್ಲಿಗಳಲ್ಲಿ ಹಾಕಿಡಬೇಕು. ಈ ಪರಿಹಾರ ಉಬ್ಬಸದ ಪ್ರಾರಂಭಾವಸ್ಥೆ ಯಲ್ಲಿ ಅತ್ಯಂತ ಪರಿಣಾಮಕಾರಿ. ಖಾಲಿ ಹೊಟ್ಟೆಯ ಮೇಲೆ ಪ್ರಾತಃಕಾಲ 7 ಗಂಟೆ ಗೊಂದು ಟೀ ಚಮಚದಷ್ಟು ತೆಗೆದುಕೊ ಳ್ಳುವುದು. ಮತ್ತೆ 3 ಮತ್ತು 9 ಗಂಟೆ ಗೊಂದೊಂದು ಸಲ ತೆಗೆದುಕೊಳ್ಳುವುದು. ಪ್ರತಿ ವಾರಕ್ಕೊಂದು ಸಲ ತಯಾರಿಸಿ 45 ದಿವಸಗಳ ತನಕ ಸೇವಿಸುವಾಗ ವ್ಯಾಧಿ ಯು ನಿರ್ಮೂಲವಾಗುವುದು.

ಅರ್ಧ ತಲೆನೋವು: 1 ತೊಲೆ ತುಳಸಿ ಎಲೆ ರಸ, ¼ ತೊಲೆ ಶುಂಠಿ ಚೂರ್ಣ ಇವನ್ನು ಮಿಶ್ರಮಾಡಿ 2 ಯಾ 3 ಬೊಟ್ಟು ನೀಲಗಿರಿ ಎಣ್ಣೆ ಸೇರಿಸಿ ನೋವಿದ್ದ ಭಾಗಕ್ಕೆ ಹಚ್ಚುವುದು. ಇದನ್ನು ದಿನಂಪ್ರತಿ ತಯಾ ರಿಸಬೇಕು.

ಗಂಟುನೋವು: ಕಾಲು ತೊಲೆ ಲವಂ ಗದೆಣ್ಣೆ, 2 ತೊಲೆ ತುಲಸಿ ರಸ, ಇವನ್ನು ಮಿಶ್ರಮಾಡಿ, ಗಂಟುಗಳಿಗೆ ಸವರಬೇಕು. ಪ್ರತಿ ಎರಡು ದಿನಗಳಿಗೊಮ್ಮೆ ಇದನ್ನು ತಯಾರಿಸಬೇಕು.

ಕಿವಿನೋವು: ಮಲಗುವ ಹೊತ್ತಿಗೆ 2 ತೊಲೆ ತುಲಸಿ ಎಲೆ ರಸವನ್ನು ತೆಗೆದು ಕೊಂಡು 1 ತೊಲೆ ಹರಳೆಣ್ಣೆಯನ್ನೂ ¼ ತೊಲೆ ಸಾಂಬ್ರಾಣಿ ಹುಡಿಯನ್ನೂ ಮಿಶ್ರ ಮಾಡಿ ಸ್ವಲ್ಪ ಉಷ್ಣತೆ ಕೊಡಬೇಕು. ತಣ್ಣಗಾದಾಗ ಕಿವಿಗೆ ಲೇಪಿಸಿರಿ. ಇದನ್ನು ದಿನಾಲೂ ತಯಾರಿಸಬೇಕು.

ಅಗ್ನಿಮಾಂದ್ಯ: 25 ಎಲೆಗಳನ್ನು ತೆಗೆ ದುಕೊಂಡು, ಅದಕ್ಕೆ ಸ್ವಲ್ಪ ಜೀರಿಗೆ ಮತ್ತು ತಾಳೆ (ಓಲೆ) ಬೆಲ್ಲವನ್ನು ಸೇರಿಸಿರಿ. ಚೆನ್ನಾಗಿ ಅರೆದು ಮಾತ್ರೆಗಳನ್ನಾಗಿ ಮಾಡಬೇಕು. ರಾತ್ರೆ ಮಲಗುವಾಗ ಇದನ್ನು ಸೇವಿಸಿರಿ.

ಮೂತ್ರ ಬಾಧೆ: 45 ತುಲಸಿ ಎಲೆ, 25 ಕಹಿಬೇವಿನ ಎಲೆಗಳನ್ನು ತೆಗೆದುಕೊ ಳ್ಳಿರಿ. ಇವನ್ನು ಚೆನ್ನಾಗಿ ಅರೆದು ರಸ ತೆಗೆ ಯಿರಿ. ಎರಡು ಔನ್ಸ್ ನೀರಿನೊಂದಿಗೆ ಬೆರ ಸಿ ರಾತ್ರೆ ಹೊತ್ತಿನಲ್ಲಿ ಕುಡಿಯಿರಿ.

ತುರಿಗಜ್ಜಿ: 60 ತುಲಸಿ ಎಲೆಗಳು, 1 ನಿಂಬೆ ಹಣ್ಣಿನ ಮತ್ತೊಂದು ನೀರುಳ್ಳಿ ಯ ರಸವನ್ನು ಚೆನ್ನಾಗಿ ಮಿಶ್ರಮಾಡಿ ಬೆಳ ಗ್ಗಿನ ಹೊತ್ತು ತುರಿಗಜ್ಜಿಗೆ ತಾಗಿಸುವುದು. ಒಂದು ಗಂಟೆ ನಂತರ ಸ್ನಾನ ಮಾಡ ಬೇಕು.

ಉಷ್ಣದಿಂದ ಹೊಟ್ಟೆನೋವು: ರಾತ್ರಿ ಊಟದ ಅರ್ಧ ತಾಸು ಮೊದಲು ಈ ಕೆಳ ಗಿನವುಗಳನ್ನು ಮಿಶ್ರಮಾಡಿರಿ: ತೆಂಗಿನ ಕಾಯಿ ಹೂವಿನ ರಸ 3 ತೊಲೆ, ತುಲಸಿ ರಸ ಅರ್ಧ ತೊಲೆ, ಜೇನುತುಪ್ಪ 5 ಬೊಟ್ಟು ಗಳು, ಒಂದು ಉಪ್ಪಿನ ಹರಳು. ಇದನ್ನು ಕುಡಿದುಬಿಡುವುದು.

ನಿದ್ದೆಯಿಲ್ಲದಿರುವಿಕೆ: ಮಲಗುವ ಹೊ ತ್ತಿಗೆ ¼ ತೊಲೆ ತುಲಸಿ ರಸ ಶುಂಠಿ ಹುಡಿ 2 ಕಾಳುಗಳಷ್ಟು, 3 ಔನ್ಸ್ ಆಡಿನ ಹಾಲು ಇವನ್ನು ಮಿಶ್ರಮಾಡಿ ಕುಡಿಯುವುದು.

ಕ್ಷೌರ ಹುಳು ಮೇಯುವಿಕೆ: 1 ತೊಲೆ, ತುಲಸಿ ಎಲೆ ರಸ, 10 ತೊಲೆ ಬೆಳ್ಳುಳ್ಳಿ, ಅರಸಿನ ಹುಡಿ ¼ ತೊಲೆ, ಇವ ನ್ನು ಚೆನ್ನಾಗಿ ಅರೆದು ಹುಳದ ಭಾಗಕ್ಕೆ ಲೇಪಿಸುವುದು. ಶೇಕಡಾ ನೂರರಷ್ಟು ಗುಣಾಂಶ ಖಂಡಿತ.

ಕಣ್ಣು ಉರಿಯುವಿಕೆ: ಎಳ್ಳೆಣ್ಣೆ 15 ಔನ್ಸ್, ತುಲಸಿ ಎಲೆ ರಸ 6 ಔನ್ಸ್ ನಿಂಬೆ ಹಣ್ಣು ರಸ 2 ಔನ್ಸ್ ಇವನ್ನು ಮಿಶ್ರ ಮಾಡಿ ಕುದಿಸಿ ತಣಿಸಬೇಕು. ಇದನ್ನು ತಲೆಗೆ ಸವರಿ ಒಂದು ಗಂಟೆ ನಂತರ ಬಿಸಿ ನೀರು ಸ್ನಾನ ಮಾಡಬೇಕು. ವಾರಕ್ಕೊಂ ದಾವರ್ತಿ ಹೀಗೆ ಮಾಡುತ್ತಿರಬೇಕು.

ಖೂನಿಗಾರರ ಪತ್ತೆಗೆ ಮಡಿವಾಳರು

ಬ್ರಿಟಿಷ ರಜಕ ಸಂಘದ ನಿರ್ಣಯ

ಅದೃಶ್ಯವಾಗಿರುವ ಬಟ್ಟೆ ಗುರುತುಗಳು

ಬ್ರಿಟನಿನ ಗುಪ್ತ ಪೋಲೀಸರ ಕಾರ್ಯ ಕಲಾಪಗಳಲ್ಲಿ ಸಹಾಯ ಮಾಡುವ ಚಾಣ ಕ್ಷ ವ್ಯಕ್ತಿಯೊಬ್ಬ ಮುಂದೆ ಬಂದಿದ್ದಾನೆ. ಅವನೇ ಅಲ್ಲಿನ ಮಡಿವಾಳ. ಅವನು ಖೂನಿ ಗಾರರನ್ನು ಪತ್ತೆಮಾಡುವ ವೈಜ್ಞಾನಿಕ ವಿಧಾನದಲ್ಲಿ ಸಹಾಯಕನಾಗುವನು.

ಅಪಾದಿತರ ಗುರುತು ಹಿಡಿಯಲೂ, ಮತ್ತು ಕೊಲೆಗಡುಕರನ್ನು ಶೋಧಿಸಲೂ ಇಂದು ಬ್ರಿಟನಿನಲ್ಲಿನ 'ಮಡಿವಾಳರ-ಸಹಾ ಯವನ್ನು ಹೆಚ್ಚೆಚ್ಚಾಗಿ ಉಪಯೋಗಿಸಿ ಕೊಳ್ಳಲಾಗುತ್ತದೆ.

ಅಲ್ಲಿ ರಜಕ ವರ್ಗದವರದ್ದೇ ಒಂದು ವರ್ತಮಾನ ಪತ್ರವಿದೆ. ಅದರಲ್ಲಿನ ಪ್ರಕ ಟಣೆಗಳಲ್ಲಿ "ಪೋಲಿಸ್ ಪ್ರಕಟಣೆ"ಗಳೆಂಬ ಪ್ರತ್ಯೇಕ ವಿಭಾಗ ಮುದ್ರಿತವಾಗುತ್ತಿದೆ. ತಜ್ಞ ಪರಿಶೋಧಕರು ಹೆಸರು ವಿಳಾಸಗ ಳಾಗಿ ಮಾರ್ಪಡಿಸಬಹುದಾದ ಅನೇಕ ರಹಸ್ಯ ಅಕ್ಷರ ಗುಂಪುಗಳೂ ಸಂಕೇತ ಗಳೂ, ಗುರುತುಗಳೂ ಅದರಲ್ಲಿ ಕೊಡಲ್ಪ ಡುತ್ತವೆ. ಖೂನಿಗಾರನು ತನ್ನ ಅಕೃತ್ಯ ವನ್ನು ನಿರ್ವಹಿಸುವ ಭರದಲ್ಲಿ ಬಿಟ್ಟುಬಿಟ್ಟ ಒಂದು ಕೈವಸ್ತ್ರವು ಅವನ ಹೆಸರು ವಿಳಾಸ ವಿರುವ ಚೀಟಿಯಷ್ಟೇ ಅಲ್ಲಿಯ ಡೋಬಿಗೆ ಸಹಾಯವಾಗುತ್ತವೆ.

ಬ್ರಿಟನಿನಲ್ಲಿ ಇಂದು 80 ಲಕ್ಷ ಪ್ರತ ಪ್ರತ್ಯೇಕ ಬಟ್ಟೆಗುರುತುಗಳಿವೆ. ಪ್ರತಿ ಯೊಂದು ಜಿಲ್ಲೆಯ ಪತ್ತೆದಾರರಿಗೆ ತಮ್ಮ ಪ್ರದೇಶದ ವಸ್ತ್ರ ಗುರುತುಗಳು ಸ್ಮರಣೆಯಲ್ಲಿ ರುತ್ತವೆ. ಕೆಲವೊಂದು ಸಲ ರಹಸ್ಯವೂ ಅಗುಂತುಕವೂ ಆದ ಗುರುತುಗಳು ತಲೆ ಯೆತ್ತುತ್ತವೆ. ಆಗ ಮಡಿವಾಳರಂಗಡಿಯ ಲ್ಲಿನ ಪತ್ತೆದಾರರನ್ನು ಕರೆಸಿ ಪರಿಶೋಧನೆ ನಡೆಸಲಾಗುವುದು.

ಇತ್ತೀಚೆಗೆ ಲಂಡನಿನ ಸ್ಕೊಟ್ಲೆಂಡ್ ಯಾರ್ಡಿನಲ್ಲಿ ಬ್ರಿಟಿಷ್ ರಜಕರ ಪರಿ ಷತ್ತೊಂದು ಜರಗಿದಾಗ ಎಲ್ಲಾ ಬಟ್ಟೆಗುರು ತುಗಳ ಒಂದು ಯಾದಿಯನ್ನು ತಯಾರಿಸ ಬೇಕೆಂದು ನಿರ್ಣಯಿಸಲಾಯಿತು. ಬಟ್ಟೆ ಗುರುಗಳನ್ನು ಮರೆಮಾಡುವ ಚಾಣಾಕ್ಷ ಖೂನಿಗಾರರಿಗೆ ಇದರಿಂದೇನು ಪ್ರಯೋಜ ನವೆಂದು ನೀವು ಕೇಳಬಹುದು, ಆದರೆ ಇತ್ತೀಚೆಗೆ ಸಾಮಾನ್ಯರ ಕಣ್ಣಿಗೆ ಕಾಣದಿರುವ ಮತ್ತು ಅಲ್ಟ್ರಾವೈಯಲೆಟ್ ಕಿರಣ ಪ್ರಕಾಶ ದಲ್ಲಿ ಮಾತ್ರ ಗೋಚರಕ್ಕೆ ಬರುವ ಅದೃಶ ಬಟ್ಟೆ ಚಿಹ್ನೆಗಳನ್ನು ಅಲ್ಲಿ ಕಂಡುಹಿಡಿಯ ಲಾಗಿದೆ. ಒಟ್ಟೆ ಗಿರಣಿಯಲ್ಲಿ ತಯಾ ರಾದ ಬಟ್ಟೆಗಳು ಮಡಿಮಾಡಲ್ಪಡುವು ವಷ್ಟೇ, ಆಗಲೇ ಈ ಗುರುತುಗಳನ್ನು ಅದ ರಲ್ಲಿ ಮುದ್ರಿಸಲಾಗುವುದು.

ಬೊಂಬಾಯಿಯ ಊಟದ ಹೋಟೆಲಿಗೆ ಬಂದೊರ್ವ ಹಸಿದ ಗಿರಾಕಿ ಒಂದು ಸಲದ ಅನ್ನ ತಿಂದು ಮತ್ತೊಂದು ತುತ್ತು ಕೇಳಿ ದಾಗ ತಿರಸ್ಕರಿಸಲ್ಪಟ್ಟ. ಕುಪಿತನಾದ ಗಿರಾಕಿ ಮೇಜು ಒಡೆದು, ಕನ್ನಡಿ ಚೂರು ಮಾಡಿ 50 ರೂಪಾಯಿ ಹಿಡಕೊಂಡು ಪರಾರಿ ಯಾದ.

ನರ ದುರ್ಬಲತೆಯ ಪರಿಹಾರ ಔಷಧಿ ಯೊಂದನ್ನು ಮಾರುವವನಿಗೆ ಒರ್ವ ಗಿರಾಕಿ ಹೀಗೆ ಸರ್ಟಿಫಿಕೇಟು ಕಳುಹಿಸಿದ: "ನಮ್ಮ ಮದ್ದು ಸೇವಿಸುವ ಮುನ್ನ ನನ್ನ ಅರ್ಧಾಂ ಗಿಯ ಬಳಿ ನಿದ್ರಿಸುವುದು ಅಸಾಧ್ಯವಿತ್ತು ಈಗ ಯಾರೂ ಅವಳ ಬಳಿ ಒರಗಬಹುದು."

ಪ್ರಣಯನಿಂದ ಚುಂಬಿತಳಾದ ಸ್ತ್ರೀ ಯೋರ್ವಳ ತುಟಿಗಳು ಒಂದೇ ಸಮ ತುರಿಸಹತ್ತಿ ಉರಿಯಲಾರಂಭಿಸಿದ್ದು ಅವಳು ಹಚ್ಚುವ ತುಟಿ ಲೇಪ, ಪೌಡರ ಗಳಲ್ಲಿ ದೋಷಗಳಿವೆಯೊ ಎಂದು ತಜ್ಞರ ಪರಿಶೀಲನೆ ಮಾಡಿದರು. ಕೊನೆಗೆ ಪ್ರಣ ಯನು ಮೀಸೆ ಹುರಿ ಮಾಡಲು ಹಚ್ಚು ಮಯಣದಿಂದ ಹಾಗಾಯಿತೆಂದು ತಿಳಿದ ಬಂತು.

ಪ್ರಧಾನ ಶಿರೋಮಣಿ ಜವಾಹರಲಾಲ್ ನೆಹ್ರೂ

ಜಗತ್ತು ಇವರ ಜನ್ಮದಿನವಾಚರಿಸಿತು

ನವ ನಾಗರೀಕತೆಯ ಯುವಕ ದುರೀಣರು

ಸ್ವತಂತ್ರವಾದ ಭಾರತದ ರಾಜ್ಯಾಡಳಿತದ ಚುಕ್ಕಾಣಿ ಹಿಡಿದಿರುವ ನಮ್ಮ ಮುಖ್ಯ ಪ್ರಧಾನರ ವಿಷಯ ಗಣನೀಯವಾದೊಂದು ಸಂಗತಿಯೆಂದರೆ ಅವರು ಆಧುನಿಕ ಯುಗದ ಧ್ಯೇಯ ವಿಚಾರಗಳ ಪ್ರತೀಕವಾಗಿರುವುದು ಪರಕೀಯ ಒಡೆತನದಿಂದ ನವ ಜಾಗೃತಿ ಹೊಂದಿ ಕಾರ್ಯ ಪ್ರೇರಣೆಯನ್ನುಂಟು ಮಾಡಿದ ಕಾಲವಿದು ಇದರ ಭಾವಾವೇಶವು ಗತವೈಭವದ ಮೇಲೆ ಅತೀ ಹೆಮ್ಮೆಯನ್ನು ತಾಳಿ ಆ ಪ್ರಾಚೀನಾನುಭವವನ್ನು ಭಾವೀ ಆಶೆ ಹಾರೈಕೆಗಳ ಪರಿಪೂರ್ಣತೆಗೆ ಪ್ರಯತ್ನ ಮಾಡುವಂತಹುದಾಗಿದ್ದು ತನ್ಮೂಲಕ ನೂತನ ಭಾರತವೊಂದರ ರಚನೆಗೆ ಹೆಣಗುವಂತಹುದಾಗಿದೆ ಮಾತ್ರವಲ್ಲ, ಒಂದು ನೂತನ ಆಸ್ಮವನ್ನೇ ಅಲ್ಲ, ಒಂದು ನವೀನ ಭೂಸ್ವರ್ಗವನ್ನೇ ನಿರ್ಮಿಸುವುದು ಅದರ ಉದ್ದೇಶವಾಗಿದೆ

ಜವಾಹರರ ಪರಿಚಯವಿದ್ದವರಿಗೆ ಅವರು ಇಂದಿನ ತಲಾಂತರದ ಸತ್ಪ್ರತಿನಿಧಿಗಳಾಗಿರುವರೆಂಬ ಸಂಗತಿಯು ವಿಚಿತ್ರವಾಗದಿರಲಿಕ್ಕಿಲ್ಲ ಇಂದು ಮಹಾತ್ಮರು ಸಾಮಾನ್ಯ ಮಾನವರಿಗೆ ಎಟುಕದ ಅತೀ ದೂರವಿರುವ ಉದಾತ್ತ ಧ್ಯೇಯವಾದಿಗಳಾಗಿರುವರು ಅವರದು ಹಲವು ಬಾರಿ ಅರಣ್ಯ ಮಧ್ಯದೊಳಗಿನ ಏಕಾಂತ ಧ್ವನಿಯಾಗಿದೆ ಅವರ ತತ್ವಗಳು ಕಾರ್ಯ ಧೋರಣೆಗಳೂ ಆದರ್ಶದ [illegible] ಉನ್ನತ ಧ್ಯೇಯದವು ಆಗಿವೆ ಆದರೆ ಇವು ಕಾರ್ಯರೂಪಕ್ಕೆ ತರಲು ಹೆಚ್ಚಿನವರಿಗೆ ಕಷ್ಟತರವೆಂದೆ [illegible] ಅವರ ಹತ್ತಿರದ ಕೆಲವು ಅನುಯಾಯಿಗಳಿಗೂ ಇದು ಕಷ್ಟವೆಂದೇ ತೋರುತ್ತದೆ ಮಾನವ ಪ್ರಕೃತಿಗೆ ಮಿಗಿಲಾದುದನ್ನು ಅವರು [illegible] ಬಯಸುವರೆಂದು [illegible]

★

ಆದರೆ ಜವಾಹರರ [illegible] ವಂತ ವ್ಯಕ್ತಿ [illegible] ತಿಳಕೊಳ್ಳುವ ತರಹ [illegible] ಈ ಸರ್ಗದ [illegible] ಅರ್ವಾಚೀನಗಳ ಪಾಶ್ಚಿಮಾತ್ಯ ಪೌರ್ವಾತ್ಯ ಸಂಸ್ಕೃತಿಗಳ ವಿಚಿತ್ರ ಮಿಶ್ರಣವಾಗಿದೆ [illegible] ಪ್ರಾಚೀನ ಸಂಸ್ಕೃತಿಯು [illegible] ಮೇಲೆ ಪರಿಣಾಮ ಮಾಡುತ್ತದೆ ಅದು ಅವನು ನಿಶ್ವಾಸಿಸುವ ಗಾಳಿಯಲ್ಲೇ ಪರಿವ್ಯಾಪ್ತವಾಗಿದೆ ಆದರೆ ಪಾಶ್ಚಿಮಾತ್ಯದಿಂದ ಬಂದಿರುವ ವಿಚಾರ ಸರಣಿಯಿಂದಲೂ ಅದು ಪ್ರಭಾವಿತವಾಗಿದೆ ಹಲವು ಬಾರಿ ಈ ಪ್ರಾಚೀನ ಆಧುನಿಕಗಳು ಪರಸ್ಪರ ಘರ್ಷಣೆಗೊಳ್ಳುತ್ತವೆ ಈ ಘರ್ಷಣೆಯ ಪರಿಣಾಮವಾಗಿಯೇ ಜವಾಹರಲಾಲರಲ್ಲಿ ನಿರಂತರವಾದ ಶಂಕೆ ಸಂಕೋಚಗಳು ತಲೆದೋರಿವೆ ಪ್ರಾಚೀನ ಪೌರ್ವಾತ್ಯದ ಸಾಂಸ್ಕೃತಿಕ ರಕ್ತವು ಅವರ ಧಮನಿಗಳಲ್ಲಿಂದು ಹರಿಯುತಿದ್ದುದರಿಂದಲೇ ಅವರು ಗಾಂಧೀಜಿಯ ಸರಳ ಜೀವನಾದರ್ಶ, ಕಾರ್ಯ ಧೋರಣೆ, ತತ್ವ ಜ್ಞಾನಗಳನ್ನವರು ಶ್ರದ್ಧೆಯಿಂದನುಸರಿಸುವವರಾಗಿದ್ದಾರೆ ಇದಕ್ಕೆ ವಿರುದ್ಧವಾಗಿ ಪಾಶ್ಚಿಮಾತ್ಯ ನಾಗರೀಕತೆಯ ಲೌಕಿಕ ಸುಖಾಭಿಲಾಷೆಗಳೂ, ಉನ್ನತ ಜೀವನ ಸೌಕರ್ಯ ಕೋರಿಕೆಗಳೂ, ವ್ಯಯಕ್ತೀಕ ಮತ್ತು ರಾಷ್ಟ್ರೀಯ ಜೀವನವನ್ನು ಕೇಂದ್ರೀಕೃತ ವ್ಯವಸ್ಥಾಪನೆಯಿಂದ ನಿಯಂತ್ರಣಗೊಳಿಸುವ ಔದ್ಯೋಗೀಕರಣದ ಧ್ಯೇಯಗಳೂ ಅವರ ಕಲ್ಪನೆಯನ್ನಾಕರ್ಷಿಸಿವೆ.

ಗಾಂಧೀಜಿಯಂತೆ ಜವಾಹರ ಲಾಲರು ಪಾಶ್ಚಿಮಾತ್ಯದಿಂದ ವಿಮುಖರಾಗಿ ಪೌರ್ವಾತ್ಯವು ತನ್ನನ್ನು ಸಂಪೂರ್ಣ ಆವರಿಸಲು ಬಿಟ್ಟಿರುವುದಾದರೆ ಗಾಂಧೀಜಿಯಂತೆ ಅವರೂ ಸ್ಪಷ್ಟ ವಿಚಾರಾದರ್ಶವುಳ್ಳವರಾಗಿ ತಿಳಿಯಲ್ಪಡುತ್ತಾರೆ ಒಂದು ವೇಳೆ ಅವರು ಪಾಶ್ಚಿಮಾತ್ಯವನ್ನೆ–ಕಮ್ಯೂನಿಸ್ಟರಂತೆ ಅನುಸರಿಸಿದ್ದರೆ ವಿಚಾರ ಮತ್ತು ಕಾರ್ಯ ಸಾಧನೆಯೊಳಗೆ ಪರಸ್ಪರ ಐಕ್ಯವುಂಟಾಗಲು ಸಹಾಯವಾಗುತಿತ್ತು

ಆದರೆ ನಮ್ಮ ದೇಶದ ಸರ್ವ ಸಾಮಾನ್ಯ ಶಿಕ್ಷಿತ ವ್ಯಕ್ತಿಯಂತೆ ಅವರು ತಮ್ಮಲ್ಲಿ ಪಾಶ್ಚಿಮಾತ್ಯ ಪೌರ್ವಾತ್ಯಗಳು ಪ್ರಭಾವವನ್ನುಂಟುಮಾಡಲು ಆಸ್ಪದವಿತ್ತವರು ಒಂದೇ ವಸ್ತುಗಳು ದೊಡ್ಡ ಕೈಗಾರಿಕಯಿಂದಲೂ ಗುಡಿ ಕೈಗಾರಿಕೆಯಿಂದಲೂ ತಯಾರಿಸಲ್ಪಡಲು ಅವರು ಸಮ್ಮತಿಸುತ್ತಾರೆ ಆದರೆ ಇವೆರಡು ಹತ್ತಿರ ಹತ್ತಿರ ಬಾಳಬಲ್ಲುವೆ ಎಂಬುದನ್ನು ಅವರು ಪರ್ಯಾಲೋಚಿಸಲಿಲ್ಲ ಕೇಂದ್ರೀಕೃತ ಆಡಳಿತಾಧಿಕಾರದ ಆವಶ್ಯಕತೆಯಿರುವ ಔದ್ಯೋಗೀಕರಣವನ್ನವರು ಬಯಸುತ್ತಾರೆ. ಅದೇ ಸಮಯಕ್ಕೆ ಹಳ್ಳಿಗರಿಗೆ ಅತೀ ಹೆಚ್ಚಿನ ಹಕ್ಕು ಬಾಧ್ಯತೆಗಳನ್ನು ಕೊಡುವ ಗ್ರಾಮ ಪಂಚಾಯತ ರಾಜ್ಯವನ್ನು ಸ್ಥಾಪಿಸಲೂ ಇಚ್ಛಿಸುತ್ತಾರೆ ಸಾಮ್ರಾಜ್ಯಶಾಹಿ ಮತ್ತು ಬಲಿಷ್ಠರು ನಿರ್ಬಲರ ಸುಲಿಗೆ ಮಾಡುವುದನ್ನು ನಿರ್ಮೂಲಿಸಲು ಅವರು ಆಶಿಸುತ್ತಾರೆ ಅದೇ ಸಮಯಕ್ಕೆ ಈ ಕಡುಕುಗಳಿಗೆ ಆಸ್ಪದ ಕೊಡುವ ಔದ್ಯೋಗೀಕರಣವನ್ನೂ ಮೆಚ್ಚುತ್ತಾರೆ. ಯುದ್ಧ ಮತ್ತು ಸಾಮ್ರಾಜ್ಯ ಲಾಲಸೆಗಳಿಗೆ ಇವೇ ಪ್ರಮುಖ ಕಾರಣಗಳು ಈ ಎರಡು ಪರಸ್ಪರ ವಿರೋಧ ತತ್ವಗಳನ್ನು ಇಟ್ಟುಕೊಂಡವರಲ್ಲಿ ಕಾರ್ಯ ನಿರ್ವಹಣದ ಧೃಡತ್ವವನ್ನು ಕಾಣಲು ಸಾಧ್ಯವಿಲ್ಲ. ಆದರೆ ಅವರಂತೇ ಘರ್ಷಣಾತ್ಮಕ ವಿಚಾರಗಳನ್ನೊಳಗೊಂಡ ಜನತೆಯಾದರೂ ಅವರಿಗೆ ಸಂಪೂರ್ಣ ಬೆಂಬಲವನ್ನು ಕೊಡುತ್ತದೆ

ಆದರೆ ತಾವು ಜನಪ್ರಿಯರಾಗಬೇಕೆಂಬಿರಾದೆಯಿಂದ ಜವಾಹರರು ಈ ಎರಡು ಅಭಿಪ್ರಾಯಗಳಿಗೂ ಸಮರ್ಥನೆಯನ್ನು ಕೊಡುತ್ತಿರುವರೆಂದು ತಿಳಕೊಳ್ಳಬಾರದು. ಹೀಗೆಂದೂ ಅವರು ಮಾಡುವವರೇ ಅಲ್ಲ ಅವರೆಲ್ಲಾ ಗುಣ ಲಕ್ಷಣಗಳನ್ನು ಮೀರಿಸುವ ಎರಡು ಮುಖ್ಯ ಗುಣ ವಿಶೇಷಗಳೆಂದರೆ ಅವರ ಹೃತ್ಪೂರ್ವಕತೆ ಮತ್ತು ಪ್ರಾಮಾಣಿಕತನಗಳು ಅವರು ಅತ್ಯಂತ ನಿರ್ಭಯವಾದಿಗಳೂ ಶ್ರದ್ಧಾ ಸ್ಫೂರ್ತಿಗಳೂ ಆಗಿರುತ್ತಾರೆ ಅಧಿಕಾರಕ್ಕಾಗಿ ಒಳಸಂತ ಇಲ್ಲವೆ ಕುಹಕೋಪಾಯ ಮಾಡಲು ಅವರು ಅತ್ಯಂತ ಅಸಮರ್ಥರಿರುವರು ತಾವು ಹೇಳುವ ಮತ್ತು ಮಾಡುವ ವಿಷಯಗಳ ಕುರಿತವರು ಬಹಳ ಶ್ರದ್ಧಾವಂತರಾಗಿರುವರು ಅವರೀ ಗುಣ ವೈಶಿಷ್ಟದಿಂದಲೇ ವಿರೋಧಿಗಳಿಗೂ ಅವರು ತುಂಬಾ ಮೆಚ್ಚಿನವರಾಗುತ್ತಾರೆ ಅವರ [illegible] ಅಂತರಾತ್ಮದಾಳವನ್ನು [illegible] ಆದುದರಿಂದ ಗಾಳಿ [illegible] ಬಿಡುವವರವರೆಂಬ ಆರೋಪವನ್ನೆಂದಿಗೂ ಅವರ ಮೇಲೆ ಹೊರಿಸುವುದಿಲ್ಲ

ತನ್ನ ಜನತೆಯ [illegible] ಆಶೆ ಆಕಾಂಕ್ಷೆ [illegible] ಪರಿಪೂರ್ಣತೆಗ [illegible] ವ್ಯಕ್ತಿತ್ವ [illegible] ತಮ್ಮ [illegible] ಜವಾಹರರು ಅಂತರಾಷ್ಟ್ರೀಯ [illegible] ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದಾರೆ

ಬ್ರಿಟಿಷ್ ಅಮೇರಿಕಗಳು ಇಟಲಿ, ಜರ್ಮನಿ ಮತ್ತು ಜಪಾನುಗಳನ್ನು ಮೆಚ್ಚಿಸುವ ಧೋರಣೆಯನ್ನನುಸರಿಸುತಿದ್ದಾಗ ಜವಾಹರರು ಈ ವ್ಯಕ್ತಿ ಧೋರಣೆಯು [illegible] ಕುರಿತು ಎಚ್ಚರಿಕೆ ಕೊಟ್ಟರು. ತಮ್ಮ ತಪ್ಪು ಧೋರಣೆಯಿಂದಾಗಿ [illegible] ಹಾನಿಗೊಳಗಾದ ಮೇಲೆ ಬ್ರಿಟನ್ ಅಮೇರಿಕಗಳು ಜವಾಹರರ ಭವಿಷ್ಯದ ಎಚ್ಚರಿಕೆಯನ್ನರಿತುಕೊಂಡವು

ಹೀಗೆ ಜವಾಹರರು ಜನತೆಯ ಸ್ನೇಹಿತರೂ, ಸಲಹೆಗಾರರೂ, ಮಾರ್ಗದರ್ಶಕರೂ ಆಗಿರುವರು ಅವರ ನಾಯಕತ್ವದಲ್ಲಿ ಭಾರತವು ತನ್ನ ಆಶೆ ಆಕಾಂಕ್ಷೆಗಳನ್ನು ಪರಿಪೂರ್ಣಗೊಳಿಸುವುದೆಂದು ನಾವು ಹಾರೈಸೋಣ ಪರಕೀಯ ದಾಸ್ಯದ ದೀರ್ಘ ಅವಧಿಯಲ್ಲಿ ಅದು ಹೊಂದಲೆಳಸಿದ ಐಕ್ಯ ಅಭಿವೃದ್ಧಿಗಳನ್ನು ಭಾರತವು ಅವರಮಾರ್ಗದರ್ಶಕತ್ವದಲ್ಲಿ ಹೊಂದಲೆಂದು ಹಾರೈಸೋಣ

KANARA COMMERCIAL BANK LTD.

PUTTUR

H O Puttur | Estd 1[illegible] | Branch Vittal

All kinds of Banking Business transacted.

Deposits Current, Savings, Cumulative Deposits are accepted

Fixed Deposits for periods of 3 months and above up to 24 months are accepted.



ರಾತೆ ಹವೆಯು ಅಪಾಯಕರವಿರಬಹುದು. ರಕ್ಷಣೋಪಾಯವಿಲ್ಲದಿದರೆ ಶೀತದಿಂದ ಗೊರಲು ಕೆಮ್ಮು, ವಿಷಮ ಜ್ವರಗಳುಂಟಾಗಬಹುದು ಪೆಪ್ಸ್ ಶ್ವಾಸನೀಯ ವಿಷಹಾರಿ ಮಾತ್ರೆ ಸೇವಿಸಿರಿ

ಪೆಪ್ಸಿನ ಅಮೂಲ್ಯ ಔಷಧ ಸಾರಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೊಯಲ್ಪಡುವುವು ಅಲ್ಲಿ ಊದುಕೊಂಡಿರುವ ಶ್ವಾಸನಾಳ ಮತ್ತು ಪರೆಗಳನ್ನದು ಶಮನಿಸಿ ಕೆಮ್ಮು ನಿಲ್ಲಿಸುವುದು ಶ್ವಾಸೇಂದ್ರಿಯಗಳು ಬಲಗೊಂಡು ಚೇತನಗೊಳ್ಳುವವು ರೋಗಾಣು ನಾಶವಾಗಿ ಭಾವಿ ಸಂಕಷ್ಟವನ್ನು ತಡೆಯುವುದು

ಕೆಮ್ಮು, ಶೀತ, ಗಂಟಲು ನೋವು, ವಿಷಮ ಜ್ವರ, ಗೂರಲು ಮುಕ್ಕಿಕೆಳ ಎದೆ ತೊಂದರೆಗಳಿಗೆ ಪೆಪ್ಸ್ ಪ್ರಖ್ಯಾತ ನಿವಾರಣೆ ಔಷಧಿ

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವುದು.

ತುಳಸಿ ಎಲೆಯ ಹಲವು ಉಪಯೋಗಗಳು

ಪವಿತ್ರ ಪತ್ರದ ವಿಚಿತ್ರ ಗುಣ ಶಕ್ತಿ

ಅತಿ ಪ್ರಾಚೀನ ಕಾಲದಿಂದ ತುಲಸೀ ಪತ್ರವು ಭಾರತೀಯರಿಂದ ಪೂಜನೀಯ ವಾಗಿದೆ. ಈ ಸಸ್ಯ ಮಾನವಕೋಟಿಗೆ ಪರಮಾತ್ಮನದೊಂದು ವರಪ್ರಧಾನವೆಂದೆನಿಸಲ್ಪಟ್ಟಿದೆ. ಆಯುರ್ವೇದ ಶಾಸ್ತ್ರದಲ್ಲೂ ತುಳಸಿ ಎಲೆಗೆ ಅತ್ಯುಚ್ಚ ಪ್ರಾಶಸ್ತ್ಯ ಕೊಡಲಾಗಿದೆ. ಈ ಗಿಡದಿಂದ ಅದೆಷ್ಟು ದೀರ್ಘ ಕಾಲದ ಕಾಯಿಲೆಯನ್ನಾದರೂ ಗುಣಪಡಿಸಬಹುದಾದ ಔಷಧಿಯನ್ನು ತಯಾರಿಸಬಹುದೆಂದು ಹೇಳಲ್ಪಟ್ಟಿದೆ. ಸೇಲಮಿನ ಬಳಿಯಿರುವ ಆನಂದಾಶ್ರಮದ ಸ್ವಾಮಿಜಿಯವರು ತಮ್ಮ ಅನುಭವದಿಂದ ಈ ಕೆಳಗಿನ ತುಳಸಿ ಎಲೆ ಪರಿಹಾರಗಳನ್ನು ಸೂಚಿಸಿದ್ದಾರೆ

ಉಬ್ಬಸಕ್ಕೆ: 25 ತೊಲೆ ತುಳಸಿ ಎಲೆಗಳು 16 ತೊಲೆ ಶುಂಠಿ ಹುಡಿ, 3 ತೊಲೆ ಲವಂಗ ಹುಡಿ, 4 ತೊಲೆ ಕಲ್ಲುಸಕ್ಕರೆ, ಇವಿಷ್ಟನ್ನೂ 25 ತೊಲೆ ನೀರಲ್ಲಿ 2 ಗಂಟೆ ಕುದಿಸಿ, ಮತ್ತೆ ಗಾಳಿಸಬೇಕು ತಣ್ಣಗಾದ ಮೇಲೆ ಬಾಟ್ಲಿಗಳಲ್ಲಿ ಹಾಕಿಡಬೇಕು ಈ ಪರಿಹಾರ ಉಬ್ಬಸದ ಪ್ರಾರಂಭಾವಸ್ಥೆಯಲ್ಲಿ ಅತ್ಯಂತ ಪರಿಣಾಮಕಾರಿ ಖಾಲಿ ಹೊಟ್ಟೆಯ ಮೇಲೆ ಪ್ರಾತಃಕಾಲ 7 ಗಂಟೆಗೊಂದು ಟೀ ಚಮಚದಷ್ಟು ತೆಗೆದುಕೊಳ್ಳುವುದು. ಮತ್ತೆ 3 ಮತ್ತು 9 ಗಂಟೆಗೊಂದೊಂದು ಸಲ ತೆಗೆದುಕೊಳ್ಳುವುದು. ಪ್ರತಿ ವಾರಕ್ಕೊಂದು ಸಲ ತಯಾರಿಸಿ 45 ದಿವಸಗಳ ತನಕ ಸೇವಿಸುವಾಗ ವ್ಯಾಧಿಯು ನಿರ್ಮೂಲವಾಗುವುದು

ಅರ್ಧ ತಲೆನೋವು: 1 ತೊಲೆ ತುಳಸಿ ಎಲೆ ರಸ, ½ ತೊಲೆ ಶುಂಠಿ ಚೂರ್ಣ ಇವನ್ನು ಮಿಶ್ರಮಾಡಿ 2 ಯಾ 3 ಬೊಟ್ಟು ನೀಲಗಿರಿ ಎಣ್ಣೆ ಸೇರಿಸಿ ನೋವಿದ್ದ ಭಾಗಕ್ಕೆ ಹಚ್ಚುವುದು ಇದನ್ನು ದಿನಂಪ್ರತಿ ತಯಾರಿಸಬೇಕು

ಗಂಟುನೋವು: ಕಾಲು ತೊಲೆ ಲವಂಗದೆಣ್ಣೆ, 2 ತೊಲೆ ತುಲಸಿ ರಸ, ಇವನ್ನು ಮಿಶ್ರಮಾಡಿ, ಗಂಟುಗಳಿಗೆ ಸವರಬೇಕು ಪ್ರತಿ ಎರಡು ದಿನಗಳಿಗೊಮ್ಮೆ ಇದನ್ನು ತಯಾರಿಸಬೇಕು

ಕಿವಿನೋವು: ಮಲಗುವ ಹೊತ್ತಿಗೆ 2 ತೊಲೆ ತುಲಸಿ ಎಲೆ ರಸವನ್ನು ತೆಗೆದುಕೊಂಡು 1 ತೊಲೆ ಹರಳೆಣ್ಣೆಯನ್ನೂ ½ ತೊಲೆ ಸಾಂಬ್ರಾಣಿ ಹುಡಿಯನ್ನೂ ಮಿಶ್ರಮಾಡಿ ಸ್ವಲ್ಪ ಉಷ್ಣತೆ ಕೊಡಬೇಕು ತಣ್ಣಗಾದಾಗ ಕಿವಿಗೆ ಲೇಪಿಸಿರಿ ಇದನ್ನು ದಿನಾಲೂ ತಯಾರಿಸಬೇಕು

ಅಗ್ನಿಮಾಂದ್ಯ: 25 ಎಲೆಗಳನ್ನು ತೆಗೆದುಕೊಂಡು, ಅದಕ್ಕೆ ಸ್ವಲ್ಪ ಜೀರಿಗೆ ಮತ್ತು ತಾಳೆ (ಓಲೆ) ಬೆಲ್ಲವನ್ನು ಸೇರಿಸಿರಿ ಚೆನ್ನಾಗಿ ಅರೆದು ಮಾತ್ರೆಗಳನ್ನಾಗಿ ಮಾಡಬೇಕು ರಾತ್ರೆ ಮಲಗುವಾಗ ಇದನ್ನು ಸೇವಿಸಿರಿ.

ಮೂತ್ರ ಬಾಧೆ: 45 ತುಲಸಿ ಎಲೆ, 25 ಕಹಿಬೇವಿನ ಎಲೆಗಳನ್ನು ತೆಗೆದುಕೊಳ್ಳಿರಿ. ಇವನ್ನು ಚೆನ್ನಾಗಿ ಅರೆದು ರಸ ತೆಗೆಯಿರಿ. ಎರಡು ಔನ್ಸ್ ನೀರಿನೊಂದಿಗೆ ಬೆರಸಿ ರಾತ್ರೆ ಹೊತ್ತಿನಲ್ಲಿ ಕುಡಿಯಿರಿ

ತುರಿಗಜ್ಜಿ: 60 ತುಲಸಿ ಎಲೆಗಳು, 1 ನಿಂಬೆ ಹಣ್ಣಿನ ಮತ್ತೊಂದು ನೀರುಳ್ಳಿಯ ರಸವನ್ನು ಚೆನ್ನಾಗಿ ಮಿಶ್ರಮಾಡಿ ಬೆಳಗ್ಗಿನ ಹೊತ್ತು ತುರಿಗಜ್ಜಿಗೆ ತಾಗಿಸುವುದು. ಒಂದು ಗಂಟೆ ನಂತರ ಸ್ನಾನ ಮಾಡಬೇಕು.

ಉಷ್ಣದಿಂದ ಹೊಟ್ಟೆನೋವು: ರಾತ್ರೆ ಊಟದ ಅರ್ಧ ತಾಸು ಮೊದಲು ಈ ಕೆಳಗಿನವುಗಳನ್ನು ಮಿಶ್ರಮಾಡಿರಿ: ತೆಂಗಿನ ಕಾಯಿ ಹೂವಿನ ರಸ 3 ತೊಲೆ, ತುಲಸಿ ರಸ ಅರ್ಧ ತೊಲೆ, ಜೇನುತುಪ್ಪ 5 ಬೊಟ್ಟುಗಳು, ಒಂದು ಉಪ್ಪಿನ ಹರಳು ಇದನ್ನು ಕುಡಿದುಬಿಡುವುದು.

ನಿದ್ದೆಯಿಲ್ಲದಿರುವಿಕೆ: ಮಲಗುವ ಹೊತ್ತಿಗೆ ½ ತೊಲೆ ತುಲಸಿ ರಸ ಶುಂಠಿ ಹುಡಿ 2 ಕಾಳುಗಳಷ್ಟು, 3 ಔನ್ಸ್ ಆಡಿನ ಹಾಲು ಇವನ್ನು ಮಿಶ್ರಮಾಡಿ ಕುಡಿಯುವುದು

ಕ್ಷೌರ ಹುಳು ಮೇಯುವಿಕೆ: 1 ತೊಲೆ, ತುಲಸಿ ಎಲೆ ರಸ, 10 ತೊಲೆ ಬೆಳ್ಳುಳ್ಳಿ, ಅರಸಿನ ಹುಡಿ ½ ತೊಲೆ, ಇವನ್ನು ಚೆನ್ನಾಗಿ ಅರೆದು ಹುಳದ ಭಾಗಕ್ಕೆ ಲೇಪಿಸುವುದು ಶೇಕಡಾ ನೂರರಷ್ಟು ಗುಣಾಂಶ ಖಂಡಿತ

ಕಣ್ಣು ಉರಿಯುವಿಕೆ: ಎಳ್ಳೆಣ್ಣೆ 15 ಔನ್ಸ್, ತುಲಸಿ ಎಲೆ ರಸ 6 ಔನ್ಸ್ ನಿಂಬೆ ಹಣ್ಣಿನ ರಸ 2 ಔನ್ಸ್ ಇವನ್ನು ಮಿಶ್ರ ಮಾಡಿ ಕುದಿಸಿ ತಣಿಸಬೇಕು. ಇದನ್ನು ತಲೆಗೆ ಸವರಿ ಒಂದು ಗಂಟೆ ನಂತರ ಬಿಸಿ ನೀರು ಸ್ನಾನ ಮಾಡಬೇಕು ವಾರಕ್ಕೊಂದಾವರ್ತಿ ಹೀಗೆ ಮಾಡುತ್ತಿರಬೇಕು.

ಖೂನಿಗಾರರ ಪತ್ತೆಗೆ ಮಡಿವಾಳರು

ಬ್ರಿಟಿಷ ರಜಕ ಸಂಘದ ನಿರ್ಣಯ

ಅದೃಶ್ಯವಾಗಿರುವ ಬಟ್ಟೆ ಗುರುತುಗಳು

ಬ್ರಿಟನಿನ ಗುಪ್ತ ಪೋಲೀಸರ ಕಾರ್ಯಕಲಾಪಗಳಲ್ಲಿ ಸಹಾಯ ಮಾಡುವ ಚಾಣಕ್ಷ ವ್ಯಕ್ತಿಯೊಬ್ಬ ಮುಂದೆ ಬಂದಿದ್ದಾನೆ ಅವನೇ ಅಲ್ಲಿನ ಮಡಿವಾಳ ಅವನು ಖೂನಿಗಾರರನ್ನು ಪತ್ತೆಮಾಡುವ ವೈಜ್ಞಾನಿಕ ವಿಧಾನದಲ್ಲಿ ಸಹಾಯಕನಾಗುವನು

ಅಪರಾಧಿತರ ಗುರುತು ಹಿಡಿಯಲೂ, ಮತ್ತು ಕೊಲೆಗಡುಕರನ್ನು ಶೋಧಿಸಲೂ ಇಂದು ಬ್ರಿಟನಿನಲ್ಲಿನ ಮಡಿವಾಳರ ಸಹಾಯವನ್ನು ಹೆಚ್ಚೆಚ್ಚಾಗಿ ಉಪಯೋಗಿಸಿಕೊಳ್ಳಲಾಗುತ್ತದೆ.

ಅಲ್ಲಿ ರಜಕ ವರ್ಗದವರದೇ ಒಂದು ವರ್ತಮಾನ ಪತ್ರವಿದೆ ಅದರಲ್ಲಿನ ಪ್ರಕಟಣೆಗಳಲ್ಲಿ "ಪೋಲಿಸ್ ಪ್ರಕಟಣೆ"ಗಳೆಂಬ ಪ್ರತ್ಯೇಕ ವಿಭಾಗ ಮುದ್ರಿತವಾಗುತ್ತಿದೆ. ತಜ್ಞ ಪರಿಶೋಧಕರು ಹೆಸರು ವಿಳಾಸಗಳಾಗಿ ಮಾರ್ಪಡಿಸಬಹುದಾದ ಅನೇಕ ರಹಸ್ಯ ಅಕ್ಷರ ಗುಂಪುಗಳೂ ಸಂಕೇತಗಳೂ, ಗುರುತುಗಳೂ ಅದರಲ್ಲಿ ಕೊಡಲ್ಪಡುತ್ತವೆ ಖೂನಿಗಾರನು ತನ್ನ ಅಕೃತ್ಯವನ್ನು ನಿರ್ವಹಿಸುವ ಭರದಲ್ಲಿ ಬಿಟ್ಟುಬಿಟ್ಟ ಒಂದು ಕೈವಸ್ತ್ರವು ಅವನ ಹೆಸರು ವಿಳಾಸವಿರುವ ಚೀಟಿಯಷ್ಟೇ ಅಲ್ಲಿಯ ಡೋಬಿಗೆ ಸಹಾಯವಾಗುತ್ತವೆ

ಬ್ರಿಟನಿನಲ್ಲಿ ಇಂದು 80 ಲಕ್ಷ ಪ್ರತ್ಯೇಕ ಬಟ್ಟೆಗುರುತುಗಳಿವೆ ಪ್ರತಿಯೊಂದು ಜಿಲ್ಲೆಯ ಪತ್ತೆದಾರರಿಗೆ ತಮ್ಮ ಪ್ರದೇಶದ ವಸ್ತ್ರ ಗುರುತುಗಳು ಸ್ಮರಣೆಯಲ್ಲಿರುತ್ತವೆ ಕೆಲವೊಂದು ಸಲ ರಹಸ್ಯವೂ ಆಗುಂತುಕವೂ ಆದ ಗುರುತುಗಳು ತಲೆಯೆತ್ತುತ್ತವೆ ಆಗ ಮಡಿವಾಳರಂಗಡಿಯಲ್ಲಿನ ಪತ್ತೆದಾರರನ್ನು ಕರೆಸಿ ಪರಿಶೋಧನೆ ನಡೆಸಲಾಗುವುದು

ಇತ್ತೀಚೆಗೆ ಲಂಡನ ಸ್ಕೊಟ್ಲೆಂಡ್ ಯಾರ್ಡಿನಲ್ಲಿ ಬ್ರಿಟಿಷ್ ರಜಕರ ಪರಿಷತ್ತೊಂದ ಜರಗಿದಾಗ ಎಲ್ಲಾ ಬಟ್ಟೆಗುರುತುಗಳ ಒಂದು ಯಾದಿಯನ್ನು ತಯಾರಿಸಬೇಕೆಂದು ನಿರ್ಣಯಿಸಲಾಯಿತು ಬಟ್ಟೆ ಗುರುಗಳನ್ನು ಮರೆಮಾಜುವ ಚಾಣಾಕ್ಷ ಖೂನಿಗಾರರಿಗೆ ಇದರಿಂದೇನು ಪ್ರಯೋಜನವೆಂದು ನೀವು ಕೇಳಬಹುದು ಆದರೆ ಇತ್ತೀಚೆಗೆ ಸಾಮಾನ್ಯರ ಕಣ್ಣಿಗೆ ಕಾಣದಿರುವ ಮತ್ತು ಅಲ್ಟ್ರಾವೊಯಿಲೆಟ್ ಕಿರಣ ಪ್ರಕಾಶದಲ್ಲಿ ಪ[illegible]ತ ಗೋಚರಕ್ಕೆ ಬರುವ ಅದೃಶ ಬಟ್ಟೆ ಚಿಹ್ನೆಗಳು ಅಲ್ಲಿ ಕಂಡುಹಿಡಿಯಲಾಗಿವ [illegible] ತಯಾರಾದ [illegible] ತಪ್ಪಿದರೂ ತಪ್ಪಲಾಗಲಿ ಈ ಗುರುತುಗಳನ್ನು ಅದರಲ್ಲಿ ಮುದ್ರಿಸಲಾಗುವುದು

ಜೀವನ ಕಾರ್ಯವು ಸಾಂಗವಾಗಿ ನಡೆಯಬೇಕಾದರೆ ನಷ್ಟವಾಗುವ ಶಕ್ತಿಯು ಭರ್ತಿಯಾಗಬೇಕು ನಿಮ್ಮ ಶೋಭೆಯನ್ನೂ ಕಾಂತಿಯನ್ನೂ ರಕ್ಷಿಸಬೇಕಾದರೆ ನಿಮ್ಮಲ್ಲಿ ಅಂತರಾರೋಗ್ಯವಿರಬೇಕು ಈ ಬಗ್ಗೆ ನಿಮಗೆ ಬೇಕಾದುದು ಬ್ಯಾಲ್ ಬೀನ್ಸ್ ಅವುಗಳಿಂದ ನಿಮ್ಮ ದೇಹಾರೋಗ್ಯವು ನೆಟ್ಟಗಾಗುವುದು ನಿಮ್ಮ ರಕ್ತವು ಪರಿಶುದ್ಧವಾಗುವುದು ನಿಮ್ಮ ದೇಹದ ವಿಸರ್ಜನಾ ಕಾರ್ಯಗಳು ಸರಿಯಾಗಿ ನಡೆಯುವವು ಈ ವನಸ್ಪತಿ ಮೂಲ ಮದ್ದಿನಿಂದ ನಿಮಗೆ ಹೊಸ ಹುರುಪು ದೊರಕುವುದು ಶುಭ್ರಲೋಚನಗಳೂ, ನಿಶ್ಚಳ ಚರ್ಮವೂ ನಿಮಗೆ ಒದಗುವವು ನಿಮ್ಮನ್ನು ಆಕರ್ಷಣೀಯರಾಗಿ ಮಾಡುವುದು

BILE BEANS

ಶಯನ ಸಮಯ ನಿತ್ಯಲೂ ಸೇವಿಸಿರಿ

ಸೌಂದರ್ಯ ಸಾಧನ
ಪ್ರತಿ ಸಲ ಕುಟಿಕೂರಾದಿಂದ
ತ್ರಿಕ್ಕಿ ತೊಳೆದಾಗ

ಈ ಸೌಗಂಧ ಸಾಬೂನಿನಲ್ಲಿ ಔಷಧೀಯ ಮತ್ತು ಶೃಂಗಾರ ಮೌಲ್ಯವಿದೆ ಚರ್ಮವನ್ನು ಸ್ವಚ್ಛವಾಗಿ ತೊಳೆದು ಅದಕ್ಕೆ ಹೊಸ ಕಾಂತಿ ಕೊಟ್ಟು ಎಲ್ಲಾ ಅದರ ಅವಗುಣಗಳನ್ನು ಹೋಗಲಾಡಿಸುತದೆ

555

ಕುಟಿಕೂರಾ ಸಾಬೂನು

CUTICURA SOAP

ಮೊ[illegible] ಊಟದ ಹೋಟೆಲಿಗೆ ಬಂದೊರ್ವ ಹಸಿದ ಗಿರಾಕಿ ಒಂದು ಸಲದ ಅನ್ನ ತಿಂದು ಮತ್ತೊಂದು ತುತ್ತು ಕೇಳಿದಾಗ ತಿರಸ್ಕರಿಸಲ್ಪಟ್ಟ ಕುಪಿತನಾದ ಗಿರಾಕಿ ಮೇಜು ಒಡೆದು, ಕನ್ನಡಿ ಚೂರು ಮಾಡಿ 50 ರೂಪಾಯಿ ಹಿಡಕೊಂಡು ಪರಾರಿಯಾದ

✠

ನರ ದುರ್ಬಲತೆಯ ಪರಿಹಾರ ಔಷಧಿಯೊಂದನ್ನು ಮಾರುವವನಿಗೆ ಓರ್ವ ಗಿರಾಕಿ ಹೀಗೆ ಸರ್ಟಿಫಿಕೇಟು ಕಳುಹಿಸಿದ "ನಮ್ಮ ಮದ್ದು ಸೇವಿಸುವ ಮುನ್ನ ನನ್ನ ಅರ್ಧಾಂಗಿಯ ಬಳಿ ನಿದ್ರಿಸುವುದು ಅಸಾಧ್ಯವಿತ್ತು ಈಗ ಯಾರೂ ಅವಳ ಬಳಿ ಬರಗಬಹುದು"

✠

ಪ್ರಣಯನಿಂದ ಚುಂಬಿತಳಾದ ಸ್ತ್ರೀಯೋರ್ವಳ ತುಟಿಗಳು ಒಂದೇ ಸಮನೆ ತುರಿಸಹತ್ತಿ ಉರಿಯಲಾರಂಭಿಸಿದುವು. ಅವಳು ಹಚ್ಚುವ ತುಟಿ ಲೇಪ, ಪೌಡರುಗಳಲ್ಲಿ ದೋಷಗಳಿವೆಯೊ ಎಂದು ತಜ್ಞರು ಪರಿಶೀಲನೆ ಮಾಡಿದರು ಕೊನೆಗೆ ಪ್ರಣಯನು ಮೀಸೆ ಹುರಿ ಮಾಡಲು ಹಚ್ಚಿದ ಮಯಣದಿಂದ ಹಾಗಾಯಿತೆಂದು ತಿಳಿದು ಬಂತು

✠

ಸ್ವತಂತ್ರವಾದ ಭಾರತದ ರಾಜ್ಯಾಡಳಿತದ ಚುಕ್ಕಾಣಿ ಹಿಡಿದಿರುವ ನಮ್ಮ ಮುಖ್ಯ ಪ್ರಧಾನರ ವಿಷಯ ಗಣನೀಯವಾದೊಂದು ಸಂಗತಿಯೆಂದರೆ ಅವರು ಆಧುನಿಕ ಯುಗದ ಧ್ಯೇಯ ವಿಚಾರಗಳ ಪ್ರತೀಕವಾಗಿರುವುದು ಪರಕೀಯ ಒಡೆತನದಿಂದ ನವ ಜಾಗೃತಿ ಹೊಂದಿ ಕಾರ್ಯ ಪ್ರೇರಣೆಯನ್ನುಂಟು ಮಾಡಿದ ಕಾಲವಿದು. ಇದರ ಭಾವಾವೇಶವು ಗತವೈಭವದ ಮೇಲೆ ಅತೀ ಹೆಮ್ಮೆಯನ್ನು ತಾಳಿ ಆ ಪ್ರಾಚೀನಾನುಭವವನ್ನು ಭಾವೀ ಆಶೆ ಹಾರೈಕೆಗಳ ಪರಿಪೂರ್ಣತೆಗೆ ಪ್ರಯತ್ನ ಮಾಡುವಂತಹದಾಗಿದ್ದು ತನ್ಮೂಲಕ ನೂತನ ಭಾರತವೊಂದರ ರಚನೆಗೆ ಹೆಣಗುವಂತಹದಾಗಿದೆ ಮಾತ್ರವಲ್ಲ, ಒಂದು ನೂತನ ಆಸ್ಯವನ್ನೇ ಅಲ್ಲ, ಒಂದು ನವೀನ ಭೂಸ್ವರ್ಗವನ್ನೇ ನಿರ್ಮಿಸುವುದು ಅದರ ಉದ್ದೇಶವಾಗಿದೆ

ಜವಾಹರರ ಪರಿಚಯವಿದ್ದವರಿಗೆ ಅವರು ಇಂದಿನ ತಲಾಂತರದ ಸತ್ಪ್ರತಿನಿಧಿಗಳಾಗಿರುವರೆಂಬ ಸಂಗತಿಯು ಖಚಿತವಾಗದಿರಲಿಕ್ಕಿಲ್ಲ. ಇಂದು ಮಹಾತ್ಮರು ಸಾಮಾನ್ಯ ಮಾನವರಿಗೆ ಎಟುಕದೆ ಅತೀ ದೂರವಿರುವ ಉದಾತ್ತ ಧ್ಯೇಯವಾದಿಗಳಾಗಿರುವರು ಅವರದು ಹಲವು ಬಾರಿ ಅರಣ್ಯ ಮಧ್ಯದೊಳಗಿನ ಏಕಾಂತ ಧ್ವನಿಯಾಗಿದೆ ಅವರ ತತ್ವಗಳು ಕಾರ್ಯ ಧೋರಣೆಗಳೂ ಆದರ್ಶದಾಯಕವೂ ಉನ್ನತ ಧ್ಯೇಯದವೂ ಆಗಿವೆ ಆದರೆ ಇವು ಕಾರ್ಯರೂಪಕ್ಕೆ ತರಲು ಹೆಚ್ಚಿನವರಿಗೆ ಕಷ್ಟತರವಾದವೆಂದೆನಿಸ್ಸಿಡುತ್ತವೆ ಅವರ ಹತ್ತಿರದ ಕೆಲವು ಅನುಯಾಯಿಗಳಿಗೂ ಇದು ಕಷ್ಟವೆಂದೇ ತೋರುತ್ತದೆ ಮಾನವ ಪ್ರಕೃತಿಗೆ ಮಿಗಿಲಾದುದನ್ನು ಅವರು ಹೊಂದ ಬಯಸುವರೆಂದು ಹೇಳಲ್ಪಡುತ್ತದೆ

★

ಆದರೆ ಜವಾಹರರು ಭಾರತದ ವಿದ್ಯಾವಂತ ವ್ಯಕ್ತಿಯು ತಿಳಕೊಳ್ಳುವಂತಹ ಭಾಷೆಯಲ್ಲಿ ನುಡಿಯುತ್ತಾರೆ ಈ ವರ್ಗದ ಧ್ಯೇಯ ಭಾವಗಳನ್ನು ವ್ಯಕ್ತಗೊಳಿಸುತ್ತಾರೆ ಭಾರತವು ಇಂದು ಪ್ರಾಚೀನ ಅರ್ವಾಚೀನಗಳ ಪಾಶ್ಚಾತ್ಯ ಪೌರ್ವಾತ್ಯ ಸಂಸ್ಕೃತಿಗಳ ವಿಚಿತ್ರ ಮಿಶ್ರಣವಾಗಿದೆ ಭಾರತೀಯನು ಬಯಸಿದರೂ ಬಯಸದಿದ್ದರೂ ಪ್ರಾಚೀನ ಸಂಸ್ಕೃತಿಯು ಅವನ ಮೇಲೆ ಪರಿಣಾಮ ಮಾಡುತ್ತದೆ ಅದು ಅವನು ನಿಶ್ವಾಸಿಸುವ ಗಾಳಿಯಲ್ಲೇ ಪರಿವ್ಯಾಪ್ತವಾಗಿದೆ ಆದರೆ ಪಾಶ್ಚಿಮಾತ್ಯದಿಂದ ಬಂದಿರುವ ವಿಚಾರ ಸರಣಿಯಿಂದಲೂ ಅದು ಪ್ರಭಾವಿತವಾಗಿದೆ ಹಲವು ಬಾರಿ ಈ ಪ್ರಾಚೀನ ಆಧುನಿಕಗಳು ಪರಸ್ಪರ ಘರ್ಷಣೆಗೊಳ್ಳುತ್ತವೆ ಈ ಘರ್ಷಣೆಯ ಪರಿಣಾಮವಾಗಿಯೇ ಜವಾಹರ ಲಾಲರಲ್ಲಿ ನಿರಂತರವಾದ ಶಂಕೆ ಸಂಕೋಚಗಳು ತಲೆದೋರಿವೆ ಪ್ರಾಚೀನ ಪೌರ್ವಾತ್ಯದ ಸಾಂಸ್ಕೃತಿಕ ರಕ್ತವು ಅವರ ಧಮನಿಗಳಲ್ಲಿಂದು ಹರಿಯುತ್ತಿದ್ದುದರಿಂದಲೇ ಅವರು ಗಾಂಧೀಜಿಯ ಸಫಲ ಜೀವನಾದರ್ಶ, ಕಾರ್ಯ ಧೋರಣೆ, ತತ್ವ ಜ್ಞಾನಗಳನ್ನವರು ಶ್ರದ್ಧೆಯಿಂದನುಸರಿಸುವವರಾಗಿದ್ದಾರೆ ಇದಕ್ಕೆ ವಿರುದ್ಧವಾಗಿ ಪಾಶ್ಚಿಮಾತ್ಯ ನಾಗರೀಕತೆಯ ಲೌಕಿಕ ಸುಖಾಭಿಲಾಷೆಗಳೂ, ಉನ್ನತ ಜೀವನ ಸೌಕರ್ಯ ಕೋರಿಕೆಗಳೂ, ವ್ಯಕ್ತೀಕ ಮತ್ತು ರಾಷ್ಟ್ರೀಯ ಜೀವನವನ್ನು ಕೇಂದ್ರೀಕೃತ ವ್ಯವಸ್ಥಾಪನೆಯಿಂದ ನಿಯಂತ್ರಣಗೊಳಿಸುವ ಔದ್ಯೋಗೀಕರಣದ ಧ್ಯೇಯಗಳೂ ಅವರ ಕಲ್ಪನೆಯನ್ನಾಕರ್ಷಿಸಿವೆ.

ಪ್ರಧಾನ ಶಿರೋಮಣಿ ಜವಾಹರಲಾಲ್ ನೆಹ್ರೂ

ಜಗತ್ತು ಇವರ ಜನ್ಮದಿನವಾಚರಿಸಿತು

ನವ ನಾಗರೀಕತೆಯ ಯುವಕ ಧುರೀಣರು

ಗಾಂಧೀಜಿಯಂತೆ ಜವಾಹರ ಲಾಲರು ಪಾಶ್ಚಿಮಾತ್ಯದಿಂದ ವಿಮುಖರಾಗಿ ಪೌರ್ವಾತ್ಯವು ತಮ್ಮನ್ನು ಸಂಪೂರ್ಣ ಆವರಿಸಲು ಬಿಟ್ಟಿರುವುದಾದರೆ ಗಾಂಧೀಜಿಯಂತೆ ಅವರೂ ಸ್ಪಷ್ಟ ವಿಚಾರಾದಾರ್ಶವುಳ್ಳವರಾಗಿ ತಿಳಿಯಲ್ಪಡುತ್ತಾರೆ ಒಂದು ವೇಳೆ ಅವರು ಪಾಶ್ಚಿಮಾತ್ಯವನ್ನೇ–ಕಮ್ಯೂನಿಸ್ಟರಂತೆ ಅನುಸರಿಸಿದ್ದರೆ ವಿಚಾರ ಮತ್ತು ಕಾರ್ಯ ಸಾಧನೆಯೊಳಗೆ ಪರಸ್ಪರ ಐಕ್ಯವುಂಟಾಗಲು ಸಹಾಯವಾಗುತಿತ್ತು

ಆದರೆ ನಮ್ಮ ದೇಶದ ಸರ್ವ ಸಾಮಾನ್ಯ ಶಿಕ್ಷಿತ ವ್ಯಕ್ತಿಯಂತೆ ಅವರು ತಮ್ಮಲ್ಲಿ ಪಾಶ್ಚಿಮಾತ್ಯ ಪೌರ್ವಾತ್ಯಗಳು ಪ್ರಭಾವವನ್ನುಂಟುಮಾಡಲು ಆಸ್ಪದವಿತ್ತಿರುವರು ಒಂದೇ ವಸ್ತುಗಳು ದೊಡ್ಡ ಕೈಗಾರಿಕೆಯಿಂದಲೂ ಗುಡಿ ಕೈಗಾರಿಕೆಯಿಂದಲೂ ತಯಾರಿಸಲ್ಪಡಲು ಅವರು ಸಮ್ಮತಿಸುತ್ತಾರೆ ಆದರೆ ಇವೆರಡು ಹತ್ತಿರ ಹತ್ತಿರ ಬಾಳಬಲ್ಲುವೆ ಎಂಬುದನ್ನು ಅವರು ಪರ್ಯಾಲೋಚಿಸಲಿಲ್ಲ ಕೇಂದ್ರೀಕೃತ ಆಡಳಿತಾಧಿಕಾರದ ಆವಶ್ಯಕತೆಯಿರುವ ಔದ್ಯೋಗೀಕರಣವನ್ನವರು ಬಯಸುತ್ತಾರೆ ಅದೇ ಸಮಯಕ್ಕೆ ಹಳ್ಳಿಗರಿಗೆ ಅತೀ ಹೆಚ್ಚಿನ ಹಕ್ಕು ಬಾಧ್ಯತೆಗಳನ್ನು ಕೊಡುವ ಗ್ರಾಮ ಪಂಚಾಯತ ರಾಜ್ಯವನ್ನು ಸ್ಥಾಪಿಸಲೂ ಇಚ್ಛಿಸುತ್ತಾರೆ ಸಾಮ್ರಾಜ್ಯಶಾಹಿ ಮತ್ತು ಬಲಿಷ್ಟರು ನಿರ್ಬಲರ ಸುಲಿಗೆ ಮಾಡುವುದನ್ನು ನಿರ್ಮೂಲಿಸಲು ಅವರು ಆಶಿಸುತ್ತಾರೆ ಅದೇ ಸಮಯಕ್ಕೆ ಈ ಕಡುಕುಗಳಿಗೆ ಆಸ್ಪದ ಕೊಡುವ ಔದ್ಯೋಗೀಕರಣವನ್ನೂ ಮೆಚ್ಚುತ್ತಾರೆ. ಯುದ್ಧ ಮತ್ತು ಸಾಮ್ರಾಜ್ಯ ಲಾಲಸೆಗಳಿಗೆ ಇವೇ ಪ್ರಮುಖ ಕಾರಣಗಳು ಈ ಎರಡು ಪರಸ್ಪರ ವಿರೋಧ ತತ್ವಗಳನ್ನು ಇಟ್ಟು ಕೊಂಡವರಲ್ಲಿ ಕಾರ್ಯ ನಿರ್ವಹಣದ ಧೃಡತ್ವವನ್ನು ಕಾಣಲು ಸಾಧ್ಯವಿಲ್ಲ. ಆದರೆ ಅವರಂತೇ ಘರ್ಷಣಾತ್ಮಕ ವಿಚಾರಗಳನ್ನೊಳಗೊಂಡ ಜನತೆಯಾದರೂ ಅವರಿಗೆ ಸಂಪೂರ್ಣ ಬೆಂಬಲವನ್ನು ಕೊಡುತ್ತದೆ

ಆದರೆ ತಾವು ಜನಪ್ರಿಯರಾಗಬೇಕೆಂಬುದರಿಂದ ಜವಾಹರರು ಈ ಎರಡು ಅಭಿಪ್ರಾಯಗಳಿಗೂ ಸಮರ್ಥನೆಯನ್ನು ಕೊಡುತ್ತಿರುವರೆಂದು ತಿಳಕೊಳ್ಳಬಾರದು. ಹೀಗೆಂದೂ ಅವರು ಮಾಡುವವರೇ ಅಲ್ಲ ಅವರೆಲ್ಲಾ ಗುಣ ಲಕ್ಷಣಗಳನ್ನು ಮೀರಿಸುವ ಎರಡು ಮುಖ್ಯ ಗುಣ ವಿಶೇಷಗಳೆಂದರೆ ಅವರ ಹೃತ್ಪೂರ್ವಕತೆ ಮತ್ತು ಪ್ರಾಮಾಣಿಕತನಗಳು ಅವರು ಅತ್ಯಂತ ನಿರ್ಭಯವಾದಿಗಳೂ ಶ್ರದ್ಧಾ ಸ್ಫೂರ್ತಿಗಳೂ ಆಗಿರುತ್ತಾರೆ ಅಧಿಕಾರಕ್ಕಾಗಿ ಒಳಸಂಚು ಇಲ್ಲವೆ ಕುಹಕೋಪಾಯ ಮಾಡಲು ಅವರು ಅತ್ಯಂತ ಅಸಮರ್ಥರಿರುವರು ತಾವು ಹೇಳುವ ಮತ್ತು ಮಾಡುವ ವಿಷಯಗಳ ಕುರಿತವರು ಬಹಳ ಶ್ರದ್ಧಾವಂತರಾಗಿರುವರು ಅವರೀ ಗುಣ ವೈಶಿಷ್ಟದಿಂದಲೇ ವಿರೋಧಿಗಳಿಗೂ ಅವರು ತುಂಬಾ ಮೆಚ್ಚಿನವರಾಗುತ್ತಾರೆ ಅವರ ಆವೇಶಪೂರಿತ ಉದ್ಗಾರಗಳು ಅವರ ಅಂತರಾತ್ಮದಾಳವನ್ನು ಪ್ರದರ್ಶಿಸುತ್ತವೆ ಆದುದರಿಂದ ಗಾಳಿ ಬಂದ ತ ಹಾಯಿ ಬಿಡುವವರವರೆಂಬ ಆರೋಪವನ್ನೆಂದಿಗೂ ಅವರ ಮೇಲೆ ಹೊರಿಸುವ ಹಾಗಿಲ್ಲ

ತನ್ನ ಜನತೆಯ ನವೀನ ಆಶೆ ಆಕಾಂಕ್ಷೆಗಳನ್ನರಿತು ಅವುಗಳ ಪರಿಪೂರ್ಣತೆಗೆ ಪ್ರಯತ್ನಿಸುವವರ ನಿಜವಾದ ನಾಯಕನು ಇವನು ಕೋಟಿಗಟ್ಟಲೆ ಜನರಲ್ಲಿ ಸ್ಫೂರ್ತಿ ಚೈತನ್ಯಗಳನ್ನು ಹುಟ್ಟಿಸಲು ಸಮರ್ಥನಾಗಿ ಅಸದೃಶವಾದ ವ್ಯಕ್ತಿತ್ವ ಅವರದು ತಮ್ಮ ಪೂರ್ವ ಚರಿತ್ರಾನುಭವದಿಂದ ಜವಾಹರರು ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದಾರೆ

ಬ್ರಿಟನ್ ಅಮೇರಿಕಗಳು ಇಟಲಿ, ಜರ್ಮನ್ ಮತ್ತು ಜಪಾನುಗಳನ್ನು ಮೆಚ್ಚಿಸುವ ಧೋರಣೆಯನ್ನನುಸರಿಸುತ್ತಿದ್ದಾಗ ಜವಾಹರರು ಈ ವೈತ್ರಿ ಧೋರಣೆಯ ಗಂಡಾಂತರದ ಕುರಿತು ಎಚ್ಚರಿಕೆ ಕೊಟ್ಟರು. ತಮ್ಮ ತಪ್ಪು ಧೋರಣೆಯಿಂದಾಗಿ ತುಂಬಾ ತೊಂದರೆಗೊಳಗಾದ ಮೇಲೆ ಬ್ರಿಟನ್ ಅಮೇರಿಕಗಳು ಜವಾಹರರ ಭವಿಷ್ಯದ ಸತ್ಯಸ್ಥಿತಿಯನ್ನರಿತು ಕೊಂಡವು

ಹೀಗೆ ಜವಾಹರರು ಜನತೆಯ ಸ್ನೇಹಿತರೂ, ಸಲಹೆಗಾರರೂ, ಮಾರ್ಗದರ್ಶಕರೂ ಆಗಿರುವರು ಅವರ ನಾಯಕತ್ವದಲ್ಲಿ ಭಾರತವು ತನ್ನ ಆಶೆ ಆಕಾಂಕ್ಷೆಗಳನ್ನು ಪರಿಪೂರ್ಣಗೊಳಿಸುವುದೆಂದು ನಾವು ಹಾರೈಸೋಣ ಪರಕೀಯ ದಾಸ್ಯದ ದೀರ್ಘ ಅವಧಿಯಲ್ಲಿ ಅದು ಹೊಂದಲೆಳಸಿದ ಐಕ್ಯ ಅಭಿವೃದ್ಧಿಗಳನ್ನು ಭಾರತವು ಅವರ ಮಾರ್ಗದರ್ಶಕತ್ವದಲ್ಲಿ ಹೊಂದಲೆಂದು ಹಾರೈಸೋಣ.

KANARA COMMERCIAL BANK LTD.

PUTTUR

H O Puttur | Estd 1920 | Branch Vittal

All Kinds of Banking Business transacted.

Deposits Current, Savings, Cumulative Deposits are accepted

Fixed Deposits for periods of 3 months and above up to 24 months are accepted.



ರಾತ್ರೆ ಹವೆಯು ಅಪಾಯಕರವಿರಬಹುದು ರಕ್ಷಣೋಪಾಯವಿಲ್ಲದಿದ್ದರೆ ಶೀತದಿಂದ ಗೂರಲು, ಕೆಮ್ಮು, ವಿಷಮ ಜ್ವರಗಳುಂಟಾಗಬಹುದು ಪೆಪ್ಸ್ ಶ್ವಾಸನೀಯ ವಿಷಹಾರಿ ಮಾತ್ರೆ ಸೇವಿಸಿರಿ

ಪೆಪ್ಸಿನ ಅಮೂಲ್ಯ ಔಷಧ ಸಾರಗಳು ಶ್ವಾಸದೊಂದಿಗೆ ಶ್ವಾಸಕೋಶಕ್ಕೊಯ್ಯಲ್ಪಡುವುವು ಅಲ್ಪ ಊದುಕೊಂಡಿರುವ ಶ್ವಾಸನಾಳ ಮತ್ತು ಪರೆಗಳನ್ನದು ಶಮನಿಸಿ ಕೆಮ್ಮು ನಿಲ್ಲಿಸುವುದು. ಶ್ವಾಸೇಂದ್ರಿಯಗಳು ಬಲಗೊಂಡು ಚೇತನಗೊಳ್ಳುವವು. ರೋಗಾಣು ನಾಶವಾಗಿ ಭಾವಿ ಸಂಕಷ್ಟವನ್ನು ತಡೆಯುವುದು

ಕೆಮ್ಮು, ಶೀತ, ಗಂಟಲು ನೋವು, ವಿಷಮ ಜ್ವರ, ಗೂರಲು ಮತ್ತಿತರ ಎದೆ ತೊಂದರೆಗಳಿಗೆ ಪೆಪ್ಸ್ ಪ್ರಖ್ಯಾತ ನಿವಾರಣೆ ಔಷಧ

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ

ಎಲ್ಲಾ ಔಷಧಯಂಗಡಿಗಳಲ್ಲಿ ಸದಾ ಸಿಗುವುದು.

ಸ್ವದೇಶಾಭಿಮಾನಿ

ತಾರೀಕು 5-12-1947

ಹಿಂದೀ ಸರಕಾರದ ಆಯವ್ಯಯ

ಸ್ವತಂತ್ರ ಹಿಂದೀ ಸರಕಾರದ ಅಂದಾಜು ಆಯವ್ಯಯದ ತಖ್ತೆಯನ್ನು ಆ ಸರಕಾರದ ಅರ್ಥಸಚಿವ ಮಾನ್ಯ ಶಣ್ಮುಖಂ ಚೆಟ್ಟಿಯವರು ಕೇಂದ್ರ ಶಾಸನ ಸಭೆಯ ಮುಂದಿರಿಸಿರುವರು. 1947ನೇ ಇಸವಿ ಎಪ್ರಿಲ್ ತಾರೀಕು 1ರಿಂದ 1948ರ ಮಾರ್ಚ ತಾ. 31ರ ತನಕದ ಹಿಂದುಸ್ಥಾನ ಸರಕಾರದ ಆಯವ್ಯಯದ ಅಂದಾಜನ್ನು ಆಗಿನ ಅರ್ಥ ಸಚಿವರಿದ್ದ ಲಿಯಾಖತ್ ಅಲ್ಲೀಖಾನರು ಕೇಂದ್ರ ಶಾಸನ ಸಭೆಯ ಮುಂದಿಟ್ಟು ಅದು ಮಂಜೂರಾಗಿತ್ತು. ಆದರೆ ಆ ಬಳಿಕ ದೇಶವು ವಿಭಕ್ತವಾಗಿ ಅಗೋಸ್ತು ತಾರೀಕು 15ರಿಂದ ಒಂದಿದ್ದ ದೇಶವು ಎರಡು ಸರಕಾರಗಳ ವಶವಾದುದರಿಂದ ಅಗೋಸ್ತು ತಾ 15 ರಿಂದ ಸರಕಾರೀ ವರ್ಷಾಂತ್ಯದ ತನಕ ಅಂದರೆ ಬರುವ ಮಾರ್ಚ 31ರ ತನಕ ಹಿಂದೆ ಮಂಜೂರಾದ ಅಂದಾಜು ನಿಷ್ಪ್ರಯೋಜಕವಾಯಿತು ಈ ಅಂದಾಜಿನಲ್ಲಿ ಬೇಕಾದ ತಿದ್ದುಪಡಿಗಳನ್ನು ಮಂಜೂರು ಮಾಡುವ ಅಧಿಕಾರವು ಹಿಂದಿನ ಪದ್ಧತಿಯಂತೆ ಈಗಿನ ಸರಕಾರಕ್ಕೂ ಇದೆಯಾದರೂ ಜನರ ಪ್ರತಿನಿಧಿಗಳಾದ ಈಗಿನ ಸರಕಾರದವರು ಇದನ್ನು ಶಾಸನ ಸಭೆಯ ಮುಂದಿರಿಸುವುದೇ ಯುಕ್ತವೆಂದು ತಿಳಿದು ಈ 7½ ತಿಂಗಳುಗಳ ಬಗ್ಗೆ ಈ ಅಂದಾಜನ್ನು ಮುಂದಿರಿಸಿದಾಗಿರುತ್ತದೆ

ದೇಶದ ವಿಭಜನೆಯಾದ ಬಳಿಕ ಹಿಂದೀ ಸರಕಾರದ ಪರಿಸ್ಥಿತಿ ಹೇಗೆ ನಿಂತಿದೆಯೆಂದು ತಿಳಿಯಲು ಪ್ರಜೆಗಳೂ ಕುತೂಹಲ ಪಡೆಯುವುದು ಸಹಜವೆಂಬುದರಿಂದ ಇದನ್ನೀಗ ಶಾಸನ ಸಭೆಯ ಮುಂದೆ ತಂದುದು ಉತ್ತಮವಾಯಿತೆಂದೇ ಹೇಳಬೇಕು

ಮಾನ್ಯ ಶಣ್ಮುಖಂ ಚೆಟ್ಟಿಯಾರರು ಆಯವ್ಯಯದ ಅಂದಾಜನ್ನು ಸಭೆಯ ಮುಂದಿಡುತ್ತಾ ನಮ್ಮ ಸರಕಾರದ ಆರ್ಥಿಕ ಪರಿಸ್ಥಿತಿ ಏನೂ ಹಾಳಾಗಿಲ್ಲವೆಂಬುದನ್ನು ಸ್ಪಷ್ಟಗೊಳಿಸಿರುವರು. ಈ ವರ್ಷದ ಮಟ್ಟಿಗೆ ಸುಮಾರು 26 ಕೋಟಿ ರೂಪಾಯಿ ಆಯಕ್ಕಿಂತ ವ್ಯಯವು ಹೆಚ್ಚಾಗುತ್ತಿತ್ತು ಇದರಲ್ಲಿ ಸುಮಾರು 1½ ಕೋಟಿಯಷ್ಟು ಹತ್ತಿ ಬಟ್ಟೆ ಮತ್ತು ನೂಲುಗಳನ್ನು ರಫ್ತುಮಾಡುವಾಗ ಹೊರಿಸುವ ಸುಂಕದ ಕ್ರಮದಲ್ಲಿ ಸ್ವಲ್ಪ ತಿದ್ದುಪಡಿ ಮಾಡಿ ವಸೂಲಾಗುವುದರಿಂದ ಕಡಮೆ ಬೀಳುವ ಹಣ ಸುಮಾರು 24½ ಕೋಟಿ ಮಾತ್ರ ಇದನ್ನು ಭರ್ತಿ ಮಾಡಲು ಹೊಸ ತೆರಿಗೆಗಳನ್ನು ಹೊರಿಸುವ ಯೋಚನೆ ಅಗತ್ಯವಿಲ್ಲವೆಂದು ಅರ್ಥಸಚಿವರು ಅದನ್ನು ಹಾಗೆಯೇ ಬಿಟ್ಟಿರುವರು ಯಾಕೆಂದರೆ ಇದು ಈ ವರ್ಷದ ವಿಶೇಷ ಪರಿಸ್ಥಿತಿಯಿಂದಾಗಿ ಹೀಗೆ ವ್ಯಯವು ಅಧಿಕವಾಗಿರುತ್ತದೆಂದೂ ಸಾಮಾನ್ಯ ಸ್ಥಿತಿ ಬಂದೊಡನೆ ವ್ಯಯಕ್ಕಿಂತ ಆಯವೇ ಹೆಚ್ಚಾಗುವಷ್ಟು ತೆರಿಗೆಗಳು ಈಗ ಇವೆಯೆಂದೂ ಇವರು ಅಭಿಪ್ರಾಯಪಟ್ಟಿದ್ದಾರೆ.

ಪಂಜಾಬ ಮೊದಲಾದೆಡೆಯ ಗಲಾಟೆಯಿಂದ ಪಾಕಿಸ್ಥಾನದಲ್ಲಿದ್ದ ನಮ್ಮ ಜನರು ಇಲ್ಲಿಗೆ ಬರಲು ಅವರ ಬಗ್ಗೆ ಕೇಂದ್ರ ಸರಕಾರಕ್ಕೆ ಸುಮಾರು 22 ಕೋಟಿ ರೂಪಾಯಿ ಖರ್ಚು ತಗಲುವುದೆಂದು ಅಂದಾಜು ಮಾಡಲಾಗಿದೆ. ಇದು ವರ್ಷಂಪ್ರತಿ ಬರುವ ಖರ್ಚಲ್ಲ. ಇದೇ ರೀತಿ ಪ್ರಜೆಗಳಿಗೆ ಆಹಾರ ಒದಗಿಸಲು ಈಗ ಕೇಂದ್ರ ಸರಕಾರಕ್ಕೆ ಸುಮಾರು 22½ ಕೋಟಿ ರೂಪಾಯಿ ಖರ್ಚಾಗುತ್ತದೆ. ನಮಗೆ ಬೇಕಾಗುವ ಆಹಾರವನ್ನು ಪರದೇಶಗಳಿಂದ ತರಿಸುವ ಗೊಡವೆಗೆ ಹೋಗದೆ ಸ್ವಾವಲಂಬನದಿಂದ ಇಲ್ಲಿಯೇ ಬೆಳಸಲು ಯತ್ನಿಸಿದಂತೆ ಈ ವಿಶೇಷ ಖರ್ಚು ಕೂಡಾ ನಿಲ್ಲುವುದು. ಮಾತ್ರವಲ್ಲ ಈಗಿನ ಸೈನ್ಯಖಾತೆಯ ಖರ್ಚು ಸುಮಾರು 92 ಕೋಟಿ ರೂಪಾಯಿಗಳಷ್ಟಾಗುತ್ತದೆ ಈ ವರ್ಷದ ವಿಶೇಷ ಪರಿಸ್ಥಿತಿ ಹೋದಂತೆ ಇದನ್ನು ಕೂಡಾ ಕಂಡಿತವಾಗಿಯೂ ಕಡಮೆ ಮಾಡಬಹುದು ಹೀಗೆ ಮುಂದೆ ವ್ಯಯವು ಕಡಮೆಯಾಗಲಿರುವುದರಿಂದ ಹೊಸ ತೆರಿಗೆಯ ಆವಶ್ಯಕತೆ ಬೀಳುವಂತಿಲ್ಲವೆಂಬುದನ್ನು ಸ್ಪಷ್ಟಪಡಿಸಲಾಗಿದೆ ಮಾತ್ರವಲ್ಲ ಈಗಿನ ತೆರಿಗೆಗಳು ಸರಿಯಾಗಿವೆಯೋ ಎಂಬ ಕುರಿತು ಸರಕಾರವು ವಿಮರ್ಶೆ ನಡೆಸಲಿದೆಯೆಂದೂ ಹೇಳಲಾಗಿದೆ

ಪಾಕಿಸ್ಥಾನ ಮತ್ತು ಹಿಂದುಸ್ಥಾನಗಳೆಂದು ದೇಶದ ವಿಭಜನೆಯಾಗುವಾಗ ಆಗಿನ ಸರಕಾರದ ಆರ್ಥಿಕ ಸಾಲ ಮೂಲ ಇತ್ಯಾದಿಗಳನ್ನು ಹಂಚಿಕೊಂಡ ಕ್ರಮ, ಈ ಕುರಿತು ಇನ್ನೂ ತೀರ್ಮಾನಿಸಲಿಕ್ಕಿರುವ ವಿಷಯಗಳು ಇವನ್ನೆಲ್ಲ ಅರ್ಥಿಕ ಸಚಿವರು ವಿವರಿಸಿರುತ್ತಾರೆ

ಮುಂದೆ ದೇಶದಲ್ಲಿಯ ಮಾಲುಗಳ ಕ್ರಯ ವಿಪರೀತ ಏರಿರುವ ಪ್ರಶ್ನೆಯನ್ನು ವಿಚಾರಿಸುತ್ತ ಹಣ ಹೆಚ್ಚಾಗಿ ಮಾಲು ಕಡಮೆಯಾಗಿರುವುದೇ ಇದರ ಮುಖ್ಯ ಕಾರಣವೆಂದು ವಿವರಿಸಿ ಹಣ ಹೆಚ್ಚಿದ್ದವರು ಅದನ್ನು ಸರಕಾರಕ್ಕೆ ಸಾಲವಾಗಿ ಕೊಟ್ಟು ಉಳಿತಾಯವಾಗಿಡುವುದರ ಆವಶ್ಯಕತೆಯನ್ನು ಒತ್ತಿ ಹೇಳಲಾಗಿದೆ

ಸರಕಾರವು ಕೃಷಿ ಕೈಗಾರಿಕೆಗಳ ಬೆಳವಣಿಗೆ ಬಗ್ಗೆ ಎಷ್ಟೋ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿದೆ ಅದಕ್ಕೆಲ್ಲ ಹಣಬೇಕು ಹಣ ಹೆಚ್ಚಿದ್ದವರೆಲ್ಲರೂ ಇಂಥ ಮಿಗಿತೆಯ ಹಣವನ್ನು ಸರಕಾರಕ್ಕೆ ಸಾಲವಾಗಿ ಒದಗಿಸಿದರೆ ಇವೆಲ್ಲ ಕಾರ್ಯಕ್ರಮಗಳಿಗೆ ಸಹಾಯ ಮಾಡಿದಂತಾಗುತ್ತದೆ ಮಾತ್ರವಲ್ಲ ಮಾಲುಗಳ ಕ್ರಯಗಳನ್ನು ಇಳಿಸಲು ಸಹಕರಿಸಿದಂತೆಯೂ ಆಗುತ್ತದೆಂಬುದನ್ನು ಅರ್ಥಸಚಿವರು ವಿವರಿಸಿರುತ್ತಾರೆ

ಪರದೇಶದ ವ್ಯಾಪಾರಕ್ಕೆ ನಮಗೆ ಬೇಕೆಂಬಷ್ಟು ಹಣದ ಅನುಕೂಲತೆ ಈಗ ಇರುವುದಿಲ್ಲ ಇಂಗ್ಲಾಂಡಿನ ಸರಕಾರವು ಯುದ್ಧ ಕಾಲದಲ್ಲಿ ನಮ್ಮಿಂದ ಪಡೆದ ಸಾಲದ ಹಣ ಪೂರ್ಣ ಈಗ ಸಿಕ್ಕುವುದಿಲ್ಲ ಇದರಲ್ಲಿ ಸ್ವಲ್ಪ ಅಂಶ ಪ್ರತ್ಯೇಕಿಸಿ ಈಗ ಪರದೇಶ ವ್ಯಾಪಾರಕ್ಕೆ ಉಪಯೋಗಿಸಲು ಕೊಟ್ಟಿರುತ್ತಾರೆ ಉಳಿದ ಹಣ ಇಂಗ್ಲಾಂಡಿನಲ್ಲಿ ನಮ್ಮಿಂದ ಸಲತಕ್ಕ ಪೆನ್‌ಶನ್ ಇತ್ಯಾದಿಗಳ ಮಟ್ಟಿಗೆ ಮಾತ್ರ ಉಪಯೋಗಿಸಲು ಸಿಕ್ಕುತ್ತದೆ. ವ್ಯಾಪಾರದ ಮಟ್ಟಿಗೆ ಈ ರೀತಿ ಪ್ರತ್ಯೇಕಿಸಿಕೊಟ್ಟ ಹಣ ಹಾಗೂ ಈಗ ನಡೆಯುತ್ತಿರುವ ವ್ಯಾಪಾರದಲ್ಲಿ ನಮಗೆ ಉಳಿಯಬಹುದಾದ ಚಾಲ್ತಿ ಮಿಗಿತೆ ಹಣ ಇವುಗಳ ಮೇಲೆಯೇ ನಾವು ಹೊಂದಿಕೊಂಡಿರಬೇಕಾಗಿದೆಯೆಂಬುದನ್ನು ವಿವರಿಸಲಾಗಿದೆ.

ನಮ್ಮ ಕೈಗಾರಿಕೆಗಳು ಹಾಗೂ ಕೃಷಿಯ ಅಭಿವೃದ್ಧಿ ಸಾಧಿಸಬೇಕಾದರೆ ಪರದೇಶಗಳಿಂದ ಸಾಕಷ್ಟು ಯಂತ್ರೋಪಕರಣ ಇತ್ಯಾದಿ ತರಿಸದೆ ನಿವೃತ್ತಿ ಇಲ್ಲ. ಇದಕ್ಕೆ ಬೇಕಾದ ಹಣವಿಲ್ಲ. ಆಮದು ಮಾಡುವುದಕ್ಕಿಂತ ಹೆಚ್ಚಿನ ಮಾಲುಗಳನ್ನು ರಫ್ತು ಮಾಡಿದರೆ ಮಾತ್ರ ಸ್ವಲ್ಪ ಹಣ ಸಿಕ್ಕುತ್ತದೆ ರಫ್ತು ಹೆಚ್ಚು ಮಾಡಬೇಕಾದರೆ ಉತ್ಪತ್ತಿ ಹೆಚ್ಚಾಗಬೇಕೆಂಬುದು ಮುಖ್ಯ ಪ್ರಶ್ನೆಯಿರುತ್ತದೆ ಬೇಕಾದ ಯಂತ್ರೋಪಕರಣ ಮೊದಲಾದುವಿಲ್ಲದೆ ಉತ್ಪತ್ತಿಯನ್ನು ಹೆಚ್ಚಿಸುವುದಾದರೂ ಸಾಧ್ಯವಿಲ್ಲ. ಹೀಗೆ ಈ ಪ್ರಶ್ನೆಯು ಹುಟ್ಟು ಬಿಡದೆ ಮದುವೆಯಾಗದು ಮದುವೆಯಾಗದೆ ಹುಚ್ಚು ಬಿಡದೆಂಬ ಗಾದೆಯಂತಾಗಿದೆ

ಅಂತೂ ಪರದೇಶದಿಂದ ಆಮದು ಮಾಡುವುದನ್ನು ಆದಷ್ಟು ಕಡಮೆ ಮಾಡುವುದು ಈ ಪ್ರಶ್ನೆಯನ್ನು ಬಿಡಿಸಲು ಇರುವ ಮುಖ್ಯ ದಾರಿಯೆನ್ನಲು ಅಡ್ಡಿಯಿಲ್ಲ ಯಂತ್ರೋಪಕರಣ ಇತ್ಯಾದಿ ಉತ್ಪತ್ತಿ ಹೆಚ್ಚಿಸಲು ಅನುಕೂಲವಾಗುವ ಮಾಲುಗಳನ್ನೇ ಪ್ರಧಾನವಾಗಿ ತರಿಸಬೇಕೆಂಬುದು ಸ್ಪಷ್ಟ ವಿಲಾಸಕ್ಕಾಗಿ ಬೇಕಾಗುವ ಪರಕೀಯ ಮಾಲುಗಳನ್ನು ತರಿಸಲೇಬಾರದು ಆಹಾರ ಇತ್ಯಾದಿ ತರಿಸದೆ ಉಪಾಯವಿಲ್ಲವೆಂಬ ಮಾಲುಗಳನ್ನು ತರಿಸುವುದನ್ನು ಪ್ರಯತ್ನಪೂರ್ವಕ ಕಡಮೆ ಮಾಡುತ್ತ ಹೋಗಬೇಕು. ಕೇಂದ್ರ ಸರಕಾರವು ಈ ಧೋರಣೆಯನ್ನೇ ಕೈಕೊಳ್ಳಲಿದೆಯೆಂದು ವಿವರಿಸಲಾಗಿದೆ

ನಮ್ಮ ಉತ್ಪತ್ತಿಯನ್ನು ಹೆಚ್ಚಿಸುವ ಆವಶ್ಯಕತೆಯನ್ನು ನಮ್ಮ ಮಜೂರ ಬಂಧುಗಳು ಸರಿಯಾಗಿ ತಿಳಿದುಕೊಳ್ಳುವುದು ಅತ್ಯಾವಶ್ಯಕವೆಂದು ಅರ್ಥ ಸಚಿವರು ಒತ್ತಿ ಹೇಳಿದ್ದಾರೆ ಮೇಲಿಂದ ಮೇಲೆ ನಡೆಯಿಸಲ್ಪಡುವ ಮಜೂರ ಮುಷ್ಕರಗಳು ದೇಶಕ್ಕೆ ಅಂದರೆ ಮಜೂರರಿಗೆ ಕೂಡಾ ಎಷ್ಟು ಹಾನಿ ಮಾಡುತ್ತವೆಂಬುದನ್ನು ಸ್ಪಷ್ಟಗೊಳಿಸಲಾಗಿದೆ ಇವು ಉತ್ಪತ್ತಿ ಹೆಚ್ಚಿಸುವ ಬದಲು ಕಡಮೆ ಮಾಡುತ್ತವೆಂಬುದನ್ನು ತಿಳಿಯಲು ಕಷ್ಟವಿಲ್ಲ ಮಾಲುಗಳಿಲ್ಲದೆ ಕೇವಲ ಹಣ ಹೆಚ್ಚು ಸಿಕ್ಕಬೇಕೆಂದು ಹೋರಾಡುವುದು ನಿಷ್ಪ್ರಯೋಜಕವೆಂಬುದನ್ನು ಅವರು ವಿಶದೀಕರಿಸಿರುತ್ತಾರೆ

ಈಗಿನ ಪರಿಸ್ಥಿತಿಯಲ್ಲಿ ಕೃಷಿ ಕೈಗಾರಿಕೆಗಳ ಅಭಿವೃದ್ಧಿ ಸಾಧಿಸಲು ಖಾಸಗಿ ಪ್ರಯತ್ನಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಡುವುದು ಅಗತ್ಯವಿದೆಯೆಂಬ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿ ಅರ್ಥಸಚಿವರು ನಮ್ಮ ಭಂಡವಲಗಾರರ ಬೆನ್ನು ತಟ್ಟಿದ್ದಾರೆ ಇವರೆಲ್ಲರಿಗೆ ಈ ಭಾಷಣದಿಂದ ಸಾಕಷ್ಟು ಸಮಾಧಾನವಾಗಿರುತ್ತದೆಂದರೆ ಹೆಚ್ಚಲ್ಲ ಇವರು ವ್ಯಕ್ತಪಡಿಸಿರುವ ಈ ವಿಶ್ವಾಸವು ಸರಿಯಲ್ಲವೆಂದು ಈಗಿನ ಪರಿಸ್ಥಿತಿಯಲ್ಲಿ ವಾದಿಸಲಿಕ್ಕೂ ಬರುವುದಿಲ್ಲವೆಂಬುದನ್ನು ಒಪ್ಪಬೇಕು

ಈಗ ಒಪ್ಪಿಸಿದ ಅರ್ಥಿಕ ಆಯವ್ಯಯದ ಅಂದಾಜು ನಮ್ಮ ಸರಕಾರದ ಪರಿಸ್ಥಿತಿ ಕೆಟ್ಟದ್ದಿಲ್ಲವೆಂಬ ಸಮಾಧಾನ ಕೊಡುವಂತಹದು ಮಾತ್ರವೆನ್ನಬೇಕು ಸರಕಾರದ ಮುಂದಿನ ಆರ್ಥಿಕ ಧೋರಣೆ ಇತ್ಯಾದಿ ಈ ಬಾರಿಯ ಈ ತಾತ್ಕಾಲಿಕ ಅಂದಾಜಿನಲ್ಲಿ ಮೂಡಿಬರುವುದು ಸಾಧ್ಯವಿಲ್ಲ ಬರುವ ಎಪ್ರಿಲಿನಲ್ಲಿ ಶಾಸನ ಸಭೆಯ ಮುಂದೆ ಬರಲಿರುವ ಆಯವ್ಯಯದ ಅಂದಾಜಿನಲ್ಲಿ ನಮ್ಮ ಸರಕಾರದ ಮುಂದಿನ ಆರ್ಥಿಕ ಧೋರಣೆ ಸ್ಪಷ್ಟವಾಗಲಿಕ್ಕಿದೆಯೆಂದು ಹೇಳಿದರೆ ಸಾಕು.

ಟೀಕೆ-ಟಿಪ್ಪಣಿಗಳು

ಹೈದರಾಬಾದಿನ ಒಪ್ಪಂದ

ಹೈದರಾಬಾದು ಸರಕಾರಕ್ಕೂ ಹಿಂದೀ ಸರಕಾರಕ್ಕೂ ಒಂದು ವರ್ಷದ ತನಕದ ಒಂದು ಒಪ್ಪಂದವಾಗಿ ಹೈದರಾಬಾದಿನ ಪ್ರಶ್ನೆಯು ತತ್ಕಾಲಕ್ಕೆ ತೀರ್ಮಾನ ಹೊಂದಿದ್ದು ತೃಪ್ತಿಕರವೆಂದೇ ಹೇಳಬೇಕು ಕೇಂದ್ರ ಶಾಸನ ಸಭೆಯಲ್ಲಿ ವಲ್ಲಭಭಾಯಿ ಪಟೇಲರು ಈ ಕುರಿತು ವಿವರಿಸುತ್ತಾ ನೈಜಾಮರ ಕಡೆಯಿಂದ ಬಂದ ಮೊದಲಾಗಿ ಬಂದಿದ್ದ ಶಿಷ್ಟಮಂಡಲದವರೊಡನೆ ಮಾತುಕತೆ ಬೆಳೆಸಿದ ಕ್ರಮದ ಶರ್ತಗಳೇ ಈಗಿನ ಈ ಒಪ್ಪಂದದಲ್ಲಿವೆಯೆಂದರು ಅಗೋಸ್ತು 15ರ ತನಕ ಹಿಂದುಸ್ಥಾನ ಸರಕಾರಕ್ಕೂ ನೈಜಾಮ ಸರಕಾರಕ್ಕೂ ಇದ್ದ ಪರಸ್ಪರ ವ್ಯವಹಾರದ ಸಂಬಂಧಗಳೇ ಇನ್ನು ಒಂದು ವರ್ಷದ ತನಕ ಇಡಬೇಕೆಂದೂ ಇದರಲ್ಲಿ ಹಿಂದೀ ಸರಕಾರಕ್ಕೆ ನೈಜಾಮ ಸರಕಾರದ ಮೇಲೆ ಇದ್ದ ಸಾರ್ವಭೌಮತ್ವ ಮಾತ್ರ ಬಿಟ್ಟುಕೊಡಲಾಗಿದೆಯೆಂದೂ ಒಪ್ಪಂದವನ್ನು ವಿವರಿಸಲಾಗಿದೆ ಅಂತೂ ಸದ್ಯಕ್ಕೆ ಯಾವ ಗೊಂದಲವೂ ಇಲ್ಲದೆ ಪ್ರಶ್ನೆಯು ಈ ರೀತಿ ತೀರ್ಮಾನವಾದುದು ಯೋಗ್ಯವೇ ಇರುತ್ತದೆಂಬುದು ನಿರ್ವಿವಾದ

ಹೈದರಾಬಾದು ಸರಕಾರಕ್ಕೂ ಅಲ್ಲಿಯ ಪ್ರಜಾವರ್ಗಕ್ಕೂ ಇರುವ ಸಂಬಂಧ ಮಾತ್ರ ಸರಿಯಾಗಬೇಕಾಗಿದೆ ಈ ಕುರಿತು ಕೂಡಾ ಪ್ರಗತಿಯಾಗುವ ಲಕ್ಷಣಗಳು ಕಂಡುಬರುತ್ತಿವೆ ನೈಜಾಮರು ಹೊಸ ದಿವಾನರನ್ನು ಆರಿಸಿಕೊಂಡಿದ್ದಾರೆ ಇವರು ಅಲ್ಲಿಯ ಶ್ರೀಮಂತರಲ್ಲೊಬ್ಬ ತರುಣರಿದ್ದು ಪಾಶ್ಚಾತ್ಯ ದೇಶಗಳ ಅನುಭವ ಚೆನ್ನಾಗಿದ್ದವರೆಂದು ತಿಳಿದ ಸುತ್ತದ ಇವರ ನೇಮಕದಿಂದ ಅಕ್ಷಿಯ ಕಾಂಗ್ರೆಸ್ ಮೊದಲಾದ ಪಂಗಡಗಳಿಗೆ ಚಳುವಳಿ ನಿಲುಮಾಡುವಂತೆ ಕಾಣುತ್ತದೆ ಅಂತೂ ಸರಕಾರಕ್ಕೂ ಪ್ರಜಾ ಮುಂದಾಳುಗಳಿಗೂ ಮಾತುಕತೆಗಳು ನಡೆಯುತ್ತಿವೆಯೆಂಬುದು ಅಷ್ಟರ ಮಟ್ಟಿಗೆ ತೃಪ್ತಿಕರವೆಂದೇ ಹೇಳಬೇಕಾಗಿದೆ

ಕಾಶ್ಮೀರದ ಕುರಿತು ಸಂಧಾನ

ಪಾಕಿಸ್ಥಾನ ಮತ್ತು ಹಿಂದುಸ್ಥಾನ ಸರಕಾರಗಳೊಳಗೆ ಕಾಶ್ಮೀರ ಪ್ರಶ್ನೆಯ ಕುರಿತು ಸಂಧಾನದ ಮಾತುಕತೆಗಳು ನಡೆಯಲು ಆರಂಭವಾಗಿರುತ್ತದೆ ಸಂಧಾನದ ಕುರಿತು ಇತ್ಯರ್ಥವಾದಲ್ಲಿ ಕಾಶ್ಮೀರದಲ್ಲಿಯ ದಂಗೆಕಾರರು ಸುಮ್ಮಗಾಗುವಂತೆ ತಾವು ಮಾಡುವುದಾಗಿ ಪಾಕಿಸ್ಥಾನದ ಮುಖ್ಯ ಮಂತ್ರಿಯವರು ಒಪ್ಪಿಕೊಂಡಿರುತ್ತಾರೆ ಅಂದರೆ ಈ ದಂಗೆಗಾರರು ತಮ್ಮ ಕಡೆಯವರೆಂಬುದನ್ನು ಇವರು ಈಗ ಸ್ಪಷ್ಟವಾಗಿ ಒಪ್ಪಿದಂತಾಗುತ್ತದೆ

ಇದು ಹೇಗಿದ್ದರೂ ಸಂಧಾನದ ಈ ಪ್ರಯತ್ನ ಯಶಸ್ವಿಯಾಗಲೆಂದೇ ಹಾರೈಸುವುದು ಯುಕ್ತವಿರುತ್ತದೆ ಕಾಶ್ಮೀರದಲ್ಲಿ ಶೇಕ್ ಅಬ್ದುಲ್ಲಾರವರ ಅಧಿಕಾರದಲ್ಲಿ ಈಗ ನಡೆಯುವ ಪ್ರಜಾ ಸರಕಾರಕ್ಕೆ ಭಂಗಬರಲಾಗದು ಕಾಶ್ಮೀರದಲ್ಲಿ ಪಾಕಿಸ್ಥಾನದವರ ಉಪಟಳ ಪುನಃ ತಲೆದೋರಲು ಎಡೆಯಿರಲಾಗದು ಅಲ್ಲಿಯ ಜನರ ಸುಖ ಸ್ವಾತಂತ್ರಗಳಿಗೆ ಭಂಗಬಾರದ ರೀತಿಯಲ್ಲಿ ಸಂಧಾನ ಸಾಧ್ಯವಾದಲ್ಲಿ ಹಿಂದೀ ಸರಕಾರವು ಅದಕ್ಕೆ ಒಪ್ಪಿಕೊಳ್ಳುವುದೇ ಯುಕ್ತವಿರುತ್ತದೆ ಯಾಕೆಂದರೆ ನೆರೆಹೊರೆಯ ನಮ್ಮ ಎರಡು ರಾಷ್ಟ್ರಗಳಲ್ಲಿ ಮೈತ್ರಿ ಬೆಳೆಯುವ ಯಾವ

ಮುನಿಸಿಪಲ್ ಕೌನ್ಸಿಲಿನ ಸಭೆ

ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಸಭೆಯೊಂದು ಇದೇ ನವಂಬರ ತಾರೀಕು 29ನೇ ಶನಿವಾರ ಸಂಜೆ ಕೌನ್ಸಿಲಿನ ಸಭಾ ಭವನದಲ್ಲಿ ಶ್ರೀ ಎಲ್ ಸಿ. ಪ್ಯಾಸರ ಅಧ್ಯಕ್ಷತೆಯಲ್ಲಿ ಜರಗಿತು.

ಗುರುಪುರ ಹೊಳೆಯಿಂದ ಮಂಗಳೂರು ನಗರಕ್ಕೆ ನಳ್ಳಿ ನೀರನ್ನು ಒದಗಿಸುವ ಯೋಜನೆಯನ್ನು ಈ ಸಭೆಯು ಮಂಜೂರು ಮಾಡಿತು ಈ ಯೋಜನೆಯಂತೆ ಮಂಗಳೂರು ಮುನಿಸಿಪಾಲಿಟಿಯಲ್ಲಿ 1,75,000 ಜನರಿಗೆ ತಲೆಯೊಂದರ ದಿನಕ್ಕೆ 20 ಗೆಲನಿನಂತೆ ನೀರು ಒದಗಿಸಲಾಗುವುದಲ್ಲದೆ ದಾರಿಯಲ್ಲಿಯ 12 ಗ್ರಾಮಗಳ ಜನರಿಗೆ ದಿನಕ್ಕೆ ತಲೆಯೊಂದರ 5 ಗೆಲನಿನಂತೆ ಒದಗಿಸಲಿಕ್ಕೆ ಸಾಧ್ಯವಾಗುತ್ತದೆ. ಈ ಯೋಜನೆಗೆ ಆರಂಭದಲ್ಲಿ ರೂ 48 41 ಲಕ್ಷ ಖರ್ಚು ತಾಗುತ್ತದೆ ಮತ್ತು ಆ ಬಳಿಕ ವರ್ಷಕ್ಕೆ ರೂ 46,000 ಖರ್ಚು ತಗಲುತ್ತದೆ

ಈ ಯೋಜನೆಯನ್ನು ಚೀಫ್ ಇಂಜಿನಿಯರರು ಶಿಫಾರಸು ಮಾಡಿರುವರು ಮಾತ್ರವಲ್ಲ ಕೂಡಲೆ ಗುರುಪುರ ಹೊಳೆಯಲ್ಲಿ 1020 ಫೀಟುಗಳ ನೆಲದಡಿಯ ತೋಡೊಂದನ್ನು ತಯಾರಿಸಿ ನೀರು ಪಂಪು ಇಡುವಲ್ಲಿ ಒಂದು ಬಾವಿಗೆ ಸೇರುವ ಏರ್ಪಾಡು ಮಾಡುವ ಕೆಲಸ ಕೈಕೊಳ್ಳಲು ಸರಕಾರದೊಡನೆ ಕೇಳಿಕೊಂಡಿರುವುದಾಗಿ ತಿಳಿದು ಬರುತ್ತದೆ.

ಯೋಜನೆಗೆ ತಗಲುವ ಖರ್ಚನ್ನು ಸರಕಾರದಿಂದ ಅರ್ಧಾಂಶ ಸಹಾಯ ಧನವಾಗಿಯೂ, ಅರ್ಧಾಂಶ ಸಾಲವಾಗಿಯೂ ಪಡೆಯಬಹುದು ಅಂದರೆ ಸುಮಾರು ರೂ 24 ಲಕ್ಷವನ್ನು ಸಾಲವಾಗಿ ಪಡೆಯಬೇಕಾಗುತ್ತದೆ ಇದನ್ನು 30 ವರ್ಷಗಳ ಕಂತಿನಲ್ಲಿ ಮರುಪಾವತಿ ಮಾಡುವುದಿದ್ದರೆ ವರ್ಷಕ್ಕೆ ಒಡ್ಡಿ ಕೂಡಾ ಸುಮಾರು ಒಂದು ಲಕ್ಷ ರೂಪಾಯಿಗಳಂತೆ ಕೊಡಬೇಕಾಗುತ್ತದೆ ಇದಕ್ಕೆ ನೀರು ಒದಗಿಸುವ ಬಗ್ಗೆ ಹೊಸ ತೆರಿಗೆಯನ್ನು ಹೊರಿಸಬೇಕಾಗುತ್ತದೆ

ಈಗ ಮಂಗಳೂರು ಮುನಿಸಿಪಾಲಿಟಿಯವರು ಶೇಕಡಾ 17ರಷ್ಟು ಒಟ್ಟು ತೆರಿಗೆ ಹೊರಿಸುತ್ತಿದ್ದಾರೆ ಸಾಮಾನ್ಯ ತೆರಿಗೆ ಶೇ 10, ವಿದ್ಯೆಯ ಬಗ್ಗೆ ಶೇ 1, ತೋಟಿ ಕೆಲಸದ ಬಗ್ಗೆ ಶೇಕಡಾ 2, ದೀಪಗಳ ಬಗ್ಗೆ ಶೇಕಡಾ 2 ಮತ್ತು ನೀರು ಒದಗಿಸುವ ಮತ್ತು ಚರಂಡಿ ವ್ಯವಸ್ಥೆ ಬಗ್ಗೆ ಶೇಕಡಾ 2 ಶೇಕಡಾ 1ರಂತೆ ತೆರಿಗೆ ಹೊರಿಸಿದರೆ ರೂ 21,000 ವಸೂಲಾಗುತ್ತದೆ ನೀರು ಒದಗಿಸುವ ಬಗ್ಗೆ ಶೇಕಡಾ 5ರಂತೆ ತೆರಿಗೆ ಹೊರಿಸಿದಲ್ಲಿ ವರ್ಷಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಜಮೆಯಾಗುತ್ತದೆ

ಸಭೆಯು ಈ ಯೋಜನೆಯನ್ನು ಸ್ವೀಕರಿಸಿದ್ದಲ್ಲದೆ ಚೀಫ್ ಇಂಜಿನಿಯರರಿಗೆ ಹೊಳೆಯಲ್ಲಿ ಕೂಡಲೆ ಕೈಕೊಳ್ಳಬೇಕಾದ ತೋಡನ್ನು ರಚಿಸಲು ಆಜ್ಞೆ ಕೊಡಬೇಕಾಗಿ ಅರ್ಧಾಂಶ ಸಹಾಯ ಧನ ಮತ್ತು ಅರ್ಧಾಂಶ ಸಾಲ ಒದಗಿಸಬೇಕಾಗಿಯೂ ಅವಶ್ಯವುಳ್ಳಷ್ಟು ನೀರು ತೆರಿಗೆ ಏರಿಸುವುದಾಗಿಯೂ ನಿರ್ಣಯಿಸಿತು ಮಾತ್ರವಲ್ಲ ಯೋಜನೆ ಬಗ್ಗೆ ಅವಶ್ಯವುಳ್ಳ ಭೂಮಿ ಸ್ವಾಧೀನತೆ ಬಗ್ಗೆ ಅಗತ್ಯವುಳ್ಳ ಕಾರ್ಯ ಕೈಕೊಳ್ಳಬೇಕಾಗಿಯೂ ಯೋಜನೆಗೆ ಹೆಚ್ಚಿನ ವಿದ್ಯುತ್ ಶಕ್ತಿ ಅಗತ್ಯವಿರುವುದರಿಂದ ಅದನ್ನು ಒದಗಿಸುವ ಏರ್ಪಾಡು ಮಾಡಬೇಕಾಗಿಯೂ ಸರಕಾರವನ್ನು ಕೇಳಿಕೊಳ್ಳಲಾಗಿದೆ

ಇದರ ಜೊತೆಯಲ್ಲಿ ಯೋಗ್ಯ ಚರಂಡಿಗಳ ವ್ಯವಸ್ಥೆ ಬಗ್ಗೆ ಪರಿಶೀಲನ ನಡೆಸಿ ಯೋಜನೆ ತಯಾರಿಸಲು ಅವಶ್ಯವುಳ್ಳ ಶಿಬಂದಿಯನ್ನು ಸರಕಾರದವರು ಕೂಡಲೇ ನೇಮಿಸಬೇಕಾಗಿಯೂ ಇದಕ್ಕೆ ತಗಲುವ ಖರ್ಚನ್ನು ಕೌನ್ಸಿಲು ಕೊಡುವುದೆಂದು ನಿರ್ಣಯಿಸಲಾಯಿತು

ಸಭೆಯು ನಿರ್ಣಯಿಸಿದ ಇನ್ನೊಂದು ಮುಖ್ಯ ವಿಚಾರವೆಂದರೆ ಮುನಿಸಿಪಾಲಿಟಿಯ ಶಿಬಂದಿಯವರೆಲ್ಲರಿಗೆ ಶಾಲಾ ಉಪಾಧ್ಯಾಯರಿಗೆ ಕೂಡಾ ಅದೇ ತರಗತಿಯ ಸರಕಾರೀ ನೌಕರರ ಸಂಬಳ ಮತ್ತು ತುಟ್ಟಿ ಭತ್ತೆಗಳ ಸ್ಕೇಲನ್ನು ಕೊಡಬೇಕೆಂಬುದು ಸರ್ವಿಸು ಹೆಚ್ಚಾದವರಿಗೆ ಸರಕಾರದವರು ಕೊಡುವ ಕ್ರಮದಲ್ಲಿಯೇ ಬಡತಿ ಇತ್ಯಾದಿ ಕೊಡಬೇಕೆಂದೂ ನಿರ್ಣಯವಾಯಿತು ಮುನಿಸಿಪಲ್ ಬಿಲ್ ಕಲೆಕ್ಟರರಿಗೆ ಒಂದು ತಿಂಗಳ ಬೋನಸ್ ಮಂಜೂರಾಯಿತು ಮತ್ತು ಕೀಳ್ತರಗತಿಯ ಕೆಲಸಗಾರರಿಗೆ ತಿಂಗಳೊಂದರ ಒಂದು ರೂಪಾಯಿ ಬಡತಿ ಮಾಸ್ಯ ತೆರದ ವೇಳೆಯವರು ಇಲ್ಲಿಗೆ ಬಂದಾಗ ಸೂಚಿಸಿದಂತೆ ಮಂಜೂರಾಯಿತು

ನಗರದಲ್ಲಿಯ ಕೆಲವು ರಸ್ತೆಗಳಿಗೆ ಡಾಮಾರು ಹಾಕುವ ಬಗ್ಗೆ ರೂ 3,10 550 ರ ಅಂದಾಜನ್ನು ಮಂಜೂರು ಮಾಡಲಾಯಿತು

ಈ ರಸ್ತೆಗಳು ಕೆಳಗಿನವು.— 1 ಬಂದರು ರಸ್ತೆ—ಬವಾರ್ಕೆಲ್ಲಿನಿಂದ ಪೋರ್ಟ್ ರಸ್ತೆ ವರೆಗೆ 2 ಮಹಾತ್ಮಾ ಗಾಂಧಿ ರಸ್ತೆ—ಬಿಸೆಂಟ್ ಶಾಲೆಯಿಂದ ಲಾಲಬಾಗಿನ ವರೆಗೆ 3 ಮಂಗಳಾದೇವಿ ರಸ್ತೆ—ಪಾಂಡೇಶ್ವರ ಜಂಕ್ಷನಿನಿಂದ ಮಾರ್ನಮಿಕಟ್ಟೆ ವರೆಗೆ 4 ಗಣಪತಿ ಹ್ಯಾಸ್ಕೂಲು ರಸ್ತೆ — ಟ್ರಂಕ್ ರೋಡಿನಿಂದ ರಾಮರಾವ್ ಗಲ್ಲಿಗಾಗಿ ರಥಬೀದಿ ವರೆಗೆ 5 ಟ್ರಿವೆಲರ್ಸ್ ಬಂಗ್ಲೆ ರಸ್ತೆ ಮಂಗಳಾದೇವಿಯಿಂದ ರೊಜಾರಿಯೋ ಚರ್ಚ್ ರಸ್ತೆ ವರೆಗೆ 6 ರೈಲ್ವೇ ಸ್ಟೇಶನ್ ರಸ್ತೆ 7. ಮುನಿಸಿಪಲ್ ಆಫೀಸು ರಸ್ತೆ 8. ಕೆನರಾ ಹ್ಯಾಸ್ಕೂಲು ರಸ್ತೆ ಮತ್ತು ಡೊಂಗರಕೇರಿ ರಸ್ತೆ 9. ಡಾಕ್ಟರ್ ಅನ್ಸಾರಿ ರಸ್ತೆ 10. ಬಂದರ ರಸ್ತೆ 11. ಜೆಪ್ಪು ಸೆಮಿನರಿ ರಸ್ತೆ ಕಂಕನಾಡಿ ಜಂಕ್ಷನಿನಿಂದ ಸೆಮಿನರಿ ವರೆಗೆ 12. ತಾಲೂಕು ಆಫೀಸು ರಸ್ತೆ 13. ದಾಸಪ್ಪ ನ್ಯಾಕನ ಕೆರೆಯಿಂದ ಪೋರ್ಟ್ ರಸ್ತೆ ವರೆಗೆ 14. ಕಂಡತಪಳ್ಳಿ/ಶಾಲೆಯಿಂದ ಬೊಕ್ಕಪಟ್ಟಣ ಡಿಸ್ಪೆನ್ಸರಿ ವರೆಗೆ 15 ಬಾವುಟೆಗುಡ್ಡೆ ರಸ್ತೆ.

ಮುನಿಸಿಪಾಲಿಟಿಯನ್ನು ವಿಸ್ತರಿಸಿದ ಪ್ರದೇಶಗಳಿಗೆ ದೀಪಗಳನ್ನು ಒದಗಿಸುವುದಿಲ್ಲವೆಂಬುದರಿಂದ ಇಲ್ಲಿ ದೀಪದ ಬಗ್ಗೆ ತೆರಿಗೆ ವಸೂಲಾಗುತ್ತಾ ಇಲ್ಲ. ಈ ಏರ್ಪಾಡನ್ನು ಮುಂದರಿಸಬೇಕೆಂಬ ನಿರ್ಣಯವು ಆಯಿತು

ಮುನಿಸಿಪಾಲಿಟಿಯ ಪ್ರಯಾಣಿಕರ ಬಂಗಲೆ ಭಾಡಿಗೆ ದರಗಳನ್ನು ಹೆಚ್ಚಿಸಲಾಯಿತಲ್ಲದೆ ಬಾಡಿಗೆ ಕೊಡದೆ ಯಾವ ಅಧಿಕಾರಿಯೂ ಇಲ್ಲಿ ಉಳಕೊಳ್ಳಬಾರದೆಂದು ನಿರ್ಣಯಿಸಲಾಯಿತು

ಪಡವು ಗ್ರಾಮದಲ್ಲಿ 1000 ಎಕ್ರೆಯಷ್ಟು ಸ್ಥಳವನ್ನು ಪಡೆದು ಇಲ್ಲಿ ಮನೆಗಳು, ಹೂದೋಟಗಳು, ಆಟದ ಭೂಮಿಗಳು, ಶಾಲೆಗಳು, ಮಾರ್ಕೆಟುಗಳು, ಇತ್ಯಾದಿ ರಚಿಸುವ ಕಾಲ್ಪನರ ಯೋಜನೆಯಲ್ಲಿ ಮುನಿಸಿಪಾಲಿಟಿಯವರು ಸಹಕರಿಸಬೇಕಾಗಿ ನಿರ್ಣಯವಾಯಿತು

ಮಂಗಳೂರು ಮುನಿಸಿಪಲ್ ಕೌನ್ಸಿಲಿನವರು ಇಲ್ಲಿಯ ಕಾಫಿ ಮತ್ತು ಊಟದ ಹೊಟೇಲುಗಳಿಗೆ ಲೈಸೆನ್ಸ್ ಕೊಡಲು ಫೀಸು ವಸೂಲು ಮಾಡುವ ದರಗಳನ್ನು ಏರಿಸಿದ್ದರು. ಇದಕ್ಕೆ ಸರಕಾರದವರು ಈ ದರಗಳನ್ನು ಯಾಕೆ ರದ್ದುಪಡಿಸಬಾರದೆಂದು ಕೇಳಿದ್ದಾರೆ ಮಾತ್ರವಲ್ಲ 47—48 ಮತ್ತು ಆ ನಂತರದ ಬಗ್ಗೆ ಲೋಕಲ್ ಬೋರ್ಡ ಇನ್ಸ್‌ಪೆಕ್ಟರರೊಡನೆ ಆಲೋಚಿಸಿ ತಿದ್ದಬೇಕೆಂದೂ ಸೂಚಿಸಿದ್ದಾರೆ ಈ ಇನ್ಸ್‌ಪೆಕ್ಟರರು ಇಲ್ಲಿ ಪೊಲ್ಲಾಚಿ ಮತ್ತು ಪಾಲಘಾಟಿನಲ್ಲಿ ಪ್ರಚಾರದಲ್ಲಿರುವ ದರಗಳನ್ನು ಇಡಬಹುದೆಂದು ಸೂಚಿಸಿದ್ದಾರೆ ಇದೆಲ್ಲದರ ಅರ್ಥವೆಂದರೆ ಮುನಿಸಿಪಾಲಿಟಿಯವರು ಹಾಕಿದ ದರಗಳು ವಿಪರೀತವೆಂದು ಹೊಟೇಲು ಮಾಲಕರು ಚಳವಳವೆಬ್ಬಿಸಿ ಯಶಸ್ವಿಯಾದಂತೆ ಕಾಣುತ್ತದೆ

ಈ ವಿಷಯಗಳನ್ನು ಸಭೆಯು ವಿಚಾರಿಸಿತು. ಈ ಹೊಟೇಲುಗಳು ಕೊಳಕು ನೀರನ್ನು ಚರಂಡಿಯಲ್ಲಿ ಹರಿಯುವಂತೆ ಮಾಡಿ ನಗರದ ಆರೋಗ್ಯವನ್ನು ಹಾಳು ಮಾಡುತ್ತವೆ ಇವುಗಳಿಂದ ಆದಷ್ಟು ಹೆಚ್ಚಿನ ತೆರಿಗೆ ವಸೂಲು ಮಾಡುವುದೇ ನ್ಯಾಯವೆಂಬುದರಿಂದ ಸರಕಾರಕ್ಕೆ ಯಾವ ರೀತಿ ಸಮಾಧಾನ ಕೊಡಬಹುದೆಂಬ ಬಗ್ಗೆ ಆಲೋಚಿಸುವ ಕೆಲಸ ಹೆಲ್ತ ಕಮಿಟಿಗೆ ಕೊಡಲಾಯಿತು ಈ ಕುರಿತು ಆಲೋಚಿಸುವ ವಟ್ಟಿಗೆ ಈ ಕಮಿಟಿಗೆ ಶ್ರೀಗಳಾದ ಸುವರ್ಣರವರೂ, ಸರ್ಪಪ್ರಭುಗಳವರೂ ಶೇಷ್ಪರೂ ಸೇರಬೇಕೆಂದೂ ನಿರ್ಣಯವಾಯಿತು

ಹಂಪನಕಟ್ಟೆ ಜಂಕ್ಷನಿನ ವಾಯುವ್ಯ ಮೂಲೆಯು ಎಲ್ಲಾ ಬಗೆಯ ವಾಹನ ಚಲಾವಣೆಗಳಿಗೆ ಒಂದು ದೊಡ್ಡ ಅಪಾಯದ ಸ್ಥಾನವಾಗಿರುತ್ತದೆ ಇದನ್ನು ಅಗಲ ಮಾಡಿ ಸರಿಮಾಡಿದರೆ ವಾಹನಗಳಿಗೆ ಆಗುವ ಅಡಚಣೆ ದೂರವಾಗುವುದು ಮಾತ್ರವಲ್ಲ ಈ ಸ್ಥಳದಲ್ಲಿ ಇರಲಿಕ್ಕೆ ಆರೋಗ್ಯವಲ್ಲದ ಕೆಲವು ಹಳೆಯ ಕಟ್ಟಡಗಳು ಹೋಗುವುದರಿಂದ ಈ ಸಿರಹದ್ದಿನ ಅಂದವೂ ಹೆಚ್ಚಾಗುತ್ತದೆ. ಆದುದರಿಂದ ಇದಕ್ಕೆ ಅಗತ್ಯವಿರುವ ಸ್ಥಳ ಅವುಗಳಲ್ಲಿರುವ ಕಟ್ಟಡಗಳ ಸಮೇತ ಸ್ವಾಧೀನ ತೆಗೆದುಕೊಳ್ಳಲು ಅವಶ್ಯವುಳ್ಳ ಕಾರ್ಯ ಕೈಕೊಳ್ಳಬೇಕು ಎಂಬುದಾಗಿ ರಾವ್ ಬಹದ್ದೂರ್ ಎನ್.

(ಒನೇ ಪುಟ ನೋಡಿ)

ಸಂದರ್ಭವನ್ನಾದರೂ ಕಳೆದುಕೊಳ್ಳುವುದು ಉಚಿತವಲ್ಲ

ಅದರೆ ನ್ಯಾಯ ತಪ್ಪಿ ರಾಜಿಮಾಡಿಕೊಳ್ಳುವ ಹವ್ಯಾಸವನ್ನು ಕಟ್ಟಿಕೊಳ್ಳುವುದಾದರೂ ಸರಿಯಲ್ಲ ಏದರಿಂದ ಈಗ ತತ್ಕಾಲಕ್ಕೆ ಶಾಂತಿ ದೊರೆತರೂ ಮುಂದೆ ಕೇಡುಂಟೆಂಬುದು ಕಟ್ಟಿಟ ಮಾತು ಅಂದರೆ ಹಿಂದೆ ಚೇಂಬರ್ಲೇನರು ಹಿಟ್ಲರನೊಂದಿಗೆ ಮಾಡಿಕೊಳ್ಳುತ್ತಿದ್ದ ಒಗೆಯ ಶಾಂತಿಸಾಧಕ ಪ್ರಯತ್ನಗಳು ಒಪ್ಪಕ್ಕೊ ಬೇಡ ಅದಕ್ಕಿಂತ ಈಗ ಪರಸ್ಪರ ಹೋರಾಡುವುದೇ ಉತ್ತಮವಿರುತ್ತದೆ

ಪಾಕಿಸ್ಥಾನದವರು ತಮ್ಮ ಕಾಶ್ಮೀರ ವಶೀಕರಣ ಪ್ರಯತ್ನದಲ್ಲಿ ಸೋಲುವರೆಂಬುದು ಸ್ಪಷ್ಟ ತತ್ಕಾಲಕ್ಕೆ ಈ ಗೊಂದಲದಿಂದ ತಪ್ಪಿಸಿಕೊಂಡು ಮುಂದೆ ಕೈನೋಡೋಣವೆಂಬ ಬುದ್ಧಿಯಿಂದ ಸಂಧಾನಕ್ಕೆ ಬಂದಿರಬಹುದು ಸಂಧಾನಕ್ಕೆ ಒಪ್ಪುವುದು ಯುಕ್ತವೇ ಆದರೆ ಮುಂದೆ ಅವರಿಗೆ ಉಪಟಳಕ್ಕೆ ದಾರಿಯಿಲ್ಲದಂಥ ಪರಿಸ್ಥಿತಿಯನ್ನು ತಂದೊಡ್ಡಿಯೇ ಸಂಧಾನ ಸಾಧಿಸಬೇಕಾಗಿದೆ. ಇದೇ ರೀತಿ ಹಿಂದೀ ಸರಕಾರವೂ ವರ್ತಿಸುವುದೆಂಬ ಬಗ್ಗೆ ಸಂಶಯಪಡಬೇಕಾಗಿಲ್ಲ

ನಿಯಂತ್ರಣಗಳು ಹೋಗುತ್ತಿವೆ.

ಕಡಲೆ ಅದರ ಬೇಳೆ ಹಾಗೂ ಹಿಟ್ಟುಗಳ ಮೇಲಲ್ಲದೆ ಉಳಿದ ದ್ವಿದಳ ಧಾನ್ಯಗಳೆಲ್ಲದರ ಮೇಲಿನ ನಿಯಂತ್ರಣವನ್ನು ಸರಕಾರದವರು ತೆಗೆದುಹಾಕಿರುತ್ತಾರೆ ಹೀಗೆ ತೆಗೆದ ಬಳಿಕ ಈ ಧಾನ್ಯಗಳ ಬೆಲೆಗಳು ಕಡಮೆಯಾಗಿವೆಯೆಂದು ಮಾನ್ಯ ಆಹಾರ ಮಂತ್ರಿಯವರು ನಮ್ಮ ಶಾಸನ ಸಭೆಗೆ ಕೊಟ್ಟಿರುವ ಅಂಕೆ ಸಂಖ್ಯೆಗಳಿಂದ ಕಂಡುಬರುತ್ತಿದೆ ಸಕ್ಕರೆಯ ನಿಯಂತ್ರಣ ಹಾಗೂ ಬೆಲ್ಲದ ಕ್ರಯ ನಿಯಂತ್ರಣ ಇವೂ ತೆಗೆಯಲ್ಪಟ್ಟಿವೆ ಅಂತೂ ನಿಯಂತ್ರಣಗಳು ಒಂದೊಂದಾಗಿ ಹೋಗುತ್ತಿವೆಯೆಂಬುದು ಸಮಾಧಾನದ ಮಾತು

ಅಕ್ಕಿ ಗೋಧಿಗಳ ನಿಯಂತ್ರಣದ ಕುರಿತು ಕೇಂದ್ರ ಸರಕಾರದ ತೀರ್ಮಾನ ಇದನ್ನು ಬರೆವಾಗ ಇನ್ನೂ ಪ್ರಕಟವಾಗಿಲ್ಲ. ಅಂತೂ ಇವುಗಳನ್ನು ಕೂಡಲೇ ಅಥವಾ ಸ್ವಲ್ಪ ಸಮಯದ ಒಳಗೆ ಹೇಗೆ ಬೇಕೋ ಹಾಗೆ ತೆಗೆಯುವ ಜವಾಬ್ದಾರಿಯನ್ನು ಪ್ರಾಂತಿಕ ಸರಕಾರಗಳಿಗೆ ಕೊಡಲ್ಪಡುವ ಸಂಭವವುಂಟೆಂದು ಹೇಳಲಾಗುತ್ತಿದೆ ಹೀಗೆ ಈ ಜವಾಬ್ದಾರಿ ನಮ್ಮ ಪ್ರಾಂತಿಕ ಸರಕಾರಕ್ಕೆ ಒದಗಿದರೆ ಇವುಗಳ ಮೇಲಿನ ನಿಯಂತ್ರಣವನ್ನು ಆದಷ್ಟು ತೆಗೆದುಹಾಕುವುದೇ ಉಚಿತವೆಂದು ಪುನಃ ಸೂಚಿಸಬಯಸುತ್ತೇವೆ

ಹೇಗೂ 1948ನೇ ಇಸ್ವಿಯ ಆದ್ಯಂತಿಗ ಈಗಿನ ನಿಯಂತ್ರಣಗಳು ಯಾವವೂ ಉಳಿಯಲಾರವು ಎಂದು ಈಗ ಸ್ಪಷ್ಟವಾಗುತ್ತಿದೆ

ಇದಲ್ಲದರ ಅರ್ಥವೇನೆಂದರೆ ಈ ವಸ್ತುಗಳೆಲ್ಲವೂ ಸಾಕಷ್ಟು ಬೆಳೆಸಿ ನ್ಯಾಯವಾದ ಬೆಲೆಗೆ ಎಲ್ಲರಿಗೂ ಸಿಕ್ಕುವಂತೆ ಮಾಡುವ ಜವಾಬ್ದಾರಿ ಪ್ರಜಾಜನರ ಮೇಲೆಯೇ ಬೀಳುತ್ತದೆಂಬುದಿರುತ್ತದೆ ಇದನ್ನು ಪ್ರಜೆಗಳೆಲ್ಲರೂ ತಿಳಿದು ಎಲ್ಲರೂ ಯೋಗ್ಯ ರೀತಿಯಲ್ಲಿ ವರ್ತಿಸುವರೆಂದು ಹಾರೈಸಬೇಕಾಗಿದೆ

ಮಂಗಳೂರಿಗೆ ನಳ್ಳಿ ನೀರು ಮತ್ತು ಯೋಗ್ಯ ಚರಂಡಿಗಳ ವ್ಯವಸ್ಥೆ

ಈ ಕುರಿತು ಇದೇ ನವಂಬರ ತಾರೀಕು 28ಕ್ಕೆ ಶ್ರೀ ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಜರಗಿ ಸರಕಾರವು ಈ ಕೆಲಸವನ್ನು ಕೂಡಲೇ ಕೈಕೊಳ್ಳಬೇಕೆಂದು ಒತ್ತಾಯಪಡಿಸುವ ನಿರ್ಣಯವೊಂದನ್ನು ಮಂಜೂರು ಮಾಡಿ ಸರಕಾರಕ್ಕೆ ತಿಳಿಸಲಾಗಿದೆ ನಮ್ಮ ನಗರ ಸಭೆಯಲ್ಲಿಯೂ ಈ ಕುರಿತು ಅಗತ್ಯವುಳ್ಳ ನಿರ್ಣಯವಾಗಿರುತ್ತದೆ. ಮಂಗಳೂರಿನ ಜೀವನದ ಪ್ರಶ್ನೆ ಇದೆಂಬುದರಿಂದ ಮದ್ರಾಸು ಪ್ರಾಂತಿಕ ಸರಕಾರದವರು ಈ ಕುರಿತು ಯಾವ ಬಗೆಯ ಅಡ್ಡಿಯನ್ನು ತಂದೊಡ್ಡದೆ ಈ ಕಾರ್ಯವನ್ನು ಕೂಡಲೆ ಸಾಧಿಸಿಕೊಡಬೇಕಾಗಿ ನಾವೂ ಅತ್ಯಾಗ್ರಹದಿಂದ ಸೂಚಿಸಬಯಸುತ್ತೇವೆ.

ಧರ್ಮ ಸಮ್ಮೇಳನ- ಧರ್ಮಸ್ಥಳ ದೀಪೋತ್ಸವ ಇದೇ ಡಿಸೆಂಬರ ತಿಂಗಳ ತಾ. 7 ರಿಂದ ಇಲ್ಲಿಯ ದೀಪೋತ್ಸವವು ಪ್ರಾರಂಭವಾಗಿ ತಾ. 11ರ ವರೆಗೆ ಜರಗಲಿರುವುದು. ತಾ. 10ರಲ್ಲು ಕನ್ನಡ ಸಾಹಿತ್ಯದ ವಿಷಯವಾಗಿ ಸುಪ್ರಸಿದ್ಧ ವಿದ್ವಾಂಸರುಗಳ ಭಾಷಣಗಳು ನಡೆಯುವುವು. ತಾ. 11ರಲ್ಲು ವಿವಿಧ ಮತ ಧರ್ಮ ಸಮ್ಮೇಳನದಲ್ಲಿ 'ಸ್ವತಂತ್ರ ಭಾರತದಲ್ಲಿ ಧರ್ಮದ ಸ್ಥಾನ, ಮತ್ತು ಆಧುನಿಕ ವಿದ್ಯಾಭ್ಯಾಸ ಕ್ರಮದಲ್ಲಿ ಧರ್ಮಶಿಕ್ಷಣದ ಆವಶ್ಯಕತೆ' ಎಂಬ ವಿಷಯವಾಗಿ ಅನೇಕ ವಿದ್ವಾಂಸರುಗಳು ಭಾಷಣ ಕೊಡಲಿರುವರು.

ಮದುವೆ ರಿಜಿಸ್ಟ್ರಾರರು-ರಾವ್ ಸಾಹೇಬ್ ಶ್ರೀ. ಯು. ಮಂಜಪ್ಪನವರ ಬದಲಿಗೆ ಮಾಜಿ ರಿಜಿಸ್ಟ್ರಾರ್ ಶ್ರೀ ಯಂ. ರಾಮಪ್ಪನವರು 1872ನೇ ಇಸವಿ ಆಕ್ಟ ನಂಬ್ರ 8ರ ಪ್ರಕಾರ ದಕ್ಷಿಣ ಕನ್ನಡ ಜಿಲ್ಲಾ ಮದುವೆ ರಿಜಿಸ್ಟ್ರಾರರಾಗಿ ನೇಮಕಪಟ್ಟಿರುತ್ತಾರೆ. ಇವರು ಮಂಗಳೂರು ಶಹಾರು ಅಳಕೆ ಸಂಕದ ಬಳಿಯಲ್ಲಿ ವಾಸಿಸುತ್ತಾರೆ.

ಕುಲಾಲರ ಸೊಸೈಟಿ- ಕುಲಾಲ ಸಮಾಜದವರಿಂದ ನಿರ್ಮಿಸಲ್ಪಡುವ ಪಾತ್ರೆಗಳನ್ನು ಮಾರಾಟ ಮಾಡುವುದಕ್ಕೋಸ್ಕರ ಇದೇ ಬರುವ ದಿಸೆಂಬರ ತಿಂಗಳ ತಾರೀಕು 7ನೇ ಆದಿತ್ಯವಾರ ಬೆಳಗ್ಗೆ ಘಂಟೆ 9-45ಕ್ಕೆ ಸರಿಯಾಗಿ ನಮ್ಮ ಸಮಾಜದ ಪರವಾಗಿ ಸ್ಥಾಪಿಸಲ್ಪಟ್ಟ ಸೊಸೈಟಿಯ ಒಂದು ಮಳಿಗೆ ಯಾನೆ ಡಿಪೊ ಕುದ್ರೋಳಿ ಮಿಶ್ಯನ್ ಹಂಚು ಕಾರ್ಖಾನೆಯ ಬಳಿ, ದ. ಕ. ಜಿಲ್ಲಾ ಕೊ-ಓಪರೇಟಿವ್ ಡಿಪ್ಯುಟಿ ರಿಜಿಸ್ಟ್ರಾರರಾದ ಶ್ರೀ. ಎಂ. ಶ್ರೀನಿವಾಸ ಶ್ಯಾನುಭಾಗ, ಬಿ. ಎ., ಇವರಿಂದ ತೆರೆಯಲ್ಪಡುವುದು.

ಉಪ್ಪಿನ ರಖಂ ಮಾರಾಟ- ಕ್ರಯವನ್ನು ಈ ಕೆಳಗೆ ತೋರಿಸಿದಂತೆ ಹೆಚ್ಚಿಸಿಯದೆ.

ರಖಂ ದರ ಅಂದರೆ ಒಂದು ಇಂಪೀರಿಯಲ್ ಮಣ ಯಾ ಅದಕ್ಕಿಂತ ಹೆಚ್ಚು ತೂಕದಷ್ಟು ಬಂಢಸಾಲೆ ಮಾರಾಟ ಮಾಡುವ ದರ- 2 ಇಂಪೀರಿಯಲ್ ಮಣ ತೂಕದ ಗೋಣಿ ಒಂದಕ್ಕೆ 1. ಮಂಗಳೂರು ಮುನಿಸಿಪಾಲಿಟಿ ಮತ್ತು ಉಪ್ಪನ್ನು ತಯಾರಿಸುವಲ್ಲಿಂದ ಸೀದಾ ತರಿಸಿಕೊಳ್ಳುವ ಇತರ ಶಹರು ಗ್ರಾಮ ಯಾ ಸ್ಟೇಶನುಗಳಲ್ಲಿ 5-10-0. 2. ಮಂಗಳೂರು ಉಡುಪಿ ಮತ್ತು ಕಾಸರಗೋಡು ತಾಲೂಕುಗಳಲ್ಲಿ (ಸೀದಾ ಉಪ್ಪು ತರಿಸಿಕೊಳ್ಳುವ ಶಹರು ಯಾ ಗ್ರಾಮದ ಸ್ಟೇಶನುಗಳಲ್ಲದೆ) 6-2-0 3. ಕುಂದಾಪುರ ಕಾರ್ಕಳ ಮತ್ತು ಪುತ್ತೂರು ತಾಲೂಕುಗಳಲ್ಲಿ (ಸೀದಾ ಉಪ್ಪು ತರಿಸುವ ಶಹರು ಗ್ರಾಮ ಯಾ ಸ್ಟೇಶನುಗಳಲ್ಲದೆ ರೂ. 6-8-0.

ನೇಮಕಗಳು- ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್ ಶ್ರೀ. ಎಸ್. ಶಂಕರನ್‌ರವರು 3 ತಿಂಗಳ ರಜೆ ಪಡಕೊಂಡಿರುವುದರಿಂದ ಶ್ರೀ. ಎಂ. ಜನಾರ್ಧನ ಶೇಟ್‌ರವರು ಅವರ ಬದಲಿಗೆ ಕ. ಟಿ. ಆಫೀಸರರಾಗಿ ನೇಮಕಪಟ್ಟಿದ್ದಾರೆ.

ಡಿ. ಎಡ್ಯುಕೇಶನಲ್ ಆಫೀಸರ್ ಶ್ರೀ ಎನ್. ಸುಬ್ಬರಾಯರು ದಿಸೆಂಬರ ತಾ. 1ರ ಲಾಗಾಯ್ತು 4 ತಿಂಗಳ ರಜೆ ಮೇಲಿರುವರು.

ಅಪಘಾತ-ಪಡುತೋನ್ಸೆ ಕೆಮ್ಮಣ್ಣು ಮಯ್ಯತ್ತಮರಕಾಲರ ಮೀನು ಶುದ್ಧೀಕರಿಸುವ ಟ್ಯಾಂಕಿಯಲ್ಲಿದ್ದ ಗತವರುಷದ ಕೊಳಕು ನೀರು ಹೊರತೆಗೆಯುವರೆ ಐದು ಮಂದಿ ನಡುಹರೆಯದ-ಬಡಕೂಲಿಗಳು ಒಬ್ಬರ ಹಿಂದೆ ಒಬ್ಬರು ಟ್ಯಾಂಕಿಗೆ ಇಳಿದವರು ಅಲ್ಲೇ ವಿಷವಾಯು ಸೇವನೆಯಿಂದ ಶ್ವಾಸಕಟ್ಟಿ ಸತ್ತರೆಂದು ತಿಳಿದು ಬರುತ್ತದೆ. ಪೋಲೀಸ್ ಮತ್ತು ಹೆಲ್ತ್ ಇಲಾಖೆಯವರು ಸ್ಥಳ ತನಿಖೆ ನಡೆಸಿದ್ದಾರೆ.

ಜಿಲ್ಲಾ ಸಮಾಚಾರ

ಕರ್ನಾಟಕ ವಿಶ್ವವಿದ್ಯಾನಿಲಯದ ಸಮಿತಿ—ಈ ಸಮಿತಿಯವರು ಕಳೆದ ತಾ. 27ರಲ್ಲಿ ಮಂಗಳೂರಿಗೆ (ಬೆಂಗಳೂರಿಂದ) ಬಂದು ತಾ. 28ರಲ್ಲಿ ಬೆಳಗ್ಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ—ಜಿ. ಬೋ. ವಿದ್ಯಾಧಿಕಾರಿಗಳಾದ ಶ್ರೀ. ಎಚ್. ರಾಮರಾವ್, ಜಿ. ಬೋ. ಸ್ಪೆಶಲ್ ಆಫೀಸರರಿಗೆ ಪ. ಅಸಿ. ಶ್ರೀ. ಎಂ. ಸುಂದರ ರಾವ್, ಶ್ರೀಗಳಾದ ಮುಳಿಯ ತಿಮ್ಮಪ್ಪಯ್ಯ, ಎ. ಶಂಕರ ಆಳ್ವ, ವಕೀಲ, ಗ. ಕಾಲೇಜಿನ ಪ್ರಿನ್ಸಿಪಾಲ್ ಸೈ. ಎಲೋಸಿಯಸ್ ಕಾಲೇಜಿನ ಪ್ರಿನ್ಸಿಪಾಲ್ ಮೊದಲಾದವರ ಸಾಕ್ಷ್ಯಗಳನ್ನು ತೆಗೆದುಕೊಂಡು ಅಲ್ಲಿಂದ ಇಲ್ಲಿಯ ಕೆಲವು ವಿದ್ಯಾ ಸಂಸ್ಥೆಗಳಿಗೆ-ಗ. ಕಾಲೇಜ್, ಸೈಂ. ಎ. ಕಾಲೇಜ್ ಮೊದಲಾದದಕ್ಕೆ ಭೇಟಿ ಕೊಟ್ಟು ಅಪರಾಹ್ನ ಗಂಟೆ 2ಕ್ಕೆ ಕೆನರಾ ಹ್ಯಾಸ್ಕೂಲಲ್ಲಿ ಶ್ರೀಗಳಾದ ಕೆ. ಆರ್. ಕಾರಂತ, ಎಂ. ಎಲ್. ಎ. ಕೆ. ಆರ್. ಆಚಾರ್, ರಾ. ಸಾ. ಪಿ. ಆರ್. ಪೂಂಜ, ಎಂ. ಮಾಧವರಾವ್ ಮೊದಲಾದವರ ಸಾಕ್ಷ್ಯಗಳನ್ನು ಪಡೆದು ಸತ್ಯ್ಕರಾಗಿ ಗಣಪತಿ ಶಾಲೆಯಲ್ಲಿ ಜಿಲ್ಲಾ ಗಿಲ್ಡಿನವರ ಅಭಿಪ್ರಾಯಗಳನ್ನೊಳಗೊಂಡ ಒಂದು ಸೂಚನಾ ಪಹಿಯನ್ನೂ ಸ್ವೀಕರಿಸಿರುವರು.

ದ. ಕ. ಪ್ರಗತಿಶೀಲ ಮುಸ್ಲಿಂ ಜಮಾಯತ್-ಇದರ ಉದ್ಘಾಟನಾ ಸಮಾರಂಭವು ತಾ. 28ರಂದು ಎಚ್. ಎಚ್. ಚಮ್ನಾಡ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಮುಸ್ಲಿಮರು ಹಿಂದೀ ಒಕ್ಕೂಟಕ್ಕೆ ಪ್ರಾಮಾಣಿಕರಾಗಿರಬೇಕು—ಮೊದಲಾದ ಠರಾವುಗಳು ಮಂಜೂರಾದವು.

ಹುಲಿ ಶಿಕಾರಿ- ಪುತ್ತೂರು ಸಮೀಪ ಕುಂಬ್ರದ ಹತ್ತಿರದ ಕಾಡಿನಲ್ಲಿ ಒಂದು ದೊಡ್ಡ ಜಾತಿಯ ಹುಲಿಯು ಅನೇಕ ಜಾನುವಾರುಗಳನ್ನು ಬಲಿ ತೆಗೆದುಕೊಂಡುದನ್ನು ತಪ್ಪಿಸಿ ಅದನ್ನು ಶಿಕಾರಿ ಮಾಡಬೇಕೆಂದು ಊರಿನವರು ಸೇರಿ ತಾ. 22ರಲ್ಲು ಬೇಟೆಯಾಡಿ ಗುಂಡುಗಳಿಂದ ಹೊಡೆದು ಕೊಂದುಹಾಕಿದರೆಂದೂ ಅರ್ಧ ಗಾಯಹೊಂದಿದ ಹುಲಿಯು ವೈಮೇಲೆ ಹಾರಿ ಇಬ್ಬರಿಗೆ ಜಖಂ ಪಡಿಸಿತೆಂದೂ, ಆ ಪೈಕಿ ಹರಿಜನನೊಬ್ಬನಿಗೆ ವಿಶೇಷ ಜಖಂ ಆಗಿದೆ ಎಂದೂ ಆಕ್ರೈಕೆ ನಡೆಸಲ್ಪಟ್ಟಿದೆ ಎಂದೂ ಗೊತ್ತಾಗಿದೆ.

ನೀರಿಗೆ ಬಿದ್ದು ಮರಣ-ಕೆಲದಿನಗಳ ಹಿಂದೆ ಇಲ್ಲಿಯೇ ಸಮೀಪವಿರುವ ಹರೇಕಳದ ಗಟ್ಟಿ ಜಾತಿಯ ಸುಮಾರು 32 ವರ್ಷ ಪ್ರಾಯದ ಹೆಂಗಸೊಂದು ಹೊಳೆಯಲ್ಲಿ ಬಿದ್ದು, ಅವಳ ಶವ ತಾ. 27ರಲ್ಲು ಉಳ್ಳಾಲ ಕಡವಿನ ಬಳಿಯಲ್ಲಿ ದೊರೆಯಿತೆಂದು ತಿಳಿದುಬಂದಿದೆ. ಈ ಬಗ್ಗೆ ತನಿಖೆ ನಡೆಯುತ್ತಿರುವುದು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪಿತ: ೧೯೦೬)

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು, ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು, ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿ ಕೊಡುವುದು ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906

CANARA BANK, LIMITED.

ಎಲ್ಲಾ ಚರ್ಮ ವ್ಯಾಧಿಗಳಿಗೆ ಜರ್ಮೆಕ್ಸನ್ನುಪಯೋಗಿಸಿರಿ

ಲಿಟಿಲ್ಸ್ ಓರಿಯಂಟಲ್ ಬಾಮಿನವರ ತಯಾರಿಕೆ.

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ

ಈ ವಿಖ್ಯಾತ ಚಲಚಿತ್ರ ತಾರೆ

ಮತ್ತು

ಗಾಯನ ವಿದುಷಿಯ

ಅಮೋಘ ಸಂಗೀತವನ್ನು

ಸದ್ಯದಲ್ಲೇ ಮಂಗಳೂರಲ್ಲಿ ಕೇಳುವ

ಸುಸಂಧಿ ಕಳಕೊಳ್ಳಬೇಡಿರಿ!

ಮುಂದೆ ವಿಶೇಷ ವಿವರಗಳು

ಲಾರ್ಡ್ ಮೌಂಟ್‌ಬೇಟನ್ನರು ಭಾರತ ಡೊಮಿನಿಯನ್ನಿನ ಗವರ್ನರ್ ಜನರಲ್ಲರಾಗಿ ನೇಮಿಸಲ್ಪಟ್ಟ ಮರುದಿನವೇ ದಿಲ್ಲಿಯ ಸಾಮಾನ್ಯ ಜನರೊಡನವರು ಹೆಗಲು ತಿಕ್ಕುತ್ತ, ಹಸ್ತಲಾಘವ ಕೊಡುತ್ತ ಮೆರವಣಿಗೆ ಹೊರಟರು ಅಂದಿನಿಂದಲೇ ಭಾರತದ ಮೇಲಧಿಕಾರಿಗಳ ವರ್ತನದಲ್ಲಿ ಅವರ್ಣನೀಯನಾದೊಂದು ಬದಲಾವಣೆಯಾಯಿತು ವ್ಯಾಸರಾಯ ಮತ್ತು ಗವರ್ನರುಗಳು, ಕಲೆಕ್ಟರರು ಮತ್ತು ಕಮೀಶನರುಗಳು ಪ್ರಜಾ ಸೇವಕರೆಂಬ ಜ್ಞಾನೋದಯವಾದಂತಾಯಿತು ಅವರು ಸ್ವರ್ಗಲೋಕದಿಂದಿಳಿದ ಬೃಹತ್ಪ್ರಾಣವರಲ್ಲವೆಂದೂ ಆಗಲೇ ಪ್ರತ್ಯಕ್ಷ ಅನುಭವಕ್ಕೆ ಬಂತು

ಅದು ತನಕ ಗವರ್ನರ್ ಮತ್ತು ವ್ಯಾಸರಾಯರುಗಳು ಬ್ರಿಟಿಷ್ ಶ್ರೀಮಂತ ವರ್ಗದಿಂದಲೇ ಚುನಾಯಿಸಲ್ಪಡುತ್ತಿದ್ದರು ಅವ

(೫ನೇ ಪುಟದಿಂದ)

ಮುನಿಸಿಪಲ್ ಕೌನ್ಸಿಲಿನ ಸಭೆ

ಎನ್ ಸುವರ್ಣರು ಸೂಚಿಸಿದ ನಿರ್ಣಯವನ್ನು ಮಂಜೂರು ಮಾಡಿ ಸಭೆಯು ಮುಕ್ತಾಯವಾಯಿತು

ಈ ವರದಿಯಲ್ಲಿ ಬಿಟ್ಟಿರುವ ಒಂದು ವಿಚಾರ ಹೇಳದೆ ಇದು ಸಂಪೂರ್ಣವಾಗುವುದಿಲ್ಲ ಮುನಿಸಿಪಲ್ ಉಪಾಧ್ಯಾಯರಿಗೆ ಸರಕಾರೀ ಸ್ಕೇಲುಗಳನ್ನು ಕೊಡಬೇಕೆಂಬ ಬಗ್ಗೆ ಶ್ರೀಗಳಾದ ರಾಘವೇಂದ್ರ ಪ್ರೈಯವರೂ ದಾಮೋದರ ಬಾಳಿಗರೂ ತಮ್ಮ ತಮ್ಮ ನಿರ್ಣಯಗಳ ನೋಟೀಸುಗಳನ್ನು ಕೊಟ್ಟಿದ್ದರು ಶ್ರೀ ಬಿ ಎಸ್ ಭಾಸ್ಕರ ರೈಯವರು ಉಪಾಧ್ಯಾಯರು ಕೂಡ ಎಲ್ಲಾ ನೌಕರರಿಗೆ ಸರಕಾರೀ ನೌಕರರಿಗೆ ಕೊಡುವ ಸ್ಕೇಲುಗಳನ್ನೇ ಕೊಡಬೇಕೆಂದು ತಮ್ಮ ನಿರ್ಣಯದ ನೋಟೀಸು ಕೊಟ್ಟಿದ್ದರು ಶ್ರೀ ರೈಯವರ ನಿರ್ಣಯದಲ್ಲಿ ತಮ್ಮ ಸೂಚನೆ ಅಡಕವಿರುವುದರಿಂದ ಮೊದಲಿನವರಿಬ್ಬರು ತಮ್ಮ ಸೂಚನೆಗಳನ್ನು ಹಿಂತೆಗೆದು ಶ್ರೀ ರೈಯವರ ಸೂಚನೆ ಮಂಜೂರಾಯಿತು

ಶ್ರೀ ರೈಯವರ ಸೂಚನೆಯಲ್ಲಿ ಇನ್ನೂ ಎರಡು ಅಂಶಗಳಿದ್ದುವು ಸರಕಾರೀ ನೌಕರರಿಗೆ ಕಳೆದ ಬಾರಿ ಕೊಟ್ಟಂತೆ ಮುನಿಸಿಪಲ್ ನೌಕರರಿಗೆ ಕೂಡಾ ಒಂದು ತಿಂಗಳ ಬೋನಸ್ಸು ಕೊಡಬೇಕೆಂಬುದು ಒಂದು ಇವರಿಗೂ ತಾತ್ಕಾಲಿಕ ಹಣ ಹಾಗೂ ಮನೆ ಬಾಡಿಗೆ ಭತ್ತೆ ಕೊಡಬೇಕೆಂಬುದು ಇನ್ನೊಂದು.

ಇವೆರಡು ಸೂಚನೆಗಳನ್ನು ಮುಂದೊತ್ತಿದರೆ ಯಾವುದೂ ಆಗಲಿಕ್ಕಿಲ್ಲವೆಂಬುದರಿಂದ ಇವೆರಡು ಸೂಚನೆಗಳನ್ನು ಮುಂದರಿಸಲಾಯಿತು

ಮುನಿಸಿಪಲ್ ನೌಕರರಿಗೆ ಇದು ಅಷ್ಟೊಂದು ಸಂತೋಷವುಂಟುಮಾಡಿದಂತೆ ಕಾಣಲಿಲ್ಲ ಶ್ರೀ ರೈಯವರ ಇವೆರಡು ಸೂಚನೆಗಳನ್ನು ಮಂಜೂರು ಮಾಡಿಬಿಡಬೇಕಿತ್ತೆಂಬುದೇ ಅವರ ಅಭಿಪ್ರಾಯವಿದ್ದಂತೆ ಕಾಣುತ್ತದೆ

ಮುನಿಸಿಪಲ್ ನೌಕರರ ಉತ್ಸಾಹ ಹೆಚ್ಚಿಸಲಿಕ್ಕೆ ಈ ರೀತಿ ಬಹಳ ಮಂದಿ ಉಮೇದ್ವಾರರು ಮುಂದೆ ಬಂದರೂ ಕೊನೆಗೂ ಈ ನೌಕರರಿಗೆ ಪೂರ್ಣ ತೃಪ್ತಿಯಾಗದಿದ್ದುದು ವಿಷಾದಕರವೆಂಬ ಈ ಸಂಗತಿಯನ್ನೆಲ್ಲ ಹೇಳದೇನೆ ಈ ಸಭೆಯ ವರದಿ ಮುಗಿಸಿದರೆ ಅನ್ಯಾಯವಾಗುತ್ತಿತ್ತಲ್ಲವೆ?

ಬಿಳಿಯರ ಬಾದಶಾಹಿಯ ಕಾಲದಲ್ಲಿ

ಭಾರತೀಯರನ್ನು ನೋಡುವುದೂ ಭ್ರಷ್ಟ

ಹಿಂದಿನ ಮತ್ತು ಇಂದಿನ ಗವರ್ನರುಗಳು

ರಾದರೊ ತಮ್ಮ ಉಚ್ಚ ಹೊಣೆಗಾರಿಕೆಯನ್ನು ಸಂಪೂರ್ಣ ನಿರ್ವಹಿಸುತ್ತಿದ್ದರೆಂದೂ ಹೇಳಬರುತ್ತಿದ್ದಿಲ್ಲ. ಅನೇಕ ಪ್ರಸಿದ್ಧ ಮೋಟಾರು ಮತ್ತು ಇನ್ಶೂರ್ ಕಂಪೆನಿಯ ಏಜೆನ್ಸಿಗಳನ್ನು ತೆಗೆದುಕೊಂಡು ಇಲ್ಲಿಗೆ ಬಂದು ಇಲ್ಲಿಯ ದೇಶಿ ರಾಜರಿಂದಲೂ ಜಮೀನ್ದಾರರಿಂದಲೂ ಕಮಿಶನ್ ಪಡೆಯುತ್ತಿದ್ದರು ಆಭರಣ ತಯಾರಿಕಾ ಸಂಸ್ಥೆಯ ಪ್ರಾತಿನಿಧ್ಯ ವಹಿಸಿ ನಾಜೂಕಿನ ಒಡವೆಗಳನ್ನು ತಮ್ಮ ಕೆಲವು ಸಂಬಂಧಿಕರಿಂದ ಇಲ್ಲಿನ ರಾಜ ಮಹಾರಾಜರುಗಳಿಗೆ ಮಾರಿಸುತ್ತಿದ್ದರು

ಬಂಗಾಲದ ಆದರ್ಶ

ಕಲ್ಕತ್ತದ ಗವರ್ನರ್ ಬಂಗಲೆಯ ಸಾಮಾಜಿಕ ಚಟುವಟಿಕೆಗಳಲ್ಲಿ ಗಣನೀಯ ಬದಲಾವಣೆಗಳಾಗಿವೆ ಹಿಂದಿನ ಗವರ್ನರರು ಸಾಮಾನ್ಯರೊಡನೆ ಹಸ್ತಲಾಘವ ಮಾಡುತ್ತಿದ್ದಿಲ್ಲ ಒಂದು ಕಾಲದಲ್ಲಿ ಬಂಗಾಲದ ಗವರ್ನರರು ಸಾಮಾನ್ಯ ಭಾರತೀಯರೊಡನೆ ಮಾತನಾಡುವಾಗ ಒಂದು ಪರದೆಯ ಹಿಂದೆ ಕುಳಿತುಕೊಳ್ಳುತ್ತಿದ್ದರು ದೊಡ್ಡ ಸಾಹೇಬರ ದೃಷ್ಟಿಯು ಸಾಮಾನ್ಯರ ನೋಟದಿಂದ ಮಲೀನವಾಗಬಹುದೆಂಬ ದರ್ಪದ ಭಾವನೆಯಿಂದಾಗಿ

ಬಂಗಾಲದ ಈ ಅವಿಚಾರದ ರೂಢಿಯನ್ನು ಮುರಿದವರು ಬಂಗಾಲಿ ಗವರ್ನರರಾಗಿ ಬಂದ ಆಸ್ಟ್ರೇಲಿಯನ್ ಗ್ರಹಸ್ಥ ಮಿಸ್ಟರ್ ಕೆಸೆ ಅವರು ಇವರೇ ಮೊದಲನೆ 'ಮಿಸ್ಟರರು'. ಅಧಿಕಾರ ಸ್ವೀಕರಿಸಿದ ಮರುದಿವಸವೇ ಕೆಸೆ ದಂಪತಿಗಳು ಸಾಮಾನ್ಯ ವೃತ್ತ ಪತ್ರಿಕಾಕಾರರೊಡನೆ ಬೆರೆತು ಮಾತುಕತೆಯಾಡಿದರು

ರಾಜಾಜಿಯವರು ಬಂಗಾಲದ ಮೊದಲ ಭಾರತೀಯ ಗವರ್ನರರು. ಅವರು ಸರಕಾರಿ ಭವನವನ್ನೂ ಕಛೇರಿಯನ್ನೂ ಇನ್ನಷ್ಟು ಪ್ರಜಾಪ್ರಭುತ್ವಮಯವಾಗಿ ಮಾಡಿದರು ಸಾಮಾನ್ಯ ಜನರನ್ನವರು ತಮ್ಮ ನಿವಾಸಕ್ಕೆ ಆಹ್ವಾನಿಸಿ ಅವರೊಡನೆ ಸಂಕೋಚವಿಲ್ಲದೆ ವ್ಯವಹರಿಸಿದರು.

ಒಂದು ವಿನೋದ ಘಟನೆ

ಹಿಂದಿನ ಬಿಳಿ ಗವರ್ನರರಿಗೆ ಇಲ್ಲಿಯ ಯಾವ ಭಾಷೆಯ ಜ್ಞಾನವೂ ಇರುತ್ತಿದ್ದಿಲ್ಲ. ಒಂದು ಸಲ ಓರ್ವ ಆಂಗ್ಲ ಗ್ರಹಸ್ಥನು ದೊಡ್ಡದೊಂದು ಹುದ್ದೆಗೆ ನೇಮಿಸಲ್ಪಟ್ಟು ಒಂದು ವಿಶಿಷ್ಟ ಪ್ರದೇಶದಲ್ಲಿರಿಸಲ್ಪಟ್ಟನು ಅಲ್ಲಿ ಯಾವುದೋ ಒಂದು ಔಷಧಿಗಾಗಿ ಅವನಿಗೆ ಕತ್ತೆ ಹಾಲಿನ ಅವಶ್ಯಕತೆಯುಂಟಾಯಿತು—ಓರ್ವ ಹಕೀಮನು ಅವನಿಗೆ ಈ ಪರಿಹಾರವನ್ನು ಹೇಳಿದ್ದನು ಕೂಡಲೇ ಬಿಳಿಯನು ತನ್ನ ಕಾವಲುಗಾರನನ್ನು ಕರೆದು ಒಂದು ಕತ್ತೆಯನ್ನು ತರಲು ಹೇಳಿದನು. ವಿಧೇಯ ಸೇವಕನು ಬಹಳ ಕಷ್ಟಪಟ್ಟು ಒಂದು 'ಗಾರ್ದಭ'ವನ್ನು ತಂದಾಗ ಅದು ನಿಷ್ಪ್ರಯೋಜನವೆಂದು ದೊರೆಗೆ ಹೊಳೆಯಿತು ಕಾರಣ ಅದು ಗಂಡು ಕತ್ತೆಯಾಗಿತ್ತು ತನಗೆ ಬೇಕಾದುದು ಹೆಣ್ಣೆಂಬುದನ್ನು ತಿಳಿಸಲು ಅವನಿಗೆ ಸರಿಯಾದ ಶಬ್ದ ಸಿಕ್ಕಲಿಲ್ಲ. ಕಡೆಗೆ ಭಾಷೆಯ ತೊಂದರೆ ನೀಗಿಸಲು ಅವನಿಗೊಂದು ಉಪಾಯ ಹೊಳೆಯಿತು. ಸೇವಕನನ್ನು ಕರೆದು ತನ್ನ ಹೆಂಡತಿಯನ್ನು ತೋರಿಸುತ್ತ ತನ್ನ 'ಹೆಂಡತಿಯಂತಹ ಒಂದು ಗದ್ಧಾ (ಕತ್ತೆ)ವನ್ನು ತಾ' ಎಂದನಂತೆ

ಇಲ್ಲಿಗೂ ಈ ಪ್ರಹಸನ ಮುಗಿಯಲಿಲ್ಲ ಅವನ ಹೆಂಡತಿಯು 'ಮಗುವನ್ನು' ಹೆತ್ತವಳಲ್ಲ ಸೇವಕನು ತನ್ನ ಅಜ್ಞಾಗ್ರಹಣ ಚಾತುರ್ಯವನ್ನು ಪ್ರದರ್ಶಿಸಲೋಸುಗವೆಂಬಂತೆ ಕರುಹಾಕದ ಹೆಣ್ಣು ಕತ್ತೆಯೊಂದನ್ನು ತಂದನು ಮತ್ತೆ ನಡೆದ ವಿನೋದವನ್ನು ವಾಚಕರು ಊಹಿಸಬಹುದು

1948 ಶಾರದಾ 1948
ಡೈರಿ
ಮತ್ತು
ಕೆಲೆಂಡರುಗಳು
ಮಾರಾಟಕ್ಕೆ ಸಿದ್ಧವಾಗಿವೆ.

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಲ್ಯಾಸಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೇಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು–ಮುಲ್ಕಿ ಲ್ಯಾಸಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಒಸ್ಕೆ ಪರ್ಮಿಶನು ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ. ಇದರಿಂದ ಪರಮೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳೆಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ,

ಮಂಗಳೂರು.
29–3–1947.

ಜೊಯಿಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮುಲಾಮು
ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.
ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.
(ESTD. 1908)
Company's New Business in 1946 - 3.28 Crores.

Our Chief Agency New Business in 1946 — **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent.

Kochikar Brothers, Limited.
(ESTD. 1910)
Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 12—12—1947 [ಸಂಚಿಕೆ 49]

ಭಾರತದಲ್ಲಿ ಕೈಗಾರಿಕೆಗಳು ವಿಶಾಲ ಪ್ರಮಾಣದಲ್ಲಿ ಅಭಿವೃದ್ಧಿಗೊಳ್ಳಬೇಕಾಗಿವೆ ಈ ವಿಷಯವು ಅತಂತ್ಯ ಜರೂರಿಯದ್ದೆಂದು ಅಲ್ಲಿನ ಸಾಮಾನ್ಯ ಜನತೆ ಬಹಿರಂಗ ಪ್ರದರ್ಶನಗಳ ಮೂಲಕ ನಿರೂಪಿಸಬೇಕು ಈಗಿನ ಬಂಡವಾಳ ಮತ್ತು ಬಂಡವಾಳ ಶಾಹಿಯು ನಡಸಿತ ಕ್ರೌರ್ಯವನ್ನು ಕೊನೆಗೊಳಿಸಿ ತಯಾರಿತ ವಸ್ತುಗಳ ಶ್ರೇಷ್ಠತೆಯನ್ನು ಹೆಚ್ಚಿಸುವುದರ ಕಡೆಗೆ ಬಲವಾದ ಸಾಮಾಜಿಕ ನಿರ್ಧಾರದ ಅವಶ್ಯಕತೆಯೂ ಇದೆ ಭಾರತದಲ್ಲೀಗ ದೊಡ್ಡ ಕೈಗಾರಿಕೆ ಹಿತಗಳೆಲ್ಲವೂ ಒಂದು ತರದ ಸಂಯುಕ್ತೀಕರಣಗೊಂಡುದರ ಪರಿಣಾಮವಾಗಿ ಬಂಡವಾಳ ಶಾಹಿ ಹಿತಗಳ ಕೈಯಲ್ಲೇ ಎಲ್ಲಾ ವಾಣಿಜ್ಯ ವ್ಯವಹಾರ ಸೂತ್ರಗಳು ಒಟ್ಟುಗೂಡಿವೆ. ಪರಿಣಾಮವಾಗಿ ವ್ಯಾಪಾರ ಕ್ಷೇತ್ರದಲ್ಲಿರಬೇಕಾದ ಪೈಪೋಟಿ ಇಲ್ಲವೆ 'ಸ್ಪರ್ಧೆ' ಗೆಡೆಯಿಲ್ಲದಂತಾಗಿದೆ ಇವುಗಳನ್ನು ಪ್ರಜಾರಾಜ್ಯದೊಡೆತನಗೊಳಪಡಿಸುವುದತ್ಯಾವಶ್ಯಕ

ಆದರೆ ಈ ತರದ ಸಾಮಾಜಿಕ ರಾಷ್ಟ್ರೀಕರಣಕ್ಕೆ ಭಾರತದ ಹಲವು ಪ್ರಮುಖರ ಆಕ್ಷೇಪವಿದೆ. ಕಾರಣ ಕೈಗಾರಿಕೆಗಳನ್ನು ರಾಷ್ಟ್ರೀಕರಿಸುವುದರಿಂದ ವ್ಯಯಕ್ತೀಕ ವಿಕಾಸಕ್ಕಿರುವ ಸಂದರ್ಭವು ಕಡಿಮೆಯಾಗುತ್ತದೆಂಬೊಂದು ಭಯವು ಅವರ ಮನಸ್ಸನ್ನು ಶಂಕೆಗೊಳ ಮಾಡಿದೆ ಸಾಮಾಜಿಕ ತತ್ವಜ್ಞಾನದಿಂದ ಘನತೆಗೇರಿಸಲ್ಪಟ್ಟ ವ್ಯಕ್ತಿ ಯಂತ್ರ ಕಿಂಕರನಾಗಿ ಆತ್ಮನಾಶಕ್ಕೊಳಗಾಗುವನೆಂಬುದು ಈ ಅಂಜಿಕೆಯ ತಿರುಳು

ಧ್ಯೇಯಾತ್ಮಕ ಕಲ್ಪನೆ

ಈ ಗಂಡಾಂತರವು ಸ್ವಲ್ಪ ಮಟ್ಟಿಗೆ ನಿಜವಾದುದು ಆದರೆ ಇಂದಿನ ಯಂತ್ರಮಯ ಪ್ರಪಂಚದಲ್ಲಿ ಮಾನವ ವ್ಯಕ್ತಿಯು ನಿಜವಾಗಿ ಸ್ವತಂತ್ರನಿರುವನೆ? ಹಿಂದಿನ ಕಾಲದಲ್ಲಿ ರೈತನು ಧೃಡಕಾಯನೂ, ಸಾನಂದ ಸ್ವರೂಪಿಯೂ ಆಗಿದ್ದನೆಂದು ತಿಳಿಯಲ್ಪಟ್ಟದ್ದು ಕೇವಲವೊಂದು ಕಲ್ಪನೆ. ಮುಂದಿನ ಕಾಲ್ಪನಿಕ ಭವಿಷ್ಯದಲ್ಲೂ ಅವನು ಹಾಗೇ ಇರಬೇಕೆಂದು ಎಳೆಸುವುದು ಅಷ್ಟೇ ಕಾಲ್ಪನಿಕವಾದುದು. ನಿಜವಾಗಿ ನೋಡ ಹೋದರೆ ಅವನು ಪ್ರತಿಯೊಂದು ಕಾಲದಲ್ಲೂ ಒಂದಿಲ್ಲೊಂದು ಜೀವನಾವಶ್ಯಕತೆಯ ಹೋರಾಟಕ್ಕೆ ಸಿಕ್ಕಿ ನರಳುತ್ತಿದ್ದನು. ಯಾವ ಕಾಲದಲ್ಲೂ ಅವನು ಸಾಂಸ್ಕೃತಿಕ ಮನಸ್ಸಿನಿಂದರ ಆನಂದವನ್ನನುಭವಿಸಿದ ಸೌಭಾಗ್ಯನಲ್ಲ. ಪ್ರತಿ ಕಾಲದಲ್ಲೂ ಇತರರ ಇಚ್ಛಾನುರಾಗಗಳಿಗೆ ಅನುವರ್ತಿಯಾಗಿ

ಭಾರತವು ತನ್ನ ತಾಪಸೀಭಾವದಿಂದ ಎದ್ದೇಳಬೇಕು

ಸಾಮಾನ್ಯ ಮಾನವನ ಜೀವನ ಸುಧಾರಿಸಬೇಕು.

ಪಾರ್ಲಿಮೆಂಟ್ ಸದಸ್ಯರೊಬ್ಬರ ಸೂಚನೆ

ಯೇ ಅವನು ಬಾಳಿ ಒಂದಿದ್ದಾನೆ. ಪಾಳೆಯಗಾರರಾಗಲಿ, ಮಾಂಡಲೀಕರಾಗಲಿ ಅವನ ಮೇಲೆ ತಮ್ಮ ನಿರಂಕುಶಾಧಿಕಾರವನ್ನು ಸದಾ ನಿರ್ವಹಿಸಿದ್ದಾರೆ ಭಾರತದ ಅನೇಕ ಸಂಸ್ಥಾನಗಳಲ್ಲಿ ಇಂದೂ ಅವ್ಯಾಹತವಾದ ನಿರಂಕುಶಾಧಿಕಾರವು ವಿರಾಜಿಸುತ್ತಿದೆ ಮೈಸೂರು, ತಿರುವಾಂಕೂರು, ಹೈದರಾಬಾದು ಮೊದಲಾದ ಕೆಲವೇ ಕಡೆಗಳಲ್ಲಿ ಅಲ್ಪ ಸ್ವಲ್ಪ ಸಾಮಾಜಿಕ ಪ್ರಗತಿ ರೈತನ ಪಾಲಿಗೆ ಬಂದಿರಬಹುದಾದರೂ ಅದು ಕೇವಲ ಅತ್ಯಲ್ಪವಾದದು. ಹೀಗೆಂದ ಮಾತ್ರಕ್ಕೆ ಯಂತ್ರಮಯವಾಗಿರದ ಕಾಲದಲ್ಲಿ ಸಾಮಾನ್ಯ ಮನುಷ್ಯ ಈಗಿನ ಯಂತ್ರಮಯವಾದ ಕಾಲಕ್ಕಿಂತಲೂ ಹೆಚ್ಚು ಭಾರರಹಿತನಾಗಿರುತ್ತಿದ್ದನೆಂಬ ಸಂಗತಿಯು ಸಂಪೂರ್ಣ ಸತ್ಯವಾಗಿಲ್ಲ

ಭಾವನಾತ್ಮಕ ಜೀವನ

ಹಳ್ಳಿಯ ಸರಳ ಜೀವನದಲ್ಲಿ ಅದೆಷ್ಟು ಸುಧಾರಣೆಗಳನ್ನು ತಂದೊಡ್ಡಿದ್ದರೂ ಹಳ್ಳಿಗನ ಜೀವನವು ಮತ್ತೂ ಜೀವನಾವಶ್ಯಕತೆಗಳನ್ನು ಸಂಗ್ರಹಿಸುವ ಹೋರಾಟದಲ್ಲೇ ಕಷ್ಟಪಡುವುದು. ಅವನ ಮಾನಸಿಕ ವಿಕಾಸಾನಂದಗಳಿಗೆ ಸಿಗುವ ಸಂದರ್ಭಗಳು ಅತ್ಯಲ್ಪವಾಗಿರುತ್ತವೆ ಕೆಲವು ಜನರು ಸಂಪೂರ್ಣ ಸನ್ಯಾಸಿ ಜೀವನದ ಸರಳತೆಯಲ್ಲಿ ಶ್ರೇಷ್ಠ ಆಧ್ಯಾತ್ಮಿಕ ಪರಮಾನಂದವನ್ನು ಹೊಂದಬಹುದು ಬೌದ್ಧಿಕ ವಿಚಾರ ಪರಿಪುಷ್ಟತವಾದ ಮನೋಶಿಕ್ಷಣದಿಂದ ಇಲ್ಲವೆ ವಿಶಿಷ್ಟವಾದೊಂದು ಮಾನಸಿಕ ಅಭಿರುಚಿಯಿಂದ ಈ ತರದ ಶಾಶ್ವತ ಪ್ರಿಯತೆಯೊಂದು ಲಭಿಸಬಹುದು ಪಾರಮಾರ್ಥಿಕ ವಿಚಾರದಲ್ಲಿ ಧ್ಯಾನಾಸಕ್ತವಾಗಿರುವ ಮನಸ್ಸೊಂದು ಇದಕ್ಕೆ ಯಥೇಷ್ಟ ಸಾಕ್ಷ್ಯ ಆದರೆ ಹಸಿವಿನಿಂದ ಬಳಲುವ ಓರ್ವ ಕಾಯಿಗೆ ಇಲ್ಲವೆ ಮಹತ್ವಾಕಾಂಕ್ಷೆಗಳಿಂದ ತುಂಬಿದೊರ್ವ ತರುಣನಿಗೆ ಈ ತಾಪಸೀ ಜೀವನೋಪದೇಶವು ಕೇವಲ ಹಾಸ್ಯಾಸ್ಪದವೆನಿಸದಿರದು

THE

UNITED INDIA LIFE ASSURANCE

ESTD 1906] CO., LTD. [H. O. MADRAS

SECURITY

'Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to.—

INSPECTORATE OFFICE

K. S. Rao Road, Mangalore.

ಸಹಜಾವಶ್ಯಕತೆಗಳು

ಸಾಮಾನ್ಯ ಭಾರತೀಯನಿಗೆ ಕೆಲವೊಂದು ನಿರ್ದಿಷ್ಟವಾದ ಆವಶ್ಯಕತೆಗಳಿವೆ ಇವು ಯಾವುವೆಂದು ಹಳ್ಳಿಗನಿಗೆ ಮತ್ತಷ್ಟು ಸ್ಪಷ್ಟವಾಗಿ ತಿಳಿದಿವೆ ಅವನಿಗೆ ಆಹಾರ, ಬಟ್ಟೆ, ನಿವಾಸ, ಬೆಳಕು, ಶಿಕ್ಷಣ, ವೈದಕೀಯ ಸೌಕರ್ಯ ಮೊದಲಾದುವುಗಳು ಬೇಕು. ಈಗ ಇವುಗಳಲ್ಲಿ ಒಂದೂ ಅವನಿಗೆ ಸರಿಯಾಗಿ ದೊರಕುವುದಿಲ್ಲ ಇವುಗಳನ್ನು ಜನತೆಗೊದಗಿಸುವುದು ಭಾರತ ರಾಷ್ಟ್ರದ ಮುಂದಿರುವ ದೊಡ್ಡ ಸಮಸ್ಯೆ

ಬ್ರಿಟನಿನ ಓರ್ವ ಪ್ರಜೆಗೆ ಇಂದು 3850 ಕೆಲರಿ (ಇದೊಂದು ಆಹಾರ ಪ್ರಮಾಣ)ಗಳಷ್ಟು ಆಹಾರ ಸಿಗುತ್ತದೆ. ಸಾಮಾನ್ಯ ಭಾರತೀಯನಿಗೆ 2000ದಷ್ಟಾದರೂ ಸಿಗಬೇಕು. ಭಾರತದಲ್ಲಿ ಆಹಾರ ಕೊರತೆಯು ದುಷ್ಪರಿಣಾಮ ಘೋರ ತರದ್ದಾಗಿವೆ ಮೂರರಲ್ಲಿ ಓರ್ವ ಭಾರತೀಯನು ಉತ್ಕೃಷ್ಟ ಆಹಾರದೆಶೆಯಿಂದ ಬಳಲುತ್ತಾನೆ ಮತ್ತೆ ಮೂರರಲ್ಲೊಬ್ಬನು ಅತ್ಯಲ್ಪ ಆಹಾರ ಪಡೆಯುತ್ತಾನೆ ಮೂರರಲ್ಲೊಬ್ಬನಿಗೆ ಸ್ವಲ್ಪ ಉತ್ತಮ ಆಹಾರ ಸಿಗುತ್ತದೆ

ಉಡುಪು

ಅದೆಷ್ಟು ಕಮ್ಮಿ ಉಡುಪು ಧರಿಸಿದವನಾಗಿದ್ದರೂ ಭಾರತೀಯನಿಗೆ ಬಟ್ಟೆ ಕೊರತೆ ಇದ್ದೇ ಇದೆ. ಮಗ್ಗಗಳಿಗೆ ಬೇಕಾದಷ್ಟು ನೂಲು ಸಿಗದಿದ್ದರೆ ಯಾವ ತರದ ಕೈನೂಲು ನೇಯುವಿಕೆಯ ಕಾರ್ಯಕ್ರಮವೂ ಫಲಕಾರಿಯಾಗಲಾರದು. 1928-29ರಲ್ಲಿ ಸರಾಸರಿ ಓರ್ವ ಭಾರತೀಯನು ತಲಾ 16 ಗಜಗಳಷ್ಟು ಬಟ್ಟೆ ಉಪಯೋಗಿಸಿದ್ದಾನೆಂದು ಲೆಕ್ಕ ಮಾಡಲಾಗಿದೆ ಜಗತ್ತಿನ ಜನತೆಯ ಸರಾಸರಿ 40 ಗಜ ಭಾರತೀಯರಿಗೆ ಕನಿಷ್ಠ ಪಕ್ಷಕ್ಕೆ 30 ಗಜವಾದರೂ ಸಿಗಬೇಕು

ನಿವಾಸಗಳು

ನಾನು ಭಾರತ ಪ್ರವಾಸ ಮಾಡಿದಾಗ ಓರ್ವ ಹಳ್ಳಿಗನಾದರೂ ತನಗೆ ಮನೆಯ ಆವಶ್ಯಕತೆಯಿದೆಯೆಂದು ನಿರೂಪಿಸಲಿಲ್ಲ. ಬಿಲಗಳಂತಿರುವ ಗುಡಿಸಲುಗಳೇ ಅವನಿಗೆ ತೃಪ್ತಿಯನ್ನುಂಟುಮಾಡುವಂತೆ ತೋರುತ್ತದೆ. ಭಾರತ ಹವಾಗುಣ ಸ್ಥಿತಿಯಲ್ಲಿ ಯುರೋಪಿನ ಜನರಿಗಿರುವ ಮನೆಯ ಆವಶ್ಯಕತೆ ಭಾರತೀಯರಿಗಿಲ್ಲ. ಇಷ್ಟಾದರೂ ಮಳೆ ನೆರಳುಗಳಿಂದ ತಪ್ಪಿಸಿಕೊಳ್ಳಲೂ, ಒಂದಿಷ್ಟು ಗೌಪ್ಯ ಜೀವನ ಸಾಗಿಸಲೂ

(3ನೇ ಪುಟ ನೋಡಿ)

ಚಿಲ್ಲರೆ ಸುದ್ದಿ ಸಂಗ್ರಹ

ಸುಮಾರು ಎರಡು ಸಾವಿರ ಪವನಿನ ಚಿಲ್ಲರೆಯನ್ನು ಲೆಕ್ಕಮಾಡಿ ಬೇರೆ ಬೇರೆ ನಾಣ್ಯಗಳನ್ನು ಪ್ರತ್ಯೇಕಿಸಿ ಬೇಂಕಿಗೆ ಕಳುಹಿಸಲು ಚೀಲಗಳಲ್ಲಿ ಹಾಕಿ ಸಿದ್ಧಪಡಿಸುವ ಯಂತ್ರವೊಂದು ಇಂಗ್ಲೆಂಡಿನಲ್ಲಿ ಪ್ರದರ್ಶಿಸಲಾಗಿದೆ.

‡ ‡ ‡

ಒಂದು ಜೋಡಿ ರೇಶ್ಮೆ ಕಾಲ್ಚೀಲಗಳನ್ನು ತಯಾರಿಸಲು 50 ಮೈಲು ಉದ್ದದ ನಾರಿನ ದಾರ ಬೇಕಾಗುವುದು.

‡ ‡ ‡

ತನ್ನಷ್ಟಕ್ಕೆ (ಡ್ರೈವರ ನಿಲ್ಲದೆ) ಓಡುವ ರೈಲು ಬಂಡಿಯೊಂದು ಇಂಗ್ಲೆಂಡಿನ ಒಂದು ಹಳ್ಳಿ ಪ್ರದೇಶದಲ್ಲಿ ಪ್ರಯೋಗಕ್ಕಾಗಿ ಓಡಿಸಲಾಯಿತು. ಅದು ಗಂಟೆಗೆ 100 ಮೈಲು ವೇಗದಲ್ಲಿ ಧಾವಿಸಿ ದೂರದ ರೇಡಿಯೋ ನಿಯಂತ್ರಣ ಕೇಂದ್ರವೊಂದರಿಂದ ಬ್ರೇಕು ಹಾಕಲ್ಪಟ್ಟಾಗ ತನ್ನಷ್ಟಕ್ಕೆ ಕೆಂಪು ದೀಪದ ಎಚ್ಚರಿಕೆಯನ್ನೂ ತೋರಿಸಿ ಕೈಬೀಳದ ಸ್ಟೇಶನಿನ ಮುಂದೆ ನಿಂತಿತು.

‡ ‡ ‡

ಒಂದು ಲಕ್ಷದ ವರೆಗೆ ಕೂಡಿಸಿ ಕಳೆದು, ಗುಣಿಸಿ ಭಾಗಿಸಿ ಲೆಕ್ಕಮಾಡುವ ಯಾಂತ್ರಿಕ ಮಿದುಳೊಂದನ್ನು ಕೆಂಬ್ರಿಜ್ ವಿಶ್ವವಿದ್ಯಾಲಯದ ಗಣಿತಜ್ಞರೊಬ್ಬರು ತಮ್ಮ ಪ್ರಯೋಗ ಶಾಲೆಯಲ್ಲಿ ಸಿದ್ಧಪಡಿಸಿದ್ದಾರೆ.

‡ ‡ ‡

ಪ್ರಕೃತಿಯಲ್ಲಿ ಹಲವು ಬಣ್ಣದ ಪಕ್ಷಿಗಳಿವೆ. ಆದರೆ ಅವುಗಳ ರೆಕ್ಕೆ ಬಣ್ಣಗಳಲ್ಲಿ ನೀರಳೆ ವರ್ಣವಿಲ್ಲ.

‡ ‡ ‡

ಜೇನು ನೊಣಗಳಿಗೆ ಒಂದು ನಿರ್ದಿಷ್ಟ ಸಮಯದಲ್ಲಿ ತಿನ್ನಲು ಆಹಾರ ಕೊಡುವ ಅಭ್ಯಾಸ ಮಾಡಿದರೆ ಮತ್ತೆ ಅವು ದಿನಂಪ್ರತಿ ಒಂದು ಸೆಕುಂಡಿಗೆ ಕೂಡಾ ತಪ್ಪದೆ ಅದೇ ಸಮಯಕ್ಕೆ ಹಾಜರಾಗುತ್ತವೆ.

‡ ‡ ‡

ಉಬ್ಬಸ ವ್ಯಾಧಿಗ್ರಸ್ತರು ಅರೆಹೊಟ್ಟೆಯಿಂದ ತಮ್ಮ ನರಳುವಿಕೆಯನ್ನು ಹೆಚ್ಚಿಸುತ್ತಾರೆ. ಅವರು ತಾವು ದಿನಸಿತ್ಯ ತಿನ್ನುವಷ್ಟನ್ನು ಬಿಡದೆ ತಿಂದರೆ ವ್ಯಾಧಿಯು ಕಡಿಮೆಯಾಗುತ್ತದಲ್ಲದೆ ಹೆಚ್ಚಾಗುವುದಿಲ್ಲವೆಂದು ಅಮೇರಿಕನ್ ವೈದ್ಯ ತಜ್ಞರೊಬ್ಬರು ತಿಳಿಸುತ್ತಾರೆ.

‡ ‡ ‡

ಅಬಿಸೀನಿಯದಲ್ಲಿ ಆಹಾರ ವಸ್ತುಗಳ ಬೆಲೆ ಏರಿಲ್ಲ. ಆದರೆ ಕೈಗಾರಿಕೆ ವಸ್ತುಗಳಿಗೆ ವಿಪರೀತ ಬೆಲೆ. ಒಂದು ಮಣ ಕಾಯಿಪಲ್ಯ, ಹಣ್ಣುಹಂಪಲುಗಳಿಗೆ 5 ರೂಪಾಯಿ. ಒಂದು ಹಲ್ಲು ಮಜ್ಜನ ಲೇಪದ ನಳಿಗೆಗೆ 5 ರೂಪಾಯಿ. ಮೋಟಾರು ಟಾಯರ್‌ವೊಂದಕ್ಕೆ 1 ಸಾವಿರ ರೂಪಾಯಿ.

‡ ‡ ‡

ಮೊದಲಿನ ವೃತ್ತಪತ್ರಿಕೆ ಸುಮಾರು 2 ಸಾವಿರ ವರ್ಷಗಳ ಹಿಂದೆ ರೋಮನ್ ಚಕ್ರವರ್ತಿ ಜೂಲಿಯಸ್ ಸೀಸರನಿಂದ ಪ್ರಾರಂಭಿಸಲ್ಪಟ್ಟಿತು—ಅದು ಕೈಬರಹದ್ದು, ಪ್ರಥಮ ಅಚ್ಚಕ್ಷರ ಪತ್ರಿಕೆ 1609ರಲ್ಲಿ ಜರ್ಮನಿಯಲ್ಲಿ ಜನ್ಮವೆತ್ತಿತು. 1682ರಲ್ಲಿ ಪ್ರಾರಂಭಿಸಲ್ಪಟ್ಟ ಇಂಗ್ಲಿಷ್ ಪತ್ರಿಕೆಯೊಂದು ಈಗಲೂ ಇಂಗ್ಲೆಂಡಿನಲ್ಲಿ ಪ್ರಕಟವಾಗುತ್ತಿದೆ.

‡ ‡ ‡

ವಿದೇಶ ರಾಜಕೀಯ

★ ಬರ್ಮಾದಲ್ಲಿ ಕೊಮ್ಯುನಿಸ್ಟರು ಪ್ರತಿ ಸರಕಾರ ಸ್ಥಾಪಿಸಿರುವರೆಂಬ ಸುದ್ದಿಯು ಸತ್ಯವಲ್ಲವೆಂದು ಪ್ರಕಟವಾಗಿದೆ.

★ ರಶ್ಯದ ಆರ್ಥಿಕ ಪರಿಸ್ಥಿತಿ ಕುಸಿದು ಬೀಳುವ ಪರಿಸ್ಥಿತಿಗೆ ಮುಟ್ಟಿದೆಯೆಂದು ಅಮೇರಿಕನ್ ನ್ಯಾಯಾಧಿಕಾರಿಯು ತಿಳಿಸುತ್ತಾನೆ.

★ ಫ್ರಾನ್ಸಿನ ರಾಜಕೀಯ ಪರಿಸ್ಥಿತಿಯ ಅಸ್ಥಿರತೆ ಮುಂದುವರಿಯುತ್ತಲಿದೆ. ಅಲ್ಲಿ ಗುಪ್ತಕಾರ ಸ್ಥಾನವಿರೋಧ ಶಾಸನ ಜಾರಿಗೆ ತರಲಾಗಿದೆ. ಕೊಮ್ಯುನಿಸ್ಟರು ರೈಲು ಬಂಡಿಗಳನ್ನುರುಳಿಸಲು ಪ್ರಯತ್ನ ಪಟ್ಟದರ ಪರಿಣಾಮವಿದು.

★ ಪೆಲೆಸ್ತೈನನ್ನು ವಿಭಜಿಸುವ ನಿರ್ಧಾರದಿಂದ ಅರಬ ಯೆಹೂದಿಗಳೊಳಗೆ 'ಯುದ್ಧ'ವಾರಂಭವಾಗಿದೆ. ಇತ್ತಂಡದವರಲ್ಲಿ ಮಡಿದವರ ವರದಿಗಳು ಬರುತ್ತಿವೆ.

★ ಫ್ರಾನ್ಸಿನ ಅಂತಃಕಲಹದಲ್ಲಿ ರಶ್ಯವು ಕೈಯಾಡಿಸುತ್ತಿರುವುದಾಗಿ ಅಮೇರಿಕದೋರ್ವ ರಾಜ್ಯಾಧಿಕಾರಿಗಳು ತಿಳಿಸುತ್ತಾರೆ. ಇಟಲಿಯಲ್ಲಿಯೂ ಫ್ರಾನ್ಸಿನಂತಹ ಉಪಟಳಗಳು ಹೆಚ್ಚುತ್ತಿವೆಯಂತೆ.

★ ಮಧ್ಯಪೂರ್ವ ದೇಶಕ್ಕೆ ಶಸ್ತ್ರಾಸ್ತ್ರಗಳನ್ನೂ ಕಳಿಸುವುದರ ಮೇಲೆ ಅಮೇರಿಕವು ನಿರ್ಬಂಧ ಹಾಕಿದೆ. ಇದು ಯೆಹೂದಿ ಪಕ್ಷಪಾತದ ಧೋರಣೆಯೆಂದು ಅರಬ ಮುಖಂಡರು ಟೀಕಿಸಿರುವರು.

★ ಇರಾನಿನ ಮಂತ್ರಿಮಂಡಳವು ರಾಜಿನಾಮೆಯಿತ್ತು ಮಾಜಿ ಪ್ರಧಾನ ಘವಾಮರ ಮುಖಂಡತ್ವದಲ್ಲಿ ಪುನಃರ್ರಚನೆಯಾಯಿತು. ಇವರು ಪಾಕಿಸ್ತಾನಕ್ಕೆ ಸಹಾಯ ಕೊಡಲು ಬಹಿರಂಗ ವಿನಂತಿ ಮಾಡಿದವರು.

★ ಚರ್ಚಿಲ್ಲರ ಚುನಾವಣೆ ಪ್ರಚಾರ ಪ್ರಾರಂಭವಾಗಿದೆ. ಎಟ್ಲಿ ಸರಕಾರವನ್ನುರುಳಿಸಿ ತಮ್ಮ ದೇಶಕ್ಕೆ ಸಮತಾವಾದ ಪ್ರಯೋಜನವಿಲ್ಲವೆಂದವರು ಸಾರಿರುವರು.

★ ಬ್ರಿಟನಿಗೆ ಸಲ್ಲಲಿರುವ ಸಾಲದ 400 ಮಿಲಿಯ ಡೊಲರಿನ ಅಂಶವನ್ನು ಅಮೇರಿಕವು ಬಿಟ್ಟುಕೊಟ್ಟಿದೆ.

★ ಬರ್ಮಾ ಸರಕಾರದ ಉದ್ಯೋಗದಲ್ಲಿದ್ದ ಬರ್ಮೇತರರನ್ನು ಬರುವ ಜನವರಿ 3ರೊಳಗೆ ನಿವೃತ್ತಪಡಿಸುವರು.

❀

ಇನ್ಶ್ಯುರೆನ್ಸ್

ವಿಷಯವಿದ್ದರೆ

ನ್ಯೂ ಇಂಡಿಯಾ

ನೆನಪಿರಲಿ

ಪ್ರಮುಖ ಹಿಂದೀ ವಿಮಾ ಸಂಸ್ಥೆ

1946ರ ಪ್ರಗತಿಯ ಕೆಲವು ಮುಖ್ಯ ವಿಷಯಗಳು

(ಜೀವವಿಮೆ) ಹೊಸ ವಹಿವಾಟು	ರೂ.	12	ಕೋಟಿಗಳಿಗೆ ಮಿಕ್ಕಿದೆ.
ಊರ್ಜಿತದಲ್ಲಿರುವ ಪೋಲಿಸಿಗಳು	ರೂ.	38	,, ,,
ಜುಮ್ಲಾ ಸೊತ್ತು	ರೂ.	10	,, ,,
ಸ್ಥಾಪಿತವಾದಂದಿನಿಂದ ತೆತ್ತ ಕ್ಲೈಮುಗಳು	ರೂ.	13	,, ,,

ಜೀವವಿಮೆ, ಬೆಂಕಿ, ನೌಕೆ, ಮೋಟಾರು ವಾಹನ, ವಾಯುಯಾನ, ಕೆಲಸಗಾರರ ವಿಷಯ ಪರಿಹಾರ, ಪ್ರಾಮಾಣಿಕತೆಯ ಗ್ಯಾರಂಟಿ ಮೊದಲಾದ ಎಲ್ಲಾ ತರದ ವಿಮೆಗೆ ಸಂಬಂಧಪಟ್ಟ ವಹಿವಾಟುಗಳನ್ನು ನಡೆಸುತ್ತದೆ.

ನ್ಯೂ ಇಂಡಿಯಾ

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಹೆಡ್ ಆಫೀಸು: ಬೊಂಬಾಯಿ)

ಮದ್ರಾಸು ಬ್ರಾಂಚ್: 4 ಮತ್ತು 5, ಫಸ್ಟ್ ಲ್ಯಾನ್ ಬೀಚ್.

ಸಬ್ ಆಫೀಸು: ಹಂಪನಕಟ್ಟಾ, ಮಂಗಳೂರು.

ವಾರಾಂತ್ಯ ವರದಿ ವಿಮರ್ಶೆ

ನಾರಾಯಣರಾಯನೆಂಬಾತ, ಹೈದರಾಬಾದಿನ ರಾಯರ ಮೇಲೆ ಬೊಂಬು ಬೀಸಾಡಿದ. ಕಾರಿಗೆ ತಾಗಿದ ಬೊಂಬು ದಾರಿಗೆ ಬಿತ್ತು, ಬೀಸಾಡಿದ್ದು ಕೈಬೊಂಬು, ಮಾರ್ಗಸ್ಥರ ಕಾಲುಗಳನ್ನು ಘಾಯಗೊಳಿಸಿತು.

✠

ಸಕ್ಕರೆ ನಿಯಂತ್ರಣವಿದ್ದ ಕಾಲಕ್ಕೂ, ಅದು ರದ್ದಾದ ನಂತರದ ಕಾಲಕ್ಕೂ ವ್ಯತ್ಯಾಸವೇನೆಂದೋರ್ವ ಪತ್ರ ವ್ಯವಹಾರಕರು ಪ್ರಶ್ನಿಸುತ್ತಾರೆ. ವ್ಯತ್ಯಾಸ ಇಷ್ಟೆ. ಮುಂಚೆ ಕಪ್ಪು ಸಂತೆಯಲ್ಲಿ ಮಾರಲ್ಪಡುತಿದ್ದ ಸಕ್ಕರೆ ಈಗ ಅಲ್ಲಿಯೇ ಕೊಳ್ಳುವಂತಾಗುತ್ತದೆ.

✠

ಪಾನ ನಿರೋಧದಿಂದ ನಿರುದ್ಯೋಗ ಹೆಚ್ಚಿಸಿದಂತಾಗುತ್ತದೆಂದೋರ್ವ ಮಜೂರ ಮುಖಂಡರು ಆಕ್ಷೇಪಿಸುತ್ತಾರೆ. ಈ ಮುಂಚೆ ಮಾದಕ ಮತ್ತತೆಯಿಂದ ಅನೇಕರು ಮಾರ್ಗ ಗಲಭೆಯಲ್ಲಿ ನಿರತರಾಗಿರುತ್ತಿದ್ದರು. ಪೋಲೀಸರಿಗೂ ಕೈತುಂಬ ಕೆಲಸ ಸಿಗುತಿತ್ತು. ಈಗ ಇತ್ತಂಡದವರೂ ಕಾರ್ಯರಹಿತರಾಗಿದ್ದಾರೆ.

✠

ಪೆಲೆಸ್ತೈನಿನ ವಿಭಜನೆ ವಿರುದ್ಧ ಪವಿತ್ರ ಯುದ್ಧ ಮಾಡಲು ಪಾಕಿಸ್ತಾನಿಗಳು ಸಿದ್ಧರಾಗುತ್ತಿದ್ದಾರೆಂದೊಂದು ವರದಿ. ಒಂದು ಕಡೆಯಂತೆ ಇನ್ನೊಂದು ಕಡೆ ಏಕಾಗಬಾರದು? ಪಾಕಿಸ್ತಾನದಂತೆ ಪೆಲೆಸ್ತೈನ್!

✠

ರಶ್ಯದ ಬಳಿಯೂ ಎಟಂ ಬೊಂಬು ಇರುವುದಂತೆ. ಅದನ್ನೊಮ್ಮೆ ಅಮೇರಿಕದ ಮೇಲೆ ಪ್ರಯೋಗಿಸಿ 'ಡೊಲರ್ ಬಂಡವಾಳಶಾಹಿ'ಯನ್ನೇಕೆ ಮುರಿಯಬಾರದು?

✠

ಲಂಚಗೂಳಿತನ ನಿರ್ಮೂಲಿಸಲು ಸರದಾರ್ ಪಟೇಲರು ಸಾರ್ವಜನಿಕ ಸಹಕಾರ ಕೋರಿರುವರು. ಲಂಚ ಕೊಡುವವರು ಅದನ್ನು ಸರಕಾರದ ಗಮನಕ್ಕೆ ತರದೆ ಇದ್ದರೆ ಈ ದುಷ್ಟಟ ಬಹಳ ಮಟ್ಟಿಗೆ ಕಡಿಮೆಯಾಗಬಹುದೆಂದು ಹಲವರ ನಿರೀಕ್ಷೆಯಿರಬಹುದು.

✠

ಹೆಚ್ಚಿಸಿದ ಅಕ್ಕಿ ಬೆಲೆಯನ್ನು ಗಿರಾಕಿಗಳೇ ಕೊಡಬೇಕೆಂದು ಮದ್ರಾಸ್ ಸರಕಾರ ತಿಳಿಸಿರುವುದು. ಹೆಚ್ಚಿನ ಗ್ರಾಹಕರು ಇದನ್ನು ಸ್ಟೋರುಗಳೇ ತಮ್ಮ ಲಾಭದಿಂದಲೇ ತೆರಬಹುದೆಂದು ಹಾರೈಸಿದರೇನೊ. ಜಮಾನ್ದಾರಿ ಪದ್ಧತಿ ರದ್ದಾಗುವುದಿಲ್ಲವೆಂಬುದಕ್ಕಿದೊಂದು ನಿರಾಸೆಯೆ?

✠

ಯುಕ್ತ ರಾಷ್ಟ್ರ ಸಂಘವು ಸಾರ್ಥಕದ ಯಾವ ಕಾರ್ಯ ಮಾಡಲಾರದೆಂದು ವಿಜಯಲಕ್ಷ್ಮಿಯವರ ಅಭಿಮತ. ಇವರಿಗಿದನ್ನು ತಿಳಕೊಳ್ಳಲು ಇಷ್ಟು ಸಮಯವೇಕೆ ಹೋಯಿತೆಂದು ಯಾರಿಗೂ ತಿಳಿದಿಲ್ಲ.

✠

ಹೈದರಾಬಾದನ್ನು ಭಾರತ ಒಕ್ಕೂಟಕ್ಕೆ ಸೇರಿಸುವೆನೆಂದು ಮಿರ್ಜಾ ಇಸ್ಮಾಯೀಲರು ವಚನ ಕೊಟ್ಟಿದ್ದರೆಂದು ಇತ್ತೆಹಾದುಲ್ ಸಂಸ್ಥೆಯ ಅಧ್ಯಕ್ಷ ರಜವಿಯವರು ಪ್ರಕಟಿಸಿದುದರಲ್ಲಿ ತಿಲಾಂಶ ಸತ್ಯವಿಲ್ಲವೆಂದು ಮಾಜಿ ಮೈಸೂರ್ ದಿವಾನರು ತಿಳಿಸುತ್ತಾರೆ. ಇಂತಹ ಪ್ರಕಟಣೆಗಳು ಆ ಸಂಸ್ಥೆಯ ವಿದೇಶಾಂಗ ಧೋರಣೆಯ ಒಂದು ಭಾಗವೆಂದು ತಿಳಕೊಂಡಿರುವರು.

✶

ಮೊದಲು ಹೊಟ್ಟೆ ಬಟ್ಟೆಗೆ ಸರಿ ಸಿಕ್ಕುವಂತಾಗಲಿ

ಜನತೆಯ ಆರ್ಥಿಕ ಸ್ಥಿತಿ ಉತ್ತಮಗೊಳ್ಳಬೇಕು

ಇಲ್ಲದಿದ್ದರೆ ಸಿಕ್ಕಿದ ಸ್ವಾತಂತ್ರ್ಯ ನಾಶವಾಗುವುದು ಖಂಡಿತ

ಭಾರತೀಯ ಜನತೆಯ ಕೈಗೆ ಸಿಗುವ ಸಂಪತ್ತನ್ನು ಹೆಚ್ಚಿಸಬೇಕಾದುದು ಮುಖ್ಯ ಕರ್ತವ್ಯ. ಜೀವನಾವಶ್ಯಕತೆಯ ವಸ್ತುಗಳು ಸರ್ವ ಸಮಾನಾಂಶರವಾಗಿ ಹಂಚಲ್ಪಡಬೇಕಾದುದೂ ಅತ್ಯಾವಶ್ಯಕ. ಕೃಷಿಗಾರಿಕೆಯ ಮೇಲೆ ಹೊಂದಿಕೊಂಡಿರುವ ಜನತೆಯ ಸಂಖ್ಯೆಯನ್ನು ಕಡಿಮೆ ಮಾಡಿ ಹೆಚ್ಚೆಚ್ಚು ಜನರು ಇತರ ಕೈಗಾರಿಕೆಗಳ ಕಡೆ ಆಕರ್ಷಿತರಾಗುವಂತೆ ಏರ್ಪಾಡು ಮಾಡಬೇಕು. ಈಗ ಕೈಗಾರಿಕೆಗಳಲ್ಲಿ ಕೇವಲ ಶೇಕಡಾ 10–15ರಷ್ಟು ಮಂದಿ ಮಾತ್ರ ಹೊಂದಿಕೊಂಡಿದ್ದಾರೆ. 1931ರಲ್ಲಿ ಶೇಕಡಾ 17ರಷ್ಟು ರಾಷ್ಟ್ರೀಯ ಆದಾಯವು ಕೈಗಾರಿಕೆಗಳ ಮುಖಾಂತರ ಉತ್ಪನ್ನವಾಗುತಿತ್ತು.

ಹೆಚ್ಚು ಆಹಾರ

ರಾಷ್ಟ್ರ ಯೋಜಕರಿಗೆಲ್ಲ ಈ ವಿಷಯ ತಿಳಿಯದಿಲ್ಲ. ಹೊಟ್ಟೆ ಬಟ್ಟೆಗಳಿಗೆ ಜನತೆ ತಾಪತಯಪಡುತಾ ಇರುವಂತಾದರೆ ಅದು ಎಂದಿಗೂ ಏಳಿಗೆ ಹೊಂದಲಾರದು. ಅದರ ಚೈತನ್ಯ ಈ ಎರಡು ಆವಶ್ಯಕ ವಸ್ತುಗಳನ್ನು ಗಳಿಸಲು ವ್ಯಯವಾಗಿ ಹೋಗುವುದು. ಕೈಗಾರಿಕೆಗಳು ವಿಕಾಸಿಸಲ್ಪಡುತ್ತಿರುವಾಗ ಕೃಷಿಗಾರಿಕೆಯ ವಿಧಾನಗಳನ್ನೂ ಉತ್ತಮಗೊಳಿಸಿ ಬೆಳೆ ಉತ್ಪತ್ತಿಗಳನ್ನು ಹೆಚ್ಚಿಸಲು ಪ್ರಯತ್ನಗಳಾಗಬೇಕು. ಭಾರತದಲ್ಲಿನ ಕೃಷಿ ಪರಿಸ್ಥಿತಿಯು ಇತರ ದೇಶಗಳೊಡನೆ ಹೋಲಿಕೆಗೆ ಯೋಗ್ಯವಾಗಿಲ್ಲ. ಆದರೂ ಕಷ್ಟ ಪ್ರಯತ್ನಗಳಿಂದ ಇಲ್ಲಿನ ಕೃಷಿ ಉತ್ಪತ್ತಿಯ ಗುಣ ಪ್ರಮಾಣಗಳನ್ನು ಉತ್ತಮಗೊಳಿಸಲು ಸಾಧ್ಯವಿದೆಯೆಂಬ ಸಂಗತಿಯನ್ನು ಮರೆಯಬಾರದು. ಸುಮಾರು 25 ಕೋಟಿ ರೂಪಾಯಿಗಳನ್ನು ವ್ಯಯಿಸಿದರೆ ಸುಮಾರು 10 ವರ್ಷಗಳಲ್ಲಿ ಈಗಿನ ಶೇಕಡಾ 50ರಷ್ಟು ಉತ್ಪತ್ತಿಯನ್ನು ಹೆಚ್ಚಿಸಬಹುದು. ಮತ್ತೆ ಹೆಚ್ಚಿನ ಐದು ವರ್ಷಗಳಲ್ಲಿ ಇನ್ನೂ ದ್ವಿಗುಣವಾಗಬಹುದೆಂದು ತಜ್ಞರು ಲೆಕ್ಕ ಹಾಕಿರುವುದು ಗಣನೀಯ ಸಂಗತಿ.

ಉಪಾಧ್ಯಾಯರು

ಭಾರತದ ಮುಖ್ಯ ಕೈಗಾರಿಕೆಗಳನ್ನು ಕೃಷಿಗಾರಿಕೆಯನ್ನು ಅಭಿವೃದ್ಧಿ ಪಡಿಸಲು ತರಬೇತು ಹೊಂದಿದ ಕೆಲಸಗಾರರು, ಯಂತ್ರ ತಜ್ಞರು ಹೇರಳ ಪ್ರಮಾಣದಲ್ಲಿ ಬೇಕಾಗುತ್ತಾರೆ. ಐದರಿಂದ ಹದಿನಾಲ್ಕು ವರ್ಷದ ಮಕ್ಕಳಿಗೆ ಕಡ್ಡಾಯವಾದ ಯಂತ್ರೋಪಕರಣ ಶಿಕ್ಷಣ ಕೊಡಬೇಕೆಂದು ಶಿಕ್ಷಣ ತಜ್ಞ ಡಾ। ಜೊನ್ ಸಾರ್ಜಂಟರು ತಮ್ಮ ವರದಿಯಲ್ಲಿ ತಿಳಿಸಿರುವುದನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕು. ಈ ಕೆಲಸಕ್ಕೆ ಸುಮಾರು 20 ಲಕ್ಷ ಉಪಾಧ್ಯಾಯರು ಬೇಕಾಗುವರು. ಯಂತ್ರ ಶಿಲ್ಪಿಗಳೇ ಅಲ್ಲದೆ ಭಾರತ ಅಭಿವೃದ್ಧಿಕರಣಕ್ಕೆ ಯಂತ್ರ ಕಾಮಗಾರಿಕೆ ಬಲ್ಲ ಮತ್ತು ವ್ಯವಸ್ಥಾಪನೆಯನ್ನು ನೋಡಿಕೊಳ್ಳಬಲ್ಲ ಅನೇಕಾನೇಕ ಕೆಲಸಗಾರರನ್ನು ತರಬೇತು ಗೊಳಿಸಲು ಮತ್ತೆ 2 ಕೋಟಿ ಉಪಾಧ್ಯಾಯರಿದ್ದರೂ ಹೆಚ್ಚೆನಿಸಲಾರದು!

ಕೊಂಗ್ರೆಸ್ ಯೋಜನೆ

ಈಗಾಗಲೇ ದೇಶೋಭಿವೃದ್ಧಿಯನ್ನು ಸೂಚಿಸುವ ಅನೇಕ ಯೋಜನೆಗಳು ಸಿದ್ಧವಾಗಿವೆ. ಇಡೀ ದೇಶದ ನೆಲ ಹೊಲಗಳನ್ನೂ ಖನಿಜ ಕೈಗಾರಿಕೆ ಕ್ಷೇತ್ರಗಳನ್ನೂ ಮತ್ತೊಂದು ಸಲ ಸರಿಯಾಗಿ ಅಳತೆ ಮಾಡಿ ಪುನರ್ಯೋಜಿಸುವುದು ಅತ್ಯಾವಶ್ಯಕವಿದೆ. ಮತ್ತದು ಹೆಚ್ಚಿನ ಕಷ್ಟದ್ದೂ ಅಲ್ಲ. ಈ ಉದ್ದೇಶಕ್ಕಾಗಿಯೇ ಕೊಂಗ್ರೆಸು ರಾಷ್ಟ್ರೀಯ ಮತ್ತು ಸಾಮಾಜಿಕವಾದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿಯನ್ನುಂಟುಮಾಡುವ ಯೋಜನೆಗಳು ಕೈಕೊಳ್ಳಬೇಕು. ಸಂಪತ್ತು ಕೆಲವೇ ಜನರ ಕೈಯಲ್ಲಿ ಒಟ್ಟುಗೂಡದಂತೆ ನೋಡಿಕೊಳ್ಳಬೇಕು. ಹೀಗಾಗದರೆ ಸಮಾಜದೇಳ್ಗೆಗೆ ಭೀಕರ ತೊಡಕುಂಟಾಗುವುದು ಖಂಡಿತ. ಸ್ವತಂತ್ರ ಭಾರತವು ಪರಸ್ಪರ ಸಹಾಯಕ ವ್ಯವಸ್ಥೆಯ ಒಂದು ಪ್ರಜಾ ಸಂಪತ್ತಿನ ದೇಶವಾಗಲು ಸಹಾಯವಾಗುವಂತೆ ಎಲ್ಲಾ ಪ್ರಮುಖ ಕೈಗಾರಿಗೆ, ಗನಿಗಾರಿಕೆ ಮತ್ತು ಸಾಗಿಸುವಿಕೆಯ ಸಂಸ್ಥೆಗಳು ರಾಷ್ಟ್ರೀಕರಣಗೊಳಿಸಲ್ಪಡಬೇಕು."

ಹೀಗೆಂದು ಅಭಿಪ್ರಾಯಪಟ್ಟಿರುತ್ತದೆ. ಇದಲ್ಲದೆ "ಎಲ್ಲಾ ತರದ ಬೇಂಕಿಂಗ್ ಮತ್ತು ಇನ್ಸೂರ್ ವ್ಯವಹಾರವೂ ಹಣ ಚಲಾವಣೆಯೂ ಸರಕಾರದ ವಶಕ್ಕೆ ಗೊಳಪಡಬೇಕು" ಎಂದಿದೆ. ಹಾಗಾದರೆ ಮಾತ್ರ ಸಮಾಜದ ಸರ್ವ ಜನಾಂಗದ ಸರ್ವತೋಮುಖ ಉನ್ನತಿಯಾಗಬಹುದೆಂದೂ ಕೊಂಗ್ರೆಸ್ಸಿನ ಧೃಡ ಅಭಿಪ್ರಾಯವಿದೆ.

ವಿಕಾಸಕ್ಕೆಡೆಯಿದೆ

ತನ್ನ ಚುನಾವಣೆ ಧ್ಯೇಯದಲ್ಲೂ ಕೊಂಗ್ರೆಸು ತನ್ನೀ ಧೋರಣೆಯನ್ನು ನಿರೂಪಿಸಿದೆ. ಬೇರೆ ಕೆಲವು ಕಡೆ (ನೇಶನಲ್ ಪ್ಲೇನಿಂಗ್ ಕಮಿಟಿಯ ಮೂಲಕ) ತನ್ನ ಯೋಜನೆಯನ್ನು ಕಾರ್ಯರೂಪಕೆ ತರಲೂ ಕೊಂಗ್ರೆಸು ಪ್ರಾರಂಭಿಸಿತ್ತು. ನಂತರ ಕೊಂಗ್ರೆಸ್ ಧೋರಣೆಯು ಜನಾಂಗದ ಶಕ್ತಿವಂತ ಕೇಡುಗಳೆನಿಸುವ 'ದುಡ್ಡನ್ನು ಬಡ್ಡಿಗೆಯೊಡ್ಡುವವನ ಮತ್ತು 'ಧನಿಯ ಗೇಣಿಗಾಗಿ ಭೂಮಿ ಹಂಚುವ' ದುರಿತಗಳನ್ನು ನಿರ್ಮೂಲಿಸುವುದರ ಕಡೆಗೆ ಹೆಚ್ಚಿನ ಗಮನ ಕೊಡಬಯಸುವುದು. ಇವೆರಡು ಭಾರತದ ದುಷ್ಟ ಶಾಪಗಳಂತಿರುತವೆ.

ಸದ್ಯಕ್ಕೆ ಅತೀ ಜರೂರಿನ ಆವಶ್ಯಕತೆಗಳನ್ನೂ ಸ್ವಲ್ಪಮಟ್ಟಿಗಾದರೂ ನೀಗಿಸಿಕೊಂಡು ಬರುತ್ತಿರುವಾಗಲೇ ಇತ್ತ ಅನೇಕಾನೇಕ ಇತರ ವಿಷಯಗಳನ್ನೂ ವಿಕಾಸಗೊಳಿಸಲು ತುಂಬಾ ಎಡೆಯಿದೆ.

ವಾಹನ ಸಂಸ್ಥೆಗಳು

ರೈಲು, ಹಡಗ, ಮಾರ್ಗವಾಹನ ಮತ್ತು ವಿಮಾನ ವಾಹನಗಳನ್ನು ವಿಕಾಸಗೊಳಿಸಲು ತುಂಬಾ ಸಂದರ್ಭಗಳಿವೆ. ರೈಲು ಮಾರ್ಗಗಳನ್ನು ಧೀರ್ಘಗೊಳಿಸಿ, ಮೋಟಾರು ಮಾರ್ಗಗಳನ್ನು ಡಾಮರಿನಿಂದ ಮುಚ್ಚುವ ಏರ್ಪಾಡು ಸುಲಭವಾಗಿ ಕೈಕೊಳ್ಳಬಹುದಾಗಿದೆ. ಇವು ಈಗಿನ ಶೇಕಡಾ 50ರಷ್ಟು ಹೆಚ್ಚಾಗಬೇಕು. ಕಲ್ಲಿದ್ದಲು ಖನಿಜ ಪದಾರ್ಥಗಳು ಮತ್ತು ಉಕ್ಕಿನ ಕೈಗಾರಿಕೆಯನ್ನು ಇದರೊಂದಿಗೆ ಅಭಿವೃದ್ಧಿ ಪಡಿಸಬಹುದು. ಈಗ ವರ್ಷಕ್ಕೆ 21 ಮಿಲಿಯ ಟನ್ ಕಲ್ಲಿದ್ದಲು ತೆಗೆಯಲಾಗುತ್ತಿದೆ. 3 ಮಿಲಿಯ ಟನ್ ಕಬ್ಬಿಣದ ಅದುರು 2 ಮಿಲಿಯ ಟನ್ ಉಕ್ಕು ತಯಾರಿಸಲ್ಪಡುತಿದ್ದು ಇವನ್ನು ಸ್ವಲ್ಪ ಹೆಚ್ಚಿಸಿದರೆ ಭಾರತದ ಆವಶ್ಯಕತೆಗೆ ಸಾಕಷ್ಟು ಸಿಕ್ಕಿದಂತಾಗುತ್ತದೆ.

ಸಂಪತ್ತಿನ ಅಭಿವೃದ್ಧಿ

ಸಂಪತನ್ನು ಉತ್ಪತ್ತಿ ರೀತಿಯಲ್ಲಿ ಹಂಚುವ ಏರ್ಪಾಡು ಆಗದೆ ಭಾರತದ ರಾಜಕೀಯ ಮತ್ತು ಸಾಮಾಜಿಕ ಯೋಜನೆಗಳೆಲ್ಲವೂ ವಾಸ್ತವಿಕ [illegible] ಮಾನವನ [illegible] ಮಾತ್ರ ಅವನ [illegible] ಸಮಸ್ಯೆಗಳು [illegible] ಜೀವನಕ್ಕೆ [illegible] ಕೊಡುವ ಆ ಜೀವನ [illegible]ಗಳು ಉತ್ತಮ ಆರ್ಥಿಕ ಸ್ಥಿತಿಯ [illegible] ಹೊಂದು [illegible] ತೃಪ್ತಿಕರವಾದ ಸಾಮಾಜಿಕ ವ್ಯವಸ್ಥೆಯೊದಗಿದ್ದರ ವ್ಯಕ್ತಿಯು ಆದರ್ಶಮಯವಾದ ತಿಳಿವಿನ ಬಾಳಿನಾಚೆ ಅವನಿಗೆ [illegible] ಸಮಸ್ಯೆಗಳು [illegible] ಆಧ್ಯಾತ್ಮಿಕ ಅನುಭವ [illegible] [illegible] ಸಾಧ್ಯವಿಲ್ಲವಿದ್ದ [illegible] ಆಧ್ಯಾತ್ಮಿಕತೆಯು [illegible] [illegible]

ಭವಿಷ್ಯ

ಸಮಾಜದ ಏಕತೆ ಸುಖ ಸಂತೃಪ್ತಿಗಳ ಸಂಭವ [illegible] ತಳಹದಿಯು ಮೇಲ್ನೆಲೆಸಿದೆ. ಅವನ್ನು ವ್ಯವಸಾಯವದರಲ್ಲಿ [illegible] ಐಹಿಕ ಮತ್ತು ಪಾರಮಾರ್ಥಿಕ ಸಾಧನೆಗಳು ಅವಗಣಿಸಲಿರುವ ವಿಕಾರ [illegible] ಸಾಂಘಿಕ ಮನೋಭಾವದಿಂದ [illegible] ವರ್ಗ ಕಲಹ ಜನಾಂಗಿಕ ದ್ವೇಷ ಕಲಹಗಳು ಕಂಡು ಬರುತ್ತವೆ. ವೈಜ್ಞಾನಿಕ ಅಜ್ಞಾನಗಳು ಇದರ ಒಳಕ್ಕಿ ಚಿಹ್ನಗಳು. ನೈತಿಕ ಹೊಣಗಾರಿಕೆಯರಿತ ಪ್ರಬುದ್ಧವಾದ ಮನೋಜ್ಞಾನವು ಇಂದು ಅತ್ಯಗತ್ಯವಾಗಿದೆ.

ರಾಜಕೀಯ ಸ್ವಾತಂತ್ರ್ಯ ಸಿಕ್ಕಿದ ಮಾತ್ರಕ್ಕೆ ಭಾರತದ ಅಪಾರ ಮಾನವ ಸಮಸ್ಯೆಗಳು ತನ್ನಷ್ಟಕ್ಕೆ ಪರಿಹಾರವಾಗವು. ಭಾರತವು ತನ್ನ ತಾತ್ವಿಕ ಮತ್ತು ಆಧ್ಯಾತ್ಮಿಕ ಅನುಭವವನ್ನು ಶ್ರೇಷ್ಠ ಉತ್ತಮ ಆರ್ಥಿಕದ ವ್ಯವಸ್ಥೆಯ ರಚನೆಗೆ ಅನುಗೊಳಿಸಬೇಕು. ಹಾಗಾದರೆ ಮಾತ್ರ ಹೊಸದಾಗಿ ಸಿಕ್ಕಿದ ಸ್ವಾತಂತ್ರ್ಯವು ಚಿರಗಾಲ ಬಾಳೀತು.

—ಆರ್. ಡಬ್ಲ್ಯೂ. ಸೊರೆನ್ಸನ್

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪಿತ: ೧೯೦೬)

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು, ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು, ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಾರ್ದದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ

ESTD: 1906

CANARA BANK, LIMITED.

1948 ಶಾರದಾ 1948

ಡೈರಿ

ಮತ್ತು

ಕೆಲೆಂಡರುಗಳು

ಮಾರಾಟಕ್ಕೆ ಸಿದ್ಧವಾಗಿವೆ.

ಸ್ವದೇಶಾಭಿಮಾನಿ

ತಾರೀಕು 12-12-1947

ಅಕ್ಕಿಯ ಬೆಲೆ ಏರಿದ್ದನ್ನು ಯಾರು ಹೊರಬೇಕು?

ಕೇಂದ್ರ ಸರಕಾರದವರು ಅಕ್ಕಿ ಮುಡಿಯೊಂದಕ್ಕೆ ರೂಪಾಯಿ ಎರಡರಂತೆ ಏರಿಸಬಹುದೆಂಬ ಅನುಜ್ಞೆ ಕೊಟ್ಟುದೇ ತಡ. ಅದನ್ನೇ ನಿರೀಕ್ಷಿಸಿಕೊಂಡಿದ್ದ ನಮ್ಮ ಮದ್ರಾಸ್ ಸರಕಾರವು ಕೂಡಲೆ ಅಕ್ಕಿಯ ಬೆಲೆಯನ್ನು ಏರಿಸಿ ಊಟಕ್ಕೆ ಅಕ್ಕಿ ಕೊಂಡು ಹೋಗುವವರಿಂದ ಈ ಹಪ್ತೆಯಲ್ಲಿಯೇ ಸೇರಿಗೆ ಹತ್ತು ಪೈಯಂತೆ ಹೆಚ್ಚಿನ ಕ್ರಯವನ್ನು ವಸೂಲು ಮಾಡಿಯೇ ಬಿಟ್ಟಿತು. ಅಕ್ಕಿ ಕೊಡುವ ರೈತರಿಗೆ ಯಾವಾಗಲಿಂದ ಹೆಚ್ಚಿನ ಕ್ರಯ ಸಲ್ಲುತ್ತಿದೆಯೆಂಬಿತ್ಯಾದಿ ವಿವರಗಳು ಇನ್ನೂ ಪ್ರಕಟವಾಗಬೇಕು ಮಾತ್ರ. ಈ ವರ್ಷದ ಬೆಳೆಯ ಆರಂಭದಿಂದಲೂ ಅಕ್ಕಿ ಕೊಟ್ಟವರಿಗೆ ಈ ಹೆಚ್ಚಿನ ಕ್ರಯ ಕೊಡಲಾಗುವುದೆ? ಹಾಗಿದ್ದರೆ ಇದುವರೆಗೆ ಮಾರಿಹೋದ ಅಕ್ಕಿಯಿಂದ ಆಗುವ ನಷ್ಟ ಯಾರು ಹೊರುತ್ತಾರೆ? ಇನ್ನು ಮುಂದೆ ಅಕ್ಕಿ ಹಾಕುವವರಿಗೆ ಮಾತ್ರ ಹೆಚ್ಚಿನ ಕ್ರಯವೆ? ಈಗ ಜಮೆಯಿದ್ದ ಅಕ್ಕಿ ಹೆಚ್ಚು ಬೆಲೆಗೆ ಮಾರಿದ್ದರಿಂದ ಸಿಕ್ಕುವ ಲಾಭ ಯಾರಿಗೆ? ಇತ್ಯಾದಿ ಪ್ರಶ್ನೆಗಳೆಲ್ಲ ಈ ಕುರಿತು ವಿವರಗಳು ಪ್ರಕಟವಾದಾಗ ಸ್ಪಷ್ಟವಾಗಬೇಕು.

ಒಂದು ವಿಚಾರವನ್ನಂತೂ ನಮ್ಮ ಮದ್ರಾಸು ಸರಕಾರದವರು ಸ್ಪಷ್ಟಮಾಡಿದ್ದಾರೆ. ಅಕ್ಕಿ ಮುಡಿಗೆ ಏರಿಸಲಾಗುವ ಈ ಎರಡು ರೂಪಾಯಿಗಳನ್ನು ಪೂರ್ಣವಾಗಿ ಅಕ್ಕಿ ಉಪಯೋಗಿಸುವವರಿಂದಲೇ ವಸೂಲು ಮಾಡುವರೆಂಬ ವಿಷಯ.

ಕೇಂದ್ರ ಸರಕಾರದವರು ಕ್ರಯವನ್ನು ಏರಿಸಬಹುದೆಂಬ ಈ ಅನುಜ್ಞೆ ಕೊಡುವಾಗ ಏರಿದ ಅಂಶವನ್ನು ಪ್ರಾಂತಿಕ ಸರಕಾರವು ಹೊರುವ ಸಂದರ್ಭದಲ್ಲಿ ಅರ್ಧಾಂಶವನ್ನು ತಾನು ಸಹಾಯ ಧನವಾಗಿ ಕೊಡುವುದಾಗಿ ಸೂಚಿಸಿರುತ್ತದೆ. ಕೇಂದ್ರ ಸರಕಾರಕ್ಕೆ ಹೀಗೆ ಕ್ರಯ ಏರಿಸಿದ ಅಂಶವನ್ನೆಲ್ಲ ಅಕ್ಕಿ ಉಪಯೋಗಿಸುವವರೇ ಹೊರುವುದು ಸರಿಯಲ್ಲವೆಂಬ ಅಭಿಪ್ರಾಯವಿರುತ್ತದೆಂಬುದು ಈ ಸೂಚನೆಯಿಂದ ಸ್ಪಷ್ಟವಾಗುತ್ತದೆ. ಕೇಂದ್ರ ಸರಕಾರದವರಿಗೆ ಬಡಜನರ ಸಂಕಷ್ಟಗಳು ಚೆನ್ನಾಗಿ ಗೊತ್ತಿದ್ದು ಬಡವರ ಬಗ್ಗೆ ತಾವು ಕೆಲಸ ಮಾಡುತ್ತಿರುವುದೆಂಬುದರ ಅರಿವು ಚೆನ್ನಾಗಿರುತ್ತದೆ.

ನಮ್ಮ ಮದ್ರಾಸು ಸರಕಾರವು ಮಾತ್ರ ಬಡಜನರ ಸಂಕಷ್ಟಗಳ ಕಡೆಗೆ ಎಳ್ಳಷ್ಟೂ ಗಮನಕೊಟ್ಟಂತೆ ಕಾಣುವುದಿಲ್ಲ. ಸೇರಿಗೆ ಹತ್ತು ಪೈ ಕ್ರಯವೇರಿಸುವುದೆಂದರೆ ಎಷ್ಟೋ ಮಂದಿಗೆ ಇದರಿಂದ ಎಷ್ಟು ಕಷ್ಟವಾಗುತ್ತದೆಯೆಂಬುದರ ಅರಿವೇ ಅವರಿಗಿಲ್ಲವೆಂಬುದು ಅವರ ಈ ವರ್ತನೆಯಿಂದ ಅತ್ಯಂತ ಸ್ಪಷ್ಟವಾಗುತ್ತಿದೆ.

ವರ್ಗದಾರರ ಹಾಗೂ ರೈತರ ಉತ್ಪತ್ತಿ ಹೆಚ್ಚಿಸಲು ಅವರು ಬಹಳ ಆತುರತೆಯಿಂದಿದ್ದರು. ಇದರಿಂದ ಪ್ರೋತ್ಸಾಹ ಸಿಕ್ಕಿ ಹೆಚ್ಚು ಬೆಳೆಯಾದೀತೆಂಬ ಆಸೆಯೇ ಈ ಆತುರದ ಮೂಲದಲ್ಲಿದೆಯೆಂದೇ ತಿಳಿಯೋಣ. ಮುಡಿ ಒಂದರ ಎರಡು ರೂಪಾಯಿ ಏರಿಸಿದ್ದುದರಿಂದ ಎಷ್ಟು ಬೆಳೆ ಹೆಚ್ಚಿಗೆ ಬೆಳೆಸಲಾಗುವುದೆಂಬುದನ್ನು ಮುಂದೆ ನೋಡಲಿಕ್ಕಿದೆ. ಅಂತೂ ರೈತರಿಗೆ ಮುಡಿ ಒಂದರ ಎರಡು ರೂಪಾಯಿ ಹೆಚ್ಚಿಗೆ ಕೊಟ್ಟುದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ ಹೀಗೆ ಹೆಚ್ಚಿಸಿದ ಅಂಶವನ್ನು ಸಂಪೂರ್ಣವಾಗಿ ಅಕ್ಕಿ ಉಪಯೋಗಿಸುವ ಜನರ ಮೇಲೆಯೇ ಹೊರಿಸಿದ್ದು ಎಷ್ಟಕ್ಕೂ ನ್ಯಾಯವಲ್ಲ. ಬಡ ಮಜೂರ ವರ್ಗಕ್ಕೆ ಸರಕಾರವು ಇದರಿಂದ ನಿಜವಾಗಿಯೂ ಅನ್ಯಾಯ ಮಾಡಿರುತ್ತದೆ. ಅಕ್ಕಿ ಕ್ರಯ ಏರಿಸಿದ ಮಟ್ಟಿಗೆ ಅವರ ತುಟ್ಟಿ ಭತ್ತೆ ಏರಿಸುವ ಏರ್ಪಾಡು ಸರಕಾರವು ಮಾಡಲು ಸಮರ್ಥವಿರುತ್ತದೆಯೆ?

ಕೇಂದ್ರ ಸರಕಾರವು ಸರಕಾರೀ ನೌಕರರಿಗೆ ನ್ಯಾಯವಾಗಿ ಅಗತ್ಯವಿರುತ್ತದೆಂದು ತೀರ್ಮಾನಿಸಿದ ದರಗಳಲ್ಲಿ ಮದ್ರಾಸು ಸರಕಾರವು ತನ್ನ ನೌಕರರಿಗೆ ತುಟ್ಟಿಭತ್ತೆ ಕೊಡಲು ಸಿದ್ಧರಿಲ್ಲ.. ಅಂದ ಬಳಿಕ ಇತರ ವರ್ಗಗಳ ನೌಕರರು ಅಥವಾ ಮಜೂರರು ಇವರ ತುಟ್ಟಿಭತ್ತೆ ಏರಿಸುವ ಪ್ರಶ್ನೆ ಎಲ್ಲಿಂದ ಬಂದೀತು?

ಅಕ್ಕಿಯ ಬೆಲೆ ಏರಿಸಿದ್ದರಿಂದ ಸಿಕ್ಕುವ ಪ್ರಯೋಜನವಾದರೂ ಯಾರಿಗೆ? ತನ್ನ ಖರ್ಚಿಗೆ ಬೇಕಾದುದಕ್ಕಿಂತ ಹೆಚ್ಚಿನ ಅಕ್ಕಿ ಬೆಳೆಸಿ ಯಾರಿಗೆ ಅದನ್ನು ಮಾರಾಟ ಮಾಡುವಷ್ಟು ಉತ್ಪತ್ತಿ ಇದೆಯೋ ಅಂಥ ಶ್ರೀಮಂತ ವರ್ಗದಾರರಿಗೆ ಮಾತ್ರ ಎನ್ನಬೇಕು. ಬಡ ಒಕ್ಕಲುಗಳಿಗೆ ಅಥವಾ ಚಿಕ್ಕ ವರ್ಗದಾರರಿಗೆ ಇದರಿಂದ ಯಾವ ಪ್ರಯೋಜನವೂ ಇರುವುದಿಲ್ಲ.

ಮದ್ರಾಸು ಸರಕಾರವು ನಿಜವಾಗಿಯೂ ಕಾಂಗ್ರೆಸ್ ಸರಕಾರವೇ ಎಂಬ ಕುರಿತು ಜನರು ಸಂಶಯ ಪಡುವಷ್ಟರ ಮಟ್ಟಿಗೆ ಈ ಧೋರಣೆಯ ಪರಿಣಾಮವಾದರೆ ಅದಕ್ಕೆ ಆಶ್ಚರ್ಯಪಡಬೇಕಾಗಿಲ್ಲ.

ಅಷ್ಟೊಂದು ಅವಸರದಿಂದ ಈ ಏರಿದ ಅಂಶವನ್ನು ಅಕ್ಕಿ ಉಪಯೋಗಿಸುವವರ ಮೇಲೆ ಹೊರಿಸಿದ್ದು ಸರಿಯೋ ಎಂಬುದನ್ನು ಮದ್ರಾಸು ಸರಕಾರವು ಇನ್ನಾದರೂ ಪುನರಾಲೋಚಿಸಿ ಇದರಲ್ಲಿ ಹೆಚ್ಚಿನ ಅಂಶವನ್ನು ತಾವೇ ವಹಿಸಿ ಕೇಂದ್ರ ಸರಕಾರವು ಈ ಬಗ್ಗೆ ವಾಗ್ದಾನ ಮಾಡಿರುವ ಸಹಾಯ ಧನದ ಉಪಯೋಗ ಮಾಡಿಕೊಳ್ಳುವುದು ಹಿತಕರವೆಂದು ಕಾಣುತ್ತದೆ.

ಟೀಕೆ-ಟಿಪ್ಪಣಿಗಳು

ಪೆಲೆಸ್ತೈನು ವಿಭಜನೆ ಕುರಿತು ಹಿಂದೀ ಸರಕಾರದ ಧೋರಣೆ

ಹಿಂದೀ ಸರಕಾರದ ಪ್ರತಿನಿಧಿಗಳು ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ಪೆಲೆಸ್ತೈನು ವಿಭಜನೆಯನ್ನು ವಿರೋಧಿಸಿದರು. ಮಾತ್ರವಲ್ಲ ಅರಬ ಮತ್ತು ಪಾಕಿಸ್ಥಾನದ ಪ್ರತಿನಿಧಿಗಳ ಜೊತೆಯಲ್ಲಿ ತಮ್ಮ ನಿಷೇಧ ತೋರಿಸಲು ಸಭಾತ್ಯಾಗ ಕೂಡಾ ಮಾಡಿದರು. ಸಂಯುಕ್ತ ರಾಷ್ಟ್ರ ಸಭೆಯು ಮೂರನೇ ಎರಡಂಶ ಬಹುಮತದಿಂದ ವಿಭಜನೆ ಮಾಡಬೇಕಾಗಿ ನಿರ್ಣಯ ಮಾಡಿತು.

ಯೆಹೂದೀ ಜನರಿಗೆ ತಮ್ಮ ಪ್ರಾಂತ್ಯದ ಆಂತರಿಕ ಆಡಳಿತೆಯ ಸ್ವಾತಂತ್ರ್ಯ ಕೊಟ್ಟು ಪೆಲೆಸ್ತೈನಕ್ಕೆ ಸಂಯುಕ್ತ ರಾಷ್ಟ್ರ ಘಟನೆ ಏರ್ಪಡಿಸುವುದೇ ಯುಕ್ತವೆಂಬುದು ಹಿಂದೀ ಸರಕಾರವು ಮುಂದೊತ್ತಿದ ಸೂಚನೆ ಇತ್ತು. ವಿಭಜನೆಯೇ ಆಗಬೇಕೆಂದಿದ್ದ ಪ್ರಮುಖ ರಾಷ್ಟ್ರಗಳು ಇದಕ್ಕೊಪ್ಪದಿದುದು ಆಶ್ಚರ್ಯವಲ್ಲ. ವಿಭಜನೆ ಬೇಡವೆಂಬವರು ಕೂಡಾ ಈ ಏರ್ಪಾಡಿಗೆ ಬೆಂಬಲ ಕೊಡಲಿಲ್ಲ. ಕೊಟ್ಟಿದ್ದರೆ ವಿಭಜನೆಯ ನಿರ್ಣಯಕ್ಕೆ ಮೂರನೆ ಎರಡಂಶದಷ್ಟು ಬಹುಮತವು ಸಿಕ್ಕುವುದು ಕಷ್ಟವಾಗುತ್ತಿತ್ತು.

ಅಂತೂ ಈಗ ವಿಭಜನೆಯ ನಿರ್ಣಯವೇನೊ ಆಗಿರುತ್ತದೆ. ಅರಬ ಜನರು ಯುದ್ಧ ಮುಖದಿಂದಲ್ಲದೆ ಇದನ್ನು ಜಾರಿಗೆ ತರಲು ಬಿಡುವಂತಿಲ್ಲವೆಂಬ ದೃಢ ನಿರ್ಧಾರಕ್ಕೆ ಬಂದಂತಿರುತ್ತದೆ. ಇದರ ಪರಿಣಾಮವೇನಾದೀತೆಂದು ಈಗ ಹೇಳುವಂತಿಲ್ಲ.

ಹಿಂದೀ ಸರಕಾರದ ಕಡೆಯಿಂದ ಮುಂದೊತ್ತಿದ ಸೂಚನೆ ಈ ಪ್ರಶ್ನೆಯನ್ನು ನ್ಯಾಯವಾದ ರೀತಿಯಲ್ಲಿ ತೀರ್ಮಾನಿಸುತ್ತಿತ್ತು. ಸಾಕಷ್ಟು ಹೊಡೆದಾಟ ನಡೆದು ಬಳಲಿದ ಬಳಿಕ ಹಿಂದೀ ಸರಕಾರದ ಸೂಚನೆಯ ಔಚಿತ್ಯ ಸಂಬಂಧಪಟ್ಟವರಿಗೆಲ್ಲ ಸಾಧ್ಯವಾಗಬಹುದೆಂದು ಹಾರೈಸಬೇಕಾಗಿದೆ.

ಕಾಶ್ಮೀರಕ್ಕೆ ಪಂಡಿತ ನೆಹರೂರವರ ಆಶ್ವಾಸನ

ಹಿಂದೀ ಸರಕಾರದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರೂ ಅವರು ಕಾಶ್ಮೀರದ ಜಮ್ಮೂ ಪ್ರಾಂತ್ಯವನ್ನು ಸಂದರ್ಶಿಸಿ ಬಂದರು. ಅಲ್ಲಿ ಮಾಡಿದ ಒಂದು ಭಾಷಣದಲ್ಲಿ ಹಿಂದೀ ಸರಕಾರಕ್ಕೆ ಕೆಲಸಗಳನ್ನು ಅರ್ಧ ಅರ್ಧವಾಗಿ ಮಾಡುವುದರಲ್ಲಿ ವಿಶ್ವಾಸವಿಲ್ಲವೆಂದೂ ಕಾಶ್ಮೀರವನ್ನು ದಂಗೆಕಾರರಿಂದ ಸಂಪೂರ್ಣವಾಗಿ ಬಿಡುಗಡೆ ಮಾಡಲು ಎಷ್ಟು ಸೈನ್ಯ ಮತ್ತೆ ಅಗತ್ಯವಿದ್ದರೂ ಆ ಕಾರ್ಯವನ್ನು ಪೂರ್ಣವಾಗಿ ಸಾಧಿಸಿಯೇ ತೀರಲಾಗುವುದೆಂದೂ ಖಂಡಿತೋಕ್ತಿಯಲ್ಲಿ ಆಶ್ವಾಸನೆ ಕೊಟ್ಟು ಬಂದರು.

ಪಾಕಿಸ್ಥಾನ ಸರಕಾರದವರು ಕಾಶ್ಮೀರದ ಕುರಿತು ಸಂಧಾನದ ಪ್ರಸ್ತಾಪವೆತ್ತಿದ್ದರಷ್ಟೆ. ಸಂಧಾನದ ಮಾತಿಗೆ ಆರಂಭಿಸುವಾಗಲೇ ಪಶ್ಚಿಮ ಪಂಜಾಬದಲ್ಲಿ ವಿಶೇಷ ಸಂಖ್ಯೆಯಲ್ಲಿ ಸೈನ್ಯ ಸನ್ನಾಹಗಳು ನಡೆಯುತ್ತಿವೆಯೆಂದು ತಿಳಿದು ಬಂದಿದೆ. ಇದನ್ನು ತಿಳಿದೇ ಪಂಡಿತ ನೆಹರೂರವರು ಈ ರೀತಿ ಸ್ಪಷ್ಟವಾಗಿ ತಮ್ಮ ಧೋರಣೆಯನ್ನು ಪ್ರಕಟಿಸುವುದು ಅಗತ್ಯವೆಂದೆನ್ನಬಹುದು.

ಈಗ ಲಾಹೋರಿನಲ್ಲಿ ಈ ಸಂಧಿ ಪ್ರಸ್ತಾಪವು ನಡೆಯುತ್ತಿದೆ. ಬಲಾತ್ಕಾರ ನಡೆಯುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ಖಚಿತಗೊಳಿಸಿದರೆ ಮಾತ್ರ ನ್ಯಾಯವಾದ ಸಂಧಾನವಾಗುವುದು ಸಾಧ್ಯವಿರುತ್ತದೆಂಬುದನ್ನು ಹಿಂದೀ ಸರಕಾರವು ಚೆನ್ನಾಗಿ ತಿಳಿದಿದೆಯೆಂಬುದು ತೃಪ್ತಿಕರವಾದ ವಿಷಯವೆನ್ನಬೇಕು.

ಸ್ವತಂತ್ರ ಪಠಾನಿಸ್ಥಾನದ ಆವಶ್ಯಕತೆ

ಪಾಕಿಸ್ಥಾನ ಸರಕಾರದವರು ಗಡಿನಾಡಿನಲ್ಲಿಯ ಕೆಲವು ಮುಖ್ಯ ಕೋಟೆಗಳಿಂದ ತಮ್ಮ ಸೈನ್ಯಗಳನ್ನು ಹಿಂತೆಗೆಯುತ್ತಿದ್ದಾರೆಂಬ ವಾರ್ತೆ ಪ್ರಕಟವಾಗಿರುತ್ತದೆ. ಈ ಗಡಿಯನ್ನು ಸುರಕ್ಷಿತವಾಗಿ ಭದ್ರಪಡಿಸುವುದು ಪಾಕಿಸ್ಥಾನದಷ್ಟೆ ಹಿಂದೂಸ್ಥಾನಕ್ಕೂ ಅಗತ್ಯವುಳ್ಳ ಪ್ರಶ್ನೆ ಇರುತ್ತದೆ. ಈ ವಿಚಾರವನ್ನು ಪಾಕಿಸ್ಥಾನ ಸರಕಾರವು ಹಿಂದೀ ಸರಕಾರದೊಡನೆ ಆಲೋಚಿಸಿ ಈ ತನ್ನ ಧೋರಣೆಯನ್ನು ನಿರ್ಣಯಿಸಿದೆಯೋ ಗೊತ್ತಿಲ್ಲ.

ಹಿಂದೆ ಬ್ರಿಟಿಷ ಹಿಂದುಸ್ಥಾನದ ಕೇಂದ್ರ ಸರಕಾರದವರು ಗಡಿಯ ಹೊರಗಿನ ಜನರ ತಂಡಗಳ ಕಡೆಗೆ ಯಾವ ಬಗೆಯ ಧೋರಣೆ ಇಟ್ಟುಕೊಂಡಿದ್ದರೋ ಅದನ್ನೇ ಪಾಕಿಸ್ಥಾನದವರು ಈಗ ಮುಂದರಿಸುತ್ತಿದ್ದಾರೆಂದು ತಿಳಿದು ಬರುತ್ತದೆ. ಈ ಜನರು ಸುಮ್ಮಗಿರುವಂತೆ ಅವರಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಡುವುದು ಇಂಥ ಕಾರ್ಯಕ್ರಮಗಳಲ್ಲಿ ಒಂದು.

ಬಲಾತ್ಕಾರವು ಇದರ ಜೊತೆಯಲ್ಲಿಯೇ ನಡೆವ ಇನ್ನೊಂದು ಧೋರಣೆ. ಈ ಗಡಿ ಹೊರಗಿನ ಜನರು ಮುಸ್ಲೀಮರಿದ್ದು ಅವರೆಲ್ಲ ತಮ್ಮ ಪಕ್ಷದವರೆನ್ನುವ ಪಾಕಿಸ್ಥಾನಕ್ಕೆ ಬಲಾತ್ಕಾರ ಅಗತ್ಯವಿಲ್ಲವೆಂದು ತೋರಿಸುವುದೇ ಉಚಿತವೆನ್ನಿಸಿ ಹೀಗೆ ಅಲ್ಲಿಯ ಕೋಟೆಗಳನ್ನು ಬರಿದು ಮಾಡಲು ಹೊರಟಿರಬೇಕು.

ಆದರೆ ಪಾಕಿಸ್ಥಾನದ ಕಡೆಯಿಂದ ಆ ಪ್ರಾಂತ್ಯದಲ್ಲಿ ಅಧಿಕಾರ ನಡೆಸುವವರು ಬ್ರಿಟಿಷ್ ಅಧಿಕಾರಿಗಳೇ ಇರುವುದರಿಂದ ಇವರು ಆ ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವುದರಲ್ಲಿ ಸಮರ್ಥರಾಗಿಲ್ಲವೆಂದೇ ತಿಳಿದು ಬರುತ್ತದೆ.

ಈ ಗಡಿಯನ್ನು ಭದ್ರಪಡಿಸಲಿಕ್ಕೆ ಅತ್ಯಂತ ಸುಲಭ ಉಪಾಯವೆಂದರೆ ಗಡಿನಾಡಿನ ಪ್ರಾಂತ್ಯವನ್ನು ಒಂದು ಸ್ವತಂತ್ರ ಪಠಾನಿಸ್ಥಾನವನ್ನಾಗಿ ಏರ್ಪಡಿಸುವುದೇ ಇರುತ್ತದೆ. ಗಡಿಯ ಹೊರಗಿನ ತಂಡಗಳು ಪಠಾನರೇ ಇರುವುದರಿಂದ ಇದು ಅತ್ಯಂತ ಯಶಸ್ವಿಯಾದೀತೆಂಬ ಬಗ್ಗೆ ಸಂಶಯವಿಲ್ಲ. ಈ ಏರ್ಪಾಡು ಸಾಧ್ಯವಾದೀತೆ?

ಹೈದರಾಬಾದು ನೈಜಾಮರ ಮೇಲೆ ಬಾಂಬಿನ ಎಸೆತ

ನೈಜಾಮರು ಅರಮನೆಯಿಂದ ಹೊರಡುವಾಗ ಅವರಗೆಂದು ಎಸೆದ ಬಾಂಬು ಅವರ ಕಾರಿಗೆ ತಾಗಿ ಪಥಿಕರಿಬ್ಬರನ್ನು

ಶಾಯಿಗೊಳಿಸಿತು ಸುದೈವದಿಂದ ನೈಜಾಮರಿಗೆ ಯಾವ ಅಪಾಯವೂ ಆಗಲಿಲ್ಲ. ಈ ರೀತಿ ನಡೆದ ಈ ಅತ್ಯಾಚಾರವನ್ನು ಎಲ್ಲರೂ ಖಂಡಿಸಿದ್ದಾರೆ. ಇಂಥ ಅಕೃತ್ಯಗಳಿಂದ ಪ್ರಜಾ ಸ್ವಾತಂತ್ರ್ಯ ಸ್ಥಾಪನೆಯು ಸಾಧ್ಯವೆಂದು ಯಾರಾದರೂ ಭಾವಿಸುವವರಿದ್ದರೆ ಅವರು ಮೂರ್ಖರೆಂದೇ ಹೇಳಬೇಕು.

ಹಿಂದೀ ಸರಕಾರದೊಡನೆ ಒಪ್ಪಂದವಾದ ಬಳಿಕ ಶಾಂತವಾಗುತ್ತಲಿದ್ದ ಹೈದರಾಬಾದಿನ ವಾತಾವರಣವು ಈ ಅಕೃತ್ಯದಿಂದ ಪುನಃ ಸ್ವಲ್ಪ ಕೆದರಿದಂತಾಗಿರುತ್ತದೆ.

ಅಂತೂ ಹೈದರಾಬಾದಿನಲ್ಲಿ ಪ್ರಜಾ ಸ್ವಾತಂತ್ರ್ಯಕ್ಕಾಗಿ ನಡೆಯುವ ರಾಷ್ಟ್ರೀಯ ಚಳವಳಿಯನ್ನು ಈ ಅಕೃತ್ಯದ ನವ ಕಟ್ಟಿಕೊಂಡು ಮುರಿಯಲೆತ್ನಿಸುವುದು ನ್ಯಾಯವೆನ್ನಿಸಲಾರದು.

ಸಂಸ್ಥಾನದ ಕಾಂಗ್ರೆಸಿಗರಿಗೂ ಸರಕಾರದ ಕಡೆಯವರಿಗೂ ಇದುವರೆಗೆ ನಡೆದ ಮಾತುಕತೆಗಳು ಇಷ್ಟರ ವರೆಗೆ ಯಶಸ್ವಿಯಾಗಿಲ್ಲ. ಕಾಂಗ್ರೆಸಿಗರನ್ನು ಬಿಟ್ಟೇ ಸುಧಾರಣೆಗಳ ಸೋಗು ನಡೆಸಿದರೂ ಯಶಸ್ವಿಯಾಗಲಾರದು. ನೈಜಾಮ ಸರಕಾರವು ನ್ಯಾಯವಾದ ರೀತಿಯಲ್ಲಿ ಬೇಡಿಕೆಗಳನ್ನು ಒಲಿಸಿಕೊಂಡು ಪ್ರಜಾಪ್ರತಿನಿಧಿ ಸರಕಾರ ಸ್ಥಾಪಿಸಿ ಇತರರಿಗೆ ಮಾದರಿಯಾಗಬೇಕೆಂಬ ಶ್ರೀ ವಲ್ಲಭಭಾಯಿ ಪಟೇಲರು ಹೇಳಿದ ಹಿತೋಕ್ತಿಯನ್ನು ನೈಜಾಮ ಸರಕಾರವು ಮನಸ್ಸಿಗೆ ತೆಗೆದುಕೊಳ್ಳಲೆಂದು ಹಾರೈಸೋಣ.

ಸಕ್ಕರೆಯ ಕ್ರಯ ಏರಿತು

ಹಿಂದೀ ಸರಕಾರವು ಸಕ್ಕರೆ ಮತ್ತು ಬೆಲ್ಲಗಳ ಮೇಲಿನ ಎಲ್ಲ ನಿಯಂತ್ರಣಗಳನ್ನು ತೆಗೆದು ಹಾಕಿರುತ್ತದೆ. ದೇಶದಲ್ಲಿ ಸಾಕಷ್ಟು ಸಕ್ಕರೆ ಜಮೆ ಇದೆಯೆಂದು ತಿಳಿದು ಬರುತ್ತದೆ. ಆದರೂ ಇದರ ಕ್ರಯ ವಿಪರೀತ ಏರುವಂತೆ ಕಾಣುತ್ತದೆ.

ಸಕ್ಕರೆ ಉತ್ಪತ್ತಿದಾರ ಸಂಘದವರು ಕ್ರಯವನ್ನು 84 ರಾತುಗಳ ಒಂದು ಮಣಕ್ಕೆ ರೂ 35ರಷ್ಟು ಇಡಬೇಕಾಗುತ್ತದೆಂದು ಪ್ರಕಟಿಸಿರುತ್ತಾರೆ. ಇದೇ ಮಣಕ್ಕೆ ಕಂಟ್ರೋಲ್ ದರ ರೂ 21 ಇತ್ತು.

ಈ ರೀತಿ ದರ ಏರಿಸಲು ಈ ಸಂಘದವರು ಕೊಡುವ ಕಾರಣಗಳೆಂದರೆ ಕಬ್ಬು ಬೆಳೆಸುವವರಿಗೆ ಹೆಚ್ಚಿನ ಕ್ರಯ ಹಾಗೂ ಕಾರ್ಖಾನೆಯಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಮಜೂರಿ ಕೊಡುವ ಯೋಜನೆ ಕೈಕೊಳ್ಳಲಾಗುತ್ತದೆ ಎಂಬುದು.

ಇನ್ನು ಮುಂದೆ ತಯಾರಾಗಲಿರುವ ಸಕ್ಕರೆಗೆ ಹೀಗೆ ಹೆಚ್ಚು ಖರ್ಚು ತಗಲುತ್ತದೆಂಬುದರಿಂದ ಈಗ ದಾಸ್ತಾನಿರುವ ಮಾಲಿಗೆ ಮಣ ಒಂದರ ರೂ 14 ಅಂದರೆ ಇವರಿಗೆ ನಾಲ್ಕು ಕೋಟಿ ರೂಪಾಯಿ ಲಾಭ ಬೇಕೆಂಬ ಈ ತರ್ಕದಲ್ಲಿ ಏನೂ ಹುರುಳಿಲ್ಲವೆಂಬುದು ಸ್ಪಷ್ಟ.

ನಿಯಂತ್ರಣ ತೆಗೆದ ಕೂಡಲೇ ಈ ರೀತಿ ಲಾಭ ಕೋರತನ ಮುಂದೆ ಬರುವುದು ಸಹಜವೇ ಇರುತ್ತದೆ. ಇದಕ್ಕೆ ನಿವೃತ್ತಿಯೇನೆಂಬುದನ್ನು ಪ್ರಜಾ ವರ್ಗವು ಚೆನ್ನಾಗಿ ಯೋಚಿಸಿ ತಕ್ಕ ಕಾರ್ಯಕ್ರಮವನ್ನು ಅಗತ್ಯ ಕೈಕೊಳ್ಳಬೇಕು.

ಸಕ್ಕರೆಯ ಕ್ರಯವನ್ನು ನ್ಯಾಯವಿದ್ದಷ್ಟು ಇರಿಸುವ ತನಕ ಸಕ್ಕರೆಯ ಉಪಯೋಗವನ್ನೇ ಜನರು ಬಿಟ್ಟರೆ ಹೇಗಾದೀತು? ಆರೋಗ್ಯ ದೃಷ್ಟಿಯಿಂದ ಸಕ್ಕರೆಗಿಂತ ಬೆಲ್ಲವೇ ಉತ್ತಮವಲ್ಲವೇ?

ತರುಣ ಮುಸ್ಲಿಮ್ ಸಂಘದ ವಾರ್ಷಿಕೋತ್ಸವ

ಮಂಗಳೂರಿನ ತರುಣ ಮುಸ್ಲಿಮ್ ಸಂಘದ ವಾರ್ಷಿಕೋತ್ಸವವು ಮಂಗಳೂರು ಮುನಿಸಿಪಲ್ ಮುಸ್ಲಿಮ್ ಹಾಯರ್ ಎಲಿಮೆಂಟರಿ ಶಾಲೆಯ ವರಾಂಡದಲ್ಲಿ ಈಗ ತಲಚೇರಿಯಲ್ಲಿ ಪ್ರಧಾನ ಮುನ್ಸಿಫರಾಗಿರುವ ಜನಾಬ್ ಅಬ್ದುರ್ ರಹಮಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಇದೇ ಕಳೆದ ಆದಿತ್ಯವಾರ ಯಶಸ್ವಿಯಾಗಿ ಜರಗಿಸಲ್ಪಟ್ಟಿತು. ಪ್ರಾರ್ಥನಾನಂತರ ಕಾರ್ಯದರ್ಶಿಯವರಿಂದ ವರದಿ ವಾಚನ ಮತ್ತೆ ಹಾರೂನ ಸಾಹೇಬರು, ಎಮ್. ಸಿ. ಅಹಮ್ಮದ್, ಬಿ. ಎಮ್. ಇದಿನಬ್ಬ ಹಾಗೂ ಮಹಮ್ಮದ್ ಕಮಾಲರ ಭಾಷಣಗಳಾಗಿ ಅಧ್ಯಕ್ಷರ ಹಿತೋಕ್ತಿಯಾಗಿ ಧನ್ಯವಾದಗಳ ಅರ್ಪಣೆಯೊಡನೆ ಈ ಸಭೆಯು ಕೊನೆಗೊಂಡಿತು.

ವರದಿಯಿಂದ ಕಂಡುಬರುವಂತೆ ಈ ಸಂಘವು ಪ್ರತಿ ವಾರ ವಾಚನಾಲಯವನ್ನು ನಡೆಸುವುದು, ವಾಚನಾಲಯವನ್ನು ನಡೆಸುವುದು, ಶಾಲಾ ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಸಹಾಯಧನವನ್ನು ಸಂಗ್ರಹಿಸಿ ಕೊಡುವುದು ಇತ್ಯಾದಿ ತಮ್ಮ ಹಿಂದುಳಿದ ಸಮಾಜದಲ್ಲಿ ವಿದ್ಯಾಭಿವೃದ್ಧಿಯನ್ನು ಸಾಧಿಸುವ ಕಾರ್ಯಕ್ರಮಗಳನ್ನು ಇಟ್ಟುಕೊಂಡಿರುತ್ತದೆ. ಮಾತ್ರವಲ್ಲ ಈಗ ರೇಶನ್ ಮೊದಲಾದ ಹಲವಾರು ಕಾನೂನುಗಳ ಸಂಬಂಧ ಅಕ್ಷರಾಭ್ಯಾಸವಿಲ್ಲದವರು ಪಡುವ ತೊಂದರೆಗಳನ್ನು ನಿವಾರಿಸುವ ಉದ್ದೇಶದಿಂದ ಇಂಥವರಿಗೆ ಬೇಕಾದ ಮಾಹಿತಿ ಒದಗಿಸಿ ಅವಶ್ಯವಿದ್ದ ಅರ್ಜಿ ಇತ್ಯಾದಿಗಳನ್ನು ಧರ್ಮಾರ್ಥವಾಗಿ ಬರೆದು ಕೊಡುವುದೇ ಮೊದಲಾದ ಸಹಾಯವನ್ನು ಒದಗಿಸುವ ಒಂದು ಕಾರ್ಯವನ್ನು ಈ ಸಂಘದವರು ನಡೆಸಿದಂತೆ ತಿಳಿದುಬರುತ್ತದೆ.

ತರುಣ ಮುಸ್ಲಿಮ್ ಸಂಘದ ಚಟುವಟಿಕೆಗಳಿಂದ ಪ್ರೀತರಾದ ಮುಸ್ಲಿಮ್ ಶ್ರೀಮಂತ ಜನರಾದರೂ ಈ ಸಂಘಕ್ಕೆ ವರದಿಯ ವರ್ಷದಲ್ಲಿ ಸುಮಾರು ಮೂರು ಸಾವಿರ ರೂಪಾಯಿಗಳ ಮಟ್ಟಿಗೆ ವಂತಿಗೆ ಕೊಟ್ಟಿರುವರೆಂದ ಮೇಲೆ ಈ ಸಂಘವು ಸ್ಥಳೀಕ ಮುಸ್ಲಿಮರಲ್ಲಿ ಜನಪ್ರಿಯವಿರುತ್ತದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ ಮಾತ್ರವಲ್ಲ ಮೊನ್ನೆ ತಾನೆ ನಡೆದ ಮಂಗಳೂರಿನ ನಗರ ಸಭೆಯ ಚುನಾವಣೆಗಳಲ್ಲಿ ಮುಸ್ಲಿಮ್ ಉಮೇದ್ವಾರರೊಳಗೆ ಸ್ಪರ್ಧೆ ನಡೆಯದಂತೆ ಈ ಸಂಘವು ಯಶಸ್ವಿಯಾಗಿ ಸಾಧಿಸಿತೆಂದು ಎಮ್. ಸಿ. ಅಹಮ್ಮದ್‌ರವರು ಮಾಡಿದ ಭಾಷಣದಿಂದ ತಿಳಿದುಬಂದಿತು.

ಅಂದಿನ ಸಭಾಧ್ಯಕ್ಷರಾಗುವದಕ್ಕಾಗಿಯೇ ತಲಚೇರಿಯಿಂದ ಬಂದಿದ್ದ ಜನಾಬ್ ಅಬ್ದುರ್‌ರಹಮಾನರವರೂ ಈ ಸಂಘದ ಯುವಕರಿಗೆ ಉಪಯುಕ್ತವಾದ ಹಿತೋಕ್ತಿಯನ್ನೇ ಹೇಳಿದರು. ಮುಸ್ಲಿಮ್ ಸಮಾಜವು ವಿದ್ಯೆಯಲ್ಲಿ, ಆರ್ಥಿಕ ಪರಿಸ್ಥಿತಿಯಲ್ಲಿ, ಸಾಮಾಜಿಕ ದೃಷ್ಟಿಯಿಂದ ಈ ಎಲ್ಲ ವಿಧಗಳಲ್ಲಿ ಬಹಳ ಹಿಂದುಳಿದಿದೆ. ಇವರಲ್ಲಿ ನ್ಯಾಯವಾದ ವಿದ್ಯಾ ಪ್ರಚಾರ ಹಾಗೂ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳ ಸುಧಾರಣೆಗಾಗಿ ದುಡಿಯುವುದು ಅತ್ಯಗತ್ಯ. ಇಂಥ ವಿಧಾಯಕ ಕಾರ್ಯಗಳನ್ನು ತರುಣರು ಉತ್ಸಾಹದಿಂದ ಮುಂದೊತ್ತಬೇಕು ಮತ್ತು ತನ್ಮೂಲಕ ತಮ್ಮ ಸಮಾಜದ ಸೇವೆ ಮಾಡಬೇಕು.

ಬ್ರಿಟಿಷರ ಆಳ್ವಿಕೆಯಲ್ಲಿ ಕಾರಣಾಂತರಗಳಿಂದ ಸರಕಾರೀ ಕೆಲಸ ಇತ್ಯಾದಿಗಳ ಮಟ್ಟಿಗೆ ಮುಸ್ಲಿಮರಿಗೆ ಹೆಚ್ಚಿನ ಪ್ರಾತಿನಿಧ್ಯ ದೊರೆಯುತಿತ್ತು. ಈಗ ಅವರವರ ಜನಸಂಖ್ಯೆಯ ಪ್ರಮಾಣಕ್ಕೆ ಮಾತ್ರ ಸಿಕ್ಕುತ್ತದೆ. ಇದಕ್ಕಾಗಿ ಮುಸ್ಲಿಮರು ಬೇಸರಿಸಲು ಕಾರಣವಿಲ್ಲ. ಮುಸ್ಲಿಮ್ ಸಮಾಜವು ತನ್ನ ಪರಿಸ್ಥಿತಿಯನ್ನು ಸುಧಾರಿಸಿಕೊಂಡು ತನ್ನ ಯೋಗ್ಯತೆಯ ಮೇಲೆ ಹೊಂದಿಕೊಂಡಿರಲು ಕಲಿಯುವುದೇ ಯುಕ್ತವಾದ ದಾರಿ. ಉದಾಹರಣೆಗಾಗಿ ಪಾರ್ಸಿ ಸಮಾಜವು ಕೇವಲ ಅಲ್ಪಸಂಖ್ಯಾಕವಿರುತ್ತದೆ. ಆದರೂ ಬೊಂಬಾಯಿಯಲ್ಲಿ ಇವರು ಎಷ್ಟು ಪ್ರಾಮುಖ್ಯ ಸ್ಥಾನವನ್ನು ಪಡೆದಿರುತ್ತಾರೆಂಬುದನ್ನು ನೋಡಿದರೆ ಯೋಗ್ಯತೆಗೆ ಮಾನವಿಗಲೂ ಬೆಲೆಇದೆಯೆಂಬುದು ಸ್ಪಷ್ಟವಾಗುತ್ತದೆ.

ಮುಸ್ಲಿಮ್ ಲೀಗು ಚಳವಳಿಯು ಮುಸ್ಲಿಮರಲ್ಲಿ ಅಪೂರ್ವ ಜಾಗೃತಿಯನ್ನುಂಟುಮಾಡಿ ಅವರಿಗೆ ಒಂದು ಐಕ್ಯವನ್ನು ತಂದೊದಗಿಸಿತು. ಪಾಕಿಸ್ತಾನದ ಸ್ಥಾಪನೆಯೊಳ್ಳಿ ಆ ಪಕ್ಷ ಅವಸಾನಗೊಂಡಿರುತ್ತದೆ. ಇನ್ನು ಆ ಬಗೆಯ ರಾಜಕೀಯ ಚಳವಳಿಯ ಆವಶ್ಯಕತೆ ಉಳಿದಿಲ್ಲ. ಪಾಕಿಸ್ತಾನದ ಸ್ಥಾಪನೆಯಿಂದ ಮುಸ್ಲಿಮ್ ಜನರಲ್ಲಿ ಅಭಿಮಾನ ಕುದುರಿದರೆ ಅದು ಸಹಜವೇ ಇರುತ್ತದೆ. ಇದರಿಂದ ಮುಸ್ಲಿಮ್ ಜನರಿಗೆ ತಮ್ಮ ಹಿಂದೀ ರಾಷ್ಟ್ರದ ಮೇಲೆ ಅಭಿಮಾನವಿಲ್ಲವೆಂದು ತಿಳಿಯಬಾರದು. ಇಲ್ಲಿಯ ಮುಸ್ಲಿಮರು ಇಲ್ಲಿಯೇ ಹುಟ್ಟಿ ಬೆಳೆದು ಬಾಳುವವರು. ಇಲ್ಲಿಯ ಸರಕಾರಕ್ಕೆ ಅವರು ಭಕ್ತಿ ವಿಶ್ವಾಸಗಳಿಂದ್ದ ವಿಧೇಯರಾಗಿ ವರ್ತಿಸುವುದು ಅವರ ಕರ್ತವ್ಯವಿರುತ್ತದೆ. ಇದನ್ನು ಇಲ್ಲಿಯ ಮುಸ್ಲಿಮರು ಬಲ್ಲರು. ಕ್ವಾದೇ ಅಜಾಮ ಜಿನ್ನಾರವರಾದರೂ ಹಿಂದೀ ಸರಕಾರದ ಪ್ರದೇಶದಲ್ಲಿರುವ ಮುಸ್ಲಿಮರು ಹಿಂದೀ ಸರಕಾರಕ್ಕೆ ವಿಧೇಯರಾಗಿ ವರ್ತಿಸತಕ್ಕದ್ದೇ ಅವರ ಕರ್ತವ್ಯವೆಂದು ಹೇಳಿರುವರು. ಇಸ್ಲಾಮ ಧರ್ಮವಾದರೂ ತಾವು ಯಾವ ರಾಷ್ಟ್ರದಲ್ಲಿ ವಾಸಿಸುವರೋ ಅಲ್ಲಿಯ ಸರಕಾರಕ್ಕೆ ವಿಧೇಯರಾಗಿರುವಂತೆಯೇ ಬೋಧಿಸುತ್ತದೆ.

ಈಗಿನ ಪರಿಸ್ಥಿತಿಯಲ್ಲಿ ಮುಸ್ಲಿಮರು ರಾಜಕೀಯ ರಂಗದಲ್ಲಿ ಮುಂದೆ ಹೇಗೆ ವರ್ತಿಸಬೇಕೆಂಬ ಬಗ್ಗೆ ಸಮಾಜದ ಮುಂದಾಳುಗಳು ಇನ್ನೂ ನಿರ್ಣಯಿಸಲಿಕ್ಕಿದೆ. ಅಂತೂ ಈ ಪ್ರಶ್ನೆಗಳನ್ನು ತರುಣರು ಹಿರಿಯರಿಗೇನೇ ಬಿಟ್ಟು ಬಿಟ್ಟು ತಮ್ಮ ಸಮಾಜದ ಉನ್ನತಿಯ ಬಗ್ಗೆ ಸಮಾಜದ ಸೇವೆಯ ಕಾರ್ಯಕ್ರಮವನ್ನು ಕೈಕೊಂಡಿರುವುದು ಬಹಳ ಶ್ರೇಯಸ್ಕರವಿರುತ್ತದೆಂದು ಹೇಳಿದರು.

ಈ ಸಭೆಯಲ್ಲಿ ಮಾತನಾಡುತ್ತ ಬಿ. ಎಮ್. ಇದಿನಬ್ಬನವರು ಮಂಗಳೂರಿನ ನಗರ ಸಭಾಭವನದಲ್ಲಿರುವ ಕ್ವಾದೇ ಅಜಾಮ ಜಿನ್ನಾರವರ ಭಾವಚಿತ್ರವನ್ನು ಅಲ್ಲಿಂದ ತೆಗೆಯುವ ಯತ್ನಗಳು ನಡೆಯುತ್ತಿವೆಯೆಂಬ ಪ್ರಸ್ತಾಪವನ್ನು ಎತ್ತಿದರು. ಭಾವಚಿತ್ರಕ್ಕೆ ಪ್ರಾಶಸ್ತ್ಯ ಕೊಡುವುದು ಇಸ್ಲಾಮ ಸಂಪ್ರದಾಯವಲ್ಲವೆಂದೂ ಈ ರೀತಿ ಮುಸ್ಲಿಮೇತರರು ಈ ಚಿತ್ರವನ್ನು ತೆಗೆದಲ್ಲಿ ಇದಕ್ಕಾಗಿ ಮುಸ್ಲಿಮರು ಉದ್ರೇಕಗೊಳ್ಳುವುದು ಸರಿಯಲ್ಲವೆಂದೂ ಇದಿನಬ್ಬನವರು ತಮ್ಮ ಅಭಿಪ್ರಾಯ ಹೇಳಿದರು.

ಈ ಕುರಿತು ಸಭೆಯಲ್ಲಿ ಮತ್ತಾರೂ ಏನನ್ನೂ ಹೇಳಲಿಲ್ಲ. ಇದಿನಬ್ಬರ ಬಳಿಕ ಮಾತನಾಡಿದ ಅಧ್ಯಕ್ಷರೂ ಈ ವಿಷಯವನ್ನು ಅಲ್ಲಿಗೇನೇ ಬಿಟ್ಟು ಬಿಟ್ಟರಲ್ಲದೆ ಏನೂ ಹೇಳಲಿಲ್ಲ. ಅಂತೂ ಈ ರೀತಿ ಮುಂದೆ ಬಂದ ಈ ವಿಚಾರವನ್ನು ನಾವಿಲ್ಲಿ ಸ್ವಲ್ಪ ವಿಮರ್ಶಿಸಿದರೆ ಅನುಚಿತವಾಗಲಾರದು.

ಮುನಿಸಿಪಾಲಿಟಿಯ ಸಭೆಗಳ ಯಾವ ಕಾರ್ಯಕ್ರಮದ ಪಟ್ಟಿಯಲ್ಲಿಯೂ ಈ ಪ್ರಸ್ತಾಪವು ಇದುವರೆಗೆ ಮುಂದೆ ಬಂದಿಲ್ಲವಾದರೂ ಊರಲ್ಲಿ ಈ ಕುರಿತು ತುಂಬಾ ಮಾತುಕತೆ ನಡೆಯುತ್ತಿದೆ. ಮುನಿಸಿಪಲ್ ಕಮಿಶನರವರು ಸಭಾಭವನದಲ್ಲಿಡಲು ಪಂಡಿತ ಜವಾಹರಲಾಲರ ಒಂದು ಚಿತ್ರಪಟವನ್ನು ಅರ್ಪಿಸುವುದಾಗಿ ಹೇಳಿದರೆಂದೂ ಈ ಸಂದರ್ಭದಲ್ಲಿ ಮುನಿಸಿಪಲ್ ಸಭಾಸದರೊಬ್ಬರು ಆ ಸಭಾಭವನದಲ್ಲಿ ಈಗ ಮಹಾತ್ಮಾಗಾಂಧಿಯವರ ಪಟದ ಜೊತೆಯಲ್ಲಿರುವ ಕ್ವಾದೇ ಅಜಾಮ ಜಿನ್ನಾರವರ ಪಟವನ್ನು ತೆಗೆದು ಅಲ್ಲಿ ಪಂಡಿತ ನೆಹರುರವರ ಪಟ ಇರಿಸಬೇಕೆಂದು ಸೂಚಿಸಿದರು. ಕಳುಹಿಸಿದರೆಂದೂ ಅಧ್ಯಕ್ಷರು ಇದನ್ನು ಸಭೆಗೆ ಇದುವರೆಗೂ ಸರಕಾರಕ್ಕೆ ಕಳುಹಿಸಿದರೆಂದೂ ಇತ್ಯಾದಿ ತಿಳಿದುಬರುತ್ತದೆ.

ಮಹಾತ್ಮಾ ಗಾಂಧೀಯವರ ಚಿತ್ರದ ಜೊತೆಯಲ್ಲಿರುವ ಕ್ವಾದೇ ಅಜಾಮ ಜಿನ್ನಾರವರ ಪಟವನ್ನು ತೆಗೆಯಬೇಕೆಂಬ ಈ ಸೂಚನೆಗಿಂತ ಮಹಾತ್ಮಾ ಗಾಂಧೀಯವರ ಪಟದ ಜೊತೆಯಲ್ಲಿ ಇನ್ನೊಂದು ಬದಿಯಿಂದ ಪಂಡಿತ ನೆಹರುಗಳ ಪಟ ಇಡುವುದೇ ಉತ್ತಮವೆಂದು ನಾವು ಸೂಚಿಸಲು ಬಯಸುತ್ತೇವೆ. ಒಂದೆಡೆಯಿಂದ ಪಂಡಿತ ನೆಹರು ಇನ್ನೊಂದೆಡೆಯಿಂದ ಜಿನ್ನಾ ಸಾಹೇಬರು ನಡುವೆ ಮಹಾತ್ಮಾ ಗಾಂಧೀಯವರು. ಈ ರೀತಿ ಚಿತ್ರಗಳ ಏರ್ಪಾಡು ಇರುವುದೇ ಹೆಚ್ಚು ಭೂಷಣವೆಂದು ನಗರ ಸಭಾಸದರಿಗೆ ನಮ್ಮ ಈ ಸೂಚನೆ ಕೊಡಲು ಬಯಸುತ್ತೇವೆ. ನಗರ ಸಭಾಸದರಾದರೂ ಸರಿಯಾಗಿ ವಿಚಾರಿಸಿ ನೋಡಿದರೆ ನಮ್ಮ ಸೂಚನೆಯೇ ಹೆಚ್ಚು ಯೋಗ್ಯವೆಂದು ಅವರು ಕಂಡುಕೊಳ್ಳುವರೆಂದು ಆಶಿಸುತ್ತೇವೆ.

ಜಿಲ್ಲಾ ಸಮಾಚಾರ

ನಗರ ಸಭೆ

ನಾಳೆ ಸೇರಲಿರುವ ನಗರ ಸಭೆಯಲ್ಲಿ ಸಾಕಷ್ಟು ವಾದವಿವಾದಗಳೂ, ಪ್ರಶ್ನೋತ್ತರಗಳೂ ಜರಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಸದಸ್ಯರಾದ ಶ್ರೀ ಜಿ. ಎಸ್. ನಗರ್ಕಾರ್ ಅವರು ಸೆಂಟ್ರಲ್ ವಾರ್ಡ್ ಬೋರ್ಡು ಶಾಲೆಯಲ್ಲಿ ಹದಿಮಿಕ್ಕಿ ವಿದ್ಯಾರ್ಥಿಗಳನ್ನು ತುಂಬಿಸಿದ ಗಾಳಿ ಬೆಳಕಿಲ್ಲದ ಹೊಗೆಸೊಪ್ಪಿನ ನಸ್ಯದ ಖಾರಬರುವ ನಾಥಬರುವ ಕೋಣೆಯಲ್ಲಿ ಚಿಕ್ಕ ಮಕ್ಕಳ ತರಗತಿಗಳನ್ನು ಹಾಕಿ ಅವರ ಆರೋಗ್ಯಕ್ಕೆ ಹಾನಿಯಾಗಿರಬಹುದೆಂಬ, ಸದ್ರಿ ಶಾಲೆಯ ರಸ್ತೆಯಲ್ಲಿ ಮೋಟಾರು ಬಸ್ಸುಗಳನ್ನು ತೊಳೆಯುವ, ಇದ್ದಲು ಹಾಕುವ ಬಾಧಕ ವಹಿವಾಟು ನಡೆಯುವುದನ್ನು ನಿಲ್ಲಿಸಬೇಕೆಂಬ, ಸದ್ರಿ ಶಾಲೆಯ ಮಕ್ಕಳಿಗೆ ಶುದ್ಧ ಮತ್ತು ಕುದಿಸಿ ತಣಿಸಿದ ನೀರಿನ ಸರಬರಾಯಿ ಸರಿಯಾಗಿ ಮಾಡಬೇಕೆಂಬ–ಮೊದಲಾದ ಪ್ರಶ್ನೆಗಳನ್ನು ಮುಂದಾಗಿ ತಿಳಿಸಿರುವರು. ಕೇಧಿಗುಡ್ಡೆಯ ಮಾರ್ಕೆಟಿನ ಬಳಿಯ ಕೆರೆಯನ್ನು ಆರೋಗ್ಯ ಕಾರಣಗಳಿಗಾಗಿ ಮುಚ್ಚಬೇಕೆಂಬಿತ್ಯಾದಿ ಇತರ ಸೂಚನೆಗಳೂ ಕೇವರ್ಗಿಸಲಿವೆ

ಮಣ್ಣಗುಡ್ಡೆ ಜಾತ್ರೆ

ಇಲ್ಲಿಯ ವರ್ಷಾವಧಿ ನಡೆಯುವ ದೀಪೋತ್ಸವವು ಈ ವರ್ಷವೂ ಯಶಸ್ವಿಯಾಗಿ ನಡೆಯಿತು.

ಶಾಲಾವರ್ಧಂತಿ

ಸ್ಥಳೀಯ ಕೆನರಾ ಹೈಸ್ಕೂಲಿನ ಶಾಲಾ ವರ್ಧಂತಿಯು ಇದೇ ತಾ 24ರಂದು ಜರಗುವುದು. ಅನಂತರದ ದಿನಗಳಲ್ಲಿ ಹಳೇ ವಿದ್ಯಾರ್ಥಿಗಳ, ಕೆನರಾ ಬಾಲಿಕಾ ಶಾಲೆಯ; ಹಳೇ ವಿದ್ಯಾರ್ಥಿನಿಯರ, ಕೆನರಾ ಹೈಸ್ಕೂಲ್ ಸೊಸೈಟಿಯ ಮತ್ತು ಕೆಲ ದಿನಗಳ ನಂತರ ಚೆಂಬರ್ ಆಫ್ ಕೊಮರ್ಸಿನ ವರ್ಧಂತ್ಯುತ್ಸವಗಳು ಜರಗಿಸಲ್ಪಡುವುವು

ಪಾವಂಜೆ ಗೋಪಾಲಕೃಷ್ಣಯ್ಯ ಸ್ಮಾರಕ ಚಿತ್ರಕಲಾ ಪ್ರದರ್ಶನ

ಕೆನರಾ ಹೈಸ್ಕೂಲ್ ವರ್ಧಂತ್ಯುತ್ಸವಗಳ ದಿನಗಳಲ್ಲಿ ಪ್ರಖ್ಯಾತ ಚಿತ್ರಕಲಾ ನಿಪುಣರಾದ ದಿವಂಗತ ಪಾವಂಜೆ ಗೋಪಾಲಕೃಷ್ಣಯ್ಯ ಸ್ಮಾರಕ ಸಮಿತಿಯವರು ಒಂದು ಚಿತ್ರಕಲಾ ಪ್ರದರ್ಶನವನ್ನೇರ್ಪಡಿಸಿರುವರು. ಜಿಲ್ಲೆಯ ಮತ್ತಿತರ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳೂ, ಉದ್ಯೋಗಸ್ಥ ಚಿತ್ರಗಾರರೂ ಇದರಲ್ಲಿ ಭಾಗವಹಿಸಲರ್ಹರಾಗಿದ್ದಾರೆ. ಪ್ರದರ್ಶನವು ಇದೇ ತಾ 24ರಂದು ಉದ್ಘಾಟಿಸಲ್ಪಡುವುದು ಚಿತ್ರಕೃತಿಗಳನ್ನು ತಾ 28ರೊಳಗೆ ಕಳುಹಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿಸಲಾಗಿದೆ. ಚಿತ್ರಗಳಿಗೆ ಯತೋಚಿತ ಬಹುಮಾನಗಳೂ ಹಂಚಲಾಗುವುವು. ಈ ಸಲ ಕಾರಣಾಂತರಗಳಿಂದ ಈ ಪ್ರದರ್ಶನದ ಪ್ರಕಟಣೆಯನ್ನು ವಿಳಂಬಿಸಬೇಕಾದುದಕ್ಕೆ ಸಮಿತಿಯವರು ವಿಷಾಧಿಸುತ್ತಾರೆ. ಮುಂಬರುವ ವರ್ಷದಿಂದ ಮಿಗಿಲಾದ ಪ್ರಮಾಣದಲ್ಲಿ ಪ್ರಚಾರ ಸೂಚನೆಗಳನ್ನು ಕೊಟ್ಟು ಈ ಪ್ರದರ್ಶನವನ್ನು ಹೆಚ್ಚು ವಿಜೃಂಭಣೆಯಿಂದಲೂ ಪ್ರೋತ್ಸಾಹಪರವಾಗಿ ನಡೆಸಬೇಕೆಂದು ಸಮಿತಿಯವರ ಉದ್ದೇಶವಿದೆ. ಎಲ್ಲಾ ವಿದ್ಯಾ ಸಂಸ್ಥೆಗಳವರ ಸಹಕಾರವನ್ನೂ ಕೋರಲಾಗಿದೆ. ಚಿತ್ರಗಳನ್ನು ಕೆನರಾ ಹೈಸ್ಕೂಲ್ ಹಳೇ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಿಗೆ ಅದೇ ಶಾಲೆಯಲ್ಲಿ ತಲ್ಪಿಸಬೇಕು

ಮುಷ್ಕರ

ಒಂದು ಘಂಟೆ ಲೇಖನಿ ಕೆಳಗಿಡುವ ಮುಷ್ಕರ ಹೂಡಬೇಕೆಂದು ಪ್ರಾಂತಿಕ ಎನ್. ಜಿ. ಒ. ಸಂಘವು ನಿರ್ಣಯಿಸಿದಂತೆ ತಾ. ೧೦ರಂದು ಮಂಗಳೂರಿನ ಸರಕಾರೀ ಆಫೀಸುಗಳ ಹಲವು ಕೆಳತರಗತಿಯ ನೌಕರರು ೧೧ ಗಂಟೆಯಿಂದ ೧೨ರ ವರೆಗೆ ಒಂದು ತಾಸು ತನಕ ಮುಷ್ಕರ ಹೂಡಿದ್ದರು.

ಹವಾಮಾನ

ಈಗ ಚಳಿಯು ಸ್ವಲ್ಪ ಕಡಿಮೆಯಾಗಿದ್ದರೂ ಬಿಸಿಲು ವಿಪರೀತವಾಗಿದೆ. ನಗರಕ್ಕೆ ನೀರು ಹಾಕುವ ವ್ಯವಸ್ಥೆ ಯಾವ ನಿರ್ದಿಷ್ಟ ಅವಧಿಯಲ್ಲಿ ಜರಗಿಸಲ್ಪಡುವುದೆಂಬ ಸಂಗತಿಯೂ ತಿಳಿದು ಬಂದಿಲ್ಲ ಆ ಕೆಲಸವೂ ದಿನ ನಿತ್ಯ ನಡೆದಂತೆ ತೋರುವುದಿಲ್ಲ

ಹರಿಜನ ಪರಿಷತ್ತು

ದ ಕ. ಜಿಲ್ಲಾ ಹರಿಜನ ಪರಿಷತ್ತೊಂದು ಬೇಗನೆ ಮಂಗಳೂರಲ್ಲಿ ಜರಗಲಿರುವುದು. ಜಿಲ್ಲೆಯ ಎಲ್ಲ ಹರಿಜನರನ್ನು ಸಂಘಟಿಸಿ, ಅವರಿಗೆ ಆಗುವ ಅನ್ಯಾಯಗಳನ್ನು ಪ್ರತಿಭಟಿಸಿ, ಅವರ ಅಭಿವೃದ್ಧಿಗೋಸ್ಕರ ಕೆಲಸ ಮಾಡುವುದೇ ಈ ಪರಿಷತ್ತಿನ ಉದ್ದೇಶವಾಗಿದೆ ಈ ಪರಿಷತ್ತಿನ ಅಧ್ಯಕ್ಷರಾಗಲು ಮೈಸೂರಿನ ಹರಿಜನ ಮಂತ್ರಿ ಶ್ರೀ ಚೆನ್ನಿಗ ರಾಮಯ್ಯನವರನ್ನೂ, ಉದ್ಘಾಟನೆಯನ್ನು ಮಾಡಲು ನಮ್ಮ ಹರಿಜನೋದ್ಧಾರ ಖಾತೆಯ ಮಂತ್ರಿ ಶ್ರೀ ಕೂರ್ಮಯ್ಯನವರನ್ನೂ ಕೇಳಿಕೊಳ್ಳಲಾಗಿದೆ. ಜಿಲ್ಲೆಯ ಹರಿಜನರೂ, ಹರಿಜನ ಬಂಧುಗಳೂ ಈ ಸಮ್ಮೇಳನವು ಯಶಸ್ವಿಯಾಗುವಂತೆ ಮಾಡಬೇಕಾಗಿದೆ

ಕಾರ್ಡಿನ ಬಟ್ಟೆ, ತೆಗೆವ ತಾರೀಕನ್ನು

ದಶಂಬರ 31ರ ವರೆಗೆ ಮುಂದುವರಿಸಲಾಗಿದೆಯೆಂದು ಅಧಿಕಾರಿಗಳಿಂದ ಆಜ್ಞೆ ಹೊರಟಿದೆ ಆದರೆ ಇದು 10 ಸಾವಿರ ಮತ್ತು ಕಡಿಮೆ ಜನಸಂಖ್ಯೆಯಿರುವ ಗ್ರಾಮಗಳಿಗೆ ಮಾತ್ರ ಅನ್ವಯಿಸುತ್ತದೆ

ಜಿಲ್ಲಾ ಕಲೆಕ್ಟರರ ಪ್ರಕಟಣೆ

ದಶಂಬರ 10ರಿಂದ 31ರ ವರೆಗೆ ಕೆಲವು ಜಾತಿಯ ಬಟ್ಟೆಗಳನ್ನು ರೇಶನ್ ಕಾರ್ಡ್ ಇಲ್ಲದೆ ಕೊಡಬಹುದೆಂದು ಜಿಲ್ಲಾಧಿಕಾರಿಗಳು ಆಜ್ಞೆ ಹೊರಡಿಸಿದ್ದಾರಾಗಿ ತಿಳಿದು ಬರುತ್ತದೆ ಪ್ರತಿಯೊಬ್ಬ ಪ್ರಾಯಸ್ಥನಿಗೆ 10 ಗಜ, ಅಪ್ರಾಯಸ್ಥನಿಗೆ 5 ಗಜ ಒಟ್ಟೆಯ ರೀತಿಯಲ್ಲಿ ವಿತರಣೆ ಮಾಡಲಾಗುವುದು

ಡೆಪ್ಯೂಟಿ ಪೋಸ್ಟ್ ಮಾಸ್ಟರ ಜನರಲರ ಭೇಟಿ:–ಅಂಚೆ ಪೇದೆಗಳ ದೂರು—

ಇದೇ ತಾ 7–12–47ನೇ ಆದಿತ್ಯವಾರ ದಿವಸ ಡಿಪ್ಯೂಟಿ ಪೋಸ್ಟ್ ಮಾಸ್ಟರ್ ಜನರಲ್‌ರವರಲ್ಲಿ ಅಂಚೆಪೇದೆ ಸಂಘದವರು ಮಂಗಳೂರಲ್ಲಿ ಭೇಟಿಯಾಗಿ ದ ಕನ್ನಡ ಜಿಲ್ಲೆಯ ಸದಸ್ಯರ ಪರವಾಗಿ ಕೇಳಿಕೆಗಳನ್ನು ಅವರ ಮುಂದಿಟ್ಟರು ಅವರಿಂದ ಸಾಧ್ಯವಿದ್ದ ಮಟ್ಟಿಗೆ ಸಹಾಯವನ್ನು ನೀಡುವದಾಗಿ ಭರವಸೆಯನ್ನು ಕೊಟ್ಟಿದ್ದಾರೆ ಅಲ್ಲದೆ ಸಾಯಂಕಾಲ ಗಂಟೆ 8ಕ್ಕೆ ಅಂಚೆ ಪೇದೆ ಮತ್ತು ಕೆಳತರಗತಿಯ ನೌಕರರು ಏರ್ಪಡಿಸಿದ ಉಪಹಾರಕ್ಕೆ ಸುಪರಿಂಟೆಂಡೆಂಟರು ನಯಂಪಳ್ಳಿ ರಾಮರಾಯರು ಮತ್ತು ಇತರ ಗ್ರಹಸ್ತರು ಕೂಡ ಹಾಜರಿದ್ದರು.

ಕಟ್ಟಿಗೆಯ ಕಂಟ್ರೋಲ್

ಸಾಗಿಸುವಿಕೆಯ ಮೋಟಾರು ವಾಹನಗಳಿಗೆ ಸಾಕಷ್ಟು ಪೆಟ್ರೋಲ್ ಸಿಗದಿರುವುದರಿಂದ ನಗರದಲ್ಲಿನ ಕಟ್ಟಿಗೆ ಬೆಲೆ ಏರುತ್ತಾ, ಇದ್ದು ಖಂಡಿಗೆ ಈಗ ರೂಪಾಯಿ 15ಕ್ಕೆ ಏರುತ್ತಿರುವುದೆಂದು ಹೇಳಲ್ಪಟ್ಟಿದೆ. ನಿಯಂತ್ರಣಗಳು ರದ್ದಾದರೆ ಆಹಾರ ವಸ್ತುಗಳಷ್ಟೇ ಆವಶ್ಯವಾಗಿರುವ ಕಟ್ಟಿಗೆಯ ಬೆಲೆ ಹದವಿಳ್ಳಬಹುದೆಂದು ನಂಬಲಾಗಿದೆ. ಸರಕಾರದವರು ಯಾವುದರ ಕಂಟ್ರೋಲನ್ನು ರದ್ದು ಮಾಡಿದರೂ, ಕಟ್ಟಿಗೆಯದನ್ನು ರದ್ದು ಮಾಡಬಾರದಾಗಿ ಒಬ್ಬ ಬಾತ್ಮಿದಾರರು ಸೂಚಿಸುತ್ತಾರೆ. ಇಲ್ಲವೆ ಪೆಟ್ರೋಲ್ ಸರಬರಾಯಿಯನ್ನು ಇದರ ಸಾಗಿಸುವಿಗೆಗಾಗಿ ಪ್ರತ್ಯೇಕ ಕೊಡುವ ಏರ್ಪಾಡು ಮಾಡಿದರೂ ಬೆಲೆ ಕಡಿಮೆಯಾಗಲು ಸಹಾಯಕವಾಗಬಹುದೆಂದು ಸಾರ್ವಜನಿಕರ ನಿರೀಕ್ಷೆಯಿದೆಯಾಗಿ ತಿಳಿದು ಬರುತ್ತದೆ

ಮದ್ರಾಸ್ ಸಿನೇಟಿಗೆ

ಮಂಗಳೂರು ಮತ್ತು ಉಡುಪಿ ಮುನ್ಸಿಪಾಲಿಟಿಗಳಿಗಿರುವ ಒಂದು ಸೀಟಿಗೆ ಉಡುಪಿ ಕೌನ್ಸಿಲ್ ಸದಸ್ಯೆ ಶ್ರೀಮತಿ ಲೀಲಾಬಾಯಿ ಕಾಮತರು ಓರ್ವ ಉಮೇದ್ವಾರಿಣಿಯಾಗಿರುವರು.

NOTICE

Canara High School Old Boys' Association Mangalore.

NOTICE is hereby given that the Annual Meeting of the General Body of the Association will be held on Thursday the 25th December 1947 at 3-30 p m in the Canara High School, Mangalore.

All members of the Association are earnestly requested to be present.

Resolution to be moved at the Meeting should reach the Hon Secretary by 21st December 1947

K Devadas Nayak
K Krishna Shetty
Hon Joint Secretaries

Canara High School
Mangalore 10-12 47

ಶ್ರಮಿಷಣಶಕ ಜಾಂಬಕು ಉತ್ತಮ ಮುಲಾಮು ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾಷನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು. ಯಾವತ್ತು ಚರ್ಮ ವ್ಯಾಧಿಯನ್ನು ಗುಣಪಡಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕ್ ಮುಲಾಮು ಚರ್ಮ ವ್ಯಾಧಿಯನ್ನು ಮುದ್ದಣವನ್ನು ತುರಿಕಜಿ ಕಾಲುಕಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು

ಜಾಂಬಕನ್ನೇ ಉಪಯೋಗಿಸಿರಿ



Zam-Buk

ಜಗತ್ ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ

ಈ ವಿಖ್ಯಾತ ಚಲಚ್ಚಿತ್ರ ತಾರೆ

ಮತ್ತು

ಗಾಯನ ವಿದುಷಿಯ

ಅಮೋಘ ಸಂಗೀತವನ್ನು

ಸದ್ಯದಲ್ಲೇ ಮಂಗಳೂರಲ್ಲಿ ಕೇಳುವ

ಸುಸಂಧಿ ಕಳಕೊಳ್ಳಬೇಡಿರಿ!

ಮುಂದೆ ವಿಶೇಷ ವಿವರಗಳು

ನಿರಾಶ್ರಿತರ ಸಹಾಯಕ್ಕಾಗಿ ಇಲ್ಲಿಯ ಗಣಪತಿ ಹಾಯಸ್ಕೂಲಿನ ಶಾರದಾ ಸಭನದಲ್ಲಿ ಮದ್ರಾಸಿನ ಪೂರ್ವಮಂತ್ರಿ ಶ್ರೀ. ವಿ. ಕೂರ್ಮಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ. ಜಿ. ನಾಯಕರಿಂದ ರಚಿಸಲ್ಪಟ್ಟ 'ಉತಾರ' ಎಂಬ ನಾಟಕವು ಹೊಯಿಗೆ ಬಜಾರಿನ ಶ್ರೀ. ಸತ್ಯಾರ್ಥ್ಯೋತ್ತೇಜಕ ನಾಟಕಸಭಾ ಇವರಿಂದ ದ. ಕ. ಜಿಲ್ಲಾ ಕಾಂಗ್ರೆಸ ಕಮಿಟಿಯ ಆಶ್ರಯದಲ್ಲಿ ಪ್ರದರ್ಶಿಸಲ್ಪಡುತ್ತದು.

ಪೊಳಲಿಯ ತುಳುವ ಮಹಾಸಭೆ

ಕಳೆದ ತಾ. 28—11—47ರಂದು ಶ್ರೀ ಕೆ. ಎ. ಪೂಂಜ, ಪಿ. ಬಿ ಪ್ರೆಸಿಡೆಂಟ್ ಪೊಳಲಿ ಇವರ ಅಧ್ಯಕ್ಷತೆಯಿಂದ ಸಾವಿರಕ್ಕೆ ಮಿಕ್ಕಿದ ರೈತರ ತುಳುವ ಮಹಾಸಭೆಯಲ್ಲಿ ಅನೇಕ ಹಿತಚಿಂತಕರ ಭಾಷಣಗಳಾದ ಮೇಲೆ ಸರ್ವಾನುಮತದಿಂದ ಹಲವು ನಿರ್ಣಯಗಳಾದುವು; ರೈತರಿಗೆ ಕೃಷಿವ್ಯವಸಾಯಕ್ಕೆ ಸಲಕರಣೆ ಸಹಾಯ ದೊರೆಯಬೇಕು.

ಬಡ ರೈತರು ಮತ್ತು ಹಳ್ಳಿಗರಾದ ನಮಗೆ ಅನ್ನ ವಸ್ತ್ರಗಳಿಗೆ ಬರಗಾಲವನ್ನುಂಟುಮಾಡಿದ ಕಂಟ್ರೋಲನ್ನು ತೆಗೆಯಬೇಕು, ದಕ್ಷಿಣಕನ್ನಡಕ್ಕೆ "ತುಳುನಾಡು ಜಿಲ್ಲೆ" ಎಂದು ಹೆಸರಿಸಬೇಕು. ಏಕೀಕೃತ ಕರ್ನಾಟಕಕ್ಕೆ ಸೇರಿಸಬೇಕು

ಪುತ್ತೂರು

ಸುಬ್ರಹ್ಮಣ್ಯ ಮಠದ ಶ್ರೀ ಪಾದಂಗಳವರಾದ ಶ್ರೀ ವಿಶ್ವಜ್ಞತೀರ್ಥ ಶ್ರೀ ಪಾದಂಗಳವರು ಈ ಕೋಡು ಕೊಯಮುತ್ತೂರು ಪ್ರಾಂತಗಳಿಗೆ ಹೋದವರು ಇದೇ ಬರುವ ಚಂಪಾ ಷಷ್ಠಿಗೆ ತಾ ೧೪ಕ್ಕೆ ಸರಿಯಾಗಿ ಸುಬ್ರಹ್ಮಣ್ಯಕ್ಕೆ ಬರುವವರಿದ್ದಾರೆ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಪೂರ್ವ ಶಿಷ್ಟ ಸಂಪ್ರದಾಯ ಪ್ರಕಾರ 9ರಿಂದ ಉತ್ಸವವು ಪ್ರಾರಂಭವಾಗಿ ತಾ 1'ರಲ್ಲಿ ಲಕ್ಷದೀಪೋತ್ಸವ, ತಾ 16ರಲ್ಲಿ ಮಯೂರ ವಾಹನೋತ್ಸವ, ತಾ 16ರಲ್ಲಿ ಹೂವಿನ ತೇರಿನ ಉತ್ಸವ ತಾ '8ರಲ್ಲಿ **ಚಂಪಾ ಷಷ್ಠಿ ಮಹಾ ರಥೋತ್ಸವ** ಶುಕ್ರವಾರ ತಾ 19ರಲ್ಲಿ ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗುವುವು

ಕಾಸರಗೋಡ

ಸಾಹಿತ್ಯ ಗೋಷ್ಠಿಗೆ ಧಾರವಾಡ ಕರ್ನಾಟಕ ಕೊಲೇಜಿನ ಪ್ರೊ ಆರ್ ವಿ ಜಾಗೀರ್‌ದಾರರು ಅಧ್ಯಕ್ಷರಾಗಲು ಒಪ್ಪಿರುವರು ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು ಸ್ವಾಗತಾಧ್ಯಕ್ಷರಾಗಿಯೂ ಶ್ರೀ ಜಿ ಶಂಕರ ಭಟ್ಟರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿದ್ದಾರೆ ಗದ್ಯಗೋಷ್ಠಿಯಲ್ಲಿ ಭಾಗವಹಿಸಲಿಚ್ಛಿಸುವವರು ದಿನಾಂಕ ೨೦ರೊಳಗೆ ಸ್ವಾಗತಾಧ್ಯಕ್ಷರಿಗಾಗಲಿ ಕಾರ್ಯದರ್ಶಿಗಳಿಗಾಗಲಿ ಮುಂದಾಗಿ ತಿಳಿಸಬೇಕು

ಉಡುಪಿ

ಲಕ್ಷದೀಪೋತ್ಸವ

ಶ್ರೀ ಕೃಷ್ಣ ಮಠದಲ್ಲಿ ಕಾಲಂಪ್ರತಿ ಜರಗುವ ಲಕ್ಷದೀಪೋತ್ಸವವನ್ನು ಪಟ್ಟಿಚರ ಪೀಠಸ್ಥರಾದ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಸ್ವಾಮಿಗಳವರು ಕಳೆದ ಮಂಗಳವಾರದಿಂದ ಇವತ್ತಿನ ತನಕ ನಾಲ್ಕು ದಿವಸ ಸಾಂಗವಾಗಿ ನೆರವೇರಿಸಿದರು

KANARA COMMERCIAL BANK LTD.

PUTTUR

H. O. Puttur.] Estd 1920 [Branch. Vittal.

All kinds of Banking Business transacted.

Deposits Current, Savings, Cumulative. Deposits are accepted.

Fixed Deposits for periods of 3 months and above up to 24 months are accepted.

ಕಡಿತ, ಘಾಯ, ಚರ್ಮ ಘಾತಗಳಿಗೆ ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ



556

ಕುಟಿಕೂರಾ ಮುಲಾಮು

CUTICURA OINTMENT

(೧ನೇ ಪುಟದಿಂದ)

ಮನೆಗಳು ಅತ್ಯಾವಶ್ಯಕ ನಗರಗಳಲ್ಲೀಗ ನಿಬಿಡದೆ ಮಿತಿಮೀರಿದ ಮನೆಮಾರಿಲ್ಲದೆ ಅಲೆದಾಡುವ ಜನಕ್ಕೆ ಅಲ್ಲಿ ಲೆಕ್ಕವಿಲ್ಲ

ಬೆಳಕಿನ ಆವಶ್ಯಕತೆ ಹೆಚ್ಚಿನ ಒತ್ತಾಯದಲ್ಲವಾದರೂ ಭಾರತದಲ್ಲಿಂದು ಸೀಮೆ ಎಣ್ಣೆ ಕೊರತೆ ಬಹಳವಾಗಿದೆಂದೆನಿಸಲ್ಪಡುತ್ತದೆ ಭಾರತದಲ್ಲಿಂದು ಉರಿಸಲ್ಪಡುವ ದೀಪಗಳೆಲ್ಲವೂ ಈ ಎಣ್ಣೆಯವು ದೀಪವನ್ನೇ ಉರಿಸುವ ಅನೇಕಾನೇಕ ಹಳ್ಳಿಗಳೆಷ್ಟೋ ಬಾರದವೆ

ಶಿಕ್ಷಣ

ಪ್ರತಿ ಏಳರಲ್ಲಿ ಆರು ಭಾರತೀಯರು ನಿರಕ್ಷರಸ್ಥರಿರುತ್ತಾರೆ 1942ರ ಖಾನೆಷುಮಾರಿ ಪ್ರಕಾರ ಕೇವಲ ನೂರರಲ್ಲಿ 12 ಮಂದಿ ಮಾತ್ರ ಅಕ್ಷರಸ್ಥರೆಂದು ತಿಳಿದುಬಂದಿದೆ ಡಿಲ್ಲಿ ಪ್ರಾಂತ್ಯದಲ್ಲಿ ಶೇಕಡಾ 25ರಷ್ಟು, ತಿರುವಾಂಕೂರಿನಲ್ಲಿ 47ರಷ್ಟು ಮತ್ತೆ ಗಡಿನಾಡಿನಲ್ಲಿ 7ರಷ್ಟು ಅಕ್ಷರಸ್ಥರ ಸಂಖ್ಯೆಗಳು ಏರಿಳಿತವಾಗುತ್ತವೆ ಬಲೂಚಿಸ್ಥಾನದಲ್ಲಿ ಶೇಕಡಾ 2ರಷ್ಟು ಮಾತ್ರ ಓದುಬರದವರೆಲ್ಲವರು ಹೆಂಗಸರಲ್ಲಿ ಸೇಕಡಾ 5ರಷ್ಟು ಮಂದಿ ಮಾತ ವಿದ್ಯಾವಂತರು ಬ್ರಿಟನ್ನಲ್ಲಿ ಶಿಕ್ಷಣಕ್ಕಾಗಿ ತಲಾ ಸುಮಾರು ರೂ. 35ರಷ್ಟು ಖರ್ಚು ಮಾಡಲ್ಪಡುವಾಗ ಭಾರತದಲ್ಲಿ ತಲಾ 10 ಆಣೆ ಮಾತ್ರ ವ್ಯಯಿಸಲ್ಪಡುತ್ತದೆ

ವೈದ್ಯಕೀಯ ಸೌಕರ್ಯ

ಭಾರತದಲ್ಲಿ ಈಗಿರುವುದಕ್ಕಿಂತ 16 ಪಾಲು ವೈದ್ಯರ ಸಂಖ್ಯೆಯೂ, 330 ಪಾಲು ಶುಶ್ರೂಷಕರ (ನರ್ಸ್) ಸಂಖ್ಯೆಯೂ ಹೆಚ್ಚಿಸುವ ಆವಶ್ಯಕತೆಯಿದೆ ಇದೇ ಪ್ರಮಾಣಶಯದಲ್ಲಿ ಆಸ್ಪತ್ರೆಗಳೂ ಹೆಚ್ಚಿಸಲ್ಪಡಬೇಕು. ಯುದ್ಧಪೂರ್ವದಲ್ಲಿ 45 ಸಾವಿರ ವೈದ್ಯರೂ 4300 ತರಬೇತು ಹೊಂದಿದ ಶುಶ್ರೂಷಕರೂ ಅಲ್ಲಿ ಇದ್ದರು ಭಾರತೀಯರ ಈಗಿನ ಸರಾಸರಿ ಆಯುಷ್ಯ ಪ್ರಮಾಣಸಂಖ್ಯೆಯಾದ 27 ವರ್ಷವನ್ನು ಹೆಚ್ಚಿಸಬೇಕಾದರೆ ಪರಿಣಾಮಕಾರಿಯಾದ ನೈರ್ಮಲ್ಯೀಕರಣದ ಏರ್ಪಾಡುಗಳೂ, ಪೋಷಕ ಪದಾರ್ಥಗಳ ಸರಬರಾಯಿಯೂ, ಆರೋಗ್ಯಾಭಿವೃದ್ಧಿ ಸೌಕರ್ಯಗಳೂ, ಹಳ್ಳಿ ಪಟ್ಟಣಗಳೆರಡರಲ್ಲೂ ಅತ್ಯಾವಶ್ಯಕವಿವೆ. ಸುಭದ್ರ ಆರ್ಥಿಕ ವ್ಯವಸ್ಥೆಯೂ ರಚಿಸಲ್ಪಡಬೇಕು ಮತ್ತು ಈಗಿನ ಅವ್ಯವಸ್ಥಿತ ಪರಿಸ್ಥಿತಿಯಿಂದದ್ಭೂತವಾದ ದುರಂತಗಳನ್ನೂ ಕಮ್ಮಿಮಾಡುವ ವ್ಯವಸ್ಥೆಯೂ ಶೀಘ್ರದಲ್ಲಿ ಕೈಕೊಳ್ಳಲ್ಪಡಬೇಕು.

ಸೋರೆನ್ಸನ್

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಯಾನಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ. ಇದರಿಂದ ಪರಪೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳೆಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು,
29–3–1947.

ಜೊಯಿಂಟ್ ಮೆನೇಜರ್ಸ್,
ದಿ. ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India)
Estd: 1906,
Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 { **About 54 lakhs,**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.
Branches at:-
MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದು

ಡಿಪೋ ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 19—12—1947 [ಸಂಚಿಕೆ 50]

ಪ್ರಪಂಚ ಪರಿಚಯ

ಕೊಮ್ಯುನಿಸಂ ಸೋಲು

ಫ್ರಾನ್ಸಿನಲ್ಲಿ ಸಾರ್ವತ್ರಿಕ ಮಜೂರ ಮುಷ್ಕರವನ್ನು ಹಿಂತೆಗೆದುಕೊಂಡಿತ ಅದನ್ನು ಇನ್ನಷ್ಟು ತೀವ್ರಗೊಳಿಸಬೇಕೆಂದು ರಷ್ಯಾ ಕಡೆಯ ಪ್ರೋತ್ಸಾಹವಿತ್ತಂತೆ ಆದರೆ ವ್ಯಯಕ್ತೀಕ ಸ್ವಾತಂತ್ರ್ಯಪ್ರಿಯರಾದ ಫ್ರೆಂಚರು ಸಂಪೂರ್ಣವಾಗಿ ತಮ್ಮನ್ನು ಕೆಂಪು ಕೊಮ್ಯುನಿಸ್ಟರಿಗೆ ವಹಿಸಿ ಕೊಟ್ಟಿರಲಿಲ್ಲ ಪಶ್ಚಿಮ ಯುರೋಪಿನಲ್ಲಿ ರಷ್ಯನ್ ರಾಜ ತಂತ್ರಕ್ಕೆ ಸಿಕ್ಕಿದ ದೊಡ್ಡ ಸೋಲು ಇದೆಂದು ಪರಿಗಣಿಸಲಾಗಿದೆ

ಚೀನದಲ್ಲಿನ ರಷ್ಯಾ ಪ್ರೇರಿತ ಕೊಮ್ಯುನಿಸ್ಟರು ಹಲವು ಕಡೆಗಳಲ್ಲಿ ಸೋತು ಸುಣ್ಣವಾಗಿರುವರ

ಅರಬ ರಾಷ್ಟ್ರಗಳನ್ನು ತವ್ಮ ಮತ್ತು ಯೆಹೂದಿಗಳ ಕಲಹದಲ್ಲಿ ರಷ್ಯದ ಸಹಾಯವನ್ನು ಪಡೆಯಲು ತಿರಸ್ಕರಿಸಿರುವರು

ತನ್ನ ಒಳ ಪರಿಸ್ಥಿತಿ ... ದು ರಶ್ಯವು ಕೊಚ್ಚಿಕೊಳ್ಳ ... ಯಾರೂ ಅದನ್ನು ... ಗುಪ್ತಸಮಿನ ... ಬಲಿಷ್ಟವಾಗಿಲ್ಲವೆಂದ ... ಅದರ ವಿಶ್ವವ್ಯಾಪಿ ... ವಾಗತ್ತ ಬರುತ್ತಿವೆ

ಬ್ರಿಟನಿಗೆ ಸಹಾಯ

ಅಮೇರಿಕವು ತಾನು ಹಿಂದೆ ಮಂಜೂರು ಮಾಡಿ ನಾನ್ನೂರು ಕೋಟಿ ರೂಪಾಯಿ ಸಾಲವನ್ನು ಈಗ ಬಿಟನಿಗೆ ಪೂರೈಸುವುದಾಗಿ ನಿರ್ಣಯಿಸಿದೆ ಬ್ರಿಟನಾದರೂ ಆರ್ಥಿಕ ಪರಿಸ್ಥಿತಿಯು ಕಸಿಷ್ಟ ಮಟ್ಟಕ್ಕಿಳಿದಿದೆ ಜಗತ್ತಿನಲ್ಲಿನ 'ತನ್ನ ಸಾಮ್ರಾಜ್ಯಶಾಹಿತ್ವವನ್ನು ಬಿಟ್ಟುಬಿಡಲು ನಿರ್ಧರಿಸಿದರಿಂದ ಬ್ರಿಟನಿನ ಟೋರಿ ಪಕ್ಷದ ಮುಂದಾಳಾದ ಚರ್ಚಿಲ್ಲರಿಗೆ ಹೊಸ ಚುನಾವಣೆಯಲ್ಲಿ ಮಜೂರ ಸರಕಾರವನ್ನು ಉರುಳಿಸಲು ಮಾಡಬೇಕಾದ ಪ್ರಚಾರಕ್ಕೆ ಒಳ್ಳೇ ನೆವ ಸಿಕ್ಕಿದೆ ಆದರೆ ಚರ್ಚಿಲ್ಲರನ್ನು ಖಂಡಿತವಾಗಿ ವಿಶ್ವಾಸಿಸುವವರು ಆ ದೇಶದಲ್ಲಿ ಬಹುಸಂಖ್ಯಾಕರಿಲ್ಲ.

ಪ್ರಧಾನ ಎಟ್ಲಿಯವರು ಎಲ್ಲವನ್ನು ಪರಸ್ಪರ ಮೈತ್ರಿಯಿಂದ ಸುಧಾರಿಸಬಹುದೆಂಬ ಭರವಸೆಯುಳ್ಳವರಾಗಿದ್ದಾರೆ ಅವರು ಭಾರತ ಪ್ರಧಾನ ನೆಹರುರವರಿಗೆ ಮಾತುಕತೆಗಳಿಗಾಗಿ ಆಹ್ವಾನವಿತ್ತಿರುವರು. ತಮ್ಮಿಂದಾದ ಸಹಾಯವನ್ನು ನೀಡಲು ... ಸರಕಾರವೂ ಸಿದ್ಧವಿರುವುದು.

ಪಲೆಸ್ತೀನ ಯುದ್ಧ

ಪಲೆಸ್ತೀನವನ್ನು ... ದವಲ್ಲಿ ವಿಭಜಿಸಬೇಕೆಂದು ಆದೇಶ್ ... ದಂಗೆಗಳುಂಟಾದವು ... ಕ್ಕಿಂತ ಭಾರಿ ಮಿಗಿಲಾದ ಗಲಾಟೆಯು ಈಗ ವಿಭಜನೆ ವಿರುದ್ಧವಾಗಿ ಪಲೆಸ್ತೀನದಲ್ಲಿ ಜರಗುತ್ತದೆ ಯುಕ್ತ ರಾಷ್ಟ್ರ ಸಂಘದವರು ಪಲೆಸ್ತೀನವನ್ನು ಅರಬಿ ಯಹೂದಿಗಳೊಳಗೆ ಹಂಚಿ ಕೊಡಬೇಕೆಂದು ನಿರ್ಧರಿಸಿದವರು ಎಲ್ಲಾ ಅರಬಿ ರಾಷ್ಟ್ರಗಳು ಇದನ್ನು ವಿರೋಧಿಸಲು ಐಕ್ಯಗೊಂಡಿರುವರು

ಈ ವಿರೋಧದಲ್ಲಿ ಅರೇಬಿಯಕ್ಕೂ ಒಂದು ಪ್ರಧಾನ ಭಾಗವಿದ್ದರೂ ಈ ದೇಶವು ಅಮೇರಿಕದೊಡನೆ ಮೈತ್ರಿಯಿಂದುಳಿಯಲು ನಿರ್ಧರಿಸಿದೆ ಪಲೆಸ್ತೀನ ವಿಭಜನೆಗೆ ಅಮೇರಿಕವು ಹೆಚ್ಚು (ಯೆಹೂದಿಗಳ ಪರವಾಗಿ) ಪ್ರಭಾವ ಬೀರಿರುವುದು ಲೋಕ ಪ್ರಸಿದ್ಧವಾದ ಸಂಗತಿ ಇಷ್ಟಾದರೂ ಅರೇಬಿಯಲ್ಲಿ ಅಮೇರಿಕಕ್ಕೆ ಕೊಡಲ್ಪಟ್ಟ ಎಣ್ಣೆ ಸವಲತ್ತುಗಳನ್ನು ರದ್ದು ಮಾಡುವುದಿಲ್ಲವಾಗಿ ಸೌದಿ ಅರೇಬಿಯದ ರಾಜರು ತಿಳಿಸಿರುವರು

ಚೀನ ಅಂತರ್ಯುದ್ಧ

ಕೊಮ್ಯುನಿಸ್ಟರ ವಿರುದ್ಧವಾಗಿ ನಡೆಸುವ ಯುದ್ಧದ ಸರ್ವ ಸೇನಾಪತ್ಯವನ್ನು ಮಾರ್ಶಲ್ ಚಿಯಾಂಗ ಕೈಶೇಕರೇ ವಹಿಸಿಕೊಂಡಿರುವರು - ಕೊಮ್ಯುನಿಸ್ಟ್ ಸೈನ್ಯಗಳು ಪೆಕಿಂಗ್ ಹೆಂಕೊ, ರೈಲುಮಾರ್ಗವನು ವಶಪಡಿಸಿಕೊಳ್ಳುವ ಯತ್ನದಲ್ಲಿರುವರು

ವಿದೇಶ ಮಂತ್ರಿ ಪರಿಷತ್ತು

ಚತುರ್ರಾಷ್ಟ್ರಗಳ ವಿದೇಶಾಂಗ ಮಂತ್ರಿವರ್ಯರ ಲಂಡನ್ ಪರಿಷತ್ತು ಯಾವ ತೀರ್ಮಾನಕ್ಕೂ ಬಾರದೆ ಮುಂದೆ ಬಿತ್ತು ಜರ್ಮನಿಯಲ್ಲಿ ಪ ತಪ್ರತ್ಯೇಕ ಪ್ರಾದೇಶಿಕ ಆರ್ಥಿಕ ವಿಭಾಗಗಳನ್ನು ರಚ್ಚಗೊಳಿಸಬೇಕೆಂದು ... ವಿದೇಶಾಂಗ ಸಚಿವ ಮೊಲೊಟೋವರು ಸಲಹೆ ನೀಡಿದರು ಅದಕ್ಕೆ ಇಂಗ್ಲೀಷ್ ಅಮೇರಿಕಾನರು ಇದನ್ನು ತೀವ್ರ ಪ್ರತಿಭಟಿಸಿದರು

ಇಂಡೋನೇಸ್ಯಾದಲ್ಲಿ

ಪ್ರಧಾನಿ ಡಾ ಶರೀಫುದ್ದೀನರು ಡಚ್ ಸಮಾಲೋಚಕರೊಡನೆ ಸಂಧಾನ ನಡೆಸಲು ಬಟೇವಿಯಾಕ್ಕೆ ಬಂದಿರುವರು ಅಮೇರಿಕದ ರೆನ್‌ವಿಲ್ ಯುದ್ಧನಾವೆಯ ಮೇಲೆ ಈ ಮಾತುಕತೆಗಳು ನಡೆಯುತ್ತವೆ

ರಾಜೆನ್ ಬಾಬುಗಳು ಬರ್ಮಾಕ್ಕೆ

ಬರುವ ವರ್ಷದ ಜನವರಿ 4ಕ್ಕೆ ಬರ್ಮಾದಲ್ಲಿ ಜರಗಿಸಲ್ಪಡುವ ಸ್ವಾತಂತ್ರ್ಯ ಸಮಾರಂಭಕ್ಕೆ ಅಲ್ಲಿನ ಪ್ರಧಾನ ಥಾಕಿನ್‌ನೂ ಅವರು ಬಾಬು ರಾಜೇಂದ್ರ ಪ್ರಸಾದರನ್ನು ಆಹ್ವಾನಿಸಿರುವರು ರಾಜೇಂದ್ರರು ಸದ್ಯದಲ್ಲೇ ಬರ್ಮಾಕ್ಕೆ ಹೋಗಲು ಸಿದ್ಧತೆಯಲ್ಲಿರುವರು.

ಇನ್ಶೂರೆನ್ಸ್

ವಿಷಯ ವಿದ್ದರೆ

ನ್ಯೂ ಇಂಡಿಯಾ

ನೆನಪಿರಲಿ

ಪ್ರಮುಖ ಹಿಂದೀ ವಿಮಾ ಸಂಸ್ಥೆ

1946ರ ಪ್ರಗತಿಯ ಕೆಲವು ಮುಖ್ಯ ವಿಷಯಗಳು

(ಜೀವವಿಮೆ) ಹೊಸ ವಹಿವಾಟು	ರೂ.	12	ಕೋಟಿಗಳಿಗೆ ಮಿಕ್ಕಿದೆ	
ಊರ್ಜಿತದಲ್ಲಿರುವ ಪೋಲಿಸಿಗಳು	ರೂ	38	,,	,,
ಜುಮ್ಲಾ ಸೊತ್ತು	ರೂ.	10	,,	,,
ಸ್ಥಾಪಿತವಾದಂದಿನಿಂದ ತೆತ್ತ ಕ್ಲೈಮುಗಳ	ರೂ	13	,,	,,

ಜೀವವಿಮೆ, ಬೆಂಕಿ, ನೌಕೆ, ಮೋಟಾರು ವಾಹನ, ವಾಯುಯಾನ, ಕೆಲಸಗಾರರ ವಿಷಯ ಪರಿಹಾರ, ಪ್ರಾಮಾಣಿಕತೆಯ ಗ್ಯಾರಂಟಿ ಮೊದಲಾದ ಎಲ್ಲಾ ತರದ ವಿಮೆಗೆ ಸಂಬಂಧಪಟ್ಟ ವಹಿವಾಟುಗಳನ್ನು ನಡೆಸುತ್ತದೆ

ನ್ಯೂ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಹೆಡ್ ಆಫೀಸು: ಬೊಂಬಾಯಿ)

ಮದ್ರಾಸು ಬ್ರಾಂಚ್: 4 ಮತ್ತು 5, ಫಸ್ಟ್ ಲ್ಯಾನ್ ಬೀಚ್.

ಸಬ್ ಆಫೀಸು: ಹಂಪನಕಟ್ಟಾ, ಮಂಗಳೂರು.

ಸ್ವದೇಶ ಸುದ್ದಿಗಳು

ಶ್ರೀ ಗಿರಿಜಾಶಂಕರ ಬಾಜಪೇಯಿ ಅವರನ್ನು ಭಾರತ ಸರಕಾರವು ಫ್ರಾನ್ಸಿನ ರಾಯಭಾರಿಗಳಾಗಿ ನೇಮಿಸಿರುವರು.

ಜರ್ಮನಿಯಿಂದ ವೈಜ್ಞಾನಿಕ ಉಪಕರಣಗಳು, ಸಣ್ಣ ಪುಟ್ಟ ಯಂತ್ರೋಪಕರಣಗಳು, ವ್ಯವಸಾಯದ ಸಲಕರಣೆಗಳು ಮೊದಲಾದವನ್ನು ತರಿಸಲಾಗುವ ಒಂದು ವಾಣಿಜ್ಯ ಒಪ್ಪಂದವು ಭಾರತ ಜರ್ಮನಿಗಳೊಳಗೆ ಸಹಿ ಮಾಡಲ್ಪಟ್ಟಿದೆ.

ಸ್ವತಂತ್ರ ಭಾರತದಲ್ಲಿ ಆರ್ಥಿಕ ಅಭಿವೃದ್ಧಿಯಾಗಬೇಕೆಂದೂ, ಬಂಡವಾಳ, ಮಜೂರ ವರ್ಗಗಳು ಸಹಕರಿಸಿ ಪರಸ್ಪರ ಅನ್ಯೋನ್ಯತೆಯಿಂದ ವರ್ತಿಸಿದರೆ ಇದು ಸಾಧ್ಯವೆಂದೂ ನೆಹರುಗಳು ಕಲ್ಕತ್ತೆಯ ಇಡೋಪ್ಯ ವಾಣಿಜ್ಯ ಸಂಘದ ಭಾಷಣದಲ್ಲಿ ತಿಳಿಸಿದರು.

ವಿಶಾಖ ಪಟ್ಟಣದಲ್ಲಿ ಹುಡುಗರಿಗೆ ನೌಕಾ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಬೇಕೆಂದು ಸ್ಥಾಯಿ ಆರ್ಥಿಕ ಸಮಿತಿಯು ಒಪ್ಪಿದೆ.

ಮದ್ರಾಸು ನಗರ ಸಭೆಯು ಅಲ್ಲಿನ ಟ್ರಾಮುಗಳನ್ನು ಕ್ರಯಕ್ಕೆ ಪಡೆಯಲು ನಿರ್ಧರಿಸಿದೆ.

ನೊನ್ ಗಜೆಟೆಡ್ ನೌಕರರು ತಮ್ಮ ಸಂಪನ್ನು ಹಿಂದೆಗೆಯಬೇಕೆಂದೂ, ಸರಕಾರವೂ ಅವರ ಭತ್ತೆ ಹೆಚ್ಚಿಸುವ ಕುರಿತು ಪರ್ಯಾಲೋಚಿಸಬೇಕೆಂದೂ ಮದ್ರಾಸಿನ ಹಿಂದೂ ಪತ್ರಿಕೆಯು ಅಗ್ರ ಲೇಖನದಲ್ಲಿ ಸೂಚಿಸಿದೆ.

ಭಾರತದ ಆರೋಗ್ಯ ಮಂತ್ರಿ ಶ್ರೀ ಅಮೃತ್ ಕುವರರ್ ಮದ್ರಾಸಿನಲ್ಲಿ ದಶಂಬರ ತಾ 29, 30, 31ಕ್ಕೆ ಜರಗುವ ಅಖಿಲ ಭಾರತ ಮಹಿಳಾ ಸಮ್ಮೇಳನಕ್ಕೆ ಬರುವರು.

ಖಾಸಗಿ ಶಾಲೆಗಳ ಉಪಾಧ್ಯಾಯರನ್ನು ಆಡಳಿತೆ ಖಾತೆಯು ಗಜೆಟೆಡ್ ಹುದ್ದೆಗೆ ನೇರವಾಗಿ ಚುನಾಯಿಸುವ ಧೋರಣೆಯನ್ನು ಮದ್ರಾಸ್ ಸರಕಾರ ಒಪ್ಪಿಕೊಂಡಿದೆ.

ಸದ್ಯಕ್ಕೆ ಹೊಣೆಗಾರ ಸರಕಾರ ಸ್ಥಾಪಿಸುವುದಕ್ಕೆ ತಿರುವಾಂಕೂರು ಸರಕಾರವು ಸಮ್ಮತಿಯೀಯುವುದಿಲ್ಲವೆಂದು ತಿಳಿದು ಬರುತ್ತದೆ.

ಹೈದರಾಬಾದಿನ ಏಳು ಹಳ್ಳಿಗಳು ಸ್ವತಂತ್ರವಾದುವಂತೆ. ಅಲ್ಲಿನ ಚಳವಳವನ್ನು ತೀವ್ರಗೊಳಿಸಲು ಅಲ್ಲಿನ ಕಾಂಗ್ರೆಸ್ ಅಧ್ಯಕ್ಷ ರಮಾನಂದ ತೀರ್ಥರು ನಿರ್ಧರಿಸಿರುವರು.

ಮಧ್ಯ ಪ್ರಾಂತ್ಯದ ಸುಮಾರು 14 ಸಣ್ಣ ಪುಟ್ಟ ಸಂಸ್ಥಾನಗಳು ಪ್ರಾಂತ್ಯ ಸರಕಾರದ ಆಡಳಿತಕ್ಕೊಳಪಡಲು ಮೊನ್ನೆ ಸರ್ದಾರ ಪಟೇಲರು ಅಲ್ಲಿ ಹೋಗಿದ್ದಾಗ ಸಮ್ಮತಿಸಿರುವರು.

ಪ್ರಾಂತ್ಯದ ಕೃಷಿಕರಿಗೆ ವ್ಯವಸಾಯದ ಶಿಕ್ಷಣವನ್ನೊದಗಿಸುವುದಕ್ಕೆ ಮದ್ರಾಸ್ ವ್ಯವಸಾಯ ಇಲಾಖೆಯವರು ನಮ್ಮ ದೇಶದಲ್ಲಿ ಬೆಳೆಯುವ ಎಲ್ಲಾ ತರದ ಸಸ್ಯ ಅವುಗಳ ಉಪಯೋಗವಾಗುವ ಭಾಗಗಳ ವರ್ಣನೆ, ಅದಕ್ಕೆ ತಟ್ಟುವ ರೋಗಗಳು ಅವುಗಳ ನಿವಾರಣೆ ಈ ಕುರಿತಾದೊಂದು ಪುಸ್ತಕ ಪ್ರಕಟಿಸುವುದು.

ಸಿಹಿಸುದ್ದಿ ಸಂಗ್ರಹ

ತಿರುವಾಂಕೂರಿನಲ್ಲಿರುವ ವೇಲುಕಾಕನ್ ಎಂಬವನು ದಕ್ಷಿಣ ಭಾರತದ ಅತೀ ವೃದ್ಧ ಮನುಷ್ಯ. ಅವನಿಗೆ 106 ವರ್ಷ ವಯಸ್ಸು; ತನ್ನ 85 ವರ್ಷದ ಮಗನೊಡನೆಯೂ ಮತ್ತು 72 ಇತರ ಕುಟುಂಬದವರೊಡನೆಯೂ ಅವನು ಸಂತೋಷದಿಂದಿದ್ದಾನೆ. 120 ವರ್ಷ ತನಕ ಬದುಕಬೇಕೆಂದವನ ಇಚ್ಛೆಯಿದೆ.

✠

ವೆಂಕೂವರ್ ನಗರದಲ್ಲಿ ಎಮ್ಮಿ ಎಂಬಾಕೆಯ ನಾಲ್ಕು ವರ್ಷದ ಹುಡುಗ ಜಗತ್ತಿನ ಅತಿ ಚಿಕ್ಕ ಪ್ರಬುದ್ಧ. ಅವನು ಎರಡನೇ ವರ್ಷದಲ್ಲಿ ಪುಸ್ತಕ ಓದಲು ಕಲಿತಿದ್ದು ನಾಲ್ಕನೆ ವಯಸ್ಸಿನಲ್ಲಿ ನೂರಾರು ಗ್ರಂಥಗಳನ್ನು ಜೀರ್ಣಿಸಿದ್ದಾನೆ. ಕಾದಂಬರಿಗಳೂ ಯಂತ್ರ ವಿಜ್ಞಾನ ಪುಸ್ತಕಗಳೂ ಅವನ ಮೆಚ್ಚಿಗೆಯವು.

✠

ಬ್ರಿಟನಿನಲ್ಲಿ 7500ರಕ್ಕೂ ಮಿಕ್ಕಿದ ಸಂಖ್ಯೆಯ ಟಪ್ಪಾಲು ಬಟವಾಡೆಯ ಸ್ತ್ರೀ ಕೆಲಸಗಾರರಿದ್ದಾರೆ.

✠

ಸಂಪೂರ್ಣ ಎಲ್ಯೂಮಿನಿಯಮಿನಿಂದ ಮಾಡಲ್ಪಟ್ಟ ನಾಲ್ಕು ಕೋಣೆಗಳ ಒಂದು ಮನೆಯನ್ನು ಉತ್ತರ ಅಮೇರಿಕದ ಮಿಯಾಮಿ ನಗರದಿಂದ ದಕ್ಷಿಣ ಅಮೇರಿಕದ ಬ್ರೇಜಿಲ್ ದೇಶದ ರಾಜಧಾನಿಗೆ ವಿಮಾನ ಮೂಲಕ ಒಯ್ಯಲಾಯಿತು. ಬ್ರೆಜಿಲ್ ಸರಕಾರದವರು ಇಂತಹ ಮಾದರಿಯೊಂದನ್ನು ನೋಡಲು ಆತುರರಾಗಿದ್ದರು.

✠

ಅಮೇರಿಕದ ಬೋಯಿಂಗ್ ವಿಮಾನ ಕಂಪೆನಿಯವರು ಎರಡು ಮಾಳಿಗೆಗಳಿರುವ ಜಗತ್ತಿನ ಅತೀ ದೊಡ್ಡ ಪ್ರಯಾಣಿಕ ವಿಮಾನವನ್ನು ತಯಾರಿಸಿರುವರು. ಅದು ಗಂಟೆಗೆ 300 ಮೈಲು ವೇಗದಲ್ಲಿ ಹಾರುವುದು.

✠

ನೋರ್ವೆ ದೇಶದ ಕರಾವಳಿಯಲ್ಲಿ 1 ಲಕ್ಷದ 50 ಸಾವಿರ ಸಣ್ಣ ಪುಟ್ಟ ದ್ವೀಪಗಳಿವೆ.

✠

ಚೀನದ ನೋಟುಗಳ ಬೆಲೆ ಕಡಿಮೆಯಾಗಿದೆ. ಒರ್ವ 96 ವರ್ಷದ ಮುದುಕಿಯು ತನ್ನ ಜೀವನದಲ್ಲೆಲ್ಲ ದುಡಿದು 4122 ಚೀನಿ ಡೊಲರುಗಳನ್ನು ಒಟ್ಟು ಮಾಡಿದ್ದಳು. ಒಂದು ಚಿಕ್ಕ ಆಸ್ತಿ ಪಡಕೊಳ್ಳಲು ಆ ಹಣವನ್ನು ತನ್ನ ಮಗನ ಬಳಿ ಕೊಟ್ಟು ಕಳುಹಿಸಿದಳು. ಅವನು ಆ ಹಣಕ್ಕೆ 5 ಸಿಗರೇಟುಗಳನ್ನು ಕೊಂಡುಕೊಳ್ಳಲು ಮಾತ್ರ ಸಮರ್ಥನಾದ. ಈ ಸಂಗತಿ ಕೇಳಿದ ಮುದುಕಿ ಹೃದಯಸ್ತಂಭನದಿಂದ ಪ್ರಾಣ ಬಿಟ್ಟಳು.

✠

ಒರ್ವ ಲಂಡನ್ ಹುಡುಗನ ಶರೀರವು ದಿನಹೋದಂತೆ ಕಲ್ಲಾಗಿ ಬರುತ್ತಿದೆ. ವೈದ್ಯರು ಅವನಿಗೆ ವಿಟಮಿನ್ ಈ ಜೀವಾತು ಕೊಟ್ಟು ಗುಣಪಡಿಸಿದ್ದಾರೆ. ಈ ವಿಚಿತ್ರ ರೋಗಕ್ಕೆ ಬಲಿಯಾಗಿ ಬದುಕಿದವನಿವನೊಬ್ಬನೆ.

✠

ಕಳೆದ ಯುದ್ಧದಲ್ಲಿ ವಿಮಾನ ದಾಳಿಯಿಂದ ಪುಡಿಯಾದ ಜರ್ಮನಿಯ ಭಗ್ನಾವಶೇಷಗಳ ರಾಶಿಯನ್ನು ತೆಗೆಯಲಿಕ್ಕೇ ಹತ್ತು ವರ್ಷಗಳು ಹಿಡಿದಾವೆಂದು ಅಲ್ಲಿನೊಬ್ಬ ತಜ್ಞನ ಹೇಳಿಕೆ.

✠

ಲಂಡನಿನ ಪೌರ್ವಾತ್ಯ ಮತ್ತು ಆಫ್ರಿಕಾ ಭಾಷೆಗಳ ವಿದ್ಯಾಲಯದಲ್ಲಿ 23 ಆಫ್ರಿಕೆಯ, 9 ಯೆಹೂದಿ, 28 ಹಿಂದೀ ಏಶಿಯಾ, 4 ದ್ರಾವಿಡ, 12 ಟಿಬೆಟ್ ಚೀನ, 6 ತುರ್ಕಿ, 3 ಆಸ್ಟ್ರೇಲಿಯದ, ಹೀಗೆ ಒಟ್ಟು 85 ಭಾಷೆಗಳನ್ನು ಕಲಿಸುವರು.

ನೋವಿನ ಎದೆ ಗಂಡಾಂತರದ ಅಣುಗಳನ್ನು ತೋರಿಸುತ್ತದೆ. ಪೆಪ್ಸ್ ನಿಷಹಾರಿ ಮಾತ್ರೆ ಸೇವಿಸಿ ಈ ಗಂಡಾಂತರವನ್ನು ಪಾರುಗೊಳಿಸಿರಿ.

ಬಾಯಲ್ಲಿ ಕರಗುತ್ತಲೆ ಪೆಪ್ಸಿನ ಅಮೂಲ್ಯ ಔಷಧೀಯ ಸತ್ವಗಳು ಶ್ವಾಸಕೋಶಕ್ಕೊಯಲ್ಪಟ್ಟು ಅಣು ನಾಶ, ಶಮನ, ಪರಿಹಾರಗಳನ್ನು ಗೆಯ್ಯುತ್ತದೆ. ಕಫ ಸಡಿಲಾಗಿ, ಎದೆ ಒತ್ತಾಟ ಕಡಿಮ್ಮೆಯಾಗುತ್ತದೆ. ಶ್ವಾಸ ಸುಲಭವಾಗುತ್ತದೆ. ಕೆಮ್ಮು, ಗೂರಲು, ಶೀಘ್ರ ಕಡಿಮ್ಮೆಯಾಗಿ ಅವನ್ನು ತಡೆಯುವ ಶರೀರ ಶಕ್ತಿ ಹೆಚ್ಚುತ್ತದೆ. ಕೆಮ್ಮು, ಶೀತ, ನೆಗಡಿ, ಗಂಟಲು ಬೇನೆ, ವಿಷಮ ಜ್ವರ, ಗೂರಲು ಮತ್ತಿತರ ಎದೆ ಶ್ವಾಸಕೋಶ ಬಾಧೆಗಳಿಗೆ ಪೆಪ್ಸ್ ವಿಶ್ವ ವಿಖ್ಯಾತವಾದುದು.

ಈಗಲೇ ಪೆಪ್ಸ್

PEPS

ಶ್ವಾಸನೀಯ ವಿಷಹಾರಿ ಮಾತ್ರೆಗಳನ್ನು ಸೇವಿಸಿರಿ.

ಎಲ್ಲಾ ಔಷಧಿಯಂಗಡಿಗಳಲ್ಲಿ ಸದಾ ಸಿಗುವವು.

ನಿಜ ಸಂಸ್ಕೃತಿಯೆ ವಿಶಾಲ ದರ್ಶನ

ಮಾನಸಿಕ ಸಂಸ್ಕಾರದ ಆವಶ್ಯಕತೆ

ಸ್ವಾಮಿ ವಿಮಲಾನಂದರ ದಿವ್ಯನಿರೂಪ

ಮಂಗಳೂರು ರಾಮಕೃಷ್ಣ ಮಿಶನ್ ಕೇಂದ್ರದ ಸ್ವಾಮಿ ವಿಮಲಾನಂದಜಿಯವರು ಇಲ್ಲಿಯ ಬೆಸೆಂಟ್ ಶಾಲೆಯಲ್ಲಿನ ಭಾಷಣದಲ್ಲಿ "ನಮ್ಮ ರಾಷ್ಟ್ರೀಯ ಸಂಸ್ಕೃತಿ" ಎಂಬ ವಿಷಯದಲ್ಲಿ ಕುರಿತಾ ಅಮೋಘವೂ ವಿಚಾರ ಪೂರ್ಣವೂ ಆದ ನಿರೂಪವನ್ನು ತೆತ್ತರು. ಅವರ ಭಾಷಣ ಸಾರಾಂಶ ಹೀಗಿದೆ:

ಓಂ ಶಬ್ದವು ವಿಶಾಲ ವ್ಯಾಪ್ತಿಯುಳ್ಳದು. ಜಾತಿ, ಮತ, ವರ್ಣಬೇಧವಿಲ್ಲದೆ ಇದ್ದು ಸಮಸ್ತ ಭಾರತ ಜನವರ್ಗವೂ ಅದರಲ್ಲಿ ಸಮಾಗಮವಾಗಿದೆ. ಪರಿಪೂರ್ಣ ಜನಾಂಗ ಲಕ್ಷಣಗಳಿಂದ ಕೂಡಿದ್ದ ಭಾರತ ನಿವಾಸಿಗಳೆಲ್ಲರೂ ಜನಾಂಗವೆಂದೆನಿಸಿಕೊಳ್ಳಲು ಯೋಗ್ಯರಿದ್ದಾರೆ.

ಸಂಸ್ಕೃತಿ ಎಂದರೆ ಮನಸ್ಸಿನ ಒಂದು ದಿವ್ಯ ವ್ಯವಸಾಯ. ಭೂವ್ಯವಸಾಯವು ಹೇಗೆ ಕೃಷಿಗಾರಿಕೆ ಎಂದೆನಿಸಲ್ಪಡುತ್ತದೋ ಅದೇ ರೀತಿ ಮಾನಸಿಕ ವ್ಯವಸಾಯವು ಸಂಸ್ಕೃತಿ ಎಂದೆನಿಸುವುದು. ಪ್ರಾಚೀನ ವೇದಕಾಲದಿಂದ ನಮ್ಮ ಪೂರ್ವಜರು ಮಾನಸಿಕ ವಿಕಾಸಕ್ಕೆ ವಿಶೇಷ ಲಕ್ಷ್ಯಕೊಟ್ಟಿರುವರು. ಪುರುಷರೆ ಮಾತ್ರವಲ್ಲ ಸ್ತ್ರೀಯರು ಕೂಡ ನಮ್ಮ ರಾಷ್ಟ್ರೀಯ ಸಂಸ್ಕೃತಿ ವಿಕಾಸಗೊಳಿಸಲು ತುಂಬಾ ಸಹಾಯಮಾಡಿರುವರು. ಸ್ತ್ರೀ ಸನ್ಯಾಸಿಯರು, ಮಹಾರಾಣಿಗಳು, ಕವಿಯತ್ರಿಯರು, ಮಹಿಳಾ ಮುಖಂಡೆಯರು ಅದೆಷ್ಟೋ ಮಂದಿ ನಮ್ಮ ದೇಶದಲ್ಲಿ ಬಾಳಿ ಬೆಳಗಿದ್ದರು.

ಸಂಸ್ಕೃತಿಯು ಭೌತಿಕ ಅಧಿಕಾರ ಶಕ್ತಿಗಳಿಗೆ ವಿಶೇಷ ಬೆಲೆಕೊಡುವುದಿಲ್ಲ. ಏಕೆಂದರೆ ಅದರಿಂದ ದ್ವೇಷಾಸೂಯೆಗಳೂ, ಭೇದ ಕಲಹಗಳೂ ಯುದ್ಧಗಳೂ ಉತ್ಪನ್ನವಾಗುತ್ತವೆ. ಪ್ರಾಚೀನರು ಹೃದಯ ಮತ್ತು ಮಾನಸಿಕ ಪರಿಶುದ್ಧತೆಗಾಗಿ ಶ್ರಮಿಸಿದರು; ಮನ ಮನಸ್ಸುಗಳನ್ನವರು ಅರಳಿಸಿದರು. ಶಾಂತಿ ಸಮೃದ್ಧಿ ಸ್ಥಾಪನೆಗವರು ಅವಿಶ್ರಾಂತ ದುಡಿದರು. ನಮ್ಮ ಪ್ರಾಚೀನ ಗ್ರಂಥ ಸಾಹಿತ್ಯಗಳಲ್ಲಿ ಪರಿಶೀಲಿಸಿದರೆ ಈ ಸಂಬಂಧವಾದ ಅನೇಕ ಆಧಾರಗಳು ಸಿಕ್ಕುತ್ತವೆ. ಈ ದೃಷ್ಟಿಯಿಂದ ನಮ್ಮ ಆಧುನಿಕ ಸಮಾಜದಲ್ಲಿ ಅದೆಷ್ಟೋ ಮೂಢತ್ವ ಮತ್ತು ಅಂಧಾಚಾರಗಳು ಇವೆಯೆಂಬ ಸಂಗತಿಯು ನಮಗೆ ತಿಳಿಯುವುದು. ನಮ್ಮ ಜನರು ಹಿಂದಿನ ಕಾಲದಿಂದಲೂ 'ಮಧು' (ಸಿಹಿತ್ವ, ಸತ್ಪರಿಸ್ಥಿತಿ) ಮತ್ತು 'ಶಾಂತಿ'ಗಾಗಿ ಅವರ್ಣನೀಯ ಯತ್ನ ವಹಿಸಿದ್ದಾರೆ. ಮುಖ್ಯವಾಗಿ ತರುಣ ಪ್ರಾಯದಲ್ಲೇ ಮನಸ್ಸಿನ ಸಾಂಸ್ಕೃತಿಕ ವ್ಯವಸಾಯ ಪ್ರಾರಂಭಿಸಬೇಕು. ನಮ್ಮ ರಾಷ್ಟ್ರೀಯ ಸಂಸ್ಕೃತಿಗೆ ಈಗಿನ ತರುಣ ತರುಣಿಯರು ಬಹಳ ಸಹಾಯವನ್ನು ಮಾಡಬಹುದಾಗಿದೆ.

ದಕ್ಷಿಣ ಭಾರತೀಯರ ಅಸಾಮಾನ್ಯ ಬುದ್ಧಿಶಕ್ತಿ

ಮಹಾತ್ಮರ ೨೦ನೇ ಶತಮಾನದ ಅದ್ಭುತ

ಆಂಗ್ಲ ಪತ್ರಿಕೋದ್ಯಮಿಯ ಶ್ಲಾಘನೆ

"ಭಾರತದಲ್ಲಿ ಗಾಂಧೀಜಿಯವರಂತಹರು ಮಾತ್ರ ಜನತೆಯ ಮನಾಕರ್ಷಣೆ ಮಾಡಿ ಮುಖಂಡರಾಗಬಲ್ಲರು. ಇಂದು ಅವರ ಪ್ರಭಾವ ಪ್ರತಿಷ್ಠೆಗಳು ಪರಮಾವಧಿಗೆ ಮುಟ್ಟಿವೆ." ಹೀಗೆಂದು ಟ್ಯಾಮ್ಸ್ ಪತ್ರಿಕೆಯ ಪೌರ್ವಾತ್ಯ ದೇಶಗಳ ಪ್ರತಿನಿಧಿಗಳಾದ ಮಿ। ಆಯನ್ ಮೋರಿಸನ್ ಅವರು ಮಲಯಾದಿಂದ ಕೊಟ್ಟ ಒಂದು ರೇಡಿಯೊ ಭಾಷಣದಲ್ಲಿ ತಿಳಿಸಿದರು. ಅವರು ತಿಳಿಸಿದ ಇನ್ನಿತರ ವಿಷಯಗಳ ಸಾರಸ್ಯವಾದ ಸಾರಾಂಶ ಹೀಗಿದೆ

ಭಾರತವು ಅದೆಷ್ಟು ವಿಶಾಲ ದೇಶ! ಅಲ್ಲಿನ ಜನ ವರ್ಗದಲ್ಲಿನ ವೈವಿಧ್ಯತೆಗಳೆಷ್ಟು ಇವೆ! ಚೀನಾ ಜಪಾನುಗಳಿಗಿಂತ ಈ ದೇಶ ಪಾಶ್ಚಿಮಾತ್ಯದಿಂದ ಬಹುದೂರವಿದೆ. ಆ ದೇಶದ ಇತಿಹಾಸದಲ್ಲಿನ ಒಂದು ಅತ್ಯುಜ್ವಲ ಘಟನೆ ನಡೆದಾಗ ನನಗಲ್ಲಿರುವ ಸುಯೋಗ ಒದಗಿತ್ತು ಮಾನವಕೋಟಿಯ ಐದನೇ ಒಂದಂಶ ಜನರಿಗೆ ಶತಮಾನಗಳ ದಾಸ್ಯಾಂಧಕಾರವು ಕಳೆದು ಹೋಗಿ ಸ್ವಾತಂತ್ರ್ಯದ ಸೂರ್ಯೋದಯವಾದ ಕಾಲವದು ಆದರೆ ಇದರೊಡನೆ ಬೀಕರ ಭ್ರಾತೃ ಕಲಹವೂ ಉಂಟಾಗಿ ಆ ದೇಶವನ್ನು ಅವರ್ಣನೀಯ ಸಂಕಷ್ಟಕ್ಕೀಡು ಮಾಡಿದುದೂ ಅತೀ ದುಃಖದ ಸಂಗತಿ

ಪೂಜ್ಯ ವ್ಯಕ್ತಿ

ನಾನು ಡಿಲ್ಲಿಗೆ ಮುಟ್ಟಿದೊಡನ ನಡಸಿದ ಕಾರ್ಯಕ್ರಮವೆಂದರೆ ಗಾಂಧೀಜಿಯ ಪ್ರಾರ್ಥನೆಗೆ ಹಾಜರಾದುದು. ಅದೊಂದು ರೋಮಾಂಚಕವಾದ ಅನುಭವ ಪ್ರಯಾಣ ಮಾಡುತ್ತಿರುವಾಗ ರೈಲಿನಲ್ಲೂ, ಇತರ ಸಮಯದಲ್ಲಿ ಬಹಿರಂಗ ಪ್ರವೇಶದಲ್ಲೂ ಗಾಂಧಿಯವರು ತಮ್ಮ ಪ್ರಾರ್ಥನಾಕೂಟ ನೆರವೇರಿಸುವರು ಅದೇ ಸಭೆಯಲ್ಲಿ ಅವರು ಅತಿ ಕಠಿಣ ರಾಜಕೀಯ ಸಮಸ್ಯೆಗಳ ಕುರಿತೂ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವರು ಅಲ್ಲದೆ ಅದರಲ್ಲಿ ಆರ್ಥಿಕ ವೈಜ್ಞಾನಿಕ ಮತ್ತು ಸಾಮಾಜಿಕ ವಿಷಯಗಳೂ ಇರುತ್ತವೆ

ಅಧ್ಯಾತ್ಮಿಕ ವಿವರಣೆಗಳಿಂದ ಕೂಡಿದ ರಾಜಕೀಯ ಸಮಸ್ಯಾ ಪರಿಹಾರಕ ನಿರೂಪಣೆಯ ಅವರ ಭಾಷಣಗಳು ವಿಚಿತ್ರ ರೀತಿಯವು ಅವರೂ ಹಾಗೆಯೆ ಸನ್ಯಾಸಿಯ ಅನಾಸಕ್ತ ಭಾವದ ರಾಜಕೀಯ ಮುತ್ಸದ್ದಿಗಳು.

ಕಲ್ಕತ್ತಾದ ಚಮತ್ಕೃತಿ

ಭಾರತದ ಜನತೆಯನ್ನು ಏಕೀಕರಿಸುವ ಸಾಮರ್ಥ್ಯ ಗಾಂಧಿಯವರಿಗಲ್ಲದೆ ಇತರರಿಗದು ಕಠಿಣ ಕೆಲಸ ಇಂದು ಅವರೊಬ್ಬರಿಂದಲೇ ಕೋಮುಕಲಹದ ಭೀಕರ ಕೃತಿಯು ತಡೆಹಿಡಿಯಲ್ಪಟ್ಟಿವೆ ಕಲ್ಕತ್ತದಲ್ಲಿ ಅವರು ಮಾಡಿದ್ದು ಇಪ್ಪತ್ತನೆ ಶತಮಾನದ ದೊಡ್ಡ ಚಮತ್ಕೃತಿಯಾಗಿದೆ ಮಿಲಿಯಾವಧಿ ಜನರ ಉದ್ವೇಗಗಳನ್ನು ತಡೆ ಹಿಡಿಯುವುದೆಂದರೆ ಕಲ್ಪನಾತೀತವಾದ ಸಂಗತಿ ಅವರು ಡಿಲ್ಲಿಯಲ್ಲಿರುವಾಗ ಒಬ್ಬೊಬ್ಬರಾಗಿ ಕೇಂದ್ರ ಸರಕಾರದ ವರಿಷ್ಠರೆಲ್ಲರೂ ತಮ್ಮ ಜರೂರಿನ ರಾಜ್ಯ ಕಾರ್ಯವನ್ನು ಬದಿಗಿಟ್ಟು ಅವರ ಉಪದೇಶ ಕೇಳಲು ಈ ವೃದ್ಧನ ಕಾಲಡಿಯಲ್ಲಿ ಬಂದು ಸೇರಿದರು.

ಸ್ವಾತಂತ್ರ್ಯ ಉತ್ಸವ

ಸ್ವಾತಂತ್ರ್ಯ ದಿನಾಚರಣೆ (ಆಗಸ್ಟ್ 15) ದಿವಸ ಡಿಲ್ಲಿಯಲ್ಲಿದ್ದವರಾರೂ ಅಂದಿನ ಸಂಭ್ರಮೋತ್ಸವಗಳ ವೈಭವವನ್ನು ಮರೆಯರು. ಅಂದು ಅಧಿಕಾರ ಸ್ಥಾನಾಂತರವಾಯಿತು. ಹೊಸ ಗವರ್ನರ್ ಜನರಲ್ಲರ, ಹೊಸ ಮಂತ್ರಿಗಳ ದೇಶಕ್ಕೆ ಪ್ರತಿಜ್ಞೆ ಸಲ್ಲಿಸುವ ಕಾರ್ಯಕ್ರಮಗಳು, ಮೆರವಣಿಗೆಗಳು ಸ್ಫೂರ್ತಿದಾಯಕವಾಗಿದ್ದುವು.

ಡಿಲ್ಲಿಯಲ್ಲಿ ಸ್ವತಂತ್ರ ಭಾರತದ ಧ್ವಜಾರೋಹಣವಾದಾಗ 5 ಲಕ್ಷ ಜನಸ್ತೋಮವು ಅದನ್ನು ವಂದಿಸಿತು ಅದಕ್ಕಿಂತ ದೊಡ್ಡ ಸಭೆಯನ್ನು ನಾನು ಕಂಡಿರಲಿಲ್ಲ ಅಂದು ನೆರೆದ ಜನರು ಅತ್ಯಂತ ಸ್ನೇಹಭಾವವನ್ನು ಪ್ರದರ್ಶಿಸಿದ್ದರು

ಕೊನೆಯ ವ್ಯಾಸರಾಯರೂ, ಪ್ರಥಮ ಗವರ್ನರ್ ಜನರಲ್ಲರೂ ಆದ ಲೋರ್ಡ್ ಮೌಂಟ್‌ಬೇಟನ್ನರು ಅತಿ ವಿಜೃಂಭಣೆಯಿಂದ ಸ್ವಾಗತಿಸಲ್ಪಟ್ಟರು. ಜನರು ಅವರ ಹಸ್ತಲಾಘವ ತೆಗೆದುಕೊಳ್ಳಲು ಪೋಲೀಸ್ ಬಂದೋಬಸ್ತನ್ನು ಮೀರಿಂದ ಬೇಲಿ ಮುರಿದು ಅವರ ಸಾರೋಟು ಕುದುರೆ ಗಾಡಿಯನ್ನು ಮುತ್ತಿದರು ಅವರಾದರೊ ಭಾರತದ ಪ್ರಥಮ ಸೇವಕರಂಗಿ ಜನರೊಡನೆ ಹೃತ್ಪೂರ್ವಕ ಸಂತೋಷದಿಂದ ಬೆರೆತು ಜನೋತ್ಸಾಹವನ್ನು ಮನ್ನಿಸಿದರು ಆ ಘರ್ಷಣೆಯಲ್ಲಿ ಸಿಕ್ಕಿ ಸಂಕಷ್ಟಕೊಳಗಾದ ಇರ್ವರ ಸ್ತ್ರೀಯರನ್ನು ಮೂರು ಮಕ್ಕಳನ್ನೂ ಅವರು ತಮ್ಮ ರಥದ ಮೇಲೆ ಕುಳ್ಳಿರಿಸಿ ತಾವು ಮೊಲ್ಪಂಪಿಸದಲ್ಲಿ ಕೂತರು

ಶ್ರದ್ಧಾವಂತ ಮುಖಂಡರು

ಈ ಆನಂದೋತ್ಸವದ ಹರ್ಷವು ಚಿರಕಾಲ ಬಾಳುವುದೆಂದು ಆಶಿಸಿದವರ ಹಾರೈಕೆಗೆ ಕೊಡಲಿ ಬಿದ್ದಂತೆ ಸ್ವಲ್ಪ ಸಮಯದಲ್ಲೇ ಭಾರತದಲ್ಲಿ ಭೀಕರ ಕೋಮುಕಲಹಾಗ್ನಿಯು ಹೊತ್ತಿಕೊಂಡಿತು ಅದರ ಕರುಣಾಜನಕ ದೃಶ್ಯವನ್ನು ವರ್ಣಿಸಲು ನನಗೆ ಮಾತುಗಳು ಬಾರವು.

ಸೆಪ್ಟಂಬರ ತಿಂಗಳಲ್ಲಿ ನಾನು ಭಾರತ ಮತ್ತು ಪಾಕಿಸ್ಥಾನಗಳ ಮುಖ್ಯ ಪ್ರಧಾನರುಗಳಾದ ನೆಹರು ಮತ್ತು ಲಿಯಾಖತ್ ಆಲಿ ಖಾನರೊಡನೆ ನಾನು ಪಂಜಾಬ ಸಂಚಾರ ಮಾಡಿದ್ದೆ ಈ ಇರ್ವ ಮಹನೀಯರು ಸಂಪೂರ್ಣ ಶ್ರದ್ಧಾವಂತ ಮುಖಂಡರಾಗಿದ್ದು ಶಾಂತಿ ಸ್ಥಾಪನೆಗೆ ಹೃತ್ಪೂರ್ವಕ ಪ್ರಯತ್ನಿಸುತ್ತಿರುವರೆಂದು ನಾನು ವಿಶ್ವಾಸದಿಂದ ಹೇಳಬಲ್ಲೆ

ಅವಿಶ್ರಾಂತ ನೆಹರು

ಸಂಚಾರ ಮಾಡಲು ನೆಹುರುರವರಿಗೆ ಸರಿಸಮಾನರಾರೂ ಇಲ್ಲ ಬೆಳಿಗ್ಗೆ ಎಂಟು ಗಂಟೆಗೆ ಅವರು ಪ್ರಯಾಣ ಪ್ರಾರಂಭಿಸಿದರೆ ರಾತ್ರೆ ಹತ್ತು ಗಂಟೆ ತನಕ ತಿರುಗುತ್ತಲೆ ಇದ್ದರೂ ಅವರಿಗೆ ತುಸುವಾದರೂ ದಣುವೆಂದೆನಿಸುವುದಿಲ್ಲ ಆ ಹೊತ್ತಿನೊಳಗೆ ಹತ್ತಿಪ್ಪತ್ತು ಸಭೆಗಳಲ್ಲಿ ಭಾಗವಹಿಸಿ ಅವರು ಹೃದಯಂಗಮವಾದ ಭಾಷಣಗಳಿಂದ ಜನತೆಯ ಉದ್ವೇಗವನ್ನು ತಣಿಸುವರು

ಮತ್ತೆ ವಾಸ ಸ್ಥಾನಕ್ಕೆ ಮರಳಿ ಬರುವಾಗ ಅವರ ದರ್ಶನಕ್ಕಾಗಿ ಕಾದು ನಿಲ್ಲುವ ವರಿಷ್ಠರು, ಅವರಿಗೆ ಬರುವ ತಂತಿ ವರ್ತಮಾನಗಳೆಷ್ಟು ಹೇಳತೀರದು ಹೀಗೆ ಅವರು ದುಡಿಯುತ್ತಿದ್ದರೆ ಅವರ ಆರೋಗ್ಯವು ಭಗ್ನವಾಗುವುದರಲ್ಲಿ ಸಂದೇಹವಿಲ್ಲವೆಂದು ಜನರಾಡಿಕೊಳ್ಳುತ್ತಿದ್ದಾರೆ. ನೆಹರುರವರ ಮೇಲೆ ನನಗೆ ಆದರಪೂರ್ವಕವಾದ ಮೆಚ್ಚುಗೆಯುಂಟಾಗಿದ್ದು ಅವರು ತಮ್ಮ ದೇಶದ ಗಹನವಾದೊಂದು ಸಮಸ್ಯೆಯನ್ನು ಬಿಡಿಸುವುದಕ್ಕೆ ಮಾಡುವ ಪ್ರಯತ್ನವು ಅಸಾಮಾನ್ಯವಾದುದು.

ದಕ್ಷಿಣದಲ್ಲಿ

ಉತ್ತರದ ಹಿಂದೂಸ್ಥಾನದ ಕೋಮು ಕಲಹದ ಪರಿಣಾಮವು ದಕ್ಷಿಣ ಭಾರತದಲ್ಲಿ ಸ್ವಲ್ಪವೂ ಪ್ರತಿಕ್ರಿಯೆಯನ್ನುಂಟು ಮಾಡದಿದ್ದದು ಒಂದು ಗಣನೀಯ ಸಂಗತಿ ದಕ್ಷಿಣದ ಮುಸಲ್ಮಾನರು ಅಲ್ಲಿನ ಬಹುಸಂಖ್ಯಾಕರಲ್ಲಿ ಸಂಪೂರ್ಣ ಬೆರೆತು ಹೋಗಿರುವರು

ದಕ್ಷಿಣದ ವೃತ್ತ ಪತ್ರಿಕೆಗಳಲ್ಲಿನ ಶಿರೋನಾಮಗಳು "ಭಾಷಾವಾರು ಪ್ರಾಂತ್ಯ ಜಮೀನ್ದಾರಿ ಸುಧಾರಣೆ, ಪಾನನಿರೋಧ, ಹರಿಜನೋದ್ಧಾರ" ಇವೇ ಮೊದಲಾದ ವಿಷಯಗಳನ್ನೇ ಪ್ರಚಾರಿಸುತ್ತವೆ ಅಲ್ಲಿನ ರಾಜಕೀಯದಲ್ಲಿ ಅಸಂಖ್ಯಾತ ಭೇಧಾಭಿಪ್ರಾಯಗಳಿವೆ ಮಿತಿ ಮೀರಿ ಆಗದಿರುವ ತನಕ ಇವು ಕೆಡುಕಲ್ಲ

ಬ್ರಿಟಿಷ್ ಆಳ್ವಿಕೆಯನ್ನು ಕೊನೆಗಾಣಿಸಲು ಭಾರತದೆಲ್ಲಾ ಜನ ವರ್ಗದವರೂ, ರಾಜಕೀಯ ಪಕ್ಷಗಳೂ ಐಕ್ಯ ಗೊಂಡದ್ದು ಮತ್ತೊಂದು ವಿಶೇಷ ಸಂಗತಿ ಈಗ ಆ ಹೋರಾಟವು ಅಂತ್ಯವಾಗಿದ್ದು ಅದರೊಡನೆ ಐಕ್ಯತೆಗೂ ಭಂಗವುಂಟಾಯಿತು

ಬುದ್ಧಿ ವೈಶಿಷ್ಟ್ಯ

ಇಂದು ದಕ್ಷಿಣ ಭಾರತದಲ್ಲಿ ಅನೇಕ ರಾಜಕೀಯ ಪಕ್ಷಗಳು (ಬಂಡವಾಳಶಾಹಿ ಪಕ್ಷದಿಂದ ಕಮ್ಯೂನಿಸ್ಟರ ತನಕ) ರಾಜಕೀಯ ಅಧಿಕಾರಕ್ಕಾಗಿ ಸೆಣಸಾಡುತ್ತಿವೆ. ಮಲಬಾರಿನಲ್ಲಿ ಕಮ್ಯೂನಿಸ್ಟರ ಪ್ರಭಾವವು ಶಕ್ತಿಯುಕ್ತವಾಗಿದೆ. ತಮಿಳು, ಆಂಧ್ರ ಮಲೆಯಾಳ ಮತ್ತು ಕರ್ನಾಟಕ ಎಂಬ ನಾಲ್ಕು ಭಾಷಾವಾರು ಪ್ರಾಂತ್ಯಗಳಾಗಬೇಕೆಂಬ ಚಳವಳವು ಅಲ್ಲಿ ಭರದಿಂದ ನಡೆಯುತ್ತಿದೆ ಈ ಮಧ್ಯದಲ್ಲಿ ಹಿಂದಿನ ಬ್ರಾಹ್ಮಣ ಅಬ್ರಾಹ್ಮಣ ಕಚ್ಚಾಟವೂ ಆಗಾಗ ಅಲ್ಲಿ ತಲೆಯೆತ್ತುತ್ತದೆ

ಇಷ್ಟಾದರೂ ದಕ್ಷಿಣ ಭಾರತವು ಸುಂದರ ಪ್ರದೇಶ. ಅಲ್ಲಿನ ಪ್ರಕೃತಿ ಸೌಂದರ್ಯವು ಚಿತ್ತೋಲ್ಲಾಸಕರವಾಗಿದೆ ಅಲ್ಲಿಯ ಜನರು ಸ್ನೇಹಭಾವದವರಾಗಿದ್ದು ಬಿಳಿ ಪ್ರೇಕ್ಷಕರನ್ನು ತುಂಬಾ ಮೆಚ್ಚುತ್ತಾರೆ ದಕ್ಷಿಣ ಭಾರತದ ಜನರು ವಿಶೇಷ ಬೌದ್ಧಿಕ ಶಕ್ತಿ ಸಾಮರ್ಥ್ಯವರಾಗಿದ್ದಾರೆ ಉತ್ತರ ಹಿಂದೂಸ್ಥಾನದಲ್ಲೂ ದೊಡ್ಡ ದೊಡ್ಡ ಅಧಿಕಾರಿ ಹುದ್ದೆಯಲ್ಲೂ ಸೈನ್ಯದಲ್ಲೂ ಅವರು ಕಾಣಸುವರು

ಆದರ್ಶ

ದಕ್ಷಿಣದಲ್ಲಿ ಜನನಿಬಿಡತೆ ಅತಿರೇಕವಾಗಿದೆ. ಅಲ್ಲಿನ ಜನರು ಕಷ್ಟಾ ಸಹಿಷ್ಣು ಬಡವರೂ, ನಿಕೃಷ್ಟ ಪೋಷಣೆಯವರೂ, ಅತೀ ಕಡಿಮೆ ಪೋಷಾಕಿನವರೂ ಆಗಿರುವರು ದಕ್ಷಿಣಿಗಳು ತಮ್ಮೊಳಗಿನ ವ್ಯತ್ಯಾಸಗಳನ್ನು ಬಗೆಹರಿಸಿ ಸಾಮರಸ್ಯದಿಂದಿರುವುದಾದರೆ ಅದು ಉತ್ತರ ಹಿಂದೂಸ್ಥಾನದವರಿಗೆ ಅಮೋಘ ಆದರ್ಶವಾಗುವುದು. ಹೀಗೇ ಇಡೀ ಭಾರತದ ಜನರು ವರ್ತಿಸಿದರೆ ಅದು ಇಡೀ ಜಗತ್ತಿಗೇ ಆದರ್ಶವಾಗುವುದರಲ್ಲಿ ಸಂದೇಹವಿಲ್ಲ.

1948 ಶಾರದಾ 1948
ಡೈರಿ
ಮತ್ತು
ಕೆಲೆಂಡರುಗಳು
ಮಾರಾಟಕ್ಕೆ ಸಿದ್ಧವಾಗಿವೆ.



ಕೂಸಿನ ಮೈ ತಂಪಗಿಡುವ
ದಗ್ಗನ್ನು ನಿವಾರಿಸುವ
ತಾಯಂದಿರೂ ಕೂಡ ಉಪಯೋಗಿಸುತ್ತಾರೆ.
ಸುಗಂಧಿತ ರೇಶ್ಮೆ ನುಣ್ಣಗಿರುವ ಈ ಪೌಡರು ಎಳೆ ಚರ್ಮವನ್ನು ನುಣ್ಣಗೆ ಮತ್ತು ಶುಭ್ರವಾಗಿಡುತ್ತದೆ. ಅಲಂಕಾರಲಾಲಸೆಯ ಸ್ತ್ರೀಯರೂ ಇದನ್ನು ಉಪಯೋಗಿಸುತ್ತಾರೆ.
558
ಕುಟಿಕೂರಾ ಟಾಲ್ಕಮ್ ಪೌಡರ್
CUTICURA TALCUM POWDER

ಸ್ವದೇಶಾಭಿಮಾನಿ

ತಾರೀಕು 19-12-1947

ನಿಯಂತ್ರಣ ತೆಗೆಯುವ ಧೋರಣೆ

ಆಹಾರ ಧಾನ್ಯಗಳ ಮೇಲಿನ ನಿಯಂತ್ರಣವನ್ನು ತೆಗೆದುಹಾಕಬೇಕೆಂದೇ ಕೇಂದ್ರ ಸರಕಾರದವರು ನಿರ್ಣಯಿಸಿರುವರು. ನಿಯಂತ್ರಣಗಳನ್ನು ಜಾರಿಗೆ ತಂದ ಕ್ರಮವನ್ನು ತಿರುಗಿಸಿ ನಿಯಂತ್ರಣಗಳನ್ನು ತೆಗೆದುಹಾಕಲಾಗುವುದು. ಅಂದರೆ ಆರಂಭದಲ್ಲಿ ಎಲ್ಲಿ ನಿಯಂತ್ರಣ ಹಾಕಲಾಯಿತೊ ಅಲ್ಲಿ ನಿಯಂತ್ರಣ ಹೋಗುವುದು ಎಲ್ಲಕ್ಕೂ ಕೊನೆಗೆ. ಇತ್ತೀಚೆಗೆ ನಿಯಂತ್ರಣ ಜಾರಿಗೆ ತಂದ ಪ್ರದೇಶಗಳಲ್ಲಿ ಮೊದಲಾಗಿ ಅದನ್ನು ತೆಗೆದುಹಾಕಲಾಗುವುದು. ಅಂತೂ ಎಲ್ಲೆಡೆಗೆ ಒಂದೇ ಸಾರಿ ತೆಗೆದುಹಾಕದೆ ಕ್ರಮೇಣ ನಿಯಂತ್ರಣ ನಿಲ್ಲಿಸಲಾಗುತ್ತದೆ.

ಕೇಂದ್ರ ಶಾಸನ ಸಭೆಯಲ್ಲಿ ಈ ಕುರಿತು ತೀಕ್ಷ್ಣ ಭಿನ್ನಾಭಿಪ್ರಾಯಗಳು ವ್ಯಕ್ತಗೊಳಿಸಲ್ಪಟ್ಟವು. ಕೆನಡಾ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ನಿಯಂತ್ರಣಗಳನ್ನು ಇನ್ನೂ ತೆಗೆದಿಲ್ಲ. ಅಮೇರಿಕದಲ್ಲಿ ಕೂಡಾ ಒಮ್ಮೆ ತೆಗೆದ ನಿಯಂತ್ರಣ ಪುನಃ ಹಾಕಲು ಯತ್ನಿಸುವಂತಿದೆ. ಹೀಗಿರುವಾಗ ಆಹಾರ ಧಾನ್ಯ ಇಲ್ಲಿಯ ಜನರಿಗೆ ಬೇಕಾಗುವುದಕ್ಕಿಂತ ಕಡಮೆ ಇರುವ ಈ ಪರಿಸ್ಥಿತಿಯಲ್ಲಿ ನಿಯಂತ್ರಣ ತೆಗೆಯುವುದೆಂದರೆ ಹುಚ್ಚುತನವೆಂದೇ ಪಂಡಿತ ಹೃದಯನಾಥ ಕುಂಜ್ರು ಮೊದಲಾದವರು ಬಲವತ್ತರವಾಗಿ ವಾದಿಸಿದರು.

ಆಹಾರ ಖಾತೆಯ ಸಚಿವ ಡಾ। ರಾಜೇಂದ್ರ ಪ್ರಸಾದರು ಈ ಧೋರಣೆಯನ್ನು ಏತಕ್ಕೆ ಕೈಕೊಳ್ಳಲಾಯಿತೆಂಬುದನ್ನು ವಿವರಿಸಿದರು. ಯುದ್ಧ ಕಾಲದಲ್ಲಿ ಜಾರಿಗೆ ತಂದ ನಿಯಂತ್ರಣಗಳನ್ನು ಯುದ್ಧ ಮುಗಿದ ಬಳಿಕ ತೆಗೆದು ಹಾಕಲು ಸಾಧ್ಯವಾಗಲಿಲ್ಲ ಬೆಳೆ ಹಾಳಾಗಿ ಮೇಲಿಂದ ಮೇಲೆ ಆಹಾರದ ಉತ್ಪತ್ತಿ ಕಡಮೆಯಾಗುತ್ತ ಹೋದುದರಿಂದ ನಿಯಂತ್ರಣ ತೆಗೆಯುವ ಬದಲು ಅದನ್ನು ಬಲಪಡಿಸುತ್ತ ಹೋಗಬೇಕಾಯಿತು ಆರಂಭದಲ್ಲಿ ಎಷ್ಟು ಮಂದಿಗಾಗಿ ರೇಶನ್ ಜಾರಿಗೆ ತರಲಾಗಿತ್ತೊ ಆ ಸಂಖ್ಯೆ ವರ್ಷದಿಂದ ವರುಷಕ್ಕೆ ಏರುತ್ತ ಹೋಯಿತು. ಇಷ್ಟೆಲ್ಲ ಮಂದಿಗೆ ಆಹಾರ ಒದಗಿಸುವ ಜವಾಬ್ದಾರಿ ಸರಕಾರ ಹೊರಬೇಕಾಯಿತು. ಇದಕ್ಕಾಗಿ ಪರರಾಷ್ಟ್ರಗಳಿಂದ ಆಹಾರ ತರಿಸದೆ ನಿವೃತ್ತಿ ಇಲ್ಲ. ಎಲ್ಲೆಲ್ಲಿಂದ ತರಿಸಲು ಸಾಧ್ಯವೊ ಅಲ್ಲಿಂದೆಲ್ಲ ಅಕ್ಕಿ ಗೋದಿ ಹಾಗೂ ಜೋಳ ತರಿಸಲಾಯಿತು. ಈ ಪರರಾಷ್ಟ್ರಗಳಾದರೋ ನಮಗೆ ಒದಗಿಸುವ ಈ ಧಾನ್ಯಗಳಿಗೆ ಕ್ರಯ ಏರಿಸುತ್ತ ಹೋಗುತ್ತಿವೆ. ಕೇಂದ್ರ ಸರಕಾರವು ಹೆಚ್ಚು ಬೆಲೆ ಕೊಟ್ಟು ಈ ಧಾನ್ಯಗಳನ್ನು ತರಿಸಿತು. ದೇಶದೊಳಗಿನ ಧಾನ್ಯಗಳಿಗೆ ಯಾವ ಬೆಲೆ ನಿಲ್ಲಿಸಲಾಗಿತ್ತೊ ಅದೇ ಬೆಲೆಗೆ ಈ ಆಮದು ಮಾಡಿದ ಧಾನ್ಯಗಳನ್ನು ಮಾರದೆ ಉಪಾಯವಿಲ್ಲ. ಇದರಲ್ಲಿ ಬಂದ ನಷ್ಟ ಸರಕಾರ ವಹಿಸಬೇಕಾಯಿತು. ಹೀಗೆ ಈ ವರ್ಷ ತಾಳಿಕೊಳ್ಳಬೇಕಾದ ನಷ್ಟ 22½ ಕೋಟಿ ರೂಪಾಯಿ.

ಆಮದು ಮಾಡುತ್ತ ಹೋಗುವುದಾದರೂ ಸುಲಭವಿಲ್ಲ. ಇಡೀ ಜಗತ್ತಿನಲ್ಲಿ ಆಹಾರ ಕಡಮೆಯಾಗಿದೆ. ನಾವು ನಮಗೆ ಬೇಕೆಂದು ಕೇಳಿದ ಪ್ರಮಾಣದ ಶೇಕಡಾ 50ರಷ್ಟು ನಮಗೆ ಸಿಕ್ಕಲು ಕಷ್ಟವಾಗುತ್ತದೆ. ಇದಕ್ಕೆ ಕೊಡಲು ಹಣವಾದರೂ ಇಲ್ಲ. ಪರರಾಷ್ಟ್ರಗಳಿಂದ ತರಿಸುವಾಗ ಅವರಿಗೆ ಡಾಲರ್ ರೂಪದಲ್ಲಿ ಕ್ರಯ ಕೊಡಬೇಕು. ಬ್ರಿಟಿಷರು ಈ ಬಗ್ಗೆ ನಮಗೆ ಅವರ ಸಾಲದ ಬಾಬ್ತು ಒದಗಿಸಿದ ಡಾಲರುಗಳಿಂದಲೇ ಈ ವ್ಯಾಪಾರ ನಡೆಯಬೇಕು. ಅಥವಾ ನಮ್ಮಲ್ಲಿಂದ ಮಾಲು ರಫ್ತು ಮಾಡಿ ಬರತಕ್ಕ ಮೌಲ್ಯದಿಂದಾಗಿ ಆಹಾರ ಧಾನ್ಯಗಳ ಕ್ರಯ ಪಾವತಿಯಾಗಬೇಕು. ಇವೆರಡು ಬಗೆಯಿಂದಲೂ ನಮ್ಮೊಡನಿರುವ ಡಾಲರುಗಳನ್ನೆಲ್ಲ ಆಹಾರ ಧಾನ್ಯಗಳಿಗೆ ಮಾತ್ರ ಕೊಡುತ್ತ ಹೋಗುವುದಾದರೂ ಸರಿಯಲ್ಲ ದೇಶದ ಉತ್ಪತ್ತಿ ಹೆಚ್ಚಿಸಲು ಬೇಕಾಗುವ ಯಂತ್ರೋಪಕರಣ ಇತ್ಯಾದಿ ತರಿಸದೆ ನಿವೃತ್ತಿ ಇಲ್ಲ.

ಇಂಥ ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತ ಹೋಗುತ್ತಿದೆ ಒಂದಲ್ಲ ಒಂದು ದಿನ ಸಾಕಷ್ಟು ಆಹಾರ ಧಾನ್ಯ ತರಿಸಲು ಕಷ್ಟವಾಗಿ ರೇಶನಿನವರಿಗೆ ಅಕ್ಕಿ ಕೊಡಲು ಅಸಾಧ್ಯವಾಗಿ ನಮ್ಮ ರೇಶನ್ ಪದ್ಧತಿ ಮುರಿದುಬೀಳುವುದು ಖಂಡಿತ ಹೀಗಿರುವಾಗ ಸರಕಾರಕ್ಕೆ ಅಸಾಧ್ಯವಾಗಿ ಕೈಮೀರಿದ ಪರಿಸ್ಥಿತಿ ಬಂದು ರೇಶನ್ ಪದ್ಧತಿ ಮುರಿದು ಬಿದ್ದಲ್ಲಿ ಜನರು ಸಾಯುವ ಭಯಂಕರ ಪರಿಸ್ಥಿತಿ ಬರುವ ಸಂಭವವುಂಟು ಇದಕ್ಕೆ ಬದಲು ನಾವೇ ಈಗ ನಿಯಂತ್ರಣ ಹಾಗೂ ರೇಶನ್ ಪದ್ಧತಿಗಳನ್ನು ಸಡಲಿಸಿ ಕ್ರಮೇಣ ಜನರನ್ನು ಈ ವಿಚಾರಗಳಲ್ಲಿ ಸ್ವತಂತ್ರಗೊಳಿಸುವುದೇ ಹಿತಕರ. ಈಗ ಪರಿಸ್ಥಿತಿ ಸರಕಾರದ ಹತೋಟಿಯಲ್ಲಿರುವಾಗಲೇ ಈ ಧೋರಣೆ ಕೈಕೊಳ್ಳುವುದು ಹಿತಕರವೆಂದು ಡಾ। ರಾಜೇಂದ್ರ ಪ್ರಸಾದರು ಬಲವತ್ತವಾಗಿ ವಾದಿಸಿದರು

ನಿಯಂತ್ರಣ ಹಾಗೂ ರೇಶನ್ ಬಗ್ಗೆ ಏರ್ಪಡಿಸಿದ ಶಿಬಂದಿ ಇತ್ಯಾದಿ ಈಗ ತೆಗೆಯುವುದಿಲ್ಲ ಒಂದೊಂದೇ ಹೆಜ್ಜೆಯಾಗಿ ನಿಯಂತ್ರಣ ತೆಗೆಯುವಾಗ ಯಾವ ಪರಿಣಾಮವಾಗುತ್ತದೆಂದು ಸರಕಾರ ಜಾಗರೂಕತೆಯಿಂದ ಪರಿಶೀಲಿಸುತ್ತಿರುವುದು. ನಿಯಂತ್ರಣ ತೆಗೆಯುವುದರಿಂದ ಗಂಡಾಂತರ ಬರುತ್ತದೆಂದು ಕಂಡುಬಂದರೆ ಕೂಡಲೆ ಅದನ್ನು ಪುನಃ ಜಾರಿಗೆ ತರಲು ಶಿಬಂದಿ ಎಲ್ಲ ಇಟ್ಟುಕೊಳ್ಳುವುದರಿಂದ ಕಷ್ಟವಾಗುವಂತಿಲ್ಲ. ನಿಯಂತ್ರಣ ಹೋಗುತ್ತಿದೆ ರೇಶನ್ ಹೋಗುತ್ತಿದೆ ಎಂದು ಪ್ರಜೆಗಳು ಗಾಬರಿಗೊಳ್ಳಲು ಏನೂ ಕಾರಣವಿಲ್ಲ. ಇದಕ್ಕೆ ಬದಲು ಎಲ್ಲರೂ ಈ ಧೋರಣೆಯಲ್ಲಿ ಸಹಕರಿಸಿ ಇದನ್ನು ಯಶಸ್ವಿಗೊಳಿಸುವುದೇ ಅಗತ್ಯವೆಂದರು.

ಆಹಾರ ಧಾನ್ಯಗಳ ಉತ್ಪತ್ತಿ ಮಾಡುವವರು ಆದಷ್ಟು ಹೆಚ್ಚು ಬೆಳೆಸಿ ನ್ಯಾಯವಾದ ಬೆಲೆಗೆ ಒದಗಿಸಬೇಕು. ವ್ಯಾಪಾರಿಗಳು ಆಹಾರ ಧಾನ್ಯಗಳನ್ನು ಕೊಂಡು ನ್ಯಾಯವಾದ ಬೆಲೆಗೆ ಮಾರಬೇಕಲ್ಲದೆ ಇದರಲ್ಲಿ ವಿಪರೀತ ಲಾಭ ಮಾಡುವ ಹವ್ಯಾಸ ಕಟ್ಟಿಕೊಳ್ಳಬಾರದು. ಆಹಾರ ಉಪಯೋಗಿಸುವವರಾದರೂ ತಮಗೆ ನ್ಯಾಯವಾಗಿ ಬೇಕಾಗುವುದಕ್ಕಿಂತ ಹೆಚ್ಚಿಗೆ ಸಂಗ್ರಹಿಸಿಡುವ ಅಭಿಲಾಷೆ ಇಟ್ಟುಕೊಳ್ಳಬಾರದು. ಈ ರೀತಿ ಎಲ್ಲರೂ ಸಹಕರಿಸಿದರೆ ಯಾವ ತೊಂದರೆಯೂ ಆಗುವಂತಿಲ್ಲವೆಂದು ರಾಜೇಂದ್ರ ಬಾಬುಗಳು ವಿನಂತಿ ಮಾಡಿಕೊಂಡರು.

ಇನ್ನು ನಿಯಂತ್ರಣಗಳನ್ನು ನಡೆಸುವುದಾದರೂ ಸರಕಾರಕ್ಕೆ ಸಾಧ್ಯವಿರುವಂತೆ ಕಾಣುವುದಿಲ್ಲ. ಮಹಾತ್ಮಾ ಗಾಂಧಿಯವರು ನಿಯಂತ್ರಣ ತೆಗೆಯಬೇಕೆಂದು ಗರ್ಜಿಸುವಾಗ ನಾವಾದರೂ ಅದನ್ನು ಹೇಗೆ ಜಾರಿಗೆ ತರಲು ಸಾಧ್ಯವಿದೆ? ಆದರೆ ಗಾಂಧೀಜಿಯವರ ಜೊತೆಯಲ್ಲಿ ಕಳೆದ 30 ವರ್ಷ ಕೆಲಸ ಮಾಡಿದ ಅನುಭವದಲ್ಲಿ ಅವರ ಹೃದಯದಿಂದ ಅವರು ಕಂಡುಕೊಳ್ಳುವ ತೀರ್ಮಾನಗಳು ನಮ್ಮೆಲ್ಲರ ತರ್ಕಗಳಿಗಿಂತ ಹೆಚ್ಚು ಸರಿಯಾಗುತ್ತವೆಂಬುದನ್ನು ನಾನು ಕಂಡಿದ್ದೇನೆ ಈ ಬಾರಿ ಕೂಡಾ ಅವರು ಸಾರಲಾರಂಭಿಸಿದ ಈ ನಿಯಂತ್ರಣವಿರುದ್ಧ ಧೋರಣೆಯಿಂದ ದೇಶಕ್ಕೆ ಹಿತವೇ ಆಗುವುದೆಂಬ ವಿಶ್ವಾಸ ನನ್ನಲ್ಲಿದೆ ನಿಯಂತ್ರಣಗಳು ಇದು ವರೆಗೆ ಉಪಯುಕ್ತ ಸೇವೆಯನ್ನೇ ಸಲ್ಲಿಸಿವೆ. ಮುಂದೆ ಅವುಗಳಿಂದ ತೊಂದರೆಯಾಗುವ ಸಂಭವವೇ ಹೆಚ್ಚು ಎಂದು ರಾಜೇಂದ್ರ ಬಾಬುಗಳು ತಮ್ಮ ನಿಜವಾದ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು

ಕೇಂದ್ರ ಸರಕಾರದ ಈ ಧೋರಣೆ ಅನುಸರಿಸುವಂತೆ ಎಲ್ಲ ಪ್ರಾಂತಿಕ ಸರಕಾರಗಳಿಗೆ ತಿಳಿಸಲಾಗಿದೆ ಇದಕ್ಕನುಗುಣವಾಗಿ ನಮ್ಮ ಮದ್ರಾಸು ಸರಕಾರದವರು ತಮ್ಮ ಕಾರ್ಯಕ್ರಮ ವಿವರಿಸಿದ್ದಾರೆ

ಪ್ರಾಂತ್ಯದಲ್ಲಿ ದತ್ತಮಂಡಲವೆನ್ನಿಸುವ ರಾಯಲ್ ಸೀಮಾ ಪ್ರದೇಶದಲ್ಲಿ ಕೂಡಲೆ ನಿಯಂತ್ರಣ ತೆಗೆಯಲಾಗುವುದು ಇದು ಮೊದಲ ಮೆಟ್ಟಲು ಎರಡನೆಯದಾಗಿ ತಮಗೆ ಬೇಕಾಗುವುದಕ್ಕಿಂತ ಹೆಚ್ಚು ಬೆಳೆಸುವ ಜಿಲ್ಲೆಗಳಲ್ಲಿ ನಿಯಂತ್ರಣ ನಿಲ್ಲಿಸಲಾಗುತ್ತದೆ. ಇದೇ ಸಮಯ ಮಲಬಾರು ಜಿಲ್ಲೆ ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಹಳ್ಳಿ ಪ್ರದೇಶಗಳಲ್ಲಿ ರೇಶನ್ ಪದ್ಧತಿ ನಿಲ್ಲಿಸಲಾಗುವುದು ಮತ್ತು ಮಲಬಾರಿನ ಹಳ್ಳಿಗಳಲ್ಲಿ ಕಾನೂನು ಪ್ರಕಾರ ನಡೆಯುವ ರೇಶನ್ ಬದಲಿಗೆ ಖಾಸಗಿ ರೇಶನ್ ಪದ್ಧತಿ ತರಲಾಗುವುದು ಇದು ಎರಡನೆ ಮೆಟ್ಟಲು. ಕೊನೆಗೆ ಮೂರನೆ ಮೆಟ್ಟಲಾಗಿ ಉಳಿದೆಡೆಗಳಲ್ಲಿ ನಿಯಂತ್ರಣ ಹಾಗೂ ರೇಶನ್ ನಿಲ್ಲಿಸಲಾಗುತ್ತದೆ ಸುಮಾರು 1948ನೇ ಅಕ್ಟೋಬರದಷ್ಟಕ್ಕೆ ನಿಯಂತ್ರಣ ಪೂರ್ಣ ತೆಗೆಯಲು ಸಾಧ್ಯವಾಗಬಹುದೆಂದು ಊಹಿಸಲಾಗುತ್ತಿದೆ.

ಟೀಕೆ-ಟಿಪ್ಪಣಿಗಳು

ಅಕ್ಕಿಯ ಬೆಲೆ ಏರಿಸಿದ ವಿಚಾರ

ಅಕ್ಕಿಯ ಬೆಲೆ ಏರಿಸಿದಾಗ ಅದನ್ನು ಉಪಯೋಗಿಸುವವರಿಗೆ ಮಾರುವಾಗ ನಷ್ಟ ಬಂದಲ್ಲಿ ಕೇಂದ್ರ ಸರಕಾರವು ಒಂದಂಶ ಕೊಡುವುದಾಗಿ ನಾವು ಕಳೆದ ಬಾರಿ ಹೇಳಿದ್ದೇವಷ್ಟೆ. ಇದು ಸರಿಯಲ್ಲವೆಂದು ಮತ್ತೆ ಪುನಃ ಪ್ರಕಟವಾಗಿರುತ್ತದೆ. ಕೇಂದ್ರ ಸರಕಾರಕಾರವು ಹೀಗೆ ಏರಿದ ಬೆಲೆಯಲ್ಲಿ ಯಾವ ಅಂಶವನ್ನೂ ತಾನು ಹೊರಲು ಸಿದ್ಧವಿಲ್ಲವೆಂದೇ ತಿಳಿಸಿಯದೆ. ಈ ಪರಿಸ್ಥಿತಿಯಲ್ಲಿ ಏರಿದ ಬೆಲೆಯನ್ನು ಪ್ರಾಂತಿಕ ಸರಕಾರವೇ ಹೊರ ಬೇಕೆಂದು ನಾವಾದರೂ ಒತ್ತಾಯಪಡಿಸಲು ನ್ಯಾಯವಿಲ್ಲ.

ಬೆಳೆ ಹೆಚ್ಚು ಬೆಳೆಸಿದವರಿಗೆ ಬೋನಸ್ಸು ಕೊಡುವುದಕ್ಕೆ ಮಾತ್ರ ಕೇಂದ್ರ ಸರಕಾರವು ಹಣ ಕೊಡುವುದಾಗಿ ಪ್ರಕಟಿಸಿರುತ್ತದೆ. ಇದರ ಪೂರ್ಣ ಉಪಯೋಗವನ್ನು ನಮ್ಮ ರೈತರು ಮಾಡಿಕೊಳ್ಳುವರೆಂದು ಆಶಿಸುತ್ತೇವೆ ಇನ್ನು ಮುಂದೆ ನಿಯಂತ್ರಣ ರೇಶನುಗಳು ಹೇಗೂ ಹೋಗುತ್ತವೆಂಬುದರಿಂದ ಸದ್ಯಕ್ಕೆ ಬೆಲೆಯ ಪ್ರಶ್ನೆಯು ಕೇವಲ ತಾತ್ಕಾಲಿಕವಿದ್ದು ಇದಕ್ಕೆ ಇನ್ನು ಮಹತ್ವ ಉಳಿದಿಲ್ಲವೆಂಬುದರಿಂದ ಈ ವಿಚಾರವನ್ನು ನಾವಿಲ್ಲಿಗೇನೆ ಬಿಟ್ಟುಬಿಡಬಹುದು.

ಸಕ್ಕರೆ ಕ್ರಯದ ವಿಚಾರ

ಸಕ್ಕರೆ ಕ್ರಯ 84 ರಾತ್ಲುಗಳ ಮಣ ಒಂದಕ್ಕೆ ರೂ 35ರಷ್ಟಕ್ಕೆ ನಿಲ್ಲಿಸಿದ ಬಗ್ಗೆ ನಾವು ಆಕ್ಷೇಪ ಹೇಳಿತ್ತಷ್ಟೆ. ಇದು ಈಗಿನ ಪರಿಸ್ಥಿತಿಯಲ್ಲಿ ನ್ಯಾಯವಾದ ಕ್ರಯವೆಂದೇ ಡಾ। ರಾಜೇಂದ್ರ ಪ್ರಸಾದರು ಸಾಧಿಸುತ್ತಿದ್ದಾರೆ. ಅಂತೂ ಕ್ರಯಗಳು ವಿಪರೀತ ಏರದಂತೆ ಈಗ ಸಕ್ಕರೆ ಕಾರ್ಖಾನೆಗಳಲ್ಲಿರುವ ಸಕ್ಕರೆಯನ್ನು ಮಾರಾಟ ಮಾಡಲು ಪ್ರತಿಬಂಧಕ ಆಜ್ಞೆಯನ್ನು ಕೇಂದ್ರ ಸರಕಾರವು ಜಾರಿಗೆ ತಂದಿರುತ್ತದೆ. ಅಂತೂ ಮುಂದೆ ಕ್ರಯಗಳು ಕಪ್ಪು ಸಂತೆಯ ಕ್ರಯಗಳಷ್ಟಕ್ಕೆ ಏರದಿದ್ದರೂ ಕಂಡು ಭಣ್ಣದಷ್ಟಕ್ಕೆ ಏರದೆ ನಿವೃತ್ತಿ ಇಲ್ಲವೆಂದು ಡಾ। ರಾಜೇಂದ್ರ ಬಾಬುಗಳು ಎಚ್ಚರಿಕೆ ಕೊಟ್ಟಿರುವುದು ಒಳ್ಳೆಯದೇ ಆಯಿತು

ಮಾಲು ಉತ್ಪತ್ತಿದಾರರಿಗೆ ಈ ಪರಿಸ್ಥಿತಿಯಿಂದ ಪ್ರೋತ್ಸಾಹ ದೊರೆತು ಅವರು ಮಾಲುಗಳನ್ನು ಹೆಚ್ಚಿಗೆ ಬೆಳೆಸಿದಂತೆ ಕ್ರಯಗಳು ಸಹಜವಾಗಿ ಕಡಮೆಯಾಗುವ ಪ್ರಸಂಗ ಬರುವುದೆಂಬ ವಿಶ್ವಾಸದಿಂದ ನಾವು ತೃಪ್ತರಾಗಬೇಕಾಗಿದೆ.

ಬರ್ಮಾ ಸ್ವಾತಂತ್ರ್ಯ

ಬ್ರಿಟಿಷ ಸರಕಾರವು ಬರ್ಮಾ ದೇಶದ ಆಡಳಿತೆಯನ್ನೂ ಅಲ್ಲಿಯ ಪ್ರಜೆಗಳಿಗೆ ಬಿಟ್ಟು ಕೊಡಲು ನಿರ್ಧರಿಸಿದ ಮಸೂದೆಗೆ ಬ್ರಿಟಿಷ ಚಕ್ರವರ್ತಿಯವರ ಒಪ್ಪಿಗೆ ದೊರೆತು ಇದು ಮಂಜೂರಾಗಿರುತ್ತದೆ.

ಯುದ್ಧ ಕಾಲದಲ್ಲಿ ಬ್ರಿಟಿಷರ ಕೈತಪ್ಪಿ ಯುದ್ಧಾಂತ್ಯದಲ್ಲಿ ಪುನಃ ಬ್ರಿಟಿಷರ ಆಡಳಿ

ಎನ್. ಜಿ. ಓ. ಮುಷ್ಕರ

ಸರಕಾರೀ ನೌಕರರಲ್ಲಿ ಮೂರು ಬಗೆಯ ಭಾಗಗಳಿವೆ. ಗಜೆಟೆಡ್ ನೌಕರರೆಂದರೆ ದೊಡ್ಡ ಹುದ್ದೆಗಳಲ್ಲಿರುವ ಕಲೆಕ್ಟರರು, ಡಿಪ್ಯೂಟಿ ಕಲೆಕ್ಟರರು, ಜಡ್ಜರು, ಸಬ್ ಜಡ್ಜರು, ಮತ್ತು ಇತರ ಜಿಲ್ಲಾ ಆಫೀಸರರು. ಕೆಳ ತರಗತಿಯ ನೌಕರರೆಂದರೆ ಪೇದೆಗಳು ದಫೇದಾರರು ಇತ್ಯಾದಿ. ಇವರ ನಡುವೆ ಇರುವ ಸರಕಾರೀ ನೌಕರರೆಲ್ಲರೂ ನೊನ್ ಗಜೆಟೆಡ್ ಆಫೀಸರರು. ಅಂದರೆ ಎನ್. ಜಿ. ಓ. ಗಳು.

ನಮ್ಮ ಪ್ರಾಂತಿಕ ಸರಕಾರವು ಮಾನ್ಯ ಪ್ರಕಾಶಮನವರಿಂದ ನಡೆಸಲ್ಪಡುತ್ತಿದ್ದಾಗ ಎನ್ ಜಿ. ಓ ಗಳ ಸಂಬಳ ಏರಿಸುವ ಪ್ರಶ್ನೆಯನ್ನು ಪರಿಶೀಲಿಸಲು ಒಂದು ಮಂತ್ರಿಗಳ ಉಪ ಸಮಿತಿ ನೇಮಿಸಲಾಗಿತು. ಇದಕ್ಕೆ ನಮ್ಮ ಶ್ರೀ ಕೆ ಆರ್ ಕಾರಂತರು ಅಧ್ಯಕ್ಷರಾಗಿದ್ದರು. ಇವರು ಪರಿಸ್ಥಿತಿಗಳನ್ನೆಲ್ಲ ಕೂಲಂಕುಶವಾಗಿ ಪರಿಶೀಲಿಸಿ ಮಾಡಿದ ವರದಿ ಪ್ರಕಾರ ಎನ್ ಜಿ ಓ ಗಳ ಸಂಬಳ ಏರಿಸಲಾಯಿತು

ಇದೇ ಸಮಯದಲ್ಲಿ ಕೇಂದ್ರ ಸರಕಾರವೂ ಈ ಪ್ರಶ್ನೆಯನ್ನು ವಿಚಾರಿಸಲು ಒಂದು ಸಮಿತಿಯನ್ನು ಏರ್ಪಡಿಸಿತ್ತು ಇದರ ವರದಿಯು ಆ ಬಳಿಕ ಪ್ರಕಟವಾಯಿತು ಈ ಸಮಿತಿಯು ಸೂಚಿಸಿದ ಸಂಬಳ, ತುಟ್ಟಿಭತ್ತೆ ಇತ್ಯಾದಿಗಳ ದರಗಳು ಜಾಸ್ತಿ ಇರುತ್ತವೆ

ಕೇಂದ್ರ ಸರಕಾರವು ತಮ್ಮ ನೌಕರರಿಗೆ ತಮ್ಮ ಸಮಿತಿಯವರು ಸೂಚಿಸಿದ ದರಗಳಂತೆ ಸಂಬಳ ತುಟ್ಟಿ ಭತ್ತೆ ಏರಿಸಿದರು ಈಗ ಅದೇ ದರಗಳಂತೆ ತಮ್ಮ ಸಂಬಳವನ್ನೂ ಏರಿಸಬೇಕೆಂಬುದು ನಮ್ಮ ಎನ್ ಜಿ ಓ ಗಳ ಮುಖ್ಯ ತರ್ಕವಿರುತ್ತದೆ

ಈಗ ಮದ್ರಾಸ್ ಸರಕಾರದ ಮಂತ್ರಿಗಳು ಬೇರೆ ಇದ್ದಾರೆ. ಮಂತ್ರಿಮಂಡಲ ಬೇರೆಯಾದರೂ ಸರಕಾರ ಒಂದೇಯಷ್ಟೆ. ಇತ್ತೀಚೆಗೆ ಈ ಪ್ರಶ್ನೆ ಪೂರ್ಣ ವಿಚಾರಿಸಿ ಸಂಬಳ ಇತ್ಯಾದಿ ಏರಿಸಲಾಗಿದೆ. ಈಗ ಪುನ ಈ ಪ್ರಶ್ನೆ ಮುಂದೊತ್ತುವುದು ಸರಿಯಲ್ಲ. ಕೇಂದ್ರ ಸರಕಾರ ಹೆಚ್ಚಿಗೆ ಕೊಡಬಹುದು. ಅವರ ಹತ್ತಿರ ಹೆಚ್ಚಿಗೆ ಹಣವಿದೆ ಪ್ರಾಂತಿ ಸರಕಾರದವರಿಗೆ ಅದೇ ದರಗಳಂತೆ ಕೊಡಲು ಪೂರೈಸುವುದಿಲ್ಲ ಆದರೂ ಎನ್. ಜಿ ಓ ಗಳು ವ್ಯರ್ಥ ಗಲಾಟೆ ಎಬ್ಬಿಸದೆ ಶಾಂತ ರೀತಿಯಿಂದ ವರ್ತಿಸಿದರೆ ತುಟ್ಟಿ ಭತ್ತೆ ಸ್ವಲ್ಪ ಮಟ್ಟಿಗೆ ಏರಿಸಲಿಕ್ಕಾಗುತ್ತದೂ ನೋಡುತ್ತೇವ ಮುಂದೆ ಪ್ರಾಂತಿಕ ಸರಕಾರದ ಹಣದ ಪರಿಸ್ಥಿತಿ ಸುಧಾರಿಸಿದಾಗ ಸಂಬಳ ಏರಿಸುವ ಪ್ರಶ್ನೆಯನ್ನೂ ವಿಚಾರಿಸುವುದಾಗಿ ಈಗ ಬೇಕಿದ್ದರೆ ಭರವಸೆ ಕೊಡುತ್ತೇವೆ. ಇದು ನಮ್ಮ ಸರಕಾರದ ಹೇಳಿಕೆ ಇರುತ್ತದೆ

ಈಗಿನ ಜೀವನ ಪರಿಸ್ಥಿತಿ ಕಷ್ಟದಲ್ಲಿರುವಾಗ ಮುಂದಿನ ಭರವಸೆ ಫಲವಿಲ್ಲ ತುಟ್ಟಿ ಭತ್ತೆ ಸ್ವಲ್ಪ ಏರಿಸಿದರೆ ಸಾಲದು. ಕೇಂದ್ರ ಸರಕಾರದವರು ಕೊಡುವ ದರಗಳಷ್ಟೇ ಕೊಡಬೇಕು ಸಂಬಳದ ಪ್ರಶ್ನೆ ಪಂಚಾಯತರ ತೀರ್ಮಾನಕ್ಕೆ ಒಪ್ಪಿಸೋಣ ಅವರ ತೀರ್ಪಿಗೆ ನಾವು ಒಪ್ಪುತ್ತೇವೆ ಎಂದು ಎನ್ ಜಿ ಓ ಗಳು ವಾದಿಸಿದರು ಮಾತ್ರವಲ್ಲ ಈ ರೀತಿ ಮಾಡುವುದಿಲ್ಲವಾದರೆ ಮುಷ್ಕರ ಹೂಡುವುದಾಗಿಯೂ ತಿಳಿಸಿದರು

ಮುಷ್ಕರದ ಬೆದರಿಕೆ ಹಾಕಲು ಸರಕಾರಕ್ಕೆ ಸಹಜವಾಗಿ ರೇಗಿತು ಮುಷ್ಕರದ ಮಾತನ್ನು ಹಿಂತೆಗೆಯದೆ ಯಾವ ವಿಚಾರವನ್ನೂ ಆಲೋಚಿಸಲಾಗುವುದಿಲ್ಲವೆಂದು ಸರಕಾರವು ನಿರ್ಧರಿಸಿತು. ಎನ್ ಜಿ ಓ ಗಳು ತಾ 15ರಿಂದ ಮುಷ್ಕರ ಹೂಡಿಯೇ ಬಿಟ್ಟರು.

ತಾ. 15ರಲ್ಲಿ ಮಂಗಳೂರಲ್ಲಿ ಎನ್ ಜಿ ಓ ಗಳ ಮುಷ್ಕರ ಆರಂಭವಾದ ಸಾಯಂಕಾಲ ಇವರು ರಾಷ್ಟ್ರ ಧ್ವಜವನ್ನ ಎತ್ತಿ ಹಿಡಿದುಕೊಂಡು ಪೇಟೆ ಮೆರವಣಿಗೆ ಮಾಡಿದರು ಕಮ್ಯೂನಿಸ್ಟ್ ಬಂಧುಗಳಂತೆ ನಮಗೆ ಹೆಚ್ಚಿನ ಸಂಬಳ ಸಿಗಲೇ ಬೇಕೆಂದು ಬಾಯಿಂದ ಬೊಬ್ಬೆ ಹೊಡಯಲಿಲ್ಲ. ಇದು ಮೌನ ಮೆರವಣಿಗೆ. ಮೆರವಣಿಗೆ ಕೇಂದ್ರ ಮೈದಾನಿನಲ್ಲಿ ಮುಟ್ಟಿದಾಗ ಇಲ್ಲಿ ಪ್ರಚಂಡ ಮಹಾ ಸಭೆ ಸೇರಿತು ಡಾ। ನಾಗಪ್ಪ ಆಳ್ವರು ~~ಅಂದರೆ ಮಂಗಳೂರಿನ ನಗರದ ಕಾಂ~~ ಗ್ರೆಸ್ ಸಮಿತಿಯ ಅಧ್ಯಕ್ಷರು ಸಭೆಯ ಅಧ್ಯಕ್ಷಸ್ಥಾನ ವಹಿಸಿದರು

ನಮ್ಮ ಜಿಲ್ಲೆಯ ಎನ್ ಜಿ ಓ ಸಂಘದ ಕಾರ್ಯದರ್ಶಿಯವರಾದ ಶ್ರೀ ಯು. ಮಂಜಪ್ಪನವರು ತಮ್ಮವರ ಮುಷ್ಕರದ ಕಾರಣ, ತಾವು ಕೇಳುವುದೇನು, ತಮ್ಮ ಮಾತುಗಳ ನ್ಯಾಯವೇನು ಇತ್ಯಾದಿ ವಿವರಿಸಿ ಊರ ಮಹಾ ಜನರು ತಮಗೆ ಬೆಂಬಲ ಕೊಡಬೇಕೆಂದು ವಿಜ್ಞಾಪಿಸಿಕೊಂಡರು.

ಆ ಬಳಿಕ ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಕೆ. ಕೆ. ಶೆಟ್ಟರು, ನಮ್ಮಲ್ಲಿ ಪ್ರಸಿದ್ಧ ವಾಗ್ಮಿಗಳಾದ ಶ್ರೀ। ಎನ್ ಎಸ್. ಕಿಲ್ಲೆಯವರು, ಶ್ರೀ। ಗಂಗಾಧರದಾಸರೇ ಮೊದಲಾದವರ ಭಾಷಣಗಳಾದವು. ಸುಮಾರು ರಾತ್ರಿ 9 30ಕ್ಕೆ ಸಭಾಂತ್ಯವಾಯಿತು

ತಾ 16ರಂದು ಮುಷ್ಕರವು ಮುಂದೆ ಸಾಗಿತು. ಈ ತನ್ಮಧ್ಯೆ ಸ್ಥಳೀಕ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಒಂದು ಗೊಂದಲವೆದ್ದಿತು. ತಾ 15ನೇ ದಿನ ಸ್ಕೂಲ್ ಫೈನಲ್ ಮತ್ತು ಇಂಟರ್ ಮೀಡಿಯೇಟ್ ವಿದ್ಯಾರ್ಥಿಗಳಿಗೆ ಸರಕಾರಿ ಪರೀಕ್ಷೆಗೆ ಯಾರನ್ನು ಕಳುಹಿಸಬೇಕೆಂದು ಆರಿಸುವ ಪರೀಕ್ಷೆ ಇಟ್ಟಿದ್ದರು ಆ ದಿನ ಕಾಲೇಜಿನ ಉಪಾಧ್ಯಾಯರೆಲ್ಲ ಮುಷ್ಕರಕ್ಕೆ ಸೇರಿದ್ದರಿಂದ ಪರೀಕ್ಷೆಯನ್ನು ಮಾರನೆ ದಿನಕ್ಕೆ ಮುಂದು ವರಿಸಲಾಯಿತು ಮಾರನೆ ದಿನ ವಿದ್ಯಾರ್ಥಿಗಳು ಈ ಪರೀಕ್ಷೆಯೇ ಬೇಡವೆಂದು ಹಟ ಹಿಡಿದರು. ಈ ವರ್ಷ ದೇಶವು ಸ್ವತಂತ್ರ ಹೊಂದಿದ ಬಗೆ ಆರಿಸುವ ಪರೀಕ್ಷೆ ಇಲ್ಲದೆ ಎಲ್ಲರನ್ನು ಪರೀಕ್ಷೆಗೆ ಕಳುಹಿಸಬೇಕೆಂದು ಇವರ ತರ್ಕ ಪರೀಕ್ಷೆಗೆ ಹೋಗಲಿಚ್ಛಿಸುವ ವಿದ್ಯಾರ್ಥಿಗಳನ್ನು ಬಾಗಿಲಲ್ಲಿ ನಿಂತು ಹಿಂದೆ ಕಳುಹಿಸಿದರು

ತಾ 16ರ ಸಂಜೆ ಕೇಂದ್ರ ಮೈದಾನಿನಲ್ಲಿ ವಿದ್ಯಾರ್ಥಿಗಳ ಸಭೆಯೊಂದು ನಡಯುತ್ತಿತ್ತು ವಿದ್ಯಾರ್ಥಿಗಳ ಧ್ವಜವು ರಾಷ್ಟ್ರಧ್ವಜದೊಡನೆ ಹಾರುತ್ತಿತ್ತು ಭಾಷಣಗಳು ತುಳು ಭಾಷೆಯಲ್ಲಿ ನಡೆಯುತ್ತಿದ್ದವು ಪರಿಶೀಲಿಸಿ ನೋಡಿದಲ್ಲಿ ಸಭೆಯಲ್ಲಿ ವಿದ್ಯಾರ್ಥಿಗಳು ಹೆಚ್ಚು ಮಂದಿ ಇದ್ದ ಹಾಗೆ ಕಾಣಲಿಲ್ಲ ಸಭೆ ಕಮ್ಯೂನಿಸ್ಟ್ ಬಂಧುಗಳೇ ನಡೆಸುತ್ತಿದ್ದಂತೆ ಕಾಣುತ್ತಿತ್ತು

ಒಂದೆಡೆಯಿಂದ ಕಮ್ಯೂನಿಸ್ಟ್ ಬಂಧುಗಳು, ಇನ್ನೊಂದೆಡೆಯಿಂದ ನಮ್ಮ ಸ್ಥಳೀಕ ಕಾಂಗ್ರೆಸ್ ಬಂಧುಗಳು ಹೀಗೆ ಇತ್ತಂಡದ ಬೆಂಬಲ ಪಡೆದಿರುವ ಎನ್ ಜಿ ಓ ಗಳ ಚಳವಳ ನಮ್ಮ ಊರಲ್ಲಿಯಂತೂ ಯಶಸ್ವಿಯಾಗಲಿಬೇಕಷ್ಟೆ?

ಎನ್ ಜಿ ಓ ಗಳ ಮಹಾ ಸಭೆಯ ಭಾಷಣಗಳಲ್ಲಿ ಒತ್ತಿ ಹೇಳಲ್ಪಟ್ಟ ಒಂದು ವಿಚಾರವನ್ನು ಮಾತ್ರ ನಾವಿಲ್ಲಿ ವಿಮರ್ಶಿಸಲು ಬಯಸುತ್ತೇವೆ ಅದೇನೆಂದರೆ ಗುತ್ತಿಗೆಗಳನ್ನು ಬಂದು ಮಾಡಿದ ವಿಚಾರ. ~~ಸರಕಾರವು ಈ ಗುತ್ತಿಗೆ ಬಂದು ಮಾಡುವ~~ ಚಳವಳವನ್ನು ಕೈಕೊಂಡು ತಮ್ಮ ಉತ್ಪತ್ತಿ ಕಳೆದುಕೊಂಡು ಈಗ ಎನ್. ಜಿ. ಓ. ಗಳಿಗೆ ಸಂಬಳ ಹೆಚ್ಚಿಸಲು ಹಣವಿಲ್ಲವೆಂದು ವಾದಿಸುವುದಕ್ಕಿಂತ ಆ ಗುತ್ತಿಗೆಗಳನ್ನು ನಡೆಸಿದರೇ ಚೆನ್ನಾಗಿತ್ತು ಎಂಬ ಅಭಿಪ್ರಾಯ.

ಅಂದರೆ ಬಡ ಜನರು ಹೆಂಡ ಶರಾಬುಗಳನ್ನು ಕುಡಿದು ತಮ್ಮ ಸರ್ವನಾಶ ಮಾಡಿಕೊಂಡು ಹಾಳಾಗಿ ಹೋಗುವುದನ್ನು ಸರಕಾರವು ನಿಲ್ಲಿಸಬಾರದಿತ್ತು. ಈ ಜನರ ದುಡ್ಡು ಸುಲಿಗೆ ಮಾಡಿ ಹಣವನ್ನ ಈ ಸರಕಾರೀ ನೌಕರರು ಸುಖದಲ್ಲಿ ಬಾಳುವಂತೆ ಇವರಿಗೆ ಕೊಡಬೇಕಿತ್ತು' ಎಂಬುದಲ್ಲವೆ ಈ ಮಾತುಗಳ ಸ್ಪಷ್ಟವಾದ ಅರ್ಥ?

ಈಗ ಪರಕೀಯರ ಬ್ರಿಟಿಷ ಸರಕಾರವಿಲ್ಲಿ ನಡೆಯುತ್ತ ಇಲ್ಲವೆಂಬುದನ್ನು ನಮ್ಮ ಎನ್. ಜಿ ಓ ಗಳು ಮರೆತಂತೆ ಕಾಣುತ್ತದೆ. ಈಗ ನಡೆಯುತ್ತಿರುವುದು ಕಾಂಗ್ರೆಸ್ ಸರಕಾರ, ಈ ಸರಕಾರವಿರುವುದು ಬಡ ಜನರ ಶ್ರೇಯಸ್ಸಿಗಾಗಿ ಬಡ ಜನರಿಗೆ ಹೆಂಡ ಶರಾಬುಗಳನ್ನು ಕುಡಿಸಿ ಅವರ ಸರ್ವನಾಶ ಮಾಡಿ ಅವರ ದುಡ್ಡು ಸುಲಿದು ಅದನ್ನು ಎನ್ ಜಿ ಓ, ಗಳಿಗೆ ಕೊಡಬೇಕೆಂಬ ಮಾತನ್ನು ಈಗಿನ ಸರಕಾರವು ಎಂದೂ ಒಪ್ಪಲಿಕ್ಕಿಲ್ಲವೆಂದು ನಾವು ಆಶಿಸುತ್ತೇವೆ

ಈಗಿನ ಸರಕಾರ ಕಾಂಗ್ರೆಸ್ ಸರಕಾರವೆಂಬದನ್ನು ಎನ್ ಜಿ ಓ ಗಳು ಮರೆತು ಬಿಟ್ಟರೆ ಅದರಲ್ಲಿ ಹೆಚ್ಚಿನ ಆಶ್ಚರ್ಯವಿಲ್ಲ. ಎನ್ ಜಿ ಓ ಗಳಿಗೂ ಕಾಂಗ್ರೆಸಿಗೂ ಹೆಚ್ಚಿನ ಪರಿಚಯವಿಲ್ಲ ಕಾಂಗ್ರೆಸ್ ಸಂಸ್ಥೆಯ ಚಳವಳವನ್ನು ಸದೆಬಡಿಯಲು ಸರಕಾರವು ಕೈಕೊಳ್ಳುತ್ತಿದ್ದ ಕೆಲಸಗಳ ಪರಿಚಯ ಮಾತ್ರ ಇವರಿಗೆ ಸ್ವಲ್ಪ ಮಟ್ಟಿಗೆ ಇರಬಹುದು ಅಷ್ಟೆ ಆದುದರಿಂದ ಇವರು ಕಾಂಗ್ರೆಸಿನ ಮೂಲ ತತ್ವಗಳನ್ನು ತಿಳಿದುಕೊಂಡಿಲ್ಲವಾದರೆ ಆಶ್ಚರ್ಯಪಡತಕ್ಕದ್ದೇನೂ ಇಲ್ಲ. ಕಾಂಗ್ರೆಸಿಗರು ಸರಕಾರದ ವಿರುದ್ಧ ಚಳವಳ ಮಾಡಿ ಯಶಸ್ವಿಯಾದರೆಂಬುದನ್ನು ಇವರು ಕಂಡಿದ್ದಾರೆ ತಾವೂ ಅದೇ ರೀತಿ ಬಾವಟೆ ಹಿಡಿದು ಮೆರವಣಿಗೆ ಮಾಡಿ ಸಭೆ ನಡೆಸಿ ಚಳವಳ ಮಾಡಿದರೆ ತಮ್ಮ ಸಂಬಳವು ಹೆಚ್ಚಾದೀತೆಂದು ಇವರು ಆಶಿಸುತ್ತಾರೆ

ಆದರೆ ನಮ್ಮಲ್ಲಿಯ ಕಾಂಗ್ರೆಸಿಗರು ಕಾಂಗ್ರೆಸಿನ ಪರಿಚಯವಿಲ್ಲದಂತೆ ವರ್ತಿಸುವುದು ನೋಡಿದರೆ ಮಾತ್ರ ಯಾರಿಗೂ ಆಶ್ಚರ್ಯವಾಗದೆ ಇರಲಿಕ್ಕಿಲ್ಲ ಬಡ ಜನರಿಗೆ ಹೆಂಡ ಶರಾಬು ಕುಡಿಸಿ ಅವರ ಸರ್ವನಾಶ ಮಾಡಿ ಅವರ ದುಡ್ಡು ಸುಲಿದು ಎನ್ ಜಿ ಓ ಗಳಿಗೆ ಕೊಡಬೇಕಿತ್ತೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯವರೇ ಹೇಳಿದರೆ ಇದಕ್ಕೆ ಏನೆನ್ನಬೇಕು?

ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಸ್ಥೆಯ ಅಧಃಪತನವು ಇದಕ್ಕೂ ಇನ್ನು ಕೆಳಗೆ ಹೋಗಲು ಸಾಧ್ಯವಿಲ್ಲವೆಂದೇ ಹೇಳಬೇಕು

ಮಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯ ಬಾಲಗೇಣಿ ಒಕ್ಕಲುಗಳ ~~ಕೋಟೇನಿಯ ಪರಿಸ್ಥಿತಿಯನ್ನು ವಿವರಿಸಿ~~ ನಾನು ಇದೇ ತಿಂಗಳು ಮಾನ್ಯ ಮಂತ್ರಿ ಕಲಾ ವೆಂಕಟ್ರಾಯರಿಗೆ ಬರೆದ ಪತ್ರಕ್ಕೆ ಅವರು ಈ ಕೆಳಗಿನ ಉತ್ತರವಿತ್ತಿರುತ್ತಾರೆ

- ಒಕ್ಕಲುಗಳ ರಕ್ಷಣೆಗಾಗಿ ಒಂದು ಎಡೆಗಾಲ ಮಸೂದೆ ಸಂಬಂಧವಾಗಿ ನಿಮ್ಮ ತಾ ೨-೧೨ ರ ಪ್ರೀತಿ ಪೂರ್ವಕವಾದ ಪತ್ರ ತಲ್ಪಿತು. ಅಂಥ ಮಸೂದೆಯು ಈಗ ತಯಾರಾಗಿ ಮಂತ್ರಿಮಂಡಲದ ಮುಂದಿದೆ. ನನಗೆ ಸಾಧ್ಯವಾದಷ್ಟು ಬೇಗನೇ ನಾನದನ್ನು ಅಸೆಂಬ್ಲಿಯ ಮುಂದೆ ತರಲಿದ್ದೇನೆ.

...ಕ್ಕೆ ಒಳಗಾದ ಬರ್ಮಾ ಈಗ ಈ ರೀತಿ ಸ್ವತಂತ್ರವಾದುದು ಶುಭ ವಾರ್ತೆಯೇ ಇರುತ್ತದೆ

ಬರ್ಮಾ ದೇಶಕ್ಕೂ ಹಿಂದುಸ್ಥಾನಕ್ಕೂ ಅನಾದಿ ಕಾಲದಿಂದ ನಿಕಟ ಸಂಬಂಧವಿರುತ್ತದೆ. ಅಲ್ಲಿಯ ಸಂಸ್ಕೃತಿ ಹಿಂದುಸ್ಥಾನದ ಸಂಸ್ಕೃತಿಯೇ ಇರುತ್ತದೆ ಹೆಚ್ಚಿನ ಜನ ಸಂಖ್ಯೆ ಬೌದ್ಧ ಮತಾನುಯಾಯಿಗಳು ಹಿಂದುಸ್ಥಾನದಿಂದ ಅಲ್ಲಿಗೆ ಹೋಗಿ ಎಷ್ಟೋ ಮಂದಿ ಅಲ್ಲಿ ವಾಸಿಸುತ್ತಿದ್ದಾರೆ ಬ್ರಿಟಿಷರ ಆಳ್ವಿಕೆಯಲ್ಲಿ ಇತ್ತೀಚೆಗಿನ ತನಕ ಬರ್ಮಾ ಹಿಂದುಸ್ಥಾನ ಒಂದೇ ರಾಜ್ಯವಾಗಿದ್ದವು.

ಬರ್ಮಾ ದೇಶದ ಮುಖ್ಯ ಮಂತ್ರಿಯವರು ಹಿಂದುಸ್ಥಾನಕ್ಕೆ ಬಂದು ತಮ್ಮ ಜನರ ಸೌಹಾರ್ದವನ್ನು ಪ್ರಕಟಿಸಿದರು ಇವೆರಡು ದೇಶಗಳು ಮುಂದೆ ಪರಸ್ಪರ ಮೈತ್ರಿಯಲ್ಲಿದ್ದು ಜೊತೆಯಾಗಿ ಮುನ್ನಡೆಯಲೆಂದು ಕೋರಿದರು ಮಹಾತ್ಮಾ ಗಾಂಧಿಯವರನ್ನು ಕಂಡು ಅವರ ಆಶೀರ್ವಚನ ಪಡೆದರು ಸ್ವತಂತ್ರ ಬರ್ಮಾದಲ್ಲಿ ಪ್ರಜಾಧಿಪತ್ಯದ ಆಡಳಿತೆ ಚೆನ್ನಾಗಿ ನಡೆದು ದೇಶದ ಪ್ರಗತಿ ಸಾಧಿಸಲ್ಪಟ್ಟು ಅಲ್ಲಿಯ ಪ್ರಜಾಜನರು ಸುಖದಲ್ಲಿ ಬಾಳುವಂತಾಗಲೆಂದು ನಾವೂ ಹಾರೈಸಬೇಕು.

ಡೆ|| ಪೋ|| ಮಾಸ್ಟರ್ ಜನರಲ್ ಮಂಗಳೂರು

ಇದೇ ಕಳೆದ ತಾ. ೭ರಲ್ಲಿ ಡೆಪ್ಯುಟಿ ಪೋಸ್ಟ್ ಮಾಸ್ಟರ್ ಜನರಲ್‌ರವರನ್ನು ಪೋಸ್ಟ್‌ಮೆನ್ ಸಂಘದವರು (ಮಂಗಳೂರಲ್ಲಿ) ಭೇಟಿಯಾಗಿ ತಮ್ಮೆಯ ಸದಸ್ಯರ ಕೇಳಿಕೆಗಳನ್ನು ಅವರ ಮುಂದಿಟ್ಟರು; ಸಾಧ್ಯವಿದ್ದ ಮಟ್ಟಿಗೆ ಸಹಾಯ ವನ್ನು ಮಾಡುವರಾಗಿ ಅವರು ಭರವಸೆ ಕೊಟ್ಟಿದ್ದಾರೆ. ಅಲ್ಲದೆ ಅಂದು ಸಂಜೆ ಇದೇ ನೌಕರರು, ಏರ್ಪಡಿಸಿದ ಉಪಹಾರಕ್ಕೆ ಸುಪರಿಂಟೆಂಡೆಂಟ್, ಮತ್ತು ಇತರ ಗೃಹಸ್ಥರು ಹಾಜರಿದ್ದರು.

ಸ್ಕೌಟ್ ರ್‍ಯಾಲಿ

ತಾ. ೬-೧೨-೧೯೪೭ನೇ ಶನಿವಾರ ಸಾಯಂಕಾಲ ೫-೩೦ ಗಂಟೆಗೆ ಕೆನರಾ ಹೈಸ್ಕೂಲು (ಡೊಂಗರಕೇರಿ) ವಠಾರದಲ್ಲಿ ಸ್ಕೌಟು ರ್‍ಯಾಲಿಯು ನಡೆಯಿತು. ಜಿಲ್ಲಾ ಕಲೆಕ್ಟರರಾದ ಶ್ರೀಯುತ ಜೆ. ಯಫ್. ಸೋಂಡರ್ಸ್, ಯಂ. ಬಿ. ಇ., ಐ. ಸಿ. ಯಸ್. ಇವರು ಅಧ್ಯಕ್ಷರಾಗಿದ್ದರು. ಅವರಿಂದ ಧ್ವಜಾರೋಹಣವೂ ವಂದನೆಯೂ ನಡೆಯಿತು. ಮರಿಗಳ ವೀರ ಘರ್ಜನೆಯ ತರುವಾಯ ಜಿಲ್ಲಾ ಸ್ಕೌಟು ಕೌನ್ಸಿಲಿನ ಕಾರ್ಯದರ್ಶಿಗಳು ವರದಿಯನ್ನೋದಿದರು. ನಂತರ ಮೊನ್ನೆ ತಾನೇ ತರಬೇತಿ ಹೊಂದಿದ ಸ್ಕೌಟು ಮಾಸ್ಟರರುಗಳಿಗೂ, ಕಬ್ ಮಾಸ್ಟರರುಗಳಿಗೂ ಸರ್ಟಿಫಿಕೇಟುಗಳನ್ನು ಹಂಚಲಾಯಿತು.

ಕ್ರಿಕೆಟ್ ಪಂದ್ಯಾಟ

ತಾ. ೧೭-೧೨-೪೭ರಂದು ಇಲ್ಲಿಯ ಎಂ. ಸಿ. ಸಿ. ಟೀಮಿನವರಿಗೂ ಮತ್ತು ಕಾರ್ಕಳ ಟೀಮಿನವರಿಗೂ ನಡೆದ ಕೊರೊನೇಶನ್ ಕಪ್ ಪಂದ್ಯಾಟದಲ್ಲಿ ಎಂ. ಸಿ. ಸಿಯವರು ಜಯಶಾಲಿಗಳಾದರು. ಅವರು ಒಂದನೇ ಎರಡನೇ ಇನ್ನಿಂಗ್ಸುಗಳಲ್ಲಿ ಕ್ರಮವಾಗಿ ೧೫೩ ಮತ್ತು ೨೧೧ ರನ್‌ಗಳನ್ನೂ, ಕಾರ್ಕಳದವರು ೮೯ ಮತ್ತು ೭೬ ರನ್‌ಗಳನ್ನೂ, ತೆಗೆದಿದ್ದರು.

ಈ ಹಿಂದೆ ನಡೆದ ಫೋರ್ಡ್ ಕಪ್ ಪಂದ್ಯಾಟಗಳಲ್ಲಿ ಎಂ. ಸಿ. ಸಿಯವರು ಎಲ್ಲಾ ಟೀಮುಗಳನ್ನು ಸೋಲಿಸಿ ವಿಜಯಿಗಳಾಗಿದ್ದರು. ನಾಳೆ ತಾ. ೨೦-೧೨-೪೭ರಂದು ಕೊರೊನೇಶನ್ ಕಪ್ ಪಂದ್ಯಾಟದ ಕೊನೆಯಾಟವು ಎಂ. ಸಿ. ಸಿ. ಮತ್ತು ಪೆಂಟ್ಲೆಂಡ್ ಟೀಮುಗಳೊಳಗೆ ಜರಗುವುದು.

ಹವಾಮಾನ

ಕಳೆದ ವಾರದಲ್ಲಿ ಅಲ್ಪ ಸ್ವಲ್ಪ ಮಳೆ ಬಿದ್ದಿರುವುದು. ಆದರೆ ಇದು ಸುಗ್ಗಿ ಬೆಳೆಗೆ ವಿಳಂಬವಾಯಿತೆಂದೂ, ಈ ಸಲದ ಬಿಸಿಲಿನಿಂದ ಕೆಲವು ಕಡೆ ಬೆಳೆಗೆ ಸ್ವಲ್ಪ ಹಾನಿ ಇರಬಹುದೆಂದೂ ಹೇಳಲಾಗಿದೆ.

ವರ್ಧಂತ್ಯುತ್ಸವಗಳು

ಸ್ಥಳೀಯ ಕೆನರಾ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ಬರುವ ತಾ. ೨೪-೧೨-೪೭ಕ್ಕೆ ಆಚರಿಸಲಾಗುವುದು. ಅನಂತರದ ದಿನಗಳಲ್ಲಿ ಹಳೇ ವಿದ್ಯಾರ್ಥಿಗಳ, ಬಾಲಿಕಾ ಶಾಲೆಯ, ಮತ್ತದರ ಹಳೇ ವಿದ್ಯಾರ್ಥಿನಿಯರ, ಶಾಲೆಯ ಸೊಸೈಟಿಯ ಇವೇ ಮೊದಲಾದ ವರ್ಧಂತ್ಯುತ್ಸವಗಳೂ ಆಚರಿಸಲಾಗುವವು. ಹಳೇ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿ ಸಹಕರಿಸಬೇಕಾಗಿ ಕೋರಲಾಗಿದೆ.

ದುರ್ಮರಣ

ಸ್ಥಳೀಯ ವೆಂಕಟರಮಣ ದೇವಸ್ಥಾನದ ಕೆರೆಯಲ್ಲಿ ಕೆಲವು ದಿವಸಗಳ ಹಿಂದೆ ಒರ್ವ ತರುಣ ಪ್ರಾಯದ ಸ್ತ್ರೀಯ ಶವವು ಸಿಕ್ಕಿರುವುದಾಗಿ ಸುದ್ದಿ.

ಜಿಲ್ಲಾ ಅಭಿವೃದ್ಧಿ ಕಾರ್ಯಕಲಾಪಗಳು

ಕಳೆದ ತಾ. ೧೮ರಂದು ಸ್ಪೆಶಲ್ ಡೆವಲಪ್‌ಮೆಂಟ್ ಆಫೀಸರು ಶ್ರೀ. ಕೆ. ಸರ್ವೋತ್ತಮ ರಾಯರು ಇಲ್ಲಿಗೆ ಬಂದಿದ್ದು ಸ್ಥಳೀಯ ಕೋ-ಓಪರೇಟಿವ್ ಕಟ್ಟಡದಲ್ಲಿ ಗ್ರಾಮೋನ್ನತಿ ಶಾಲೆಯ ಆರಂಭೋತ್ಸವವನ್ನು ನಡೆಸಿರುತ್ತಾರೆ. ಅಂದು ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳು ಜರಗಿದವಲ್ಲದೆ ಶ್ರೀಗಳಾದ ಯನ್. ಯಸ್. ಶ್ರೀನಿವಾಸ ರಾವ್. ಬಿ. ಮಂಗೇಶ ರಾವ್; ಈಶ್ವರ ಭಟ್; ಐತಪ್ಪ ರೈ; ಇವರ ಭಾಷಣಗಳಾದುವು.

KANARA COMMERCIAL BANK LTD.

PUTTUR.

H. O. Puttur.] Estd. 1920 [Branch: Vittal.

All kinds of Banking Business transacted.

Deposits: Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

೨೫ ಲಕ್ಷ ಕನ್ನಡಿಗರ ಮನವಿ

೨೫ ಲಕ್ಷ ಜನ ಕನ್ನಡಿಗರ ಅಂಕಿತದ ಮನವಿಯನ್ನು ಘಟನಾ ಸಮಿತಿಯ ಅಧ್ಯಕ್ಷರಿಗೆ ಒಪ್ಪಿಸುವ ಕೊನೆಯ ದಿನವು ೧-೧-೪೮ ಎಂದು ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿದೆಯಷ್ಟೇ. ಹುಬ್ಬಳ್ಳಿಯಲ್ಲಿರುವ ಏಕೀಕರಣ ಮಹಾ ಸಮಿತಿ ಕಾರ್ಯಾಲಯದಲ್ಲಿ ಈಗಾಗಲೇ ದಿನಾಲು ಅನೇಕ ಸಾವಿರ ಜನ ಕನ್ನಡಿಗರ ಅಂಕಿತಗಳು ಬರತೊಡಗಿವೆ. ಇನ್ನು ಸಮಯವು ಅತ್ಯಲ್ಪವಿರುವುದರಿಂದ ಪ್ರತಿಯೊಂದು ಗ್ರಾಮದವರೂ ಇದು ತಮ್ಮ ಧ್ಯೇಯವೆಂದು ತಿಳಿದು ತಮ್ಮ ತಮ್ಮ ಗ್ರಾಮ ನಿವಾಸಿಗಳಿಂದ ಸಹಿಮಾಡಿದ ಮನವಿಗಳನ್ನು ಭರದಿಂದ ಕಾರ್ಯಾಲಯಕ್ಕೆ ಕಳುಹಿಸಬೇಕೆಂದು ಏಕೀಕರಣ ಮಹಾ ಸಮಿತಿಯವರು ತಿಳಿಸುತ್ತಾರೆ.

ಗಾಯತ್ರಿ ಮತ್ತು ಮೃತ್ಯುಂಜಯ ಹೋಮ:

ತಾ. ೧೭-೧೨-೪೭ನೇ ಬುಧವಾರದಿಂದ ೧೧ ದಿನಗಳ ಪರ್ಯಂತರ ಮಂಗಳೂರು ಶಹರು ಕರಂಗಲಪಾಡಿ ಈಶ್ವರ ದೇವಸ್ಥಾನದ ವಠಾರದಲ್ಲಿ ಗಾಯತ್ರಿ ಮತ್ತು ಮೃತ್ಯುಂಜಯ ಹೋಮವನ್ನು ಶ್ರೀ ರಾಮ ಸೇವಕ ಗೋರೆಯವರು ಭಕ್ತರ ಸಹಾಯದಿಂದ ಆಚರಿಸುವರು. ಭಕ್ತಾದಿಗಳಿಗೆ ಸುಸ್ವಾಗತವಿದೆ.

ಸಪ್ತಾಹ

ಇಲ್ಲಿಯ ಶ್ರೀ ವಿಠೋಬ ದೇವಸ್ಥಾನದಲ್ಲಿ ಕಳೆದ ತಾ. ೧೭ರಿಂದ ಭಜನಾ ಸಪ್ತಾಹವು ಪ್ರಾರಂಭಿಸಲ್ಪಟ್ಟಿದೆ. ಈ ಸಪ್ತಾಹವು ಕಾರ್ತೀಕ ಮಾಸದಲ್ಲಿ ನಡೆಯುವುದು ವಾಡಿಕೆಯಾಗಿತ್ತು. ಕಾರಣಾಂತರಗಳಿಂದ ಈ ವರ್ಷ ಮುಂದೂಡಲ್ಪಟ್ಟಿತು. 'ಅಸ್ಪೃಶ್ಯರಿಗೆ ಪ್ರವೇಶವಿಲ್ಲ'ವೆಂಬ ಪ್ರಕಟಣೆಯೂ ದೇವಳದ ಇದಿರಿನಲ್ಲಿ ಕಾಣಿಸಲಾಗಿದೆಂದು ತಿಳಿದು ಬರುತ್ತದೆ.

ಕರ್ನಾಟಕ ಏಕೀಕರಣ ಸಮ್ಮೇಳನ-ಕಾಸರಗೋಡು

ಕಾಸರಗೋಡಿನಲ್ಲಿ ಈ ತಿಂಗಳ ಕೊನೆಯ ವಾರದಲ್ಲಿ ಜರಗುವ ಮೇಲ್ಕಂಡ ಸಮ್ಮೇಳನಕ್ಕೆ ನಮ್ಮ ಆರೋಗ್ಯ ಶಾಖಾ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ಅಧ್ಯಕ್ಷರಾಗಲು ಒಪ್ಪಿರುವರು. ಶ್ರೀ ಕೆ. ಆರ್. ಕಾರಂತ ಎಂ. ಎಲ್. ಎ. ಇವರು ಸ್ವಾಗತಾಧ್ಯಕ್ಷರು.

ಜೀವನ ಕಾರ್ಯವು ಸಾಂಗವಾಗಿ ನಡೆಯಬೇಕಾದರೆ, ನಷ್ಟವಾಗುವ ಶಕ್ತಿಯು ಭರ್ತಿಯಾಗಬೇಕು. ನಿಮ್ಮ ಶೋಭೆಯನ್ನೂ ಕಾಂತಿಯನ್ನೂ ರಕ್ಷಿಸಬೇಕಾದರೆ ನಿಮ್ಮಲ್ಲಿ ಅಂತರಾರೋಗ್ಯವಿರಬೇಕು. ಈ ಬಗ್ಗೆ ನಿಮಗೆ ಬೇಕಾದುದು ಬೈಲ್‌ಬೀನ್ಸ್. ಅವುಗಳಿಂದ ನಿಮ್ಮ ದೇಹಾರೋಗ್ಯವು ನೆಟ್ಟಗಾಗುವುದು. ನಿಮ್ಮ ರಕ್ತವು ಪರಿಶುದ್ಧವಾಗುವುದು. ನಿಮ್ಮ ದೇಹದ ವಿಸರ್ಜನಾ ಕಾರ್ಯಗಳು ಸರಿಯಾಗಿ ನಡೆಯುವವು. ಈ ವನಸ್ಪತಿ ಮೂಲ ಮದ್ದಿನಿಂದ ನಿಮಗೆ ಹೊಸ ಹುರುಪು ದೊರಕುವುದು. ಶುಭ್ರ ಲೋಚನಗಳೂ, ನಿಷ್ಕಳ ಚರ್ಮವೂ ನಿಮಗೆ ಒದಗುವವು. ನಿಮ್ಮನ್ನು ಆಕರ್ಷಣೀಯರಾಗಿ ಮಾಡುವುದು.

BILE BEANS

ಶಯನ ಸಮಯ ನಿತ್ಯಲೂ ಸೇವಿಸಿರಿ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪಿತ: ೧೯೦೬)

ದೇಶೋನ್ನತಿಯನ್ನು ಬಯಸುವುದು ಪ್ರತಿಯೊರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು, ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು, ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿ ಕೊಡುವುದು ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906

CANARA BANK, LIMITED.

ವಿವಿಧ ಧರ್ಮ ಸಮ್ಮೇಳನ-

ಧರ್ಮಸ್ಥಳ

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಕಾರ್ತಿಕ ದೀಪೋತ್ಸವ ಕಾಲದಲ್ಲಿ ವರ್ಷಂಪ್ರತಿ ಜರಗುವ ಮೋಲ್ಯಂಡ ಸಮ್ಮೇಳನದ ೧೫ನೇ ಅಧಿವೇಶನವು ಕಳೆದ ತಾ ೧೦ನೇ ಬುಧವಾರ ಅಲ್ಲಿನ ಶಾಲಾ ವಠಾರದಲ್ಲಿ ಹಾಕಿದ ಭವ್ಯ ಚಪ್ಪರದ ಸಭಾಂಗಣದಲ್ಲಿ ಜರಗಿತು ಕರ್ನಾಟಕ ಪ್ರಾಂತಿಕ ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಶ್ರೀ ಪಿ. ಸಿ ಮಲ್ಲಪ್ಪನವರು ಅಧ್ಯಕ್ಷತೆ ವಹಿಸಿದ್ದರು

ವ್ಯವಸ್ಥಾಪಕರ ಪರವಾಗಿ ಶ್ರೀ ಡಿ ಮಂಜಯ್ಯ ಹೆಗ್ಗಡೆ ಎಂ ಎಲ್ ಸಿ ಯವರು ಸ್ವಾಗತಿಸಿದರು, ಶ್ರೀ ಡಿ ಪುಟ್ಟಸ್ವಾಮಿ ಅವರು ಒಂದು ಬೆಳ್ಳಿ ಕರಂಡದ ಸಹಿತ ಅಧ್ಯಕ್ಷರಿಗೊಪ್ಪಿಸಿದರು

ಅಂದು ಚರ್ಚಿಸಬೇಕಾದ "ಸ್ವತಂತ್ರ ಭಾರತದಲ್ಲಿ ಧರ್ಮದ ಸ್ಥಾನ" ಎಂಬ ವಿಷಯದಲ್ಲಿ— ಮೈಸೂರಿನ ಮಹಾರಾಜಾ ಕಾಲೇಜಿನ ಸೈಕೊಲಜಿ ಲೆಕ್ಚರರ್ ಶ್ರೀ ಎನ್ ಎಸ್ ನಾರಾಯಣ ಶಾಸ್ತ್ರಿ, ಎಂ ಎ ಡಿ ಲಿಟ್ ಅವರೂ ಅದೇ ಕಾಲೇಜಿನ ಫಿಲಾಸಫಿ ಲೆಕ್ಚರರ್ ಶ್ರೀ ವೈ ಜಿ ಪದ್ಮರಾಜಯ್ಯ ಎಂ ಎ ಅವರೂ, ಬೆಂಗಳೂರಿನ ಅಡ್ವೊಕೇಟ್ ಜನಾಬ್ ಸಾದಿಕ್ ಸಿ ಕೆ ಬಿ ಅವರೂ, ಬೆಂಗಳೂರಿನ ಶ್ರೀ ಅ ನ ಕೃಷ್ಣರಾಯರೂ, ಮಿ ಅನಂದ ಅಂಟೋಂಜ್ ಬಿ ಎ ಅವರೂ, ಶ್ರೀ ಕೋಟ ಶಿವರಾಮ ಕಾರಂತರೂ ಶ್ರೀ ಬಿ ಶಂಕರ ಭಟ್ಟರೂ ಪಂಡಿತ ರತ್ನ ಎ ಶಾಂತಿರಾಜ ಶಾಸ್ತ್ರಿ, ಆಸ್ಥಾನ ಮಹಾ ವಿದ್ವಾನ್ ಅವರೂ, ಬೆಂಗಳೂರಿನ ಸಂಸ್ಕೃತ ಕಾಲೇಜಿನ ವಿದ್ವಾನ್ ನಂದನೂಡ ಅರಾಧರೂ ಮೈಸೂರಿನ ಆರ್ಯ ಸಮಾಜದ ಶ್ರೀ ರಾಮಸ್ವಾಮಿ ಅವರೂ, ಮೈಸೂರು ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಕೆ ಎಸ್ ಧರಣೇಂದ್ರಯ್ಯ ಎಂ ಎ ಬಿ ಟಿ ಅವರೂ ಮಾತಾಡಿದ ಬಳಿಕ ಅಧ್ಯಕ್ಷರ ಮುಕ್ತಾಯ ಭಾಷಣವಾಗಿ, ಶ್ರೀ ಮಂಜಯ್ಯ ಹೆಗಡೆಯವರ ವಂದನಾರ್ಪಣೆಗಳೊಡನೆ ಸಭೆ ಮುಗಿಯಿತು.

ಈ ಮಹಾ ಸಭೆಯಲ್ಲಿ ಸರ್ವಾನುಮತದಿಂದ ಮಂಜೂರಾದ ಠರಾವು ಹೀಗಿದೆ –

"ಧಾರ್ಮಿಕ ವಿಚಾರ ರಹಿತವಾದ ಯಾವುದೊಂದು ರಾಜ್ಯಾಂಗ ಘಟನೆಯೂ ವಿವಿಧ ಧರ್ಮಗಳಿಗೂ ಅವುಗಳ ಸಂಪ್ರದಾಯಗಳಿಗೂ ನಂಬುಗೆಗಳಿಗೂ ವಿರೋಧವಾಗಿರುವುದರಿಂದ ಜೀವನದ ಸಾರಸ್ಯವೂ ಸಂಸ್ಕೃತಿಯ ಆತ್ಮಸ್ವರೂಪವೂ ಆಗಿರುವ ಧರ್ಮವನ್ನೇ ತಳಹದಿಯಾಗಿಟ್ಟುಕೊಂಡು ಆ ರಾಜ್ಯಾಂಗ ಘಟನೆಯನ್ನು ರಚಿಸಿ, ಅದನ್ನು ಆಚರಣೆಗೆ ತರುವ ಮೂಲಕ ದೇಶದ ಕಲ್ಯಾಣವನ್ನೂ ಲೋಕ ಶಾಂತಿಯನ್ನೂ ಸಾಧಿಸಬೇಕೆಂದು ಈ ಸಮ್ಮೇಳನವು ಹಾರೈಸುತ್ತದೆ

ಕಾರ್ಕಳ

'ಅರುಣಾ ಮಿಲ್ಸ್' ಉದ್ಘಾಟನೆ ಕಲ್ಮರದ ಶ್ರೀ ಕೆ. ವಿ ಯನ್ ಉಪಾಧ್ಯಾಯರವರು ವ್ಯವಸ್ಥಾಪಕರಾಗಿರುವ ಅರುಣ ಮಿಲ್ಸ್ ಎಂಬ ಕಾರ್ಖಾನೆಯ ಉದ್ಘಾಟನಾ ಸಮಾರಂಭವು ಇದೇ ತಾ 13ರಂದು ಊರಿನ ಅನ್ಯ ಗಣ್ಯರ ಸಮಕ್ಷಮದಲ್ಲಿ ಬಹು ವಿಜೃಂಭಣೆಯಿಂದ ಯಶಸ್ವಿಯಾಗಿ ಜರಗಿತು ಪ್ರಕೃತ ಈ ಕಾರ್ಖಾನೆಯಲ್ಲಿ ಕಾಫಿ ಹುಡಿ ತಯಾರಿಕೆಯು ಆರಂಭವಾಗಿದ್ದು ವಿದ್ಯುಚ್ಛಕ್ತಿಯು ಪುರವಠೆ ಆಗ ತೊಡಗಿದೊಡನೆ, ಅಕ್ಕಿ, ಗೋಧಿ ಮೊದಲಾದ ಇತರ ದವಸ ಧಾನ್ಯಗಳ ಹಿಟ್ಟು ರವೆ ಇತ್ಯಾದಿ ಕೂಡಾ ತಯಾರಾಗುವಂತೆ ಈಗಾಗಲೇ ಯಂತ್ರೋಪಕರಣಗಳ ಸಂಯೋಜನೆಯಾಗಿದೆ

೩೧ನೇಯ ಕನ್ನಡ ಸಾಹಿತ್ಯ ಸಮ್ಮೇಳನ ಕಾಸರಗೋಡು

ಕನ್ನಡ ಸಾಹಿತ್ಯ ಸಮ್ಮೇಳನವು ಇದೇ ತಿಂಗಳ ತಾ ೨೮, ೨೯, ೩೦ರಲ್ಲಿ ಜರಗುವುದು ಆಮಂತ್ರಣ ಪತ್ರಿಕೆಯು ಅಚ್ಚಾಗಲು ತಡವಾದುದರಿಂದ ಅನೇಕರಿಗೆ ಆಮಂತ್ರಣ ಕಳುಹಿಸಲು ಬಿಟ್ಟು ಹೋಗಬಹುದು ಈ ವಿಚಾರವನ್ನು ಯಾರೂ ಮನಸ್ಸಿನಲ್ಲಿಡಬಾರದು ಕರ್ನಾಟಕದ ಹಿರಿಕಿರಿಯ ಸಾಹಿತಿಗಳಿಗೂ ಪತ್ರಿಕೋದ್ಯೋಗಿಗಳಿಗೂ ಕನ್ನಡತಂಬೆಯ ಸಕಲ ಪುತ್ರರಿಗೂ ನಮ್ಮ ಆದರದ ಆಮಂತ್ರಣ — ಕಾರ್ಯದರ್ಶಿ

ಶ್ರೀ ಫಲಿಮಾರು ಮಠಾಧೀಶರು ವೃಂದಾವನಸ್ಥರಾದರು

ಉಡುಪಿ ಅಷ್ಟ ಮಠಾಧೀಶರಲ್ಲೊಬ್ಬರಾದ ಶ್ರೀ ಫಲಿಮಾರು ಶ್ರೀಪಾದಂಗಳವರು ಕೆಲ ಕಾಲದಿಂದ ಕಾಯಿಲೆಯಲ್ಲಿದ್ದವರು ಈಚೆಗೆ ಮದ್ರಾಸಿನಲ್ಲಿ ವೃಂದಾವನಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ

ಚರ್ಮ ಹೊಲಿವ ಯಂತ್ರ

ಶಸ್ತ್ರ ಚಿಕಿತ್ಸೆಯಾದ ನಂತರ ವೈದ್ಯರು ಗಾಯ ಹಾಕಿದ ಚರ್ಮ ಭಾಗವನ್ನು ಕೈಯಿಂದಲೇ ಹೊಲಿಯುತ್ತಿದ್ದರು. ಈಗ ವೈದ್ಯ ವಿಜ್ಞಾನಿಗಳು ಈ ಕೆಲಸವನ್ನು ಬೇಗನೆ ಮತ್ತು ವೇದನ ಇಲ್ಲದೆ ಮಾಡುವ ಸೂಕ್ಷ್ಮ ಯಂತ್ರವೊಂದನ್ನು ತಯಾರಿಸಿರುವರು. ಹೊಲಿಗೆ ಯಂತ್ರದಂತೆ ಇದಕ್ಕೆ ಸೂಜಿಯನ್ನು ಮೇಲ್ಭಾಗದಲ್ಲಿ ಪೋಣಿಸಿ ಗಾಯದ ಮೇಲಿಂದ ಇದನ್ನು ಹೊರಳಿಸಿದರೆ ಭದ್ರ ಸ್ಟಿಚಿಂಗ್ ಆಗುವುದು.

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ

ಇದೇ ತಾ 8-2 1948ನೇ ಆದಿತ್ಯವಾರ ಸಾಯಂಕಾಲ ಘಂ. 6ಕ್ಕೆ

ಮಂಗಳೂರಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ ವಿಖ್ಯಾತ ಗಾಯಕಿ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ ಇವರ

ಸಂಗೀತ ಕಚೇರಿ

ಆಸ್ಥಾನ ವಿದ್ವಾನ್ ಶ್ರೀ ಚೌಡಯ್ಯ - ಇವರ ಪಿಟೀಲು

ಶ್ರೀ ಕಲ್ಪತಿ ರಮಾನಾದನ್ - ಇವರ ಮೃದಂಗ

ಶ್ರೀ ಅಲಂಗುಡಿ ರಾಮಚಂದ್ರನ್ ಇವರ ಘಟವಾದ್ಯ

ಟಿಕೇಟು ದರ ರೂ. 1 25, 10 5

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ನಮ್ಮ [illegible] ಗಳಿಗೆ ಸಿಗುವ [illegible] ಪಟ್ಟಿ ಕಡಿತವಾಗಿರುವುದರಿಂದ ಕೆಲವು [illegible] ಸೀಟುಗಳನ್ನು [illegible] ರಿಸರ್ವ ಮಾಡಲು ಅಸಾಧ್ಯವಾಗಿರುವುದರಿಂದ ಮತ್ತು [illegible] ಬಸ್ಸುಗಳ [illegible] ಇದ್ದು ಅವುಗಳ [illegible] ಸೀಟುಗಳನ್ನು ರಿಸರ್ವ ಮಾಡಿಸಲ್ಪಡಿಸುವ ಸಾಧ್ಯವಿದ್ದಲ್ಲಿ ಮಾತ್ರ [illegible] ಸೀಟುಗಳನ್ನು ರಿಸರ್ವ ಮಾಡಬೇಕಾಗುತ್ತದೆ ಅಲ್ಲದೆ ಕೆಲವು ರೂಟುಗಳಲ್ಲಿ ಕೆಲವು [illegible] ಮತ್ತು ಕೆಲವು ರೂಟುಗಳಲ್ಲಿ [illegible] ಬಸ್ಸುಗಳಿರುವುದರಿಂದ [illegible] ಸ್ಥಳದ ವರೆಗೆ ಮಾತ್ರ ಸೀಟು ರಿಸರ್ವ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗಳೂರು–ಮುಲ್ಕಿ [illegible] ಮಾಡುವ [illegible] ಬಸ್ಸು ಮಾತ್ರ ರಿಸರ್ವ [illegible] ಸೀಟುಗಳನ್ನು ರಿಸರ್ವ ಮಾಡುವ ಸಂದರ್ಭಗಳಲ್ಲಿ [illegible] ಬಸ್ಸುಗಳ ಅನುಕೂಲತೆ ನೋಡಿ ಮುಂಚಿತವಾಗಿ [illegible] ಸೀಟುಗಳನ್ನು ರಿಸರ್ವ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳಿಗೆ [illegible] ಸೀಟುಗಳನ್ನು ರಿಸರ್ವ ಮಾಡುವ ಸಂದರ್ಭಗಳಲ್ಲಿ R T O [illegible] ಪರ್ಮಿಶನ್ [illegible] ಸೀಟುಗಳನ್ನು [illegible] ಬಸ್ಸುಗಳ ಅನುಕೂಲತೆ ನೋಡಿ [illegible] ಮಾಡಬೇಕಾಗಿರುವುದರಿಂದ, [illegible] ಸ್ಪೆಶಲ್ ಬಸ್ಸುಗಳನ್ನು ಅಪೇಕ್ಷಿಸುವವರು ಸ್ಪೆಶಲ್ [illegible] ಪರ್ಮಿಶನ್ ಪಡೆಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಒದಗಿಸಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತರ ಪ್ರಯಾಣಿಸದೆ ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಸದರೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳೆಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು.
29–3–1947

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

ವೀರ ಬಚ್ಚಾ

ಮಕ್ಕಳನ್ನು ಬಲಿಷ್ಠರನ್ನಾಗಿಯೂ ಆರೋಗ್ಯವಂತರನ್ನಾಗಿಯೂ ಮಾಡುವ ಶಕ್ತಿಸಾಧಕ 4 ಔನ್ಸಿನ ಬಾಟ್ಲಿಗೆ 1 ರೂ

ಬಿರ್ಲಾ ಲೆಬೋರೇಟರಿಸ್

ಸೇಲ್ಸ್ ಆಫೀಸು

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

- BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ
ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 { **About 54 lakhs**

Our experience of 37 years avialable to you for arranging Insurance Investment
It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕೊಡುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 26—12—1947 [ಸಂಚಿಕೆ 51]

ಪಾಕಿಸ್ತಾನದ ರಾಜ್ಯವಿಸ್ತರಣ ಯೋಜನೆ

ಲಾಹೋರಿನ ಶರಾಬನಂಗಡಿಯಲ್ಲಿ ಮಂತ್ರಾಲೋಚನೆ

ಲೀಗ್ ಮುತ್ಸದ್ದಿಗಳ ಗುಪ್ತ ಕಾರಸ್ಥಾನ್

ಹಿಂದುಸ್ಥಾನ್ ಟೈಮ್ಸ್ ಪತ್ರಿಕೆಯ ವಿಶೇಷ ಬಾತ್ಮಿದಾರನು ಲಾಹೋರನ್ನು "ಹೃದಯವಿಲ್ಲದ ನಗರ" ವೆಂದು ಕರೆಯುತ್ತ ಆ ನಗರದಲ್ಲಿನ ತನ್ನ ಅನುಭವಗಳನ್ನು ಹೀಗೆ ಬಣ್ಣಿಸುತ್ತಾನೆ

ಡಿ ಎಚ್ ಲಾರೆನ್ಸ್ ಎಂಬ ಗ್ರಂಥಕಾರನು ಮೆಕ್ಸಿಕೊ ನಗರವನ್ನು ಹೀಗೆ ವರ್ಣಿಸಿದ್ದನು "ಈ ನಗರವು ಸ್ವತಂತ್ರತೆಯ ಕುರಿತು ಯೋಚಿಸುವುದಿಲ್ಲ. [illegible]ಕಾರನು ತನ್ನ ಮುಂದಿನ ಹೊಸ ಕೊಲೆ ಪಾತಕವನ್ನು ನಿರ್ವಹಿಸುವ ಬಗೆಯನ್ನು ಯೋಚಿಸುವಂತೆ ಈ ನಗರ ತೋರುತ್ತಿದೆ. ಇದೊಂದು ಅಸ್ತವ್ಯಸ್ತ ಪರಿಸ್ಥಿತಿ. ಇಲ್ಲಿಯ ಸರಕಾರವೊಂದು ಅಪಾಯಕಾರಕವಾದ ಪ್ರಹಸನ ಕೂಟ"

ಲಾಹೋರಿಗೆ ಈ ವರ್ಣನೆ ಉತ್ತಮವಾಗಿ ಸಲ್ಲುತ್ತದೆ. ಇಂದು ಮೆಕ್ಸಿಕೊಗಿಂತ ಲಾಹೋರು ಹೆಚ್ಚು ಅಪಾಯಕಾರಕವಾಗಿದೆನ್ನಬಹುದು. ಕೇವಲ ತ[illegible] ರೈಲಿನಷ್ಟು ಅಪಾಯಕರವೆಂದರೂ ಅಂಶವಿಲ್ಲ. ಆ ರೈಲಿನ ಡ್ರೈವರನಿಗೆ ಬಂ[illegible] ಸಿ ಮಿತ[illegible]ಡಲು ಯಾವ ದಾರಿ ಕಾಣುವುದಿಲ್ಲ. [illegible]ಗ ಈ ರೈಲು ಒಂದು ಆಳವಾದ ನದಿಯ ಮೇಲಿನ ಸೇತುವೆಯ ಮೇಲೆ ಬಂದರೆ ವರ್ಣನೆ ಸಂಪೂರ್ಣವಾಗುವುದು.

ಕ್ರೂರ ವಾತಾವರಣ

ಲಾಹೋರಿನ ರಾಜಮಾರ್ಗದಲ್ಲಿ ಹೋದಷ್ಟೇ ಅಲ್ಲಿನ ಸಣ್ಣಪುಟ್ಟ ಮಾರ್ಗಗಳಲ್ಲೂ ಹಿಂಸೆಯ ಭೀಕರ ದುರ್ಗಂಧ ವಾತಾವರಣದಲ್ಲಿ ತೇಲಿದಂತಾಗಿ ಸಾರುತ್ತದೆ. ಗಡಿನಾಡಿನಲ್ಲಿ ಇಂದು ಪಠಾಣರು ಬಹಿರಂಗವಾಗಿ ಬಂದೂಕು ಹಿಡಿದು ತಿರುಗುವಂತೆ ಲಾಹೋರಿನಲ್ಲಿ ತಿರುಗುತ್ತಿಲ್ಲವಾದರೂ ಅವರ ಚಲನವಲನಗಳು ಸಂದೇಹಾಸ್ಪದವಾಗಿವೆ. ಉರ್ದು ಪತ್ರಿಕೆ ಮಾರುವ ಹುಡುಗರು "ಕಾಶ್ಮೀರದಲ್ಲಿ ಹಿಂದೂಸ್ಥಾನ ಸೈನ್ಯಗಳು ಹಿಮ್ಮೆಟ್ಟಿದ್ದವು" ಎಂದು ಬೊಬ್ಬಿಡುತ್ತ ಧಾವಿಸುವರು. ಸುಲಿಯಲ್ಪಟ್ಟು ಹಾಳುಗೆಡಲ್ಪಟ್ಟ ಅಂಗಡಿಗಳ ಮನೆಗಳ ಭದ್ರವಾಗಿ ಹಾಕಲ್ಪಟ್ಟ ಬಾಗಿಲುಗಳು ಅಲ್ಲಿನ ವಾತಾವರಣದ ಭೀಕರತೆಯನ್ನು ಹೆಚ್ಚಿಸುತ್ತವೆ.

ಈ ಚಿಹ್ನೆಗಳೆಲ್ಲ ಅವ್ಯಕ್ತವಾಗಿ ಶರೀರವನ್ನು ಕೊರೆಯುತ್ತಿರುವ ಮಾಂಸಾರ್ಬುದದ ಹುಣ್ಣಿನಂತೆ ತೋರುತ್ತಿವೆ. ಅಲ್ಲಿನ ಜನರ ಮುಖಗಳಲ್ಲಿ ಸ್ಪಷ್ಟ ನಿರಾಶೆಯ ಚಿಹ್ನೆಗಳು ಮೂಡಿ ಬರುತ್ತಿವೆ. ಅಧಿಕಾರಿಗಳನ್ನು ವಿಚಾರಿಸಿದರೆ "ಹೌದು ಈ ತರದ ಪರಿಸ್ಥಿತಿ [illegible] ಕಷ್ಟದ [illegible] ಆದರೆ ಇದಕ್ಕೆ ಹೊಣೆಗಾರರು [illegible] ಸಾವೇನು ಮಾತಲಿಕ್ಕಾಗ[illegible] ಆ ಇಂತಹ ದಿವಸಗಳ ಪ್ರಶ್ನೆವಾದ [illegible] ಕಾರಿಗಳ [illegible] ದೇಶದಲ್ಲಿ ಸ್ಥಾಪಿಸಿದ [illegible] ಬೆದರಿಕೆ [illegible] ಲಾಹೋರಿನ ಅಧಿಕಾರಿಗಳ ಗೊಣಗುಟ್ಟುವರು.

[illegible] ಕಟ್ಟುವ ಸಮಾನ [illegible]ವುದು. ಅಲ್ಲಿನ ಮುಸ್ಲಿಮೇತರ ಅಂಗಡಿಗಳನ್ನು ವಶಪಡಿಸಿಕೊಂಡ ಮುಸ್ಲಿಮರು ಆ ಅಂಗಡಿಗಳಲ್ಲಿನ ಸೊತ್ತುಗಳನ್ನು ಮಾರಿ ನಗದು ಹಣವನ್ನು ಶೇಖರಿಸುವುದರಲ್ಲಿ ಆಸಕ್ತರಾಗಿದ್ದಾರೆ. [illegible] ಆ ನಗರವು [illegible] ವರ್ಣನ ಹೊಂದಿದೆ. ಬೀದಿಗಳೆಲ್ಲ [illegible] ದುರ್ಗಂಧವಾಗಿವೆ. [illegible] ನವು ಭರದಿಂದ ಸಾಗುತ್ತಿದೆ. ಲಾಹೋರಿನಲ್ಲಿ ಈಗ ಬಿಕರಿಯಾಗುವವರಲ್ಲಿ ಹೆಚ್ಚಿನವರು ದಾರಿದ್ರ್ಯಾವಸ್ಥೆಯಲ್ಲಿ ಇರುವವರೆಂದು ಹೇಳಬಹುದು.

ಪಂಜಾಬನ್ನು ವಿಭಾಗಿಸಿದ ಪರಿಣಾಮದಿಂದುಂಟಾದ ಅವ್ಯವಸ್ಥೆಯು ಈ ನಗರ ಜೀವನದ ಪ್ರತಿಯೊಂದು ಜೀವನವ್ಯವಹಾರದಲ್ಲಿಯೂ ದೃಷ್ಟಿಗೆ ತೋರುತ್ತದೆ. ಲಾಹೋರಿನಲ್ಲಿಂದು ಒಳ್ಳೆ ಹಣ್ಣುಗಳು ಸಿಗುತ್ತಿಲ್ಲ. ಮಾತ್ರವಲ್ಲದೆ ಕೈಗಳ [illegible] ಕತ್ತಲೆಗಳು ಅಪರೂಪವಾಗಿವೆ. ಹೋಟೆಲು ವ್ಯಾಪಾರಗಳು ಕಡಿಮೆಯಾಗಿರುವುದರಿಂದ ಜಟಕಾ ಗಾಡಿಗಳ [illegible] ಮತ್ತು ಅಂಗಡಿ ಕೆಲಸಗಾರರು ಅಲ್ಲಿ ಅದೆಷ್ಟು ಕಡಿಮೆ ಇರುವರೆಂದರೆ ಇಂದು ಅವರಿಗೆ ಕೇಳಿದಷ್ಟು ಸಂಬಳ ಸಿಗುವುದು.

ಇಂದಿನ ಲಾಹೋರದ ಆಡಳಿತದಾರರು ಆ ನಗರವನ್ನು ಸಂಪೂರ್ಣ ಬದಲಾಯಿಸಲು ಪ್ರಯತ್ನಪಡುವಂತೆ ತೋರುತ್ತದೆ. ಮುಸ್ಲಿಮೇತರ ಹೆಸರು ವಾತಾವರಣ, ಆಕೃತಿ ಕಟ್ಟಿದ ರಚನೆಗಳನ್ನು ಮುಸಲ್ಮಾನಿ ವಿಧಾನಕ್ಕೆ ತಿರುಗಿಸಲು ಯತ್ನಗಳಾಗುತ್ತಿವೆ. ಕೃಷ್ಣನಗರವೆಂಬುದು ರಸೂಲಪುರವೆಂಬದಾಗಿದೆ. ಲಾರೆನ್ಸ್ ಉದ್ಯಾನವು ಜಿನ್ನಾ ತೋಟವಾಗಿದೆ. ಇದೇ ರೀತಿ ಅನೇಕ ಮಾರ್ಪಾಟುಗಳಾಗಿವೆ. ಮುಸ್ಲಿಮೇತರರ ಅಂಗಡಿಗಳ ಮೇಲೆ "ಹೊಸ ಕಂಪನಿ"ಗಳ ಹೆಸರ ಬರೆದು ಹಾಕಲಾಗಿದೆ. ಇದರ ಪರಿಣಾಮವಾಗಿ ಈಗ ಸುಲಭವಾಗಿ ಟಪ್ಪಾಲು [illegible] ಮಾಡಲು ಕಷ್ಟತರವಾಗುತ್ತದೆ.

ಒಂದು ಕಾಲದಲ್ಲಿ ಇಡೀ ಉತ್ತರಹಿಂದುಸ್ಥಾನದಲ್ಲೇ ಬಹಳ ಮನರಂಜನೆಯ ನಗರವಾಗಿದ್ದ ಲಾಹೋರು ಇಂದು ಆ ಗುಣದಿಂದ ಸಂಪೂರ್ಣ ಲೋಪಗೊಂಡಿಲ್ಲ. ಸಾಯಂಕಾಲದ ಹೊತ್ತಿನಲ್ಲಿ ಈಗಲೂ ಅಲ್ಲಲ್ಲಿ [illegible]ಗಳೂ ಕೆಲವು ನಾಟ್ಯ ನೃತ್ಯಗಳೂ, ಮೇರೆ ಕೆಲವು ಕಡೆ ಸಂಗೀತ ಕಚೇರಿಗಳೂ ನಡೆಯುತ್ತಿವೆ. ಇವುಗಳಲ್ಲಿ ಭಾಗವಹಿಸುವವರು ಹೆಚ್ಚಾಗಿ ಪಾಕಿಸ್ಥಾನದ ಸೈನ್ಯಾಧಿಕಾರಿಗಳೇ ಆಗಿರುತ್ತಾರೆ.

ಆಕ್ರಮಣ ಸುದ್ದಿ

ಇಷ್ಟೊಂದು ಗಲಿಬಿಲಿಗೊಳಗಾದ ನಗರದಲ್ಲಿ ಶೀಂದಿ ಶರಾಬು ಮುಂತಾದ ಮಾದಕ ದ್ರವ್ಯಗಳಿಗೆ ಕೊರತೆ ಒಂದಿಲ್ಲ. ಮದ್ಯನಿಷೇಧ ಮಾಡುವ ಇಸ್ಲಾಮಿ ಮತ ಪ್ರಧಾನವಾದ ರಾಜಧಾನಿಯಲ್ಲಿ ಮಾದಕ ಪದಾರ್ಥಗಳಿಗೆ ಕೊರತೆಯಿಲ್ಲದಿರುವುದು ಒಂದು ಕೌತುಕದ ಸಂಗತಿ. ಕುಡಿದು ಮತ್ತರಾದ ಸೈನ್ಯಾಧಿಕಾರಿಗಳು ಪಾಕಿಸ್ಥಾನದ ಗಡಿಗಳನ್ನು ವಿಸ್ತರಿಸುವ ಉದ್ದುದ್ದ ಮಾತುಗಳನ್ನು ಅಮಲಿನ ಗುಂಗಿನಲ್ಲಿ ಉದ್ಗರಿಸುವುದನ್ನು ಲಾಹೋರಿನಲ್ಲಿ ಸಾಮಾನ್ಯವಾಗಿ ಕೇಳಬಹುದು.

ಕಾಶ್ಮೀರದಲ್ಲಾದ ಸಂಪೂರ್ಣ ಸೋಲಿನ ಧೈರ್ಯಗುಂದಿದುದರ ಸ್ಥೈರ್ಯದ ಪರಿಣಾಮವಿದು. ಆದರೆ ಈ ಅಮಲಿನ ಮಾತನ್ನು ನಿರ್ಲಕ್ಷಿಸುವುದಾದರೂ ತಪ್ಪಾಗಬಹುದು. ಪಾಕಿಸ್ತಾನದ ರಾಜಕೀಯ ಗಾಳಿಯೆತ್ತ ಕಡೆ ಬೀಸುವುದೆಂಬುದನ್ನು ಇದು ತೋರಿಸುತ್ತದೆ.

THE
UNITED INDIA LIFE ASSURANCE CO., LTD.
ESTD 1906 | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore.

ನಾರದ ವೈಜ್ಞಾನಿಕ ವರದಿ

ಪರಿಮಳದ ಇದ್ದಲು

ವಾಶಿಂಗ್ಟನ್ನಿನ ಜೇಮ್ಸ್ ಸೂರ್ ಎಂಬ ಸಂಶೋಧಕನು ಮೋಟಾರಿಗೆ ಹಾಕುವ ಇದ್ದಲಿನ ಗೇಸನ್ನು ಪರಿಮಳ ಯುಕ್ತವಾಗಿ ಮಾಡುವ ವಿಧಾನವನ್ನು ಕಂಡುಹಿಡಿದಾಗ ಕೊಪ್ಪರಿಗೆ ಸಿಕ್ಕಿದಷ್ಟು ಸಂತೋಷಪಟ್ಟನು. ಇಂಗ್ಲೆಂಡ್ ಅಮೇರಿಕಾ ಯುರೋಪ್ ದೇಶಗಳಲ್ಲಿ (ನಮ್ಮ ದೇಶದ ಬೊಂಬಾಯ್ ಕಲ್ಕತ್ತಾಗಳಲ್ಲಿ ಕೂಡಾ) ಇದ್ದಲು ಗೇಸಿನಿಂದ ಮೋಟಾರು ಓಡಿಸಲಿಕ್ಕೆ ಮಾತ್ರವಲ್ಲ ದೀಪವನ್ನು ಹಚ್ಚಲಿಕ್ಕೆ, ಒಲೆ ಹಚ್ಚಲಿಕ್ಕೂ ಉಪಯೋಗಿಸುವರು. ನಳಿಗೆ ಮತ್ತು ಸರಿಗೆಗಳ ಮೂಲಕ ಅದು ಮನೆಗಳಿಗೆ ಒಯ್ಯಲ್ಪಡುವುದು.

ಇದ್ದಲಿನ ಬಹು ಗೇಸು ದುರ್ವಾಸನೆಯದಾಗಿದ್ದು ಅನೇಕರಿಗೆ ಅದರಿಂದ ವಾಕರಿಕೆಯುಂಟಾಗುತ್ತದೆ. ಮೇಲ್ಕಂಡ ಸಂಶೋಧಕನು ಅದನ್ನು ನಾನಾ ತರದ ಹೂವುಗಳ ಪರಿಮಳದಂತೆ ಮಾಡುವನೆಂದಾಗ ಅನೇಕರಿಗೆ ಮೊದಲು ಸಂತೋಷವಾದರೂ ನಂತರ ಧೀರ್ಘ ವಿಚಾರ ಮಾಡುವಾಗ ಈ ಹೊಸ ಶೋಧನೆಯಿಂದ ಹಾನಿಯುಂಟೆಂದೂ ಅವರಿಗೆ ತಿಳಿಯಿತು ಕಾರಣ ಇದ್ದಲು ಗೇಸು ಹರಿಯುವ ನಳಿಗೆಯಿಂದ ಅಕಸ್ಮಾತ್ ಸೋರಿ ಹೊರಬಂದರೆ ಅದಕ್ಕಿರುವ ದುರ್ವಾಸನೆಯಿಂದ ಕೂಡಲೇ ತಿಳಿಯುವುದು ಅದು ಪರಿಮಳಯುಕ್ತವಾಗಿದ್ದರೆ ಜನರು ಅದು ಯಾರದೊ ಕೂದಲು ಎಣ್ಣೆಯ ಪರಿಮಳವೆಂದು ತಿಳಿದು ಸಕಾಲದಲ್ಲಿ ಎಚ್ಚರಿಕೆ ತೆಗೆದುಕೊಳ್ಳದಂತಾಗಿ ತುಂಬಾ ಹಾಸಿಯಾಗಬಹುದು ಇದಕ್ಕಾಗಿ ಜನರು ಹೊಸ ಶೋಧನವನ್ನು ತಿರಸ್ಕರಿಸಿದರು

ಪ್ಲೆಸ್ಟಿಕ್ ಬಳೆಗಳು

ಆಫ್ರಿಕದ ಕೊಂಗೊ ಅರಣ್ಯದ ಮತ್ತಿತರ ಕಡೆಗಳಲ್ಲಿನ ನಿಗ್ರೊ ತುರುಣಿಯರು ಉತ್ತಮ ನಾಟ್ಯಗಾರ್ತಿಯರು ಅವರು ಇದುವರೆಗೆ ಕೈಗಳಿಗೆ ಗಾಜಿನ ಬಳೆಗಳನ್ನು ತೊಟ್ಟು ತಮ್ಮ "ಸಮರ ನೃತ್ಯ"ವನ್ನು ಮಾಡುತ್ತಿದ್ದರು ನೃತ್ಯದ ಬಿರುಸಾದ ಹಾವಭಾವದ ಉರುಳಾಟದಲ್ಲಿ ಗಾಜಿನ ಕಂಕಣಗಳು ಒಡೆದು ಚೂರಾಗುತ್ತಿದ್ದವು ಈಗ ವಿಜ್ಞಾನಿಗಳು ಪೆಲೆಸ್ಟಿಕಿನಿಂದ ಒಡೆಯದ ಬಳೆಗಳನ್ನು ನಾನಾ ಬಣ್ಣಗಳಲ್ಲಿ ತಯಾರಿಸಿರುವುದರಿಂದ ನಿಗ್ರೊ ನರ್ತಕಿಯರು ಮುಂದೆ ತಮಗೆ ಗಾಜಿನಿಂದ ನಷ್ಟವಾಗಲಿ ಗಾಯವಾಗಲಿ ಆಗುತ್ತದೆಂದು ನಿರೀಕ್ಷಿಸಬೇಕಾಗಿರುವುದಿಲ್ಲ

ಅಂಧ ಪತ್ರಿಕೆ

ರೇಡಿಯೊಗಳಿಲ್ಲದ ಕಾಲದಲ್ಲಿ ಕುರುಡರಿಗೆ ಜಗತ್ತಿನ ವರ್ತಮಾನಗಳನ್ನು ತಿಳಿಕೊಳ್ಳುವ ಸಂದರ್ಭಗಳಿಲ್ಲದೆ ಇನ್ನಷ್ಟು ಹೆಚ್ಚಿನ ಅಂಧಕಾರದಲ್ಲಿರುತ್ತಿದ್ದರು ರೇಡಿಯೊಗಳಾದರೊ ಎಲ್ಲರಿಗೂ ಕೇಳಲು ಸಿಗುವಂಥವುಗಳಲ್ಲ ಈಗ ಬ್ರಿಟಿಷ್ ಕುರುಡರ ಸಂಘದವರು ತಮ್ಮ ಸದಸ್ಯರಿಗಾಗಿ ಸ್ಪರ್ಶ ಜ್ಞಾನದಿಂದ ಓದಲಿಕ್ಕಾಗುವ ಬ್ರೈಲ್ ಸಂಕೇತಗಳಿಂದ ರಚಿತವಾದ ವರ್ತಮಾನ ಪತ್ರಿಕೆಗಳನ್ನು ತಯಾರಿಸಿ ಹಂಚುವ ಏರ್ಪಾಡು ಮಾಡಲಿರುವರು ಬ್ರಿಟನಿನಲ್ಲಿ ಹೆಚ್ಚು ಕಡಿಮೆ ಎಲ್ಲಾ ಕುರುಡರೂ ಸ್ಪರ್ಶಾಕ್ಷರ ಜ್ಞಾನವಿದ್ದವರಾದುದರಿಂದ ಇದು ತನಕ ಅವರಿಗಿಲ್ಲದೊಂದು ಸೌಕರ್ಯವು ದೊರೆಯುವಂತಾಯಿತು.

ಯಂತ್ರ ಸಂಶೋಧನೆಗಳು

★ ಮೋಟಾರಿನ ಅಡಿ ಭಾಗಗಳು ಧೂಳು, ನೀರುಗಳಿಂದ ಹಾಳಾಗದಂತೆ ರಕ್ಷಿಸುವ ರಬ್ಬರಿನ ದ್ರಾವಕ ಮಿಶ್ರವಾಗಿರುವ ಪೈಂಟನ್ನು ಕಂಡು ಹಿಡಿದಿರುವರು. ಒಂದು ಸಲ ಲೇಪಿಸಿದರೆ ಹಲವು ವರ್ಷ ಬರುವುದು

★ ಮಂಜು ಮುಸುಕಿದ ರಾತ್ರಿಗಳಲ್ಲಿ ವಿಮಾನಗಳಿಗೆ ಸ್ಪಷ್ಟವಾಗಿ ಇಳಿಯುವ ನೆಲ ಕಾಣುವ 3 ಕೋಟಿ ಮೇಣದ ಬತ್ತಿಗಳ ಪ್ರಕಾಶವಿರುವ ವಿದ್ಯುದೀಪಗಳನ್ನು ವಿಮಾನ ನಿಲ್ದಾಣಗಳಲ್ಲಿಡುವ ಏರ್ಪಾಡುಗಳಾಗಿವೆ

★ ಗಾಳಿಹಾಕಲಿಕ್ಕಿರದ ರಬ್ಬರಿನ ಟಾಯರುಗಳನ್ನು ಕಂಡು ಹಿಡಿದಿರುವರು ಇವು ಹಲವು ವರ್ಷಗಳಾದರೂ ಸವೆಯದೆ ಸೇವೆ ಮಾಡುತ್ತವೆ

★ ಚಾಲಕನ ಸಹಾಯವಿಲ್ಲದೆ ಇಂಗ್ಲೆಂಡಿನಲ್ಲಿ ಒಂದ [illegible] ರೇಡಿಯೊ ಕಿರಣ [illegible] ಯಂತ್ರ ತಯಂತ್ರಗಳ ಸಹಾಯದಿಂದ ಯಶಸ್ವಿಯಾಗಿ ಓಡಿಸಲಾಯಿತು. ಕೆಂಪು ದೀಪವನ್ನು ನೋಡಿದೊಡನೆ ಇದು ನಿಲ್ಲುವುದು-ತನ್ನಷ್ಟಕ್ಕೆ!

ತರಕಾರಿ ವಿಜ್ಞಾನ

ಶ್ರೀಮಂತ ಗೃಹಿಣಿಯರು ನಾಜೂಕು ವಸ್ತುಗಳಿಗೆ ಮನಸೋಲುವರು ಮಿಲ್ಲಿನ ಅಕ್ಕಿ, ಬೊಂಬಾಯಿ ಬಿಳಿ ಗೋದಿ ಹಿಟ್ಟು ಇಷ್ಟೆಂದರೆ ಬಹಳ ಪ್ರೀತಿ ಆದರೆ ಇವುಗಳಲ್ಲಿ ಶರೀರ ಪೋಷಕ ಆಹಾರ ಮೌಲ್ಯಗಳಿಲ್ಲ - ಯಂತ್ರದ ತಿರುಗುವಿಕೆಯಲ್ಲೂ, ಅದರ ಉಷ್ಣದಿಂದಲೂ ಮಾಯವಾಗುತ್ತವೆ ಆದುದರಿಂದ ಕೆಂಪಕ್ಕಿಯೂ, ಕಂದು ಗೋಧಿಯೂ ಅತ್ಯುತ್ತಮವಾದವು ತರಕಾರಿಗಳನ್ನು ಹೆಚ್ಚು ಬೇಯಿಸಿದರೆ ಅವುಗಳೊಳಗಿನ ಜೀವಾತುಗಳು ನಾಶವಾಗುತ್ತವೆ ಇವನ್ನು ಹಸಿಯಾಗಿ ತಿನ್ನುವುದೊಳಿತು ಬೆಂಡೆ ಅಳಸಂದೆ, ಮುಳ್ಳಂಗಿ, ನೀರುಳ್ಳಿ, ಕುಂಬಳಕಾಯಿ, ಸೌತೆಕಾಯಿ ಇವನ್ನು ಹೆಚ್ಚು ಬೇಯಿಸಬಾರದು. ತಣ್ಣೀರಿನಲ್ಲಿ ಹಾಕಿ ಬಿಸಿ ಮಾಡುವುದು ಇನ್ನಷ್ಟು ಕೆಟ್ಟದ್ದು ಬೇಯಿಸಬೇಕೆಂದಿದ್ದರೆ ಕುದಿಯುವ ನೀರಲ್ಲಿ ಹಾಕಿ ತೆಗೆಯುವುದುತ್ತಮ ಕೆಲವರ ಕಾಯಿಪಲ್ಯಗಳಿಗೆ ರುಚಿತರಲು ಸೋಡಾ ಹುಡಿ ಮೊದಲಾದುವುಗಳನ್ನು ಬೆರೆಸುತ್ತಾರೆ ಇದರಿಂದ ಪೌಷ್ಟಿಕ ಜೀವಾತುಗಳು ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿ ಮಾಯವಾಗುತ್ತವೆ ಅನೇಕ ತರಕಾರಿಗಳ ಮತ್ತು ಕಾಯಿ ಗೆಡ್ಡೆ ಗೆಣಸುಗಳ ಸಿಪ್ಪೆ ತೆಗೆದ ಪದಾರ್ಥ ಮಾಡುವುದು ರೂಢಿ ಸಿಪ್ಪೆ ತೆಗೆಯುವುದರಿಂದ ಅನೇಕ ಉಪಯುಕ್ತ ಜೀವಾತುಗಳು ನಷ್ಟವಾಗುತ್ತವೆ ಬಟಾಟೆಯನ್ನು ಸಿಪ್ಪೆ ತೆಗೆಯದೇ ಬೇಯಿಸುವುದುತ್ತಮ ಅನ್ನ ಮಾಡುವಾಗ [illegible] ಬೇಕೆಂದಷ್ಟೇ [illegible] ಇಟ್ಟು [illegible] ಇಂಗಿಸ [illegible] ಸಂಪೂರ್ಣ ಆಹಾರ ಸತ್ವಗಳ [illegible] ಹಿಂದೆ [illegible] ತಜ್ಞರ ಸಲಹೆ ಕೊಟ್ಟಿದ್ದಾರೆ

1948 ಶಾರದಾ 1948

ಡೈರಿ

ಮತ್ತು

ಕೆಲೆಂಡರುಗಳು

ಪೂರಾಟಕ್ಕೆ ಸಿದ್ಧವಾಗಿವೆ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪಿತ: ೧೯೦೬)

ದೇಶೋನ್ನತಿಯನ್ನು ಬಯಸುವುದು ಪ್ರತಿಯೊರ್ವ ವ್ಯಕ್ತಿಯ ಕರ್ತವ್ಯವು ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು, ವಣಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು, ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ

ESTD: 1906

CANARA BANK, LIMITED.

ಕ್ರಿಮಿನಾಶಕ ಜಾಂಬಕು ಉತ್ತಮ ಮುಲಾಮು. ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮ ವ್ಯಾಧಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾಧಿಯನ್ನು ಮುಖ್ಯವಾಗಿ ಕುರಿಕಜ್ಜಿ, ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುತ್ತದು

ಜಾಂಬಕನ್ನೇ ಉಪಯೋಗಿಸಿರಿ

Zam-Buk

- ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು

ಅರಸು ಲಕ್ಷಣದ ಮಹಾ ಭಾರತೀಯರೀರ್ವರು

ಬಿಹಾರಿನ ರಾಜೇಂದ್ರ, ಮದ್ರಾಸಿನ ಚಕ್ರವರ್ತಿ

ಉತ್ತರದ ಮಹಾತ್ಮಾ, ದಕ್ಷಿಣದ ಗಾಂಧಿ

ಕಳೆದ ಮತ್ತು ಈ ತಿಂಗಳೆರಡರಲ್ಲಿ ಇವರ ಮಹಾ ಪುರುಷರ ಜನ್ಮದಿನ ಸ್ಮಾರಕ ನೃಡಲಾಯಿತು. ಶ್ರಾಜೇಂದ್ರ ಬಾಬುಗಳಿಗೆ ಅರವತ್ತು ನಾಲ್ಕು ರಾಜಾಜಿಗಳಿಗೆ ಎಪ್ಪತ್ತು ವಯಸ್ಸುಗಳಾದುವು

ರಾಜೇಂದ್ರ ಬಾಬುಗಳ ಮೂಲ ಪುರುಷರು ಸಂಯುಕ್ತ ಪ್ರಾಂತ್ಯಕ್ಕೆ ಸೇರಿದ ಬಿಹಾರದಲ್ಲಿ ನೆಲೆನಿಂತಿದವರು ಆಗ ಅವರ ಪ್ರಾಂತ್ಯ ಬಂಗಾಳಕ್ಕೆ ಸೇರಿದ್ದು ರಾಜೇಂದ್ರರು ಕಲ್ಕತ್ತಾ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯಲ್ಲಿ ಎಲ್ಲರನ್ನು ಮೀರಿಸಿದ ಪ್ರಥಮ ಬಿಹಾರಿ ವಿದ್ಯಾರ್ಥಿ ಗಳಾಗಿದ್ದರು. ಮತ್ತೆ ಎಂ ಎಂ ತನಕ ಅವರಿಗೆ ಈ ಸ್ಥಾನವು ಸುಲಭವಾಗಿ ಲಭಿಸಿದ್ದು ಕಲಿತದಲ್ಲಿ ಅದ್ವಿತೀಯರೆನಿಸಿದರು.

ಬಾಬುಗಳ ಬಾಲಶಿಕ್ಷರು ಮುಸಲ್ಮಾನ ಉಪಾಧ್ಯಾಯರಿಂದ ನಿರ್ವಹಿಸಲ್ಪಟ್ಟಿದ್ದು ಉರ್ದುವನ್ನವರು ಚೆನ್ನಾಗಿ ಬಲ್ಲರು ಆದರೆ ಅವರ ಇಚ್ಛೆ ಬಿಹಾರಿ ಹಿಂದಿ ಮನರಂಜಕ ವಾದುದಾಗಿದೆ

ಗಾಂಧಿಜಿಯವರು ಕಠಿಣ ಅಭ್ಯಾಸಾಚರಣೆಯಿಂದ ಅಹಿಂಸಾ ವ್ಯಕ್ತಿಯನ್ನು ನಶಪಡಿಸಿಕೊಂಡಿರುವುದಾದರೆ ರಾಜೆನ್ ಬಾಬುಗಳಿಗೆ ಅದು ಹುಟ್ಟಿನಿಂದಲೇ ಪಸ್ತಗತವಾಗಿದೆ ಅವರದು ಅತ್ಯಂತ ಸಾಧು ಪ್ರಕೃತಿ [illegible] ಇರುವರೋ ಅಷ್ಟು ಸಾಯಕತ್ವ [illegible] ಕಟ್ಟಿಟ್ಟದ್ದು ಅವರ ಶ್ರದ್ಧೆ [illegible] ರ್ಕವಾದುದು ಅವರ ಮೈತ್ರಿ [illegible] ಲಂಕವಾದುದು ಅವರ ಮನಸ್ಸು ಮಗುವಿನಷ್ಟು ಸರಳ ಬುದ್ಧಿ ನಷ್ಟು ಪ್ರಶಾಂತ ಹೀಗಾಗಿ ಗಾಂಧೀಜಿಯವರಿಗಾದರೂ ಒಬ್ಬೊಬ್ಬ ಶತ್ರುಗಳಿರಬಹುದು ರಾಜೇಂದ್ರ ಪ್ರಸಾದರಿಗೆ ವೈರಿಗಳೆಂಬರೇ ಇಲ್ಲ ಅವರ ಸಂಪರ್ಕಹೊಂದಿದವರು ಅವರೊಡನೆ ಸ್ನೇಹದಲ್ಲಿರುವರು ಇತರರು ಶತ್ರುಗಳನ್ನು ಗೆಲ್ಲಿ ಪುದಾದರೆ ಇವರು ತಮ್ಮ ನಿಷ್ಕಪಟ ಬಾನದಿಂದ ಮಿತ್ರರನ್ನು ಗೆಲ್ಲುತ್ತಾರೆ ದೇವರ ತಲೆಯ ಮೇಲಿನ ಹೂ ತಪ್ಪಿತೇ ವಿನಃ ರಾಜೇಂದ್ರರ ಮುಖದಲ್ಲಿನ ನಗುಗಳೆಗ ಎಂದಿಗೂ ಮಾಯವಾದುದಿಲ್ಲ ತಮ್ಮೊಂದು ನಗುವಿನಿಂದ ಜಗತ್ತನ್ನೇ ಜಯಿಸುವ ಅಸಾಧಾರಣ ಶಕ್ತಿ ಅವರಲ್ಲಿದೆ

ಹದಿನೆರಡನೆ ವಯಸ್ಸಿನಲ್ಲಿ ದಾವೆಯಾಗಿ ರಾಜೇಂದ್ರ ಪ್ರಸಾದರು ಅತಿ ಎಳೆಯದರಲ್ಲೇ ಸಂಸಾರಾನುಭವಿಗಳಾಗಿದ್ದಾರೆ ಈಗ ಅವರ ಪಾಲಿಗೆ ಹನ್ನೆರಡು ಮಕ್ಕಳು ಗಳಿವೆ. ಸ್ವತಂತ್ರ ಭಾರತದ ಮಂತ್ರಿಗಳಾಗಿದ್ದರೂ, ಘಟನಾ ಸಮಿತಿಯ ಮಹೋನ್ನತ ಪದವಿ ಗಳಿಸಿದ್ದರು ಅವರ ಜೀವನ ಸರಳ ಅವರ ಸಂಸಾರ ಜೀವನ ಸಾಮಾನ್ಯ. ರೈಲ್ವೆಯ ಮೂರನೇ ತರಗತಿಯಲ್ಲಿ ಪ್ರಯಾಣ ಮಾಡುತ್ತ ಅತೀ ದೀನರೊಡನೆ ಸಂಪೂರ್ಣ ಸಂತೃಪ್ತಿಯಿಂದ ಬೆರೆಯುವ ಇವರ ಸ್ವಭಾವವು ಅತ್ಯಂತ ಮನಕರ್ಷಕವಿದೆ

ಗಾಂಧೀಜಿಯವರೊಡನೆ ಚಂಪಾರಣ್ಯ ಸತ್ಯಾಗ್ರಹದ ಕಾಲದಲ್ಲಿ ರಾಜೆನ್ನರು ಮಹಾತ್ಮರೊಡನೆ ಸಂಪರ್ಕಕ್ಕೆ ಬಂದರು. ಅಂದಿನಿಂದ ರಾಜಕೀಯವೇ ಅವರ ಉದ್ಯೋಗವಾಯಿತು. ಇಷ್ಟಾದರೂ ಹದಿನಾಲ್ಕು ವರ್ಷಗಳ ತನಕವ ಮಹೋನ್ನತನ ಮುಖಂಡನ ವಿಷಯ ಯಾರೂ ಅರಿತಿರಲಿಲ್ಲ. ಬಿಹಾರದ ಅನಭಿಶಕ್ತ ರಾಜನಂತೆ ಇವರು ಅತ್ಯಂತ ಪೂಜನೀಯರೂ ಆದ ಬಿಹಾರದ ಧುರೀಣರಾಗಿದ್ದರು.

ಮತ್ತೆ 1934ರಲ್ಲಿ ಬಿಹಾರದಲ್ಲಿ ಭೂಕಂಪದ ದುರಂತವಾಗಿ ಅನೇಕ ಪ್ರಾಂತ್ಯ ಭಾಗಗಳು ಬಿಸ್ಮಾನಶೇಷವಾದಾಗ ರಾಜೇಂದ್ರ ಪ್ರಸಾದರು ತಮ್ಮ ಜನತೆಯ ಸಂಕಷ್ಟ ನಿವಾರಣೆಗೆ ಟೊಂಕಕಟ್ಟಿ ಅಖಿಲ ಭಾರತದ ಬೆಳಕಿಗೆ ಬಂದರು ಆಗ ಅವರ ಆರೋಗ್ಯವು ಭಯಂಕರ ಉಬ್ಬಸ ರೋಗದಿಂದ ಕೃಶವಾಗಿ ಶರೀರವು ಪಾರಶೂನ್ಯತವಾಗಿತ್ತು. ಆದರೂ ತನ್ನ ಸ್ವಸುಖವನ್ನು ಗಣಿಸದೆ ಬಾಬುಗಳು ದೀನೋದ್ಧಾರದ ಪರಿಹಾರ ಕಾರ್ಯದಲ್ಲಿ ತನುಮನಗಳನ್ನಿತ್ತರು

ಇಂದು ನಮಗೆ ಸ್ವಾತಂತ್ರ್ಯ ಗಳಿಸಿಕೊಟ್ಟ ರಾಷ್ಟ್ರೀಯ ಸಂಸ್ಥೆಯ ಏದ ಕಾಂಗ್ರೆಸ್ಸು ಆಂತರೀಕ ಸಿರ್ಬಲತೆಯಿಂದ ಜರ್ಜರಿತವಾಗಿರುವಾಗ ಅವರನ್ನು ಹಿಂದಿನಂತೆ ಅಧ್ಯಕ್ಷ ಸ್ಥಾನಕ್ಕೆ ಸಮರ್ಥವಾಗಿ ಪುನಃ ರಚಿಸಲು ರಾಜೇಂದ್ರ ಬಾಬುಗಳಷ್ಟು ಯೋಗ್ಯರಿನ್ನೊಬ್ಬರಿಲ್ಲ ಅವರ ಶ್ರದ್ಧಾ ಪೂರ್ವಕ ಸರಳತೆಯೇ ಕಾಂಗ್ರೆಸಿನೊಳಗಿನ ಲೋಪ ದೋಷಗಳನ್ನು ಕಳೆದು ಕಷ್ಟಗಳನ್ನು ತೊಳೆದು ಒಬ್ಬರು. ಅವರ ನೇತೃತ್ವದಲ್ಲಿ ರಾಷ್ಟ್ರ ಸಂಸ್ಥೆಯು ಪುನಃ ಸಮಾಜೋದ್ಧಾರದ ಕಾರ್ಯಕ್ಕೆ ಸಿದ್ಧವಾಗುತ್ತದೆಂಬುವ ಆಶಾಂತ ತೃಪ್ತಿಯು ಸಂಗತಿ ಅವರು ರಾಜಾಜಿಯೂ ಉತ್ತರ ಹಿಂದೂಸ್ಥಾನ ಮಹಾತ್ಮರು

ದಕ್ಷಿಣದ ಗಾಂಧಿ

ರಾಜೇಂದ್ರ ಬಾಬುಗಳ [illegible] ವರ್ಣಿಸಿದ ಸ್ವಭಾವ [illegible] ತುನವರೆಂದರೆ ರಾಜಾಜಿಯವರು ತಮ್ಮ ಪ್ರಖರ ತರ್ಕ ಶಕ್ತಿ ವಿಚಾರ ಪ್ರತಿಭೆಗಳಿಂದ ಎದುರಾಳಿಗಳನ್ನು ತಮ್ಮ ಅಧೀನ ಮಾಡಿಕೊಳ್ಳುವರು. ಸರ್ವತ್ರದಲ್ಲಿ ಇವರು ರಾಜೆನ್ ಬಾಬುಗಳನ್ನು ಮೀರಿಸುತ್ತಾರೆ ಅವರು ಕೋಟು ಹಾಕಿ ಟೋಪ್ಪಿ ಇಟ್ಟುಕೊಂಡರೆ ಇವರು ಜುಬ್ಬ ಶಾಲಿನಲ್ಲಿ ಸುದಾರಿಸುತ್ತಾರೆ ರಾಜೇಂದ್ರ ಬಾಬುಗಳ ಬೂಟ್ಸಿನ ಬದಲಿನ ಇವರ ಚಪ್ಪಲ್ ಅವರ ಹೃದಯಂಗಮ ಪಿಸಂತಿಯ ಸ್ಥಾನದಲ್ಲಿ ಇವರ ಅಲಂಕಾರಿಕ ಭಿಷಯ ನಿರೂಪಣೆ

ಆದರೆ ತರು ಸಮಸ್ಯಾತ್ಮಿಕವಾದ ಸಂಗತಿಗಾದರೂ ಸುಲಭವಾಗಿ ಪರಿಹಾರ ಕಂಡು ಹಿಡಿಯುವ ತೀಕ್ಷ್ಣ ಬುದ್ಧಿಯ ಪರಸ್ಪರ ಪಡೆದು 70 ವರ್ಷಗಳ ಹಿಂದೆ ರಾಜಾಜಿ ಶ್ರೀ ವೈಷ್ಣವ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಅವರ ಶಿಕ್ಷಣ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಆಗಿರುವುದರಿಂದ ಈ ಮಹನೀಯರಿಗೆ ಕನ್ನಡದ ಪರಿಚಯ ಚೆನ್ನಾಗಿದೆ ಮದ್ರಾಸು ಸಾಹಿತ್ಯದ ಪರಿಷತ್ತನ್ನು ಉದ್ಘಾಟಿಸುವಾಗ ಕನ್ನಡದಲ್ಲೇ ಭಾಷಿಸಿದರು

ರಾಜಾಜಿ ವಕೀಲರಾಗಿ ಸೇಲಂನಲ್ಲಿ ಉದ್ಯೋಗ ಪ್ರಸಿದ್ಧಿಯುಳ್ಳವರಾಗ ಮುಂದಾಸು ಇಟ್ಟು ಬೂಟ್ಸು ಹಾಕಿ ಕೋರ್ಟಿಗೆ ಹೋಗುತ್ತಿದ್ದರು ಆಗ ಅವರಿಗೆ ಮಾತು ಕಮ್ಮಿ ಆದರೂ ಪುರಜನರು ಅವರ ಸಾಮರ್ಥ್ಯವನ್ನು ತಿಳಿಯದಿರಲಿಲ್ಲ ಸೇಲಂನ ನಗರ ಸಭಾಧ್ಯಕ್ಷರಾಗಿ ಸಾರ್ವಜನಿಕ ಬಾವಿಗಳನ್ನು ಹರಿಜನರಿಗೆ 1920 ಸುಮಾರಿಗೆ ಅವರು ತೆರವು ಮಾಡಿ ಆಗ ಸಮಾಜ ಭ್ರಷ್ಟರೆನಿಸಿದ್ದರು. ಹರಿಜನೋದ್ಧಾರಕ್ಕೆ ಗಾಂಧೀಜಿಗಿಂತ ಮೊದಲೇ ಇವರು ಪೀಠಿಕೆ ಹಾಕಿದ್ದರು

ತಮ್ಮ ಸ್ವಕ್ಷ ವಿಚಾರ ನಿರ್ಣಯ ಶಕ್ತಿಗೆ ತೋರಿದನ್ನು ಖಡಾ ಖಂಡಿತವಾಗಿ ನಿರೂಪಿಸುವಾಗ ಆದೆಂತಹ ಅಧ್ಯಕ್ಷರನ್ನಾಗಲಿ, ದುರಂತವನ್ನಾಗಲಿ ಎದುರಿಸಲು ಇವರು ಸಂಕೋಚಪಡುವವರಲ್ಲ ಆಕಸ್ಮಿಕಕೊಂಡ ಸನ ತೇ ಹಿಂದೂ ಸಭೆಗಳನ್ನು ಎದುರಿಸಲು ಹಿಂಜರಿದವರಲ್ಲ ಗಾಂಧಿ ನಿಕಟ ರುಗಳನ್ನಾಗಲಿ, ಸುಭಾಷ್ ಸರೋಜಿನಿ ಮುಂತಾದವರನ್ನಾಗಲಿ ಇವರು ತಾತ್ವಿಕ ತಳಹದಿಯ ಮೇಲೆ ಸದಾ ವಿರೋಧಿಸುವರು. ಅವರ ವಿಚಾರ ಸತ್ಯಾಸತ್ಯತೆಯನ್ನು ಎಲ್ಲರೂ ಕಾಲಾನುಕ್ರಮದಲ್ಲಿ ಖಂಡಿತ ತಿಳಕೊಳ್ಳುವರು. ಹಲವು ಸಲ ಕಾಂಗ್ರೆಸ್ ಪರಿಷತ್ತನ್ನೂ ಬಿಟ್ಟವರು ಕಟ್ಟಾ ವಿರುದ್ಧವಾದರೂ ಈಗಲೂ ಅವರ ಪಟ್ಟ ವಿವೇಕ ಶಕ್ತಿಗೆ ಇಡೀ ಭಾರತವೇ ತಲೆಬಾಗುತ್ತಿದೆ ಚಾಣಕ್ಯ ಬ್ರಿಟಿಷ್ ರಾಜತಂತ್ರಜ್ಞರೂ ಕೂಡಾ ಇವರ ವಿಚಕ್ಷಣತೆ ಅಮೋಘ ಜ್ಞಾಪನೆ ತೆತ್ತಿರುವರು

ಗವರ್ನರರಾಗಲಿ ಗವರ್ನರ ಜನರಲ್ಲರಾಗಲಿ ರಾಜಾಜಿಯವರ ಜೀವನ 'ಮರ್ಜಿ' ಒಂದೇ. ರಾಜಕೀಯ ತ್ಯಜಿಸಿ ತಿರುಚನಗೂಡಿನ ತಮ್ಮ ಖಾದಿ ಕೇಂದ್ರದಲ್ಲಿ ಅವರು ಯಾವ ಶ್ರದ್ಧೆ ವಹಿಸುತ್ತಿದ್ದರೋ ಅದೇ ಜೈಕ ಸ್ವರಿಂದವರ ಬಂಗಾಲ ಗವರ್ನರಗಿರಿಯನ್ನು ನಿರ್ವಹಿಸುತ್ತಾರೆ. ತಮ್ಮ ಬಟ್ಟೆ ತಾವೇ ಒಗೆಯುವುದು, ಒಣಗಿಸುವುದು, ಹಾಸಿಗೆ ಹಾಕಿಕೊಳ್ಳುವುದು ಒಂದಕ್ಕೂ ಆಡಂಬರವಿಲ್ಲ. ಒಂದು ಕಾಲದಲ್ಲಿ ವೈಭೋಗಕ್ಕೆ ಪ್ರಖ್ಯಾತಿಪಟ್ಟ ಬಿಳಿ ಗವರ್ನರನ ದರ್ಪದ ತೌರುಮನೆಯಂತಿದ್ದ ಕಲ್ಕತ್ತಾದ ಗವರ್ನರ್ ಭವನ ಇಂದು ಸರಳ ಜೀವನ ಉನ್ನತ ವಿಚಾರದ ಶ್ರೇಷ್ಠ ಭಾರತೀಯ ಸಂಸ್ಕೃತಿಕ ಪ್ರಭೆಯಿಂದ ಬೆಳಗುತ್ತಿದೆ.

ಮಹಾತ್ಮನನ್ನು ಸ್ಪಷ್ಟವಾಗಿ ತಿಳಕೊಂಡ ಅತ್ಯಲ್ಪ ಮಂದಿಗಳಲ್ಲಿ ರಾಜಾಜಿಯವರೊಬ್ಬರು ಅವರನ್ನು ಆದುದರಿಂದಲೇ ದಕ್ಷಿಣದ ಗಾಂಧಿಯೆನ್ನುವರು ಆದರೆ ಗಾಂಧಿಜಿಯ ತೀಕ್ಷ್ಣ ಅಹಿಂಸಾಚರಣೆ ದಕ್ಷಿಣಕ್ಕೆ ಬರುತ್ತಲೆ ಖಂಡ ತುಂಡ ಧರ್ಮ ಯುದ್ಧವಾಗುತ್ತದೆ ಸಮಯ ಬಂದರೆ ಪಿಸ್ತೂಲು ಸೆಳೆದುಕೊಂಡು ಹೊಡೆಯುವೆನೆಂದು ತಿಳಿಸುತ್ತ ಪ್ರಾಂತ್ಯದಲ್ಲಿ ಶಾಂತಿ ಸ್ಥಾಪಿಸುವ ತಮ್ಮ ಶ್ರದ್ಧೆಯನ್ನವರು ನಿರೂಪಿಸಿರುವರು.

ಸಕ್ಕರೆಯ ಸಾಮಾನುಗಳು

ವಿಜ್ಞಾನಿಗಳ ಕೈಯಲ್ಲಿ ಸಿಕ್ಕಿದ ವಸ್ತು ವಿಚಿತ್ರ ಮಾರ್ಪಾಟುಗಳನ್ನು ಹೊಂದುತ್ತದೆ. ಸಕ್ಕರೆಯ ಕುರಿತು ಈಗ ಪರಿಶೋಧನೆಗಳು ನಡೆಯುತ್ತವೆ ಅದರಿಂದ ಕೆಲವೊಂದು ಉಪಯುಕ್ತ ಏಸೀದುಗಳನ್ನು ತೆಗೆಯಬಹುದೆಂದು ಮೊದಲು ಕಂಡುಹಿಡಿದರು ಮತ್ತ ಸಕ್ಕರೆಯನ್ನು ಕೆಲವೊಂದು ರಸಾಯನಿಕ ಪದಾರ್ಥಗಳೊಡನೆ ಬೆರೆಸಿದರೆ ಪ್ಲಸ್ಟಿಕ್ ಮೂಲ ವಸ್ತುವನ್ನು ತಯಾರಿಸುವ ಪದಾರ್ಥವಾಗಿ ಪರಿವರ್ತಿಸಿಕೊಳ್ಳಬಹುದೆಂದು ತಿಳಿಯಿತು. ಈಗ ಅದರಿಂದ ಪಿಂಗಾಣಿ ಬ್ರಶ್ಶುಗಳು, ಕರಡಿಗೆಗಳು, ಫೌಂಟನ್ ಪೆನ್ನುಗಳಲ್ಲದೆ ಪಾನೀಯಗಳನ್ನು ಹಾಕಬಹುದಾದ ಪಾತ್ರೆಗಳನ್ನು ತಯಾರಿಸಬಹುದೆಂದು ಕಂಡುಹಿಡಿಯಲಾಗದೆ ಸಧ್ಯದಲ್ಲೇ ನಾವು ಸಕ್ಕರೆಯ ಟಂಬ್ಲರುಗಳಲ್ಲಿ ಕಾಫಿ ಚಾ ಕುಡಿಯುವ ಸೌಭಾಗ್ಯ ಯೋಗ ಬರದಿರಲಾರದು

ಸ್ವಪ್ನ ಸಂಗತಿಗಳು

12ರಿಂದ 16 ವರ್ಷದ ತರುಣರು ಸ್ವಪ್ನ ಸಾಮ್ರಾಜ್ಯದಲ್ಲೇ ಇರುತ್ತಿರುವರೆಂದರೆ ಅತಿಶಯವಲ್ಲ ಕಾರಣ ಚಿಕ್ಕ ಮಗುವಿಗೆ ಮೊಣಕಾಲ ನಡಿಗೆ ಹೇಗೆ ಸ್ವಾಭಾವಿಕವೋ ಅದೇ ರೀತಿ ತರುಣರಿಗೆ ಸ್ವಪ್ನ ಸುಖ ಸಾಮಾನ್ಯ ಸಂಗತಿ ಈ ಪ್ರಾಯ ಮಕ್ಕಳ ಮೇಲೂ ತರುಣನು ಕಲ್ಪನಾ ಸಾಮ್ರಾಜ್ಯದಲ್ಲಿರುತ್ತಾನಾದರೆ ಯಾವುದೋ ಒಂದು ಕಳವಳವು ಅವನನ್ನು ಬಾಧಿಸುತ್ತಿದೆಂದು ತಿಳಿಯಬೇಕು ಹಾಗೇ ಮುಂದರಿದರೆ ಅವನ ಬೆಳವಣಿಗೆ ಕುಂಟಿತವಾಗುತ್ತದೆ. ಮುಂದೆ ಅದು ರಚನಾತ್ಮಕ ಕಾರ್ಯರೂಪವನ್ನು ತಾಳಿದರೆ ಉತ್ತಮ. ಆದರೆ ನೆನಸಿದ ಕಲ್ಪನೆಗಳು ದೈವಿಕ ಭ್ರಮತ್ವರದಿಂದ ಕೈಗೂಡಬೇಕೆಂದಾದರೆ ಜೀವನವು ಯಶಸ್ವಿಯಾಗುವುದು. ಹೀಗೆಂದೋರ್ವ ಮಾನಸಿಕ ತಜ್ಞರು ಸಾರುತ್ತಾರೆ.

KANARA COMMERCIAL BANK LTD.

PUTTUR

H. O. Puttur.] Estd. 1920 [Branch Vittal.

All kinds of Banking Business transacted.

Deposits: Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ಸ್ವದೇಶಾಭಿಮಾನಿ

ತಾರೀಕು 26-12-1947

ಮೂರು ವರ್ಷಗಳ ತನಕ ಮುಷ್ಕರ ಬೇಡ

ಕೇಂದ್ರ ಸರಕಾರದ ಕೈಗಾರಿಕೆಗಳ ಖಾತೆಯ ಮಂತ್ರಿ ಡಾ॥ ಶಾಮ ಪ್ರಸಾದ ಮುಖರ್ಜಿಯವರು ಮ್ಹಾಲಿಕರ ಮತ್ತು ಎಲ್ಲಾ ಸಂಗಡಗಳ ಮಜೂರರ ಪ್ರತಿನಿಧಿಗಳಿಂದ ಕೂಡಿದ ಒಂದು ಕೈಗಾರಿಕೆಗಳ ಪರಿಷತ್ತನ್ನು ಸೇರಿಸಿದರು. ಇದರಲ್ಲಿ ಮ್ಹಾಲಿಕ ಮಜೂರರು ಪರಸ್ಪರ ಸಹಕರಿಸಿ ಬರುವ ಮೂರು ವರ್ಷಗಳ ತನಕ ಯಾವ ತಡೆಯೂ ಇಲ್ಲದೆ ಉತ್ಪತ್ತಿಯನ್ನು ಬೆಳೆಸಬೇಕೆಂಬ ನಿರ್ಣಯವು ಸರ್ವ ಸಮ್ಮತಿಯಿಂದ ಮಂಜೂರಾಗಿರುತ್ತದೆ.

ಮ್ಹಾಲಿಕರು ಲಾಭ ಕಡಮೆಯಾಗುವ ನೆವನದಿಂದ ಕಾರ್ಖಾನೆ ಮುಚ್ಚುವುದು ಇತ್ಯಾದಿ ಮಾಡಬಾರದು ಮಜೂರರಿಗೆ ನ್ಯಾಯವಾದ ವೇತನ ಇತ್ಯಾದಿ ಜೀವನದ ಸಲಕರಣೆಗಳನ್ನು ಒದಗಿಸಬೇಕು. ಲಾಭದಲ್ಲಿ ಒಂದಂಶ ಮಜೂರರಿಗೂ ಸಲ್ಲಬೇಕು ಅಂದರೆ ಭಂಡವಲಕ್ಕೆ ಬಡ್ಡಿ ಮಜೂರರಿಗೆ ನ್ಯಾಯವಾದ ಮಜೂರಿ ಸಂದುಳಿದ ಲಾಭದಲ್ಲಿ ಮಜೂರರಿಗೂ ಪಾಲು ಸಲ್ಲಬೇಕು. ಕೈಗಾರಿಕೆಗಳ ಆಡಳಿತೆಯಲ್ಲಿಯೂ ಮಜೂರ ಪ್ರತಿನಿಧಿಗಳಿಗೆ ಸೇರಿಸಿಕೊಳ್ಳಲು ಯೋಗ್ಯ ವ್ಯವಸ್ಥೆ ಮಾಡಬೇಕು ಇದು ಮ್ಹಾಲಿಕರು ಅನುಸರಿಸಬೇಕಾದ ಧೋರಣೆ.

ಮಜೂರಾದರೂ ತಮ್ಮ ಯಾವ ಸಂಕಷ್ಟಗಳಿದ್ದರೂ ಅವನ್ನು ಪಂಚಾಯತಿಗೆ ಒಪ್ಪಿಸಿ ಪಂಚಾಯತರ ತೀರ್ಮಾನದಂತೆ ನಡೆಯಬೇಕು. ಮುಷ್ಕರಗಳನ್ನು ಖಂಡಿತವಾಗಿಯೂ ಹೂಡಕೂಡದು ಎಂಥ ಪ್ರಸಂಗದಲ್ಲಿಯೂ ಕಾರ್ಖಾನೆಗಳು ನಡೆಯುತ್ತಿದ್ದು ಮ್ಹಾಲುಗಳ ಉತ್ಪತ್ತಿಗೆ ತಡೆಯಾಗಬಾರದು ಇದು ಮಜೂರ ವರ್ಗವು ಅನುಸರಿಸಬೇಕಾದ ಧೋರಣೆ

ಮುಖ್ಯ ಕೈಗಾರಿಕೆಗಳ ಮ್ಹಾಲಿಕರು ಪರಿಷತ್ತಿನಲ್ಲಿ ಸೇರಿದ್ದರು ಕಮ್ಯೂನಿಸ್ಟ್, ಸೋಶಿಯಲಿಸ್ಟ್, ಕಾಂಗ್ರೆಸ್, ಇತ್ಯಾದಿ ಎಲ್ಲ ಸಂಗಡಗಳ ಮಜೂರರ ಪ್ರತಿನಿಧಿಗಳು ಪರಿಷತ್ತಿನಲ್ಲಿ ಸೇರಿದ್ದರು ಸರ್ವಾನುಮತದಿಂದ ಈ ನಿರ್ಣಯವು ಮಂಜೂರಾದುದು ಸಂತೋಷದ ಸಂಗತಿ.

ಕಾರ್ಖಾನೆಗಳ ಮ್ಹಾಲಿಕರೂ ಮಜೂರರೂ ಇತ್ತಂಡದವರೂ ಈ ನಿರ್ಣಯವನ್ನು ಜಾರಿಗೆ ತರುವುದರ ಮಹತ್ವವನ್ನು ದೇಶದ ಎಲ್ಲಾ ಭಾಗಗಳಲ್ಲಿ ತಿಳಿದುಕೊಂಡು ವರ್ತಿಸಬೇಕಾಗಿದೆ.

ದೇಶದ ಉತ್ಪತ್ತಿ ಹೆಚ್ಚಿಸುವುದು ಎಲ್ಲಕ್ಕೂ ಮಹತ್ವದ ಪ್ರಶ್ನೆ ಇರುತ್ತದೆ. ನಮ್ಮ ಕೈಗಾರಿಕೆಗಳು ಮುಂದೆ ಅಭಿವೃದ್ಧಿಗೆ ಬರಬೇಕಾದರೆ ಅದಕ್ಕೆ ಬೇಕಾದ ಉಪಕರಣಗಳು ಯಂತ್ರಗಳು ಮೊದಲಾದುವನ್ನು ಪರದೇಶಗಳಿಂದ ಆಮದು ಮಾಡದೆ ಸಾಧ್ಯವಿಲ್ಲವೆಂಬುದು ಸರ್ವ ವಿದಿತವಷ್ಟೆ? ಪರದೇಶಗಳಿಂದ ತರಿಸಲು ಹಣ ಬೇಕು. ಇಲ್ಲಿ ತಯಾರಿಸಲು ಸಾಧ್ಯವಿರುವ ಮಾಲುಗಳನ್ನು ಪರದೇಶಗಳಿಂದ ತರಿಸುವುದನ್ನು ನಿಲ್ಲಿಸಿ ಯಂತ್ರೋಪಕರಣ ಮೊದಲಾದವುಗಳಿಗೆ ಹಣ ಉಳಿಸಬೇಕು. ಪರಕೀಯರಿಗೆ ಆದಷ್ಟು ನಮ್ಮ ಮ್ಹಾಲು ಮಾರಲಿಕ್ಕೂ ಯತ್ನಿಸಬೇಕು ಇದೆಲ್ಲ ಸಾಧ್ಯವಾಗಬೇಕಾದರೆ ಇದ್ದ ಯಂತ್ರೋಪಕರಣಗಳನ್ನು ಪೂರ್ಣ ಉಪಯೋಗಿಸಿಕೊಂಡು ಆದಷ್ಟು ಹೆಚ್ಚಿನ ಉತ್ಪತ್ತಿ ಸಾಧಿಸುವುದು ಅಗತ್ಯ. ಇಷ್ಟನ್ನು ನಮ್ಮ ಕಾರ್ಖಾನೆ ಮ್ಹಾಲಿಕರು ಸ್ವಲ್ಪ ವಿಚಾರಿಸಿದರೆ ತಿಳಿಯಬಲ್ಲರು ಉತ್ಪತ್ತಿ ಹೆಚ್ಚಿಸುವ ಪ್ರಶ್ನೆಯ ಮಹತ್ವವನ್ನು ನೆನಸಿನಲ್ಲಿಟ್ಟುಕೊಂಡು ಮಜೂರರ ಸಹಕಾರ ಸಿಕ್ಕುವಂತೆ ವರ್ತಿಸುವುದು ಮ್ಹಾಲಿಕರ ಶ್ರೇಯೋಭಿವೃದ್ಧಿಗಾಗಿಯೇ ಅವಶ್ಯ ಈ ನಿರ್ಣಯದಲ್ಲಿ ಸೂಚಿಸಿದ ಧೋರಣೆ ಕೈಕೊಳ್ಳಬೇಕಾಗಿದೆ

ಇದೇ ರೀತಿ ಮಜೂರರಾದರೂ ಉತ್ಪತ್ತಿ ಹೆಚ್ಚಿಸುವುದರ ಆವಶ್ಯಕತೆ ತಿಳಿದುಕೊಳ್ಳಬೇಕು ಕಾರ್ಖಾನೆಗಳ ಅಭಿವೃದ್ಧಿಯಲ್ಲಿಯೇ ಮಜೂರ ವರ್ಗದ ಅಭಿವೃದ್ಧಿಯೂ ಹೊಂದಿಕೊಂಡಿದೆ! ಮಾತ್ರವಲ್ಲ ಅವರಿಗೆ ಸಿಕ್ಕುವ ಮಜೂರಿಯನ್ನು ಅವರ ಹಣದ ಲೆಕ್ಕದಲ್ಲಿ ಎಣಿಸಿ ಫಲವಿಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು ತಿಂಗಳಿಗೆ ಮೂವತ್ತು ರೂಪಾಯಿ ಸಿಕ್ಕುವ ಬದಲು ನಾಲ್ವತ್ತು ಸಿಕ್ಕಿದರೆ ತುಂಬಾ ಪ್ರಯೋಜನವೆಂದು ಭಾವಿಸುವುದು ತಪ್ಪು ಗ್ರಹಿಕೆ ನಾಲ್ವತ್ತು ರೂಪಾಯಿಗಳಿಗೆ ಮೂವತ್ತೇ ರೂಪಾಯಿಗಳಿಗೆ ಸಿಕ್ಕುತ್ತಿದ್ದಷ್ಟೆ ಮ್ಹಾಲುಗಳು ಸಿಕ್ಕಿದರೆ ಮಜೂರಿ ಏರಿದಂತಾಗುವುದಿಲ್ಲ ಮಜೂರಿ ನಿಜವಾಗಿ ಎಣಿಸಬೇಕಾದುದು ಸಿಕ್ಕಿದ ಮಜೂರಿಗೆ ದೊರೆಯುವ ಮ್ಹಾಲುಗಳ ಲೆಕ್ಕದಲ್ಲಿ ಎಂಬುದನ್ನು ಸ್ವಲ್ಪ ವಿಚಾರಿಸಿದರೆ ಗೊತ್ತಾಗುತ್ತದೆ.

ಮ್ಹಾಲುಗಳ ಲೆಕ್ಕದಲ್ಲಿ ಮಜೂರಿ ಏರಬೇಕಾದರೆ ಉತ್ಪತ್ತಿಯಾಗುವ ಮ್ಹಾಲುಗಳು ಹೆಚ್ಚಾಗುವುದು ಅಗತ್ಯವೆಂದು ಪುನಃ ಹೇಳುವ ಆವಶ್ಯಕತೆ ಇಲ್ಲ ಮ್ಹಾಲುಗಳು ಹೆಚ್ಚಾಗದೆ ಮಜೂರಿಯ ಹಣ ಮಾತ್ರ ಹೆಚ್ಚಾದರೆ ಅದೇ ಪ್ರಮಾಣದಲ್ಲಿ ಮ್ಹಾಲುಗಳ ಕ್ರಯಗಳೂ ಏರುವುದರಿಂದ ನಿಜವಾಗಿ ಎಣಿಸಿದರೆ ಮಜೂರಿ ಹೆಚ್ಚಿದಂತಾಗುವುದಿಲ್ಲ

ಹೀಗೆ ದೇಶದ ಉತ್ಪತ್ತಿ ಹೆಚ್ಚಾಗುವುದು ಮಜೂರರ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದಲೂ ಅತ್ಯಾವಶ್ಯಕ ವಿಚಾರವಿರುತ್ತದೆ ಇದನ್ನು ಮನಗಂಡಿರುವುದರಿಂದಲೇ ಎಲ್ಲ ಸಂಗಡಗಳ ಮಜೂರ ಮುಂದಾಳುಗಳೂ ಈ ಮೂರು ವರ್ಷಗಳ ಒಪ್ಪಂದಕ್ಕೆ ಒಪ್ಪಿಗೆ ಕೊಟ್ಟಿರುತ್ತಾರೆ

ನಮ್ಮ ಜಿಲ್ಲೆಯಲ್ಲಿಯ ಕಾರ್ಖಾನೆ ಮ್ಹಾಲಿಕರೂ ವಿವಿಧ ಮಜೂರ ಸಂಗಡಗಳೂ ಅನುಸರಿಸಿ ದೇಶದ ಅಭ್ಯುದಯಕ್ಕೆ ಸಹಾಯ ಮಾಡುವುದು ಅವರ ಕರ್ತವ್ಯವೆಂದು ಸೂಚಿಸ ಬಯಸುತ್ತೇವೆ ಇನ್ನು ಮೂರು ವರ್ಷಗಳ ತನಕವಾದರೂ ನಮ್ಮಲ್ಲಿ ಮಜೂರ ಮುಷ್ಕರಗಳು ನಡೆಯದಂತಾಗಲೆಂದು ಹಾರೈಸುತ್ತೇವೆ.

ಟೀಕೆ-ಟಿಪ್ಪಣಿಗಳು

ಎನ್. ಜಿ. ಒ. ಮುಷ್ಕರ ನಿಂತಿತು.

ಮದ್ರಾಸು ಪ್ರಾಂತ್ಯದಲ್ಲಿ ಸರಕಾರೀ ನೌಕರರು ಹೂಡಿದ ಮುಷ್ಕರ ನಿಂತುದು ಇನ್ನೊಂದು ಸಂತೋಷದ ಸಂಗತಿ ಇವರ ತುಟ್ಟಿಭತ್ತೆಯನ್ನು ಸಾಧ್ಯವಿದ್ದಷ್ಟು ಏರಿಸುವುದು ಅಗತ್ಯವಿರುತ್ತದೆ ಮಾತ್ರವಲ್ಲ ಮನೆಬಾಡಿಗೆ ಬಗ್ಗೆ ಕೊಡುವ ಭತ್ತೆ ಕೂಡಾ ಇವರಿಗೆ ಆದಷ್ಟು ಹೆಚ್ಚಿಗೆ ಕೊಡಲೇ ಬೇಕು ಮುಷ್ಕರಕ್ಕೆ ಸೇರಿದ ಸರಕಾರೀ ನೌಕರರು ಕಡಮೆ ಸಂಬಳದವರಿದ್ದು ಇವರ ಸಂಕಷ್ಟಗಳು ನಿಜವಿರುತ್ತವೆ ಇವರು ಮುಷ್ಕರ ಹೂಡಿದ್ದು ಸರಿಯೋ ತಪ್ಪೋ ಎಂಬ ಪ್ರಶ್ನೆ ಇನ್ನು ಚರ್ಚಿಸುವ ಅಗತ್ಯ ಉಳಿದಿಲ್ಲ ಇವರ ಸಂಕಷ್ಟಗಳನ್ನು ನಿವಾರಿಸುವುದು ಸರಕಾರದ ಕರ್ತವ್ಯವೆಂಬುದನ್ನು ಮಾತ್ರ ಒತ್ತಿಹೇಳ ಬಯಸುತ್ತೇವೆ

ಮದ್ಯವಿರೋಧದಿಂದಾಗಿ ಸರಕಾರದೊಡನೆ ಹೆಚ್ಚು ಹಣವಿಲ್ಲವೆಂಬುದು ನಿಜ ಮದ್ಯವಿರೋಧವಾದರೂ ಅತ್ಯಾವಶ್ಯ ಸುಧಾರಣೆ ಇದ್ದು ಅದನ್ನು ಪೂರ್ತಿಗೊಳಿಸುವುದು ಸರಕಾರದ ಪವಿತ್ರ ಕರ್ತವ್ಯವೇ ಇರುತ್ತದೆ

ಕೆಳತರಗತಿಯ ನೌಕರರಿಗೆ ಹೆಚ್ಚಿನ ಹಣವೆಲ್ಲಿಂದ ಕೊಡಬೇಕೆಂಬುದು ಸಹಜವಾದ ಪ್ರಶ್ನೆ ಮೇಲ್ತರಗತಿಯ ನೌಕರರ ಖರ್ಚು ಕಡಮೆ ಮಾಡಬಹುದೆಂಬುದೇ ಇದಕ್ಕೆ ಸಹಜವಾದ ಉತ್ತರವಿರುತ್ತದೆ ಮಾತ್ರವಲ್ಲ ಅನಾವಶ್ಯಕ ಶಿಬಂದಿ ಬೆಳೆಸುವುದನ್ನು ನಿಲ್ಲಿಸಬೇಕು ಅಗತ್ಯವುಳ್ಳಷ್ಟು ಶಿಬಂದಿ ಇಟ್ಟು ಶಿಬಂದಿ ಖರ್ಚು ಕಡಮೆ ಮಾಡಿ ಹಣ ಉಳಿಸಬೇಕು ಇದೆಲ್ಲ ಬಗೆಯಿಂದ ಹಣ ಉಳಿಸಿ ಕೆಳತರಗತಿಯ ನೌಕರರ ಸ್ಥಿತಿ ಸುಧಾರಿಸಲು ಖಂಡಿತವಾಗಿಯೂ ಸಾಧ್ಯವುಂಟು ಇದನ್ನು ಸರಕಾರದವರು ಸರಿಯಾಗಿ ಪರಿಶೀಲಿಸುವುದು ಅವರ ಕರ್ತವ್ಯವಿರುತ್ತದೆ

ಮುಸ್ಲೀಮು ಲೀಗಿನ ಭವಿಷ್ಯ

ಕರಾಚಿಯಲ್ಲಿ ಸೇರಿದ ಮುಸ್ಲೀಮು ಲೀಗಿನ ಅಧಿವೇಶನದಲ್ಲಿ ಪಾಕಿಸ್ಥಾನಕ್ಕೆ ಒಂದು ಲೀಗು ಹಿಂದುಸ್ಥಾನಕ್ಕೆ ಒಂದು ಲೀಗು ಹೀಗೆ ಎರಡು ಮುಸ್ಲೀಮು ಲೀಗುಗಳನ್ನು ಸ್ಥಾಪಿಸಬೇಕೆಂಬ ನಿರ್ಣಯವಾಗಿರುತ್ತದೆ

ಪಾಕಿಸ್ಥಾನದಲ್ಲಿ ಮುಸ್ಲೀಮರಿಂದ ಮಾತ್ರ ಸೇರಿದ ಲೀಗನ್ನು ಮುಂದೆ ಸಾಗಿಸುವುದಕ್ಕಿಂತ ಇದನ್ನು ಇತರ ಜಾತಿಯವರನ್ನು ಸೇರಿಸಿ ರಾಜಕೀಯ ಸಂಗಡವಾಗಿ ಮಾರ್ಪಡಿಸಬಹುದೆಂಬ ಸೂಚನೆಗೆ ಕಾಯ್ದೇಅಜಾಮ ಜಿನ್ನಾರವರು ಅದಕ್ಕೆ ಅನುಕೂಲ ಪರಿಸ್ಥಿತಿ ಇನ್ನೂ ಬಂದಿಲ್ಲವೆಂದು ಹೇಳಿ ಜಾತೀಯ ಲೀಗನ್ನೆ ಮುಂದರಿಸಬೇಕೆಂಬ ನಿರ್ಧಾರವಾಯಿತು

ಇದೇ ಬಗೆಯ ವ್ಯವಸ್ಥೆ ಹಿಂದುಸ್ಥಾನಕ್ಕೂ ಮಾಡಬೇಕೆಂಬ ತೀರ್ಮಾನವೇಕೆ ಮಾಡಲಾಯಿತೋ ತಿಳಿದಿಲ್ಲ ಇಲ್ಲಿ ಮುಂದೆ ಸರಕಾರವು ಯಾವ ಜಾತೀಯತೆಯನ್ನು ಅವಲಂಬಿಸದೆ ಕೇವಲ ರಾಜಕೀಯ ದೃಷ್ಟಿಯಲ್ಲಿಯೇ ನಡೆಸಲಾಗುವುದೆಂದು ನಮ್ಮ ಮುಂದಾಳುಗಳು ಅನೇಕ ಬಾರಿ ಸ್ಪಷ್ಟಗೊಳಿಸಿದ್ದಾರೆ ಹೀಗಿರುವಾಗ ಜಾತೀಯತೆಯನ್ನು ಅವಲಂಬಿಸಿ ರಾಜಕೀಯ ಸಂಗಡಗಳನ್ನು ಕಟ್ಟಲು ಮುಂದೆ ಯಾವ ನ್ಯಾಯವೂ ಇರುವುದಿಲ್ಲ

ಮುಸ್ಲೀಮರು ಮುಸ್ಲೀಮ ರಾಜಕೀಯ ಸಂಗಡ ಕಟ್ಟಿಕೊಂಡಲ್ಲಿ ಅವರಿಗೆ ಯಾವ ಲಾಭವೂ ಸಿಕ್ಕುವಂತಿಲ್ಲ ಅದರ ಬದಲು ಅವರಿಗೆ ಹಾನಿಯಾಗುವ ಸಂಭವವೇ ಹೆಚ್ಚಿರುತ್ತದೆ ಮುಂದೆ ರಾಜಕೀಯ ಹಕ್ಕುಗಳು ಖಂಡಿತವಾಗಿಯೂ ಜಾತೀಯತೆಯ ಮೇಲೆ ಹಂಚಲ್ಪಡುವಂತಿಲ್ಲ ದೇಶದ ರಾಜಕೀಯ ಸಂಗಡಗಳಲ್ಲಿ ಇತರ ಜಾತಿಗಳವರ ಜೊತೆಯಲ್ಲಿ ಅವರು ಸೇರಿಕೊಳ್ಳುವುದು ಅವರ ಶ್ರೇಯಸ್ಸಿನ ದೃಷ್ಟಿಯಿಂದಲೇ ಅಗತ್ಯವಿರುತ್ತದೆ ಅಂದರೆ ಅವರು ಕಾಂಗ್ರೆಸಿಗೆ ಸೇರಬಹುದು ಸೋಶಿಯಲಿಸ್ಟ್ ಆಗಬಹುದು, ಇತ್ಯಾದಿ ಯಾವುದಾದರೂ ರಾಜಕೀಯ ಕಾರ್ಯಕ್ರಮದ ದೃಷ್ಟಿಯಿಂದ ಇತರ ಜಾತಿಯವರ ಜೊತೆಯಲ್ಲಿ ಸೇರಿ ಅವರು ದುಡಿದರೆನೆ ಅವರಿಗೆ ರಾಜಕೀಯ ರಂಗದಲ್ಲಿ ನಿಜವಾದ ಸ್ಥಾನ ಸಿಕ್ಕುವುದು.

ಮುಸ್ಲೀಮರ ಸಮಾಜದ ಅಥವಾ ಆರ್ಥಿಕ ಅಭಿವೃದ್ಧಿಗಾಗಿ ಅವರು ಜಾತೀಯ ಸೃಷ್ಟಿಯಿಂದ ದುಡಿದರೆ ಚಿಂತೆಯಿಲ್ಲ ಇಂಥ ಸಂಸ್ಥೆಗಳಲ್ಲಿ ರಾಜಕೀಯ ವಿಚಾರ ಬೆರೆಸಲಾಗದು

ಮುಸ್ಲೀಮು ಲೀಗು ಮಾಡಿ ಕಾಯ್ದೇ ಅಜಾಮ ಜಿನ್ನಾರ ಸೂಚನೆಯಂತೆ ನಡೆದು ಸಂಕಷ್ಟವನ್ನು ತಂದುಕೊಂಡರೆ ಪಾಕಿಸ್ಥಾನದವರು ಅವರಿಗೆ ಸಹಾಯ ಮಾಡುವುದು ಮುಂದೆ ಅಸಾಧ್ಯವೆಂಬುದನ್ನು ಅವರು ಸ್ಪಷ್ಟವಾಗಿ ತಿಳಿಯಬೇಕಾಗಿದೆ

ಅತಿಥಿಗಳಿಗೆ ಸುಸ್ವಾಗತ.

ಕಾಸರಗೋಡಿನಲ್ಲಿ ಜರಗುವ ಅಖಿಲ ಕರ್ನಾಟಕ ಸಾಹಿತ್ಯಸಮ್ಮೇಳನ ಹಾಗೂ ಏಕೀಕರಣ ಪರಿಷತ್ತುಗಳ ಮಹಾ ಸಮಾರಂಭಗಳಿಗಾಗಿ ಅಖಿಲ ಕರ್ನಾಟಕದಿಂದ ಅನೇಕ ಮಂದಿ ಮಹನೀಯರು ಈಗ ದಕ್ಷಿಣ ಕನ್ನಡದ ಅತಿಥಿಗಳಾಗಿ ಬರುತ್ತಿದ್ದಾರೆ, ಸಮ್ಮೇಳನಾಧ್ಯಕ್ಷರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು ಸಮ್ಮೇಳನದ ಆರಂಭ ಸಮಾರಂಭ ಜರಗಿಸಲು ಬರುವ ಬೊಂಬಾಯಿ ಹ್ಯಾಕೋರ್ಟು ಜಸ್ಟೀಸ್ ಶ್ರೀ ಆರ್ ಎ ಜಹಗೀರ್‌ದಾರರು, ಸಾಹಿತ್ಯ ಗೋಷ್ಠಿಯ ಅಧ್ಯಕ್ಷ ಶ್ರೀ ಆರ್. ವಿ. ಜಹಗೀರ್‌ದಾರರು, ಮಹಿಳಾಗೋಷ್ಠಿಯ ಅಧ್ಯಕ್ಷೆ ಶ್ರೀಮತಿ ಎಮ್. ಆರ್. ಲಕ್ಷ್ಮಮ್ಮನವರು ಇವರೇ ಮೊದಲಾದ ಮಹನೀಯರ

ಅಕ್ಕಿ ಸಂಗ್ರಹ ಮತ್ತು ವಿತರಣೆಯ ಮುಕ್ತಾಯ

ಕೇಂದ್ರ ಸರಕಾರದ ಸೂಚನೆಯಂತೆ ಮದ್ರಾಸು ಸರಕಾರದವರು ಅಕ್ಕಿ ಸಂಗ್ರಹ ಮತ್ತು ವಿತರಣೆಗಳನ್ನು ನಿಲ್ಲಿಸಲು ಕೈಕೊಂಡಿರುವ ಕಾರ್ಯಕ್ರಮದಂತೆ ಈದೇ ದಶಂಬರ ತಾರೀಕು 28ರಿಂದ ನಮ್ಮ ಜಿಲ್ಲೆಯಲ್ಲಿಯೂ ಅಕ್ಕಿ ಸಂಗ್ರಹ ಹಾಗೂ ವಿತರಣೆ ಕಾರ್ಯಕ್ರಮದ ಮುಕ್ತಾಯವಾಗುತ್ತಿದೆ. ಈ ಕುರಿತು ಬಂದಿರುವ ಸರಕಾರೀ ಆಜ್ಞೆಯ ಮಾಹಿತಿ ಮಹಾ ಜನರಿಗೆ ಆಗುವುದು ಅತ್ಯಂತ ಮಹತ್ವದ ಸಂಗತಿ.

ದಿಶಂಬರ ತಾರೀಕು 28ರ ಬಳಿಕ ನಮ್ಮ ಜಿಲ್ಲೆಯಲ್ಲಿ ಅಕ್ಕಿ ಸಂಗ್ರಹ ಮಾಡುವ ಕಾರ್ಯ ನಿಲ್ಲುತ್ತದೆ. ರೈತರು ಮುಂದೆ ತಮ್ಮ ಅಕ್ಕಿಯನ್ನು ಸ್ಟೋರಿಗೆ ಮಾತ್ರ ಮಾರುವ ಅಗತ್ಯವಿಲ್ಲ

ಮಂಗಳೂರು, ಉಡುಪಿ ಮತ್ತು ಕಾಸರಗೋಡು ಈ ಮೂರು ಪೇಟೆಗಳಲ್ಲಿ ಮಾತ್ರ ಈಗ ಇರುವ ರೇಶನ್ ಪದ್ಧತಿ ಮುಂದುವರಿಯುವುದು ಇಲ್ಲಿಗೆ ಅಕ್ಕಿ ತರುವುದು ಇತ್ಯಾದಿ ಎಲ್ಲ ನಿಯಮಗಳು ಈಗ ಇದ್ದಂತೆಯೇ ಇರುತ್ತವೆ.

ಉಳಿದ ಜಿಲ್ಲೆಯಲ್ಲೆಲ್ಲ ಕಾರ್ಡುಗಳಂತೆ ಅಕ್ಕಿ ಹಂಚುತ್ತಿದ್ದ ಏರ್ಪಾಡು ದಶಂಬರ ತಾ 28ರಿಂದ ಒಂದು ವಾರಕ್ಕೆ ಮಾತ್ರ ನಡೆಯುತ್ತದೆ ಮತ್ತೆ ನಿಲ್ಲಿಸಲ್ಪಡುತ್ತದೆ

ಕಾರ್ಡುದಾರರಿಗೆ ಅಕ್ಕಿ ಮಾರುತ್ತಿದ್ದವರು ಮುಂದೆ ಮಾರಾಟ ಮಾಡಲು ತಾವೇ ಏರ್ಪಾಡು ಮಾಡಬೇಕಲ್ಲದೆ ಇವರಿಗೆ ಅಕ್ಕಿ ಒದಗಿಸಲಾಗುವುದಿಲ್ಲ ಅಂದರೆ ಇವರು ರೈತರಿಂದ ಅಕ್ಕಿ ಕ್ರಯಕ್ಕೆ ಪಡೆದು ಮಾರಾಟ ನಡೆಸಬಹುದು ಕಾರ್ಡುಗಳ ಅಗತ್ಯವಿಲ್ಲ

ಕಾರ್ಡುದಾರರು ತಮ್ಮ ಕಾರ್ಡುಗಳನ್ನು ಜಾಗರೂಕತೆಯಿಂದ ಇಟ್ಟುಕೊಳ್ಳಬೇಕಾಗಿ ಸರಕಾರದವರು ಎಚ್ಚರಿಕೆ ಕೊಟ್ಟಿರುತ್ತಾರೆ ಮುಂದೆ ಅಕ್ಕಿ ಸಿಕ್ಕದೆ ತೊಂದರೆಯಾಗುವ ಪ್ರಸಂಗ ಬಂದರೆ ಸರಕಾರದವರು ಅಕ್ಕಿ ಒದಗಿಸಲೇ ಬೇಕಾಗಿ ಬಂದರೆ ಪುನಃ ಕಾರ್ಡು ಹಂಚುವ ತೊಂದರೆ ಬರಬಾರದು. ಆದುದರಿಂದ ಈಗ ಕಾರ್ಡುಗಳಂತೆ ಅಕ್ಕಿ ಮಾರಾಟ ನಿಲ್ಲಿಸಿದರೂ ಆ ಕಾರ್ಡುಗಳನ್ನು ಪ್ರತಿಯೊಬ್ಬರೂ ಜಾಗ್ರತೆಯಿಂದ ಇಟ್ಟುಕೊಳ್ಳಬೇಕು.

ಆಹಾರ ಧಾನ್ಯಗಳ ಕಂಟ್ರೋಲ್ ಆರ್ಡರ್ ಜಾರಿಯಲ್ಲೇ ಇರುತ್ತದೆ ಅಂದರೆ ಅಕ್ಕಿ ಭತ್ತಗಳ ವ್ಯಾಪಾರ ಮಾಡುವವರು ಲ್ಯಾಸೆನ್ಸ್ ಪಡೆದು ಅದರ ಕ್ರಮಗಳಂತೆ ಮಾತ್ರ ಈ ವಹಿವಾಟು ಮಾಡಬಹುದು. ಲ್ಯಾಸೆನ್ಸ್ ಪಡೆಯದೆ ವ್ಯಾಪಾರ ಮಾಡಿದರೆ ಕಾನೂನಿಗೆ ವಿರೋಧ. ಅಗತ್ಯವಿದ್ದಲ್ಲೆಲ್ಲ ಹೆಚ್ಚಿನ ವ್ಯಾಪಾರಿಗಳಿಗೆ ಲ್ಯಾಸೆನ್ಸ್ ಕೊಡಲಾಗುತ್ತದೆ.

ಅಕ್ಕಿಯ ಕ್ರಯನಿಯಂತ್ರಣವೂ ಜಾರಿಯಲ್ಲಿ ಇರುತ್ತದೆ, ರೈತರಿಗೆ ಮುಡಿ ಒಂದರ ರೂ 12ರಂತೆ ಸಲ್ಲಬೇಕೆಂದು ಸರಕಾರದವರು ಇತ್ತೀಚೆಗೆ ನಿರ್ಣಯಿಸಿರುತ್ತಾರೆ ಚಿಲ್ಲರೆ ಮಾರಾಟ ದರಗಳನ್ನು ನಿರ್ಣಯಿಸಿ ಪ್ರಕಟಿಸಲಾಗುತ್ತಿದೆ ಅವನ್ನು ವ್ಯಾಪಾರಿಗಳ ಬೋರ್ಡಿನಲ್ಲಿ ಬರೆಯಲಾಗುತ್ತದೆ. ಅದಕ್ಕೆ ಮಿಕ್ಕಿ ಯಾರಾದರೂ ವ್ಯಾಪಾರ ಮಾಡಿದರೆ ಅದು ಕಳ್ಳ ಸಂತೆಯೆಂದಾಗಿ ತಕ್ಷೀರಿಗೆ ಒಳಪಡುತ್ತದೆ

ಅಕ್ಕಿ ಸ್ಟಾಕ್ ಇದ್ದವರಿಂದ ಅದನ್ನು ರಿಕ್ವಿಜಿಶನ್ ಮಾಡಿ ತೆಗೆದುಕೊಳ್ಳುವ ಅಧಿಕಾರ ಕಲೆಕ್ಟರರಿಗೆ ಇಡಲಾಗಿದೆ ಕಳ್ಳ ಸಂತೆಯಲ್ಲಿ ಮಾರಬಹುದೆಂದು ಅಕ್ಕಿ ಹೆಚ್ಚು ಕ್ರಯಕ್ಕೆ ಪಡೆದು ದಾಸ್ತಾನಿಟ್ಟರೆ ಅಂಥ ಅಕ್ಕಿ ರಿಕ್ವಿಜಿಶನ್ ಮಾಡಿದರೆ ವ್ಯರ್ಥ ನಷ್ಟಕ್ಕೆ ಗುರಿಯಾಗುತ್ತದೆ.

ಜಿಲ್ಲೆಯ ಹೊರಗೆ ಅಕ್ಕಿಯನ್ನು ಕಳುಹಿಸಲು ಪರ್ಮಿಟು ಇಲ್ಲದೆ ಬಿಡಲಾಗುವುದಿಲ್ಲ ವ್ಯಾಪಾರಸ್ಥರು ಕಳ್ಳಾಟಿಕೆಯಿಂದ ಹೊರಗೆ ಕಳುಹಿಸಲು ಯತ್ನಿಸಿದರೆ ತಕ್ಷೀರಿಗೆ ಗುರಿಯಾಗಬೇಕಾಗುವುದು.

ಕಳೆದ ವರ್ಷ ನಮ್ಮ ಜಿಲ್ಲೆಗೆ ಸರಕಾರದವರು ಅಕ್ಕಿ ಕಳುಹಿಸಿದ ಪ್ರಮಾಣದಲ್ಲಿಯೇ ಈ ವರ್ಷವೂ ಕಳುಹಿಸುವರು. ಇದನ್ನು ರೇಶನ್ ಜಾರಿ ಇರುವ ಮೂರು ಪಟ್ಟಣಗಳಲ್ಲಿ ಮತ್ತೆ ಅಕ್ಕಿಯ ಅಭಾವ ಕಂಡುಬರುವ ಜಿಲ್ಲೆಯ ಭಾಗಗಳಲ್ಲಿ ಉಪಯೋಗಿಸಲಾಗುತ್ತದೆ ಕಡಿಮೆ ಬಿದ್ದರೆ ಜಿಲ್ಲೆಯಲ್ಲಿ ಹೆಚ್ಚು ದಾಸ್ತಾನಿದ್ದವರಿಂದ ರಿಕ್ವಿಜಿಶನ್ ಮಾಡಲಾಗುತ್ತದೆ

ಮೂವತ್ತು ಮಂದಿಗಿಂತ ಹೆಚ್ಚು ಸೇರಿ ಊಟ ಇತ್ಯಾದಿ ನಡಸಬಾರದೆಂಬ ಕ್ರಮಗಳು ಮುಂದೆಯೂ ಜಾರಿಯಲ್ಲಿರುತ್ತವೆ

ಇದಿಷ್ಟು ಈ ಕುರಿತು ಬಂದಿರುವ ಸರಕಾರೀ ಆಜ್ಞೆಯಲ್ಲಿ ಅಡಕವಾಗಿರುವ ಮಾಹಿತಿ ಇದರ ಪರಿಚಯವನ್ನು ಜಾಗ್ರತೆಯಿಂದ ಓದುಗರು ಸ್ವತ ಮಾಡಿಕೊಳ್ಳುವುದು ಮಾತ್ರವಲ್ಲ ಇದರ ಪರಿಚಯವನ್ನು ಸಾಧ್ಯವಿದ್ದ ಮಟ್ಟಿಗೆ ಇತರರಿಗೂ ಪ್ರತಿಯೊಬ್ಬರೂ ಮಾಡಿಕೊಡಬೇಕು.

ನಮ್ಮ ಜಿಲ್ಲೆಯ ಮಟ್ಟಿಗೆ ಪರಿಸ್ಥಿತಿಯು ಬಹಳ ಗಂಭೀರವಾಗಿರುತ್ತದೆಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು ನಮ್ಮಲ್ಲಿ ಎಣಿಲು ಬೆಳೆಯೇ ಮುಖ್ಯ ಬೆಳೆ ಇದರ ಉತ್ಪತ್ತಿಯ ಸಂಗ್ರಹ ಕಾರ್ಯವಾದರೂ ಬಲವತ್ತರವಾಗಿಯೇ ನಡೆದರೆ ಇದರಿಂದ ರೈತರಿಗೆ ಊಟಕ್ಕೆ ಬಿಟ್ಟಿದ್ದಾದರೂ ನಾಲ್ಕೇ ತಿಂಗಳಿಗೆ. ಸುಗ್ಗಿ ಬೆಳೆಯು ಬಹು ಮಟ್ಟಿಗೆ ಮಳೆಯ ಅಭಾವದಿಂದ ಒಳ್ಳೆಯದಾಗಿಲ್ಲ ಹಳ್ಳಿಗಳಲ್ಲಿ ಅಕ್ಕಿಯ ಅಭಾವ ಬರುವುದು ಬಹಳ ಮಟ್ಟಿಗೆ ಖಂಡಿತವೆಂದೇ ಕಾಣುತ್ತದೆ.

ಆದರೂ ಸಂಗ್ರಹವಾದ ಅಕ್ಕಿ ಎಲ್ಲ ಜಿಲ್ಲೆಯಲ್ಲಿಯೇ ಇದೆ ಕೇವಲ 5000 ಟನ್ ಮಾತ್ರ ಮಲಬಾರಿಗೆ ಕಳುಹಿಸಲಾಗುತ್ತಿದೆ. ಇನ್ನೂ 5000 ಟನ್ ಕಳುಹಿಸಲು ಬಂದ ಆಜ್ಞೆ ಜಾರಿ ಮಾಡಲಿಕ್ಕಿಲ್ಲವೆಂದೇ ನಂಬುತ್ತೇವೆ ಅಂತೂ ನಮ್ಮ ಅಕ್ಕಿ ಇಲ್ಲಿಯೇ ಇದೆ ಕಳೆದ ವರ್ಷ ಕಳುಹಿಸಿದಷ್ಟೆ ಅಕ್ಕಿಯನ್ನು ಈ ವರ್ಷವೂ ಕಳುಹಿಸುವುದಾಗಿ ಸರಕಾರದವರಾದರೂ ಭರವಸೆ ಹೇಳುತ್ತಿದ್ದಾರೆ ಪೇಟೆಯವರಿಗೆ ಸದ್ಯ ಒಂದು ಪಾವಿಗಿಂತ ಹೆಚ್ಚು ಕೊಡುವ ಯೋಚನೆ ಇಲ್ಲ ಸುಗ್ಗಿ ಬೆಳೆ ಒಳ್ಳೆಯದಾಗದೆ ಇದ್ದುದರಿಂದ ಮಾತ್ರ ಸ್ವಲ್ಪ ತೊಂದರೆ ಮಾದೀತೆ ವಿನಾ ಜಾಗ್ರತೆಯಿಂದ ಎಲ್ಲರೂ ವರ್ತಿಸಿದರೆ ಅನಾಹುತವಾಗಲು ಕಾರಣವಿಲ್ಲ

ಈ ತನ್ಮಧ್ಯ ಕಳ್ಳ ಸಂತೆ ಅಥವಾ ಕಳ್ಳಾಟಿಕೆಯ ಧಪ್ತ ಇತ್ಯಾದಿ ನಿಕಲಾಟ ಮಾಡಿದರೆ ಮಾತ್ರ ಜಿಲ್ಲೆಯ ಜನರು ಅನ್ನವಿಲ್ಲದೆ ಸಾಯುವ ಪ್ರಸಂಗ ಬಂದೀತು ಇಂಥ ಕಾರ್ಯಗಳನ್ನು ಈಗಿನ ಗಂಭೀರ ಪರಿಸ್ಥಿತಿಯಲ್ಲಿ ನಡೆಸುವುದೆಂದರೆ ಮಹಾ ದ್ರೋಹವಿದು ಇದು ಅಕ್ಷಮ್ಯ ಅಪರಾಧವೆಂದು ಎಲ್ಲರೂ ತಿಳಿದುಕೊಳ್ಳಬೇಕು. ಸರಕಾರದವರು ಹಾಕಿ ಕೊಟ್ಟ ಕ್ರಮಗಳಲ್ಲಿ ನಡೆದರೆ ಸ್ವಲ್ಪ ಮಟ್ಟಿನ ತೊಂದರೆ ಇರಬಹುದಾದರೂ ಈ ವರ್ಷದಾಟಿದೆವೆಂದರೆ ಮುಂದೆ ನಿಜವಾದ ಕ್ಷೇಮವುಂಟು.

ಹಳ್ಳಿ ವಿಭಾಗಗಳಲ್ಲಿ ಅಕ್ಕಿ ಕಾರ್ಡಿನಿಂದ ಹಂಚುತ್ತಿಲ್ಲವೆಂಬ ಮಾತ್ರದಿಂದ ಅದನ್ನು ಬೇಕಾದಷ್ಟು ಉಪಯೋಗಿಸಬಹುದೆಂದು ಯಾರೂ ಅಕ್ಕಿಯ ದುಂದುಗಾರಿಕೆ ಮಾಡಬಾರದು. ಆದಷ್ಟು ಕಡಿಮೆ ಅಕ್ಕಿ ಖರ್ಚಿನಿಂದ ಸುಧಾರಿಸಲು ಯತ್ನಿಸಿ ಎಲ್ಲರೂ ಬದುಕುವಂತೆ ಸಹಾಯ ಮಾಡಬೇಕು

ಕೊನೆಯದಾಗಿ ಸಾಧ್ಯವಿದ್ದಷ್ಟು ಮಟ್ಟಿಗೆ ಹೆಚ್ಚು ಆಹಾರ ಧಾನ್ಯಗಳನ್ನು ಇತರ ತರಕಾರಿ ಹಣ್ಣು ಹಂಪಲು ಇತ್ಯಾದಿ ಆಹಾರ ವಸ್ತುಗಳನ್ನು ಪ್ರತಿಯೊಬ್ಬರು ಹೆಚ್ಚಿಗೆ ಬೆಳೆಯಿಸಲು ಯತ್ನಿಸುವುದು ಕರ್ತವ್ಯವೆಂದು ತಿಳಿಯಬೇಕು ಸರಕಾರದವರು ಅಕ್ಕಿ ಕೊಡುತ್ತಾರೆಂಬ ಪರಾವಲಂಬನದ ಭಾವನೆ ತೆಗೆಯಬೇಕೆಂಬುದೇ ಈ ಹೊಸ ಧೋರಣೆಯ ಉದ್ದೇಶವಿರುತ್ತದೆ ಪ್ರತಿಯೊಂದು ಹಳ್ಳಿ, ಪ್ರತಿಯೊಂದು ಕುಟುಂಬ ಆಹಾರದ ಮಟ್ಟಿಗೆ ಸ್ವಾವಲಂಬಿಯಾಗುವುದು ಮಾತ್ರವಲ್ಲ ಇತರರಿಗೂ ಸ್ವಲ್ಪ ಕೊಡಲು ಸಮರ್ಥವಾಗುವ ಧ್ಯೇಯವಿಟ್ಟುಕೊಂಡು ದುಡಿಯಬೇಕಾಗಿದೆ

ಮುಂದೆ, ಅಕ್ಕಿ ಬೆಳೆಸಿದರೆ ಸ್ಟೋರಿಗೆ ಕೊಡಬೇಕಾಗುತ್ತದೆಂಬ ಬೇಸರಕ್ಕೆ ಕಾರಣವಿಲ್ಲ. ರೈತರು ತಾವು ಬೆಳೆಸಿದ ಅಕ್ಕಿ ತಾವೇ ಉಣ್ಣಬಹುದು. ತಮ್ಮ ಕೆಲಸಗಾರರಿಗೂ ಉಣ್ಣಲು ಒದಗಿಸಬಹುದು. ಅಂದಮೇಲೆ ಈ ಹೊಸ ಧೋರಣೆಯಲ್ಲಿ ಅಕ್ಕಿ ಬೆಳೆಸುವವರಿಗೆ ನಿಜವಾದ ಪ್ರೋತ್ಸಾಹವಾಗಲು ಕಾರಣ ಉಂಟು

ಅಕ್ಕಿ ಸರಕಾರ ಕೊಡುತ್ತದೆ. ಹೆಚ್ಚು ಕ್ರಯ ಬರುವ ಕಬ್ಬು ಇತ್ಯಾದಿ ಮಾಡಿ ಹಣ ಮಾಡೋಣವೆಂಬ ಭಾವನೆಗೆ ಇನ್ನು ಎಡೆ ಇಲ್ಲ ಊಟಕ್ಕೆ ಬೇಕಾದ ಪ್ರತಿಯೊಬ್ಬರೂ ಬೆಳೆಸದಿದ್ದರೆ ಕೊಡುವವರಿಲ್ಲವೆಂಬುದರಿಂದ ಮೊದಲಾಗಿ ಊಟದ ವ್ಯವಸ್ಥೆ ನೋಡಿ ಮುಂದೆ ಹಣ ಮಾಡುವ ಆಲೋಚನೆ ಮಾಡತಕ್ಕದ್ದು.

ನಮ್ಮ ಮುಂದಾಳುಗಳಾದರೂ ಜನರು ದಿಗಿಲುಗೊಳ್ಳುವಂತೆ ಮಾಡಬಾರದು. ಶಾಂತ ರೀತಿಯಿಂದ ದೃಢ ಸಂಕಲ್ಪದಿಂದ ವರ್ತಿಸಿದರೆ ಈಗಿನ ಗಂಭೀರ ಪರಿಸ್ಥಿತಿಯನ್ನು ನಾವು ದಾಟಲು ಬಹಳ ಕಷ್ಟವಾಗುವಂತಿಲ್ಲ ಇದಕ್ಕೆ ಬದಲು ಜನರು ಭ್ರಮಿಸುವಂತೆ ಮಾಡಿ ತಮಗೆ ಬೇಕಾಗುವುದಕ್ಕಿಂತ ಪ್ರತಿಯೊಬ್ಬರೂ ಹೆಚ್ಚು ಅಕ್ಕಿ ಇಟ್ಟುಕೊಳ್ಳುವಂತೆ ಮಾಡಿದರೆ ನಿಜವಾಗಿ ಗಂಡಾಂತರ ಬರುವುದೆಂಬುದನ್ನು ನಮ್ಮ ಮುಂದಾಳುಗಳೂ ತಿಳಿದುಕೊಳ್ಳಬೇಕು

ರೇಶನ್ ಜಾರಿ ಇರುವ ಪೇಟೆಯವರಾದರೂ ಒಂದೇ ಸಾವು ಅಕ್ಕಿಯೆಂದು ಗೊಣಗುಟ್ಟಬಾರದು ಪರಿಸ್ಥಿತಿಯು ಸುಧಾರಿಸಿದರೆ ಸರಕಾರದವರು ರೇಶನ್ ಹೆಚ್ಚಿಸುವರೆಂಬ ವಿಶ್ವಾಸ ಇಟ್ಟು ತಾಳ್ಮೆಯಿಂದ ವರ್ತಿಸಬೇಕು.

ವ್ಯಾಪಾರೀ ವರ್ಗ, ರೈತ ವರ್ಗ ಹಾಗೂ ಇತರ ಮಹಾ ಜನರು ಈ ಹೊಸ ಧೋರಣೆಯ ಅಭಿಪ್ರಾಯಗಳೆಲ್ಲವನ್ನು ಮನಗಂಡು ಯಥಾರ್ಥತೆಯಿಂದ ತಮ್ಮ ತಮ್ಮ ಪಾಲಿನ ಕಾರ್ಯ ನಿರ್ವಹಿಸಿ ನ್ಯಾಯದಿಂದ ವರ್ತಿಸಬೇಕಾಗಿ ಅತ್ಯಾಗ್ರಹದಿಂದ ಕೇಳಿಕೊಳ್ಳುತ್ತೇವೆ

ಹಾಗೆ ನಡೆದರೆ ಬರುವ ವರ್ಷವೇ ನಮಗೆ ಬೇಕಾದ ಅಕ್ಕಿ ನಮ್ಮ ಜಿಲ್ಲೆಯಲ್ಲಿಯೇ ಬೆಳೆದು ಪೇಟೆಗಳ ರೇಶನಿನ ಅಗತ್ಯ ಕೂಡಾ ಹೋಗಿ ಜಿಲ್ಲೆಯು ಸುಭಿಕ್ಷದಲ್ಲಿರುವಂತಾಗುವುದೆಂದು ಖಂಡಿತವಾಗಿ ಹೇಳಬಹುದು

ಜಿಲ್ಲಾಭಿವೃದ್ಧಿ ಕಾರ್ಯಗಳು — ಕೆಲವು ದಿನಗಳ ಹಿಂದೆ ಪುತ್ತೂರಲ್ಲಿ "ಮಿಶನ್ನ ಯದ ಚಳವಳಕ್ಕಾಗಿ ಒಂದು ಸಭೆ ಸೇರಿ ಆತ ಹುಂಡಿ ಪೆಟ್ಟಿಗೆಗಳನ್ನು ಸಹಕಾರಿ ಬ್ಯಾಂಕಿನ ಮೂಲಕ ಹಂಚಬೇಕೆಂಬ ನಿರ್ಣಯವಾಯಿತು. ಉಳ್ಳಾಲದಲ್ಲಿ ನಿವೃತ್ತ ತಹಶೀಲ್ದಾರ್ ಮಿ। ಸಲ್ಡಾನ್ಹಾರಿಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಕಸ್ಬದ ಕೆಲಸಗಾರರಿಗೊಂದು ಸಂಘವನ್ನು ಸ್ಥಾಪಿಸುವ ಆಲೋಚನೆ ನಡೆಯಿತು. ಕುಂದಾಪುರ ತಾಲೂಕಿನಲ್ಲಿ ಮರುವಂತೆ ಕಿರಿಮಂಜೇಶ್ವರಗಳಲ್ಲಿ ತೆಂಗಿನ ಬೆಲ್ಲದ 2 ಸಂಘಗಳು ರಿಜಿಸ್ಟ್ರಿಯಾದವು. ಬೋಂದೆಲ ಗ್ರಾಮ (ಮಂಗಳೂರಿಗೆ ಸಮೀಪ)ದಲ್ಲಿ ಜಿಲ್ಲೆಯ ಯೂನಿಯನ್ನಿನವರು ಮದ್ಯ ನಿಷೇಧದ ಒಂದು ನಾಟಕ ಮಾಡಿದರು.

ಆಗಮನವೆಂದರೆ ಜಿಲ್ಲೆಗೆ ಅದೊಂದು ಸೌಭಾಗ್ಯವೇ ಎನ್ನಲು ಅಡ್ಡಿ ಇಲ್ಲ. ಇವರೆಲ್ಲರಿಗೆ ಹಾಗೂ ಈ ಸಮಾರಂಭಕ್ಕಾಗಿ ಬರುವ ಎಲ್ಲರಿಗೂ ನಮ್ಮ ಹಾರ್ದಿಕಸುಸ್ವಾಗತವನ್ನು ಅರ್ಪಿಸುತ್ತೇವೆ.

ಜಿಲ್ಲಾ ಸಮಾಚಾರ

ವರ್ಧಂತ್ಯುತ್ಸವ: ಸ್ಥಳೀಯ ಕೆನರಾ ಹೈಸ್ಕೂಲಿನ ವರ್ಧಂತ್ಯುತ್ಸವವು ಕಳೆದ ತಾ ೨೪ರಂದು, ಶ್ರೀ। ಬಿ ಸೋಮಶೇಖರ ರಾವ್ ವಕೀಲ್, ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಅಂದು ಬೆಳಿಗ್ಗೆ ವಿದ್ಯಾರ್ಥಿಗಳಿಗೆ ಲಘು ಉಪಹಾರವಾದ ನಂತರ ಶ್ರೀಯುತ ಮತ್ತು ಶ್ರೀಮತಿ ಮಂಜುನಾಥ ಸುವರ್ಣ ಅವರ ನೇತೃತ್ವದಲ್ಲಿ ಕ್ರೀಡಾ ಸ್ಪರ್ಧೆಗಳ ಬಹುಮಾನಗಳು ಹಂಚಲ್ಪಟ್ಟವು ಸಾಯಂಕಾಲ ವರದಿ ವಾಚನ, ಬಹುಮಾನ ವಿತರಣ, ಅಧ್ಯಕ್ಷರ ಭಾಷಣಗಳಾದ ಮೇಲೆ ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳು ಜರಗಿ, ಉತ್ಸವವು ಮುಕ್ತಾಯ ಗೊಂಡಿತು

ಚಿತ್ರಕಲಾ ಪ್ರದರ್ಶನ: ದಿವಂಗತ ಪಾವಂಜೆ ಗೋಪಾಲ ಕೃಷ್ಣಯ್ಯ ಸ್ಮಾರಕ ಚಿತ್ರಕಲಾ ಪ್ರದರ್ಶನವು, ತಾ ೨೪ರಂದು ಪ್ರಾತಃಕಾಲ ಕೆನರಾ ಹೈಸ್ಕೂಲಿನ ಸುಬ್ರಾಯ ಪೈ ಸ್ಮಾರಕ ಭವನದಲ್ಲಿ ಶ್ರೀಮತಿ ಮಂಜುನಾಥ ಸುವರ್ಣ ಅವರಿಂದ ಉದ್ಘಾಟಿಸಲ್ಪಟ್ಟಿತು ಜಿಲ್ಲೆಯ ಹಲವು ಉದ್ಯೋಗಸ್ಥ ಮತ್ತು ವಿದ್ಯಾರ್ಥಿ ಚಿತ್ರಗಾರರ ಕೃತಿಗಳು ಪ್ರದರ್ಶದಲ್ಲಿದ್ದವು ಅಲ್ಲದೆ ಕೆನರಾ ಶಾಲೆಗಳ ಮಕ್ಕಳ ಕಸೂತಿ ಕೆಲಸಗಳೂ, ಕೈಗಾರಿಕೆ ವಸ್ತ್ರಗಳೂ ಪ್ರದರ್ಶಿತವಾಗಿದ್ದವು

ಶ್ರೀ ಬಿ ಪಿ ನ್ಯಾಕ್ ಎಂಬ ಕಿವುಡ ಮೂಗ ತರುಣ ಚಿತ್ರಗಾರನ ಕೃತಿಗಳು ಮೇಲ್ಕಂಡ ಪ್ರದರ್ಶನದಲ್ಲಿ ಪ್ರೇಕ್ಷಕರ ಮನಸ್ಸನ್ನು ರಂಜಿಸಿದುವು. ಸದ್ರಿ ಪ್ರದರ್ಶನದಲ್ಲಿ ಸಿಕ್ಕಿದ ಬಹುಮಾನಗಳ ವಿವರ ಹೀಗಿದೆ ಪ್ರದರ್ಶನದಲ್ಲಿನ ಅತ್ಯುತ್ತಮ ಚಿತ್ರ ಕೃತಿಯು ಬಂಗಾರ ಪದಕ, ಶ್ರೀ ಬಿ ಪಿ ನ್ಯಾಕ್ ಇವರಿಗೆ. ತೈಲ್ಯ ಚಿತ್ರ ಪ್ರಥಮ ಬಹುಮಾನ ಶ್ರೀ ಎಂ ಎಸ್ ಕುಡ್ವ, ಜಲವರ್ಣ ಚಿತ್ರ ಶ್ರೀ ಬಿ ಪಿ ನ್ಯಾಕ್, ಪೆನ್ಸಿಲ್ ಚಿತ್ರ ಶ್ರೀ ಗುಲಾಬ ರಾಯ ಧವೆ ವಿದ್ಯಾರ್ಥಿಗಳಲ್ಲಿ ತೈಲ ಚಿತ್ರ ಪ್ರಥಮ ಬಹುಮಾನ ಶ್ರೀ ಶ್ರೀನಿವಾಸ ಮಧ್ಯಸ್ಥ ಕೆನರಾ ಹೈಸ್ಕೂಲು, ಜಲವರ್ಣ ಮತ್ತು ಪೆನ್ಸಿಲ್ ಚಿತ್ರಗಳ ಬಹುಮಾನಗಳು ಎಲೋಸಿಯಸ್ ಕಾಲೇಜಿನ ಶ್ರೀ ಮೂಕ್ ಡಿಸೋಜ ಎಂಬವರಿಗೆ ದೊರಕಿವೆ

ಹಳೆ ವಿದ್ಯಾರ್ಥಿ ದಿನ: ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ದಿನಾಚರಣೆ ತಾ ೨೫ರಂದು ಡಾ। ಬಿ ಪಿ ಆರ್ ಪೂಂಜರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು ಉಪಹಾರ, ಕಾರ್ಯಕಾರಿ ಸಮಿತಿ ಸಭೆ, ವರದಿ ವಾಚನ, ಬಹುಮಾನ ವಿತರಣೆಗಳಾದ ಮೇಲೆ ಶ್ರೀ ಎಂ ಟಿ. ಪ್ರಭು ಮತ್ತು ಪಾರ್ಟಿಯವರ ವಿವಿಧ ವಿನೋದಾವಳಿಗಳಿದ್ದವು

ಇಂದು ತಾ. ೨೬ರಂದು ಕೆನರಾ ಸಪ್ತಾಹ ಮುಕ್ತಾಯ: ಇಲ್ಲಿಯ ಶ್ರೀ ವಿಠೋಬ ದೇವಸ್ಥಾನದಲ್ಲಿ ಜರಗಿದ ಭಜನಾ ಸಪ್ತಾಹವು ತಾ. ೨೪ರ ತನಕ ಜರಗಿ ಮರುದಿನ ಪ್ರಾತಃಕಾಲ ಮಂಗಲವಾಯಿತು

ಹೋಮ:—ಇಲ್ಲಿಯ ಶ್ರೀ ಕರಂಗಲಪಾಡಿ ಶಂಕರ ದೇವಸ್ಥಾನದಲ್ಲಿ ಶ್ರೀ ವಾಮನ ರಾವ್ ಗೋರೆಯವರಿಂದ ಜರಗಿಸಲ್ಪಡುವ ಲೋಕಶ್ರೇಯಸ್ಸಿನ ಹೋಮ ಕಾರ್ಯವು ಸಾಂಗವಾಗಿ ನಡೆಯುತ್ತದೆಂದೂ, ಹೇರಳ ಭಕ್ತಸ್ತೋಮವು ಅದರಲ್ಲಿ ಭಾಗವಹಿಸಿ ಅನುಗ್ರಹಿತವಾಯಿತೆಂದೂ ನಾಳೆ ೨೭ರಂದು ಅದರ ಕೊನೆಯ ವಿಧಿಯಾಗಿ ಹೋಮವು ಮುಗಿಯುವುದೆಂದೂ ತಿಳಿದು ಬರುತ್ತದೆ.

ಕ್ರಿಕೆಟ್ ಪಂದ್ಯಾಟ:—ಕಳೆದ ತಾ ೨೦ರಂದು ಇಲ್ಲಿಯ ಪೆಂಟ್ಲೆಂಡ್ ಮತ್ತು ಎಂ. ಸಿ ಸಿ ಟೀಮುಗಳೊಳಗೆ ಕೊರೊನೇಶನ್ ಕ್ರಿಕೆಟ್ ಪಂದ್ಯಾಟದ ಕೊನೆಯ ಆಟ ಜರಗಿ ಎಂ ಸಿ. ಸಿ ಯವರು ವಿಜಯ ಶಾಲಿಗಳಾದರು ಇವರು ೧ನೇ ೨ನೇ ಇನ್ನಿಂಗ್ಸುಗಳಲ್ಲಿ ಕ್ರಮವಾಗಿ ೧೮೭ ಮತ್ತು ೨೧೭ ರನ್ನುಗಳನ್ನು ಪೆಂಟ್ಲೆಂಡಿನವರು ೧೦೦ ಮತ್ತು ೧೮೭ ರನ್ನು ತೆಗೆದಿದ್ದರು ಈ ಮ್ಯಾಚಿನ ಒಂದು ಉಜ್ವಲ ಘಟನೆಯೆಂದರೆ ಪೆಂಟ್ಲೆಂಡ್ ಟೀಮಿನ ಕಪ್ತಾನರಾದ ಶ್ರೀ ಗೋಪಾಲ ಪೈಯವರು ೧೭ ಬೌಂಡರಿಗಳನ್ನೊಳಗೊಂಡು ಅಮೋಘ ಸೆಂಚುರಿಯನ್ನು ತೆಗೆದುದು ಅವರ ಸ್ಕೋರು ೧೨೧ ಆಗಿದ್ದು ಈ ಪಂದ್ಯಾಟದ ಆಟಗಾರಿಕೆಯ ಬಹುಮಾನಕ್ಕವರು ಅರ್ಹರಾಗಿರುವರು

ಸಕ್ಕರೆ:—ಈ ತಿಂಗಳಲ್ಲಿ ಕಾರ್ಡು ಹೋಲ್ಡರರಿಗೆ ಕೊಡಲ್ಪಟ್ಟಿರದ ಅರ್ಧಾಂಶ ಸಕ್ಕರೆ ಕೋಟಾವನ್ನು ಪೂರ್ಣ ಕೊಡಲಾಗಿದೆ ರೂ ೩೫ ತೀವಣಾತಿ ಇಟ್ಟುವರೊಳಗೆ ನಾಳೆ, ಸಕ್ಕರೆ ಗೋಣಿಗಳನ್ನು ಬಹಿರಂಗ ಏಲಂ ಹಾಕಿ ಮಾರಲಾಗುವುದೆಂದು ತಿಳಿದು ಬರುತ್ತದೆ

ಬೆಲ್ಲ:—ಹೊರಗಿನಿಂದ ಹೇರಳ ಪ್ರಮಾಣದ ಬೆಲ್ಲವು ನಮ್ಮ ಜಿಲ್ಲೆಗೆ ಬಂಧಿರುವುದೆಂದು ನಿರೀಕ್ಷಿಸಲ್ಪಟ್ಟಿದೆ ಪ್ರಸುತ್ತ ಅದರ ಬಜಾರು ಬೆಲೆಯು ಸುಮಾರು ರೂ ೬। ಯಷ್ಟಿದೆ ಜಿಲ್ಲೆಯಲ್ಲಿನ ಊರ ಬೆಲ್ಲದ ತಯಾರಿಯೂ ಪ್ರಾರಂಭವಾಗಿದ್ದು ಮಾರಾಟಕ್ಕೆ ಸಿದ್ಧವಾಗಿದೆ

ಹವಾಮಾನ:—ಈ ವಾರದಲ್ಲಿ ಚಳಿಯ ಪ್ರತಾಪವು ಹೆಚ್ಚಿತ್ತು ಮಧ್ಯಾಹ್ನದ ಹೊತ್ತಿನಲ್ಲಿ ಉಷ್ಣತೆಯೂ ಇರುವುದಾದರೂ ಗಾಳಿ ಬೀಸಾಟದಿಂದ ಅದರ ತೀವ್ರತೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುವುದೆಂದು ಹೇಳಬಹುದು

ಬಿಲ್ ಕಲೆಕ್ಟರ್ಸ್ ಪರಿಷತ್ತು:—ಇಂದು ಬೆಳಿಗ್ಗೆ ಇಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಯವರಾದ ಶ್ರೀ ಟಿ ವಿಶ್ವನಾಥನ್ ಬಿ ಎ ಬಿ ಎಲ್ ಅವರು ಪ್ರಾಂತೀಯ ಮುನ್ಸಿಪಲ್ ಬಿಲ್ ಕಲೆಕ್ಟರರ ೫ನೇ ಸಮ್ಮೇಳನವನ್ನು ಉದ್ಘಾಟಿಸಿದರು

ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್ರಚಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆಗಳ ಬೇನೆಯನ್ನು ಡಗಿಸುತ್ತದೆ. ಚರ್ಮ ಸ್ವಚ್ಛವಿರಿಸಿ ಗುಣಪಡಿಸುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ನೋಟೀಸು

ಕಾರ್ಕಳ ಡಿ ಮು. ಕೋರ್ಟಿನಲ್ಲಿ

O. P No. 66/1947.

1. ತುಂಗಮ್ಮ ಯಾನೆ ಅಕ್ಕಣಿ ಸೆಟ್ತಿ
2. ಬಾಲಕೃಷ್ಣ
3 ವಸಂತಿ
4 ಮಲ್ಲ
5 ಗುಲಾಬಿ

(2–5) ಮೈನರರು, ಇವರ ಕ್ಷೇಮಚಿಂತಕಳು ತಾಯಿ 1ನೇ ಅರ್ಜಿದಾರಳು — ಅರ್ಜಿದಾರರು

1ನೆ ಅರ್ಜಿದಾರಳ ಗಂಡ, ಮಿಕ್ಕ ಅರ್ಜಿದಾರರ ತಂದೆ, ಇರುವೈಲು ಗ್ರಾಮದಲ್ಲಿ ತಾರೀಕು 31–8 1946ರಲ್ಲು ಮೃತಪಟ್ಟ ಮುದ್ದಣ್ಣ ಯಾನೆ ತುಂಬಣ್ಣ ಸೆಟ್ರು ಮೂಡಬಿದ್ರಿ ಬ್ರಾಂಚಿನ ಮಂಗಳೂರು ಬೇಂಕಿನಲ್ಲಿ ಅಡವಿಟ್ಟ ಆಭರಣಗಳನ್ನು ಪಡಿಯುವರೆ ಆತನ ವಾರಿಸುದಾರರಾದ ಅರ್ಜಿದಾರರ ಕಡೆಯಿಂದ 1ನೆ ಅರ್ಜಿದಾರಳಿಗೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಅರ್ಜಿಯು ತಾರೀಕು 5–1–48ಕ್ಕೆ ತನಿಖೆಗೆ ಇಡೋಣಾಗಿಯದೆ ಆಕ್ಷೇಪ ಉಳ್ಳವರು ಸದ್ರಿ ದಿನ ಬೆಳಿಗ್ಗೆ 11 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು

ಕಾರ್ಕಳ 21–12–47 | P Ramachandra Rao, ಅರ್ಜಿದಾರ್ರ ಕಡೆ ವಕೀಲ್

ಲಿಟಲ್ಸ ಒರಿಯಂಟಲ್ ಬಾಮ್‌ನವರ ತಯಾರಿಕೆ

ಎಲ್ಲಾ ಚರ್ಮ ವ್ಯಾಧಿಗಳಿಗೆ

ಜರ್ಮೆಕ್ಸ್

ಉಪಯೋಗಿಸಿರಿ

ಇನ್ಶುರೆನ್ಸ್

ವಿಷಯ ವಿದ್ದರೆ

ನ್ಯೂ ಇಂಡಿಯಾ

ನೆನಪಿರಲಿ

ಪ್ರಮುಖ ಹಿಂದೀ ವಿಮಾ ಸಂಸ್ಥೆ

1946ರ ಪ್ರಗತಿಯ ಕೆಲವು ಮುಖ್ಯ ವಿಷಯಗಳು

(ಜೀವವಿಮೆ) ಹೊಸ ವಹಿವಾಟು	ರೂ.	12	ಕೋಟಿಗಳಿಗೆ ಮಿಕ್ಕಿದೆ
ಊರ್ಜಿತದಲ್ಲಿರುವ ಪ್ಪೋಲಿಸಿಗಳು	ರೂ.	38	,, ,,
ಜುಮ್ಲಾ ಸೊತ್ತು	ರೂ.	10	,, ,,
ಸ್ಥಾಪಿತವಾದಂದಿನಿಂದ ತೆತ್ತ ಕ್ಲೈಮುಗಳು	ರೂ.	13	,, ,,

ಜೀವವಿಮೆ, ಬೆಂಕಿ, ನೌಕೆ, ಮೋಟಾರು ವಾಹನ, ವಾಯುಯಾನ, ಕೆಲಸಗಾರರ ವಿಷಯ ಪರಿಹಾರ, ಪ್ರಾಮಾಣಿಕತೆಯ ಗ್ಯಾರಂಟಿ ಮೊದಲಾದ ಎಲ್ಲಾ ತರದ ವಿಮೆಗೆ ಸಂಬಂಧಪಟ್ಟ ವಹಿವಾಟುಗಳನ್ನು ನಡೆಸುತ್ತದೆ

ನ್ಯೂ ಇಂಡಿಯಾ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಹೆಡ್ ಆಫೀಸು: ಬೊಂಬಾಯಿ)

ಮದ್ರಾಸು ಬ್ರಾಂಚ್: 4 ಮತ್ತು 5, ಫಸ್ಟ್ ಲ್ಯಾನ್ ಬೀಚ್.

ಸಬ್ ಆಫೀಸು: ಹಂಪನಕಟ್ಟಾ, ಮಂಗಳೂರು.

ಕ್ವೀನಿನ್ ಮತ್ತು ಸರ್ಪ ಕಡಿತದ ಔಷಧಿ.

ಬ್ರೆಜಿಲ್ ದೇಶದಲ್ಲಿ ಇತರ ಎಲ್ಲಾ ದೇಶಗಳಿಗಿಂತ ಹಾವುಗಳ ಬಾಧೆ ಅತಿ ಹೆಚ್ಚು. ಆದುದರಿಂದ ಇತರ ಕಡೆಗಳಿಗಿಂತ ಅಲ್ಲಿ ಉರಗಗಳ ವಿರೋಧ ಯುದ್ಧವು ದೊಡ್ಡ ಪ್ರಮಾಣದಲ್ಲಿ ಜರಗಿಸಲ್ಪಡುತ್ತದೆ ಬುಟ್ಟಂಟನ್ ಎಂಬುದು ಈ ಸರ್ಪವಿನಾಶಕ ಚಟುವಟಿಕೆಯ ಕೇಂದ್ರ, ಇದು ಬ್ರೆಜಿಲಿನ ಸಾವೊಫೌಲೊ ಎಂಬ ನಗರದ ಬಳಿಯಿದೆ

ಹಾವು ಕಡಿತಕ್ಕೆ ಯೋಗ್ಯ ಪರಿಹಾರಕ ಧಾತುವನ್ನು ಕಂಡುಹಿಡಿಯುವುದೇ ಮೇಲ್ಕಂಡ ಕೇಂದ್ರದ ನಿಯುಕ್ತಿತ ಉದ್ದೇಶ ದೇಶದೆಲ್ಲಾ ಕಡೆಯ ರೈತರು ಹಿಡಿದು ಕಳುಹಿಸಿ ಕೊಡಲ್ಪಡುವ ಹಾವುಗಳಿಂದಲೇ ಈ ವಿಷಹಾರಿ ರಸವನ್ನು ತೆಗೆಯಲಾಗುವುದು (1938ರಲ್ಲಿ 18 ಸಾವಿರ ಹಾವುಗಳು ಇಲ್ಲಿಗೆ ಕಳುಹಿಸಲ್ಪಟ್ಟಿವೆ) ತಮ್ಮ ಬಂಧನದ ಹೆಚ್ಚುಕಮ್ಮಿ ದೀರ್ಘ ಅವಧಿಯಲ್ಲಿ ಈ ಅತಿ ನಂಜಿನ 'ಹುಳು'ಗಳು ಸಾಧ್ಯವಿದ್ದಷ್ಟು ಹೆಚ್ಚು ಕಡಿಯಲು ಪ್ರೋತ್ಸಾಹಿಸಲ್ಪಡುತ್ತವೆ (ಇವು ಕಡಿಯುವುದು ಕೊಲ್ಲಲಿಕ್ಕಲ್ಲ ಆದರೆ ಕಡಿಯಲ್ಪಟ್ಟವರ ಜೀವರಕ್ಷಣೆಗಾಗಿ ಗಾಜಿನ ಗಾಳಿಗೆ ವಂಚ್ಚಿದ ಒಂದ ಬಟ್ಟೆಗ [illegible] ತಮ್ಮ ವಿಷದ ಕೆ [illegible] ಒಂದ [illegible] ಮಾಡಿಕೊಳ್ಳುತವೆ ವಿಷಧಾರ [illegible] ಗ್ಲಾಸಿನಲ್ಲಿ ಶೇಖರಿತವಾಗುತ್ತದೆ) ಈ ವಿಷದಿಂದ ಹಾವು ಕಡಿತದ [illegible] ಸ್ಥಿತಿಗೊಳಗಾದ ಮಾನವ [illegible] ಣಿಯಾಗುತ್ತದೆ

ಬ್ರೆಜಿಲಿನಲ್ಲಿ ಮಾ [illegible] ವಾದುವು ಕೇವಲ ಹಾವುಗಳ ವಿಷತ್ವವಲ್ಲ ಎನೋಫೀಲಿಸ್ [illegible] ಯಿದೆ ಇದ ವಿಷ [illegible] ಕಾರಕವಾದ ಸೊಳ್ಳೆ [illegible] ವನ್ನುಂಟು [illegible] ಹವುಗಳಲ್ಲ ಆದರೆ ಮಲೇರಿಯಾ [illegible] ದೇಶವಿಶಾಲಕ್ಕೆ ಹರಡಿಸಿ [illegible] ತ ಜನತೆಯನ್ನು ಸಮಾವಿಗ [illegible] ನಿನು ಈ ವ್ಯಾಧಿಗೆ ಅತ್ಯಂತ ಪರಿಣಾಮಕಾರಿಯಾದ ಔಷಧಿ ಕ್ವೀನಿನೂ ಅತ್ಯಂತ ಜನಪ್ರಿಯವೂ ಸುಲಭ ಸೇವನೆಯದೂ ಮತ್ತು ಶರೀರಕ್ಕೆ ಕಮ್ಮಿ ಹಾನಿಯದೂ ಆಗಿರುವ ಶೀಘ್ರಪರಿಣಾಮಕಾರಿಯಾದ ಮಲೇರಿಯಾ ಪ್ರತಿಬಂಧಕ ಔಷಧಿಯಾಗಿದೆ ಈ ಸಂಗತಿಯನ್ನು ಜನಾಂಗ ಸಂಘದ ಮಲೇರಿಯಾ ಸಮಿತಿಯವರು ತಮ್ಮ ವರದಿಯಲ್ಲಿ ಒತ್ತಿ ತಿಳಿಸಿರುತ್ತಾರೆ ಈ ಸಮಿತಿಯಲ್ಲಿ ಪ್ರಖ್ಯಾತ ಮಲೇರಿಯಾ ವ್ಯಾಧಿತಜ್ಞರನೇಕರಿರುವರು

ಈ ವ್ಯಾಧಿಯ ಕಾಲದಲ್ಲಿ ಕ್ವೀನನ್ನು ಪ್ರತಿದಿನ ಆರು ಕಾಳುಗಳಷ್ಟು ಸೇವಿಸಬಹುದೆಂದು ಮೇಲ್ಕಂಡ ತಜ್ಞರು ಸಲಹೆಯಿತ್ತಿದ್ದಾರೆ ವ್ಯಾಧಿಗ ಸ್ತರು ದಿನಂಪ್ರತಿ 15ರಿಂದ 20 ಕಾಳುಗಳಷ್ಟು ಕ್ವೀನಿನನ್ನು 5ರಿಂದ 7 ದಿವಸಗಳು ತೆಗೆದುಕೊಳ್ಳಬೇಕೆಂದೂ ಅವರು ತಿಳಿಸುತ್ತಾರೆ

ಕ್ವೀನಿನ ಮತ್ತು ವಿಷಹಾವು ಕಡಿತದ ಔಷಧಿಯಿಂದ ಅಸಂಖ್ಯಾತ ಬ್ರೆಜಿಲಿನ ಜನರ ಜೀವಗಳು ಉಳಿಸಲ್ಪಟ್ಟಿವೆ

ಚಿಲ್ಲರೆ ಸುದ್ದಿ ಸಂಗ್ರಹ

"ಇನ್ನು ಸುಮಾರು ಐವತ್ತು ವರ್ಷಗಳಲ್ಲಿ ಒಂದು ಅನಿಷ್ಟ ಧೂಮಕೇತುವು ಕಾಣಿಸಿಕೊಳ್ಳುವುದು ಒಂದು ವಿನಾಶಕಾರಿ ಯುದ್ಧವು ಸಂಭವಿಸುವುದು ಮತ್ತು ಆಗಲೇ ಜಗತ್ತಿನ ನಿರ್ನಾಮವು ಆಗುವುದು" ಹೀಗೆಂದು ಅಮರಗಂಗಾ ಸಿಂಹರೆಂಬ 104 ವರ್ಷದ ಹಿಂದೂ ಜೋತಿಷ್ಯಗಳು ತಿಳಿಸುತ್ತಾರೆ ಆಸ್ಟ್ರೇಲಿಯಾ ಸರಕಾರದ ಜೋತಿರ್ಗಣನಾ ತಜ್ಞರು ಇವರ ಭವಿಷ್ಯದಲ್ಲಿ ತುಂಬಾ ಭರವಸೆ ತಾಳುತ್ತಾರೆ

✠

ಚಿಕಾಗೊದಲ್ಲಿ 270 ರೋಮನ್ ಕೆಥೊಲಿಕ ಮಹಿಳೆಯರು ಒಬ್ಬರ ನಂತರ ಒಬ್ಬರಾಗಿ ದಿನಸಿತ್ಯವೆಂಬಂತ ತಮ್ಮ ಇಗರ್ಜಿಯಲ್ಲಿ ಕಮ್ಯುನಿಸ್ಟ್ ತತ್ವವು ಜಗತ್ತಿನಲ್ಲಿ ಹರಡದಂತೆ ಪ್ರಾರ್ಥನೆ ಮಾಡಲು ನಿರ್ಧರಿಸಿರುವರು

✠

ಫ್ರಾನ್ಸಿನ ಪ್ಯಾರಿಸ್ ಮುಂತಾದ ಶೃಂಗಾರ ನಗರಗಳಲ್ಲಿ ಜನಪ್ರಿಯವಾಗಿದ್ದ ನಗ್ನ ನೃತ್ಯಗಳು ಟೋಕಿಯದಲ್ಲೂ ಆರಂಭವಾಗಿದೆ. ಅಲ್ಲಿನ ಘೇಶಾ ಹುಡುಗಿಯರು ಈ ಕುರಿತು ಆಕ್ಷೇಪವೆತ್ತಿರುವರು

✠

60 ಲಕ್ಷ ರೂಪಾಯಿ ಬೆಲೆಬಾಳುವ ಚೀನಿಯರ ತಲೆ ಜುಟ್ಟಿನ ಕೂದಲುಗಳು 'ಕೂದಲಿನ ಬಲೆ' ತಯಾರಿಕೆಗಾಗಿ ಅಮೇರಿಕಕ್ಕೆ ಕಳುಹಿಸಲಾಗಿದೆ

✠

ಜಗತ್ತಿನಲ್ಲಿ ಇಂದು ಐದು ಕೋಟಿ 40 ಲಕ್ಷ ಟೆಲಿಫೋನುಗಳಿವೆ

✠

ಟೆಲಿಫೋನುಮೂಲಕ ದೇಶದ ಪ್ರಮುಖ ರಾಜಕೀಯ ಮುಖಂಡರಿಂದ ಶೈಕ್ಷಣಿಕ ಭಾಷಣಗಳನ್ನು ಕೊಡಿಸುವ ಏರ್ಪಾಡನ್ನು ಅಮೇರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದವರು ಪ್ರಾರಂಭಿಸಿರುವರು

✠

ಇದೇ ತಾ 8 2-1948ನೇ ಆದಿತ್ಯವಾರ ಸಾಯಂಕಾಲ ಘಂ 6ಕ್ಕೆ

ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥ

ವಿಖ್ಯಾತ ಗಾಯಕಿ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ

ಇವರ ಸಂಗೀತ ಕಚೇರಿ

ಆಸ್ಥಾನ ವಿದ್ವಾನ್ ಶ್ರೀ ಚೌಡಯ್ಯ - ಇವರ ಪಿಟೀಲು

ಶ್ರೀ ಕಲ್ಪಾತಿ ರಮಾನಾದನ್ - ಇವರ ಮೃದಂಗ

ಶ್ರೀ ಅಲಂಗುಡಿ ರಾಮಚಂದ್ರನ್ ಇವರ ಘಟವಾದ್ಯ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ

ಟಿಕೇಟು ದರ ಪ್ರೇಕ್ಷಕ ವರ್ಗ ರು. 100 I 25 II 10, III 5.

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸ್ಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲ್ಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50 ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗ್ಯಾತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ, ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಮಂಗಳೂರು.
23-12-1947.

ಜ್ಯೊಂಟ್ ಮೆನೇಜರ್ಸ್,

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued, Subscribed	Rs. 16,00,000
Capital Paid up	Rs. 15,98,220
Reserves	Rs. 5,26,000

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ . ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years avialable to you for arranging Insurance Investment
It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletoed ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharala Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ಸದಿರ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡೆಗಿಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್‌ಚಿಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.